ಚೆನ್ನಬಸವ ಪುರಾಣ

ವಿರೂಪಾಕ್ಷ ಪಂಡಿತ

ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ
ವಾಙ್ಮಯಶಾಖೆ
ಧಾರವಾಡ

7-೪-

ವಿ. ಸೀತಾರಾಮಯ್ಯ
೪. ೧. ೧೯೩೫



ಲಿಂಗರಾಜ ಆರ್ಟ ಪ್ರೆಸ್. ಸಿದ್ಧರಾಮೇಶನ ಲಿಂಗದೀಕ್ಷೆ ಮ. ವೀ. ಮಿಣಜಗಿ

ಚೆನ್ನಬಸವ ಪುರಾಣ

(ಭಾಗ ೧)



ಶ್ರೀಮಂತ ಸರದಾರ

ರಾಜಾ ಲಖಮಗೌಡಾ ಬಸವಪ್ರಭು ಸರದೇಸಾಯಿ

ಸಿ. ಆಯ್. ಇ., ಬಾರ್-ಅಟ್-ಲಾ.

ಶ್ರೀಮಂತ ರಾಜಾ

ಲಖಮಗೌಡಾ ಬಸವಪ್ರಭು ಸರದೇಸಾಯಿ

ಒಂದನೆಯ ವರ್ಗ ಸರದಾರ

ಸಿ. ಆಯ್. ಇ., ಬಾರ್-ಆಟ್-ಲಾ.

ಸಂಸ್ಥಾನ ವಂಟಮುರಿ

ಇವರ ಸನ್ನಿಧಾನಕ್ಕೆ

ಆದರಪೂರ್ವಕವಾಗಿ ಅರ್ಪಿಸಿದೆ

ವಿರೂಪಾಕ್ಷಪಂಡಿತಕೃತ

ಚೆನ್ನಬಸವ ಪುರಾಣ

(ಭಾಗ ೧ - ಕಾಂಡಗಳು ೧-೩)

- ಪ್ರಥಮ ಮುದ್ರಣ -

ಪ್ರಕಾಶಕರು:

ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ

ವಾಙ್ಮಯಶಾಖೆ

ಧಾರವಾಡ

೧೯೩೪

ವೀರಭದ್ರಪ್ಪ ರುದ್ರಪ್ಪ ಕೊಪ್ಪಳ, ಎಮ್. ಎ., ಬಿ. ಟಿ., ಇವರು
ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆಯ
ವಾಙ್ಮಯಶಾಖೆಯ ಕಚೇರಿಯಲ್ಲಿ (ಮನೆ ನಂ. ೭೪೨೦) ಪ್ರಕಟಿಸಿದರು.

ವಾಙ್ಮಯ ಶಾಖೆಯ ಸದಸ್ಯರು :

೧ ಶ್ರೀಮಾನ್ ವೀರಭದ್ರಪ್ಪ ಬಸಪ್ಪ ಹಾಲಬಾವಿ, ಬಿ. ಎ., ಎಲ್‌ಎಲ್. ಬಿ.,
ನಿವೃತ್ತ ೧ನೆಯ ವರ್ಗ ಸಬ್‌ಜಜ್ಜ, ಧಾರವಾಡ-ಅಧ್ಯಕ್ಷರು.

೨ ,, ವೀರಭದ್ರಪ್ಪ ರುದ್ರಪ್ಪ ಕೊಪ್ಪಳ, ಎಮ್. ಎ., ಬಿ. ಟಿ.,
ಅಧ್ಯಾಪಕ, ರಾಜಾಲಖಮಗೌಡಾ ಸರದೇಸಾಯಿ ಹಾಯ್‌ಸ್ಕೂಲ, ಧಾರವಾಡ
—ಡೆಪ್ಯುಟಿ ಚೆನ್ನಬಸಪ್ಪ ಪುಸ್ತಕಾಲಯದ ವ್ಯವಸ್ಥಾಪಕ.

೩ ,, ವಿರೂಪಾಕ್ಷಪ್ಪ ಶಿವಯೋಗಪ್ಪ ಬಸವನಾಳ, ಬಿ. ಎ., ಎಲ್‌ಎಲ್. ಬಿ.,
ವಕೀಲ, ಧಾರವಾಡ
—ಲಿಂಗಾಯತ ವಿದ್ಯಾಭಿವೃದ್ಧಿಸಂಸ್ಥೆಯ ಗೌರವ ಕಾರ್ಯದರ್ಶಿ.

೪ ಡಾಕ್ಟರ ಶಿವಲಿಂಗಯ್ಯ ಚೆನ್ನಬಸವಯ್ಯಸ್ವಾಮಿ ನಂದೀಮಠ,
ಎಮ್. ಎ. (ಮುಂಬಯಿ), ಪಿಎಚ್. ಡಿ. (ಲಂಡನ್), ಎಮ್. ಆರ್. ಎ. ಎಸ್.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ, ಪ್ರಿನ್ಸಿಪಾಲ್, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ.

೫ ಶ್ರೀಮಾನ್ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ,
ಎಮ್. ಎ., ಎಮ್. ಆರ್. ಎ. ಎಸ್.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ, ಪ್ರೊಫೆಸರ, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ.

೬ ರಾವಸಾಹೇಬ ಫಕೀರಪ್ಪ ಗುರುಬಸವಪ್ಪ ಹಳಕಟ್ಟಿ, ಬಿ. ಎ., ಎಲ್‌ಎಲ್. ಬಿ.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ,
"ಶಿವಾನುಭವ"ದ ಮತ್ತು "ನವಕರ್ನಾಟಕ"ದ ಸಂಪಾದಕ, ವಿಜಾಪುರ.

೭ ಶ್ರೀಮಾನ್ ಸಿದ್ಧೇಶ್ವರ ಸಿದ್ಧಲಿಂಗಸ್ವಾಮಿ ಮಳಿಮಠ, ಬಿ. ಎ., ಎಲ್‌ಎಲ್. ಬಿ.,
ಆಡ್ವೊಕೇಟ, ಧಾರವಾಡ.

೮ ,, ಬುದ್ಧಯ್ಯ ಮಗೆಯ್ಯಸ್ವಾಮಿ ಪುರಾಣಿಕ, ಧಾರವಾಡ.

ಎಮ್. ಮಧುಲಿಂಗಪ್ಪ ಹರ್ಡೇಕರ ಇವರು ತಮ್ಮ
ಮಾಳಮಡ್ಡಿಯಲ್ಲಿರುವ ಲಿಂಗರಾಜ ಆರ್ಟ ಪ್ರೆಸ್ಸಿನಲ್ಲಿ
(ಮನೆ ನಂ. ೨೨೦) ಮುದ್ರಿಸಿದರು.

ಮುನ್ನುಡಿ

ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ವೀರಶೈವ ವಾಙ್ಮಯವನ್ನು ಪ್ರಸಾರಗೊಳಿಸುವ ಉದ್ದೇಶದಿಂದ ಸನ್ ೧೯೪೫ನೆಯ ಇಸ್ವಿಯಲ್ಲಿ ವಾಙ್ಮಯ ಶಾಖೆಯೊಂದನ್ನು ಏರ್ಪಡಿಸಿದರು. ವಾಙ್ಮಯವನ್ನು ಪ್ರಸಾರಮಾಡುವ ಅನೇಕ ಸಾಧನಗಳಲ್ಲಿ ಪುರಾತನ ಗ್ರಂಥಗಳನ್ನು ಪರಿಶೋಧಿಸಿ ಚೆನ್ನಾಗಿ ಅಚ್ಚುಮಾಡಿಸುವುದು ಒಂದಾಗಿರುವುದು. ಈ ಕಾರ್ಯವನ್ನು ಕೈಕೊಂಡು ವಾಙ್ಮಯ ಶಾಖೆಯವರು ವಿಜಯನಗರದ ವಿರೂಪಾಕ್ಷಪಂಡಿತನಿಂದ ರಚಿತವಾದ ಚೆನ್ನಬಸವಪುರಾಣವನ್ನು ಪ್ರಸಿದ್ಧಿಸುವ ಕಾರ್ಯವನ್ನು ೧೯೪೬ನೆಯ ಇಸ್ವಿಯಲ್ಲಿ ಆರಂಭಿಸಿದರು. ಈ ಗ್ರಂಥವನ್ನೇ ಮೊದಲು ಪ್ರಸಿದ್ಧಿಸಲು ಹಲವು ಕಾರಣಗಳುಂಟು. ಇದರಲ್ಲಿ ವೀರಶೈವ ಮತತತ್ತ್ವಗಳೂ ಪರಶಿವನ ಲೀಲೆಗಳೂ ಸಾಮಾನ್ಯ ಜನರಿಗೆ ತಿಳಿಯುವಂತೆ ವರ್ಣಿತವಾಗಿರುವುವಲ್ಲದೆ ಎಷ್ಟೋ ಐತಿಹಾಸಿಕ ಸಂಗತಿಗಳೂ ಅಡಕವಾಗಿರುವುವು. ಇದನ್ನರಿತೇ ಈ ಪುರಾಣದ ಇಂಗ್ಲಿಷ ಭಾಷಾಂತರವನ್ನು ರೆವ್ಹರೆಂಡ ಜಿ. ವರ್ಥರವರು ಮಾಡಿದ್ದು ಅದು ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ಮುಂಬಯಿ ಶಾಖೆಯ ಪತ್ರಿಕೆ (ಜರ್ನಲ್) ಯ ೫೮-೨೨೧ನೆಯ ಪುಟಗಳಲ್ಲಿ ೧೮೬೫ನೆಯ ಇಸ್ವಿಯಲ್ಲಿ ಪ್ರಸಿದ್ಧವಾಗಿರುತ್ತದೆ. ಈ ಮೊದಲೇ ಇದು ಸಾಮಾನ್ಯ ಜನರಲ್ಲಿ ಸಹ ಪ್ರಚುರವಾಗಿದ್ದರೂ ಇದರ ಶುದ್ಧವಾದ ಪ್ರತಿಯು ದೊರೆಯುವಂತಿಲ್ಲ. ಇತ್ತಿತ್ತಲಾಗಿ ಶಾಲೆಗಳ ಅಭ್ಯಾಸಕ್ರಮದಲ್ಲಿ ಈ ಗ್ರಂಥದ ಭಾಗಗಳನ್ನು ಸೇರಿಸುತ್ತಿರುವುದರಿಂದ ಶುದ್ಧ ಪ್ರತಿಯ ಅಭಾವವು ವಿಶೇಷವಾಗಿ ಅನಿಸಹತ್ತಿತು. ಇನ್ನುಮೇಲೆ ಕಾಲೇಜುಗಳ ಅಭ್ಯಾಸಕ್ರಮದಲ್ಲಿ ಸಹ ಇದರ ಭಾಗಗಳನ್ನು ಸೇರಿಸಬಹುದಾಗಿದೆ. ಇವೇ ಮುಂತಾದ ಕಾರಣಗಳಿಂದ ವಾಙ್ಮಯಶಾಖೆಯವರು ಈ ಗ್ರಂಥವನ್ನು ಮೊದಲು ಹೊರಗೆಡವಿದ್ದಾರೆ.

ಈ ಪ್ರತಿಯನ್ನು ಸಿದ್ಧಪಡಿಸುವಲ್ಲಿ ಉಪಯೋಗವಾದ ಪ್ರತಿಗಳು ಯಾವುವೆಂದರೆ:

ಅ— } ಅಚ್ಚಾದ ಪ್ರತಿಗಳು. ಇವುಗಳ ಆರಂಭದ ಪುಟಗಳು ಹೋಗಿರುವುದರಿಂದ ಯಾವ ಸ್ಥಳದಲ್ಲಿ ಮತ್ತು ಯಾವ ವರುಷ ಇವು
ಬ— } ಅಚ್ಚಾದವೆಂಬುದು ತಿಳಿಯುವಂತಿಲ್ಲ.

ಕ— ಬೆಂಗಳೂರಿನಲ್ಲಿ ೧೯೦೮ನೆಯ ಇಸ್ವಿಯಲ್ಲಿ ಅಚ್ಚಾದದ್ದು.

ಡ— ಬೆಂಗಳೂರಿನಲ್ಲಿ ೧೮೮೬ನೆಯ ಇಸ್ವಿಯಲ್ಲಿ ಅಚ್ಚಾದದ್ದು.

ಮ— ಮಂಗಳೂರಿನಲ್ಲಿ ೧೮೫೧ನೆಯ ಇಸ್ವಿಯಲ್ಲಿ ಶಿಲೆಯಲ್ಲಿ ಅಚ್ಚಾದದ್ದು. ಶ್ರೀಮಾನ್ ಜಿ. ಶಾಂತವೀರಪ್ಪನವರು, ಬಿ. ಎ., ಬೆಂಗ

ಳೂರ, ಇವರಿಂದ ದೊರೆತದ್ದು.

ಕೋ— ಮದ್ರಾಸ ಪ್ರಾಚ್ಯಕೋಶಾಲಯದಲ್ಲಿರುವ ಕಾಗದದ ಮೇಲಿನ ಕೈಬರಹದ ಪ್ರತಿಯು.

ಗೋ — ಕಾಗದದ ಮೇಲಿನ ಕೈಬರಹದ ಪ್ರತಿಯು. ಬೆಳಗಾಂವ ಜಿಲ್ಲೆಯ ಗೋಕಾಕ ಗ್ರಾಮದ ಶ್ರೀಮಾನ್ ಟೆಂಗಿನಮಠದ ಗುರುಲಿಂಗಯ್ಯನವರಿಂದ ದೊರೆತದ್ದು.

ಪ— ಕಾಗದದ ಮೇಲಿನ ಕೈಬರಹದ ಪ್ರತಿಯು. ಧಾರವಾಡ ತಾಲೂಕಿನ ಅಮ್ಮಿನಬಾವಿ ಪಂಚಗ್ರಹಮಠದ ಶ್ರೀ ಪಟ್ಟದಸ್ವಾಮಿಗಳಿಂದ ದೊರೆತದ್ದು. ಇದನ್ನು ಬರೆದು ಪೂರ್ಣಮಾಡಿದ ಕಾಲವು ಸಾಧಾರಣ ಸಂವತ್ಸರ ಆಶ್ವಿನ ಶುದ್ಧ ೬ ಗುರುವಾರ. ಇವುಗಳ ಮೇಲಿಂದ ಇದನ್ನು ಬರೆದ ಶಕವರ್ಷವು ೧೫೩೨ (ಇ. ಸ. ೧೬೧೦) ಎಂದು ಗೊತ್ತಾಗುವುದು.

ಶಿ— ಸನ್ ೧೮೪೯ ನೇ ಇಸ್ವಿಯ ಕಾಗದದ ಮೇಲಿನ ಕೈಬರಹದ ಪ್ರತಿಯು. ವಿಜಾಪುರ ಜಿಲ್ಹೆಯ ಬಾದಾಮಿ ತಾಲೂಕಿನಲ್ಲಿರುವ ಶಿವಯೋಗಮಂದಿರ ಸಂಸ್ಥೆಯಿಂದ ದೊರೆತದ್ದು.

ಹು— ಸನ್ ೧೮೬೬ನೇ ಇಸ್ವಿಯ ಕಾಗದದ ಮೇಲಿನ ಕೈಬರಹದ ಪ್ರತಿಯು. ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀ ಮಹಾಸ್ವಾಮಿಗಳವರಿಂದ ದೊರೆತದ್ದು.

ತು— ಸನ್ ೧೭೪೯ನೇ ಇಸ್ವಿಯ ತಾಳೆವೋಲೆಯ ಪ್ರತಿಯು. ತುಮಕೂರಿನ ಶ್ರೀಮಾನ್ ಶಿವಮೂರ್ತಿಶಾಸ್ತ್ರಿಗಳು ಹುಲಕುಂಟೆಮಠ, ಕೀರ್ತನಕೇಸರಿ, ಕವಿರತ್ನ, ಇವರಿಂದ ದೊರೆತದ್ದು.

ತಾ— ಶಿವಯೋಗಮಂದಿರ ಸಂಸ್ಥೆಯಿಂದ ದೊರೆತ ತಾಳೆವೋಲೆಯ ಪ್ರತಿಯು. ಇದರಲ್ಲಿ ನಾಂದೀಪದ್ಯಗಳಷ್ಟೇ ಇರುವುವು.

ದಾ— ದಾವಣಗೇರಿಯ ಶ್ರೀಮಾನ್ ಮೈಲಾರದ ವೀರಭದ್ರಪ್ಪನವರಿಂದ ದೊರೆತ ತಾಳೆವೋಲೆಯ ಪ್ರತಿಯು. ಈ ಪ್ರತಿಯನ್ನು ಬರೆದ ಕಾಲವು ಗೊತ್ತಾಗುವುದಿಲ್ಲ.

ಮ. ಕೋ. ಗೋ. ಪ. ಶಿ. ಹು. ತು. ತಾ. ದಾ. ಈ ಪ್ರತಿಗಳನ್ನು ವಾಙ್ಮಯ ಶಾಖೆಯವರ ವಿನಂತಿಯ ಮೇರೆಗೆ ಕಳುಹಿಸಿಕೊಟ್ಟು ಶಾಖೆಯ ಕಾರ್ಯಕ್ಕೆ ನೆರವಾದುದಕ್ಕಾಗಿ ಅವುಗಳ ಒಡೆಯರ ಉಪಕಾರವನ್ನು ಶಾಖೆಯವರು ಬಹಳವಾಗಿ ಸ್ಮರಿಸುತ್ತಾರೆ.

ಆರಂಭದಲ್ಲಿ ವಾಙ್ಮಯ ಶಾಖೆಯವರಿಗೆ ಅ. ಬ. ಕ. ಡ. ಶಿ. ಹು. ತಾ.

ಪ್ರತಿಗಳಷ್ಟೇ ದೊರೆತವು. ಅವುಗಳ ಸಹಾಯದಿಂದ ಕೆಲವು ಸಾಮಾನ್ಯ ನಿಯಮಗಳನ್ನನುಸರಿಸಿ ಶುದ್ಧ ಪ್ರತಿಯನ್ನು ಸಿದ್ಧಪಡಿಸಲಿಕ್ಕೆ ಶ್ರೀಮಾನ್ ಶಿವಲಿಂಗಪ್ಪನವರು ಬಸವನಾಳ, ಎಮ್. ಎ., ಪ್ರೊಫೆಸರ, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ. ಶ್ರೀಮಾನ್ ಶಿವಲಿಂಗಯ್ಯನವರು ಮುರಡೂರ, ಸುಪರವಾಯಿಜರ, ಡಿಸ್ಟ್ರಿಕ್ಟ ಲೋಕಲ ಬೋರ್ಡ, ಧಾರವಾಡ, ಡಾಕ್ಟರ ಶಿವಲಿಂಗಯ್ಯನವರು ನಂದೀಮಠ, ಎಮ್. ಎ. (ಮುಂಬಯಿ), ಪಿಎಚ್. ಡಿ. (ಲಂಡನ್), ಪ್ರಿನ್ಸಿಪಾಲ, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ, ಶ್ರೀಮಾನ್ ಬಸವರಾಜಶಾಸ್ತ್ರಿಗಳು ಕೊಡಿಕೊಪ್ಪಮಠ, ಅಧ್ಯಾಪಕ, ಶ್ರೀ ಸಿದ್ಧೇಶ್ವರ ಹಾಯಸ್ಕೂಲ, ವಿಜಾಪುರ, ಶ್ರೀಮಾನ್ ಸಿದ್ಧರಾಮಪ್ಪನವರು ಪಾವಟೆ, ಬಿ. ಎ., ಎಲ್‌ಎಲ್. ಬಿ., ವಕೀಲ, ಹುಬ್ಬಳ್ಳಿ ಮತ್ತು ಶ್ರೀಮಾನ್ ವೀರಭದ್ರಪ್ಪನವರು ಹಾಲಬಾವಿ, ಬಿ. ಎ., ಎಲ್‌ಎಲ್. ಬಿ., ರಿಟಾಯರ್ಡ ಫಸ್ಟ ವರ್ಗ ಸಬ್‌ಜಜ್ಜ, ಧಾರವಾಡ, ಈ ಜನರಿಗೆ ವಿನಂತಿಮಾಡಿಕೊಂಡ ಮೇರೆಗೆ ಅವರು ಕೆಲಕೆಲವು ಭಾಗಗಳನ್ನು ಸಿದ್ಧಪಡಿಸಿ ಕೊಟ್ಟರು. ಆಮೇಲೆ ಹಿಂದಿನಿಂದ ದೊರೆತ ಇತರ ಪ್ರತಿಗಳ ಸಹಾಯದಿಂದ ಈಗಿನ ಪ್ರತಿಯನ್ನು ಶ್ರೀಮಾನ್ ಬಸವನಾಳ ಮತ್ತು ಹಾಲಬಾವಿಯವರು ಸಿದ್ಧಪಡಿಸಿರುವರು. ಶ್ರೀಮಾನ್ ಕೊಟ್ರಯ್ಯನವರು ಬಸೆಟ್ಟಿ, ಅಧ್ಯಾಪಕ, ಪ್ರಾಕ್ಟಿಸಿಂಗ ಸ್ಕೂಲ, ಧಾರವಾಡ, ಇವರು ಎಷ್ಟೋ ಭಾಗವನ್ನು ಅಂದವಾದ ಅಕ್ಷರದಲ್ಲಿ ಬರೆದು ಕೊಟ್ಟರು. ಶ್ರೀಮಾನ್ ಹಾಲಬಾವಿಯವರು ಕೋಶವನ್ನು ತಯಾರಿಸಿದರು. ಶ್ರೀಮಾನ್ ಬಸವನಾಳರವರು ಪ್ರಸ್ತಾವನೆಯನ್ನು ಬರೆದರು. ಇವರಿಬ್ಬರೂ ಮತ್ತು ಶ್ರೀಮಾನ್ ವೀರಭದ್ರಪ್ಪನವರು ಕೊಪ್ಪಳ, ಎಮ್. ಎ., ಬಿ. ಟಿ., ಅಧ್ಯಾಪಕ, ರಾಜಾ ಲಖಮಗೌಡಾ ಸರದೇಸಾಯಿ ಹಾಯಸ್ಕೂಲ, ಧಾರವಾಡ, ಇವರೂ ಕಥಾಸಾರಾಂಶವನ್ನು ತಯಾರಿಸಿದರು. ಶ್ರೀಮಾನ್ ಬುದ್ದಯ್ಯನವರು ಪುರಾಣಿಕ, ಧಾರವಾಡ, ಇವರು ಕಾಲಕಾಲಕ್ಕೆ ಎಷ್ಟೋ ಉಪಯುಕ್ತ ಸಲಹೆಗಳನ್ನು ಕೊಟ್ಟರು. ಇವರೆಲ್ಲರಿಗೆ ವಾಙ್ಮಯ ಶಾಖೆಯವರು ಅತ್ಯಂತ ಋಣಿಯಾಗಿದ್ದಾರೆ.

ಮುದ್ರಾದ ಅಚ್ಚಿನ ಜೊತೆಗೆ ಸರಿಯಾದ ಚಿತ್ರಗಳಿದ್ದರೆ ನೇತ್ರಗಳಿಗೆ ಹೆಚ್ಚು ಆನಂದವುಂಟಾಗುವುದು. ಸಾಂಪ್ರತ ಕಾಲದಲ್ಲಿ ಜನರೊಳಗೆ ಚಿತ್ರಗಳ ಪ್ರಚಾರವು ವಿಶೇಷವಾಗಿರುವುದು. ಈ ಕಾರಣಗಳಿಂದ ಕೆಲವು ಚಿತ್ರಗಳನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಇವುಗಳ ವಿವರವು:-

ಚಿತ್ರಗಳ ಹೆಸರು	ಬರೆದವರು
ಪ್ರಸಾದಸೇವಿಸುವ ನಾಗಲಾಂಬಿಕೆ ಚೆನ್ನಬಸವೇಶನ ಪುಷ್ಪಕೋತ್ಸವ	ಶ್ರೀಮಾನ್ ಮುರಿಗೆಪ್ಪನವರು ಚೆಟ್ಟಿ, ಜಿ. ಡಿ. ಆರ್ಟ್, ಕೊಲ್ಹಾಪುರ

ಭಿಕ್ಷಾಟನ ಲೀಲೆ	ಶ್ರೀಮಾನ್ ಗಂಗಾಧರಯ್ಯನವರು ದಂಡಾವತಿಮಠ, ಜಿ. ಡಿ. ಆರ್ಟ, ಮುಂಬಯಿ
ಜಲಂಧರನ ನಾಮಕರಣ ಕಾಮದಹನ ಸಿದ್ಧರಾಮೇಶನ ಲಿಂಗದೀಕ್ಷೆ	ಶ್ರೀಮಾನ್ ಮಡಿವಾಳಪ್ಪನವರು ಮಿಣಜಿಗಿ, ಎ. ಆರ್. ಸಿ ಎ. (ಲಂಡನ್), ಎ. ಎಮ್., ಜಿ. ಡಿ. ಆರ್ಟ (ಮುಂಬಯಿ)
ವೀರಭದ್ರಾವತಾರ	ಶ್ರೀಮಾನ್ ದ್ಯಾವಪ್ಪನವರು ಬಡಿಗೇರ, ರಾಯಲ್ ಎಕೆಡೆಮಿ (ಲಂಡನ್), ಜಿ. ಡಿ. ಆರ್ಟ (ಮುಂಬಯಿ) ಇನ್ಸ್‌ಪೆಕ್ಟರ ಆಫ್ ಡ್ರಾಯಿಂಗ ಮತ್ತು ಕ್ರಾಫ್ಟ ವರ್ಕ, ಮುಂಬಯಿ
ಅಂಧಕಾಸುರನ ಓಲಗ	ಶ್ರೀಮಾನ್ ಚಂದ್ರಶೇಖರಪ್ಪನವರು ಕಾರಡಗಿ, ಜಿ. ಡಿ. ಆರ್ಟ, ಗುರ್ಲಹೊಸೂರ ತಾ. ಬೈಲಹೊಂಗಲ
ಗಿರಿಜಾಕಲ್ಯಾಣ ಅರ್ಜುನನಿಗೆ ಪಾಶುಪತಾಸ್ತ್ರದಾನ	ಶ್ರೀಮಾನ್ ದಾನಪ್ಪನವರು ಹಾಲಬಾವಿ, ಧಾರವಾಡ

ಇವುಗಳಲ್ಲಿ ಪ್ರತಿಯೊಂದು ಚಿತ್ರವು ಅದನ್ನು ಬರೆದವರ ಯೋಗ್ಯತೆಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆಂಬುವುದು ನೋಡುವವರಿಗೆ ಗೋಚರವಾಗದಿರದು. ಇವರೆಲ್ಲರು ಚಿತ್ರಗಳನ್ನು ಉಚಿತವಾಗಿ ಬರೆದು ಕೊಟ್ಟಿರುವರು. ಶ್ರೀಮಾನ್ ದಾನಪ್ಪನವರು ಹಾಲಬಾವಿ ಇವರು 'ಕಥಾಸಾರಾಂಶ' ದ ೧೫೫ ನೆಯ ಪುಟದ ಮೇಲಿನ 'ಷಟ್ಚಕ್ರ-ವಿವರ' ದ ಚಿತ್ರವನ್ನು ಶ್ರೀಮಾನ್ ಮಲ್ಲಿಕಾರ್ಜುನಪ್ಪ ಪಟ್ಟೇದ, ವೆಟರಿನರಿ ಡಾಕ್ಟರ, ಧಾರವಾಡ, ಇವರ ಸಲಹೆಯ ಮೇರೆಗೆ ತೆಗೆದುಕೊಟ್ಟದಲ್ಲದೆ ಜಾತ್ರೆಯ ಕಾಲಕ್ಕೆ ಶ್ರೀ ಉಳುವೆಯ ಕ್ಷೇತ್ರಕ್ಕೆ ಹೋಗಿ ಅಲ್ಲಿಯ ಚೆನ್ನಬಸವೇಶ್ವರ ದೇವಾಲಯದ ಮತ್ತು ರಥೋತ್ಸವದ ನಕ್ಷೆ (ಫೋಟೋ) ಗಳನ್ನು ತೆಗೆದು ತಂದುಕೊಟ್ಟರು. ಈ ಮಹನೀಯರೆಲ್ಲರಿಗೆ ವಾಙ್ಮಯಶಾಖೆಯವರು ವಿಶೇಷವಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ.

ಈ ಗ್ರಂಥವನ್ನೂ ಇದರಲ್ಲಿ ಸೇರಿಸಿದ ಚಿತ್ರಗಳನ್ನೂ ವಿಶೇಷ ಶ್ರಮವಹಿಸಿ ಮುದ್ದಾಗಿಯೂ ಅಚ್ಚುಕಟ್ಟಾಗಿಯೂ ಮುದ್ರಿಸಿಕೊಟ್ಟ ಶ್ರೀಮಾನ್ ಮಧುಲಿಂಗಪ್ಪನವರು ಹರ್ಡೇಕರ, ಧಾರವಾಡ, ಇವರಿಗೆ ಶಾಖೆಯವರು ತುಂಬಾ ಉಪಕೃತರಾಗಿರುತ್ತಾರೆ.

ಈ ಗ್ರಂಥವನ್ನು ಆರಂಭಿಸಿದಂದಿನಿಂದ ಸುಮಾರು ಮೂರು ವರುಷಗಳೊಳಗಾಗಿ ಇದನ್ನು ಮುಗಿಸಿ ಹೊರಗೆಡಹುವಂತೆ ಅನುಗ್ರಹಿಸಿದ ಶ್ರೀ ಚೆನ್ನಬಸವೇಶ್ವರ ದೇವರನ್ನು ವಾಙ್ಮಯಶಾಖೆಯವರು ಅಂತಃಕರಣಪೂರ್ವಕವಾಗಿ ಸ್ಮರಿಸುತ್ತಾರೆ.

ಧಾರವಾಡ
೧೬-೭-೧೯೩೪

ವೀರಭದ್ರಪ್ಪಾ ಹಾಲಬಾವಿ,
ಲಿ. ವಿ. ಸಂಸ್ಥೆಯ ವಾಙ್ಮಯಶಾಖೆಯ ಅಧ್ಯಕ್ಷ.

೧ನೆಯ ಭಾಗದ ಪರಿವಿಡಿ

ಪ್ರಥಮ ಕಾಂಡ

ದ್ವಿತೀಯ ಕಾಂಡ

ತೃತೀಯ ಕಾಂಡ

ಚಿತ್ರಗಳು

ಪ್ರಸ್ತಾವನೆ

ಕವಿಯ ಹೆಸರು - ಸ್ಥಾನ - ಕಾಲ - ಮತ ಇತ್ಯಾದಿ

ಶ್ರೀಚೆನ್ನಬಸವೇಶ್ವರದೇವರಪುರಾಣವೆಂಬ ಈಗ್ರಂಥವನ್ನು ರಚಿಸಿದ ಕವಿಯು ವಿರೂಪಾಕ್ಷಪಂಡಿತಾರಾಧ್ಯನೆಂಬುವನು. ಈತನ ವಾಸಸ್ಥಾನವು ಇತಿಹಾಸಪ್ರಸಿದ್ಧವಾದ ವಿಜಯನಗರವು. ಈತನ ಜನನಮರಣಕಾಲಗಳು ಗೊತ್ತಾಗುವಂತಿಲ್ಲವಾದರೂ ಕ್ರಿ. ಶ. ೧೬ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದನೆಂದು ಸ್ಥೂಲವಾಗಿ ಹೇಳಬಹುದು. ಈಕಾಲದಲ್ಲಿ ವಿಜಯನಗರದ ಕಡೆಯವಂಶ(ಅರವೀಡು ವಂಶ)ದ ರಾಜರು ಆಳುತ್ತಿದ್ದರು. ತಾಳಿಕೋಟೆಯ ಕಾಳೆಗವು ಈಕವಿಯ ಜೀವಿತಕಾಲದಲ್ಲಿಯೆ ಆಯಿತೆಂದು ಊಹಿಸಬಹುದು. ಕವಿಯು ಚೆನ್ನಬಸವಪುರಾಣವನ್ನು ರಚಿಸಿದ ಕಾಲವೂ[1] ವಿಜಯನಗರದ ಕೊನೆಯ ಕಾಲವೂ (ಕ್ರಿ. ಶ. ೧೫೬೫) ಒಂದೇಯೆಂದು ಕಂಡುಬರುತ್ತದೆ.

ವಿರೂಪಾಕ್ಷಪಂಡಿತನು ವೀರಶೈವನು. ವಿಜಯನಗರದ ಹಿರಿಯಮಠಕ್ಕೆ ಸೇರಿದವನು. ತಾಯಿತಂದೆಗಳ ಹೆಸರುಹೇಳದೆ ಗುರುಪರಂಪರೆಯನ್ನು ಮಾತ್ರ ಹೇಳಿರುವನು. ಆದುದರಿಂದ ಈತನು ಸಂಸಾರಿಕನಾಗಿರದೆ ಪಟ್ಟಾಧಿಕಾರಿಯಾಗಿದ್ದನೆಂದು ತಿಳಿಯಬಹುದು. ಈತನು ವೀರಶೈವಗುರುಗಳಲ್ಲಿ ಸುಪ್ರಸಿದ್ಧನಾದ ಮಳೆಯಮಲ್ಲೇಶನ ಸಂಪ್ರದಾಯಕ್ಕೆ ಸೇರಿದವನು. ವಿಜಯನಗರದ ಹಿರಿಯಮಠದ ಸಿದ್ಧವೀರೇಶನು ಈಕವಿಯ ಗುರು. ಇವರಿರ್ವರನ್ನು ಕವಿಯು ವಿಶೇಷವಾಗಿ ಹೊಗಳಿದ್ದಾನೆ.[2] ಕರ್ಣಾಟಕದಲ್ಲಿ ಪ್ರಾಚೀನಕಾಲದಿಂದಲೂ ಪ್ರಸಿದ್ಧಪುಣ್ಯಕ್ಷೇತ್ರವೆಂದು ಹೆಸರುಗೊಂಡ ಹಂಪೆಯ ಶ್ರೀವಿರೂಪಾಕ್ಷಲಿಂಗವು ಹರೀಶ್ವರ, ರಾಘವಾಂಕ ಮೊದಲಾದ ಅನೇಕ ಕನ್ನಡಕವಿಗಳಿಗೆ ಇಷ್ಟದೇವತೆಯಾಗಿದ್ದಂತೆ ಈತನಿಗೂ ಇಷ್ಟದೇವತೆಯಾಗಿದ್ದಿತು.

ವಿರೂಪಾಕ್ಷಪಂಡಿತನು 'ಕರ್ಣಾಟಕದ ಬೆಡಗು'ಗಳನ್ನು[3] ಬಲ್ಲ ಕವಿ. ಒಳ್ಳೆಯ ಪಂಡಿತನೂ ಅಹುದು. ಮೇಲಾಗಿ ವೀರಶೈವಾಚಾರಸಂಪನ್ನನೂ ಷಟ್‌ಸ್ಥಲಬ್ರಹ್ಮದಾಚರಣೆಯನ್ನು ಚೆನ್ನಾಗಿ ಅರಿತವನೂ ಆಗಿದ್ದನು. 'ಪರಕವಿಗಳ ನಾಲಗೆ ಕಿವಿ-ಮನ

೧. ಸ. ೬೩ ಪ. ೭೭ರಲ್ಲಿ ಈಗ್ರಂಥವು ಶಾಲಿವಾಹನಶಕ ೧೫೦೭ನೆಯ [illegible] ಬಹುಳ [illegible] ಗುರುವಾರ ದಿವಸ ಮುಗಿಯಿತೆಂದು ಹೇಳಿದೆ. ಈದಿವಸವು ಕ್ರಿ. ಶ. ೧೫೮೫ನೆಯ [illegible] ಆಗುವುದೆಂದು ಶ್ರೀ. ಗೋವಿಂದ ಪೈ ಇವರು '[illegible]' [illegible] ಲೇಖದಲ್ಲಿ ಹೇಳುತ್ತಾರೆ. ೨. ಸ. ೧ ಪ. ೧೮-೨೨ ೩. ಸ. ೭ ಪ. ೧೦

ಗಳನ್ನು ಸೆಳೆಯುವಂತಹ ಕವಿತ್ವಶಕ್ತಿಯು ತನ್ನಲ್ಲಿತ್ತೆಂದೂ, ತಾನು 'ಸಕಲಾಗಮ ಕೋವಿದ'ನೂ, 'ಸರಸಕರ್ಣಾಟಾದಿಭಾಷಾವಿಶಾರದ'ನೂ, 'ವರಕವಿಪ್ರಕರಮಾನಸ ರಾಜಹಂಸ'ನೂ ಆಗಿದ್ದನೆಂದು ತನ್ನ ಗ್ರಂಥದಲ್ಲಿ[1] ಹೇಳಿಕೊಂಡಿದ್ದಾನೆ. ತನ್ನನ್ನು ಜನರು 'ನೂತನಪಂಡಿತಾರಾಧ್ಯ'ನೆಂದು[2] ಹೊಗಳುತ್ತಿದ್ದರೆಂದು ಹೇಳುತ್ತಾನೆ.

ಚೆನ್ನಬಸವಪುರಾಣವನ್ನು ರಚಿಸಲು ಕಾರಣವನ್ನು ಕವಿಯು ಈರೀತಿಯಾಗಿ ಹೇಳುತ್ತಾನೆ: 'ಸಕಲಶಿವಶರಣರ ಕಥೆಗಳನ್ನು ಕವೀಶ್ವರರು ಈಗಾಗಲೆ ಹೇಳಿರುವರಾದರೂ ಚೆನ್ನಬಸವೇಶ್ವರಚರಿತೆಯನ್ನು ಯಾರೂ ಬರೆದಿಲ್ಲ; ಆದುದರಿಂದ ಅದನ್ನು ಬರೆಯಲು ಕೈಕೊಳ್ಳಬೇಕೆಂದೂ, ಅದಕ್ಕೆ ಕವಿಯು ಎಲ್ಲಂದದಿಂದಲೂ ಯೋಗ್ಯನಾಗಿರುವನೆಂದೂ ಸಕಲಶಿವಭಕ್ತಸಂಕುಲವು ತನ್ನನ್ನು ಕೇಳಿಕೊಂಡುದುದರಿಂದ ಅವರ ಬೇಡಿಕೆಯನ್ನು ಮನ್ನಿಸಿ ತಾನು ಈಗ್ರಂಥವನ್ನು ನಿರವಿಸಿದೆನೆ'ಂದು[3] ಹೇಳುತ್ತಾನೆ. ಕವಿಯು ಈಗ್ರಂಥವನ್ನು ಶಾಲಿವಾಹನದ ೧೫೦೭ ತಾರಣ[4] ಸಂವತ್ಸರ (ಕ್ರಿ. ಶ. ೧೫೮೫) ದಲ್ಲಿ ಮುಗಿಸಿದಂತೆ ಹೇಳಿದ್ದಾನೆ. ಈತನು ಚೆನ್ನಬಸವಪುರಾಣದ ಹೊರತು ಬೇರೆ ಗ್ರಂಥಗಳನ್ನು ಬರೆದಂತೆ ತೋರುವುದಿಲ್ಲ.

ಗ್ರಂಥವಿಚಾರ - ಪ್ರಶಸ್ತಿ ಇತ್ಯಾದಿ

ಈಗ್ರಂಥವನ್ನು ಕವಿಯು ೫ ಕಾಂಡಗಳಾಗಿ ವಿಭಾಗಿಸಿದ್ದಾನೆ. ಇದರಲ್ಲಿ ಒಟ್ಟು ೬೩ ಸಂಧಿಗಳೂ ೨೯೦೬ ಪದ್ಯಗಳೂ ಉಂಟು. ಪ್ರತಿಯೊಂದು ಸಂಧಿಯ ಆರಂಭದಲ್ಲಿ ಸೂಚನೆಯಾದನಂತರ ಮೊದಲನೆಯ ಪದ್ಯವು ಪಂಪಾವಿರೂಪಾಕ್ಷನ ಸ್ತುತಿ[5]ಯಾಗಿರುತ್ತದೆ. ಈ ಸ್ತುತಿಪದ್ಯಗಳಲ್ಲಿ ಕವಿಯು ಕಷ್ಟಾಕ್ಷರಪ್ರಾಸ, ಅನುಪ್ರಾಸ, ಯಮಕ, ಶ್ಲೇಷ, ಉಕ್ತಿಚಮತ್ಕಾರ ಮೊದಲಾದುವುಗಳನ್ನು ಚೆನ್ನಾಗಿ ಸಾಧಿಸಿದ್ದಾನೆ. 'ಚೆನ್ನಬಸವಪುರಾಣದ ನಾಂದೀಪದ್ಯಗಳು' ಎಂಬ ಹೆಸರಿನ ತಾಡವಾಲಿಯ ಪ್ರತಿಗಳು ಅಲ್ಲಲ್ಲಿ[6] ದೊರೆಯುತ್ತಿದ್ದು, ಅವುಗಳಲ್ಲಿ ಈಗ್ರಂಥದ ಪೀಠಿಕಾಸಂಧಿಯೊಳಗಿನ ಮೊದಲಿನ ೧೭ (ಸ್ತುತಿ) ಪದ್ಯಗಳೂ ಉಳಿದ ೬೨ ಸಂಧಿಗಳೊಳಗಿನ ಆರಂಭದ ಸ್ತುತಿಪದ್ಯಗಳೂ ಕೂಡಿ ಒಟ್ಟಿಗೆ ೭೯ ಪದ್ಯಗಳು ದೊರೆಯುವುದರಿಂದ ಈಪದ್ಯಗಳು ನಿತ್ಯಪಾರಾಯಣಕ್ಕೆ ಯೋಗ್ಯವಾಗಿವೆವೆಂದು ತಿಳಿದು ಇವುಗಳನ್ನು ಜನರು ಪ್ರತ್ಯೇಕವಾಗಿ ಬರೆ

೧. ಸ. ೧ ಪ. ೨೩, ೨೭; ಸ. ೧೧ ಪ. ೫೫ ೨. ಸ. ೧ ಪ. ೨೪ ೩. ಸ. ೧ ಪ. ೨೪, ೨೫ ೪. ತಾರಣ ಸಂವತ್ಸರವು ಲೆಕ್ಕದಿಂದ ಶಕೆ ೧೫೦೬ ಆಗುತ್ತದೆ. ೫. ಆದರೆ ಸಂಧಿ ೭ರ ಸ್ತುತಿಪದ್ಯದಲ್ಲಿ 'ವಿರೂಪಾಕ್ಷ' ಎಂಬುದರ ಬದಲಾಗಿ 'ಶಿವ' ಎಂದು ಇದೆ. ಸಂಧಿ ೬೦ರ ಸ್ತುತಿಪದ್ಯದಲ್ಲಿ 'ವಿರೂಪಾಕ್ಷ' 'ಶಿವ' ಎಂಬಿವೆರಡೂ ಇಲ್ಲ. ಇದರಂತೆಯೆ ೧೨, ೨೭, ೪೧, ೪೪, ೪೫ ಈಸಂಧಿಗಳ ಸ್ತುತಿಪದ್ಯಗಳಲ್ಲಿಯೂ 'ವಿರೂಪಾಕ್ಷ' ಎಂಬುದು ಇಲ್ಲ. ೬. ಮೈಸೂರ ಅರಮನೆಯ ಭಾಂಡಾರದಲ್ಲಿ ಒಂದು ಪ್ರತಿಯಿದೆ. ಶಿವಯೋಗಮಂದಿರದಲ್ಲಿಯೂ ಒಂದುಪ್ರತಿಯುಂಟು.

ವಿಟ್ಟುಕೊಳ್ಳುತ್ತಿದ್ದರೆಂದು ತರ್ಕಿಸಬಹುದು. ಈಗ್ರಂಥದಲ್ಲಿ ಪ್ರತಿಸಂಧಿಯ ಕೊನೆಯ ಪದ್ಯವು ಒಂದೇಯಾಗಿಯೂ ಪ್ರತಿಕಾಂಡದ ಕೊನೆಯ ಪದ್ಯವು[1] ಒಂದೇ ವಿಧವಾಗಿಯೂ ಇರುವುವು.

ವಿಷಯ - ವರ್ಣನೆ ಮುಂತಾದುವು

ಈಗ್ರಂಥಕ್ಕೆ 'ಚೆನ್ನಬಸವೇಶ್ವರಪುರಾಣ'ವೆಂಬ ಹೆಸರು ಇರುವುದರಿಂದ ಇದರಲ್ಲಿ ಚೆನ್ನಬಸವೇಶ್ವರನ ಚರಿತ್ರೆಯು ಸಂಪೂರ್ಣವಾಗಿ ಬಂದಿರಬೇಕೆಂಬ ಗ್ರಹಿಕೆಯು ಆಗುವುದುಂಟು. ಆದರೆ ಪೀಠಿಕಾಸಂಧಿಯ ಸೂಚನೆಯಲ್ಲಿ ಕವಿಯು 'ಸಿದ್ಧರಾಮೇಶನಿಗೆ ಚೆನ್ನಬಸವೇಶ್ವರನು ಶಿವತತ್ತ್ವವನ್ನು ತಿಳಿಸಿ ದೀಕ್ಷೆಕೊಟ್ಟ ಕಥೆ' ಎಂದು ಹೇಳಿದ್ದಾನೆ. ಆದುದರಿಂದ ಇದರಲ್ಲಿ ಮುಖ್ಯಚರಿತ್ರಭಾಗವು ಅಲ್ಪವಾಗಿಯೇ ಇರುತ್ತದೆ. ಮೊದಲನೆಯ ಕಾಂಡದಲ್ಲಿ ಚೆನ್ನಬಸವೇಶನ ಜನ್ಮ-ಬಾಲ್ಯ-ಪೌಢಾವಸ್ಥೆ ಈವಿಷಯಗಳು ಹೆಚ್ಚು ವಿಸ್ತಾರವಾಗಿ ಬಂದಿವೆ. ಮುಂದಿನ ಚರಿತ್ರಭಾಗವು ಕಾಲಜ್ಞಾನರೂಪದಿಂದ ಐದನೆಯ ಕಾಂಡದಲ್ಲಿ ಸಂಗ್ರಹವಾಗಿ ಬಂದಿದೆ. ಎರಡು-ಮೂರು-ನಾಲ್ಕು ಈಕಾಂಡಗಳಲ್ಲಿ ಈಶ್ವರನ ಪಂಚವಿಂಶತಿಲೀಲೆಗಳನ್ನು ವಿಸ್ತಾರವಾಗಿ ಬಣ್ಣಿಸಿದ್ದಾನೆ. ಐದನೆಯ ಕಾಂಡದಲ್ಲಿ ವೀರಶೈವಮತತತ್ತ್ವ - ಷಟ್ಸ್ಥಲಜ್ಞಾನಗಳೂ, ೬೩ ಪುರಾತನರು - ತೇರಸರು - ಷೋಡಶರು, ೭೭೦ ಅಮರಗಣಂಗಳು - ೧೦೧ ವಿರಕ್ತರು ಇವರ ಸಂಕ್ಷಿಪ್ತ ಇತಿಹಾಸವೂ ಅಡಕವಾಗಿರುತ್ತವೆ. ಬಿಜ್ಜಳರಾಯ, ಆನೆಗೊಂದಿಯ ಅರಸರು, ವಿಜಯನಗರದ ರಾಜ್ಯ ಮತ್ತು ರಾಜರು ಇವರ ಬಗ್ಗೆಯೂ ಇದರಂತೆ ಅನೇಕ ವೀರಶೈವಕವಿಗಳ ಬಗ್ಗೆಯೂ ಎಷ್ಟೋ ಐತಿಹಾಸಿಕ ಸಂಗತಿಗಳು ಐದನೆಯ ಕಾಂಡದಲ್ಲಿ ದೊರೆಯುತ್ತವೆ. ಚೆನ್ನಬಸವಪುರಾಣದಲ್ಲಿ ಬರುವ ಮುಖ್ಯಸಂಗತಿಗಳನ್ನು ಕವಿಯೇ ಪೀಠಿಕಾಸಂಧಿಯ ೩೭-೩೯ನೆಯ ಪದ್ಯಗಳಲ್ಲಿ ಹೇಳಿದ್ದಾನೆ.

ಹೆಸರಿನಿಂದಲೂ ವಿಷಯದಿಂದಲೂ ಪುರಾಣವೆನಿಸಿಕೊಂಡ ಈಗ್ರಂಥವನ್ನು ಜನರು ಮಹಾಕಾವ್ಯವೆಂದು ಅಂಗೀಕರಿಸಬೇಕೆಂಬ ಉದ್ದೇಶದಿಂದ ಮಹಾಕಾವ್ಯದ ಅಂಗಗಳಾದ ೧೮ ಮುಖ್ಯವರ್ಣನೆಗಳನ್ನೂ ಹಲವು ಉಪವರ್ಣನೆಗಳನ್ನೂ ಕವಿಯು ಈಗ್ರಂಥದಲ್ಲಿ ಅಲ್ಲಲ್ಲಿ ಸೇರಿಸಿದ್ದಾನೆ. ಪೀಠಿಕಾಸಂಧಿ ಪದ್ಯ ೩೭ರಲ್ಲಿ ಈತನು ಹೇಳಿದ

ಋತು ನಂದನಂ ತರಣಿ ಶಶಿ ಶರಧಿ ಪರಿಣಯಂ |
ರತಿ ನಗರಿ ಗಿರಿ ಸುತಂ ನಾರಿ ಮಧು ವಿರಹಮುಂ |
ನತದಂಡಯಾತ್ರೆ ಯಾನಂ ರಣಂ ನೃಪರೋಳ್ಗೆ ರಾಜಮಂತ್ರಂಗಳೆಂಬ ||

---

೧. ಈಕಾಂಡಾಂತ್ಯದ ಪದ್ಯವು 'ದಾ' ಪ್ರತಿಯಲ್ಲಿ ಸಂಧಿಯ ಕಡೆಯ ಪದ್ಯದ ರೂಪವಾಗಿ ಬರುತ್ತದೆ. ಉಳಿದ ಪ್ರತಿಗಳಲ್ಲಿ ಮೊದಲು ಬರುತ್ತದೆ.

ಈ ೧೮ ವರ್ಣನೆಗಳಿಗೂ ಮಲ್ಲಿಕಾರ್ಜುನನು ತನ್ನ ಸೂಕ್ತಿಸುಧಾರ್ಣವದಲ್ಲಿ ಹೇಳಿದ ವರ್ಣನೆಗಳಿಗೂ ಸ್ವಲ್ಪ ವ್ಯತ್ಯಾಸವಿದ್ದಂತೆ ತೋರುತ್ತದೆ. ಇವನ ವರ್ಣನೆಗಳಲ್ಲಿ ವಸಂತ ವರ್ಣನೆ, ಗಿರಿಜಾಪರಿಣಯ, ಸೂರ್ಯಾಸ್ತ, ಚಂದ್ರೋದಯ, ರತಿಪ್ರಲಾಪ ಮೊದಲಾದುವುಗಳು ಬಹು ಹೃದಯಂಗಮವಾಗಿವೆ. ರಣವರ್ಣನೆಯು ಈಗ್ರಂಥದಲ್ಲಿ ಬಹಳಸಾರೆ ಬರುವುದಾದರೂ ಪ್ರತಿಯೊಂದು ಕಡೆಗೆ ಒಂದಿಲ್ಲ ಒಂದು ವಿಶೇಷವಿರುವುದರಿಂದ ವಾಚಕರಿಗೆ ಬೇಸರಬರುವ ಕಾರಣವಿಲ್ಲ. ಈವರ್ಣನೆಗಳಲ್ಲಿ ಹಲವು ಕಥಾವಿಷಯದೊಡನೆ ಬೆರೆದು ಬರುತ್ತವೆ; ಕೆಲವು ಮಾತ್ರ ಸ್ವತಂತ್ರವಾಗಿ ಬಂದಿರುತ್ತವೆ. ಉದಾಹರಣಾರ್ಥವಾಗಿ ಶೃಂಗಾರಪ್ರಚುರವಾದ ರಾತ್ರಿವಿಹಾರದ ವರ್ಣನೆಯನ್ನು ನೋಡಬಹುದು. ಈವರ್ಣನೆಗಾಗಿ ಕವಿಯು ೨ ಸಂಧಿಗಳನ್ನೂ ಸುಮಾರು ೧೦೦ ಪದ್ಯಗಳನ್ನೂ ವೆಚ್ಚಮಾಡಿದ್ದಾನೆ. ಈವರ್ಣನೆಯು ಮಹಾಕಾವ್ಯಕ್ಕೆ ಆವಶ್ಯಕವಾದ ಒಂದು ಅಂಗವಾದುದರಿಂದಲೂ ಇದರಲ್ಲಿ ಪ್ರಚುರವಾದ ಶೃಂಗಾರವು ಮಹಾಕಾವ್ಯಕ್ಕೆ ಬೇಕಾದ ಒಂದು ರಸವಾದುದರಿಂದಲೂ ಎಲ್ಲಾ ಪ್ರಾಚೀನಕವಿಗಳು ಇದನ್ನು ತಮ್ಮ

೧. ಈ ೧೮ ವರ್ಣನೆಗಳು ಈಗ್ರಂಥದಲ್ಲಿ ಮುಖ್ಯವಾಗಿ ಕೆಳಗೆ ಕಾಣಿಸಿದ ಎಡೆಗಳಲ್ಲಿ ಬಂದಿರುವುವು.

(೧) ಋತು (ವಸಂತವರ್ಣನೆಯೊಂದೇ ಇದರಲ್ಲಿ ಬಂದಿದೆ.)	ಸ. ೪೫ ಪ. ೯-೨೪	(೯) ಗಿರಿ	ಸ. ೨ ಪ. ೮-೧೨
			ಸ. ೩೪ ಪ. ೧೪-೧೬
(೨) ನಂದನ:		(೧೦) ಸುತ	ಸ. ೫ ಪ. ೨೬-೩೦
ನಗರೋಪವನ	ಸ. ೧೧ ಪ. ೨೦-೨೮		ಸ. ೫ ಪ. ೩೪-೪೨
ತೋಟ	ಸ. ೪೫ ಪ. ೨೫-೨೭	(೧೧) ವಾರಿ:	
ಪುಷ್ಪಾಪಚಯ	ಸ. ೪೫ ಪ. ೩೬-೪೩	ಸರಸ್ಸು	ಸ. ೪೫ ಪ. ೪೪-೫೧
(೩) ಸೂರ್ಯ:		ಜಲಕ್ರೀಡೆ	ಸ. ೪೫ ಪ. ೫೩-೬೬
ಉದಯ	ಸ. ೪ ಪ. ೭	(೧೨) ಮಧು	ಸ. ೧೦ ಪ. ೭೧-೭೪
ಅಸ್ತ	ಸ. ೯ ಪ. ೨-೯	(೧೩) ವಿರಹ	ಸ. ೧೦ ಪ. ೬೫-೬೭
	ಸ. ೪೨ ಪ. ೩		ಸ. ೧೯ ಪ. ೨೯-೪೪
(೪) ಚಂದ್ರ:		(೧೪) ದಂಡಯಾತ್ರೆ	ಇವು ಹಲವು ಕಡೆಗಳಲ್ಲಿ ಬಂದಿವೆ. ೧೬, ೨೩-೨೬, ೨೮, ೩೧, ೩೨, ೩೮-೪೪, ೪೭-೫೦ ಇತ್ಯಾದಿ ಸಂಧಿಗಳನ್ನು ನೋಡುವುದು.
ಉದಯ	ಸ. ೯ ಪ. ೧೭-೨೫	(೧೫) ಯಾನ	
ಅಸ್ತ	ಸ. ೧೦ ಪ. ೮೧	(೧೬) ರಣ	
(೫) ಸಮುದ್ರ	ಸ. ೨ ಪ. ೩-೫	(೧೭) ನೃಪರೇಳ್ಗೆ	
	ಸ. ೨೨ ಪ. ೮-೯		
(೬) ವಿವಾಹ	ಸ. ೩೭ ಪ. ೨-೮೩		
(೭) ರತಿ	ಸ. ೧೦ ಪ. ೫೮-೬೩	(೧೮) ರಾಜಮಂತ್ರ	ಸ. ೮ ಪ. ೩-೨೦
(೮) ನಗರ	ಸ. ೧೧ ಪ. ೩೦-೪೭		ಸ. ೫೦ ಪ. ೨-೯

ಇಲ್ಲಿ ಹೇಳಿರುವ ಕಡೆಗಳಲ್ಲಿ ಮಾತ್ರವಲ್ಲದೆ ಇತರ ಕೆಲವೆಡೆಗಳಲ್ಲಿ ಕೆಲವು ವರ್ಣನೆಗಳು ಪ್ರಸಕ್ತವಾಗಿವೆ. ೨. ಸ. ೩೫ ಪ. ೨೪-೩೩ ೩. ೨೩-೨೬, ೩೧-೩೨, ೩೮-೪೦, ೪೧-೪೪, ೪೭-೫೦ನೆಯ ಸಂಧಿಗಳನ್ನು ನೋಡಬಹುದು. ಇವುಗಳಲ್ಲಿ ಮಲ್ಲಯುದ್ಧ, ಮುಷ್ಟಿಯುದ್ಧ, ಕೋಂಟಗಾಳಗ, ಮಾಯಾಯುದ್ಧ ಮೊದಲಾದುವು ಬರುತ್ತವೆ. ೪. ಸಂಧಿ ೯-೧೦

ಗ್ರಂಥಗಳಲ್ಲಿ ಸೇರಿಸಲಿಕ್ಕೆ ಅನುಕೂಲವಾದ ಎಡೆಗಳನ್ನು ಹೇಗಾದರೂ ಕಲ್ಪಿಸಿಕೊಳ್ಳುತ್ತಿದ್ದರು. ಮೇಲಾಗಿ ಓದುಗರಿಗೂ ಈವರ್ಣನೆಯು ಹೆಚ್ಚು ರುಚಿಸುತ್ತಿತ್ತೆಂದು[೧] ತಿಳಿದು ಕವಿಗಳು ಇದನ್ನು ಸ್ವಲ್ಪ ವಿಸ್ತಾರವಾಗಿಯೇ ಬರೆಯುವುದುಂಟು. ಕವಿಕುಂಜರಲೀಲಾವತಿಯಲ್ಲಿ ನೇಮಿಚಂದ್ರನು

ಸ್ತ್ರೀರೂಪಮೆ ರೂಪಂ ಶ್ರೀ |
ಗಾರವೆ ರಸಮುಮುಳಸುರತಗಂಧಮೆ ಗಂಧಂ ||
ಸಾರಸ್ಪರ್ಶಮೆ ಗುರುಕುಚ |
ಭಾರಸ್ಪರ್ಶಂ ಗಳಪ್ರಶಬ್ದಮೆ ಶಬ್ದಂ || (ಆ. ೧೨ ಪ. ೮)

ಎಂದು ಹೇಳಿದ್ದಾನೆ. ಅನೇಕ ಪ್ರೌಢಕವಿಗಳ ಕೃತಿಗಳಲ್ಲಿ—ಇದಕ್ಕೆ ಸಂಸ್ಕೃತಕವಿಗಳೂ ಅಪವಾದವಲ್ಲ—ಈವರ್ಣನೆಯು ಕಥಾಸಂವಿಧಾನದೊಡನೆ ಬೆರೆಯದೆ ಪ್ರತ್ಯೇಕವಾಗಿಯೆ ಕಂಡುಬರುತ್ತದೆ. ಇದರಿಂದ ಹಲವುಕಡೆಗಳಲ್ಲಿ ಔಚಿತ್ಯಭಂಗವಾದರೂ ಆಗುವುದುಂಟು.[೨] ಈಪರಂಪರೆಗನುಸಾರವಾಗಿ ವಿರೂಪಾಕ್ಷಪಂಡಿತನು ಈವರ್ಣನೆಯನ್ನು ಬಹುವಾಗಿ ಲಂಬಿಸಿದ್ದರೂ ಅದರಲ್ಲಿಯೂ ಒಂದು ಬಗೆಯ ಔಚಿತ್ಯವನ್ನು ಪಾಲಿಸಿರುವುದು ಕಂಡುಬರುತ್ತದೆ. ಮೂಲಕಥೆಯ ನಾಯಕರಾದ ಚೆನ್ನಬಸವ-ಬಸವೇಶ್ವರರು ಸಾತ್ತ್ವಿಕವೃತ್ತಿಯುವರೂ, ಸದಾ ಶಿವಧ್ಯಾನ - ಶಿವಪೂಜಾನಿರತರೂ, ಸಮಾಜದ ಆಚರಣೆಗೆ ಆದರ್ಶಪ್ರಾಯರೂ ಆಗಿದ್ದರೆಂದು ಕವಿಯು ತಿಳಿದಿದ್ದನಾದುದರಿಂದ ಅವರ ಗೊಡವೆಗೆ ಹೋಗದೆ ಭೋಗವಿಲಾಸಗಳ ಅನುಭವಕ್ಕೆ ಯೋಗ್ಯನಾದ ರಾಜಬಿಜ್ಜಳನು ಈವಿಹಾರವನ್ನು ಮಾಡಿದನೆಂದು ವರ್ಣಿಸಿದ್ದಾನೆ. ಒಟ್ಟಿನಲ್ಲಿ ಈ ಗ್ರಂಥವಲ್ಲಿ ಬರುವ ಅಷ್ಟಾದಶವರ್ಣನೆಗಳಲ್ಲಿ ಕೆಲವು ಸಮಯೋಚಿತವಾಗಿ, ಹಲವು ಹೊಸಬಗೆಯಾಗಿ, ಎಲ್ಲವೂ ಮನೋಹರವಾಗಿ ಇರುವುವೆನ್ನಬಹುದು.

ಛಂದಸ್ಸು - ಅಲಂಕಾರ - ರಸ ಇತ್ಯಾದಿ

ಚೆನ್ನಬಸವಪುರಾಣವು ಸಂಪೂರ್ಣವಾಗಿ ವಾರ್ಧಕಷಟ್ಪದಿಯಲ್ಲಿದೆ. ಕವಿಯು ಷಟ್ಪದಿನಿಯಮಗಳನ್ನು ಚೆನ್ನಾಗಿ ಪಾಲಿಸಿದ್ದಾನೆ. ವೀರಶೈವರಾದ ಹರೀಶ್ವರ-ರಾಘವಾಂಕರು ಹಾಕಿಕೊಟ್ಟ ಸಂಪ್ರದಾಯಾನುಸಾರವಾಗಿ ಜಾತಿ-ಕುಳ - ಕ್ಷಳಗಳ ಭೇದ

೧ ಶೃಂಗಾರರಸಂ ಮಿಕ್ಕಿರೆ । ಸಂಗಳ್ಗೆ ಧಿಷ್ಟ್ಯವಮುದನೆ ನರರೋಲಗಿಪರ್ ॥ (ಶೃಂಗಾರ ರತ್ನಾಕರ ಪರಿಚ್ಛೇದ ೧ ಪದ್ಯ ೬೩) ೨. ನೇಮಿಚಂದ್ರನು ತನ್ನ 'ಲೀಲಾವತಿ'ಯಲ್ಲಿ ಕಥಾರಂಭದಲ್ಲಿಯೆ ಚಂದ್ರಿಕಾವಿಹಾರವನ್ನು ಬಣ್ಣಿಸಿದ್ದಾನೆ. ಹರೀಶ್ವರನು 'ಗಿರಿಜಾಕಲ್ಯಾಣ'ದಲ್ಲಿ ರಾತ್ರಿವಿಹಾರಕ್ಕೆ ನಾರದನನ್ನು ಹಚ್ಚಿದ್ದಾನೆ. ಶ್ರೀಮದ್ಭಾರತದಲ್ಲಿ (ಸಂಧಿ ೨೬) ತಾನು ಪ್ರಥ್ವಜನನ್ನು ರಣರಂಗದಲ್ಲಿ ಸೋಲಿಸಲಾರದೆ ಉಪಾಯದಿಂದ ಅವನನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದು ಕೃಷ್ಣಾರ್ಜುನರು ಹೂಡಿದ ಅವನ ರಾಘವ ... ಹೋಗುತ್ತಿದ್ದ ಸಂದರ್ಭದಲ್ಲಿ ಬರುವ ಶೃಂಗಾರದ ಪದ್ಯಗಳು ಅಷ್ಟು ಸಮಂಜಸವೆನಿಸುವುದಿಲ್ಲ.

ವನ್ನು ಬಿಟ್ಟುಕೊಟ್ಟಿದ್ದಾನೆ. ಕನ್ನಡಪದಗಳ ಮುಂದೆ ಬಂದ ಸಂಸ್ಕೃತಶಬ್ದಗಳ ಆರಂಭದ ಒತ್ತಕ್ಕರಗಳನ್ನು—ಪೂರ್ವಕವಿಗಳ ರೂಢಿಯಂತೆ—ಶಿಥಿಲ[೧]ವಾಗಿಯೇ ಇಟ್ಟುಕೊಂಡಿದ್ದಾನೆ. ಆದರೆ ಕೆಲವೆಡೆಗಳಲ್ಲಿ ಅಪವಾದ[೨]ಗಳುಂಟು. ಸಮಾಸಪದಗಳಲ್ಲಿ ಬಂದ 'ಪ್ರ' ಕಾರವು ಕೆಲವೆಡೆ ಶಿಥಿಲ[೩]ವಾಗಿದೆ.

ಕನ್ನಡಛಂದಸ್ಸಿನ ಜೀವಾಳವಾದ ಪ್ರಾಸಾಕ್ಷರನಿಯಮವನ್ನು ಕವಿಯು ಚೆನ್ನಾಗಿ ಪಾಲಿಸಿದ್ದರೂ ಒಂದೆರಡು ಅಪವಾದ[೪]ಗಳು ದೊರೆಯುತ್ತವೆ. ಅನುಪ್ರಾಸ-ಯಮಕ ಮೊದಲಾದ ಶಬ್ದಾಲಂಕಾರಗಳಿಗೆ ಉದಾಹರಣೆಗಳು ಈಗ್ರಂಥದಲ್ಲಿ ಹೇರಳವಾಗಿ ದೊರಕುತ್ತವೆ. ಪ್ರತಿಪಾದದಲ್ಲಿ ಮೂರು-ಮೂರು ಶಬ್ದಗಳ ಅನುಪ್ರಾಸವು[೫] ಉಳಿದ ಷಟ್ಪದಿಗ್ರಂಥಗಳಿಗಿಂತ ಹೆಚ್ಚಾಗಿ ಇದರಲ್ಲಿ ಕಂಗೊಳಿಸುವುದು.

ಕಾವ್ಯಗಳ ಸೊಬಗನ್ನು ಹೆಚ್ಚಿಸುವಂತಹ, ವಾಚಕರ ಆಹ್ಲಾದವನ್ನು ವರ್ಧಿಸುವಂತಹ ಅರ್ಥಾಲಂಕಾರಗಳಲ್ಲಿ ಉಪಮೆ-ಉತ್ಪ್ರೇಕ್ಷೆ-ರೂಪಕ ಮೊದಲಾದ ಸರಳಾಲಂಕಾರಗಳಿಗೂ ಶ್ಲೇಷ-ನಿರುಕ್ತಿ-ಅತ್ಯುಕ್ತಿ ಮೊದಲಾದ ಕ್ಲಿಷ್ಟಾಲಂಕಾರಗಳಿಗೂ ಈ ಕಾವ್ಯದಲ್ಲಿ ಉತ್ತಮ ಉದಾಹರಣೆ[೬]ಗಳನ್ನು ಕಾಣಬಹುದು. ಆದರೆ ಇವುಗಳನ್ನು ಕವಿಯು ಹಿತವಾಗಿಯೂ ಮಿತವಾಗಿಯೂ ಬಳಸಿದ್ದಾನೆ.

ಭಾಷಾಶೈಲಿಯಲ್ಲಿ ಷಟ್ಪದಿಕೃತಿಗಳೆಲ್ಲ 'ಷಟ್ಪದಿಸಂಪ್ರದಾಯಸ್ಥಾಪಕ'ನಾದ ರಾಘವಾಂಕನ ಶೈಲಿಯನ್ನೆ ಅನುಸರಿಸುತ್ತವೆಂಬುದು ವಿಮರ್ಶಕರ ಮತ. ಆದರೂ ಸೂಕ್ಷ್ಮದೃಷ್ಟಿಯಿಂದ ಪರಾಮರ್ಶಿಸಿದರೆ ಷಟ್ಪದಿಶೈಲಿಯಲ್ಲಿ ಸಹ 'ಹಲಗೆಬಳಪವ ಹಿಡಿಯದಗ್ಗಳಿಕೆ'ಯನ್ನು ಮೆರೆಯುವ ಅಸಂಸ್ಕೃತವಾದರೂ ಸಾಜವಾದ ಸರಣಿ[೭]ಯಿಂದ 'ಜಾಣರಂ ತಲೆದೂಗಿಸುವ' ಸುಸಂಸ್ಕೃತವಾದ ನಯವಾದ ಸರಣಿ[೮]ಯ ವರೆಗೆ ಹಲಪ್ರ

೧. ಶೃಂಗಾರಿ 'ಸ್ಮ'ರರಾಜಧಾನಿ (ಸ. ೧೦ ಪ. ೮) ೨. ಭವಾನಿ'ಶ್ಯಾ'ಮ ಫಣಿವೇಣಿ (ಸ. ೨೯ ಪ. ೧೭) ೩. ಸ್ಮರ'ಪ್ರಿ'ಯಂ (ಸ. ೧೦ ಪ. ೯) ೪. 'ಕ್ರ'ಕಾರಕ್ಕೂ 'ಕೃ'ಕ್ಕೂ ಪ್ರಾಸ (ಸ. ೨೬ ಪ. ೧) ; 'ಗ'ಕಾರಕ್ಕೂ 'ಖ'ಕ್ಕೂ ಪ್ರಾಸ (ಸ. ೫೩ ಪ. ೩೧) ; 'ಯ'ಕಾರಕ್ಕೂ 'ಯ್ಯ'ಕ್ಕೂ ಪ್ರಾಸ (ಸ. ೩೬ ಪ. ೩೨) ೫. 'ವಿರಚಿಸಿದ ಸಾರಣೆಯ ಕಾರಣೆಯ ಧಾರುಣಿಯು' (ಸ. ೫ ಪ. ೫) ; 'ಕಡಿದ ತಲೆಯೋಳ್ಗಳಿಂ ತೋಳ್ಗಳಿಂ ಬಾಳ್ಗಳಿಂ' (ಸ. ೪೩ ಪ. ೪೪) ; 'ಬರಹೇಳ್ ನಿಕುಂಭನಂ ಪುಂಭನಂ ಜಂಭನಂ' (ಸ. ೪೭ ಪ. ೨೧) ; 'ಎತ್ತೆತ್ತಲುಂ ಪಳ್ಳಕೊಳ್ಳಮುಳ್ಳವನಿತಳ' (ಸ. ೪೯ ಪ. ೩೧) ಇತ್ಯಾದಿ. ೬. ಉದಾಹರಣೆಗಾಗಿ ಕೆಳಗೆ ಹೇಳಿರುವ ಪದ್ಯಗಳನ್ನು ವಿವೇಚಿಸಿ ನೋಡಬಹುದು: ಸ. ೧ ಪ. ೧೨; ಸ. ೨ ಪ. ೩೦; ಸ. ೪ ಪ. ೪, ೧೨-೧೪, ೩೪; ಸ. ೫ ಪ. ೧೫, ೨೩; ಸ. ೬ ಪ. ೪೭; ಸ. ೮ ಪ. ೨, ೩, ೨೨; ಸ. ೯ ಪ. ೨, ೬, ೯, ೨೫; ಸ. ೧೦ ಪ. ೩, ೭; ಸ. ೧೧ ಪ. ೭, ೩೬; ಸ. ೧೬ ಪ. ೨೨; ಸ. ೨೦ ಪ. ೧೫; ಸ. ೨೬ ಪ. ೨೮; ಸ. ೩೪ ಪ. ೫, ೭, ೧೪; ಸ. ೩೫ ಪ. ೧೧; ಸ. ೩೭ ಪ. ೧೪, ೧೯, ೩೯, ೪೮, ೫೧; ಸ. ೪೦ ಪ. ೨೫; ಸ. ೪೫ ಪ. ೧೩, ೨೨, ೪೧; ಸ. ೫೩ ಪ. ೧೫, ೧೬, ೧೯, ೩೨ ಇತ್ಯಾದಿ. ೭. ಉದಾ:-ಕುಮಾರವ್ಯಾಸನ ಭಾರತ, ಭೀಮಕವಿಯ ಬಸವಪುರಾಣ ಮೊದಲಾದುವು. ೮. ಇದಕ್ಕೆ ಜೈಮಿನಿಭಾರತವು ಉತ್ತಮ ಉದಾಹರಣೆಯಾಗಿದೆ. ಭಾಷಾಸರಣಿಯಲ್ಲಿಯೂ ಪದಲಾಲಿತ್ಯದಲ್ಲಿಯೂ ಇದು ಚೆನ್ನಬಸವಪುರಾಣಕ್ಕಿಂತಲೂ ಒಂದು ಕೈ ಮಿಗಿಲೆಂದೇ ಹೇಳಬಹುದು.

ಅಂತಸ್ತುಗಳು ಕಂಡುಬರುತ್ತವೆ. ಚೆನ್ನಬಸವಪುರಾಣವು ಕೊನೆಯ ಅಂತಸ್ತಿಗೆ ಸೇರಿದುದೆನ್ನಬಹುದು. ವ್ಯಾಕರಣದೃಷ್ಟಿಯಿಂದ ನೋಡಿದರೆ, ಈಕೃತಿಯಲ್ಲಿ—ಇನ್ನುಳಿದ ಷಟ್ಪದಿಗ್ರಂಥಗಳಲ್ಲಿ ಕಂಡುಬರುವಂತೆ—ಹಳೆ-ನಡು-ಹೊಸಗನ್ನಡಗಳ ಪ್ರಯೋಗಗಳು ಬೆರೆತು ಬರುವುದು ಗೋಚರವಾಗುತ್ತದೆ. ಸಂಸ್ಕೃತಶಬ್ದಗಳ ಉಪಯೋಗವೂ, ದೀರ್ಘಸಮಾಸಗಳ ಬಳಕೆಯೂ ಕೆಲವೆಡೆಗಳಲ್ಲಿ[೧] ಸ್ವಲ್ಪ ಹೆಚ್ಚಾಗಿವೆಯೆಂದು ಕಂಡರೂ, 'ಲಲಿತವಹ ಕನ್ನಡದ ನುಡಿ'ಯ ಬೆಲೆಯು ಕವಿಗೆ ಗೊತ್ತಿಲ್ಲವೆಂದಲ್ಲ. ರೂಢಿಯೊಳಗಿನ ಸಾಮ್ಯ-ಗಾದೆ ಮುಂತಾದುವುಗಳನ್ನು ಸಮಯೋಚಿತವಾಗಿ ಉಪಯೋಗಿಸುವುದರಲ್ಲಿ ಕಂಡುಬರುವ ಕೆಲಕವಿಗಳ ಚಾತುರ್ಯ—'ಜಗದೊಳ್ ಸನ್ನಿಪಮಾದ ನಾಣ್ನುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ'—ಈಕಾವ್ಯದಲ್ಲಿ[೨]ಯೂ ದೃಗ್ಗೋಚರವಾಗುತ್ತದೆ. ಈಬಗೆಯ ಲೋಕರೂಢಿಯ ಮಾತುಗಳನ್ನು ಅಲ್ಲಲ್ಲಿ ಬಳಸುವುದರಿಂದ ಕಾವ್ಯದ ಶೈಲಿಗೆ ಹೆಚ್ಚಿನ ಶೋಭೆಯು ಬರುತ್ತದೆ.

ಈಕಾವ್ಯದಲ್ಲಿ ಶಾಂತಿ ಮತ್ತು ವೀರರಸಗಳು ಒಡೆದು ಕಾಣುವಂತಿದ್ದರೂ ಉಳಿದ ರಸಗಳೂ ಅಲ್ಲಲ್ಲಿ ಪ್ರಕಟವಾಗಿರುವುವು. ಈಗ್ರಂಥದಲ್ಲಿ ಕಂಡುಬರುವ ನಾಟ್ಯ-ಸಂಗೀತ-ರಸಶಾಸ್ತ್ರಗಳಿಗೆ ಸಂಬಂಧಿಸಿದ ಪಾರಿಭಾಷಿಕಶಬ್ದ[೩]ಗಳನ್ನೂ ಅವುಗಳ ಲಕ್ಷಣಗಳನ್ನೂ ಪರಿಶೀಲಿಸಿದರೆ ವಿರೂಪಾಕ್ಷಪಂಡಿತನು ನಿಜವಾದ, ಗಟ್ಟಿಗನಾದ ಪಂಡಿತನಾಗಿದ್ದನೆಂಬುವುದು ಚೆನ್ನಾಗಿ ಮನದಟ್ಟಾಗುತ್ತದೆ.

೧. ಇವು ಸ್ತುತಿಪದ್ಯಗಳಲ್ಲಿಯೂ ಶ್ಲೇಷಾರ್ಥದ ಪದ್ಯಗಳಲ್ಲಿಯೂ ಒಡೆದುಕಾಣುತ್ತವೆ. ಉದಾ: ಸ. ೩ ಪ. ೧; ಸ. ೯ ಪ. ೨೧; ಸ. ೨೨ ಪ. ೮ ಇತ್ಯಾದಿ. ೨. ಉದಾಹರಣೆಗಾಗಿ ಈಕೆಳಗಿನ

'ಕರದ ಕಂಕಣಕೆ ಕನ್ನಡಿಯುಂಟೆ?' (ಸ. ೪ ಪ. ೧೮)
'ಎಳೆಯ ಹೂಮಿಡಿಗಳಂ ಹರಿದು ಹಣ್ಣಂ ಮಾಡಲಳವೆ?' (ಸ. ೬ ಪ. ೯)
'ಬಲುರಾಯರೊಳ್ಮೆ ಗಡಯುಂಬುದೆಲ್ಲಂ ನವಣೆಯೊಳು ಗಂಜಿ ಗಡ' (ಸ. ೧೦ ಪ. ೭೦)
'ಪರುಷ ಸೋಂಕು ಗಡ ವರುಷಮುಂ ಸಲೆ ಕಡಂ ಗಡ' (ಸ. ೧೦ ಪ. ೭೦)
'ಬಾಳೆಯ ಹಣ್ಣಿಗುಂಟೆ ಗರಗಸಂ?' (ಸ. ೧೦ ಪ. ೭೦)
'ಹಿಂತೊರ್ಪನಂ ತನ್ನ ತಾಯ್ಬಂಜೆ ನಿಜಮೆಂಬ ಗಾದೆ' (ಸ. ೧೮ ಪ. ೭)
'ಕಾಮಿಗಳ್ ಕಣ್ಣುಗಾಣರೆಂಬುದು ಪುಸಿಯೇ?' (ಸ. ೨೦ ಪ. ೨)
'ಸಿರಿಮುರ ವಿರೋಧಂ ಸಿರಿಗೆ ಕಷ್ಟಮಲ್ತೇ?' (ಸ. ೨೨ ಪ. ೪)
'ಮಾಮವನ ಮುರಿ ಗರ್ಭಾಕಾರನೂದೊಲಾಯ್ತು ಬಾಳ್ಕೆ' (ಸ. ೩೧ ಪ. ೨೦)
'ತಾಂ ಕೆಡುತೆ ಪೆರೆಯುವರನೆಲ್ಲರಂ ಕೆಡಿಪುವರ ಮಾಳ್ಕೆ' (ಸ. ೩೨ ಪ. ೪೭)
'ಪಳೆಯ ರೋಗಕ್ಕೆ ಪಥ್ಯಂಗೊಳಲ್ ನವರೋಗಮೊಲಿದು ಬಂದಂತೆ' (ಸ. ೩೩ ಪ. ೭)
'ಮೊದಲಾಣ್ಮ ಸೋಲ್ತಿಂಮೊರ್ವ ಬಲವಂತನಂ ಬಯಸಿ ಬಾಳ್ವಾಗಲ್ ಬಡಿವ ಗಂಡಂ ಮೊರೆದಂತೆ' (ಸ. ೩೩ ಪ. ೭)
'ಬಂದವರ್ಗೀಳಿಸಸಿತೆಂಬ ಮತಿ' (ಸ. ೩೫ ಪ. ೩೪)
'ಎತ್ತ ಮೆಟ್ಟಿತ್ತ ಚಪ್ಪಟೆಯೆಂಬ ನಾಣ್ನುಡಿ' (ಸ. ೩೭ ಪ. ೭೪)
'ಓಕಳಿಯ ಸೇನೆಯೊಳಪ್ಪೆದೆಂಬ ನಾಣ್ನುಡಿ' (ಸ. ೩೭ ಪ. ೭೬) ಇತ್ಯಾದಿ ಮಾತುಗಳನ್ನು ನೋಡುವುದು. ೩. ಸ. ೨ ಪ. ೨೭-೨೯; ಸ. ೧೦ ಪ. ೧೯-೪೦

ಪೂರ್ವಕವಿಗಳ ಛಾಯೆ

ವೀರಶೈವಕವಿಗಳ ಸಂಪ್ರದಾಯಾನುಸಾರವಾಗಿ ವಿರೂಪಾಕ್ಷಪಂಡಿತನು ತನ್ನ ಗ್ರಂಥದಲ್ಲಿ ಪುರಾತನ ಶಿವಕವಿಗಳನ್ನಷ್ಟೆ ಸ್ತುತಿಸಿರುತ್ತಾನೆ.[1] ಅವರಲ್ಲಿ ಬಾಣ, ಭವಭೂತಿ, ಮಯೂರ, ಕಾಳಿದಾಸ, ಮಲುಹಣ, ಮಳಯರಾಜ, ಉದ್ಭಟ (?), ಹಲಾಯುಧ ಇವರು ಸಂಸ್ಕೃತಕವಿಗಳು. ರಾಘವಾಂಕ, ಹರೀಶ್ವರ, ಪಂಡಿತೇಶ್ವರ, ಪಾಲ್ಕುರಿಕೆಯ ಸೋಮಾರಾಧ್ಯ, ಭೀಮರಸ, ಮೊಗ್ಗೆಯ ಮಾಯಿದೇವ, ಚಾಮರಸ, ಶಂಕರ, ಕೆರೆಯ ಪದ್ಮರಸ ಇವರು ಕನ್ನಡಕವಿಗಳು. ಕನ್ನಡಕವಿಗಳಲ್ಲಿ ಮೇಲ್ಕಾಣಿಸಿದವರನ್ನಷ್ಟೇ ಸ್ತುತಿಸಿರುವನಾದರೂ ಪಂಪ, ನಾಗಚಂದ್ರ, ನೇಮಿಚಂದ್ರ, ರುದ್ರಭಟ್ಟರೇ ಆದಿಯಾದ ಉದ್ದಾಮ ಚಂಪೂಕಾರರ ಕೃತಿಗಳ ಪರಿಚಯವು ಈಕವಿಗೆ ಚೆನ್ನಾಗಿತ್ತೆಂದು ಕಂಡುಬರುತ್ತದೆ. ಕನ್ನಡದಲ್ಲಿ ಚಂಪೂಕಾವ್ಯಗಳನ್ನು ಬರೆಯಲು ಮೊದಲುಮಾಡಿದ ಆದಿಪಂಪ,[2] ನೇಮಿಚಂದ್ರ ಮೊದಲಾದ ಕವಿಗಳು ಸಂಸ್ಕೃತಕವಿಗಳ ಓಜಸ್ಸು-ಮಾಧುರ್ಯಾದಿ ಕಾವ್ಯಗುಣಗಳನ್ನು ಸಂಸ್ಕೃತ ಬಾರದ ವಾಚಕರಿಗೆ ಸವಿಸುವ ಉದ್ದೇಶದಿಂದ ಸಂಸ್ಕೃತಕಾವ್ಯಗಳೊಳಗಿನ ಉತ್ತಮಭಾವಗಳನ್ನು ಕನ್ನಡಕ್ಕೆ ಸರಸವಾಗಿ ಪರಿವರ್ತಿಸಿ ತಮ್ಮ ಗ್ರಂಥಗಳಲ್ಲಿ ಸೇರಿಸುತ್ತಿದ್ದಂತೆ ಕನ್ನಡಷಟ್ಪದಿಕಾರರು ಚಂಪೂಗ್ರಂಥಗಳ ಪರಿಚಯವಿಲ್ಲದ 'ಪಾಮರ'ರಿಗೆ ಅವುಗಳ ಸವಿಯನ್ನು ಸುಲಭವಾಗಿ ಪಾನಮಾಡಿಸುವ ಇಚ್ಛೆಯಿಂದ ಪ್ರಸಿದ್ಧಚಂಪೂಗ್ರಂಥಗಳೊಳಗಿನ ಸುಂದರವಾದ ಭಾವಗಳನ್ನೂ ವರ್ಣನೆಗಳನ್ನೂ ಸರಲವಾದ ಷಟ್ಪದಿಶೈಲಿಯಲ್ಲಿ ಅಂತರಿಸಿ ತಮ್ಮ ಗ್ರಂಥಗಳಲ್ಲಿ ಸೇರಿಸುತ್ತಿದ್ದರು. ಉದಾಹರಣೆಗಾಗಿ ಜೈಮಿನಿಭಾರತದೊಳಗಿನ

ಗಾಲಿಯೊಂದೇ ರಥಕೆ ಜೋಡಾಗಿ ಪೂಡುವೊಡೆ |
ಸಾಲದೇಳೇ ಹಯಂ ನಡೆಸುವೊಡೆ ಸಾರಥಿಗೆ |
ಕಾಲಿಲ್ಲ ಲೋಕಯಾತ್ರೆಯನೊಲ್ಲೆನೆಂದೊಡಾಗದೆ ತನಗೆ ತಿರುಗಲೇಕೆ ||
ಕಾಲಗತಿಯಂ ಮೀರಬಾರದಿಂತೆಂಬುದಂ |
ಮೂಲೋಕಕೆಚ್ಚರಿಸುವಂತೆ ಪೂರ್ವಾಚಲದ |
ಮೇಲೆ ಮೂಡಿದನೆಂದಿನವೊಲಬ್ಜಬಾಂಧವಂ ನಯನಾಂಧಮಂದಡಗಲು ||

(ಸ. ೨೬ ಪ. ೨೬)

ಈಪದ್ಯವನ್ನು ನೇಮಿಚಂದ್ರನ ಅರ್ಧನೇಮಿಪುರಾಣದ ಐದನೆಯ ಆಶ್ವಾಸದಲ್ಲಿ ದೊರೆಯುವ ಮುಂದಿನ

೧. ಸ. ೧ ಪ. ೨೮, ೨೯ ೨. ಆದಿಪಂಪನು ಸಂಸ್ಕೃತಕವಿಗಳ ಪದ್ಯಗಳನ್ನು ತನ್ನ ಕಾವ್ಯಗಳಲ್ಲಿ ಸೇರಿಸಿರುವನೆನ್ನುವುದಕ್ಕೆ ಸಾಹಿತ್ಯಪರಿಷತ್ತಿನಿಂದ ಪ್ರಕಟವಾದ 'ವಿಕ್ರಮಾರ್ಜುನವಿಜಯ'ದ ಉಪೋದ್ಘಾತದ ಪುಟ xxxviii ರಿಂದ xlii ರ ವರೆಗೆ ನೋಡಬೇಕು.

ಪೂಡುವ ಕುದುರೆ ಬೆಸಂ ಕೊಂ |
ಡೋಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಳವಂ ||
ಕೇಡಿಂಗಲಸಿದೊಡಕ್ಕುಮೆ |
ನೋಡಿರೆ ರವಿ ಕೆಡೆಪಸಸ್ತಗಿರಿಮಸ್ತಕದೊಳ್ || (ಆ. ೫ ಪ. ೪)

ಎಂಬ ಪದ್ಯದೊಡನೆ ಹೋಲಿಸಿ[೧] ನೋಡಬಹುದು. ಅದರಂತೆ ಜೈಮಿನಿಭಾರತದ ಇಪ್ಪತ್ತೆಂಟನೆಯ ಸಂಧಿಯೊಳಗಿನ ಮೂರನೆಯ ಪದ್ಯವಾದ

ಉತ್ತಮಾಂಗದ ಗಂಗೆಯಂ ಸಾಗರಕೆ ಕಳುಹಿ |
ಪೊತ್ತ ಶಶಿಕಲೆಯನಂಬರಕಿಟ್ಟು ತನ್ನ ನಡು |
ನೆತ್ತಿಗಣ್ಣೊಳ್ ಕೆಯ್ಯೊಳಗ್ನಿಯಂ ತಾಳ್ದುದಲ್ಲದೆ ಕಾಂತೆಗರೆಮೆಯ್ಯನು ||
ತೆತ್ತು ಬಿಡದಪ್ಪಿಕೊಂಡಿರ್ಪನೀಶ್ವರನೆನಲ್ |
ಮತ್ತೆ ಕಾಮಿನಿಯರ ಕುಚಾಲಿಂಗನವನುಳಿದೊ |
ಡೆತ್ತಣದು ಹಿಮಕೆ ಭೇಷಜಮೆಂದು ವಿರಹಿಗಳ್ ಕೂರ್ಪರನರಸುತಿರ್ದರು ||

ಎಂಬುದನ್ನು ದೇವಕವಿಯ ಕುಸುಮಾವಳಿಯೊಳಗಿನ

ಒಗೆದಳುರ್ವ ಮಾಗೆಯ ಹಿಮ |
ಕ್ಕಗಿದಾಗಳೆ ಶಶಿಯನಮರನದಿಯಂ ಬಿಟ್ಟಾ ||
ನಗಜಾತೆಯ ತನುವಂ ತಾಂ |
ಬಿಗಿಯಪ್ಪಿರ್ದರ್ಧನಾರಿಯಾದನುಮೇಶಂ ||

ಎಂಬ ಪದ್ಯದೊಡನೆ ಹೋಲಿಸಬಹುದು. ವಿರೂಪಾಕ್ಷಪಂಡಿತನಾದರೂ ಇದೇ ರೀತಿಯಲ್ಲಿ ಪ್ರಾಚೀನ ಕನ್ನಡಕವಿಗಳ—ಮುಖ್ಯವಾಗಿ ಪ್ರಸಿದ್ಧಚಂಪೂಕಾರರ—ಕಾವ್ಯಗಳೊಳಗಿನ ರಮ್ಯವಾದ ಭಾವ-ವರ್ಣನೆಗಳನ್ನು ತನ್ನ ಗ್ರಂಥದಲ್ಲಿ ಉಪಯೋಗಿಸಿಕೊಂಡಿರುವನು. 'ಸತ್ಕವಿಪರಂಪರೆಯಿಂ ಪರಿಗೀತವಾಗಿ' 'ನಿಷ್ಕೇವಳವಾದ ರೂಢಿವಶದಿಂ' 'ಶಿಷ್ಟಸಂಭಾವಿತಮಪ್ಪ' ಕಾವ್ಯಸಮಯವು ಎಲ್ಲ ಕಾವ್ಯಗಳಲ್ಲಿ ಒಂದೇಯಾಗಿ ತೋರಿದರೂ ಕವಿಚಮತ್ಕೃತಿಯಿಂದ ಅದಾದರೂ ಓದುಗರಿಗೆ ಹೆಚ್ಚು ರುಚಿಸುವಂತೆ ಬಹುಜನರಿಗೆ ಪರಿಚಯವಿರುವ ಪ್ರಸಿದ್ಧಕವಿಗಳ ಭಾವ-ವರ್ಣನೆಗಳನ್ನು ಬಳಸುವುದರಿಂದ ನೂತನಕವಿಯೂ ಚಿರಪರಿಚಿತನಂತೆ ಕಂಡುಬರುವನು. ಆದರೆ ಇಂತಹ ಅನುಕರಣವಲ್ಲಿಯಾದರೂ ಉಚಿತವಾದ ಹೆಚ್ಚುಕಡಿಮೆಗಳನ್ನು ಮಾಡುವುದರಿಂದ ಕವಿಯು

೧. ಭೋಜಪ್ರಬಂಧದೊಳಗಿನ 'ರಥಸ್ಯೈಕಂ ಚಕ್ರಂ ...' ಎಂಬ ಸಂಸ್ಕೃತವೃತ್ತವು ಮೇಲಿನ ಎರಡೂ ಪದ್ಯಗಳಿಗೆ ಮಾತೃಕೆಯೆಂದು ಕೆಲವರ ಅಭಿಪ್ರಾಯ. ಆದರೆ 'ಜೋಡು ಬಿಸ' ಎಂಬ ಈ ಕಲ್ಪನೆ ಮೂಲ ಸಂಸ್ಕೃತದಲ್ಲಿಲ್ಲ. ಹಾಗೆಯೇ 'ಭುಜಗನಿಯಮಿತಾಃ . . ತುರಗಾಃ' 'ಸರಾಜಂ[illegible] ನಾಗಾಃ' ಎಂಬ ಎರಡು ಕಲ್ಪನೆಗಳನ್ನು ಇವರಿಬ್ಬರೂ ಬಿಟ್ಟುಕೊಟ್ಟಿದ್ದಾರೆ. ಆದುದರಿಂದ [illegible] ಹೋಲುವ ಪದ್ಯವನ್ನು ಮೂಲವೆಂದೇಕೆ ಊಹಿಸಬೇಕಾಗುತ್ತದೆ.

ಬಹುಶ್ರುತತ್ವದೊಡನೆ ಅವನ ಆತ್ಮಪ್ರತಿಭೆಯೂ ಪ್ರಕಟವಾಗುತ್ತದೆ. ವಿರೂಪಾಕ್ಷ ಪಂಡಿತನು ಈದೃಷ್ಟಿಯಿಂದ ನೋಡಿದರೂ ಪ್ರಥಮಶ್ರೇಣಿಯ ಕವಿಗಳಲ್ಲಿ ಗಣನೆಗೆ ಬರುವನೆಂಬುದು ಅವನ ಕಾವ್ಯದಲ್ಲಿ ಅಲ್ಲಲ್ಲಿ[1] ಕಂಡುಬರುವ ಉದಾಹರಣೆಗಳಿಂದಲೇ ಸಿದ್ಧವಾಗುವುದು.

ಚೆನ್ನಬಸವಪುರಾಣವೂ ಕರ್ಣಾಟಕಜೈಮಿನಿಭಾರತವೂ

ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣಕ್ಕೂ ಲಕ್ಷ್ಮೀಶನ ಜೈಮಿನಿಭಾರತಕ್ಕೂ ಹಲವೆಡೆಗಳಲ್ಲಿ ಹೋಲಿಕೆಯಿರುವುದೆಂಬುದು ಈಗ ಸರ್ವಶ್ರುತವಾಗಿದೆ.[2] ಇಂತಹ ಹೋಲಿಕೆಗಳನ್ನೆಲ್ಲ ಪರಾಮರ್ಶಿಸಿದರೆ ಒಬ್ಬಕವಿಯ ಕೃತಿಯನ್ನು ಮಾದರಿಯಾಗಿಟ್ಟುಕೊಂಡು ಇನ್ನೊಬ್ಬಕವಿಯು ತನ್ನ ಕೃತಿಯನ್ನು ರಚಿಸಿರಬೇಕೆಂಬುದು ನಿಸ್ಸಂದೇಹವಾಗಿ ಕಾಣಬರುತ್ತದೆ. ಇವರಿಬ್ಬರಲ್ಲಿ ಯಾವ ಕವಿಯು ಮೊದಲಿದ್ದನೆನ್ನುವುದು ಇತ್ತೀಚೆಗೆ ಚರ್ಚಾಸ್ಪದವಾದ ವಿಷಯವಾಗಿದೆ. ಇದಕ್ಕೆ ಕಾರಣವೆಂದರೆ: ಲಕ್ಷ್ಮೀಶನು ತನ್ನ ಕಾವ್ಯದಲ್ಲಿ ಅದನ್ನು ರಚಿಸಿದ ಕಾಲವನ್ನು ಹೇಳಿಲ್ಲ; ಪೂರ್ವಕವಿಗಳನ್ನು ಸ್ತುತಿಸುತ್ತೇನೆಂದು ಹೇಳಿದರೂ ಅವರ ಹೆಸರುಗಳನ್ನು ಹೇಳಿಲ್ಲ. ಆದುದರಿಂದ

---

೧. ಇವಕ್ಕೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದಾದರೂ ನಿದರ್ಶನೆಗಾಗಿ ಚೆನ್ನಬಸವಪುರಾಣದ

ಸ. ೨ ಪ. ೧೧	ಇದನ್ನು ಗಿರಿಜಾಕಲ್ಯಾಣದ	ಆಶ್ವಾಸ ೨ ಪ. ೧೧ಕ್ಕೆ	
ಸ. ೧೦ ಪ. ೬೬	ಇದನ್ನು ಗಿರಿಜಾಕಲ್ಯಾಣದ	ಆಶ್ವಾಸ ೪ ಪ. ೧೪೧ಕ್ಕೆ	
ಸ. ೩೪ ಪ. ೧೧	ಇದನ್ನು ಗಿರಿಜಾಕಲ್ಯಾಣದ	ಆಶ್ವಾಸ ೪ ಪ. ೫೦ಕ್ಕೆ	
ಸ. ೧೯ ಪ. ೧೮	ಇದನ್ನು ಹರಿಶ್ಚಂದ್ರಕಾವ್ಯದ	ಸ್ಥಲ ೨ ಪ. ೧ಕ್ಕೆ	
ಸ. ೪೫ ಪ. ೯	ಇದನ್ನು ಹರಿಶ್ಚಂದ್ರಕಾವ್ಯದ	ಸ್ಥಲ ೩ ಪ. ೧೬ಕ್ಕೆ	
ಸ. ೧೦ ಪ. ೬೭	ಇದನ್ನು ಹರಿಶ್ಚಂದ್ರಕಾವ್ಯದ	ಸ್ಥಲ ೪ ಪ. ೫೯ಕ್ಕೆ	
ಸ. ೧೯ ಪ. ೧೦	ಇದನ್ನು ಭಿಕ್ಷಾಟನಚರಿತೆಯ	ಸಂಧಿ ೩ ಪ. ೪ಕ್ಕೆ	
ಸ. ೧೯ ಪ. ೩೧	ಇದನ್ನು ಭಿಕ್ಷಾಟನಚರಿತೆಯ	ಸಂಧಿ ೨ ಪ. ೪೮ಕ್ಕೆ	
ಸ. ೧೧ ಪ. ೯೩	ಇದನ್ನು ಪಂಪನ ಆದಿಪುರಾಣದ	ಆಶ್ವಾಸ ೧೧ ಪ. ೯೩ಕ್ಕೆ	
ಸ. ೪೬ ಪ. ೪-೧೨	ಇವನ್ನು ಕವಿಕುಂಜರಲೀಲಾವತಿಯ	ಆಶ್ವಾಸ ೬ ಪ. ೧೧೭-೧೨೬	ಇವಕ್ಕೆ
ಸ. ೯ ಪ. ೩	ಇದನ್ನು ಜಗನ್ನಾಥವಿಜಯದ	ಆಶ್ವಾಸ ೧೬ ಪ. ೯೪ಕ್ಕೆ	
ಸ. ೧೧ ಪ. ೯-೧೦	ಇವನ್ನು ಜಗನ್ನಾಥವಿಜಯದ	ಆಶ್ವಾಸ ೨ ಪ. ೫-೬	ಇವಕ್ಕೆ
ಸ. ೧೧ ಪ. ೨೨	ಇದನ್ನು ಜಗನ್ನಾಥವಿಜಯದ	ಆಶ್ವಾಸ ೨ ಪ. ೧೫ಕ್ಕೆ	
ಸ. ೧೧ ಪ. ೨೨	ಇದನ್ನು ಪಂಪರಾಮಾಯಣದ	ಆಶ್ವಾಸ ೧ ಪ. ೧೧೭ಕ್ಕೆ	
ಸ. ೧೧ ಪ. ೮	ಇದನ್ನು ಚಂದ್ರಪ್ರಭಪುರಾಣದ	ಆಶ್ವಾಸ ೧ ಪ. ೯೦ಕ್ಕೆ	
ಸ. ೧೧ ಪ. ೮	ಇದನ್ನು ಪುಷ್ಪದಂತಪುರಾಣದ	ಆಶ್ವಾಸ ೨ ಪ. ೧೫ಕ್ಕೆ	
ಸ. ೧೧ ಪ. ೧೨	ಇದನ್ನು ಪುಷ್ಪದಂತಪುರಾಣದ	ಆಶ್ವಾಸ ೨ ಪ. ೨೦, ೨೩	ಇವಕ್ಕೆ

ಹೋಲಿಸಬಹುದು. ೨. ೨ನೆಯ ಅನುಬಂಧವನ್ನು ನೋಡುವುದು. ೩. ಜೈ. ಭಾ. ಸ. ೧ ಪ. ೧೦

ಕೆಲವರು ಲಕ್ಷ್ಮೀಶನೇ ಮೊದಲಿಗನೆಂದು ಹೇಳುತ್ತಾರೆ. ಮೆ. ರೈಸ್,[೨] ಪ್ರಾಕ್ತನ ವಿಮರ್ಶನ ವಿಚಕ್ಷಣ ಮಹಾಮಹೋಪಾಧ್ಯಾಯ ಆರ್. ನರಸಿಂಹಾಚಾರ್ಯ[೩] ಮೊದ

---

೧. ಲಕ್ಷ್ಮೀಶನು ಮೊದಲಿಗನೆನ್ನುವವರು ಮುಖ್ಯವಾಗಿ ಕೆಳಗಿನ ಆಧಾರಗಳನ್ನು ಕೊಡುತ್ತಾರೆ:

೧. ತೊರಗಲೆ ದೇಸಾಯಿ ಜಾಯಗೊಂಡನೆಂಬುವನು 'ಕನ್ನಡಕುವಲಯಾನಂದ'ವೆಂಬ ಗ್ರಂಥವೊಂದನ್ನು ಬರೆದಿದ್ದಾನೆ. ಅದರಲ್ಲಿ ಹೇಳಿರುವ ಲಕ್ಷಣಗಳಿಗೆ ಲಕ್ಷ್ಯಗಳೆಂದು ಜೈಮಿನಿಭಾರತದಿಂದ ಹಲವು ಪದ್ಯಗಳನ್ನು ಉದಾಹರಿಸಿದ್ದಾನೆ. ಈಗ್ರಂಥವನ್ನು ಆನಂದ ಸಂ॥ ವೈಶಾಖ ಶು॥ ೧ ಆದಿತ್ಯವಾರ ಮುಗಿಸಿದುದಾಗಿ ಹೇಳುತ್ತಾನೆ. ಇದು ಕ್ರಿ.ಶ. ೧೬೭೪ ಆಗುವುದರಿಂದ ಲಕ್ಷ್ಮೀಶನು ಅದಕ್ಕೂ ಹಿಂದೆ ಇದ್ದನೆಂಬುದಕ್ಕೆ ಸಂದೇಹವಿಲ್ಲವೆಂದು ಶ್ರೀ. ಗೋವಿಂದ ಪೈಯವರು 'ಲಕ್ಷ್ಮೀಶನ ಕಾಲ' ವೆಂಬ ಲೇಖದಲ್ಲಿ ಪ್ರತಿಪಾದಿಸುತ್ತಾರೆ. ('ಕವಿಲಕ್ಷ್ಮೀಶ' ಪುಟ ೫೭-೬೪.)

೨. 'ನಂದೀಮಹಾತ್ಮ್ಯ'ವೆಂಬ ಗ್ರಂಥವನ್ನು ಬರೆದ ಗೋಪಕವಿಯು ಚತುರಾಸ್ಯ, ಲಕ್ಷ್ಮೀಪತಿ, ರುದ್ರ, ಅನಂತ ಎಂಬ ಕವಿಗಳನ್ನು ಸ್ತುತಿಸಿದ್ದಾನೆಂದೂ ಇವನು ಸುಮಾರು ಕ್ರಿ. ಶ. ೧೬೦೦ರಲ್ಲಿ ಇದ್ದಿರಬೇಕೆಂದೂ ಊಹಿಸಿ ಬೇರೊಬ್ಬ ಲೇಖಕರು ಲಕ್ಷ್ಮೀಶನು ಈಕವಿಗಿಂತ ಮೊದಲಿದ್ದಿರಬೇಕೆಂದು ಬರೆಯುತ್ತಾರೆ. ('ಕವಿಲಕ್ಷ್ಮೀಶ' ಪುಟ ೫೨-೫೪.)

೩. ದೇವನೂರಿನಲ್ಲಿಯ ಜೈಮಿನಿಭಾರತದ ಸ್ಥಲಪ್ರತಿಯ ಕೊನೆಯಲ್ಲಿ ಅದನ್ನು ಬರೆದ ಕಾಲವು ಶಾಲಿವಾಹನಶಕ ಮುನ್ನೂರಮೂವತ್ತೇಳನೆಯ 'ಮನ್ಮಥ' ಸಂವತ್ಸರವೆಂದಿರುವುದರಿಂದ ಜೈಮಿನಿಭಾರತವು ಕ್ರಿ. ಶ. ೧೪೧೫ರ ಹಿಂದೆಯೇ ಹುಟ್ಟಿರಬೇಕೆಂದೂ, ರೈಸರವರು 'ಮುನ್ನೂರ'ರೊಳಗಿನ 'ಮು'ಕಾರವು ತಮಿಳು ಲಿಪಿಯದಾಗಿರುವುದರಿಂದ ಅದು ಕನ್ನಡ 'ಆ'ಕಾರವಿರಬೇಕೆಂದು ನೆನಸಿ ಜೈಮಿನಿಭಾರತವು ರಚಿತವಾದ ಕಾಲವು ಶಕೆ ಸಾವಿರದ ಆರುನೂರ ಮೂವತ್ತೇಳಿರಬೇಕೆಂದು ಹೇಳಿದುದು ತಪ್ಪೆಂದೂ ಕೆಲವರು ಭಾವಿಸುತ್ತಾರೆ. ('ಕವಿಲಕ್ಷ್ಮೀಶ' ಪುಟ ೭೬-೮೩.)

೪. 'ಅರಸಲ್ ಜಗನ್ನಾಥವಿಜಯಮೆನಿಪಾ ಕಬ್ಬ । ಮುದದೋಷದೂರಪರಿಚಿತವಾಗಿ ಲಾಕ್ಷಣಿಕ ।
ವರವಾದ ರಾಜಶೇಖರವಿಲಾಸಕೆ ಪಡಿಯನೊರೆಯದಿರೆ ರುದ್ರಭಟ್ಟಂ ॥
ಶಾಂಭವಕೆ ಗುರಿಮಾಡದೆಂದು ಸಭಿಕರು ಪೇಳ್ವ । ಪರಿಯರಿತು ಕರುಣದಿಂದಾ ಷಡಕ್ಷರದೇವ ।
ಬಿರುದುಗಳ ಕೊಂಡು ಮಗುಳಿತ್ತು ಮನ್ನಿಸಿದನೆಂದುದ ಕೇಳಿ ಲಕ್ಷ್ಮೀಶನು ॥
ಹರಿಯ ಚಾರಿತ್ರ್ಯಮಿದು ಹರಿಮೇಧಪರ್ವಕಥೆ । ಯೊರೆದ ವಾರ್ಧಿಕಷಟ್ಪದಗಳಿಂದ ಜಯಮಿನಿಯ
ವರಸೂಕ್ತಿ ತಾತ್ಪರ್ಯ ಭಾವಗರ್ಭಿತವಾಗಿ ರಸಿಕರ್ಕಳನುಮೋದಿಸಲ್ ॥
ಪರಿಪರಿಯಲಂಕಾರ ರಸಭಾವಪುಷ್ಟಿಯಿಂ । ಮೆರೆದುದು ಗುಣೇಂದುಕಳೆಪರಿಮಿತಾಬ್ಧದ ಶಕದ ।
ಹರಿವಾರ ಕಾರ್ತಿಕದ ಸಿತಪಂಚಮಿ ದ್ರುಹಿಣವಾರದಾಸಂಗಮೆನಲು ॥
ಕನ್ನಡಕಬ್ಬಿಗರನ್ನಂ । ಮನ್ನಿಸಿ ಲಕ್ಷ್ಮೀಶನೊರ್ವನೇ ಕವಿರತ್ನಂ ॥
ಸನ್ನುತನೆಂದುರುಬಿರುದಂ । ಚಿನ್ನದಿ 'ಕವಿಚೂತಚೈತ್ರ'ನೆನೆ ಬರೆದಿತ್ತರ್ ॥'

ಎಂಬ ಪದ್ಯಗಳು ದೊರೆಯುವುವಾದರೂ [ಮೆ. ರೈಸ್‌ರವರು ಪ್ರಕಟಿಸಿದ ಕರ್ಣಾಟಕ ಭಾಷಾಭೂಷಣದ (೧೮೮೪) ಪ್ರಸ್ತಾವನೆ ಪುಟ xxxii (ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಪಂಡಿತರಾಗಿದ್ದ ಸಿ. ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ತಮ್ಮ ಗುರು ರಂಗಪಂಡಿತರಿಂದ ಸಿಕ್ಕ 'ಕವಿಚರಿತ್ರಪದ್ಯಗಳ'ಲ್ಲಿ ಈ ಪದ್ಯಗಳು ಅಡಕವಾಗಿದ್ದು ಶಾಸ್ತ್ರಿಗಳಿಂದ ತನಗೆ ದೊರೆತುವಾಗಿ ರೈಸ್‌ರವರು ಎನ್ನುತ್ತಾರೆ) ಮತ್ತು ಮೈಸೂರ ವಿಶ್ವವಿದ್ಯಾಲಯದವರು ಪ್ರಕಟಿಸಿದ ಜಗನ್ನಾಥವಿಜಯದ (Oriental Library Publications, Kannada Series No. 2-11) ಉಪೋದ್ಘಾತ ಪು. xii ಇವನ್ನು ನೋಡಿ] ಅವು ಸಹಜವಾದ ಪದ್ಯಗಳಲ್ಲ ನವಕಾಲೀನವೆಂದು ಕಲ್ಪಿಸುವುದರಿಂದ [illegible] ಕವಿಯ ಶಂಕೆ.

೨. [illegible] ಉಪೋದ್ಘಾತ ಪು. ೪೩. ೩. ಕರ್ಣಾಟಕ ಕವಿಚರಿತೆ ಭಾಗ ೨ [illegible]

ಲಾದವರು ವಿರೂಪಾಕ್ಷಪಂಡಿತನೇ ಮೊದಲಿಗನೆಂಬ ಅಭಿಪ್ರಾಯದವರು. ಈವಾದ ಗ್ರಸ್ತ ವಿಷಯವು ಮುಂದೆ ಹೇಗೆ ನಿಷ್ಕರ್ಷವಾದರೂ ಅದರಿಂದ ಈಕವಿಗಳಿಬ್ಬರಿಗೂ ಆವ ಕುಂದುಕವಾಗಲಿ ಬಾಧೆಯಾಗಲಿ ಉಂಟಾಗುವಂತಿಲ್ಲ. ಮೊದಲಿದ್ದ ಕವಿಯ ಕೃತಿಯು ಜನರ ಮೆಚ್ಚುಗೆಗೆ ಪಾತ್ರವಾಗಿತ್ತೆಂದೂ ಅದನ್ನು ಸರಿಗಟ್ಟಬೇಕು ಅಥವಾ ಮೀರಬೇಕು ಎಂಬ ಶ್ಲಾಘ್ಯವಾದ ಉದ್ದೇಶದಿಂದ ಹಿಂದಣಿಂದ ಬಂದ ಕವಿಯು ಪ್ರಯತ್ನಪಟ್ಟಿರಬೇಕೆಂದೂ ಊಹಿಸಬಹುದು. ಏಕೆಂದರೆ ಲಕ್ಷ್ಮೀಶನಾಗಲಿ ವಿರೂಪಾಕ್ಷ

೧. ಚೆನ್ನಬಸವಪುರಾಣವೆ ಮೊದಲಿನದೆಂದು ಪರಂಪರೆಯಾಗಿ ಬಂದ ಅಭಿಪ್ರಾಯವನ್ನು ಸಮರ್ಥಿಸುವವರು ಜೈಮಿನಿಭಾರತವು ಮೊದಲಿನದೆನ್ನುವವರು ಹೇಳುವ ಕಾರಣಗಳಿಗೆ ಕ್ರಮವಾಗಿ ಕೆಳಗಿನ ಉತ್ತರಗಳನ್ನು ಕೊಡುತ್ತಾರೆ:

೧. ಜಾಯಗೊಂಡದೇಸಾಯಿ ಈತನು ಕೋಕಟನೂರ-ಸಿರಸಂಗಿ ಮನೆತನಗಳಿಗೆ ಸೇರಿದವನಾದುದರಿಂದ ಆಮನೆತನಗಳ 'ಬಾಡ'–ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆಯವರು ಈಬಾಡಗಳಲ್ಲಿ ಒಂದನ್ನು (ಮರಾಠಿ) ಪ್ರಕಟಿಸಬೇಕೆಂದಿದ್ದಾರೆ–ಗಳಲ್ಲಿ ಅವನ ಚರಿತ್ರೆಯು ಜನನ-ಮರಣಕಾಲಗಳೊಡನೆ ಉಲ್ಲೇಖವಾಗಿದೆ. ಅದರಂತೆ ಜಾಯಗೊಂಡನ ಜನನವು ಕ್ರಿ. ಶ. ೧೭೧೨ರಲ್ಲಿ ಎಂದೂ, ಅವನು ಅಧಿಕಾರರೂಢನಾದ ಕಾಲವು ೧೭೩೨ ಎಂದೂ, ಮರಣವು ೧೭೬೦ರಲ್ಲಿ ಎಂದೂ ಗೊತ್ತಾಗುತ್ತದೆ. ಹಾಗೂ ಪೇಶ್ವೆ ಬಾಳಾಜೀಬಾಜೀರಾಯನ ಕಾಲ (ಕ್ರಿ. ಶ. ೧೭೪೦-೧೭೬೧) ದವನೆಂದು ಆ'ಬಾಡ'ಗಳಿಂದಲೇ ಸಿದ್ಧವಾಗುತ್ತದೆ. ಇದೂ ಅಲ್ಲದೆ ಈತನು ತಾನು ಕಾಡಸಿದ್ಧೇಶ್ವರನ ಶಿಷ್ಯನೆಂದು ಹೇಳಿಕೊಂಡಿದ್ದಾನೆ; ಕಾಡಸಿದ್ಧೇಶ್ವರನು ಪರ್ವತೇಶನ ಶಿಷ್ಯನೆಂದು ಹೇಳಿಕೊಂಡಿದ್ದಾನೆ (ಕವಿಚರಿತೆ ಭಾಗ ೨ ಪು. ೨೮). ಪರ್ವತೇಶನ ಕಾಲವು ಕ್ರಿ. ಶ. ೧೬೯೮ ಇರುವುದರಿಂದ ಜಾಯಗೊಂಡನ ಕಾಲವು ಕವಿಚರಿತೆಕಾರರು ಹೇಳಿರುವುದೇ ಸರಿಯೆಂದು ತೋರುತ್ತದೆ.

೨. ಗೋಪಕವಿಯು ಲಕ್ಷ್ಮೀಪತಿಯೆಂದು ಜೈಮಿನಿಭಾರತಕಾರನನ್ನು ಉದ್ದೇಶಿಸಿ ಹೇಳಿರುವನೆಂಬುದಕ್ಕೆ ಹೆಚ್ಚು ಆಕ್ಷೇಪವುಂಟು. ಏಕೆಂದರೆ ಅದರೊಡನೆ ಉಕ್ತವಾದ ಹೆಸರುಗಳಲ್ಲಿ ಅನಂತನೆಂಬುವನು ಯಾರೋ ಗೊತ್ತಿಲ್ಲವೆಂದೂ ಚತುರಾಸ್ಯನೆಂದರೆ ಚತುರಾಸ್ಯನಿಘಂಟನ್ನು ಬರೆದೊಬ್ಬ (ಅಪ್ರಸಿದ್ಧ) ಕವಿಯೆಂದೂ 'ಲಕ್ಷ್ಮೀಶನ ಕಾಲ'ದ ಲೇಖಕರೇ ಹೇಳುವುದರಿಂದ ಅವರೊಡನೆ ಲಕ್ಷ್ಮೀಶನನ್ನು ಗೋಪಕವಿಯು ಹೊಗಳಿರಬಹುದೇ ಎಂಬ ಸಂದೇಹಕ್ಕೆ ಎಡೆಯಿದೆ. ಇವು ಕೆಲ ಕನ್ನಡಕವಿಗಳ ಹೆಸರಾಗಿರದೆ ಪೂರ್ವದ ಕನ್ನಡಕವಿಗಳು ದೇವತಾವತಾರವೆಂದು ಕವಿಯ ಅಭಿಪ್ರಾಯವಿರಬಹುದೆಂದು ಊಹಿಸಿದರೆ ಹೆಚ್ಚು ಸಮಂಜಸವಾಗಬಹುದು.

೩. ದೇವನೂರಿನ ಪ್ರತಿಯೊಳಗಿನ ಕಾಲವನ್ನು ಕುರಿತು ರೈಸ್‌ರವರು ನಂಬಲರ್ಹವಲ್ಲೆಂದು ಬರೆದುದು ನಿರಾಧಾರವಿರಲಿಕ್ಕಿಲ್ಲ. ಏಕೆಂದರೆ ಲಕ್ಷ್ಮೀಶನು ಕ್ರಿ. ಶ. ೧೪೧೫ಕ್ಕಿಂತ ಹಿಂದೆ ಇದ್ದುದೇ ನಿಜವಾದರೆ ಮುನ್ನೂರು ವರ್ಷಗಳ ವರೆಗೆ ಒಬ್ಬ ಕವಿಯೂ ಆತನನ್ನು ಸ್ತುತಿಸದಿರುವುದು ಆಶ್ಚರ್ಯವಾಗಿದೆಯೆಂದು ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ.

೪. ರುದ್ರಭಟ್ಟ-ಷಡಕ್ಷರಿಗಳನ್ನು ಸಮಕಾಲೀನರನ್ನಾಗಿ ಮಾಡುವುದರಿಂದ ರೈಸ್‌ರವರು ಕೊಟ್ಟ ಪದ್ಯಗಳು ನಂಬಿಗೆಗೆ ಅರ್ಹವಲ್ಲವೆನ್ನುವುದು ಅಷ್ಟು ಸಮಂಜಸವಲ್ಲ. ಏಕೆಂದರೆ ಅವುಗಳ ಮುಖ್ಯಾರ್ಥವು– ರುದ್ರಭಟ್ಟನ ಕಾವ್ಯವು ಮೊದಲು ಜನರ ಆದರಕ್ಕೆ ಪಾತ್ರವಾಯಿತೆಂದೂ, ಆಮೇಲೆ ಷಡಕ್ಷರದೇವನ ಗ್ರಂಥವು ಲೋಕಾದರವನ್ನು ಪಡೆಯಿತೆಂದೂ, ತರುವಾಯ ಲಕ್ಷ್ಮೀಶನ ಕಾವ್ಯವು ಜನರ ಮೆಚ್ಚುಗೆಯನ್ನು ಸಂಗ್ರಹಿಸಿತೆಂದೂ, ಅರ್ಥವಾದಲು ಬರುವಂತಿದೆ. ಆದುದರಿಂದ ಅವುಗಳಿಂದ ಸೂಚಿತವಾಗುವ ಲಕ್ಷ್ಮೀಶನ ಕಾಲವು ೧೮ನೆಯ ಶತಮಾನವನ್ನೇ ಸಮರ್ಥಿಸುತ್ತದೆ ಎಂದು ಅನೇಕರು ಅಭಿಪ್ರಾಯಪಡುತ್ತಾರೆ.

ಪಂಡಿತನಾಗಲಿ ಸ್ವತಂತ್ರವಾದ ಪ್ರತಿಭಾಶಾಲಿಗಳಾದ ಕವಿಗಳೆಂಬುದು ಆಹೋಲಿಕೆಗ ಳಿಲ್ಲಯೆ ಕಂಗೊಳಿಸುತ್ತದೆ. ಇವನ್ನು ಹೆಚ್ಚು ವಿಸ್ತಾರವಾಗಿ ವಿವೇಚಿಸುವುದಕ್ಕೆ ಎಡೆ ಯಿಲ್ಲವುದರಿಂದ ಒಂದು ಉದಾಹರಣೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ. 'ಮನ ಶ್ಶಾತಕಂ ನಲಿದುದು' ಎಂಬ ಒಂದು ಭಾವವು ಇವರಿಬ್ಬರ ಕೃತಿಗಳಲ್ಲಿಯೂ ಬಂದಿದೆ ಯಾದರೂ ಒಬ್ಬನ ಕೃತಿಯಲ್ಲಿ ಶೃಂಗಾರರಸಪೋಷಣೆಗಾಗಿ ಉಪಯೋಗವಾಗಿದ್ದರೆ ಅದೇ ಭಾವವು ಇನ್ನೊಬ್ಬನ ಕಾವ್ಯದಲ್ಲಿ ವೀರರಸಪೋಷಣೆಯಲ್ಲಿ ಪ್ರಯುಕ್ತವಾಗಿದೆ ಯೆಂಬುದು ಮುಂದಣ ಪದ್ಯಗಳಿಂದ ಚೆನ್ನಾಗಿ ಪ್ರಕಟವಾಗುವಂತಿದೆ:

ಚೆನ್ನಬಸವಪುರಾಣ (ಸ. ೩೮ ಪ. ೩೭)

ಹರಿಗೆಗಳ್ ಮೇಘದೊಡ್ಡಣೆ ಕತ್ತಿಗಳ ತೊಳಪ |
ದಿರವೆ ಪೊಂಚುವ ಮಿಂಚು ಕವಿದೆಸೆವ ಸಾಯಕದ |
ಸರಿಯೆ ಸರಿವಳೆ ಭುಜಂಬೊಯ್ದು ಬೊಬ್ಬಿರಿದಿಡುವ ಶಕ್ತಿಯಬ್ಬರವೆ ಸಿಡಿಲು ||
ಭರದೆ ಪೊಯ್ವಾಡಲಸಿಯುಸಿಯಿಂದೊಗೆದ ಕಿಡಿಯೆ |
ಹರಿಗೋಪಮಾ ವೀರರಸವೆ ಪರಿವೊನಲಾಗೆ |
ಪರುಷವಂತಿರ್ಪ ರಣಮುಂ ಕಂಡು ವೀರರ **ಮನಶ್ಶಾತಕಂ ನಲಿದುದು** ||

ಜೈಮಿನಿಭಾರತ (ಸ. ೧೮ ಪ. ೨೭)

ಸ್ಫುರದುತ್ಕಟಾಕ್ಷಚಂಚಲದಿಂದೆ ಚಾರುಪೀ |
ವರಪಯೋಧರದಿಂದೆ ಪರಿವೃತಸುಮೇಖಲಾ |
ತರಳಸತ್ಕಲಕಿಂಕಿಣೀಘನಸ್ವರದಿಂದೆಸೆವ ಕಂಕಣಂಗಳಿಂದೆ ||
ಸರಸತರಲಾವಣ್ಯಪೂರಪ್ರವಾಹದಿಂ |
ಭರಿತಕಬರೀಬರ್ಹಿಲೀಲೆಯಿಂ ಮಳೆಗಾಲ |
ದಿರವನೆಚ್ಚರಿಪರಸಿಯುಂ ಕಂಡು ರಾಮನ **ಮನಶ್ಶಾತಕಂ ನಲಿದುದು** ||

ಹೀಗಿದ್ದರೂ ಲೋಕಾದರಣೆಯಲ್ಲ ಜೈಮಿನಿಭಾರತಕ್ಕೆ ದೊರೆತ ಪ್ರಶಸ್ತಿಯು ಚೆನ್ನಬಸ ವಪುರಾಣಕ್ಕೆ ದೊರಕದೇ ಇರುವುದಕ್ಕೆ ಮುಖ್ಯವಾದುದೊಂದು ಕಾರಣವನ್ನು ಇಲ್ಲಿ ಹೇಳಬಹುದು. ಜೈಮಿನಿಭಾರತದಲ್ಲಿ ಬರುವ ಕಥೆಯು ಎಲ್ಲರಿಗೂ ಬೇಕಾದ, ಎಲ್ಲ ಜಾತಿಮತದವರಿಗೂ ಅಷ್ಟೇ ಪ್ರಿಯವಾದ ಅನೇಕ ಮನೋರಂಜಕವಾದ ಕಥೆಗಳಿಂದ ಕೂಡಿದ ಭಾರತಕ್ಕೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಚೆನ್ನಬಸವಪುರಾಣದ ಮುಖ್ಯವಿಷಯವು ಕೇವಲ ವೀರಶೈವರಿಗಷ್ಟೆ ಮಾನ್ಯವಾದುದು. ಒಬ್ಬನೇ ಕವಿಯು ಬರೆದ ಎರಡು ಗ್ರಂಥಗಳ ವಿಷಯದಲ್ಲಿಯಾದರೂ ಜನಾನುರಾಗವು ಹೆಚ್ಚುಕಡಿಮೆ ಯಾಗಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ ಕರ್ಣಾಟಕ ಸಾಹಿತ್ಯದಲ್ಲಿ ಆದಿಪಂಪನ ಆದಿಪುರಾಣಕ್ಕಿಂತಲೂ ಆತನ ಭಾರತಕ್ಕಿರುವ ಗೌರವ, ಅಭಿನವಪಂಪನ ಮಲ್ಲಿನಾಥಪುರಾಣಕ್ಕಿಂತಲೂ ಪಂಪರಾಮಾಯಣಕ್ಕಿರುವ ಪ್ರಶಸ್ತಿ, ರನ್ನನ ಅಜಿತ

ಪುರಾಣಕ್ಕಿಂತಲೂ ಆತನ ಗದಾಯುದ್ಧಕ್ಕಿರುವ ಮೆಚ್ಚುಗೆ, ಷಟ್ಪದಿಗ್ರಂಥಗಳಲ್ಲಿಯೇ ಉಳಿದ ಕಾವ್ಯಗಳಿಗಿಂತ ಜೈಮಿನಿಭಾರತಕ್ಕೂ ಕುಮಾರವ್ಯಾಸನ ಭಾರತಕ್ಕೂ ಇರುವ ಜನಾನುರಾಗ ಇವೆಲ್ಲ ಇದೇ ಅಭಿಪ್ರಾಯವನ್ನು ಬಲಪಡಿಸುತ್ತವೆ. ಆದರೂ ವಿರೂಪಾಕ್ಷಪಂಡಿತನು ಇತರ ಶೈವರಾದರೂ ತನ್ನ ಗ್ರಂಥವನ್ನು ಓದಲೆಂದು ಈಶ್ವರನ ಪಂಚವಿಂಶತಿಲೀಲೆಗಳನ್ನು ಈಗ್ರಂಥದಲ್ಲಿ ಸೇರಿಸಿರಬಹುದು. ವೀರಶೈವರಲ್ಲಿ ಜೈಮಿನಿಭಾರತವನ್ನು ಓದುವವರ ಪ್ರಮಾಣದಷ್ಟು ವೀರಶೈವೇತರರಲ್ಲಿ ಚೆನ್ನಬಸವಪುರಾಣವನ್ನು ಓದುವವರ ಪ್ರಮಾಣವು ಇಲ್ಲೆಂಬುದು ನಿಜವೆಂದು ತೋರುತ್ತದೆ.

ಕನ್ನಡಸಾಹಿತ್ಯದಲ್ಲಿ ಕವಿಯ ಹಾಗೂ ಕಾವ್ಯದ ಸ್ಥಾನ

ವಿರೂಪಾಕ್ಷಪಂಡಿತನು ಸುಪ್ರಸಿದ್ಧವಾದೊಂದು ಮಠದ ಪಟ್ಟಾಧಿಕಾರಿಯಾಗಿದ್ದುಕೊಂಡು ವಿಷಯಪ್ರಪಂಚದ ಜಂಜಡಕ್ಕೊಳಗಾಗದೆ ಪ್ರಪಂಚದ ವಿಷಯಗಳನ್ನು ಕಾವ್ಯಾದಿ ಗ್ರಂಥಪಠಣದಿಂದ ಸಂಗ್ರಹಿಸುತ್ತ ಶಿವತತ್ತ್ವಗೋಷ್ಠಿಯಲ್ಲಿ ವೇಳೆಯನ್ನು ವಿನಿಯೋಗಿಸುತ್ತಿದ್ದುದರಿಂದ ಆತನಿಗೆ ಕವಿತ್ವದೊಡನೆ ಬಹುಶ್ರುತತ್ವವೂ ಪಾಂಡಿತ್ಯವೂ ದೊರೆಕೊಳ್ಳಲು ಅನುವಾಯಿತು. ಆದರೆ ತನ್ನ ಅಮೌಲ್ಯವಾದ ಕವಿತ್ವಶಕ್ತಿಯನ್ನು ವೆಚ್ಚಮಾಡಿ ಆವನಾದರೊಬ್ಬ ರಾಜನ ಆಶ್ರಯವನ್ನು ದೊರಕಿಸಲು, ಅಥವಾ ಬರಿಯ ಕೀರ್ತಿಯನ್ನು ಸಂಪಾದಿಸಲು ಕಾವ್ಯವನ್ನು ಬರೆಯತೊಡಗಲಿಲ್ಲ. ಕೇವಲ ತನ್ನ ಭಕ್ತರ ಆಗ್ರಹವನ್ನು ಮನ್ನಿಸಲೋಸುಗ, ಶಿವಪಾರಮ್ಯ-ಶಿವತತ್ತ್ವಗಳನ್ನೂ ಶರಣರ ಚರಿತೆಗಳನ್ನೂ ಜನಸಾಮಾನ್ಯರಿಗೆ ಬೋಧಿಸಲೋಸುಗ ಈಪುರಾಣರಚನೆಯನ್ನು ಕೈಕೊಂಡಿರಬೇಕು. ಈತನು ತನ್ನ ಕಾವ್ಯವನ್ನು ಚಂಪೂರೂಪವಾಗಿ ಬರೆಯದೆ ಷಟ್ಪದಿರೂಪವಾಗಿ ಬರೆದಿರುವುದಕ್ಕೆ ಆಕಾಲದ ಒಲವೇ ಮೂಲಕಾರಣವೆಂದು ಹೇಳಬಹುದು. 'ಪುರಾಣ'ಗಳು ನಿಜವಾಗಿಯೂ ಶ್ರಾವ್ಯಕಾವ್ಯಗಳಾಗಿರುವುದರಿಂದ ಷಟ್ಪದಿಯಂತಹ ಸುಲಭವಾದ ಹಾಡುಗಬ್ಬವಾಗಿ ಬರೆದರೆ ಲೋಕಾದರಣೆಗೆ ಹೆಚ್ಚು ಪಾತ್ರವಾಗುತ್ತವೆಂಬುದು ಈಗಲಾದರೂ ನಿದರ್ಶನಕ್ಕೆ ಬರುವ ಮಾತಾಗಿದೆ. ಕರ್ನಾಟಕದಲ್ಲಿ ಪ್ರತಿಯೊಂದು ಚಿಕ್ಕದೊಡ್ಡ ಹಳ್ಳಿಯ ಮಠಗುಡಿಗಳಲ್ಲಿ ವರ್ಷದೊಳಗೆ ಕೆಲಕಾಲವಾದರೂ ಯಾವುದಾದರೊಂದು ಪುರಾಣವನ್ನು ಪಂಡಿತರಿಂದ ಸಂಗೀತಸಾಹಿತ್ಯದೊಂದಿಗೆ ಹೇಳಿಸುವ ಕ್ರಮವು ಇನ್ನೂ ಗೋಚರವಾಗುತ್ತದೆ. ಇಂತಹ ಕಾಲದಲ್ಲಿ ಸುತ್ತಲಿನ ಹೆಣ್ಣೂ ಗಂಡೂ ಪ್ರತಿದಿನ ಸಾಯಂಕಾಲದಲ್ಲಿ ತಾಸೆರಡುತಾಸು ಪುರಾಣಶ್ರವಣವನ್ನು ಮಾಡುವ, ಪುರಾಣದೊಳಗಿನ ಒಂದೊಂದು ಮಹತ್ತ್ವದ ವಿಷಯವು ಮುಗಿಯಿತೆಂದರೆ 'ಕಾಂಡಪ್ರಸ್ತ'ವನ್ನು ಮಾಡಿಸುವ ಈರೂಢಿಯು ಸರ್ವಶ್ರುತವಾಗಿರುತ್ತದೆ. ಪುರಾಣಪ್ರವಚನವನ್ನು ಮಾಡುವವರಾದರೂ ವಿಷಯಕ್ಕೆ ತಕ್ಕಂತೆ ಕಥೆ-

ಉಪಕಥೆ-ಉಪ್ಪುಗತೆಗಳನ್ನು ಬೆರೆಸಿ ರಸವತ್ತಾಗಿ ನಿರೂಪಿಸುವ ಕಲೆಯನ್ನು ವಂಶಪರಂಪರೆಯಾಗಿ ಬಲ್ಲವರಾಗಿರುತ್ತಾರೆ. ಆದುದರಿಂದ ಪುರಾಣಪ್ರವಚನವು ಲೋಕಶಿಕ್ಷಣದ ಬಹುಕಾಲದಿಂದ ಬಂದ ಒಂದು ಒಳ್ಳೆಯ ಸಾಧನ. ಅಂತೆಯೆ ಲೋಕಶಿಕ್ಷಣವನ್ನು ತನ್ನ ಮುಖ್ಯಧ್ಯೇಯವನ್ನಾಗಿ ಮಾಡಿಕೊಂಡ ವೀರಶೈವಮತವು ಪ್ರಸಾರಗೊಳ್ಳಲಾರಂಭಿಸಿದಂದಿನಿಂದ ಕವಿಗಳು ಪುರಾಣಗಳನ್ನು ಷಟ್ಪದಿಗಳಲ್ಲಿ ಹೆಚ್ಚು ಬರೆಯಲಾರಂಭಿಸಿದರು.[೧] ವಿರೂಪಾಕ್ಷಪಂಡಿತನು ಈತತ್ತ್ವವನ್ನನುಸರಿಸಿ ಚೆನ್ನಬಸವೇಶನ ಚರಿತ್ರೆಯೊಡನೆ ವೀರಶೈವತತ್ತ್ವಗಳ ಪಂಚವಿಂಶತಿಲೀಲೆಗಳ ಶಿವಶರಣರ ಹಾಗೂ ರಸಭಾವ ಮೊದಲಾದವುಗಳ ಅನುಭವಗಳನ್ನು ಜನತೆಗೆ ಮಾಡಿಕೊಡುವ ಎಡೆಯನ್ನು ತನ್ನ ಕೃತಿಯಲ್ಲಿ ಕಲ್ಪಿಸಿರಬೇಕು. ಲೋಕಶಿಕ್ಷಣದ ಪುಣ್ಯದೊಡನೆ ಲೋಕಾದರಣೆಯು ತನ್ನಿಂದ ತಾನೇ ಲಭಿಸುತ್ತಿತ್ತೆಂದು ಇವನ ಮತವಾಗಿರಬೇಕು. ಈಕವಿಯು ತನಗೆ ಬೇಕಾದ ವಿಷಯವನ್ನು ನಿರೂಪಿಸುವಲ್ಲಿ ಶಬ್ದಾಲಂಕಾರ ಮೊದಲಾದ ಯಾವ ಆಡಂಬರಕ್ಕೂ ಹೋಗದೆ ಕೇವಲ ಆವಿಷಯವನ್ನೇ[೨] ಸರಳವಾದ ಶೈಲಿಯಲ್ಲಿ ಸುಗಮವಾಗುವಂತೆ ಪ್ರತಿಪಾದಿಸುತ್ತಾನೆ. ಜನರಿಗೆ ಬೇಕಾದ ವಿಷಯವು ಬಂದಲ್ಲಿ[೩] ತನ್ನ ಕವಿತ್ವಕ್ಕೆ ಎಲ್ಲ ಬಾಹ್ಯಾಲಂಕಾರಗಳನ್ನು ತೊಡಿಸುತ್ತಾನೆ.

ಒಟ್ಟಿನಲ್ಲಿ ಈಕವಿಯು ಪಂಪ-ರನ್ನ-ಷಡಕ್ಷರದೇವರೊಡನೆ ಪ್ರಥಮಶ್ರೇಣಿಯ ಕವಿಮಾಲಿಕೆಯಲ್ಲಿ ಸೇರಲು ತಕ್ಕವನಲ್ಲವೆಂದರೂ ಲಕ್ಷ್ಮೀಶ-ಕುಮಾರವ್ಯಾಸರ ಮಾಲಿಕೆಯಲ್ಲಿ ಸೇರಲಿಕ್ಕೆ ಆವ ಸಂದೇಹವೂ ಇಲ್ಲೆನ್ನಬಹುದು. ಕನ್ನಡಷಟ್ಪದಿಕಾವ್ಯಗಳಿಗೆ ಆದರವಿರುವ ತನಕ ಈಕೃತಿಯು ಜನರ ಆದರಣೆಗೆ ಪಾತ್ರವಾಗಿಯೇ ಇರುವುದೆಂದು ಹೇಳಿದರೆ ಸಾಕು.

ಈಕಾವ್ಯದ ಮುದ್ರಣದಲ್ಲಿ ಉಪಯೋಗಿಸಿದ ಮಾತೃಕೆಗಳು


ನಮಗೆ ನಾಲ್ಕು ಅಚ್ಚಿನ ಪ್ರತಿಗಳು, ಕ್ರಿ. ಶ. ೧೮೫೧ರಲ್ಲಿ ಅಚ್ಚಾದ ಮಂಗಳೂರ ಶಿಲಾಮುದ್ರಣದ ಪ್ರತಿಯೊಂದು ಹೀಗೆ ಐದು ಪ್ರತಿಗಳು ದೊರೆತಿದ್ದು, ಮಂಗಳೂರ ಪ್ರತಿಯೇ ಉಳಿದ ನಾಲ್ಕು ಪ್ರತಿಗಳಿಗೆ ಮಾತೃಕೆಯೆಂದು ತೋರುತ್ತದೆ. ಇವೈದೂ ಪ್ರತಿಗಳಲ್ಲಿರುವ ಒಟ್ಟು ಪದ್ಯಗಳ ಸಂಖ್ಯೆಯಾದರೂ ಒಂದೇ (೨೮೯೮) ಆಗಿರುತ್ತದೆ. ಈಪ್ರತಿಗಳಿಗೆ ಅನುಕ್ರಮವಾಗಿ ಅ, ಬ, ಕ, ಡ, ಮ. ಎಂಬುವ ಸಂಕೇತಗಳನ್ನು ಇಟ್ಟುಕೊಂಡಿರುತ್ತದೆ.

೧. ರಾಘವಾಂಕ-ಭೀಮಕವಿಗಳು ತಮ್ಮ ಪುರಾಣಗಳನ್ನು ಷಟ್ಪದಿರೂಪವಾಗಿ ಬರೆದರು. ೨. ಸಂಧಿ ೩ ಮತ್ತು ಸಂಧಿ ೫ರಿಂದ ೬೩ರ ವರೆಗೆ ನೋಡುವುದು. ೩. ಸಂಧಿಗಳು ೯, ೧೧, ೩೪-೩೭ ಮತ್ತು ೫೫ ಇವುಗಳನ್ನು ನೋಡಿರಿ.

ಒಟ್ಟಿಗೆ ನಮಗೆ ಕಾಗದದ ಮೇಲಿನ ಐದು ಕೈಬರೆಹದ ಪ್ರತಿಗಳು ದೊರೆತಿವೆ. ಅವುಗಳಿಗೆ ಅನುಕ್ರಮವಾಗಿ ಕೋ., ಗೋ., ಶಿ., ಪ., ಹು. ಎಂದು ಸಂಜ್ಞೆಗಳನ್ನು ಕೊಟ್ಟಿದೆ. ಇವುಗಳಲ್ಲಿ ಗೋ. ಮತ್ತು ಪ. ಪ್ರತಿಗಳು ಬಹುತರ ಒಂದೇ ಎಂಬಂತೆ ತೋರಿದರೂ ಪ. ಪ್ರತಿಯು ಹೆಚ್ಚು ಶುದ್ಧವಾಗಿರುವುದಲ್ಲದೆ ಅದರಲ್ಲಿರುವ ಪದ್ಯಗಳ ಸಂಖ್ಯೆಯು ೨೯೦೬ ಇದ್ದು ಉಳಿದ ಎಲ್ಲ ಪ್ರತಿಗಳಿಗಿಂತ ಹೆಚ್ಚು ಇರುವುದು. ಇದು ಕಾಗದದ ಮೇಲಿನ ಪ್ರತಿಯಾದರೂ ಇದನ್ನು ಬರೆದ ಕಾಲವು ಶಾಲಿವಾಹನಶಕ ೧೫೩೨ (ಕ್ರಿ. ಶ. ೧೬೧೦) ಎಂದರೆ ಕಾವ್ಯರಚನೆಯಾದ ೨೫ನೆಯ ವರ್ಷದಲ್ಲಿ. ಈಕಾರಣ ದಿಂದ ಇದನ್ನೇ ಮುಖ್ಯಾಧಾರವಾಗಿಟ್ಟುಕೊಂಡು ಗ್ರಂಥಶೋಧನೆಯನ್ನು ಮಾಡ ಲಾಗಿದೆ. ಗೋ. ಪ್ರತಿಯಲ್ಲಿ ೨೯೦೨ ಪದ್ಯಗಳಿದ್ದು ಹಲವೆಡೆಗಳಲ್ಲಿ ಶುದ್ಧಪಾಠವನ್ನು ನಿರ್ಣಯಿಸಲು ಇದರಿಂದ ಅನುಕೂಲವಾಯಿತು. ಶಿ. ಪ್ರತಿಯಲ್ಲಿ ೨೮೭೮ ಪದ್ಯ ಗಳಿದ್ದು ಇದರಲ್ಲಿ ಹಲವೆಡೆ ಸ್ವತಂತ್ರ ಪಾಠಗಳು ದೊರೆಯುತ್ತವೆ. ಹು. ಪ್ರತಿಯಲ್ಲಿ ಒಟ್ಟು ೨೮೬೫ ಪದ್ಯಗಳಿದ್ದು ಅನೇಕ ಕಡೆಗಳಲ್ಲಿ ಪ. ಪ್ರತಿಯನ್ನು ಹೋಲುತ್ತದೆ. ಕೋ. ಪ್ರತಿಯಲ್ಲಿ ೨೮೨೧ ಪದ್ಯಗಳಿದ್ದು ಇದು ಬೇರೆ ಯಾವುದೋ ೨-೩ ಮಾತೃಕೆಗ ಳನ್ನು ನೋಡಿಮಾಡಿದ ಪ್ರತಿಯಾದುದರಿಂದಲೂ ಬೇರೆ ಬೇರೆ ಪಾಠಗಳನ್ನು ಒಂದರ ಮೇಲೊಂದು ಬರೆದಿರುವುದರಿಂದಲೂ ಇದು ಅಷ್ಟು ಸಹಾಯಕಾರಿಯಾಗಲಿಲ್ಲ.

ನಮಗೆ ಮೂರು ತಾಳೆವೋಲೆಯ ಪ್ರತಿಗಳು ದೊರೆತಿದ್ದು ಅವುಗಳಿಗೆ ಅನುಕ್ರ ಮವಾಗಿ ತು., ದಾ., ತಾ. ಎಂಬ ಸಂಕೇತಗಳನ್ನು ಕೊಡಲಾಗಿದೆ. ತು. ಮತ್ತು ದಾ. ಪ್ರತಿಗಳು ಪೂರ್ಣವಾಗಿದ್ದು ಮೊದಲನೆಯದರಲ್ಲಿ ೨೮೮೩, ಎರಡನೆಯದರಲ್ಲಿ ೨೮೬೩ ಪದ್ಯಗಳು ಇರುವುವು. ತಾ. ಪ್ರತಿಯಲ್ಲಿ ನಾಂದೀಪದ್ಯಗಳಷ್ಟೇ ಇರುತ್ತವೆ.

ಮೇಲ್ಕಂಡಂತೆ ಬೇರೆ ಬೇರೆ ಪ್ರತಿಗಳಲ್ಲಿ ಪದ್ಯಗಳ ಸಂಖ್ಯೆಯು ಬೇರೆ ಬೇರೆಯಾ ಗಿರುವುದರಿಂದ ಪ. ಪ್ರತಿಯನ್ನೇ ಅನುಸರಿಸಿ ಒಟ್ಟಿಗೆ ೨೯೦೬ ಪದ್ಯಗಳನ್ನು ಮುದ್ರಿಸ ಲಾಗಿದೆ. ಯಾವ ಯಾವ ಪ್ರತಿಗಳಲ್ಲಿ ಯಾವ ಯಾವ ಪದ್ಯಗಳು ಬಿಟ್ಟು ಹೋಗಿವೆ ಯೆಂಬುದನ್ನು ಅಲ್ಲಲ್ಲಿ ಅಡಿಟಿಪ್ಪಣಿಗಳಲ್ಲಿ ತೋರಿಸಲಾಗಿದೆ. ಸಾಮಾನ್ಯವಾಗಿ ಪ. ಪ್ರತಿಯ ಪಾಠಗಳನ್ನೇ ಮೂಲದಲ್ಲಿಟ್ಟುಕೊಂಡಿದ್ದರೂ ಬೇರೆ ಯಾವುದಾದರೊಂದು ಪ್ರತಿಯಲ್ಲಿ ಹೆಚ್ಚು ಸಯುಕ್ತಿಕವೆಂದು ಅಥವಾ ಸುಂದರವೆಂದು ನಮಗೆ ಕಂಡುಬಂದ ಪಾಠವನ್ನು ಅಲ್ಲಲ್ಲಿ ಅಂಗೀಕರಿಸಿದ್ದೇವೆ. ಬಳಿಕೆಯ ಅನೇಕ ಶಬ್ದಗಳು ಕೈಬರೆಹದ ಪ್ರತಿಗಳಲ್ಲಿ ಬೇರೆ ಬೇರೆ ರೂಪವಾಗಿ ಬರೆದಿರುವುದರಿಂದ ಎಷ್ಟೋ ಕಡೆಗಳಲ್ಲಿ ಕವಿಯು ಇಂತಹದೇ ರೂಪವನ್ನು ಉಪಯೋಗಿಸಿದ್ದಾನೆಂದು ನಿರ್ಧರಮಾಡಲಿಕ್ಕೆ ಬರುವಂತಿಲ್ಲ. ಅಂತಹ ರೂಪಗಳಲ್ಲಿ ಕಾರಣವಿಲ್ಲದೆ ಒಂದನ್ನು ಅಂಗೀಕರಿಸಿ ಇನ್ನೊಂದನ್ನು ಬಿಡು ವುದು ಸರಿದೋರಲಿಲ್ಲ. ಆದುದರಿಂದ ಈಮುದ್ರಿತ ಪ್ರತಿಯಲ್ಲಿ ಬಹಳ ಸಾರೆ ಬಂದ ರೂಪಗಳನ್ನು ಸಾಮಾನ್ಯವಾಗಿ ಉಪಯೋಗಿಸಿದರೂ ಉಳಿದ ರೂಪಗಳನ್ನೂ ಅಲ್ಲಲ್ಲಿ



"ಷ" ಪ್ರತಿಯ ಕಡೆಯ ಪುಟ



“ತು” ಪ್ರತಿಯ ಒಂದು ಪುಟ

ಇಟ್ಟುಕೊಳ್ಳಲಾಗಿದೆ. ಇಂತಹ ಶಬ್ದಗಳ ಪಟ್ಟಿಯನ್ನು ವಾಚಕರ ಅವಗಾಹನೆಗಾಗಿ ಬೇರೊಂದು ಕಡೆಗೆ ಕೊಟ್ಟಿರುತ್ತದೆ. ಕೈಬರೆಹದ ಪ್ರತಿಗಳಲ್ಲಿ ಎಷ್ಟೋ ಕಡೆಗೆ 'ಗ' ಮತ್ತು 'ನ', 'ಚ' ಮತ್ತು 'ಜ', 'ವ' ಮತ್ತು 'ದ', 'ಕ' ಮತ್ತು 'ತ' ಈಯಕ್ಷರಗಳನ್ನು ಸರಿಯಾಗಿ ಗುರುತಿಸಲು ಬರುವಂತಿಲ್ಲ.

'ಱ-ೞ' ಗಳ ವಿಚಾರ

ಈ ಕಾವ್ಯದ ಮುದ್ರಣದಲ್ಲಿ ಹಳೆಗನ್ನಡದ 'ಱ-ೞ' ಗಳನ್ನು ಉಪಯೋಗಿಸಿರುವುದಿಲ್ಲ. ಇದಕ್ಕೆ ಕೆಲವು ಕಾರಣಗಳುಂಟು. ನಮಗೆ ದೊರೆತ ಕೈಬರೆಹದ ಪ್ರತಿಗಳಲ್ಲಿ ಯಾವುದರಲ್ಲಿಯೂ 'ೞ'ಕಾರ ಪ್ರಯೋಗವಿಲ್ಲ. 'ಱ'ಕಾರದ ಉಪಯೋಗವು 'ದಾ' ಎಂಬುದೊಂದೇ ಪ್ರತಿಯಲ್ಲಿ ಮಾತ್ರ ಕಂಡುಬರುತ್ತದೆ. ನಮ್ಮಲ್ಲಿದ್ದ ಕೈಬರೆಹದ ಪ್ರತಿಗಳಲ್ಲಿ ಎಲ್ಲಕ್ಕೂ ಹಳೆಯದೆಂದು ತೋರುವ 'ಪ' ಪ್ರತಿಯಲ್ಲಿಯೂ ಈಯಕ್ಷರಗಳ ಉಪಯೋಗವಿಲ್ಲದುದರಿಂದ ಆಕಾಲದಲ್ಲಿ ಆಗಲೇ ಇವುಗಳ ಉಪಯೋಗವನ್ನು ಬಿಟ್ಟಿದ್ದರೆಂದು ಊಹಿಸಲು ಬರುವಂತಿದೆ. ಮೇಲಾಗಿ ವೀರಶೈವ ಸಂಪ್ರದಾಯವು ಈ ಊಹೆಯನ್ನು ಬಲಗೊಳಿಸುವುದರಿಂದ ಇವುಗಳ ಉಪಯೋಗವನ್ನು ಸದ್ಯದ ಮುದ್ರಣದಲ್ಲಿ ಬಿಡುವುದು ಉಚಿತವೆಂದು ನಿರ್ಧರಿಸಲಾಯಿತು. ಮುಂದೆ ಈ ಅಕ್ಷರಗಳನ್ನು ಬಳಸಿದ ಹಳೆಯ ಪ್ರತಿಗಳು ಹೆಚ್ಚು ದೊರೆತಲ್ಲಿ ಮುಂದಿನ ಮುದ್ರಣದಲ್ಲಿ ಇವುಗಳನ್ನು ಉಪಯೋಗಿಸಲು ಬರುವಂತಿದೆ.

ಅನುಬಂಧ ೧

ಬಸವ - ಚೆನ್ನಬಸವ - ಅಲ್ಲಮ - ಸಿದ್ಧರಾಮ

ಕಲ್ಯಾಣನಗರದಲ್ಲಿ ಬಸವೇಶ್ವರ-ಚೆನ್ನಬಸವೇಶ್ವರರು ವೀರಶೈವ ತತ್ತ್ವಗಳನ್ನು ಬಸವಣ್ಣನವರ ಅನುಭವಮಂಟಪದ್ವಾರಾ, ವೀರಶೈವಾಚರಣೆಗಳನ್ನು ಚೆನ್ನಬಸವೇಶ್ವರರ ಷಟ್ಸ್ಥಳಸಿದ್ಧಾಂತದ ದ್ವಾರಾ, ನೆಲೆಗೆ ನಿಲ್ಲಿಸಿ, ಆಮತವನ್ನು ಜನರಲ್ಲಿ ಪ್ರಸಾರಮಾಡುವ ಕಾರ್ಯದಲ್ಲಿ ನಿರತರಾಗಿರಲು, ಅವರ ಕೀರ್ತಿಯು ದಿಕ್ಕುದಿಕ್ಕುಗಳಲ್ಲಿ ಪಸರಿಸಿತು. ತೆಂಕಣ (ಬನವಾಸಿ) ದೇಶದಲ್ಲಿದ್ದ ಅಲ್ಲಮಪ್ರಭುಗಳು ಅವರು ಮಾಡುತ್ತಿದ್ದ ಕಾರ್ಯವನ್ನು ಕರ್ಣಪರಂಪರೆಯಿಂದ ಕೇಳಿ, ಅವರನ್ನು ಕಾಣಬೇಕೆಂಬ ಲವಲವಿಕೆಯಿಂದ ಹೊರಟು, ಮಾರ್ಗದಲ್ಲಿ ಗೊಗ್ಗಯ್ಯ ಮೊದಲಾದವರನ್ನು ಕಂಡು, ಅವರಿಗೆ ಮೋಕ್ಷದ ನಿಜಮಾರ್ಗವನ್ನರುಹಿ, ಸೊನ್ನಲಾಪುರದ ಸಿದ್ಧರಾಮರಲ್ಲಿಗೆ ಬಂದು ಅವರಲ್ಲಿಪ್ಪ ಕರ್ತೃತ್ವಶಕ್ತಿಯನ್ನು ಕಂಡು ಅವರನ್ನು ವೀರಶೈವರನ್ನಾಗಿ ಮಾಡಿದರೆ ಅವರಿಂದ ಇನ್ನೂ ಹೆಚ್ಚಿನ ಕಾರ್ಯಗಳಾಗುವುವೆಂದು ಬಗೆದು, ಅವರನ್ನು ಒಡಗೊಂಡು ಕಲ್ಯಾಣಕ್ಕೆ ಬಂದರು. ಬಸವ-ಚೆನ್ನಬಸವ ಮೊದಲಾದವರನ್ನು ಅವರಿಗೆ ತೋರಿಸಿ ಚೆನ್ನಬಸವಣ್ಣನವರಿಂದ ಅವರಿಗೆ ಲಿಂಗದೀಕ್ಷೆಯನ್ನು ಮಾಡಿಸಿದರು. ಇದೇ ಈ ಕಾವ್ಯದ ಮುಖ್ಯ ಆಶಯವಾಗಿರುವುದರಿಂದ ಓದುಗರಿಗೆ ಈ ನಾಲ್ಕು ವೀರಶೈವ ಆದ್ಯರ ಬಗ್ಗೆ ಸಂಕ್ಷಿಪ್ತವಾಗಿ ಕೆಲವು ಸಂಗತಿಗಳು ಗೊತ್ತಿರುವುದು ಒಳ್ಳೆಯದೆಂದು ಇದರ ಅಡಿಯಲ್ಲಿ ಕೆಲವು ವಿಷಯಗಳನ್ನು ಬರೆಯಲಾಗಿದೆ.

ಬಸವೇಶ್ವರ - ಚೆನ್ನಬಸವೇಶ್ವರ - ಅಲ್ಲಮಪ್ರಭು ಈ ಮೂವರು ವೀರಶೈವ ಆದ್ಯರಲ್ಲಿ ಅತ್ಯುಚ್ಚಸ್ಥಾನವನ್ನು ಪಡೆದಿರುತ್ತಾರೆ. ಇವರಲ್ಲಿ ತಾರತಮ್ಯದಿಂದ ಅವರವರ ಸ್ಥಾನವನ್ನು ನಿರ್ದೇಶಿಸುವುದು ಸುಕರವಲ್ಲ; ಏಕೆಂದರೆ ಇವರಲ್ಲಿಯ ಅಂತರವು ಬಹುಸೂಕ್ಷ್ಮವಾಗಿದೆ.

ವೀರಶೈವ ಮತಪ್ರಸಾರದ ಕಾರ್ಯದಲ್ಲಿ ಬಸವೇಶ್ವರರೇ ಮೊದಲಿಗರೆನ್ನಬಹುದು. ಅಷ್ಟಾವರಣ-ಪಂಚಾಚಾರಗಳೆಂಬ ವಿಶಿಷ್ಟತತ್ತ್ವಗಳನ್ನು ಬಳಕೆಯಲ್ಲಿ ತಂದು, ಅವುಗಳ ಸಾಧನದಿಂದ ವ್ಯಕ್ತಿ ಹಾಗೂ ವಿಚಾರ - ಸ್ವಾತಂತ್ರ್ಯ, ಸ್ತ್ರೀ - ಪುರುಷರಲ್ಲಿ ಸಮಾನತೆ, ವರ್ಣಾಶ್ರಮಧರ್ಮದ ನಿರಾಕರಣೆ, ಕಾಯಕದ ಮಹತ್ತ್ವ, ಪೂರ್ವಕರ್ಮ-ಪುನರ್ಜನ್ಮಗಳ ನಿರಸನ, ಜಾತಿ - ಜನನ - ಪ್ರೇತ - ಉಚ್ಛಿಷ್ಟ - ರಜಸ್ಸು ಈ "ಸೂತಕ"ಗಳಿಂದ ಉಂಟಾಗುವ ಅಸ್ಪೃಶ್ಯತೆಯ ನಿವಾರಣೆ ಇವೇ ಮೊದಲಾದ ವಿಶಾಲದೃಷ್ಟಿಯ ಆಚರಣೆಗಳನ್ನು ರೂಢಿಯಲ್ಲಿ ತಂದು ವೀರಶೈವ ಮತವನ್ನು ಒಂದು ವಿಶ್ವಮತವನ್ನಾಗಿಯೇ ಮಾಡಿದರು. ಜ್ಞಾನಯುಕ್ತವಾದ ನಿಷ್ಕಾಮಕರ್ಮ,

ಸದಾಚರಣೆ, ಶೀಲಸಂಪನ್ನತೆ ಮೊದಲಾದ ಅತ್ಯುಚ್ಚ ನಡೆವಳಿಕೆಯಿಂದ ಕೂಡಿದ ಬಸವೇಶ್ವರರು ತಮ್ಮ ಸಹಕಾರಿಗಳಾದ ಶಿವಶರಣರಿಗೂ ಕೂಡ ಗುರುಸ್ಥಾನದಲ್ಲಿದ್ದರಾದರೂ ತಾವು ಮಾತ್ರ "ಭಕ್ತಿಭಾಂಡಾರಿ" ಗಳಾಗಿ ಭಕ್ತಿಸ್ಥಳದಲ್ಲಿಯೇ ನಿಂತರು.

ಬಸವಣ್ಣನವರ ಸೋದರಳಿಯಂದಿರಾದ ಚೆನ್ನಬಸವಣ್ಣನವರು ಜ್ಞಾನಮೂರ್ತಿಗಳಾಗಿ ಷಟ್ಸ್ಥಲಜ್ಞಾನವನ್ನು ಪ್ರಸಾರಗೊಳಿಸಿ ವೀರಶೈವಾಚರಣೆಯನ್ನು ಕ್ರಮಗೊಳಿಸಿದರು; ಜ್ಞಾನಕ್ಕೆ ಪ್ರಾಧಾನ್ಯವನ್ನು ಇತ್ತರು. ಇದರಿಂದ ವೀರಶೈವ ಮತಾನುಯಾಯಿಗಳ ತಿಳಿವಳಿಕೆಯು ಅಭಿವೃದ್ಧಿಯನ್ನು ಹೊಂದಿತು. ಭಕ್ತಿಸ್ಥಲದ ಮುಂದಿನ ಮೆಟ್ಟಲುಗಳನ್ನು ಅವರವರ ಯೋಗ್ಯತೆಯ ಪ್ರಕಾರ ಏರಲು ಅನುಕೂಲವಾಯಿತು. ಚೆನ್ನಬಸವಣ್ಣನವರ ಆಚರಣೆಯಲ್ಲಿ ಜ್ಞಾನಪ್ರಾಧಾನ್ಯವಿದ್ದುದರಿಂದ ಉಳಿದವರ ದೃಷ್ಟಿಯಿಂದ ಇವರ ನಡವಳಿಕೆಯಲ್ಲಿ ನಿಷ್ಠುರತೆಯು ಕಂಡುಬರುತ್ತಿತ್ತು. ಬಸವಣ್ಣನವರು ವೀರಶೈವದ ಪ್ರಸಾರಣಕಾರ್ಯವನ್ನು ಕೈಕೊಂಡಿದ್ದರೆ, ಚೆನ್ನಬಸವಣ್ಣನವರು ಆ ಮತದಲ್ಲಿ ಸೇರಿದವರ ಆಚಾರ-ವಿಚಾರಗಳನ್ನು ಕ್ರಮಗೊಳಿಸುವ ಕಾರ್ಯವನ್ನು ಕೈಕೊಂಡಿದ್ದರೆಂದೆನ್ನಬಹುದು. ಬಸವಣ್ಣನವರ "ಅನುಭವ ಮಂಟಪ"ದಲ್ಲಿ ಲಿಂಗವೆಂದು ಬದಣೆಕಾಯಿಗಳನ್ನು ಕಟ್ಟಿಕೊಂಡವರಿಗೂ ಎಡೆಯಿದ್ದರೆ, ಚೆನ್ನಬಸವಣ್ಣನವರ "ಷಟ್ಸ್ಥಲಮಂದಿರ"ದಲ್ಲಿ ಪ್ರಾಣಲಿಂಗಿಯಾದ ಸಿದ್ಧರಾಮರಂತಹರಿಗೂ ಪ್ರವೇಶವಿರಲಿಲ್ಲ.

ಮಾಯಾಕೋಲಾಹಲನೂ, ನಿತ್ಯಪರಿಪೂರ್ಣನೂ, ಸಹಜವೈರಾಗ್ಯಮೂರ್ತಿಯೂ ಎಂದು ಹೆಸರಾಂತ ಅಲ್ಲಮಪ್ರಭುಗಳು ಲೋಕಹಿತಾರ್ಥವಾಗಿ ಪ್ರಪಂಚದಲ್ಲಿ ಸಂಚರಿಸುತ್ತ ಸಾಧಕರಿಗೆ ನಿಜಮಾರ್ಗವನ್ನರುಹುತ್ತ, ಸಿದ್ಧರನ್ನು ಪರೀಕ್ಷಿಸಿ, ಅವರವರ ಕೊರತೆಗಳನ್ನು ಅವರಿಗೆ ತೋರಿಸಿಕೊಟ್ಟು, ಅವುಗಳ ಪೂರ್ಣತೆಗಾಗಿ ಬಸವಾದಿ ಪ್ರಮಥರನ್ನು ಮರೆಹೊಗಲು ಉಪದೇಶಿಸುತ್ತಿದ್ದರು. ಭಕ್ತಿಜ್ಞಾನಗಳ ಸಮುಸಮುಚ್ಚಯವಾದ ಶಿವಯೋಗವೇ ಮುಮುಕ್ಷುಗಳಿಗೆ ನಿಜವಾದ ಮಾರ್ಗವೆಂಬುದನ್ನು ತಿಳಿಸುತ್ತಿದ್ದರೂ, ತಾವು ಸ್ವತಃ ಎಲ್ಲದರಿಂದಲೂ ನಿರ್ಲಿಪ್ತರಾಗಿ ಬಸವಾದಿಪ್ರಮಥರಿಂದ ನಿರ್ಮಿತವಾದ ಶೂನ್ಯಸಿಂಹಾಸನವನ್ನು ಆರೋಹಿಸಿ ಜಗತ್ಪೂಜ್ಯರಾದರು.

ಮೋಕ್ಷಸಾಧನೆಗಳಾದ ಭಕ್ತಿ-ಜ್ಞಾನ-ವೈರಾಗ್ಯ ಈ ಮೂರೂ ಈ ಮೂವರಲ್ಲಿ ಇದ್ದುವಾದರೂ ಬಸವೇಶ್ವರರಲ್ಲಿ ಭಕ್ತಿಯೂ ಚೆನ್ನಬಸವಣ್ಣನವರಲ್ಲಿ ಜ್ಞಾನವೂ ಪ್ರಭುವಿನಲ್ಲಿ ವೈರಾಗ್ಯವೂ ಪ್ರಧಾನವಾಗಿ ಕಾಣುತ್ತಿದ್ದುವು.

ರಾಜಯೋಗಿಯಾದ ಸಿದ್ಧರಾಮರು ಉಳಿದ ಎಲ್ಲ ರೀತಿಯಿಂದ ಪರಿಪೂರ್ಣರಾಗಿದ್ದರೂ ಅವರಿಗೆ ಶಿವಯೋಗರಹಸ್ಯವು ಗೊತ್ತಿದ್ದಿಲ್ಲವಾದುದರಿಂದ ಪ್ರಭುವಿನಿಂದ ನಿರ್ದಿಷ್ಟರಾಗಿ ಚೆನ್ನಬಸವಣ್ಣನವರಿಂದ ಸಂಸ್ಕಾರಹೊಂದಿ ಪ್ರಮಥಮಾಲಿಕೆಯಲ್ಲಿ ಸೇರಿದರು.

ಅನುಬಂಧ ೨

ಚೆನ್ನಬಸವಪುರಾಣ ಮತ್ತು ಜೈಮಿನಿಭಾರತ

ಇವುಗಳಲ್ಲಿಯ

ಪರಸ್ಪರ ಹೋಲಿಕೆಯುಳ್ಳ ಕೆಲವು ಪದ್ಯಗಳು

ಚೆನ್ನಬಸವಪುರಾಣ		ಜೈಮಿನಿಭಾರತ		ಚೆನ್ನಬಸವಪುರಾಣ		ಜೈಮಿನಿಭಾರತ	
ಸಂಧಿ	ಪದ್ಯ	ಸಂಧಿ	ಪದ್ಯ	ಸಂಧಿ	ಪದ್ಯ	ಸಂಧಿ	ಪದ್ಯ
೧	೨	೧	೧	೧೦	೪೭	೬	೩೧
೨	೩	೬	೩	೧೦	೪೮	೬	೨೬
೪	೨೦	೨	೫೪	೧೦	೪೯	೬	೨೩
೪	೩೧	೪	೨	೧೦	೫೧	೬	೩೫
೫	೧೨	೨೬	೯	೧೦	೬೮	೨೬	೨೧
೬	೪೦	೨	೫	೧೧	೩	೩	೨
೬	೪೧	೨	೬	೧೧	೪	೩	೨
೬	೪೨	೨	೭	೧೧	೫	೩	೩
೬	೪೩	೨	೮	೧೧	೬	೩	೪
೬	೪೪	೨	೯	೧೧	೧೪	೩	೯
೬	೪೫	೨	೧೦	೧೧	೧೫	೩	೧೨
೬	೪೭	೨	೧೨	೧೧	೨೪	೩	೨೮
೯	೫	೨೬	೧೪	೧೧	೨೫	೩	೨೩
೯	೧೨	೨೬	೯	೧೧	೩೬	೩	೧೫
೯	೧೬	೨೬	೧೨	೧೬	೨೦	೮	೨೭
೯	೨೪	೨೬	೧೬	೧೬	೩೪	೨೨	೩೧
೧೦	೪	೬	೧೬	೧೯	೨೫	೧೦	೫೦
೧೦	೬	೬	೧೮	೨೬	೧೮	೨೨	೩೫
೧೦	೧೩	೬	೧೭	೨೬	೨೬	೨೩	೧೪
೧೦	೪೩	೬	೨೨	೩೧	೨೪	೧೨	೪೬
೧೦	೪೪	೬	೨೫	೩೨	೭	೨೨	೨೧
೧೦	೪೫	೬	೨೯	೩೨	೧೮	೨೨	೨೨
೧೦	೪೬	೬	೩೦	೩೨	೧೯	೨೨	೨೩

ಚೆನ್ನಬಸವಪುರಾಣ		ಜೈಮಿನಿಭಾರತ		ಚೆನ್ನಬಸವಪುರಾಣ		ಜೈಮಿನಿಭಾರತ	
ಸಂಧಿ	ಪದ್ಯ	ಸಂಧಿ	ಪದ್ಯ	ಸಂಧಿ	ಪದ್ಯ	ಸಂಧಿ	ಪದ್ಯ
೩೨	೨೦	೨೨	೨೪	೪೫	೩೪	೩೦	೪
೩೪	೧೪	೧೦	೨	೪೫	೩೬	೩೦	೬
೩೪	೨೦	೧೯	೫	೪೫	೪೦	೮	೨೨
೩೪	೨೧	೧೯	೬	೪೫	೪೨	೮	೧೬
೩೪	೨೮	೧೫	೧೭	೪೫	೪೫	೧೫	೯
೩೫	೨೬	೧೯	೨೨	೪೫	೪೬	೧೫	೧೩
೩೫	೨೭	೧೯	೨೧	೪೫	೪೭	೧೫	೧೪
೩೫	೨೯	೧೯	೩೦	೪೫	೪೯	೧೫	೧೨
೩೫	೩೦	೧೯	೩೨	೪೫	೫೦	೧೫	೧೧
೩೫	೩೧	೧೯	೩೩	೪೫	೬೫	೩೦	೧೩
೩೫	೩೩	೧೯	೨೮	೪೫	೬೬	೩೦	೧೭
೩೬	೨೭	೧೭	೨೭	೪೮	೫೪	೮	೩೨
೩೬	೩೦	೧೭	೨೪	೪೯	೨೮	೧೩	೧೮
೩೭	೧೯	೩೧	೮	೫೧	೭	೨೬	೧೪
೩೭	೫೨	೩೦	೩	೫೩	೧೫	೪	೨೬
೩೮	೩೭	೧೮	೨೭	೫೩	೧೯	೧೯	೯
೪೦	೨೫	೨೨	೨೨	೫೩	೨೦	೧೯	೮
೪೩	೩೩	೨೨	೪	೫೩	೨೫	೨೮	೪೪
೪೩	೪೪	೧೨	೪೪	೫೩	೨೬	೨೮	೪೫
೪೫	೩೩	೩೦	೨	೫೩	೬೩	೨೧	೪೦

ಅನುಬಂಧ ೩

ಚೆನ್ನಬಸವಪುರಾಣದ ಕೈಬರೆಹದ ಹಾಗೂ ತಾಳೆವೋಲೆಯ ಮಾತೃಕೆಗಳಲ್ಲಿ ದೊರೆಯುವ

ಕೆಲವು ಶಬ್ದಗಳ ಬೇರೆ ಬೇರೆ ರೂಪಗಳು

ಅ - ಇ

ಇಂದರ	ಇಂದಿರ
ನಲವು	ನಲಿವು
ನಾಲಗೆ	ನಾಲಿಗೆ
ಬೇಸಗೆ	ಬೇಸಿಗೆ
ಸಂಪಗೆ	ಸಂಪಿಗೆ

ಅ - ಉ

ಅಂಜಲಿ	ಅಂಜುಲಿ
ಅರಸ	ಅರಸು
ಜಗಲಿ	ಜಗುಲಿ
ಪೋಗುತಂ	ಪೋಗುತುಂ
ಬಗ್ಗರಿ	ಬಗ್ಗುರಿ
ಬಹಳ	ಬಹುಳ
ಮಕುಟ	ಮುಕುಟ
ರೂಪ	ರೂಪು

ಅ - ಎ

ಅಡಗೆಡೆ	ಅಡೆಗೆಡ
ಅಯ್ದೆ	ಎಯ್ದೆ
ಎನುತ	ಎನುತೆ
ಎಳ	ಎಳೆ
ಒಡವರೆ	ಒಡವೆರೆ
ಕಾಳಗ	ಕಾಳೆಗ
ಕೆಡಪು	ಕೆಡೆಪು
ಗಯ್ದು	ಗೆಯ್ದು
ಚಚ್ಚರ	ಚೆಚ್ಚರ
ಜಡೆ	ಜೆಡೆ
ತರ	ತೆರ
ಪೋಗುತ	ಪೋಗುತೆ
ಬರತು	ಬರೆತು
ಬಳಿಕ	ಬಳಿಕೆ
ಬೆರಸು	ಬೆರೆಸು
ಮಚ್ಚು	ಮೆಚ್ಚು
ಹಜ್ಜೆ	ಹೆಜ್ಜೆ
ಹಳ	ಹಳೆ
ಸಜ್ಜೆ	ಸೆಜ್ಜೆ

ಇ - ಉ

ಅರಿಪು	ಅರುಪು
ಇಳಿಪು	ಇಳುಪು
ಉರಿಪು	ಉರುಪು
ಉಲಿಪು	ಉಲುಹು
ಉಸಿರು	ಉಸುರು
ಕಳಿಪು	ಕಳುಪು
ಧಾರಿಣಿ	ಧಾರುಣಿ

ಇ - ಉ

ತೀಳಿಪು	ತೀಳುಪು
ಪಳಿಕ	ಪಳುಕು

ಪ್ರತಿಮೆ	ಪ್ರತುಮೆ
ಬಸಿರು	ಬಸುರು
ಬಿರಿ	ಬಿರು
ಬಿರಿದು	ಬಿರುದು
ಬಿಸಿ	ಬಿಸು
ಬೋದಿಗೆ	ಬೋದುಗೆ

ಇ - ಎ

ಅವರಿ	ಅವರೆ
ಇನಿಯು	ಇನೆಯು
ಕಳಿ	ಕಳೆ
ಕಿಡಿಸು	ಕೆಡಿಸು
ಜಡಿ	ಜಡೆ
ಜರಿ	ಜರೆ
ಮಣಿ	ಮಣೆ
ರಾತ್ರಿ	ರಾತ್ರೆ

ಉ - ಒ

ಕುಡು	ಕೊಡು
ಪುಗು	ಪೊಗು

ಐ - ಎಯ್

ಸೈ	ಸೆಯ್

ಔ - ಅವ

ತೌಳಿ	ತವಳಿ

ಔ - ಅವು

ಕೌಂಗು	ಕವುಂಗು

ಅ - ಇ - ಉ

ಉದರ್	ಉದಿರ್	ಉದುರ್
ಉರಲ್	ಉರಿಲ್	ಉರುಲ್
ಮಡಪು	ಮಡಿಪು	ಮಡುಪು

ಅ - ಇ - ಎ

ಕರಸು	ಕರಿಸು	ಕರೆಸು

ಹ್ರಸ್ವ - ದೀರ್ಘ

ಎಳ್ಟಂ	ಏಳ್ಟಂ
ಜಂಬುದ್ವೀಪ	ಜಂಬೂದ್ವೀಪ
ಬಿಳ್ಲಂ	ಬೀಳ್ಲಂ

ಅಲ್ಪಪ್ರಾಣ - ಮಹಾಪ್ರಾಣ

ಅದಟು	ಅಧಟು
ಆರ್ಬಟೆ	ಆರ್ಭಟೆ
ಕಡೆಯು	ಖಡೆಯು
ಒಂಬತ್ತು	ಒಂಭತ್ತು
ಕಂಬ	ಕಂಭ
ಗಾಯ	ಘಾಯ
ಗುಡುಗುಡಿಸು	ಘುಡುಘುಡಿಸು
ಚಳಿ	ಛಳಿ
ಜರ್ಜರ	ಜರ್ಝರ
ತಟ್ಟು	ಥಟ್ಟು
ದಾಳಿ	ಧಾಳಿ
ದಿಟ್ಟ	ಧಿಟ್ಟ
ಡೊರೆ	ಢೊರೆ
ಪೌಜು	ಫೌಜು
ಬಂಡಿ	ಭಂಡಿ

ಣ – ಳ

ಅಂಗಣ	ಅಂಗಳ
ಅಂದಣ	ಅಂದಳ
ಕಣ	ಕಳ
ಗಣೆ	ಗಳೆ
ಗಿಣಿ	ಗಿಳಿ
ಚೂಣಿ	ಚೂಳಿ

ಮ – ವ

ಬೆಮರ್	ಬೆವರ್
ಸಮೆದ	ಸವೆದ
ಸಾಮಂತ	ಸಾವಂತ

ಲ – ಳ

ಕೊರಲು	ಕೊರಳು
ಬೆರಲು	ಬೆರಳು
ಮರಲು	ಮರಳು
ಸರಲು	ಸರಳು

ಒತ್ತಕ್ಕರಗಳ ರೂಪಾಂತರಗಳು

ಎರ್ದೆ	ಎದೆ	
ಕೂರ್ತು	ಕುರಿತು	
ತಳ್ಕೆ	ತಕ್ಕೆ	
ಬರ್ಪ	ಬಪ್ಪ	
ಮುಗುಳ್ಳು	ಮುಗುಳಿ	ಮುಗುಳು

ಇತರ

ಇಸು	ಎಸು	ಎಸೆ	
ಕೈ	ಕಯ್	ಕೆಯ್	
ಚಾಗು	ಚಾಂಗು	ಜಾಗು	
ಬಿನ್ನೈಸು	ಬಿನ್ನವಿಸು	ಬಿನ್ನಯಿಸು	
ಸೊಂಕು	ಸೋಂಕು	ಸೋಕು	
ವಿರಂಚ	ವಿರಂಚಿ	ವಿರಿಂಚ	ವಿರಿಂಚಿ

ಲಿಂಗರಾಜ ಆರ್ಟ್ಸ್ ಕಾಲೇಜ
ಬೆಳಗಾಂವ
ತಾ|| ೨೮-೩-೩೪ನೆಯ ಇಸ್ವಿ

ಶಿ. ಶಿ. ಬಸವನಾಳ

ಚೆನ್ನಬಸವ ಪುರಾಣ

ಕಥಾಸಾರಾಂಶ

ಮೊದಲನೆಯ ಕಾಂಡ

ಪೀಠಿಕಾಸಂಧಿ:—ಕವಿಯು ಆರಂಭದಲ್ಲಿ ಶ್ರೀ ಪಂಪಾವಿರೂಪಾಕ್ಷನನ್ನು (೧-೬) ಸ್ತುತಿಸಿ ತದನಂತರ ಅನುಕ್ರಮವಾಗಿ ಅನಾದಿವೃಷಭ (೭), ಭೃಂಗೀಶ್ವರ (೮), ವೀರಭದ್ರ (೯), ಕುಮಾರಷಣ್ಮುಖ (೧೦), ಇವರನ್ನು ಸ್ತುತಿಸುತ್ತಾನೆ. ಮುಂದೆ ನಿರ್ಮಾಯನಾದ ಅಲ್ಲಮಪ್ರಭುರಾಯ (೧೧), ಪಂಚಪರುಷರೂಪನಾದ ಬಸವೇಶ್ವರ (೧೨), ಷಟ್‌ಸ್ಥಲಮಾರ್ಗವನ್ನು ತಿಳಿಸಿದ ಚೆನ್ನಬಸವೇಶ್ವರ (೧೩), ಯೋಗಸಿದ್ಧಾಂತವನ್ನು ಬಿತ್ತರಿಸಿದ ಸಿದ್ಧರಾಮೇಶ (೧೪), ಪಾರ್ವತಿಯ ಅಂಶವೇ ಆದ ಮಹಾದೇವಿಯಕ್ಕ (೧೫), ಶಿವಭಕ್ತರ ಮನದ ಮೈಲಿಗೆಯನ್ನು ತೊಳೆದ ಮಡಿವಾಳ ಮಾಚರಸ (೧೬), ಇವರನ್ನು ಬಹಳವಾಗಿ ಕೊಂಡಾಡಿ ಮರುಳಶಂಕರದೇವ, ಮುನಿರಾಜ, ಕರಿಕಾಲಚೋಳ, ಕಾಶಿರಾಜ, ಶಂಕರದಾಸಿಮಯ್ಯ, ಸಕಳೇಶಮಾದರಸ, ಸಾನಂದಮುನಿ, ಕರುಳ ಕೇತಯ್ಯ, ಕಾಚಿರಾಜ, ಕಿನ್ನರಿಯ ಬ್ರಹ್ಮಯ್ಯ, ಕೇಶಿರಾಜ ಮೊದಲಾದ ಶಿವಶರಣರನ್ನು ಸ್ತುತಿಸಿದ್ದಾನೆ (೧೭). ಪರಶಿವನೇ ಧರೆಗೆ ಬಂದು ಮಹಾಶರಣರಿಗೆಲ್ಲ ಗುರುವೆನಿಸಿ, ಸಕಲದೇಶಗಳನ್ನು ಚರಿಸಿ ರಕ್ಷಿಸುತ್ತ ಮಕ್ಕೆಗೆ ಹೋಗಿ, ಏಳುನೂರು ಖಲಂದರರಿಗೆ ಗುರುವಾಗಿ, ತುರುಕಾಣ್ಯದಲ್ಲಿ ಉಂಟಾದ ಅನಾವೃಷ್ಟಿಯನ್ನು ಪರಿಹರಿಸಿ, ಮಳೆಯನ್ನು ಸುರಿಸಿ, ಸುರಿತಾಳನಿಂದ ಪೂಜೆಗೊಂಡು ಮಳೆಯಮಲ್ಲೇಶನೆಂಬ ಹೆಸರನ್ನು ಪಡೆದನು (೧೮-೧೯). ಆತನ ಸಾಂಪ್ರದಾಯದಲ್ಲಿ ಷಟ್‌ಸ್ಥಲಜ್ಞಾನಿಯೂ, ಜಿತೇಂದ್ರಿಯನೂ ಆದ ಸಿದ್ಧವೀರೇಶನು ವಿಜಯನಗರದಲ್ಲಿ ಪ್ರೌಢದೇವನ ಗುರುವಾಗಿದ್ದನು (೨೦-೨೨). ಗ್ರಂಥಕರ್ತೃವಾದ ವಿರೂಪಾಕ್ಷಪಂಡಿತನು ಈ ಸಿದ್ಧವೀರೇಶನ ಶಿಷ್ಯನೂ ಕರ್ಣಾಟಕಾದಿಭಾಷಾವಿಶಾರದನೂ ಅತ್ಯುತ್ತಮಶಿವಾಚಾರಸಂಪನ್ನನೂ ಆಗಿದ್ದನು (೨೩).

ಹೀಗಿರಲು ಶಿವಭಕ್ತಸಮೂಹವು ಕವಿಯ ಹತ್ತಿರ ಬಂದು "ಎಲ್ಲ ಶಿವ ಶರಣರ ಕಥೆಗಳನ್ನು ಹಿಂದಿನ ಕವಿಗಳು ಹೇಳಿರುವರು; ಈ ಚೆನ್ನಬಸವೇಶ್ವರನ ಚರಿತ್ರೆಯನ್ನು ಯಾರೂ ಹೇಳಿಲ್ಲ; ನೀನು ಎಲ್ಲರೀತಿಯಿಂದಲೂ ಈ ಚರಿತ್ರೆಯನ್ನು ಬರೆಯಲಿಕ್ಕೆ ಶಕ್ತನೂ ಯೋಗ್ಯನೂ ಆಗಿರುವುದರಿಂದ ಈ ಗ್ರಂಥವನ್ನು ರಚಿಸಬೇಕು" ಎಂದು ಕೇಳಿಕೊಂಡುದುದರಿಂದ ಅವರ ನುಡಿಗಳಿಗೆ ಒಪ್ಪಿ "ಕರ್ನಾಟಕ ವ್ಯಾಕರಣ ಛಂದಸ್ಸು ಅಲಂಕಾರ ಶಬ್ದಗಳನ್ನು ಅನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣವೆಂಬ ನಾಣ್ನುಡಿಯನಲ್ಲೆನಿ" ಸುವಂತೆ ಈ ಕಾವ್ಯವನ್ನು ರಚಿಸಿದೆನೆಂದು ಕವಿಯು ಹೇಳುತ್ತಾನೆ (೨೪-೨೮). ಬಾಣ, ಮಯೂರ, ಭವಭೂತಿ, ಕಾಳಿದಾಸ, ಮಲುಹಣ, ಮಲಯರಾಜ, ರಾಘವಾಂಕ, ಹಂಪೆಯ ಹರೀಶ್ವರ, ಹಲಾಯುಧ, ಉದ್ಭಟ, ಗುರುಪಂಡಿತೇಶ, ಪಾಲ್ಕುರಿಕೆಯ ಸೋಮೇಶ, ಭೀಮರಸ, ಮೊಗ್ಗೆಯ ಮಾಯಿದೇವ, ಚಾಮರಸ, ಶಂಕರ, ಕೆರೆಯ ಪದ್ಮರಸ ಮೊದಲಾದ ಕನ್ನಡ ಸಂಸ್ಕೃತ · ಶೈವಕವಿಗಳನ್ನು ಬಲಗೊಂಡು ಪುರಾಣವನ್ನು ಹೇಳಲು ಉಪಕ್ರಮಿಸುತ್ತೇನೆಂದು ಹೇಳುತ್ತಾನೆ (೨೯).

ಚೆನ್ನಬಸವಪುರಾಣವನ್ನು ಪಂಪಾಪತಿಯಾದ ಶ್ರೀ ವಿರೂಪಾಕ್ಷನೇ ಕವಿಯ ಹೃದಯದಲ್ಲಿದ್ದುಕೊಂಡು ಹೇಳಿಸಿರುವುದರಿಂದ ಈ ಕಾವ್ಯವನ್ನು ಭಕ್ತರಾದವರೆಲ್ಲರೂ ಮನಸ್ಸಿನಿಂದ ಕೇಳಬೇಕೆಂದು ಕವಿಯು ಬಯಸುತ್ತಾನೆ (೩೦-೩೧). ಸುಕವಿಯಾದವನು ನಿಂದೆಮಾಡುವವರ ನಿಷ್ಠುರತನಕ್ಕೆ ಬೆದರಿ ಕಾವ್ಯವನ್ನು ಬರೆಯದೆ ಬಿಡಬಾರದೆಂದು ಹೇಳಿ (೩೨), ಚೆನ್ನಬಸವಪುರಾಣದಲ್ಲಿ ಕಾವ್ಯದ ಎಲ್ಲ ಸದ್ಗುಣಗಳು ಕೂಡಿರುವುದರಿಂದ ವಿದಗ್ಧರು ನಿರ್ಮತ್ಸರರಾಗಿ ಪುರಾಣವನ್ನು ಪರಾಮರ್ಶಿಸಬೇಕೆಂದೂ, ತಪ್ಪಿಲ್ಲದಂತೆ ಈ ಕಾವ್ಯವನ್ನು ರಚಿಸಿದ್ದರೂ ಸಂದೇಹಕ್ಕನುಸರಿಸಿ ಏನಾದರೂ ತಪ್ಪುಗಳು ಉಳಿದಿದ್ದರೆ ರಸಿಕರು ಅವುಗಳನ್ನು ತಿದ್ದಿಕೊಳ್ಳಬೇಕೆಂದೂ ಕವಿಯು ಪ್ರಾರ್ಥಿಸುತ್ತಾನೆ (೩೩-೩೪). ಮನಸ್ಸಗೊಟ್ಟು ಕೇಳಿದರೆ ಈ ಕಾವ್ಯವು ಸಕ್ಕರೆಯಿಂದ ಇನಿದಾಗಿ ತೋರುವುದೆಂದು ಆಶ್ವಾಸನವನ್ನು ಕೊಡುತ್ತಾನೆ (೩೫). ಇದರಲ್ಲಿ ಕಾವ್ಯದ ಸುಪ್ರಸಿದ್ಧ ಅಂಗಗಳಾದ ಹದಿನೆಂಟು ವರ್ಣನೆಗಳೂ ನವರಸಾಲಂಕಾರಗಳೂ ಅಡಕವಾಗಿವೆಯೆನ್ನುತ್ತಾನೆ (೩೬). ಇದರಲ್ಲಿ ಅನುಕ್ರಮವಾಗಿ ೧. ಕೈಲಾಸವರ್ಣನೆ, ೨. ನಾರದನ ದರ್ಶನ, ೩. ಚೆನ್ನಬಸವೋತ್ಪತ್ತಿ, ೪. ಪುಷ್ಪಕೋತ್ಸಾಹ, ೫. ಚೆನ್ನಬಸವನ ಬಾಲಲೀಲೆ, ೬. ಬಿಜ್ಜಳ ಅರಸನ ಆಸ್ಥಾನ, ೭. ಪುರದೇಶವರ್ಣನೆ, ೮. ಸಿದ್ಧರಾಮೇಶನಿಗೆ ಚೆನ್ನಬಸವನು ಹೇಳಿದ ಶಿವತತ್ತ್ವ, ೯. ಶಿವನ ಏಕಪಾದನರ್ತನಲೀಲೆ, ೧೦. ಸೋಮಲೀಲೆ, ೧೧. ವೃಷಭಯಾನ, ೧೨. ಗುರುಲಿಂಗಲೀಲೆ,

೧೩. ಅರ್ಧನಾರೀಶ್ವರಲೀಲೆ, ೧೪. ಅಜಶಿರಶ್ಛೇದಲೀಲೆ, ೧೫. ಭಿಕ್ಷಾಟನಲೀಲೆ, ೧೬. ದಕ್ಷಿಣಾಮೂರ್ತಿಲೀಲೆ, ೧೭. ವಿಷ್ಣುಕಂಕಾಳಧರಲೀಲೆ, ೧೮. ಗರಳಧರಲೀಲೆ, ೧೯. ಇಂದುಧರಲೀಲೆ, ೨೦. ಜಲಂಧರಸಂಹಾರ, ೨೧. ವಿಷ್ಣುವಿಗೆ ಚಕ್ರಪ್ರದಾನ, ೨೨. ಗಜಾಸುರಮಥನ, ೨೩. ದಕ್ಷಸಂಹಾರ, ೨೪. ಕಾಮದಹನ, ೨೫. ಗಿರಿಜಾ ಕಲ್ಯಾಣ, ೨೬. ಷಣ್ಮುಖೋತ್ಪತ್ತಿ, ೨೭. ತಾರಕಾಸುರಸಂಹಾರಲೀಲೆ, ೨೮. ತ್ರಿಪುರದಹನ, ೨೯. ವಸಂತೋತ್ಸಾಹ, ೩೦. ಗಂಗಾಧರಲೀಲೆ, ೩೧. ಅಂಧಕಾಸುರಸಂಹಾರ, ೩೨. ಕಾಲದಹನ, ೩೩. ಸುಖವಹಮೂರ್ತಿಲೀಲೆ, ೩೪. ಅರ್ಜುನನಿಗೆ ಪಾಶುಪತಾಸ್ತ್ರಪ್ರದಾನ, ೩೫. ಸೋಮಸೂರ್ಯವಂಶ, ೩೬. ಶಿವಶರಣರ ಚರಿತೆಗಳು, ೩೭. ದೀಕ್ಷಾವಿಧಾನ, ೩೮. ಷಟ್ಸ್ಥಳ, ೩೯. ಕಾಲಜ್ಞಾನ ಇಷ್ಟು ವಿಷಯಗಳು ಬರುವುವು (೩೭ - ೪೦).

೨ ಒಡ್ಡೋಲಗದ ಸಂಧಿ

ಈಶ್ವರನ ಆಜ್ಞೆಯಿಂದುಂಟಾದ ಹದಿನಾಲ್ಕು ಬ್ರಹ್ಮಾಂಡಗಳಲ್ಲಿ ಒಂದಾದ ಭೂಲೋಕವು ಚಕ್ರಾಕಾರವಾಗಿ ಐವತ್ತುಕೋಟಿಯೋಜನದ ಅಳತೆಯಿಂದೊಪ್ಪುವುದು. ಅದರಲ್ಲಿಯ ಏಳು ದ್ವೀಪಗಳನ್ನು ಏಳು ಸಮುದ್ರಗಳು ಸುತ್ತುಗಟ್ಟಿರುವುವು. ಅವುಗಳಲ್ಲಿ ಒಂದಾದ ಲವಣಸಮುದ್ರವು ಜಂಬೂದ್ವೀಪವನ್ನು ಬಳಸಿರುವುದು (೨). ಅನೇಕ ಪ್ರಾಣಿಗಳಿಂದಲೂ ರತ್ನಗಳ ಸಮೂಹದಿಂದಲೂ ತೆರೆ ನೊರೆ ಬಡಬಾಗ್ನಿಗಳಿಂದಲೂ ಡೋಣಿ ಹಡಗು ಮೊದಲಾದುವುಗಳಿಂದಲೂ ಆ ಕಡಲು ಕಣ್ಗೆಸೆಯುತ್ತಿರುವುದು (೩-೫). ಇಂತಹ ಸಮುದ್ರದಿಂದ ಸುತ್ತುವರಿಯಲ್ಪಟ್ಟ ಜಂಬೂದ್ವೀಪವು ಅನೇಕ ಸುಕ್ಷೇತ್ರಗಳಿಂದಲೂ ಧರ್ಮಾರ್ಥ ಕಾಮ ಮೋಕ್ಷಗಳನ್ನು ವರತಪಸ್ಸಿನಿಂದ ಪಡೆಯುವ ಸುರಮುನಿಗಳ ವ್ರಾತದಿಂದಲೂ ಒಪ್ಪುತ್ತಿರುವುದು (೬). ಅದರ ಮಧ್ಯದಲ್ಲಿ ನಕ್ಷತ್ರಗಳೆಂಬ ಗೆಜ್ಜೆಗಳಿಂದಲೂ ಚಂದ್ರ ಸೂರ್ಯರೆಂಬ ಕುಂಭಗಳಿಂದಲೂ ಕೋಡುಗಲ್ಲುಗಳೆಂಬ ಕೋಡುಗಳಿಂದಲೂ ರತ್ನಗಳ ಮಣಿಮೋರಜೆಯಿಂದಲೂ ಭಂಗಾರದ ಕಾಂತಿಯೆಂಬ ತೋಂಜೂಲಿಂದಲೂ ಅಲಂಕೃತವಾಗಿ ಶ್ರೀವಿರೂಪಾಕ್ಷನು ಆರೋಹಿಸಲಿಕ್ಕೆಂದು ಬ್ರಹ್ಮನು ನಿರ್ಮಿಸಿದ ಪಟ್ಟದ ಆನೆಯಂತೆ ಕನಕಾಚಲವು ಕಂಗೊಳಿಸುವುದು (೭). ರುದ್ರ, ಬ್ರಹ್ಮ, ವಿಷ್ಣು, ದಿಕ್ಪಾಲಕರು ಮೊದಲಾದವರ ಪಟ್ಟಣಗಳುಳ್ಳ ಈ ಪರ್ವತದ ದಕ್ಷಿಣದಿಕ್ಕಿನಲ್ಲಿ ಕೈಲಾಸಗಿರಿಯು. ಅಲ್ಲಿ ದೇವರು ಪೂಜಿಸುವಂತಹ

ಸ್ಫಟಿಕಲಿಂಗದಂತೆ ಮೆರೆಯುತ್ತಿರುವುದು (೯). ಈ ಕೈಲಾಸಪರ್ವತವು ಸಾಸಪ್ರಕೋಟಿ ಚಂದ್ರರ ಪ್ರಕಾಶವನ್ನು ಗಟ್ಟಿಗೊಳಿಸಿದಂತೆ, ಪುಣ್ಯದ ಘುಟಿಕೆಯಂತೆ, ಸಕಲಶಿವಶಾಸ್ತ್ರಗಳ ದೇಹಕಾಂತಿಯು ಒಟ್ಟುಗೂಡಿ ಈಶ್ವರನಿಗೆ ಉನ್ನತವಾದ ಪೀಠವಾದಂತೆ ರಮಣೀಯವಾಗಿರುವುದು (೧೦). ಅಲ್ಲಿ ಕೇವಲ ಪರುಷದ ಕಣಿಗಳೂ ಚಿಂತಾರತ್ನಗಳೂ ಸಿದ್ಧರಸಗಳೂ ಪುಣ್ಯಮೃಗಕುಲಗಳೂ ಇರುವುವೇ ಹೊರತು, ಬೇರೆ ಪದಾರ್ಥಗಳು ಇಲ್ಲ (೧೧). ಆ ಗಿರಿಯ ಮೇಲೆ ವೀರಶ್ರೀಭಾಗವತದ ಕೋಟೆಗಳು, ಅಮೃತದ ಅಗಳ್ತಗಳು, ವೈರಾಗ್ಯದ ಅಟ್ಟೋರಿಗಳು, ಜ್ಞಾನದ ಕೇತುಗಳು, ಭಕ್ತಿಯ ತೆನೆಗಳು, ಮುಕ್ತಿಯ ಮುಗಿಲಟ್ಟೆಳಿಗಳು, ಶ್ರುತಿಯ ಬಾಗಿಲುಗಳು, ಸತ್ಯದ ಕದಗಳು, ಇವುಗಳಿಂದ ಕೈಲಾಸವು ಕಣ್ಗೆಸೆಯುತ್ತಿರುವುದು (೧೨).

ತ್ರಿಯಕ್ಷನಾದ ಶ್ರೀವಿರೂಪಾಕ್ಷನು ಇಲ್ಲಿಯೇ ವಿನೋದದಿಂದ ವಾಸಿಸುತ್ತ ಪ್ರತಿದಿನವು ಓಲಗವನ್ನು ಕೊಡುತ್ತ ಬ್ರಹ್ಮ ವಿಷ್ಣುಗಳು ಮಾಡುತ್ತಿದ್ದ ಸ್ತುತಿಯನ್ನು ಆಲಿಸುತ್ತ, ಲೋಕಪಾಲಕರ ಸ್ಥಿತಿಯನ್ನು ಕೇಳುತ್ತ, ಸದ್ಭಕ್ತಿಗೆ ಒಲಿಯುತ್ತ, ಪಾರ್ವತಿಯೊಡನೆ ಸುಖಸಂಕಥಾವಿನೋದದಲ್ಲಿ ಜಗತ್ತನ್ನು ಪಾಲಿಸುತ್ತಿದ್ದನು (೧೩-೧೪). ಹೀಗಿರಲು ಒಂದುದಿವಸ ಶಿವನ ಓಲಗಕ್ಕೆ ಅಸಂಖ್ಯ ವಿಷ್ಣುಗಳು, ಅನೇಕಬ್ರಹ್ಮರು, ಇಂದ್ರ ಮೊದಲಾದ ಅಷ್ಟದಿಕ್ಪಾಲಕರ ಅಪರಿಮಿತ ಸಮೂಹಗಳೊಡನೆ ತಮ್ಮ ವಾಹನಗಳನ್ನು ಹತ್ತಿಕೊಂಡು ಬಂದರು. ಅದರಂತೆ ಯಕ್ಷ ರಾಕ್ಷಸ ಕಿನ್ನರ ಮೊದಲಾದವರೂ, ಮನುಷ್ಯಸಮೂಹವೂ, ದ್ವಾದಶಾರ್ಕರೂ, ನವಬ್ರಹ್ಮರೂ, ಸಪ್ತಋಷಿಗಳೂ, ಸುಪ್ರಸಿದ್ಧ ಮುನಿವರರೂ, ಸಿರಿ ಸರಸ್ವತಿ ಶಚಿ ಅಹಲ್ಯೆ ಲೋಪಾಮುದ್ರೆ ಮೊದಲಾದ ಪುಣ್ಯಾಂಗನೆಯರೂ, ರಂಭೆ ಮೇನಕೆ ಮೊದಲಾದ ಅಮರವೇಶ್ಯೆಯರೂ, ಗಂಗೆ ಯಮುನೆ ಕಾವೇರಿ ಮೊದಲಾದ ನದ್ಯಂಗನೆಯರೂ ಈಶ್ವರನ ಓಲಗಕ್ಕೆ ಬಂದರು (೧೫-೧೯). ಪಾರ್ವತಿಯ ಸಮ್ಮುಖದಲ್ಲಿ ಸಪ್ತಮಾತೃಕೆಯರೂ ಚೌಸಷ್ಟಿಯೋಗಿನಿಯರೂ ಅಷ್ಟದಿಕ್ಸತಿಯರೂ ಅಸಂಖ್ಯಾತ ತಾರಾಂಗನೆಯರೂ ನಾಗಕನ್ನಿಕೆಯರೂ ಅಷ್ಟವಿಧ ಮಹಾಲಕ್ಷ್ಮಿಯರೂ ಭೂಗಗನಲೋಕಗಳ ಸ್ತ್ರೀಯರೂ ಭಯಭಕ್ತಿಯಿಂದ ನಿಂತಿದ್ದರು (೨೦). ಈ ರೀತಿಯಾಗಿ ಗಿರಿಜಾತೆಯು ಎಡಗಡೆಯಲ್ಲಿ ಎಲ್ಲ ಸ್ತ್ರೀಸಮೂಹದೊಡನೆ ರಾಜಿಸುತ್ತಿರಲು, ಬ್ರಹ್ಮ ವಿಷ್ಣುರು ಎಡಬಲದಲ್ಲಿ ಒಪ್ಪುತ್ತಿರಲು, ವೇದಗಳು ಉದ್ಘೋಷಿಸುತ್ತಿರಲು, ಈಶ್ವರನು ತತ್ತ್ವಜ್ಞಾನರತ್ನಸಿಂಹಾಸನದಲ್ಲಿ ರಂಜಿಸುತ್ತಿದ್ದನು (೨೧-೨೩). ಆತನ ಸಮ್ಮುಖದಲ್ಲಿ ಸಿರಿಭವ, ಕಾರ್ತಿಕೇಯ ನಂದಿ ಮೊದಲಾದ ಮಹಾಗಣಗಳೂ, ರುದ್ರಗಣಗಳೂ, ಸಾಲೋಕ್ಯ ಸಾರೂಪ್ಯ ಸಾಮೀಪ್ಯದವರೂ ವಿರಾಜಿಸುತ್ತಿದ್ದರು (೨೪-೨೫). ಇಂತಹ ಮಹಾಸಭೆಯಲ್ಲಿ

ನಂದಿನಾಥಕಾರರು ಸಭಾವ್ಯವಸ್ಥೆಯನ್ನು ಮಾಡುತ್ತಲಿದ್ದರು (೨೬). ಶಿವನ ಎದುರಿನಲ್ಲಿ ಭೃಂಗಿಯು ಭಕ್ತಿಯಿಂದ ಸಭೆಗೆ ಹಾಸ್ಯರಸವನ್ನು ಕಲಿಯುತ್ತ ನಾಟ್ಯವನ್ನು ಮಾಡುತ್ತಲಿದ್ದನು (೨೭). ತುಂಬುರ ನಾರದರು ಸಕಲರಾಗಗಳನ್ನು ಹಾಡುತ್ತಲಿದ್ದರು (೨೮). ನೃತ್ಯದ ಅಬಲಾಜನರು ನಾಟ್ಯಶಾಸ್ತ್ರಕ್ಕನುಗುಣವಾಗಿ ನರ್ತಿಸುತ್ತಲಿದ್ದರು (೨೯). ಪಾರ್ವತಿಯಿಂದ ಶೃಂಗಾರ, ವೀರಭದ್ರನಿಂದ ವೀರ, ಈಶ್ವರನ ಮನಸ್ಸಿನಲ್ಲಿ ಕರುಣ, ಬೆಟ್ಟದಂತ ಭೂತಗಳಲ್ಲಿ ಅದ್ಭುತ, ಭೃಂಗಿಯಿಂದ ಹಾಸ್ಯ, ಭಕ್ತರ ಹೃದಯದಲ್ಲಿ ಭಯ, ಹುಲಿತೊಗಲು ಎಲುವಿನ ಮಾಲೆ ಇವುಗಳನ್ನು ಧರಿಸಿದವರಿಂದ ಭೀಭತ್ಸ, ರುದ್ರಗಣಗಳಿಂದ ರೌದ್ರ, ಮುನಿಗಳಿಂದ ಶಾಂತ, ಹೀಗೆ ನವರಸಗಳಿಂದ ಈಶ್ವರನ ಸಭೆಯು ಎಸೆಯುತ್ತಿತ್ತು (೩೦). ಆಗ ಬ್ರಹ್ಮವಿಷ್ಣುಗಳು ಸಾಷ್ಟಾಂಗವೆರಗಿ ಭಕ್ತಿಯಿಂದ ಸ್ತುತಿಸಿದರು (೩೧-೩೩). ಈ ರೀತಿಯಾಗಿ ನುತಿಸಿದ ಹರಿ ಬ್ರಹ್ಮ ಇಂದ್ರರುಗಳನ್ನು ಕೃಪೆಯಿಂದ ಮನ್ನಿಸಿ ಮುನಿಗಳ ಭಕ್ತಿಗೆ ಮೆಚ್ಚುತ್ತ ವಿರೂಪಾಕ್ಷನು ಓಲಗದಲ್ಲಿದ್ದನು (೩೪).

೩ ನಾರದನ ದರ್ಶನ ಸಂಧಿ

ಈ ರೀತಿಯಾಗಿ ಅಭವನು ವಿಭವದಿಂದೊಪ್ಪುತ್ತಿರಲು ಪಾರ್ವತಿಯು "ಶ್ರೀದೇವ, ನೀವು ಅಂದು ನಂದ್ಯಾದಿ ಅಮರಗಣಗಳನ್ನು ಪೃಥ್ವಿಗೆ ಕಳುಹಿಸಿದಾಗ ಅವರಿಗೆ ತತ್ತ್ವೋಪದೇಶಮಾಡುವುದಕ್ಕೆ ನಮ್ಮ ಚಿತ್ಕಳೆಯನ್ನು ಕಳುಹಿಸುವೆನೆಂದು ಅವರಿಗೆ ಕೊಟ್ಟ ನಿರೂಪವನ್ನು ಸಲಿಸಬೇಕಲ್ಲವೆ?" ಎನಲು, ಶಿವನು ತನ್ನ ಹೃದಯದಲ್ಲಿಯ ಚಿತ್ಕಳಾರೂಪವನ್ನು ನೆನೆದನು (೨). ಒಡನೆಯೆ ಕೋಟಿಸೂರ್ಯಪ್ರಭೆಯೊಳು ಈಶ್ವರನ ಆರು ಮುಖದಿಂದವತರಿಸಿ ಭಕ್ತಿಯಿಂದ ಎರಗಿದ ದಿವ್ಯಮೂರ್ತಿಯಾದ ಷಣ್ಮುಖಿಯನ್ನು ಎತ್ತಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, "ಎಲೈ ಕುವರ, ನಂದಿಮೊದಲಾದ ಅಮರಗಣಗಳು ಪೃಥ್ವಿಯಲ್ಲಿ ಮನುಷ್ಯರೂಪದಲ್ಲಿ ಜನಿಸಿ ಬಾಳ್ವೆಯಿಂದಿರುವರು. ನೀನೂ ಅಲ್ಲಿ ಜನಿಸಿ ಶಿವತತ್ತ್ವದ ಬಟ್ಟೆಯನ್ನು ಅವರಿಗೆ ಉಪದೇಶಿಸಿ ಅವರನ್ನು ಮುಕ್ತಿಗೆ ಸಲಿಸಬೇಕು" ಎನಲು (೩). ಆ ಕುವರನು "ಮಾನವಜನ್ಮದಲ್ಲಿ ನಾನು ಹುಟ್ಟಿ ಶಿವತತ್ತ್ವದ ಬಟ್ಟೆಯ ರಹಸ್ಯವನ್ನು ನಂದಿಮೊದಲಾದವರಿಗೆ ಉಪದೇಶಿಸುವ ಕಾರಣವೇನು?" ಎಂದನು. ಅದಕ್ಕೆ ಈಶ್ವರನು ನಕ್ಕು "ನಿನಗೆ ಗೊತ್ತಿಲ್ಲದ ಸಂಗತಿ ಇಲ್ಲ. ಅವರು ನಿಜತತ್ತ್ವಚಿತ್ಕಳಾರೂಪನಾದ ಷಟ್ಸ್ಥಲಬ್ರಹ್ಮನಾದ ನಿನ್ನ ಕೇಳಬೇ

ಕೇಂದರೆ ಹೇಳುತ್ತೇನೆ, ಕೇಳು (೫). ಹಿಂದಕ್ಕೆ ನಾವು ಇದೇರೀತಿ ಓಲಗವನ್ನು ಕೊಟ್ಟ ಕಾಲದಲ್ಲಿ ನಾರದನು ಬಂದು ಸಾಷ್ಟಾಂಗವೆರಗಿ ನಮಸ್ಕಾರಮಾಡುತ್ತಿರಲು, ನಂದಿಯು 'ಎಲೆ ಮುನೀಶ್ವರನೇ, ನೀನು ಬಂದ ಕಾರಣವನ್ನು ದೇವೇಶನಿಗೆ ಅರಿಕೆ ಮಾಡಿಕೊಳ್ಳು' ಎನಲು, ನಾರದನು 'ಪರಮಾತ್ಮನೇ, ನಿನ್ನ ಆಜ್ಞೆಯಂತೆ ಎಲ್ಲ ಲೋಕಗಳನ್ನು ತಿರುಗಿದೆನು. ಎಲ್ಲ ಲೋಕಗಳಲ್ಲಿ ಶಿವಭಕ್ತಿಯು ಬೆಳೆಯು ತ್ತಿರುವುದು; ಆದರೆ ಭೂಲೋಕದಲ್ಲಿಯ ಭರತಖಂಡದಲ್ಲಿ ಕಲಿಯು ಪ್ರಬಲ ವಾಗಿ ಸತ್ಯವು ಅಳಿದು ಸದಾಚಾರವು ಅಡಗಿ ಶಿವಭಕ್ತಿಯು ಮಸಳಿ ಶಿವಾಗಮ ಪುರಾಣಗಳು ಕನಸಾಗಿರುವುವು. ನಿತ್ಯಕ್ರಿಯೆ, ಸದ್ಧರ್ಮ ಇವುಗಳೆಲ್ಲ ಹಾಳಾಗಿ ಅರಸರೆಲ್ಲರು ದುಷ್ಕೃತಿಗಳಲ್ಲಿ ನಿರತರಾಗಿರುವರು (೬-೮). ಶಿವಮತವು ಕುಗ್ಗಿ ಜಿನ-ಬುದ್ಧ-ಚಾರ್ವಾಕ ಮತಗಳು ಹೆಚ್ಚಿರುವುವು. ರಾಜಪ್ರಜರು ಜಂಗಮಕ್ಕೆ ಮುನಿಯುತ್ತಿರುವರು (೯). ಜೈನಮತವು ಪ್ರಬಲವಾಗಿರುವುದು (೧೦). ಅನ್ಯಾಯಗಳು ಹೆಚ್ಚಿರುವುದರಿಂದ ಧರಾವನಿತೆಯು ತಾಳದೆ ಕಂಪಿಸುತ್ತಿರುವಳು (೧೧). ಸ್ತ್ರೀ ಪುರುಷರು ನೀತಿಬಾಹಿರರಾಗಿರುವರು. ಅತಿಹೀನರು ಐಶ್ವರ್ಯ ಯುತರಾಗಿಯೂ, ಆಚಾರವಂತರು ದರಿದ್ರರಾಗಿಯೂ ಜೀವಿಸುತ್ತಿರುವರು (೧೨). ನಿಮ್ಮ ಶ್ರೀಪಾದಭಕ್ತರು ಕೋಟಿಗೊಬ್ಬಬ್ಬರಂತೆ ಇರುವರು (೧೩). ಅವರು ಪರಸಮಯವೇದಿಗೆ ಅಡಗಿ ಹೋಗಿ ಹರಸಮಯವು ಏಳಿಗೆ ಹೊಂದುವುದೋ ಎಂದು ಬಿಸುಸುಯ್ಯುತ್ತಲಿರುವುದನ್ನು ನಾನು ಕಿವಿಯಾರೆ ಕೇಳಿದೆನು. ಆದುದ ರಿಂದ ಇದನ್ನು ಬಿನ್ನಹಮಾಡಲು ನಾನು ಬೇಗದಿಂದ ಬಂದೆನು. ನಿಮಗರಿ ಯದ ಪ್ರಪಂಚವಿಲ್ಲದಿರುವುದರಿಂದ ಸಕಲವನ್ನು ಪಾವನಮಾಡಲು ಇದೇ ಸಮ ಯವು. ಆದುದರಿಂದ ದೇವರು ಗುರುಚರಮೂರ್ತಿಯಾಗಿ ಧರೆಗೆ ಹೋಗಿ ಪರಸಮಯಗಳನ್ನು ಖಂಡಿಸಿ, ಪವಾಡಗಳನ್ನು ತೋರಿಸಿ, ಗುರು ಲಿಂಗ ಜಂಗಮ ಪಾದೋದಕ ಪ್ರಸಾದಗಳ ಮಹಾತ್ಮೆಯನ್ನು ಪ್ರದರ್ಶಿಸಿ, ಮನುಷ್ಯರನ್ನು ಶಿವಾ ಚಾರಸಂಪನ್ನರಾಗಿ ಮಾಡಿ ಉಳಿಸಬೇಕು' (೧೪-೧೬), ಎಂದು ನಾರದನು ನುಡಿದನು.

"ಆಗ ನಾವು ಮಾನವರ ಭವಬಂಧವನ್ನು ಹರಿದು ರಕ್ಷಿಸಲಿಕ್ಕೆ ಯಾರನ್ನು ಕಳಿಸಬೇಕೆಂದು ಯೋಚಿಸುತ್ತಿರಲು ಪಾರ್ವತಿಯು 'ದೇವ, ಮರ್ತ್ಯರು ಭವಕ್ಕೆ ಬರುವರೆಂದು ನನಗೆ ಗೊತ್ತುಂಟು. ಆದರೆ ನಿನ್ನ ಮಹಾಸ್ಥಾನದೊಳಗಿರುವ ಘನಮಹಿಮರೂ ಭವಕ್ಕೆ ಬರತಕ್ಕವರೇ? ಇಲ್ಲವೆ ನಿತ್ಯಸುಖದಿಂದಿರುವರೇ? ಹೇಳಬೇಕು' ಎನಲು, ಅದಕ್ಕೆ ನಾವು 'ವಿಷ್ಣು ಬ್ರಹ್ಮರಿಗೂ ಕೂಡ ಭವ ಬಂಧವುಂಟು' ಎನಲು, ಪಾರ್ವತಿಯು 'ಹಾಗಿದ್ದರೆ ಅದನ್ನು ತಪ್ಪಿಸುವ

ಸಾಧನವು ಉಂಟೇ ?' ಎಂದೆನಲು, 'ಷಟ್ಸ್ಥಲರಹಸ್ಯವೆಂಬುದು ಉಂಟು' ಎಂದು ಉತ್ತರಕೊಟ್ಟೆವು. ಆಗ ಪಾರ್ವತಿಯು 'ಆ ರಹಸ್ಯವನ್ನು ತಿಳಿಸಿ ನನ್ನನ್ನು ಕೃತಾರ್ಥೆಯನ್ನು ಮಾಡಬೇಕು' ಎಂದು ಕೇಳಿಕೊಂಡಳು. ಆಗ ನಂದೀಶ್ವರನು 'ಎಲೈ ಪರಮಾತ್ಮನೇ, ಜಗನ್ಮಾತೆಯು ನಮ್ಮನ್ನೆಲ್ಲ ಉದ್ಧರಿಸಬೇಕೆಂಬ ಸದ್ಭಾವದಿಂದ ನಿಮ್ಮಲ್ಲಿ ಬಿನ್ನವಿಸಿಕೊಂಡಿರುವಂತೆ ನಿಮ್ಮ ನಿಜನಿತ್ಯ ಸುಖವನ್ನು ಕೊಡುವಂತಹ ಷಟ್ಸ್ಥಲವನ್ನು ತಿಳುಹಿ ನಮ್ಮೆಲ್ಲರನ್ನು ರಕ್ಷಿಸಬೇಕು' ಎಂದು ಬೇಡಿಕೊಂಡನು (೨೦). ನಮ್ಮ ಅಂತರಂಗದೊಳಗಿದ್ದ ನಿರ್ಮಲ ಧರ್ಮಸ್ವರೂಪನಾದ ದ್ವಿತೀಯಶಂಭುವಾದ ನಂದೀಶನು ಅನಂತಶಿವಶರಣರನ್ನು ಉದ್ಧರಿಸಲೋಸುಗ ಈ ಬಿನ್ನಪವನ್ನು ಮಾಡಿಕೊಂಡನೆಂದರಿದು, ಭೂಮಿಯಲ್ಲಿ ವೀರಶೈವೋದ್ಧರಣಕಾರ್ಯಕ್ಕೆ ನಂದಿಯನ್ನೇ ಕಳಿಸಬೇಕೆಂದು ನಿಶ್ಚಯಿಸಿ, 'ನಂದೀಶನೇ, ಷಟ್ಸ್ಥಲಮಾರ್ಗವನ್ನು ತಿಳಿಯಬೇಕಾದರೆ ನರಜನ್ಮದಲ್ಲಿ ಜನಿಸಿ ಭರತಖಂಡದ ಕರ್ಮಭೂಮಿಯಲ್ಲಿ ನಿರ್ಮಳ ವೀರಶೈವಮಾರ್ಗವನ್ನು ಆಚರಿಸಬೇಕಲ್ಲದೆ ಗತ್ಯಂತರವಿಲ್ಲ' ವೆಂದು ನಾವು ಹೇಳಲು, ನಂದೀಶ್ವರನು 'ಅಲ್ಲಿ ಷಟ್ಸ್ಥಲ ಮಾರ್ಗವನ್ನು ಬೋಧಿಸುವರಾರು ?' ಎಂದು ಕೇಳಿದನು (೨೧-೨೪). ಅದಕ್ಕೆ ನಾವು 'ಭೂಮಿಯಲ್ಲಿ ನೀನು ವೀರಶೈವಾಚಾರದಿಂದಿರಲು ನಿನ್ನ ಭಕ್ತಿಯಲ್ಲಿ ನಾವು ಲಿಂಗರೂಪವಾಗಿಯೂ, ನಿರ್ಮಲ ಭಾವಕೊಲಿದು ಜಂಗಮರೂಪವಾಗಿಯೂ ಇರುವೆವು. ಆಗ ನಮ್ಮ ಚಿತ್ಕಳಾಕುಮಾರನು ಷಟ್ಸ್ಥಲಮಾರ್ಗವನ್ನು ತಿಳಿಸಲು ಬರುವನು' ಎಂದು ಹೇಳಿದೆವು (೨೫). ಅದನ್ನು ಕೇಳಿ ಗಿರಿಜಾತೆಯು ಇಂತೆಂದಳು : 'ನನ್ನ ಬಸಿರಲ್ಲಿ ಮಕ್ಕಳು ಹುಟ್ಟದೆ ಇರುವುದು ನಿಮಗೆ ಗೊತ್ತುಂಟು. ಮಕ್ಕಳನ್ನು ಪಡೆಯುವ ನೆವವು ಇದೊಂದಿದೆ. ಆದುದರಿಂದ ನನ್ನ ಚಿತ್ಕಳೆಯು ನಂದೀಶನೊಡನೆ ಪೃಥ್ವಿಯಲ್ಲಿ ಹುಟ್ಟುವಂತೆಯೂ, ಅವಳ ಗರ್ಭದಲ್ಲಿ ನಿಮ್ಮ ಜ್ಞಾನಸುತನು ಉದಿಸಿ ನಂದಿಮೊದಲಾದವರಿಗೆ ಷಟ್ಸ್ಥಲವನ್ನು ಉಪದೇಶಿಸುವಂತೆಯೂ ಕರುಣಿಸಬೇಕು' (೨೬). ಆ ಮಾತಿಗೆ ಒಪ್ಪಿಕೊಂಡು ನಾರದನು ಬಂದ ಕಾರ್ಯವು ಸಫಲವಾಯ್ತೆಂದು ಹೇಳಿ ನಂದಿಮೊದಲಾದವರನ್ನು ಉದ್ಧರಿಸುವೆವೆಂದು ಆಶ್ವಾಸನವನ್ನಿತ್ತು ಬೀಳ್ಕೊಟ್ಟೆವು (೨೭-೨೮).

"ಆ ಗಣರೆಲ್ಲರೂ ರುದ್ರಕನ್ಯೆಯರನ್ನು ಕೂಡಿಕೊಂಡು ಭೂಮಿಯಲ್ಲಿ ಆ ಆ ಜಾತಿಗಳಲ್ಲಿ ಜನಿಸಿ ಕಾರ್ಯಗಳನ್ನು ಮಾಡುತ್ತ ವೀರಶೈವಾಚಾರದಿಂದಿರುವರು. ಇವರಲ್ಲಿ ಅಧಿಕನಾದ ನಿರಾಮಯನು ಅಲ್ಲಮನಾಗಿಯೂ ನನ್ನ ಪ್ರತಿಬಿಂಬವು ಸಿದ್ಧರಾಮನಾಗಿಯೂ ವೀರೇಶನು ಮಡಿವಳಯ್ಯನಾಗಿಯೂ ಮಹಾದೇವಿಯೆಂಬ ರುದ್ರಕನ್ಯೆಯು ಮಹಾದೇವಿಯಕ್ಕನಾಗಿಯೂ ಇರುವರು (೨೯-೩೦). ಹಾಗೂ

ಮಂಡಿಗೆಯ ಮಾದಿರಾಜನೆಂಬ ಬ್ರಾಹ್ಮಣನ ಹೆಂಡತಿಯಾದ ಮಾದಾಂಬಿಕೆಯ ಗರ್ಭದಲ್ಲಿ ಪಾರ್ವತಿಯ ಚಿತ್ಕಳೆಯು ಜನಿಸಿ ನಾಗಾಂಬಿಕೆಯೆಂಬ ಹೆಸರನ್ನು ಧರಿಸಿರುವಳು. ಅವಳೊಡನೆ ಬಸವೇಶ್ವರನೆಂಬ ಹೆಸರಿನಿಂದ ನಂದಿಕೇಶ್ವರನು ಹುಟ್ಟಿ ಕಲ್ಯಾಣಪಟ್ಟಣದಲ್ಲಿ ಬಿಜ್ಜಳರಾಜನ ಮಂತ್ರಿಯಾಗಿರುವನು (೩೧). ಆ ಸಚಿವಶಿರೋಮಣಿಯು ಅನೇಕ ಪವಾಡಗಳನ್ನು ಮೆರೆದು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ ದಾಸೋಹವನ್ನು ಮಾಡುತ್ತ ನಿನ್ನ ಬರವನ್ನು ಹಾರೈಸುತ್ತಿರುವನು (೩೨). ಆ ನಂದೀಶನು ನಮ್ಮ ಭಕ್ತಿರೂಪನು, ಪ್ರಭುವು ನಮ್ಮ ವೈರಾಗ್ಯರೂಪನು, ನೀನು ನಮ್ಮ ಜ್ಞಾನರೂಪನು, ನಾಗಲಾಂಬಿಕೆಯು ಪಾರ್ವತಿಯ ರೂಪಳು. ನೀನು ಮರ್ತ್ಯದಲ್ಲಿ ಜನಿಸಿ ಅವರ ಗುರುವಾಗಿ ತತ್ತ್ವವನ್ನು ತಿಳುಹು" ಎಂದು ಈಶ್ವರನು ಹೇಳಿದನು (೩೩). ಆ ಮಾತಿಗೆ ಷಣ್ಮುಖಿಯು "ನೀವು ಇರಿಸಿದಂತೆ ಇರುವೆನು. ನನಗೇನು ಸ್ವತಂತ್ರವೇ ?" ಎಂದನು. ಆಗ ಈಶ್ವರನು ಆ ಸುಜ್ಞಾನರೂಪನನ್ನು ತನ್ನ ಮುಖದಲ್ಲಿ ಅಡಗಿಸಿ ಕಣ್ಸನ್ನೆಯಿಂದ ಸಭಾವಿಸರ್ಜನವನ್ನು ಮಾಡಿ ಕ್ಷಣದಲ್ಲಿಯೇ ನಾಗಲಾಂಬಿಕೆಯ ಮನೆಯನ್ನು ಸಾರಿದನು (೩೪).

೪ ಚೆನ್ನಬಸವೋತ್ಪತ್ತಿಯ ಸಂಧಿ

ಇತ್ತ ನಾಗಲಾಂಬಿಕೆಯು ಗುರುಲಿಂಗಜಂಗಮಾರ್ಚನೆಯನ್ನು ಮಾಡಿ, ಪ್ರಸಾದವನ್ನು ಸವಿದು, ಶಯ್ಯೆಯಲ್ಲಿ ಶಿವಧ್ಯಾನದೊಂದಿಗೆ ಯೋಗಪರವಶದಲ್ಲಿರಲು, ಈಶ್ವರನು ಚರಮೂರ್ತಿಯಾಗಿ ಬಂದು ಅವಳನ್ನು ಎಚ್ಚರಿಸಿ "ಎಲೈ ತರುಣಿಯೆ, ಈ ಪ್ರಸಾದವನ್ನು ತೆಗೆದುಕೊಳ್ಳು" ಎನಲು, ಅಕ್ಕನಾಗಮ್ಮನು ಅದನ್ನು ಲಿಂಗಕ್ಕೆ ಕೊಟ್ಟು ತಾನೂ ಕೈಕೊಂಡಳು. ಬಳಿಕ ಈಶ್ವರನು ಚರರೂಪವನ್ನು ಅಡಗಿಸಿ ಪಂಚವದನ ದಶಭುಜ ತ್ರಿಪಂಚನೇತ್ರ ಫಣಿಕುಂಡಲ ತ್ರಿಶೂಲ ಡಮರುಗಳನ್ನಾಂತು ಪುಲಿದೊವಲಿನುಡಿಗೆಯಿಂದ ಆಕೆಗೆ ಪ್ರತ್ಯಕ್ಷನಾದನು (೧-೩). "ಎಲೈ ಲಲಿತಾಂಗಿಯೆ, ಇದೊಂದು ಹೊಸ ಚೋದ್ಯವನ್ನು ನಿನಗೆ ತಿಳುಹುವೆವು. ಈ ನಮ್ಮ ಚಿತ್ಕಳಾಮೃತಪ್ರಸಾದದಿಂದ ನಿನ್ನ ಗರ್ಭದಲ್ಲಿ ನಮ್ಮ ಷಣ್ಮುಖಸ್ಥಿತವಾದ ಪ್ರಣವದ ನಿರ್ಮಲರೂಪನಾದ ಷಟ್ಸ್ಥಲಬ್ರಹ್ಮಿಯು ಜನಿಸಿ ವೀರಶೈವಾಚಾರವನ್ನು ಪ್ರತಿಷ್ಠಿಸಿ ಜೈನ ಬೌದ್ಧ ಚಾರ್ವಾಕ ಮತಗಳನ್ನಳಿದು ಬಸವಾದಿ ಪ್ರಮಥರಿಗೆ ಷಟ್ಸ್ಥಲ ಬ್ರಹ್ಮೋಪದೇಶವನ್ನು ಮಾಡಿ ನಿಜಪದವನ್ನು ಕೊಡುವನು.

ಈ ಒಸಗೆಯನ್ನು ಸಕಲಗಣಕೆ ಅರುಹು” ಎಂದು ಹೇಳಿ ಬಯಲಾದನು (೩-೫).

ಅಷ್ಟರಲ್ಲಿ ನಾಗಲಾಂಬಿಕೆಯು ಕಣ್ದೆರೆದು ಈಶ್ವರಮೂರ್ತಿಯನ್ನು ಕಾಣದೆ “ಇದು ಕನಸಿನಂತಿದ್ದರೂ ಕನಸಲ್ಲ, ಪ್ರತ್ಯಕ್ಷವೆನ್ನುವಂತಿದೆ” ಎಂದು ವಿಸ್ಮಯಹೊಂದಿ, ಬೆಳಗಾದೊಡನೆಯೇ ಭಕ್ತಿಯಿಂದ ಶಿವಪೂಜೆಮೊದಲಾದವುಗಳನ್ನು ತೀರಿಸಿಕೊಂಡು ಅನುಭವಮಂಟಪಕ್ಕೆ ಬಂದು ಬಸವೇಶ್ವರನಿಗೆ ಎಲ್ಲವನ್ನು ಸವಿಸ್ತಾರವಾಗಿ ನಿವೇದಿಸಿದಳು (೬-೮). ಇದನ್ನು ಕೇಳಿ ಬಸವೇಶ್ವರನು ಮುದವನ್ನು ತಾಳಿದನು. ಶರಣರೆಲ್ಲ ಸಂತೋಷಭರಿತರಾದರು. ಮುಂದೆ ದಿನದಿನಕ್ಕೆ ನಾಗಲಾಂಬಿಕೆಯ ಗರ್ಭಚಿಹ್ನಗಳು ಚೆಲ್ವಾಗಿ ತೋರಲಾರಂಭಿಸಿದುವು (೯-೧೦). ನಾಗಲಾಂಬಿಕೆಗೆ ಶಿವಕಥೆಯನ್ನು ಕೇಳುವುದು, ಈಶ್ವರಪೂಜೆಯನ್ನು ಮಾಡುವುದು, ಗುರುಲಿಂಗಜಂಗಮದ ತೀರ್ಥಪ್ರಸಾದವನ್ನು ಉಣ್ಣುವುದು, ಜಂಗಮಕ್ಕೆ ಉತ್ಕೃಷ್ಟವಸ್ತುಗಳನ್ನು ಎಡೆಮಾಡುವುದು ಈ ಬಯಕೆಗಳಲ್ಲದೆ ಬೇರೆ ಬಯಕೆಗಳು ತಲೆದೋರಲಿಲ್ಲ (೧೫).

ಹೀಗೆ ಕೆಲವು ದಿವಸಗಳು ಕಳೆಯಲು ವಿರಕ್ತೆಯೂ ಬಸವೇಶ್ವರನ ಒಡಹುಟ್ಟಿದವಳೂ ಆದ ನಾಗಲಾಂಬಿಕೆಯು ವೃಥಾಗರ್ಭವನ್ನು ತಾಳಿದಳೆಂಬ ಮಾತು ಊರಲ್ಲೆಲ್ಲ ಹರಡಿಕೊಂಡಿತು (೧೬). ಇದನ್ನು ಕೇಳಿದ ಪಿಸುಣನೊಬ್ಬನು ಬಿಜ್ಜಳನಲ್ಲಿಗೆ ಬಂದು ಈ ವಾರ್ತೆಯನ್ನು ಸಿರಿ ಸುಳ್ಳಲ್ಲವೆಂದು ಭಾಷೆಯನ್ನು ಬರೆಸಿಕೊಟ್ಟು ಬಸವನ ಅರಮನೆಗೆ ಬಂದರೆ ಕಾಣಬಹುದೆಂದು ಹೇಳಲು (೧೮). ಬಿಜ್ಜಳನು ವಿಸ್ಮಿತನಾಗಿ ಎಲ್ಲ ಪ್ರಧಾನಿಗಳೊಡನೆ ಬಸವನ ಅರಮನೆಗೆ ಬಂದನು. ಇದನ್ನು ಕಂಡು ಉಚಿತಮರ್ಯಾದೆಯಿಂದ ಆತನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಬಸವೇಶ್ವರನು ಆತನು ಬಂದ ಕಾರ್ಯವನ್ನು ವಿಚಾರಿಸಿದನು (೧೯-೨೦). ಬಿಜ್ಜಳನು ಮಾರುತ್ತರವನ್ನು ಕೊಟ್ಟು ಕೆಲಬಲವನ್ನು ಈಕ್ಷಿಸಿ ನಾಗಲಾಂಬಿಕೆಯ ಗರ್ಭಸೌಂದರ್ಯವನ್ನು ಕಂಡು “ನಿನಗೆ ವೃಥಾಗರ್ಭವು ಏಕೆ ಆಯಿತು?” ಎಂದು ಅವಳನ್ನು ಕೇಳಿದನು (೨೧). ಅದಕ್ಕೆ ಅವಳು “ಇದು ಮೃಡನ ಚಿತ್ಕಳಾಮೃತಪ್ರಸಾದದಿಂದಾದುದು” ಎಂದಳು. “ಹಾಗಿದ್ದರೆ ಸಕಲಶಿವಭಕ್ತರೆಲ್ಲರು ಆ ಪ್ರಸಾದಸೇವನೆ ಮಾಡುವರು, ಅವರಿಗೇಕೆ ಈ ಗರ್ಭದ ಗೊಡವೆಯಿಲ್ಲ?” ಎಂದು ಬಿಜ್ಜಳನು ಕೇಳಲು, ಅವಳು “ಸುಳ್ಳಲ್ಲ. ಈಶ್ವರನೇ ತನ್ನ ಮುಖದಲ್ಲಿಯ ಸುಜ್ಞಾನಪುತ್ರನು ಉದಯಿಸುವನೆಂದು ಹೇಳಿಕೊಟ್ಟನು” ಎಂದು ನಾಗಲಾಂಬಿಕೆಯು ಉತ್ತರವಿತ್ತಳು. ಅಷ್ಟಕ್ಕೆ ಸಮಾಧಾನತಾಳದೆ ಬಿಜ್ಜಳನು “ಹಾಗಾದರೆ ನಿನ್ನ ಗರ್ಭದೊಳಗಿನ ಶಿಶುವೇ ಈ ಮಾತನ್ನು ನಮ್ಮೊಡನೆ ಹೇಳಲಿ” ಎಂದನು. ಕೂಡಲೆ ಎಲ್ಲ ದಿಕ್ಕುಗಳನ್ನು ತುಂಬಿ ಜನದೆ

ಲ್ಲರು ಕೇಳುವಂತೆ ಗಂಭೀರವಾದ ನುಡಿಯು ಆವಳ ಉದರಮಧ್ಯದಲ್ಲಿ ಹೊರಟಿತು (೨೨-೨೩). "ಬಿಜ್ಜಳರಾಯನೇ, ಇಷ್ಟೇಕೆ ಕಳಕಳ? ಶಿವಶರಣರು ಎಂದೂ ಸುಳ್ಳು ಹೇಳಲಾರರು. ನಾನು ಮೃಡನ ಚಿತ್ಕಳೆಯಲ್ಲದೆ ರಕ್ತರೇತಸ್ಸಿನಿಂದುಂಟಾದ ಮಾಂಸಪಿಂಡವಲ್ಲ" ಎಂದು ಗಂಭೀರಸ್ವರವು ಹೊರಹೊಮ್ಮಲು ಬಿಜ್ಜಳನು ಬೆರಗಾದನು (೨೪). "ಚೋಳಿಯಕ್ಕನಿಗೆ ಭೀಮೇಶ್ವರನು, ಜಾಹೂರ ಬೊಮ್ಮಣ್ಣನಿಗೆ ಈಶ್ವರನು, ಬಸವೇಶ್ವರನಿಗೆ ಸಂಗಮನಾಥನು, ಕಿನ್ನರಯ್ಯನಿಗೆ ತ್ರಿಪುರಾಂತಕನು ಅವರು ಕೇಳಲಾಗಿ ನುಡಿದರೆಂದು ನಾನು ಕೇಳಿದ್ದೇನೆ. ಆದರೆ ಈ ಗರ್ಭದ ಶಿಶುವು ನಾನು ಕೇಳದೆ ನುಡಿದುದು ಆಶ್ಚರ್ಯಕರವು. ಆದರೂ ಪ್ರತ್ಯಕ್ಷವನ್ನು ಪ್ರಮಾಣಿಸಿ ನೋಡಬೇಕೆಂಬುವಂತೆ ಅನಿತ್ಯವಾದ ಮಾನವಶರೀರದಲ್ಲಿ ಮಲಮೂತ್ರರಕ್ತಮಾಂಸಗಳಲ್ಲಿ ಶಿವನ ಚಿತ್ಕಳೆಯು ಇರುವುದೇ?" ಎಂದು ಬಿಜ್ಜಳನು ಸಂಶಯಗೊಂಡನು (೨೫). ಆಗ ನಾಗಲಾಂಬಿಕೆಯು ತನ್ನಲ್ಲಿ ರಕ್ತಮಾಂಸಮಲಮೂತ್ರಗಳ ಲವಲೇಶವೂ ಇಲ್ಲವೆಂದು ತನ್ನ ಉದರವನ್ನು ಉಗುರ್ಗೊನೆಯಿಂದ ಬಗಿದು ತೋರಿಸಿದಳು (೨೬). ಕೋಟಿ ಬಾಲಸೂರ್ಯರ ಪ್ರಕಾಶದಿಂದ ಹೊಳೆಯುವ, ಭಸಿತವನ್ನು ಧರಿಸಿದ, ನಗೆಮೊಗದ ಶಿಶುವು ಶಿವಲಿಂಗಧರನಾಗಿ ಸುರಕುಸುಮಮಾಲಿಕೆಯ ಮಧ್ಯದಲ್ಲಿ ಕಂಗೊಳಿಸುತ್ತಿದ್ದುದನ್ನು ನೋಡಿ ಸಭಿಕರೆಲ್ಲರು ವಿಸ್ಮಯಗೊಂಡರು (೨೭). ಬಸವೇಶ್ವರನು ಆನಂದಭರಿತನಾದನು. ಬಿಜ್ಜಳನು ಭಯಭಕ್ತಿಯಿಂದ ಆ ಶಿಶುವಿಗೆ ಸಾಷ್ಟಾಂಗಪ್ರಣತನಾದನು (೨೮). "ಹಿಂದಕ್ಕೆ ಶುಕಮುನಿಯು ರಂಭೆಯ ವಾದದಲ್ಲಿ, ಪೂಸಲನು ಚೋಳನಿಗೆ, ಸಿದ್ಧರಾಮನು ಸೊನ್ನಲಾಪುರದಲ್ಲಿ ತಮ್ಮ ತಮ್ಮ ಉದರವನ್ನು ಬಿಚ್ಚಿ ತೋರಿಸಿದರೆಂದು ನಾನು ಕೇಳಿದ್ದೆನು; ಈಗ ಪ್ರತ್ಯಕ್ಷ ನೋಡಿದಂತಾಯಿತು" ಎಂದು ಬೆರಗಾಗಿ ಬಿಜ್ಜಳನು "ಚಿದ್ರೂಪನೇ, ನಿನ್ನಿರವನ್ನು ತಿಳಿಯದೆ ಹಳಿದು ನಿಂದಾದ್ರೋಹವನ್ನೂ, ಶಿವಶರಣೆಯನ್ನು ಜರೆದು ಭಕ್ತದ್ರೋಹವನ್ನೂ, ಈಶ್ವರನ ವಚನವನ್ನು ಅಲ್ಲಗಳೆದು ದೈವದ್ರೋಹವನ್ನೂ, ಇವಳ ಉದರವನ್ನು ಬಗಿಸಿ ಸತಿದ್ರೋಹವನ್ನೂ, ಇವೆಲ್ಲವನ್ನೂ ತಿಳಿಯದೆ ಆತ್ಮದ್ರೋಹವನ್ನೂ ಮಾಡಿ ಪಂಚಮಹಾದ್ರೋಹಿಯಾದ ನನ್ನನ್ನು ರಕ್ಷಿಸೆ"ಂದು ಹೊಗಳಿದನು (೩೦-೩೨).

ಆ ಸಮಯದಲ್ಲಿ ನಾಗಲಾಂಬಿಕೆಯು ಗರ್ಭದ ಕೂಸನ್ನು ತನ್ನ ಅಂಗೈತಳಕೆ ತರಲು ಆಕೆಯ ಉದರವು ಎಂದಿನಂತೆ ಆಯಿತು. ಆಗ ಪೃಥ್ವಿ, ಕಮಠ, ದಿಗ್ಗಜ, ವಾಸುಕಿ ಇವುಗಳ ಭಾರವು ಕಡಿಮೆಯಾಯಿತು. ಕೊರಡು ಕೊನರಿದುವು. ಬರಡು ಕೊಡಹಾಲು ಕರೆದುವು. ಕಲ್ಲುಗಳು ಒಸರಿದುವು. ಕೊಯ್ದ ಫಲತತಿಗಳು ಮತ್ತೆ

ಫಲಿಸಿದುವು. ಶಿವಾಲಯದ ಕಲ್ಲುಬೊಂಬೆಗಳು ನರ್ತಿಸಿದುವು. ಜೈನರೆದೆಯೊಡೆದುವು (೩೩-೩೪). ಅಜ್ಞಾನ ಕಾಮ ಮಾಯೆ ಮೊದಲಾದುವುಗಳು ಮಾಯವಾಗಿ ಅಸಮತ್ವ ನಾಶ ಮುಂತಾದುವು ಮುಕ್ತಿಸ್ವರೂಪನು ಅವತರಿಸಲು ಎಲ್ಲಿಯೋ ಅಡಗಿ ಹೋದುವು (೩೫).

೫ ಪುಷ್ಪಕೋತ್ಸವ ಸಂಧಿ

ಬಳಿಕ ಬಿಜ್ಜಳನು ಕಾಲನು ಬಸವಣ್ಣನನ್ನು ಕರೆದು ಪಟ್ಟಣವನ್ನು ಸಿಂಗರಿಸಬೇಕೆಂಬ ಮಾತು ಬಾಯಿಂದ ಹೊರಡುವಷ್ಟರಲ್ಲಿ ಊರ ಜನರು ತಮ್ಮ ತಮ್ಮ ಮನೆಗಳ ಮುಂದೆ ಪನ್ನೀರ ಚಳಿಹೊಡೆದು ಗುಡಿತೋರಣಗಳಿಂದಲೂ ಕಳಸಕನ್ನಡಿಗಳಿಂದಲೂ ಬೀದಿಬೀದಿಗಳನ್ನು ಅಲಂಕರಿಸಿದರು (೨-೩). ಅಲ್ಲಲ್ಲಿ ನಿರ್ಮಿಸಿದ ಕುರುಜುಗಳೂ ಮಹಾಮೇರುವೆಗಳೂ ಮಹೋತ್ಸವವನ್ನು ನೋಡಬಂದ ದೇವತೆಗಳ ವಿಮಾನಗಳಂತೆ ಅಥವಾ ಶಿವಶರಣರನ್ನು ಸಾಯುಜ್ಯಪದಕೆ ಒಯ್ಯಲು ಬಂದ ವಿಮಾನಗಳಂತೆ ಶೋಭಿಸಿದುವು (೪). ಸಾರಣೆ ಕಾರಣೆಮಾಡಿದ ನೆಲದಿಂದಲೂ ತೋರಣದ ಹೂಗಳ ಕಂಪಿನಿಂದೊಡಗೂಡಿದ ಪನ್ನೀರ ಚಳಿಯ ಮನೆಗಳಿಂದಲೂ ಆರತಿಯನ್ನು ತರುತ್ತಿದ್ದ ಸ್ತ್ರೀಯರ ಸಮೂಹದಿಂದೊಡಗೂಡಿದ ಕೇರಿಗಳಿಂದಲೂ ಭೇರಿಗಳ ರಭಸದಿಂದಲೂ ಆ ಪಟ್ಟಣವು ಶೋಭಾಯಮಾನವಾಯಿತು (೫). ಬಿಜ್ಜಳನು ತನ್ನ ಪುಷ್ಪಕವನ್ನು ತರಿಸಿ ಅದರಲ್ಲಿ ನಾಗಲಾಂಬಿಕೆಯ ಮಗನನ್ನು ಕುಳ್ಳಿರಿಸಿ ನಮಸ್ಕರಿಸಿದನು. ಒಡನೆಯೇ ಚತುರಂಗಬಲವನ್ನೂ ಪಟ್ಟಣದ ಜನರನ್ನೂ ಮಂತ್ರಿಗಳನ್ನೂ ಕರೆಸಿ, ವಾರಾಂಗನೆಯರನ್ನು ದೂರಮಾಡಿಕೊಂಡು, ಶೈವದಲ್ಲಿ ಭಯಭಕ್ತಿಧರಿಸಿ, ಜೈನನಾದ ಬಿಜ್ಜಳನು ಹರ್ಷದಿಂದ ಉತ್ಸವವನ್ನು ಮಾಡಲು ಸಿದ್ಧನಾದನು (೬).

ಕೂಡಲೆ ನಾನಾಪ್ರಕಾರದ ವಾದ್ಯಗಳ ರಭಸವು ದಿಕ್ಕುಗಳನ್ನೆಲ್ಲ ತುಂಬಲು ಕುಮಾರನ ಪಲ್ಲಕ್ಕಿಯು ಹೊರಟಿತು (೭). ಸಕಲಮಂತ್ರಿಗಳೊಂದಿಗೆ ಬಿಜ್ಜಳನು ಪಾದಚಾರಿಯಾಗಿ ಓಲೈಸುತ್ತ ಬರಲು ಬಸವದಂಡಾಧೀಶ ಮೊದಲಾದ ಶಿವಶರಣರು ಜಯಜಯಕಾರವನ್ನು ಮಾಡುತ್ತ ನಡೆದರು (೮). ಪಟ್ಟಣದ ಸ್ತ್ರೀಯರೆಲ್ಲರು ಚೆನ್ನಬಸವನ ಬಗ್ಗೆ ಚೋದ್ಯಪಡುತ್ತ ಆತನನ್ನು ನೋಡುವ ತವಕದಿಂದ ಬಂದರು (೯-೧೦). ಅವರಲ್ಲನೇಕರು ಮನೆಮನೆಗಳ ಮೇಲ್ಮಾಳಿಗೆಯ ಮೇಲೆ, ಕೆಲವರು ಜಗುಲಿಗಳ ಮೇಲೆ, ಮತ್ತೆ ಕೆಲವರು ಮನೆಯ ಬಾಗಿಲುಗಳಲ್ಲಿ, ಇನ್ನು ಕೆಲವರು ಮಾಳಿಗೆಗಳ ಬದಿಯ ಮಗ್ಗುಲಲ್ಲಿ ಕಂಬಗಳನ್ನು ಹಿಡಿದುಕೊಂಡು ಸಾಲಾಗಿ ನಿಂತು

ರಲು ನೋಟಕರ ಕಣ್ಗೆ ಭಂಗಾರದ ಬೊಂಬೆಗಳಂತೆ ತೋರಿದರು (೧೧). ಅಲ್ಲಲ್ಲಿ ಓಡಾಡುತ್ತಿದ್ದ ತರುಣೀಜನರು ಸ್ಮರನ ಕುಲದೇವತೆಯರಂತೆ ಕಾಣುತ್ತಿದ್ದರು (೧೨-೧೩). ಶಾರದೆ, ಇಂದ್ರಾಣಿ, ಸಿರಿ, ರತಿ, ಅಹಲ್ಯೆ, ಅರುಂಧತಿ ಮುಂತಾದ ದೇವತಾಸ್ತ್ರೀಯರಿಗೆ ಸಮಾನರಾದ ಆ ಪಟ್ಟಣದ ಮಹಾಸತಿಯರು ಅತಿಭಕ್ತಿಯಿಂದ ಮುತ್ತಿನಾರತಿ, ರತ್ನದಾರತಿ, ಪಚ್ಚದಾರತಿ, ಸೊಡರುಗಳ ಆರತಿ ಮೊದಲಾದವುಗಳಿಂದ ನಿವಾಳಿಸಿ, ಹರಸಿ, ಸುಕುಮಾರನಿಗೆ ಸೇಸೆತಳಿದರು (೧೬). ಅವರಿಗೆ ಆಭರಣ ರತ್ನಹಾರಗಳನ್ನೂ ಉಡುಗೊರೆ ತಾಂಬೂಲಗಳನ್ನೂ ನಾನಾವರ್ಣದ ಜನರಿಗೆ ದಕ್ಷಿಣೆಗಳನ್ನೂ ಕೊಡಿಸಿ ಒಳ್ಳೆಯ ವೈಭವದಿಂದ ಬಸವನೊಡಗೂಡಿ ಬಿಜ್ಜಳನು ನಡೆತಂದನು (೧೭).

ಈ ಪ್ರಕಾರ ಉತ್ಸವವನ್ನು ಮುಗಿಸಿ ಬಸವನ ಅರಮನೆಗೆ ಬಂದು ಕುಮಾರನಿಗೆ ನಮಸ್ಕರಿಸಿ ಎಲ್ಲರಿಗೂ ಉಡುಗರೆ ಮೊದಲಾದವುಗಳನ್ನು ಕೊಟ್ಟು ಮನ್ನಿಸಿ ತನ್ನ ಮನೆಗೆ ಬಿಜ್ಜಳರಾಯನು ತಿರುಗಿದನು.

ಇತ್ತ ಬಸವಣ್ಣನು ಗಣಸಂತತಿಕೂಡಿಕೊಂಡು ತನ್ನ ಅರಮನೆಯನ್ನು ಹೊಕ್ಕನು (೧೮). ಆಗ ನೀಲಲೋಚನೆಯು ಅರಮನೆಯ ಹೆಂಗಳೆಯರನ್ನೊಡಗೊಂಡು ಬಣ್ಣಬಣ್ಣದ ಆರತಿಗಳಿಂದ ಕುಮಾರನಿಗೆ ನಿವಾಳಿಸಿ ಸೇಸೆತಳಿದು ಹರಸುವಷ್ಟರಲ್ಲಿ ಸಾಯಂಕಾಲವಾಯಿತು (೧೯). ಕೂಡಲೆ ಬಸವ ನಾಗಲಾಂಬಿಕೆ ನೀಲಲೋಚನೆಯರು ಜಂಗಮಾರ್ಚನೆಯನ್ನು ಮಾಡಿ ಪ್ರಸಾದವನ್ನು ಸೇವಿಸಿದರು (೨೦). ಮುಂದೆ ಎಲ್ಲರು ಪವಡಿಸಿರಲು ನಾಗಲಾಂಬಿಕೆಯ ಮಗ್ಗುಲಲ್ಲಿ ಕುಮಾರನು ನಿದ್ರೆಯೊಳಗಿದ್ದನು (೨೧). ಆಗ ಪಾರ್ವತೀಪರಮೇಶ್ವರರು ತಮ್ಮ ಪುತ್ರನನ್ನು ನೋಡಬೇಕೆಂಬ ಅಪೇಕ್ಷೆಯಿಂದ ರುದ್ರಕನ್ನಿಕೆಯರೊಡನೆ ನಾಗಲಾಂಬಿಕೆಯು ಮಲಗುವ ಮನೆಯನ್ನು ಹೊಕ್ಕರು (೨೨). ನಾಗಲಾಂಬೆಯ ಮಗ್ಗುಲನ್ನು ಸಿಂಗರಿಸಿದ್ದ ಪುತ್ರನನ್ನು ಗಿರಿಜೆಯು ಆನಂದದಿಂದ ಎತ್ತಿಕೊಂಡಳು (೨೩). ಬಳಿಕ ಶಿವನು ಪಂಚಕಳಶಗಳನ್ನು ಸ್ಥಾಪಿಸಿ, ಪಾರ್ವತಿಯನ್ನು ಕುಳ್ಳಿರಿಸಿ, ಪುತ್ರನಿಗೆ ಮೂರುಪ್ರಕಾರದ ದೀಕ್ಷೆಗಳಿಂದ ಮೂರು ಲಿಂಗಗಳನ್ನು ಮೂರು ಅಂಗಗಳಲ್ಲಿ ಪ್ರತಿಷ್ಠಿಸಿ, ಶರಣಕುಲಕ್ಕೆ ಇದೇ ಪ್ರಕಾರ ದೀಕ್ಷೆಮಾಡು ಎಂದು ಹೇಳುವಂತೆ ಇಷ್ಟಲಿಂಗವನ್ನು ದೀಕ್ಷೆಯಿಂದ ಕೊಟ್ಟನು (೨೪). ಈತನು ಎಲ್ಲ ಪ್ರಕಾರದಿಂದಲೂ ಬಸವನಗಿಂತ ಚೆನ್ನಾಗಿ ಕಾಣುವನಾದುದರಿಂದ ಚೆನ್ನಬಸವನೆಂಬ ಹೆಸರೇ ಯೋಗ್ಯವಾದುದೆಂದು ಶಿವನು ಗಣಕುಲಕ್ಕೆ ಹೇಳಿದನು (೨೫). ಶಿವಶಿವೆಯರು ಆ ಕೂಸನ್ನು ಪ್ರೀತಿಯಿಂದ ಆಡಿಸಿ ಮುಂಡಾಡಿದರು (೨೬). ಪುತ್ರಸ್ನೇಹದಿಂದ ಮೊಲೆಗಳು ತೊರೆಯಲು ಪಾರ್ವತಿಯು ಆ ಶಿಶುವಿಗೆ ಮೊಲೆಯೂಡಿ ಪ್ರೊಂದೊಟ್ಟಿ

ಲಕ್ಷಿಸಿ ರುದ್ರಕನ್ಯೆಯರೊಡನೆ ತೊಟ್ಟಿಲವನ್ನು ತೂಗಿದಳು (೨೭). ರುದ್ರಕನ್ನಿಕೆಯರೆಲ್ಲರು ಜೋಗುಳ ಹಾಡುತ್ತ ತೂಗುತ್ತಿದ್ದರು (೨೮-೨೯). ಪಾರ್ವತಿಯು ನಾಗಲಾಂಬಿಕೆಗೆ “ ಮಜ್ಜನಭೋಜನಾದಿ ನಾನಾಕ್ರಿಯೆಗಳಲ್ಲಿ ಈ ಶಿಶುವನ್ನು ಮರನೆಂದು ತಿಳಿಯಬೇಡ ” ಎಂದು ಹೇಳಿ ಕೂಸನ್ನು ಅವಳ ಕೈಗೆ ಕೊಟ್ಟಳು (೩೦). ಅಷ್ಟರಲ್ಲಿ ಮುಂಜಾವಿನ ಕೋಳಿಗಳು ಕೂಗತೊಡಗಲು ಶಿವಶಿವೆಯರು ಮಗುವನ್ನು ಮುಂಡಾಡಿ ಕೈಲಾಸಕ್ಕೆ ತೆರಳಿದರು (೩೧). ಒಡನೆಯೆ ನಾಗಲಾಂಬಿಕೆಗೆ ಎಚ್ಚರವಾಗಿ ಹತ್ತಿರವಿದ್ದ ಮಣಿಕಲಶಗಳನ್ನು ಕಂಡು ಇದು ಕನಸಲ್ಲವೆಂದು ಬಗೆಯುತ್ತಿರುವಷ್ಟರಲ್ಲಿ ಬೆಳಗಾಯಿತು (೩೨). ಆಗ ಅವಳು ಬಸವಣ್ಣನನ್ನು ಕರೆಸಿ ಶಿವನು ಶಿಶುವಿಗೆ ದೀಕ್ಷೆಯನ್ನು ಕೊಟ್ಟನೆಂದು ಹೇಳಿ ಕುರುಹುಗಳನ್ನು ತೋರಿಸಿದಳು (೩೩).

ಮುಂದೆ ದಿನದಿನಕ್ಕೆ ಚೆನ್ನಬಸವಣ್ಣನು ವರ್ಧಿಸುತ್ತ, ಶಿಶುಲೀಲೆಯಿಂದ ತಾಯ್ಗೆ ಹರುಷವನ್ನುಂಟುಮಾಡುತ್ತ, ಪರಿಪರಿಯ ಬಾಲದೊಡಿಗೆಗಳನ್ನು ಧರಿಸಿ ಕಣ್ಗಳ ಪುಣ್ಯವೇ ಬೆಳೆಯುವಂತೆ ಬೆಳೆಯುತ್ತಿದ್ದನು (೩೪-೩೮). ಪರವಾದಿಗಳ ಬಾಯ್ಗಳನ್ನು ಹೊಯ್ಯುವಂತೆ ತೋಳಾಟವಾಡಿ, ಮುಕ್ತಿಬಾಲೆಯನ್ನು ಕೆಳೆತನಕ್ಕೆ ಕರೆಯುವಂತೆ “ ಹೊನ್ನತಾಗುಬ್ಬಿಯಾಟ ” ವಾಡಿ, ಖಳರೆದೆಯನ್ನು ಮೊಳಕಾಲಿನಿಂದ ಒದೆಯುವಂತೆ ಅಂಬೆಗಾಲಿಟ್ಟು, ಶೈವವನ್ನು ನೆಲೆಗೆ ನಿಲ್ಲಿಸುವಂತೆ ನಿಂತು ಆಡುತ್ತಿದ್ದನು (೩೯). ಪಸುಳೆತನದಲ್ಲಿಯೆ ಶರಣಕುಲಕ್ಕೆ ಪ್ರಣವವನ್ನು ಬೋಧಿಸುವಂತೆ ಕುಮಾರನ ತೊದಲ್ಮಾತು ಶೋಭಿಸಿದುವು. ಹೀಗೆ ಕ್ರಮದಿಂದ ವರ್ಧಿಸುತ್ತಿರಲು ನಾನಾಶಾಸ್ತ್ರ, ವೇದ, ಪುರಾಣಮೊದಲಾದ ಸಕಲವಿದ್ಯೆಗಳು ಚೆನ್ನಬಸವಣ್ಣನನ್ನು ಒಲ್ಲೈಸಿಕೊಂಡಿದ್ದುವು (೪೦-೪೩). ಕಾಲಕ್ರಮದಿಂದೆ ಎಳೆಯ ಹರಯವು ತಲೆದೋರಲು ಮನೋಹರನಾಗಿ ಕಣ್ಗೊಳಿಸುತ್ತಿದ್ದ ಅಳಿಯನ ಮುಖವನ್ನು ನೋಡಿ ಬಸವರಾಜನು “ ಇವನು ನನಗೆ ಸಮ್ಮದವು. ಈತನನ್ನು ಬೇರೆ ಅರಮನೆಯಲ್ಲಿರಿಸಬೇಕು ” ಎಂದು ಭಾವಿಸಿ, ಶಿಲ್ಪಿಗಳನ್ನು ಕರೆಸಿ, ತನ್ನ ಅರಮನೆಯ ಹತ್ತಿರ ಬೇರೆ ಅರಮನೆಯನ್ನು ನಿರ್ಮಿಸಲು ಅಪ್ಪಣೆಯಿತ್ತನು (೪೭). ವಾಸ್ತುಕ್ರಮಾನುಸಾರವಾಗಿ ಕಟ್ಟಿದ ರಂಜಿಸುವ ಮಜ್ಜನಶಾಲೆ, ಪಾಕಶಾಲೆ, ಭೋಜನಶಾಲೆ, ಮಂತ್ರಶಾಲೆ, ನರ್ತನಶಾಲೆ, ವಸ್ತ್ರಶಾಲೆ, ಗಜಶಾಲೆ, ಹಯಶಾಲೆ, ಓಲಗಶಾಲೆ, ಗೀತಶಾಲೆ, ಶಯನಶಾಲೆ ಮೊದಲಾದುವುಗಳೆಲ್ಲವು ಅರಸುತಿಪಿಗೆ ತಕ್ಕಂತೆ ಒಪ್ಪಿದುವು. ಉಗ್ರಾಣದ ಮನೆಗಳೂ, ಪಸಿಯೋಗದವರ ಭಾವಡಿಗಳೂ, ಕೇಳೀವನವೂ ಅದರಲ್ಲಿದ್ದುವು. ನೋಡಲು ಮೇಲೆ ತರತರದ ಬಣ್ಣಗಳಿಂದ ಬರೆದ ಬೊಂಬೆಗಳಿಂದಲೂ, ಕಸ್ತೂರಿಕುಂಕುಮದ ಸಾರಣೆಕಾರಣೆಗಳಿಂದಲೂ, ಮುತ್ತುರತ್ನಗಳ ಮೊಳ್ಳೆಯ,

ಕುಚ್ಚುಗಳಿಂದಲೂ ಅರಮನೆಯು ಚೆಲ್ವಾಯಿತು (೪೮-೫೧). ಆ ಅರಮನೆಗೆ ಆರು ಬಾಗಿಲಗಳೂ ಅವುಗಳಮೇಲೆ ಮಣಿಖಚಿತವಾದ ಆರು ಉಪ್ಪರಿಗೆಗಳೂ ಶೋಭಿಸುತ್ತಿದ್ದುವು. ಬಸವೇಶ್ವರನು ಆ ಅರಮನೆಯನ್ನು ನೋಡಿ ಶಿಲ್ಪಿಗರಿಗೆ ಉಡುಗೊರೆಗಳನ್ನಿತ್ತು, ಚೆನ್ನಬಸವಣ್ಣನಿಗೆ ಆ ಅರಮನೆಯಲ್ಲಿದ್ದು ಸಕಲಶಿವತತ್ತ್ವವನ್ನು ತಮ್ಮೆಲ್ಲರಿಗೆ ಬೋಧಿಸಬೇಕೆಂದು ಹೇಳಿ, ಅವನ ಸಲುವಾಗಿ ಧನಧಾನ್ಯಸಂಪತ್ತನ್ನೆಲ್ಲ ಆ ಅರಮನೆಯಲ್ಲಿರಿಸಿದನು. ಇದು ಪರಮಗುರುವಚನವೆಂದು ಭಾವಿಸಿ ಚೆನ್ನಬಸವಣ್ಣನು ನಾಗಲಾಂಬಿಕೆಯನ್ನು ಕೂಡಿಕೊಂಡು ಆ ಅರಮನೆಯನ್ನು ಹೊಕ್ಕನು. ಆರು ಬಾಗಿಲಗಳನ್ನು ಕಾಯಲಿಕ್ಕೆಂದು ಆರು ಷಟ್ಸ್ಥಲ ಬ್ರಹ್ಮಿಗಳನ್ನು ಚೆನ್ನಬಸವಣ್ಣನಿರಿಸಿ, ಆರುಸ್ಥಳಗಳನ್ನು ಉಸಿರದಿದ್ದರೆ ಮೂರುಕಣ್ಣುಳ್ಳವನನ್ನು ಸಹ ಒಳಗೆ ಬಿಡಬೇಡೆಂದು ಅವರಿಗೆ ಆಜ್ಞಾಪಿಸಿ ತಾನು ಜಂಗಮಾರ್ಚನೆಯನ್ನು ಮಾಡತೊಡಗಿದನು (೫೨-೫೮). ಜಂಗಮದ ಪಾದೋದಕಪ್ರಸಾದವನ್ನಾಂತು ಪರಿಪರಿಯ ಭಕ್ಷ್ಯಭೋಜ್ಯಗಳಿಂದ ಅವರನ್ನು ತಣಿಸಿ ಸರಸಕರ್ಪೂರತಾಂಬೂಲಗಳನ್ನು ಕೊಡಿಸಿ ಸದ್ಭಕ್ತಸಮೂಹದೊಡನೆ ಶಿವತತ್ತ್ವಗೋಷ್ಠಿಯಲ್ಲಿ ಸುಖದೊಳಿದ್ದನು (೫೯-೬೫).

೬ ಪ್ರಾಣಲಿಂಗದ ಸಂಧಿ

ಒಂದುದಿನ ಉದಯಕಾಲದನಂತರ ಬಸವೇಶ್ವರನು ಶಿವಪೂಜೆಯನ್ನು ತೀರಿಸಿಕೊಂಡು, ಚೆನ್ನಬಸವಣ್ಣನಿಂದ ಷಟ್ಸ್ಥಲವನ್ನು ತಿಳಿದುಕೊಳ್ಳಬೇಕೆಂದು ಗಣಕುಲದೊಡನೆ ಅಳಿಯನ ಅರಮನೆಗೆ ಬಂದನು (೨). ಚೆನ್ನಬಸವಣ್ಣನು ತನ್ನವರನ್ನೊಡಗೂಡಿ ಬಸವರಾಜನನ್ನು ಎದುರುಗೊಂಡನು (೩). ಉಚಿತಾಸನದಲ್ಲಿ ಇಬ್ಬರೂ ಕುಳಿತಬಳಿಕ ಬಸವರಾಜನು ಚೆನ್ನಬಸವನಿಗೆ "ತತ್ತ್ವನಿಧಿಯೇ, ಶಿವಪೂಜೆಯು ತೀರಿತೆ?" ಎಂದನು. ಅದಕ್ಕೆ ಚೆನ್ನಬಸವಣ್ಣನು "ಜ್ಯೋತಿಯಿಲ್ಲದೆ ಕಣ್ಣಿಗೆ ಬೆಳಕುಂಟೇ? ಗುರುವಿನ ದೀಕ್ಷೆಯಿಲ್ಲದೆ ಶಿವಪೂಜೆಯಾಗುವುದುಂಟೇ? ಶಿಕ್ಷೆಯನ್ನು ಬಿಟ್ಟು ಲಿಂಗವನ್ನು ಪೂಜಿಸಲಿಕ್ಕೆ ಅನುಜ್ಞೆಯನ್ನು ಮಾಡು" ಎಂದು ಹೇಳಿದನು (೪-೫). ಬಸವೇಶ್ವರನು "ಲೋಕದಲ್ಲಿ ಎಲ್ಲಿಯಾದರೂ ಗುರುವಿನ ಉಪದೇಶವುಂಟೆಂದು ಬಲ್ಲೆನು. ಗುರುವಿಗೆ ಶಿಷ್ಯನು ಉಪದೇಶಮಾಡಿದ ಎಡೆಯುಂಟೇ? ನೀನು ಮನುಷ್ಯನಲ್ಲ: ತತ್ತ್ವರಹಸ್ಯವನ್ನು ತಿಳಿಸಿ ನಮ್ಮನ್ನು ರಕ್ಷಿಸಲು ಬಂದ ಗುರು ಸಂಗನಬಸವನು. ನಿನಗೆ ದೀಕ್ಷೆಯನ್ನು ಮಾಡಲಿಕ್ಕೆ ನಾನು ಅಂಜು

ನೆನು!" ಎಂದನು (೬). ಚೆನ್ನಬಸವಣ್ಣನು "ನೀನು ಅಂಜುವ ಕಾರಣ ವಿಲ್ಲ. ನೀನು ಕೊಟ್ಟ ಲಿಂಗವನ್ನು ತೆಗೆದುಕೊಂಡು ಅಡಗಿದ ಅನಿಮಿಷನಂತೆ ನಾನಲ್ಲ. ಈ ಲಿಂಗಲಕ್ಷಣವನ್ನು ನನಗೆ ತಿಳಿಸು" ಎಂದು ಸಜ್ಜೆಯ ಲಿಂಗ ವನ್ನು ಆತನ ಕೈಯೊಳಗಿಡಲು, "ಲಿಂಗಲಕ್ಷಣವನ್ನು ಎಳ್ಳಷ್ಟಾದರೂ ಪರೀಕ್ಷಿ ಸಲಿಕ್ಕೆ ಬಾರದು" ಎಂದು ತಿರುಗಿ ಕೊಡಲು, "ಇದೇ ನನಗೆ ಗುರುದೀಕ್ಷೆ" ಯೆಂದು ಚೆನ್ನಬಸವನು ನುಡಿದನು (೭).

ಬಸವೇಶ್ವರನು ಚೆನ್ನಬಸವಣ್ಣನಿಗೆ "ಹಿಂದಿನದನ್ನು ಎಚ್ಚರಿಸಿ ಮುಂದಿನ ಭವವನ್ನು ಕಳೆಯುವ ತಂದೆ ನೀನು. ನೀನಿರಲು ನನಗೆ ಯಾವ ಕಷ್ಟವೂ ಇಲ್ಲ. ಅನಿಮಿಷನು ಕೊಂಡು ಅಡಗಿದ ಲಿಂಗವು ನನಗೆ ತಿರುಗಿ ದೊರೆಯುವು ದೆಂದಿಗೆ? ಸಂಗಮೇಶ್ವರನು ನನ್ನನ್ನು ಎತ್ತಿಕೊಳ್ಳುವುದೆಂದಿಗೆ?" ಎಂದನು (೮). ಅದಕ್ಕೆ "ಬಸವಣ್ಣನೇ, ನೀನು ಮಾಡಬೇಕಾದ ಕಾರ್ಯದೊಳಗೆ ಎಳ್ಳಷ್ಟಾದರೂ ಇನ್ನೂ ಆಗಿಲ್ಲ. ಇಷ್ಟಲಿಂಗವನ್ನು ಪೂಜಿಸಿ ಪ್ರಾಣಲಿಂಗ ಲಿಂಗ ಪ್ರಾಣದೊಳಗೆ ಅಷ್ಟಾವಧಾನಗಳನ್ನರಿದು ಷಟ್ಸ್ಥಲವನ್ನು ತಿಳಿಯಬೇಕಲ್ಲದೆ ಬರಿಯ ಮಾತಿನಿಂದ ಸಾಧ್ಯವಿಲ್ಲ"ವೆಂದೆನಲು, "ಇದುವರೆಗೆ ನಾನು ಬಹಿಕ್ರಿಯೆಗ ಳಿಂದೆ ವೃಥಾ ಪೂಜಿಸಿ ದಿವಸಗಳನ್ನು ಕಳೆದುಕೊಂಡೆನು. ಆದುದರಿಂದ ಷಟ್ಸ್ಥಲ ವನ್ನು ತಿಳಿಸಬೇಕೆಂದು" ಬಸವಣ್ಣನು ಕೇಳಲು, ಚೆನ್ನಬಸವಣ್ಣನು ಎಲ್ಲರಿಗೂ ತಿಳಿಯುವಂತೆ ಅದನ್ನು ತಿಳಿಸಿದನು (೯-೧೦). ಆಗ ಬಸವಣ್ಣನು ತನ್ನ ಭವ ಭವಾಂತರವನ್ನು ನಾಶಮಾಡಿದನೆಂದು ಚೆನ್ನಬಸವಣ್ಣನನ್ನು ಹೊಗಳಿ, ಅವನಿಂದ ತನಗೆ ಸಂಗನಬಸವನೆಂಬ ಹೆಸರಾಯಿತೆಂದು ಹೇಳಿ, ಅನಿಮಿಷನ ವೃತ್ತಾಂತ ವನ್ನು ಕೇಳಿದನು (೧೧).

"ನೀನು ಅನಿಮಿಷನಿಗೆ ಲಿಂಗವನ್ನು ಕೊಟ್ಟಮೇಲೆ ಆ ಲಿಂಗದಲ್ಲಿ ಅವನ ಮನಸ್ಸು ಕಣ್ಣು ನಟ್ಟು ನಿಜಸುಖಸಮಾಧಿಯಲ್ಲಿರಲು ಅಲ್ಲಮಪ್ರಭುವು ಅಲ್ಲಿಗೆ ಬಂದು ಆ ಲಿಂಗವನ್ನು ಕೈಕೊಂಡು ನಿನ್ನಲ್ಲಿಗೆ ಬರುವನು. ನೀನು ಜಂಗಮಪ್ರಾಣಿಯೆಂಬುದನ್ನು ಕೇಳಿ ಜಂಗಮನು ನಿನ್ನಮನೆಗೆ ಬರುವನು. ನೀನು ಜಂಗಮರನ್ನು ಮನೆಯಲ್ಲಿರಿಸಿಕೊಂಡಿರಬಾರದು. ಮಠಗಳನ್ನು ಕಟ್ಟಿಸಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರನ್ನು ಅಲ್ಲಿ ಇಂಬಿಡಬೇಕು. ಅವರನ್ನು ನಿನ್ನಮನೆಗೆ ಕರೆತಂದು ಮೃಷ್ಟಾನ್ನವನ್ನು ನೀಡಿ ಅವರು ಬೇಡಿದ ವಸ್ತು ಗಳನ್ನು ಕೊಟ್ಟು ಕಳುಹು". ಎಂದು ಚೆನ್ನಬಸವೇಶನು ಹೇಳಿದನು (೧೨-೧೬) ಅದಕ್ಕೆ ಬಸವಣ್ಣನು "ನಾನು ಸ್ವತಂತ್ರನೆ ! ನೀವಿರಿಸಿದಂತೆ ಇರುವೆನು" ಎಂದು ಹೇಳಿ ಮನೆಗೆ ಬಂದನು (೧೭).

ಬಸವೇಶ್ವರನ ಮನೆಯ ಹತ್ತಿರ ದೊಡ್ಡದಾದ ಬಯಲಿನಲ್ಲಿ ಚೆನ್ನಬಸವಣ್ಣನು ಜಂಗಮರಿಗೆ ಮಠಗಳನ್ನು ಸಾಲುಸಾಲಾಗಿ ಕಟ್ಟಿಸಿ ಅವರನ್ನು ಅಲ್ಲಿಟ್ಟನು (೧೯). ಅವರಲ್ಲಿ ಕೆಲವರು ತಮ್ಮ ಮಠಗಳಿಗೆ ನಡೆಯಲು ಒಪ್ಪದಿರಲು ಆ ಮನೆಗೆ ಕಿಚ್ಚಿಕ್ಕಿಸಿದನು. ಆಗ ಅದನ್ನು ಕಂಡು ಅವರು ಎದ್ದುಬಿದ್ದು ಕೈಕಾಲೊಡಿದುಕೊಂಡು ಮುಂಗಾಣದೆ ಓಡಿದರು. ಅವರಲ್ಲಿ ಮೂವರು ಲಿಂಗಸಂಧಾನದಿಂದಿದ್ದು ಒಬ್ಬನು ಇನ್ನೊಬ್ಬನಿಗೆ "ಅಗೋ, ಕಿಚ್ಚೇಳುತಿದೆ" ಎಂದನು. ಇನ್ನೊಬ್ಬನು "ಎಲ್ಲಿ?" ಎಂದನು. ಮೂರನೆಯವನು "ನಿಮ್ಮ ಸೊಲ್ಲಡಗದೇ? ಸುಮ್ಮನೇ ಬಿದ್ದುಕೊಳ್ಳಿ" ಎಂದನು. ಹೀಗೆ ಮೂವರು ಪವಡಿಸಿರಲು, ಅವರನ್ನೂ ಭೀತಿಯಿಂದ ಓಡಿದವರನ್ನೂ ತಂದು ಮಠಗಳಲ್ಲಿರಿಸಿ, ಆ ಅರಮನೆಯನ್ನು ಮುಂಚಿದ್ದಂತೆ ಮಾಡಿದನು (೨೦). ಈ ಚೋದ್ಯವನ್ನು ಬಿಜ್ಜಳನು ಕೇಳಿ, "ನಿಮ್ಮ ಅಳಿಯನು ಘನಮಹಿಮನು" ಎಂದು ಬಸವಣ್ಣನೆದುರಿಗೆ ಚೆನ್ನಬಸವನನ್ನು ಕೊಂಡಾಡಿದನು (೨೧).

ಬಸವಣ್ಣನ ಭಕ್ತಿ ಪವಾಡಗಳನ್ನು ಕೇಳಿ ಜಂಗಮನೊಬ್ಬನು ಆತನನ್ನು ಕಾಣಲು ಅರಮನೆಯ ಬಾಗಿಲಿಕೆ ಬರಲು, ಇದು ಸಮಯವಲ್ಲೆಂದು ರಕ್ಷಕರು ಹೇಳಲು, ನೊಂದು ಅವನು ತಿರುಗಿ ತ್ರಿಪುರಾಂತಕನ ಗುಡಿಗೆ ಹೋಗಲು ಅವನೊಡನೆ ಬಸವೇಶ್ವರನ ಪ್ರಾಣವೂ ಹೋಯಿತು (೨೨). ಆಗ ಬಿಜ್ಜಳನ ದೂತನು ಬಸವಣ್ಣನನ್ನು ಕರೆಯಲು ಬಂದನು. ಬಸವಣ್ಣನು ಇಷ್ಟುಹೊತ್ತೇಕೆ ಮಲಗಿದನೆಂದು ಎಬ್ಬಿಸಹೋಗಲು ಆತನ ದೇಹದಲ್ಲಿ ಅಸುವಿಲ್ಲದುದನ್ನು ಕಂಡು ಜನರೆಲ್ಲ ಗೋಳಿಟ್ಟು ಅಳತೊಡಗಿದರು. ಬಿಜ್ಜಳನ ದೂತರು ಇದನ್ನು ಆತನಿಗೆ ತಿಳಿಸಲು ಅವನು ಕಾಲುನಡಿಗೆಯಲ್ಲಿ ಅಲ್ಲಿಗೆ ಬಂದನು (೨೩-೨೪). ಇದನ್ನೆಲ್ಲ ಸಮ್ಯಜ್ಞಾನದೃಷ್ಟಿಯಿಂದರಿತು ಚೆನ್ನಬಸವನೂ ಅಲ್ಲಿಗೆ ಬಂದನು. ಅವನಿಗೆ ಬಿಜ್ಜಳನು "ಬಸವಣ್ಣನಿಗೆ ಅಕಾಲಮೃತ್ಯು ಏಕೆ ಆಯಿತು?" ಎನಲು, ಚೆನ್ನಬಸವನು ಆದ ಸಂಗತಿಯನ್ನರಿತು ಬಾಗಿಲ ಕಾಯ್ವವರನ್ನು ಆ ಜಂಗಮನನ್ನು ಕರೆಯಲು ಕಳುಹಿದನು (೨೫-೨೬). ಜಂಗಮನು ಬಾಗಿಲಿಕೆ ಬಂದೊಡನೆ ಬಸವನ ಮೈಯಲ್ಲಿ ಪ್ರಾಣಸಂಚಾರವಾಯಿತು. ಅವನು ಸಮೀಪಕ್ಕೆ ಬರಲು ಬಸವನು ಎದ್ದು ಆತನಿಗೆ ನಮಸ್ಕರಿಸಿದನು. ಬಿಜ್ಜಳನು ಬೆರಗಾಗಿ ಚೆನ್ನಬಸವನನ್ನು ಸ್ತುತಿಸಿ ಮನೆಗೆ ಹೋದನು (೨೭).

ಆಗ ಚೆನ್ನಬಸವಣ್ಣನು ಬಸವೇಶನಿಗೆ "ನೀನು ಹೀಗೆ ವೃಥಾ ಪ್ರಾಣಬಿಡುವರೇ? ಜಂಗಮವು ಲಿಂಗದೊಳಗಾದರೆ ಮಾತ್ರ ಪ್ರಾಣಬಿಡಬಹುದು. ನಿನಗೆ ಕೆಲವು ಜಂಗಮಪ್ರಾಣಿಗಳ ಚರಿತ್ರೆಯನ್ನು ಹೇಳುತ್ತೇನೆ. ಶಿವಶರಣರ ಮುಗ ಲಿಂಗಣ್ಣ

ನೆಂಬುವನು ಆಡುವಾಗ ತನ್ನ ಕೊರಳ ಲಿಂಗವನ್ನು ಕಳೆದುಕೊಂಡನು. ಅವನ ತಾಯಿಯು "ಲಿಂಗಣ್ಣಾ, ಕೊರಳ ಲಿಂಗವೆಲ್ಲಿ?" ಎಂದು ಕೇಳಿದೊಡನೆಯೆ ಅವನ ಪ್ರಾಣವು ಹೋಯಿತು (೨೯). ಅವನ ತಾಯಿ ತಂದೆ ಬಳಗದವರು ಅಳುತ್ತಿರಲು ಅವನ ತಮ್ಮನಾದ ಚಿಕ್ಕಲಿಂಗಣ್ಣನು ಲಿಂಗವನ್ನು ಕಂಡು ಅದನ್ನು ತಂದು ಅವನ ಕೊರಳಿಗೆ ಹಾಕಲು ಪ್ರಾಣವು ಮರಳಿ ಬಂದಿತು. ಚಿಕ್ಕಲಿಂಗಣ್ಣನು ಅಣ್ಣನಿಗೆ "ಇದು ಪ್ರಾಣಲಿಂಗಿಗಳ ನಡತೆಯಲ್ಲ" ಎಂದನು (೩೦). ಈ ಮಾತನ್ನು ಅವರ ಗುರುವು ಕೇಳಿ ಆ ರಾತ್ರಿ ನಸುಕಿನಲ್ಲಿ ಚಿಕ್ಕಲಿಂಗಣ್ಣನ ಕೊರಳ ಲಿಂಗವನ್ನು ಕೊಂಡು ಹೂತರಲು ಹೋದನು. ಚಿಕ್ಕಲಿಂಗಣ್ಣನ ಪ್ರಾಣವು ಹೋಗಿರುವುದನ್ನು ಕಂಡು ತಾಯ್ತಂದೆಗಳು ಅಳುತ್ತಿರಲು ಗುರುವು ತಿರುಗಿ ಬಂದು ಅದನ್ನು ಕೊರಳಿಗೆ ಹಾಕಲು ಪ್ರಾಣವು ಪುನಃ ಬಂದಿತು (೩೧).

"ಹಾಗೆಯೇ ಸತ್ಯಣ್ಣನೆಂಬುವನು ತನ್ನ ಸೂಳೆಯೊಡನೆ ರತಿಕೇಳಿಯಲ್ಲಿದ್ದಾಗ ಲಿಂಗವನ್ನು ಮಂಚದ ಕಾಲಿಗೆ ಹಾಕಿದ್ದನು. ಅವನಿಗೆ ಗೊತ್ತಾಗದಂತೆ ನಾವು ಅದನ್ನು ತರಿಸಲು ಅವನ ಪ್ರಾಣವು ಹೋಯಿತು. ಅದನ್ನು ನೋಡಿ ಆ ಸೂಳೆಯ ಪ್ರಾಣವೂ ಹೋಯಿತು (೩೨). ಮತ್ತೆ ಆ ಲಿಂಗವನ್ನು ಅವನ ಕೊರಳಿಗೆ ಹಾಕಲು ಅವನ ಪ್ರಾಣವೂ ಸೂಳೆಯ ಪ್ರಾಣವೂ ಮರಳಿದುವು.

"ಇದೇ ಮೇರೆಗೆ ಪ್ರಹರಿಯ ಮಾರಣ್ಣನೂ ಅವನ ಹೆಂಡತಿಯೂ ತಮ್ಮ ಲಿಂಗಗಳನ್ನು ಮಂಚದ ಕಾಲಿಗೆ ಹಾಕಿ, ಪಲ್ಲಟಿಸಿ ಧರಿಸಿ, ಮಂಚದಿಂದ ಇಳಿಯಲು ಅವರಿಬ್ಬರ ಪ್ರಾಣಗಳೂ ಹೋದುವು. ಇದನ್ನು ಕೇಳಿ ಅವರ ಮನೆಗೆ ನೀರು ತರಲು ಹೋದ ದಾಸಿಯ ಪ್ರಾಣವೂ ಹೋಯಿತು. ಈ ಸುದ್ದಿಯನ್ನು ಕೇಳಿ ನಾವು ಹೋಗಿ ಅವರವರ ಲಿಂಗಗಳನ್ನು ಸರಿಪಡಿಸಲು ಮೂವರ ಪ್ರಾಣಗಳು ಮರಳಿ ಬಂದುವು. ಲಿಂಗಣ್ಣನೂ, ಚಿಕ್ಕಲಿಂಗಣ್ಣನೂ, ಶರಣಸಂಗಿಯಾದ ಸತ್ಯಣ್ಣನೂ, ಮಾರಣ್ಣನೂ, ಆತನ ಅಂಗನೆಯೂ ಪ್ರಾಣಲಿಂಗಿಗಳು (೩೩-೩೫).

"ಘಟ್ಟಿವಾಳಯ್ಯನು ತನ್ನ ಕಾಲಿಗೆ ಲಿಂಗವನ್ನು ಕಟ್ಟಿಕೊಂಡು ನಡೆದಾಡುತ್ತಿರಲು ಜಂಗಮರು ಕಂಡು ಆ ಲಿಂಗವನ್ನು ಕಸಿದುಕೊಂಡರು. ಅವನು ಒಂದು ದೊಡ್ಡ ಗುಂಡನ್ನು ಕೊರಳಿಗೆ ಕಟ್ಟಿಕೊಂಡು ಊರ ಬಾಗಿಲಲ್ಲಿ ನಿಲ್ಲಲು ಜನರು ಸಾಯುವುದು ಕಟ್ಟಾಯಿತು. ಆಗ ಲಿಂಗವನ್ನು ತಿರುಗಿ ಕೊಡಲು ಅವನು ಆ ಹೆಗ್ಗುಂಡನ್ನು ಆ ಲಿಂಗದಲ್ಲಿಯೆ ಅಡಗಿಸಿದನು (೩೬).

"ಘಟ್ಟಿವಾಳನ ಲಿಂಗಪ್ರಾಣಿ, ಆ ವೇಶ್ಯೆದಾಸಿಯರು ಜಂಗಮಪ್ರಾಣಿಗಳು. ಅವರಲ್ಲಿ ನಿನ್ನಂತೆ ಜಂಗಮನು ಮುಳಿದು ಹೋದುದಕ್ಕೆ ಪ್ರಾಣಬಿಡಲಿಲ್ಲ. ಬಂದೆ ನೀನು ನಿನ್ನರಿಯ ಬ್ರಹ್ಮನ್ನು ಮತ್ತು ಸೋದರ ಕೇತಿತಂದೆಗಳೊಡನೆ

ಪ್ರಾಣಬಿಟ್ಟುದುದಕ್ಕೆ ನಾವು ಅಲ್ಲಿನ್ನಿಲ್ಲಿ (೩೭). ಇನ್ನು ಅಖಿಳದೇಶದ ಭಕ್ತ ಮಾಹೇಶ್ವರರು ನಿನ್ನೊಡನೆ ಬಂದ ಅಮರಗಣಗಳನ್ನು ನೋಡಲು ಬರುವರು. ನಿನ್ನ ಪ್ರಾಣವು ಹೀಗೆ ಮಕ್ಕಳಾಟಿಕೆಯಲ್ಲ ಹೋಗಿ ಬರಲೇಕೆ? ಸಾಕು" ಎಂದು ಬಸವಣ್ಣನಿಗೆ ಹೇಳಿ ಚೆನ್ನಬಸವನು ತನ್ನ ಮನೆಯನ್ನು ಸಾರಿ ಸುಖದಿಂದಿದ್ದನು (೩೮).

ಚೆನ್ನಬಸವನೇ ಶಿವನು; ಬಸವನೇ ವೃಷಭನು; ಕನ್ನೇಶಬಿಜ್ಜಳರು ಶಿವಪುರದ ಬಾಗಿಲ ಕಾಯ್ವವರು; ಕಲ್ಯಾಣವೇ ಕೈಲಾಸ; ಅಲ್ಲಿಯ ಶಿವಭಕ್ತರೇ ಪ್ರಮಥಗಣನಿಕರ; ಅಲ್ಲಿಯ ಜನರೇ ಸದಾಚಾರಸಂಪನ್ನರು (೩೯). ಹುಸಿ, ಕಳವು, ಹಾದರ, ದುರ್ನೀತಿ, ಠಕ್ಕು, ದುರ್ವ್ಯಸನ, ದುರಾಚಾರ, ಕೃತಘ್ನತೆ, ಅವಿಶ್ವಾಸ ಮುಂತಾದವು ಚೆನ್ನಬಸವಣ್ಣನಿದ್ದ ರಾಜ್ಯದಲ್ಲಿಲ್ಲ (೪೦). ಗರುವಿಕೆ, ಗಾಂಭೀರ್ಯ, ಗುರುಸೇವೆ, ಸನ್ಮಾರ್ಗ, ನೀತಿ, ಸದಾಶಿವಭಕ್ತಿ, ವಿವೇಕ, ಸೌಭಾಗ್ಯ, ಸದಾರೋಗ್ಯ ಮೊದಲಾದವುಗಳು ಆ ನಗರದಲ್ಲಿ ನೆಲೆಗೊಂಡಿದ್ದುವು (೪೧). [ಅಲ್ಲಿಯ ಜನರ ಬಗ್ಗೆ ಶ್ಲೇಷಮೊದಲಾದುವುಗಳಿಂದ ಕೂಡಿದ ವರ್ಣನೆಯನ್ನು ಕವಿಯು ಮಾಡುತ್ತಾನೆ (೪೨-೪೬).] ಚಂದ್ರನನ್ನು ಸಕಳಂಕನೆನಿಸಿ, ಆದಿಶೇಷನನ್ನು ವಿಷಧಾರಿಯೆನಿಸಿ, ಹಿಮಾಲಯವನ್ನು ಗತಿಹೀನನೆನಿಸಿ, ಆಕಾಶಗಂಗೆಯನ್ನು ಮೂರುಬಟ್ಟೆಯಾಗಿಸಿ, ಸಮುದ್ರವನ್ನು ಭಂಗಯುತನೆನಿಸಿ, ಐರಾವತನನ್ನು ಮತ್ತನೆನಿಸಿ ಚೆನ್ನಬಸವನ ಕೀರ್ತಿಯು ಮೂರು ಲೋಕಗಳಲ್ಲಿ ರಾಜಿಸಿತು (೪೭).

ಚೆನ್ನಬಸವಣ್ಣನೂ, ಬಸವಣ್ಣನೂ ಪವಾಡಪುರುಷರೆಂದು ಐವತ್ತಾರು ದೇಶಗಳ ಶಿವಶರಣರು ಕಲ್ಯಾಣಕ್ಕೆ ನಡೆತಂದರು (೪೮-೫೦). ಈ ಸುದ್ದಿಯನ್ನು ಚೆನ್ನಬಸವನು ಬಸವರಾಜನಿಗೆ ತಿಳಿಸಲು ಕಲ್ಯಾಣವನ್ನು ಸಿಂಗರಿಸಿದನು (೫೧). ಗುಡಿ ತೋರಣಗಳನ್ನು ಕಟ್ಟಿ ರಂಗವಲಿಯನ್ನು ಹಾಕಿ ಸ್ತ್ರೀಯರು ಕಳಸ ಕನ್ನಡಿಗಳನ್ನು ಹಿಡಿದು ನಡೆದರು. ವ್ಯಾಸನ ತೋಳು, ವೃಷಧ್ವಜ, ಸತ್ತಿಗೆಯ ಸಾಲುಗಳು ಕಣ್ಣಿಗೆ ಶೋಭಿಸಿದುವು (೫೨-೫೪). ಬಸವ ದಂಡಾಧೀಶನು ಚೆನ್ನಬಸವನನ್ನೂ ಶಿವಶರಣರನ್ನೂ ಕೂಡಿಕೊಂಡು ಪಟ್ಟಣಕ್ಕೆ ಬಂದ ಶಿವಶರಣರನ್ನು ಉಚಿತ ಮರ್ಯಾದೆಯಿಂದ ಇದಿರುಗೊಂಡನು (೫೫). ಚೆನ್ನಬಸವಣ್ಣನು "ಬಸವದಂಡಾಧೀಶನೇ, ಇವನು ಕಾಶ್ಮೀರಭೂಪಾಲನು; ರಾಣಿಯರನ್ನು ಕೂಡಿಕೊಂಡು ಶ್ರೀಶೈಲದಿಂದ ಇಲ್ಲಿಗೆ ಬಂದಿರುವನು. ಇವನು ಸಕಳೇಸ ಮಾದರಸ; ಕಾಳಿಂಗದೇಶದಿಂದ ಬಂದಿರುವನು. ಇವನು ಮಡಿವಾಳ ಮಾಚರಸ; ಹಿಪ್ಪಲಿಗೆಯಿಂದ ಬಂದಿದ್ದಾನೆ. ಇವನು ಸುಜ್ಞಾನಿದೇವ. ಇವನು ಮಾತಂಗತಮ; ತನ್ನ ಗುರುವಿನ ಮುಂಡಕ್ಕೆ ರುಂಡವನ್ನೂ ರುಂಡಕ್ಕೆ ಮುಂಡವನ್ನೂ ಪಡೆದನು" ಎಂದು ಶಿವಶರಣರ ಪರಿಚಯವನ್ನು

ಮಾಡಿಕೊಟ್ಟನು (೫೬-೫೭). ಅವರನ್ನೆಲ್ಲ ಕರೆದುಕೊಂಡು ಬಸವಣ್ಣನು ತನ್ನ ಅರಮನೆಗೆ ಬಂದು ಅವರಿಗೆ ಮಜ್ಜನ ಭೋಜನಾದಿ ಸತ್ಕಾರಗಳನ್ನು ಮಾಡಿದನು (೫೮). ಹೀಗೆ ಶಿವಭಕ್ತಸಂತತಿಗೆ ಮಠ ಮನೆಗಳನ್ನು ಕೊಡಿಸಿ, ಕೆಲವರಿಗೆ ಸ್ವಾಸ್ತಿಗಳನ್ನು ಮಾಡಿ, ಕೆಲವರಿಗೆ ಕಾಯಕಗಳನ್ನು ಕಟ್ಟಿ ಚೆನ್ನಬಸವನೂ ಬಸವಣ್ಣನೂ ಶಿವತತ್ತ್ವಗೋಷ್ಠಿಯಲ್ಲಿ ಸುಖದಿಂದಿದ್ದರು (೫೯).

೭ ಮಂಚಣ್ಣನ ಚಹಡಿಯ ಸಂಧಿ

ಉದಯಾಚಲದ ಮೇಲೆ ಕಂಗೊಳಿಸುವ ರವಿಯಂತೆ ಕನಕಸಿಂಹಾಸನದ ಮೇಲೆ ಬಿಜ್ಜಳರಾಯನು ಒಂದು ದಿವಸ ಒಡ್ಡೋಲಗದಲ್ಲಿದ್ದನು (೨-೩). ಆತನ ಕೆಲ ಬಲದ ಗದ್ದುಗೆಗಳಲ್ಲಿ ಮಂಡಲಾಧೀಶರೂ ಸಂಗರಧೀರರಾದ ರಾಜಸುಕುಮಾರರೂ ಒಪ್ಪಿದರು (೪-೫). ಹೇಳಿದ ಕೆಲಸವನ್ನು ಪಡಿಹಾರರಿಂದ ಮಾಡಿಸುವಂತಹ, ಅರಸನ ಇಚ್ಛೆಯನ್ನರಿತು ಅದರಂತೆ ವರ್ತಿಸುವಂತಹ, ಯೋಗ್ಯತೆಗೆ ತಕ್ಕಂತೆ ಲಂಚವನ್ನು ಕೊಳ್ಳುವಂತಹ, ಅರಮನೆಯ ಭಾಂಡಾರಕ್ಕೆ ದ್ರವ್ಯವನ್ನು ಒದಗಿಸಿ ಕೊಡುವಂತಹ, ಬಸವೇಶ್ವರನ ಹೊರತು ಮಿಕ್ಕವರಾದ ರಾಜಮಂತ್ರಿಗಳು ಅರಸನ ಹತ್ತಿರ ಇದ್ದರು (೬). ಇದರಂತೆ ಬಿಜ್ಜಳನ ಓಲಗದಲ್ಲಿ ಕರಣಿಕ ಶಿರೋಮಣಿಗಳೂ, ಪಂಡಿತರೂ, ವೈದ್ಯರೂ, ಸತ್ಕವಿಗಳೂ ನೆರೆದಿದ್ದರು (೭-೧೦). ಇದಲ್ಲದೆ ಹೆಂಗಸರೂ, ಬಾಲಕಿಯರೂ, ವಾರನಾರಿಯರೂ ರಾಜಸ್ಥಾನದಲ್ಲಿದ್ದರು (೧೨-೧೪). ಹೆಸರಾದ ಮಹಾವ್ರತರೂ, ರಾವುತರೂ ಅರಸನ ಓಲಗದಲ್ಲಿ ನೆರೆದಿದ್ದರು (೧೫). ಸಚಿವಸಾಮಂತ ಮುಂತಾದ ಇತರ ಸಭಾಸದರು ಆಸ್ಥಾನದಲ್ಲಿ ಕೂಡಿದ್ದರು (೧೬). ಆಗ ಎಲ್ಲರನ್ನು ಪರಾಕೆಂದು ಎಚ್ಚರಿಸುತ್ತಿದ್ದ ಕಂಚುಕಿಗಳ ಅಬ್ಬರದಲ್ಲಿ ಕೊಂಡೆಯರ ಕುಲತಿಲಕನೆಂಬ ಮಂಚಣ್ಣನು ಆ ಸಭೆಗೆ ಬಂದನು (೧೭-೧೯).

ಆತನು ಅರಸನಿಗೆ " ದೇವ, ಕಲ್ಯಾಣದಲ್ಲಿ ನಿಮ್ಮ ರಾಜಾಲಯದ ಹೊರತು ಮಿಕ್ಕೆಡೆಗಳಲ್ಲೆಲ್ಲ ದಿಕ್ಕುದೇಶಗಳಿಂದ ಬಂದ ಶೈವಸಂಕುಲವು ತುಂಬಿಕೊಂಡಿದೆ. ಅವರ ಹಾವಳಿ ಎಲ್ಲ ಕಡೆಯಲ್ಲಿಯೂ ವಿಶೇಷವಾಗಿದೆ. ವೇಶ್ಯಾವಾಟ ಮೊದಲಾದ ಸ್ಥಳಗಳಲ್ಲಿ ಸಹ ಅವರ ಹುಡಿಯಾಟವು ಹೆಚ್ಚಾಗಿದೆ. ನಿಮ್ಮ ಪಾದದಾಣೆ. (೨೦). ಚೆನ್ನಬಸವಣ್ಣನಿಗೆ ಪಟ್ಟವನ್ನು ಕಟ್ಟಿ, ನಾಡೆಲ್ಲವನ್ನು ತಮ್ಮ ಕೈವಶ ಮಾಡಿಕೊಂಡು ನಿಮಗೆ ಏನು ಮಾಡುವರೋ ಎಂಬ ಸಂದೇಹ ಉಂಟಾಗಿದೆ. ಹೀಗೆ ಮೈಮರೆದಿರುವುದು ಉಚಿತವಲ್ಲ (೨೧). ಆದುದರಿಂದ ಅವರನ್ನು ಕರೆಸಿ ಅವರ ಪರಿಯನ್ನು ತಿಳಿದು

ಕೊಳ್ಳುವುದು ಒಳ್ಳೆಯದು. ಕೇವಲ ನಿಮ್ಮ ಚರಣಸೇವಕರಾದ ನಮಗೆ ನಿಮ್ಮ ಸುಖ ದುಃಖದ ಹೊರತು ಬೇರೆ ಸುಖದುಃಖಗಳಿಲ್ಲ. ಸಿರಿವಂತರಾಗಿ ಬಾಳುವವರನ್ನು ಕಂಡು ತಡೆಯಲಾರದೆ ದೂರಿಕೊಳ್ಳುವೆನೆಂದು ತಿಳಿಯ ಬಾರದು" ಎಂದು ಹೇಳಿದನು (೨೩).

ಅರಸನು ಇದನ್ನು ಕೇಳಿ ಬೆರಗಾಗಿ ಚಿಂತೆಯಿಂದ ಕೆಲಹೊತ್ತು ಸುಮ್ಮನಿದ್ದು "ಇನ್ನು ಹೀಗೆ ಸುಮ್ಮನಿರುವುದು ಉಚಿತವಲ್ಲೆಂದು" ಚೆನ್ನಬಸವಣ್ಣ ಬಸವಣ್ಣನವರನ್ನು ಕರೆಯ ಕಳುಹಿದನು. ಅವರು ಬಂದೊಡನೆಯೆ ದುಮ್ಮಾನದಿಂದ ಕುಳ್ಳಿರೆಂದು ಸೂಚಿಸಲು ಅವನ ಅಂತರಂಗವನ್ನು ಅರಿತು ಆತನ ಅರ್ಧಾಸನದಲ್ಲಿ ಇಬ್ಬರೂ ಕುಳಿತರು (೨೪-೨೫). ಮೆಲ್ಲಗೆ ಮಾತು ತೆಗೆದು ಆತನ ಮನಸ್ಸಿನಲ್ಲಿದ್ದುದನ್ನು ಬಹಿಷ್ಕರಿಸಬೇಕೆಂದು ಬಗೆದು ಚೆನ್ನಬಸವಣ್ಣನು "ರಾಯನೇ, ನಿನ್ನ ಭಾವವು ಎಂದಿನಂತಿಲ್ಲ. ನಿನಗಾದ ತಲ್ಲಣವನ್ನು ಮಾಣದೆ ನನ್ನಲ್ಲಿ ಹೇಳು" ಎಂದು ಕೇಳಿದನು (೨೬). ಅವಕ್ಕೆ ಅರಸನು "ಏನು ಹೇಳಲಿ ಚೆನ್ನಬಸವಣ್ಣಾ, ನಿನ್ನ ಮಾವನಾಟವನ್ನು ? ಅಖಿಳದೇಶದಿಂದ ದುಷ್ಟರನ್ನು ಭಕ್ತರೆಂದು ಕೂಡಿಸಿಕೊಂಡು ನಮ್ಮ ಪುರವಲ್ಲಿ ಹಾವಳಿಯನ್ನುಂಟು ಮಾಡಿರುವನು. ನಾವು ಪಟ್ಟಣದ ಭಂಡಾರ ಬೊಕ್ಕಸ ಮೊದಲಾದವುಗಳನ್ನು ಆತನ ಕೈವಶ ಮಾಡಲು ಎಲ್ಲವನ್ನು ಜಂಗಮರಿಗೆ ಕೊಟ್ಟುಬಿಟ್ಟನು. ಎಲ್ಲ ನೋಡಿದರೂ ಜಂಗಮರ ಮಠ ಮನೆಗಳು; ಎಲ್ಲ ನೋಡಿದರೂ ಜಂಗಮರ ಲೂಟಿ, ಸೂಳೆಬಂಟಿಕೆ; ಎಲ್ಲ ನೋಡಿದರೂ ಜಂಗಮರ ಹಾದರ, ಜಂಗಮರ ಕಳವು. ಏನು ಮಾಡುವುದು ? " ಎಂದನು (೨೭-೨೮). ಅದಕ್ಕೆ "ಕಳವು ಹಾದರವೆಂಬವು ಶಿವಭಕ್ತರನ್ನು ಸೇರಲರಿಯವು. ಅದರಲ್ಲಿಯೂ ಬಸವೇಶ್ವರನಿರಲು ಕಲಿ ಸಹ ನಿನ್ನ ಧರಣಿಯನ್ನು ಮುಟ್ಟಲರಿಯದು. ಹೆಚ್ಚು ಮಾತೇನು ? ಕೊಂಡೆಯ ಮಾತು ಕೇಳಿದುದರ ಫಲವಿದು. ಕ್ಷಾತ್ರತಾಮಸವು ಕ್ಷತ್ರಿಯರ ಕುಲಕೆ ಸಹಜ" ಎಂದು ಚೆನ್ನಬಸವೇಶ್ವರನು ರಾಜನಿಗೆ ನುಡಿದನು (೨೯).

೮ ರಾಜನೀತಿಯ ಸಂಧಿ

ಚೆನ್ನಬಸವಣ್ಣನು ಬಿಜ್ಜಳನಿಗೆ "ಜಗತ್ತಿನ ಎಲ್ಲ ಅರಸರನ್ನು ಕ್ಷಾತ್ರತಾಮಸವು ಸೂರ್ಯನನ್ನು ಮೋಡವೂ, ಕನ್ನಡಿಯನ್ನು ಮಾಲಿನ್ಯವೂ, ನೀರನ್ನು ಹಾಂಸೆಯೂ, ಪರಮಾತ್ಮನನ್ನು ಜೀವಭಾವವೂ ಮುಚ್ಚಿಕೊಳ್ಳುವಂತೆ, ಮುಚ್ಚಿಕೊಂಡಿರುವುದು. ಅದನ್ನು ಹೋಗಲಾಡಿಸಲು ರಾಜನೀತಿ ಬೇಕು; ಹೇಳು

ತ್ತೇನೆ; ಆಲಿಸು " ಎಂದನು (೨).

" ಚೆನ್ನಾಗಿ ಪರೀಕ್ಷಿಸಿದರೆ, ಯಾವಾಗಲೂ ವಕ್ರಚರಿತ, ನುಡಿಯುವುದಕ್ಕೆ
ಎರಡು ನಾಲಿಗೆ, ಧನವನ್ನು ಕಾಯ್ದುಕೊಂಡಿರುವಂಥ ಪರಮಲೋಭ, ಭೋಗದಿಂದ
ಕೂಡಿದ ಬಾಳ್ವೆ, ಎರಡನೆಯವರ ಜೀವವನ್ನು ತೆಗೆಯುವ ಕೋಪ ಇವು ಅರಸನಿಗೂ
ಹಾವಿಗೂ ಅನ್ಯೋನ್ಯವಾದಾಗ್ಯೂ ಹಾವಿಗೆ ಕಣ್ಣೇ ಕಿವಿಯಾಗಿಯೂ, ಅರಸನಿಗೆ
ಕಿವಿಯೇ ಕಣ್ಣಾಗಿಯೂ ಇರುವುವೆಂಬ ಭೇದವೊಂದಿದೆ (೩). ಆದುದರಿಂದ ಅರಸ
ರಿಗೆ ಕೊಂಡೆಯರ ನುಡಿಗಳು ಕರ್ಣಕ್ಕೆ ಭೂಷಣವಾಗಿರುತ್ತವೆ. ಚಹಡಿ ಮಾತುಗಳ
ನ್ನು ಕೇಳುವುದರಿಂದ ಅರಸರಿಗೆ ಕೇಡಾಗುವುದು. ಹುಳಿಯಿಂದ ಹಾಲು ಕೆಡುವಂತೆ
ಪಿಸುಣರ ಮಾತಿನಿಂದ ಅರಸರ ರಾಜ್ಯವು ಹಾಳಾಗುವುದು. ಆದುದರಿಂದ ಕೊಂಡೆಯರ
ಮಾತು ಕೇಳುವುದು ಅನುಚಿತವು (೪-೫). ದುರ್ಬೋಧಕರನ್ನೂ, ಕುಲಹೀನ
ರನ್ನೂ, ದುರ್ಜನರನ್ನೂ ಅರಸರು ನಿರಾಕರಿಸತಕ್ಕದ್ದು (೬). ಪರರಿಗೆ ತಾನು
ಮಾಡಿದ ಉಪಕಾರಗಳನ್ನೂ, ತನಗೆ ಪರರಿಂದುಂಟಾದ ಅಪಕಾರಗಳನ್ನೂ ಪರರ
ಮುಂದೆ ಆಡಿಕೊಳ್ಳುವುದು ಉತ್ತಮರ ಲಕ್ಷಣಕ್ಕೆ ಸಲ್ಲದು. ಆದರೆ ಪರರಿಗೆ ತನ್ನಿಂದಾ
ದ ಅಪಕಾರಗಳನ್ನೂ, ಪರರಿಂದ ತನಗುಂಟಾದ ಉಪಕಾರಗಳನ್ನೂ ಹೆರವರ ಎದುರಿ
ಗೆ ಆಡಿತೋರಿಸುವುದು ಉತ್ತಮರ ಲಕ್ಷಣವು (೭). ಧರ್ಮವನ್ನು ಮಾಡುವುದೂ
ಧರ್ಮಿಷ್ಠರನ್ನು ಪಾಲಿಸುವುದೂ, ಧರ್ಮಕ್ಕೆ ಎಡರು ಬಾರದಂತೆ ನೋಡಿಕೊಳ್ಳು
ವುದೂ, ಜಾತಿಧರ್ಮಗಳನ್ನು ತಪ್ಪದೇ ನಡಿಸುವುದೂ, ನೃಪಧರ್ಮದ ರಹಸ್ಯವು
(೮). ಧನವು ಹೆಚ್ಚಾಗಬೇಕೆಂಬ ಆಶೆಯಿಂದ ಚಹಡಿಯ ಮಾತುಗಳನ್ನು ಕೇಳಿ
ಪಾಪವನ್ನು ಸಂಗ್ರಹಿಸುವಂತೆ ಸಂಗ್ರಹಿಸಿದ ಒಡವೆಯು ಶತ್ರುರಾಜರಿಂದ ಬಯಲಾ
ಗುವುದು (೯). ಆದರೆ ದೇಶಪ್ರಜರನ್ನು ನೋಯಿಸದೆ ಒಕ್ಕಲಿಗರಿಂದ ಆರರ
ಲ್ಲೊಂದು ಪಾಲು ತೆಗೆದುಕೊಂಡರೆ ಅರಸರು ಯೋಗ್ಯ ದ್ರವ್ಯಾರ್ಜನೆ ಮಾಡಿದಂತೆ ಆ
ಗುವುದು. ಅದನ್ನು ಸುಪಾತ್ರದಲ್ಲಿ ವೆಚ್ಚ ಮಾಡಿದರೆ ಪುಣ್ಯವುಂಟಾಗುವುದು (೧೦).
ಆಜ್ಞೆಯೆಂಬುದು ಅರಸರಿಗೆ ಪ್ರಾಣವಿದ್ದಂತೆ; ಅದಕ್ಕೆ ಅಪಜಯವಾದರೆ ಅರಸರು
ಮೃತರಾದಂತೆ. ಪ್ರಾಣವಿಲ್ಲದೆ ಯುದ್ಧಕ್ಕೆ ಹೋಗಿ ಸುಮ್ಮನೇ ತಿರುಗಿ ಬಂದರೆ ಅರ
ಸರು ರಾಣಿಯರ ಅಪಹಾಸಕ್ಕೆ ಮಾತ್ರ ಗುರಿಯಾಗುವರು (೧೧). ಮರೆಯು ಹೊ
ಕ್ಕವರನ್ನು ಕಾಯುವುದೂ, ಎದುರಾದ ಶತ್ರುಗಳನ್ನು ಇರಿಯುವುದೂ, ಬೇಡಿದವ
ರಿಗೆ ಬೇಡಿದುದನ್ನು ಕೊಡುವುದೂ ಕ್ಷತ್ರಿಯರ ಧರ್ಮವು. ಹಾಗಿಲ್ಲದ ರಾಜನು
ರಾಜನಲ್ಲ (೧೨). ಹಾಗೂ ಶತ್ರುರಾಜರು ಎಷ್ಟು ಧರ್ಮಿಷ್ಠರಿದ್ದರೂ ಅವರನ್ನು
ಸಾಧಿಸುವಾಗ ಅರಸರು ಕರುಣೆಯನ್ನು ತೋರಿಸತಕ್ಕುದಲ್ಲ (೧೩). ಚತುರೋ
ಪಾಯಗಳಲ್ಲಿ ಸಾಮವೇ ಮುಖ್ಯವಾದುದು; ಉಳಿದವುಗಳಲ್ಲಿ ಸಾಮಾನ್ಯವಾದವುಗಳು

(೧೪). ವೈರಿಗಳ ಕೂಡ ಸಂಧಾನ ಮಾಡುವಾಗ, ಆನೆ ಕುದುರೆಗಳನ್ನು ಏರುವಾಗ, ಯುದ್ಧ ಮಾಡುವಾಗ, ಸ್ತ್ರೀಯರ ಕೇಳಿವಿನೋದದಲ್ಲಿದ್ದಾಗ, ಸ್ನಾನ ಭೋಜ್ಯ ಭೋಜನ ಮೊದಲಾದವುಗಳನ್ನು ಮಾಡುವಾಗ, ಮಲಗುವಾಗ, ವಿವಾಹ ಮುಂತಾದ ಉತ್ಸವಗಳಲ್ಲಿ ತೊಡಗಿದಾಗ ಅರಸರು ಎಚ್ಚರದಿಂದಿರತಕ್ಕದು (೧೫). ವ್ಯಸನಗಳನ್ನು ತ್ಯಜಿಸಿ, ಸುಳ್ಳನ್ನು ಬಿಟ್ಟು, ಜಾತಿಸಂಕರವನ್ನು ಮಾಡದೆ, ಪೃಥ್ವಿಯನ್ನು ಚೆನ್ನಾಗಿ ಪಾಲಿಸುವ ರಾಜನಿಗೆ ಒಳಿತಾಗುವುದು (೧೬). ಹಿರಿಯರು, ದೇವರು, ಗುರುಗಳು ಇವರಲ್ಲಿ ಭಯವೂ, ಪುಣ್ಯಕ್ಷೇತ್ರಗಳಲ್ಲಿ ಭಕ್ತಿಯೂ, ಶರಣರನ್ನು ಎಂತಹರಾದರೂ ಪಾಲಿಸುವ ಧೈರ್ಯವೂ, ಪರಿಜನರಲ್ಲಿ ದಯೆಯೂ, ಸಜ್ಜನರಲ್ಲಿ ಆದರಣೆಯೂ, ಹಿತದವರಲ್ಲಿ ವಿಶ್ವಾಸವೂ ಇರತಕ್ಕದ್ದು (೧೭). ಸಿರಿಯ ಮದದಿಂದ ಸೊಕ್ಕಿ ಮಾನ್ಯರನ್ನು ಧಿಕ್ಕರಿಸಿ, ಪರಿವಾರಕ್ಕೆ ಕಾಲಕಾಲಕ್ಕೆ ಸಂಬಳವನ್ನು ಕೊಡದೆ, ಸಪ್ತಾಂಗ ಸನ್ನಾಹವನ್ನು ಎಚ್ಚರದಿಂದಿಟ್ಟುಕೊಳ್ಳದೆ, ಬಾಂಧವರನ್ನು ಲೆಕ್ಕಿಸದೆ, ಕೈಹಿಡಿದವಳನ್ನು ನಿರಾಕರಿಸಿ ಸೂಳೆಯ ಸಹವಾಸದಲ್ಲಿ ಇರುವಂತಹ ಅರಸರನ್ನು ಜಯಲಕ್ಷ್ಮಿಯು ನಂಬುವುದಿಲ್ಲ (೧೮). ಆದುದರಿಂದ ಯಾವಾಗಲೂ ಸಚ್ಚರಿತ್ರವೂ, ಒಂದೇ ಮಾತೂ, ಅಪರಾಧಕ್ಕೆ ತಕ್ಕ ಕೋಪವೂ, ಚಹಡಿಕಾರರ ಮಾತು ಕೇಳದೆ ಇರುವುದೂ, ಕೇಳಿದರೆ ಅದನ್ನು ಬಲ್ಲವರಿಂದ ನಿರ್ಧರಿಸಿವುದೂ, ಇದೇ ಒಳ್ಳೆಯ ಅರಸರ ಮಾರ್ಗವಾಗಿರುವುದು (೧೯). ಉತ್ತಮ ಮಂತ್ರಿಯಿಂದ ಅರಸರ ಐಶ್ವರ್ಯವು ಹೆಚ್ಚುವುದು. ನಿನ್ನ ಮಂತ್ರಿಯಾದ ಬಸವನು ನಾಡಾಡಿಯಾದ ಮಂತ್ರಿಯಲ್ಲ. ಆದುದರಿಂದ ಐಶ್ವರ್ಯದಿಂದ ಬಾಳುವವರನ್ನು ಕಂಡು ಮತ್ಸರಬಡುವ ಕೊಂಡೆಯರ ಮಾತು ಕೇಳುವುದು ನೀತಿ ಮಾರ್ಗವೇ ?" ಎಂದು ಚೆನ್ನಬಸವೇಶ್ವರನು ನುಡಿದನು (೨೧).

ಆಕ್ಷಣವೇ ಬಿಜ್ಜಳನ ಮನಸ್ಸಿನ ಸಂದೇಹವೆಂಬ ಕತ್ತಲೆಯು ಹರಿದು ವಿವೇಕವೆಂಬ ಹೊಂಬಿಸಿಲು ಪಸರಿಸಿತು. ರಾಜನ ಮುಖವೆಂಬ ಕಮಲವು ಅರಳಿತು. ಭೂವರನ ಸುಜ್ಞಾನವೆಂಬ ಸೂರ್ಯನು ತಲೆದೋರಲು, ಒಡನೆಯೆ ಬಸವರಾಜನ ಮನಸ್ಸು ತನ್ನ ಮನಸ್ಸು ಎಂಬ ಚಕ್ರವಾಕಗಳು ಒಂದಾದುವು (೨೨). ಆಗ ಅರಸನು "ನೀವಲ್ಲದೆ ನನಗೆ ಬೇರೆ ಹಿತದವರಿಲ್ಲೆ"ಂದು ಹೇಳಿ ಬಸವ ಚೆನ್ನಬಸವರನ್ನು ಮನ್ನಿಸಿ ಕಳುಹಿ, ತಾನು ತನ್ನ ರಾಜಾಲಯವನ್ನು ಹೊಕ್ಕನು (೨೩).

೯ ಚಂದ್ರೋದಯದ ವರ್ಣನೆಯ ಸಂಧಿ

ಪಶ್ಚಿಮಾಂಗನೆಯು ಹಿಡಿದ ಇಮ್ಮೈಗನ್ನಡಿಯೋ, ವಾರುಣಿಯ ತಲೆಯ

ಯ ಮಾಣಿಕ್ಯವೋ, ವಡಬಾಗ್ನಿಯಿಂದ ಸಿಡಿದ ಕೆಂಗಿಡಿಯೋ, ಸಮುದ್ರರಾಜನ ಸಂಪತಿಯು ತನ್ನ ಪತಿಗೆ ಆರತಿಯನ್ನೆತ್ತಿ ಚೆಲ್ಲಲು ಅವಳ ಕೈಯಲ್ಲಿದ್ದ ಬಂಗಾರದ ಹರಿವಾಣವೋ ಎಂಬಂತೆ ಅಸ್ತವಾಗುತ್ತಲಿದ್ದ ಸೂರ್ಯಬಿಂಬವು ಶೋಭಿಸಿತು (೨). ಸೂರ್ಯನು ಸಂಜೆಸಹಿತ ಪಶ್ಚಿಮಾಬ್ಧಿಯನ್ನು ಸೇರಲು ಕತ್ತಲೆಯು ಭೂಮಂಡಲವನ್ನು ಮುಸುಕಿಕೊಂಡಿತು (೩-೫). ಅಷ್ಟದಿಕ್ಪಾಲಕರ ನೆರೆಯಲ್ಲಿದ್ದ ಕೈದೀವಿಗೆಗಳಂತೆ, ಅಂಬರದ ರತ್ನವು (ಸೂರ್ಯನು) ಹೋಗಲಾಗಿ ಅದನ್ನು ಹುಡುಕುವುದಕ್ಕಾಗಿ ಲೆಕ್ಕವಿಲ್ಲದ ಕಣ್ಣುಗಳನ್ನು ಆಕಾಶವು ತಾಳಿದಂತೆ ನಕ್ಷತ್ರಗಳು ಗಗನದಲ್ಲಿ ಶೋಭಿಸಲಾರಂಭಿಸಿದುವು (೫-೬). ಕತ್ತಲೆಗೆ ಪಿಡಿಯಾಳಾದ ಸೂರ್ಯನ ಕಿರಣಗಳನ್ನು ಅವು ಅಲ್ಲಲ್ಲಿ ಸೆರೆಯಿಟ್ಟವೋ ಎಂಬಂತೆ ಮನೆಮನೆಗಳಲ್ಲಿ ದೀಪಗಳು ಒಪ್ಪಿದುವು (೮). ಜಗತ್ತಿನಲ್ಲಿ ಕೃಷ್ಣನು ಕರಿದು, ಅವನಿಗಿಂತ ಕಾಳಿ ಕರಿದು, ಅವರಿಬ್ಬರಿಗಿಂತ ನೀಲಗಿರಿಯು ಕಪ್ಪಾದುದು, ಅವೆಲ್ಲವುಗಳಿಗಿಂತ ಕಾಳಮೇಘವು ಕರಿದು, ಇವೆಲ್ಲವುಗಳಿಗಿಂತಲೂ ಕಪ್ಪೆನಿಸಿ ಅಂಧಕಾರವು ಎಲ್ಲೆಡೆಯಲ್ಲ ಪಸರಿಸಿತು (೯). ಇಂತಹ ಸೊಕ್ಕುಗತ್ತಲೆಯಲ್ಲಿ ಜಾರಜಾರೆಯರು ಸಂಕೇತಸ್ಥಾನಗಳಲ್ಲಿ ತಮಗೆ ಬೇಕಾದವರೊಡನೆ ನೆರೆದರು (೧೦-೧೬). ಅಷ್ಟರಲ್ಲಿ ಚಂದ್ರಮಂಡಲವು ಉದಯಿಸಿತು (೧೭). ಕಾಲನೆಂಬ " ಕೌಳಿಗನು " ದೇವೇಂದ್ರನೋಲಗದಲ್ಲಿ ಆಡಲಿಟ್ಟ ರನ್ನದ ಚಂಡು ಮೊದಲು ಬಂಗಾರದ ಚೆಂಡಾಗಿ, ಆಮೇಲೆ ಮುತ್ತಿನ ಚೆಂಡಾದಂತೆ ಚಂದ್ರಬಿಂಬವು ಶೋಭಿಸಿತು; ಹಾಗೂ ಮೊದಲು ಪೂರ್ವಾದ್ರಿಯೆಂಬ ದೇವಗ್ರಹದ ಮೇಲಿಟ್ಟ ಮಣಿಗಳಸದಂತೆ, ಮುಂದೆ ಬಂಗಾರದ ಕಳಸದಂತೆ, ಕೊನೆಗೆ ಬೆಳ್ಳಿಯ ಕಳಸದಂತೆ ಆ ಚಂದ್ರಬಿಂಬವು ಅನುಕ್ರಮವಾಗಿ ಚೆಲ್ವಾಯಿತು (೧೮).

ಆ ಬೆಳದಿಂಗಳಲ್ಲಿ ಪರ್ವತಗಳೆಲ್ಲವೂ ಬೆಳ್ಳಿಯ ಬೆಟ್ಟದಂತೆಯೂ, ಹಕ್ಕಿಗಳೆಲ್ಲವೂ ಸ್ವಚ್ಛಹಂಸಗಳಂತೆಯೂ, ಬಗೆಬಗೆಯ ಹೂಗಳೆಲ್ಲವೂ ಮಲ್ಲಿಗೆಯ ಹೂಗಳಂತೆಯೂ, ಜಗತ್ತಿನೊಳಗಿನ ಆನೆಗಳೆಲ್ಲವೂ ಐರಾವತದಂತೆಯೂ, ಪಾರ್ವತಿಯು ಸರಸ್ವತಿಯಂತೆಯೂ, ಯಮುನೆಯು ದೇವಗಂಗೆಯಂತೆಯೂ, ಕಂಗೊಳಿಸುತ್ತಿರಲು, ಚಂದ್ರನ ಬೆಳಕನ್ನು ಹೊಗಳಲು ಯಾವ ಕವಿಗೆ ಸಾಧ್ಯವು ? (೨೨). ಬ್ರಹ್ಮನು ಸಕಲ ಭೂಮಿಯನ್ನೂ ಅದರೊಳಗಿನ ದೇವಾಲಯ ಅರಮನೆಗಳನ್ನೂ ಬೆಳ್ಳಿಯಿಂದ ನಿರ್ಮಿಸಿದಂತೆ ಜಗತ್ತಿನ ವರ್ಣಗಳೆಲ್ಲ (ಜಾತಿಗಳು ಅದ್ವೈತಮತದಲ್ಲಿ ಐಕ್ಯವಾಗುವಂತೆ) ಧವಳಾದ್ವೈತವಾದುವು. ಹಾಗೂ ಮುತ್ತು ತುಂಬಿದ ಸ್ಫಟಿಕದ ದೊಡ್ಡ ಭರಣಿಯಂತೆ ಬ್ರಹ್ಮಾಂಡವು ತೋರಲು ಅದರ ಬಾಯಿಗೆ ಮುಚ್ಚಿದ ಕರ್ಪೂರದ ಹಲ್ಲೆಯಂತೆ ಚಂದ್ರನು ತೋರಿದನು (೨೩). ಚಂದ್ರನೆಂಬ ಬಟ್ಟ ಕಾಗದದ ಮೇಲೆ ಕಸ್ತೂರಿಮಸಿಯಿಂದ ಓಂಕಾರವನ್ನು ಸ್ಮರನು

ಬರೆದನೋ, ಅಥವಾ ತಮವು ಭೀತಿಯಿಂದ ದಿಕ್ಕುಗೆಟ್ಟು ಚಂದ್ರನ ಹೊಟ್ಟೆಯಲ್ಲಿಯೇ ಹುಟ್ಟಬೇಕೆಂದು ಅಲ್ಲಿ ಸೇರಿತೋ, ಇಲ್ಲವೆ ಚಂದ್ರನೆಂಬ ಅಮೃತಕಲಶದ ಬಾಯಿಗೆ ಇಂದ್ರನು ಆಶೆಯಿಂದ ಅರಗಿನ ಮುದ್ರೆಯನ್ನು ಇಟ್ಟಿರುವನೋ ಎಂಬಂತೆ ಚಂದ್ರಬಿಂಬದ ನಡುವಣ ಕಲಂಕವು ಹೊಸಪರಿಯಾಗಿ ಶೋಭಿಸಿತು. (೨೫).

೧೦ ರಾತ್ರಿವಿಹಾರದ ಸಂಧಿ

ಈ ಬಗೆಯ ಚಂದ್ರೋದಯವನ್ನು ಕಂಡು ಬಿಜ್ಜಳಮಹಾರಾಜನು ಆ ಕಾಲದಲ್ಲಿ ಪಟ್ಟಣದಲ್ಲಿ ವಿಹಾರ ಮಾಡಬೇಕೆಂದು ಬಗೆದು ನಾಗರಿಕ ವಿಟ ಪೀಠ ವರ್ಧನ ವಿದೂಷಕರೊಡನೆ ಪಣ್ಯವೀಧಿ (ಸೂಳೆಗೇರಿ) ಗೆ ಬರಲು ಅಲ್ಲಿ ನೆರೆದ ಹೂವಿನ ಸಂತೆಯು ಕಾಮನ ಬಾಣಗಳ ಸಮೂಹದಂತೆ ತೋರುತ್ತಿತ್ತು (೨). ಇದು ಕೇದಿಗೆಯ ವಾಸನೆ, ಇದು ಮಲ್ಲಿಗೆಯ ಕಂಪು, ಇದು ಜಾತಿಪುಷ್ಪಗಳ ಗುಂಪು, ಇದು ಸಂಪಗೆಯ ಸೌರಭವೆಂದು ಅಲ್ಲಿಯ ಮಾಲೆಗಾರ್ತಿಯರು ಹೇಳುತ್ತಿದ್ದಂತೆ ತೋರುವ ಗುಂಗಿಯ ಹುಳಗಳ ಸ್ವರದೊಡನೆ ಸುಳಿಗಾಳಿಯು ವಾಸನೆಗಳನ್ನು ಬೇರೆ ಬೇರೆ ಮಾಡುತ್ತ ಅಲ್ಲಿ ಸುಳಿಯುತ್ತಿತ್ತು (೩). ಮುಂದೆ ಅವರು ಪರಿಮಳದ ಸಂತೆಗೆ ಬಂದರು (೫).

ಪರಿಮಳದ್ರವ್ಯಗಳನ್ನು ಮಾರುತ್ತಿದ್ದ ಗಟ್ಟಿವಳ್ತಿಯರು ಕಸ್ತೂರಿಯನ್ನು ಕೈಯಲ್ಲಿ ಹಿಡಿದು ಕುಂಕುಮವಾಗುವಂತೆ ಮಾಡಿಯೂ, ನಕ್ಕು ಅದನ್ನೇ ಕಪ್ಪುರವಾಗುವಂತೆ ಮಾಡಿಯೂ, ಮೆಯ್ಯ ಸಮೀಪಕ್ಕೆ ಹಿಡಿದು ಹರಿಚಂದನದಂತೆ ತೋರುವಂತೆ ಮಾಡಿಯೂ, ಕಟಾಕ್ಷದಿಂದ ಅದನ್ನೇ ಗಂಧದ ಕೊರಡಿನಂತೆ ಆಗಿಸಿಯೂ, ಹಿಡಿದ ಒಂದು ವಸ್ತುವನ್ನು ನಾನಾ ಬಗೆಯಾಗಿ ತೋರಿಸಿ ಮಾರುತ್ತ ತಮ್ಮ ಹೊಟ್ಟೆಯೊಳಗಿನ ಅನ್ಯತವನ್ನೇ ಕನ್ನಡಿಸುವಂತೆ ತೋರುತ್ತಿದ್ದರು (೬). ಆ ಕೇರಿಯೊಳಗಿನ ತರುಣಿಯರ ಹೂಮುಡಿಯ ಕಂಪನ್ನು ಧರಿಸಿ ಸೌರಭ್ಯಧರನೆನಿಸಿಕೊಂಡು ಅವರ ಕುಚದ ಕುಂಕುಮದ ಕೆಸರೊಳಗೆ ಬಿದ್ದು ಬರಲಾರದೆ ಮಾಂದ್ಯವುಳ್ಳವನಾಗಿ ಸುರತಸೌಖ್ಯದಲ್ಲಿ ತಣಿದ ಸ್ತ್ರೀಯರ ಉಸಿರ ತಂಪನ್ನು ತಳೆದು ಶೀತಲನಾಗಿ ಮಂದಮಾರುತನು ರಮ್ಯವಾಗಿ ಅಲ್ಲಿ ಸುಳಿಯುತ್ತಿದ್ದನು (೭). ಹೂವಿನ ಬಾಣವೂ ಕಬ್ಬಿನ ಬಿಲ್ಲೂ ಅವರನ್ನು ಜಯಿಸಲಿಕ್ಕೆ ಬಾರವೆಂದು ಅವುಗಳನ್ನು ಬಿಟ್ಟು ಕಾಮನು ಜೋಕಾಲಿಯೆಂಬ ಬಿಲ್ಲಿನಿಂದ ಸುದತಿ (ಸ್ತ್ರೀ) ಎಂಬ ಬಾಣವನ್ನು ಹೂಡಿ ಇಂದ್ರ ಲೋಕಕ್ಕೆ ಪಾ

ರಿಸುವನೋ ಎಂಬುವಂತೆ ವಿಟನೊಬ್ಬನು ಒರ್ವ ತರುಣಿಯನ್ನು ಉಯ್ಯಾಲದಲ್ಲಿ ಕೂರಿಸಿ ತೂಗುತ್ತಿದ್ದನು (೬೩). ಹೀಗೆಯೇ ಇನ್ನೂ ಅನೇಕ ಬಾಲೆಯರು ಅಂಬರದ ಮಿಂಚಾಡುವಂತೆ ಉಯ್ಯಾಲಾಟವನ್ನು ಆಡುತ್ತಿದ್ದರು (೬೪-೬೫). ಒಬ್ಬಳು ಕಮಲದಂತೆ ಮುಖವುಳ್ಳವಳೂ, ಎರಳಂತೆ ಕಣ್ಣುಗಳುಳ್ಳವಳೂ, ಕಪ್ಪು ಕೂದಲುಳ್ಳವಳೂ, ಕೋಗಿಲೆಯ ಸ್ವರವುಳ್ಳವಳೂ, ಹಂಸದಂತೆ ಮಂದಗತಿವುಳ್ಳವಳೂ, ವೃತ್ತ ಕುಚವುಳ್ಳವಳೂ, ಬಿಂಬಾಧರವುಳ್ಳವಳೂ, ಲಜ್ಜೆಯುಳ್ಳವಳೂ ಆಗಿ ಬಿಳಿಯ ಬಟ್ಟೆಯನ್ನು ಧರಿಸಿ ತನ್ನ ಮನೆಯ ಒಳಬಾಗಿಲಲ್ಲಿಯೇ ಇದ್ದುದನ್ನು ಕಂಡು ನಾಗರಿಕರು " ಇವಳು ಪದ್ಮಿನಿ " ಎಂದು ಹೇಳಿದರು (೭೨). ಹೀಗೆಯೆ ಪೀಠವರ್ಧನ, ವಿಟ, ವಿದೂಷಕರು ಕ್ರಮವಾಗಿ ಚಿತ್ತಿನಿ, ಶಂಖಿನಿ, ಹಸ್ತಿನಿಯರನ್ನು ಕ್ರಮವಾಗಿ ತೋರಿಸಿದರು (೭೩-೭೫). ಹಾಗೆಯೆ ಮುಂದಕ್ಕೆ ನಡೆದು ನಾನಾತರದ ವಿಟರನ್ನೂ ಬೆಲೆವೆಣ್ಣುಗಳನ್ನೂ ನೋಡುತ್ತ ಸಾಗಿದರು (೭೬-೭೮). ಈ ರೀತಿಯಾಗಿ ಬೆಳಗಿನ ಜಾವದ ಕೋಳಿಯು ಕೂಗುವವರೆಗೆ ಅವರು ವಿಹರಿಸಿದರು. ಆಗ ತುಂಬಿಗಳಿಗೆ ಔತಣವನ್ನು ಕೊಟ್ಟು, ಚಕ್ರವಾಕಗಳಿಗೆ ರತಿಯೊಸಗೆಯನ್ನು ಬೀರಿ, ಕಿಡಿಕಿಯಲ್ಲಿ ಹೊಕ್ಕು ಮಲಗಿದವರನ್ನು ಎಚ್ಚರಿಸಿ, ಕೋಳಿಗಳ ನಾಲಗೆಯನ್ನು ಅಲುಗಿಸಿ, ಕಮಲಗಳಿಗೆ ಮಿತ್ರ(ಸೂರ್ಯ)ನ ಬರುವಿಕೆಯನ್ನು ತಿಳಿಸಿ, ಕನ್ನೈದಲುಗಳಿಗೆ ದುಃಖವನ್ನುಂಟುಮಾಡಿ ಮುಂಜಾವಿನ ತಂಗಾಳಿಯು ಸುಳಿಯಿತು (೭೯-೮೦). ಅಷ್ಟರಲ್ಲಿ ಗಾಳಿಯ ಹೊಡೆತದಿಂದ ಆಕಾಶಕ್ಕೆ ಹಾರಿದ ಸಮುದ್ರದೊಳಗಿನ ಬಟ್ಟನ್ನ ಮುತ್ತಿನ ಚಿಪ್ಪೋ, ದೇವನದಿಯಲ್ಲಿ ರಾತ್ರಿಯ ಮಂಜು ಸೇರಿದ್ದರಿಂದ ಬಾಡಿದ ಕಮಲದ ಹೂವೋ, ಬೆಳದಿಂಗಳೆಂಬ ತನಿಹಾಲನ್ನು ಕುಡಿಯುವಾಗ ಅದು ತೀರಲು ಮನಸ್ಸಿನಲ್ಲಿಯೇ ಕಂದಿದ ಹಂಸಮರಿಯೋ, ಎಂಬಂತೆ ಪಶ್ಚಿಮಾದ್ರಿಯ ಶಿಖರದಲ್ಲಿದ್ದ ಚಂದ್ರನು ಸೂರ್ಯೋದಯಕಾಲದಲ್ಲಿ ನಿಸ್ತೇಜನಾಗಿ ತೋರಿದನು (೮೧). ಬಿಜ್ಜಳನು ಆ ಸಮಯದಲ್ಲಿ ತನ್ನ ಸಖರನ್ನೆಲ್ಲ ಕೂಡಿಕೊಂಡು ತನ್ನ ಅರಮನೆಗೆ ಬಂದು ಅವರನ್ನೆಲ್ಲ ಕಳಿಸಿದನು. ಅದೇ ಕಾಲಕ್ಕೆ ಬಸವ ಚೆನ್ನಬಸವರು ಲಕ್ಷದಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ದಾಸೋಹವನ್ನು ಮಾಡಿಸಿ ಸುಖದಿಂದಿದ್ದರು (೮೨).

೧೧ ಕಲ್ಯಾಣದೇಶದ ವರ್ಣನೆಯ ಸಂಧಿ

ಕಲ್ಯಾಣ ಪಟ್ಟಣದಲ್ಲಿದ್ದ ಬಸವ ಚೆನ್ನಬಸವೇಶ್ವರರನ್ನು ಕಾಣುವುದಕ್ಕೆಂದು ತ್ರಿಪುರಪ್ರಭುವು ಸೊನ್ನಲಾಪುರದ ಸಿದ್ಧರಾಮೇಶ್ವರನನ್ನು ಕರೆದುಕೊಂಡು ಹೊರಟ

ನು (೭). ಆ ದೇಶವು ಗ್ರಾಮಪತ್ತನಸಮೂಹಗಳಿಂದಲೂ, ಕೊಳ ಕೆರೆ ಕಾಲುವೆಗಳಿಂದಲೂ, ಬೆಳೆಮೆಳೆಗಳಿಂದಲೂ ಬಹು ಚೆಂದವಾಗಿ ಶೋಭಿಸುತ್ತಿತ್ತು (३-೪). ಕಮಲಗಳಿಲ್ಲದ ಸರೋವರಗಳೂ, ಫಲಗಳಿಲ್ಲದ ಮಾಮರಗಳೂ, ಮಂಜುಳ ಧ್ವನಿಯಿಲ್ಲದ ಗುಂಗಿಯ ಹುಳಗಳೂ ಆ ನಾಡ ಬನಗಳಲ್ಲದ್ದಿಲ್ಲ (೫). ಹಲವು ಕಾಲ ಬೆಳೆದುದೇನು ಫಲ? ಕಡೆಗೆ ತಲೆ ಕೊಯ್ಸಿಕೊಳ್ಳುವುದು ಬಿಡದು ಎಂದು ನಾಚಿ ತಲೆ ಬಾಗಿದುವೋ ಅಥವಾ ತನ್ನ ನೋವನ್ನು ನೋಡದೆ ಪ್ರತಿದಿನವು ಪುತ್ರ ಮೋಹದಿಂದ ತಮ್ಮನ್ನು ಸಲುಹಿದ ಭೂದೇವಿಗೆ ಭಕ್ತಿಯಿಂದ ತಲೆಬಾಗಿದುವೋ ಎಂಬಂತೆ ಬತ್ತದ ಗದ್ದೆಗಳು ಕಣ್ಣಿಗೆ ರಂಜಿಸಿದುವು (೧೦). "ತುಂಡುತುಂಡಾಗಿ ಕತ್ತರಿಸಿ, ಗಾಣದಲ್ಲಿ ಅರೆದು, ಹಿಂಡಿ, ರಸವನ್ನು ತೆಗೆದು, ಕಾಸಿ, ಕಾಲಿನಿಂದ ತುಳಿಯಲು, ಏನು ಮಾಡಿದರೂ ಸುಗುಣವನ್ನು ಬಿಡದ ಸುಜನರಂತೆ ಖಂಡಸಕ್ಕರೆಯಾದೆವು; ನಮ್ಮನ್ನಾಳುವಂತಹ ಕಾಮನಿಗೆ ಎದುರಾದವರನ್ನು ದಿಂಡುರುಳಿಸಿದೆವು" ಎಂದು ತಮ್ಮೊಳಗೆ ಉದ್ದಂಡತೆಯ ಬಿರುದನ್ನು ಧರಿಸಿದಂತೆ ಸೋಗೆ ಹಸುರನ್ನು ತಾಳ್ದ ಕಬ್ಬು ಕಣ್ಣಿಗೆ ಶೋಭಿಸಿತು (೧೧). ಅಕ್ಕಿಯ ಅನ್ನ, ತುಪ್ಪದ ಹರವಿ, ಪಚ್ಚಡಿ, ಶಿಕರಣೆ, ಹಾಲು, ಮೊಸರು ಮೊದಲಾದ ಆಹಾರ ಸಾಮಗ್ರಿಗಳನ್ನು ಉಂಡುಂಡು ಹೋಗುವ ಹಾದಿಕಾರರಿಂದ ಕೂಡಿದ ಅನ್ನಸತ್ರಗಳು ಆ ಹಾದಿಯಲ್ಲಿ ರಂಜಿಸಿದುವು (೧೩). ಅಲ್ಲಲ್ಲಿಗೆ ಬಾಯಾರಿದ ಹಾದಿಕಾರರ ಸಲುವಾಗಿ ಇಟ್ಟ ಅರವಟ್ಟಿಗೆಗಳಲ್ಲಿ ಸುಂದರಿಯರಾದ ಸ್ತ್ರೀಯರು ನೀರು ಹಣಿಸುತ್ತಿದ್ದರು (೧೪-೧೬). ಪ್ರಭು ಸಿದ್ಧರಾಮರು ಹಾದಿಯಲ್ಲಿ ಹೋಗುತ್ತಿರಲು ದೂರದಲ್ಲಿ ಕಲ್ಯಾಣ ನಗರವು ಕಣ್ಗೆ ಇಂಬಾಗಿ ತೋರುತ್ತಿತ್ತು (೧೯). ಎಲ್ಲ ಬಗೆಯ ಹಣ್ಣು ಹಂಪಲಗಳ ಗಿಡಗಳಿಂದಲೂ ನಾನಾಬಗೆಯ ಹೂಗಳ ಗಿಡಬಳ್ಳಿಗಳಿಂದಲೂ ಆ ಪಟ್ಟಣದ ಉಪವನವು ಶೋಭಾಯಮಾನವಾಗಿತ್ತು (೨೦-೨೪). ಈ ವನವು ಪ್ರತಿದಿನವು ಪಾದರಿಯರಲ್ಲಿ ಸ್ನೇಹವುಳ್ಳದ್ದು, ಮಧುಪ (ಗುಂಗಿಯಹುಳ, ಕುಡಕ) ರಲ್ಲಿಯೂ ಪುಷ್ಪಿತೆಯರಲ್ಲಿಯೂ ಸಂಗವುಳ್ಳದ್ದು, ಇದನ್ನು ಸೋಂಕಿದರೆ ತನಗೆ ಸದ್ಗತಿಯಿಲ್ಲವೆಂದು ಸೂರ್ಯನು ತನ್ನ ಕಿರಣಗಳನ್ನು ಅದರಲ್ಲಿ ಹೋಗಗೊಡಲಿಲ್ಲವೋ ಎಂಬಂತೆ ದಟ್ಟವಾಗಿ ಬೆಳೆದ ಮರಗಳಿಂದ ವನದಲ್ಲಿ ಕತ್ತಲೆ ಕವಿದಿದ್ದಿತು (೨೫). ಮುಂದೆ ನಡೆತರಲು ಆ ಪಟ್ಟಣ ಹೊರವೊಳಲು ಚೆನ್ನಾಗಿ ಮೆರೆಯಿತು (३೦). ಆ ಪಟ್ಟಣದ ಸುತ್ತಲು ಬಹು ಉನ್ನತವಾದ ಕೋಟೆಯು ಸುತ್ತುವರೆದಿದ್ದಿತು. ನಾಲ್ವತ್ತೆಂಟು ಯೋಜನ ವಿಸ್ತೀರ್ಣವಾದ ಆ ಪಟ್ಟಣಕ್ಕೆ ಮುನ್ನೂರರವತ್ತು ಹೆಬ್ಬಾಗಿಲುಗಳು ಶಶಿಸೂರ್ಯ ವೀಥಿಗಳೆಂಬ ನೂರಿಪ್ಪತ್ತು ಬೀದಿಗಳು ಇದ್ದುವು (३೪). ಆ ಪಟ್ಟಣದಲ್ಲಿ ನಾನಾ ಬಗೆಯ ವಾದ್ಯಗಳು ಮೊಳಗುತ್ತಿದ್ದುವು (३೫). ಪಣ್ಯವೀಥಿಯನ್ನು

ಮಾಂಟಿ ಕಂಚುಕಾರರ ಪಸರ, ಗಂಧಿಗರ ಪಸರ, ಜವಳಿ ಪಸರ, ಬೆಳ್ಳಿಬಂಗಾರದ ಪಸರ ಇವುಗಳನ್ನೆಲ್ಲ ನೋಡುತ್ತ ಅವರು ನಡೆದರು (೩೬-೪೬). ಆ ಪಟ್ಟಣದಲ್ಲಿ ಬಿಜ್ಜಳರಾಜನು ಸಕಲ ಸೌಭಾಗ್ಯದಿಂದ ಇರುತ್ತಿರ್ದನು (೪೮). ಈ ರೀತಿಯಾಗಿ ಶೋಭಿಸುತ್ತಿದ್ದ ಕಲ್ಯಾಣ ಪಟ್ಟಣವನ್ನು ನೋಡುತ್ತ ಬಸವೇಶ್ವರನ ಅರಮನೆಗೆ ಪ್ರಭುಸಿದ್ಧರಾಮರು ಬಂದರು (೪೯). ಆಗ ಹಡಪದಪ್ಪಣ್ಣನು ಶಿವಪೂಜೆ ಮಾಡುತ್ತಿದ್ದ ಬಸವೇಶ್ವರನಿಗೆ ಅವರು ಬಂದ ಸುದ್ದಿಯನ್ನು ನಿವೇದಿಸಲು ಬಸವೇಶ್ವರನು ಅವರನ್ನು ಕರೆತರ ಹೇಳಿದನು. ಅವನು ಅದೇ ರೀತಿ ಪ್ರಭುವನ್ನು ಕರೆಯಲು ರಾಜಾಲಯಕ್ಕೆ ನಾವು ಬರುವುದಿಲ್ಲವೆಂದು ಹೇಳಿದರು. ಚೆನ್ನಬಸವಣ್ಣನು ಇದನ್ನೆಲ್ಲ ಮನಸ್ಸಿನಲ್ಲಿಯೇ ತಿಳಿದು ಬಸವೇಶ್ವರನಲ್ಲಿಗೆ ಬಂದು, “ ಎಲೈ ಮರುಳೇ, ಬಸವೇಶ್ವರಾ, ಪ್ರಭುಸಿದ್ಧರಾಮರು ನಿನ್ನ ಬಾಗಿಲಕ್ಕೆ ಬಂದಿರಲು ನೀನು ಅಹಂಕಾರದಿಂದ ಈ ರೀತಿ ಇರಬಹುದೇ ” ಎಂದು ಕೇಳಿದುದಕ್ಕೆ ಬಸವಣ್ಣನು ಧೈರ್ಯಗೆಟ್ಟವನಾಗಿ, ಕಳವಳಿಸಿ “ ನನಗೆ ಗತಿಯಾವುದು ” ಎಂದು ಚೆನ್ನಬಸವಣ್ಣನನ್ನು ಬೇಡಿಕೊಳ್ಳಲು, ಅದಕ್ಕೆ ಚೆನ್ನಬಸವಣ್ಣನು “ ಬಸವೇಶ್ವರಾ, ಪ್ರಭುವು ನಿನ್ನ ಭಕ್ತಿಗೆ ಮೆಚ್ಚಿ ನಿನ್ನ ಬಾಗಿಲಕ್ಕೆ ಬಂದಿರುವನು ; ಹಾಗೇ ಹೋಗಲರಿಯನು, ಹೆದರಬೇಡ ” ಎಂದು ಹೇಳಿ ನಾನಾಗಣಂಗಳೊಡನೆ ಕೂಡಿಕೊಂಡು ಪ್ರಭುವನ್ನು ಒಲಿಸಿ ಬಸವನ ಅರಮನೆಗೆ ಕರೆತಂದನು (೫೦-೫೩). ಉಚಿತಾಸನದಲ್ಲಿ ಪ್ರಭುವನ್ನು ಕುಳ್ಳಿರಿಸಿ ಅರ್ಘ್ಯಪಾದ್ಯಾದಿ ಸತ್ಕ್ರಿಯೆಗಳಿಂದ ಪೂಜಿಸಿ ಬಸವನು ನುತಿಸುತ್ತಿರಲು, ಪ್ರಭುವು ಎಲ್ಲರನ್ನು ಸಮಾಧಾನಪಡಿಸಿ ಶಿವತತ್ತ್ವಾನುಭವವನ್ನು ಅವರಿಗೆಲ್ಲ ತಿಳಿಸಿದನು (೫೪).

ದ್ವಿತೀಯ ಕಾಂಡ

೧೨ ಏಕಪಾದಲೀಲೆಯ ಸಂಧಿ

ಪ್ರಭುವು ಬಸವಣ್ಣನನ್ನು ಕೂಡಿಕೊಂಡು ಗಣಸಮೂಹದೊಡನೆ ಚೆನ್ನಬಸವೇಶ್ವರನ ಅರಮನೆಗೆ ಬಂದನು. ಅಲ್ಲಿಯ ಸಭಾಮಂಟಪದಲ್ಲ ಎಲ್ಲರೊಡನೆ ಕುಳಿತುಕೊಂಡು ಚೆನ್ನಬಸವೇಶನೊಡನೆ, “ ಇದೇನು? ನಮ್ಮೆಲ್ಲರನ್ನು ಕರೆತಂದು ಒಳಗೆ ಕರೆದುಕೊಂಡು ಹೋಗದೆ ಇಲ್ಲಿಯೇ ಕುಳ್ಳಿರಿಸಿದ ಕಾರಣವೇನು? ” ಎಂದು ಬೆಸಗೊಳ್ಳಲು ಚೆನ್ನಬಸವಣ್ಣನು “ ಜಗತ್ಪಾವನನೇ ಷಟ್ಸ್ಥಲ ಮಾರ್ಗವನ್ನು ತಿಳಿಯದಿದ್ದವರನ್ನು ಇಲ್ಲಿಂದ ಒಳಗೆ ಬಿಡುವುದಾಗುವುದಿಲ್ಲ (೨-೩). ಈ ಸಿದ್ಧರಾಮೇಶನಿಗೆ ಅಂಗದಲ್ಲಿ ಇಷ್ಟಲಿಂಗವಿಲ್ಲವಾದುದರಿಂದ ನಾವು ಒಳಗೆ ಹೋಗದೆ ಇಲ್ಲಿಯೇ ಕುಳಿತೆವು ” ಎಂದನು. ಆ ನುಡಿಗೆ ಸಿದ್ಧರಾಮೇಶನು “ ನಾನು ಪ್ರಾಣಲಿಂಗಿ, ನನಗೇಕೆ ಇಷ್ಟಲಿಂಗವೆಂ ” ದು ಕೇಳಿದನು (೪). ಚೆನ್ನಬಸವಣ್ಣನು “ ಇದು ಮನದ ಭ್ರಾಂತಿ. ತನುತ್ರಯವನ್ನು ಹಿಡಿದ ಬಳಿಕ ತ್ರಿವಿಧ ಲಿಂಗವನ್ನು ಧರಿಸಬೇಕು. ನಿನಗೆ ಇಷ್ಟಲಿಂಗವಿಲ್ಲದೆ ಉಳಿದ ಎರಡು ಲಿಂಗಗಳ ಭೇದವು ಹೇಗೆ ತಿಳಿಯಿತು? ” ಎನ್ನಲು, ಸಿದ್ಧರಾಮೇಶನು, “ ಅಂಗಮೂರುಳ್ಳವರಿಗೆ ಮೂರು ಲಿಂಗಗಳು ಬೇಕು. ನಾನು ಎಲ್ಲರಂತಲ್ಲ. ನನ್ನ ಕಾಯವೇ ಪೀಠವು; ಈ ಪ್ರಾಣವೇ ಲಿಂಗವು ” ಎಂದನು. ಚೆನ್ನಬಸವೇಶ್ವರನು, “ ಇಷ್ಟಲಿಂಗವಿಲ್ಲದವನು ಭವಿ, ಶೈವನಂಗವಲ್ಲದೆ ವೀರಶೈವನಲ್ಲ ” ಎಂದು ಹೇಳಿದನು. ಆ ಮಾತಿಗೆ ಸಿದ್ಧರಾಮೇಶನು, “ ಶೈವವೇ ಎಲ್ಲಬಗೆಯ ಶೈವಗಳಿಗೆ ಆಧಾರವಾಗಿರುವುದು. ಆ ಮಹಾಶೈವದಿಂದಲೇ ವೀರಶೈವ ಮೊದಲಾದುವುಗಳು ಉಂಟಾದುವು ” ಎಂದೆನಲು, ಚೆನ್ನಬಸವೇಶನು “ ಶೈವದಾದಿಯ ಸೃಷ್ಟಿಯೇ ಬೇರೆ; ವೀರಶೈವದ ಸೃಷ್ಟಿಯೇ ಬೇರೆ ” ಎಂದನು. ಸಿದ್ಧರಾಮನು “ ಹಾಗಿದ್ದರೆ ಶೈವದಾದಿಯನ್ನು ಎನಗೆ ವಿಸ್ತರಿಸಿ ಹೇಳು ” ಎನ್ನಲು ಚೆನ್ನಬಸವಣ್ಣನು ಹೇಳತೊಡಗಿದನು (೫-೭).

“ ಎಲೈ ಸಿದ್ಧರಾಮೇಶನೇ ಆಲಿಸು, ‘ ಭೇದಿಸಲ್ಕತ್ಯತಿಷ್ಠದ್ದಶಾಂಗುಲ ’ ನೆಂದೆಂಬ ಪರಶಿವನು ಅನಾದಿಕಾಲದಲ್ಲಿ ಗೋಪ್ಯದಿಂದ ವೇದವೇದಾಂತ ಮೊದಲಾದ ಶಾಸ್ತ್ರಗಳಿಗೆ ಸಿಲುಕದವನಾಗಿ ನಾದಬಿಂದುಕಲೆಗಳಿಗೆ ದೂರನಾಗಿ ಸರ್ವಶೂನ್ಯನಾಗಿ ತನ್ನ ನಿಜಸುಖಸಮಾಧಿಯಲ್ಲಿದ್ದನು (೮-೯). ಬಳಿಕೊಂದು ಕ್ಷಣದಲ್ಲಿ ಪರಶಿವ

ನು ಮನದಲ್ಲಿ ಪ್ರವೃತ್ತಿಯನ್ನು ನೆನೆಯಲು ಆ ಚಿತ್ತೀ ಚಿಚ್ಛಕ್ತಿಯಾಯಿತು. ಅದರಿಂದ ಮಹಾಲಿಂಗವಾಯಿತು; ಅದರಿಂದ ಪರಶಕ್ತಿಯಾಯಿತು. ಅವರಿಬ್ಬರಿಂದ ಸದಾಶಿವನಾದನು; ಅವನಿಗೆ ಆದಿಶಕ್ತಿಯಾದಳು. ಅವರಿಬ್ಬರಿಗೆ ಈಶ್ವರನಾದನು; ಆತನಿಗೆ ಇಚ್ಛಾಶಕ್ತಿಯಾದಳು. ಅವರಿಬ್ಬರಿಂದ ಮಹೇಶ್ವರನಾದನು; ಆತನಿಗೆ ಸುಜ್ಞಾನವೆಂಬ ಶಕ್ತಿಯಾದಳು. ಆ ಮಹೇಶನಿಂದ ಸೃಷ್ಟಿಯಾಯಿತು (೧೦-೧೧). ಆ ಮಹೇಶನು ಲೀಲೆಯಿಂದ ವಿರಾಡ್ರೂಪವನ್ನು ತಾಳಲು ಅವನ ಪಾದ, ಗುಲ್ಫ, ಜಾನು, ಜಂಘೆ, ಊರು, ಕಟಿ, ಮಧ್ಯ ಇವುಗಳಿಂದ ಪಾತಾಳ ಮೊದಲಾದ ಏಳು ಅಧೋಲೋಕಗಳು ಉದಯಿಸಿದುವು (೧೨). ಆತನ ನಾಭಿ, ಉದರ, ಭುಜ, ಹೃದಯ, ಕಂಧರ, ಮುಖ, ಶಿರವೆಂಬ ಏಳು ಸ್ಥಳಗಳಿಂದ ಭೂ, ಭೂವರ್ ಮೊದಲಾದ ಏಳು ಉಪರಿಲೋಕಗಳು ಹಾಗೂ ಆತನ ಮೆಯ್ಯಕಾಂತಿಯಿಂದ ಏಳು ಸಮುದ್ರಗಳೂ, ಕಿವಿಗಳಿಂದ ದಶದಿಕ್ಕುಗಳೂ, ಹರಡ ಹಿಮ್ಮಡಗಳಿಂದ ಪರ್ವತಗಳೂ ಉಂಟಾದುವು (೧೩). ಮುಖದಲ್ಲಿ ರುದ್ರ, ಎಡಭುಜದಲ್ಲಿ ವಿಷ್ಣು, ಬಲದೊಡೆಯಲ್ಲಿ ಬ್ರಹ್ಮ, ಪಾದದಲ್ಲ ದೇವೇಂದ್ರ, ಮನಸ್ಸಿನಲ್ಲ ಚಂದ್ರ, ಕಣ್ಣಲ್ಲಿ ಸೂರ್ಯ, ಉಗುರುಗಳಲ್ಲಿ ದ್ವಾದಶಾದಿತ್ಯರು, ಕಂಠಮೂಲದಲ್ಲಿ ಸಪ್ತಋಷಿಗಳು, ಎದೆಯಲ್ಲಿ ನಕ್ಷತ್ರಕುಲವು, ಹಣೆಯಲ್ಲಿ ಮಹಾರುದ್ರ, ಇವರು ಉದಯಿಸಿದರು (೧೪). ಬೆರಳುಗಳಲ್ಲಿ ನವಬ್ರಹ್ಮರು, ಎರಡು ಬಗಲಲ್ಲಿ ಹದಿನಾಲ್ಕು ಇಂದ್ರರು, ಆತನ ಬೆರಳ ಸಂದುಗಳಲ್ಲಿ ಬಗೆಬಗೆಯ ಶಕ್ತಿಗಳು, ಆತನ ಅಂಗಯ್ಯಲ್ಲಿ ಚತುರ್ದಶ ಮನುಗಳು ಜನಿಸಿದರು. ವೇದಾಗಮಪುರಾಣೋಪನಿಷತ್ತು ಮೊದಲಾದ ಶಾಸ್ತ್ರಸಮೂಹಗಳೆಲ್ಲ ಆತನ ವಾಣಿಯಲ್ಲಿ, ಅಖಿಳ ನದಿಗಳು ಆತನ ಆನಂದಾಶ್ರುಗಳಲ್ಲ ಉದಯಿಸಿದುವು (೧೫). ಗರುಡ ಗಂಧರ್ವ ಮೊದಲಾದ ಮೂವತ್ತುಮೂರು ಕೋಟಿ ದೇವತೆಗಳು ಆತನ ಶಿರದಲ್ಲಿ, ಅರವತ್ತಾರು ಕೋಟಿ ರಾಕ್ಷಸರು ಆತನ ರೋಮಕೂಪದಲ್ಲಿ, ಹಾಗೂ ಉರಗ ನರ ಮೊದಲಾದವರು ಆತನ ಅವಯವಗಳಲ್ಲಿ ಸಂಜನಿಸಿದರು (೧೬). ನವಗ್ರಹಗಳೂ, ಅಷ್ಟದಿಕ್ಪಾಲಕರೂ, ಅಷ್ಟವಸುಗಳೂ ಆತನ ಗಲ್ಲಗಳಲ್ಲಿ, ಮೃಗ ಪಕ್ಷಿ ಜಲಚರ ಮೊದಲಾದ ಪ್ರಾಣಿಗಳು ಆತನ ಪಾದಗಳ ಬೆರಳಿನಲ್ಲಿ, ಗುಡ್ಡ ಬಳ್ಳಿ ಹುಲ್ಲು ಕಟ್ಟಿಗೆಗಳೆಲ್ಲ ಆತನ ಪಾದದ ಬೆರಳ ಅಡಿಯಲ್ಲಿ, ಪಶುಗಳೆಲ್ಲ ಆತನ ಕಂಕುಳಲ್ಲಿ ಹುಟ್ಟಿದುವು (೧೭).

ಈ ರೀತಿಯಾಗಿ ತನ್ನ ಬೆಸೆಯಿಂದ ಸಚರಾಚರಸೃಷ್ಟಿ ಉಂಟಾಗಲು ಬಳಿಕ ಮಹೇಶ್ವರನು ಕಲ್ಪಾಂತದಲ್ಲಿ ತಾಂಡವ (ವೆಂಬ ನೃತ್ಯ) ವನ್ನು ಆರಂಭಿಸಿದನು. ಆ ನೃತ್ಯದಲ್ಲಿ ತನ್ನ ಪಾದಗಳನ್ನು ಇಟ್ಟಂತೆ ಆ ವಿಶಾಲಸೃಷ್ಟಿಯು ಧೂಳಿಪಟವಾಯಿತು. ಬ್ರಹ್ಮ ವಿಷ್ಣು ಮೊದಲಾದವರೂ, ಲೋಕಗಳೂ, ಸಮುದ್ರಗಳೂ, ದ್ವೀಪಗಳೂ, ಗಿರಿ

ಗಳೂ, ಎಲ್ಲಾ ಲಯುವಾದುವು (೧೮-೧೯). ಸಮುದ್ರದ ಅಲ್ಲೋಲಕಲ್ಲೋಲ ದಿಂದ ಉಂಟಾದ ಸುಳಿಗಳು ದೊಡ್ಡ ತೆರೆಗಳ ಹೊಡೆತಕ್ಕೆ ಲಯವಾಗುವಂತೆ ಈಶ್ವರನ ಭುಜದ ಗಾಳಿಗೆ ಎಲ್ಲ ಚರಾಚರಗಳು ಒಟ್ಟುಗೂಡಿ ಈಶ್ವರನ ಅಂಗದಲ್ಲಿಯೇ ಅಡಕ ವಾದುವು (೨೦). ಹೀಗೆ ಸೃಷ್ಟಿಯು ವಿಲಯವನ್ನು ಹೊಂದಿದಾಗ ಆ ಮಹೇಶ ನು ಸ್ಮಶಾನರುದ್ರತ್ವವನ್ನು ತಾಳಿ ಒಂದೇ ಪಾದದಿಂದ ನಿಂತು ಏಕಪಾದಾಹ್ವಯಲೀ ಲೆಯನ್ನು ನಟಿಸಿದನು " ಎಂದು ಚೆನ್ನಬಸವಣ್ಣನು ಸಿದ್ಧರಾಮೇಶನಿಗೆ ನಿರೂಪಿಸಿದ ನು (೨೧).

೧೩ ವೃಷಭವಾಹನಲೀಲೆಯ ಸಂಧಿ

ಆ ಬಳಿಕ ಚೆನ್ನಬಸವೇಶನು ಸಿದ್ಧರಾಮನ ವಿಜ್ಞಾಪನೆಯ ಮೇರೆಗೆ ಮುಂದಿ ನ ಜಗತ್ಸೃಷ್ಟಿಯ ವಿಸ್ತಾರವನ್ನು ಹೇಳತೊಡಗಿದನು :-

ಆ ಮಹೇಶ್ವರನ ಆಜ್ಞೆಯಿಂದ ಪ್ರಕೃತಿಯು ಹುಟ್ಟಿತು ; ಆ ಪ್ರಕೃತಿಯಿಂದ ಮಹತ್ತು, ಮಹತ್ತಿನಿಂದ ಅಹಂಕಾರ, ಅಹಂಕಾರದಿಂದ ಸತ್ವರಜತಮಗಳೆಂಬ ತ್ರಿ ಗುಣಗಳು ಉದಿಸಿದುವು (೨). ಅವನ ಹಣೆಯಿಂದುದಿಸಿದ ರುದ್ರನು ತಾಮಸ ವನ್ನನುಕರಿಸಿದನು. ಅವನ ಎಡ ಭುಜದಿಂದುದಯಿಸಿದ ವಿಷ್ಣುವು ಸಾತ್ವಿಕವನ್ನ ನುಕರಿಸಿದನು. ಅವನ ಬಲ ಭುಜದಿಂದುದಯಿಸಿದ ಬ್ರಹ್ಮನು ತೈಜಸವನ್ನನುಕರಿಸಿ ಜನಿಸಿದನು. ಈ ತ್ರಿಗುಣಗಳ ವಿಕಾರದಿಂದ ಶಬ್ದ, ಸ್ಪರ್ಶ, ರೂಪು, ರಸ, ಗಂಧ ಗಳಾದುವು. ಇವುಗಳಿಂದ ಗಗನ, ಅನಿಲ, ಅಗ್ನಿ, ಜಲ, ಭೂಮಿಗಳೆಂಬ ಪಂಚ ಭೂತಗಳುಂಟಾದುವು. ಪರಶಿವನ ಆಜ್ಞೆಯಿಂದ ಗಾಳಿಯು ಬೀಸಲು ಗಗನವು ತೆರ ವಾಯಿತು. ಗಾಳಿಯ ಗೆಳೆತನದಿಂದ ಅಗ್ನಿಯು ಉದಕವನ್ನು ಕೂಡಿ ಅದನ್ನು ಕು ದಿಸತೊಡಗಿತು. ಇದಕ್ಕೆ ಮಣ್ಣು ಬೆರೆತು ಅದರಿಂದುಂಟಾದ ರಾಡಿಯ ಬೊಬ್ಬುಳಿಕೆ ಯಿಂದ ಹಿರಣ್ಮಯವಾದ ತೇಜದಿಂದೊಡಗೂಡಿದ ತತ್ತಿ (ಅಂಡ) ಯೊಂದುದಿಸಿತು (೩-೪).

ಈ ಅಂಡವು ಐವತ್ತು ಕೋಟಿ ಸುವಿಸ್ತಾರವಾದುದು. ಇದನ್ನು ಇದರ ಹತ್ತು ಪಟ್ಟು ಜಲವು ಬಳಸಿಹುದು. ಇದೇ ಮೇರೆಗೆ ಈ ಜಲವನ್ನು ಅದರ ಹತ್ತು ಪಟ್ಟು ಅಗ್ನಿಯೂ, ಈ ಅಗ್ನಿಯನ್ನು ಅದರ ಹತ್ತು ಪಟ್ಟು ವಾಯುವೂ, ಈ ವಾಯುವನ್ನು ಅದರ ಹತ್ತು ಪಟ್ಟು ಆಕಾಶವೂ ಸುತ್ತುವಾಕಿರುವುದು. ಈ ಆಕಾಶವನ್ನು ಅ ಹಂಕಾರವೂ, ಅಹಂಕಾರವನ್ನು ಮಹತ್ತೂ, ಮಹತ್ತನ್ನು ಸಪ್ತಾವರಣವಾದ ಅವ್ಯ

ಕ್ಷವೂ ಸುತ್ತುಗಟ್ಟಿರುವುವು. ಮಧ್ಯದಲ್ಲಿ ಇಪ್ಪ ಆ ತತ್ತಿಯನ್ನು (ಅಂಡವನ್ನು) ಹರನ ಆಜ್ಞೆಯಿಂದ ಬ್ರಹ್ಮನು ಒಡೆಯಲು ಅದಕ್ಕೆ ಬ್ರಹ್ಮಾಂಡವೆಂದು ಹೆಸರಾಯಿತು (೫-೬).

ಆ ಬಳಿಕ ಮಹೇಶ್ವರನು ಸೃಷ್ಟಿಸ್ಥಿತಿಪ್ರಲಯವನ್ನು ಮಾಡುವ ಸಾಮರ್ಥ್ಯವು ರುದ್ರನಿಗುಂಟೆಂದು ತಿಳಿದು ಹರಿಯಜರಿಗೆ ಇವನೇ ನಿಮಗೊಡೆಯನೆಂದು ಹೇಳಿ ನಷ್ಟವಿಲ್ಲದ ಪಟ್ಟವನ್ನು ಕಟ್ಟಿ ತಾನು ಕ್ರಿಯಾಶಕ್ತಿಯೊಡನೆ ಕೂಡಿ ಇರುತ್ತಿದ್ದನು (೭).

ಕ್ರಿಯಾಶಕ್ತಿಯಿಂದೊಡಗೂಡಿದ ಇವನೇ ಮಹಾರುದ್ರನು. ಒಮ್ಮೆ ಈ ರುದ್ರನು ಬ್ರಹ್ಮನನ್ನು ಕರೆದು ಸೃಷ್ಟಿಯನ್ನು ಮಾಡೆಂದು ನಿರೂಪಿಸಲು, ತನ್ನಿಂದಾಗದೆ ಶಿವನನ್ನು ಕುರಿತು ತಪವನಾಚರಿಸಿದನು. ಶಿವನು ಆತನ ತಪಸ್ಸಿಗೆ ಮೆಚ್ಚಿ ಸನಕ, ಸನಂದನ, ಸನತ್ಸುಜಾತ, ಸನಾತನರೆಂಬ ಮಾನಸಸುತರನ್ನು ಕೊಟ್ಟು ನಿರವಯನಾದನು. ಬ್ರಹ್ಮನು ಆ ಮಕ್ಕಳನ್ನು ಕರೆದು ಸೃಷ್ಟಿಯನ್ನು ಮಾಡಿರೆನಲು, "ಎಲ್ಲ ರಹಸ್ಯಮಂ ನಿನ್ನಿಂದಲೇ ತಿಳಿದು ಸಂಸಾರಬಂಧನದೊಳಗೆ ಖುಲ್ಲರಾದೆವು. ಸೃಷ್ಟಿಯಂ ಮಾಡಲು ಬುದ್ಧಿಯನ್ನು ಬಲ್ಲೆವೇ? ನಾವು ಒಲ್ಲೆವು" ಎಂದು ತಪೋವನಕ್ಕೆ ಹೋದರು. ಬ್ರಹ್ಮನು ಪುನಃ ಸಾವಿರ ವರ್ಷ ತಪಸ್ಸನ್ನಾಚರಿಸಿ ಈಶ್ವರನನ್ನು ಮೆಚ್ಚಿಸಿ ಈ ವೃತ್ತಾಂತವನ್ನು ಹೇಳಲು ಅವನು ನಿನ್ನ ಈ ಶರೀರದಿಂದ ಮಕ್ಕಳಂ ಪಡೆದು ಸೃಜಿಸುವುದೆಂದು ಹೇಳಿ ನಿರವಯನಾದನು (೮-೧೨).

ಆ ಮೇಲೆ ಬ್ರಹ್ಮನು ಮನಸ್ಸಿನಿಂದ ಮರೀಚಿಯನ್ನೂ, ನಯನದಿಂದ ಅತ್ರಿಯನ್ನೂ, ಮುಖದಿಂದ ಅಂಗೀರಸನನ್ನೂ, ಕಿವಿಯಿಂದ ಪುಲಸ್ತ್ಯನನ್ನೂ, ನಾಭಿಯಿಂದ ಪುಲಹನನ್ನೂ, ಹಸ್ತದಿಂದ ಕ್ರತುವನ್ನೂ, ಚರ್ಮದಿಂದ ಭೃಗುವನ್ನೂ, ಪ್ರಾಣದಿಂದ ವಸಿಷ್ಠನನ್ನೂ, ಅಂಗುಟದಿಂದ ದಕ್ಷನನ್ನೂ ಪಡೆದನು. ಈ ಒಂಬತ್ತು ಮಂದಿಯೂ ಸಾಲದೆ ಮತ್ತೆ ತನ್ನ ತೊಡೆಯಿಂದ ನಾರದನನ್ನೂ, ಬಲದ ಮೊಲೆಯಿಂದ ಧರ್ಮನನ್ನೂ, ನೆಳಲಿನಿಂದ ಕರ್ದಮನನ್ನೂ, ಒಡಲಿನಿಂದ ದಿವಾರಾತ್ರಿಗಳನ್ನೂ, ಮುಖದಿಂದ ಗಾಯತ್ರಿ ಮುಂತಾದ ಛಂದಸ್ಸುಗಳನ್ನೂ, ಅಗಣಿತವಾದ ವೇದಶಾಸ್ತ್ರಗಳನ್ನೂ ಪಡೆದನು. ಆ ಮೇಲೆ ಬ್ರಹ್ಮನು ಮಕ್ಕಳನ್ನು ಕರೆದು ಸೃಷ್ಟಿಯನ್ನು ರಚಿಸಿರೆಂದು ಹೇಳಲು ಅವರೂ ತಮ್ಮ ಕೈಯಿಂದಾಗದೆಂದರು (೧೩-೧೫).

ಆ ಮೇಲೆ ಬ್ರಹ್ಮನು ಚಿಂತೆಯಿಂದ ಮತ್ತೆ ತಪಸ್ಸು ಮಾಡಿ ಕ್ರಿಯಾಶಕ್ತಿಯನ್ನು ಮೆಚ್ಚಿಸಿಕೊಂಡು "ತಾಯೆ, ನೀನು ಪರಶಿವನೊಡನೆ ಇರುವವರೆಗೂ ನನ್ನಿಂದ ಸೃಷ್ಟಿಯ ಕಾರ್ಯವು ಆಗದು. ನನ್ನ ಸುತನಾದ ದಕ್ಷನಿಗೆ ನೀನು ಸುತೆಯಾಗಿ ಜನಿಸಿ ಅಭವನಿಗೆ ವಧುವಾಗು. ನಿನ್ನೊಳಗಿರುವ ಶಕ್ತಿಗಳೂ ಸ್ತ್ರೀಯರಾಗುವರು.

ಅವರಿಂದ ನಾನು ಸೃಷ್ಟಿಯನ್ನು ಮಾಡುವೆನು" ಎಂದು ಬೇಡಿಕೊಂಡನು. ಕ್ರಿಯಾಶಕ್ತಿಯು ಅಭಯವಚನವಿತ್ತು, "ನಿನ್ನ ಶಕ್ತಿಯು ಬಹಿಷ್ಕರಿಸಿ ವಾಗ್ದೇವಿ ಎನಿಸುವಳು. ಆಕೆಯೊಡನೆ ಈ ಜಗತ್ಸೃಷ್ಟಿಯನ್ನು ಬೇಸರದೆ ಮಾಡು"ಎಂದು ನೇಮವಿತ್ತು ಅಂತರ್ಧಾನವಾದಳು (೧೫-೧೭).

ಆ ಬಳಿಕ ಬ್ರಹ್ಮನು ಭಾರತಿಯಿಂದ ಶತರೂಪೆ ಸ್ವಾಯಂಭು ಎಂಬಿರ್ವರನ್ನು ಪಡೆದು ಅವರನ್ನು ದಂಪತಿಗಳನ್ನು ಮಾಡಲು, ಅವರಿಗೆ ಉತ್ತಾನಪಾದ, ಪ್ರಿಯವ್ರತ, ಆಕೂತಿ, ದೇವಹೂತಿ ಎಂಬ ನಾಲ್ವರು ಮಕ್ಕಳೂ, ಪ್ರಸೂತಿಯೆಂಬ ಮಗಳೂ ಜನಿಸಿದರು. ಈ ಸ್ವಾಯಂಭುವೇ ಸ್ವಾಯಂಭುಮನು. ಪ್ರಸೂತಿಯು ದಕ್ಷನಿಗೆ ಸತಿಯಾಗಿರಲು ಆಕೆಯ ಗರ್ಭದಿಂದ ಕ್ರಿಯಾಶಕ್ತಿಯು ದಾಕ್ಷಯಣೀ ಎಂಬ ಹೆಸರಿನಿಂದ ಜನಿಸಿದಳು. ತನ್ನಗೋಸುಗ ತಪಸ್ಸನ್ನಾಚರಿಸಿದ ಬ್ರಹ್ಮನ ದೆಸೆಯಿಂದ ಪರಶಿವನು ದಾಕ್ಷಾಯಣಿಯನ್ನು ಮದುವೆಯಾಗಿ ವಿಭವದಿಂದಿರುತ್ತ, ನೆನೆದ ಮಾತ್ರದಿಂದ ಬ್ರಹ್ಮಾಂಡದಿಂದ ಬೇರೆಯಾದ ಶಿವಲೋಕವನ್ನು ನಿರ್ಮಿಸಿ ಸುಖದಿಂದಿರುತ್ತಿರ್ದನು. ಇದಕ್ಕೆ ಉಮಾಮಹೇಶ್ವರಲೀಲೆಯೆಂದು ಹೆಸರು (೧೮-೨೦).

ಸಕಲ ಬ್ರಹ್ಮಾಂಡದ ಭಾರವನ್ನು ಧರಿಸಿದ ನನ್ನನ್ನು ಧರಿಸುವವರಾರೆಂದು ಒಮ್ಮೆ ಪರಶಿವನು ತನ್ನ ಹೃದಯದೊಳಗಿನ ಧರ್ಮವನ್ನು ನೆನೆಯಲು, ಆ ಸದ್ಧರ್ಮವೇ ತೇಜೋಮೂರ್ತಿಯಾಗಿ ಅಡಿಗೆರಗಿ ನಿಂದಿರಲು ತನಗೆ ಭಿನ್ನವಿಲ್ಲದುದರಿಂದ ವಾಹನವನ್ನು ಮಾಡಿಕೊಂಡನು. ಈ ಸದ್ಧರ್ಮಮೂರ್ತಿಯೇ ಆದಿವೃಷಭನು. ಈ ಆದಿವೃಷಭನಿಗೆ ವೇದಗಳೇ ನಾಲ್ಕು ಪಾದಗಳು, ಷಟ್‌ಶಾಸ್ತ್ರಗಳೇ ಶರೀರವು, ನಾದ ಬಿಂದುಕಳೆಗಳೇ ತನುತ್ರಯವು, ಆದಿ ಅನಾದಿ ಎಂಬವುಗಳೇ ಎರಡು ಕೋಡುಗಳು, ಪ್ರಣವವೇ ಶಿರಸ್ಸು, ಪಂಚಾಕ್ಷರಿಯೇ ಮುಖವು, ವೇದಾಂತವೇ ಪಿಣಿಲು (ಇಣಿ), ತೀರ್ಥಸ್ಮೃತಿಮಂತ್ರಗಳೇ ಕೂದಲು, ಶಿವಾಗಮಗಳೇ ಪ್ರಾಣವು. ಈ ತೆರನಾದ ವೃಷಭನನ್ನು ಉಮೆಸಹಿತ ಮಹೇಶ್ವರನು ಏರಲು ವೃಷಭವಾಹನಲೀಲೆ ಎಂದೆನಿಸಿತು. ಮಹೇಶ್ವರನು ಆ ಮೇಲೆ ತನ್ನಿಂದ ಪಡೆದ ಪ್ರಮಥಜಾತದೊಡನೆ ಶಿವಲೋಕದ ಅರಮನೆಯಲ್ಲಿ ಸುಖಸಂಕಥಾಕೇಳಿಯಿಂದೊಪ್ಪಿದನು (೨೧-೨೩).

೧೪ ದಕ್ಷಬ್ರಹ್ಮಸೃಷ್ಟಿಯ ಸಂಧಿ

ಇತ್ತ ಬ್ರಹ್ಮನು ತನ್ನ ಮಗನಾದ ದಕ್ಷನಿಗೆ ಸೃಷ್ಟಿಯನ್ನು ಮಾಡೆಂದು ಹೇಳಲು ಅವನು ಅಸಿಕ್ನಿಯಲ್ಲಿ ಹತ್ತು ಸಾವಿರಮಂದಿ ಹರಿಯಶ್ವರನ್ನು ಪಡೆದು ಅವರನ್ನು

ಸೃಷ್ಟಿಯ ಕಾರ್ಯದಲ್ಲಿ ತೊಡಗಿಸುವಷ್ಟರಲ್ಲಿಯೇ ನಾರದನು ಅವರೆಲ್ಲರನ್ನು ಸಂಸಾರ ಬಂಧನಕ್ಕೊಳಗಾಗಬೇಡಿರೆಂದು ತಪಸ್ಸಿಗೆ ಕಳುಹಿದನು. ದಕ್ಷನು ಧೈರ್ಯಗುಂದದೆ ಚಪಲಾಶ್ವರನ್ನು ಪಡೆದು ಅವರನ್ನು ಸೃಷ್ಟಿಯ ಕೆಲಸಕ್ಕೆ ತೊಡಗಿಸಲು ನಾರದನು ಪುನಃ ಬಂದು ದಕ್ಷನಿಕ್ಕುವ ಬಲಿಗೆ ನೀವು ಸಿಕ್ಕದಿರೆಂದು ಅವರನ್ನು ತಪಕ್ಕೆ ಕಳುಹಿದನು. ಮಕ್ಕಳು ದೂರಾದ ಸಿಟ್ಟಿನಿಂದ ದಕ್ಷನು "ಮೂರು ಮುಕ್ಕಾಲು ಗಳಿಗೆಯವರೆಗೆ ಒಮ್ಮೆಯೂ ಎಲ್ಲಿಯಾದರೂ ಸ್ಥಿರವಾಗದೆ ನಿರರ್ಥಕವಾಗಿ ತಿರುಗಿ ಜಗಳಂಗಳನೆ ಗಂಟಿಕ್ಕು; ಕ್ರೂರ, ಹೋಗು," ಎಂದು ಶಾಪವನ್ನಿತ್ತು ಹೆಣ್ಣುಮಕ್ಕಳನ್ನು ಪಡೆಯಲನುವಾದನು (೨-೪).

ಆ ಮೇಲೆ ದಕ್ಷನು ಅಸಿಕ್ನಿಯಲ್ಲಿ ಅರವತ್ತು ಹೆಣ್ಣುಮಕ್ಕಳನ್ನು ಪಡೆದು, ಧರ್ಮನಿಗೆ ಹತ್ತು, ಚಂದ್ರನಿಗೆ ಇಪ್ಪತ್ತೇಳು, ಕಶ್ಯಪನಿಗೆ ಹದಿಮೂರು, (ತನ್ನ ಸಹಜಾತರಾದ) ಅತ್ರಿ, ಮರೀಚಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠರಿಗೆ ಒಬ್ಬೊಬ್ಬ ಮತ್ತು ಕೃಶಾಶ್ವನಿಗೆ ಇಬ್ಬರು ಹೆಣ್ಣುಮಕ್ಕಳನ್ನು ಕೊಟ್ಟನು (೫).

ಇವರಲ್ಲಿ ಧರ್ಮನ ಸತಿಯರಲ್ಲ ಅರುಂಧತಿಗೆ ಕಿನ್ನರರೂ, ಯಾಮೆಗೆ ನಂದಿಯೂ, ಲಂಬೆಗೆ ಸಿಡಿಲ್ಮಿಂಚೂ, ಮರುತ್ವತಿಗೆ ಮರುತ್ತುಗಳೂ, ಸುಭಾನುವಿಗೆ ಸಿದ್ಧರೂ, ಸಂಕಲ್ಪೆಗೆ ಸಂಕಲ್ಪರೂ, ಮುಹೂರ್ತೆಗೆ ಮುಹೂರ್ತರೂ, ಸಾಧ್ಯೆಗೆ ಸಾಧ್ಯರೂ, ವಿಶ್ವೆಗೆ ವಿಶ್ವೇದೇವರೂ, ವಸುವಿಗೆ ಅಷ್ಟವಸುಗಳೂ ಜನಿಸಿದರು (೬-೭).

ಕಶ್ಯಪನ ಹದಿಮೂರು ಹೆಂಡಂದಿರಲ್ಲಿ ಅದಿತಿಗೆ ದ್ವಾದಶಾದಿತ್ಯರೂ, ದಿತಿಗೆ ದೈತ್ಯರೂ, ದನುವಿಗೆ ದಾನವರೂ, ತಾಮ್ರೆಗೆ ಖರತುರಗಾದಿಗಳೂ ಪಕ್ಷಿಪರಿಯಾಯವೂ, ವಿನತೆಗೆ ಅರುಣ ಗರುಡರೂ, ಸುರಸೆಗೆ ಹಲವು ಪಕ್ಕ ಶಿರಗಳುಳ್ಳ ಒಂದು ಸಾವಿರ ಉರಗಗಳೂ, ಕದ್ರುವಿಗೆ ಉರಗಪತಿ ಶೇಷ ವಾಸುಗಿ ಕಂಬಳಾಶ್ವತರರೇ ಮುಖ್ಯರಾದ ಸಾಸಿರ ಫಣೀಂದ್ರರೂ, ಧರೆಗೆ ಸಿದ್ಧಸಾಧ್ಯರೂ, ಸುರಭಿಗೆ ಅಮೃತ ಕಾಮಧೇನು ಅಪ್ಸರಸ್ತ್ರೀಯರೇ ಮೊದಲಾದವರೂ, ಇರೆಗೆ ಗಿರಿತರುಲತಾನಿಕರವೂ, ಸ್ವಸೆಗೆ ಯಕ್ಷರಾಕ್ಷಸರೂ, ಮುನಿಗೆ ಆನೆ ಸಿಂಹ ಇತ್ಯಾದಿ ಪಶುಗಳೂ, ಕ್ರಿಮಿ ಕೀಟಕಗಳೂ, ಜಲಚರಗಳೂ, ಅರಿಷ್ಟೆಗೆ ಗಂಧರ್ವರೂ ಜನಿಸಿದರು.

ಮುಂದೆ ಅತ್ರಿ ಅನಸೂಯೆಯರಿಗೆ ಚಂದ್ರದತ್ತ ದೂರ್ವಾಸರೂ, ಅಂಗಿರಸ ಸ್ಮೃತಿಯರಿಗೆ ಗುರುಸಂವರ್ತಯೋಗಸಿದ್ಧಿಗಳೂ, ಪುಲಸ್ತ್ಯಪ್ರೀತಿಗಳ್ಗೆ ವಿಶ್ರವಸುಗಳೂ, ದೇವವರ್ಣೆಗೆ ಧನೇಶನೂ, ಕೈಕಸೆಗೆ ರಾವಣ ಕುಂಭಕರ್ಣ ವಿಭೀಷಣ ಶೂರ್ಪನಖಿಯರೂ, ಪುಲಹಗೆ ಕಿನ್ನರಕಿಂಪುರುಷರೂ, ಕ್ರತುಸನ್ನತಿಯರಿಗೆ ಸಹಚರಿಪತಂಗರೂ, ಭೃಗುಪುಲೋಮೆಯರಿಗೆ ಉಶನ ಕವಿ ಚ್ಯವನರ್ಷರೂ, ವಸಿಷ್ಠ ಅರುಂಧ

ತಿಯರಿಗೆ ಶಕ್ತಿಯೂ, ಕರ್ದಮದೇವಹೂತಿಯರಿಗೆ ಕಪಿಲ ಕರ್ಣಿಕೆಯರೂ, ಕೃಶಾಶ್ವ ಅರ್ಚಿಯರಿಗೆ ಧೂಮಕೇತ್ವಾದಿಗಳೂ ಸಂಭವಿಸಿದರು (೮-೨೨).

ಚೆನ್ನಬಸವನು ಸಿದ್ಧರಾಮನಿಗೆ ಧರ್ಮನ ಸೃಷ್ಟಿಯನ್ನು ಹೇಳುವನು. "ಧರ್ಮನಿಗೆ ಮೃಷೆ ಎಂಬುವಳಲ್ಲಿ ಡಂಬನೂ ಮಾಯೆಯೂ ಜನಿಸಿದರು. ಈ ಮಾಯೆಗೂ ನಿರುತಿಗೂ ಲೋಭವಿಕೃತಿಗಳು ಹುಟ್ಟಿದುವು. ಲೋಭಕ್ಕೆ ಭೂಮಿ ಎಂಬವಳಲ್ಲ ಕ್ರೋಧವು ಹುಟ್ಟಿತು. ವಿಕೃತಿಗೆ ಹಿಂಸೆ ಎಂಬವಳು ಜನಿಸಿದಳು. ಕ್ರೋಧಕ್ಕೂ ಹಿಂಸೆಗೂ ದುರುಕ್ತಿಯುದಯಿಸಿದಳು. ಕಲಿದುರುಕ್ತಿಗಳಿಗೆ ಭಯವೆಂಬ ಮಗನೂ ಮೃತ್ಯುವೆಂಬ ಮಗಳೂ ಹುಟ್ಟಿದರು. ಇವರಿರ್ವರಿಂದ ನಿರಯ (ನರಕ) ವೆಂಬ ಮಗನೂ ಯಾತನೆಯೆಂಬ ಮಗಳೂ ಜನಿಸಿದರು. ಇವರಿಂದ ದುರ್ನಿತಿ, ದುರ್ಮಾರ್ಗ, ಕಪಟ, ಕುತ್ಸಿತ, ಮಹಾದ್ರೋಹ, ಠಕ್ಕು, ಠವುಳಿ, ವಂಚನೆ, ದುರ್ಜನತ್ವ, ಸಂಯುಗ, ವಿಕೃತಿ, ರೋಗ, ಸಂತಾಪ, ಬಲ್ಮನಿಸು, ಹಾನಿ ಇವುಗಳೆಲ್ಲ ಉದಯಿಸಿದುವು. ಇದಿಷ್ಟು ಧರ್ಮಬ್ರಹ್ಮನ ಸೃಷ್ಟಿಯು (೨೩-೨೪). ಪರಶಿವನಿಗೆ ಏಕಾದಶ ರುದ್ರರೂ, ಸಪ್ತರ್ಷಿಗಳೂ, ಚತುರ್ದಶಮನುಗಳೂ ಉದಯಿಸಿದರು (೨೫-೨೬)".

೧೫ ಚತುರ್ದಶಭುವನಸೃಷ್ಟಿಯ ಸಂಧಿ

ಬ್ರಹ್ಮಾಂಡದ ಅಧೋಭಾಗದಲ್ಲ ಜಲವು ತುಂಬಿರುವುದು. ಅದರ ಮೇಲೆ ಆದಿಕೂರ್ಮನೂ, ಕೂರ್ಮನ ಮೇಲೆ ಶೇಷನೂ, ಶೇಷನ ಮೇಲೆ ದಿಗ್ದಂತಿಗಳೂ, ದಿಗ್ದಂತಿಗಳ ಮೇಲೆ ಭೂಮಿಯೂ, ಈ ಭೂಮಿಯ ಮಧ್ಯದಲ್ಲಿ ಒಂದೊಂದರ ಮೇಲಿರುವ ಭರಣಿಗಳಂತೆ ಏಳು ಲೋಕಗಳೂ ಇರುವುವು (೨-೪).

ಈ ಅಡಕಿಲುಗಳಾಗಿರುವ ಲೋಕಗಳಲ್ಲ ಪಾತಾಳವು ಸುವರ್ಣದಂತೆ ಹೊಳೆಯುವಂಥದು. ಶೇಷ, ಬಲಿ, ಮುಚುಕುಂದರು ಅದಕ್ಕೊಡೆಯರು. ಅಲ್ಲಿಯ ಜನರು ಭೂತನಾಥನನ್ನು ಶಿವನೆಂದು ಪೂಜಿಸುವರು. ರಸಾತಳಲೋಕವು ಶುಭ್ರವರ್ಣವಾಗಿರುವುದು. ವಾಸುಗಿ ಸುಪರ್ಣರು ಅದಕ್ಕೊಡೆಯರು. ಅಲ್ಲಿಯ ಜನರು ಪರಮೇಶನನ್ನು ಶಂಭುವೆಂದು ಪೂಜಿಸುವರು. ಮಹಾತಳವು ಸಿಕತವರ್ಣವಾಗಿರುವುದು. ಹಿರಣ್ಯಾಕ್ಷ ನರಕಾಸುರರು ಅದಕ್ಕೊಡೆಯರು. ಅಲ್ಲಿಯ ಜನರು ಶಿವನನ್ನು ಶಂಕರನೆಂದು ಪೂಜಿಸುವರು. ತಳಾತಳಲೋಕವು ಹೊಸ ಬಂಗಾರವರ್ಣವು. ಮಯ, ಕಾಲನೇಮಿ, ಕರ್ಕೋಟಕ ಸರ್ಪಗಳು ಅದಕ್ಕೊಡೆಯರು. ಅಲ್ಲಿಯ ಜನರು ಭೀಮ

ವನ್ನು ನೀಲಕಂಠನೆಂದು ಪೂಜಿಸುವರು. ಸುತಳಲೋಕವು ಹವಳಬಣ್ಣದ್ದು. ತಾರಕ, ಪ್ರಹಲ್ಲಾದರು ಅದಕ್ಕೊಡೆಯರು. ಅಲ್ಲಿಯ ಜನರು ಶಂಭುವನ್ನು ಉಮಾಪತಿಯೆಂದು ಪೂಜಿಸುವರು. ವಿತಳವು ನಿರ್ಮಳಛಾಯೆವುಳ್ಳದ್ದು. ಶಂಖಪಾಲ ಮುಖರಾದ ಸರ್ಪಗಳೂ ಜಂಭಕುಂಭದೈತ್ಯರೂ ಅದಕ್ಕೊಡೆಯರು. ಅಲ್ಲಿಯ ಜನರು ಶಿತಿಕಂಠನನ್ನು ಹಾಟಕೇಶ್ವರನೆಂಬ ನಾಮದಿಂದ ಪೂಜಿಸುವರು. ಅತಳಲೋಕವು ನೀಲವರ್ಣದ್ದು. ನಮುಚಿಯು ಅದಕ್ಕೊಡೆಯನು. ಅಲ್ಲಿಯ ಜನರು ಶಿವನನ್ನು ಮಹಾದೇವನೆಂದು ಪೂಜಿಸುವರು (೫-೮).

ಧರಣಿಯುಂತಿರುವ ಈ ಸಪ್ತಲೋಕಗಳ ಮೇಲೆ ಮುಚ್ಚಳದಂತೆ ಭೂಮಂಡಲವಿರುವುದು. ಅದರ ಮಧ್ಯದಲ್ಲಿ ಸುವರ್ಣಲಿಂಗದಂತೆ ಮಹಾಮೇರು ಪರ್ವತವಿರುವುದು. ಸ್ವಾಯಂಭುಮನುವು ತನ್ನ ಮಗನಾದ ಪ್ರಿಯವ್ರತನಿಗೆ ಸಕಲ ಸಾಮ್ರಾಜ್ಯ ಪಟ್ಟವನ್ನು ಕಟ್ಟಿದನು. ಅವನು ರಥಾರೂಢನಾಗಿ ಸುರಗಿರಿಯನ್ನು ಏಳು ಬಾರಿ ಸುತ್ತುಹಾಕಲು ಆ ರಥದ ಗಾಲಿಯು ಹಾಯ್ದುದರಿಂದ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಖಾ, ಪುಷ್ಕರಗಳೆಂಬ ಸಪ್ತದ್ವೀಪಗಳೂ ಲವಣ, ಇಕ್ಷು, ಸುರಾ, ಘೃತ, ದಧಿ, ಕ್ಷೀರ, ಸ್ವಾದೋದಕಗಳೆಂಬ ಸಪ್ತ ಶರಧಿಗಳೂ ಉಂಟಾದುವು. ಸೌವರ್ಣಭೂಮಿಯೂ, ಲೋಕಾಲೋಕಪರ್ವತವೂ, ಮಹಾಂಧಕಾರಭೂಮಿಯೂ ಈ ಮೇರು ಪರ್ವತದ ಒತ್ತಿನಲ್ಲಿಯೇ ಇರುವುವು (೯-೧೩).

ಪ್ರಿಯವ್ರತನು ತನ್ನ ಏಳು ಜನ ಮಕ್ಕಳಲ್ಲಿ ಪ್ರತಿಯೊಬ್ಬರನ್ನು ಒಂದೊಂದು ದ್ವೀಪಕ್ಕೆ ಅಧಿಪತಿಯನ್ನು ಮಾಡಿದನು. ಇವರಲ್ಲಿ ಅಗ್ನೀಂದ್ರನೆಂಬುವನು ತನ್ನ ಜಂಬೂದ್ವೀಪವನ್ನು ತನ್ನ ಒಂಬತ್ತು ಮಂದಿ ಮಕ್ಕಳಲ್ಲಿ ಹಂಚಿಕೊಟ್ಟನು. ಮುಂದೆ ಅವರವರ ಹೆಸರುಗಳಿಂದ ಆಯಾ ಭೂಭಾಗಗಳು ಕರೆಯಲ್ಪಟ್ಟವು. ಅವರೊಳಗೆ ನಾಭಿ ಎಂಬವನ ಮಗನು ವೃಷಭಧರಣಿಪತಿ, ಇವನ ಮಗನು ಭರತನು. ಈತನಿಂದ ಇವನಾಳುವ ಭಾಗಕ್ಕೆ ಭರತಖಂಡವೆಂದು ಹೆಸರಾಯಿತು (೧೪-೧೫). ಸುರಗಿರಿಯ ದಕ್ಷಿಣಕ್ಕೆ ಬಿಲ್ಲಿನಾಕಾರವಾಗಿ ಚಿತ್ರವರ್ಣದಿಂದ ರಂಜಿಸುವ ಈ ಭರತಖಂಡದ ಮೂರು ದಿಕ್ಕುಗಳಿಗೆ ಲವಣಾಬ್ಧಿಯೇ ಮೇರೆಯು. ಇದರ ಉತ್ತರಕ್ಕೆ ಹಿಮಾಚಲಪರ್ವತವಿರುವುದು. ಈ ಹಿಮಾಚಲದ ಉತ್ತರಕ್ಕೆ ಕಿಂಪುರುಷದೇಶವೂ, ಅದಕ್ಕುತ್ತರವಾಗಿ ಹೇಮಾದ್ರಿಯೂ, ಈ ಹೇಮಾದ್ರಿಯ ಉತ್ತರಕ್ಕೆ ಹರಿವರ್ಷವೂ, ಈ ಹರಿವರ್ಷಕ್ಕುತ್ತರದಲ್ಲಿ ನಿಷಧಗಿರಿಯೂ ಉಂಟು. ಕನಕಪರ್ವತದ ಚತುರ್ಭಾಗದೊಳಗೆ ಇಲಾವೃತ್ತವಿರುತ್ತದೆ. ನೀಲಾಚಲವು ಇದರ ಉತ್ತರಕ್ಕೆ. ನಿಷಧಾಚಲವು ದಕ್ಷಿಣಕ್ಕೆ, ಗಂಧಮಾದನವು ಪಶ್ಚಿಮಕ್ಕೆ, ಮಾಲ್ಯವಾನಪರ್ವತವು ಪೂರ್ವಕ್ಕೆ. ಈ ನೀಲಗಿರಿಯ ಉತ್ತರ ಭಾಗದಲ್ಲಿ ರಮ್ಯಕದೇಶವಿರುತ್ತದೆ. ಈ ರಮ್ಯಕ ದೇಶಕ್ಕೆ

ಶ್ವೇತಶೈಲವೇ ಉತ್ತರ ಮೇರೆಯು. ಇದರ ಉತ್ತರಕ್ಕೆ ಹಿರಣ್ಮಯವರ್ಷವಿರುವುದು. ಶೃಂಗಪರ್ವತವು ಇದಕ್ಕೆ ಗಡಿ. ಈ ಪರ್ವತದ ಉತ್ತರಕ್ಕೆ ಕುರುಭೂಮಿಯು ಇರುತ್ತದೆ. ಸುರಗಿರಿಯ ಮೂಡಲದೆಸೆಯಲ್ಲಿ ಭದ್ರಾಶ್ವವರುಷವಿರುವುದು. ಇದರ ಪೂರ್ವಕ್ಕೆ ಸಮುದ್ರವು ಮತ್ತು ಪಶ್ಚಿಮಕ್ಕೆ ಮಾಲ್ಯವಂತಪರ್ವತವು ದಕ್ಷಿಣೋತ್ತರಕ್ಕೆ ಜಠರಗಿರಿ ದೇವಕೂಟಪರ್ವತಗಳು. ಮಾಲ್ಯವರ್ಷದ ಪಶ್ಚಿಮಕ್ಕೆ ಸಮುದ್ರವು ಮತ್ತು ಪೂರ್ವಕ್ಕೆ ಗಂಧಮಾದನಪರ್ವತವು. ಕನಕಾಚಲದ ದಕ್ಷಿಣಕ್ಕಿರುವ ಗಂಧಮಾದನನಗದಲ್ಲಿ ಎತ್ತರವಾಗಿ ಬೆಳೆದ ಜಂಬೂಕುಜಗಳಲ್ಲಿ ಆನೆಯಷ್ಟು ದೊಡ್ಡದಾದ ಹಣ್ಣುಗಳಾಗುವುವು. ಅವು ನೆಲಕ್ಕೆ ಬಿದ್ದು ಒಡೆದು ರಸವೆಲ್ಲ ಜಾಂಬೂನದವೆಂಬ ಹೆಸರಿನಿಂದ ಹರಿಯುತ್ತಿರುವುದಾದ ಕಾರಣ ಈ ದ್ವೀಪಕ್ಕೆ ಜಂಬೂದ್ವೀಪವೆಂಬ ಹೆಸರುಂಟಾಯಿತು (೧೬-೨೦).

ಭೂಮಂಡಲ ಮಧ್ಯದಲ್ಲಿರುವ ಮಹಾಮೇರು ಪರ್ವತದ ಮೇಲೆ ಎರಡನೆಯದಾದ ಭುವರ್ಲೋಕವಿರುವುದು. ಅದಕ್ಕೆ ರವಿಯು ಒಡೆಯನು. ಅಲ್ಲಿಂದಾಚೆಗೆ ಚಂದ್ರ, ತಾರಕಿ, ಬುಧ, ಶುಕ್ರ, ಮಂಗಳ, ಗುರು, ಶನಿ, ಸಪ್ತಋಷಿವರರು, ಧ್ರುವ, ಈ ಗ್ರಹನಕ್ಷತ್ರಗಳಿರುವುವು. ಇವುಗಳನ್ನು ದಾಟಿ ಮೂರನೆಯದಾದ ಸ್ವರ್ಗಲೋಕವಿರುವುದು. ಧ್ರುವನಕ್ಷತ್ರದಿಂದಾಚೆಗೆ ನಾಲ್ಕನೆಯದಾದ ಮಹರ್ಲೋಕವಿರುವುದು. ಅಲ್ಲಿ ಮುನಿಗಳೂ, ಋಷಿಗಳೂ ಭಕ್ತಿಭಾವನೆಗಳಿಂದ ಶಿವನನ್ನು ಆರಾಧಿಸುವರು. ಆ ಲೋಕದಿಂದಾಚೆಗೆ ಐದನೆಯದಾದ ಜನರ್ಲೋಕವಿರುವುದು. ಅಲ್ಲಿ ಸನಕಾದಿಗಳು ಶಿವಭಕ್ತಿಯೋಗದಿಂದ ಇರುತ್ತಿರುವರು. ಆ ಲೋಕದಿಂದ ಮೇಲಕ್ಕೆ ಹೋಗಲು ಆರನೆಯದಾದ ತಪರ್ಲೋಕವಿರುವುದು. ಅಲ್ಲಿ ಕಮಲಲೋಚನನಾದ ವಿಷ್ಣುವಿರುವನು. ಅಲ್ಲಿಂದ ಮೇಲೆ ಕಾಂತಿಯುತ ಏಳನೆಯದಾದ ಸತ್ಯಲೋಕವುಂಟು. ಅಲ್ಲಿ ಚತುರ್ವದನನಾದ ಬ್ರಹ್ಮನಿರುವನು. ಆ ಸತ್ಯಲೋಕದಿಂದ ಮೇಲೆ ಆಕಾಶವಿಹುದು. ಬ್ರಹ್ಮನು ಈ ರೀತಿ ಚತುರ್ದಶ ಭುವನಭವನದಲ್ಲಿ ನಾಗಕುಲ ನರ ಸುರಾಸುರ ಸಿದ್ಧ ವಿದ್ಯಾಧರ ಅಪ್ಸರ ಮನು ಮುನಿ ಗರುಡ ಗಂಧರ್ವ ಕಿನ್ನರ ಕಿಂಪುರುಷರೆಂಬ ಪರಮ ಸಚರಾಚರವನು ಉಚಿತವಾಗಿ ಅವರವರ ಸ್ಥಾನದಲ್ಲಿರಿಸಿ ಅವರಿಂದ ಓಲಗಂಗೊಳುತ ಸುಖಸಂಕಥಾವಿನೋದದಲ್ಲಿರ್ದನು (೨೧-೩೬).

೧೬ ಹರಿಯುಜಗರ್ವಖಂಡನ ಸಂಧಿ

ಒಂದು ದಿನ ಬ್ರಹ್ಮನು ತನ್ನ ಸಭೆಯಲ್ಲಿ ರತ್ನಸಿಂಹಾಸನದಲ್ಲಿ ಕುಳಿತಿರಲು ಅವ

ನ ಪುತ್ರ ಪೌತ್ರರಾದ ಮನು, ಮುನಿ ಮೊದಲಾದ ಜನರು ಅವನಿಗೆ "ನೀನೇ ಸಕಲ ಜಗದೊಡೆಯ, ನಿನಗೆ ಬೇರೆ ದೇವರಿಲ್ಲೆಂ" ದು ಸ್ತುತಿಸುತ್ತಿದ್ದರು (೨-೩). ಆ ಸ್ತುತಿಯಿಂದ ಅವನಲ್ಲಿ ಅಹಂಕಾರವುಂಟಾಗಿ ತನ್ನನ್ನು ತಾನೆ ಹೊಗಳಿಕೊಳ್ಳಲು ಅವನ ಅಸತ್ಯಕ್ಕೆ ಜಗತ್ತೇ ಅಳಿಯುತ್ತಿರಲು ಅದನ್ನು ತಿಳಿದು ವಿಷ್ಣುವು ಅಲ್ಲಿಗೆ ಬಂದು ನಿಲ್ಲಲು ಗರ್ವದಿಂದ ಬ್ರಹ್ಮನು ಅವನನ್ನು "ನೀನು ಯಾರೆಂ" ದು ಕೇಳಲು ಅವನು "ಬ್ರಹ್ಮನೇ, ನೀನು ಕುರಿ, ನಿನ್ನ ಸಭಾಸದರು ನಿನ್ನನ್ನು ಹೊಗಳಲು ನಿನಗೆ ಅಹಂಕಾರವುಂಟಾಗಿ ನಿನಗೂ ಲೋಕಕ್ಕೂ ಒಡೆಯನಾದ ನನ್ನನ್ನು ಮರೆತೆಯಾ ?" ಎಂದನು. ಅದಕ್ಕೆ ಬ್ರಹ್ಮನು ಕನಲಿ "ನಾನು ಕುರಿಯೋ ವಿಕ್ರಯಶೇಷ ಮೇಷದಂತಿದ್ದ ನೀನು ಕುರಿಯೋ? ಹೇಳು" ಎಂದು, ಮತ್ತೆ "ಎಲೈ ಸಭಾಸದರೇ, ಇವನು ನನಗೆ ಒಡೆಯನೆಂದು ಈ ಸಭೆಯಲ್ಲಿ ಹೇಳಿಕೊಳ್ಳುವನು, ನನ್ನನ್ನು ಕುರಿಯೆಂದು ಕರೆದ ಇವನ ನಾಲಿಗೆಯನ್ನು ಸೀಳಬೇಡವೇ? ಇವನನ್ನು ಕೊಲ್ಲಬೇಡವೇ?" ಎಂದು ಉರಿದೇಳಲು, ಕಮಲಾಕ್ಷನು "ಎಲೋ, ನನ್ನನ್ನು ವಿಕ್ರಯಶೇಷ ಮೇಷನೆಂದು ಹಳಿದೆ. ನನ್ನ ಪರಾಕ್ರಮವನ್ನು ನೋಡು" ಎಂದು ಕೂಡಲೆ ಆನೆ ಕುದುರೆ ತೇರು ಕಾಲಾಳು ಮೊಲಾದವುಗಳು ದಿಕ್ಕುದಿಕ್ಕುಗಳೆಲ್ಲಾ ತುಂಬುವಂತೆ ಸೃಜಿಸಿದನು (೪-೮). ಇದನ್ನು ಕಂಡು ಬ್ರಹ್ಮನ ಸಭೆಯಲ್ಲಿ ವೀರಾವೇಶವುಂಟಾಗಿ ಬ್ರಹ್ಮನ ಪಕ್ಷದವರು ಯುದ್ಧಕ್ಕೆ ಸನ್ನದ್ಧರಾದರು (೯-೧೦). ಬ್ರಹ್ಮವಿಷ್ಣುಗಳ ಆಜ್ಞೆಯ ಮೇರೆಗೆ ಎರಡೂ ಸೈನ್ಯದ ಚೂಣಿಯ ಭಟರಿಗೆ ಕಾಳೆಗವು ಮುಂಕೊಂಡುದು (೧೧). ಇದನ್ನು ಕಂಡು ಸಮಸ್ತಲೋಕದ ಜನರು "ಸೃಷ್ಟಿರಕ್ಷಾಕರ್ತರೆ ಕಾಳೆಗ ಮಾಡತೊಡಗಿದರೆ ಜಗತ್ತ್ರಯವನ್ನು ರಕ್ಷಿಸುವವರು ಅಷ್ಟಮೂರ್ತಿಯಾದ ಶಿವನ ಹೊರತು ಇನ್ನಾರೆಂ" ದು ಮೊರೆಯಿಟ್ಟರು (೧೨). ಚೂಣಿಗಾಳೆಗದಲ್ಲಿ ಎಲ್ಲ ಭಟರು ಮಡಿದನಂತರ ಬ್ರಹ್ಮನು ಹಂಸವಾಹನನಾಗಿ ತನ್ನ ಪಕ್ಷದಲ್ಲಿದ್ದ ದೇವ ದಾನವ ಮನು ಮುನಿ ಚತುರಂಗಬಲವನ್ನು ನೋಡಿ ವಿಷ್ಣುವನ್ನು ಕುರಿತು "ನನ್ನ ಸಂಪತ್ತಿಗೆ ಸರಿಯಾದ ಸಂಪತ್ತನ್ನು ತೋರಿಸು" ಎಂದನು (೧೩-೧೬). ಅದಕ್ಕೆ ವಿಷ್ಣುವು "ನನ್ನ ಇದನ್ನು ನೋಡೆಂದು" ವಿಶ್ವರೂಪಿಂದ ಅಸಂಖ್ಯಾತ ಮನು ಮುನಿಗಳನ್ನೂ ದೇವದಾನವರನ್ನೂ ಅಸಂಖ್ಯ ಬ್ರಹ್ಮ ವಿಷ್ಣುಗಳನ್ನೂ ಅಖಿಳ ಚತುರಂಗವನ್ನೂ ಪಡೆದನು (೧೮). ಅವರಿರ್ವರ ಬಲಗಳಿಗೆ ಭಯಂಕರ ಕಾಳೆಗವೆಸಗಿತು (೧೯-೨೪). ಅನಿತರೊಳಗೆ ಬ್ರಹ್ಮ ವಿಷ್ಣುಗಳಿಗೆ ದ್ವಂದ್ವಯುದ್ಧವಾಯಿತು (೨೫-೩೪). ಬಹಳ ಹೊತ್ತು ಹೋರಾಡಿದರೂ ಇಬ್ಬರೂ ಸೋಲುಗೆಲವುಗಳನ್ನು ಕಾಣದೆ ಮಲ್ಲಯುದ್ಧವನ್ನು ಮಾಡಬೇಕೆಂದು ಬಗೆಯುತ್ತಿರುವಾಗ ಗರುಡಹಂಸಗಳಿಗೆ ಯುದ್ಧವಾಗಿ ಅವೆರಡು ಮಡಿಯಲು ವಿಷ್ಣು ಬ್ರಹ್ಮರು ಆರ್ಭಟಿಸಿ ಮಲ್ಲಗಾಳೆಗಕೆ ಅನುವಾ

ದರು (೩೫). ಅವರು ಮುಷ್ಟಿಯುದ್ಧವನ್ನು ಆರಂಭಿಸಿ ಒಬ್ಬರನ್ನೊಬ್ಬರು ಹೊಡೆಯುವಾಗ ಮಾಧವನು ಸಿಟ್ಟಿನಿಂದ ಬ್ರಹ್ಮನ ತಲೆಯನ್ನು ಮುಷ್ಟಿಯಿಂದ ತಿವಿಯಲು ಅದು ಸರಿಯಾಗಿ ನಾಲ್ಕು ಹೋಳಾಯಿತು (೩೬-೪೦). ಬ್ರಹ್ಮನು ಅದಕ್ಕೆ ಬೆದರದೆ ಆ ಹೋಳುಗಳನ್ನೇ ನಾಲ್ಕು ಮುಖಗಳನ್ನಾಗಿ ಮಾಡಿಕೊಂಡು ಮತ್ತೆ ರೋಷದಿಂದ ಹರಿಗೆ ಮಾರಾಂತು ನಿಂತನು. ಅಷ್ಟರಲ್ಲಿ ಆಕಾಶದಲ್ಲಿ ಒಂದು ವಾಣಿ ಕೇಳಿಸಿತು (೪೧). "ಮುರಾರಿ ಬ್ರಹ್ಮರೇ ನೀವೇನು ಮೂರ್ಖರೇ? ನಿಮಗಿಬ್ಬರಿಗೂ ಬೇರೆ ವಸ್ತುವುಂಟು. ಆ ವಸ್ತುವು ಇಲ್ಲಿ ಹುಟ್ಟುವುದು. ಅದರ ಪಾದ ಮಸ್ತಕಗಳನ್ನು ಕಂಡವರೇ ಸಾಹಸಿಗಳು." ಆ ಮಾತು ಕೇಳಿ ಬೆರಗಾಗಿ ಇಬ್ಬರೂ ರಣಾವೇಶವನ್ನು ಮರೆತು ನೋಡುವಾಗ ಅವರ ಮಧ್ಯದಲ್ಲಿ ಮಹಾಲಿಂಗವು ಉದಯಿಸಿತು (೪೨-೪೩). ಧರಣಿಯೇ ಅದರ ಪೀಠವೂ, ಶೈಲಗಳೇ ಭುಜಗಳೂ, ಸಪ್ತಸಮುದ್ರಗಳೇ ಕುಕ್ಷಿಯೂ, ಚಂದ್ರ ಸೂರ್ಯರೇ ಕಣ್ಣುಗಳೂ, ರಸಾತಳವೇ ಪಾದವೂ, ನಕ್ಷತ್ರಗಳೇ ಹೂಗಳೂ, ಪ್ರಮಥಗಣವೇ ಅದರ ಪರಿವಾರವೂ ಆಗಿರಲು ಅಜಹರಿಗಳನ್ನು ಬೆರಗುವಡಿಸುವಂತೆ ಆ ಲಿಂಗವು ಉದಯಗೊಂಡುದು (೪೪). ಆಗ ಹರಿಯು ಅದರ ಪಾದವನ್ನೂ ಬ್ರಹ್ಮನು ಅದರ ಮಸ್ತಕವನ್ನೂ ಕಾಣುವೆನೆಂದು, ಹರಿಯು ವರಾಹಾಕೃತಿಯನ್ನು ತಾಳಿ ಪೃಥ್ವಿಯನ್ನು ಬಗೆದು ಹೊರಟನು. ಬ್ರಹ್ಮನು ಹಂಸಾಕೃತಿಯನ್ನು ತಾಳಿ ಆಕಾಶದಲ್ಲಿ ಹೊರಟಾಗ ಅವನಿಗೆ ಕೇತಕಿಯು ಎದುರಾದನು (೪೫). ಬ್ರಹ್ಮನು ಅವನನ್ನು "ಎಲ್ಲಿಂದ ಬಂದೆ" ಯೆಂದು ಕೇಳಲು "ಪರಶಿವನ ಮುಕುಟದಿಂದ ಬಂದೆ" ನೆಂದನು. ಅದಕ್ಕೆ ಅದು "ಎಷ್ಟುದೂರದಲ್ಲಿದೆ" ಯೆಂದು ಬ್ರಹ್ಮನು ಕೇಳಲು "ಹಲವು ಯುಗ ಹೋದರೂ ಕಾಣುವುದು ಅಸಂಭವವೆಂ" ದು ಕೇತಕಿಯು ಹೇಳಿದನು (೪೬). ಬ್ರಹ್ಮನು ಆಶ್ಚರ್ಯಪಟ್ಟು "ನಾನು ಪರಶಿವನ ಮಸ್ತಕವನ್ನು ಕಾಣುವೆನೆಂದು ಹರಿಯೊಡನೆ ಭಾಷೆಕೊಟ್ಟು ಬಂದೆ. ಆದುದರಿಂದ ನನ್ನ ಮಾತು ಗೆಲ್ಲುವಂತೆ ನೀನು ಸಹಾಯ ಮಾಡಬೇಕು" ಎಂದು ಹೇಳಿ ಇಬ್ಬರೂ ರಣಾಂಗಣಕ್ಕೆ ಬಂದರು (೪೭). ಹರನ ಪಾದಗಳನ್ನು ಕಾಣದೆ ವಿಷ್ಣುವು ಮರಳಿ ಬರಲು ಇವರು ಮೊದಲೇ ಅಲ್ಲಿರಲು "ನೀನು ಶಿವನ ಮುಕುಟವನ್ನು ಕಂಡೆಯಾ?" ಎಂದು ಬ್ರಹ್ಮನನ್ನು ಕೇಳಲು ಬ್ರಹ್ಮನು "ಕಂಡೆನು, ಅದಕ್ಕೆ ಕೇತಕಿರಾಜನು ಸಾಕ್ಷಿ" ಯೆನ್ನಲು, ವಿಷ್ಣುವು ಅದನ್ನು ತಿಳಿದು "ನೀನು ಶಿವನ ಮಸ್ತಕಕ್ಕೆ ಸಲ್ಲಬೇಡವೆಂದು ಕೇತಕಿಯನ್ನು ಶಪಿಸಿದನು (೪೮). ಅಷ್ಟರಲ್ಲಿ ಲಿಂಗವು ಭೀಕರಾಕಾರವನ್ನು ತೋರಲು ಇವರು ಗಾಬರಿಯಾಗಿ "ನಿನ್ನ ಭೀಷಣಮೂರ್ತಿಯನ್ನು ನೋಡಲಾರೆವೆಂದು ಹೊಗಳಲು ಲಿಂಗವು ಸುಭಗರೂಪಿನಿಂದಿರಲು ಅವರು ಪಾರ್ವತೀಶ್ವರನನ್ನು ಕೊಂಡಾಡಿದರು (೪೯-೫೩). ಆಗ ಈಶ್ವರನು ಅವರಿಬ್ಬರಿಗೂ ಆಶೀರ್ವದಿಸಿ ನೀವು ನಿಮ್ಮ ಕರ್ತವ್ಯಗಳನ್ನು ಮುನ್ನಿ

ನಂತೆ ಮಾಡಿಕೊಂಡು ಇರಬೇಕು ಎಂದು ಹೇಳಿ ಬಯಲಾದನು (೫೩-೫೪).

೧೭ ಅರ್ಧನಾರೀಶ್ವರಲೀಲೆಯ ಸಂಧಿ

ಎಲೈ ಸಿದ್ಧರಾಮೇಶನೇ ಕೇಳು, ಬ್ರಹ್ಮನು ಸೃಷ್ಟಿಯನ್ನು ಹೇಗೆ ಮಾಡಬೇಕೆಂದು ವಿಚಾರಿಸುತ್ತ ತನ್ನ ಮುನ್ನಿನ ಅಸತ್ಯದಿಂದ ಸೃಷ್ಟಿಸುವುದು ಅಸಾಧ್ಯವಾಗಿರಲು ಈಶ್ವರನನ್ನು ಕುರಿತು ಬಹುಕಾಲ ತಪಸ್ಸುಮಾಡಿದನು. ಅದಕ್ಕೆ ಈಶ್ವರನು ಮೆಚ್ಚಿ ವರವ ಬೇಡೆನ್ನಲು, ಅವನು "ದೇವ ನೀವು ನನ್ನ ದೇಹದಲ್ಲಿ ಜನಿಸಿದರೆ ಸೃಷ್ಟಿಯನ್ನು ಚೆನ್ನಾಗಿ ಮಾಡುವೆನೆಂ" ದನು (೨-೩). ಈಶ್ವರನು "ನಾನು ನಿನ್ನ ಒಡಲೊಳಗೆ ಒಡೆದು ಮೂಡಿದರೆ ನಿನಗೆ ವಿಲಯವಾಗುವುದು." ಬ್ರಹ್ಮನು "ಆದರೂ ಚಿಂತೆಯಿಲ್ಲ" ಎನ್ನಲು, "ಹಾಗೆಯೇ ಮಾಡುವೆನು. ನೀನು ತಪವನ್ನು ಮಾಡು, ನಿಜ ಸಮಾಧಿಯೊಳಗೆ ಕೂಡಿರು" ಎಂದು ಬಯಲಾದನು (೪). ಮುಂದೆ ಈಶ್ವರನು ಉಮಾಶಕ್ತಿಯೊಡನೆ ಬ್ರಹ್ಮನ ಹಣೆಯ ಮಧ್ಯದಲ್ಲಿ ಒಡೆದು ಮೂಡಿದನು. ಕೂಡಲೇ ಬ್ರಹ್ಮನ ಶರೀರವು ಎರಡು ಸೀಳಾಯಿತು (೫). ಆಗ ಈಶ್ವರನು ರುದ್ರಮೂರ್ತಿಯನ್ನು ತಳೆದನು. ಉಮೆಯು ಮಹಾಕಾಳಿಯಾದಳು. ಇಬ್ಬರೂ ಬಾಲಸೂರ್ಯನಂತೆಯೂ ಆ ಮಂಡಲದ ಹತ್ತಿರವಿಪ್ಪ ನೀಲಮೇಘದಂತೆಯೂ ಶೋಭಿಸಿದರು (೬). ಈ ರೀತಿ ರುದ್ರಮಹಾಕಾಳಿಯರು ಕೆಲಕಾಲ ವಿಲಾಸದಿಂದಿರಲು ರುದ್ರಗಣವೂ ಬಲವಿಕರಣಿ ಬಲಪ್ರಮಥಿನಿಯರೆಂಬ ಶಕ್ತಿದೇವಿಯರೂ ಉದಯಿಸಿದರು. ರುದ್ರಮಹಾಕಾಳಿಯರು ಅವರನ್ನು ದಂಪತಿಗಳನ್ನು ಮಾಡಿ ಅವರೊಡನೆ ಸುಖದಿಂದಿದ್ದರು (೭). ಬ್ರಹ್ಮನ ಶರೀರದ ಎರಡು ಸೀಳುಗಳನ್ನು ಕೂಡಿಸಲು ಬ್ರಹ್ಮನು ಎಚ್ಚೆತ್ತು ಅವರ ರುದ್ರಸ್ವರೂಪವನ್ನು ನೋಡಿ ಭಯಗೊಂಡು "ಏಕರೂಪದಿಂದ ನನ್ನನ್ನು ಕರುಣಿಸುವುದು" ಎನಲು ಈಶ್ವರನು ಅರ್ಧನಾರೀಶ್ವರನಾದನು (೮). ನೀಲಮಾಣಿಕ್ಯವೆರಡೊಂದಾದ ಮೂರ್ತಿ, ಮುಡಿ-ಜಡೆ, ಓಲೆ-ಕುಂಡಲ, ಕಂಠಾಭರಣ-ತಲೆಮಾಲೆ, ನೀಲೋತ್ಪಲ-ಶೂಲ, ಮಣಿಜಾಲ-ಪನ್ನಗಾಭರಣ, ದುಕೂಲ-ಚರ್ಮಾಂಬರ ಇವುಗಳನ್ನು ಧರಿಸಿ ಅರ್ಧನಾರೀಶ್ವರನು ಶೋಭಿಸಿದನು (೯). ಅವನನ್ನು ನೋಡಿ ಬ್ರಹ್ಮನು ಕೈಮುಗಿದು ಭಯಭಕ್ತಿಯಿಂದ "ಸೃಷ್ಟಿಯನ್ನು ಹೇಗೆ ಮಾಡಲಿ?" ಎಂದನು (೧೦). ಈಶ್ವರನು "ನೀನು ಈ ರುದ್ರಗಣವನ್ನು ಕರೆದುಕೊಂಡು ಮಾಡೆ" ನಲು ಅವರ ರುದ್ರರೂಪವನ್ನು ನೋಡಿ "ನಾನು ಇವರನ್ನೊಲ್ಲೆ" ಎನಲು, "ಒಳ್ಳೆಯದು ಮೊದಲಿನಂತೆ ಸೃಷ್ಟಿಯನ್ನು ಮಾಡು" ಎಂದು ಹೇಳಿ

ಬಯಲಾದನು (೧೧). ಆ ವೇಳೆಗೆ ಬ್ರಹ್ಮನು ಮೊದಲಿನಂತೆ ಸೃಷ್ಟಿಯನ್ನು ನಿರ್ಮಿಸಿ ಸಂತೋಷದಿಂದ ಸತ್ಯಲೋಕದಲ್ಲಿದ್ದನು (೧೨).

೧೮ ಬ್ರಹ್ಮಶಿರಶ್ಛೇದನದ ಸಂಧಿ

ಬ್ರಹ್ಮನು ಓಲಗದಲ್ಲಿದ್ದಾಗ ಅಲ್ಲಿ ನೆರೆದಿದ್ದ ಮುಖ್ಯ ಮುನಿಗಳೆಲ್ಲರು ಅವನಿಗೆ ಕೈಮುಗಿದು ಭಯಭಕ್ತಿಯಿಂದ ಕೊಂಡಾಡಿ "ಜಗಕ್ಕೆಲ್ಲ ನಿತ್ಯನಾವನು? ನಾವು ಯಾರನ್ನು ಅರ್ಚಿಸತಕ್ಕದ್ದು?" ಎನ್ನಲು, ಬ್ರಹ್ಮನು "ಸಕಲ ಜಗದ ಸೃಷ್ಟಿ ಸ್ಥಿತಿ ಪ್ರಳಯಂಗಳೆಲ್ಲ ನನ್ನ ಆಧೀನವು. ಇದನ್ನೆಲ್ಲ ಹೊರುವುದಕ್ಕೆ ನಾನಲ್ಲದೆ ಮತ್ತಾರು? ಇಂದ್ರ, ಹರಿ, ರುದ್ರ ಮೊದಲಾದವರೆಲ್ಲ ನನ್ನನ್ನೇ ಧ್ಯಾನಿಸುವರು, ನಾನೇ ಪರಬ್ರಹ್ಮ, ನನ್ನಿಂದ ಅಧಿಕರಿಲ್ಲ" ಎಂದನು (೨-೩). ಅಷ್ಟರಲ್ಲಿ ವಿಷ್ಣುವು ಇವನ ಅಜ್ಞಾನವನ್ನು ತಿಳಿದು ಬಂದು "ಬ್ರಹ್ಮನೇ ನೀನು ಮೀರಿದವ್ವಬೇಡ, ಇದು ಈಶ್ವರ ಮಾಯೆ. ನೀನು ಸೃಷ್ಟಿಕರ್ತ. ನಾನು ರಕ್ಷಿಸುವಾತ. ನಮ್ಮಿಬ್ಬರಿಗೆ ಶಂಭು ನಾಥನು. ವೇದಗಳನ್ನು ಕೇಳು" ಎಂದನು (೪-೫). ವೇದಗಳೆಲ್ಲ ಆಕಾರವನ್ನು ತಾಳಿ "ಅತ್ಯತಿಷ್ಠದ್ದಶಾಂಗುಲನೆನಿಪ್ಪಾ ಮಹೇಶನೇ ಅದ್ವಿತೀಯನೂ ಸಕಲ ಜಗದಾಧಾರನೂ" ಎಂದುವು (೬). ಸತ್ಪ್ರಣವವು ಆಕಾರವನ್ನು ತಾಳಿ ಇದೇ ಮಾತನ್ನು ಸಮರ್ಥಿಸಿ "ನಾನೇ ದೇವನೆಂದು ಅಹಂಕರಿಸಬೇಡ" ವೆಂದು ಹೇಳಿ ಬಯಲಾಯಿತು (೭). ಹೀಗೆ ನಿಗಮೋಂಕಾರಗಳು ನುಡಿದ ಮಾತನ್ನು ಕೇಳಿ ಅಜನು ಹರಿಯ ಮುಖವನ್ನು ನೋಡಿ "ಸತಿಗರ್ಧದೇಹವನ್ನು ಕೊಟ್ಟವನನ್ನೂ ಆನೆದೊವಲುಟ್ಟ ಅಶುಚಿಯನ್ನೂ ಸ್ಮಶಾನದಲ್ಲಿ ಭ್ರಾಂತಿಯಿಂದಿದ್ದ ಅಶುಭಮೂರ್ತಿಯನ್ನೂ ಈ ಬರಿನುಡಿಯ ಬ್ರಹ್ಮವು ಹೊಗಳಿತು. ಇದನ್ನೆಲ್ಲಿ ನಂಬುವರಾರೋ?" ಎಂದನು.

ಆ ಕ್ಷಣದಲ್ಲಿ ಈಶ್ವರನು ಪಂಚವದನ, ದಶಭುಜ, ಪಂಚದಶಲೋಚನಗಳಿಂದಲೂ ಹುಲಿತೊಗಲಿನಿಂದಲೂ ಕೂಡಿದ ಕೆಂಜೆಡೆಯ ಮಂಜುಳಾಕಾರವನ್ನು ತಾಳಿ ಬ್ರಹ್ಮನ ಎದುರಿನಲ್ಲಿ ಉದಯಿಸಿದನು (೮-೯). ಆ ಮೂರ್ತಿಯನ್ನು ಮಂದಮತಿಯಾದ ಬ್ರಹ್ಮನು ನೋಡಿ ಹಾಸ್ಯೋಕ್ತಿಯಿಂದ "ಇವನೇ ಜಗದೊಡೆಯನು? ನಗೆಯಿಂದ ನನ್ನ ಹೊಟ್ಟೆಯು ನೊಯ್ಯುತ್ತದೆ. ಇವನ ಬಹುರೂಪು ಕಣ್ಣಿಗೆ ಎಷ್ಟು ಅಂದವಾಗಿದೆ? ಎಲ್ಲರೂ ನೋಡಿರಿ" ಎಂದು ಕೈತೊಯ್ದು ನಕ್ಕು "ನಿನಗೆ ಪಂಚವದನದ ಹೆಮ್ಮೆಯಿದ್ದಂತೆ ಕಾಣುತ್ತದೆ. ನಾನೂ ಪಂಚಮುಖವನ್ನು ತಾಳುವೆನು ನೋಡೆಂ" ದು ಹೇಳಿ ಹೊಸಮುಖವೊಂದನ್ನು ಧರಿಸಿ ಆ ಮುಖದಿಂದ ಮತ್ತೆ

ಶಂಭುವನ್ನು ಮನಸಾರೆ ನಿಂದಿಸಿದನು (೧೦-೧೧). ನೀನೇ ಸಕಲಜಗದಾಧಾರ ನೆಂತೆ, ಪರಬ್ರಹ್ಮವೆಂತೆ, ನೀನೆಲ್ಲಿ ಹುಟ್ಟಿದೆ? ತಂದೆತಾಯ್ಗಳಾರು? ಎಂದು ಕೇಳಿದ ನು. ಬ್ರಹ್ಮನು ಈ ರೀತಿ ಈಶ್ವರನನ್ನು ಜರೆದು "ನೀನು ನನ್ನನ್ನು ಹೊಂದಿಕೊಂಡ ರೆ ನಿನಗೆ ಉತ್ತಮ ಪದಗಳನ್ನು ಕೊಡುವೆನು ಇಲ್ಲದಿದ್ದರೆ ನಿನ್ನನ್ನು ಸದೆದು ಅಸುವ ನ್ನು ತೆಗೆಯುವೆನು" ಎಂದು ಆರ್ಭಟಿಸಲು, ಈಶ್ವರನು ಕ್ಷಣದಲ್ಲಿ ಅದ್ಭುತ ಭೈರ ವಾಕಾರವನ್ನು ತಾಳಿ ಬ್ರಹ್ಮನ ಹೊಸ ಮುಖವನ್ನು ಎಡದ ಕೂರುಗುರಿಂದ ಉಡಿದ ನು. ಅದರಿಂದ ಹೊರಟ ರಕ್ತಪ್ರವಾಹವು ಸಕಲ ಲೋಕಗಳನ್ನು ಮುಳುಗಿಸುತ್ತಿರಲು ಶಿವನು ತನ್ನ ಭಾಳಾಕ್ಷಿಯಿಂದ ಒಂದು ದೊಡ್ಡ ಕಿಡಿಯನ್ನು ಬಿಡಲು ಆ ಕಿಡಿಯು ಕೂಡಲೇ ಆ ರಕ್ತವನ್ನೆಲ್ಲ ಹೀರಿಕೊಂಡು ಮುರಿದ ಬ್ರಹ್ಮನ ಶಿರವನ್ನು ಹೋಳುಮಾ ಡಿತು (೧೨-೧೫). ಈಶ್ವರನ ಕೈಯಲ್ಲಿ ಹೋಳಾದ ತನ್ನ ಶಿರವನ್ನೂ ರಕ್ತಪ್ರವಾಹ ವನ್ನೂ ನುಂಗಿದ ಆ ತೋರಕಿಡಿಯನ್ನೂ ಹೊಗಳುತ್ತಿದ್ದ ದೇವತೆಗಳನ್ನೂ ಕೊಂಡಾ ಡುವ ವೇದಗಳನ್ನೂ ನುತಿಸುತ್ತಿದ್ದ ವಿಷ್ಣುವನ್ನೂ ಬ್ರಹ್ಮನು ನೋಡಿ ತಾನು ಉ ದ್ದಂಡದೈವದ ಕೂಡೆ ಸೆಣಸಿದೆನೆಂದು ತಿಳಿದು "ನಾನು ಶೈವದ್ರೋಹಿಯಾದೆನು, ಕೆಂಡು ಕಂಡು ಮರುಳಾದೆನು" ಎಂದು ಈಶ್ವರನ ಪಾದದಲ್ಲಿ ಎರಗಿದನು (೧೬-೧೭). ಬ್ರಹ್ಮನ ಪಶ್ಚಾತ್ತಾಪಕ್ಕೆ ಮನಕರಗಿ ಶಿವನು ಅವನನ್ನು ಕ್ಷಮಿಸಿ ಅವನಿಗೆ ಅಭಯವಿತ್ತು ಎಲ್ಲರನ್ನು ಬೀಳ್ಕೊಟ್ಟನು (೧೮-೧೯).

೧೯ ಭಿಕ್ಷಾಟನಲೀಲೆಯ ಸಂಧಿ

ಎಲೈ ಸಿದ್ಧರಾಮನೇ ಕೇಳು. ಬ್ರಹ್ಮನ ಕಪಾಲವನ್ನು ಕೈಯಲ್ಲಿ ಹಿಡಿದು ಕೊಂಡು ಭಯಂಕರವಾದ ಭೈರವರೂಪವನ್ನು ಬಿಟ್ಟು ಆ ಶಿರಸ್ಸಿಗೆ ತುಷ್ಟಿಯನ್ನುಂಟು ಮಾಡುವುದರಲ್ಲಿ ವಿಷ್ಣು ಮೊದಲಾದವರ ಭಕ್ತಿಯನ್ನು ಪರೀಕ್ಷಿಸಬೇಕೆಂದು ಬಗೆದು ಶಿವನು ದಿವ್ಯರೂಪವನ್ನು ಧರಿಸಿ ಹೊರಟನು (೨-೩). ಕಾಮನ ಭಸ್ಮವನ್ನು ಅ ಗಣಿತ ಪ್ರಕಾಶದಿಂದ ಮೆರೆಯುವ ಕಾಯದಲ್ಲಿ ಧರಿಸಿ ಬಲಗೈಯಲ್ಲಿ ತ್ರಿಶೂಲವನ್ನೂ ಎಡಗೈಯಲ್ಲಿ ಬ್ರಹ್ಮಕಪಾಲವನ್ನೂ ಹಿಡಿದು ಹದಿನಾರು ವರ್ಷದ ಪ್ರಾಯದವನಾಗಿ ತೋರಿದನು (೪-೬). ವಿಷ್ಣುವಿನ ಭಕ್ತಿಯನ್ನು ನೋಡುವುದಕ್ಕಾಗಿ ವೈಕುಂಠಪು ರಕ್ಕೆ ಬರಲು ಅಲ್ಲಿಯ ಸ್ತ್ರೀಜನರು ಇವನನ್ನು ಕಂಡು ಮನಸೋತರು. ಬೀದಿಯೊಳಗೆ ಅವನ ಬೆನ್ನು ಹತ್ತಿದರು. ಹಲವರು ಅವನ ರೂಪವನ್ನು ಕಂಡು ಮೂರ್ಛೆ ಹೊಂದಿ ದರು (೭-೮). ಹರಿಯ ಅರಮನೆಯ ಬಾಗಿಲಿಕೆ ಬರಲು ವಿಷ್ವಕ್ಸೇನನೆಂಬುವನು ತಡೆ

ಯಲು ಅವನನ್ನು ಈಶ್ವರನು ತ್ರಿಶೂಲದಿಂದಿರಿದು ಎತ್ತಲು ಆ ದ್ವಾರಪಾಲಕನು ಬೆದರದೆ ಗಹಗಹಿಸಿ ನಗಲು, “ ಎಲೋ, ಕೆಚ್ಚೆದೆಯವನು ನೀನು ನಗುವ ಕಾರಣವೇನೆಂ” ದು ಕೇಳಲು “ ವೇದಗಳಿಗೆ ನಿಲುಕದ ನಿನ್ನ ಸಚ್ಚಿದಾನಂದ ರೂಪವನ್ನು ಕಂಡೆನು, ನನ್ನನ್ನು ಕೆಳಗಿಳಿಸಬೇಡ” ಎನ್ನಲು ಹರನು “ ಅಂತೆ ಆಗಲಿ ” ಎಂದನು (೯-೧೦). ಅನಿತರಲ್ಲಿ ಈಶ್ವರನ ಬರವನ್ನು ಕೇಳಿ ಹರಿಯು ಬಂದು ದೂರದಿಂದಲೆ ವೈಯಿಕ್ಕಿ ಸ್ತುತಿಸಿದನು (೧೧-೧೨). ಹರನು ಬಂದ ಉದ್ದೇಶವನ್ನು ತಿಳಿದು ಬ್ರಹ್ಮಕಪಾಲಕ್ಕೆ ತನ್ನ ಹಣೆಯೊಳಗಿನ ರಕ್ತವನ್ನು ಎರೆಯಲಾರಂಭಿಸಿದನು (೧೩-೧೪). ಸಹಸ್ರಾರು ವರ್ಷಗಳ ವರೆಗೆ ಆ ರಕ್ತವು ಸುರಿಯುತ್ತಿರಲು ಹರಿಯ ಸರ್ವಾಂಗದೊಳಗಿನ ರಕ್ತವೆಲ್ಲ ಹೋಗಿ ಚರ್ಮಾಸ್ಥಿಗಳು ಮಾತ್ರ ಉಳಿಯಲು ಶಕ್ತಿ ಸಾಲದೆ ಹರಿಯು ನೆಲಕ್ಕೆ ಬಿದ್ದನು. ಆದರೂ ರಕ್ತವು ಹೊಳೆಯಂತೆ ಹರಿಯುತ್ತಲಿದ್ದುದರಿಂದ ಭಕ್ತಚರಿತಕ್ಕೆ ಈಶ್ವರನ ಮನಸ್ಸು ಕರಗಿತು (೧೫). ಈಶ್ವರನು “ ಇನ್ನು ಸಾಕು, ನಿನ್ನ ಭಕ್ತಿಗೆ ಮೆಚ್ಚಿದೆ ” ನೆಂದು ಹರಿಯನ್ನು ಸಂತೈಸಿ ದೇವೇಂದ್ರನ ಪುರಕ್ಕೆ ಬಂದು ಒಳಹೊಕ್ಕನು (೧೬-೧೮). ಅಲ್ಲಿ ಪಣ್ಯಾಂಗನಾವೀಥಿಯಲ್ಲಿ ನಡೆದು ಬರುವಾಗ ಶಿವನನೀಕ್ಷಿಸುವ ತವಕದಿಂದ ಅಲ್ಲಿಯ ಸ್ತ್ರೀಯರು ತಮ್ಮ ಕೈಯೊಳಗಿನ ಕೆಲಸಗಳನ್ನೆಲ್ಲ ಬಿಟ್ಟು ಬರತೊಡಗಿದರು (೧೯-೨೭). ಈಶ್ವರನ ರೂಪವನ್ನು ಕಂಡು ಎಷ್ಟೋ ಸ್ತ್ರೀಯರು ವಿರಹತಾಪದಿಂದ ದಶಾವಸ್ಥೆಗಳಿಗೊಳಗಾದರು (೨೮-೩೨). ಉರ್ವಶಿ, ತಿಲೋತ್ತಮೆ, ರಂಭೆ ಮೊದಲಾದ ಸುರಸ್ತ್ರೀಯರು ಈಶ್ವರನ ಬೆನ್ನು ಹತ್ತಿ ಬರುತ್ತಿರಲು ಅವರಿಗೆ ಸೋತವನಂತೆ ನಟಿಸುತ್ತ ಅನೇಕ ಹಾವಭಾವಗಳಿಂದ ಅವರನ್ನೆಲ್ಲ ಮರುಳು ಮಾಡುತ್ತ ಮುಂದೆ ಅಡಿಯಿಟ್ಟನು (೩೩-೩೫). ಆ ಸುರಸತಿಯರಲ್ಲಿ ಹಲವರು ಬಹುದೈನ್ಯದಿಂದ ಅವನನ್ನು ಬೇಡಿಕೊಂಡರು, ಹಲವರು ರತಿಮೂರ್ಛೆಯನ್ನು ಅನುಭವಿಸಿದರು, ಹಲವರು ಬರಿಯೆದೆಯಾಗಿ ಬಳಲಿದರು (೩೬-೪೪). ಅವರ ಅವಸ್ಥೆಯನ್ನು ಕಂಡ ಪುರಜನರು ಈ ಸುರಸ್ತ್ರೀಯರ ಭೋಗ ಕೆಳಸಿ ನಾನಾರಾಜ್ಯದ ಚಕ್ರೇಶ್ವರರು ಬಹು ಜನ್ಮದ ಪುಣ್ಯದಿಂದ ಯಜ್ಞಮೊದಲಾದವುಗಳನ್ನು ಮಾಡಿ ಇವರನ್ನು ಒಂದು ದಿವಸ ನೆರೆಯುವುದು ಅಘಟಿತವಿರುವಾಗ ಈತನು ಕೇವಲ ರೂಪದಿಂದ ಅವರನ್ನೆಲ್ಲ ನಾಣ್ಗೆಡಿಸಿದನೆ ” ಂದು ಬೆರಗಾದರು (೪೫). ಈಶ್ವರನು ಆ ಸತಿಯರ ಬಳಲಿಕೆಯನ್ನು ಕಂಡು ಕರುಣಾರಸದಿಂದ ಅವರನ್ನು ನೋಡಲು ಅವರ ವಿರಹತಾಪವು ಅಳಿದು ಅವರು ರತಿಸುಖಹೊಂದಿದಂತಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಲು, ಈಶ್ವರನು ಇಂದ್ರನ ಅರಮನೆಗೆ ನಡೆತಂದನು (೪೬).

---

೨೦ ದಕ್ಷಿಣಾಮೂರ್ತಿಲೀಲೆಯ ಸಂಧಿ

ಈಶ್ವರನು ಇಂದ್ರನ ಅರಮನೆಯನ್ನು ಹೊಕ್ಕು ಭಿಕ್ಷಾ ಭಿಕ್ಷವೆಂದು ಕೇಳಲು ಇಂದ್ರನು “ನನ್ನ ಹಲವು ಜನ್ಮದ ಸುಕೃತದಿಂದ ಅಭವನು ನನ್ನ ಅರಮನೆಗೆ ಬಂದಿದ್ದಾನೆ”ಎಂದು ತಿಳಿದು ಸಂತೋಷದಿಂದ ಬಂದು ಸ್ತುತಿಸಿ ಹರನ ಅಡಿಗಳಿಗೆ ಎರಗಲು “ಎಲೈ ಇಂದ್ರನೇ, ಬ್ರಹ್ಮಕಪಾಲಕ್ಕೆ ಭಿಕ್ಷೆಯನ್ನು ಹಾಕು” ಎಂದು ಆಕಾಶವಾಣಿಯಾಯಿತು (೧-೭). ಇಂದ್ರನು ಎಣಿಕೆಯಿಲ್ಲದ ವಸ್ತುಗಳನ್ನು ತರಿಸಿ ಅವನ್ನೆಲ್ಲ ಶಚಿಯೊಡನೆ ಕರಕಪಾಲಕ್ಕೆ ಎರೆಯಲು ಅದು ತುಂಬದಿರಲು ಅಮೃತಕಲಶವನ್ನು ನೀಡಲಿಕ್ಕೆ ಬಂದನು (೮-೯). ಈಶ್ವರನು “ಸಾಕು ಸಾಕು, ಅಮೃತಕಲಶವು ದೇವತೆಗಳ ಜೀವನಾಧಾರ. ಇದನ್ನು ಜೋಕೆಯಿಂದ ಕಾಯಬೇಕು” ಎಂದು ಹೇಳಿ ಅವನನ್ನು ಬೀಳ್ಕೊಟ್ಟು ಅನಿಲಪುರಕ್ಕೆ ಹೋಗಿ ಅಗ್ನಿಯು ಆ ಕಪಾಲಕ್ಕೆ ಭಿಕ್ಷೆ ಹಾಕಲು ಅಲ್ಲಿಂದ ಯಮಪುರಕ್ಕೆ ಬಂದನು (೧೦). ಹರನು ಬಂದ ಮಾತ್ರದಿಂದ ಯಮಪುರದ ಇಪ್ಪತ್ತೆಂಟು ಕೋಟಿ ನಾಯಕ ನರಕಗಳಲ್ಲಿ ಮುಳುಗಿದ ಜನರಿಗೆ ಶೈವಲೋಕಸಂಪ್ರಾಪ್ತಿಯಾಯಿತು (೧೧). ಯಮನ ಭಿಕ್ಷೆಯನ್ನು ಕೈಕೊಂಡು ಉಳಿದ ದಿಕ್ಪಾಲಕರ ಪಟ್ಟಣಗಳಿಗೆ ಹೋಗಿ ಅವರಿಂದ ಭಿಕ್ಷೆಯನ್ನು ಕೈಕೊಂಡು ಎಲ್ಲ ಸ್ಥಳಗಳನ್ನು ಪಾವನ ಮಾಡುತ್ತ ಹರನು ಹಿಮಶೈಲಕ್ಕೆ ಬಂದನು (೧೨-೧೩). ಅಲ್ಲಿಯ ದಾರುಕವನದಲ್ಲಿ ಗೌತಮ ಭೃಗು ಮೊದಲಾದ ಮುನಿಗಳು ಈಶ್ವರಧ್ಯಾನದಲ್ಲಿದ್ದರು (೧೪). ಅವರ ಹೆಂಡಿರು ಮಹಾಪತಿವ್ರತೆಯರಾಗಿ ಅವರ ಶುಶ್ರೂಷೆಯನ್ನು ನೇಸರಿಗೆ ಮುಂಚೆಯೆ ಮಾಡುತ್ತ ಇದ್ದರು (೧೫). ಈಶ್ವರನು ಆದಿಶೇಷನಿಗೂ ಹೊಗಳಲಸದಳವಾದ ರೂಪನ್ನು ಧರಿಸಿ “ಭಿಕ್ಷೆ” ಯೆಂದು ಅಲ್ಲಿಗೆ ಬರಲು ಆ ಋಷಿಸ್ತ್ರೀಯರು ಶಿವನ ಗಂಭೀರಧ್ವನಿಯನ್ನು ಕೇಳಿ ದಿವ್ಯಾನ್ನ ನವನೀತ ಮೊದಲಾದುವನ್ನು ತಂದು ನೀಡುತ ಶಿವರೂಪವನ್ನು ಕಂಡು ಮೋಹಿಸಿದರು (೧೬-೧೭). ಆ ಮುಗ್ಧೆಯರು ಈಶ್ವರನನ್ನು ಕಂಡು ಭ್ರಾಂತರಾಗಿ ಬೆಂಕಿಯೊತ್ತಿನ ಬೆಣ್ಣೆಯಂತೆ ಕರಗಿ, ಸೂಜಿಗಲ್ಲಿದಿರ ಕಬ್ಬಿಣದಂತೆ ತಿರುಗಿದತ್ತ ತಿರುಗಿ ಸೂತ್ರಧಾರರು ಪಿಡಿದಾಡಿಸುವ ಬೊಂಬೆಯಂತಾದರು (೧೮-೨೧). ಈಶ್ವರನು ಮುನಿಗಳನ್ನು ಸಿಟ್ಟಿಗೆಬ್ಬಿಸಬೇಕೆಂದು ಬಗೆದು ಆ ಸತಿಯರ ಕರಸ್ಪರ್ಶ ಮಾಡಲು, ಅವರೆಲ್ಲ ಶಿವನ ಸಾರೂಪ್ಯದ ಶಿಶುಗಳನ್ನು ತಮ್ಮ ಬಸಿರಿನಿಂದ ಪಡೆದರು (೨೨). ಇದನ್ನು ಕಂಡ ಅಲ್ಲಿಯ ವಟುಗಳು “ನಿಮ್ಮ ಹೆಂಡಂದಿರನ್ನು ಒಬ್ಬ ಮಾಯಾವಿ ಕೊಂಡೊಯ್ಯುತ್ತಿರುವನು. ನಿಮ್ಮ ಜಪತಪಗಳು ಸುಟ್ಟುವು. ಬಿಡಿಸಿಕೊಳ್ಳಿರಿ” ಎಂದು ಒದರಿದರು (೨೩). ಇದನ್ನು ಕೇಳಿ ಆ ಮುನಿಗಳು ಕೋಪವನ್ನು ತಾಳಿ, ಜಪತಪಗಳನ್ನು

ಮರೆತು ಆರ್ಭಟಿಸುತ್ತಿದ್ದರು (೨೪). ಅವರು ಆ ಮಾಯಾವಿಯನ್ನು ಕರೆತರಲು ಸಿಂಹೋಗ್ರನೆಂಬ ಬಟುವಿಗೆ ಹೇಳಲು ಅವನು ಬಂದು ಶಿವನನ್ನು ಕರೆಯಲು "ಮುನಿಗಳ ಕಡೆಗೆ ಬರಲು ಕಾರಣವೇನು? ಭಿಕ್ಷೆಯು ಹೋಯಿತು ಅಲ್ಲಿ ಬರಲಿಕ್ಕೆ ನನಗೇನು ಕೆಲಸ? ಹೋಗು" ಎನ್ನಲು ಸಿಂಹೋಗ್ರನು ಕೋಪದಿಂದ "ನೀನಲ್ಲಿಯೇ ಭಸ್ಮನಾಗು" ಎಂದು ಶಪಿಸಿದನು (೨೫-೨೬). ಈಶ್ವರನು ನಸುನಗುತ ಹಾಗೆಯೇ ಮುಂದಕ್ಕೆ ನಡೆಯಲು ಆಶ್ಚರ್ಯದಿಂದ ಆ ವಟುವು ಮುನಿಗಳಿಗೆ ಇದನ್ನೆಲ್ಲ ಹೇಳಲು, ಹೊಗೆಯುತ್ತ ಉರಿಯುತ್ತ ಈಶ್ವರನಲ್ಲಿಗೆ ಅವರೇ ಬಂದರು (೨೭). ಅವನನ್ನು ಕಂಡು ಎಲ್ಲರೂ ಶಪಿಸಲು ಅದಕ್ಕೆ ಈಶ್ವರನು ಅಲುಕದಿರಲು, ದರ್ಭೆಯಿಂದ ದಿವ್ಯ ಮಂತ್ರವನ್ನು ಮಂತ್ರಿಸಿ ಹೊಡೆಯಲು, ಅದು ಕಾಲಾಗ್ನಿಯಂತೆ ಹೊರಟು ಈಶ್ವರನ ಹತ್ತಿರ ಹೋಗಿ ನಂದಿತು. ಅನೇಕ ಪ್ರಕಾರದಿಂದ ಅವನನ್ನು ಕೊಲ್ಲಲು ಪ್ರಯತ್ನಪಟ್ಟು ಅದು ಸಾಧ್ಯವಾಗದಿರಲು ಮಾರಣ ಹೋಮವನ್ನು ಮಾಡಲು ತೊಡಗಿದರು (೨೮). ಯೋಜನಗಲದ ಕುಂಡವನ್ನು ಮಾಡಿ ಮೂರು ಜಗತ್ತಿನ ಸಿದ್ಧ ಸಮಿತುಗಳಿಂದಲೂ ತುಪ್ಪದಿಂದಲೂ ನಾಲ್ವತ್ತೆಂಟು ಸಾವಿರ ಮುನಿಗಳು ಹೋಮ ಮಾಡಲಿಕ್ಕೆ ಕುಳಿತು ಘೋರಮಂತ್ರಗಳಿಂದ "ಈ ಮಾಯಾವಿಯನ್ನು ದಹಿಸೆ" ಎಂದು ಆಹುತಿಗಳನ್ನರ್ಪಿಸಿದರು (೨೯). ಹೋಮಾಗ್ನಿಯು ಹೊತ್ತಿ ಉರಿಯ ನಾಲಗೆಗಳಿಂದ ಉಗ್ರ ವ್ಯಾಘ್ರ, ಘೋರ ಸರ್ಪ, ಆಯುಧ, ಶಕ್ತಿ, ಭೂತಗಣ, ಅಪಸ್ಮಾರ ಮೊದಲಾದವು ಎದ್ದು "ತೋರಿಸು ಆಹುತಿಯನ್ನು" ಎನ್ನಲು, ಈಶ್ವರನನ್ನು ಕಣ್ಸನ್ನೆಯಿಂದ ಅವರು ತೋರಿಸಲು ಅವು ಅವನ ಮೇಲೆ ಬೀಳಲು ಶಂಕರನು ಉರಳೆಯನ್ನು ತಾಳಿ ಹುಲಿಯನ್ನು ಸೀಳಿ ಅದರ ಚರ್ಮವನ್ನುಟ್ಟು ಆಯುಧಗಳನ್ನು ಧರಿಸಿ ಶಕ್ತಿಯನ್ನು ಒರಸಿದನು (೩೦-೩೧). ಅಪಸ್ಮಾರವನ್ನು ತುಳಿದು ತಾಂಡವ ರೂಪವನ್ನು ತಾಳಿ ಕುಣಿಯತೊಡಗಲು ಶಿವನೆಂದು ನಿರ್ಧರಿಸಿ ಅವನನ್ನು ಆ ಮುನಿಗಳು ಹೊಗಳಿದರು (೩೨-೩೩). ಈಶ್ವರನು ಅವರನ್ನು ಕ್ಷಮಿಸಿ ಕೈಯ ಕಪಾಲವನ್ನು ಭೈರವನ ಕೈಗಿತ್ತು ದಕ್ಷಿಣಾಮೂರ್ತಿರೂಪದಿಂದ ಅವರಿಗೆ ಬೋಧಿಸಿ ಅವರನ್ನು ಅವರ ಸತಿಯರೊಡನೆ ಕಳುಹಿ ಕೈಲಾಸವನ್ನು ಹೊಕ್ಕನು (೩೪).

೨೧ ಕಂಕಾಳಧರಲೀಲೆಯ ಸಂಧಿ

ಚೆನ್ನಬಸವಣ್ಣನು ಸಿದ್ಧರಾಮನಿಗೆ ಹೇಳಿದ್ದೇನೆಂದರೆ :-

ಆದಿಯಲ್ಲಿ ತಮನೆಂಬ ಒಬ್ಬ ರಾಕ್ಷಸನು ಎಲ್ಲ ವೇದಗಳನ್ನು ಕದ್ದು ಸಮುದ್ರ

ದಲ್ಲಿ ಮುಳುಗಿದನು. ಅದರಿಂದ ಜಗತ್ತಿನ ಸದಾಚಾರವೂ, ಜಪಹೋಮನೇಮಗ
ಳೂ ಕೆಟ್ಟು ಹೋದುವು. ದೇವತೆಗಳಿಗೆ ಐಶ್ವರ್ಯನಾಶವೂ ದುಃಖವೂ ಉಂಟಾ
ದುವು (೨). ಕೆಲವು ದಿನಗಳ ನಂತರ ದೇವತೆಗಳೆಲ್ಲ ಬ್ರಹ್ಮನಿಗೆ ಮೊರೆಯಿಡಲು,
ಅವನು ತನಗೆ ಹರಿಯದೆಂದು ಅವರನ್ನು ಕರೆದುಕೊಂಡು ಈಶ್ವರನಲ್ಲಿಗೆ ಬಂದು ವೃ
ತ್ತಾಂತವನ್ನು ಬಿನ್ನೈಸಿಕೊಳ್ಳಲು, ಶಿವನು ಅದನ್ನು ಕೇಳಿ ವಿಷ್ಣುವಿಗೆ ದೇವತೆಗಳ ಕಾ
ರ್ಯವನ್ನು ಮಾಡಿಕೊಡಲು ನೇಮಿಸಿದನು (೩). ಅವನು ಈಶ್ವರನ ಅಪ್ಪಣೆಯನ್ನು
ಪಡೆದು ದೊಡ್ಡ ಮೀನಿನ ಆಕಾರವನ್ನು ತಾಳಿ ಸಮುದ್ರವನ್ನು ಹೊಕ್ಕು ಆ ರಾಕ್ಷಸ
ನನ್ನು ಕೊಂದು ವೇದಗಳನ್ನು ದೇವತೆಗಳಿಗೆ ಕೊಟ್ಟನು. ಮುಂದೆ ಅಹಂಕಾರ
ದಿಂದ ವಿರಾಟ್ಕಾಯವನ್ನು ಧರಿಸಿ, ಸಮುದ್ರವು ಅಲ್ಲೋಲಕಲ್ಲೋಲವಾಗಿ ಮೇರೆ
ದಪ್ಪುವಂತೆ ಅದರಲ್ಲಿ ಚೆಲ್ಲಾಟವಾಡತೊಡಗಿದನು. ಜಗತ್ತಿಗೆ ಕಡೆಗಾಲ ಬಂದಂತಾ
ಗಲು ದೇವತೆಗಳು ಶಿವನಿಗೆ ಮತ್ತೆ ಬಿನ್ನೈಸಲು ಈಶ್ವರನು ಸಮುದ್ರಕ್ಕೆ ಬಂದು ಅ
ದನ್ನು ನೋಡಿ "ಈ ಮೀನು ಈ ರೀತಿಯಾಗಿ ಇಲ್ಲದ್ದರೆ ಜಗಕೆ ಕೇಡು ತಪ್ಪದು"
ಎಂದು ಸಮುದ್ರವನ್ನು ಹೊಕ್ಕು ಗುಡುಗುಡಿಸುತ್ತಿದ್ದ ಆ ಮೀನಿನ ಬಗ್ಗರಿಯ
ನ್ನು ಒಡೆದು ಕಟವಾಯಲ್ಲಿ ಕೈಯಿಟ್ಟು ಎರಡು ಸೀಳು ಮಾಡಿ ಅದರ ಬೆನ್ನಲುವ
ನ್ನು ಮುರಿದು ಅದನ್ನು ಕಂಕಾಳಾಯುಧವನ್ನಾಗಿ ಧರಿಸಿದನು (೪-೬).

ಇಷ್ಟರಲ್ಲಿ ಸಿದ್ಧರಾಮೇಶನು ಚೆನ್ನಬಸವಣ್ಣನನ್ನು ಕುರಿತು "ವಿಷ್ಣು ಈಶ್ವರನ
ಅಜ್ಞೆಯಂತೆ ವೇದಗಳನ್ನು ತಂದುಕೊಟ್ಟ ಮೇಲೆ ಅಹಂಕಾರಮತ್ತನಾಗಿ ನಡೆದುದೇ
ಕೆ?" ಎಂದು ಕೇಳಿದನು (೭). ಅದಕ್ಕೆ ಚೆನ್ನಬಸವನು "ಅದನ್ನೂ ಹೇಳುವೆ
ನು ಕೇಳು. ಪೂರ್ವಕಾಲದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಕಾಳೆಗವುಂಟಾಗಲು
ಸಹಸ್ರಾರು ವರ್ಷಗಳಾದರೂ ಯುದ್ಧವು ಕೊನೆಗಾಣದೆ ಬಹಳ ಪ್ರಾಣಹಾನಿ
ಯುಂಟಾಗಿರಲು ದೇವೇಂದ್ರನು ಸತ್ತವರನ್ನು ಬದುಕಿಸುವ ಹದನವನ್ನು ಬೃಹಸ್ಪತಿ
ಯೊಳು ವಿಚಾರಿಸಲು ಹಿಮಾಲಯದಲ್ಲಿ ತಪಸ್ಸುಮಾಡಿ ಈಶ್ವರನಿಂದ ಸಂಜೀವಿನೀ
ಮಂತ್ರವನ್ನು ಪಡೆಯುವೆನೆಂದು ಸುರಗುರು ಹೇಳಿ ಹೋದನು. ಈ ಮಾತನ್ನು ಆ
ಲಿಸುತ್ತಿದ್ದ ಅಸುರಗುರುವಾದ ಶುಕ್ರಾಚಾರ್ಯನು ತಾನೂ ಆ ಮಂತ್ರವನ್ನು ಪಡೆ
ಯಬೇಕೆಂದು ಶಿವನನ್ನು ಕುರಿತು ಸುರಗುರುವಿನ ಬಳಿಯಲ್ಲಿಯೇ ಉಗ್ರ ತಪಸ್ಸನ್ನು
ಆಚರಿಸತೊಡಗಿದನು (೮-೧೦).

"ಗುರುಶುಕ್ರರ ಘನತಪಕ್ಕೆ ಶಿವನು ಮೆಚ್ಚಿ ಅವರ ಬಯಕೆಯನ್ನು ತಿಳಿದು ಇ
ಬ್ಬರ ಇಷ್ಟಾರ್ಥಗಳೂ ಒಂದೇಯಾದುದರಿಂದ ಉಪಾಯದಿಂದ ಅದು ಅಸಾಧ್ಯವಾ
ಗುವಂತೆ ಮಾಡಬೇಕೆಂದು ಬಗೆದು ಶಿವನು 'ದೊಡ್ಡ ಕುಂಡದಲ್ಲಿ ಕಿಚ್ಚು ಮಾಡಿ ಅದರ
ಮೇಲೆ ಆಕಾಶದಲ್ಲಿ ತಲೆ ಕೆಳಗಾಗಿ ನಿಂತು ಅದರ ಹೊಗೆಯನ್ನು ಸಾವಿರ ವರುಷಗಳವ

ರಿಗೆ ಆಸ್ವಾದಿಸುತ್ತ ಮಂತ್ರೋಚ್ಚರಣೆಯನ್ನು ಮಾಡಿದರೆ ಸಂಜೀವಿನೀ ಮಂತ್ರವು ಸಾಧಿಸುವುದು' ಎಂದು ಹೇಳಿದನು (೧೧-೧೩). ಬೃಹಸ್ಪತಿಯು ಹೆದರಿ ತನಗೆ ಅ ಸಾಧ್ಯವೆಂದು ತಿಳಿದನು. ಆದರೆ ಶುಕ್ರನು ಚತುರತನದಿಂದ ಈಶ್ವರನ ಕೃಪೆಯಿದ್ದರೆ ತಾನು ಸಾಧಿಸುವೆನೆಂದು ಹೇಳಿ ಶಿವನನ್ನು ಒಲಿಸಿ ಆ ರೀತಿ ತಪಮಾಡಲು ಅನುವಾದನು (೧೪-೧೫). ರಾಕ್ಷಸರಿಗೆಲ್ಲ ಶಿವಧ್ಯಾನದಲ್ಲಿ ಇರುತ್ತ ತಪಸ್ಸು ಮಾಡುತ್ತಿರಬೇಕೆಂದೂ ದೇವತೆಗಳು ಕೊಲಬಂದರೆ ತನ್ನ ತಂದೆಯಾದ ಭೃಗುಮುನಿಯ ಆಶ್ರಮವನ್ನು ಆಶ್ರಯಿಸಬೇಕೆಂದೂ ಹೇಳಿ ತಪಕ್ಕೆ ಹೋಗಲು, ವಿಷ್ಣುವು ಈ ವಾರ್ತೆಯನ್ನು ಕೇಳಿ 'ಶುಕ್ರನು ತನ್ನ ಅಭೀಷ್ಟವನ್ನು ಸಾಧಿಸುವಷ್ಟು ಬಲ್ಲಿದನು. ಆದುದರಿಂದ ಅವನು ಬರುವಷ್ಟರಲ್ಲಿ ರಾಕ್ಷಸರನ್ನೆಲ್ಲ ಸಂಹರಿಸಬೇಕೆಂ'ದು ಬಗೆದು, ಆ ರೀತಿ ದಿಕ್ಪಾಲಕರಿಗೆ ಆಜ್ಞಾಪಿಸಿದನು (೧೬-೧೮). ಆ ಆಜ್ಞೆಗನುಸಾರವಾಗಿ ದಿಕ್ಪಾಲಕರು ಶಿವನನ್ನು ಕುರಿತು ತಪಮಾಡುತ್ತಿದ್ದ ರಾಕ್ಷಸರನ್ನು ಎಲ್ಲ ಕಡೆಗೂ ಹುಡುಕುತ್ತ ಕಂಡಲ್ಲಿ ಸಂಹರಿಸುತ್ತ ನಡೆದರು (೧೯-೨೦). ದಿಕ್ಪಾಲಕರ ಈ ದಾಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ರಾಕ್ಷಸರು ದಿಕ್ಕೆಟ್ಟು ಓಡುತ್ತ ಭೃಗುಮುನಿಯ ಆಶ್ರಮಕ್ಕೆ ಬಂದರು. ಆದರೂ ಸುರರು ಅಲ್ಲಿಯವರೆಗೆ ಅವರನ್ನು ಬೆನ್ನಟ್ಟಿ ಕೊಲ್ಲುತ್ತ ಬಂದುದರಿಂದ ಎಷ್ಟೋ ಬಲ್ಲಿದರಾದ ರಾಕ್ಷಸರು ಅವರನ್ನು ಎದುರಿಸಿ ಕೊಲ್ಲಬೇಕೆಂದು ವಿಚಾರಿಸಿ ಗುರುವಿನ ಆಜ್ಞೆಯ ವಿರುದ್ಧವಾಗುವುದೆಂದು ತಿಳಿದು ಭಯದಿಂದ ಆಶ್ರಮ ಹೊಕ್ಕು ಮೊರೆಯಿಟ್ಟರು (೨೧-೨೩). ಭೃಗುಮುನಿಯು ಈಶ್ವರಧ್ಯಾನದಲ್ಲಿ ಸಮಾಧಿಸ್ಥನಾಗಿರಲು ಅವನ ಪತ್ನಿಯಾದ ಪ್ರಖ್ಯಾತೆಯು ಅವರ ಮೊರೆಗೇಳಿ ಕರುಣದಿಂದ ಅಭಯವಿತ್ತು ಈಶ್ವರನನ್ನು ನೆನೆದು ಮಂತ್ರೋದಕವನ್ನು ಸುರರ ಮೇಲೆ ಎರಚಲು ಅವರು ಬೊಂಬೆಗಳಂತೆ ಸ್ತಂಭಿತರಾದರು (೨೪-೨೬). ದೇವೇಂದ್ರನು ಇದನ್ನು ಕಂಡು ಅವಳ ತಲೆಯನ್ನು ಹಾರಿಸುವಂತೆ ಚಕ್ರದಿಂದ ಇಡುಯೆಂದು ವಿಷ್ಣುವಿಗೆ ಹೇಳಲು ಅವನು ಕೂಡಲೆ ಅವಳ ತಲೆಯನ್ನು ಹಾರಿಸಿದನು (೨೭).

"ಖ್ಯಾತೆಯ ಮರಣದಿಂದ ಭಯಂಕರ ಕೋಲಾಹಲವುಂಟಾಗಿ ರಾಕ್ಷಸರೆಲ್ಲರು ರೊಚ್ಚಿಗೆದ್ದು ಆರ್ಭಟಿಸಲು ಆ ಧ್ವನಿಗೇಳಿ ಭೃಗುಮುನಿಯು ಕಣ್ತೆರೆದು ಎದುರಿಗೆ ಸತ್ತು ಬಿದ್ದಿದ್ದ ಸತಿಯನ್ನು ನೋಡಿ ಬಹುವಾಗಿ ಹಲುಬಿದನು (೨೮-೩೨). ಮುಂದೆ ಆ ಮುನಿಯು ತನ್ನ ಪತ್ನಿಯನ್ನು ಕೊಂದವನು ವಿಷ್ಣುವೆಂದು ತಿಳಿದು ಕೋಪದಿಂದ 'ಅಜ್ಞಾನಕೃತದಿಂದ ನೀನು ನನ್ನ ಹೆಂಡತಿಯನ್ನು ಕೊಂದುದರಿಂದ ಅಜ್ಞಾನವನ್ನು ತಾಳಿ ಮತ್ಸ್ಯಾದಿ ದಶಜನ್ಮದಲ್ಲಿ ಹುಟ್ಟು' ಎಂದು ಶಪಿಸಿ ಶಿವಮಂತ್ರದಿಂದ ಕಲಶೋದಕವನ್ನು ತನ್ನ ಹೆಂಡತಿಯ ಮೃತ ಶರೀರದ ಮೇಲೆ ತಳಿದು ಅವಳ ಪ್ರಾಣವನ್ನು ಪಡೆದನು (೩೩-೩೯).

"ಇತ್ತ ವಿಷ್ಣುವು ಈಶ್ವರನನ್ನು ಕುರಿತು ತಪಸ್ಸು ಮಾಡಿ ಅವನನ್ನು ಮೆಚ್ಚಿಸಿ ನಡೆದ ವೃತ್ತಾಂತವನ್ನು ತಿಳುಹಿ ತನ್ನನ್ನು ಉದ್ಧರಿಸಬೇಕೆಂದು ಕೇಳಿಕೊಳ್ಳಲು ಈಶ್ವರನು ಅವನಿಗೆ 'ನೀನು ಅಂಜಬೇಡ, ನಿನ್ನ ಹತ್ತು ಮೂರ್ತಿಗಳು ಜಗತ್ತಿಗೆ ಹಿತಕರವಾಗುವಂತೆ ಮಾಡುವೆನು. ಅದರಿಂದ ನೀನು ಅಹಂಕಾರ ತಾಳಿದರೆ ಆ ರೂಪವನ್ನು ಛೇದಿಸಿ ಅದರ ಕುರುಹೊಂದನ್ನು ಧರಿಸುವೆನು' ಎಂದು ಹೇಳಿ ಕೈಲಾಸವನ್ನು ಹೊಕ್ಕನು (೪೦-೪೧).

"ಈ ಕಾರಣದಿಂದ ಹರಿಗೆ ಹತ್ತು ಅವತಾರಗಳುಂಟಾದುವು" ಎಂದು ಚೆನ್ನಬಸವೇಶನು ಸಿದ್ಧರಾಮನಿಗೆ ಅರುಹಿದನು (೪೨).

೨೨ ಸಮುದ್ರಮಥನವಿಷಧರಲೀಲೆಯ ಸಂಧಿ

ಒಂದು ದಿವಸ ಇಂದ್ರನು ಪರಿವಾರದೊಂದಿಗೆ ಸುರಸತಿಯರ ಕೂಡ ಕೇಳೀವನದಲ್ಲಿ ವಿನೋದದಿಂದ ಕಾಲಕಳೆದು ಐರಾವತನನ್ನು ಏರಿ ತಿರುಗಿ ಬರುತ್ತಿರಲು ಅವನಿಗೆ ದುರ್ವಾಸ ಮುನಿಯು ಈಶ್ವರನಿತ್ತ ಮಂದಾರ ಮಾಲೆಯನ್ನು ಕೊಟ್ಟನು (೨). ಅವನ್ನು ಇಂದ್ರನು ಆನೆಯ ಕುಂಭಸ್ಥಳಕ್ಕೆ ಹಾಕಿದನು. ಅದರ ಪರಿಮಳಕ್ಕೆ ತುಂಬಿಗಳು ಮುತ್ತಿಕೊಳ್ಳಲು ಆನೆಯು ಅವುಗಳ ಕಾಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆ ಮಾಲೆಯನ್ನು ಕಿತ್ತು ತುಳಿದು ಹಾಕಿತು. ಇದನ್ನು ಕಂಡು "ಹರ ಕೊಟ್ಟ ಮಂದಾರ ಮಾಲೆಗೆ ಈ ಗತಿಯಾಯಿತೆ?" ಎಂದು ದುರ್ವಾಸನು ಸಿಟ್ಟಿನಿಂದ ಇಂದ್ರನ ಐಶ್ವರ್ಯವೆಲ್ಲ ಸಮುದ್ರಪಾಲಾಗಲೆಂದು ಶಾಪವಿತ್ತನು (೩-೪). ಇಂದ್ರನು ಪಶ್ಚಾತ್ತಾಪದಿಂದ ಮುನಿಯನ್ನು ಬೇಡಿಕೊಳ್ಳಲು "ಈಶ್ವರನು ನಿನ್ನ ಸೌಭಾಗ್ಯವನ್ನು ತಿರುಗಿ ಕೊಡುವನು" ಎಂದು ಹೊರಟುಹೋದನು. ಅಷ್ಟರಲ್ಲಿ ಇಂದ್ರನ ಐಶ್ವರ್ಯವೆಲ್ಲ ನಿಂತಲ್ಲಿಯೇ ಬಯಲಾಗಲು, ಅವನು ಶಿವನನ್ನು ಕುರಿತು ತಪಸ್ಸು ಮಾಡಿ ಮೆಚ್ಚಿಸಲು ಈಶ್ವರನು "ಎಲ್ಲ ಸುರರೂ ರಾಕ್ಷಸರೂ ಕೂಡಿ ಸಮುದ್ರವನ್ನು ಕಡೆದರೆ ನಿನ್ನ ಸೌಭಾಗ್ಯವು ಲಭಿಸುವುದೆ"ಂದನು (೫-೭).

ಈಶ್ವರನ ಹೇಳಿಕೆಯಂತೆ ಇಂದ್ರನು ಸುರಾಸುರರನ್ನು ಕೂಡಿಕೊಂಡು ಸಮುದ್ರಕ್ಕೆ ಬಂದು ಮಂದರಪರ್ವತವನ್ನು ಕಡೆಗೋಲು ಮಾಡಿ ವಾಸುಕಿಯನ್ನು ಕಡೆಗಣ್ಣಿ ಮಾಡಿ ಅದರ ಬಾಲಮುಖಗಳನ್ನು ಹಿಡಿದು ಮೊದಲು ಬಂದ ವಸ್ತುವನ್ನು ವಿಷ್ಣುವಿಗೆ ಕೊಟ್ಟು, ಹಿಂದಿನಿಂದ ಬಂದವುಗಳನ್ನು ತಮ್ಮೊಳಗೆ ಹಂಚಿಕೊಳ್ಳುವ ಆಲೋಚನೆ ಮಾಡಿ ಕಡೆಯಲಾರಂಭಿಸಿದರು (೮-೧೦). ಆದರೆ ಆ ಸರ್ಪವು ಆಯಾಸದಿಂದ

ವಿಷವನ್ನು ಕಾರಲು ಆ ವಿಷದ ಜ್ವಾಲೆಯು ಸುತ್ತೆಲ್ಲ ಭಯಂಕರವಾಗಿ ಪಸರಿಸಿತು. ಅದನ್ನು ತಾಳಲಾರದೆ ದೇವತೆಗಳೂ ರಾಕ್ಷಸರೂ ಕಂಡ ಕಡೆಗೆ ಓಡಲಾರಂಭಿಸಿದರು. ಆದರೂ ಆ ಕಾಳಕೂಟವು ಎಲ್ಲರನ್ನು ಮರಣಕ್ಕೀಡು ಮಾಡುತ್ತಿರುವುದನ್ನು ಕಂಡು ಎಲ್ಲರೂ ಈಶ್ವರನಿಗೆ ಮೊರೆಯಿಡಲು ಆತನು ಕೂಡಲೆ ಅಲ್ಲಿಗೆ ಬಂದು ಎಲ್ಲರಿಗೂ ಅಭಯವಿತ್ತು "ಈ ಕಾಳಕೂಟವನ್ನು ನಾನು ನುಂಗುವೆನೆ" ಂದು ಹೇಳಿ ಅದನ್ನು ಕರೆಯಲು ಆತನ ಕಂಗೈಯಲ್ಲಿ ಬಂದು ನಿಂತಿತು (೧೧-೧೯). ಅದನ್ನು ಹೊಟ್ಟೆಯವರೆಗೆ ಇಳಿಸಿದರೆ ಜಗತ್ತೇ ಅಳಿಯುವುದೆಂದು ಕಂಠದಲ್ಲಿಯೆ ಧರಿಸಿದನು. ಎಲ್ಲರಿಗೂ ಅಭಯವಿತ್ತು "ಮೊದಲು ಹುಟ್ಟಿದ ವಸ್ತು ಈಶ್ವರನಿಗೆ" ಎನ್ನದೆಯಿದ್ದುದರಿಂದ ಹೀಗಾಯಿತೆಂದು ಹೇಳಿ ನಿರವಯನಾದನು (೨೦-೨೧). ಮತ್ತೆ ವಾಸುಕಿಯನ್ನು ಹಿಡಿದು ದೇವತೆಗಳು ಕಡೆಯತೊಡಗಲು ಚಂದ್ರಬಿಂಬವು ಉದಿಸಲು ಅದರ ಶೀತದಿಂದ ಜನರೆಲ್ಲರೂ ಅಳವಳಿಯುತ್ತಿರಲು ಈಶ್ವರನು ಕರುಣದಿಂದ ಚಂದ್ರನ ಈರೆಂಟು ಭಾಗದಲ್ಲೊಂದನ್ನು ಧರಿಸಿ ಚಂದ್ರನಿಗೆ "ಎಲ್ಲರನ್ನು ರಕ್ಷಿಸುತ್ತ ಆಕಾಶದಲ್ಲಿರೆ" ಂದು ಹೇಳಿ ಅಂತರ್ಧಾನನಾದನು (೨೨-೨೪).

ದೇವಾಸುರರು ಮತ್ತೆ ಕಡೆಯಲಾರಂಭಿಸಲು ಲಕ್ಷ್ಮಿ, ಐರಾವತ, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಅಮೃತಕಲಶ ಮೊದಲಾದ ವಸ್ತುಗಳು ಸಮುದ್ರದಿಂದ ಉದಿಸಿದುವು. ಅವುಗಳಲ್ಲಿ ಲಕ್ಷ್ಮಿಯನ್ನು ವಿಷ್ಣು ಕೈಕೊಂಡನು. ಅಮೃತಕಲಶವನ್ನು ಅಸುರರು ಕದ್ದೊಯ್ದರು (೨೫). ವಿಷ್ಣು ಸ್ತ್ರೀಯಾಕಾರವನ್ನು ಧರಿಸಿ ರಾಕ್ಷಸರಿದ್ದಲ್ಲಿಗೆ ಹೋಗಿ ಅವರನ್ನು ಅಮೃತಕಲಶದೊಡನೆ ಕರೆದುಕೊಂಡು ಬಂದು ದೇವರಾಕ್ಷಸರಿಗೆ ಸಮುದ್ರದಂಡೆಯ ಮೇಲೆ ಅಮೃತಬಿಂದುಗಳನ್ನು ನೀಡಲು ಅನುವಾದನು. ವಿಷ್ಣು ಕಪಟಮಾಡುವನೆಂದು ತಿಳಿದು ಸೈಂಹಿಕೇಯನು ದೇವತೆಗಳ ಪಂಕ್ತಿಯಲ್ಲಿ ಕುಳ್ಳಿರಲು ಹರಿಯು ಅವನಿಗೂ ಅಮೃತವನ್ನು ನೀಡಿದನು. ಆದರೆ ಸೂರ್ಯಚಂದ್ರರು ಸೈಂಹಿಕೇಯನ ಕಪಟವನ್ನು ಹರಿಗೆ ತಿಳಿಸಲು ವಿಷ್ಣುವು ಅವನನ್ನು ಕತ್ತರಿಸಲು ಸಿರಮುಂಡಗಳು ರಾಹುಕೇತುಗಳಾದುವು. ಹೀಗೆ ಅವುಗಳಿಗೂ ಸೂರ್ಯಚಂದ್ರರಿಗೂ ಪೂರ್ವದಿಂದ ವೈರತ್ವವಿರುವುದು (೨೬-೨೮).

೨೩ ಜಲಂಧರನು ಸ್ವರ್ಗಕ್ಕೆ ದಂಡೆತ್ತಿದ ಕಥೆಯ ಸಂಧಿ

ದೇವೇಂದ್ರನು ಈಶ್ವರಪೂಜಾಫಲದಿಂದ ಸುರಲೋಕವನ್ನು ಪಾಲಿಸುತ್ತ ಪಾಯಾದಿಗಳಾದ ರಾಕ್ಷಸರನ್ನು ಕಾಳೆಗದಲ್ಲಿ ಗೆದ್ದು ಸುಖದಿಂದ ಇರುವುದನ್ನು ಬಿಟ್ಟು

ತನಗೆ ಯೋಗ್ಯನಾದ ವೈರಿಯನ್ನು ಕೊಡೆಂದು ಈಶ್ವರನನ್ನು ಬೇಡಿದನು. ಈ ಅಹಂಕಾರದ ಮಾತಿಗೆ ಈಶ್ವರನು ಕೋಪದಿಂದ ಅವನನ್ನು ಸುಡಲೋಸುಗ ಹಣೆಗಣ್ಣಿನಿಂದ ಒಂದು ಕಿಡಿಯನ್ನುಗುಳಿಸಿದನು (೨-೪). ಕೂಡಲೇ ಕೋಪವನ್ನು ಸಂಹರಿಸಬೇಕೆಂದು ಸುರಗುರುವು ಬೇಡಿಕೊಳ್ಳಲು ಈಶ್ವರನು ಆ ಕಿಡಿಯನ್ನು ಕೈಯೊಳಗೆ ಹಿಡಿದು ಸಮುದ್ರಕ್ಕೆ ಒಗೆದು "ನಿನಗೆ ಶತ್ರುವನ್ನು ಕೊಟ್ಟಿರುವೆನು, ಹೋಗು" ಎಂದು ಇಂದ್ರನನ್ನು ಬೀಳ್ಕೊಟ್ಟನು (೫).

ಇತ್ತ ಈಶ್ವರನು ಒಗೆದ ಕಿಡಿಯು ಬಾಲನಾಗಿ ಗಂಗೆಯು ಸಮುದ್ರಕ್ಕೆ ಕೂಡಿದ ಸ್ಥಳದಲ್ಲಿ ಅಳುತ್ತಿರಲು, ತನ್ನ ಮಗನಾದ ಶಂಖನೆಂಬುವನು ಸತ್ತುದರಿಂದ ಇಂದ್ರನನ್ನು ಗೆಲ್ಲುವಂತಹ ಮಗನನ್ನು ಪಡೆಯಬೇಕೆಂದು ತಪಮಾಡುತ್ತಿದ್ದ ಸಿಂಧುರಾಜನು ಆ ಶಿಶುವನ್ನು ಕಂಡನು (೬). ಅದನ್ನು ಎತ್ತಿಕೊಂಡು ಸಂತೋಷದಿಂದ ತನ್ನ ತೊಡೆಯ ಮೇಲಿಟ್ಟುಕೊಳ್ಳಲು ಆ ಕೂಸು ಬ್ರಹ್ಮಾಂಡವು ಒಡೆಯುವಂತೆ ಕೂಗಲು ಈ ದನಿ ಯಾರದೆಂದು ನೋಡುವುದಕ್ಕೆ ಬ್ರಹ್ಮನು ಅಲ್ಲಿಗೆ ಬಂದನು. ಸಮುದ್ರರಾಜನು ಆ ಮಗುವನ್ನು ಬ್ರಹ್ಮನ ಕೈಗೆ ಕೊಟ್ಟು ಯಾರಿಂದಲೂ ಮರಣಹೊಂದದಂತೆ ಆಶೀರ್ವಾದಮಾಡಲು ಬೇಡಿದನು (೭). ಆ ಶಿಶುವನ್ನು ತೊಡೆಯ ಮೇಲಿಟ್ಟುಕೊಂಡು ಅದರ ಭದ್ರಾಕಾರವನ್ನು ನಿರೀಕ್ಷಿಸುತ್ತಿರಲು ಅದು ಬ್ರಹ್ಮನ ಗಡ್ಡವನ್ನು ಹಿಡಿದು ಎಳೆಯಲು ನೋವಿನಿಂದ ಬ್ರಹ್ಮನ ಕಣ್ಣೀರು ಆ ಶಿಶುವಿನ ಮೇಲೆ ಸುರಿಯತೊಗಿಡತು. ತನ್ನ ಕಣ್ಣೀರ ಹನಿಗಳನ್ನು ಧರಿಸಿದುದಕ್ಕಾಗಿ ಬ್ರಹ್ಮನು ಆ ಶಿಶುವಿಗೆ "ಜಲಂಧರ" ಎಂಬ ಹೆಸರಿಟ್ಟು "ಈ ಕೂಸು ಸಾಮಾನ್ಯನಲ್ಲ; ಯಾರಿಂದ ಇವನ ಜನ್ಮವೋ ಅವನಿಂದಲೇ ಇವನಿಗೆ ಮರಣ. ಉಳಿದವರಾರಿಂದಲೂ ಈತನಿಗೆ ಅಪಾಯವಾಗದಿರಲಿ" ಎಂದು ವರವಿತ್ತು ಶುಕ್ರನಿಂದ ರಾಕ್ಷಸರಾಜಪಟ್ಟಾಭಿಷೇಕವನ್ನು ಆತನಿಗೆ ಮಾಡಿಸಿ ಹೋದನು (೮-೯).

ಮುಂದೆ ಜಾಲಂಧರವೆಂಬ ಬಲುರಾಜಧಾನಿಯನ್ನು ಮಾಡಿಕೊಂಡು ಗುಡ್ಡಗಳಲ್ಲಿ ಅಡಗಿದ್ದ ಅಸುರರನ್ನೆಲ್ಲ ಕರೆಸಿಕೊಂಡು ಸುಖದಿಂದ ರಾಜ್ಯವಾಳುತ್ತ ಒಂದು ದಿವಸ ಒಡ್ಡೋಲಗದಲ್ಲಿರುತ್ತಿರಲು, ಆಗ ಭಯಂಕರಾಕಾರದ ಪ್ರಸಿದ್ಧ ರಾಕ್ಷಸ ಸುಭಟರು ಒಡ್ಡೋಲಗಕ್ಕೆ ಬಂದರು (೧೦-೧೩). ಅವರಲ್ಲಿ ರಾಹು ಕೇತುಗಳನ್ನು ನೋಡಿ "ಇದೇನು? ಒಂದು ಶರೀರವು ಎರಡಾದ ಕಾರಣವೇನು?" ಎಂದು ಬಳಿಗಡೆಯಲ್ಲಿದ್ದ ಅಸುರಗುರುವಾದ ಶುಕ್ರನನ್ನು ಕೇಳಲು ಸಮುದ್ರಮಥನ ಕಾಲದಲ್ಲಿ ಜರುಗಿದ ಸಂಗತಿಯನ್ನು ಶುಕ್ರನು ಹೇಳಿದನು (೧೪-೧೭). ಅದನ್ನು ಕೇಳಿ ಗುಡುಗುಡಿಸಿ ಘನತರದ ಕೋಪದಿಂದ "ನನ್ನ ತಂದೆಯನ್ನು ಮಥಿಸಿ ಸಕಲೈಶ್ವರ್ಯವನ್ನು ಒಯ್ದ ಆ ಸುರರ ಕರುಳನ್ನು ಕಿತ್ತು ರಣಭೂತಗಳಿಗುಣಿಸುವೆನು. ನನ್ನ ಸೈನ್ಯವನ್ನು ಬರ

ಹೇಳು" ಎಂದನು. "ಆದರೆ ಮೊದಲು ಚರರನ್ನು ಕಳುಹಿ ಇಂದ್ರನಿಂದ ಎಲ್ಲ ಐಶ್ವರ್ಯವನ್ನು ಬೇಡತಕ್ಕದ್ದು. ಕೊಡದೆ ಇದಲ್ಲಿ ಯುದ್ಧಕ್ಕೆ ಸಿದ್ಧರಾಗಬಹುದು" ಎಂದು ಶುಕ್ರನು ಹೇಳಿದ ಮಾತಿಗೆ ಒಪ್ಪಿ ಚರನನ್ನು ಇಂದ್ರನಲ್ಲಿಗೆ ಕಳುಹಿದನು. ಅದಕ್ಕೆ ಇಂದ್ರನು "ನಮ್ಮ ವಸ್ತುಗಳನ್ನು ನಾವು ತಂದೆವೇ ಹೊರತು ಪರರವಲ್ಲ" ಎನ್ನಲು ಇದನ್ನೆಲ್ಲ ಆ ಚರನು ಜಲಂಧರನಲ್ಲಿ ಬಿನ್ನವಿಸಿದನು. ಜಲಂಧರನು ಈ ಸಂಗತಿಯನ್ನು ಕೇಳಿ ಕಡುಕೋಪವನ್ನು ತಾಳಿ ಪ್ರಸ್ಥಾನ ಭೇರಿಯನ್ನು ಹೊಡೆಸ ಹೇಳಿದನು (೧೮-೨೩). ಅಸುರಗುರುವಿತ್ತ ಸುಮುಹೂರ್ತದಲ್ಲಿ ರಾಕ್ಷಸರಾಜನು ಸೇನೆಯನ್ನೊಡಗೊಂಡು ಹೊರಟನು (೨೪-೨೫). ಸುತ್ತಲಿತ್ತಲೂ ಜಲಂಧರನ ಚತುರಂಗ ಬಲದ ಹೊರತು ಬೇರೆ ಏನೂ ಇಲ್ಲವೆಂಬಂತೆ ಅಪಾರ ಸೇನಾಸಮೂಹವು ಇಂದ್ರನ ರಾಜಧಾನಿಗೆ ನಡೆಯಿತು (೨೬-೩೦). ಹಾದಿಯಲ್ಲಿ ಭಯದಿಂದ ಶರಣು ಹೊಕ್ಕವರನ್ನು ರಕ್ಷಿಸುತ್ತ, ಮಲೆತವರನ್ನು ಶಿಕ್ಷಿಸುತ್ತ, ರಾಜರನ್ನೆಲ್ಲ ಗೆಲ್ಲುತ್ತ ಸೇನೆಯು ಅಮರಾವತಿಯ ಸಮೀಪಕ್ಕೆ ಬಂದಿತು. ಸುತ್ತಲಿನ ಸುರರೆಲ್ಲ ಅಲ್ಲಿಗೆ ಓಡಿ ಬಂದರು. ರಾಕ್ಷಸರ ಬರವನ್ನು ಕೇಳಿ ಇಂದ್ರನು ಕೋಪವನ್ನು ತಾಳಿ ಎಲ್ಲ ದಿಕ್ಪಾಲ, ಯಕ್ಷ, ಕಿನ್ನರ, ಗಂಧರ್ವ ಮೊದಲಾದವರನ್ನು ಕರೆಸಿ ಸೇನಾಸನ್ನಾಹವನ್ನು ಮಾಡಲು ಅಪ್ಪಣೆಯಿತ್ತನು (೩೧-೩೪). ಕೂಡಲೆ ಅಗಣಿತಸೈನ್ಯವು ನಾನಾಬಗೆಯ ಆಯುಧಗಳೊಡನೆ ಅಮರಾವತಿಗೆ ನಡೆತಂದಿತು (೩೫). ಸಕಲ ದಿಕ್ಪಾಲರು ತಮ್ಮ ತಮ್ಮ ವಾಹನಗಳನ್ನು ಹತ್ತಿಕೊಂಡು ಎಡಬಲದಲ್ಲಿ ಬರುತ್ತಿರಲು, ಇಂದ್ರನು ಐರಾವತವನ್ನೇರಿ ರಣರಂಗಕ್ಕೆ ಸಾಗಿದನು (೩೬-೩೮). ಎಲ್ಲರು ಬಂದು ಅಮರಾವತಿಯ ಮುಂದಣ ವಿಶಾಲವಾದ ಬಯಲಲ್ಲಿ ಬೀಡುಬಿಟ್ಟರು. ಈ ಸೇನೆಯನ್ನು ಎದುರಿಸುವವರಾರೆನುತ್ತ ಇಂದ್ರನು ತನ್ನ ಸೇನೆಯನ್ನೊಡ್ಡಿದನು (೩೯).

೨೪ ಬ್ರಹ್ಮದಿಕ್ಪಾಲಕರು ವೈಕುಂಠವನ್ನು ಪೊಕ್ಕ ಸಂಧಿ

ಬಳಿಕ ಇಂದ್ರನು ತನ್ನ ಸೇನೆಸಹಿತ ರಣರಂಗಕ್ಕೆ ಬರಲು, ಕೂಡಲೆ ಇರ್ಬಲದಲ್ಲಿ ಸಮರಸಂರಂಭವು ಉಂಟಾಯಿತು. ವಾದ್ಯಗಳು ಮೊಳಗಿದುವು. ಎರಡೂ ಬಲದ ಕೆಂದೂಳಕ್ಕೆ ಹೋರಾಟವಾಯಿತು. ಮುಂದೆ ಉಭಯ ಭಟರ ನಿಷ್ಠುರ ದೃಷ್ಟಿಗಳು ಹೊಡೆದಾಡಿದುವು. ಚೂಣಿಗರು ಭಲ್ಲೆಯದಿಂದ ತಿವಿದಾಡಿದರು. ಭಾರಿ ಆಹವವಾಯಿತು (೨-೫). ರಾಕ್ಷಸರ ಸೇನೆಯೊಳಗಿನ ವೀರರೂ, ಭಟರೂ, ಸುಪ್ರಸಿದ್ಧ ಸೇನಾನಿಗಳೂ ಕೂಡಿ ಸುರರೊಡನೆ ಕಾಳೆಗವನ್ನು ಆರಂಭಿಸಲು ಕೆಲಹೊತ್ತಿನಲ್ಲಿ

ಸುರಸೇನೆಯು ತೆಗೆದೋಡತೊಡಗಿತು (೬-೨೦). ನಿಮಿಷದಲ್ಲಿ ತ್ರಾಣಕ್ಕೆ ಮುಕ್ಕಾಗದೆ ಹರಿಹಂಚುವಷ್ಟು ಸುರಸೇನೆ ಬೆಂಗೊಟ್ಟಿತು. ರಾಕ್ಷಸರು ಇದನ್ನು ಕಂಡು "ಸುರರು ಸೋತರು, ಇರಿ, ಕಡಿ" ಎನ್ನುತ್ತ ಅವರನ್ನು ಬೆನ್ನಟ್ಟಿ ಕೈಗೆ ಸಿಕ್ಕವರನ್ನು ಕೊಲ್ಲತೊಡಗಿದರು (೨೧-೨೨). ದೇವತೆಗಳು ತಮ್ಮನ್ನು ಕೊಲ್ಲಬಂದವರಿಗೆ ಕೈಕಾಲು ಬೀಳುತ್ತ "ನಿಮ್ಮ ಹೊಟ್ಟೆಯಲ್ಲಿ ಬಂದವರು, ರಕ್ಷಿಸಿರಿ" ಎನ್ನುತ್ತ ಕುದುರೆ ಆನೆಗಳ ಮರೆಯಲ್ಲಿ ಅಡಗಿಕೊಳ್ಳುತ್ತಿದ್ದರು (೨೩).

ಅನಿತರಲ್ಲಿ ಅಮರಾವತಿಯ ಕೋಟೆಯ ಬಾಗಿಲುಗಳನ್ನು ಮುಚ್ಚಿಕೊಳ್ಳಲು ಅಸುರ ಸೇನೆಯು ಶುಂಭನೆಂಬ ಸೇನಾಪತಿಯ ಆಜ್ಞೆಯಿಂದ ಆ ಕೋಟೆಯನ್ನು ಮುತ್ತಿಕೊಂಡಿತು (೨೪-೨೬). ದಿಕ್ಪಾಲಕರೆಲ್ಲ ಕೋಟೆಯನ್ನು ರಕ್ಷಿಸಲು ಸಿದ್ಧರಾದರು. ರಕ್ಕಸರು ಅವರನ್ನು ಲೆಕ್ಕಿಸದೆ ಕೋಟೆಯನ್ನು ಮುತ್ತಿ ಹತ್ತತೊಡಗಿದರು (೨೭). ಅಷ್ಟರಲ್ಲಿ ದೇವೇಂದ್ರನು ತನ್ನ ಪರಿವಾರ ಮಂತ್ರಿಗಳನ್ನು ಕೂಡಿಕೊಂಡು ದೈತ್ಯರನ್ನು ಕೋಟೆಬಾಗಿಲದಲ್ಲಿ ತಡೆದನು. ಸಾಯಂಕಾಲವಾಯಿತು. ರಾಕ್ಷಸರಾಜನು ತನ್ನ ಸೇನೆಯನ್ನೆಲ್ಲ ಕೂಡಿಕೊಂಡು ಸುತ್ತ ಪಾಳೆಯವಿಳಿದನು. ಪುರದೊಳಗೆ ದಿಕ್ಪಾಲಕರನ್ನು ಕೂಡಿಕೊಂಡು ದೇವೇಂದ್ರನು ಕಾಳೆಗದ ಬಗ್ಗೆ ವಿಚಾರ ಮಾಡುತ್ತ ಕುಳಿತನು (೨೮-೩೧). "ಈ ಪಟ್ಟಣದ ದುರ್ಗವೂ, ಇದನ್ನು ಕಾಯುವ ಸುಭಟರೂ ಸಾಮಾನ್ಯರಲ್ಲವಾದರೂ ಈಶ್ವರನ ಕೃಪೆ ಉಳಿದ ಬಳಿಕ ನಮ್ಮನ್ನು ರಕ್ಕಸರು ಭಂಗಬಡಿಸಿದರು. ಇನ್ನು ಇಲ್ಲಿ ಇರುವುದು ಹಿತಕರವಲ್ಲ. ವಸ್ತುವಾಹನಕ್ಕಾಸೆ ಮಾಡದೆ ನಾವೆಲ್ಲ ಸತ್ಯಲೋಕಕ್ಕೆ ಹೋಗಬೇಕೆ"ಂದು ನಿರ್ಧರಿಸಿ ಅಲ್ಲಿಗೆ ಬರಲು ಬ್ರಹ್ಮನು ಅವರನ್ನು ಕರೆದುಕೊಂಡು ವಿಷ್ಣುವಿನಲ್ಲಿಗೆ ಹೋಗಿ ನಡೆದ ಸಂಗತಿಯನ್ನು ಅರುಹಿದನು. ಈಶ್ವರನ ಹೊರತು ಜಲಂಧರನನ್ನು ಗೆಲ್ಲುವುದು ಉಳಿದವರಿಗೆ ಅಸಾಧ್ಯವೆಂದು ಹರಿಗೆ ಗೊತ್ತಿದ್ದರೂ ದೂರನ್ನು ಕೇಳಿ ಸುಮ್ಮನಿರುವುದು ಉಚಿತವಲ್ಲೆಂದು ಬಗೆದು ಸನ್ನಾಹಮಾಡತೊಡಗಿದನು (೩೨-೩೪). ಇಷ್ಟರಲ್ಲಿ ಅಮರರೆಲ್ಲ ತಮ್ಮ ಪಟ್ಟಣವನ್ನು ಬಿಟ್ಟು ಓಡಿಹೋದರೆಂದು ಕೇಳಿ ಜಲಂಧರನು ಸಂತಸಪಟ್ಟು ಅಮರಾವತಿಯನ್ನು ಹೊಕ್ಕು ಅದರ ಸಿರಿಯನ್ನು ನೋಡುತ್ತ ನಡೆದನು (೩೫-೩೬). ಮುಂದೆ ಪ್ರಜೆಗಳನ್ನು ಕರೆಸಿ ದರ್ಶನಕೊಟ್ಟು ಶುಂಭನಿಗೆ ಅಲ್ಲಿನ ಪಟ್ಟವನ್ನು ಕಟ್ಟಿ ದಿಕ್ಪಾಲಕರ ದುರ್ಗಗಳನ್ನು ಕೈವಶಮಾಡಿಕೊಂಡು ಕಾವಲಿಟ್ಟು ಇಂದ್ರನ ವಸ್ತುಗಳನ್ನು ವಿಚಾರಿಸಿದನು. ಇಂದ್ರನು ಉಳಿದ ವಸ್ತುಗಳನ್ನೆಲ್ಲ ಬಿಟ್ಟು ಚಿಂತಾಮಣಿಯನ್ನು ತೆಗೆದುಕೊಂಡು ಹೋದನೆಂದು ತಿಳಿಯಲು ಜಲಂಧರನು ಕೋಪಾವಿಷ್ಟನಾದನು. ಅಷ್ಟರಲ್ಲಿ ನಾರದರು ಅಲ್ಲಿಗೆ ಬಂದರು (೩೭-೩೮). ಯೋಗ್ಯ ಉಪಚಾರದ ನಂತರ "ಸುರರನ್ನೆಲ್ಲ ವೈಕುಂಠದಲ್ಲಿ ಕಂಡೆನೆ"ಂದು ನಾರದರು ಹೇಳಿದರು (೩೯).

“ಹರಿಯು ಅವರನ್ನು ನಮ್ಮ ವಿರುದ್ಧ ರಕ್ಷಿಸುವನೇ” ಎಂದು ಅಸುರರಾಜನು ಗುಡುಗುಡಿಸಿ ಸೇನೆಯನ್ನು ವೈಕುಂಠಮಾರ್ಗವಾಗಿ ಸಾಗಿಸಿದನು (೪೦).

೨೫ ಜಲಂಧರನು ವಿಷ್ಣುವಂ ಸೆರೆಗೈದ ಸಂಧಿ

ವಿಷ್ಣುವು ಇಂದ್ರಬ್ರಹ್ಮರನ್ನು ಒಡಗೊಂಡು ಅವರವರ ಚತುರ್ಬಲಗಳನ್ನು ಕೂಡಿಕೊಂಡು ತನ್ನ ಚತುರಂಗಬಲವೆರಸಿ ಸಂಗರಕೆ ಪೊರಮಟ್ಟನು (೨). ಅನಿತರೊಳಗೆ ದಾನವಾಧಿಪತಿಯಾದ ಜಲಂಧರನು ರೋಷಭೀಷಣನಾಗಿ ವೈಕುಂಠಪುರಕ್ಕೆ ಅತಿಸಮೀಪದಲ್ಲಿಯೇ ಬಂದನು (೩). ಕ್ಷಣದಲ್ಲಿ ಇರ್ಬಲಗಳು ಸಂಧಿಸಿ ಚೂಣಿಗಾಳಗವು ಆರಂಭವಾಯಿತು (೪). ರಕ್ಕಸರು ದೇವತೆಗಳನ್ನು ನಾನಾವಿಧದ ಶಸ್ತ್ರಾಸ್ತ್ರಗಳಿಂದ ಸವರತೊಡಗಿದರು. ಅವರಿಗೆ ಎದುರಾಗಿ ಸುರಭಟರು ರಕ್ಕಸರನ್ನು ಕತ್ತರಿಸುತ್ತ ಮುಂಬರಿಯಲು ಶುಂಭಧೂಮ್ರಾಕ್ಷರೆಂಬ ಅಸುರಭಟರು ಮುಂಕೊಂಡುದನ್ನು ಕಂಡು ಚೂಣಿಗರನ್ನು ಹಿಂದಕ್ಕೊತ್ತಿ ಸುರಭಟರು ಅವರನ್ನು ತಡೆದರು (೫-೮). ಸ್ವಲ್ಪ ಹೊತ್ತಿನಲ್ಲಿ ಸುರಭಟರು ರಾಕ್ಷಸರ ಉರವಣಿಯನ್ನು ಸೈರಿಸಲಾರದೆ ಬೆಂಗೊಟ್ಟು ಓಡುತ್ತಿರಲು ರಕ್ಕಸರನ್ನು ತಡೆಯುವದಕ್ಕೆ ಮಾಧವನು ರಥವನ್ನು ಮುಂದಕ್ಕೆ ನೂಕಿದನು (೯-೧೨). ಅವನನ್ನು ಕಂಡು ದೈತ್ಯನಾಯಕರು ಹೆದರಿ ಜಲಂಧರನ ಮರೆಯನ್ನು ಹೊಕ್ಕರು. ಆಗ ಅವನೇ ವಿಷ್ಣುವಿಗೆ ಎದುರಾದನು (೧೩). ಒಬ್ಬರನ್ನೊಬ್ಬರು ಪಚಾರಿಸುತ್ತ ಒಬ್ಬರ ಮೇಲೆ ಒಬ್ಬರು ಬಾಣಪ್ರಯೋಗವನ್ನು ಆರಂಭಿಸಿದರು (೧೪-೧೮). ಕೆಲಕಾಲ ಇಬ್ಬರೂ ನೆಲದ ಮೇಲೆಯೂ ಆಕಾಶದಲ್ಲಿಯೂ ಎಚ್ಚಾಡಿ ದಿವ್ಯಾಸ್ತ್ರಗಳ ಪ್ರಯೋಗವನ್ನು ಮಾಡಿ ಒಬ್ಬರ ರಥಗಳನ್ನು ಒಬ್ಬರು ಮುರಿದರು (೧೯-೨೬). ಇದರಿಂದ ಒಬ್ಬರೂ ಸೋಲದೆ ಗದಾಯುದ್ಧವನ್ನು ಆರಂಭಿಸಿ ಕೆಲಕಾಲ ಆಶ್ಚರ್ಯವಾಗುವಂತೆ ಹೊಡೆದಾಡಿದರು (೨೭-೩೦). ಇದರಲ್ಲಿ ಗೆಲುವು ಗಾಣದೆ ಮಲ್ಲಗಾಳೆಗಕ್ಕೆ ಅನುವಾದರು. ಅದರಲ್ಲಿಯೂ ಇಬ್ಬರ ಉರವಣಿಗೆ ಇಬ್ಬರ ಚಮತ್ಕಾರಕ್ಕೆ ಇಬ್ಬರೇ ಸಾಟಿಯೆಂಬಂತೆ ಕಾಳೆಗಮಾಡಿ ಕೊನೆಗೆ ಮಾಧವನು ಶಕ್ತಿಗುಂದಿ ಜಲಂಧರನ ಹೇಳಿಕೆಯಂತೆ ತನ್ನ ಅರಸಿಯಾದ ಕಮಲೆಯೊಡನೆ ಅವನ ಮನೆಯಲ್ಲಿ ಸೆರೆಯಿರಲು ಒಪ್ಪಿಕೊಂಡನು (೩೦-೩೬). ಜಲಂಧರನು ಅವರನ್ನು ಕೂಡಿಕೊಂಡು ದೇವತೆಗಳನ್ನೆಲ್ಲ ಸೆರೆಹಿಡಿದು ತನ್ನ ಪಟ್ಟಣಕ್ಕೆ ತಿರುಗಿದನು (೩೭). ಸಡಗರದಿಂದ ತನ್ನರಮನೆಗೆ ಬಂದು ವಿಷ್ಣುಲಕ್ಷ್ಮಿಯರನ್ನು ಒಂದು ಮನೆಯಲ್ಲಿರಿಸಿ ಉಳಿದವರನ್ನು ತನ್ನ ಸೇವೆಮಾಡಲು ಹಚ್ಚಿದನು (೩೮-೩೯). ಹೀಗೆ ಮೂರ

ಬರದ ವರ್ಷ ಕಳೆಯಲು ದೇವತೆಗಳೆಲ್ಲ ಗುಪ್ತದಿಂದ ಆಲೋಚಿಸಿ ಜಾಲಂಧರದಿಂದ ಎಲ್ಲರೂ ಓಡಿಹೋಗಿ ಈಶ್ವರನಿಗೆ ಇದನ್ನೆಲ್ಲ ತಿಳುಹಿ ತಮ್ಮನ್ನು ಉದ್ಧರಿಸುವುದೆಂದು ಬೇಡಿಕೊಂಡರು. ಶಿವನು ಅವರಿಗೆ ಅಂಜಬೇಡಿರೆಂದು ಅಭಯವಚನವನ್ನು ಇತ್ತನು (೪೦-೪೨).

೨೬ ಜಲಂಧರ ಸಂಹಾರಲೀಲೆಯ ಸಂಧಿ

ಇತ್ತ ಜಲಂಧರನು ತನ್ನ ಆಸ್ಥಾನದಲ್ಲಿ ಕುಳಿತಾಗ ದೇವತೆಗಳ ಸುಳಿವನ್ನು ಕಾಣದೆ ಅವರನ್ನು ಹುಡುಕಿಸಲು, ಅವರಿದ್ದ ಮನೆಗಳೆಲ್ಲ ಬರಿದಾಗಿವೆಯೆಂದು ಚರರು ತಿಳಿಸಿದರು (೨). “ಮೂರು ಲೋಕಗಳು ನನ್ನ ಆಜ್ಞೆಯಲ್ಲಿರುವಾಗ ಆ ದೇವತೆಗಳನ್ನು ಮರೆಮಾಗಿಸಿಕೊಂಬ ವೀರರನ್ನು ನಾನು ಕಾಣೆ, ಇವರು ಎತ್ತ ಹೋದರು?” ಎಂದು ಜಲಂಧರನು ತನ್ನ ಗುರುವನ್ನು ಕೇಳಲು “ಎಲೈ ಮರುಳೇ, ಲೋಕನಾಯಕನೂ, ಸಕಲಬ್ರಹ್ಮಾಂಡಗರ್ಭೀಕರನೂ ಆದ ಶಂಕರನನ್ನು ಮರೆಹೊಕ್ಕಿರುವರು” ಎಂದು ಹೇಳಿದನು (೩). “ನಾನಲ್ಲದೆ ಇನ್ನೊಬ್ಬ ಜಗನ್ನಾಯಕನುಂಟೇ? ಅವನೊಡನೆ ಯುದ್ಧವನ್ನು ಬಿಡಬಹುದೇ? ಚತುರಂಗವನ್ನು ಕರೆಸೆ” ನುತ ರಕ್ಕಸರಾಜನು ಸಿಂಹಪೀಠದಿಂದೆದ್ದನು (೪). ರಾಕ್ಷಸರ ದಂಡು ರಜತಗಿರಿಗೆ ದಾಳಿಯನ್ನಿಡಲು ಅಲ್ಲಿಯ ಜನರೆಲ್ಲ ಕೈಲಾಸಕ್ಕೆ ಗೂಳೆಯ ತೆಗೆದರು. ಈಶ್ವರನು “ನಮಗೆ ಜಲಂಧರನ ಕೂಡೆ ಕಾಳೆಗವು. ಸೈನ್ಯದಲ್ಲಿ ಡಂಗುರವನ್ನು ಹೊಡಿಸೆ” ಎಂದು ನಂದಿಗೆ ಹೇಳಿದನು (೫). ಕೂಡಲೇ ಚತುರಂಗಬಲವು ಕೂಡಿ ಸಂಭ್ರಮದಿಂದ ನಡೆಗೊಂಡಿತು (೬-೧೦). ಶಿವಬಲದ ಭರವಸವನ್ನು ಪೊಗಳಲಸದಳವಾಗಿದ್ದಿತು (೧೧). ಜಲಂಧರನ ಹಾಗೂ ಶಿವನ ಬಲಗಳು ಒಂದಕ್ಕೊಂದು ಕಾಣಿಸಿಕೊಂಡುವು (೧೨-೧೩). ಎರಡೂ ಚೂಳಿ ಪೊಯ್ಯಾಡಿ ಮುಡಿಯಲು ಚತುರಂಗಗಳಿಗೆ ಕಾಳೆಗವು ಆರಂಭವಾಯಿತು (೧೪-೧೬). ಒಬ್ಬರನ್ನೊಬ್ಬರು ಕುಟ್ಟಿ ಮೆಟ್ಟಿ ಕೊಲ್ಲುವುದರಿಂದ ರಣರಂಗವು ಭಯಂಕರ ಸ್ವರೂಪವನ್ನು ತಾಳಿತು. ದೇವತೆಗಳಲ್ಲಿ ಮುಖ್ಯರಾದ ಬ್ರಹ್ಮ ವಿಷ್ಣು ಇಂದ್ರ ಮೊದಲಾದವರು ರಾಕ್ಷಸರನ್ನು ಕೊಲ್ಲುತ್ತಿರಲು ರಕ್ಕಸರ ಮುಂದಾಳುಗಳಾದ ನಾಮುನ ಜಂಭ ವಿರೂಪಾಕ್ಷ ಮೊದಲಾದವರು ಅವರನ್ನು ಎದುರಿಸಿದರು (೧೮-೨೨). ಜಂಭನನ್ನು ಉಗ್ರನೂ, ಶುಂಭನನ್ನು ವೃಷೇಶ್ವರನೂ, ನಿಶುಂಭನನ್ನು ಭೈರವನೂ, ಹೀಗೆ ಒಬ್ಬರನ್ನೊಬ್ಬರು ಎದುರಿಸಿದರು (೨೩). ಇವರೆಲ್ಲರ ಕಾಳೆಗದಲ್ಲಿ ಎಲ್ಲಿ ನೋಡಿದರೂ ಬಾಣಗಳು ತುಂಬಿಹೋದುವು

(೨೪-೨೮). ಅವರಲ್ಲಿ ಶುಂಭನಂದೀಶರಿಗೆ ಕಲಹದಾವೇಶವು ಹೆಚ್ಚಿ ಒಬ್ಬರನ್ನೊಬ್ಬ ರು ಜಯಿಸುವಭಿಲಾಷೆಯಿಂದ ಹೊಡೆದಾಡಿದರು. ಕೊನೆಗೆ ರಕ್ಕಸನು ನಂದಿಯ ಆವೇಶಕ್ಕೆ ತಾಳಲಾರದೆ ಓಡಿಹೋದನು (೩೦). ಮುಂದೆ ಒಂದೇ ಸಾರಿಗೆ ಅಸುರರ ಸೇನೆಯು ಮುರಿದು ಓಡಲಾರಂಭಿಸಿತು. ಈಶ್ವರನ ಭಟರು ಅವರನ್ನು ಬೆನ್ನಟ್ಟಿದರು (೩೧). ಜಲಂಧರನ ಅರೆನೆಲೆಯನ್ನು ಈ ರಕ್ಕಸರು ಸೇರಲು ಅವನು ಭಯಂಕರ ಕೋಪದಿಂದ ದೇವತೆಗಳ ಮೇಲೆ ನಡೆದನು (೩೨). ಅವನ ಕೈಸನ್ನೆಗೆ ಅಸುರಭಟರು ಮತ್ತೆ ಬಂದು ದೇವತೆಗಳ ಮೇಲೆ ಬಿದ್ದರು. ಜಲಂಧರನು ಅನುಮಾನವಿಲ್ಲದೆ ಈಶ್ವರಬಲದ ಮೇಲೊತ್ತಿ ನಡೆತರುವುದನ್ನು ಹರನು ಕಂಡು ಪಿನಾಕವನ್ನು ಕೊಂಡು ಒಂದು ಬಾಣದಿಂದ ಅಸುರಬಲವನ್ನು ಬರಿಕೈದನು (೩೩-೩೪). ದಾನವರಾಜನು ಸೇನೆ ಅಳಿದುದನ್ನು ಕಂಡು ಈಶ್ವರನ ಕಡೆಗೆ ತನ್ನ ರಥವನ್ನು ನಡೆಸಿ "ನೀನೇ ಈಶ್ವರನೋ ? ಮಾತಾಡು" ಎನ್ನುತ್ತ ಬಾಣಗಳನ್ನು ಕರೆದನು (೩೫). ಈಶ್ವರನು ಅವನ ಆ ಬಾಣಗಳನ್ನೆಲ್ಲ ಕತ್ತರಿಸಲು ರಾಕ್ಷಸನಿಗೆ ಭಯವುಂಟಾಗಿ ಮತ್ತೆ ಸರಳುಗಳನ್ನು ಕವಿಸಿದನು. ಈಶ್ವರನು ಅವನ ಬಾಣಗಳನ್ನು ಮತ್ತೆ ಕತ್ತರಿಸಿ ಅವನಿಗೆ ತನ್ನ ನಿಜರೂಪವನ್ನು ತೋರಿಸಿದನು (೩೬-೩೭). ತನ್ನ ಹೃತ್ಕಮಲದಲ್ಲಿದ್ದ ಅಖಂಡ ಚಿನ್ಮಯನನ್ನೇ ತನ್ನೆದುರಿನಲ್ಲಿ ಕಂಡು ದಾನವೇಶ್ವರನು ಸಾಷ್ಟಾಂಗವೆರಗಿದನು (೩೮). ಈಶ್ವರನು ಅವನ ಭಕ್ತಿಗೆ ಮೆಚ್ಚಿ "ವರವನ್ನು ಬೇಡೆ" ನಲು "ನಿನ್ನೊಡನೆ ಗರ್ವದಿಂದ ಕಾದಿದ ಈ ಒಡಲನ್ನು ಬಿಚ್ಚಿ ಬಿಸುಟು ನನ್ನ ಆತ್ಮವನ್ನು ನಿನ್ನೊಳಗೆ ಕೂಡಿಸಿಕೊಳ್ಳೆ"ಂದು ಬೇಡಿದನು (೩೯). ಈಶ್ವರನು ಕರುಣದಿಂದ ಪಾದದಂಗುಷ್ಟದಿಂದ ಚಕ್ರವನ್ನು ಬರೆದು ಮೂರೂ ಕಣ್ಣಿನಿಂದ ಅದನ್ನು ನೋಡಲು ಸೂರ್ಯಚಂದ್ರರು ಅದರ ಮೊಳೆಗಳಾದರು ಅಗ್ನಿಯು ಪಟ್ಟಿಯಾಯಿತು. ಅದನ್ನು ಕೈಯಲ್ಲಿ ಹಿಡಿದು ಜಲಂಧರನ ಕೊರಳಿಗಿಡಲು ಅವನ ಆತ್ಮಜ್ಯೋತಿಯು ಹರನ ಹಣೆಗಣ್ಣಿ ಬೆಂಕಿಯಲ್ಲಿ ಬೆರೆತಿತು. ಈಶ್ವರನ ತಲೆಯಮೇಲೆ ದೇವತೆಗಳು ಪುಷ್ಪವೃಷ್ಟಿ ಮಾಡಿದರು. ದೇವದುಂದುಭಿಗಳು ಮೊಳಗಿದುವು. ಎಲ್ಲ ದೇವತೆಗಳು ಶಂಕರನ ಪಾದಕಮಲಗಳಿಗೆ ಭಕ್ತಿಯಿಂದ ಎರಗಿದರು. ಎಲ್ಲರನ್ನು ಬೀಳ್ಕೊಟ್ಟು ಈಶ್ವರನು ಕೈಲಾಸವನ್ನು ಸೇರಿದನು (೪೦-೪೨).

೨೭ ಚಕ್ರಪ್ರದಾನಲೀಲೆಯ ಸಂಧಿ

ಕೆಲಕಾಲದ ಮೇಲೆ ವಿಷ್ಣುವು ಶಿವನನ್ನು ಮೆಚ್ಚಿಸಿ ಚಕ್ರವನ್ನು ಪಡೆಯಬೇಕೆಂದು

ಉಗ್ರ ತಪಸ್ಸನ್ನಾಚರಿಸಿದನು. ಈಶ್ವರನು ಸಂತುಷ್ಟನಾಗಿ "ವರವನ್ನು ಬೇಡು" ಎಂದು ಕೇಳಲು ಅಚ್ಯುತನು "ನಿನ್ನ ಆಜ್ಞೆಯ ಪ್ರಕಾರ ಲೋಕರಕ್ಷೆಯನ್ನು ಮಾಡುತ್ತಿರಲು ರಾಕ್ಷಸರು ಹೆಚ್ಚಿ ಹಾಳುಮಾಡುತ್ತಿರುವರು. ನಿನ್ನ ಕೈಯ ಚಕ್ರವನ್ನು ಕೊಟ್ಟರೆ ದುಷ್ಟರನ್ನು ಶಿಕ್ಷಿಸುವೆನು" ಎನ್ನಲು, ಅವನಿಗೆ ಈಶ್ವರನು ಚಕ್ರವನ್ನಿತ್ತನು (೨-೩). ವಿಷ್ಣುವು ಚಕ್ರದಿಂದ ದುಷ್ಟರನ್ನು ಶಿಕ್ಷಿಸುತ್ತಲೂ ಲೋಕಗಳನ್ನು ರಕ್ಷಿಸುತ್ತಲೂ ಇದ್ದನು. ಮುಂದೆ ಕೆಲಕಾಲದ ನಂತರ ಹರಿಭಕ್ತನಾದ ಕ್ಷುಪನೆಂಬ ರಾಜನು ದಧೀಚಿ ಮುನಿಯೊಡನೆ ಲೆತ್ತವಾಡುತ್ತ "ನೀನು ಸೋತರೆ ಹರಿಭಕ್ತನಾಗು. ನಾನು ಸೋತೆನಾದರೆ ಹರಭಕ್ತನಾಗುವೆ" ಎಂದು ಮಾತಾಡಿ ಆಡುತ್ತಿರಲು ಕ್ಷುಪನು ಸೋತನು (೪). ವಚನಪ್ರಕಾರ ಹರಭಕ್ತನಾಗೆಂದು ದಧೀಚಿಮುನಿಯು ಅವನನ್ನು ಕೇಳಲು ರಾಜನು ಆ ಮುನಿಯನ್ನು ಹೊರಗೆ ಹಾಕಿಸಿದನು. ಆ ಮುನಿಯು ಈಶ್ವರನನ್ನು ಕುರಿತು ತಪಮಾಡಿ ವಜ್ರಕಾಯವನ್ನು ಪಡೆದು ಅರಸನೊಡನೆ ಕಾದಿ ಅವನ ಚತುರಂಗವೆಲ್ಲವನ್ನು ನಾಶಮಾಡಿ ಅವನನ್ನು ಬೆನ್ನಟ್ಟಿದನು. ಕ್ಷುಪನು ವಿಷ್ಣುವಿನ ಬೆನ್ನು ಬೀಳಲು, ವಿಷ್ಣುವು ಮುನಿಯೊಡನೆ ಯುದ್ಧಮಾಡಿದನು (೫). ಅನೇಕ ಆಯುಧಗಳಿಂದ ಯುದ್ಧಮಾಡಿದರೂ ವಿಷ್ಣುವಿಗೆ ಗೆಲವುದೊರೆಯದಿರಲು ಅವನು ಆ ಮುನಿಯನ್ನು ಚಕ್ರದಿಂದಿಟ್ಟನು. ಆದರೆ ಮುನಿಯು ಆ ಚಕ್ರವನ್ನು ಕೈಯಿಂದ ಹಿಡಿದು ಅದನ್ನು ಪುಡಿಯಾಗುವಂತೆ ಮುರಿದೊಗೆದು ಹರಿಯೆದೆಯನ್ನು ಪಾದತಲದಿಂದ ಒದೆಯಲು, ಶ್ರೀವತ್ಸಲಾಂಛನನೆಂಬ ಹೆಸರನ್ನು ತಾಳಿ ಅಬ್ಜಾಕ್ಷನು ಕ್ಷುಪನಿಗೆ ಶೈವದೀಕ್ಷೆಯನ್ನು ಕೊಡಿಸಿದನು (೬). ಮುಂದೆ ಈಶ್ವರನಿಂದ ಮರಳಿ ಚಕ್ರವನ್ನು ಪಡೆಯಬೇಕೆಂದು ವಿಷ್ಣುವು ಆತನನ್ನು ಪ್ರತಿದಿನ ಸಾವಿರ ಕಮಲಗಳಿಂದ ಪೂಜಿಸಲಾರಂಭಿಸಿದನು. ಒಮ್ಮೆ ಹರಿಯ ಭಕ್ತಿಯನ್ನು ನೋಡಬೇಕೆಂದು ಶಿವನು ಸಾವಿರ ಹೂಗಳಲ್ಲಿ ಒಂದನ್ನು ಕಡಿಮೆ ಮಾಡಲು, ವಿಷ್ಣುವು ತನ್ನ ನೇಮವು ತಪ್ಪಿದ್ದಕ್ಕೆ ಮನನೊಂದು ತನ್ನ ಬಲಗಣ್ಣನ್ನು ಲಿಂಗಕ್ಕೆ ಸಮರ್ಪಿಸಿದನು. ಈಶ್ವರನು ಮೆಚ್ಚಿ ಮರಳಿ ಚಕ್ರವನ್ನು ಕೊಟ್ಟು ಅದನ್ನು ಇನ್ನು ಮುಂದೆ ಶಿವಭಕ್ತರ ಮೇಲೆ ಉಪಯೋಗ ಮಾಡಬಾರದೆಂದು ನೇಮಿಸಿದನು (೭-೮).

ತೃತೀಯ ಕಾಂಡ

೨೮ ಗಜಾಸುರಸಂಹಾರಲೀಲೆಯ ಸಂಧಿ

ಪೂರ್ವದಲ್ಲಿ ಅಗಸ್ತ್ಯಮುನಿಯು ಕಾವೇರಿಯಾದಿಯಲ್ಲ ತಪಸ್ಸು ಮಾಡುತ್ತಿರುವಾಗ, ಒಬ್ಬ ಗಂಧರ್ವನು ಆಕಾಶದಲ್ಲಿ ವಿಮಾನದಲ್ಲಿ ಬರುತ್ತ ಆ ಮುನಿಯನ್ನು ಕಂಡು ಹಾಸ್ಯೋಕ್ತಿಗಳಿಂದ ಹೆಂಡತಿಯ ಮುಡಿಯೊಳಗಿನ ಹೂವಿನಿಂದ ಹೊಡೆಯಲು ಆ ಮುನಿ ಕೆರಳಿ " ನೀನು ಮತ್ತತೆಯಿಂದ ನನ್ನನ್ನು ಹೊಡೆದುದಕ್ಕೆ ಸಕಲಜಗವನ್ನು ಸಂಹರಿಸುವಂತಹ ಮದೋನ್ಮತ್ತವಾದ ದುಷ್ಟ ಗಜವಾಗಿ ಹುಟ್ಟಿ "ಎಂದು ಶಾಪವಿತ್ತನು. ಅದಕ್ಕೆ ಕಳವಳಿಸಿ ಗಂಧರ್ವನು ಶಾಪವನ್ನು ತಪ್ಪಿಸಬೇಕೆಂದು ಮುನಿಯನ್ನು ಬೇಡಲು " ಇದು ಮತ್ತಾರಿಂದಲೂ ಸಾಧ್ಯವಿಲ್ಲ. ಶಿವನಿಂದ ಮುಕ್ತನಾಗುವೆ. ಹೋಗು " ಎಂದನು (೨-೩).

ಕ್ಷಣದಲ್ಲಿ ಆ ವಿಮಾನವೂ ಆತನ ಮಡದಿಯೂ ಇಲ್ಲದಂತಾಗಿ ಗಂಧರ್ವನು ಅದ್ಭುತಾಕಾರದ ಆನೆಯ ರೂಪನ್ನು ಧರಿಸಿದನು. ನಕ್ಷತ್ರಪಂಕ್ತಿಗಳು ಆ ಆನೆಯ ಗೆಜ್ಜೆಗಳಾದುವು. ಸೂರ್ಯಚಂದ್ರರು ಅದರ ಕೊರಳ ಗಂಟೆಗಳಾದರು. ಅದರ ಎಡೆಯಾಟಕ್ಕೆ ಬ್ರಹ್ಮಾಂಡವೇ ಒಲೆದಾಡುತ್ತಿತ್ತು (೪-೭). ಅದನ್ನು ಎದುರಿಸುವವರು ಮೂಲೋಕದಲ್ಲಿ ಒಬ್ಬರೂ ಇಲ್ಲವಾಯಿತು. ಕೋರೆಗಳಿಂದ ಕುಲಪರ್ವತಗಳನ್ನೇ ಕೀಳುತ್ತಿತ್ತು. ಅದರ ಸೊಂಡಿಲಿನ ಉಸಿರಿಗೆ ಮೇಲಿನ ಲೋಕಗಳು ಮಾಲೆಗಳ ಬೆಂಡಿನಂತೆ ಕೆಳಗುಮೇಲೆಯಾಗುತ್ತಿದ್ದುವು. ಅದರ ಪಾದಪ್ರಹಾರದಿಂದ ಜಗತ್ತಿನ ಜನರೆಲ್ಲ ಇಲ್ಲವಾದರು. ಫಣಿಪದಿಗ್ಗಜಗಳು ಜಜ್ಜಿದಂತಾದುವು. ಇದನ್ನು ಜಯಿಸುವವರಾರೆಂದು ಮೂಜಗವು ತಲ್ಲಣಿಸುತ್ತಿತ್ತು (೮-೧೨).

ಇಂದ್ರಮೊದಲಾದ ದಿಕ್ಪಾಲಕರು ವಿಷ್ಣುಬ್ರಹ್ಮರಲ್ಲಿ ಇದನ್ನು ದೂರಿಕೊಂಡರು. ಅವರು ಸೈನ್ಯದೊಂದಿಗೆ ಗಜಾಸುರನೊಡನೆ ಬಹುದಿವಸ ಕಾದಿ ಗೆಲ್ಲಲಾರದೆ ಮಹಾದೇವನಲ್ಲಿಗೆ ಬಂದು ಹೇಳಿಕೊಂಡರು (೧೨-೧೫). ಈಶ್ವರನು ಅವರಿಗೆ ಅಭಯವನ್ನಿತ್ತು ತನ್ನ ಸಕಲ ಸೈನ್ಯವನ್ನು ಕೂಡಿಕೊಂಡು ಗಜಾಸುರನನ್ನು ಮರ್ದಿಸಲು ಹೊರಟನು (೧೬-೧೮). ಈ ಅಗಣಿತ ಸೇನಾಸಮುದ್ರಕ್ಕೆದುರಾಗಿ ಪರ್ವತವೇ ಕೈಕಾಲತಾಳಿದಂತೆ ಭಯಂಕರಾಕಾರದಿಂದ ಗಜಾಸುರನು ಬಂದನು (೧೯). ನಿಮಿಷದಲ್ಲಿ ತನ್ನನ್ನು ಮುತ್ತಿದ ಸೇನೆಯನ್ನು ನಾಶಮಾಡಿದನು. ಹರಿಬ್ರಹ್ಮರನ್ನು

ಬರಿಯ ಜೀವದಿಂದ ಉಳಿಸಿದನು (೨೦-೨೯). ಹರಿಯು ಬಹಳ ವೀರಾವೇಶದಿಂದ ಆ ಗಜವನ್ನು ನಾಶಮಾಡಲು ಗದೆಯನ್ನು ಕೊಂಡು ಅದರ ಮೇಲೆ ಏರಲು ಅದು ಅವನನ್ನು ಹಿಡಿಯಿತು. ಆಗ ಹರಿಯು ತಪ್ಪಿಸಿಕೊಂಡು ಅದರ ಎದೆಯಲ್ಲಿ ಒಂದುಕಡೆಯಲ್ಲಿ ನಿಂತುಕೊಂಡು ಪಾರಾದನು (೩೦-೩೧). ಇದನ್ನೆಲ್ಲ ಕಂಡು ಉಳಿದವರು ಈಶ್ವರನ ಮೊರೆಹೊಗಲು ಮಹೇಶ್ವರನು ಪಿನಾಕದಲ್ಲಿ ಬಾಣವನ್ನು ಹೂಡಿ ಆನೆ ತಲೆಯು ಹರಿದು ಬೀಳುವಂತೆ ಹೊಡೆದನು. ಕೂಡಲೇ ಗಂಧರ್ವನು ನಿಜರೂಪತಾಳಿ ಈಶ್ವರನಿಗೆ ನಮಿಸಿ ತನ್ನ ಶರೀರದೊಳಗಿನ ಕುರುಹನ್ನು ಧರಿಸಲು ಬೇಡಿಕೊಂಡನು (೩೨-೩೩). ಈಶ್ವರನು ಗಜಾಸುರನ ಚರ್ಮವನ್ನು ಹೊದ್ದು ಆ ಗಂಧರ್ವನಿಗೆ ಗಣಪದವಿಯನ್ನು ಕೊಟ್ಟು, ಆನೆಯ ತಲೆಯನ್ನು ಹಿಡಿದುಕೊಂಡು ಕೈಲಾಸದರಮನೆಗೆ ಬರಲು, ಪಾರ್ವತಿಯ ಮೈಯ್ಯ ಮಣ್ಣಿನಿಂದಾದ ಮಗನು ಈಶ್ವರನನ್ನು ತಡೆಯಲು ಖಡ್ಗದಿಂದ ಅವನ ತಲೆಯನ್ನು ಕತ್ತರಿಸಿ ಆಕಾಶಕ್ಕೆ ಹಾರಿಸಿದನು. ಮಗನು ಅಳಿದ ಸುದ್ದಿಯನ್ನು ಕೇಳಿ ಪಾರ್ವತಿಯು ದುಃಖದಿಂದ ಈಶ್ವರನೊಡನೆ ಸಿಟ್ಟಾಗಲು, "ನಿನ್ನ ಮಗನಿದ್ದಾನೆ ನೋಡು ಬಾ" ಎನ್ನುತ್ತ ಅವಳನ್ನು ಕರೆತಂದು ಗಜಾಸುರನ ಮಸ್ತಕವನ್ನು ಆ ಮುಂಡಕ್ಕೆ ಹಚ್ಚಿದೊಡನೆ ಪ್ರಾಣವು ಬಂದಿತು. ಆ ರೂಪವನ್ನು ನೋಡಿ ಖಿನ್ನಮನಸ್ಕಳಾದ ಪಾರ್ವತಿಗೆ "ಈ ರೂಪು ವಿಕಾರವಾಯಿತೆಂದು ದುಃಖಪಡಬೇಡ" ಎಂದು ಗಜಮುಖನಿಗೆ ಗಾಣಪತ್ಯವನ್ನು ಕೊಟ್ಟು "ನಿನ್ನನ್ನು ಭಜಿಸಿದವರ ಇಷ್ಟಸಿದ್ಧಿಯಾಗಲಿ" ಎಂದು ವರವನ್ನು ಕೊಟ್ಟನು (೩೪-೩೬).

೨೯ ಶಿವಲೋಕವಿಸ್ತಾರದ ಸಂಧಿ

ಬ್ರಹ್ಮಾಂಡವೆಂಬ ಕನಕಮಯ ಶಿವಾಲಯ, ಅದರ ತುದಿಗೆ ಮುಕ್ತಾಕಾರ ಕಲಶದಂತೆ ಶಿವಲೋಕವು ಶುದ್ಧ ಸ್ಫಟಿಕದಂತೆ ಇರುವುದು (೨). ಆ ಶಿವಲೋಕವು ಷಟ್ಕೋಣದ ಆಕಾರವನ್ನು ತಾಳಿರುವುದು. ಅದರ ವಿಸ್ತಾರವು ಮೂವತ್ತೆರಡು ಕೋಟಿಯೋಜನವು. ಅದರ ಸುತ್ತಲು ಜ್ಯೋತಿರ್ಮಯವಾದ ಕೋಟೆ. ಅದಕ್ಕೆ ಎಂಟು ಬಾಗಿಲುಗಳು. ಅವುಗಳನ್ನು ಕಾಯಲು ಕೃತಾಂತನ ಆಕಾರದ ಅಷ್ಟಭೈರವರು (೩). ಇವರ ಶರೀರ ಬಣ್ಣವು ಕ್ರಮವಾಗಿ: ಬಂಗಾರ, ಅರುಣ, ರಕ್ತ, ಹಳದಿ, ನೀಲಿ, ರತ್ನ, ಕಪ್ಪು, ಹೇಮ ಇದ್ದಿತು. ಇವರ ಹೆಸರು ವಿಸುತ್ರಗುಣ, ನೇತ್ರವು, ಚಂಡ, ಕ್ರೋಧೋನ್ಮತ್ತ, ಅಸಿತ, ಕಾಪಾಲಿ, ಭೀಷಣ, ಮಹಾಸಂಹಾರವೆಂದು ಇದ್ದುವು. ಇವರ ವಾಹನಗಳು: ಹಂಸ, ಹೋತು, ನವಿಲು, ಸಿಂಹ, ಕೋಣ, ಆನೆ, ಕಾಗೆ, ಇಲಿ

ಆಗಿದ್ದುವು. ಇವರ ಪತ್ನಿಯರು : ಬ್ರಾಹ್ಮಿ, ಮಾಹೇಶ್ವರಿ. ಕೌಮಾರಿ, ವೈಷ್ಣವಿ, ವಾರಾಹಿ, ಮಾಹೇಂದ್ರಿ, ಚಾಮುಂಡಿ, ಕಾಳಿ ಎಂಬುವರು ಆಗಿದ್ದರು. ಪ್ರತಿಯೊಬ್ಬ ಭೈರವಗೆ ಇಪ್ಪತ್ತುಕೋಟಿ ಪರಿವಾರವಿದ್ದಿತು (೪-೫). ಆ ಪಟ್ಟಣದೊಳಗೆ ಚಂದ್ರಸೂರ್ಯಬೀದಿಗಳು ಲಕ್ಷಗಟ್ಟಲೆ ಇದ್ದುವು. ಗೋಪುರ, ಮನೆ ಮೊದಲಾದುವು ಅಸಂಖ್ಯಾತವಾಗಿದ್ದುವು. ಕೇರಿಗೊಬ್ಬ ಗಣಪರು ಅವನ್ನು ಚೆನ್ನಾಗಿ ರಕ್ಷಿಸುತ್ತಿದ್ದರು. ಆ ಪಟ್ಟಣವು ಸುಕೃತಗಳ ಬೀಡಾಗಿದ್ದಿತು (೬-೭). ಅಲ್ಲಿ ಈಶ್ವರನ ಅರಮನೆಯು ಕೋಟಿಯೋಜನ ವಿಸ್ತೀರ್ಣವಾಗಿತ್ತು (೮). ಅದನ್ನು ಬಳಸಿ ಶಿವತತ್ತ್ವವು ನೀಲರೂಪಿನಿಂದ ಹತ್ತು ಸಾವಿರ ಯೋಜನದುನ್ನತಿಯಿಂದಿತ್ತು. ಭಕ್ತಿ, ಜ್ಞಾನ, ವೈರಾಗ್ಯ, ಮುಕ್ತಿ ಎಂಬುವೇ ನಾಲ್ಕು ಬಾಗಿಲುಗಳು (೯). ಇಂದ್ರ (ಪೂರ್ವ) ಯಮ (ದಕ್ಷಿಣ) ವರುಣ (ಪಶ್ಚಿಮ) ಧನಪ (ಉತ್ತರ) ದಿಕ್ಕುಗಳಲ್ಲಿ ಋಗ್, ಯಜುರ್, ಸಾಮ, ಅಥರ್ವ ವೇದಗಳು ಬಂಗಾರ, ನೀಲಿ, ಮೌಕ್ತಿಕ, ಮಾಣಿಕಗಳ ಬೆಳಗಿನಿಂದ ಲಕ್ಷಯೋಜನದುಪ್ಪ ಗೋಪುರಗಳಾಗಿದ್ದುವು. ಅವುಗಳನ್ನು ನಂದಿ, ವೀರಭದ್ರ, ಮಾಕಾಳ, ನೀಲಲೋಹಿತರು ಕಾಯ್ದುಕೊಂಡಿದ್ದರು (೧೦). ಅವರು ಹರಿಯಜಮೊದಲಾದವರನ್ನು ನಿಲಿಸಿ ಶಿವನ ಇಚ್ಛೆಯ ಪ್ರಕಾರ ಕರೆದುಕೊಂಡು ಹೋಗುವುದೂ ಹೊರಗೆ ಕಳುಹುವುದೂ ಮಾಡುತ್ತಿದ್ದರು. ವೇದಾಂತವು ಅಂತಃಪುರಾಕಾರವಾಗಿಯೂ ಸತ್ತ್ರಣವು ಶಿವಸಭಾಸ್ಥಳವಾಗಿಯೂ ಇದ್ದುವು (೧೧). ಆ ಸಭೆಯ ಪ್ರಕಾಶದಲ್ಲಿ ಕೋಟಿರವಿಗಳು ಹಳೆಕಂಚುಗನ್ನಡಿಯಾಗಿದ್ದುವು. ಕೃಷ್ಣಕಾಳಿಯರ ದೇಹಕಾಂತಿಯು ಸಹ ಪಲ್ಲಟಿಸುತ್ತಿತ್ತು. ಬ್ರಹ್ಮಾಂಡಗಳು ಹಾಲಕಲಡಲ್ಲ ಪ್ರತಿಬಿಂಬಿತವಾದ ಕೋಳಿಯ ತತ್ತಿಗಳಂತೆ ತೋರಿದುವು (೧೨). ಅಲ್ಲಿ ಮುಕ್ತಿಪ್ರತಿಷ್ಠಿತ ಸಿಂಹಾಸನದ ಮೇಲೆ ಸೃಷ್ಟಿಸ್ಥಿತಿಪ್ರಳಯಕಾರಣನಾದ ಶಿವನು ವಿರಾಜಿಸಿದನು (೧೩-೧೪). ಮುತ್ತು, ಮಾಣಿಕ, ಹೊನ್ನು, ನೀಲ ಇವುಗಳ ಕಾಂತಿಯಿಂದ ಅನುಕ್ರಮವಾಗಿ ಪಶ್ಚಿಮ, ಉತ್ತರ, ಪೂರ್ವ, ದಕ್ಷಿಣಗಳಲ್ಲಿ ಸದ್ಯೋಜಾತ, ವಾಮದೇವ, ತತ್ಪುರುಷ, ಅಘೋರ ಎಂಬ ಮುಖಗಳೂ, ಅವುಗಳ ಅಗ್ರದಲ್ಲಿ ಸ್ಫಟಿಕವರ್ಣದಿಂದ ಬೆಳಗುವ ಈಶಾನ್ಯ ಮುಖವೂ ಇದ್ದುವು. ಅವುಗಳನ್ನು ಬಳಸಿ ಆಯಾ ಹೆಸರಿನ ಪುರುಷರು ಪಂಚವದನದಿಂದ ಆಯಾ ಮಂತ್ರಗಳಿಂದ ಸ್ತುತಿಸುತ್ತಿದ್ದರು (೧೫). ಈ ರೀತಿಯಾಗಿ ಐದು ಮುಖಗಳಿಂದಲೂ ಹದಿನೈದು ಕಣ್ಣುಗಳಿಂದಲೂ ದಶಭುಜ ವಿಷಕಂಠ ಗಜಚರ್ಮಗಳಿಂದಲೂ ತಲೆಮಾಲೆಗಳಿಂದಲೂ ಚಂದ್ರಕಾಂತ ಕಾಂತಿ ಕಾಮಭಸ್ಮೋದ್ಧೂಳಿತಾಂಗ ಫಣಿಮಾಲೆ ಇವುಗಳಿಂದಲೂ ಈಶ್ವರನು ಒಪ್ಪಿದನು (೧೬). ಈಶ್ವರನ ಎಡಗಡೆಯ ಅರ್ಧಪೀಠದಲ್ಲಿ ಶರ್ವಾಣಿಯು ಸಕಲ ಸತಿಯರ ಮೇಳದಿಂದಿದ್ದಳು (೧೭-೧೮).

ಈಶ್ವರನ ಎಡಗಡೆಯಲ್ಲಿ ವಿಷ್ಣುಕೋಟಿಗಳೂ, ಬಲಗಡೆಯಲ್ಲಿ ಬ್ರಹ್ಮಕೋಟಿ

ಗಳೂ, ಆ ಬ್ರಹ್ಮರ ಸಮೀಪದಲ್ಲಿ ಅನಂತ ಮುನಿಗಳೂ, ಶಿವನ ಎದುರಿನಲ್ಲಿ ರುದ್ರಕೋಟಿಗಳೂ ಕಣ್ಗೆಸೆದರು (೧೯-೨೨). ನಂದಿ, ಭೃಂಗೀಶ, ವೀರೇಶ, ಗಣಪತಿ ಮೊದಲಾದ ಆದಿಗಣರು ಅಸಂಖ್ಯ ಸೈನಿಕರೊಡನೆ ರಾಜಿಸಿದರು (೨೩-೨೬). ರುದ್ರಗಣರೂ ವಿಭವದಿಂದ ಶಿವನ ಓಲಗದಲ್ಲಿ ಭಕ್ತಿಯಿಂದಿದ್ದರು (೨೭-೨೯). ನವಗ್ರಹರು, ಏಕಾದಶರುದ್ರರು, ದ್ವಾದಶರವಿಗಳು, ಚತುರ್ದಶಮನುಗಳು, ಅಷ್ಟದಿಕ್ಪಾಲಕರು, ಸುರನರೋರಗಸಿದ್ಧವಿದ್ಯಾಧರಾದಿಗಳು, ಪರಿಪರಿಯ ಜೀವಜಾಲಂಗಳು ಅಸಂಖ್ಯಾತರಾಗಿ ಆ ಸಭೆಯಲ್ಲಿ ರಾಜಿಸುತ್ತಿದ್ದರು (೩೦-೩೨). ಒಟ್ಟಿಗೆ ಪ್ರಣವವೇ ಸಿಂಹಾಸನ, ಲೋಕದಂಬಿಕೆಯೇ ರಾಣಿ, ಚಂದ್ರಸರ್ಪಗಳೇ ಭೂಷಣ, ವಿಭೂತಿಯೇ ಸುಗಂಧ, ಆನೆದೊವಲೇ ವಸ್ತ್ರ, ಮೋಕ್ಷವೇ ಆಹಾರ, ತತ್ತ್ವರಸವೇ ತಾಂಬೂಲ, ಕೇಳುವುದೆಲ್ಲ ಕಂಬಲಾಶ್ವತರ ಗಾನ, ಹೀಗೆ ಶಿವನು ಅಷ್ಟಭೋಗಲ್ಲಿದ್ದನು (೩೩-೩೫). ಷಣ್ಮುಖನು ಯುವರಾಜ, ಗಜಮುಖನು ಶಿವಗಣಕೆ ದಳವಾಯಿ, ವಿಷ್ಣು ದುಷ್ಟನಿಗ್ರಹಶಿಷ್ಟಪಾಲನ ಮಾಡುವ ಕರ್ತೃ, ಬ್ರಹ್ಮನು ಸೃಷ್ಟಿಕರ್ತೃಗಳಾಗಿದ್ದರು (೩೬).

ಸಿರಿಯುರಸನೇ ಮುಖ್ಯ ಪ್ರಧಾನ, ಬ್ರಹ್ಮಾಂಡಗಳೇ ದೇಶಗಳು, ರಜತಗಿರಿ ಮೇರು ಮಂದರಗಳೇ ದುರ್ಗಗಳು, ಧರ್ಮವೇ ಭಂಡಾರ, ಗಣಗಳೇ ಪರಿವಾರ, ಜ್ಞಾನಬಲವೇ ಭುಜಬಲವಾಗಲು ಈಶ್ವರನು ಸಪ್ತಾಂಗಸನ್ನಾಹವುಳ್ಳವನಾಗಿದ್ದನು (೩೭). ನಂದಿಮಹಾಕಾಳರೇ ವೇತ್ರಧಾರರು, ಶ್ರುತಿಗಳೇ ವಂದಿಗಳು, ಸುರಸ್ತ್ರೀಯರೇ ನರ್ತಕಿಯರು, ಭೃಂಗಿಯೇ ಹಾಸ್ಯಗಾರ, ಸುರಗುರುವೇ ಪುರೋಹಿತ, ಭಕ್ತರೇ ನಂಟರು, ವಿಶ್ವಕರ್ಮನೇ ಶಿಲ್ಪಿ, ಚಿತ್ರಗುಪ್ತರೇ ಕರಣಿಕರು, ಸುಜ್ಞಾನಿಗಳೇ ಸಂಧಿವಿಗ್ರಹಗಳಾಗಿದ್ದರು (೩೮). ಇಂದ್ರ ಮೊದಲಾದ ದೇವತೆಗಳು ಈಶ್ವರನ ವಿನಿಯೋಗದವರಾಗಿದ್ದರು (೩೯). ವತ್ಸರ, ಋತು, ಮಾಸ, ಚಂದ್ರ ಮೊದಲಾದುವು ಫಲಪಯಿರುಗಳನ್ನು ಕೊಟ್ಟು ರಕ್ಷಿಸುತ್ತಿದ್ದುವು (೪೦). ದಿಗ್ಗಜಗಳೆ ಆನೆಗಳು, ಉಚ್ಚೈಃಶ್ರವಗಳೆ ಕುದುರೆಗಳು, ವಿಮಾನಗಳೆ ರಥಗಳು, ಕಿನ್ನರಸುರನರೋರಗ ಮೊದಲಾದವರೇ ಪದಾತಿಗಳು ಇವೇ ಈಶ್ವರನ ಚತುರಂಗವಾಗಿದ್ದುವು. ಮೇರುಪರ್ವತವೇ ಈಶ್ವರನ ಬಿಲ್ಲು, ಪಾಶುಪತವೇ ಅಸ್ತ್ರ, ಗೋಪತಿಯೇ ವಾಹನ, ತ್ರಿಶೂಲವೇ ಆಯುಧಗಳಾಗಿದ್ದುವು (೪೧). ಸರ್ಪಿ ದಧಿ ಇಕ್ಷು ಮೊದಲಾದ ಸಮುದ್ರಗಳು ಈಶ್ವರನ ಉಗ್ರಾಣ, ಸುರಧೇನು ಶಿವನ ತುರುವಟ್ಟಿಯಾಗಿದ್ದುವು (೪೨). ಅಷ್ಟಮದ, ಸಪ್ತವ್ಯಸನ, ಷಡ್ವರ್ಗ, ಪಂಚೇಂದ್ರಿಯ, ಮುಂತಾದುವು ಚೋರ ದುರ್ಜನರನ್ನು ಕೂಡಿಕೊಂಡು ಕಷ್ಟವನ್ನು ಮಾಡುವ ಜಗಚ್ಛತ್ರುವಾದ ಕಾಮನನ್ನು ಗೆಲ್ಲುವುದಕ್ಕೂ ಶಿವತತ್ತ್ವವು ಒಲಿಯಲಿಕ್ಕೂ ಈಶ್ವರನು ಅರಸುಗೈಯುತ್ತಿದ್ದನು (೪೩).

೩೦ ದಕ್ಷಯಾಗದ ಸಂಧಿ

ದಕ್ಷನು ಒಮ್ಮೆ ತನ್ನ ಹೆಣ್ಣುಮಕ್ಕಳನ್ನೂ ಅಳಿಯಂದಿರನ್ನೂ ನೋಡಬೇಕೆಂದು ಅವರವರ ಪಟ್ಟಣಕ್ಕೆ ಹೋಗಲು ಅವರು ಅತಿ ಸಂಭ್ರಮದಿಂದ ಊರನ್ನು ಸಿಂಗರಿಸಿ ಕಳಸಕನ್ನಡಿ ಹಿಡಿದು ಸ್ತ್ರೀಯರೊಡನೆ ಅವನನ್ನು ಇದಿರುಗೊಂಡು ಮನೆಗೆ ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಪೂಜಿಸಿದರು (೨). ದಕ್ಷನಿಗೆ ಕಣ್ಣುಗಳಲ್ಲಿ ಆನಂದಾಶ್ರು ತುಂಬಿ ನಮುಸ್ಕಾರ ಮಾಡಿದ ಮಕ್ಕಳನ್ನು ಅಪ್ಪಿಕೊಂಡು ತಂದ ವಸ್ತುಗಳನ್ನು ಅವರಿಗೆ ಕೊಟ್ಟು ಅವರವರ ಮನೆಯಲ್ಲಿ ಕೆಲಕಾಲವಿದ್ದು ಅಳಿಯರು ಕೊಟ್ಟ ಉಡುಗರೆಗಳನ್ನು ಸ್ವೀಕರಿಸಿ ಸಂತೋಷದಿಂದ ಇರುತ್ತ ಮನಸದಲ್ಲಿ ಒಂದು ಯೋಚನೆಯನ್ನು ಮಾಡಿದನು (೩). "ನನಗೆ ಇನ್ನೊಬ್ಬ ಮಗಳಿರುವಳು, ಅವಳು ಮಹದೇವನ ಅರ್ಧಾಂಗಿಯಾಗಿರುವಳು, ಅಲ್ಲಿಗೆ ಹೋದರೆ ಅವರು ನನಗೆ ಯೋಗ್ಯಮರ್ಯಾದೆಯನ್ನೂ ಉಪಚಾರವನ್ನೂ ಮಾಡದಿರರು" ಎಂದು ಶಿವಲೋಕಕ್ಕೆ ಹೋದನು (೪). ಅವರ ವೈಭವವನ್ನೂ ಸಾರೂಪ್ಯದವರನ್ನೂ ನೋಡಿ ಅಳಿಯನ ಐಶ್ವರ್ಯಕ್ಕೆ ಬಹಳ ಆಶ್ಚರ್ಯಪಡುತ್ತ ಮುಂದಕ್ಕೆ ನಡೆದು ಈಶ್ವರನ ಅರಮನೆಯ ಮುಂದೆ ಪುಷ್ಪಕವನ್ನು ಇಳಿದು ಒಳಹೊಕ್ಕನು (೫-೮). ದಾಕ್ಷಾಯಣಿಯ ತಂದೆಯಾದುದರಿಂದ ಅವನನ್ನು ಯಾರೂ ತಡೆಯಲಿಲ್ಲ. ಈಶ್ವರನ ಸಭಾಸ್ಥಾನವು ಶತಲಕ್ಷಯೋಜನದಗಲವಾದಾಗ್ಯೂ ದೇವತೆಗಳು ಅದರಲ್ಲಿ ಎಡೆಬಿಡದೆ ತಲೆಯ ಮೇಲೆ ಬದ್ಧಾಂಜಲಿಯುಳ್ಳವರಾಗಿ ನಿಂತಿದ್ದರು (೯-೧೦). ಈಶ್ವರನು ಸಿಂಹಾಸನದಲ್ಲಿ ಪಾರ್ವತಿಯೊಡನೆ ತುಂಬುರ ನಾರದ, ಕಂಬಳಾಶ್ವತರ ಗಾನವನ್ನು ಆಲಿಸುತ್ತ ಭೃಂಗಿಯ ನಾಟ್ಯವನ್ನು ನೋಡುತ್ತ ವಿಷ್ಣುಬ್ರಹ್ಮರ ಬಿನ್ನಹವನ್ನು ಆಲಿಸುತ್ತ ರಂಜಿಸಿದನು. ಬಾಗಿಲದಲ್ಲಿ ಬಿಡದೆ ಇದ್ದುದರಿಂದ ಹೊರಗೆ ತರುಬಿನಿಂತ ಲೋಕಪಾಲಕಮೊದಲಾದವರನ್ನು ನೋಡಿ ಈಶ್ವರನ ಪರಮ ವೈಭವದ ಸಭಾಸಾಗರದ ಕೊನೆಯ ಕೊಲ್ಲೆಯಲ್ಲಿ ನಿಂತುಕೊಂಡು, ತನ್ನನ್ನು ನೋಡದೆ ನುಡಿಸದೆ ಇದ್ದ ಮಗಳನ್ನೂ ಅಳಿಯನನ್ನೂ ನೋಡಿ "ಐಶ್ವರ್ಯಮದದಿಂದ ಇವರು ನನ್ನನ್ನು ಉದಾಸೀನ ಮಾಡಿದರು. ಇವರ ಐಶ್ವರ್ಯವನ್ನು ಹೇಗೆ ಅಗ್ನಿಗೆ ಆಹುತಿ ಮಾಡಲಿ?" ಎನ್ನುತ್ತ ಅಶ್ವಮೇಧವನ್ನು ಮಾಡಬೇಕೆಂದು ನಿಶ್ಚಯಿಸಿ ತನ್ನ ಊರಿಗೆ ತಿರುಗಿದನು (೧೧-೧೬).

ದಕ್ಷನು ತನ್ನ ಅರಮನೆಗೆ ಬಂದು ಮಂತ್ರಿಗಳಿಗೆ ಶಿವನಿಂದ ತನಗಾದ ಅಪಮಾನವನ್ನು ಹೇಳಿ "ಅವನ ಸೊಕ್ಕನ್ನು ಈಗಲೇ ನಿಲಿಸುವೆನು" ಎಂದು ತನ್ನ ತಂದೆಯಾದ ಬ್ರಹ್ಮನಲ್ಲಿಗೆ ಹೋಗಿ ಈಶ್ವರನನ್ನು ಮನಸ್ವಿ ನಿಂದಿಸಿ ತನಗೆ ಸೇಡು ತೀರಿ

ಸಿಕೊಳ್ಳಲು ಸಹಾಯ ಕೇಳಿದನು (೧೭-೧೮). ಬ್ರಹ್ಮನು ಇದು ತನ್ನ ತುತ್ತವಲ್ಲವೆಂದು ಬಗೆದು ದಕ್ಷನನ್ನು ಕರೆದುಕೊಂಡು ವಿಷ್ಣುವಿನಲ್ಲಿಗೆ ಬಂದು ವೃತ್ತಾಂತವನ್ನು ತಿಳಿಸಿ “ನಿನಗೆ ಯಜ್ಞದಲ್ಲಿ ಅಗ್ರಪೂಜೆಯನ್ನು ಕೊಡುವೆನು. ಸಹಾಯ ಮಾಡು” ಎಂದು ಬ್ರಹ್ಮನು ವಿಷ್ಣುವಿಗೆ ಹೇಳಿದನು. “ಶಿವನನ್ನು ಬಿಡುವುದು ಸರಿಯಲ್ಲ, ಅಗ್ರಪೂಜೆಯು ಅವನಿಗೆ ಸಲ್ಲತಕ್ಕದ್ದು” ಎಂದು ಹೇಳಿದರೂ ಬೆನ್ನುಬಿದ್ದವರನ್ನು ರಕ್ಷಿಸಬೇಕೆಂದು ಬ್ರಹ್ಮನು ಹೇಳಿದ್ದರಿಂದ ಹರಿಯು ಒಪ್ಪಿಕೊಂಡನು (೧೯-೨೨). ವಿಷ್ಣುವು ಚತುರಂಗ ಬಲವನ್ನು ತೆಗೆದುಕೊಂಡು ದಕ್ಷನಲ್ಲಿಗೆ ಬಂದನು. ದಕ್ಷನು ಹಿಮಾಲಯದ ಮೇಲೆ ಗಂಗಾದ್ವಾರದಲ್ಲಿ ಯಜ್ಞಶಾಲೆಯನ್ನು ಮಾಡಿಸಿ, ಕುದುರೆಯನ್ನು ತರಿಸಿ ಅದರ ರಕ್ಷೆಗೆ ಹರಿಯನ್ನು ನೇಮಿಸಿ, ಪರಿಕರಗಳನ್ನು ಕೂಡಿಸಿ, ಮನು ಮುನಿಗಳನ್ನೆಲ್ಲ ಕರೆಸಿ ಯಜ್ಞದೀಕ್ಷೆಯನ್ನು ತಳೆದನು (೨೩). ಯಾಗವು ಆರಂಭವಾಗಲು ದಧೀಚಿಮುನಿಯು ಬಂದು ಈಶ್ವರನಿಲ್ಲದುದನ್ನು ಕಂಡು ಮನದಲ್ಲಿ ಕುಪಿತನಾದನು. ದಕ್ಷನಿಗೆ ಈಶ್ವರನನ್ನು ಬಿಡಬಾರದೆಂದು ಬುದ್ಧಿವಾದವನ್ನು ಹೇಳಿದನು. ಆ ಮಾತನ್ನು ಶ್ರುತಿಗಳು ಸಮರ್ಥಿಸಿದುವು. ಆದರೆ ದಕ್ಷನು ಶಿವನಿಂದೆಯನ್ನು ಮಾಡುತ್ತಿರಲು “ಶಿವನಿಲ್ಲದ ಈ ಕಾರ್ಯಕ್ಕೆ ಬಂದವರಿಗೆ ಶಿವಜ್ಞಾನವು ಅಳಿಯಲಿ” ಎಂದು ಮುನಿಯು ಶಾಪವಿತ್ತು ಹೋದನು (೨೪-೨೬). ಯಾಗದ ಈ ಸಂಗತಿಯನ್ನು ನಾರದನು ಬಂದು ಈಶ್ವರನಿಗೆ ಬಿನ್ನವಿಸಿದನು (೨೭).

ಈ ಮಾತನ್ನು ಕೇಳಿ ಉಮೆಯು ದುಃಖದಿಂದ “ನಾನು ಹೋಗಿ ನನ್ನ ತಂದೆಯ ಅಜ್ಞಾನವನ್ನು ತಿಳಿಸಿ ಬರುವೆನು. ಅಪ್ಪಣೆಯನ್ನು ಕೊಡುವುದಾಗಬೇಕು” ಎಂದು ಪತಿಯನ್ನು ಕೇಳಿಕೊಂಡಳು. ಶಿವನು “ನಿನ್ನ ಮಾತನ್ನು ದಕ್ಷನು ಕೇಳುವ ಸ್ಥಿತಿಯಲ್ಲಿಲ್ಲ. ಬೇಡ, ನಿನಗೆ ಅಪಮಾನವಾಗುವ ಸಂಭವವಿದೆ” ಎಂದು ಹೇಳಿದನು. ಪಾರ್ವತಿಯು “ತಂದೆಯ ಮನೆಗೆ ಹೋಗಲಿಕ್ಕೆ ಮಗಳಿಗೆ ಏತರ ಅಪಮಾನ? ನಾನು ಅವನಿಗೆ ಬುದ್ಧಿ ಹೇಳುವೆನು” ಎನಲು. “ಶಿವನು ಮುಂದಾಗುವುದು ಕಾಣುವೆ, ಹೋಗು” ಎಂದು ನಂದಿಯೊಡನೆ ಅವಳನ್ನು ಕಳುಹಿಕೊಟ್ಟನು (೨೮-೨೯). ದೇವಿಯು ಬಂದಳೆಂಬ ಸುದ್ದಿಯನ್ನು ಮೊದಲೇ ಒಬ್ಬ ಚರನು ದಕ್ಷನಿಗೆ ತಿಳಿಸಿದರೂ ಅವನು ಸುಮ್ಮನಿರಲು “ಲೋಕನಾಯಕನ ಅರಸಿ ಬಂದಳು. ನಿನ್ನ ಪುಣ್ಯದ ಫಲವೇ ಬಂದಳು. ಏಳು, ಪುರವನ್ನು ಸಿಂಗರಿಸಿ ಇದಿರುಗೊಳ್ಳು” ಎಂದು ಮತ್ತೆ ಆ ಚರನು ಹೇಳಲು ದಕ್ಷನು ಅವನನ್ನು ಹೊರಗೆ ಹಾಕಿಸಿದನು (೩೦-೩೧). ಅನಿತರಲ್ಲಿ ದಾಕ್ಷಾಯಣಿಯು ತಂದೆಯೆದುರಿಗೆ ಬಂದು ನಿಂತು “ಅಪ್ಪ, ಕೇಳಿಕೇಳಿ ನೀನು ಮರುಳಾಗಬೇಡ, ಈಶ್ವರನನ್ನು ಬಿಟ್ಟು ಯಜ್ಞವು ನಡೆಯುವದೇ?” ಎಂದಳು. “ಬ್ರಹ್ಮವಿಷ್ಣು ಮೊದಲಾದವರ ಸಹಾಯವು ನನಗೆ ಇರಲು ತಿರುಕನೂ, ಮಸಣಗಾಹಿಯೂ, ಗೊರ

ವನೂ ಆದವನು ನನಗೆ ಸರಿಯೇ ?" ಎನ್ನುತ್ತ ಶಿವನನ್ನು ನಿಂದಿಸಿದನು. ಶಿವನಿಂದೆಯನ್ನು ಕೇಳಲಾರದೆ ಅನೇಕರು ಯಾಗಶಾಲೆಯನ್ನು ಬಿಟ್ಟು ಹೋದರು. ಶಿವೆಯು ಪತಿನಿಂದೆಯನ್ನು ಕೇಳಲಾರದೆ "ದಕ್ಷಸಂಬಂಧಕಾಯವನ್ನು ಬಿಡುವೆ" ನೆನ್ನುತ್ತ ಯಜ್ಞಕುಂಡಕ್ಕೆ ತನ್ನ ದೇಹವನ್ನಿತ್ತು ಹಿಂದೆ ಹಿಮರಾಜನ ಪತ್ನಿಯಾದ ಮೇನೆಗೆ ಕೊಟ್ಟ ವರವನ್ನು ಸಲಿಸುವುದಕ್ಕಾಗಿ ಆಕೆಯ ಉದರದಲ್ಲಿ ಬಳೆಯುತೊಡಗಿದಳು (೩೨-೩೫).

೩೧ ವೀರಭದ್ರೋತ್ಪತ್ತಿಯ ಸಂಧಿ

ದಾಕ್ಷಾಯಣಿಯು ಕಾಯವಳಿದಳೆಂಬ ಸುದ್ದಿಯನ್ನು ನಂದಿಯು ಈಶ್ವರನಿಗೆ ತಿಳುಹಲು ಆ ದೇವನು ಭಯಂಕರ ಕೋಪವನ್ನು ತಾಳಿದನು (೨-೩). ಆತನ ಕೋಪದಿಂದ ಜನಕೆ ಲಯದೋರಿದುದು. ನಕ್ಷತ್ರ ಮೊದಲಾದುವುಗಳು ಬಳಬಳನೆ ಉದಿರುತಿರ್ದುವು. ಧರಣಿ ಧಗಧಗನೆ ಉರಿಯುತಿರ್ದುದು. ಕಾದ ಹಂಚೊಡೆದಂತೆ ಬ್ರಹ್ಮಾಂಡವು ಹೋಳಾಯಿತು (೪-೬). ಆ ಮಹಾದೇವನ ಕೋಪದಲ್ಲಿ ನೇಲಿಕ್ಕಿದ ಧೂಮವೇ ಪೌರುಷಾಕಾರವನು ತಳೆದಂತೆ, ಪ್ರಳಯಕಾಲದ ಮೇಘಗಳನ್ನೂ ಚಂದ್ರನಕ್ಷತ್ರಗಳನ್ನೂ ತಾಳಿದ ನೀಲಾಚಲವು ಈಶ್ವರನ ಶ್ವಾಸದಿಂದ ಇಳಿಯಿತೆಂಬಂತೆ ಕಪ್ಪುಬಣ್ಣದ, ಸಾವಿರ ಮುಖಗಳ, ಎರಡು ಸಾವಿರ ಕೈಗಳ, ಮೂರು ಸಾವಿರ ಕಣ್ಣುಗಳ ಭೀಮರೂಪೊಂದು ಜನಿಸಿತು (೭). ಆ ವಿರಾಡ್ರೂಪವನ್ನು ವರ್ಣಿಸಲಳವೇ ? ಬ್ರಹ್ಮಾಂಡದಂತಹ ಶಿರವು, ಚಂದ್ರಸೂರ್ಯರು ಎದೆಯ ಮೇಲಿನ ಸೂತ್ರದ ರತ್ನಗಳು, ನಕ್ಷತ್ರಸಮೂಹವು ಕೊರಳೊಳಗಿನ ಮಾಲೆ ಆಗಿದ್ದುವು. ಅನೇಕ ಸಿಡಿಲ ಅರ್ಭಟೆಯಂತಿದ್ದ ದನಿಯಿಂದ ಗುಡುಗುಡಿಸುತ ಅದು ಓಡಾಡಲು ಧರೆಯೆ ಒಲೆದಾಡುತ್ತಿತ್ತು (೮). ತಲೆಮಾಲೆಫಣಿಭೂಷಣಗಳನ್ನೂ, ಖಡ್ಗಫಲಕಮುಖ್ಯಾಯುಧಗಳನ್ನೂ, ಜುಂಜುದಲೆ ಕೆವಿಮ್ಮಾಸೆ ಕೆಂಗಣ್ಣುಗಳನ್ನೂ ತಳೆದು, ಮಹಾಶೇಷನ ಕಾಸೆಯನ್ನುಟ್ಟು ಸುರನರಭುಜಂಗರುಗಳ ಪ್ರಾಣಗಳನ್ನು ಕೊಂಬ ಕಾಲ್ತೊಡರ್ಗಟ್ಟಿಕೊಂಡು ಕಟ್ಟಾಳ್ಗಳ ಶಿರೋಮಣಿಯಾದ ಆ ಮೂರ್ತಿಯು ಈಶ್ವರನಿಗೆ "ಬ್ರಹ್ಮಾಂಡವನ್ನು ಜಜ್ಜಲೋ? ಬ್ರಹ್ಮನ ಎಲುವುಗಳನ್ನು ನುಗ್ಗುಮಾಡಲೋ ? ಹರಿಯ ಹರಣವನ್ನು ತೆಗೆಯಲೋ ? ಏನು ಮಾಡಬೇಕು ಹೇಳು" ಎನ್ನುತ್ತ ಆರ್ಭಟಿಸುತ್ತಿದ್ದನು (೯-೧೧).

ಶಿವನು ಆತನಿಗೆ "ನೀನು ಸಕಲರನ್ನು ಗೆಲ್ಲುವ ವೀರನೂ ಭದ್ರಮೂರ್ತಿಯೂ

ಆದುದರಿಂದ ನೀನು ವೀರಭದ್ರನು" ಎಂದು, "ಎಲೈ ಕುಮಾರನೇ ದಕ್ಷನೆಂಬುವನು ಹರಿಬ್ರಹ್ಮರನ್ನು ಕೂಡಿ ಯಾಗಮಾಡುತ್ತಿರುವಾಗ ಈಶ್ವರಿಯು ಅಳಿದಳು. ಆ ಸ್ಥಳಕ್ಕೆ ನೀನು ಹೋಗಿ ಅವರಿಗೆ ಬುದ್ಧಿಯನ್ನು ಹೇಳು. ರುದ್ರಭಾಗವನ್ನು ಕೊಡದಿದ್ದರೆ ಆ ಯಜ್ಞವನ್ನು ನಾಶಮಾಡಿ ಎಲ್ಲರನ್ನು ಸೆರೆಹಿಡಿದುಕೊಂಡು ಬಾ" ಎಂದು ಕುಮಾರನನ್ನು ಬೀಳ್ಕೊಟ್ಟನು (೧೨-೧೩).

ವೀರಭದ್ರನು ಕೋಟಿಸಿಡಿಲಂತೆ ಆರ್ಭಟಿಸುತ್ತ "ಹರಿಬ್ರಹ್ಮರ ಶಿರಸ್ಸನ್ನು ಕೊಳ್ಳುವೆನು, ಮಿಕ್ಕವರ ಹೊಟ್ಟೆಯನ್ನು ಸೀಳುವೆನು" ಎನ್ನುತ್ತ ಮನಸ್ಸಿನಲ್ಲಿ ಒಂದು ಕಾರ್ಯವನ್ನು ನೆನೆದು ಸಿಟ್ಟಿನಿಂದ ಹೂಂಕರಿಸಲು ಮಹಾಭದ್ರಕಾಳೀಶಕ್ತಿಯು ಹೊರಹೊಮ್ಮಿದಳು. ವೀರಭದ್ರನು ತನ್ನರೂಪಿನ ವೀರರಗಣಿತಕೋಟಿಯನ್ನೂ ಅಸಂಖ್ಯ ಚತುರಂಗವನ್ನೂ ಪಡೆದನು. ಆ ಬಲವು ನಡೆಯಲು ಧರೆಸಮುದ್ರಗಳು ಒಂದಾಗುವಂತಿದ್ದುವು (೧೪-೧೬). ವಿಕ್ರಮದಿಂದ ಬರುವ ಚತುರ್ಬಲಕ್ಕೆ ಧರಾಚಕ್ರವು ಸಾಲುವುದಿಲ್ಲೆಂಬಂತೆ, ವಾದ್ಯಘೋಷಕ್ಕೆ ದಿಶಾಚಕ್ರವು ಸಾಲದೆಂಬಂತೆ, ಛತ್ರಚಮರಾಳಿಗೆ ಗಗನಚಕ್ರವು ಸಾಲಲರಿಯದೆಂಬಂತೆ ತೋರುತ್ತಿತ್ತು (೧೭).

ಅಷ್ಟರಲ್ಲಿ ವೀರಭದ್ರನು ಒಬ್ಬ ಗಣನಾಥನನ್ನು ಕರೆದು "ಆ ಶಿವದ್ರೋಹಿ ದಕ್ಷನಲ್ಲಿಗೆ ಹೋಗಿ ನಮ್ಮ ಬರವನೆಚ್ಚರಿಸದೆ ರುದ್ರಭಾಗನನ್ನು ಕೊಟ್ಟು ಜೀವವುಳಿಸಿಕೊಳ್ಳೆಂದು ಹೇಳು" ಎಂದು ಅವನನ್ನು ಕಳುಹಿಕೊಟ್ಟನು (೧೮). ಅವನು ಯಜ್ಞದೀಕ್ಷಿತನಾಗಿದ್ದ ದಕ್ಷನ ಎದುರಿನಲ್ಲಿ ನಿಂತು "ನೀವು ಯಾರನೊಲಿಸುವುದಕ್ಕೆ ಯಜ್ಞವನ್ನು ಮಾಡುವಿರಿ? ಶ್ರುತಿ ಮಂತ್ರಗಳು ಯಾರನ್ನು ಸ್ತುತಿಸುವುವು? ಬ್ರಹ್ಮ ವಿಷ್ಣುಗಳು ಯಾರಿಂದ ಜನಿಸಿದರು? ಎಲ್ಲವನ್ನು ಮರೆತು ನೀವು ಹೀಗೇಕೆ ಅಹಂಕಾರದಿಂದ ಕೆಟ್ಟಿರಿ?" ಎಂದು ಕೇಳಲು, ದಕ್ಷನು ಕೋಪದಿಂದ "ನೀನು ಯಾರವನು? ನಿನಗೇಕೆ ಮಂತ್ರತಂತ್ರಗಳ ರಹಸ್ಯ? ನೀನು ಬಂದ ಕಾರಣವೇನು" ಎಂದು ಕೇಳಿದನು. ಅದಕ್ಕೆ ಅವನು "ನಾನು ಶಿವದೂತನು. ಯಜ್ಞದಲ್ಲಿಯ ರುದ್ರಭಾಗವನ್ನು ಬೇಡಬಂದಿರುವೆನು. ನೀವು ಕೊಡದಿದ್ದರೆ ನರಿನಾಯಿಗಳಿಗೆ ನಿಮ್ಮ ಶರೀರದ ಮಾಂಸಮೊದಲಾದವುಗಳ ಊಟದ ಔತಣವನ್ನು ಹೇಳಬಂದಿರುವೆನು" ಎಂದನು. ಅದಕ್ಕೆ "ಎಲ್ಲಿಯ ಈಶ್ವರ? ಎಲ್ಲಿಯ ರುದ್ರಭಾಗ? ಇವನನ್ನು ನೂಂಕಿರಿ" ಎಂದು ನೂಕಲು, ಅವನು ಇದನ್ನೆಲ್ಲ ವೀರಭದ್ರನಲ್ಲಿಗೆ ಬಂದು ಹೇಳಿದನು. ಇದನ್ನುಕೇಳಿ ಮಹಾಕೋಪವನ್ನು ತಾಳಿ "ಆ ಯಜ್ಞಾಲಯವನ್ನೇ ನಾಶಮಾಡುವೆ" ನೆಂದು ಚಾಪವನ್ನು ಹಿಡಿದು ಚತುರಂಗವನ್ನು ಕೂಡಿಕೊಂಡು ಹೊರಡಲು ಜಗತ್ತೇ ನಡುಗಿದಂತಾಯಿತು (೧೯-೨೫).

ಅಷ್ಟರಲ್ಲಿ ಯಾಗಶಾಲೆಯನ್ನು ಕಾಯುತ್ತಿದ್ದ ಸುರರು ಇವರನ್ನು ತಡೆಯಲು,

ಅವರನ್ನೇ ಚೆಂಡಾಡಿ ಮುಂಡರುಂಡಗಳನ್ನು ಹೋಮಕುಂಡದಲ್ಲಿ ಕೆಡವುತ್ತಿದ್ದರು (೨೬). ಆನೆಕುದುರೆಗಳ ಸೊಂಡಿಲು ಕಾಲುಗಳು, ಭಟರ ಖಡ್ಗ ತೋಳ್ಗಳು ಆಕಾಶದಿಂದ ಬೀಳುತ್ತಿರುವುದನ್ನು ಕಂಡು ದೇವತೆಗಳೂ ಮುನಿಗಳೂ ಮನಸದಲ್ಲಿ ಭೀತಿಯಿಂದ ನಡುಗಿದರು (೨೭). ವಿಷ್ಣುವು ಇದನ್ನು ಕಂಡು "ಪಶ್ಚಾತ್ತಾಪದಿಂದ ಆಗುವುದೇನು? ಬಂದುದನ್ನು ನೋಡುವೆನು" ಎನ್ನುತ್ತ ದೇವತೆಗಳನ್ನೆಲ್ಲ ಹುರಿಮಾಡಿದನು (೨೮-೨೯). ಸುರಚತುರಂಗವು ಈ ರೀತಿ ಸಿದ್ಧವಾಗಲು, ಕಾಳೆಗಕ್ಕೆ ಆರಂಭವಾಯಿತು. ರಾಹುತರೂ, ಮಾವುತರೂ ಕುದುರೆ ಆನೆಗಳನ್ನು ನಡೆಸಿ ವೈರಿಗಳ ಆನೆಕುದುರೆಗಳ ಮೇಲೆ ಬಿದ್ದರು. ರಥಾರೋಹಕರೂ, ಭಟರೂ ವೈರಿಗಳ ತಲೆಗಳ ಅರಿದರು. ರಕ್ತದಿಂದ ರಣರಂಗವು ಕೆಸರಾಗಿ ಕಾಗೆಗೂಗೆಗಳಿಗೆ ಆನಂದವಾಯಿತು (೩೦-೩೨). ಇಂದ್ರನೂ ಅಖಿಳ ದಿಕ್ಪಾಲಕರೂ ಅಂಬುಗಳನ್ನು ಕರೆಯುತ್ತಿರಲು ವೀರಭದ್ರನು ಅದನ್ನೆಲ್ಲ ನೋಡಿ ಸ್ವತಃ ವಿಕ್ರಮದಿಂದ ಅವರಿಗೆದುರಾಗಿ ಬಾಣಗಳನ್ನು ಕರೆದು ಅವರನ್ನೆಲ್ಲ ಗಾಸಿಪಡಿಸಿದನು. ಅವರು ಆತನ ಬಾಣದುರುಬಿಗೆ ಸೂರ್ಯಮಂಡಲದವರೆಗೆ ಹಾರಿಹೋಗಿ ಹೊಸರಥಗಳಲ್ಲಿ ಬಂದು "ಮೋಸದಿಂದ ಹೊಡೆದು ನಮ್ಮನ್ನು ಆಕಾಶಕ್ಕೆ ಹಾರಿಸಿದ ವೀರನೇ, ನಿನ್ನ ಬಲ್ಪನ್ನು ತೋರು" ಎನುತ್ತ ರುದ್ರಗಣದ ಮೇಲೆ ಸರಳುಗಳನ್ನು ಕರೆದರು (೩೩-೩೫). ಸಿಡಿಲಭರದ ಮುಂದೆ ಶಿಶುಗಳ ಬಳಗವೇ ಎಂಬಂತೆ ಮೃಡನ ಮಗನೆದುರಿಗೆ ಆ ಸುರರ ಆಟೋಪವೆತ್ತ? ಅವರ ಬಾಣಗಳನ್ನು ಖಂಡಿಸಿ ಅವರ ತೇರು ಕುದುರೆ ಛತ್ರ ಚಾಮರಗಳನ್ನೆಲ್ಲ ಕತ್ತರಿಸಿದನು (೩೬). ದಿಕ್ಪಾಲಕರು ಆತನ ಎಸುಗೆಯನ್ನು ತಾಳಲಾರದೆ ಓಡಿಹೋಗಿ ಬ್ರಹ್ಮನನ್ನು ಮರೆಹೊಕ್ಕರು (೩೭-೩೯).

ಬ್ರಹ್ಮನು ಕೋಪದಿಂದ ಓಡಿಹೋಗುತ್ತಿದ್ದ ಎಲ್ಲ ದೇವತೆಗಳನ್ನೂ ಸುರನರಭುಜಂಗರನ್ನೂ ಮೂದಲಿಸಿ ಕಲಹಕ್ಕೆ ಮತ್ತೆ ಅನುವಾದನು (೪೦-೪೧). ಆದರೆ ಹರಗಣದೆದುರಿಗೆ ಬ್ರಹ್ಮಬಲವು ಹುಲಿಬಳಗದ ಮುಂದೆ ಸೊಕ್ಕಿದ ಎರಳೆಗಳಂತೆ ಬಲಗುಂದಿ ಹೋಯಿತು (೪೨). ಹರಗಣವು ಸುರಸಮೂಹವನ್ನು ಬೆನ್ನಟ್ಟಿ ಕತ್ತರಿಸಿ ಮಡಿಪತೊಡಗಿತು. ಮುರಿದ ಬಲವನ್ನು ಜರೆದು ಬ್ರಹ್ಮನು ತನ್ನ ಬಲವನ್ನು ಕೂಡಿಕೊಂಡು ಹರಬಲವನ್ನು ತಾಗಿದನು (೪೩-೪೫). "ಇದುವರೆಗೆ ಸುರಬಲವನ್ನು ಚೆಲ್ಲವಡೆದ ವೀರನನ್ನು ತೋರಿಸಿರಿ" ಎನ್ನುತ್ತ ಬ್ರಹ್ಮನು ಬಾಣಗಳನ್ನು ಕರೆಯುತ್ತ ಮುಂದೆ ನೂಂಕಲು, ವೀರಭದ್ರನು "ಎಲೈ ಚತುರಾನನ ನೀನು ಪರಮ ಶಿವಭಕ್ತನೆಂದು ನಿನಗೆ ಜಗತ್ಸೃಷ್ಟಿಯೊಡೆತನವನ್ನು ಕೊಟ್ಟರು. ನಿನ್ನ ಮಗನ ದೈವವು ನಿನ್ನನ್ನು ಹಿಡಿದುಕೊಂಡಿತಲ್ಲ, ಈಗಲಾದರೂ ಶರಣುಹೋಗು, ಇಲ್ಲದಿದ್ದರೆ ಸಮರಕೆ ಬಾ" ಎಂದನು. ಬ್ರಹ್ಮನು "ನನಗೆ ಬ್ರಹ್ಮತ್ವವನ್ನು ಕೊಟ್ಟವರಾರು, ಸುಳ್ಳೇಕೆ ಹೇಳುವೆ?"

ಎನ್ನುತ್ತ ಬಾಣಗಳನ್ನು ಸುರಿಸಿದನು. ವೀರಭದ್ರನು "ನಮ್ಮ ಮೇಲೆ ಅಂಬುದೊಟ್ಟಿ. ನಿನ್ನುಳಿವ ತಲೆಗಳನ್ನ ಕುಟ್ಟಿ ಶಿವನ ರುಂಡಮಾಲೆಗೆ ಕೊಡುವೆನು" ಎನ್ನುತ್ತ ಬ್ರಹ್ಮನ ಬಾಣಗಳನ್ನ ಕಡಿದುಹಾಕಿ ಮತ್ತೆ ಬಾಣಗಳನ್ನು ಎಚ್ಚನು (೪೬-೪೮). ಆತನ ಬಾಣಗಳು ಬ್ರಹ್ಮನ ಸೂತಾಶ್ವಗಳನ್ನ ಕೊಚ್ಚಿ, ಬ್ರಹ್ಮನ ಮೈಯಲ್ಲಿ ಚುಚ್ಚಿ, ಒಳಹೊಕ್ಕು ಹೊರಬಿದ್ದುವು. ಗಾಯದಿಂದ ನೊಂದು ಬ್ರಹ್ಮನು ಹೊಸರಥವನ್ನು ಹತ್ತಿ ಕಾಡಹಂದಿಯಂತೆ ಆರ್ಭಟಿಸಿ ವೀರಭದ್ರನ ಮೇಲೆ ಬಾಣಗಳನ್ನು ಸುರಿಸಿದನು. ವೀರಭದ್ರನು ಆ ಬಾಣಗಳನ್ನು ಕಡಿದು ಹೊಸ ಬಾಣಗಳನ್ನು ಬಿಡಲು ಅವು ರಥಾಶ್ವಗಳನ್ನು ಸವರಿ ವಿಧಿಯನ್ನು ಹೊತ್ತುಕೊಂಡು ಗಗನದಲ್ಲೆಲ್ಲ ಸುತ್ತಿ ರಣರಂಗಕ್ಕೆ ಈಡಾಡಿದುವು. ಬ್ರಹ್ಮನೊಡನೆ ವೀರಭದ್ರನು ಈ ರೀತಿ ಕಾದುತ್ತಿರೆ ಅವನ ಮೇಲೆ ಬೀಳುತ್ತಿದ್ದ ಸುರಸಮೂಹವನ್ನು ಭದ್ರಕಾಳಿಯು ಕೊಲ್ಲುತ್ತಿದ್ದಳು. ಬ್ರಹ್ಮನು ಸಿಟ್ಟಿನಿಂದ ಬ್ರಹ್ಮಾಸ್ತ್ರವನ್ನು ವೀರಭದ್ರನ ಮೇಲೆ ಬಿಟ್ಟನು. ಅದು ಕಿಡಿಗಳನ್ನುಗುಳುತ್ತ ಅಡವಿಗಳನ್ನು ಸುಡುತ್ತ ಕಡಲನ್ನುಕ್ಕಿಸುತ್ತ ನಕ್ಷತ್ರಗಳನ್ನು ಉದುರಿಸುತ್ತ ಬರುತ್ತಿರಲು ರುದ್ರಾಸ್ತ್ರದಿಂದ ಅದನ್ನು ಕತ್ತರಿಸಿ ಬ್ರಹ್ಮನನ್ನು ಹೆಡೆಮುರಿ ಕಟ್ಟಿ ವೀರಭದ್ರನು ಮುಂದಕ್ಕೆ ನಡೆದನು (೪೯-೫೨).

ವೀರಭದ್ರನು ಮುಂದೆ ಬ್ರಹ್ಮನ ಅಪ್ತರನ್ನೆಲ್ಲ ಸವರಿ, ಎದುರಾದ ಇಂದ್ರನ ತೋಳ್ಗಳನ್ನ ಕತ್ತರಿಸಿ, ಅಗ್ನಿಯ ನಾಲಗೆಯನ್ನ ಏಳು ಹೋಳು ಮಾಡಿ, ಪೂಷನ ಹಲ್ಲುಗಳನ್ನ ಮುರಿದು, ಭಗನ ಕಣ್ಣುಕಿತ್ತು, ಚಂದ್ರನನ್ನು ಒರಸಿ, ಮಿಕ್ಕವರ ಅವಯವಗಳಲ್ಲಿ ಒಂದೊಂದು ಕುರುಪುಗೊಂಡು ಎಲ್ಲರನ್ನು ಕಟ್ಟಿ ಭೂತಗಳ ವಶಕ್ಕೆ ಕೊಟ್ಟನು (೫೩). ಅಪ್ಸರಲ್ಲಿ ಉಳಿದವರು ಓಡಿಹೋಗಿ ಮುಖಶಾಲೆಯನ್ನು ಹೊಕ್ಕು ವಿಷ್ಣುವಿಗೆ "ಸುರರೆಲ್ಲ ಹಾಳಾದರು. ನೀನು ಓಡಿಹೋಗಿ ಬದುಕು. ಇಲ್ಲದಿದ್ದರೆ ಯುದ್ಧಕ್ಕೆ ಏಳು" ಎಂದು ಹೇಳಿದರು (೫೪). ವಿಷ್ಣುವು "ಅಂಜದಿರಿ, ನಾನು ವೈರಿಗಳನ್ನು ಸೀಳುವೆನು" ಎನ್ನುತ್ತ ಯುದ್ಧಕ್ಕೆ ನಡೆದನು (೫೫). ಇಂದ್ರ ಮೊದಲಾದವರು ಮತ್ತೆ ಬಂದು ತಮ್ಮ ತಮ್ಮ ಬಲಗಳನ್ನು ಕೂಡಿಕೊಂಡು ರಣಾಂಗಣಕೆ ನಡೆದರು (೫೬).

೩೨ ದಕ್ಷಶಿರಶ್ಛೇದನದ ಸಂಧಿ

ಹರಿಯು ಕಾಳೆಗಕೆ ನಡೆಯಲು ಎಡಗಣ್ಣು, ತೋಳು, ತೊಡೆಗಳು ಕಂಪಿಸಿದುವು. "ತಲೆ ಹೋಗುವ ಬಳಿಗೆ ಕಾಲೆ ತೋಹೆಗಾರ" ಎಂಬಂತೆ ಆತನು ರಣಾಂಗಣಕೆ

ಬರಲು ವೀರಭದ್ರನ ಶರಜಾಲದಿಂದ ತುಂಬಿದ ರಣರಂಗವನ್ನೂ ದೇವತೆಗಳ ಭಂಗವನ್ನೂ ಕಂಡನು (೨). ಭೂತ್ರಗಳು ಆ ರಣದಲ್ಲಿ ಮನಬಂದಂತೆ ಕುಣಿಯುತ್ತ, ವಿನೋದದಿಂದ ಐರಾವತ ಮೊದಲಾದ ವಾಹನಗಳನ್ನು ಏರಿ ಸುತ್ತುತ್ತ ಓಡಾಡುವುದನ್ನೂ ಇನ್ನೂ ಅರೆಜೀವಿಗಳಾಗಿ ಬ್ರಹ್ಮನನ್ನು ಬಯ್ಯುತ್ತಿದ್ದ ಭಟರನ್ನೂ ಕಂಡು ಹರಿ ಕಿಡಿಕಿಡಿಯಾಗಿ ನಡೆತಂದನು (೩). ಅಖಿಳವಾದ್ಯಧ್ವನಿಯು ಭೋರೆನ್ನುತ್ತಿರಲು, ಚೂಣಿಗರು ಕಾದುತ್ತಿರಲು, ಹರಿಯು ಕೋಪದಿಂದ ಸಿಂಜಿನಿನಿನಾದವನ್ನು ಮಾಡಿ ಬಾಣವನ್ನು ಪೂಡಿ "ನಮ್ಮ ಬಲವನ್ನು ಕೊಂದು ಬ್ರಹ್ಮಾದ್ಯರನ್ನು ಕಟ್ಟಿದಾತನ ಒಡಲನ್ನು ಸೀಳಿಡು" ಎನ್ನುತ್ತ ವೀರಭದ್ರನ ಬಲದ ಮೇಲೆ ರಕ್ತವು ಸುರಿವಂತೆ ಎಸೆದನು (೪-೫). ಅಚ್ಯುತನು ಬೀರಿದ ಕಣೆಗಳಿಂದ ವೀರಭದ್ರನ ಚತುರಂಗಬಲವು ಅಳಿಯುತ್ತಿರಲಾಗಿ ವೀರೇಶನು ತನ್ನ ರಥವನ್ನು ನಾರಾಯಣನಲ್ಲಿಗೆ ಹರಿಸಿ ವಂದಿಗಳು ಬಿರುದನುಗ್ಘಡಿಸುತ್ತಿರಲು ಅವನನ್ನು ತಡೆದನು (೬-೯). ಒಬ್ಬರನ್ನೊಬ್ಬರು ಮೂದಲಿಸುತ ಅಚ್ಯುತವೀರಭದ್ರರು ಎಚ್ಚಾಡಿದರು (೧೦-೧೨). ವೀರಭದ್ರನು ಹದನಾದ ಐದು ಬಾಣಗಳಿಂದ ಹರಿಯ ಛತ್ರಚಾಮರರಥಾಶ್ವಗಳನ್ನು ಕಡಿದು, ಒಂಬತ್ತು ಬಾಣಗಳನ್ನು ಹರಿಯ ಹಣೆಗೆ ಗುರಿಯಿಟ್ಟು ಹೊಡೆದನು (೧೩). ಅದರಿಂದ ಹರಿಯು ನೆಲಕ್ಕೆ ಬೀಳಲು, ವೀರಭದ್ರನು "ಶಿವ ಶಿವಾ, ನಮ್ಮ ಪರಾಕ್ರಮವು ತಂದೆಯ ಆಜ್ಞೆಯನ್ನು ಮೀರಿತು" ಎನ್ನುತ್ತ ಶೈತ್ಯೋಪಚಾರವನ್ನು ಮಾಡಲು, ವಿಷ್ಣುವು ಕಣ್ದೆರೆದು ಕೋಪಾಟೋಪದಿಂದ ಹೊಸ ರಥವನ್ನು ಏರಿ ವೀರಭದ್ರನೊಡನೆ ಸಮರಕನುವಾಗಲು, ಈಶ್ವರನು ಭೃತ್ಯಪುತ್ರರ ಪರಾಕ್ರಮವನ್ನು ನೋಡಲು ಆಕಾಶದಲ್ಲಿ ಬಂದು ನಿಂತನು. ಇಬ್ಬರ ಸಮರವು ಸಮವಾಗುತ್ತಿರಲು ವೀರೇಶನು ಕೋಪದಿಂದ ಹರಿಯನ್ನು ಮತ್ತೆ ಮೂರ್ಛಿತನನ್ನಾಗಿ ಮಾಡಿ ಅವನ ಚತುರಂಗ ಬಲವನ್ನು ಕೊಲತೊಡಗಿದನು (೧೪-೧೬). ವೀರೇಶನು ಇರಿದ ಸಮರಂಗವು ಅತಿ ಭಯಂಕರವಾಯಿತು. ಹೆಣಗಳೂ ಮುರಿದ ತೇರುಗಳೂ ಕಡಿವಡಿದ ಆನೆಕುದುರೆಗಳೂ ಎಲ್ಲ ನೋಡಿದಲ್ಲಿ ತುಂಬಿದ್ದುವು. ನೆಣ ನೆತ್ತರ ಬಸೆ ಮೊದಲಾದುವುಗಳಿಂದ ನೆಲವು ಜಿಗಿಯಾಗಿತ್ತು (೧೭-೧೯). ದೇವತೆಗಳ ಮುಂಡಗಳೆಂಬ ಹಸೆಮಣೆಗಳಲ್ಲಿ ಕುಳಿತು ಕರುಳಬಾಸಿಗಗಳನ್ನು ಧರಿಸಿ ಎಲವುಗಳ ಆಭರಣಗಳನ್ನು ಇಟ್ಟುಕೊಂಡು ನರದ ಕಂಕಣದಾರದಿಂದ ಎಸೆಯುತ್ತ ನರಿಗಳಿಂದ ಶೋಭಾನ ಹಾಡಿಸುತ್ತ ನೆತ್ತರೋಕುಳಿಯಾಡಿ ಮರುಳ (ಭೂತಗಳ) ಮದುಮಕ್ಕಳು ಶೋಭಿಸುತ್ತಿದ್ದರು (೨೦).

ಅನಿತರಲ್ಲಿ ವಿಷ್ಣುವು ಎಚ್ಚತ್ತು ಮತ್ತೆ ವೀರಭದ್ರನೊಡನೆ ಕಾಳೆಗವನ್ನು ಆರಂಭಿಸಿದನು. ಹರಿಯು ವೈಷ್ಣವಾಸ್ತ್ರದಿಂದ ವೀರೇಶನನ್ನು ಇಡಲು, ಅದನ್ನು

ಅವನು ಹಗುರಾಗಿ ರುದ್ರಾಸ್ತ್ರದಿಂದ ಹಿಂಡಿಸಿದನು. ಹರಿಯು ಖತಿಯಿಂದ "ನನ್ನನ್ನು ನೋಯಿಸಿದ ಫಲವನುಣ್ಣು" ಎನುತ್ತ ಚಕ್ರವನ್ನು ಪ್ರಯೋಗಿಸಿದನು. ಮೂಲೋಕವನ್ನು ತಳಮಳಿಸುತ್ತ, ನಕ್ಷತ್ರಗಳನ್ನು ಉದುರಿಸುತ್ತ, ಸೂರ್ಯಪ್ರಕಾಶವನ್ನು ಮುಚ್ಚುತ್ತ, ಸಪ್ತಸಾಗರಗಳನ್ನು ಕುದಿಸುತ್ತ, ಕಿಚ್ಚನುಗುಳುತ್ತ ಬರುತ್ತಿದ್ದ ಆ ಚಕ್ರವನ್ನು ವೀರೇಶನು ನುಚ್ಚುನೂರ್ಕಡಿಮಾಡಿ ಹರಿಯ ರಥಸಾರಥಿ ಮೊದಲಾದುವುಗಳನ್ನು ಸವರಿದನು (೨೧-೨೩). ಗೆಲ್ಲುವ ಉಪಾಯವನ್ನು ಕಾಣದೆ ಹರಿಯು ಚಿಗರೆಯ ರೂಪವನ್ನು ತಾಳಿ ಓಡುತ್ತಿರಲು ವೀರೇಶನ ಬಾಣವೊಂದು ಅದನ್ನು ಕೆಡವಿತು (೨೪). ವೀರೇಶನು ಕರುಣದಿಂದ ತನ್ನ ಸಚ್ಚಿದಾನಂದ ರೂಪವನ್ನು ತೋರಿ ವಿಷ್ಣುವಿಗೆ ಅಭಯವಿತ್ತನು. ವಿಷ್ಣುವು ಭಕ್ತಿಯಿಂದ ಆತನನ್ನು ಸ್ತುತಿಸಿದನು (೨೫-೨೭). ಹರಿಯ ಇಚ್ಛೆಯಂತೆ ಆ ಎರಳೆಯ ಚರ್ಮವನ್ನು ಯಜ್ಞಯಾಗಾದಿಗಳಲ್ಲಿ ಬಳಸಿದವರಿಗೆ ದುಷ್ಕರ್ಮಪಾಶಗಳು ನಾಶವಾಗಲೆಂದು ವರವನ್ನು ಕೊಟ್ಟನು (೨೮-೨೯).

ಇತ್ತ ಯಜ್ಞದೀಕ್ಷಿತನಾದ ದಕ್ಷನಲ್ಲಿಗೆ ಚರರು ಬಂದು ಆದುದನ್ನು ಬಿನ್ನವಿಸಲು, ಅವನು ಭಯಂಕರ ಕೋಪದಿಂದ "ಯಾರಳಿದರೇನು? ತಿರುಗಿ ಪಡೆಯುವ ಶಕ್ತಿ ನಮ್ಮಲ್ಲಿದೆ" ಎಂದು ಚತುರಂಗವನ್ನು ಪಡೆದು ರಾಕ್ಷಸರ ಬಲವನ್ನು ನೆರೆಸಿ, ಜಗಜಟ್ಟಿಗಳಾದ ರಕ್ಕಸ ದೊರೆಗಳಿಗೆ ಯುದ್ಧಕ್ಕೆ ಅಪ್ಪಣೆಕೊಟ್ಟು ತಾನು ಯಜ್ಞದಲ್ಲಿ ಹವಿಗಳನ್ನು ಬೇಳುತ್ತಿದ್ದನು (೩೦-೩೨). ಇತ್ತ ಮರುಳತಂಡಗಳು ಯಜ್ಞಶಾಲೆಯನ್ನು ಹೊಕ್ಕು ಕಾವಲ ಭಟರುಗಳನ್ನು ಸದೆದು ಬಾಗಿಲುಗಳನ್ನು ಕೀಳುತ್ತಿರುವಷ್ಟರಲ್ಲಿ ರಾಕ್ಷಸರ ತಂಡವು ಅವರನ್ನು ಕವಿಯಿತು. ರಾಕ್ಷಸರು ತರತರದ ಮಾಯೆಯಿಂದ ಬೆಟ್ಟ, ಗುಂಡು, ಕಲ್ಲು, ಸಿಡಿಲು, ಹುಲಿ, ಸಿಂಹ, ಬೆಂಕಿ ಮೊದಲಾದ ಆಕಾರಗಳನ್ನು ತಾಳಿ ಭೂತಗಳನ್ನು ಕೊಲ್ಲುತ್ತಿದ್ದರು. ಭೂತಗಳನ್ನು ಹಿಡಿದು ರಾಕ್ಷಸರು ಬಾಯಲ್ಲಿ ಹಾಕಿಕೊಂಡು ನುಂಗಲು ಅವು ಕಿವಿ ಮೂಗಿನಿಂದ ಹೊರಬೀಳುತ್ತಿದ್ದುವು (೩೩-೩೮). ಈ ರೀತಿ ಕಾದುತ್ತಿರಲು ವೀರಭದ್ರನ ಬಲವು ಬಲಗುಂದಿ ಆತನನ್ನು ಮರೆಹೊಕ್ಕಿತು (೩೯). ಆಗ ಕೋಪದಿಂದ ವೀರೇಶನು ರಕ್ಕಸಗಣವನ್ನು ಸದೆದು ಓಡಿಸಿ ರಥವನ್ನು ಇಳಿದು ಭದ್ರಕಾಳಿಸಹಿತ ಹೋಮಶಾಲೆಗೆ ಹೋದನು. ಅವನ ಮರುಳ ಪರಿವಾರವು ಮಖಶಾಲೆಯಲ್ಲಿದ್ದವರನ್ನು ಭಂಗಿಸುತ್ತಿರಲು ಅವರನ್ನು ನಿಲ್ಲಿಸಿ ಯಜ್ಞಕ್ಕೆ ಪೂರ್ಣಾಹುತಿಯನ್ನು ಕೊಡುವೆನೆಂದು ದಕ್ಷನ ಶಿರವನ್ನು ಕುಟ್ಟಿ ಹೋಮದಲ್ಲಿಟ್ಟನು (೪೦-೪೫). ಆದರೆ ಅವನ ಸತಿಯರ ಬಿನ್ನಪಕ್ಕೆ ಮೆಚ್ಚಿ ದಕ್ಷನ ಮುಂಡಕ್ಕೆ ಕುರಿಯ ತಲೆಯನ್ನು ಹಚ್ಚಿ ಪ್ರಾಣದಾನವನ್ನು ಮಾಡಿದನು. ದಕ್ಷನು ಅವನನ್ನು ಹೊಗಳಲು ಅವನಿಗೆ ಅಭಯವಿತ್ತು ಅವನನ್ನೂ ಉಳಿದದೇವತೆಗಳನ್ನೂ ಕೂಡಿಕೊಂಡು ಶಿವನಲ್ಲಿಗೆ ಬಂದನು (೪೬-೫೧). ಅವರೆಲ್ಲ ಶಿವನನ್ನು ಸ್ತುತಿಸುತ್ತಿರಲು ಶಿವನು ವೀರಭ

ದ್ರನನ್ನು ತಳ್ಳೈಸಿ ದೇವತೆಗಳನ್ನೆಲ್ಲ ಬೀಳ್ಕೊಟ್ಟನು (೪೮-೫೦).

೩೩ ಶರಭಾವತಾರಲೀಲೆಯ ಸಂಧಿ

ಎಲೈ ಸಿದ್ಧರಾಮೇಶನೇ ಕೇಳು, ದೇವತೆಗಳು ಕೆಲವು ಕಾಲ ಸುಖದಿಂದ ಕಳೆದ ಮೇಲೆ ಅವರಿಗೊಂದು ಮೃತ್ಯುವಾಯಿತು. ಹಿರಣ್ಯಕಶಿಪುವೆಂಬೊಬ್ಬ ಕಾಳರಕ್ಕಸನು ತನ್ನ ಭುಜಬಲದಿಂದ ದೇವತೆಗಳ ಸಮೂಹವನ್ನು ಸದೆಬಡಿಯಲು, ಇಂದ್ರನು ಅವ ರೊಡನೆ ಈಶ್ವರನೆಡೆಗೆ ಬಂದು, “ಭೂಲೋಕದಲ್ಲಿ ಹಿರಣ್ಯಕಶಿಪುವೆಂಬುವನು ಬ್ರಹ್ಮ ನಿಂದ ಹಗಲು ಇರುಳು ಹೊರಗೆ ಒಳಗೆ ಸುರ ನರ ಉರಗ ದನುಜರಿಂದ ಮೂವತ್ತೆ ರಡು ಆಯುಧಗಳಿಂದ ಸಾಯದಂತೆ ವರವನ್ನು ಪಡೆದು ನಮ್ಮೆಲ್ಲರನ್ನು ಪಾದದಿಂದ ತುಳಿದು ದೇವಸ್ತ್ರೀಯರನ್ನು ಹಿಡಿದುಕೊಂಡಿರುವನು. ಇದನ್ನು ಪರಿಹರಿಸಿ ನಮ್ಮ ನ್ನು ಕಾಯಬೇಕು” ಎಂದು ಸಾಷ್ಟಾಂಗವೆರಗಿದನು (೨-೩). ಶಿವನು ಕರುಣೆ ಯಿಂದ ಹರಿಯನ್ನು ಕರೆದು ಆ ಖಳನನ್ನು ಕೊಲ್ಲಲು ಆಜ್ಞಾಪಿಸಿದನು. ಹರಿಯೂ ಆ ನಿರೂಪವನ್ನು ಆಲಿಸಿ ಬೇಗದಿಂದ ಬಂದು ಬ್ರಹ್ಮನು ಕೊಟ್ಟ ವರದ ಶಕ್ತಿಯನ್ನು ನೆನೆದು ಆ ರಕ್ಕಸನ ಮನೆಯ ಕಂಬದಲ್ಲಿ ನರಸಿಂಹರೂಪದಿಂದ ಹುಟ್ಟಿ ಅವನನ್ನು ಹಿ ಡಿತಂದು ಹೊಸ್ತಿಲೊಳಗೆ ಸಂಜೆಯಲ್ಲಿ ತನ್ನ ತೊಡೆಯ ಮೇಲೆ ಕೆಡವಿ ಉಗುರ್ಗೊನೆ ಗಳಿಂದ ಅವನ ಹೊಟ್ಟೆಯನ್ನು ಹರಿದು ರಕ್ತವನ್ನು ಸುರಿಸುರಿದು ಕುಡಿದನು. ಲೋ ಕವೆಲ್ಲವು ಸಂತೋಷವನ್ನು ಹೊಂದಿತು (೪-೫).

ಮುಂದೆ ಕೆಲವು ದಿವಸಗಳ ಮೇಲೆ ನರಸಿಂಹನು ರಕ್ಕಸನ ನೊರೆನೆತ್ತರದಿಂದ ಮದೋನ್ಮತ್ತನಾಗಿ ಅವನಿಗೆಂಟುಮಡಿಯಾಗಿ ಲೋಕವನ್ನು ಪೀಡಿಸುತ್ತಿರಲು, ದೇವ ತೆಗಳು ಬೇಸತ್ತು ಪುನಃ ಕೈಲಾಸಕ್ಕೆ ಬಂದು ಶಂಕರನಿಗೆ ಬಿನ್ನವಿಸಿದರು. “ಹಳೆ ಯ ರೋಗಕ್ಕೆ ಔಷಧವನ್ನು ತೆಗೆದುಕೊಳ್ಳಲು ಹೊಸರೋಗವು ಉಂಟಾದಂತೆ, ಮೊದ ಲೊಬ್ಬ ಗಂಡನನ್ನು ಒಲ್ಲೆನೆಂದು ಮತ್ತೊಬ್ಬನನ್ನು ಬಯಸಲಾಗಿ ಜೀವ ಹೋ ಗುವಂತೆ ಬಡಿಯುವ ಗಂಡನು ದೊರಕಿದಂತೆ ರಕ್ಕಸನ ಕೊಲೆಗಂಜಿ ನಿಮ್ಮ ಮರೆ ಹೊಕ್ಕರೆ ನಮ್ಮನ್ನು ಪೀಡಿಸಿ ತಿನ್ನುವ ಸಿಂಹಾಕೃತಿಯ ಭೂತವನ್ನು ಕಳುಹಿದಿರಿ” ಎಂದು ದೇವತೆಗಳು ನರಸಿಂಹನ ಕೃತಿಯನ್ನು ವಿಸ್ತರಿಸಿದರು (೬-೭). ಶಿವನು ಆ ನು ಡಿಯನ್ನು ಕೇಳಿ ಆಶ್ಚರ್ಯಪಟ್ಟು ದೇವತೆಗಳಿಗೆ ಅಭಯವಿತ್ತು ವೀರೇಶನನ್ನು ಕರೆದು “ನೀನು ಹರಿಯ ಬಳಿಗೆ ಹೋಗಿ ನೀತಿಯ ಉಪದೇಶವನ್ನು ಹೇಳಿ ಕರೆ. ಬಾರದಿದ್ದರೆ ಅವನ ದೇಹವನ್ನು ಬಿಚ್ಚಿ ಅದರ ಶಿರವನ್ನೂ ಚರ್ಮವನ್ನೂ ತೆಗೆದುಕೊಂಡು ಬಾ”

ಎಂದು ಹೇಳಿಕಳುಹಿದನು (೮). ವೀರೇಶನು ಭಕ್ತಿಯಿಂದ ಶಿವನಿಗೆ ನಮಸ್ಕರಿಸಿ ತನ್ನ ಬಲವನ್ನು ಕೂಡಿಕೊಂಡು ಬಂದು ನರಸಿಂಹನಿಗೆ ಹಲವು ತರದ ಬುದ್ಧಿಯನ್ನು ಹೇಳಿದನು. ನರಹರಿಯು ಅವನನ್ನೂ ಶಂಕರನನ್ನೂ ತಿರಸ್ಕರಿಸಿ ನುಡಿಯಲು, ವೀರೇಶನು ಮಹಾಕೋಪವನ್ನು ತಾಳಿ, ದೇವತೆಗಳೆಲ್ಲರೂ ನೋಡುತ್ತಿರಲು, ಅವನ ಮಸ್ತಕವನ್ನು ಎಡಗಾಲಿನಿಂದ ಒದೆಯಲಾಗಿ ನರಸಿಂಹನು ಭೂಮಿಯ ಮೇಲೆ ಬಿದ್ದನು. ಮತ್ತೆ ಚೇತರಿಸಿ ರೋಷಾವೇಶದಿಂದ ವೀರೇಶನನ್ನು ಗುದ್ದಬೇಕೆನ್ನುವಷ್ಟರಲ್ಲಿ ವೀರೇಶನು ಶರಭಾವತಾರವನ್ನು ತಾಳಿ ಚಂಚುವಿನಿಂದ ನರಸಿಂಹನ ಕುತ್ತಿಗೆಯನ್ನು ಕಚ್ಚಿಕೊಂಡು ಆಕಾಶಕ್ಕೆ ಹಾರಿದನು (೯-೨೩). ಈ ರೀತಿ ವೀರೇಶನು ನರಸಿಂಹನನ್ನು ಕೊಂದು ಅವನ ಶಿರವನ್ನೂ ಚರ್ಮವನ್ನೂ ತಂದು ತಂದೆಗೆ ಒಪ್ಪಿಸಲು, ಈಶ್ವರನು ಸಂತೋಷದಿಂದ ಆ ಶಿರಸ್ಸಿಗೆ ಕೀರ್ತಿಮುಖವೆಂಬ ಹೆಸರಿಟ್ಟು ಭೂಷಣವನ್ನು ಮಾಡಿ ಧರಿಸಿ ಚರ್ಮವನ್ನು ಸಿಂಹಾಸನವನ್ನು ಮಾಡಿ ಏರಿ ಮಗನನ್ನು ಮನ್ನಿಸಿ ದೇವತೆಗಳನ್ನು ಬೀಳ್ಕೊಟ್ಟು ಸುಖದಿಂದಿದ್ದನು (೨೪).

೩೪ ಗಿರಿಜೋತ್ಪತ್ತಿಯ ಸಂಧಿ

ಪೂರ್ವಕಾಲದಲ್ಲಿ ಹಿಮವಂತನ ಹೆಂಡತಿಯು ಶಿವೆಯನ್ನು ಕುರಿತು ಬಹಳ ಕಾಲ ಪರಿಯಂತರ ತಪವನ್ನು ಮಾಡುತ್ತಿರಲು, ಶಿವೆಯು ಆಕೆಯ ತಪಕ್ಕೆ ಮೆಚ್ಚಿ ವರವನ್ನು ಬೇಡೆನ್ನಲು, "ನೀನು ನನಗೆ ಮಗಳಾಗಿ ಹುಟ್ಟು" ಎಂದು ಮೇನೆಯು ಎನ್ನಲು, ಶಿವೆಯು ದಕ್ಷಸಂಬಂಧದ ಶರೀರವನ್ನು ಬಿಟ್ಟು ಮೇನೆಯ ಹೊಟ್ಟೆಯಲ್ಲಿ ಹುಟ್ಟಿದಳು. ಗಿರಿರಾಜನು ಶಿವಲಿಂಗಧಾರಿಯಾದ ಆ ಕುವರಿಯನ್ನು ನೋಡಿ ಆಕೆಗೆ ತನ್ನ ಕುಲಗುರುವಿನಿಂದ ದೀಕ್ಷೆಯನ್ನು ಕೊಡಿಸಿ ಹೆಸರಿಡಲು ಗಿರಿಜಾತೆಯು ಬಳೆಯುತ್ತಿದ್ದಳು (೨-೩). ಅವಳು ಯವ್ವನದೆಸೆಯನ್ನು ಹೊಂದಿದ ಮೇಲೆ ನಾರದನು ಆಕಾಶಮಾರ್ಗದಿಂದ ಹಿಮವಂತನೆಡೆಗೆ ಬರಲು, ಅಗರಾಜನು ಅತ್ಯಂತ ಹರುಷದಿಂದ ಅವನಿಗೆ ನಮಸ್ಕರಿಸಿ ತನ್ನ ರಾಜಾಲಯಕ್ಕೆ ಕರೆದುಕೊಂಡು ಹೋಗುತ್ತಿರಲು, ಮುಂದಿರುವ ಗಿರಿಸುತೆಯನ್ನು ಮುನಿಯು ಕಂಡು ಆಕೆಯ ಪದಕೆರಗಿ ಹೊಗಳಿದನು. ಇದನ್ನು ನೋಡಿ ಗಿರಿರಾಜನು "ನೀವು ನಮಗೆ ವಂದ್ಯರು, ನಮ್ಮ ಮಗಳನ್ನು ನಮಸ್ಕರಿಸಿ ಏಕೆ ಹೊಗಳಿದಿರಿ" ಎಂದು ಕೇಳಲು, ನಾರದನು "ದೇವಗಂಗೆಗೆ ಆಕಾಶವು ಜನನಿಯೆ? ಚೈತ್ರರಥವನವು ಕಲ್ಪವೃಕ್ಷಕ್ಕೆ ಜನನಿಯೆ? ದಿವ್ಯನಿಗಮಗಳಿಗೆ ಮುಖವು ಜನನಿಯೆ? ವಿಮಲಸುಜ್ಞಾನಸುಧೆಗೆ ವಿಕಾರವಾದ ಮನಸ್ಸು ಜನನಿಯೆ?

ರತ್ನಕ್ಕೆ ಫಣಿಶಿರವು ಜನನಿಯೆ? ಸರ್ವಮಂಗಲೆಗೆ ನೀವು ಜನನಿಜನಕರೆ? ಮೇ
ನೆಯ ವರಕ್ಕಾಗಿ ದಕ್ಷಸಂಬಂಧದ ಶರೀರವನ್ನು ಬಿಟ್ಟು ವಿರೂಪಾಕ್ಷನರ್ಧಾಂಗಿಯು
ಮೇನೆಯ ಬಸುರಿನಲ್ಲಿ ಬರಲು ಅವಳು ಈಕೆಯ ಮಗಳೆ? ಅವಳ ವಿಯೋಗದಿಂದ
ಫಾಲಾಕ್ಷನು ತುಂಗಭದ್ರಾನದಿಯ ತೀರದಲ್ಲಿ ಹೇಮಕೂಟಗಿರಿಯ ಮೇಲೆ ತಪೋಧ
ನನಾಗಿ ನಿಂತು ತನ್ನ ನಿಜವನ್ನು ತಾನೇ ಧ್ಯಾನಿಸುತ್ತಿರುವನು. ಅವನಿದ್ದೆಡೆಗೆ ಮಹಾ
ದೇವಿಯನ್ನು ಕಳುಹಿಸು " ಎನ್ನಲು, ಗಿರಿರಾಜನು ಉಚಿತಸಂಭಾವನೆಯನ್ನು ಮಾಡಿ
ಮುನಿಯನ್ನು ಕಳುಹಿಸಿ, ತನ್ನ ಮಗಳಿಗೆ ಹೇಮಕೂಟಪರ್ವತಕ್ಕೆ ಹೋಗೋಣವೆಂದು
ಹೇಳಿದ ಕೂಡಲೆ ಆಕೆಯು ಪುಷ್ಪಕವನೇರಿ ಪಿತನೊಡನೆ ಆ ಪರ್ವತಕ್ಕೆ ಬಂದಳು. ಗಿರಿ
ರಾಜನು ಆಕೆಗೆ ತುಂಗಭದ್ರಾನದಿಯನ್ನೂ ಅನಂಗಹರನಿರುವ ಪಂಪಾಕ್ಷೇತ್ರವನ್ನೂ
ತೋರಿಸಿ ಪುಷ್ಪಕವನಿಳಿದು ಬಾಗಿಲಿನಲ್ಲಿ ಕಾದಿರುವ ನಂದೀಶನನ್ನು ಕಂಡು ನಮಸ್ಕರಿಸಿ,
" ನಿನ್ನ ನಿಜರಮಣನು ಯೋಗಿಯ ರೂಪದಿಂದ ಇಲ್ಲಿರುವನು. ನೀನು ಸಹ ಅವ
ನಂತೆ ಯೋಗಿಣಿಯಾಗಿ ಅವನ ಮನವೊಲಿಸು " ಎಂದು ಸುತೆಗೆ ಬಿನ್ನವಿಸಿ ಜಯವಿಜ
ಯಗಳೆಂಬುವರನ್ನು ಆಕೆಯ ಸಹಾಯಕ್ಕೆ ಬಿಟ್ಟು ತನ್ನ ಪುರಕ್ಕೆ ಸಾಗಿದನು (೪-೨೪).
ಆ ತಪೋವನದಲ್ಲಿ ಮುನಿಗಳು ಅಭಿಷೇಕ ಜಪ ಯಜ್ಞ ಹೋಮಗಳನ್ನು ಮಾಡುತ್ತಿ
ದ್ದರು. ಮೃಗಪಕ್ಷಿಕುಲಗಳು ಅನ್ಯೋನ್ಯ ವೈರವನ್ನು ಬಿಟ್ಟಿದ್ದುವು (೨೫-೨೯). ಈ
ರೀತಿ ರಂಜಿಸುವ ಪುಣ್ಯಾಶ್ರಮವನ್ನು ನೋಡುತ್ತ ಹೇಮಕೂಟಪರ್ವತದ ಮಗ್ಗುಲಿನಲ್ಲಿ
ತಪೋಮೂರ್ತಿಯಾಗಿ ಶೋಭಿಸುವ ವಿರೂಪಾಕ್ಷನನ್ನು ಗಿರಿಸುತೆಯು ಕಂಡು ನಮಿಸಿ
ಸಂತೋಷದಿಂದ ಕೊಂಡಾಡಿ ಭಯಭಕ್ತಿಯಿಂದ ದಿನಾಲು ಪೂಜಿಸುತ್ತಿದ್ದಳು (೩೦-೩೧).

ಇತ್ತ ತಾರಕಾಸುರನೆಂಬ ದಾನವನು ಇಂದ್ರ ಮುಂತಾದ ದೇವತೆಗಳನ್ನು ಪೀ
ಡಿಸಿ ಅವರ ಕೋಟೆಗಳನ್ನು ಕೈವಶಮಾಡಿಕೊಳ್ಳಲು, ದೇವತೆಗಳು ತಮ್ಮ ತಮ್ಮ
ಹೆಂಡಂದಿರನ್ನು ತಂದು ಮೇರುಪರ್ವತದ ಗುಹೆಯೊಳಗೆ ಇಟ್ಟು ಬರೀ ಉಟ್ಟರಿವೆಗ
ಳಿಂದ ಬ್ರಹ್ಮನೆಡೆಗೆ ಬಂದು ಈ ಸುದ್ದಿಯನ್ನು ಹೇಳಿದರು. ಬ್ರಹ್ಮನು ಅವರ ದೂರ
ನ್ನು ಆಲಿಸಿ ತಾರಕನ ವೃತ್ತಾಂತವನ್ನು ಹೇಳಿದನು. ಅದೇನೆಂದರೆ :- " ಪೂರ್ವಕಾ
ಲದಲ್ಲಿ ತಾರಕನು ವನಕ್ಕೆ ಹೋಗಿ ಉಗ್ರತಪವನ್ನು ಮಾಡತೊಡಗಲು ಅದರಿಂದ
ಹದಿನಾಲ್ಕು ಲೋಕಗಳು ಸುಡಹತ್ತಿದುವು. ನಾನು ಚಿಂತಾಕುಲನಾಗಿ ಈಶನೆಡೆಗೆ
ಹೋಗಿ ಹೇಳಲು, ಅವನು ' ಇದು ತಾರಕನ ತಪದ ಬಲವು, ಅವನಿಗೆ ಬೇಡಿದ ವರ
ವನ್ನು ಕೊಟ್ಟು ಅವನ ತಪವನ್ನು ನಿಲ್ಲಿಸು ' ಎಂದು ಹೇಳಿ ಕಳುಹಿದನು (೩೨-೩೫).
ನಾನು ತಾರಕನಿದ್ದಲ್ಲಿಗೆ ಬಂದು ವರವನ್ನು ಬೇಡೆನ್ನಲು ಅವನು ಕಣ್ಣು ತೆರೆದು ತಾ
ನೆಂದಿಗೂ ಸಾಯದಂತೆ ವರವನ್ನು ಬೇಡಿದನು. ನಾನು ಹುಟ್ಟಿದವನಿಗೆ ಸಾವು ನಿಶ್ಚಿತ
ವೆಂದು ಹೇಳಲು ಅವನು ' ಹಾಗಾದರೆ ಅಭವನ ವೀರ್ಯವನ್ನು ಹರಿಯಜಮುಂತಾದ

ದೇವತೆಗಳು ಧರಿಸಿ ಆ ವೀರ್ಯದಿಂದ ಹುಟ್ಟಿದ ಏಳುದಿನದ ಕುಮಾರನಿಂದಲ್ಲದೆ ಉಳಿದವರಿಂದ ಸಾಯದಂತೆ ವರವನ್ನು ಕೊಡು ' ಎಂದೆನ್ನಲಾಗಿ ನಾನು ಅದರಂತೆ ಅವನಿಗೆ ವರವನ್ನು ಕೊಟ್ಟೆನು. ಈ ಕಾರಣದಿಂದ ಅವನ ಕೂಡ ಕಾದಾಡಿ ಕೊಲ್ಲಹೋದರೆ ಅವನು ಸಾಯಲಾರನು. ಹೇಮಕೂಟಪರ್ವತದಲ್ಲಿ ಶಂಕರನು ತಪಮಾಡುತ್ತಿರುವನು. ಗಿರಿಜೆಯು ಆತನ ಸೇವೆಮಾಡುತ್ತಿರುವಳು. ಅವರಿಬ್ಬರೂ ಒಂದಾಗದ ಹೊರತು ನಮ್ಮ ಕಾರ್ಯವಾಗಲಾರದು. ವಿಷ್ಣುವನ್ನು ವಿಚಾರಿಸೋಣ " ಎಂದು ದೇವತೆಗಳನ್ನು ಕೂಡಿಕೊಂಡು ವಿಷ್ಣುವಿನೆಡೆಗೆ ಬರಲಾಗಿ ಅವನು ಬ್ರಹ್ಮನನ್ನು ಬಂದ ಕಾರಣವನ್ನು ಕೇಳಿದನು. ಅದಕ್ಕೆ ಬ್ರಹ್ಮನು ಆ ವೃತ್ತಾಂತವನ್ನು ಹೇಳಿ ಈಶ್ವರನ ತಪವನ್ನು ಕೆಡಿಸುವ ಉಪಾಯವನ್ನು ಕಾಣಬೇಕೆಂದು ಹೇಳಲು, ಈ ಕಾರ್ಯ ಪ್ರಕಾಮನ ಹೊರತು ಇತರರಿಂದಾಗದೆಂದು ಎಲ್ಲ ದೇವತೆಗಳು ನಿರ್ಧರಿಸಿ ಪುಷ್ಪಾಸ್ತ್ರನನ್ನು ಕರೆಯಿಸಿದರು. ಅವನು ತನ್ನನ್ನು ಕರೆಯಿಸಿದ ಕಾರಣವನ್ನು ಕೇಳಲಾಗಿ ಅವರು ಅವನಿಗೆ ಹರನ ತಪವನ್ನು ಕೆಡಿಸಿ ಅವನನ್ನು ಪಾರ್ವತಿಯೊಳು ಒಂದಾಗಿಸೆಂದು ಹೇಳಿದರು (೩೬-೪೦). ಆ ಮಾತು ಕಿವಿಯಲ್ಲಿ ತೀಕ್ಷ್ಣಾಯುಧವು ಚುಚ್ಚಿದಂತಾಗಲು, ಕಾಮನು ಭೀತಿಯಿಂದ " ಶಂಭುವನ್ನು ಕೆಣಕಿದರೆ ಅವನ ನಯನಾಗ್ನಿಯಿಂದ ಸುಡದೆ ಹೋಗುವೆನೆ? ಇಂಥ ಮಾತನ್ನು ನೀವು ನನಗೆ ಹೇಳಬಹುದೆ? " ಎನ್ನಲಾಗಿ, " ಈ ದೇವಸಂತತಿಗೆ ನಿನ್ನ ಶರೀರವನ್ನು ಅರ್ಪಿಸಲು ನೀನು ಮಾಡಿದ್ದು ಸಫಲವಾಗುವುದೆ " ಎಂದು ವಿಷ್ಣುವು ಅವನನ್ನು ಒಡಂಬಡಿಸಿ ಕಳುಹಿದನು (೪೧).

೩೫ ಕಾಮದಹನಲೀಲೆಯ ಸಂಧಿ

ಮನ್ಮಥನು ತಂದೆಯ ಅಪ್ಪಣೆಯನ್ನು ಪಡೆದು ಹೊರಟು ಮಂದಮಾರುತನನ್ನು ಸಮೀಪಕ್ಕೆ ಕರೆದು ಚೈತ್ರನಿಗೆ ಸಕಲ ಬಲವನ್ನು ಕೂಡಿಕೊಂಡು ಬರಹೇಳೆನ್ನಲು. ಮಾರುತನು ಚೈತ್ರನಿಗೆ ಇದನ್ನು ಹೇಳಲು, ಅವನು ಉತ್ಸವದಿಂದ ಬಂದು ಕಾಮ್ಯನ್ನಿತ್ತು ಸೇನಾಸಮುದ್ರವು ಸಿದ್ಧವಿದೆಯೆಂದು ಬಿನ್ನವಿಸಿದನು (೧-೪). ಅದನ್ನು ನೋಡಿ ಮನ್ಮಥನು ಚಿಗುರಿದ ಮಾಮರಗಳನೆಗಳ, ಗಿಳಿಗಳ ಕುದುರೆಗಳ, ರಥಾಂಗಗಳ ರಥಗಳ, ಕಾಂತಾಜನದ ಕಾಲಾಳುಗಳ ಚತುರಂಗಬಲವನ್ನೂ ಚಂದ್ರನೆಂಬ ಮಂತ್ರಿಯನ್ನೂ ವಸಂತನೆಂಬ ದಳವಾಯಿಯನ್ನೂ ಕೂಡಿಕೊಂಡು ಭ್ರಮರ ಸಮೂಹದ ಝೇಂಕಾರದ ಭೇರಿಯನ್ನು ಹೊಡೆಸುತ್ತ ಕೋಕಿಲರವದ ಕಾಳೆಯನ್ನು ಊದಿಸುತ್ತ ಚಾತಕಿಗಳ ಸ್ತುತಿಪಾಠವನ್ನು ಕೇಳುತ್ತ ರತಿಯೊಡನೆ ಹೂದೇರನೇರಿ

ಇಂದುಧರನಿರುವ ಹೇಮಕೂಟಾಚಲಕ್ಕೆ ಹೊರಟನು (೫-೧೧). ಮುಂದಮಾರುತನು ಮುಂಭಾಗದಲ್ಲಿ ನಡೆದನು. ವಸಂತನು ಸೇನೆಯನ್ನು ಸಾಲಾಗಿ ನಡೆಯಿಸಿದನು. ಚಂದ್ರನು ಕಾಳೆಗದ ಸಕಲ ಭಾರವನ್ನು ವಹಿಸಿದನು. ಅಖಿಳ ಖಗರವದ ವಾದ್ಯಧ್ವನಿಯು ತುಂಬಿಕೊಂಡಿತು. ಧೂಳಿಯು ಬ್ರಹ್ಮಾಂಡವನ್ನು ಮುಸುಕಿತು (೧೨-೧೩). ಈ ಮದನದಾಳಿಯನ್ನು ಕಂಡು ಕೆಲವು ತಾಪಸರು ನೆಲದೊಳಗೆ ಹೂಳಿದ್ದ ತಮ್ಮ ಮೈಗಳನ್ನು ಕೀಳಲಾರದೆ ಕಂಗೆಟ್ಟು ಬಾಯ್ಬಿಟ್ಟು ಅತಿಶಯವಾಗಿ ಮರುಗಿದರು. ಕೆಲವರು ಗದ್ಗದಿಪಕಂಠದಿಂದ ಶಿವಸ್ಮರಣೆಯನ್ನೂ ದಂಡಕಮಂಡಲುಗಳನ್ನೂ ಮರೆದು ಓಡಿಹೋದರು. ಯತಿಗಳಿಂದ ಎರಗಿಸಿಕೊಳ್ಳುತ್ತ ವ್ರತಿಗಳಿಂದ ಕಾಣಿಕೆಗಳನ್ನು ತೆಗೆದುಕೊಳ್ಳುತ್ತ ಯೋಗೀಶ್ವರರ ಬುದ್ಧಿಭ್ರಂಶಮಾಡುತ್ತ ಯಮಿಗಳನ್ನು ನಾಶಪಡಿಸುತ್ತ ಶ್ರುತಿಸುಮಾರ್ಗಿಗಳ ಸರ್ವಸ್ವವನ್ನು ಹರಣಮಾಡುತ್ತ ಜಿತೇಂದ್ರಿಯರನ್ನು ಸ್ತ್ರೀಯರೊಳು ಸೇರಿಪುತ್ತ ಅಂಗಭವಚಕ್ರವರ್ತಿಯು ಈಶ್ವರನ ಮೇಲೆ ಸಾಗಲು ಪಂಪಾಕ್ಷೇತ್ರಕ್ಕೆ ಬಂದನು (೧೪-೧೭).

ಆಗ ಪಟ್ಟದಾನೆಯು ಮುಗ್ಗರಿಸಿತು. ನರಿಗಳು ಅಡ್ಡಗಟ್ಟಿ ಒದರಿದುವು. ಮೊಲವು ಕೈಗೆ ಸಿಗದೆ ಸೈನಿಕರ ನಟ್ಟನಡುವೆ ಅಡ್ಡ ಹಾಯ್ದು ಹೋಯಿತು. ಆನೆಕುದುರೆಗಳ ಕಣ್ಣೀರು ಉದುರಿದುವು. ತೇರಿಗೆ ಕಟ್ಟಿದ ಕುದುರೆಗಳು ನೊಗವನ್ನು ಚೆಲ್ಲಿಕೊಟ್ಟು ದಿಕ್ಕಾಪಾಲಾದುವು. ಈ ರೀತಿ ಕಾಮನ ದಂಡಿನಲ್ಲಿ ಉಂಟಾದ ಅಪಶಕುನಗಳನ್ನು ನೋಡಿ ಚೈತ್ರನು "ಅಪಜಯವು ಬಾರದಿರದು, ತಿರುಗು" ಎನ್ನಲು, ಕಾಮನು "ದೇವತೆಗಳಿಗೆ ನಂಬುಗೆಯಿತ್ತು ಬಂದ ಬಳಿಕ ಆದದ್ದು ಆಗಲಿ" ಎಂದು ಮುಂದೆ ಸಾಗಿ ಹೇಮಕೂಟಾಚಲದ್ವಾರದಲ್ಲಿರ್ದ ನಂದೀಶನನ್ನು ಕಂಡು ಶಂಕರನೆಡೆಗೆ ಪೋಗಲಂಜಿ ಅಧಿಕ ಚಿಂತಾಕುಲನಾದನು. ಅಷ್ಟರಲ್ಲಿ ಪಾರ್ವತಿಯು ಹೂಗಳನ್ನು ತಕ್ಕೊಂಡು ಸಖಿಯರೊಡನೆ ಅಲ್ಲಿಗೆ ಬಂದಳು. ಕಾಮನು ಆಕೆಗೆ ನಮಸ್ಕಾರಮಾಡಲು, ನೀನಾರೆಂದು ಆಕೆಯು ಕೇಳಿದಳು. "ನಾನು ಪುಷ್ಪಶರನು. ಅಭವನನ್ನೂ ನಿಮ್ಮನ್ನೂ ಒಂದುಮಾಡಬೇಕೆಂದು ದೇವತೆಗಳು ಹೇಳಲು ಆ ಕಾರ್ಯಕ್ಕೆ ಬಂದೆನು. ನಂದಿಯನ್ನು ನೋಡಿ ಒಳಗೆ ಹೋಗಲು ಅಂಜಿದೆನು" ಎಂದೆನ್ನಲಾಗಿ, ಆಕೆಯು "ಮದನ, ನನ್ನ ಪುಷ್ಪಕದ ಮರೆಯಾಗಿ ಬಂದು ನೀನು ದೇವತೆಗಳಿಗೆ ಕೊಟ್ಟ ವಚನವನ್ನು ಸಲಿಸು. ಪನ್ನಗಾಭರಣನಿಂದ ನಿನಗೆ ಅಪಾಯವಾಗುವುದೆಂದು ಅಂಜಬೇಡ. ನನ್ನನ್ನು ನಂಬು" ಎಂದು ಹೇಳಿ ಕಾಮನನ್ನು ಈಶ್ವರನೆಡೆಗೆ ಕರೆತಂದಳು (೧೮-೨೧). ಕಾಮನು ಪಾರ್ವತಿಯ ಮರೆಗೆ ನಿಂತು ಉನ್ಮದನ ಮುಂತಾದ ಪಂಚಬಾಣಗಳಿಂದ ಕ್ರಮವಾಗಿ ಶಿವನನ್ನು ಹೊಡೆಯಲು ಅವು ಅವನಿಗೆ ತಾಗಲಂಜಿ ಹಿಂದಿರುಗಿದುವು. ಕಾಮನು ಧೈರ್ಯವನ್ನು ತಾಳಿ ಆ ಮೇಲೆ ಐದೂ ಬಾಣಗಳಿಂದ ಒಂದೇ

ಬಾರಿ ಎಸೆಯಲು ಅವು ಶಿವನ ಶರೀರಕ್ಕೆ ತಾಗಿ ಅವನಲ್ಲಿ ಅರಿವನ್ನುಂಟುಮಾಡಲಾಗಿ, ಅವನು ಎಚ್ಚತ್ತು ಅತಿ ಕೋಪದಿಂದ ಮದನನನ್ನು ಈಕ್ಷಿಸಿದನು. ಕೂಡಲೇ ಮದನನ ಶರೀರವು ಸುಟ್ಟು ಭಸ್ಮವಾಯಿತು. ಹರನು ಆ ಭಸ್ಮವನ್ನು ತನ್ನ ಸರ್ವಾಂಗಕ್ಕೆ ಲೇಪಿಸಿ ಪಾರ್ವತಿಯನ್ನು ನೋಡಿ ನುಡಿಸದೆ ನಿರಾಕಾರವನ್ನು ಹೊಂದಿದನು. ರತಿಯು ಒಮ್ಮಿಂದೊಮ್ಮೆ ಅಲ್ಲಿಗೆ ಬಂದು ಬಹಳ ಶೋಕಾರ್ತೆಯಾಗಿ ಬಡಬಡಕೊಂಡು ಪರಿಪರಿಯಾಗಿ ಹಂಬಲಿಸಹತ್ತಿದಳು(೨೨-೨೯). ಆಕೆಯ ಶೋಕವನ್ನು ನೋಡಿ ಅಲ್ಲಿಯ ಪಕ್ಷಿಮೃಗಸಮೂಹವು ಕಣ್ಣೀರು ತುಂಬಿ ಆಹಾರದ ಆಶೆಯನ್ನು ಬಿಟ್ಟುನಿಂತುವು, ಗಿಡಗಳು ಬಾಡಿದುವು, ಕಮಲಗಳು ಕೊರಗಿದುವು (೩೦). ರತಿಯ ಮರುಗನ್ನು ಗಿರಿಜಾತೆಯು ನೋಡಿ ಕಡುನೊಂದು ‘‘ಮಹಾದೇವನನ್ನು ಕುರಿತು ತಪಸ್ಸುಮಾಡಿ ಅವನನ್ನು ಮೆಚ್ಚಿಸಿ ನಿನ್ನ ಪತಿಯನ್ನು ತಿರುಗಿ ಕೊಡುವೆನು, ದುಃಖಮಾಡಬೇಡೆಂ” ದು ಆಕೆಯನ್ನು ಸಮಾಧಾನಪಡಿಸಿ, ಈಶ್ವರನನ್ನು ಒಲಿಸಿಕೊಳ್ಳುವ ಮಾರ್ಗವನ್ನು ಚಿಂತಿಸಿದಳು (೩೫).

೩೬ ಗಿರಿಜಾತಪಸ್ಸಿನ ಸಂಧಿ

ಸಿದ್ಧರಾಮನೇ ಕೇಳು, ಗಿರಿಜಾತೆಯು ರತಿಯನ್ನು ಸಮಾಧಾನಪಡಿಸಿ ಆ ಮೇಲೆ ತನಗೆ ಪಂಪಾಕ್ಷೇತ್ರದಲ್ಲಿ ತಪಸ್ಸು ಮಾಡಲಿಕ್ಕೆ ಯೋಗ್ಯವಾದ ಸ್ಥಳವನ್ನು ಆರಿಸಿ ಈಶ್ವರನು ತನ್ನನ್ನು ಉದಾಸೀನವಾಗಿ ಕಂಡದ್ದನ್ನು ನೆನೆನೆನೆದು ತನ್ನ ಸಖಿಯರಾದ ಜಯವಿಜಯೆಯರಿಗೆ, ‘‘ನಾನು ಶಿವನೆಡೆಗೆ ಹೋದರೆ ನೋಡಿ ನುಡಿಸದೆ ಉದಾಸೀನ ಮಾಡಿ ಹೋದನೇ? ಇರಲಿ. ತಾನೇ ನಾನಿದ್ದಲ್ಲಿಗೆ ಬರುವಂತೆ ಮಾಡುವೆನು” ಎಂದು ಧೈರ್ಯದಿಂದೆ ತನ್ನ ಹೃತ್ಕಮಲಮಧ್ಯದಲ್ಲಿ ಈಶನನ್ನು ಧ್ಯಾನಿಸತೊಡಗಿದಳು. ಆ ತಪಸ್ಸಿನ ತೇಜವು ಉಗ್ರತನದಲ್ಲಿ ಸೂರ್ಯಮಂಡಲವನ್ನು ತಿರಸ್ಕರಿಸಿತು (೧-೩). ಚಳಿಗಾಲ ಬೇಸಗೆ ಮಳೆಗಾಲಗಳಲ್ಲಿ, ಕೊಳದ ತಡಿಯಲ್ಲ ಬಂಡೆಗಲ್ಲಿನ ತುದಿಯಲ್ಲಿ ವಟಮೂಲದಾಶ್ರಯದಲ್ಲಿ, ಚಳಿ ಬಿಸಿಲು ಮಳೆಗಳಿಗೆ ಲಕ್ಷ್ಯಕೊಡದೆ ಚಂಚಲಿಸಾಗದೆ ಪಾರ್ವತಿಯು ತಪಸ್ಸನ್ನಾಚರಿಸಲು ಆಕೆಗೆ ಯೋಗಿಣಿಯೆಂಬ ಹೆಸರಾಯಿತು (೪). ಕಂದಮೂಲಫಲಗಳನ್ನೂ ತರಗೆಲೆಯನ್ನೂ ಸಹ ಒಲ್ಲದೆ ಆನಂದದಿಂದ ಶಿವನ ಧ್ಯಾನಾಮೃತವನುಂಡು ತೃಪ್ತಿಹೊಂದಿದ ಪಾರ್ವತಿಯ ಕಾಂತಿಮೀರಿದ ಮುಖಕಮಲವನ್ನು ನೋಡಿ ದೇವತೆಗಳ ಸಮೂಹವು ಆಶ್ಚರ್ಯಪಟ್ಟು ಕೊಂಡಾಡಿ ಭಕ್ತಿಯಿಂದ ನಮಿಸುತ್ತಿದ್ದಿತು (೫). ಈಶ್ವರನು ಉಮೆಯ ಉಗ್ರತ

ಪವನ್ನು ನೋಡಿ ನಿರ್ಮಲವಾದ ಮಹಾಯತಿಯ ರೂಪವನ್ನು ಧರಿಸಿ ಪರ್ಣಶಾಲೆಯ ಬಾಗಿಲಿಗೆ ಬರಲು, ಸಖಿಯರು ಅವನನ್ನು ನಮಿಸಿ ಅರ್ಘ್ಯಾಸನಗಳಿಂದ ಉಪಚರಿಸಿ ಫಲಕಂದಮೂಲಾದಿಗಳನ್ನು ಭಕ್ತಿಯಿಂದ ಅವನ ಮುಂದಿಟ್ಟು, "ಬಳಲಿದಿರಿ, ಕೈಕೊಳ್ಳುವುದು" ಎಂದು ನುಡಿಯಲು, ಕಪಟ ಯತಿಯು "ನಾನು ಇವುಗಳನ್ನು ಕೈಕೊಳ್ಳುವುದು ಇರಲಿ. ಈ ಮಾನಿನಿಯು ಏನು ಕಾರಣ ತಪವನಾಚರಿಸುವಳು, ಹೇಳಿರಿ" ಎನ್ನಲು, ಅವರು "ನೀನು ಅತಿಥಿಪೂಜೆಯನ್ನು ಹೊಂದಿ ಹೋಗು. ಈಕೆಯ ವಿಚಾರವೇಕೆ?" ಎಂದರು. ಅದಕ್ಕೆ ಅವನು "ಕೇಳಿದರೆ ಹಾನಿಯೇ? ಅಕಟ! ಯೌವನದಲ್ಲಿ ಈ ಅಡವಿಯಲ್ಲಿ ಬಿಡಿಸುವವರು ಯಾರೂ ಇಲ್ಲ" ಎನ್ನುವ ಈ ಹೊಸ ದನಿಯನ್ನು ಕೇಳಿ ಗಿರಿಸುತೆಯು ಕಣ್ತೆರೆಯಲು ಕಪಟ ಯತಿಯು ಅವಳಿಗೆ ಇಂತೆಂದನು (೬-೭). "ಚಂದನ ಲೇಪನ ಮಾಡುವ ಅಂಗಕ್ಕೆ ಭಸಿತವನ್ನು ಧರಿಸುವರೇ? ದಿವ್ಯವಸ್ತ್ರವನ್ನುಡುವ ಬಡನಡುವಿಗೆ ನಾರುಬಟ್ಟೆಯನ್ನು ಸುತ್ತುವರೇ? ಮಂದಾರಮುಖ್ಯವಾದ ಹೂಗಳನ್ನು ಮುಡಿವ ಕುರುಳುಗಳನ್ನು ಹೊಸೆದು ಜಡೆಯನ್ನು ಮಾಡುವರೇ? ರತಿಸುಖಪಡುವ ಕಾಲದಲ್ಲಿ ತಪವನ್ನು ಆಚರಿಸುವರೇ? ಯಾರನ್ನು ಒಲಿಸುವುದಕ್ಕೆ ಹೀಗೆ ಮಾಡುವೆ?" ಎನ್ನಲು, "ಆಕೆಯು ಸರ್ವಜ್ಞನಾದ ಶಂಭುವನ್ನು ಒಲಿಸುವದಕ್ಕೆ ತಪವನ್ನಾಚರಿಸುವೆನು" ಎಂದಳು. ಅದನ್ನು ಕೇಳಿ ಕಪಟ ಯತಿಯು ಗಹಗಹಿಸಿ ನಕ್ಕು "ಮನ್ಮಥಹರನೂ ಉಗ್ರನೂ ವಿಷಕಂಠನೂ ತಿರುಕನೂ ವ್ಯಾಘ್ರಚರ್ಮಾವರಣನೂ ಸದಾ ಅಮಾಂಗಲ್ಯಶೀಲನೂ ಆದಂಥವನನ್ನು ಭಜಿಸುವರೇ?" ಎನ್ನಲಾಗಿ, ಗಿರಿಜೆಯು ಕೋಪದಿಂದ "ಖೂಳ, ಛೀ ಹೋಗು" ಎಂದು ಶಾಪಕೊಡುವಷ್ಟರಲ್ಲಿ ಈಶನು ತನ್ನ ನಿಜರೂಪವನ್ನು ತೋರಿದನು (೮-೧೦).

ಪಾರ್ವತಿಯು ಅವನನ್ನು ಸ್ತುತಿಸಿ ನಮಸ್ಕರಿಸಿದಳು. ಆಕೆಗೆ ಈಶ್ವರನ ಪಾದಗಳನ್ನು ಕಂಡೊಡನೆ ಬಡವನಿಗೆ ದ್ರವ್ಯವು, ಹಸಿದವನಿಗೆ ಮೃಷ್ಟಾನ್ನಭೋಜನವು, ಹೆಳವನಿಗೆ ಕಾಲು, ಕುರುಡನಿಗೆ ಕಣ್ಣು, ಮೂಕನಿಗೆ ನುಡಿ, ನೀರಡಿಸಿದವನಿಗೆ ತಣ್ಣೀರು, ತಾಪತ್ರಯದಿಂದ ನೊಂದ ಸಂಸಾರಿಗೆ ಸದ್ಗುರುಬೋಧೆ, ರೋಗಿಗೆ ಅಮೃತವು, ಬಳಲಿಕೆ ಹೊಂದಿದವನಿಗೆ ತಂಗಾಳಿ, ನೈದಿಲವನಕ್ಕೆ ಚಂದ್ರನು ದೊರೆತಂತೆ ಆಯಿತು. (೧೧-೧೨). ಈಶನು ಆಕೆಯ ಶಿರವನ್ನೆತ್ತಿ "ಲೋಕಸನ್ನುತೆ, ನಿನ್ನ ಮನದ ಪರೀಕ್ಷೆಗಾಗಿ ನಾನು ಇಷ್ಟು ದಿವಸ ತಡೆದೆನು. ನಿಶ್ಚಯವಾಗಿ ನೀನು ನನ್ನ ಅರ್ಧಶರೀರದಲ್ಲಿ ಮನೆಮಾಡಿ ಸಕಲ ಲೋಕವನ್ನು ಪಾಲಿಸು" ಎನ್ನಲು, ಪಾರ್ವತಿಯು ಪುನಹ ಈಶನಡಿಗಳಿಗೆರಗಿ ಬಿನ್ನವಿಸಿದಳು. "ಕಾಮನು ನನ್ನ ಸಲುವಾಗಿ ತನ್ನ ಶರೀರವನ್ನು ನಿನಗೆ ಅರ್ಪಿಸಿದನು. ಅವನನ್ನು ರಕ್ಷಿಸಬೇಡವೇ? ಮೊದಲು ಅವನಿಗೆ ಹರಣವನ್ನು ಕೊಟ್ಟು ತರುವಾಯ ನನ್ನನ್ನು ರಕ್ಷಿಸಿ ವಿಷ್ಣುಮುಖ್ಯರಾದ ದೇವತೆಗ

ಳೊಡನೆ ಗಿರಿರಾಜನ ಆಲಯಕ್ಕೆ ಬಂದು ನನ್ನ ಮದುವೆಯಾಗಬೇಕು" ಎನ್ನಲು, ಶಿವನು "ಈಶ್ವರಾಜ್ಞೆಯನ್ನು ಮೀರಬಾರದೆಂಬ ವಚನವು ಸ್ಥಿರವಾಗಬೇಕು. ಆ ಜ್ವಲಿಸುವ ಅಗ್ನಿಗೆ ಆಹುತಿಯನ್ನು ಕೊಡಬೇಕಲ್ಲದೆ ಕೊಟ್ಟದ್ದನ್ನು ತಿರುಗಿ ತಕ್ಕೊಳ್ಳಬಹುದೇ? ರತಿಗೆ ಆಕೆಯ ಪತಿಯನ್ನು ಕೊಡುವೆನು. ಅವನು ವಿಶ್ವಕ್ಕೆಲ್ಲ ಮನೋಭವನಾಗಲಿ" ಹೀಗೆಂದು ರತಿಗೆ ಪತಿಯನ್ನು ಕೊಟ್ಟು ಪಾರ್ವತಿಗೆ ಆಕೆಯ ಲಗ್ನವಾಗುವೆನೆಂದು ಹೇಳಿ ಕಳುಹಿಸಿ ಕೈಲಾಸವನ್ನು ಪೊಕ್ಕನು (೧೩-೧೫).

ಆಗ ಜಯೆವಿಜಯೆ ಮೊದಲಾದ ಗೆಳತಿಯರ ಮನಕೆ ಮಹೋತ್ಸವವಾದುದು. ರತಿಯು ತನ್ನ ವಲ್ಲಭನೊಡನೆ ಬಹು ಸಂತೋಷದಿಂದ ಪಾರ್ವತಿಗೆ ನಮಿಸಿ ಹೊರಟು ಹೋದಳು. ಈ ಸುದ್ದಿಯನ್ನು ದೂತರು ಬಂದು ಗಿರಿರಾಜಮೇನೆಯರಿಗೆ ಹೇಳಲು, ಅವರು ಆ ದೂತರಿಗೆ ಕಾಣಿಕೆಯನ್ನು ಕೊಟ್ಟು ಸಂಭ್ರಮದಿಂದ ಪಾರ್ವತಿಯನ್ನು ಇದಿರ್ಗೊಂಡು ಬಿಗಿದಪ್ಪಿ ಹರ್ಷರೋಮಾಂಚನ ಹೊಂದಿದರು. "ಎಲೆ ತಾಯೆ, ತಪದಿಂದ ಈಶ್ವರನನ್ನು ಮೆಚ್ಚಿಸುವದು ಸಾಮಾನ್ಯವೇ? ನೀನು ಆಯಾಸ ಹೊಂದಿರುವಿ. ಹರಿಬ್ರಹ್ಮರಿಗೆ ಹುಡುಕಿದರೆ ಒಂದು ಬಾರಿಯಾದರೂ ಕುರುಹು ತೋರದ ಮಹಾಮಹಿಮನು ನಮ್ಮ ಮನೆಗೆ ಬರುವನು. ಶಿವ ಶಿವಾ, ನಿನ್ನ ದೆಸೆಯಿಂದ ನಾವೆಷ್ಟು ಧನ್ಯರು!" ಎನ್ನುತ್ತ ಗಿರಿರಾಜಮೇನೆಯರು ಪಾರ್ವತಿಗೆರಗಿ ತಮ್ಮರಮನೆಗೆ ಕರಕೊಂಡು ಹೋಗಿ ಮಗಳೆಂಬ ಭಾವನೆಯನ್ನು ಬಿಟ್ಟು ಪರಶಕ್ತಿಯೆಂದು ನಂಬಿ ಮಜ್ಜನದಿವ್ಯಭೋಜನಾದಿಗಳಿಂದ ಉಪಚರಿಸಿ ಬಹು ಭಯಭಕ್ತಿಯಿಂದ ಆಕೆಯ ಪಾದಕಮಲಗಳನ್ನು ಭಜಿಸುತ್ತಿದ್ದರು (೧೬-೧೯).

ಅತ್ತ ಪರಶಿವನು ಸಪ್ತರ್ಷಿಗಳನ್ನು ಕರೆದು "ನಾನು ಶೈಲೋತ್ತಮನ ಮಗಳನ್ನು ಮದುವೆಯಾಗಬೇಕು. ಅವನನ್ನು ಕೇಳಿರಿ" ಎನ್ನಲು, ಅವರು ಹರುಷಚಿತ್ತರಾಗಿ ಗಿರಿರಾಜನೆಡೆಗೆ ಬಂದು, ಈಶನಿಗೆ ನಿನ್ನ ಮಗಳನ್ನು ಬೇಡಬಂದೆವೆಂದು ನುಡಿದರು. ಅದಕ್ಕೆ ಗಿರಿರಾಜನು "ಇಂದು ನಮಗೆ ಲೇಸಾದುದು. ನಮ್ಮ ಮಗಳ ಇಷ್ಟಾರ್ಥವು ಕೈಗೂಡಿತು. ಆಕೆಯನ್ನು ಎರಡಿಲ್ಲದೆ ಈಶನಿಗೆ ಕೊಟ್ಟೆವು" ಎಂದು ಹೇಳಿ ಬಾಂಧವಸಮೂಹವನ್ನು ಕರೆಸಲು, ಆ ಋಷಿಗಳು ಗಿರಿಜೆಗೆ ಉಂಗುರವಸ್ತ್ರಗಳನ್ನೂ ನೆರೆದ ಜನರಿಗೆ ತಾಂಬೂಲವನ್ನೂ ಕೊಟ್ಟರು (೨೦-೨೩). ಗಿರಿರಾಜನು ಆ ಋಷಿಗಳನ್ನು ಕಳುಹಿಸಿ ತರುವಾಯ ವಿಶ್ವಕರ್ಮನನ್ನು ಕರೆಸಿ ತನ್ನ ಮಗಳ ಮದುವೆಯ ಸಲುವಾಗಿ ಮಂಟಪವನ್ನು ರಚಿಸೆಂದು ಹೇಳಲು, ಅವನು ಭಕ್ತಿಯಿಂದ, ಇದು ಪರಶಿವನ ಮದುವೆ. ಸಾಮಾನ್ಯವಾದುದಲ್ಲ ಎಂದು ರತ್ನಮಯ ಮಂಟಪವನ್ನು ರಚಿಸಿ ಗಿರಿರಾಜನೆಡೆಗೆ ಬಂದು ಕೈಮುಗಿದು ತಾನು ವಿರಚಿಸಿದ ಬಡಭಕ್ತಿಯನ್ನು ಬಂದು ನೋಡಬೇಕೆಂದು ಹೇಳಲು, ಗಿರಿರಾಜನು ತನುಜೆಬಂಧುವರ್ಗವನ್ನು ಕೂ

ಡಿಕೊಂಡು ಬಂದು ಮಂಟಪವನ್ನು ನೋಡಿ ವಿಶ್ವಕರ್ಮನಿಗೆ ಉಡುಗೊರೆಯನಿತ್ತು ಮನ್ನಿಸಿದನು (೨೪-೩೧). ಆ ಮೇಲೆ ಅವನು ಪಾರ್ವತಿಗೆ “ತಾಯಿ, ಈಶ್ವರನ ಸಂಗಡ ಬರುವ ದೇವತೆಗಳ ಸಮೂಹವನ್ನು ಸತ್ಕರಿಸುವುದು ಹೇಗಾದೀತು” ಎನ್ನಲು, ಆಕೆಯು ನಸುನಗುತ ಅಂಜಬೇಡೆಂದು ಹೇಳಿ ಅರಮನೆಯೊಳಗೆ ಕಲ್ಪವೃಕ್ಷ, ಕಾಮಧೇನು, ಚಿಂತಾರತ್ನ ಮುಂತಾದ ವಸ್ತುಸಮುದಾಯವು ಉಂಟಾಗಲೆಂದು ಆಜ್ಞಾಪಿಸಿದಳು (೩೨).

೩೭ ಗಿರಿಜಾಕಲ್ಯಾಣದ ಸಂಧಿ

ಎಲೈ ಸಿದ್ಧರಾಮೇಶನೇ ಕೇಳು, ಗಿರಿನಂದನೆಯ ಲೀಲೆಯಿಂದ ಹದಿನಾಲ್ಕು ಲೋಕಗಳಲ್ಲಿರುವ ಮೇಲಾದ ಕೋಟಾನುಕೋಟಿ ವಸ್ತುಗಳು ಅಲ್ಲಿ ಉಂಟಾದುವು. ಸಪ್ತಋಷಿಗಳು ಅತ್ತ ಈಶ್ವರನಿಗೆ ಹೇಳಿದ ಕೂಡಲೆ ಅವನು ಮದವಣಿಗನಾಗಿ ಗಣಜಾಲಜನಜಾಲಗಳನ್ನು ಕೂಡಿಕೊಂಡು ಹೊರಡಲನುವಾದನು. ವಿಷ್ಣು ಬ್ರಹ್ಮ ಇಂದ್ರ ಗರುಡ ಗಂಧರ್ವ ಕಿನ್ನರ ಯಕ್ಷ ಸಿದ್ಧ ವಿದ್ಯಾಧರ ಪಿಶಾಚ ಕಿಂಪುರುಷ ಮನು ಮುನಿ ವಸು ದಿಶಾಧಿಪ ದಿನಾಧಿಪ ಮುಂತಾದ ದೇವತೆಗಳ ಸಮೂಹವು, ನರಭುಜಂಗಾದಿ ಲೋಕವಾಸಿಗಳು, ಒಟ್ಟಾರೆ ಅನಂತ ಬ್ರಹ್ಮಾಂಡದ ಜನವು ಮಹೇಶ್ವರನ ವಿವಾಹವನ್ನು ನೋಡಲಿಕ್ಕೆ ಉತ್ಸಾಹದಿಂದ ಹೊರಟಿತು (೨-೩). ಎಡಬಲದಲ್ಲಿ ವೇದಗಳು ಹರನ ಬಿರುದನ್ನು ಉಗ್ಗಡಿಸುತ್ತಿರಲು, ಮೃಡನು ಮುತ್ತಿನ ಬಾಸಿಂಗವನ್ನು ಕಟ್ಟಿಕೊಂಡು ನಂದಿಯನ್ನು ಏರಿದನು. ಹರಿಯಜಾದ್ಯರು ತಮ್ಮ ತಮ್ಮ ವಾಹನಗಳನ್ನೇರಿ ಹಿಂಬಾಲಿಸಿದರು. ಈ ರೀತಿಯಾಗಿ ವಾದ್ಯಧ್ವನಿಯೊಡನೆ ಶಂಕರನು ಬರುತ್ತಿರಲು, ಅದನ್ನು ಕೇಳಿ ಹಿಮಗಿರಿರಾಜನು ಬಾಂಧವರ ಸಹಿತ ಅವನನ್ನು ಸಂಭ್ರಮದಿಂದ ಇದಿರ್ಗೊಂಡು ತನ್ನ ಪುರಕ್ಕೆ ಹೋಗಿ ಬೀಡಾರವರಮನೆಯಲ್ಲ ಇಳಿಸಿದನು. ಬಂದ ನಿಬ್ಬಣಿಗರನ್ನು ಅವರವರಿಗೆ ಯೋಗ್ಯವಾದ ಬೀಡಾರಗಳಲ್ಲಿಳಿಸಿದನು. ಈಶ್ವರನು ಹರಿ ಬ್ರಹ್ಮ ಇಂದ್ರ ಮುಂತಾದವರೊಡನೆ ಸುರಸತಿಯರ ಮಾಂಗಲ್ಯದ ವಿಲಾಸದಿಂದ ಒಡ್ಡೋಲಗದಲ್ಲಿ ಶೋಭಿಸುತ್ತಿರಲು, ಅತ್ತ ನಗರಾಜನು ಅಗಜೆಯನ್ನು ಸಿಂಗರಿಸಲಿಕ್ಕೆ ಆಕೆಯ ಕೆಳದಿಯರಿಗೆ ಸೂಚಿಸಿದನು. ಅವರು ಪಾರ್ವತಿಯೆಡೆಗೆ ಐತಂದು ಮುಗುಳ ನಗೆಯಿಂದ “ನಿನ್ನ ಪರಮ ಪುಣ್ಯದ ಫಲವು ಕೈಗೂಡಿತು” ಎನ್ನುತ್ತ ಆಕೆಯನ್ನು ಮಂಗಲಸ್ನಾನ ಮಾಡಿಸಿ ಶ್ರೇಷ್ಠವಾದ ವಸ್ತ್ರಾಲಂಕಾರಗಳಿಂದ ಸಿಂಗರಿಸಿದರು (೪-೨೫).

ಆ ಸಮಯದಲ್ಲಿ ಬೃಹಸ್ಪತಿಯು ಈಶ್ವರನ ಹತ್ತಿರ ಬಂದು "ಮುಹೂರ್ತವು ಸಮೀಪಿಸಿತು, ಬಿಜಯಂಗೈವುದು" ಎನ್ನಲಾಗಿ, ಶಂಭುವು ಹರಿಬ್ರಹ್ಮರ ಕೈಲಾಗಿನಿಂದ ಮಣಿಮಯ ಪಲ್ಲಕ್ಕಿಯಲ್ಲಿ ಕುಳಿತು ಸಕಲ ವೈಭವದಿಂದ ಬಂದು ವಿವಾಹ ಮಂಟಪದ ಮುಂದೆ ಪಲ್ಲಕ್ಕಿಯಿಂದಿಳಿದು ವೇದಿಕೆಯನ್ನು ಏರಿದನು (೨೬-೩೩). ಅವರ ಹಿಂದೆ ಅನಂತ ಶಿವಗಣಕುಲವು ರಾಜಿಸುತ್ತಿರಲು, ವಿಷ್ಣು ಬ್ರಹ್ಮೇಂದ್ರಾದಿ ದೇವತೆಗಳು ಎಡಬಲದಲ್ಲಿ ಗುಂಪಾಗಿರಲು, ರಂಭಾದಿದೇವಕಾಂತೆಯರು ಮುಂಭಾಗದಲ್ಲಿ ನರ್ತನ ಮಾಡುತ್ತಿರಲು, ನಂದಿಮಹಾಕಾಳರು ವ್ಯವಸ್ಥೆಯನ್ನು ಇಡುತ್ತಿರಲು, ಈಶ್ವರನು ಶೋಭಿಸಿದನು (೩೪). ಇತ್ತ ಪಾರ್ವತಿಯನ್ನು ಬಂಗಾರದ ಪಲ್ಲಕ್ಕಿಯಲ್ಲಿ ಕೂಡ್ರಿಸಿ ಅತಿ ಸಂಭ್ರಮದಿಂದ ವಿವಾಹಮಂಟಪದೆಡೆಗೆ ಕರೆತರಲು ಆಕೆಯು ಸಖಿಯರ ಕೈಲಾಗಿನಿಂದ ಪಲ್ಲಕ್ಕಿಯಿಂದ ಇಳಿದು ನವರತ್ನಖಚಿತ ವೇದಿಕೆಯನ್ನು ಏರಲಾಗಿ ಸಕಲ ಜನಸಮೂಹವು ಹರ್ಷದಿಂದ ಜಯಜಯವೆಂದು ಕೈಮುಗಿಯುತ್ತಿದ್ದಿತು (೩೫-೫೫). ಸಿರಿ ಸರಸ್ವತಿ ಶಚಿ ಅಹಲ್ಯೆ ಲೋಪಾಮುದ್ರೆ ಗಾಯತ್ರಿ ಸಾವಿತ್ರಿ ಮುಂತಾದ ಸುರನರಭುಜಂಗಮಸ್ತ್ರೀಯರು ಸಂತೋಷದಿಂದ ಶೋಭಾನವನ್ನು ಹಾಡುತ್ತಿರಲು ವರಮುಹೂರ್ತದ ಸಮಯವಾಯಿತೆಂದು ಸುರಗುರುವು ಬಿನ್ನವಿಸಿದನು. ಅದನ್ನು ಕೇಳಿ ನಸುನಗುತ ಈಶ್ವರಗಿರಿಜೆಯರು ಸೇಸೆಯನ್ನೇರಿದರು. ಆ ಮೇಲೆ ಸುರಗುರುವು ಶಿವನ ಮಂಗಳಾಷ್ಟಕವನ್ನು ಓದುತ್ತ "ಆಯುತಾಯುತವು" ಎನ್ನಲು, ಮುನಿವರರು "ಸರ್ವಾಯುತಾಯುತವು" ಎನ್ನಲು, ತೆರೆಸೀರೆಯು ಸರಿಯಿತು. ಹರಗಿರಿಜೆಯರು ಜೀರಿಗೆಬೆಲ್ಲವನ್ನು ಒಬ್ಬರ ಮೇಲೊಬ್ಬರು ಒಗೆದರು. ಅದನ್ನು ನೋಡಿ ಹರಿಬ್ರಹ್ಮೇಂದ್ರಾದಿಗಳು ಜಯಜಯಕಾರ ಮಾಡಿದರು. ವಾದ್ಯನಿರ್ಘೋಷದಿಂದ ದಿಗ್ಗಜಗಳು ಗಾಸಿಯಾದುವು. ಶಿವಶಿವೆಯರು ಒಬ್ಬರೊಬ್ಬರ ತಲೆಯ ಮೇಲೆ ಮುತ್ತಿನಕ್ಷತೆಯನ್ನು ಸೂಸಿದರು. ಗಿರಿರಾಜನು ಈಶ್ವರನ ಹತ್ತಿರ ಬಂದು ಮಗಳನ್ನು ಮುಂದಿಟ್ಟು ಧಾರೆಯನೆರೆದನು. ಆ ಮೇಲೆ ಸಮೀಪದ ಮನೆಯೊಳಗೆ ಈಶ್ವರನು ಪಾರ್ವತಿಸಹಿತ ಹಸೆಯ ಮೇಲೆ ವಿರಾಜಮಾನನಾದ ಮೇಲೆ ಹರಿಬ್ರಹ್ಮೇಂದ್ರಾದಿ ದೇವತೆಗಳು ಸೇಸೆಯನ್ನಿಟ್ಟು ಹೊರಟುಹೋದರು. ಅನಂತರದಲ್ಲಿ ಈಶ್ವರನು ಗಣಂಗಳನ್ನು ಪಂಕ್ತಿಯಲ್ಲಿ ಕೂಡಿಕೊಂಡು ಅಗಜೆಯೊಡನೆ ಭೂಮವನುಂಡನು (೫೬-೫೯). ಬಳಿಕ ನಾಲ್ಕನೆಯ ದಿವಸದ ರಾತ್ರಿಯಲ್ಲಿ ನಾಗವಲಿಯನ್ನು ಮಾಡಿದರು. ಆ ಮೇಲೆ ಹಿಮವಂತನು ಅಳಿಯನಿಗೆ ಉಡುಗೊರೆಯನ್ನು ಕೊಟ್ಟನು. ಹರಿಬ್ರಹ್ಮೇಂದ್ರ ಮುಂತಾದ ದೇವತೆಗಳು ಶಿವಶಿವೆಯರ ಮುಂದೆ ಕಾಣಿಕೆಯಿಟ್ಟು ನಮಿಸಿದರು. ಮರುದಿವಸ ನಗರಾಜನು ಬಂದ ದಿಬ್ಬಣಕ್ಕೆ ಮೃಷ್ಟಾನ್ನದ ಊಟವನ್ನು ಮಾಡಿಸಿ ಗಂಧತಾಂಬೂಲಗಳಿಂದ ತೃಪ್ತಿಪಡಿಸಿ ವಸ್ತ್ರಾಭರಣಗಳ ಉಡುಗೊರೆಯನ್ನು ಕೊಟ್ಟನು. ಆ ಮೇಲೆ

ಕೋಟಿಯೋಜನ ವಿಸ್ತಾರವಾದ ಚಚ್ಚೌಕ ಖೇಡಾಕುಳಿಯ(ತಗ್ಗ)ನ್ನು ವಸಂತೋತ್ಸವದ ಸಲುವಾಗಿ ಮಾಡಿಸಿದನು. ಅದರ ನೆಲಗಟ್ಟು ಚಂದ್ರಕಾಂತಶಿಲೆಯಿಂದ ಮತ್ತು ಸೋಪಾನ ಪಂಕ್ತಿಗಳು ಮುತ್ತು ಮಾಣಿಕ ವಜ್ರ ವೈಡೂರ್ಯ ಗೋಮೇದಿಕ ಪದ್ಮರಾಗ ಮುಂತಾದ ರತ್ನಗಳಿಂದ ರಚಿಸಲ್ಪಟ್ಟಿದ್ದುವು. ಅದರಲ್ಲಿ ಕುಂಕುಮ ಚಂದನ ಕಸ್ತೂರಿ ಇವುಗಳ ನೀರಿನ ಕೊಪ್ಪರಿಗೆಗಳನ್ನು ತುಂಬಿಟ್ಟಿದ್ದರು (೬೦-೬೩). ಈಶ್ವರನು ಪಾರ್ವತಿಸಹಿತ ಹರೀಂದ್ರಾದಿ ಜನಸಮೂಹವನ್ನು ಕೂಡಿಕೊಂಡು ವೈಭವದಿಂದ ಬಂದು ಖೇಡಾಕುಳಿಯ ಮಗ್ಗುಲಿನಲ್ಲಿರುವ ಮಂಟಪದಲ್ಲಿ ಮಣಿಖಚಿತ ಸಿಂಹಾಸನವನ್ನು ಏರಿ ಕೂಡ್ರಲು, ಪಾರ್ವತಿಯು ಜೀಕಳಿಯಿಂದ ಚಂದನದ ನೀರನ್ನು ಅವನ ಮೇಲೆ ಎಸೆದಳು. ಈಶ್ವರನು ಆಕೆಯ ಮೇಲೆ ಕಸ್ತೂರಿಯ ನೀರನ್ನ ಚಿಮ್ಮಿದನು. ಹರಿಬ್ರಹ್ಮೇಂದ್ರಾದಿಗಳ ಮನಸಿನ ಒಲವನ್ನು ತಿಳಿದು ಈಶ್ವರನು ಅವರಿಗೆ ಜಲಕೇಳಿಗೆ ನಿರೂಪವನ್ನು ಕೊಡಲಾಗಿ ಅವರೂ ಅವರ ಪತ್ನಿಯರೂ ರಂಭೆ ಊರ್ವಸಿ ತಿಲೋತ್ತಮೆ ಸುಕೇಶಿ ಮುಂತಾದ ಸುರವಾರಾಂಗನೆಯರೂ ಕೂಡಿ ಹರುಷದಿಂದ ಖೇಡಾಕುಳಿಯನ್ನು ಹೊಕ್ಕು ಜೀಕಳಿಗಳಿಂದ ಮನವಾರೆ ಜೀಕಳಿಯಾಟವನ್ನು ಆಡಿದರು (೬೪-೭೯).

ಈ ಪ್ರಕಾರ ನಾನಾ ವಿನೋದಗಳನ್ನು ಹೊಂದಿ ವಿಷ್ಣು ಮುಖ್ಯರಾದ ದೇವತೆಗಳು ತಮ್ಮ ತಮ್ಮ ಕಾಂತೆಯರನ್ನು ಕೂಡಿಕೊಂಡು ಖೇಡಾಕುಳಿಯಿಂದ ಹೊರಗೆ ಬಂದು ವಸ್ತ್ರಾನುಲೇಪನಾಭರಣಗಳನ್ನು ಧರಿಸಿ ಕರ್ಪೂರತಾಂಬೂಲಗಳನ್ನು ಸ್ವೀಕರಿಸಿ ಈಶ್ವರನ ಒಡ್ಡೋಲಗಕ್ಕೆ ಬಂದರು. ಆ ಮೇಲೆ ಈಶ್ವರನು ಗಿರಿರಾಜನ ಅರಮನೆಗೆ ಬರಲಾಗಿ ಅವನು ಮಹಾಭಕ್ತಿಯಿಂದ ಅಳಿಯನಿಗೆ ಮೇಲಾದ ವಸ್ತುಗಳ ಕಾಣಿಕೆಯನ್ನೂ ತನ್ನ ಮಗಳಿಗೆ ಬಳುವಳಿಯನ್ನೂ ಜಯೆವಿಜಯೆ ಮುಂತಾದ ಸಖೀಜಾಲವನ್ನೂ ಅಮೌಲ್ಯ ವಸ್ತ್ರಾಭರಣಗಳನ್ನೂ ಸಕಲ ಗಣವೃಂದಕ್ಕೆ ಉಡುಗೊರೆಯನ್ನೂ ಕೊಟ್ಟು ಕಳುಹಿಸಿದನು. ಕಳುಹಿಸಲಿಕ್ಕೆ ಬಂದ ಗಿರಿರಾಜಮೇನಕೆಯರಿಗೆ ಶಿವನು ಉಚಿತ ವಚನಗಳಿಂದ ತಿರುಗಿ ಹೋಗಹೇಳಲು, ಅವರು ಗಿರಿಜೆಯ ಪಾದಗಳಿಗೆ ನಮಸ್ಕರಿಸಿ “ತಾಯೆ, ನಿನ್ನನ್ನು ಹಡೆದ ಪುಣ್ಯವೃಕ್ಷದ ಫಲದಿಂದ ಈಶ್ವರನು ನಮ್ಮ ಮನೆಗೆ ಬಂದನು. ಉಳಿದ ಎಲ್ಲರನ್ನೂ ಕಂಡೆವು. ಇಂಥ ಸುಲಭತೆಯನ್ನು ಮರೆಯಬೇಡ” ಎಂದು ಕಣ್ಣೀರುತುಂಬಿ ಕಳುಹಿಸಿಕೊಂಡರು (೮೦-೮೩).

ಈಶ್ವರನು ಗಿರಿಜೆಸಹಿತ ನಂದಿಯನ್ನೂ ಹರಿಬ್ರಹ್ಮೇಂದ್ರಾದಿಗಳು ತಮ್ಮ ತಮ್ಮ ವಾಹನಗಳನ್ನೂ ಏರಿ ಸಂಭ್ರಮದಿಂದ ಕೈಲಾಸಕ್ಕೆ ಬರಲು ಈಶ್ವರನು ಸುರತರುಣಿಯರ ಮಂಗಳಾರತಿಗಳನ್ನು ನೋಡುತ್ತ ತನ್ನ ಅರಮನೆಯನ್ನು ಹೊಕ್ಕನು. ನಂದೀಶ ಮೊದಲಾದ ಸಕಲ ಗಣನಿಕರವು ಆನಂದಿಸುತ್ತಿರಲು ಅಭವನು ಆಗಜೆಸಹವಾಗಿ ರಂಜಿಸುವ

ಸಿಂಹಾಸನದ ಮೇಲೆ ಕುಳಿತು ಹರಿಬ್ರಹ್ಮ ಮೊದಲಾದವರಿಗೆ ಚೆಲುವಾದ ಉಡುಗೊರೆಗಳನ್ನಿತ್ತು ಕಳುಹಿಸಿಕೊಟ್ಟು ಪರಮಸಂತೋಷದಿಂದ ಕೈಲಾಸದಲ್ಲಿರುತ್ತಿದ್ದನು (೮೩-೮೪). ಈಶ್ವರನು ನಿಜವಾಗಿ ತನ್ನ ಶಕ್ತಿಯನ್ನೇ ಬಹಿಷ್ಕರಿಸಿ ತನ್ನ ನಿಜಸುಖವನ್ನು ಸಂಸಾರಗಳಿಗೆ ಅಭಿನ್ನವಾಗದಂತೆ ಕಾಣಿಸಿಕೊಂಡು ಸಾಮಾನ್ಯ ಜನರಂತೆ ನಾನಾ ವಿಲಾಸಗಳಿಂದ ಭೃಂಗಿಯ ನಾಟ್ಯದುನ್ನತಿಯನ್ನು ನೋಡಿ ಕರುಣಾಕಟಾಕ್ಷದಿಂದ ಅವನನ್ನು ಮನ್ನಿಸುತ್ತ ಕೈಲಾಸದರಮನೆಯಲ್ಲ ಒಪ್ಪಿದನು (೮೫).

೩೮ ಕುಮಾರೋತ್ಪತ್ತಿಯ ಸಂಧಿ

ಸಿದ್ಧರಾಮೇಶನೇ ಕೇಳು, ಕೈಲಾಸದಲ್ಲಿ ಈಶ್ವರನು ಪಾರ್ವತಿಯ ಕೂಡ ಸಂತೋಷದಿಂದ ಸುರತಕೇಳಿಯಲ್ಲಿರುತ್ತಿರಲು, ಇತ್ತ ಇಂದ್ರಾದಿ ದೇವತೆಗಳು ಬ್ರಹ್ಮನಲ್ಲಿಗೆ ಬಂದು ತಾರಕನ ಉಬ್ಬೆಯನ್ನು ಹೇಳಲು, ಬ್ರಹ್ಮನು ಅದನ್ನು ಕೇಳಿ ಚಿಂತಾತುರನಾಗಿ ದೇವತೆಗಳನ್ನು ಕೂಡಿಕೊಂಡು ಹರಿಯೆಡೆಗೆ ಬಂದು ಅಸುರನ ಉಪದ್ರವಕ್ಕೆ ಯಾವ ಉಪಾಯವನ್ನು ಕಾಣಬೇಕೆಂದು ಆಲೋಚಿಸಿದರು (೨). ಗಿರಿಜೆಯ ಗರ್ಭದಲ್ಲಿ ಪುತ್ರನು ಜನಿಸಿದರೆ ತಾರಕನಿಗಿಂತ ನೂರ್ಮಡಿ ಉಪದ್ರವವನ್ನು ಮಾಡುವನು. ಅದನ್ನು ಪರಿಹರಿಸಿ ಬೇರೊಂದುಪಾಯದಿಂದ ಈಶ್ವರನ ವೀರ್ಯದಿಂದ ಮಗನು ಹುಟ್ಟುವಂತೆ ಮಾಡಬೇಕೆಂದು ನಿರ್ಧರಿಸಿ ವಿಷ್ಣುಮುಂತಾದ ದೇವತೆಗಳು ಘನತಪವನ್ನು ಮಾಡಿದರು (೩). ಹರನು ಇದನ್ನರಿತು ಸುರರ ಕಡೆಗೆ ಬಂದು ವರವನ್ನು ಬೇಡೆನ್ನಲು ಅವರು ಕಣ್ದೆರೆದು ಶಿವನ ದಿವ್ಯಮೂರ್ತಿಯನ್ನು ಕಂಡು ಭಯಭಕ್ತಿಯಿಂದೆರಗಿ "ಗಿರಿಸುತೆಯ ಗರ್ಭದಲ್ಲಿ ಸುತನುದಿಸದೆ ನಿನ್ನ ವೀರ್ಯದಿಂದುದ್ಭವಿಸಿ ತಾರಕನ ಸಂಹಾರವಾಡುವಂತೆ ಕರುಣಿಸು" ಎನ್ನಲು, ಶಿವನು ಹಾಗೆ ಮಾಡುವೆನೆಂದು ಹೇಳಿ ಕೈಲಾಸಕ್ಕೆ ಹೋದನು (೪). ಈ ಸುದ್ದಿಯನ್ನು ಶಿವೆಯು ಕೇಳಿ ದೇವತೆಗಳಿಗೆಲ್ಲ ನಿಸ್ಸಂತಾನವಾಗಲೆಂದು ಶಪಿಸಿದಳು. ಆಕೆಯು ತನಗೆ ಸಂತಾನವಿಲ್ಲದಾಯ್ತೆಂದು ಬಹಳ ಚಿಂತಿಸುತ್ತಿರಲು ಈಶ್ವರನು ಆಕೆಯನ್ನು ಸಂತೈಸಿ ನಾನಾ ವಿನೋದಗಳಿಂದ ಆಕೆಯ ಕೂಡ ದಿವ್ಯಸಾಹಸ್ರವರುಷ ಕ್ರೀಡಿಸುತ್ತಿದ್ದನು. ಇದನ್ನು ಕಂಡು ಸುರಕುಲವು ದುಷ್ಟರಾಕ್ಷಸನು ತಮ್ಮನ್ನು ಹಿಂಡಿಸುತ್ತಿರುವುದನ್ನು ಕೇಳುವವರಿಲ್ಲೆಂದು ಚಿಂತಿಸಿ ಅಗ್ನಿಯನ್ನು ಕರೆದು ಈಶ್ವರನೆಡೆಗೆ ಹೋಗಿ ಬಿನ್ನೈಸೆಂದು ಹೇಳಿದರು. ಅವನು ಕಾಮನು ಸುಟ್ಟುಹೋದದ್ದನ್ನು ತಿಳಿದು ಭೀತಿಯಿಂದ ತಾನು ಹೋಗಲಿಕ್ಕೆ ಅಂಜುತ್ತಿರಲು (೫-೬). ಅದಕ್ಕೆ ದೇವತೆಗಳು "ಶಿವನು ತಪ್ಪಿಲ್ಲದೆ ಯಾರನ್ನೂ

ನಾಶಪಡಿಸುವವನಲ್ಲ. ದೇವತೆಗಳನ್ನು ಕರುಣೆಯಿಟ್ಟು ಕಾಯಬೇಕು" ಎಂದು ಬೇಡಿಕೊಳ್ಳಲು ಅವನು ಸರ್ವಥಾ ಒಲ್ಲೆನೆಂದನು. ಅದನ್ನು ಕೇಳಿ ದೇವತೆಗಳು "ನಿನಗಾದ ಸುಖದುಃಖವೇ ನಮಗಾಗಲಿ ಹೋಗು" ಎಂದು ಅವನಿಗೆ ನಂಬುಗೆಯನ್ನು ಕೊಟ್ಟು ಕಳುಹಿದರು. ಈಶ್ವರನು ಪಾರ್ವತಿಯ ಕೂಡ ಕೂಟದಿಂದಿರುವ ಶಯ್ಯಾಗೃಹಕ್ಕೆ ಅಗ್ನಿಯು ಪಾರಿವಾಳದ ರೂಪದಿಂದ ಬಂದು ಕಿಂಡಿಯೊಳಗಿಂದ ನೋಡಲು, ಗಿರೀಶನು ಲಜ್ಜೆಯಿಂದ ಸುರತಕೇಳಿಯನ್ನು ಬಿಟ್ಟು ಆ ಪಕ್ಷಿಯನ್ನು ಹಿಡಿತಂದು ಅದರ ಬಾಯಲ್ಲಿ ತನ್ನ ರೇತಸ್ಸನ್ನು ಬಿಟ್ಟನು (೮-೯). ಶಿವನ ವೀರ್ಯವನ್ನು ಅಗ್ನಿಯು ಧರಿಸಿ ಬರಲು ಆಗ ಸುರನಿವಹಕ್ಕೆ ಪುರುಷಗರ್ಭಗಳುಂಟಾದುವು. ಕೂಡಲೆ ಮೀಸೆಗಡ್ಡಗಳು ಉದುರಿದುವು. ಮುಖಮಂಡಲಗಳು ಬೆಳ್ಳಗಾದುವು. ಈ ರೀತಿ ದಿವ್ಯಸಹಸ್ರವರ್ಷಗಳು ಹೋದ ಮೇಲೆ ಅವರು ಅಗ್ನಿಯನ್ನು ಕರೆದು ಈ ಪುರುಷಗರ್ಭಗಳು ಹೋಗುವ ಪರಿಯನ್ನು ಕೇಳಲು, ಅವನು ಶಂಭುವನ್ನು ಕೇಳುವೆನೆಂದು ಘನತಪವನ್ನು ಮಾಡಿದನು. ಪರಶಿವನು ಮೆಚ್ಚಿ ಅವನಿಗೆ "ಮೇರುಪರ್ವತದ ಸಮೀಪದಲ್ಲಿರುವ ಶರವಣನದಿಯಲ್ಲಿ ಆ ರೇತಸ್ಸನ್ನು ಇರಿಸೆಂ"ದು ಹೇಳಿ ನಿರವಯನಾದನು (೧೦-೧೧). ಅಗ್ನಿಯು ಹಾಗೆ ಮಾಡಲು ದೇವತೆಗಳ ಗರ್ಭಗಳು ಅಡಗಿದುವು. ಆ ಗಂಗೆಯೊಳಗಿದ್ದ ರೇತಸ್ಸು ಕುದಿಯುತ್ತ ಹೊರಸೂಸಿ ಅದರ ದಂಡೆಯ ಮೇಲೆ ಉಜ್ವಲಿಸುತ್ತಿರ್ದುದು. ಆ ನದೀತಟಕ್ಕೆ ಬಂದ ಷಟ್ಕೃತ್ತಿಕಾಸ್ತ್ರೀಯರು ಆ ಮಹಾಜ್ವಾಲೆಯು ಎತ್ತಣದೆಂದು ಸಮೀಪಕ್ಕೆ ಬಂದು ನೋಡಲು, ಅದು ಅವರ ಗರ್ಭಗಳನ್ನು ಭೇದಿಸಿ ಬಲಿಯಲು, ಆ ಕ್ಷಣವೇ ಅವರು ಶಿಶುಗಳನ್ನು ಪಡೆದು ಅಲ್ಲಿರಿಸಿ ವೇಗದಿಂದ ಹೋದರು (೧೨-೧೩).

ಆ ಸಮಯದಲ್ಲಿ ಶಂಭುವು ಗಿರಿಜೆಗೆ "ನಿನಗೆ ಮಕ್ಕಳಾಗಿರುವರು, ನೋಡೋಣ ನಡೆ" ಎಂದು ಆಕೆಯನ್ನೊಡಗೊಂಡು ಬಂದು ಚೀರುತಿಹ ಬಾಲರನ್ನು ಕಂಡನು. ಅಗಜಾತೆಯು ಅವರನ್ನು ತೆಗೆದುಕೊಂಡು ಅಪ್ಪಿಕೊಳ್ಳಲು, ಅದರಿಂದ ಆ ಶಿಶುಗಳ ತನುಗಳು ಕೂಡಿ ಒಂದಾಗಿ ಅದಕ್ಕೆ ಆರು ಮುಖಗಳು ಉಂಟಾದುವು. ಇದನ್ನು ನೋಡಿ ದೇವತೆಗಳಿಗೆ ಪ್ರಾಣವು ಬಂದಂತಾಗಿ ಹರುಷದಿಂದ ಪುಷ್ಪವೃಷ್ಟಿಯನ್ನು ಮಾಡಿದರು. ಶಿವಪಾರ್ವತಿಯರು ಕುಮಾರನನ್ನು ತೆಗದುಕೊಂಡು ಕೈಲಾಸವನ್ನು ಹೊಕ್ಕರು (೧೪-೧೬).

ಅನಂತರ ಹರಿಬ್ರಹ್ಮರು ದೇವತೆಗಳೊಡನೆ ಅಲ್ಲಿಗೆ ಬಂದು ಶಿವನ ಮುಂದೆ ಕೈಮುಗಿದು ನಿಂತು "ಕಾಮಾಂತಕನೇ, ತಾರಕಾಸುರನಿಂದ ಅನಂತಕಾಲ ನೊಂದೆವು. ಇನ್ನಾದರೂ ಕಾಯಬೇಕು" ಎಂದು ಮೊರೆಯಿಟ್ಟರು. ಶಿವನು ಅವರಿಗೆ ಅಭಯವಿತ್ತು ಕುಮಾರನಿಗೆ ಯುವರಾಜ ಪಟ್ಟವನ್ನು ಕಟ್ಟಿ ಸುರಜಾಲವನ್ನು ಕರೆದು ಅವರಿ

ಗೆ ಕಾಣಿಕೆಯನ್ನಿಟ್ಟು ನಮಿಸೆಂದು ಹೇಳಿದನು. ಅವರು ಹಾಗೆ ಮಾಡಿ ಕುವರನನ್ನು ಕೊಂಡಾಡಿ ತಮ್ಮನ್ನು ತಾರಕನಿಂದ ರಕ್ಷಿಸಬೇಕೆಂದು ಬಿನ್ನವಿಸಲು, ಷಣ್ಮುಖನು ಶಿವನ ಆಜ್ಞೆಯನ್ನು ಹೊಂದಿ ಸಂಗರದ ಸನ್ನಾಹದಿಂದ ಸಮಸ್ತ ಸುರಜಾಲಸುರಗಣ ಸಹಿತ ನಡೆಗೊಂಡನು (೧೭-೨೪).

ಇದನ್ನು ಕಂಡು ಒಬ್ಬ ಚರನು “ದೇವತೆಗಳು ಷಣ್ಮುಖನಿಗೆ ಸೇನಾಧಿಪತ್ಯವನ್ನು ಕೊಟ್ಟು ಕಾಳೆಗಕ್ಕೆ ಬಂದರು” ಎಂದು ದಾನವೇಶನಿಗೆ ಹೇಳಲು, ಅವನು ಕಣ್ಣು ಕೆಂಪಗೆ ಮಾಡಿ ಬಾಯಿಂದ ಉರಿಯನ್ನು ಸೂಸುತ್ತ ಕುಡಿಮೀಸೆಯನ್ನು ಕುಣಿದಾಡಿಸುತ್ತ ಕತ್ತಿಯನ್ನು ಜಳಪಿಸುತ್ತ “ಸುರರಿಗೆ ಯುದ್ಧಕ್ಕೆ ಬರಹೇಳು” ಎಂದೆನ್ನುತ್ತ ತನ್ನ ಒಡಹುಟ್ಟಿದವರಾದ ಶತಮಾಯ ಮುಂತಾದವರನ್ನು ಕೂಡಿಕೊಂಡು ವಾದ್ಯಗಳ ರವದೊಡನೆ ಆಹವಕೆ ನಡೆತಂದನು (೨೫-೩೧). ಅವನು ತನ್ನ ಸೇನೆಯನ್ನು ಕಮಲದಾಕಾರದಿಂದ ರಚಿಸಿ ಒಂದೊಂದು ಕಡೆ ಒಬ್ಬೊಬ್ಬ ರಣಭಟನನ್ನು ಇರಿಸಿ ಕಾಳೆಗಕೆ ಆರಂಭಿಸಿದನು. ಎರಡೂ ಕಡೆಯ ದಂಡಿನವರು ಶರ ಶಕ್ತಿ ಶಲ್ಲೆಹ ಕೃಪಾಣ ಚಕ್ರ ಪರಶು ಮುಸಲ ಗದೆ ಮೊದಲಾದ ಆಯುಧಗಳಿಂದ ಕಾದಾಡಿದರು. ಚೂಣಿಗಳು ಮಡಿದು ರಣಾಂಗಣವು ತಲೆಪರಟಿ ಕರುಳ ನರ ಮುಂಡ ರುಂಡ ಮಿದುಳು ರಕ್ತಗಳಿಂದ ತುಂಬಿಹೋಯಿತು (೩೨-೪೦).

೩೯ ಹರಿಮಹಾನಾಭಯುದ್ಧದ ಸಂಧಿ

ಸಿದ್ಧರಾಮೇಶನೇ ಕೇಳು. ಆ ಮೇಲೆ ವಜ್ರನಾಭನು ಅಗ್ಗಳೆಯ ವೀರರನ್ನು ಕೂಡಿಕೊಂಡು ಇಂದ್ರನ ಮತ್ತು ಅವನ ಸುತ್ತಲು ಬಳಸಿರುವ ಸುರಬಲದ ಕೂಡ ಕಾದಲಾರಂಭಿಸಿದನು. ಸುರಸೈನ್ಯವು “ಶಿವನ ಸುಕುಮಾರನು ಬೆನ್ನೊಳಿರ್ಪನು. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಬೇಡಿರಿ” ಎಂದು ಬೊಬ್ಬಿರಿದು ಕಾದಿತು. ವಜ್ರನಾಭನು ಬಾಣಗಳ ಮಳೆಗರೆದು ಸುರಭಟರ ಅಸುಗಳನ್ನು ಹೀರಿದನು (೨-೭). ಇದನ್ನು ನೋಡಿ ಹರಿಯು ವಜ್ರನಾಭನನ್ನು ಕೆಣಕಲು ಇಬ್ಬರೂ ದಿವ್ಯಾಸ್ತ್ರ ಮಂತ್ರಾಸ್ತ್ರಗಳಿಂದ ಹೊಡೆದಾಡಿದರು. ಅವರ ಕಾದಾಟವು ಸಾಟಿಯಾಯಿತು. ಬಳಿಕ ಹರಿಯು ಆರ್ಭಟಿಸಿ ಖಗಪತಿಯ ಮೇಲಿ ವೈಷ್ಣವಾಸ್ತ್ರವನ್ನು ಬಿಡಲು, ದಾನವನ ತಲೆಯು ಆಗಸಕೆ ನೆಗೆಯಿತು. ಮಹಾನಾಭನ ಚತುರ್ಬಲವು ಹರಿಯ ಸಮ್ಮುಖದಲ್ಲಿ ಆರ್ದು ಕವಿದು ಬಾಣಗಳ ಮಳೆಗರೆಯಿತು. ಕಮಲಾಂಬಕನು ಮುಂಬರಿವ ಖಳಸೇನೆಯನ್ನು ಕತ್ತರಿಸಿದನು. ಮಹಾನಾಭನು ಸುರಬಲವನ್ನು ಬೆನ್ನಟ್ಟಲು

ಅವರು ಕೆಟ್ಟೆವೆಂದು ಓಡಿ ಹರಿಯ ಬೆನ್ನಹಿಂದೆ ಅಡಗಿದರು. ಇದನ್ನು ಕಂಡು ಗುಹನು ಹನ್ನೆರಡು ಕಂಗಳಿಂದ ಕಿಡಿಯನ್ನು ಸುರಿಸುತ್ತ ಹರೀಂದ್ರಾದಿಗಳಿಗೆ ಸಂಜುಗೆಯಿತ್ತು ಅಸುರಸೇನೆಯನ್ನು ಚೆಲ್ಲಬಡಿದು ತೀಕ್ಷ್ಣವಾದ ಎರಡು ಬಾಣಗಳಿಂದ ಮಹಾನಾಭನನ್ನು ಹೊಡೆಯಲು ಅವನ ತಲೆಯು ಚಿಗಿದುಹೋಯಿತು (೮-೨೧). ಮಹಾನಾಭನ ಆಪ್ತರು ತಮ್ಮ ಸೇನೆಸಹಿತ ಮುಂದೆ ಬರಲು ಕುಮಾರನು ಅವರನ್ನು ಸದೆಬಡಿಯುತ್ತ ಖಳಸೇನೆಯೊಳಗೆ ಕೋಲಾಹಳವನ್ನುಂಟುಮಾಡಿದನು. ಇದನ್ನು ಕಂಡು ಗಜಶಿರ, ಸ್ವರ್ಭಾನು, ಶಬಲ, ವಾಮನ ಮೊದಲಾದ ರಜನೀಚರರು ಸರ್ವಸನ್ನಾಹದಿಂದ ಕುಮಾರನನ್ನು ಮೂದಲಿಸುತ್ತ ಮುತ್ತಿದರು. ಗುಹನು ಅವರನ್ನೆಲ್ಲ ಬಾಣಪಂಜರದೊಳಗೆ ಮುಚ್ಚಿ ಘೋಳಿಡಿಸಲಾಗಿ ಅಸುರನಾಯಕರೆಲ್ಲ ಮಡಿದರು. ಆಮೇಲೆ ದಿವಿಜಸೇನೆಯು ತಾರಕನನ್ನು ಯುದ್ಧಕ್ಕೆ ಕರೆಯಲು ಅವನು ಕಂಗಳಿಂದ ಕಿಡಿಯನ್ನುಗುಳುತ್ತ ಕೋಟಿಸಿಡಿಲು ಒಮ್ಮೆಯೇ ಮೊಳಗಿದಂತೆ ಬೊಬ್ಬಿರಿದು ಮುರಿದೋಡುವ ತನ್ನ ಬಲಕ್ಕೆ ಅಭಯವನ್ನು ಕೊಟ್ಟು ಮುಂಬರಿದನು. ಅವನ ಭಯಂಕರಾಕಾರವನ್ನು ಕಂಡು ಸುರರೆಲ್ಲ ಓಡಿಹೋದರು (೨೨-೩೬). ಇದನ್ನು ಕಂಡು ಷಡಾನನನು ಕಾಲಮೇಘದ ಸಿಡಿಲಂತೆ ಆರ್ಭಟಿಸಿ ಧನುಸ್ಸನ್ನು ಮಿಡಿಯಲು ಭೂಮಿಯು ಬೆದರಿತು, ಅಂಬುಧಿಯು ಅಲ್ಲೋಲಕಲ್ಲೋಲವಾಯಿತು. ತಾರಕನು ಬೇಸಗೆಯ ಮಧ್ಯಾಹ್ನದ ಸೂರ್ಯನಂತೆ ಪ್ರಖರನಾದ ಕುಮಾರನನ್ನು ಕಂಡು ಇವನು ತನ್ನ ಪ್ರಾಣವನ್ನು ತೆಗೆದುಕೊಳ್ಳದೆ ಬಿಡನೆಂದು ನಿರ್ಧರಿಸಿ ಮಧುರವಚನಗಳಿಂದ ಅವನನ್ನು ಮಾತಾಡಿಸಿದನು (೩೭-೩೯).

೪೦ ತಾರಕಾಸುರಸಂಹಾರಲೀಲೆಯ ಸಂಧಿ

“ಎಲೆ ಬಾಲ, ನೀನು ಸಾಮಾನ್ಯನಾದ ಬಾಲನಲ್ಲ. ನಿನ್ನ ಹಡೆದ ಜನನಿಯದಾರೊ? ಇನ್ನೂ ತಾಯಿಯ ಮೊಲೆಹಾಲನ್ನುಂಡು ಆಕೆಯ ಮಗ್ಗುಲಲ್ಲಿ ಮಲಗಿರಬೇಕಾದ ದಿವಸದಲ್ಲ ಬಂದು ಗೋಪಾಲ ಮುಂತಾದವರ ಬಲೆಗೆ ಸಿಕ್ಕು ಕೆಡಬೇಡ. ನಾನು ನಿನ್ನನ್ನು ರಕ್ಷಣೆಗೈವೆನು, ಹೋಗು” ಎಂದು ತಾರಕನು ನುಡಿಯಲು ಅದಕ್ಕೆ ಗುಹನು ನಗುತ್ತ “ನಾನು ಬಾಲನಾದರೇನಾಯಿತು? ಕತ್ತಲೆಗೆ ಬಾಲಾರ್ಕನಂಜುವನೆ? ವನದ ಮದ್ದಾನೆಯ ಭೀಕರತೆಗೆ ಸಿಂಹದ ಮರಿಯು ಓಡುವುದೆ? ಪರ್ವತಕ್ಕೆ ವಜ್ರವು ಬಲಗುಂದುವುದೆ? ಮರುಳೆ, ನೀನು ಮೇಲನರಿಯದೆ ಮಾತಾಡುವರೆ? ನಿನ್ನಲ್ಲಿ ರಕ್ಷಿಸುವ ಗುಣವೇಕೆ?” ಎನ್ನುತ್ತ ತಾರಕನನ್ನು ಬಾಣಜಾಲದಿಂದ

ಕಸಿದನು (೩-೬). ಅವರು ಒಬ್ಬರನ್ನೊಬ್ಬರು ಮೂದಲಿಸುತ್ತ ಪಾವಕಾಸ್ತ್ರ, ವಡಬಾಸ್ತ್ರ, ಪರ್ವತಾಸ್ತ್ರ, ನಿಶಾಸ್ತ್ರ, ಉರಗಾಸ್ತ್ರ, ಬ್ರಹ್ಮಾಸ್ತ್ರ ಮುಂತಾದುವುಗಳನ್ನು ಖಂಡಿಸುವ ವರುಣಾಸ್ತ್ರ, ವಜ್ರಾಸ್ತ್ರ, ತರಣ್ಯಸ್ತ್ರ, ಗರುಡಾಸ್ತ್ರ, ರುದ್ರಾಸ್ತ್ರ ಮೊದಲಾದುವುಗಳನೆಸೆದು ಕಾಳೆಗವಾಡಿದರು (೪-೧೯). ಆಮೇಲೆ ತಾರಕನು ದಿವ್ಯಶಕ್ತಿಯನ್ನು ಸೆಳೆಯಲು ಗುಹನು ಅದನ್ನು ಹಿಡಿದು ಮರಳಿ ಬಿಡಲಾಗಿ ಅದು ರಾಕ್ಷಸನ ಎದೆಯನ್ನು ತಿವಿದು ಅವನನ್ನು ರಣಾಂಗಣದಲ್ಲಿ ಕೆಡವಿತು. ಇದನ್ನು ಕಂಡು ದೈತ್ಯವೀರರು ನಾ ಮುಂದೆ ತಾ ಮುಂದೆಂದು ಕೋಲಾಹಲದಿಂದ ಷಡಾನನನ ಮೇಲೆ ಬಾಣಗಳ ಮಳೆಗರೆದರು (೨೦-೨೨). ಇತ್ತ ತಾರಕನು ಮೂರ್ಛೆ ತಿಳಿದೆದ್ದು ತನ್ನೆದೆಯಲ್ಲಿ ನೆಟ್ಟ ಶಕ್ತಿಯನ್ನು ಕಿತ್ತು ಮನದಲ್ಲಿ ಚಿಂತಿಸಿ ನಾಳಿನ ದಿನದಲ್ಲಿ ಸುರರನ್ನು ತಿಂದು ತೇಗುವೆನೆನುತ್ತ ಕ್ರೌಂಚಪರ್ವತದ ಮರೆಯೊಳಡಗಿದನು (೨೩).

ಗುಹನು ತನ್ನನ್ನು ಮುತ್ತುವ ತಾರಕನ ಸೇನಾಸಮುದ್ರವನ್ನು ನಾನಾ ಪ್ರಕಾರದಿಂದ ಸಂಹರಿಸಿದನು. ಹರಿಯುಜೇಂದ್ರಾದ್ಯರು ಮಹಾನಂದದಿಂದ ಷಣ್ಮುಖನನ್ನು ಕೊಂಡಾಡಿದರು. ದಾನವಾಧೀಶನಾದ ತಾರಕನು ರಣಾಂಕಣದಲ್ಲಿ ಕಾಣದಾಗಲು, ಅವನನ್ನು ಸಕಲ ಸುರಸಂತತಿಗಳು ರಣರಂಗದ ಎಲ್ಲ ದಿಕ್ಕುಗಳಲ್ಲಿಯೂ ಹುಡುಕಿದರು. ಕಡೆಗೆ ಅವನು ಕ್ರೌಂಚಪರ್ವತದ ಮರೆಯಲ್ಲಿದ್ದುದನ್ನು ಹರಿಯು ತಿಳಿದು ಇಂದ್ರನಿಗೆ ಹೇಳಲಾಗಿ ಇಂದ್ರನು ಆ ಸುದ್ದಿಯನ್ನು ಗುಹನಿಗೆ ಬಿನ್ನವಿಸಿದನು (೨೪-೨೯). ಕೂಡಲೆ ಗುಹನು ಶಾಂಭವಾಸ್ತ್ರಕೆ ಕೈನೀಡಿ "ನಿನಗೆ ಕ್ರೌಂಚಪರ್ವತದ ಮರೆಯೊಳಗಿರ್ದ ದನುಜನೊಡಲು ಗುರಿ" ಎಂದು ಬೆಸಸಿ ಮನದೊಳಗೆ ಮಂತ್ರವನ್ನು ಜಪಿಸಿ ಕಿವಿಯವರೆಗೆ ಅದನ್ನು ಜಗ್ಗಿಬಿಡಲು, ಅದು ಕೆಂಗಿಡಿಗಳನ್ನು ಕಾರುತ್ತ ಆಕಾಶಮಾರ್ಗದಿಂದ ಬಂದು ಕ್ರೌಂಚಪರ್ವತವನ್ನು ಸೀಳಿ ತಾರಕನ ಶರೀರವನ್ನು ಚೂರುಚೂರು ಮಾಡಿತು (೩೦-೩೧). ದೇವತೆಗಳು ಹೂಮಳೆಗರೆದರು. ಗಂಧರ್ವರು ಆನಂದದಿಂದ ಹಾಡಿದರು. ಜಯರವವು ಲೋಕನಾಕಗಳನ್ನು ತುಂಬಿತು. ವಿಷ್ಣುಬ್ರಹ್ಮೇಂದ್ರಾದಿಗಳ ಪಟ್ಟಣಗಳು ಅವರವರ ವಶವಾದುವು (೩೨-೩೪). ತಾರಕನ ಮಕ್ಕಳೂ ಮಿಕ್ಕ ರಕ್ಕಸರೂ ಓಡಿಹೋಗಿ ಗಿರಿಗುಹೆಗಳನ್ನು ಸೇರಿದರು. ಇತ್ತ ಕುಮಾರನು ಅಮರತತಿವೆರಸಿ ಕೈಲಾಸಪುರಕ್ಕೆ ಬಂದು ಶಿವನಡಿಗೆರಗಿದನು. ಶಿವನು ಕುಮರನನ್ನು ತೆಗೆದಪ್ಪಿ ವಿಷ್ಣು ಮುಂತಾದವರನ್ನು ಅವರವರ ಪುರಗಳಿಗೆ ಕಳುಹಿಸಿ ಸುಖದಿಂದಿರ್ದನು (೩೫).

ನಾಲ್ಕನೆಯ ಕಾಂಡ

೪೧ ಶಿವನು ತ್ರಿಪುರಕ್ಕೆ ಬಿಜಯಂಗೈದ ಸಂಧಿ

“ಸನ್ನುತಗುಣಾಗ್ರಣಿಯಾದ ಚೆನ್ನಬಸವೇಶನೇ, ಗುಹೆಯೊಳಡಗಿರ್ದ ತಾರಕನ ಸುತರು ಮುಂದೇನು ಮಾಡಿದರು” ಎಂದು ಸಿದ್ಧರಾಮೇಶನು ಕೇಳಲು ಚೆನ್ನಬಸವೇಶನು ಅದನ್ನು ವಿಸ್ತರಿಸತೊಡಗಿದನು (೨).

ತಾರಕನ ಮಕ್ಕಳಾದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬುವರು ಬಹುಕಾಲ ಗುಹೆಗಳಲ್ಲಿ ಕಳೆದು ಕಡೆಗೊಂದು ದಿವಸ ತಮ್ಮೊಳಗೆ ತಾವೇ ಆಲೋಚನೆಗೈಯುತ್ತ, “ಸಾಕಿನ್ನು ಚಿಂತೆ, ನಮ್ಮ ತಂದೆಗೆ ವರವನ್ನು ಕೊಟ್ಟ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಬೇಕಾದ ವರಗಳನ್ನು ಪಡೆದು ದಿವಿಜರನ್ನು ಸದೆಬಡಿಯಬೇಕೆ”ಂದು ನಿರ್ಧರಿಸಿ ತಪೋವನಕ್ಕೆ ಬಂದು ತಿಳಿಗೊಳದಲ್ಲಿ ಜಳಕಮಾಡಿ ಶುಚಿಯಾಗಿ ಸೂರ್ಯನಿಗೆ ನಮಸ್ಕರಿಸಿ ತಮ್ಮ ಮನದಿಷ್ಟಗಳನ್ನು ನೆನೆದು ಹೃತ್ಕಮಲದಲ್ಲಿ ಬ್ರಹ್ಮನ ನಿರ್ಮಲಮೂರ್ತಿಯನ್ನು ನೆಲೆಗೊಳಿಸಿ ಉಗ್ರತರತಪವನಾಚರಿಸತೊಡಗಿದರು (೩-೬). ಆ ತಪೋವಹ್ನಿಯಿಂದ ಅಖಿಳ ಲೋಕಗಳು ಸುಡತೊಡಗಿದುವು. ಅಬ್ಜಸಂಭವನು ಇದನ್ನರಿತು “ನಾನು ರಕ್ಕಸರ ಹತ್ತಿರ ಹೋದರೆ ದೇವತೆಗಳಿಗೆ ಹಾನಿ ತಪ್ಪದು, ಹೋಗದಿದ್ದರೆ ಲೋಕಗಳೆಲ್ಲ ಸುಟ್ಟುಹೋಗುವುವು. ಇನ್ನೇನು ಮಾಡಬೇಕು?” ಎಂದು ಚಿಂತಿಸಿ ಶಿವನ ಕರುಣೆಯಿರಲು ದೇವತೆಗಳಿಗೆ ಏನೂ ಭಯವಿಲ್ಲೆಂದು ನಿಶ್ಚೈಸಿ ಖಳತಾಪಸರ ಹತ್ತಿರಕ್ಕೆ ಬಂದು “ನಿಮ್ಮ ತಪಕ್ಕೆ ಮೆಚ್ಚಿದೆನು. ನಿಮ್ಮ ಮನದಭೀಷ್ಟವಾವುದು?” ಎಂದು ಕೇಳಿದನು. ರಕ್ಕಸರು ಕಣ್ದೆರೆದು ನಳಿನಸಂಭವನನ್ನು ಕಂಡು ನಮಸ್ಕರಿಸಿ ಸ್ತುತಿಸಿ (೭-೧೩) “ಗಗನಾಗ್ರದಲ್ಲಿ ಬಂಗಾರದೊಂದು ಬೆಳ್ಳಿಯದೊಂದು ಕಬ್ಬಿಣದ್ದೊಂದು ಹೀಗೆ ಮೂರು ಪಟ್ಟಣಗಳನ್ನು ರಚಿಸುವೆವು. ಈ ಮುಪ್ಪುರಗಳಿಗೆ ಒಂದೇ ಕೀಲವು. ಅದು ಯಾರಿಗೂ ಕಾಣದಿರಲಿ. ಮುಂದೆ ಸುರಸಹಸ್ರವರುಷಕ್ಕೆ ಒಂದಾಗಿ ಪುನಃ ಅಗಲುವದರೊಳಗಾಗಿ ಒಂದೇ ಬಾಣದಿಂದ ತೊಡೆವರೆ ಅವು ನಾಶವಾಗಲಿ. ಇಲ್ಲದಿದ್ದರೆ ಅವು ಸತತ ತಿರುಗುತ್ತಿರಲಿ. ಖಚರ ಕಿನ್ನರ ಮುಂತಾದವರು ಎಡೆಬಿಡದೆ ನಮ್ಮ ಸೇವೆಮಾಡಲಿ. ಎಲ್ಲ ಲೋಕಗಳ ಜನರು ಭಯಗೊಂಡು ನಮ್ಮ ವಚನವನ್ನು ಅತಿಕ್ರಮಿಸದಿರಲಿ” ಎಂಬ ವರವನ್ನು ಬೇಡಿದರು. ಬ್ರಹ್ಮನು ವಿಚಲಮಾನಸನಾಗಿ ಹಾಗೇ ಆಗಲೆಂದು ಅಂದು ಹೊರಟುಹೋದನು. ಖ

ಲವು ಅಂತರಂಗದಲ್ಲಿ ಮಹಾನಂದವನ್ನು ತಳೆದರು (೧೪-೧೬).

ಅನಂತರ ಅವರು ಮಯನಿಗೆ ಕೋಟೆಗಳನ್ನು ಕಟ್ಟಲಿಕ್ಕೆ ಹೇಳಲು ಅವನು ತಾರಕಾಕ್ಷಂಗೆ ಪೊಂಗೋಂಟೆಯನ್ನು ಕಮಲನಯನಂಗೆ ಬೆಳ್ಳಿಯ ಕೋಂಟೆಯನ್ನು ವಿದ್ಯುನ್ಮಾಲಿಗೆ ಕಾರ್ಬೋನ್ನಿನ ಕೋಂಟೆಯನ್ನು ಸಿದ್ಧಪಡಿಸಿದನು. ಅವು ಆಕಾಶಚುಂಬಿತಪ್ರಾಸಾದತತಿಗಳಿಂದ ಕೂಡಿ ಅಮರಾವತಿಯನ್ನು ಕೀಳುಗೈದುವು. ಅತುಳಬಲರಾದ ದೈತ್ಯರ ತೀವ್ರತೇಜವು ಅಖಿಳ ಲೋಕಗಳನ್ನು ತುಂಬಿತು. ಪರ್ವತಗುಹಾಂತರಗಳಲ್ಲಿ ಮೈಗರೆದ ಹಳೆಯ ರಕ್ಕಸರೂ ಪೂರ್ವಕಾಲದಲ್ಲಿ ಮಡಿದ ದಾನವರ ಬಂಧುಗಳಾದ ನೀಳ ನಳ ಮುಂತಾದವರೂ ಬಂದು ಖಳರನ್ನು ಕೂಡಿಕೊಂಡರು (೧೭-೨೪).

ಇದನ್ನು ಕಂಡು ಸಕಲ ಲೋಕಗಳ ಜನರು ಇನ್ನು ನಮಗೆ ದಾರಿಯಾವುದೆನುತ ತಮ್ಮ ತಮ್ಮೊಳಗೆ ಗುಜುಗುಜಿಸಲಾರಂಭಿಸಿದರು. ತಾರಕಸುತರು ಗರ್ವದಿಂದ ತಮ್ಮ ತಮ್ಮ ಸೇನೆಸಹಿತೈತಂದು ಭೂಲೋಕವನ್ನು ಸೂರೆಗೊಳ್ಳತೊಡಗಿದರು. ಮುಂದೊಂದು ದಿವಸ ಅವರು ತಮ್ಮ ಭುಜದ ಕಂಡೂತಿಯನ್ನು ಕಳೆಯಬೇಕೆಂದು ಚತುರಂಗವನ್ನು ಕೂಡಿಕೊಂಡು ಅಬ್ಬರದಿಂದ ನಿರ್ಮಲವಾದ ದೇವಗಂಗಾನದಿಯನ್ನು ದಾಟಿ ನಾಕಲೋಕವನ್ನು ಹೊಕ್ಕು ಅಖಿಳದಿಕ್ಪಾಲಕರನ್ನು ಸದೆದು ಅಲ್ಲಿಯ ಸಮಸ್ತ ಹಯಗಜಮುಖ್ಯವಸ್ತುಗಳನ್ನು ತ್ರಿಪುರಕ್ಕೆ ಕಳುಹಿಸಿ ಇಂದ್ರನನ್ನು ಪರಿಭವಿಸಿ ಅವನ ಪಟ್ಟಣದ ಸತಿಯರನ್ನು ಸೂರೆಗೊಂಡು ಹಿಂದಿರುಗಿದರು (೨೫-೩೧). ಇಂದ್ರನು ಭಂಗವನ್ನು ಹೊಂದಿ ಕೆಲವು ದಿವಸ ಹಿಮಗಿರಿತಟದೊಳು ಗೋಪ್ಯದಿಂದಿದ್ದು ಒಂದು ದಿನ ಸಕಲ ದಿಕ್ಪಾಲಕರನ್ನು ಕೂಡಿಕೊಂಡು "ಯಾವನಿಂದ ಈ ಸಂಕಟವು ತಮಗೆ ಬಂದುದು ಅವನಿಂದ ಅದನ್ನು ಕಳೆವೆವು" ಎಂದಾಲೋಚಿಸಿ ಬ್ರಹ್ಮನೆಡೆಗೆ ಬಂದು ನಡೆದ ಸಂಗತಿಯನ್ನರುಹಿದನು. ಕಮಲಜನು ಅವರನ್ನು ಸಂತೈಸಿ ಅವರ ಸಹಿತ ಈಶ್ವರನೆಡೆಗೆ ಬಂದೆರಗಿ ಆದ ಸಂಗತಿಯನ್ನು ನಿವೇದಿಸಿ ಮುಂದಿನ ಉಪಾಯವನ್ನು ಕೇಳಿದನು. ಅದಕ್ಕೆ ಶಿವನು "ಬೊಮ್ಮ, ನೀನು ಮುಂಬರ್ಪ ಕೇಡನರಿಯದೆ ದನುಜರಿಗೆ ವರವನಿತ್ತೆ. ನಿನಗೆ ಈಗ ಹೇಳುವುದೇನು? ನಮಗೆ ಪಶುಪತಿ ಪಟ್ಟವನ್ನು ಕಟ್ಟಿದರೆ ಸಂಗ್ರಾಮದಲ್ಲಿ ಪುರತ್ರಯದ ವೀರರನ್ನು ಸಂಹರಿಸುವೆವು" ಎನ್ನಲು ಅದನ್ನು ಕೇಳಿ ಸುರಕುಲವು ತಲೆವಾಗಿ ಪರಶಿವನಿಗೆ ಪಟ್ಟಾಭಿಷೇಕವನ್ನು ಮಾಡಿ ಕಾಣಿಕೆಯನಿತ್ತು ನಮಿಸಿತು. ಶಿವನು ರಥವನ್ನು ಮೇಳೈಸಲಿಕ್ಕೆ ಇಂದ್ರನಿಗೆ ಹೇಳಲು, ಅವನು ವಿಶ್ವಕರ್ಮನಿಂದ ರಥವನ್ನು ಸಿದ್ಧಪಡಿಸಿದನು (೩೨-೪೫). ಶಿವನು ರಥವನ್ನೇರಲನುವಾಗಿ ಅದರ ಮೇಲೆ ತನ್ನ ವಾಮಾಂಘ್ರಿಯನ್ನಿಡಲು, ರಥವು ಆ ಭಾರದಿಂದ ರಸಾತಳಕ್ಕಿಳಿಯಿತು. ಇದನ್ನು ಕಂಡು ವಿಷ್ಣುವು ವಾತಾ

ವನ್ನು ಹೊಕ್ಕು ವೃಷಭಾವತಾರದಿಂದ ಆ ರಥವನ್ನು ಎತ್ತಲಾಗಿ ವಿಶ್ವಕರ್ಮನು ಅದನ್ನು ಸರಿಪಡಿಸಿದನು. ಸರ್ವೇಶ್ವರನಾದ ಶಂಭುವು ಅದನ್ನೇರಿ ಸಕಲಗಣಕುಲದೊಡನೆ ನಡೆಗೊಂಡನು. ಜೋದರು, ರಾವುತರು, ರಥಿಕರು, ಕಾಲಾಳ್ಗಳು ಪರಿಗಣನೆಗರಿವಾಗಿ ಹಿಂಬಾಲಿಸಿದರು (೪೬-೫೫). ಈಶ್ವರನು ಹರಿಯುವರು ಪ್ರಮಥಾನೀಕವು ಮಿಕ್ಕ ಸೇನಾಪತಿಗಳು ದಾನವರ ಪುರಸಮೀಪದ ಮಹಾಬಯಲೊಳಗೆ ಒಂದೊಂದು ದೆಸೆಯಲ್ಲಿ ತಮ್ಮ ತಮ್ಮ ಬೀಡಾರಗಳನ್ನು ಮಾಡಿದರು. ಕಾಳೆಗದ ಸಮಗ್ರಸಾಧನಗಳು ಅಲ್ಲಲ್ಲಿ ತರತರವಾಗಿ ಚೆಲುವಾಗಿ ಕಂಡವು (೫೬-೫೭).

೪೨ ತ್ರಿಪುರದ ಮುತ್ತಿಗೆಯ ಸಂಧಿ

ಸಿದ್ಧರಾಮೇಶನೇ ಆಲಿಸು, ಬಳಿಕ ಭಾಳಲೋಚನನ ಪಾಳೆಯದ ಕಾವಲವು ಕಾಳಭೈರವನ ವಶವಾಯ್ತು, ಸೇನಾಪತ್ಯವು ಕುಮಾರನದಾಯ್ತು, ಸಕಲ ವ್ಯವಸ್ಥೆಯು ವೀರಭದ್ರನದಾಯ್ತು, ತ್ರಿಪುರವನ್ನು ಸಂಹರಿಸುವ ಆ ಲೀಲೆಯು ಪರಶಿವನದಾಯ್ತು. ಆ ಸಮಯದಲ್ಲಿ ಸೂರ್ಯನು ಮುಳುಗಿದನು (೨). ಇತ್ತ ತಾರಕಾಕ್ಷನು ಸಮಸ್ತ ರಾಕ್ಷಸರನ್ನೆಲ್ಲ ಓಲಗಕ್ಕೆ ಕರೆಯಿಸಿದನು. ಜಂಭ ನಿಕುಂಭ ಶುಂಭ ನಿಶುಂಭ ವಿದ್ಯುನ್ಮಾಲಿ ಕಮಲಾಕ್ಷ ಮುಂತಾದವರು ಅಲ್ಲಿ ನೆರೆದರು. ತಾರಕಾಕ್ಷನು ಅವರೆಲ್ಲರನ್ನು ಉಚಿತ ವಚನಗಳಿಂದ ಸತ್ಕರಿಸಿ ಕುಳ್ಳಿರಿಸಿ ಬಲಭಾಗದಲ್ಲಿರುವ ಶುಕ್ರನ ಮೊಗನೋಡಿ ಸದ್ವಿನಯಗಂಭೀರವಾಕ್ಯಗಳಿಂದ "ಅಮರ ಸಂಕುಲವು ನಮಗೆ ಅಳುಕಿ ನಮ್ಮ ಸಂಹಾರಮಾಡಲಿಕ್ಕೆ ಖಂಡಪರಶುವನ್ನು ಪುರಕೆ ಕರೆತಂದಿತು, ಮುಂದಿನ ಕಾರ್ಯಗತಿಯೇನು?" ಎಂದು ನುಡಿದನು. ಅದಕ್ಕೆ ಶುಕ್ರನು "ಶಿವನು ಕೊಲ್ಲಲು ಸಿದ್ಧನಾದಮೇಲೆ ನಮ್ಮನ್ನು ಬಿಡಿಸಿಕೊಳ್ಳುವವರು ಯಾರು? ಅವನನ್ನು ಕಂಡು ಬಾಳುವುದು ನೀತಿಯು" ಎಂದನು. ಇದನ್ನು ಕಂಡು ವಿದ್ಯುನ್ಮಾಲಿಯು ಕನಲಿ "ದಿವಿಜಭಟರೆಂಬುವರು ಹುಳುಗಳು, ನಮ್ಮ ಪಟ್ಟಣಗಳ ನೆಲದ ಮೇಲೆ ಕಾಲಿಡಲು ಸಮರ್ಥರೇ? ಹರಿಣಶಾಬಕವು ಹುಲಿಯ ಬಿರುದನ್ನು ನಿವಾರಿಸಬಲ್ಲುದೇ?" ಎನ್ನಲಾಗಿ ಅಸುರಭಟರು ಈ ಮಾತನ್ನೇ ಸಮರ್ಥಿಸಿ ಗರ್ಜಿಸಿದರು (೩-೮). ತಾರಕಾಕ್ಷನು ಅದಕ್ಕೊಪ್ಪಿ ಓಲಗವನ್ನು ವಿಸರ್ಜಿಸಿ ಪುರತ್ರಯದ ಕೋಟೆಗಳ ಕಾವಲಿಗೆ ಪಟುಭಟರನ್ನು ನೇಮಿಸಿ ಅರಮನೆಯನ್ನು ಹೊಕ್ಕನು. ಭಟರು ಡೊಳ್ಳುಗಳನ್ನು ಹೊಡೆಯುತ್ತ ಪಂಜುಗಳನ್ನು ಹಿಡುಕೊಂಡು ಎಚ್ಚರದಿಂದ ಕಾವಲು ಮಾಡತೊಡಗಿದರು (೯-೧೦). ಮತ್ತು ಕೋಟೆಗಳ ಆಳ್ವೇರಿಗಳ ಮೇಲೆ ಹುರಿವ ಮಳಲಿನ ಕಾಸು

ಮಂಚಲಿಬಿಸಿಸಿಣ್ಣೆಯ ಹರವಿಗಳ ಹುಲ್ಲಿನ ಕಟ್ಟುಗಳ ದೊಡ್ಡ ತೊಲೆಗಳ ತರತರದ
ತುಪಾಕಿಗಳ ಕುದಿವ ಸುಣ್ಣಗಳ ಹಿರಿದಾದ ಗುಂಡುಕವಣೆಬರ್ಚಿಗಳ ಮೊತ್ತಗಳು
ಸಜ್ಜಿಸಿದುವು (೧೧). ಈ ರೀತಿ ಸಿದ್ಧತೆಯನ್ನು ಮಾಡುತ್ತ ಅತ್ಯಂತ ಜಾಗರೂಕ
ತೆಯಿಂದ ದುರ್ಗಗಳನ್ನು ಕಾಯುತ್ತಿರುವಷ್ಟರಲ್ಲಿ ಸೂರ್ಯೋದಯವಾಯಿತು. ಇ
ತ್ತ ಇಂದ್ರನು ಎಲ್ಲರು ಸನ್ನದ್ಧರಾಗಿ ತ್ರಿಪುರಕ್ಕೆ ಲಗ್ಗೆಹತ್ತಲಿಕ್ಕೆ ಹೊರಡಬೇಕೆಂದು
ಡಂಗುರವನ್ನು ಹೊಡೆಸಿದನು. ಮುಪ್ಪುರದ ಜನಜಾಲವು ಕೋಟೆಗಳನ್ನು ಹತ್ತಿ
ಸಮುದ್ರದಂತೆ ಪಸರಿಸಿರುವ ಶಂಕರನ ಪಾಳೆಯವನ್ನು ನಿಟ್ಟಿಸಿ ಅವನ ಸೇನೆಯೊಡನೆ
ನಮ್ಮವರ ಕಾಳೆಗವು ತೂಗದೆಂದು ಗುಜುಗುಜಿಸುತ್ತಿದ್ದಿತು (೧೨-೧೬).

ಇತ್ತ ಪಾವಕ ಕೃತಾಂತ ಮುಂತಾದವರು ನಿತ್ಯನಿಯಮಗಳನ್ನು ತೀರಿಸಿ
ಕೊಂಡು ಶಿವನಡಿಗೆ ನಮಿಸಿ ತಾವು ಮಾಡತಕ್ಕ ಕಾರ್ಯವೇನೆಂದು ಕೇಳಲು, ಈಶ್ವರ
ನು ದೈತ್ಯರ ಪುರಗಳಿಗೆ ಲಗ್ಗೆಯನ್ನು ಬಿಡುವುದೆಂದು ಇಂದ್ರನಿಗೆ ನೇಮಿಸಿದನು. ಅವ
ನು ತನ್ನ ಬಿಳಿಯಾನೆಯನ್ನೇರಿ ಸಕಲ ಸಚಿವಸಾಮಂತಸೇನಾಧೀಶರನ್ನೂ ಮಾವು
ತರಾವುತಕಾಲಾಳುಗಳನ್ನೂ ಕೂಡಿಕೊಂಡು ಹೊರಟು ಹೊರಕೋಟೆಗಳನ್ನು ಬಳಸಿ
ಸಮುದ್ರದಂತೊಪ್ಪುವ ಅಗಳಗಳಿಂದ ಸುತ್ತಲ್ಪಟ್ಟ ತ್ರಿಪುರಗಳನ್ನೀಕ್ಷಿಸಿ ತನ್ನ ಕಡೆ
ಯ ಮುಖ್ಯ ದೊರೆಗಳನ್ನು ಕರೆದು ಅವರಿಗೆ ಈ ಪುರಗಳನ್ನು ಮುತ್ತಿ ಒಳಕೋಟೆಗಳ
ನ್ನು ವಶಮಾಡಿಕೊಳ್ಳಬೇಕೆಂದು ಅಪ್ಪಣೆಮಾಡಲಾಗಿ ಅವರು ವಾದ್ಯಕಾಳೆಗಳ ಅಬ್ಬ
ರದಿಂದ ತಮ್ಮ ತಮ್ಮ ಚಾತುರ್ಬಲವನ್ನು ಕೂಡಿಕೊಂಡು ಪುರಗಳ ಹೊರಬದಿಗೆ ಅಗ
ಳದ ಸಮೀಪಕ್ಕೆ ಬಂದು ಸೇರಿದರು (೧೭-೨೫). ಕೆಲವರು ಢಾಲುಗಳನ್ನು ಹಿಡು
ಕೊಂಡು ತಲೆದೋರಿದರು. ಮಾವುತರು ಆನೆಗಳ ಪಕ್ಕರಕ್ಕೆಗಳ ಮರೆಯೊಳಡಗಿ
ಪುಲಿಮುಖಕೆ ಸೂಕಿದರು. ಇದನ್ನು ಕಂಡು ಅಸುರಭಟರು ನಾನಾತರದ ಆಯು
ಧಗಳಿಂದ ಸುರಭಟರನ್ನು ಗಾಸಿಮಾಡಿದರು. ಕೆಲವರು ದಿಡ್ಡಿಗಳಿಗೆ ಗುಪ್ತದಿಂದ
ಬಂದು ಬೇಲಿಗಳ ಮರೆಗೆ ಅಡಗಿದ ವೀರರನ್ನು ಸಂಹರಿಸುತ್ತ ಅಗಳಿನಲ್ಲಿದ್ದಾದ ಅ
ಮರರನ್ನು ತರಿಯುತ್ತ ತಿರುಗಿ ಕೋಟೆಗಳನ್ನು ಸೇರುತ್ತಿದ್ದರು (೨೬-೨೮). ಸುರಭ
ಟರು ಕಲ್ಲು ಕೊರಡು ಸಡೆಸಟ್ಟೆ ಹುಲ್ಲುಹೊರೆ ಸತ್ತವರ ಹೆಣಗಳಿಂದ ಅಗಳನ್ನು
ತುಂಬಿ ನೆಲಸಮ ಮಾಡಿದರು. ಖಳರು ದಿವಿಜಭಟರ ಹೊಡೆತಗಳನ್ನು ಸರಕುಮಾ
ಡದೆ ಕೋಟೆಗಳ ಗೋಡೆಗಳ ಮೇಲಿಂದ ಕವಣೆಗಲ್ಲು ಗುಂಡುಗಳನ್ನೆಸೆದರು, ಕಾಯ್ದ
ಎಣ್ಣೆಯಲ್ಲಿ ಮುಳಲು ಅರಗು ಸಾಸಿವೆ ಸುಣ್ಣಕಲ್ಲಂಬಲಿಗಳನ್ನು ಕೂಡಿಸಿ ಸುರಿದರು.
ದನಿಗಳಿಂದ ಹೊಡೆದರು. ಸುರರು ನಿಚ್ಚಣಿಕೆಗಳನ್ನು ಹತ್ತಲು ಅವರನ್ನು ಹುಲ್ಲಿನ
ಸಂಜುಗಳ ಕಿಚ್ಚಿನಿಂದ ಸುಟ್ಟರು. ಒಂದು ನಿಮಿಷದಲ್ಲಿ ಭೂತವೇತಾಳಸಂಕುಲಕೆ
ಔತಣದ ಹೆಣಗಳ ರಾಶಿಗಳನ್ನು ಮಾಡಿಟ್ಟರು (೨೯-೩೩).

ಸುರಪನು ಹಿಂಜರಿವ ದಿವಿಜರನ್ನು ಕಂಡು "ಎಲವೋ, ದನುಜರ್ಗೆ ಬೆನ್ನಿತ್ತಿರೇ" ಎಂದು ಮೂದಲಿಸಲಾಗಿ ಸುರರು ದಿಡ್ಡಿಗಳ ಸರಿಸದಲ್ಲಿ ಸಂದಣಿಸುತ್ತ ಸಾಲ ನಿಚ್ಚಣಿಕೆಗಳ ಮೇಲೆ ಹತ್ತಿದರು. ರಕ್ಕಸರು ಪುನಃ ಕೆಂಡ ಬಿಸಿಯ ಮೇಣ ಕವಣೆಗಲ್ಲು ಸುರಗಿ ಶೂಲ ಖಡ್ಗ ಕೊಡಲಿ ಮುದ್ಗರ ಗದೆ ಚಕ್ರಗಳಿಂದ ಸುರರನ್ನು ಕೊಂದರು (೩೪-೪೦). ಇದನ್ನು ನೋಡಿ ವಹ್ನಿ ಮುಂತಾದ ದಿಕ್ಪಾಲಕರು ಕೋಪಾವಿಷ್ಟರಾಗಿ ವಾಹನಗಳನ್ನು ಬಿಟ್ಟು ಹರಿಗೆ ಕತ್ತಿಗಳನ್ನು ಹಿಡುಕೊಂಡು ಹೊಳಿದಗಳಲ್ಲಿ ನಿಂತು ಎಡಬಲದಲ್ಲಿರುವ ಅಮರರನ್ನು ಜರೆವುತ್ತ ಮುಗ್ಗಿ ಕೈಕಾಲೊಡೆದು ಬೀಳ್ವವರನ್ನೆಳೆಸುತ್ತ ಕೋಟೆಯನ್ನು ಹತ್ತಿದರು (೪೧-೪೩). ಪಟ್ಟಣಗಳಲ್ಲಿ ಕೋಲಾಹಲವುಂಟಾಯಿತು. ಇದನ್ನು ಕಂಡು ಭರ್ಗನಯನಜ್ವಾಲೆಯು ರೂಪಾದುದೋ ಎಂಬಂತೆ ವೀರ ವಿದ್ಯುನ್ಮಾಲಿಯು ಘೋರರಾಕ್ಷಸರನ್ನೂ ಆನೆ ಕುದುರೆ ತೇರ್ಗಳನ್ನೂ ಕೂಡಿಕೊಂಡು ಬರುವುದನ್ನು ನೋಡಿ ದಿವಿಜಾಳಿಯು ಅಳವಳಿದಿತು (೪೪-೪೫).

೪೩ ವಿದ್ಯುನ್ಮಾಲಿಕಮಲಾಕ್ಷರ ಯುದ್ಧದ ಸಂಧಿ

ದಿವಿಜ ಸಂಕುಲವು ತ್ರಿಪುರದಾಳ್ವೇರಿಯನ್ನು ಹತ್ತಿ ಕಾದಲಾರಂಭಿಸಿದ ಕೂಡಲೆ ವಿದ್ಯುನ್ಮಾಲಿಯೊಡನೆ ಬರ್ಪ ಮಹಾನಾಭ ವಿದ್ರಾವಣ ಗಜಶಿರ ಶಂಖಶಿರ ಜಂಭ ಮುಂತಾದ ವೀರರಕ್ಕಸರು ಆ ದಿವಿಜರನ್ನು ಸದೆಬಡಿದರು. ಇಂದ್ರನಾಜ್ಞೆಯಿಂದ ಅಮರವ್ರಜವು ಜಂಭನಾಜ್ಞೆಯಿಂದ ದಾನವರ ಬಲವು ಒಂದಕ್ಕೊಂದು ಇದಿರಾಗಿ ಕಾಳೆಗಮಾಡಲು ರಕ್ಕಸರ ಉರುಬೆಗೆ ಸುರಬಲವು ಕಂಗೆಟ್ಟು ಮುರಿದು ಬೆನ್ನುಕೊಟ್ಟಿತು (೨-೫). ಇದನ್ನು ಕಂಡು ವೈಶ್ವಾನರಾದಿ ದಿಕ್ಪಾಲಕರು ಮುಂಕೊಂಡರು. ಇವರಿಗೂ ಮುಪ್ಪುರದ ದೊರೆಗಳಿಗೂ ಕಾಳೆಗವು ಸಮನಿಸಿತು. ಆ ಕ್ಷಣದಲ್ಲಿ ಇಂದ್ರನು ಜಂಭನನ್ನು ಜರೆದು ಅವನ ಮೇಲೆ ಶರವರುಷವನ್ನು ಕರೆದನು. ಇಬ್ಬರೂ ಒಬ್ಬರ ಮೇಲೊಬ್ಬರು ಬಾಣಗಳನ್ನು ಬಿಡುತ್ತ ಕಡೆಗೆ ಶಕ್ರನು ಐದಂಬುಗಳಿಂದ ಜಂಭಾಸುರನ ವಕ್ಷಸ್ಥಳವನೆಚ್ಚೊಡೆ ಅವು ಅವನ ಬೆನ್ನಿನಲ್ಲಿ ಪಾರಾದುವು. ಅವನು ಮೂರ್ಛೆಹೊಂದಿ ರಥದೊಳಗೆ ಮಲಗಿದನು (೬-೮). ಶಕ್ರನು ಮತ್ತೆ ಹದಿನಾಲ್ಕು ಬಾಣಗಳಿಂದ ರಥವನ್ನೂ ಅದರ ಸೂತನನ್ನೂ ಕುದುರೆಗಳನ್ನೂ ಕಡಿದು ದಾನವರನ್ನು ಸವರುತ್ತಿರಲು ವಿದ್ಯುನ್ಮಾಲಿಯು ಮುಂಕೊಂಡು ಸುರರ ಸೇನೆಯನ್ನು ಕೋಪದಿಂದ ಸಂಹರಿಸುತ್ತ ಇಂದ್ರನನ್ನು ತರುಬಿ "ಜಲಕೇಳಿಯಲ್ಲಿ ಸುರವಧುಗಳೆಡವ

ಅಂಬುಧಾರೆಯುಳ್ಳ" ಎನ್ನುತ್ತ ಬಾಣದಿಂದ ಅವನನ್ನು ಕೊರೆದು ಹರವಳಕೆ ದಾಳಿಯಿಟ್ಟನು. ಇದನ್ನು ಕಂಡು ಶಿವಕುಮಾರನು ಬೊಬ್ಬಿರಿದು ಬಾಣವನ್ನು ಬಿಲ್ಲಿಗೆ ಹೂಡಿ ಜಗ್ಗಲು ದಿಗ್ಗಜಗಳು ಕಿವುಡಾದುವು, ಕುಲನಗಗಳು ಭ್ರಮಿಸಿದುವು, ಬ್ರಹ್ಮಾಂಡವು ಬಿರಿದುದು (೯-೧೨). ಈ ಮಹಾಧನುಷ್ಟಂಕಾರಕೆ ಎಳ್ಳಷ್ಟಾದರೂ ಹೆದರದ ಅಸುರೇಂದ್ರರನ್ನು ಕಂಡು ಕುಮಾರನು "ಎಲವೊ, ತಾರಕದರ್ಪಹರನಾದ ಹರಕುಮಾರನು ನಾನು, ಓಡಿ ಬದುಕು. ಅಲ್ಲದೊಡೆ ನಿಮ್ಮಯ್ಯನಿಗೆ ಹೊಡೆದ ಬಾಣವಿದೆ, ಕೊಳ್ಳು" ಎನ್ನಲು, ಅದಕ್ಕೆ ಖಳರಾಜನು "ಒಂದೇಸವನೆ ಹುಡುಕಾಡುತ್ತಿರುವ ಬಳ್ಳಿ ತಾನೇ ಕಾಲಿಗೆ ತೊಡರಲು ಒಳಿತಲ್ಲವೇ? ನಮ್ಮ ತಂದೆಯನ್ನು ಮೋಸದಿಂದ ಕೊಂದ ಖಳನೇ, ಭಾಪು! ಪುಣ್ಯವುಳ್ಳ ಕಾಲಕ್ಕೆ ಇಚ್ಛಿತ ವಸ್ತುವು ತಾನೇ ದೊರೆಯುವುದೆಂಬದಕ್ಕೆ ನೀನೇ ಸಾಕ್ಷಿ, ಹೋಗು" ಎಂದನು. ಇದನ್ನು ಕೇಳಿ ಶಿವಕುಮಾರನು ಈ ಮಹಾನಗರಗಳನ್ನು ನಿಮಿಷದೊಳಗೆ ನಿರ್ಧೂಮವಾಗಿ ಮಾಡುವೆನೆಂದೆನ್ನುತ್ತ ಬತ್ತಳಿಕೆಯಿಂದ ಒಂದು ಬಾಣವನ್ನು ತೆಗೆದು ಬಿಡಲು, ಅದು ಬತ್ತಳಿಕೆಯಿಂದ ತೆಗೆಯುವಾಗ ಒಂದು, ಬಿಲ್ಲಿಗೇರಿಸಿದಾಗ ಹತ್ತು, ಬಿಡುವಾಗ ನೂರು, ಮುಂದೆ ಸಾಗುವಾಗ ಸಾವಿರ, ಶತ್ರುವಿನ ಬಾಣಗಳನ್ನು ಕಡಿಯುವಾಗ ಲಕ್ಷ, ಶತ್ರುಗಳನ್ನು ಕೊಲ್ಲುವಾಗ ಕೋಟಿಸಂಖ್ಯೆಗಳಾಗಿ ದೈತ್ಯಸೇನೆಯಲ್ಲಿ ಬಿದ್ದಿತು (೧೩-೧೬). ಇದಕ್ಕೆ ಇಮ್ಮಡಿಯಾಗಿ ಖಳನು ಇಷುವ್ರಾತವನ್ನು ಕರೆದನು. ಎಲ್ಲರು ಕೌತುಕದಿಂದ ಇಬ್ಬರನ್ನೂ ಅವರ ಜಾಣತನಕ್ಕೆ ಕೊಂಡಾಡಿದರು. ಮತ್ತೆ ಇಬ್ಬರೂ ಹೊಸ ಬಾಣಗಳಿಂದಲೂ ಮಂತ್ರಾಸ್ತ್ರಗಳಿಂದಲೂ ಕಾದಾಡಿದರು (೧೭-೨೮). ಕಡೆಗೆ ಖಳನು ತಾರಕಾರಿಯನೆಂಟು ಬಾಣಗಳಿಂದೆಸೆಯಲು ಕುಮಾರನು ಅವುಗಳನ್ನೆಲ್ಲ ಕಡಿದು ಒಂದು ಶಕ್ತಿಯನ್ನು ಬಿಡಲಾಗಿ ಅದು ಖಳನ ವಕ್ಷವನ್ನು ಸೀಳಿತು. ಖಳನು ಮೂರ್ಛೆಯಿಂದ ಮೈಮರೆದು ಭೂಮಿಯಲ್ಲಿ ಬಿದ್ದನು. ಗುಹನು ಉಳಿದ ಅಸುರರನ್ನು ಸವರಿ ಗೆಲವಿನಿಂದ ತಿರುಗಿದನು. ಇಂದ್ರನು ಸುರಬಲವನ್ನೆಲ್ಲ ಕೂಡಿಕೊಂಡು ಮಿಕ್ಕದೈತ್ಯರನ್ನು ಘಾತಿಸಿದನು.

ಖಳಕಮಲಲೋಚನನು ತನ್ನ ತಮ್ಮ ವಿದ್ಯುನ್ಮಾಲಿಯು ಬಿದ್ದ ಮೇಲೆ ಅವನಿಂದ ಕಾಳೆಗದ ವೇಳೆಯನ್ನು ತಳೆದು ನಿಜಬಲವೆರಸಿ ಪುರದಿಂದ ಹೊರಟನು. ಅವನ ಸೇನೆಯವರು ಸುರಸೇನೆಯನ್ನು ಹೊಕ್ಕು ಪರಿಪರಿಯ ಕೈದುಗಳಿಂದ ಅದನ್ನು ಸವರಿದರು (೨೯-೩೪). ಅಸುರರು ಕಂಗೆಟ್ಟು "ಈ ಪಾಪಿಯು ನಮ್ಮ ಗಂಟಲನ್ನು ಕೊಯ್ಯುವನು. ನಾವು ಹಿಮಗಿರಿತಟದೊಳು ಮರೆಸಿಕೊಂಡಿದ್ದೆವು. ನಮ್ಮನ್ನು ಕರೆಗೊರಲನು ಕಾದಾಡುವನೆಂದು ರಣಾಂಕಣಕೆ ತಂದನು. ನಮ್ಮ ಕೇಡನ್ನು ಹರನೇನು ನೋಡುವನು?" ಎಂದು ಸುರಪನನ್ನು, "ಖಳವಿರಿಂಚಿಯು ದೈತ್ಯರು

ವರಗಳನ್ನು ಬೇಡಿದ ಕೂಡಲೆ ಕೊಟ್ಟು ನಮ್ಮನ್ನು ವಂಚಿಸಿದನು. ತಾನೀಗ ಈಶ್ವರನ ರಥದ ಸೂತನಾಗಿ ಚಮ್ಮಟಿಗೆಯನ್ನು ಹಿಡಿದರೇನಾಯಿತು? ಇದೆಲ್ಲ ಕಪಟ" ಎಂದು ಬ್ರಹ್ಮನನ್ನೂ ಜರೆವುದನ್ನು ಕೇಳಿ ರೋಷದಿಂದ ವೀರಭದ್ರನು ಆಹವಕೆ ನಡೆತಂದನು (೩೫-೩೯). "ಅಸುರ ಭಟರೊಳಗೆ ಶೂರರಿದ್ದವರು ಬರಲಿ. ಅವರ ಹೊಟ್ಟೆಗಳನ್ನು ಸೀಳಿ ಕರುಳಗಳನ್ನೂ ರಕ್ತವನ್ನೂ ಭೂತಗಣಕಿಕ್ಕುವೆನು" ಎನ್ನುತ್ತ ಅವನು ಪರಬಲವನ್ನು ಸವರಿದನು. ರಣಾಂಕಣವು ಕಡಿದ ತಲೆಪರಟಿರುಂಡಮುಂಡಗಳಿಂದ ಭೂತಪ್ರೇತಶಾಕಿನಿಯರಿಂದ ಚೂರುಚೂರಾದ ಗಜವಾಜಿತೇಜಿಗಳಿಂದ ಘೂಕಕಾಕಗಳಿಂದ ಭಯಂಕರವಾಗಿ ಕಂಗೊಳಿಸಿತು (೪೦-೪೪).

ಇದನ್ನು ಕಂಡು ಕಮಲಾಂಬಕನು ಯಮನಂತೆ ರುದ್ರಾವತಾರವನ್ನು ತಾಳಿ "ದೇವತೆಗಳು ಗಂಡುವೇಷದ ಸೂಳೆಯರು. ಅವರೊಳಗೆ ನೀನು ಉದ್ದಂಡ ಭಟನಹುದೇ? ನಿನ್ನನ್ನು ನೋಡುವೆನು. ನನ್ನ ಪಟ್ಟಣವು ದಕ್ಷಮುಖಶಾಲೆಯೊ? ತಾಳು" ಎನ್ನುತ್ತ ಮೂವತ್ತೆಂಟು ಬಾಣಗಳಿಂದ ವೀರಭದ್ರನನ್ನು ಹೊಡೆದನು. ವೀರಭದ್ರನು ಆ ಬಾಣಗಳನ್ನು ಕ್ಷಣದಲ್ಲಿಯೇ ಕಡಿದು ತಾನೊಂದು ಬಾಣದಿಂದ ದೈತ್ಯನನ್ನು ಘಾತಿಸಿದನು. ಆ ಮೇಲೆ ಖಳನು ಒಂದು ಶಕ್ತಿಯನ್ನು ಆಕರ್ಷಿಸಿ "ಇದು ನಿನ್ನನ್ನು ಉಳಿಸಲಾರದು. ಬಿಡಿಸಿಕೊಳ್ಳಲಿಕ್ಕೆ ನಿನ್ನ ತಂದೆಯನ್ನು ಕರೆದುಕೋ" ಎನ್ನುತ್ತ ಅದನ್ನು ಬಿಡಲು, ಅದು ಅಲ್ಲಲ್ಲಿ ನಿಂದಿರುವ ನಿರ್ಜರನಿಕಾಯವನ್ನು ದೊಡ್ಡ ದೊಡ್ಡ ಕಿಡಿಗಳ ಗಡಣದಿಂದ ಚುಂಬಿಸುತ್ತ ಬರುತ್ತಿರ್ದುದು (೪೫-೫೦). ವೀರನು ಆ ಶಕ್ತಿಯನ್ನು ಐದು ತೀಕ್ಷ್ಣವಾದ ಬಾಣಗಳಿಂದ ಕಡಿದು ನುಚ್ಚುನೂರ್ಮಾಡಿ ಮತ್ತೊಂದು ಬಾಣವನ್ನೆಸೆಯಲು ಅದು ಭೋರ್ಗರೆವುತ್ತ ಅಸುರದೇಹವನ್ನು ಮೇಲಕ್ಕೆತ್ತಿ ಆಕಾಶವನ್ನು ರಕ್ತದಿಂದ ನೆನೆಯಿಸುತ್ತ ಪುರದೊಳಗೆ ತಾರಕಾಕ್ಷನ ಇದುರಿನಲ್ಲಿ ಬಿಸುಟಿತು. ತಾರಕಾಕ್ಷನು ತನ್ನ ತಮ್ಮನು ಬಿದ್ದು ಮೂರ್ಛಿತನಾದುದನ್ನು ಕಂಡು ಕೆರಳ್ದು ಸಿಂಹನಾದವನ್ನು ಮಾಡಲು, ಅವನ ಮೈದುನನಾದ ಶಿಂಶುಮಾರನು ಎದ್ದುನಿಂತು ಸಿಡಿಲಗರ್ಜನೆಯಿಂದ "ಏತಕೆ ಚಿಂತೆ? ಸುರನರಭುಜಂಗಮರ ಜೀವಂತ ತಲೆಗಳನ್ನು ತಂದು ಬಿಸುಡುವೆನು. ಅವರ ಸಹಾಯಕ್ಕೆ ಬಂದ ಹರಿಬ್ರಹ್ಮರುಗಳನ್ನು ಬಡಿವೆನು. ಅಲ್ಲದೆ ಶಿವನು ಎದುರಾದರೆ ಅವನನ್ನು ಸಹ ಅಳವಳಿಸುವೆನು. ವೀಳೆಯವನ್ನು ಕೊಡು" ಎಂದು ತಾರಕಾಕ್ಷನ ಅಪ್ಪಣೆಯನ್ನು ಪಡೆದು ಹೊರಟನು (೫೧-೫೫).

---

೪೪ ತ್ರಿಪುರಸಂಹಾರದ ಸಂಧಿ

ಸಿದ್ಧರಾಮನೇ ಕೇಳು. ಮದೋನ್ಮತ್ತನಾದ ಶಿಂಶುಮಾರನು ರಣಾಟೋಪದಿಂದ ಚತುರ್ಬಲವನ್ನು ಕೂಡಿಕೊಂಡು ಪುರದ ಹೊರಗೆ ಬಂದನು. ಅವನ ದೇಹವು ವರ್ಣಿಸಲಶಕ್ಯವು. ಅವನ ಉತ್ತಮಾಂಗವು ಗಗನವನ್ನು ಚುಂಬಿಸುವುದು. ಅವಯವಗಳು ಘನಪರ್ವತಶಿಖರೋಪಮವಾದವುಗಳು. ಬಣ್ಣವು ಅಚ್ಚ ಕರಿದು. ಸ್ವಭಾವವು ಕ್ರೂರ. ಅವನು ಸಮ್ಮುಖದಲ್ಲಿ ಬಂದ ಭಟರನ್ನು ಕೈಯಲ್ಲಿ ಹಿಡಿದು ಬಾಯಿಯೊಳಗೆ ಹಾಕುತ್ತ ಕೋಡುಗಳಿಂದ ಚಿಮ್ಮುತ್ತ ಉಶ್ವಾಸನಿಶ್ವಾಸದಿಂದ ಮೂಗಿನೊಳಗೆ ಜಗ್ಗುತ್ತ ಚರಣತಲದಿಂದೊರಸುತ್ತ ಕರಿತುರಂಗಾಳಿಯನ್ನು ಕುಟ್ಟುತ್ತ ರಥಗಳನ್ನು ಈಡಾಡುತ್ತ ನಡೆದನು. ಇದನ್ನು ಕಂಡು ನಿರ್ಜರರು "ಪ್ರಾಣವುಳಿದುದೆ ಹಬ್ಬವು. ಈ ಮೊದಲೆ ಕಳೆದುಕೊಂಡ ಸಂಪದಕೆ ಅಸುವನು ಬಳುವಲಿಗೊಡುವಂತಾಯ್ತು" ಎನ್ನುತ್ತ ಇಂದುಮೌಳಿಯ ಸರಿಸಕೆ ಓಡಿಬಂದು ಮೊರೆಯಿಟ್ಟರು (೨-೭). ಅನಿತರೊಳು ಆದಿವೃಷಭನು ಕನಲ್ದು ಕೋಪಾಟೋಪದಿಂದ "ಅಭವನಿಗೆ ಹೇಳಲು ಇದು ಯಾವ ದೊಡ್ಡಮಾತು? ನಾನು ಆ ದೈತ್ಯನನ್ನು ಸೀಳುವೆನು" ಎನ್ನುತ್ತ ಆಹವಕೆ ಪೊಕ್ಕು ಅರಿಸೇನೆಯನ್ನು ಒಕ್ಕಲಿಕ್ಕುತ್ತ ಬಂದನು. ಅವನ ಘೋರತರ ವಿಗ್ರಹವನ್ನು ಬಣ್ಣಿಸಲಳವೆ? ತನ್ನ ಬಾಲದ ಹೊಡತದಿಂದ ನಕ್ಷತ್ರಪಂಕ್ತಿಯನ್ನು ಉದುರಿಸುವನು, ಪಾದಾಗ್ರದಿಂದ ಭೂಮಿಯನ್ನು ಕೆರೆದು ಕಲ್ಗುಂಡುಗಳನ್ನು ಎಳಿಸುವನು, ಕೊಡುಗಳಿಂದ ಗಿರಿಗಳನ್ನು ಮೀಂಟಿ ವಿಷ್ಣುವಿನಾಲಯಕ್ಕೆ ಸಾಲಿಡುವನು. ರಾಕ್ಷಸರ ಮೊತ್ತವು ಅವನನ್ನು ಮುತ್ತಿ ಕಣೆ ಕಲ್ಲು ಮುಸಲ ಮುದ್ಗರ ಮುಂತಾದುವುಗಳಿಂದ ಹೊಡೆಯಿತು. ಅವನ ರೋಮಸೋಂಕಿನಿಂದ ಅದ್ರಿಕುಲಗಳೆ ಶತಚೂರ್ಣವಾಗುತ್ತಿರಲು ಕಲ್ಗುಂಡು ಮುಂತಾದುವುಗಳ ಪಾಡೇನು? ಇವುಗಳೆಲ್ಲ ನುಚ್ಚುನೂರಾದುವು (೮-೧೪). ಇದನ್ನು ನೋಡಿ ಅಸುರರು "ಆಯುಧಗಳಿಂದ ಈ ಎತ್ತು ಅಸಕೊಳ್ಳುವುದಿಲ್ಲ. ಬಹುಪಾಶಗಳನ್ನು ಬೀಸಿ ಇದನ್ನು ಕೆಡವಬೇಕು" ಎಂದು ದೊಡ್ಡ ಮಿಣಿಗಳನ್ನೊಗೆದು ಅವನನ್ನು ಕಟ್ಟಿದರು. ವೃಷಪತಿಯು ಸಿಟ್ಟಿನಿಂದಾರ್ಭಟಿಸಿ ಜಿಗಿಯಲು ಕಟ್ಟಿದ ಹಗ್ಗಗಳೆಲ್ಲ ಹರಿದುವು. ಅವನು ರಕ್ಕಸರ ಸೇನಾಶರಧಿಯನ್ನು ಪೊಕ್ಕು ಕಲಕಿ ನಾನಾಪ್ರಕಾರದಿಂದ ಅದರಲ್ಲಿ ಭಂಗವನ್ನುಂಟುಮಾಡಿದನು (೧೫-೧೯).

ಶಿಂಶುಮಾರನು ಅವನನ್ನು ತಡೆದು "ಎತ್ತು ಕಾರಹುಣ್ಣಿವೆಯ ದಿವಸ ಪೂಜ್ಯವಲ್ಲದೆ ಸಮರಧಾರುಣಿಗೆ ಯೋಗ್ಯವೇ? ನೀನು ಯಾರಮಗನು? ಎಷ್ಟುದಿವಸ ತಪಸ್ಸುಮಾಡಿ ನಿನ್ನ ತಾಯಿಯು ನಿನ್ನನ್ನು ಹೆತ್ತಳು? ಆದರೂ ನಿನ್ನಲ್ಲಿ ತುಸು ಶೂರ

ತನವುಂಟು" ಎಂದು ಹಾಸ್ಯಮಾಡಿದನು. ಅದಕ್ಕೆ ವೃಷರಾಜನು "ಎಲೆ ಕುನ್ನಿ,
ಒರಲಬೇಡ. ಈ ಹೊತ್ತೇ ಕಾರಹಬ್ಬವು. ನಿನ್ನ ರುಧಿರಧಾರೆಯೆಂಬ ಕೆರೆಯೊಳಗೆ
ಈಸಾಡಿ ಗೆಲವಿನ ವೈಭವವನ್ನು ಪಡೆದು ಘನರಣಾಂಕಣದಲ್ಲಿ ಸುರರಿಂದ ಪೂಜೆಯ
ನ್ನು ಹೊಂದುವೆನು" ಎಂದು ಹೂಂಕರಿಸಿ ವಿಜೃಂಭಿಸಿದನು. ಅನಂತರ ಖಳನು
ವೃಷಪತಿಯ ಮೇಲೆ ಗಿರಿಗಳನ್ನೆರಗಲು, ಒಂದು ಅವನ ರೋಮತತಿಯು ಸೋಂಕಿದ
ಕೂಡಲೆ ಶತಚೂರ್ಣವಾದುದು, ಮತ್ತೊಂದನ್ನು ತನ್ನ ಕೋಡಿನಿಂದೆತ್ತಿ ಬಿಸುಡ
ಲಾಗಿ ಅದು ಅಸುರಬಲದಲ್ಲಿ ಬಿದ್ದು ಅಸಂಖ್ಯಾತ ಜನರನ್ನು ಮಡಿಸಿತು. ಖಳನು
ವೃಷರಾಜನನ್ನು ನುಂಗುವೆನೆಂದು ಬಾಯ್ದೆರೆಯಲು, ವೃಷರಾಜನು ಒಳಹೊಕ್ಕು ಬ
ಳಿಯೆ, ಘೋರದಾನವನ ತನುವು ಬಿರಿದು ಖುರಪುಟದ ಹೊಡೆತದಿಂದ ಎರಡು
ತುಂಡಾಯಿತು. ವೃಷಭನು ಕೋಡುಗಳಿಂದ ಎರಡೂ ತುಂಡುಗಳನ್ನು ನೆಗವಿ
ಒಂದನ್ನು ಮುಪ್ಪುರದ ಕಡೆಗೆ ಮತ್ತೊಂದನ್ನು ಹರಬಲದ ಕಡೆಗೆ ಚೆಲ್ಲಿಕೊಟ್ಟನು.
ದೈತ್ಯಾಮರರು ಎರಡೂ ತುಂಡುಗಳ ಬುಡದಲ್ಲಿ ಸಿಕ್ಕು ಮಡಿದರು. ಶಿಂಶುಮಾರನ
ಮರಣದ ವಾರ್ತೆಯನ್ನು ತಾರಕನ ಹಿರಿಯ ಮಗನು ಕೇಳಿ ಪರಿಭವದ ಬೇಗೆಯಿಂದ
ಅಳಲಿ ಕೂಡಲೆ ಎಚ್ಚೆತ್ತು ರೋಷಾವೇಶದಿಂದ ಪ್ರಬಲದೈತ್ಯನಾಯಕರನ್ನು ಕೂಡಿ
ಕೊಂಡು ಪುರದಿಂದ ಹೊರಟು ಮುಂದೆ ಬಂದು ನಾನಾಪ್ರಕಾರಪ್ರಹಾರದಿಂದ ಸುರ
ಪ್ರಸರವನ್ನು ದೆಸೆಗೆಡಿಸಿದನು (೨೦-೩೨). ಕಮಲಾಕ್ಷ ಜಂಭ ವಜ್ರನಾಭ ವಿದ್ಯು
ನ್ಮಾಲಿ ಶುಂಭ ತಾರಕಾಕ್ಷ ಇವರೆಲ್ಲರು ಒಂದೊಂದು ದಿಕ್ಕಿನಲ್ಲಿ ಮುಂದೆವರಿದು ನಿ
ರ್ಜರಭಟರನ್ನು ಕುಟ್ಟಿ ಘಟ್ಟಿಸಲು ಅವರು ಕೆಟ್ಟೆವೆಂದು ಕಂಡಕಡೆಗೋಡಿದರು.
ಮಡಿದ ದಾನವರೆದ್ದು ಕಾದುತ್ತ ಬೆಂಕೊಂಡು ಬರುವದನ್ನು ಇಂದ್ರನು ನೋಡಿ ಈ
ವರ್ತಮಾನವನ್ನು ಖಂಡಪರಶುವಿಗೆ ಅರುಹಲು, ಅವನು ಅಜಹರಿಗಳನ್ನು ಕರೆದು
"ಚಂಡದೈತ್ಯರ ಪುರದಲ್ಲಿ ಅಮೃತಕೂಪವುಂಟು, ಅದನ್ನು ಬರಿದು ಮಾಡಬೇಕು,
ಉದ್ದಂಡಪಾತಿವ್ರತಿಯರುಂಟು, ಅವರನ್ನು ಕೆಡಿಸಬೇಕು" ಎಂದು ಹೇಳಿ ಕಳುಹಿ
ದನು (೩೩-೩೪).

ಆ ಮೇರೆಗೆ ಹರಿಯಜರು ತಮ್ಮ ರೂಪವನ್ನು ಬದಲಿಸಿ ಹರಿಯು ಪಶುವಾಗಿ
ಅಜನು ಕರುವಾಗಿ ಆ ಪುರದೊಳಗೆ ಹೊಕ್ಕು ಅಮೃತವನ್ನು ಹೀರ್ದರು. ಬಳಿಕ ಅ
ಚ್ಯುತನು ಬೌದ್ಧರೂಪಿನಿಂದ ದನುಜಸತಿಯರ ಹರಭಕ್ತಿಯನ್ನು ಬಿಡಿಸಿ ಅವರ ಪಾ
ತಿವ್ರತ್ಯವನ್ನು ಕೆಡಿಸಿದನು. ಇಬ್ಬರೂ ಬಂದು ತಾವು ಮಾಡಿದ ಕಾರ್ಯವನ್ನು ಈ
ಶಂಗೆ ಬಿನ್ನವಿಸಲು, ಅವನು ಹರಗಣಕೆ ದೈತ್ಯರ ಮೇಲೆ ಸಾಗಲಿಕ್ಕೆ ಅಪ್ಪಣೆಯಿತ್ತ
ನು. ಆಗ ನಂದೀಶ ಮುಂತಾದವರು ತಮ್ಮ ತಮ್ಮ ಸೇನೆಸಹಿತ ಗುಡುಗುಡಿಸಿ ನಡೆ
ತಂದರು. ವೀರಭದ್ರನ ಖಡ್ಗಹತಿಗೆ ಕಮಲಾಕ್ಷನು, ಕುಮಾರನಂಬಿನ ಹತಿಗೆ ವಿದ್ಯು

ನ್ಮಾಲಿಯು ನಂದೀಶನುರವಣೆಗೆ ಶುಂಭನು, ಹರಿಯ ಭರವಸಕೆ ಜಂಭನು, ಭೈರವನ
ಆಡಂಬರಕ್ಕೆ ತಾರಕಾಕ್ಷನು ಮುರಿದು ಬಿದ್ದರು. ಅಭವಬಲದ ವೀರರ ವಿಕ್ರಮಕ್ಕೆ
ಖಳರು ತರಹರಿಸಲಾರದೆ ಕಂಡಕಡೆಗೋಡಿದರು. ರಣಭೂಮಿಯು ಭಯಂಕರ
ವಾಗಿ ಕಣ್ಗೆಸೆದುದು. ಅಸುರಭಟರೆಲ್ಲ ಕೆಲವರು ಸುರಭಟರ ಕಾಲ್ಗೆರಗಿ ಪ್ರಾಣವ
ನ್ನುಳಿಸಿಕೊಂಡೋಡಿದರು, ಕೆಲವರು ಬೀಳುತೇಳುತ ಮುಂದುಗಾಣದೆ ಕಾಲ್ಗೆಟ್ಟೋ
ಡಿದರು. ಹರಗಣವು ಎದುರಾದವರನ್ನು ಸಂಹರಿಸುತ್ತ ನತರಾದವರನ್ನು ರಕ್ಷಿಸು
ತ್ತ ಅವರ ಛತ್ರಚಾಮರಪತಾಕಾಳಿಯನ್ನು ವಶಮಾಡಿಕೊಳ್ಳುತ್ತ ಪುರದ ಹೆಬ್ಬಾಗಿಲಿ
ನಲ್ಲಿ ಧರ್ಮಗಾಳೆಯನ್ನು ಹಿಡಿಸಿ ವಿಜಯೋತ್ಸವದಿಂದ ತಿರುಗಿತು (೩೫-೪೬).

ಇತ್ತ ಕಾಮಸಂಹರನು ಅಚಲಚಾಪದೊಳು ನಿಸ್ಸೀಮಪಾಶುಪತಾಸ್ತ್ರವನ್ನು
ಹೂಡಿ ಖಳರನ್ನು ನಿರ್ನಾಮಮಾಡಬೇಕೆಂದು ಮುಪ್ಪುರದ ಕೀಲನ್ನು ನಿರೀಕ್ಷಿಸು
ತ್ತಿದ್ದನು. ಸುರಸಹಸ್ರವರ್ಷಗಳು ಸಂದಲು ಆ ಪುರಗಳೊಂದಾದುವು. ಈಶ್ವರನು
ಲಲಾಟೇಕ್ಷಣಾಗ್ನಿಯನ್ನು ಹುರಿಗೊಳಿಸಿ ಬಾಣವನ್ನು ಬಿಡಲು ಪುರತ್ರಯದ ಕೀಲವು
ಖಂಡಿಸಿ ಅದರ ಪರಿಕರಗಳೆಲ್ಲವು ಸುಟ್ಟು ಹೋದುವು. ಆ ಕ್ಷಣದಲ್ಲಿಯೇ ದೈತ್ಯ
ಸಂಕುಲವು ಕರಿದಾದುದು. ಸುರರು ಈಶ್ವರನ ಮುಡಿಯಲ್ಲಿ ಪೂಮಳೆಗರೆದರು. ಶಿ
ವನು ಅವರನ್ನು ಕರುಣದಿಂದ ನೋಡಿ ಮನ್ನಿಸಿ ಅವರ ಪುರಗಳಿಗೆ ಬೀಳ್ಕೊಟ್ಟು
ಮಂದರಾಚಲಕ್ಕೈದಿ ಗಿರಿಜೆಯೊಡಗೂಡಿ ಸುಖದಿಂದಿದ್ದನು (೪೭-೪೯).

೪೫ ಜಲಕ್ರೀಡೆಯ ಸಂಧಿ

ಶಂಕರನು ಮಂದರಾಚಲದಲ್ಲಿ ವಾಸಿಸುತ್ತಿದ್ದ ಕಾಲದಲ್ಲಿ ಪುಷ್ಪದತ್ತನೆಂಬುವನು
ಪ್ರತಿದಿವಸ ಲೋಕಲೋಕದ ವನಗಳಿಂದ ಮೊದಲಾದ ಕುಸುಮಗಳನ್ನು ತಂದು ಮಾ
ಲೆಗಟ್ಟಿ ಪಾರ್ವತಿಯ ಸಿರಿಮುಡಿಗಾಗಿ ಅತಿ ಭಕ್ತಿಯಿಂದ ಕೊಡುತ್ತಿದ್ದನು (೨).
ಒಂದು ದಿವಸ ಅವನು ತಂದ ಮಾಲೆಯಲ್ಲಿ ಪಾರಿಜಾತ ಕುಸುಮವನ್ನು ಕಾಣದೆ ಪಾ
ರ್ವತಿಯು ಆ ಹೂವಡಿಗನ ಮೊಗವನ್ನು ನೋಡಲು ಅವನು ಭೀತಿಯಿಂದ “ ಅದು
ಸುರವನದ ಕುಸುಮವಾದುದರಿಂದ ಇಂದ್ರನ ಅರಸಿಯು ಅದನ್ನು ಮೊದಲೇ ತರಿಸಿ
ಕೊಂಡು ಮುಡಿದಳು ” ಎಂದು ಈಶ್ವರನಿಗೆ ಕೇಳುವಂತೆ ಹೇಳಿದನು (೩). ಈ
ಮಾತಿನಿಂದ ಭವಾನಿಗೆ ಈರ್ಷೆಯುಂಟಾದರೆ ಮುಂದೇನಾಗುವದೋ ಎಂದು ಈಶ್ವರ
ನು ವಿಚಾರಮಾಡಿ, ಆಕೆಗೆ “ ಆ ಸುರತರುಗಳು ಇದೇ ಇರುವುವು. ಅವುಗಳ ಕು
ಸುಮಗಳೇನು ಅಧಿಕ? ನಿನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಸುರತರುಗಳ ವನವ

ನ್ನೇ ಈ ಪರ್ವತದ ತಪ್ಪಲಲ್ಲಿ ಆಗಿಸಿರುವೆನು. ನೋಡು, ನಡೆ" ಯೆನ್ನಲು ಗಿರಿಜೆಯು ಸಖಿಯರನ್ನು ಕೂಡಿಕೊಂಡು ಹೊರಟಳು (೪). ಅನಂತ ಸಖಿಯರನ್ನು ಕೂಡಿಕೊಂಡು ಪಾರ್ವತಿಯು ಆ ವನದೊಳಗೆ ಹೊಕ್ಕು ನೋಡಲು ಒಂದು ಸಹಸ್ರ ಯೋಜನದಗಲವಾಗಿಯೂ ಮುಗಿಲು ಮುಟ್ಟುವಂತೆಯೂ ಸುರತರುಗಳು ಬೆಳೆದಿದ್ದುವು. ಆ ವನವು ಹಲವು ಜಾತಿಯ ಹೂಗಿಡಗಳಿಂದಲೂ ಅಮೃತದ ಕೊಳಗಳಿಂದಲೂ ಶೋಭಿಸುತ್ತಿತ್ತು. ಅದನ್ನು ನೋಡಿ ನಗುತ್ತ ಗಿರಿಜೆಯು "ಎಲೈ ದೇವ, ನಿಮ್ಮ ಅಡಿಗಳ ಕರುಣಾಮೃತದ ಮಳೆಯಲ್ಲಿ ನನಗೆ ಯಾವ ಸುಖದ ಬೆಳೆಯು ಬೆಳೆಯಲಾರದು?" ಎಂದು ಹೊಗಳುತ್ತಿರಲು, ಶಿವನು "ಇದು ಚೈತ್ರರಥವನ, ಇದನ್ನು ಯಾವ ವನಗಳೂ ಸರಿಗಟ್ಟಲಾರವು, ಇದರ ಹೂಗಳೇ ನಿನ್ನ ಮುಡಿಗೆ, ಈ ಹೂಗಳಿಗೆ ನಿನ್ನ ಮುಡಿಯೇ ಯೋಗ್ಯವಾಗಿರುವುವು" ಎಂದು ಹೊಸ ಹೂಗಳನ್ನು ತರಿಸಿ ಪಾರ್ವತಿಗೆ ಅವುಗಳನ್ನು ತನ್ನ ಕೈಯಿಂದಲೆ ಮುಡಿಸಿ ಎಣ್ಣೆಗಂಟಿಟ್ಟು ಸಂತೋಷಬಟ್ಟು, ವನಪಾಲನಿಗೆ ಆ ವನವನ್ನು ಸಲಹುವಂತೆಯೂ ಪ್ರತಿದಿನವೂ ತಪ್ಪದೆ ಹೂಗಳನ್ನು ಪಾರ್ವತಿಗೆ ತಂದು ಕೊಡುವಂತೆಯೂ ನೇಮಿಸಿದನು (೫-೭).

ಈಶ್ವರನು ಪಾರ್ವತಿಯೊಡಗೂಡಿ ತಿರುಗಿ ಮಂದರಾಚಲಕ್ಕೆ ಬಂದು ದೇವತೆಗಳನ್ನು ಓಲೈಸುತ್ತಿರಲು ವಸಂತಕಾಲವು ಪ್ರಾಪ್ತವಾಯಿತು (೮). ಆಗ ತೋಟತೋಟಗಳಲ್ಲಿ ಮಲ್ಲಿಗೆಗಳು ಅರಳಿದುವು; ಮಾಮರಗಳು ಕಾತುವು; ಗಿಡಗಿಡಗಳಲ್ಲಿ ಹಣ್ಣುಹಂಪಲಗಳು ಜೋತು ಒರಗಿದುವು (೯-೧೦). ತೆಂಕಣದಿಂದೆ ಎಳಗಾಳಿಯು ಕಾಮದೂತನಂತೆ ಸುಳಿಯಿತು (೧೨). ಮೌನವ್ರತವನ್ನು ಪಾಲಿಸುತ್ತಿದ್ದ ಕೋಗಿಲೆಯು ಮೌನವನ್ನು ಬಿಟ್ಟು ಉಲಿಯತೊಡಗಿತು. ಮಲ್ಲಿಗೆಯೆಂಬ ಮಾನಿನಿಗೆ ಚಂಡಾಳಿ (ಚಂಡ-ಅಳಿ) ಗಳ ಸಂಗವಾಯಿತು. ಸೂರ್ಯನ ಅರಸಿಯಾದ ಕಮಲಿನಿಯು ಬಂಡಿಗೆ (ಹೂಗಳೊಳಗಿನ ಜೇನು) ಒಳಗಾದಳು. ಹೀಗೆ ಮಧುಸಂಗದಿಂದ ಉತ್ತಮ ಜಾತಿಯು ಹೀನವಾಯಿತು ಎಂಬಂತೆ ವಸಂತವು ತಲೆದೋರಿತು (೧೩). ಕೊಳಗಳಲ್ಲಿ ಆಡುವ ಹಂಸ-ಕ್ರೌಂಚ ಪಕ್ಷಿಗಳಿಂದಲೂ, ಬಿರಿಮುಗುಳುಗಳಿಗೆ ಎರಗುವ ತುಂಬಿಗಳಿಂದಲೂ, ಹಣ್ಣುಗಳನ್ನು ತಿನ್ನುವ ಗಿಳಿಗಳಿಂದಲೂ, ಹರುಷದಿಂದ ಒಪ್ಪುವ ವಿಟರ ಕೇಳಿಗಳಿಂದಲೂ, ಹೂಗಳ ಸೊಗಸುಗಂಪಿನಿಂದಲೂ ಬನಗಳೆಲ್ಲ ಚೆಲ್ವಾದುವು (೨೩). ಹೀಗೆ ಜನರಿಗೆ ಆನಂದವನ್ನು ಕೊಡುತ್ತ ವಸಂತವು ಬರಲು ಚೈತ್ರರಥವನಪಾಲನು ಪಾರ್ವತಿಯೊಡನೆ ಶಿವನ ವಿನೋದಕ್ಕೆ ಯೋಗ್ಯವಾಗುವಂತೆ ಆ ವನವನ್ನು ಸಿಂಗರಿಸಿದನು (೨೫).

ಅಲ್ಲಿಗಲ್ಲಿಗೆ ಲತಾಮಂಟಪಗಳಿಂದಲೂ, ಹೂಗಳಿಂದ ಸಮೆದ ಚಾವಡಿ ಮಲಗುಮಾಡುಗಳಿಂದಲೂ, ಅಲ್ಲಿಗಲ್ಲಿಗೆ ಪನ್ನೀರ ಕಾಲುವೆಗಳಿಂದಲೂ, ತಳಿರ ಗುಡಿತೋರ

ಣಾಗಳಿಂದಲೂ, ಅಲ್ಲಗಲ್ಲಿಗೆ ಸತ್ತಿಸುವ ಪ್ರೋವಲಿ ಕೆಪರುವ ಪರಿಮಳ ಜಲವನ್ನು ಜೊ ಕೊಳ್ಳಿಸಿಯಿಂದ ಬಸೆಯುವ ಹೂಗಳ ಗೊಂಬೆಗಳಿಂದಲೂ ಆ ವನವು ಚೆಲ್ವಾಯಿತು (೨೬-೨೭).

ಆ ವನದ ಪಾಲಕನು ತರತರದ ಹೂ-ಹಣ್ಣುಗಳನ್ನು ತೆಗೆದುಕೊಂಡು, ಈಶ್ವರನ ದರುಶನಕ್ಕೆ ಹೋಗಿ ಸಾಷ್ಟಾಂಗ ನಮಸ್ಕಾರಮಾಡಿ "ನೀವು ನಿರ್ಮಿಸಿ ನನಗೆ ಸಲಹಲಿಕ್ಕೆ ನೇಮಿಸಿದ ವನವು ಈಗ ಫಲಿಸಿರುತ್ತದೆ. ಅದನ್ನು ನಿರೀಕ್ಷಿಸುವದಾಗಬೇಕೆಂ" ದು ಬಿನ್ನವಿಸಿ ತಾನು ತಂದ ಕಾಣ್ಕೆಯನ್ನು ಶಿವನ ಮುಂದಿಳುಪಿದನು. ಅವನ ಮಾತುಗಳಿಗೆ ಒಪ್ಪಿಕೊಂಡು ಶಿವನು ಪಾರ್ವತಿಯೊಡನೆ ವನದ ವಿಲಾಸವನ್ನು ನೋಡಲು ಹೊರಟನು. ಆಗ ಪಾರ್ವತಿಯ ಹಿಂದೆ ಅವಳ ಅಸಂಖ್ಯ ಸಖಿಯರು ಹೊರಟರು (೨೮-೩೨).

ಸ್ಥಾವರವನಕ್ಕೆ ಜಂಗಮವನ ಬಂದಂತೆ ಬಂದ ಆ ಸತಿಯರು ಹಿಂಡುಹಿಂಡಾಗಿ ಆ ವನವನ್ನು ಹೊಕ್ಕು ಬಗೆಬಗೆಯ ಹೂಗಳನ್ನು ಕೊಯ್ದು ತಂದು ಈಶ್ವರನಿಗೆ ಕಾಣ್ಕೆಯೆಂದು ಕೊಟ್ಟರು (೩೩-೪೩). ಈಶ್ವರನು ಅವರೊಡನೆ ವನದ ಸಿರಿಯನ್ನು ನೋಡಿ ಆನಂದಬಟ್ಟು ಆ ವನದಲ್ಲಿದ್ದ ಮನೋಹರವಾದ ಸರಸ್ಸಿಗೆ ಬಂದನು. ಅದರಲ್ಲಿ ಪಾರ್ವತಿ ಮತ್ತು ಅವಳ ಸಖಿಯರೊಡನೆ ಶಿವನು ಜಲಕ್ರೀಡೆಯಾಡಿದನು (೪೪-೬೪). ಈ ರೀತಿ ನಾನಾ ವಿನೋದಗಳನ್ನು ಮಾಡಿ ಪಾರ್ವತಿ ಪರಮೇಶ್ವರರು ಮಡಿವಸ್ತ್ರ-ಭೂಷಣಗಳನ್ನು ಧರಿಸಿ ಮರಳಿ ತಮ್ಮ ರಾಜಾಲಯವನ್ನು ಸೇರಿ ನಾನಾ ವಿಲಾಸದೊಳಗಿದ್ದರು (೬೫-೬೭).

೪೬ ಗಂಗಾಧರಲೀಲೆಯ ಸಂಧಿ

ಮರುದಿವಸ ಶಿವನು ಒಬ್ಬನೇ ರಾಜಾಲಯದ ಹೊರಬಾಗಿಲವನ್ನು ದಾಟಿ ಸುತ್ತಲಿನ ಬನದ ಚೆಲ್ವನ್ನು ನಿರೀಕ್ಷಿಸುತ್ತ ಮುಂದೆ ಬರಲು ತಳಿರು ಹೂಮಿಡಿ ಕಾಯಿ ಹಣ್ಣುಗಳಿಂದ ಶೋಭಿಸುತ್ತಿದ್ದ ಒಂದು ಮಾವಿನ ಮರವನ್ನು ಕಂಡನು. ಅದು ಶಿವನ ಕಣ್ಣಿಗೆ ಕಾಮನ ಸೂಕ್ಮಾನೆಯಂತೆ ಕಂಗೊಳಿಸುತ್ತಿತ್ತು (೨-೩). ಆ ಮರವನ್ನು ಹರುಷದಿಂದ ನೋಡುತ್ತ ಶಿವನು ಒಂದು ಚಂದ್ರಕಾಂತ ಸಿಲೆಯ ಜಗುಲಿಯ ಮೇಲೆ ಕುಳಿತುಕೊಳ್ಳಲು ಆ ಮರದ ತುದಿಗೊಂಬಿನಲ್ಲಿ ಒಂದು ಹೆಣ್ಣು ಗಿಳಿಯು ತನ್ನ ಮನದನ್ನನಾದ ಅರಸಗಿಳಿ ಇರಳು ಬಾರದಿರಲು, ಶೋಕಿಸುತ್ತಿದ್ದುದನ್ನು ಕಂಡನು. ತನ್ನ ಇನಿಯನು ಬಾರದುದಕ್ಕೆ ಏನಾದರೂ ಅಪಾಯವುಂಟಾದುದು

ಕಾರಣವಾಗಿರಬಹುದೇ ? ಅಥವಾ ಯಾವುದಾದರೂ ಹೊಸ ಹೆಣ್ಣು ಗಿಳಿಯ ಮೋಹಕ್ಕೆ ಸಿಕ್ಕಿ ತಡೆದಿರಬಹುದೇ ಎಂದು ಬಹು ವಿಧವಾಗಿ ಶೋಕಿಸಿ, ಬರುವ ಬಟ್ಟೆಯನ್ನೇ ನೋಡುತ್ತ ಪತಿವಿರಹದಿಂದ ತೊಳಲುತ್ತಿರುವಷ್ಟರಲ್ಲಿ ಗಂಡು ಗಿಳಿಯು ಘುಸೃಣಮಲಯಜೋದಕದಲ್ಲಿ ತೊಯ್ದ ಶರೀರದಿಂದ ಹೆಣ್ಣು ಗಿಳಿಯ ಹತ್ತಿರಕ್ಕೆ ಹರಣವು ಬರುವಂತೆ ಬಂದಿತು. ಅದನ್ನು ಕಂಡು ಆ ಹೆಣ್ಣು ಗಿಳಿಯು ತನ್ನ ಪ್ರಿಯನ ಮೈಯ್ಯ ಪರಿಮಳವು ಅನ್ಯರತಸಂಬಂಧವೆಂದು ಕೋಪದಿಂದ ಕಣ್ಣೀರು ಸುರಿಸುತ್ತ ಮೌನವನ್ನು ಧರಿಸಿ ಕಣ್ಣು ಮುಚ್ಚಿಕೊಂಡಿತು. ಆ ಗಂಡು ಗಿಳಿಯು ಪರಿಪರಿಯಿಂದ ಅದರ ಕೋಪವನ್ನು ಹೋಗಲಾಡಿಸಲು ಯತ್ನಮಾಡಿ ತನ್ನ ಮೈಯ್ಯ ಪರಿಮಳದ ಕಾರಣವನ್ನು ಈ ರೀತಿಯಾಗಿ ಹೇಳಿತು: "ನಿನ್ನೆ ಬನದಲ್ಲಿಯ ಕೊಳದಲ್ಲಿ ಈಶ್ವರನು ಜಲಕ್ರೀಡೆಯನ್ನು ಮಾಡಿದುದರಿಂದ ಅದು ಪುಣ್ಯತೀರ್ಥವಾದುದರಿಂದ ಅಲ್ಲಿ ಹರಿಬ್ರಹ್ಮರು ಸ್ನಾನಮಾಡಿ ಸುಕೃತಿಗಳಾದರು. ನಾನೂ ಅಲ್ಲಿ ಸ್ನಾನಮಾಡಿ ಬರುವುದಕ್ಕೆ ತಡವಾಯಿತು. ಆ ಕೊಳವನ್ನು ನಿನಗೆ ತೋರಿಸುವೆನು" ಎಂದು ಸಂತೈಸಿತು (೪-೧೨). ಗಿಳಿಗಳ ಸರಸ ವಿನೋದವನ್ನು ಶಿವನು ಆಲಿಸುತ್ತಿರಲು ಗಿರಿಜೆಯು ಈಶ್ವರನನ್ನು ಮನೆಯಲ್ಲಿ ಕಾಣದೆ ಅವನನ್ನು ಹುಡುಕುತ್ತ ದೂರದಿಂದಲೆ ಆತನನ್ನು ಜಗುಲಿಯ ಮೇಲೆ ಕಂಡಳು. ಕೂಡಲೇ ಒಂದು ಉಪಾಯಮಾಡಬೇಕೆಂದು ಬಗೆದು ಆಭರಣಗಳ ಸಪ್ಪಳವಾಗದಂತೆ ಮಾಡಿಕೊಂಡು ಸಖಿಯರನ್ನು ಚಲಿಸಬಾರದೆಂದು ಕೈಸನ್ನೆಯಿಂದಲೇ ತಿಳಿಸಿ ಮೆಲ್ಲಗೆ ಹಿಂದಿನಿಂದ ಹೋಗಿ ಶಿವನ ಎರಡು ಕಣ್ಣುಗಳನ್ನು ತನ್ನ ಚೆಂದಳಿಗೈಗಳಿಂದ ಮುಚ್ಚಿದಳು (೧೩-೧೬). ಶಿವನ ಕಣ್ಣುಗಳು ಮುಚ್ಚಿದೊಡನೆ ಸೂರ್ಯಚಂದ್ರರ ಮೂರ್ತಿಗಳು ಮುಚ್ಚಿದುವು; ಎಲ್ಲಾ ಭುವನಜನರ ಕಣ್ಣುಗಳು ಮುಚ್ಚಿದುವು; ಜಗತ್ತಿನೊಳಗಿನ ಬೆಳಕೆಲ್ಲ ಅಡಗಿ ಘೋರಾಂಧಕಾರವು ಅತಿ ಭಯಂಕರವಾಗಿ ಹಬ್ಬಿತು (೧೭-೧೮). ಇದರಿಂದ ಅಖಿಳ ಲೋಕದ ಜನರಿಗೆ ದಿಕ್ಕೇ ತೋಚದಂತಾಗಿ ಮುಂದಕ್ಕೆ ಹೆಜ್ಜೆಯಿಡಲು ಅಂಜಿ ಕಲ್ಮರವಾಗಿ ನಿಂತಲ್ಲಿಯೇ ಲಯವಾಗುತ್ತಿರಲು ಶಿವನು ಲೋಕಾಪತ್ತನ್ನು ನೆನೆದು, "ಅಕಟಾ" ಎಂದು ಪಾರ್ವತಿಯ ಕೈಗಳನ್ನು ಬಿಡಿಸಹೋದರೆ ಸಿಟ್ಟಾಗುವಳೆಂದು ತಿಳಿದು ಕತ್ತಲೆಯ ಮನೆಗೆ ದೀಪವಿಡುವಂತೆ ತನ್ನ ನೊಸಲಗಣ್ಣನ್ನು ಎಳ್ಳಷ್ಟು ಮೆಲ್ಲಗೆ ತೆರೆದನು (೧೯-೨೨).

ಭವನ ಹಣೆಗಣ್ಣ ಉರಿಯ ಬೆಳಕು ಕತ್ತಲೆಯನ್ನು ಓಡಿಸಲು ಮುಂದೊಂದು ಕಾರಣದ ಸಲುವಾಗಿ ಆ ತಮವೆಲ್ಲ ಒಟ್ಟುಗೂಡಿ ಶಿವನಿದಿರಿನಲ್ಲಿ ಒಂದು ಶಿಶುವಾಗಿ ನಲಿಯಲಾರಂಭಿಸಿತು. ಇತ್ತ ಹಣೆಗಣ್ಣ ಕಿಚ್ಚು ಭುವನಗಳನ್ನು ಸುಡತೊಡಗಿತು. ಆ ಜ್ವಾಲೆಯ ಪ್ರಭಾವಕ್ಕೆ ಬೆಟ್ಟಗಳು ಸಿಡಿದು ಹಾರಿದುವು. ಸಪ್ತಸಮುದ್ರಗಳು ಬತ್ತಿದುವು. ಬ್ರಹ್ಮಾಂಡವು ಒಡೆದು ಮೇಲಿನ ಜಲವು ಸೋದಿಹೋಯಿತು. ಅಮಲ

ಲೋಕದ ಜೀವಿಗಳು ಬೆಂದು ಹೋಗುತ್ತಿರಲು ಹರಿಬ್ರಹ್ಮ ಮೊದಲಾದವರು ಬಾಯಿ ಬಿಡುತ್ತಿರಲು ಪಾರ್ವತಿಯು ತನ್ನಿಂದ ತಪ್ಪಾಯಿತೆಂದು ತಿಳಿದು ಶಿವನ ಕಣ್ಣುಗಳನ್ನು ಮುಚ್ಚಿದ ಎರಡು ಕೈಗಳನ್ನು ತೆಗೆದಳು (೨೩-೨೭). ಆಗ ಮತ್ತೊಂದು ಅಮೃತವು ಪ್ರಕಟವಾಯಿತು. ಈಶ್ವರನ ಆನಂದಭಾಷ್ಪಗಳು ಪಾರ್ವತಿಯ ಬೊಗಸೆಯಲ್ಲಿ ತುಂಬಿರಲು ಅವುಗಳನ್ನು ಅವಳು ಕೊಡವಿದಳು. ಅವಳ ಹತ್ತು ಬೆರಳುಗಳಿಂದ ಇಳಿದ ನೀರು ಹತ್ತು ನದಿಗಳಾಗಿ ಹತ್ತು ದಿಕ್ಕುಗಳಲ್ಲಿಯೂ ಪ್ರವಹಿಸಿ ಅಡಿಗಡಿಗೆ ಹೆಚ್ಚುತ್ತಿರಲು ಎಲ್ಲಕಡೆಯಲ್ಲಿಯೂ ಹಬ್ಬಿದ ಉರಿಯು ನಂದಿ ಜಲಮಯವಾಯಿತು (೨೮).

ಈ ಜಲವು ಎಲ್ಲೆಡೆಗಳಲ್ಲ ಹಬ್ಬಲು ಲೋಕವೆಲ್ಲವೂ ಅದರಲ್ಲ ಮುಳಿಗಿದುವು. ವಿಷ್ಣು ಮೊದಲಾದವರು ಹೌಹಾರಿ ಹೋದರು. ಅಷ್ಟರಲ್ಲ ಶಿವನು ಸೃಷ್ಟಿ ಅಳಿಯುವುದೆಂದು ತಿಳಿದು ತನ್ನ ಕಿರುಜಡೆಯ ಕೊನೆಯನ್ನು ಆ ಜಲದಲ್ಲ ಎದ್ದಲು ಎಲ್ಲಕಡೆಗೂ ಪಸರಿಸಿದ್ದ ಉದಕವು ಸರ್ರನೆ ಬಂದು ಒಂದು ಪ್ರಕಾಶಿಸುವ ಮುತ್ತಿನ ಮಣಿಯಂತೆ ಜಡೆಯ ತುದಿಯಲ್ಲಿರಲು ಅದನ್ನು ಶಿವನು ಶಿರದಲ್ಲ ಧರಿಸಿ ಗಂಗಾಧರನಾದನು (೨೯-೩೩). ಆಗ ದೇವ ಮಾನವ ಉರಗ ಮೊದಲಾದ ನಾನಾ ಲೋಕಗಳು ಎಂದಿನಂತೆ ಇದ್ದುವು (೩೪-೩೬).

೪೭ ಅಂಧಕಾಸುರೋತ್ಪತ್ತಿಯ ಸಂಧಿ

ಓಪ್ಪರಾಮೇಶನೇ ಕೇಳು. ಕನಕಾಂಬಕನೆಂಬ ರಕ್ಕಸನು ವಿಷ್ಣು ಬ್ರಹ್ಮ ಇಂದ್ರ ಮುಂತಾದವರನ್ನು ಗೆಲ್ಲುವ ಪುತ್ರನ ಸಲುವಾಗಿ ಈಶ್ವರನನ್ನು ಕುರಿತು ಬಹುಕಾಲ ತಪವನಾಚರಿಸುವುದನ್ನು ಈಶ್ವರನು ಅರಿತು. ಕಾಳಿಯು ತನ್ನ ಕಣ್ಣುಗಳನ್ನು ಮುಚ್ಚುವುದರಿಂದುಂಟಾದ ಕಾಳಗತ್ತಲೆಯ ಶಿಶುವನ್ನು ಕೈಲಾಸಗಿರಿತಟದಲ್ಲಿ ತಪವನಾಚರಿಸುವ ಆ ಖಳನಿಗೆ ಕೊಟ್ಟು ತಿರುಗಿ ರಜತಗಿರಿಯನ್ನು ಹೊಕ್ಕು ಗಿರಿಜೆಯೊಡಗೂಡಿ ಸುಖದಿಂದಿದ್ದನು (೨-೪).

ಇತ್ತ ಹಿರಣ್ಯಾಕ್ಷನು ಸಂತೋಷದಿಂದ ಆ ಶಿಶುವನ್ನು ತೆಗೆದುಕೊಂಡು ಅತಿಬ ವೈಭವದೊಡನೆ ತನ್ನ ಮಂದಿರಕ್ಕೆ ಬಂದು ಅದನ್ನು ತನ್ನುತ್ತಮಾಂಗನೆಯ ಕೈಯಲ್ಲಿ ಕೊಡಲು ಅವಳು ಹರುಷಾಶ್ರುವಿನಲ್ಲಿ ಮುಳುಗಿ ಪತಿಯ ಪೌರುಷವನ್ನು ಕೊಂಡಾಡಿದಳು. ಶುಕ್ರನ ಅಪ್ಪಣೆಯ ಮೇರೆಗೆ ಈಶ್ವರನು ನುಡಿದಂತೆ ಆ ಶಿಶುವಿಗೆ ಅಂಧಕಾಸುರನೆಂದು ಹೆಸರಿಟ್ಟನು. ಅವನು ದಿನದಿನಕ್ಕೆ ಬೆಳೆದು ದೊಡ್ಡವನಾದನು

(೫-೭). ಹಿಂದಕ್ಕೆ ಹರಿಯು ವರಾಹ ನರಸಿಂಹಾವತಾರಗಳಲ್ಲಿ ಸಂಹರಿಸಿದ ಕನಕಲೋಚನ ಹಿರಣ್ಯಕಶಿಪುಗಳ ಅಣ್ಣತಮ್ಮಂದಿರ ಪುತ್ರ ಮಿತ್ರ ಸಾಮಂತ ಸೇನಾಪಿ ಸಚಿವರ ಸಂತತಿಗಳು ಶುಕ್ರನೇಮದಿಂದ ಅಂಧಕಾಸುರನೆಡೆಗೈತಂದು ಅವನಿಗೆ ಅಸುರರಾಜಪಟ್ಟವನ್ನು ಕಟ್ಟಿ ಕೈಮುಗಿದು ಕಾಣ್ಕೆಗಳನಿಕ್ಕಿ ಓಲೈಸಲು ಜಗತ್ತಿನಲ್ಲೆಲ್ಲ ಅವನ ತೇಜವು ಪಸರಿಸಿತು. ದೈತ್ಯರ ಸಹಾಯದಿಂದ ಅವನು ದಿಕ್ಕುದಿಕ್ಕುಗಳಲ್ಲಿ ದಾಳಿಯನಿಟ್ಟು ಸಪ್ತ ಸಮುದ್ರಗಳನ್ನು ದಾಟಿ ಅವುಗಳ ಮಧ್ಯದಲ್ಲಿ ಸಪ್ತ ದ್ವೀಪಗಳನ್ನು ಕಟ್ಟಿಕೊಂಡಿರುವ ಸಪ್ತಾರ್ಷಿ ಮೊದಲಾದ ದಿಕ್ಪಾಲಕರನ್ನು ಸದೆದು, ಸಪ್ತಾಶ್ವ ಚಂದ್ರ ವಸು ಮನುಗಳನ್ನು ಬಡಿದು ದ್ವಿಸಪ್ತ ಲೋಕಗಳ ಮುಂದೆ ದಾಳಿಯನ್ನಿಟ್ಟನು (೮-೧೧). ಇದನ್ನು ಕಂಡು ವಿಷ್ಣು ಮುಂತಾದವರು ಗೂಳೆಯನ್ನು ತೆಗೆದು ರಜತಗಿರಿಯನ್ನು ಸೇರಿದರು. ಆಮೇಲೆ ಅಂಧಕಾಸುರನು ತನ್ನನ್ನೆದುರಿಸುವವರು ಯಾರೂ ಇಲ್ಲವೆಂದು ಬಗೆದು ಒಂದು ದಿವಸ ಓಲಗಗೊಡಲಾಗಿ ಅಲ್ಲಿ ಕೋಟಾನುಕೋಟಿ ದಡಿಗ ರಕ್ಕಸರು ಬಂದು ನೆರೆದರು. ಆಗ್ಗೆ ಆಕಾಶಮಾರ್ಗದಿಂದ ನಾರದನು ಸಭೆಗೆ ಬರಲು ಖಳಶಿರೋಮಣಿಯು ಅವನನ್ನು ಇದಿರ್ಗೊಂಡು ನಮಸ್ಕರಿಸಿ ಸಿಂಹಾಸನಾರ್ಧದಲ್ಲಿ ಕುಳ್ಳಿರಿಸಿ ವಿನಯದಿಂದ “ ನಮ್ಮ ಮಹಾಪುಣ್ಯದ ಫಲದಿಂದ ನಿಮ್ಮ ದರುಶನವಾಯಿತು. ಯಾವಲ್ಲಿಂದ ನೀವು ಇಲ್ಲಿ ಬಂದಿರಿ? ನಿಮ್ಮ ವಾಸವು ಯಾವುದು ? ಬಂದ ಕಾರಣವೇನು ? ” ಎಂದು ಕೇಳಿದನು (೧೨-೧೬). ಅದಕ್ಕೆ ನಾರದನು “ ನಮ್ಮ ಮನಸ್ಸು ಬಂದೆಡೆಯಲ್ಲಿರುವೆವು. ದಿನಾಲು ಅಖಿಲ ಲೋಕದ ಕರ್ತನಾದ ಈಶ್ವರನ ಓಲಗಕ್ಕೆ ಹೋಗಿಬರುವೆವು. ನಿನ್ನ ಭುಜದರ್ಪದಿಂದ ನೊಂದ ಹರಿಮುಖ್ಯದೇವತೆಗಳು ಶಿವನಿಗೆ ಮೊರೆಯಿಡಲು ಅದನ್ನು ಕೇಳಿ ಈಶ್ವರನು ನಿನ್ನ ವಧೆಗೆ ಬರುವನೆಂಬುದನ್ನು ನಿನಗೆ ಉಸಿರಬಂದೆವು ” ಎಂದು ಹೇಳಿದನು. ಇದನ್ನು ಕೇಳಿ ಅಸುರನು ಗಹಗಹಿಸಿ ನಕ್ಕು ಶುಕ್ರನ ಮೊಗವನ್ನು ನೋಡಿ “ ಜಗದೊಡೆಯನು ಇನ್ನೊಬ್ಬನಿರುವನೆಂದು ಇಂದಿನ ವರೆಗೆ ನಮಗೆ ಯಾರೂ ಹೇಳಿದ್ದಿಲ್ಲ. ಭಾಪು! ನಮ್ಮ ಪಿತನನ್ನು ಸೀಳಿದವನನ್ನು ಮರೆಹೊಗಿಸಿಕೊಂಡು ನಮ್ಮನ್ನು ಕೊಂದು ಬಾಳುವವನ ಹೆಸರೇನು? ಹರಿಯಜಾದ್ಯರು ನಮ್ಮ ಮೂರನು ಆ ಮಸಣನಾಹಿಗೆ ಉಸುರಿದರೆ! ಆ ಬೂದಿಬಡಕನು ಅವರ ಮೊರೆಯನ್ನು ಆಲಿಸಿದನೆ? ದಿಗ್ವಿಜಯದಲ್ಲಿ ಗೊರವನೆಂದು ನಾವು ಅವನನ್ನು ಉಳಿಸಿದೆವು. ಅವನೇ ಜಗತ್ಕರ್ತನಂತೆ ” ಎಂದು ಗರ್ಜಿಸಿದನು (೧೭-೧೯). ಆ ಗರ್ಜನೆಯ ದನಿಗೆ ಅಖಿಲ ಲೋಕಗಳ ಜನರು ಬೆದರಿದರು. ನಾರದನು ಆಶ್ಚರ್ಯಪಟ್ಟು ಹೊರಟುಹೋದನು. ಬಳಿಕ ಅಂಧಕಾಸುರನು ಶತಮಾಯನೆಂಬ ಸೇನಾನಿಯನ್ನು ಕರೆದು ನಿಶುಂಭ ಶುಂಭ ಜಂಭ ಮುಂತಾದ ಖಳಮುಖ್ಯರಿಗೆ ಬರಹೇಳಿ ಕೈಲಾಸಕ್ಕೆ ದಾಳಿಯಿಡಲಿಕ್ಕೆ ನೇಮಿ

ಸಿದನು (೨೦-೨೨). ಇದನ್ನು ಪ್ರಹಲ್ಲಾದನು ಕಂಡು "ಹೋ ಹೋ! ಸಾಕು ಸಾಕು! ಇದೇನು ದೊಡ್ಡಸ್ತಿಕೆ? ಕಲಹವು ಯಾರ ಕೂಡ? ದಾಳಿಯಿಲ್ಲ? ಬಲ್ಲವರು ಹಿಂದುಮುಂದೆಣಿಸದೆ ಹೀಗೆ ಉಬ್ಬುವರೆ? ತಮ್ಮ ಬಾಯ ಹವಣಿನ ತುತ್ತನುಂಬುವದು ಒಳಿತು. ಶಿವನು ಯಾರು? ನಿನ್ನ ಜನನವು ಯಾರಿಂದಾಯಿತು? ಶುಕ್ರನನ್ನು ಕೇಳು. ಬರಿದೆ ಭ್ರಮಿಸಬೇಡ. ಶಿವನ ಶಶಿಸೂರ್ಯನೇತ್ರಗಳನ್ನು ಗಿರಿಜೆಯು ಚೇಷ್ಟೆಯಿಂದ ಮುಚ್ಚಲಾಗಿ ತಮವು ಹೆಚ್ಚಿತು. ಈಶನು ಆಗ್ಗೆ ಉರಿಗಣ್ಣಿನ ಬೆಳಕು ತೋರಿಸಲು ಆ ತಮದಳವಿನೊಳಗೆ ನೀನು ಹುಟ್ಟಿ ಶಿವನ ಮಗ್ಗುಲಲ್ಲಿ ಅಳುತ್ತಿರಲು ಅವನು ನಿನ್ನನ್ನು ಕಂಡು ಕನಕಾಕ್ಷನ ತಪಸ್ಸಿಗೆ ಮೆಚ್ಚಿ ಅವನಿಗೆ ನಿನ್ನನ್ನು ಕೊಟ್ಟನು. ಶಿವಮಹಿಮೆಯನ್ನು ಬಣ್ಣಿಸುವೊಡಳವೆ? ಅವನ ಎಡೆಯಾಟದಿಂದ ಅಖಿಳ ಬ್ರಹ್ಮಾಂಡವು ಅಳಿವುದು ಉದಿಸುವುದು. ಅಗ್ನಿ ಶಶಿ ಮೊದಲಾದವುಗಳು ಶಿವನ ಅಷ್ಟ ಮೂರ್ತಿಗಳು. ಸರ್ವವೂ ಸದಾಶಿವಮಯವು. ನೀನೇಕೆ ಮರುಳಾಗುವೆ? ಶಿವಚರಣವನ್ನು ಕಂಡು ಬದುಕಲು ಇಹಪರಸೌಖ್ಯವುಂಟಾಗುವುದು" ಎಂದನು (೨೩-೨೮).

ಇದನ್ನು ಕೇಳಿ ಅಸುರನು ಕಿಡಿಕಿಡಿಯಾಗಿ "ನಿನ್ನ ಬಾಯಿಯು ದೊಡ್ಡದೆಂದು ಬೊಗಳುವಿಯೇನು? ನಿನ್ನನೀಗ ಯಾರು ಕರೆದರು? ಫಡ, ಖೂಳ, ಕೂಗದೆ ಕೆಲಕೆ ಸಾರು" ಎನ್ನುತ್ತ ಆಸ್ಥಾನದಿಂದೆದ್ದು ರಣಭೇರಿಯನ್ನು ಹೊಡೆಯಿಸಿದನು. ಆಗ್ಗೆ ಅಗಣಿತ ಸಂಖ್ಯೆಯ ದಾನವಮಾನವರೂ ಚತುರಂಗಸೇನೆಯೂ ಸನ್ನದ್ಧವಾಗಿ ಹೊರಡಲನುವಾಯಿತು. ರಾಣಿವಾಸದವರೂ ಅವರ ಕೆಳದಿಯರೂ ಕೂಡ ಹೊರಟರು. ಆಹಾರದ ಪದಾರ್ಥಗಳೂ ಐಶ್ವರ್ಯದ ವಸ್ತುಗಳೂ ಯುದ್ಧದ ಸಾಮಗ್ರಿಗಳೂ ಸಿದ್ಧವಾದುವು. ಇಷ್ಟರಲ್ಲಿ ಸಂಜೆಯಾಗಲು ಎಲ್ಲರೂ ಪಾಳಯದಲ್ಲಿ ಉಂಡು ಮಲಗಿಕೊಂಡರು (೨೯-೪೭).

೪೮ ಅಂಧಕಾಸುರನು ಕೈಲಾಸಕ್ಕೆ ದಂಡೆತ್ತಿದ ಕಥೆಯ ಸಂಧಿ

ಸೂರ್ಯೋದಯವಾದ ಮೇಲೆ ಪಡೆಯು ಮಾರ್ಗಕ್ರಮಣವನ್ನಾರಂಭಿಸಲು ಅದರ ಭಾರಕ್ಕೆ ಭೂಮಿಯು ತಗ್ಗಿದುದು, ಕುಲಾಚಲವು ನೆಗ್ಗಿದುದು, ದಿಕ್ಕರಿಕುಲವು ಕುಗ್ಗಿದುದು, ಫಣಿಪತಿಯ ಸಹಸ್ರ ಹೆಡೆಗಳು ಬಗ್ಗಿದುವು, ಕೂರ್ಮದ ಬೆನ್ನು ನೆಗ್ಗಿದುದು (೧-೫). ರಾಕ್ಷಸೇಂದ್ರನು ರಥವನ್ನೇರಿ ಸಾಗುವಾಗ ಸಾರಥಿಯು ಮುಂದೆ ಬಿದ್ದನು. ಕುದುರೆಗಳು ಮುಗ್ಗಿದುವು. ಮುಂದೆ ದಾರಿಯೋಗತಿಗಳಿಗೆ ಅಗ

ಣಿತವಾದ ದುಶ್ಯಕುನಗಳುಂಟಾದುವು. ಅಂಧಕಾಸುರನ ಕಿರೀಟಾಗ್ರದಲ್ಲಿ ಹದ್ದು ಬಂದು ಕೂತಿತು. ಇವುಗಳನ್ನು ಗಣಿಸದೆ ಹಾಗೇ ಮುಂದಕ್ಕೆ ಸಾಗಿ ಸೈನ್ಯವು ಕೈಲಾಸಪುರದ ಸೀಮೆಯನ್ನು ಸೇರಿತು. ಆ ಮೇಲೆ ಅಸುರನು ಒಬ್ಬ ಜಾಣ ಭಟನನ್ನು ಕರೆದು "ನೀನು ಕರಿಗೊರಲನೆಡೆಗೆ ಹೋಗಿ ನಮ್ಮ ವೈರಿಯಾದ ವಿಷ್ಣುವಿನನ್ನು ಕೊಟ್ಟು ಬಾಳುವೆಯೋ ಅಥವಾ ನಮ್ಮ ಕೂಡ ಕಾದುವೆಯೋ ಎಂದು ಕೇಳಿ ಬಾ" ಎಂದು ಹೇಳಿಕಳುಹಿದನು (೬-೮). ಆ ಖಳಪಾಠಕನು ಅಶ್ವರತ್ನವನ್ನೇರಿ ಕೈಲಾಸದ ಬಹಿರ್ದ್ವಾರಕ್ಕೆ ಬಂದು ಅಂಧಕಾಸುರನ ಶೌರ್ಯವನ್ನು ಹೊಗಳುತ್ತಿರಲು ಶಂಕರನು ಅದನ್ನು ಕೇಳಿ ಅವನನ್ನು ಕರೆಯಿಸಿದನು. ಅವನು ಬಂದು ಈಶನಿದಿರಿನಲ್ಲಿ ನಿಂತು ಬಂದ ಕಾರಣವನ್ನು ಹೇಳಿದನು. ಅದನ್ನು ಕೇಳಿ ನಂದೀಶ ವೀರೇಶ್ವರಾದಿಗಳಿಗೆ ಅತಿಶಯ ಕೋಪವಾಗಿ ಅವರು "ಇವನ ಬೆನ್ನನ್ನು ತಿವಿ, ನಾಲಿಗೆಯನ್ನು ಸೀಳು, ಕಾಲಿನಿಂದ ಒದೆ" ಎನ್ನುತ್ತ ಗರ್ಜಿಸಲಾರಂಭಿಸಿದರು (೯-೧೧). ಈಶ್ವರನು ಅವರನ್ನು ತಡೆದು ಆ ಖಳಪಾಠಕನನ್ನು ಕರೆದು ಅಸುರನ ಕೂಡ ಕಾದುವೆನೆಂದು ಹೇಳಿಕಳುಹಿದನು. ಅವನು ಅದರಂತೆಯೆ ಖಳಪತಿಗೆ ತಿಳಿಸಲು ರಕ್ಕಸನು ಕೋಪಾಗ್ನಿಯಿಂದ ಹೊತ್ತಿ ಕೈಲಾಸ ಪರ್ವತವನ್ನು ಈಕ್ಷಣವೇ ಮುತ್ತುವೆನೆಂದೆನ್ನಲಾಗಿ ಅವನ ದಂಡು ಮುಂದೆ ಸಾಗಿ ಸೆರೆಸೂರೆಗಳನ್ನಾರಂಭಿಸಿತು. ಇದನ್ನು ಕಂಡು ಕೋಪದಿಂದ ಈಶ್ವರನು ಆದ್ಯಂತ ದೇವತೆಗಳನ್ನೂ ಸಿದ್ಧ ವಿದ್ಯಾಧರ ಕಿಂಪುರುಷ ಕಿನ್ನರ ಗರುಡ ಗಂಧರ್ವ ಮುಂತಾದವರನ್ನೂ ಬ್ರಹ್ಮೇಂದ್ರ ವಿಷ್ಣುಗಳ ಸೇನೆಗಳನ್ನೂ ರುದ್ರಪ್ರಮಥಗಣಗಳನ್ನೂ ಕೂಡಿಕೊಂಡು ಮಹಾವೃಷಪತಿಯನ್ನೇರಿ ಕೈಲಾಸದಿಂದ ಹೊರಟನು (೧೨-೨೩). ಇದನ್ನು ಕೇಳಿ ಖಳನ ಸೇನೆಯು ಮುಂಬರಿದುದು. ಎರಡೂ ಸೈನ್ಯಗಳ ಚೂಣಿಯ ಭಟರು ಕಾದಲು ರಕ್ತದ ಕಾಲುವೆಗಳು ಹರಿದುವು. ಅವರನ್ನು ಹಿಂದೆ ಸರಿಸಿ ನಿಚ್ಚಟದ ಕಲಿಗಳು ಶರಧಿಶರಧಿಗಳು ಗಿರಿಗಿರಿಗಳು ಪೇರಡವಿಪೇರಡವಿಗಳು ಪ್ರಳಯಜಲಧರಜಲಧರಗಳು ಧರೆನಭಂಗಳು ಒಂದಕ್ಕೊಂದು ತಾಗುವಂತೆ ಕಾದುತ್ತಿರಲು ಸಂಜೆಯಾಯಿತು. ಎರಡೂ ದಂಡಿನವರು ಬೀಡು ಬಿಟ್ಟು ಗುಡಾರಗಳನ್ನು ಹೊಡೆದು ಪಂಜುಗಳನ್ನು ಹೊತ್ತಿಸಿದರು. ಕಾವಲುಗಾರರು ಪಹರೆಯನ್ನು ಮಾಡಲಾರಂಭಿಸಿದರು (೨೪-೩೩). ರುದ್ರನೇಮದಿಂದ ಬಲದ ಕಾವಲು ಕಾಲಭೈರವನ ವಶವಾಯ್ತು, ಸೇನಾಧಿಪತ್ಯವು ಕುಮಾರನಿಗಾಯ್ತು, ಉಳಿದ ವ್ಯವಸ್ಥೆಯು ವೀರಭದ್ರನದಾಯ್ತು. ಇತ್ತ ರಕ್ಕಸರ ಕಾವಲು ಜಂಭನದಾಯ್ತು, ಶತಮಾಯನು ಪರಿವಾರಾಧಿಪತಿಯಾದನು, ಸೈನ್ಯದ ಆರಭಾರವು ಶುಂಭಾಸುರಂಗಾದುದು. ಎರಡೂ ಪಾಳಯಗಳಲ್ಲಿ ನಾಳೆ ಹೆಚ್ಚಿನ ಕಾಳೆಗವಾಗುವುದೆಂದು ಸಾರಿದರು. ಸೈನಿಕರೆಲ್ಲರು ಉಂಡು ನಿದ್ರೆಗೈದರು (೩೪-೩೫).

ಮರುದಿವಸ ಮುಂಬೆಳಗಿನಲ್ಲಿ ಎಲ್ಲರೂ ನಿದ್ರೆ ತಿಳಿದೆದ್ದು ಯುದ್ಧಕ್ಕೆ ಸಿದ್ಧರಾದರು. ಆಗ ಅಂಧಕಾಸುರನು ನಸುನಗುತ ಶುಕ್ರನ ಮೊಗವನ್ನು ನೋಡಿ ಎದುರುಬಲದ ಮೊರೆಗಳನ್ನು ಬೇರೆಬೇರೆ ತೋರಿಸೆಂದು ಕೇಳಲಾಗಿ ಶುಕ್ರನು ಇಂದ್ರ ಬ್ರಹ್ಮ ವಿಷ್ಣು ಕುಮಾರ ವೀರಭದ್ರ ಪ್ರಮಥಗಣ ಭೂತಗಣಗಳನ್ನು ಬೇರೆಬೇರೆಯಾಗಿ ತೋರಿಸಿದನು (೩೬-೪೩). ಆಮೇಲೆ ವೃಷಭವಾಹನನನ್ನು ತೋರಿಸಿ " ಇವನು ಅಗಣಿತ ಹರಿಯಜೇಂದ್ರರನ್ನು ಸೃಜಿಸಿ ರಕ್ಷಿಸಿ ಲಯಂಗೈಸಿ ಮತ್ತೆ ಹುಟ್ಟಿಸುವನು. ಇವನ ಮಹಾತ್ಮೆಯನ್ನು ಹೊಗಳಲು ಆದಿಶೇಷನಿಗೂ ಆಗದು. ಮರೆಹೊಕ್ಕವರನ್ನು ಕಾಯುವ ಎದುರಾದವರನ್ನು ಕೊಲ್ಲುವ ಬಿರುದು ಈತನದು. ಈ ಪೂರ್ವದಲ್ಲಿ ನಡೆದಿದ್ದನ್ನು ನೋಡಿ ಹೇಳುವೆವು. ಇವನಿಗೆ ಶರಣು ಹೋಗು. ಕೆಡಬೇಡ " ಎಂದು ಹೇಳಲಾಗಿ, ಖಳನು ಖತಿಯಿಂದ ಕಿಡಿಕಿಡಿಯಾಗಿ ಆರ್ಭಟಿಸಿ ಹೊಂದೇರನ್ನು ಮುಂದೆ ನೂಕಿದನು. ಉಭಯ ಸೇನಾಭಟರು ಬಲ್ಲಿಬಿನ್ನಣಿಗರು ಹರಿಗೆಯವರು ರಾವುತರು ಮಾವುತರು ರಥಿಕರು ಆಹವದಲ್ಲಿ ಎಲ್ಲತರದ ಆಯುಧಗಳಿಂದ ಕಾದಾಡಲು, ಹೆಣಗಳ ಮಿದೆ ಮಾಂಸದೊಟ್ಟಿಲು ನೆಣದ ಬೆಟ್ಟ ಮಿದುಳಿನ ರಾಶಿ ಕರುಳುಗಳ ತಿಂತಿಣಿ ತೊರಳೆಗಳ ಕುಪ್ಪೆ ಮಜ್ಜೆಯ ತೆವರು ಹೃದಯಗಳ ಸಾಲು ಖಂಡಗಳ ಬಣವೆ ನೆತ್ತರಿನ ಹೊಳೆ ಮೂಳೆಗಳ ಸಂದಣಿ ಇವು ರಣಾಂಗಣದೆಲ್ಲೆಡೆಯನ್ನು ತುಂಬಿದುವು (೪೪-೫೬).

೪೯ ಅಂಧಕಾಸುರನ ಯುದ್ಧದ ಸಂಧಿ

ಸಿದ್ಧರಾಮೇಶನೇ ಆಲಿಸು, ಆಮೇಲೆ ದಿಕ್ಪಾಲಕರು ಮುಂಕೊಂಡು ವಿಚಿತ್ರ ಬಾಣಗಳಿಂದ ಅಸುರರ ಕರಿ ತುರಗ ತೇರ್ಗಳನ್ನೂ ಯೋಧರನ್ನೂ ಸೂತರನ್ನೂ ತುಂಡುತುಂಡಾಗಿ ಕತ್ತರಿಸಿದರು. ಮುಂಗಡಿಯ ಸೇನಾರ್ಣವವು ಬತ್ತಿದುದು. ಮುಂದಕ್ಕೊತ್ತಿದ ಅಷ್ಟದಿಕ್ಪಾಲಕರಲ್ಲಿ ಸುರಪನನ್ನು ನಮುಚಿಯೂ, ಅಗ್ನಿಯನ್ನು ಬಲನೂ, ದಂಡಧರನನ್ನು ಜಂಭನೂ, ನೃವಾಹನನನ್ನು ಹಸ್ತಿಶಿರನೂ, ಅಬ್ಧಿಪಾಲನನ್ನು ದುಂದುಭಿಯೂ, ಜಗತ್ಪ್ರಾಣನನ್ನು ಶೂರ್ಪಕನೂ, ಧನದನನ್ನು ಮಹಾನಾಭನೂ, ಈಶಾನನನ್ನು ವೃತ್ರನೂ ತರುಬಿ ಕಾದಲಾರಂಭಿಸಿದರು (೧-೭). ಪುರುಹೂತನೂ ನಮುಚಿಯೂ ಒಬ್ಬರನ್ನೊಬ್ಬರು ಮೂದಲಿಸುತ್ತ ಬಾಣಗಳನ್ನೆಸೆದರು. ಕಡೆಗೆ ಇಂದ್ರನ ರುದ್ರಾಸ್ತ್ರದಿಂದ ನಮುಚಿಯ ಶಿರಃಖಂಡನವಾಗಿ ಅವನ ಸೈನ್ಯವು ಯಮನಗರಿಗೈದಿತು. ಇದನ್ನು ಕೇಳಿ ಬಲನು ಅಗ್ನಿಯನ್ನು ಭ್ರಮೆಗೊಳಿಸಿ ಕೆಡಹಿ

ಇಂದ್ರನ ಹಣೆಯ ಮೇಲೆ ಒಂದು ಬಾಣವನ್ನು ಬಿಟ್ಟನು. ಇಂದ್ರನು ಅರೆಗಳಿಗೆ ಮ ಯ್ಮರೆದು ಬಳಿಕೆಚ್ಚತ್ತು ರೋಷಾಗ್ನಿಯಿಂದ ಒಂದು ಕವಲಂಬಿನಿಂದ ಹೊಡೆಯಲು ಬಲನ ಗೋಣು ಕತ್ತರಿಸಿ ತಲೆಮುಂಡಗಳು ನೆಲಕ್ಕುರುಳಿದುವು (೮-೧೪). ಈ ವಾರ್ತೆಯನ್ನು ಕೇಳಿ ವೃತ್ತಜಂಭರು ಈಶಾನಯಮರನ್ನು ಮೂರ್ಛೆಪಡಿಸಿ ಇಂದ್ರನ ಮೇಲೆ ಒಂದೇ ಬಾರಿ ಎಡಬಲದಲ್ಲ ಬಾಣಗಳನ್ನೆಸೆಯಲು ಇಂದ್ರನು ಅವುಗಳನ್ನೆ ಲ್ಲ ಖಂಡಿಸಿದನು. ಹೀಗೆ ಕಾದುತ್ತಿರುವಾಗ್ಗೆ ಖಳರು ತಮ್ಮೊಳೊಬ್ಬಬ್ಬರನ್ನು ಮೂ ದಲಿಸುತ್ತ ದಿವ್ಯಾಸ್ತ್ರಮೆರಡನ್ನೆಸೆಯಲು ಇಂದ್ರನು ಭೂಮಿಗುರುಳಿದನು. ಜಂಭ ವೃತ್ತರು ಅವನ ಸೈನ್ಯವನ್ನು ಕೊಲ್ಲಲಾರಂಭಿಸಿದರು (೧೫-೧೭). ಇಂದ್ರನು ದಿವ್ಯ ಮಂತ್ರೌಷಧಿಗಳುಪಚಾರದಿಂದ ಮೂರ್ಛೆತಿಳಿದೆದ್ದು ರಥವನೇರಿ ಉಗ್ರವಾದ ಎರ ಡು ಬಾಣಗಳನ್ನು ಬಿಡಲು ಅವು ನವ್ಯಸ್ಫುಲಿಂಗಸಂತಾನಧೂಮಂಗಳಿಂದ ಭೂಮ್ಯಾ ಕಾಶಗಳನ್ನು ತುಂಬಿ ಬರುವಾಗ ದನುಜರು ಅವುಗಳನ್ನು ನಡುವೆ ಕತ್ತರಿಸಲು ಹಿಂದಿನ ಅರ್ಧಭಾಗಗಳು ಭೂಮಿಗುರುಳಿದುವು ಮತ್ತು ಮುಂದಿನ ಅರ್ಧಭಾಗ ಗಳು ಕಡುವೇಗದಿಂದ ಮದೋನ್ಮತ್ತ ವೃತ್ತಜಂಭರ ತಲೆಗಳನ್ನು ಕತ್ತರಿಸಿ ಹೊತ್ತು ಕೊಂಡು ಹೋಗಿ ಆಕಾಶಕೆತ್ತಿ ಬಿಸುಟಿದುವು. ಸುರಪನ ವಿಜಯವಾರ್ತೆಯನ್ನು ಕೇ ಳಿ ಉಳಿದ ದಿಕ್ಪಾಲಕರು ಅಹಿತಸೇನೆಯನ್ನು ಕೊಲತೊಡಗಿದರು. ಇದನ್ನು ಕೇಳಿ ಕೇಸರಿಯಂತೆ ಖತಿಗೊಂಡು ಶತಮಾಯನು ಆಹವಕ್ಕನುವಾಗಿ ಇಂದ್ರಶಿಖಿಯಮನಿ ರುತಿಯರನ್ನು ಅನುಕ್ರಮವಾಗಿ ನೂರು ಹದಿನಾರು ಐದು ಮೂರು ಬಾಣಗಳಿಂದ, ವರುಣ ಮರುತ ಧನದ ಈಶಾನ ವಸುಮನುಗಳಲ್ಲಿ ಪ್ರತಿಯೊಬ್ಬರನ್ನು ಆರು ಬಾಣ ಗಳಿಂದ ಹೊಡೆದು ಅವರ ಅಶ್ವಸಾರಥಿತೇರ್ಗಳನ್ನು ಕಡಿದನು. ಇವನ ಉಗ್ರರೂಪವ ನ್ನು ಕಂಡು ಸುರಬಲವು ಮೂರ್ಛೆಹೊಂದಿತು. ಯಕ್ಷ ಸಿದ್ಧ ವಿದ್ಯಾಧರ ಮುಂತಾ ದವರು ಕಂಗೆಟ್ಟು ಬೆಂಗೊಟ್ಟು ಭಯದಿಂದ ಓಡಿಹೋದರು (೧೮-೨೩).

ಇದನ್ನು ನೋಡಿ ಬ್ರಹ್ಮನು ಮುರಿದೋಡಿಬರುವಮರಸಂತತಿಗಳನ್ನು ಸಂತೈಸಿ ರಥವನೇರಿ ಮಹಾಕೋಪದಿಂದ ಶತಮಾಯನ ಮೇಲೆ ಬಾಣಗಳನ್ನು ಕರೆದನು. ಇ ಬ್ಬರೂ ಕೆಲಹೊತ್ತು ಒಬ್ಬರಮೇಲೊಬ್ಬರು ಬಾಣಗಳನ್ನು ಹೊಡೆದು ಕಾದಾಡಿದರು. ಕಡೆಗೆ ಶತಮಾಯನು ತನ್ನ ಮಾಯೆಯನ್ನು ಬಿಚ್ಚಿ ಹುಲಿ ಕರಡಿ ಫಣಿ ಶರಭ ಭೇ ರುಂಡಾದಿ ಖಗಮೃಗದ ಬಳಗವನ್ನೂ ಮೊಸಳೆ ತಿಮಿಂಗಿಲಾದಿ ಜಲಚರಾಳಿಯನ್ನೂ ಮಳೆ ಮಿಂಚು ಮುಂತಾದವುಗಳನ್ನೂ ಅಸ್ತ್ರಶಸ್ತ್ರತತಿಗಳನ್ನೂ ಭೂತವೇತಾಳಗಳನ್ನೂ ಹುಟ್ಟಿಸಿ ಇವುಗಳಿಂದ ಸುರಸೇನೆಯನ್ನು ನಾಶಪಡಿಸಿದನು. ಮತ್ತು ತಾನು ಕತ್ತಲೆ ಯನ್ನುಂಟುಮಾಡಿ ಸದ್ದು ಹುಟ್ಟದಂತೆ ಅಂಬುಗಳನ್ನೆಸೆಯಲಾರಂಭಿಸಿದನು. ಬ್ರ ಹ್ಮನು ಅವನೆದೆಗೆ ಸಂಧಾನವನ್ನು ಮಾಡುವ ಬಗೆಯನ್ನು ಕಾಣದೆ ಈಶ್ವರಧ್ಯಾನ

ದಿಂದ ಪ್ರಳಯರುದ್ರಾಸ್ತ್ರವನ್ನು ಬಿಡಲು, ಕತ್ತಲೆಯು ಅಡಗಿತು, ಬ್ರಹ್ಮಾಂಡವು ಉರಿಯಿತು, ಶತಮಾಯನ ಕಂಠವು ಕತ್ತರಿಸಿ ತಲೆಮುಂಡವೆರಡೂ ಸಪ್ತಸಮುದ್ರದಾಚೆ ಮರುಭೂಮಿಯಲ್ಲಿ ಬಿದ್ದುವು (೨೪-೩೬). ದೇವತೆಗಳು ವಾಗ್ವಲ್ಲಭನ ಸಿರಿಮುಡಿಗೆ ಕುಸುಮವೃಷ್ಟಿಯನ್ನು ಕರೆದರು. ದೈತ್ಯಸೇನಾಸಮುದ್ರವು ತಲ್ಲಣಿಸಿತು. ಖಳಸ್ವೈನ್ಯಸೇನಾಪತಿಯ ಅಳಿವನ್ನು ಕೇಳಿ ಶುಂಭಾಸುರನು ಆವೇಶದಿಂದ ತನ್ನ ಬಲಸಹಿತ ಹಸಿದ ಶಾರ್ದೂಲದಂತೆ ಸಾಗಿಬರಲು ಅಜಮುಖ್ಯದೇವತೆಗಳು ಪಿಶಾಚಿಗಳು ಹಿಡಿದಂತೆ ಸ್ತಬ್ಧರಾದರು, ಸುರಬಲವು ಅಪಜಯವನ್ನು ಹೊಂದಿತು, ದಿಕ್ಪಾಲರೆಲ್ಲರು ಗಾಯದಿಂದ ಮೂರ್ಛೆವಡೆದರು. ಇದನ್ನು ಕಂಡು ವಿಷ್ಣುವು ಅತಿ ಕೋಪದಿಂದ ಕಾಳೆಗವನ್ನಾರಂಭಿಸಲು, ಅಸುರನು ಗುಡುಗುಡಿಸಿ ವಿಷ್ಣುವಿನ ತೇರನ್ನು ನಿಡುಬೊಗರೆಯಂತೆ ನಭಕೆ ಹಾರಿಸಿದನು. ಅಲ್ಲಿಂದ ಬೀಳುವ ರಥದಿಂದ ಹರಿಯು ಪುಟನೆಗೆದು ಮೇಘದಂತಾರ್ದು ಗಗನದಲ್ಲಿ ಶುಂಭನ ಮೇಲೆ ಬೀಳಲು ಇಬ್ಬರೂ ನೊಂದು ಮೂರ್ಛಿತರಾದರು (೩೭-೪೨). ಮುಂದೆ ಕ್ಷಣದೊಳೆಚ್ಚತ್ತು ಇಬ್ಬರೂ ಬಿಲ್ಲುಗಳಿಂದ ಶಸ್ತ್ರಾಸ್ತ್ರಗಳಿಂದ ಮುಷ್ಟಿಯುದ್ಧದಿಂದ ಕಾದಾಡಿದರು. ಕಡೆಗೆ ಶುಂಭನ ಉಗ್ರಶಕ್ತಿಯು ಹೊಡೆತಕ್ಕೆ ಹರಿಯು ಮೈಯ್ಮರೆದು ರಥದಲ್ಲಿ ಬಿದ್ದನು. ಅವನ ಸಾರಥಿಯು ರಥವನ್ನು ಪಾಳಯಕ್ಕೆ ತೆಗೆದುಕೊಂಡು ಹೋದನು. ಸುರಬಲವೆಲ್ಲ ಓಡಿಹೋಗಿ ಬೀಡನ್ನು ಸೇರಿತು. ಇದನ್ನು ಕಂಡಾಕ್ಷಣವೇ ಸೇನಾನಿಯು ಉರಿದೆದ್ದು ಪರಬಲವನ್ನು ತರುಬಿ ಬಿಲ್ಗಾರರಿಂದ ಖಳನ ಸಾರಥಿರಥಾಶ್ವಗಳನ್ನು ನೆಲಸಮಮಾಡಿದನು (೪೩-೫೦). ವಿರಥನಾದ ಶುಂಭನು ಅಸಿ ಗದೆ ಮುಂತಾದ ಬತ್ತೀಸಾಯುಧಗಳಿಂದ ಕಾದಲು ಮಹೇಶ್ವರಸುತನು ಅವೆಲ್ಲವನ್ನು ತರಿದನು. ಆಮೇಲೆ ಅವನು ಸೇನಾನಿಯನ್ನು ನುಂಗಬೇಕೆಂಬ ಭ್ರಾಂತಿಯಿಂದ ಮೇಲ್ವಾಯಲು ಗುಹನು ಗಿರಿಜೆಯಸ್ತ್ರಕ್ಕೆ ಆರು ಶರಗಳನ್ನು ಹೂಡಿ ಬಿಡಲು ಅವು ಖಳನ ಉರಕ್ಕೆ ತಾಗಿ ಅವನನ್ನು ನೆಲಕ್ಕುರುಳಿಸಿದುವು. ಅಷ್ಟರಲ್ಲಿ ನಿಶುಂಭ ಕುಂಭ ನಿಕುಂಭ ಮೊದಲಾದ ಖಳರು ಶುಂಭನನ್ನು ಬೀಡಿಗೆ ಹೊರಿಸಿ ಷಣ್ಮುಖನನ್ನು ಮುತ್ತಿದರು. ಗಿರಿಯು ಬಳಗವು ಮುತ್ತಲು ಕುಲಿಶವಂಜುವುದೆ? ಕರಿಯು ಜಂಗುಳಿಯರುಬೆಗೆ ಸಿಂಗವಳ್ಕುವುದೆ? ಮುದಿನರಿಯು ಹಿಂಡು ಉರವಣಿಸಲು ಪೆರ್ಬುಲಿಯು ಭಯಗೊಂಬುವುದೆ? ಷಣ್ಮುಖನು ಕಡಿವ ರಕ್ಕಸರ ನೆರವಿಯನ್ನು ಒಂದು ನಿಮಿಷದೊಳಗೆ ಸಂಹರಿಸಿದನು. ಉಳಿದವರನ್ನು ವಿಷ್ಣು ವಿಧಿ ಮುಂತಾದವರು ಬೆನ್ನಟ್ಟಲು ಅವರು ಧೃತಿಗುಂದಿ ದೈನ್ಯದಿಂದ ಓಡಿಕೊಂಡು ತಮ್ಮ ಪಾಳಯವನ್ನು ಹೊಕ್ಕರು. ಸುರರು ಜಯಘೋಷಮಾಡಿದರು. ಷಣ್ಮುಖನು ಬಿಂಕದಿಂದ ಜಯಭೇರಿಯನ್ನು ಹೊಡೆಸುತ್ತ ತನ್ನ ಪಾಳಯಕ್ಕೆ ತಿರುಗಿದನು (೫೧-೬೦).

೫೦ ಅಂಧಕಾಸುರಸಂಹಾರದ ಸಂಧಿ

ಘನಮಹಿಮನಾದ ಚೆನ್ನಬಸವಣ್ಣನು ಸಿದ್ಧರಾಮನಿಗೆ ಮುಂದಿನ ಕಥೆಯನ್ನು ಹೇಳತೊಡಗಿದನು. ಅದೆಂತೆಂದರೆ:-

ಸುರರು ಜಯಶಾಲಿಗಳಾಗಿ ತಮ್ಮ ಪಾಳಯಕ್ಕೆ ಮುಟ್ಟುವಷ್ಟರಲ್ಲಿ ಸಂಧ್ಯಾಕಾಲವಾಯಿತು. ಅಂಧಕಾಸುರನು ರಣಭಂಗವನ್ನು ನೆನೆದು ದುಃಖದಿಂದ ನೊಂದ ದೈತ್ಯನಾಯಕರನ್ನು ಗುಪ್ತಾಲೋಚನೆಗೆ ಕರೆಸಿದನು. ಅವರು ಮುಸುಕಿನಲ್ಲೆ ಮುಂತಾದ ನಿರಹಂಕಾರದ ಕಳೆಗಳನ್ನುಳ್ಳವರಾಗಿ ಬಂದು ಒಬ್ಬರ ಮರೆಯೊಳೊಬ್ಬರು ಮಿಸುಕದೆ ಕುಳಿತರು. ಅಂಧಕಾಸುರನು ಅವರನ್ನು ಮುಂದೆ ಕರೆದು ಕುಳ್ಳಿರಿಸಿ “ ಚಿಂತೆಯೇಕೆ? ಇರಿತಮುರಿತಗಳು ಸಮರದಲ್ಲಿ ಎಂಥವರಿಗಾದರೂ ಬರುವುವು. ಹಿಂದೆ ಆದ ಕಾಳೆಗದಲ್ಲಿಯ ಜಯಾಪಜಯವು ಒತ್ತಟ್ಟಿಗಿರಲಿ. ಕಾಳೆಗವು ಬಹುಕಾಲ ನಡೆಯಿತು. ಇನ್ನುಮುಂದೆ ಶತ್ರುವನ್ನು ಜಯಿಸುವ ಉಪಾಯವನ್ನು ತಿಳಿದು ಹೇಳಿರಿ ” ಎನ್ನಲಾಗಿ, ಆಮಾತನ್ನು ಎಲ್ಲರೂ ಕೇಳಿ ಮೌನವನ್ನು ತಾಳಿ ಒಬ್ಬರ ಮೊಗವನ್ನೊಬ್ಬರು ನೋಡಹತ್ತಿದರು. ಆಗ್ಗ ಭೀಮಾಂಗನಾದ ಗಗನಮೂರ್ಧ್ನಿಯು ಎದ್ದು ನಿಂತು “ ಮಹಾಸಭೆಯು ವೀರರಿರಲಾಗಿ ಶತ್ರುವನ್ನು ನಾಶಪಡಿಸುವುದು ನಿನಗೆ ಆಶ್ಚರ್ಯವಲ್ಲ. ಆದರೂ ನನ್ನಮನಸ್ಸಿಗೆ ತೋರಿದ್ದನ್ನು ಸಾರುವೆನು. ಇಷ್ಟು ದಿವಸಗಳವರೆಗೆ ನಾವು ಹಗಲು ಯುದ್ಧಮಾಡಿದ್ದರಿಂದ ನಮಗಪಜಯವುಂಟಾಯಿತು. ನಾವು ನಿಶಾಚರರು. ಇರುಳು ಕಾಳೆಗಮಾಡಿದರೆ ನಮಗೆ ಜಯವುಂಟಾಗುವುದು. ಈ ಹೊತ್ತಿನ ಜಯದಿಂದ ಮೈಯ್ಮರೆದು ಮಲಗಿದ ಸಕಲ ದೇವತಾವೃಂದವನ್ನು ಕೊಲ್ಲುವುದು ನಿಶ್ಚಯವು. ಇದು ಮನಸಿಗೆ ಬಂದರೆ ಹಾಗೆ ಮಾಡಬಹುದು ” ಎಂದನು (೨-೭). ಎಲ್ಲರೂ ಇದಕ್ಕೆ ಒಪ್ಪಿದರು. ಆದರೆ ಪ್ರಹಲ್ಲಾದನೊಬ್ಬನು “ ಕಂಡೂ ಕಂಡೂ ಕಾಣದಿರುವ ದುರ್ವಹಿಪಸ್ವರೂಪರಿಗೆ ತಿಳಿಸಲಿಕ್ಕೆ ಈಶನಿಗೆ ಸಹ ಸಲ್ಲದು. ಶತಮಾಯ ಜಂಭ ಬಲ ನಮುಚಿ ವೃತ್ರರ್ಗೆ ಸರಿಯಾದವರುಂಟೆ? ಸಮರದಲ್ಲಿ ಅವರೆಲ್ಲರೂ ಮಡಿದರು. ನಮ್ಮ ಬಲದಲ್ಲಿ ಕ್ಷತರಾಗದವರು ಯಾರು, ಶತ್ರುಬಲದಲ್ಲಿ ಹತರಾದವರು ಎಷ್ಟು ಜನರು ನೋಡು. ಶಿವನಡಿಗಳಿಗೆ ನಮಿಸು. ಮರುಳರನ್ನು ನಂಬಿ ಕೆಡಬೇಡ. ತ್ರಿವಚನದಲ್ಲಿ ಹೇಳುವೆನು ” ಎನ್ನಲಾಗಿ, ಅದನ್ನು ಕೇಳಿ ಅಂಧಕಾಸುರನು ಗುಡುಗುಡಿಸಿ ಕಂಗಳಲ್ಲಿ ಕಿಡಿಗೆದರಿ ಪ್ರಹಲ್ಲಾದನನ್ನು ಜರೆದು ಗಗನಮೂರ್ಧ್ನಿಯನ್ನು ಸೇನಾಪತಿತ್ವಕ್ಕೆ ನಿಯಮಿಸಿ ನೆನೆದ ಕಾರ್ಯವನ್ನೆಸಗಲಿಕ್ಕೆ ವೀಳೆಯವಿತ್ತು ಕಳುಹಿದನು (೮-೧೦).

ಆಮೇಲೆ ಅಸುರಸೇನೆಯವರು ಆನೆಗಳ ಘಂಟೆಗಳನ್ನೂ ಕುದುರೆಗಳ ನಾಲಗೆ

ಗಳನ್ನು ದನಿಯಾಗದಂತೆ ಕಟ್ಟಿ ಪಂಜುಗಳನ್ನು ಹೊತ್ತಿಸದೆ ವಾದ್ಯಗಳನ್ನು ಬಾಜಿಸದೆ ಪುರಹರನ ಪಾಳೆಯವನ್ನು ಸುತ್ತುಗಟ್ಟಿ ನಿದ್ದೆಹೋದ ಸುರರ ಮೇಲೆ ಪಾಂತ್ರಿಕಬೂದಿಯನ್ನಾದಿ ಬೇಲಿಬದ್ದರಗಳನ್ನು ಮುರಿದು ಒಳಹೊಕ್ಕು ಸುರಪಹರಿಬ್ರಹ್ಮರ ಪಾಳೆಯಗಳ ಮೇಲೆ ಬಿದ್ದು ಹಲವು ತೆರದಿಂದ ಸುರರ ಕೊಲೆ ಮಾಡಿದರು (೧೧-೧೩). ಇದರಿಂದ ಎಲ್ಲೆಲ್ಲಿಯೂ ಬೊಬ್ಬಾಟವಾಗಿ ಅಮರರು ಬೆದರಿ ತಮ್ಮೊಳಗೆ ತಾವೆ ಸಿಕ್ಕಸಿಕ್ಕವರನ್ನು ಕೊಲ್ಲುತ್ತ ಕಂಡಕಡೆಗೋಡಿದರು. ಸುರಭಟರು ಮುರಿದು ದಿಕ್ಪಾಲರ ಮೇಲೆ, ಸುರಭಟದಿಕ್ಪಾಲರು ವಿಧಿಯ ಮೇಲೆ, ಸುರಭಟದಿಕ್ಪಾಲವಿಧಿಗಳು ಮಾಧವನ ಮೇಲೆ, ಸುರಭಟದಿಕ್ಪಾಲವಿಧಿಮಾಧವರು ಹರಗಣದ ಮೇಲೆ ಕಂಗೆಟ್ಟು ಬೀಳುವ ಹೊತ್ತಿನಲ್ಲಿ ದುರುಳರಕ್ಕಸರು ಎಲ್ಲರನ್ನು ಸವರುತ್ತ ಸಾಹಸದಿಂದ ಮುಂದೆ ಬಂದರು (೧೪-೧೬). ಶಿವಾಶಿವಾ, ಸಲಹು ಸಲಹೆಂದು ಮೊರೆಯಿಡುವ ದಿವಿಜನಿಕರವನ್ನು ಕಂಡು ವೀರಭದ್ರ ಕಾರ್ತಿಕೇಯ ಕಾಲಭೈರವ ಮುಂತಾದ ರುದ್ರಪ್ರಮಥಗಣವೂ ಭೂತವೇತಾಳಗಣಕುಲವೂ ಚಾಮುಂಡಿ ಭೈರವಿ ದುರ್ಗಿ ಮೊದಲಾದ ಶಕ್ತಿಕುಲವೂ ಆರ್ಭಟಿಸುತ್ತಿದ್ದು ವೀರೇಶಷಣ್ಮುಖರ ಅಪ್ಪಣೆಯನ್ನು ಪಡೆದು ಸುತ್ತಲೂ ಮೇಡೆಯನ್ನಿಕ್ಕಿ ಅಸುರರನ್ನು ಕೊಲತೊಡಗಿತು. ರಕ್ಕಸರು ಈ ಉರುಬೆಯನ್ನು ಸಹಿಸಲಾರದೆ ಮೊರೆಯಿಟ್ಟು ಬಾಯ್ಬಿಟ್ಟು ಕಂಗೆಟ್ಟು ಕಂದಿ ಧೃತಿಗುಂದಿ ತಮ್ಮ ಪಾಳಯವನ್ನು ಹೊಕ್ಕರು. ಸುರರು ಅಲ್ಲಿಯೂ ಸೇರಿ ಗೂಡಾರಗಳನ್ನು ಕೊಯ್ದು ಅಶ್ವಪಾರಣಗಳನ್ನು ಹಿಡಿದು ಭಂಡಾರಗಳನ್ನು ಸೂರೆಮಾಡಿದರು (೧೭-೨೦). ಇದನ್ನು ಕಂಡು ಅಂಧಕಾಸುರನು ವಿಲಯಕಾಲದಂತಕನಂತೆ ಅತಿಕೋಪಗೊಂಡು ಸುಭಟರನ್ನು ಕೂಡಿಕೊಂಡು ಸುರರ ಸೂರೆಯನ್ನು ತಡೆದು ಅವರನ್ನು ಪಾಳೆಯದಿಂದ ಹಿಂದಕ್ಕಟ್ಟಿದನು. ಪಾಳಯದ ಹೊರಗೆ ವೀರಭದ್ರನಿಗೂ ಅಂಧಕಾಸುರನಿಗೂ ಆಹವವು ಬಲಿದುದು. ಇಬ್ಬರೂ ಬಾಣಗಳಿಂದ ಅಸ್ತ್ರಪ್ರತ್ಯಸ್ತ್ರಗಳಿಂದ ಕಾದಾಡಿದರು. ಕಡೆಗೆ ವೀರಭದ್ರನು ಉರುಶಕ್ತಿಯಿಂದ ಹೊಡೆಯಲು ಅದು ಅಂಧಕಾಸುರನ ಎದೆಯನ್ನು ಸೀಳಲು ಅದರಿಂದ ರಕ್ತಪ್ರವಾಹವು ಹೊರಟು ಅಸುರನು ಭೂಮಿಗೆ ಬಿದ್ದನು. "ಈತನನ್ನು ನಾನು ಕೊಂದರೆ ಭರ್ಗನಂಬುಗಳಿಗೆ ಅಪರಾಧಿಯಾಗುವೆನು" ಎಂದು ಚಿಂತಿಸಿ ವೀರನು ಉಳಿದ ಅಸುರರನ್ನು ಬೆನ್ನಟ್ಟಿ ಗಗನಮಾರ್ಗವನ್ನು ಸ್ವರ್ಗಕ್ಕೆ ಕಾಣಿಸಿದನು. ಗುಹನಂದ್ಯಾದಿಗಳು ತಮಗೆ ಮಾರಾಂತ ವೀರಭಟರನ್ನು ಸವರತೊಡಗಿದರು (೨೧-೩೦). ಇತ್ತ ಅಂಧಕಾಸುರನು ಎಚ್ಚತ್ತು ವೀರಭದ್ರನನ್ನು ಹುಡುಕುತ್ತ ಚಿತ್ರಚಾರಿಯು ಸಮ್ಮುಖಕ್ಕೆ ಬರಲು ಅವರ ನಡುವೆ ಜಗಳವೆಸಗಿತು. ಅಸುರನೆಸೆದ ಬಾಣಗಳನ್ನೆಲ್ಲ ಶಿವನು ಚಮತ್ಕಾರದಿಂದ ಕಡಿದುಬಿಟ್ಟನು. ಅನಂತರ ಚಂಡವಿಕ್ರಮನಾದ ರಕ್ಕಸನು ಹಲಗೆಕತ್ತಿಗಳನ್ನಾಂತು

ಖಂಡಪರಶುವಿನ ಮೇಲ್ಪಾಯಲು ಅಭವನು ಅವನನ್ನು ತ್ರಿಶೂಲದಿಂದಿರಿದು ಮೇಲ ಕ್ಕೆತ್ತಲು ಆ ಖಳನ ಮೆಯ್ಯುಂಡ ರಕ್ತವು ನಿಮಿಷಮಾತ್ರದಲ್ಲಿ ಭೂತಳಕ್ಕೆ ಕರೆಯಲು ಅವನು ವಿಗತಮದನಾಗಿ ಶಿವನನ್ನು ಕೊಂಡಾಡಿದನು (೩೯-೪೪).

ಅದನ್ನು ಕೇಳಿ ಕಂತುಮರ್ದನನು ಮೆಚ್ಚಿ ವರವನ್ನು ಬೇಡೆನಲು ಅಂಧಾಸು ರನು "ನನ್ನ ವಕ್ಷದ ಮೇಲೆ ನಾಟ್ಯವಾಡಿ ಆಮೇಲೆ ಚಿರಮಾದ ಗಣಪದವಿಯನ್ನು ಪಾಲಿಸು" ಎನ್ನಲು, ಹಾಗೇ ಆಗಲೆಂದು ಅವನನ್ನು ಶೂಲದಿಂದ ನೆಲಕಿಳುಪಿ ತನ್ನ ಸ್ವಾಭಾವಿಕಾಲಂಕಾರಗಳಿಂದ ಭೂಷಿತನಾಗಿ ಪುಷ್ಪಾಂಜುಳಿಯ ಗಮಕದಿಂದ ಅಸುರನ ವಕ್ಷೋರಂಗವನ್ನು ಪೊಗಲನುವಾದನು. ನಂದಿಯು ಮದ್ದಳೆಯನ್ನು ಬ್ರಹ್ಮನು ತಾಳವನ್ನು ವಿಷ್ಣುವು ಕೊಳಲನ್ನು ಇಂದ್ರನು ಉಪಾಂಗವನ್ನು ನಾರದನು ವೀಣೆಯ ನ್ನು ತುಂಬುರನು ದಂಡಿಗೆಯನ್ನು ಬಾಜಿಸಲಾಗಿ ಅಂದು ಬ್ರಹ್ಮಾಂಡವು ಶಬ್ದಬ್ರಹ್ಮ ದಿಂದ ಪೂರ್ಣವಾಯಿತು. ಈಶ್ವರನು ಅಸುರನ ವಕ್ಷದ ಮೇಲೆ ಪುಷ್ಪಾಂಜುಳಿಯನೆ ಸಗಿ ಅನಂತರ ಶಿರಭೇದ ಹಸ್ತಭೇದ ಮೊದಲಾದವುಗಳನ್ನನುಗೊಳಿಸಿ ವಿಲಾಸದಿಂದ ನಟಿಸಿ ಭರತಶಾಸ್ತ್ರಕ್ರಮದ ವಿವರಣೆಯನೆಲ್ಲವನ್ನು ವಿಸ್ತರಿಸಿದನು. ಸಕಲಭುವನ ಜನದ ಉತ್ಸವವು ಹೆಚ್ಚಿತು. ದೇವತೆಗಳು ಹೂಮಳೆಗರೆದರು. ಅಖಿಲಲೋಕದ ಜನರು ಜಯಜಯಾರಾವದಿಂದ ಕೈಮುಗಿದರು. ಈಶ್ವರನು ಅಂಧಾಸುರನ ವಕ್ಷ ದಿಂದಿಳಿದು ಅವನಿಗೆ ವರಗಣಪದವಿಯನ್ನಿತ್ತು ನೆರೆದವರನ್ನೆಲ್ಲ ಕರುಣದಿಂದ ಬೀ ಳ್ಕೊಟ್ಟು ದೇವಿಯನ್ನೊಡಗೂಡಿ ಕೈಲಾಸಗಿರಿಶಿಖರದರಮನೆಗೆ ಹೋಗಿ ಹರುಷದಿಂದಿ ದ್ದನು (೪೫-೫೬).

೫೧ ಕಾಲದಹನದ ಸಂಧಿ

ಕೇಳೈ ಸಿದ್ಧರಾಮ, ಪೂರ್ವದಲ್ಲಿ ಶ್ವೇತನೆಂಬರಸನು ಬಹಳ ಭಾಗ್ಯದಿಂದ ಇಳೆ ಯನಾಳುತ್ತಿರ್ದನು. ಒಂದು ದಿವಸ ಅವನು ಚತುರಂಗಬಲವೆರಸಿ ವೈಹಾಳಿಗೆ ಹೊ ರಟಾಗ ಆ ಪಟ್ಟಣದ ಒರ್ವ ಪರದನು ಸಮುದ್ರಾಂತರ ದ್ವೀಪಗಳಿಗೆ ತನ್ನ ವ್ಯವ ಹಾರಕ್ಕೈದಿರಲು ಅವನ ಹೆಂಡತಿಯು ತನ್ನ ಮಂದಿರದ ಗೋಪುರವನಡರಿ ವೈಹಾಳಿ ಯನ್ನು ನೋಡುತ್ತಿದ್ದಳು. ಶ್ವೇತನು ಅವಳ ರೂಪುಯೌವನವಿಲಾಸಗಳನ್ನು ನೋ ಡಿ ಕಾಮಾತುರನಾಗಿ ವೈಹಾಳಿಯ ತುರಗದೇರಾಟವನ್ನೂ ದಂತಿಗಳ ಯುದ್ಧದ ಸಘಾಟವನ್ನೂ ನೋಡದೆ ಹಿಂತಿರುಗಿ ಅರಮನೆಗೆ ಬಂದು ಶಯ್ಯಾಗೃಹವನ್ನು ಹೊ ಕ್ಕು ವಿರಹತಾಪದಿಂದ ಕಳವಳಿಸಿ ಒರ್ವ ಆಪ್ತಸಖಿಯನ್ನು ಕರೆದು, "ಎಲೆ ತರುಣಿ,

ರತ್ನವರ್ಣನ ಕಾಂತೆಯನ್ನು ಸೌಧಾಗ್ರದಲ್ಲಿ ಕಂಡೆನು, ಅವಳನ್ನು ತಂದು ಕೊಡದಿದ್ದರೆ ನನ್ನ ಹರಣವು ಹೋಗುವುದು" ಎಂದು ಹೇಳಲು, ಅವಳು "ಇದೇನು ಹೆಚ್ಚಿನದು, ತರುವೆನೆಂ" ದು ಹೇಳಿ ಹೋದಳು (೨-೮). ಅವಳು ಪರದನ ಮನೆಗೆ ಬಂದು ಅವನರಸಿಯನ್ನೊಡಂಬಡಿಸಿ ಗುಪ್ತದಿಂದವನಿಪತಿಯ ಬಳಿಗೆ ಕರೆತಂದಳು. ಅರಸನು ವಿನಯದಿಂದ ಅವಳಿಗೆ ಸಕಲಪರಿಮಳಕುಸುಮಗಳನ್ನು ಕೊಡುತ್ತಿರುವಾಗ ಒಂದು ಚಂಪಕಪುಷ್ಪವು ಫೇಲಿಪಾತ್ರೆಯಲ್ಲಿ ಬೀಳಲು ಅದು ಶಂಕರಾರ್ಪಿತವೆಂದನು (೯). ಈ ತೆರದೆ ಭೂಪನು ದುಷ್ಟವ್ಯಸನಪಾಪದುರ್ನೀತಿಯುತನಾಗಿರಲು ಅಂತ್ಯಕಾಲಕ್ಕೆ ಯಮದೂತರು ಅವನನ್ನು ತೆಗೆದುಗೊಂಡು ಹೋಗಿ ಯಮದೂತನಿದಿರಿನಲ್ಲಿ ನಿಲಿಸಲು, ಚಿತ್ರಗುಪ್ತರು "ಇವನು ಬಹಳ ಪಾಪಿಷ್ಟನು, ಇವನಿಗೆ ರೌರವ ನರಕವು ಸಲ್ಲತಕ್ಕದ್ದು, ಒಂದು ಹೂವನ್ನು ಭೂತನಾಥನಿಗೆ ಅರ್ಪಿಸಿದ ಸದ್ಧರ್ಮ ಪ್ರೊಂದಿಸುವುದು" ಎಂದು ನುಡಿದರು. ಈ ಸದ್ಧರ್ಮಕ್ಕೆ ಇವನಿಗೆ ಒಂದು ರಾತ್ರಿ ರಂಭೆಯೊಡನೆ ಸಂಭೋಗವು ಸಲ್ಲುವುದೆಂದು ಯಮನು ಉಸಿರಲು, ಅವನನ್ನು ಆಕೆಯ ಬಳಿಗೆ ತಂದು "ಈ ಗುಣಹೀನನನ್ನು ನಾಳೆ ನಮಗೆ ಒಪ್ಪಿಸಬೇಕೆಂ" ದು ದೂತರು ಹೇಳಿಹೋದರು (೧೦-೧೧).

ರಂಭೆಯು ಅಭವಪೂಜೆಯಿಂದ ಈ ನೃಪತಿಗೆ ಅಂತಕನ ಬಾಧೆಯನ್ನು ಹಿಂಗಿಸಬೇಕೆಂದಾಲೋಚಿಸಿ ಶ್ವೇತನ ಪರ್ಯಂಕದ ಹತ್ತಿರ ಹೋದಳು. ಅವನು ರತಾರಂಭಚೇಷ್ಟೆಯಿಂದ ಅವಳನ್ನು ಕರೆಯಲು, ಅವಳು "ಭೂಪನೇ, ಈಗ ನೀನು ರತಿಲೋಲುಪನಾಗಿರುವಿ, ನಾಳಿನ ಯಮನ ಬಾಧೆಯನ್ನು ನೋಡು" ಎಂದಳು. ಇದು ಹೇಗೆಂದು ಅರಸನು ಕೇಳಲು ಅವಳು ಅಂದದ್ದು: "ನೀನು ಮೊದಲು ಮಾಡಿದ ಮಹಾಪಾಪವನ್ನು ವರ್ಣಿಸಲು ನಾನು ಶಕ್ತಳಲ್ಲ. ಒಂದು ಹೂವು ಈಶಾರ್ಪಣವೆಂದುದಕ್ಕೆ ಈ ಹೊತ್ತು ನನ್ನ ಸಂಭೋಗವು ನಿನಗೆ ಪ್ರಾಪ್ತವಾಯಿತು. ಇನ್ನು ಭಸ್ಮರುದ್ರಾಕ್ಷಿ ಶಿವಮಂತ್ರಗಳಿಂದ ಅಭವನನ್ನು ಭಜಿಸಿ ನಾಳಿನ ನರಕವನ್ನು ನಿವಾರಿಸು." ಇದನ್ನು ಕೇಳಿ ಭೂಪನು ಇಷ್ಟು ಬೇಗ ಇದು ಹೇಗಾಗುವುದೆಂದು ಕೇಳಲು ರಂಭೆಯು ಹಾಗಾದ ಕೆಲವು ದೃಷ್ಟಾಂತಗಳನ್ನು ಕೊಟ್ಟು, "ಈಗ ನೀನು ತಪ್ಪದೆ ಶಿವಪೂಜೆಯನ್ನು ಮಾಡಿದರೆ ಅಂತಕನ ಭಯವು ತಪ್ಪುವುದೆಂ" ದು ಹೇಳಿ, ಭಸಿತ ರುದ್ರಾಕ್ಷಿ ಕುಸುಮ ಸುಗಂಧ ನವಧೂಪದೀಪಂಗಳನು ತರಿಸಿ ಶಂಭುವಿನಿದಿರಿನಲ್ಲಿರಿಸಿದಳು (೧೨-೨೦).

ಈ ಸಕಲಪರಿಕರಂಗಳನರಸನೀಕ್ಷಿಸಿ "ರಂಭೆ, ಶಿವಪೂಜೆಯನ್ನು ಮಾಡಬೇಕಾದರೆ ನನಗೆ ದೀಕ್ಷೆಯಿಲ್ಲ, ಪಾಪಾತ್ಮನಾದ ನನಗೆ ಧರ್ಮಪಥವನ್ನು ತೋರಿಸಿದ್ದರಿಂದ ನೀನೇ ನನಗೆ ಗುರು, ಅನುಗ್ರಹಿಸಬೇಕು" ಎನ್ನಲು, ರಂಭೆಯು ಅವನಿಗೆ ದೀಕ್ಷೆ

ಯನ್ನು ಕೊಟ್ಟು ಶಿವಪೂಜೆಯಲ್ಲಿ ತೊಡಗಿಸಿದಳು. ಭೂಪನು ಈ ರೀತಿ ಈಶಾರ್ಚನೆಯಲ್ಲಿರುವಾಗ ಬೆಳಕು ಹರಿಯಿತು (೨೧-೨೩). ಆಗ್ಗೆ ಯಮದೂತರು ಬಂದು ಅರಸನನ್ನು ಒಪ್ಪಿಸಲಿಕ್ಕೆ ರಂಭೆಯನ್ನು ಕೇಳಲು ಆಕೆಯು ಅವನನ್ನು ತೋರಿಸಿದಳು. ಅವನು ಶಿವಪೂಜಾನಿರತನಾದುದನ್ನು ದೂತರು ಕಂಡು ಯಮನಿಗೆ ಅರುಹಿದರು. ಕೃತಾಂತನು ಇದನ್ನು ಕೇಳಿ ಕಿಡಿಕಿಡಿಯಾಗಿ ಭೂಪನನ್ನು ಎಳಕೊಂಡು ಬರಬೇಕೆಂದು ಕೈಯಲ್ಲಿ ಗದೆಯನ್ನು ತಿರುವುತ್ತ ದೂತರನ್ನು ಕೂಡಿಕೊಂಡು ಅಮರಾವತಿಗೆ ಬಂದು ಶ್ವೇತನಿಗೆ ನರಕಕುಂಡಕ್ಕೆ ನಡೆಯೆಂದು ಗರ್ಜಿಸಲು, ಅವನು "ಖಂಡಪರಶುವಿನ ಪೂಜಾವಿಧಿಯನ್ನು ಬಿಟ್ಟು ಹೋದರೆ ಕಂಡವರು ನಗರೆ? ನೀನು ಅಜ್ಞನೆ? ಹಿಂದೆ ಮಾರ್ಕಂಡೇಯನನ್ನು ಹಿಡಿದಾಗ ಬಂದ ಸಂಕಟವನ್ನು ಮರೆತೆಯಾ?" ಎಂದನು (೨೪-೨೬). ರಂಭೆಯಾದರೂ ಇವನನ್ನು ಬಿಟ್ಟು ಹೋಗುವುದೇ ಯೋಗ್ಯವೆಂದು ನುಡಿದಳು. ಇದನ್ನು ಕೇಳಿ ಯಮನು ಕಂಗಳಲ್ಲಿ ಕಿಡಿಗೆದರುತ ಇವನನ್ನು ಸದಾಶಿವನೇ ಬಿಡಿಸಿಕೊಳ್ಳಲೆಂದು ಗುಡುಗುಡಿಸಿ ನೃಪಾಲಕನ ಕೊರಳಿಗೆ ಪಾಶವನ್ನು ಹಾಕಿ ಜಗ್ಗಿದನು. ಶ್ವೇತನು ಈಶ್ವರನನ್ನು ಸ್ತುತಿಸಲಾರಂಭಿಸಿದನು. ಸಿದ್ಧರಾಮನೇ, ಮುಂದಿನ ಕೌತುಕವನ್ನು ಕೇಳು (೨೮-೩೦). ಶ್ವೇತನ ವಿಮಲಹಸ್ತದಲ್ಲಿ ಪೂಜೆಗೊಂಬ ಲಿಂಗವೇ ಪಂಚಮುಖದ ಪರಮೇಶ್ವರನಾಗಿ ತೋರಿ ಅವನ ನಯನವಹ್ನಿಯಿಂದ ಯಮನು ಸುಟ್ಟುಹೋದನು. ಇದನ್ನು ಕಂಡು ದಿವಿಜರು ತಲ್ಲಣಿಸಿದರು. ಈಶ್ವರನು "ನನ್ನ ಭಕ್ತನಿಗೆ ಮಾಡಿದ ದ್ರೋಹವೇ ಯಮನನ್ನು ಕೊಂದಿತು. ಎಲ್ಲ ಲೋಕಗಳಲ್ಲಿ ಭಕ್ತರೇ ನನ್ನ ಪ್ರಾಣವು. ಇದನ್ನು ತಿಳಿದು ನಡೆಯಬೇಕು" ಎಂದು ಅವರಿಗೆ ತಿಳುಹಿಸಿ ರಂಭೆಯನ್ನೂ ಶ್ವೇತನನ್ನೂ ಮನ್ನಿಸಿದನು. ಬ್ರಹ್ಮನು ಎಲ್ಲ ದೇವತೆಗಳನ್ನು ಕೂಡಿಕೊಂಡು ಶಂಕರನ ಪಾದಕ್ಕೆ ಮಣಿದು, "ದೇವರ ದೇವ, ನಿನ್ನ ಭಕ್ತನ ದ್ರೋಹದಿಂದ ಕಾಲನು ಉರಿಯೊಳಗೆ ಉರಿದನು. ಮುಂದೆ ಭೂಮಿಯಲ್ಲಿ ಪಾಪಪುಣ್ಯಗಳು ಹೇಗೆ ನಡೆಯುವವು? ಜೀವಿಗಳಿಗೆ ಮರಣ ಭಯವು ಹೇಗಾದೀತು? ಬುದ್ಧಿಗಲಿಸು, ಒಮ್ಮೆ ಸರ್ವಾಪರಾಧವನ್ನು ಕ್ಷಮಿಸು" ಎಂದು ಸ್ತುತಿಸಿದನು. ಶಂಕರನು ಹಾಗೇ ಆಗಲಿ ಎಂದು ಅನ್ನಲು, ಯಮನು ಮಲಗಿದವರೇಳುವಂತೆ ಎದ್ದು ಶಂಕರನಿಗೆ ಕೈಮುಗಿದು ರಕ್ಷಿಸೆಂದು ಬೇಡಿಕೊಳ್ಳಲು, ಅವನಿಗೆ ಭಕ್ತದ್ರೋಹವನ್ನು ಮಾಡಬೇಡೆಂದು ಹೇಳಿ ಶ್ವೇತಸಹಿತ ಕೈಲಾಸಕ್ಕೆ ತೆರಳಿದನು. ಅಂತಕನು ರುದ್ರಮುದ್ರೆಯನ್ನು ತಾಳ್ದವರ ಸಮೀಪಕ್ಕೆ ಹೋಗಬೇಡಿರೆಂದು ತನ್ನ ದೂತರಿಗೆ ಅಪ್ಪಣೆಮಾಡಿ ತನ್ನ ಪಟ್ಟಣಕ್ಕೆ ಹೋದನು (೩೧-೩೬).

೫೨ ಸುಖವಹಮೂರ್ತಿಲೀಲೆಯ ಸಂಧಿ

ಮುನ್ನ ದಂಡಕಾರಣ್ಯದಲ್ಲಿ ಸಕಲಶಾಸ್ತ್ರಸಂಪನ್ನನಾದ ಗೌತಮ ಮುನಿಯು ಶನಿಯು ರೋಹಿಣೀಶಕಟವನ್ನು ಭೇದಿಸುವನಾದಕಾರಣ ಭೂಮಿಯಲ್ಲಿ ಹನ್ನೆರಡು ವರ್ಷ ಬರವುಂಟಾಗುವುದು, ಅದಕ್ಕೆ ಉಪಾಯವನ್ನು ಕಾಣಬೇಕೆಂದು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸತೊಡಗಿದನು. ಈಶನು ಇದನ್ನು ತಿಳಿದು ವಿಷ್ಣುವಿನನ್ನು ಕರೆದು "ನೀನು ಇಳೆಗೈದಿ ನೀನೇ ಜಗತ್ಕರ್ತನೆಂದು ಗೌತಮನ ಕೂಡ ವಾದಮಾಡಿ ಬಾ" ಎನ್ನಲು, ವಿಷ್ಣುವು "ನೀವಿರ್ದು ನಾನು ಕರ್ತನೆಂದು ವಾದಮಾಡಲಂಜುವೆನು" ಎಂದನು (೨-೩). ಅದಕ್ಕೆ ಈಶನು ನಕ್ಕು ವೈಷ್ಣವನ ವೇಷವನ್ನು ಧರಿಸಿ ಹರಿಯಜರೊಡನೆ ತ್ರಿಯಂಬಕ ಪರ್ವತಕ್ಕೆ ಬಂದು ನೀನು ಯಾರನ್ನು ಕುರಿತು ತಪಸ್ಸನ್ನು ಮಾಡುವಿಯೆಂದು ಗೌತಮನನ್ನು ಕೇಳಲು, ಅವನು ಮನಸಿಜಾರಿಯನ್ನು ಕುರಿತು ಮಾಡುವೆನೆಂದನು. ಅದನ್ನು ಕೇಳಿ ಕಪಟ ವೈಷ್ಣವನು ನಗುತ್ತ ಅಂದದ್ದು (೪) :

"ಹರನು ನಿನಗೆ ವರವನ್ನು ಕೊಡುವುದು ನಿಶ್ಚಯವೇ? ಅವನು ತಿರುಕನು. ಸಂಹಾರಕಾರನು. ಹರಿಯನ್ನು ಭಜಿಸಿದರೆ ಅವನು ನಿನ್ನಿಷ್ಟವನ್ನು ಕರುಣಿಸುವನು. ನಾವಿಷ್ಣುಃ ಪೃಥ್ವೀಪತಿಯೆಂಬ ಶ್ರುತಿವಚನವುಂಟು (೫). ಹರಿಯು ಜ್ಞಾನರೂಪನು ನಿತ್ಯನು ಅಚ್ಯುತನು ಪರಮಪುರುಷೋತ್ತಮನು ಜಗತ್ಕರ್ತನು ಬ್ರಹ್ಮಾದಿಸುರರೊಡೆಯನು ಅಹಿತರನ್ನು ಸಂಹರಿಸಿ ಶಿಷ್ಟರನ್ನು ಕಾಪಾಡುವನು. ಸರ್ವಂ ವಿಷ್ಣುಮಯ ಜಗತ್ತೆಂಬ ಶ್ರುತಿಯುಂಟು (೬). ಹರನು ರಾಮಮಂತ್ರವನ್ನು ಗಿರಿಜೆಗೆ ಉಪದೇಶಮಾಡಲು ಆಕೆಯು ಕಾಶಿಯೊಳಗಿರುವವರ ಕರ್ಣದಲ್ಲಿ ಈ ಮಂತ್ರವನ್ನೊರೆಯಲು ಅವರು ಸದ್ಯೋಮುಕ್ತರಾದರು. ಕಾಶಿಯಲ್ಲಿ ವೇದವ್ಯಾಸನು ನ ದೈವಾತ್ ಕೇಶವಾತ್ಪರಂ ಎಂದು ತನ್ನ ಕೈಯೆತ್ತಲಿಲ್ಲವೇ (೭)? ರುದ್ರನು ಕೊಟ್ಟ ಉನ್ನತ ಪದವಿಗಳನ್ನು ಹರಿಯು ತೆಗೆದು ಹರಿಸಲಿಲ್ಲವೇ? ತನ್ನ ನಾಭಿಕಮಲದಿಂದ ಬ್ರಹ್ಮನನ್ನು ಪಡೆಯಲಿಲ್ಲವೇ (೮)? "

ಇದನ್ನು ಮುನಿಯು ಕೇಳಿ ಕಡುನೊಂದು ಅನ್ನುತ್ತಾನೆ :

"ಮಂದಮತಿಯಾದ ವೈಷ್ಣವನೇ, ಕೇಳು. ಇಂದುಧರನು ಅತ್ಯತಿಷ್ಠದ್ದಶಾಂಗುಲನೆಂದೂ ಏಕಮೇವಾದ್ವಿತೀಯನೆಂದೂ ಶ್ರುತಿವಚನಗಳಿರುವುದನ್ನರಿಯದೆ ಶಿವನು ಹರಿಗಿರಿಯ ಸರಿಯೆಂದು ನುಡಿಯಬಹುದೇ (೯)? ಹರಿಯು ಜ್ಞಾನಸ್ವರೂಪನಾದರೆ ಭೃಗುಮುನಿಯರಸಿಯನ್ನು ಅಜ್ಞಾನದಿಂದೇಕೆ ಕೊಂದನು? ಅಚ್ಯುತನಾದರೆ ಸತ್ತು ಸತ್ತು ಏಕೆ ಹುಟ್ಟುವನು? ಪರಮಪುರುಷೋತ್ತಮನಾದರೆ ಕಪಿನಿಂದ

ಪರಸತಿಯರನ್ನೇಕೆ ಬಯಸುವನು? ಸರ್ವವು ವಿಷ್ಣುಮಯವಾದರೆ ತನ್ನರಸಿಯುನ್ನು ಕದ್ದುಕೊಂಡು ಹೋಗುವಾಗ ಎಲ್ಲಿದ್ದನು (೧೦)? ರಕ್ಷಾಕರ್ತನಾದರೆ ತನ್ನ ಮಗನನ್ನೇಕೆ ರಕ್ಷಿಸದಾದನು? ಜಗತ್ಕರ್ತನಾದರೆ ಮಮಕರ್ತಂ ಮಹೇಶಂ ಎಂದೇಕೆನ್ನುವನು (೧೧)? ರಾಮಮಂತ್ರವು ಶಿವನ ನಿಜನಾಮವೆಂದು ಜಮದಗ್ನಿದಶರಥರು ತಮ್ಮ ಮಕ್ಕಳನ್ನು ರಾಮರೆಂದೇ ಕರೆದರು. ಕಾಶಿಯಲ್ಲಿ ವೇದವ್ಯಾಸನು ಕೈಯತ್ತಲು ನಂದೀಶನು ಅದನ್ನು ಮುರಿಯಲಿಲ್ಲವೇ? ಈಶನಾಜ್ಞೆಯ ಮೀರಲು ಹರಿಬ್ರಹ್ಮರಿಗೆ ಸಾಮರ್ಥ್ಯವಿಲ್ಲೆಂಬುದಕ್ಕೆ ಹರಿಯ ಮಗನು ಮತ್ತು ಬ್ರಹ್ಮನ ತಲೆಯು ಸಾಕ್ಷಿ (೧೨-೧೩). ಹರಿಗೆ ಉಪಮನ್ಯುಮುನಿಯು ಶಿವದೀಕ್ಷೆಯನ್ನು ಕೊಟ್ಟದ್ದನ್ನ ನೀನು ಕೇಳಿಲ್ಲವೇ? ದಧೀಚಿಮುನಿಯ ಕೂಡ ಕಾದುವಾಗ ಹರಿಯು ಓಡಿಹೋಗಲಿಲ್ಲವೇ? ಭೃಗುಮುನಿಯು ಅವನೆದೆಯನ್ನೊದೆಯಲು ಅದು ಕಂದಿ ಕಲೆಯಾಗಲು ಅವನಿಗೆ ಶ್ರೀವತ್ಸಲಾಂಛನವೆಂಬ ಹೆಸರಾದುದನ್ನರಿಯೆಯಾ (೧೪-೧೫)? ತಾರಕಜಲಂಧರರು ಅವನನ್ನು ಸೋಲಿಸಿದ್ದನ್ನರಿಯೆಯಾ? ಹರಿಯಜರು ಕರಿಮುಖನ ಶಾಪದಿಂದ ಒಬ್ಬರೊಬ್ಬರ ಉದರವನ್ನು ಪೊಕ್ಕು ಹೊರಗೆ ಬರಲಾರದೆ ಹರಿಯ ನಾಭಿಯಿಂದಜನುದಯಿಸಿದನು. ಈ ಕಾರಣದಿಂದ ಅವನಿಗೆ ಸರಸಿಜೋದ್ಭವನೆಂಬ ಹೆಸರಾಯ್ತು. ಹರಿಯು ಅಜನ ಗುದದಿಂದುದ್ಭವಿಸಲು ಅವನಿಗೆ ಅಧೋಕ್ಷಜನೆಂಬ ಹೆಸರಾಯ್ತು. ಅವರಿರ್ವರು ಮತ್ಸರದಿಂದ ಕಾದುವಾಗ ಉರುಲಿಂಗೋದ್ಭವವಾಗಲು ಅದರ ಪದಮಸ್ತಕಗಳನ್ನು ಹಂದಿಹಕ್ಕಿಗಳಾಗಿ ಕಾಣದೆ ಶಿವನನ್ನು ನುತಿಸಿ ಅವನ ಕಾರುಣ್ಯವನ್ನು ಪಡೆದರು. ಅಜಕಪಾಲಕ್ಕೆ ಹರಿಯು ತನ್ನ ಹಣೆಯ ನೆತ್ತರವನ್ನು ದಿವ್ಯಸಾಹಸ್ರವರುಷಪರ್ಯಂತರ ಕರೆದು ಶಿವನ ಕರುಣವನ್ನು ಪಡೆದನು. ಹರನ ಕುರಿತು ತಪಸ್ಸುಮಾಡಿ ಚಕ್ರವನ್ನು ಪಡೆದನು (೧೬-೧೯). ಭೂಲೋಕವನ್ನು ತೀವಿದುದಕದಲ್ಲಿ ಹರಿಯು ಒಂದಾಲದೆಲೆಯ ಮೇಲೆ ತೇಲಿ ಮುಳುಗುವಾಗ ಶಿವನು ಲೀಲೆಯಿಂದ ಆ ಗಂಗೆಯನ್ನು ಮಲ್ಲಿಕಾಕುಸುಮದಂತೆ ಜಡೆಯಲ್ಲಿ ಧರಿಸಲಿಲ್ಲವೇ? ಕಾಳಕೂಟವಿಷವನ್ನು ಕಂಠದಲ್ಲಿ ಧರಿಸಿ ದೇವತೆಗಳನ್ನು ಕಾಪಾಡಲಿಲ್ಲವೇ? ದಕ್ಷಯಾಗದಲ್ಲಿ ವೀರಭದ್ರನು ಸಕಲದಿವಿಜರನು ಭಂಗಿಸಲು ಹರಿಯು ಎರಳೆಯಾಗಿ ಓಡುವಾಗ ಅವನನ್ನು ಕೂರಲಗಿನಿಂದೆಚ್ಚು ಅದರ ಚರ್ಮವನ್ನು ಹೊದ್ದನು. ಶಿವನಿಗೆ ವಿಷ್ಣುವು ತನ್ನ ಕಣ್ಣನ್ನರ್ಪಿಸಿ ಸೇವಕನಾದವನು ಅವನಿಗೆ ಹೇಗೆ ಸರಿಯಾದಾನು? (೨೦-೨೪). ಭೃಗುವಿನರಸಿಯನ್ನು ಹತಿಸಿ ಆ ಮುನಿಯ ಶಾಪದಿಂದ ಹತ್ತು ಅವತಾರಗಳನ್ನು ತಾಳಿದನು. ಮತ್ಸ್ಯ ಕೂರ್ಮ ವರಾಹ ನಾರಸಿಂಹ ವಾಮನಾವತಾರಗಳನ್ನು ಹೊಂದಿ ಅಹಂಕರಿಸಲು ಆಗಾಗ್ಗೆ ಈಶ್ವರನು ಅವನನ್ನು ಸಂಹರಿಸಿ ಅವನ ಒಂದೊಂದು ಕುರುಹುಗಳನ್ನು ಧರಿಸಿದನು. ಪರಶುರಾಮಾವತಾರದಲ್ಲಿ ಶಿವಲಿಂಗವ

ನ್ನು ದಾನೇಶನೆಂದು ಪೂಜಿಸಿ ತನ್ನ ಭವವನ್ನು ನಿರ್ನಾಮವಾಗಿ ಮಾಡಿದನು. ಸೀತಾರಮಣರಾಮನಾಗಿ ಹುಟ್ಟಿ ಮಹಾದುಃಖದಿಂದ ಶರಧಿಯಲ್ಲಿ ಬಿದ್ದು ಅಳಿದನು. ಕೃಷ್ಣಾವತಾರದಲ್ಲಿ ದಾಸತ್ವದಿಂದರ್ಜುನನ ಸಾರಥಿಯಾಗಿ ಬೇಡನಿಂದಸುವನ್ನು ನೀಗಿದನು. ಆಮೇಲೆ ಅವನ ಹೆಣವನ್ನು ಸುಡಲು ಅದು ಅರೆಬೆಂದು ಕೈಕಾಲ್ಗಳು ಮೋಟಾಗಲು ಅದನ್ನು ಜಗನ್ನಾಥನೆಂದು ಪೂಜಿಸುವರು. ಇನ್ನು ಬುದ್ಧ ಕಲ್ಕ್ಯವತಾರಗಳಲ್ಲಿ ಹುಟ್ಟಿ ಕೆಲದಿನದಮೇಲಳಿವನು. ಈ ತೆರದೆ ಭಂಗಿಯಾದ ಹರಿಯನ್ನು ಪರಮೇಶನಿಗೆ ಸರಿಯೆಂದು ನುಡಿಯ ಬಹುದೇ? ಹರಿಯಜೇಂದ್ರಾರ್ಕ ಶಶಿ ವಸು ದಿಶಾಧೀಶ ಕಿನ್ನರ ಯಕ್ಷ ರಾಕ್ಷಸ ಪಿಶಾಚ ಗುಹ್ಯಕ ಸಿದ್ಧ ಗರುಡ ಗಂಧರ್ವ ವಿದ್ಯಾಧರ ಕಿಂಪುರುಷರ ಉರಗ ಮನು ಮುನಿಮುಖ್ಯರೂ ಶಿವಲಿಂಗಗಳನ್ನು ಧರಿಸಿ ಮರಣವನ್ನು ನೀಗಿದರು (೨೫-೩೬)."

ಇದನ್ನು ಕೇಳಿ ಕಪಟವೈಷ್ಣವನು ನಸುನಗುತ್ತ "ಹರನಲ್ಲದೆ ಬೇರೆ ದೈವತವಿಲ್ಲೆಂಬುದು ಸತ್ಯವೇ? ಹರಿಯಲ್ಲದೆ ಬೇರೆದೈವತವಿಲ್ಲೆಂಬುದಕೆ ಭಾಳದೊಳಗಕ್ಷಿಯನ್ನು ತೋರುವೆನು" ಎನ್ನಲು, ಮುನಿಪನು ಅವನಿಗೆ ಹಾಗೆ ಮಾಡಲು ಹೇಳಿದನು. ಕಪಟವೈಷ್ಣವನು ಅಂತೆ ಮಾಡಲು ಗೌತಮನು ಹರನಲ್ಲದನ್ಯದೈವತವಿಲ್ಲೆಂದು ಪಾದದೊಳಗಕ್ಷಿಯನ್ನು ತೋರಿಸಲು ಶಿವನು ಮುನಿಯ ಭಕ್ತಿಗೆ ಮೆಚ್ಚಿ ಕೃತಕವೇಷವನ್ನು ಬಿಟ್ಟು ನಿಜರೂಪವನ್ನು ತೋರಿದನು. ಮುನಿಯು ಹರ್ಷರೋಮಾಂಚಿತನಾಗಿ ಸರ್ವಾಪರಾಧಗಳನ್ನು ಕ್ಷಮಿಸೆಂದು ಬೇಡಿಕೊಂಡನು. ಈಶ್ವರನು ಅವನಿಗೆ ನಿನ್ನಿಷ್ಟವೇನೆಂದು ಕೇಳಲು, ಅವನು ಬಿತ್ತಿದ ಕ್ಷಣವೇ ಸಕಲ ಧಾನ್ಯಗಳು ಬೆಳೆಯುವಂತೆ ವರವನ್ನು ಬೇಡಿದನು. ಹಾಗೇ ಆಗಲೆಂದು ಹೇಳಿ ಶಿವನು ರಜತಗಿರಿಗೆ ಮರಳಿದನು. ಮುಂದೆ ಶನಿಯು ರೋಹಿಣೀಶಕಟವನ್ನು ಭೇದಿಸಲು ಹನ್ನೆರಡು ವರುಷ ಮಳೆಹೋಗಿ ಬರಬಿದ್ದುದು (೩೭-೪೦).

ಆಗ್ಗೆ ಎಂಬತ್ತೆಂಟು ಸಾವಿರ ಮುನೀಶ್ವರರು ಗೌತಮನು ವರವನ್ನು ಪಡೆದದ್ದನ್ನು ತಿಳಿದು ದಾರುವನದಿಂದ ಹೊರಟು ಇವನಾಶ್ರಮಕ್ಕೆ ಬರಲು ಮುನಿಯು ಅವರನ್ನು ಅನ್ನಪಾನಂಗಳಿಂದ ಸತ್ಕರಿಸಿದನು. ಹನ್ನೆರಡು ವರುಷಗಳಾದ ಮೇಲೆ ಸುಭಿಕ್ಷವಾಗಲು ಅವರು ತಮ್ಮ ದೇಶಕ್ಕೆ ಹೋಗಬೇಕೆಂದು ಯೋಚಿಸಿದರು. ಶಾಂಡಿಲ್ಯಮುನಿಯು ಇದನ್ನು ಕೇಳಿ "ಗೌತಮನು ಬರದೊಳೆಮ್ಮನು ರಕ್ಷಿಸಿದನು. ಅನ್ನದಾನಕ್ಕಿಂತ ಮೇಲಾದ ದಾನವಿಲ್ಲ. ಇವನಿಗೆ ಹೇಳದೆ ಹೋಗುವುದು ಉಚಿತವಲ್ಲ" ಎಂದು ಈ ಮಾತಿನ ಸಾಕ್ಷಿಗೆ ಗುಣನಿಧಿನೃಪಾಲನಕ ಕಥೆಯನ್ನು ಹೇಳಿದನು (೪೧-೫೫). ಆದರೂ ಮುನಿಗಳು ಅವನುಪದೇಶವನ್ನು ಲಕ್ಷಿಸಲಿಲ್ಲ. ಅವರಲ್ಲಿ ಕೆಲವರು ಮೋಸದಿಂದ ಒಂದು ಗೋವನ್ನು ಮಾಡಿ ಗೌತಮನು ಹೋಗುವ ದಾರಿಯಲ್ಲಿ

ನಿಲ್ಲಿಸಿದರು. ಅವನು ಆ ಹೊಸ ಗೋವು ಎಲ್ಲಿಯದೆಂದು ನೈದಡವಲು ಅದು ಬಿದ್ದು ಪ್ರಾಣವನ್ನು ಬಿಟ್ಟಿತು. ಗೋವು ಸತ್ತ ಇವನ ಮನೆಯಲ್ಲಿ ಅನ್ನಪಾನವನ್ನು ಹೇಗೆ ಮಾಡಬೇಕೆಂದು ಮುನಿಗಳು ಹೊರಡಲು, ಅವನು ಅವರ ಕಾಲುಬಿದ್ದು ಇದಕ್ಕೆ ನಿಷ್ಕೃತಿಯನ್ನು ಹೇಳಿರೆಂದು ಬೇಡಿಕೊಂಡನು. ಅವರು "ಶಂಕರನ ಮಸ್ತಕದ ಗಂಗೆಯನ್ನು ತಂದು ಗೋವಳಿದ ಸ್ಥಳದಲ್ಲಿ ಹಾಯಿಸಬೇಕೆಂ"ದು ಹೇಳಿದರು. ಗೌತಮನು ತಪದಿಂದ ಈಶನನ್ನು ಮೆಚ್ಚಿಸಿ ಗಂಗೆಯ ಬಿಂದುವನ್ನು ಪಡೆದು ತನಗೆ ಗೋಹತ್ಯೆಯೇಕೆ ಬಂದುದೆಂದು ಕೇಳಲು, ಶಿವನು "ನೀನು ಬರಪಲ್ಲಿ ರಕ್ಷಿಸಿದ ಋಷಿಗಳಪಕಾರದಿಂದ ಹೀಗಾಯಿತೆಂ"ದು ಹೇಳಲು, ಗೌತಮನು ಮುನಿಗಳಿಗೆ ಪಾಷಂಡಿಮತರಾಗಿ ಕೆಡಲೆಂದು ಶಪಿಸಿದನು (೬೦-೬೨). ಬಳಿಕ ಗಂಗೆಯನ್ನು ಪಶುವಳಿದ ಸ್ಥಾನವಲ್ಲೈದಿಸಲು, ಆ ಸ್ಥಾನಕ್ಕೆ ಗೌತಮಿಯೆಂಬ ಹೆಸರಾಯ್ತು. ಆ ಪ್ರವಾಹಕ್ಕೆ ಗೋವು ಸೋಂಕಲಾಗಿ ಗೋದಾವರಿಯೆಂಬ ಹೆಸರಾಯ್ತು.

ಇತ್ತ ಶಂಕರನು ತನ್ನ ಭಕ್ತನ ವಾಕ್ಯವು ಸಟೆಯಾಗಬಾರದೆಂದು ವಿಷ್ಣುವಿನನ್ನು ಕರೆದು ಜೈನ ಬೌದ್ಧ ಚಾರ್ವಾಕಾದಿ ಮತಗಳನ್ನು ಬೆಳೆಸೆಂದು ಹೇಳಲು, ಅವನು ಅದರಂತೆ ಮಾಡಿ ಋಷಿಗಳಿರುವ ಸ್ಥಾನದಲ್ಲಿ ಪಾಷಂಡಿಮತವನ್ನು ಹೆಚ್ಚಿಸಿದನು. ಇದನ್ನು ಕಂಡು ಅತ್ರಿಕಶ್ಯಪಾಂಗಿರಸ ಮುಂತಾದ ಮುನಿಗಳು ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ತಮ್ಮ ಅಜ್ಞಾನವನ್ನು ಹೋಗಲಾಡಿಸಿ ಉದ್ಧರಿಸಬೇಕೆಂದು ಬೇಡಿಕೊಂಡರು. ಶಿವನು ಅವರಿಗೆ "ನೀವು ಭಯಪಡಬೇಡಿರಿ! ಶೈಲಾದಿಯು ನಮ್ಮೆರಡನೆಯ ರೂಪಾಗಿ ಬಂದು ಮುನಿವ್ರಜಕೆ ಶೈವಾಗಮರಹಸ್ಯವನ್ನು ತಿಳಿಸಿ ಸುಜ್ಞಾನವನ್ನು ನೆಲೆಗೊಳಿಸುವನು" ಎಂದು ಹೇಳಿ ಕಳುಹಿಸಿ ತಾನು ಸುಖವಹಮೂರ್ತಿಯಾಗಿ ವೇದವೇದಾಂತಶಿವಶಾಸ್ತ್ರಪೌರಾಣಾಗಮಾದಿಗಳನವನಿಯೊಳ್ ಪ್ರಜ್ವಲಿಸೆಂದು ವೃಷಪತಿಗೆ ಎಲ್ಲ ರಹಸ್ಯವನ್ನು ತಿಳಿಸಿ ಕಳುಹಿಸಲು, ಅವನು ಮೇದಿನಿಗೆ ಬಂದು ಆ ಋಷಿಗಳಿಗೆ ಶೈವಮತವನ್ನು ಬೋಧಿಸಿ ತಿರುಗಿ ಕೈಲಾಸಕ್ಕೆ ಹೋದನು (೬೩-೬೬).

೫೩ ಕಿರಾತಲೀಲೆಯ ಸಂಧಿ

ಸಿದ್ಧರಾಮನೇ ಆಲಿಸು. ಪೂರ್ವಕಾಲದಲ್ಲಿ ಚಂದ್ರವಂಶದವರಾದ ಪಾಂಡವರು ಧರಿತ್ರಿಯನ್ನು ಪಾಲಿಸುತ್ತಿರುವಾಗ ದಾಯಾದಿಗಳಾದ ಕೌರವರೊಡನೆ ದ್ಯೂತಕೇಳಿಯನ್ನಾಡಿ ಸೋತು ಅವರಿಗೆ ದೇಶಕೋಶಗಳನ್ನೊಪ್ಪಿಸಿ ಅರಣ್ಯವಾಸಿಗಳಾಗಿದ್ದರು (೨). ಒಂದು ದಿನ ವೇದವ್ಯಾಸನು ಅವರಿದ್ದೆಡೆಗೆ ಬಂದು ಧರ್ಮರಾಜನಿಗೆ "ಈಶ್ವ

ರಿಸುವ ಪಾಶುಪತಾಸ್ತ್ರವನ್ನು ಪಡೆದರೆ ಅದರಿಂದ ನಿನಗೆ ರಿಪುಗಳನ್ನು ಜಯಿಸಲಾಗುವುದು" ಎಂದನು. ಧರ್ಮಜನು ಅದು ಹೇಗೆ ಸಾಧ್ಯವಾಗುವುದೆಂದು ಕೇಳಲು ವ್ಯಾಸನು ಅರ್ಜುನನಿಗೆ ಶಿವನೊಲಿವನೆಂದು ಹೇಳಿ ಮಂತ್ರೋಪದೇಶವನ್ನು ಮಾಡಿ ಹೋದನು. ಧರ್ಮಜನು ಅರ್ಜುನನಿಗೆ ಆ ಮಂತ್ರವನ್ನು ನಿರವಿಸಿದನು. ಅರ್ಜುನನು ಇಂದ್ರಕೀಲಪರ್ವತಕ್ಕೆ ಹೋಗಿ ಶುಚಿಯಾಗಿ ಶಿವಮೂರ್ತಿಯನ್ನು ಮನಸಿನಲ್ಲಿ ಧ್ಯಾನಿಸುತ್ತ ತಪವನಾಚರಿಸತೊಡಗಿದನು (೩-೫). ಈ ತಪಸ್ತೇಜದಿಂದ ತಪೋವನದಲ್ಲಿಯ ಋಷಿಗಳು ಭಯಾಕ್ರಾಂತರಾಗಿ ಓಡಿಹೋದರು. ಇವರ ಕೋಳಾಹಳವನ್ನು ನಾರದನು ಕೇಳಿ ಅವರ ಹತ್ತಿರ ಹೋಗಲು, ಅವರು ಅವನಿಗೆ ತಮ್ಮ ಸಂಕಟವನ್ನು ಪರಿಹರಿಸೆಂದು ಬೇಡಿಕೊಂಡರು. ಅವನು ಖಂಡಪರಶುವಿನೆಡೆಗೆ ಹೋಗಿ ನಿಮ್ಮುಪಹತಿಯನ್ನು ಖಂಡಿಸುವೆನೆಂದು ನಂಬುಗೆಯಿತ್ತು ಈಶನೆಡೆಗೆ ಬಂದು ಮುನಿಗಳ ಗೋಳನ್ನು ಹೇಳಲು, ಅಭವನು "ಅಲ್ಲಿ ತಪಿಸುತಿಹ ನರನು ನಮ್ಮ ಪರಮ ಭಕ್ತನು. ಅವನಿಂದ ಮುನಿಗಳಿಗೆ ಬಾಧೆಯಿಲ್ಲ. ನೀನು ಹೋಗಿ ಅವರ ಭೀತಿಯನ್ನು ಬಿಡಿಸು" ಎಂದು ಹೇಳಿ ನಂದಿಯನ್ನು ಕರೆದು ಗಣಸಮೂಹಕ್ಕೆ ಬೇಟೆಗೆ ಹೊರಡಲಿಕ್ಕೆ ಹೇಳೆಂದು ಅಪ್ಪಣೆಯೀಯಲು ನಂದೀಶನು ಅದರಂತೆ ಡಂಗುರವನ್ನು ಹೊಡಿಸಿದನು (೬-೧೦). ಆಗ್ಗೆ ಗಣಸಮೂಹವು ಕೈಗಳಲ್ಲಿ ಬಲೆ ಕಣ್ಣಿ ಬಡಿಕೋಲಗಳನ್ನು ಹಿಡಿದುಕೊಂಡು ಸೊಪ್ಪಿನುಡುಗೆಯನ್ನುಟ್ಟು ಪುಳಿಂದರಾಗಿ ದೇವಿಯರು ಚಲ್ಲಣವನ್ನುಟ್ಟು ಗುಂಜಾಭರಣವನ್ನು ತೊಟ್ಟು ಪುಳಿಂದಿಯರಾಗಿ ಹೊರಟರು (೧೧-೧೩). ಇವರನ್ನೊಡಗೊಂಡು ಹರನು ನಾನಾವಾದ್ಯರಭಸದಿಂದ ಇಂದ್ರಕೀಲಪರ್ವತಕ್ಕೆ ಬಂದನು (೧೪-೨೩). ಅಲ್ಲಿಯ ಘೋರಾರಣ್ಯವನ್ನು ಹೊಕ್ಕು ಶಾಬರಗಣವು ನಾನಾಮೃಗಗಳ ಬೇಟೆಯಾಡಿ ಖಗಸಮೂಹಗಳನ್ನು ಹಿಡಿದುಕೊಂಡು ಅತ್ಯಂತ ಹರುಷದಿಂದ ಆ ಕಾಂತಾರದೊಳಗೆ ಹೋಗುತ್ತಿರಲು ಅವರ ಅಬ್ಬರಕ್ಕೆ ಆ ಗಿರಿಯ ಗುಹೆಯಲ್ಲಿರುವ ಜಗತ್ಪ್ರಳಯಸಮಯದ ಮಹೋಗ್ರಾಂತಕನ ರೂಪಿನ ಮೂಕದಾನವನು ಭೀಕರಾಕಾರಸೂಕರನಾಗಿ ಪೊರಮಟ್ಟನು (೨೪-೩೪). ಆ ಸೂಕರವು ಸುರಭಟರನ್ನು ತುಡುಕಿ ನಾಯ್ಗಳನ್ನು ಕೋರೆಯಿಂದ ಖಂಡಿಸುತ್ತ ಒಡ್ಡಿದ ಬಲೆಗಳನ್ನು ಸವರುತ್ತ ಅಡ್ಡಬಂದ ತರುಲತೆಗಳನ್ನು ಹಾರಿಸುತ್ತ ನಡೆದುದನ್ನು ಕಂಡು ಹರನು ಅದರ ಮೇಲೆ ಒಂದು ಬಾಣವನ್ನು ಬಿಡಲು, ಅದು ಆ ಸೂಕರಕೆ ತಾಗಲು, ಸೂಕರವು ಬಾಣಸಹಿತ ಕಿರೀಟಿಯ ಮುಂದೆ ಬಂದು ಗುಡಿಗುಡಿಸಲು, ಆಕ್ಷಣ ಅವನು ಲೋಕನಾಥನ ಧ್ಯಾನವನ್ನು ಬಿಟ್ಟು, ನೋಟಕ್ಕೆ ಸೋಜಿಗವಾದ ಸೊಕ್ಕಿದೆಕ್ಕಲವನ್ನು ಬಾಣದಿಂದಿಕ್ಕಲು, ಅದು ಪಕ್ಕನಸುವಂ ಬಿಡಲು, ಮುಕ್ಕಣ್ಣನ ಕಡೆಯ ಬೇಡನು ಕಿಟಿಯು ನಕ್ಕಿತೆಂದು ಅವನ್ನು ಗಟ್ಟಿಯಾಗಿ ಹಿಡಿದನು (೩೫-೩೯).

ಇದನ್ನು ಕಂಡು ಅರ್ಜುನನು “ ಎಲೆ ಪುಳಿಂದ, ನನ್ನ ಕೂಡ ಹುಡುಗಾಟಿಕೆಯೆ ? ನಾನು ಕೊಂದ ಹಂದಿಯನ್ನು ಒಯ್ಯುವಿಯಾ? ನಿನ್ನ ತೆತ್ತಿಗನನ್ನು ತಂದು ತೋರಿಸು. ಅವನ ಸಾಮರ್ಥ್ಯವನ್ನು ನೋಡುವೆನು ” ಎನ್ನಲು, ಇಂದುಧರನು ಈ ನುಡಿಯನಾಲಿಸಿ ನರನ ಪೊರೆಗೆ ಬಂದು ಹಂದಿಯು ನಮ್ಮದೆನ್ನಲಾಗಿ, ಪಾರ್ಥನು ಗುಡುಗುಡಸಿ “ ಎಲೆ ಕಿರಾತ, ನಿನ್ನ ಬಲ್ಮೆಯು ಸಾಕು, ಹಂದಿಯು ನನ್ನಂಬಿನಿಂದ ಬಿದ್ದುದು. ಜೋಕೆಯಿಂದ ಹೋಗು, ಇಲ್ಲವಾದರೆ ಈ ಶರಾಳಿಯನ್ನು ತೆಗೆದುಕೋ ? ” ಎನ್ನುತ್ತ ಬಾಣಗಳನ್ನೆಸೆಯಲು, ಅವು ಶಂಭುವನ್ನು ಸೋಂಕದೆ ಬಲವಂದುದನ್ನು ಕಂಡು ಕೋಪದಿಂದ ಮತ್ತೆ ಮತ್ತೆ ಬಾಣಗಳನ್ನು ಬಿಡಲು, ಅವು ಸಹ ಮರಳಿದುವು (೪೦-೪೨). ನರನು ಪುನಃ ಪುನಃ ಬಾಣಗಳನ್ನು ಬಿಡಲು ಶಿವನು ಅವುಗಳನ್ನು ಖಂಡಿಸಿದನು. ಮಂತ್ರಾಸ್ತ್ರಗಳನ್ನು ಬಿಡಲು ಅವುಗಳನ್ನು ನುಂಗಿದನು. ಆ ಮೇಲೆ ಕಿರೀಟಿಯು ತನ್ನ ಕೈಯೊಳಗಿನ ಚಾಪದಿಂದ ಸಸಿದಲೆಯನನ್ನು ಹೊಡೆದನು. ಅಡಾಯುಧ ಕಲ್ಲು ಗುಂಡು ಮರಗೊಂಬುಗಳಿಂದ ಸೆಣಸಿದನು. ಇವೆಲ್ಲವು ನಿರರ್ಥಕವಾದುವು. ಅನಂತರ ಇಬ್ಬರೂ ಕೆಲಕಾಲ ಮಲ್ಲಯುದ್ಧವಾಡಿ ಕಡೆಗೆ ನರನು ಮುಷ್ಟಿಯನ್ನು ನೆಗವಿ “ ಲುಬ್ಧಕ, ನಿನ್ನ ಕಾಯಕಿದೆ ಕಡೆ ” ಯೆನುತೆ ಹರನ ವಕ್ಷಸ್ಥಳವನು ಚೆನ್ನಾಗಿ ತಿವಿದು ಬೊಬ್ಬಿರಿದನು (೪೩-೫೫). ಹರನು ಆ ಹೊಡೆತವನ್ನು ಪರಿಹರಿಸಿ ನರನನ್ನು ಭೂಮಿಯ ಮೇಲೆ ಕೆಡವಿ ಮೆಟ್ಟಲು, ಆ ಮೆಲ್ಲಡಿ ಸೋಂಕುಮಾತ್ರದಿಂದ ನರನು ರಕ್ತವನ್ನು ಕಾರಿ ಮೈಮರೆದನು. ಇದನ್ನು ನೋಡಿ ಶಿವನ ಮನವು ಕರುಣದಿಂದ ಕರಗಿತು. ಅವನು ಭಕ್ತವತ್ಸಲನಲ್ಲವೇ ? ಕೌಂತೇಯನು ಚೇತರಿಸಿ ಕಣ್ದೆರೆದು “ ನನಗೆ ಯಾವ ಜನ್ಮದ ಮಹಾಪಾತಕವುಂಟಾಯಿತೋ ? ಶಿವಮತವನ್ನು ಹಳಿದು ಶಿವಭಕ್ತರನ್ನು ಜರೆದ ಕಾರಣದಿಂದ ಇವನಿಂದ ನನಗೆ ಪರಿಭವವುಂಟಾಯಿತು. ಶಿವನಿಗೆ ಮರೆಹೊಗುವೆನು ” ಎಂದು ವಿಚಾರಿಸಿ, ಮಳಲಲಿಂಗವ ಮಾಡಿ ಪರಿಪರಿಯ ಕುಸುಮಗಳನ್ನು ತಿರಿದು ತಂದು ಭಕ್ತಿಯಿಂದ ಪೂಜಿಸಿ “ ಅಸಮಾಕ್ಷ, ಶಬರನು ನನ್ನನ್ನು ಹಸಗೆಡಿಸಿದನು, ಅವನನ್ನು ಶಿಕ್ಷಿಸಲಿಕ್ಕೆ ನನಗೆ ಸಾಮರ್ಥ್ಯವನ್ನು ದಯಪಾಲಿಸು ” ಎಂದು ಸ್ತುತಿಸಿ ಶಬರನ ಕಡೆ ನೋಡಲು, ತಾನು ಲಿಂಗಕ್ಕರ್ಪಿಸಿದ ಹೂವುಗಳು ಕಿರಾತನ ಮಸ್ತಕದಲ್ಲಿ ಕಂಡುವು. ಇದನ್ನು ನೋಡಿ ಇವನೇ ಶಿವನೆಂದು ತಿಳಿದು ನರನು ಮತ್ತನಾದ ನನ್ನನ್ನು ಕಾಯೆಂದೆರಗಲು, ಶಿವನು ಅವನನ್ನು ಎತ್ತಿ ತನ್ನ ನಿಜರೂಪವನ್ನು ತೋರಿದನು (೫೬-೬೦). ವೀರಭದ್ರ ಕುಮಾರ ಮುಂತಾದ ಪ್ರಮಥರು ಶಾಬರವನುಳಿದು ನಿಜರೂಪಿಂದ ಶಿವನ ಸುತ್ತಲು ಶೋಭಿಸಿದರು. ಪಾರಾಶರಾತ್ರಿ ಮುಂತಾದ ಮುನಿಗಳು ನರನ ದೆಸೆಯಿಂದ ಈ ರಮ್ಯಮೂರ್ತಿಯನ್ನು ಕಂಡೆವೆಂದು ಜಯರವದೊಡನೆ ಶಿವನಿಗೆರಗಿದರು. ಸುರರು

ಈಶ್ವರನ ಮಣಿಮುಕುಟದ ಮೇಲೆ ಹೂಮಳೆಗರೆದರು. ವೇದಶಾಸ್ತ್ರಾಗಮಪುರಾಣಗಳು ನಿಜರೂಪದಿಂದ ಅವನನ್ನು ಹೊಗಳಿದುವು. ಪಾರ್ಥನು ಆನಂದಾಶ್ರುಯುಕ್ತನಾಗಿ ಮನವಣಿಯೆ ನುತಿಸಿದನು (೬೧-೬೫). ಶಂಭುವು ಅವನನ್ನು ಬಿಗಿದಪ್ಪಿ ಅವನ ಬಿಲ್ಲುಬಾಣಖಡ್ಗಗಳನ್ನು ತಿರುಗಿ ಕೊಟ್ಟು ನಿನ್ನಿಷ್ಟವೇನೆಂದು ಕೇಳಲು, ಅವನು ಪಾಶುಪತಮಹಾಶರವನ್ನು ಬೇಡಿದನು. ಈಶನು ಅದನ್ನವನಿಗೆ ಕೊಟ್ಟನು. ಉಮೆಯು ಅಂಜನಶರವನ್ನು ಕೊಟ್ಟಳು, ಹರಸುರಗಣಾಧೀಶರೊಲಿದು ಒಂದೊಂದು ಬಾಣವನ್ನು ಕೊಟ್ಟರು. ಈಶ್ವರನು ಮುನಿನಿಕರವನ್ನು ಮನ್ನಿಸಿ ಫಲ್ಗುಣನನ್ನು ಬೀಳ್ಕೊಟ್ಟು ರಜತಾಚಲವನ್ನು ಹೊಕ್ಕನು. ಈ ರೀತಿ ಖಂಡಪರಶುವಿನ ಇಪ್ಪತ್ತೈದು ಲೀಲೆಗಳು ಕಡೆಗಂಡುವೆಂದು ಚೆನ್ನಬಸವೇಶನು ಸಿದ್ಧರಾಮನಿಗೆ ಹೇಳಲು, ಸಿದ್ಧರಾಮನು "ಪಾರ್ಥನು ಯಾರ ಮಗನು, ಅವನು ಆ ಬಾಣವನ್ನು ತಕ್ಕೊಂಡು ಏನು ಮಾಡಿದನು, ಆ ಕಥೆಯನ್ನು ಹೇಳು" ಎನ್ನಲು, ಚೆನ್ನಬಸವನು ಅದನ್ನು ನಿರವಿಸಲನುವಾದನು (೬೬-೬೭).

೫ನೆಯ ಕಾಂಡ

೫೪ ಸೋಮಸೂರ್ಯಾನ್ವಯವರ್ಣನೆಯ ಸಂಧಿ.

ಆ ಬಳಿಕ ಚೆನ್ನಬಸವೇಶ್ವರನು ಸಿದ್ಧರಾಮನಿಗೆ ಸೋಮಸೂರ್ಯಾನ್ವಯವನ್ನು ವಿಸ್ತರಿಸತೊಡಗಿದನು. ಅದು ಹೇಗಂದರೆ:-

ಸೃಷ್ಟಿಯ ಮೊದಲು ಬ್ರಹ್ಮನು ಭಾಳಲೋಚನನ ವರವನ್ನು ಪಡೆದು ತನ್ನ ಅವಯವಗಳಿಂದ ನವಬ್ರಹ್ಮರನ್ನು ಪಡೆದನು. ಅವರೊಳಗೆ ಅತ್ರಿಮುನಿಪನಿಂದ ಚಂದ್ರನುದಯಿಸಿದನು. ಅವನಿಂದ ವಿಶಾಲತರವಾದ ಚಂದ್ರವಂಶವಾಯಿತು. ಚಂದ್ರನಿಂದ ಬುಧನು ಹುಟ್ಟಿದನು. ಬುಧನ ಮಗನು ಪುರೂರವನು. ಪುರೂರವನಿಗೂ ಊರ್ವಶಿಗೂ ಆಯುಃಕುಮಾರನು, ಅವನಿಂದ ನಹುಷನುದಿಸಿದನು. ಆ ನಹುಷನಿಗೆ ಯಯಾತಿ ಯದು ಪೂರುಗಳು ಮಕ್ಕಳು. ಇವರಲ್ಲಿ ಯದುವಿನಿಂದ ಯಾದವಕುಲವೂ ಪೂರುವಿನಿಂದ ಪೌರವಕುಲವೂ ಆಗಿ ಸೋಮಕುಲವು ಎರಡಾಯ್ತು (೨-೩).

ಪೂರುವಿನಿಂದ ಜನಮೇಜಯನೂ, ಆತನಿಗೆ ಪ್ರಜಿಹ್ವನೂ, ಆತನಿಗೆ ಸಂಯಾತಿಯೂ, ಅವನಿಂದ ಹಂಪಾತಿಯೂ, ಅವನಿಂದ ಸಾರ್ವಭೌಮನೂ, ಅವನಿಗೆ ಜಯಸೇನನೂ, ಅವನಿಂದ ಇಂದ್ರನೂ, ಅವನಿಂದ ಮಹಾಭೂಮನೂ, ಅವನಿಂದ ಅಯುತಾನೀತನೂ, ಆತನಿಂದ ಕ್ರೋಧನೂ, ಆತನಿಂದ ದೇವಾತಿಯೂ ಹುಟ್ಟಿದರು. ದೇವಾತಿಯಿಂದ ರುಚಿಕನೂ, ಆತನಿಂದ ರುಕ್ಷನೂ, ಅವನಿಗೆ ಮತಿವರನೂ, ಅವನಿಗೆ ತೃಷ್ಣವೂ, ಆತನಿಗೆ ಇಲನೂ, ಆತನಿಗೆ ದುಷ್ಯಂತನೂ, ದುಷ್ಯಂತನಿಗೆ ಶಾಕುಂತಳೆಯಲ್ಲಿ ಭರತನೂ, ಅವನಿಗೆ ಹುಮನ್ಯುವೂ, ಅವನಿಗೆ ಸುಹೋತ್ರನೂ, ಅವನಿಂದ ಹಸ್ತಿಯೂ, ಹಸ್ತಿಯಿಂದ ವಿಲೋಚನನೂ ಉದಿಸಿದರು. ವಿಲೋಚನನಿಂದ ಅಜಾವಿಳನೂ, ಅವನಿಗೆ ಸಂವರಣನೂ, ಆತನಿಗೆ ತಪತಿಯಲ್ಲಿ ಕುರುವೂ, ಅವನಿಗೆ ಪರೀಕ್ಷಿತನೂ, ಅವನಿಗೆ ಭೀಮಸೇನನೂ, ಅವನಿಗೆ ಪ್ರದೀಪನೂ, ಅವನಿಗೆ ಶಂತನೂ. ಅವನಿಗೆ ವಸಿಷ್ಠನ ಶಾಪದಿಂದ ಪ್ರಭಾಸವಸುವೂ ಜನಿಸಿದರು. ಶಂತನು ಪ್ರಭಾಸವಸುವಿಗೆ ಭೀಷ್ಮನೆಂದು ಹೆಸರಿತ್ತು ಸಲುಹಲು ಆತನು ಉಳಿದ ವಸುಗಳ ಬಲದಿಂದ ಅಹಿತರನ್ನು ಗೆದ್ದು ಸುಖದಿಂದಿರುತ್ತಿದ್ದನು. ಇತ್ತ ಅಜಶಾಪದಿಂದ ಅದ್ರಿಕೆಯೆಂಬ ಅಪ್ಸರೆಯು ದೊಡ್ಡದೊಂದು ಮತ್ಸ್ಯರೂಪಿನಿಂದ ಗಂಗೆಯೊಳಗಿರಲು ಆಕಾಶಮಾರ್ಗದಲ್ಲಿರುವ ಉಪರಿಚರವಸುವಿನ ಇಂದ್ರಿಯವು ಬಿದ್ದು ಅದಕ್ಕೆ

ಗರ್ಭವು ನಿಂತಿತು. ಒರ್ವ ಜಾಲಗಾರನು ಅದನ್ನು ತಂದು ಸೀಳಲು ಅದರ ಹೊಟ್ಟೆಯೊಳಗೆ ಎರಡು ಶಿಶುಗಳನ್ನು ಕಂಡು ಅವನ್ನು ವಸುವಿಗೆ ಕೊಟ್ಟನು. ಅವುಗಳಲ್ಲಿ ಹೆಣ್ಣುಶಿಶುವನ್ನು ವಸುವು ಅವನಿಗೆ ಕೊಟ್ಟು ಕುವರನನ್ನು ತಾನು ರಕ್ಷಿಸಿ ಅವನಿಗೆ ಮತ್ಸ್ಯನೃಪನೆಂದು ಕರೆದನು. ಪರಾಶರಋಷಿಯಿಂದ ಆ ಮತ್ಸ್ಯಗಂಧಿಯಲ್ಲಿ ವೇದವ್ಯಾಸಮುನಿಯು ಜನಿಸಿದನು. ಹೀಗಿರುತ್ತಿರಲು, ಬೇಟೆಗೆ ಬಂದ ಶಂತನು ಆಕೆಯನ್ನು ಕಂಡು ಭ್ರಮಿಸಿ ಕರೆಯಲು, ಆಕೆಯು ಒಪ್ಪದಾದಳು. ಇದಕ್ಕಾಗಿ ಶಂತನು ಚಿಂತೆಯೊಳಿರಲು ಭೀಷ್ಮನು ಆಕೆಯನ್ನು ಅವನೊಡನೆ ಕೆಯ್ಗೂಡಿಸಿದನು. ಆಕೆಯಿಂದ ಚಿತ್ರಾಂಗದನೂ ವಿಚಿತ್ರವೀರ್ಯನೂ ಜನಿಸಿ ಪಗೆಗಳಿಂದ ಮಡಿಯಲು, ವೇದವ್ಯಾಸನಿಂದ ಅವರ ಕಾಂತೆಯರು ಗರ್ಭವನ್ನು ಧರಿಸಿ ಧೃತರಾಷ್ಟ್ರ ಪಾಂಡು ವಿದುರರನ್ನು ಹೆತ್ತರು (೪-೯).

ಧೃತರಾಷ್ಟ್ರನಿಗೆ ಕೌರವೇಶ್ವರ ಮೊದಲಾದ ನೂರ್ವರೂ ಪಾಂಡುವಿಗೆ ಧರ್ಮಜ ಮೊದಲಾದ ಐವರೂ ಆತ್ಮಜರಾದರು. ಮುನಿಶಾಪದಿಂದ ಪಾಂಡುವು ಅಳಿಯಲು, ಹಸ್ತಿನಾಪುರದಲ್ಲಿ ಕೌರವಪಾಂಡವರ್ಗೆ ಮತ್ಸರವುಂಟಾಗಿ ವಾರಣಾವತದಲ್ಲಿ ಪಾಂಡವರು ಇರುತ್ತ ಅರಗಿನ ಮನೆಯಿಂದ ಪಾರಾಗಿ, ಕಾನನದಲ್ಲಿ ಹಿಡಿಂಬನನ್ನು ಮುರಿದು, ಅಗ್ರಹಾರದಲ್ಲಿ ಬಕನನ್ನು ಮರ್ದಿಸಿ, ದ್ರುಪದನಂದನೆಗೆ ಐವರೂ ವರರಾಗಿ, ಕೌರವರನ್ನು ಪರಿಭವಿಸಿ, ಮತ್ತೆ ಇಂದ್ರಪ್ರಸ್ಥವನ್ನು ಸೇರಿ, ಕೌರವರ ಕೂಡ ಜೂಜಾಡಿ ಸೋಲಲು ಕೌರವರು ಅವರ ಭೂಮಿಯನ್ನು ತೆಗೆದುಕೊಂಡರು. ಪಾಂಡವರು ಮತ್ತೆ ಅರಣ್ಯವನ್ನು ಸೇರಿದರು. ಕೌರವರನ್ನೆಲ್ಲರನ್ನು ಜಯಿಸಲು ನರನು ಪಾಶುಪತಶರವನ್ನು ಪಡೆದು ನಾಕಲೋಕವನ್ನು ಹೊಕ್ಕು ಅಸುರರನ್ನು ಕೊಂದು ಭೂಮಿಗೈದಿದನು. ಬಳಿಕ ಅಜ್ಞಾತವಾಸದಲ್ಲಿ ಮತ್ಸ್ಯನನ್ನು ಓಲೈಸಿ ಆಮೇಲೆ ಅರ್ಧರಾಜ್ಯಕ್ಕೋಸುಗ ಪಾಂಡವರು ಕಲಹಕುದ್ಯೋಗಿಸಿದರು. ಇತ್ತ ವಸುದೇವದೇವಕಿಯರಿಗೆ ಕೃಷ್ಣನು ಜನಿಸಿ ವಸುಮತಿಯ ಭಾರವನ್ನು ಕಳೆದು ಪಾರ್ಥನಿಗೆ ಸಾರಥಿಯಾಗಲು, ಪಾಶುಪತಬಾಣದ ಮಹಾತ್ಮೆಯಿಂದ ನರನು ಯುದ್ಧದಲ್ಲಿ ಹೋರಾಡಿ ಅಗ್ರಜ ಗುರು ಪಿತಾಮಹಮೊದಲಾದ ಕುರುಸೇನೆಯನ್ನು ಸಂಹರಿಸಿದನು. ಈ ವಸುಧೆಯಲ್ಲಿ ಮಣ್ಣು ಹೆಣ್ಣಿಗೆ ಅಳಿಯದವರಾರು? (೧೦-೧೩).

ಹೀಗೆ ಚೆನ್ನಬಸವೇಶನು ಹೇಳಲು, ಸಿದ್ಧರಾಮನು ಹೆಣ್ಣಿನ ಸಲುವಾಗಿ ಅಳಿದವರಾರೆಂದು ಕೇಳಲಾಗಿ ಚೆನ್ನಬಸವನು ಹೇಳತೊಡಗಿದನು. ಅದೇನೆಂದರೆ:

ಪೂರ್ವದಲ್ಲಿ ಆದಿಬ್ರಹ್ಮನ ಅಂಗದಿಂದ ಮರೀಚಿ ಜಂಬುವನುದಯಿಸಿದನು. ಆತನುದರದೊಳು ಕಶ್ಯಪನು ಜನಿಸಿದನು. ಕಶ್ಯಪನಿಗೆ ವಿವಸ್ವತನೂ, ಆತನಿಗೆ ವೈವಸ್ವತಮನುವೂ, ಅವನಿಗೆ ಇಕ್ಷ್ವಾಕುವೂ ಮಕ್ಕಳಾದರು. ಇಕ್ಷ್ವಾಕುವಿಗೆ ನಿಮಿ ವಿಕು

ಕ್ಷಿಗಳೆಂಬ ಮಕ್ಕಳಾದರು. ವಿಕುಕ್ಷಿಗೆ ಪುರಂಜಯನೂ, ಆತನಿಗೆ ಸೇನಸ್ಸುವೂ, ಆತನಿಗೆ ಪೃಥುವೂ, ಅವನ ಸಂತತಿಯಲ್ಲಿ ಕುವಲಯಾಶ್ವನೂ, ಅವನ ಸಂತತಿಯಲ್ಲಿ ಯೌವನಾಶ್ವನೂ ಜನಿಸಿದರು. ಯೌವನಾಶ್ವನಿಗೆ ಮಾಂಧಾತನು ಮಗನಾದನು. ಇವನಿಗೂ ಇವನ ಹೆಂಡತಿ ಬಿಂದುಮತಿಗೂ ಅಂಬರೀಷ ಪುರುಕುತ್ಸರೆಂಬಿರ್ವರು ಸುತರಾದರು. ಪುರುಕುತ್ಸನ ಸಂತತಿಯಲ್ಲಿ ಸತ್ಯವ್ರತನೂ, ಅವನಿಗೆ ತ್ರಿಶಂಕುವೂ, ಅವನಿಗೆ ಹರಿಶ್ಚಂದ್ರನೂ, ಅವನಿಗೆ ಲೋಹಿತಾಶ್ವಕುಮಾರನೂ ಸಂಜನಿಸಿದರು. ಲೋಹಿತಾಶ್ವನ ವಂಶಾವಳಿಯಲ್ಲಿ ಸಗರರಾಜನಾದನು. ಅವನಿಗೆ ಸಮಂಜಸನೂ, ಅವನಿಗೆ ಅಂಶುಮಾನನೂ, ಆತನಿಗೆ ದಿಳೀಪನೂ, ಆತನಿಗೆ ಭಗೀರಥನೂ ಮಕ್ಕಳು. ಭಗೀರಥನ ವಂಶದಲ್ಲಿ ಸ್ಥೂಲಬಾಹುವೆಂಬುವನಾದನು. ಆತನಿಗೆ ರಘುವೂ, ರಘುರಾಜನಿಗೆ ಅಜನೂ, ಅಜನಿಗೆ ದಶರಥನೂ ಮಕ್ಕಳಾದರು. ದಶರಥನುದರದೊಳಗೆ ರಘುರಾಮನುದಿಸಿದನು. ಈತನು ಬಾಲಲೀಲೆಯನ್ನು ಕಳೆದು ತಾಟಕಿಯನ್ನು ಮರ್ದಿಸಿ, ಭೂಮಿಸುತೆಯನ್ನು ಮದುವೆಯಾಗಿ, ಬರುತ ದಾರಿಯಲ್ಲಿ ಪರಶುರಾಮನು ಅಡ್ಡೈಸಲು ಆತನ ಚಾಪವನ್ನು ಸೆಳೆದು, ತನ್ನ ಪುರವನ್ನು ಪ್ರವೇಶಿಸಿ ತಂದೆಯ ಆಜ್ಞೆಯಿಂದ ಕಾನನಕೆ ಹೋದನು. ಭರತಶತ್ರುಘ್ನರೆಂಬ ಅನುಜರು ಅಲ್ಲಿಗೆ ಬಂದು ಕರೆದೊಡೆ ಒಲ್ಲದೆ, ತಮ್ಮನಾದ ಲಕ್ಷ್ಮಣನೂ ತನ್ನ ಅರಸಿಸಹಿತ ತಾನೂ ಅಲ್ಲಿ ಇರುತ್ತ, ಶೂರ್ಪನಖಿಯೆಂಬ ರಕ್ಕಸಿಯ ನಾಸಿಕವನರಿದು, ಖರದೂಷಣಾದಿ ಖಳರನ್ನು ಕೊಂದು ಹರುಷದಿಂದಿರುತ್ತಿದ್ದರು. ಒಮ್ಮೆ ಒಂದು ಹೊಮ್ಮಿಗವನ್ನು ಕೊಲ್ಲಲಿಕ್ಕೆ ಪೋಗಲು, ಇತ್ತ ದುರುಳ ರಾವಣನು ಸೀತೆಯನ್ನು ಒಯ್ಯು ತನ್ನನ್ನು ತಡೆದ ಜಟಾಯುವನ್ನು ಮರ್ದಿಸಿದನು. ಸತಿಯನ್ನು ರಾವಣನು ಕದ್ದೊಯ್ಯಲು ರಾಮನು ದುಃಖದಿಂದ ಆಕೆಯನ್ನು ಹುಡುಕುತ್ತ ಬಂದು ಜಟಾಯುವನ್ನು ಕಂಡು ಅವನನ್ನು ದಹಿಸಿ ಗತಿಯಾವುದೆನ್ನುತ್ತಿರಲು ಹನುಮಂತನು ಅಲ್ಲಿಗೆ ಬಂದನು. ಆ ಬಳಿಕ ವಾಲಿಯನ್ನು ಹತಿಸಿ, ಸುಗ್ರೀವನನ್ನು ಕೂಡಿಕೊಂಡು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದನು. ಕಪಿಸೈನ್ಯದೊಡನೆ ಶರಧಿಯನ್ನು ದಾಟಿ ರಾವಣಾದಿ ರಕ್ಕಸರನ್ನು ಸಂಹರಿಸಿ ಅವನ ತಮ್ಮನಿಗೆ ಪಟ್ಟಗಟ್ಟಿ ಸೀತೆಯ ಕೈಯ್ವಿಡಿದು ರಾಮನು ತನ್ನ ಪುರಕ್ಕೆ ತಿರುಗಿ ಬಂದನು. ಹೀಂಗೆ ಸೂರ್ಯವಂಶದಲ್ಲಿ ಇವರು ಸತಿಯರಿಂದ ಕೆಟ್ಟರು (೧೪-೨೨).

ಆ ಮೇಲೆ ಚೆನ್ನಬಸವೇಶನು ಉಭಯ ಕುಲದೊಳಗೆ ಅತಿದಾನಧರ್ಮೋಪಕಾರಗಳಿಂದ ಚಕ್ರವರ್ತಿತ್ವವನ್ನು ತಳೆದ ಷೋಡಶಮಹೀಪಾಲರ ಹೆಸರುಗಳನ್ನು ಸಿದ್ಧರಾಮನಿಗೆ ಹೇಳಿ " ಜೂಜಾಡಿ ನಳಧರ್ಮಜರೂ, ಮದ್ಯದಿಂದ ಯದುಜಾಲವೂ, ಪರಾಂಗನಾವ್ಯಸನದಿಂದ ಇಂದ್ರ ಕೀಚಕ ವಾಲಿ ದಶವದನರೂ, ಬೇಟೆಯ

ನಿಮಿತ್ತವಿಂದ ದಶರಥ ಪಾಂಡುಗಳೂ, ನಿಂದೆಯಿಂದ ಬ್ರಹ್ಮ ಶಿಶುಪಾಲ ದಕ್ಷರೂ, ಗುರುಮೋಹದಿಂದ ಇಂದು ತ್ರಿಶಂಕುಗಳೂ ಕೆಟ್ಟರು. ಬೇಡಿದರ್ಗೆ ಬೇಡಿಪುದನಿತ್ತ ಮಾಂಧಾತನೂ, ಹರಿಗೆ ಕವಚವನ್ನು ಕೊಟ್ಟ ಕರ್ಣನೂ, ಗರುಡನು ಅಹಿಯನ್ನು ಕಚ್ಚಿಕೊಳ್ಳಲು ಜೀವಮಂ ಕೊಟ್ಟ ಜೀಮೂತವಾಹನೂ, ಸುರಪತಿಗೆ ಬೆನ್ನೆಲುವ ನಿತ್ತ ದಧೀಚಿಯೂ, ಧರೆಯನ್ನು ಅಳೆದು ಅಸುರಾರಿಗಿತ್ತ ಬಲಿಯೂ ಕೀರ್ತಿಪುರುಷ ರೆನಿಸಿಹರಲ್ಲದೆ ಈಶನನ್ನು ಭಜಿಸಿ ಮುಕ್ತಿಗೆ ಸಂದುದಿಲ್ಲವು'' ಎಂದು ಹೇಳಿದನು (೨೩-೨೬).

೫೫ ಶೈವರ ಕಥೆಯ ಸಂಧಿ

ತರುವಾಯ ಚೆನ್ನಬಸವನು ಸಿದ್ಧರಾಮನಿಗೆ ಶೈವದಿಂದ ಮುಕ್ತಿಯನ್ನು ಪಡೆದ ಮಹಿಮೋನ್ನತರಾದ ಇಂದ್ರದ್ಯುಮ್ನ ಕಳಚಂಗಪೆರುಮಾಳೆ ಸತ್ಯೇಂದ್ರಚೋಳ ಧರ್ಮಚೋಳ ಉತ್ತುಂಗಚೋಳ ರಾಜೇಂದ್ರಚೋಳ ನಂಬಿ ಚೇರಮ ಚಂಡೇಶ್ವರ ಮೊನೆಧರಚೋಳ ಕೈವಲ್ಯಚೋಳ ಮನುಜೇಂದ್ರಚೋಳ ವೀರಚೋಳ ಪಗಲ್ ಚೋಳ ವೀರಪಾಂಡ್ಯ ಕೂನಪಾಂಡ್ಯ ವಾಗೀಶ ಮೆರೆಮಿಂಡ ತಿರುನೀಲಕಂಠ ಅಮರ ನೀತಿ ಇರಿಭಕ್ತ ಇಹಃಪಗೆ ತಿರುಕುರುಂಬೆಯತೊಂಡ ತಿರುಮೂಲ ತಿರುನಾಳ್ಪೋವ ಇಳೆಯಾಂಡಗುಡಿಮಾರ ಸೇದಿರಾಜ ಏಣಾಧಿನಾಥ ಅನ್ನೈನಾರಿ ಅಲಘಾಂಡಮೂರ್ತಿ ಕರಿಕಾಲಮ್ಮೆ ನೀಲಕ್ಕ ಕಣ್ಣಪ್ಪ ನಾಟ್ಯನಿಮಿತ್ತಿ ರುದ್ರಪಶುಪತಿ ವಾಯಲಾರಿ ಕಲಿ ಯನ್ನೈನಾರಿ ಕಲಿಕಂಬ ಕಲಿಚಿಟ್ಟ ಉರುವಾಳ್ತಂಡ ಕೊಂಗುಲಿಯಕಲಿ ಸಿರಿಯಾಳ ಮನುಜೋಳ ಮುರುಘ ಮಾನಕಂಜರ ಸಾಂಖ್ಯತೊಂಡಿ ನಮಿನಂದಿ ನೈಯಾಂಡಿ ಕೊಳ್ಳಲಿ ವೇಳ್ಮಾತರು ಎಡೆಗಣೆಯಪೆರುಮಾಳೆ ಕಡವೂರಕಾರಿ ಅಚ್ಯುತ ಗೊಲ್ಲಾಳ ಚಿರುಪುಲಿಯರಿತ್ತಾಂಡಿ ಮಳೆಯರಾಜ ಮಲುಹಣ ಓಹಿಲಯ್ಯ ಗುಡ್ಡವ್ವೆ ಕಾಳಿಂಗ ಚೆನ್ನೆ ಉದ್ಭಟ ಮುಂತಾದವರ, ಸಿಂಗಿದೇವ ಮುಂತಾದ ತೇರಸರ, ಪೊನ್ನಯ್ಯ ಮೊದಲಾದ ಷೋಡಶರ, ವೀರಘಂಟೆಮಡಿವಳ ಮೊದಲಾದ ದಶಗಣಂಗಳ ಕಥೆಗಳನ್ನು ಹೇಳಿದನು (೨-೫೦).

---

೫೬ ಸಾನಂದಗಣೇಶ್ವರನ ಕಥೆಯ ಸಂಧಿ

ಆಮೇಲೆ ಸಾನಂದಗಣೇಶ್ವರನ ಕಥೆಯನ್ನು ಚೆನ್ನಬಸವನು ಹೇಳತೊಡಗಿದನು. ಅದು ಏನೆಂದರೆ:-

ಸಂಪೂರ್ಣಪಿತ್ರನೆಂಬ ಋಷಿಗೆ ಸಾನಂದನೆಂಬ ಒರ್ವ ಮಗನು ಜನಿಸಿದನು. ಅವನು ಜಾತಕರ್ಮ ಉಪನಯನಾದಿ ಸಂಸ್ಕಾರಗಳನ್ನು ಹೊಂದಿ, ಶೈವೋಪದೇಶವನ್ನು ಪಡೆದು, ಈಶ್ವರಭಕ್ತಿಯೇ ವಿಮಳ ರೂಪವನ್ನು ಧರಿಸಿ ಬೆಳೆಯುವಂತೆ ಪ್ರಣವಪಂಚಾಕ್ಷರಿಯೇ ದೇಹವನ್ನು ತಳೆದಂತೆ ಶುಕ್ಲಪಕ್ಷದ ಚಂದ್ರಮಂಡಲವೇ ದಿನದಿನಕೆ ಹೆಚ್ಚಿ ಬೆಳೆದಂತೆ ಬಳೆದು ಸುಜ್ಞಾನಯುತನಾಗಿ ಮುನಿರಾಜಕುಲತಿಲಕನೆಂದೆನಿಸಿ ಇರುತ್ತಿದ್ದನು. ವೇದಾದಿಗಳನ್ನು ತೀರಲೋದಿ, ಉಳಿದ ಸತ್ಕಲಾಭೇದಂಗಳನ್ನು ತಿಳಿದು, ದಂಡ ಕಮಂಡಲು ತ್ರಿಪುಂಡ್ರ-ರುದ್ರಾಕ್ಷಾದಿಗಳಿಂದ ಭೂಷಿತನಾಗಿ ಪರಶಿವನಂತೆ ರಂಜಿಸಿದನು. ಒಮ್ಮೆ ಅವನು ಈಶನನ್ನು ಕುರಿತು ತಪವನ್ನು ಮಾಡಲು, ಆತನು ಮುನಿಗೆ ಮೆಚ್ಚಿ ಶೈವೋಪದೇಶವನ್ನೂ ಗಣಪದವಿಯನ್ನೂ ಪುಷ್ಪಕವನ್ನೂ ವಿನಿಯೋಗದವರನ್ನೂ ಕೊಟ್ಟು ಕೈಲಾಸಕ್ಕೈದಿದನು (೨-೫). ಇತ್ತ ಒಂದು ದಿನ ಸದ್ಭಕ್ತಿಯುತರಾದ ಮುನಿವರರ ಸಂದಣಿಯಲ್ಲಿ ಸದ್ಗೋಷ್ಠಿಯೊಳಗಿರುತ್ತಿದ್ದ ಸಾನಂದ ಮುನಿಗೆ ಒಬ್ಬ ಋಷಿಯು ಮಾತುಮಾತಿನಲ್ಲಿ ಧರ್ಮಾಧರ್ಮ ನಿರ್ಣಯವನ್ನೂ ಪುಣ್ಯಪಾಪ ಮಾಡುವವರನ್ನು ಯಮದೂತರು ಒಯ್ಯುವ ಚೆಂದವನ್ನೂ ಸವಿಸ್ತಾರವಾಗಿ ಹೇಳಿದನು (೬-೪೪).

ಅಧರ್ಮಿಗಳ ವೃತ್ತಾಂತವನ್ನು ಕೇಳಿ ಸಾನಂದಮುನಿವರನು ನೊಂದು “ ಶಿವ ಶಿವ, ಮುಂದರಿಯದ ಅಜ್ಞಾನದಿಂದ ಪಾತಕವನ್ನು ಮಾಡಲು ಅವರನ್ನು ಕೊಂದು ಬಾಧಿಸಬಹುದೇ? ಯಮನು ತಾನು ಧರ್ಮರಾಜನೆನಿಸಿಕೊಳಲೇಕೆ? ಪ್ರಾಣಿಗಳು ನೊಂದರಲ್ಲಾ? ಮಹಾದೇವ, ನೀನು ಇಂತು ಇವರ ಕೊಲಿಸಿ ನೋಡುವದುಚಿತವೇ? ಪ್ರಾಣಿಗಳನ್ನು ಇಂತು ಸಂಹರಿಸಿದೊಡೆ, ನೀನಲ್ಲದೆ ಇನ್ನು ಪರಿಹರಿಪರಾರುಂಟು? ಶಂಕರ ಸರ್ವಗತ ಸರ್ವಜೀವನದಯಾಪರನೆನಿಪ್ಪ ಬಿರಿದು ನಿನಗೆಲ್ಲಿ? ನೀನು ಕೆರಹುಗಾಲಿಂದೆ ಒದೆಯಲು ಒಲಿದೆ! ಬಿಲ್ಲಿನಿಂದ ಹೊಡೆಯಲು ಮೆಚ್ಚಿದೆ!! ಕಲ್ಲಿನಿಂದಿಡಲು ನಿನ್ನ ಪುರಕ್ಕೆ ಕರೆದೊಯ್ದೆ!!! ಆ ಪರಿಯಲ್ಲಿ ಕರುಣವಿಡಬೇಡವೇ ಸರ್ವರಲ್ಲಿ" ಎಂದು ಮನದೊಳು ಅತಿ ಕರುಣದಿಂದ ತರಣಿಜನ ಪುರದ ವೈತರಣಿಯೊಳಗಿರ್ದ ಪಾತಕರನ್ನೆಲ್ಲ ಪರಶಿವನ ಪುರಕೆ ಕೊಂಡೊಯ್ವೆನೆಂದು ತನ್ನ ಪುಷ್ಪಕವನೇರಿ ಮುನಿಗಣಸಮೇತನಾಗಿ ಯಮಪುರಕೆ ನಡೆತಂದನು (೪೫-೪೮). ಅವನು ಬರುವುದನ್ನು ಚರನಿಂದ ಕೇಳಿ ಯಮನು ಇದಿರ್ಗೊಳ್ಳಬೇಕೆಂದು ಸಕಲ

ಮಾಂಗಲ್ಯದೊಡನೆ ಅತಿ ವೈಭವದಿಂದ ಹೊರಟು ತನ್ನ ಪುರದ-ಬಾಗಿಲಲ್ಲಿ ಆತನನ್ನು ಕಂಡು, ಕಾಣಿಕೆಯನಿಕ್ಕಿ ದಿಂಡುಗೆಡೆದೆರಗಿದನು. ಸಾನಂದಮುನಿವರನು ಅವನನ್ನು ಕರುಣದಿಂದ ಪಿಡಿದೆತ್ತಿ, "ಮಗನೇ, ಕುಶಲವೇ" ಎಂದು ಬೆಸಗೊಳ್ಳಲು, "ದೇವ, ನೀವು ಇರಿಸಿದಂತೆ ಇಪ್ಪೆನು. ಎನ್ನ ಮೇಲಣ ಅತಿ ಪ್ರೇಮದಿಂದ ಪಾವನವ ಮಾಡಲು ಬಂದಿರಿ. ನಾನು ಮಾಡುವ ಸೇವೆ ಆವುದು" ಎಂದು ಯಮನು ಭಕ್ತಿಯಿಂದ ಬಿನ್ನವಿಸಿಕೊಂಡನು. ಆಗ ಮುನಿಯು ನಮಗೆ ವೈತರಣಿಗಳೆಲ್ಲವನ್ನು ತೋರಿಸೆನಲು, ಯಮಧರ್ಮನು "ಜೀಯಾ, ಎರಡನೆಯ ಮೃಡಮೂರ್ತಿಯೇ, ಸಾನಂದತಂದೆಯೇ, ವೈತರಣಿಯನ್ನು ನೋಡಬಾರದು, ಅಲ್ಲಿಯ ನರಕಗಳನ್ನು ನೋಡಿದರೆ ಪಾತಕವು ಸಂಭವಿಸುವುದು" ಎಂದು ಬಿನ್ನವಿಸಿದನು. ಆದರೂ ಅವುಗಳನ್ನು ತೋರಲೇಬೇಕೆಂದು ಮುನಿಯು ಎನ್ನಲು, ತರಣಿಜನು ಅಂತೆಗೆಯ್ದನು. ನಿರಯಗಳೆಂಹ ಬಲ್ಗೇರಿಯಲ್ಲಿ ಯಮದೂತರು ಪಾತಕರನ್ನು ನಾನಾಬಗೆಯಾಗಿ ಕೊಂದು ಕೊಲೆಯಾಡಿ ಮೂದಲಿಸಿ ಬಾಧಿಸುತಿರ್ಪ ದಂದುಗವನ್ನು ಕಂಡು, "ಈ ತೆರದಿ ಕೊಂದು ಇವರನ್ನು ಏನು ಮಾಡುವಿರಿ?" ಎಂದು ಪ್ರೇತಪತಿಯನ್ನು ಕೇಳಲು, ಅವನು ಈ ಮಹಾಪಾತಕವ ಮಾಡಿದವರನ್ನು ಮಹಾ ನರಕಕುಂಡದಲ್ಲಿ ಹಾಕುವರೆಂದೂ ಇಪ್ಪತ್ತೆಂಟು ಕೋಟಿ ನಾಯಕನರಕವೂ ಅಗಣಿತ ಕುಂಡಗಳೂ ಇರುವುವೆಂದೂ ಹೇಳಿದನು. ಅದನ್ನು ಕೇಳಿ ವಿಸ್ಮಯಗೊಂಡು "ಶಿವ ಶಿವ, ನಮಃ ಶಿವಾಯ" ಎಂದು ನುಡಿಯಲು, ಪಾಪಿಷ್ಠರ ಕಿವಿಗಳಲ್ಲಿ ಮಂತ್ರೋಪದೇಶವಾಡಿದಂತಾಗಿ ಎಲ್ಲರೂ ಈತನು ನಮಗೆ ಗುರುವೆಂದು "ಶಿವ ಶಿವಾ" ಎಂದೆನಲು ಆ ನಿರಯವೆಲ್ಲ ಬತ್ತಿಹೋಯಿತು. ಸರ್ವರೂ "ನಮಃ ಶಿವಾಯ" ಎನ್ನುತ್ತ ಅಲ್ಲಿಂದ ಪೊರಮಟ್ಟರು. ನಿರಯಗಳಿರುವ ಕೇರಿಕೇರಿಗಳಲ್ಲಿ ಶಿವಮಂತ್ರವನ್ನು ಜಪಿಸಿರೆಂದು ಡಂಗುರವನ್ನು ಸಾರಿದರು. ಘೋರಪಾತಕವ ಮಾಡಿದವರೆಲ್ಲರೂ "ಶಿವ ಶಿವ, ನಮಃ ಶಿವಾಯ" ಎನ್ನುತ್ತ, ಜವನ ದೂತರನ್ನು ದಂಡಿಸುತ್ತ ಬಂದು ಸಾನಂದ ಮುನಿಯನ್ನು ಸೇರಿ ಸುಮನದಿಂದ ಅವನಿಗೆರಗಿದರು. ಮುನಿಯು ಅವರೆಲ್ಲರನ್ನು ತನ್ನ ಪುಷ್ಪಕವಿಮಾನದಲ್ಲಿ ಇಂಬಿಟ್ಟುಕೊಂಡು ಮುನಿಗಣಸಹಿತವಾಗಿ ಕೈಲಾಸಕ್ಕೈದಿದನು (೪೯-೬೫).

ಇತ್ತ ಯಮರಾಜನು ಅತಿ ಖೇದದಿಂದ ತನ್ನ ವಿನಿಯೋಗದವರನ್ನು ಕೂಡಿಕೊಂಡು ಚಿಂತಿಸುತ್ತಿರಲು, ಚಿತ್ರಗುಪ್ತರು ನೋಡಿ "ಜೀಯಾ, ಇನ್ನು ಚಿಂತೆ ಏಕೆ? ಚಿತ್ರಜಹರನಿಗೆ ಬಿನ್ನವಿಸಬೇಕು" ಎಂದು ಹೇಳಲು, ಅದನ್ನು ಚಿತ್ರಕ್ಕೆ ಸರಿತಂದು ಅವರನ್ನು ಕೂಡಿಕೊಂಡು, ಶಿವಪುರದ ಬಾಗಿಲಿಗೆ ಬಂದು, ಮಹಾಸಭೆಯೊಳಗಿರ್ದ ಈಶನನ್ನು ಕಂಡು, ನರಕದ ಬೀಗಮುದ್ರೆಗಳನ್ನು ಮುಂದಿರಿಸಿ ನಮಿಸಿ, "ದೇವ,

ಸಾನಂದಮುನಿ ಮಾಡಿಪುದನ್ನು ನೋಡಿದಿರೇ ? ಸಾಕು, ನನಗೆ ಎಂದೆಂದಿಗೂ ಇಂತ ಪ್ಪ ಮಣಿಹವೇ ಸಾಕು, ಸಾಕು" ಎಂದು ಬಿನ್ನವಿಸಿದನು. ಈಶ್ವರನು ಇದನ್ನು ಕೇಳಿ ನಸುನಗುತ್ತ "ಸಾನಂದನು ಮುಂಪರಿಯುದೆ ಇಂದು ಮಾಡಿದನು. ಮನದೊಳು ನೊಂದುಕೊಳ್ಳಬೇಡ" ಎಂದು ಸಂತೈಸಿ ಬೀಗಮುದ್ರೆಗಳನ್ನು ಕೊಟ್ಟು ಮನ್ನಿಸಿ ಯಮನನ್ನು ಕಳುಹಿಸಿಕೊಟ್ಟನು. ಇತ್ತ ಸಾನಂದನಿಗೆ ಗಣಪದವನ್ನೂ ಅವನು ಕರೆ ತಂದವರಿಗೆ ಸಾಲೋಕ್ಯಪದವಿಯನ್ನೂ ಕೊಟ್ಟನು (೬೬-೬೮).

೫೭ ವೀರಶೈವಶರಣರ ಕಥೆಯ ಸಂಧಿ

ಈ ಪ್ರಕಾರವಾಗಿ ಶೈವಾಚರಣೆಯಿಂದ ಕೈಲಾಸವನ್ನು ಸೇರಿದ ಶೈವರ ಕಥೆಗಳನ್ನು ಚೆನ್ನಬಸವಣ್ಣನು ಹೇಳಲು, "ಶೈವನಿಷ್ಠೆಯಿಂದ ಕೈಲಾಸವನ್ನು ಹೋಗುವ ಸಾಮರ್ಥ್ಯವಿರಲು ಇಷ್ಟಲಿಂಗವು ಇನ್ನೇತಕ್ಕೆ ?" ಎಂದು ಸಿದ್ಧರಾಮನು ಕೇಳಿದನು. ಅದಕ್ಕೆ ಚೆನ್ನಬಸವನು "ಕೈಲಾಸದ ಬಾಗಿಲಲ್ಲಿ ಇವರಿಗೆ ಲಿಂಗವನ್ನು ಕಟ್ಟಿ ವೀರ ಶೈವರನ್ನು ಮಾಡಿ ಒಳಗೆ ಬಿಡುವರು" ಎಂದು ಹೇಳಿ, ಆ ಮೇಲೆ ಜಾತಿಸೂತಕ ಪ್ರೇತಸೂತಕ ರಜಸ್ಸೂತಕ ಜಾತಸೂತಕ ಉಚ್ಛಿಷ್ಟಸೂತಕಗಳೆಂಬ ಪಂಚಸೂತಕ ವಿರಹಿತವಾದ ಆಚರಣೆಯುಳ್ಳ ಮತ್ತು ಬೇರೆ ಬೇರೆ ಕಾಯಕಗಳನ್ನಾಚರಿಸಿದ ಹಾಗೂ ಅನೇಕ ಪವಾಡಗಳನ್ನು ಮೆರೆದ ಶಿವಶರಣರ ಕಥೆಗಳನ್ನು ವಿವರಿಸಿ, ಅಲ್ಲಿ ನೆರೆದ ಕಿನ್ನರಬ್ರಹ್ಮಯ್ಯ ಮೇದಾರಕೇತಯ್ಯ ಡೋಹರಕಕ್ಕಯ್ಯ ಮಡಿವಳಮಾಚಯ್ಯ ಹಡಪದಪ್ಪಣ್ಣ ಇವರು ಮೊದಲಾದ ೭೭೦ ಅಮರಗಣನಿವಹವನ್ನು ತೋರಿಸಿ, ಈ ಬಸವನು ಮತ್ತು ಅಲ್ಲಮನು ಯಾರು ಎಂಬುದನ್ನು ನಿನಗೆ ತಿಳಿಸುವೆನೆಂದು ಅವರ ಮಹಿಮೆಯನ್ನು ಹೀಗೆ ಹೇಳುವನು (೨-೬೪) :

ಬಸವನು ಪ್ರಣವಸ್ವರೂಪನು, ದ್ವಿತೀಯ ಶಿವನು. ತಪಸ್ಸಿನಿಂದ ತನ್ನನ್ನು ಮೆಚ್ಚಿಸಿದ ಶಿಲಾದನಿಗೆ ಮಗನಾಗಿದ್ದನು. ಒಮ್ಮೆ ಈಶ್ವರನ ಒಡ್ಡೋಲಗದಲ್ಲಿ ಸುರ ಸಹಿತವಾಗಿ ಬಂದ ಸುರಪನು ಈಶನೆದುರಿನಲ್ಲಿದ್ದ ಈ ನಂದಿಯನ್ನು ಸೋಂಕಿ ಬಾಲ ದಿಂದ ಬಡಿಸಿಕೊಂಡು "ಗರುಡ ಹಂಸ ಐರಾವತ ಉಚ್ಚೈಶ್ರವಾದಿಗಳಿರಲು ಈ ಎತ್ತು ಶಿವನಿಗೇಕೆ ವಾಹನವು" ಎಂದು ಸುರರೊಡನೆ ಮಾತಾಡಿದನು. ಈಶನು ಇದನ್ನು ಕೇಳಿಯೂ ಕೇಳದಂತೆ ಇದ್ದನು. ಶಿವನಿದನ್ನು ಉಪೇಕ್ಷಿಸಿದನೆಂದು ನಂದೀಶ್ವರನು ಮುನಿದು ಹೊರಟುಹೋದನು. ಇದನ್ನು ನಾರದನು ಬಂದು ಹೇಳಲು ಶಿವನು ಸುರಪನಿಗೆ "ನನ್ನ ಧರ್ಮವೇ ಮೂರ್ತಿಯಾದ ಆ ನಂದಿಯು ನಿ

ಸೇವೆ ಸುದಿಗೆ ಖಿನ್ನಮನಸ್ಕನಾಗಿ ತೆರಳಿದನು. ನೀನು ಆತನನ್ನು ಕರೆದುಕೊಂಡು ಬಾ" ಎಂದು ಹೇಳಿದನು (೬೫-೬೭). ಆ ಮೇರೆಗೆ ಶತಮುಖನು ಹೋಗಿ ನಂದಿಯನ್ನು ಕರೆಯಲು ಬರಲಿಲ್ಲವು. ಆದುದರಿಂದ ಅವನು ಯಮವರುಣಪಾಶಗಳನ್ನು ನಂದಿಯ ಕುತ್ತಿಗೆಗೆ ಹಾಕಿ ಎಳೆದನು. ಕೂಡಲೇ ನಂದಿಯು ಅತಿ ಕೋಪದಿಂದ ಕೆದರಿದ ಮಣ್ಣೇ ಕೇತಾರಮಕ್ಷೆಯಗಳಾದುವು. ಶೃಂಗಗಳ ಹೊಡೆತಕ್ಕೆ ಸಿಕ್ಕ ಸ್ಥಳವೇ ಸಿಂಗಳವಾಯಿತು. ಅದೇ ಮಾನಸಸರೋವರವೆಂದೆನ್ನುವರು. ಆಗ ನಂದಿಯು ಪಾಶಗಳನ್ನು ಹರಿದು ಹೂಂಕರಿಸಿ ದೀರ್ಘವಾದ ಶ್ವಾಸೋಚ್ಛ್ವಾಸವನ್ನೆಸಗಲು ದೇವೇಂದ್ರನೇ ಮೊದಲಾದ ಸ್ವರ್ಗವಾಸಿಗಳು ತರಗೆಲೆಗಳಂತೆ ಎಡಬಲಕ್ಕೆ ಬಿದ್ದರು. ದೇವೇಂದ್ರನು ನೊಂದು ನಂದಿಯನ್ನು ಕೊಂಡಾಡಲು ಮೆಚ್ಚಿ ವರವದೇನೆಂದು ಕೇಳಿದನು. ಅದಕ್ಕೆ ಸುರಪನು "ನಂದೀಶ, ಈ ಭಾಗ್ಯವು ಸ್ಥಿರವಲ್ಲ. ಇದರ ದಂದುಗವು ನನಗೆ ಬೇಡ. ನೀನು ನನಗೆ ಪ್ರಾಣಲಿಂಗವನ್ನು ಕೊಟ್ಟು ನಿಜಸುಖವನ್ನು ದಯಪಾಲಿಸು" ಎಂದು ಬೇಡಿಕೊಂಡನು. ಅದಕ್ಕೆ ನಂದೀಶ್ವರನು, "ನಿನಗೆ ಈ ಶರೀರದಿಂದ ಅದು ಆಗದು. ನೀನು ನರಜನ್ಮದಿಂದುದಿಸಿ ಶೈವನಿಷ್ಠೆಯಲ್ಲಿರಲು ನಿನಗೆ ಪ್ರಾಣಲಿಂಗವನ್ನು ಕೊಡುವೆನು" ಎಂದು ಅಂದನು. ಅದುಕಾರಣ ಪಟ್ಟಗಲ್ಲೆಂಬ ಪುರದ ಚಾಳೋಕ್ಯಕುಲ ತ್ರೈಲೋಕ್ಯಚೂಡಾಮಣೀಶನ ಅರಸಿಯಾದ ಸುಮಹಲೇಖೆಯ ಉದರದಲ್ಲಿ ವಸುದೀಪ್ಯನಾಮದಿಂದ ದೇವೇಂದ್ರನುದಿಸಿದನು. ಒಮ್ಮೆ ಬೇಂಟೆಗೆ ಹೋಗಿ ಒಂಟಿಗನಾಗಿ ದರುಶನಕೆ ಲಿಂಗವಿಲ್ಲದೆ ಪಸಿದ ಆ ಅರಸನ ವರಕ್ಕಾಗಿ ನಂದಿಯು ಸಂಚರಿಸುತ್ತಿರಲು ಅದನ್ನು ಕಂಡು ಅರಸನು ಲಿಂಗವನ್ನು ಕೇಳಿದನು. ನಂದಿಯು ಅವನಿಗೆ ಇಷ್ಟಲಿಂಗೋಪದೇಶವನ್ನು ಅರುಹಿ, ಪ್ರಾಣಲಿಂಗಸಂಬಂಧವನ್ನು ಮಾಡಿ, ನಿಜಸುಖವಿತ್ತು ಹೊರಟನು. ಅತ್ತ ನಾರದನು ಶಿವಪುರದ ದ್ವಾರಪಾಲಕರಿಗೆ "ನಂದೀಶನು ದೇವೇಂದ್ರನಿಗೆ ಪ್ರಾಣಲಿಂಗವನ್ನಿತ್ತು ಬರುವನು" ಎನಲು, ಸಿಂಹಕೇಶಪ್ರವಿಡರು ಬಾಗಿಲಿಗೆ ಬಂದ ನಂದಿಯನ್ನು ಭವಿಯೆಂದು ತಡೆದರು. ಶಿವನಿದನ್ನು ತಿಳಿದು "ಸರ್ವಾಂಗಲಿಂಗಿಯನ್ನು ಇಂತು ಭವಿಯೆಂದಕಾರಣ ಮರ್ತ್ಯದಲ್ಲಿ ಭವಿಗಳಾಗಿ ಉದ್ಭವಿಸಿ ನಂದೀಶನ ಮಹತ್ವವನರಿದು ಬನ್ನಿರಿ" ಎಂದು ಹೇಳಿದನು. ಆದುದರಿಂದ ಅವರು ಈ ಮರ್ತ್ಯದಲ್ಲಿ ಕನ್ನೇಶ ಬಿಜ್ಜಳ ಎಂಬ ಹೆಸರಿನಿಂದ ಉದ್ಭವಿಸಿದರು (೬೮-೭೩).

ಈ ಭೂಮಿಯಲ್ಲಿ ಶಿವಾಚಾರವು ಅಡಗಿದ್ದುದರಿಂದ ಅದನ್ನು ಉದ್ಧರಿಸಬೇಕೆಂದು ಈಶ್ವರನು ನಂದೀಶ್ವರನನ್ನು ಕರೆದು "ನೀನು ವೀರಶೈವಾಚಾರವನ್ನು ನಿಲಿಸಿ, ಬಿಜ್ಜಳನಿಗೆ ನಿನ್ನ ಮಹಿಮೆಯನ್ನು ತಿಳುಹಿ ಬಾ" ಎಂದು ಹೇಳಲು, ನಂದೀಶ್ವರನು ತನ್ನ ಅನುಚರಗಣಸಹಿತನಾಗಿ ಅಪ್ಪಣೆಯನ್ನು ಹೊಂದಿ ಮಾದರಸ-ಮಾದಾಂಬಿ

ಯರ ಗರ್ಭದಿಂದ ಬಸವನೆಂಬ ನಾಮದಿಂದ ಜನಿಸಿ ಮಹಾಪವಾಡಂಗಳನ್ನು ಮೆರೆದನು.

ಒಮ್ಮೆ ಬ್ರಾಹ್ಮಣನ ಮಗನೊಬ್ಬನು ಬಾವಿಯಲ್ಲಿ ಬಿದ್ದು ಸಾಯಲು ಅವನ ತಾಯ್ತಂದೆಗಳು ಬಸವನನ್ನು ಬೆನ್ನಟ್ಟಿದರು. ಬಸವನು ಒಂದು ನದಿಯನ್ನು ಕಾಣುತ್ತ ಅದನ್ನು ಇಬ್ಭಾಗಮಾಡಿ ದಾಟಿ ಸಂಗಮನಾಥನಿಂದ ತಾನು ಕೊಂದುದಿಲ್ಲವೆಂದು ನುಡಿಸಿದನು. ಆಮೇಲೆ ತನ್ನ ಅಕ್ಕನನ್ನು ಕೂಡಿಕೊಂಡು ಈ ಕಲ್ಯಾಣಪಟ್ಟಣಕ್ಕೆ ಬಂದು ಬಲದೇವಮಂತ್ರಿಯ ಮಗಳನ್ನು ಮದುವೆಯಾಗಿ, ಬಲದೇವನು ಅಳಿಯಲು ಅವನ ಪಟ್ಟಕ್ಕಧಿನಾಥನಾಗಿ, ಮಹಾಲಿಪಿಯೊಂದನ್ನೋದಿ, ಅರುವತ್ತು ಕೋಟಿ ಧನವನ್ನು ಬಿಜ್ಜಳನಿಗೆ ತೆಗೆದುಕೊಟ್ಟನು. ಹಗರಣಿಗರನ್ನು ಜಂಗಮರನ್ನು ಮಾಡಿ, ಜೋಳಗಳನ್ನು ಮುತ್ತುಗಳನ್ನು ಮಾಡಿ ಜಂಗಮಕ್ಕೆ ಕೊಟ್ಟು, ಜಂಗಮಕ್ಕೆ ಕನ್ನಡಿ ಹಿಡಿದು ಅವನಲ್ಲಿ ಹಣೆಗಣ್ಣು ತೋರಿ, ಪೆಟ್ಟಿಗೆಪವಾಡವನ್ನು ಮೆರೆದು, ಕನ್ನದ ಮಣ್ಣನ್ನು ಚಿನ್ನವನ್ನು ಮಾಡಿ, ಲೆಕ್ಕದ ಪವಾಡಕ್ಕೆ ರವಿಯನ್ನು ಹನ್ನೊಂದು ದಿವಸ ತಡೆದನು. ಇದೂ ಅಲ್ಲದೆ ಮಜ್ಜಿಗೆಪವಾಡವನ್ನೂ, ಲಿಂಗಕ್ಕೆ ಕೂದಲು ತೋರಿದ ಪವಾಡವನ್ನೂ, ಕುಂಬಳಕಾಯಿಗಳ ಪವಾಡವನ್ನೂ, ಕೇತಕೀ ಕುಸುಮದ ಪವಾಡವನ್ನೂ, ಬಸವನ ತಳೆದ ಉಂಗುರಪವಾಡವನ್ನೂ, ಗುಪ್ತ ಮಂಚಣ್ಣನ ಒಲವಿನ ಪವಾಡವನ್ನೂ, ತೇಜಿಯ ಪವಾಡವನ್ನೂ, ವಿಷದ ಪವಾಡವನ್ನೂ ಮೆರೆದನು. ಮತ್ತು ಹರವಿಯೊಳಗಿದ್ದ ನೀರನ್ನು ಘಟ್ಟಿಮಾಡಿದನು. ಕಟ್ಟಿಗೆಯ ಜಂಗಮವನ್ನು ನಿಜವಾದ ಜಂಗಮವನ್ನಾಗಿಸಿದನು; ಮೀಮಾಂಸಕನನ್ನು ವಾದದಲ್ಲಿ ಗೆದ್ದನು; ಶಿವನಾಗಮಯ್ಯನ ಬೆರಲೊಳಗೆ ಹಾಲು ಕರೆದನು; ಸೀರೆಯ ಪವಾಡವನ್ನೂ ಕರುವಿನ ಪವಾಡವನ್ನೂ ಮೆರೆದನು. ಕರವೀರಕುಸುಮವನ್ನು ಸಂಪಿಗೆಯ ಹೂವನ್ನು ಮಾಡಿದನು. ತನ್ನ ಶರೀರವನ್ನು ಕಚ್ಚಿ ಸತ್ತ ಸರ್ಪಕ್ಕೆ ಪ್ರಾಣವನ್ನು ಕೊಟ್ಟನು. ಚಿತ್ರದಲ್ಲಿ ಬರೆದ ಹಲಸಿನ ಹಣ್ಣನ್ನು ನಿಜವಾದ ಹಲಸಿನ ಹಣ್ಣು ಮಾಡಿದನು. ಸುರೆಯನ್ನು ಅಮೃತವನ್ನು ಮಾಡಿದನು. ಬಿಜ್ಜಳರಾಜನ ತರುಣಿಯರನ್ನು ಜಂಗಮರನ್ನು ಮಾಡಿದನು; ಅಲ್ಲದೆ ಅವರನ್ನು ಅರಮನೆಯಲ್ಲಿಯೂ ತೋರಿಸಿದನು. ತೊಗರಿಯನ್ನು ಮಾಣಿಕವನ್ನು ಮಾಡಿತೋರಿದನು. ಲಿಂಗದೊಳಗೆ ಭಕ್ತನನ್ನೂ ಆ ಭಕ್ತನ ಹೃದಯದೊಳಗೆ ಲಿಂಗವನ್ನೂ ತೋರಿದನು. ಚಿತ್ರದ ಜಂಗಮನನ್ನು ಕೊಂದವನನ್ನು ಕೊಂದು ತಿರುಗಿ ಅವನನ್ನು ಬದುಕಿಸಿ ತೋರಿದನು. ಬದಣೆಯ ಕಾಯಿಯನ್ನು ಸಹಜಲಿಂಗವನ್ನು ಮಾಡಿತೋರಿದನು. ಇಂಥ ಈ ಬಸವನು ಮೋಟನಿಗೆ ಕೈಕಾಲು ಕೊಡನೇ? ಮಹಾಸತಿಯೊಬ್ಬಳು ಶರಣೆನೆ ಮುತ್ತೈದೆಯಾಗೆಂದು ಅವಳ ಗಂಡನ ಪ್ರಾಣವನ್ನು ಪಡೆಯನೇ? ಮಣ್ಣ

ಹೋರಿಯನ್ನು ಎತ್ತನ್ನು ಮಾಡನೇ ? ಸತ್ತ ಬಸವನಿಗೆ ನೋಟಮಾತ್ರದಿಂದ ಪ್ರಾಣವನ್ನು ಕೊಡನೇ ? ಹುಲಿಯನ್ನು ಹಸುವನ್ನು ಮಾಡಿ ಹಾಲು ಕರೆಸನೇ ?

ಸುಣ್ಣವನ್ನು ಮಹಾಪ್ರಸಾದವೆಂದು ಕೈಕೊಂಡನು; ಹಡಪದಪ್ಪಣ್ಣಗಳ ಬೊಟ್ಟಿನಿಂದ ಗಿರಿಯನ್ನು ಎತ್ತಿಸಿದನು. ಜಂಗಮಕ್ಕೆ ತನ್ನ ಸತಿಯನ್ನು ಕೊಟ್ಟನು. ಮತ್ತೊಬ್ಬ ಜಂಗಮನಿಗೆ ತನ್ನ ಸತಿಯ ಹೊನ್ನೋಲೆಗಳನ್ನು ಕೊಡಿಸಿದನು. ಜಂಗಮವು ಬಾರದಿರಲು ತಲೆಯನ್ನು ಕೊಯ್ದು ತಿರುಗಿ ಹತ್ತಿಸಿದನು; ಗೊಡ್ಡಾಕಳನ್ನು ಕರೆಸಿದನು; ಜಂಗಮನ ಕೂಡ ಪ್ರಾಣವನ್ನು ಬಿಟ್ಟನು; ಮಿಂಡಜಂಗಮಕ್ಕೆ ಲಿಂಗಪ್ರಸಾದವನ್ನು ಕಳುಹಿಸಿದನು; ಅಲಗಿನಿಂದ ತಿವಿಯಲು ನಿರ್ದೇಹಿಯಾದನು. ಬಿಜ್ಜಳನು ಕೊಂಕು ಮಾತಿನಿಂದ ತನ್ನ ಹಡಪದ ಬಸವನನ್ನು “ ಬಸವಾ, ಬಾ ” ಎಂದು ಕರೆಯಲು, ಅರಸನು ಸರ್ಪಕಚ್ಚಿ ಸತ್ತನು. ಈ ಬಸವನು ಅವನಿಗೆ ಪ್ರಾಣವಿತ್ತನು. ಅಗ್ಗವಣಿಯನ್ನು ತರುವ ಹೊನ್ನಯ್ಯನಿಗೆ ಕುಷ್ಠನೆಂದು ಅರಸು ಎನ್ನಲು, ಅವನ ತೊನ್ನನ್ನು ಪರಿಹರಿಸಿದನು. ಮೋಟಭಟ್ಟನಿಗೆ ಕೈಕಾಲುಗಳನ್ನು ಕೊಟ್ಟನು. ಈ ಬಸವನ ಮಹಾಪವಾಡಗಳನ್ನು ವಿಸ್ತರಿಸಿ ಪೇಳಲೆನ್ನಳವಲ್ಲ (೭೪-೮೬).

ಈ ಅಲ್ಲಮನು ನಿರ್ಮಾಯನೆಂಬ ಗಣನಾಥನು. ಈತನು ನಿರಹಂಕಾರ ಸುಜ್ಞಾನಿ ಎಂಬುವರಿಗೆ ಶಿಶುವಾಗಿ ಬೆಳೆದು, ಗಿರಿಜೆಯಟ್ಟಿದ ಮಾಯೆಯನ್ನು ಜರೆದು ಷಡ್ಗುರುವೆನಿಪ ಅನಿಮಿಷನ ಕೈಯ ಲಿಂಗವನ್ನು ತೆಗೆದುಕೊಂಡು, ಗೊಗ್ಗಯ್ಯ ಮುಕ್ತಾಯಿಗಳಿಗೆ ಬೋಧಿಸಿ ಮುಕ್ತಿಯನ್ನು ಕೊಟ್ಟನು. ಅಲ್ಲಿಂದ ನಿನ್ನ ಪುರಕ್ಕೆ ಬಂದು ಶಿವತತ್ವವೆಲ್ಲವನ್ನೂ ಇಷ್ಟಲಿಂಗದ ಮಹತ್ವವನ್ನೂ ನಿನಗೆ ತಿಳುಹಲೋಸುಗ ನಿನ್ನೊಡನೆ ಇಲ್ಲಿಗೆ ಬಂದಿರುವನು. ಈತನೇ ಪರಮಗುರುವೆನಿಪ ಅಲ್ಲಮಪ್ರಭುವು (೮೭-೮೮).

ಈ ಧರೆಯ ಎಂಬತ್ತುನಾಲ್ಕುಲಕ್ಷ ಜೀವರಲ್ಲಿ ಗೋಜನ್ಮವೂ ಅದಕ್ಕಿಂತ ನರಜನ್ಮವೂ ನರರಲ್ಲಿ ಶಿವಭಕ್ತರೂ ಅವರಿಗಿಂತ ವೀರಶೈವರೂ ಅವರಲ್ಲಿ ಷಟ್ಸ್ಥಲವನ್ನು ಬಲ್ಲವರೂ ಉತ್ತರೋತ್ತರ ಅಧಿಕರು. ಆ ಷಟ್ಸ್ಥಲಬ್ರಹ್ಮಿಗಳ ಮತವೇ ಅಧಿಕವಾದುದು. ಅದಕ್ಕಿಂತ ಹೆಚ್ಚಿನದು ಇನ್ನಿಲ್ಲ. ಆ ಷಟ್ಸ್ಥಲಬ್ರಹ್ಮಿಗಳಲ್ಲದವರನ್ನು ಈ ಬಾಗಿಲಿಂದ ಅತ್ತ ಪುಗಿಸರು. ನಿನಗೆ ಇಷ್ಟಲಿಂಗವಿಲ್ಲದುದರಿಂದ ಒಳಗೆ ಎಂತು ಬಿಡುವರು ? ಎಂದು ಚೆನ್ನಬಸವನು ಎನ್ನಲು, ಅಲ್ಲಮನು “ ಈ ಸಿದ್ಧರಾಮನು ಸರ್ವಾಂಗಲಿಂಗಿಯು, ಇವನಿಗೆ ಇಷ್ಟಲಿಂಗವೇಕೆ ? ” ಎಂದು ಕೇಳಿದನು. ಅದಕ್ಕೆ ಚೆನ್ನಬಸವನು “ ಇವನಿಗೆ ಇಷ್ಟಲಿಂಗವೆಂಬುದು ಮುನ್ನವೇ ಇಲ್ಲ. ಅದೆಂತು ಸರ್ವಾಂಗಲಿಂಗಿಯಾದನು ? ” ಎಂದು ಕೇಳಲು, ಸಿದ್ಧರಾಮನು ತನ್ನಂಗದಲ್ಲಿಯ ಲಿಂಗದ ಗೊಂಚಲುಗಳನ್ನು ತೋರಿದನು. ಅದನ್ನು ಕಂಡು “ ಸರ್ವಾಂಗಲಿಂಗತ್ವವು ಇಂತೆ !

ಇವು ಹಗರಣದ ಮಾತಲ್ಲದೆ ಏಕಲಿಂಗನಿಷ್ಠಾಪರನು ನೀನು ಮುನ್ನವೇ ಅಶ್ಲಿ. ಮನೆಗೆ ಬಂದ ಅಲ್ಲಮನನ್ನು ದಹಿಸಲು ಹಣೆಗಣ್ಣು ತೆರೆದ ಜಂಗಮದ್ರೋಹಿ ನೀನು ಜಂಗಮದ್ರೋಹಿಯನ್ನು ಕರೆದು ತಂದು ಸರ್ವಾಂಗಲಿಂಗವನ್ನುಂಟುಮಾಡುತಿಪ್ಪ ಅಲ್ಲಮಾ, ನೀನು ಗುರುವನ್ನು ಅಳಿದು ಲಿಂಗವನ್ನು ತಂದೆ. ನೀನಾದರೂ ಸಾಮಾನ್ಯನೇ ? ನಿಮ್ಮಿರ್ವರ ಮುಖಗಳು ನೋಟಕ್ಕೆ ಸಲ್ಲವು " ಎಂದು ಚೆನ್ನಬಸವನು ಎಂದನು. ಇದನ್ನು ಕೇಳಿ ಅಲ್ಲಮನು " ನಾನು ಗುರುವನ್ನು ಅಳಿದು ಈ ಲಿಂಗವನ್ನು ತಂದುದಿಲ್ಲ. ಆ ಗುರುವಿನ ಸುಚಿತ್ಕಳೆಯು ಈ ಲಿಂಗದೊಳಗಿದೆ, ತಿಳಿದು ನೋಡು. ಎಮ್ಮ ಗುರುವರನ ಶಿವಸೋದರನಾದ ನೀನೆ ಎನಗೆ ಗುರುವು. ನಿನಗೆ ಗುರುವಾದ ಈ ಬಸವಣ್ಣನೇ ಎನಗೆ ಪರಮಗುರುವು. ಈತನಿರಲು ನಾನು ಗುರುವನೆಂತು ಅಳಿದೆನು " ಎಂದು ಕೇಳಿದನು. ಇದನ್ನು ಕೇಳಿ ಸಿದ್ಧರಾಮನು ತನಗಿನ್ನಾವ ಗತಿಯೆಂದು ಪ್ರಭುವನ್ನು ವಿಚಾರಿಸಲು, ಅವನು " ಅಸಮಪ್ರಸಾದದಿಂದ ಚೆನ್ನಬಸವಣ್ಣನೆಂಬ ಹೆಸರಿನಿಂದುದಿಸಿದ ಈ ಶಿವಚಿತ್ಕಳಾರೂಪನಿಂದ ನೀನು ದೀಕ್ಷೆ ಹೊಂದಿ ಇಷ್ಟಲಿಂಗವನ್ನು ಪಡೆದಲ್ಲದೆ ನಿನಗೆ ಗತಿ ಇಲ್ಲವು " ಎಂದನು. ಬಳಿಕ ಸಿದ್ಧರಾಮನು ಗುರುಚೆನ್ನಬಸವೇಶನನ್ನು ಕೊಂಡಾಡಿ ನಮಸ್ಕರಿಸಿ, ಮನುಷ್ಯಜನ್ಮದ ಪಿಂಡದಿರವನ್ನೂ ಆದರ ಉದಯವನ್ನೂ ಪೇಳಿ ಎನಗೆ ದೀಕ್ಷೆಯನ್ನು ಪಾಲಿಸೆಂದು ಬೇಡಿಕೊಂಡನು (೮೯-೯೬).

೫೪ ಪಿಂಡೋತ್ಪತ್ತಿ ಕರಣಹಸಿಗೆಗಳ ನಿರೂಪಣಸಂಧಿ

ಸಿದ್ಧರಾಮನೇ ಇನ್ನಾಲಿಸು, ನಿನಗೆ ನಾನು ಈ ಮೊದಲು ಹೇಳಿದಂತೆ ಸುಧರ್ಮಿಗಳು ಸುರಲೋಕಭೋಗವನ್ನೂ ಕರ್ಮಿಗಳು ಯಮನ ಪಟ್ಟಣದ ನರಕಗಳನ್ನೂ ಅನುಭವಿಸಿ, ಬಳಿಕ ಪೃಥ್ವಿ ಅಪ್ಪು ವಾಯು ಆಕಾಶ ಈ ನಾಲ್ಕು ಭವದ್ವಾರಗಳ ಮುಖಾಂತರ ಭೂಲೋಕದಲ್ಲಿ ಸಂಜನಿಸುವರು. ಇವರಲ್ಲಿ ಸ್ಥಾವರವು ೨೦ ಲಕ್ಷ, ಯೋನಿಜನಜೀವವು ೯ ಲಕ್ಷ, ಕ್ರಿಮಿಕುಲವು ೧೧ ಲಕ್ಷ, ಪಕ್ಷಿಕುಲವು ೧೦ ಲಕ್ಷ, ಗೋ ಮುಂತಾದ ಪಶುಕುಲವು ೩೦ ಲಕ್ಷ, ಮನುಜಯೋನಿಜೀವವು ೪ ಲಕ್ಷ, ಹೀಗೆ ಒಟ್ಟು ಜೀವಗಳು ೮೪ ಲಕ್ಷ. ಜೀವನು ಸ್ವೇದಜ ಅಂಡಜ ಉದ್ಭಿಜ ಜರಾಯುಜಗಳೆಂಬ ನಾಲ್ಕು ತರದ ಜನನದೊಳುದಿಸಿ ಆ ಆ ಜಾತಿಧರ್ಮಸಂಪಾದನೆಯ ಪರಿಕರವನುಂಡು ಅವುಗಳ ಕ್ರಿಯೆಗಳಿಂದ ಕಂಗೆಟ್ಟು ಕಡೆಗೆ ಆದಿಸಂಚಿತದಿಂದ ಗೋಜನ್ಮಕ್ಕೆ ಬಂದು ಆ ಮೇಲೆ ಅಧಿಕವಾದ ನರಜನ್ಮವನ್ನೈದುವನು (೨-೪).

ಋತುಕಾಲದಲ್ಲಿ ದಂಪತಿಗಳು ಕೂಡಲು ಮಾತೆಯ ರಜಸ್ಸು ಪಿತನ ವೀರ್ಯಗಳು ಒಂದಾಗಿ ಪ್ರಥಮದಿನದಲ್ಲಿ ಪಿಂಡವುಂಟಾಗುವುದು. ಐದು ದಿನಕ್ಕೆ ಗುಳ್ಳೆಯ ಆಕಾರವಾಗಿ ಹತ್ತು ದಿವಸಗಳಲ್ಲಿ ರಕ್ತ ಬಲಿದು, ಹದಿನಾಲ್ಕು ದಿನಗಳಲ್ಲಿ ಮಾಂಸವೆನಿಸಿ, ಇಪ್ಪತ್ತು ದಿನಕ್ಕೆ ಆ ಮಾಂಸವೇ ಘಟ್ಟಿಗೊಂಬುವುದು. ಇಪ್ಪತ್ತೈದು ದಿವಸಕ್ಕೆ ಅವಯವಗಳು ಅಂಕುರವಾಗಿ, ತಿಂಗಳಿಗೆ ಶಿರವು ಉದಯಿಸಿ, ಎರಡು ತಿಂಗಳಿಗೆ ತೋಳು ತೊಡೆಗಳು ಉಂಟಾಗಿ, ಮೂರು ತಿಂಗಳಿಗೆ ಹಸ್ತ ಪಾದ ಬೆರಳುಗಳು ವ್ಯಕ್ತವಾಗಿ, ನಾಲ್ಕು ತಿಂಗಳಿಗೆ ಕಣ್ಣು ಮೂಗು ಕಿವಿ ಗುದ ಗುಹ್ಯ ರೋಮಗಳು ಹುಟ್ಟುವುವು. ಐದನೆಯ ತಿಂಗಳಿಗೆ ನವದ್ವಾರಗಳೂ ಜಠರವೂ ಇಂಬಾಗುವುವು. ಆರನೆಯ ತಿಂಗಳಿಗೆ ನಖ ಕೇಶಗಳು ಮೊಳೆಯುವುವು. ಏಳು ತಿಂಗಳಿಗೆ ಅವಯವಾದಿಗಳು ಬಲಿದು ತಾಯಿಯುಂಡ ಅನ್ನರಸವು ನಾಭಿಸೂತ್ರದ ಮುಖಾಂತರ ಶಿಶುವಿನ ಉದರದೊಳಗೆ ಇಳಿಯುವುದು. ಎಂಟನೆಯ ತಿಂಗಳಿಗೆ ಅದಕ್ಕೆ ಜಾತಿಸ್ಮರಣೆಯೂ ಸುಜ್ಞಾನವೂ ಉಂಟಾಗುವುವು. ಒಂಬತ್ತು ತಿಂಗಳಿಗೆ ಶಿವಧ್ಯಾನಪರವಾಗಿ, ಗುರುಕರುಣದಿಂದ ಜನಿಸಿದೆನು, ಶಿವಧ್ಯಾನಪರಾಯಣನಾಗಿ ಮುಕ್ತನಾಗುವೆನೆನುತ್ತಿರಲು, ಸೂತಿಕಾವಾಯುವಿಂದೆ ತಲೆ ಕೆಳಗಾಗಿ ಬಿದ್ದು, ವಿಷ್ಣುವಾಯುವಿನಿಂದ ಅಜ್ಞಾನಯುತನಾಗಿ, ಧರೆಗೆ ತನ್ನ ದುಃಖವನ್ನು ದೂರುವ ತೆರದಿಂದ ಚೀರುತ್ತ ನಡುಗುತ್ತ ಜನಿಯಿಸುವುದು (೫-೮).

ಸತಿಯು ಋತುಸ್ನಾತೆಯಾದ ಒಂದನೆಯ ದಿವಸದಲ್ಲಿ ರತಿಕೇಳಿಯನ್ನು ಮಾಡಲು ಕುಲಗೇಡಿಯಾದ ಕುಮಾರಿತಿಯೂ ಎರಡನೆಯ ದಿವಸದಲ್ಲಿ ಪಾತಕನೂ ಮೂರನೆಯ ದಿವಸದಲ್ಲಿ ಚೋರನೂ ನಾಲ್ಕನೆಯ ದಿವಸದಲ್ಲಿ ಕೃತಕಿಯೂ ಐದನೆಯ ದಿವಸದಲ್ಲಿ ಬುದ್ಧಿವಂತನೂ ಆರನೆಯ ದಿವಸದಲ್ಲಿ ವ್ರತಗೇಡಿಯೂ ಏಳನೆಯ ದಿವಸದಲ್ಲಿ ದಯಾಪರನೂ ಎಂಟನೆಯ ದಿವಸದಲ್ಲ ದರಿದ್ರನೂ ಒಂಬತ್ತನೆಯ ದಿವಸದಲ್ಲಿ ಧನಾಢ್ಯನೂ ಹತ್ತನೆಯ ದಿವಸದಲ್ಲಿ ಕಾಮಿಯೂ ಹನ್ನೊಂದನೆಯ ದಿವಸದಲ್ಲಿ ನಿಷ್ಕಾಮಿಯೂ ಹನ್ನೆರಡನೆಯ ದಿವಸದಲ್ಲಿ ಕೋಪಿಯೂ ಹದಿಮೂರನೆಯ ದಿವಸದಲ್ಲಿ ಪಂಡಿತನೂ ಹದಿನಾಲ್ಕನೆಯ ದಿವಸದಲ್ಲಿ ಅಶಕ್ತನೂ ರೋಗಿಯೂ ಹದಿನೈದನೆಯ ದಿವಸದಲ್ಲಿ ರಾಜನೂ ಹದಿನಾರನೆಯ ದಿವಸದಲ್ಲ ಶಿವಯೋಗಿಯೂ ಸಂಜನಿಸುವನು (೯-೧೦).

ಭೋಗಕಾಲದಲ್ಲಿ ಸತಿಪತಿಗಳಿರ್ವರು ಪರಧ್ಯಾನರಾಗಿರಲು ಜಾರನೂ ಶಿವಧ್ಯಾನಪರರಾಗಿರಲು ಶಿವಯೋಗಿಯೂ ಜನಿಸುವನು. ರವಿಯುದಯಕಾಲದಲ್ಲಿ ಜನಿಸಿದವನು ಕೋಪಿಯೂ ಮಧ್ಯಾಹ್ನದೊಳುದಿಸಿದವನು ಪಾಪಿಯೂ ಸಂಧ್ಯಾಸಮಯದಲ್ಲುದಿಸಿದವನು ಭೂಮಿಗೆ ತಾಪವನ್ನು ಕೊಡುವವನೂ ರಾತ್ರಿಯಲ್ಲಿ ಉದಯಿಸಿದವ

ನು ಗುಣಾನಿತ್ವನೂ ಶಾಂತಿಯುತನೂ ಆಗುವನು (೧೧).

ನರದೇಹದಲ್ಲಿ ಪಿತ್ತ ಶ್ಲೇಷ್ಮ ಮಾಂಸ ಮಜ್ಜೆ ರಕ್ತ ಮೇದಸ್ಸು ಶುಕ್ಲ ಇವು ಕ್ರಮವಾಗಿ ಒಂದು ಎರಡು ಇಪ್ಪತ್ತು ಹತ್ತು ಹತ್ತು ಐದು ಮೂರು ಪ್ರಮಾಣದಿಂದಿರುವುವು. ಅವರಲ್ಲಿ ಮೂರುವರೆ ಕೋಟಿ ರೋಮಂಗಳೂ ಮುನ್ನೂರರುವತ್ತು ಅಸ್ಥಿಗಳೂ ಸೇರಿರುವುವು. ಅದರಲ್ಲಿಯ ನರ ರೋಮ ಶುಕ್ರ ಅಸ್ಥಿಗಳು ತಂದೆಯ ಅಂಶಗಳು. ಚರ್ಮ ಮಾಂಸ ರಕ್ತಗಳು ತಾಯಿಯ ಅಂಶಗಳು. ಈ ಸಪ್ತಧಾತುಗಳಲ್ಲಿ ಶುಕ್ಲಾಧಿಕದಿಂದ ಪುರುಷನೂ, ರಕ್ತಾಧಿಕದಿಂದ ಸ್ತ್ರೀಯೂ, ಎರಡೂ ಸಮವಾಗುವುದರಿಂದ ನಪುಂಸಕನೂ ಉದಯಿಸುವನು (೧೨-೧೩).

ಪಂಚ ಭೂತಗಳಲ್ಲಿ ಆಕಾಶದಿಂದ ಜ್ಞಾನಾದಿ ಪಂಚ ಕರಣಗಳೂ ಮರುತನಿಂದ ಪ್ರಾಣಾದಿ ಪಂಚ ವಾಯುಗಳೂ ಅಗ್ನಿಯಿಂದ ಶ್ರೋತ್ರಾದಿ ಪಂಚ ಜ್ಞಾನೇಂದ್ರಿಯಗಳೂ ವಾರಿಯಿಂದ ಪಂಚ ವಿಷಯಗಳೂ ಪೃಥ್ವಿಯಿಂದ ಪಂಚ ಕರ್ಮೇಂದ್ರಿಯಗಳೂ ಉದಿಸಿದುವು. ಈ ಪಂಚ ಭೂತಗಳೇ ಪಂಚಾಂಶಪಂಚೀಕೃತಿಯನ್ನೈದಿ ದೇಹವಾಯಿತು. ದೇಹದಲ್ಲಿ ಅಸ್ಥಿ ಚರ್ಮ ನಾಡಿ ಮಾಂಸ ರೋಮಗಳು ಪೃಥ್ವಿಯಿಂದ, ಸ್ವೇದ ಜೊಲ್ಲು ಮೂತ್ರ ಶುಕ್ಲ ಶೋಣಿತಗಳು ಜಲದಿಂದ, ತೃಷೆ ನಿದ್ರೆ ಆಲಸ್ಯ ಸಂಗ ಕ್ಷುತ್ತುಗಳು ಅಗ್ನಿಯಿಂದ, ಹರಿವ ಹಾರುವ ಸುಳಿವ ಕೂಡುವ ಅಗಲುವ ಕಾರ್ಯಗಳು ವಾಯುವಿಂದ, ಮೋಹ ರಾಗ ದ್ವೇಷ ಲಜ್ಜೆ ಭೀತಿಗಳು ಗಗನದಿಂದ ಹೀಗೆ ಪಂಚ ಭೂತಗಳಿಂದ ಇಪ್ಪತ್ತೈದು ಗುಣಗಳು ತೋರುವುವು (೧೪-೧೬). ಮತ್ತು ಪಾಯು ಗಂಧ ನಾಸಿಕ ಪ್ರಾಣ ಚಿತ್ತ ಇವು ಪೃಥ್ವಿಯ ಕೃತಿಗಳು, ಗುಹ್ಯ ರಸ ಜಿಹ್ವೆ ಅಪಾನ ಬುದ್ಧಿ ಇವು ಅಪ್ಪುವಿನ ಕೃತಿಗಳು, ಪಾದ ರೂಪು ಅಕ್ಷಿ ಉದಾನ ಅಹಂಕಾರ ಇವು ಅಗ್ನಿಯ ಕೃತಿಗಳು, ಪಾಣಿ ಸ್ಪರ್ಶ ತ್ವಕ್ಕು ವ್ಯಾನ ಮನ ಇವು ವಾಯುಕೃತಿಗಳು, ವಾಕ್ಕು ಶಬ್ದ ಶ್ರುತಿ ಸಮಾನ ಜ್ಞಾನ ಇವು ಆಕಾಶದ ಕೃತಿಗಳು. ಇಂತೀಬಗೆಯಿಂದ ಪಿಂಡ ಬ್ರಹ್ಮಾಂಡ ಪ್ರಪಂಚವಾಯಿತು. (ಇದರ ವಿವರಣೆಯನ್ನು ಈ ಸಂಧಿಯ ಕೊನೆಗೆ ಕೊಟ್ಟ ೧ನೆಯ ಪತ್ರಿಕೆಯನ್ನು ನೋಡುವುದು).

ಪಿಂಡ ಪ್ರಪಂಚದಲ್ಲಿ ಜ್ಞಾನೇಂದ್ರಿಯಗಳ ಭೂತ ದೇವತೆ ವಿಷಯ ಮತ್ತು ಆ ವಿಷಯಭೇದಗಳು ಅದರಂತೆ ಕರ್ಮೇಂದ್ರಿಯಗಳ ವಾಯು ಅಧಿದೇವತೆ ಮತ್ತು ವಿಷಯಗಳು ವಿವಿಧವಾಗಿರುವುವು (೧೭-೨೧). (ಸಂಧಿಯ ಕೊನೆಗೆ ೨ನೆಯ ಪತ್ರಿಕೆಯನ್ನು ನೋಡುವುದು).

ಈ ಪಿಂಡದಲ್ಲಿ ಪ್ರಾಣ ಅಪಾನ ಸಮಾನ ಉದಾನ ವ್ಯಾನ ನಾಗ ಕೂರ್ಮ ಕೃಕರ ದೇವದತ್ತ ಧನಂಜಯಗಳೆಂಬ ದಶವಾಯುಗಳ ಸಂಚಾರವಿದ್ದು ಅವುಗಳ ವರ್ಣ ಸ್ಥಾನ ಲಕ್ಷಣ ಕ್ರಿಯೆಗಳು ಬೇರೆಬೇರೆಯಾಗಿರುತ್ತವೆ. ಇವುಗಳಲ್ಲಿ ಪ್ರಾಣ

ವಾಯುವಿನಿಂದ ಉಚ್ಛ್ವಾಸನಿಶ್ವಾಸಕ್ರಿಯೆಗಳೂ ಅನ್ನಜೀರ್ಣವೂ, ಅಪಾನವಾಯುವಿನಿಂದ ಮಲಮೂತ್ರವಿಸರ್ಜನಕ್ರಿಯೆಗಳೂ ಅನ್ನರಸವ್ಯಾಪ್ತಿಯೂ, ಸಮಾನವಾಯುವಿನಿಂದ ಅನ್ನರಸವು ಸರ್ವಾವಯವಗಳಲ್ಲಿ ಪಸರಿಸಿಕೊಂಡು ರೋಮಕ್ಕೆ ಏವ ಕ್ರಿಯೆಯೂ, ಉದಾನವಾಯುವಿನಿಂದ ಕೆಮ್ಮು ಕನಸು ಮರವೆ ಎಬ್ಬಿಸುವ ಕೂಡಿಸುವ ಸರ್ದಿ ನಿರೋಧವಮಾಡುವ ಕ್ರಿಯೆಗಳೂ ಇಳಿವ ಅನ್ನರಸದ ಉತ್ಥಾಪನೆಯೂ, ವ್ಯಾನವಾಯುವಿನಿಂದ ಮುದುಡಿದ್ದುದನ್ನು ತಿದ್ದಿ ಅದಕ್ಕೆ ಅನ್ನಪಾನಾದಿಗಳನ್ನು ಮುಟ್ಟಿಸುವ ಕ್ರಿಯೆಯೂ ಜರುಗುವುವು. ಮತ್ತು ನಾಗವಾಯುವಿನಿಂದ ಹಾಡಿಸುವ, ಕೂರ್ಮವಾಯುವಿನಿಂದ ಕಣ್ಣು ಬಾಯಿ ಮೂಗು ಮುಚ್ಚಿ ತೆರೆಯುವ, ಕೃಕರವಾಯುವಿಂದ ಗಮನಾಗಮನಗೊಳಿಸುವ ಮತ್ತು ಕ್ಷುತ್ತಾದಿಧರ್ಮಗಳನ್ನು ಪ್ರಕಟಿಸುವ, ದೇವದತ್ತವಾಯುವಿನಿಂದ ಕುಳ್ಳಿರಿಸುವ ಏಳಿಸುವ ಹಾಗೂ ಒರಲಿ ಮಾತಾಡಿಸುವ ಮತ್ತು ಧನಂಜಯ ವಾಯುವಿನಿಂದ ಕರ್ಣಗಳಲ್ಲಿ ಶರಧಿಘೋಷ ಮಾಡುವ ಮರಣದಲ್ಲಿ ನಿರ್ಘೋಷಗೊಳಿಸುವ ಕ್ರಿಯೆಗಳುಂಟಾಗುವುವು (೨೨-೨೭).
(ಸಂಧಿಯ ಕೊನೆಗೆ ೩ ನೆಯ ಪತ್ರಿಕೆಯನ್ನು ನೋಡುವುದು).

ಇಪ್ಪತ್ತುನಾಲ್ಕು ತತ್ತ್ವಮಯವಾದ ಪಿಂಡವೇ ದೇಹವು. ಇದನ್ನು ಧರಿಸಿದ ಆತ್ಮನು ಪೃಥ್ವಿ ಅಪ್ಪು ತೇಜ ವಾಯು ಆಕಾಶಗಳೊಡನೆ ಬೆರಸಲು, ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನಗಳೆಂಬ ಪಂಚಕರಣಂಗಳಾದುವು. ಅವನಿಗೆ ಜ್ಞಾನೇಂದ್ರಿಯಗಳು ಚಿದಾಕಾರವಾಗಿಪ್ಪ ಈಶನು ಅಧಿದೈವವು. ಅವನು ಸರ್ವಾಂಗಪ್ರದೇಶವನ್ನು ತುಂಬಿಕೊಂಡು ಚೈತನ್ಯರೂಪಾಗಿ ಅದನ್ನು ಸತ್ಕಾಂತಿಯನ್ನೈದಿಸುತ್ತಿರುವನು. ಮನಸ್ಸಿಗೆ ಚಂದ್ರನಧಿದೇವತೆ. ಅದು ಸಂಕಲ್ಪವಿಕಲ್ಪಗಳಿಗೊಳಗಾದುದು. ಅಹಂಕಾರಕ್ಕೆ ರುದ್ರನಧಿದೇವತೆ. ಅದು ಒಡನೊಡನೆ ಅಹಂಕರಿಸುತ್ತಿರುವುದು. ಬುದ್ಧಿಗೆ ಚತುರಾನನನಧಿದೇವತೆ. ಅದು ಬುದ್ಧಿಯನ್ನು ನಿಶ್ಚಯಿಸುವುದು. ಚಿತ್ತಕ್ಕೆ ಉಮಾತ್ಮಪಿತತ್ರಿಯಧಿದೇವತೆ. ಅದು ಸ್ಥಿರದೊಳವಧರಿಸುತ್ತಿರುವುದು.

ಆತ್ಮನು ಜೀವಾತ್ಮ ಅಂತರಾತ್ಮ ಪರಮಾತ್ಮ ಎಂದು ಮೂರು ತೆರ. ಸಂಸಾರ ಸುಖದುಃಖದೊಳು ಪರಿಬದ್ಧನಾದ ಆತ್ಮನೇ ಜೀವಾತ್ಮನು. ಆ ಸುಖದುಃಖಂಗಳನ್ನು ಹೊದ್ದಿಯೂ ಹೊದ್ದದಂತೆ ಇರುವ ಆತ್ಮನೇ ಅಂತರಾತ್ಮನು. ಆ ಸುಖದುಃಖಪ್ರಪಂಚದಲ್ಲಿ ಸಿಲುಕದೆ ನಿರಾಕಾರರೂಪಿನಲ್ಲಿರುವ ಆತ್ಮನೇ ಪರಮಾತ್ಮನು. ಆತ್ಮನಿಗೆ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ತನುಗಳು. ಪಂಚಭೂತಮಯವಾದ ತನುವೇ ಸ್ಥೂಲತನುವು. ದಶೇಂದ್ರಿಯಗಳು ಪಂಚವಾಯು ಮನ ಬುದ್ಧಿಗಳೆಂಬ ಹದಿನೇಳು ತತ್ತ್ವಗಳಿಂದುಂಟಾದ ಲಿಂಗಭೌತಿಕ ತನುವೇ ಸೂಕ್ಷ್ಮತನುವು. ಆತ್ಮ ಚಿತ್ತ ಅಹಂಕಾರಗಳಿಂದ ನಿರ್ಮಿತವಾದ ತನುವೇ ಕಾರಣತನುವು.

ಶಿರಸ್ಸು ಎದೆ ತೊಡೆ ತೋಳುಗಳಿಗೆ ಅಂಗವೆಂದೂ ಮುಖ ಮೂಗು ಕಣ್ಣು ಕಿವಿ ತುಟಿ ಬೆರಳುಗಳಿಗೆ ಪ್ರತ್ಯಂಗವೆಂದೂ ನಾಲ್ಕು ಕರಣಗಳಿಗೆ ಸಾಂಗಾಂಗವೆಂದೂ ವಸ್ತ್ರಾಭರಣಲೇಪಾದಿಗಳಿಗೆ ಉಪಾಂಗವೆಂದೂ ಹೆಸರು (೨೮-೩೩).

ಮನುಷ್ಯದೇಹದಲ್ಲಿ ದಶನಾಡಿಗಳಿವೆ. ಅವುಗಳಲ್ಲಿ ಈಡ ಪಿಂಗಳ ಸುಷುಮ್ನಗಳು ಚಂದ್ರ ರವಿ ಮಧ್ಯನಾಳಗಳಲ್ಲಿ, ಹಸ್ತಿಜಿಹ್ವೆ ಗಾಂಧಾರಿಗಳು ಎಡಬಲ ಕಣ್ಣುಗಳಲ್ಲಿ, ಪಯಸ್ವಿನಿ ಪೂಷಂಗಳು ಎಡಬಲದ ಕಿವಿಗಳಲ್ಲಿ, ಅಲಂಬವು ಮೇಢ್ರದಲ್ಲಿ, ನಕುಹವು ಗುದದಲ್ಲಿ, ಶಂಕಿನಿಯು ನಾಭಿಯಲ್ಲಿ ಇರುತ್ತವೆ (೩೪).

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಸೂರ್ಯ ಚಂದ್ರ ಆತ್ಮ ಇವು ಅಷ್ಟಮೂರ್ತಿಗಳು. ದೇಹಿಯು ಇವುಗಳಲ್ಲಿ ಧರೆಯ ಮದವೆತ್ತಲು ತನುಗುಣಭರಿತನೂ, ಸಲಿಲಮದವೆತ್ತಲು ಸಂಸಾರಮದನೂ, ಶಿಖಿಮದವೆತ್ತಲು ಕಾಮಮದನೂ, ಪವನಮದಭರಿತನಾಗಲು ಗಮನಮದನೂ, ಗಗನಮದವೆತ್ತಲು ವಾಹನಮದನೂ, ತರಣಿಮದವೆತ್ತಲು ಕೋಪಾಗ್ನಿಯಲ್ಲಿ ಪುದಿದವನೂ, ಶಶಿಮದವೆತ್ತಲು ಚಿಂತೆಯಿಂದ ಕೂಡಿದವನೂ, ಆತ್ಮಮದವೆತ್ತಲು ಅಹಂಕಾರಯುತನೂ ಆಗುವನು (೩೫-೩೬).

ಮನುಷ್ಯದೇಹವು ಸಪ್ತಧಾತುಸಮ್ಮಿಶ್ರಿತವಾದುದು. ಈ ಸಪ್ತಧಾತುಗಳಲ್ಲಿ ಪೃಥ್ವಿಯಂಶದ ರಸವು ಅಂಗವನ್ನು ಆಳ್ಕಿಸುತ್ತಿಹುದು. ಅಪ್ಪುವಿನಂಶದ ರುಧಿರವು ಅವಯವವನ್ನು ನಡುಗಿಸುತ್ತಿಹುದು. ಅಗ್ನಿಯಂಶದ ಮಾಂಸವು ಶರೀರವನ್ನು ಕಳವಳಿಸುತ್ತಿಹುದು. ಪವನಾಂಶದ ಮೇದಸ್ಸು ಅಂಗವನ್ನು ಬೆದರಿಸುತ್ತಿಹುದು. ಗಗನಾಂಶದ ಅಸ್ಥಿಯು ಮರುಳಾಗಿ ನುಡಿಯಿಸುತ್ತಿಹುದು. ಸೂರ್ಯನಂಶದ ಮಜ್ಜೆಯು ಶರೀರವನ್ನು ಒತ್ತರದಿಂದ ಕನವರಿಸಿ ನುಡಿಸುತ್ತಿಹುದು. ಚಂದ್ರನಂಶದ ಶುಕ್ಲವು ಕಳವಳಕಂಪನಗಳನ್ನುಂಟುಮಾಡುವುದು. (ಸಂಧಿಯ ಕೊನೆಗೆ ಳನೆಯ ಪತ್ರಿಕೆಯನ್ನು ನೋಡುವುದು.)

ದೇಹಿಯು ಸಪ್ತವ್ಯಸನ ಷಡೂರ್ಮಿ ಅರಿಷಡ್ವರ್ಗ ಷಡ್ಭ್ರಮೆಗಳಿಂದ ಪೀಡಿತನು. ಅವನಿಗೆ ತನುವಿನ ವ್ಯಸನವಾದಲ್ಲಿ ತನು ಬಡವಾಯಿತೆನ್ನುವನು. ಮನೋವ್ಯಸನವಾದಲ್ಲಿ ಕಳವು ಹಾದರಗಳನ್ನು ಬಯಸುತಿಹನು. ಅರ್ಥವ್ಯಸನವಾಗಲು ಧನಕೆ ಚಿಂತಿಸುತಿಹನು. ರಾಜ್ಯವ್ಯಸನವಾಗಲು ವಿನುತ ವಸ್ತ್ರಾಭರಣ ವಾಹನಗಳನ್ನು ಬಯಸುತಿಹನು. ವಿಶ್ವವ್ಯಸನವಾಗಲು ಸದ್ಗೃಹಕ್ಷೇತ್ರವನ್ನು ಬಯಸುತಿಹನು. ಉತ್ಸಾಹವ್ಯಸನವಾಗಲು ಪುತ್ರಮಿತ್ರಾಳಿಯನ್ನು ಬಯಸುತಿಹನು. ಸೇವಕವ್ಯಸನವಾಗಲು ಕೊಂಡುಕೊಟ್ಟು ಉಂಡು ಉಡಲುಬೇಕೆಂಬ ಕೋಟಲೆಯೊಳಹನು. ಷಡೂರ್ಮಿಗಳಲ್ಲಿ ಕ್ಷುತ್ತು ಪಿಪಾಸೆಗಳು ಪ್ರಾಣಧರ್ಮವಾಗಿಯೂ ಶೋಕ ಮೋಹಗಳು ಮನೋಧರ್ಮವಾಗಿಯೂ ಜನನಮರಣಗಳು ದೇಹಧರ್ಮವಾಗಿಯೂ ಇರುತ್ತವೆ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬುವು ಅರಿಷಡ್ವರ್ಗವು. ಜಾತಿ ವರ್ಣ ಕುಲ ಗೋತ್ರ ಆಶ್ರಮ ನಾಮ ಇವು ಷಡ್ಭ್ರಮೆಗಳು. ದೇಹಕ್ಕೆ ಹುಟ್ಟುವುದು ಇರುವುದು ಪರಿಣಮಿಸುವುದು ಬಳೆವುದು ಕುಸಿವುದು ಕೆಡುವುದು ಎಂಬ ಷಡ್ಭಾವವಿಕಾರಗಳುಂಟು. ಈ ದೇಹಿಗೆ ಅನ್ನಮಯ ಪ್ರಾಣಮಯ ವಿಜ್ಞಾನಮಯ ಆನಂದಮಯ ಮನೋಮಯಗಳೆಂಬ ಪಂಚಕೋಶಗಳುಂಟು. ಅವನು ಸಾತ್ವಿಕ ರಾಜಸ ತಾಮಸಗುಣವಿಶಿಷ್ಟನು. ಸತ್ಯ ಹರುಷ ಕ್ಷಮೆ ಜ್ಞಾನ ನಿಶ್ಚಯ ಶ್ರದ್ಧೆ ಧೈರ್ಯ ವಿವೇಕ ಸಾಹಸ ಎಂಬಿವೇ ಸಾತ್ವಿಕಗುಣಗಳು. ಪರಮಪ್ರಿಯ ಅಹಂಕೃತಿ ಉದ್ಯೋಗ ರೋಷ ಮತ್ಸರ ಎಂಬಿವೇ ರಾಜಸಗುಣಗಳು. ನಿದ್ರೆ ಆಲಸ್ಯ ಮೋಹ ಚಾಪಲ್ಯ ಹಿಂಸೆ ನಿಂದೆ ಎಂಬಿವೇ ತಾಮಸಗುಣಗಳು. ಸಸಿವ ತೃಣೀಕೃತ ವರ್ತಿನಿ ಮಹಾಕ್ರೋಧಿನಿ ಸಗಂಧಚಾರಿಣಿ ವಿಮೋಹಿನಿ ಅತಿಚಾರಿಣಿ ಹಾಸಿನಿ ಇವು ಅಂತರಂಗದ ಮದಾಷ್ಟಕವು. ಧನ ಕುಲ ಛಲ ಯೌವನ ರೂಪು ವಿದ್ಯೆ ರಾಜ್ಯ ತಪಸ್ಸುಗಳಿಗಾಗಿ ಉಂಟಾಗುವ ಮದಗಳೆ ಬಹಿರಂಗದ ಅಷ್ಟಮದಗಳು. ದೇಹಿಯು ಈ ಅಂತರ್ಬಾಹ್ಯ ಅಷ್ಟಮದಗಳಿಂದ ಪೀಡಿತನಾದವನು, ಅಲ್ಲದೆ ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕ ಎಂಬ ತಾಪತ್ರಯಗಳ ಬಲೆಗೆ ಸಿಲುಕಿದವನು. ಆಧ್ಯಾತ್ಮಿಕವು ಮಾನಸ ಶಾರೀರವೆಂದು ಎರಡು ತೆರನಾಗಿರುವುದು. ಮತ್ಸರ ಸೂಯಾಸೂಯ ಚಿಂತೆಯಿಂದಾದ ತಾಪವೇ ಮಾನಸತಾಪವು. ಜ್ವರಮುಖ್ಯರೋಗದಿಂದ ನೋವುದೇ ಶಾರೀರತಾಪವು. ಚೋರ ರಾಜ ಪಶು ಪಕ್ಷಿ ಮೃಗ ಸರ್ಪ ಭೂತ ವೇತಾಳಾದಿ ಜೀವಚಯದಿಂದಾದುಪಹತಿಗಳು ಆಧಿಭೌತಿಕವು. ಜನನ ಮರಣ ಹಸಿವು ತೃಷೆ ನೆರೆ ತೆರೆ ಅಜ್ಞಾನಗಳಿಂದುಂಟಾದ ದುಃಖವು ಆಧಿದೈವಿಕವು (೩೬-೪೬).

ಭವಭವನದೊಳುದ್ಭವಿಸಿ ಇಂತು ತಾಪತ್ರಯದ ಭ್ರಾಂತಿಯೊಳು ಕಡು ನೊಂದು ಜನ್ಮಾಂತರದ ಸುಕೃತವಾಸನೆವಿಡಿದು ಜೀವಂಗೆ ಶಿವಭಕ್ತಿ ಸಂಜನಿಸಲು ಅದರಿಂದಲೇ ಮುಂದೆ ಸುಜ್ಞಾನವೊದಗುವುದು. ಇದು ಪ್ರತ್ಯಕ್ಷ ಪರೋಕ್ಷ ಅಪರೋಕ್ಷ ಎಂದು ಮೂರು ವಿಧವಾಗಿರುವುದು. ಇವುಗಳಲ್ಲಿ ಶಬ್ದಾದಿ ವಿಷಯಗಳಿಂದಲೂ ಜ್ಞಾನಾದಿ ಅಂತಃಕರಣಗಳಿಂದಲೂ ಅರಿವುದೇ ಪ್ರತ್ಯಕ್ಷ ಜ್ಞಾನವು. ದೇಶ ಕಾಲ ಲೋಕಾಂತರಗಳನ್ನೂ ಜನ್ಮಾಂತರದ ಸುಖದುಃಖ ಸುಕರ್ಮ ದುಷ್ಕರ್ಮಗಳ ಬಂಧಮೋಕ್ಷಗಳನ್ನೂ ವೇದಾಗಮಗಳಿಂದ ಅರಿವುದೇ ಪರೋಕ್ಷ ಜ್ಞಾನವು. ಜಾಗ್ರ್ಯಾಂತರದ ಸ್ಥೂಲ ಸೂಕ್ಷ್ಮ ಭೂತಪಂಚಕಗಳನ್ನು ಒಂದೆಂದರಿದು ಅವುಗಳ ಗುಣ ಧರ್ಮ ವಿಷಯಗಳು ತಾನಲ್ಲವೆಂದು ತಿಳಿದು ಜೀವಾತ್ಮ ಪರಮಾತ್ಮರ ಏಕಾರ್ಥವನ್ನು ನಿಶ್ಚಯಿಸಿ ಅದೇ ನಿಜವೆಂದು ನಂಬಿ ಅದನ್ನು ಶ್ರೀಗುರುಕಟಾಕ್ಷದಿಂದ ಸಂದು ಸಂಶಯವಿಲ್ಲದೆ ಅರಿವುದೇ ಅಪರೋಕ್ಷ ಜ್ಞಾನವು (೪೭-೫೦).

ಪಂಚೀಕರಣ

ಪಂಚಾಂಶ ಪಂಚೀಕೃತಿಗಳು					ಪಂಚ ಭೂತಗಳು	ಪೃಥ್ವಿ ಪಂಚಕ	ಅಪ್ಪು ಪಂಚಕ	ತೇಜ ಪಂಚಕ	ವಾಯು ಪಂಚಕ	ಆಕಾಶ ಪಂಚಕ	೨೫ ತತ್ತ್ವಗಳು
ಅಸ್ಥಿ	ತ್ವಕ್ಕು	ನಾಡಿ	ಮಾಂಸ	ರೋಮ	ಪೃಥ್ವಿ	ಪಾಯು	ಗುಹ್ಯ	ಪಾದ	ಪಾಣಿ	ವಾಕ್ಕು	೫ ಕರ್ಮೇಂದ್ರಿಯಗಳು
ಸ್ವೇದ	ಜೊಲ್ಲು	ಮೂತ್ರ	ಶುಕ್ಲ	ಶೋಣಿತ	ಅಪ್ಪು	ಗಂಧ	ರಸ	ರೂಪು	ಸ್ಪರ್ಶ	ಶಬ್ದ	೫ ವಿಷಯಗಳು
ತೃಷೆ	ನಿದ್ರೆ	ಆಲಸ್ಯ	ಸಂಗ	ಕ್ಷುತ್ತು	ತೇಜ	ನಾಶಿಕ	ಜಿಹ್ವೆ	ಅಕ್ಷಿ	ತ್ವಕ್ಕು	ಶ್ರುತಿ	೫ ಜ್ಞಾನೇಂದ್ರಿಯಗಳು
ಪರಿ	ಪಾರು	ಸುಳಿ	ಕೂಡು	ಅಗಲು	ವಾಯು	ಪ್ರಾಣ	ಅಪಾನ	ಉದಾನ	ವ್ಯಾನ	ಸಮಾನ	೫ ಪ್ರಾಣಗಳು
ಮೋಹ	ರಾಗ	ದ್ವೇಷ	ಲಜ್ಜೆ	ಭಯ	ಆಕಾಶ	ಚಿತ್ತ	ಬುದ್ಧಿ	ಅಹಂಕಾರ	ಮನ	ಜ್ಞಾನ	೫ ಅಂತಃಕರಣಗಳು

[illegible] ಪತ್ರಿಕೆ

ಕರ್ಮಜ್ಞಾನೇಂದ್ರಿಯಗಳ ಭೂತ ದೇವತೆ ವಿಷಯ ವಿಷಯಭೇದಗಳು

ವಿಷಯಭೇದ	ವಿಷಯ	ದೇವತೆ	ಜ್ಞಾನೇಂದ್ರಿಯಗಳು	ಭೂತಗಳು	ಕರ್ಮೇಂದ್ರಿಯಗಳು	ವಾಯು	ಅಧಿದೇವತೆ	ವಿಷಯ
ಸುಗಂಧ ದುರ್ಗಂಧ	ಗಂಧ	ಅಶ್ವಿನಿ	ನಾಸಿಕ	**ಪೃಥ್ವಿ**	ಪಾಯು	ಧನಂಜಯ	ಪರಮೇಷ್ಠಿ	ವಿಸರ್ಜನ
ಮಾಧುರ್ಯ ಲವಣಾದಿ ಷಡ್ರಸ	ರಸ	ವರುಣ	ಜಿಹ್ವೆ	**ಅಪ್ಪು**	ಗುಹ್ಯ	ದೇವದತ್ತ	ಮೃತ್ಯು	ಆನಂದ
ಶ್ವೇತಭಾನಾದಿ ಷಡ್ವರ್ಣಗಳು	ರೂಪು	ಅಗ್ನಿ	ಅಕ್ಷಿ	**ತೇಜ**	ಪಾದ	ಕೃಕರ	ವಿಷ್ಣು	ಗಮನಾಗಮನ
ಮೃದು ಕಠಿಣ ಶೀತ ಉಷ್ಣ	ಸ್ಪರ್ಶ	ಇಂದ್ರ	ತ್ವಕ್ಕು	**ವಾಯು**	ಪಾಣಿ	ಕೂರ್ಮ	ಇಂದ್ರ	ಆದಾನದಾನ
ಅಕ್ಷರ ಅನಕ್ಷರ	ಶಬ್ದ	ದಿಕ್ಕುಗಳು	ಶ್ರುತಿ	**ಆಕಾಶ**	ವಾಕ್ಕು	ನಾಗ	ವಾಣಿ	ಸುವಾಕ್ಯದುರ್ವಾಕ್ಯ

...ನೆಯ ಪತ್ರಿಕೆ

ದಶವಾಯುಗಳ ನಿರ್ಣಯ

ವಾಯು	ವರ್ಣ	ಸ್ಥಾನ	ಅವುಗಳ ಕ್ರಿಯೆಗಳು
ಪ್ರಾಣ	ಇಂದ್ರನೀಲ	ಹೃದಯ	ಹೆಬ್ಬೆರಳಿನಿಂದ ತಲೆಗೂದಲಿನ ವರೆಗೆ ಪ್ರಾಣಕ್ರಿಯೆ ಉಚ್ಛ್ವಾಸ ನಿಶ್ವಾಸನಾಗಿಸಿ ಅನ್ನವನ್ನು ಜೀರ್ಣಿಸುವುದು.
ಅಪಾನ	ಹರಿತ	ಗುದ	ಮಲಮೂತ್ರವಿಸರ್ಜನಗೊಳಿಸಿ ಅನ್ನರಸವನ್ನು ವ್ಯಾಪ್ತಿಗೊಳಿಸುವುದು.
ಸಮಾನ	ನೀಲ	ನಾಭಿ	ಆಪಾದಮಸ್ತಕ ಅವಯವಗಳಲ್ಲಿ ಪಸರಿಸಿ ಅನ್ನರಸವನ್ನು ರೋಮುಗಳಿಗೆ ಒಯ್ಯುವುದು.
ಉದಾನ	ಎಳೆಮಿಂಚು	ಕಂಠ	ಸೀನು ಕೆಮ್ಮು ಕನಸು ಮರವೆ ಎಬ್ಬಿಸುವ ಕೂಪ್ರಿಸುವ ವಾಂತಿಯನಿರೋಧಕ್ರಿಯೆಗಳನ್ನು ಮಾಡಿಸಿ ಇಳಿವ ಅನ್ನರಸವನ್ನು ಉತ್ಥಾಪನಗೊಳಿಸುವುದು.
ವ್ಯಾನ	ಕ್ಷೀರ	ಸರ್ವಾಂಗ ಸಂಧಿಗಳು	ಮುದುಡಿಕೊಂಡುದನ್ನು ತಿದ್ದಿ ಅಲ್ಲಲ್ಲಿ ಅನ್ನಪಾನಾದಿಗಳನ್ನು ಮುಟ್ಟಿಸುವುದು.
ನಾಗ	ಪೀತ	ರೋಮನಾಳ	ಸಿಕ್ಕಲದೆ ಪಾಡಿಸುವುದು.
ಕೂರ್ಮ	ಧವಳ	ಉದರಭಾಳ	ಕಣ್ಣು ಬಾಯಿಗಳನ್ನು ಮುಚ್ಚಿ ತೆರೆಯಿಸುವುದು, ತನುವಿಗಾಧಾರವಾಗಿಹುದು.
ಕೃಕರ	ಅಂಜನ	ನಾಸಿಕಾಗ್ರ	ಕ್ಷುದಾದಿಧರ್ಮಗಳನ್ನು ಪ್ರಕಟಿಸುವುದು, ಗಮನಾಗಮನಗಳನ್ನು ಮಾಡಿಸುವುದು.
ದೇವದತ್ತ	ಸ್ಫಟಿಕ	ಗುಹ್ಯಕಟಿದೇಶ	ಕುಳ್ಳಿರಿಸುವ ಏಳಿಸುವ ಒರಲಿ ಮಾತನಾಡಿಸುವ ಕಾರ್ಯಗಳನ್ನು ಮಾಡಿಸುವುದು.
ಧನಂಜಯ	ಉರುನೀಲ	ಬ್ರಹ್ಮರಂಧ್ರ	ಕರ್ಣಗಳಲ್ಲಿ ಶರಧಿಘೋಷವನ್ನು ಘೋಷಿಸುವುದು, ಮರಣಕಾಲಕ್ಕೆ ನಿರ್ಘೋಷಗೊಳಿಸುವುದು.

ಸಪ್ತಧಾತುಗಳ ನಿರ್ಣಯು

ಸಪ್ತಧಾತುಗಳು	ವರ್ಣ	ಉತ್ಪತ್ತಿ	ಅವುಗಳ ಕರ್ಮ
ರಸ	ಕಪಿಲ	ಪೃಥ್ವಿ	ಅಂಗವನ್ನು ಅಕ್ಕಿಸುತ್ತಿಹುದು.
ರುಧಿರ	ನೀಲ	ಅಪ್ಪು	ಅವಯುವವ ನಡುಗಿಸುತ್ತಿಹುದು.
ಮಾಂಸ	ರಕ್ತ	ಅಗ್ನಿ	ಶರೀರವನ್ನು ಕಳವಳಿಸುತ್ತಿಹುದು.
ಮೇದಸ್ಸು	ಮಾಂಜಿಷ್ಠ	ಪವನ	ಅಂಗವನ್ನು ಬೆದರಿಸುತ್ತಿಹುದು.
ಅಸ್ಥಿ	ಕೃಷ್ಣ	ಗಗನ	ಮರುಳಾಗಿ ನುಡಿಸುತ್ತಿಹುದು.
ಮಜ್ಜೆ	ತಾಮ್ರ	ಸೂರ್ಯ	ಶರೀರವನ್ನು ಒತ್ತರದೊಳೆ ಕನವರಿಸಿ ನುಡಿಸುತ್ತಿಹುದು.
ಶುಕ್ಲ	ಶ್ವೇತ	ಚಂದ್ರ	ಕಳವಳ ಕಂಪವನುಂಟುಮಾಡುತ್ತಿಹುದು.

೫೩ ದೀಕ್ಷಾವಿಧಾನದ ಸಂಧಿ

ಆ ಮೇಲೆ ಸಿದ್ಧರಾಮನು ನನಗೆ ಇನ್ನಾವ ಗತಿ ಎಂದು ಚೆನ್ನಬಸವನನ್ನು ಕೇಳಲು, ಅವನು "ನೀನು ವೀರಶೈವೋಪದೇಶವನ್ನು ಪಡೆದು ಅಷ್ಟಾವರಣವನ್ನರಿತು ನಿನ್ನ ಭವವನ್ನು ತೊಲಗಿಸು. ಈ ವೀರಶೈವವು ಖಡ್ಗಧಾರೆಯ ಮಧು, ಮಹಾಫಣಿಯ ತಲೆಯ ಮಾಣಿಕ. ಬಹಳ ಧೀರೋದ್ಧಾರಣನಿಗಲ್ಲದೆ ಆರಿಗೂ ಅಳವಡದು. ಇವರು ಎನ್ನ ತಾಯಿ ತಂದೆ ಮಕ್ಕಳು, ಇದು ಎನ್ನ ಉನ್ನತದ ಕುಲಗೋತ್ರ, ಇದು ಎನ್ನ ಧನ ಎಂಬ ಆಣವ ಮಾಯಾ ಕಾರ್ಮಿಕ ಮಲಗಳನ್ನೂ ಜಾತಿ ಜನನ ಪ್ರೇತ ನಿತ್ಯ ಉಚ್ಛಿಷ್ಟಗಳೆಂಬ ಪಂಚಸೂತಕಗಳನ್ನೂ ಕಳೆದು, ಸ್ಥಾವರ ಲಿಂಗಾದಿಗಳ ಭಜನೆ ಅರ್ಚನೆ, ಅನ್ಯತೀರ್ಥಕ್ಷೇತ್ರಯಾತ್ರೆ, ಭವಿಗಳ ಸಂಗ ಇವುಗಳನ್ನು ಬಿಟ್ಟು ಪಂಚಾಚಾರದಿಂದ ನಡೆಯಬೇಕು" ಎಂದು ಹೇಳಿದನು (೨-೮).

ಮತ್ತೆ ಶರಣರೆದುರಿಗೆ "ಭೃಂಗೀಶನ ಶಾಪದಿಂದ ಗಂಧರ್ವರಿಬ್ಬರು ಸೊನ್ನಲಿಗೆಯಲ್ಲಿ ಕುಡಿಯೊಕ್ಕಲಿಗರ ಗರ್ಭದಿಂದ ಮೊರಡಿಯ ಮುದ್ದುಗೌಡ ಸುಗ್ಗಾಯಿ ಎಂಬ ಹೆಸರಿನಿಂದ ಜನಿಸಿ ದಂಪತಿಗಳಾಗಿರಲು, ಅವರ ಉದರದಿಂದ ಪರಶಿವನ ಪ್ರತಿಬಿಂಬವೇ ಈ ಸಿದ್ಧರಾಮೇಶನೆಂಬ ಹೆಸರಿನಿಂದ ಜನಿಸಿ ಶಿವಯೋಗಿಯೆನಿಸಿದನು. ಈ ಸಿದ್ಧರಾಮನು ಶ್ರೀಶೈಲದ ಮಲ್ಲಿಕಾರ್ಜುನನನ್ನು ಸೊನ್ನಲಪುರಕ್ಕೆ ಕರೆತಂದು ಅವನನ್ನು ಪೂಜಿಸುತ್ತ ಮನ್ಮಥನನ್ನು ಗೆಲಿದು ಯಮಗೊಂಡದಲ್ಲಿದ್ದವರನ್ನು ಕೈಲಾಸಕ್ಕೊಯ್ದನು. ತನ್ನ ಹೃದಯವನ್ನು ಬಗಿದು ಬಸವೇಶನನ್ನು ತೋರಿಸಿದನು" ಎಂದು ಹೇಳಿ ಸಿದ್ಧರಾಮೇಶನ ಮಹಾತ್ಮೆಗಳನ್ನು ಕೊಂಡಾಡಿದನು. ಇದನ್ನು ಕೇಳಿ ಸಿದ್ಧರಾಮನು "ಗುರು ಚೆನ್ನಬಸವೇಶ, ನಿಮ್ಮ ಭೃತ್ಯರ ಭೃತ್ಯನೆಂದು ನನ್ನನ್ನು ಭಾವಿಸಿ ನನಗೆ ಇಷ್ಟಲಿಂಗವನ್ನು ಪಾಲಿಸು" ಎಂದು ಸಾಷ್ಟಾಂಗವೆರಗಲು, ಅಲ್ಲಮ ಬಸವ ಮೊದಲಾದ ಅಸಂಖ್ಯಾತ ಪ್ರಮಥರು "ಸಿದ್ಧರಾಮನಿಗೆ ದೀಕ್ಷೆಯನ್ನಿತ್ತು ಮೋಕ್ಷವನ್ನು ಕೊಟ್ಟು ರಕ್ಷಿಪುದು" ಎಂದರು. ಆಗ ಚೆನ್ನಬಸವನು ಸಿದ್ಧರಾಮನ ಮುಕುಟವನ್ನೆತ್ತಿದನು. ಕೂಡಲೆ ಅಲಂಕೃತವಾದ ತಂಡುಲದ ಚೌಕಮಧ್ಯವು ರಚಿತವಾಯಿತು. ಜಲಪೂರ್ಣವಾಗಿರ್ದ ಪಂಚಕಲಶಗಳನ್ನು ಸ್ಥಾಪನೆಗೆಯ್ದು ಅವುಗಳನ್ನು ಹೊಸನೂಲಿನ ಐದು ಎಳೆಗಳಿಂದ ಸುತ್ತಿ ಅಷ್ಟವಿಧಪೂಜೆಗೈದು, ಆಮೇಲೆ ಸಿದ್ಧರಾಮನು ಚೆನ್ನಬಸವೇಶನ ಆಜ್ಞೆಯಿಂದ ಭಸಿತವೀಳೆಯಗಳನ್ನು ಅಖಿಲ ಗಣಕುಲದ ಮುಂದಿರಿಸಿ ನಮಿಸಿದನು. ಬಳಿಕ ಚೆನ್ನಬಸವನು ಅವನನ್ನು ತಂಡುಲಚೌಕಮಧ್ಯದಲ್ಲಿ ಕುಳ್ಳಿರಿಸಿ, ವಿಭೂತಿಯ ಪಟ್ಟಗಟ್ಟಿ, ರುದ್ರಾಕ್ಷಿಯಿಂದಲಂಕರಿಸಿ, ಪಂಚಕಲಶಭರಿತ ಜಲವನ್ನು ದರ್ಭಾಂಕುರದಲ್ಲಿ ತಳಿದು ಅವ

ರಿಂದ ನಾಲ್ವರಾಚಾರ್ಯರೊಡನೆ ಅವನ ಶಿರಕೆ ಕಲಶಗಳನ್ನೆತ್ತಿ ಮೂರು ಸಾರೆ ಅಭಿಷೇಚನವನ್ನು ಮಾಡಿ, ಕಲಶಗಳನ್ನು ಮರಳಿ ಅವುಗಳ ಸ್ಥಳದಲ್ಲಿರಿಸಿ, ತ್ರಿವಿಧ ದೀಕ್ಷೆಗಳಿಂದ ತ್ರಿವಿಧ ಲಿಂಗಗಳನ್ನು ತ್ರಿವಿಧಾಂಗಗಳಿಗೆ ಕೊಟ್ಟು ಅವನ ತ್ರಿವಿಧ ಮಲಗಳನ್ನು ಛೇದಿಸಿದನು. ತರುವಾಯ ಸಿದ್ಧರಾಮನು ಗುರುಮುಖ್ಯ ಸಕಲಗಣನಿವಹಕ್ಕೆ ಸಾಷ್ಟಾಂಗದಿಂದೆರಗಿ ಕುಳಿತು ಕಲಶಗಳ ಇರವನ್ನು ಕೇಳಲು ಚೆನ್ನಬಸವೇಶನು ಅದನ್ನು ಹೇಳಿದನು. ಅದು ಎಂತೆಂದರೆ:-

ಪರಶಿವನು ತ್ರಿವಿಧ ಭೇದದಿಂದ ಗುರುಲಿಂಗಜಂಗಮವೆನಿಸಿ ತನ್ನ ವಿನೋದದಲ್ಲಿ ಪಂಚಸಾದಾಖ್ಯದಿಂದ ಪಂಚಕಲೆಗಳನ್ನೈದಲು, ಆ ಗುರುವು ಸದಾಶಿವ ಈಶ್ವರ ಮಹೇಶ ರುದ್ರ ಎಂಬ ನಾಲ್ವರಿಗೆ ಶಿವದೀಕ್ಷೆಯನ್ನು ಪಾಲಿಸಿದನು. ಇವರು ಆರ್ಯರಾಗಿ ಸಕಲ ಗಣಕುಲ ಹರಿ ಅಜ ಮುಂತಾದವರಿಗೆ ದೀಕ್ಷೆಯನ್ನು ಮಾಡಿದರು. ಮರ್ತ್ಯರ ಭವಬಂಧನವ ಕಳೆಯಲೆಂದು ಇವರ ಅಂಶದಿಂದ ರೇವಣಸಿದ್ಧ ಮರುಳಸಿದ್ಧ ಏಕೋರಾಮ ಪಂಡಿತಾರಾಧ್ಯ ಎಂಬುವರುದಿಸಿ ಚತುರಾಚಾರ್ಯರಾದರು (೧೯-೨೯). (೧೩೮-೯ ನೆಯ ಪುಟಗಳ ಮೇಲಿನ ಪತ್ರಿಕೆಯನ್ನು ನೋಡುವುದು). ಇವರು ಯುಗಯುಗಗಳಲ್ಲಿ ಬಂದು ಧರೆಯ ಭಕ್ತರಿಗೆ ದೀಕ್ಷೆಯನಿತ್ತು ರಕ್ಷಿಸುವರು. ಆ ವಂಶಗಳ ಹಿರಿಯರಾದ ಆಚಾರ್ಯರು ನಾಲ್ದೆಸೆಗಳಲ್ಲಿ ನಾಲ್ಕು ಕಲಶಗಳನ್ನಿರಿಸಿ, ಅವುಗಳ ಮಧ್ಯದಲ್ಲಿ ಗುರುಕಲಶವೊಂದನಿಟ್ಟು ಅದನ್ನು ಗುರುಭಾವದಿಂದ ಪೂಜಿಸಿ, ದೀಕ್ಷೆಯನ್ನು ಕೊಡುವಲ್ಲಿ ಊನರಲ್ಲದ ಹೀನಜಾತರಲ್ಲದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರುಗಳನ್ನು ಕ್ರಮವಾಗಿ ಮೂರು ಆರು ಒಂಬತ್ತು ಹನ್ನೆರಡು ವರ್ಷಗಳವರೆಗೆ ಪರೀಕ್ಷಿಸಿ ಮನದ ಪಕ್ವಾಪಕ್ವಭೇದವ ತಿಳಿದು ದೀಕ್ಷಾತ್ರಯವನ್ನು ಕೊಡುವರು (೩೦-೩೨).

ಉರುತರ ಜ್ವಲಿತ ಕಾಲಾಗ್ನಿಯ ಕಾಂತಿಯನ್ನು ಜರೆವ, ವಿದ್ಯುತ್‌ಕೋಟಿಯ ಕಾಂತಿಯನ್ನು ಹಳಿವ, ಮತ್ತು ಶಿಖಾಚಕ್ರದಲ್ಲಿ ಸೂಕ್ಷ್ಮದಿಂದ ಚಿದ್ರೂಪಿನಿಂದೆಸೆವ ಚಿತ್ಕಳೆಯನ್ನು ದೀಕ್ಷಾಗುರುವು ಭಾವಕ್ಕೆ, ಭಾವದಿಂದ ಮನಕ್ಕೆ, ಮನದಿಂದ ದೃಕ್ಕಿಗೆ, ದೃಕ್ಕಿನಿಂದ ಕರಸ್ಥಲಕ್ಕೆ ತಂದು ಶಿಷ್ಯನ ಮಸ್ತಕದಲ್ಲಿ ಹಸ್ತವನ್ನಿರಿಸಿ, ವೇಧಾದೀಕ್ಷೆಯಿಂದ ಭಾವಲಿಂಗವನ್ನು ಕಾರಣತನುವಿನಲ್ಲಿ, ಕರ್ಣದಲ್ಲಿ ಮಂತ್ರದೀಕ್ಷೆಯಿಂದ ಪ್ರಾಣಲಿಂಗವನ್ನು ಸೂಕ್ಷ್ಮತನುವಿನಲ್ಲಿ, ಮತ್ತು ಕರದಲ್ಲಿ ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವನ್ನು ಸ್ಥೂಲತನುವಿನಲ್ಲಿ ಪ್ರತಿಷ್ಠಿಸುವನು (೩೩-೩೪). ಗುರುವರನು ಲಿಂಗವನ್ನು ಕೊಡುವುದೇ "ದೀ" ಎಂಬುದು, ಮಲತ್ರಯವನ್ನು ಛೇದಿಸುವುದೇ "ಕ್ಷೆ" ಎಂಬುದು, ಇವೆರಡೂ ಕೂಡಲಾಗಿ "ದೀಕ್ಷೆ" ಯಾಯಿತು.

ಇನ್ನು ಗುರುವಿನ ಮಹಾತ್ಮೆಯನ್ನು ಕೇಳು. ಅವನು ಬ್ರಹ್ಮ-ವಿಷ್ಣು-ರುದ್ರ-ಮಹೇಶ್ವರ-ಸದಾಶಿವತತ್ತ್ವನಿಚಯದಾಕಾರನು ಪರಮಚೈತನ್ಯಾತ್ಮನು ಶಾಶ್ವತನು

ಚತುರಾಚಾರ್ಯರ

ಆಚಾರ್ಯರು	ಶಕ್ತಿ	ಮುಖ	ಜಡೆ	ದಂಡ	ಕಂಥೆ	ಆಶ್ರಮ	ಪಾತ್ರೆ	ಕುಂಡಲ
ರೇವಣಸಿದ್ಧ	ಆದಿಶಕ್ತಿ	ತತ್ಪುರುಷ	ಎಂಟುಜಡೆ	ಯೋಗದಂಡ	ಕರಿಯ ಕಂಬಳಿ ಕುಪ್ಪಸ ಕಂಥೆ	ಬ್ರಹ್ಮಚಾರಿ	ಲೋಹದ ಮುರಿಪಾತ್ರೆ	ಲೋಹದ ಕುಂಡಲ
ಮರುಳಸಿದ್ಧ	ಇಚ್ಛಾ ಶಕ್ತಿ	ಅಘೋರ	ಬಹುಶಿಖ	ಕುಠಾರದಂಡ	ಸೆರಗುಗಂಬಳಿ ಕಂಥೆ	ಸನ್ಯಾಸ	ಲೋಹದ ಎಡಮುರಿ ಪಾತ್ರೆ	ಲೋಹದ ಕುಂಡಲ
ಏಕೋರಾಮ ತಂದೆ	ಜ್ಞಾನಶಕ್ತಿ	ವಾಮದೇವ	ಐದುಜಡೆ	ಚಿತ್ರದಂಡ	ಕಾಪಿಯ ಕಂಥೆ	ವಾನಪ್ರಸ್ಥ	ತಾಮ್ರದ ಮುರಿಪಾತ್ರೆ	ತಾಮ್ರದ ಕುಂಡಲ
ಪಂಡಿತಾರಾಧ್ಯ	ಕ್ರಿಯಾಶಕ್ತಿ	ಸದ್ಯೋಜಾತ	ಏಕಶಿಖ		ಬಿಳಿಯ ಕಂಥೆ	ಗೃಹಸ್ಥ	ಬೆಳ್ಳಿಯ ಮುರಿಪಾತ್ರೆ	ಮೌಕ್ತಿಕ ಕುಂಡಲ

ಇರವಿನ ಪರಿವಿಡಿ

ಲಿಂಗ, ಅದನ್ನು ಧರಿಸಿದ ಸ್ಥಾನ	ಮಂತ್ರ	ವೇದ	ವಾಹನ	ತಪಃಸ್ಥಾನ	ಆಸನ ಗದ್ದುಗೆ	ದೀಕ್ಷಾಕಲಶ	ಇಡುವ ದಿಕ್ಕು	ದೀಕ್ಷಾಕಲಶದ ಅಲಂಕಾರದ್ರವ್ಯ
ಕರದಿನಗಲದ ಶಾಂತ ಮಲ್ಲಿಕಾರ್ಜುನಲಿಂಗ	ಪ್ರಣವ	ಋಗ್ವೇದ	ಸಿಂಹ	ನಕ್ಷತ್ರಪರ್ವತತಟದ ಕಲ್ಪವೃಕ್ಷದಡಿ	ಪದ್ಮಾಸನ ತರಕ್ಷುಚರ್ಮ	ಲೋಹಕಲಶ	ಇಂದ್ರದಿಕ್ಕು	ಪಾರಿಜಾತದ ತಳಿರು
ಯೊಳಮಕ್ಕಳ್ಕೆದೊಳೆ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗ	ಷಡಕ್ಷರಿ	ಯಜುರ್ವೇದ	ಹುಲಿ	ಕುಮಾರಾದ್ರಿಗತ ಮಂದಾರತರುತಟ	ಗೋಮುಖಾಸನ ಮೃಗಚರ್ಮ	ಲೋಹಕಲಶ	ತೆಂಕಣದಿಕ್ಕು	ದೂರ್ವಾಂಕುರಾದಿ ಕುಸುಮ
ಶಿಖಿಗೆ ಅಮರ್ದಿಪ್ಪ ಭೋಗಮಲ್ಲಿಕಾರ್ಜುನಲಿಂಗ	ಪ್ರಸಾದ ಪಂಚಾಕ್ಷರಿ	ಸಾಮವೇದ	ಮರಾಳ	ಮೇರುಗಿರಿತಟದ ವಟವೃಕ್ಷದಡಿ	ಭದ್ರಾಸನ ಕಾಷಾಂಬರ	ತಾಮ್ರಕಲಶ	ಕುಬೇರದಿಕ್ಕು	ಪೊಂಬಾಳೆ
ಕರದೊಳ್ ಅಥವಾ ಕಕ್ಷದೊಳ್ ಧರಿಸಿದ ಚೆನ್ನಮಲ್ಲಿಕಾರ್ಜುನಲಿಂಗ	ಹಂಸ ಪಂಚಾಕ್ಷರಿ	ಅಥರ್ವಣವೇದ	ಮತ್ತಗಜ	ತ್ರಿಕೂಟಾದ್ರಿಯ ಇನಿಮಾವಿನ ವೃಕ್ಷದಡಿ	ಸುಖಾಸನ ರತ್ನಗಂಬಳಿ	ಬೆಳ್ಳಿಯ ಕಲಶ	ವರುಣದಿಕ್ಕು	ನಾಗವಲ್ಲೀದಳ

ಶಾಂತನು ನಿರಂಜನನು ನಿರ್ಮಲಿನನು ನಾದ-ಬಿಂದು-ಕಳಾವ್ಯತೀತನು ಷಟ್ತ್ರಿಂಶತ್-ತತ್ತ್ವಮಾಲಾಭೂಷನು ಜ್ಞಾನಶಕ್ತಿಪ್ರಯುಕ್ತನು ನಿತ್ಯನು. ಇಂತಪ್ಪ ಗುರುವಿಗಿಂತ ಹೆಚ್ಚಿನವನು ಯಾವನೂ ಇಲ್ಲವು. "ನ ಗುರೋಂರಧಿಕವ್" ಎಂದು ಶ್ರುತಿಯಿರುವುದು.

ಇದನ್ನು ಕೇಳಿ ಸಿದ್ಧರಾಮನು "ಇಂತಪ್ಪ ಗುರುವು ನೀನೆ. ಇನ್ನು ಲಿಂಗತ್ರಯದ ಭೇದವನ್ನು ತಿಳುಹಿಸು" ಎನ್ನಲಾಗಿ ಚೆನ್ನಬಸವೇಶನು ಹೇಳಿದ್ದೇನೆಂದರೆ (೩೫-೩೬) :

ಲಿಂಗವು ನಿಷ್ಕಲದಿಂದ ಭಾವಕೆ ಗೋಚರಿಸಲು ಭಾವಲಿಂಗವೂ ಸಕಲನಿಷ್ಕಲದಿಂದ ಮನಕೆ ಗೋಚರಿಸಲು ಪ್ರಾಣಲಿಂಗವೂ ಸಕಲದಿಂದ ಕಣ್ಣಿಗೆ ಗೋಚರಿಸಲು ಇಷ್ಟಲಿಂಗವೂ ಆಗುವುದು. ಅದು ಅತ್ಯತಿಷ್ಠದ್ದಶಾಂಗುಲವು ನಿರುಪಮವು ನಿತ್ಯವು ನಿರಾಮಯವು ನಿರ್ಗುಣವು ಪಾಪರಹಿತವು ನಿರಂಜನವು ನಿರ್ದ್ವಂದ್ವವು ಅವ್ಯಕ್ತವು ಅವ್ಯಯವು ನಿಃಶೂನ್ಯವು ಸಾಕ್ಷಿರೂಪಕವು ಅಕರ್ತೃಕವು ಅಭೋಕ್ತೃಕವು ಏಕಮೇವಾದ್ವಿತೀಯಬ್ರಹ್ಮವು ಪರಕೆ ಪರಮೆನಿಸುವ ಪರಬ್ರಹ್ಮವು. ಇಂತಪ್ಪ ಲಿಂಗವನ್ನು ಅಮಳ್ಳೈಕ್ಯ ಕೊರಳು ಬಾಹು ಬಗಲು ಎದೆ ಈ ಸ್ಥಾನಗಳೊಳಗೆ ಯಾವುದಾದರೊಂದರಲ್ಲಿ ಯಾವಾಗಲೂ ಧರಿಸಬೇಕು. ನಾಭಿಯ ಕೆಳಗೆ ಧರಿಸಿದರೆ ಪಾತಕ. ಮಜ್ಜನ ಭೋಜನ ಮಲಮೂತ್ರವಿಸರ್ಜನ ನಿದ್ರೆ ಕಾಂತೆಯರ ರತಿ ರಾಜಭಯ ಇತ್ಯಾದಿ ಕಾಲಗಳಲ್ಲಿ ಲಿಂಗವನ್ನು ಸ್ವಲ್ಪವೂ ಅಂಗದಿಂದಗಲದಿರಬೇಕು. ಈ ಲಿಂಗಕ್ಕೆ ಜಂಗಮವೇ ಮುಖವು. ಜಂಗಮದ ಮುಖದಿಂದಲೇ ಲಿಂಗಕ್ಕೆ ತೃಪ್ತಿಯು. ಈ ಜಂಗಮನು ಆದಿಮಧ್ಯಾಂತವನ್ನು ಕಳೆವವನೂ ನಿತ್ಯಪರಿಪೂರ್ಣನೂ ನಿರಾಮಯನೂ ಸಗುಣನಿರ್ಗುಣನೂ ಹರಿಯಜಮುಖ್ಯರಿಂದ ಪೂಜಿತನೂ ಜನನಮರಣವರ್ಜಿತನೂ ನಾದಬಿಂದುಕಳೆಯುತನೂ ಸಕಲಭುವನಾಧಾರನೂ ಸಚ್ಚಿದಾನಂದರೂಪಕನೂ ತ್ರಿಮೂರ್ತಿಸ್ವರೂಪನೂ ತ್ರಿವಿಧತತ್ತ್ವಾತ್ಮಕನೂ ಆಗಿರುವನು (೩೭-೪೧).

೬೦ ಲಿಂಗಾರ್ಚನಾವಿಧಾನದ ಸಂಧಿ

ಲಿಂಗಾರ್ಚನೆಯ ಮಾಡುವುದಕ್ಕೆ ಪೂರ್ಣನಕ್ಷತ್ರಗಳಿರುವ ಕಾಲವು ಉತ್ತಮವಾದುದು. ಆ ನಕ್ಷತ್ರಗಳು ಹರಿಯುತ್ತಿರುವ ಕಾಲವು ಮಧ್ಯಮವು. ಸೂರ್ಯೋದಯ ಕಾಲವು ಅಧಮವು. ಆದುದರಿಂದ ಉತ್ತಮ ಕಾಲದಲ್ಲಿ ಶಿವನ ನೆನವಿನಿಂದೆದ್ದು ಪ್ರಾತರ್ವಿಧಿಗಳನ್ನು ತೀರಿಸಿ, ಖದಿರಕಡ್ಡಿಯಿಂದ ದಂತಧಾವನಗೆಯ್ದು ಲಿಂಗೋದಕ

ದಿಂದ ಮುಕ್ಕುಳಿಸಿ, ಮುಖಮಜ್ಜನಮಾಡಿ, ಮಡಿ ಬಟ್ಟೆಗಳನ್ನು ಧರಿಸಿ, ಈಶಾನದಿಕ್ಕಿನೊಳಗೆ ಶೋಭಿಸುವ ಶಿವಪೂಜಾಮಂಟಪಕ್ಕೆ ಬಂದು, ಅದನ್ನು ಸಮ್ಮಾರ್ಜನಂಗೈದು ರಂಗವಲಿಯಿಂದಲಂಕರಿಸಿ, ಶಿವಪೂಜೋಪಕರಣಂಗಳನ್ನು ಕ್ರಮದಿಂದಿರಿಸಿಕೊಂಡು, ಪದ್ಮಾಸನದಿಂದ ಮಂಡಿಸಿ, ಭಸ್ಮಸ್ನಾನ ಉದ್ಧೂಳನಗಳನ್ನು ಮಾಡಿ ತ್ರಿಪುಂಡ್ರ ರುದ್ರಾಕ್ಷಿಗಳಿಂದ ಅಲಂಕರಿಸಿಕೊಂಡು, ಶಿವಮಂತ್ರದಿಂದ ಉಪಕರಣಗಳನ್ನರ್ಚಿಸಿ ಶಿವಾರ್ಚನೆಯನ್ನು ಮಾಡಬೇಕು (೨-೪).

ಪರಶಿವನ ಪಂಚಮುಖಗಳಿಂದ ಪಂಚಭೂತಗಳೂ ಅವುಗಳಿಂದ ಪಂಚಕಲೆಗಳೂ ಆ ಕಲೆಗಳಿಂದ ಪಂಚಗೋವುಗಳೂ ಜನಿಸಿದುವು. ಈ ಗೋವುಗಳ ಗೋಮಯದಿಂದ ಪಂಚವಿಧವಾದ ಭಸಿತಗಳುಂಟಾದುವು. ಹೇಗೆಂದರೆ:

ಮುಖ	ಭೂತ	ಕಲೆ	ಗೋವು	ಈ ಗೋವುಗಳ ಗೋಮಯದಿಂದಾದದ್ದು
ಸದ್ಯೋಜಾತ	ಪೃಥ್ವಿ	ನಿವೃತ್ತಿ	ಕಪಿಲವರ್ಣದ ನಂದೆ	ಭೂತಿ
ವಾಮದೇವ	ಜಲ	ಪ್ರತಿಷ್ಠೆ	ಕೃಷ್ಣವರ್ಣದ ಭದ್ರೆ	ಭಸಿತ
ಅಘೋರ	ತೇಜ	ವಿದ್ಯೆ	ಅರುಣವರ್ಣದ ಸುರಭಿ	ಭಸ್ಮ
ತತ್ಪುರುಷ	ವಾಯು	ಶಾಂತಿ	ಶುಭ್ರವರ್ಣದ ಸುಶೀಲೆ	ಕ್ಷಾರ
ಈಶಾನ್ಯ	ಆಕಾಶ	ಶಾಂತ್ಯಾತೀತ	ಚಿತ್ರವರ್ಣದ ಸುಮನೆ	ರಕ್ಷೆ

ಇವುಗಳಲ್ಲಿ ಭೂತಿಯಿಂದ ಸಿರಿಯೂ ಭಸಿತದಿಂದ ಜ್ಞಾನವೂ ಭಸ್ಮದಿಂದ ಪಾಪಹಾರವೂ ಕ್ಷಾರದಿಂದ ಸಂಕಟಪರಿಹಾರವೂ ರಕ್ಷೆಯಿಂದ ಭಯನಾಶವೂ ಉಂಟಾಗುವುವು. ಆಹಾರವನ್ನು ಅಗಿಯದೆ [illegible] ಕರುವಿಲ್ಲದ ರೋಗಪೀಡಿತ ಶಕ್ತಿಹೀನ ವಿಕಟಶರೀರವುಳ್ಳ ಬಹುಭಕ್ಷಿ ಒಡೆಗೋಳಾದ ಅಂಗಹೀನವಾದ ಸಿಡಿಗಾರ [illegible]

ದ ಗೋವುಗಳು ಕೊಡುವ ಗೋಮಯುವನ್ನು ಬಿಟ್ಟು ಸಲಕ್ಷಣವಾದ ಗೋವುಗಳ ಗೋಮಯುವನ್ನು ಕೆಳಗೆ ಬೀಳದಂತೆ ಆಯ್ದುಕೊಂಡು, ಗ್ರಹಣ ಕಬಲಶೋಷಣ ದಹನ ಪ್ಲವ ಶೋಧನಾಭಿಮಂತ್ರಗಳಿಂದ ವಿರಚಿಸಿದ ಭಸಿತವನ್ನು ಧರಿಸಬೇಕು. ಅದು ಇಲ್ಲದಿದ್ದರೆ ಪರರಿತ್ತುದನ್ನಾದರೂ ಭಕ್ತಿಯಿಂದ ಕೈಕೊಂಡು, ಶಿರ ವದನ ಹೃದಯ ಗುಹ್ಯ ಚರಣ ಇತ್ಯಾದಿ ಸರ್ವಾಂಗಕ್ಕೆ ಈಶಾನ ತತ್ಪುರುಷ ಅಘೋರ ವಾಮದೇವ ಸದ್ಯೋಜಾತ ಕ್ರಮದಿಂದ ಪಂಚಾಕ್ಷರಿಯುಕ್ತವಾಗಿ ವಿಭೂತಿಸ್ನಾನಪರಿಶುದ್ಧನಾಗಬೇಕು (೫-೧೦).

ಬಿಸಿಲಿನಿಂದ ಕೂಡಿದ ಮಳೆಯಿಂದ ಮಾಡುವ ಸ್ನಾನವು ದಿವ್ಯಸ್ನಾನವು. ಗೋಧೂಳಿಗಾಳಿಯಿಂದ ಮಾಡುವ ಸ್ನಾನವು ವಾಯುವ್ಯ ಸ್ನಾನವು. ಜಲವಿನಿಂದ ಜಲದಿಂದ ಮಾಡುವ ಸ್ನಾನವು ವಾರುಣಸ್ನಾನವು. ಇದಕ್ಕೆ ಗಂಗಾಸ್ನಾನಕ್ಕಿಂತಲೂ ಫಲವು ಅಧಿಕ. ಈಶ್ವರಧ್ಯಾನದಿಂದ ಯುಕ್ತವಾಗಿರುವುದು ಮನಸ್ನಾನವು. ಭಸ್ಮದಿಂದ ಮಾಡುವ ಸ್ನಾನವು ಆಗ್ನೇಯ ಸ್ನಾನವು. ಈ ಸ್ನಾನಗಳಲ್ಲಿ ಆಗ್ನೇಯ ಸ್ನಾನವು ಉತ್ತಮವಾದುದು (೧೧).

ಆದುದರಿಂದ ಭಸ್ಮೋದ್ಧೂಳನವನ್ನು ಮಾಡಿ ಮಧ್ಯಮ ಅನಾಮಿಕೆ ಅಂಗುಷ್ಠಗಳಿಂದ ತ್ರಿಪುಂಡ್ರವನ್ನು ಆ ಆ ಸ್ಥಾನಗಳಲ್ಲಿ ಆ ಆ ಮಂತ್ರಗಳಿಂದ ಧರಿಸಬೇಕು. ಶಿರ ಹಣೆ ಕರ್ಣ ಚರಣದ್ವಯ ಭುಜಯುಗ ಎದೆ ನಾಭಿ ಪೃಷ್ಠ ಹೆಗಲು ಈ ಹನ್ನೊಂದು ಸ್ಥಾನಗಳಲ್ಲಿ ಕ್ರಮವಾಗಿ ಶಿವ ಮಹೇಶ್ವರ ರುದ್ರ ಶ್ರೀಕಂಠ ಶಂಭು ಈಶ ಮಹಾದೇವ ಪಶುಪತಿ ಶಂಕರ ವೃಷಭಯಾನ ಪರಮಾತ್ಮ ಈ ಮಂತ್ರಗಳಿಂದ ಭಸ್ಮವನ್ನು ಧರಿಸಬೇಕು. ತಲೆ ಹಣೆ ಕಿವಿಗಳು ಕಣ್ಣುಗಳು ಮೂಗು ಬಾಯಿ ಬಾಹುಗಳು ಭುಜಗಳು ಮೊಲೆಗಳು ಹೊಟ್ಟೆ ಮಣಿಬಂಧಗಳು ಪಾರ್ಶ್ವಗಳು ನಾಭಿ ಜನನೇಂದ್ರಿಯ ಬೆನ್ನಿನ ಮೇಲ್ಭಾಗ ಮೊಣಕಾಲುಗಳು ಜಂಘೆಗಳು ತೊಡೆಗಳು ಪಾಯು ಮತ್ತು ಪಾದಗಳು ಇವು ಮೂವತ್ತೆರಡು ವಿಭೂತಿಧರಿಸುವ ಸ್ಥಾನಗಳು. ಇವಕ್ಕೆ ಧರಿಸುವದು ಶಕ್ಯವಿಲ್ಲದಿದ್ದರೆ ಶಿರ ಹಣೆ ಕಿವಿಗಳು ಕುತ್ತಿಗೆ ಬಾಹುಗಳು ಮಣಿಬಂಧಗಳು ಹೃದಯ ಪೃಷ್ಠ ನಾಭಿ ಭುಜಗಳು ತುಟಿಗಳು ಇವು ಹದಿನಾರು ಸ್ಥಾನಗಳಿಗೆ ಧರಿಸಬೇಕು. ಇದೂ ಶಕ್ಯವಿಲ್ಲದಿದ್ದರೆ ಹಣೆ ಕುತ್ತಿಗೆ ಭುಜ ಹೃದಯ ನಾಭಿ ಅಪದಾವಳಿ ಈ ಎಂಟು ಸ್ಥಾನಗಳಿಗಾದರೂ ಧರಿಯಿಸಬೇಕು. ಭಸ್ಮದಿಂದ ಅಖಿಳ ದುಷ್ಟಗ್ರಹ ಸಿಡಿಲ ಮುಂತಾದವುಗಳ ಭಯವು ಪರಿಹಾರವಾಗುವುದು (೧೨-೧೫).

ಕಾಮಮದಮರ್ದನನು ತ್ರಿಪುರಗಳನ್ನು ನಿರ್ಧೂಮಮಾಡುವ ಕಾಲದಲ್ಲಿ ಅವನ ನಯನಜಲದಿಂದ ರುದ್ರಾಕ್ಷಿಗಳು ಹುಟ್ಟಿದುವು. ಅವುಗಳನ್ನು ಶಿಖೆಯಲ್ಲಿ ಒಂದು, ನೇತ್ರಿಯಲ್ಲಿ ಮೂರು, ಶಿರದಲ್ಲಿ ಮೂವತ್ತಾರು, ಕರಣಗಳಲ್ಲಿ ಒಂದೊಂದಕ್ಕೆ ಒಂದೊಂದು,

ಕಂಠದಲ್ಲಿ ಮೂವತ್ತೆರಡು, ರೋಮಗಳಿಗೆ ಐವತ್ತು, ಉಪವೀತಕ್ಕೆ ನೂರೆಂಟು, ಭುಜದ್ವಯಕ್ಕೆ ಹದಿನಾರು, ಮಣಿಬಂಧಕ್ಕೆ ಹನ್ನೆರಡು, ಅಕ್ಷಮಾಲೆಗೆ ನೂರೆಂಟು ಧರಿಸಬೇಕು. ಶಿರ ಕರ್ಣ ಕಂಠ ಬಾಹು ಮಣಿಬಂಧ ಇವುಗಳಿಗೆ ರುದ್ರಾಕ್ಷಿಗಳನ್ನು ಧರಿಯಿಸಲು ಕೋಟಿ ದಶಕೋಟಿ ಶತಕೋಟಿ ಸಹಸ್ರಕೋಟಿ ಅಪ್ರಮಾಣದ ಫಲವು ದೊರೆಕೊಳ್ಳುವುದು. ಇಪ್ಪತ್ತೈದು ಮಣಿಗಳುಳ್ಳ ಸರದಿಂದ ಮೋಕ್ಷವೂ ಇಪ್ಪತ್ತೆಂಟುಳ್ಳ ಸರದಿಂದ ಸೌಖ್ಯವರ್ಧನವೂ ಇಪ್ಪತ್ತೇಳುಳ್ಳ ಸರದಿಂದ ಭಕ್ತಿಯೂ ಮೂವತ್ತಾರುಳ್ಳ ಸರದಿಂದ ಪಿಡಿದರ್ಥವೂ ಮೂವತ್ತೆರಡುಳ್ಳ ಸರದಿಂದ ವಿಜಯವೂ ಹದಿನೈದುಳ್ಳ ಸರದಿಂದ ಅದ್ಭುತವನ್ನು ವ್ಯಕ್ತಗೊಳಿಸುವ ಸಾಮರ್ಥ್ಯವೂ ದೊರೆಕೊಳ್ಳುವುವು (೧೬-೧೮).

ಪರಶಿವನ ಚಿತ್ತೇ ಚಿತ್ಪ್ರಣವವು. ಅದರಿಂದ ನಾದಬಿಂದುಕಳೆಗಳೂ ಇವುಗಳಿಂದ 'ಅ'ಕಾರ 'ಉ'ಕಾರ 'ಮ'ಕಾರಗಳೂ ಇವು ಒಂದಾಗಲು 'ಓಂ'ಕಾರವೆಂಬ ಪರತತ್ತ್ವಪ್ರಣವವೂ ಆದುವು. 'ಓಂ'ಕಾರ ಪ್ರಣವದಿಂದ ತಾರಕ ದಂಡಕ ಕುಂಡಲ ಅರ್ಧೇಂದು ಬಿಂದುಗಳೆಂಬ ಪಂಚ ಲಕ್ಷಣಗಳು ಜನಿಯಿಸಿದುವು. ಈ ಪಂಚ ಲಕ್ಷಣಗಳ ಆಕಾರಗಳೇ ನ ಮ ಶಿ ವ ಯ ಕಾರಗಳು. ಇವು ತಾರಕ ಬ್ರಹ್ಮವೆನಿಪ ಚಿತ್ಪ್ರಣವದಿಂದಾದುವು. ಈ ಪಂಚಾಕ್ಷರಗಳಿಂದ ಪಂಚಸಂಜ್ಞಾಳಿಗಳು ಆದುವು. ಇವೇ ಪಂಚಸಾದಾಖ್ಯಗಳು, ಪಂಚವದನಗಳು. ಇವುಗಳಿಂದ ಪಂಚಕಲೆಗಳು ಆದುವು. ಈ ಪಂಚಕಲೆಗಳೇ ಪಂಚಶಕ್ತಿಗಳೆನಿಪುವು. ಪಂಚಶಕ್ತಿಗಳಿಂದ ಪಂಚಭೂತಗಳೂ ಅವುಗಳಿಂದ ಪಂಚವಿಂಶತಿತತ್ತ್ವಗಳೂ ಉದಯಿಸಿದುವು. ಇಂತೆಸೆವ ಪ್ರಣವಪಂಚಾಕ್ಷರೀ ಮಂತ್ರವು ಅಗಣಿತಕೋಟಿ ಮಂತ್ರಕ್ಕೆ ಮಾತೆಯು. ಇದನ್ನು ಸತತ ಜಪಿಸುವವನು ಸಾಕ್ಷಾತ್ ಶಿವನು. ಈ ಮಂತ್ರದಿಂದ ಸಕಲ ಉಪಕರಣಗಳ ಶುದ್ಧಿಯನ್ನು ಮಾಡಿ ಆಮೇಲೆ ಶಿವಪೂಜೆಯನ್ನು ಮಾಡಬೇಕು (೧೯-೨೨).

ಅರ್ಘ್ಯ ಪಾದ್ಯ ಆಚಮಾನ ಗಂಧೋದಕ ಪುಷ್ಪೋದಕ ಮಂತ್ರೋದಕ ಸ್ಪರ್ಶೋದಕ ರತ್ನೋದಕಗಳ ಅಭಿಷೇಕ ಇವುಗಳಿಂದ ಶಿವಪೂಜೆಯನ್ನು ಮಾಡಿ ಪರಮ ಪಾದೋದಕವನ್ನು ತೆಗೆದುಕೊಳ್ಳಬೇಕು (೨೩).

ಪಾದೋದಕವು ಮೂರುತೆರನಾಗಿಹುದು. ಗುರುಪಾದೋದಕವು ಕರುಣಜಲವು. ಲಿಂಗಪಾದೋದಕವು ವಿನಯಜಲವು. ಜಂಗಮಪಾದೋದಕವು ಸಮತೆ ಜಲವು. ಗುರುಲಿಂಗಜಂಗಮದ ಪಾದೋದಕಗಳಿಂದ ಸಂಚಿತ-ಆಗಾಮಿ-ಪ್ರಾರಬ್ಧ ಕರ್ಮದೋಷಗಳು ಅಳಿಯುವುವು. ಅಂದರೆ ಗುರುಪಾದೋದಕವು ಜನನದ ಅಜ್ಞಾನವನ್ನು ಕಳೆದು ಪರಮ ಸುಜ್ಞಾನವನ್ನು ಕೊಡುವುದು. ಲಿಂಗಪಾದೋದಕವು ಇಹಲೋಕಭೋಗವನ್ನು ಬಿಡಿಸಿ ಶಿವಲೋಕಪದವನ್ನು ಕೊಡುವುದು. ಜಂಗಮ

ಪಾದೋದಕವು ಭವಭವಾಂತರದಲ್ಲಿ ಬರಗೊಡದೆ ಇಹಪರಕ್ಕೆ ಎಡೆಯಾಡಗೊಡದೆ ಪರಶಿವನೊಳು ಒಂದಿಸುವುದು. ಪರಮ ಪಂಚಾಕ್ಷರೀ ಮಂತ್ರದಿಂದ ತನ್ನ ಮನೆಗೆ ತಂದ ಉದಕವೇ ಮಂತ್ರೋದಕವು. ಆ ಜಲದಿಂದ ಇಷ್ಟಲಿಂಗಕ್ಕೆ ಮಜ್ಜನಕ್ಕೆರೆದುದೇ ಪಾದೋದಕವು. ಅದನ್ನು ಲಿಂಗಕ್ಕೆ ಸಮರ್ಪಿಸಿದುದೇ ಪ್ರಸಾದೋದಕವು. ಮಂತ್ರೋದಕದಿಂದ ಪಾಕಪ್ರಯತ್ನವನ್ನು ಮಾಡಬೇಕು. ಪಾದೋದಕದಿಂದ ಮುಖಮಜ್ಜನವನ್ನು ಮಾಡಬೇಕು. ಲಿಂಗವಂತನು ಪ್ರಸಾದೋದಕವನ್ನು ಸೇವಿಸಬೇಕು. ಇವು ಲಿಂಗವಂತನಿಗೆ ಅವಶ್ಯವಾದವುಗಳು (೨೪-೨೭).

ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಇಷ್ಟಲಿಂಗವನ್ನು ಪೂಜಿಸಿ, ಮೃಷ್ಟಾನ್ನವನ್ನು ಸಮರ್ಪಿಸಿ, ಆ ಪ್ರಸಾದವನ್ನು ನಿಷ್ಠೆಯಿಂದ ಸವಿದು, ಅದರ ದ್ರವವನ್ನು ಲಿಂಗಕ್ಕೆ ಲೇಪಿಸುವುದು. ಆ ಪ್ರಸಾದವು ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂರುಬಗೆ. ಗುರುಭುಕ್ತಶೇಷವೇ ಶುದ್ಧಪ್ರಸಾದವು. ಲಿಂಗಕರ್ಪಿಸಿದುದೇ ಸಿದ್ಧಪ್ರಸಾದವು. ಜಂಗಮಭುಕ್ತಶೇಷವೇ ಪ್ರಸಿದ್ಧಪ್ರಸಾದವು (೨೮-೨೯).

ಶಿವಪೂಜೆಯು ರಾಜಸ-ತಾಮಸ-ಸಾತ್ವಿಕವೆಂದು ಮೂರು ತೆರನಾಗಿಹುದು. ವೇದಾಗಮಗಳನ್ನು ಮನ್ನಿಸದೆ ಮನಕೆ ಬಂದಂತೆ ಅರ್ಚಿಪುದು ರಾಜಸ ಪೂಜೆಯು. ವೇದಾಗಮಗಳು ಅಹುದೆಂದುದನ್ನು ಅಲ್ಲೆಂದು ಭಾವಿಸಿ ಮನಬಂದಂತೆ ಪೂಜಿಸುವುದು ತಾಮಸ ಪೂಜೆಯು. ವೇದಾಗಮೋಕ್ತಿಯಿಂದ ಭಕ್ತಿಯಿಂದ ಅರ್ಚಿಪುದು ಸಾತ್ವಿಕ ಪೂಜೆಯು. ಶಿವಪೂಜೆಯು ಶುದ್ಧ ಮಿಶ್ರ ಸಂಕೀರ್ಣವೆಂದು ಮತ್ತೊಂದು ಪ್ರಕಾರವಾಗಿಹುದು. ಲಿಂಗದಲ್ಲಿ ಶೋಭಿಸುವ ಅಖಂಡ ಪರಿಪೂರ್ಣ ತೇಜೋರಾಶಿಯೆನಿಸುವ ಶಿವನನ್ನು ಮನದಲ್ಲಿ ಭಾವಿಸಿ ಅರ್ಚಿಸುವುದೇ ಶುದ್ಧ ಪೂಜೆಯು. ಆ ಲಿಂಗದಲ್ಲಿ ಪಂಚಮುಖ ದಶಭುಜ ಹದಿನೈದುಕಣ್ಣುಗಳುಳ್ಳ ಶುದ್ಧಸ್ಫಟಿಕವರ್ಣದ ಸದಾಶಿವ ಮೂರ್ತಿಯನ್ನು ಭಾವದಿಂದ ತಿಳಿದು ಪೂಜಿಸುವುದೇ ಮಿಶ್ರಪೂಜೆಯು. ಆ ಲಿಂಗದಲ್ಲಿ ಹರಿಯಜ ಸುರೇಂದ್ರಾದಿ ದಿವಿಜರ ನಡುವೆ ಶಕ್ತಿಸಹಿತವಾಗಿ ಶೋಭಿಸುವ ಪರಮಮಹೇಶ್ವರನನ್ನು ಭಾವಿಸುತ್ತ ಅರ್ಚಿಸುವುದೇ ಸಂಕೀರ್ಣಪೂಜೆಯು. ಇದೂ ಅಲ್ಲದೆ ಆ ಪೂಜಾವಿಧಾನವು ಕರ್ಮ ಭಕ್ತಿ ಜ್ಞಾನಗಳಿಂದ ಕೂಡಿದುದಾಗಿ ಮತ್ತೊಂದು ತೆರನಾಗಿಹುದು. ವರ್ಣಾಶ್ರಮಧರ್ಮಕರ್ಮಗಳನ್ನು ಬೆರಸಿಕೊಂಡು ಫಲಪದವಿಗಳನ್ನು ಬಯಸಿ ಉಪಾಧಿಯನ್ನು ಮುಂದಿಟ್ಟುಕೊಂಡು ಪೂಜಿಸುವುದೇ ಜಡಕರ್ಮವು. ವರ್ಣಾಶ್ರಮಧರ್ಮಕರ್ಮಗಳನ್ನು ಪರಿಹರಿಸಿ ಭವಿಭಕ್ತಭೇದವನ್ನು ತಿಳಿದು ಫಲಪದಗಳನ್ನು ಬಯಸದೆ ನಿರುಪಾಧಿಯನ್ನು ಆಶ್ರಯಿಸಿ ಪೂಜಿಸುವುದೇ ಅಜಡಸದ್ಭಕ್ತಿಯು. ವರ್ಣಾಶ್ರಮಧರ್ಮಕರ್ಮಗಳನ್ನು ನೀತಿಗಳೆದು ಫಲಪದಗಳನ್ನು ಮೀರಿ ಪೂಜ್ಯಪೂಜಕವೇಕವೆಂದು ತಿಳಿದು ಸ್ವಾನುಭಾವದಿಂದ ಸಿದ್ಧನಾಗಿ

ನಿರ್ವಾಣನಿಜಪದವಿಯೆಂದು ಪೂಜಿಸುವುದೇ ಸುಜ್ಞಾನವು. ಇದೇ ಸದ್ಯೋನ್ಮುಕ್ತಿಯು (೩೦-೩೪).

ಪರಶಿವನು ಚಿತ್ತದಿಂದ ಪ್ರವೃತ್ತಿಯನ್ನು ನೆನೆಯಲು ಆ ಚಿತ್ತೇ ಚಿಚ್ಛಕ್ತಿಯಾಯಿತು. ಅದರಿಂದ ಮಹಾಲಿಂಗವೂ ಮಹಾಲಿಂಗದಿಂದ ಪಂಚಕಲೆಗಳೂ ಆದುವು. ಆ ಮಹಾ ಘನಲಿಂಗವೇ ಪರವೆಂದೂ ಗೂಢವೆಂದೂ ಶರೀರಸ್ಥವೆಂದೂ ಲಿಂಗಕ್ಷೇತ್ರವೆಂದೂ ಅನಾದಿಯೆಂದೂ ಪಂಚ ಸಂಜ್ಞೆಗಳಿಂದ ಯುಕ್ತವಾಯಿತು. ಸಕಲ ತತ್ತ್ವಗಳಿಗೆ ಪರವೆಂದು ತಾನೇ ಆ ಪರತತ್ತ್ವವಾದಕಾರಣ ಪರವಾದುದು. ತಾನೇ ಮೂರ್ತಿಯಿಲ್ಲದೆ ಸಕಲ ಮೂರ್ತಿಗಳನ್ನು ತನ್ನಿಂದಲೇ ಹುಟ್ಟಿಸಿ ತಾನು ಗೋಪ್ಯದಿಂದಿರಲು ಗೂಢವೆನಿಸಿತು. ಸಕಲ ಸಚರಾಚರಗಳನ್ನು ಸೃಜಿಸಿ ಅವಕ್ಕೆ ಆಧಾರವಾಗಲು ಶರೀರಸ್ಥವೆಂದೆನಿಸಿತು. ಕಂಗೊಳಿಸುವ ಸಕಲ ಸಚರಾಚರಗಳನ್ನು ತನ್ನಂಗದಿಂದ ಸೃಜಿಸಿ ತಾನೆ ಅವೆಲ್ಲವುಗಳ ವಿಲಯಕ್ಕೆ ಕಾರಣವಾದ ಕ್ಷೇತ್ರವೆಂದೆನಿಸುವುದರಿಂದ ಲಿಂಗಕ್ಷೇತ್ರವೆಂದೆನಿಸಿತು. ಶಿವಾದಿ ರುದ್ರಾಂತವಾದ ಅಖಿಲ ತತ್ತ್ವಗಳಿಗೆ ತಾನೇ ಅನಾದಿಯಾದುದರಿಂದ ಅನಾದಿಯೆನಿಸಿತು. ಶಾಂತಿ ಶಾಂತ್ಯಾತೀತೆ ವಿದ್ಯೆ ಪ್ರತಿಷ್ಠೆ ನಿವೃತ್ತಿ ಇವೈದು ಪಂಚಕಲಾಶಕ್ತಿಗಳು. ಈ ಪಂಚಕಲಾಶಕ್ತಿಗಳೂ ಪಂಚ ಸಂಜ್ಞೆಗಳೆನಿಸುವ ಪರಮಸಾದಾಖ್ಯಗಳೂ ಪರಶಿವನೂ ಕೂಡಿ ಹನ್ನೊಂದು ಶಿವತತ್ತ್ವವಾಯಿತು. ಈ ಹನ್ನೊಂದು ಲಿಂಗತತ್ತ್ವಗಳೂ ಇಪ್ಪತ್ತೈದು ಅಂಗತತ್ತ್ವಗಳೂ ಕೂಡಿ ಮೂವತ್ತಾರು ಲಿಂಗಾಂಗತತ್ತ್ವಗಳಾದುವು (೩೫-೪೦).

೬೧ ಷಟ್ಸ್ಥಲನಿರ್ಣಯದ ಸಂಧಿ

ಇನ್ನು ಷಟ್ಸ್ಥಲ ವಿವರವು ಎಂತೆಂದರೆ:-

ಸಚ್ಚಿದಾನಂದನೂ ಅತ್ಯತಿಸ್ವಚ್ಛನಿಷ್ಕಲನೂ ಅದ್ವಿತೀಯನೂ ಪರಬ್ರಹ್ಮನೂ ನಿರ್ಮಲನೂ ಆದ ಪರಶಿವನು ಮಹದಾದಿತತ್ತ್ವಗಳಿಗೆ ನೆಲೆಯಾಗಿ, ಪ್ರಕೃತಿ-ಪುರುಷಾತ್ಮಕದ ವಿಶ್ವಕ್ಕೆ ಲಯ-ಜನ್ಮಭೂಮಿಯೆನಿಸಿ ತಾನಿರಲು ಅದೇ ಮಹಾಸ್ಥಲವೆಂದು ಹೆಸರಾಯಿತು. ತನ್ನಲ್ಲಿ ಲೀನವಾಗಿರುವ ಚಿಚ್ಛಕ್ತಿಯು ಸ್ಫುರಣೆಗೊಂಡು ಸೇವ್ಯ ಸೇವಕ ವಿಭೇದದಿಂದ ಪರಶಿವನೇ ಲಿಂಗ-ಅಂಗವೆಂದುಭಯವಾಯಿತು. ಲಿಂಗವೇ ಸೇವ್ಯನು. ಅಂಗವೇ ಸೇವಕನು. ಆದುದರಿಂದ ಪರಶಿವನ ತತ್ತ್ವವೊಂದೇ ಲಿಂಗಸ್ಥಲ-ಅಂಗಸ್ಥಲವೆಂದು ಎರಡಾಯಿತು (೨-೩).

ಲಿಂಗತ್ವ ಅಂಗತ್ವ ಶಿವತ್ವ ಪರಮಾತ್ಮತ್ವ ಎಂಬ ಈ ಭೇದದ ಪರಿಯಾಯ

ಗುಣನಾಮದಿಂದ ಸುಸ್ಥಲವೆಂಬ ಸಂಜ್ಞೆಯ ಆ ಪರಶಿವತತ್ತ್ವವು ಎರಡಾಗಲು ಮಹಾಶಕ್ತಿಯೂ ಎರಡಾಯಿತು. ತನ್ನ ಸ್ವತಂತ್ರದಿಂದಲೂ ಪರಶಿವನ ಸಮಾನ ಧರ್ಮಗಳಿಂದಲೂ ಲಿಂಗಾಂಗವೇ ನಿಜನಿವಾಸವಾಗಿರಲು, ಲಿಂಗಸ್ಥಲವನಾಶ್ರಯಿಸಿ ಆ ಶಕ್ತಿಯು ಪರೆ ಎನಿಸಿತು, ಅಂಗಸ್ಥಲವನಾಶ್ರಯಿಸಿ ಭಕ್ತಿಯೆನಿಸಿತು. ಉರಿವ ವಹ್ನಿಜ್ವಾಲೆಯು ಭೇದವಡೆದು ವಿಸ್ಫುರಿಸಿ ತೋರುವ ಜ್ಯೋತಿಯಾದಂತೆ ಪರಶಿವನ ಪರಮ ಚಿತ್ತೇ ಶಕ್ತಿ ಭಕ್ತಿ ಎಂದು ದ್ವಿವಿಧವಾಯಿತು. ಅನಲಜ್ವಾಲೆಯು ಧೂಮದ ಆವರಣದಿಂದ ಬೆಳಗದೆ ತಮೋಮಯದೊಳಿರುವಂತೆ ಶಕ್ತಿಯು ವಾಸನೆ ವಿಡಿದಿಹುದು. ಪ್ರಕಾಶಮಯವಾದ ನಿರ್ಮಲಿನ ದೀಪಿಕೆಯಂತೆ ಹೊಳೆವ ಭಕ್ತಿಯು ನಿರ್ವಾಸನೆಯಿಂದ ಘನಸಚ್ಚಿದಾನಂದಸ್ವರೂಪಮಂಗಳವಾದುದು. ಶಕ್ತಿಯು ಪ್ರವೃತ್ತಿಪರವು, ಭಕ್ತಿಯು ನಿವೃತ್ತಿಪರವು. ಶಕ್ತಿಯು ಮಾಯಾಪ್ರಪಂಚವುಳ್ಳುದು, ಭಕ್ತಿಯು ಮಾಯಾಪ್ರಪಂಚರಹಿತವಾದುದು. ಶಕ್ತಿಯು ಪುಣ್ಯಫಲ ಪದವಿಗಳನ್ನು ಕೊಡುವುದು. ಭಕ್ತಿಯು ಶಿವನಲ್ಲಿ ಯುಕ್ತನನ್ನು ಮಾಡುವುದು. ಶಕ್ತಿಯು ಅಧೋಮುಖಿಯಾದುದು. ಭಕ್ತಿಯು ಊರ್ಧ್ವಮುಖಿಯಾದುದು. ಆದುದರಿಂದ ಭಕ್ತಿಯು ಶಕ್ತಿಯಿಂದಧಿಕವಾದುದು (೪-೭).

ಲಿಂಗಸ್ಥಲದಲ್ಲಿ ಶಿವನೆನಿಸಿಕೊಳ್ಳುತ್ತ ಆ ಶಕ್ತಿಯು ಉಪಾಸ್ಯವಾಗಿರುವುದು. ಅಂಗಸ್ಥಲದಲ್ಲಿ ಜೀವನೆನಿಸಿಕೊಳ್ಳುತ್ತ ಆ ಭಕ್ತಿಯು ಉಪಾಸಕವಾಗಿಹುದು. ಲಿಂಗಾಂಗಸ್ಥಳಗಳ ಉಭಯಸಂಗವೇ ಶಿವಜೀವೈಕ್ಯವು (೮).

ವೇದ ಮಂತ್ರ ಕ್ರಿಯೆಗಳಿಂದ ನಾದಬಿಂದುಕಲಾಸ್ವರೂಪವಾದ ಲಿಂಗವು ಭಾವಲಿಂಗ ಪ್ರಾಣಲಿಂಗ ಇಷ್ಟಲಿಂಗವೆಂದು ತ್ರಿವಿಧವಾಯಿತು. ಭಾವಲಿಂಗವು ನಿಷ್ಕಲವಾದುದು. ಪ್ರಾಣಲಿಂಗವು ಸಕಲನಿಷ್ಕಲವಾದುದು. ಇಷ್ಟಲಿಂಗವು ಸಕಲವಾದುದು. ಸದ್ರೂಪವೇ ಭಾವಲಿಂಗವು, ಮನಕೆ ಹೊಳೆವ ಚಿದ್ರೂಪವೇ ಪ್ರಾಣಲಿಂಗವು, ಕಣ್ಣಿಗೆ ಬೆಳಗುವ ಆನಂದರೂಪವೇ ಇಷ್ಟಲಿಂಗವು. 'ಅಸಿ' ಪದವೇ ಭಾವಲಿಂಗವು, 'ತ್ವಂ' ಪದವೇ ಪ್ರಾಣಲಿಂಗವು, 'ತತ್' ಪದವೇ ಇಷ್ಟಲಿಂಗವು. ಇಂತು 'ತತ್ತ್ವಮಸಿ' ಯೇ ಇಷ್ಟಪ್ರಾಣಭಾವಲಿಂಗವಾಗಿಹುದು. ಪರತತ್ತ್ವವೇ ಅಖಂಡಿತವೆನಿಸಿ ಭಾವಲಿಂಗವಾಯಿತು. ಸೂಕ್ಷ್ಮತತ್ತ್ವವೇ ಒಳಗೆನಿಸಿ ಪ್ರಾಣಲಿಂಗವಾಯಿತು. ಸ್ಥೂಲತತ್ತ್ವವೇ ಹೊರಗೆನಿಸಿ ಇಷ್ಟಲಿಂಗವಾಯಿತು (೯-೧೧).

ಭಾವಲಿಂಗವು ಮಹಾಲಿಂಗ ಪ್ರಸಾದಲಿಂಗವೆಂದೂ ಪ್ರಾಣಲಿಂಗವು ಚರಲಿಂಗ ಶಿವಲಿಂಗವೆಂದೂ ಇಷ್ಟಲಿಂಗವು ಗುರುಲಿಂಗ ಆಚಾರಲಿಂಗವೆಂದೂ ಇತ್ತೆರಗೊಂಡು ಮೂರುಲಿಂಗಗಳು ಆರುಲಿಂಗಗಳಾದುವು. ಅದರಂತೆಯೇ ಶಾಂತ್ಯತೀತೋತ್ತರ ಶಾಂತ್ಯತೀತ ಶಾಂತಿ ವಿದ್ಯೆ ಪ್ರತಿಷ್ಠೆ ನಿವೃತ್ತಿಗಳೆಂಬ ಷಡ್ವಿಧಕಳೆಗಳಿಂದ ಪರಶಿವಶಕ್ತಿಯು

ಚಿಚ್ಛಕ್ತಿ ಪರಾಶಕ್ತಿ ಆದಿಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳೆಂಬ ಷಡ್ವಿಧ ಶಕ್ತಿಯಾಯಿತು. ಈ ಚಿಚ್ಛಕ್ತಿ ಮೊದಲಾದ ಷಡ್ವಿಧ ಶಕ್ತಿಯರೊಡಗೂಡಿ ಮಹಾಲಿಂಗಾದಿ ಷಡ್ವಿಧ ಲಿಂಗಗಳು ಭಾವ ಜ್ಞಾನ ಮನ ಅಹಂಕಾರ ಬುದ್ಧಿ ಚಿತ್ತಗಳೆಂಬ ಷಡ್ವಿಧ ಕರಣಗಮ್ಯವಾಗಿ ಸೇವ್ಯವಾಗಿರುವುವು (೧೨-೧೮).

ಇನ್ನು ಸೇವಕ ವಿಭೇದದಿಂದಿದ್ದ ಆತ್ಮತತ್ತ್ವವು ತನ್ನ ಸದ್ಭಕ್ತಿಯ ವಿಚಿತ್ರದಿಂದ ತಾನೇ ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ತ್ರಿವಿಧವಾಯಿತು. ಯೋಗಾಂಗವೆಂದರೆ ಶಿವನ ಸಂಯೋಗದಿಂದಿರುವುದು. ಭೋಗಾಂಗವೆಂದರೆ ಶಿವನು ಸಹಿತವಾಗಿ ಭೋಗಿಸುವುದು. ತ್ಯಾಗಾಂಗವೆಂದರೆ ಶಿವಭಕ್ತರಲ್ಲದ ಅನ್ಯರ ಸಂಗವನ್ನು ತ್ಯಜಿಸುವುದು. ಯೋಗಾಂಗವೇ ಕಾರಣತನುವೆನಿಸುವುದು. ಭೋಗಾಂಗವೇ ಸೂಕ್ಷ್ಮತನುವೆನಿಸುವುದು. ತ್ಯಾಗಾಂಗವೇ ಸ್ಥೂಲತನುವೆನಿಸುವುದು. ಭಾವಕ್ಕೆ ಗೋಚರಿಸುವ ಯೋಗಾಂಗವೇ ಪ್ರಾಜ್ಞನು. ಮನಕ್ಕೆ ಹೊಳೆವ ಭೋಗಾಂಗವೇ ತೈಜಸನು. ಕಣ್ಗಳಿಗೆ ಸುಳಿವ ತ್ಯಾಗಾಂಗವೇ ವಿಶ್ವನು. ಯೋಗಾಂಗವು ಸುಷುಪ್ತಿಯಲ್ಲಿರುವುದು. ಭೋಗಾಂಗವು ಸ್ವಪ್ನದಲ್ಲಿರುವುದು. ತ್ಯಾಗಾಂಗವು ಜಾಗ್ರದಲ್ಲಿರುವುದು. ಯೋಗಾಂಗವೆಂಬುದೇ ಪರಮಾತ್ಮನು. ಭೋಗಾಂಗವೆಂಬುದೇ ಅಂತರಾತ್ಮನು. ತ್ಯಾಗಾಂಗವೆಂಬುದೇ ಜೀವಾತ್ಮನು. ಯೋಗ ಭೋಗ ತ್ಯಾಗವೆಂಬೀ ತ್ರಯಾಂಗವೇ ರಾಗದಿಂದೊಂದೊಂದು ವಿಲಾಸದಿಂದ ಎರಡೆರಡಾದುವು (೧೯-೨೧).

ಯೋಗಾಂಗವೇ ಐಕ್ಯ ಶರಣನೆಂದೂ ಭೋಗಾಂಗವೇ ಪ್ರಾಣಲಿಂಗಿ ಪ್ರಸಾದಿಯೆಂದೂ ತ್ಯಾಗಾಂಗವೇ ಮಹೇಶ ಭಕ್ತನೆಂದೂ ಸದ್ಭಕ್ತಿಯ ವಿಚಿತ್ರದೊಂದೆಸಕದಿಂದ ಅಂಗವೇ ಷಟ್ಸ್ಥಲವನ್ನೈದಿತು. ಬಳಿಕ ಆ ಭಕ್ತಿಯೂ ಸಹ ಮಹಾಲಿಂಗಾದಿ ಷಡ್ವಿಧ ಲಿಂಗ ಸೇವೆಗಾಗಿ ಸಮರಸ ಆನಂದ ಅನುಭವ ಅವಧಾನ ನಿಷ್ಠಾ ಸತ್ (ಶ್ರದ್ಧಾ) ಎಂದು ಆರು ತೆರನಾಯಿತು. ಇಂತು ಚಿಚ್ಛಕ್ತಿಯಿಂದ ಶಿವನೇ ಮಹಾಲಿಂಗವೆನಿಸಿ ಸಮರಸಭಕ್ತಿಯ ಯೋಗದಿಂದ ಐಕ್ಯಸ್ಥಲವಾಯಿತು. ಮಹಾಲಿಂಗವೇ ಪರಾಶಕ್ತಿಯಿಂದ ಪ್ರಸಾದಲಿಂಗವೆನಿಸಿ ಆನಂದಭಕ್ತಿಯೋಗದಿಂದ ಶರಣಸ್ಥಲವಾಯಿತು. ಪ್ರಸಾದಲಿಂಗವೇ ಆದಿಶಕ್ತಿಯಿಂದ ಜಂಗಮಲಿಂಗವೆನಿಸಿ ಅನುಭವಭಕ್ತಿಯೋಗದಿಂದ ಪ್ರಾಣಲಿಂಗಿಸ್ಥಲವಾಯಿತು. ಪ್ರಾಣಲಿಂಗವೇ ಇಚ್ಛಾಶಕ್ತಿಯಿಂದ ಶಿವಲಿಂಗವೆನಿಸಿ ಅವಧಾನಭಕ್ತಿಯ ಯೋಗದಿಂದ ಪ್ರಸಾದಿಸ್ಥಲವಾಯಿತು. ಶಿವಲಿಂಗವೇ ಜ್ಞಾನಶಕ್ತಿಯಿಂದ ಗುರುಲಿಂಗವೆನಿಸಿ ನಿಷ್ಠಾಭಕ್ತಿಯ ಯೋಗದಿಂದ ಮಹೇಶಸ್ಥಲವಾಯಿತು. ಗುರುಲಿಂಗವೇ ಕ್ರಿಯಾಶಕ್ತಿಯಿಂದ ಆಚಾರಲಿಂಗವೆನಿಸಿ ಸದ್ಭಕ್ತಿಯ (ಶ್ರದ್ಧಾ) ಯೋಗದಿಂದ ಭಕ್ತಸ್ಥಲವಾಯಿತು. ಆದುದರಿಂದ ಷಡ್ವಿಧ ಲಿಂಗದಿಂದಲೇ ಷಟ್ಸ್ಥಲವಾಯಿತು (೨೨-೨೭).

ಇಂತು ಪರಮಷಟ್ಸ್ಥಲವನಾಂತ ಅಂಗವೆನಿಪ ಆತ್ಮನಿಂದ ಗಗನವೂ ಗಗನದಿಂದ ವಾಯುವೂ ವಾಯುವಿಂದ ಅಗ್ನಿಯೂ ಅಗ್ನಿಯಿಂದ ಅಪ್ಪೂ ಅಪ್ಪುವಿಂದ ಪೃಥ್ವಿಯೂ ಆಯಿತು. ಅದರಂತೆಯೇ ಪರತತ್ತ್ವದಿಂದ ಭಾವವೂ ಭಾವದಿಂದ ಜ್ಞಾನವೂ ಜ್ಞಾನದಿಂದ ಮನವೂ ಮನದಿಂದ ಅಹಂಕಾರವೂ ಅಹಂಕಾರದಿಂದ ಬುದ್ಧಿಯೂ ಬುದ್ಧಿಯಿಂದ ಚಿತ್ತವೂ ಆಯಿತು. ಐಕ್ಯಸ್ಥಲವೇ ಆತ್ಮಾಂಗವು, ಶರಣಸ್ಥಲವೇ ಗಗನಾಂಗವು, ಪ್ರಾಣಲಿಂಗಿಸ್ಥಲವೇ ಮರುತಾಂಗವು, ಪ್ರಸಾದಿಸ್ಥಲವೇ ಅನಲಾಂಗವು. ಮಹೇಶಸ್ಥಲವೇ ಜಲಾಂಗವು, ಭಕ್ತಸ್ಥಲವೇ ಭೂಮ್ಯಂಗವು. ಇವುಗಳ ಗುಣಾಂತರ ವಿಲಕ್ಷಣಂಗಳು ಬೇರೆಬೇರೆಯಾಗಿವೆ (೨೮-೨೯).

ಇನ್ನು ಆದಿಯೊಳಗೆ ಆನು ನೀನೆಂಬುಭಯವಾಂತ ಮನಃಪ್ರಾಣದೇಹೇಂದ್ರಿಯಾದಿಗಳನಂತವು ಎನ್ನೊಳಗುದಿಸವೆಂದರಿದ ಸಮರಸವೇ ತಾನೀಗ ಐಕ್ಯಸ್ಥಲವು. ದೇಹೇಂದ್ರಿಯದ ಪರಿಯಾಯಗಳನ್ನು ತನ್ನ ರೂಪಲ್ಲೆಂದು ನಿಶ್ಚಯಿಸಿ ಅಖಿಳ ವಿಷಯವನ್ನು ಹಸನಾಗಿ ಕೂಡಿಕೊಂಡು ಆನಂದಭಕ್ತಿಯಿಂದಿರುವುದೇ ಶರಣಸ್ಥಲವು. ಪ್ರಾಣೇಂದ್ರಿಯಾದಿ ಮಮತೆ ಮೋಹ ಭ್ರಾಂತಿಗಳನಳಿದು ಪರಮ ಸಂತಸದಿಂದೆ ತತ್ತ್ವಾನುಭವದೊಳಿರ್ಪುದೇ ಪ್ರಾಣಲಿಂಗಿಸ್ಥಲವು. ಆವುದೊಂದಿಂದ್ರಿಯದ ಸುಖವು ತನುವನಾವರಿಸುವುದರಿಂದೆ ಮುನ್ನ ಲಿಂಗಕೆ ಕೊಟ್ಟು ಸಾವಧಾನದ ಭಕ್ತಿಯಿಂದ ಅದನ್ನು ಕೆಯ್ಕೊಂಬುದೇ ಪ್ರಸಾದಿಸ್ಥಲವು. ಯಾವಾಗಲೂ ವ್ರತ ನಿಯಮ ನಿತ್ಯಕರ್ಮಾದಿಗಳಿಗಸಾಧ್ಯನೆಂದು ಸದ್ಭಾವದಿಂದ ಲಿಂಗನಿಷ್ಠೆಯಿಂದ ಸುಖಮಿಪ್ಪುದೇ ಮಹೇಶಸ್ಥಲವು. ಶರೀರಪ್ರಾಣಧರ್ಮಗಳು ಅಸ್ಥಿರವೆಂದು ತಿಳಿದು ಸತ್ಕ್ರಿಯೆಗಳಿಂದ ಎಲ್ಲವನ್ನೂ ಪರಿಹರಿಸಿ ಯಾವಾಗಲೂ ಸದ್ಭಕ್ತಿಯಿಂದಿರುವುದೇ ಭಕ್ತಸ್ಥಲವು. ಇಂತಿವು ಷಡ್ವಿಧ ಅಂಗಸ್ಥಲದ ಪರಿಯಾಯ ಗುಣನಾಮಲಕ್ಷಣಗಳು (೩೦-೩೩).

ಐಕ್ಯಂಗೆ ಸದ್ಭಾವವೇ ಹಸ್ತವು, ಶರಣಂಗೆ ಸುಜ್ಞಾನವೇ ಹಸ್ತವು, ಪ್ರಾಣಲಿಂಗಿಗೆ ಸುಮನವೇ ಹಸ್ತವು, ಪ್ರಸಾದಿಗೆ ನಿರಹಂಕಾರವೇ ಹಸ್ತವು, ಮಹೇಶಂಗೆ ಸುಬುದ್ಧಿಯೇ ಹಸ್ತವು, ಭಕ್ತಂಗೆ ಸುಚಿತ್ತವೇ ಹಸ್ತವು. ಆತ್ಮಾಂಗದಲ್ಲಿ ಸದ್ಭಾವಹಸ್ತದಿಂದ ಸಮರಸಭಕ್ತಿಯೊಡಗೂಡಿ ಚಿಚ್ಛಕ್ತಿಯೊಳು ಬೆಳಗುವ ಮಹಾಲಿಂಗವನ್ನು ಧರಿಸಿ ಪೂಜಿಸುವವನೇ ಪರಮ ಲಿಂಗೈಕ್ಯನು. ಗಗನಾಂಗದಲ್ಲಿ ಸುಜ್ಞಾನಹಸ್ತದಿಂದ ಆನಂದಭಕ್ತಿಯೊಡಗೂಡಿ ಪರಶಕ್ತಿಸಮ್ಮಿಳಿತ ಪ್ರಸಾದಲಿಂಗವ ಧರಿಸಿ ಪೂಜೆಯನ್ನು ಮಾಡುವಾತನೇ ಶರಣನು. ಮರುತಾಂಗದಲ್ಲಿ ಸುಮನಹಸ್ತದಿಂದ ಅನುಭವಭಕ್ತಿಯೊಡಗೂಡಿ ಆದಿಶಕ್ತಿಯೊಳು ಬೆಸುಗೆಯಿಂದಿರ್ಪ ಚರಲಿಂಗವನ್ನು ಧರಿಸಿ ಪೂಜಿಸುವವನೇ ಪ್ರಾಣಲಿಂಗಿಯು. ಅನಲಾಂಗದಲ್ಲಿ ನಿರಹಂಕಾರಹಸ್ತದಿಂದ ಅವಧಾನ

ಭಕ್ತಿಯೊಡಗೂಡಿ ಇಚ್ಛಾಶಕ್ತಿಗೂಡಿರ್ಪ ಶಿವಲಿಂಗವನ್ನು ಧರಿಸಿ ಪೂಜಿಪಾತನೇ ಪ್ರಸಾದಿಯು. ಜಲಾಂಗದಲ್ಲಿ ಸುಬುದ್ಧಿಹಸ್ತದಿಂದ ನಿಷ್ಠಾಭಕ್ತಿಯೊಡಗೂಡಿ ಜ್ಞಾನಶಕ್ತಿಯೊಡು ಬೆರಿಸಿರ್ಪ ಗುರುಲಿಂಗವನ್ನು ಧರಿಸಿ ಪೂಜಿಸುವಾತನೇ ಮಹೇಶನು. ಭೂಮ್ಯಂಗದಲ್ಲಿ ಸುಚಿತ್ತಹಸ್ತದಿಂದ ಸತ್ (ಶ್ರದ್ಧಾ) ಭಕ್ತಿಯೊಡಗೂಡಿ ಕ್ರಿಯಾಶಕ್ತಿಯೊಡವೆರಸಿದ ಆಚಾರಲಿಂಗವನ್ನು ಧರಿಸಿ ಪೂಜಿಸುವಾತನೇ ಭಕ್ತನು.

ಇಂತು ಷಡ್ವಿಧವಾಂತ ಅಂಗಸ್ಥಲಗಳನ್ನೂ ಷಡ್ವಿಧವಾಂತ ಲಿಂಗಸ್ಥಲಗಳನ್ನೂ ಉಪಾಸ್ಯ ಉಪಾಸಕ ಸೇವ್ಯ-ಸೇವಕ ಪೂಜ್ಯ-ಪೂಜಕ ಭಾವದಿಂದ ಅಂತರಿಸದೆ ಶಕ್ತಿಯೊಡವೆರೆದ ಲಿಂಗವನ್ನು ಅಂಗದಲ್ಲಿ ತಳೆದು ತನ್ನ ಹಸ್ತಗಳಿಂದ ಭಕ್ತಿಯುತನಾಗಿ ಪೂಜಿಸುವುದು. ಇದೇ ಲಿಂಗಾಂಗಸಂಯೋಗವು. ಲಿಂಗವೇ 'ತತ್' ಪದವು, ಅಂಗವೇ 'ತ್ವಂ' ಪದವು, ಉಭಯದ ಸಂಗವೇ 'ಅಸಿ' ಪದವು. ಲಿಂಗವೇ ನಾದವು, ಅಂಗವೇ ಬಿಂದುವು, ಅವುಗಳ ಸಂಗವೇ ಚಿತ್ಕಳೆಯು. ಲಿಂಗವೇ ಪರಬ್ರಹ್ಮವು, ಅಂಗವೇ ಚಿದಾತ್ಮನು, ಸಂಗವೇ ಸಂಯೋಗವು. ಲಿಂಗವೇ ಸನ್ಮಾತ್ರವು, ಅಂಗವೇ ಚಿನ್ಮಾತ್ರವು, ಅವುಗಳ ಯೋಗವೇ ಆನಂದಮಾತ್ರವು. ಲಿಂಗವೇ ಮಂತ್ರವು, ಅಂಗವೇ ಕ್ರಿಯೆಯು, ಅವುಗಳ ಸಂಗವೇ ಲಿಂಗಾಂಗಸಂಯೋಗವು (೩೮-೪೦).

ಇನ್ನು ಹೃದಯಾಂಗದಲ್ಲಿ ಮಹಾಲಿಂಗವೂ ಶ್ರೋತ್ರಾಂಗದಲ್ಲಿ ಪ್ರಸಾದಲಿಂಗವೂ ತ್ವಗಂಗದಲ್ಲಿ ಚರಲಿಂಗವೂ ದೃಗಂಗದಲ್ಲಿ ಶಿವಲಿಂಗವೂ ಜಿಹ್ವಾಂಗದಲ್ಲಿ ಗುರುಲಿಂಗವೂ ನಾಸಿಕಾಂಗದಲ್ಲಿ ಆಚಾರಲಿಂಗವೂ ಇರುವುವು. ಜ್ಞಾನೇಂದ್ರಿಯಗಳಲ್ಲಿರುವಂತೆ ಕರ್ಮೇಂದ್ರಿಯಗಳಲ್ಲಿಯೂ ಲಿಂಗಗಳಿರುವುವು. ಮತ್ತು ಒಂದೊಂದು ಜ್ಞಾನೇಂದ್ರಿಯ ಮತ್ತು ಅದರ ವಿಷಯ, ಅದಕ್ಕೆ ಸರಿಯಾದ ಕರ್ಮೇಂದ್ರಿಯ ಮತ್ತು ಅದರ ವಿಷಯ, ಆ ಇಂದ್ರಿಯಗಳ ಭೂತ ಇಂತಿವೈದಕ್ಕೆ ಶಿವಮೂರ್ತಿಯಲ್ಲಿ ಒಂದೊಂದು ಅಧಿದೈವವು. ಆದುದರಿಂದ ಶ್ರೋತ್ರ-ವಾಕ್ಕು ತ್ವಕ್ಕು-ಪಾಣಿ ದೃಕ್ಕು-ಪಾದ ಜಿಹ್ವೆ-ಗುಹ್ಯ ನಾಸಿಕ-ಪಾಯು ಈ ಜ್ಞಾನಕರ್ಮೇಂದ್ರಿಯಗಳೆಂಬೆರಡಕ್ಕೆ ಅನುಕ್ರಮವಾಗಿ ಈಶಾನ ತತ್ಪುರುಷ ಅಘೋರ ವಾಮದೇವ ಸದ್ಯೋಜಾತವೆಂಬ ಅಧಿದೈವಗಳು.


ಜ್ಞಾನಕರ್ಮೇಂದ್ರಿಯಗಳಿಗೆ ಹೃದಯವೇ ನೆಲೆವೀಡು. ಆ ಹೃದಯಕ್ಕೆ ಹೃದಯವೂ ಶ್ರೋತ್ರಕ್ಕೆ ಶ್ರೋತ್ರವೂ ತ್ವಕ್ಕಿಗೆ ತ್ವಕ್ಕೂ ನೇತ್ರಕ್ಕೆ ನೇತ್ರವೂ ಜಿಹ್ವೆಗೆ ಜಿಹ್ವೆಯೂ ನಾಸಿಕಕ್ಕೆ ನಾಸಿಕವೂ ವಾಕ್ಕಿಗೆ ವಾಕ್ಕೂ ಪಾಣಿಗೆ ಪಾಣಿಯೂ ಪಾದಕ್ಕೆ ಪಾದವೂ ಗುಹ್ಯಕ್ಕೆ ಗುಹ್ಯವೂ ಪಾಯುಗೆ ಪಾಯುವೂ ಲಿಂಗಮುಖಗಳಾಗಿರುವುವು. ಮತ್ತು ಹೃದಯದ ಹೃದಯವೇ ಮಹಾಲಿಂಗವು, ಶ್ರೋತ್ರದ ಶ್ರೋತ್ರವೇ ಪ್ರಸಾದಲಿಂಗವು, ತ್ವಕ್ಕಿನ ತ್ವಕ್ಕೇ ಜಂಗಮಲಿಂಗವು, ನೇತ್ರದ ನೇತ್ರವೇ ಶಿವಲಿಂಗವು, ಜಿಹ್ವೆಯ ಜಿ

ಹ್ವೆಯೇ ಗುರುಲಿಂಗವು, ನಾಸಿಕದ ನಾಸಿಕವೇ ಆಚಾರಲಿಂಗವು. ಪರಿವಿಡಿಯೊಳಿಂತಿಹುದು ಪ್ರವೃತ್ತಿಮಾರ್ಗವು (೪೧-೪೬) .

ಇನ್ನು ನಿವೃತ್ತಿಮಾರ್ಗಾಭಿದಾನವುಳ್ಳ ಷಟ್ಚಕ್ರ ಭೇಧಗಳು. ಈ ಶರೀರದ ಆಧಾರ ಲಿಂಗ ನಾಭಿ ಹೃದಯ ತಾಲು ಭ್ರೂಮಧ್ಯ ಈಸ್ಥಾನಗಳಲ್ಲಿ ಕ್ರಮವಾಗಿ ೪, ೬, ೧೦, ೧೨, ೧೬, ೨ ದಳಗಳುಳ್ಳ ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆಗಳೆಂಬ ಆರುಚಕ್ರಗಳಿರುವುವು. ಇವುಗಳಲ್ಲಿ ಆಧಾರಚಕ್ರದ ದಳಗಳಲ್ಲಿ ವ ಶ ಷ ಸ, ಸ್ವಾಧಿಷ್ಠಾನ ಚಕ್ರದ ದಳಗಳಲ್ಲಿ ಬ ಭ ಮ ಯ ರ ಲ, ಮಣಿಪೂರಕ ಚಕ್ರದ ದಳಗಳಲ್ಲಿ ಡ ಢ ಣ ತ ಥ ದ ಧ ನ ಪ ಫ, ಅನಾಹತ ಚಕ್ರದ ದಳಗಳಲ್ಲಿ ಕ ಖ ಗ ಘ ಙ ಚ ಛ ಜ ಝ ಞ ಟ ಠ, ವಿಶುದ್ಧಿ ಚಕ್ರದ ದಳಗಳಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ, ಆಜ್ಞಾಚಕ್ರದ ದಳಗಳಲ್ಲಿ ಹಂ ಕ್ಷಂ ಎಂಬ ಪ್ರಣವಗಳು ನೆಲೆಸಿಡುವುವು. ಮತ್ತು ಇವುಗಳ ಮಧ್ಯದಲ್ಲಿ ಅನುಕ್ರಮವಾಗಿ ನ ಮ ಶಿ ವ ಯ ಓಂ ಎಂಬ ಪ್ರಣವಗಳು ಇರುವುವು. ಇವುಗಳೊಳಗಿನ ನಕಾರಕ್ಕೆ ಆಚಾರಲಿಂಗವೆಂತಲೂ ಮಕಾರಕ್ಕೆ ಗುರುಲಿಂಗವೆಂತಲೂ ಶಿಕಾರಕ್ಕೆ ಶಿವಲಿಂಗವೆಂತಲೂ ವಕಾರಕ್ಕೆ ಜಂಗಮಲಿಂಗವೆಂತಲೂ ಯಕಾರಕ್ಕೆ ಪ್ರಸಾದಲಿಂಗವೆಂತಲೂ ಓಂಕಾರಕ್ಕೆ ಮಹಾಲಿಂಗವೆಂತಲೂ ಸಂಜ್ಞೆಗಳು. ಇವುಗಳಿಗೆ ಷಡ್ಲಿಂಗಗಳೆನ್ನುವರು. ಮತ್ತು ಈ ಪ್ರಣವಗಳಲ್ಲಿ ಓಂಕಾರವೇ ತ್ವಕ್ಕಿನಲ್ಲಿಯೂ ನಕಾರವೇ ರುಧಿರದಲ್ಲಿಯೂ ಮಕಾರವೇ ಮಾಂಸದಲ್ಲಿಯೂ ಶಿಕಾರವೇ ಮೇದಸ್ಸಿನಲ್ಲಿಯೂ ವಕಾರವೇ ಅಸ್ಥಿಯಲ್ಲಿಯೂ ಯಕಾರವೇ ಮಜ್ಜೆಯಲ್ಲಿಯೂ ಷಡಕ್ಷರಿಗಳೇ ಶುಕ್ಲದಲ್ಲಿಯೂ ವ್ಯಾಪಿಸಿಕೊಂಡಿರುವುವು. ಇಂತೀ ಷಟ್ಚಕ್ರಭೇದಕ್ರಮಜ್ಞಾನವು ನಿವೃತ್ತಿಮಾರ್ಗವುಳ್ಳುದು. ಇದೇ ಸರ್ವಾಂಗಲಿಂಗಸಾಹಿತ್ಯವು (೪೭-೫೦). (ಮುಂದಿನ ಪುಟದ ಮೇಲಿರುವ ಷಟ್ಚಕ್ರ-ವಿವರದ ಪಟವನ್ನು ನೋಡುವುದು.)

ಇನ್ನು ಮುಂದೆ ಲಿಂಗಾರ್ಪಣವಿಧಾನವು. ಅದು ಕ್ರಿಯಾರ್ಪಣ ಜ್ಞಾನಾರ್ಪಣವೆಂದು ದ್ವಿವಿಧ. ಆತ್ಮೋಪಭೋಗಕ್ಕೆ ತಕ್ಕ ದ್ರವ್ಯವು ತಾನೆ ಬರಲು ಅದನ್ನರ್ಪಣಗೆಯ್ಯುವುದೇ ಕ್ರಿಯಾರ್ಪಣವು. ಅದು ಸ್ಥೂಲದ್ರವ್ಯಾರ್ಪಣ ಸೂಕ್ಷ್ಮದ್ರವ್ಯಾರ್ಪಣ ಆನಂದದ್ರವ್ಯಾರ್ಪಣವೆಂದು ಮೂರು ತೆರನಾಗಿಹುದು. ಸ್ಥೂಲದ್ರವ್ಯವೇ ರೂಪು, ಸೂಕ್ಷ್ಮದ್ರವ್ಯವೇ ರುಚಿ, ಆನಂದದ್ರವ್ಯವೇ ತೃಪ್ತಿ. ಸ್ಥೂಲದ್ರವ್ಯದ ರೂಪವನ್ನು ಇಷ್ಟಲಿಂಗಾರ್ಪಣವ ಮಾಡುವಾತನೆ ವಿಶ್ವನು. ಸೂಕ್ಷ್ಮದ್ರವ್ಯದ ರುಚಿಯನ್ನು ಪ್ರಾಣಲಿಂಗಕರ್ಪಿಸುವಾತನೆ ತೈಜಸನು. ಆನಂದದ್ರವ್ಯದ ತೃಪ್ತಿಯನ್ನು ಭಾವಲಿಂಗಾರ್ಪಣವ ಮಾಳ್ಪನೇ ಪ್ರಾಜ್ಞನು. ಇಷ್ಟಲಿಂಗದ ಪ್ರಸಾದವೇ ಶುದ್ಧಪ್ರಸಾದವು. ಪ್ರಾಣಲಿಂಗದ ಪ್ರಸಾದವೇ ಸಿದ್ಧಪ್ರಸಾದವು. ಭಾವಲಿಂಗದ ಪ್ರಸಾದವೇ ಪ್ರಸಿದ್ಧ

ಷಟ್ಚಕ್ರ-ವಿವರ.



ಪ್ರಸಾದವು. ವಿಶ್ವ ತೈಜಸ ಪ್ರಾಜ್ಞರು ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಗಳು. ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ ಪರಮಾತ್ಮನೆ ತ್ರಿವಿಧ ಭೇದದಿಂದ ತ್ರಿವಿಧ ಲಿಂಗಾರ್ಪಿತಪ್ರ ಸಾದಭೋಗೋಪಭೋಗದಲ್ಲಿ ಸಂತುಷ್ಟನಾಗಿ ಪರಮ ಸುಖದಿಂದ ನಿರ್ಲೇಪನಾಗಿ ತಾನಿರುವನು. ಈದೇ ಕ್ರಿಯಾರ್ಪಣವು (೫೧-೫೪).

ಸರ್ವೇಂದ್ರಿಯಂಗಳ ಮುಖಂಗಳಿಗೆ ಬರುತ್ತಿರ್ಪ ಸಕಲದ್ರವ್ಯಗಳನ್ನು ಷಡ್ವಿಧಾ ತ್ಮಾಂಗರೂಪಿನಿಂದ ಷಡ್ವಿಧಲಿಂಗಮುಖದಿಂದರ್ಪಿಸಿ ತತ್ಪ್ರಸಾದವನ್ನು ನಿರಂತರ ಅರ್ಪಿ ಸಬೇಕು. ಇದು ಸುಜ್ಞಾನಾರ್ಪಣವು. ಅದರ ವಿವರವೆಂತೆಂದೊಡೆ:-

ಗಂಧ ರಸ ರೂಪು ಸ್ಪರ್ಶ ಶಬ್ದ ಪರಿಣಾಮ ಇವು ಷಡ್ವಿಷಯಗಳು. ಇವುಗ ಳಿಗೆ ಷಟ್ಪದಾರ್ಥಗಳೆಂದು ಸಂಜ್ಞೆ. ಇವುಗಳಲ್ಲಿ ಗಂಧವೇ ಪರಿಮಳಾದಿ ಪದಾರ್ಥವು, ರಸವೇ ಮಧುರಾದಿ ಪದಾರ್ಥವು, ರೂಪವೇ ವರ್ಣಪದಾರ್ಥವು, ಸ್ಪರ್ಶವೇ ಮೃ ದುವಾದಿ ಪದಾರ್ಥವು, ಶಬ್ದವೇ ನಾದಪದಾರ್ಥವು, ಪರಿಣಾಮವೇ ಸುಖಪದಾ ರ್ಥವು. ಇಂತೀ ಪರಿಯ ನಾನಾಪದಾರ್ಥಗಳಲ್ಲಿ ಬೆರಸಿ ಲಿಂಗಾರ್ಪಣಮಾಡಿ ಸುಪ್ರ ಸಾದವನ್ನು ಭೋಗಿಸಬೇಕು. ಸದ್ಭಕ್ತಿ (ಶ್ರದ್ಧಾಭಕ್ತಿ) ಯುತನಾದ ಭಕ್ತನು ತನ್ನ ಧರಣಿಯಂಗದಿಂದ ಕ್ರಿಯಾಶಕ್ತಿಸಂಯುಕ್ತವಾಗಿರುತಿಹ ಸದಾಚಾರಲಿಂಗದ ನಾಸಿ ಕಮುಖದಲ್ಲಿ ಚಿತ್ತಹಸ್ತದಿಂದ ಚಂದನಾದಿ ನಾನಾಪರಿಮಳಂಗಳನ್ನರ್ಪಿಸಿ ಸುಗಂಧ ಪ್ರಸಾದವನ್ನು ಭೋಗಿಸುವನು. ನಿಷ್ಠಾಭಕ್ತಿಯುತ ಮಹೇಶನು ವಾರಿಯಂಗದಿಂದ ಜ್ಞಾನಶಕ್ತಿಯುತಗುರುಲಿಂಗದ ರಸನಮುಖದಲ್ಲಿ ಸುಬುದ್ಧಿಹಸ್ತದಿಂದ ಮಧುರಾದಿ ಷಡ್ರಸಪದಾರ್ಥವನ್ನು ಸಮರ್ಪಿಸಿ ತತ್ಪ್ರಸಾದವನ್ನುಪಭೋಗಿಸುವನು. ಅವಧಾನ ಭಕ್ತಿಸಂಯುತ ಪ್ರಸಾದಿಯು ತನ್ನ ಅಗ್ನಿಯಂಗದಿಂದ ಇಚ್ಛಾಶಕ್ತಿಯೊಡನಿರ್ಪ ಶಿವ ಲಿಂಗದ ನೇತ್ರಮುಖದಲ್ಲಿ ನಿರಹಂಕಾರಹಸ್ತದಿಂದ ಶ್ವೇತಾದಿ ಷಡ್ವರ್ಣದ್ರವ್ಯವನ್ನ ರ್ಪಿಸಿ ತತ್ಪ್ರಸಾದವನ್ನು ಸವಿವನು. ಅನುಭಾವಭಕ್ತಿಯಿಂದ ಕೂಡಿಕೊಂಡಿರ್ಪ ಪ್ರಾಣಲಿಂಗಿಯು ತನ್ನ ಮರುತಾಂಗದಿಂದ ಆದಿಶಕ್ತಿಸಂಯುತವಾದ ಚರಲಿಂಗದ ತ್ವ ಙ್ಮುಖದಲ್ಲಿ ಸುಮನಹಸ್ತದಿಂದ ಮೃದುವಾದಿ ಸ್ಪರ್ಶನಪದಾರ್ಥವನ್ನರ್ಪಿಸಿ ತತ್ಪ್ರ ಸಾದವನ್ನು ಭೋಗಿಸುವನು. ಆನಂದಭಕ್ತಿಸಂಯುತನಾದ ಶರಣನು ವ್ಯೋ ಮಾಂಗದಿಂದ ಪರಾಶಕ್ತಿಯೊಡನಿರುವ ಪ್ರಸಾದಲಿಂಗದ ಶ್ರೋತ್ರಮುಖದಲ್ಲಿ ಸುಜ್ಞಾ ನಹಸ್ತದಿಂದ ಸುನಾದದ್ರವ್ಯವನ್ನು ಸಮರ್ಪಿಸಿ ತತ್ಪ್ರಸಾದವನ್ನು ಸೇವಿಸುತ್ತಿರುವನು. ಸಮರಸಭಕ್ತಿಯುತನಾದ ಐಕ್ಯನು ತನ್ನ ಆತ್ಮಾಂಗದಿಂದ ಚಿಚ್ಛಕ್ತಿಸಂಯುತ ಮ ಹಾಲಿಂಗದ ಹೃನ್ಮುಖದಲ್ಲಿ ಸದ್ಭಾವಹಸ್ತದಿಂದ ಪರಿಣಾಮಪದಾರ್ಥವನ್ನರ್ಪಿಸಿ ಬಳಿಕ ತತ್ಪ್ರಸಾದವನ್ನು ಭೋಗಿಸುವನು (೫೫-೬೩).

ಇಂತೊಪ್ಪುವ ಅಂಗವೂ ಲಿಂಗವೂ, ಸದ್ಭಕ್ತಿಯೂ ಶಕ್ತಿಯೂ, ವದನವೂ

ಹಸ್ತವೂ, ಅರ್ಪಿತವೂ ಪ್ರಸಾದವೂ ಎಂಟುತರದಿಂದ ಪ್ರತಿಯೊಂದು ಸ್ಥಲದಲ್ಲಿರುತ್ತಿ
ಪ್ಪುವು. ಸತ್ತೇ ಅಂಗ ಲಿಂಗವೆಂದೆರಡಾಯಿತು, ಚಿತ್ತೇ ಶಕ್ತಿ ಭಕ್ತಿಯೆಂದೆರಡಾಯಿ
ತು. ಆನಂದವೇ ಸಮರ್ಪಣ ತತ್ಪ್ರಸಾದವೆಂದೆರಡಾಯಿತು. ಹೀಗೆ ಸಚ್ಚಿದಾನಂದ
ಲಕ್ಷಣವೇ ತತ್ತ್ವತ್ರಯವು. ಅದೇ ಷಟ್ಸ್ಥಲವು. ಇಂತು ಪರಶಿವನೇ ಷಡ್ವಿ
ಧಲಿಂಗವಾಗಲು ಆ ಪರಮಾತ್ಮನೇ ಷಡ್ವಿಧಾಂಗವನ್ನು ತಳೆದು ಸರ್ವಾಂಗಲಿಂಗಿ
ಯಾಗಿರುತ್ತ ಸರ್ವೇಂದ್ರಿಯಪದಾರ್ಥಗಳನ್ನು ಷಡ್ವಿಧಲಿಂಗಮುಖದಿಂದರ್ಪಿಸಿ ತತ್ಪ್ರ
ಸಾದವನ್ನು ಸೇವಿಸುತ್ತಿರುವನು (೫೫-೬೬).

ಪರಶಿವನೇ ಲಿಂಗವು, ಪರಮಾತ್ಮನೇ ಅಂಗವು, ಇವೆರಡರೊಳು ತೆರಹಿಲ್ಲದಿರ್ಪು
ದೇ ಸಂಯೋಗವು. ಸಂಯೋಗವೇ ಸದ್ಭಕ್ತಿಯೆನಿಸಿತು. ಅದರಿಂದಾಯಿತು ಭಕ್ತಿ
ಸ್ಥಲವು. ಭಕ್ತನು ಆಚಾರಲಿಂಗಸಂಯೋಗದಿಂದ ಸದ್ಭಕ್ತಿಯಿಂದಿರುತಿರ್ಪ ನಿಷ್ಠೆ
ಯೇ ನಿಷ್ಠಾಭಕ್ತಿಯು. ನಿಷ್ಠಾಭಕ್ತಿಯಿಂದ ಆತ್ಮನಿಗೆ ಮಾಹೇಶ್ವರ ಸ್ಥಲವಾಯಿತು.
ಮಹೇಶನು ಗುರುಲಿಂಗಸಂಗದಿಂದಿರ್ಪ ನಿಷ್ಠಾಭಕ್ತಿಯ ಅವಧಾನವೇ ಅವಧಾನಭಕ್ತಿ
ಯು. ಅವಧಾನ ಭಕ್ತಿಯುದೆಸೆಯಿಂದ ಪ್ರಸಾದಿಸ್ಥಲವಾಯಿತು. ಪ್ರಸಾದಿಯು ಶಿವ
ಲಿಂಗಯೋಗದಿಂದಿರುವ ಅವಧಾನಭಕ್ತಿಯೇ ಅನುಭವಭಕ್ತಿಯು. ಆ ಭಕ್ತಿಯಿಂದ
ಅಳವಟ್ಟುದೇ ಪ್ರಾಣಲಿಂಗಿಸ್ಥಲವಾಯಿತು. ಪ್ರಾಣಲಿಂಗಿಯು ಜಂಗಮಲಿಂಗ
ಸಂಯೋಗದಿಂದಿರ್ಪ ಪರಮಾನುಭವದ ಆನಂದವೇ ಆನಂದಭಕ್ತಿಯು. ಅದರಿಂದ
ಶರಣಸ್ಥಲವಾಯಿತು. ಶರಣನು ಪ್ರಸಾದಲಿಂಗದ ಯೋಗದಿಂದಿಹ ಸದಾನಂದ ಸಮ
ರಸವೇ ಸಮರಸಭಕ್ತಿಯು. ಆ ಭಕ್ತಿಯಿಂದ ಐಕ್ಯಸ್ಥಲವಾಯಿತು. ಐಕ್ಯನು ಮ
ಹಾಲಿಂಗಸಂಯೋಗದಿಂದೈಕ್ಯವಾಗಲು ಅವನಿಂದ ಪರವಿಲ್ಲವಾಗಿ ಸಮರಸಭಕ್ತಿಯು
ಆತನಲ್ಲಿರುತೆ ಸಮರಸವಾಗಿ ನಿಶ್ಶಬ್ದವಾಯಿತು (೬೭-೭೦).

ಚಂದ್ರ ಮತ್ತು ಅದರ ಬೆಳ್ದಿಂಗಳು, ಆಕಾಶ ಮತ್ತು ಅದರಲ್ಲಿಯ ವಾಯು,
ಕುಸುಮ ಮತ್ತು ಅದರೊಳಗಿನ ಕಂಪು, ಆಣೆಕಲ್ಲು ಮತ್ತು ಅದರೊಳಗಿನ ನೀರು,
ಶಬ್ದ ಮತ್ತು ಅದರ ಅರ್ಥ, ದೀಪ ಮತ್ತು ಅದರ ಬೆಳಕು, ರತ್ನ ಮತ್ತು ಅದರ
ಕಾಂತಿ, ರಸ ಮತ್ತು ಅದರ ರುಚಿ ಇವು ಬೇರೆ ಬೇರೆ ಎಂದು ತೋರಿದರೂ ಒಂದ
ರಿಂದೊಂದನ್ನು ಹೇಗೆ ಬೇರ್ಪಡಿಸಲಾಗುವುದಿಲ್ಲವೋ ಹಾಗೆಯೇ ಲಿಂಗಾಂಗದ
ಸಂಯೋಗವು. ಹಾಗೆ ತೋರಿ ಅಂಗಲಿಂಗವೆಂಬ ಉಭಯವಳಿದು ಏಕವಾಹುದೇ
ಐಕ್ಯಸ್ಥಲವು. ಲಿಂಗಾಂಗದ ಸಂಗವೇ ಯೋಗವು, ಸಂಯೋಗವೇ ನಿವೃತ್ತಿಯು. ನಿ
ವೃತ್ತಿಯೇ ಅದ್ವೈತವು, ಅದ್ವೈತವೆಂದರೆ ಐಕ್ಯವು, ಐಕ್ಯವೇ ಸಾಯುಜ್ಯವು, ಸಾ
ಯುಜ್ಯವೇ ವಿಶ್ರಾಂತಿಯು, ವಿಶ್ರಾಂತಿಯೇ ಪರಮ ಪದವು, ಆ ಪರಮ ಪದದಿಂದ
ಬೇರೆ ಮುಕ್ತಿಯಿಲ್ಲವು. ಇಂತು ಭಕ್ತಾದಿ ಐಕ್ಯಾಂತವಾದ ಆತ್ಮನೇ ಆಚಾರಲಿಂಗಾದಿ

ಮಹಾಲಿಂಗಾಂತವಾದ ಷಡ್ವಿಧಲಿಂಗವನ್ನು ಷಡ್ವಿಧಾಂಗದಿಂದ ತಳೆದು ಐಕ್ಯದ ನಿಜ ಪದವಿಯನ್ನು ಹೊಂದಬೇಕು. ಇದು ಷಟ್ಸ್ಥಲಬ್ರಹ್ಮದಾಚರಣೆಯ ಮಾರ್ಗವು. ಇದನ್ನು ನೀನು ತಿಳಿವುದು.

ಈ ರೀತಿ ಚೆನ್ನಬಸವೇಶ್ವರನು ಸಿದ್ಧರಾಮೇಶನಿಗೆ ಅಖಿಳ ಶರಣರು ತಿಳಿಯುವಂತೆ ನಿರವಿಸಿದನು (೭೧-೭೩).

೬೨ ಕಾಲಜ್ಞಾನದ ಸಂಧಿ

"ಇಂತು ಪೇಳ್ದ ಷಟ್ಸ್ಥಲವನು ತಿಳಿದು ನಿಮ್ಮ ಕರುಣದಿಂದ ಭವಭವಾಂತರ ವನತಿಗಳೆದು ಸದ್ಯೋನ್ಮುಕ್ತನಾದೆನು" ಎಂದು ಸಿದ್ಧರಾಮನು ಚೆನ್ನಬಸವನನ್ನು ನುತಿಸುತ್ತಿರಲು, ಪ್ರಭುವು "ಸಿದ್ಧರಾಮ, ನೀನು ಬಂದುದಕ್ಕೆ ಫಲವಾಯಿತು, ನಾವಿನ್ನು ಹೋಗಿ ಬರುವೆವು" ಎಂದು ಅಂದನು. ಸಿದ್ಧರಾಮನು ಅಲ್ಲಮನಿಗೆರಗಿ ಅವನನ್ನು ಕೊಂಡಾಡಿದನು. ಚೆನ್ನಬಸವನು ಪ್ರಭುಮೊದಲಾದ ಪ್ರಮಥಕುಲವನ್ನು ತನ್ನ ಮಂದಿರಕ್ಕೆ ಕರೆದೊಯ್ದು ಮೃಷ್ಟಾನ್ನದಿಂದ ಎಲ್ಲರನ್ನು ತುಷ್ಟಿಪಡಿಸಿದನು. ಆಗ ಅಲ್ಲಮನು ಬಸವ ಮೊದಲಾದ ಗಣಸಂಕುಲಕ್ಕೆ "ಚೆನ್ನಬಸವನು ಹೇಳಿದ ಷಟ್ಸ್ಥಲಸುಮಾರ್ಗವನ್ನು ಚೆನ್ನಾಗಿ ತಿಳಿದುಕೊಂಡಿರಿ. ನಾವು ತಿರುಗಿ ಬಂದು ನೀವು ಸಂಪಾದನೆ ಮಾಡಿದುದನ್ನು ನೋಡಿ ನಿಮ್ಮನ್ನು ಮುಕ್ತಿಯೊಳಗೆ ಇಂಬಿಟ್ಟು ಪೋಗುವೆವು, ಇದು ಸತ್ಯ" ಎಂದು ನಂಬುಗೆಯನ್ನು ಕೊಟ್ಟು, ಬಸವ ಚೆನ್ನಬಸವ ಸಿದ್ಧರಾಮ ಮೊದಲಾದವರನ್ನು ನಿಲಿಸಿ, ತಾನು ಅವರನ್ನು ಬೀಳುಕೊಂಡನು (೨-೪).

ಇತ್ತ ತನಗಿನ್ನಾವ ಬುದ್ಧಿ ಎಂದು ಸಿದ್ಧರಾಮನು ಚೆನ್ನಬಸವನನ್ನು ಬೇಡಿಕೊಳ್ಳಲು, ನೀನು ಸೊನ್ನಲಾಪುರದಲ್ಲಿ ನಿಜಸಮಾಧಿಯೊಳಿರು ಎಂದು ಹೇಳಿದನು. ಆಗ ಮುಂದಾಗುವುದನ್ನು ಹೇಳಿ ತನ್ನನ್ನು ಉದ್ಧರಿಸಬೇಕೆಂದು ಸಿದ್ಧರಾಮನು ಬಿನ್ನವಿಸಿಕೊಂಡನು. ಅದಕ್ಕೆ ಚೆನ್ನಬಸವನು ಇಂತೆಂದನು (೫):

ಅಲ್ಲಮಪ್ರಭುವು ಇನ್ನು ಮೇಲೆ ಅಖಿಳದೇಶವನ್ನು ಚರಿಸಿ ಪಾವನಮಾಡಿ ಶಿವಭಕ್ತರ ಇಷ್ಟವನ್ನು ಪಾಲಿಸುತ್ತ ತಿಗುಳ ದೇಶಕ್ಕೆ ಹೋಗುವನು. ಆಮೇಲೆ ಕಂಚಿ ಕಾಳಹಸ್ತಿ ಪೊನ್ನಾಂಬಲ ಅರುಣಾಚಲ ಕುಂಭಕೋಣ ರಾಮೇಶ್ವರ ಗೋಕರ್ಣ ಸೌರಾಷ್ಟ್ರ ಕಾಶಿ ಕೇತಾರಾದಿ ತೀರ್ಥಗಳನ್ನು ಕರುಣದಿಂದ ನೋಡಿ, ಹಿಮಗಿರಿಯನ್ನು ದಾಟಿ ತಿರುಗಿ ಬಂದು, ಸಪಾಲಕ್ಷ ಪರ್ವತದಲ್ಲಿದ್ದ ಮುನಿಗಳಿಗೆ ತತ್ತ್ವವನ್ನು ತಿಳಿಸಿ ಮುಕ್ತಿಯನ್ನು ಕೊಡುವನು. ಆ ಬಳಿಕ ಗಿರಿ ಗುಹಾಂತರಗಳಲ್ಲಿ ಯೋಗಿಗಳನ್ನು

ಅಧಿಕವಾದ ರಾಜಯೋಗದಿಂದ ತನ್ನ ನಿಜವನ್ನು ತಾನೇ ಜಾನಿಸುತ್ತ ಹನ್ನೆರಡು ವರುಷವಿರುವನು.

ಅಷ್ಟು ಹೊತ್ತಿನವರೆಗೂ ಬಸವಣ್ಣನು ಕಾಯ್ದುಕೊಂಡಿರುವ ಶೂನ್ಯಪೀಠವನ್ನು ಅಲ್ಲಮನರಿದು ಮನೋವೇಗದಿಂದ ಇಲ್ಲಿಗೆ ಬರುವನು. ಅದನ್ನು ತಿಳಿದು ಬಸವಣ್ಣನು ಈ ಶರಣರೆಲ್ಲರ ಸಹಿತನಾಗಿ ಇದಿರ್ಗೊಂಡು ಕರೆತರಲು ಪ್ರಭುವು ಶೂನ್ಯಪೀಠವನ್ನೇರುವನು. ಅಲ್ಲಿದ್ದ ಚರಪತಿಗಳು ಅವನ್ನು ಕಂಡು ಕಡು ಮುಳಿದು ಹೊರಟುಹೋಗುವರು. ಈ ಬಸವರಾಜನು ತಲ್ಲಣಂಗೊಂಡು ಇದನ್ನು ಪ್ರಭುರಾಯನಿಗೆ ಬಿನ್ನವಿಸುವನು. ಆಗ ಅಲ್ಲಮನು ಬಸವನಿಗೆ “ ಭಯಪಡಬೇಡ, ಘನಚರಲಿಂಗಕೆ ಈಗ ನೀನು ಮಾಡಿಸಿದ ಪರಿಕರವನೆಲ್ಲವನ್ನೂ ತರಿಸಿ ನಮಗೆ ನೀಡಿಸು, ಆರೋಗಿಸುವೆವು ” ಎಂದು ನುಡಿಯುವನು. ಅಂತೆಯೇ ಲಕ್ಕದ ಮೇಲೆ ತೊಂಬತ್ತಾರು ಸಾವಿರದ ಗಣಂಗಳಿಗೆ ಮಾಡಿಸಿದ ಪರಿಕರಗಳನ್ನು ತರಿಸಿ ನೀಡಿಸುತ್ತಿರಲು, ಗಗನವೇ ಬಾಯ್ದೆರೆದಂತೆ ಅಲ್ಲಮನು ಅದೆಲ್ಲವನ್ನು ಸಲಿಸುವನು. ಶಿವೆಯು ಮಾಡಿ ನೀಡಿದುದನ್ನಂ ಗುಪ್ತಗಣನಾಥನು ಓರ್ವನೇ ಆರೋಗಿಸೆ ಅಸಂಖ್ಯಾತಗಣಕುಲವೆಲ್ಲ ತೃಪ್ತಿಯಾದಂತೆ, ನಿರ್ಮಾಯಗಣನಾಥನೆನಿಸಿದ ಅಲ್ಲಮನು ಒಬ್ಬನೇ ಆರೋಗಿಸಲು ಮುಳಿದೆದ್ದು ಹೋದ ಚರರೆಲ್ಲರಿಗೆ ತೃಪ್ತಿಯಾಗುವುದು. ಆಗ ಬಸವನು ಆ ಚರರೆಲ್ಲರನ್ನು ತನ್ನ ಮನೆಗೆ ಕರೆತಂದು ಅವರು ಬೇಡಿದಿಷ್ಟಗಳನ್ನು ಕೊಟ್ಟು ಕಳುಹುವನು. ಆ ಮೇಲೆ ಅಲ್ಲಮನು ಬಸವನಿಗೂ ಗಣಕುಲಕ್ಕೂ “ ನಿಮ್ಮ ಹೃದಯದನುಭಾವದ ಐಕ್ಯಸ್ಥಲವ ಪೇಳಿರಿ ” ಎಂದು ಕೇಳುವನು. ಅವರು ಬಿನ್ನವಿಸಿದ ಐಕ್ಯಸ್ಥಳಗಳ ವಿವರಗಳನ್ನು ಕೇಳಿ ಮೆಚ್ಚಿ, “ ನಿಮಗೆ ಐಕ್ಯಪದವಿ ಚೆಂದದಿಂದ ಅಳವಟ್ಟುದು ” ಎಂದು ಅಂದು ನಿರವಯವಾಗುವ ಅಂದವನ್ನು ಕರುಣಿಸಿ ಎಮ್ಮನು ಬೀಳ್ಕೊಂಡು ಶ್ರೀಶೈಲಕ್ಕೆ ಹೋಗುವನು. ಅಲ್ಲಿ ಗೋರಕ್ಷ ಮೊದಲಾದ ಯೋಗಿಗಳ ಮನದಿಷ್ಟವನ್ನು ಕೊಟ್ಟು, ಮಹದೇವಿಯಕ್ಕಗೆ ನಿರ್ವಾಣಪದವಿಯನ್ನಿತ್ತು ಕದಳಿಯನ್ನು ಹೊಕ್ಕು ಶಿವಯೋಗದಿಂದ ನಿರವಯವನೈದುವನು (೬-೧೭).

ಅದನ್ನು ತಿಳಿದು ಶಾಲಿವಾಹನ ಶಕದ ೭೦೭ನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ಮಂಗಳವಾರ ಉದಯಕಾಲದ ಇಪ್ಪತ್ತೈದು ಗಳಿಗೆಯಲ್ಲಿ ಬಸವನು ಅಖಿಲಗಣಸಂಕುಲಕ್ಕೆರಗಿ ಸಂಗಮೇಶ್ವರನಲ್ಲಿ ಅಡಗುವನು. ಇದನ್ನು ತಿಳಿದು ಚೆನ್ನಬಸವಣ್ಣನು ನೀಲಾಂಬೆಗೆ ಹೇಳಿ ಇರ್ವರು ತಮ್ಮ ಇಷ್ಟಲಿಂಗಗಳಲ್ಲಿ ಐಕ್ಯವಾಗುವರು. ಆಗ ಶಿವಶರಣರಲ್ಲಿ ಸಹ ಕೆಲರು ಐಕ್ಯವಾಗುವರು. ಬಿಜ್ಜಳಭೂಪನು ಬಸವದಂಡಾಧೀಶನ ಪಟ್ಟವನ್ನು ನಮಗೆ ಕಟ್ಟುವನು. ಮುಂದೆ ಅವನು ಅನುಕೂಲನೆಂದು ಹರಳಯ್ಯ ಮಧುವಯ್ಯಗಳನ್ನು ಎಳೆಹೂಟೆಯನ್ನು ಕಟ್ಟಿಸಲು,

ಜಗದೇವ ಬೊಮ್ಮಣ್ಣಗಳು ಬಿಜ್ಜಳರಾಯನ ಪಂಜಿನವರಾಗಿ ಅವನ ಅಸುಗೊಂಬೆವೆಂದು ನಮ್ಮ ಕೈಯಿಂದ ಅಲಗಿನ ಪ್ರಸಾದವನ್ನು ಪಡೆದು ಒಯ್ಯುವರು. ಇತ್ತ ನಾವು ಘನಪರ್ವವೆಂದು ಶರಣಕುಲವನ್ನು ಕರೆಸಿ, “ ಇಲ್ಲಿ ಇರಬಾರದು, ಉಳುವೆಯ ಮಹಾಮನೆಗ ಹೋಗಬೇಕು ” ಎನಲು ಕೆಲವರು ಒಪ್ಪುವರು. ಮತ್ತೆ ಕೆಲವರು ಬಾರೆವೆನಲು ಅವರನ್ನು ತಿರುಗಿ ಕಳುಹಿಸಿ, ಸಂಗಮೇಶ್ವರನ ಘನಪರ್ವವೆಂದೆಂಬ ನೆವದಿಂದ ಮಿಕ್ಕವರನ್ನು ಈ ಪುರದಿಂದ ಆಗಲೇ ಕಳುಪುವೆವು. ಕೆಲವು ಶರಣರು ಸಹಿತ ನಾವು ನಮ್ಮ ಅರಮನೆಯನ್ನು ಕಾದುಕೊಂಡಿರುವೆವು. ಅತ್ತ ಜಗದೇವ ಬೊಮ್ಮಣ್ಣರಿರ್ವರು ಎಂದಿನಂತೆ ಬಿಜ್ಜಳನ ಬದಿಯಲ್ಲಿ ಪಂಜುಗಳನ್ನು ಹಿಡಿದುಕೊಂಡಿರಲು, ಅರಸನು ಅವುಗಳ ಬೆಳಕಿನಿಂದ ರಾಜಾಲಯವನ್ನು ಪೊಗುವಾಗ, ಅವರಿರ್ವರು ಅವನ ಉದರವನ್ನು ಸೀಳಿ, ಪರವಾದಿಯನ್ನು ಕೊಂದೆವು ಎಂದು ಬೊಬ್ಬಿರಿಯುತ್ತ ನಮ್ಮ ಆಲಯಕೆ ಬರುವರು. ಈ ವಾರ್ತೆಯನ್ನು ನಮಗೆ ಹೇಳಿ ಅವರು ಆನಂದದಿಂದ ಕೈಲಾಸಕ್ಕೈದುವರು. ನಾವು ಈ ಪುರವನ್ನು ತಿಗಳೆದು ಪೋಗುವೆವು. ಆಗ ಅಳಿಯ ಬಿಜ್ಜಳನು ಹಿಂದುಗೊಂಡು ದಾಳಿಬಂದು ತಡೆಗೋಡದಲ್ಲ ನಮ್ಮನ್ನು ತಡೆಯುವನು. ನಾವು ಮುರುಗೋಡಿಂದ ಮುರಿಯ ತಿವಿದು ಕಾತರವಳಿಯಲ್ಲಿ ಕಾದುವೆವು. ಮತ್ತು ಮಡಿವಳಯ್ಯ ಕೂಗಿನ ಮಾರಿತಂದೆಗಳನೊಡಗೂಡಿ ಅಳಿಯ ಬಿಜ್ಜಳನ ಸೇನೆಯನ್ನು ಸಂಹರಿಸಿ, ಆವನನ್ನು ಕೈಸೆರೆಹಿಡಿದು ಗೂಳಿಯಕೆ ಬರುವೆವು. ಆಗ ನಾಗಾಂಬಿಕೆಯು ಕಡುನೊಂದು “ ಶರಣರು ಇಂತಪ್ಪ ಕೊಲೆಗೆ ಒಡಂಬಡುವರೇ? ಸಾಕು, ನೀವು ಬಿಜ್ಜಳನನ್ನು ಬಿಟ್ಟು ಮಡಿದ ಸೇನೆಗೆ ಪ್ರಾಣವನ್ನು ಕೊಟ್ಟು ಕಳುಹಿಸಿರಿ. ಬಿಜ್ಜಳನನಿರಿದಳಿದ ಶರಣರು ಓರುಗಲ್ಲೆಂಬ ಪಟ್ಟಣದ ಹೊರ ಪುರದಲ್ಲಿ ವೀರಗುಂಡ ಬ್ರಹ್ಮರೆಂಬ ಹೆಸರಿನಿಂದ ಜನಿಸುವರು. ಮಾರಾರಿಯು ಗಣಪತಿರಾಯನ ಅರಮನೆಯನ್ನು ಕದ್ದು ಅವರ ಮರೆಯ ಹೊಗುವನು. ಮರೆಹೊಕ್ಕವರನ್ನು ಕೊಡದಿರುವುದರಿಂದ ಗುಂಡಬೊಮ್ಮಯ್ಯಗಳು ಶೂಲವನ್ನು ಹತ್ತಿ ಮುಕ್ತರಾಗುವರು. ಅದುಕಾರಣ ಈಶಭಕ್ತರು ಇಂಥ ಕಾರ್ಯವನ್ನು ಹೃದಯದಲ್ಲಿ ನೆನೆಯಲಾಗದು. ಅರಸನನ್ನು ಸುರಕ್ಷಿತವಾಗಿ ಅವನ ಪಟ್ಟಣಕ್ಕೆ ಕಳುಹಿಸಿಕೊಡು ” ಎಂದು ನಮಗೆ ಹೇಳುವಳು. ಆಗ ಅಳಿಯ ಬಿಜ್ಜಳನಿಗೆ ನಾವು ಅಭಯವನ್ನಿತ್ತು ಮಡಿದ ಸೈನ್ಯಕ್ಕೆ ಪ್ರಾಣವನ್ನು ಕೊಟ್ಟು, “ ಮಂದಮತಿಯಾದ ಬಿಜ್ಜಳನಂತೆ ನಡೆಯದೆ ನೀನು ಸದಾಚಾರದಿಂದ ನಡೆ ” ಎಂದು ಹೇಳಿ ಅವನಿಗೆ ಪಟ್ಟವನ್ನು ಕಟ್ಟುವೆವು (೧೮-೨೯).

ಆ ಮೇಲೆ ಅವನಿಗೆ “ ಈ ಪಟ್ಟವು ನಿನಗೆ ಅರುವತ್ತು ವರುಷಗಳವರೆಗೆ ನಡೆಯುವುದು. ಮುಂದೆ ತುರುಕರ ಕುಲದಲ್ಲಿ ರಾಕ್ಷಸಶ್ವೇತಾಂಬರ ಎಂಬುವನು ಜನಿ

ಸುವನು. ಅವನ ಸಂತತಿಯವರು ಈ ದೇಶವನ್ನು ತುರುಕಾಣ್ಯವೆನೆಸಿ ೭೬೦ ವರುಷ ಗಳವರೆಗೆ ಆಳುವರು. ಅವರು ಕಲ್ಯಾಣವನ್ನು ಕೆಡಿಸಿ ಕಲಬುರಿಗೆಯನ್ನು ಕಟ್ಟಿಸು ವರು. ಆದುದರಿಂದ ನಾವು ಹೋಗಬೇಕಾಗಿದೆ" ಎಂದು ಹೇಳಿ ಅಳಿಯ ಬಿಜ್ಜಳನ ನ್ನು ಕಳುಹುವೆವು. ಅವನು ಕಲ್ಯಾಣಪುರಕ್ಕೆ ಹೋಗಿ ಬಿಜ್ಜಳನು ಸತ್ತ ಹಾವಳಿಯ ನ್ನು ನಿಲ್ಲಿಸಿ ಸುಖದಿಂದ ರಾಜ್ಯವಾಳುವನು.

ನಾವು ಉಳುವೆಯ ಮಹಾಮನೆಗೆ ಸಾಗಬೇಕೆನಲು, ಮಡಿವಾಳಯ್ಯನು ಹಿಪ್ಪಲಿ ಗೆಗೆ ಹೋಗಿ, ಅಲ್ಲಿ ತಮ್ಮ ಗುರು ಲಿಂಗಣಾರ್ಯರ ಪಾದದಲ್ಲಿ ಐಕ್ಯವಾಗುವನು. ನಾವು ಎಲ್ಲಾ ಶಿವಶರಣರನ್ನು ಕೂಡಿಕೊಂಡು ಉಳುವಿಗೆ ಬಂದು ಘನಪರ್ವವನ್ನು ಮಾಡಿ ಮಾಹೇಶ್ವರರ ಕರುಣವನ್ನು ಪಡೆದುಕೊಳ್ಳುವೆವು. ಆಗ ಹರಶರಣರು ತಮ್ಮ ತಮ್ಮ ಇಷ್ಟದೊಳಗೆ ನಿರವಯುವನ್ನೈದುವರು. ನಮ್ಮ ಸಮಯಾಚಾರದ ಹನ್ನೆರಡುಸಾವಿರ, ಬಸವಣ್ಣನವರ ಸಮಯಾಚಾರದ ಮೂವತ್ತಾರು ಸಾವಿರ ಮಾಹೇಶ್ವರರನ್ನು ಹೊನ್ನ ಗಳಿಯ ಮರಕ್ಕೆ ತೊಟ್ಟಿಲಕಟ್ಟಿ ತೂಗುವೆವು. ಆಗ ಅವರು ನಿರವಯವಾಗುವರು. ಆಮೇಲೆ ನಾವು ಉಳಿದ ಚರಪತಿಗಳಿಗೆ ಶರಣೆಂದು, ನಿರಾಕಾರವನ್ನು ತಳೆಯುವಿರೋ ಸಾಕಾರದಿಂದಿರುವಿರೋ ನಿರೂಪಿಸಬೇಕೆನಲು, "ನೀವೆಲ್ಲರೂ ಮರಳಿಬರುವ ಪರಿ ಯಂತರವೂ ನಾವು ನಮ್ಮ ಆರಾಧ್ಯರಿತ್ತ ಪ್ರಸಾದವನು ಸೇವಿಸುತ ಅತಿ ಗೌಪ್ಯದಿಂದ ಈ ಕಲ್ಯಾಣಪಟ್ಟಣದೊಳಿರುವೆವು" ಎನ್ನುವರು. "ನೀನು ನಾವು ಮರಳಿ ಬರುವತನಕ ಸೊನ್ನಲಾಪುರದಲ್ಲಿ ಶಿವಯೋಗನಿಜಸಮಾಧಿಯಲ್ಲಿ ನಿಂದು ಸಂತೋ ಷದಿಂದ ಇರು" ಎಂದು ನಿನಗೆ ಹೇಳಿ, "ಹಿಂದೆ ಪಾವುಗೆಯನ್ನು ಮರೆತು ಬಂದೆವು, ಅವನ್ನು ತೆಗೆದುಕೊಂಡು ಬಾ" ಎಂದು ರೇಚಣ್ಣನನ್ನು ಕಳುಹಿಸುವೆವು. ಬಳಿಕ ಅ ಕ್ಕನಾಗಾಂಬಿಕೆ ಸಹಿತವಾಗಿ ಶರಣರನ್ನು ನಿರವಯುವನ್ನೈದಿಸಿ ನಾವು ನಿರವಯುವನ್ನೈದು ವೆವು. ತರುವಾಯ ಲಕ್ಷದಮೇಲೆ ತೊಂಬತ್ತಾರು ಸಾವಿರ ಜಂಗಮರು ದಿಕ್ಕು ದಿಕ್ಕಿ ಗೆ ಚರಿಸಲು ಹೋಗುವರು. ರುದ್ರಮುನಿತಂದೆಯು ಚರಪತಿಗಳೊಡನೆ ಕಲ್ಯಾಣ ಕ್ಕೆ ಬಂದು ಗೌಪ್ಯದಿಂದಿದ್ದು ತನ್ನ ಶಿಷ್ಯನಾದ ಮುಕ್ತಿಮುನಿಗೆ "ಸಕಲದೇಶಗಳನ್ನು ಚರಿಸುತ್ತ ದುಷ್ಟಪರವಾದಿಗಳನ್ನು ಕೊಂದು ಶರಣರನ್ನು ಪೊರೆ" ಎಂದು ಹೇಳಿ ಕಳು ಹುವನು. ಅದರಂತೆ ಅವನು ಅಖಿಲದೇಶಗಳನ್ನು ಚರಿಸಿ ಶ್ರೀಗಿರಿಯ ಸಿಂಹಾಸನ ದಿ ನಿಂದು ಸಕಲ ಸದ್ಭಕ್ತರನ್ನು ಪಾಲಿಸುವನು (೩೦-೩೭). ಅತ್ತ ಮಲೆರಾಜ್ಯದ ಲ್ಲಿ ಜೈನರು ಹೆಚ್ಚಿ ಶಿವಮತವನ್ನು ಜರೆದು ವೀರೇಶನನ್ನು ಕಿತ್ತು ಬಿಸುಡುವರು. ಈ ವಾರ್ತೆಯನ್ನು ಕೇಳಿ ಮುಕ್ತಿಮುನಿದೇವರು ಅಜಾತಭಿಕ್ಷಾವರ್ತಿ ಎಂಬುವನಿಗೆ ಪಟ್ಟಗಟ್ಟಿ ತನ್ನ ಶಿಷ್ಯನಾದ ದಿಗಂಬರಸುಮುಕ್ತಿಮುನಿ ಎಂಬುವನಿಗೆ "ನೀನು ಮಲೆರಾಜ್ಯದೊಳು ತುಂಬಿದ ಪರವಾದಿಗಳನ್ನು ಸಂಹರಿಸು" ಎಂದು ಹೇಳಿ ತಾನು

ಶ್ರೀಗಿರಿಯ ಸಿಂಹಾಸನಕ್ಕೆ ಬಂದು ಸದ್ಭಕ್ತರನ್ನು ಪಾಲಿಸಿ, ಮಲ್ಲಿಕಾರ್ಜುನಲಿಂಗದಲ್ಲಿ ನಿರವಯುವನ್ನೈದುವನು. ಸುಮುಕ್ತಿಮುನಿಯು ಕೆಲವು ಚರಪತಿಗಳೊಂದಿಗೆ ಮಲೆದೇಶಕ್ಕೆ ಬಂದು ಪರವಾದಿ ಜೈನರನ್ನು ಸಂಹರಿಸಿ ಅವರು ಕಿತ್ತು ಹೊಳೆಯಲ್ಲಿ ಬಿಸುಡಿದ ವೀರೇಶನನ್ನು ಬಾಳೆಯ ಎಲೆಯ ದಂಡಿಗೆಯ ಮೇಲೆ ತೆಗೆದುಕೊಂಡು ಬಂದು ಹೊನ್ನೂರಿನ ಬಳಿಯಲ್ಲಿ ಗುಡಿಯ ಕಟ್ಟಿಸಿ ಪ್ರತಿಷ್ಠಿಸುವನು. ತಾನು ಅಲ್ಲಿಯೇ ನಿಂದು ಇದೀಗ ದುರ್ಜನರ ಸಂಹರಿಸುವ ಸ್ಥಳವೆಂದು ಬಾಳೆಯಹಳ್ಳಿಯೆಂಬ ಪುರವನ್ನು ಕಟ್ಟಿ ಅಲ್ಲಿ ಸಿಂಹಾಸನಾಧೀಶನಾಗಿರುವನು. ಕೆಲವು ಕಾಲದ ಮೇಲೆ ಚರಪತಿಗಳಲ್ಲಿ ಯೋಗ್ಯರಾದ ಒಬ್ಬರಿಗೆ ಪಟ್ಟವ ಕಟ್ಟಿ ತಾನು ಶಿವಯೋಗನಿಜಸಮಾಧಿಯೊಳಿರುವನು. ದಿಗಂಬರಮುಕ್ತಿಮುನಿದೇವರ ಆಜ್ಞೆಯಿಂದ ಸುಕುಮಾರ ಚೆನ್ನಬಸವೇಶ್ವರನು ಪರವಾದಿಗಳನ್ನು ಸಂಹರಿಸಿ ಶರಣರನ್ನು ಪಾಲಿಸುತ್ತಿರಲು, ಚಿಕ್ಕಸಿದ್ಧೇಶ್ವರನೆಂಬುವನು ಚರಪತಿಗಳೊಂದಿಗೆ ಶಿವಗಂಗೆಗೆ ಬಂದು ಹೊನ್ನಾದೇವಿಯಿಂದ ಕಂಕಣವನ್ನು ಪಡೆಯುವನು (೩೮-೪೩).

ಇಷ್ಟರಲ್ಲಿ ಅಳಿಯ ಬಿಜ್ಜಳನು ತುರುಕರೊಡನೆ ಕಾದಿ ಮಡಿಯಲು ಅವರು ಕಲ್ಯಾಣವನ್ನು ಕೆಡಿಸಿ ಕಲಬುರಿಗೆಯನ್ನು ಹೊಸದಾಗಿ ರಚಿಸಿ ತ್ರಿಪುರಾಂತಕಾಲಯದಲ್ಲಿ ಪಶುಗಳನ್ನು ಕೊಂದು ಗರುಡಗಂಬವನ್ನು ಮುರಿದು ಮಸೂದಿಯನ್ನು ಕಟ್ಟಿಸುವರು. ಹೀಗೆ ತುರುಕರು ಪ್ರಜೆಗಳನ್ನು ಸುಲಿದು ಸೂರ್ಯಾಡಲು, ಗುಮ್ಮಣ ಸೊಮ್ಮಣಯ್ಯಗಳೆನಿಪ ವ್ರತಿಗಳು ನೆಲೆಗೆಟ್ಟು ಹೋಗಿ ದಕ್ಷಿಣಕಾಶಿಯೆನಿಸಿ ಮೆರೆವ ಶಿವಗಂಗೆಯ ಸಮೀಪದಲ್ಲಿ ಗುಮ್ಮಳಾಪುರವೆಂಬ ಪುರವನ್ನು ರಚಿಸುವರು. ಅಲ್ಲಿ ಅವರು ಚರಲಿಂಗಪಾದೋದಕವನ್ನು ಹಸಿಯ ಮಣ್ಣ ಬಿಂದಿಗೆಯ ತುಂಬಿ ಪರಿವಾಣದೊಳಗಿರಿಸಿ ಹೊತ್ತುಕೊಂಡು ಆ ಪುರವ ತಿರುಗಿ ಬಂದು ಅದರ ಮಧ್ಯದಲ್ಲಿ ನಿಕ್ಷೇಪಿಸಿ 'ಈ ಪುರವನ್ನು ಲಿಂಗವಿಲ್ಲದ ಭವಿಯು ಹೊಗಲು ಅಳಿಯಲಿ' ಎಂದು ಆಜ್ಞಾಪಿಸುವರು. ಅಲ್ಲಿ ಧೂಳಿಪಾವಡವಾದಿ ಸರ್ವಾಂಗಪಾವಡಕಡೆಯಾಗಿ ಕ್ರಮದೊಳೆಸೆವ ಅರವತ್ತುನಾಲ್ಕು ಶೀಲಗಳನ್ನು ನಡೆಸುವ ಶೀಲವಂತರು ಹೆಚ್ಚಾಗುವರು. ದಾಸೋಹಿಗಳೂ ಆಚಾರವೇ ಪ್ರಾಣವೆಂದೆಂಬ ಸದ್ಭಕ್ತರೂ ಅಲ್ಲಿರುವರು. ಧನಸಂಪನ್ನ ಸೆಟ್ಟಿಗಳು ಅಲ್ಲಿರುವ ಕಾರಣ ಸೆಟ್ಟನಾಡೆನಿಪುದು. ಸಕಲಸೌಭಾಗ್ಯದಿಂದ ಪ್ರಭುಗಳಿರುವುದರಿಂದ ಪ್ರಭುನಾಡೆನಿಪುದು. ಸಕಲಾಗಮಪುರಾಣಕೋವಿದ ಸಕರ್ಣಾಟಕಾದ್ಯಖಿಳ ಶಾಸ್ತ್ರವ ಬಲ್ಲ ಚದುರರಿರುವುದರಿಂದ ಕರ್ಣಾಟಕವೆನಿಪುದು (೪೪-೫೦).

ಶಾಲಿವಾಹನ ಶಕದ ೮೦೦ನೆಯ ವಿಳಂಬಿ ಸಂವತ್ಸರ ಚೈತ್ರ ಶುದ್ಧ ದಶಮಿ ಗುರುವಾರ ಉದಯದ ಹನ್ನೆರಡು ಗಳಿಗೆ ವೇಳೆಯಲ್ಲಿ ಹೊಯ್ಸಳ ಎಂಬುವನಿಗೆ ಪಟ್ಟಗಟ್ಟುವರು. ಅವನಾಳುವ ಭೂಮಿಯು ಹೊಯ್ಸಳರಾಜ್ಯವೆನಿಸುವುದು. ಅವ

ನ್ನು ನವಬಲ್ಲಾಳರು ಆಳುವರು. ಅವರಲ್ಲಿ ಬಲ್ಲಾಳವಿಷ್ಣುವರ್ಧನನೆಂಬುವನು ವೇಲಾಪುರದಲ್ಲಿ ಒಂದು ಗುಡಿಯನ್ನು ಕಟ್ಟಿಸಿ ಗಾಳಿಪೂಜೆಯೊಳಿರ್ದ ವಿಷ್ಣುವನ್ನು ತೆಗೆತರಿಸಿ ಆ ಗುಡಿಯೊಳು ಪ್ರತಿಷ್ಠಿಸುವನು. ಅಲ್ಲಿ ಹೊಲಿಹದಿನೆಂಟು ಜಾತಿಯವರು ಒಂದಾಗಿ ನಡೆಯುವರು (೫೧-೫೨).

ಹಳೆಯಬೀಡೆಂಬ ಪಟ್ಟಣದಲ್ಲಿ ಕರಣಿಕರ ಕುಲತಿಲಕನೆನಿಸುವ ಹರೀಶ್ವರನ ಲೆಕ್ಕವನ್ನು ಬಲ್ಲಾಳ ಭೂಪನು ಕೇಳುತ್ತಿರಲು, ಕಡಿತವನ್ನು ಬಿಟ್ಟು ಕೆಯ್ಗಳನ್ನು ಒರಸುವನು. ಆಗ ಬಲ್ಲಾಳನು ಅದರ ವೃತ್ತಾಂತವನ್ನು ಕೇಳಲು, "ಹಂಪೆಯ ವಿರೂಪಾಕ್ಷನಾಲಯದಲ್ಲಿ ದೀಪ ಸೋಂಕಿ ತೆರೆಸೀರೆ ಸುಡುತ್ತಿದ್ದುದನ್ನಾರಿಸಿದೆನು" ಎಂದು ಹೇಳುವನು. "ವಿರೂಪಾಕ್ಷನಾಲಯದ ತೆರೆಸೀರೆಯೆಲ್ಲಿ? ನೀನೆಲ್ಲಿ?" ಎಂದು ಬಲ್ಲಾಳ ಭೂಪನು ಉದ್ಗಾರವನ್ನು ತೆಗೆದು, ಕೂಡಲೆ ಅದರ ಸತ್ಯತೆಯನ್ನು ತಿಳಿದುಕೊಂಡು ಅಚ್ಚರಿವಟ್ಟು "ಹರಿಯಣ್ಣ, ನೀನು ವಿರೂಪಾಕ್ಷನಾಲಯದಲ್ಲಿ ಬರೆದುಕೊಂಡಿರು" ಎಂದು ಕಳುಹಿಸುವನು. ಆಗ ಹರೀಶ್ವರನು ಪಂಪಾಕ್ಷೇತ್ರಕ್ಕೆ ಬಂದು ಶಿವಗಣಂಗಳ ಮೇಲೆ ರಗಳೆಗಳನ್ನೂ ಗಿರಿಜಾವಿವಾಹವನ್ನೂ ಬರೆದು ವಿರೂಪಾಕ್ಷಲಿಂಗದಲ್ಲಿ ಐಕ್ಯನಾಗುವನು. ಈ ಹರೀಶ್ವರನ ಸೋದರಳಿಯನಾದ ಉಭಯಕವಿಶರಭಭೇರುಂಡ ಇತ್ಯಾದಿ ಬಿರುದಾಂಕಿತನಾದ ರಾಘವಾಂಕ ಕವಿಯು ಓರುಗಲ್ಲೆಂಬ ಪಟ್ಟಣಕ್ಕೆ ಹೋಗಿ ಅಲ್ಲಿ ಪರವಾದಿಗಳನ್ನು ಗೆದ್ದು ವೀರೇಶನಿಂದ ಪದಕವನ್ನು ಪಡೆದು ವೇಲಾಪುರಕೆ ಮರಳಿಬಂದು ಅಲ್ಲಿ ದೇಹವನುಳಿದು ಸಮಾಧಿಯೊಳಿರುವನು. ಪದ್ಮರಸನೆಂಬ ಬ್ರಾಹ್ಮಣನು ಅಲ್ಲಿ ವೀರಶೈವಾಚಾರ್ಯನಾಗಿರುವನು. ತ್ರಿಭುವನತಾತನೆಂಬುವನು ಅಲ್ಲಿಗೆ ಬಂದು ಪದ್ಮರಸನ ಕೂಡ ವಾದಿಸಲು, ತೃಣಪುರುಷನಿಂದ ಅವನನ್ನು ಗೆದ್ದು ವೀರಶೈವೋಪದೇಶವನ್ನು ಕೊಡುವನು. ವಿಷ್ಣುಬಲ್ಲಾಳನು ಪದ್ಮರಸನನ್ನು ಕರೆಯಿಸಿ ನಮಗೊಂದು ಬಲುಗೆರೆಯನ್ನು ಕಟ್ಟಿಸೆಂದು ಅಧಿಕಧನವನ್ನು ಕೊಟ್ಟು ಕಳುಹಿಸಲು, ಪದ್ಮರಸನು ಆ ರೊಕ್ಕದಿಂದ ಜಂಗಮಾರ್ಚನೆ ಮಾಡಿಸಿ ಶಿವನೊಲವಿನಿಂದ ಕೆರೆಯನ್ನು ಕಟ್ಟಿಸುವನು. ಬಲ್ಲಾಳನು ಆ ಕೆರೆಯ ಕೆಳಗಿರ್ಪ ಬಯಲನ್ನು ಎಂಬತ್ತೆಂಟು ಬ್ರಾಹ್ಮಣರಿಗಿತ್ತು ಕೆರೆಯ ಪದ್ಮರಸನಿಗೆ ನಿಮಗಾವ ಬಯಲಾಗಬೇಕೆಂದು ಕೇಳಲು, ನಮಗೆ ಈ ಮಹಾಬಯಲೇ ಸಾಕೆನುತ್ತ ಅವನು ಆ ಬಯಲಲ್ಲಿ ಬಯಲಾಗುವನು.

ಪಾಲ್ಕುರಿಕೆಯ ಸೋಮೇಶ್ವರ ಎಂಬುವನು ಅರವತ್ತುನಾಲ್ಕು ಶೀಲವ ನಡೆಸಿ ಕಲ್ಕೆರೆಯಲ್ಲಿ ಶಿವಸಮಾಧಿಯನ್ನೈದುವನು (೫೩-೫೪).

ಮೊಸ್ಪುರಿಯಿಂದ ಭೈರವರಾಜನು ಪುಲ್ಲಿಪಟ್ಟಣಕ್ಕೆ ಬಂದು ಅಲ್ಲಿರ್ಪ ಅರಸನನ್ನು ಕಾದು ಪುರವನ್ನು ಹೀಂಟಿಯ ಪವಾಡದಿಂದ ಗೆಲಿಯುವನು. ಆಗ ಶ್ರೀಪುರ

ಪರಿರ್ವರು ವೀರಶೈವೋಪದೇಶವನಾಂತು ಪಾಸಲಿಗೆ ಹೋಗಿ ಚಿದ್ರೂಪನೊಳು ಕಾದಿ ಕೈಲಾಸಕ್ಕೆ ಹೋಗುವರು. ಅಲ್ಲಿಯು ಸೋಮೇಶಲಿಂಗದಿಂದ ಹಾಲು ಸುರಿವುದು. ಅವರ ಸಮೀಪದಲ್ಲಿಯೇ ಕೆಂಡದ ಮಳೆ ಕರೆವುದು. ಶ್ರೀಗಿರಿಯ ಮೇಲೆ ವೇಶ್ಯೆಯರು ಗುಡಿಸಲನ್ನು ಕಟ್ಟುವರು, ಸುರೆಯನ್ನು ಮಾರುವರು, ಅಲ್ಲಿ ನೆತ್ತರಿನ ಹೊಳೆ ಹರಿಯುವುದು. ದಿಂಡುಗೂರಲ್ಲಿ ನಾಗಾಭಕ್ತನೆಂಬುವನು ಬೇಡಿದ ಜಂಗಮಕೆ ಹೊನ್ನ ಸಾಲತೆಗೆದು ನೀಡಲು ಬಹುಋಣವಾಗುವುದು. ಆಗ ಆ ಭಕ್ತನು ಶಿವನಿಂದ ಹೊನ್ನ ಪಡೆದು ಸಾಲವನ್ನು ತೀರಿಸಿ ಶುಚಿಯಾಗಿ ಕೈಲಾಸಕ್ಕೆ ಹೋಗುವನು. ಕಂಜ ನೂರಾಂಡಿ ಎಂಬುವನು ಹರಭಕ್ತನಾಗಿ ವೇದಗಳಿಗೆ ಭಾಷ್ಯ ಬರೆದು, ಸರಸಿಯೊಳಗೆ ಅಳಿಯನನ್ನು ಪುಗಿಸಿ ಮಣಿಕರ್ಣಿಕೆಯಲ್ಲಿ ಎಬ್ಬಿಸಿ, ರಂಗನಾಥನ ಕೈಯಿಂದ ಬಾಗಿಲ ವನ್ನು ತೆರೆಸಿ, ಶಿವನ ವರದಿಂದ ತನ್ನ ಪುರದ ಉಭಯ ಕೇರಿಯೊಳಗಿದ್ದವರನ್ನು ಕೈಲಾಸಕೊಯ್ಯುವನು.

ವೆಕ್ಕಲೂರಲ್ಲಿ ನುಲಿಯ ಕಾಯಕದ ಕಲ್ಲಪ್ಪನೆಂಬುವನುದಿಸುವನು. ಅವನ ಮಗನು ಹೊಲದೊಳಗೆ ನಾರನೆತ್ತುವಾಗ್ಗೆ ಹಾವು ಕಚ್ಚಿ ಸಾಯಲು ಕಲ್ಲಪ್ಪನು ಅವನನ್ನು ತಂದು ತನ್ನ ನುಲಿಯ ವಿಕ್ರಯದಿಂದ ಜಂಗಮಾರ್ಚನೆಯ ಮಾಡಿ ತೀರ್ಥಪ್ರಸಾದವನ್ನು ಮಗನಿಗೂಡುವನು. ಆಗ ಮಲಗಿದವರೇಳುವಂತೆ ಮಗನೇಳುವನು. ಆಮೇಲೆ ಶಿವನು ಅವರನ್ನು ತನ್ನ ಪುರಕ್ಕೊಯ್ಯುವನು. ಕರಿಯೆಡೆಯೆಂಬ ಪುರದಲ್ಲಿ ಮುಮ್ಮಡಿಭಕ್ತನೆಂಬುವನು ಜಂಗಮಕೆ ಮೃಷ್ಟಾನ್ನವನ್ನು ನೀಡಿ ಅವರಿಗೊಂದೊಂದು ವಸ್ತ್ರವನ್ನು ಕೊಡುವನು. ಒಬ್ಬ ಜಂಗಮನು ಆತನ ಹೆಂಡತಿಯು ಉಟ್ಟ ಅಡವಿನ ಸೀರೆಯ ಸೆರಗನ್ನು ಕೇಳಲು ಅವನು ಆ ಜಂಗಮನಿಗೆ ಅದನ್ನು ಕೊಟ್ಟು ಅದಕ್ಕೆ ಪಾದೋದಕವನ್ನು ತಳಿದು ಪುನಃ ಸೆರಗನ್ನು ಪಡೆದು ಅಡವಿಟ್ಟವನಿಗೆ ಆ ಸೀರೆಯನ್ನು ಕೊಡುವನು. ಪೆರುಮೊಗ್ಗೆಯೆಂಬಲ್ಲಿ ಜಂಗಮ ದಾಸೋಹಿಯಾದ ದೇವಮ್ಮನೆಂಬುವಳು ಜಂಗಮನು ಬೈಚಿಡಲು ಕೊಟ್ಟ ಪುಲಿ ಚರ್ಮವು ಬಯಲಾಗಲು ತನ್ನ ದೇಹದ ಚರ್ಮವನ್ನು ಆ ಜಂಗಮಕ್ಕೆ ಕೊಡುವಳು (೬೦-೬೬).

ಕಂಚಿಯಲ್ಲಿ ಬಯಲಲಿಂಗಣ್ಣನು ಪಂಚಾಕ್ಷರಿಯ ಮಂತ್ರವೇ ಘನವೆಂದು ಸಾಧಿಸಿ ಸಂಚಿಕೆಯ ಚೀಟಿನಿಂದ ಅದನ್ನು ಬರೆದು ತೂಗಿ ಮೆರೆವನು. ಗುಜ್ಜರಾತಿಯ ದೇಶರಾವುತನು ಕೆಯ್ಬೆರಳುಂಗುರದ ಬಸವಂಗೆ ಸ್ವಲ್ಪವೂ ಬಿಡದ ಹಾಗೆ ಕದಳಿಯ ರಾಸಿಯನ್ನು ತಿನಿಸಿ ಸಂಚಿತಪವಾಡವನ್ನು ಗೆಲ್ಲುವನು. ಪಟ್ಟೀಶ್ವರದಲ್ಲಿ ವೀರಭದ್ರನ ಮುಂದೆ ಬಸವಪ್ಪನೆಂಬುವನು ತನ್ನಯ ಮಕ್ಕಳಿರ್ವರ ತಲೆಗಳನ್ನು ತರಿದು ಪುನಃ ಹತ್ತಿಸಿ ಪರವಾದಿಗಳನ್ನು ಗೆಲ್ದು ಮೆರೆವನು. ಉದಯಗಿರಿಯಲ್ಲಿ ಪರವಾದಿ

ಗಳು ಬಸವಪುರಾಣವನ್ನು ಹೇಳಿಯುಲು ರಾಮಯ್ಯನೆಂಬುವನು ಆ ಪುಸ್ತಕವನ್ನು
ಕಿಚ್ಚಿನಲ್ಲಿ ಹಾಕಿ ಅದು ಸುಡದೆ ಇರುವುದನ್ನು ತೋರಿಸಿ ಅವರನ್ನು ಗೆದಿಯುವನು.
ರಾಜಮಹೇಂದ್ರದಲ್ಲಿ ಸೋಮಣ್ಣನೆಂಬುವನಿಗೆ "ಈ ಬ್ರಾಹ್ಮಣನು ಹರಭಕ್ತನಾದನು
ನೋಡು" ಎನುತ ಬ್ರಾಹ್ಮಣರು ನಿಂದಿಸಲು ಅವನು ಕೇಳದಂತಿರುವನು. ಆಗ
ಅವನ ಮನೆಯೊಂದುಳಿದು ಆ ಕೇರಿಯೆಲ್ಲವೂ ಸುಟ್ಟುಹೋಗಲು ಆ ಬ್ರಾಹ್ಮಣರು
ಅವನಿಗೆ ಶರಣೆಂದು ಕರುಣವನ್ನು ಪಡೆಯುವರು. ದಕ್ಷಿಣಾಪುರದಲ್ಲಿ ಶಿವಭಕ್ತರು
ಕೋಡನ್ನು ಕುಣಿಸಿ ಬರಡನ್ನು ಹಯನಮಾಡುವರು ಎಂದು ಬೋಳೆಯೊಡೆಯರು
ನುಡಿಯುವರು. ಆಗ ತುರುಕರು ನೀವು ಮಾಡಿರೆನ್ನಲು ಅವರು ಕಟ್ಟಿಗೆಯ ಕುದು
ರೆಯನ್ನೇರಿ ಕುಣಿಸುವರು, ಗೊಡ್ಡಾಕಳನ್ನು ಕರೆಯುವರು, ವಿಮಾನವನ್ನು ಚಂದ್ರ
ಕಾಂತ ಲಿಂಗವನ್ನು ಮಾಡುವರು, ಎರಡು ಹೋಳಾಗಿದ್ದ ಲಿಂಗವನ್ನು ಕೂಡಿಸುವ
ರು. ಕುರುವವೆಂಬೂರಲ್ಲಿ ಸೊಪ್ಪಿಯ ಬಸವಪ್ಪನೆಂಬುವನು ಪ್ರತಿದಿನವೂ ಸೊಪ್ಪಿಯ
ನ್ನು ಕೊಂಡು ಬಸವನಿಗೆ ಹಾಕುತ್ತಿರಲು ಸುರಿತಾಳನು ಅದನ್ನು ಕೇಳಿ ಅವನನ್ನು
ಮನೆಹೊಗಿಸಿ ಕಿಚ್ಚು ಸಿಕ್ಕಿಸುವನು. ಅವನು ಎಂದಿನಂದದಿ ಸೊಪ್ಪಿಯಂಗಡಿಯಲ್ಲಿರು
ವುದನ್ನು ಕೇಳಿ ಅವನನ್ನು ಕರೆಸಿ ಸುರಿತಾಳನು ಪರಮಕರ್ತಾರನೆಂದು ಅವನನ್ನು ಪೂ
ಜಿಸುವನು. ಬಿದಿರೆಯಲ್ಲಿ ಶಿವಕವೀಶ ಏಕೋಭಾಯಿ ಎಂಬುವನು ಸುರಿತಾಳನೊಡ
ನೆ ವಾದಿಸಿ ಸತ್ತ ಕುದುರೆಯ ಪ್ರಾಣವನ್ನೂ ಅವನ ಸತ್ತ ಮಗನ ಪ್ರಾಣವನ್ನೂ
ಹಾವುಕಚ್ಚಿ ಸತ್ತ ಮತ್ತೊಬ್ಬನ ಪ್ರಾಣವನ್ನೂ ಪಡೆವನು. ಮೇಲುಕೊಂಕಣದೇಶ
ದಲ್ಲಿ ದೋಪೇಶ್ವರದ ನೀಲಕಂಠೇಶ್ವರನ ಗುಡಿಯಲ್ಲಿ ಸೂಚಿಕಾಯಕದ ಸದ್ಭಕ್ತ ಶೀಲ
ವಂತ ಪೀರಪ್ಪನು ಪರವಾದಿ ಜನರನ್ನು ಗೆದ್ದು ಕೈಲಾಸಕ್ಕೈದುವನು. ಹರಿಭಕ್ತನಾದ
ಉಪ್ಪಲಿಕರ ಅಣ್ಣಪ್ಪನಿಗೆ ಶಿವನು ಹರಭಕ್ತನಾಗೆನ್ನಲು ಅವನ ಮುದ್ರೆಗಳು ಪಾದ
ಕ್ಕೆಳೆಯುವುವು. ಆಗ ಪರವಾದಿಗಳು ವಾದಮಾಡಲು ಹರನೊಲವಿನಿಂದ ಬೇಸಿಗೆ
ಯಲ್ಲಿ ಮಳೆ ಬರಿಸಿ ಹಾಳುಗೆರೆಗಳನ್ನು ತುಂಬಿಸಿ ಅವರನ್ನು ಗೆದಿಯುವನು. ಸುಗ್ಗ
ಊರಲ್ಲಿ ಕಾಚನಾಯಕನೆಂಬ ಹರಿದಾಸನು ಬೇಟೆಗೆ ಹೋಗಿ ಮೊಲದ ಬೆನ್ನು ಹತ್ತ
ಲು ಅದು ಕೆರೆಯೊಳಗೆ ಬಿದ್ದಿತು. ಅಲ್ಲಿ ಹೋಗಿ ಅದನ್ನು ಹಿಡಿಯಲು ಅದು ಶಿವ
ಲಿಂಗವಾದುದನ್ನು ಕಂಡು ತಾನದನ್ನು ಧರಿಸಿ ಮಹಲಿಂಗದೇವಯ್ಯನೆಂದು ಕರೆಯಿ
ಸಿಕೊಂಡು ಅದೇ ಲಿಂಗದಲ್ಲಡಗುವನು. ಆಸುಗೋಡ ಮಲ್ಲಯ್ಯನು ತನ್ನ ಹೋ
ರಿಗೆ ಬಸವನನ್ನು ಬರಿದು ಬಿಡಲು ಕೆಲವು ದಿವಸಕ್ಕೆ ಅದು ಪ್ರಾಣವನ್ನು ಬಿಡುವು
ದು. ಆಗ ಮಲ್ಲಯ್ಯನು ತನ್ನ ಹೆಂಡತಿ ಮಗ ಮಗನ ಸತಿ ಸಹಿತವಾಗಿ ಆ ಬಸ
ವನೊಡನೆ ಸಮಾಧಿಯಲ್ಲಿ ಕುಳಿತು ಅಳಿದಿರ್ದ ಬಸವನ ಪ್ರಾಣವನ್ನು ಪಡೆಯುವನು.

ಇಂತಿವರು ಮೊದಲಾದ ಶಿವಶರಣರು ಅಲ್ಲಲ್ಲಿ ನಾನಾಪವಾಡಗಳನ್ನು ಮೆರೆದು

ನಿಜಪದವಿಯನ್ನು ಪಡೆಯುವರು. ಮುಂದೆ ಹೊಸಮಲೆಯ ಕಂಪಿಲ ಭೂಪನ ಕುಮಾರನಾದ ರಾಮನಾಥನು ಕುಮ್ಮಟವೆಂಬ ದುರ್ಗವನ್ನು ಕಟ್ಟಿಸಿ ಸುತ್ತಣ ಭೂಪಾಲಕರನ್ನು ಗೆದ್ದು ಹೊಗಳಿಸಿಕೊಳ್ಳುವನು. ಅವನೊಡನೆ ಕಾದುವುದಕ್ಕೆ ಲಕ್ಷದಮೇಲೆ ತೊಂಬತ್ತಾರು ಸಾವಿರ ಕುದುರೆಸಹಿತವಾಗಿ ಖಾನರು ಆ ಕುಮ್ಮಟಕ್ಕೆ ದಾಳಿಯನ್ನು ತರಲು ಕಾಳಿಗದಲ್ಲಿ ಅವರಿರ್ವರು ಕಾದಿ ಅಲ್ಲಿಯೇ ಬಯಲಾಗುವರು. ಆ ಮೇಲೆ ಕುಮ್ಮಟವು ಹಾಳಾಗುವುದು (೬೭-೭೮).

೬೩ ಕಾಲಜ್ಞಾನದ ಸಂಧಿ

ಶಾಲಿವಾಹನ ಶಕದ ಸಾವಿರದ ಮೇಲೆ ಇನ್ನೂರೈವತ್ತೆಂಟನೆಯ ಧಾತುಸಂವತ್ಸರ ವೈಶಾಖ ಶುದ್ಧ ಸಪ್ತಮಿಯ ದಿವಸ ಹರಿಹರಗೆ ಪಟ್ಟವನ್ನು ಕಟ್ಟುವರು. ಅವನ ಸಂತತಿಯ ಹದಿಮೂರು ಜನರು ನೂರೈವತ್ತು ವರುಷಗಳವರೆಗೆ ಆಳುವರು. ಹರಿಹರರಾಜನ ವಂಶೋದ್ಭವನು ಆನೆಯಗೊಂದಿಯಲ್ಲಿರುತ್ತ ಹಂಪೆಯ ಸಮೀಪದಲ್ಲಿ ವಿದ್ಯಾನಗರಿಯೆಂಬ ಪಟ್ಟಣವನ್ನು ರಚಿಸುವನು. ಕೈಲಾಸಪರ್ವತದಲ್ಲಿ ವಿಕಟಾಂಗದ ಗಣೇಶ್ವರರ ಶಾಪದಿಂದ ದೇವೇಂದ್ರನು ಹರಿಹರ-ಬುಕ್ಕರಾಯರ ವಂಶದಲ್ಲಿ ಪ್ರೌಢದೇವೇಂದ್ರನೆಂಬ ಹೆಸರಿನಿಂದ ಜನಿಸಿ ವಿದ್ಯಾನಗರಿಯಲ್ಲಿ ಅರಸುಗೆಯ್ಯುವನು. ಅವನ ಕಾಲದಲ್ಲಿ ನೂರೊಂದು ಗಣೇಶ್ವರರು ಮಹಿಮೆಗಳನ್ನು ತೋರುವುದಕ್ಕಾಗಿ ಇಳೆಯಲ್ಲಿ ಜನಿಸಿ ಜಂಗಮಸ್ಥಲವನಂಗೀಕರಿಸಿ ವಿರತರಾಗಿಹರು (೨-೬).

ಅವರಲ್ಲಿ ಕರಸ್ಥಲದ ವೀರಣ್ಣೊಡೆಯರೆಂಬುವರ ಶಿಷ್ಯನಾದ ಅಕ್ಕಸಾಲೆಯ ನಾಗನು ಒಂದು ದಿನ ಹಾದರಕ್ಕೆಂದು ಒಂದು ಮನೆಯನ್ನು ಹೊಗಲು ಆ ಮನೆಯವರು ಅವನನ್ನು ಮುತ್ತಿಕೊಳ್ಳುವರು. ಆಗ ಅವನಿಗೆ ಸಮ್ಯಗ್‌ಜ್ಞಾನವು ತೋರಿ ವಿರತನಹೆನೆಂದು ಸಂಸಾರವನ್ನು ಬಿಟ್ಟು ಪೀಠವ ಬಿಸುಡಿ ಲಿಂಗವ ಕೈಕೊಂಡು ಮರುಳನಂತೆ ತಲೆಗೆದರಿ ಬೂದಿಯ ಬಳಿದುಕೊಂಡು ದಿಗಂಬರನಾಗಿ ಎಲ್ಲರೂ ನೋಡ ನೋಡುತ್ತ ಆ ಮನೆಯ ಬಾಗಿಲಿನಿಂದ ಹೊರಬಿದ್ದು ತನ್ನ ಗುರುವಿದ್ದ ಪುರಕೆ ಬರುವನು. ಅಲ್ಲಿ "ಅಕ್ಕಸಾಲೆಯ ನಾಗನು ಭಿಕ್ಷಕೆ ಬಂದನು ನೋಡಿರಿ" ಎಂದು ಜನರು ಪರಿಹಾಸ ಮಾಡುತ್ತಿರಲು ಅವನ ಗುರುವು ಬಂದು ಇದೇನೆಂದು ಕೇಳುವನು. ನಾಗನು ತನ್ನ ವೃತ್ತಾಂತವನ್ನು ತಿಳುಹಿ ಕೈಯೊಳಿದ್ದ ಪೀಠರಹಿತವಾದ ಲಿಂಗವನ್ನು ತೋರಲು ವೀರಣ್ಣೊಡೆಯರು ಅದಕ್ಕೆ ಮತ್ತೊಂದು ಪೀಠವನಿತ್ತು ಕ್ರಿಯೆಯುಳಿವ ಪರಿಯಂತರವೂ ಲಿಂಗವ ಪೀಠದಿಂದ ತೊಲಗಲೀಯದಿರು ಎಂದು ಬೋಧಿಸಿ ಪ್ರಸಾದವನ್ನು

ನೀಡಿ ಕಳುಹುವರು. ಆ ಮೇಲೆ ನಾಗನು ಅಲ್ಲಿಂದ ಹೊರಟು ಸಕಲದೇಶವನ್ನು ತಿರುಗಿ ಮತ್ತೆ ಅಲ್ಲಿಗೆ ಬರುವನು. ಬಂದ ಶಿಷ್ಯನ ನಿಲವನರಿದು, ತಾನು ಗುರುವೆಂಬ ಭಾವವನುಳಿದು ವೀರಣ್ಣೊಡೆಯರು ಅರ್ಘ್ಯಪಾದ್ಯಾಸನಾದಿಗಳಿಂದರ್ಚಿಸಿ ಹೂವ ತರುವುದಕ್ಕೆ ಹೋಗಲು, ಇತ್ತ ನಾಗನು ಮೂರೆಡೆಯಲ್ಲಿ ಮಲವ ಬಿಟ್ಟು ಅಲ್ಲಿದ್ದ ನಾರಿಯೊಡನೆ, "ತರುಣಿ, ಕೇಳು. ನಿಮ್ಮೊಡೆಯರು ಈ ಮಲಕ್ಕೊಳಗಾದೊಡೆ ಇಲ್ಲಿ ಸುಖಮಿರಲಿ, ಅಲ್ಲದೊಡೆ ಎಮ್ಮ ಕೂಡ ಬರಲಿ" ಎಂದುಸಿರಿ ಹೊರಟು ಹೋಗುವನು. ವೀರಣ್ಣೊಡೆಯರು ಬಂದು ಇದನ್ನು ಕೇಳಿ, ಎಲ್ಲವನ್ನೂ ಬಿಟ್ಟು ಆತನಡಿವಿಡಿದು ನಡೆಗೊಂಡು, ದಾರಿಯಲ್ಲಿ ಮೆಳೆಗೆ ತಲೆಗೂದಲು ಸಿಕ್ಕಿ ಶಿವಯೋಗದಿಂದಿರುವ ನಾಗಿದೇವನನ್ನು ಕಂಡು ಅವನ ಕೂದಲು ಬಿಡಿಸುವರು. ಆಗ ನಾಗಿದೇವನು ಕಣ್ದೆರೆದು ಕಂಡು "ಹಾ ವೀರ, ಸಂಸಾರಬಂಧಮಂ ಪರಿಹರಿಸಿ ಬಂದೆಯಾ. ನಡೆ" ಎಂದು ಅವರಿರ್ವರು ವಿದ್ಯಾನಗರಿಗೆ ಬರುವರು. ಅಲ್ಲಿ ಹುಚ್ಚರಾವುತನ ಮನೆಯಂಗಣದೊಳು ಲಿಂಗಾರ್ಪಿತದ ಭಿಕ್ಷೆಯನ್ನು ಬೇಡಲು, ಆ ಮನೆಯಾಕೆಯು ಭಸಿತವನ್ನು ಮುಂದಿರಿಸಿ ತನ್ನ ಕೈಯ್ಕೊಂಬುದೆನ್ನುವಳು. ಆಗ ಆಕೆಯನ್ನು ಆ ಮನೆಯ ಮುಂದೆಯೇ ಸಂದೇಹವಿಲ್ಲದೆ ಸಂಭೋಗಿಸುತ್ತಿರಲು ಅವಳ ಗಂಡನು ಬಂದು ಅಲಗಿನಿಂದ ಅವರನ್ನು ತಿವಿದರೂ ಗಾಯುಗಳಿಲ್ಲದಿರುವುದನ್ನು ಕಂಡು ಅಚ್ಚರಿಗೊಂಡು ನಡುಗುತ್ತ ನಿಲ್ಲುವನು. ಆಗ ನಾಗಿದೇವನು ಕರುಣದಿಂದ "ಎಲವೊ, ಬೆದರಬೇಡ ನೀನೊಂದು ಭಿಕ್ಷವನಿತ್ತೆ, ಇವಳೊಂದು ಭಿಕ್ಷವನಿತ್ತಳು. ಇದರಲ್ಲಿ ನಿನಗೆ ಹೆಚ್ಚು ಕುಂದಿಲ್ಲ. ನೀನಂಜಲೇತಕೆ?" ಎಂದು ಹೇಳುವನು. ಪ್ರೌಢದೇವೇಂದ್ರನು ಈ ವಾರ್ತೆಯನ್ನು ಕೇಳಿ ಭಯಭಕ್ತಿಯಿಂದೆರಗಿ ಅವರನ್ನು ಗುರುಬಸವೇಶನ ಅರಮನೆಗೆ ಕಳುಹುವನು. ಅಲ್ಲಿ ಗುರುಬಸವನು ಲಿಂಗಪೂಜೆಯ ಮಾಡುತ್ತಿರುವುದನ್ನು ಕಂಡು ಉಪಕರಣಗಳನ್ನು ಬಿಸುಡಿ ದಂಡಿಗೆಯನ್ನು ನೆಲಕ್ಕಪ್ಪಳಿಸಲು, ಗುರುಬಸವನು ನಾಗಿದೇವನೊಡನೆ "ದಂಡಿಗೆ ನಿಮ್ಮನೇನು ಮಾಡಿತ್ತು?" ಎಂದು ನುಡಿಯುವನು. ಆಗ ನಾಗಿದೇವನು "ಲಿಂಗವ ಬಿಟ್ಟು ನಿನ್ನ ಧ್ಯಾನವು ಎಲ್ಲಿತ್ತು? ಬಯಲಸಂಧಾನದಲ್ಲಿದ್ದು ಅರ್ಪಿತಾವಧಾನವ ಮಾಡುವ ಕ್ರಮವು ನಿನಗೆ ಗೊತ್ತಿಲ್ಲ. ಐಕ್ಯಪದವನ್ನು ಸ್ವಾನುಭಾವದೊಳರಿಪೆನು" ಎನ್ನಲು, ಗುರುಬಸವದೇವನು ಅನುಮಾನವಿಲ್ಲದೆ ನಾಗಿದೇವನಿಗೆ ನಮಿಸಿ ವಿರಕ್ತರನ್ನು ಕೂಡಿ ಸಿಂಗಾರ ತೋಟಕ್ಕೆ ಹೋಗುವನು. ಅಲ್ಲಿ ತೆಂಗಿನ ಮರದ ಮೇಲಿನ ಎಳೆನೀರುಗಳು ತಮ್ಮ ಲಿಂಗಕ್ಕರ್ಪಿತವಾದುವು ಎನ್ನುತ್ತ ವಿರತರು ತಮ್ಮೊಳಗೆ ಮಾತನಾಡುವ ಕಾಲದಲ್ಲಿ ತೋಟಿಗನು ಅವನ್ನು ತಂದು ಮುಂದಿರಿಸುವನು. ಎಲ್ಲರೂ ಅರ್ಪಿತವಮಾಡಿಕೊಂಡ ಕಾಯಿಗಳಲ್ಲಿ ಮೊದಲಂತೆ ನೀರುಗಳಿರುವುವು. ನಾಗಿದೇವನ ಕಾಯಿಗಳಲ್ಲಿ ನೀರು ಇಂಗಿ ಬರು

ಲಾಗಲು ಅದನ್ನು ನೋಡಿ ವೀರಣ್ಣೊಡೆಯರು "ನಮ್ಮಂತೆ ಕ್ರಿಯೆಗಳನ್ನು ಮಾಡಿ ಶಿವನಿಗಿತ್ತು ತೆಗೆದುಕೊಳ್ಳಬೇಕು. ಇಲ್ಲವೆ ನಾಗಿದೇವನಂತೆ ನಡೆಯಬೇಕು" ಎಂದು ಹೇಳಿ ಆ ವಿರಕ್ತರಿಗೆ ಷಟ್ಸ್ಥಲಮಾರ್ಗವನ್ನು ತಿಳಿಪುವರು. ಆಮೇಲೆ ವೀರಣ್ಣೊಡೆಯರೂ ನಾಗಿದೇವನೂ ಮೋಹಿನೀಗಜವಿದ್ದ ಬಳಿಗೆ ಹೋಗುವರು. ಹಗ್ಗಗಳಿಂದ ಕಟ್ಟಿದ ಆ ಆನೆಯನ್ನು ನಾಗಿದೇವನು ಏರಲು ಆ ಹಗ್ಗಗಳೆಲ್ಲ ಬಂಗಾರವಾಗುವುವು. ಆಮೇಲೆ ನಾಗಿದೇವನು ತನ್ನೊಡನೆ ನಿರವಯವನ್ನೈದಲಪೇಕ್ಷಿಸಿದ ವೀರಣ್ಣೊಡೆಯರಿಗೆ ನೀವಿನ್ನು ಅರಸನಿಂದ ಪೂಜೆಗೊಳ್ಳುತ್ತ ಕೆಲವು ದಿನವಿದ್ದು ಬರಬೇಕೆಂದು ಹೇಳುವನು. ಅವನನ್ನು ನಂಬಿದ ವೀರಣ್ಣೊಡೆಯರು ಚಿಂತೆಗೊಳಗಾಗಲು "ಅನುಮಾನವೇಕೆ? ನಾನೇ ಬಂದು ನಿಮ್ಮನು ನಿರವಯವನ್ನೈದಿಸುವೆನು" ಎಂದು ವಿನಯದಿಂದ ಅವರ ಬೀಳ್ಕೊಟ್ಟು ನಿರವಯವನ್ನೈದುವನು (೭-೨೦).

ಆ ಮೇಲೆ ವೀರಣ್ಣೊಡೆಯರು ವಿದ್ಯಾನಗರಕೆ ಬಂದಿರುವುದನ್ನು ತಿಳಿದು ಪ್ರೌಢದೇವೇಂದ್ರನು ತನ್ನ ಮಗಳನ್ನು ಕೊಟ್ಟು ಕಳುಹುವನು. ನಾಗಿದೇವನು ಬರುವವರೆಗೂ ಆ ಸ್ಥಾನವನ್ನು ಬಿಟ್ಟು ಅಗಲದೆ ವೀರಣ್ಣೊಡೆಯರು ಅಲ್ಲಿಯೇ ಇರುವರು. ಒಂದು ದಿನ ವೀರಣ್ಣೊಡೆಯರು ಅರಸನೊಡನೆ ಪಂಪಾನದೀತೀರದಲ್ಲಿ ನಿಂತಿರಲು, ಒಂದು ಮೀನ್ಬಲಿಗಹಕ್ಕಿಯು ಮೀನವನ್ನು ತಿನ್ನುವೆನೆಂದು ಒಂದು ಮೀನವನ್ನು ಕಚ್ಚಿಕೊಂಡು ಗಗನಕೊಯ್ದು ಅಲ್ಲಿಂದ ಅದನ್ನು ಬಿಟ್ಟು ಮತ್ತೆ ಅದನ್ನು ಹಿಡಿದು ಲೀಲೆಯನಾಡುತ್ತಿರುವುದನ್ನು ನೋಡಿದರು. ಆಗ ವೀರಣ್ಣೊಡೆಯರು ಅದಕ್ಕೆ ಮೆಚ್ಚಿ ಒಂದು ಪಚ್ಚದ ಕಡಗವನ್ನು ಒಗೆಯಲು ಅದು ಹೊಳೆಯಲ್ಲಿ ಬಿತ್ತು. ಅದನ್ನು ಕಂಡು ಅರಸನು ಆ ಪಚ್ಚೆಯ ಕಡಗವನ್ನು ಏಕೆ ಬಿಸುಟಿದಿರಿಯೆಂದು ಕೇಳಲು, ಆ ಹಕ್ಕಿಗೆ ಮೆಚ್ಚಿ ಅದೋ ಅಲ್ಲಿ ಬಿಸುಟಿದೆನು ಎಂದು ಮತ್ತೊಂದು ಕಡಗವನ್ನು ಉಚ್ಚಿ ಮೊದಲಿನ ಕಡಗವು ಬಿದ್ದ ಸ್ಥಳದಲ್ಲಿ ಬಿಸುಟಿದನು. ಅವು ಬೆಲೆಯುಳ್ಳ ಕಡಗಗಳೆಂದು ಅರಸನು ಚಿಂತೆಗೊಳಗಾಗಲು ವೀರಣ್ಣೊಡೆಯರು "ಅರಸನೇ, ನೀನು ಅದೆಂಥ ಹುಚ್ಚನು? ನಿನ್ನ ಕಡಗಗಳು ಬೊಕ್ಕಸದಲ್ಲಿವೆ. ತರಿಸಿ ನೋಡು" ಎನಲು, ಅರಸನು ಅವನ್ನು ತರಿಸಿ ನೋಡಲು ಅವು ಇದ್ದುದನ್ನು ಕಂಡು ಬೆರಗಾಗುವನು (೨೧-೨೩).

ಒಮ್ಮೆ ಹೊನ್ನಯ್ಯನೆಂಬ ಅಗಸನು ತನ್ನ ಗುರುವಾದ ವೀರಣ್ಣೊಡೆಯರಿಗೊಂದು ಮತ್ತು ಅರಸನಿಗೊಂದು ಹೀಗೆ ಎರಡು ಚಂದ್ರಗಾವಿಯ ಬಟ್ಟೆಗಳನ್ನು ಕೊಡುವನು. ವೀರಣ್ಣೊಡೆಯರ ಅರಸಿಯು ಅವರಿಗೆ ಕೊಟ್ಟ ಬಟ್ಟೆಯನ್ನುಟ್ಟುಕೊಂಡು ತನ್ನ ತಂದೆಯ ಮನೆಗೆ ಬರುವಳು. ಅರಸನು ಹೊನ್ನಯ್ಯನಿಗೆ "ನನ್ನ ಒಡವೆಯನ್ನು ನಿನ್ನ ದೇವರಿಗೆ ಅದೇತು ಕೊಟ್ಟೆ?" ಎಂದು ಕೇಳಲು, "ನನ್ನ ದೇವರನು

ಅವರಿಗೆ ಕೊಟ್ಟೆನು. ಪರರೊಡವೆಯನ್ನು ಅವರಿಗೆ ಕೊಡುವೆನೇ ? ನಿನ್ನೊಡವೆಯು ನಿನ್ನ ಬೊಕ್ಕಸದ ಪೆಟ್ಟಿಗೆಯಲ್ಲಿದೆ. ಇದು ಹುಸಿಯಲ್ಲ" ಎಂದು ಹೇಳುವನು. ಅರಸನು ತನ್ನ ಪೆಟ್ಟಿಗೆಯಲ್ಲಿ ಅದನ್ನು ಕಂಡು "ಹೊನ್ನಯ್ಯ, ನೀನು ಅಗಸನಲ್ಲ" ವೆನಲು ಕೂಡಲೆ ಅವನು ನಿರವಯವಾಗುವನು (೨೪-೨೫).

ಮತ್ತೊಮ್ಮೆ ಮಿಡಿಬಿಲ್ಲ ಶಾಂತಿದೇವರು ತನ್ನ ಲಿಂಗವನ್ನು ಧರಿಸುತ್ತಿರುವಾಗ ಎಲ್ಲರೂ ನೋಡ ನೋಡುತ್ತ ಅವರಿಂದ ಪಾರಾಗಿ ಹೋಗಲು ಇವನು ಹುಚ್ಚನೆಂದು ಜನರೆಲ್ಲ ಹಿಂಬಾಲಿಸುವರು. ಅವನು ವೀರಣ್ಣೊಡೆಯರ ಬಳಿಗೆ ಬಂದು ಇನ್ನು ಸಂಧಾನವಾಯಿತೆಂದು ಲಿಂಗವನೆಸೆದು ಅದರೊಡನೆ ನಿರವಯವಾಗುವನು (೨೬).

ಹೇಟಿಯ ಮರುಳನು ಕೋಳಿಗಳ ಮೇಲೆ ತನ್ನ ಹೇಟಿಯನ್ನು ಬಿಟ್ಟು ಕಾಳೆಗದಿಂದ ಅವನ್ನೆಲ್ಲ ಗೆದ್ದೊಯ್ಯುತ್ತಿರಲು ವೀರಣ್ಣೊಡೆಯರು ಚಿಂತೆಯಿಂದ ಅಲ್ಲಿಗೆ ಬಂದು ನೋಡುವರು. ಆಗ ಆ ಕೋಳಿಗಳನ್ನೆಲ್ಲ ಮಾಯಗೊಳಿಸಿ ತಾನು ಬಯಲಾಗುವನು (೨೭).

ತಗರ ಕಾಳೆಗದ ಪ್ರಭುವು ಗೆಲ್ಲಗೂಳಿಯ ಅಂಗಡಿಯ ತಿನಸುಗಳನ್ನು ತಿನ್ನುತ್ತಿರಲು ಆ ಅಂಗಡಿಯವರು ಅವನನ್ನು ಹಿಂಸಿಸುವರು. ಆಗ ವೀರಣ್ಣೊಡೆಯರು ಆತನನ್ನು ಕಂಡು "ಕೊಲ್ಲಬೇಡಿ, ಈತನೇ ಪರಮ ಶಿವಯೋಗಿ" ಎಂದು ಹೇಳಲು, ಆತನು ಅರಿದನೆಂದು ಕೂಡಲೆ ಪ್ರಭುವು ನಿರವಯವಾಗುವನು (೨೮).

ಬಾಲಲಿಂಗಣ್ಣನು ವೀರಣ್ಣೊಡೆಯರ ಮನೆಗೆ ಬಂದು ಭಿಕ್ಷೆ ಬೇಡುತ್ತಿರಲು ಅವರು ಅವನು ಬಾಲನೆಂದು ಒಳಗೆ ಕರೆದೊಯ್ವರು. ಅಲ್ಲಿ ಲಿಂಗಣ್ಣನು ಮಂಚದ ಮೇಲೆ ಪವಡಿಸಿರಲು ಲೀಲೆಯಿಂದ ಆತನ ಅಂಗೈಯ ಲಿಂಗವನ್ನು ತೆಗೆಯುವರು. ಎಲ್ಲರೂ ಸವಿಸಿ ಬಳಿಕ ಬಾಲಲಿಂಗಣ್ಣನನ್ನು ಕರೆಯಲು ಅವನ ಹರಣವಳಿದು ಡಿಂಬವಿರುವುದು. ಆಗ ವೀರಣ್ಣೊಡೆಯರೇ ತಾವು ತೆಗೆದುಕೊಂಡಿದ್ದ ಲಿಂಗವನ್ನು ಅಂಗೈಯೊಳಿರಿಸಲು ಲಿಂಗಣ್ಣನು ಕಣ್ತೆರೆದುದನ್ನು ಕಂಡು ಉಂಡುದಿಲ್ಲ ಏಳೆನ್ನುವರು. ಆಗ ಅವನು ನಿಮ್ಮೊಡನೆ ಉಂಡೆನೆಂದು ಹೇಳಿ ಊಟಗಳ ಗುರುತುಗಳನ್ನು ಹೇಳುವನು. ಆಗ ವೀರಣ್ಣೊಡೆಯರು ನೀನು ಪ್ರಾಣಲಿಂಗಸಂಧಾನಿ ಎಂದು ಬಾಲಲಿಂಗಣ್ಣನನ್ನು ಹಿಡಿದೆತ್ತಿ ಸ್ನಾನುಭಾವದೊಳು ಕೊಂಡಾಡುತ್ತಿರಲು ನಾಗಿದೇವನು ಅವರನ್ನು ನಿರವಯವನ್ನೈದಿಸುವನು (೨೯-೩೧).

ಕಾಲನ್ನು ಹಗ್ಗದಿಂದ ಸುತ್ತಿಕೊಂಡು ಅದಕ್ಕೆ ಲಿಂಗವನ್ನು ಕಟ್ಟಿಕೊಂಡು (ನಾಗಿದೇವನು?) ಅಡ್ಡಾಡುತ್ತಿರಲು, ಪ್ರೌಢದೇವರಾಯನು ಅವನು ಮಲಗಿರುವಾಗ್ಗೆ ಆ ಲಿಂಗವನ್ನು ತೆಗೆಯಿಸುವನು. ಆಗ ಹರಣವಿಲ್ಲದೆ ಡಿಂಬವಿರುವುದನ್ನು ಅರಸನು ನೋಡಿ ಆ ಶವವಿಗೆ ಲಿಂಗವನ್ನು ಕಟ್ಟಿಸಲು ಕಣ್ತೆರೆದು ಅರಸನರಿದನೆಂದು ನಿರವಯ

ನಾಗುವನು (೩೨).

ಬತ್ತಲೇಶ್ವರನೆಂಬ ಶಿವಯೋಗಿಯು ಗುಹೆಯಲ್ಲಿ ಬತ್ತಿದ ಶರೀರದಿಂದ ಇರುವುದನ್ನು ಅರಸನು ನೋಡಿ, ಪದ್ಮಾವತಿ ಎಂಬುವಳಿಗೆ “ ನೀನು ಈತನನ್ನು ಒಲಿಸಲಾಪೆಯಾ? ” ಎಂದು ಕೇಳುವನು. ಆಗ ಆಕೆಯು ನಾನು ಈತನಿಂದ ಪುತ್ರನನ್ನು ಪಡೆದು ನಿನ್ನ ಬಳಿಗೆ ಕರೆತರುವೆನೆಂದು ಹೇಳಿ ಆ ಯತಿಯನೊಲಿಸಿಕೊಂಡು ಒರ್ವ ಮಗನನ್ನು ಪಡೆವಳು. ಒಂದು ದಿವಸ ವಿರೂಪಾಕ್ಷಲಿಂಗನ ತೇರ ಪರಿಸೆಗೆ ಪದ್ಮಾವತಿಯು ತನ್ನ ಪುರುಷನನ್ನು ಕೂಡಿಕೊಂಡು ಬಂದು ಆತನ ಕೆಯ್ಗೆ ಮಗನನ್ನು ಕೊಟ್ಟು ಅರಸನಿಗೆ ಇವನೇ ಬತ್ತಲೇಶ್ವರನೆಂದು ಕರವೆತ್ತಿ ತೋರಿಸುತ್ತಿರಲು, “ ಇವರು ಅರಿವರು, ನಾವು ಇನ್ನು ಇಲ್ಲಿ ಇರಬಾರದೆಂ”ದು ಆ ಶಿಶುವನ್ನು ಮೇಲಕ್ಕೆ ಹಾಯ್ಕಿ ತಾನು ಬಯಲಾಗುವನು (೩೩-೩೪).

ಗುರುಬಸವೇಶನು ವಾದದಿಂದ ಶಾರದೆಯ ಪೀಠವನ್ನು ಏರಿ ಗೆಲವಿನಿಂದ ಮರಳಿಬಂದು ಪ್ರೌಢನರಮನೆಯೊಳಿರುತ್ತಿರಲು, ಒಬ್ಬ ಯೋಗಿಯು ಖೇಚರಗಮನದಿಂದ ಇರುವುದನ್ನು ಅರಸನು ಆಶ್ಚರ್ಯದಿಂದ ನೋಡುತ್ತಿರಲು, ಗುರುಬಸವನು ಅವನಿಗಿಂತಲೂ ಮೇಲಕ್ಕೆ ಹೋಗಿ ಖೇಚರದಲ್ಲಿ ಸಕಲರಾಗಗಳನ್ನು ಹಾಡಿ ನಿರವಯವಪ್ಪುವನು (೩೫).

ನಿರ್ವಾಣಿಬೋಳೇಶನು ಅನೇಕ ಪವಾಡಗಳನ್ನು ಮೆರೆದು ಆಲಮರದ ಜಡೆಗಳನ್ನು ಹಿಡಿದುಕೊಂಡು ಶಿವಯೋಗಸಮಾಧಿಯಲ್ಲಿರುವನು. ಅಲ್ಲಿದ್ದ ಭಕ್ತ ಜನಜಾಲವು ಈತನು ತೀರಿಕೊಂಡನೆಂದು ತೆಗೆಯಲು ಅವರ ಕೈಯಲ್ಲಿಯೇ ನಿರವಯವಾಗುವನು (೩೬).

ಒಬ್ಬನು ಮಕ್ಕಳೊಡನೆ ಮರುಳನಂತೆ ಆಡುತ್ತಿರುವುದನ್ನು ಅರಸನು ಕಂಡು ಅವನು ಪರಮ ಶಿವಯೋಗಿಯೆಂದು ಕರೆದೊಡೆ ಅದನರಿದು ಅವನು ಬಯಲಾಗುವನು. ಇಂತು ಆತಮೊದಲಾಗಿ ನೂರೊಂದು ವಿರತರು ಮರುಳರಂದದೊಳಿದ್ದು ನಿರಾಕಾರವನ್ನು ತಳೆವರು (೩೭).

ಅಲ್ಲಿ ಮಗ್ಗೆಯ ಮಾಯಿದೇವಪ್ರಭುವು ಸಕಲಾಗಮಗಳಿಗೆ ನೆಲೆಯೆನಿಸಿ ಪ್ರೌಢನಿಂದ ಪೂಜೆಗೊಂಡು ಷಟ್ಸ್ಥಲಮಾರ್ಗವನ್ನು ಶಿವಭಕ್ತಸಂತತಿಗೆ ಕರತಲಾಮಲಕವಾಗಿ ತಿಳಿವಂತೆ ಅನುಭವಸೂತ್ರವಾದಿ ಶಾಸ್ತ್ರಗಳನ್ನು ಪೇಳಿ ಶಿವಸಮಾಧಿಯಲ್ಲಿ ನಿಂದು ಮುಕ್ತನಾಗುವನು (೩೮).

ಪ್ರೌಢರಾಯನು ಅಳಿದ ಮೇಲೆ ಅವನ ವಂಶದಲ್ಲಿ ವಿರೂಪಾಕ್ಷನೆಂಬುವನು ಆಳುವನು. ಆಗ ನರಸಣನಾಯಕನು ಅವನನ್ನು ಗೆದ್ದು ವಿದ್ಯಾನಗರಿಯನ್ನಾಳುವನು. ಅವನ ವಂಶದವರು ಐವತ್ತೊಂದು ವರುಷಗಳವರೆಗೆ ರಾಜ್ಯವಾಳುವರು. ಅವ

ದಲ್ಲಿ ಅಚ್ಯುತನೆಂಬುವನೇ ಕಡೆ. ಆಮೇಲೆ ಅವನ ಅಳಿಯಂದಿರು ಆ ಪಟ್ಟವನ್ನಾಳು
ವರು (೩೯).

ಪ್ರೌಢರಾಯನಳಿದ ಕೆಲವು ದಿವಸಗಳ ಮೇಲೆ ಅನಾಚಾರವು ಹೆಚ್ಚಿ ವೀರಶೈವಾ ಚಾರವಡಗಿ ಪರವಾದಿಗಳು ಹೆಚ್ಚಾಗಿರಲು, ಈಶನು ನಿರಂಜನಗಣೇಶನನ್ನು ಏಳ್ನೂರು ಗಣೇಶ್ವರರೊಡನೆ ಭೂಮಿಯೊಳಗುದಿಸಿ ಜಂಗಮಸ್ಥಲವಾಂತು ಷಟ್ಸ್ಥಲವನುದ್ಧರಿಸೆಂದು ಭೂಮಿಗೆ ಕಳುಹುವನು (೪೦-೪೩).

ಗೋಸಲ ಚೆನ್ನಬಸವೇಶ್ವರನ ಹಸ್ತದಿಂದ ನಿರಂಜನಗಣೇಶ್ವರನು ಉದಿಸಿ ಸಿದ್ಧೇಶನಾಮವನಾಂತು ಕಗ್ಗೆರೆಯ ತೋಟಕ್ಕೆ ಬರುವನು. ಅಲ್ಲಿ ನಂಬ್ಯಣ್ಣನೆಂಬುವನು ಭಕ್ತಿಯಿಂದ ಶರಣೆಂದು ಅವನನ್ನು ಭಿಕ್ಷಕ್ಕೆ ಬಿನ್ನವಿಸಿಕೊಂಡು ಈಗ ತಿರುಗಿ ಬಂದು ನಾನೇ ಕರೆದುಕೊಂಡು ಹೋಗುವೆನು ಎಂದು ಹೇಳಿ ಕಗ್ಗೆರೆಗೆ ತಿರುಗಿ ಹೋಗುವ ಷ್ಟರಲ್ಲಿ ಜಗಳದಿಂದ ಊರು ಒಡೆದು ಹೋಗುವುದು. ಕೆಲವು ದಿವಸಗಳಾದ ಮೇಲೆ ನಂಬ್ಯಣ್ಣನು ಬಂದು ತೋಟದೊಳಗೆ ನೋಡಲು ಶಿವಧ್ಯಾನದಿಂದ ಪರವಶವನ್ನೈದಿ ಗೆದ್ದಲೆ ಹುತ್ತವಿಟ್ಟಿರುವ ಶಿವಯೋಗಿಯನ್ನು ಕಾಣುವನು. ಜನರೆಲ್ಲರೂ ಅಚ್ಚರಿಗೊಂಡು ಹುತ್ತವನ್ನು ಬಗಿದು ಆ ಶಿವಯೋಗಿಯನ್ನು ಕಂಡು ಅವನನ್ನು ಅಗಣಿತ ಮಹಾಪುರುಷನಾದ ತೋಂಟದಸಿದ್ಧಲಿಂಗನೆಂದು ಪೂಜಿಸುವರು. ಗಣನಾಥರೂ ಸಹ ಚರರೂಪಿನಿಂದುದಿಸಿ ಅಲ್ಲಲ್ಲಿ ನಾನಾ ಪವಾಡಗಳನ್ನು ಮೆರೆದು ಪೂಜೆಗೊಳ್ಳುತ್ತ ತೋಂಟದ ಯತಿಯನ್ನು ಸಾರುವರು. ತೋಂಟದಾರ್ಯರು ತತ್ತ್ವಾನುಭವಗಳಿಂದ ಸೊಲ್ಲುಸೊಲ್ಲಿಗೆ ಆ ವಿರಕ್ತರಿಗೆ ಷಟ್ಸ್ಥಲವನುಸಿರುವರು (೪೪-೪೬).

ಆ ವಿರಕ್ತರಲ್ಲಿ ಸಿದ್ಧಲಿಂಗೇಶ್ವರ ಕಂಬಳಾದೇವರು ಸಿದ್ಧಸಂಜೇಶ್ವರ ಚೆನ್ನದೇವರು ದೊಡ್ಡ ಸಿದ್ಧಲಿಂಗೇಶ್ವರ ಕಂಕಣದೇವರು ಲಂಬಕರ್ಣದೇವರು ಸಿದ್ಧಮಲ್ಲೇಶ್ವರ ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಯೆಡತೊರೆಯಪುರದ ಗುರುಸಿದ್ಧವೀರಣ್ಣೊಡೆಯರು ಘನಲಿಂಗದೇವರು ಚಿಕ್ಕಮಲ್ಲೇಶ ಮರುಳಸಿದ್ಧೇಶ್ವರ ಚಂದ್ರಶೇಖರ ಸುರಗಿಯಾರ್ಯ ಕಾಂತಮಲ್ಲಿಕಾರ್ಜುನದೇವರು ಬೆಡಗಿನ ಪರ್ವತೇಶ್ವರ ಪಟ್ಟಣದ ದೇವರು ಜಕುನಿಯ ಮರುಳದೇವರು ಮಳೆಯದೇವರು ಬತ್ತಲಿದೇವರು ಸಂಪಗೆಯ ರಾಚವಟ್ಟಿದೇವರು ಸಪ್ಪಿಯಾರ್ಯ ಉಪ್ಪಿನಹಳ್ಳಿಯಾರ್ಯ ಶೀಲವಂತಾರ್ಯ ಕೊಡಗಿಯ ಹಳ್ಳಿಯಾರ್ಯ ಜೋಲಿಯ ಬಸವೇಶ್ವರ ರಾಚಪಟ್ಟ ಕೋರಿಯ ಸಿದ್ಧಬಸವೇಶ್ವರ ಹಿರಣ್ಯಾರ್ಯ ಶಿವಪೂಜೆಯಾರ್ಯನೆನಿಸುವ ಬೋಳಬಸವೇಶ ಕಿತ್ತಾಪುರದ ಚೆನ್ನಮಲ್ಲೇಶ್ವರಾದಿ ಏಳ್ನೂರು ವಿರತರು ತೋಂಟದ ಯತೀಶನನ್ನು ಕೂಡಿಕೊಂಡು ಷಟ್ಸ್ಥಲಮಾರ್ಗವನ್ನು ನೆಲೆಗೊಳಿಸಿ ಪೂಜೆಗೊಂಡು ನಿಜಮುಕ್ತರಾದರು. ಅವರ ತರುವಾಯ ಹುಚ್ಚಸಂಜೇಶ್ವರನೂ ಹುಚ್ಚ

ವಿರೂಪಾಕ್ಷನೂ ಶ್ರೀಗಿರಿಯ ಪ್ರಾಂತದೊಳಿರ್ಪ ಮೋಹಿನಿಯ ಗಜವನ್ನು ಹತ್ತಿ ಸಿರ ವಯವಪ್ಪರು (೪೭-೫೦).

ಮಾಡಾಪುರದ ಮರುಳದೇವರೆಂಬುವರು ವಾದದಿಂದ ಸತ್ತ ಪ್ರಾಣಗಳನ್ನು ಪಡೆದು ಬಿತ್ತಿದ ಆರು ತಿಂಗಳಿಗೆ ತೆಂಗು ಮೊದಲಾದ ಫಲಗಳನ್ನು ಪಡೆಯುವರು. ಅನಾದಿಸಿದ್ಧರ ದೇವನಾದ ಸಿದ್ಧವೀರೇಶನು ಹೊನ್ನಹಳ್ಳಿಯಲ್ಲಿರುತ್ತ ವಿನೋದದಿಂದ ನಾನಾ ಪವಾಡಗಳನ್ನು ಮೆರೆಯುವನು. ನಿಡುಮಾಗಡಿಯ ಕರಿಯ ಬಸವೇಶನು ತೆಂಗಿನಮರದ ಭಿಕ್ಷೆಯನ್ನು ಬೇಡಲು ಅದು ಬಾಗಿ ನಿಂತು ಫಲಗಳನ್ನು ನೀಡಿ ಮರಳಿ ಹಿಂದಿನಂತೆ ಎಸೆವುದು. ಅದರಂತೆಯೇ ಸುವ್ರತದ ಕರಡಿಯ ಹಾಲದೇವರೂ ಸರವೆಯ ಸಿದ್ಧರಾಮೇಶ ಮೊದಲಾದವರೂ ಊದಿಸಿ ನಾನಾ ಪವಾಡಗಳನ್ನು ಮೆರೆಯುವರು (೫೧-೫೨).

ಷಟ್ಸ್ಥಲಬ್ರಹ್ಮಿಯೂ ಚರಮೂರ್ತಿಯೂ ಯತಿಕುಲತಿಲಕನೂ ಎಂದೆನಿಪ ಕೋರಾನ್ನದಾರ್ಯನೂ ಬುಕ್ಕಸಾಗರದ ಕರಿಯಸಿದ್ಧೇಶ್ವರನೂ ಜಂಗಮಕ್ಕೆ ಮೃಷ್ಟಾನ್ನವನ್ನು ನೀಡಿಸುವರು. ನಾರಕಂಥೆಯದೇವರು ಚೆಂಗಡಹಳ್ಳಿ ವೀರಪ್ಪನು ಮಾವಿನಹಳ್ಳಿ ಮಲ್ಲಪ್ಪನು ಮತ್ತು ಆ ಗ್ರಾಮದ ಸಂಗಮೇಶನು ಗುಮ್ಮಟಾಪುರದ ಜಂಗುಳಿ ವೀರಪ್ಪನು ಸುಪ್ರಸಾದಿದೇವರು ಇವರೇ ಮೊದಲಾದ ಚರಮೂರ್ತಿಗಳು ಜಂಗಮದಾಸೋಹವನ್ನು ಮಾಡುವರು (೫೩-೫೪).

ಅದರಂತೆಯೇ ನಂಜರಾಯ ಕೆಂಚಸೋಮಣ್ಣನಾಯಕ ಎಳಂದೂರ ಚೆನ್ನೊಡೆಯರು ಬರಗಿರಿಯ ದೇವಿನಾಯಕ ಬುಕ್ಕಣ್ಣೊಡೆಯ ಸಿದ್ಧಮಲಿನಾಯಕ ಶಿವಶರಣನಾದ ಸಂಕಣ್ಣನಾಯಕ ಜಂಬೂರದಾನಿವಾಸದ ದೊರೆಗಳು ಕೇತಸಾಗರದ ಚಿಕ್ಕಣ್ಣಸೆಟ್ಟಿ ಬಿಜ್ಜಾವರದ ಪ್ರಭುವು ಚಿಕ್ಕಣಗೌಡ ಸುಕುಮಾರ ತಮ್ಮಣಗೌಡ ತಗಡೂರ ಪ್ರಭುವು ತಳಕಾಡ ಚಂದ್ರಶೇಖರ ಭೋಗವಾಡಿಯ ಲಿಂಗರಾಯ ಭೂತಹಿತನಾದ ಉಡುವಂಕನಾಡ ಪ್ರಭು ಇವರೇ ಮೊದಲಾದ ದೊರೆಗಳು ಜಂಗಮದಾಸೋಹವನ್ನು ಮಾಡುವರು (೫೫-೫೬).

ಸೋಲೂರ ಬಸವಪ್ಪ ಸಂಗಯ್ಯ ಮಹಾಂತಯ್ಯ ಸಂಡಿಗೆಯ ಸಿದ್ದಪ್ಪ ಮುದ್ದುಸಂಗಪ್ಪ ಅಂದೂರ ಕೆರೆಯ ದಾಸೋಹದ ಲಿಂಗಪ್ಪ ಮಲ್ಲಪ್ಪ ಕಾಬಣದ ಬಿಂಗಿಗಂಗಾಧರ ಕಳಲೆಯ ವೀರಪ್ಪ ಧೂಳಾಭಕ್ತ ಪೂಸಹಳ್ಳಿಯ ನಾಗಪ್ಪ ದಾತಬಸವಪ್ಪ ಮೋಳಿಗಯ್ಯ ಬಾಣಾವರದ ಸಿದ್ದಪ್ಪ ಶೀಲವಂತ ಸಿರಿಯಾಳಯ್ಯ ಹೋಳನ ಸಿದ್ದಪ್ಪ ಹೊಸದುರ್ಗದ ಕಲ್ಲಪ್ಪ ವಿರತ ಬಸವಪ್ಪ ತೈಲದ ಮರುಳಪ್ಪ ಮಾನಂಗಿ ಶಿಖರಪ್ಪ ಬಿಟ್ಟಮುಂಡೆಯ ಪ್ರಭು ಬಯಲಪ್ರಭು ಕಳಲಿಯ ಕಂಚಿದೇವರು ಕಾನಾಪುರದ ಮರುಳಸಿದ್ಧೇಶ ಉಪ್ಪಲಗುಡಿಯ ಸಂಗಮೇಶ ಕೊಟ್ಟೂರ ಬಸವಲಿಂಗೇಶ ಆನೆಯ

ಗೊಂದಿಬೆಟ್ಟದಲ್ಲಿರುವ ಹುಚ್ಚದೇವರು ಬೆಳುಗಾವಿ ಹುಚ್ಚಸಿದ್ಧರಾಮೇಶ ಇವರೇ ಮೊದಲಾದ ನಿರವಧಿಕ ಮಹಿಮೆಯ ಪುರುಷರು ಜಂಗಮದಾಸೋಹವನ್ನು ಮಾಡಿ ನಿಜಲಿಂಗೈಕ್ಯರಹರು (೫೭-೫೯).

ನರಸಿಂಹವಂಶವಳಿಯರು ಮೂವರು ತುರುಕರೊಡನೆ ಕಾದುವರು. ಅವರಲ್ಲಿ ಹಿರಿಯನಾದವನ ತಲೆಯು ಕಾಶಿಯಲ್ಲಿ ಪೂಜೆಗೊಂಬುದು. ಉಳಿದವರು ತಮ್ಮ ಪುರಕ್ಕೆ ಓಡಿಹೋಗಲು ಅಲ್ಲಿಗೆ ತುರುಕರು ಬಂದು ಸೆರೆವಿಡಿದು ಸೂರಾಡಿ ಸಕಲರನ್ನು ಸಂಹರಿಪರು. ಆಮೇಲೆ ಹಂಪೆಯ ನೆಲೆನೆಲೆಯ ಗೋಪುರಗಳನ್ನು ಅಳಿದು, ಮಾತಂಗದಿಂದ ವೀರೇಶನನ್ನು ಕಿತ್ತು, ವಿಷ್ಣು ಮೊದಲಾದ ಪ್ರತಿಮೆಗಳನ್ನು ಒಡೆದು, ಸಕಲವನ್ನು ಸಂಹರಿಸಿ ಕೆಲವು ದಿನಗಳಿಗೆ ಅಲ್ಲಿಂದ ತಮ್ಮ ತಮ್ಮ ನೆಲೆಗಳಿಗೆ ಹೋಗುವರು. ಅಲ್ಲಿಂದ ಆ ಪಟ್ಟಣವು ಕೆಟ್ಟು ಆ ರಾಜ್ಯದಲ್ಲಿ ಹಟ್ಟಿಕೊಟ್ಟಿಗೆಗಳಾದುವು. ಅಲ್ಲಲ್ಲಿ ಪ್ರಜೆಗಳ ಧನವನ್ನು ತೆಗೆದುಕೊಂಡು ಬಾಧಿಸುವರು. ಜಂಗಮರೂ ಭಕ್ತರೂ ಆಚಾರವನ್ನು ಬಿಟ್ಟು ಮನಬಂದಂತೆ ನಡೆದು ಧರ್ಮವನ್ನು ವರ್ಜಿಸುವರು. ದುರ್ಗಿಮಾರಿಯರು ನರಬೇಂಟೆಯನಾಡುವರು. ಅವರಲ್ಲಿ ಕುಲಕೊಬ್ಬ ಸತ್ಯರು ಉಳಿದು ನಿಕ್ಕವರು ಲಯವಪ್ಪರು. ತುರುಕರು ಅಲ್ಲಿಂದ ಹೋಗಲು ಅಳಿದ ಅಳಿಯನ ಅನುಜನು ಅಲ್ಲಿಗೆ ಬಂದು ಪುನಃ ತನ್ನ ರಾಜ್ಯವನಾಳುವನು (೬೦-೬೩).

ಮುಂದೆ ಕಲಿಯುಗದ ೪೬೮೩ನೆಯ ಸ್ವಭಾನು ಸಂವತ್ಸರದ ಮಾಘ ಬಹುಳ ಚತುರ್ದಶಿ ಸೋಮವಾರದ ಇಪ್ಪತ್ತೆಂಟು ಗಳಿಗೆಯಲ್ಲಿ ಕರ್ನಾಟಕ ದೇಶಕ್ಕೆ ವೀರವಸಂತ ಭೂಪಾಲನು ಅತಿಗೋಪ್ಯದಿಂದ ಬರುವನು. ಅವನು ಶಿವಭಕ್ತಕ್ಷತ್ರಿಯರಲ್ಲಿ ಜನಿಸಿ ಎಣ್ಣೆಕಾವೇರಿಮಧ್ಯದಲ್ಲಿರುವ ಬಸವನಾಮಾಂಕಿತ ಪಟ್ಟಣಕ್ಕೆ ಹೋಗುವನು. ನಾವು ಆಗ ಆ ಸ್ಥಳದಲ್ಲಿ ವಿಪ್ರಜಾತಿಯಲ್ಲುದಿಸಿ ಪಟ್ಟಲವನುದ್ಧರಿಸುವೆವು. ಈ ಬಸವಣ್ಣನೂ ಸಹ ಅಖಿಲಗಣಸಂಕುಲಸಹಿತನಾಗಿ ಅಲ್ಲಿಗೆ ಬರುವನು (೬೪-೬೫).

ನರಸಿಂಹವಂಶದ ಅಳಿಯರ ಸುತರು ತುರುಕಾಣ್ಯಕ್ಕೆ ಹೋಗಿ, ಬಿದಿರೆಯ ಕೋಟೆಯನ್ನು ಕೆಡಹಿ, ಕಾಶಿಯ ಪರಿಯಂತರ ತುರುಕರನ್ನು ಸಂಹರಿಸುವರು. ಅದನ್ನು ಕೇಳಿ ದಿಲ್ಲಿಯ ಸುರಿತಾಳನು ತೆಲುಗರ ಮೇಲೆ ದಂಡೆತ್ತಿ ಹದಿನೆಂಟು ನೆಂಜಯದ ಖಾನರುಸಹ ಹದಿನೆಂಟು ಲಕ್ಷ ಕುದುರೆಯ ದಂಡನ್ನು ಕೂಡಿಕೊಂಡು ಸಕಲದೇಶಗಳನ್ನು ಸುಡುತ್ತ ರಾಮೇಶಪರಿಯಂತರ ಹೋಗಿ ಅಲ್ಲಿಂದ ಮರಳಿ ಕದಲುವನು. ತಮನಾಯ ಬೇಡರು ಅಲ್ಲಲ್ಲಿ ಗಿಡಕೊಂಡು ಕುದುರೆಯ ತೆಗೆತೆಗೆದು ಕಟ್ಟುತ್ತ ಖಾನರ ದಳವನ್ನು ಸುಲಿದು ಸೂರಾಡಿ ಸಂಹರಿಪರು. ಬಂದ ದಂಡಿನಲ್ಲಿ ಅರ್ಧವಳಿಯಲು ಅವರು ಹಿಂದುವರನೆಲ್ಲರನ್ನು ಸಂಹರಿಸುತ್ತ ಆನೆಯಗೊಂದಿಯಲ್ಲಿ ಬಾಳೆಯವ ಬಿಟ್ಟು. ಮುಂದಿದ್ದ ಬಾಲಿಯ ಭಂಡಾರವನ್ನು ತೆಗೆಸಿ, ಅಲ್ಲಿದ್ದ ಧನದ ರಾಶಿಯು

ನನಗೆ ತನಗೆ ಎಂದು ತಮ್ಮೊಳಗೆ ತಾವೇ ಕಡಿದಾಡಿ ಮಡಿವರು. ಹೀಗೆ ತುರುಕರು ಹತರಾದ ಮೇಲೆ ಬೇಡರು ಆ ಪಟ್ಟಣವನ್ನು ಕಟ್ಟಿಸಿ ಆರು ತಿಂಗಳವರೆಗೆ ಅಲ್ಲಿ ಪಟ್ಟವನ್ನಾಳುವರು (೬೬-೬೯).

ಬಸವನಾಮಾಂಕಿತದ ಪಟ್ಟಣದಲ್ಲಿ ಆ ವೀರವಸಂತನಿಗೆ ಪಟ್ಟವ ಕಟ್ಟಲು ಅವನು ವಿಷ್ಣುನಗರಿಗೆ ಬಂದು ಬಾಲಿಯ ಭಂಡಾರದ ಧನವನ್ನು ವಶಮಾಡಿಕೊಂಡು ಆ ರಾಜ್ಯವನ್ನು ಪಾಲಿಸುತ್ತಿದ್ದು ಕಲ್ಯಾಣಪಟ್ಟಣವನ್ನೂ ಅಲ್ಲಿಯ ತ್ರಿಪುರಾಂತಕಾಲಯವಾದಿ ಗುಡಿಗಳನ್ನೂ ಬಸವಣ್ಣ ಮೊದಲಾದ ಸಕಲ ಶರಣರ ಮನೆಮಠಗಳನ್ನೂ ಮಿಸುನಿಗೆಲಸದಿಂದಲೂ ನಾನಾಚಿತ್ರಕುಶಲದಿಂದಲೂ ಕಟ್ಟಿಸುವನು. ಈ ಪುರವು ಸಕಲ ಸಂಪತ್ತು ಶಿವಭಕ್ತಿ ಸುಕೃತಗಳಿಗೆ ನೆಲೆಯಾಗಿ ರಾಜಿಸಲು, ವೀರವಸಂತನು ವಿಷ್ಣುನಗರಿಯಿಂದ ಬಂದು ಅಳಿಯಬಿಜ್ಜಳರಾಯನ ಅರಮನೆಯಲ್ಲಿ ಅಧಿಕತರ ವಿಭವದಿಂದಿರುವನು (೭೦-೭೩). ಆಗ ಬಸವೇಶನು ೭೭೦ ಅಮರಗಣವಿಸರವನ್ನು ಕೂಡಿಕೊಂಡೆಯ್ತಂದು ಅವರೆಲ್ಲರು ತಮ್ಮ ತಮ್ಮ ಅರಮನೆಗಳಲ್ಲಿರುವರು. ಆ ಮೇಲೆ ವೀರವಸಂತರಾಯನು ನಮಗೆ ಪ್ರಧಾನಿಪಟ್ಟವನ್ನು ಕಟ್ಟಲು ನಾವು ನಮ್ಮ ಅರಮನೆಗೆ ಹೋಗಿ ಸಂತಸದಿಂದಿರುವೆವು. ಇಂತಿದು ಮುಂದಾಗುವ ಸುದ್ದಿ. ನೀನು ಮಾತ್ರ ಸೊನ್ನಲಾಪುರದಲ್ಲಿ ಐಕ್ಯಸ್ಥಲದಲ್ಲಿ ನಿಂದು ನಿಜಸುಖಸಮಾಧಿಯೊಳಿರು.

ಹೀಗೆ ಚೆನ್ನಬಸವೇಶನು ಸಿದ್ಧರಾಮೇಶನಿಗೆ ಅತಿಕರುಣದಿಂದ ಹೇಳಲು ಸಿದ್ಧರಾಮೇಶನು ಬಸವೇಶ ಮೊದಲಾದ ಶರಣರಿಗೆ ಭಕ್ತಿಯಿಂದ ನಮಿಸಿ ಅವರನ್ನು ಬೀಳ್ಕೊಂಡು ಸೊನ್ನಲಾಪುರಕ್ಕೆ ಹೋಗಿ ಶಿವಸಮಾಧಿಯೊಳಿದ್ದನು. ಇತ್ತ ಕಲ್ಯಾಣಪಟ್ಟಣದಲ್ಲಿ ಬಸವೇಶ ಮೊದಲಾದ ಶಿವಶರಣರು ಶಿವತತ್ತ್ವಗೋಷ್ಠಿಯಿಂದ ಸುಖವಿದ್ದರು.

ಈ ಚೆನ್ನಬಸವೇಶನ ಪುರಾಣವನ್ನು ಪಂಡಿತಾಗ್ರಣಿಯಾದ ವಿರೂಪಾಕ್ಷನು ಶಾಲಿವಾಹನ ಶಕದ ೧೫೦೭ನೆಯ ತಾರಣಸಂವತ್ಸರದ ಶ್ರಾವಣ ಬಹುಳ ದಶಮಿಯ ಗುರುವಾರ ದಿನದಲ್ಲಿ ಹೇಳಿ ಮುಗಿಸಿದನು.

ಚೆನ್ನಬಸವ ಪುರಾಣ

ಶ್ರೀಗುರುಬಸವಲಿಂಗಾಯ ನಮಃ

ಶ್ರೀ ಚೆನ್ನಬಸವೇಶ್ವರದೇವರ ಪುರಾಣ

ವಾರ್ಧಿಕ ಷಟ್ಪದಿ

ಪೀಠಿಕಾ ಸಂಧಿ

ಸೂಚನೆ

ಪರಮಗುರು ಚೆನ್ನಬಸವಂ ಸಿದ್ಧರಾಮಂಗೆ |
ಪರಮಶಿವತತ್ತ್ವಮಂ ತಿಳಿಪಿ ದೀಕ್ಷೆಯನಿತ್ತ |
ಪರಮಸತ್ಕಥೆಯಿದಂ ಸದ್ಭಕ್ತರೊಲವಿನಿಂ ಕೇಳ್ದು ಕೃತಕೃತ್ಯರಹುದು[೧] ||

ಶ್ರೀಪರಮಸದ್ಗುರು ಪರಂ ಪರಂಜ್ಯೋತಿಸ್ವ |
ರೂಪನಾದ್ಯಂತರಹಿತಂ ನಿತ್ಯನದ್ವಯಂ |
ಪಾಪರಹಿತಂ ಪರಬ್ರಹ್ಮ ಬ್ರಹ್ಮಜ್ಞಾನಬೋಧಾಸುಕರ್ತೃವೆಂದು ||
ಗೋಪನಾಹನರಾವಗಂ ಬಿಡದೆ ನಿಮ್ಮಯಾ |
ಶ್ರೀಪಾದಪದ್ಮಂಗಳಂ ಭಜಿಸುತಿಹರೆನ್ನ |
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಮ್ಮನಾಂ ಪೊಗಳ್ವೆನಕ್ಕರಿಂದೆ || ೧ ||

ಶ್ರೀಗಿರಿಜೆಯಹಸ್ತಕಮಳದ ಸೊಂಪು ಪೊಳೆಯೆ ಪಿರಿ |
ದಾಗಿ ಕುಚಚಕ್ರಯುಗಳದ[೨] ಪೆಂಪು ಬಳೆಯೆ ತಲೆ |
ವಾಗಿ ಕಣ್ದಿಲಲರಿಕೆಯಿಂಪು ಕಳೆಯೆ ನಾಸಾನಿಲನ ಕಂಪು ಸುಳಿಯೆ ||
ಬೀಗೆ ಕುಂತಳತತಮಂ ಸಾಗೆ ಚೆಂದುಟಿಗೆಂಪು |
ಪೋಗೆ ಸೌಖ್ಯೋದಯದ ಬೆಳಗ ಪಸರಿಸಿ ನಿತ್ಯ |
ವಾಗೆಸೆವ ಪಂಚಾವಿರೂಪಾಕ್ಷಸೂರ್ಯನಾನಂದಮಂ ಸಮಗೀಯಲಿ || ೨ ||

೧ ಬಹುದು (ಕೆ., ಅ, ಬ, ಕ.) ೨ ಚಕ್ರಕನ್ಮೊಳದ (ತಾ.); ಚಕ್ರಯುಗ್ಮದ (ಹು, ಅ, ಬ, ಕ.)

ಶಿವ ಶಿವಗಣಾನಂದ ನಂದನಂದನಕಮಲ |
ಭವನುತ ಮಹಾಮಹಿಮ ಹಿಮಕಿರಣಕಂಜಬಾಂ |
ಧವಕೋಟಿ ತೇಜೋವಿರಾಜಿತಕಳೇವರ ವರಾ[೧]ಭರಣಚಕ್ಷುಃಶ್ರವ ||
ಶ್ರವಣ ಮಂಗಳನಾಮ ನಾಮರೂಪಕ್ರಿಯಾ |
ದಿವಿ[೨]ಕಲ್ಪರಹಿತ ಹಿತಮಿತ್ರಧನರಾಜ ರಾ |
ಜವಿಪಕ್ಷನೇತ್ರಸುಕುಮಾರಹರ ಹರ ವಿರೂಪಾಕ್ಷ ರಕ್ಷಿಸು ನತರನು[೩] || ೩ ||

ವರಜೂಟ[೪]ಧೃತರಾಜ ರಾಜರಾಜಪ್ರಸಖ[೫] |
ನಿರುಪಮಿತ ನಿಷ್ಕಾಮಕಾಮ ಕಾಮಧ್ವಂಸಿ[೬] |
ಹರ ವಿಜಿತಖಳಭೀಮ ಭೀಮ ಭೀಮಾನುಸಂಜಾತದಿವ್ಯಾಸ್ತ್ರಪ್ರದ ||
ಶರಣನುತ[೭] ಸುರ[೮]ಕಾಂತಕಾಂತ ಕಾಂತಾರ್ಧಾಂಗ |
ಪುರವೈರಿ[೯]ಲಯ ಕಾಲಕಾಲ ಕಾಲಗ್ರೀವ |
ನಿರುಪಮ[೧೦]ಸರೋಜಾತಜಾತಜಾತಾಧ್ವರಧ್ವಂಸಿ ಜಯ ಪಂಪಾಧಿಪ || ೪ ||

ಗೋಪಕ್ಷಹರಗೋಪ ಗೋಪಾವನತಚರಣ |
ಗೋಪಕಂಧರಗೋಪ ಗೋಭೂಷ ಗತದೋಷ |
ಗೋಪವಾಹನ ಗೋಪಚಾಪ ಗೋಪವಿ[೧೧] ಗೋಪ ಗೋಪಪತಿ ಗೋಪವಾಸ ||
ಗೋಪರಮವಸ್ತ್ರ[೧೨] ಗೋಶಸ್ತ್ರ ಗೋಪಾತ್ಮಜಾ |
ಲಾಪಹರುಷಿತ ಗೋಮುಖಾದ್ಯಖಿಳ[೧೩] ಲೋಕೇಶ |
ಗೋಪಾಟವಂಗಳಂ[೧೪] ಪಾಲಿಪುದು ಪಂಪಾವಿರೂಪಾಕ್ಷ ಸುಜನರಕ್ಷ || ೫ ||

ಭೀಮ ಭೀಮಾಘಹರ ಜಿತಕಾಲ ಕಾಲಗಳ |
ಸೋಮ ಸೋಮವಿಭೂಷ ಸುರಪಾಲಪಾಲ ಹೃತ[೧೫] |
ಕಾಮ ಕಾಮಪ್ರದ ಸದಾರಾಜರಾಜನುತ[೧೬] ಗತತಾಪ ತಾಪಸನತ ||
ರಾಮ ರಾಮಾರ್ಧಾಂಗ ಗೋಕರ್ಣಕರ್ಣ ಗಿರಿ |
ಧಾಮ ಧಾಮನಿಧಾನ ಪಂಪಾವಿರೂಪಾಕ್ಷ |
ಪ್ರೇಮದಿಂ ಭಕ್ತರಂ ಸಲಹು ಸನ್ನುತಗಣಸ್ತೋಮ[೧೭] ನಿಸ್ಸೀಮಮಹಿಮ || ೬ ||

೧ ಧರಾ (ಶಿ, ಕೋ, ಹು.) ೨ ಭವ (ಪ.) ೩ ನಮ್ಮನೂ (ತಾ.) ೪ ವರಜಟಾ (ಹು, ಅ, ಬ, ಕ.) ೫ ಪ್ರಮುಖ (ಶಿ.) ೬ ಕಾಮಧ್ವಂಸ (ಪ, ಗೋ, ಕೋ, ತು.) ೭ ಚರಣನುತ (ಅ, ಬ, ಕ, ಪು.) ೮ ಪುರ (ತು.) ೯ ಸುರವೈರಿ (ಹು, ತಾ.) ೧೦ ಸುರುಚಿರ (ತು.) ೧೧ ಗೋಪಜ (ಪ, ಶಿ.) ೧೨ ಗೋಪರಮಣೀಯ (ಶಿ, ತಾ, ಕೋ.) ೧೩ ಗೋಪಮುಖ್ಯಾಖಿಳ (ಶಿ.) ೧೪ ಗೋಪಾವಟಂಗಳಂ (ಶಿ.) ೧೫ ಹೃತ್ (ಹು, ಅ, ಬ, ಕ.) ೧೬ ನತ (ಶಿ, ತಾ.) ೧೭ ಸನ್ನುತಜನಸ್ತೋಮ (ಅ, ಬ, ಕ, ಮ.); ಸುರನುತನತಸ್ತೋಮ (ತು.)

ಭೇದಿಸಲ್ಕತ್ಯತಿಷ್ಠದ್ದಶಾಂಗುಲನೆನಿ |
ಪ್ಪಾದಿಪರಶಿವನ[1] ಸದ್ವರ್ಮವೇ ರೂಪಾಗಿ |
ಭೇದಮಿಲ್ಲದೆ ತಚ್ಛಿವಂಗೆ ವಾಹನವಾಗಿ ಸಕಲಗಣಕಧಿಪ[2]ನಾಗಿ ||
ಮೇದಿನಿಯೊಳುಗ್ರತಪದಿಂ ಮೆಚ್ಚಿಸಿದ ವರಶಿ |
ಲಾದಂಗೆ ಸುತನಾಗಿ ತಾಂ ತಪದೊಳೀಶನಂ |
ಸಾದರದೊಳೊಲಿಸಿ ಭಕ್ತಿಯನಾಂತು ರಂಜಿಸುವನಾದಿವೃಷಭಂಗೆರಗುವೆ || ೭ ||

ಮಂಗಳೆಯನಂಗದೊಳ್ ಸಂಗೊಳಿಸಿ ಪರಶಿವಂ |
ಸಿಂಗಪೀಠದಿ ಪ್ರಮಥಗಂಗೆವಾಳುಕರು ಮುನಿ[3] |
ಪುಂಗವರ್ ಹಿತೋಲಗಂಗೊಟ್ಟು ರಂಜಿಸುವ ರಂಗಮಂಟಪಕೆ ಬಂದು ||
ಪೊಂಗಿ ನಾಟ್ಯವನಾಡುತಂಗಜಾರಿಗೆ ನಮಿಸಿ |
ದಂಗವರಿದಾ ಗಿರಿಜೆ ತುಂಗಕೋಪದಲಿ ತ |
ನ್ನಂಗಮಂ ತಾರೆನಲು ಹಿಂಗದುರೆ ಬಿಸುಟಮಲಭೃಂಗಿನಾಥಂಗೆ ಶರಣು || ೮ ||

ರುದ್ರನ ಲಲಾಟಾಕ್ಷಿಯಿಂದೊಗೆದು ಬಳಿಕಲಾ |
ರುದ್ರರೂಪಂ ಧರಿಸಿ ದಕ್ಷಯಾಗಕೆ ನಡೆದು |
ರುದ್ರಭಾಗವನ್[4] ಬೇಡೆ ಕೊಡದಿರೆ ಶಿವದ್ರೋಹಿ ದಕ್ಷನಂ ಶಿರವನರಿದು ||
ರುದ್ರಸಖಮುಖ್ಯಸುರರಂ ಬಡಿದು ಪಿಡಿತಂದು |
ರುದ್ರಂಗೆ ಸೆರೆಯನೊಪ್ಪಿಸಿದ ನೂತನಕಾಲ |
ರುದ್ರನೆನಿಸುವ ವೀರಭದ್ರಂಗೆ ವಂದಿಪೆಂ ಭದ್ರಕಾಳೀ[5]ವರಂಗೆ || ೯ ||

ಮೊಗವೈದಘೋರ ಸದ್ಯೋಜಾತ ತತ್ಪುರುಷ[6] |
ಮಿಗೆ ವಾಮದೇವಮೀಶಾನ್ಯವೆಂದಿನ್ನೊಂದು |
ಮೊಗಮುಂಟು ಪಾತಾಳವೆಂದವಂ ತತ್ತ್ವಜ್ಞರಲ್ಲದುಳಿದವರರಿಯರು ||
ಜಗವೆಲ್ಲವರಿವಂತೆ ತೋರಬೇಕೆನುತಲಾ |
ಮೊಗದಿಂದೆ ಶಿವ ತನ್ನ ತಾನೆ ಜನಿಸಿದನೆನಲ್ |
ಸೊಗಯಿಸುತ್ತಿಹ ಕುಮಾರಸ್ವಾಮಿಯಡಿದಾವರೆಗಳಿಗಾರಡಿಯಪ್ಪೆನು ||೧೦||

೧ ಪ್ಪಾದಿಲಿಂಗನ (ಶಿ, ಕೋ, ಗೋ, ಪ.) ೨ ಕಧಿಕ (ಹು, ಶಿ.) ೩ ನಾಳುಕ ರುದ್ರ (ಶಿ, ತಾ, ತು, ಪ, ಗೋ.) ೪ ರುದ್ರಭಾಗೆಯ (ಅ, ಬ, ಕ, ತು, ಮ.) ೫ ಕಾಳಿಯ (ಶಿ, ಹು, ತಾ.) ೬ ತತ್ಪುರು ಷ ಸದ್ಯೋಜಾತ (ಶಿ, ತಾ, ಪ.)

ದರ್ಪಣದೊಳೆಸೆವ ಪ್ರತಿಬಿಂಬದಂತಾಗಸದೊ |
ಳೆರ್ಪ ಸುರಚಾಪದಿರವೆಂತಂತೆ[೧] ದಗ್ಧಪಟ |
ತೋರ್ಪಂತೆ ಘನಮರೀಚಿಯು ಜಲದ ನಿಲುವಿನಂತಾಲಿವರಲಂತೆ ನಿಸ್ಸಪ ||
ಕರ್ಪೂರಂ ಶಿಖಿಯೊಳೊಡವೆರೆದಂತೆ ಶ್ರುತಸಿತಾ |
ಸರ್ಪಿಯೊಳಗಣ ರೂಪಿನಂತಂತೆ ಮೆರೆದು ಕಂ |
ದರ್ಪನಂ ಸುಟ್ಟತುಳನಿರ್ವಾಯನಲ್ಲಮಪ್ರಭುರಾಯ ಸಲಹೆಮ್ಮನು || ೧೧ ||

ಪಸುವೆನಿಸದಮಲಸುರಧೇನು ಮರನೆಂದೆನಿಸ |
ದಸಮಕಲ್ಪದ್ರುಮಂ ಕಲ್ಲೆನಿಸಿಕೊಳ್ಳದಿಹ |
ನಿಸ್ಸಪ ಚಿಂತಾರತ್ನ ಖಣಿಯೆನಿಸದಿಹ ಮಹಾಪುರುಷ ತೃಣವೆನಿಸಿಕೊಳದ ||
ಪೊಸಮರುಜವಣಿ ಮನಂ ನುಡಿ ನೋಟ ನಡೆ ಕೈಗ[೨] |
ಳೆಸೆವುತಿಹ ಪಂಚಪರುಷಮುದಾಗಿ ರಂಜಿಸುವ |
ಬಸವದಂಡಾಧೀಶ ಶರಣು ಮತ್ಪ್ರಾಣೇಶ ಭವನಾಶ ಭಕ್ತಿಕೋಶ || ೧೨ ||

ಸನ್ನುತಶಿವಪ್ರಸಾದವೆ ನಾಗಲಾಂಬಿಕೆಗೆ |
ನನ್ನಿಯಿಂ ಶಿಶುವಾಗಿ ಜನಿಸಿ ಬಾಲ್ಯವನುಳಿದು |
ಭಿನ್ನವಿಲ್ಲದೆ ಶಿವಗಣಕ್ಕೊಲಿದು[೩] ಸ್ಥಾವರಾದ್ಯನ್ಯಲಿಂಗದ ಭಜನೆಯ ||
ಮುನ್ನವೇ ಬಿಡಿಸಿ ಷಟ್ಸ್ಥಳಮಾರ್ಗಮಂ ತಿಳಿಪಿ |
ಚೆನ್ನಾಗಿ ಪ್ರಾಣಲಿಂಗದ ನೆಲೆಯನರುಹಿಕೊ |
ಟ್ಟುನ್ನತಸುಮುಕ್ತಿಯೊಳಗಿಂಬಿಟ್ಟ ಪರಮಗುರು ಚೆನ್ನಬಸವಂಗೆ ಶರಣು || ೧೩ ||

ಸಿದ್ಧನಿದು ಪಣೆಯೊಳಗೆ ಕಣ್ಸಹಿತ ಲೋಕಪ್ರ |
ಸಿದ್ಧಶಿವ ತಾನೆ ಮಾನವರೂಪಿನಿಂ ಯೋಗ |
ಸಿದ್ಧಾಂತಮಂ ಬಿತ್ತರಿಸ ಬಂದನಲ್ಲದಿಂತಂ ನಿಕ್ಕ ನಾಡಾಡಿಯುಳ್[೪] ||
ಸಿದ್ಧಮಾತ್ರನೆ ಮಹಾಯೋಗಸಂಸಿದ್ಧರಿಗೆ |
ಸಿದ್ಧನೆಂದೆಲ್ಲಾ ಜನಂ ಪೊಗಳೆ ರಂಜಿಸುವ[೫] |
ಸಿದ್ಧರಾಮೇಶನ ಪದಂಗಳೆಮಗೀಗೆ[೬] ಭಕ್ತಿಜ್ಞಾನವೈರಾಗ್ಯಮಂ || ೧೪ ||

---

೧ ಬಿಡುವೆಂತಂತೆ (ಶಿ.) ೨ ಮನಂ ನೋಟ ನಡೆ ನುಡಿ ಕೈಗ (ಶಿ.); ಮನಂ ನುಡಿ ನೋಟ ಕೈಯುಡಿಗ (ತಾ.) ೩ ಸಕಲಗಣಕೊಲಿದು (ಕು, ಕೋ, ಗೋ, ಪ.); ಸಕಲಗಣಕೊರೆದು (ಪ.) ೪ ನಾಡಾಡಿಯೆ (ಅ, ಬ, ಕ, ಮ.) ೫ ರಾಜಿಸುವ (ತಾ.) ೬ ಪದದ್ವಯಗಳೀಗೆ (ಹು.)

ಚಿಕ್ಕನೆದ್ದಲ್ಲಮನೊಳರಿವನರಿಯಲ್ಕಾಗ |
ಮುಕ್ಕಣ್ಣನರಸಿಯಂಶವೆ ಬಂದು ಧರೆಯೊಳಗೆ |
ಧಿಕ್ಕರಿಸಿ ಕೌಶಿಕನ ವೈರಾಗ್ಯದಿಂ ನಡೆದು ಕಲ್ಯಾಣಪುರಕೆ ಪೋಗಿ ||
ಚಿಕ್ಕಬಸವಂ ಬಸವಮುಖ್ಯಪ್ರಮಥರ ಮುಂದೆ |
ಮಿಕ್ಕಮಾತೇನಲ್ಲಮನೊಳರಿದು ಕದಳಿಯಂ |
ಪೊಕ್ಕು ನಿರ್ವಾಣಪದವಿಯನಾಂತ ಮಹಾದೇವಿಯಕ್ಕನ ಪದಕ್ಕೆ ಶರಣು[1] || ೧೫ ||

ಮೃಡನ ಕಿಡಿಗಣ್ಣಿನಿಂದೊಗೆದು ದಕ್ಷನ ತಲೆಯ |
ಹೊಡೆದು ಹೋಮದೊಳಿಟ್ಟು ಕುರಿಯ ತಲೆಯಂ ಕೊಟ್ಟು |
ಪೊಡವಿಯೊಳಗುದಿಸಿ ಬಿಜ್ಜಳನ ಪಡೆಯಂ ಮಡುಹಿ[2] ನುತಿಸೆ ಮಗುಳ್ದುಸುವನಿತ್ತು ||
ಬಡವಾದೆ ಬೇಡುವವರಿಲ್ಲೆಂದು ಬಸವ ತಾಂ |
ನುಡಿಯೆ ಧರ್ಮಂ ನಿಲಿಸಿ ಶಿವಭಕ್ತಸಂತತಿಯ |
ಕಡುಮನದ ಮೈಲಿಗೆಯ ತೊಳೆದ ಮಡಿವಳತಂದೆ ಕೊಡು ಮತಿಗೆ ಮಂಗಳವನು || ೧೬ ||

ಮರುಳಶಂಕರದೇವರಿಂಗೆ ಮುನಿರಾಜಂಗೆ |
ಕರಿಕಾಲಚೋಳಂಗೆ ಕಾಶಿರಾಜಂಗೆ[3] ಶಂ |
ಕರದಾಸಿಮ[4]ಯ್ಯಂಗೆ ಸಕಳೇಶಮಾದಿರಾಜಂಗೆ ಸಾನಂದಮುನಿಗೆ ||
ಕರುಳ[5]ಕೇತಯ್ಯಂಗೆ ಕಾಚಿರಾಜಂಗೆ ಕಿ |
ನ್ನರಿಯ ಬೊಮ್ಮಯ್ಯಂಗೆ[6] ಕೇಶಿರಾಜಂಗೆ[7] ಪರಿ |
ಸರಿಯ ಶಿವಶರಣರ್ಗೆ ಪರಮಸಂತಸದಿಂದೆ ಪರಿವಿಡಿಯೊಳೊಲಿದೆರಗುವೆ || ೧೭ ||

ಪರಶಿವಂ ಸಕಲಗಣಸಂಕುಲಕೆ ಪ್ರೀತಿಯಿಂ |
ಹರಿಯಜಾಸುರಸುರಾದ್ಯಖಿಳದೇವವ್ರಜಕೆ |
ಕರುಣದಿಂ ಶೈವೋಪದೇಶಮಂ ಕೊಟ್ಟು ರಕ್ಷಿಸಿ ಬಳಿಕ ಸಂತಸದೊಳು ||
ಧರೆಗಿಳಿದು ಮಳೆಯ ಮಲ್ಲೇಶನಾಮವನಾಂತು |
ಚರರೂಪಿನಿಂದೆ ಮರ್ತ್ಯದ ಮಹಾಶರಣರ್ಗೆ |
ಗುರುವೆನಿಸಿ ಸಕಲದೇಶಂಗಳಂ ಚರಿಸಿದಂ ಸರ್ವಜನರಂ ಪೊರೆವುತೆ || ೧೮ ||

೧ ಪದಕ್ಕೆರಗುವೆ (ಶಿ.) ೨ ಮಡುಹಿ (ಶಿ.) ೩ ಕಾಳಿರಾಜಂಗೆ (ಶಿ.) ೪ ದಾಸಮ (ಶಿ.) ೫ ಕರುಳು (ಹು.) ೬ ಬ್ರಹ್ಮಯ್ಯಂಗೆ (ಶಿ.) ೭ ಕಾಶಿರಾಜಂಗೆ (ಹು.)

ವರಖಲಿಂಧರ[೧]ರೇಳುನೂರ್ವರ್ಗೆ ಗುರುವಾಗಿ |
ಹರುಷದಿಂ ಮಖ್ಯಕ್ಕೆ ಪೋಗಿ ಮಹಿಮೆಯ ತೋರಿ |
ತುರುಕಾಣ್ಯದೊಳಗನಾವೃಷ್ಟಿದೋಷಂ ಬಂದು ಪಸರಿಸೆ ಪವಾಡದಿಂದೆ ||
ವರುಷವಂ ಸುರಿಸಿ ಸುರಿತಾಳನಿಂ ಪೂಜೆಯಂ |
ಪಿರಿದಾಗಿ ಕೈಕೊಂಡು ಘನತರದ ಕೀರ್ತಿಯಂ |
ಧರಿಸಲಂದ[೨]ಂದಿತ್ತ ಮಳೆಯ ಮಲ್ಲೇಶನೆಂದೆಂಬ ನಾಮವನಾಂತನು || ೧೯ ||

ಆ ಮಳೆಯ ಮಲ್ಲೇಶ್ವರನ ಸಾಂಪ್ರದಾಯದೊಳು |
ಕಾಮಾಹಿತಂ[೩] ಷಟ್ಸ್ಥಲಾಬ್ಧಿವರ್ಧನಪೂರ್ಣ[೪] |
ಸೋಮನತ್ಯಂತದೋಷಾಪಹಂ ದಕ್ಷನುಂ[೫] ಕಾರುಣ್ಯಭರಿತಹೃದಯಂ ||
ರಾಮಣೀಯಕಯಶಃಪ್ರೇಮಂ ಜಿತೇಂದ್ರಿಯಲ |
ಲಾಮಂ ಸುಗುಣಗಣೋದ್ದಾಮಂ ಪರಮಪುಣ್ಯ |
ನಾಮನೆನಿಸುವ ಸಿದ್ಧವೀರೇಶನೆಸೆದನಂದವನಿಯೊಳು ಪೆಂಪುವಡೆದು || ೨೦ ||

ಪರಮಶಾಂತಿಯೆ ಮನೆ ಸದಯವೆ ಪರಿಕರವಾಗ |
ಲಿರದೆ ಶಿವಲಿಂಗಚಿಂತನೆಯೆ ಮನೆವಾರ್ತೆ ಮ |
ತ್ತಿರದೆ ಸತಿಯೇ ಮೋಕ್ಷಲಕ್ಷ್ಮಿ ಮಕ್ಕಳೆ ಶಿಷ್ಯರಾಗೆ ಸಂಸಾರಿಯಂತೆ ||
ಧರಣಿಯೊಳಗೆಸೆವ ವಿದ್ಯಾನಗರಿಯೊಳ್ ಮೆರೆವ |
ಹಿರಿಯಮಠದೋಳ್ ಮಹಾಚರಲಿಂಗಸಹಿತ ಸ |
ದ್ಗುರುವರಂ ಸಿದ್ಧವೀರೇಶನೊಪ್ಪಿರ್ದನಾ ಯತಿಯದೇಂ ಸಾಮಾನ್ಯನೆ || ೨೧ ||

ಸೋಡಿದವನೇ ಶುಚಿ ಪದಾಬ್ಜಂಗಳಿಗೆ ತಲೆಯ |
ನೀಡಿದವನೇ ಸುಕೃತಿ ಸಮ್ಮುಖದೊಳೊಮ್ಮೆ ಮಾ |
ತಾಡಿದವನೇ ಶೈವಮಾರ್ಗಿ ಪ್ರತ್ಯುತ್ತರಂಬಡೆದವನೆ ನಿತ್ಯನೊಲ್ದು ||
ಬೇಡಿದವನೇ ಪೂರ್ಣಕಾಮನಕ್ಕರೊಳೆ ಕೊಂ |
ಡಾಡಿದವನೇ ಲೋಕನುತನಂಘ್ರಿಸೇವೆಯಂ |
ಮಾಡಿದವನೇ ಜಗತ್ಸೇವ್ಯನೆಂಬುದು ಜನಂ ಗುರುಸಿದ್ಧವೀರೇಶನ || ೨೨ ||

---

೧ ಖಲಂದರ (ಹು, ಅ, ಬ, ಕ, ಮ.) ೨ ಧರಿಸಿದಂದಿ (ಅ, ಬ, ಕ, ಮ.) ೩ ಕಾಮದಹಿತಂ (ಶಿ.) ೪ ಕಾಮಾಹಿವಿರಹಿತಂ ಷಟ್ಸ್ಥಲಾಬ್ಧಿವರ್ಧನ (ಕೋ.) ೫ ದೋಷವನೊಪೆದನಕ್ಷಯಂ (ಶಿ.)

ಸರಸಕರ್ಣಾಟಾದಿ೧ಭಾಷಾವಿಶಾರದಂ |
ವರಕವಿಪ್ರಕರಮಾನಸರಾಜಹಂಸನ |
ಸ್ಥಿರತರಶಿವಾಚಾರಸಂಪನ್ನನಸುಹೃತ್ಕವಿಪ್ರತತಿವಾರ್ಧಿವಡಬಂ ||
ಶರನಿಧಿಸಮಾನಗಂಭೀರನತ್ಯೌದಾರ್ಯ೨ |
ಸುರಭೂಜನಾ ಸಿದ್ಧವೀರೇಶ್ವರನ ಪಾಣಿ |
ಸರಸಿರುಹಜಾತಂ ವಿರೂಪಾಕ್ಷಪಂಡಿತಾರಾಧ್ಯನೊಪ್ಪಿದನಿಳೆಯೊಳು || ೨೩ ||

ಇರೆ ಸಕಲಶಿವಭಕ್ತಸಂಕುಲಂ ನಡೆತಂದು |
ಹರುಷದಿಂದೆರಗಿ ಭಯಭಕ್ತಿಯಿಂ ಕೊಂಡಾಡಿ |
ವರವಿನೂತನಪಂಡಿತಾರಾಧ್ಯನೆನಿಸುವ ವಿರೂಪಾಕ್ಷಪಂಡಿತೇಶಾ ||
ಧರೆಯೊಳಗೆ ಸಕಲಶರಣರ ಕಥೆಗಳಂ ಕವಿ೩ |
ಸ್ವರದೊಳ್ಪು ಪೇಳ್ದರೀ ಚೆನ್ನಬಸವೇಶ್ವರನ |
ಚರಿತೆಯಂ ಸದೋರ್ವರುಂ ಪೇಳ್ದುದಿಲ್ಲಮುಗದಂ ನಿರವಿಸೆನುತಿಂತೆಂದರು೪ || ೨೪ ||

ಬಿಡದೆ ಶಿವಲಿಂಗಮಂ ಪೂಜಿಸುವ ಚಿತ್ತಮೆಡೆ |
ಪಿಡದೆ ಸಸ್ತುತಿಗಳಿಂದಾತ್ಮಸುಖಕೊಲಿದು ಸವಿ |
ಪಡೆದು ಪಾಡುವ ಗಾನ ಮೆರೆವರಂತರವನರಿದೀವ ವಿತರಣಮೊಪ್ಪುವ ||
ಕಡುಜಾಣರಂ ಮೆಚ್ಚಿಸುವ ವಾಗ್ವಿಲಾಸಮಾ |
ಮೃಡನನೊಲಿಸುವ ಷಟ್ಸ್ಥಲಬ್ರಹ್ಮದಾಚರಣೆ |
ಪೊಡವಿಯೊಳ್ ಪಂಡಿತ ವಿರೂಪಾಕ್ಷ ನಿನಗಲ್ಲದಾರ್ಗುಂಟು ಬಣ್ಣಿಸುವೊಡೆ || ೨೫ ||

ಹರನಲ್ಲದನ್ಯದೈವಂಗಳಂ ನುತಿಸದೀ |
ಹರನಲ್ಲದನ್ಯಮಂ ಪೂಜಿಸದ ಚಂದ್ರಶೇ |
ಖರನಲ್ಲದನ್ಯದೈವದ ಮೂರ್ತಿಯಂ ಭಕ್ತಿಯಿಂದೀಕ್ಷಿಸದ ತ್ರಿಣಯನ |
ವರಕಥನಮಲ್ಲದನ್ಯರ ಕಥೆಯ ಪೇಳದಘ |
ಹರನ ಪ್ರಸಾದಮಲ್ಲದುದನಾಸ್ವಾದಿಸದ |
ಬಿರುದು ಪಂಡಿತ ವಿರೂಪಾಕ್ಷೇಶ ನಿನಗೆ ಭೂತಳಮರಿಯೆ ಸಲೆ ಸಂದುದು || ೨೬ ||

೧ [illegible] | ಶಿ. | ೨ ತ್ಯೌದಾರ | ಶಿ, ಪ, ಗೋ. | ೩ ಸೆನಲಿಂತೆಂದರು | ಅ, ಬ, ಕ. | ೪ [illegible]
(ಹು.)

ಕವಿಗಳೇ ನೀವಹುದು [1]ಪರಕವೀಶ್ವರಕೃತಿಯ |
ಹವಣ ಬಲ್ಲಿರೆ ಬಲ್ಲೆವಾದೊಡೀಪದ್ಯಕ |
ರ್ಥವದಾವುದೆನಲೆಡದ ಕಿವಿಯ ಬೆರಲಿಂದಂಟೆ ಮೇಲೆ ನಿಟ್ಟಿಸಿ ಕಾಣದೆ ||
ತವೆ ತಲೆಯ ಬಾಗಿ ನುಡಿಯುಡುಗುವಳಿಗಬ್ಬಿಗಂ |
ಕವಿಯೆ ಶಿವಕವಿ ವಿರೂಪಾಕ್ಷ ನಿನ್ನಂತೆ ಪರ |
ಕವಿಯ ನಾಲಗೆ ಕಿವಿ ಮನಂಗಳಂ ಸೆಳೆವವಂ ಕವಿಯಲ್ತೆ ಭೂತಳದೊಳು || ೨೭ ||

ಎನಲವರ ನುಡಿಗಳ್ಗೆ ತಲೆಯ ಬಾಗಿಸಿ ಪುರಾ |
ತನಶಿವಕವೀಶ್ವರರ ಪಾದಾಂಬುಜಂಗಳಂ |
ನೆನೆದು ಕರ್ಣಾಟಕವ್ಯಾಕರಣ ಛಂದಸ್ಸಲಂಕಾರ ಶಬ್ದಂಗಳ ||
ಅನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣಮೆಂಬ |
ಜನರ ನಾಣ್ನುಡಿಯನಲ್ಲೆನಿಸಿ ಪೇಳ್ದೆಂ ವಿನೂ |
ತನಕಾವ್ಯಮಂ ಜಗತ್ಸೇವ್ಯಮಂ ಕಿವಿಗೊಟ್ಟು ಕೇಳ್ವುದೆಲ್ಲಾ ಸುಜನರು || ೨೮ ||

ಸರಸಕವಿಬಾಣಂ ಮಯೂರ ಭವಭೂತಿ ಸ |
ದ್ವರಕಾಳಿದಾಸ ಮಲುಹಣ ಮಳಯರಾಜನತಿ |
ಬಿರುದಂಕ ಕವಿ ರಾಘವಾಂಕ ಹಂಪೆಯ ಹರೀಶ್ವರ ಹಲಾಯುಧನುದ್ಭಟ ||
ಗುರುಪಂಡಿತೇಶ ಪಾಲ್ಕುರಿಕೆಯಾರಾಧ್ಯ ಭೀ |
ಮರಸ ಮೊಗ್ಗೆಯ ಮಾಯಿದೇವ ಚಾಮರಸ ಶಂ |
ಕರ ಕೆರೆಯ ಪದ್ಮರಸರಾದಿ ಶಿವಕವಿಗಳಂ ಬಲಗೊಂಡು ಕೃತಿವೇಳ್ವೆನು || ೨೯ ||

ಗುಡಿಯೆ ಮಾತಾಡುವಂ[2]ದದೊಳೊರ್ವನೊಳಗಿರ್ದು |
ನುಡಿದರನ್ಯರ ಕಿವಿಗೆ ಪ್ರತಿಶಬ್ದದಿಂದಾಗ |
ಲೊಡನೆ ತಾಂ ಕೇಳಬಂದಂತೆನ್ನ ಹೃತ್ಕಮಲ[3]ಕರ್ಣಿಕಾಮಧ್ಯದಲ್ಲಿ ||
ಎಡೆವಿಡದೊಲಾವಾಗಮಿರ್ಪ ಪಂಪಾಕ್ಷೇತ್ರ |
ದೊಡೆಯಂ ವಿರೂಪಾಕ್ಷನೇ ಪೇಳಿಸಿದೊಡೆ ಸವಿ |
ನುಡಿಗಳಿಂದೀ ಚೆನ್ನಬಸವಪೌರಾಣಮಂ ಪೇಳ್ದೆನಧಿಕೋತ್ಸವದೊಳು || ೩೦ ||

೧ ವರಕವೀ (ಅ, ಬ, ಕ, ಮ.) ೨ ಮಾತಾಡಿದಂ (ಶಿ, ಕ.) ೩ ನಿಜಹೃತ್ಕಮಲ (ಕೋ, ಗೋ.)

ಕಥೆಯ ನಾಮಂ ಚೆನ್ನಬಸವಪೌರಾಣಮೀ |
ಕಥೆಗೊಡೆಯನಾ ವಿಮಲ ಚೆನ್ನಬಸವೇಶ್ವರಂ |
ಕಥೆಯ ಪೇಳ್ದಾತಂ ವಿರೂಪಾಕ್ಷಪಂಡಿತಾರಾಧ್ಯನಾಗಮಹೃದ್ಯನು ||
ಕಥೆಯನಾಲಿಸಿ ನವರಸಾಂಬುಧಿಯೊಳಾಳದೀ |
ಕಥೆಯ ನಿಂದಿಸುವರ್ ತಕಾರವಡ್ಡಕ್ಕರವ |
ಕಥೆಗಳಲ್ಲದೆ ಮನುಜರಲ್ಲವದರಿಂ ಭಕ್ತರೀ ಕಥೆಯ ಕೇಳ್ವುದೊಲಿದು || ೩೧ ||

ಕವಿತೆ ಬಾರದು ತನಗೆ ಪರರ ಕಾವ್ಯಂಗಳ |
ಘನವನು ತಿಳಿಯಲ್ಕರಿಯನಿಲ್ಲದತಿ ದೋಷಮಂ |
ತವೆ ಕಲ್ಪಿಸಲ್ ಬಲ್ಲನಾವನಾ ಖಳನ ನಿಷ್ಠುರತನದ ನಿಂದೆಗಳ್ಗೆ ||
ನವರಸಾಲಂಕಾರಭರಿತಮಾಗಿರ್ಪ ಕ |
ಬ್ಬವನೊಲ್ದು ಕಥಿಸದುಳಿದಪುದು ನೀತಿಯೆ ತಮಕೆ |
ರವಿಯಂಜಿ ಬೆಳಗದಿರ್ಪನೆ ಲೋಕಮಂ ತನ್ನ ವಿಮಲಕಿರಣಂಗಳಿಂದೆ || ೩೨ ||

ಕವಿತೆಯೇ ಸಕಲವಿದ್ಯಕ್ಕಧಿಕವಂತದೇ |
ಶಿವಕಾವ್ಯಮಾಗಲತ್ಯುತ್ತಮೋತ್ತಮವಲ್ತೆ |
ನವರಸಾಲಂಕಾರ[೧]ವೊದವಿದೊಡೆ ಪುಣ್ಯಫಲವೆ ಬಹಳ ಪಕ್ವವಾಗಿ[೨] ||
ಸವಿಯಿತ್ತೊಡೆಂತಂತುಟದರಿನಿಂ ಲೇಸಿ[೩] ಬ |
ಲ್ಲವಿದಗ್ಧರೀ ಚೆನ್ನಬಸವಪೌರಾಣಮಂ |
ಕಿವಿಗೊಟ್ಟು ಮತ್ಸರವ ಬಿಟ್ಟು ಸಂತಸವಟ್ಟು[೪] ಕೇಳ್ವುದು ವಿಲಾಸದಿಂದೆ || ೩೩ ||

ವರಲಕ್ಷಣಂ ಸುಛಂದಸ್ಸು ನುತಶಬ್ದಮುರು |
ತರರಸಾಲಂಕಾರಮತಿಶಯಾರ್ಥಂಗಳಿಂ |
ವಿರಚಿಸಿದ ಕಾವ್ಯಮಿದರೊಳಗೆ ತಪ್ಪಿಲ್ಲಮಾದೊಡ[೫]ನೀ ಮಹಾಕೃತಿಯೊಳು |
ನರದೇಹವಿದಕೆ ಪಸಿವಾಲಸ್ಯನಿದ್ರೆಗಳ್ |
ಪೆರಸಿಪ್ಪುವದರಿಂದಮೆತ್ತಾನುಮೊಂದು ತ |
ಪ್ಪಿರಲದಂ ತಿದ್ದಿ ರಸಿಕರ್ ಕರುಣದಿಂದಿಳೆಯುರಿಯೆ ಲೇಸ ಮೆರೆಪ್ಪುದೊಲಿದು[೬] || ೩೪ ||

೧ ಮತಿಶಯಾರ್ಥಂಗಳಿಂದೊದವಿದ [illegible] ಪುಣ್ಯಫಲವೆ (ಗೋ, ಕೋ.) ೩ ನೀತಿಕೆಸ (ಅ, ಬ, ಕ, ಮ.) ೪ ಸಲ್ವೃತ್ತಿಯಂ (ಕೋ, ಗೋ.) ೫ [illegible] ವಿದಗ್ಧರಿಂ [illegible] || [illegible] ನರದೇಹ [illegible] ಪಸಿವಾಲಸ್ಯನಿದ್ರೆಗಳ್ [illegible] ಮೊಂದು ತ | ಪ್ಪಿರಲದಂ [illegible] ತಿದ್ದಿ ರಸಿಕರ್ಕಳೆಳೆಯುರಿಯೆ ಲೇಸಂ ಮೆರೆವುದು || (ಅ, ಬ, ಕ, ಮ.)

ಕೇಳದೆ ಪೋದೊಡೊಂದರಿಯೆವಿನಿಸಾದೊಡಂ |
ಕೇಳಿದೊಡೆ ಸಾಕವರ ಕಿವಿಯುಮಂ ಮನಮುಮಂ |
ಕೋಳಹಿಡಿದೊಡನೆ ನಿರ್ಮಲಿಸನವರಸಮುಹಾದುಗ್ಧ ವಾರಾಸಿಯೊಳಗೆ ||
ಆಳಿಸದೆ ಬಿಡದೆನ್ನ ಕೃತಿ ಕೇಳಿದುತ್ತರಂ |
ಬೇಳಲಾರದೆ[೧] ಮೊಗಂ ಬೆಮರ್ದು ಕಂಗೆಟ್ಟೊಳ್ವ |
ಖೂಳಕುಕವಿಯ ಕಾವ್ಯದಂತಲ್ಲ ಖಂಡಶರ್ಕರೆಯಿನಿದಿಗಿನಿದುವಾಗಿ || ೩೫ ||

ಋತು ನಂದನಂ ತರಣಿ[೨] ಶಶಿ ಶರಧಿ ಪರಿಣಯಂ|
ರತಿ ನಗರಿ ಗಿರಿ ಸುತಂ ವಾರಿ ಮಧು ವಿರಹಮುಂ |
ನತದಂಡಯಾತ್ರೆ ಯಾನಂ ರಣಂ ನೃಪರೇಳ್ಗೆ ರಾಜಮಂತ್ರಂಗಳೆಂಬ ||
ನುತಿವಡೆದ ಪದಿನೆಂಟು ವರ್ಣನೆಗಳಿಂ ನವಾ |
ಶ್ರಿತನವರಸಾದ್ಯಲಂಕಾರಂಗಳಿಂ ವಿಬುಧ |
ತತಿ ಬಣ್ಣಿಪಂ[೩]ತುಸಿರ್ದನೀಕಾವ್ಯಮತಿಸೇವ್ಯಮಾದುದೆಂಬೊಲ್ ಸುಜನರು || ೩೬ ||

ಪರಿವಿಡಿಯೊಳೀ ಪುರಾಣದ ಕಥಾಕುಳಕಮಂ |
ವಿರಚಿಪೆಂ ಕೈಲಾಸವರ್ಣನಂ ನಾರದನ |
ದರುಶನಂ ಚೆನ್ನಬಸವೋತ್ಪತ್ತಿ ಪುಷ್ಪಕೋತ್ಸಾಹಮಾತನ ಸುಲೀಲೆ ||
ಅರಸಿನಾಸ್ಥಾನಮಾಪುರದೇಶವರ್ಣನಂ |
ಗುರುಚೆನ್ನಬಸವನಾ ಸಿದ್ಧರಾಮೇಶ್ವರಂ |
ಗೊರೆದ ಶಿವತತ್ತ್ವಮಾ ಶಿವನೇಕಪಾದದಿಂ ನಿಂದು ನರ್ತಿಸಿದ ಲೀಲೆ || ೩೭ ||

ಪರಮಸೋಮಂ ವೃಷಭಯಾನಮುರುಲಿಂಗಳವಮಂ[೪] |
ದಿರದರ್ಧನಾರೀಶನಜಶಿರಶ್ಛೇದಮಂ |
ದುರುತರದ ಭಿಕ್ಷಾಟನಂ ದಕ್ಷಿಣಾಮೂರ್ತಿ ವಿಷ್ಣುಕಂಕಾಳಸುಧರ ||
ಗರಳಧರನಿಂದುಧರನಾ ಜಲಂಧರನ ಸಂ |
ಹರಣಮಾ ಚಕ್ರದಾನಂ ಗಜಾಸುರಮಥನ |
ಮಿರದೆ ದಕ್ಷಾಧ್ವರಂ ಹರಿಹರಂ ಕಾಮದಹನಂ ಶಿವೆಯ ಕಲ್ಯಾಣವು || ೩೮ ||

೧ ಹೇಳಲಾರದೆ (ಶಿ.) ೨ ತರುಣಿ (ಹು.) ೩ ಪಣ್ಣಿಪಂ (ಶಿ.) ೪ ಮುರಿಲಿಂಗ (ಹು.)

ಶರಕುಮಾರೋತ್ಪತ್ತಿ ತಾರಕಾಸುರನ ಸಂ |
ಹರಣಮಾ ತ್ರಿಪುರದಹನಂ ವಸಂತೋತ್ಸಾಹ |
ಮುರುತರದ ಗಂಗಾಧರಂ ಬಳಿಕ್ಕಂಧಕಾಸುರಹರಂ ಕಾಲದಹನಂ ||
ಪರಮಸುಖವಹ ಮೂರ್ತಿಯರ್ಜುನಗೆ ಪಾಶುಪತ |
ಶರವಿತ್ತ ಲೀಲೆಯಾ ಸೋಮಸೂರ್ಯಾನ್ವಯಂ |
ಹರಶರಣಚರಿತೆ ದೀಕ್ಷಾವಿಧಾನಂ ಷಟ್ಸ್ಥಲಂ ಸುಕಾಲಜ್ಞಾನವು || ೩೯ ||

ಇಂತಿವೆಲ್ಲಂ ಚೆನ್ನಬಸವಪೌರಾಣದಾ |
ದ್ಯಂತ ಸತ್ಕಥೆಯ ಸೂಚನೆಯಿದಂ ಪರಮಸುಖ |
ಸಂತಸದಿ ಪೇಳ್ದರ್ಗೆ ಕೇಳ್ದರ್ಗೆ ಭಕ್ತಿಯಿಂ ಬರೆದೋದಿ ಪಠಿಸಿದರ್ಗೆ ||
ಸಂತತಂ ಸಕಲಸುಖಮುಂ ಸಕಲಭೋಗಮುನ |
ಸಂತಸೌಭಾಗ್ಯಮುಂ ಕೊಟ್ಟು ರಕ್ಷಿಸುವನಾ |
ಕಂತುಹರಸಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೦ ||

ಅಂತು ಸಂಧಿ ೧ಕ್ಕಂ ಪದಗಳು ೪೦ಕ್ಕಂ ಮಂಗಳಮಹಾಶ್ರೀ

ಎರಡನೆಯ ಸಂಧಿ

ಸೂಚನೆ

ಪರಮಕೈಲಾಸಗಿರಿಶಿಖರದಾಸ್ಥಾನದೊಳ್ ।
ಪರಮೇಷ್ಠಿ ವಿಷ್ಣು ಸುರನರ ಭುಜಂಗರ್ವೆರಸಿ ।
ಪರಮೇಶ್ವರಂ ಗಿರಿಜೆಸಹಿತಮತಿವಿಭವದಿಂದೊಡ್ಡೋಲಗದೊಳೆಸೆದನು ॥

ಶ್ರೀಶದಿವಿಜೇಶ[೧]ವಾಗೀಶ[೨]ನತವರಪದಕು ।
ಶೇಶಯ ಸಮಸ್ತಲೋಕೇಶವಿನಮಿತಸುಪ್ರ ।
ಕಾಶ ಸನ್ನುತಪುಣ್ಯಕೋಶ ಪುಷ್ಕರವಿಪುಳಕೇಶ ಕೀನಾಶನಾಶ ॥
ಆಶಾಸುವಸ್ತ್ರಭೂತೇಶ ಹಿಮಗಿರಿನಂದ ।
ನೀಶ ಪಾವನತರಸುವೇಷ ನಿಜಭಕ್ತಭವ ।
ಪಾಶಮಂ ಪರಿದು ಜಗದೀಶ ಪಂಪಾಪುರೀವಾಸ[೩] ನೀಂ ಸಲಹೆಮ್ಮನು ॥ ೧ ॥

ಈ ಕಥೆಗೆ ಮೊದಲಾವುದೆನಲೀಶ್ವರಾಜ್ಞೆಯೊಳು ।
ಲೋಕವೀರೇಳಜಾಂಡದೊಳೊಪ್ಪಲಲ್ಲಿ ಭೂ ।
ಲೋಕವಿರ್ಪುದು ನೋಡಲೈವತ್ತುಕೋಟಿಯೋಜನದಳತೆಯೊಳ್ ಚಕ್ರದ ॥
ಆಕಾರದಂತದರೊಳೇಳ್ದ್ವೀಪಮನಿತುಮಂ ।
ಶ್ರೀಕರದಿ ಸಪ್ತಾಬ್ಧಿ ವೇಷ್ಟಿಸಿರೆ ಲವಣರ ।
ತ್ನಾಕರಂ ಮೊದಲ ಜಂಬುದ್ವೀಪಮಂ ಬಳಸಿ ರಾಮಣೀಯಕಮಾದುದು ॥ ೨ ॥

ಮಕರ ಕರ್ಕಟ ಕಮಠ ಶಾಲೂರ ಕಿಂಚುಳಕ ।
ನಿಕರದಿಂ ತಿಮಿ ತಿಮಿಂಗಿಳಮುಖ್ಯಜಲಚರ ।
ಪ್ರಕರದಿಂ ಮೊಸಳೆ ನೀರಾನೆ ನೀರ್ವಾವು ನೀರುಡುಗಳ ಸಮೂಹದಿಂದೆ ॥
ಅಕಳಂಕರತ್ನಂಗಳೋಳಿ[೪]ಯಿಂದೈತಪ್ಪ ।
ಸಕಲಭಂಗದ[೫] ಸುಳಿಯ ಸವ್ವಳಿಗಳಿಂದೊಳಗೆ ।
ತಕಪಕನೆ ಕುದಿವ ವಡಬಾಗ್ನಿಯ ಕಲಾಪದಿಂದಾ ಕಡಲ್ ಕಣ್ಗೆಸೆದುದು ॥ ೩ ॥

೧ ದಿವಿಜೇಂದ್ರ (ಹು, ಗೋ, ಪ, ಮ.) ೨ ವಾಣೀಶ (ಹು.) ೩ ಪುರಾವಾಸ (ಹು.) ೪ ಗಳೇಳ್ಗೆ (ಅ, ಬ, ಕ, ಮ.) ೫ ಭೋಗದ (ಶಿ.)

ತಡಿಗಡಿಗೆ ನಡೆವ ಪೇರ್ವಡಗುಗಳ ಬೆಡಗುಗಳ |
ಘುಡಿಘುಡಿಸುತೀಸ್ವ ಮತ್ಸ್ಯಾಳಿಗಳ ಕೇಳಿಗಳ |
ಬಿಡಬಿಡದೆ ನಡೆತಪ್ಪ ವೀಚಿಗಳ ರೋಚಿಗಳನುಗುಳ್ವ ನವರತ್ನಂಗಳ ||
ಎಡೆಯೆಡೆಯೊಳಿಡಿಕಿರಿವ ದ್ರೋಣಿಗಳ ಶ್ರೇಣಿಗಳ |
ಸಿಡಿಸಿಡಿದುರುಳ್ವ ಜಲಬಿಂದುಗಳ ಪೊಂದುಗಳ |
ತಡಿತಡಿಗಡರ್ವ ಜಲದೊತ್ತುಗಳ ಮುತ್ತುಗಳ ಪಡೆಪಿನಿಂ[೧] ಕಡಲೆಸೆದುದು || ೪ ||

ಹಿರಿಯಳಿಯನಬುಜಜಂ ಮೊಮ್ಮನಿಂದಿರೆ ಕುವರಿ |
ಸುರಗಂಗೆ ಸತಿ ಸುರರ ಪೊರೆವ ಚಂದ್ರಂ ಸುತಂ |
ಸುರಪತಿಗೆ ಸಕಲಸಿರಿಯಿತ್ತು ಗಿರಿಜೆಯ ತಮ್ಮನಂ ಕಾಯ್ದೆನೆನುತಲುಬ್ಬಿ ||
ವರಮುನೀಶಂ ದಾಶರಥಿ ಜಾಮದಗ್ನಿಯರೊ |
ಳಿರದೆ ಕಡುನೊಂದು ವಡಬಾಗ್ನಿಯಿಂದಳ್ಕತಂ |
ಸಿರಿಮ ಭಂಗವನಾಂತೆನೆನುತಬ್ಧಿ ತಗ್ಗಿ ತಾಂ ಹೆಚ್ಚುಕುಂದಿನೊಳೆಸೆದುದು (೨) || ೫ ||

ಈ ತೆರದೊಳಬ್ಧಿ ತನ್ನಂ ಬಳಸಿರಲ್ ಕಾಶಿ |
ಕೇತಾರ ಗಯೆ ನೀಲಕಂಠ ಶ್ರೀಶೈಲ ಸಂ |
ಪ್ರೀತಗೋಕರ್ಣ ಪಂಪಾಕುರುಕ್ಷೇತ್ರಂಗಳೆಂಬ ಸುಕ್ಷೇತ್ರಂಗಳು ||
ಖ್ಯಾತಿಯಿಂ ತನ್ನೊಳೆಸೆದಿರಲಲ್ಲಿ ಸುರಮುನಿ |
ವ್ರಾತಮುತಿಧರ್ಮಾರ್ಥಕಾಮಮೋಕ್ಷಂಗಳನ |
ತೀಂತತಪದಿಂ ಪಡೆವ ಪೆಂಪು ತನಗೆಸೆಯೆ ಜಂಬುದ್ವೀಪಮೊಪ್ಪಿರ್ದುದು || ೬ ||

ಸಂಗರದ[೨] ಸಿರಿಯಂತೆ ನವಖಂಡಮಯಮೊಪ್ಪ |
ನಂಗದಂತಧಿಕವಿಷಯಾಳಿಮಯಮಂತರಿ |
ಕ್ಷಾಂಗಣದೊಳುರುಸೌಮ್ಯಗುರುರಾಜಹಂಸತೇಜೋಮಯಂ ಋಷಿಗಳಂತೆ ||
ತುಂಗಕುಲಗೋತ್ರಶೋಭನಮಯಂ ಭೂವಿಪಗ |
ಣಂಗಳಂತೆಸೆವ ನಾಟಿಸಿಮಯಂ ಕಾಮಿಯೊಲ್ |
ಸಿಂಗಪಾಕಾವಲಂಬನಶಿವೆನಿಸಿ[೩] ಮೆರೆವ ಜಂಬುದ್ವೀಪಮೊಪ್ಪಿರ್ದುದು || ೭ ||

೧ ಪಡಪಿಸಿಂ (ಶಿ, ಅ, ಬ, ಕ, ಮು.) (೨) ಈ ಪದ್ಯವು ಗೋ, ಕೋ, ಪ, ಶಿ. ಈ ಕೆಲವು ಪ್ರತಿಗಳಲ್ಲಿ ಇಲ್ಲ. ೨ ಸಿಂಗರದ (ಅ, ಬ, ಕ, ಮ.) ೩ ಶಾವಲಂಬಿತ (ಹು.)

ಇಂತು ತದ್ವೀಪದವನೀಮಧ್ಯದೊಳ್ ಭಗಣ |
ಸಂತತಿಗಳೇ ಗೆಜ್ಜೆ ಚಂದ್ರಾರ್ಕಬಿಂಬಂಗ |
ಳುಂ ತೋರ್ಪ ಕುಂಭಂಗಳದರ ಕೋಡ್ಗಲ್ಗಳೇ ಕೋಡ್ಗಳಾ ಕಂದರದೊಳು ||
ಅಂತ ರತ್ನಂಗಳೇ ಮಣಿವೊರಜೆ ಕಳಧೌತ |
ಕಾಂತಿ ಪೊಂಜೂಲೆನೆ ವಿರೂಪಾಕ್ಷನಡರೆ ಬೊ |
ಮ್ಮಂ ತಿರ್ದಿ ತೋರ್ಪ ಪಟ್ಟದ ದಂತಿಯೆಂದೆನಲ್ ಕನಕಾಚಲಂ ಮೆರೆದುದು || ೮ ||

ಸುತ್ತಲುಂ ಮೇಲೆ ದಿಕ್ಪಾಲಕರ ನಗರಂಗ |
ಳೊತ್ತೊತ್ತೆಯಿಂ ರುದ್ರ ವಿಷ್ಣು ಬ್ರಹ್ಮಾದಿಗಳ |
ಪತ್ತನಂಗಳನಾಂತ ಪೆರ್ಮೆಯಿಂ ಝುಗಿಝುಗಿಸುವಾ ಮಹಾಕನಕಗಿರಿಯ ||
ಒತ್ತಿಲಿಹ ದಕ್ಷಿಣಾಶೆಯೊಳಂದು ಸಕಲದಿಗು |
ಭಿತ್ತಿಯಂ ಬೆಳಗುತುಂ ಸರ್ವದೇವರ್ ಪೂಜಿ |
ಸುತ್ತುಮಿಹ ಸ್ಫಟಿಕಸಂಘಟಿತಲಿಂಗಮೊಯೆನಲ್ ಕೈಲಾಸಗಿರಿ ಮೆರೆದುದು || ೯ ||

ಸಾಹಸ್ರಕೋಟಿ[೧]ಶುಭ್ರಾಂಶುಗಳ ರುಚಿರಸಮು |
ನಾ ಹರಂ ಹಿಳಿದು[೧] ತನ್ನಯ ಕಳೆಯ ಕೂಡಿ ಕ |
ಣ್ಗಾಹಿನಿಂ ಘಟ್ಟಿಗೊಳಿಸಿದ ಪುಣ್ಯಘಟಿಕೆ[೨]ಯೊ ಸಕಲ ಶಿವಶಾಸ್ತ್ರಂಗಳ ||
ದೇಹನಿರ್ಮಳತೆಯೊಬ್ಬುಳಿಯಿಂ[೩] ಶಿವಗೆ ಸ |
ನ್ಮೋಹಿತೋದ್ಯತ್ಪ್ರೀಶವಾದುದೋಯೆಂತೆಂತು |
ಮೂಹಿಸುವೊಡರಿದೆನಲ್ ಕೈಲಾಸಪರ್ವತಂ ರಾಮಣೀಯಕವಾದುದು || ೧೦ ||

ತೋರ್ಪ ಕಣಿಯೆಲ್ಲ ಪರುಷದ ಕಣಿಗಳಗ್ರದಿ ಪೊ |
ಗರ್ವಡೆದ ರತ್ನಂಗಳೆಯ್ದೆ[೪] ಚಿಂತಾರತ್ನ |
ಮುರ್ವಿ ಬೆಳೆದಿರ್ಪ ತರುಗಳ್ ಕಲ್ಪತರುಗಳಲ್ಲಲ್ಲಿ ಗಿರಿಸಾನುವಿಂದೆ ||
ಸೋರ್ವ ನಿರ್ಝರರಸಂ ಸಿದ್ಧರಸಮಲ್ಲಿರ್ಪ |
ಸರ್ವಮೃಗಮುಂ[೫] ಪುಣ್ಯಮೃಗಕುಲಂ ಪೊಗಳೆ ಸಾ |
ಸಿರ್ವರಹಿಪರ್ ನೆರೆಯರೆಂದೆನಲು ಕೈಲಾಸಪರ್ವತಂ ಕಣ್ಗೆಸೆದುದು || ೧೧ ||

---

೧ ಶುಭ್ರಾಂಶುರುಚಿಯಾ ರಸಮು | ನಾ ಹರಂ ಹಳಿದು (ಶಿ.) ೨ ಘುಟಿಕೆ (ಅ, ಕ, ಮ.) ೩ ಯೊಬ್ಬುಳಿಯೋ (ಶಿ.) ೪ ಳೆಲ್ಲ (ಪ.) ೫ ಗಳ್ (ಶಿ, ಗೋ.)

ಆ ಗಿರಿಯ ಮೇಗೆ ರಂಜಿಪುದತುಳವೀರಶ್ರೈ |
ಪಾಗಸುದ ಕೋಂಟೆಯಿಂದಮೃತದಗಳಿಂದೆ ವೈ |
ರಾಗಪಾಳ್ಗೀರಿಯಿಂ ಜ್ಞಾನಕೇತುಗಳಿಂದೆ ಭಕ್ತಿಗಳ ತೆನೆಗಳಿಂದೆ ||
ನೆಗಸಿದ ಮುಕುತಿಮುಗಿಲಟ್ಟಳೆಗಳಿಂ ಶ್ರುತಿಯ |
ಬಾಗಿಲ್ಗಳಿಂ ಸತ್ಯದುನ್ನತಕದಂಗಳಿಂ |
ಬಾಗೆ ಪುಣ್ಯಂಗಳ ನಿವಾಸಮಘನಾಶಮಾ ಕೈಲಾಸವಾಸಮುಂದು || ೧೩ ||

ಹರುಷದಿಂದಲ್ಲಿರ್ಪನೀಶನಹಿಭೂಷನಗ |
ವರಜೇಶನುಗ್ರಭವಭಯವಿನಾಶಂ ದಿವಾ |
ಕರಕೋಟಿಸುಪ್ರಕಾಶಂ ಮುಕ್ತಿಕೋಶಂ ಶಶಾಂಕಲೇಖಾವತಂಸಂ ||
ಸುರರಕ್ಷನಸುರಸಂಹಾರದಕ್ಷಂ ದಕ್ಷ |
ಕರಿಕುಂಭವಿದಳನಾಪೇಕ್ಷಹರ್ಯಕ್ಷನಾ[೧] |
ಹರಿಯಕ್ಷಿಪೂಜಿತಪದಂ ತ್ರಿಯಕ್ಷಂ ವಿರೂಪಾಕ್ಷಂ ವಿನೋದದಿಂದೆ || ೧೪ ||

ಪ್ರತಿದಿನಂ ಬಂದೋಲಗಂಗೊಡುತೆ ಹರಿಯಜರ |
ಸ್ತುತಿಯನಾಲಿಸುತೆ ನಾನಾಲೋಕಪಾಲಕರ |
ಸ್ಥಿತಿಯುಂ ವಿಚಾರಿಸುತೆ ಸದ್ಭಕ್ತಭಕ್ತಿಗೊಲಿಯುತ್ತೆ ಗಿರಿಜಾತೆಸಹಿತ ||
ಅತಿವಿಭವದಿಂದೆಸೆದು ನಿಜನಿಜಸ್ಥಳಕೆ ಶ್ರೀ |
ಪತಿಮುಖ್ಯರಂತರಂಗಳನರಿದು ಕಳುಪಿ ಪಶು |
ಪತಿ ವಿಮಲಸುಖಸಂಕಥಾವಿನೋದದೊಳೆ ಜಗಮಂ ಪಾಲಿಸುತ್ತಿರ್ದನು || ೧೫ ||

ಅಂತೊಂದು ದಿನಮೊಂದಿನಂತೆ ಶಿವನೋಲಗಕ |
ನಂತವಿಷ್ಣುಗಳಗಣಿತಾಂಬುಜಭವರ್ ಸುರಪ |
ಸಂತತಿ ಶಿಖಿವ್ರಜಂ ಯಮಸಮೂಹಂ ನಿರುತಿನಿಕರಮಾ ವರುಣವರ್ಗಂ ||
ಮುಂತೆ ವಾಯುನಿಕಾಯಮುಂ ಕುಬೇರೌಘಮೀ |
ರಂತೀಶವಿಸರಂ[೨] ಗರುತ್ಮಂ[೩] ಮರಾಳಂ ಗ |
ಜಂ ತಗರ್ ಕೋಣಂ ನರಂ ನೆಗಳೆರಳೆ ಕುದುರೆಯೆತ್ತು[೪]ಗಳೊಳ್ಪೈತಂದುದು[೫] || ೧೬ ||

೧ ಮಂ (ಅ, ಬ, ಕ, ಮ.) ೨ ನಿಕರಂ (ಅ, ಬ, ಕ, ಮ.) ೩ ಗರುಡರುಂ (ಮ, ಅ, ಬ, ಕ.) ೪ ನಂದಿ (ಶಿ, ಗೋ., ಕೋ.) ೫ ಬಂದರು (ಅ, ಬ, ಕ.)

ಸುಮನೋಗಣಂ ರಾಕ್ಷಸಸ್ತೋಮಮುಂ ಯಕ್ಷ |
ಸಮುದಯಂ ಕಿನ್ನರವ್ಯೂಹಮುಂ ಗಂಧರ್ವ |
ಸಮಿತಿ ಕಿಂಪುರಷತತಿ ವಿದ್ಯಾಧರಾಳಿಯುಂ ಸಿದ್ಧಸಂಹತಿ ಗರುಡರ ||
ಸಮುದಾಯಮುಂ ಮಯೂರರ ನೆರವಿ ಗುಹ್ಯಕರ |
ಸಮವಾಯಮುರಗವೃಂದಂ ಪಿಶಾಚೋತ್ಕರಂ |
ಕ್ರಮದಿಂದೆ ಮಾನವಚಯಂ ರಾಗದಿಂದೀಶನೋಲಗಕೆ ಬರುತಿರ್ದುದು || ೧೬ ||

ತವಕದಿಂ ದ್ವಾದಶಾರ್ಕರ ಗೊಂದಣಂ ಮಹೋ |
ತ್ಸವದೊಳೇಕಾದಶಮಹೇಶ್ವರರ ಹೊರಳಿ ವೈ |
ಭವದೆ ನಾನಾಗ್ರಹಂಗಳ ತಂಡಮೊಲವಿನಿಂ ಬಹ ನವಬ್ರಹ್ಮರೊಗ್ಗು ||
ಸುವಿಲಾಸದಿಂದಷ್ಟವಸುಗಳ ತೆರಳ್ಕೆ ಘನ |
ಜವದಿಂದೆ ಸಪ್ತಋಷಿಗಳ ನೆರವಿ ಹರುಷದಿಂ |
ತವೆ ಚತುರ್ದಶಮನುಗಳೊತ್ತೊತ್ತೆಯಾ[೧] ಶಿವಾಧವನೋಲಗಕೆ ಬಂದುದು || ೧೭ ||

ತರತರಂ[೨] ಬಿಡಿದು ಸಂಭ್ರಮದಿಂದೆ ರೋಷ ಭಾ |
ಸ್ಕರ ಭರದ್ವಾಜ ಮಾಂಡವ್ಯ ಮಾರ್ಕಂಡೇಯ |
ವರರೋಮಜ ವ್ಯಾಸ ಬಕದಾಲ್ಭ್ಯ ಶುಕ ಪರಾಶರ ಭೃಗುವಗಸ್ತ್ಯ ಮೈತ್ರಿ ||
ವರವಾಲಖಿಲ್ಯ ಗಾಲವ ಗಾರ್ಗ್ಯ ದೂರ್ವಾಸ |
ಶರಭ ಕೌಂಡಿನ್ಯ ಮುದ್ಗಲ[೩] ಪುಷ್ಪದತ್ತ ಭಾ |
ಗುರಿ ಸನಕ ನಾರದ ಸನತ್ಕುಮಾರಾದಿ ಮುನಿವರರೈದೆ ಬರುತಿರ್ದರು || ೧೮ ||

ಸಿರಿ ಸರಸ್ವತಿ ಶಚಿಯಹಲ್ಯೆ ಲೋಪಾಮುದ್ರೆ |
ಯರುಮರುಂಧತಿಮುಖ್ಯಪುಣ್ಯಾಂಗನಾಜನಂ |
ಸುರಸೆಯೂರ್ವಸಿ ರಂಭೆ ಮೇನಕೆ ತಿಲೋತ್ತಮಾದ್ಯಮರವೇಶ್ಯಾಸಮೂಹಂ ||
ಪರಮಜಾಹ್ನವಿ ಸರಸ್ವತಿ ಕುಮುದ್ವತಿ ಪುಣ್ಯ |
ಚರಿತೆ ಕಾವೇರಿ ಗೋದಾವರಿಗಳೆಂದೆಂಬ |
ತರತರದ ಸಪ್ತಾಂಗನಾಜನಂ ಶಿವನೋಲಗಕ್ಕೆ ನಡೆತರುತಿರ್ದುದು || ೧೯ ||

೧ ಳೊತ್ತೊತ್ತೆಯಿಂ (ತಿ, ಪು, ಅ, ಬ.) ೨ ಥರಥರಂ (ಪು.) ೩ ಪುಷ್ಕಲ (ಪು, ಅ, ಬ, ಕ, ಮ.)

ರಾಗದಿಂ ಸಪ್ತಮಾತೃಕೆಯರಾ ಚೌಷಷ್ಟಿ |
ಯೋಗಿನಿಯರಷ್ಟದಿಕ್ಸತಿಯರಶ್ವಿನಿಯಾದಿ |
ಯಾಗಿರ್ದ ತಾರಾಂಗನೆಯರಖಿಳರುದ್ರಕನ್ನಿಕೆಯರತಿನಿಬಿಡವಾದ |
ನಾಗಕನ್ನಿಯರಷ್ಟವಿಧಮಹಾಲಕ್ಷ್ಮಿಯರ್ |
ಭೂಗಗನಲೋಕಂಗಳಬಲಾಜನಂಗಳಿಂ |
ಬಾಗಿ ಪಾರ್ವತಿಯ ಸಮ್ಮುಖದೊಳತಿ ಭಕ್ತಿಯಿಂ ನಿಂದಿರ್ದರೋಲೈಸು || ೨೦ ||

ಎಡಗಡೆಯೊಳಧಿಕತರವಿಭವದಿಂ ನಾರಿಯರ |
ಗಡಣದಿಂ ಗಿರಿಜೆ ರಂಜಿಸಲಿಂದ್ರರುಗಳ ವಂ |
ಗಡಗೂಡಿ ವಿಷ್ಣು ತತ್ಪಕ್ಕಿನೊಳ್ ಮೆರೆಯೆ ಸಂಯಮಿಗಳ ಸಮೂಹದಿಂದೆ ||
ಬಿಡದೆ ದಕ್ಷಿಣಭಾಗದೊಳ್ ನವಬ್ರಹ್ಮರುಗ |
ಳೊಡಗೂಡಿ ಸರಸಿಜೋದ್ಭವನಿರಲ್ ವೇದವು |
ಗ್ಘಡಿಸೆ ತತ್ತ್ವಜ್ಞಾನರತ್ನಸಿಂಹಾಸನದೊಳೀಶ್ವರಂ ರಂಜಿಸಿದನು[3] || ೨೧ ||

ಅಲುಗೆ ಭುಜಗೇಂದ್ರೆಂಬ ಫಣಿಗಣಾಭರಣಮುಪ್ರ |
ತೊಳಗೆ ಶುದ್ಧಸ್ಫಟಿಕಸಂಕಾಶತನುಕಾಂತಿ |
ಬೆಳಗೆ ದಿಗ್ಘರೆ ಪುಷ್ಕರಂಗಳಂ ಸ್ಮರಭಸ್ಮಧೂಳಿಯಂಗದೊಳೆಸೆಯಲು ||
ಸುಳಿಪಲ್ಸುರಿ ಥಳತ್ಥಳಿಸೆ ಕೆಂಜೆಡೆ ಮಿರುಗೆ |
ತಲೆಮಾಲೆಗಳ್ ಶೋಭಿಸೆತ್ತು ರಂಜಿಸೆ ಮದನ |
ಬಲಶಿಕ್ಷನಮಳಭಾಳಾಕ್ಷನೀ ವಿರೂಪಾಕ್ಷನಿರ್ದಂ ವಿಲಾಸದಿಂದೆ || ೨೨ ||

ಆ ರುದ್ರಸಮ್ಮುಖದೊಳತಿ ವಿಭವದಿಂ ವಿಜಯ |
ವೀರಭದ್ರಂ ನಂದಿ ಕಾರ್ತಿಕೇಯಂ ಭೃಂಗಿ |
ವೀರವೀರಕನತುಳರೇಣುಕಂ ದಾರುಕಂ ಕಂಕಾಳಧರ ಗಣಪರು ||
ಭೈರವಂ ಚಂಡೇಶ ಕೂಷ್ಮಾಂಡನಂಗಾರ |
ಧಾರ ಗಗನಾಂಗ ಧೂಮಾಂಗ ಶೈಲಾಂಗರೆಂ |
ಬಾ ರೌದ್ರರೂಪಿನ ಮಹಾಗಣಂಗಳ್ ಮೆರೆದಿರೆ ಸಂಜನಿಸಿದಚ್ಚರಿಯನು || ೨೩ ||

೧ ಕಾಂತಿ (ಶಿ, ಪ, ಗೋ, ಕ.) ೨ ಬಲಬಿಕ್ಕೆ (ಶಿ.) ೩ ನಂಜಿಸಿದನು (ಕೋ.) ೪ ಘಾಲಸೆ (ಕೋ.)

ಕಡಲೇಳನೊಮ್ಮೆ ಸುರ್ರೆಂದು ಪೀರ್ವ ಮಹಾ |
ಪಡಬನಂ ಮಿಂಚುಬುಳುವೆಂಬ ವಾಸುಗಿಯ ಮುಡಿ |
ವೆಡೆಯ ಕಿಚ್ಚಿಂ ಧರೆಯನೊಬ್ಬೆರಲೊಳಾಳ್ದು ಮುನಿದೊಡೆ ಸಕಲಜಗವನೊಮ್ಮೆ |
ಸುಡುವ ಕನಕಾದ್ರಿಯಂ ಪಿಡಿಗುಂಡ ಮಾಳ್ಪ ನಭ |
ದೆಡೆಯುಡುಗಳಂ ಕಳಲ್ಚುವ ಸೂರ್ಯಮಂಡಲವ |
ನೊಡೆವ ಘುಡಿಘುಡಿಪ ಸಿಡಿಲಂ ಸೀಳ್ವ ರುದ್ರಗಣಮೆಡೆವಿಡದೆ ಕಣ್ಗೆಸೆದುದು || ೨೪ ||

ಪಂಚವದನಂಗಳಿಂ ದಶಭುಜಂಗಳೊಳೆ ತ್ರಿ |
ಪಂಚನೇತ್ರಂಗಳಿಂ ವಿಷಕಂಠದಿಂ ದೆಸೆಗೆ |
ಮಿಂಚುವೆಲುವಾಲೆಯಿಂ ಪಿಡಿದಾ ತ್ರಿಶೂಲಡಮರುಗದೊಳಂ ಕೆಂಜೆಡೆಗಳ |
ಗೊಂಚಲ್ಗಳಿಂ ದೇಸಿವಡೆದುಟ್ಟ ವ್ಯಾಘ್ರಚ |
ರ್ಮಾಂಚಲದೊಳೈದೆ ಸಾರೂಪ್ಯದವರತ್ತಿತ್ತ |
ಲುಂ ಚಲಿ[1]ಸದಿರ್ಪ [2]ಸಾಲೋಕ್ಯ ಸಾಮೀಪ್ಯದವರೆಸೆದಿರ್ದರೇನೆಂಬೆನು[2] || ೨೫ ||

ಸಮ್ಮುಖಂಬಿಡಿದು ನಿಲಿ ಹರಿಯಜರ್ ದಿಗಧಿಪರ್ |
ನಿಮ್ಮ ದೆಸೆಗಳ ಸಾರ್ದು ನಿಲ್ಲಿ ಮುನಿಪಾಲಕರ್ |
ಸುಮ್ಮನಿರಿಯಸುರರಲಿಚಲ್ ಬೇಡಿಮುಖಿಳದಿವಿಜಾಳಿ ಗಜಬಜಿಸಬೇಡ |
ದಿಮ್ಮಿದರ್[3] ಗುಜುಗುಜಸದಿರಿಮುತುಳರುದ್ರಗಣ |
ಮುಮ್ಮಸಗಬೇಡೆಂದು ತತ್ಸಭೆಯೊಳಾನಂದಿ |
ಯುಮ್ಮಹಾಕಾಳರ್ ಭರಾಭರಿಗಳಂ ಮಾಡುತಿರ್ದರತಿಭಕ್ತಿಯಿಂದೆ || ೨೬ ||

ಬಿರುಬಿರನೆ ಕಂಗಳಂ ಬಿಟ್ಟು ಪಲ್ಲಂ ಕಿರಿದು |
ಪ್ರರುಗಿಸುತೆ ಮೊಗಮನಂಗುಷ್ಠಾಗ್ರದೊಳ್ ನಿಂದು |
ಥರಥರಿಸಿ ನಿಲ್ಲುತುಂ ಕಂಠಮಂ ಹಿಂದಕ್ಕೆ ತಿರುಪಿ ಬಿರ್ರನೆ ಬೆರೆವುತೆ[4] |
ತಿರುತಿರುಗಿ ತಿರ್ರೆಂದು ತಿರುಗುತುಂ ದಿವಿಜರಂ |
ಜರೆಜರೆವುತಭಿನಯಿಸಿ[5] ಹಾಸ್ಯರಸಮಂ ಸಭೆಗೆ |
ಕರೆಕರೆವುತುಂ ಭೃಂಗಿ ಭಕ್ತಿಯಿಂ ನಟಿಸುತುಂ ಶಿವನಿದಿರೊಳೆಸೆದಿರ್ದನು || ೨೭ ||

---

೧ ಚರಿ (ಹು.) ೨ ಸಾಮೀಪ್ಯ ಸಾಯುಜ್ಯ ಸಾಲೋಕ್ಯದವರೆಸೆದಿರ್ದರು || (ಶಿ, ಗೋ.) ೩ ನಿಮ್ಮಿದಿರ್ (ಹು.) ೪ ಬಿರಿವುತಂ (ಹು.) ೫ ತಭಿನಮಿಸಿ (ಶಿ.)

ಎಸೆವ ಪಂಚಮ ಮಧ್ಯ ಗಾಂಧಾರ ಷಡ್ಜ ಮೊ |
ಹಿಸುವ ಧೈವತ ಋಷಭ ವರನಿಷಾದಸ್ವರದ |
ಪಸರದಿಂ ಕಾಕಲಿಕಲಂ[೧] ಮಂದ್ರ ತಾರಮೆಂಬಿವರ ನಿಲುಕಡೆಯನರಿದು ||
ಪೊಸ ಭಣಿತೆ ಬೆಡಗು ಮಧುರಂ ನಯಂಗಳೊಳೆ ಶೋ |
ಭಿಸುವ ತಾನಂಗಳೊಳ್ ಸಕಲ ರಾಗಂಗಳಿಂ |
ದೊಸೆದು ತುಂಬುರನಾರದರ್ ಪಾಡುತಿರ್ದರೊಂದೆಸೆಯೊಳತಿವಿಭವದಿಂದೆ || ೨೮ ||

ಘನಸುಷಿರಮಾನದ್ಧತತವೆಂಬ ವಾದ್ಯನಿ |
ಸ್ವನದೊಳಂ ಗೋಪಾಂಗ ಪ್ರತ್ಯಂಗ ಭ್ರಮರಿ[೨] ಭಾ |
ವನೆ ಮಂಡಲಂಗಳಿಂ ಶುದ್ಧ ದೇಶಿಗಳೊಳಳವಡಿಸಿ ಲಕ್ಷಣಯುಕ್ತದೆ ||
ಅನುಗೊಳಿಸಿ ಚಿಂದು ಜಕ್ಕಡಿ ಕೋಲಚಾರಿಗಳ್ |
ಮೊನೆಗಾಲ್ ಕಳಾಸ ಕೈಮರಿ ತಿಪುಡೆ ಮಡುಹುಮು |
ಕ್ಕನಿತು ಭೇದಂಗಳಿಂ ನರ್ತಿಸುವ ನೃತ್ಯದಬಲಾಜನಂ ಕಣ್ಗೆಸೆದುದು || ೨೯ ||

ರುದ್ರಾಣಿಯಿಂದಖಿಳಶೃಂಗಾರಮಾ ವೀರ |
ಭದ್ರನಿಂ ವೀರಮೀಶ್ವರಮನದೊಳಂ ಕರುಣ |
ಮದ್ರಿರೂಪದ ಮರುಳ್ಗಳಿಂದದ್ಭುತಂ ಭೃಂಗಿಯಿಂ ಹಾಸ್ಯಮಾಭಕ್ತರ ||
ಪ್ರಪ್ರಚನೆಯೊಳ್ ಭಯಮುಮೆಲುವಾಲೆ ಪುಲಿದೊವಲ |
ಮುದ್ರೆಯವರಿಂದೆ ಬೀಭತ್ಸ ರೌದ್ರಂ ಮಹಾ |
ರುದ್ರಗಣದಿಂ ಮುನಿಗಳಿಂ ಶಾಂತಿಯೆನಲಭವಸಭೆ ನವರಸದೊಳೆಸೆದುದು || ೩೦ ||

ಹಡಪಮಂ ಪಿಡಿದು ಧನದಂ ರಾಜಿಸಲ್ ಗಿಂಡಿ |
ಪಿಡಿಯೆ ವರುಣಂ ಮರುತನಸರಳ ಬಿಜ್ಜಣಿಗೆಯಂ |
ಪಿಡಿದು ಬೀಸಲ್ ನಿರುತಿ ಕಾಳಾಂಜಿವಿಡಿಯೆ ಸುರಪಂ ರನ್ನಗನ್ನಡಿಯನು ||
ಪಿಡಿಯೆ ಚಂದ್ರಾದಿತ್ಯರುಭಯಚಾಮರಗಳಂ |
ಪಿಡಿದು ಫಾಳಿಸೆ ಹರಿಯಚಾಪ್ಯಮರಸಂದೋಹ |
ಮಡಿಗಡಿಗೆ ಪೊಡಮಿಕ್ಕಿ ಮಗುಳೆದ್ದು ನಿಂದಿರ್ದು ನುತಿಸಿದರ್ ಭಕ್ತಿಯಿಂದೆ || ೩೧ ||

೧ ವಿಕಲಂ (ಶಿ.) ೨ ಭ್ರಮರ (ಶಿ.)

ಜಯತು ಭವಹರ ಜಯತು ಭಾಳಾಕ್ಷ ಜಯತು ಶಿವ |
ಜಯತು ಭಿಕ್ಷಾಟನಪ್ರಿಯ ಜಯತು ಭೀಮಾಂಗ |
ಜಯ ಭುಜಗಭೂಷ ಜಯಜಯತು ವೇದಾಭೇದ್ಯ ಜಯತು ಭೈರವಜನಕನೇ |
ಜಯ ಭೋಗಿಶಯನನೇತ್ರಾರ್ಚಿತಪದದ್ವಂದ್ವ |
ಜಯತು ಭೌಮಾಪರಗ್ರಹಕಲಾಜೂಟ ಜಯ |
ಜಯ ಮದನಭಂಗ ಗಂಗಾಂಭಃಕಣಾಧಾರ ಜಯತು ಜಯತೆನುತಿರ್ದರು || ೩೨ ||

ಜಯ ಜಯತು ಸದ್ಭಕ್ತಭಕ್ತ ಭವಭಯನಾಶ |
ಜಯ ಜಯತು ದಿಕ್ಪಾಲಪಾಲ ಪಾವಕನೇತ್ರ |
ಜಯ ಜಯತು ಪರಬ್ರಹ್ಮಬ್ರಹ್ಮಬೋಧಾರಾಧ್ಯ ಜಯಜಯತು ನಿರ್ವಾಣನೆ |
ಜಯ ಜಯತು ಶ್ರೀನಾಥನಾಥ ನಾಥಾಭಾವ |
ಜಯ ಜಯತು ಕೀನಾಶನಾಶ ನಾಶವಿದೂರ |
ಜಯ ಜಯತು ನಿಷ್ಕಾಮಕಾಮ ಕಾಮವಿರಾಮ ಜಯತು ಜಯತೆನುತಿರ್ದರು
|| ೩೩ ||

ಎಂದಿಂತು ನುತಿಪ ಹರಿಯಜ ಸುರೇಂದ್ರಾದಿಗಳ |
ನಂದು ಕೃಪೆಯಿಂ ನೋಡಿ ಕರೆಕರೆದು ಕಣ್ಣನ್ನೆ |
ಯಿಂದಂತರಂಗವರಿದೊಡನೆ ಮನ್ನಿಸುತೆ ಮುನಿಗಳ ಭಕ್ತಿಗಂ ಮೆಚ್ಚುತೆ |
ಕುಂದಧವಳಾಂಶುಭಸ್ಮಾಂಗನಗಜಾಂಗನಾ |
ನಂದಸಂಬಂಧನಾಲಿಂಗನಮೃತಾಂಗನೆಯೊ |
ಳೊಂದಿದಭವಂ ತ್ರಿಯಕ್ಷಂ ವಿರೂಪಾಕ್ಷನಂದೋಲಗದೊಳೆಸೆದಿರ್ದನು || ೩೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದಿ ಬರೆದವರ್ಗೋದಿದರ್ಗರ್ಥವಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೫

ಅಂತು ಸಂಧಿ ೨ಕ್ಕಂ ಪದಗಳು ೩೫ಕ್ಕಂ ಮಂಗಳಮಹಾಶ್ರೀ

ನೂರನೆಯ ಸಂಧಿ

ಸೂಚನೆ

ಪಾರ್ವತಿಯ ಪ್ರಶ್ನೆಗೀಶಂ ತನ್ನ ಚಿತ್ಕಳೆಯ |
ಸನ್ನಿಯೋಗುದಿಸೆಂದೊಡೇಕೆನಲ್ ಬಸವಾದಿ |
ಸರ್ವರುಂ ನಿಸ್ಸ ಬರವಂ ಬಯಸುತಿಹರದಂ ಕೇಳೆಂದು ಪೇಳ್ದನಂದು ||

ಗಳಸಂಧಿಸಮ್ಮಿಳಿತಗರಳಾಪ್ತವಿಗ್ರಹೋ |
ಜ್ವಲದ್ವೃಷಭಯಾನ ಕಮಲಾಸನಾನತಪಾದ |
ಖಳತ್ರಿಪುರಧಿಕ್ಕೃತಪ್ರಕಟಖಡ್ಗ ಕೈಲಾಸಶಿಖರಿಸಮಾಶ್ರಯ ||
ತ್ರಿಳಿಯ ಷಡ್ಗುಣದಂತೆ ರಾಜಿಸುವ ಪಾರ್ವತೀ |
ಕಠಿನಕುಚತಟಕುಂಕುಮದ್ರವಾಂಕಿತವಕ್ಷ |
ಸಲಹು ಪಂಪಾವಿರೂಪಾಕ್ಷ ಲೋಕಾಧ್ಯಕ್ಷ ಭಾಳಾಕ್ಷ ನತಜನರನು || ೧ ||

ಈ ವಿಭವದಿಂದಭವನಿರಲಗಜೆ ನುಡಿದಳೆಲೆ |
ದೇವ ಕೇಳೆಂದು ನಂದ್ಯಾದ್ಯಮರಗಣಕುಲವು |
ನಾ ವಸುಮತಿಗೆ ಕಳುಪುತಪರ್ಗೆ ತತ್ತ್ವೋಪದೇಶಕೆ ನಮ್ಮ ಚಿತ್ಕಳೆಯನು ||
ನೀವೊಡನೆ ಕಳುಪಿದಪೆವೆಂದಿತ್ತ ನಂಬುಗೆಯ |
ಪಾವನನಿರೂಪಮಂ ಸಲಿಸಬೇಡವೆಯೆನಲ್ |
ಭಾವಿಸಿ ಶಿವಂ ತನ್ನ ಹೃತ್ಕಮಲಮಧ್ಯಚಿತ್ಪ್ರಣವರೂಪಂ ನೆನೆದನು || ೨ ||

ನೆನೆಯಲಾ ಚಿತ್ಪ್ರಣವವೇ ಹೊಳೆದು ಶಿವಪದಾ |
ನನದಿಂದೆ ಕೋಟಿಸೂರ್ಯಪ್ರಭೆಯೊಳವತರಿಸಿ |
ಘನತರದ ದಿವ್ಯಮೂರ್ತಿಯನಾಂತು ಮುಂದೆನಿಂದಡಿಗಡಿಗೆ ಭಕ್ತಿಯಿಂದೆ ||
ತನುಮನದೊಳೆರಗಲಾ ಷಣ್ಮುಖಿಯನೊಲಿದೆತ್ತಿ |
ವಿನಯದಿಂದಪ್ಪಿ ಮುಂಡಾಡಿ ತೊಡೆಯೊಳಗಿಟ್ಟು |
ಮಿನುಗು ರದನದ್ಯುತಿ ಸಭಾಂತರಂದೀವೆ ತತ್ಕವರನೊಳಗಿಂತೆಂದನು || ೩ ||

೧ ಕೇಳ (ಮು, ಅ, ಬ, ಕ, ಮು.) ೨ ಷಣ್ಮುಖನ (ತಿ, ಗೋ.) ೩ ಸಭಾಂತರದ ಜಲಗೆ (ಮು, ಕ.)

ಕೇಳ್ಕುವರ ನಂದಿಮುಖ್ಯಾಮರಗಣಂ ಧರೆಗೆ |
ಬೀಳ್ಕೊಂಡು ಪೋಗಿ ಮಾನವಜನ್ಮದೊಳ್ ಪುಟ್ಟಿ |
ಬಾಳ್ಕೆಯಿಂದಿರ್ಪರಲ್ಲಿಗೆ ಪೋಗಿ ನೀಂ ಜನಿಸಿ ಶಿವತತ್ತ್ವಷಟ್ಸ್ಥಲವನು ||
ಅಳ್ಕರಿಂದುಪದೇಶವಿತ್ತು ಮುಕ್ತಿಗೆ ಸಲಿಸ |
ವೇಳ್ಕುಮೆನಲಾ ಕುವರನತಿಶಯದೊಳೆರಗಿ ಪಣೆ |
ಯೊಳ್ಕೆಯ್ಗಳಿಟ್ಟು ಬಿನ್ನಯ್ಸಿದಂ ಪರಶಿವಂಗಾದರದೊಳಾ[೧]ಕ್ಷಣದೊಳು || ೪ ||

ಮಾನವರೊಳಾಂ ಜನಿಸಿ ಶಿವತತ್ತ್ವಷಟ್ಸ್ಥಲನಿ |
ಧಾನಮಂ ನಂದಿಮೊದಲಾದಮರಗಣಕುಸಿರ್ವ |
ದೇನಿದಕೆ ಕಾರಣಮೆನಲ್ ಶಿವಂ ನಕ್ಕು ನೀನರಿಯದ ರಹಸ್ಯಮುಂಟಿ ||
ಈ ನಮ್ಮ ನಿಜತತ್ತ್ವಚಿತ್ಕಳಾರೂಪೀ ಷ |
ಡಾನನಂಗಳೊಳೆ ಷಟ್ಪ್ರಣವರೂಪಾಗಿರ್ಪೆ |
ನೀನೆ ಷಣ್ಮುಖ ಷಟ್ಸ್ಥಲಬ್ರಹ್ಮ ಕೇಳಬೇಕೆಂದೊಡಾಂ ಪೇಳ್ವೆನಿನ್ನು || ೫ ||

ಕೇಳಾದೊಡೆಲೆ ಷಟ್ಸ್ಥಲಬ್ರಹ್ಮ ಪಿಂತೆ ಕೆಲ |
ಕಾಲದೊಳಗೊಂದು ದಿವಸಂ ನಂದಿ ಭೃಂಗಿ ಮಾ |
ಕಾಳಮೊದಲಾದಸಂಖ್ಯಾತಗಣದೊಡನೆ ಗಿರಿಜಾತೆಸಹಿತೀ ಕ್ರಮದೊಳು ||
ಓಲಗಂಗೊಟ್ಟಿರ್ಪ ಸಮಯದೊಳ್ ನಾರದಂ |
ಲೀಲೆಯಿಂ ಬಂದೆಮಗೆ ಸಾಷ್ಟಾಂಗದಿಂದೆರಗಿ |
ಭಾಳವಿನ್ಯಸ್ತಕರಪುಟನಾಗಿ ನಮಿಸುತಿರೆ ನಂದೀಶನಿಂತೆಂದನು || ೬ ||

ಎಲೆಮುನಿಪ ನೀಂ ಬಂದ ಕಾರ್ಯಮಂ ದೇವೇಶ |
ನೊಲವರಿದು ಬಿನ್ನಯಿಸೆನಲ್ ನಾರದಂ ಸುನಿ |
ಶ್ಚಲಚಿತ್ತದಿಂದೆಮ್ಮ[೨]ನೀಕ್ಷಿಸುತ್ತಭವ ನಿಮ್ಮಾಜ್ಞೆಯೊಳು ಲೋಕಂಗಳ ||
ತೊಳಲಿದೆಂ ಸಕಲಲೋಕಂಗಳೊಳ್ ಶಿವಭಕ್ತಿ |
ಬಳೆವುತಿರ್ಪುದು ದಿನದಿನಕ್ಕಿತ್ತ ಭೂಲೋಕ |
ದೊಳಗಿರ್ಪ ಭರತಖಂಡದ ಕರ್ಮಭೂಮಿಯೊಳ್ ಕಲಿ ಪ್ರಬಲಮಾಯ್ತೆಂದನು || ೭ ||

೧ ಗಾಕುವರನಾ (ಶಿ, ಪ, ಗೋ, ಹು.) ೨ ನಾಗೆಮ್ಮ (ಶಿ.)

ಸತ್ಯಮಳಿದುದು ಸದಾಚಾರಂಗಳಡಗಿರ್ದು |
ಸತ್ಯಾಧಿಕಶಿವಭಕ್ತಿಗಳ್ ಮಸುಳ್ದುವಾ |
ಚಿತ್ರಶ್ರೀಲಿಂಗಗಳಳಿದುವು ಶಿವಾಗಮಪುರಾಣಂಗಳವು ಕನಸಾದುವು ||
ನಿತ್ಯಸತ್ಕ್ರಿಯೆಗಳುಡುಗಿದುವಖಿಳಸದ್ಧರ್ಮ |
ಕೃತ್ಯಮುಂ ಬಯಲಾಯ್ತು ಧರೆಯ ರಾಜವ್ರಜಂ |
ಪ್ರತ್ಯೇಕಮವಿಚಾರ ದುರ್ನೀತಿ ದುಷ್ಕೃತಾಸ್ಪದಿಗಳಾಯ್ತೆಂದುಸಿರ್ದನು || ೮ ||

ಜಿನಬುದ್ಧ ಚಾರ್ವಾಕಮತವಿರದೆ ಪೆರ್ಚಿ ನೂ |
ತನವಾಗಿ ಪಿರಿದು ಶಿವಮತವನುರೆ ಜರೆವುತುಂ |
ಘನಲಿಂಗ ಜಂಗಮ ಪ್ರಸಾದ ಪಾದೋದಕ ವಿಭೂತಿ ರುದ್ರಾಕ್ಷಗಳನು ||
ತನತನಗೆ ಪಳಿವುತುಂ ಶಿವಭಕ್ತಿಯುಕ್ತಸ |
ಜ್ಜನರನತಿನಿಂದಿಸುತ್ತಂ ಜಂಗಮವ ಕಂಡು |
ಮುನಿವುತಿರ್ಪರ್ ಪ್ರಭುಗಳುಂ ಪ್ರಜೆಗಳಾಸ್ಥಳದೊಳಭವ ಚಿತ್ತೈಸೆಂದನು || ೯ ||

ಎಲ್ಲೆಲ್ಲಿಯುಂ ಶಿವಾಲಯದ ಬಾಗಿಲ್ಗಳವು |
ಕಲ್ಲಿಂದೆ ಮುಚ್ಚಿದುವು ಜಂಗಮಸ್ಥಲದ ಮಠ |
ವೆಲ್ಲಮುಂ ಬಯಲಾದುವಧಿಕಪುರಮಾನ್ಯಸಂತತಿ ಚರಕೆ ಸಲೆ ಸಂದುವು ||
ಎಲ್ಲೆಡೆಯೊಳುಂ ಜಿನಾಲಯಮಯಂ ಸಕಲಜನ |
ರೆಲ್ಲರುಂ ಜಿನಭಕ್ತಿಯುಕ್ತರಲ್ಲಿಯ ಮುನಿಗ |
ಳೆಲ್ಲರುಂ ಜಿನಮುನಿಗಳರಸಿ ನೋಡಿದೊಡೆ ಶಿವಲಾಂಛನಮದಿಲ್ಲೆಂದನು || ೧೦ ||

ಪುಸಿ ಪುಸುಳ್ ಗನ್ನಗತಕಂ ಕಳವು ಕೊಲೆ ಕೇಡು |
ಕಿಸುರುಂ ಕೃತಘ್ನಭಾವಂ ನಿಂದೆ ಮಾಯೆ ದು |
ರ್ವ್ಯಸನಂ ವಿಕಾರಂ ಕುತರ್ಕಂ ಕುಮಾರ್ಗಮವ್ರತಮವಾಚ್ಯಂ ನಿಷ್ಠುರಂ ||
ಪಿಸುಣಂ ಪರಾಭವಂ ಕಲಹಮುಂ ಕಪಟಮಳಿ |
ಜನಮತಿಕ್ರೂರಮನ್ಯಾಯಮಿವು ಪೆರ್ಚಿತ |
ದ್ವಸುಮತೀವನಿತೆ ತಾಳದೆ ಕಂಪಿಸುತ್ತಿರ್ಪಳೇನೆಂಬೆನಚ್ಚರಿಯನು || ೧೧ ||

---

೧ ವಧಿಕ (ಹು.)

ಪತಿಗಳಿರಲನ್ಯರೊಳ್ ನೆರೆವರಂಗನೆಯರಾ |
ಪತಿಹಿತೆಯರಿರ[೧]ಲಸತಿಗೊಲಿದಿರ್ಪರಾ[೧] ಪುರುಷ |
ರತುಳದ್ವಿಜರಧಮಕುಲದೊಳ್ ವೆರಸಿ ವರ್ತಿಪರ್ ಧರ್ಮಕರ್ಮವನೆಣಿಸದೆ |
ಅತಿಹೀನರೈಶ್ವರ್ಯದಿಂ ಬಾಳ್ವರಾಚಾರ |
ಯುತರೆತ್ತಲಾನುಮಿರಲವರುಂ ದರಿದ್ರಸಂ |
ಗತರಾಗಿ ಜೀವಿಪರ್ ಸೀಗೆಯೊಳಗಣ ಬಾಳೆಯಂತೆಂದನಾ ಮುನಿಪನು || ೧೨ ||

ಈ ದುರಾಚಾರಮಂ ಪೊರ್ದದಲ್ಲಲ್ಲಿ ಪರ |
ವಾದಿಗಳ ಕಣ್ಗಳ್ಗೆ ಕಾಣಿಸದೆ ಗೋಪ್ಯದಿಂ |
ಮೇದಿನಿಯ ಮರೆಯೊಳಿಹ ನವನಿಧಿಗಳಂತೆ ಬಿದಿರಡವಿದುರುಗಲ್ ಮುಸುಕಿದ |
ಆ ದಿವ್ಯಚಂದನದ್ರುಮಗಳೆನೆ ದುರ್ದಿವಸ |
ದಾದಿತ್ಯಕಿರಣಂಗಳಂತಭವ ನಿಮ್ಮ ಶ್ರೀ |
ಪಾದಭಕ್ತರ್ ದುರಿತಮುಕ್ತರಿಪ್ಪರ್ ಕೋಟಿಗೊರೊರ್ವರೆಂದುಸಿರ್ದನು || ೧೩ ||

ಉರಿವ ಬೇಸಗೆಯೊಳೊಣಗುವ ಬಳ್ಳಿಗಳ್ ಮಳೆಯ |
ನಿರುಳ ಚಕ್ರಾಬ್ಜಂಗಳರ್ಕನಂ ದಾರಿದ್ರ್ಯ |
ದುರವಣೆಯೊಳಗೆ ನೊಂದ ಮಾನವಂ ಪರಮಸೌಭಾಗ್ಯಮುಂ ಬಯಸುವಂತೆ |
ಪರಸಮಯಮಿನ್ನೆಂದಿಗಡಗಿ ಪೋಪುದೊ ನಮ್ಮ |
ಹರಸಮಯಮೆಂದಧಿಕಮಪ್ಪುದೋಯೆಂದು ಶಿವ |
ಶರಣರೊಳಗೊಳಗೆ ಬಿಸುಸುಯ್ವುದಂ ಕಿವಿಯಾರೆ ಕೇಳ್ದೆನಾನೆಂದುಸಿರ್ದನು || ೧೪ ||

ಈ ವಾರ್ತೆಯಂ ಬಿನ್ನಪಂಗೆಯ್ಯಲೆಂದಾಂ ಮ |
ಹಾವೇಗದಿಂ ಬಂದೆನಾ ಮನುಜರೆಲ್ಲರುಂ |
ಸಾವ ಹುಟ್ಟುವ ದಂದುಗಕ್ಕೊಳ್ಗು ಬರಿದೆ ಕೆಡುತಿರ್ಪರದನುಸಿರಲಳವೆ |
ದೇವರರಿಯದ ಪ್ರಪಂಚುಂಟೆ ನಾನಾಜೀವ |
ಭಾವಚೇಷ್ಟಿತಸೂತ್ರಧಾರಕನೆ ಸಕಲರಂ |
ಪಾವನಂ ಮಾಳ್ಪುದಿದು ಸಮಯಮಘನಾಶ ಸರ್ವೇಶ ಚಿತ್ತೈಸೆಂದನು || ೧೫ ||

---

೧ ಉ ಪರಸತಿಗೊಲಿವರಾ (ಶಿ.)

ತಪಸದಿಂದವು ನಿಮಿತ್ತಂ ದೇವರಧಿಕಗುರು |
ಚರಮೂರ್ತಿಯಾಗಿ ಮರ್ತ್ಯಕ್ಕೆ ಬಿಜಯಂಗೆಯ್ದು |
ಪರಸಮಯಖಂಡನೋದ್ದಂಡಮಂ ಮೆರೆದು ಶ್ರುತದೃಷ್ಟದ ಪವಾಡಂಗಳ ||
ಧರೆಗೊಲ್ದು ತೋರಿಸುತೆ ಗುರು ಲಿಂಗ ಜಂಗಮದ |
ಚರಣೋದಕ ಪ್ರಸಾದಂಗಳ ಮಹಾತ್ಮೆಯಂ |
ವಿರಚಿಸಿ ಶಿವಾಚಾರಸಂಪನ್ನರೆನಿಸಿ ಮನುಜರನುಳಿಹಬೇಕೆಂದನು || ೧೬ ||

ಮಾನವರ ಭವಬಂಧಮಂ ಪರಿದು ರಕ್ಷಿಸೆಂ |
ದಾ ನಾರದಂ ನುಡಿಯಲಾರ ಕಳುಪುವೆವೆಂದು |
ಜ್ಞಾನಿಸುತ್ತಿರೆ ಗಿರಿಜೆ ನುಡಿದಳೆಲೆ ದೇವ ಮರ್ತ್ಯರ್ ಭವಕೆ ಬಹರೆಂಬುದ ||
ಆನರಿವೆನಾ ಭವದ ಕೋಟಲೆಗೆ ತವ ಮಹಾ |
ಸ್ಥಾನದೊಳಗಿರ್ಪ ಘನಮಹಿಮರುಂ ಬಹರೊ ಪರ |
ಮಾನಂದನಿತ್ಯಸುಖದಿಂದಿರ್ಪರೊ ನಿರೂಪಿಸವೇಳ್ಕುಮೆನಗೆಂದಳು || ೧೭ ||

ಲೇಸು ಲೇಸೌ ಗಿರಿಜೆಯೀಗ ನಿನ್ನಯ ವಾಗ್ವಿ |
ಲಾಸಮಿತ್ತುದು ಮನಕೆ ಮುದಮನಾ ಕೃಷ್ಣಕಮ |
ಲಾಸನಾದ್ಯಮರರ್ಗೆಯುಂ ಕಡೆಗೆ ಭವಬಂಧಮುಂಟೆನಲ್ ಗಿರಿಜೆ ಕೇಳ್ದು ||
ಈ ಸಮಸ್ತರ ಭವದ ಕೋಟಲೆಗಳಂ ಪಿಂಗಿ |
ಸಾ ಸಮರ್ಥೋದ್ಯೋಗಮುಂಟೆಯೆನಲುಂಟದು ಮ |
ಹಾಸಾಧ್ಯನಿತ್ಯತ್ವನಿಜಸುಖಂ ಷಟ್ಸ್ಥಲರಹಸ್ಯಮೆನಲಿಂತೆಂದಳು || ೧೮ ||

ಎಲೆ ದೇವ ಭವರೋಗವೈದ್ಯ ನೀವೆನಗೆ ನಿ |
ರ್ಮಲವೆನಿಪ ನಿತ್ಯನಿಜಸುಖಮೀವ ಷಟ್ಸ್ಥಲಂ |
ತಿಳಿವಂತೆ ಬೋಧಿಸಿ ಕೃತಾರ್ಥೆಯಂ ಮಾಡಬೇಕೆಂದಗಜೆ ಬಿನ್ನಯಿಸಲು ||
ನಲಿದು ನಂದೀಶ್ವರಂ ತಾನಂದು ಸಕಲಗಣ |
ಕುಲಕ್ಕೆ ವಸುಮರಿದಾಕೆಯಂತರಂಗದ ಕರುಣ |
ದೊಲವನರಿ ತಿಳಿದು ಕೈಮುಗಿದು ನಿಂದಭವ ಬಿನ್ನಪವನವಧರಿಸೆಂದನು || ೧೯ ||

ದೇವ ಕೇಳೀಜಗನ್ಮಾತೆಯುಪ್ಪೀ ಮಹಾ |
ದೇವಿ ನಮ್ಮೆಲ್ಲರಂ ಸಲಹಬೇಕೆಂಬ ಸ |
ದ್ಭಾವದೊಲವಿಂದೆ ನಿಮ್ಮಂಘ್ರಿಕಮಲಂಗಳ್ಗೆ ಬಿನ್ನವಿಪ ಬಿನ್ನಪವನು ||
ಸಾವಧಾನದಿ ಕೇಳ್ದು ನಿಮ್ಮ ನಿಜನಿತ್ಯಸುಖ |
ಮೀವ ಷಟ್ಸ್ಥಲವನುರೆ ತಿಳಿಪಿ ನಮ್ಮೆಲ್ಲರಂ |
ಕಾವುದೆಂದೆನುತಲತಿಭಕ್ತಿಯಿಂ ಕೆಯ್ಮುಗಿದು ನಂದಿಕೇಶಂ ನುಡಿದನು || ೨೦ ||

ಇಂತೆನುತ್ತಾದಿವೃಷಭಂ ನುಡಿಯಲೆಮಗಧಿಕ |
ಸಂತೋಷಮುದಿಸಿ ನಂದೀಶ ನೀಂ ಪೆರನೆ ನ |
ಮ್ಮಂತರಂಗದೊಳಿರ್ಪ ನಿರ್ಮಲಿನಧರ್ಮಸ್ವರೂಪಂ ದ್ವಿತೀಯಶಂಭು |
ಅಂತರಹಿತಂ ಜಗತ್ಪಾವನಂ ನೀನರಿಯ |
ದಂತಾ ರಹಸ್ಯಮುಂಟೇ ಸುಷಟ್ಸ್ಥಲದಿಂದ[೧] |
ನಂತಶಿವಶರಣರಂ ನಿತ್ಯರಂ ಮಾಡಲೋಸುಗ ಕೇಳ್ದಿಯೆನಲೆಂದನು || ೨೧ ||

ಸ್ವಾಮಿ ನಿಮ್ಮಡಿಯ ಲೆಂಕರ ಪರಮ ಲೆಂಕನೆನ |
ಗೀಮಾತದೇಕೆನ್ನ ಬಿನ್ನಪಂಗೇಳಿ ನ |
ಮ್ಮೀ ಮಹಾಗಣಕೆ ಷಟ್ಸ್ಥಲಮಾರ್ಗಮಂ ತಿಳಿಪಿ ಸಲಹೆಂದು ಬಿನ್ನಯಿಸಲು ||
ಈ ಮಾತುಗೇಳ್ದಾತನಂತರಂಗಂದಿಳಿದು |
ಭೂಮಿಯೊಳ್ ವೀರಶೈವೋದ್ಧರಣಕಾರಣಂ |
ಪ್ರೇಮದಿಂ ನಂದಿಯಂ ಕಳುಪಬೇಕೆನುತೆ ನಿಶ್ಚಯಿಸಿ ಮತ್ತಿಂತೆಂದನು || ೨೨ ||

ಪರಮಷಟ್ಸ್ಥಲಮಾರ್ಗಮೀ ಶರೀರದೊಳಿಲ್ಲಿ |
ದೊರಕಲರಿಯದು ನಂದಿಕೇಶ್ವರನೆ ಕೇಳಯ್ಯ |
ಭರತಖಂಡದ ಕರ್ಮಭೂಮಿಯುಂಟಲ್ಲಿ ನೀವೆಲ್ಲರುಂ ಪೋಗಿ ಬಳಿಕ ||
ನರಜನ್ಮದೊಳ್ ಜನಿಸಿ ಪ್ರತಿನಾಮ ರೂಪು ಕ್ರಿಯೆ |
ವೆರಸಿ ನಿರ್ಮಳವೀರಶೈವಮಾರ್ಗವನುಮಾ |
ಚರಿಸಿ ನಡೆದಲ್ಲದೀ ಷಟ್ಸ್ಥಲಂ ಸಾಧ್ಯಮಲ್ಲೆನೆ ವೃಷಭನಿಂತೆಂದನು || ೨೩ ||

---

೧ ದಂತಿರ್ಪ ರಹಸ್ಯಮುಂಟೆ ಷಟ್ಸ್ಥಲದಿಂದ | (ಶಿ, ಗೋ, ಕೋ.)

ತಂದೆತಾಯ್ಗಳ್ ತಮ್ಮ ಮಕ್ಕಳ್ಗೆ ತನಿವಾಲ |
ತಂದಕ್ಕರಿಂದೆರೆವ ಮಾಳ್ಕೆಯಿಂ ನೀವೀಗ |
ಬಂದಂತೆ ನರಜನ್ಮದೊಳ್ ಪುಟ್ಟಿ ವೀರಶೈವಾಚಾರದಿಂದಿರುತಿರೆ ||
ಎಂದಿಗೀ ಶಿವತತ್ತ್ವಷಟ್ಸ್ಥಲಂ ಸಕಲಗಣ |
ವೃಂದಕ್ಕೆ ಸಾಧ್ಯಮಹುದಲ್ಲ ಬೋಧಿಸುವರಾ |
ರೆಂದು ಕೃಪೆಯಿಂ ನಿರೂಪಿಸವೇಳ್ಕುಮೆಮಗೆಂದು ನಂದಿಕೇಶಂ ನುಡಿದನು[೧] || ೨೪ ||

ಎಲೆ ನಂದಿಕೇಶ ಕೇಳ್ ಭೂಮಿಯೊಳ್ ಜನಿಸಿ ಮನ |
ಮೊಲವು ಜಂಗಮದಾ ಪ್ರಸಾದಪಾದೋದಕಂ |
ಗಳನಾಂತು ಗುರುಲಿಂಗಭಕ್ತಿಯಿಂ ವೀರಶೈವಾಚಾರದಿಂದಿರುತಿರೆ ||
ಸಲೆ ನಿನ್ನ ಭಕ್ತಿಯೊಳು ಲಿಂಗರೂಪಹೆವು ನಿ |
ರ್ಮಲಭಾವಕೊಲಿದು ಜಂಗಮವಹೆವು ಷಟ್ಸ್ಥಲಂ |
ವಿಳಸಲಿಮ್ಮಯ ಚಿತ್ಕಳಾಕುಮಾರಂ ಬರ್ಪನೆನೆ ಗಿರಿಜೆಯಿಂತೆಂದಳು || ೨೫ ||

ಶಿವನೆ ಕೇಳಿನ್ನ ಬಸಿರೊಳ್ ಪುತ್ರರುದಿಸದೀ |
ವಿವರಮಂ ದೇವರರಿವಿರಿ ಮಕ್ಕಳಂ ಪಡೆವ |
ಸೆಸನಿಡೊಂದಿದೆ ಷಟ್ಸ್ಥಲಂ ತಿಳಿವೊಡೆನ್ನ ಚಿತ್ಕಳೆಯೆ ನಂದೀಶನೊಡನೆ ||
ಅವನಿತಳದೊಳ್ ಜನಿಸಲಾ ಸತಿಯ ಗರ್ಭದೊಳ್ |
ತವೆ ತವಜ್ಞಾನಸುತನುದಿಸಿ ನಂದ್ಯಾದ್ಯಮರ |
ನಿವಹಕ್ಕೆ ಷಟ್ಸ್ಥಲವನುಪದೇಶವೀವಂತೆ ಕರುಣಿಸುವುದೆನಗೆಂದಳು || ೨೬ ||

ಎಂದೊಡಂತಾಗಲೌ ಗಿರಿಜೆ ನಾರದನಿಂದು |
ಬಂದ ಕಾರ್ಯಂ ಸಫಲವಾಯ್ತು ನಿನ್ನಿಂದಮೀ |
ನಂದೀಶನಿಂದೆ ಮರ್ತ್ಯದ ಮಹಾಗಣಕೆ[೨] ನೋಡಲ್ ಭವಂ ಪಿಂಗಿದಪುದು ||
ಮುಂದೆ ಭೂಲೋಕದೊಳ್ ವೀರಶೈವಂ ನೆಲೆಗೆ |
ನಿಂದಪುದು ನೀವಿಬ್ಬರುಂ ಪೋಗಿ ಜನಿಸಲಾಂ |
ಮುಂದೆಮ್ಮ ಸುಜ್ಞಾನಪುತ್ರನಂ ಕಳುಪಿದಪೆವೆನೆ ವೃಷಭನಿಂತೆಂದನು || ೨೭ ||

೧ ನಂದೀಶ್ವರಂ ನುಡಿಯಲು (ಮ, ಅ, ಬ, ಕ.) ೨ ಶರಣತತಿಗೆ (ಶಿ.)

ಕಳುಪಿದಪಿರೇ ಕಳುಪಿದಪೆವು ನಂಬಲೆ ನಂಬು |
ತಳುವಿಲ್ಲ ನಿನ್ನನಗಲೆವು ಮಗನೆ ಪೋಗು ಕ |
ತ್ತಲೆಯನೊಳ್ಪೆಳಗು ಪುಸಿಯಂ ದಿಟಂ ವಿಷಮನಮೃತಂ ಪುಣ್ಯಮಾ ಪಾಪವ ||
ಸಲೆ ತೆವರುವಂತೆ ಪರವಾದಮಂ ಗೆಲ್ದು ಭೂ |
ತಳದೊಳಗಣಿತಪವಾಡಂಗಳಂ ಮೆರೆದು ನಿ |
ರ್ಮಳಭಕ್ತಿಯಿಂ ವೀರಶೈವಮಾರ್ಗಂಬಿಡಿದು ನಡೆಯೆಂದು ಬೀಳ್ಕೊಟ್ಟೆವು || ೨೮ ||

ಜೀಯ ಬದುಕಿದೆವೆಂದಸಂಖ್ಯಾತಗಣದೊಳತಿ |
ಪ್ರೀಯದಿಂದೆದ್ದುದೇಳ್ನೂರೆಪ್ಪತಮರಗಣ |
ಮಾಯತಿಕೆಯಿಂ ರುದ್ರಕನ್ಯೆಯರ್ ಕೆಲಕೆಲರ್ಸಹಿತಮತಿಭಕ್ತಿಯಿಂದೆ ||
ದಾಯದಿಂದೆರಗಿ ಬೀಳ್ಕೊಂಡು ನಾನಾನರರ |
ಕಾಯದೊಳ್ ಜನಿಸಿ ತತ್ತಜ್ಜಾತಿಯಿಂದೆಸೆವ |
ಕಾಯಕಂಗಳನಾಂತು ವೀರಶೈವಾಚಾರದಿಂದಿರ್ಪರವರೆಂದನು || ೨೯ ||

ಇನ್ನವರೊಳಧಿಕನಿರ್ಮಾಯನಲ್ಲಮನಾಗಿ |
ಯೆನ್ನ ಪ್ರತಿಬಿಂಬಮೇ ಸಿದ್ಧರಾಮನುಮಾಗಿ |
ಚೆನ್ನವೀರೇಶ್ವರನೆ ಮಡಿವಳಯ್ಯಗಳಾಗಿ ಮಾದೇವಿಯೆನಿಪ ರುದ್ರ ||
ಕನ್ನೆಯೇ ಮಾದೇವಿಯಕ್ಕ ತಾನಾಗಿ ಪ್ರ |
ಸನ್ನತೆಯೊಳವನಿಯೊಳಗಲ್ಲಲ್ಲಿ ಜನಿಸಿರ್ಪ |
ರುನ್ನತಶಿವಾಚಾರಿ ಗಿರಿಜೆನಂದಿಯರಿರವನಿನ್ನು ನೀಂ ಕೇಳೆಂದನು || ೩೦ ||

ರಾಜಿಸುವನೊರ್ವ ವಿಪ್ರಂ ಮಂಡಿಗೆಯ ಮಾದಿ |
ರಾಜವೆಸರಿಂದಾತನರ್ಧಾಂಗಿ ಮಾದಾಂಬಿ |
ಕಾಜಠರದೊಳಗೆ ಪಾರ್ವತಿಯ ಚಿತ್ಕಳೆಯುದಿಸಿ ನಾಗಲಾಂಬಿಕೆವೆಸರೊಳು ||
ಆ ಜಗನ್ನುತೆಯಿರ್ಪ[1]ಳಾಕೆಯೊಡನಾ ಬಸವ |
ರಾಜವೆಸರಿಂ ನಂದಿಕೇಶ್ವರಂ ಜನಿಸಿ ಕಡು |
ತೇಜದಿಂ ಕಲ್ಯಾಣಪುರದರಸು ಬಿಜ್ಜಳನ ಮಂತ್ರಿಯಾಗಿರುತಿರ್ಪನು || ೩೧ ||

೧ ಜಗನ್ಮಾತೆಯಿಹ (ಶಿ, ಮ.)

ಆ ಸಕಲಸಚಿವರ ಶಿರೋರತ್ನವೆನಿಸಿ ಮ |
ತ್ತಾ ಸಮಸ್ತಾಮರಗಣಂಗಳ್ಗೆ ಮುಖವೆನಿಸಿ |
ಶಾಸನ ಪ್ರಸಾದಂಗಳಂ ಮೆರೆದು ಪರಸಮಯಗರ್ವಮಂ ಜರೆದು ಮುರಿದು ||
ಓಸರಿಸದೊಲಿದು ಲಕ್ಷದ ಮೇಲೆ ತೊಂಬತಾ |
ರ್ಸಾಸಿರ ಮಹಾಜಂಗಮಕ್ಕೆ ಮೃಷ್ಟಾನ್ನಮಂ |
ದಾಸೋಹಮಂ ಮಾಡುತಾವಗಂ ನಿನ್ನ ಬರವಂ ಬಯಸುತಿರುತಿರ್ಪನು || ೩೨ ||

ಆ ನಂದಿಕೇಶನೆಮ್ಮಯ ಭಕ್ತಿರೂಪು ಪ್ರಭು |
ತಾನೆಮ್ಮ ವೈರಾಗ್ಯರೂಪು ನೀನೆಮ್ಮ ಸು |
ಜ್ಞಾನರೂಪಾ ನಾಗಲಾಂಬಿಕೆಯೆ ಗಿರಿಸುತಾರೂಪಾಕೆಯುದರದಲ್ಲಿ ||
ನೀನವನಿಯೊಳ್ ಸ್ವೇಚ್ಛೆಯಿಂದುದಿಸಿಯವರನನು |
ಮಾನಿಸದೆ ಗುರುಭಾವದೊಳ್ ಕಂಡು ತತ್ತ್ವಮಂ |
ನೀನವರ ಗುರುವಾಗಿ ತಿಳಿಪು ತಳುವದೆ ಷಟ್ಸ್ಥಲಬ್ರಹ್ಮ ಹೋಗೆಂದನು || ೩೩ ||

ಎನೆ ಮಹಾದೇವ ನೀವಿಂತೆಂದು ನುಡಿವಾಗ |
ಲೆನಗೇಂ ಸ್ವತಂತ್ರತೆಯೆ ನೀವಿರಿಸಿದಂತಿರ್ಪೆ |
ನೆನಲೀಶ್ವರಂ ನಕ್ಕು ತನ್ನ ಸುಜ್ಞಾನರೂಪಂ ಮುಖದೊಳೊಲಿದಡಗಿಸಿ ||
ಘನಹರುಷದಿಂದಲೀಶ್ವರನಂದು ತನ್ನ ಕ |
ಜೊನೆಯೊಳೋಲಗಮಂ ವಿಸರ್ಜಿಸುತ್ತಾ ಕ್ಷಣಂ |
ನೆನೆದು ಕಲ್ಯಾಣಪುರದೊಳಗಿರ್ಪ ನಾಗಲಾಂಬಿಕೆಯ ಗೃಹಮಂ ಸಾರ್ದನು || ೩೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದಿ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮುನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೫ ||

ಅಂತು ಸಂಧಿ ೩ಕ್ಕಂ ಪದಗಳು ೧೧೦ ಕ್ಕಂ ಮಂಗಳಮಹಾಶ್ರೀ

ನಾಲ್ಕನೆಯ ಸಂಧಿ

ಸೂಚನೆ

ಧರೆಯೊಳುದಿಸಿರ್ದ ನಂದ್ಯಾದ್ಯಮರಗಣಕೆ ತ ।
ತ್ತ್ವರಹಸ್ಯಮಂ ತಿಳಿಪ ಶಿವಚಿತ್ಕಳಾರೂಪ ।
ಮುರುಪ್ರಸಾದದೆ ನಾಗಲಾಂಬೆಯುದರಪಸೊಡೆದು ಚೆನ್ನಬಸವಂ ಜನಿಸಿದಂ ॥

ಕುಮುದಸಖವರಕಲಾಭರಣ ಪಾವನಚರಣ ।
ಕುಮುದಖಳವನಮಹಾದಾವ ದೇವರ ದೇವ ।
ಕುಮುದಾರ್ಕವಹ್ನಿತ್ರಿಣೇತ್ರ ಸನ್ನುತಗಾತ್ರ ಸುಪವಿತ್ರ ಸಚ್ಚರಿತ್ರ ॥
ಕುಮುದವಾಹನವಿನುತಪಾದ ಗಿರಿಜಾನಯನ ।
ಕುಮುದಚಂದ್ರಮ ವಿಕಾಶಿಸು ನಿನ್ನ ಭಕ್ತಹೃತ್ ।
ಕುಮುದಮಂ ಪಂಪಾವಿರೂಪಾಕ್ಷ ಸುಜನಸಂರಕ್ಷ ಗೀರ್ವಾಣಪಕ್ಷ[೧] ॥ ೧ ॥

ಇರಲಿತ್ತ ನಾಗಲಾಂಬಿಕೆ ಮಹಾಭಕ್ತಿಯಿಂ ।
ಗುರುಲಿಂಗಜಂಗಮಾರ್ಚನೆಯನೊಲವಿಂ ಮಾಡಿ ।
ಪರಮಪ್ರಸಾದಮಂ ಸವಿದು ಶಯ್ಯೆಯೊಳಂದು ಪರಶಿವಧ್ಯಾನದಿಂದೆ ॥
ಹರುಷದಿಂ ಯೋಗನಿದ್ರಾಮುದ್ರಿತಾಕ್ಷಿ ತ ।
ತ್ಪರವಶದೊಳಿರಲೀಶ್ವರಂ ಕರುಣದಿಂದೆ ವರ ।
ಚರಮೂರ್ತಿಯಾಗಿ ತತ್ಸತಿಯನೇಳೆಂದೊಡನೆ ಕರೆದೆಚ್ಚರಿಸಿ ನುಡಿದನು ॥ ೨ ॥

ಎಲೆ ತರುಣಿ ಕೊಳ್ಳೌ ಮಹಾಪ್ರಸಾದವನೆನಲ್ ।
ನಲಿದು ಕೈಕೊಂಡು ಲಿಂಗಕೆ ಕೊಟ್ಟು ತಾಂ ಕೊಂಡ ।
ಬಳಿಕ ಚರರೂಪನಡಗಿಸಿ ಪಂಚವದನ ದಶಭುಜ ತ್ರಿಪಂಚಾಕ್ಷಿಯಿಂದೆ ॥
ಪೊಳೆವ ಫಣಿಕಟಕತ್ರಿಶೂಲಡಮರುಗದಿಂದೆ ।
ಪುಲಿದೊವಲಿನುಡಿಗೆಯಿಂ ಪಾರ್ವತಿಸಮೇತದಿಂ ।
ದೊಲಿದು ಪ್ರಸನ್ನಭಾವದೊಳೆ ಪರಶಿವನಾಗಳಾ ತರುಣಿಗಿಂತೆಂದನು ॥ ೩ ॥

---

೧ ರಕ್ಷ (ಹು, ಶಿ, ಮ.)



ಪ್ರಸಾದಸೇವಿಸುವ ನಾಗಲಾಂಬಿಕೆ

ಲಲಿತಾಂಗಿ ಸಂಕಲ್ಪಮಂ ಮಾಡಬೇಡ ನಾಂ |
ತಿಳಿಪುವೆಂ ಪೊಸತಪ್ಪ ಚೋದ್ಯಮಂ ನೀಂ ಕೇಳ್ದು |
ಪೊಳೆವ ನಮ್ಮೀ ಚಿತ್ಕಳಾಮೃತಪ್ರಸಾದವಿದರಿಂ ನಿನ್ನಗರ್ಭದೊಳಗೆ[೧] ||
ತೊಳಗುವೆಮ್ಮೀ ಷಣ್ಮುಖಸ್ಥಿತಪ್ರಣವನಿ |
ರ್ಮಳರೂಪನಾ ಷಟ್ಸ್ಥಲಬ್ರಹ್ಮ ಸಕಲಭೂ |
ತಳವಂದ್ಯನಗಣಿತಪವಾಡಪುರುಷಂ ಜನಿಪನೆಂದೀಶ್ವರಂ ನುಡಿದನು || ೪ ||

ಪೊಸತಪ್ಪ ವೀರಶೈವಾಚಾರಮಂ ಪ್ರತಿ |
ಷ್ಠಿಸಿ ಜೈನಬೌದ್ಧಚಾರ್ವಾಕರ ಮತವನಳಿದು |
ಬಸವಾದಿಪ್ರಮಥರ್ಗೆ ಷಟ್ಸ್ಥಲಬ್ರಹ್ಮೋಪದೇಶದಿಂ ನಿಜಪದವನು ||
ಒಸೆದೀವನೌ ನಿನ್ನ ಗರ್ಭದರ್ಭಕನುದಯಿ |
ಪ್ಪೊಸಗೆಯುಂ ಸಕಲಗಣಕರಿಪು ಶೀಘ್ರದೊಳೆನು |
ತ್ತ ಸುಮಾಸ್ತ್ರಶಿಕ್ಷಂ ವಿರೂಪಾಕ್ಷನಾ ನಿರಾಕಾರರೂಪಂದಳೆದನು || ೫ ||

ಅನಿತರೊಳ್ ಕಣ್ದೆರೆದು ನಾಗಲಾಂಬಿಕೆ ತನ್ನ |
ಮನೆಯೊಳೀಶ್ವರಮೂರ್ತಿಯಂ ಕಾಣದಿಂತಿದೇಂ |
ಕನಸಾಗಿಯುಂ ಕನಸಿನಂದಮಲ್ಲದು ನೋಡೆ ಪ್ರತ್ಯಕ್ಷಮೆಂಬಂತಿರೆ ||
ಮನದೊಳಗೆ ವಿಸ್ಮಯರಸಂ ತುಳುಕುತಿದೆಯೆನ್ನ |
ನೆನಹಿನೊಳು ಶಿವರೂಪು ಹೊಳೆವುತಿದೆ ಚೋದ್ಯಮೆಂ |
ದೆನುತೆ ಜಾನಿಪ ಸಮಯದೊಳ್ ಬೆಳಗುಜಾವಗೋಳಿಗಳುಲಿದುವೇನೆಂಬೆನು || ೬ ||

ಇಂದಿರನ ದೆಸೆಗೆಂಪು ಮೂಡೆ ಕತ್ತಲೆಯೋಡೆ |
ಮಂದಾನಿಲಂ ತಂಪು ತೀಡೆ ಭ್ರಮರಂ ಪಾಡೆ |
ಬಂದು ಚಕ್ರಂ ಕೂಡೆ ಕೈರವಂ ಬಾಡೆ ಕಮಲಂ ಬಿರಿದು ನಗೆಯೊಳಾಡೆ ||
ಮುಂದೊರ್ವ ವೀರಶೈವಾಚಾರ್ಯನೀ ಧರೆಗೆ |
ಬಂದಿದಕೆ ಸೂರುಮುಡಿಯಾಗಿ ಬೆಳಗಂ ತೋರ್ಪ |
ನೆಂದು ಸೂಚಿಸುವಂದದಿಂದುದಯಶೈಲಾಗ್ರದೊಳ್ ದಿನಪನುದಯಿಸಿದನು || ೭ ||

---

೧ ದಿಂದೆ (ಶಿ, ಪ.)

ಆ ಕಾಲದೊಳ್ ಭಕ್ತಿಯಿಂ ನಾಗಲಾಂಬಿಕೆಯು
ಮಾಕಾಂತಪೂಜೆಯಂ [1]ತೀರ್ಚಿಯಾ ಬಸವಾದ್ಯ |
ನೇಕರೊಡನೀವಾರ್ತೆಯಾದ್ಯಂತಮಂ ಹಿಂಚುಮುಂಚೆನಿಸದಾಂ ಪೇಳಲು[1] |
ಬೇಕೆಂದು ಬೇಗಮನುಭವಮಂಟಪಕ್ಕೆ ಬಂ |
ದಾಕಾರ್ಯಮಂ ಮಹಾಗಣಕುಲಂ ಕೇಳ್ವಂತೆ |
ಜೋಕೆ ಮಿಗೆ ಬಸವದಂಡಾಧೀಶನೊಳು ಸವಿಸ್ತರವಾಗಿ ವಿರಚಿಸಿದಳು || ೮ ||

ಕೇಳ್ದು ಮುದಮಂ ತಾಳ್ದನಾ ಬಸವನುತ್ಸವಂ |
ದಾಳ್ದುದು ಗಣಪ್ರತತಿ ನಾಗಲಾಂಬಿಕೆಯ ಮೊಗ |
ಮಾಳ್ದುದು ವಿಕಾಸಮಂ ಗರ್ಭಚಿಹ್ನಂ ದಿನದಿನಕ್ಕೆ ತಲೆದೋರಲೊಡನೆ ||
ನೀಳ್ದುದೆಲ್ಲರ ಮನೋಹರುಷಲತೆ ಧಾರುಣಿಯೊ |
ಳೆಳ್ದ ಶೈವಾಚಾರಮಿಂದನಾಚಾರಮಂ |
ತೊಳ್ದುದು ಸುಗರ್ಭದೊಳಗಿರ್ಪ ಪರಶಿವನ ಚಿತ್ಕಳೆಯದೇಂ ಸಾಮಾನ್ಯಮೇ || ೯ ||

ಕ್ಷೀರಾಬ್ಧಿಮಧ್ಯಚಿಂತಾರತ್ನದಂತೆ ನವ |
ಶಾರದಾಭ್ರದ ಮರೆಯ ಶಶಿಯಂತೆ ಸತ್ಪುಣ್ಯ |
ಧಾರುಣಿಯೊಳಿರ್ಪ ನವನಿಧಿಯಂತೆ ಗುರುಬೋಧೆಯೊಳಗಿರ್ಪ ಮುಕ್ತಿಯಂತೆ |
ಆ ರವಿಗ್ರಾವಗುಪ್ತಜ್ಯೋತಿಯಂತೆ ಮಂ |
ದಾರಮುಕುಳದೊಳಿರ್ಪ ಸುರಭಿಯಂತಧಿಕಗಂ |
ಭೀರಾಬ್ಧಿ ನಾಗಲಾಂಬಿಕೆಯ ಬಸಿರೊಳು ತತ್ತ್ವನಿಧಿ ಗೋಪ್ಯದಿಂದಿರ್ದನು || ೧೦ ||

ತ್ರಿವಳಿಗಳ್ ಮಸುಳಿದುವು ಬಾಸೆ ಕಪ್ಪೇರಿದುದು |
ಧವಳಮಾಸ್ಯಾಬ್ಜಕಡರ್ದುದು ಕುಚಂ ಕೊರ್ಬಿದುವು
ತವೆ ಚೂಚುಕಂ ತರ್ಗಿದುವು ನಾಭಿ ಪೊರಪೊಣ್ಮಿತಸಿಯ ನಡುವುಂ ಬಳೆದುದು ||
ಸವಿನುಡಿಯನಾಶ್ರಯಿಸಿತಲಸಿಕೆ ವಿಶೇಷಮಾಂ |
ದ್ರವನಾಂತುಡೊಕ್ಕಡೆ ಬಳಲ್ಕೆಯಂ ಧರಿಸಿ ತುರು |
ಗಿವೆಗಣ್ಣ ನೋಟಮೆಸೆದುದು ಗರ್ಭಸೂಚಕಂ ಚೆಲ್ವಾದುದಾ ಬಾಲೆಯ || ೧೧ ||

೧ ತೀರ್ಚಿ ಬಸವೇಶಾದ್ಯ | ನೇಕಶಿವಶರಣರೊಡನೀವಾರ್ತೆಯಂ ಹಿಂಚುಮುಂಚೆನಿಸದೇ ಪೇಳಲು || (ಹು.) ೨ ಳೆಳ್ದುದು ಶಿವಾಚಾರ (ಶಿ.)

ಕಮಲಜಾಂಡಂಗಳನನಂತಮಂ[1] ತಾಳ್ದ ಶಿವ |
ಸಮರೂಪನಂ ತರುಣಿ ತಾಳ್ದಿದು ಚೋದ್ಯಮೆಂ |
ದಮರಗಣದಿಂ ದಿಟ್ಟಿಯಾದಪುದು ಮತ್ಸುತಂಗೆಂದು ಗಿರಿರಾಜತನುಜೆ ||
ಸುಮತಿಯಿಂ ತದ್ಗರ್ಭರಕ್ಷಣಕೆ ಬರೆದ ಕಾ |
ಳಿಮಲಿಖಿಯೋ ಶಿವಜ್ಞಾನದೀಪದ ಕುಡಿಯೊ |
ಸುಮದ ಧೂಮಚ್ಛವಿಯೊಯೆಂದೆನಲ್ ಕಪ್ಪಡರ್ದ ನಿಡುಬಾಸೆ ಕಣ್ಗೆಸೆದುದು || ೧೨ ||

ಚಾರ್ವಾಕ ಜಿನ ಬುದ್ಧಮೆಂಬೀ ಮತತ್ರಯಮು |
ಮುರ್ವರೆಯ ಭಾರಮೀ ಭಕ್ತರ ಭವಂ ನಾಡೆ |
ತೋರ್ವ ಖಳರೀಳ್ಗೆಯೆಂದೆಂಬರಿಷ್ಟತ್ರಯಂ ಮಸುಳ್ಪುವು ತತ್ತರುಣಿಯಾ ||
ಪೂರ್ವತಾಪತ್ರಯಂ ಪೋಪುದೆನುತಂ ಮುಂದೆ |
ಸಾರ್ವಂತೆ ತ್ರಿವಳಿಯಡಗಿದುವು ಶಿವತತ್ತ್ವಮದು |
ಬೇರ್ವರಿಯಲಜ್ಞಾನಕೂಪ ನೆಲೆಗೆಟ್ಟುದೆನೆ ನಾಭಿ ನಿಮ್ನವನುಳಿದುದು || ೧೩ ||

ತರಣಿಪ್ರಕಾಶಂ ಕುಮಾರನಾ ಗರ್ಭದೊಳ |
ಗಿರೆ ಮನಸ್ತಿಮಿರಮತಿಭಯದಿ ಪೊರಮಟ್ಟು ಕುಚ |
ಗಿರಿಯುಗಮಡರ್ದೊ ಪಿರಿದು ಶಿವತತ್ತ್ವರಸಪೂರ್ಣಮಾದ ಕಲಧೌತಂಗಳ |
ಭರಣಿಗಳ ಬಾಯ್ಗಿರಿಸಿದಿಂದ್ರನೀಲದ ಮಣಿಯ |
ಬಿರುಡೆಗಳೊ ಪೇಳೆನಲ್ ಸ್ತನಚೂಚುಕದ ಕಪ್ಪು |
ಕರಮೊಪ್ಪಲೊಪ್ಪಿದಳ್ ನಾಗಲಾಂಬಿಕೆಯಂದು ಕರುವಿಟ್ಟ ಮುಕ್ತಿಯಂತೆ || ೧೪ ||

ಶಿವಕಥಾಮೃತವನೊಲಿದಾ[2]ಲಿಸುವ ಬಯಕೆಯು |
ತ್ವವೊಳೀಶ್ವರಪೂಜೆಯಂ ಮಾಳ್ಪ ಬಯಕೆ ಕಡು |
ತವಕದಿಂ ಗುರುಲಿಂಗಜಂಗಮದ ತೀರ್ಥಪ್ರಸಾದಮುಮನುಣ್ಬ ಬಯಕೆ ||
ದಿವಿಜತರುವನಮುಮಂ ಸಿದ್ಧರಸಸಿಂಧುಮಂ |
ನವನಿಧಿಗಳಂ ಸುರಪಧೇನುವಂ ಜಂಗಮದ |
ನಿವಹಕೆಡೆಮಾಡುವೀ ಬಯಕೆಯಲ್ಲದೆ ಮಿಕ್ಕ ಬಯಕೆಯಿಲ್ಲೆಳೆವಸಿರೊಳು || ೧೫ ||

೧ ಕಮಲಜಾಂಡಮುಮನಂತಂಗಳಂ (ಶಿ, ಪ, ಗೋ, ಕೋ.) ೨ ಶಿವಕಥಾಮೃತರಸವನಾ (ಅ, ಬ, ಕ.)

ಪಲತೆರದ ಗರ್ಭಚಿಹ್ನಂಗಳಿಂದಿಂತು ತ |
ಲ್ಲಲನೆ ಕೆಲಕೆಲವು ದಿವಸಂಗಳಂ ಕಳೆಯೆ ಪುರ |
ದೊಳಗೆ ಗುಜುಗುಜು ಮಸಗಿ ನಾಗಲಾಂಬಿಕೆ ಗಡ ವಿರಕ್ತೆ ಗಡ ರಾಯಗುರುವ ||
ಬಲುದಣಾಯಕ ಬಸವನಕ್ಕ ಗಡ ಗರ್ಭಮಂ |
ತಳೆದಳ್ಗಡೇಂ ಚಿತ್ರಮೆಂದು ಮನೆಮನೆ ನೀರ |
ಹೊಳೆ ಬೀದಿಬೀದಿಯೊಳಗೀ ವಾರ್ತೆ ಪುರಜನದ ಕರ್ಣಂಗಳೊಳಗಿಡಿದುದು || ೧೬ ||

ಆಕೆ ದೈವಜ್ಞೆಯೆಂಬರ್ ಕೆಲಬರುತ್ತಮರ್ |
ಜೋಕೆ ಮಿಗೆ ಮಧ್ಯಮರ್ ವಿಸ್ಮಯಂಬಡುವರವಿ |
ವೇಕಿ ನೀಚರು ಹಾಸ್ಯಮಾಡುವರದಂ ಕೇಳ್ದು ಮತ್ತೊರ್ವ ಪಿಸುಣರರಸಂ ||
ಭೂಕಾಂತಬಿಜ್ಜಳಂಗರಿಪಬೇಕೆನುತೆ ಬಂ |
ದೇಕಾಂತದೋಲಗದೊಳೀ ವಾರ್ತೆಯಂ ಪೇಳೆ |
ಪೋಕನಿವನಿವನ ನುಡಿ ಪುಸಿಯೆನಲ್ ಭಾಷೆಯಂ ಬರೆಸಿ ಮತ್ತಿಂತೆಂದನು || ೧೭ ||

ಕರದ ಕಂಕಣಕೆ ಕನ್ನಡಿಯುಂಟೆ ಜೀಯ ಬಹು |
ಪರಿಯೊಳಾಂ ಬಿನ್ನಯಿಸಲಂಜುವೆಂ ನಿಮಗೆ ತವ |
ಚರಣಪಂಕಜವಾಣೆ ಪುಸಿ ದಿಟಂ ನೋಳ್ಪೊಡಿದು ವೇಳೆಯಾ ಬಸವಣ್ಣನ ||
ವರಗೃಹಾಂತಸ್ಥದನುಭವಮಂಟಪದೊಳೀಗ |
ಹರಭಕ್ತರುಂ ನೀಲಲೋಚನೆಯುಮಾ ಗರ್ಭ |
ವರಸಿಯುಂ ಸಹ ಬಸವನಿರ್ದಪಂ ದೇವರೈತರೆ ಕಾಣಬಹುದೆಂದನು || ೧೮ ||

ಎನೆ ಬಿಜ್ಜಳಂ ವಿಸ್ಮಯಂಬಟ್ಟು ನೋಡಬೇ |
ಕೆನುತೆ ಸಕಲಪ್ರಧಾನರ್ವೆರಸಿ ಕೆಲವು ಪರಿ |
ಜನಸಹಿತಲರಮನೆಯನೊಳಪೊಕ್ಕು ಬರಲಸಂಖ್ಯಾತಗಣದೊಡನೆ ಬಸವಂ ||
ಘನಹರುಷದಿಂ ಕಾಣುತಿದಿರೆದ್ದು ಬಂದು ಸ |
ದ್ವಿನಯಮಂ ನುಡಿದು ಕರೆತಂದಮಳರತ್ನರಂ |
ಜನಸಿಂಹಪೀಠದೊಳ್ ಕುಳ್ಳಿರಿಸಿ ದಶನದೀಧಿತಿ ಪೊಳೆಯಲಿಂತೆಂದನು || ೧೯ ||

ಎಲೆ ರಾಯ ಕೇಳ್ ನಿನ್ನ ಬಲ್ಲಿದರ ಮೊಸೆಗೆ ವಾ |
ರ್ಲೆವ ಪರಸ್ಪರವಿಲ್ಲ ವಾಣಿಗಪಜಯವಿಲ್ಲ |
ಮಿಳಿಯಮಿಳಿಗಂ ಬಾಧೆಯಿಲ್ಲವನುಜಾಗ್ರಜಸುತರ್ಕರೊಳ್ ಭೇದವಿಲ್ಲ |
ಹಲವು ಕೋಶಕೆ ಕಡಿಮೆಯಿಲ್ಲವೀ ಚತುರಂಗ |
ಬಲದೊಳೆರಡಿಲ್ಲಮಿಂದೆನ್ನೆಡೆಗೆ ನೀಂ ಬರ್ಪ |
ಬಲುಗಜ್ಜಮಾವುದುಂಟೆನೆ ಕೇಳಿ ನಸುನಗೆಯೊಳ್ ಪನೀಶನಿಂತೆಂದನು || ೨೦ ||

ಮಾನನಿಧಿ ಬಸವದಂಡೇಶ ನೀನೆನ್ನೀ ಪ್ರ |
ಧಾನಿಯಾಗಿರ್ಪನ್ನಮೆನ್ನ ಸೌಭಾಗ್ಯಕ್ಕೆ |
ಹಾನಿಯಿಲ್ಲಿದುದೆಂದು ಮಾರುತ್ತರಂಗೊಟ್ಟು ಕೆಲಬಲವ ನೋಡುತಿರಲು ||
ಆ ನಾಗಲಾಂಬಿಕೆಯ ಗರ್ಭಸೌಂದರ್ಯಮಂ |
ತಾನರಿದು ತತ್ಸತಿಯ ಪೆಸರ್ವಿಡಿವುತುಂ ವಿರತೆ |
ನೀನಾರದೇಂ ಕಾರಣಂ ವ್ಯಥಾಗರ್ಭಮಾಯ್ತೆನಲಾಕೆಯಿಂತೆಂದಳು || ೨೧ ||

ಪೊಡವೀಶ ನೀಂ ಕೇಳತಕ್ಕುದೀ ಗರ್ಭಮಾ |
ಮೃಡಚಿತ್ಕಳಾಮೃತಪ್ರಸಾದದಿಂದಾದುದೆಂ |
ದೊಡೆ ಸಕಲಶಿವಭಕ್ತರೆಲ್ಲರುಂ ತತ್ಪ್ರಸಾದಿಗಳವರಿಗೀ ಗರ್ಭದ ||
ಗೊಡವೆಯುಂ ಕಂಡುಕೇಳಿದುದಿಲ್ಲಮೆನೆ ಪುಸಿಯ |
ನುಡಿವಳಲ್ಲೀಶ್ವರಂ ಕರುಣದಿಂ ತನ್ನಮುಖ |
ದೆಡೆಯ ಸುಜ್ಞಾನಪುತ್ರಂ ಜನಿಪನೆಂದಿತ್ತನೆನಲರಸನಿಂತೆಂದನು || ೨೨ ||

ಆ ಶಿವಜ್ಞಾನಭರಿತಂ ನಿನ್ನ ಗರ್ಭದೊಳ |
ಗೀಶಕೃಪೆಯಿಂ ಬಂದನಾದೊಡದುಲೇಸು ಮ |
ತ್ತಾ ಶಿಶುವೆ ತಾನೆಮ್ಮೊಳೀ ವಾರ್ತೆಯಂ ಪೇಳಿ ನಿಜವೆಂಬ ಕಟಕಿನ್ನಸನ |
ಆಶಮವನರಿದಾಕೆಯುದರಮಧ್ಯದಲಿ ನಿಖಿ |
ಳಾಶೆಯಂ ತೀವಲೆಲ್ಲಾ ಜನರ್ ಕೇಳೆ ಬಸ |
ವೇಶನುಸ್ಯಾರ್ ನಲಿದು ಪ್ರೊಣ್ಮಿತೊಂದಾನೊಂದು ನುಡಿಯುದೇಂ ಬಣ್ಣಿಸುವೆನು
|| ೨೩ ||

೧ ನಸನಗುತಲ (ಹು, ಅ, ಬ, ಕ, ಮ.) ೨ ಯೆಲ್ಲಿಯ (ಶಿ, ಅ, ಬ, ಕ, ಮ.)

ಕಳಕಳವಿದೇಕೆ ಹೋ ಹೋ ನಿಲ್ಲು ನಿಲ್ಲು ಬಿ |
ಜ್ಜಳನೃಪತಿಯಾಗಸಂ ನೆಲಕಿಳಿದೊಡಂ ಧರಾ |
ತಳವಿರದೆ ಪಾತಾಳಕದ್ದೊಡಂ ಶಿವಶರಣರಿಂದೆ ಪುಸಿನುಡಿ ಬರ್ಪುದೆ ||
ವಿಳಸದ್ವಿರೂಪಾಕ್ಷಷಣ್ಮುಖಸ್ಥಿತಸುಚಿ |
ತ್ಕಳೆಯುಲ್ಲದಾಂ ರಕ್ತರೇತಃಪ್ರಯುತಪಿಂಡ |
ದೊಳಗಲ್ಲಮೆಂಬ ಗಂಭೀರಸ್ವರಂ ಪೊಣ್ಮೆ ಬಿಜ್ಜಳಂ ಬೆರಗಾದನು || ೨೪ ||

ಚೋಳಿಯಕ್ಕಂಗೆ ಭೀಮೇಶ್ವರಂ ನುಡಿದುದಂ |
ಜೋಳರಾಸಿಯೊಳೆ ಬಾಹೂರಬೊಮ್ಮಣ್ಣಂಗೆ |
ಭಾಳನಯನಂ ನುಡಿದನೆಂದು ಬಸವಂಗೆ ಸಂಗಮನಾಥ ನುಡಿದನೆಂದು ||
ಹೇಳುವರ್ ಕಿನ್ನರಯ್ಯಂಗೆ ತ್ರಿಪುರಾಂತಕಂ |
ಕೇಳೆ ನುಡಿದುದ ಕೆಳ್ದೀನೀ ಗರ್ಭದರ್ಭಕಂ |
ಕೇಳದೆ ನುಡಿದುದಚ್ಚರಿಯೆನುತೆ ಬಿಜ್ಜಳಂ ವಿಸ್ಮಯದೊಳಿಂತೆಂದನು || ೨೫ ||

ಪ್ರತ್ಯಕ್ಷಮಿರೆ[೧] ಪ್ರಮಾಣಿಸಿ ನೋಡಬೇಕೆಂಬು |
ದತ್ಯಧಿಕನೀತಿಶಾಸ್ತ್ರಮುದುಂಟುಮದರಿಂದ |
ನಿತ್ಯವಹ ಮಾನವಶರೀರದಿಂ ಮಲಮೂತ್ರರಕ್ತಮಾಂಸಂಗಳೊಳಗೆ ||
ನಿತ್ಯವಹ ಶಿವನ ಚಿತ್ಕಳೆಯಿರ್ಪುದೆಂಬುದಿದು |
ಸತ್ಯಮೇಯೆಂದೆನಲ್ಕಜ್ಜರನೊಡಂಬಡಿಪ |
ಕೃತ್ಯಮಂ ತಿಳಿದು ತನ್ನೊಳ್ ವಿಚಾರಿಸಿ ನಾಗಲಾಂಬೆಯಿಂತೆಂದಳು || ೨೬ ||

ಅಕ್ಕಕ್ಕ ಮೂತ್ರಮಲಮಾಂಸರಕ್ತಂಗಳೊಳ |
ಗಿಕ್ಕುಮೇ ಶಿವಮೂರ್ತಿಯೆನ್ನುದರದೊಳಗವರ |
ತೊಕ್ಕಿಲ್ಲಮೆನೆ ಬಿಜ್ಜಳಂ ಕೇಳ್ದು ದೃಷ್ಟಮಿಲ್ಲದೆ ನಿನಗೆ ಬರಿಯಮಾತು ||
ತಕ್ಕುದೇಯೆನೆ ದೃಷ್ಟಮಂ ತೋರ್ಪುದೀ ಶಿವಗ |
ಣಕ್ಕದೇನರಿದು ನೋಡಾದೊಡೆನುತಾಗ ನಸು |
ನಕ್ಕು ತನ್ನುದರವನುಗುರ್ಗೊನೆಗಳಿಂ ಬಗಿದಳೇನೆಂಬೆನಚ್ಚರಿಯನು || ೨೭ ||

---

೧ ಪ್ರತ್ಯಕ್ಷಮಂ (ಅ, ಬ, ಕ, ಮ.)

ನೇಲುಗುಗೋನೆ ಸೋಂಕಲುದರದೊಳ್ ಹೊಳೆಹೊಳೆವ |
ಬಾಲಾರ್ಕಕೋಟಿಪ್ರಕಾಶದಿಂ ಮೆರೆವ ಭಸಿ |
ತಾಳಿ ಪಸದೆ ಥಳಥಳಿಪ ನಗೆಮೊಗದ ಕರ್ಣಕುಂಡಲಯುಗಂಗಳಿಂದೆ ||
ಜಾಲೋಳಿವಾದ ಕಿರುಜಡೆಗಳಿಂ ಸುರಕುಸುಮ |
ಮಾಲಿಕಾಮುಷ್ಟದೊಳ್ ಶಿವಲಿಂಗಧರನಾಗಿ |
ಬಾಲಕಂ ನೋಳ್ಪ ಸಭೆಯುಂ ವಿಸ್ಮಯಾರ್ಣವದೊಳಷ್ಟಿದಸದೆಂ ಪೊಗಳ್ವೆನು || ೨೮ ||

ದೇವದುಂದುಭಿ ಮೊಳಗಿದುವು ಸುರರ್ ನಲಿದು ಕುಸು |
ಮಾವಳಿಯ ವೃಷ್ಟಿಯುಂ ಕರೆದರಾ ಸ್ಥಾನಿಕರ |
ನಾವರಿಸಿದುದು ಭಕ್ತಿರಸಜಲಧಿ ಬಸವನಾನಂದದೊಳ್ ಮೆಯ್ಮರೆದನು ||
ಕಾವುದೆನ್ನಪರಾಧಶತಮನೆಂದಾ ಬಿಜ್ಜ |
ಳಾವನೀಶಂ ಮಹಾಭಯಭರಿತಭಕ್ತಿಯಿಂ |
ಕೇವಲಜ್ಞಾನಯುತನಾಗಿ ಧರೆಯೊಳ್ ಮೆಯ್ಯನಿಕ್ಕಿ[2] ಬಳಿಕಿಂತೆಂದನು || ೨೯ ||

ಹಿಂದೆ ರಂಭೆಯ ವಾದದಿಂದಲಾ ಶುಕಮುನಿಪ |
ನಂದು ತನ್ನುದರಮಂ ಬಗಿದು ತೋರಿಸಿದನಂ |
ತೆಂದು ಚೋಳಂಗೆ ಪೂಸಲನುದರಮಂ ಬಗಿದು ತೋರಿಸಿದನೆಂದು ಬಳಿಕ ||
ಚಂದದಿಂ ಸಿದ್ಧರಾಮಂ ಸೊನ್ನಲಾಪುರದೆ |
ನಿಂದು ತನ್ನುದರಮಂ ಬಗಿದು ತೋರಿಸಿದನಂ |
ತೆಂದು ಪೇಳ್ವರ್ ನಾನಿದಂ ಕಂಡೆನೆನುತೆ ಬಿಜ್ಜಳನೃಪಂ ಬೆರಗಾದನು || ೩೦ ||

ಚಿದ್ರೂಪ ನಿನ್ನಿರವನರಿಯದಾಂ ಪಳಿದ ನಿಂ |
ದಾದ್ರೋಹಮೊಂದು ಶಿವಶರಣೆಯಂ ಜರೆದ ಭ |
ಕ್ತದ್ರೋಹಮೆರಡು ಶಿವವಚನಮುಲ್ಲಿಂದ ದೈವದ್ರೋಹದಿಂದೆ ಮೂರು ||
ಉದ್ರೇಕದಿಂದೀಕೆಯುದರಮಂ ಬಗಿಸಿದ ಸ |
ತಿದ್ರೋಹ ನಾಲ್ಕಿಸಿತನಾನರಿಯದರಿಯದಾ |
ತ್ಮದ್ರೋಹದಿಂ ಪಂಚಮದ್ರೋಹಿಯಾಂ[3] ರಕ್ಷಿಸೆನುತವಂ ಪೊಗಳ್ದನಂದು || ೩೧ ||

೧ ಜಾಲೋಕ (ಕೋ.) ೨ ನೋಕ್ಕು (ಪ, ಗೋ.) ೩ ದ್ರೋಹಿಯುಂ (ಅ, ಬ, ಕ.)

ಒಂದುಕಡೆಯೊಳ್ ಬಿಜ್ಜಳಂ ಪೊಗಳಲಿತ್ತ ಮ[೧] |
ತ್ತೊಂದುಕಡೆಯೊಳ್ ಬಸವದಂಡೇಶ್ವರಂ ನುತಿಸ |
ಲೊಂದುದಿಕ್ಕಿನೊಳಸಂಖ್ಯಾತಗಣಮೆಯ್ದೆ ಜಯಜಯವೆಂದು ನುತಿಸುತಿರಲು ||
ಹಿಂದೆಮುಂದೆಡಬಲದೊಳೊಡೆಯರುಂ ಭಕ್ತರುಂ |
ನಿಂದು ಕೊಂಡಾಡುತಿರೆ ನೀಲಾಂಬೆಸಹಿತ ಸತಿ |
ವೃಂದದೊಡ[೨]ಗೂಡಿ ನಲಿಯಲ್ಕೆ ಮೊದಲೊಳ್ ಸಪಾಡಂ ವಿಭವದಿಂ ಮೆರೆದುದು || ೩೨ ||

ಆ ಸಮಯದೊಳ್ ನಾಗಲಾಂ[೩]ಬಿಕೆಯು ನಲಿದು[೩] ಗ|
ರ್ಭಾಸನದ ಶಿಶುವನಂಗೈತಳಕೆ ತರಲೊಡನ |
ದೇಸು ಬಲ್ಪೋ ಶಿವಮಹಾತ್ಮೆಯಂ ಕಾಣ್ಬರಾರೆಂಬ ಶಂಕಾಜಾಲಮಂ ||
ಆ ಸಭೆಗೆ ಬೀಸಿ ತೆಳ್ವಸಿರೆಂದಿನಂತಾಯ್ತು |
ಭೂಪತಿಯ ಪೊರೆ ಕಮಠದಿಗ್ಗಜಂಗಳ ಭರಂ |
ವಾಸುಗಿಯ ಭಾರಮಿಳಿದುದು ತತ್ತ್ವನಿಧಿಜನನಕಾಲದೊಳ್ ಚೋದ್ಯಮೆನಲು || ೩೩ ||

ಕಡಿದೊಣಗಿದಖಿಳ ವೃಕ್ಷಂಗಳ್ ಕೊನರ್ತುವೆ |
ಲ್ಲಿಡೆಂಬೊಳುಂ[೪] ಬರಡುಗಳ್ ಕೊಡವಾಲ್ಗಳಂ ಕರೆಯ |
ತೊಡಗಿದುವು ಕಗ್ಗಲ್ಗಳೊಸರ್ದುವಾ ಕೊಯ್ದ ಫಲತತಿ ಮಗುಳೆ ಫಲವಾದುವು ||
ಸಡಗರದೊಳಂ ಶಿವಾಲಯದ ಕಲ್ಬೊಂಬೆಗಳ್ |
ನಡೆದು ನರ್ತಿಸುತಿರ್ದುವಾಕ್ಷಣಂ ಜೈನರೆರ್ದೆ |
ಯೊಡೆವುತಿರ್ದುವು ಷಟ್ಸ್ಥಲಬ್ರಹ್ಮ ಭೂತಳದೊಳವತರಿಸಲೀಸಂಜೆನು || ೩೪ ||

ಕಳವಳಿಸಿದಂ ಕಾಲನಡಗಿದಂ[೫] ಪೂಗೋಲ |
ನಳವಳಿದುದಜ್ಞಾನವಿಳಿದುದು ಮನದ ಮಾನ[೬] |
ಮೊಳಗೊಳಗೆ ಕಂದಿದಳ್ ಮಾಯೆ ಪೋದುದಸೂಯೆ ಷಡ್ವರ್ಗಮೇನಾದುವೋ ||
ಸಲೆ ಕೆಟ್ಟುದಪಮೃತ್ಯು ಜ್ವಲಿಸಿದುದು ಭಯಬಿತ್ತು |
ನೆಲೆಗುಂದಿದಳ್ ಮಾರಿ ತೊಲಗಿತಘಚಯಭೂರಿ |
ಲಲಿತಮುಕ್ತಿಸ್ವರೂಪಂ ಸತ್ಕಲಾಪನವತರಿಸಿದಾಕ್ಷಣಮಿಳೆಯೊಳು || ೩೫ ||

೧ ಲಿತ್ತಲ (ಶಿ, ಪ, ಕೋ.) ೨ ವೃಂದಮೊಡ (ಅ, ಬ, ಕೆ.) ೩ ಬೆ ತಾನತ್ತ (ಶಿ, ಗೋ, ಕೋ.); ಬಿಕೆಯು ತನ್ನ (ಅ, ಬ, ಕ.) ೪ ಯೊಳುರೆ (ಶಿ.) ೫ ಕಾಲನಡುಗಿದಂ (ಅ, ಬ, ಕ, ಹು.) ೬ ದುಂಮದಮಾನ (ಮ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೬ ||

ಅಂತು ಸಂಧಿ ೪ಕ್ಕಂ ಪದಗಳು ೧೪೬ಕ್ಕಂ ಮಂಗಳಮಹಾಶ್ರೀ

ಐದನೆಯ ಸಂಧಿ

ಸೂಚನೆ

ಲೀಲೆಯಿಂ ಚೆನ್ನಬಸವಣ್ಣನಂ ಬಿಜ್ಜಳನೃ ।
ಪಾಲಕಂ ಪುಷ್ಪಕೋತ್ಸವಮನಾ[೧]ಗಿಸೆ ಬಳಿಕ ।
ಬಾಲಲೀಲೆಯ ಕಳೆದು ಶರಣರೊಡಗೂಡಿ ಸುಖಮಿರ್ದನತಿಸಂತಸದೊಳು ॥

ಬೆರಲ ಕಳಿಕೆಗಳ ಭುಜಶಾಖೆಗಳ ರಂಜಿಸುವ ।
ಕೊರಲ ಗರಳದ ಮಧುವ್ರತದ ದಂತಪ್ರಭೆಯ ।
ವರಕುಸುಮಮಂಜರಿಯ ಜಡೆಯೆಡೆಯ ಬಾಂದೊರೆಯ ಮಕರಂದಸಂದೋಹದ ॥
ಮುರಿದ ಜಡೆಗಳ ರಜಃಪಿಂಜರದ ಸಂತತಂ ।
ಸುರನರೋರುಗಶುಕಪಿಕಾಳಿಗಾಶ್ರಯಮಾದ ।
ಪರಮಪಂಪಾವಿರೂಪಾಕ್ಷಕಲ್ಪದ್ರುಮಂ ಪೊರೆಯಲಾನತಜನರನು ॥ ೧ ॥

ಬಳಿಕ ಬಿಜ್ಜಳನೃಪತಿ ಬಸವಣ್ಣನಂ ಕರೆದು ।
ಪೊಳಲನುರೆ ಸಿಂಗರಿಸವೇಳ್ಕೆಂಬ[೨] ಮಾತು ಬಾ ।
ಯೊಳಗಿರಲ್ ನೆಗಳ್ದುವಲ್ಲಲ್ಲ ನಾನಾಪಟ್ಟೆ ಝಲ್ಲಿ ಕನ್ನಡಿ ಕಳಸದಿಂ ॥
ನಿಳಯನಿಳಯದ ಮುಂದೆ ಬಲ್ಗುರುಜುಗಳ್ ನಡುವೆ ।
ತೊಳಪ ಮಣಿಗುಡಿತೋರಣಂಗಳಿಂ ಪನ್ನೀರ ।
ಚಳೆಯದಿಂದಗರುಧೂಪದ ಹೊಗೆಗಳಿಂ ಬೀದಿಬೀದಿಗಳ್ ಚೆಲ್ವಾದುವು ॥ ೨ ॥

ಪಚ್ಚೆಗಳ ಕಂಬಂಗಳಿಂ ಪವಳವಲಗೆಗಳ ।
ಮುಚ್ಚಳ್ಗಳಿಂ ನೀಲಮಣಿಯ ಲೋವೆಗಳಿಂ ವಿ ।
ಯಚ್ಚರಾಂಗಣಕಡರ್ದ ವಜ್ರವೈಡೂರ್ಯಮಾಣಿಕ್ಯದೊಳ್ ನೆಲೆನೆಲೆಗಳ ॥
ಅಚ್ಚಮುತ್ತಿನ ಗುದಿಗಳಿಂ ಝಲ್ಲಿಪಟ್ಟೆಗಳ ।
ಕುಚ್ಚುಗಳ ಸಂದಣಿಗಳಿಂ ಕೇರಿಕೇರಿಯೊಳ್ ।
ಪೆಚ್ಚಿದುವು ಗೃಹಗೃಹದ್ವಾರಂಗಳೊಳ್ ಮಹಾಮೇರುವೆಗಳೇನೆಂಬೆನು ॥ ೩ ॥

೧ ಕೋತ್ಸಹವನಾಗಿಸೆ (ಹು, ಕೋ. ೨ ವೇಳೆಂಬ (ಕೋ, ಗೋ, ಪ.)



ಲಿಂಗರಾಜ ಆರ್ಟ ಪ್ರೆಸ್.

ಚೆನ್ನಬಸವೇಶನ ಪುಷ್ಪಕೋತ್ಸವ

ವಿವರಿಸುವ್ರೌಢಿ ಮಹೋತ್ಸವಮನೀಕ್ಷಿಸೆ ಬಂದ |
ದಿವಿಜರ ವಿಮಾನಂಗಳೋ ಷಟ್ಸ್ಥಲಬ್ರಹ್ಮ |
ಯವತರಿಸಲಿ ಪುರದೊಳಿರ್ಪ ಶಿವಶರಣಸಂತತಿಯ ಸಾಯುಜ್ಯಪದಕೆ |
ತವಕದಿಂ ಮೊಯ್ಯಲ್ಪಿತಂದ [1]ಸತ್ಪು[2]ಷ್ಪಕದ |
ನಿವಹಮೋ ಪೇಳೆನಲ್ ಪುರದೊಳೆಲ್ಲೆಲ್ಲಿಯುಂ[1] |
ನವಕುರುಜುಗಳ್ ಮಹಾಮೋರುವೆಗಳುಂ ಮೆರೆದುವೆಂಬೆನಚ್ಚರಿಯನು || ೪ ||

ವಿರಚಿಸಿದ ಸಾರಣೆಯ ಕಾರಣೆಯ ಧಾರುಣಿಯ |
ಪರಿವಿಡಿಯೊಳೋರಣದ ತೋರಣದ ಪೂರಣದ |
ಸರವ ಪೂಗಂಪುಗಳ [3]ಸೊಂಪುಗಳ ತಂಪುಗಳ[3] ಸಿರಿಗಂಧ ಪನ್ನೀರೊಳು ||
ಬೆರಸಿರ್ಪ ಚಳಿಯದ ಸುನಿಳಯದ ಸುಕಳೆಯಗಳೊಳ್ |
ಕರದೆ ಬರ್ಪಾರತಿಯ ಮೂರುತಿಯರಾರತಿಯ |
ತರತರದ ಕಾರಿಗಳ ಭೂರಿಗಳ ಭೇರಿಗಳ ರಭಸದಿಂ ಪುರವೆಸೆದುದು || ೫ ||

ತರಿಸಿದಂ ರತ್ನಮಯಪುಷ್ಪಕವನೊಲಿದದರೊ |
ಳಿರಿಸಿದಂ ನಾಗಾಂಬೆಯಂ[5] ಕುವರನಂ ನಮಸ್ |
ಕರಿಸಿದಂ ತಾನವರ್ಗೆ[6] ಚತುರಂಗಮುಂ ಪುರಜನಂಗಳಂ ಮಂತ್ರಿಗಳನು ||
ಕರೆಸಿದಂ ಪುರದ ವಾರಾಂಗನಾನಿಕರಮುಂ |
ಬರಿಸಿದಂ ಶೈವದೊಳ್ ಭಯಭರಿತಭಕ್ತಿಯಂ |
ಧರಿಸಿದಂ ಜಿನಬಿಜ್ಜಳಂ[7] ಹರುಷದಿಂದುತ್ಸವಂಗೈಸಲನುವಾದನು || ೬ ||

ಪಟಹ ನಿಸ್ಸಾಳ ಗಿಡಿಬಿಡಿ ಭೇರಿ ಡವುಡೆ ಜೇಂ |
ಗಟೆ ಕರಡೆ ಕಂಸಾಳ ಡೊಳ್ಳಾರಿ ಟುಮುಕು ತಂ |
ಬಟೆ ಮೆಸೆವ ಹಿರಣ ಡಮಾನ ಚಂಬಕ ಬುರುಗುಗಾಳೆ ಹೆಗ್ಗಾಳೆ ಗಜರ್ವ |
ಪಟುಕಹಳೆಯುಂ ಕೊಂಬುಗಹಳೆ ಪೊಂಗಹಳೆಯು |
ತ್ಕಟತಾಳ ಮದ್ದಳೆಗಳೆಂಬ ಬಹುವಾದ್ಯದು |
ಬ್ಬಟೆಯುಮಿಕ್ಕಡೆಸೆಯೊಳಾವರಿಸಲಾ ಕುವರನ ಸುಪುಷ್ಪಕಂ ಪೊರಮಟ್ಟುದು || ೭ ||

೧-೧ ಪುಷ್ಪಕಪಸಿನ | ಹವೊ ಪೇಳೆನಲ್ ಪುರದೊಳೆಲ್ಲೆಲ್ಲಯಿಡಕಿರಿದ | (ಗೋ.) ೧-೨ ಮಣಿಪು (ಕೋ.) ೩ ಪೊಂಪುಗಳ ಸೊಂಪುಗಳ (ಶಿ.); ಸೊಂಪುಗಳ ಪೆಂಪುಗಳ (ಅ, ಬ, ಕ, ಮ.) ೪ ಸಕ್ಕಯಿಡೆಯೊ (ಅ, ಬ, ಕ, ಮ) ೫ ನಾಗಾಂಬಿಕೆಯ (ಮ.) ೬ ತಾನವಗೆ (ಅ, ಬ, ಕ.) ೭ ಬಿಜ್ಜಳನೃಪಂ (ಶಿ, ಕೋ, ಗೋ, ಪ.)

ಪೇಳಲೇಂ ಪುರಮುಖ್ಯಸತಿಯರೆಡಬಲದೊಳಂ |
ಡಾಳಿಸಲ್ ಧವಳಚಮರಂಗಳಂ ಬಿಜ್ಜಳನ್ಪ |
ಪಾಲಕಂ ಕಾಲ್ನಡೆಯೊಳಖಿಲಮಂತ್ರಿಪ್ರಮುಖಪರಿಜನದ ಗಡಣದಿಂದೆ ||
ಓಲೈಸಿ ಬರೆ ಬಸವದಂಡೇಶಮುಖ್ಯಶರ |
ಣಾಳಿ ಜಯತೆಂದೆನುತೆ ಬರೆ ಸಮ್ಮುಖಂಬಿಡಿದು |
ಬಾಲೆಯರ್ ನರ್ತನವನಾಡಲಾ ಸುಕುಮಾರಕಂ ಮೆರೆದು ಬರುತಿರ್ದನು || ೮ ||

ವಾದ್ಯಮೊನಕ್ಕ ನೀಂ ಕೇಳ್ದುದಿಲ್ಲವೆ ತಂಗಿ |
ಚೋದ್ಯಮಂ ಬಸವನಗ್ರಜೆ ನಾಗಲಾಂಬಿಕೆಗ |
ಭೇದ್ಯಮಪ್ಪಭವಪ್ರಸಾದಪಾಲಿತಗರ್ಭದೊಳ್ ಬಿಜ್ಜಳಂ ಕೇಳಿದ ||
ಸಾಧ್ಯವಿಲ್ಲದ ಪ್ರಶ್ನೆಗುತ್ತರಿಸಿ ಲೋಕದಾ |
ರಾಧ್ಯನ[1]ಪ್ಪೊಂದು ಶಿಶು ಬಂತು ಗಡಮೆಂದು ಪುರ |
ದಾದ್ಯಂತದಬಲಾಜನಂ ನೋಡಲೌತ್ಸುಕ್ಯದಿಂದಯ್ದೆ ಪೊರಮಟ್ಟುದು || ೯ ||

ಅಂಗಜನ ಕಣೆಗಳಂ ಬೀರೆ ನೋಟಂ ಮೊಗಂ |
ತಿಂಗಳಂ ಮೀರೆ ನಸುನಗೆಯ ಸೊಂಪಡರ್ದು ಬೆ |
ಳ್ದಿಂಗಳಂ ಕರೆಯೆ ಭೂಷಣಮಣಿಪ್ರಭೆ ತಟತ್ಸಂಪದಮನಯ್ದೆ ಜರೆಯೆ ||
ಪೊಂಗಳಸಮೊಲೆ ಮೇಲುದಂ ನೂಂಕೆ ಮಧ್ಯಂ ಬೆ |
ಡಂಗಿನಿಂ ಬಳ್ಕೆ ಮುಡಿ ಪೂಗಳಂ ಕೆದರೆ ಕಾ |
ಲುಂಗುರಗಳೊದರೆ ತವಕದೊಳಯ್ದಿದರ್ ಪುರವರಾಂಗನೆಯರಾ ಕ್ಷಣದೊಳು || ೧೦ ||

[2]ಎಸೆವ ಮಾಡಗಳ ನೆಲೆನೆಲೆಗಳೊಳ್ ನಿಂದು ಶೋ |
ಭಿಸುವ ಮಾಳಿಗೆಯನಿರದೇರಿ ಪೊಂಜಗಲಿಯೊಳ್ |
ಮಿಸುಪ ಕಂಬಂಗಳಂ ನೆಮ್ಮಿ ಮಂಟಪದಿಕ್ಕೆಲಂಗಳೊಳ್ ಪಂತಿವಿಡಿದು ||
ಒಸೆದು ಮಂದಿರಬಹಿದ್ವಾರದೊಳ್ ನಿಂದು ನಿ |
ಟ್ಟಿಸುವ ಶಶಿಮುಖಿಯರಲ್ಲಲ್ಲಿ ಕರುವಿಟ್ಟಿರೆದ |
ಪೊಸ ಪೊನ್ನ ಪುತ್ತಳಿಗಳಂತೆ ಕಣ್ಗೊಳಿಸಿದರದೇನೆಂಬೆನಚ್ಚರಿಯನು || ೧೧ ||

---

೧ ರಾಧ್ಯಮ (ಶಿ.) ೨ ಎಸೆವ (ಹು.)

ವಸುಧೆಯುಂ ಪಾದಾಬ್ಜರಾಗಮುಗುರ್ವೆಳ್ಪುಗಳ್ |
ಪಸವನಂಗೆಯ್ಯೆ ನೂಪುರಕಂಕಣಸ್ವನಂ[1] |
ದೆಸೆಗಳೊಳ್ ಪೊಣ್ಮೆ ನಯನಾಂಶು ಗಗನಕೆ ತಟಿಲ್ಲತೆಯ ಪರ್ಬಂ ಪಡೆಯಲು |
ಪೊಸಬಗೆಯ ನಡೆಯಂಚೆವಿಂಡನೊದವಿಸೆ ಮೆಯ್ಯ |
ಬಿಸಜಗಂಧಂ ತುಂಬಿವಿಂಡುಮಂ ನೆರಪೆ ತಾ |
ವಸಮಾಸ್ತ್ರನಸ್ತ್ರಂಗಳೆಡೆಯಾಡುವಂತೆ ಬರುತಿರ್ದರಖಿಳಸ್ತ್ರೀಯರು || ೧೨ ||

ಕುರುಳ್ಗಳುಂ ಹಾರಂಗಳುಂ ಕುಣಿಯೆ ಕುಚಯುಗಂ |
ವರನಿತಂಬಂ ಕದಕ್ಕದಿಸೆ ಮೇಲುದ ನಿರಿಗ |
ಳಿರದೆ ಪಯ್ಸರಿಸೆ ಲಾವಣ್ಯಜಲಮುಂ ಘರ್ಮಜಲಬಿಂದುಗಳ್ ತುಳುಂಕೆ ||
ಚರಣಂಗಳುಂ ನುಡಿಗಳುಂ ತಡಂಬಡಿಸಲತಿ |
ಭರವಸದೊಳಯ್ತಂದು ನೋಳ್ಪ ತರುಣೀಜನಂ |
ಸ್ಮರನ ಕುಲದೇವತೆಯರೆಡೆಯಾಡುವಂತೆಸೆದರೇನೆಂಬೆನಚ್ಚರಿಯನು || ೧೩ ||

ನಲ್ಲನಂ ಬಿಟ್ಟೇತಕೋಡಿ ಬಂದಪೆ ಪೋಗ |
ಸಲ್ಲ ಕುಚಭರಕೆ ನಡು ಮುರಿವುದೆಂಬಾಳಿಯರ |
ಸೊಲ್ಲುಮಂ ಮೀರಿ ತೊಡೆಗಿಳಿವ ಕಟಿಸೂತ್ರಮಂ ಮುರಿದಿಡುತ್ತಂದುಗೆಗಳ ||
ಸಿಲ್ಲಿದೀಡಾಡಿ ಬಿಡುಮುಡಿಯ ಕಟ್ಟದೆ ತವಕ |
ದಲ್ಲ ನೋಳ್ಪೌತ್ಸುಕ್ಯದಿಂ ಮಂದಿಯುಂ ಬಗಿದು |
ಚೆಲ್ಲೆಗಂಗಳೊಳೀಕ್ಷಿಸುತ್ತಿರ್ದಳೊರ್ವಳಾ ಕುವರನ ಮಹೋತ್ಸವವನು || ೧೪ ||

ಎಳೆನೀಲ ಪಚ್ಚೆ ಪಳಗೆಂಪು ಮುತ್ತುಗಳ ನಿ |
ರ್ಮಳಕಾಂತಿಯಿಂದೆಸೆವ ಪುಷ್ಪಕಂಗಂಡು ತಿಳಿ |
ಗೊಳನುಂ ಬನಂ ಪದ್ಮಮುಂ ಜೊನ್ನಮೆಂದು ಮೀನ್ ಮೃಗಮಳಿಚಕೋರಂಗಳು ||
ಪೊಳೆವ ಚಂಚಲಿಪ ಕವಿವೊಲಿವ ನೋಟಗಳ ಕೋ |
ಮಳೆಯರಾ ವರಕುಮಾರನನೀಕ್ಷಿಸುವ ಭಾವ |
ಮಲಿಗಳ್ಗಳಿಂ ಪುರವನಿತೆ ಬಹುರೂಪನಾಂತು ಪೂಜಿಸುವಂತೆ ಚೆಲ್ವಾದುದು || ೧೫ ||

೧ ವರಕಂಕಣಂಗಳ ಸ್ವನಂ (ಮ, ಅ, ಬ, ಕ.)

ಶಾರದೆಗೆ ಸಾಟಿಯಿಂದ್ರಾಣಿಗೆಣೆ ಸಿರಿಗೆ ಸರಿ ।
ಯಾ ರತಿಗೆ ಪಡಿಯಹಲ್ಯೆಗೆ ಸಮಮರುಂಧತಿಯೊ ।
ಳೋರಗೆಯೆನಿಪ್ಪ ಪುರವರಮಹಾಸತಿಯರತಿಭಯಭರಿತಭಕ್ತಿಯಿಂದೆ ॥
ತೋರಬಿಡುಮುತ್ತಿನಾರತಿ ಪಚ್ಚೆಯಾರತಿ ಮ ।
ಹಾರತ್ನದಾರತಿ ಸೊಡರ್ಗಳಾರತಿಗಳಿಂ ।
ಬಾರತಿಗಳಿಂ[1] ನಿವಾಳಿಸಿ ಪರಸಿ ಸೇಸೆಯಂ ತಳಿದರಧಿಕೋತ್ಸವದೊಳು ॥ ೧೬ ॥

ಆರತಿಯನೆತ್ತಿದ ಮಹಾಸತೀಜನಕೆ ಪಿಡಿ ।
ಹಾರದಿಂ ಪೊಂಗಳಂ ವಸ್ತ್ರಂಗಳಂ ರತ್ನ ।
ಹಾರಂಗಳಂ ಸುತಾಂಬೂಲಂಗಳಂ ಮಹಾಭೂಷಣಪ್ರತತಿಗಳನು ॥
ಆರಯ್ದು ಕೊಡಿಸಿ ನಾನಾವರ್ಣಮಂ ಮಹಾ ।
ಭೂರಿದಕ್ಷಿಣೆಗಳಿಂ ದಣಿಸುತಂ ಬಸವನಿಂ ।
ದೋರಂತೆ ಬಿಜ್ಜಳನೃಪಂ ಸಕಲಸಂಭ್ರಮದೊಳೊಡನಯ್ದೆ ಬರುತಿರ್ದನು ॥ ೧೭ ॥

ಇಂತಖಿಳವಿಭವದಿಂದುತ್ಸವಂಗೆಯ್ಸಿ ತದ ।
ನಂತರಂ ಬಸವನರಮನೆಗೊಡನೆ ಬಂದು ನಿ ।
ಮ್ಮಂತಪ್ಪರುಂಟೆಯೆಂದುಪಚರಿಸಿ ಸಕಲವಸ್ತ್ರಾಭರಣದುಡುಗೊರೆಗಳ ॥
ಮುಂತಿರಿಸಿ ಸತ್ಕುಮಾರ[2]ಂಗೆರಗಿ ತನ್ನ ಮನೆ ।
ಗಂ ತಿರುಗಿದಂ ಬಿಜ್ಜಳಂ ಬಳಿಕ್ಕಿತ್ತ ಗಣ ।
ಸಂತತಿಗಳಂ ಕೂಡಿಕೊಂಡು ಬಸವಂ ತನ್ನ ನಿಳಯಮಂ ಪೊಕ್ಕನಂದು ॥ ೧೮ ॥

ಹರುಷದಿಂದಂತಃಪುರಾಂಗನೆಯರೆಲ್ಲರಂ ।
ಕರೆಸಿದಳ್ ನೀಲಲೋಚನೆ ಮಹಾವಿಭವದಿಂ ।
ಪರಿಪರಿಯ ಬಣ್ಣದಾರತಿಗಳಂ ಹೊನ್ನ ಹರಿವಾಣಂಗಳೊಳ್ ತುಂಬಿಸಿ ।
ತರತರಂಬಿಡಿದು ನಡೆತಂದು ನಾಗಾಂಬೆಗಂ ।
ವರಕುವರಗಂ ನಿವಾಳಿಸಿ ಬಿಸುಟು ತೂಪಿರಿದು ।
ಪರಸಿ ಸೇಸೆಯ ತಳಿದರಾ ಸಮಯದೊಳ್ ದಿನಪನಸ್ತಗಿರಿಯಂ ಸಾರ್ದನು ॥ ೧೯ ॥

೧ ರತಿಗಳಂ (ಗೋ, ಕೋ, ಪ.) ೨ ತತ್ಕುಮಾರ (ಗೋ, ಕೋ, ಪ.)

ಅಸಿತಮೊಳ್ ಸಂಜೆಗತ್ತಲೆ ತಾರೆ ದೀಪಮೊ |
ಸೆಸೆಮ ಸ್ಪೈದಿಲ್ ಚಕೋರಾಬ್ಧಿ ದೀಗುಲವರೆಯು |
ಧ್ವನಿಗಳಿರೆ ಪೆರ್ಚಿದುವು ಬಸವನುಂ ನಾಗಲಾಂಬಿಕೆ ನೀಲಲೋಚನೆಯರು ||
ಘನತರದ ಜಂಗಮಾರ್ಚನೆಯನೊಲವಿಂ ಮಾಡಿ |
ಮನವೊಲಿದು ತತ್ಪಾದವನಖಿಳಭಕ್ತರಂ |
ವಿನಯದಿಂ [೧]ಪಂಕ್ತಿಯೊಳ್ ಕೂಡಿಕೊಂಡಾರೋಗಿಸಿದರಧಿಕಭಕ್ತಿಯಿಂದೆ[೧] || ೨೦ ||

ಆ ಭೋಜನಾಂತರದೊಳಖಿಳಭಕ್ತರ್ಗೆ ವ |
ಸ್ತ್ರಾಭರಣಮುಡುಗೊರೆಗಳಂ ಕೊಟ್ಟು ಬಳಿಕಂ ಮ |
ನೋಭರಿತಪ್ರಿಯದಿಂದುಪಚರಿಸಿ ಕಳುಪಿ ಬಸವಂ ನೀಲಲೋಚನೆಯರು ||
ಸ್ವಾಭಾವದಿಂದೆ ಪವಡಿಸಿದರತಿಮುದುವಾಗಿ |
ಶೋಭಿಸುವ ಪಾಸಿನೊಳ್ ನಾಗಲಾಂಬಿಕೆ ದುಷ್ಕ್ರ |
ತೀಭಕಂಠೀರವಕುಮಾರಕಂ ಮಗ್ಗುಲೊಳಗೆಸೆಯೆ ನಿದ್ರೆಯೊಳಿರ್ದಳು || ೨೧ ||

ಈ ಪರಿಯೊಳಿವರಿರ್ದರತ್ತ ಕೈಲಾಸದೊಳ |
ಗಾ ಪಾರ್ವತಿಯುಮೀಶನುಂ ತಮ್ಮ ಕುವರಂ ಮ |
ಹಾಪವಾಡಂಗಳಂ ಮೆರೆದು ಜನಿಸಿದನಾತನಂ ನೋಳ್ಪೆವೆಂದು ಕೂಡೆ ||
ಗೋಪತಿಯನೇರಿ ಘನತರದ ವೈಭವದಿಂದೆ |
ಲಾ ಪರಮಗಣರುದ್ರಕನ್ಯೆಯರ್ವೆರಸಿ ಪು |
ತ್ರಾಪೇಕ್ಷೆಯಿಂ ನಾಗಲಾಂಬಿಕೆಯ ಸೆಜ್ಜೆವನೆಯಂ ಪೊಕ್ಕರುತ್ಸವದೊಳು || ೨೨ ||

ಗಂಗಾನದಿಯ ತಟದೊಳೆಸೆವ ಶುದ್ಧಸ್ಫಟಿಕ |
ಲಿಂಗದಂತಮೃತವಾರ್ಧಿಯ ಪೊರೆಯೊಳಿರ್ಪ ನೆರೆ |
ದಿಂಗಳಂತಮಳಕಮಲಾಕರದ ಕೆಲದೊಳೊಪ್ಪುವ ರಾಜಹಂಸನಂತೆ ||
ಮಂಗಳಾಕರೆ ನಾಗಲಾಂಬಿಕೆ[೨]ಯ ಮಗ್ಗುಲಂ |
ಸಿಂಗರಿಸಿ ತೋರ್ಪ ಶಿಶುವಂ ಕಂಡು ಹರುಷಾಶ್ರು |
ಪಿಂಗದೊಡನುದುರೆ ಮಗನಂ ಗಿರಿಜೆ ತೆಗೆದೆತ್ತಿಕೊಂಡಳುತ್ಸವದೊಳು[೩] || ೨೩ ||

೧ ಕೂಡಿಕೊಂಡಾರೋಗಿಸಿದರಧಿಕತರವಾದ ಭಕ್ತಿಯಿಂದೆ (ಹು.) ೨ ಮಂಗಳಾಕಾರನಾಗಾಂಬಿಕೆ (ಕೋ, ಪ.) ೩ ಕೊಂಡಳೆಂದುತ್ಸವದೊಳು (ಶಿ.)

ಬಳಿಕಮಾ ಸಮಯದೊಳಗೀಶ್ವರಂ ಸತ್ಪಂಚ |
ಕಳಶಂಗಳಂ ಸ್ಥಾಪನಂಗೆಯ್ದು ಪಾರ್ವತಿಯ |
ನೊಲವಿನಿಂ ಕುಳ್ಳಿರಿಸಿ ಪುತ್ರಂಗೆ ತ್ರಿವಿಧದೀಕ್ಷೆಗಳಿಂ ತ್ರಿಲಿಂಗಂಗಳ ||
ನಲಿದು ತ್ರಿವಿಧಾಂಗಂಗಳೊಳು ಪ್ರತಿಷ್ಠಿಸಿ ಶರಣ |
ಕುಲಕೀ ಪ್ರಕಾರದೊಳ್ ದೀಕ್ಷೆ[1]ಗೆಯ್ಯೆಂದು ಕೃಪೆ |
ಯೊಳೆ ನಿರೂಪಿಸುವನೋ ಪೇಳೆನಲ್ ಮೊದಲಲಿಂಗವನೆ ದೀಕ್ಷೆಯಿನಿತ್ತನು || ೨೪ ||

ಉನ್ನತಸುತೇಜಂಗಳೊಳ್ ರೂಪಿನೊಳ್ ಸುಪ್ರ |
ಸನ್ನತೆಯೊಳಂ ಶೈವಕಳೆಯೊಳಂ ತತ್ತ್ವಸಂ |
ಪನ್ನತೆಯೊಳಂ ಪವಾಡಂಗಳಿಂ ಬಸವಣ್ಣನಿಂದಮೀ ಸುಕುಮಾರನು ||
ಚೆನ್ನಾಗಿ ತೋರ್ಪನೆಲೆ ಗಿರಿಜೆ ನೋಡೆಂದೀಶ್ವ |
ರನ್ನಿಧಾನಿಸಿ ಮನೋಹರುಷದಿಂದೀತಂಗೆ |
ಚೆನ್ನಬಸವಣ್ಣನೆಂಬೀ ನಾಮವೇ ಸಾಮ್ಯವೆಂದು ಗಣಕುಲಕೊರೆದನು || ೨೫ ||

ನೋಡುವರ್ ನಲಿವರೊಲಿವರ್ ತಲೆಯನಲುಗಿ ಮುಂ |
ಡಾಡುವರ್ ನಗುವರೊಗುವರ್ ಮಿಗುವ ಸುಖದೊಳೋ |
ಲಾಡುವರ್ ಚುಂಬಿಪರ್ ನಂಬಿಪರ್ ತಂಬಿಸುವರಳ್ತಿಯಿಂ ಮುದ್ದುಗಳನು ||
ಬೇಡುವರ್ ಕೆಯ್ಗಳೊಳ್ ಮೆಯ್ಗಳೊಳ್ ಬಾಯ್ಗಳೊಳ |
ಗಾಡಿಸುವರಾಯೆಂದು ದಾಯೆಂದು ಬಾಯೆಂದು |
ಪಾಡುವರ್ ನೀಡುವರ್ ಬೇಡುವರ್ ಕುವರನಂ ಶಿವಶಿವೆಯರಕ್ಕರಿಂದೆ || ೨೬ ||

ಪರಿಪರಿಯೊಳಿಂತಾ ಕುಮಾರನಂ ಮುದ್ದಿಸು |
ತ್ತಿರೆ ಹರಹರಾ ಪುತ್ರಮೋಹವಿನ್ನೆಂತುಟೋ |
ತೊರೆದೊಗುವ ಪಾಲ್ಗಳಿಂ ಬಿಗಿದ ಗುರುಕುಚದ ಮೇಲುದನೊಯ್ಯನೋಸರಿಸುತೆ |
ಗಿರಿಜೆ ಮಗನಂ ತೆಗೆದು ಸೋಗಿಲೊಳಗಿಟ್ಟಧಿಕ |
ಹರುಷದಿಂ ಮೊಲೆಯೂಡಿ ಮುಂಡಾಡಿ ಕೊಂಡಾಡಿ |
ಪರಸಿ ಪೊಂದೊಟ್ಟಿಲೊಳ್ ತೂಗಿದಳ್ ಮಿಗೆ ರುದ್ರಕನ್ನೆಯರ ಮೇಳದಿಂದೆ || ೨೭ ||

---

೧ ಪ್ರಕಾರದಿಂ ದೀಕ್ಷೆ (ಹು.)

ಉಕ್ಕವತಿ ಹರುಷದಿಂದಮ್ಮವ್ವೆಯುಂ ಚೋಳಿ |
ಯಕ್ಕ ಚಂಗಳೆ ನಿಂಬಿ ದುಗ್ಗಳೆಯುಮೆಸೆವ ಸ |
ತ್ರಕ್ಕ ಕಮಳವ್ವೆ ಬಾಚವ್ವೆ ಮೊದಲಾದಖಿಳರುದ್ರಕನ್ನಿಕೆಯರೊಲಿದು ||
ರಕ್ಕೆಯುಂ ಪಣೆಗಿಟ್ಟು ತೂಪಿರಿದು ಪರಸಿ ಹಸು |
ಮಕ್ಕಳ ಶಿರೋಮಣಿಯೆ ಸಿಂಗರದ ಕಣಿಯೆ [1]ಜೋ |
ಚಿಕ್ಕಬಸವಣ್ಣ[2] ಜೋಜೋಯೆಂದು ಪಾಡಿ ತೂಗುತ್ತಿರ್ದರುತ್ಸವದೊಳು || ೨೮ ||

ಜೋಜೋ ಮಹೇಶಷಣ್ಮುಖಜನಿತಸನ್ಮೂರ್ತಿ |
ಜೋಜೋ ಮಹಾವೀರಶೈವೋದ್ಧರಣಕೀರ್ತಿ |
ಜೋಜೋ ಮಹಾದೇವಿಯಾನಂದವಾರ್ಧಿವರ್ಧನಕಳಾಪೂರ್ಣಚಂದ್ರ ||
ಜೋಜೋ ಸಕಲಭಕ್ತಹೃದಯಪಂಕಜಮಿತ್ರ |
ಜೋಜೋ ಮಹಾಶರಣಗಣಭವಾಂಬುಧಿಛತ್ರ |
ಜೋಜೋ ಪರಬ್ರಹ್ಮರೂಪ ಜೋಜೋಯೆಂದು ಪಾಡಿ ತೂಗುತ್ತಿರ್ದರು || ೨೯ ||

ಎಂದಿಂತು ಪಾಡುತುಂ ಪರಸುತುಂ ತೂಗುತಾ |
ನಂದದಿಂದಾ ಗಿರಿಜೆ ನಾಗಲಾಂಬಿಕೆಗೆ ನಗು |
ತೆಂದಳೆಲೆ ತಂಗಿ ನೀನೆನ್ನ ರೂಪೀ ಶಿಶುವೆ ಶಿವಕುಮಾರಂ ತಿಳಿಯಲು ||
ಮುಂದೆ ಮಜ್ಜನಭೋಜನಾದಿನಾನಾಕ್ರಿಯೆಗ |
ಳೊಂದರೊಳ್ ನರವೇಷಕಾಯಮಂ ನವೆಸಬೇ |
ಡೆಂದು ಕೈವೆಡೆಗೊಟ್ಟಳೇಂ ವಿಶೇಷಮೊ ಪುತ್ರಮೋಹಮಿಾ ಲೋಕದೊಳಗೆ || ೩೦ ||

ಅನ್ನೆಗಂ ಶಿವಶಿವೆಯರಿನಿತೆಸಗಿದೀ ವಿವರ |
ಮನ್ನೆಲಕೆ ಸಾರ್ವಂತೆ ಮುಂಗೋಳಿಗಳ್ ಕೂಗೆ |
ಕನ್ನೈದಿಲರಮೆ ಮುಗಿಯಲ್ ಕಮಲಮರೆವಿರಿಯೆ ತಂಗಾಳಿ ತಲೆದೋರಲು ||
ಮುನ್ನೀಸರಾಗಮವನೆಚ್ಚರಿಸಲಳಿಕುಲಂ |
ಸನ್ಮಿತ್ರಗಣಂಗಳೊಡವರೆ ಶಿವಂ ಶಿವೆಯರಾ |
ಚೆನ್ನಬಸವಣ್ಣನಂ ಮುಂಡಾಡಿ ಕೈಲಾಸಕಯ್ದಿದರ್ ಸಂತಸದೊಳು || ೩೧ ||

---

೧ ಜೋಲಿಕ್ಕಿ ಕೊಟ್ಟಳೋಳು (ಮ, ಮ, ಕ.) ೨ ತನೆ (ಕೋ.)

ಇತ್ತಲೀ ನಾಗಲಾಂಬಿಕೆ ಶಿವಂ ಪೋಗಲೆ |
ಚ್ಚತ್ತು ವಿಸ್ಮಿತೆಯಾಗಿ ತಿಳಿದು ನಲವಿಂ ತನ್ನ |
ಚಿತ್ತದಿಂ ಕನಸಾಗಿಯುಂ ಕನಸುವಲ್ಲವಿದು ತಾಂ ವಿಚಾರಿಸಿ ನೋಡಲು |
ಒತ್ತಿನೊಳ್ ಪೂಜಿಸಿದ ಮಣಿಗಳಸವಿವೆ ಶೋಭೆ
ವೆತ್ತು ಪೊಂದೊಟ್ಟಿಲಿದೆ ಪ್ರತ್ಯಕ್ಷಮೆಂದು ತ |
ನ್ನತ್ತಮಾಂಗವನೊಲೆವುತಿರ್ದಿನಂ ದಿನಪನಡರಿದನುದಯಪರ್ವತವನು || ೩೨ ||

ಆ ಕಾಲದೊಳ್ [೧]ನಾಗಲಾಂಬೆ ಬಸವಣ್ಣಂಗ[೧] |
ನೇಕಹರುಷಂ ಪುಟ್ಟಲೀಶ್ವರಂ ಬಂದು ಮ |
ತ್ತಿಂ ಕುವರಗಂ[೨] ದೀಕ್ಷೆಯಂ ಕೊಟ್ಟು ಪೆಸರನಿಟ್ಟಂದವುಂ ಪೇಳ್ದು ಬಳಿಕ |
ಜೋಕೆಯಿಂದಿಟ್ಟ[೩] ಕಲಶಂಗಳಂ ತೊಟ್ಟಿಲವು |
ನಾ ಕೆಲವು ಕುರುಪುಗಳನೆಲ್ಲವಂ ತೋರಲ್ ಶು |
ಭಾಕಾರಶಿಶುವಿದೆನ್ನಯ ಕಣ್ಣ ಪುಣ್ಯನಿಧಿಯೆನುತೆ ನುತಿಸುತ್ತಿರ್ದನು || ೩೩ ||

ಪಲತೆರದಲೊಳಳಿಯನಂ ಕೊಂಡಾಡಿ ಮುಂಡಾಡಿ |
ನಲವು ಮಿಗೆ ಬಸವನಿರುತಿರೆ ಕ್ರಮಕ್ರಮದೊಳಂ |
ಬಳೆವ ಶಶಿಕಳೆಯಂತೆ ಪೆರ್ಚ್ಚಿಯುದಯಾದಿತ್ಯನಂತಖಿಳತೇಜದಿಂದೆ ||
ಗಳಿಗೆಗಳಿಗೆಗೆ ವರ್ಧಿಸುತ್ತಿರ್ದನಾ ಸಮು |
ಜ್ವಲಮುಕ್ತಿಯೇ ರೂಪುವೆತ್ತಂತೆ ಶೈವನಿ |
ರ್ಮಳಕಳೆಯೆ ಬಾಲ್ಯತ್ವಮಂ ಧರಿಸಿದಂದದಿಂ ಚೆಲ್ವಾದನಾ ಕುವರನು || ೩೪ ||

ಸಲೆಸೆವನ ಪೊರ್ದದ ಮುಗುಳ್ನಗೆಯಿನಕ್ಕರಂ |
ಗಳೊಳೆಸೆಯದಿಹ ಮುದ್ದುನುಡಿಗಳಿಂ ಬರಿದೆ ತ |
ನ್ನೊಳಗೆ ತಾನಾನಂದಿಪಾಟದಿಸಕಾರಣಂ ಪರಿದತ್ತ ಪರಿದು ನೋಳ್ಪ ||
ತೊಳಪ ಕಂಗಳ ನೋಟದಿಂ ಬೆರಲ ಚುಂಬಿಸು |
ತ್ತಳುತೆ ಜೋಗುಳವಾಡೆ ನಲಿವುತುಂ ಪೊಂದೊಟ್ಟ |
ಲೊಳಗೆ ಶಿಶುಲೀಲೆಯಿಂ ಕೆಲದಿನಂ ತಾಯ್ಗೆ ಹರುಷಂದೋರಿದಂ ಕುವರನು || ೩೫ ||

೧ ನಾಗಲಾಂಬಿಕೆಯು ಬಸವಂಗ (ಶಿ.) ೨ ಕುಮಾರಗೆ (ಶಿ.) ೩ ಮಿಗಿಲಿಟ್ಟ (ಶಿ.)

ರಕ್ಕೆವಣಿ ಪುಲಿಯುಗುರ್ ಗೆಜ್ಜೆ ಮಾಗಾಯ್ ಮುತ್ತಿ |
ನೆಕ್ಕಸರಮುಡಿದಾರ ಕಾಲ ಕಡಗಂ ಪಣೆಯೊ |
ಳಿಕ್ಕಿದ ಸುಭಸಿತಮುರಳೆಲೆಯೆನಿಪ ಪರಿಪರಿಯ ಬಾಲದೊಡಿಗೆಗಳನಾಂತು ||
ಉಕ್ಕಿತಿಹ ತಾಯ ಮೊಲೆವಾಲುಣುತೆ ಸೋಂಗಿಲೊಳ್ |
ನಕ್ಕಾಡುತುಂ[೧] ಮುದ್ದುಗರೆವುತುಂ ಲೀಲೆಯಿಂ |
ಮಕ್ಕಳಾಟಕೆಯೊಳೆಸೆದಂ ಜಗವನಾಡಿಸುವ ಸೂತ್ರಧಾರಂ ಕ್ರಮದೊಳು || ೩೬ ||

ನೊಸಲಗಣ್ಣವನ ಸುತನೆಂಬುದಂ ಧರೆಗೆ ಸೂ |
ಚಿಸುವೊಲುಜ್ವಲಿಸುವರಳೆಲೆಯೊಪ್ಪೆ ಪೆಡೆವಣಿಗ |
ಳೆಸೆವ ಫಣಿಕುಂಡಲನ ಕುವರನೆಂದರಿಪವೊಲ್ ಕಿವಿಗಳೊಳ್ ಪೊಂಜರಿಗೆಯ ||
ಮಿಸುಪ ತುದಿಯೊಳ್ ರನ್ನಮಾಗಾಯ್ಗಳೊಲೆದಾಡೆ |
ಸಸಿದಲೆಯನಣುಗನೆಂಬುದ ತೋರುವಂತೆ ರಾ |
ಜಿಸಲುರದೊಳೆಳವೆರೆಯ ಮಾಳ್ಕೆಯಿಂ ಪುಲಿಯುಗುರ್ ಬಾಲಕಂ ಕಣ್ಗೆಸೆದನು
|| ೩೭ ||

ತೊಳಗುವ ಕಳಂಕಮಂ ತಳೆದ ಪೂರ್ಣೇಂದುಮಂ |
ಡಳದಂತೆ ಕಜ್ಜಳಂಬೊರೆದು ಕಣ್ಗೊಳಿಪ ಮುಂ |
ಗಳಮುಖಂಗಾಣುತಿದು ಶಶಿಯೆಂದು ಸಕಲತಾರಾಂಗನೆಯರೊಲಿದು ಬಂದು ||
ನೆಲಸಿದರೊ ತತ್ಸಮೀಪದೊಳೆಂದೆನಲ್ಕೆ ಥಳ |
ಥಳಿಪ ಮುತ್ತಿನ ಕಂಠಮಾಲೆ ಕಣ್ಗೆಸೆಯೆ ಕ |
ಣ್ಗಳ ಪುಣ್ಯಮೇ ಬಳೆವ ತೆರದೊಳಾ ಚೆನ್ನಬಸವಂ ವರ್ಧಿಸುತ್ತಿರ್ದನು || ೩೮ ||

ಮೇಲೆ ಪರವಾದಿಗಳ ಬಾಯ್ಗಳಂ ಪೊಯ್ವಂತೆ |
ತೋಳಾಟವಾಡಿ ಕೈಸನ್ನೆಯಿಂದಾ ಮುಕ್ತಿ |
ಬಾಲೆಯಂ ಕೆಳೆತನಕೆ ಕರೆವಂತೆ ಹೊನ್ನತಾಗುಬ್ಬಿಯಾಟಂಗಳಾಡಿ ||
ಲೀಲೆಯಿಂ ನೆಲಕಿಳಿಪೆ ಖಳರೆದೆಗಳಿಂತು ಮೊಳ |
ಕಾಲೊಳೊದೆದಪೆನೆಂಬವೊಲಂಬೆಗಾಲಿಟ್ಟು |
ಲೀಲೆಯಿಂ ಶೈವಮಂ ನೆಲೆಗೆ ನಿಲಿಪಂತೆ ನಿಂದಾಡುತಿರ್ದಂ ಕುವರನು || ೩೯ ||

---

೧ ನಕ್ಕಾಡುತಿ (ಹು, ಅ, ಬ, ಕ, ಮ.)

ಮೆಲ್ಲಮೆಲ್ಲನೆ ದಟ್ಟಡಿಯನಿಡಲ್ ಗೆಜ್ಜೆಗಳ್ |
ಘಲ್ಲಘಲ್ಲೆನೆ ಸಕಲಪರವಾದಿಹೃದಯಮವು |
ಝುಲ್ಲಝುಲ್ಲೆನೆ ಪಳಿಕಿನಿಂ ಸವೆದ ನೆಲೆಗಟ್ಟು ಜಾರ್ವುದೆಲೆ ಚೆನ್ನಬಸವ ||
ನಿಲ್ಲುನಿಲ್ಲೆಂಬ ದಾದಿಯರ ಮಾತಂ ಮೀರು |
ತಲ್ಲಿಗಲ್ಲಗೆ ನಿಂದು ನಿಂದು ನೋಡುತ್ತೆ ಮೊಳೆ |
ವಲ್ಲು ಜೊಲ್ಲುಂ ಪೊಳೆಯೆ ನಸುನಗುತ್ತುಂ ಬಾಲಲೀಲೆಯಂ ತೋರಿಸಿದನು || ೪೦ ||

ಪಸುಳೆತನದೊಳ್ ಪ್ರಣವಮಂ ಶರಣಗಣಕೆ ಬೋ |
ಧಿಸುವನೀ ಕುವರನೆಂಬೊಲ್ ತೊದಲ್ವಾತು ರಂ |
ಜಿಸಿದುವೀಶ್ವರರೂಪನೀತನೀತನ ಪದವನೆಮ್ಮಂತೆ ಸಕಲಜನರು ||
ಒಸೆದಪ್ಪಿರಿಲ್ ಮುಕ್ತಿಯಪ್ಪುದೆಂಬೀ ಮಾತು |
ಪುಸಿಯಲ್ಲವೆಂದು ಡಂಗುರಿಪಂತೆ ಚರಣದೊಳ್ |
ಮಿಸುನಿಯಂದುಗೆ ಝಣಝಣೆಂದುಮಡಿಗಡಿಗುಲಿಯೆ ನಡೆದಾಡಿದಂ[1] ಕುವರನು || ೪೧ ||

ನಿಮಿಷನಿಮಿಷಕೆ ಜಾವಜಾವಕ್ಕೆ ದಿನದಿನಕೆ |
ಕ್ರಮದೊಳಂ ಬಳೆದು ತನ್ನೊಡನಾಡಿಗಳ್ವೆರಸು |
ವಿಮಲತಾರಾ[2]ಗಣದ ನಡುವೆ ಕಂದಂ ಕುಂದನಳಿ[3]ದಿಂದುವೊಪ್ಪುವಂತೆ ||
ರಮಣೀಯಮೆನಿಪ ಮುತ್ತಿನ ಕಂಠಮಾಲೆಯೊಳ |
ಗಮರ್ದ ನಾಯಕರತ್ನದಂತೆ ಬಿಸುಗದಿರಳಿದ |
ಹಿಮಕಿರಣನಂತೆ ನೋಳ್ಪರ ಕಣ್ಗೆ ಚೆನ್ನಬಸವಂ ಚೆನ್ನಮಂ ತಳೆದನು || ೪೨ ||

ಬಾಲಕಂ ಕ್ರಮದೊಳಿಂತಭಿವರ್ಧಿಸುತ್ತಿರಲ್ |
ಕಾಲಕಾಲಂಗಳಂ ಬಯಸಿ ನಾನಾಶಾಸ್ತ್ರ |
ಜಾಲವೇದಾಗಮಪುರಾಣಮಿವು ಮೊದಲಾದ ಸಕಲವಿದ್ಯಾಪ್ರಭೆಗಳು ||
ಮೇಲೆಮೇಲೈತಂದು ಕೈಮುಗಿದು ಪದತಳವ |
ನೋಲಗಿ[4]ಸಿಕೊಂಡಿರ್ಪುವೆಂದೊಡೀಶ್ವರಸುತನ |
ಲೀಲೆಯಂ ಬಣ್ಣಿಸಲ್ ಸಾಧ್ಯಮಲ್ಲೆನೆ ಚೆನ್ನಬಸವಣ್ಣನೊಪ್ಪಿರ್ದನು || ೪೩ ||

---

೧ ನಲಿದಾಡಿದಂ (ಹು.) ೨ ತಾರಾಂ (ಶಿ.) ೩ ನುಳಿ (ಹು.) ೪ ನೋಳ್ಪಸಿ (ಶಿ.)

ತಾಮರಸಕೈರವಂಗಳ ವಿಕಾಸಂಗಳಂ |
ತಾಮತಿಕ್ರಮಿಸಿದುವು [1]ನಿಡಿದುಗಣ್ ಪುರ್ಬು[1]ಗಳ್ |
ಕಾಮಕೋದಂಡಮಂ ದಂಡಿಸಿದುವಾ ಮುಖಂ ಮುಕುರದಿರವಂ ಪಳಿದುದು ||
ಕೋಮಲಾಂಗಂ ಸೊಂಪಡರ್ದುದಾ ತೋಳ್ಗಳು |
ದ್ದಾಮದಿಕ್ಕರಿ[2]ಕರಮನುರೆಜರೆದುವತುಳರಂ |
ಭಾಮಂಗಳಂಗಳೆದುವೊಳ್ತೊಡೆಗಳೆನಲೆಳೆಯ ಹರಯಮುಮರ್ದುದು[3] ಕುವರನ || ೪೪ ||

ಹಡಪದವರಂ ಬಿಜ್ಜಣಿಗೆ[4]ಯರನಾ ಕಾಳಾಂಜಿ |
ಪಿಡಿವರಂ ಪಾದುಕಾಧಾರರಂ ಚವರಮಂ[5] |
ಪಿಡಿದು ಡಾಳಿಸುವರಂ ಗಿಂಡಿವಿಡಿವರ ಮುಖ್ಯವಿನಿಯೋಗದೆಳೆವಕ್ಕಳ ||
ಕಡುವಿಲಾಸದೊಳವುರ್ಚಿಸಿಕೊಟ್ಟು ತನ್ನ ಕ |
ಣ್ಗಡೆಯ ಪುಣ್ಯದ ಪುಂಜವೆಂದು ನಿಚ್ಚಂ ಸುಖಂ |
ಬಡೆದು ತನ್ಮೂರ್ತಿಯಂ ನೋಡುತುಂ ಬಸವನತ್ಯುತ್ಸವದೊಳಿರುತಿರ್ದನು || ೪೫ ||

ನೋಡುತುಂ ಥಳಥಳಿಪ ವದನಮಂ ಸುಖದೊಳೋ |
ಲಾಡುತುಂ ಗುರುಮೂರ್ತಿಯೆಂದರಿದು ವಂದನಂ |
ಮಾಡುತುಂ ಚಿತ್ತದೊಳ್ ಚೆನ್ನಬಸವನ ಮೊಗಂ ಕಣ್ಗಳ್ಗೆ ಮರೆಯಾಗಲು ||
ಬಾಡುತುಂ ಕಂಡೊಡನೆ ಹರ್ಷವಾರ್ಧಿಯೊಳಗಿ |
ಸಾಡುತುಂ ಪಲತೆರದ ಸಿಂಗರಂಗಂಡು ಮು |
ದ್ದಾಡುತುಂ ಜಾಮಾತನಂ ಬಸವದಂಡೇಶ್ವರಂ ಸುಖದೊಳಿರುತಿರ್ದನು || ೪೬ ||

ಇರುತಿರುತಲೊಂದು ದಿವಸಂ ಬಸವರಾಜನತಿ |
ಹರುಷದಿಂದಳಿಯನ ಮೊಗಂ ನೋಡಿ ನಮಗೆ ಸ |
ದ್ಗುರುವೀತನೆಂದು ಹೃದಯದೊಳರಿದು ತನ್ನ ಭಕ್ತಿಯೊಳು ಬೇರರಮನೆಯೊಳು ||
ಇರಿಸಬೇಕೆಂದೆನುತೆ ಶಿಲ್ಪಿಗಳನಾಕ್ಷಣಂ |
ಕರೆಸಿ ನುಡಿದಂ ನಮ್ಮ ಮನೆಗೆಲದೊಳರಮನೆಯ |
ನಿರದಾಗಿಸೆನಲವರ್ ಭಯಭರಿತಭಕ್ತಿಯಿಂ ನಿರ್ಮಿಸಿದರೇನೆಂಬೆನು || ೪೭ ||

೧ ನಿಡುಗಣ ಪುರ್ವು (ಮ.) ೨ ದಿಂ ಕರಿ (ಮ.) ೩ ಮಮುರಿಪು (ಅ, ಬ, ಕ, ಮ.) ೪ ಬಿಜ್ಜಣಿಗ (ತಿ.) ೫ ಚೌರಮಂ (ಶಿ.)

ನೀಲರತ್ನಂಗಳಿಂ ನೆಲೆಗಟ್ಟ್ಟ ಪಳಿಕುಗಳ |
ಸಾಲೆಸೆವ ಭಿತ್ತಿಗಳ್ ವಜ್ರದೊಳ್ಗಂಬಂಗ |
ಳಾಲಲಿತಪಚ್ಚೆಗಳ ತೊಲೆ ರನ್ನಬೋದುಗೆಗಳಾ ಪ್ರವಾಳಂಗಳಿಂದೆ ||
ಮೇಲೆಸೆವ ಜಂತೆಗಳ್ ತೋರ್ಪ ನವಪುಷ್ಯರಾ |
ಗಾಳಿಯಿಂ ಸಮೆದ ಬಾಗಿಲ್ ಪೊಂಗದಂಗಳಿಂ |
ಪೇಳಲಚ್ಚರಿಯಾದುದರಮನೆಯದಾ ವಿಶ್ವಕರ್ಮನಿರ್ಮಿತ[೧]ದಂತಿರೆ || ೪೮ ||

ಎಸೆದುವಲ್ಲಲ್ಲಿ ವಾಸ್ತುಕ್ರಮಂಬಿಡಿದು ರಂ |
ಜಿಸುವ ಮಜ್ಜನಶಾಲೆಯುಂ ಸೂಪಶಾಲೆ ಶೋ |
ಭಿಸುವ ಭೋಜನಶಾಲೆಯುಂ ಮಂತ್ರಶಾಲೆ ನರ್ತನಶಾಲೆ ವಸ್ತ್ರಶಾಲೆ ||
ಮಿಸುಪ ಹಯಶಾಲೆ ಗಜಶಾಲೆಯೋಲಗಶಾಲೆ |
ಪೊಸ ಗೀತಶಾಲೆಯೊಪ್ಪುವ ಶಯನಶಾಲೆ ಭಾ |
ವಿಸಲರಸುಗೀವಿಗುಳ್ಳನಿತು ಶಾಲೆಗಳೊಪ್ಪಿದುವು ರತ್ನರಂಜನದೊಳು || ೪೯ ||

ಸಕಲಕೋಶದ ಗೃಹಂಗಳ್ ತೈಲಘೃತಗುಡ |
ಪ್ರಕರರಸಭಾಂಡದುಗ್ರಾಣದೊಳ್ವನೆಗಳುಂ |
ಸುಕರಧಾನ್ಯದ ಕಣಜಗಳ್ ಸರ್ವವಿನಿಯೋಗದವರಿಪ್ಪ ಚಾವಡಿಗಳು ||
ಪ್ರಕಟತರತರುಲತೆಗಳುಂ ರನ್ನಜಗಲಿ ರ |
ನ್ಯಕಸರಸಿ ಕೃತಕಾದ್ರಿಗಳ್ ತರತರದೊಳಿರ |
ಲ್ಕಕಳಂಕಕೇಳೀವನಂ ಮೆರೆದುದನಿತು ಲೋಕದ ವನಮನುರೆ ಜರೆಯುತೆ || ೫೦ ||

ತರತರದೊಳೆಸೆವ ಬಾಗಿಲ ಗೋಪುರಂಗಳೊಳ್ |
ಕರುವಿಟ್ಟ ಪುತ್ತಳಿಗಳಿಂ ಭಿತ್ತಿಭಿತ್ತಿಯೊಳ್ |
ಬರೆದ[೨] ನಾನಾತೆರದೊಳೆಸೆವ ಬೊಂಬೆಗಳಿಂದೆ ಕಸ್ತೂರಿಕುಂಕುಮದೊಳು ||
ಪೊರೆದ ಸಾರಣೆಗಳಿಂ ಕಾರಣೆಗಳಿಂ ಚಿತ್ರ |
ತರಪಟ್ಟ ಝುಲ್ಲಿ ಕನ್ನಡಿ ಕಳಸ ಮುತ್ತುಗಳ |
ಪರಿಪರಿಯ ರನ್ನಗಳ ಕುಚ್ಚು[೩]ಗಳ ಮೇಲ್ಕಟ್ಟನಿಂ ಕರಂ ಚೆಲ್ವಾದುದು || ೫೧ ||

---

೧ ನಿರ್ಮಿಸಿ (ಶಿ.) ೨ ಪೊರೆದ (ಶಿ.) ೩ ಗುಚ್ಛ (ಹು.)

ಬಾಗಿಲ್ಗಳಾರೆಸೆವುವರಮನೆಗೆ ಹೇಮಮಯ |
ಮಾಗಿ ತೋರ್ಪುವು ವಿಶಾಲಂಗಳಿಂದವರವರ |
ಮೇಗೆ ಮುಗಿಲಂ ಮುಟ್ಟುವುಪ್ಪರಿಗೆಗಳ್ ಮೆರೆದುವಾರು ಮಣಿಖಚಿತಮಾಗಿ ||
ಭೂಗಗನಪಾತಾಳದರಮನೆಗಳಿದರೊಡನೆ |
ತೂಗೆ ಸರಿಬಾರವೆಂದೆಲ್ಲರುಂ ಪೊಗಳಲತಿ |
ವೇಗದಿಂದಾ ಶಿಲ್ಪಿಗಂ ಬಂದು ಮೆಯ್ಯಿಕ್ಕಿ ಬಸವನೊಡನಿಂತೆಂದನು || ೫೨ ||

ಜೀಯ ಚಿತ್ತಯ್ಸು ಬಹುರಚನೆಯಿಂದರಮನೆಯ |
ನೊಯ್ಯಾರದಿಂ ಗೆಯ್ದೆನೀಕ್ಷಿಸೆನೆ ಹರುಷಪೂ |
ರಾಯಮಾನಸನಾಗಿ ಬಸವನಾ ಚೆನ್ನಬಸವಂಗೂಡಿ ನೋಳ್ಪಾಗಲು ||
ತೋಯಜಾಕರದಂತೆ ಪದ್ಮಾಲಯಂ ಶಿವನ |
ಕಾಯದಂದದೆ ಸರ್ವಮಂಗಳಾಲಂಕೃತಂ |
ಕಾಯಜನ ಪಿತನಂತನಂತಮಣಿರಂಜಿತದೊಳರಮನೆ ವಿರಾಜಿಸಿದುದು || ೫೩ ||

ಇಂತು ನಾನಾಕುಶಲದಿಂದೊಪ್ಪುವರಮನೆಯ |
ನಂತವಿಭವಂಗಂಡು ತಲೆದೂಗಿ ಬಸವನ |
ತ್ಯಂತವಿಸ್ಮಿತನಾಗಿ ಶಿಲ್ಪಿಗಂಗುಡುತೊಡಂಗಳನಿತ್ತು ಸಲೆ ಮನ್ನಿಸಿ ||
ಮುಂತಿರ್ಪ ಚೆನ್ನಬಸವಣ್ಣಂಗೆ ನಮಿಸಿ ತಾಂ |
ಸಂತತಂ ಮಾಳ್ಪ ಭಕ್ತಿಯನೊಲಿದು ಕೈಕೊಳುತೆ |
ಸಂತಸದೊಳೀ ಮನೆಯೊಳಿರ್ದೆಮಗೆ ಸಕಲಶಿವತತ್ತ್ವಮಂ ಬೋಧಿಸುವುದು || ೫೪ ||

ಇದು ನಿಮಿತ್ತದೊಳೆನ್ನ ಬಿನ್ನಪಂಗೇಳ್ದು ನೀ |
ವಿದರೊಳಿರ್ದೆನ್ನ ಮನದಿಷ್ಟಮಂ ಸಲಿಸೆನಲ್ |
ಹೃದಯದೊಳ್[೧] ಚೆನ್ನಬಸವಂ ತಿಳಿದು ಪರಮಗುರುವಚನವೆಂದೇ ಭಾವಿಸಿ ||
ಸದಮಲಜ್ಞಾನಿ ನೀವಿರಿಸಿದಂತಿರ್ಪೆನೆನೆ |
ಮುದದೊಳಾ ಬಸವದಂಡೇಶ್ವರಂ ತದ್ರಾಜ |
ಸದನಕ್ಕೆ ಧನಧಾನ್ಯ ಮೊದಲಾದ ಸಂಪದವನಿಂಬಿಟ್ಟನಾಕ್ಷಣದೊಳು || ೫೫ ||

೧ ಹದುಳದಿಂ (ಶಿ.)

ಅಕಳಂಕಚರಿತಬಸವಂ ಚೆನ್ನಬಸವಂಗೆ ।
ಸಕಲವಿನಿಯೋಗದವರಂ ಕೊಟ್ಟು ಭಕ್ತಿಯಿಂ ।
ಮುಕುಳಿತಕರಂಗಳಿಂ ಬಿನ್ನವಿಸಿ ನಾಗಲಾಂಬೆಯು ಕರೆಸಲಾಕ್ಷಣದೊಳು ॥
ಸಕಲವೈಭವದಿಂದೆ ಹೊನ್ನಂದಣವನೇರಿ ।
ಮುಕುರಮುಖಿಯುರ್ವರಿಸಿ ನಡೆತಂದು ನವರತ್ನ ।
ನಿಕರನಿರ್ಮಿತದಿಂದಲೆಸೆವ ರಾಜಾಲಯವನೊಳಪೊಕ್ಕಳುತ್ಸವದೊಳು ॥ ೫೬ ॥

ಉಕ್ಕುವತಿಹರುಷದಿಂ ಬಸವಣ್ಣನಾಗ ತ ।
ನ್ನಕ್ಕ[೧] ನಾಗಾಂಬೆಯೊಡನೀಕುಮಾರಕನೆಸೆವ ।
ಮುಕ್ಕಣ್ಣನಪರಾವತಾರನೆಂದೇ ತಿಳಿದು ಸಲಹೆಂದು ಪೇಳ್ದು ಬಳಿಕೆ ॥
ಚಿಕ್ಕಬಸವಂಗೆರಗಿ ಬಸವ ತನ್ನಾಲಯಂ ।
ಬೊಕ್ಕನೀ ಚೆನ್ನಬಸವಂ ತನ್ನ ಬಾಗಿಲ್ಗೆ ।
ತಕ್ಕರಂ ಕಾಪಿರಿಸಬೇಕೆಂದು ಹೃದಯದೊಳ್ ತಿಳಿದು ಬಳಿಕಾ ಕ್ಷಣದೊಳು ॥ ೫೭ ॥

ಆರುಬಾಗಿಲಿನೊಳಾರುಸ್ಥಳವನುಸಿರದೊಡೆ ।
ಮೂರುಕಣ್ಣುಳ್ಳರಂ ಬಿಡಬೇಡವೆಂದು ಪೇ ।
ಳ್ದಾರುಮುಂದಿಯನಧಿಕಷಟ್ಸ್ಥಲಬ್ರಹ್ಮಿಗಳ ಬಾಗಿಲ ಪರೀಕ್ಷೆಗಿರಿಸಿ ॥
ಆರುಮುಖದೊಳ್ ಜನಿಸಿದಮಳಸ್ವರೂಪನೀ ।
ರಾರುಸಾವಿರಷಟ್ಸ್ಥಲಬ್ರಹ್ಮಿಗಳನೊಯ್ದು ।
ಮೀರಿದಾ ಜಂಗಮಾರ್ಚನೆಯನೊಲವಿಂ ಮಾಡುತಿರ್ದನತಿಭಕ್ತಿಯಿಂದೆ ॥ ೫೮ ॥

ವಿನಯದಿಂ ಷಟ್ಸ್ಥಲಬ್ರಹ್ಮಿಗಳನೊಲ್ದು ಭೋ ।
ಜನಶಾಲೆಯೊಳ್ ತರತರಂಬಿಡಿದು ರಂಜಿಸುವ ।
ಘನತರದ ರತ್ನಮಯಮಾದ ಗದ್ದುಗೆಯ ಮೇಲೊಲ್ದು ಕುಳ್ಳಿರಿಸಲವರು ॥
ಅನುವಿನಂದರ್ಘ್ಯಪಾದ್ಯಾದಿಸತ್ಕ್ರಿಯೆಗಳಿಂ ।
ಮನಮೊಲ್ದು ಶಿವಪೂಜೆಯಂ ಮಾಡೆ ಬಳಿಕ ಮಿನು ।
ಮಿನುಪ ಪೊಂಬರಿವಾಣಗಳೊಳೆಯ್ದೆ ನೀಡಿದರ್ ಪರಿಪರಿಯ ಪರಿಕರವನು ॥ ೫೯ ॥

---

೧ ನ್ನಕ್ಕೆ (ಮ.)

ಪರಿಮಳಿಪ ರಾಜಾನ್ನ ಸೂಪ ಘೃತಸಂಕುಲಂ |
ಪರಿಪರಿಯ ತಾಳಲುಪ್ಪಿನಕಾಯ್ ಪಳಿದ್ಯ ಕ |
ಜ್ಜರಿ ಬಾಳುಕಂಗಳೊಪ್ಪುವ ಪಕ್ವಫಲರಸಾಯನದ ಸೀಕರಣೆಗಳನು ||
ಪರಮಮಧುಶರ್ಕರಾನೀಕಭಕ್ಷ್ಯಂಗಳಂ |
ಪರಮಾನ್ನ ದಧಿ ದುಗ್ಧಮುಂತಾದ ಭೋಜ್ಯಪರಿ |
ಕರಮನುರೆ ನೀಡಿಸಿದನಾ ಮಹಾಚರಕೊಲ್ದು ಚೆನ್ನಬಸವೇಶನಂದು || ೬೦ ||

ಕಚ್ಚರಿಯನುರೆ ಸವಿದು ಸವಿದು ತತ್ಸ್ವಾದಕೊ |
ಲ್ದಚ್ಚರಿಯ ಮಾಡುತೆ ಪಳಿದ್ಯಂಗಳಂ ಸುರಿದು |
ಮೆಚ್ಚುತುಂ ಕೆಲದ ಬಟ್ಟಲ ನವ್ಯಘೃತದ ಪರಿಮಳಕೆ ತಲೆಗಳನೊಲೆವುತೆ ||
ಪೆಚ್ಚುತುಂ ಸೀಕರಣೆ ರಸಪಾನಗಳ ಸವಿಗೆ |
ಪಚ್ಚಡಿಯ ಮೆಲ್ದದರ ರುಚಿಯ ಕೊಂಡಾಡುತ್ತೆ |
ಸಚ್ಚಿದಾನಂದಸ್ವರೂಪ ನೀಂ ಬಾಳೆಂದು ಪರಸಿದರ್ ಪ್ರೀತಿಯಿಂದೆ || ೬೧ ||

ಪಾಯಸವನುಂಡು ಸವಿನೋಡಿದಿರೆಯಿದು ದಿವಿಜ |
ರಾಯಂಗೆ ದುರ್ಲಭಂ ಮೇಣೊಂದು ಬಾರಿ ಕ |
ಜ್ಜಾಯಮಂ ಸಲಿಸೆ ನೀವಿಂಪಹುದು ಪರುಪಿಗೀ ರುಚಿಯೆತ್ತಣಿಂ ಬಂದುದೋ ||
ಬಾಯ ಸವಿಯೊರೆತಪುದು ಶಿವಶಿವಾ ಬಟ್ಟಲ ರ |
ಸಾಯನವನೀಂಟೆ ಸುಧೆಯೆಣೆಯಹುದೆ ಪೇಳೆಂದು |
ಪ್ರೀಯದಿಂದೋರೊರ್ವರೊಡನೆ ಮಾತಾಡುತಾರೋಗಿಸಿದರೇನೆಂಬೆನು || ೬೨ ||

ಪರಿಪರಿಯೊಳೆಸೆವ ಭೋಜನಪರಿಕರಂಗಳ ಸು |
ಪರಿಮಳವನಾಚಾರಲಿಂಗಕ್ಕೆ ರಸವನಂ |
ದಿರದೆ ಗುರುಲಿಂಗಕ್ಕೆ ರೂಪವನೆ ಶಿವಲಿಂಗಕದರ ಸತ್ಸ್ಪರ್ಶನವನೆ ||
ಚರಲಿಂಗಕೋರೊರ್ವರೊಳ್ ನುಡಿವ ಶಬ್ದಮಂ |
ಪರಮಪ್ರಸಾದಲಿಂಗಕ್ಕೆ ಪರಿಣಾಮವಂ |
ವರಮಹಾಲಿಂಗಕರ್ಪಿಸಿದರತಿಸುಯ್ದಾನದಿಂದದೇಂ ಬಣ್ಣಿಸುವೆನು || ೬೩ ||

ಹರುಷದಿಂದಿಂತು ಷಡ್ವಿಧಲಿಂಗಮುಖದಿಂದೆ |
ಪರಿಪರಿಯ ಷಡ್ರಸಾನ್ನಂಗಳಂ ಸವಿಸವಿದು |
ಪರಿತುಷ್ಟರಾಗಿ ಹಸ್ತಂಗಳಂ ಪ್ರಕ್ಷಾಲನಂಗಳಂ ಮಾಡಿ ಬಳಿಕೆ ||
ಇರದೆ ತಚ್ಛ್ರವಮನೊಡನಾಯತಂಗೆಯ್ಯಲತಿ |
ಪರಮಪರಿಣಾಮದಿಂ ಚೆನ್ನಬಸವೇಶ್ವರಂ |
ಸರಸಕರ್ಪೂರತಾಂಬೂಲಂಗಳಂ ಕೊಡಿಸಿದಂ ಮಹಾಭಕ್ತಿಯಿಂದೆ || ೬೪ ||

ಬಿಡದಿಂತು ಜಂಗಮಾರ್ಚನೆಯನೊಲವಿಂ ಮಾಡು |
ತೊಡನೆ ತತ್ಪಾದೋದಕಪ್ರಸಾದವನಾಂತು |
ಕಡುವಿಲಾಸದೊಳೆ ಸದ್ಭಕ್ತಸಂತತಿವೆರಸಿ ಶಿವತತ್ತ್ವಗೋಷ್ಠಿಯಿಂದೆ ||
ಮೃಡಚಿತ್ಪ್ರಸಾದಸುಕುಮಾರನವ್ಯತೋದ್ಧಾರ |
ನುಡುಪಸಮಶಾಂತನಾದ್ಯಂತರಹಿತಂ ಶರಣ |
ರೊಡೆಯಂ ಜಿತೇಂದ್ರಿಯರ ತಲೆರನ್ನ ಚೆನ್ನಬಸವಂ ಸುಖದೊಳಿರುತಿರ್ದನು || ೬೫ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೬೬ ||

ಅಂತು ಸಂಧಿ ೫ಕ್ಕಂ ಪದಗಳು ೨೧೨ಕ್ಕಂ ಮಂಗಳಮಹಾಶ್ರೀ

ಆರನೆಯ ಸಂಧಿ

ಸೂಚನೆ

ಬಸವಂಗೆ ಪ್ರಾಣಲಿಂಗವನರಿಹಿಕೊಟ್ಟು ಸಂ |
ತಸದಿ ಕಿಚ್ಚಿನ ಪವಾಡಂಗೆಲ್ದು ಬಳಿಕಲಾ |
ಬಸವನಸು ಪೋಗಲದನುಸಿರೆ ಮರಳಿಸಿ ಚೆನ್ನಬಸವಣ್ಣನೊಪ್ಪಿರ್ದನು ||

ಕಮಲಸಂಭವಮುಖ್ಯದಿವಿಜವಂದಿತಪಾದ |
ಕಮಲ ವಿಮಲಸ್ಫಟಿಕಸಂಕಾಶಚಾರುತರ |
ಕಮಲಧರವರಕಲಾ[೧]ಭೂಷ ಮಂಜುಳಭಾಷ ಜಗದೀಶ ಮುಕ್ತಿಕೋಶ ||
ಕಮಲಾರ್ಕಕೋಟಿಪ್ರಭಾಪೂರ ಗುಣಸಾರ |
ಕಮಲಸಖಪುತ್ರಗಾತ್ರಾರಣ್ಯವನದಾವ |
ಕಮಲ ತ್ರಿತಯಾ[೨]ಪರಗ್ರಹ ಮಹಾಮಹಿಮ[೩] ನೀಂ ಸಲಹು[೨] ಪಂಪಾವಲ್ಲಭ
|| ೧ ||

ಇಂತಿರುತ್ತಿರಲಿತ್ತಲೊಂದಿನದೊಳುದಯಸಮ |
ನಂತರದೊಳಾ ಬಸವನತ್ಯಧಿಕಶಿವಪೂಜೆ |
ಯಂ ತೀರ್ಚಿ ಬಳಿಕಿನ್ನು ಚೆನ್ನಬಸವಣ್ಣನಿಂದಂ ಮಹಾಷಟ್ಸ್ಥಲವನು ||
ತಾಂ ತಿಳಿಯೆಬೇಕೆನುತೆ ನಡೆಗೊಳಲ್ ಗಣಕುಲಂ |
ಪಿಂತೆ ಬರೆ ಪಡಿಯರರ ತಂಡಮುಗ್ಗಡಿಸಲೋ |
ರಂತಳಿಯನರಮನೆಯ ಬಾಗಿಲ್ಗಳಂ ಕಳೆದು ಬರುತಿರ್ದನುತ್ಸವದೊಳು[೪] || ೨ ||

ಅನ್ನೆಗಂ ಬಾಗಿಲವನಿರದೊರ್ವನೈತಂದು |
ಚೆನ್ನಬಸವಣ್ಣಂಗೆ ಕೈಮುಗಿದು ತತ್ತ್ವಸಂ |
ಪನ್ನ ಕೇಳಿದೆ ದಣ್ಣಾಯಕ ಬಸವರಾಜನೈತಂದನೆನೆ ಭೋಂಕನೆದ್ದು ||
ತನ್ನ ವರ್ಗಳೊಡನಿದಿರ್ವರೆ ಕಂಡು ಬಸವಣ್ಣ |
ನುನ್ನತಸುಭಕ್ತಿಯಿಂ ನಮಿಸೆ ಕೆಲಸಿಡಿದು ಬೇ |
ಗನ್ನಮಿಸಬಪ್ಪಳಿಯನಂ ಕಂಡು ಸೆಳೆದು ಬಿಗಿಯಪ್ಪಿದಂ ಹರುಷದಿಂದೆ || ೩ ||

೧ ಕಮಲ (ಶು.) ೨-೨ ಪರಮವಿಗ್ರಹಮಹಾಮಹಿಮ ಸಲಹು (ಶಿ.) ೩-೨ ಗುರು ಸಲಹು (ಮ.) ೪ ಸಂತಸದಿ ಬರುತಿರ್ದನು (ಶಿ.)

ಸಲೆ ಮೋಹರಸವಧಿಕಭಕ್ತಿರಸಮೊಡವೆರೆದು |
ತುಳುಕಲಳಿಯನ ನೋಡಿ ಹಿಗ್ಗಿತುಂ ಹರುಷದಿಂ |
ಹಲವು ಪರಿಯಿಂ ನುತಿಸಿ ರತ್ನಮಯಮಂಟಪದೊಳಿಸೆವ ಗದ್ದುಗೆಯ ಮೇಲೆ |
ಒಲಿದು ಕುಳ್ಳಿರಿಸಿ ತಾನುಂ ಕುಳಿತು ಷಟ್ಸ್ಥಲಂ |
ದಿಳಿಯಬೇಕೆನುತಲತಿವಿನಯದಿಂ ಸಕಲಗಣ |
ಕುಲವನೆಡಬಲದೊಳ್ ಸಮಿಾಪದೊಳ್ ಕುಳ್ಳಿರಿಸಿದಂ ಬಸವನಳ್ತಿಯಿಂದೆ ॥ ೪ ॥

ಈ ತೆರದೊಳೊಲಿದು ಕುಳ್ಳಿರ್ದುಬಸವಣ್ಣನತಿ |
ಪ್ರೀತಿ ಮಿಗಲಳಿಯನ ಮೊಗಂನೋಡಿ ನಗುತಾದು |
ದೇ ತತ್ತ್ವನಿಧಿ ಶಿವಾರ್ಚನೆಯೆನಲ್ ಚೆನ್ನಬಸವಂ ನಕ್ಕುವಿನಯದಿಂದೆ |
ಜ್ಯೋತಿಯಿಲ್ಲದೆ ಕಣ್ಗೆ ಬೆಳಗುಂಟೆ ಗುರುವಿನ ಮ |
ಹಾತಿಶಯದೀಕ್ಷೆಯಿಲ್ಲದೆ ಶಿವಾರ್ಚನೆಯೆಂಬ |
ಮಾತುಂಟೆ ಸೆಜ್ಜೆಯಂ ಬಿಚ್ಚೀಶ್ವರಾರ್ಚನೆಗನುಜ್ಞೆಯಂ ಮಾಡೆಂದನು ॥ ೫ ॥

ಹರಹರಾ ಲೋಕದೊಳಗೆಲ್ಲಯುಂ ಶಿಷ್ಯಂಗೆ |
ಗುರುವಿನುಪದೇಶಮುಂಟೆಂಬುದಂ ಬಲ್ಲೆನಾಂ |
ಗುರುವಿಂಗೆ ಶಿಷ್ಯನುಪದೇಶಮಂ ಮಾಡಿದೆಡೆಯುಂಟೆ ನೀನೆಲ್ಲರಂತೆ ॥
ನರನೆ ಪರಶಿವಚಿತ್ಕಲಾನಂದರೂಪಳಿ ತ |
ತ್ತ್ವರಹಸ್ಯಮಂ ತಿಳಿಪಿ ನಮ್ಮ ರಕ್ಷಿಸ ಬಂದ |
ಗುರುಸಂಗಮೇಶ್ವರಂ ನೀಂ ನಿನಗೆ ದೀಕ್ಷೆಯಂ ಮಾಡಲಂಜುವೆನೆಂದನು ॥ ೬ ॥

ಎನಲಂಜಲೇತಕೆಲೆ ಬಸವಣ್ಣ ನೀಂ ಕೊಟ್ಟ |
ಘನಲಿಂಗಮಂ ಕೊಂಡಡಂಗಿದನಿಮಿಷನಂದ |
ಮೆನಗಿಲ್ಲ ಬಲ್ಮೆಗೈವವನಲ್ಲಮಿಾ ಲಿಂಗಲಕ್ಷಣಂಗಳನಾದೊಡೆ ॥
ನಸಗೆ ತಿಳಿಪೆಂದು ಸೆಜ್ಜೆಯಲಿಂಗಮಂ ತೆಗೆದು |
ವಿನಯದಿಂ ಕೈಯೊಳಿಡೆ ಲಿಂಗಲಕ್ಷಣಮನೆ |
ಳ್ಳನಿತು ಪರಿಕಿಸಲಾಗದೆನುತೆ ಮರಳೀಯಲಿದು ಗುರುದೀಕ್ಷೆ ಯೆಸಗೆಂದನು ॥ ೭ ॥

೧ ನಲ್ಮೆಯಿಂದೆ (ಮು.) ೨ ಸ್ನೇಹೆಯಿಂ (ಹು.) ೩ ಬಿಟ್ಟೀ (ಶಿ.) ೪ ಚಿತ್ಕಲಾಧರ್ಮರೂಪ (ಮು.)
೫ ನಾಂ (ಶಿ.)

ಎಂದೊಡೆನ್ನಯ ಹಿಂದ ನೆಚ್ಚರಿಸಿ ಕರುಣದಿಂ |
ಮುಂದಣ ಭವಂಗಳೆವ ತಂದೆ ನೀನಿರಲಾವ |
ದಂದುಗಮದಿಲ್ಲನಿನಿಮಿಷಂಗೆ ಕೊಟ್ಟೊಡೆ ಕೊಂಡಡಂಗಿದ ಮಹಾಲಿಂಗವು ||
ಎಂದೆನಗೆ ಸಾಧ್ಯಮಪ್ಪುದು ಸಂಗಮೇಶ್ವರನ |
ದೆಂದೆತ್ತಿಕೊಂಬನವನರಿಪಿ ಸಲಹೆನುತಡಿಗೆ |
ವಂದಿಸಿದ ಬಸವದಂಡೇಶಂಗೆ ಮಗುಳ್ದೆರಗಿ ಚೆನ್ನಬಸವಂ ನುಡಿದನು || ೮ ||

ಎಳೆಯ ಹೂಮಿಡಿಗಳಂ ಹರಿದು ಹಣ್ಣಂ ಮಾಡ |
ಲಿಕವೆ ನೀಂ ಬಂದ ಮಣಿಹದೊಳಗೆಳ್ಳನಿತುಮಂ |
ಕಳೆಯದಿರ್ದೀಗ ನೀನಿಷ್ಟಲಿಂಗವನರ್ಚಿಸಂತಮಲಹೃದಯದಲ್ಲಿ ||
ಒಲಿದು ಪೂಜಿಸಿ ಪ್ರಾಣಲಿಂಗ ಲಿಂಗಪ್ರಾಣ[1] |
ದೊಳಗರ್ಪಿತಾವಧಾನವನರಿದು ಷಟ್ಸ್ಥಲಂ |
ದಿಳಿವಲ್ಲದೀ ಬರಿಯ ಮಾತಿಂದೆ ಸಾಧ್ಯಮಲ್ಲೆನೆ ಬಸವನಿಂತೆಂದನು || ೯ ||

ಲೇಸಂ ನಿರೂಪಿಸಿದೆ[2] ಚೆನ್ನಬಸವಣ್ಣ ನಾ |
ನೀಸು ದಿನಪರಿಯಂತರಂ ಬಹಿಃಕ್ರಿಯೆಗಳಿಂ |
ಹೂಸಿ ಹುಂಡಸಮಾಡಿ ಹೊರಗೆ [3]ನಾಂ ಪೂಜಿಸೆ ವೃಥಾ[3] ದಿನಂಗಳು ಸವೆದುವು ||
ಓಸರಿಸದೀ ಪ್ರಾಣಲಿಂಗದನುವಂ ಮುಂದೆ |
ಲೇಸೆನಿಪ ಷಟ್ಸ್ಥಲವಿಭೇದಮಂ ತಿಳಿಪೆನ |
ಲ್ಕಾ ಸಕಲಗಣರೆಲ್ಲರರಿವಂತೆ ತಿಳಿಪಲ್ಕೆ ಬಸವಣ್ಣನಿಂತೆಂದನು || ೧೦ ||

ಎನ್ನ ಸದ್ಗುರುವೆ ಸುರತರುವೆ ಮುಕ್ತಿಯ ಕರುವೆ |
ಚೆನ್ನಬಸವೇಶ ಭವನಾಶ ನೀಂ ಕರುಣದಿಂ |
ಚೆನ್ನಾಗಿ ಪ್ರಾಣಲಿಂಗದ ನೆಲೆಯನರಿಪಿ ಕಿಡಿಸಿದೆ ಭವಭವಾಂತರವನು ||
ನಿನ್ನಿಂದಲೆನಗೆ ಸಂಗನಬಸವನೆಂಬ ಪೆಸ |
ರಿನ್ನಾದುದೀಗಲನಿಮಿಷನ ವೃತ್ತಾಂತಮಂ |
ಚೆನ್ನಾಗಿ ತಿಳಿಪೆನೆಲ್ ಸುಜ್ಞಾನದಿಂದರಿದು ಚೆನ್ನಬಸವಂ ಪೇಳ್ದನು || ೧೧ ||

---

೧ ಮುಂ ತಲ್ಲಿಂಗ (ಹು, ಮ, ಅ, ಬ, ಕ.) ೨ ಲೇಸ ನೀಂ ನಿರವಿಸಿದೆ (ಶಿ.) ೩ ನಾಂ ಪೂಜಿಸಿಯೆ ಮಿಗೆ (ಶ.); ಪೂಜಿಸಿ ವೃಥಾ ಮಿಗೆ (ಅ, ಬ, ಕ, ಮ.)

ಆಲಿಸನಿಮಿಷಗಮಲಲಿಂಗಮಂ ನೀನಿತ್ತ |
ಮೇಲೆ ತಲ್ಲಿಂಗದೊಳ್ ಮನ ಲೀನವಾಗಿ ಕ |
ಣ್ಣಾಲಿಗಳ್ ನಟ್ಟು ದಿಟ್ಟಿಯಲಿ ನಿಬ್ಬೆರಗಾಗಿ ನಿಜಸುಖಸಮಾಧಿಯೊಳಿರೆ ||
ಪೇಳಲೇನಲ್ಲಮಪ್ರಭುವಲ್ಲಿಗೈತಂದು |
ಮೇಳದಿಂದಾತನಂಗೈಲಿಂಗಮಂ ಕೊಂಡು |
ಲೀಲೆಯಿಂ ನಿನ್ನಮನೆಗೈತಹಂ ನಿನ್ನಯ ಮಹಾತ್ಮೆಯಂ ಪೊಗಳಲಳವೆ || ೧೨ ||

ಆಲಿಸೆಲೆ ಬಸವ ನೀಂ ಪರಶಿವನ ನೇಮದಿಂ |
ದೇಳುನೂರೆಪ್ಪತ್ತಮರಗಣಂಗಳ್ವೆರಸಿ |
ಲೀಲೆಯಿಂ ವೀರಶೈವಾಚಾರಮಂ ಪ್ರತಿಷ್ಠಿಸಲೆಂದು ಕರುಣದಿಂದೆ ||
ಭೂಲೋಕಕ್ಕೈತಂದೆ ನಿನ್ನ ಮಹಿಮೆಯನೊಲ್ದು |
ಪೇಳಲೆನ್ನಳವೆ ನೀನನಿಮಿಷಂಗೊಲಿದಿತ್ತ |
ಮೇಲೆ ತಲ್ಲಿಂಗದೊಳ್ ಬೆರಗಾಗಿ ನಿಜಸುಖಸಮಾಧಿಯೊಳಗಿರುತಿರ್ದನು || ೧೩ ||

ಇಂತು ನಿತ್ಯಾನಂದಸೌಖ್ಯದಿಂದಿರ್ಪ ಸಮ |
ನಂತರದೊಳಲ್ಲಮಪ್ರಭುವೆನಿಪ ಜಂಗಮಂ |
ತಾಂ ತಡೆಯದಲ್ಲಿಗೈತಂದಾತನಂಗೈಯ ಲಿಂಗಮಂ ತೆಗೆದು ಕೊಂಡು ||
ಮುಂತು[1] ನಿಜಸುಖದೊಳೋಲಾಡುತುಂ ಪಾಡುತುಂ |
ಮುಂತೆ ನಿನ್ನಮಳನಿಜಭಕ್ತಿಯಂ ನೋಡುವತಿ |
ಸಂತಸದೊಳೈತರ್ಪನೆಲೆ ಬಸವ[2] ನಿನ್ನಯ ಮಹಾತ್ಮೆಯಂ[2] ತಿಳಿಯಲಳವೇ ⊛ || ೧೪ ||

ಜಂಗಮಪ್ರಾಣಿ[3] ನೀನೆಂಬುದಂ ಕೇಳುತುಂ[3] |
ಜಂಗಮಂ ನಿನ್ನ ಮನೆಗೈತಹಂ ನೀಂ ಮಾಳ್ಪ |
ಜಂಗಮಾರ್ಚನೆಯ ತೆರನಿಂತಲ್ಲ ನಿನ್ನ ಮನೆಯೊಳಗುದಾಸೀನದಿಂದೆ ||
ಲಿಂಗಶೋಭರುಮಂಗಶೋಭರು[4]ಮೆನಿಪ್ಪ ಘನ[4] |
ಜಂಗಮವನಿರಿಸಿ ಕೊಂಡಿರಬಾರದಲ್ಲಮಂ |
ಜಂಗಮಸ್ಥಲವಾಂತು[5] ನಿನ್ನ ಮನೆಗೈತರಲ್ ಕಾಣ್ಬುದಘಟಿತವೆಂದನು || ೧೫ ||

---

೧ ನಿಂತು (ಹು, ಮ.) ೨ ನಿನ್ನ ಸುಮಹಾತ್ಮೆಯಂ (ಮ.) ೩ ನೀನಾದೊಡಿಲ್ಲಿಂತಪ್ಪ (ಮ.); ನೀನವರಿನಿಲ್ಲಿಂತಿಪ್ಪ (ಹು.) ೪ ವೆನುತ್ತಲಾ (ಹು, ಮ.) ೫ ಜಂಗಮಾಕಾರದಿಂ (ಹು, ಮ.) ⊛ ೧೨ ನೆಯ ಪದ್ಯವು ಅ, ಬ, ಕ, ಮ, ಹು, ಈ ಪ್ರತಿಗಳಲ್ಲಿಲ್ಲ; ೧೩, ೧೪ ನೆಯ ಪದ್ಯಗಳು ಕೋ, ಗೋ. ಪ, ಶಿ, ಈ ಪ್ರತಿಗಳಲ್ಲಿಲ್ಲ.

ಅದುಕಾರಣಂ ಮಹಂತಿಂಗೊಲ್ದು¹ ಮಠಗಳಂ |
ಪದುಳನರಿ²ದೊಡನೆ ಕಟ್ಟಿಸಿಯವರನಿಂಬಿಟ್ಟು |
ಪದಪಿನಿಂದಿಪ್ಪ ಲಕ್ಕದಮೇಲೆ ತೊಂಬತಾರ್ಸಾಸಿರ ಸುಜಂಗಮವನು ||
ಸಮವಿಸಯಭಯಭರಿತಭಕ್ತಿಯಿಂ³ದಂ ನಿನ್ನ |
ಸದನಕ್ಕೆ ಕರೆತಂದು ಮೃಷ್ಟಾನ್ನಮಂ ನೀಡಿ |
ಮುದದೊಳವರೇನ ಬೇಡಿದಿಸು ವಸ್ತುಗಳನಿತ್ತು ಕಳುಪುವುದೆಂದನು³　　|| ೧೬ ||

ಇಂತೆಂದು ಚೆನ್ನಬಸವಂ ಬಸವರಾಜಂಗ |
ನಂತವಿಧದಿಂ ತಿಳಿಯೆ ಪೇಳೆ ಬಸವಣ್ಣನ |
ತ್ಯಂತಹರುಷದೊಳೆಂದನೆನಗೇಂ ಸ್ವತಂತ್ರ ನೀವಿರಿಸಿದಂತಿರ್ಪೆನೆನುತೆ ||
ಸಂತೋಷದಿಂದಲಾ ಗಣಕುಲಂ ಸಹಿತೆದ್ದು |
ಮುಂತಿರ್ಪ ಚೆನ್ನಬಸವಣ್ಣಂಗೆ ನಮಿಸಿ ಬಳಿ |
ಕಂ ತಿರುಗಿದಂ ತನ್ನಮನೆಗಿತ್ತಲಾ ⁴ಬಸವದಂಡೇಶನಳ್ತಿಯಿಂದೆ⁴　　|| ೧೭ ||

ಉಕ್ಕುವತಿಹರುಷದಿಂ ಬಸವಣ್ಣನರಮನೆಗೆ |
ಚಿಕ್ಕಬಸವಂ ಬಂದು ಬಳಿಕಲಾ ಮನೆಯ ಮುಂ |
ದಿಕ್ಕೆಲನ ನೋಡಲಲ್ಲೆಸೆದಿರ್ದ ಘನತರದ ಬಯಲೊಳತಿರಮ್ಯವಾಗಿ ||
ಲಕ್ಕದಿಂ ಮೇಲೆ ತೊಂಬತ್ತಾರು ಸಾಸಿರದ |
ಲೆಕ್ಕದಿಂ ಮೆರೆದ ಜಂಗಮಕೆ ಮಠಗಳನಾಗ |
ಳೆಕ್ಕೆಕ್ಕೆಯಿಂದೆ ಕಟ್ಟಿಸಿ ಬಳಿಕಲವರೊಳಾ ಜಂಗಮವನಿಂಬಿಟ್ಟನು　　|| ೧೮ ||

ಲಿಂಗಶೋಭರುಮಂಗಶೋಭರುಮನೆಲ್ಲರಂ |
ಮುಂಗಡೆಯ ಮಠಕೆ ನಡೆಯೆನಲಾರೆವೆಂದೆನಲು |
ಹಿಂಗದಾ ಮನೆಗೆ ಕಿಚ್ಚಿಕ್ಕಿಸಲ್ ಧಗಧಗೆಂದುರಿಯಲದ ಕಾಣುತವರು ||
ಅಂಗಲಾಚುತ್ತೆದ್ದು ಬಿದ್ದು ಕೈಕಾಲೊಡೆದು |
ಮುಂಗಾಣದೋಡುತಿರಲವರೊಳಗೆ ಮೂವರೇ |
ಲಿಂಗಸಂಧಾನದಿಂದಿರಲವರೊಳೊರ್ವ ತನ್ನೊತ್ತಿನವಗಿಂತೆಂದನು　　|| ೧೯ ||

೧ ಮಹತ್ತಿಂಗೊಲ್ದು (ಹು, ಮ.) ೨ ಪೊದವನರಿ (ಹು, ಶಿ, ಕೋ, ಗೋ, ಪ.) ೩ ದವರಿರ್ದ | ಸದನಕ್ಕೆ ಪೋಗಿ ನಿನ್ನ ಮನೆಗೆ ಕರೆತಂದು | ಮುದದೊಳವರೇನೇನ ಬೇಡಿದ ಪದಾರ್ಥಮಂ ನೀಡಿ ಕಳುಹುವುದೆಂದನು || (ಹು, ಮ.) ೪ ಬಸವನಿತ್ತಲಾ ಚೆನ್ನಬಸವಂ (ಶಿ, ಗೋ, ಕೋ, ಹು, ಪ.)

ಇಲ್ಲ ಮನೆ ಕಿಚ್ಚಿಂಗಳುತಿದಿಕೊ ನೋಡೆನಲೊರ್ವ |
ಯೆಲ್ಲಿಯೆನೆ ಮತ್ತೊರ್ವನೆಂದನೆಲವೊ ನಿಮ್ಮ |
ಸೊಲ್ಲಡಗದೆ ಕೆಡೆದುಕೊಳ್ಳಿಯೆನಲವರಿರದೆ ಮೊದಲಂತೆ ಪವಡಿಸಿರಲು[೧] ||
ವೆಲ್ಲನಾ ಮೂವರಂ ಭೀತಿಯಿಂದೋಡುತಿ |
ರ್ಪೆಲ್ಲರಂ ಕರೆತಂದು ಬೇರೆ ಮಠಗಳೊಳಿರಿಸಿ |
ನಿಲ್ಲದಾ ಕಿಚ್ಚನಂ ನಿಲಿಸಿ ತದ್ಗೃಹವನಂ ಮುನ್ನಿನಂತಿರವೇಳ್ದನು || ೨೦ ||

ಎಂದಿನಿಂದಾ ಗೃಹಂ ನೋಡಲತಿ ಪೊಸಬಗೆಯ |
ಚಂದದಿಂದಿರಲನಿತುಮಂ ಬಿಜ್ಜಳಂ ಕೇಳ್ದು |
ಬಂದು ತದ್ಗೃಹವ ನಿಟ್ಟಿಸಿ[೨] ಬಸವನೊಡನೆ ನಿನ್ನಳಿಯನತಿಘನಮಹಿಮನು ||
ಎಂದು ಕೊಂಡಾಡುತಾ ಚೆನ್ನಬಸವಣ್ಣಗಾ |
ನಂದದಿಂದೆರಗಿ ಬೀಳ್ಕೊಂಡನವನಿಪನಿತ್ತ |
ಲಂದು ಬಸವಂ ಚೆನ್ನಬಸವನುಂ ತಮ್ಮ ಮನೆಗಳೊಳ್ಸೈದೆ ಸುಖಮಿರ್ದರು || ೨೧ ||

ಬಸವನ ಸುಭಕ್ತಿಯಾತನಪವಾದಂಗಳೊಂ |
ದೆಸಕಮಂ ಕರ್ಣಪಾರಂಪರೆಗಳಿಂದಮಾ |
ಲಿಸಿ ನೋಡಿ ಸಂತಸಂಬಡುವೆನೆಂದೊರ್ವ ಜಂಗಮದೇವರ್ಸೈದೆ ಬಂದು ||
ಮಿಸುಗುವರಮನೆಯನೊಳಪುಗೆ ಸಮಯವಲ್ಲದೆಂ |
ದುಸಿರಲಾ ನುಡಿಗೇಳಿ ನೊಂದು ತಿರುಗಲ್ ಬಸವ |
ನಸುಪೋದುದವರೊಡನೆ ಪೋಗಿ ತ್ರಿಪುರಾಂತಕಾಲಯದೊಳಗೆ ಮಂಡಿಸಿದರು || ೨೨ ||

ಆ ಸಮಯದೊಳ್ ಬಿಜ್ಜಳಂ ಬಸವರಾಜನ ನಿ |
ವಾಸಕ್ಕೆ ದೂತನಂ ಕರೆಯಲಟ್ಟಲ್ಕವಂ |
ಭಾಸುರಶಿವಾಚಾರಿಯರಮನೆಯ ಬಾಗಿಲೊಳಗಿರ್ದವರಿಗರಿಪಲೊಡನೆ ||
ಈಸು ಪೊತ್ತಿಂಕೆ ಪವಡಿಸಿದನೆಂದೆಬ್ಬಿಸಲ್ |
ಶ್ವಾಸಮಿಲ್ಲದೆ ಡಿಂಬಮಿರೆ ಕಂಡು ಸರ್ವರುಂ |
ಮೋಸವಾದುದು ಬಸವಗೆನುತಳುವ ಕಳಕಳಂ ಪಸರಿಸಿದುದರಮನೆಯೊಳು || ೨೩ ||

---
೧ ಪವಡಿಸಿದರು (ಹು, ಶಿ.) ೨ ನೀಕ್ಷಿಸಿ (ಶಿ.)

ಅರಮನೆಯ ಕಳಕಳವನರಿದು ದೂತಂ ಮಹೇ |
ಶ್ವರನೊಡನೆ ಬಸವರಾಜಂ ಮರಣವಾದನೆಂ |
ದೊರೆಯಲಾ ಬಿಜ್ಜಳಂ ಕಾಲ್ನಡೆಯೊಳೈತಂದು ಬಸವನರಮನೆಯ ಪುಗಲು ||
ಇರದೆ ಸಮ್ಯಜ್ಞಾನದೃಷ್ಟಿಯಿಂದರಿದು ತ |
ನ್ನರಮನೆಯಲಿಂ[೧] ಚೆನ್ನಬಸವೇಶ್ವರಂ ಬಸವ |
ನರಮನೆಗೆ ಬರೆ ಬಿಜ್ಜಳಂ ಜನದ ಕಳಕಳವನಾಕ್ಷಣಂ ಮಾಣಿಸಿದನು || ೨೪ ||

ಬಂದುವಾಗಳೆ ಸಕಲಭಕ್ತಮಾಹೇಶ್ವರರ |
ವೃಂದಮಾ ಬಿಜ್ಜಳಂ ಬಸವನಂ ನೋಡಿ ಕಡು |
ನೊಂದು ನುಡಿದಂ ಚೆನ್ನಬಸವಣ್ಣನೊಡನಕಾರಣಮೃತಂ ಬಸವಣ್ಣಗೆ ||
ಬಂದುದೇಕೆನೆ ನಗುತೆ ಬಾಗಿಲ್ಗೆ ಜಂಗಮಂ |
ಬಂದು ನಿಲ್ಲೆನೆ ಮುನಿದು ಪೋದನಾತನ ಕೂಡೆ |
ಯಿಂದೀತನಸು ಪೋದುದೆಂದುಸಿರಿ ಬಾಗಿಲವರಂ[೨] ಕರೆಸಿ ಬೆಸಗೊಂಡನು || ೨೫ ||

ಆದೊಡಂ ಬಾಗಿಲಕೆ ಬಂದು ಪೋದರೆ ವಿ |
ಚಾರದಿಂದುಸಿರೆನಲ್ಕವರೆಂದರೆಲೆ[೩] ದೇವ |
ದೂರದೇಶಾಂತರದಿನೊರ್ವ ಜಂಗಮದೇವರೈದೆ ಮನೆಯೊಳಪುಗಲ್ಕೆ ||
ಬಾರಿಸಲ್ ಪೋದರೆನೆ ತ್ರಿಪುರಾಂತಕನ ಗುಡಿಯೊ |
ಳೋರಂತೆ ಕುಳಿತಿರ್ಪರೀಕ್ಷಣಂ ಪೋಗಿ ಕರೆ |
ತಾರೆನಲ್ಕತಿವೇಗದಿಂ[೪] ಪೋಗಿ ಬಸವಣ್ಣನರಮನೆಗೆ ಕರೆತಂದರು[೫] || ೨೬ ||

ಆಡಲೇನಾತನರಮನೆಪೊಗಲ್ ಬಸವನುಸಿ |
ರಾಡಿದುದು ಮೂಗಿನೊಳ್ ತಾಣತಾಣಂಗಳೊಳ್ |
ನಾಡಿಗಳ್ ನೆಲೆಗೊಂಡುವತಿ ಸಮೀಪಕೆ ಬರಲ್ ತನು ಚೇತನಂ ಬಡೆದುದು ||
ಗಾಢದಿಂ ಬಸವನಿದಿರಿಗೆ ಬರಲ್ಕೊಡನೆದ್ದು |
ಮಾಡೆ ಸಾಷ್ಟಾಂಗಪ್ರಣಾಮಮಂ ಕಂಡು ಕೊಂ |
ಡಾಡಿ ಬಿಜ್ಜಳನೃಪಂ ಚೆನ್ನಬಸವಣ್ಣನಂ ತನ್ನರಮನೆಗೆ[೬] ಪೋದನು || ೨೭ ||

೧ ಯಲಿ (ಮ.) ೨ ಬಾಗಿಲವನಂ (ಹ.) ೩ ನೆಂದನೆಲೆ (ಮ.) ೪ ನಲ್ಲನ ವೇಗದಿಂ (ಮ.)
೫ ಕರೆತಂದನು (ಮ.) ೬ ತನ್ನ ಮನೆಗಂ (ಶಿ, ಮ, ಗೋ, ಕೋ.)

ಇತ್ತಲೀ ಬಸವನಂ ಚೆನ್ನಬಸವಣ್ಣನಂ |
ಚಿತ್ತಹರುಷದೊಳಖಿಲಭಕ್ತಮಾಹೇಶ್ವರರ |
ಮೊತ್ತವೆಲ್ಲಂ ಪೊಗಳೆ ಬಸವಣ್ಣನೊಡನೊಲಿದು ಚೆನ್ನಬಸವಣ್ಣನಾಗ ||
ಬಿತ್ತರಿಸಿದಂ ವೃಥಾಪ್ರಾಣಮಂ ಬಿಡುತಿರ್ಪು |
ದುತ್ತಮವೆ ಜಂಗಮಂ ಲಿಂಗದೊಳಗಾಗಲಸು |
ವಿತ್ತು ಕಳೆವುದು ಜಂಗಮಪ್ರಾಣಿಗಳ ನೀತಿಯ್ಯೆಸಿದನುಚಿತವೆಂದನು || ೨೮ ||

ಹಿಂಗದಾಲಿಸು ಬಸವದಂಡೇಶ ನೀಂ ಪ್ರಾಣ |
ಲಿಂಗಲಿಂಗಪ್ರಾಣಸಂಬಂಧಿಗಳನಮಲ |
ಜಂಗಮಪ್ರಾಣಿಗಳ ಚಾರಿತ್ರಮಂ ಪೇಳ್ವೆನೊರ್ವ ಶಿವಶರಣರಣುಗಂ[೧] ||
ಲಿಂಗಣ್ಣನೆಂಬಾತನಿರದಾಡುತಿರೆ ಕೊರಲ |
ಲಿಂಗಮೋಸರಿಸಿ ಪೋಗಲ್ಕವನ ತಾಯ್ ಕಂಡು |
ಲಿಂಗಣ್ಣ ಕೇಳ್ ಕೊರಲ ಲಿಂಗಮಿಲ್ಲೆನೆ ಪ್ರಾಣವಡಗಿತವನೊಡಲಿನಿಂದೆ || ೨೯ ||

ಅಂಗಲಾಚುತ್ತವನ ತಾಯ್ತಂದೆಗಳ್ ನೆರೆಯ |
ಸಂಗಡಿಗ ಬಂಧು ಬಳಗಂಗಳಳುತಿರೆ ಚಿಕ್ಕ |
ಲಿಂಗಣ್ಣನಾ ಲಿಂಗಮಂ ಕಂಡು ತಂದವನ ಕೊರಲಿಂಗೆ ಹಾಯ್ಕಲೊಡನೆ ||
ಲಿಂಗಣ್ಣನಸು ಬರಲ್ ಕಾಣುತ್ತಲಾ ಚಿಕ್ಕ |
ಲಿಂಗಣ್ಣನೆಂದನೆಲೆಯಣ್ಣ ಕೇಳಿದು ಪ್ರಾಣ |
ಲಿಂಗಿಗಳ ಸನ್ಮಾರ್ಗಮಿಂತಲ್ಲವೆನಲವರ ಗುರುವಾಗ ಕೇಳ್ದನದನು[೨] || ೩೦ ||

ಹರುಷದಿಂದಾ ಚಿಕ್ಕಲಿಂಗಣ್ಣನಿರುತಂದಿ |
ನಿರುಳು ಮಲಗಿರಲವನ ಕೊರಲ ಲಿಂಗವನೆ ಕೊಂ |
ಡರುಣೋದಯದೊಳೆದ್ದು ಪುಷ್ಪಮಂ ತರಪೋದನವರ ಗುರುವತ್ತಲಿತ್ತ ||
ಹರಣವಿಲ್ಲದೆ ಚಿಕ್ಕಲಿಂಗಣ್ಣನಿರೆ ಕಾಣು |
ತಿರದವನ ತಾಯ್ತಂದೆಗಳ್ ಮರುಗುತಿರಲವರ |
ಗುರುವೈದಿಯವನಲಿಂಗವನವನ ಕೊರಲಿಂಗೆ ಹಾಯ್ಕಲಸು ಬಂದುದೊಡನೆ || ೩೧ ||

---

೧ ಶರಣನಣುಗಂ (ಹು.) ೨ ಲಿಂಗಾಂಗಿಗಳ ಮಾರ್ಗಮಿಂತಲ್ಲವೆಂದು ನುಡಿಯಲ್ಕೇಳ್ದನವರ ಗುರುವು || (ಹು, ಮ.)

ಆಲಿಸೈ ಸತ್ಯಣ್ಣನೆಂಬ ಜಂಗಮ ತನ್ನ |
ಸೂಳೆಯೊಳ್ ಸುರತ[೧]ಸಲ್ಲಾಪದಿಂ ರತಿರಾಜ |
ಕೇಳಿಯೊಳ್ ಕೂಡಿರುತೆ ಲಿಂಗಮೊತ್ತುವುದೆಂದು ತೆಗೆದಾಗಲಾ ಮಂಚದ ||
ಮೇಲಿರಿಸಿ ಕೊಂಡಿರಲ್ಕಾ ಸುದ್ದಿಯಂ ನಾವು |
ಕೇಳಿ ತಲ್ಲಿಂಗಮಂ ಕಳವಿನಿಂ ತರಿಸಲತಿ |
ಲೀಲೆಯಿಂದಾತನಸು ಪೋದುದದ ಕಾಣುತಾ ಸೂಳೆಯಸು[೨]ವುಂ ಪೋದುದು
|| ೩೨ ||

ಮರಳಿ ಸತ್ಯಣ್ಣಗಳ ಗಳಕೆ ತಲ್ಲಿಂಗಮಂ |
ತರಿಸಿ ಹಾಯ್ಕಾಗಾತನಸು ಬಂದುದಾ ಕ್ಷಣಂ |
ಪೊರೆಯೊಳಸುಗಳೆದಿರ್ದ ವೇಶ್ಯೆಗಂ ಪರಣವೈತಂದುದಿನ್ನಾಲಿಸುವುದು[೩] ||
ಸರಸದಿಂ ಪ್ರಹರಿಯಾ ಮಾರಣ್ಣನಂದು[೪] ತ |
ನ್ನರಸಿಯೊಳ್ ಕೂಡುತಿರೆ ಲಿಂಗಮೊತ್ತುವುದೆಂದು |
ಕೊರಲ ಲಿಂಗಂಗಳಂ ತೆಗೆದು ಮಂಚದೊಳಿರಿಸಿ ರತಿಕೇಳಿಯಿಂದಿರ್ದರು || ೩೩ ||

ಆ ಸಮಯದಿಂದಿರ್ವರೆದ್ದು ಲಿಂಗಂಗಳಂ |
ಮೋಸದಿಂ ಪಲ್ಲಟದಿ ಧರಿಸಿ ಮಂಚವನಿಳಿಯೆ |
ಶ್ವಾಸಂಗಳಿಲ್ಲದಿರಲದ ಕೇಳುತವರ ಮನೆಗಂ ನೀರತರಲು ಪೋದ ||
ದಾಸಿಗಂದಸು ಪೋದುದಂ ಕಂಡು ಬಂದು ನಮ |
ಗಾ ಸುದ್ದಿಯಂ ಪೇಳೆ ಪೋಗಿ ಸತ್ಯಣ್ಣಗಳ |
ನೀ ಸಮೀಪಕೆ ಕರೆಸಿಯಿವರಳಿದರೇಕೆನಲ್ಕಾತನಿರದಿಂತೆಂದನು || ೩೪ ||

ಲಿಂಗಂಗಳಿವರ್ಗೆ ಪಲ್ಲಟವಾದುವೆಸಲವರ |
ಲಿಂಗಂಗಳವರವರ ಗಳಕೆ ಸೇರಿಸಲೊಡನೆ |
ಹಿಂಗಿರ್ದ ದಂಪತಿಗಳಸುಗಳೈತಂದುವಾ ದಾಸಿಗಂದಸು ಬಂದುದು ||
ಲಿಂಗಣ್ಣನುಂ ಚಿಕ್ಕಲಿಂಗಣ್ಣನುಂ ಶರಣ |
ಸಂಗಿ ಸತ್ಯಣ್ಣನುಂ ಮಾರಣ್ಣನಂದಾತ |
ಸಂಗನೆಯುಮಿವರೆಲ್ಲರುಂ ಪ್ರಾಣಲಿಂಗಿಗಳ್ ಬಸವಣ್ಣ ಕೇಳೆಂದನು || ೩೫ ||

---

೧ ಸರಸ (ಶಿ, ಪ, ಗೋ.) ೨ ವೇಶ್ಯೆಯಸು (ಹು, ಮ, ಗೋ, ಪ.) ೩ ಸೋಲಿಸು (ಪ, ಗೋ.)
೪ ಸೊಲಿದು (ಪ, ಗೋ.)

ಘಟ್ಟಿವಳದೇವರೊಲವಿಂ ತನ್ನ ಲಿಂಗಮುಂ |
ಕಟ್ಟಿ ತನ್ನಯ ಕಾಲ್ಗೆ ನಡೆಯೆ ಚರಪತಿಗಳದ |
ನೆಟ್ಟನೇ ಕಂಡು ತಲ್ಲಿಂಗಮುಂ ಸೆಳೆದುಕೊಳಲಿರದೊಂದು ಪೆರ್ಗುಂಡನು |
ಕಟ್ಟಿ ಕೊರಳಲಿ ಪುರದ ಬಾಗಿಲೊಳ್ ನಿಂದಿರಲ್ |
ಬಟ್ಟೆಯಿಲ್ಲದೆ ಸರ್ವರುಂ ತರುಬಿ ನಿಲೆ ಮರಳಿ |
ಕೊಟ್ಟೊಡಾ ಲಿಂಗದೊಳಗಾ ಗುಂಡನಡಗಿಸಿದನೆಲ್ಲರುಂ ಚೋದ್ಯಮೆನಲು || ೩೬ ||

ಇನ್ನಾಲಿಸಾ ಘಟ್ಟಿವಳನೆ ಲಿಂಗಪ್ರಾಣಿ |
ಚೆನ್ನೆಯರೆನಿಪ್ಪರಾ ದಾಸಿವೇಶ್ಯೆಯರಿರ್ವ |
ರುನ್ನೋಡೆ ಜಂಗಮಪ್ರಾಣಿಗಳವರ್ ತಿಳಿಯೆ ಜಂಗಮುಂ ಮುನಿದು ಪೋಗೆ ||
ನಿನ್ನಂತೆ ಪ್ರಾಣವಂ ಬಿಟ್ಟರೇ ನೀಂ ಪಿಂತೆ |
ಕಿನ್ನರಯ್ಯಂಗಳೊಡನಳಿದುದಲ್ಲೆಂದೆವೇ |
ಮುನ್ನ ಮೇದರ ಕೇತಿತಂದೆಗಳ ಕೂಡೆ ಹರಣವನುಳಿದು[೧]ದಲ್ಲೆಂದೆವೆ || ೩೭ ||

ಇನ್ನಖಿಳದೇಶದ ಸುಭಕ್ತಮಾಹೇಶ್ವರರ್ |
ನಿನ್ನೊಡನೆ ಮರ್ತ್ಯಕೈತಂದಮರಗಣನಿಕರ |
ಮುನ್ನೋಡಲಿಲ್ಲಿಗಿನ್ನೈತರ್ಪರಿಂತು ನಿನ್ನಸು ಮುಕ್ಕಳಾಟಕೆಯೊಳು ||
ತನ್ನತಾನೇ ಪೋಗಿ ಬರಲೇಕೆ ಸಾಕೆನು |
ತ್ತನ್ನುಡಿದು ಬಸವಂಗೆ ತಿಳಿಪಿ ತನ್ನಾಲಯಕೆ |
ಚೆನ್ನಬಸವಂ ಬಂದು ಶಿವತತ್ತ್ವಗೋಷ್ಠಿಯಿಂ ಸುಖಮಿರ್ದನುತ್ಸವದೊಳು || ೩೮ ||

ಚೆನ್ನಬಸವನೆ ಶಿವಂ ಬಸವನೇ ವೃಷಭನಾ |
ಕನ್ನೇಶ ಬಿಜ್ಜಳ[೨]ರೆ ಶಿವಪುರದ್ವಾರಮುಂ |
ಚೆನ್ನಾಗಿ ಕಾದಿಪ್ಪ ದ್ರವಿಡಕೇಸರಿಗಳೆಂದೆಂಬ[೩]ರಾ ಕಲ್ಯಾಣವೇ ||
ನನ್ನಿಯಿಂ ಕೈಲಾಸಮಲ್ಲರ್ಪ ಶಿವಭಕ್ತ |
ರುನ್ನೋಡೆ ಪ್ರಮಥಗಣನಿಕರಮಲ್ಲಿಯ ಜನಂ |
ಸನ್ನುತಸದಾಚಾರಸಂಪನ್ನರೆನಿಪರವರಿರವನಭಿವರ್ಣಿಸುವೆನು || ೩೯ ||

---

೧ ನಳಿದು (ಮ.) ೨ ಬಿಜ್ಜಳನೆ (ಮ.) ೩ ಕೇಸರಿಗನೆಂದೆಂಬ (ಮ.)

ಪುಸಿ ಕಳವು ಪಾದರಂ ದುರ್ನೀತಿ ವೈರಮಳಿ |
ಜಸಮಾರ್ಗಮುಂ ಠಕ್ಕು ಪಳಿವು ಬೆಳುಗವತೆ ದು |
ರ್ವ್ಯಸನಂ ದುರಾಚಾರಮನ್ಯಾಯವಾರಡಿ ಕೃತಘ್ನತೆ ವಿರೋಧಭಾವಂ ||
ಗಸಣಿ ದುರ್ಜನಮವಿಶ್ವಾಸಂ ಪರಾಭವಂ |
ಕಿಸುರು ಗಾವಳಿ ಬಂದಿ ಗಳಹತನಮವಿವೇಕ |
ಮುಸಿರಲೇನಾ ಚೆನ್ನಬಸವನಿಹ ರಾಜ್ಯದೊಳ್ ಮಿಸುಕವೇವಣ್ಣಿಸುವೆನು[೧] || ೪೦ ||

ಗರುವಿಕೆ ಕಲಾಪ್ರೌಢಿ ಗಾಂಭೀರ್ಯಮಗ್ಗಳಿಕೆ |
ಗುರುಸೇವೆ ವಿಭವಂ [೨]ಶುಭಂ ಸುಖಂ[೨] ಸನ್ಮಾರ್ಗ |
ಮರಿಜಯಂ ನೀತಿ ನಿಪುಣತೆ ಸದಾಶಿವಭಕ್ತಿ ದಾಕ್ಷಿಣ್ಯಮತ್ಯುದಾರಂ ||
ಪರಹಿತಂ ಧರ್ಮಂ ವಿವೇಕಂ ವಿಚಾರಮಾ |
ದರಣೆ ಸೌಭಾಗ್ಯಂ ಸದಾರೋಗ್ಯಮೆಂಬುವಿವು |
ಪರಿಪೂರ್ಣಮಾಗಿರ್ಪುವಾ ನಗರದೊಳು ಚೆನ್ನಬಸವನಿರಲೇವೇಳ್ವೆನು || ೪೧ ||

ಪರವಶ ಪರಾಭವ ತೊದಳ್ ಕರ್ಕಶಂಗಳಿವು |
ಸುರತಾಂತ್ಯ ವತ್ಸರ ಸುಬಾಲ ಕಾಂತಾಸ್ತನದೊ |
ಳೊರೆವು[೩]ದಿಂ ಬಂಡು[೩] ಬಕ್ಕುಡಿ ಭಂಗ ಬಂಧನ ಕನಲ್ಕೆ ಕಳಕಳವೆಂಬಿವು ||
ಸರಸಿಜಂ ರತಿ ಸರಸಿ ಗರಿವೂ ವಿಯೋಗ ಘನ |
ವಿರಹಿಜನದೊಳಗಲ್ಲದೇ ನೋಡಲಾ ನಾಡ |
ಹಿರಿಯೂರ ಪಟ್ಟಣದ ಪಾಳೆಯದ ಜನದೊಳಿಲ್ಲೇನೆಂಬೆನಚ್ಚರಿಯನು || ೪೨ ||

ಗುಣಪಂಚಕತ್ವಮಾ ನಾಡ ಪಂಕೇಜಾತ |
ಗಣದೊಳಾರಡಿಪಾತು ತುಂಬಿಯೊಳ್ ನೀರಸಂ |
ಮಣಿಗಳೊಳು ಕೊಲ್ಲೆಂಬನುಡಿ ಲೆತ್ತವಾಡುವೆಡೆಯೊಳ್ ಮಹಾಶೋಕೋದ್ಭವಂ ||
ಅಣಿಯುರಂ ವನದೊಳ್ ಕುಜಪ್ರಭಾವಂ ನಭೋ |
ಗಣದೊಳ್ ವಿರಾಗಮುಬ್ಜಾಕರದೊಳಳಿಯಾಸೆ |
ಮಿಣಿಸಲ್ಕೆ ಕುಸುಮತರುಗಳೊಳಲ್ಲದಿಲ್ಲವಾ ಜನಪದದೊಳೇನೆಂಬೆನು || ೪೩ ||

೧ ಪೇಳ ವರ್ಣಿಸುವೆನು (ಶಿ.) ೨ ಸುಚಾರಿತ್ರ (ಗೋ.) ೩ ದೊಳ್ ಬಂದು (ಮ.)

ಪಿಡಿಯೆಂಬರಾ ಕರಿಣಿಯಂ ಲತಾವೃದ್ಧಿಯಂ |
ಕುಡಿಯೆಂಬರಾ ಪುಳಿಂದರ ಬೇಂಟೆಗೋಲ್ಗಳಂ |
ಬಡಿಯೆಂಬರಂಬರವಿಶೇಷಮಂ ಪಳಿಯೆಂಬರಲರುಣಿಯನಳಿಯೆಂಬರು ||
ಉಡಿಯೆಂಬರುರುನಿತಂಬೋರ್ಧ್ವಮಂ ಸಂತತಂ |
ಮಡಿಯೆಂಬರೆಸೆವ ದವನಾದಿಗಳ್ ಬೆಳೆವೆಡೆಯ |
ನಡಿಯೆಂಬರಂಘ್ರಿಗಳನಲ್ಲದೀ ನುಡಿಗಳಂ ನುಡಿಯರಾ ಜನಪದದೊಳು || ೪೪ ||

ಎಲ್ಲರುಂ ಧರ್ಮಿಗಳ್ ಧಾನುಷ್ಕರೆಂದೆನಿಸ |
ರೆಲ್ಲರುಂ ಸರ್ವಜ್ಞರಾ ಬುದ್ಧರೆಂದೆನಿಸ |
ರೆಲ್ಲರುಂ ಸಾರಸ್ವತಾಯುಕ್ತರಾಗಿಯುಂ ತಾಂ ಜಡಧಿಯೆಂದೆನಿಸರು ||
ಎಲ್ಲರುಂ ರಾಗಿಗಳ್ ಕಾಮಾರ್ಥ[1]ರೆಂದೆನಿಸ |
ರೆಲ್ಲರುಂ ಧನಪರುಂ ಗುಹ್ಯಕೇಶ್ವರರೆನಿಸ |
ರೆಲ್ಲರುಂ ಬಲಯುತರ್ ಗೋಪಾಲರೆನಿಸರಾ ವಿಷಯದ ಸಮಸ್ತಜನರು || ೪೫ ||

ಪ್ರಕಟಕಂಟಕಹರವಿರೋಧಂಗಳೆಸೆವ ಕೇ |
ತಕಿಯೊಳ್ ಮಧುಪ್ರೀತಿ ಪುಷ್ಪಿಣೀಸಂಗಮಳಿ |
ನಿಕರದೊಳ್ ತಾಡನಂ ದೈನ್ಯವಚನಂ ಚಂಚಲಾಕ್ಷಿಯರ ಸದ್ರತಿಯೊಳು ||
ವಿಕಳಸ್ವನಂ ಜಡಾಶ್ರಯಮುಂ ಸರಸ್ಸಿನೊಳ್ |
ಸುಕುಟಿಲಗಮನವಿಷಕ್ರೂರಂಗಳುರುವಹಿ |
ಪ್ರಕರದೊಳಗಲ್ಲದಾ ನಗರದೊಳಗಿಲ್ಲಲ್ಲಿ ಚೆನ್ನಬಸವೇಶನಿರಲು || ೪೬ ||

ರಾಜನಂ ಸಕಳಂಕನೆನಿಸಿ ಪಾತಾಳದಹಿ |
ರಾಜನಂ ವಿಷಧಾರಿಯೆನಿಸಿ ಪ್ರಾಲೇಯಗಿರಿ |
ರಾಜನಂ ಗತಿಹೀನನೆನಿಸಿ ಮೂವಿಧಿಗೊಳಿಸಿ ನುತಸುರತರಂಗಿಣಿಯನು ||
ರಾಜನಯ್ಯನ ಭಂಗಯುತನೆನಿಸಿ ವರದಿವಿಜ |
ರಾಜನಾನೆಯ ಮತ್ತನೆನಿಸಿ ಸದ್ಗುರು ಬಸವ |
ರಾಜನಳಿಯಂ ಚೆನ್ನಬಸವರಾಜನ ಕೀರ್ತಿ ರಾಜಿಸಿತು ಮೂಜಗದೊಳು || ೪೭ ||

---
೧ ಕಾಮಾರ್ತ (ಮ.)

ಬಸವನಗ್ರಜೆ ನಾಗಲಾಂಬಿಕೆಯು ರಂಜಿಸುವ |
ಬಸಿರೊಳ್ ಶಿವಪ್ರಸಾದಾರ್ಭಕಂ ಬಳೆವುತುಂ |
ವಸುಧೀಶ ಬಿಜ್ಜಳನ ಮಾತಿಗುತ್ತರವಿತ್ತು ಚೋದ್ಯದಿಂ ಜನಿಸಿದ ಗಡ ||
ಬಸವಂಗೆ ಪ್ರಾಣಲಿಂಗವನರಿಪಿದಂ ಚೆನ್ನ |
ಬಸವ ಗಡ ಪೆಸರಾತನುಂ ಮಹಾಬಸವನುಂ |
ಮಿಸುಗುವ ಪವಾಡಪುರುಷರ್ ಗಡೀಕ್ಷಿಪೆವೆಂದು ಶರಣರೈತರುತಿರ್ದರು || ೪೮ ||

ಅಂಗ ಮಲೆಯಾಳ ಮಾಳವ ಮಗಧ ಬರ್ಬರ ಕ |
ಳಿಂಗ ಕಾಶ್ಮೀರ ಕೊಂಕಣ ಸಿಂಧು ಹಮ್ಮೀರ |
ವಂಗ ಹೊಯಿಸಳ ತುಳುವ ಚೋಳ ಚೇರಮ ಪಾಂಡ್ಯ ಯವನ ಸೌವೀರ ಮಚ್ಛ ||
ಬಂಗಾಳ ಜೈನ ಜೋನೆಗ[೧] ಸಗರ[೨] ಹೈವಿಗ ತೆ |
ಲುಂಗ ಗುರ್ಜರ ಗೌಳ ನೇಪಾಳ ಸೌರಾಷ್ಟ್ರ |
ಸಿಂಗಳ ದ್ರವಿಡ ಕಾಂಬೋಜದೇಶದ ಸಕಲಶರಣರೈತರುತಿರ್ದರು || ೪೯ ||

ಲಾಟ ಪಾಂಚಾಳ ವೈದರ್ಭ ಕುರು ಕುಕುರ ಕರ |
ಹಾಟ ಕರ್ಪರಯವಂತಿಕ ಪಾರಿಯಾತ್ರ ಕ |
ರ್ಣಾಟ ಕೋಶಲ ಮಂದಭದ್ರ ಕುಂತಳ ಮಹಾಚೀನಕ ವಿದೇಹ ಮೆರೆವ ||
ಭೋಟಕ ತುರುಷ್ಕವೊಡ್ಡಿಯ ಪಾರಸಿಕ ಮಹಾ |
ಘೋಟಕ ಪುಳಿಂದಕ ಸ್ತ್ರೀರಾಜ್ಯ ಕೊಂಗು ಮಾ |
ಳಾಟ ಮೊದಲಾದ ದೇಶದ ಶರಣಸಂಕುಲಂ ಬರುತಿರ್ದುದುತ್ಸವದೊಳು || ೫೦ ||

ಇಂತು ಛಪ್ಪನ್ನದೇಶದೊಳೆಸೆವ ಶಿವಭಕ್ತ |
ಸಂತತಿಗಳೈತರ್ಪುದಂ ತನ್ನ ಸುಜ್ಞಾನ |
ದಿಂ ತಿಳಿದು ಚೆನ್ನಬಸವೇಶ್ವರಂ ಬಸವರಾಜಂಗಿರದೆ ಪೇಳಲೊಡನೆ ||
ಸಂತಸದೆ ಚಾರರಂ ಕರೆಸಿ ಬೆಸವೇಳಲ[೩] |
ತ್ಯಂತವಸ್ತುಗಳ ವಿಸ್ತಾರದಿಂ ನಗರವನ |
ನಂತವಿಭವದೆ [೪]ಸಿಂಗರದಲೊಪ್ಪವಿಟ್ಟರದನೇನೆಂದು ಬಣ್ಣಿಸುವೆನು || ೫೧ ||

೧ ಜೋಗಿ | ಶಿ. | ೨ ಸರಳ (ಹು.) ೩ ಸೇಮಿಸಿದರ (ಶಿ.) ೪ ಲೊಪ್ಪವಿಟ್ಟರದರಂದಮುಮನೇ (ಶಿ.)

ಕಟ್ಟಿದುವು ಮನೆ ಮನೆಯ ಮುಂದಾಗಲಿರದೆ ಸಾ |
ಲಿಟ್ಟುವು ಮಕರತೋರಣಂಗಳಾಕಾಶಮಂ |
ಮುಟ್ಟಿದುವು ಕೇತನಪ್ರತತಿಗಳ್ ನಿರ್ಜರರ ನಾಕಲೋಕಕೆ ದಾಳಿಯ ||
ಇಟ್ಟುದಿರದಗರುಧೂಪದ ಧೂಮಮೆಣ್ದೆಸೆಯ |
ಮೆಟ್ಟಿದುದು ಸಕಲವಾದ್ಯಂಗಳ ನಿನದಮುಳ್ಳಿ |
ವಟ್ಟರಚ್ಚರಿಯುರುತ್ಸವವನೀಕ್ಷಿಸಲೆಂದು ಪುರಜನಂ ನಡೆಗೊಂಡುದು || ೫೨ ||

ಇಂದುರವಿವೀಧಿಗಳ್ ಪನ್ನೀರ ಚಳೆಯದಿಂ |
ದಂದವಡೆದುವು ಮೌಕ್ತಿಕದ ರಂಗವಲಿ ಕಣ್ಗೆ |
ವಂದುದಬಲಾಜನಂ ಕಳಸಕನ್ನಡಿವಿಡಿದು ನಡೆಗೊಂಡುದುತ್ಸವದೊಳು ||
ಮುಂದೆ ಶೋಭಾನಮಂ ಪಾಡುತಡಿಯಿಟ್ಟುದಾ |
ನಂದದಿಂದ್ವೈದೆಯರ್ ತೂರ್ಯತ್ರಯಮುಮುದಿತಿ |
ನಂದನನ ನಾಟ್ಯಶಾಲೆಯ ಮಿಗಿಸಿತೇನೆಂಬೆನಿದಿರ್ಗೊಳ್ವ ಸಂಭ್ರಮವನು || ೫೩ ||

ಕರಡೆ ಕಂಸಾಳ ಮಂಗಳಧವಳಶಂಖಂಗ |
ಳುರುರವಂ ಶಿವನ ಬಿರುದಾವಳಿಯ ಬಣ್ಣಿಸುವ |
ಪರಮಪಾಠಕರ ಕೈವಾರಮಡಿಯಿಡುವ ಕಾಂತೆಯರಂದುಗೆಯ ನಿನಾದಂ ||
ಸರವೆತ್ತಿ ಪಾಡುವ್ವೈದೆಯರ ಗಾನಂ ದಿಗೀ |
ಶ್ವರರ ಕಿವಿಗಾನಂದಮಂ ಕರೆಯೆ ಕಣ್ಗೆಸೆದು |
ವಿರದೆ ವ್ಯಾಸನ ತೋಳ್ ವೃಷಧ್ವಜ ಪತಾಕೆ ಪಲ್ಲವ ಸತ್ತಿಗೆಯ ಸಾಲ್ಗಳು || ೫೪ ||

ಹರಶರಣರೊಡಗೂಡಿ ಚೆನ್ನಬಸವಣ್ಣಸಹಿ |
ತರಮನೆಯ ಪೊರಮಟ್ಟು ಬಸವದಂಡಾಧಿಪಂ |
ಪರಮಭಕ್ತಿಯಲಿ ನಡೆದಿದಿರ್ಗೊಂಡು ಬಂದ ಶಿವಶರಣಸಂಕುಲಕೆರಗಲು ||
ಹರುಷದಿನವರ್ ಚೆನ್ನಬಸವಬಸವೇಶ್ವರ |
ರ್ಗಿರದೆ ಸಾಷ್ಟಾಂಗದಿಂ ನಮಿಸಲವರಿರ್ವರುಂ |
ಕರುಣದಿಂದೆತ್ತಿ ಬಸವಂಗೆ ಬಳಿಕಾ ಚೆನ್ನಬಸವನೊಲಿದಿಂತೆಂದನು || ೫೫ ||

ಆಲಿಸೈ ಬಸವದಂಡೇಶ ಕಾಶ್ಮೀರಭೂ |
ಪಾಲನಿಂ ಮಹದೇವ ರಾಣಿಯರ್ಕೂಡೆ ಶ್ರೀ |
ಶೈಲದಿಂ ಶಿವಯೋಗಿಮಲ್ಲರಸನಾಜ್ಞೆಯಿಂದಿಲ್ಲಿಗೊಲಿದಯ್ತಂದನು ||
ಲೀಲೆಯಿಂ ಸಕಳೇಶ ಮಾದರಸನೀತನೇ |
ಕಾಳಿಂಗದೇಶದಿಂ ಬಂದನಿಂದಿಲ್ಲಿಗೀ |
ಶೀಲವಂತಂ ಮರುಳಶಂಕರಂ ಕೇಳೆಂದು ಚೆನ್ನಬಸವಂ ಪೇಳ್ದನು || ೫೬ ||

ಈತನೇ ಮಡಿವಾಳಮಾಚಯ್ಯನೆಂಬ ವಿ |
ಖ್ಯಾತಪುರುಷಂ ನೋಡು[1] ಹಿಪ್ಪಲಿಗೆ[2]ಯಿಂ ಬಂದ |
ನೀತನೇ ಸುಜ್ಞಾನಿದೇವನೆಂಬಾತನಾ ಕಟಕದಿಂದೈತಂದನು ||
ಈತನೇ ಮಾತಂಗತಮನೆಂಬ ಶರಣನತಿ |
ಪ್ರೀತಿಯಿಂ ತನ್ನ ಗುರುಸುಜ್ಞಾನಿದೇವನ ಮ |
ಹಾತಿಶಯರುಂಡಕ್ಕೆ ಮುಂಡಮಂ ಮುಂಡಕ್ಕೆ ರುಂಡಮಂ ನೆರೆ ಪಡೆದನು || ೫೭ ||

ಇಂತಖಿಳಭಕ್ತಮಾಹೇಶ್ವರರ ಮಹಿಮೆಯಾ |
ದ್ಯಂತಮಂ ಚೆನ್ನಬಸವಂ ಪೇಳೆ ಕೇಳ್ದು ತದ |
ನಂತರದೆ ಸಕಲಗಣಕುಲಕೆ ಮಗುಳೆರಗಿ ಬಸವೇಶನತಿಭಕ್ತಿಯಿಂದೆ ||
ಮುಂತೆ ನಾನಾವಾದ್ಯಘೋಷದಿಂ ತನ್ನ ಮನೆ |
ಗಂತರಿಸದೊಡನೆ ಕರೆತಂದಧಿಕವಿಭವದಿಂ |
ಸಂತೋಷದಿಂದೆ ಮಜ್ಜನಭೋಜನಾದಿಸತ್ಕಾರಮಂ ಮಾಡಿಸಿದನು || ೫೮ ||

ಅವರವರನುಚಿತವಚನಂಗಳಿಂ ಸತ್ಕರಿಸಿ |
ವಿವಿಧೋಪಚಾರಂಗಳಂ ಮಾಡಿ ಬಳಿಕಲಾ |
ಶಿವಭಕ್ತಸಂತತಿಗೆ ಮಠಮನೆಗಳಂ ಕೊಡಿಸಿ ಸ್ವಾಸ್ತಿಗಳ ಮಾಡಿ ಕೆಲರ್ಗೆ ||
ವಿವರದಿಂ ಕೆಲಬರ್ಗೆ ಕಾಯಕಂಗಳ ಕಟ್ಟಿ |
ಸುವಿಲಾಸದಿಂದಲಾ ಚೆನ್ನಬಸವಂ ಬಸವ |
ಸವಿರಾನಂದದಿಂ ಶಿವತತ್ತ್ವಗೋಷ್ಠಿಯಿಂ ಸುಖಮಿರ್ದರುತ್ಸವದೊಳು || ೫೯ ||

---

೧ ನಾಡೆ (ಶಿ, ಗೋ, ಪ.) ೨ ಹಿಪ್ಪರಿಗೆ (ಮ, ಅ, ಬ, ಕ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೬೦ ||

ಅಂತು ಸಂಧಿ ೬ಕ್ಕಂ ಪದಗಳು ೨೭೨ಕ್ಕಂ ಮಂಗಳಮಹಾಶ್ರೀ

ಏಳನೆಯ ಸಂಧಿ

ಸೂಚನೆ

ವಿಸ್ತಾರದಿಂದೆಸೆವ ಬಿಜ್ಜಳಮಹೀಪಾಲ |
ನಾಸ್ಥಾನಕೈತಂದು ಮಂಚಣ್ಣ ಚಹಡಿಯುಂ |
ವಿಸ್ತಾರದಿಂ ಪೇಳೆ ಕೇಳ್ದು ಭೂಪಂ ಚೆನ್ನಬಸವನಂ ಕರೆಯಿಸಿದನು ||

ಪರಮೇಷ್ಠಿ ಸಕಲರಂ ಪಡೆದೆನೆನಲಾತನಂ |
ಸರಸಿಜಂ ಪಡೆದೆನೆಂದೆನಲದಂ ಹರಿ ತನ್ನ |
ವರನಾಭಿಯಿಂ ಪಡೆದೆನೆನಲಾತನಂ ಶರಧಿ ತಾಳ್ದೆನೆನಲದ ಮುನಿಪನು ||
ಧರಿಸಲಾತನ ಹರವಿ ಧರಿಸಲದ ಭೂಮಿ ತಾಂ |
ಧರಿಸಲವ ಫಣಿಪಾಲ ಧರಿಸಲದು ಶಿವೆಯು ಕಿರು |
ವೆರಲಿಗುಂಗರವಾಗಲಾ ಶಿವೆಯುನೆಡದೊಡೆಯೊಳಾಂತ ಶಿವ ಸಲಹೆಮ್ಮನು[೧] || ೧ ||

ಇರಲಿತ್ತ ರಿಪುರಾಯಮೇಘಜಂಝಾನಿಲಂ |
ಪರರಾಯಗರ್ವಪರ್ವತದಳನದಂಭೋಳಿ |
ಘುರಮತ್ತರಾಯಮದಮಾತಂಗತುಂಗಕುಂಭಸ್ಥಳವಿದಾರಣಹರಿ ||
ಅರಿರಾಯವಾರ್ಧಿಶೋಷಣವಾಡಬಾನಲಂ |
ಬಿರುದಂಕರಾಯಫಣಿಕುಲಗರುಡನಧಟರಾ |
ಯರ ಗಂಡನೆನಿಪ ಬಿಜ್ಜಳಮಹಾರಾಯ[೨]ನೊಡ್ಡೋಲಗದೊಳೊಪ್ಪಿರ್ದನು[೩] || ೨ ||

ಉದಯಾಚಲದ ಮೇಲೆ ಕಂಗೊಳಿಪ ರವಿಯಂತೆ |
ಪದಪಿನಿಂ ಕನಕಸಿಂಹಾಸನದ ಮೇಲೆ ಭೂ |
ಸುದತಿಯಧಿನಾಯಕಂ ಬಿಜ್ಜಳಂ ರತ್ನಭೂಷಣಕಾಂತಿ ರುಚಿಗಳಂತೆ ||
ಒದವಿ ನೆರೆ ತೋರೆ ಪರರಾಜನಿಸ್ತೇಜನ |
ಗ್ರದ ವೈರಿಸ್ತ್ರೀಸ್ತುತಿಪಿನಾಸಸೊಂದಕ್ಕ್ರಮಂ |
ಸದಮಲಂ ಪದ್ಮಸೀಚಿತ್ತಾನುಕೂಲನೊಪ್ಪಿರ್ದನೊಡ್ಡೋಲಗದೊಳು || ೩ ||

೧ ಸಕ್ಕೆ ಸೆಮ್ಮ (ಶಿ.) ೨ ಮಹೀಪಾಲ (ಮು, ಅ, ಬ, ಕ.) ೩ ಇರುತಿರ್ದನು (ಹು.)

ಪೊಳೆವ ಮಕುಟದ ರತ್ನಕಾಂತಿಗಳ್ ದಿಗ್ಭಿತ್ತಿ |
ಗಳೊಳಮರ್ದು ನಾನಾವಿಚಿತ್ರಚಿತ್ರದ ತೆರದೆ |
ತೊಳಗೆ ಭೂಷಣಖಚಿತಮೌಕ್ತಿಕಮರೀಚಿ ಪಗಲೊಳು ಜೊನ್ನಮಂ ಪ್ರಕಟಿಸೆ ||
ಥಳಥಳಿಸುವಂಗಲತೆಯೊಳ್ ಪುದಿದ ಸಕಲಪರಿ |
ಮಳಕೆರಗುವಳಿಮಾಲೆ ಮೇಲೆ ಮಂಡಳಿಸಿ ನಿಲೆ |
ಕೆಲಬಲದ ಗರ್ದುಗೆಗಳೊಳು[೧] ಮಂಡಲಾಧೀಶರೊಪ್ಪಿರ್ದರಾ ಭೂಪನಾ[೨] || ೪ ||

ಮುರಿದ ಮೀಸೆಗಳ ಕೆಂಗಣ್ಣುಗಳ ಪಣೆಯ ಕ |
ತ್ತುರಿಯ ತಿಲಕದ ಮೆಯ್ಗೆ ಪೊರೆದ ಗಂಧದ ಕಾಲ |
ಬಿರುದುತೊಡರಿನ ವಾಮಕರದ ಪೊಂಜರಪಣಿಯ ಬೆರಲ ಮಣಿಮುದ್ರಿಕೆಗಳ ||
ಕೊರಲಹಾರದ ಕರ್ಣಭೂಷಣದ ಝಳಪಿಸುವ |
ಕರವಾಳ ಹೊಳಹುಗಳ ಬಳೆದ ಮುಡುಹುಗಳ ಸಂ |
ಗರಧೀರರಾಜಸುಕುಮಾರರೊಪ್ಪಿರ್ದರವನೀಪಾಲನಿಕ್ಕೆಲದೊಳು || ೫ ||

ಬೆಸಸಿದೂಳಿಗವನಾ ಪಡಿಹಾರ[೩]ರಿಂದಲೊದ |
ಗಿಸಿ ಕಾರ್ಯಭಾಗವಿಡಿದರಸನಿಚ್ಛೆಯನರಿದು |
ಬೆಸುಗೆ ಬಿಡಿದಂತೆ ಹತ್ತಿಸಿ ಹವಣನಾರಯ್ದು ಲಂಚವಂ ಮೊದಲೆ ಕೊಂಡು ||
ಕಸವರವನರಮನೆಯ ಭಂಡಾರಕೊದಗಿಸುವ |
ಪೆಸರುಳ್ಳ ರಾಜಮಂತ್ರಿಗಳಿರ್ದರಿಕ್ಕೆಲದೆ |
ಬಸವೇಶನುಳಿಯೆ ಮಿಕ್ಕವರವನಿಪಾಲಕುಲತಿಲಕ ಬಿಜ್ಜಳರಾಯನಾ || ೬ ||

ಕರಡು ದಿನವಹಿ ವರ್ಗ[೪] ಮಾಸಾಂತಕಾದಿಗಳ |
ಬರೆದೋದಿ ಸರಿದೋರಿ ಭೇದಕರ್ ಬಹುವಿಧದೆ |
ಪರಕಿಸಲೊಳಗುಗಾಣದಂತೆ ಛಿದ್ರಿಸಿ[೫] ತೆಗೆವ ಜಾಣ್ಮೆ ಕಡುಸ್ನೈಜವಾಗೆ ||
ಪರಮಲಂಚವೆ ತಮಗೆ ಜೀವನಮದೆನಿಸಿ ಚ |
ಚ್ಚರದಿಂದಲೈಶ್ವರ್ಯಮಂ ಪಡೆದು ನೆರೆ ಬಾಳ್ವ
ಕರಣಿಕಶಿರೋಮಣಿಗಳೊಪ್ಪಿರ್ದರಾ ಬಿಜ್ಜಳಾವನಿಪನೋಲಗದೊಳು || ೭ ||

೧ ಳಿಹ (ಶಿ, ಗೋ.) ೨ ಸಭೆಯೊಳು (ಗೋ, ಕೋ.) ೩ ಪ್ರತಿಹಾರ (ಹು.) ೪ ಮಾರ್ಗ (ಹು.)
೫ ಚಿತ್ರಿಸಿ (ಶಿ.)

ಶ್ರುತಿ ಶಬ್ದತರ್ಕವೇದಾಂತಾರ್ಥಕೋವಿದರ್ |
ನುತಪುರಾಣಾಗಮವಿಚಾರನಿಪುಣರ್ ಸಮು |
ನ್ನತಕನಕಪೀಠದೊಳ್ ಬಳೆದ ಗಡ್ಡದ ರತ್ನಕುಂಡಲಯುಗಂಗಳೆಸೆವ ||
ಶ್ರುತಿಪುಟಂಗಳ ಮೇಲುಗುಲ್ಲಾಯಿಗಳ ಸಮಾ |
ಶ್ರಿತಯಜ್ಞಸೂತ್ರಕಾಷಾಯಮುದ್ರಿಕೆಗಳ ಪಂ |
ಡಿತನಿಕರಮೊಪ್ಪಿರ್ದುದವನಿಪಾಲಕನ ಬಲಗಡೆಯೊಳ್ ವಿಲಾಸದಿಂದೆ || ೮ ||

ವರದೇಶಕಾಲಶಾರೀರಸೂತ್ರಂಗಳಂ |
ಪರಿವಿಡಿಯೊಳಷ್ಟವುಸ್ಥಾನಭೇದಂಗಳಂ |
ಪರಿಕಿಸಲ್ ಸಕಲರೋಗಂಗಳ ನಿಧಾನಂಗಳರಿದಾ ಚಿಕಿತ್ಸೆಗಳನು ||
ಹರುಷದಿಂ ಮಾಳ್ಪ ಸದ್ಧರ್ಮದಯೆದಾಕ್ಷಿಣ್ಯ |
ಪರಮಶಿವಭಕ್ತಿ ನಿರ್ಮತ್ಸರಂಗಳೊಳೆಸೆವ |
ರುಚಿತರಸುವೈದ್ಯರೊಪ್ಪಿರ್ದರಾ ಬಿಜ್ಜಳಮಹೀಪಾಲನೋಲಗದೊಳು || ೯ ||

ನುಡಿದು ಪೊಗಳಿಸಿಕೊಂಬ ಪದಬಂಧರೀತಿಯಂ |
ಬಿಡದೆ ಬಲ್ಲವರ ತಲೆದೂಗಿಸಿ ಸಮಸ್ಯಮಂ |
ಕೊಡಲೊಡನೆ ಪೂರಿಸುವ ಘಟಿಕಾಶತಕವನುಸಿರ್ದಾಕ್ಷಣಂ ಮೆಚ್ಚುಗಳನು ||
ಪಡೆವ ನವರಸರಸಿಕರೆಸೆವ ಕರ್ಣಾಟಕದ |
ಬೆಡಗುಗಳ ಬಲ್ಲ ಸತ್ಕವಿಗಳೊಪ್ಪಿರ್ದರಾ |
ಪೊಡವಿಪಾಲಕ ಬಿಜ್ಜಳನ ಬಲದ ಕಡೆಯ ಮಣಿಮಯದ ಗದ್ದುಗೆಗಳಲ್ಲಿ || ೧೦ ||

ಬಿರುದುರಾಯರ ಗಂಡ ಬೇಡಿದರವಗ್ರೀವ |
ಗುರುದಾನರಾಧೇಯ ಶರನಿಧಿಸಮಾನಭಾ |
ಸುರಮಹಾಗಂಭೀರ ತರುಣೀನಿಕಾಯಲೋಚನಕುಮುದಕುಲಶಶಾಂಕ ||
ಶರಣಾಗತಾನಂದಚೂತವನಚೈತ್ರ ಭೂ |
ವರಶಿಖಾಮಣಿ ಜೀಯ ಬ್ರಹ್ಮಾಯು ನಿನಗೆಂದು |
ಕರವೆತ್ತಿ ಪೊಗಳ್ವ ಪಾಠಕರ ಕೈವಾರ ಕಿವಿಗಿಡಿದುದಾ ನೃಪಸಭೆಯೊಳು || ೧೧ ||

೧ ಗುಲ್ಮಾಯ (ಶಿ.) ೨ ಪರ್ವ (ಶಿ.) ೩ ಮಯ (ಶಿ.) ೪ ಮೊನೆಸುವ (ಹು, ಮ.)

ತಳಿರಡಿಗಳೊಳ್ಪೊಡೆಗಳವರ್ದು ಬಲ್ಪೊರವಾರ |
ಸೆಳೆನಡುವಿನಡರ್ದ ಬಾಸೆಯ ಬಲ್ಮೊಲೆಗಳ ಥಳ |
ಥಳಿಪ ನುಣ್ಗೊರಲ ನಳಿತೋಳ್ಗಳೆಸೆವಿಂದುಟಿಯ ಮೊಲ್ಲೆವಲ್ಗಳ ಸೊಗಸುವ ||
ತೊಳಪಗಣ್ಗಳ ತೆಳ್ಗದಂಪುಗಳ ಸಂಪಗೆಯ |
ಪಳಿಪ ಮೂಗಿನ ಚೆಲ್ವ ಕುಡಿಹುಬ್ಬುಗಳ ತುಂಬಿ |
ಗಳ ಪೊಲ್ಪ ಸುಳಿಗುರುಳ್ಗಳ ಪೆಣ್ಗಳಿರ್ದರಂದರಸಿನೊಡ್ಡೋಲಗದೊಳು || ೧೨ ||

ಕಿವಿಗಳಂ ಮಿಗುವಕ್ಷಿಗಳ್ ಕುಚದ್ವಯಮಧ್ಯ |
ದವಿರಳವನಿರದೆ ಭೇದಿಸಿ ಮಿಗುವ ಬಡಬಾಸೆ |
ತವೆ ಹಿಮ್ಮಡಂಗಳಂ ಮಿಗುವ ಘನವೇಣಿಲತೆ ಕಣ್ಗೆ ಮಂಗಳವೆನಿಸುವ ||
ನವಹೇಮಭೂಷಣರುಚಿಯ ಮಿಗುವ ತನುಕಾಂತಿ |
ಪವಳದುಟಿರಾಗಮಂ ಮಿಗುವ ನಿರ್ಮಳರದ |
ಚ್ಛವಿಗಳೊಪ್ಪಿರೆ ಮೆರೆದರವನಿಪಸಭಾಂಗಣದೊಳೋಲಗದ ಬಾಲಕಿಯರು[1] || ೧೩ ||

ತನುಗಂಪಿಗೆಳಸಿ ಬಂದೆರಗುವಳಿತತಿಯ ಕರ |
ವನಜದೊಳ್ಪಿಡಿದ ನೀಲಾಬ್ಜ[2]ದಿಂ ಸೋವುತೊ |
ಯ್ಯನೆ ನುಡಿಗಲಿಯಲೆಂದು ಬಂದ ಪುರುಳಿಗಳನಾಳಿಯರಿಂದೆ ತೊಲಗಿಸುತ್ತೆ ||
ಮನಸೋತು ನಡೆಯನಭ್ಯಾಸಿಸಲ್ ಬಂದ ಮೊ |
ಹನರಾಜಹಂಸಿಗಳ ಪದನೇವುರದ ಕಳ |
ಧ್ವನಿದೋರಿ ಬೆದರಿಸುತ್ತೋಲಗದ ವಾರನಾರಿಯರಿರ್ದರಾ ಸಭೆಯೊಳು || ೧೪ ||

ನಿರುತದಿಂ ಭಗದತ್ತನೆಣೆ ಸುರೇಂದ್ರಂ ಸಾಟಿ |
ಕರಿಕಂಧರಾರೋಹಣಕ್ಕಾಹವಕ್ಕೆಂದು |
ಬಿರುದುಪೆಂಡೆಯನಿ ಕಾಲೊಳಿಟ್ಟು ಪೊಗಳಿಸಿಕೊಂಬ ಧುರಧೀರಮಾವತಿಗರು ||
ಪರಿಕಿಪೊಡೆ ತಮಗೆ ರೈವಂತನೆಣೆ[4] ಸರಿ ಧನೇ |
ಶ್ವರನೆ ಪಾಸಟಿ ಹಯಾರೋಹಣಕೆ ಸಂಗರಕೆ |
ದೊರೆಯೆ ಮಿಕ್ಕವರೆಂಬ ವೀರರಾವುತರಿರ್ದರವನೀಶನೋಲಗದೊಳು || ೧೫ ||

---

೧ ಭಾವಕಿಯರು (ಹು.) ೨ ಲೀಲಾಬ್ಜ (ಮ.) ೩ ಕಡೆಯುವ (ಹು, ಮ.) ೪ ರೇವಂತರೇ (ಶಿ.)

ಸಚಿವ ಸಾವಂತ ಸೇನಾನಾಥ ಬಾಂಧವ |
ಪ್ರಜೆಯ ಹಯವಾಹ ಗಜವಾಹರಾ ಪ್ರತಿಹಾರ[೧] |
ರುಚಿರ[೨] ಶಾಸ್ತ್ರಾರ್ಥಕೋವಿದ ಪುರೋಹಿತ ಸೂತ ಸಂಧಿವಿಗ್ರಹಿ ಮಾಗಧ ||
ಪ್ರಚುರಕವಿ ವಾಗ್ಮಿ ತಾರ್ಕಿಕ ಮಂತ್ರವಾದಿ ಘನ |
ಶುಚಿ ಪುರಾಣಿಕ ವೈದ್ಯ ನಟಗಾನರೆಂಬವರ್ |
ನಿಚಲವವಯವರಾಗಿ ಬಿಜ್ಜಳಮಹೀಪಾಲನೋಲಗದೊಳೆಸೆದಿರ್ದರು || ೧೬ ||

ಚೋಳನಂ ಚಿತ್ತೈಸು ಚಿತ್ತೈಸು ಕೇರಳನ |
ಪಾಳನಂ ಚಿತ್ತೈಸು ಸಗರನಂ ಚಿತ್ತೈಸು |
ಲಾಳನಂ ಚಿತ್ತೈಸು ಮಗಧನಂ ಚಿತ್ತೈಸು ಗಾಂಧಾರದೇಶದವನ ||
ಗೌಳನಂ ಚಿತ್ತೈಸು ಚಿತ್ತೈಸು ವೀರನೇ |
ಪಾಳನಂ ಚಿತ್ತೈಸು ಯವನನಂ ಕೊಂಗು ಮಲೆ |
ಯಾಳ ಮಾಳವ ಮಲೆಯ ಮಾತುಳ ಮಹಾರಾಷ್ಟ್ರ ಕರ್ಣಾಟಕಾದಿಯಾದ || ೧೭ ||

ಪೊಡವಿಪರ ಚಿತ್ತೈಸು ಸಕಲಮಂತ್ರಿಗಳ ಮಂ |
ಗಡಮಿದಂ ಚಿತ್ತೈಸು ವೀರಸೇನಾನಿಗಳ |
ಗಡಣಮಂ ಚಿತ್ತೈಸು ಕಾಲವರ ಚಿತ್ತೈಸು ಮೇಲವರ ಚಿತ್ತೈಸು ಹೋ ||
ಎಡಬಲಪರಾಕು ಜಯ[೩] ಚಿತ್ತಾವಧಾನ[೪]ಜಯ |
ಕಡು[೫] ಪರಾಕೆಚ್ಚರಿಕೆ ಬಹುಪರಾಕಯ್ಯ ಯೆಂ |
ದೊಡನೊಡನೆ ನೆಲನನುಗ್ಘಡಿಪ ಕಂಚುಕಿಗಳಬ್ಬರ ಮಸಗಿತಾ ಸಭೆಯೊಳು || ೧೮ ||

ಬಂದನೋಲಗಕೆ ತತ್ಸಮಯದೊಳ್ ಸಕಲನೃಪ |
ವೃಂದವೃಂದಾರಕಂಗೆತ್ತಿ ಕೈಗಳ ಮುಗಿದು |
ಸಂದಣಿಸು ಕಡೆಗೆ ತೊಲಗಿಸಿ ರತ್ನಖಚಿತ ಮೃಗರಾಜಪೀಠದ ಕೆಲದೊಳು ||
ನಿಂದು ಕರದಿಂ ಬಾಯ ಮುಚ್ಚಿಕೊಂಡಾನನವ |
ನೊಂದಿಸಿ ಕಿವಿಗೆ ಬಿನ್ನಪಂಗೈದನೆರ್ದೆಯೊಳಗೆ |
ಸಂದೆಗಂ ಜನಿಪಂತೆ ಕೊಂಡೆಯರಕುಲತಿಲಕನೆಂದೆನಿಪ ಮಂಚಣ್ಣನು || ೧೯ ||

೧ ಪಡಿಹಾರ (ಮು.) ೨ ರುಚಿತ (ಮು, ಅ, ಬ, ಕ.) ೩ ಸೀ (ಶಿ.) ೪ ಜೀಯ ಚಿತ್ತಾವಧಾನ (ಗೋ, ಕೋ, ಪ.) ೫ ಕಡು (ಹು, ಮು.)

ದೇವ ಚಿತ್ತೈಸು ಕಲ್ಯಾಣಮಂಟಪದೊಳಗೆ |
ತೀವಿಕೊಂಡಿದೆ ನಿಖಿಳದೇಶದಿಂದೈತಂದ |
ಶೈವಸಂಕುಲವೀಗ ನಿನ್ನ ರಾಜಾಲಯಂ ಹೊರತಾಗಿ ಮಿಕ್ಕೆಡೆಯೊಳು ||
ಹಾವಳಿಯೆ ಘನವವರ ಪರಿದಾಟ ಪಿರಿದು ವೇ |
ಶ್ಯಾವಾಟವಾದಿಯಾದಲ್ಲಿ ನಿಮ್ಮಂಘ್ರಿರಾ |
ಜೀವದಾಣೆಂದು ಬಿನ್ನವಿಸಿದಂ ೧ಕೊಂಡೆಯರ ಮಂಡೆಮಣಿ೧ ಮಂಚಣ್ಣನು || ೨೦ ||

ನೋಡಿದಿರೆ ಚೆನ್ನಬಸವಂಗೆ ಪಟ್ಟವ ಕಟ್ಟಿ |
ನಾಡೆಲ್ಲವಂ ಬೇಗದಿಂ ತನ್ನ ಕೈವಶಂ |
ಮಾಡಿಕೊಂಡೇನ ಮಾಡುವನೊ ನಿಮ್ಮಡಿಗೆಂಬ ಸಂದೆಗಂ ತೋರುತಿದಕೊ ||
ಬೇಡಬೇಕೆಂಬುವರ ಕಾಣೆ ಕರಿತುರಗಂಗ |
ಳಾಡಲೇನವರ ವಶಮಿನ್ನು ಮೆಯ್ಮರೆದಿಹುದು |
ಪಾಡಲ್ಲವೆಂದು ಭೂಪತಿಗೆ ಬಿನ್ನೈಸಿದಂ ಕೊಂಡೆಯರ ಮಂಚಣ್ಣನು || ೨೧ ||

ಪಿಂತೆ ವೃತ್ರಾಸುರಂ ಬಳೆಬಳೆದು ಮೂಲೋಕ |
ಮಂ ತಿವಿವುತಿರೆ ಗರ್ವದಿಂದೆ ಮೆಯ್ಮರೆದಿರ್ದು |
ತಾಂ ತರಹರಿಸಿ ಸಮರರಂಗದೊಳ್ ನಿಲಲಾರದಧಿಕಪ್ರಯಾಸದಿಂದೆ |
ಚಿಂತಿಸಿ ಬಳಲ್ದನಮರಾಧೀಶನೆನೆ ಮನುಜ |
ರಿಂತು ಮೆಯ್ಮರೆದು ತಾವಿರೆ ಮುಂತೆ ಕಾರ್ಯಗತಿ |
ಯೆಂತಹುದೊ ಜೀಯ ಚಿತ್ತೈಸೆಂದು ಮಂಚಣ್ಣ ಬಿನ್ನವಿಸಿದಂ ನೃಪಂಗೆ || ೨೨ ||

ಕರೆದು ಶ್ರುತದೃಷ್ಟಾನುಮಾನಂಗಳಿಂದವರ |
ಪರಿಯಂ ವಿಚಾರಿಪುದೆ ನೀತಿಯಲ್ಲದೊಡೆ ತವ |
ಚರಣಮಂ ಕೂಡಿದವರೈಸೆ ನಾವೆಮಗೆ ಬೇರುಂಟೆ ಸುಖದುಃಖಂಗಳು ||
ಸಿರಿವೆರಿಸಿ ಬಾಳ್ವರಂ ಕಂಡಿವಂ ನಾಡೆ ತರ |
ಹರಿಸಲಾರದೆ ನುಡಿದನೆಂದೊಡೀ೨ ಕಾರ್ಯಾರ್ಥ |
ದಿರವ ಬಿನ್ನವಿಸಿದೆಂ ಚಿತ್ತಕ್ಕೆ ಸರಿತಂದುಕೊಳ್ಳಿಮೆನಲವನೀಶನು || ೨೩ ||

೧ ಬಿಜ್ಜಳಂಗಾಗಲಾ (ಪು, ಮು, ಗೂ, ಕೋ.) ೨ ಸೆನ್ನದೀ (ಮ.)

ತೂಗುವ ಕಿರೀಟಮಲುಗುವ ಚೌಕುಳಿಗಳ ನಸು |
ಬಾಗಿದವಯವದ ಕದಪಿನೊಳವುರ್ದ ಕೈಯ ಸುಳಿ |
ನಾ ಗುಳಿಕೆಗಳ ರಸಂದೆಗೆದ ಜಿಹ್ವೆಯ ಬೆಮರ್ವನಿಗಳುದಿಸಿದ ವದನದ ||
ರಾಗವಡಗಿದ ಮನದ ಬಿಸುಸುಯ್ಲ ಸೂಟಿಗಿಂ |
ಬಾಗಿರ್ದ ನಾಸಿಕದ ಬಿಗಿದ ಬೆರಗಿನ ಚಿಂತೆ |
ಗಾಗರಂ ತಾನಾಗಿ ನೃಪತಿಲಕನಿರ್ದನಾ ಸಮಯದೊಳದೇಂ ಪೇಳ್ವೆನು || ೨೪ ||

ಸುಮ್ಮನಿಹುದಿನ್ನುಚಿತವಲ್ಲೆಂದು ಚಿತ್ತವಂ |
ನೆಮ್ಮಿದಾತಂಕದಿಂ ಚರನೊರ್ವನಂ ಕರೆದು |
ನೀಮ್ಮಹಾವೇಗದಿಂ ಚೆನ್ನಬಸವಂ ಬಸವನಂ ಕರೆದು ತಾರೆನಲವಂ ||
ಗಮ್ಮನವರಂ ಕರೆದು ತರಲಾಗ ಬಿಜ್ಜಳಂ |
ದುಮ್ಮಾನದಿಂ ಕುಳ್ಳಿರೆನಲವನ ಹೃದಯಮುಂ |
ತಮ್ಮೊಳರಿದಾಗಲಾ ನೃಪತಿಯರ್ಧಾಸನೊದೊಳಿರ್ವರುಂ ಮಂಡಿಸಿದರು || ೨೫ ||

ಮೆಲ್ಲಮೆಲ್ಲನೆ ಮಾತುದೆಗೆದಸಂತಃಕರಣ |
ದಲ್ಲಿರ್ದುದಂ ಬಹಿಷ್ಕರಿಸಬೇಕೆಂದೆನುತೆ |
ಬಲ್ಲರಿಗೆ ಬಲ್ಲಹಂ ಚೆನ್ನಬಸವೇಶ್ವರಂ ವಿನಯಸಂಪ್ರೀತಿವೆರೆದ ||
ಸೊಲ್ಲನಿಂದರಸ ನಿನ್ನಯ ಭಾವಮೆಂದಿನಂ |
ತಿಲ್ಲ ಮರೆಬೇಡವೆನ್ನೊಡನುಸಿರ್ ನಿನಗಾದ |
ತಲ್ಲಣವದೇನಿಳೆಯೊಳೇನುಂಟಸಾಧ್ಯಮೆನಲವನೀಶನಿಂತೆಂದನು || ೨೬ ||

ಏನೇಳ್ವೆನೆಲೆ ಚೆನ್ನಬಸವೇಶ ಕೇಳ್ ನಿನ್ನ[೧] |
ಮಾವನಾಟವನೀಗಲೆಮ್ಮ ಪುರದೊಳಗಿರದೆ |
ಹಾವಳಿಯನೊದಗಿಸಿದ[೨]ನಖಿಳದೇಶದ ದುಷ್ಟರಂ ನೆರಪಿ ಭಕ್ತರೆಂದು ||
ತೀವಿರ್ದ ಪುರದ ಭಂಡಾರ ಬೊಕ್ಕಸ ಗಜ ಹ |
ಯಾವಳಿಯನೆಲ್ಲವಂ ತನ್ನ ವಶವರ್ತಿಯಂ |
ನಾವು ಮುಂದರಿಯದೇ ಮಾಡಲವನೆಲ್ಲವಂ ಜಂಗಮರಿಗೊಲಿದಿತ್ತನು || ೨೭ ||

---

೧ ನಿಮ್ಮ (ಶಿ.) ೨ ನೆಸಗಿಸಿದ (ಪ.)

ಎಲ್ಲೆಲ್ಲಿಯುಂ ನೋಡೆ ಜಂಗಮರ ಮಠಮನೆಗ
ಳೆಲ್ಲೆಲ್ಲಿಯುಂ ನೋಡೆ ಜಂಗಮರ ಊಟಮು |
ತ್ತೆಲ್ಲೆಲ್ಲಿಯುಂ ನೋಡೆ ಜಂಗಮರ ಸೂಳೆಬಂಟಿಕೆ ನಮ್ಮ ನಗರದೊಳಗೆ ||
ಎಲ್ಲೆಲ್ಲಿಯುಂ ನೋಡೆ ಜಂಗಮರ ಹಾದರಮು |
ದೆಲ್ಲೆಲ್ಲಿಯುಂ ನೋಡೆ ಜಂಗಮರ ಕಳವಲ್ಲ |
ದಿಲ್ಲವಿನ್ನೇಗೆಯ್ವೆನೆನೆ ಚೆನ್ನಬಸವನಾ ಬಿಜ್ಜಳಂಗಿಂತೆಂದನು || ೨೮ ||

ಕಳವು ಹಾದರಮೆಂಬಿವೆಮ್ಮ ಶಿವಭಕ್ತರಂ |
ಕುಳದೊಳಗೆ ಪೊದ್ದಲರಿಯವು ಬಸವರಾಜನಿಂ |
ನೆಲದೊಳಿರ್ಪನ್ನೆಗಂ ಕಲಿ ಬಂದು ಹೊದ್ದಲಮ್ಮದು ನಿಮ್ಮ ಧಾರುಣಿಯೊಳು ||
ಪಲವು ಮಾತೇಂ ಕೊಂಡೆಯರ ನುಡಿಯ ಕೇಳ್ವುದಕೆ |
ಫಲವಾಯ್ತು ಪಿಂತೆ ನೆರೆ ಕಂಡು ಕಂಡುಂ ಮತ್ತೆ |
ತಿಳಿಯದಲ್ಲಾ ಕ್ಷಾತ್ರತಾಮಸಂ ಕ್ಷತ್ರಿಯರ ಕುಲಕೆ ಸಹಜವಿದೆಂದನು || ೨೯ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೦ ||

ಅಂತು ಸಂಧಿ ೭ಕ್ಕಂ ಪದಗಳು ೩೦೨ ಕ್ಕಂ ಮಂಗಳಮಹಾಶ್ರೀ

ಎಂಟನೆಯ ಸಂಧಿ

ಸೂಚನೆ

ರಾಜನೀತಿಯನೊಲ್ದು ಕಲ್ಯಾಣಪಟ್ಟಣದ
ರಾಜನೆನಿಸುವ ಬಿಜ್ಜಳಂಗಾಗಲಾ ಬಸವ |
ರಾಜನಳಿಯಂ ಚೆನ್ನಬಸವರಾಜಂ ಪೇಳ್ದನಧಿಕತರವಿನಯದಿಂದೆ ||

ದಶಶಿರಂ ತಪದಿಂದಲೆದ್ದೀಶಪದಯುಗಕೆ |
ಸಹಸದಿಂ ನಮಿಸಲಿನ್ನೂರೊಂದು ಕಣ್ಣಿರಲ್ |
ಪೊಸತೆನುತೆ ಕೌತುಕಂಬಟ್ಟು ನಾರಾಯಣನ ನಯನವೊಂದಿರ್ಪುದೆಂದು ||
ಉಸಿರುವರೆನುತ್ತೀಕ್ಷಿಪನ ಮುಗ್ಧಭಾವಕ್ಕೆ |
ಶಶಿಧರಂ ಮರಳಿ ಮೆಚ್ಚಲ್ ಕಂಡು ಹರಿಯಜರ್ |
ಬಸವಳಿವುತಿರೆ ನೋಡಿ[೧] ನಸುನಗುವ ಪಂಪಾವಿರೂಪಾಕ್ಷ[೨] ಸಲಹೆಮ್ಮನು || ೧ ||

ತರಣಿಮಂಡಲವನಭ್ರಂ ಸುದರ್ಪಣವನಂ |
ದಿರದೆ ಕಾಳಿಕೆ ನಿರ್ಮಳೋದಕವನಾ ಪಾಂಸೆ |
ಪರಮಾತ್ಮನಂ ಜೀವಭಾವಮಿವು ಮುಸುಕಿಕೊಂಡಿರ್ಪಂತೆ ಜಗದೊಳುಳ್ಳ ||
ಅರಸುಗಳ ವೇಷ್ಟಿಸಿರ್ಪುದು ಕ್ಷಾತ್ರತಾಮಸಂ |
ನಿರುತವದ ಪರಿಹರಿಸುವೊಡೆ ರಾಜನೀತಿ[೩]ಬೇ |
ಕೊರವೆನಾಳಿಲಿಪುದೆಂದು ಚೆನ್ನಬಸವೇಶ್ವರಂ ಬಿಜ್ಜಳಗಿಂತೆಂದನು || ೨ ||

ಪರಿಕಿಪೊಡೆ ಸಂತತಂ ವಕ್ರಚರಿತಂ ನುಡಿವೊ |
ಡೆರಡುನಾಲಗೆ ಧನವನೇ ಕಾಯ್ದುಕೊಂಡಿರ್ಪ |
ಪರಮಲೋಭಂ ಭೋಗದೊಡನೆ ಕೂಡಿದ ಬಾಳ್ವೆ ಪರರಸುವನುಗಿವ ಕೋಪಂ ||
ಉರಗಂಗಮರಸಿಂಗಮನ್ಯೋನ್ಯಮಾದೊಡಂ |
ನಿರುತದಿಂ ಕಣ್ಣೆ ಕಿವಿ ಕಿವಿಯೆ ಕಣ್ಣೆಂದೆಂಬ |
ಪರಿಯಾಯಭೇದವಿದು ನಾಡಾಡಿಗಿದು ನೀತಿಯನುಚಿತಂ ಕೇಳೆಂದನು || ೩ ||

೧ ಕೇಡು (ಮ.) ೨ ಪರಾಧೀಶ (ತು.) ೩ ಯುಂ | ಟೊರೆವೆನಾ (ಹು, ಮ.)

ಕೊಂಡೆಯರ ನುಡಿಗಳೇ ಕರ್ಣಕ್ಕೆ ಭೂಷಣಂ |
ಕೊಂಡೆಯರ ಮಾರ್ಗವೆರ್ದೆದಾವರೆಗೆ ಭಾಸ್ಕರಂ |
ಕೊಂಡೆಯರೆ ತನಗೆ ಕಡುಹಿತವರೆಂದೆರಡಿಲ್ಲದೇ ನಂಬುವವನೀಶನ ||
ಮಂಡಲಕೆ ಕೇಡಪ್ಪುದಾ ನೃಪನ ಸಿರಿ ಸಘೋ |
ಮಂಡಲದ ಕುಸುಮದೊಲ್ ಬಯಲಪ್ಪುದದರಿನಿಂ |
ಮಂಡಲೇಶ್ವರರಾವಗಂ ಕೊಂಡೆಯಂಗೊಳ್ವುದನುಚಿತಂ ಕೇಳೆಂದನು | ೪ |

ಕುಳಿರ್ವ ಮಂಜಿನ ಪನಿಗಳಿಂ ಕಮಲಸಂಕುಲಂ |
ಜಲಬಿಂದುವಿಂದೆ ಮಧು ಲೋಭದಿಂ ಗುಣಗಣಂ |
ಗಳಹತನದಿಂದೆ ಗೌರವಮನಾಚಾರಪ್ರವರ್ತನದೆ ಕುಲದ ಪೆಂಪು ||
ಪುಳಿಯಿಂದೆ ಪಾಲ್ ಬಹುಳಕೋಪದೆ ತಪಃಫಲಮು |
ಮಲೆದು ಬೀಸುವ ಗಾಳಿಯಿಂ ಮೇಘದೊಡ್ಡವಣೆ |
ಸಲೆ ಕಿಡುವವೊಲ್ ಕಿಡುವುದರಸಾಳ್ವಧರೆ ಪಿಸುಣರಿಂ ನೃಪತಿ ಕೇಳೆಂದನು || ೫ ||

ಖಳರ ಮಾಯಾವಿಗಳ ದುರ್ವಿನೀತರ ಮದಾ |
ಕುಳರ ದುರ್ಜನರ ಡಂಭರ ನೀತಿಮಾರ್ಗವಿ |
ಹ್ವಲರ ನಿಷ್ಠುರವಚನಕೋವಿದರ ದುರ್ಬೋಧಕರ ದುರಾಚಾರಪರರ ||
ಕುಲವಿಹೀನರ ಕುಮಂತ್ರಾನ್ವಿತರ ಶ್ರುತಿಪಥವ |
ನುಳಿದು ನುಡಿವ[೧]ವರ ಕಂಡೊಡೆ ನಿರಾಕರಿಸುವುದು |
ನೆಲಸನಾಳ್ವರಸುಮಕ್ಕಳ ನೀತಿ ಬಿಜ್ಜಳನೃಪಾಲ ನೀಂ ಕೇಳೆಂದನು || ೬ ||

ಪರರ್ಗೆ ತಾಂ ಮಾಡಿದುಪಕಾರಂಗಳಂ ತನಗೆ |
ಪರರಿಂದಲೊದಗಿದಪಕಾರಂಗಳಂ ನಾಡೆ |
ಪರರ ಕೂಡಾಡಿ ಕಿಡಿಸುವುದುತ್ತಮರಮತಕೆ ಸಲ್ಲದು ಮಹೀತಳದೊಳು ||
ಪರರ್ಗೆ ತಾಂ ಮಾಡಿದಪಕಾರಂಗಳಂ ತನಗೆ |
ಪರರಿಂದಲೊದಗಿದುಪಕಾರಂಗಳಂ ನಾಡೆ |
ಪರರ ಕೂಡಾಡಿ ತೋರುವುದುತ್ತಮರ ಮತಕೆ ಸಲ್ವುದೈ ಕೇಳೆಂದನು || ೭ ||

---

೧ ನಡೆವ (ಶಿ.)

ಧರ್ಮವುಂ ಬಿಡದೆ ಮಾಳ್ಪುದು ತನ್ನ ರಾಜ್ಯದೊಳ್ |
ಧರ್ಮಿಷ್ಠರುಳ್ಳೊಡವರಂ ಪಾಲಿಪುದು ವಿಮಲ |
ಧರ್ಮಕ್ಕೆಡರ್ ಬಂದೊಡಾಲಸ್ಯಮಂ ಮಾಡದೊಡನೊಡನೆ ಪರಿಹರಿಪುದು |
ಧರ್ಮಹೀನರನುದಾಸಿಪುದು ನಿರುಪಮಜಾತಿ |
ಧರ್ಮಂಗಳಂ ತಪ್ಪದಂತೆ ನಡೆಸುವುದು ನೃಪ |
ಧರ್ಮದ ರಹಸ್ಯವಿದು ತಪ್ಪದವನೀಪಾಲತಿಲಕ ನಿಂ ಕೇಳೆಂದನು || ೮ ||

ಧನವಧಿಕವಾಗಬೇಕೆಂಬಾಶೆಯಿಂದೆ ದು |
ರ್ಜನರ ಚತುಡೆಯ ಮಾತುಗಳ ಕೇಳ್ದು ಸಕಲಸ |
ಜ್ಜನರ ನಾಕರಿಸಿ ಪಾಪವನೆ ಸಂಗ್ರಹಿಪಂತೆ ಸಂಗ್ರಹಂ ಮಾಡಿದೊಡವೆ ||
ಘನವಾಗಿ ಕಾಲೋಚಿತಕೆ ತೋರಿ ಹೆಚ್ಚಿದಿಂ |
ಧನ ವಹ್ನಿಯಿಂ ದಹನವಪ್ಪಂತೆ ಶತ್ರುನೃಪ |
ಜನದಿಂದೆ ಕಡೆಗೆ ಬಯಲಹುದು ಪುಸಿಯಲ್ಲವನಿಪಾಲಕನೆ[2] ಕೇಳೆಂದನು || ೯ ||

ಧನದಾಸೆಗಾಗಿ [3]ದೇಶದ ಪ್ರಜೆಯ ನೋಯಿಸದೆ |
ಧನವುಳ್ಳವರ ಬದುಕುಗಳ ಕಂಡು ಕರುಬಿಸದೆ |
ಧನವನೊದವಿಸುವುದೊಕ್ಕಲಿಗೈದುಪಾಲರಸಿಗೊಂದುಪಾಲಿಂ ಕ್ರಮದೊಳು ||
ಧನವಧಿಕವಹುದಿಂ ಪರಿಯೊಳಾರ್ಜಿಸಿದೊಡೆ ತದ್ |
ಧನವನೊಲವಿಂ ಸುಪಾತ್ರದೆ ವೆಚ್ಚಿಸಲ್ ಪುಣ್ಯ
ಧನಪಾಲನಪ್ಪನಾ ನೃಪತಿ ಪರಲೋಕದೊಳಗರಸ ನಿಂ ಕೇಳೆಂದನು || ೧೦ ||

ಆಣೆಯೀಗರಸುತನವೆಂದೆಂಬ ತನುವಿಂಗೆ |
ಪ್ರಾಣಮುದಕಪಜಯಂ ಬಂದು ಪೊರ್ದಿದೊಡೆ ತ |
ತ್ಪ್ರಾಣಪತಿ ಹರಣವಿದರ್ಂ ಮೃತವನೈದಿದವನಿದಕೆ ಸಂದೇಹವೇಕೆ ||
ತ್ರಾಣವಿಲ್ಲದೆ ಬರಿಯ ಭುಜಬಲದ ಗರ್ವದಿಂ |
ಕೋಣೆಕೊಕ್ಕರಿಯಲಾರದೆ ಮುರಿದು ಬರ್ಪವಂ |
ರಾಣಿಯರ ನಗೆಯ ಕೈಕೊಳ್ಳ ಪಾದ್ಮದ ಗತಿಯ ನರ್ತಕಂ ಕೇಳೆಂದನು || ೧೧ ||

---

೧ ನಸ್ಥ (ಶಿ.) ೨ ಪಾಲಕನಂ (ಮು, ಹು, ಗೋ, ಪ.) ೩ ದೇಶಪ್ರಜೆ (ಮ.)

ಮರೆಯ ಹೊಕ್ಕರ ಕಾಯ್ವ ಮಾರಾಂತ ಭೂಭುಜರ |
ನಿರಿವ ಬೇಡಿದವರ್ಗೆ ಬೇಡಿದ ಸುವಸ್ತುವಂ |
ನೆರೆ ಕೊಡುವುದೀಗ ಕ್ಷತ್ರಿಯರ ಸದ್ಧರ್ಮವರ್ತನವಾ ಸುವರ್ತನವನು ||
ತೊರೆವು ಚಾವಡಿಯೊಳಗೆ ಗಳಹಿ ಹುಯ್ಯಲ ಕಂಡು |
ಬಿರುತೋಡಿ ಘಟ್ಟಬೆಟ್ಟಂಗಳಂ ಸಾರ್ದು ಬಾ |
ಯ್ದೆರೆವವಂ ರಾಜನೇ ಹಗರಣದ ರಾಜನಲ್ಲದೆ ಮಹೀಮಂಡಲದೊಳು || ೧೩ ||

ಎನಿತೆನಿತು ಸನ್ಮಾರ್ಗದೊಳ್ ಬಿಡದೆ ನಡೆದೊಡೆಯು |
ಮೆನಿತೆನಿತು ಸತ್ಕೀರ್ತಿವಡೆದೊಡೆಯುಮವನಿಯೊಳ |
ಗೆನಿತೆನಿತು ಸದ್ಧರ್ಮಸಂಜನಿತವಸ್ತುವಂ ಪಿಡಿದೊಡೆಯುಮೆರ್ದೆ ನೆಲದೊಳು ||
ಎನಿತೆನಿತು ಬಲ್ಲವಿಕೆ ಮೊಳೆತೊಡಂ ಬಾಹುಬಲ |
ಮೆನಿತೆನಿತು ತನಗೆ ಪಿರಿದಾಗಿರ್ದೊಡಂ ಶತ್ರು |
ಜನವ ಸಾಧಿಸುವಲ್ಲಿ ಕರುಣಮಂ ಮಾಳ್ಪುದನುಚಿತವರಸ ಕೇಳೆಂದನು || ೧೪ ||

ಸಾಮವೇ ವೇದಂಗಳೊಳಗಧಿಕವಾದಂತೆ |
ಸಾಮವೇ [1]ವಿಗಿಲಾಯ್ತುಪಾಯಂಗಳಲ್ಲಿ ತತ್ |
ಸಾಮವೇ ಭೂಭುಜರ ಬಾಳ್ಕೆ[2]ಗನುಸಾರಿ ಮಿಕ್ಕಿನ ಮೂರುಪಾಯಂಗಳು ||
ಸಾಮಾನ್ಯಮವರೊಳಗೆ ದಂಡಮೆಂದೆಂಬುವದು |
ಸಾಮಾನ್ಯದೊಳಗೆ ಸಾಮಾನ್ಯವಿದನರಿಯದರು[3] |
ಸಾಮಾನ್ಯರೆನಿಪರ[4]ವನೀಪತಿಗಳೊಳ್ ನೃಪಲಲಾಮ ನೀಂ ಕೇಳೆಂದನು || ೧೫ ||

ಅರಿನೃಪರ ಸಂಧಾನಸಮಯಂಗಳಲ್ಲಿ ಕರಿ |
ತುರಗಂಗಳೇರಾಟದಲ್ಲಿ ಸಂಗರದಲ್ಲಿ |
ತರುಣಿಯರ ಕೇಳಿಮೇಳಂಗಳೆಡೆಯಲ್ಲಿ ಮಜ್ಜನದಲ್ಲಿ ಮಲಗುವಲ್ಲಿ ||
ಪರಿಪರಿಯ ಪರಿಕರದ ಭೋಜ್ಯಭೋಜನದಲ್ಲಿ |
ವರವಿವಾಹಾದ್ಯನೇಕೋತ್ಸವಗಳಲ್ಲಿ ಭೂ |
ವರನಿಕರಕೆಚ್ಚರಿಕೆ ಪಿರಿದಾಗಬೇಕು ಬಿಜ್ಜಳನೃಪತಿ ಕೇಳೆಂದನು || ೧೬ ||

೧ ಮಿ (ಮ.) ೨ ಮಾಳ್ಕೆ (ಹು.) ೩ ಯದಂ (ಶಿ, ಗೋ, ಕೋ.) ೪ ಸಾಮಾನ್ಯನೆನಿಪನ (ಶಿ.)

ವ್ಯಸನಸಪ್ತಕವ ನೆತ್ತಿಗಳನಿರದೊಡೆಬಡಿದು |
ಪುಸಿಯುಸನನೀತಳದೊಳಡಿಯೂರದಂತೆ ತೊಲ
ಗಿಸಿ ಜಾತಿಸಂಕರಂಗಳ ಮೂಗನರಿದು ಬೆಳುಗವತೆಯಂ ಸುಟ್ಟು ತೂರಿ ||
ಪೆಸರನಡಗಿಸಿ ಕಳವುಪಾದರಂಗಳ ಹಿಂಸೆ |
ಯುಸುವ ತೊಲಗಿಸಿ ಧರಾತಳವನಾಜ್ಞೆಯೊಳಿ ಪಾ |
ಲಿಸುವ ರಾಜಂಗಿಹಪರಂಗಳೊಳಗನುಮಾನವಿಲ್ಲರಸ ಕೇಳೆಂದನು || ೧೬ ||

ಹಿರಿಯರೊಳ್ ದೇವರೊಳ್ ಗುರುಗಳೊಳ್ ಘನಭಯಂ |
ಪರಮಪುಣ್ಯಕ್ಷೇತ್ರತೀರ್ಥಂಗಳೊಳ್ ಭಕ್ತಿ |
ಶರಣಾಗತರೊಳಗವಗುಣಗಳಂ ನೋಡದಿಡೇರಿಸುವ ದೃಢಮೊಪ್ಪುವ ||
ಪರಿಜನಂಗಳೊಳಮಳದಯೆ ಸಾರಸಜ್ಜನರ |
ನೆರವಿಯೊಳಗಾದರಣೆ [೧]ಹಿತವರೊಳ್ ವಿಶ್ವಾಸ[೧] |
ಮಿರಬೇಕು ನೀತಿಕೋವಿದನೆನಿಸುವರಸಂಗೆ ನೃಪತಿ ನಿಂ ಕೇಳೆಂದನು || ೧೭ ||

ಸಿರಿಯು ಮದದಿಂ ಸೊಕ್ಕಿ ಮಾನ್ಯರಂ ಧಿಕ್ಕರಿಸಿ |
ಪರಿವಾರಕಾಗಾಗ ಸಂಬಳಂಗಳನಿತ್ತು |
ಪೊರೆದುಕೊಂಡಿರದೆ ಸಪ್ತಾಂಗಸನ್ನಾಹದೊಳಗೆಚ್ಚರಿಕೆಯೆನಿತಿಲ್ಲದೆ ||
ಪರಮಬಾಂಧವರ ಲೆಕ್ಕಿಸದೆ ಕೈವಿಡಿದವಳ |
ನರಿವರಿಸಿ ಸೂಳೆವೆಂಡಿರ ಸಂಗದೊಳಗಿರ್ಪ |
ಧರಣಿಪತಿಯಂ ಹಿಂಗದಿರ್ಪಳೇ ಜಯಲಕ್ಷ್ಮಿ ನೃಪತಿ ನಿಂ ಕೇಳೆಂದನು || ೧೮ ||

ಆವಾಗಲುಂ ಸಚ್ಚರಿತ್ರಮೊಂದೇ ಮಾತು |
ತಾವರಿದು ಮಾಳ್ಪ ಬೀಯ್ಯಂ ಸಕಲಪರಿಜನವ |
ನೋವಿ ಕಾಲೋಚಿತವನರಿದು ಭೋಗಿಪ ಭೋಗಮುಪರಾಧಕುಳ್ಳ ಕೋಪಂ ||
ಲಾವಕರ ನುಡಿಗೇಳದ ಕೇಳ್ದೊಡಂ ಬಲ್ಲ |
ಕೋವಿದರ ಮುಖದೆ ನಿರ್ಧರಿಸಿ ಮಾಳ್ಪುದು ಸನ್ಮ |
ಹೀವಲ್ಲಭರ ಮಾರ್ಗವಿದ ಪಿಡಿವುದುತ್ತಮೋತ್ತಮವರಸ ಕೇಳೆಂದನು || ೧೯ ||

---
೧ ಹಿತರೊಳತಿವಿಶ್ವಾಸ (ಹು, ಮ.)

ಮಳೆಯಿಂದೆ ಸಕಲಸಸ್ಯಾದಿಗಳ್ ಕುಸುಮಪರಿ |
ಮಳದಿಂದೆ ತುಂಬಿಗಳ್ ಜ್ಞಾನದಿಂ ತಪಮಿಂದು |
ಕಳೆಯಿಂ ಚಕೋರಿಗಳ್ ಧರ್ಮದಿಂದರಸಾಳ್ವ ಭೂಮಂಡಲಂ ಭಾವಿಸೆ ||
ಕೆಳೆಯರಿಂ ಬೇಟಂ[೧] ಸುಪುತ್ರರಿಂದಿಹಪರಂ |
ಗಳ ಸುಖಂ ಪೆರ್ಚುವಂದದೆ ಪೆರ್ಚುವುದು ಮಂತ್ರಿ |
ತಿಲಕನಿಂದೈಶ್ವರ್ಯಮವನಿಪಂಗಿದು ರಾಜನೀತಿ ನೀಂ ಕೇಳೆಂದನು || ೨೦ ||

ಅದರಿನುತ್ತಮಸಚಿವನುಳ್ಳ ಭೂಪಾಲಕನ |
ಪದವಿಗಪ್ಪುದು ಪೆರ್ಚು ದಿನದಿನಕೆ ಶುಕ್ಲಪ |
ಕ್ಷದ ಚಂದ್ರನಂದದಿಂ ನಾಡಾಡಮಾತ್ಯನೇ[೨] ತವ ದಣಾಯಕ ಬಸವನು ||
ಒದವಿದೈಶ್ವರ್ಯದಿಂ ಬಾಳ್ವರಂ ಕಂಡು ಕಡು |
ಗುದಿದು ಮತ್ಸರದೆ ಕೊಂಡೆಯವನುಸಿರಿದೊಡೆ ಕೇ |
ಳ್ವುದು ನೀತಿಮಾರ್ಗವೇ ರಾಯ ನೀಂ ಕೇಳೆಂದು ಚೆನ್ನಬಸವಂ ನುಡಿಯಲು[೩]
|| ೨೧ ||

ಪರೆದುದಾಕ್ಷಣ ಮನದ ಸಂದೇಹಮೆಂದೆಂಬ |
ಪರಮತಿಮಿರಂ ವಿವೇಕಮೆನಿಪ್ಪ ಪೊಂಬಿಸಿಲ್ |
ನಿರುತದಿಂ ಪಸರಿಸಿತು ವದನವೆಂದೆಂಬ ನೀರೇಜಮಿರದಲರ್ದುದೊಡನೆ ||
ವರಬಸವರಾಜನ ಮನಂ ತನ್ನ ಮನವೆಂಬ |
ಗುರುಚಕ್ರವಾಕಮೆರಡೊಂದಾದುವಂದು ಭೂ |
ವರನ ಸುಜ್ಞಾನಸೂರ್ಯೋದಯಂ ತಲೆದೋರಲೇನೆಂಬೆನಚ್ಚರಿಯನು || ೨೨ ||

ನೀವಲ್ಲದೆಮಗೆ ಹಿತರುಂಟೆ ಬೇರೆಮ್ಮ[೪] ಧರ |
ಣೀವಲಯವೆಲ್ಲವುಂ ಬಸವರಾಜನ ವಶಂ |
ಪಾವನಚರಿತ್ರರಲ್ಲಾ ನೀವೆನುತ್ತಲುಡುಗೊರೆಗಳಂ ತರಿಸಿ ಕೊಟ್ಟು ||
ಭಾವಿಸಿ ನಿಜಾಲಯಕ್ಕಳಿಯಮಾವಂದಿರಂ |
ತೀವಿದುತ್ಸವದೆ ಬೀಳ್ಕೊಟ್ಟಳಿದರಂ ಕಳುಪಿ |
ಭೂವರಂ ತನ್ನ ರಾಜಾಲಯಕ್ಕೈದಿದಂ ಪರಮಸಂತೋಷದಿಂದೆ || ೨೩ ||

೧ ದಾಟಂ (ಶಿ.) ೨ ನಾಡಾಡಿಮಾತ್ರನೇ (ಹು, ಶಿ, ಗೋ, ಕೋ.) ೩ ನುಡಿದನು (ಶಿ.) ೪ ಬೇರೊಂದು (ಶಿ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಕಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೨೪ ||

ಅಂತು ಸಂಧಿ ೮ಕ್ಕಂ ಪದಗಳು ೩೨೬ ಕ್ಕಂ ಮಂಗಳಮಹಾಶ್ರೀ

ಒಂಬತ್ತನೆಯ ಸಂಧಿ

ಸೂಚನೆ

ಇನನಸ್ತಮಾನವರ್ಣನೆಯನಾ ತಮದೊಳಂ |
ದನುವಿನಿಂದೈತಪ್ಪ ಜಾರೆಯರ ಜಾತಿಯಂ |
ಘನತರದ ಚಂದ್ರೋದಯದ ವರ್ಣನೆಯನೊಲಿದು ಪೇಳ್ವೆಂ ಸವಿಸ್ತರದೊಳು * ||

ಮುಖವೈದನುಳ್ಳ ಮಹಿಮನ ತೊಡೆಯ ಮೇಲೆ ಹಿಮ |
ಶಿಖರಿಯಾತ್ಮಜೆ ಸುಖದೊಳಿರಲಲ್ಲಿಗಯ್ತಂದು |
ಶಿಖಿವಾಹನಂ ಮುಂದೆ ನಿಂದು ತನ್ಮಾತೆಯುರಮಂ ನಿರೀಕ್ಷಿಸಿದೊಡಲ್ಲಿ |
ಮುಖಮದೈವತ್ತುನಾಲ್ಕಕ್ಷಿನೂರೆಂಟಿರಲ್ |
ಲಿಖಿಸಿರ್ದ ಪ್ರತಿಮೆಯಂದದಿ ಬೆರಗುವಟ್ಟ ಷಣ್ |
ಮುಖನ ಮುಗ್ಧಸುಭಾವವಂ ಕಂಡು ನಗುವ ಪಂಪಾಧವಂ ಸಲಹೆಮ್ಮನು || ೧ ||

ಅನ್ನೆಗಂ ಪಶ್ಚಿಮಾಂಗನೆ ಲೀಲೆಯಿಂ ಪಿಡಿದ |
ರನ್ನದಿಮ್ಮೈಗನ್ನಡಿಯೊ ವಾರುಣಿಯ ಮಸ್ತ |
ಕೋನ್ನತಸವೀನವಮಾಣಿಕ್ಯವೋ ವಡಬಾಗ್ನಿಯಿಂ ಸಿಡಿದ ಪೆರ್ಗಿಡಿಯಿದೋ ||
ಮುನ್ನೀರ ಸತಿ ಪತಿಗೆಯಾರತಿಯನೆತ್ತಿ ಜವ |
ದಿನ್ನೆಗಪಿ ಚೆಲ್ಲಲಾಕೆಯ ಕೈಯೊಳಿರ್ಪ ಪೊಸ |
ಪೊನ್ನ ಪರಿಯಾಣಮೆನಲಸ್ತಗಿರಿಮಸ್ತಕದೊಳಿನಬಿಂಬಮೆಸೆದಿರ್ದುದು || ೨ ||

ಘನಹೇತಿಯಿಂದಂ ದ್ವಿಜೋಪಹತಿಗೆಯ್ದು ವೇ |
ದನೆಗಳಂ ಕುಲಗೋತ್ರಶಿರಕೆ ಸಮನಿಸಿ ಬಿಡದೆ |
ಮುನಿದು ರಾಜಿಸುವ ಸೈಂಧವವೃದ್ಧಿಯಂ ಕೆಡಿಸಿ ಕುವಲಯಮನುರಿಪಿ ನಿಚ್ಚಂ ||
ಜನದರಿಕೆಯಿಂದೆ ವಾರುಣಿಗೆ ಮೋಹಿಪ ಮಹಾ |
ತ್ಮನ ತೇಜಮಿರ್ದಪುದೆ ಪೇಳೆನಲ್ ಸೂರ್ಯನು |
ಳ್ಳನಿತು ಕಿರಣಮನುಳಿದು ತವೆ ದಿಗಂಬರನಾಗುತಸ್ತಗಿರಿಯಂ ಸಾರ್ದನು || ೩ ||

---

* ಇನನಸ್ತಮಾನವರ್ಣನೆಯನಾ ತಮದ ವ | ರ್ಣನೆಯನಾ ಸಮಯದೊಳ್ ಜಾರೆಯರ ಜಾತಿಯಂ | ಘನತರದ ಚಂದ್ರೋದಯವನದರ ಜೊನ್ನವಣ್ಣನೆಗಳಂ ವರ್ಣಿಸುವೆನು || (ಶಿ.) ೧ ಪ್ರತಿಮೆ (ಗೋ, ಪ, ತು.) ೨ ನಲಿವ (ಶಿ.)

ಮಧುಪಪ್ರಸಂಗಿ ಪುಷ್ಪಿತೆ ಬಂಡಿನಿಂ ಮೆರೆವ |
ಸುವತಿಯುನ್ಮವಿ ಪಗಲೆ ಬಯಲೊಳಗೆ ನೆರೆವ ಕುಲ |
ಪಘುಪ್ರಂಟೆ ಮೋಷಮುಬ್ಜನಿಯ ಸಂಗಂ ಸಾಕೆನುತ್ತೆ ಸಂಧ್ಯಾದೇವಿಯ ||
ಮದುವೆಯಾಮೊಸಗೆಯೋಕುಳಿಯಾಡಿದಂತೆ ಕೆಂ |
ಪೊದವಲಂಬರಕೆ ನವಸತಿಯನಂದೇಕಾಂತ |
ಸದನದೊಳ್ ಕೂಡಲೊಯ್ವಂತೆ ರವಿ ಸಂಜೆಸಹಿತುದಧಿಗೇಹಂಬೊಕ್ಕನು || ೪ ||

ಅಳಲಿದುವು ಭೂಚಕ್ರಚಕ್ರವಾಂಬುಜಭುಜಂ[1] |
ಬಳಲಿದುವು ಕುಮುದವುದಗಳ್ ಪೆರ್ಚಿದುವು ಧರಾ |
ವಳಯುವಳಯಿತವಾದುದಂಧತಮ ಕುಲಕುಲಟೆಯರ್ ನಲಿದರಲ್ಲಗಲ್ಲ ||
ಮೊಳೆತುವೊಂದೊಂದು ನಕ್ಷತ್ರ ಕ್ಷತ್ರತ್ವದೊಂ[2] |
ದಳವು ದಳದುಳವಾಯ್ತು ಕಾಮಿಜನಕಂಗಜಂ |
ಗೆಲಿವೆನೀ ಜಗವ ಗಮ[3]ನೋದ್ಯಕ್ತನಾಗಿ ನೇಸರ್ ಬೀಳಲೇವೇಳ್ವಿನು || ೫ ||

ದಿನಪನಪರಾಂಗನಾಸಂಗಿಯಾದಂದಮಂ |
ನೆನೆದು ಪದ್ಮಿನಿಯುದರಮುರಿದು[4] ಕಪ್ಪಾಯ್ತೊ ಮೇಣ್ |
ಮನಸಿಜಂ ವಿಟರನಿಡೆ ಕತ್ತುರಿಯ ಗುಂಡನಬ್ಜದ ಕೋವಿಯೊಳ್ ಜಡಿದನೋ ||
ದಿನಲಕ್ಷ್ಮಿ ವಿಧುಗಂಜಿಯಂಬುಜಕರಂಡದೊಳ್ |
ತನಗುಳ್ಳ ನೀಲಮಂ ಬೈತು ಪೋದಳೊಯೆನಲ್ |
ವನಜಮವು ಮುಗಿಯೆ ಗರ್ಭದೆ ಸಿಲ್ಕಿದಿಂದಿಂದಿರಂ ಕರಂ[5] ಚೆಲ್ವಾದುದು || ೬ ||

ಸುರಪ[6]ಮುಖ್ಯಾಖಿಳದಿಶಾಧಿಪರ ಖೇಚರರ |
ಪುರಿಯೊಳೊಪ್ಪಿರ್ಪ ಕೈದೀವಿಗೆಗಳೋ ಮೇಣ್ |
ಸ್ಫುರಿಸುವಂಬರದ ರತ್ನಂ ಪೊಗಲಾಗಸಮುದಾದ್ಯಂತಭೂಮಿಯೊಳಗೆ ||
ಪರಿಕಿಸಲ್ ಲೆಕ್ಕವಿಲ್ಲದೆ ಲೋಚನಂಗಳಂ |
ಧರಿಸಿದುದೊ ಮನಸಿಜಂ ತನ್ನ ಜಸಮಂ ನಭೋ |
ಧರಿಯೊಳಗೆ ಪೊಪ್ಪುಸೋ ಪೇಳೆನಲ್ ತಾರಾಳಿ ಗಗನದೊಳ್ ಕಣ್ಗೆಸೆದುವು || ೭ ||

೧ ಘನಂ (ತಿ.); ಕುಲಂ (ಮ.) ೨ ನಚ್ಚತ್ರಚಕ್ರತ್ವದಿಂ (ಮ.) ೩ ನಿಜಗಮನಗವ (ತಿ.)
೪ ಮುಗಿಸು (ಮ.) ೫ ಕಣ್ಗೆ (ಹು.) ೬ ಶಿಖಿಯಮನುಮುಖ್ಯಖೇದಿಶಾಧಿಪರ (ತಿ.)

ತರಣಿಯಂ ಬೆನ್ನಟ್ಟಲೊಡನೆ ಪಿಡಿಯಾಳಾದ |
ಕಿರಣಂಗಳಂ ಸೆರೆಯಿನಲ್ಲಟ್ಟಿದೋ ತಮಂ |
ನಿರುತಮಿದಿರ್ಗಂ ನಿಲ್ಲದೀ ತಮವಿದಂ ಮರೆಯೊಳಡಕದಿಂ ಪಿಡಿಯಲೆಂದು ||
ಸರಸಿಜಸಖಂ[೧] ತನ್ನ ಬಲವನಲ್ಲಲ್ಲಿ ಮೈ |
ಗರೆಪುವಿರಲೆಂದು ನೇಮಿಸಿದನೋ ಪೇಳೆನಲ್ |
ಕರಮೊಪ್ಪಿದುವು ದೀಪಮವು [೨]ತಮಸ್ತಾಪಮವು ಮನೆ[೨]ಮನೆಗಳೊಳ್ ತಪ್ಪದೆ|| ೮ ||

ಧರೆಯೊಳಗೆ ಕರಿದು ಕೃಷ್ಣಂ ಕೃಷ್ಣನಿಂ ಕಾಳಿ |
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿ |
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿಯಿಂ ಕರಿದು ಕಾಳಮೇಘಂ ||
ಪರಿಕಿಸಲ್ ಕೃಷ್ಣನಿಂ ಕಾಳಿಯಿಂದಂ ನೀಲ |
ಗಿರಿಯಿನಾ ಕಾಳಮೇಘದಿನಂಧಕಾರಮೇ |
ಕರಿದೆನಿಸಿ ಪಿರಿದೆನಿಸಿ ಪಸರಿಸಿದುದೆಲ್ಲಿಯುಂ ತಿಮಿರಮತಿನಿಬಿಡಮಾಗೆ || ೯ ||

ಗಳಿಗೆಗಳಿಗಿಗೆ ಪೆರ್ಚಿ ಬಳೆವ ತಮಮಂ ಕಂಡು |
ನಲಿದೆರಗಿದರ್ ತಮದ ರೂಪೆಂದು ಪರಸಿ ಜೋ |
ಗುಳವಾಡಿ ಮಕ್ಕಳಂ ತೂಗುವೀ ನೆವದಿಂದೆ ಕೃಷ್ಣನಂ ಕಾಳಿಂದಿಯು ||
ಅಳಿಗಳಂ ಕೋಗಿಲೆಯನೊಲಿದು ಪಾಡಿದರಂದು |
ಸಲೆ ತಮ್ಮ ಮನದಿಚ್ಛೆಯಂ ಸಲಿಪರಂ ಕಂಡು |
ಪಲವು ಪರಿಯಿಂ ಪೊಗಳದಿರ್ಪರೇಯೆಂತಪ್ಪರಾದೊಡಂ ಧಾರುಣಿಯೊಳು || ೧೦ ||

ಪಡುವಣಂಬುಧಿಯೊಳ್ ಮುಳುಂಗಿದಿನನಂ ನೆಗಳ್ |
ವಿಡಿದು ನುಂಗುಗೆ ಮೂಡುವಿಂದುವಂ ರಾಹು ಬಂ |
ದಡಿಸಿ ಮುಕ್ಕುಗೆ ಪತಿಗೆ ಕೇಡಕ್ಕೆ ಕತ್ತಲೆಗೆ ಕಡೆಗಾಲಮಾಗದಿರ್ಕೆ ||
ಕಡುನೇಹದುಪಪತಿಗೆ ಜಯಮಕ್ಕೆ ತಸ್ಕ ಸಂ
ಗಡತಿಯರ್ಗೊಲವಕ್ಕೆನುತ್ತೆ ಮಾರಿಗೆ ಪರಕೆ |
ವಿಡಿದೆತ್ತಿದಳ್ ಕುಲಟೆಯೊರ್ವಳತಿ ಕಾಮುಕರ್ ಕಾಲಭೇದವನೆಣಿಪರೇ || ೧೧ ||

---

೧ ರಿಪುಂ (ಗೋ, ಕೋ, ಪ.) ೨ ತಮ್ಮ ತಮ್ಮ ಪೊಸಮನೆ (ತಿ.)

ಧವಳಾಂಬರಮುನಮಳಮಮೌಕ್ತಿಕಾಭರಣಮುಂ |
ನವಚಂದನಾನುಲೇಪಂಗಳಂ ಬಿಟ್ಟು ಸೊಗ |
ಸುವ ನೀಲವಸನ ನೀಲಾಭರಣ ಮೃಗಮದಂಗಳನುಟ್ಟು ತೊಟ್ಟು ಪೂಸಿ |
ತವೆ ತಮುಂ ಬಹುರೂಪಮುಂ ಧರಿಸಿದಂತೆ ಪಾ |
ಪವೆ ನಾಡೆ ಪೆಣ್ರೂಪಿನಿಂ ಚರಿಸುವಂತಧಿಕ |
ತವಕದಿಂದೆಯ್ದಿದರ್ ಸಂಕೇತಭವನದೊಳ್ ಕಾದಿರ್ದ ನಲ್ಲರೆಡೆಗೆ[1] || ೧೨ ||

ಕೇಕರಿಸಿ ಕೆಮ್ಮಿ ಸೀತುಂ ಪೆರರ ಕರೆದು ಮೊದ |
ಲಾಕೆಗೀ ಪರಿ ಸನ್ನೆದೋರಿದುಪಪತಿಗೆ ನಾ |
ನಾಕುಶಲಮಪ್ಪ ಸಂಜ್ಞೆಗಳಿಂದಮೆರ್ದೆಗೆ ತರಹರವಿತ್ತು ತನ್ನ ಪತಿಯ ||
ಬೇಕೆಂದು ಕೂಡಿದಂತೊದಗಿ ನಿದ್ರೆಗೆ ಸಲಿಸಿ |
ಜೋಕೆಯಿಂ ಜಾರರೊಳ್ ನೆರೆದು ಮನೆಗಳ್ಗೆ ಬ |
ರ್ಪರ್ ಕಪಟಸತಿಯರೆಸೆದಿರ್ದರಲ್ಲಲ್ಲ ಬಹುಪಾಪಮೆಡೆಯಾಡುವಂತೆ || ೧೩ ||

ಸೊಕ್ಕುಗತ್ತಲೆಯೊಳಗೆ ಜಾರೆಯರ್ ತಮತಮಗೆ |
ತಕ್ಕರಡೆಗೈದುವೆಡೆಯೊಳಗಿರ್ದರಸತಿಯರ್ |
ಗಕ್ಕಸಾಡಿಂ ಕಾಣುತನ್ಯೋನ್ಯ ಪ್ರಿಯರೆಂದು ಸನ್ನೆಗೈದೆಡೆಗೆ ಪೋಗಿ ||
ಉಕ್ಕುವತಿ ಕಾತರದೊಳಾಲಿಂಗನಂಗೆಯ್ಯೆ |
ಸಕ್ಕಸಮನಾಗಲಿರ್ವರ ರೂಪುಗಳ್ ಬಳಿಕೆ |
ನಕ್ಕು ಪಿಂಗಿದರಿಂತು ಕಾಮಿಗಳ್ ಕಣ್ಗಾಣರೆಂಬುದೇನಚ್ಚರಿಯುಮೋ || ೧೪ ||

ಬಾಯ್ಗ ಮರ್ದುದೇಯಧರವಾಗಿ [2]ನೇಮವೆ ತಮ್ಮ |
ಕಯ್ಗೆ ಮರ್ದುದಾಗಿ ಮುಸಕಮರ್ದುದೇ ಮನೆಯಾಗಿ |
ಮೆಯ್ಗೆ ಮರ್ದುದೇ ತಳ್ಪವಾಗಿ ಕಡುತವಕಕಮರ್ದಂದಮೆ ಸಂಬಂಧವಾಗಿ ||
ಸುಯ್ಗಳುಣ್ಮದ ಭರಂ ತನುಬಂಧನಂ[3] ಹದಿರು |
ಮಯ್ಗಳುಣ್ಮದ ಚಿಲ್ಲಿ ಸಡದುಗುರ್ ಕರಗಡಿರ್ದೆ[4] |
ಪ್ರೊಯ್ಗಳುಣ್ಮದ ಸರಸಮರಿಕೆಗೂಡಿದ[5] ಪರವಶಂ ಜಾರರೊಳ್ ಮೆರೆದುದು || ೧೫

೧ ಕಾಂತರೆಡೆಗೆ (ಮು.) ೨ ಸೇಮವೆ ತಮ್ಮ | ಕಯ್ಗ ಮರ್ದುದೆ ಕುಚ ಮುಸಕಮರ್ದುದೆ ಮನೆ ಮಾಗಿ | ೩ ಚುಂಬನ (ಮು.) ೪ ಕರಗಿದಿರ್ದ (ತೌ.) ೫ ಸರಸಸಮರಗೂಡಿದ (ಕಿ.)

ತಿಳಕಮಂ ನೇವರಿಸಿ ಮೆಯ್ಯ ರಜಮಂ ತೊಡೆದು |
ಪ್ರೇಳಿವಧರ ಕುಚ ಜಿಸ್ನು ತೋಳ್ ತೊಡೆಗಳಂ ತಡವು |
ತಿಳಿವ ಮದನಾಂಬುವಂ ನಿರಿಯೊಳೊರಸುತೆ ಸಡಿಲ್ದ ಡಿಗೆಯಂ ಸ್ಥಿರಮಾಡಿ |
ಗಳಕರ್ಣಭೂಷಣಂಗಳ ತಿರ್ದುತುಸಿರಬಿಡ |
ದೊಳಗೊಳಗೆ ನಲ್ಲನಂ ಪಲ್ಲುಗುರ್ಗಳ ಚುರುಕು |
ಗಳನರಿದು ಬೈವುತಂ ಬರುತಿರ್ದರಾತ್ಮಮಂದಿರಕಂದು ಬಂಧಕಿಯರು ॥ ೧೬ ॥

ವರುಣಗಿರಿ ಪೂರ್ವಾದ್ರಿಗಳ ಹೆಚ್ಚುಕುಂದಮಂ(೧) |
ಸರಸಿಜಭವಂ ನೋಳ್ಪೆನೆಂದು ತೂಗಲ್ ಸಮಂ |
ಬರದಿರಲ್ ಪೂರ್ವಾದ್ರಿಗಿಟ್ಟ ಪಡಿಗುಂಜಿಯೋ ನಿರ್ಮೋಹಿಲೌಕಿಗರನು(೨) ॥
ಸ್ಮರನೆಂಬ ಕಾಲರುದ್ರಂ ಪ್ರಳಯಮೈದಿಸಲ್ |
ಗುರುತರಕ್ರೋಧದಿಂ ತೆರೆದ ಶಿಖಿನೇತ್ರದಂ |
ತಿರಲೆಸೆದುದುದಯಾದ್ರಿಯೊಳ್ ಚಂದ್ರಮಂಡಲಂ ಸಂಪೂರ್ಣರಾಗಮಾಗಿ ॥ ೧೭ ॥

ಕಾಲನೆಂದೆಂಬ ಕೌಳಿಗನೊಸೆದು ದೇವೇಂದ್ರ |
ನೋಲಗದೊಳಾಡುವಲ್ಲಟ್ಟ ರನ್ನದ ಚೆಂಡು |
ಮೇಲೆ ಪೊಂಜೆಂಡು ಮೌಕ್ತಿಕದ ಚೆಂಡಾದಂತನುಕ್ರಮದೊಳಿಂದುಬಿಂಬಂ ॥
ಸಾಲಾಗಿಯರುಣಂ ಪಿಶಂಗಮಾ ಸಿತರುಚಿಗ |
ಳೋಲೈಸಿ ಪೂರ್ವಾದ್ರಿಯೆಂಬ ದೇವಗೃಹದ |
ಮೇಲಿಟ್ಟ ಮಣಿಗಳಸ ಪೊಂಗಳಸ ರಜತಕಳಶಂಗಳೆನೆ ಚೆಲ್ವಾದುದು ॥ ೧೮ ॥

ತವೆ ಸಂಜೆಯೆಂಬ ತೆರೆದೊಲಗೆ ಮರಿದುಂಬಿಗಳ |
ರವದ ಮಂಗಳಗಾನಮೆಸೆಯೆ ತಾರೆಗಳೆಂಬ |
ನವಮೌಕ್ತಿಕದ ಸೇಸೆಯೊಪ್ಪೆ ಸ್ಮರಜೋಯಿಸಂ ಚಂದ್ರಂಗೆ ರಾತ್ರಿಯೆಂಬ ॥
ಯುವತಿಯಂ ಕೈಗೂಡಿಸಲ್ ಪುರುಷದರ್ಶನೋ |
ತ್ಸವದೊಳಾ ಚಂದ್ರಾಶ್ಮಮೆಂಬ ಜಘನಂ ದ್ರವಿಸ |
ಲವಯವಂ ಸಾತ್ವಿಕದೆ ವೈವರ್ಣಮಾದುದೆನೆ ದಿಗ್ಧರೆ ನಭಂ ಬೆಳತರ್ದುದು (೩)
॥ ೧೯ ॥

---

೧ ಕುಂದುಗಳ (ಮ.) ೨ ಲೋಕಗಳನು (ಹು.) ೩ ಪ, ತು, ಗೋ, ಇವುಗಳಲ್ಲಿ ಈ ಪದ್ಯವಿಲ್ಲ

ಸುರರಿಗಿಲ್ಲದೆ ಸುಧೆಯನಾರ್ಗೆಯುಂ ಕೊಡದವೊಲ |
ವರವಿಂದೆ ಕಂದುಕಂಮಾಗಾದುವೆಂದು ಶಶಿ |
ಧರೆಗಮುರ್ವಳೆಗರೆವನೋ ಸುತಸ್ನೇಹದಿಂ ಪಾಲ್ಗಡಲೆ ಪರಿತಂದುದೋ ||
ತರಣಿ ನಿಶಿಸಂಗಮಂ ಬಯಸಿ ವಿಧುವೇಷಮಂ |
ಧರಿಸಿ ಬರಲೊಗೆವ ತಣ್ಬಿಸಿಲೊ ಪೇಳೆಂಬಿನಂ |
ಕರ್ಗಿಮೆಸೆದುದ್ವಿದೆ ಚಂದ್ರಾತಪಂ ಕಾವ್ಯ[೧]ಕರ್ತೃವಿನ ಸತ್ಕೀರ್ತಿಯಂತೆ || ೨೦ ||

ಹಿಮಕಿರಣಶಾರದಾಹಾಸಮೋ ವಿಧುಸುರ |
ದ್ರುಮಸುಪ್ರಸೂನೋಚ್ಚಲಿತಸಾಂದ್ರತರರಜಮೋ |
ಕುಮುದೇಶಶಿವಜಟಾಗಂಗಾಪ್ರವಾಹಮೋ ತಾರೇಶಶಾರದಾಭ್ರಂ |
ಸಮನೆನಿಸಿ ಭೂತಳಕೆ ಸುರಿವ ಬೆಳ್ಸರಿಗಳೋ |
ವಿಮಲೇಂದುಪೀಯೂಷವಾರ್ಧಿಫೇನಪ್ರತಾ |
ಸಮೊ ಪೇಳೆನಲ್ಕೆ ಚಂದ್ರಾತಪಂ ಪಸರಿಸಿದುದಾಗಳೆಲ್ಲಾ ದೆಸೆಯೊಳು || ೨೧ ||

ನಗನಿಕಾಯಂ ರಜತಗಿರಿಯಂತೆ ಕಂಗೊಳಿಸೆ |
ಖಗಸಂಕುಲಂ ವಿಮಲಹಂಸಾಕೃತಿಯಿನೊಪ್ಪೆ[೨] |
ಬಗೆಬಗೆಯ ಪುಷ್ಪರಾಜಿಗಳಮಳವಿಚಕಿಲಪ್ರಸೂನಂಗಳೆಂಬಂತಿರೆ ||
ಜಗತೀದ್ವಿಪೌಘವೈರಾವತಪ್ರಭೆಯೊಳಿರೆ |
ನಗಜಾತೆ ವಾಣಿಯಂತಿರೆ ಯಮುನೆ ದೇವನಿ |
ಮೃಗೆಯಂತೆ ರಂಜಿಸಲ್ ಪೊಗಳ್ವ ಕವಿಯಾವನಾ ಜ್ಯೋತ್ಸ್ನಾಪ್ರಭಾವತೆಯನು || ೨೨ ||

ಸರಸಿಜಭವಂ ಸಕಲಭೂಮಿಯುಂ ತದ್ಗೃಹಾಂ |
ತರಹರ್ಮ್ಯದೇವಾಲಯಂಗಳಂ ಬೆಳ್ಳಿಯಿಂ |
ವಿರಚಿಸಿದನೆನೆ ಧರೆಯ ವರ್ಣಂಗಳಮಳಧವಳಾದ್ವೈತಮಾದುದೆನಲು ||
ಪರಿಕಿಸಲ್ ಮುತ್ತುತೀವಿರ್ದ ಪಳಿಕಿನ ದೊಡ್ಡ |
ಭರಣಿಯಂತೊಪ್ಪೆ ಬ್ರಹ್ಮಾಂಡಮಾ ಬಾಯ್ಗೆ ಮು |
ಚ್ಚಿರಿಸಿರ್ದ ಕರ್ಪೂರದ ಹಲ್ಲೆಯಂತೆಸೆಯೆ ಶಶಿ ಚೆಲ್ವಾಯ್ತು ಚಂದ್ರಾತಪಂ || ೨೩ ||

೧ ದ್ವಿದೆ ಚಂದ್ರಾತಪಂ ನಾಡೆ ಕಾವ್ಯ (ಹು.) ೨ ಬೆಳ್ಪಿನಿ (ಶಿ.) ೩ ಯೊಳೊಪ್ಪೆ (ಗೋ., ಕೇ.)

ಹರಿಪದಾಶ್ರಯನಮೃತರಂಜಿತಂ ಕೃಷ್ಣಾಂಕ |
ನುರುಕುಮುದವರ್ಧನಂ ವಿಪ್ರಾಗ್ರಳರಸಂ ನಿರಂ |
ತರಮೆಯ್ದು ಕುವಲಯಹಿತಂ೧ ಗೋಸಮೂಹಾವಲಂಬಿತಂ ಸುರಪೋಷಕಂ ||
ಒರೆಯಲೇನೆನ್ನ ಸುತನೆನ್ನಂತೆ ಪೆರ್ಮೆಯಿಂ |
ಪರಿವರ್ಧಿಪಂ ಗಡಂ ನೋಳ್ಪೆನೆನುತಲಿ ಪಾಲ |
ಶರಧಿ ಮೇರೆಯ ಮೀರಿ ಪರ್ಬಿತೆನೆ ಸರ್ವೋರ್ವಿಯಂ ಜ್ಯೋತ್ಸ್ನೆ ಪಸರಿಸಿದುದು
|| ೨೪ ||

ಸಸಿಬಟ್ಟಗಾಗಜದೊಳತನು ಕತ್ತುರಿಮುಸಿಯೊ |
ಳೊಸೆದು ಬರೆದಿರ್ದ ಮೋಹಾಗಮೋ೨ಂಕಾರಮೋ |
ದೆಸೆಗೆಟ್ಟು ತಮಮೋಡಿ ಭೀತಿಯಿಂ ಸಸಿವಸುರ ಬಹೆನೆಂದು ಪೊಡೆವೊಕ್ಕುದೋ |
ಎಸೆವಿಂದುವೆಂಬಮೃತಕುಂಭಮುಂ ವಜ್ರ ೩ಲೋ |
ಘಿಸಿ೩ ಕುರುಪಿಗಿಟ್ಟರಗಿ೪ನೊಂದುಮುದ್ರೆಯೊ೪ಳಿಯೆನಲ್ |
ಪೊಸತಾಯ್ತು ವಿಧುಬಿಂಬಮಧ್ಯದಂಕಂ ಪಳಿಕುವಸೆಯಿ೫ರ್ದ೫ ಕಾಳಿಯಂತೆ || ೨೫ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಲ್ಕರಿಂದೆ || ೨೬ ||

ಅಂತು ಸಂಧಿ ೯ಕ್ಕಂ ಪದಗಳು ೩೫೨ಕ್ಕಂ ಮಂಗಳಮಹಾಶ್ರೀ

---

೧ ಕಮಲಾಹಿತಂ (ಪು, ಅ, ಬ, ಕ, ಮ.) ೨ ಮೋಹಾಂಗಮೋ (ಶಿ.) ೩ ಶೋ । ಘಸಿ (ಶಿ.)
೪ ನುರುಮುದ್ರೆಯೇ (ಶಿ.) ೫ ಪಳಿಕ ಪೊಸೆದಿರ್ದ (ಮ.)

ಹತ್ತನೆಯ ಸಂಧಿ

ಸೂಚನೆ

ಲೀಲೆಯಿಂ ಚಂದ್ರೋದಯಂಗಂಡು [೧]ಬಿಜ್ಜಳನೃ |
ಪಾಲಕಂ [೨]ಸಖರಸಮ್ಮೇಳದಿಂ[೨] ಬೈ[೧]ತರುತೆ |
ಸೂಳೆಗೇರಿಯೊಳೆಸೆವ ಚಿತ್ರಂಗಳಂ [೩]ನೋಡಿ ತಿರುಗಿದಂ[೩] ನಿಜನಿಳಯಕೆ ||

ಭೂತಪತಿ ನತಪಾರಿಜಾತಪರಿವೃತಗಣ |
ವ್ರಾತ ವಂದಿತಕಮಲಜಾತ ನಿಗಮವ್ರಜಾ |
ತೀತ ಗುಹಕರಿವದನತಾತ ದುರಿತಾಭ್ರಘನವಾತ ಲೀಲಾಸಮೇತ ||
ಶೀತಕರಖರಕಿರಣಜಾತವೇದಾಕ್ಷಾಂಗ |
ಜಾತಮದಮರ್ದನ ವಿನೀತನಿಜಭಕ್ತಸಂ |
ಘಾತಮಂ ರಕ್ಷಿಪುದಜಾತರಿಪು [೪]ಸಂಪ್ರೀತಪಂಪಾಪುರೀವಲ್ಲಭ[೪] ||೧||

ಇಂತು ಕಣ್ಗೆಸೆವ ಚಂದ್ರೋದಯವ ಕಂಡು ಭೂ |
ಕಾಂತಬಿಜ್ಜಳನೃಪಾಲಂ ಪುರವಿಹಾರಚಿ |
ತ್ರಂ ತನಗೆ ಪುಟ್ಟಲದವನೆಯನೊಲವಿಂ ಪೊರಡೆ ನಾಗರಿಕವಿಟರಿರ್ವರು ||
ಪಿಂತೆಂದ್ವಿ ಪೀಠವರ್ಧನವಿದೂಷಕರೊಡನೆ |
ಸಂತೋಷದಿಂ ಪಣ್ಯವೀಧಿಗೈತರಲಾಗ |
ಮುಂತೆ ಪೂವಿನ ಸಂತೆ ಕಾಣಿಸಿದುದಪ್ರತಿಮಕಂತುಶರಜಾಲದಂತೆ ||೨||

ಕೇತಕಿಯ ವಾಸನೆಯಿದಿದುವೆ ಮಲ್ಲಿಗೆಗಂಪು |
ಜಾತಿಗಳ ಗಂಧಮಿದು ಸಂಪಗೆಯ ಸೌರಭಮಿ |
ದೀ ತೆರಂ ಪಾದರಿಯ ಪರಿಮಳಮಿದೀಗಮಿದು ಕುಂದದಾಮೋದಮೆಂದು ||
ಪ್ರೀತಿ ಮಿಗೆ ಮಾಲೆಗಾರ್ತಿಯರುಸಿರುತಿರ್ಪ ಸವಿ |
ಮಾತೆಸಲ್ ಮಧುಪರವಮೊಡಗೂಡಿ ಕಂಪುಗಳ |
ಜಾತಿಯುಂ ಜಿ ರಿಜೀರ್ಕೈದಿಸುತೆ ಸುಳಿಗಾಳಿ ಪೂವಸರದೊಳ್ ಮೆರೆದುದು[೫] ||೩||

೧-೧ ಸಖಿಸಹಿ ಸ್ತ್ರೀಳದಿಂ ಬಿಜ್ಜಳನೃಪಾಲನೈ (ಮು, ಅ, ಬ, ಕ.) ೨-೨ ಸಕಲಸಮ್ಮೇಳದಿ (ತ.) ೩ ನೋಡುತ್ತೈದಿದಂ (ಹು, ಮು.) ೪ ನಿತ್ಯಸಂಪ್ರೀತಪಂಪಾವಲ್ಲಭಾ (ತು.); ಸ್ತುತ್ಯಸಂಪ್ರೀತಪಂಪಾವಲ್ಲಭಾ (ಹು, ಮು.); ಸತ್ಯಸಂಪ್ರೀತಪಂಪಾವಲ್ಲಭಾ (ಗೋ.) ೫ ಮೊರೆಯುದು (ತು.)

ಕುಮುದಮಕ್ಷಿಗಳೊಳಾ ಚಂಪಕಂ ನಾಸದೊಳ್ |
ಹಿಮಭೀರು ಹಾಸದೊಳ್ ಬಂಧೂಕಮಧರದೊಳ್ |
ಕಮಲಮಾಸ್ಯಂಗಳೊಳ್ ಕುಂದಮಾದಂತದೊಳ್ ಕೇತಕಿಯುಗುರ್ಗಳೊಳಗೆ |
ಕ್ರಮದಿಂದೆ ಮಚ್ಚರಿಸಲಿನಿತುಮಂ ಗೆಲ್ದು ಸಾ
ಲಮರೆ ಪೆಡೆಗುಡಿಗಟ್ಟಿ ಮಾರಿದಪರೆಂಬಿನಂ |
ತಮತಮಗೆ ಮಾಲೆಹೂಗಳನೆತ್ತಿದಬಲೆಯರ್ ಕಣ್ಗೆಸದರೆವೆಳ್ಗಿಸು ॥ ೪ ॥

ಇನಿತು ಸೊಬಗಂ ಪಡೆದ ಪೂಸಂತೆಯಿಂ ಮುಂದೆ |
ನೆನೆವವರ ಚಿತ್ತಮೆಲ್ಲಂ ಪರಿಮಳಂ ಸುಲೋ |
ಜನದ ನೋಟದ ಪೊಳೆಪದೆಲ್ಲಮುಂ ಪರಿಮಳಂ ಸವಿಮಾತು ಸಲೆ ಪರಿಮಳಂ |
ತನುಗಳೆಲ್ಲಂ ಪರಿಮಳಂ ನಭಂ ಪರಿಮಳಂ |
ತನತನಗೆ ದಿಗ್ಧರೆಗಳೆಲ್ಲಮುಂ ಪರಿಮಳದ |
ಪೊನಲೆನಿಪ ಪರಿಮಳದ ಪಸರಮಾ ಘಟ್ಟವಳ್ತಿಯರ ಚೆಲ್ವಿಂ ಮೆರೆದುದು ॥ ೫ ॥

ಪಿಡಿದ ಕತ್ತುರಿಯೊಪ್ಪೆ ಕುಂಕುಮದೊಲಿರೆ ನಕ್ಕ |
ರೊಡನೆ ಕಪ್ಪುರಮಾಗೆ ಕಾಯಸನ್ನಿಧಿಯಿಂದ |
ಲಡಿಗಡಿಗೆ ಹರಿಚಂದನಾಕೃತಿ[1]ವೊಲಿರೆ ನೋಡಲೊಡನೆ ಮಲಯಜದಂತಿರೆ |
ಕೊಡುವೊಂದುವಸ್ತುವಂ ನಾನಾಪ್ರಕಾರದಿಂ |
ಸುಡಿದು ಮಾರುವ ಕಂಪುಗಾರ್ತಿಯರು ತಾವೆ ತ |
ಮ್ಮೊಡಲೊಳಿರ್ಪನ್ನತಮುಂ ಕನ್ನಡಿಸುವಂತೆಸೆದರೆಂಬೆನಚ್ಚರಿಯನು ॥ ೬ ॥

ತರುಣಿಯರ ಪೂಮುಡಿಯ ಕಂಪಿಂದೆ ಸೌರಭ್ಯ |
ಧರನಾಗಿ ಕುಚದ ಕುಂಕುಮದ ಕೆಸರೊಳ್ ಬಿದ್ದು |
ಮರಳಿ ಬರಲಾರದತಿಮಾಂದ್ಯಯುತನಾಗಿ ಸುರತಸೌಖ್ಯದೊಳೆ ತಣಿವ |
ವರಮತ್ತಕಾಶಿನಿಯರುಸಿರ ತಂಪಂ ಧರಿಸಿ |
ಪರಮಶೀತಳಯುಕ್ತನಾಗಿ ವೇಶ್ಯಾಲಯಾಂ |
ತರದ ಸೌಭಾಗ್ಯಮಂ ತೋರುತಂ ಮಾರುತಂ ಸುಳಿದನತಿ[2]ರಮ್ಯಮಾಗಿ ॥ ೭ ॥

---

೧ ನದಕೃತಿ (ತು.) ೨ ಸುಳಿದುದತಿ (ತು.)

ಮನಸಿಜನ ಶಸ್ತ್ರಾಸ್ತ್ರಶಾಲೆಯೋ ಕಾವದೋ |
ವನ ಪಟ್ಟವಾಸೆಗಳ ಸೆಜ್ಜರಮೊ ಕಂತುವಿನ |
ಮನಮುಚ್ಚಿನಮುಳನವನಿಧಿಯ ಭಂಡಾರಮೋ ಸ್ಮರಸುಕೃತಫಲಿತವನಮೋ ||
ಘನಮೋಹನದ ಜನ್ಮಭೂಮಿಯೋ ಜಾಣ್ಮೆಗಳ |
ಮನೆಯೊ ಸುಖದಾಗರಮೊ ಸೊಬಗಿನಾಡುಂಬೊಲಮೊ |
ಯೆನಲೆಸೆದುದಾ ಸೂಳೆಗೇರಿಯತಿಶೃಂಗಾರಿ ಸ್ಮರರಾಜಧಾನಿಯಂತೆ || ೮ ||

ಹುಸಿಯ ಹಸರಂ ಹುರುಡಿನಾಲಯಂ ಮಾಯೆಗಳ |
ವಸತಿಯಾಸೆಯ ತಾಣಮಳುಪಿನಂಗಡಿ ಪಂಥ |
ಮೆಸೆವ ಗೇಹಂ ತೋಟಿಯಾಟದೆಡೆ ನೆವದ ನೆಲೆವೀಡು ಕುಹಕದ ಕೊಟಾರಂ ||
ಪೊಸಬಗೆಯ ಚದುರ ಚಾವಡಿ ಮೋಸದಾವಾಸ |
ಮಸವಳದ ಬಲ್ಮೆಯರಮನೆ ತಪ್ಪುಗಳ ತವ |
ದೆಸೆಯೆನಿಪ ವೇಶ್ಯಾಶ್ರಯಂ ಮನೋವಿಸ್ಮಯಂ ಸ್ಮರಪ್ರಿಯಂ ಚೆಲ್ವಾದುದು || ೯ ||

ಸುರಪನೀಲಂಗಳಿಂ ಸವೆದ ನೆಲಗಟ್ಟುಗಳ್ |
ತರತರದೊಳೆಸೆವ ಪಳಿಕಿನ ಗೋಡೆ ಪಚ್ಚೆಯಿಂ |
ವಿರಚಿಸಿದ ತೊಲೆ ಮಹಾವೈಡೂರ್ಯದಮಳರತ್ನಗಳ ಕಂಭಗಳ ಪವಳ ||
ಪರಿವಿಡಿಯ ಜಂತೆ ಗೋಮೇದಕದ ಬೋದುಗೆಗ |
ಳುರುವಜ್ರಮಯವಾದ ಬಲ್ಗದಂ ಚಿನ್ನದು |
ಪ್ಪರಿಗೆಗಳೊಳೆಸೆವ ಮನೆಮನೆಗಳಿಂ ಗಣಿಕಾಂಗನಾವೀಥಿ ಕಣ್ಗೆಸೆದುದು[1] * || ೧೦ ||

ಚಲಿಪ ಚೇಟಿಯ ಚರಣನೂಪುರಧ್ವನಿ ಕುಸುಮ |
ಶರಶಾಸ್ತ್ರಪಠಿತಶುಕವಾಚಾಸ್ವರಂ ಗೃಹಾಂ |
ತರಹರ್ಮ್ಯಬದ್ಧ ಸೌಭಾಗ್ಯಘಂಟಾರುತಂ ಪಾಲಿತಕಪೋತಂಗಳ |
ಸುರುಚಿರಸ್ವನಮೊತ್ತೆಗೊಳ್ಳ ಸರಿಮಿಂಡಿಯರ |
ಕರದ ಕಂಕಣರವಂ ಬಗೆಗೊಳಿಸಲಿದು ವಿಸ್ಮರೋ |
ದ್ಭವಿಸಿಜಿರಘೋಷವೆನಲೆಸೆದು ವೇಶ್ಯಾಶ್ರಯಂ ಕಣ್ಗೆ ಕಾಣಿಸುತಿರ್ದುದು || ೧೧ ||

* ಈ ಪದ್ಯವು ತಿ, ಪು, ಗೋ. ಈ ಪ್ರತಿಗಳಲ್ಲಿಲ್ಲ. ೧ ಚೆಲ್ವಾದುದು (ಪ.) ೨ ಮಾರ | ಧುರ (ಮ.)

ಮನಸಿಜನ್ನ ಪಂಗೆ ಬೀಸುವ ಚಾಮರಂಗಳೆನೆ ।
ವನಜಾಸ್ತ್ರಭೂಪಗೆತ್ತಿದ ಹೊನ್ನಸತ್ತಿಗೆಗ[1] ।
ಳೆನೆ ಕಾವರಾಯನೀಕ್ಷಿಸೆ ಪಿಡಿದ ಮುಕುರಮೆನೆ ಥಳಥಳಿಪ ನಗೆಗಣ್ಗಳ್ ॥
ಘನಕುಚಂಗಳ ಸಸಿಮೊಗಂಗಳಿಂ ದೇಸಿವಡೆ ।
ದನುಪಮಿತ ವೇಶ್ಯಾಜನಂ ಕಾಮನಿಧಿಗಿಟ್ಟ[2] ।
ವಿನುತಾಂಜನಂ [3]ಮೋಹಿಜನರಂಜನಂ ಗತ[3]ನಿರಂಜನಂ ಚೆಲ್ವಾದುದು ॥ ೧೨ ॥

ಅರಳಂಬುಗಳ್ ಕಬ್ಬುವಿಲ್ಲುಮಿವುನಾಡೆ ನಿ ।
ಬ್ಬರಮುಮರರಂ ಜಯಿಸಲೆಂದವಂ ಬಿಟ್ಟು ಶಂ ।
ಬರಮಥನನಾಂದೋಳಚಾಪದಿಂ ಸುದತಿಯೆಂಬೊಂದು ಬಾಣವನೆ ಪೂಡಿ ॥
ಸುರಪಲೋಕಕ್ಕೆ ಪಾರಿಸುವನೋ ಪೇಳೆನಲ್ ।
ತರುಣಿಯೊರ್ವಳನುಯ್ಯಲೇರಿಸಿ ವಿಟಂ ಮನೋ ।
ಹರುಷದಿಂ ತೂಗುತಿರ್ದಂ ಕನಕಲತೆಯನಾ ಮರುತನುರೆ ತೂಗುವಂತೆ ॥ ೧೩ ॥

ಚರಣಂಗಳುರೆ ಸೋಂಕೆ ಮುಗಿಲಸುಗೆಗಂ ತಳಿರ್ ।
ಕರಮೊರೆ ಪಾಡುವತಿಜಾಣ್ಮೆಗೇಳ್ದಲರ್ಗಳಂ ।
ಸುರಪಪುನ್ನಾಗವೃಕ್ಷಂ ಪೇರೆ ಶಶಿತಿಲಕಮವಳ[4] ನೇತ್ರಾಂಶುವಿಂದೆ ॥
ಪೊರೆಯೊರೆಯಾ ಸುಭಾ[5]ಯಾಲಿಂಗನಂ ನಭೋಂ ।
ತರಕುರವಕಕೆ ಸೊಂಪುಬೀರೆ ವನಕೇಳಿಯಂ ।
ತಿರಲುಯ್ಯಲಾಟವಾಡಿದಳೊರ್ವಬಾಲೆಯಂಬರದ ಮಿಂಚಾಡುವಂತೆ ॥ ೧೪ ॥

ಪೊಳೆವ ನಖದುಡುಗಳಿಂ ಮುಡಿಯೆಂಬ ಮೇಘದಿಂ ।
ತೊಳಗುವ ಮುಖೇಂದುವಿಂ ನಯನತಟಿದಂಶುವಿಂ ।
ಕಳಗೀತಮೆಂಬ ಮೊಳಗಿಂ ಮಧ್ಯಗಗನದಿಂದೀ ನಭೋಮಂಡಲವನು ॥
ಗೆಲಿವೇಳ್ಪದೊಂದರಿಂದೊಂದನೆಂದಾಗ ಭೂ ।
ಲಲನೆಯಾಗಸಕೆ ನೆಗೆದಪಳೊ ಪೇಳೆಂಬಿನಂ[6] ।
ನಲಿದುಯ್ಯಲಾಡಿದಳ್ ಕಾಂತೆಯೊರ್ವಳ್ ವಿಟರ ಜೀವಮೆಡೆಯಾಡುವಂತೆ ॥ ೧೫ ॥

೧ ಹೇಮಛತ್ರಂಗ (ಮ.) ೨ ಕಾಮನಿದಿರಿಟ್ಟ (ಶಿ.) ೩ ಮೋಹಿರಂಜನಮುಮಪಗತ (ಗೋ, ಮ.) ೪ ನಮಲ (ಹು, ಮ, ತು.) ೫ ಕಾಯಭಾ (ಮ.) ೬ ಪೇನಲ್ (ಶಿ, ಗೋ.)

ತಿಳಿಯಲ್ ಕಳಂಕಿ ನೀಂ ಕ್ಷಯರೋಗಿ ದಿವಿಜರಿಂ |
ಜಲಿಗನತಿದೋಷಾಕರಂ ನಿನ್ನನೆನ್ನ ಮಂ |
ಗಸಮುಖಿಕೆ ಸರಿಯೆಂದು ಪೋಲಿಸುವರುಪಮೆಗಳನೀಗ ಮಾಣಿಸುವೆನೆಂದು ||
ನಳಿನಾಕ್ಷಿಯೊರ್ವಳೀಕ್ಷಣರಜ್ಜುವಿಂ ವಿಧುವ |
ನೆಳೆತರಿಸಿ ಕುಣಿಸಿದಪಳೋಯೆನಲ್ ಚಚ್ಚರಂ |
ದಳದೊಳಗೆ ಮೌಕ್ತಿಕದ ಚೆಂಡನೊರ್ವಳ್ ಪೊಯ್ಯುತಿರ್ದಳ್ ವಿಲಾಸದಿಂದೆ
|| ೧೬ ||

ಇಂದು ನಿನ್ನೆರಳೆಯೆನ್ನಕ್ಷಿಗಳ ಗಾಡಿಯಂ |
ತಿಂದ ಕಳವಿಂಗೊಂದು ನಿನ್ನಾಲವೆನ್ನಧರ |
ದಂದಮುಂ ಕೊಂಡೊಯ್ದುದಿ ತಸ್ಕರಕ್ಕೆರಡಿರದೆ ನೀನೆನ್ನ ಮುಖರಸವನು ||
ಬಂದೊಯ್ದುಳಿ ಚೋರತ್ವಕೀಗಳಿದೆ ಮೂರು ಗು |
ದೆಂಮ ಶಶಿಯುಂ ಪಚಾರಿಸಿ ಪೊಯ್ವಳೋಯೆನ |
ಲ್ಕೆಂಮ ಲೆಕ್ಕಿಸುತೆ ಮುತ್ತಿನ ಚೆಂಡನಳ್ತಿಯಿಂ ಪೊಯ್ದಳೊರ್ವಳ್ ಮೃಗಾಕ್ಷಿ
|| ೧೭ ||

ಬಟ್ಟಜವ್ವನದೆಡೆಗಳೊಳ್ ವಿಟರ ದಿಟ್ಟಿಗಳ್ |
ನಟ್ಟಂತೆ ನಿಲೆ ದೇಹಗಂಧಕಳಿಗಳ್ ಸುತ್ತು |
ಗಟ್ಟಿ ನಿಲೆ ಪಿಂದುಮುಂದೆಡಬಲದೊಳಮರ್ದ ಸೇವಾಳೀಜನಂಗಳ್ ನಿಲೆ ||
ತೊಟ್ಟು ಪೂಗಣೆಗಳಂ ಮನಸಿಜಂ ಹೊಂಚಿ ನಿಲೆ |
ಮುಟ್ಟೆ ತಮ್ಮೊಳ್ ವಿಟರ್ ಸೂಳೆಬಂಟಿಕೆಗೆ ನಿಲೆ |
ಮುಟ್ಟು ತೊಟ್ಟೊರ್ವಳೊತ್ತಿಗೆ ನಿಂದಳಂಗಜನ ಪಟ್ಟದಾನೆಯ ತೆರದೊಳು
|| ೧೮ ||

ಸಣ್ಣಮುಗುಳ್ಮೊಲೆಯ ಪರಳ್ಮೊಲೆಯ ಪುಟ್ಟವ ಮೊಲೆಯ |
ಸಣ್ಣತಹ ಬದರೀಫಲದ ಮೊಲಯ ದಿನದಿನಕೆ |
ಬಣ್ಣಮೇರುವ ಮೊಗದ ಸುಲಿಪಲ್ಲ ಕೆಂಪುವಾಯ್ದೆರೆಯ ಸವಿನುಡಿಯ ಬೆಡಗ |
ಕಣ್ಣ ಸೊಂಟದ ಬಾಲೆಯರ್ ವಿಟರ್ ನೋಡೆ ನಾಣ್ |
ವಿಣ್ಣದಿಂ ತಲೆವಾಗಿ ನುಡಿಸೆ ನುಡಿಯದೆ ಕೂಡೆ |
ಬೆಣ್ಣೆವೋಲ್ ಬೆಮರಿ ಸಾರ್ ಸಾರೆಂದು ಸಖಿಯ ಮರೆಗೊಂಬ ಬಾಲೆಯರೆಸೆವರು
|| ೧೯ ||

೧-೧ ರೋಹಿಣೀ ಸೌಧ | ದೊಳಗೆ ಮೌಕ್ತಿಕಮುಮುದ (ಹು.); ಯೆನಲ್ ಚೆಲ್ವಚಂ | ದಳದೊಳಗೆ ಮೌಕ್ತಿಕದ (ಪ, ಮ, ಪಿ.) ೨-೨ ಕಳವಳಿಗ | ದಳ (ತಿ.) ೩ ಯ್ದು (ತಿ.) ೪ ದೊಯ್ದು (ತಿ.) ೫ ಮುಗುಳ್ಗೆಗಳು (ಹು.) ೬ ಕಡಗಿ (ಮು.) ೧೯ ಈ ಪದ್ಯವು ಹು. ಪ್ರತಿಯಲ್ಲಿ ಇಲ್ಲ.

ಪೊಂಗುತಿಹ ಕ್ರಮುಕಾಮಳಕಬಿಲ್ಪುಜಂಭನಾ |
ರಂಗಫಲಕಮಲನವಕುಟ್ಮಳಕುಚಂಗಳ ಬೆ |
ಡಂಗಿನೊಳ್ಪಡೆಯ ನಿಡುಜಡೆಯ ಥಳಥಳಿಪ ಕದಪಿನ ತಳಿರ್ದುಟಿಯ ವಿಟರ ||
ಪಿಂಗದೀಕ್ಷಿಪ ದಿಟ್ಟ೧ಗಳ ಸೊಗಸುತಿಹ ನಗೆಮೊ |
ಗಂಗಳ ನಯಂ ಬಿರುಸಿನೊಳ್ ಬೆರೆದ ನುಡಿಗಳ ಮ |
ನಂಗೊಳಿಪ ಸಿಂಗರದ ಬೆಚ್ಚಬೀಟದ ಬಗೆಯ ಜೌವ್ವನೆಯರೆಸೆದಿರ್ದರು || ೨೦ ||

ಬಿಣ್ಮೊಲೆಯ ಮಿಗೆ ಬಟ್ಟಮೊಲೆಯ ತೆಂಗಾಯ್ಮೊಲೆಯ |
ನುಣ್ಮೊಲೆಯ ನೆಲೆಮೊಲೆಯ ಬಲ್ಮೊಲೆಯ ಹೊಳೆಹೊಳೆವ |
ಕಣ್ಮಲರ ಸನ್ನೆಗಳ ಬೆಳ್೨ನಗೆಯ ಬೀಟದೊಳ್ ಬೆರೆದು ತರಹರಿಪ ಮನದ ||
ಜಾಣ್ಮೆಗಳ ಸವಿನುಡಿಯ ಮುಚ್ಚಿಮುಚ್ಚಿಪ ಬಗೆಯ |
ಪೊಣ್ಮೆ ಪೊಡಕರಿಪ ಧನದಾತುರದ ವೈಸಿಕದೊ |
ಳುಣ್ಮವ ಗುಣಂಗಳ ಮಹಾಪ್ರೌಢವನಿತೆಯರ್ ಕಣ್ಗೆಸೆದರಲ್ಲಿಗಲ್ಲಿ || ೨೧ ||

ಜಲಜಾಸ್ಯೆ ಪದ್ಮಗಂಧಿನಿ ಕುರಂಗಾಕ್ಷಿ ಕೋ |
ಕಿಲಗಾನೆ ನೀಲಕುಂತಳೆ ಹಂಸಯಾನೆ ನವ |
ತಿಲಪುಷ್ಪನಾಸಿಕೆ ಸುವೃತ್ತಕುಚೆ ಲಜ್ಜಿತೆ ಸುಗಂಭೀರಬಿಂಬಾಧರೆ ||
ಲಲಿತಾಂಗಿ ಧವಳಾಂಬರವನೊರ್ವಳುಟ್ಟು ತ |
ನ್ನೊಳವಾಗಿಲೊಳಗಿರಲ್ ಕಂಡು ೩ನಾಗರಿಕಕುಲ |
ತಿಲಕನಿವಳಿಂಗೆ೩ ಪದ್ಮಿನಿಯೆಂದು ಸೂಚಿಸಲ್ ನೋಡುತಡಿಯಿಟ್ಟರಂದು || ೨೨ ||

ಬಿಸಜಾಕ್ಷಿ ಚಂದ್ರಮುಖಿ ಮಧುಗಂಧಿ ಕೊಬ್ಬುಗ |
ಕ್ಕಸಜವ್ವನದ ಚೆಲ್ವೆ ಘನನಿತಂಬಿನಿ ಕಾಮ |
ರಸಪೂರೆ ಸಚ್ಚಕೋರೀನಿನದೆ ಗಜಗಮನೆ ಕಂಬುಕಂಧರೆ ಕಾಮುಕಿ ||
ರಸಗಾನಲೋಲೆ ಹರಿಮಧ್ಯೆಯೊರ್ವಳ್ ಚಿತ್ರ |
ವಸನರಮ್ಯಾಂಗಿ ಕೊಂಕಿದಕುರುಳೆ ಬಂದೊತ್ತೆ |
ಗೆಸೆದಿರಲ್ ಪೀಠವರ್ಧನನಿವಳೆ ಚಿತ್ತಿನಿಯೆನುತ್ತುಸಿರ್ದನವಳಿರವನು || ೨೩ ||

---

೧ ನಿಟ್ಟೆ (ತು.) ೨ ನಸು (ಶಿ, ತು, ಗೋ, ಕೋ.) ೩ ತಾಂ ನಾಗರಿಕ | ಕುಲತಿಲಕನಿವಳೆ (ಶಿ, ಗೋ, ಕೋ.)

ಜಲಜಮುಕುಳಸ್ತನೆ ಸುದೀರ್ಘಾಂಗಿ ನಿಡಿದುಗಂ |
ಗಳ ಚಪಳೆ ನೀಳ್[1]ಕಚಭರೆ ವಿಳದ್[2]ಭ್ರೂಲತಿಕೆ |
ತೆಳುವಸುರಿನಬಲೆ ಶಂಖಸ್ತನೆ ಸುಪಲ್ಲವಾಧರೆ ಕುಟಿಲೆ[3] ಚೂರ್ಣಗಂಧಿ ||
ತಳರಡಿಯ ತರಳೆ ಕಿಂಚಿತ್ಕಾಮಿ ಕೋಪಿ ಜಂ |
ಗುಳಮೋಹಿ ಶೀಘ್ರಗಾಮಿನಿ ರಕ್ತವಸನೆ ಬಾ |
ಗಿಲಪಾಂಟಿ ನಿಂದಿರ್ಪಳಿವಳ್ ಶಂಖಿನಿಯೆಂದು ವಿಟನುಸಿರ್ದನವಳಿರವನು || ೨೪ ||

ಕೊಬ್ಬಿದ ಶರೀರೆ ಸೂಕ್ಷ್ಮಾಪಾಂಗೆ ಕೆಂಗೂದ |
ಲುಬ್ಬಜಪ್ಪನೆ ಕಂಪನಸ್ಪನೆ ರಹಿತಗಾನೆ |
ನಿರ್ಬುದ್ಧಿವಂತೆ ಬಾಯ್ಬಡಿಕೆ ದುಶ್ಚೇಷ್ಟೆ ನಿಷ್ಠುರಸುರತೆ ಮದಗಂಧಿನಿ ||
ಪರ್ಬಿದ ನಿತಂಬೆಯುನ್ನತಮಧ್ಯೆ ಮಧುಗೋಷ್ಠಿ |
ಗೊರ್ಬಳಿಡೆಯಾಡುತಿರೆ ಕಂಡಾ ವಿದೂಷಕಂ |
ಸರ್ಬವದೊಳಿಲ್ಲರಂ ನಗಿಸುತಿವಳೀಗ ಹಸ್ತಿನಿಯೆಂದುಸಿರ್ದನಂದು || ೨೫ ||

ಮುನಿಸೆಂಬುದರಿಯನೆಂದುಂ ರೂಪಿನೆಡೆಯೊಳಂ |
ಮನಸಿಜಂ ಕೊಡುವಲ್ಲಿ ರವಿನಂದನಂ ಭೋಗ |
ದಸುವಿನೊಳಗಿಂದಿರಂ [4]ಬಲ್ಲವಂ ನಾನಲ್ಲದೊಮ್ಮೆಯುಂ[4] ಪೆರವೆಣ್ಗಳ ||
ಕನಸಿನೊಳ್ ನೋಡ[5]ಯರಿಯನಿನಿತುಸುಗುಣಗಳು |
ಳ್ಳಿಸಿಯ[6]ನೆನ್ನಿಂ ಜನ್ಮಜನ್ಮಾಂತಮೆನ್ನ ತೋ |
ಳ್ಳಸೆಯೊಳಿರಲೆಂದೊರ್ವ ಕಾಂತೆಯೆನುಕೂಲಿಗನನಂದು ಸಖಿಯೊಳ್ ಪೊಗಳ್ದಳು
|| ೨೬ ||

ಸುದತಿ ನೋಡೀ ಚಂದ್ರಬಿಂಬಮಂ ನಿನ್ನ ಮೊಗ |
ಕಿದಿರೆನ್ನಬಹುದೆ ಸರ್ವಾಂಗಮುಂ ಬೆಳ್ಪು ಮ |
ತ್ತಿದು ನೋಡು ಮಧ್ಯದ ಕಳಂಕೆಂದು ಮುಗ್ಧೆ ಶಶಿಯಂ ನೋಳ್ಪವೋಲ್ ಪೇಳುತೆ ||
ಚದುರ ದಕ್ಷಿಣನಾಯಕಂ ಪೊರೆಯೊಳಿರ್ದ ಸಖಿ |
ಯಧರಮಂ ಚುಂಬಿಸುತೆ ಸೀತ್ಕೃತಂ[7]ಗೇಳದಂ |
ದದೊಳವಳ ಪಲಿಯುರಮಂ ಸೆಗಳ್ಚಿಸಿದನೆತ್ತಿದ ಚಂದ್ರಶಾಲೆಯೊಳಗೆ || ೨೭ ||

---

೧ ಶಾಲ (ಹು, ಮು.) ೨ ಬುಸ್ತ (ಗೋ, ಪ.) ೩ ಕುಟಿ (ಶಿ.) ೪ ಬಲವನಹನಲ್ಲದೊಮ್ಮೊಮ್ಮೆಯುಂ (ಶಿ.) ೫ ಕೂಡಿ (ಶಿ.) ೬ ಳ್ಳಿಸೆಯ (ಶಿ.) ೭ ಚೀತ್ಕೃತ (ಶಿ, ಮು.)

ಇಂದಿನುತು ಪೊಳ್ತೇಕೆ ತಡೆದೆ ಪೊಸತಿದು ಮೆಯ್ಗ |
ಗಂಧಲೇಪಂ ನಿನ್ನ ಬಾಯೇಕೆ ಮುದ್ರಿಸಿತು |
ಬಂದ ಭರವೇನು ಚೆನ್ನಾಗೆಲ್ಲ ಪುಸಿಯದುಸಿರಿನ್ನು ನಿನ್ನಂ ಕೊಲ್ಲೆನು ||
ಇಂದುವರೆಗಾಂ ತಾಳಿದೆಂ ನಿನ್ನ ದೂಸರಿಂ |
ನೊಂದೆ ನಿನ್ನಿನ್ನುವಂ ಕರೆದರೆನ್ನಂ ನಗುವ |
ರೆಂದೊರ್ವ ಕಾಂತೆ ಶಠನಂ ಬರಿಯ ಬಾಯ ಮಾತಿಂದೆ ಕೋಪಿಸುತಿರ್ದಳು
|| ೨೮ ||

ಜಡಿದು ನಾಣ್ಗೆಡೆನುಡಿಯಲುಬ್ಬುವಂ ಬಿರಿಸಿನಿಂ
ಪೊಡೆಯೆ ಪೊಂಗುವನೊದೆಯಲೊಂದು ಪೊರೆಯೇರುವಂ |
ದೊಡನೊಡನೆ ಕೂಡಲೆಳಸುವನೆನ್ನ ತಪ್ಪುಗಳನೆಣಿಸನೆಂದುಂ ಮುನಿದೊಡೆ ||
ಕಡುತವಕದಿಂ ತಿಳಿಪುವಂ ಸೇವೆಗೈವನಿವ |
ನೊಡವೆಗೊಡದಿರ್ದೊಡಂದಪರಾಧಿಯಾದೊಡಂ |
ಬಿಡದೀ ಮನಂ ದುಷ್ಟನಾಯಕನನೆಂದೊರ್ವಮಡದಿ ಕೆಳದಿಗೆ ನುಡಿದಳು || ೨೯ ||

ಬರಲೊಂದು ತಾಣದೊಳ್ ಸುರತದಿಂದಂ ಬಳಲಿ |
ತರುಣಿಯೊರ್ವಳ್ ನಲ್ಲನಂ ತನ್ನ ಕುರುಳ್ಗಳಂ |
ಸರಿಸು ಸ್ವೇದಮನೊರಸು ಹಾರಮಂ ಸ್ಥಿರಿಸು ಬಿಜ್ಜಣಿಗೆಯುಲರ ಬರಿಸು ||
ಸರಸತಾಂಬೂಲಮುಂ ಸವಿದಿರುಸು ಬಾಯ್ಗುಪರಿ |
ಸುರತದಲಸಂ ಪರಿಹರಿಸು ಪಾದಕೆಂಬ ಸೌಂ |
ದರಿಯ ನುಡಿಯಿಂದಿವಳ್ ಸ್ವಾಧೀನಪತಿಕೆಯೆಂದರಿದು ಮುಂದಕೆ ನಡೆದರು
|| ೩೦ ||

ಬಳಿಕೊಂದು ತಾಣದೊಳಗಪರಾಧನಾಯಕಂ |
ಮುಳಿದಿನಿಯಳಂ ತಿಳಿಪುತೆಲೆ ರಮಣಿಯೆನ್ನ ನಿ |
ನ್ನೊಳಗೆ ಭೇದವೆ ದೇಹವೆರಡಕೊಂದೇ ಜೀವಮೆನೆ ಕೇಳ್ದು ನಸುನಗುತ್ತೆ ||
ಸುಲಭ ನೀನೆಂದ ನುಡಿ ದಿಟಮಲ್ಲದೊಡೆ ನಿನ್ನ |
ತಳಿರ್ದುಟಿಯ ಗಾಯಕೆನ್ನೀ ಮನಂ ನೋಯದೆಂ |
ದಳಲಿ ನುಡಿದಳನಿವಳ್ ಖಂಡಿತೆಯೆನುತ್ತರಿದು ತೆರಳ್ದರಲ್ಲಿಂ ಮುಂದಕೆ || ೩೧ ||

---

೧ ಳೆ (ಗೋ, ಕ.) ೨ ಮುಳಿ (ಗೋ, ಕೋ, ಪು.)

ಮನವನ್ನನಿಂದು ಬಂದಪನೆಂದು ಮಿಂದು ಚಂ |
ದನಲೇಪನಂಗೆಯ್ದು ಕುಸುಮಮಂ ಮುಡಿದು ಮಂ |
ಡನದಿಂದಲಂಕರಿಸಿ ಸೆಜ್ಜೆಯಂ ಸಿಂಗರಿಸಿ ಹಾಸುಮಂ ಹಚ್ಚವಡಿಸಿ |
ವಿನುತಪರಿಮಳಪುಷ್ಪ[೧] ತಾಂಬೂಲಮಂ ತರಿಸಿ |
ಮನಮೊಸೆದು ಕಾದಿರ್ದನಿನಿತುವರೆಗಂ ಬಾರ |
ನೆನುತೆ ಸಖಿಗುಸಿರ್ವುದಂ ಕೇಳ್ವ ವಾಸವಸಜ್ಜಿಕಾಖ್ಯೆಯಿವಳೆಂದರಿದರು || ೩೨ ||

ನಲ್ಲನಿಂದಿನಿತು ಪೊಳ್ತೇಕೆ ತಡೆದನೊಯೆನ್ನ |
ಸೊಲ್ಲನೋ ಮಚ್ಚಿದಬಲೆಯರಡ್ಡಗಟ್ಟಿ ಬ |
ರ್ಪಲ್ಲಿ ಬಲ್ಪಿಂದಲೆಳೆದೊಯ್ದರೋ ಪುಸಿಗೆ ಮುನಿದನೊ ಧೈರ್ಯದಿಂದಮೆನ್ನ ||
ಮೆಲ್ಲಿದೆಯನರಿವೆನೆಂದುಳಿದನೋಯೆನ್ನ ತ |
ನ್ನಲ್ಲಗೈದಿಸುವೆನಾನೆಂದು ನಿಂದನೊ[೨]ಯೆಂದು |
ತಲ್ಲಣಿಸಿ ಪಂಬಲಿಪ ನುಡಿಗೇಳುತಿವಳುತ್ಕೆಯೆಂದರಿದು ನಡೆದರಂದು || ೩೩ ||

ಬಳಿಕೊರ್ವ ನಾರಿ ನೆವದೊಳ್ ಮುಳಿದು ನಲ್ಲನಿಂ |
ತಿಳಿಯಲೊಲ್ಲದೆ ಜಡಿದು ನುಡಿದು ಪೊರಮಡಿಸಿ ತ |
ನ್ನೊಳು ತಾನೆ ತಿಳಿದೇಕೆ ಮುನಿದೆನೋ ವಲ್ಲಭಂ ತಿಳಿಪಲೇತಕೆ ಜರಿದೆನೋ ||
ತಿಳಿವಪೆನೆನುತ್ತಿನಿಯಗಟ್ಟುವೆನೊ ಸಖಿಯರಂ |
ಪಳಿವ ನುಡುವುಮ್ಮಳಿಪುದೇ ಕಷ್ಟಮಾಕ್ಷಣಂ |
ತಿಳಿಯದುದೆ ಮೂಢತ್ವಮೆಂಬ ನುಡಿಗೇಳುತಭಿಸಂಧಿಕೆಳಿಯೆನುತ್ತರಿದರು || ೩೪ ||

ತನುಗೆ ಚಂದನವಣ್ಪಮಂ ಕೊಟ್ಟು ಮಲ್ಲಿಗೆಯು |
ನನೆಗಳಂ ಮುಡಿಗಿಟ್ಟು ಧವಳಾಂಬರವನುಟ್ಟು |
ವಿನುತ ಮುತ್ತಿನ ತೊಡಗಳಂ ತೊಟ್ಟು ಸುಲಿಪಲ್ಲ ಮಿಂಚು ದೆಸೆಯಂ ಬೆಳಗಲು ||
ಮನೆಯುಮಂ ಪೊರಮಟ್ಟುಯಚ್ಚಮುತ್ತಿನ ಬೊಂಬೆ |
ಮಿನಲಿಸಿಯುನೆಡೆಗೆ ಪೋಪೊರ್ವಳಂ ಕಾಣುತುಂ |
ಮನದೊಳಭಿಸಾರಿಕೆ[೩]ಯು ತೆರನಿಲ್ಲಾಯೆಂದರಿದು ನಗುತೆ ಮುಂದಕೆ ನಡೆದರು || ೩೫ ||

---

೧ ಕ್ರಮುಕ (ಶಿ.) ೨ ಸುವೆನೆಂದುಂ ನಿಂದನೋ (ಗೋ, ಪ.) ೩ ಅಭಿಸಾರಿಕೆ (ಹು.)

ಚಪಳೆ ಕೇಳಿಂದೆನ್ನ ನಲ್ಲನೀಯೆಡೆಗೆ ಬಂ |
ದಪನೆಂದು ಸೂಚಿಸಿದೊಡಾಂ ಬಂದೆನಕಟ ನಿ |
ಷ್ಕೃಪೆಯೊಳಿನ್ನುಂ ಬಾರನೇಗುವೆನಿದೇಕುಳಿದನೋ ಮನಸಿಜಂಗೆನ್ನಸು |
ಉಪಲಕ್ಷ್ಯಮಂ ಮಾಡಿದನೊ ಶಶಿಗೆ ಮಾರಿದನೊ |
ವಿಪರೀತಮಿಂದಿನಿರುಳಂ ಕಳೆವೆನೆಂತೊಯೆಂ |
ದಪ ವಿಪ್ರಲಂಬೆಯ ಪ್ರಳಾಪಂಗಳಂ ಕೇಳುತಡಿಯಿಟ್ಟರೇನೆಂಬೆನು || ೩೬ ||

ಆಲಿಂಗನಂ ಮಾಡಿ ಚುಂಬನಂಗೆಯ್ದು ಸರ |
ಸಾಲಾಪಮಂ ನುಡಿದು ಕಾತರಿಸುತುಂ ರತಿಗೆ |
ಮೇಲಿಕ್ಕಿ ಕೂಡುತುಂ ಮರೆವುತೆಚ್ಚರುತೆ ನಿನ್ನಿರುಳೆನ್ನ ನಲ್ಲನೊಡನೆ |
ಲೀಲೆಯಿಂದಿರ್ದೆನಿಂದಿನ ದಿನಂ ನಿಷ್ಫಲಂ |
ಹಾಳಾದ ಮನೆಯುಮಂ ಕಾದೆ[1]ನೆಂತೆಂದೊರ್ವ |
ಸೂಳೆ ಗತಭರ್ತಾರಿಕಾಖ್ಯೆ ಮರುಗುತ್ತಿರ್ದಳೇನೆಂಬೆನಚ್ಚರಿಯನು || ೩೭ ||

ಮುನಿಸೇಕೆ [2]ಪೇಳ ಕಾರಣಮನೆಲೆ ಕಾಂತೆ ಕೇಳ್ |
ಮನಸಿನೊಳಗಾದೊಡಂ [3]ತನ್ನಲ್ಲಿ ದೋಷಮೆಂ |
ಕ್ಷಮಿಸುತುಂಟೆಯೆಂದೆರಗಿ ಕಣ್ಣೀರ್ಗಳಿಂ ಕಾಲ್ಗಳಂ ತೊಳೆದ ವಲ್ಲಭನನು |
ಮನಮೊಡನೆ ಕರಗಲೇಳೆಂದೆತ್ತುತಶ್ರುವಿಂ |
ನನೆದ ಕುಚಕುಂಭದೊಳ್ ಬಿಗಿಯಪ್ಪುತಿರ್ದ ತ |
ದ್ವನಿತೆಯಿವಳುತ್ತಮಸ್ತ್ರೀಯೆಂದು ಕೊಂಡಾಡುತಂ ಮುಂದೆ ನಡೆಗೊಂಡರು || ೩೮ ||

ಬಳಿಕೊರ್ವಳಪರಾಧರಮಣನಂ ಕಂಡು ನೆಲೆ |
ಮೊಲೆ ನಡುಗೆ ಪುರ್ಬುಗಂಟಿಕ್ಕಿ ಕುಮುದಾಕ್ಷಿಗಳ್ |
ತಳೆಯೆ ಕೆಂಪಂ ಮಾತುಗಳ್ ತಡಂಬಡಿಸೆ ಕಾಲ್ ದಡದಡಿಸಿ ಕೋಪಿಸು[4]ವಳ |
ತಿಳಿಪಲೆಂದೆರಗಿದಿನಿಯನನೊದೆಯೆ ನೂಪುರಂ |
ಗಳ ಕೀಲ್ಗೆ ಸಿಲ್ಕಿದ ಕುರುಳ್ಗಳಂ ಬಿಡಿಸುತುಂ |
ತಲೆವಿಡಪ್ರತಪ್ಪಿದಳನಿವಳೆ ನಾಯಕಿಮಧ್ಯೆಯೆಂದು ಪೋಗುತ್ತಿರ್ದರು || ೩೯ ||

೧ ಕಾವೆ (ಮ.); ಕಾಣೆ (ಶಿ.) ೨ ಕಾರಣಮೆಲೆ ಪ್ರಾಣಕಾಂತೆ (ಪು.); ಕಾರಣಮೆಲೆ ಪ್ರಾಣಪ್ರಿಯೆ (ಹು.) ೩ ದೋಷ ತನ್ನಲ್ಲಿಯೆ (ಹು.) ೪ ಕೋಪಿಪ (ಹು.)

ತರುಣಿ ಕೇಳವನೆಡೆಗೆ ಪೋಗೆನೆನಲಿ ಮನಂ |
ತರಹರಿಸದೊಯ್ಯನಾಂ ಪೋದೊಡಂ ನೋಡೆನೆಂ |
ದಿರೆ ಕಣ್ಗಳಿರವು ಸೋಲ್ತಲ್ಲಿ ನಗೆನೆಂದೊಡೀ ನಗೆ ಬಿಡದು ನಕ್ಕೊಡಿನ್ನು ||
ಕರೆದು ಮಾತಾಡೆನೆನೆ ಜಿಹ್ವೆ ಕೇಳದು ಮಾತ |
ನೊರೆದೊಡಂ ಸೊಂಕೆನೆನೆ ತನು ತಾಳದೇಕೆನು |
ತ್ತಿರಲೊರ್ವಳವಳಂ ಜಘನ್ಯೆಗಿದು ಸಹಜಶಿವೆಂದರಿಪುತಂ ನಡೆತಂದರು || ೪೦ ||

ನುತವಿಭವಯುತನೀವಕರಮುಳ್ಳವಂಗದೇಂ |
ಪ್ರತಿಯೆ ಮನ್ಮಥ ಚಿತ್ರಭಾನು ನಳ ಕೂಬರರ್ |
ಸತತವಿಾತಂ ಸೌಮ್ಯ ಶ್ರೀಮುಖಂ ಪ್ರಭವಶುಕ್ಲಾನಂದನಿವನಿರಲ್ಕೆಳ ||
ಕೃತಕಂ ಪ್ಲವಂಗದುರ್ಮುಖಿಯಂ ವಿಕಾರಿಯಂ |
ಪ್ರತಿದಿನಂ ಕರೆಯೆಂಬೆಯೆಂದು ಸಂವತ್ಸರಮು |
ನತಿಶಯಂ ಪೇಳ್ವಂತೆ ರೌದ್ರಿ ರಕ್ತಾಕ್ಷಿ ತಾಯಂ ಮಗಳ್ ಕೋಪಿಸಿದಳು || ೪೧ ||

ವರಚೈತ್ರಸಖನ ಮದದಾನೆ ವೈಶಾಖಶಿಖಿ |
ಗುರುಕಬರಿ ಸದ್ಗುಣೋಜ್ಜ್ಯೇಷ್ಠೆ ಶುಚಿ ನವರತ್ನ |
ಭರಿತರುಚಿರಶ್ರಾವಣಾಭರಣೆ ಪಂಕೇಜಭಾದ್ರಪದೆ ಸುನಿಮಿಷಯುತೆ ||
ಪರಮಕಾರ್ತಿಕಪಿತೃಭೂಷಣಸುವೇಣಿ ಸುಮ |
ಶರಮಾರ್ಗಯುತೆ ವಪುಶ್ಯಾಮೆ ಭೀಮಾಘಭಯೆ |
ನಿರುತಫಾಲ್ಗುಣಮಿತ್ರಸುತನುತೆಯೆ ಬಾರೆಂದು ಸಖಿಯೊರ್ವಳಂ ಪೊಗಳ್ದಳು
|| ೪೨ ||

ಒಸರ್ವ ಮೃದುಚಿತ್ತೆಯಾಗದಿರೊರ್ಮೆಯುಂ ಪುನ |
ರ್ವಸುವಿಲ್ಲದೊರ್ವರಂ ಕರೆಯದಿರ್ ಭೂಷಣಮು |
ನೆಸೆವ ಸಿಸ್ನೀ ಹಸ್ತದಿಂ ಭರಣಿಯೊಳ್ ತುಂಬಿ ನೀಂ ಪೋಗು ವಿಟರಲ್ಲಿಗೆ ||
ರಸಿಕರೊಳ್ ಮಾತುಮಂ ಶ್ರವಣದಿಂ ಕೇಳ್ದು ಭಾ |
ವಿಸು ಮೃಗನಾಶ್ಲೇಷೆಯಿಂ ಪಿಂಗದಿರ್ ಮಗಳೆ |
ಪುಸಿಯೆ ಮೂಲಂ ಸೂಳೆಗೆಂದು ನೆವದೊಳ್ ಮುದುಕಿಯುಸಿರ್ದಳಾ ತಾರೆಗಳನು
|| ೪೩ ||

---

೧ ಸೊಡರ (ಶಿ.) ೨ ದಿಂ (ಶಿ, ಮು.) ೩ ಸಾಜ (ತು.) ೪ ನಾಗಿರಷ್ಠೆ (ಶಿ. ೫ ಷಮಂ (ಶಿ.)

ಅನಿಮೇಷಕನ್ಯೆಯರ್ ನಿನಗೆ ತುಲೆಯೊ[೧] ಮದನ |
ಧನು ನಿನ್ನ ಪುರ್ಬಿಂಗೆಣೆಯೆ ಕೋಕಮಿಥುನವಿಾ |
ಘನಕುಂಭಕುಚಕೆ ಪಾಸಟಿಂಪಿ ನೇತ್ರಕೆ ಮೀನ ಪೊಳಪು ಸಮನೇ ನಡುವಿಗೆ |
ವನಸಿಂಹಮಧ್ಯಮಸಿದೇಂ ನಿನ್ನ ಗಂಭೀರ |
ತನಕೆ ವೃಶ್ಚಿಕ ಮಕರ ಕರ್ಕಟಕಯುತವಾರ್ಧಿ |
ಘನವೆಯೆಂದೊರ್ವಳಂ ವಿಟವೃಷಭನಿತು ರಾಶಿಗಳನೆಣಿಪ್ಪೋಲ್ ಪೊಗಳ್ದನು || ೪೪ ||

ತೊಳಗುವರುಣಾಧರೆ ಸುರತ[೩]ಕಲಾನಿಧಿಯೆ ಮಂ |
ಗಳಕಾಯೆ ಸೌಮ್ಯಭಾಷಿತೆ ಗುರುನಿತಂಬೆ ಕವಿ |
ಕುಲಪಾರಿಜಾತೆ ಸನ್ಮಂದಗಾಮಿನಿ ಸಿಂಹಿಕೇಯರೋಮಾಳಿಸದೃಶೆ ||
ಸಲೆ ಮೀನಕೇತುವಧಿದೇವಿ ಕೇಳ್ ನಿನ್ನದೊಂ |
ದೊಲವಾದುದಾನವಗ್ರಹಗಳೇಕಾದಶ |
ಸ್ಥಳರೆಂದು ಪೊಗಳ್ದನೊರ್ವಂ ತನ್ನ ನಲ್ಲಳಂ ಮನಮುಚ್ಚಿನೊಲವಿನಿಂದೆ || ೪೫ ||

ಉಕ್ಕುವಾ ತುರುಗಮನೆಯಿಂದಾಳುಳಿಮಂ ನೂಂಕೆ |
ದಕ್ಕಿತರಸಿನ ಹಿಂದೆ ಬಂದಾನೆ ನಿನಗೆ ಕೈ | .
ಸಿಕ್ಕಿದೀ ಮಂತ್ರಿಯಿಂ ಕವಡು ಬೀಳ್ವುದು ಮನೋರಥಮೊದಗಿ ನಡೆಯುದೆಂದು[೪] ||
ನಿಕ್ಕುವಂ ಚದುರಂಗವಾಡುವಂತೊರ್ವಳತಿ |
ಠಕ್ಕಿನಿಂ ಮೊದಲೊತ್ತಿಗೊಟ್ಟನಂ ನೂಂಕಿ ಬಹು
ರೊಕ್ಕಮಂ ತೆತ್ತೊರ್ವ ದೊರೆಭುಜಂಗಂ ಬರಲ್ ಕಂಡು[೫] ಕೂಡುತುಮಿರ್ದಳು
|| ೪೬ ||

ಕಪ್ಪು ಕೆಂಪಿನ ಹಣ್ಣು ಮೇಲಿದೇಂ ಕಾಣಿಸದೊ |
ಡೊಪ್ಪುವರೆ ಬಲ್ಲವರ್ ಬಾಯ ನೀಂ ಮುಚ್ಚು ನಿನ |
ಗಿಪ್ಪ ಹಳದಿಯ ಕಾಯಿ ಹಣ್ಣಾದ ಬಳಿಕ ಪವಣರಿದಿನ್ನು ಪಚ್ಚೆಯಾಡು ||
ತಪ್ಪಿದುದು ಪಂಚಬಾಣಂ ನಿನಗೆ ಬಳಿಕಲೆಂ |
ಟಿಪ್ಪಗಡೆಯೇಂ ಫಲಂ ಸೋಲುವೇ ನಿನಗಿನ್ನು |
ತಪ್ಪದೆನುತೊರ್ವ ಜಾಣಂ ಪಗಡೆಯೂಟನೆವಮಿಟ್ಟು ಲೋಲೆಯ ಜರಿದನು(*)
|| ೪೭ ||

---

೧ ತೊಣೆಯೇ (ಶಿ.) ೨ ತಿ (ಮ, ತು, ಗೋ.) ೩ ಹ (ಶಿ.) ೪ ಯಿನ್ನಾಳು (ಹು, ಮ.) ೫ ಕಂದು (ಶಿ.) ೬ ತಂದು (ಹು, ತು, ಗೋ, ಕೋ.); ಬಂದು (ಮ.) (*) ಈ ಪದ್ಯ ಅ, ಬ, ಕ, ಹು, ಮ, ಈ ಪ್ರತಿಗಳಲ್ಲಿಲ್ಲ.

ಕೆಂಪುವಣ್ಣನ ನೇಱಿ ಕಱಿದು ಕಾಣಿಸಿಕೊಂಬು |
ಪೆಂ ಸಂಘವೆ ಬಾಯುಮಂ ಮುಚ್ಚು ಪಚ್ಚೆಯಂ |
ನಿಂ ಸವಣಲಿತ್ತಾಡು ನಿಸ್ನ ಹೞದಿಯ ಕಾಯ್ಗಳವು ಮೊದಲೆ ಹಣ್ಣಾದುವು ||
ಇಂಪಂಚಬಾಣ ನಿನಗಿಲ್ಲವೆಂಟಿಪ್ಪಗಡೆ |
ಬೋಂ ಫಲಂ ಸೋಲು ತಪ್ಪದು ಮುಂದೆನುತ್ತೆ ಜಾ |
ಣಂ ಪಗಡೆಯಾಟದೊಳು ಸೆವನಿಟ್ಟು ಲೋಲೆಯಂ ಹದಿರುವಾತಿಂ ಜರೆದನು(ಅ)
|| ೪೭ (ಅ) ||

ಪರಿಸು ಮೂತಿಯನಾತನೆಡೆಗಿವನ[1] ಸಂಗವಂ |
ತರುಣಿ ಶಮನಂ ಮಾಡು ಮಾಡು ಚೆಂದುಟಿಯನೆಸೆ |
ವರುಣವುಂ ಹರೆಯದೊಳ್ ಹಣವನಾರ್ಜಿಸುವದೆ ಮನುಷ್ಯಧರ್ಮಂ ತಿಳಿಯಲು ||
ತರಿಸು ಪೂರ್ವದ್ರವ್ಯಮಂ ವಿಟರ್ಗೆ ದಕ್ಷಿಣನೊ |
ಲಿರದೆ ವಂಚಿಸು ವಾರುಣಿಯ ಕೊಳ್ಳಲುತ್ತರೋ |
ತ್ತರಮೆಂದು ಸುತೆಗೊರ್ವಳುಸಿರ್ದಳು ಚತುರ್ದಿಶಾವರರ ನಾಲ್ದೆಸೆವೆಳ್ದೊಲು || ೪೮ ||

ಕರತಳಮುಮಧರಮುಂ ಪಲ್ಲವಂ ಪಲ್ಲವಂ |
ತರಳಾಕ್ಷಿಯುಂ ಮುಖಂ ಕುಮುದಮುಂ ಕುಮುದಮುಂ |
ಗುರುಕುಚಂ ಸಮತೆಯುಂ ಗೋತ್ರಮುಂ ಗೋತ್ರಮುಂ ವಾಣಿಯುಂ ವರವೇಣಿಯುಂ
ಪರಿರಂಜಿಸುತ್ತಿರ್ಪ ಶಿವಮುಮಂ ಶಿವಮುಮಂ |
ಚರಣಮುಂ ಬಾಸೆಯುಂ ಪದ್ಮಮಂ ಪದ್ಮಮುಮ |
ನಿರದೆ ಪೊಲ್ತಿರಲ್ಲಲ್ಲ ಬಾಲೆಯರ್ ನಿಖಿಳಗುಣಶೀಲೆಯರ್ ಕಣ್ಗೆಸೆದರು || ೪೯ ||

ಕುರುಳ್ಗಳೊಳ್ ನಾರಿಯುಂ ಪುರ್ಬಿನೊಳ್ ಚಾಪಮಂ |
ಕರತಳದೊಳಸ್ತ್ರಮಂ ನಯನದೊಳ್ ಶಸ್ತ್ರಮಂ |
ಗುರುಕುಚದೊಳೊಪ್ಪುವ ರಥಾಂಗಮಂ ನುಡಿಗಳೊಳ್ ಗಿಳಿಗಳಂ ನುಣ್ದನಿಯೊಳು ||
ಪರಭೃತಂಗಳನೆಸೆವ ಯಾನದೊಳ್ ಹಂಸೆಯಂ |
ತರಳಾಕ್ಷಿ ನಿನ್ನಂಗದೊಳಗಿಟ್ಟು ತಾನೆತ್ತ |
ಸರಿದನೋ ಕುಸುಮಶರನೆಂದೊರ್ವ ಮುಗ್ಧೆ ಪ್ರಿಯಸಖಿಯ ಕೂಡಿಂತೆಂದಳು || ೫೦ ||

೧ ಗವನ (ಶಿ.) ೨ ಮುಚ್ಚಿ (ತು.) (ಅ) ಈ ಪದ್ಯ ಶಿ, ತು, ಪ, ಗೋ, ಕೋ, ಈ ಪ್ರತಿಗಳಲ್ಲಿಲ್ಲ.

ನಿನಗರಸನೀತನಿವನಂ ಕಾಯದಿರು ತರಳೆ |
ತನು ಸೊಂಕೆ ಸೊಂಕೆ ಸುಖಿಸುವ ಸೊಬಗನಿವನಿನ್ನ |
ಮನಕೆ ಸರಿಪೋಗಪಾತ್ರಂ ಮಹಾಕೀರ್ತಿಯುತನನುದಿನಂ ವಿನಯಪರನು ||
ಮನಸಿಜಕಲಾನಿಪುಣನೀತನಿರ್ದೊರ್ವಗೆ[1] ನ |
ಲ್ಲನನಪೇಕ್ಷಿಸಬಾರದೆಂದು ವಿಟನಂ ಜರಿದು |
ಮನಮೊಲ್ವು ಕೊಂಡಾಡುವಂತೆ ನಾಯಕಿಗೆ ಸಖಿ ಬೋಧಿಸಿದಳಕ್ಕರಿಂದೆ || ೫೧ ||

ಒಲಿದ ಬಳಿಕರ್ಥವಿಾವನೆ ವಿಟಂ ನಿನಗೆ ಹೇ |
ರಳವಾಗಿ ಮುನಿಯೆ[2] ತಿಳಿಪುವನೆ ಜಾಣಂ ಮನೆಗ |
ಳೊಳಗಿರ್ದೊಡಂ ಬರ್ಪುದೇಪೊತ್ತೆ ಕಳವಿನೊಳ್ ನಡೆವುದೇ[3] ಸುಖದ ಸುಗ್ಗಿ ||
ತಲೆದೋರುತಿರ್ಪುದೇ ಮಚ್ಚು ನಿನಗೆಲಗೆಯೆ[4] |
ನ್ನೊಳಗೆ ವಂಚನೆಯೆಯೆಂದೊರ್ವ ಸೂಳೆಗೆಯವಳ |
ಕೆಳದಿ ಚದುರಿಕೆ ಬೆಡಗಿನಿಂ ಹಿತದ ಬುದ್ಧಿಯಂ ಪೇಳಿದಳದೇನೆಂಬೆನು || ೫೨ ||

ಅಧರವರುಣ[5]ಮನಕ್ಷಿಗಂ ಬಿದಿರ್ಪುದಿಲ್ಲ ಕೇ |
ಶದ ಪಾಳಿಯಂ ಕೆದರ್ಪುದಿಲ್ಲ ಕುಚಕುಂಭಮಂ |
ಪುದಿದ ಕುಂಕುಮಮುದಿರ್ಪುದಿಲ್ಲ ನಿನ್ನೀ ತೊಡೆಗಳೊಮ್ಮೆಯುಮದಿರ್ಪುದಿಲ್ಲ ||
ಇದು ಗುಣವೆ ಸೂಳೆತನಕಕಟ ನೀನಾರ್ಗೆ ಮೆ |
ಚ್ಚಿದೆಯೊ ಪೇಳ್ ಕೊಟ್ಟವರನಿಂತು ಕರೆದೊಡೆ ಮುಂದೆ |
ಬದುಕಿಲ್ಲಮೆಂದೊರ್ವ ಮುದಿಕಿ ಮಗಳಂ ಪುರ್ವಿನಿಂ ಜರ್ವಿ ಕೋಪಿಸಿದಳು || ೫೩ ||

ಮುಗುದೆ ಕೇಳ್ ಬಯಕೆ ಚಿಂತಾವೃದ್ಧಿ ಸುಯಿಗಳೊಗು |
ಮಿಗೆ ಪ್ರಿಯಸ್ತುತಿ ತಾಪಮುಶಸತ್ಯಜಾ ಮಾನ |
ವಿಗತಿ ಕಾಂತಾನ್ವೇಷಣಾಗಮಂ ಕಂಠಗತಪ್ರಾಣಮೂ ಮೃತಿಯೆಂಬಿವು ||
ಮಿಗೆ ದಶಾವಸ್ಥೆಯಿವನೊಂದುಮಂ ನೀಂ ಮನಂ |
ಬುಗಿಸದಿರ್ ಬಾಹಿರಂಗದೊಳುಂಟೆನಿಸಿ ತೋರಿ |
ತೆಗೆಸು ವಸ್ತುಗಳನೆಂದೊರ್ವ ಮುದಿಸೂಳೆಯಾ[6] ಮಗಳನುರೆ[7] ಬೋಧಿಸಿದಳು || ೫೪ ||

೧ ನೆಂದೊರ್ವ (ಮ.) ೨ ಮುನಿಸ (ಮ.) ೩ ನೋಡುವುದೆ (ಮ.) ೪ ನಿನಗೆ ನಗೆಯೆ (ಶಿ, ಪು, ಗೋ, ಕ.) ೫ ವರ್ಣ (ಮ.) ೬ ತಾ (ಶಿ.) ೭ ಳುಮಂ (ಹು, ಮ, ಪು.)

ಸರಸಿಜಾನನೆ ಪೇಳ್ ಸುಧಾಂಶುಯಶ ಕೇಳ್ ಕುಮುದ |
ವರನೇತ್ರೆ ಪೇಳ್ ಬಾಲಸೂರ್ಯಪ್ರಕಾಶ ಕೇಳ್
ಕರಿಕುಂಭಕುಚೆ ಪೇಳ್ ಮಹಾಪುರುಷಸಿಂಹ ಕೇಳ್ ತುಂಬಿಗುರುಳಬಲೆ ಪೇಳು ||
ವರಚಂಪಕಾಮೋದ ಕೇಳ್ ಹಂಸಗಮನೆ ಪೇಳ್ |
ಪರಮಘನಗಂಭೀರನಿನದ ಕೇಳೆಂದೊರ್ವ[೧] |
ತರುಣಿಗೊತ್ತೆಯನೀಯದಾ ವಿಟಂ ಬೇಗದಿಂ[೨] ತಿರುಗಿದನದೇಂ ಚಿತ್ರಮೋ || ೫೫ ||

ಪರನಂತೆ ಘನಪಸಖಿ ನವರತ್ನದಂತೆ ಗುಣ |
ವಿರಹಿತೆ ಸುರಾಚಾರ್ಯನಂತೆ ಗತಸೌಖ್ಯ ಸ |
ದ್ವರುಪಮಿತನಿಮ್ನಗಾರಯುದಂತೆ ರಹಿತಾನುಕೂಲೆ ಘನವಜ್ರದಂತೆ ||
ನಿರಸೆ ರವಿಯಂತೆಯಾಶಾಪ್ರದರ್ಶಿತೆ ಕಲಾ |
ಧರನಂತೆ ವಿಶ್ರುತಕಳಂಕಿಯವಳೆಂ[೩]ದೊರ್ವ |
ತರುಣಿಯುಂ ತನ್ನಾಪ್ತಸಖನೊಡನೆ ಕೊಂಡಾಡುವಂತೆ ದೂರಿದನೊರ್ವನು || ೫೬ ||

ಕುಡಿವುರ್ವುಗಳ್ ಸುರಪಧನುವನಾ ಪೋಲೆವ ಕಣ್ |
ಗಡೆ ಮಿಂಚಿನೆಳ್ಗೆಯುಂ ತ್ರಿವಳಿಗಳ್ ತೆರೆಗಳಂ |
ಕಡುತೋರಮುಡಿ ಮುಗಿಲನಧರಮತಿಸಂಚಯಂ[೪] ತನುಮಧ್ಯಮದು ಪುಸಿಯನು ||
ಬಿಡದೆ ಮಿಕ್ಕುಂ ಮಹಾಚಂಚಲಮೆ ರೂಪಾದ |
ಮಡದಿಯುರ ಮನ ವಚನ ಕಾಯ ನಿಜಮುಂ ಮಹಾ |
ದ್ವಧನೊಂದು ಸಂಬುವಂ ಮೂಢನೆಂದೊರ್ವ ಜಾಣಂ ಕೆಳೆಯನೊಳ್ ನುಡಿದನು
|| ೫೭ ||

ಗಳರವಂ ವಕ್ಷತಾಡಿತನಿಸ್ವನಂ ಮಂಚ |
ದುಲಿವ್ರ ಕರಕಂಕಣಧ್ವನಿಯುಮರ್ದ ಸದ್ದಶಪದ |
ತಳಸಿನಾದಂ ಚುಂಬನಸ್ವನಮದೋರೊರ್ವರೊಳು ಲಲ್ಲೆಗಳ ನುಣ್ದನಿ ||
ಸಿಲಿದುಣ್ಮುವ್ರಸಿದು ತವಕಂ ಹೂಂಕೃತಾರವಂ |
ಗಳೊಕ್ಕೈದೆ ಕಾಮವೇದವನೋದುತಿರ್ಪವ |
ಗಳ ಮಿಥುನಗಳವೊಲಿಲ್ಲಿಗೆ ಪ್ರಕಾಶಸಂಭೋಗಿಗಳ್ ಕರಮೆಸೆದರು || ೫೮ ||

೧ ಪೇಮಾ (ಗೊ.) ೨ ಬೇಗದಿಂ (ಶಿ, ತು.) ೩ ಕಳಂಕಾಂತೆಯಿಂ (ಪ.) ೪ ಮಧು ವೃಷ್ಟಿಯುಂ (ಮ.)

ತಣ್ಣೆಲರ ಸೋಂಕೆನಲ್ ಸೋಂಕಿಯುನಿವಿ ಷರಂತೆ |
ಕಣ್ಣೊಳಂ ಕಣ್ಣನಿಟ್ಟಳಿಯಂತಿರಪ್ಪಿ ಮಾ |
ವಣ್ಣನರಗಿಳಿ ಸವಿವೊಲಧರವಂ ಸವಿದು ಜಾರುವ ನಿರಿಗಳಂ ತೊಲಗಿಸಿ |
ಗಿಣ್ಣಲಂತಪ್ಪ ಮೊಲೆಯಂ ಮುಟ್ಟಿ ಲಜ್ಜಿಸುವ |
ತಿಣ್ಣಮಂ ಬಿಡಿಸಿ ನಾಣ್ದಾಣಮಂ ತಡವಿ ಮೆಯ್ |
ಬಣ್ಣಗೆಡದಂತೊಂದುತಿರ್ಪ ಪ್ರಚ್ಛನ್ನಸಂಭೋಗಿಗಳ್ ಕಣ್ಗೆಸೆದರು ॥ ೫೯ ॥

ಬರಸೆಳೆದೊಡಮರ್ದಪ್ಪಿ ಚುಂಬಿಸಲ್ ಕರಗಿ ಕಾ |
ತರಿಸಲೊಡನೊಡನೆ ಮೇಲ್ವಾಯ್ದು ಕೂಡಲ್ ಜುಮ್ಮ |
ನಿರ[೧]ದೊಸರಿ ತೆಗೆದತ್ತಲೊದಗಿ ತಳಮೇಲಿದಿರ್ಗಳೊಳ್ ಪಿಂಚುಮುಂಚೆನಿಸದೆ[೧] ॥
ಸರಿಯೆನಿಸಿ ಕೂಡಿ ಮೂರ್ಛೆಗೆ ಸಂದ ಸಮಸುಖದ |
ನೆರವಿಯಿದು ಕಾವಜಾತ್ರೆಗೆ ಬಂದು ಮೆಯ್ಯಿಕ್ಕಿ |
ಸುರತಸಿದ್ಧಾಂಜನವ ಬಯಸಿ ಭಜನೆಗೆ ಬೀಳ್ವರೆಂಬಿನೆನಲ್ ಕಣ್ಗೆಸೆದರು ॥ ೬೦ ॥

ಸರಿದ ತೆರೆಯೆನೆ ಲಜ್ಜೆ ತೊಲಗೆ ಪುಷ್ಪಾಂಜಲಿಯ |
ದೊರೆಯೆನಲ್ ಮುಡಿಯಲರ್ ಸೂಸೆ ತವೆ ಬಾಜಿಸುವ |
ಮುರಜಮೆನೆ ತಾಟಿತಕಟಸ್ವನಂ ಪೊಣ್ಮೆಯೊತ್ತುವ ತಾಳಮೆನಲಮರ್ದ ॥
ಕರಘಾತಮೊಪ್ಪೆ ಪಾಡುವ ಗೀತಮೆನೆ ಗಳ |
ಸ್ವರಮೆಸೆಯೆ ಕಾಂತಾಂಗರಂಗದೊಳ್ ಮತ್ತೊರ್ವ |
ತರುಣಿ ರತಿಲಾಸ್ಯಮಂ ಕಾವಂಗೆ ತೋರ್ಪಳೆನೆ ಪುರುಷಾಯತದೊಳೆಸೆದಳು ॥ ೬೧ ॥

ವಲ್ಲಭಧ್ವಜಮೆಂಬ ಲಾಕುಳದ ಕೋಲ ತುದಿ |
ಯಲ್ಲಿ ನೆರೆ ಕಾಮಯೋಗಾಭ್ಯಾಸಮಂ ಮಾಳ್ಪ |
ಸಲ್ಲಲಿತ ಜೋಗಿಣಿಯೊ ಪ್ರಿಯ[೨]ದಂಡಮೆಂಬ ಗಳೆದುದಿಯ ಮೇಲಾಡುತಿರ್ಪ ॥
ಕೊಲ್ಲಟಿಗವೆಣ್ಣೊ ಸ್ಮರಕೇತನದ[೩] ತುದಿಯ ಪಟ |
ದಲ್ಲಿ ಪೊನ್ನೀರೊಳರೆ ಚಿತ್ರಿಸಿದ ಬೊಂಬೆಯೆನ |
ಲಲ್ಲಿಯುಪರತಿಯಾದಿಮುಧ್ವಾಂತದಬಲೆಯೊರ್ವಳ್ ಕಣ್ಗೆ ಸೊಗಯಿಸಿದಳು ॥ ೬೨ ॥

೧-೧ ದೋಸರಿಸಿ ತೆಗೆದನಿತರ ಮೇಲಿದಿರ್ಗಳೋಳ್ ಪಿಂಚುಮುಂಚೆಂದೆನಿಸದೆ (ಮ.) ೨ ಜಯ (ಶಿ, ಗೋ.) ೩ ಕಾಮಧ್ವಜದ (ಮ.)

ಕೆದರ್ದ ತಲೆನವಿರಂನೆ ಮುಗಿದ ಕಣ್ಗಳ್ ಜೋಲ್ವ
ವದನದಿಂ ಭುಜಮೊಕ್ಕೊರಗಿದ ಕೊರಲ್ ತೆಳ್ಳಟಿಯುಂ |
ತುವಿ ಮಿಡುಕದಂಗಂ ವರಾಂಗಚುಂಬನದ ತಂಬುಲ ರಸಂ ಪೆರಸಿ ಸೋರ್ವ ||
ಮದನಾಂಬುವೋ ರಕ್ತಮೆನೆ ಸ್ಮರಂ ತನ್ನ ವಿಜ |
ಯದಕೊರ್ವಳಂ ತಂದು ಪುನ್ನಾಗವೃಕ್ಷದಂ |
ದದ ಮೂಲದೊಳ್ ಬಲಿಸಿದನೆನಲುಪರಿಸುರತಮೂರ್ಛಿತೆ ಕಣ್ಗದೆಂ ವಂದಳೋ
|| ೬೩ ||

ಆಲವಣ್ಣೆಂದಧರಮಂ ಗಿಳಿ ಕರ್ದುಂಕಿದುದು |
ಸೀಳಿದುದು ತೋಳ್ಗಳಂ ಕಳಹಂಸ ಸಾರಸಮು |
ಗಾಳಮೆಂದುಂ ಚಂಚುವಿಂ ನಿನ್ನ ವಿರಹದಿಂ ಪೊರಳುತಿರೆ ನಿರಿಗುರುಳ್ಗಳ ||
ನಾಲು ಕೆದರ್ದುದು ಹಾರಮೋಸರಿಸತೆಂದೊರ್ವ |
ಬಾಲೆ ಪ್ರಾಣೇಶನಂ ನೆರೆದಂತೆ ಕಳುಪಿ ತತ್ |
ಕಾಲರತಿಚಿಹ್ನಮಂ ಮತ್ತೊರ್ವನೊಳ್ ಪುಸಿದು ಡಾಳಿಸಿಯೊಲಿದಿಂತೆಂದಳುಳ
|| ೬೪ ||

ತಂಗಾಳಿ ತೀಡೆ ತಿಂಗಳ್ ಮೂಡೆ ಮನಸಿಜಂ |
ಸಿಂಗಾಡಿವಿಡಿಯೆ ಕೋಕಿಲೆ ನುಡಿಯೆ ವಿರಹದಿಂ |
ದಂಗನೆ ಬಳಲ್ದಿಹಿಗಳಂ ದಿವಿಜರಂ ರುದ್ರನಂ ಕೂಡೆ ಕರಟಂಗಳ ||
ನುಂಗಿಯುರಿವೆಲ್ದು ಸುಟ್ಟುಳಿಪಿ ರಕ್ಷಿಸಿದರಿಂ |
ದಂಗೊಳಿಯುರಿವರೆಂದು ಶಪಿಸಿಯುಂ ತಣಿಯದೆ ವಿ |
ಹಂಗಪತಿಯುಬ್ಬಿ ಪರಶಿವ ಬ್ರಹ್ಮರಂ ಬೈದಳೇನೆಂಬೆನಚ್ಚರಿಯನು || ೬೫ ||

ವರಪುಷ್ಪತಲ್ಪಮಾ ಸರ್ಪದರ್ಪಂ ಸುಕ |
ತ್ಸ್ವರಿಯ ಲೇಪಮುದುರಿಯರೂಪಮಾ ಚಂದನಂ |
ಪಿರಿತಮತಿಬಂಧನಂ ಸಸಿಯ ಜೊನ್ನಂ ಬಿಸಿಯ ಬನ್ನಮಂತಾ ಮಾರುತಂ ||
ಸ್ಮರಧನುಜ್ಯಾರುತಂ ಸಖಿಯರಾಳಾಪಂಗ |
ಳುರುತರಪ್ರಳಾಪಮಾದುವು ವಿರಹತಾಪದಿಂ |
ಪರಪರಾ ತಾಳ್ದಳೇ ತರಳೆ ಪೇಸಿಸುತಂ ಸಖಿಯರರಸಿ ಚಿಂತಿಸುತಿರ್ದರುಲ್ || ೬೬ ||

೧ ಡಿಳ್ಳ ಕೊಳ್ (ಮು.) ೨ ಪ (ಮು.) ೩ ದಾಳಿ (ಕೋ.) ೪ ದಂತಿರ್ದಳು (ಮು.) ೫ ಸುರಿತಸ್ವಾದನಲಂ (ಪ.) ೬ ಬಿಸಿಲ (ತಿ, ಗೋ.) ೭ ನ್ಯಾರಿಕೆ (ಮು.) ೮ ಳು (ಪ, ಗೋ.)

ಗಂಧಮಂ ಮುಡಿಸು ಪೂವಂ ಪೂಸು ಮಂಚಮಂ |
ತಂದು ತಳಿ ಪನ್ನೀರ್ಗಳಂ ಪಾಸು ವೀಣೆಯಂ |
ನಿಂದು ಕತ್ತರಿಸಡಕೆಯಂ ನುಡಿಸು ಜಿಕ್ಕನೋದಿಸು ಗಿಳಿಯಸತ್ತ್ರ ಹೊಡಿಸು ||
ಅಂದುಗೆಯ ಕೊರಳೊಳಿಡು ಕಾಲ್ಗಂಜನಮನೆಚ್ಚು |
ಪಿಂಬೆ ಮುಡಿಯಂ ಬೆಳಗು ದೀಪಮಂ ಕಟ್ಟು ನೀ |
ನೆಂದೊರ್ವ ನಾರಿ ನಲ್ಲನನಗಲ್ದ ವಿರಹವಿಕಳದೊಳು ನುಡಿದಳ್ ಸಖಿಯೊಳು || ೬೬ ||

ಲಾವಣ್ಯವಾರಾಸಿಯೊಳ್ ಮುಳುಗಿಯುಂ ಮರಳಿ |
ಜೀವಿಸಿದರುಂಟೆ ಗಿರಿನೈತಂಬಸಿಂಹಮಂ |
ಹಾವನಾಲಂಗಿಸಿದರುಂಟೆ ಸುರರಮ್ಮತಕಲಶಮನೊಲ್ದು ಸವಿದರುಂಟೇ ||
ಭಾವಿಸೆ ಪಯೋಧರಮನೌಂಕಿದವರುಂಟೆಯಿಾ |
ಕಾವಗಲಹದ ಭಟರ ಭಾವಮಿದು ಚೋದ್ಯಮೆಂ |
ದಾ ವಿನೋದದೊಳೊರ್ವ ಜಾಣೆಯೊಳ್ ಮುಂಗಯ್ಯ ಗಿಳಿ ನುಡಿದುದೇನೆಂಬೆನು
|| ೬೮ ||

ಕೇಳಬಲೆ ನೀಂ ಪೆಣ್ಣ ಜವ್ವನಂ ನೋಡೆ ಬಿರು |
ಗಾಳಿಗೊಡ್ಡಿದ ಸೊಡರ್ ಸುರರ ಚಾಪಂ ಕುಸುಮ |
ದೇಳಿಗೆ ತಟಿಚ್ಛೋಬೆಯೆಂದರಿದುಮೆಳವರೆಯದೊಳಗೆ ಧನಮಂ ಗಳಿಸದ ||
ಸೂಳೆತನದಂಗದಿಂದೇಂ ಫಲಂ ಮನೆಯೊಳಗೆ |
ಹಾಲುಳ್ಳ ಕಾಲದೊಳ್ ಹಬ್ಬಮಂ ಮಾಡೆಂದು |
ಪೇಳುವೀ ಗಾದೆ ಪುಸಿಯಲ್ಲಮೆಂದೊರ್ವಳತಿಬಾಲೆಯಂ ಬೋಧಿಸಿದಳು || ೬೯ ||

ಬಲುರಾಯರೊಲ್ಮೆ ಗಡಯುಂಬುದೆಲ್ಲಂ ನವಣೆ |
ಯೊಳು ಗಂಜಿ ಗಡ ಪರುಷ ಸೋಂಕು ಗಡ ವರುಷಮಂ |
ಸಲೆ ಕಡಂ ಗಡಮೆಂಬ ನಾಣ್ಣುಡಿಗೆ ಸಲ್ವರೇ ನೀಂ ಜಾಣ ಮೆಲ್ಲಿರ್ದೆಗನು ||
ಒಲಿವ ತರಳೆಯೊಳಿಂತು ಮುನಿವರೇ ಮೋಹಕ್ಕೆ |
ಛಲವೆ ಬಾಳೆಯ ಹಣ್ಣಿಗುಂಟೆ ಗರಗಸವೆಂದು |
ತಿಳಿಪಿ ತಂದೊರ್ವನಂ ಕೆಳದಿ ತನ್ನಯ ಸಖಿಯೊಳೊಲವನ್ನೈದಿಸುತಿರ್ದಳು || ೭೦ ||

ಮಧುಪೂರ್ಣಶಶಿಕಾಂತಚಷಕಮಂ ಮತ್ತೊರ್ವ |
ಸುದತಿ ಹಸ್ತಾಗ್ರದೊಳ್ ಪಿಡಿದು ನೋಡುವ ಪದ¹ದೊ |
ಳದರೊಳತಿ ಕಂಪಿಸ ಮುಖೇಂದುಪ್ರತಿಬಿಂಬಮಂ ಕಂಡು ತಾಂ ನಸುನಗುತ್ತೆ ||
ಇದೆ ಸಿಕ್ಕಿದಂ ಕಳ್ಳನಿಂದೆನ್ನ ಮೊಗದ ಸಂ |
ಪದಮಂ ಕಳಲ್ ಬಂದನೆಂದು ರಕ್ತಾಕ್ಷಿ ಕೋ |
ಪದೊಳೆ ನುಂಗುವಳೆನಲ್ ಮಧುಪಾನಮಂ ಮಾಡುತಿರ್ಪವಳ್ ಕಣ್ಗೆಸೆದಳು || ೭೧ ||

ಬಟ್ಟಲೊಳ್ ಪಿಡಿದ ಮಧುರಸವನಾಪೇಕ್ಷೆಯಿಂ |
ನಟ್ಟಾಲಿಯಿಂದೀಕ್ಷಿಸಲ್ ಕಣ್ಣ ಕಪ್ಪು ರೂ |
ಪಿಟ್ಟ ಕತ್ತುರಿಯ ರಸದಂತೆಸೆಯೆ ಚಿತ್ರಮೆಂದುಂ ಮುಗ್ಧೆಗಂ ಮುಗುಳ್ನಗೆ ||
ಪುಟ್ಟಲನ್ಯತೋಪಮಾನಮಿದೆಂದು ವಿಸ್ಮಯಂ |
ಬಟ್ಟು ಸವಿದಳ್ ತನಗೆ ಬೇಕಾದ ವಸ್ತುವೊಳ್ |
ಪುಟ್ಟಿದವಗುಣಮುಮಂ ನೋಡರೆಂದೆಂಬ ನಾಣ್ನುಡಿಗಿದೇ ತಥ್ಯಮೆನಲು || ೭೨ ||

ಮತ್ತೊರ್ವ ಸುದತಿ ಬೆಳ್ಳಿಯ ಬಟ್ಟಲೊಳ್ ತುಂಬಿ |
ದುತ್ತಮಮಧುದ್ರವಮನೀಂಟುತಿರೆ ಕಣ್ಗೆವಂ |
ದತ್ತು ಜೆನ್ನಂ ಮುಸುಕಿ ಪೊರೆವಾರಿಗಿಳಿದ ನಿಡುಜಡೆ ಚಂದ್ರಮಂಡಲವನು ||
ಅತ್ತಿತ್ತ ಮಿಸುಕ²ಲೀಯದೆ ಕಚ್ಚಿ ಧರೆಗೆ ತಂ |
ದತ್ತೊ ಸ್ವರ್ಭಾನುವೆಂಬಂತೈದೆ ಸಂಶಯಮ |
ನಿತ್ತುದೀ ಮಧುವಾಶ್ರಯಂ ಮೇಲೆನಿಪ್ಪರಂ ಕೀಳ್ಮಾಡದೆಂ ಬಿಡುವುದೇ || ೭೩ ||

ತೇಗಿದೊಡೆ ಮದ್ಯಪಾನದ ಗಂಧಮೆಲ್ಲರ್ಗೆ |
ಮೂಗುಬ್ಬಸಂ ಮಾಡೆ ಕುಡಿದ ಮಧುರಸಮುಕ್ಕಿ |
ಮೇಗೆ ಸುರಿಯಲ್ ತತ್ತದಿದ್ದಿ ಮಿತ್ತೊಂಗುಥೋಯೆಂದು ಜೋಗುಳವಾಡುತೆ ||
ತೂಗುತೇಳುತ್ತೆ ಬೀಳುತ್ತಳುತೆ ನಗುತಲಿಲಿ |
ಮೇಗೆ ಬಿದ್ದುದು ಕಪ್ಪೆಯೆಂದು ನಾಯ್ಗೆರಗಿ ಪೋ |
ಜೋಗಮ್ಮ ಬಾಳು ಬಾಳೆನುತದೊರ್ವಳ್ ಕುಡಿಚಿ ಸೂಳೆಯಾಡುತ್ತಿದ್ದಳು || ೭೪ ||

---

೧ ಪಥ (ಪು.) ೨ ಮಿದುಕ (ಹು, ಮ.)

ಮುಸುಕಿ ರವಿಕೆಯೊಳಡಸಿ ಜೊಲ್ವ ಪೆರ್ಮೊಲೆಗಳಂ |
ಬಸುರ ಸಾರಿದ ಮೊಲೆಗಳಂ ಸೊಲ್ವ ಮೊಲೆಗಳಂ |
ಪಸರಿಸುತೆ ಬಯಲ ಬೇಟಂಗಳಂ ತನ್ನ ಹರಯದ ನಲ್ಲರೊಡನೆ ನಕ್ಕು ||
ನಸೆ ಮಾಡುತಂ ಸಿಂಗರಕ್ಕೆ ಮನಮೆಳಸಿ ನು |
ಣ್ಣಿಸುತೆ ರಸಪುರತ ಮೊಗಮುಂ ಬೀತ ಕಾಮಮುಂ |
ಹಸಗೆಟ್ಟಿನೆಂಬ ಮನದುಜ್ಜುಗದ ಲೋಲೆಯರ್ ಮೆರೆದರದನೇವೇಳ್ವೆನು || ೭೫ ||

ಬತ್ತಿರ್ದ ಮೊಲೆಯ ಕುಪ್ಪುಸದೊಳರುವೆಯ ಚೆಂಡ |
ನೊತ್ತಿ ಬಿಗಿದುಂ ಬಾಡಿ ಬಿಸುಟಿಲೆಯ ಗಳಿಗೆಯಂ |
ಸುತ್ತಿ ಸುಕ್ಕಿರ್ದಣಲೊಳಡಸಿ ನೆರೆದಲೆಗೆ ಮಸಿದೊಡೆದು ತೆರೆಗೊಂಡೊಡಲನು ||
ಕತ್ತಲೆಯ ಮರೆಗೆಯ್ದು ಬೊಗಡು[೧]ಬಾಯಿಂದಲೂ |
ಳುತ್ತೆ ತನ್ನಿಚ್ಚೆ ಬಂದಂತೆ ನಾಯ್ ಸರಕೆಂದೊ |
ಡಿತ್ತ ಬಾ ಜಾಣಯೆಂಬಾ ಹಣ್ಣುಮುದುಕಿಸೂಳೆಯರೆಸೆದರೇನೆಂಬೆನು || ೭೬ ||

ಹಂಜಿಗುಕ್ಕೆಯೊಳೆಸೆವ ಮೊಗದೊಳಾ ಬೊಗಡು[೨]ಬಾ |
ಯಿಂ ಜೊಲ್ಲು ಸುರಿಯೆ ತಲೆ ನಡುಗೆ ಸುಕ್ಕಿದ ಮೆಯ್ಯೊ |
ಳಂ ಜಗುಳ್ದುಡುಪನೆತ್ತುತಿತೆ ಮುರುಡುತಿಗೋಲ್ಪಿಡಿದು ತಡವರಿಸಿ ನಡೆವ ಮುದುಪಂ[೪]
ಕಂಜಮುಖಿಯೊರ್ವಳಂ ಕಂಡು ಭ್ರಮೆಗೊಂಡು ತಾ |
ನುಂ ಜಗಲಿಯೆಡೆಗೆ ನಡೆದೊತ್ತೆಯುಂ ಕೇಳುತಿ |
ರ್ದಂ ಜಗದೊಳೆಂತಪ್ಪರಂ ಮನಸಿಜಂ ಮರುಳ್ಮಾಡದಲ್ಲದೆ ಮಾಣ್ಬನೆ || ೭೭ ||

ಮುಂತೆ ಬರಲಾಗಳಾ[೫] ಶಿವಭಕ್ತಸೂಳೆಯರ |
ಸಂತತಿಗಳೈತಂದ[೬] ಮಿಂಡಜಂಗಮದೊಡನ |
ನಂತ ಸೌಖ್ಯ[೭]ಂಗಳಿಂದಿರುತಿರ್ದು ಬಳಿಕ ಶಿವಪೂಜೆಯಂ ಮಾಡುತಿರಲು[೭] ||
ಅಂತಾಗಲಾ[೮] ಶಂಖ ಜಯಘಂಟೆ ಮೊದಲಾದ |
ನಂತವಾದ್ಯಂಗಳ ನಿನಾದಮಂ ಕೇಳುತತಿ |
ಸಂತೋಷದಿಂದಾಗ ಸಖರ ಸಮ್ಮೇಳದಿಂದೈದಿದಂ ಸಂಭ್ರಮ[೯]ದೊಳು || ೭೮ ||

---

೧ ಬೋಡು (ಮ.) ೨ ಬೋಡು (ಮ.) ೩ ತೆಮೂರು (ಮ.) ೪ ಕಂ (ಮ.) ೫ ಬರಬರಲಾಗ (ಗೋ.) ೬ ಳಾ ತಮ್ಮ (ಹು, ಮ.) ೭-೭ ದೊಳಿರ್ದು ಮುಂಜಾವಿನಲ್ಲಿ ಶಿವ ಪೂಜೆಯಂ ಮಾಡುತಿರಲು (ಶಿ.) ೮ ಲುಂ (ಶಿ.) ೯ ಸಂತಸ (ಶಿ.)

ಈ ತೆರದೊಳಾ ವಿಟವಿಟೀಜನದೊಳುಳ್ಳನಿತು |
ಜಾತಿಲಕ್ಷಣಗಳಂ ನೋಡುತ್ತೈತರೆ ದಿನಪ |
ಘಾತಿಯಿಂದೋಡುವ ನಿಶಾಂಗನೆಯ ಚರಣನೂಪುರದ ರವವೆಂಬಂತಿರೆ ||
ಓತಪ್ಪಿದರನಗಲ್ಚುವ ಸೂಳೆಯರ ದುಷ್ಟ |
ಮಾತಾಕಘೋರವಚದಂ[1]ತಲ್ಲಗಲ್ಲಿ ಪ್ರ |
ಘಾತಸಮಯದ ಕೋಳಿಗಳ್ ಕುಕ್ಕುಕೂಯೆಂದು ಕೂಗುತಿರ್ದುವು ಕ್ರಮದೊಳು
|| ೭೯ ||

ತುಂಬಿಗಳಿಗೌತಣಮನೆಚ್ಚರಿಸಿ ಚಕ್ರದ ಕು |
ಟುಂಬಕ್ಕೆ ರತಿಯೊಸಗೆಯಂ ಪೇಳ್ದು ವಾತಾಯ |
ನಂಬೊಕ್ಕು ಸುರತಮೂರ್ಛಿತರನೆಬ್ಬಿಸಿ ತಾಮ್ರಚೂಡಜಿಹ್ವೆಯನಲುಗಿಸಿ ||
ಅಂಬುಜಕೆ ಮಿತ್ರಾಗಮವನುಸಿರ್ದು ಕೈರವಕ |
ದಂಬಕಳಲುರಿಯನೆಬ್ಬಿಸಿ ನಾಡೆ ಶೈತ್ಯರೂ |
ಪಂ ಬಂದು ತೀಡಿದುದು ರವಿಯುದಯಕಾರಣಸಮೀರಣಂ ತತ್ಕ್ಷಣದೊಳು
|| ೮೦ ||

ಅನಿತರೊಳಗನಿಲಹತಿಯಿಂದಂಬರಕೆ ನೆಗೆದ |
ವನಧಿಮಧ್ಯದ ಬಟ್ಟತಪ್ಪ ಮುತ್ತಿನ ಚಿಪ್ಪೊ |
ಅನಿಮಿಷಾಪಗೆಯೊಳಿರುಳಿನ ಮಂಜು ಸೋಂಕೆ ಬಾಡಿದ ಪುಂಡರೀಕದಲರೋ ||
ತನಿಜೊನ್ನವಾಲನೀಂಟುವ ಪದ[2]ದೊಳದು ಬತ್ತೆ |
ವನದೊಳಂ ಕಂದಿ ತೋರುವ ಹಂಸಮರಿಯೊ ಪೇ |
ಳೆನಲೆಸೆದುದಸ್ತಾದ್ರಿಯೊಳ್ ಚಂದ್ರಮಂಡಲಂ ಮುನ್ನೇಸರಾಗಮದೊಳು || ೮೧ ||

ಆ ಸಮಯದೊಳ್ ಬಿಜ್ಜಳಂ ಸಖರ ಸಹಿತ[3] ಸುವಿ |
ಲಾಸದಿಂದಲ್ಲಿರದೆ ತಿರುಗಿ ತನ್ನಯ ನಿಜನಿ |
ವಾಸಕ್ಕೆ ಬಂದು ಸಖರಂ ಕಳುಪಲಾಕ್ಷಣದೊಳಿನನುದಯವಾಗಲಿತ್ತ ||
ಲೇಸಾಗಿ ಮೆರೆವ ಲಕ್ಕದ ಮೇಲೆ ತೊಂಬತಾರ್ |
ಸಾಸಿರ ಮಹಾಜಂಗಮಕ್ಕೆ ಮೃಷ್ಟಾನ್ನಮಂ |
ದಾಸೋಹಮಂ ಮಾಡುತುಂ ಬಸವನುಂ ಚೆನ್ನಬಸವನುಂ ಸುಖಮಿರ್ದರು || ೮೨ ||

೧ [illegible] (ಮು.) ೨ ಪಥ (ಮು.) ೩ ಕೂಡಿ (ಮ, ಹು.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೮೩ ||

ಅಂತು ಸಂಧಿ ೧೦ಕ್ಕಂ ಪದಗಳು ೪೩೫ಕ್ಕಂ ಮಂಗಳಮಹಾಶ್ರೀ

ಹನ್ನೊಂದನೆಯ ಸಂಧಿ

ಸೂಚನೆ

ಎಸೆವ ಕಲ್ಯಾಣಪುರವಳಿಯುದೈಶ್ವರ್ಯಮಂ |
ಪೊಸೆಮ ನಿಟ್ಟಿಸುತೆ ಪ್ರಭು ಸಿದ್ಧರಾಮನು[೧] ಕೂಡೆ |
ಬಸವನ ಮಹಾಗೃಹಕೆ ಬಂದು ಪೂಜೆಯ ಕೊಂಡು ಶಿವಗೋಷ್ಠಿಯಿಂದಿರ್ದರು[೨] ||

ಪಾವಕೇಂದ್ವರ್ಕನೇತ್ರಾವಳೀರವ್ಯ ರಾ |
ಜೀವಭವಹರಿಮುಖ್ಯದೇವಸಂತಾನಸಂ |
ಭಾವನಾಪೂರ್ವಕಕೃಪಾವಲೋಕನ[೩] ಲಸತ್ಪಾವನಚರಿತ್ರ ಜಯತು ||
ದೇವೀಮುಖಾಂಭೋಜಲಾವಣ್ಯರುಚಿಮುದಿತ |
ಭಾವ ನತರಕ್ಷಪ್ರಭಾವ ಸಲಹೊಲ್ದು ಪಂ |
ಪಾವರ ವಿರೂಪಾಕ್ಷದೇವ ಸುರನಿಕರಸಂಜೀವ ಭಕ್ತವ್ರಜವನು || ೧ ||

ಅತ್ತಲಾ ಪ್ರಭು ಸಿದ್ಧರಾಮಂಗೆ ಲಿಂಗದ ಮ |
ಹತ್ತನರುಹಿಸಿ ಕೊಡುವೆನೆಂದು ಕಲ್ಯಾಣದೊಳ |
ಗುತ್ತಮಶಿವಾಚಾರಿ ಚೆನ್ನಬಸವಂ ಬಸವನಿರಲವರ ಬಳಿಗಾತನ ||
ಚಿತ್ತಹರುಷದೊಳೆ ಕರೆತರುತಿರಲ್ ಮುಂದೆ ತೋ |
ರಿತ್ತು ಸುಕೃತದ ಬೀಡು ಸಿಂಗರದ ಜೋಡು ಸ |
ದ್ಭಕ್ತಿಯಿಹ ಗೂಡು ಸೊಗಸುವ ನಾಡು ನೋಡುತವರಡಿಯಿಟ್ಟು ಬರುತಿರ್ದರು
|| ೨ ||

ಎತ್ತ ನೋಡಿದೊಡೆ ನಿಗಮಂಗಳಿಂ ಪೊಂಗಳಿಂ |
ದೆತ್ತ ನೋಡಿದೊಡೆ ಗ್ರಾಮಂಗಳಿ ಪೆಂಗಳಿಂ |
ದೆತ್ತ ನೋಡಿದೊಡೆ ನಗರಾಳಿಯಿಂ ಶಾಳಿಯಿಂ[೪] ದ್ರೋಣಾಮುಖಾಳಿಯಿಂದೆ ||
ಎತ್ತಲುಂ ಪತ್ತನಸಮಾಜದಿಂ ಭೂಜದಿಂ |
ದೆತ್ತಲುಂ ಖರ್ವಡನಿಕಾಯದಿಂ ಗೇಯದಿಂ |
ದೆತ್ತಲ್ ಕಡಂಬದ[೫]ಸಘಾಡದಿಂ ಖೇಡದಿಂದಾ ನಾಡ ಸಿರಿ ಮೆರೆದುದು || ೩ ||

---

೧ ಸ (ಮ, ಹು.) ೨ ಸು (ಪ.) ೩ ವಚನಕರ (ಶಿ, ತು, ಗೋ, ಪ.) ೪ ಪಾಳಿಯಿಂ (ಅ, ಬ, ಕ, ಮ.) ೫ ಪುಡಂಬದ (ಮ, ಹು, ಶಿ.)

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ |
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ |
ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ[೧] ||
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ |
ದಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ |
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾದೇಶಮೊಪ್ಪಿರ್ದುದು ||೪||

ಕಂಜಕುಮುದಂಗಳಿಲ್ಲದ ಸರಂ ಸರದಿಂದೆ |
ರಂಜಿಸದ ಶುಕಪಿಕಂ [೨]ಶುಕಪಿಕಂಗಳ್ಗೆ ಫಲ[೨] |
ಮಂಜರಿಯನೀಯದಿಹ ಮಾವು ಮಾವುಗಳನಪ್ಪದ ಬಳ್ಳಿ ಬಳ್ಳಿಗಳೊಳು ||
ಮಂಜುಳಧ್ವನಿಗುಡದ ಪರಮೆ ಪರಮೆಗೆ ಸಂತ |
ಸಂ ಜನಿಸದರಲರಲ ನವಪರಿಮಳಂಗಳಿಂ |
ದಂ ಜಡಿಯದೆಳಗಾಳಿಯೆಳಗಾಳಿಯಿಲ್ಲದಿಹ ಬನಮಿಲ್ಲವಾ ನಾಡೊಳು ||೫||

ಪೊರೆಯದ ಸರಂಗಳಂ ಚಂದ್ರಕಾಂತಂಗಳಿಂ |
ಮೆರೆಯದ ಧರಂಗಳಂ ಕಿವಿಗಮೃತಸಾರಮಂ |
ಕರೆಯದ ಸ್ವರಂಗಳಂ ದುರ್ನೀತಿ ದುರ್ಮಾರ್ಗ ದುಷ್ಕೀರ್ತಿಸಂತತಿಯನು ||
ತೊರೆಯದ ಜನಂಗಳಂ ಸುರಪುರೋದ್ಯಾನಮಂ |
ಜರೆಯದ ಬನಂಗಳಂ ಜಾತಿವೈರಂಗಳಂ |
ಮರೆಯದ ಮೃಗಂಗಳಂ ಕಾಣೆನಾದೇಶದೊಳಗೇನೆಂಬೆನಚ್ಚರಿಯನು ||೬||

ಸುರಸಭೆಯವೊಲ್ ಸುಧರ್ಮಾಧಿಷ್ಠಿತಂ ನಾಡೆ |
ತರಣಿಮಂಡಲದಂತೆ ಗೋಮಂಡಲಾನ್ವಿತಂ |
ತರುಣೀಸ್ತನದ್ವಂದ್ವದಂತಗ್ರಹಾರಮಾಲಾಲಂಕೃತಂ ನೋಳ್ಪೊಡೆ ||
ಸರಸಿವೊಲ್ ಪದ್ಮಾಲಯಂ ವತ್ಸರಂಗಳಂ |
ತಿರೆ ಯುಕ್ತಬಹುಧಾನ್ಯಮೆಸೆವ ಗಂಧರ್ವರಂ |
ತುರುತರೋದ್ಯಾನಶೋಭಾಮೋಹದಿಂದಮಾ ನಾಡ ಸಿರಿ ಕರಮೆಸೆದುದು ||೭||

೧ ಕಾಲುವೆಗಳಿಂದೆ (ಮ.) ೨-೨ ಗಳ್ಗೆ ಫಲವಾದಸುಮ (ಶಿ.) ೩ ದಂಪದೊಳ್ (ಶಿ, ಗೋ.)
೪ ವಾಹ (ಮ.)

ದೇವಮಾತೃಕ ನದೀಮಾತೃಕದೊಳಂ ಬೆಳೆವ |
ದಾವ ಚೋದ್ಯಂ ಗಿಳಿ ಕದುಂಕಿದೊಡೆ ಬೀಳ್ಕಿನಿದು೧ |
ಪೂವಣ್ಣ ತನಿರಸದ ಕಾಲ್ಗಳಿಂ ಬೆಳೆವುವಾ ಗಾಳಿಗಲೆದೋಸರಿಸುವ ||
ತೀವಿದೆಳನೀರ ಕಬ್ಬಿನ ಸಾರದಿಂ ಬೆಳೆವು |
ದಾವಗಂ ಪಾಮರೀಮುಖಶಶಿಗೊಸರ್ವಿಂದು |
ಗ್ರಾವನಿರ್ಮಳಜಲದ ಪೂರದಿಂ ಬೆಳೆವುತಿಹ ಶಾಳಿಗಳ್ ಕಣ್ಗೆಸೆದುವು ||೮||

ಶಾಳಿಗೆರಗಿದ ಗಿಳಿಗಳಂ ಸೋವ ಪಾಮರೀ |
ಜಾಳದೊಂದುಲಿಪುಮಂ ಕೋಕಿಲನಿನಾದಮಂ |
ದೇಳಿದಂಗೆಯ್ದು ತೊಲಗದೆ ನಿಂದ ಕೀರಾಳಿ ಸಲೆ ಕಂಗೊಳಿಸಿತೆಂದೆನೆ ||
ಭೂಲಲನೆಗಾ ಕಳಮೆ ಪ್ರಸವೋತ್ಸವಕ್ಕೆ ಸಂ |
ಮೇಳಿಸಿದ ಕೆಂಪುಗೂಡಿದ ಹಸುರುಪಟ್ಟೆಯ ವಿ |
ಶಾಲವಸನದ ಮುಸುಕಿದೆಂಬಿನಂ ಕಣ್ಗೆಸೆದುದೇನೆಂಬೆನಚ್ಚರಿಯನು ||೯||

ಪಲವುಕಾಲಂ ಬೆಳೆದಿದೇಂ೨ ಫಲಂ ಕಡೆಯಲ್ಲಿ |
ತಲೆಗೊಯ್ಸಿಕೊಂಬುದೆಂದುಂ ಬಿಡದೆಸುತೆ ನಾಣ್ಚಿ
ತಲೆವಾಗಿದುವೊ ಪುತ್ರಮೋಹದಿಂ ಪ್ರತಿದಿನಂ ತನ್ನ ನೋವಂ ನೋಡದೆ ||
ಸಲಹಿದೀ ಭೂದೇವಿಗಂ ನಮಿಸಿ ಭಕ್ತಿಯಿಂ |
ನಲಿದು ಬಾಗಿದುವೊ ಪೇಳೆಂಬಿನಂ ಕಿಕ್ಕಿರಿದ |
ಫಲಭಾರದಿಂ ಕೊರಲ್ವಾಗಿ ಕಣ್ಗೊಳಿಸಿರ್ದ ಶಾಲಿಗಳ್ ಕರಮೆಸೆದುವು ||೧೦||

ತುಂಡುತುಂಡಾಗಿ ಕತ್ತರಿಸಿ ಗಾಣದೊಳರೆದು |
ಹಿಂಡಿ ರಸಮಂ ತೆಗೆದು ಕಾಸಿ ಕಾಲ್ಚುಳಿಯಲುಂ೩ |
ಖಂಡಶರ್ಕರೆ೪ಯಾದೆವೇಗೈದೊಡಂ ಸುಗಣಮಂ ಬಿಡದ ಸುಜನರಂತೆ ||
ದಿಂಡುರುಳ್ಚಿದೆವಾಳ್ಗಿದಿರಾದರಂ ಸುಕೋ |
ದಂಡಮಾಳಿಂ ಸ್ವಾಮಿಹಿತಕಿನ್ನು ತಮ್ಮೊಳು |
ಪ್ಪಂಡತೆಯ ಬಿರುದೆತ್ತಿತೆನೆ ಸೋಗೆವಸುರ ಕಬ್ಬಿನ ಕೊರ್ಬು ಕಣ್ಗೆಸೆದುದು ||೧೧||

೧ ಬಿಸ್ಕಿನಿದು (ಕೋ.) ೨ ದೇವೇಂ (ಹು.) ೩ ದುಳಿತದಿಂ (ಮು.) ೪ ಕಂದಸಕ್ಕರೆ (ಮು.)

ಬೆಳೆವ ನಾನಾಶಾಳಿ ಗದ್ದೆಗಳ ಪಾಳಿಗಳೊ |
ಳುಲಿವ ಕೀರಾಳಿ ಸುಳಿಗಾಳಿಯಿಂ ಕೆದರ್ದ ಪೂ |
ಗಳ ಧೂಳಿ ಪಾಡುವ ಮದಾಳಿ ಸತತಂ ಪಾಮರಿಯರೋಳಿ ಸಲೆ ಬಳಸಿದ ||
ತೊಳಗುವ ವನಾಳಿಯೊಳ್ ವಿಟಕೇಳಿ ಮತ್ತ ಕೋ |
ಕಿಳಕೋಕಿ[೧]ಹಂಸಾಳಿಯಂ ಕಾಣುತಿದು ಸ್ಮರನ |
ಬಲುದಾಳಿಯೆಂದು ಪಾಂಥರ್[೨] ಕಾಲುಗೆಟ್ಟು ನಿಂದಿರೆ ನೋಡುತೆಯ್ತಂದರು || ೧೨ ||

ಸುರಿದ ಶಾಲ್ಯನ್ನರಾಸಿಗಳ ಘೃತಪೂರಿತದ |
ಹರವಿಗಳ ಸೂಪಾದಿಶಾಕಸಂತತಿಯ ಪರಿ |
ಪರಿಯ ಪಚ್ಚಡಿಯುಪ್ಪುಗಾಯ್ ಭಕ್ಷ್ಯಪರಮಾನ್ನ ಬಹುವಿಧದ ಶೀಕರಣೆಯ ||
ತರತರದ ದಧಿದುಗ್ಧತಕ್ರದಿಂ ಪುದಿದ ಕೊ |
ಪ್ಪರಿಗೆಗಳನುಂಡುಂಡು ಪೋಪ ನಡೆತರ್ಪ ಪಥಿ |
ಕರ ನೆರವಿಗಳ ಸತ್ರ[೩]ದಾಲಯಂ ರಂಜಿಸಿದುದಾ ಪಥದೊಳೇನೆಂಬೆನು || ೧೩ ||

ಕಲಶಂಗಳೆತ್ತಿ ನೀರೆರೆವ ಕಾಂತೆಯರ ಪೊಂ |
ಗಳಸಸ್ತನಂಗಳಂ ಮಂಗಳಮುಖಂಗಳಂ |
ತಳಿರ್ದುಟಿಗಳಂ ಮುದ್ದುನಗೆಗಳಂ ಕಂಡು ನಡೆಯಲ್ ಮುಂದೆ ಕಾಲೇಳದೆಳ[೪] ||
ಬಳಲಿಕೆಯನಾರಿಸುವ ನೆವದೊಳಲ್ಲಲ್ಲಿ[೫] ಸವೆ |
ದಿಳಿಪಿರ್ದ ಗಂಡು ಬೊಂಬೆಗಳಂತೆ ಪಥಿಕಸಂ |
ಕುಳವಿರ್ದುದರವಟ್ಟಿಗೆಯ ನೆಳಲ ಸಾರಿ ಸುಖಸಂತಸದೊಳೇನೆಂಬೆನು || ೧೪ ||

ನೀರನೀಂಟುವ ನೆವದೊಳಬಲೆಯರ ಲಲಿತಶೃಂ |
ಗಾರರಸಸುಧೆಯನಾ ಕಣ್ಗಳಿಂದೀಂಟಿ ಸವಿ |
ಸೋರುತಿಹ[೬] ವಾಗಮೃತಮಂ ಕರ್ಣದಿಂದೀಂಟಿ ತಣಿಯದುರೆ[೭] ಕಣ್ಣಮುಚ್ಚಿ ||
ಓರಂತೆ ಭಾವರತಿ[೮]ಸೌಖ್ಯಪೀಯೂಷರಸ |
ಧಾರೆಯಂ ಚಿತ್ತದಿಂದೀಂಟಿ ನೆರೆ ತಣಿದು ಬಾ |
ಯಾರೆ ಸಾಕೆನದೆ ತಲೆದೂಗೆದು ನೀರಂ ನಿಲಿಸುತಿರ್ಪರಾ ಪಥಿಕರ್ಕಳು || ೧೫ ||

೧ ಕೇಳಿ (ಶಿ.); ಕೀರ (ಪು, ಮ.) ೨ ಕಾಂತರ್ (ಶಿ, ಪು.) ೩ ಛತ್ರ (ಶಿ.) ೪ ಕಾಲೆಳಸವೆ (ಪ.) ೫ ಗಳಿಂದಲ್ಲಿ (ಶಿ.) ೬ ದೋರುತಿಹ (ಮ.) ೭ ತಣಿಯದೊಲು (ಪು.) ೮ ರಸೆ (ಶಿ, ಪು.)

ಕರಕಮಲರತಿಕಾಂತಕಳಶಮಾಸ್ಯೇಂದುವಿಂ |
ಕರಗವಿಪ್ಪುದೆ ಚೋದ್ಯಮೆಂದು ದುಶ್ಚಿಂತೆಯಿಂ |
ಕರಗುತಿಪೆ ಸಿಂಹಮಧ್ಯಂಗಳಬುಜಾಕ್ಷಿಯರ ನೋಟದೊಳ್ ಪರೆದಿವೆಂದು ||
ಕರಿಕುಂಭಕುಚಯುಗಂ ಪೆಚ್ಚಿ ತಾವಿದ ಕಂಡು |
ಪರಿಹಾಸಮಂ[೧] ಮಾಳ್ಪ ತೆರದೊಳರವಟ್ಟಿಗೆಯ |
ತರುಣೀಜನಂಗಳಿರುತಿರೆ ಮುಂದೆ ಗೋಕುಲಂ ಕಣ್ಗೆ ಕಡು ಚೆಲ್ವಾದುದು || ೧೬ ||

ತೋರಯೋರಿ[೨]ಗಳ ಡುರುಕಾರವಂ ಗಳದ ಘಂ |
ಟಾರವಂ ಪಶುಗಳಂಬಾರವಂ ಕರುಗಳಂ |
ಭೀರವಂ ಕರೆವ ಭೋ ಭೋ[೩]ರವಂ [೩]ಮುಂಘಾನದಾ ರವಂ ಗೊಲ್ಲತಿಯರ ||
ಭೂರಿಭೂಷಾರವಂ ಕರುಗಳಂ ಕರೆವ ಗೋ |
ಪಾರವಂ ಮಾರ್ಮಲೆತು ಪೋರ್ವ ಘನವೃಷಭಶೃಂ |
ಗಾರವಂಗೂಡಿ ನಾನಾರವಂ ಕಿವಿಗಳಂ ಪೂರೈಸಿತೇಂ ಪೇಳ್ವೆನುಳಿ || ೧೭ ||

ಮುನಿಯಂತೆ ಕರಿಯಂತೆ ಶಶಿಯಂತೆ ಭಟನಂತೆ |
ವನಕುಸುಮದಂತೆಯಿಾಶಾನ್ಯವೈಭವದಂತೆ |
ಘನತರ[೫]ವ್ರತವಶಾರೋಹಿಣೀಧೇನು ಸಂಸುರಭಿ ವೃಷ[೫]ಯುಕ್ತಮಾಗಿ ||
ಅನಿಮಿಷಾಲಯದಂತೆ ರವಿಯಂತೆ ಬಾಣಸದ |
ಮನೆಯಂತೆ ಮಾಸಂಗಳಂತತುಳಪೀಯೂಷ |
ಘನತೆ ಗೋಮಯುಪಲ್ಲವಾ[೬]ಸ್ಪದಂ ವೈಶಾಖಶಬ್ದದೊಳ್ ವ್ರಜಮೆಸೆದುದು || ೧೮ ||

ಮುಂತೆಸೆದುದಾ[೭]ಗಳಾ ಘನವಿಭವದಿಂ ಮುಕ್ತಿ |
ಕಾಂತೆಯುರಮನೆಯಂತೆ ಪುಣ್ಯದಾಲಯದಂತೆ |
ಸಂತತಂ ಶ್ರೀವಸಿಪುದ ಕೋಶಗೃಹದಂತೆ ಧರೆಯ ಮುಖಕಮಲದಂತೆ ||
ತಿಂತಿಣಿಯೊಳೆಸೆವ ಸೌಧಂಗಳ ಮರೀಚಿ ಗಗ |
ನಾಂತಮಂ ಚುಂಬಿಸಲ್ ಸಕಲಸೌಭಾಗ್ಯಮಂ |
ತಾಂ ತಳೆದ ಪಟ್ಟಣಂ ಕಲ್ಯಾಣಮೆಸೆವ ಜಾಣರ ತಾಣಮೊಪ್ಪಿರ್ದುದು || ೧೯ ||

---

೧ ಕೇ (ಷು.) ೨ ಜೋರಿ (ಹು, ಷು, ಮ.) ೩-೩ ತಕ್ರಮಂಘಾರವಂ (ಹು.)
೪ ತಿಸೇಜಿಸು (ಮ.) ೫ ವ್ರತವಾಶಾ ಧೇನು ಸಂಸುರಭಿವೃಷಘೋಷ (ತಿ.)
೬ ಮಲ್ಲದಾ (ಶಿ, ಷು.); ವಲ್ಲವಾ (ಮ.) ೭ ದುವಾ (ಶಿ, ಷು.)

ಇಂತೆಸೆವ ಪಟ್ಟಣದ ಪೊರವಳಯದೊಳ್ ಲತಾ |
ಸಂತತಿಗಳಿಂ ಕುಸುಮಶೋಭೆಯಿಂ ತರುಕುಲದ |
ತಿಂತಿಣಿಗಳಿಂ ಫಲಾನೀಕದಿಂ ತಳಿರ್ವನೆಗಳಿಂ ಸುಳಿವ ತಂಗಾಳಿಯಿಂ |
ಮುಂತೆಸೆವ ಶುಕಪಿಕಸಮೂಹದಿಂ ತುಂಬಿವಿಂ |
ಡಿಂ ತಳರ್ವ ಹಂಸಾಳಿಯಿಂ ನಗರದುಪವನಂ |
ಕಂತುಸಂಜೀವನಂ ಪಾವನಂ ಪೆಂಪನಾಂತಾವಸಂ ಕಣ್ಗೆಸೆದುದು || ೨೦ ||

ಪೊಸತೆಂಗು ಕೌಂಗು ಹೇರೀಳೆ ಕಿತ್ತ್ರೀಳೆ ಶೋ |
ಭಿಸುವಂಚೆ ಕೊಂಚೆ[1] ಪೂವಂಡು ಗಿಳಿವಿಂಡು ರಂ |
ಜಿಸುವ ಕಾದಲರೆಲರ್ ಸವಿಮಾವು ಪೂವು ಬಕುಳಂ ಮುಕುಳಮೊಪ್ಪುವ ಕೊಳಂ ||
ಮಿಸುಪ ನಳಿನಂ ಪುಳಿನಮುಂ ತುಂಬಿ ತುಂಬಿ[2] ರಾ |
ಜಿಸುವಶೋಕಂ ಕೋಕಮಾ ದಾಡಿಮಂ ಹಿಮಂ |
ದೆಸೆಗಂಪು ಸೊಂಪು ಪೆಂಪಿಂದೀ ಪುರೋಪವನಮೆಸೆದಿರ್ದುದೇನೆಂಬೆನು || ೨೧ ||

ಸೋರ್ವ ರಸವಣ್ಗಳಂ ತಾಳ್ದ ಚೂತಂ ತುದಿಗೆ |
ಪರ್ವಿದೆಳೆವಳ್ಳಿಯಿಂದೆಸೆವ[3] ಪೂಗಂ ನಾಡೆ |
ಕೊರ್ವಿ ತಿಂತಿಣಿವಣ್ಗಳಾಂತ ಕದಳಂ ಬೀಡೆವಣ್ ವರಿವ[4] ದಾಡಿಮಚಯಂ ||
ಬೇರ್ವೆರಸಿ ತುದಿವರಂ ಕಾಯ್ತ ಪನಸಂಗಳೆಳ |
ನೀರ್ವೊನಲುಮಂ ಕರೆವ ತೆಂಗು ಕಿಸುವಣ್ ಮುಸುಕಿ |
ತೋರ್ವ ನಾರಂಗ ಜಂಬೀರಮಿನಿತುಂ ನಾಡೆ ಸಾರ್ವಕಾಲಂ ಕುಂದವು || ೨೨ ||

ನಾಗಲತೆಯಂ ಪೂಗವೃಕ್ಷಮಾಲಂಗಿಸಿದು |
ದೀಗಳೀ ಚೂತಮಾ ಮಲ್ಲಿಗೆಯನಪ್ಪಿದುದು |
ಬೇಗದೊಳ್ ಕುರುವಕಂ ಮಾಧವಿಯ ತಕ್ಕೆಗೊಳಗಾದುದಂತಾ ತಮಾಲಂ ||
ಪೋಗಿ ತಳಿತಸುಗೆಯಂ ವೇಷ್ಟಿಸಿದುದಂ ಕಂಡು |
ಭೋಗಿಸಂಕುಲಮುಗಲ್ದಿರಬೇಡ ಬೇಡೆಂದು |
ಕೂಗಿ ಸಾರುವ ಮದನಕಹಳೆಯೆನೆ ಸೊರಗೆಯ್ವ ಕೋಗಿಲೆಗಳೆಸೆದಿರ್ದುವು || ೨೩ ||

೧ ಜಂಚೆ (ಪು, ಹು, ಶಿ.) ೨ ಬಿಂಬಿ (ಪು, ಶಿ.) ೩ ಪುದಿದ (ಪ.) ೪ ಣ್ ಪರಿವ (ಶಿ, ಪು.); ಣ್ ಬಿರಿದ (ಮ.)

ಪೆಣ್ಗಳಾಡುವ ತಳಿರ್ವನೆಗಳಿಂ ನನೆಗಳಿಂ |
ಕಣ್ಗೊಳಿಪ ಕುಸುಮಿತಲತಾಳಿಯಿಂ ಕೇಳಿಯಿಂ |
ಜಾಣ್ಣಾ ಡಿವಡೆವ ದಂಪತಿಗಳಿಂ ರತಿ[೧]ಗಳಿಂ ನಲಿವ ಚಕ್ರಂಗಳಿಂದೆ ||
ಪಣ್ಗಳಂ ಸವಿವ ಗಿಳಿವಿಂಡಿನಿಂ ಬಂಡಿನಿಂ |
ತಣ್ಗಾಳಿಯಿಂ ಪೊರೆವ ಕಮಲದಿಂ ವಿಮಲದಿಂ |
ಪೆಣ್ಗಡೆಗೆ ರಂಜಿಪ ಕೊಳಂಗಳಿಂ ಕಂಗಳಿಂ ನೋಡೆ ಬನಮೆಸೆದಿರ್ದುದು || ೨೪ ||

ಪ್ರತಿದಿನಂ ಪಾದರಿಯರೊಳ್ ಸ್ನೇಹಿ[೨] ಮಧುಪಪು |
ಸ್ಥಿತಿಯರೊಳ್ ಸಂಗಿಯಿವನಮಿದಂ ಸೋಂಕೆ ಸ |
ದ್ಗತಿಯಿಲ್ಲವೆಂದು ರವಿ ತೊಲಗಿ ಕಿರಣಂಗಳಂ ಮುದುಡಿ[೩] ಪೋಪನೊ ಪೇಳೆನೆ ||
ಮಿತಿಯಿಲ್ಲದಾಗಸಕೆ ಬೆಳೆದ ತರುಪತ್ರಸಂ |
ತತಿಯ ಸಾಂದ್ರತ್ವದಿಂ ಕತ್ತಲಿಸುತಿದೆ ಕುಸುಮ |
ವಿತತಿಗಳ ಬೆಳಗಿಲ್ಲದಿರಲೊಳಗುಗಾಣ್ಬುದಚ್ಚರಿಯೆನುತೆ ನಡೆತಂದರು || ೨೫ ||

ಸುರವನದೊಲಾಂ ಸುಡಿಸಿಕೊಂಡೆನೇ ನಾಡೆ ದಶ |
ಶಿರನ ವನದಂತೆ ಕಪಿಯಿಂ ಭಂಗವಡೆದೆನೇ |
ನಿರುತ[೪]ಮಾ ಧನದ[೪]ವನದಂತೆ ರಾಕ್ಷಸರ ಕಾಲ್ದುಳಿತಕ್ಕೆ ಪಕ್ಕಾದೆನೇ ||
ಸರಿಯೆ ಲೋಕದ ವನಂ ತನಗೆಂಬ ಪೆರ್ಮೆಯಿಂ |
ಮೊರೆವ ತುಂಬಿಗಳಿಂದೆ ಪರಪುಟ್ಟನಿಂದೆ ಬಿ |
ತ್ತರಿಸಿ ಪಾಡಿಸಿ ಪೊಗಳಿಪಂತೆ ಪುರಮಂ ಬಳಸಿದುಪವನಂ ಕಣ್ಗೆಸೆದುದು || ೨೬ ||

ನವಿಲ ನಟಿಸಿಯೆ ನರ್ತನಂ ಮೊರೆವ ತುಂಬಿಗಳ |
ರವಮೆ ಗೀತಂ ಕೋಕಿಲಧ್ವನಿಯೆ ವಾದ್ಯಮೊ |
ಪ್ಪುವ ಮರುತನಿಂ ಕೆದರ್ವ ಕುಸುಮಂಗಳೆಸೆವ ಪುಷ್ಪಾಂಜಲಿಗಳಂದಮಾಗೆ ||
ನವಪಾತ್ರಮಂ ವಸಂತಂ ತಿರ್ದಿ ತಂದಂಗ |
ಭವನ ಮುಂಪಾಡಿಸಲ್ ಸಮೆದಿರ್ದ ಸಲ್ಲಾಸ್ಯ |
ಭವನದಂತೊಪ್ಪಿರ್ದುದುಪವನಂ ಪವನಪದಚರ[೫]ರಿಗಚ್ಚರಿಯಾವ್ರತೆ || ೨೭ ||

---

೧ ಲತೆ (ಶಿ.) ೨ ನಟಿತ (ಶಿ.) ೩ ಮುದುಬಿ (ಶಿ.) ೪-೪ ಮಾಧವನ (ಶಿ, ಹು.)
೫ ಪವನಪಥಚರ (ಗೊ, ಕೊ, ಶಿ.); ಜನಪದದ ಜನ (ಮ.)

ಪುರದ ಕೋಂಟೆಯ ತೆನೆಯೊಳಲ್ಲಲ್ಲಿ ಕೀಲಿಸಿದ |
ವರಪದ್ಮರಾಗ ನೀಲದ ಕಾಂತಿ ರಂಜಿಸುವ[1] |
ಮರಕತದ ಕಾಂತಿ ಮುತ್ತಿನ ಕಾಂತಿಯುನಿತುಮಾ ವನದೊಳಗೆ ಪ್ರತಿಬಿಂಬಿಸಿ ||
ಸರಸಕಿಸಲಯಚಯಂ ತುಂಬಿಗಳ್ ಶೋಭಿಸುವ |
ತರುಪತ್ರತತಿಪುಷ್ಪಸಂದೋಹಮಪ್ಪವೆಂ |
ಬುರುಶಂಕೆಯುಂ ಪುಟ್ಟಿ ನಗರಮಂ ಬಳಸಿದುಪವನಚಯಂ ಚೆಲ್ವಾದುದು || ೨೮ ||

ಇನಿತಲ್ಲದಿಮ್ಮುಂದೆ ರಂಜಿಸುವುದೀ ನಗರ |
ದನುಪಮಶಿವಾರ್ಚನಾಪರರ್ಗಳ ಸುಶೀಲಕ |
ತ್ಯನುಕೂಲಮಾದ ಕೆರೆ ಬಾವಿ ಹೊಕ್ಕರಣಿ ದೀರ್ಘಿಕೆ ಕೊಳಂ ಪಳ್ಳಂಗಳು ||
ತನತನಗೆ ನೇಮಿಸಿರ್ಪುವು ಲೆಕ್ಕಮಿಲ್ಲ ಪೂ |
ಬನಗಳಿಗೆ ಗಣನೆ ಮೊದಲಿಲ್ಲವಾ ನಗರದ ಸು |
ಜನರದೇಂ ಧನ್ಯರೋ ಶಿವಶಿವಾಯೆನುತಾಗ ನೋಡುತ್ತೈತರುತಿರ್ದರು || ೨೯ ||

ಆನೆಗಳನೇರಿ ದೆಸೆದೆಸೆಗೆ ನೂಂಕುವ ರಾಜ |
ಸೂನುಗಳನುತ್ತಮಾಶ್ವಂಗಳಂ ತಿರ್ದುವ ನ |
ವೀನಕುಶಲದ ಸಹಣಿಗಳನಂಕದೊಳಗೊಬ್ಬರೊಬ್ಬರಂ ಮೂದಲಿಸುತೆ ||
ನಾನಾಯುಧಂಗಳಿಂದಂ ಪ್ರಹಾರಿಸುವ ಸುಭ |
ಟಾನೀಕದಬ್ಬರದ ವಾದ್ಯರವದುಬ್ಬರದ |
ನೂನಸಂಭ್ರಮದಿಂದೆ ಕಲ್ಯಾಣಪಟ್ಟಣದ ಪೊರವೊಳಲ್ ನೆರೆ ಮೆರೆದುದು || ೩೦ ||

ಪೊಳಲ ಪೊರಗಣ ಸಿರಿಯನೀಕ್ಷಿಸುತೆ ಬರೆ ಮುಂದೆ |
ಜಳಧಿ ಜಂಬೂದ್ವೀಪಮಂ ಬಳಸಿದಂತೆ ಕಣ್ |
ಗೊಳಿಸಿ ಪರಿವೇಷಮಾ ರವಿಬಿಂಬಮಂ ಬಳಸಿ ತೋರ್ಪಂತೆ ಪೊಂಗೋಂಟೆಯ ||
ಬಳಸಿಯುಗಳೊಪ್ಪುತಿರ್ಪುದು ತನ್ನ ಘಾತಮಂ |
ತಿಳಿವರಾರೆಂದು ಮೂದಲಿಸಿ ಕರೆವಂತೆಸೆವ |
ಜಲಪಕ್ಷಿಗಳ ಕಳಧ್ವಾನದಿಂದಾ ಪುರದಗಳ್ ಮೆರೆದುದೇನೆಂಬೆನು || ೩೧ ||

---

೧ ರಾಜಿಸುವ (ಶಿ, ಹು, ಮ.)

ನೀಲಂಗಳಂ ಸವೆದ ತೆನತೆನೆಯ ನಡುವಣ ವಿ |
ಶಾಲಂಗಳಂ ಕಂಡು ಬಾಯ್ಬಿರಿದ ಬಹುಮುಖದ |
ಕಾಳರಾಹುಪಿದೆಂಬ ಶಂಕೆಯಿಂ ಕೋಂಟೆಯಂ ಸೋಂಕದೆಡಬಲಕೆಪೋಗೆ ||
ಮೇಲೆ ದಿನಪಂ ದಕ್ಷಿಣೋತ್ತರಾಯಣನೆಂದು |
ಪೇಳುವರ್ ಮನುಜರಂತಲ್ಲದೊಡಕಾರಣಂ |
ಬಾಲಕರ್ಕಾದೊಡೆಯುವಮೂರಮೇಲಣ ದಾರಿಯಂ ಬಿಡುವರೆ ಧರೆಯೊಳು || ೩೨ ||

ಕನಕಾಚಲದ ಮೇಲೆ ತರತರಂ ಬಿಡದೊಪ್ಪು |
ವನಿಮಿಷವಿಮಾನಂಗಳುನ್ನತಪ್ರಭೆಗಳೆಂ |
ದೆನೆ ಪಳಿಕಿನಿಂ ಸವೆದ ಮುಗಿಲಟ್ಟಳೆಯ ಸಾಲ್ಗಳೊಪ್ಪಿದುವು ಪೊಂಗೋಂಟೆಯ ||
ತೆನೆಯ ಪಸುರ್ವಳವಿಗೆಯ ಕಾಂತಿ ಸುರನಿಮ್ನಗಾ |
ತನುಯೋಗದಿಂ ಯಮುನೆಗಂಗೆಯರ ಸಂಗಮಂ |
ಜನಿಸಿತಾಗಸದೊಳೇನಾಶ್ಚರ್ಯಮೆಂಬಂತೆ ಕಾಣಿಸಿದುದೇವ್ರೊಗೆಳ್ವೆನು || ೩೩ ||

ಇನಿತುನ್ನತಂ ಬಡೆದ ಕೋಂಟೆ ನಾಲ್ವತ್ತೆಂಟು |
ಘನಯೋಜನದ ಸುವಿಸ್ತೀರ್ಣಮಾ ಪಟ್ಟಣ |
ಕ್ಕನುಪಮಿತನವರತ್ನಮಯದ ಮುನ್ನೂರರುವತೆಸೆವ ಪೆರ್ಬಾಗಿಲ್ಗಳು ||
ಮಿನುಪ ಶಶಿಸೂರ್ಯವೀಥಿಗಳೆ ನೂರಿಪ್ಪತ್ತು |
ವಿನುತಮಾದಖಿಳಸೌಭಾಗ್ಯಸಂಪದದಿಂದೆ |
ಜನಪದದೆ ರಂಜಿಸುವ ಕಲ್ಯಾಣಪಟ್ಟಣವನೊಳಪೊಕ್ಕು ಬರುತಿರ್ದರು || ೩೪ ||

ಹೊಳೆವ ನವರತ್ನದಾಳ್ವೇರಿಗಳ ಕೇರಿಗಳ |
ಚಲಿಪ ಕನಕಧ್ವಜಪಟಾಳಿಗಳ ಕೇಳಿಗಳ |
ಒಳಿದ ಸೊಡಿಗಳ ಸೌಧರಾಜಿಗಳ ವಾಜಿಗಳ ತರತರದ ನಿಳಯಂಗಳ ||
ಸಲೆ ಪೊಳಪ ಒಪ್ಪ ಬಲ್ಮಸ್ನೆಯರ ಕನ್ನೆಯರ |
ಸುಳಿಸುಳಿವ ಕಣ್ಗೊಪ್ಪುವಂದಣದ ಗೊಂದಣದ |
ಕಳಕಳದ ವಾದ್ಯರವದಬ್ಬರದ ನಿಬ್ಬರದಲಾ ಪುರಂ ರಂಜಿಸಿದುದು || ೩೫ ||

ಏಸು ವೈಭವಮುಳ್ಳೊಡೆಂ ಫಲಂ ಸಲೆ ಜಾರ |
ವಾಸಮಮರೇಂದ್ರನಗರಂ ಮಹಾನವನಿಧಿಗ |
ಳೇಸುಳ್ಳೊಡೆಂ ಫಲಮದೇಕಪಿಂಗಳಸದನಮಳಕಾಪುರಂ ಭಾವಿಸೆ ||
ಏಸು ಭೋಗಗಳುಳ್ಳೊಡೆಂ ಫಲಂ ವಿಷಧರನಿ |
ವಾಸಮಾ ಭೋಗಾವತೀಪುರಮದೆಂದಟ್ಟ |
ಹಾಸದಿಂ ಪುರವನಿತೆ ಜರೆವಳೆನೆ ಸೌಧಂಗಳೊಳ್ಪೊಳಗು ರಂಜಿಸಿದುದು || ೩೬ ||

ಇಕ್ಕೆಲದ ಬೀದಿಬೀದಿಯೊಳಲ್ಲಿಗಲ್ಲಿಗಿರ |
ದಿಕ್ಕೆಕ್ಕೆಯಿಂ ಸಕಲವಿಭವದ ಶಿವಾಲಯಂ |
ಲಕ್ಕಮುಂ ಮೇಲೆ ತೊಂಬತ್ತಾರುಸಾವಿರಮಿಂತವಕೆ ಮುಖ್ಯಮಾಗಿ ||
ಮುಕ್ಕಣನಲ್ಲಿ ತ್ರಿಪುರಾಂತಕಾಖ್ಯದೊಳಿಹಂ |
ಸೊಕ್ಕುಜವ್ವನೆಯರಾಡುವ ಹದಿರ್ ಚದುರುಗಳ್ಗೆ |
ಹಕ್ಕೆ ಮೋಹನದಿಕ್ಕೆಯೆನಿಪ ವೇಶ್ಯಾಶ್ರಯಂ ಮುಂದೆ ಕಡು ಚೆಲ್ವಾದುದು || ೩೭ ||

ವರಮೇನಕೆಯ ಸೊಬಗು ರಂಭೆಯ ವಿಲಾಸಮಾ |
ಸುರಸೆಯ ಸುರೂಪುಮುರ್ವಸಿಯ ಚಾತುರ್ಯಂಗ |
ಳುರುಮಂಜುಘೋಷೆಯ ಸುಗಾನಂ ಸುಕೇಶಿಯುನ್ನತಕೇಶಮಾ ನಗರದ ||
ತರುಣಿಯರ ಚರಣಸೇವೆಯ ಮಾಳ್ಪ ಕೆಳದಿಯರ |
ಪೊರೆಯೊಳೋಲೈಸಿರ್ಪುವಿನ್ನಿವರ ಗಾಡಿಯಂ |
ವಿರಚಿಸುವೊಡಳವಲ್ಲವೆಂದೆನಲ್ ಪುರದ ವೇಶ್ಯಾಜನಂ ಕಣ್ಗೆಸೆದುದು || ೩೮ ||

ಮೆಲ್ಲಮೆಲ್ಲನೆ ಬೀದಿಬೀದಿಯೊಳ್ ನಡೆದು ಬರ |
ಲಲ್ಲಿಗಲ್ಲಿಗೆ ನೋಳ್ಪರೆರ್ದೆಗಳಂ ಮೋಹನದೆ |
ಝಲ್ಲುಝಲ್ಲೆಂದೆನಿಪ ಬಟ್ಟಮೊಲೆಗಳ ಕಣ್ಗೆ ಕಾಣಿಸದ ಬಡನಡುವಿನ ||
ನಿಲ್ಲನಿಲ್ಲದ ನೋಟದಬಲೆಯರ್ ತಂತಮ್ಮ |
ಸೊಲ್ಲುಸೊಲ್ಲುಗಳೊಳನಿದೊಸರೆ ನಾನಾಕಲೆಯ |
ಬಲ್ಲಬಲ್ಲನಿಯರಂ ಗೆಲ್ದು ಚಾತುರ್ಯಂಗಳಬಲೆಯರ್ ಕಣ್ಗೆಸೆದರು || ೩೯ ||

೧ ರೆಸೆವ (ಶಿ.)

ಗಿಳಿಗಿನಿದು ನುಡಿಗಳಂ ಬರಿಸುತಂ ಗಂಡುಗೋ |
ಗಿಲೆಗಳ ಸರಂಗಳಂ ತಿರ್ದುತಂ ಹಂಸೆಗಳಿ |
ಗಳಿಸಗಮನಂಗಳಂ ತೋರುತಂ ಜಾಣಾಂಕಿಗಳಿಗೆ ನೀತಿಯನುಸಿರುತೆ ||
ಗಳರವಂಗಳ ಕಪೋತಂಗಳ್ಗೆ ಕಲಿಸುತಂ |
ತಳಿರುಯ್ಯಲಾಡುತಂ ಪಾಡುತಂ ನೋಡುತಂ |
ಬೆಳೆವೆಣ್ಗಳೆಸೆದಿರ್ದರಾ ಪಣ್ಯವೀಧಿಯೊಳದೇನೆಂದು ಬಣ್ಣಿಸುವೆನು || ೪೦ ||

ಸುಯ್ಗಮರ್ದ ಕಂಪು ಕಂಪಂ ಪೆಚ್ಚಿಸಲ್ವರಿದು[1] |
ಮೆಯ್ಗಮರ್ದ ನುಣ್ಪು ನುಣ್ಪೇರಿಸಲ್ ನಸುನಗೆಯ |
ಬಾಯ್ಗಮರ್ದ ಸೊಂಪು ಸೊಂಪಂ ಕೊರ್ವಿಸಲ್ ಕುಸುಮಮಾಲೆಯಂ ಪಿಡಿದೆತ್ತಿದ ||
ಕಯ್ಗಮರ್ದ ಕೆಂಪು ಕೆಂಪೊದವಿಸಲ್ ನಿಂದಿರ್ದ |
ರಯ್ಗಣೆಯನಿಂದು ಪೂಜಿಸಲೊಲಿದ ಜಯರಮೆಯ |
ತಾಯ್ಗಡುವೆ ಬಹುರೂಪನಾಂತು ದಿಗ್ವಿಜಯಕೈದುವಳೊ ಪೇಳೆನೆ ಸತಿಯರು || ೪೧ ||

ತಳಿವ ನೀರ್ವನೆಗಳೇ ಮಳೆಯ ಪನಿ ಕಂಪಿಂಗೆ |
ಬಳಸುವಳಿಮಾಲೆ ಜಲದಾಳಿ ಕಣ್ಗದಿರ್ಗಳೇ |
ತೊಳಪ ಮಿಂಚು ವರೀಕರಕಂಕಣಧ್ವನಿ[2] ಮೊಳಗು ಮುಡಿಗಳಿಂದುದಿರ್ವಲರ್ಗಳೇ ||
ಪೊಳೆವಾಲಿವರಲೆಸೆವ ಕುಂಕುಮಂ ಕಪ್ಪುರಂ |
ಮಳಯಜಂ ಕಸ್ತೂರಿಮಿಶ್ರವರ್ಣಂ ಸಮು |
ಜ್ವಳ ಸುರಪಧನುವೆನಲ್ ಮಳೆಗಾಲದಂತಲ್ಲಿ ಘಟ್ಟವಳ್ತಿಯರೆಸೆದರು || ೪೨ ||

ಮೊಗದೊಳಂ ಪುಚ್ಚರಿಪ ಶಶಿಕಲೆಗಳಂ ಕಟ್ಟಿ |
ಬಿಗಿದು ಮಾರುವರೆನಲ್ ತಾಂಬೂಲದೆಲೆಗಳಂ |
ಮಿಗೆ ಮಾರುವಬಲೆಯರ್ ಕಣ್ಗೆಸೆದರಲ್ಲಲ್ಲಿ ಧರೆಯ ಕಮಳಂಗಳೆಲ್ಲಾ ||
ನಗರವಧುಗಳ ಪದತಳಂಗಳಂ ಸೇವಿಸಿರ |
ಲಗಲಲಾರದೆ ಬಂದು ಕೆಳೆಯೊಳಿಹುವೆಂದು ತರ |
ಣಿಗಳ ಬಿಂಬಂಗಳಿರುವೆನೆ ಕಂಚುಗಾರಸಸರದ ಭಾಂಡಮೆಸೆದಿರ್ದುವು || ೪೩ ||

---

೧ ಪಿಲ್ಪರಿದು (ಶಿ.)　೨ ಮಿಂಚವರ (ಕು.)

ತರುಜಾಂಗರಲ್ಲದಾ ರಾಜ್ಯದೊಳಗೆಲ್ಲಿಯುಂ |
ಸರುಜಾಂಗರಿಲ್ಲಾದೊಡೆಯು[1]ಮಖಿಳವಸ್ತುಗಳ್ |
ನೆರೆದಿರ್ಪುವೇತಕೆಂದೆನೆ[2]ಲಕ್ಷ ದಂತಿಗಳ ಕವಳಕಸ್ತುಸುಗಂಧಕೆ[3] |
ಪರಿಪರಿಯ ಚಿತ್ರಕುಶಲಂಗಳ್ಗೆ[4] ಭೋಗಿಗಳ |
ಪರಮಭೋಗದ್ರವ್ಯಕೆಂದಜಂ ಪಡೆದನೆನೆ |
ಪರಿಶೋಭಿಸಿದುವು ತತ್ಪುರದ ವೀಥಿಗಳಲ್ಲಿ ಗಂಧಿಗರ ಪಸರಂಗಳು || ೪೪ ||

ಪರಿಕಿಪೊಡೆ ದೇವದಾನವಮಾನವರ್ಗೆಯುಂ |
ನಿರುತದಿನಲಂಕಾರವಸ್ತುಗಳಿಗಾದಿಯಾ |
ಗಿರುತಿರ್ಪವನುಪಮಗುಣಂಗಳೆಮ್ಮೊಡಲನಾಶ್ರಯಿಸಿರ್ಪುವಂತಲ್ಲದೆ ||
ಪರಿಹರಿಸುವೆವು ಹಿಮವನಾರ್ಗೆಯುಂ ನಮ್ಮಂತೆ |
ಧರೆಯೊಳಗೆ ಪೆಣ್ಗಂಡುಗಳ ಲಜ್ಜೆಯಂ ಕಾಯ್ವ |
ಪಿರಿಯತನಮೆಲ್ಲಿಯುದೆನಿಪ್ಪ ಪೆರ್ಮೆಯೊಳಲ್ಲಿ ಜವಳಿವಸರಗಳೆಸೆದುವು || ೪೫ ||

ಹರಸಖನ ಪುರದ ಧನನಿೀ ಪುರದ ಚಿನ್ನವರ |
ದರೊಳೊರ್ವನೊರೆವ ಚಿನ್ನಕ್ಕೆ ಸರಿಬಾರದೆಂ |
ಬರ ಮಾತು ಸಲ್ವಂತೆ ರಾಸಿಗೈದಿರ್ಪ ಪೊಂಗಳ್ ಕಂಗೆ ಶೋಭಿಸುತಿರೆ ||
ವರಮುನಿಪನಬ್ಧಿ ಜಲಮೆಲ್ಲವಂ ಪೀರೆ ತ |
ಚ್ಛರಧಿಪಾತ್ರೆಯೊಳಿರ್ಪ ರತ್ನಸಂಚಯದಂತೆ |
ಕರಮೊಪ್ಪಿ ತೋರ್ಪ ರತ್ನಂಗಳೊಟ್ಟಿಲ್ಗಳುರೆ ಚೆಲ್ವಾದುದೇನೆಂಬೆನು || ೪೬ ||

ಇಂತೆಸೆವ ಸಕಲವ್ಯವಹಾರದಂಗಡಿಗಳಂ |
ಸಂತಸದೆ ನೋಡುತ್ತೈತರೆ ಮುಂದೆ ಕಾಣಿಸಿತ |
ನಂತ ಗಜಶಾಲೆ ಹಯಶಾಲೆಯಾಯುಧಶಾಲೆಯುಂ ಸಕಲಭಂಡಾರದೆ ||
ಸಂತತಂ ಪೊಗುವ ಪೊರಮಡುವ ಸಂದಣಿಪರ ಸು |
ತಿಂತಿಣಿಗಳಿಂ ಭಟಾಗ್ರಣಿಗಳಿಂ ಕವಿಗಮಕಿ |
ಸಂತತಿಗಳಿಂದೆ ರಾಜಾಲಯಂ ಪುರವನಿತೆಯಮಳಮುಖಬಿಂಬದಂತೆ || ೪೭ ||

೧ ಲ್ಲಾದರೆಯು (ಶಿ, ಪು.) ೨-೨ ಲಕ್ಷಗಳ ದಂತಿಗಳ ಕವಳಕಟುಗಂಧಕೆ (ಶಿ.) ೩ ಳಿ (ಶಿ, ಹು, ಪು.)

ಅದರೊಳಿರ್ಪಂ ರೂಪಮದನನುಂ [1]ಧನದಸಮ[1] |
ಸುಧನನುಂ ವಿಭವಸುರಸದನನುಂ[2] ನವಪದ್ಮ |
ವದನನುಂ ಸಿತಕುಂದರದನನುಂ ಜಿತ[3]ಶತ್ರುಕದನನೆಂದೆನಿಸಿ ಮೆರೆವ ||
ಉದಧಿಗಂಭೀರನುಂ ಸೂಚಿತೋದ್ಧಾರನುಂ |
ಸದಮಳಶರೀರನುಂ ಸರಸಗುಣಸಾರನುಂ |
ಪುದತಿಪ್ಪಕ್ಕಜ್ಜಳಂ ಬಿಜ್ಜಳಂ ಸಕಲಸೌಭಾಗ್ಯದಿಂದಿರುತಿರ್ದನು || ೪೮ ||

ಇಂತೆಸೆವ ಕಲ್ಯಾಣಪಟ್ಟಣದೊಳುಪ್ಪುವಾ |
ದ್ಯಂತ ಸೌಭಾಗ್ಯಮಂ ನೋಡುತಡಿಯಿಟ್ಟು ಬರೆ |
ಮುಂತೆಸೆದುದಮಳಭಕ್ತಿಯ ತವರ್ಮನೆಯಂತೆ ಮುಕ್ತಿಯಿಹ ಸದನದಂತೆ ||
ಅಂತರಂತರದ ಸೌಧಾವಳಿಯ ಬಾಗಿಲ್ಗ |
ಳಿಂ ತೊಳಪ ಬಸವನರಮನೆಯದಂ ಕಾಣುತ |
ತ್ಯಂತಹರುಷದೊಳಲ್ಲಮಪ್ರಭುವರಂ ಸಿದ್ಧರಾಮನುಂ ನಡೆತಂದರು || ೪೯ ||

ಬಂದು ಬಸವನ ಮನೆಯ ಬಾಗಿಲೊಳ್ ನಿಲೆ ಭಕ್ತಿ |
ಯಿಂದಾಗ ಹಡಪದಪ್ಪಣ್ಣ ತಾಂ ಕಾಣುತ್ತೆ |
ತಂದಖಿಳಗಣನಿಕರದೊಡನೆ ಶಿವಪೂಜೆಯಂ ಮಾಳ್ಪ ಬಸವನ ಪೊರೆಯೊಳು ||
ನಿಂದು ಬಿನ್ನಯಿಸಿದನಪೂರ್ವಜಂಗಮಯುಗಂ |
ಬಂದಿರ್ಪರದಕೊ ಬಾಗಿಲೊಳೆನಲ್ ಕರೆತರ್ಪು |
ದೆಂದು ನೇಮಿಸೆ ಬಸವನಾಜ್ಞೆಯಿಂ ಮರಳಿ ಬಂದಲ್ಲಮನೊಳಿಂತೆಂದನು || ೫೦ ||

ಸ್ವಾಮಿ ಚಿತ್ತೈಸಿ ನಿಮ್ಮಯ ಮಗಂ ಬಸವನತಿ |
ಪ್ರೇಮದಿಂ ನಿಮ್ಮ ಪಾದವನರ್ಚಿಸುತ್ತಿರ್ಪ |
ನಾ ಮಗನ ರಕ್ಷಿಸೆನೆ ರಾಜಾಲಯ[4]ಕ್ಕಾವು ಬಾರೆವೆನೆ ಮರಳಿ ಬಂದು ||
ಈ ಮಾತನೆಲ್ಲಮಂ ಪೇಳ್ವನಿತರೊಳ್ ಹೃದಯ |
ತಾಮರಸದೊಳ್ ತಿಳಿದು ಚೆನ್ನಬಸವೇಶ್ವರಂ |
ತಾ ಮಹಾವೇಗದಿಂ ಬಂದು ನಿಂದಾ ಬಸವರಾಜನೊಡನಿಂತೆಂದನು || ೫೧ ||

೧-೧ ಜನಪದದ (ಪು, ಪ, ಗೋ, ಕೋ.) ೧-೨ ಧನದನಿಂ | ದಧಿಕತರಧನವಿಭವಸಂಪದನು (ತಿ.)
೩ ಜಯ (ಗೋ, ಪ.) ೪ ನಿಮ್ಮಾಲಯ (ಪ.)

ಎಲೆ ಮರುಳೆ ಬಸವದಂಡಾಧೀಶ ನಿನ್ನ ಬಾ |
ಗಿಲೊಳ್ಸೈದಿ ಪ್ರಭು ಸಿದ್ಧರಾಮರ್ವೈತಂದಿರಲ್ |
ತಿಳಿಯದಿಂತೊಳಗೆ ಮೆಯ್ಮರೆದಹಂಕಾರದಿಂದಿರ್ಪರೇ ನೀನೆನಲ್ಕೆ ||
ಬಳಿಕದಂ ಕೇಳ್ದು ಧೃತಿಗುಂದಿ ಕರಿಕರಿಗಂದಿ |
ಕಳವಳಿಸಿ ಕಂಗೆಟ್ಟು ಮಮ್ಮಲಂ ಮರಗುತ್ತೆ |
ತಿಳಿದೆನಗೆ ಗತಿಯಾವುದೆಂದು ಬಸವಂ ಚೆನ್ನಬಸವಗಾನತನಾದನು || ೫೨ ||

ಮಾನನಿಧಿ ಬಸವ ನಿನ್ನಯ ಭಕ್ತಿಗೊಲ್ದು ಪ್ರಭು |
ತಾನೈದಿ ಬಂದು ಬಾರದೆ ಪೋಗಲರಿಯನಿದ |
ಕಾನಿರ್ಪೆನಂಜಬೇಡೆನುತೆ ನಂಬುಗೆಯಿತ್ತು ಬಸವನಂ ತಿಳಿಪಿ ಬಳಿಕ ||
ನಾನಾಗಣಂಗಳೊಡನೈತಂದು ಭಕ್ತಿಸಂ |
ಧಾನದಿಂದಲ್ಲಮಪ್ರಭುವ ನಲಿವಿಂದೊಲಿಸಿ |
ಸಾನುರಾಗದೊಳೆ ಬಸವನ ಮಹಾಮಂದಿರಕೆ ಕರೆತಂದರುತ್ಸವದೊಳು || ೫೩ ||

ಇಂತು ಕರೆತಂದಮಳಪೀಠದೊಳಗಿರಿಸಿ ಸಮ |
ನಂತರದೊಳರ್ಘ್ಯಪಾದ್ಯಾದಿ ಸತ್ಕ್ರಿಯೆಗಳಿಂ |
ಸಂತೋಷದಿಂದಲರ್ಚಿಸಿ ಬಳಿಕ ಬಸವನತಿ ಭಕ್ತಿಯಿಂ ನುತಿಸುತಿರಲು ||
ಮುಂತಿರ್ಪ ಸಕಲಗಣಕುಲಮನೀಕ್ಷಿಸಿ ಮನದ |
ಚಿಂತೆಯಂ ಬಿಡಿಸಿ ಶಿವತತ್ತ್ವಾನುಭಾವಸುಖ |
ಸಂತೋಷಸಾಗರದೊಳೋಲಾಡಿಸಿದನಖಿಳಭಕ್ತರಂ ಪ್ರಭುರಾಯನು || ೫೪ ||

ಇದು ಸಕಲವೀರಮಾಹೇಶ್ವರರ ಸದ್ವಿಮಲ |
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ |
ಬುದಧಿವರ್ಧನಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು ||
ಸದಮಲಜ್ಞಾನಿ ಸಕಲಾಗಮಪುರಾಣಕೋ |
ವಿದನೆನಿಪ ವಿರುಪಾಕ್ಷ ಪಂಡಿತಾರಾಧ್ಯರತಿ |
ಮುದದೆ ಪೇಳ್ದೀ ಚೆನ್ನಬಸವಪೌರಾಣಸತ್ಕಥೆಯೊಳೊಂದನೆಯ ಕಾಂಡಂ || ೫೫ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ಸ್ವಾಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೬ ||

ಅಂತು ಸಂಧಿ ೧೧ಕ್ಕಂ ಪದಗಳು ೪೯೧ಕ್ಕಂ ಮಂಗಳಮಹಾಶ್ರೀ

ಪ್ರಥಮಕಾಂಡಂ ಸಮಾಪ್ತಂ

ದ್ವಿತೀಯ ಕಾಂಡ

(ಒಂದನೆಯ ಸಂಧಿ)

ಹನ್ನೆರಡನೆಯ ಸಂಧಿ

ಸೂಚನೆ

ಸಿದ್ಧರಾಮೇಶಂಗೆ ಚೆನ್ನಬಸವಂ ಶೈವ |
ಸಿದ್ಧಾಂತಸೃಷ್ಟಿಯಂ ಪೇಳ್ದು ಬಳಿಕಾ ಸುಪ್ರ |
ಸಿದ್ಧ ಶಿವನೇಕಪಾದದೆ ನಿಂದು ನಟಿಸಿದುರುಲೀಲೆಯಂ ಪೇಳ್ದನೊಲಿದು[೧] ||

ಪಾಕಶಾಸನವಿಷ್ಣುಲೋಕೇಶಮುಖವರದಿ |
ವೌಕಸಪ್ರತತಿಮಕುಟಾಕಲಿತರತ್ನಪ್ರ |
ಭಾಕೀರ್ಣಪಾದ ಮಹಿಮಾಕರ ಶಿರೋಧೃತನಿಶಾಕರ ವರಶ್ರೀಕರ[೨] ||
ಸೂಕರಾಸುರನಯನಭೀಕರ ಕೃಪಾಸುರ |
ತ್ನಾಕರ ಧನಂಜಯದಿವಾಕರೇಂದ್ವಕ್ಷಿತ್ರ |
ಯಾ ಕರುಣದಿಂ ಜನಾನೀಕಮಂ ಸಲೆ ಸಕಲಲೋಕಮಂ ಶಿವ ಪೊರೆವುದು || ೧ ||

ನಸುನಗುತಲಲ್ಲಮಂ ಬಸವನೊಡನೀ ಚೆನ್ನ |
ಬಸವಣ್ಣನಾಲಯಕೆ ಪೋಪೆವೇಳೆಂದು ಗಣ |
ನಿಸರಮಂ ಕೂಡಿಕೊಂಡೈತಂದು ತನ್ಮಹಾಮಂದಿರದ ಚೆಲ್ವಿಕೆಯನು |
ಒಸೆದು ನಿಟ್ಟಿಸುತಿರಲ್ಕಾಕ್ಷಣಂ ಕಣ್ಗೆ ರಾ |
ಜಿಸುತಿರ್ಪ ವರಸಭಾಮಂಟಪದೊಳೆಂದು ಸಂ |
ತಸದಿನೆಲ್ಲರ್ಸಹಿತ ಕುಳ್ಳಿರ್ದು ಪ್ರಭು ಚೆನ್ನಬಸವನೊಡನಿಂತೆಂದನು || ೨ ||

ಇಂತಿದೇನೈ ನಮ್ಮನೆಲ್ಲರಂ ಕರೆದು ತಂ |
ದಂತಃಪುರಕ್ಕೊಯ್ಯದಿಲ್ಲಿಯೇ ಕುಳ್ಳಿರಿಸಿ |
ದಂತಿತ್ತಪೇಳೆನಲ್ ನಸುನಗುತೆ ಚೆನ್ನಬಸವಣ್ಣನಾ ಪ್ರಭುವಿನೊಡನೆ ||
ಅಂತರಹಿತನೆ[೪] ಜಗತ್ಪಾವನನೆಯಿಲ್ಲಿಂಪ |
ಮುಂತೆ ಷಟ್‌ಸ್ಥಲಮಾರ್ಗಮಂ ತಿಳಿಪಿದಲ್ಲದೆ ಗೃ |
ಹಾಂತರಕ್ಕೊಯ್ವರಂ ಬಿಡರೆಂದು ಚೆನ್ನಬಸವೇಶ ಮಗುಳಿಂತೆಂದನು || ೩ ||

೧ ನೊಲ್ದು । ಶಿ. । ೨ ವರಶ್ರೀಕರ (ಪ, ಗೋ, ಕೋ.) ೩-೩ ದಿಲ್ಲಿಕುಳ್ಳಿರಿಸಿದುದ । ಶಿಂ । ಶಿ. । ೪ ಅಂತರಹಿತ । ಪು. ।

ಅಂಗದೊಳ್ ನೋಡಲಿಂ ಸಿದ್ಧರಾಮಂಗಿಷ್ಟ |
ಲಿಂಗಮೇ ಮುನ್ನಮಿಲ್ಲಿಂತಪ್ಪರಂ ಮಹಾ |
ಲಿಂಗಾಂಗಿಗಳ್ ಪೊಂಗಲೀಯರದುಕಾರಣದೊಳಿಲ್ಲಯೇ ಕುಳಿತೆವೆನಲು ||
ಪಿಂಗದಾ ನುಡಿಗೇಳ್ದು ಸಿದ್ಧರಾಮಂ ಪ್ರಾಣ |
ಲಿಂಗಿಯಾಂ ಚೆನ್ನಬಸವಣ್ಣ ಕೇಳೆನಗಿಷ್ಟ |
ಲಿಂಗಮಿನ್ನೇಕೆನಲ್ ನಸುನಗುತಲಾ ಚೆನ್ನಬಸವಣ್ಣನಿಂತೆಂದನು || ೪ ||

ಎಂತಾದುದೈ ನಿನಗೆ ಪ್ರಾಣಲಿಂಗಂ ಮನದ |
ಭ್ರಾಂತಿಯಲ್ಲವೆ ತನುತ್ರಯವಿಡಿದ ಬಳಿಕಿಲ್ಲ |
ಸಂತತಂ ತ್ರಿವಿಧಲಿಂಗವ ಧರಿಸಬೇಕಿಷ್ಟಲಿಂಗವೇ ನಿನಗಿಲ್ಲದೆ ||
ಮುಂತೆರಡು ಲಿಂಗಂಗಳಳವಟ್ಟ ಭೇದಮಂ |
ನೀಂ ತಿಳಿಯೆ ಪೇಳೆನಲ್ ಸಿದ್ಧರಾಮೇಶ್ವರಂ |
ಸಂತಸದೊಳಾ ಚೆನ್ನಬಸವದಂಡಾಧೀಶನೊಡನಾಗಳಿಂತೆಂದನು || ೫ ||

ಅಂಗಮೂರುಳ್ಳವರಿಗಾಗಬೇಕಾ ಮೂರು |
ಲಿಂಗಂಗಳೆನಗೆಲ್ಲರಂದದಿಂ ಬೇರೆ ಮೂ |
ರಂಗಂಗಳಿಲ್ಲೆನ್ನ ಕಾಯವೇ ಪೀಠವಿಾ ಪ್ರಾಣವೇ ಲಿಂಗಮೆನಲು ||
ಪಿಂಗದಾ ನುಡಿಗೇಳ್ದು ಚೆನ್ನಬಸವನದಿಷ್ಟ[೧] |
ಲಿಂಗವಿಲ್ಲದ ಬಳಿಕ್ಕಾತನೇ ಭವಿ ಶೈವ |
ನಂಗವಲ್ಲದೆ ವೀರಶೈವನಲ್ಲೆನೆ ಸಿದ್ಧರಾಮೇಶನಿಂತೆಂದನು || ೬ ||

ಶೈವವೇ ಸಕಲಶೈವಕ್ಕಾದಿಯಾ ಮಹಾ |
ಶೈವದಿಂದಾದುದೀ ವೀರಶೈವಂ ಮುಖ್ಯ |
ಶೈವಂಗಳೆಂದೆನಲ್ ಕೇಳ್ದು ನಸುನಗುತಲಾ ಚೆನ್ನಬಸವಣ್ಣನಂದು ||
ಶೈವದಾದಿಯ ಸೃಷ್ಟಿ ಬೇರೆ ಕೇಳಾ ವೀರ |
ಶೈವವೇ ಬೇರೆನಲ್ ಸಿದ್ಧರಾಮಯ್ಯನಾ[೨] |
ಶೈವದಾದಿಯನೆನಗೆ ವಿಸ್ತರಿಸಿ ಪೇಳೆನಲ್ ಚೆನ್ನಬಸವಂ ಪೇಳ್ದನು || ೭ ||

೧ ಚೆನ್ನಬಸವಂ ಯಿಷ್ಟ (ಶಿ, ಹು.) ೨ ಸಿದ್ಧರಾಮೇಶ್ವರಂ (ಶಿ.)

ಆದೊಡಿನ್ನಾಲಿಸ್ಯೆ ಸಿದ್ಧರಾಮೇಶ ನೀಂ |
ನಾವಿಸ್ಯೆವದ ಸೃಷ್ಟಿಮಾರ್ಗಮಂ ಪೇಳ್ದಪೆಂ |
ಭೇದಿಸಲ್ಕತ್ಯತಿಷ್ಠದ್ದಶಾಂಗುಲನೆನಿಪ ಪರಶಿವಂ ಗೋಪ್ಯದಿಂದೆ ||
ವೇದವೇದಾಂತಸಿದ್ಧಾಂತಶಾಸ್ತ್ರಂಗಳ್ ಸು |
ನಾದಬಿಂದುಕಳಾದಿಗತಿದೂರನೆನಿಸುತಲ |
ನಾದಿಕಾಲದೆ ಸರ್ವಶೂನ್ಯನಾಗಿರುತಿರ್ದನೇನೆಂದು ಬಣ್ಣಿಸುವೆನು || ೮ ||

ಪರವೆಂದು ಪರಕೆ ಪರವೆಂದು ಪರತತ್ವವೆಂ |
ದುರುತರಪರಂಜ್ಯೋತಿಯೆಂದು ಪರಸುಖವೆಂದು |
ಪರಮಕಾರಣನೆಂದು ಪರಮೇಶನೆಂದು ಪರತರಪರಬ್ರಹ್ಮವೆಂದು ||
ನಿರವಯವನೆಂದು ನಿತ್ಯನದೆಂದು ನಿಃಶೂನ್ಯ |
ನಿರುಪಮನಿರಾಕಾರನೆನಿಪ ನಾಮಂಗಳಿಂ |
ಪರಶಿವಂ ತನ್ನ ನಿಜಸುಖಸಮಾಧಿಯೊಳಿ[1]ರ್ದು ತಿಳಿದು ಬಳಿಕಾ ಕ್ಷಣದೊಳು[1] || ೯ ||

ಪರಶಿವಂ ಚಿತ್ತದಿ ಪ್ರವೃತ್ತಿಯಂ ನೆನೆಯಲಂ |
ದುರುತರದ ಚಿತ್ತೆ ಚಿಚ್ಛಕ್ತಿಯಾಯ್ತದರಿಂದೆ |
ವರಮಹಾಲಿಂಗವಾಯ್ತುದರಿಂ[2]ದೆ ಪರಶಕ್ತಿ[2]ಯಾದುದವರಿರ್ವರಿಂದೆ ||
ಉರುಸದಾಶಿವನಾದನಾ ಸದಾಶಿವನಿಗಂ |
ದಿರದಾದಿಶಕ್ತಿಯಾದಳ್ ಬಳಿಕ್ಕಿವರೊಳೀ |
ಶ್ವರನಾದನಾತಗಿಚ್ಛಾಶಕ್ತಿಯಾದಳಿವರಿರ್ವರಿಂದೀನೆಂಬೆನು || ೧೦ ||

ವರಮಹೇಶ್ವರನಾದನಾತಂಗೆ ರಂಜಿಸುವ |
ಪರಮಸುಜ್ಞಾನವೆನಿಸುವ ಶಕ್ತಿಯಾದಳಂ |
ದಿರದಾ ಮಹೇಶನಿಂದಧಿಕತರಸೃಷ್ಟಿಯಾಯ್ತೆಂದಾಗ ತಿಳಿಯೆ ಪೇಳೆ ||
ವಿರಚಿಸಲಿ ಚೆನ್ನಬಸವೇಶ ಮುಂದಪ್ಪ ಘನ |
ತರದಖಿಳಸೃಷ್ಟಿಯುಂ ನೀನೆಂದು ಕೇಳಲತಿ |
ಕರುಣದಿಂ ಸಿದ್ಧರಾಮೇಶನೊಡನಾ ಚೆನ್ನಬಸವಣ್ಣನಿಂತೆಂದನು || ೧೧ ||

೧-೧ ರ್ದುಳಿದು ಬಳಿಕಾ ಕ್ಷಣದೊಳು (ಹು.) ೨-೨ ದಲಾ ಶಕ್ತಿ (ಹು.) ; ರಿಂದಪರಶಕ್ತಿ (ಶಿ.)

ಲೀಲೆಯಿಂದಾ ಮಹೇಶಂ ವಿರಾಡ್ರೂಪಮಂ |
ತಾಳಲಾತನ ಪಾದಗುಲ್ಫಜಂಘಾ ಜಾನು |
ವಾ ಲಲಿತಮೆನಿಪೂರುಕಟಿಮಧ್ಯನಿಚಯದಿಂ ಪಾತಾಳಮುಖ್ಯಮಾದ ||
ಸಾಲೆನಿಪಧೋಭುವನಸಪ್ತಮುಂ ಘನತರವಿ |
ಶಾಲದಿಂದುದಯಿಸಿದುವೆಲೆ ಸಿದ್ಧರಾಮ ನೀಂ |
ಕೇಳಿನ್ನುಪರಿಲೋಕದುದ್ಭವಂಗಳನೆಂದು ಚೆನ್ನಬಸವಂ ಪೇಳ್ದನು || ೧೨ ||

ಪರಿಕಿಸಲ್ ಭೂರ್ಭುವಸ್ಸ್ವರ್ಮಹಾಲೋಕಾದ್ಯ |
ಪರಿಲೋಕತತಿ ನಾಭಿಯುದರಂ ಭುಜಂ ಹೃದಯ |
ಮುರುಕಂಧರಂ ಮುಖಂ ಶಿರಮೆಂಬ ತಾಣದೊಳ್ ಸಂಭವಿಸಿದುವು ಭರದೊಳು ||
ಶರಧಿಯೇಳುಂ ನಿಜಶರೀರಕಾಂತಿಯೊಳಾದ |
ವಿರದೆ ದಶದಿಕ್ಕುಗಳ್ ಕರ್ಣಂಗಳೊಳ್ ಸಕಲ |
ಗಿರಿಸಮೂಹಂ ಪರಡು ಮಡುಗಳೊಳ್ಜನಿಸಿದುವು ಪೇಳಲೇನಚ್ಚರಿಯನು || ೧೩ ||

ಪೊಳೆವಾಸ್ಯದೊಳ್ ರುದ್ರನೆಡದ ಭುಜದೊಳ್ ವಿಷ್ಣು |
ಬಲದ ತೊಡೆಯೊಳ್ ಬ್ರಹ್ಮನಂಘ್ರಿಯೊಳ್ ದೇವೇಂದ್ರ |
ನೊಲವಿನಿಂ ಮಾನಸದೊಳಿಂದು ರವಿ ನಯನದೊಳು ಜನಿಸಿದರು ಲೀಲೆಯಿಂದೆ ||
ತಿಳಿಯಲಾ ದ್ವಾದಶಾದಿತ್ಯರ್ ನಖಂಗಳೊಳ್ |
ಗಳಮೂಲದೊಳ್ ಸಪ್ತಋಷಿಗಳುರದೊಳ್ ಭಗಣ |
ಕುಲವೆಸೆವ ಪಣೆಯೊಳೊಪ್ಪುವ ಮಹಾರುದ್ರರುದ್ಭವಿಸಿದರ್ ಸಂತಸದೊಳು || ೧೪ ||

ವರನವಬ್ರಹ್ಮರಂಗುಲಿಯೊಳ್ ಚತುರ್ದಶೇಂ |
ದ್ರರುಮುಭಯಪಾರ್ಶ್ವದೊಳ್ ಬಹುವಿಧದ ಶಕ್ತಿಗಳ್ |
ಬೆರಲ ಸಂಧಿಗಳೊಳ್ ಚತುರ್ದಶಮನುಗಳಾತನಂಗೈಯೊಳುದಿಯಿಸಿದರು ||
ಪರಮವೇದಾಗಮಪುರಾಣೋಪನಿಷದತುಳ |
ತರಶಾಸ್ತ್ರಸಂಕುಲಂ ವಾಣಿಯೊಳಖಿಲನದೀ |
ತರುಣಿಯರ್ ತಿಳಿಯಲಾನಂದಾಶ್ರುವಾರಿಯಿಂ ಜನಿಸಿದರ್ ಸಂಭ್ರಮದೊಳು || ೧೫ ||

ಗರುಡ ಗಂಧರ್ವ ಕಿನ್ನರ ಸಿದ್ಧ ಸಾಧ್ಯ ಕಿಂ |
ಪುರುಷ ಸುರರೆಂಬ ತೆತ್ತೀಸಕೋಟಿಗಳೆಸೆವ |
ಶಿರದೊಳುದ್ಭವಿಸಿದರ್ ಮಾಣದರುವತ್ತಾರುಕೋಟಿ ರಕ್ಕಸವೀರರು ||
ತರತರದ ರೋಮಕೂಪಂಗಳೊಳಗುದಯಿಸಿದ |
ಉರಗ ನರ[೧] ಮುಖ್ಯನಾನಾಜನಮದಾ ಮಹೇ |
ಶ್ವರನವಯವಂಗಳೊಳ್ ಸಂಜನಿಸಿದುದು ಸಿದ್ಧರಾಮ ನೀಂ ಕೇಳೆಂದನು || ೧೬ ||

ಮಿಗೆ ನವಗ್ರಹಮಷ್ಟದಿಕ್ಪಾಲಕರ್ ತಿಳಿಯ |
ಲೊಗುಮಿಗೆಯೊಳಷ್ಟ ವಸುಗಳ್ ಕಪೋಲಂಗಳೊಳ್ |
ಮೃಗ ಪಕ್ಷಿ ಜಲಚರಾದಿಗಳೆ ಪಾದಾಂಗುಲಿಯೊಳುದ್ಭವಿಸಿದುವು ಮುದದೊಳು ||
ನಗ ಲತಾ ಗುಲ್ಮ ತೃಣ ಕಾಷ್ಟಂಗಳಾತನಂ |
ಘ್ರಿಗಳ ಬೆರಲಡಿಯೊಳಾದುವು ಸಕಲಪಶುನಿಕರ |
ಮೊಗೆಮುದಾತನ ಕಕ್ಷಯುಗ್ಮದೊಳ್ ಪೇಳಲೇನಾತನ ಮಹಾಲೀಲೆಯ || ೧೭ ||

ರಾಮ ಕೇಳಾ ಮಹೇಶ್ವರನ ಸರ್ವಾಂಗದೊಳ |
ಗೀ ಮಹಾಸಚರಾಚರಂಗಳುದ್ಭವಿಸಿ ಪ್ರೋ |
ದ್ದಾಮಲೋಕದ ಸೃಷ್ಟಿ ತನ್ನ ದೆಸೆಯಿಂದಾದಬಳಿಕಲಾ ಕಲ್ಪಾಂತಕೆ ||
ಆ ಮಹೇಶ್ವರನತುಳ ಲೀಲೆಯಿಂದಖಿಳನಿ |
ಸ್ಸೀಮಗಣಸಂಕುಳದ ಮಧ್ಯದೊಳ್ ಪಟುತರನಿ |
ಶಾಮಲೋಕಪ್ರಳಯತಾಂಡವಾಡಂಬರಮನನುಕರಿಸಿದಂ ಮುದದೊಳು || ೧೮ ||

ಪೇಳಲೇನೆಲೆ ರಾಮ ಪೊಸತಂ ಮಹೇಶ್ವರನ |
ಲೀಲಾವಿನೋದಮಂ ತನ್ನಿಂದೆ ಜನಿಸಿದ ವಿ |
ಶಾಲಸೃಷ್ಟಿಗಳೆಸೆವ ಪಾದಚಾರಿಗಳ ವಿನ್ಯಾಸದಿಂ ನಿಮಿಷದೊಳಗೆ ||
ಘೋಳಿಪಟಮಾದುದಾ ಹರಿವಿರಿಂಚ್ಯಾದಿ ಜನ |
ಮಾಲೋಕವಾ ಶರಧಿಯಾ ದ್ವೀಪವಾ ಗಿರಿಗ |
ಳೊಳ್ಪಿಸಿದುವು ನಿರಾಕಾರಮಂ ಶಿವನ ತಾಂಡವಮನದನೇನೆಂಬೆನು || ೧೯ ||

---

೧ ಉರುನಾಗ (ಅ, ಬ, ಕ.)

ಸಾಗರದ ಮಸಕದಿಂದುದಯಿಸಿದ ಬೊಬ್ಬುಳಿಗ |
ಳಾಗಳೀ ಘನತರಂಗದ ಪೊಯ್ಲಿನಿಂದೆ ಹತ |
ವಾಗುವಂತಾ ಮಹೇಶ್ವರನ ತಿರುಪಿನೊಳುರುಭುಜೋದ್ಧೂತ ವಾಯುವಿಂದೆ ||
ಚೀಗೆಯಾದುವು[1] ಚರಾಚರವಿಶನಂಗದೊಳ್ |
ಪೋಗಿ ಕೂಡಿದುವೇಕಪಾದದಿಂದಂದು[2] ಸೊಗ |
ಸಾಗಿ ಲೋಕಪ್ರಳಯತಾಂಡವಾಡಂಬರವನಳ್ತಿಯಿಂ ನಟಿಯಿಸಿದನು || ೨೦ ||

ಇಂತು ಸಚರಾಚರಂಗಳ್ ವಿಲಯಮಾದ ಸಮ |
ನಂತರದೊಳೆಸೆವಾ ಸ್ಮಶಾನರುದ್ರತ್ವಮಂ |
ತಾಂ ತಳೆದು ತನ್ಮಹೇಶಂ ಮುದದೊಳೇಕಪಾದಾಹ್ವಯದ ಲೀಲೆಯಿಂದೆ ||
ಸಂತೋಷದಿಂ ಮೆರೆದನೆನೆ ಸಿದ್ಧರಾಮನ |
ತ್ಯಂತ ಹರುಷದೆ ಕೇಳ್ದು ಚೆನ್ನಬಸವೇಶ ನೀಂ |
ಮುಂತೀ ಜಗತ್ಸೃಷ್ಟಿಯೆಂತಾದುದುಸಿರೆನಲ್ ಪೇಳ್ದಂ ಸವಿಸ್ತರದೊಳು || ೨೧ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೨೨ ||

ಅಂತು ಸಂಧಿ ೧೨ಕ್ಕಂ ಪದಗಳು ೫೧೩ಕ್ಕಂ ಮಂಗಳಮಹಾಶ್ರೀ

---

೧ ಜೋಗಿಯಾದಂ (ಹು.) ೨ ಲೀಲೆ (ಶಿ.)

ಹದಿಮೂರನೆಯ ಸಂಧಿ

ಸೂಚನೆ

ಮರಳಿ ಮಾಹೇಶ್ವರಂ ತನ್ಮಹಾಸೃಷ್ಟಿಯಂ |
ವಿರಚಿಸಿಯುಮಾಮಹೇಶ್ವರಲೀಲೆಯಂ ವೃಷಭ |
ವರಪಾತನವ ಲೀಲೆಯಂ ಮೆರೆದ ಕಥನಮಂ ಚೆನ್ನಬಸವಂ ಪೇಳ್ದನು ||

ಚಂದ್ರಾರ್ಧಚೂಡ ವೃಷಭೇಂದ್ರವಾಹನ ದಾನ |
ವೇಂದ್ರಮದಕುಂಜರಮೃಗೇಂದ್ರ ಸನ್ನುತಸುಗುಣ |
ಸಾಂದ್ರ ಕಮಲಾಸನೋಪೇಂದ್ರವಿನಮಿತಪಾದ ಚಂದ್ರಕಾಂತೋಪಮಾಂಗ ||
ಇಂದ್ರಾಭಿನುತ ವರಫಣೀಂದ್ರಭೂಷಣ ಹಿಮಗಿ |
ರೀಂದ್ರವರತನುಜಾಸ್ಯಚಂದ್ರಸುಚಕೋರ ಪ್ರಮ |
ಥೇಂದ್ರಪರಿವಾರ ಪಂಪಾವಿರೂಪಾಕ್ಷ ಸತವ್ಮಂದಮಂ ಪಾಲಿಸೊಲಿದು || ೧ ||

ಆ ಮಹೇಶ್ವರನಾಜ್ಞೆಯಿಂ ಪ್ರಕೃತಿ ವಿಕರಿಸಿ |
ತ್ತಾ ಮಹಾಪ್ರಕೃತಿಯಿಂದಂ ಮಹತ್ತುದಿಸಿತಂ |
ದಾ ಮಹತ್ತಿನೊಳಹಂಕಾರಮುದ್ಭವಿಸಿದುದು ಮೇಣಹಂಕಾರದಿಂದೆ ||
ತಾಮಸಂ ಸಾತ್ವಿಕಂ ತೈಜಸಂಗಳ್ ಬಳಿ |
ಕ್ಕಾ ಮಹಾವೈಕಾರಿಕಂಗೂಡಿ ಜನಿಸಿದುವು |
ನಾವು ಕೇಳೀ ಗುಣಂಗಳಿಗೊಡೆಯರಾಗಿರ್ಪ ದೇವತೆಗಳಂ ಪೇಳ್ವೆನು || ೨ ||

ಪರಮಹೇಶ್ವರನ ಪಣೆಯಿಂದೆ ತಾಮಸವನನು |
ಕರಿಸಿ ಸಂಜನಿಸಿದಂ ರುದ್ರನಾ ಶಿವನ ಘನ |
ತರವಾಮಭುಜದಿಂದೆ [೧]ಸಾತ್ವಿಕವನನುಕರಿಸಿ ಜನಿಸಿದಂ[೧] ವಿಷ್ಣು ಬಳಿಕೆ ||
ಇರದಾ ಶಿವನ ಬಲದ ಭುಜದ ತೈಜಸವನನು |
ಕರಿಸಿ ಜನಿಸಿದನಜಂ ವೈಕಾರಿಕೆಯೊಳಿನ್ನು |
ಪರಮಶಬ್ದ ಸ್ಪರ್ಶ ರೂಪು ರಸ ಗಂಧಂಗಳಾದುವದರಿಂದೆ ಬಳಿಕೆ || ೩ ||

೧-೧ ಸಾತ್ವಿಕಗುಣವನುಕರಿಸಿದಂ (ಕ.)

ಖ್ಯಾತಿಯಿಂ ಗಗನಾನಿಲಾಗ್ನಿ ಜಲ ಭೂ ಪಂಚ |
ಭೂತಮುದಿಸಿದುವು ಪರಶಿವನಾಜ್ಞೆಯಿಂದಿರದೆ |
ವಾತಮುರೆ ಪ್ರಕಟಿಸಲ್ ತೆರಪಾದುದಾಗಸಂ ತದ್ವಾತಸಂಗದಿಂದೆ ||
ವಾತಸಖನುದಕಮಂ ಕೂಡಲ್ಕೆ ಕುದಿಕುದಿದು |
ಭೂತಳದ ಕೂಟದೆ ಹಿರಣ್ಮಯದ ತೇಜದಿಂ |
ದಾ ತಪ್ತಭೂಜಲದ ಬೊಬ್ಬುಳಿಯೊಳೊಂದಂಡಮಾದುದದನೇವೇಳ್ವೆನು || ೪ ||

ಪರಿಕಿಸೆ ತದಂಡಮಯ್ವತ್ತುಕೋಟಿಯ ಸವಿ |
ಸ್ತರಮದುಂ ಮೇಣಂಡದೀರಯ್ದುಮಡಿ ಜಲಂ |
ಪರಿವೇಷ್ಟಿಸಿಹುದು ಜಲದೀರಯ್ದುಮಡಿಯಗ್ನಿ ಬಳಸಿಹುದು ನಿಬಿಡವಾಗಿ ||
ಮರುತಸಖನೀರಯ್ದುಮಡಿ ವಾಯುವವಗಾಹಿ[೧] |
ಸಿರಲದಂ ಮರುತನೀರಯ್ದುಮಡಿಯಾಗಸಂ |
ಹರಹಿನೊಳ್ ಸುತ್ತಿರಲ್ಕಾಗಸಮನೊಡನಹಂಕಾರಮದು ಬಳಸಿರ್ಪುದು || ೫ ||

ಮತ್ತಹಂಕಾರಮಂ ಬಳಸಿಕೊಂಡಿರ್ಪುದು ಮ |
ಹತ್ತಾ ಮಹತ್ತನವ್ಯಕ್ತಂ ಪ್ರವೇಷ್ಟಿಸಿ |
ರ್ದತ್ತು ಸಪ್ತಾವರಣಮಿಂತು ಹರನಾಜ್ಞೆಯಿಂ ಮಧ್ಯದಂಡಮನೆ ಪೊಕ್ಕು ||
ಒತ್ತಿ ಕಮಲಜನೊಡೆಯೆ ಬ್ರಹ್ಮಾಂಡಮೆಂಬುದಾ |
ಯಿತ್ತು ಪೆಸರದಕಾ ಮಹೇಶ್ವರಂ ಮಿಗೆ ಯೋಚಿ |
ಸುತ್ತಿರ್ದನೆನ್ನ ಪಣೆಯಿಂದಾದ ರುದ್ರನೇ ತನ್ನಯ ಸ್ವರೂಪಮೆಂದು || ೬ ||

ಸೃಷ್ಟಿಸ್ಥಿತಿಪ್ರಲಯಮಂ ಮಾಳ್ಪ ಸಾಮರ್ಥ್ಯ |
ಮಷ್ಟುಮುಂಟೀತಂಗೆನುತ್ತಾ ಮಹೇಶ್ವರಂ |
ಹೃಷ್ಟಮಾನಸನಾಗಿ ಹರಿಯಜರೊಳೀತನೇ ನಿಮಗೊಡೆಯನೆಂದು ಪೇಳಿ ||
ನಷ್ಟಮಿಲ್ಲದ ಪಟ್ಟಮಂ ಕಟ್ಟಿ ರುದ್ರಂಗ |
ದಿಷ್ಟಮೆನಿಸುವ ಕ್ರಿಯಾಶಕ್ತಿಯಾಗಲ್ ಕೂಡಿ |
ದೃಷ್ಟಿ[೨]ದಿಂ ಪರಶಿವಸದಾಶಿವಾದಿಗಳ ನಾಮಂಗಳಂ ತಾಂ ತಳೆದನು || ೭ ||

---

೧ ವಾಯುವವಗಾಹಿ (ಕ.) ೨ ದುಷ್ಟ (ಹು, ಶಿ.)

ಪರಶಿವಂ ಶಿವನೆಂದುಮೆರಡು ನಿಷ್ಕಲತತ್ತ್ವ |
ಮುರುಸದಾಶಿವನೀಶ್ವರಂ ಸಕಲನಿಷ್ಕಲಂ |
ಪರಮಹೇಶ್ವರನಾದಿರುದ್ರರೆಂದೆನಿಪರೀ ಕೇವಲಂ ಸಕಲತತ್ತ್ವಂ ||
ಪರಿಕಿಸೆ ಸದಾಶಿವಂ[೧] ಪಂಚಸಾದಾಖ್ಯಮಂ |
ಧರಿಸಲೀಶ್ವರನಾಗಳಷ್ಟತನುವಂ ತಾಳ್ದ |
ನಿರುಪಾ ಮಹೇಶ್ವರಂ ಪಂಚವಿಂಶತಿಲೀಲೆಗಳನಾಂತನೆಸೆಂಬೆನು || ೮ ||

ಆ ಮಹಾರುದ್ರಂ ಕ್ರಿಯಾಶಕ್ತಿಯೊಳ್ ಕೂಡಿ |
ಪ್ರೇಮದಿಂ ಪರಮಹೇಶ್ವರನಾಮದಿಂದೊಲ್ದು |
ಸೋಮಾದಿಪಂಚವಿಂಶತಿಲೀಲೆಯಂ ತಳೆದನೆನೆ ಸಿದ್ಧರಾಮನಂದು ||
ಈ ಮಹಾಲೀಲೆಗಳನೆನಗೆ ವಿಸ್ತರಿಸೆನಲ್ |
ರಾಮ ಕೇಳ್ಕೆ ರುದ್ರನಜನೊಲವಿನಿಂ ಕರೆದು |
ನೀಂ ಮಾಡು ಸೃಷ್ಟಿಯನೆನಲ್ಕಾಗದಬುಜಜಂ ತಪಿಸಿದಂ ಶಿವನ ಕೂರ್ತು || ೯ ||

ದೇವನೀತನ ತಪಕೆ ಮೆಚ್ಚಿ ಬೇಡೆನೆ ಸುರಾ |
ಜೀವಪೀಠಂ ಸೃಷ್ಟಿಯಾಗದೆನ್ನಿಂ ಸುತರ |
ನೀವುದೆನೆ ಸನಕಂ ಸನಂದನ ಸನತ್ಸುಜಾತಂ ಸನಾತನರೊಪ್ಪುವ ||
ಕೋಪಿದಸನತ್ಕುಮಾರಾದಿ ಮಾನಸಸುತರ |
ನಾ ವಿಭುವೆ ತಾನೊಲಿದು ಕೊಟ್ಟ ನಿರವಯನಾಗ |
ಲಾ ವೇಳೆಯೊಳ್ ಮಕ್ಕಳಂ ಕರೆದು ಕಮಲಜಂ ಸೃಷ್ಟಿಯಂ ಮಾಡೆಂದನು || ೧೦ ||

ಒಲ್ಲೆನಾವ್ ಸೃಷ್ಟಿಯಂ ಮಾಡಲ್ಕೆ ಬುದ್ಧಿಯಂ |
ಬಲ್ಲೆವೇ ಹರನ ವರದಿಂ ನಿನಗೆ ಸುತರಾಗಿ |
ಯೆಲ್ಲಾ ರಹಸ್ಯಮಂ ನಿನ್ನಿಂದಲೇ ತಿಳಿದು ಸಂಸಾರಬಂಧದೊಳಗೆ ||
ಖುಲ್ಲರಾದಪೆವೆಂದೆನುತ್ತುಂ ತಪೋವನಕೆ |
ಮೆಲ್ಲನಡಿಯಿಟ್ಟರವರಿತ್ತಲೀ ಕಮಲಜಂ |
ಸಲ್ಲಪೆ ತಪಸ್ಸಿನಿಂ ದಿವ್ಯ ಸಾಸಿರ್ವರುಷಕಭವನಂ ಮೆಚ್ಚಿಸಿದನು || ೧೧ ||

---

೧ ಉರುಸದಾಶಿವನಾಗ (ಪ, ಗೋ, ತು.)

ಪರಶಿವಂ ಪ್ರತ್ಯಕ್ಷನಾಗಿ ವರವೇನೆನಲ್ |
ಸರಸಿಜಭವಂ ಕಾಣುತೆಲೆ ದೇವ ನೀವಿತ್ತ |
ವರಮಾನಸಾತ್ಮಜರ್ ತಪಕೈದಿದರ್ ಸೃಷ್ಟಿಯಾಗದೆನ್ನಿಂದಲೆನಲು ||
ಕರುಣದಿಂದೀಶನಜನೊಡನೆಂದ ನಿನ್ನಿಂ ಶ |
ರೀರದಿಂ ಮಕ್ಕಳಂ ಪಡೆದು ಸೃಜಿಯಿಸುವುದೆಂ |
ದೊರೆದು ನಿರವಯನಾಗಲಜನಸ್ಥಿಯಿಂ ಮಕ್ಕಳಂ ಪಡೆಯಲನುವಾದನು || ೧೨ ||

ಮನದೊಳ್ ಮರೀಚಿ ನಯನದೊಳತ್ರಿಯಾಸ್ಯದೊಳ್ |
ಜನನುತಾಂಗೀರಸಂ ಪುಲಸ್ತ್ಯನೆ ಕಿವಿಯೊಳಾ |
ತನ ನಾಭಿಯಿಂ ಪುಲಹನುರುಹಸ್ತದೆ ಕ್ರತು ಚರ್ಮದೊಳು ಭೃಗು ಪ್ರಾಣದಿಂದೆ ||
ಅಸಘನೆನಿಸುವ ವಸಿಷ್ಠಂ ದಕ್ಷನಂಗುಟದೆ |
ಜನಿಸಿದರ್ ಪೇಳಿದೀಯೊಂಬತ್ತುಮುಂದಿ ಮು |
ತ್ತಿನಿತು ಸಾಲದೆ ತನುಜರಂ ಪಡೆಯಲುದ್ಯೋಗಿಸಿದನಜಂ ತತ್ ಕ್ಷಣದೊಳು || ೧೩ ||

ತೊಡೆಯಿಂದೆ ನಾರದಂ ಧರ್ಮನಾ ವಿಧಿಯ ಬಲ
ಗಡೆಯ ಮೊಲೆಯಿಂದೆ ನೆಳಲಿಂದೆ ಕರ್ದಮನಾತ |
ನೊಡಲಿಂ ದಿವಾರಾತ್ರಿಗಳ್ ಮೆರೆವ ಗಾಯತ್ರಿ ಮುಂತಾದ ಛಂದಂಗಳು ||
ನುಡಿಯಲಗಣಿತವಾದ ವೇದಶಾಸ್ತ್ರಂ ಜನಿಸೆ |
ಪಡೆದ ಮಕ್ಕಳನಜಂ ಕರೆದು ಸೃಷ್ಟಿಯನಿನಿಬ |
ರೊಡರಿಚಿವೆನಲ್ಕೆ ಯೋಚಿಸಿಯವರ್ ತಮ್ಮ ಕೈಯಿಂದಾಗದೆಂದರಂದು || ೧೪ ||

ಎನೆ ಕೇಳ್ದು ಕಮಲಜಂ ಚಿಂತಿಸುತ್ತಾ ಕ್ಷಣಂ |
ನೆನೆದು ಹೃದಯದೊಳಾ ಕ್ರಿಯಾಶಕ್ತಿಯಂ ಕೂರ್ತು |
ಘನತರತಪಸ್ಸಿನಿಂ ಮೆಚ್ಚಿಸಲ್ಕಾ ಕ್ರಿಯಾಶಕ್ತಿ ಪ್ರತ್ಯಕ್ಷವಾಗಿ ||
ವನಜಸಂಭವ ನಿನಗೆ ವರವದೇಂ ಬೇಡೆನಲ್ |
ಮನದೊಳಗೆ ಗುಡಿಗಟ್ಟಿ ತತ್ಕ್ರಿಯಾಶಕ್ತಿಯಂ |
ವಿನಯದಿಂ ಕೊಂಡಾಡಿದಂ ಸರೋಜಾಸನಂ ಭಯಭರಿತಭಕ್ತಿಯಿಂದೆ || ೧೫ ||

೧-೧ ಹಸ್ತದಿಂದೆ ಕ್ರತು ಚರ್ಮದಿಂ ಭೃಗು ಪ್ರಾಣದಿಂ || (ಮ, ಗೋ, ಪ.) ೨ ಮೆರೆವ (ಮ.

ಚಿತ್ರಮಿದು ತಾಯೆ ನೀಂ ಪರಶಿವನೊಳೊಂದಿರಲ್ |
ಬಿತ್ತರಿಸಲಘಟಿತಂ ಸೃಷ್ಟಿ ನೀನೆನಗೆ ವರ |
ನಿತ್ಯೆ ದಕ್ಷಪ್ರಜೇಶ್ನ ಸುತವಕ್ಷಸುವರದೊಳ್ ನೀಂ ಜನಿಸಿ ಲೀಲೆಯಿಂದೆ ||
ಮತ್ತಾದಿರುದ್ರಂಗೆ ವಧುವಾಗಲೆಮ್ಮೊಳಗಿ |
ರುತ್ತಿರ್ಪ ಶಕ್ತಿಗಳ್ ಸ್ತ್ರೀಯರಪ್ಪರ್ ತನ್ನಿ |
ಪುತ್ರಪೌತ್ರಿಕೆಗಳ ದೆಸೆಯಿಂದಲೀ ಸೃಷ್ಟಿಯಂ ಮಾಡುವೆಂ ತಾನೆಂದನು || ೧೬ ||

ಲೇಸಾದುದೈ ಬ್ರಹ್ಮ ದಕ್ಷಂಗೆ ಬಂದಾಂ ವಿ |
ಲಾಸದಿಂ ಮಗಳಪ್ಪೆ ನೀಂ ನಿನ್ನೊಳೊಂದಿರ್ಪ |
ಭಾಸುರದ ಪರಶಕ್ತಿಯಂ ಬಹಿಷ್ಕರಿಸಲ್ಕೆ ವಾಗ್ದೇವಿಯೆಂದಿನಿಪಳು ||
ಆ ಸತಿಯೊಳೊಂದಿ ನೀನೀ ಜಗತ್ಸೃಷ್ಟಿಯಂ |
ಬೇಸರದೆ ಮಾಡೆಂದು ನೇಮವಿತ್ತಂಭೋರು |
ಹಾಸನಸನಕ್ಕರಿಂ ಬೀಳ್ಕೊಟ್ಟು ಶಕ್ತಿಯಂತರ್ಧಾನದಿಂ ಪೋದಳು || ೧೭ ||

ಇಂತೆಂದು ಶಕ್ತಿ ಬಯಲಾಗೆ ಕಮಲಾಸನಂ |
ತಾಂ ತನ್ನ ಭಾರತಿಯೊಳೊಲವಿನಿಂ ಕೂಡಿರುತೆ |
ಸಂತಸದೆ ಶತರೂಪೆ[೧] ಸ್ವಾಯಂಭುವಂ ಪಡೆದು ದಂಪತಿಗಳಂ ಮಾಡಲು ||
ಅಂತವರ್ಗುತ್ತಾನಪಾದಂ ಪ್ರಿಯವ್ರತಂ |
ಪಿಂತೆಯಾಕೂತಿಯುಂ ದೇವಹೂತಿಯುಮೆಸೆವ |
ಕಾಂತೆ ಪ್ರಸೂತಿಯೆಂಬಯ್ವರುದಿಸಿದರೊಲ್ಪು ಸ್ವಾಯಂಭು ಮನುಗಾಗಲು || ೧೮ ||

ಇರುತಾ ಪ್ರಸೂತಿ ದಕ್ಷಂಗೆ ಸತಿಯಾಗಲಂ |
ಮರುಕ್ರಿಯಾಶಕ್ತಿಯಾಕೆಯ ಗರ್ಭದೊಳ್ ಜನಿಸೆ |
ಪರಮೇಶ್ವರಂಗೆ ದಾಕ್ಷಾಯಣಿಯನೀಯಬೇಕೆಂದಜಂ ತಪಿಸುತಿರಲು ||
ಪರಶಿವಂ ಪ್ರತ್ಯಕ್ಷಮಾಗಿ ವರವೇನೆನಲು |
ಕರುಣಾನಿಧಿ ನೀನೆನ್ನ ನಂದನನ ನಂದನೆಗೆ |
ವರನಾಗಿ ದಿನದಿನಮೊಳೊಡ್ಡೋಲಂಗೊಟ್ಟು ಪೊರೆಯೆನಲು ಕೈಕೊಂಡನು || ೧೯ ||

---

೧ ಸ್ವಾರೂಪೆ (ಪ.) ೨ ಕೂಲೆ (ಪು.)

ಇರದೆ ದಾಕ್ಷಾಯಣಿಯು ನೋಡಿ ಸರ್ವೇಶ್ವರಂ |
ಹರುಷದಿಂ ಮದುವೆಯಾದಂ ಮಹಾವಿಭವದಿಂ |
ದಿರುತೆ ಬ್ರಹ್ಮಾಂಡದಿಂ ಪೊರಗೆ ಶಿವಲೋಕಮಂ ನೆನೆದ ಮಾತ್ರದೊಳಾಗಿಸಿ ||
ಒರೆಯಲಸದಳಮಾ ಮಹೇಶ್ವರನ ರಂಜಿಸುವ |
ಗುರುತರಸಭಾಮಂಟಪವನದರೊಳೊಂದಿ ಸುಖ |
ಮಿರುತಿರ್ದನಲ್ಲಿಯೊಳುಮಾಮಹೇಶ್ವರಲೀಲೆಯಿಂದೆ ಬಳಿಕೇನೆಂಬೆನು || ೨೦ ||

ಪರಶಿವಂ ಸಕಲಬ್ರಹ್ಮಾಂಡ ಭರಭಾರಮಂ |
ಧರಿಸಿರ್ಪೆನೆನ್ನ ಧರಿಸುವರಾರೆನುತ್ತೆ ನಿ |
ರ್ಧರಿಸಿ ತನ್ನಯ ಹೃದಯದೊಳಗಿರ್ದ ಧರ್ಮಮಂ ನೆನೆಯಲಾ ಸದ್ಧರ್ಮವೆ ||
ಪರಮತೇಜೋಮೂರ್ತಿಯಾಗಿ ನಿಂದಡಿಗೆರಗೆ |
ಕರುಣದಿಂದೆತ್ತುತೆಲೆ ಧರ್ಮವೇ ನಿನ್ನನಾಂ |
ಧರಿಸಿರ್ಪೆನೆನ್ನ ನೀಂ ಧರಿಸೆನಗೆ ನಿನಗಾವಗಂ ಭಿನ್ನಮಿಲ್ಲೆಂದನು || ೨೧ ||

ಪುಂಗವಾಕಾರದಿಂದೆಮ್ಮ ನೀಂ ಧರಿಸೆನೆ ಪ |
ದಂಗಳೇ ವೇದನಾಲ್ಕಾಯ್ತು ಶಾಸ್ತ್ರಂಗಳೆ ಷ |
ಡಂಗಂ ತನುತ್ರಯಂ ನಾದಬಿಂದುಕಳಾಳಿಯಾದಿಯುಮನಾದಿಯೆರಡು ||
ಶೃಂಗಂ ಶಿರಂ ಪ್ರಣವಮಾಸ್ಯಪಂಚಾಕ್ಷರಿ ವೃ |
ಷಂಗೆ ವೇದಾಂತಂ ಪಿಣಿಲ್ ತೀರ್ಥ ಸ್ಮೃತಿ ಸುಮಂ |
ತ್ರಂಗಳೇ ರೋಮಂ ಶಿವಾಗಮವೆ ಪ್ರಾಣಮಿಂತಾದಿ ವೃಷಭಂಮೆರೆದನು || ೨೨ ||

ಈ ತೆರದೆ ಪ್ರಣವಸ್ವರೂಪಾದ ವೃಷಭನಂ |
ಪ್ರೀತಿಯಿಂದೇರಲ್ಕೆ ವೃಷಭವಾಹನ ಲೀಲೆ |
ಭೂತನಾಥಂಗಾದುದುಮೆಸಹಿತ ಶಿವಲೋಕದರಮನೆಯೊಳೊಲಿದಿರುತ್ತೆ ||
ಆ ತರಣಿಶತಕೋಟಿತೇಜನಾಗಳ್ ಪ್ರಮಥ |
ಜಾತಮಂ ತನ್ನಿಂದೆ ಪಡೆದವರ್ಗಳೊಡನೆ ವಿ |
ಖ್ಯಾತಸುಖಸಂಕಥಾ ಕೇಳಿಯಿಂದೊಪ್ಪಿದಂ ನಾನಾವಿಲಾಸದಿಂದೆ || ೨೩ ||

೧ ದಾಸಿಸಿ (ಮ, ಹು.) ೨-೨ ಪಾದಿನೃಷಭನಂ (ಹು.) ೩ ಪೆಂಗಲ್ತೆ (ಶಿ, ಹು.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೨೪ ||

ಅಂತು ಸಂಧಿ ೧೩ ಕ್ಕಂ ಪದಗಳು ೫೩೭ ಕ್ಕಂ ಮಂಗಳಮಹಾಶ್ರೀ

ಹದಿನಾಲ್ಕನೆಯ ಸಂಧಿ

ಸೂಚನೆ

ವರಮಹೇಶಂಗುಮೆಯನಿತ್ತಬಳಿಕಾ ದಕ್ಷ|
ನಿರದೆ ಪೆಣ್ಣಿರುವತ್ತುಮಂ ಪಡೆಯಲವರವರ |
ಪುರುಷಸಂಯೋಗದಿಂದಖಿಳಸಚರಾಚರಂ ಸಂಜನಿಸಿತೇನೆಂಬೆನು ||

ಪಾಪಹರ ವಿಪುಳಪ್ರತಾಪ ಘನತರಮೋರು |
ಚಾಪ ವಿಲಯಪ್ರಬಲಕೋಪ ಸನ್ನುತದಿವ್ಯ |
ರೂಪ ಮೋಹನಪುಷ್ಪಚಾಪವಿಗ್ರಹಭಸಿತಲೇಪ ಗಿರಿಜಾಕಲಾಪ ||
ಗೋಪವಾಹನಕೃತಾಲಾಪ[೧] ಸುರವಂದ್ಯ ನಿ |
ರ್ಲೇಪ ವರಪುಣ್ಯಸ್ವರೂಪ ಜಯ ಪಂಪಾವಿ |
ರೂಪಾಕ್ಷ ಭಕ್ತರಕ್ಷಾಪೇಕ್ಷ ನತರಂ ಸದಾ ಪಾಲಿಸಳ್ತಿಯಿಂದೆ || ೧ ||

ಇನ್ನಾಲಿಸೈ ಸಿದ್ಧರಾಮ ಪಂಕಜಭವಂ |
ತನ್ನ ಸುತ ದಕ್ಷನಂ ಕರೆದು ನೀಂ ಸೃಷ್ಟಿಯಂ |
ಚೆನ್ನಾಗಿ ಮಾಡೆನಲ್ ಪಂಕಜಜನಾತ್ಮಜೆಯಸಿಕ್ನಿಯೊಳ್ ದಕ್ಷನಂದು ||
ನನ್ನಿಯಿಂ ಹತ್ತುಸಾವಿರ ಮಂದಿ ಹರಿಯಶ್ವ |
ರಂ ನಲಿದು ಪಡೆದು ಸೃಷ್ಟಿಯನೆಸಗಿಸಲ್ ನಾರ |
ದಂ ನೋಡಿ ಸಂಸಾರಬಂಧಕೊಳಗಾಗಬೇಡೆಂದು ತಪಕ್ಕೈದಿಸಿದನು || ೨ ||

ಠಕ್ಕಿನಿಂ ನಾರದಂ ಬೋಧಿಸೆ ತಪೋವನಂ |
ಬೊಕ್ಕರವರಾ ಕ್ಷಣಂ ದಕ್ಷನಿದನರಿದು ತಾಂ |
ಮಕ್ಕಳ ವಿಯೋಗದಿಂದೆರ್ದೆಗೆಡದೆ ಮತ್ತೆ ಚಪಲಾಶ್ವರಂ ಪಡೆದವರನು ||
ಮಕ್ಕಳಿರ ಸೃಜಿಸಿ ನೀವೆನಲವರ್ ಸೃಷ್ಟಿಸುವ |
ದಕ್ಕುಜ್ಜುಗಿಸೆ ನಾರದಂ ಬಂದವರ್ಗಳಂ |
ಸಿಕ್ಕದಿರಿ ದಕ್ಷನಿಕ್ಕುವ ಬಲಿಗೆ ನೀವೆಂದು ತಪಕ್ಕೈದಿಸಿದನವರನು || ೩ ||

---

೧ ಕೃಪಾಲಾಪ (ಮ, ಅ, ಬ, ಕ.)

ನಾರದನ ಶೌರ್ಯದಿಂದಿತ್ತಂಡದಾತ್ಮಜರ್ |
ಮೂರಾಗಲ್ ಕೆರಳಿ ದಕ್ಷನೆಲವೊ ಖೂಳ |
ನಾರದ ಮದೀಯನಂದನರನಿರಗೊಡೆ ಮೂರು ಮುಕ್ಕಾಲ್‌ಗಳಿಗೆಯೊಮ್ಮೆಯುಂ ||
ಧಾರುಣಿಯೊಳೆಲ್ಲಿಯುಂ ಸ್ಥಿರನಾಗದೊಡನೊಡನ |
ಕಾರಣಂ ತಿರುಗಿ ಜಗಳಂಗಳನೆ ಗಂಟಿಕ್ಕು |
ಕ್ರೂರ ಪೋಗೆಂದು ಶಾಪವನಿತ್ತು ಪೆಣ್ಮಕ್ಕಳಂ ಪಡೆಯಲನುಗೆಯ್ದನು　　|| ೪ ||

ಒರೆವೆನಾಲಿಸು ಸಿದ್ಧರಾಮ ದಕ್ಷಬ್ರಹ್ಮ |
ನಿರದಸಿಕ್ಕಿದೊಳ್ಪಿದೆ ಪಡೆದು ಮತ್ತರುವತ್ತು |
ತರುಣಿಯರನಿತ್ತನಾ ಧರ್ಮಂಗೆ ಹತ್ತನಿಪ್ಪತ್ತೇಳ ಚಂದ್ರಮಂಗೆ ||
ಗರುವಕಶ್ಯಪಗೆ ಹದಿಮೂರತ್ರಿ ಮರಿಚಿಯಂ |
ಗಿರಸಂ ಪುಲಸ್ತ್ಯಂ ಪುಲಹ ಕ್ರತುವು ಭೃಗು ವಸಿ |
ಷ್ಠರಿಗೊರ್ವರೊರ್ವರಂ ತವೆ ಕೃಶಾಶ್ವಂಗಿರ್ವರಂ ಕೊಟ್ಟನಳ್ತಿಯಿಂದೆ　　|| ೫ ||

ಧರ್ಮನ ಸತಿಯರರುಂಧತಿ ಯಾಮೆ ಲಂಬೆಯರ್ |
ನಿರ್ಮಳ ಮರುತ್ವತಿ ಸುಭಾನು ಸಂಕಲ್ಪೆಯರ್ |
ಪೆರ್ಮೆಯ ಮುಹೂರ್ತೆ ಸಾಧ್ಯೆಯು ವಿಶ್ವೆವಸುವೆನಿಪ ನಾಮಂಗಳವರ ಸುತರು ||
ಕೂರ್ಮೆಯೊಳರುಂಧತಿಗೆ ಕಿನ್ನರರ್ ಯಾಮೆಗಂ |
ಕರ್ಮರಹಿತಂ ನಂದಿ ಲಂಬೆಗೆ ಸಿಡಿಲ್ ಮಿಂಚು |
ಮರ್ಮಜ್ಞೆಗಾಗಿ ಮರುತ್ವತಿಗಂ ಮರುತ್ತುಗಳ್ ಭಾನುವಿಗೆ ಸಿದ್ಧರ್ಕಳುಂ　　|| ೬ ||

ಎಸೆವ ಸಂಕಲ್ಪೆಗಂ ಸಂಕಲ್ಪರಾದರಾ |
ಬಿಸಜಲೋಚನೆ ಮುಹೂರ್ತೆಗೆ ಮುಹೂರ್ತರ್ ಸಾಧ್ಯೆ |
ಗಸಮಸಾಧ್ಯರ್ ವಿಶ್ವೆಗಂದು ವಿಶ್ವೇದೇವರಾ ವಸುವಿಗೆಂಟುಮಂದಿ ||
ವಸುಗಳಾದರ್ ವಸುಗಳಾಪಧ್ರುವ ಸೋಮಧರ |
ಶ್ವಸನಶಿಖಿ ಪ್ರತ್ಯೂಷರುಂ ಪ್ರಭಾಸನುಮೆನಿಪ |
ಜಸವಡೆದರಷ್ಟವಸುಗಳ್ ಮೇಣ್ ಪ್ರಭಾಸಂಗೆ ವಿಶ್ವಕರ್ಮಂ ತನುಜನು　　|| ೭ ||

---

೧ ತಪ್ಪಳಿ (ಶಿ.) ೨ ಉಸುವಾದನು (ಶಿ.) ೩ ಮರ್ಮಜ್ಞೆಯಾ (ಎಲ್ಲ)
೪ ಸಿಕ್ಕಿದರ್ಗಳು (ಗೋ, ಕೋ, ಪ.) ೫ ಸೊಸನ (ಕ.)

ಮರಿಚಿಸಂಭೂತೆಯರ್ಗಾದ ಕಶ್ಯಪಗೆಸೆವ |
ತರುಣಿಯರ್ ಪದಿಮೂವರ[1]ದಿತಿದಿತಿದನುತಾಮ್ರ |
ವರವಿನತೆ[2]ಸುರಸೆ ಧರೆ ಕದ್ರುನುತೆ ಸುರಭಿ ಸ್ವಸೆ[3]ಯಿರೆ ಮತ್ತೆ[4] ಮುನಿಯರಿಷ್ಟೆ ||
ಪರಿವಿಡಿಯಲವರವರ ಸುತರ ನಾಮಂಗಳಾ |
ತರಳೆಯರ ಪೆಸರ್ಗಳಂ ಕ್ರಮದಿಂದೆ ಕೇಳೆಂದು |
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮಂಗೆ ಮಗುಳಿಂತೆಂದನು || ೮ ||

ಧಾತನರ್ಯಮನಂಶುಮಾನ್ ವರುಣನಿಂದ್ರಂ ಮ |
ಹಾತಿಬಲಮಿತ್ರಂ ರವಿ ತ್ವಷ್ಟ್ರ ವಿಷ್ಣು ಸಂ |
ಜಾತಗುಣನಿಧಿ ವಿವಸ್ವತನೆಸೆವ ಪೂಷನಾ ಪರ್ಜನ್ಯನೆಂಬನಿಬರು ||
ಖ್ಯಾತರಾ ದ್ವಾದಶಾದಿತ್ಯರವರೊಳಗೆ ಪುರು |
ಹೂತಶಚಿಯರ್ಗೆ ಮಿಾಷಡು[5]ಜಯಂತಂ ರಿಷಭ[6] |
ರೋತು ಸಂಭವಿಸಿದರ್ ವರುಣಂಗೆ ವಾಲ್ಮೀಕಿಮುನಿವರಂ ಸುತನಾದನು || ೯ ||

ಆ ವಿವಸ್ವಂ ಸಂಜ್ಞೆಗಳ್ಗೆ ಸಂಭವಿಸಿದರ್ |
ವೈವಸ್ವತಂ ಯಮಂ ಯಮುನೆಯುಂ ಛಾಯೆಯೊಳ್ |
ಸಾವರ್ಣಿ ಶನಿತಪತಿಗಳ್ ಜನಿಸಿದರ್ ಸಂಜ್ಞೆಗಾಗ ವಡಬಾಕೃತಿಯೊಳು ||
ತಾವಾದರಶ್ವಿನೀದೇವತೆಗಳಿರ್ವರುಂ |
ಭಾವಿಸಲ್ ನಿಮಿಯ[7] ಶಾಪದೆ ಮಿತ್ರವರುಣರ್ಗೆ |
ದೇವಾಂಗನಾಸಂಗದಿಂ ವಸಿಷ್ಠಾಗಸ್ತ್ಯರುದಿಸಿದರ್ ಕುಂಭದಿಂದೆ || ೧೦ ||

ದಿತಿಯಾತ್ಮಜರ್ ಹಿರಣ್ಯಕಶಿಪು ಹಿರಣ್ಯಾಕ್ಷ |
ರತಿಭಯಂಕರರೂಪೆ ಸಿಂಹಿಕೆಯೆನಿಪ್ಪೊರ್ವ |
ಸುತೆಯಾದಳಾ ಹಿರಣ್ಯಕಶಿಪುವಿನುದರದೊಳ್ ವರಪ್ರಹಲ್ಲಾದಮುಖ್ಯ ||
ಸುತಸಹಸ್ರಂ ಪ್ರಹಲ್ಲಾದಶಿಷ್ಕಾಲೆ[8]ಯ |
ಗತಿಶಯ ವಿಲೋಚನನಿಕುಂಭಕುಂಭರ್ ಜನಿಸ |
ಲತುಳಸಾಹಸಿ ವಿಲೋಚನಗೆ ಬಲಿಯಾ ಬಲಿಗೆ ಬಾಣಾಸುರಂ ಜನಿಸಿದಂ || ೧೧ ||

---

೧ ಮೂರ್ವರ (ಕ.) ೨ ವನಿತೆ (ಶಿ.) ೩ ಯಿರವಂತೆ (ಹು.) ೪ ನನ್ನ (ತಿ.)
೫ ವಿದುಷಂ (ಮ.) ; ಮಿಾಡುಷ (ಪ, ಹು.) ೬ ವೃಷಭ (ಶಿ.) ; ಋಷಭ (ಕ.)
೭ ನಿಯಮ (ಹು.) ೮ ಸುಷ್ಕಾಲೆ (ಹು.)

ಪರಿಕಿಸಲ್ ಬಾಣಂಗೆ ಧನದೆಗಂ ನಮುಚಿ ಸಂ |
ವರಣನುಂ ವಿಪ್ರಜಿತುವುಂ ಪುಲೋಮಾದಿ ಖಳ
ರಿರದೆ ಸಂಜನಿಸಿದರ್ ನಾಲ್ವತ್ತುಮಂದಿಯಾ ಸಿಂಹಿಕೆಗೆ ವಿಪ್ರಜಿತುಗೆ ||
ನರಕ ಸ್ವರ್ಭಾನು ವಾತಾಪಿಲ್ವಲಾದಿಗಳ್ |
ಧರೆಯೊಳುದಿಸಿದರೀಶವರದಿಂದಲಂಧಕಾ |
ಸುರನಾ ಹಿರಣ್ಯಾಕ್ಷದೈತ್ಯಂಗೆ ಮಗನಾದನೆಲೆ ರಾಮ ಕೇಳೆಂದನು || ೧೨ ||

ಇಂತೆಸೆವ ಕನಕಾಂಬಕಂಗೆಯುಪದಾನವಿಗೆ[1] |
ಸಂತಾಪನುಂ ಶಕುನಿ ಜರ್ಝರ ಮಹಾನಾಭ |
ಮುಂತಾದವರ್ ದನುವಿಗುದಿಸಿದರ್ ತಾರಕ ವಿಧಾತಮಯ ಶಂಖಶಿರರು ||
ಅಂತಕೋಪಮ ಗಗನಮೂರ್ಧ್ನಿ ಶಕುನಿ ವಿವಾದ |
ಮುಂತೆ ಶತಮಾಯ ವೃಷಪರ್ವ ವಿದ್ರಾವಣ ಸು |
ರಾಂತಕ ಮರಿಚಿ ಮದಿರ ದುಂದುಭಿ ವಿರೂಪಾಕ್ಷ ಸರ್ಜನಾಭಾಟಖಳರು[2] || ೧೩ ||

ಶರಭ ಗಜಶಿರ ನಮುಚಿ ವಿಪ್ರಜಿತು ಕಪಿಲ ಶಂ |
ಬರ ಹಯಗ್ರೀವ ವೈಶ್ವಾನರರ್ ಶಬಲನುಂ |
ಮರುಳ ವಾಮನಕೇತು ವಿಕ್ಷೋಭಣಾದಿಗಳ್ ಸೂರ್ವರಾದರ್ ತಾಮ್ರೆಗೆ ||
ಇರಳ್ಮೊಂದನುಳ್ಳ ಖರತುರಗಾದಿಗಳ್ ಪಕ್ಷಿ |
ಪರಿಯಾಯ ವಿನತೆಗರುಣಂ ಗರುಡನುಂ ತನುಜ |
ವರುಣಶ್ರೋಣಿಕೆಯರ್ಗೆ ಸಂಪಾತಿಯುಂ ಜಟಾಯುವುಮೆಂಬರುದಯಿಸಿದರು || ೧೪ ||

ಸುರಸೆಗಂ ಪಲವು ಪಕ್ಕಂ ಪಲವು ಶಿರಮನು |
ಸ್ಫುರಗಂಗಳೊಂದುಸಾವಿರಮುದಿಸಿದುವು ಕದ್ರುವಿ |
ಗುರಗಪತಿಶೇಷ ವಾಸುಗಿ ಕಂಬಳಾಶ್ವತರರೆಸೆವ ಕರ್ಕೋಟಕಾಳಿ ||
ನಿರುಪಮುವಿಷದ ಶಂಖಪಾಲ ತಕ್ಷಕ ಸನಿ |
ಷ್ಠುರ ಮಹಾಕರ್ಕೋಟ ಮಣಿಯಾದಿಯಾದ ಸಾ |
ಸಿರ ಫಣೀಂದ್ರರ್ ಜನಿಸಿದರ್ ಧರೆಗೆ ಸಿದ್ಧಸಾಧ್ಯರ್ ಕುಮಾರಕರಾದರು || ೧೫ ||

೧ ಹಿರಣ್ಯಾಕ್ಷ (ಶಿ.) ೨ ಸಿಗೆ (ಶಿ.) ೩ ರಾಂತಕ ಮರೀಚಿ ದುಂದುಭಿ ವಿರೂಪ ಕ
ದುರ್ಗಜ್ರನಾಭಾದಿಖಳರು || (ಮ, ಹು.) ೪ ಖುರ (ಮ, ಹು.)

ಸುರಭಿಗಮ್ಮೃತಂ ಕಾಮಧೇನುವುಂ ಪಶುಗಳುಂ |
ನಿರುತಂ ಮಹಿಷ[1]ನಿಕರಮಪ್ಸರಸ್ತ್ರೀಯರುಂ |
ತರತರದೊಳಾದರಿರೆಯೆಂಬಳ್ಗೆ ಗಿರಿ ತರು ಲತಾನಿಕರಮುದ್ಭವಿಸಿತು ||
ತರುಣಿ ಸ್ವಸೆಗಂ ಯಕ್ಷರಾಕ್ಷಸರ್ ಜನಿಸಿದರ್ |
ಪರಮಮುನಿಗೈರಾವತಾದಿ ಕರಿಜಾತಿಯುಂ |
ಹರಿಮುಖ್ಯಮೃಗಕುಲಂ ಕ್ರಿಮಿಕೀಟಕಾದಿಗಳ್ ಜಲಚರಗಳುದಯಿಸಿದುವು || ೧೬ ||

ದಿತಿಯೊಳ್ ಮರುದ್ಗಣಮರಿಷ್ಟೆಗಂ ಗಂಧರ್ವ |
ತತಿಯಾಯ್ತು ರಾಮ ಕೇಳ್ ಕಶ್ಯಪನ ದೆಸೆಯಿಂದ |
ಮತುಲತರಸೃಷ್ಟಿಯಾದುದು ಮುಂದೆ ಕೇಳತ್ರಿಯನಸೂಯೆಗೊಗೆದರಂದು ||
ಸುತಚಂದ್ರದತ್ತ ದೂರ್ವಾಸನಂಗೀರಸಂ |
ಶ್ರುತಿಗೆ[2] ಗುರುಸಂವರ್ತಯೋಗಸಿದ್ಧಿಗಳೆಂಬ |
ಸುತರಾದರಾ ಪುಲಸ್ತ್ಯಪ್ರೀತಿಗಳ್ಗುದಿಸಿದಂ ವಿಶ್ವವಸು[3]ವಾಗಳು || ೧೭ ||

ದೇವವರ್ಣೆಗೆ ಧನೇಶಂ ಸುತಂ ಕೈಕಸೆಗೆ |
ರಾವಣಂ ಕುಂಭಕರ್ಣಂ ವಿಭೀಷಣರೆಂಬ |
ಮೂವರುಂ ಶೂರ್ಪನಖಿಯುಂ ರಾವಣನ ಮಾತೃಪಿತೃವಂಶ[4]ಮೆಂತುಂಟೆನಲು ||
ಭಾವಿಸಲ್ಕಜನೊಂದು ಕೊಣನ ನಿರ್ಮಿಸಲದರೊ |
ಳೀ ವಿಗಡಹೇತಿಪ್ರಹೇತಿಯೆಂಬವರಾದ |
ರೀವೇಳ್ವಿನಾ ಪ್ರಹೇತಿಗೆಯಮುನೆಗಂದು ವಿದ್ಯುತ್ಕೇತು ಮಗನಾದನು || ೧೮ ||

ಆತನರ್ಧಾಂಗಿ ಸಂಧ್ಯಾದೇವಿಗುದಿಸಿದಂ |
ಪಾತಕರಹಿತನೀಶಭಕ್ತಂ ಸುಕೇಶಿ ಮ |
ತ್ತಾತಂಗೆ ದೇವವತಿಗಾದರ್ ಸುಮಾಲಿಯುಂ ಮಾಲಿಯುಂ ಮಾಲ್ಯವಂತಂ ||
ಈ ತೆರದೆ ಮಾಲಿಯನಿಲಾಖ್ಯೆಗೆ ಕೈಕಸೆಯು |
ಮಾ ತಳೋದರೆ ವಿಶ್ವವಸು[5]ಕಾಂತೆ ರಾವಣನ |
ಮಾತೆಯೊಪ್ಪುವ ವಂಶಮಿದು ಪುಲಹಗುದಿಸಿದರ್ ಕಿನ್ನರರ್ ಕಿಂಪುರುಷರು || ೧೯ ||

---

೧ ಮಹರ್ಷಿ (ಕ.) ೨ ಸ್ಮೃತಿಗೆ (ಕ.) ೩ ವಿಶ್ರವಸು (ಕ.) ೪ ತಾಯ ಪಿತವಂಶ (ಗೋ, ಕೋ, ಪ.)
೫ ವಿಶ್ರವಸು (ಅ, ಬ, ಕ.)

ಕ್ರತುಗೆ ಸನ್ನುತೆಗೆ ಸಹಚರಿ ಪತಂಗರ್ ಸುತರ್ |
ಸತಿ ಪುಲೋಮೆಗೆ ಭೃಗುವಿಗುಷನ ಕವಿ ಚವನರ್ಕ |
ಅತುಳಕವಿಗಂ ಶುಕ್ರನಾದನಾ ಚವನಕರ್ಣಿಕೆಯೊಳೊರ್ವಂ ಜನಿಸಿದಂ ||
ಸುತನಾದನಾತಂಗೆ ರುಚಿಕನಾ ರುಚಿಕಂಗೆ |
ಸುತನಾದನೊಲ್ದು ಜಮದಗ್ನಿಯಾತಂಗೆ ವಿ |
ಶ್ರುತಪರಶುರಾಮನಾತಂಗಳಿಯನೆಸೆವ ವಿಶ್ವಾಮಿತ್ರಮುನಿನಾಥನು || ೨೦ ||

ವರವಸಿಷ್ಠನ ಸತಿಯರುಂಧತಿಯ ಗರ್ಭದಿಂ |
ದಿರದುದಿಸಿದಂ ಶಕ್ತಿಯಾತಂಗೆ ಮುನಿ ಪರಾ |
ಶರನವಂಗುದಿಸಿದಂ ವ್ಯಾಸನಾತಂಗೆ ಶುಕಯೋಗಿ ಸಂಭವನಾದನು ||
ಹರುಷದಿಂ ಕರ್ದಮಂ ದೇವಹೂತಿ[1]ಯೆನಿಪ್ಪ |
ತರುಣಿಯೊಳ್ ಕಪಿಲಕರ್ಣಿಕೆಯರಂ ಪಡೆದು ತ |
ತ್ತರಳೆಯಂ ಕೊಟ್ಟಂ ಪ್ರಿಯವ್ರತಂಗಾತಂಗೆ ದಶತನುಜರುದಯಿಸಿದರು || ೨೧ ||

ಅವರಗ್ನಿ[2]ಬಾಹುವುಂ ಮೇದನುಂ ಪುತ್ರನುಂ |
ಸವನ ಜ್ಯೋತಿಷ್ಮಾನು ವರವಪುಷ್ಮಾನುಗಳ್ |
ವಿವರಿಸಲ್ ಮೇಧಾತಿಯಗ್ನೀಂದ್ರ ಹವ್ಯದ್ಯುತಿಮಾನುವೆಂಬವರವರೊಳು ||
ತವೆ ಮೊದಲ ಮೂವರುಂ ಯತಿಗಳಾದರ್ ಮುಂದೆ |
ಧ್ರುವನಾದನುತ್ತಾನಪಾದಭೂಪಂಗೆ ಸಂ |
ಭವಿಸಿದುವು ಧೂಮಕೇತ್ವಾದಿಗಳ್ ತತ್ಕೃಶಾಶ್ವಂಗರ್ಚಿ[3]ಯೆಂಬವಳೊಳು[4] || ೨೨ ||

ರಾಮ ಕೇಳಿನ್ನು ಧರ್ಮನ ಸೃಷ್ಟಿಯುಮನವನ |
ಭಾಮೆ ಮೃಷೆಯೊಳು ಡಂಬನುಂ ಮಾಯೆಯುಂ ಬಂದ |
ರಾ ಮಾಯೆಗಂ ನಿರುತಿಗಂ ಲೋಭವಿಕೃತಿಗಳ್ ಪುಟ್ಟಿದುವು ತಲ್ಲೋಭಕೆ ||
ಭೂಮಿಯೊಳ್ ಕ್ರೋಧಮುದಿಸಿತು ವಿಕೃತಿಗಂ ಹಿಂಸೆ |
ಯಾ ಮಹಾಕ್ರೋಧಕ್ಕೆ ಹಿಂಸೆಗೆ ದುರುಕ್ತಿ ಮ |
ತ್ತಾ ಮಹಿಳೆಯಾ ಕಲಿದುರುಕ್ತಿಗಳ್ಗಂ ಭಯಂ ಮೃತ್ಯುವೆಂಬವರಾದರು || ೨೩ ||

೧ ದೇವಹೂತಿ (ಹು.) ೨ ರಗ್ರಿ (ಹು, ಮ.) ೩ ಕುಶಾಂಗರ್ಚಿ (ಶಿ.)
೪ ಯೊಳು (ಶಿ.)

ಜಗದೊಳಾ ಭಯಮೃತ್ಯುಗಳ್ಗೆ ನಿರಯಂ ಯಾತ |
ನೆಗಳುದಿಸಿದುವು ನಿರಯಯಾತನೆಗಳಿಂದೆ ಮೇ |
ಣೊಗುವಿಗೆಯ ದುರ್ನೀತಿ ದುರ್ಮಾರ್ಗ ಕಪಟ ಕುತ್ಸಿತ ಮಹಾದ್ರೋಹಂಗಳು ||
ಮಿಗೆ ಠಕ್ಕು ಠವುಳಿ ವಂಚನೆ ದುರ್ಜನತ್ವ ಸಂ |
ಯುಗ ವಿಕೃತಿ ರೋಗ ಸಂತಾಪ ಬಲ್ಮನಿಸು ಹಾ |
ನಿಗಳುದಿಸಿದುವು ರಾಮ ಕೇಳ್ ಧರ್ಮಬ್ರಹ್ಮನುರುಸೃಷ್ಟಿಯಾಯ್ತೆನಿತೆಂದನು || ೨೪ ||

ಪರಶಿವಂಗುರೆ ವೀರಭದ್ರ ಶಂಭು ಗಿರೀಶ |
ಪರಮ ಚೈತಾಂಘ್ರಿ[1] ಪಶುಪತಿಯಹಿರ್ಬುಧ್ನ್ಯನುಂ |
ವರದಿಶಾಪತಿ ಪಿನಾಕಿ ಸ್ಥಾಣು ಭವರೊಪ್ಪುತಿರ್ಪ ಭುವನಾಧೀಶರು ||
ಪರಿಕಿಸಲ್ಕೇಕಾದಶಾರುದ್ರರಾದರಾ |
ಮರಿಚಿ ಕಶ್ಯಪ ಗೌತಮಾತ್ರಿ ವಿಶ್ವಾಮಿತ್ರ |
ಪರಮಮುನಿ ಜಮದಗ್ನಿ ಸುತವಸಿಷ್ಠರ್ ಸಪ್ತಋಷಿವರರ್ ಕೇಳೆಂದನು || ೨೫ ||

ಪಾವನಚರಿತ್ರ ಸ್ವಾಯಂಭು ಸಾರೋಚಿ ಮಿಗೆ |
ವೈವಸ್ವತೋರುತರಸಂವೃತ್ತಮಾಖ್ಯಾತವೆ[2] |
ರೈವತಾಮಸ ಚಾಕ್ಷುಸಾಚ್ಯ[3] ರೌಚ್ಯ[4]ಬ್ರಹ್ಮಸಾವರ್ಣಿ ಸುಗುಣರೆನಿಪ |
ಆ ವಿಮಲ ರುದ್ರಸಾವರ್ಣಿ ಮತ್ತಂ ದಕ್ಷ |
ಸಾವರ್ಣಿಯಗ್ನಿಸಾವರ್ಣಿ ಪೇಳ್ವೆಂ ಸೂರ್ಯ |
ಸಾವರ್ಣಿಯಿಂತೆಸೆವರೀರೇಳುಮಂದಿ ಮನುಗಳ್ ರಾಮಕೇಳೆಂದೆನು || ೨೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೭ ||

ಅಂತು ಸಂಧಿ ೧೪ ಕ್ಕಂ ಪದಗಳು ೫೬೪ ಕ್ಕಂ ಮಂಗಳಮಹಾಶ್ರೀ

೧ ಚೈತನ್ಯ (ಅ, ಬ, ಕ, ಮ.) ೨ ಮುತ್ತಮನು (ಕ, ಮ.); ಮಾಖ್ಯ ತವೆ (ಹು.
೩ ತಾಚ್ಯ (ಪ. ಗೋ.) ೪ ಚೌಚ್ಯ (ಹು, ಮ.)

ಹದಿನೈದನೆಯ ಸಂಧಿ

ಸೂಚನೆ

ಶಿವನಾಜ್ಞೆಯಿಂದಂ ಚರಾಚರಮನಂಬುರುಹ |
ಭವನೈದೆ ಸೃಜಿಸಿ ನೆಲೆಯಂ ಚತುರ್ದಶಭುವನ |
ಭವನದೊಳ್ ಕೈಗೈದು ತಚ್ಚರಾಚರಮನಿವರೆಡೆಯಿಡೆಯೊಳಿಂಬಿಟ್ಟನು ||

ಪರಮಗುಣನಿಲಯ ಪಾವನತರಮಹಾಮಹಿಮ |
ಪಿರಿದುಂ ನಿಗಮದೂರ ಪೀತಪಟನುತಚರಿತ |
ಪುರಮಥನಕಥನ ಪೂಸರನ ಭಸಿತಾಪೇಕ್ಷ ಪೈತೃಪತಿ ವಿಧ್ವಂಸನನೆ ||
ಸುರನಿಕರಪೋಷಣಮಹಾಪೌರುಷಪ್ರಯುತ |
ಕರುಣಿಗೆ ಪಂಪಾವಿರೂಪಾಕ್ಷ ಸುತಪಃಪ್ರಭಾ |
ಪರಿಪೂರ್ಣಗಾತ್ರ ತ್ರಿಣೇತ್ರ ದಾನವಜೈತ್ರ ಸುಪವಿತ್ರಚಾರಿತ್ರನೆ || ೧ ||

ಆಲಿಸೈ ಸಿದ್ಧರಾಮೇಶ ಪಂಕಜಭವಂ |
ಫಾಲಾಕ್ಷನಾಜ್ಞೆಯಿಂ ಬ್ರಹ್ಮಾಂಡದೊಳಗೆ ಸ |
ಲ್ಲೀಲೆಯಿಂ ಸಚರಾಚರಂಗಳಂ ಸೃಷ್ಟಿಸಿದ ಬಳಿಕವಕೆ ನೆಲೆವನೆಗಳ ||
ಮೇಲೆ ಕೈಗೈದ ವೃತ್ತಾಂತಮಂ ಪೇಳ್ವೆಪೆಂ |
ಕೇಳಬ್ಜಜಾಂಡಖರ್ಪರದಧೋಭಾಗದೊಳ್ |
ಮೇಳದಿಂದಿರ್ಪುದಿಪ್ಪತ್ತಯ್ದುಕೋಟಿಯೋಜನದ ಜಲಮೇನೆಂಬೆನು || ೨ ||

ಇಂತೆಸೆವ ಜಲದ ಮೇಲಾದಿಕೂರ್ಮಂ ಮೆರೆವ |
ನಂತವರ ಮೇಲೆ ಶೇಷಂ ಸುತ್ತಲಿಹುವು ದಿ |
ಗ್ದಂತಿಗಳವರ ಮೇಲೆಯಿಳೆಯೊಂದುಕೋಟಿ ದಳಮಯ್ವತ್ತುಕೋಟಿಹರಹಿಂ ||
ಅಂತರದ ಧರಣಿಯಂತೇಳುಲೋಕಂಗಳವ |
ರಂತರಾಂತರದೊಳಿಹವವರಗಲದುನ್ನತಗ |
ಳಂ ತಿಳಿಪೆನ್ ಹತ್ತುಕೋಟಿಗಳ ಹರಹೀರಯ್ದುಸಾಸಿರಗಳುನ್ನತಗಳು || || ೩ ||

೧ ಸಿರಿದೆ (ಮ.) ೨ ದು ನಿಗಮಕೆ ದೂರ (ಶಿ.); ೩ ವಿಧ್ವಂಸಕ (ಶಿ.) ೪ ತರಣಿ (ಪ) ೫-೫ ತರದೊಳಿಹವವರಗಲದುನ್ನತಂಗಳಂ । ನಿಂ೦ ತಿಳಿಯೆ (ಪ, ಗೋ.)

ಇನ್ನು ಮೂಲೋಕಂಗಳಡಿಯೆಡೆಯ[1] ಭೂಮಿಗಳ್ |
ಪನ್ನೆರಡುಲಕ್ಷಮುಂ ನಾಲ್ವತಾರ್ಸಾಸಿರದ |
ಯಿನ್ನೂರದಯ್ವತ್ತುಯೋಜನದಗಲದಿಂದಲಿರ್ಪುವಾ ಲೋಕಂಗಳ ||
ಮುನ್ನಮೀ ಬಳಸಿದಿಳೆಯಿಪ್ಪತ್ತುಕೋಟಿ ಹರ |
ಹಿನ್ನೊಂಡೆ ಬ್ರಹ್ಮಾಂಡದೊಂಟಿಯಂ ಕರ್ಚಿರ್ಪು |
ದಿನ್ನದರ ಮೇಲಣ ವಿಶಾಲಮೀ ಭೂಲೋಕ[2]ಮೆಲೆ ರಾಮ ಕೇಳೆಂದನು || ೪ ||

ಭೂತಳದ ಕೆಳಗೆ ತಳ ವಿತಳ ಸುತಳಂಗಳ್ ತ |
ಳಾತಳ ಮಹಾತಳ ರಸಾತಳಂಗಳ್ ನೆಗಳ್ದ |
ಪಾತಾಳಮೆಂಬಿವೇಳ್ ಲೋಕಮುಮನಡಕಿಲ್ಗಳಾಗಿ ನಿರ್ಮಿಸುತಲದಕೆ |
ಶಾತಕುಂಭಚ್ಛಾಯಿಯಂ ಮಾಡಿಯೊಡೆತನಕೆ |
ಪ್ರೀತಿಯಿಂ ಶೇಷ ಬಲಿ ಮುಚುಕುಂದರಂ ನಿಲಿಸೆ |
ಭೂತನಾಥನನಲ್ಲಿ ಶಿವನೆಂದು ಪೂಜಿಸುವರಾ ಲೋಕದಖಿಳಜನರು || ೫ ||

ವರರಸಾತಳಲೋಕಮಂ ಶುಭ್ರವರ್ಣದಿಂ |
ಪರಿರಚಿಸಿ ವಾಸುಗಿ ಸುವರ್ಣಾಖ್ಯರಂ ನಿಲಿಸೆ |
ಪರಮೇಶನಂ ಶಂಭುವೆಂದು ಪೂಜಿಸುತಿರ್ಪರಿನ್ನು ಮಹಾತಳವನು ||
ಉರುಸಿಕತವರ್ಣದಿಂ ನಿರ್ಮಿಸಿ ಹಿರಣ್ಯಾಕ್ಷ |
ನರಕಾಸುರರನಲ್ಲಿ ನೆಲೆಗೆಯ್ಯೆ ಶಿವನ ಶಂ |
ಕರನೆಂಬನಾಮದಿಂ ಭಜಿಸುತಿಹುದಾ ಲೋಕಜನಮತುಳಭಕ್ತಿಯಿಂದೆ || ೬ ||

ರಾಮ ಕೇಳ್ ವಿಧಿ ತಳಾತಳಲೋಕಮಂ ನವ್ಯ |
ಹೇಮವರ್ಣವ ಮಾಡಿಯವರೊಳಗೆ ಮಯಶಿಕಾಲ |
ನೇಮಿಗಳನೆಸೆವ ಕರ್ಕೋಟಕಾಹಿಯನಿರಿಸಿ ನೀಲಕಂಠಾಹ್ವಯದೊಳು ||
ಭೀಮನಂ ಪೂಜಿಸುವರಲ್ಲಿ ಸುತಳಕೆ ಪವಳ |
ಧಾಮಮಂ ರಚಿಸಿ ತಾರಕ ಪ್ರಹಲ್ಲಾದರಂ |
ಪ್ರೇಮದಿಂದಿರಿಸೆ ಶಂಭುವನುಮಾಪತಿಯೆಂದು ಭಜಿಸುವರ್ ಲೀಲೆಯಿಂದೆ || ೭ ||

೧ ಳಿಡೆಯಿಡೆಯ (ಗೋ, ಪ.) ೨ ಭೂರ್ಲೋಕ (ಶಿ.) ೩ ಯಮ (ಹು.) ; ಮಾ (ಶಿ.)

ವಿತಳಮುಂ ನಿರ್ಮಳದ್ಯುತಿಯಿಂದೆ ಕೈಗೈದು |
ಚತುರಾನನಂ ಶಂಖಪಾಲಮುಖರಾದ ಫಣಿ |
ವಿತತಿಯುಂ ಜಂಭಕುಂಭಕ[೧] ದೈತ್ಯರುಂ ನಿಲಿಸೆ ಹಾಟಕೇಶ್ವರನಾಮದೆ ||
ಶಿತಿಕಂಠನಂ ಸೇವಿಸುತ್ತಿರ್ಪರಲ್ಲಿ ಮೇ |
ಲತಳಮುಂ ನೀಲವರ್ಣಂ ಮಾಡಿ ನಮುಚಿಗಂ |
ಕ್ಷಿತಿಗೈದನಲ್ಲಿ ಶಿವನಂ ಮಹಾದೇವನೆಂದರ್ಚಿಸುವರೊಲವಿನಿಂದೆ || ೮ ||

ಮೇಲೆ ಭೂಮಂಡಲಮನಂತರದ ಭರಣಿಗಳ |
ಮೇಲುಮುಚ್ಚಳಪಾಂಗಿನಿಂ ತೋರ್ಪುತಿಹುದಾ ವಿ |
ಶಾಲಧಾತ್ರೀಪೀಠ ಮಧ್ಯದೊಳ್ ಕಣ್ಗೆಸೆವ ಸೌವರ್ಣಲಿಂಗದಂತೆ ||
ಸ್ಥೂಲವಾಗಿರ್ಪುದು ಮಹಾಮೇರುಪರ್ವತಂ |
ಸೇಳಲಿಂ ಸ್ವಾಯಂಭುವನು ಸಕಲಸಾಮ್ರಾಜ್ಯ |
ಪಾಲನೆಯ ಪಟ್ಟಮಂ ಕಟ್ಟಿದಂ ಮುದದಿಂ ಪ್ರಿಯವ್ರತಕುಮಾರಕಂಗೆ || ೯ ||

ಹರುಷದಿಂ ಸಕಲಭೂಮಂಡಲದ ಭಾರಮಂ |
ಧರಿಸಿ ತನ್ನಯ ರಾಜ್ಯದೊಳ್ ದಿವಾಕರಕಿರಣ |
ಪರಿವರ್ತನಂ ಬೇಡ ಮದ್ದೇಹಕಾಂತಿಯೇ ಸಾಕೆಂದು ಸುರಗಿರಿಯನು ||
ವರರಥಾರೂಢನಾಗೇಳ್[೨] ಬಾರಿಯೊಳ್ ಸುತ್ತಿ |
ಬರಲೊಂದುಗಾಲಿಯೈದಿದ ತಾಣದೊಳಗೊಂದು |
ಪರಿಯಲಾ[೩] ಮಧ್ಯದೊಳಗಿಂತು ಸಪ್ತದ್ವೀಪ ಸಪ್ತಶರಧಿಗಳಾದುವು || ೧೦ ||

ಲಕ್ಷಜಂಬೂದ್ವೀಪಮಾ ಲವಣಸಾಗರಂ |
ಲಕ್ಷಯೋಜನದಳತೆಯದರೊತ್ತಿನೊಳಗೆರಡು |
ಲಕ್ಷಯೋಜನದೊಳಾ ಪ್ಲಕ್ಷ ಮನಿತಿಕ್ಷು[೪]ನಿಧಿನಾಲ್ಕುಲಕ್ಷಂ ಶಾಲ್ಮಲಿ ||
ಕುಕ್ಷಿಸೆ ಸುರಾಶರಧಿಯಾ ಪ್ರಮಾಣಮದೆಂಟು |
ಲಕ್ಷಂ ಕುಶ[೫]ದ್ವೀಪಮಂತೆಸೆವ ಸರ್ಪಿ ಪಿಗೆ |
ಲಕ್ಷಹಿನಾರೆಂಟು ಕ್ರೌಂಚದ್ವೀಪಮಾ ಗಣನೆ ದಧಿಶರಧಿ ಕೇಳೆಂದನು || ೧೧ ||

---

೧ ಕುಂಭಕ | ಗೊ, ಹು. ಅ, ಬ, ಕ, ಮ. ೨ ಸೇಳೇಳ್ (ಹು.) ೩ ಪರಿಯಂತ (ಗೊ.೭) ೪ ಮಗಿಂಕ್ಷು (ಶಿ.) ೫ ಲಕ್ಷಕುಂಶ (ಶಿ.)

ಬಿತ್ತರದೊಳೆಸೆವ ಶಾಖ[1]ದ್ವೀಪದಳತೆ ಮೂ |
ವತ್ತೆರಡುಲಕ್ಷಯೋಜನಮಾ ಪಯಃಶರಧಿ |
ಸುತ್ತಿಕೊಂಡಿರ್ಪುದಾ ಲೆಕ್ಕದಿಂದಾ ಕ್ಷೀರವಾರಿಧಿಯನೊಳಗುಮಾಡಿ ||
ಉತ್ತಮದ ಪುಷ್ಕರದ್ವೀಪವರುವತ್ತುನಾ |
ಲ್ಕೊತ್ತಿನೊಳಗೊಪ್ಪುವಾ ಸ್ವಾದೋದಕಾಂಬುನಿಧಿ |
ಮುತ್ತದರ ಪರಿಗಣನೆಯಿಂತು ಸಪ್ತದ್ವೀಪ ಸಪ್ತಶರಧಿಗಳ ಹರಹು || ೧೨ ||

ಇರದೆ ಸಪ್ತದ್ವೀಪ ಸಪ್ತಶರನಿಧಿಗಳಂ |
ದೆರಡುವರೆಕೋಟಿಮೂರ್ಲಕ್ಕವರೆ ಸೌವರ್ಣ |
ಧರಣಿ ಹತ್ತುಂಕೋಟಿ ನೋಡೆ ಲೋಕಾಲೋಕಪರ್ವತಂ ಹತ್ತುಕೋಟಿ ||
ಗಿರಿಯ ಹೊರಭಾಗದ ಮಹಾಂಧಕಾರಂ ತಿಳಿಯ |
ಲೆರಡುಕೋಟಿಯು ಮೇಲೆ ನಾಲ್ವತ್ತಾರುಂ ಲಕ್ಕ |
ವರೆಯಿಂತು ಮೇರುವಿಂದತ್ತಲಿಪ್ಪತ್ತೈದುಕೋಟಿಯೋಜನದ ಹರಹು || ೧೩ ||

ಇನ್ನಾಲಿಸೈ ರಾಮ ಸವನನುಂ ಭವ್ಯ[2]ದ್ಯುತಿ |
ಮಾನು ಜ್ಯೋತಿಷ್ಮಾನು ವರವಪುಷ್ಮಾನುಗಳ್ |
ಸನ್ನುತಂ ಮೇಧಾತಿಯಗ್ನೀಂದ್ರರೆಂಬರೇಳ್ಮಂದಿಸುತರಿರಲವರ್ಗೆ ||
ಮನ್ನಣೆಯೊಳಾ ಪ್ರಿಯವ್ರತಮಹೀಪಾಲಕಂ |
ಮುನ್ನಪೇಳ್ದಾ ದ್ವೀಪದೊಳ್ ಪುಷ್ಕರಾದಿಗಳ |
ನುನ್ನತ ಪ್ರೀತಿಯಿಂದೀಯೆ ಜಂಬೂದ್ವೀಪಕಗ್ನೀಂದ್ರನರಸಾದನು || ೧೪ ||

ಪರಿಗಣಿಸಲಗ್ನೀಂದ್ರನಂದನರ್ ನಾಭಿಕಿಂ |
ಪುರುಷರುಂ ಹರಿಯಿಳಾವೃತರಮ್ಯಕರ್ ಮತ್ತೆ |
ವರಹಿರಣ್ಮಯ[3] ಕುರುನೃಪಂ ನೆಗಳ್ವಭದ್ರಾಶ್ವಕೇತುಮಾಲ್ಯಾದಿಗಳ್ಗೆ ||
ಧರೆಯನೊಂಭತ್ತುಭಾಗಂ ಮಾಡಿಕೊಡಲವರ |
ವರ ಪೆಸರ್ಗಳವಕಾದುವಾ ನಾಭಿಗಂ ವೃಷಭ |
ಧರಣಿಪತಿಯಾತಂಗೆ ಭರತನಾತನ ಪೆಸರ ಭರತಖಂಡಮದಾದುದು || ೧೫ ||

---

೧ ಶಾಕಾ (ಶಿ.) ೨ ಹವ್ಯ (ಅ, ಬ, ಕ.) ೩ ವೀರಜಯ (ಹು.)

ಸುರಗಿರಿಯ ತೆಂಕಣದಿಶಾಭಾಗದೊಳಗಿರ್ಪ |
ಭರತಖಂಡದ ಭೂಮಿ ತಿಳಿಯೆ ಹನ್ನೆರಡುಸಾ |
ಸಿರದ ವಿಸ್ತೀರ್ಣವದು ಬಿಲ್ಲಿಂತೆ ಮೂರು ದಿಕ್ಕಿಂಗೆ ಲವಣಾಬ್ಧಿ ಮೇರೆಯೊ[1] ||
ವರಹಿಮಾಚಲಮದರ ಬಡಗ ಪೂರ್ವಾಪರದ |
ಶರಧಿಗಾಂತೆರಡುಸಾಸಿರದುದ್ದಮಗಲ ಸಾ |
ಸಿರದಿಂದಲೊಪ್ಪುವದು ತತ್ ಖಂಡಮದು ಚಿತ್ರವರ್ಣದಿಂ ರಂಜಿಸುವುದು || ೧೬ ||

ತಂಪುವೆಟ್ಟದ ಬಡಗಭಾಗದೊಳಗೊಪ್ಪುವುದು |
ಕಿಂಪುರುಷವರ್ಷಮೇಕಾದಶಸಹಸ್ರದಗ |
ಲಿಂ ಪೊಳೆವ ಕನಕವರ್ಣಂ ನೀಳವಾಗಿ ಪೂರ್ವಾಪರಾಬ್ಧಿಯೆ ಗಡಿಯೆನೆ ||
ಸೊಂಪಿನಿಂದಿಹುದು ಹೇಮಾದ್ರಿಯದರುತ್ತರದೊ |
ಳಿಂ ಪೇಳ್ವೆನಾ ಶೈಲದುದ್ದಮೊಂದೇ ಸಾಸಿ |
ರಂ ಪರಪವಯ್ನೂರು ಯೋಜನಂ ಪೇಳಲೇನದರ ಸೌಖ್ಯಸ್ಥಿತಿಯನು || ೧೭ ||

ಹೇಮಶಿಖರಿಯ ಬಡಗಲೊಪ್ಪುವುದು ಹರಿವರ್ಷ |
ಭೂಮಿ ದಶಸಾಹಸ್ರ ಯೋಜನಂ ಕಾಂತಿಯುಂ |
ಹೇಮವರ್ಣಂ ಮೂಡ ಪಡುವಣಸಮುದ್ರಗಡಿಯುದ್ದ ಸಾಸಿರಯೋಜನಂ ||
ಆಮೇಲಣಗಲವೈನೂರರಿಂ ನಿಷಧಗಿರಿ |
ಸೀಮೆಯಾಗಿಹುದು ಬಡಗಣ ದಿಕ್ಕಿನೊಳ್ ಸಿದ್ಧ |
ರಾಮ ಕೇಳಿನ್ನಿಳಾವೃತದ ವಿಸ್ತಾರಮಂ ನೀನೆಂದು ನಿರವಿಸಿದನು || ೧೮ ||

ಕನಕಾಚಲದ ಚತುರ್ಭಾಗದೊಳಿಳಾವೃತಂ |
ಕನಕಮಯಭೂಮಿಯಿಂದಿಹುದದರ ಬಡಗದಿ |
ಕ್ಕಿನೊಳೆಸೆವ ನೀಲಾಚಲಂ ಮೇರೆ ತೆಂಕ ನಿಷಧಾಚಲಂ ಗಡಿ ಪಡುವಲು ||
ಘನಗಂಧಮಾದನಂ ಕಡೆ ಮೂಡ ಮಾಲ್ಯವಾ |
ನೆನಿಪ[2] ಗಿರಿಯೊತ್ತಾಗೆ ತದ್ಗಿರಿಯ ನಾಲ್ಕುದಿ |
ಕ್ಕಿನೊಳದರ ಮಂದರಂ ಮೊದಲಾಗಿ ನಿಷ್ಕಂಭಗಿರಿಚತುಷ್ಟಯಮಿರ್ಪುದು || ೧೯ ||

---
೧ ಮೇರೆ (ಹು.) ; ಮೇಲೆ (ಗೋ.)　೨ ಮೇ|ಲೆನಿಪ (ಕ.)

ನೀಲಗಿರಿಯೊಂದುಸಾಸಿರದುದ್ದಮನಿತೇ ವಿ |
ಶಾಳಮುದರುತ್ತರದೊಳುಂ ಹತ್ತುಸಾಸಿರದ |
ನೀಳದಿಂದಪರ ಪೂರ್ವಾಬ್ಧಿ ಗಡಿಯಾಗಿಹುದು ರಮ್ಯಕಂ ಕನಕವರ್ಣಂ |
ಪೇಳಲೇನದಕವಧಿಯಾಗಿ ಬಡಗಲ್ ಶ್ವೇತ |
ಶೈಲವಿಪ್ಪುದು ಸಹಸ್ರೋನ್ನತಂ ತದ್ಗಿರಿಯ |
ವೋಲಗಲವನಿತದರ ಬಡಗದಿಶೆಯೊಳು ಹಿರಣ್ಮಯವರ್ಷವಂ ಪೇಳ್ವೆನು || ೨೦ ||

ಹನ್ನೊಂದುಸಾಸಿರದ ಯೋಜನದ ನೀಳದಿಂ |
ಮುನ್ನ ಪೇಳ್ದಂತುಭಯವಾರ್ಧಿಗಡಿಯಾಗಿ ಪೊಸ |
ಚಿನ್ನದಂತಿರೆ ಕಾಂತಿಯೆಸೆವುದದಕವಧಿಯೇ ಶೃಂಗಪರ್ವತಮುದಕ್ಕೆ ||
ಉನ್ನತಂ ಸಾಸಿರಂ ಹರಹು ಸಾಸಿರವಾಗ |
ಲಿನ್ನದರ ಬಡಗದಿಕ್ಕಿನೊಳಿಹುದು ಕುರು[೧]ಭೂಮಿ |
ಹನ್ನೆರಡುಸಾಸಿರದ ತೆರಪಿನಿಂ ಪೂರ್ವಾಪರೋತ್ತರಾಬ್ಧಿಯೆ ಗಡಿಯೆನೆ || ೨೧ ||

ಸುರಗಿರಿಯ ಮೂಡಣ ದೆಸೆಯೊಳಿಹುದು ಭದ್ರಾಶ್ವ |
ವರುಷಮದು ಪೂರ್ವಾಬ್ಧಿವೇರೆ ಪಶ್ಚಿಮಕೆ ಘನ |
ಗಿರಿಮಾಲ್ಯವಂತನೇ ಗಡಿ ತ್ರಯತ್ರಿಂಶತ್ ಸಹಸ್ರಯೋಜನದ ಹರಹು ||
ಇರೆ ದಕ್ಷಿಣೋತ್ತರಕೆ ಮೂವತ್ತುನಾಲ್ಕು ಸಾ |
ಸಿರದಳತೆ ಜಠರಗಿರಿ ದೇವಕೂಟಾದ್ರಿಗಳ್ |
ಪರಿಗಣನೆಗಿಪ್ಪತ್ತುಸಾಸಿರಂ ದಕ್ಷಿಣೋತ್ತರಕುನ್ನತಂ ಸಾಸಿರಂ || ೨೨ ||

ವರಕೇತುಮಾಲ್ಯವರ್ಷಂ ಪಶ್ಚಿಮಾಬ್ಧಿ ಗಡಿ |
ಗಿರಿಗಂಧಮಾದನಂ ಮೂಡಲೊತ್ತಾಗಿಹುದು |
ಪರಿಗಣನೆ ಮೂವತ್ತುಮೂರ್ಸಾಸಿರಂ ದಕ್ಷಿಣೋತ್ತರಕ್ಕೊಂದು ಮಿಗಿಲು ||
ಪರಿಕಿಸಲಿಳಾವೃತಕ್ಕೀ[೨] ಪ್ರಮಾಣಂ ಪವನ |
ಗಿರಿಪಾರಿಯಾತ್ರಂಗಳಿಪ್ಪತ್ತುಮೈದುಸಾ |
ಸಿರದ ನೀಳಂ ದಕ್ಷಿಣೋತ್ತರಕ್ಕುನ್ನತಂ ಸಾಸಿರದೊಳಿರುತಿರ್ಪುವು || ೨೩ ||

---

೧ ಕಿರು (ಶಿ.) ೨ ಇರದಿಳಾವೃತಚೌಕಕೀ (ಕ, ಹು.)

ಹರಿವರ್ಷದೊಳಗೆಸೆವ ಕರವೀರಕೈಲಾಸ |
ಗಿರಿಗಳಿಪ್ಪತ್ತೈದು ಸಾಸಿರದ ನೀಳದಿಂ |
ದಿಟತಿರ್ಪುವಪರ ಪೂರ್ವಾಶಾಭಿಮುಖಮದು ತ್ರಿಸಾಸಿರಂ ರಜತವರ್ಣಂ ||
ಇರವೆ ರಮ್ಯಕದೊಳಿರ್ಪ ಶೃಂಗಮಕರಮುಮೆಂಬ |
ಗಿರಿಯುಗಳಮಿಪ್ಪತ್ತೈಸಾಸಿರದ ನೀಳದಿಂ |
ದಿರದಪರ ಪೂರ್ವಾಭಿಮುಖಮಾಗಿ ಮೂರುಸಾಸಿರಮುನ್ನತದೊಳಿರ್ಪುವು || ೨೪ ||

ಪನ್ನೆರಡುಸಾಹಸ್ರಯೋಜನಪರಿಪ್ರಮಾ |
ಣೋನ್ನತಂ ನಾಲ್ಕುವರೆಸಾಸಿರದ ನೀಳಮುಗ |
ಲಂ ನೋಡೆ ಮೂರುಸಾವಿರದಿಂದೆ ಮುನ್ನಮುಸಿರ್ದಂತೆ ಮಂದರಮಿರ್ಪುದು ||
ಇನ್ನದರ ತುದಿಯೊಳಿಹ ಕಡವದ ಮರಂ ಸಹ |
ಸ್ರೋನ್ನತಂ ವಿಸ್ತಾರಮುಂ ಚೈತ್ರರಥವನಂ |
ತನ್ನಗದೊಳಿಹುದು ಸಾಸಿರದಗಲದಿಂದಲ್ಲಿ ಕೊಳನೊಂದು ರಂಜಿಸುವುದು || ೨೫ ||

ಕನಕಾಚಲದ ತೆಂಕಬಾಗದೊಳ್ ಗಂಧಮಾ |
ದನನಗಂ ನಾಲ್ಕುವರೆಸಾಸಿರದ ನೀಳಮುಂ |
ಮಿನುಮಿನುಪ ಪವಳ ವಣ್ಣಂ ಮೂರುಸಾವಿರದ ವಿಸ್ತರಂ ಮೇಣುನ್ನತಂ ||
ದಿನಪಸಾಹಸ್ರಮದರೊಳಗೆ ಜಂಬೂಕುಜಂ |
ಘನಮಾಗಿ ಸಾಹಸ್ರಯೋಜನೌನ್ನತ್ಯದಿಂ |
ದಿನದಿನಂ ತೋರ್ಪುದಾನೆಗಳ ತೋರೆಯಳಿ ಪಣ್ಗಳಾಕುಜದೊಳಿಡಿದಿರ್ಪುವು || ೨೬ ||

ನೆಲಕೆ ಬಿದ್ದೊಡೆದ ರಸ ಜಾಂಬೂನದಾಖ್ಯೆಯಿಂ |
ಸಲೆ ಪರಿವುದಲ್ಲಿ ಜಂಬೂದ್ವೀಪನಾಮಮುಂ |
ದಿಳೆಗೆ ಸಂದುದು ಗಂಧಮಾದನೆಂಬಾ ವನಂ ತನ್ನಾಮಸರಸಿಯಿಹುದು ||
ತಿಳಿಯೆ ಸುರಗಿರಿಯ ಪಶ್ಚಿಮಭಾಗದೊಳಗೊಂದು |
ನೆಲಸಿಹುದು ವಿಷ್ಕಂಭಗಿರಿ ಮೂರುಸಾವಿರದ |
ಗಲಮಾರುಸಾಸಿರಸ್ಥೂಲಮದು ನಾಲ್ಕುವರೆಸಾವಿರದ ನೀಳಮಿಹುದು || ೨೭ ||

---

೧ ರಿ (ಗೋ.) ೨ ಳಿ (ಗೋ, ಪ.) ೩ ತೋರದ (ಕ.) ೪ ಚಾಂಬೂನ (ಕ.); ಬಂಬೂನ (ತಿ.)

ಆರಳಿಯೊಂದಾ ಗಿರಿಯ ತುದಿಯೊಳಿಹುದೊಂದುಸಾ |
ಸಿರದುದ್ದಮಲ್ಲಿ ವೈಭ್ರಾಜಮೆಂಬಾ ವನಂ |
ಸರಸಿಯೊಂದತಿ ನಿರ್ಮಳೋದಕದಿನೊಪ್ಪುತಿಹುದಾ ವನದ ನಟ್ಟನಡುವೆ ||
ಒರೆವೆನುತ್ತರದಿಶಾವ್ರತದೊಳಗೆ ನಿಷ್ಕಂಭ |
ಗಿರಿ ಮೂರುಸಾಸಿರದ ಹರಹು ತಿಳಿಯಲ್ಕೆ ಹ |
ನ್ನೆರಡುಸಾಸಿರಯೋಜನೋನ್ನತಂ ನಾಲ್ಕುವರೆಸಾಸಿರದನೀಳವಿಹುದು || ೨೮ ||

ಆಲವಿಹುದದರಗ್ರದೇಶದೊಳಗುರುತರವಿ |
ಶಾಲಮದರುನ್ನತಂ ಸಾಹಸ್ರಯೋಜನಂ |
ಪೇಳಿಲೇಂ ನಂದನವನಂ ಸಾವಿರದ ತೆರಪಿನಿಂದಿಹುದು ಸರಸಿಯೊಂದು ||
ನೀಳವೈನೂರ್ ಮಹಾಭದ್ರೆಯೆಂಬಭಿಧಾನ |
ಮಾಲಿಸೈ ರಾಮ ನಿಷ್ಕಂಭಗಳ[1]ನಡುವೆ ದಿವಿ |
ಜಾಲಯಂ ಲಕ್ಷಯೋಜನದ ಪರಿಗಣನೆಯಿಂದಿಹುದು ಕಾಂಚನಮಯದೊಳು
|| ೨೯ ||

ನೆಲದೊಳಗೆ ಪದಿನಾರುಸಾವಿರದ ಯೋಜನಮ |
ದಿಳಿದಿಹುದು ತೋರಮನಿತಲ್ಲಹುದು ಸಂತತಂ |
ತಿಳಿಯಲ್ಕೆ ಮೇಲೆ ಚೌರಾಸೀತಿಯೋಜನಂ ಸ್ಥೂಲದಿಂ ಕಾಣಿಸುವುದು ||
ಬಳಸಿಕೊಂಡಿಹುವೆಂಟುದಿಕ್ಕಿನೊಳ್ ದಿಕ್ಪಾಲ |
ಕುಲದ ನಗರಂಗಳುಂ ಮತದ[2] ಹೂವಿನ ಲೆಕ್ಕ |
ದೊಳೆ ಮೆರೆವುದೆಲೆ ಸಿದ್ಧರಾಮ ಕೇಳಿನ್ನದರ ಮೇಲಣ ಸುವಿಸ್ತರವನು || ೩೦ ||

ಮೇರುವಿನ ಮೇಲೆ ಬತ್ತೀಸ[3]ಸಾವಿರದ ವಿ |
ಸ್ತಾರಮದರೊಳಗೀಶ್ವರಂಗೆ ಮನೆಯೊಂದಿಹುದು |
ಚಾರುಮಣಿಮಂಡಿತಂ ಧರೆಗೊಂದುಲಕ್ಷಯೋಜನದೊಳ್ ಭುವರ್ಲೋಕವು ||
ಸೇರಿರ್ಪುದದಕೆ ರವಿಯೊಡೆಯನೆರಡೇ ಲಕ್ಷ |
ದೂರದೊಳಗಿಂದುವಿರ್ಪಂ ಮೂರುಲಕ್ಷದೊಳ್ |
ತಾರಕೆಗಳಿಹುವೈದುಲಕ್ಷದೊಳ್ ಬುಧನಿರ್ಪನೆಲೆರಾಮ ಕೇಳೆಂದನು || ೩೧ ||

---

೧ ಗಿರಿ (ಶಿ.) ೨ ಮದದ (ಹು.) ೩ ಛತ್ತೀಸ (ಮ, ಅ, ಬ, ಕ.)

ಧರೆಗೆ ಲಕ್ಷಯೋಜನದುದದೊಳ್ ಶುಕ್ರ |
ನಿರವು ನವಲಕ್ಷಯೋಜನದೊಳಗೆ ಮಂಗಳಂ |
ಗುರುನಿರ್ಪನೇಕಾದಶಪ್ರಮಾಣದ ಲಕ್ಷದೊಳಗೆ ಶನಿ ಹದಿಮೂರರ ||
ಪರಿಗಣನೆಯಲ್ಲಿರ್ಪ ಪದಿನಾಲ್ಕುಲಕ್ಷದೊಳ |
ನಿರುತಿರ್ಪರಾ ಸಪ್ತಋಷಿವರರ್ ಧ್ರುವನಿರ್ಪ |
ಧರೆಗೆ ಹದಿನೈದುವರೆಲಕ್ಷಯೋಜನದುದ್ದವಿಂತಿವರ ತೆರನೆಂದನು || ೩೨ ||

ಇನ್ನುಬ್ಜಮಿತ್ರನಿಂ ಮೇಲೆ ಹದಿನಾಲ್ಕುಲ |
ಕ್ಷೋನ್ನತಂ ಸ್ವರ್ಗಮಾ ಧ್ರುವನಿಂದೆ ಮೇಲೆ ಲೆ |
ಕ್ಕಸ್ಸೋಡಲೊಂದು ಕೋಟಿಯು ಮೇಲೆ ವರಮಹರ್ಲೋಕಮೊಪ್ಪುವುದದರೊಳು ||
ಸನ್ನುತಂ ಮುನಿಪ ಮಾರ್ಕಂಡೇಯನಂ ಋಷಿಜ |
ನನ್ನೋಡಿ ಭಕ್ತಿಭಾವಂಗಳಿಂದನುದಿನಂ |
ಪನ್ನಗಾಭರಣಚರಣಾರಾಧನೆಗಳಿಂದಮಿರ್ಪರದನೇವೇಳ್ವೆನು || ೩೩ ||

ಆ ಲೋಕದಿಂದೆ ಕೋಟಿದ್ವಯದ ಯೋಜನದ |
ಮೇಲಿರ್ಪುದಾ ಜನರ್ಲೋಕಮದರೊಳ್ ಮುನಿಪ |
ಜಾಲಸಹಿತೆಸೆವ ಸನಕಾದಿಗಳ್ ಶಿವಭಕ್ತಿಯೋಗದಿಂದಿರುತಿರ್ಪರು ||
ಆಲಿಸಾ ಲೋಕದಿಂ ನಾಲ್ಕುಕೋಟ್ಯಂಬರದ |
ಮೇಲಿರ್ಪುದಾ ತಪರ್ಲೋಕಮಾ ಲೋಕದ ವಿ |
ಶಾಲಮನಿತದರೊಳಿರ್ಪಂ ಕಮಲಲೋಚನಂ ಪೇಳಲೇನದರಿರವನು || ೩೪ ||

ಸತತಂ ತಪರ್ಲೋಕದಿಂ ಮೇಲೆ ರಂಜಿಪುದು |
ಮಿತಕೋಟಿಯೋಜನೌನ್ನತ್ಯದಿಂ ಕಾಂತಿಸಂ |
ಯುತವಾಗಿ ಸತ್ಯಲೋಕಂ ಚತುರ್ವದನನಲ್ಲಿರ್ಪನತಿಹರುಷದಿಂದೆ ||
ನುತಸತ್ಯಲೋಕದಿಂ ಮೇಲೆ ದಶಕೋಟಿಯುಂ |
ಕ್ಷಿತಿಮದೆಂಬತ್ತೈದುಲಕ್ಷಪರಿಗಣನೆಯು |
ನ್ನತವಿನಿತುಮಾಗಸಂ ಬ್ರಹ್ಮಾಂಡಮಿಂತುಟ್ಟಿವತ್ತುಕೋಟಿಪ್ರಮಾಣಂ || ೩೫ ||

೧-೧ ಗಿಂಟು ಹದಿನೈದು ಲಕ್ಷಯೋಜನ (ಶಿ.) ೨ ಯೋಜನಂ ವ್ಯಕ್ತದಿಂ (ಕ.) ೩ ಕ (ಶಿ.)

ಸರಸಿರುಹಸಂಜಾತನಿಃ ತೆರೆದೊಳೊಲವಿನಿಂ |
ವರಚತುರ್ದಶಭುವನಭವನದೊಳ್ ನಾಗಕುಲ |
ನರ ಸುರಾಸುರ ಸಿದ್ಧ ವಿದ್ಯಾಧರಾಪ್ಸರಪ್ರಕರ ಮನು ಮುನಿಮುಖ್ಯರು ||
ಗರುಡ ಗಂಧರ್ವ ಕಿನ್ನರ ಕಿಂಪುರುಷರೆಂಬ |
ಪರಮಸಚರಾಚರಮನುಚಿತದಿಂದೆಡೆಯೆಡೆಯೊ |
ಳಿರಿಸಿಯವರಿಂದೋಲಗಂಗೊಳುತೆ ಸುಖಸಂಕಥಾವಿನೋದದೊಳಿರ್ದನು || ೩೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೭ ||

ಅಂತು ಸಂಧಿ ೧೫ ಕ್ಕಂ ಪದಗಳು ೬೦೧ ಕ್ಕಂ ಮಂಗಳಮಹಾಶ್ರೀ

ಹದಿನಾರನೆಯ ಸಂಧಿ

ಸೂಚನೆ

ಹರಿಯಜರ್ ಹಮ್ಮಿನಿಂ ತಮ್ಮೊಳಗೆ ತಾವು ಮ |
ಚ್ಚರಿಸಿ ಕಾದುತ್ತಿರಲ್ ಸಕಲಜಗಮಳಿಯಲುಂ |
ಮರುಲಿಂಗಮುದ್ಭವಿಸಲವರಹಂಕಾರಂಗಳುಂ ಮುರಿದುವಾಕ್ಷಣದೊಳು ||

ಗಿರಿರಾಜನಂದನಾಮುಖಸರೋಜಭ್ರಮರ |
ಗಿರಿರಾಜನಂದನಾನಿಟಿಲಮೃಗಮದತಿಲಕ |
ಗಿರಿರಾಜನಂದನಾರಾಗೋಷ್ಠಬಿಂಬಫಲಚುಂಬನೋತ್ಸಾಹಕೀರ ||
ಗಿರಿರಾಜನಂದನಾಕರ್ಣತಾಟಂಕಯುಗ |
ಗಿರಿರಾಜನಂದನಾಕುಚತರಳಮಣಿಹಾರ |
ಗಿರಿರಾಜನಂದನಾರ್ಧಾಂಗ ಕರುಣಾಪಾಂಗ ಜಯ ವಿರೂಪಾಕ್ಷಲಿಂಗ || ೧ ||

ರಾಮ ಕೇಳೊಂದುದಿವಸಂ ಕಮಲಸಂಭವಂ |
ರಾಮಣೀಯಕಸಭೆಯೊಳಗೆ ರತ್ನನಿಕರಾಭಿ |
ರಾಮನೆಂದೆನಿಪ ಸಿಂಹಾಸನದೊಳೊಡ್ಡೋಲಗದೆ ಪುತ್ರಪೌತ್ರರೆನಿಪ ||
ಕಾಮರೂಪಿಗಳಾದ ಮನುಮುನಿ ಕ್ರತು ಭೃಗ್ವಿ[1] |
ಕಾಮಬಲವದ್ರಾಕ್ಷಸಾಳಿಕೃತಸಂಸ್ತೋತ್ರ |
ಕಾಮಿಸಿರ್ಪಂ ನೀನೆ ಸಕಲಜಗದೊಡೆಯನೆಂದಾ ಜನರ್ ನುತಿಸುತಿರಲು || ೨ ||

ಆವನಿಂದಖಿಳಜನನಸ್ಥಿತಿಪ್ರಳಯಂಗ |
ಳಾವನಿಂ ಸುಜನದುರ್ಜನರಕ್ಷೆಶಿಕ್ಷೆಗಳ |
ಆವನಾಜ್ಞೆಯೊಳಖಿಳಲೋಕಪಾಲಕರಿರ್ಪರತಿಕಲಾವತಿ ಶಾರದೆ ||
ಆವ ದೇವಂಗೆ ಸದ್ಭಕ್ತೆ ದೇವ ಮನು ಮುನಿಗ |
ಳಾವ ದೇವನ ಪುತ್ರಪೌತ್ರರಂತೆಸೆವರಾ |
ದೇವ ನೀನೇ ನಿನಗೆ ದೇವರಿಲ್ಲೆಂದಾ ಸಭಾಸದರ್ ನುತಿಯಿಸಿದರು || ೩ ||

---

೧ ಭುಜ್ಞ (ಶಿ, ಗೋ, ಕೋ.)

ಎಂದು ಕೊಂಡಾಡಲ್ಕಹಂಕೃತಿಯೊಳಬ್ಜಜಂ |
ಮುಂದುಗಾಣದೆ ತನ್ನಸಂಪದಕ್ಕಾರ್ ಸಾಟಿ |
ಯೆಂದು ತನ್ನಂ ತಾನೆ ಪೊಗಳಿಕೊಳಲಜನಸತ್ಯದೆ ಲೋಕಮುಳಿಪುತಿರಲು ||
ಕಂದರ್ಪಜನಕನರಿದಾ ಕ್ಷಣದೊಳಜನೆಡೆಗೆ |
ಬಂದು ನಿಂದಿರಲತುಳಗರ್ವದಿಂ ನೀನಾವ |
ನೆಂದು ಕೇಳಲ್ ಮುಗುಳ್ನಗೆ ಮಿನುಗುತಿರಲಂದು ಕಮಲಾಕ್ಷನಿಂತೆಂದನು || ೪ ||

ಕುರಿಯೆಲಾ ಬೊಮ್ಮ ನೀಂ ಲೋಕಕಂ ನಿನಗಮಾ |
ನೆರೆಯನಾಗಳೆ ಮರೆದೆಯಾ ತವಸಭಾಸದರ್ |
ನೆರೆ ಪೊಗಳೆ ನಿನಗಹಂಕಾರಮಾದುದೆ ಬೇಡವೆನೆ ಕಮಲಜಂ ಕನಲ್ದು ||
ಮಿರುಪ ಮಣಿಖಚಿತಸಿಂಹಾಸನದ ಸುತ್ತಲುಂ |
ತುರುಗಿದ ಸುರವ್ರಜದ ಮಧ್ಯದೊಳ್ ಮೆರೆವವಂ |
ಕುರಿಯೊ ವಿಕ್ರಯಶೇಷಮೋಷನಂತಿರ್ಪವಂ ಕುರಿಯೊ ನೀಂ ಪೇಳೆಂದನು || ೫ ||

ಕೇಳಿರೈ ಮನುಮುನಿಗಳೀತನ ಮಹಾಹಾಸ್ಯ |
ದಾಳಾಪಮಂ ತಾಂ ಗಡಂ ಸಕಲಲೋಕಮಂ |
ಪಾಲಿಪಂ ಗಡಮೆನಗೆ ವಲ್ಲಭಂ ಗಡ ನುಡಿಯೆ ತಕ್ಕುಮೇಂ ತತ್ಸಭೆಯೊಳು ||
ನಾಲಗೆಯನರಿಯಬೇಡವೆ ಕೊಬ್ಬಿದಿವನಂ ಯ |
ಮಾಲಯಕೆ ಕಳುಪಿದಪೆನೀ ಕ್ಷಣಮೆನುತೆ ವಿಲಯ |
ಕಾಲದಂತಕ[೧]ವೈರಿಯಂತಜಂ ಮುಳಿದೇಳೆ ವನಜಾಕ್ಷನಿಂತೆಂದನು || ೬ ||

ಎಲವೊ ವಿಕ್ರಯಶೇಷಮೋಷನೆಂದೆನ್ನ ನೀಂ |
ಪಳಿದೆಲಾ ಕಾಣಬಹುದಿನ್ನೇಕೆ ನೋಡು ತ |
ತ್ತಳವಿಯೊಳ್ ನೀನೆನ್ನ ಸೋಲಗೆಲವುಗಳನೆನುತಬ್ಜಾಕ್ಷನಾಕ್ಷಣದೊಳು ||
ಮುಳಿದು ಸೃಜಿಸಿದನಾನೆ ಕುದುರೆ ತೇರ್ ಕಾಲಾಳ |
ನಿಳೆ ಜರೆಯೆ ಫಣಿಪನೆದೆಯೊಡೆಯೆ ಕುಲಗಿರಿ ಬಿರಿಯೆ |
ತಲೆ ಕುಸಿಯೆ ದಿಗ್ಗಜಂಗಳ್ಗೆ ಸೇನಾರಜಂ ತುಡುಕೆ ದಿಙ್ಮಂಡಲವನು || ೭ ||

---

೧ ದಂಧಕ (ಕ, ಶಿ, ಗೋ, ಕೋ, ಪ.)

ಆವಾವ ದಿಕ್ಕುದಿಕ್ಕುಗಳೊಳಂ ಹರಿಯ ದಂ |
ತಾವಳಂ ಹರಿಯ ಹರಿಸಂಕುಳಂ ಹರಿಯ ಸುಭ |
ಟಾವಳಿ ಹರಿಯ ವರೂಥಂಗಳಲ್ಲದೆ ಪೆರತನಾಂ ಕಾಣೆನಾಹವದೊಳು ||
ಈ ವಿವಿಧ ಸೇನಾನಿಕಾಯಮಂ ಕಂಡು ಕೋ |
ಪಾವಲಂಬಿತಚಿತ್ತನಾಗಿ ಕಮಲಾಸನಂ |
ಶ್ರೀಪರ್ವ ತನ್ನಯ ಸಭಾಸದರನೆಲ್ಲರಂ ಮುರಿದೀಕ್ಷಿಪವಸರದೊಳು || ೮ ||

ಕಲಕಿದುದು ತುಂಬಿದಾಸ್ಥಾನಮಂಡಲವಾಗ |
ತುಳುಕಿದುದು ವೀರರಸವವರಾಸ್ಯಮಂಡಲದೊ |
ಳಳಿದುದು ಮನದ ಶಾಂತಿ ಪೆರ್ಚಿದುದು ವಿಭ್ರಾಂತಿ ಸಂಗರಾವೇಶದಿಂದೆ ||
ಮೊಳಗಿದುದು ವಾದ್ಯಸಂದೋಹವಾ ಪದದೊಳು |
ಜ್ವಲಿಸಿದುವು ಸುಭಟರ ಕರಂಗಳೊಳ್ ಕೈದುಗಳ್ |
ಕೊಳುಗುಳದ ವೃತ್ತಾಂತವೆಂತುಟಹುದೆನುತೆ ಲೋಕದ ಜನಂ ಚಿಂತಿಸಿದುದು || ೯ ||

ಮನುಗಳುಬ್ಬೇರಿದರ್ ಮುನಿಗಳುರೆ ಮೀರಿದರ್ |
ದನುಜರಾರ್ಭಟಿಸಿದರ್ ಜಯಕೆ ಲಟಕಟಿಸಿದರ್ |
ದಿಕ್ಪಾಲರೊತ್ತಿದರ್ ದಿವಿಜಭಟರೆತ್ತಿದರ್ ಕಿನ್ನರರ್ ಸೇನೆಸಹಿತ ||
ಕನಲಿದಂ ಸುತ್ರಾಮನುರಿದನುದ್ಧೃತಸೋಮ |
ನಿನಸುತಂ ಪೆರ್ಚಿದಂ ನಿರುತಿ ಬಾಳುರ್ಚಿದಂ |
ವನಧಿಪಂ ಕೆರಳಿದಂ ಹರಿ ರಣಕೆ ತೆರಳಿದಂ ಧನದಂ ಮುನಿದು ನಡೆದನು || ೧೦ ||

ಅಸಿತರೊಳ್ ಕಲಹಕರ್ತೃಗಳೀರ್ವರಾಜ್ಞೆಯಿಂ |
ತಸತಸಗೆ ಚೂಣಿಯ ಭಟಾಳಿ ಮುಂಕೊಂಡು ಪೊ |
ಕ್ಕಸುವರದೊಳೆಚ್ಚಾಡಿದರ್ ಮಾಡಿದರ್ ಪ್ರತಿಜ್ಞಾವಚನಮಂ ಖತಿಯೊಳು ||
ಇನಮಂಡಲಕೆ[1] ಸಮುದ್ರಂಗಳ್ಗೆ ನದಿಗಳ್ಗೆ |
ಘನಪವನಹತೋತ್ಥಿತರಜಂ ರಾಹು ವಡಬಾಗ್ನಿ |
ಘನಸಿದಾಘನಮಾಯ್ತು ಶಿವಶಿವಾ[2] ಪೊಗಳಲೆಂ ಸಂಗರದ ಸಂಭ್ರಮವನು || ೧೧ ||

೧ ಜನ (ಪ.) ೨ ಶಿವಶಿವಾಂ (ಕೋ, ಪ, ಗೋ.)

ಸೃಷ್ಟಿರಕ್ಷಾಕರ್ತೃಗಳ್ಗೆ ಕಾಳಗವಾಗೆ |
ನಷ್ಟಮೋ ಸುಖಮೋ ಜಗತ್ತ್ರಯಕೆ ಶಿವಶಿವಾ |
ಕಷ್ಟಮಿವರೀ ವಿಧಿಮುಕುಂದರಿನ್ನಾರ್ಗರಿಪಬೇಳ್ಪುದೀ ಸಂಕಟವನು ||
ಅಷ್ಟಮೂರ್ತಿಯೆ ಕರ್ತೃ ಸಕಲಜಗಮಂ ಪೊರೆವ |
ಭೀಷ್ಟವಿನ್ನಾರ್ಗೀ ವಿರಿಂಚಿಕಮಲಾಂಬಕರ |
ದುಷ್ಟಸಂಗ್ರಾಮಮಂ ಬಿಡಿಸನೇಯಕಟೆನುತೆ ಮೊರೆಯಿಟ್ಟುದಖಿಳಜನವು || ೧೨ ||

ಪಟಹ ತಮ್ಮಟ ಢಕ್ಕೆ ಡವುಡೆ ಕಹಳಾಸಮು |
ತ್ಕಟನಾದಮಳ್ಳಿರಿಯೆ ಪೇಳ್ವುದೇಂ ಬ್ರಹ್ಮಾಂಡ |
ಘಟಮೊಡೆದು ಬಹಿರಾವರಣದಿಂದೆ ಬೀಳ್ವಂಬುಧಾರಾಪ್ರವಾಹಮೆಸಲು ||
ಪಟುಧನುರ್ಧರಕರವಿಮುಕ್ತ[೧]ಬಾಣಂ ದಿಶಾ |
ತಟಕೆ[೧] ಭೀತಿ[೨]ಯನಾಗಿಸಲ್ ಮಸಗಿ ಸಮರಲಂ |
ಪಟರೆಚ್ಚು ಪಂಚಿ[೩]ದರ್ ಕಾಕಜಂಬುಕತತಿಗೆ ರಿಪುಭಟರ ಮಾಂಸಂಗಳ || ೧೩ ||

ಜೋದರಾನೆಗಳನಂಕುಶವಿಕ್ಕಿ ನೂಂಕಿದರ್ |
ನಾದಿಸುತೆ ಕೈಮಾಡಿದರ್ ಹಯಾರೋಹಕರ್ |
ಸೇದಿ ಸಿಂಜಿನಿಯ ತಲೆವಿಲ್ಗೊಂಡು ಪೊಕ್ಕರ್ ಧನುರ್ಧರರ್ ಮೂದಲಿಸುತೆ ||
ಪಾದಘಟ್ಟಣೆಗೆ ನೆಲನೊಡೆಯೆ ಫಣಿಗ[೪]ಳ ಸೆಡೆಯ |
ಲಾದಿಕೂರ್ಮಂ ಕೆಡೆಯೆ ಕಣೆಕಣೆಗಳಂ ಕಡಿಯೆ |
ಕಾದಿದರ್ ಕೈಜಡಿಯೆ ಕಂಡೆಯದ ಬಿಣ್ಪಿನಿಂ ಪಟುಭಟರುಭಯಬಲದೊಳು || ೧೪ ||

ಇದೆ ನವಬ್ರಹ್ಮರಾಟೋಪವೀ ದೆಸೆಯೊಳಿಂ |
ತಿದೆ ದಿನಪರುಜ್ಜಾಟ[೫]ವಿದೆ ಮನುಗಳಾವೇಶ
ವಿದೆ ದನುಜರಣ್ಮು ಜೀರಿದೆ ಸುರರ ಸಂರಂಭವಿದೆ ಭಟರ ಬೊಬ್ಬೆಯೆನುತೆ ||
ಕದನಕೌಶಲರಸ್ತ್ರಶಸ್ತ್ರಪ್ರವೀಣರು |
ಚಿದ[೬] ಬಾಳ ಸೇದಿದಂಬಿನ ಮಸಕದಿಂದೆ ಕಿಡಿ |
ಗೆದರುತುಂ ಪೊಯ್ದಾಡಿದರ್ ಕೂಡಿದರ್ ವೈರಿಭಟರುಂ ಲಯಾಲಯದೊಳು || ೧೫ ||

೧-೧ ಬಾಣೌಘ ದಿಕ್ | ತಟಕೆ (ಹು.) ; ಬಾಣಂ ದಿಶಾ | ಪಟಕೆ (ಗೋ, ತು.) ೨ ಭಿತ್ತಿ (ಕ, ತು, ಗೋ, ಪ.) ೩ ಪಚ್ಚಿ (ಪ, ಗೋ.) ೪ ಪಗೆಗಳ್ (ಮ, ಪ, ಶಿ, ಗೋ, ಕೋ.) ೫ ಉದ್ಭಾಟ (ಶಿ.) ೬ ಚ್ಛಿದ (ಕ, ಹು.)

ಇತ್ತಲಿತ್ತಂಡಚೂಣಿಯ ಭಟಾನೀಕವಿರ |
ಪೊತ್ತರಿಸಿ ಕಡಿದಿರಿದು ಕೆಡೆಯೆಚ್ಚು ಕಾದುತಿರ |
ಲಿತ್ತ ಕಮಲಾಸನಂ ಹಂಸೆಯುಂ ಕಮಲಾಂಬಕಂ ಬೇಗದಿಂ ಗರುಡನ ||
ಒತ್ತರಿಪ ಸಕಲಸಂರಂಭದಿಂದೇರಿ ಪರಿ |
ಸುತ್ತಿರಲ್ಕಾ ಕ್ಷಣಂ ಸನ್ನಾಹದಿಂ ತನ್ನ |
ಮೊತ್ತಲಿಹ ದೊರೆದೊರೆಗಳಂ ನೋಡಿ ಹರಿಗೆ ಪಂಕಜಗರ್ಭನಿಂತೆಂದನು || ೧೬ ||

ಈ ಮರುತ್ಸೈನ್ಯಮೀ ಮನುಮುನಿಗಳೀ ದನುಜ |
ರೀ ಮಹಾಚತುರಚತುರಂಗಂ ನವಬ್ರಹ್ಮ |
ರೀ ಮಿತ್ರರೀ ಗರುಡಗಂಧರ್ವರೀ ಯಕ್ಷಕಿನ್ನರರ್ ಕಿಂಪುರುಷರು ||
ಭೂಮಿಯೊಳದಾರ್ಗುಂಟು ತೋರೆನ್ನ ಸಂಪದಕೆ |
ತಾಮರಸನಯನ ನೀಂ ಪಾಸಟಿಯೆ ಪೇಳೆನಲ್ |
ಕಾಮಪಿತನೆಲೆ ಮೂಢ ಕಮಲಸಂಭವ ತೋರ್ಪೆನೆನ್ನಿರವನಿನ್ನೆಂದನು || ೧೭ ||

ಪಡೆದನಂಬುಜಲೋಚನಂ ವಿಶ್ವರೂಪಿನಿಂ |
ಬಿಡುಗಣ್ಣರಂ ಮನುಮುನೀಂದ್ರರಂ ದನುಜರಂ |
ಕಡೆಯ ಮಾತೇನಖಿಳಚತುರಂಗಮಂ ಬೊಮ್ಮರಂ ರವಿಗಳಂ ಗರುಡರ ||
ಬಿಡದೆ ಗಂಧರ್ವರಂ ಯಕ್ಷಕಿನ್ನರರನು |
ಗ್ಗಡದ ಕಿಂಪುರುಷರಂ ಸೃಜಿಸಿಯನಿತಲ್ಲದಾ |
ಗಡೆ ವಿಷ್ಣುಗಳನಸಂಖ್ಯಾತರಂ ತೋರಿದಂ ಪೊಗಳಲೇನಚ್ಚರಿಯನು || ೧೮ ||

ಇರಿಪಾಡಿತುಭಯಸೇನಾವಿತತಿ ಕರಿಕರಿಯೊ |
ಳುರುವಶ್ವಮಶ್ವಂಗಳೊಳ್ ಭಟರ್ ಭಟರೊಳುರೆ |
ಮಿರುಗುವ ರಥಾರೋಹಕರ್ ವರೂಥಾರೂಢರೊಡನೆ ಸುರರಮರರೊಡನೆ ||
ಸರಿಗರಕ್ಕಸರಸುರರೊಡನನುಕ್ರಮದೊಳಿಂ |
ತರಿಸಿ ನಾನಾಸ್ತ್ರಶಸ್ತ್ರಂಗಳಿಂ ಕಾದಿದರ್ |
ಕುರುಪಿಟ್ಟು ಪೊಗಳ್ದು ಕಪಿಯಾರಂಬುಜಾಕ್ಷಕಮಲಾಸನರ ಪಟುಭಟರನು
|| ೧೯ ||

ಪರಿವ ರಕ್ತಕೆ ಸಿಡಿವ ತಲೆಗಳ್ಗೆ ಪಾರ್ವಂಬಿ |
ಗುರುಳ್ವಟ್ಟೆಗಾರ್ಭಟಿಪ ರವಕಬ್ಧಿಯಾಗಸಂ |
ಹರಿದಂತವಾವನಿಮಂಡಲಮಂಬುಜಭವಾಂಡಸಮಿತಿಯಿಂಬಿಲ್ಲದಾಯ್ತು ||
ಗುರುತರವಡಬಶಿಖಿಗೆ ಋಕ್ಷಂಗಳಿಗೆ ದಿಶಾ |
ಪರಿವೃಢರ[1] ಪತ್ತುಸಂಗಳ್ಗೆ ಶೇಷನ ತಲೆಗು |
ಪರಿಲೋಕತತಿಗದೃಶ್ಯತೆ ವಿಗತಕಾಂತಿ ಕಳ್ತಲೆ ಭರಂ ಬಧಿರಮಾಯ್ತು || ೨೦ ||

ಮುಂಡಗಳ ರುಂಡಗಳ ತಂಡಗಳನುರೆ ಕರುಳ |
ಜೊಂಡುಗಳ ತುಂಡುಗಳ ಹಿಂಡುಗಳ ಮುಂಕೆವರ್ದ |
ಖಂಡಗಳ ಪಿಂಡಗಳ ಗುಂಡುಗಳನುಂಡುಂಡು ಕೊಂಡಾಡಿ ಪಟುಭಟರನು ||
ಗಂಡೋಳ್ಳ ಭೂತಮಾತ್ರೋ[2]ತ[2] ಜಾತಂಗಳಿಂ |
ದಿಂಡುರುಳ್ವ ಪೊರಳ್ವ ನೆರಳ್ವಾ ಪರಾಕ್ರಮಿಗಳಿಂ |
ಕಂಡೆಡೆಗೆ ಪಾಯ್ವರಿಂ ಕಾಯ್ವರಿಂ ಸುಯ್ವರಿಂ ತದ್ರಣಾಂಕಣಮೆಸೆದುದು || ೨೧ ||

ಪುಂಡರೀಕೋತ್ಪಾತವಾಗಿಯುಂ ಭಾವಿಸಲ್ |
ಶುಂಡಾಲದಳಿತಸರವಲ್ತು ನುತಕಂಜಾತ |
ಮಂಡನಂ ತಾನಾಗಿಯುಂ ದಿವಾಕರನಲ್ತು ಸಲೆ ವಿರಕ್ತಾಂಕಿತವಾಗಿ ||
ತಂಡದ ತಪೋವನ[4]ವುದಲ್ತುರೆ ಶಿವಾನ್ವಿತಂ |
ಖಂಡಪರಶುಪ್ರಯುತವಾಗಿ ಕೈಲಾಸದು |
ದ್ದಂಡಗಿರಿಯಲ್ತೆನಿಸಿ ನೋಟಕರ ಕಣ್ಗಾ ರಣಾಂಕಣಂ ಚೆಲ್ವಾದುದು || ೨೨ ||

ಈ ಪರಿಯೊಳುಭಯಸೇನಾಭಟರ್ ಪೊಯ್ದಾಡಿ |
ರೂಪಳಿದು ಮಡಿವುದಂ ಕಂಡು ಹರಿಕಮಲಜರ್ |
ಕೋಪಮಾನಸರಾಗಿ ನಿಜವಾಹನಂಗಳಂ ಪದಸಂಜ್ಞೆಯಿಂ ನೂಂಕಲು ||
ಆ ಪಕ್ಷಿ ಪಕ್ಷಾನಿಲಂ ಪೊಯ್ಯಲಾಕ್ಷಣಂ |
ಭೂಪಯೋಧಿಗಳೊಂದುಗೂಡಿದವು ನಿಮಿಷದೊಳ್ |
ಚಾಪಮಂ ಜೇಗೆಯ್ದುರುಭಯವೀರರ್ ಭಯಂಕರಮುಣ್ಮುತಿರೆ ಜಗದೊಳು || ೨೩ ||

೧ ನೃಪರ (ಕ, ಪು.) ೨-೨ ಉಪ್ಪತಲೆ ಭೂತಪ್ರೇತ (ಹು.) ; ಳ್ಳ ನೆರೆ ಭೂತಪ್ರೇತ (ಮು.)
೩ ತ (ಶಿ. ಪು.) ೪ ತಾಂಡವತಪೋಧನ (ಹು.)

ಪಟುವು ಮಾತೇನಖಿಳಲೋಕಮಂ ಸಂಹರಿಪ |
ನಿಟಿಲಾಂಬಕನ ಮಹಾಧ್ವಾನಮೋ ವಿಷ್ಣುಪದ |
ನಟನವಮ ತಪ್ರಳಯಕಾಲಮೇಘಾಡಂಬರಮೊ ಶಿವಶಿವಾ ಪೊಸತೆನೆ ||
ಪಟುತರದ ಸಮರಲಂಪಟಭಟೋರಸ್ಸ್ಥಳಂ |
ಸ್ಫುಟವಾಗೆ ಸಕಲದಿಕ್ತಟಕವಾಟಂ ತೆರೆಯೆ |
ಚಟುಲಸಂಗ್ರಾಮಭೀಮರ ವಿಜಯಕಾಮುರುರುಚಾಪ[೧]ರವಮುಳ್ಳಿರಿದುದು || ೨೪ ||

ಸೇದಿ ತಾಂ ಸವದಿವೆರಳಿನೊಳಂಬ ಕರ್ಣಾಂತ |
ಕೈದಿಸಿ ಸಡಿವನೆಲವೊ ಬೊಮ್ಮ ಬೊಮ್ಮೇತಿಗಾಂ |
ಕಾದೊಡರಿಯದೆ ಪೋದೆಲಾ ನೋಡು ನೋಡಾದೊಡೆನ್ನ ನಾರಾಚವೆನುತೆ ||
ವೇದಚೋರಧ್ವಂಸಿಯೆಸಲಾ ಕಳಂಬಮಂ |
ಛೇದಿಸಿ ಮಗುಳೆ ದಿವ್ಯಬಾಣಂಗಳಿಂದೆಚ್ಚು |
ಭೇದಿಸಲುರವನದರ ಘಾತಿಗೆ ಮುರಾಂತಕಂ ನೊಂದು ಖತಿಯಂ ತಾಳ್ದನು[೨]
|| ೨೫ ||

ಪೇಳಬಹುದೇಂ ಹರಿಯ ರೋಷವಹ್ನಿಯ ಬಹುಳ |
ಜ್ವಾಳತೆಯನಯ್ಯಯ್ಯೊ ಪೆರರುಪದ್ರಂಗಳಂ |
ತೇಲಿಸುವವರ್ ತಾವೆ ಲೋಕಕಂಟಕರಾದರಿದ ಪರಿಹರಿಸದಿರ್ಪುದು ||
ಬಾಲೇಂದುಮೌಳಿಗೇಂ ಸೈರಣೆಯೆ ತನ್ನ ಕಾಂ |
ತಾಲಿಂಗನಕ್ಕಿದೇ ಸಮಯಮೇ ಭಕ್ತಜನ |
ಪಾಲನೆಂಬೀ ಬಿರುದನುಳಿದನೋ ಹರನೆನುತೆ ಭುವನಜನಮುಳವಳಿದುದು || ೨೬ ||

ಅಸಿತದೊಳ್ ಶುಭಜಲದನಿಭಗಭೀರೋಕ್ತಿಯಿಂ |
ವನಜಾಕ್ಷನೆಂದನೆಲೆ ಖೂಳ ಕಮಲಜ ನೀನೆ |
ಘನವೆನುತ್ತೆಮ್ಮೊಡನೆ ಸೆಣಸಿದೀ ಫಲವನುಣ್ಣೆನುತೆಚ್ಚು ಬೊಬ್ಬಿಡಲ್ಕೆ ||
ಕನಲಿ ಬರ್ಪಾ ಬಾಣಮಂ ಕಡಿದು ಜಡೆದು ಭೋಂ |
ಕನೆ ಚಿನ್ನಬತ್ತಳಿಕೆಯಿಂದೆ ಬ್ರಹ್ಮಾಸ್ತ್ರಮಂ |
ವನಜಭವನುಗಿದು ತಿರುಪಿಗೆ ಪೂಡಿ ಕಿವಿವರೆಗೆ ತೆಗೆದು ಬೊಬ್ಬಿರಿದೆಚ್ಚನು || ೨೭ ||

---

೧ ಕಾಮುರುಚ್ಚಾಪ (ಮ, ಶಿ.) ೨ ತಳೆದನು (ಪ, ಗೋ.)

ಎಲೆಲೆ ಬೆಂದುದು ಲೋಕವೀಕ್ಷಣಂ ಜಗಕಿದೆಂ |
ವಿಲಯವೋ ನಿಲಿಸು ನಿಲಿಸೀ ಮೂರ್ಖಕಮಲಜನ |
ಕೊಲೆಗಡುಕಸರವನೆಂದಲ್ಲಲ್ಲಿ ಗುಜುಗುಜಿಸೆ ಮುಂಬರಿವ ಬ್ರಹ್ಮಾಸ್ತ್ರವ ||
ಜಲಜನಾಭಂ ಕಂಡು ತನ್ನ ಬತ್ತಳಿಕೆಯಿಂ |
ಸೆಳೆದನುನ್ನತವೈಷ್ಣವಾಸ್ತ್ರಮಂ ಪೆರ್ಗಿಡಿಯ |
ಬಳಗಂಗಳವಗಡಿಸೆ ಭಟರ ಭಯವಿಮ್ಮಡಿಸೆ ಪೂಡಿದಂ ಕಾರ್ಮುಕದೊಳು[೧] || ೨೮ ||

ಪೂಡಬೇಡಕಟ ನಿಲ್ಲೆಂಬಂತೆ ಗಿರಿಗಳ |
ಲ್ಲಾಡುತಿರ್ದುವು ಬಾಣವಹ್ನಿ ಪೀರ್ದಪುದೆಂದು |
ನೋಡೆ ಮೊರೆಯಿಡುವಂತೆ ಶರಧಿ ತಳಮಳಲೇಳಲುದ್ಘೋಷಮಯವಾದುದು ||
ಪೂಡೆ ಪಣ್ಬಾಮುಳಕಫಲಮುದಿರ್ವಂದದಿಂ |
ನಾಡೆ ಸುರಿದುದು ಋಕ್ಷರಾಜಿ ಲೋಕಂಗಳಿಗೆ |
ಕೇಡಡಸಿತೆಂದು ಬಾಯ್ಬಿಡುವಂತೆ ಧರಣೀತಳಂ ಬಿರಿದುದೇವೇಳ್ವೆನು || ೨೯ ||

ನಾರಿಯಿಂದುಗಿದು ಬಿಡಲಾ ಕ್ಷಣಂ ಲಯದ ಮದ |
ನಾರಿಯುರಿಗಣ್ಣಂತೆ ಬರ್ಪುದಂ ಪೇಳ್ವ ನರ |
ನಾರಿನ್ನುಮದರ ಮಾರ್ಗಿಡಿಗಳಿಂ ಸಕಲಲೋಕಾಳಿ ಸಂವರ್ತಮಾಯ್ತು ||
ವಾರಿಜಭವಾಸ್ತ್ರಮಿಾ ಪ್ರತ್ಯಸ್ತ್ರಮುಂ ಕಂಡು |
ವಾರಿಧಿಯ ಕಿಚ್ಚಿನಂತಡದರ್ದು ಲಟಕಟಿಸಲ್ಕೆ |
ವಾರಿರುಹನಾಭನ ಶರಂ ತುಡುಕಿದುದು ಕವಿವ ಪೆರ್ಗಿಡಿಯ ಸಡಗರದೊಳು || ೩೦ ||

ಹೂಂಕರಿಸುತುರಿಯನುಗುಳುತೆ ಮಲೆತು ಮತ್ಸರಿಸಿ |
ಶಂಕೆಯುಂ ಪುಟ್ಟಿಸುತೆ ಹರಿಕಮಲಜಗಾ ರ |
ಣಾಂಕಣಮನುಳಿದಭ್ರಮಂಡಲದೊಳೊಂದನೊಂದಡರ್ದು ಚುಂಬಿಸುವಾಗಳು ||
ಪಂಕಜಭವಾಂಡಮುರಿದುದು ಮಹಾಪ್ರಲಯದಾ |
ತಂಕಮಾದುದು ಹರಿವಿರಿಂಚಿಗಳ್ಗಿವರಿರ್ವ |
ರುಂ ಕೂಡಿ ವರಖಗದ್ವಯವಲ್ಲದಾಹವಂ ಶೂನ್ಯಮಾಯ್ತೇವೇಳ್ವೆನು || ೩೧ ||

---

೧ ವನು (ಹು.)

ಹರಿ ಗರುತ್ಮನನಿಳಿದು ಕರಕಾರ್ಮುಕವನುಳಿದು |
ಗುರುತರಗದಾದಂಡಮಂ ಕೊಂಡು ನಿಲೆ ಕಂಡು |
ಸರಸಿಜಭವಂ ವಾಹನವನಿಳಿದು ತಾಂ ಗದಾದಂಡಮಂ ತಳೆದುಕೊಂಡು ||
ಪರಿಪರಿಯ ಪಾಡರಿದು ತಳವೆಲ್ಗಳೊಳಗೆ ಪೊ |
ಯ್ದುರವಣಿಸಿ ಪೆರಸಾರಿ ಮುಂಬರಿದು ಗದೆಗಳಂ |
ತಿರುಪಿ ಭುಜಸತ್ತ್ವದಿಂ ತೋರಿದರ್ ಘನಗದಾಯುದ್ಧಮಂ ಸಂಗರದೊಳು
|| ೩೨ ||

ಪೊಯ್ವನೀ ಹರಿ ವಂಚಿಪಂ ಬೊಮ್ಮನದು ಪುಸಿಯೆ |
ಕಾಯ್ವನೀ ಹರಿ ಕೂಡೆ ಕೈಮಾಳ್ಪನೀ ಬ್ರಹ್ಮ |
ನಯ್ವಡಿ ಪರಾಕ್ರಮದೊಳೆರಗುವಂ ಹರಿ ಮತ್ತೆ ಮೈಗೊಡಂ ಕಮಲಭವನು ||
ಪಾಯ್ವನೀ ಹರಿಯುಜಂ ನಿರ್ಲಕ್ಷನಾಗೆ ತಲೆ |
ಗಾಯ್ವನೀ ನಿನ್ನನೆನುತೆರಗುವಂ ಬಿದಿಯೊಲೆದು |
ಮೆಯ್ವಳಿಗೆ ಸಂದು ಸಾಧಿಸುವಂ ಮುರಧ್ವಂಸಿ ಪೊಗಳಲೇನಚ್ಚರಿಯನು || ೩೩ ||

ಮೀರುವರ್ ಬೀರುವರ್ ಶೌರ್ಯಮಂ ರಣಕೆ [೧]ಕಲಿ |
ಯೇ[೧]ರುವರ್ ತೋರುವರ್ ಸಾಸಮಂ ಪೊಯ್ದು ಕೈ |
ಜೋರುವರ್ ಪೋರುವರ್ ಗಾಯಮಂ ಧರಣಿಮಂಡಲದಿಂದೆ ಗಗನತಳಕೆ ||
ಪಾರುವರ್ ಕೀರುವರ್ ಕೆಲಕಡೆಗೆ ಹರಿಯಂತೆ |
ಚೀರುವರ್ ಜಾರುವರ್ ಮೆಯ್ಗೊಡದೆ ಬೀರಮಂ |
ದೂರುವರ್ ಮಾರುವರ್ ಮೆಯ್ಗಳಂ ವಿಕ್ರಮದ್ರವ್ಯಕಿರ್ವರ್ ಸುಭಟರು || ೩೪ ||

ಇಂತಿರ್ವರುಂ ಸೋಲುಗೆಲವುಗಾಣದೆ ಗದೆಗ |
ಳಂ ತೊರೆದು ಮಲ್ಲಗಾಳೆಗಕೆಳಸುತಿರಲಾಗ |
ಕಂತುಪಿತನೇರುವ ಗರುತ್ಮಂಗೆ ಕಮಲಜನ ಹಂಸೆಗಾದುದು ಕಾಳೆಗಂ ||
ಅಂತವೆರಡುಂ ಕಾದಿ ಹತವಾಗಿ ಪೋದ ನಮ |
ನಂತರದೊಳುಭಯರುಮಿರರ್ ಬಾಹುಯುಗವನ |
ತ್ಯಂತರೋಷದೊಳಾಭಟಿಸಿ ಪೊಯ್ಯಲಾ ಧ್ವನಿ ಮಹಾಭಯಂಕರವಾದುದು
|| ೩೫ ||

೧-೧ ಕವಿ । ದೇ (ಮ.) ; ಕೆರಿ । ಯೇ (ಶಿ.)

ಲಲಿತಕರ್ಪೂರತಾಂಬೂಲಮುಂ ತಮ್ಮಣಲೊ |
ಳಳವಡಿಸಿ ಪುದಿದ ಬೆಮರ್ವನಿಗಳಂ ತತ್ಕ್ಷಣಂ |
ಕಳನ ದೂಳಿಯೊಳೆ ತಂಬಿಸಿ ಮುಷ್ಟಿಯುಂ ಬಲಿದವೆಗಳಲುಗದಿಕ್ಷಿಸುತ್ತೆ ||
ನಳಿನಭವನಳಿನಾಕ್ಷರಿರ್ವರುಂ ಕೈಗಳಂ |
ಸಲೆ ತೋರಿ ತೋರುತೆ ಕುಲಾಲಚಕ್ರದ ಬವಣೆ |
ಯೊಲುಮೊಂದು ಯಾಮಮಾತ್ರಂ[1] ತಿರುಗಿದರ್ ದಿಶಾಮಂಡಲಂ ತಿರುಗುತಿರಲು
|| ೩೬ ||

ನೋಡಿ ಬಣ್ಣಿಪರನಿಮಿಷರ್ಗೆ ಫಣಿರಾಜಂಗೆ |
ಕೇಡು ಸಂಭವಿಸಿತ್ತು ಭಟರ ಸಂಗ್ರಾಮಮಂ |
ನಾಡೆ ನಿಟ್ಟಿಸಿ ಪೊಗಳ್ವರಾರೋ ಮಹಾದೇವ ರಣಕಿದೇ ಕಡೆಯೆಸಲ್ಕೆ ||
ನೀಡಿರ್ದ ವಾಮಹಸ್ತವ ನೆವರಿದುರುತರದ |
ಗೂಢಮುಷ್ಟಿಯ ಚಪಲತನುಲತೆಯ ಕಲಿಗಳೊಲೆ |
ದಾಡುತಿರ್ದರ್ ಧರಾಕಂಪದೊಳ್ ಕಂಪಿಸುವ ಕುಲಗಿರಿಯ ಪಾಂಗಿನಿಂದೆ || ೩೭ ||

ಘನಗುರುತ್ವಕೆ ರೋಹಣಾದ್ರಿನೀಲಾದ್ರಿಗಳ್ |
ಕನಲ್ದು ಕಾದಲ್ಕೆ ಬಂದುವೋ ಪೇಳೆನಲ್ಕಾಗ |
ವನಜಭವವನಜನಾಭರ್ ತೋರಿದರ್ ಪೊಯ್ದು ತನತನಗೆ ಕೌಶಲ್ಯವ ||
ಮಿನುಗೆ ಮುಷ್ಟಿಯೊಳೆ ಪೆರ್ಗಿಡಿ ತಿವಿವ ತಿವಿಗಳ್ಗೆ |
ದನಿದೋರೆ ಭಟರ ಕಾಯಂ ಗೆಲವುಗಾಣದ |
ತ್ಯನುಪಮಪರಾಕ್ರಮಿಗಳಾರ್ಭಟಿಸಿ ಪೊಯ್ದಾಡಿದರ್ ಮಹಾಸಂಗರದೊಳು
|| ೩೮ ||

ಕರವಲಯಕೋರೊರ್ಮೆ ತಳಹತ್ತಕೋರೊರ್ಮೆ |
ಸರಿಸಮುಂಕಡಕೊರ್ಮೆ ಬಂಧಪಟ್ಟಿಸಕೊರ್ಮೆ |
ಉರಗಬಂಧನಕೊರ್ಮೆ ಬಾಹುದಣಿವಿಂಗೊರ್ಮೆ ಡೊಕ್ಕರಕ್ಕೊರ್ಮೆಯೊರ್ಮೆ ||
ಸಿರವಲಯಕೋರೊರ್ಮೆ ಕಂಡಡೊಕ್ಕರಕೊರ್ಮೆ |
ಹರಿಕಮಲಭವರೊದಗಿದರ್ ಮತ್ತೆಯುಂ ಗೆಲವು |
ದೊರೆಕೊಳ್ಳದಿರೆ ಮಹಾರೋಷಮಾನಸನಾಗಿ ಮಾಧವಂ ಚಿಂತಿಸಿದನು || ೩೯ ||

೧ ಮಾತ್ರದೆ (ಶಿ.)

ಎನ್ನೊಡನೆ ಸರಿಬರಿಗೆ ಬರಲೀಸರವನಿವನ |
ಗನ್ನಮಂ ನಿಲಿಸುವೆಂ ತಾನೆನುತೆ ಮಾಧವಂ |
ಸನ್ನೆಯಿಂ ಕಮಲಜನ ಖಾತಿಗೊಡಲಂಗೊಟ್ಟು ಗೆಲವುದೋರಿಸಿ ಖತಿಯೊಳು ||
ಮುನ್ನೀರ ಮಗಳ ಗಂಡಂ ಬ್ರಹ್ಮಮಸ್ತಕವ |
ನುನ್ನತದ ಮುಷ್ಟಿಯಿಂ ತಿವಿಯಲ್ಕೆ ತಚ್ಛಿರಂ |
ಛಿನ್ನವಾದುದು ನಾಲ್ಕುಸೀಳ್ ಸಕ್ಕಸಮನಾಗೆ ಪೇಳ್ವೆನೇನದ್ಭುತವನು || ೪೦ ||

ಸಿರಮೊಡೆದೊಡೇನಾಯ್ತು ಸರಸಿರುಹಸಂಭವಂ |
ಘುರವರಿವ್ರನೆ ಬಿರಿವ ಮಸ್ತಕದ ಪ್ರೋಗ್ಗಳಂ |
ವರಚತುರ್ವದನಂಗಳಂ ಮಾಡಿಕೊಂಡು ಪುನರಪಿ ಕ್ರುದ್ಧಚಿತ್ತನಾಗಿ ||
ಹರಿಗೆ ಮಾರಾಂತು ಬಾಹುದ್ವಯಮನಪ್ಪಳಿಸಿ |
ಮುರಿದೆರಗುವೆಂ ಮುರಾಂತಕನನೆಂಬವಸರದೊ |
ಳಿರದಾದುದಾಗಸದೊಳೊಂದುಲುಹು ಸಿದ್ಧರಾಮೇಶ ಕೇಳ್ ಕೌತುಕವನು || ೪೧ ||

ಅರಿಯುವವನೇ ನೀಂ ಮುರಾರಿ ಮೂರ್ಖನೆ ಬೊಮ್ಮ |
ತರಿಸಂದು ನಿನಗಮಾತಂಗಮೊಂದೇ ವಸ್ತು |
ಪೆರತುಂಟು ತದ್ವಸ್ತುವಿಲ್ಲಿ ಜನಿಸುವುದೀಗಳದರ ಪದಮಸ್ತಕವನು ||
ನೆರೆ ಪೋಗಿ ಕಂಡಾತನೇ ಸಾಸಿಯೆನೆ ಕೇಳ್ದು |
ಬೆರಗಾಗಿ ತಾವಿರ್ವರುಂ ರಣಾವೇಶಮಂ |
ಮರೆದು ನೋಳ್ಪನಿತರೊಳ್ ಸಿದ್ಧರಾಮೇಶ ಕೇಳಿನ್ನೊಂದು ಕೌತುಕವನು || ೪೨ ||

ತರಣಿಬಿಂಬಂಗಳಂ ಕರಗಿ ಕರುವಿಟ್ಟೆರೆದ |
ಪಿರಿಯ ಮೂಲಸ್ತಂಭವೋ ಪಂಚಭೂತಮಂ |
ಪರಿಗಣಿಸಲಳಿವ ಮಿಸುನಿಯ ದಂಡಮೋ ಮುಂದೆ ಸೃಜಿಯಿಸುವ ಲೋಕಂಗಳು ||
ಜರಿದಪುವವಕ್ಕಡರ್ಪಾಗಿರಲ್ವೇಳ್ಕೆಂದು |
ಗುರುತರಸುವರ್ಣದ ಸಲಾಕೆಯುಂ ಬಲಿದರೋ |
ಹರಹರಾ ಪೇಳಲೇಂ ಹರಿಯಜರ ಮಧ್ಯದೆ ಮಹಾಲಿಂಗಮುದಯಿಸಿದುದು || ೪೩ ||

೧-೧ ಸೀಳ ಪೋಳಸಮಾಗೆ (ಶಿ.) ೨-೨ ಳನಡೆದ ಸ್ವರ್ಣದಂಡವೊ (ಶಿ.)

ಆ ಲಿಂಗದತುಳತರ ಪೀಠಂ ಧರಿತ್ರಿ ಶೈ |
ಲಾಳಿ ಭುಜಮೆಸೆವ ಸಪ್ತಾಂಬುನಿಧಿಗಳೆ ಕುಕ್ಷಿ |
ಲೋಲಾಕ್ಷಿಗಳ್ ಚಂದ್ರಸೂರ್ಯಾಗ್ನಿಗಳ್ ರಸಾತಳದ ಕಡೆಯೇ ಪಾದವು ||
ಮೇಲಿರ್ಪ ತಾರಾಳಿಗಳೆ ಪುಷ್ಪಸಂದೋಹ |
ಮೋಲಗಿಪ ಪರಿವಾರವೇ ಪ್ರಮಥಗಣವಾಗೆ |
ಲೀಲೆಯಿಂ ಮೂಡಿದುದು ಲಿಂಗಮಜಹರಿಗಳಂ ಬೆರಗುವಡಿಸಿದುದಾಗಳು || ೪೪ ||

ಲಲಿತತೇಜೋಮಯದ ಲಿಂಗದಿದಿರೊಳ್ ಮಿಂಚು |
ಬುಳುವೆಂತುಟಂತಾದುದಿವರ ತೇಜಂ ಕೂಡೆ |
ತಿಳಿದು ನಿಶ್ಚಯಿಸಿದರ್ ಪಾದಮಂ ಹರಿ ಮಸ್ತಕವನಜಂ ಕಾಣ್ಬೆವೆಂದು ||
ನಳಿನನಾಭಂ ವರಾಹಾಕೃತಿಯನಾ ಕ್ಷಣಂ |
ತಳೆದಿಳಿದು ಪೋದಂ ಧರಾತಳವನೊಡೆಬಗಿದು |
ಕಲಹಂಸೆಯಾಗಿ ಬೊಮ್ಮಂ ಪೋಗುತಿದಿರೆ ಬಹ ಕೇತಕಿಯೊಳಿಂತೆಂದನು || ೪೫ ||

ಎಲೆ ಮಹಾತ್ಮನೆ ನಮಸ್ಕಾರಮೆಲ್ಲಿಂದಾಯ್ತು |
ಸುಳಿವು ನಿಮಗೆಂದೆನಲು ಪರಶಿವನ ಮಕುಟದಿಂ |
ದಿಳಿತಂದೆನೀಗ ಕೇತಕಿಯೆಂಬುದಭಿಧಾನಮೆನಗೆ ನೀನಾರೆನಲ್ಕೆ ||
ಜಲಜಸಂಭವನಾಂ ಸದಾಶಿವನ ಮುಕುಟಮಂ |
ತಿಳಿಯಲ್ಬೈದುವೆನಿಲ್ಲಿಗೆನಿತು ಗಾವುದಮುಂಟು |
ತಿಳಿಪೆನಲ್ ನಸುನಕ್ಕು ಪಲಯುಗದೊಳೈದೆಯುಂ ಕಾಣ್ಬುದಘಟಿತಮೆಂದನು || ೪೬ ||

ಬೆಚ್ಚಿದಂ ಮನದೊಳಬುಜಾಸನಂ ಹೃದಯಮಂ |
ಬಿಚ್ಚಿದಂ ಕೇತಕಿಯೊಳೆಲೆ ಪುರುಷ ಹರಿಗೆ ಮೂ |
ರಚ್ಚಿಯುಳ್ಳನ ಮಸ್ತಕಂಗಂಡು ಬಹೆನೆಂದು ಭಾಷೆಯಂ ಕೊಟ್ಟು ಬಂದೆ ||
ಮುಚ್ಚುಮರೆಯೇಕೆ ೧ಹರಿಯೊಡೆನೆ ನಾಂ೧ ಗೆಲ್ವಂತು |
ಟುಚ್ಚರಿಸವೇಳ್ಕೆಂದು ಬೇಡಿಕೊಳೆ ಕೈಕೊಳು |
ತ್ತುಚ್ಚರಿಯೊಳೈದಿ ಮುನ್ನಿನ ರಣಾಂಕಣದೆಡೆಗೆ ತಾವಿರ್ವರುಂ ಬಂದರು || ೪೭ ||

೧-೧ ನಾಂ ಹರಿಯೊಡನೆ (ಗೋ.)

ಹರನ ಪಾದಾಬ್ಜಮಂ ಕಾಣದೆ ಮುರಾಂತಕಂ |
ಮರಳಿ ಮುನ್ನಿನ ರಣಾಂಕಣಕೆ ಬರಲಿವರೆ ಮೊದ |
ಲಿರೆ ಶಿವನ ಮುಕುಟಮಂ ಕಂಡೆಯಾ ನೀನೆನಲ್ ಕಮಲಜಂ ಕಂಡೆನೆನಲು ||
ನಿರುತಮೋ ಸಾಕ್ಷಿಯಾರೆನಲು ಕೇತಕಿರಾಜ |
ನರವಿಂದನಾಭ ಬೊಮ್ಮಂ ಕಂಡನೆನೆ ತಿಳಿದು |
ಹರನ ಮಸ್ತಕಕೆ ಸಲ್ಲದೆ ಪೋಗು ದೋಷಿ ನೀನೆನುತೆ ಹರಿ ಶಾಪಿಸಿದನು || ೪೮ ||

ಶಾಪಮಂ ತಳೆದು ಕೇತಕಿರಾಜನತುಳಸಂ |
ತಾಪದಿಂ ಪೋಗಲಾ ಲಿಂಗಮೇ ಭೀಕರದ |
ರೂಪಮಂ ತೋರಲೆರ್ದೆ ಜರ್ಜರಿತಮಾಗಲಜಹರಿಗಳತಿಭೀತಿಯಿಂದೆ ||
ಈ ಪರಿಯ ನಿನ್ನ ಭೀಷಣಮೂರ್ತಿಯಂ ನೋಡ |
ಲಾಪೆವೇ ನಾವೆಂದು ಪೊಗಳೆ ದೇವಂ ಸುಭಗ |
ರೂಪಿನಿಂದಿರೆ ಕಂಡು ಕೈಮುಗಿಯುತಾ ಪಾರ್ವತೀಶನಂ ನುತಿಯಿಸಿದರು || ೪೯ ||

ಜಯಜಯ ಗುಣಾಭರಣ ಜಯ ದಿವಿಜನತಚರಣ |
ಜಯಜಯ ಮಹಾಲಿಂಗ ಜಯ ನತಾಂಬುಜಭೃಂಗ |
ಜಯಜಯ ಸದಾಸೋಮ ಜಯ ರಜತಗಿರಿಧಾಮ ಜಯ ಭೀಮ ವಿಧೃತಸೋಮಾ ||
ಜಯಜಯ ವಿಷಗ್ರೀವ ಜಯ ಭಕ್ತಸಂಜೀವ |
ಜಯಜಯ ಕೃಪಾಪಾಂಗ ಜಯ ಗಿರಿಸುತಾರ್ಧಾಂಗ |
ಜಯಜಯ ಚಿದಾನಂದ ಜಯ ಮಹಾಗಣವೃಂದ ಜಯವೆಂದಜಂ ನುತಿಸಿದಂ || ೫೦ ||

ರಾಜಶೇಖರ ದಿವಿಜರಾಜವಂದಿತಪಾದ |
ರಾಜೀವ ವರರಾಜರಾಜಸಖ ಚಂದ್ರದಿನ |
ರಾಜಕೋಟಿಪ್ರಭಾರಾಜಚ್ಛರೀರ ಖಳರಾಜಮದವಿಧ್ವಂಸನಾ ||
ರಾಜೀವಭವಮಕುಟರಾಜತ್ಸುರತ್ನನೀ |
ರಾಜನಚರಣ ಭೋಗಿರಾಜಭೂಷಣ ಶೈಲ |
ರಾಜಾತ್ಮಜಾಸ್ತನಸಿರಾಜಕುಂಕುಮವಕ್ಷ ಸಲಹೆಂದು ಹರಿ ಪೊಗಳ್ದನು || ೫೧ ||

ಉಭಯಪಾರ್ಶ್ವದೊಳಿರ್ದು ಪೊಗಳ್ವ ಸೃಷ್ಟಿಸ್ಥಿತಿಯ |
ವಿಭುಗಳಾ ನಿರಹಂಕೃತಿಸ್ತೋತ್ರತತಿಗಾಗ |
ಳಭವನತಿಕರುಣಮಂ ತಾಳ್ದು ನಿರ್ಮಳಸುಪ್ರಸನ್ನತೆಯೊಳಿವರ ಮುಂದೆ ||
ವಿಭವದಿಂ ಪಂಚವದನದ ದಶಭುಜಂಗಳತಿ |
ಶುಭವಾದ ಪಂಚದಶಲೋಚನದ ಕೆಂಜೆಡೆಯ |
ಸುಭಗರೂಪಂ ತೋರ[೧]ಲಿರ್ವರುಂ ಮಗುಳೆ ಕೊಂಡಾಡಿದರ್ ಭಕ್ತಿಯಿಂದೆ || ೫೨ ||

ಮನದಣಿಯಲಿರ್ವರುಂ ಕೊಂಡಾಡೆ ಶಂಕರಂ |
ದನುಜಾರಿಯಂ ಕರೆದು ನೀಂ ಸಕಲಲೋಕಂಗ |
ಳನುಪಮದ ರಕ್ಷೆಯಂ ಮಾಡುತ್ತೆ ಕಮಲಜನಸತ್ಯದಿಂ ಕರಗಿ ಬಿಟ್ಟ ||
ಘನತರಮೆನಿಪ್ಪ ಧರೆಯಂ ಮುನ್ನಿನಂದದಿಂ |
ದನುಗೊಳಿಸು ಪೋಗೆಂದು ಕಾರುಣ್ಯದಿಂ ಬೆಸಸಿ |
ವನಜಸಂಭವನಂ ಸಮೀಪಕ್ಕೆ ಕರೆದು ಪರಶಿವನಾಗಳಿಂತೆಂದನು || ೫೩ ||

ಸರಸಿಜೋದ್ಭವ ಕೇಳಸತ್ಯಮಂಬಿಟ್ಟು ಸು |
ಸ್ಥಿರಬುದ್ಧಿಯಿಂ ಮುನ್ನಿನಂದದಿಂ ಸೃಷ್ಟಿಯಂ |
ವಿರಚಿಸುವುದೆಂದು ನಿರವಿಸಿ ನಿರಾಕಾರಮಂ ತಳೆಯೆ ಶಿವನಾಜ್ಞೆಯಿಂದೆ ||
ಹರಿ ವರಾಹಾಕೃತಿಯೊಳಿರದೆತ್ತಿ[೨] ಕೂಡೆ ಸೈ |
ತಿರಿಸಿ ಧರೆಯಂ ವಿಧಿಗೆ ಸೃಷ್ಟಿಸಲ್ವೇಳ್ದು ತಾಂ |
ನಿರುತಮಮೃತಾಬ್ಧಿಯುತ್ತರಭಾಗದೊಳ್ ಪೋಗಿ ಪವಡಿಸಿದನಾ ಕ್ಷಣದೊಳು || ೫೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೫ ||

ಅಂತು ಸಂಧಿ ೧೬ ಕ್ಕಂ ಪದಗಳು ೬೫೬ ಕ್ಕಂ ಮಂಗಳಮಹಾಶ್ರೀ

೧ ದೋರ (ಶಿ, ಕ.) ೨ ಳೆತ್ತಿರದೆ (ಗೋ, ಪ.)

ಹದಿನೇಳನೆಯ ಸಂಧಿ

ಸೂಚನೆ

ಪಂಕಜಭವಂ ಶಿವನನೊಲಿಸೆ ತನ್ನಿಟಿಲದಿಂ |
ಶಂಕರಂ ಜನಿಸಲತಿ ರೌದ್ರಮಂ ಕಾಣುತೆ ಭ |
ಯಂಕರದೊಳಜನಭವನಂ ನುತಿಸಲರ್ಧನಾರೀಶ್ವರತ್ವದೊಳೆಸೆದನು ||

ಕಾಲಕಂಧರ ದಿವಿಜಪಾಲ ವಿಧಿಸೌವರ್ಣ |
ಚೇಲವಿನಮಿತಪದ ವಿಶಾಲತರಮಹಿಮ ಶಾ |
ರ್ದೂಲಚರ್ಮಾಂಬರಸುಲೀಲ ನಾನಾಲೋಕಪಾಲವಂದಿತಪದಾಬ್ಜ ||
ಕೈಲಾಸಶಿಖರಿರಾಜಾಲಯಸ್ಥಿತ ಹೈಮ |
ಶೈಲಜಾವರ ಸರ್ಪಜಾಲಭೂಷಣ ಲಸ |
ತ್ಫಾಲಾಕ್ಷ ಲೋಕಮಂ ಪಾಲಿಸೈ ಪಂಪಾವಿರೂಪಾಕ್ಷ ದನುಜಶಿಕ್ಷ || ೧ ||

ವಿರಚಿಸುವೆನಿನ್ನಾಲಿಸೈ ಸಿದ್ಧರಾಮೇಶ |
ಸರಸಿರುಹಸಂಭವಂ ಸೃಷ್ಟಿಯಂ ಮಾಳ್ಪೆನೆಂ |
ದಿರದೆ ಚಿಂತಿಸಿ ಮುನ್ನಮಾಡಿರ್ದಸತ್ಯದಿಂ ಸೃಷ್ಟಿಯಳವಲ್ಲದಿರಲು ||
ಚಿರಕಾಲಮೀಶನಂ ಕುರಿತು ತಪಮಂ ಮಾಡೆ |
ಹರನೊಲಿದು ಬೊಮ್ಮನೆಡೆಗೈತಂದು ಮೆಚ್ಚಿದೆಂ |
ವರಮದೇಂ ಬೇಡೆನಲ್ ಕೊಂಡಾಡಿ ಕೈಮುಗಿದು ಕಮಲಭವನಿಂತೆಂದನು || ೨ ||

ದೇವ ನಿನ್ನಾಜ್ಞೆಯಿಂ ಸೃಷ್ಟಿಯಂ ಮಾಳ್ಪೆನೆಂ |
ದಾವಾವ ತೆರದೊಳಾನುಂ ನೋಡೆ ನಿನ್ನಯ ದ[೧] |
ಯಾವಲಂಬನವಿಲ್ಲದಾಗದೀ ಸೃಷ್ಟಿ ಮುನ್ನಿಂದಧಿಕಮೆನೆ ಮಾಳ್ಪೆನು ||
ನೀನೆನ್ನ ದೇಹದೊಳ್ ಜನಿಸೆಂದು ಕಮಲಜಂ |
ದೇವದೇವನನಜಾತನನಪ್ರಮೇಯನಂ |
ಭಾವಶುದ್ಧಿಯೊಳೆ ಕೊಂಡಾಡಲ್ಕೆ ಶಂಕರಂ ಬ್ರಹ್ಮನೊಡನಿಂತೆಂದನು || ೩ ||

---

೧ ದೊಳಂ ನೋಡೆ ನಿನ್ನಯ ಸಹಾ (ಗೋ.)

ಬೇಡಿದೆ ವರವನಿಂತು ನಿನ್ನೊಡಲೊಳಾನೊಡೆದು |
ಮೂಡಿದಾಗಳೆ ನಿನಗೆ ವಿಲಯ ತಪ್ಪದು ಮರುಳೆ |
ಬೇಡವೀ ವರವೆನಲ್ಕಾದೊಡಾಗಲಿ ಕರುಣಿಸೆನಲಂತೆ ಮಾಳ್ಪೆನಿಂತು ||
ಮಾಡುತಿರ್ ತಪಮಂ ಮನಃಪವನಯೋಗದಿಂ |
ನೋಡು ನಿಶ್ಚಳದೃಷ್ಟಿಯಿಂ ನಿಜಸಮಾಧಿಯೊಳ್ |
ಕೂಡಿರೆಂದಭವನಾಜ್ಞಾಪಿಸಿ ನಿರಾಕಾರಮಂ ತಳೆದನಾಕ್ಷಣದೊಳು || ೪ ||

ಸ್ಫಟಿಕಭಾಂಡದೊಳೆಸೆವ ಜ್ಯೋತಿಯಂದದೊಳಜನ |
ಘಟದೊಳಗೆ ಷಟ್ಚಕ್ರಮಂ ಭೇದಿಸುತ್ತಜನ |
ನಿಟಿಲಮಧ್ಯದೊಳೊಡೆದು ಮೂಡಿದನುಮಾಶಕ್ತಿಸಹಿತಂ ಮಹೇಶನಂದು |
ಪಟುತರದ ಶತಕೋಟಿಬಾಲರವಿತೇಜಮು |
ತ್ಕಟತಿಮಿರದೊಡನೆ ಬೆರಸಿದುದೊ ಪೇಳೆಂದೆನಲ್ |
ಚಟುಲಸ್ವರೂಪನೊಪ್ಪಿದನಜನ ತನುವೆರಳ್ಸೀಳಾಗೆ ತತ್ಕ್ಷಣದೊಳು || ೫ ||

ಇಂತಜನ ತನುವೆರಳ್ಸೀಳಾಗಿ ಬಿದ್ದ ಸಮ |
ನಂತರದೊಳತಿರೌದ್ರದಿಂ ರುದ್ರಮೂರ್ತಿಯಂ |
ತಾಂ ತಳೆದನಾ ಮಹೇಶಂ ಕಮಲಸಂಭವನ ಚಿತ್ತದಜ್ಞಾನದಿಂದೆ ||
ತಾಂ ತವೆ ಮಹಾಕಾಳಿಯಾದಳುಮೆಯಿವರಿರ್ವ |
ರೆಂತಿರ್ದರೆನೆ ಬಾಲಚಂಡಾಂಶು ಮಂಡಲೋ |
ಪಾಂತದೊಳ್ ರಂಜಿಸುವ ನೀಲಮೇಘದ ತೆರದೆ ದಂಪತಿಗಳೆಸೆದಿರ್ದರು || ೬ ||

ಬಳಿಕ ರುದ್ರಂ ಮಹಾಕಾಳಿಯೊಳ್ ಸಂತಸದೊ |
ಳೊಲಿದು ಕ್ರೀಡಿಸುತೆ ನಾನಾವಿಲಾಸಂಗಳಿಂ |
ಕೆಲವು ಕಾಲಂಗಳಂ ಕಳೆವುತಿರೆ ನೀಲಲೋಹಿತಮುಖ್ಯರುದ್ರಗಣವು ||
ಬಲವಿಕರಣಿಯರುಂ ಬಲಪ್ರಮಥಿನಿಯರೆಂಬ |
ಪಲತೆರದ ಶಕ್ತಿದೇವಿಯರಾದರಿವರನಂ |
ದೊಲಿದು ದಂಪತಿಗಳಂ ಮಾಡಿಯಾ ರುದ್ರಗಣದೊಡನೆ ಸುಖಮಿರುತಿರ್ದರು
|| ೭ ||

ಕರುಣದಿಂದಂ ಮಹಾರುದ್ರನಾ ಕಮಲಜನ |
ಬಿರಿದ ಸೀಳೆರಡನೊಂದಿಸೆ ಮಲಗಿದವರೆಲ್ಲ |
ಸರಿಯೊಳೆಚ್ಚತ್ತುಭಯಮೂರ್ತಿಗಳ ರೌದ್ರಸ್ವರೂಪನೀಕ್ಷಿಸಿ ಭಯದೊಳು ||
ಕರದರಾ ನಿಮ್ಮುಭಯಮೂರ್ತಿಗಳ ರೌದ್ರದೊಂ |
ವಿರಿಂಚಿಗೀಗೆನ್ನ ಹೃದಯಂ ನಡುಗುತಿದೆ ದೇವ |
ಕರುಣಿಸುವುದೇಕರೂಪಿಂದೆನಲ್ಕರ್ಧನಾರೀಶ್ವರಂ ತಾನಾದನು ॥ ೮ ॥

ನೀಲ ಮಾಣಿಕ್ಯವೆರಡೊಂದಾದ ಮೂರ್ತಿ ಸ |
ಲ್ಲೀಲೆಯಿಂ ಮುಡಿಯುಮಂ ಜಡೆಯುಮಂ ನವರತ್ನ |
ಮೋಲೆಯಂ ಕುಂಡಲಮನೆಸೆವ ಕಂಠಾಭರಣಮಂ ಪೊಳೆವ ತಲೆನಾಲೆಯು ||
ನೀಲೋತ್ಪಲವನತುಳಶೂಲಮಂ ಚಾರುಮಣಿ |
ಜಾಲಮಂ ಪನ್ನಗಾಭರಣಮಂ ನೂತನದು |
ಕೂಲಮಂ ಚರ್ಮಾಂಬರವನಾಂತುದೆಸಲರ್ಧನಾರೀಶ್ವರಂ ಮೆರೆದನು ॥ ೯ ॥

ಇಂತರ್ಧನಾರೀಶ್ವರಾಕಾರಲೀಲೆಯಿಂ |
ಸಂತಸದೊಳಾ ಮಹಾರುದ್ರನಿರುತಿರೆ ಕಂಡು |
ಮುಂತೆ ಕಮಲಾಸನಂ ಮೆಯ್ಯಿಕ್ಕಿ ಕೈಮುಗಿದು ಭಯಭರಿತಭಕ್ತಿಯಿಂದೆ ||
ಅಂತರಹಿತನನದ್ವಿತೀಯನನಜಾತನನ |
ಸಂತಮಹಿಮನನಪ್ರಮೇಯನಂ |
ಸಂತೋಷದಿಂದೆ ಕೊಂಡಾಡಿ ನಾಂ ಸೃಷ್ಟಿಯನದೆಂತು ಮಾಡುವೆನೆಂದನು ॥ ೧೦ ॥

ಕೇಳಾಮೊದಲೆ ಚತುರ್ಮುಖ ಜಗತ್ಸೃಷ್ಟಿಯಂ |
ನೀಲಲೋಹಿತಮುಖ್ಯರಾಗಿರ್ದ ರುದ್ರಗಣ |
ಜಾಲಸಹಿತಂ ಮಾಡು ನೀನೆನಲ್ಕವರ ರೌದ್ರಸ್ವರೂಪಂ ಕಾಣುತೆ ||
ತಾಳಿ ಬಹು ಭೀತಿಯಂ ಸಾಕಿವರನೊಲ್ಲೆನೆನೆ |
ಭಾಳಾಂಬಕಂ ನಕ್ಕು ನೀಂ ಮುನ್ನಿನಂದದಿಂ |
ಮೇಳಗೆಯ ಸೃಷ್ಟಿಯಂ ಮಾಡೆಂದು ಕರುಣದಿಂ ವರವಿತ್ತು ಬಯಲಾದನು ॥ ೧೧ ॥

೧-೧ ವಿಗೆನ್ನ ಹೃದಯಂ ನಡುಗುತಿದೆ ದೇವ ನೀಂ | (ಗೋ, ಪ.)

ಇಂತೆಂದು ಶಂಕರಂ ವರವಿತ್ತು ಪೋದ ಸಮು |
ನಂತರದೊಳಜನಾ ಮಹೇಶನಾಜ್ಞೆಯನಾಂತು |
ಪಿಂತೆ ಲೋಕದ ಸೃಷ್ಟಿಯೆಂತಾದುದಾ ತೆರೆದೊಳುಂ ತಾನೆ ನಿರ್ಮಿಸಿದನು ||
ಮುಂತೆ ನಾನಾದೇವಸಂತತಿಗಳುಂ ಸಹಿತ |
ಸಂತೋಷದಿಂ ಸತ್ಯಲೋಕದರಮನೆಯೊಳಗ |
ನಂತವೈಭವದಿಂದಲೊಡ್ಡೋಲಗಂಗೊಟ್ಟು ಮೆರೆದಿರ್ದನುತ್ಸವದೊಳು || ೧೨ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೧೩ ||

ಅಂತು ಸಂಧಿ ೧೭ ಕ್ಕಂ ಪದಗಳು ೬೭೯ ಕ್ಕಂ ಮಂಗಳಮಹಾಶ್ರೀ

ಹದಿನೆಂಟನೆಯ ಸಂಧಿ

ಸೂಚನೆ

ಸರಸಿಜೋದ್ಭವನಿರವಹಂಕರಿಸಿ ನಿಂದಿಸಲ್[೧] |
ಪರಶಿವಂ ಕೇಳ್ದು ಭೈರವರೂಪದಿಂದವನ |
ಶಿರವನರಿದುದುಲೀಲೆಯಿಂ ಚೆನ್ನಬಸವನಾ ಸಿದ್ಧರಾಮಂಗೊರೆದನು ||

ಪೊಂಬಣ್ಣದಿಹ ಜಡೆಯ ಬಂಬಲೊಳ್ ಥಳಥಳಸು |
ವಂಬರಾಪಗೆಯ ವಿಮಲಾಂಬುವೊಳ್ ನೋಡೆ ಪ್ರತಿ |
ಬಿಂಬಿಸುವ ಚೆಲ್ವುವಡೆದಂಬುಜಾರಿಯ ಕಲೆಯು ತುಂಬಿ ನವಕಂಧರದೊಳು ||
ಲಂಬಿಸುವ ಭೂಷಣಕದಂಬದ ತರಕ್ಷುಚ |
ರ್ಮಾಂಬರದ ಕಮಲಜಶಿರಂಬಿಡಿದ ಕರದ ಲೋ |
ಕಾಂಬಿಕಾನಾಥ ಪಂಪಾವಿರೂಪಾಕ್ಷದೇವಂ ಬಿಡದೆ ಸಲಹೆಮ್ಮನು || ೧ ||

ಆಲಿಸಿನ್ನೆಲೆ ಸಿದ್ಧರಾಮ ಪಂಕಜಗರ್ಭ |
ನೋಲಗದೊಳೊಪ್ಪುತಿರೆ ನೆರೆದಿರ್ದ ಮುಖ್ಯಮುನಿ |
ಜಾಲಮೊಡನೆದ್ದು ಕೈಮುಗಿದು ಭಯಭಕ್ತಿಯಿಂ ಕೊಂಡಾಡಿ ಕಮಲಜನನು ||
ಕೇಳೆಲೆ ವಿಧಾತ ನಿತ್ಯನದಾವವಂ ಜಗಕೆ |
ಲೀಲೆಯಿಂದಾರಾರನರ್ಚಿಪೆವು ನಿಶ್ಚಯಂ |
ಪೇಳೆಮೆಂದೆನಲಟ್ಟಹಾಸದಿಂದವರ್ಗೆ ಸರಸಿಜಜಾತನಿಂತೆಂದನು || ೨ ||

ಈ ಸಕಲಜಗದ ಸೃಷ್ಟಿ ಸ್ಥಿತಿ ಪ್ರಳಯಂಗ |
ಳೈಸು ನನ್ನಾಧೀನವೀಭಾರಮಂ ಪೊತ್ತು |
ಪೋಷಿಸುವವನಾನಲ್ಲದಾರುಂಟು ತಿಳಿಯಲಿಂ ಸಚರಾಚರಕೆ ಪೂಜ್ಯರು ||
ವಾಸವ ಮುಕುಂದ ರುದ್ರರ್ ಮುಖ್ಯಸುರರೆನ್ನ |
ನೇ ಸದಾ ತತ್ತ್ವಮಾಲಮಧ್ಯದೊಳ್ ರಾಜಿಸುವ |
ನಾ ಸುರಜ್ಯೇಷ್ಠನಾನೇ ಪರಬ್ರಹ್ಮವೆನ್ನಿಂದಧಿಕವಿಲ್ಲೆಂದನು || ೩ ||

---

೧ ನಿಂದಿರಲ್ (ಸ.) ೨ ನಿಚ್ಚಂ (ಮ.)

ಇಂತೆಂದು ವಿಧಿಯವರೊಳಾಡುತಿರಲಿತ್ತಲಾ |
ಕಂತುಪಿತನರಿದೀತನಜ್ಞಾನಮಂ ತಿಳಿದು |
ಸಂತತಂ ಸುಜ್ಞಾನಿಯಪ್ಪಂತೆ ಮಾಳ್ಪೆನೆಂದೈತಂದು ಮುಂದೆ ನಿಂದು ||
ಇಂತಿದೇನೈ ಬ್ರಹ್ಮ ನೀಂ ಮೀರಿದಪ್ಪೊಡೆ |
ಸಂತವಿಡುವವರಾರಿದೇಕೆ ಮರುಳಾದೆ ಕಾ |
ಮಾಂತಕನ ಮಾಯೆಯಿಂದು ನೀನರಿಯದಪನೆ ಕೇಳೆನುತೆ ಮತ್ತಿಂತೆಂದನು || ೪ ||

ನೀನೇ ಜಗತ್ಸೃಷ್ಟಿಕರ್ತೃ[1] ರಕ್ಷಿಸುವಾತ |
ನಾನೆನಗೆ ನಿನಗೆ ನಾಥಂ ಶಂಭು ಕೇಳಾತ |
ನೇ ನಿತ್ಯನಾತನೇ ಪರದೈವವಾತನೇ ಸಕಲಜೀವಾಧಾರನು ||
ನಾನುಂ ಕಮಲಗರ್ಭ ನೀನಾದಿಯಾದವ |
ರ್ಗೇನೈ ಸ್ವತಂತ್ರವಾತನ ಸೂತ್ರದವರಾವು |
ನೀನಿಂತು ಗರ್ವಿಪರೆ ನಂಬದೊಡೆ ಸಕಲವೇದಂಗಳಂ ಕೇಳೆಂದನು || ೫ ||

ಸಾಮಂ ಯಜುಸ್ಸಥರ್ವಣ ಮಹಾಋಗ್ಮುಖ್ಯ |
ನಾಮವೇದಂಗಳಾಕಾರಮಂ ತಳೆದಿಂ ಪಿ |
ತಾಮಹನ ಸಭೆಗೆ ಬಂದೆಲೆ ಪಾಪಿಯತ್ಯತಿಷ್ಠದ್ದಶಾಂಗುಲನೆನಿಪ್ಪ ||
ಆ ಮಹೇಶ್ವರನದ್ವಿತೀಯನಾತನೆಯಭವ |
ನಾ ಮಹಿಮನೇ ಸಕಲಲೋಕಕಾಧಾರನಿಂ |
ತೀ ಮರುಳ್ತನವೇಕೆನಲ್ಕೆ ನಿಜರೂಪಿನಿಂ ಸತ್ಪ್ರಣವಮಿಂತೆಂದುದು || ೬ ||

ಅಜನನವ್ಯಯನನಗುಣನನಪ್ರಮೇಯನಂ |
ತ್ರಿಜಗವಂದಿತನನನುಪಮನನಮಲಾಂಗನಂ |
ಗಜದಾನವಪ್ರಮರ್ದನನಂ ಮಹೇಶನಂ ಸಾಕ್ಷಾತ್ಪರಬ್ರಹ್ಮವ ||
ಅಜ ಸಾಕು ನಿಂದಿಸಿಯಹಂ ದೇವನೆಂದೆಂಬ |
ಗಜಬಜಂ ಪಿಂತೊರ್ವನಂ ತನ್ನ ತಾಯ್ ಬಂಜೆ |
ನಿಜವೆಂಬ ಗಾದೆಗೀಡಾದೆ[2] ನಿನ್ನಿಂ ಮರುಳರಾರೆಂದು ಬಯಲಾದುದು || ೭ ||

೧ ಕರ್ತು (ಕ.) ; ಕರ್ತ (ಮ.) ೨ ನೀಂ ಮರುಳಾಪರೇಯಂ (ಶಿ.)

ಇಂತು ನಿಗಮೋಂಕಾರವಾಕ್ಯಂಗಳಂ ಕೇಳ್ದು |
ಕಂತುಪಿತನಾಸ್ಯಮಂ ನೋಡಿ ಬರಿನುಡಿಯ ಬೊ |
ಮ್ಮಂ ತವೆ ಪೊಗಳ್ದುದಾ ಸತಿಗರ್ಭದೋಹಮಂ ಕೊಟ್ಟಾತನಂ ಸಭೆಯೊಳು ||
ದಂತಿಚರ್ಮವನುಟ್ಟರುಚಿಯಂ ಸ್ಮಶಾನದೊಳು |
ಭ್ರಾಂತಿಯಿಂದಿರ್ಪಶುಭಮೂರ್ತಿಯಂ ಕೇಳ್ದವರ |
ದೆಂತು ನಂಬುವರೊ ತಿರುಕನ ಮಾತನೆಂದಜಂ ಜರೆಯುತಿರಲಾ ಕ್ಷಣದೊಳು || ೮ ||

ಪುದಿದ ಘೋರಾಂಧಕಾರಮನೆ ಕಿಡಿಸುವೆನೆನು |
ತ್ತುದಯಿಸುವ ಮಾರ್ತಾಂಡಮಂಡಲಮೊ ಸಲೆ ಹೃದಯ |
ಸದನದಜ್ಞಾನಮಂ ಪೊರಮಡಿಸಿ ನೆಲೆಗೊಂಬ ಸುಜ್ಞಾನಮೆಂಬಂತಿರೆ ||
ಮುದದಿಂದೆ ಮುಂಗಾಣದಜನಿದಿರೊಳುಂ ಪಂಚ |
ವದನ ದಶಭುಜ ಪಂಚದಶಲೋಚನಂಗಳಿಂ |
ಪೊದೆದ ಪುಲಿದೊವಲ ಕೆಂಜೆಡೆಯ ಮಂಜುಳಕಾಯನಾಕ್ಷಣಂ ಮೂಡಿರ್ದನು
|| ೯ ||

ಮುಂದೆ ಪ್ರತ್ಯಕ್ಷಮಾಗಿರುತಿರ್ದ ಸಾಕ್ಷಾತ್ಪು |
ರಂದರಪ್ರಮುಖಬೃಂದಾರಕಾವನತನಂ |
ಮಂದಮತಿ ಕಮಲಜಂ ನೋಡಿ ಹಾಸ್ಯೋಕ್ತಿಯಿಂದೀತನೇ ಜಗದೊಡೆಯನು ||
ನೊಂದಪುದು ಪೊಡೆ ನಗೆಗೆ ಇವನ ಬಹುರ್ರೂಪು ಕ |
ಣ್ಗಂದವಾಗಿದೆ ನೋಡಿ ನೀವೆಲ್ಲರುಂ ಕಾಣೆ |
ನೆಂದವಸ್ನಬೇಡೆನುತೆ ಕೆಲದವರ ಕೈವೊಯ್ದು ನಕ್ಕು ಮತ್ತಿಂತೆಂದನು || ೧೦ ||

ತಿರುಕುಳಿಗೆ ಮಾನವೆತ್ತಣದು ತೆಗೆ ತಲೆಮಾಲೆ |
ಗೊರಲಿಂಗೆ ಮಹಿಮೆಯೆಲ್ಲಿಯದು ಸಲೆ ಸರ್ಪನಾ |
ಭರಣಂಗೆ ಚಿರಮೆಂತು ಸುಡುಗಾಡೊಳಿರ್ಪಂಗೆ ಶುಭಮಾವುದೀ ಮರುಳಗೆ ||
ನಿರುತಮಿದಾ ಪಂಚವದನದ ಪೆಸರ್ಬೈಸೆ ತಾಂ |
ಧರಿಸುವೆಂ ಪಂಚವದನವನೆಂದು ಮೇಣೊಂದು |
ಶಿರವನಬುಜಾಸನಂ ಸೃಜಿಸಿ ತಚ್ಛಿರದೊಳೀ ಶಂಭುವಂ ನಿಂದಿಸಿದನು || ೧೧ ||

೧ ಬದಿ (ಗೋ., ಪ.)

ನೀನೆಂತೆ ಸಕಲಜಗದಾಧಾರ ನೀಂ ಮುಖ್ಯ |
ನಾನಾಸುರಾವಳಿಗೆ ನೀಂ ಕರ್ತೃ ಗಡ ನಿನ್ನ |
ಸೇ ನುತಿಪರೆಂತೆ ದೇವ[1]ವ್ರಾತಮಾವಗಂ ನೀಂ ಪರಬ್ರಹ್ಮವೆಂತೆ ||
ನೀನೆಲ್ಲ ಜನಿಸಿದೆಯದಾರ್ ತಂದೆತಾಯ್ಗಳ್ ನಿ |
ಧಾನವೆಮ್ಮೊಡನುಸುರಿಮೆಂದಜಂ ನುಡಿದ ನಿಂ |
ದಾನಗುತಮೇ ಸ್ತೋತ್ರಮಾಯ್ತು ಸರ್ವೇಶ್ವರನ ಮಹಿಮೆಯೆಂತೋ ಜಗದೊಳು
|| ೧೨ ||

ಮತ್ತೆ ಕಮಲಜನಭವನಂ ಜರೆದು ನೀನಿಂತು |
ಪ್ರೋತ್ತ ಚೋಹಂಗಳಂ ಬಿಟ್ಟಿನ್ನ ಪೊರ್ದೆ ನಿನ |
ಗುತ್ತಮುಪದಂಗಳಂ ಕೊಟ್ಟಪೆಂ ಬದುಕಲ್ಲದೊಡೆ ನಿನ್ನ ಸದೆದಸುವನು ||
ನೆತ್ತಿಯೊಳ್ ತೆಗೆದಪೆಂ ನೋಡೆಂದು ಘುಡಿಘುಡಿಸು |
ತೆತ್ತಲುಂ ನೆರೆದ ದೇವವ್ರಜಂ ಬೆದರೆ ಪಳಿ |
ವೃತ್ತಿರ್ದನಂಬುಜಾಸನನಾಕ್ಷಣದೊಳೊಂದು ಕೌತುಕವನೇನೆಂಬೆಸು || ೧೩ ||

ಪಲಬಗೆಯ ಕರದಾಯುಧಂಗಳಿಂ ಕಂಗಳಿಂ |
ಥಳಥಳಿಪ ಚಾರುಮುಖದೋಳಿಯಿಂ ಪಾಳಿಯಿಂ |
ದೊಲೆದೊಲೆದು ಪೊಳೆವ ಫಣಿಹಾರದಿಂ ಕ್ರೂರದಿಂದದ್ಭುತಾಕಾರವಾಗಿ ||
ಜಲಜಭವನೋಲಗದವರ್ ಚೆದುರೆ ವಿಧಿ ಬೆದರೆ |
ಜಲಜಲನೆ ಬೆಮರುತಿರಲುಗುರಿಂದೆ ಹೊಗರಿಂದೆ |
ಹೊಳೆವ ಬೊಮ್ಮನ ನೂತನಾಸ್ಯಮಂ ಹಾಸ್ಯಮಂ ಮಾಡೆನುತೆ ಹರನುಡಿದನು
|| ೧೪ ||

ಘೋರತರಭೈರವಾಕಾರದಿಂ ಹರನೆಡದ |
ಕೂರುಗುರುನಿಂದಜನ ಶಿರವರಿಯೆ ನವರಕ್ತ |
ಧಾರಾಪ್ರವಾಹದಿಂ ಸಕಲಲೋಕಂಗಳಿರದಾ ಕ್ಷಣಂ ಮುಳುಗುತಿರಲು ||
ಓರಂತೆ ಹರನೊಲಿದು ತನ್ನ ಭಾಳಾಕ್ಷಿಯಿಂ[2] |
ತೋರಕಿಡಿಯಂ ಬಿಡಲ್ಕಾ ಕ್ಷಣಂ ರುಧಿರಮಂ |
ಹೀರಿ ಮುರಿದಜನ ಶಿರಮಂ ಪೊಳ್ದುದಭವನ ಮಹಾತ್ಮೆಯಂ ಪೊಗಳಲಳವೇ || ೧೫ ||

---

೧ ವೇದ (ಕ, ಸಿ.) ೨ ಬಾಳಾಕ್ಷದಿಂ (ಶಿ, ಗೋ, ಪ.)

ಕಂಡನಾ ಸಮಯದೊಳ್ ಕಮಲಜಂ ಹರಕರದೆ |
ಖಂಡಿಸಿದ ತನ್ನುತ್ತಮಾಂಗಮಂ ರುಧಿರಜಲ |
ಮುಂಡು ಪೊಳೆಸಿದ ನಯನಾಗ್ನಿಯಂ ಪೊಗಳುತಿಹ ಸಕಲವೃಂದಾರಕರನು ||
ಕೊಂಡಾಡುವಖಿಳವೇದಂಗಳಂ ನುತಿಯಿಸುವ |
ಪುಂಡರೀಕಾಕ್ಷನಂ ಶಿವಶಿವಾ ತಿಳಿಯದು |
ದ್ದಂಡದೈವದ ಕೂಡೆ ಸೆಣಸಿದೆಂ ತಾನೆನುತೆ ಮಂಡೆಯೊಳ್ ಕೈಯ್ಯಿಟ್ಟನು || ೧೬ ||

ಹರನೊಡನೆ ಸೆಣಸಾಟವೆಂತುಟೋ ನುತವಿಶ್ವ |
ಭರಿತನೊಳಹಂಕಾರವೆತ್ತಣದೊ ಲೋಕಸಂ |
ಹರನೊಡನೆ ನಿಂದಿಸುವುದೇನೋ ಮಹಾಮಹಿಮನಿದಿರೊಳುಚ್ಚಾಸನದೊಳು ||
ಇರವೆಂತೊ ಕಂಡು ಕಂಡುಂ ಕೇಳಿ ಕೇಳಿಯಾಂ |
ಮರುಳಾದೆನೈಸೆ ತವ ಮಹಿಮೆಯುಂ ಸಾಕುಳಿದ |
ಸಿರಿವರಂ ಸವರು ಶೈವದ್ರೋಹಿಯಾನೆಂದು ವಿಧಿಯೆರಗಿದಂ ಪದದೊಳು || ೧೭ ||

ಕಂಬನಿಗಳಭಿಷೇಕವಾರಿಕಣ[1] ಮಕುಟಾವ |
ಲಂಬಮಣಿ ಪುಷ್ಪಸಂದೋಹಮಾನುತಿ ಮಂತ್ರ |
ಮಿಂಬಾದ ನಯನಂಗಳೇ ದೀಪಸಂಕುಲಂ ತಾವಾಗೆ ಭಕ್ತಿಯಿಂದೆ ||
ಅಂಬುಜಭವಂ ಶಂಭುಪೂಜಾನಿರತನಾದ |
ನೆಂಬಂತೆಪೋಲೊಪ್ಪು[2]ತಿರೆ ಸಕಲಸುಮನಃಕ |
ದಂಬಕಂ ಜಯಜಯ ತ್ರಾಹಿ ಮೃತ್ಯುಂಜಯ ತ್ರಾಹಿಯೆಂದೆನುತಿರ್ದುದು || ೧೮ ||

ಕೊಂಡಾಡುವಖಿಳದೇವವ್ರಜವನಾ ಕ್ಷಣಂ |
ಖಂಡಪರಶು ಕೃಪಾಬ್ಧಿಯೊಳ್ ಮುಳುಂಗಿಸಿ ಪಾದ |
ಪುಂಡರೀಕಕ್ಕೆ ನತನಾದ ವಾಣೀವರನನೊಲವಿನಿಂ ನೆಗಹಿ ಬಳಿಕೆ ||
ಮಂಡೆಯೊಳ್ ಕೈಯಿಟ್ಟು ಬೆದರಬೇಡೆಂದು ಮುಖ |
ಮಂಡಲದೊಳೊಗೆವ ನಸುನಗೆಯಿಂದೆ ಮಾಸತಿಯು[3] |
ಗಂಡನಂ ನೋಡಿ ಕರುಣಾರಸದ ವೃಷ್ಟಿಯಂ ಕರೆದವರ ಬೀಳ್ಕೊಟ್ಟನು || ೧೯ ||

೧ ವಾಕ್ಷಣಂ (ಶಿ.) ೨ ತಾನೊಪ್ಪು (ಕ.) ೩ ರಮೆಯ.

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೦ ||

ಅಂತು ಸಂಧಿ ೧೮ ಕ್ಕಂ ಪದಗಳು ೭೮೯ ಕ್ಕಂ ಮಂಗಳಮಹಾಶ್ರೀ

ಹತ್ತೊಂಬತ್ತನೆಯ ಸಂಧಿ

ಸೂಚನೆ

ಬೊಮ್ಮನ ಕಪಾಲವಂ ಪಿಡಿದು ಭಿಕ್ಷಕೆ ನಡೆದು |
ಹಮ್ಮೈಸಿಂ ಹರಿಯ ಭಕ್ತಿಯ ನೋಡಿ ಕೃಪೆಮಾಡಿ |
ದಂ ಮಹೇಶ್ವರನಿರದೆ ಸುರಪುರಕೆ ಬಂದು ಸುರಸತಿಯರಂ ರಕ್ಷಿಸಿದನು ||

ಹಸ್ತಧೃತವಾಗೀಶಮಸ್ತಕ ಗಿರೀಂದ್ರತನು |
ಜಾಸ್ತನವಿಲಿಪ್ತನವಕಸ್ತೂರಿಕಾವಕ್ಷ |
ಸುಸ್ತವಪ್ರಿಯತರಸಮಸ್ತದಿವಿಜಾವಳಿಸುವಿಸ್ತರಿತಕೀರ್ತಿಭೂಪ ||
ನ್ಯಸ್ತಾಸ್ಥಿಮಾಲಾಪ್ರಶಸ್ತ ಹಿಮಕರಖರಗ |
ಭಸ್ತಿಕೋಟಿಪ್ರಭಾವಿಸ್ತೀರ್ಣ ಪಂಪಾಪು |
ರಸ್ತ್ರರಣ್ ಶರಣಜನ ಭಕ್ತಿಯ ವಿರೂಪಾಕ್ಷ ಸುಸ್ಥಿರದೊಳೆಮಗೀವುದು[1] || ೧ ||

ಆದರದೊಳಿನ್ನಾಲಿಸೈ ರಾಮ ವಿಧಿಶಿರ |
ಶ್ಛೇದಲೀಲೆಯೊಳಾ ಕಪಾಲಹಸ್ತಂ ಮಹ |
ತ್ತಾದ ಭೈರವರೂಪನುಳಿದಾಗ ವಿಷ್ಣುಮೊದಲಾದವರ ಭಕ್ತಿಗಳನು ||
ಭೇದಿಸುವೆನೀ ಶಿರಕೆ ತುಷ್ಟಿಬಡಿಪುದರೊಳೆಂ |
ದಾದಿರಹಿತಂ ಶಿವಂ ಭಿಕ್ಷಾಟನದ ನೆವದೊ |
ಳಾ ದಿವ್ಯರೂಪದೊಳ್ ಪೊರಮಟ್ಟನಖಿಳಶ್ರುತಿಗಣವೈದೆ ಕೊಂಡಾಡಲು || ೨ ||

ಕೋಟಿಶಶಿಕಳೆಗಳಂ ಜರೆವ ನಗೆಮೊಗದ ರವಿ |
ಕೋಟಿತೇಜಂಗಳಂ ಪಳಿವ ತನುರುಚಿಯ ಶತ |
ಕೋಟಿಮನ್ಮಥ ಮಧು ಜಯಂತ ನಳ ಕೂಬರರ ಸೌಂದರ್ಯಮಂ ಮೀರುವ ||
ಕೋಟಿಲಾವಣ್ಯಮಂ ಬಣ್ಣಿಪೊಡೆ ಕೋಟಾನು |
ಕೋಟಿಶೇಷರ ಬಗೆಗಸಾಧ್ಯವೆಂದೆನೆ ಜಟಾ |
ಕೋಟೀರಭಾರನಾ ಹರಿಯ ಭಕ್ತಿಯ ನೋಳ್ಪೆನೆಂದಾಗ ನಡೆಗೊಂಡನು || ೩ ||

೧.೧ ಗೋಭಕ್ತಿವಸ್ತುವ ವಿರೂಪಾಕ್ಷ ಸುಸ್ಥಿರದಿ ಸಲಹೆಮ್ಮನು (ಪ, ಗೋ.) ; ಶರಣಜನಭಾಕ್
ಸ್ತವ ವಿರೂಪಾಕ್ಷ ಸುಸ್ಥಿರದ ಶುಭವಪ್ಪುದು (ಹು.)

ಪೊಳೆವ ಕೆಂಜೆಡೆಯ ಭಸಿತತ್ರಿರೇಖೆಯ ಸೊಸಲ |
ಲಲಿತಭ್ರೂಲತೆಯ ಥಳಥಳಿಪ ಕಂಗಳ ಚೆಲ್ವ |
ವಳೆದ ನಾಸಿಕದ ಸುಲಿಪಲ್ಲ ಬಾಯ್ದೆರೆಯ ಚುಬುಕದ ಕರ್ಣಯುಗಳಂಗಳ ||
ತೊಳಪ ಮಣಿಕುಂಡಲದ ನುತಕಪೋಲಂಗಳೊಳ |
ಗಿಳಿವ ಶೃಂಗಾರರಸಮೆಂಬಂತೆಯಡಿಗಡಿಗೆ |
ಮೊಳೆವ ಕಿರುಬೆಮರ ವದನಂ ವಿಜಿತಮದನನಾ ಮೋಹಸದನಂ ನಡೆದನು || ೪ ||

ಕಾಯಜದಹನಭಸಿತವಗಣಿತರವಿಪ್ರಭಾ |
ಕಾಯ[೧]ದೊಳ್ ತೊಳಗೆ[೧] ತ್ರಿಸೂಳಂ ಬಲದ ಕರಕಮಲ |
ಕಾಯತಸುದಾಗಿ ರಂಜಿಸೆ ವಾಮಕರಕಮರ್ದ ವಿಧಿಕಪಾಲಂ ಮೆರೆಯಲು ||
ಪ್ರಾಯಮೆರಡೆಣ್ಬರಿಸಮಳವಡಲ್ ತನ್ನಭಿ |
ಪ್ರಾಯಮಾರ್ಗೆಯುಮಿಂಬುಗೊಡದಿರಲ್ ನಡೆದನ |
ಪ್ರಾಯಾಸಯುತ್ಕದಿಂದಂಗಜಂ ಬಿಲ್ವಿಡಿದು ಸತಿಯುರಂ ಜಯಿಸೆ ನಡೆಯೆ || ೫ ||

ಸಿಂಗರದ ಕರುವೊ ಮುಕ್ತಿಯ ಗುರುವೊ ಮೋಹರಸ |
ದಿಂಗಡಲೊ ಸುಕೃತದೊಡಲೋ ಸೌಖ್ಯಲತೆಯ ಪೊಸ |
ಮುಂಗುಡಿಯೊ ಮೋಕ್ಷದೆಡೆಯೋ ಸೊಗಸುವೀಡೊ ಪ್ರಣವದಜೋಡೊ ಸಲೆ ಭಾವಿಸೆ
ಮಂಗಳಾಕಾರಮೋ ಶಿವತತ್ತ್ವಸಾರಮೊ ಅ |
ನಂಗರಾಜ್ಯದ ಬೆಳೆಯೊ ಭಕ್ತಿಕಳೆಯೋಯೆಂದು |
ಪಿಂಗದಲೆ ಕಾಮಯೋನಿ[೨]ಗಳೀಕ್ಷಿಸಲ್ ಮೋಹಬೊಮ್ಮಸಡಿಯಿಟ್ಟನಂದು || ೬ ||

ಇಂತಪ್ಪ ಸಿಂಗರಮನಾಂತು ನಡೆತಂದುಮಾ |
ಕಾಂತನಾ ಮಾಕಾಂತಭಕ್ತಿಯಂ ಕಾಣ್ಬಧಿಕ |
ಸಂತಸದೊಳಮಳವೈಕುಂಠಪುರಕಾಗಿ ನಡೆತಂದು ಪೊರಪೊಳಲ ಸಿರಿಯಾ ||
ಅಂತಂತು[೩] ನೋಡಿ ಮಚ್ಚುತ್ತೊಡನೆ ಬಾಗಿಲಗ |
ಳಂತರಂಗಳೆದು ನಡೆತರುತಿರಲ್ಕಾ ಪುರದ |
ಕಾಂತಾಜನಂ ಕಂಡು ಕೇಳ್ದೊಡನೆ ಸೋಲ್ತು ಬೆಂಬಿಡದೆ ಬೀದಿಯೊಳ್ಕೈದಿತು || ೭ ||

೧-೧ ಮೋಳಗಸೆಯೆ (ಪ, ಗೋ.) ೨ ಕಾಮಯೋಗಿ (ಗೋ, ತು.) ೩ ಅಂತಂತು (ಗೋ.)

ಮುಡಿಯಮಂ ಸೈತಿಡುವ[1] ಪೂಗಳಂ ಮುಡಿವ ಚೆ |
ಲ್ವಿಡಿದ ಮಣಿಭೂಷಣಂದೊಡುವ ಸೀರೆಯನುಡುವ |
ತೊಡೆವ[2] ಸಿರಿಖಂಡ ಮಜ್ಜನಭೋಜನಾದಿ ಕ್ರಿಯೆಗಳನುಳಿದು ತಮ್ಮಿನಿಯರ ||
ತೊಡರ್ದ ತೆಕ್ಕೆಯನೊದ್ದು ನೂಂಕುತೇಳುತೆ ಬೀಳು |
ತೊಡನೆ ಸಿಂದುಂ ಮುಂದುಗಾಣದೈತರುತಲಾ |
ಪ್ಮಡನ ರೂಪಂ ಕಂಡು ಮೂರ್ಛೆವಡೆದರ್ ಕೆಲಬರಂಗನೆಯರೇನೆಂಬೆನು || ೮ ||

ತಳಿವ ಪನ್ನೀರ್ಗೆ ತಂಗೊಳಕೆ ಚಂದನದಂಪಿ |
ಗಲರ ಪಾಸಿಕೆಗೆ ಸುಳಿಗಾಳಿಗೊಡನೊಡನೆ ಕಂ |
ಗೊಳಿಪ ನಂದನಕೆಳಸುವಂತೆ ಕಾಮಂಗೆ ಕಾಮಿನಿಯರಂ ಮಾರುತೊಡನೆ ||
ತಳರ್ದು ಹರಿಯರಮನೆಯ ಬಾಗಿಲ್ಗೆ ಬಂದು ಮುಂ |
ದೊಳಪೊಗಲ್ ಕಂಡು ವಿಷ್ವಕ್ಸೇನನೆಂಬವಂ |
ನಿಲಿಸಲ್ ತ್ರಿಶೂಲದಿಂದಿರಿದೆತ್ತಿದಂ ಹರಂ ಲೀಲಾವಿನೋದದಿಂದೆ || ೯ ||

ಅಚ್ಚರಿಯನೇನೆಂಬೆನಾ ತ್ರಿಶೂಲದ ಹತಿಗೆ |
ಬೆಚ್ಚದಾ ದ್ವಾರಪಾಲಂ ಕೂಡೆ ಗಹಗಹಿಸೆ |
ಕೆಚ್ಚಿರ್ದೆಯಸಹುದು ನೀಂ ನಗುವ ಕಾರಣವದೇನೆಂದೀಶ್ವರಂ ನುಡಿಯಲು ||
ಉಚ್ಚರಿಪುದೇಂ ವೇದಮರಿಸಿ ಕಾಣದ ನಿನ್ನ |
ಸಚ್ಚಿದಾನಂದರೂಪಂ ಕಂಡೆನೆನೆ ಶಿವಂ |
ಮೆಚ್ಚಿದೆನೆನಸಲ್ ಶೂಲದಿಂದಿಳಿಪಬೇಡವನೆನೆ ಹರನದಂ ಕೈಕೊಂಡನು || ೧೦ ||

ಅಸಿತರೊಳಗೊರ್ವನಾ ಹರಿಯೆಡೆಗೆ ಪೋಗಿ ಬಳಿ |
ಕಿಸಿತವಕ್ಷೈಯನಸ್ಲಿವಂ ಪೇಳೆ ಕೇಳ್ದು ಭೋಂ |
ಕನೆ ಸಿಂಹಪೀಠದಿಂದೆದ್ದೊಡನೆ ಪರಿತಂದು ಶಿವನ ರೂಪಂ ಕಾಣುತೆ ||
ಮನದೊಳರೆ ಹಿಗ್ಗುತತಿದೂರದಿಂದವನಿಯೊಳ್ |
ತನುವನೀಡಾಡಿ ಮುಗುಳ್ದಿದ್ದು ಕುಣಿದಾಡಿ ತ |
ನ್ನನೆ ಮರೆವುತೆಚ್ಚರುತೆ ಭಕ್ತಿರಸದೊಳಗಾಳುತೇಳುತಾ ಹರಿಯೆಸೆದನು || ೧೧ ||

---

೧ ಸ್ಯೆತಿಡುತ (ಅ.) ೨ ತೊಡುವ (ಶಿ, ಹು.)

ಜಯಜಯತು ಜಗದೀಶ ಜನನಮರಣವಿನಾಶ |
ಜಯಜಯತು ಸುತಕಾಯ ನಿತ್ಯ ನಿರ್ಜಿತಮಾಯ |
ಜಯಜಯತು ದಿವ್ಯಾಂಗ ಗೀಷ್ಪತಿಶಿರೋಭಂಗ ಜಯಜಯ ಕೃಪಾಪಾಂಗನೆ ||
ಜಯಜಯತು ಮುನಿಪಾಲ ದಾಕ್ಷಾಯಣೀಲೋಲ |
ಜಯಜಯತು ಭಾಳಾಕ್ಷ ಭಕ್ತರಘಸಂಶಿಕ್ಷ |
ಜಯಜಯತು ಸದ್ಗ್ರೀವ ನಿಖಿಳಸುರಸಂಜೀವ ಜಯತು ಜಯತೆನುತಿರ್ದನು || ೧೨ ||

ಇಂತು ನಾನಾತೆರದೆ ನುತಿಸುತಿರ್ಪಾ ಹರಿಯ |
ನಂತಭಕ್ತಿಯನೀಶ್ವರಂ ನೋಡಿ ಮೆಚ್ಚುತ |
ತ್ಯಂತ ಕರುಣದೊಳೆಂದೆನೆಲೆ ವಿಷ್ಣು ಕೇಳಾವು ಬಂದ ಬರವಂ ತಿಳಿಯದೆ ||
ಅಂತಿಂತು ಪೊಗಳೆ ಫಲವೇನೆಂದು ವಾಚಿಸಿದ |
ಕಂತುಮರ್ದನನ ವಚನಜ್ಯೋತಿ ಬೆಳಗೆ ಹರಿ |
ಯಂತಸ್ತಮಂ ತೊಲಗಿ ಪರಮಸಮ್ಯಗ್‌ಜ್ಞಾನವವತರಿಸಿತಾ ಕ್ಷಣದೊಳು || ೧೩ ||

ಅರಿದನಾ ವಿಧಿಶಿರಂ ಪರಿದೊಂದುತೆರನನಿದ |
ಕೆರವೆನೆನ್ನೀ ನೊಸಲೊಳೊರೆವ ರಕ್ತಮನೆಂದು |
ಸರಸರನೆ ಚಕ್ರದಿಂ ಪೆರೆನೊಸಲ್ಗೊರೆದು ಹರಕರಪಾತ್ರೆಗುರೆ ಬಾಗಿಸೆ ||
ದುರುದುರಿಪ[1] ಕೆನ್ನೀರ ತೊರೆ ಬೆಟ್ಟದಿಂದಿಳಿವ |
ತೆರದೊಳ್ ಕಪಾಲದಿಂ ಕರೆವುತಿರಲದರ ಕೆಲ |
ದೆರಪಿಂಗದೊಮ್ಮೆಯುಂ ನೆರೆಯದಿರೆ ಹರಿಯದಟು ಬರತುದೇಂ ಬಣ್ಣಿಸುವೆನು || ೧೪ ||

ಸುರರ ಸಾಸಿರಬರಿಸಮುಂ ಬಿಡದೆ ಸುರಿಯಲಾ |
ಹರಿಯ ಸರ್ವಾಂಗರಕ್ತಂ ಮಜ್ಜೆ ಮಾಂಸಂಗ |
ಳಿರದೆ ಪೋಗಲ್ ಬಳಿಕ್ಕುಳಿದ ಚರ್ಮಾಸ್ಥಿಯಿಂ ತರಹರಿಸಿ ನಿಲಲಾರದೆ ||
ಹರಿ ಧರೆಗೆ ಬೀಳಲಾ ಹರನಂದು ಕರುಣದಿಂ |
ಹರಣಮಂ ಪಡೆಯೆ ಹೇಳಿಯಂತೆ ಹರಿ ರಕ್ತಮಂ |
ಸುರಿವುತಿರಲೀಶ್ವರಮನಂ ಭಕ್ತಚರಿತಕ್ಕೆ ಕರಗಿತ್ತದೇವೇಳ್ವೆನು || ೧೫ ||

---

೧ ದುರಿಸೆ (ಪ.) ೨ ಹೊ (ಶಿ. ಮ.)

ಹೋ ಹೋ ಪುರೇ ಪುರೇ ಸಾಕು ಸಾಕೈ ನಿನ್ನ |
ಸಾಹಸದ ಭಕ್ತಿಗೆಮ್ಮಯ ಮನಂ ಮಚ್ಚಿತಿಂ |
ತ್ರಿಃ ಸಾಹಸನನ ಹಮ್ಮಿನಿಂದೊಗೆದ ಕೋಪಂ ಶಾಂತಮಾದುದಿನ್ನು ||
ಊಹಿಸಲ್ ನಿನಗೆ ಸರಿ ಭಕ್ತರುಂಟೇಯೆನು |
ತ್ತಾ ಹರಿಯುನಾವರಿಸಿ ಬೀಳ್ಕೊಟ್ಟು ಹರುಷದಿಂ |
ದಿ ಹರಂ ದೇವೇಂದ್ರಪುರಕೆ ನಡೆತಂದನದನೇನೆಂದು ಬಣ್ಣಿಸುವೆನು || ೧೬ ||

ಭೋಗಿಸಂಕುಲಶೋಭಿತಂ ಸರ್ವಮಾಂಗಲ್ಯ |
ಯೋಗಿ ಭೂತಿಪ್ರಯುಕ್ತಂ ಕಾಮವಿಹರಣಂ |
ನೆಗೆ ವಿಭವಪ್ರದಂ ವಿಧೃತಗೋಪಂ ಸಮಾಶ್ರಿತಸೋಮನೆಂಬ ಪೆಸರಿಂ ||
ಈಗಳೀ ಪುರವೆಮ್ಮ ನಾಮಾಂಕಿತಂದಳೆದು |
ದಾಗಮಂ ಮನಕೀವುತಿದೆ ನೋಳ್ಪವಿದನೆಂದು |
ನಾಗಭೂಷಂ ವಿಮಲವೇಷನಮರಾವತಿಯನೊಳಪೊಕ್ಕನುತ್ಸವದೊಳು || ೧೭ ||

ಪೆಸರವಮರಾವತೀಪುರಮುದಂ ನಯದೆ ಪಾ |
ಲಿಸುವವಂ ದೇವೇಂದ್ರನವನ ಪೊರೆಯೊಳಗಿರ್ದು |
ಬೆಸಕೈವರಮಲದಿಕ್ಪಾಲರುಂಬುದೆ ಸುಧಾಹಾರಮಾತನ ಸತಿಯರು ||
ಪೆಸರಾದ ಶಚಿ ರಂಭೆಯುರ್ವಸಿ ತಿಲೋತ್ತಮೆಯ |
ರಿಸಿವ ಮೇನಕೆ ಸುಕೇಶಿಯರನಿಬರೊಸೆದು ಪೂ |
ಜಿಸುವಿಷ್ಟಲಿಂಗಮೆ ವಿರೂಪಾಕ್ಷನೆನಲದರ ಪೆಂಪನೇಂ ಬಣ್ಣಿಸುವೆನು || ೧೮ ||

ಈ ವಿಭವದಿಂದೆಸೆವ ಪುರವನೊಳಪೊಕ್ಕು ಮ |
ತ್ತಾ ವಿಕೃತವೇಷಸರ್ವೇಶ್ವರಂ ಪಣ್ಯಾಂಗ |
ನಾವೀಧಿಯೊಳ್ ನಡೆದು ಬರಬರಲ್ ಚರಿಪ ಸಖಿಯರ ಚೆಲ್ಲೆಗಣ್ಬುಂಬಿಗೆ ||
ಆ ವಿಭುವಿನನುಪಮವದನಾಬ್ಜ ವಿಧಿದಾಗಲದ |
ಸೇವೆಗೈವವರನ್ ತಂತಮ್ಮವರ್ಗೆಸುರ್ವ |
ನಾವಧಾನದೊಳೊಬ್ಬರೊಬ್ಬರಂ ಮುಂಚಿ ನಡೆದೊಡತಿಯರೊಳಿಂತೆಂದರು
|| ೧೯ ||

೧-೧ ವಡಸೆಯೆಯ್ದಿ (ಪ.)

ಅಕ್ಕ ಕೇಳಾತನಾರೆಂದರಿಯೆವವನೊರ್ವ |
ಚಿಕ್ಕಹರಯದ ಸೊಬಗನದೆ ಪೊಂದಪಂ ಮರೆಯ |
ಮುಕ್ಕಣ್ಣನಪ್ಪನಲ್ಲದೆ ವಿಷ್ಣು ಶಶಿ ಸೂರ್ಯ ಮನಸಿಜರ್ಗಿನಿತು ರೂಪು ||
ಮಿಕ್ಕಿರದು ನಿನ್ನಾಣೆ ಪುಸಿಯಲ್ಲ ಮಿಗೆ ಕೈಯೊ |
ಸಿಕ್ಕಿದಾಭರಣಕ್ಕೆ ಕನ್ನಡಿಯೆ ನಿನ್ನೆರ್ದೆಗೆ |
ತಕ್ಕವಂ ೧ಸೌಭಾಗ್ಯಮೆಂತಿರ್ಪುದೋ ಎಂದು೧ ಕೂಡೆ ಮತ್ತಿಂತೆಂದರು೨ || ೨೦ ||

ಈಯಮರನಗರಕ್ಕೆತರದ ಸುರ ನರ ನಾಗ |
ನಾಯಕರ್ ಮುನ್ನಿಲ್ಲವವರೊಳೀ ಪರಿ ಜಾತಿ |
ನಾಯಕನನೊರ್ವನಂ ಕಂಡುದಿಲ್ಲವನೆಡದ ಕಾಯಕಾ ಬಲದಕಡೆಯ ||
ಕಾಯಮೆಣೆಯಲ್ಲದಿಂ ಪಡಿಯಿಡುವ ವಸ್ತುವಿ |
ನ್ನೀಯಬುಜಭವಕೋಟಿಸೃಷ್ಟಿಯೊಳಗಿಲ್ಲ ಬರಿ |
ಬಾಯ ಮಾತಲ್ಲ ನೋಳ್ಪೊಡೆ ತೋರ್ಪೆವೆನಲವರ್ ಸಂಭ್ರಮದೆ ಪೊರಮಟ್ಟರು || ೨೧ ||

ಸರಸಶಶಿವದನೆಯರ್ ಸಕಲಗುಣಸದನೆಯರ್ |
ಸರಸಿರುಹಪಾಣಿಯರ್ ಸಾರಸಸು೩ವಾಣಿಯರ್ |
ಸರಳತರಳಾಕ್ಷಿಯರ್ ಸತ್ಕಲಾಪೇಕ್ಷೆಯರ್ ಸಕಲಲಕ್ಷಣಯುತೆಯರು ||
ಶರಧಿಗಂಭೀರೆಯರ್ ಸಂಗೀತಸಾರೆಯರ್ |
ಸರಣಜಿತಭೋಗಿಯರ್ ಸಂತತಂ ರಾಗಿಯರ್ |
ಸರಳ್ಪೈದರೆಡೆಯಾಗಿ ಸಂಭ್ರಮದ೪ ನಡೆಯಾಗಿ ಬರುತಿರ್ದರೇವೇಳ್ವೆನು || ೨೨ ||

ಪೀಲಿದಳೆವಿಡಿದಂತೆ ಮೈಗಂಪಿಗಳಿಕುಳಂ |
ಮೇಲೆತ್ತಿ ಬರೆ ಸೋಗೆಮುಡಿಗೆ ಸೋಲ್ತೊಡನೆ ನವಿ |
ಲೋಲಗಿಸಿ ಬರೆ ಕುಚದ್ವಯದ ಚೆಲ್ವಿಗೆ ಕೋಕಮಿಥುನಂಗಳೊಡನೆ ಬರಲು ||
ಮೇಲೆ ನಡೆ ನುಡಿಗಂಚೆ ಗಿಳಿಗಳೊಡವರಲೊಂದು |
ಲೀಲಾ೫ಬ್ಜಮಂ ಪಿಡಿದು ಬರ್ಪಳೊಪ್ಪಿರ್ದಳ್ಪೈ |
ಗೋಲನಧಿದೇವತೆಯೊ ಪೇಳೆಂಬಿನಂ ಶಿವನನೀಕ್ಷಿಪೌತ್ಸುಕ್ಯದಿಂದೆ || ೨೩ ||

೧-೧ ಸೌಖ್ಯಮೆಂತಿಪ್ಪುದೋಯೆಂದು ನೆರೆ (ಶಿ.) ೨ ಉ (ಗೋ, ಶಿ.) ೩ ಸಾರಸುಕ (ಮ.) ೪ ಸಂಭ್ರಮಿತ (ಪ, ಶಿ.) ೫ ನೀಲಾ (ಹು, ಶಿ.)

ಅರೆವೆಂ ತಿದ್ದಿದ ತಿಲಕಮೇಕನಯನಾಂಜನಂ |
ಕರೆವ ಕಸ್ತುರಿ ಕಟ್ಟಿದೊಳ್ಮುಡಿ ವಿಭಾಗಿಸದ |
ಕುರುಳ ಬೈತಲೆಯೊಂದು ತೋಳ್ಗೆ ಮರ್ದರವಕೆ ತಿಗುರದ ಗಂಧಮೊಟ್ಟಿದೊಡಲು ||
ಅರೆಯುಟ್ಟ ಸೀರೆ ನೆಲಕಲೆವ ಮೊಲುದು ಸಿರಂ |
ಬೋರೆವ ಕಮ್ಮೆಣ್ಣೆ ನೀರಾರದ ಕುರುಳ್ ಮೆರೆಯೆ |
ಬರುತಿರ್ದರರೆಮಾಳ್ಪ ಸಿಂಗರಂಗಳನುಳಿದು ತರಳೆಯರ್ ತವಕದಿಂದೆ || ೨೪ ||

ಕೆಂಪೇರಿದರಳ್ಗಣ್ಣ ಕಡೆಪರಿದ ಕುರುಳಾಂತ |
ಸೊಂಪುವಡೆ ಮಸುಳ್ದ ತಿಲಕಂ ಕದಡಿದಂಜನದ |
ಸೊಂಪು ಸೊಪ್ಪಾಗಿ ಬೆಳ್ಪಾದಧರಮುಗುರಿರಿತ[1]ವಿಡಿದ ನೆಲೆಮೊಲೆ ನಡೆಯೊಳು[1] ||
ಕಂಪಿಸುವ ತೊಡೆಗಳಾರದ ಬೆಮರ್ ನಿಟ್ಟುಸುರ್ಗ |
ಳಿಂ ಪೊಯ್ವ ತೆಕ್ಕಳಿಯು[2] ಬಳಲ್ದ ಕೈವೆಟ್ಟಿಯ ಪೊಸ |
ಗಂಪು ಕೆದರಿದ ನಿರಿಯ ಸುರತಾಂತೆಯರ್ ದೇವಕಾಂತೆಯರ್ ಬರುತಿರ್ದರು
|| ೨೫ ||

ಎಣ್ಣೆಗಂಟಿನ ಪೊರೆಗೆ ನುಣ್ಗೊರಲ್ ಬಳ್ಕೆ ಕಡು |
ತಿಣ್ಣ ಮೊಲೆಗಳ ಬಿಣ್ಪುಗಸಿಯ ನಡುವಳ್ಕೆ ಪೊಂ |
ಬಣ್ಣ ಕೊಡಪೊರವಾರ ಭರಕೆ ಪೊಂಬಾಳೆದೊಡೆ[3] ದಡದಡಿಸೆ ಥಳಥಳಿಸುವಾ ||
ಹುಣ್ಣಿಮೆಯ ಸಸಿಮೊಗದೊಳುದಿಸೆ ಬೆಮರ್ವನಿಯಾಲ |
ವಣ್ಣನೆಯ ತುಟಿ ಸುಯಿಲ ಬಿಸುಪಿನಿಂ ಬತ್ತಲಾ |
ಪೆಣ್ಣುಪಿಂಡಂಗಜನ ಬಾಣದೇರಿಂ ನೋವುತಡಿಯಿಟ್ಟಿತಾ[4]ಕ್ಷಣದೊಳು || ೨೬ ||

ಮುಗ್ಗುಲಿನಿಯನನುಳಿದು ಪೋಪುದುಚಿತವೆ ಮಗಳೆ |
ಸಗ್ಗವೆಣ್ಣೆಂಬ ಮಾತಿಗೆ[5] ಕಾಯ್ದು ನಟಿಕೆಯಂ |
ನೆಗ್ಗಿ ಪೊಂಬಟ್ಟಲಿಯಂ ಬಯ್ದು ಮುಡಿಮೊಲೆಯ ಪೊರೆವಾರ ಬಿಣ್ಪನಿಂತು ||
ಪೆಗ್ಗಳಿಸಲೆಂದು ಬೊಮ್ಮನಂ ಜರೆವುತ್ತೆ |
ಕಿಗ್ಗದೆಯ ತೊಡೆಗಳಂ ಸುಗ್ಗುಮಾಡುತ್ತೊರ್ವ |
ದಿಗ್ಗಜೋಪಮಯಾನೆ ಭರ್ಗನಂ ಕಾಣುತ್ತೆ ಬಗ್ಗಬರಿಯೆದ್ದೆಯಾದಳು || ೨೭ ||

೧ ೧ [illegible] ವಿಡಿದ ನೆಲೆಮೊಲೆಯೊಳು (ಗೋ.) ೨ ತೆಕ್ಕಳ್ಳಿ (ಹು, ಮ, ಶಿ.) ೩ ೩ [illegible] ಪೊರೆವಾರ ಪೊಂಬಾಳೆದೊಡೆಗಳ್ ನಡುಗಿ (ಹು, ಮ.) ೪ ಯಿಟ್ಟಿರಾ (ಹು, ಮ.) ೫ ಮಾತೆ (ಗೋ, ಹು.)

ಒತ್ತಿಲಿಹ ನಲ್ಲನಂ[೧] ಮರೆವುತಾಡುವ ಪಗಡೆ |
ಲೆತ್ತ ಚದುರಂಗಂಗಳಂ ಬಿಸುಟ್ಟೊಂದು[೨]ತಿಹ |
ಚಿತ್ತಜಾಗಮದೋಲೆಗಳನೊದ್ದು ನೂಂಕಿ ಮುಂಗೈಗಿಳಿಯ ಸವನಿಗಿಟ್ಟು[೩] ||
ಸುತ್ತಲಿಹ ಸಖಿಯರಂ ಕಣ್ಪುರ್ಬುಗಳೊಳೆ ಜರೆ |
ವುತ್ತೆ ಭರವಸದೆ ನಡೆವುತ್ತೆ ಬೆಮರುತ್ತೆ ಕಾ |
ಣುತ್ತೆ ಶಿವನಂಗವನನಂಗನರಳಂಬಿಗೊರೆಯಾದರಖಿಳಸ್ತ್ರೀಯರು || ೨೮ ||

ದಡದಡಿಪ[೪] ನಡೆಗಳಿಂ ತಬ್ಬಿಬ್ಬ ನುಡಿಗಳಿಂ |
ಕಡುಬಿಸುಪ ಸುಯ್ಗಳಿಂ ಕಂಪಿಸುವ ಮೆಯ್ಗಳಿಂ |
ಮಿಡಿವ ಕಂಬನಿಗಳಿಂ ಮಿಡುಕದಿಹ[೫] ದನಿಗಳಿಂ ಮಿಾರುವ ಮನಂಗಳಿಂದೆ ||
ಮುಡಿಬಿಟ್ಟ[೬]ಳಲ್ಪರಿಂ[೬]ಮುದ್ದು ಮೊಗಬಳಲ್ಪ[೭]ರಿಂ |
ದೊಡಲ್ಗಳಂ ಮರೆವರಿಂದೋಪ[೮]ರಂ ತೊರೆವರಿಂ |
ಮಡಲಿರಿದ ವಿರಹದಿಂ ಮತಿಗೆಟ್ಟ ಕರಹದಿಂದಬಲೆಯರ್ ಕಂಗೆಸೆದರು || ೨೯ ||

ನೆಗೆವ ರೋಮಾಂಚಮುಣ್ಮುವ ಬೆಮರ್ ನಡುಪ ಮೈ |
ಯೊಗುವ ಕಂಬನಿ ಬಿನ್ನದನಿಲ್ ವಿವರ್ಣಮನಾಂತ |
ಮೊಗಮಿರ್ದೆಡೆಯಲಿ ಚಲಿಸದೆ ಕಂಬಮಾದತನು ಸಂಪೂರ್ಣಭಾವರತಿಯ ||
ಸೊಗಸಿನೊಳಗೊಂದಿರ್ಪ ಚೇತನಮಿಮೆಂಟು ತಾ |
ನೊಗುಮಿಗೆಯ ಸಾತ್ತ್ವಿಕರಸಾವೇಶಮುಮರಿಯರೊ |
ಳೊಗೆದುವು ಸುಧೈರ್ಯಮಂ ತೆಗೆದುವವರಂ ಕೊಲಲ್ ಬಗೆದುವೆಂಬಣ್ಣಿಸುವೆನು || ೩೦ ||

ಬಿಡದೆ ನಿಟ್ಟಿಸುವ ಕಂಡೊಡನೆ ಚಿಂತಿಸುವ ನೊಂ |
ದಡಿಗಡಿಗೆ ಸುಯ್ವ ಜ್ವರಮಿಡಿದು ತಾಪಿಸುವ ಸೆಕೆ |
ಗೊಡಲನುರೆ ಕಳಲ್ವ ಭುಕ್ತಿ[೯]ಯನುಳಿವ ವಿಕಳಿಸುವ ನುಡಿಯಡಗಿ[೧೦] ಸುಮ್ಮನಿರ್ಪ ||
ಕಡುಸೊರಗಿ ಮೂರ್ಛಿಸುವ ಸುಧೆಯುಂಡುದರಿನುಸುರ್[೧೧] |
ಮಿಡುಕುತಿಹ ಗಳಗತಪ್ರಾಣೆಯರ್ ಬಾಯ್ಗಳಂ |
ಬಿಡುವ ಬಿಡುಗಂಗಳ ಸುಜಾಣೆಯರ್ ಸಲೆ ದಶಾವಸ್ಥೆಯೊಳ್ ಕಣ್ಗೆಸೆದರು || ೩೧ ||

---

೧ ವಲ್ಲಭನ (ಮ.) ೨ ಗಿತ್ತು (ಶಿ.) ೩ ತಡಬಡಿಪ (ಹು, ಮ.) ೪ ಕುತಿಹ (ಶಿ.) ೫ ಟ್ಟ (ಶಿ.) ೬-೬ ಮುಂಗೆಟ್ಟಳಲ್ವ (ಶಿ, ಪ, ಗೋ.) ೭ ತ (ಗೋ.) ೮ ಭಿನ್ನಧ್ವನಿ (ಹು, ಶಿ.) ; ಕಿನ್ನದನಿ (ಗೋ.) ೯ ಭಕ್ತಿ (ಶಿ, ಹು, ಮ.) ೧೦ ಯುಡುಗಿ (ಶಿ, ಹು.) ೧೧ ಸೊರಣೆಯಂದುರಿದುಸುರ್ (ಕ, ಮ.)

ಸೋತು ಮೇಲಿಕ್ಕಿಯೊಂದಗುವ ಮನಂ ತಳ್ಕಿಸುವ |
ಪ್ರೀತಿಯಿಂ ತವಕಿಸಿ ನಿಗುರ್ವ ತೋಳ್ ಸಲೆ ಚುಂಬಿ |
ಸಾತುರಮೊಳೊರೆವ ಬಾಯ್ ಸವಿಲಿಕ್ಕಿಸುಡಿಗೆ ಲವಲವಿಪ ನಾಲಗೆ ಕೂಟಕೆ ||
ಕಾತರಿಸಿ ಮಿಡುಮಿಡುಕಿಲೊಸರ್ವ ನಾಣೆಡೆ ನಿಂದ¹ |
ರೀತಿಯಂ ಕಳೆಯದೋಸರಿಪ ನಿರಿಯುಡಿಗಡಿಗೆ |
ಘಾತುಗುಂದುವ ಧೈರ್ಯಮೆಸೆಯಲೆಸೆದರ್ ಶಿವನ ಜೆಂಕೊಂಡು ಸುರಸತಿಯರು
|| ೩೨ ||

ಹರಿಣಿ ಮಧುಕೇಶಿಯುರ್ವಶಿ ತಿಲೋತ್ತಮೆ ರಂಭೆ |
ಪರಮಂಜುಘೋಷೆ ಮೇನಕೆ ಸುರಸೆ ಮೊದಲಾದ |
ಪರಿಗಣನೆಯಿಂ ಮೂರುಲಕ್ಕಮೂವತ್ತಾರುಸಾವಿರಂ ಕಲೆಗೆ ಸಂದ ||
ಸುರಸತಿಯರಭವನಂ ಬೆಂಬತ್ತಿದರ್ ಬಿಡದೆ |
ಪರಮವೇದಾಂತಕಾಂತೆಯರಕ್ಕರಿಂದರಸಿ |
ಪರಿದೈದಲಾರದ ಪರಬ್ರಹ್ಮಮೂರ್ತಿಯಂ ಪೇಳಲೇನಚ್ಚರಿಯನು || ೩೩ ||

ಈ ತೆರದೊಳಾ ಸುರವರಾಂಗನೆಯರೆಲ್ಲರುಂ |
ಕಾತರಿಸಿ ಬೆಂಬಿಡಿವುದಂ ಕಂಡು ನಸುನಗುತೆ |
ಸೋತವನ ತೆರದೊಳೋರಡಿಗೊರ್ಮೆ² ನಿಂದು ನೋಡುತೆ ತಿಸುಳಮಂ ತಿರುಪುತೆ ||
ಜಾತಿವಿಟಚಿಹ್ನಮಂಗದೊಳೆಸೆಯೆ ನಟನೆಗಳ |
ರೀತಿ ಪೊಸತೆಸೆಯೆ ನಡೆನಡೆಗೆ ಸೊಬಗೆಸೆಯಲಿವ |
ನೀತೆರದ ಮಾಯಾವಿಯೋ ಚೋದ್ಯಮೆನಲಭವನಡಿಯಿಟ್ಟು ಬರುತಿರ್ದನು || ೩೪ ||

ನಗೆಯೊಳ್ ಕೆಲಂಬರಂ ಸೋಲ್ವಂತೆ ನಿಲ್ವ ಕಾ |
ಲ್ಗೆಗೆಯೊಳ್ ಕೆಲಂಬರಂ ವಿಟಮಾರ್ಗಮಂ ತೋರ್ಪ |
ಜಗೆಯೊಳ್ ಕೆಲಂಬರಂ ನೋಡಿ ನೋಡದೆ ಬಿಡದೆ ನೋಡಿ ತಿರುತಿರುಗಿ ನೋಳ್ಪ ||
ಬಿಗುಹಿನೊಳ್ ಕೆಲಕೆಲಬರಂ ಜಾಣ್ಮೆಗಾಡಿಗಳ |
ತೆಗಹಿನೊಳ್ ಕೆಲಕೆಲಬರೆಸೋಲವರಿದು ಮೈ |
ದೆಗಹಿನೊಳ್ ಕೆಲಕೆಲಬರಂ ಮರುಳ್ಮಾಡುತೀಶ್ವರನಡಿಯಿಡುತ್ತಿರ್ದನು || ೩೫ ||

೧ ಲಿಕ್ಕಿಟೊ (ಪು.) ೨-೨ ಲೊಸರುತಿಹ ನಾಣಿಂದ (ಪು.) ; ಲೊಸರ್ವ ನಾಣ್ಗೆಡೆ ನಿಂದ (ಗೋ. ೩.) ; ಲೊಸರ್ವ ನಾಣೆಡೆಯಿಂದ (ಗೋ.) ೩ ಳೋರಡಿಗೊರ್ಮೆ (ಪ.)

ಉರಿವ ಬೇಸಗೆಯೊಳೊಣಗಿದ ಲತೆಗಳಂ ಸುಡುವ |
ಮರುದಾಪ್ತನೊಳ್ ತುಪ್ಪವೆರೆದೆಲರನೂದಿದೊಡೆ |
ತರಹರಿಪುದೇ ಮುನ್ನಮೆಳವಳ್ಳಿ [೧]ಮೆಯ್ಯ್ಯವರ್ತನತು[೧] ವಿರಹದೊಳುರಿವರಂ ||
ಸರಸಸೌಂದರ್ಯರೂಪಂ ನೋಡಿ ನಕ್ಕು ಮೊಗ |
ದಿರುಹಿ ನಿಲ್ಲದೆ ಪೋಗುತಿರೆ ತರಳೆಯರ್ ಕಂಡು |
ತರಹರಿಪರೇ ಮೋಹದಿಂ ಧೈರ್ಯಮಳಿದು ಬಹುದೈನ್ಯದಿಂದಿಂತೆಂದರು || ೩೬ ||

ಪಿಂತಿರುಗಿ ನೋಡೆಲೊ ವಿಶಾಲಾಕ್ಷ ಮೋಹರಸ |
ಮಂ ತುಳ್ಕಿ ನುಡಿಸೊ ಸವಿನುಡಿಜಾಣ ತವಕದಿಂ |
ದಂ ತಳ್ಕಿಗೆಯ್ಯೊ ಬರಿಕೆಯ್ಯ ತೋಳ್ಗಳ ನೀರ ಕುರುಳ್ಪಿಡಿವುತಧರಸುಧೆಯ ||
ನೀಂ ತಳುವದೀಂಟೊ ಚೆಂದುಟಿಯಿನಿಯ ನೆಲೆಮೊಲೆಗ |
ಳಂ ತಡವುತೊತ್ತೊ ತಳಿರ್ಗೈಯ್ಯ ತಂಪಿಗ ವಿರಹ |
ಮಂ ತವಿಸಿ ನೆರೆಯೊ ಹದಗಾರ ನೀನೆಮ್ಮನೆಂದಮರೆಯರ್ ಭ್ರಮೆ[೨]ಗೊಂಡರು
|| ೩೭ ||

ಕೂಡಲಾಗದೆ ಕೂಡಲೊಲ್ಲದೊಡೆ ನಿಂದು ಮಾ |
ತಾಡಲಾಗದೆ ಮಾತನಾಡದೊಡೆ ಕೈಸನ್ನೆ |
ಮಾಡಲಾಗದೆ ಸನ್ನೆಮಾಡದೊಡೆ ಕಟಕಟಾ ನಿನ್ನ ಕಣ್ಣೋರೆಯಿಂದೆ ||
ನೋಡಲಾಗದೆ ನೋಡಲೊಲ್ಲದೊಡೆ ಮೆಲ್ಲನೆಡೆ |
ಯಾಡಲಾಗದೆಯೇತರಾಶೆಯಂ ಕೊಡನಾವ |
ನಾಡ ನಿಷ್ಕರುಣಿಯೋ ಶಿವ ಶಿವಾಯೆಂದೊರ್ವ ಸುದತಿ ಸಖಿಯೊಳ್ ನುಡಿದಳು
|| ೩೮ ||

ಉರಿಗಣ್ಣಿನಿಂದಳಿದ ಸ್ಮರನೆನ್ನ ಹೃದಯದೊಳ್ |
ಮರಳಿ ತಾಂ ಜನಿಸಿ ಮತ್ತೆನ್ನನೀಗಂ ಕೊಲ್ಲ |
ದಿರನದಕ್ಕೀಶ ನೀನೀ ಹೃದಯದೊಳಗಿರಲ್ ಮದನಭಯಮಿಲ್ಲವೆಂದು ||
ಹರನನಾ ಕಣ್ಬಾಗಿಲಿಂ ಪುಗಿಸಿಯನಿಮಿಷತೆ |
ಯಿರವ[೩]ನುಳಿದೆರ್ದೆಗದಂಗೆತ್ತಳೋ[೩]ಂಪಿಸಲೊರ್ವ |
ತರುಣಿ ಚಿತ್ತದೊಳೀಶನಂ ನೆರೆದ ರತಿಮೂರ್ಛೆಯಿರವದೆಂ ಚೆಲ್ವಾದುದೋ ❁
|| ೩೯ ||

೧ ಮೈವರ್ತನತೆನು (ಹು, ಮ.) ೨ ಬೆಮೆ (ಮ.) ೩-೩ ನುಳಿದೆವೆಗದಂಗೆತ್ತಳೋ (ಪ.) ; ನುಳಿದಿಂತು ಮೆಯ್ಮರೆದಳೋ (ಮ.) ❁ ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ಪ್ರೇಗಣೆಯ ಕೋಂಟೆಗೆ ತರಹರಿಸದಬಲೆ ಸಿಂ |
ಸಿಂಗ ನೋಟದ ಕಂಬಲಂಬಿಟ್ಟು ಹೃನ್ಮಧ್ಯ |
ಕೀ ಗಾಡಿಕಾರನಂ ತಂದು ನೆರೆದಪೆನೆಂದು[೧] ಕಣ್ಮುಚ್ಚಿ ಜಾಸಿಸಿದೊಡೆ ||
ಈ ಗಲಭೆಯೊಳಗಪ್ಪುದೆ ಚಿತ್ತಶುದ್ಧಿ ಚೆ |
ನ್ನಾಗಿ ಕಣ್ಗಳ ಸೌಖ್ಯಮಂ ಪಡೆಯದಕಟ ಮರು |
ಳಾಗವಿರ್ಕೆ ಸೊಬಗನಂ ಕಣ್ದೆರೆದು ನೋಡೆಂದು ಸವಿಗಾರ್ತಿ ಸವಿಗುಸಿರ್ದಳು ()
|| ೪೦ ||

ಮೋಲಿಕ್ಕಿದಪೆನಿಂತು ಮುದ್ದಿಸುವೆನಿಂತು ಮ |
ತ್ತಾಲಿಂಗಿಸುವೆನಿಂತು ಚುಂಬಿಸುವೆನಿಂತು ಸ |
ಮ್ಮೇಳಿಸುವೆನಿಂತು ಪೊಯ್ದಪೆನಿಂತು ಬಯ್ದಪೆಂ ಮುನಿಸಿದೊಡೆ ತಿಳಿಪಿ ರತಿಯ ||
ಕಾಲವರಿದಿಂತು ನೆರೆದಪೆನವನೊಳೆಂದೊರ್ವ |
ಬಾಲೆ ಭಾವಿಸುತಳಿಮಿರೆ ಬರೆಳೆ ಭಾವರತಿಮೂರ್ಛೆ |
ಯೋಳಿಗೆಯೊಳವಳೊಪ್ಪಿದಳ್ ಚಂದ್ರನುದಯದಿಂದೊಪಲದ ಪ್ರತಿಮೆಯಂತೆ
|| ೪೧ ||

ಚಿತ್ತರಿಪೊಡರಿಡಿನಲ್ ಕೆಲಕೆಲರ್ ತಂತಮ್ಮ |
ಚಿತ್ತದೊಳಗೀಶನಂ ನೆರೆದಪೆವೆನುತೆ ಮೂರ್ಛೆ |
ವೆತ್ತು ಮನಸಿನೊಳ್ಬೆದೆ ಕೂಡಿದರ್ ಕೆಲಕೆಲರ್ ನೋಡಿ ಸುಖಮಂ ಪಡೆದರು ||
ಮತ್ತೆ ಕೆಲಕೆಲರಿಂತುಮಿಂತು ದಣಿಯದೆ ಸಾವ |
ಹೊತ್ತನರಿಯದೆ ಶಿವನ ಚಿತ್ತವರಿಯದೆ ಹಿಂದೆ |
ಸುತ್ತಿ ನೆರೆಯದೆ ಬಾಯೆ ಬತ್ತಿ ಬರಿಯೆದೆಯಾಗಿ ಬಳಲಿದರದೇನೆಂಬೆನು || ೪೨ ||

ಕಡುಬಿಸಿಲ ಮರಿವಕ್ಕಿಯಂತೆ ಗಂಟಲ್ ಮಿಡುಕಿ |
ಯಡವಿಗಿಚ್ಚಟ್ಟಿದೆಳಹುಲ್ಲೆಯಂತಿರ್ದ ದಡಂ |
ದಡಿಸಿ ಪನ್ನನೆ ಕಾರಿ ದೂವೆಯೊಳ್ ಪೊಕ್ಕರಗಿಯಂತೆ ಬೆದಬೆದನೆ ಬೆಂದು ||
ಮಡುಪಿಸಿಂ ಪೊರಮಟ್ಟ ಮರಿಮಿಸಾಸಿನಂತೆ ಕೆಲ |
ಬಿಡಿಬಿಡಿದು ಪೊರಳೆ ಬಿರಹದ ಬೆಂಕೆಯಿಂ ಬೆಂದು |
ಕಡುತರದಸಂಬೋಧದಮರಿಯರ್ ನಡೆವಲ್ಲಿ ನಿಂತಲ್ಲಿ ತತ್ಕ್ಷಣದೊಳು || ೪೩ ||

---

೧೧ [illegible] ಮುದದಿಂದೆ ಹೃದಯದು | ರಾಗದಿಂದೊಲಿಸಿ ರತಿಯಂ ಪಡೆವೆನೆಂದು [illegible] (ಮು, ಕ.) ೩ ಬಲೆ (ಪ.) ; ಸಖಿ (ಮು, ಕ.) ೩ ದಿ (ಮು, ಕ.) ೪-೪ ಬರುತಿರೆ (ಮು.) ೫ ಬತ್ತಿಬರಿವೆರ್ದ (ಪ.) ; ಬತ್ತಿಬರವೆರ್ದ. () ಈ ಪದ್ಯವು ಮು. ಪ್ರತಿಯಲ್ಲಿಲ್ಲ.

ಪರಿದು ಬಿಸುಟಿಳಿವಳ್ಳಿಯಂತೆಸೆವ ಮೆಯ್ಗಳಿಂ |
ಮುರಿದಿಟ್ಟ ತಾವರೆಗಳಂತೆಸೆವ ಕೆಯ್ಗಳಿಂ |
ತರಿದ ನೈದಿಲ ಪೂಗಳಂತೆಸೆವ ಕಣ್ಗಳಿಂ ಮಿಡುಕುತಿಹ ಗೋಣ್ಗಳಿಂದೆ ||
ನೆರೆ ಪಗಲ ಚಂದ್ರನಂತೊಪ್ಪುವ ಮೊಗಂಗಳಿಂ |
ತಿರಿದ ಚೆಂದಳಿರ್ಗಳಂತೊಪ್ಪುವಧರಂಗಳಿಂ |
ಮರೆದಿಪ್ಪ ಮನದ ಚೇತನದ ಸುರವನಿತೆಯರ್ ಕಂಗೆಸೆದರೇನೆಂಬೆನು || ೪೪ ||

ಈ ಸಗ್ಗದಬಲೆಯರ ಸಂಭೋಗಕೆಳಿಸಿ ನಾ |
ನಾಸಮುದ್ರಾಂತಚಕ್ರೇಶ್ವರರ್ ಬಹುಜನ್ಮ |
ದಾ ಸುಕೃತ[೧]ಮೊದವಲೆಸಗಿದ ಯಜ್ಞ[೧]ಮುಖದೊಳೈತಂದಿವರ ಪಡಿಗವಿಡಿವ ||
ದಾಸಿಯರೊಳೊಂದಿವಸಮಿಪ್ಪುದಘಟಿತಮುಪ್ಪು |
ದೇ ಸೊಬಗನೋ[೨] ರೂಪಮಾತ್ರದಿಂ ರಂಭಾದಿ |
ಭಾಸುರಸ್ತ್ರೀಯರಂ ನಾಣ್ಗೆಡಿಪನಿವನೆಂದು ಪುರಜನಂ ಬೆರಗಾದುದು || ೪೫ ||

ಕಂಡನೀಪರಿ ಮರುಗುತಿರ್ಪ ಕಮಲಾಕ್ಷಿಯರ |
ತಂಡಮನಕಟ ಸಕಲಪ್ರಾಣಿಗಳ್ಗಾ ಕಾಮು |
ನಂಡಲೆ ವಿಶೇಷಮಲ್ಲಾಯೆಂದು ಕರುಣರಸಪೂರ್ಣದೃಷ್ಟಿಯೊಳೀಕ್ಷಿಸೆ ||
ಖಂಡಿಸಿತು ವಿರಹಮೆರ್ದೆಗಾಯ್ತು ಸವಿ ರತಿಸುಖಂ |
ನುಂಡಬಲೆಯರ್ ತಮ್ಮ ಮನೆಗಳ್ಗೆ ಪೋಗಲಾ |
ಖಂಡಲನ ಗೃಹಕೆ ನಡೆತರುತಿರ್ದನಭವನತಿಲೀಲಾವಿನೋದ[೩]ದಿಂದೆ || ೪೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೭ ||

ಅಂತು ಸಂಧಿ ೧೯ ಕ್ಕಂ ಪದಗಳು ೭೩೬ ಕ್ಕಂ ಮಂಗಳಮಹಾಶ್ರೀ

೧-೧ ಮೊದಲೆಸಗಿದಾ ಯಜ್ಞ (ಶಿ, ಪ.) ೨ ದೀ ಸೊಬಗಸೀ (ಹು.) ೩ ವಿಲಾಸ (ಹು.)

ಇಷ್ಟಪುತ್ರನೆಯ ಸಂಧಿ

ಸೂಚನೆ

ಇಂದ್ರ ಮೊದಲಾದ ದಿಕ್ಪಾಲಕರ ಮನೆಗೊಲ್ದು |
ಚಂದ್ರಧರನೈದಿ ಭಿಕ್ಷವನಾಂತು ಬಳಿಕಾ ಮು |
ನೀಂದ್ರರ್ಗೆ ಶಿವನೊಲ್ದು ದಕ್ಷಿಣಾಮೂರ್ತಿಯಾಕಾರದಿಂ ಬೋಧಿಸಿದನು ||

ಕರಧೃತಕಪಾಲ ವಿನಮಿತಲೋಕಪಾಲ ಭೀ |
ಕರದೈತ್ಯಮಥನ ವಿಶ್ರುತವಿಮಲಕಥನ ಹಿಮ |
ಕರಕಲಾಜೂಟ ಭೂಷಿತಕಾಳಕೂಟಾಂಧಕಾಸುರನಿಶಾಟವಿಜಯ ||
ಸರಸಗುಣಧಾಮ ಸಂತತನತಪ್ರೇಮ ವಾ |
ಸರವಾಹದಹನ ಪೂಸರನಂಗದಹನಕರ |
ಶರಣಜನರಕ್ಷ ಪಂಪಾವಿರೂಪಾಕ್ಷ ಲೋಕಾಧ್ಯಕ್ಷ ಸಲಹೆಮ್ಮನು || ೧ ||

ಪೊಸತಿದೆಲೆ ಚೆನ್ನಬಸವೇಶ ಶೂಲಿಯ ಕೈಯ |
ತ್ರಿಸುಳವೇಣನಂ ಕರಕಪಾಲಮುಂ ಕಂಡೊರ್ವ |
ಶಶಿಮುಖಿಯರಾದೊಡಂ ಭಯಭಿಭತ್ಸಗೆ ಸಂದುದಿಲ್ಲವೆನೆ ಶಿವಮುಖದೊಳು ||
ಬಿಸುಗೆಂ[೧]ಗಣ್ಗಳ್ ಪೆರತು ಕಾಣ್ಬವೇ[೧]ಮೇಣ್ ಮಿಕ್ಕ |
ರಸಮೆನಿತ್ತಾದೊಡಂ ಮೋಹರಸಮಂ ತಗು |
ಳ್ಚಿಸಬಲ್ಲುದೇ ಕಾಮಿಗಳ್ ಕಣ್ಣುಗಾಣರೆಂಬುದು ಪುಸಿಯೆ ಕೇಳೆಂದನು || ೨ ||

ಪ್ರೇಕ್ಷಿಸೀಶಂ ಸುರೇಂದ್ರನ ಮನೆಯ ಬಾಗಿಲೊಳ್ |
ಕಿಕ್ಕಿರಿದ ಸುರಭಟರ ಸಂದಣಿಗಳೇನುಮಂ |
ಲೆಕ್ಕಿಸದೆ ಶೂಲಮಂ ನೆಗಪಿ ಬ್ರಹ್ಮನ ಕಪಾಲವನುದ್ದಕೆತ್ತಿ ಕೂಡೆ ||
ಉಕ್ಕೈಕ್ಕೆಯಿಂದಮುತ್ಕೃಚ್ಚಸ್ವರಂಗಳಿಂ |
ಮುಕ್ಕಣ್ಣ[೨]ನಿಂದು ಭಿಕ್ಷಾಭಿಕ್ಷಮೆನೆ ಕೇಳು |
ತ್ರ್ಯಕ್ಷಪತಿ ಹರುಷದಿಂದಿಂದ್ರನೈತಂದಭವನಂ ಕಾಣುತಿಂತೆಂದನು[೨] || ೩ ||

---

೧ ಗಣ್ಗಳ್ ಬೆರತು ಕಾಣ್ಬವೇ (ಪ, ಗೋ.) ; ೨-೨ ಸೊಲಿದು ಭಿಕ್ಷಾಭಿಕ್ಷವೆನಲಿಂದ್ರ |
ಪುಕ್ಕವತಿ ಹರುಷದಿಂದಾಲಿಸಿದನಾಗಳಭವನ ಸುಭಿಕ್ಷಾಧ್ವನಿಯನು || (ಹು, ಮ.)

ಕೇೞ್ದಂ ಗಭೀರಭಿಕ್ಷಾಧ್ವನಿಯನಂಗಡೊೞ್ |
ತಾೞ್ದಂ ಪುಳಕಜಲಮನಾನಂದವಾರ್ಧಿಯೊಳ |
ಗಾೞ್ದಂ ಮನಕ್ಕೆ ಸರಿಯಾದಾಪ್ತರೊೞ್ ಮುನಿಗಳೊೞ್ ಶಚೀದೇವಿಯರೊಳು ||
ಪೇೞ್ದಂ ಮಹೇಶನ ಬರವು ಚೋದ್ಯಮೆಂದು ಸುರ |
ರಾೞ್ದಂ ಮೃಗೇಂದ್ರಪೀಠವನಿಳಿದು ನಡೆತಂದು |
ಬೀೞ್ದಂ ಮಹಾದೇವನಿದಿರೊಳಷ್ಟಾಂಗದಿಂ ಭಯಭರಿತಭಕ್ತಿಯಿಂದೆ ❁ || ೪ ||

ಕಾರ ಮೊಳಗಂ ಕೇೞ್ದ ನವಿಲಂತೆ ನಲಿದು ಶಶಿ |
ಸೂರರುದಯಂಗಂಡ ಕುಮುದಕಮಲಂಗಳಂ |
ತೋರಡಿಸಿ[1] ಪೆಚ್ಚಿ ಗುರುವಂ ಕಂಡ ಶಿಷ್ಯನಂತಧಿಕಭಕ್ತಿಯನೆ ತಾೞ್ದು ||
ಬಾರದರ್ಥಂಗಂಡ ಕವಿಯಂತೆ ಮೆಚ್ಚಿ ಕ |
ಣ್ಣಾರೆ ನಿಧಿಯಂ ಕಂಡ ಬಡವನಂತುಬ್ಬಿ [3]ತ |
ನ್ಮಾರಹರ[2]ಮುಖಕಮಲಮಂ ದೂರದಿಂ ಕಾಣುತಮರೇಂದ್ರನಿಂತೆಂದನು ❁ || ೫ ||

ಫಲಿತವಾದುದು ಪೂರ್ವಸುಕೃತಲತೆ ಪರಿತಂದು |
ದೊಲವಿನಿಂದಮೃತಪ್ರವಾಹಮತ್ಯುತ್ಸವಂ |
ದಳೆದು ಬಂದುದು ಪರಬ್ರಹ್ಮವಾನಂದವಾರಾಶಿ ದಾಂಗುಡಿಇಯಿಟ್ಟುದು ||
ಸಲೆ ಸೌಖ್ಯಮೇ ರೂಪನಾಂತು ನಡೆತಂದುದು |
ಜ್ಜ್ವಳಮುಕ್ತಿಯೇ ಮೂರ್ತಿವೆತ್ತು ಸಾರ್ದತ್ತೆನ್ನ[4] |
ಪಲವುಜನ್ಮಂ ಸಫಲಮಾದುದೆಂದಮರೇಂದ್ರನಭವನಂ ನುತಿಯಿಸಿದನು || ೬ ||

ಶರಣು ಸುತಶಶಿಚೂಡ[5] ಸಕಲದುರಿತವಿಭಾಡ |
ಶರಣು ಸೌಖ್ಯಾಪೂರ್ಣ ಸರ್ಪವೇಷ್ಟಿತಕರ್ಣ |
ಶರಣು ಸರ್ವಾಭೇದ್ಯ ಸಚ್ಚರಿತಯುತಹೃದ್ಯ ಶರಣು ಸಲ್ಲಲಿತಶೀಲಾ ||
ಶರಣು ಸಜ್ಜನಪಾಲ ಸಾಮಗಾನವಿಲೋಲ |
ಶರಣು ಮುನಿಜನಸಂಗ ಮುಕ್ತ್ಯಂಗನಾಲಿಂಗ |
ಶರಣು ಹರಿನತಚರಣ ಹಸ್ತಿಚರ್ಮಾವರಣ ಶರಣೆನುತ್ತಡಿಗೆಡೆದನು || ೭ ||

---

೧ ಱಣಿವಿ (ಮ.) ೨-೨ ಜಂ । ಭಾರಿ ಹರ (ಹು.) ೩ ತಾಂ ಗುಡಿ (ಹು.) ; ತಾಂ ಕುಡಿ (ಪ.)
೪ ಸಾರ್ದಂತೆನ್ನ (ಪ, ಶಿ, ಹು.) ೫ ಜೂಟ (ಗೋ.) ❁ ಈ ಪದ್ಯಗಳು ಪ, ಗೋ, ಶಿ, ಕೋ. ಈ ಪ್ರತಿಗಳಲ್ಲಿಲ್ಲ.



ವಾಣಿಯಿಂ [illegible] ನವಿುಸಿದಿಂ |
[illegible] ಮನಿಸ್ಕರಂ ನೆಗಪಲೊಡನಾಕಾಶ |
ವಾಣಿ ನುಡಿದತ್ತೆಲೆಲೆ ಸುರಪ ಕೇಳ್ ಪರಮೇಶನೆಡದ ಹಸ್ತದೊಳಿಪ್ಪುದಾ |
ವಾಣೀಪತಿಯ ಕಪಾಲಕೆ ಭಿಕ್ಷಮಂ ನಿನ್ನ |
[illegible] ವಸ್ತುವೀಡೆಂಬ ವಚನಮಂ |
ಪ್ರಾಣನ್ಯೆತಂದಂತೆ ಕೇಳ್ದೊಡನೆ ತರಿಸಿದಂ ನಾನಾಸುವಸ್ತುಗಳನು || ೮ ||

ಎಣಿಕೆಯುಳ್ಳದ ವಸ್ತುವಂ ತರಿಸಿ ಶಚಿಯೊಡನೆ |
ಫಣಿಭೂಷಣನ ಕರಕಪಾಲಕ್ಕೆ ಭಿಕ್ಷಮಂ |
[illegible] ಮಾಡೆನಲ್ಕನುವಾದಳ್ಶೈವತ್ತುಲಕ್ಷಸುರಸತಿಯರೊಡನೆ |
ಮಣಿಖಚಿತ ಹೊನ್ನ ಹರಿವಾಣಂಗಳಂ ತುಂಬಿ |
ಮಣಿಮಣಿದು ನೀಡಲ್ಕೆ ತುಂಬದಿರೆ ಸುರಪ ಸುರ |
ಮಣಿಯುಂ ಸುಧಾಕಳಶಮಂ ನೀಡಬರಲಭವನೊಲಿದಾಗಳಿಂತೆಂದನು || ೯ ||

ಸಾಕು ಸಾಕೈ ಸುರಪ ಕೇಳ್ ಸುಧಾಕಲಶವಿದಾ |
ನಾಕಿಗಳ ಜೀವನಾಧಾರವಿದನತ್ಯಂತ |
ಜೋಕೆಯಿಂ [illegible] ವುದೆನುತವರ ಬೀಳ್ಕೊಡುತ್ತನಲಪುರಕ್ಕೈದಲಗ್ನಿ |
ಆ ಕಪರ್ದಿಯ ಕರಕಪಾಲಕ್ಕೆ ಭಿಕ್ಷಮಂ |
ಬೇಕಾದರತ್ನಂಗಳಂ ಬಡಿಸಲಲ್ಲಿಂದ |
[illegible] ಯಮನ ಪುರಕೆ ಬಂದಾ ಜವನ ಪೂಜೆಯಂ ಕೈಕೊಂಡನು || ೧೦ ||

ಎಲೆ [illegible] ಕೇಳಾ ಯಮನ ಪಟ್ಟಣದೆ |
[illegible] ಯುಗಣಿತಕೋಟಿಯವರೊಳಗೆ |
[illegible] ಕೋಟಿನಾಯಕನರಕವನಿತುಕುಂಡಂಗಳಲ್ಲಿ |
ಮುಳಿಗಿರ್ದ ನರಕಿಗಳಭವ ಬಂದ ಮಾತ್ರದಿಂ |
ಸಲೆ ಕೈವಲೋಕಸಂಪ್ರಾಪ್ತರಾದರ್ ಶಿವನ |
[illegible] || ೧೧ ||

[illegible]



ಮಾಣದಿಂತಡಿಗೆರಗಿದಿಂದ್ರನಂ ನಮಿಸಿದಿಂ |
ಪ್ರಾಣಿಯುಮುನೀಶ್ವರಂ ನೆಗಪಲೊಡನಾಕಾಶ |
ವಾಣಿ ನುಡಿದತ್ತೆಲೆಲೆ ಸುರಪ ಕೇಳ್ ಪರಮೇಶನೆಡದ ಹಸ್ತದೊಳೊಪ್ಪುವಾ ||
ವಾಣೀಪತಿಯ ಕಪಾಲಕೆ ಭಿಕ್ಷಮಂ ನಿನ್ನ |
ತ್ರಾಣವುಳ್ಳನಿತು ಮುನ್ನೀಡೆಂಬ ವಚನಮಂ |
ಪ್ರಾಣವೈತಂದಂತೆ ಕೇಳ್ದೊಡನೆ ತರಿಸಿದಂ ನಾನಾಸುವಸ್ತುಗಳನು || ೮ ||

ಎಣಿಕೆಯಿಲ್ಲದ ವಸ್ತುವಂ ತರಿಸಿ ಶಚಿಯೊಡನೆ |
ಫಣಿಭೂಷಣನ ಕರಕಪಾಲಕ್ಕೆ ಭಿಕ್ಷಮಂ |
ದಣಿಯದೆಡೆಮಾಡೆನಲ್ಕನುವಾದಳೈವತ್ತುಲಕ್ಷಸುರಸತಿಯರೊಡನೆ ||
ಮಣಿಖಚಿತ ಹೊನ್ನ ಹರಿವಾಣಂಗಳಂ[೧] ತುಂಬಿ |
ಮಣಿಮಣಿದು ನೀಡಲ್ಕೆ ತುಂಬದಿರೆ ಸುರಪ ಸುರ |
ಮಣಿಯಂ ಸುಧಾಕಳಶಮಂ ನೀಡಬರಲಭವನೊಲಿದಾಗಳಿಂತೆಂದನು || ೯ ||

ಸಾಕು ಸಾಕೈ ಸುರಪ ಕೇಳ್ ಸುಧಾಕಲಶಮಿಾ |
ನಾಕಿಗರ ಜೀವನಾಧಾರ[೨]ಮಿದನತ್ಯಂತ |
ಜೋಕೆಯಿಂ ಬೈತಿಡು[೩]ವುದೆನುತವರ ಬೀಳ್ಕೊಡುತ್ತನಲಪುರಕೈದಲಗ್ನಿ ||
ಆ ಕಪರ್ದಿಯ ಕರಕಪಾಲಕ್ಕೆ ಭಿಕ್ಷಮಂ |
ಬೇಕಾದರತ್ನಂಗಳಂ ಬಡಿಸಲಲ್ಲಿಂದ |
ನೇಕಹರುಷದೆ ಯಮನ ಪುರಕೆ ಬಂದಾ ಜವನ ಪೂಜೆಯಂ ಕೈಕೊಂಡನು || ೧೦ ||

ಎಲೆ ಸಿದ್ಧರಾಮ ಕೇಳಾ ಯಮನ ಪಟ್ಟಣದೆ |
ಪುಳುಗೊಂಡಪಾದಿಯಗಣಿತಕೋಟಿಯುವರೊಳಗೆ |
ತಿಳಿಯಲೆಪ್ಪತ್ತೆಂಟುಕೋಟಿನಾಯಕನರಕಮನಿತುಕುಂಡಂಗಳಲ್ಲಿ ||
ಮುಳುಗಿರ್ದ ನರಕಿಗಳಭವ ಬಂದ ಮಾತ್ರದಿಂ |
ಸಲೆ ಶೈವಲೋಕಸಂಪ್ರಾಪ್ತರಾದರ್ ಶಿವನ |
ನೊಲಿಪಿಸಿಂ ಭೃತ್ಯಮುಲಕರ್ಣಿಕೆಯೊಳಿಂಬಿಟ್ಟರಂ ಪೊಗಳಲರಿದೆಂದನು || ೧೧ ||

೧ ಗಳಿಂ (ಪ, ಗೋ, ಹು.) ೨ ಜೀವದಾಧಾರ (ಕ, ಹು.) ೩ ಬಚ್ಚಿಡು (ಕ, ಹು.)

ಹರುಷದಿಂ ಕಾಲನಂ ಬೀಳ್ಕೊಂಡು ನೈರುತ್ಯ |
ವರುಣ ವಾಯು ಕುಬೇರರೀಶಾನರೆಂದೆಂಬ |
ವರ ಪುರಂಗಳ್ಗೆ ಕ್ರಮದೊಳ್ ಬರಲ್ಕವರಿದಿರ್ಗೊಂಡಧಿಕಭಕ್ತಿಯಿಂದೆ ||
ತರುಣಿಯರ್ ವೆರಸಿ ನವರತ್ನಂಗಳಂ ಶಿವನ |
ಕರದ ಪಾತ್ರೆಗೆ ಭಿಕ್ಷಮಂ ನೀಡಲವರ್ಗಳಂ |
ಕರೆದು ಸಂತೈಸಿ ಬೀಳ್ಕೊಂಡು ಶಂಕರನಂದು ಬರುತಿರ್ದನೇವೇಳ್ವೆನು || ೧೨ ||

ಸಕಲಜಗಮಂ ಪಾವನಂ ಮಾಡಿ ನಾಮಗೊ |
ಪ್ಯಕಭೂಮಿಯಂ ಪುಣ್ಯಭೂಮಿಯೆಂದೆನಿಸಿ ನಿ |
ಷ್ಪ್ರಕಟಗಿರಿಗಳನಮಳಗಿರಿಗಳೆಂದೆನಿಸಿ ಪೆಸರ್ವಡೆಯದಿಹ ನದನದಿಗಳ ||
ಅಕಳಂಕಪುಣ್ಯನದಿಯೆನಿಸುತಲ್ಲಲ್ಲಿ ಬಾ |
ಧಕವನಂಗಳನೆಸೆವ ಪುಣ್ಯವನಮೆನಿಸಿ ದ |
ರ್ಪಕಹರಂ ಹಿಮಶೈಲವಿದ್ದೆಡೆಗೆ ನಲವಿನಿಂದಾಗ ನಡೆತರುತಿರ್ದನು || ೧೩ ||

ಆ ಗಿರಿಸಿತಂಬದೊಳ್ ದಾರುವನಮಿರಲದರೊ |
ಳಾ ಗೌತಮಂ ಭೃಗು ಭರದ್ವಾಜನತ್ರಿ ಮ |
ತ್ತಾ ಗಾಲವಂ ವಸಿಷ್ಠಂ ಕೌಶಿಕಂ ಕಶ್ಯಪಂ ವ್ಯಾಸನಂಗೀರಸಂ ||
ಬಾಗುರಿ ಪರಾಶರಂ ಗಾರ್ಗ್ಯಕಣ್ವರ್ ಮುಖ್ಯ |
ರಾಗಿರ್ದ ವರಮುನಿಗಳಗಣಿತರ್ ತಂತಮ್ಮ |
ಯೋಗನಿಷ್ಠೆಯೊಳೀಶ್ವರಧ್ಯಾನದಿಂ ಮನಂಗೊಳಿಸಿರ್ದರೇನೆಂಬೆನು || ೧೪ ||

ನೆಳಲಂತೆ ಮೆಯ್ವಳಿಗೆ ಸಂದು ಮತಿಯಂತೆ ನಿ |
ರ್ಮಳಕರ್ಮಕನುಸಾರಿಯಾಗಿ ನುಂಗಿದ ರಸಂ[1] |
ಸಲೆ ತಿವಿದ ಬಳಿಗೊದಗುವಂತೆ ನೆನಹಿಗೆ ಮುಂಚೆ ಶುಶ್ರೂಷೆಗಳ ಮಾಡುವ ||
ತಳಿರ್ಗಯ್ಯ ತೆಳ್ವಸುರ ಸುಳಿಗುರುಳ ಸೆಳೆನಡುವಿ |
ನೆಳಜವ್ವನದ ಮುದ್ದುಮೊಗದ ಕೋಮಲಕಾಯ |
ದಲಘುಜಘನದ ಮುಹಾಪಾತಿವ್ರತಾಜನಂ ಕಂಗೊಳಿಸಿತೇನೆಂಬೆನು || ೧೫ ||

---

೧ ಚಿತ್ತ (ಶಿ.)

ಆ ಮುನಿಗಳಾಶ್ರಮವನೊಳಪೊಗುತ್ತೀಶ್ವರಂ |
ಕೋಮಲಾಂಗಂ ಥಳತ್ಥಳಿಸೆ ಪೊಳೆಪೊಳೆವ ಸೌ |
ದಾಮಿನಿಯ ಸಾರೂಪ್ಯಮಂ ಪಡೆಯೆ ಕಣ್ ಮೊಗಂ ನಡೆನಡೆಗೆ ಗಾಡಿವಿಗಲು ||
ಆ ಮಹಾಶೇಷರೀತನ ರೂಪಮಂ ಪೊಗಳೆ |
ಸಾಮರ್ಥ್ಯರಲ್ಲೆಂಬ ಸಂಶಯಂ ವನಜಜನ |
ಸ್ತೋಮಕ್ಕೆ ಪುಟ್ಟೆ ಭಿಕ್ಷಾಧ್ವನಿಗಳುಣ್ಮೆ ಕಡು ಚೆಲ್ವಿನಿಂ ನಡೆತಂದನು || ೧೬ ||

ಆ ಋಷಿಸ್ತ್ರೀಯರುಂ ಮನೆಗಳೊಳ್ ತಮ್ಮ ಸಂ |
ಸಾರಕೃತ್ಯಂಗಳಿಂದಿರುತಿರ್ದು ಶಿವನ ಗಂ |
ಭೀರಭಿಕ್ಷಾಧ್ವನಿಗಳಂ ಕೇಳ್ದು ಸುಪವಿತ್ರಪಾತ್ರೆಯೊಳ್ ದಿವ್ಯಾನ್ನವ ||
ಸಾರಸವ ನವನೀತಮಂ ಬಡಿಸಿ ತಂದು ಕೈ |
ಯಾರೆ ಭಿಕ್ಷವ ನೀಡಿ ಮುಖವನೀಕ್ಷಿಸದೆ ಕ |
ಣ್ಣೋರೆಯಿಂ ಪ್ರತಿಕೃತಿಯನುಗುರ್ವೆಳಗಿನೊಳ್ ಕಂಡು ಮೋಹಿಸಿದರಾ ಕ್ಷಣದೊಳು
|| ೧೭ ||

ಆವ ಚೆನ್ನಿಗನೀತನಾವನೀ ಜಾಣನಿವ |
ನಾವನೀ ಗಾಡಿಕಾರಂ ಶಿವಾಯೆಂದತ್ತೆ |
ಮಾವ ಮೈದುನ ಭಾವ ಗಂಡರಿರೆ ಮನೆಗಳಂ ಬಿಟ್ಟಳ್ಪ ಮಕ್ಕಳ್ಗಳ ||
ಓವದೆ ಮುನೀಂದ್ರ ಹೋಮಾಜ್ಯಚರುಸಮಿತೆಗಳ |
ಕೋವಿಳ ಗಂಧಾಕ್ಷತೆಗಳಂ ಬಿಸುಟು ಪರಿತಂದ |
ದೇವೇಳ್ಗೆಸಬ್ಜಾಕ್ಷಿಯರ್ ಮದನಲಕ್ಷ್ಮಿಯರ್ ನಿಟ್ಟಿಸಿದರೀಶನಿರವ || ೧೮ ||

ಕಾಣುತೀಶನ ಮೂರ್ತಿಯಂ ಮಹಾಸತಿಯರಿರ್ದೆ |
ದಾಣಮಲಿಗರ್ಣೆಗೆ ನೆಲೆದಾಣಮಾದುವು ಮನಂ |
ಪಾಣಪಡಿಗಡಿಗೆ ಜೆಂಬತ್ತಿದುವು ಬತ್ತಿದುವು ಬಾಯ್ಗಳತಿತವಕದಿಂದೆ ||
ಪ್ರಾಣಮೆಳಪಾಯ್ತು ಮತ್ತೊಡಸೊಡಸೊಸರ್ವ ನಾ |
ಣಾಣಮುಬ್ಬರವಾಯ್ತು ನಡೆಗೆ ತಡಬಡವಾಯ್ತು |
ವಾಣಿ ತಪ್ಪಿಬ್ಬಾಯ್ತು ಸುಮತಿ ಮರುಳಾಯ್ತೊಂದು ನಿಮಿಷದೊಳಗೇನೆಂಬೆನು
|| ೧೯ ||

೧ ಮುನಿ (ಮ.) ೨ ಸಾರಪೇಸವನವನಿತ (ಪ, ಹು.) ; ಸಾರಪಾಯಸವನವನಿತಂ (ಮ.)
೩ ರಿಗೆ (ಹು.) ೪ ತೇವ (ಮ, ಅ, ಬ, ಕ.)

ಸ್ನಾನ ಜಪ ಹೋಮ[೧]ಮಾಧ್ಯಾಯನ ತಪಸ್ಸು ಸಂ |
ಧ್ಯಾನ[೧]ಯುಕ್ತಾತ್ಮಪತಿಗಳ ಜನ್ಮಜಾಡ್ಯದೊಳ್ |
ತಾನಡ್ಡಕಟ್ಟುವಡೆದಾ ಕಾವಗಟ್ಟೆ ಸ್ಮರವೈರಿಯಿಾಕ್ಷಣಘಾತಕೆ ||
ಆನದೊಡೆದೊಸರ್ದು ಪರಿವಂತೆ ಬೆಮರ್ವನಿಗಳಂ |
ದಾನನಾಬ್ಜಂಗಳೊಳ್ ಹರುಷಾಶ್ರು ಕಣ್ಗಳೊಳ್ |
ಮಾನಿತವರಾಂಗದೊಳ್[೨] ತೆಳ್ವದಂ ಸೂಸೆ ಮೋಹಿಸಿದರಖಿಳಸ್ತ್ರೀಯರು || ೨೦ ||

ಸಾಜಗುಣಮಲ್ಲದರಿಯದ ಮುಗ್ಧೆಯರ್ ಬಳಿ |
ಕ್ಕೀ ಜೇಟಿಗಾರ[೩]ನಂ ಕಂಡು ಮರುಳಪ್ಪುದಿದು |
ಸೋಜಿಗಮೆ ಶಿವಶಿವಾ ತರಳೆಯರ್ ಬೆಂಕೆಯೊತ್ತಿನ ಬೆಣ್ಣೆಯಂತೆ ಕರಗಿ ||
ಸೂಜಿಗಲ್ಲದಿರ ಕಾರ್ಬೊನ್ನಂತೆ[೪] ತಿರುಗಿದೆಡೆ |
ಗಾ ಜವದೊಳೊಡದಿರುಗಿ ಬೆಂಡಾಗಿ ನಾರೀಸ |
ಮಾಜವೆಸೆದುದು ಸೂತ್ರಧಾರಿ ಪಿಡಿದಾಡಿಸುವ ಬೊಂಬೆಗಳ ಬಳಗದಂತೆ || ೨೧ ||

ಅಚ್ಚರಿಯನಾಲಿಸೆಲೆ ರಾಮ ಮುನಿಜನಕೆ ಖತಿ |
ಪೆಚ್ಚಬೇಕೆಂದೀಶ್ವರಂ ವಿನೋದಕ್ಕೆ ಕಣ್ |
ಮುಚ್ಚಿ ಧ್ಯಾನಿಸುವ ಸತಿಯರ ಕರಸ್ಪರ್ಶನಂಗೆಯ್ಯಲೊಡನಾ ಕ್ಷಣದೊಳು ||
ಅಚ್ಚರದ ಶಿವನ ಸಾರೂಪ್ಯದಿಂ ಥಳಥಳಿಸು |
ವಚ್ಚ ಮುತ್ತಿನ ಬೊಂಬೆಯಂತಿರ್ಪ ಶಿಶುಗಳಳು |
ತುಚ್ಚಿ ಬಸಿರಿಂ ಬಿಳ್ದುವೀಶ್ವರಮಹಾತ್ಮೆಯಂ ಬಣ್ಣಿಸುವರಾರೆಂದನು || ೨೨ ||

ನೆರೆದುದಲ್ಲಲ್ಲ ಪಟುವಟುಸಂಚಯಂ ತಮ್ಮ |
ಗುರುಗಳೊಡನೀ ವಾರ್ತೆಯಂ ಪೇಳಬೇಕೆಂದು |
ಪರಿದು ಬಂದಡ್ಡಬಿದ್ದೊಡನೆದ್ದು ಕೈಗಳಂ ಮುಗಿದು ತಮತಮಗೆ ನಿಂದು ||
ಉರಿದುವೀ ನಿಮ್ಮಯ ತಪೋಜಪಧ್ಯಾನಂಗ |
ಳಿರವದೇಂ ಭಾನಸಮದೊರ್ವ ಮಾಯಾವಿ ನಿ |
ಮ್ಮರಿಸಿಯರನೊಲಿಸಿ ಕೊಂಡೊಯ್ದಪಂ ಬಿಡಿಸಿಕೊಳಿಮೇ[೫]ಳೆಂದೊರಲ್ದರಂದು || ೨೩ ||

೧-೧ ಮಧ್ಯಾಪನ ತಪಸ್ಸು ಸುಯಿ । ದಾನ (ಮ.) ೨ ವರಾಂಗಣದಿ (ಶಿ, ತು.)
೩ ಜಗಾಧಾರ (ಶಿ.) ; ಜಟ್ಟಗಾರ (ಮ.) ೪ ಕರ್ಬುನದಂತೆ (ಶಿ.) ೫ ವೇ (ಶಿ.)

ಕೇಳಿ ಕಣ್ದೆರೆದು ಜಪಮಂ ಮರೆದು ಕೋಪಮಂ |
ತಾಳಿ ತಪಮಂ ತೊರೆದು ಮೌನಮಂ ಮರೆದು ನೆರೆ |
ಬೀಳುತಿರ್ಪಾಹುತಿಯನಿಟ್ಟು ಷಟ್ಕರ್ಮಮಂ ಬಿಟ್ಟು ನೆರೆ ಬೆರಗುವಟ್ಟು ||
ಕಾಳಕೂಟಕ್ಕೆಳಸಿದವರಾರ್ ಮಹಾರುದ್ರ |
ಭಾಳಲೋಚನದ ಕಿಚ್ಚಂ ಕಾವರಾರೆಂದು |
ಘೀಳಿಡಲ್ ದೆಸೆಗಳಾರ್ಭಟಿಸುತಿದ್ದುದು ಮಹಾಮುನಿಗಳದನೇನೆಂಬೆನು || ೨೪ ||

ತೋರು ತೋರಾವೆಡೆಯೊಳಿರ್ಪನಿಂದಿನ ಜೇಟಿ |
ಕಾರನವನಂ ಕರೆ ವಿಚಾರಿಸವನೀ ಪರಿಯ |
ದೂರನೆಂದೊರ್ವ ಸಿಂಹೋಗ್ರನೆಂದೆಂಬ ವಟುವಂ ಕರೆದು ನೇಮವೀಯೆ ||
ತೂರಿ ಕಂಗಳ್ ಕಿಡಿಗಳಂ ಸೂಸೆ ಮೈಬೆಮರ್ |
ತಾರೆ ಬೇಗದೊಳೀಶನೆಡೆಗೆ ಬಂದೆಲೆ ಮಾಯ |
ಕಾರ ನಿನ್ನಂ ಮಹಾಋಷಿಗಳೊಡಗೊಂಡು ಬರವೇಳ್ದರೆನಲಿಂತೆಂದನು || ೨೫ ||

ಒಸಗೆಯೇಂ ಋಷಿಗಳೆಮ್ಮಂ ಕರೆಯಬರಲದೇಂ |
ಬೆಸನವೆಮಗೀ ಭಿಕ್ಷಮಲ್ಲದವರೆಡೆಗೆ ಬಹ |
ಗಸಣೆಯೇಂ ಬಂದಂತೆ ನೀಂ ನಡೆಯೆನಲ್ಕೆ ಸಿಂಹೋಗ್ರನತಿಕೋಪದಿಂದೆ ||
ಮಸಗಿದ ಮೃಗೇಂದ್ರನಂತಾರ್ಭಟಿಸುತೆಗ್ಗಮಾ |
ನಸರ ಕುಲಗುರುವೆಯಾಗಳೆ ನಿಂದ ನಿಲವಿನಿಂ |
ಭಸಿತಮಾಗೆಂದು ಸರ್ವೇಶನಂ ಶಪಿಸಿದಂ ಪೇಳಲೇನಚ್ಚರಿಯನು || ೨೬ ||

ಜಂಬುಕನ ಕೋಪದೊಳ್ ವಾರಣದ ರೋಮಂಗ |
ಳೇಂ ಬಳ್ಕಿದಪ್ಪುವೆ ಮುನಿವಟು ಶಪಿಸಲಭವಂಗೆ |
ಮೇಂ ಬಪ್ಪುದೀ ಹಾನಿ ಕೇಳ್ದು ನಸುನಗುತೀಶ್ವರಂ ಮುಂದೆ ನಡೆವುತಿರಲು ||
ಎಂಬುದೇನಚ್ಚರಿವಡುತ್ತಧಿಕತೀವ್ರದಿಂ |
ದಂ ಬಂದು ಮುನಿಗಳೊಡನೀ ವಾರ್ತೆಯಂ ಪೇಳೆ |
ಸಂಜಾತನ ವಚನಮಂ ತಾವೆ ಬಂದರುರಿವುತೆ ಹೊಗೆವುತೀಶ[೧]ನೆಡೆಗೆ || ೨೭

೧ ಹೊಗುತ್ತೀಶ (ಹು.); ಹೋಗುತೀಶ (ಶಿ.)

ಬಂದು ಕಾಣುತ್ತೆಲ್ಲರುಂ ಶಪಿಸಲಣುಮಾತ್ರ |
ವೆಂದು ಬಗೆಯದುದನೀಕ್ಷಿಸಿ ಮತ್ತೆ ದರ್ಭೆಯಿಂ |
ದಂ ದಿವ್ಯಮಂತ್ರಮುಂ ಮಂತ್ರಿಸಿಡೆ ಕಾಲಾಗ್ನಿಯಂತೈದಿ ಶಿವನಿದಿರೊಳು ||
ನಂದಿ ಪೋಗಲ್ ಬಳಿಕ ನಾನಾಪ್ರಕಾರದಿಂ |
ಕೊಂದಪೆನೆನುತ್ತೆಸಗಿದನಿತುವುಂ ಬಯಲಾಗೆ |
ನಿಂದು [1]ಮಾರಣಹೋಮಮಂ ತೊಡಗಿದರವರದನೇ[1]ನೆಂಬೆನದ್ಭುತವನು || ೨೮ ||

ಯೋಜನದ ವಿಸ್ತೀರ್ಣದೊಳ್ ಕುಂಡಮಂ ಸೃಜಿಸಿ |
ಮೂಜಗದ ಸಿದ್ಧಸಮಿತು[2]ಗಳೊಳವರಾಜ್ಯದಿಂ |
ದಾ ಜಗತ್ಸಿದ್ಧ ನಾಲ್ವತ್ತೆಂಟುಸಾವಿರಮಹಾಮುನಿಗಳಲ್ಲಿ ಕುಳಿತು ||
ಆ ಜಾತವೇದನೊಳ್ ಘೋರಮಂತ್ರಂಗಳಿಂ |
ದೀ ಜೇಟಿಕಾರನಂ ದಹಿಸೆನುತ್ತಾಹುತಿಸ |
ಮಾಜದಿಂ[3] ಬೇಳುತಿರ್ದರ್ ಕೋಟಿಶತಕೋಟಿಗಳನೊರ್ವರೊರ್ವರಂದು || ೨೯ ||

ಹೊಗೆಹೊಗೆದು ಸುತ್ತಲೆತ್ತೆತ್ತಲುಂ ಸಲೆ ಸುತ್ತು |
ವೊಗೆಯು ಚೂಣಿಯನೊತ್ತಿ ನೂಂಕಿ ನೆರೆ ಭುಗಿಭುಗಿಲ್ |
ಭುಗಿಲೆನುತ್ತುರಿವ ಶಿಖಿ ನಾಲಗೆಯೊಳೊಂದರಿಂದೊಂದುಗ್ರಮಾಗಿ ಕೂಡೆ ||
ನೆಗೆದುವಂದುಗ್ರವ್ಯಾಘ್ರಂ ಘೋರಸರ್ಪಂಗ |
ಳಗಣಿತಾಯುಧಮೇಳೆ ಭೂತಗಣ ಶಕ್ತಿಗಳ್ |
ಮಿಗುವಪಸ್ಮಾರವೆಂಬದ್ಭುತದ ರೂಪಂಗಳಾರ್ಭಟಿಸುತಿಂತೆಂದುವು || ೩೦ ||

ಬೆಸಸು ಬೆಸಸಾಹುತಿಯನೆಮಗೆನುತ್ತೊಡನೆ ಗ |
ರ್ಜಿಸುವನಿತುಮಂ ನೋಡಿ ಸನ್ನೆಯಿಂದೀಶನಂ |
ಮುಸುಕಿ ನುಂಗಲ್ ವೇಳಲೊಡನೀಶನಂ ಕಾಣುತಾರ್ಭಟಿಸಿ ಮೇಲ್ವಾಯಲು ||
ನಸುನಗುತ್ತೆರಳೆಯಂ ತಾಳ್ದು ಪುಲಿಯಂ ಸೀಳ್ದು |
ಪೊಸಸಮ್ಮುವುಟ್ಟು ಫಣಿಗಳ ತೊಟ್ಟು ಕೈದುಗಳ |
ನೆಸಕದಿಂ ಧರಿಸಿ ಶಕ್ತಿಯನೊರಸಿ ಮತ್ತೆ ಬರ್ಪುರಿಯನಾಂತಂ ಕರದೊಳು || ೩೧ ||

೧-೧ ಮಾರಣಮಹಾಹೋಮಮಂ ತೊಡಗಿದರಂದೇ. ೨ ಸಮಿತ (ಶಿ.) ೩ ಮಂ (ಹು.)

ಮತ್ತಪಸ್ಮಾರವತಿಕೋಪದಿಂ ರುದ್ರನಂ |
ಮುತ್ತೆ ಮುಂದಲೆವಿಡಿದು ಕೆಡಹಿ ಪಾದಂಗಳಿಂ |
ತೊತ್ತಳಂದುಳಿದು ತಾಂಡವರೂಪಮಂ ಧರಿಸಿ ಕುಣಿವುತಿರೆ ಭೂತಂಗಳು ||
ತತ್ತಧಿಮಿಧಿಮಿಕೆಂದು ತಾಳಮದ್ದಳೆಗಳುಮ |
ಸುತ್ತಿ ಪಾಡುತ್ತಿರಲ್ ವಿಸ್ಮಯಂಬಟ್ಟು ಮುನಿ |
ಪ್ರೋತ್ತಮರ್ ಶಿವನೆಂದು ನಿಶ್ಚಯಿಸಿ ನಿಗುರ್ವ ನಾಲಗೆಯಿಂದೆ ಪೊಗಳ್ದರಂದು || ೩೨ ||

ರಕ್ಷಿಸಿಂತರಿಯದತಿಮುಗ್ಧಳಂ ಪರಮೇಶ |
ರಕ್ಷಿಸೈ ಕಂಡು ಕಾಣದ ಪುಟ್ಟುಗುರುಡರಂ |
ರಕ್ಷಿಸೈ ಕೇಳ್ದು ಕೇಳದ ಮೂರ್ಖಬಧಿರರಂ ನೀನೆನುತ್ತಡಿಗೆರಗಲು ||
ಈಕ್ಷಿಸಿ ಕೃಪಾವಲೋಕನದೊಳವರೆಲ್ಲರನು |
ಪೇಕ್ಷೆಯಿಲ್ಲದೆ ಸಂತವಿಟ್ಟು ಬೀಳ್ಕೊಳೆ ತಮಗೆ |
ಶಿಕ್ಷೆಗೆಯ್ಯಮಳಜ್ಞಾನೋಪದೇಶವನೆಂದು ಬಿನ್ನಪಂಗೆಯ್ದರಂದು || ೩೩ ||

ಎನಲೀಶ್ವರಂ ಕರುಣದಿಂ ಕರಕಪಾಲಮಂ |
ಮನಮೊಲಿದು ಭೈರವನ ಕೈಗಿತ್ತು ಕೂಡೆ ಮುನಿ |
ಜನಕೆ ತತ್ತ್ವಜ್ಞಾನಮಂ ಬೋಧಿಪುಜ್ಜುಗದೆ ದಕ್ಷಿಣಾಮೂರ್ತಿರೂಪಂ ||
ಅನುನಯದೊಳಾಂತು ಬೋಧಿಸಿ ಮುನಿಪರಂತವರ |
ವನಿತೆಯರ್ ಸಹಮಾಗಿ ಬೀಳ್ಕೊಟ್ಟು ಗಿರಿರಾಜ |
ತನುಜೆಯುಂ ನೆನೆದೈದಿ ಕೈಲಾಸಮಂ ಪೊಕ್ಕು ವಿಭವದಿಂದಿರುತಿರ್ದನು || ೩೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮುಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ಸಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೫ ||

ಅಂತು ಸಂಧಿ ೨೦ಕ್ಕಂ ಪದಗಳು ೭೮೧ಕ್ಕಂ ಮಂಗಳಮಹಾಶ್ರೀ

ಇಪ್ಪತ್ತೊಂದನೆಯ ಸಂಧಿ

ಸೂಚನೆ

ಭೃಗುಶಾಪದಿಂದೆ ಹರಿ ಮತ್ಸ್ಯಾವತಾರದಿಂ |
ನಿಗಮಂಗಳಂ ತಂದು ಬಳಿಕಹಂಕರಿಸಲಾ |
ವಿಗಡಮಿಾನಂ ಕೊಂದು ಕಂಕಾಳಧರಲೀಲೆಯಿಂದಲಭವಂ ಮೆರೆದನು ||

ಹರಿಭೂಷ ಹರಿದಹನ ಹರಿವಸನ ಹರಿಶಯನ |
ಹರಿತನುಜಹರಿಮುಖ್ಯಸುರವಿನುತಹರಿಚರಣ |
ಹರಿಹರಿಹರಿಪ್ರಸಖ ಹರಿನಯನ ಹರಿಜನಕತನಯಾನುಜಾತವರದ ||
ಹರಿತನಯಸಂಹಾರ ಹರಿಕಲಾಲಂಕಾರ |
ಹರಿಜಾತಜಾತಜಾತಪ್ರಮುದವಿಧ್ವಂಸ |
ಹರಿಕೋಟಿಸಂಕಾಶ ಪಂಪಾವಿರೂಪಾಕ್ಷ ರಕ್ಷಿಸಾನತಜನರನು || ೧ ||

ಆದಿಯೊಳ್ ರಾಮ ಕೇಳ್ ತಮನೆಂಬ ಖಳನಖಿಳ |
ವೇದಮಂ ಕದ್ದಬ್ಧಿಯೊಳ್ ಮುಳುಂಗಲ್ ಕೆಟ್ಟು |
ಪೋದುವವನಿಯ ಸದಾಚಾರ ಸುತಪೋಧರ್ಮ ಜಪ ನೇಮ ಹೋಮಂಗಳು ||
ಆ ದಿವ್ಯಮಂತ್ರ ಮಖ ಹವ್ಯ ಕವ್ಯಾದಿ ನಾ |
ನಾದಿವಿಜತರ್ಪಣಂಗಳ್ ಬಳಿಕೆ ದೇವತತಿ |
ಗಾದುದೈಶ್ವರ್ಯನಾಶಂ ಬಹುಕ್ಲೇಶಮಪಸಂತೋಷಮೇನೆಂಬೆನು || ೨ ||

ಇಂತು ಕೆಲಕಾಲಮಿರುತಿರ್ದು ನಾನಾದೇವ |
ಸಂತತಿ ಹಿರಣ್ಯಗರ್ಭಂಗೆ ಮೊರೆಯಿಡಲುಮಾ |
ಕಾಂತನಿಂದಲ್ಲದಿದು ಹರಿಯದೆಂದವರನೊಡಗೊಂಡು ಶಿವನೆಡೆಗೆ ಬಂದು ||
ಸಂತಸದೊಳೆಲ್ಲರುಂ ಮೆಯ್ಯಿಕ್ಕಿ ಸಕಲವೃ |
ತ್ತಾಂತಮಂ ಬಿನ್ನವಿಸೆ ಕೇಳ್ದೀಶ್ವರಂ ರಮಾ |
ಕಾಂತಂಗೆ ನೇಮಿಸಲ್ ತದ್ವಿಷ್ಣು ಪೊರಮಟ್ಟನಭವನಡಿಗಳ್ಗೆ ಮಣಿದು || ೩ ||

ನಿಮಿಷಮೊಳ್ ಶಂಭುವಂ ಬೀಳ್ಕೊಳುತ್ತುಂ ಮಹಾ |
ನಿಮಿಷಮಾಸಂಹಾಳ್ಪ ವಾರ್ಧಿಯಂ ಪೊಕ್ಕಂದ |
ನಿಮಿಷರಿಪುವಂ ಕೊಂದು ನಿಗಮಂಗಳಂ ದೇವತತಿಗಿತ್ತಹಂಕೃತಿಯೊಳು ||
ಕ್ರಮಿತಸ್ವೈರಾಟ್ಕಾಯಮಂ ಧರಿಸಿ ಕೂಡೆ ಸಂ |
ಕ್ರಮಿತನಿಖಿಲಾಬ್ಧಿಗಳ್ ಮೇರೆಯಂ ಮೀರಲಾ |
ಕ್ರಮಿತಜಲದಿಂ ಧರಣಿಶರಧಿಯೊಂದಾದುವದನೇನೆಂಬೆನಚ್ಚರಿಯನು || ೪ ||

ಪೊಡೆಮಗುಳಲಬ್ಧಿಯಂತಿಂತಾಗಿ ತಾಯ್ಮಳಲ್ |
ಗಡಿಗಾಣಲುಣ್ಮುತಿರ್ಪುಸಿರ್ಪೊಯ್ಗಳಿಂದೆ¹ ಬುಡ |
ಬುಡಸೋಕ್ಕೆ ಬುದ್ಬುದಂಗಳ್ ಹಿಮಾದ್ರಿಯವೊಲಾಕಾಶಮಂ ಚುಂಬಿಸುತಿರೆ ||
ಕುಡಿವಾಲಮುಪ್ಪಳಿಸಲೊಗೆದ ತುಂತುರ್ ಜಗಕೆ |
ಕಡೆಗಾಲಮಂ ಮಾಡಲಮರರೊಡನಜನೈದಿ |
ಮೃಡನಡಿಗೆ ಬಿನ್ನೈಸಲಬ್ಧಿಗೈತಂದು ಮೀನಂ ಕಾಣುತಿಂತೆಂದನು || ೫ ||

ಕಟಕಟಾಯಿಮಾ ಮತ್ಸ್ಯಮಿಲ್ಲಿರಲ್ ಜಗಕೆ ಸಂ|
ಕಟಮಪ್ಪುದಚ್ಚರಿಯೆ ನೋಡೆಂದು ಕೂಡೆ ಲಟ |
ಕಟಿಸಿ ಕಡಲೊಳ್ ಪೊಕ್ಕು ಗುಡಿಗುಡಿಪ ಮೀನ ಬಗ್ಗರಿಯನೊದೆದೌಂಕಿ ಕೂಡೆ ||
ಕಟವಾಯ್ಗೆ ಕೈಯನಿಟ್ಟೆರಡೆರಳ್ ಸೀಳಾಗಿ |
ನಿಟಿಲೆನಲ್ ನಿಟಿಲೆನಲ್ ನಿಟ್ಟೆಲುವನುರೆ ಮುರಿದು |
ನಿಟಿಲಾಕ್ಷನಂದು ಕಂಕಾಳಾಯುಧಂಬಿಡಿದನೆನೆ ರಾಮನಿಂತೆಂದನು || ೬ ||

ವಿರಚಿಸೆಲೆ ಚೆನ್ನಬಸವೇಶ ತದ್ವಿಷ್ಣುವಾ |
ಹರಸಾಜ್ಞೆಯೊಳ್ ಲೋಕಹಿತಮತ್ಸ್ಯರೂಪಮಂ |
ಧರಿಸಿ ತಮನಂ ಕೊಂದು ವೇದಮಂ ತಂದ ಕಜ್ಜಂ ಮುಗಿದಮೇಲದೇಕೆ² ||
ಶರಧಿಯೊಳಗಜ್ಞಾನದಿಂದಹಂಕರಿಸಿರ್ದ |
ಪರಿಯುಮೇಸೀಶ್ವರನಮಂ ಮರಳ್ದಿಂತು ಸಂ |
ಹರಿಸಲೇಂ ಕಾರಣಮೆನುತ್ತೆ ಬಿನ್ನವಿಸಿದಂ ನಿಟಿಲತಟಹಸ್ತನಾಗಿ || ೭ ||

---

೧ ಯ್ಗಳಿಂದೆ (ಶಿ, ಮ, ಹು.) ೨ ದಕ್ಕೆ (ಮ.)

ಅದನೊರೆದಪೆಂ ಸಿದ್ಧರಾಮ ಕೇಳಾದಿಕಾ |
ಲದ ವೈರದಿಂದಮರದನುಜರ್ಗೆ ಕಾಳೆಗಂ |
ಪುದಿಯಲಾ ದಿವ್ಯಸಾಹಸ್ರವರ್ಷಂಗಳೀರ್ಕೈದಾಗಲಾ ಮಧ್ಯದ ||
ಕದನದೊಳ್ ಪುತ್ರಮಿತ್ರಾನುಜಾಗ್ರಜರಳಿದ |
ಹದನನೀಕ್ಷಿಸಿ ಕಲಹಮಂ ಮಾಣ್ಬ ಪುರಕೈದಿ |
ಮುದಮುಡಗಿ ದಿವಿಜಪತಿ ಗುರುವಿಂಗೆ ಬಿನ್ನವಿಸಲಾತನೊಲಿದಿಂ[೧]ತೆಂದನು || ೮ ||

ಸುತ್ರಾಮ ಕೇಳ್ ಕಲಹಮೆಂಬುದಿದು ಪಟದೊಳಗೆ |
ಚಿತ್ರಿಸಿದ ಬೊಂಬೆಗಳ ಕಾಳೆಗವೆ ಸತಿ ಪುತ್ರ |
ಮಿತ್ರ ಬಾಂಧವರ ಕೂಡಿಂಗಳಲ್ಲೊಡೆ ದೇವಲೋಕದೊಡೆತನವೇತಕೆ ||
ಸತ್ರುದಂಬಲಿಯೆ ಸಾಲದೆ ನಿನಗೆ ದಿವಿಜಪತಿ |
ಚಿತ್ರಮಿದು ನಿನ್ನಾಳ್ತನಂ ಸೋಲಗೆಲಮೀಶ[೨] |
ಪುತ್ರನಾದೊಡೆ ಬಿಡುವುದೇ ಮರುಳೆ ಕೇಳೆನುತೆ ಜೀವನರಿದಿಂತೆಂದನು || ೯ ||

ದೇವೇಂದ್ರ ಕೇಳ್ ಹಿಮಾಲಯತಟದೊಳಾ ಮಹಾ |
ದೇವನಂ ಭಜಿಸಿಯುಳಿದವರನೆಬ್ಬಿಸುವ ಸಂ |
ಜೀವಿನೀಮಂತ್ರಮಂ ಪಡೆವೆನೆಂದಮರಗುರು ಪೋಗಿ ತಪದಿಂದಿರುತಿರೆ ||
ಈ ವಾರ್ತೆಯಂ ಕೇಳುತಳಲಿನಿಂದಸುರಗುರು |
ಜೀವನಿರ್ದೆಡೆಗೈದಿ ತನ್ಮಂತ್ರಮಂ ಕುರಿತು |
ಭಾವದೊಳ್ ಶಂಭುವಂ ನೆಲೆಗೊಳಿಸುತುಗ್ರತಪದಿಂದಿರ್ದನವನಿದಿರೊಳು || ೧೦ ||

ಅಂತಸುರಸುರಗುರುಗಳಿರ್ವರುಂ ಮುಂಚಿ ಶಿವ |
ನಂ ತಮತಮಗೆ ಮೆಚ್ಚಿಸುವೆವೆಂದು ಚಿರಕಾಲ |
ಮುಂ ತಪಂಗೆಯ್ಯಲೀಶಂ ಪ್ರಸನ್ನತೆಯೊಳೈತಂದವರ್ಗಳಿತ್ತಂಡದ ||
ಮುಂತೆ ನಿಂದೆಲೆ ಜೀವಶುಕ್ರರಿರ ಬಳಲ್ದಿರಿ |
ನ್ನೇಂ ತಳುವದುಸಿರಿರೈ ನಿಮ್ಮ ಬಯಕೆಯನೆನಲ್ |
ಸಂತಸದೊಳಿರ್ವರುಂ ಬಿನ್ನವಿಸಿದರ್ ಕೂಡೆ ತಂತಮ್ಮ ಬಯಕೆಗಳನು || ೧೧ ||

---

೧ ನೊಡನಿಂ (ಹು. ಮ.) ೨ ಗೆಲನಿಮಿಷ (ಗೋ.)

ಅಸುರಸುರಗುರುಗಳಿಂ ಸ್ವಾರ್ಥಮೊಂದಾದುವಿದ |
ನುಸಿರದಿರಬಾರದುಸಿರ್ದೊಡೆ ದೈತ್ಯರಿಂದವು |
ಬ್ಬಸಮಪ್ಪುದಿವನೊಂದುಪಾಯದೊಳ್ ತಮಗಸಾಧ್ಯಂ ಮಾಡಿ ಕಳೆವೆನೆಂದು ||
ಬೆಸಗೊಂಡು ಕರೆದಿರ್ದರಂ ನಿಮ್ಮ ಬಯಕೆಗಳ |
ನೊಸೆದೀವೆನವು ನಿಮ್ಮ ಕೈಸೊಳಪ್ಪೊಡೆ ಮಾಳ್ಪು |
ದಸಮಮಂತ್ರದ ಪುನಶ್ಚರಣೆಯಂ ಕೇಳಿಮೆಂದೀಶ್ವರಂ ನಿರವಿಸಿದನು || ೧೨ ||

ಚಚ್ಚಾಟಕನಾಗಿ ಘನಕುಂಡಮಂ ತೆಗೆದು ಪೆ |
ಗ್ಗಿರ್ಚ್ಚಸದೊಳಗೊಟ್ಟಿ [1]ಹೊಗೆ ಹೊಗೆಯುತಿದರೊಡನೆ |
ನೆಚ್ಚುಪ್ರೀತಿಯಿಂ ಸೋಂಕೆ ತಲೆಕೆಳಗುಮಾಗಿ ನಭದೊಳ್ ನಿಂದು ನಿಶ್ಚಲತೆಯಿಂ ||
ಬೆಚ್ಚದಾ ಹೊಗೆಯನಾಸ್ವಾದಿಸುತೆ ತನ್ಮಂತ್ರ |
ದುಚ್ಚರಣೆಯಿಂ ದಿವ್ಯಸಾಹಸ್ರವರ್ಷಮಿರೆ |
ನಚ್ಚಿದಂತೀ ಮಂತ್ರಸಿದ್ಧಿಯಪ್ಪುದು ನಿಮಗೆ ಕೈಕೊಂಬುದಿದನೆಂದನು || ೧೩ ||

ಕೇಳ್ದು ನಡುನಡುಗಿದಂ ದಿವಿಜಗುರು ದೃಢಶಕ್ತಿ |
ಸಾಲದೆನಗೀ ತಪಸ್ಸಿಂಗೆಂದು ಶಶಿಕಲಾ |
ಮೌಳಿಯಡಿಗೆರಗಿ ಬಿನ್ನವಿಸಿ ಬಿಮ್ಮೆಟ್ಟಿದಂ ಶುಕ್ರನಾ ಖಳಕುಲಕ್ಕೆ ||
ಮೂಲಮಂತ್ರವ ಗುರುವೆನಲ್[2] ಬಳಿಕೆ ವಿಸ್ತರಿಸಿ |
ಪೇಳಲಳವಲ್ಲ ಸರ್ವಜ್ಞನಂ ಜಾಣ್ಣುಡಿಯ |
ಕೀಲಣಿಕೆ[3]ಯಿಂ ಗೆಲಿದನಭವ ನೀನೆನ್ನಿಂದಲಹುದೆನಲ್ ಮಾಳ್ಪೆನೆಂದು || ೧೪ ||

ಮರಳಿ ಮೆಚ್ಚಿದನಭವನವನ ಚದುರಿಂಗೆ ಭಾ |
ಪುರೆ ಭಲರೆ ಜಾಗೆಂದು ಮೂಗಿನೊಳ್ ಬೆರಳಿಟ್ಟು |
[illegible]ಸೊಲೆಮೊಲೆದು ಕೇಳಿಲೆ ಶುಕ್ರನೀ ಜಾಣನಹುದೆನುತೆ ಕರುಣದಿಂದೆ |
ಪರಮಮಂತ್ರೋಪದೇಶಮನಿತ್ತು ಶಂಕರಂ |
ತೆರಳಿದಂ ಕೈಲಾಸಗಿರಿಗತ್ತಲಿತ್ತಲತಿ |
ಸುರುಚಿರಂ ಭೃಗುಸುತಂ ಸಂತಸಮೊಳಿರ್ದನಿಲ್ಲಿ ದನು ಕೇಳಚ್ಚರಿಯನು || ೧೫ ||

[illegible]
ಪಸುತೆಏ (ಮ.) ೨ ಗುರುವಲಾ (ಕ.) ೩ ಕೀಲೆಣಿಕೆ (ಪ, ಗೋ.)

ಪಲ್ಲವಿಸಿದುದು ಶುಕ್ರನಾನಂದಲತೆ ಶಿಷ್ಯ |
ರೆಲ್ಲರಂ ಕರೆದೆಂದನೆಮಗೀಗ ಪಾರ್ವತೀ |
ವಲ್ಲಭನ ಕರುಣಮಾಯ್ತಾ ಮಂತ್ರಸಿದ್ಧಿಯಪ್ಪನ್ನೆಗಂ ನೀವಿನಿಬರು ||
ಸಲ್ಲಲಿತಭಸಿತ ರುದ್ರಾಕ್ಷಿ ಜಟೆಗಳ ಧರಿಸು |
ತಲ್ಲಲ್ಲಿ ತಪಿಸುತಿರಿ ನಿಮ್ಮ ವೈರಿಗಳಟ್ಟಿ |
ಕೊಲ್ಲಬಂದರೆ ಕಾಯ್ವನೆಮ್ಮ ಪಿತ ಭೃಗುವಾತನಾಶ್ರಮಂ ಬುಗಿಮೆಂ[೧]ದನು || ೧೬ ||

ಎಂದವರನೆಲ್ಲರಂ ಕಳುಪಿ ಪಿತನಾಶ್ರಮಕೆ |
ಬಂದು ತದ್ವೃತ್ತಾಂತಮಂ ಬಿನ್ನಪಂಗೆಯ್ದು |
ತಂದೆಯಂ ಬೀಳ್ಕೊಂಡು ಪೋಗಿ ತಪಮಂ ಮಾಡುತಿರೆ ಶುಕ್ರನತ್ತಲಿತ್ತ ||
ಮುಂದುಗೆಟ್ಟಮರರೈತಂದು ಶುಕ್ರಂ ಮಾಡಿ |
ದಂದಮಂ ಹರಿಗೆ ಬಿನ್ನವಿಸಲಾತಂ ನುಡಿದ |
ನಿಂದುಮೌಳಿಯ ವರಂ ಪುಸಿವುದೇಯೆನುತೆ ತದ್ವಿಷ್ಣು ಮಗುಳಿಂತೆಂದನು || ೧೭ ||

ಬಲ್ಲಿದಂ ಶುಕ್ರನಾ ಮಂತ್ರಸಿದ್ಧಿಯ ಪಡೆದು |
ಮೆಲ್ಲನೈತರ್ಪಿನಂ [೨]ದನುಜಸಂಕುಲಕುಲಮು[೨] |
ನಿಲ್ಲೆನಿಸಬೇಕೆನುತಲಲ್ಲಲ್ಲಿಯುಗ್ರತರತಪದಿಂದಲೊಪ್ಪುತಿರ್ಪ ||
ಖುಲ್ಲದಾನವಸಮೂಹಂಗಳಂ ಬಿಡದೆ ಪೊ |
ಕ್ಕಲ್ಲಿ ಪೊಕ್ಕರಸಿ ನಾನಾಪ್ರಕಾರಂಗಳಿಂ |
ಕೊಲ್ಲಿಮೆಂದಷ್ಟದಿಕ್ಪಾಲರ್ಗೆ ವಿಷ್ಣುವಾಜ್ಞಾಪಿಸಿದನಾ ಕ್ಷಣದೊಳು || ೧೮ ||

ಹರಿಯ ನೇಮದೊಳುಂ ಚತುರ್ಬಲಂಗಳ್ ವೆರಸಿ |
ಹರಿಮುಖ್ಯದಿಗಧಿಪರ್ ಸುತ್ತಲೆತ್ತೆತ್ತಲುಂ |
ಹರಿಹರಿದು ಗಿರಿ ವನ ನದೀ ನದಂಗಳ ತೀರದಲ್ಲಿ ನಾನಾತೆರದೊಳು ||
ಹರನ ಧ್ಯಾನ[೩]ದೊಳಿರ್ಪ ದೈತ್ಯರಂ ಕೂಡೆ ಸಂ |
ಹರಣಮಂ ಮಾಡತೊಡಗಿದರಸುರಕಾಯದಿಂ |
ಹರಣಂಗಳಳಿವುತಿರ್ದುವು ನಿರಾಯುಧರನಿರಿವ[೪]ಲ್ಲಿ ತಡೆಗಿಡೆಗಳುಂಟೇ[೪] || ೧೯ ||

---

೧ ರೆಂ (ಮ.) ; ಯೆಂ (ಪ, ಶಿ, ಹು.) ೨-೨ ತಾ ದನುಜಸಂಕುಲಮ (ಶಿ.) ; ದನುಜ ಸಂಕುಲಮನಾ (ಮ.) ೩ ಜಾನ (ಮ, ಹು.) ; ಜ್ಞಾನ (ಪ.) ೪-೪ ಲ್ಲಿ ತಡೆಬಿಡೆ ಗಳುಂಟೇ (ಮ.) ; ಲ್ಲಿನ್ನು ತಡೆಗಳುಂಟೇ (ಶಿ.)

ತಱಿದರಱಿದರ್ ಕೂಡೆ ಕತ್ತರಿಸಿದರ್ ಪೊಯ್ದು |
ಱಿಱಿದರೆಚ್ಚರ್ ಕೊಚ್ಚಿದರ್ ಕರಪದಂಗಳಂ |
ಮುಱಿವಿಟ್ಟರಟ್ಟಿದರ್ ಮೆಟ್ಟಿದರ್ ಪೆಣಗಳನೊಡಲ್ಗಳೊಳ್ ಭಲ್ಲಿಹಂಗಳು ||
ಮುಱಿಯೆ ಸಿಕ್ಕಿದರೊಕ್ಕಲಿಕ್ಕಿದರ್ ಮುಕ್ಕಿದರ್ |
ಕೊಱೆದರಱೆದರ್ ಕೊಂದರಂದಗೆಡಿಸಿದರಸುಂ |
ಜೊರೆವಿನಂ ಬಾಯ್ಗಳಂ ತೆರೆವಿನಂ ಮೆಯ್ಗಳಂ ಮಱೆವಿನಂ ಸುರರಸುರರ || ೨೦ ||

ವೆಂಟಣಿಸಿ ಲುಬ್ಧಕರ್ ಮೃಗಸಮೂಹಂಗಳಂ |
ಗೋಂಟು ಗೋಂಟಂ ಸೋಹಿ ತರುತಿರ್ಪ ಮಾಳ್ಕೆಯಿಂ |
ದೆಂಟುದೆಸೆಯುಂ ಬಿಡದೆ ಕೊಲ್ವ ದಿಕ್ಪಾಲಕರ ದಾಳಿ ಬೆನ್ನಟ್ಟೆ ಬರಲು ||
ಕಂಟಕಂಗಳ್ ನಾಂಟೆ ಬಿದ್ದು ಕಾಲೊಡೆದು ಬಾಯ್ |
ಗಂಟಲ್ಗಳೊಣಗಿ ಗತಿಗೆಟ್ಟು ಮತಿಯಳಿದೆಂಸು |
ಗೆಂಟೊ ಭೃಗುಮುನಿಪನಾಶ್ರಮಮೆಂದು ಕಂಗೆಟ್ಟು ಬರುತಿರ್ದರಾ ದನುಜರು
|| ೨೧ ||

ಹರಿಸುರೇಂದ್ರಾದಿ ನಾನಾದಿವಿಜಯೋನಿಜರ್ |
ಕರುಣಮೆಳ್ಳನಿತಿಲ್ಲದೀ ನಿರಾಯುಧರನೀ |
ಪರಿಕೊಲಲ್ಕವರೆಂತು ಗೆಯ್ವರೆಂದೆಣ್ದೆಸೆಗೆ ಬಾಯ್ವಿಟ್ಟು ಮೊರೆಯನಿಟ್ಟು ||
ತಿರುತಿರುಗಿ ಚಾರಿವರಿದೋಡಿ ಹೊಗೆ ದೆಸೆಗಾಣ |
ದರಿಗಳಿಂ ಕಡಿಖಂಡಮಾದರರೆಬರ್ ಮಿಕ್ಕ |
ದೊರೆರಕ್ಕಸರ್ ಮಹಾಕೋಪದಿಂ ಗುಡುಗುಡಿಸಿ ಪಲ್ಮೊರೆವುತಿಂತೆಂದರು || ೨೨ ||

ಪುಟ್ಟಿದಂದಿಂದೆ ಸುರರೆಮ್ಮುಮಂ ಕಂಡು ಕಂ |
ಗೆಟ್ಟೋಡುವವರಿಂದು ತಮ್ಮ ಬಾಳ್ ತಲೆಗಳಂ |
ಕುಟ್ಟುವಂತಾಯ್ತು ಹುಲಿಮೀಸೆಯುಂ ನರಿಗಳಲ್ಲಾಡುವಂತಾದುದೆಂದು ||
ಬೆಟ್ಟಂಗಳಂ ಕಿತ್ತು ಪೊತ್ತಿವರನಿಟ್ಟು ಬೆ |
ನ್ನಟ್ಟಿದಪೆವೆಂದೊಡನೆ ಗುರುವಿನಾಜ್ಞೆಗೆ ಭಯಂ |
ಬಿಟ್ಟು ಭೃಗುಮುನಿಪನಾಶ್ರಮವನೊಳಪೊಕ್ಕು ಬಾಯ್ಬಿಟ್ಟು ಮೊಱೆಯಿಟ್ಟರಂದು
|| ೨೩ ||

೧ ಶಲ್ಯಂ (ಹು, ಮ.)

ಎಲೆ ರಾಮ ಕೇಳ್ ಭೃಗುಮುನೀಶ್ವರಂ ಚಿತ್ತದೊಳ್ |
ನೆಲೆಗೊಳಿಸಿ ಶಂಭುವಂ ಬಹಿರಂಗಮಂ ಮರೆದು |
ಸಲೆ ಸಮಾಧಿಯೊಳಿರ್ದನಾತನರ್ಧಾಂಗಿ ಪ್ರಖ್ಯಾತೆಯಿಾ ಸುರರಿಪುಗಳ ||
ಕಳವಳದ ಮೊರೆಗೇಳ್ದಿದೇನೆಂದು ಬೆಸಗೊಳಲ್ |
ಖಳರೆಂದರೆಲೆ ತಾಯೆ ನಿರಪರಾಧಿಗಳೆಮ್ಮ |
ನಳುಕದೆ ನಿರಾಯುಧರನಮರರಿರಿದಪರೆಂದು ತವಗುತವಗೆ ಮೊರೆಯಿಟ್ಟರು || ೨೪ ||

ಅದೆ ಶಕ್ರಹಸ್ತವಜ್ರಾಯುಧಂ ನೆಗಪಿ ಕಿಡಿ |
ಗೆದರುತಿದೆ ವಹ್ನಿ ಪಿಡಿದುಗ್ರಖಡ್ಗಂ ಕರದೊ |
ಳೊದರುತಿದೆ ಯಮನ ದಂಡಂ ನಿಮಿರ್ದು ನಿರುತಿಕೊಂತಂ ಕೊಸರುತಿದೆ ಕೈಯನು ||
ಅದೆ ವರುಣಕರಪಾಶವುರಿಲಾಗಿ ಮಾರುತನ |
ಗದೆ ತೂಗುತಿದೆ ಕುಬೇರನ ಭಲ್ಲೆಯಂ ಕೈಯ |
ನೊದೆದು ಬರುತಿದೆ ಬೇಗದೊಳ್ ಸಲಹು ಸಲಹೆಂದು ಮೊರೆಯಿಟ್ಟರಾ ದೈತ್ಯರು || ೨೫ ||

ಇಂತಟ್ಟಿ ಬರ್ಪ ನಿರ್ಜರಭಯಕ್ಕೊಡನೊಡನೆ |
ಪಿಂತಿರುಗಿ ನೋಡಿ ಕಣ್ಣಾಯ್ಪುಡುವ ಶಿಷ್ಯರಂ |
ಸಂತೈಸುತಂಜಬೇಡೆಂದಭಯವಿತ್ತು ಕ್ಷಣದೊಳ್ ದಿವ್ಯಮಂತ್ರಂಗಳ |
ಕಂತುಹರನಂ ಸ್ಮರಿಸಿ ಮಂತ್ರಿಸಲ್ ಸಕಲಸುರ |
ಸಂತತಿಗೆ ಕರಗತಿಸ್ತಂಭಂಗಳಾಗಿರೆ ಪ |
ಟಾಂತರದೊಳಿಸೆವ ಬೊಂಬೆಗಳಂತೆ ಕಣ್ಗೆಸೆದರೇನೆಂಬೆನಚ್ಚರಿಯನು || ೨೬ ||

ಅನಿತರೊಳ್ ಸುರಪನಾ ಪಿಂಗಡೆಯೊಳ್ನಿತಪ್ಪ |
ವನಜಾಕ್ಷನಂ ನೋಡಿ ವಿಷ್ಣು ಕೇಳಿವಳೀಗ |
ಅನುಪಮಿತಮಾಯಾಧಿದೇವಿಯಿವಳಿಂದೆಮ್ಮ ಕೈಕಾಲ್ಗೆ ತಡೆಯಾದುದು |
ಅನುಮಾನಿಸದೆ ಚಕ್ರದಿಂದಿಟ್ಟು ಕೊಲ್ಲೆಂಬ |
ವಸಿ ಪಿಂಚಲವಳ ತಲೆ ¹ಮುಂಚಿ ಬೀಳ್ವಿನಮಿಡಲ್ |
ಮುನಿಸಿಪ¹ ಹಾ ಹಾಯೆಂದು ಹಲುಬೆ ಖ್ಯಾತೆಯು ಜೀವನಂ ಪೋಯ್ತು ಪಿಸಿಷಮೋಗೆ
|| ೨೭ ||

೧-೧ ಮುಂಚಿ ಬೀಳ್ವ ಮುನಿಪ । ಜನಪ್ರ । ಶಿ. । ; ಮುಂಚೀಳ್ವಿನಂ ಬುತಲ । ಮುನಿಪ । ಮ. ।

ಪೋಯಿತೆಂದುದಮರಾಳಿ ಹರುಷದಿಂ ಕಂಡು ಹಾ |
ಹಾಯೆಂದು ದನುಜರಡಗೆಡೆದವನಿಗೊಡನೆದ್ದು |
ಜಾಯುಸಂಗ್ರೈಗಳಿಂ ಬಡಿದು ಬಸುರಂ ಮೋದಿಕೊಳುತಳುತೆ ಪೊರಳುತಕಟಾ ||
ತಾಯೆ ಕೇಳ್ ಪಾಪಾತ್ಮರೆಮ್ಮುವಂ ನೀನಿಂದು |
ಕಾಯಲೋಸುಗವಾಯ್ತಲಾ ಮರಣವಿಾಗ ಗುರು |
ಕಾಯಲಿಮಗಮರರಂ ಕೊಂದು ಸತ್ತಪೆವೆಂದು ಸಿಡಿಲಂತೆ ಗರ್ಜಿಸಿದರು || ೨೮ ||

ಪ್ರಳಯಕಾಲದ ಸಿಡಿಲ ಗರ್ಜನೆಗಳಂ ಮಿಗುವ |
ಖಳಕಠೋರಧ್ವನಿಗಳಾ ಮುನಿಪಕರ್ಣಂಗ |
ಳೊಳೆ ಪೊಕ್ಕು ಸರ್ವಾಂಗದೊಳ್ ತೀವಿ ಬಲಿದಿರ್ಪ ವರಸಮಾಧಿಯ ಕೀಲನು |
ಅಲುಗೆ ಮಲಗಿದವರೇಳ್ವ ತೆರದೆ ಕಂದೆರೆದಿದಿರೊ |
ಳಳಿದ ಸತಿಯುಂ ಕಂಡು ಹಾ ತರುಣಿ ಹಾಯೆಂದು |
ಹಲುಬಿದಂ ಭೃಗು ಪೆಣ್ಣಗಲ್ಕೆಯೆಂತಪ್ಪರಂ ಭ್ರಮೆಗೊಳಿಸದೇಂ ಬಿಡುವುದೆ || ೨೯ ||

ಏತೆರದೊಳಾಯ್ತಕಟ ತರುಣಿ ನಿನಗೀ ಮೃತಂ |
ಮಾತಾಡು ಮನದನ್ನೆ ನಿನ್ನನಾಂ ಬಹುದಿವಸ |
ನೀ ತಪಸ್ಸಿಂದಗಲ್ದಿರೆ ಮುಳಿದೆಯೋ ಬಂದೆನೆಳಬಲೆ ನೋಡೆನ್ನನು |
ಕಾತರದೊಳಾಲಿಂಗನಂ ಮಾಡು ಕೂಡೆನುತು |
ವಾ ತಲೆಯನೆತ್ತಿಕೊಂಡೊಡನೆ ಮುಂಡಾಡಿ ನಾ |
ನಾ ತೆರದೊಳಳಲುತಿರ್ದನು ಸತಿಯ ರೂಪ ಗುಣ ಶೀಲಂಗಳಂ ಬಣ್ಣಿಸಿ || ೩೦ ||

ಸ್ನಾನಮಂ ಮಾಡಿ ಬಂದೆಂ ಹೋಮಕೆಡೆಮಾಡ |
ನೂನದೇವಾರ್ಚನಾಪರಿಕರಮನಿರಿಸು ಸು |
ಜ್ಞಾನಿ ಮುನಿವರರಾಶ್ರಮಕ್ಕೆ ಬಂದಿಹರವರ್ಗರ್ಘ್ಯಪಾದ್ಯಮನೊದಗಿಸು[1] ||
ಏನಕಟ ಮಾತಾಡದಿಹೆ ತರುಣಿ ನಿನ್ನಿಂದ |
ಮೇ ನಡೆದುದೀ ತಪಸ್ಸಿಂದುವರೆಗಂ ಮುಂದೆ |
ನಾನಾವತೆರದೊಳೀಶನನೊಲಿಸೆನಬಲೆ ಪೇಳೆಂದು ಮರುಗುತ್ತಿರ್ದನು || ೩೧ ||

೧ ಸೊಡಂಚು (ಮು, ಹು.)

ಹರನೊಲವಿನಿಂದಾದ ದಿವ್ಯಮಂತ್ರದ ಪುನ |
ಶ್ಚರಣೆಯಿಂ ಸಂಜೀವಿನಿಯ[1] ಮಂತ್ರಮಂ ಪಡೆದು |
ಹರುಷದಿಂ ನಿನಗೆರಗಬಪ್ಪ ನಿಜಪುತ್ರನೊಡನೇನೆಂಬೆನೀ ಕೇಡನು ||
ತರುಣಿ ನಿನ್ನೊಡಹುಟ್ಟಿದರ್ಗೆ ನಾನೇನೆನು |
ತ್ತೊರೆವೆನೀಯಳಿವನಕಟಕಟ ಹಾ ಶಂಕರನ |
ಕರುಣವೆಳದಾಗಿ ಮೊರ್ಗುಡಿಸಿತಯ್ಯೋಯೆಂದು ಭೃಗು ದುಃಖಿಸುತ್ತಿರ್ದನು
|| ೩೨ ||

ಇಂತು ಮೋಹಾಂಧಕಾರಂ ಕವಿಯೆ ಕಣ್ಗಾಣ |
ದಂತೆ ದುಃಖಿಪ ಮುನಿಗೆ ಕೋಪಮುದಯಿಸೆ ದಿವಿಜ |
ಸಂತತಿಯನುರಿಪುವೊಡಿದೇ ವೇಳೆಯೆಂದು ದೂರಂ ಚೀರಿ ಪೇಳ್ದಿಪೆಂದು ||
ಮುಂತಡ್ಡಬಿದ್ದಿದ್ದು ಕೈಮುಗಿದು ಕೇಳ್ ಮುಕ್ತಿ |
ಕಾಂತ ನಿಮ್ಮಯ ಕೆಯ್ಯೆಡೆಯ ಮಕ್ಕಳಂ ವಿಷ್ಣು |
ಮುಂತಾದ ಸುರರಟ್ಟಿ ಕೊಂದರಗಣಿತದೈತ್ಯರಳಿದರೆಂದುಸಿರ್ದರಂದು || ೩೩ ||

ಪೊಕ್ಕಲ್ಲಿ ಪೊಕ್ಕು ಬರಲೋಡಿ ನಿಮ್ಮಾಶ್ರಮಂ |
ಬೊಕ್ಕು ಮೊರೆಯಿಡುತಿರಲ್ಕೀ ಮಹಾಸತಿ ಕೇಳು |
ತಕ್ಕರಿಂದೆಮಗಭಯವಿತ್ತೆಮ್ಮನಟ್ಟಿಬರ್ಪಮರರಂ ಸ್ತಂಭಿಸಲ್ಕೆ ||
ಚಿಕ್ಕನೀಕೆಯ ಶಿರಂ ಪರಿದು ಬೀಳಲ್ಕಂಡೆ |
ವೆಕ್ಕೆಕ್ಕೆಯಿಂ ಸುರಸಮೂಹಮಿದೆ ನೋಡಿಮೆನ |
ಲಕ್ಕೆಯಡಗಿತು ರೋಷಶಿಖಿ ಪೊಣ್ಮಿ ಪೊಡಕರಿಸಿ ಪರ್ಬಿದುದನೇನೆಂಬೆನು || ೩೪ ||

ಕೂಡೆ ಭುಗಿಭುಗಿಲೆನುತ್ತಿರುವ ಶಿಖಿ ಮೆಯ್ಯೊಳಗೆ |
ಮೂಡಿರ್ದುದು ಸುರಚೂಣಿಯೊಳಗ್ನಿ ಜಿಹ್ವೆಯಂ |
ನೀಡಿದುದು ಕಣ್ಣಿಟ್ಟಕಡೆ ಕರಿಕುವರಿವುತಿರ್ದುದು ವಿಷ್ಣುಸುರಸಾದ್ಯರು ||
ಕಾಡೊಳರೆಬೆಂದ ಕೊರಡಂತಿರ್ದರವರ್ಗಳಂ |
ನೋಡಿ ಕಡುಪಾಪಿಗಳಿರಾ ಮಹಾಸತಿಗಿಂತು |
ಕೇಡೆಣಿಸಿದವರಾರಪಾರೆಂದು ಭೃಗುಮುನೀಶ್ವರರೆ ಕಾಯ್ದು ಗರ್ಜಿಸಿದನು || ೩೫ ||

---

೧ ಸಂಜೀವನದ. (ಮ.) ೨ ಕಂಬಿ. (ಮ.) ೩ ಮುನೀಶರಂ (ಮ, ಕ.)

ಬಾಯಾರಿವರ್ ಸುರರ್ ತದ್ವಿಷ್ಣು ಕಂಪಿಸುವ |
ಕಾಯದಿಂದೆಲೆ ಮುನಿಪ ಕೇಳೀ ಮಹಾಸತಿಗ |
ಪಾಯಮೆನ್ನಿಂದಾಯ್ತು ನೀಂ ಪರಮ ಋಷಿಯೆನ್ನ ಗುಣದೋಷಮಂ ನೋಡದೆ ||
ಕಾಯಬೇಕೀ ತಪ್ಪನೆಂದಧಿಕವಿನಯದಿಂ |
ದಾ ಯತೀಶಂಗೆ ದೈನ್ಯಂಬಡಲ್ ಕೋಪಭಾ |
ರಾಯಮಾನಸನಾಗಿ ಭೃಗುಮುನೀಶಂ ಮಹಾವಿಷ್ಣುಗಂದಿಂತೆಂದನು || ೩೬ ||

ಸಕಲಜಗಮಂ ಸಲಹುತಿರ್ದು ನೀಂ ಪುಣ್ಯಪಾ |
ತಕಭೇದಮರಿದು ರುದ್ರಾಕ್ಷಿಯುಂ ಭಸ್ಮಧಾ |
ರಕನೆ ಶಿವನೆಂದು ತಿಳಿದುಂ ನಿರಾಯುಧರ ನೀನಿರಿವುದಲ್ಲೆಂದು ಬಗೆದು ||
ಅಕಟೆಮ್ಮುಮಂ ಶರಣ್ಬೊಕ್ಕುದಂ ಕಂಡು ನಾ |
ಚಿಕೆಯಲಾ ಪೆಣ್ಗೊಲೆ ಭಟರ್ಗೆಂದು ತಿಳಿದು ಹೇ |
ಸಿಕೆಯಿಲ್ಲದಿನಿತುಮಂ ಕೈಗೈದೆ ಭಾಪು ಬಲ್ಲಿದರರಸನಹುದೆಂದನು[1] || ೩೭ ||

ಇಂತೆಂದು ನುಡಿಯಲಾ ವಿಷ್ಣುವತಿಭೀತಿಯಿಂ |
ಕಂತುಹರಸನ್ನಿಭನೆಯಜ್ಞಾನದಿಂ ಬಂದು |
ದಂತಾದೊಡಂ ಕಾಯಬೇಕೆನಲ್ ಕರಮೆತ್ತಿ ಗುಡುಗುಡಿಸಿ ಕೋಪದಿಂದೆ ||
ಭ್ರಾಂತ ಪ್ರೋಗಜ್ಞಾನಕೃತದಿಂ ಮಮ ಪ್ರಾಣ |
ಕಾಂತೆಯಂ ಕೊಂದೆಯದರಿಂ ನೀನುಮಜ್ಞಾನ |
ಮುಂ ತಳೆದು ಮತ್ಸ್ಯಾದಿದಶಜನ್ಮದಿಂದೆ ಜನಿಸೆಂದು ಮುನಿ ಶಾಪಿಸಿದನು || ೩೮ ||

[2]ನಡುನಡುಗುತಾ ವಿಷ್ಣು ಮಾಡಿದಕೆ ಫಲಮಾಯ್ತು[2] |
ಕೊಡು ವಿಶಾಪವನೆನಲ್ ಕೋಪದಿಂದಂ ಕೇಳಿ |
ಸುಡುವೆನಿಲ್ಲೆಂದೆಯ್ದಿ ವಿಪ್ರೇಶ್ವರಂ ಬಲ್ಲನೆನುತೊಡನೆ ಶಿವಮಂತ್ರದಿಂದೆ ||
ಬಿಡದೆ ಕಲಶೋದಕಂದಳಿದವಳ ಜೀವಮಂ |
ಪಡೆದನಾ ಮುನಿಯುತ್ತ ಸುರರ್ಕೈದಿದರ್ ಲೋಕ |
ದೊಡೆಯನೆನಿಸಿಶನಂ ಕೂರ್ತು ಹರಿ ತಪಿಸಲ್ಕೆ ಮೆಚ್ಚಿ ಶಿವನಿಂತೆಂದನು || ೩೯ ||

೧. ...ಸೊಗಸೆಂದನು, ಪು. | ೨-೨ ನಡುಗುತಾ ವಿಷ್ಣು ಮಾಡಿದುದಕ್ಕೆ ಫಲವಾಯ್ತು, ಶಿ. |

ಬಿಡು ತಪವನೆಲೆ ವಿಷ್ಣು ಸಾಕು ನಿನ್ನಿಷ್ಟಮಂ |
ಕೊಡುವೆನಾಂ[1] ಬೇಡೆನಲ್ ಕೊಂಡಾಡಿ ಭಕ್ತಿಯಿಂ |
ಮೃಡನೆ ಕೇಳ್ ಮತ್ಸ್ಯಾದಿಯಾಗಿ ದಶಜನ್ಮದಿಂ ಬಾರೆಂದು[2] ಭೃಗುಮುನಿಪನು ||
ಕಡುಮುಳಿದು ಶಾಪಮಂ ಕೊಟ್ಟನಯ್ಯಯ್ಯೊ ನಿ |
ಮ್ಮಡಿಗಳ್ಗೆ ದೂರಮಹುದಲ್ಲದೆಯುಮಾನೆಂತು |
ಪಡೆವೆನೀ ದಶಜನ್ಮಮಂ ಕೆಟ್ಟೆನೇನುಗತಿಯೆನಗೆಂದು ಹರಿ ನುಡಿದನು || ೪೦ ||

ಆದೊಡೇನಾಯ್ತು ನಿನ್ನಯ ಪತ್ತುಮೂರ್ತಿಯಂ |
ಮೇದಿನಿಗೆ ಹಿತಕಾರಿಯೆನಿಸುವೆಂ ತಾನೆಳಿನಲ್ |
ಮಾದೇವ[3] ತನ್ಮೂರ್ತಿಯಿಂದಹಂಕರಿಸಿದೊಡೆ ಬಹುಕಾಲಮಿರವೇಳ್ವುದು ||
ನೀ ದಯಾಂಬುಧಿ ಪೇಳೆನಲ್ಕಹಂಕರಿಸಿದೊಡೆ |
ಭೇದಿಸುವೆನಾ ರೂಪನದರ ಕುರುಪೊಂದನಾಂ |
ತಾದರಿಪೆನಿಂತು ನಿನ್ನಯ ಮೂರ್ತಿಗಳನೆಂದು ಕೈಲಾಸಮಂ ಪೊಕ್ಕನು || ೪೧ ||

ಕಾರಣಮದೀಗ ಕೇಳೆಲೆ ರಾಮ ವಿಷ್ಣುಗವ |
ತಾರವಿಾ ಪತ್ತಾದುವದರೊಳೀ ಮತ್ಸ್ಯವ |
ತಾರಮುದನೀಶ್ವರಂ ಮೊದಲೆಂದ ಕ್ರಮದೊಳೀಪರಿ ಬಂದು ಮರ್ದಿಸಿದನು ||
ಈ ರೀತಿಯಿಂ ಮುಂದೆ ಹರಿ ಪುಟ್ಟುವಂ ಮಹಾ |
ಘೋರಜನ್ಮಂಗಳಂ ಪರಿದಪಂ ಶಿವನೆಂದು |
ಮಾರಹರನಪರಾವತಾರನಾ ಚೆನ್ನಬಸವೇಶ್ವರಂ ನಿರವಿಸಿದನು || ೪೨ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೩ ||

ಅಂತು ಸಂಧಿ ೨೧ ಕ್ಕಂ ಪದಗಳು ೪೩ ಕ್ಕಂ ಮಂಗಳಮಹಾಶ್ರೀ

---

೧ ಸೀಂ (ಮ.); ನೇಂ (ಪ.) ೨ ಜನ್ಮಮಂ ಬಾರೆಂದು (ಅ, ಹು.); ಜನ್ಮಮಂ ತಾಳೆಂದು (ಕ.) ೩-೩ ನ | ಲ್ಮಾದೇವ (ಅ, ಹು.)

ಇಪ್ಪತ್ತೆರಡನೆಯ ಸಂಧಿ

ಸೂಚನೆ

ದೂರ್ವಾಸನಿಂದೆ ಸಿರಿಪೋಗಲಮರಾಸುರರ್ |
ಸರ್ವನಾಜ್ಞೆಯೊಳುದಧಿಯಂ ಮಥಿಸೆ ವಿಷ ಶಶಿಗ |
ಳುರ್ವಿ ಜನರಂ ಕೊಲಲ್ಕಭವನೈತಂದಾಂತು ಸಕಲಜನರಂ ಪೊರೆದನು ||

ಉಗ್ರ ಶಶಿಕಾಂತಸಮವಿಗ್ರಹಾವನಿಜಾಪ |
ದಗ್ರಹಕಲಾಧರ ಸಮಗ್ರಮಹಿಮಾರ್ಣವ ವಿ |
ಷಗ್ರೀವ ನಿಬಿಡಸಮುದಗ್ರಪಿಂಗಳಜಟಾಭ್ಯಗ್ರ ದುರಿತವಿಮರ್ದನ ||
ಉಗ್ರದಾನವಘನತರಗ್ರೀವಖಂಡನ ಕ |
ರಾಗ್ರಧೃತಪಾವಕ ಶಿರೋಗ್ರಸ್ಥ[೧]ಗಂಗಾಜ |
ಲಾಗ್ರದಿಂದೆಮಗೆ ಸಮುದುಗ್ರಚಿರ[೧]ಪದವನಿಂ ಕೊಡು ಸು[೧]ಪಂಪಾವಲ್ಲಭ || ೧ ||

ಕೇಳಿನ್ನು ಸಿದ್ಧರಾಮೇಶ ದಿವಿಜೇಶ್ವರಂ |
ಕೇಳೀವನಕೆ ಸಕಲ ದೇವಸುದತಿಯರ ಸ |
ಮ್ಮೇಳದಿಂ[೨] ನಾನಾಪ್ರಪಂಚಿನ ವಿನೋದದೊಳ್ ಸುಖಮಿರ್ದು ತೀರ್ಚಿ ಬಳಿಕ ||
ಘೋಳಿಡುವ ವಾದ್ಯಸಂದೋಹದಿಂ ಸಮದಶುಂ |
ಡಾಲಮಸ್ತಕದೊಳಗಲಂಕರಿಸಿ ಬರ್ಪ ಸುರ |
ಪಾಲಂಗೆ ಹರಸಿತ್ತ ಮಂದಾರಮಾಲೆಯಂ ದೂರ್ವಾಸಮುನಿ ಕೊಟ್ಟನು || ೨ ||

ಹರಿಯುಜ ಸುರಾಸುರೇಂದ್ರಾದ್ಯರಂ ಕೊಂಬನೇ |
ಕರಳಿದೊಡೆ ದೂರ್ವಾಸಮುನಿಯಿತ್ತ ಮಾಲೆಯಂ |
ಕರಿಯಂಕುಶದೊಳಾಂತು ಕುಂಭಿಕುಂಭಕೆ ಸುತ್ತೆ ಪರಿಮಳಕೆ ಪರಿದೆರಗುವ ||
ಮರಿಚಂಚರೀಕಮಂ ಸೋಂಪ್ರತಾ ಮಾಲೆಯಂ |
ಕರಿ ನೆಲದೊಳಿಟ್ಟುದೆ ಮುನಿ ಕಂಡು ಕೋಪದಿಂ |
ಹರಸಿತ್ತ ಮಂದಾರಮಾಲೆಗಿದು ವಿಧಿಯೆ ಹಾ ಹಾಯೆನುತ್ತುರಿದೆದ್ದನು || ೩ ||

೧-೧ ಗಂಗಜಲ | ಸ್ವಗ್ರದಿಂದೆಮಗೆ ಸಮುದಗ್ರಘನಚಿರಪದವ ಕೊಡು ಸು (ಮ, ಗೋ.)
೨-೧ ಪದವಿಯಂ ಕೊಡಿಸು (ಶಿ, ಹು.)

ಖಳನೆ ಕೇಳ್ ಕಾಮಾರಿ ತನ್ನ ಪ್ರಸಾದವೆಂ |
ದೊಲಿದಿತ್ತನೆನಗದಂ ನಿನಗೀಯೆ ಗರ್ವದಿಂ |
ತಳೆಯದಾ ಮಾಲೆಯಂ ಕರಿ ನೆಲದೊಳಿಟ್ಟೊರಸಿತದರಂತೆ ನಿನ್ನ ಸಿರಿಯುಂ[1] ||
ಜಲಧಿಯೊಳ್ ಕೂಡಲೆಂದುಗ್ರಕೋಪದೊಳೆ ಮುನಿ |
ತಿಲಕನಾಗಳೆ ಶಪಿಸಿದಂ ನಿಮಿಷಮಾತ್ರದೊಳ್ |
ವಿಲಯಮಾದುದು ಸುರಪನೇಳ್ಗೆ ಪಿರಿಯರ ವಿರೋಧಂ ಸಿರಿಗೆ ಕಷ್ಟಮಲ್ತೇ || ೪ ||

ಇಂದ್ರನಾತನ ಶಾಪಮಂ ತಳೆದು ಬಳಿಕಾ ಗ |
ಜೇಂದ್ರಮಸ್ತಕವನಿಳಿದೈತಂದು ಬಂದಾ ಮು |
ನೀಂದ್ರನಡಿಗೆರಗಿಯೆನ್ನಯ ತಪ್ಪ ಕಾಯೆಂದು ಬಿನ್ನವಿಸೆ ಕರುಣದಿಂದೆ ||
ಸಾಂದ್ರಸೌಭಾಗ್ಯಮಂ ಕೊಟ್ಟಪಂ ನಿನಗಾ ಫ |
ಣೀಂದ್ರಭೂಷಣನೆನುತೆ ಮುನಿ ಪೋಗೆ ದುಃಖದಿನು |
ಪೇಂದ್ರಾಗ್ರಜಂ ಖೇದವಾರಾಶಿಯೊಳ್ ಕೂಡಿ[2] ಮುಳುಗಾಡಿದಂ ಕ್ಷಣದೊಳು || ೫ ||

ತಡೆಯದೈರಾವತವನೇರಲುಜ್ಜುಗಿಸೆ ಮು |
ನ್ನಡಸಿಗಿದುದು ಸೇನೆ ಸರಿದುದು ದೇವಕಾಮಿನಿಯ |
ರೊಡನೆ ಮೃಗತೃಷ್ಣೆಯಂತಾದುದಮರಾವತಿಯ ಸಿರಿ ಕನಸಿನಿರವಾದುದು ||
ಬಿಡದೀಕ್ಷಿಸುತ್ತೆ ಹರಿ ಶಿವನಂ ಕುರಿತು ತಪಂ |
ದೊಡಗಿ ಮಚ್ಚಿಸಿ ದೈನ್ಯಭಾವದಿಂ ತನಗೆ ಬಂ |
ದಡಸಿದಾಪತ್ತುವಂ ಬಿನ್ನೈಸೆ ಕೇಳ್ದೀಶ್ವರಂ ಸುರೇಶಂಗೆಂದನು || ೬ ||

ಹರಿಯಜಸುರಾಸುರಾದಿಗಳುಮಂ ಕೂಡಿ ನೀಂ |
ಶರಧಿಯಂ ಮಥಿಸೆ ಬಪ್ಪುದು ನಿನ್ನ ಸೌಭಾಗ್ಯ |
ಮಿರದೆ ರಚಿಸೆಂದು ಪೇಳ್ದೀಶ್ವರಂ ಪೋದನತ್ತಿತ್ತಲಾ ಸುರಪಾಲನು ||
ಹರನಾಜ್ಞೆಯಿಂದೆ ಬ್ರಹ್ಮಾಚ್ಯುತರ್ಗೀ ಹದನ |
ನೊರೆಯಲವರಂದು ನಾನಾಸುರಸುರಾದಿಗಳ |
ಕರೆಸಿಕೊಂಡವರೆಲ್ಲರುಂ ಸಹಿತ ತೀವ್ರದಿಂ ಕ್ಷೀರಾಬ್ಧಿಗೈತಂದರು || ೭ ||

---

೧ ಸಿರಿಯುಂ (ಅ, ಹು.) ೨ ಮೂಡಿ (ಹು, ಕ, ಪ.) ೩-೩ ಸಿದಂ । ನದು (ಗೋ.)

ಕರಿಯಂತೆ ಘುರದಂತೆ ಪುಷ್ಕರೋದ್ಭಾಸಿತಂ |
ಹರಿಯಂತೆ ವಿಧಿಯಂತೆ ಗೋಯುಕ್ತಮಧಿಕಮುಂ |
ಘುರದಂತೆ ಮುಖದಂತೆ ವಾಡಬಾನ್ವಿತಮದ್ರಿಯಂತೆ ಪರಮೇಶನಂತೆ ||
ವರಶಿವಾಲಂಕೃತಂ ನಿಧಿಯಂತೆ ನಿಟಲದಂ |
ಶಿರಿ ಶಂಖಶೋಭಿ ಸಸ್ಮನಿಯಂತೆ ವನದಂತೆ |
ವಿಸುತಮುತ್ಕಳಿಕಾಪ್ರಸಂಗಿ ತಾನೆಂದುದಧಿ ಕಂಗೆ ಮಂಗಳವಾದುದು || ೮ ||

ಶ್ರೀವಿ ರಸಮಯವಾಗಿ ಸತ್ಕಾವ್ಯಮಲ್ತು ಪ್ಲವ |
ಗಾವಾಸಮಾಗಿ ವನಮಲ್ತು ಸತತಂ ಬಂದು |
ಸೇವಿಪ ಪಯೋಧರಸ್ಪರ್ಶಿ ತಾನಾಗಿಯುಂ ಪಲ್ಲವಕರಿಹಸ್ತಮಲ್ತು ||
ಆವಗಂ ಮಕರಕರ್ಕಟಕಯುತಮಾಗಿರ್ದು |
ಭಾವಿಸಲ್ ರಾಶಿಗಣಮಲ್ತು ಮೀನಂಗಳ್ ಜನಿತಃ |
ಹೀವರಗ್ರಹಮಾಗಿ ನಭಮಲ್ತುಮೆನಿಸಿ ರತ್ನಾಕರಂ ಕಂಗೆಸೆದುದು || ೯ ||

ಇಂತೆಸೆವ ದುಗ್ಧವಾರಾಶಿಯಂ ನೋಡುತ |
ತ್ಯಂತಹರ್ಷಂದಳೆದು ಮಂದರಾದ್ರಿಯನೆಳಕಿ |
ತ್ತಾಂತರಳ್ ವಾಸುಗಿಯ ನೇಣಂ ಬಿಗಿದು ವಾಲವದನಂಗಳಂ ಪಿಡಿದುಕೊಂಡು ||
ಮುಂತೊಗೆದ ವಸ್ತುವಬ್ಜೋದರಂಗದರ ಸಮ |
ನಂತರದೊಳಿವುಗೆ ತಮಗೆಂದು ದೇವಾಸುರರ್ |
ತಂತ್ರಮ್ಮೊಳಾಲೋಚಿಸುತೆ ಕಡೆವ ಸಮಯದೊಳ್ ರಾಮ ಕೇಳ್ ಕೌತುಕವನು
|| ೧೦ ||

ಅಗಜಾಧಿಪಂಗೆ ಮುನ್ನೊಗೆವ ವಸ್ತುವನಿರದೆ |
ತೆಗೆದೆವೆನ್ನದೆ ಸಿಕ್ಕ ದಿವಿಜಾಳಿಗೆಂದೆನಲ್ |
ಸೊಗಸಪ್ಪುದೇ ಮುಂತೆ ಸರ್ವರಿಗೆ ಫಣಿಪನಂದಾಯಾಸದಿಂ ಕಾರಲು ||
ಧಗಧಗಲ್ ಮಂಧಗಲ್ ಚಿಟಿಚಿಟಿಲ್ ಸಟಿನಳಿಲ್ |
ಭುಗಿಭುಗಿಲ್ ಭುಗಿಲೆಂದು ಪಿಡಿದ ದೇವಾಸುರರ |
ಮೊಗಮುಸಪ್ಪಳಿಸಿ ಭೋರ್ ಭೋರೆಂಬ ರಭಸದಿಂ ವಿಷವಹ್ನಿ ಪಸರಿಸಿದುದು
|| ೧೧ ||

೧ ಮಿಸ | ಶಿ, ಮು, ಮು. | ೨ ಪಲ್ಲವಿಕ (ಮು, ಶಿ.); ಪಲ್ಲವಿತೆ (ಕ.) ೩-೩ ಗಳಿದಂಗೆ.
೪-೪ ಕೀ | ಶ್ರಾಂತು (ಕ.)

ಓಡಿದಂ ಹರಿ ಮರಾಳನ ಬೆಂಗೆ ವಾಯ್ದು ಕೈ |
ಮಾಡಿದಂ ಕಮಲಜಂ ಖಗಪತಿಯನೇರಿ ಸಲೆ |
ಯೋಡಿದುದು ಭುವನಜನಮೆಮಗಾರು ಗತಿಯೆಂದು ಪುದಿದ ವಿಷಭೀತಿಯಿಂದೆ ||
ಝಾಡಿಸಿದುದಖಿಳದಿಙ್ಮಂಡಲವನಾಗಳ |
ಲ್ಲಾಡಿಸಿತು ಭೂ ಸ್ವರ್ಗ ಪಾತಾಳ ಲೋಕಮಂ |
ಕೂಡಿಸಿತು ಸಕಲಜನರಂ ವಿಲಯಗೇಹದೊಳ್ ಕಾಳಕೂಟಂ ಕ್ಷಣದೊಳು || ೧೨ ||

ವರಮುನಿಯ ಶಾಪದಿಂ ಸಿರಿಯನೀಗಿದ ಮರುಳ |
ಸುರಪತಿಯ ನುಡಿಗೇಳ್ದು ಸುರರಸುರರಂ ನೆರಪಿ |
ಶರಧಿಯಂ ಮಥಿಸುವರೆ ಕೇಡನೆಣಿಸಿದಿರಲಾ ಪಾಪಿಗಳ್ ಭುವನಜನಕೆ ||
ಗರಳದುರಿಯಖಿಳ ಬ್ರಹ್ಮಾಂಡಮಂ ಪರ್ವಿ ಸಂ |
ಹರಿಸುತಿದೆಯಕಟಕಟ ಕಂಡು ಕಂಡಿಂತು ಪರಿ |
ಹರಿಸಲಾಗದೆ ನೀವು ಸೃಷ್ಟಿರಕ್ಷಾಧಿನಾಯಕರೆಂದು ಮೊರೆಯಿಟ್ಟರು || ೧೩ ||

ಓಡಿದೊಡೆ ಬಿಡುವುದೇ ಮುನಿಗುವಾಸೀನಮಂ |
ಮಾಡಿ ಸಿರಿಯಂ ನೀಗಿದನಿತಲ್ಲದಕಟಕಟ |
ಮಾಡಿದೈ ಶಂಕರದ್ರೋಹಮಂ ಕೆಡಿಸಿದೈ ಸಕಲಲೋಕದ ಜನರನು ||
ಆಡಲೇನಹುದು ಶಚಿಗೂಡಿ ಭೋಗಿಸು ನಿನ್ನ |
ನಾಡನೆಲೆ ಖೂಳ ನೀನೆಂದು ನೋಟಕಜನಮು |
ದೀಡಿರಿದುದಂದು ಸುರಪನ ಗಲ್ಲಮಂ ಕಾಳಕೂಟಮುರಿಪಲ್ ಜಗವನು || ೧೪ ||

ಓಡಿದರ್ ಕೆಲರಲ್ಲಿ ತಮತಮಗೆ ನಿಂದು ಮಾ |
ತಾಡಿದರ್ ಕೆಲರಭವ ಸಲಹೆಂದು ಕೈಗಳಂ |
ನೀಡಿದರ್ ಕೆಲರಟ್ಟೆ ಸುಡುವ ವಿಷವಹ್ನಿಯಿಂ ಕಾಲ್ಗೆಟ್ಟು ದಿಕ್ಕುಗಳನು ||
ನೋಡಿದರ್ ಕೆಲರೋಡುವಮರರಂ ಕಂಡು ಕೊರ |
ಚಾಡಿದರ್ ಕೆಲರೇಳ್ದು ಬೀಳ್ದು ಬಹುಶೋಕಮಂ |
ಮಾಡಿದರ್ ಕೆಲರಿಂತು ಸಕಲಜಗಮಂ ವಿಷಂ ವ್ಯಾಪಿಸಲ್ಕಾಕ್ಷಣದೊಳು || ೧೫ ||

ದೇವ ನೀನಲ್ಲದೀ ಸುರ ನರ ಭುಜಂಗರಂ |
ಕಾವರಿಲ್ಲಕಟ ಕಂಠಗತಾಸುವಾದೆಮ್ಮ |
ಸೋವಳಾಗದೆ ನಿರ್ದಯಾಲೋಕವೇಕೆ ಪಾಲಿಸು ಪಾಲಿಸೈ ನಮ್ಮನು ||
ಭಾವಿಸದೆ ನಿನ್ನ ಪದರಾಜೀವಯುಗಳಕ್ಕೆ |
ನಾವತಿದ್ರೋಹಮಂ ಮಾಡಿದೆವು ಕ್ಷಮಿಸೆಂದು |
ದೇವಕುಲಮೊರಲಲ್ಕೆ ಕೇಳಿದಂ ಶಂಭು ಜಂಭಾರಿಮುಖ್ಯರ ಮೊರೆಯನು || ೧೬ ||

ನೊಂದುದು ಸಮಸ್ತದೇವಾಳಿ ವಿಷವಹ್ನಿಯಿಂ |
ಬೆಂದುದು ಭುವನಜನಮದೀಗಳೀ ವಿಲಯಮಯ್ಯ |
ತಂದುದು ಜವಮೊದಾವು ಪರಿಹರಿಸದೊಡೆ ಸಕಲಲೋಕದಾಟಂ ಕ್ಷಣದೊಳು ||
ನಿಂದುದು ಸರೋಜಭವಹರಿಗಳ್ಗೆ ದುರ್ಯಶಂ |
ಬಂದುದಕಟಕಟಿನುತ್ತುಮೆ ಸಹಿತ ವೃಷಪತಿಯ |
ನಂದು ಧೂರ್ಜಟಿಯೇರಿ ನಡೆದನಾ ಕಾಳಕೂಟಪ್ರಚಾರವನೀಕ್ಷಿಸೆ || ೧೭ ||

ಗರಳಭಯದಿಂದೆ ಬಾಯಾರ್ವರಂ ಚೀರ್ವರಂ |
ಪರಿಪರಿದು ಕಾಲ್ಗಿಟ್ಟು ಕೆಡೆವರಂ ಮಡಿವರಂ |
ಗರ್ವದ ಬಿರುಹೊಯ್ಲಿಂದೆ ನರಳ್ವರಂ ಸುರುಳ್ವರಂ ಬಿಟ್ಟೋಡುವಾಪ್ತರ್ಕಳ ||
ಕರೆಕರೆದು ಬೇಸತ್ತು ಬಯ್ವರಂ ಸುಯ್ವರಂ |
ಸುರಪನಂ ಶಾಪಿಸುತ್ತಳಲ್ವರಂ ಬಳಲ್ವರಂ |
ಹರ ಸಲಹು ಸಲಹೆಂದುಸಿರ್ವರಂ ದೂರ್ವರಂ ಚಂದ್ರಚೂಡಂ ಕಂಡನು || ೧೮ ||

ಅಂಜದಿರಿ ಸುರನಿಕರವಂಜದಿರಿ ದನುಜರ್ಕ |
ಅಂಜದಿರಿ ಭುವನಜನಮಂಜದಿರಿ ನೋಟಕರ್ |
ಭುಂಜಿಸುವೆನೀ ಕಾಳಕೂಟಮಂ ನಾನೆನುತೆ ಕರವೆತ್ತಿ ಬಾರೆನಲ್ಕೆ ||
ಅಂಜುವ ಮಹಾಭೀತಿಯಿಂದೆ ನಿಷ್ಠುರಮಾದ |
ಸಂಜದರ್ಭವನಂಗೈತಳದೊಳಾ ಕ್ಷಣಂ |
ಮಂಜುಳಸುಮಣಿಪರೀಕ್ಷಕನಂತೆ ಶಿವನಿರಲ್ ಸಕಲರುಂ ನುತಿಯಿಸಿದರು || ೧೯ ||

---

೧ ಕರ (ಗೋ.) ೨ ಭಂಜಿಸು (ಹು, ಮ.)

ಇಂತನೇಕಸ್ತೋತ್ರದಿಂದೆ ಜನವಿರ್ಪ ಸಮು |
ನಂತರದೊಳಭವನಂಗೈತಳದ ಗರಳಮಂ |
ತಾಂ ತಡೆಯದೀಕ್ಷಿಸಲ್ ತನ್ನ ಪ್ರತಿಬಿಂಬಮೀ ವಿಷದೊಳಗೆ ಕಾಣಿಸಲ್ಕೆ |
ನೀಂ ತೊಲಗೆನಲ್ ಪುಷ್ಪದತ್ತಾಭಿಧಾಸಮಂ |
ತಾಂ ತಳೆದು ನಿಜರೂಪಿನಿಂದಿರ್ದುದಾ ಗರಳ |
ಮಂ ತಳೆದು ಪೊಡೆಗಿಳಿಪೆ ಜಗಮಳಿವುದೆಂದು ತೊಡೆದಂ ಲಸದ್ಗ್ರೀವದೆಡೆಗೆ
|| ೨೦ ||

ಬನ್ನಿರೈ ಹರಿಯಜರ್ ಮುಂಕುರಿತು ವಸ್ತುವೆಮು |
ಗೆನ್ನದಿರಲಿಂತಾದುದೈ ಕೇಳಿ ನೀಂ ಮುಂದೆ |
ಮುನ್ನಿನಂದದೆ ಶರಧಿಯಂ ಮಥಿಸೆ ನಿಮ್ಮಿಷ್ಟಮಹುದೆಂದು ಹರ ನುಡಿಯಲು ||
ಇನ್ನೇಕೆ ಜೀಯ ವಿಷವೆಮ್ಮ ಮನದಿಚ್ಛೆಯಂ |
ಚೆನ್ನಾಗಿ ಸಲಿಸುತಿರ್ದುದು ಸಾಕು ಸಾಕೆನಲ್ |
ನನ್ನಿಯಿಂದು ಮುಂದೆ ನಾವಿಹೆವೆಂದು ಕರುಣದಿಂ ನುಡಿದು ನಿರವಯನಾ[೧]ದನು
|| ೨೧ ||

ಸಂಬಿದರ್ ಸಕಲ ಸುರ ನರ ಯಕ್ಷ ರಾಕ್ಷಸರ್ |
ತುಂಬಿದುದು ಹರ್ಷರಸಮುವರಂತರಂಗದೊಳ್ |
ತಾಂ ಬೆದರದಹಿಪತಿಯ ಮುಖ ಪುಚ್ಛ ಭಾಗಂಗಳಂ ಮುನ್ನಿನಂತೆ ಪಿಡಿದು ||
ಶಂಬರಾರಿಯ ಪಗೆಯ ನೇಮದಿಂ[೨]ದೆ ವರದು[೨] |
ಗ್ಧಾಂಬುಧಿಯನುರೆ ಮಥಿಸಲಾಕ್ಷಣಂ ನವಚಂದ್ರ |
ಬಿಂಬಮುದಿಸಿದುದು ಶೀತಪ್ರಭೆಯೊಳಖಿಳದೇವಾಸುರರನಳವಳಿಸುತೆ || ೨೨ ||

ಕುಗ್ಗಿದುವು ಜನರ ಕೈಕಾಲ್ಗಳತಿಶೀತದಿಂ |
ನೆಗ್ಗಿದುವು ಮನದಹಂಕಾರಂಗಳಾ ಕ್ಷಣಂ |
ತಗ್ಗಿದುವು ದಿವಿಜರ ಮನೋರಥಂ ವಿಷದಧಿಕ ಭೀತಿಯಿನಿತಿಲ್ಲವೆಂದು ||
ಸಗ್ಗಿಗರ್ ದೇವನಂ ಪೊಗಳಲಾಗಳ್ ಬಂದು |
ವೆಗ್ಗಳಿಪ ಶೀತಕರನೀರೆಂಟು ಭಾಗದೊಳ್ |
ಬಗ್ಗದೊವಲುಡಿಯನೊಂದಂ ತಳೆದು ಚಂದ್ರನಂ ನೋಡಿ ಮತ್ತಿಂತೆಂದನು || ೨೩ ||

೧ ವಯಲಾ (ಶಿ.) ೨-೨ ದವರೆ ದು (ಗೋ, ಪ, ಮ.)

ಇಂತು ನಿಸಿಸ್ಸ್ಕೀವ ಕಲೆಯಿನೋಷಧಿ[1] ದೈವ |
ವೃಂದಮಂ ಪೊರೆವುತಂಬರದೊಳಗೆರಡುಲಕ್ಷ |
ಮೇಲೆನಿಪ ಯೋಜನದೊಳಿರುವುದೆಂದಭವ ತಾಂ ಕೈಲಾಸಮಂ ಪೊಕ್ಕನು ||
ಅಂದು ದೇವಾಸುರರ್ ಸಂತೋಷಮನರಾಗಿ |
ಮಂದರದೊಳಾರ್ಭಟಿಸಿ ಕಡೆಯಲ್ಕೆ ಪುಟ್ಟಿದುವು |
ಚಂದಚಂದದ ವಸ್ತುಗಳ್ ಶಿವನ ಕರುಣವಿರಲಾವುದಘಟಿತಮೆಂದನು || ೨೪ ||

ಸಿರಿ ದಿವಿಜಕರಿ ಕಾಮಧೇನು ಕಲ್ಪದ್ರುಮಂ |
ಪರಮಚಿಂತಾರತ್ನಮಮೃತಮತಿಚಾಪಲದ |
ಸುರಹಯಂ ತಾರೆ ಸುರಕಾಮಿನೀಸಂದೋಹ ಧನ್ವಂತ್ರಿ ಮುಖ್ಯರುದಿಸೆ ||
ಸಿರಿಯನಬ್ಜೋದರಂ ಕೊಂಡು ಮಿಕ್ಕವನೆಲ್ಲ |
ಸುರಪತಿಗೆ ಕೊಟ್ಟು ಕಳುಪುವ ಸಮಯದೊಳ್ ದೈತ್ಯ |
ರುರುತರದ ಪೀಯೂಷಕಲಶಮಂ ಕದ್ದೊಯ್ದರೇನೆಂಬೆನಚ್ಚರಿಯನು || ೨೫ ||

ಕೋಡಿದುದು ಮನಮತಿಭ್ರಮೆಯಾಯ್ತು ಬುದ್ಧಿ ಬಿ |
ಟ್ಟೋಡಿದುದಹಂಕಾರಮಳಲಿದುದು ಚಿತ್ತವಿಾ |
ಕೂಡಿದ ಸುರಾಳಿಯಿದನರಿದು[2] ಹರಿ ಖಳರಿರ್ದ ವನದೊಳಗೆ ಕಾಂತೆಯಾಗಿ ||
ಗಾಡಿಯಂ ಮೆರೆದು ದೈತ್ಯರ ಕರದ ಕಲಶಮಂ |
ಕೋಡಿಯಿಂ ಕೊಂಡವರ್ಗಳ್ ಸಹಿತಮೈತಂದು |
ನೀಡಿದಂ ಸಾಗರದ ತಡಿಯೊಳಮರಾಸುರರ್ಗಮೃತಕಾದಂಬರಿಗಳ || ೨೬ ||

ಹರಿಯ ಕಪಟವನರಿದು ಸೈಂಹಿಕೇಯಂ ಬಂದು |
ಸುರರ ಪಙ್ತಿಯೊಳೊಲಿದು ಕುಳ್ಳಿರಲ್ ಸುಧೆಯನೀ |
ಪರಿಯರಿಯೆ ಹರಿಹರಿಗಳಿದನರಿದು ಹರಿಗುಸುರೆ ಹರಿಚಕ್ರದಿಂದರಿಯಲು ||
ಶಿರ ಮುಂಡಗಳ್ ರಾಹು ಕೇತುವಾದುವು ಪೂರ್ವ |
ಪರವಿರೋಧಂ ಚಂದ್ರಸೂರ್ಯರ್ಗಮವರ್ಗೆಯುಂ |
ಭರಮಾದುದೀಗಳುಂ ಕೇಳೆಂದು ರಾಮಂಗೆ ಚೆನ್ನಬಸವಂ ಪೇಳ್ದನು || ೨೭ ||

---

೧ ಸೊಸೆದೀ (ಶಿ.) ೨ ಯದನರುಹೆ (ಮ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೮ ||

ಅಂತು ಸಂಧಿ ೨೨ಕ್ಕಂ ಪದಗಳು ೬೪೨ಕ್ಕಂ ಮಂಗಳಮಹಾಶ್ರೀ

ಇಪ್ಪತ್ತನೂರನೆಯ ಸಂಧಿ

ಸೂಚನೆ

ಸುರಪಾಲನಭವನಂ ಪಗೆಯನೊಲವಿಂ ಕೇಳೆ |
ಹರನ ಪಣೆಗಣ್ಣಿಡಿಯೆ ಶರಧಿಗಂ ಸುತನಾಗಿ |
ವರಜಲಂಧರನೆಂಬ ನಾಮದಿಂ ಸುರಪುರಕೆ ದಂಡೆತ್ತಿ ನಡೆದನಂದು[೧] ||

ಶುಭ್ರಗಮನೇಂದ್ವಗ್ನಿವಿಭ್ರಾಜಿತಾಕ್ಷ ಲೋ |
ಲಭ್ರಮರನಿಭಗರಳ ಶುಭ್ರವಿಗ್ರಹ ವಧೂ |
ವಿಭ್ರಮಾಲೋಕ ದೈತ್ಯಭ್ರಷ್ಟವಿಮದವಿಪುಲಾಭ್ರಪ್ರಚಂಡಪವನ ||
ಅಭ್ರಾಂತರಾಳಸಂವಿಭ್ರಾಂತಚಾರುತರ |
ಶುಭ್ರಾಂಶುಕೋಟಿಕಾಂತಿಭೃತಶರೀರ[೨] ರುಚಿ |
ರಭ್ರೂಲತಾಶೋಭ ಪಂಪಾವಿರೂಪಾಕ್ಷ ತೀಬ್ರದಿಂ ಸಲಹೆಮ್ಮನು || ೧ ||

ಆಲಿಸಿನ್ನೆಲೆ ಸಿದ್ಧರಾಮ ದಿವಿಜೇಶ್ವರಂ |
ಫಾಳಲೋಚನನಂಘ್ರಿಪೂಜಾಫಲಾಳಿಯಿಂ |
ಪಾಲಿಸುತೆ ಸುರಲೋಕಮಂ ಸುಖದೊಳಿರುತಿರಲ್ ದಾಯಾದ್ಯಸಂಬಂಧದ ||
ಪಾಲಿಗೋಸುಗ ದನುಜರಂದು ಯುದ್ಧವ ಮಾಡೆ |
ಕಾಳೆಗದೊಳವರೆಲ್ಲರಂ ಗೆಲ್ದು ಸುಖಮಿರದೆ |
ಕಾಲಹರನೆಡೆಗೆ ಪಗೆಯುಂ ಕೇಳ್ವೆನೆಂದು ಪೊರಮಟ್ಟನತ್ಯುತ್ಸವ[೩]ದೊಳು || ೨ ||

ಬಂದು ಕೈಲಾಸದಾಸ್ಥಾನದೊಳ್ ಸಕಲಗಣ |
ವೃಂದಸಹಿತೊಡ್ಡೋಲಗದೊಳಿರ್ಪ ಶಿವನಡಿಗೆ |
ವಂದಿಸಿ ಮಹಾಭಕ್ತಿಯಿಂದೆ ಬಿನ್ನವಿಸಿದಂ ಮಕುಟತಟಹಸ್ತನಾಗಿ ||
ಇಂದುಶೇಖರನೆ ಕರುಣಿಸುವುದೆನ್ನೊಡನಾಂತು |
ನಿಂದು ಕಾದುವ ಸಮರ್ಥನನೆನಲ್ ನಸುನಕ್ಕು |
ಮುಂದರಿಯದಿಂತು ನುಡಿವರೆ ಜಡವೆನೆ ಸುರಪನಭವನೊಡನಿಂತೆಂದನು || ೩ ||

೧ ತಂದನು (ಮ.) ೨ ವಿಭೂಷಶರೀರ (ಶಿ.) ೩ ಹ (ಗೋ.)

ಜಂಭಬಲ ನಮುಚಿ ವೃತ್ರಾದಿ ಖಳರಂ ಕದನ |
ಕುಂಭಿನಿಯೊಳೋಡಿಸಿದೆನಂದಿನಿಂ ಸಮರಸಂ |
ರಂಭವೋ ಕನಸಾಯ್ತು ಸರ್ವಥಾ ನನಗೊಬ್ಬ ಶತ್ರುವಂ ಕರುಣಿಸೆಸಲು ||
ಜಂಭಾರಿ ನುಡಿದಹಂಕಾರವುಂ ಕೇಳ್ದು ಕೋ |
ಪಂ ಭರದೊಳುಬ್ಬರಿಸೆ ಸುರಪಾಲನಂ ಸುಡಲ್ |
ಶಂಭು ಭಾಳಾಂಬಕಜ್ವಾಲೆಯೊಳಗೊಂದು ಕಿಡಿಯಂ ಮಾಣದುಗುಳಿಸಿದನು || ೪ ||

ಸಾಕು ಸಾಕೆಲೆ ಮಹಾದೇವ ದೇವೇಶ ಕರು |
ಣಾಕರ ಕೃಪಾಬ್ಧಿ ಶಂಕರ ಶರ್ವ ನೀಂ ಮುನಿಯೆ |
ಪಾಕಶಾಸನನದೇಂ ದಕ್ಷನೇ ಕಿಡಿಯನುಪಸಂಹರಿಸ[1]ಬೇಕೆನುತ್ತೆ ||
ನಾಕವಾಸಿಗಳ ಗುರು ಶಿವನಡಿಗೆ ನಮಿಸೆ ಬಳಿ |
ಕಾ ಕಿಡಿಯನೀಶ್ವರಂ ಹಸ್ತದೊಳ್ ಪಿಡಿದು ರ |
ತ್ನಾಕರಕೆ ಬಿಸುಟೆಂದ್ರ ಶತ್ರುವಂ ಕೊಟ್ಟೆವಾಂ ಪೋಗೆನುತೆ ಬೀಳ್ಕೊಟ್ಟನು || ೫ ||

ಇತ್ತಲಮರೇಂದ್ರನಭವನನಿರದೆ ಬೀಳ್ಕೊಂಡು |
ಚಿತ್ತದಾನಂದದಿಂ ಸುರಪುರಕೆ ನಡೆತಂದ |
ನತ್ತಲಾ ಹರನಿಟ್ಟ ಕಿಡಿ ಬಾಲನಾಗಿ ಗಂಗಾಸಿಂಧುಸಂಗಮದೊಳು ||
ಬಿತ್ತರದೊಳಳುತಿರಲ್ ಶಂಖ[2]ನೆಂಬಾತ್ಮಜಂ |
ಸತ್ತುಪೋಗಲ್ ಸುರಪನಂ ಗೆಲ್ವ ಕುವರನಂ |
ಪೆತ್ತಪೆನೆನುತ್ತೆ ಶಿವನಂ ಕೂರ್ತು ತಪಿಸುತ್ತೆ ಶರಧಿ ಸುತನಂಕಂಡನು || ೬ ||

ಹರುಷದಿಂದಾ ಶಿಶುವನೆತ್ತಿ ತೊಡೆಯೊಳಗಿರಿಸೆ |
ಸರಸಿಜಭವಾಂಡಮೊಡೆವಂತೆ ಶಿಶು ಕೂಗಲಾ |
ಸರದ ಬಳಿವಿಡಿದೆಲ್ಲಯದು ಬೊಬ್ಬೆಯೆನುತಜಂ ಬಾಲನಿರ್ದಲ್ಲಿಗೈದೆ ||
ಪರಮೇಷ್ಠಿಯಂ ಕಂಡು ನಮಿಸಿ ಮತ್ತನುಜಂಗೆ |
ಕರುಣದಿಂ ಪೆಸರಿಟ್ಟು ಜಗದೊಳಾರಿಂದಲುಂ |
ಮರಣಮಾಗದೊಲು ವರವೀವುದೆಂದಜನ ಕಯ್ಗಬ್ಧಿ ಸುತನಂ ಕೊಟ್ಟನು || ೭ ||

೧ ನಪಸಂಹರಿಸ (ಹು.) ೨ ಶುಂಭ (ಹು, ಮು.)



ಜಲಂಧರನ ನಾಮಕರಣ

ಸರಸಿಜಭವಂ ಶರಧಿಜಾತನಂ ತೊಡೆಯ ಮೇ |
ಲಿರಿಸಿಕೊಂಡವನ ಭವ್ಯಾಕಾರಮಂ ನೋಡು |
ತಿರಲಿಜನ ಗಡ್ಡಮಂ ತೂಗಲ್ಕೆ[1] ಕಡು ನೊಂದು ಕಣ್ಣಸುರವನ ಮೇಲೆ ||
ಸುರಿಯಲಾಯಾಸದಿಂ ಬಿಡಿಸಿಕೊಂಡೆಂದನೆಲೆ |
ಶರಧಿ ಕೇಳಿವನೆನ್ನ ಕಂಗಳ ಜಲಂಗಳಂ |
ಧರಿಸಿದ ನಿಮಿತ್ತದಿಂ ವರಜಲಂಧರನಿವಂ ಸಾಮಾನ್ಯನಲ್ಲೆಂದನು || ೮ ||

ಆವನಿಂದೀತಂಗೆ ಜನನಮವನಿಂದಲೇ |
ಸಾವು ಪೊಸಕ್ಕೈದುವಿಂದಲ್ಲದುಳಿದೀ ಕ್ಷುದ್ರ |
ದೇವಾಸುರೋರಗ ನರಾಳಿಯಿಂದಳಿಯಬೇಡೆಂದು ವರಮಂ ಪಾಲಿಸಿ ||
ಆ ವೇಳೆಯೊಳ್ ಶುಕ್ರನಿಂದಸುರರಾಜನೆಂ |
ಬೀ ವಿಮಲ ನಾಮದಿಂ ಪಟ್ಟಮಂ ರಚಿಸಿ ರಾ |
ಜೀವಪೀಠಂ ಪೋದ[2]ನಿತ್ತಲಿತ್ತಲ್ ದಿನದಿನಕ್ಕಿವಂ ವರ್ಧಿಸಿದನು[2] || ೯ ||

ಶುಕ್ರನೀತಂಗೆ ಕ್ರೌಂಚನ ಮಗಳ್ ವೃಂದೆಯಂ |
ಶಕ್ರವಿಭವದೆ ಮದುವೆಯಂ ಮಾಡಿದಂ ಮಹಾ |
ವಿಕ್ರಮಾನ್ವಿತನಾಗಿ ಜಾಲಾಂಧರಾಹ್ವಯದ ಬಲುರಾಜಧಾನಿಯೊಳಗೆ ||
ವಕ್ರವೈಭವರಾಗಿ ಗಿರಿಯೊಳಡಗಿರ್ದಸುರ |
ಚಕ್ರಮಂ ಕರೆಸಿ ಕಾಣಿಸಿಕೊಳುತೆ ವೃಂದೆಯೊಡ |
ಸಕ್ರಮದೊಳತಿ ವಿನೋದಂಗಳಿಂ ಖಳರಾಜನಿರುತಿರ್ದನುತ್ಸವದೊಳು || ೧೦ ||

ಆಲಿಸೈ ಸಿದ್ಧರಾಮೇಶ ಸುಖಮಿರುತಸುರ |
ಪಾಲಕ ಜಲಂಧರಂ ಲೀಲೆಯಿಂ ತನ್ನ ವರ |
ಜಾಲಂಧರಾಖ್ಯಪುರದೊಳಗಿರುತ್ತೊಂದು ದಿನಮೋಲಗದೊಳೊಪ್ಪುತಿರಲು ||
ಲೀಲೆಯಿಂದಸುರಗುರು ಬಲಗಡೆಯೊಳಿರೆ ಬಂಧು |
ಜಾಲಮಿರೆ ಹಿಂದೆಸೆಯೊಳಖಿಳರಾಕ್ಷಸಸುಭಟ |
ಓಲಗಕೆ ಬರುತಿರ್ದರದ್ಭುತಾಕಾರದಿಂ ಪೇಳ್ವುದೇನಚ್ಚರಿಯನು || ೧೧ ||

೧ ಹಿಡಿಯಲ್ಕೆ (ಮು, ಕ.) ೨-೨ ಸತ್ತಲುಂ ದಿನದಿನಕ್ಕೀತನಭಿವರ್ಧಿಸಿದನು (ಮು, ಕ.)

ಪೊಳೆವ ಕೆವಿಸ್ಮಾಸೆಗಳ ಕಾರೊಡಲ ಕೆಂಗಣ್ಣ |
ಬಳೆದ ಭುಜದುಬ್ಬುಗಳ ಸಲೆ ಮುಸುಡ ಕೊಬ್ಬುಗಳ |
ತಳೆದ ಕೈದುಗಳ ಜುಂಜುರದಲೆಯ ಬರಸಿಡಿಲ ಜಂಗುಳಿಯ ಗರ್ಜನೆಗಳ ||
ಘಳಘಳಿಪ ಕೋರೆದಾಡೆಗಳ ಕರ್ಕಶರೋಮ |
ದಳವಟ್ಟ ಬಿರುದುಹಾಹೆಗಳ ಮಣಿಮಕುಟದೊ |
ಬ್ಬುಳಿಯ ಬೆಳಗಿನ ಬಿರಿಸುನಡೆಯ ರಾಕ್ಷಸಸುಭಟರೋಲಗಕೆ ಬರುತಿರ್ದರು
|| ೧೨ ||

ಶ್ವೇತದಂತಂ ಸುಪಾರ್ಶ್ವಂ ^೧^ಪ್ರಜಂಘಂ ಮಯಂ^೧^ |
ನೀತಿವಂತಂ ವಿಪ್ರಜಿತು ವಿರೂಪಾಕ್ಷಂ ಮ |
ಹಾತಿಬಲವಿದ್ರಾವಣಂ ಮಹಾನಾಭಂ ಪುಲೋಮಂ ಮರೀಚಿ ಮದಿರಂ ||
ಕೇತುವುಂ ಜರ್ಝರಂ ವಾಮನಂ ಗಜಶಿರಂ |
ಕೇತುವೀರ್ಯಂ ನಮುಚಿಮುಂತಾದ ಖಲನೃಪ |
ವ್ರಾತವೈತರುತಿರ್ದುದಾ ಜಲಂಧರನೋಲಗಕ್ಕೆ ಬಹುಭೀಕರದೊಳು || ೧೩ ||

ಅರಿಬಲಪ್ರಳಯಪ್ರಚಂಡನುಂ ಚಂಡನುಂ |
ಧುರವಿಜಯಘನತಟಿತ್ಕೇತುವುಂ ಕೇತುವುಂ |
ಪರಮವಿಕ್ರಮನಾ ನಿಶುಂಭನುಂ ಶುಂಭನುಂ ಮಧುಮತ್ತಧೂಮ್ರಾಕ್ಷರು ||
ಗುರುಭೀಷಣಾಂಗಪ್ರಹೇತಿಯುಂ ಹೇತಿಯುಂ |
ಸುರಬಲಾಹಕದೀರ್ಘಬಾಹುವುಂ ಬಾಹುವುಂ |
ದುರುಳದಾನವ ಖಡ್ಗರೋಮನುಂ ಭೀಮನುಂ ಖಳನೋಲಗಕೆ ಬಂದರು || ೧೪ ||

ಕಾಲನ ಮಹಾಕಾಲದಂಡಮಂ ಸೆಳೆವ ಲಯ |
ಕಾಲಭೈರವನ ದಾಡೆಯನುಗಿವ ಕೋಪದಿಂ |
ಕಾಲಮೃತ್ಯುವಿನ ಗಂಟಲವರಿವ ಗಿರಿಗಳಂ ಕಿತ್ತು ತಿರಿಕಲ್ಲಾಡುವ ||
ಕಾಲಮೇಘದ ಸಿಡಿಲ ತೊಡಿಗೆಯಂ ಸಲೆ ತೊಡುವ |
ಕಾಲದೊಳ್ ಪ್ರಳಯಂಗಳಂ ಮಾಳ್ಪ ಭೀಕರದ |
ಕಾಲರಾಕ್ಷಸರೈದಿ ಸಂದಣಿಸಿ ನಿಂದಿರ್ದರೇನೆಂಬೆನಚ್ಚರಿಯನು || ೧೫ ||

೧-೧ ಪೃಥುಜಘನಮಯಂ (ಹು.)

ಇಂತು ಖಳರಾಜನೊಡ್ಡೋಲಗದೊಳಿರ್ಪ ಸಮ |
ಸಂತರದೊಳತುಳಭಯಭಕ್ತಿಯಿಂದಾ ಕ್ಷಣಂ |
ಮುಂತಿರ್ಪ ರಾಹುಕೇತುಗಳನೀಕ್ಷಿಸಿ ಮಹಾವಿಸ್ಮಯಸ್ವಾಂತನಾಗಿ ||
ಇಂತಿವೇನೊಂದುತನುವೆರಡಾದ ಕಾರಣವಿ |
ದಂ ತಿಳಿಯೆ ಪೇಳೆಂದು ಶುಕ್ರನ ಮೊಗಂ ನೋಡೆ |
ದಂತರುಚಿ ಭಿತ್ತಿಯನಲಂಕರಿಸೆ ಪೇಳ್ದನವದಿರ ಪೂರ್ವಸಂಗತಿಯನು || ೧೬ ||

ಕೇಳಾದೊಡೆಲೆ ಜಲಂಧರ ಪಿಂತೆ ದಿವಿಜಕುಲ |
ಪಾಲಕಂ ಸಕಲದೇವಾಸುರರ್ ವೆರಸಿ ಘನ |
ಲೀಲೆಯಿಂ ಶರಧಿಯಂ ಮಥಿಸೆ ಸುರತರು ದಿವಿಜಮಣಿ ದಿವಿಜಧೇನುವೆಂಬ ||
ಮೇಲಾದ ವಸ್ತುಗಳ್ ವೆರಸಿ ಸುಧೆಯುದಿಸೆ ಲ |
ಕ್ಷ್ಮೀಲೋಲನಾ ಸುಧೆಯನಮರಾಸುರವ್ರಜಕೆ |
ಕೌಳಿಕದೊಳೆರೆಯೆ ಶಶಿರವಿಯು ಕೊಂಡೆಯದೆ ತಲೆಯರಿಯಲಿಂತಾಯ್ತೆಂದನು || ೧೭ ||

ಕೇಳಿ ಗುಡುಗುಡಿಸಿ ಕೋಪಾಗ್ನಿಸ್ಫುಲಿಂಗಪ್ರ |
ಲೋಲಭೀಷಣನಯನಸಮ್ಮಿಳಿತಗುರುತರಕ |
ರಾಳಮುಖನಾಗಿ ನುಡಿದಂ ನಮ್ಮ ತಂದೆಯಂ ಮಥಿಸಿ ನಾನಾವಸ್ತುವ ||
ಖೂಳನೊಯ್ದನೆ ತನ್ನ ಬಸಿರನುಗಿದಾಂ ಕರುಳ |
ಜಾಲಮಂ ರಣಭೂತಕುಣಿಸುವೆಂ ಬಲವೈದ |
ವೇಳೆನುತೆ ಗರ್ಜಿಸುತ್ತಿರ್ಪ ಖಳರಾಜನೊಡನಸುರಗುರುವಿಂತೆಂದನು || ೧೮ ||

ಸಾಮಮುಂ ಭೇದಮುಂ ದಾನಮುಂ ದಂಡಮುಂ |
ಭೂಮಿಪತಿಗಳ ನೀತಿ ಕೇಳ್ ಚರರನಟ್ಟಿ ಸು |
ತ್ರಾಮನಂ ವಸ್ತುವಂ ಬೇಡಿಸುವುದೀಯದೊಡೆ ದಂಡದಿಂ ಕೊಂಬುದೆನಲು ||
ಆ ಮಾತ ಕೇಳಿ ಚರನೊರ್ವನಂ ಕರೆದು ನೀಂ |
ತಾಮಸವ ಮಾಡದಿಂದ್ರನ ಬಳಿಗೆ ಪೋಗಿಯೆ |
ಮ್ಮಾ ಮಹಾವಸ್ತುವಂ ಕೊಟ್ಟಿನ್ನು ಕಂಡು ಬದುಕೆಂದುಸಿರಪೋಗೆಂದನು || ೧೯ ||

ಚರನಸುರರಾಜನಂ ಬೀಳ್ಕೊಂಡು ಬೇಗದಿಂ |
ಸುರಪುರಕೆ ನಡೆತಂದು ಬಾಗಿಲೊಳ್ ತಡೆದರಂ |
ಸರಕುಮಾಡದೆ ಪೊಕ್ಕು ಸುರಪನಾಸ್ಥಾನಕ್ಕೆ ಬರಲವನ ದಿಟ್ಟತನವ ||
ಸುರಮಂತ್ರಿಕಂಡು ನೀನಾರದೂತಂ ನಮ್ಮ[೧] |
ಪುರಕದೇಂ ಕಾರಣಂ ಬಂದೆ ಕಳುಹಿದರಾರು |
ನಿರುತದಿಂ ಪೇಳೆಂದು ಬೆಸಗೊಳಲ್ಕಾಗಳಾ ಖಳನ ಚರನಿಂತೆಂದನು || ೨೦ ||

ಸಕಲಸುರಪಾರ್ಥಿವಡಬಂ ದಿವಿಜಕುಲಶರಭ |
ನಿಕರಭೇರುಂಡನಸುರೇಂದ್ರಮಸ್ತಕದ ಮಾ |
ಣಿಕಜಲಂಧರನ ದೂತಂ ಪಿಂತೆಯೆಮ್ಮಾಳ್ದನಯ್ಯನಂ ಬಿಡದೆ ಮಥಿಸಿ ||
ಪ್ರಕಟತರವಸ್ತುಗಳನೊಯ್ದಿರಿ ಗಡಸುರನಾ |
ಯಕನವಂ ಬೇಡಲಟ್ಟಿದನೆನ್ನನೀವುದೇ |
ಯುಕುತಿಯಲ್ಲದೊಡೆ ರಣಸನ್ನಾಹಮಾಗಿಮೆನೆ ದಿವಿಜಗುರುವಿಂತೆಂದನು || ೨೧ ||

ದೂರ್ವಾಸಮುನಿವರಂ ಕೊಟ್ಟ ಶಾಪದೊಳೀಸು |
ಪರ್ವರಾಜನ ವಸ್ತುಗಳ್ ಶರಧಿಯೊಳ್ ಕೂಡೆ |
ಶರ್ವನಾಜ್ಞೆಯೊಳದಂ ಮಥಿಸಿ ತದ್ವಸ್ತುವಂ ತಂದೆವಾಂ ಪೆರರೊಡವೆಯ ||
ಪಾರ್ವನೇ ಸುರರಾಜನೆನೆ ಕೇಳ್ದು ಕಲಹಮಂ |
ನಿರ್ವಹಿಸಲಾಪಿರೇ ಮದ್ವಸ್ತುವಂ ಕೊಟ್ಟು |
ಸರ್ವಥಾ ಕಂಡು ಬದುಕುವುದೆಂದು ಸಾರಿ ಬಂದೊಡೆಯನೊಡನಿಂತೆಂದನು || ೨೨ ||

ಜೀಯ ನೀವೆಂದಂತೆ ನಾಂ ಪೋಗಿ ನಿರ್ಜರರ |
ರಾಯನಂ ವಸ್ತುವಂ ಬೇಡಲಿಂದೆಮಗೆ ಪ |
ರ್ಯಾಯಮಂ ನುಡಿದನಲ್ಲದೆ ಕೊಟ್ಟು ಕೊಂಬ ಮಾತಿನಿತಿಲ್ಲಮೆಂದೆನಲ್ಕೆ ||
ಕಾಯದೊಳ್ ಭುಗಿಭುಗಿಸೆ ಕೋಪಾಗ್ನಿ ಪರ್ಬಿಪೂ |
ರಾಯಮಾಗಲ್ಕವಂ ಕರೆಕರೆ ಸಮಸ್ತಖಳ |
ನಾಯಕರನೀಗ ಪ್ರಸ್ಥಾನಭೇರಿಯ ಪೊಯ್ಸುವುದೆಂದವಂ ನೇಮಿಸಿದನು || ೨೩ ||

೧ ತಮ್ಮ (ಹು.)

ಸಂಧಿ ಮುರಿವುದು ತೊಲಗಿ ತೊಲಗಿ ದಿವಿಜರ್ ವೈರಿ |
ಗಂಧೇಭಹರ್ಯಕ್ಷಸೈತಹಂ ಪರರಾಜ |
ಸಿಂಧುನಾದಬನಿದಕೊ ಬಂದನಾಶಾಧಿಪರ್ ಬಿಟ್ಟೋಡಿ ಕಂಡಕಡೆಗೆ ||
ಕಂಧರಮನುಳಿಪಿಕೊಳ್ಳೆನುತೆ ಸಾರುವ ತೆರದೆ |
ಧಂಧಳಂ ಧಳ ಧಳ ಧಳೆಂಬ ಭೀಷಣದಿಂ ಜ|
ಲಂಧರಪ್ರಸ್ಥಾನಭೂರಿಭೇರೀರವಂ ಪೊಣ್ಮಿತು ಜಗತ್ರಯದೊಳು || ೨೪ ||

ವಾಜಿಗಳನಿರದೆ ಹಲ್ಲಣಿಸಿದರ್ ಮತ್ತಗಜ |
ರಾಜಿಗಂ ರಂಚಿಕೆಯನಿಕ್ಕಿದರ್ ತೇರ್ಗಳುಮ |
ನೋಜೆಯಿಂ ಪಣ್ಣಿದರ್ ಜೋಡುಸೀಸಕವಿಕ್ಕಿ ಕಾಲಾಳ್ಗಳನುವಾದರು ||
ರಾಜಿಸುವ ಬಹುವಿಧದ ವಾದ್ಯಂಗಳಾರ್ಭಟೆಗೆ |
ಮೂಜಗಂ ತಲ್ಲಣಿಸಿತಾ ಕ್ಷಣದೊಳಸುರಕುಲ |
ರಾಜನತಿಸಂಭ್ರಮದೆ ತನ್ನ ಗುರುವಿತ್ತ ಸುಮುಹೂರ್ತದೊಳ್ ಪೊರಮಟ್ಟನು
|| ೨೫ ||

ಭಟರ ಹೂಂಕೃತಿ ಗಜದ ಬೃಂಹಿತಂ ವಾಜಿಗಳ |
ಪಟುಹೇಷಿತಂ ತೇರ ಚೀತ್ಕೃತಂ ವೀರಕರ |
ಘಟಿತಶಸ್ತ್ರದಖಣಿಖಟಿಲ್ಧ್ವನಿ ಮದೇಭಘಂಟಾರವಂ ತುರಗಚಯದ ||
ತುಟಿಯಿನುಣ್ಮುವ ಕಡಿಯಣದ ಖಣಖಣಧ್ವಾನ |
ಪುಟಿಸಿದ ರಥಾಶ್ವಖುರಪುಟಘುರುಘುರುಸ್ವನಂ |
ಪಟಹತಮ್ಮಟಢಕ್ಕೆಗಳ ರವಂ ಬ್ರಹ್ಮಾಂಡಘಟಮನಲ್ಲಾಡಿಸಿದುದು || ೨೬ ||

ರಾಮ ಕೇಳಯ್ದುಪದ್ಮಂ ವರೂಥಂ ಸಮದ |
ಸಾಮಜಂ ನೂರುಪದ್ಮಂ ವಾಯುವೇಗ ನಿ |
ಸ್ಸೀಮವಾಜಿಗಳುಂ ಸಹಸ್ರಪದ್ಮಂ ಶತಸಹಸ್ರಪದ್ಮಂ ಸುಭಟರು ||
ಈ ಮಹಾಗಣನೆಯೊಳವನ ಸೇನೆಯಿಂತಪ್ಪ |
ಭೀಮರೂಪಿನ ದೈತ್ಯನಾಯಕರ್ ಸಂಗರೋ |
ದ್ದಾಮರೀ ಶತಕೋಟಿಪದ್ಮಂಗಳೊಡನೆ ರಕ್ಕಸರಾಯನೈತಂದನು || ೨೭ ||

ಒಡನೆ ನಡೆದುದು ಜಲಂಧರನ ತೂಕದ ದೈತ್ಯ |
ರೆಡಬಲದೆ ಕರಿತುರಗರಥಪದಾತಿಗಳ ವಂ |
ಗಡದೊಳಾರ್ಭಟಿಪ ವಂದಿಗಳ ಕಳಕಳದ ಬಗೆಬಗೆಯ ವಾದ್ಯಧ್ವನಿಗಳ ||
ಗಡಬಡೆಯೊಳಖಿಳಬ್ರಹ್ಮಾಂಡಂಗಳೋಳಿಯಿಂ |
ದೊಡೆಯದಿರದೆನೆ ಭೂಮಿಯುಂ ಪೊತ್ತ ಗಜರಾಜಿ |
ಯುಡುಗದಿರದೆನೆ [1]ಫಣಿಪನಡಗದಿರದೆನೆ ಕೂರ್ಮನೊಡೆಯದಿರದೆನೆ ಭರದೊಳು[1]
|| ೨೮ ||

ಎತ್ತಲುಂ ಪುದಿದರುಣರಜಮುಯಂ ಗಜಮುಯಂ |
ಸುತ್ತಲುಂ ದೈತ್ಯಪ್ರಚಯಮುಯಂ ಹಯಮುಯಂ |
ಮುತ್ತಿರ್ದ ಛತ್ರಚಾಮರಮುಯುಂ ಸ್ವರಮುಯಂ ನೆಗಳ್ದ ನಾನಾವಾದ್ಯದ ||
ಬಿತ್ತರದೊಳಿಹ ರಥವ್ರಜಮುಯಂ ಧ್ವಜಮುಯಂ |
ಪೊತ್ತ ಕತ್ತಿಗಳ ದೀಧಿತಿಮಯಂ ಖತಿಮಯಂ |
ಎತ್ತಿ ಬಹ ಸಕಲಪರಿಕರಮುಯಂ ಶರಮುಯಂ ದೈತ್ಯನ ಮಹಾಬಲದೊಳು || ೨೯ ||

ಬತ್ತಿದುದು ಸಾಗರವ್ರಾತಮಹಿಪನ ಕೊರಲ್ |
ಕುತ್ತಿ[2]ದುದು ಕೂರ್ಮಖರ್ಪರಮಿರದೆ ಬೇಗನು |
ಗ್ಗೊತ್ತಿದುದು ಜಡಿವ ನಾನಾವಾದ್ಯನಿಸ್ವನಂ ಬ್ರಹ್ಮಾಂಡದೆಲ್ಲೆ[3]ಡೆಯೊಳು ||
ಸುತ್ತಿದುದು ವೈರಿಭೂಪಾಲರಂ ಭೀತಿ ಬೆಂ |
ಬತ್ತಿದುದು ನಾಕಿಗರ ಗಡಿಯ ಠಾಣೆಯ [4]ವಮಾನ |
ಮೆತ್ತಿ[4]ದುದು ಸುರಪುರಕೆ ಕಲಿಜಲಂಧರನ ಸೇನಾಸಮೂಹಂ ನಡೆಯಲು || ೩೦ ||

ಕಂಡವರನುಚಿತದಿಂ ಮನ್ನಿಸುತೆ ಸಲೆ ಭಯಂ |
ಗೊಂಡರ್ಗೆ ನಂಬುಗೆಯನೀವುತ್ತೆ ಮಲೆತರಂ |
ದಿಂಡುದರಿವುತ್ತಮಿದಿರಾದ ದುರ್ಗಂಗಳಂ ಧೂಳಿಗೋಂಟೆಗಳ ಕೊಂಡು ||
ಪೆಂಡಿರಂ[5] ವಸ್ತುಗಳ ತಂಡಂಗಳಂ ಸೂರೆ |
ಗೊಂಡು ತದ್ಭೂಪರಂ ದಂಡಿಸಿಯೆ ಪಿಡಿದು ಪ್ರ |
ಚಂಡಖಳನಾಯಕನ ದಂಡು ನಡೆದುದು ಸುರರನಂಡಲೆವ ತವಕದಿಂದೆ || ೩೧ ||

೧-೧ ಕೂರ್ಮನೊಡಯದಿರದೆನೆ ಒಲದ ಭಾರಮಂ ಪೊಗಳಲಳವೇ || (ಗೋ.) ೨ ಪತ್ತಿ (ಪ, ಗೋ.) ೩ ಮೆಲ್ಲೆಡೆ (ಶಿ, ಪ.) ೪-೪ ಮಾನಮೆತ್ತಿ (ಹು.) ; ಮಾಣಮೆತ್ತಿ (ಕ) ೫ ರರ (ಗೋ.)

ಪಾಳಿಬಿಟ್ಟುವು ದಿಕ್ಕುದಿಕ್ಕಿಗಂದಸುರಬಲ |
ಜಾಲ ಮಘವನ ಸಲಿಲದುರ್ಗಂಗಳಂ ಬಿಡದೆ |
ಕೋಳ ಕೊಂಡರ್ ನಾಡೆ ಸೆರೆತುರುಗಳಂ ಕೊಟ್ಟು ಬಹುಭಯಂಗೊಂಡು ಕೂಡೆ ||
ಗೂಳಿಯಂ ಬಂದುದಮರಾವತಿಗೆ ತಾನದಂ |
ಕೇಳಿ ಖಳರಾಜನೈತಪ್ಪುದಂ ಚಿತ್ತದೊಳ್ |
ತಾಳಿ ಘನರೋಷಮಂ ಕಂಗಳೊಳ್ ಕಿಡಿಗೆದರಿ ಸುರಪಾಲನಾ ಕ್ಷಣದೊಳು || ೩೨ ||

ಕರೆಸಿದಂ ಸಕಲದಿಕ್ಪಾಲ ಕಿನ್ನರ ಯಕ್ಷ |
ಗರುಡ ಗಂಧರ್ವ ಸಾಧ್ಯೋರಗ ಪಿಶಾಚ ಕಿಂ |
ಪುರುಷ ರಾಕ್ಷಸ ಸಿದ್ಧ ಗುಹ್ಯಕಾಪ್ಸರರೆಂಬ ಸಕಲಲೋಕಾಧಿಪರನು ||
ಕರಿ ತುರಗ ರಥ ಪದಾತಿಗಳ ಸಂದಣಿಯಿಂದೆ |
ಸುರಪುರಕೆ ಬರಲಿಂದ್ರನಾಗಲಾ ಕಲಿಜಲಂ |
ಧರನ ಕೂಡಣ ಕಲಹ ಕೇಳಿಮೆನಲಾ ಕ್ಷಣಂ ಸಂಭ್ರಮದೆ ಪೊರಮಟ್ಟನು || ೩೩ ||

ಆನೆಗಳ್ಗಿಕ್ಕು ರಂಚಿಕೆಗಳಂ ತುರಗಪ್ರ |
ತಾನಮಂ ಹಲ್ಲಣಿಸು ತೇರ್ಗಳಂ ಪೂಡು ತಾ |
ತಾ ಸೀಡು ಜೋಡುಸೀಸಕ ಬಾಹುರಕ್ಕೆ ಚಲ್ಲಣಗಳಂ ಬೇಗದಿಂದೆ ||
ನೀಸಯ್ಯು ತಾಸಯ್ಯು ಪರಶು ಗದೆ ಮುಸಲಾಸಿ |
ಧೇನುಗಳನೀ ಪುರದ ಬಾಹೆಗೆ ಜಲಂಧರನ |
ಸೇನೆ ಬಂದುದು ತಡೆಯದೇಳೆಂಬ ಗಜಬಜಂ ತುಂಬಿತಮರಾವತಿಯೊಳು || ೩೪ ||

ಆಸಮಯದಾನವನ ಸೇನಾಸಮುದ್ರಂ ತನ್ನ |
ಮುಸುಕಲ್ಕೈತರೆ ಕಂಡು ಪುರವನಿತೆ ಸೇನೆಯಂ |
ಬೆಸಲಾವಳೊ[೧] ಪೇಳಿಸಲ್ಕೆ ತಮ್ಮಟ ಭೇರಿ ಡೌಡೆಗಳ ರಭಸದಿಂದೆ ||
ಅಸಿ ಪರಸು ತೋಮರ ಕಠಾರಿ ಮುದ್ಗರ ಕುಂತ |
ಮುಸುಡ ಭಲ್ಲೀ[೨]ಯ ಪಿಂಡಿ[೩]ವಾಳಂಗಳಂ ತಳೆದು |
ಮುಸಕದಿಂದೈದಿದರ್ ಪಟುಭಟರ್ ಪುರಮನಗಣಿತಕೋಟಿಸಂಖ್ಯೆಯಿಂದೆ || ೩೫ ||

೧ ಬೆಸಲೆಯಾದಳೊ (ಶಿ, ಪ.) ೨ ಶಲ್ಲಿ (ಪ.) ೩ ಭಿಂಡಿ (ಪ.)

ಭೂರಿಭೇರಿಗಳ ರಭಸದ ವಂದಿಜನದ ಗಂ |
ಧೀರಘೋಷದ ಬಳಸಿ ಜೀ[೧]ಯೆಂಬ ಮನುಮುನಿಗ |
ಘೋರಣದ ಕೈಗೊಡುವ ದಿಕ್ಪಾಲಕರ ಪರಕೆಗೊಡುವ ಮಂತ್ರಧ್ವಾನದ ||
ಚಾರುಚಾಮರಛತ್ರನಿಚಯದಾಡಂಬರದ |
ಸಾರವೈಭವದ ಸಂಭ್ರಮದಿಂದೆ ದಿವಿಜಮುದ |
ವಾರಣಮನೇರಿ ನಡೆದಂ ರಣಕೆ ದೇವೇಂದ್ರನತುಳಸುಮ್ಮಾನದಿಂದೆ || ೩೬ ||

ಜಾತವೇದಂ ತಗರನಂತಕಂ ಕೋಣನಂ |
ಯಾತುಧಾನಂ ಮನುಜನಂ ಪಾಶಿ ಮಕರಮಂ |
ವಾತನೇಣನನೀಶಸಖನಶ್ವರತ್ನಮುಮನೀಶಾನನುಂ ವೃಷಭನ ||
ಪ್ರೀತಿಯಿಂದೇರೆ ಸುರ ನರ ಗರುಡ ಗಂಧರ್ವ |
ಜಾತಮುಂ ನಿಜವಾಹನಮನೇರಿ ಮುಂದಸಂ |
ಖ್ಯಾತಬಲವೆರಸಿ ದೇವೇಂದ್ರನಿಕ್ಕೆಲದೊಳಗೆ ನಡೆಗೊಂಡುದೇವೇಳ್ಪಿನು || ೩೭ ||

ಬಿಗಿದ ರಂಚಿಕೆಯ ಘಂಟಾರವದ ಘನಪತಾ |
ಕೆಗಳ ಚಂಚತ್ಕರದ ಗಜರಾಜಿ ಹಲ್ಲಣದ |
ಮೊಗರಂಬಗಳ ಪಕ್ಕೆರಕ್ಕೆಗಳ ಕಡಿಯಣದ ವಾಜಿಗಳ್ ವಜ್ರಾಂಗಿಯ ||
ಮಿಗೆ ಬಾಹುರಕ್ಕೆಗಳ ಸೀಸಕದ ಕೈಯ ಕೈ |
ದುಗಳ ಕಾಲಾಳಂಬುದುಂಬಿ ಸಾರಥಿಯ ಚಾ |
ರಿಗೆ ಬರ್ಪ ಚಿನ್ನದ ವರೂಥಂಗಳೈದಿದುವು ಸುರಸೈನ್ಯಮೆಲ್ಲಿಡೆಯೊಳು || ೩೮ ||

ಬಂದು ದಿವಿಜೇಶ್ವರಂ ಸಕಲಸುರನಾಯಕರ |
ಸಂದಣಿಯ ಸಂರಂಭದಿಂದಲಮರಾವತಿಯ |
ಮುಂದಣ ವಿಶಾಲಮಾಗಿರ್ದ ಬಯಲೊಳ್ ಬಹಳಸನ್ನಾಹಮಾಗಿ ನಿಂದು ||
ಹಿಂದುಮುಂದೆಡಬಲದೊಳೆಲ್ಲಿಯುಂ ನೆರೆದ ಬಲ |
ವೃಂದಮಂ ನೋಡಿ ವಿಸ್ಮಿತನಾಗಿಯಿದರೊಡನೆ |
ನಿಂದುಕಾದುವ ವೀರನಾವನೆನುತೊಡ್ಡಿದಂ ಫೌಜನತಿವಿಸ್ತರದೊಳು || ೩೯ ||

---
೧ ಬಾ (ಶಿ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತವಂ ಬಿಡದೆ ಪೇಳ್ದರ್ಗೆ ಪಠಿಸಿದರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೦ ||

ಅಂತು ಸಂಧಿ ೨೩ಕ್ಕಂ ಪದಗಳು ೮೮೨ಕ್ಕಂ ಮಂಗಳಮಹಾಶ್ರೀ

ಇಪ್ಪತ್ತನಾಲ್ಕನೆಯ ಸಂಧಿ

ಸೂಚನೆ

ಸ್ವರ್ಗದರಸಿನಕೂಡೆ ಕಾದಿ ಖಳರಾಜನಾ |
ದುರ್ಗಮಂ ಸೆಳೆದುಕೊಂಡಾ ಕ್ಷಣಂ ದಿಕ್ಪಾಲ |
ವರ್ಗಮುಂ ಬೆಂಬತ್ತಲೋಡಿ ವಿಧಿಸಹಿತ ವೈಕುಂಠಮಂ ಪೊಕ್ಕರಾಗ ||

ಎರಗದ ವಿರೋಧಿಖಳರೆರೆಯುರಂ ಸಮರದೊಳ್ |
ತರಿದು ಸುರರಾಲಯದೊಳುರೆ ಮಹಾಲಕ್ಷ್ಮಿಯಂ |
ಸೆರೆಗೈದು ಭಕ್ತರ್ಗೆ ನೆರತೆಯಿಂ ಕರುಣಮಂ ಕರೆದು ಕರೆದುಂ ಮಾಣದೆ[೧] ||
ಹರಿದಲೆಯ ಕೈಯ ಬೊಬ್ಬಿರಿವ ರುಂಡದ ಕೊರಳ |
ಹೆರೆಯ ಸೂಡಿದ ವೈಯ್ಯ ವಿರುಪ ಮರಿ[೨]ವಾವುಗಳ |
ತುರುಗಲಿಂದೊಪ್ಪುತಿಹ ಕರಿಗೊರಲ ಪಂಪಾವಿರೂಪಾಕ್ಷ ಸಲಹೆಮ್ಮನು || ೧ ||

ವಿವರಿಸುವೆನಾಲಿಸಿನ್ನೆಲೆ ರಾಮ ಬಳಿಕಲಾ |
ದಿವಿಜೇಂದ್ರನತುಳಸನ್ನಾಹದಿಂ ಬರುತಿರಲ್ |
ತವೆ ಕಾಣಿಸಿತು ಜಲಂಧರನ ಸೈನಿಕವತ್ತಲದ್ಭುತಾಕಾರವಾಗಿ ||
ಜವನ ಜಂಗುಳಿಯಂತೆ ಮಿಳ್ತು[೩]ವಿನ ಪಡೆಯಂತೆ |
ಶಿವನ[೪] ಕಣ್ಣುರಿಯಂತೆ ಭೈರವನ ಬಿಲದಂತೆ |
ತವಕಿಸುವ ಸಿಡಿಲ ವಂಗಡದಂತೆ ಬರುತಿರ್ದುದೇನೆಂಬೆನಚ್ಚರಿಯನು || ೨ ||

ಘೋರ್ಗರೆದುವಿರ್ಬಲದ ವಾದ್ಯಂಗಳುಭಯಸುಭ |
ಟರ್ಗಳಾರ್ಭಟಿಸಿ ತೋಳ್ವೊಯ್ದು ಪಟುಭಟವಾಜಿ |
ವರ್ಗಮುಂ ರಾವ್ತರಪ್ಪಾಡಿದರ್ ತೀಡಿ[೫]ದರ್ ಬಿಲ್ಲವರ್ ಸಿಂಜಿನಿಯನು ||
ತೇರ್ಗಳಗ್ರದ ಪಟಂ ಕೈವೀಸಿ ಕಾಳೆಗದ |
ವರ್ಗಳಂ ಕರೆವಂತೆ ಚರಿಸಿದುವು ತತ್ಕ್ಷಣಂ |
ಸ್ವರ್ಗವರಸಿನ ಜಲಂಧರನ ಸೇನೆಗಳೊಂದನೊಂದು ಸಂಧಿಸುವಾಗಳು || ೩ ||

---

೧ ದು (ಪ.) ೨ ಮಣಿ (ಪ, ಹು.) ೩ ಮೃತ್ಯು (ಮ, ಅ, ಬ, ಕ.) ೪ ಭವನ (ಪ, ಗೋ, ಹು.) ೫ ವಿ (ಪ, ಗೋ.)

ಗಗನಚುಂಬಿತಸಧ್ವಜಾಳಿಗಳ ಧೂಳಿಗಳ |
ಝುಗಝುಗಿಪ ಕಾಂಚನರಥಾವಳಿಯ ಗಾವಳಿಯ |
ಮಿಗುವ ತುರಗವ್ರಜದ ಸಂವಣಿಯ ಗೊಂದಣಿಯ ಕರಿಘಟೆಯ ಭರವಸಗಳ ||
ವಿಗಡಪಟುಭಟಮನದ ಖಾತಿಗಳ ಹೇತಿಗಳ |
ಮಿಗೆ ಮೊರೆವ ಬಹುವಿಧದ ಭೇರಿಗಳ ಭೂರಿಗಳ |
ಬಗೆಬಗೆಯ ಛತ್ರಚಮರಾಳಿಗಳ ಪಾಳಿಗಳ ಬಲಮೆರಳ್ ಕಣ್ಗೆಸೆದುವು || ೪ ||

ಘೋರೆಂದುವಖಿಳಸುರದುಂದುಭಿಗಳೊರಲ್ದ ಕಹ |
ಕಾರವಂ ಪರ್ಬಿದುದು ಬಲಯುಗದ ಕೆಂದೂಳ್ಗಿ |
ಹೋರಾಟವಾಯ್ತನಂತರಮುಭಯಭಟರ ನಿಷ್ಠುರದೃಷ್ಟಿಗಳ್ ಪೊಣರ್ದುವು[1] ||
ಸೇರಿ ತಿವಿದಾಡಿದರ್ ಚೂಣಿಗರ್ ಬಲ್ಲಿಹ[2]ಕ |
ಠಾರಿ ಕಕ್ಕಡ ಪರಶುಮುಖ್ಯಾಯುಧಂಗಳಿಂ |
ಭಾರಿಯಾಹವವಾಯ್ತು ದೇವಾಸುರರ್ಗಳೇನೆಂಬೆನಚ್ಚರಿಯನು || ೫ ||

ಕಡಿ ಕೊಚ್ಚು ತಿವಿ ತಾಗು ಕೂಗು ಬೊಬ್ಬಿರಿಯೆಲುವ |
ನುಡಿ ಕೆಡೆಪು ಕರುಳನುಗಿ ಬಸಿರ ಬಗಿಯುರುಬು ತೋಳ್ |
ಪ್ರೊಡೆ[3]ಯೊತ್ತು ಮುತ್ತು ಕುತ್ತಡಸು ಬಯ್ ಪೊಯ್ ನೂಂಕುತೌಂಕು ಸೀಳ್ ತಡೆಸಿ-
ಕಡಿದಾಡಿದರ್ ಕತ್ತಿ ಕೈದುವಿಂ ಗದೆಗಳಿಂ |	[-ಯೆನುತ್ತೆ ||
ಬಡಿದಾಡಿದರ್ ಮೂದಲೆಯ ಮಾತಿನಿಂದೆ ಬಾಯ್ |
ಬಡಿದಾಡಿದರ್ ಸುರಾಸುರರ ಚೂಣಿಯ ಸುಭಟರೇನೆಂಬೆನದ್ಭುತವನು || ೬ ||

ತರಿವರಿರಿವರ್ ಕೊಯ್ವರೊತ್ತುವರ್ ಮುತ್ತುವರ್ |
ಕೊರೆವರುಡಿವರ್ ಕಡಿವರುಬ್ಬುವರ್ ಕೊಬ್ಬುವರ್ |
ಮುರಿವರೆಳ್ವರ್ ಬೀಳ್ವರುರುಬುವರ್ ತರುಬುವರ್ ಕರುಬುವರ್ ಸಾಹಸವನು ||
ಪೊರೆವರೆಸೆವರ್ ಕುಸಿವರಳ್ಕುವರ್ ಬಳ್ಕುವರ್ |
ತೊರೆವರಂಗವನೊತ್ತಿ ನೂಂಕುವರ್ ತಾಂಕುವರ್ |
ಕುರಿವರಿ[4]ಯ ಮಾಡಿ ಪೊಯ್ದಾಡುವರ್ ಮಾಡುವರ್ ಪೌರುಷವನುಭಯಭಟರು
|| ೭ ||

೧ ಪೋಪು‌ವು (ಹು, ಅ, ಪ, ಗೋ.) ೨ ಕಲ್ಯಹ (ಹು, ಪ, ಗೋ,) ೩ ಪೊಡೆ (ಶಿ.)
೪ ಲೆ (ಹು.)

ಪೊಳ್ದರಂಗಂಗಳಂ ಮೊದಲೆಯ ನುಡಿಗಳಂ |
ಕೇಳ್ದರೊಬ್ಬೊಬ್ಬರಂ ಮೆಟ್ಟಿ ಸರಿಸೀಳಾಗಿ |
ಸೀಳ್ದರಿಟ್ಟಣಿಸಿದರ್ ತಣಿಸಿದರ್ ಭೂತಮಂ ಬಹಳಕೋಪಾಂಬುಧಿಯೊಳು ||
ಆಳ್ದರಿರಿದೇರ್ಗಳತಿವೇದನೆಗೆ ಮುಸಕಮಂ |
ತಾಳ್ದರಿದಿರಾದವರ ತಲೆಗಳಂ ತಂದು ತ |
ಮ್ಮಾಳ್ದಂಗೆ ಸಲೆ ನಿವಾಳಿಸಿದರುಭಯದ ಸುಭಟರೇನೆಂಬೆನಾಕ್ಷಣದೊಳು[1] || ೮ ||

ವಾರ್ಧಿಗಳ ಬಲ್ತೆರೆಗಳೊಂದೊಂದನಣೆವಂತೆ |
ದುರ್ಧರದ ರಾವ್ತರಿರಿದಾಡಿದರ್ ಪಟುವೈರಿ |
ನಿರ್ಧೂತರೆನಿಪ ಜೋದರ್ಕಳಂಕುಶವಿಕ್ಕಿ ಪೋರಿಸಿದರಾನೆಗಳನು ||
ಮಾರ್ದನಿಯ ಮುಸಕದಿಂ ರಥಿಕರೊತ್ತಿದರಾ ಧ |
ನುರ್ಧರರ್ ಮೊದಲಿಸುತಿಸುವ ಕೈಚಳಕಮಂ |
ನಿರ್ಧರಿಸಲರಿದೆಂಬ ಹದನಾದುದಾಕ್ಷಣದೊಳೇನೆಂಬೆನಚ್ಚರಿಯನು || ೯ ||

ಸರ್ಬಸನ್ನಾಹದಿಂ ನೊಂಕಿದುದು ಸುರರ ಚಾ |
ತುರ್ಬಲಂ ಖಂಡೆಯಂಗಳ ಖಣಿಕಟಿಸ್ವನಂ |
ಪರ್ಬಿದುದು ದಿಕ್ತಟಂಗಳೊಳಾನೆಗಾನೆ ಕುದುರೆಗೆ ಕುದುರೆ ತೇರ್ಗೆ ತೇರು ||
ಗರ್ಬದಿಂ ಸುಭಟರ್ಗೆ ಸುಭಟರ್ಕಳಿದಿರಾಗಿ |
ಯೊರ್ಬರೊರ್ಬರ್ ಸೆಣಸೆ ಸುರಸುಭಟರಿರಿತಕ್ಕೆ |
ಮಾರ್ಬಲದ ಚೂಣಿ ಮುರಿದೋಡಿ ಕೂಡಿತು ಜಲಂಧರದೈತ್ಯಸರಿಸೆಲೆಯನು
|| ೧೦ ||

ಪಿಂತಿರುಗಿ ಕಾದಿದರನಿರಿವುತುಂ ತರಿವುತುಂ |
ದಂತಿ ತುರಗಂಗಳಂ ಪಿಡಿವುತುಂ ಜಡಿವುತುಂ |
ಮುಂತಳರ್ವ ಭಟರನರೆಯುಟ್ಟುತುಂ ಕುಟ್ಟುತುಂ ಮೆಟ್ಟುತುಂ ಪೆರ್ವೆಣನನು ||
ಅಂತರಿಸದುರುಬಿ ತಲೆವೊಯ್ವುತುಂ ಬಯ್ವುತುಂ |
ತಂತಮ್ಮ ವೀರಮಂ ಮೆರೆವುತುಂ ಬೆರೆವುತುಂ |
ಭ್ರಾಂತಿಬಡಿಸಿದರಾಗ ರಾಗದಿಂ ಬೇಗದಿಂ ಸುರಭಟರ್ ಪರಭಟರನು || ೧೧ ||

---

೧ ನಚ್ಚರಿಯನು (ಗೋ.) ೨ ನಳ (ಹು.) ; ನಳಿ (ಕ.) ೩ ನರ (ತಿ.) ; ಸಿಹ (ಮು.)

ಖಂಡಮಯಮೆತ್ತಲುಂ ಮುರಿಮುರಿದು ಬಿದ್ದ ಕೋ |
ದಂಡಮಯಮೆತ್ತಲುಂ ಕುಣಿಕುಣಿವ ಮರುಳ ಬ |
ಲ್ಲುಂಡಮಯಮೆತ್ತಲುಂ ಸುತ್ತಲುಂ ಪರಿವ ರಕ್ತಾಂಬುವಿನೊಳೋಲಾಡುತೆ[೧] |
ರುಂಡಮಯಮೆತ್ತಲುಂ ಕಡಿಕಡಿದು ಕೆಡೆದ ತಲೆ |
ತುಂಡಮಯಮೆತ್ತಲುಂ ತುಂಡಾದ ಘನಗದಾ |
ದಂಡಮಯಮೆತ್ತಲುಂ ತಾನೆನಿಸಿ ರಣರಂಗಮಿರ್ದುದತಿಭೀಕರದೊಳು || ೧೨ ||

ರಕ್ತಪ್ರವಾಹಮಾದುದು ರಣಂ ಸಾಹಸವಿ |
ರಕ್ತರಾದರ್ ಖಳನ ಚೂಣಿಗರ್ ಸುರಕರವಿ |
ಮುಕ್ತಬಾಣೋರಗನ ಬಾಯ್ಗೆ ತುತ್ತಾದುದರಿಭಟರ ಜೀವಾಸಿಲಚಯಂ ||
ಶಕ್ತಿ[೨]ಯುಡಿದುವು ಖಳರ ಕಾಯದೊಳ್[೨] ಬಹುಕೋಪ |
ರಕ್ತೇಕ್ಷಣಂ ಶುಂಭದಾನವಂ ಕಂಡು ಕರ |
ಯುಕ್ತಭೀಷಣಮಾದ ಖಂಡೆಯವನುರೆ ಜಡಿದು ಕೈವೀಸಿದಂ ಬಲವನು || ೧೩ ||

ನಡೆ ಜಂಭ ನೂಂಕೆಲೆ ನಿಶುಂಭ ಮುಂಬರಿ ಚಂಡ |
ತುಡುಕು ನೀನೆಲೆ ಖಡ್ಗರೋಮ ತೋರಿಸು ನಿನ್ನ |
ಕಡುಪನೆಲೆ ವಾಮನ ವಿರೂಪಾಕ್ಷ ಕೈದೋರ್ಪುರ್ ಲೋಮ ಬಲ್ಪೇನಾದುದು ||
ಮಿಡುಕದಿಹರೇ ದೀರ್ಘಬಾಹು ನಿಲ್ವರೆ ಮದಿರ |
ತಡೆವರೇ ನೀಂ ಕಾಲನೇಮಿ ಸತ್ತ್ವವನೆಲ್ಲಿ |
ಮಡಗಿದಿರಿ ಭಟರೆನುತೆ ಮೂದಲಿಸಿದಂ ಖಳನ ಸೇನಾನಿ ಶುಂಭನಂದು || ೧೪ ||

ಮೊಳಗಿದುವು ಸಕಲವಾದ್ಯಂಗಳಾರ್ಭಟಿಸಿದರ್ |
ಖಳದೊರಲ್ದುವು ಕಹಳೆ ಮಿಂಚಿದವು ಕತ್ತಿಗಳ್ |
ಸಲೆ ನೂಂಕಿದುವು ಕುದುರೆಗಳ್ ಕರಿಗಳೊತ್ತಿದುವು ಪಟುಭಟರ್ ಮುಂಬರಿದರು ||
ಖಳನಾಯಕರ್ ಕುಬುಬೆನುತ್ತಾರಿ ಬೊಬ್ಬಿರಿದು |
ಮುಳಿದು ನಿಜವಾಹನಂಗಳನುರುಬಿ ನಡೆಸಿದರ್ |
ಕೊಳುಗುಳದ ಭೀಷಣವನೇನೆಂದು ಬಣ್ಣಿಸುವೆನೆಲೆ ರಾಮ ಕೇಳೆಂದನು || ೧೫ ||

೧ ವ (ಗೋ.) ೨-೨ ಯುಡುಗಲ್ ಖಳರ್ಗೆ ಕಂಡಾಗ (ಶಿ.)

ಖೋಯೆಂದು ಖಳನ ಪಡೆ ನಡೆವುದಂ ಕಂಡಿಂದ್ರ |
ನೋಯೆಂದು ಬೊಬ್ಬಿರಿದು ಕೆಲಬಲದ ಸಕಲಸುರ |
ನಾಯಕರನೈದೆ ಕೈವೀಸಿದಂ ಸೂಸಿದಂ ಮೂದಲೆಯ ಮಾತುಗಳನು ||
ಬಾಯ ಬೊಬ್ಬೆಗಳ ತೋಳ್ವೊಯ್ಲ ಪಟುಭಟರ ಸಮು |
ದಾಯದೊಡನಗ್ನಿ ಯಮ ನೈಋತ್ಯ ಜಲಧಿಪತಿ |
ವಾಯು ಧನದಾದಿಗಳ್ ನೂಂಕಿದರ್ ಭರವಸದೊಳೇನೆಂಬೆನಚ್ಚರಿಯನು || ೧೬ ||

ಸುರಪನಂ ಶುಂಭನಗ್ನಿಯ ನಿಶುಂಭಂ ದಂಡ |
ಧರನನಾ ವಾಮನಂ ನಿಋತಿಯಂ ಮದಿರನುರೆ |
ಶರಧಿಪತಿಯಂ ದೀರ್ಘಬಾಹು ಪವಮಾನನಂ ಖಡ್ಗರೋಮಂ ಧನದನ ||
ದುರುಳಪ್ರಚಂಡನೀಶಾನನಂ ಚಂಡನಿಂ |
ತಿರದೆ ಮೂದಲಿಸಿ ಸಮ್ಮುಖವಾಗಿ ತುಳ್ಕಿದರ್ |
ಶರವರುಷಮಂ ನಭೋಂಗಣಮೆತ್ತ ದೆಸೆಯೆತ್ತ ಸುರಧರಣಿಯೆತ್ತಲೆನಲು || ೧೭ ||

ಕೊಚ್ಚುವರ್ ಪೊಸಮಸೆಯ ಸರಳ್ಗಳಿಂದೆಸುಗೆಯಂ |
ಮೆಚ್ಚುವರ್ ಹೃದಯದಲಿ ಕೋಪಮಂ ಕಣ್ಗಳೊಳ್ |
ಬಿಚ್ಚುವರ್ ಕಣೆಕಣೆಗಳೆಸುಗೆಗಳ ಮಸಕದಿಂ ಬೃಂದಾರಕರ ನೆಲವನು ||
ಮುಚ್ಚುವರ್ ಬಲನೆಡನೊಳುರುಬುತಿಹ[1] ಸುಭಟರಂ |
ಪಚ್ಚುವರ್ ಭೂತವೇತಾಳಜನಕೀ ಪರಿಯೊ |
ಳೆಚ್ಚಾಡಿದರ್ ಸುರೇಂದ್ರಾದಿಸುರನಾಯಕರ್ ಖಳನಾಯಕರ್ ಧುರದೊಳು
|| ೧೮ ||

ಅಸಿಗಳಿಂದೊರ್ಮೆ ಕುಂತದೊಳೊರ್ಮೆ ನೆಗಳ್ದ ಪ |
ಟ್ಟಸಗಳಿಂದೊರ್ಮೆ ಗದೆಗಳೊಳೊರ್ಮೆ ಘನತರದ |
ಮುಸಲಂಗಳಿಂದೊರ್ಮೆ ಮುದ್ಗರದಿನೊರ್ಮೊರ್ಮೆ ಸುರಗಿಯಿಂದೊರ್ಮೆಯೊರ್ಮೆ |
ಅಸಮಸಂಗ್ರಾಮದೊಳಗಿಂತುಭಯನಾಯಕರ್ |
ಮಸಕದಿಂ ಪೊಯ್ದಾಡಿದರ್ ಬಿಡದೆ ಪೊಕ್ಕು ರ |
ಕ್ಕಸರಿರಿಯೆ ತರಹರಿಸಲಾರದಾಶಾಧಿಪರ್ ಬೆಂಗೊಟ್ಟರಾ ಕ್ಷಣದೊಳು || ೧೯ ||

---

೧ ನೊಳಾಂಕುತಿಹ (ಹು.)

ಸುರಪನೋಡಿದನಗ್ನಿ ಸಾಗಿದಂ ಪ್ರೇತಪತಿ |
ತೆರಳ್ದನಾ ನೈರುತ್ಯನಡಗಿದಂ[೧] ಜಲಧಿಪಂ |
ಮುರಿದನನಿಲಂ ಸರಿದನಭವಮಿತ್ರಂ ನೊಂದನೀಶಾನನಳವಳಿದನು ||
ಉರವಣಿಸಿ ದೈತ್ಯನಾಯಕರೊಡ್ಡುವಮರರಂ |
ಜರೆಸಿದರ್ ದೊರೆಗಳೀ ಜಸ್ಸ್ಸಿಯೆ ಚತುರಂಗ |
ಮುರಿದೆ ತೆಗೆದೋಡುತಿರ್ದುದು ಕೆಟ್ಟುಬಿಟ್ಟು ಕುಟ್ಟುವ ದೈತ್ಯಭಟರುರುಬೆಗೆ
|| ೨೦ ||

ಬಿರುಗಾಳಿ ಬೀಸಿದೊಡೆ ಸೂರಜುವಿಂಡದದಂತು |
ಮುರಿಯುದಿಹುದೇ ನಿಮಿಷಮಾತ್ರದೊಳ್ ಸುರಸೇನೆ |
ಹರಿಹಂಚುವಟ್ಟು ತಾಯ್ಗಂ ಮಕ್ಕಳಾಗದೊಂದೇ ಬಾರಿ ಜಿಸ್ಕಿತ್ತುದು ||
ಇರಿ ಕಡಿ ಪೊರಳ್ಚು ಸೋಲ್ತರ್ ದಿವಿಜರೆನುತಾರ್ದು |
ಸರಿಗರಕ್ಕಸರಾನೆಕುದುರೆಸಹಿತೊತ್ತಿ ಕುರಿ |
ದರಿಮಾಡಿ ಬಿಡದೆ ಬೆಂಬತ್ತಿದರ್ ಸಾಹಸದೊಳೇನೆಂಬೆನದ್ಭುತವನು || ೨೧ ||

ಕಡಿದರೋಡುವ ಭಟರ ಬೆಂಬತ್ತಿ ತಮುತಮುಗೆ |
ಪಿಡಿದರ್ ತುರಂಗಗಜರಾಜಿಯಂ ಪಂಥಮಂ |
ನುಡಿದರಿರದೊತ್ತಿದರ್ ಮುತ್ತಿದರ್ ಕುತ್ತಿದರ್ ಮೆತ್ತಿದರ್ ವೈಗಂಬನು ||
ಉಡಿದರಾಂತವರ ಬಗ್ಗುರಿಗಳಂ ದಾನವರ್ |
ಕುಡಿದರರುಣಾಂಬುವಂ ಶಾಕಿನಿಯರೀ ಸುರರ್ |
ಮುಡಿಪರಂದೋಡಿದರ್ ಕೋಡಿದರ್ ಬಾಡಿದರ್ ನೀಡಿದರ್ ಕೈದುಗಳನು || ೨೨ ||

ಶಿರವರಿಯಲೆತ್ತಿದ ಕರಾಗ್ರಮಂ ಕಂಡು ಪಲ್ |
ಗಿರಿವ್ರತಂ ಖಡ್ಗಧಾರೆಗೆ ಬೆದರಿ ತಂತಮ್ಮ |
ಕರವನೊಡ್ಡುತೆ ಕಾಲ್ಗೆ ಬೀಳುತಂ ಪಲ್ಗಚ್ಚಿ ದೈನ್ಯವಚನಂಗಳಿಂದೆ ||
ಶಿರವನುಳುಹಯ್ಯ ನಿಮ್ಮಯ ಬಸಿರ ಬಂದೆವೆಮು |
ಗೊರೆವ್ರದಾಳ್ಗಿಲಸಮಂ ಮಾಳ್ಪೆವೆಂದುಸಿರಿ ಮೈ |
ಗರೆವ್ರತಿರ್ದರ್ ಮಡಿದ ಗಜಹಯಂಗಳ ಮರೆಯೊಳಳವಳಿದು ದಿವಿಜಭಟರು || ೨೩ ||

---

೧ ನಡೆದನಾ (ಮ.)

ಮೊರೆವ ಬೊಬ್ಬೆಗೆ ರಾವ್ತರಂ ಬಿಸುಟು ವಾಜಿಗಳ್ ।
ಪರಿದಾಡಿದುವು ಮಾವ್ತರಂ ಕೆಡೆಪಿಯಾನೆಗಳ್ ।
ತಿರುಗುತಿರ್ದುವು ಬಂದು ಬಿದ್ದರಮರಾವತಿಯ ಪೇರಗಳನಮರಭಟರು ॥
ಪುರದ ಪೆರ್ಬಾಗಿಲೊಳ್ ಕರಿತುರಗಪದಹತಿಯೊ ।
ಳರೆವುತಿರ್ದುದು ಸುರಪದಾತಿ ಖಳಚತುರಂಗ ।
ಮುರವಣಿಸಿ ತುಳಿದಿರಿದುಕೊಂಡು ಬರುತಿರ್ದುದದನೇನೆಂಬೆನದ್ಭುತವನು ॥ ೨೪ ॥

ಬಾಗಿಲೊಳ್ ಪೊಗುವೊಡಸದಳವಾಗಿ ಪರಣಮಂ ।
ನೀಗಿದರ್ ಕೆಲಬರಿರಿದಾಡಿ ನೋಡುವೆನೆಂದು ।
ತಾಗಿದರ್ ಕೆಲಬ[೧]ರಾ ನಗರದಾಳ್ವೇರಿಯೊಳ್ ನೋಡುತಿಹ[೧] ಬಾಲೆಯರನು ॥
ಬೇಗನೆವ್ಮೆಂ[೨] ಸೇದಿಕೊಳ್ಳಿವೆಂದವರ್ಗೆ ತಲೆ ।
ವಾಗಿದರ್ ಕೆಲರರಿಗಳುರುಬಿ ಬರೆ ಕಂಡು ಪೆ ।
ರ್ಬಾಗಿಲ್ಗಳಂ ಬೇಗ ಮುದ್ರಿಸಿದರಾ ಸಮಯದೊಳ್ [೩]ದೈತ್ಯರುರವಣಿಸಲು[೩] ॥ ೨೫ ॥

ಪೆರ್ಬಾಗಿಲಂ ಬಂಧಿಸಲ್ಕೆ ಪೊರಬಿದ್ದರಂ ।
ಗರ್ಬದಿಂದಿರಿದು ತಲೆಯರಿದುದು[೪] ಜಲಂಧರನ ।
ಸರ್ಬಸೇನಾಸಮುದ್ರಂ ಶುಂಭನಾಜ್ಞೆಯಿಂ ಕೋಟೆಯಂ ಪತ್ತುತಿರಲು ॥
ಕೊರ್ಬಿನಿಂ ದಿಕ್ಪಾಲರಾಳ್ವೇರಿಯಂ ಪತ್ತು ।
ತೊಬ್ಬರೊಬ್ಬರ ಪಚಾರಿಸುತಾಗ ದಾನವರ ।
ಪೆರ್ಬಲವ ಕಡಿದಿಳಿಪುತಿರಲಸುರರುರುಬಿದರದೇನೆಂಬೆನಚ್ಚರಿಯನು ॥ ೨೬ ॥

ಪರಿಗೆ ಬಲುಹಗ್ಗಿಗಳಲುರಿ ಯಮುಂಗುಬ್ಬಸಂ ।
ನಿರುತಿಗತಿಸಂಕಟಮುಗುಳ್ ನೀರ್ ಜಲೇಶಂಗೆ ।
ಮರುತಂಗೆ ತಲ್ಲಣಂ ಯಕ್ಷಪತಿಗಾಸರೀಶಾನಂಗೆ ಬೆಟ್ಟಿತಾಯ್ತು ॥
ಪುರದೊಳಗೆ ಪೊರಗೆ ದೇವಾಸುರರೊಳಳಿವರ್ಗೆ ।
ಪರಿಗಣನೆಯೆಲ್ಲಯದು ದಾನವರ್ ತಮತಮಗೆ ।
ಪರಿಪರಿದು ಮುತ್ತಿದರ್ ಪತ್ತಿದರ್ ಕೋಂಟೆಯಂ ನಿಲ್ಲದತಿಸಾಹಸದೊಳು ॥ ೨೭ ॥

೧-೧ ರಮರಾನಗರದಾಳ್ವೇರಿಯೊಳ್ ನೋಳ್ಪ (ಗೋ.) ೨ ವೆವ್ಮೆಂ (ಶಿ, ಹು, ಅ.)
೩-೩ ಸುರಪತಿಯ ಸುಭಟರು (ಹು.) ೪ ರಿದಾ (ಪ, ಗೋ.)

ಕೂಡೆ ಗಜಬಜಮಾಯ್ತು ಮನೆಮನೆಯ ಕದಗಳಂ |
ಪೊಡೆದರ್ ಮೆಯ್ಯ ಬಂಗಾರಗಳನುಗಿದು ಮರೆ |
ಮಾಡಿದರ್ ಕೈವೆರಳ್ಗಳನೊತ್ತಿಕೊಳುತೆ ಕಳವಳಿಸಿದರ್ ಕಾಮಿನಿಯರು ||
ಬೇಡಕಳುಪಿದರವರ ವಸ್ತುವಂ ಕೊಡದಿಂತು |
ಮಾಡಬಹುದೇ ಪಾಪಿ ದೇವೇಂದ್ರ ತಾನೆಲ್ಲಿ |
ನೋಡುತಿರ್ಪನೊ ಕೆಟ್ಟೆವೆನುತೆ ಪುರಜನಮಳಲುತಿರ್ಪ ಸಮನಂತರದೊಳು || ೨೮ ||

ಕಂಡರಲ್ಲಲ್ಲಿ ದೊರೆಗಳ್ ವರುಣದಿಕ್ಕಿನೊಳ್ |
ದಿಂಡುದರಿವಸುರರಂ[1] ಕೋಂಟೆ ಪೋದುದೆನುತ್ತೆ |
ಖಂಡೆಯಂಗಳ ಕಿತ್ತು ಬಾಯ್ವೊಯ್ದು ಬೊಬ್ಬಿರಿದು ಪರಿದರಿರಿ ಕಡಿಯೆನುತ್ತೆ ||
ಕಂಡುದಿಲ್ಲವೆ ಜೀಯ ಪಡುಗಡೆಯ ಕೋಂಟೆಯಂ |
ಕೊಂಡರವರೆಂದು ಸುರರುಲಿಯೆ ಖತಿಯಿಂದಲಾ |
ಖಂಡಲಂ ಬಿಟ್ಟ ಸೂಟಿಯೊಳೈದಿದಂ ನೆರೆದ ಮಂತ್ರಿಗಳ ಗಡಣದಿಂದೆ || ೨೯ ||

ಕಿತ್ತಾಯುಧದೊಳಿಂದ್ರ ಮುಖ್ಯದಿಕ್ಪಾಲಕರ್ |
ಕುತ್ತಿದರ್ ಕುಸುರಿದರಿದರ್ ತಿವಿದರೊಂದೆಸೆಯೊ |
ಳೊತ್ತಿದರ್ ಸುರಭಟರ್ ಪರಭಟರ ಮುಂದಲೆಯ ಪಿಡಿದು ಘನಮುಷ್ಟಿಯಿಂದೆ ||
ನೆತ್ತಿಯಂ ಬಿಡಿದರುರೆ ಕೂರಂಬಿನಿಂ ಮೆಯ್ಯ |
ನೊತ್ತಿದರ್ ಬಹಳಭಂಗಂಬಡೆದು ಕದನಮಂ |
ನಿತ್ತರಿಸಲಾರದಾಳ್ವೇರಿಯಿಂ ಕೆಡೆವರಗಳೊಳಗಾಗಲಸುರಭಟರು || ೩೦ ||

ಅನಿತರೊಳ್ ದಿನಪನಪರಾಂಬುನಿಧಿಗೈದಿದಂ |
ದನುಜೇಂದ್ರನತ್ತ ಸೇನಾಸಮುದ್ರಂ ಬೆರಸಿ |
ಘನವಿಭವದಿಂ ಸುತ್ತ ಪಾಳಯವನಿಳಿದನಿತ್ತಲ್ ಪುರದೊಳಮರೇಂದ್ರನು ||
ಮನದ ದುಮ್ಮಾನದಿಂ ದಿಕ್ಪಾಲಕರ್ ವೆರಸಿ |
ಮನೆಗೆ ಬಂದೇಕಾಂತಭವನದೊಳ್ ಕುಳ್ಳಿರ್ದು |
ತನಗೆ ಕಾಳಗದ ಸಂಕಟವನಮರಾಚಾರ್ಯನೊಡನಾಗಳಿಂತೆಂದನು || ೩೧ ||

---

೧ ಸುವಸುರರ (ಮ.)

ದುರ್ಗವಿದು ಸಾಮಾನ್ಯಮೇಯಿದಂ ಕಾಯ್ದಿಹ ಭ |
ಟರ್ಗಳೇನಲ್ಪರೇ ಸಂಗರದ ಪರಿಕರದ |
ವರ್ಗಮಿಲ್ಲವೆ ಶಿವಶಿವಿಂತಪ್ಪುದಂ ನಿಮಿಷಮಾತ್ರದೊಳ್ ಕೊಂಡರವರು ||
ಭರ್ಗನ ಕಟಾಕ್ಷದಿಂದುಳಿದುದಲ್ಲದೆ ಖಳಭ |
ಟರ್ಗಳಂ ಕಡಿದಿಳಿಪಲೆಮ್ಮಳವೆಯಿನ್ನಿಹುದು |
ಮಾರ್ಗಮಲ್ತುದಯದೊಳಗವರುರುಬೆ ತರಹರಿಸಬಾರದಿನ್ನೆಂತೆಂದನು[೧] || ೩೨ ||

ಲೇಸನಾಡಿದೆ ಸುರಪ ಇನ್ನಿರಲ್ ಖಳರಿಂದೆ |
ಘಾಸಿಯಾಗದೆ ಮಾಣೆವೀ ವಸ್ತುವಾಹನ |
ಕ್ಕಾಸೆ ಮಾಡದೆ ಸತ್ಯಲೋಕಕ್ಕೈದುವುದುಚಿತವೆಂದು ಗುರುವಾಡಲೊಪ್ಪಿ ||
ವಾಸವಾದ್ಯಖಿಳದಿವಿಜರ್ ತಮ್ಮ ನಿಜರಾಣಿ |
ವಾಸಸಹಿತಜನೆಡೆಗೆ ಬರೆ ಕಂಡು ವಿಧಿ ಪೀತ |
ವಾಸನಲ್ಲಿಗೆ ಕರೆದು ತಂದು ಬಿನ್ನವಿಸಿದಂ ನಿಜಕಾರ್ಯಸಂಗತಿಯನು || ೩೩ ||

ಖಳಜಲಂಧರನೆಂಬವಂ ಪೆರ್ಚಿ ಸ್ವರ್ಗಮಂ |
ಸೆಳೆದು ಕೊಂಡಮರರಿರ್ದೆಡೆಯ ಭೇದಿಸಲೆಮ್ಮ[೨] |
ಬಳಿಗೆ ಬರಲಿಲ್ಲಿಗೊಡಗೊಂಡು ಬಂದೆಂ ಸುರರ ಕಾವುದೆನೆ ಹರಿ ಮನದೊಳು ||
ತಿಳಿದಂ ಜಲಂಧರಂ ಹರನಲ್ಲದುಳಿದರಿಂ |
ದಳಿವನಲ್ಲೆಂದು ನಿರ್ಧರಿಸಿ ದೂರಂ ಕೇಳ್ದು |
ತಳುವುದಲ್ತೆಂದು ಹರಿ ಸಕಲಸನ್ನಾಹಮಾಗಿರಲಿತ್ತಲಸುರೇಂದ್ರನು || ೩೪ ||

ಕಾಳೆಗಕೆ ಸಂಹರಿಸಿಕೊಂಡರಸುರರ್ ಮೊರೆವ |
ಕಾಳೆಗಳ ಸನ್ನೆಯಿಂ ಪಣ್ಣಿದಿಭ ಹಯ ಮರು |
ಥಾಳಿಗಳ್ ನಡೆದುವಾ ಸಮಯದೊಳ್ ಚರನೊರ್ವನಸುರಪತಿಯೆಡೆಗೆ ಬಂದು ||
ಪೇಳಲೇನಮರರ್ ಪಲಾಯನಂಗೈದರೆನೆ |
ಕೇಳಿ ಸಂತೋಷದಿಂ ನಿಜಬಲಂವೆರಸಿ ಖಳ |
ಪಾಲನಮರಾವತಿಯ ಪುರದ ಸಿರಿಯಂ ನೋಡುತೊಳಪೊಕ್ಕು ಬರುತಿರ್ದನು || ೩೫ ||

---

೧ ತರಹರಿಸದಿಂತೆಂದನಮರೇಂದ್ರನು (ಶಿ.) ೨ ಲೆಂದು (ಪ, ಗೋ,)

ತರತರದ ಬಾಗಿಲ್ಗಳೊರಣದ ತೋರಣದ |
ಪರಿವಿಡಿಯೊಳೆಸೆವ ಸೌಧಾಳಿಗಳ ಪಾಳಿಗಳ |
ಪರಿಖಚಿತರತ್ನಗೃಹವೀಥಿಗಳ ವೀಥಿಗಳ ಸಂದಣಿಯ ಪೌರಜನದ ||
ಚರಿಸುವ ಪುರಂಧ್ರಿಯರ ನೋಟಗಳ ಬೇಟಗಳ |
ಪರಿರಂಜಿಪಖಿಳಗಜರಾಜಿಗಳ ವಾಜಿಗಳ |
ಸರಿಸರಿಯ ಚೆಲ್ವುಗಳ ಸೊಂಪುಗಳ ಸೆಂಪುಗಳ ಸಂಭ್ರಮಂ ಕಣ್ಗೆಸೆದುದು || ೩೬ ||

ಆದರದೊಳಾ ಪುರದ ಸೊಬಗ ನೋಡುತೆ ರಾಜ |
ಬೀದಿಯೊಳ್ ಬಂದು ಖಳಪತಿ ಸುಧರ್ಮೆಯೊಳತಿವಿ |
ನೋದದಿಂ ಕುಳ್ಳಿರ್ದು ಪ್ರಜೆಗಳಂ ಕರೆಸಿ ಕಾಣಿಸಿಕೊಂಡು ಶುಂಭಗಂದು ||
ಮೋದದಿಂದಂ ಪಟ್ಟಮಂ ಕಟ್ಟಿಯಗ್ನಿಮುಂ |
ತಾದ ದಿಕ್ಪಾಲಕರ ದುರ್ಗಂಗಳೆಲ್ಲಮಂ |
ಭೇದಿಸುತ್ತವಕೆ ಠಾಣೆಯನಿಟ್ಟು ಹರಿಯ ವಸ್ತುಗಳಂ ವಿಚಾರಿಸಿದನು || ೩೭ ||

ಚರರಾಗ ಬಿನ್ನವಿಸಿದರ್ ಜೀಯ ಸುರಪತಿಯ |
ಪರಮವಸ್ತುಗಳೆಲ್ಲಮಿವೆಕೊ ಚಿಂತಾಮಣಿಯ |
ನಿರದೊಯ್ದರೆಂದುಸಿರೆ ಕಲಿಜಲಂಧರನೆತ್ತ ಪೋದನೆಂದುಮ್ಮಳಿಸಲು ||
ಕರಕಮಂಡಲು ದಂಡ ಕಾವಿ ಕಾಷಾಂಬರಂ |
ಪರಿರಂಜಿಸಲ್ ಶುಭ್ರಜೀಮೂತವಿಳೆಗಿಳಿವ |
ಪರಿಯಂತೆ ನಾರದಂ ಕಲಿಜಲಂಧರನ ಮುಂದಿಳಿದನಾಕಾಶದಿಂದೆ || ೩೮ ||

ಏಳ್ದು ಸಿಂಹಾಸನದಿನಾ ಮುನಿಯ ಚರಣದೊಳ್ |
ಬೀಳ್ದೊಡಾಶೀರ್ವಾದಪೂರ್ವಕಂ ನೆಗಪಿ ಖಳ |
ರಾಳ್ದಸರ್ಧಾಸನದೊಳೊಲ್ದು ಕುಳ್ಳಿರ್ದು ನಿನಗೇತಕೀ ಚಿಂತೆಯೆನಲು ||
ಕೇಳ್ದುದಿಲ್ಲವೆ ದಿವಿಜಮಣಿವೆರಸಿ ಸುರಪಂ ತೆ |
ರಳ್ದನಾವಲ್ಲಿಗೆಂದರಿಯೆವೆನೆ ನಾರದಂ |
ಪೇಳ್ದನಾ ವೈಕುಂಠದೊಳಿಗಿಂದ್ರಮುಖ್ಯಸುರನಿವಹಮಂ ಕಂಡೆನೆಂದು || ೩೯ ||

ಆ ನುಡಿಗೆ ಗುಡುಗುಡಿಸುತಿಂದ್ರನಂ ಹಿಂದಿಕ್ಕಿ |
ತಾನೆಮ್ಮ ಸೆಣಸಿ ಬಾಳ್ದಪನೆ ಹರಿಯೆಂದೊಡನೆ |
ದಾನವಾಧೀಶ್ವರಂ ಕೂಚು[1] ಮಾಡಿಸಿ ತೆರಳ್ದಂ ಮಹಾವೇಗದಿಂದೆ |
ಸೇನೆ ನಡೆದುದು ವಿಷ್ಣುಲೋಕಮಾರ್ಗಂಬಿಡದ[2] |
ದೇನೆಂಬೆನೈ ರಾಮ ಸಕಲಸನ್ನಾಹದಿಂ |
ದಾನವಾರಿಯ ಪುರಸಮೀಪಕ್ಕೆ ಬಂದನದನೇನೆಂಬೆನಚ್ಚರಿಯನು || ೪೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೧ ||

ಅಂತು ಸಂಧಿ ೨೪ ಕ್ಕಂ ಪದಗಳು ೬೨೩ ಕ್ಕಂ ಮಂಗಳಮಹಾಶ್ರೀ

---

೧ ಕೂಚಿ (ಹು, ಅ.) ೨ ಬಿಡಿದ (ಮ.)

ಇಪ್ಪತ್ತೈದನೆಯ ಸಂಧಿ

ಸೂಚನೆ

ವರಜಲಂಧರನೊಡನೆ ಹರಿಯಜೇಂದ್ರಾದ್ಯರುಂ[೧] |
ಧುರದೊಳಿದಿರಾಗಲವರೆಲ್ಲರಂ ತನ್ನ ನಿಜ |
ಪುರಕೆ ಪಿಡಿತಂದು ಸೆರೆಯಿಟ್ಟಖಿಳಲೋಕಂಗಳಂ ಪಾಲಿಸುತ್ತಿರ್ದನು ||

ಗರಳಗಳ ಪರಮಬಳ ವರಸೋಮಧರ ಭೀಮ |
ದುರಿತಹರ ಶರಣಪರ[೨] ಗಿರಿಚಾಪ ಹರತಾಪ |
ಮುರಮಥನನುತಕಥನ ಸುರರಕ್ಷ ನತಪಕ್ಷ ಖಲದಕ್ಷಯಾಗಶಿಕ್ಷ[೩] ||
ಪುರವಿಜಯ ನುತವಿಜಯ ಹರಿಭೂಷ ಜಿತದೋಷ |
ಕರಿವೇಶ[೪] ಖಲನಾಶ ಮೃದುಭಾಷ ಗಣಪೋಷ |
ಗಿರಿಜೇಶ ಭವಪಾಶಹರ ಹರ ವಿರೂಪಾಕ್ಷ ನಿರಪೇಕ್ಷ ಸಲಹೆಮ್ಮನು || ೧ ||

ಕೇಳ್ದನೀ ವಾರ್ತೆಯಂ ಹರಿ ಮಹಾಕೋಪವಂ |
ತಾಳ್ದನಂದಖಿಳಸೇನಾತತಿಗೆ ಪಯಣಮಂ |
ಪೇಳ್ದನಾಗಳ್ ಸಿಂಹಪೀಠದಿಂ ಹರಿಯಜೇಂದ್ರಾದಿಗಳ ಗಡಣದಿಂದೆ ||
ಏಳ್ದು ನಡೆದಂ ಸಮರಭರನಾಗಿ ಬಳಿಯೊಳ್ ತೆ |
ರಳ್ದಿಭ ಹಯ ರಥ ಪದಾತಿ ಬಹುಕೋಟಿ ಸುರ |
ರಾಳ್ದನ ಭಟಪ್ರತತಿ ಬೊಮ್ಮನ ಚತುರ್ಬಲಂ ಸಂಗರಕೆ ಸಂಭ್ರಮದೊಳು || ೨ ||

ಆನೆಗಳಸಂಖ್ಯಾತಮೈದಿದುವು ತುರಗಸಂ |
ತಾನಂಗಳಗಣಿತಂ ನಡೆದುವಿನಿಬರ ಮಹಾ |
ಸೇನೆಗಳ್ ಗಮಿಸಿದುವನೇಕಂಗಳನುಪಮವರೂಥಾಳಿ ಕದಲಿತಂದು ||
ಏನೆಂಬೆನೀ ಹರಿಯ ಸಮರಭರವಂ ಕೇಳ್ದು |
ದಾನವಾಧೀಶ್ವರಂ ರೋಷಭೀಷಣನಾಗಿ |
ತಾನಿರದೆ ವೈಕುಂಠಪುರಕತಿಸಮೀಪದೊಳ್ ಬರುತಿರ್ದನಾ ಕ್ಷಣದೊಳು || ೩ ||

---

೧ ವಿಗಳು (ಗೋ.) ೨ ಕರುಣಪರ (ಪ, ಗೋ, ತು.) ೩ ಹರರಹಿತಯಾಗಶಿಕ್ಷ (ಶಿ.)
೪ ವೇಷ (ಗೋ, ಹು, ಶಿ.)

ಸಂಧಿಸಿದುದಿರ್ಬಲಂ ಘನಶರಧಿಶರಧಿಗಳ್ |
ಸಂಧಿಸುವ ಮಾಳ್ಕೆಯಿಂ ಪಟುತರದ ಗಿರಿಗಿರಿಗ |
ಳೊಂದಾಗುವಂತುಭಯಸೈನಿಕದ ಚೂಣಿಗರ್ ತಾಗಿದರ್ ಭರವಸದೊಳು ||
ಒಂದೆಸೆಯೊಳೆಚ್ಚಾಡಿದರ್ ಬಿಲ್ಲವರ್ ಮತ್ತ |
ಮೊಂದೆಸೆಯೊಳಿರಿದಾಡಿದರ್ ಸಬಳದವರಿಂತು |
ಮುಂದುವರಿದಿರಿವಾಡಿ ಮಡಿವುತಿರ್ದರ್ ಪೇಳಲೇನಂದಿನಾಹವವನು || ೪ ||

ಕುದುರೆಗಳ್ ಕುದುರೆಗಳೊಳೊತ್ತಿದುವು ಮುತ್ತಿದುವು |
ಮದಗಜವನಾನೆಗಳ್ ತಾಂಕಿದುವು ನೂಂಕಿದುವು |
ಪದಚರರ್ ಪದಚರರೊಳುರುಬಿದರ್ ತರುಬಿದರ್ ನಾನಾಯುಧಂಗಳಿಂದೆ ||
ಅದಟನಿಂ ರಥಿಕರೆಚ್ಚಾಡಿದರ್ ಮಾಡಿದರ್ |
ಸದಮುದ[1]ದ ಸಮರಮಂ ರಾವುತರ್ ಮಾವುತರ್ |
ಸದೆದಾಡಿದರ್ ಹತಾಹತಿಗಳಿಂ ಖತಿಗಳಿಂದುಭಯಬಲಮೇನೆಂಬೆನು || ೫ ||

ಆರಿವರ್ ದಿವಿಜನಾಯಕರೊ ಶಿವಶಿವ ಮಹಾ |
ವೀರರೈ ತಪ್ಪಲ್ಲ ತಮ್ಮ ನಗರದ ಸೂಳೆ |
ಗೇರಿಯೊಳ್ ಪಂಥಮಂ ನುಡಿದು [2]ನಿಲ್ಲದೆ ಬಂದ ಮೂಗುಮಾರಿಗಳಿವರಲಾ[2] ||
ವಾರಿಜಾಕ್ಷನೆ ನಿಮ್ಮ ಹಿಂದಿಕ್ಕಿಕೊಂಬಂ ವಿ |
ಕಾರಿಗಳ ಕರುಳ್ಗಳಂ ತೆಗೆಯೆನುತೆ ವಿವಿಧಪ್ರ |
ಹಾರದಿಂ ಮೂದಲಿಸಿ ಸವರಿದರ್ ದಿವಿಜರಂ ದನುಜರತಿಕೋಪದಿಂದೆ || ೬ ||

ಕಳ್ಗುಡಿಹುಳಿತನದಿಂದೆ ಬಗುಳ್ದೊಡೆಲವೆಲವೊ ಕ |
ಟ್ವಾಳ್ಗಳೇ ಕಾಳೆಗಕೆ ನೀವೀಗ ಪೇರೊಡಲ |
ಸೀಳ್ಗಳಂ ರಣಭೂತವೇತಾಳಸಂಕುಲಕೆ ಬಡಿಸುವೆವು ನಿಲ್ಲಿಮೆನುತೆ |
ಬಾಳ್ಗಳಂ ಝಳಪಿಸುತೆ ಸುರಭಟರ್ ದನುಜರಂ |
ಪೋಳ್ಗಳೆದುಕೊಂಡು ಬರುತಿರೆ ಕಂಡು ಪದಹತಿಯ |
ದೂಳ್ಗಳಿನನಂ ಮುಸುಕೆ ಶುಂಭ ಧೂಮ್ರಾಕ್ಷಾದಿಖಳಭಟರ್ ಮುಂಕೊಂಡರು || ೭ ||

೧ ಸದಮುಲ (ಶಿ.) ೨-೨ ನಿಲ್ಲದ ಮೂಗುಮಾರಿಗಳ್ ನೀವಹುದಲಾ. (ಹು.) ೩ ಡಿಕ (ಮ.)

ರಾಕ್ಷಸರ ಸೇನೆಯೊಳ್ ದೊರೆದೊರೆಗಳೈದುವುದ |
ನೀಕ್ಷಿಸುತೆ ದಿವಿಜನಾಯಕರತುಳದೋಷತಾ |
ವ್ಯಾಕ್ಷರಾ ಚೂಣಿಗರ ಪಿಂದಿಕ್ಕಿ ಖಳಪತಿಗಳಂ ತಡೆದು ಬೊಬ್ಬಿರಿವುತೆ ||
ಅಕ್ಷಿಗಚ್ಚರಿಯೆಂದೆನಲ್ಕಮಾಹವಲಕ್ಷ್ಯ |
ಲಕ್ಷಣಮಹಾಸ್ತ್ರಂಗಳಿಂದೆಸೆವುತಿರಲಾಗ |
ಲಕ್ಷೀಣಸತ್ತ್ವರೆಚ್ಚಾಡಿದರ್ ದೇವಾಸುರರ್ ಘೋರಸಂಗರದೊಳು || ೮ ||

ತಡೆವರುರುಬುವರೊರ್ಮೆ ಸೈರಿಸದೆ ಪಿಂದಕಡಿ |
ಯಿಡುವರೋರೊರ್ಮೆಯೊತ್ತುವರೊರ್ಮೆ ರಿಪುಗಳಂ |
ಕಡಿವರೋರೊರ್ಮೆ ತಾಗುವರೊರ್ಮೆ ತವಕಿಸುವರೊರ್ಮೆ ಸೈರಿಸುವರೊರ್ಮೆ ||
ಬಿಡದೆ ಜರಿವರದೊರ್ಮೆ ಬಿಂಕದಿಂ ಮುಸಗಿ ಬೊ |
ಬ್ಬಿಡುವರೋರೊರ್ಮೆ ಬೀಗುವರೊರ್ಮೆ ಪಂಥಮಂ |
ನುಡಿವರೋರೊರ್ಮೆ ಖತಿಮುಸಗಿ ಕಾದುವರೊರ್ಮೆ ದೇವಾಸುರರ್ ಧುರದೊಳು || ೯ ||

ಕರದ ಖಂಡೆಯದ ಭೀಕರಭಟರ್ ಮೂದಲಿಸಿ |
ಕರಕರೆದು ಪಗೆಗಳಂ ಕರಚಮತ್ಕಾರದಿಂ |
ಕರಮುರುಬಿ ತರುಬಿ ಪೊಕ್ಕರವರಿಸದಿರಿದಿರಿದು ಕರಚರಣಮಂ ಖಂಡಿಸೆ ||
ಹರಣದಾಸೆಯನುಳಿದು ಹರಿದೋಡುವಹಿತಮೋ |
ಹರಮೊಳಗೆ ಬೇಹಬೇಹರರೈದೆ ಸೆಣಸಿ ಸಂ |
ಹರಣಕಾಲದ ಕಾಲಹರನ ಕೋಪದೊಳಿರಿವ ಹರಹನೇಂ ಬಣ್ಣಿಸುವೆನು || ೧೦ ||

ಇರಿವ ದನಿ ತರಿವ ಕೋಳಾಹಳಂ ಪಗೆಗಳಂ |
ಮುರಿವ ಬೊಬ್ಬಾಟಮೊತ್ತುವ ಕಡುಪು ಮೂದಲೆಗೆ |
ಮುರಕಿಸುವ ಬುದ್ಧಿ ವಂಚಿಪ ಲಾಗು ತವಕಿಸುವ ಚಿತ್ತಮಾರ್ಭಟಿಸುವದಟು ||
ಮೆರೆವುದಮರಾಸುರರ ಘಟ್ಟಿನೊಳ್ ಬಿಡದೆ ಕುರಿ |
ದರಿದ ಪೆಣಗಳ ಮೂಳೆಗಳ ಬಸೆಯ ಮಿದುಳ ಜನು |
ಜುರಿಪ ಪೊಸನೆತ್ತರಿನ ಪೊಳೆಯನಲ್ಲದೆ ಕಾಣೆನಾ ರಣಾಂಗಣದೆಡೆಯೊಳು || ೧೧ ||

೧ ಲೀಲಾ (ಮ, ಪ.) ೨ ಹರಹರೇಂ (ಶಿ.)

ಕೋಟೆಯೊಳಗಿರ್ದು ಕಾದುವೊಡಂಜಿ ನಡುವಿರುಳ್ |
ಕೋಟಲೆಯೊಳೋಡಿದವರಿದಿರಾಗಿ ಖಳರ ಪೊಯ್ |
ದಾಟಮಂ ಸೈರಿಸದೆ ಬೆಂಗೊಟ್ಟರಮರರಿಂದ್ರುಂ[೧] ಕಾಣುತೆಮ್ಮ ಭಟರ ||
ಓಟಮಂ ಕಂಡಿರೇ ಕವಿವ ದಾನವರ ಬೊ |
ಬ್ಬಾಟಮಂ ಕಂಡಿರೇ ಸೀವೆನಲ್ ಮಾಧವಂ |
ತೋಟಿಯಂ ದನುಜೇಂದ್ರನೊಡನೆಸಗಬೇಕೆನುತೆ ನೂಕಿದಂ ಮಣಿರಥವನು || ೧೨ ||

ಬಿಡುಗಣ್ಣರಾಳ್ಗಳಂ ಪಿಂತಿಕ್ಕಿ ದನುಜಾರಿ |
ನಡೆವುದಂ ಕಂಡು ಕಾದುವ ದೈತ್ಯನಾಯಕರ್ |
ಸೆಡೆದೋಡಿ ಕಲಿಜಲಂಧರನ[೨] ಮರೆಯಂ ಪೊಗಲ್ಕವನಾಕ್ಷಣಂ ಕನಲ್ದು ||
ನುಡಿದನೀತಂ ವಿಷ್ಣುವೇ ಎಮ್ಮೊಳಿಂದು ತಾಂ |
ತೊಡರಲ್ಕೈತರ್ಪನೋ ಲೇಸೆನುತೆ ಚಾಪಮಂ |
ವಿಡಿದು[೩] ರಥವಂ ನಡೆಸೆ ಶಾರ್ಙ್ಗಮಂ ಜೇಗೈದು ಕಮಲಾಕ್ಷನಿಂತೆಂದನು || ೧೩ ||

ಈಸುದಿನವೆನ್ನೊಡನೆ ಕಾಳೆಗದೊಳಿದಿರಾಗಿ |
ಗಾಸಿಯಾಗದ ದೈತ್ಯರಿಲ್ಲ ದನುಜಾರಿಯೆಂ |
ಬೀ ಸಘಾಟ[೪]ದ ಪೆಸರನರಿದು ನೀಂ ಬಂದುದಜ್ಞಾನಕೃತಕಮೊ[೫] ಸಹಜಮೋ ||
ಹೊಸಕವನಾಡದಿರ್ ನಿನ್ನ ಪೆಸರಾವುದಾ |
ವಾಸವಾವೆಡೆ ಪೇಳ್ವುದೆನೆ ದನುಜಪತಿ ಮುಂದ |
ಹಾಸದಿಂ ನುಡಿದನಬುಜಾಯತಾಂಬಕನೆಂದ ಮಾತಿಗಿದಿರುತ್ತರವನು || ೧೪ ||

ದಾನವಾರಾತಿಯೆಂದೆಂಬ ಗುಣನಾಮದಿಂ |
ನೀನಿರ್ಪುದಂ ಕೇಳ್ದದಂ ಬಿಡಿಪ ಭರವಸದೆ |
ನಾನೈದಿದೆಂ ಜಲಂಧರನೆಂಬುದೆನ್ನ ಪೆಸರಾ ಸಂಜ್ಞೆ ಮತ್ಪತ್ತನಂ ||
ಈ ನಿಲಿಂಪೇಶನಂ ಹಿಂದಿಕ್ಕಿಕೊಂಡ ರುಜೆ |
ಗಾನರಿವೆನೌಷಧಿಯನೆನುತೆ ಹತ್ತಂಬಿನಿಂ |
ದಾನವಾರಿಯನೆಸೆಯಲೆಡೆಯೊಳವನಡಗಡಿದು[೬] ಕಾಮಪಿತನಿಂತೆಂದನು || ೧೫ ||

---

೧ ರಮರೇಂದ್ರ ತಾಂ (ಶಿ.) ೨ ದೈತ್ಯನಾಯಕನ (ಪ.) ೩ ಪಿಡಿದು (ಶಿ.) ೪ ದ (ಶಿ.)
೫ ಕೃತಮೋ (ಪ, ಮ.) ೬ ಅವ ಕಡೆಗಡಿದು (ಮ.)

ಆರ್ಗಿಸಿತು ಗುಣಮುಂಟು ನಿನ್ನಂತೆ ಬಡಸುರರ |
ದುರ್ಗಮಂ ಕೊಂಡವರನಟ್ಟಿದೊಡೆ ನೀಂ ಜಗದೊ |
ನರ್ಗಳನೆ ವಾಡಬನ ಮೇಲೆ ಕವಿದೈತರ್ಪ ಕಡಲವೊಲ್ ನಿನ್ನ ಬರವು ||
ಮಾರ್ಗಮಲ್ಲರಿಯದೈತಂದೊಡೇಂ ನಾಂ ತೊಟ್ಟ |
ಮಾರ್ಗಣಮನಿಳಿಪುವೆಂ ಪೋಗು ಪೋಗದೊಡೆ ಕೆ |
ನ್ನೀರ್ಗಳೋಕುಳಿಗೆ ಸಂವರಿಸಿಕೊಳ್ಳೆನುತ್ತೈದುಬಾಣದಿಂ ಹರಿಯೆಚ್ಚನು || ೧೬ ||

ನೊಂದನಸುರಂ ಗಾಯದಿಂ ಗಾಯದಿಂ ನೊಂದ |
ಪಂದಿಯಂತಾರ್ಭಟಿಸಿ ಚಾಪದಿಂದಂಬುಗಳ |
ನಂದವಂ ಪಸರಿಸಿದನುಬ್ಬಿನಿಂದೊಂದೆರಳ್ ಮೂರು ನಾಲ್ಕಯ್ದುನೂರು ||
ಮುಂದೆ ಸಾಸಿರ ಲಕ್ಷ ಕೋಟಿಸಂಖ್ಯೆಗಳೊಳರ |
ವಿಂದನಾಭನನೆಚ್ಚನಾತನೀ ಪರಿಗಣನೆ |
ಗೊಂದೆರಳ್ಮಡಿಯಧಿಕಮೆಂಬಂತೆ ಕರೆದನಂಬಿನ ಮಳೆಯನಾ ಕ್ಷಣದೊಳು
|| ೧೭ ||

ಕವಿದುವಿಟ್ಟಣಿಸಿದುವು ನೂಂಕಿದುವು ತಾಂಕಿದುವು |
ಜವಗೆಡಿಸಿ ಸೇನೆಯಂ ಮುತ್ತಿದುವು ಕುತ್ತಿದುವು |
ರವಿರಥತುರಂಗಮಂ ಚುರ್ಚಿದುವು ಕರ್ಚಿದುವು ತಮತಮಗೆ ತಾರಕೆಯನು ||
ಭವಣಿಯಿಂದಂಬರದೊಳುರ್ಬಿದುವು ಪರ್ಬಿದುವು |
ಭುವನಂಗಳನಿತರೊಳ್ ಪತ್ತಿದುವು ಸುತ್ತಿದುವು |
ಹವಣಿಸುವೊಡರಿದೆನಿಸಿ ಕೆಡೆಪಿದುವು ಮಡುಪಿದು[೧]ವು ಸುಭಟರಂ[೧] ಬಾಣಂಗಳು
|| ೧೮ ||

ಎಚ್ಚಂಬನೊಡನೊಡನೆ ಕತ್ತರಿಸುವರ್ ಬಳಿ |
ಕ್ಕೆಚ್ಚು ಬೊಬ್ಬಿರಿವರೋರೊರ್ವರ ರಥಂಗಳಂ |
ಕೊಚ್ಚುವರ್ ಪೊಸರಥದೊಳೈದುವರ್ ಗಾಯದಿಂ ಮೂರ್ಛಿಪರ್ ಚೇತರಿಪರು ||
ಸುಚ್ಚುಸುರ್ಗಾ[೨]ಯ್ಪುರಶ್ವಧ್ವಜವನೊರ್ಮೊರ್ಮೆ |
ಪೆಚ್ಚುವರ್ ಗಾಯಗಾಯಕೆ ರಣಾವೇಶದಿಂ |
ಸಿಚ್ಚಟಿಪ ಕಲಿಗಳೆಚ್ಚಾಡಿದರ್ ಹರಿಜಲಂಧರರಂದು ಸಂಗರದೊಳು || ೧೯ ||

೧-೧ ವಸುರಭಟರ (ಮ.) ೨ ಸೂರ್ಗೆ (ಮ.)

ವಿಕ್ರಮದೊಳಸುರನೆಸೆವಂ ತಚ್ಛರಂಗಳಂ |
ಚಕ್ರಿ ಕತ್ತರಿಸುತೆಸುವಂ ಹರಿಯ ಬಾಣಮನ |
ನುಕ್ರಮದೊಳಾ ಖಳಂ ತರಿದಿಸುವನಾಗಳೀ ಖಂಡಿಸುವನಬುಜಾಕ್ಷನು ||
ಈ ಕ್ರಮದೊಳೆಚ್ಚಾಡುತಿರಲೊಂದು ಬಾಣದಿನ |
ತಿಕ್ರಮಿಸಿ ಹರಿಯಿಸಲ್ ದನುಜನಂದಾಕಾಶ |
ಚಕ್ರದೊಳ್ ರಥವೆರಸಿ ಪಾರಿದಂ ಕೀರಿದಂ ಕೋಪದಿಂ ಬೊಬ್ಬಿರಿವುತೆ || ೨೦ ||

ಸಾಹಸಮನೇನೆಂಬೆನಾಗಸಕಡರ್ದು ವು |
ತ್ಸಾ ಹರಿಯನಸುರನೊಂದಂಬಿನಿಂದೆಸೆಯೆ ಬಳಿ |
ಕೀ ಹರಿ ವರೂಥಮಂ ಬೆರಸಿ ಗಗನಕ್ಕೈದಲೊರ್ವರುಂ ಧರೆಗಿಳಿಯದೆ ||
ಆ ಹೊಳೆವ ತೇರ್ ಮಿಂಚು ಬಿಲ್ಲ ದನಿ ಮೊಳಗವರ |
ದೇಹರುಚಿಗಳ್ ಪ್ರಳಯಮೇಘಮೆನಲೆಸೆವ ಸರ |
ಳೂಹಿಸಲ್ ಕಡೆಗಾಲಮಳೆಯಾಗಲೆಚ್ಚಾಡುತಿರ್ದರದನೇವೇಳ್ವೆನು || ೨೧ ||

ಅಂಬರದೊಳೊಮ್ಮೊಮ್ಮೆ ಕಾದುವರ್ ಧರೆಗಿಳಿವು |
ತುಂ ಬಿಡದೆ ಸೆಣಸುವರ್ ಧರೆಯೊಳೊರ್ವರ್ ಗಗನ |
ಮಂ ಬಲಿವರೊರ್ವರಿರದೆಚ್ಚಾಡುವರ್ ಧರೆಯೊಳಿರದೆಸುವರೊಮ್ಮೆಯೊಮ್ಮೆ ||
ಎಂಬುದೇನಾ ಜಲಂಧರನತುಳರೋಷದಿಂ |
ದಂ ಬಳಿಕೆ ಮೂಡಿಗೆಯೊಳಾಯ್ದುರಸಿ ಪಾವಕಕ |
ಳಂಬಮಂ ಪೂಡಿ ತೆಗೆದೆಚ್ಚನೀರೇಳ್ಜಗಂ ಶಿಖಿಯ ಸವಿದುತ್ತಾಗಲು || ೨೨ ||

ಎರಡುಬಲದಾಸ್ಯಮುಂ ಕಂದಿದುವು ಕುಂದಿದುವು |
ಕರಿತುರಗಮುರಿಯೊಳೊಕ್ಕಾಡಿದುವು ಬಾಡಿದುವು |
ಪರಿವ ತೇರ್ಗಳ್ ಸೀದು ಮುಗ್ಗಿದುವು ತಗ್ಗಿದುವು ಪಟುಭಟರ ಧೈರ್ಯಂಗಳು ||
ಸುರರ ಹರುಷಂಗಳುಂ ಸಾಗಿದುವು ಬಾಗಿದುವು |
ಕರದಾಯುಧಂಗಳುಂ ಕರಗಿದುವು ಕೊರಗಿದುವು |
ಹರಿಗೆ ಹಲಗೆಗಳುರಿದು ಪಾರಿದುವು ಕೀರಿದುವು ಸೆಕಳೆಯಿಂ ಭೂತಂಗಳು || ೨೩ ||

---

೧ ಬರಿಯುತೊ (ಮ.) ೨ ಬೀಗಿ (ಹು.) ೩ ಶಿಖಿಯಿಂದೆ (ಪ.) ; ೪ ಕೆಗಳಿಂ (ಶಿ.)

ಕಂಡಂ ಜಲಂಧರನ ಚಾಪದಿಂದೈತರ್ಪ |
ಚಂಡತಿಬಿಬಾಣಮಂ ಶರಧಿಯಿಂದುಗಿದು ಕೋ |
ದಂಡದೊಳ್ ತೊಡಿಸಿ ವರುಣಾಸ್ತ್ರಮಂ ನಿಜಸೇನೆಗಭಯಕರಮಂ ತೋರುತೆ ||
ಪುಂಡರೀಕಾಕ್ಷನಿಸೆ ತುಂಬಿದುದು ವಾರಿ ರಣ |
ಮಂಡಲದೊಳೆಲ್ಲಿಯುಂ ನೀರಾಟವಾಡಿದುದು |
ಶುಂಡಾಲತುರಗಸಂದೋಹಂಗಳಾಕ್ಷಣಂ ಪೇಳಲೇನಚ್ಚರಿಯನು || ೨೪ ||

ಕೆರಳ್ದುರಗಬಾಣದಿಂ ಖಳನಿಸಲ್ ಮಾಧವಂ |
ಗರುಡಾಸ್ತ್ರದಿಂ ತರಿದನದ್ರಿಬಾಣದಿನಿಸಲ್ |
ಪರವಜ್ರವಿಶಿಖದಿಂ ಖಂಡಿಸಿದನಿನಕಳಂಬದಿನಂಧಕಾರಶರಮಂ ||
ಪರಿಹರಿಸಿದಂ ಹರಿ ಬಲಾಹಕಾಸ್ತ್ರದಿನಿಸಲ್ |
ಮರುದಸ್ತ್ರದಿಂದದಂ ತೊಲಗಿಸಿ ಜಲಂಧರನ |
ಕರದ ಕಾರ್ಮುಕವನಿಕ್ಕಡಿಮಾಡಿ ಸೂತ ರಥ ತುರಗಂಗಳಂ ಕಡಿ[೧]ದನು || ೨೫ ||

ತುರಗ ರಥ ಸಾರಥಿಗಳಂ ತುಂಡಿಸಲ್ ಕೋಪ |
ಭರಿತಮಾನಸನಾಗಿ ಕಾಯ್ದ ಕೇಸರಿಯಂತೆ |
ಭರದಿನಾರ್ಭಟಿಸಿ ದೇವಾಸುರರ್ ಬೆರಗಾಗಿ ನೋಡುತಿರೆ ಪಾಯ್ದು ಹರಿಯ ||
ವರವರೂಥಮನೆತ್ತಿ ಕರಯುಗಳದಿಂ ನಭಕೆ |
ತಿರುಪಿಟ್ಟು ನಿಡುಬೊಗರೆಯಂತೆ ಹರಿ ನಭದಿಂದೆ |
ಧರೆಗಿಳಿದು ಪೊಸರಥದೊಳ್ಕೈತರಲ್ ಮುಗುಳಿಟ್ಟು ಖಳನಿರದೆ ಬೊಬ್ಬಿರಿದನು || ೨೬ ||

ಅಡರ್ವನೀ ಹರಿಯೊಂದು ತೇರನಸುರಂ ಕನ |
ಲ್ದಿಡುವನದನಂತುಟಿಪ್ಪತ್ತೊಂದು ಸೂಳ್ವರಂ |
ಬಿಡದಣ್ಣೆಕಲ್ಲಾಡುವಂತುಟಂ ಮಾಲೆಗಳನೊದಗಿ ನಿಂದಾಡುವಂತೆ |
ಇಡುವ ಬಿಡುವುರುಚಮತ್ಕೃತಿ ನೋಡುತಿರ್ಪೆರಡು |
ಪಡೆಗಗೋಚರಮೆನಲ್ ಕೂಡೆ ಕಮಲಾಂಬಕಂ |
ಕಡುನೊಂದು ಕೌಮೋದಕೀಗದೆಯ ತುಡುಕುತುರೆ[೨] ಖಳಪತಿಯೊಳಿಂತೆಂದನು
|| ೨೭ ||

೧ ಬದಿ (ಹು.) ೨ ನುರೆ ತುಡುಕಿ (ಹು.)

ಭಾರಣೆಯ ವಿದ್ಯಮಂ ಸಮರದೊಳ್ ತೋರಿದೊಡೆ ।
ಧೀರರೇಂ ಮೆಚ್ಚುವರೆ ಮಧುಕೈಟಭಾದ್ಯಖಿಳ ।
ವೀರರಂ ಸದೆದುದೀ ಗದೆಯಿದರ ಸವಿಯ ನೀನೊವ್ಮೆಯುಂ ಕಂಡರಿಯಲಾ ॥
ಪಾರದೆಡಬಲವನುನ್ನತಗದಾದಂಡದಿಂ ।
ದೀ ರಣದೊಳಿದಿರಾಗು ಕಾಣಬಹುದುಭಯಾಪ್ರ ।
ಹಾರಪ್ರವೀಣತೆಯನೆನುತೆ ಹರಿ ನುಡಿಯಲಾ ಖಳನಿರದೆ ಗದೆಗೊಂಡನು ॥ ೨೮ ॥

ಕಸ್ತೂರಿಕಾಸುರಿಕುಂಕುಮವಾದಿಯಾಗಿಹ ಸ ।
ಮಸ್ತಪರಿಮಳದ ನೂಂಪಿಟ್ಟು ಮುಖಕಮಲವಿ ।
ನ್ಯಸ್ತಕರ್ಪೂರತಾಂಬೂಲಶೋಭಿತರಾಗಿ ನಿಜಗದೆಗಳಂ ತಿರುಪುತೆ ॥
ಮಸ್ತಕದ ಮಣಿಮುಕುಟದೊಲಹುಗಳ ಭೂಷಣಗ ।
ಭಸ್ತಿಗಳ ಹರಿಜಲಂಧರರಾಗ ರಾಗದಿಂ ।
ವಿಸ್ತೀರ್ಣಮಾದ ರಣರಂಗದೊಳ್ ನೋಳ್ಪರ್ಗೆ ಬೀರಿದರ್ ಕೌತುಕವನು ॥ ೨೯ ॥

ಉಡಿ ನಡುವುರಂ ಪಾರ್ಶ್ವಮೆಸೆವ ತೋಳ್ ಕೌಂಕುಳಂ ।
ಮುಡುಹು ಕೊರಲಾನನಂ ಚಾರುಮಣಿಮುಕುಟಂಗ ।
ಳೆಡೆಯೊಳಾಡಿದುವುಭಯವೀರರ ಗದಾದಂಡಯುಗಳಂಗಳಾ ಕ್ಷಣದೊಳು ॥
ಅಡಗಿದಾವೇಶವುಬ್ಬರಿಪ ಮುದದೊಡನೆ ವೈ ।
ಗೊಡದ ವಂಚನೆ ಪೊಯ್ವ ಕೈಚಳಕಗಳ ನೋಳ್ಪ ।
ಪಡೆಯೆರಡಕಾಶ್ಚರ್ಯಮಂ ಮಾಡಿ ಪೊಯ್ದಾಡಿದರ್ ಕಲಿಕಿಗಳಾಹವದೊಳು
॥ ೩೦ ॥

ಇಂತು ನಾನಾಕುಶಲದೊಳ್ ಗದಾಯುದ್ಧದಿಂ ।
ದಂ ತಸಗೆ ಗೆಲವುಗಾಣದೆ ಮಹಾವಿಷ್ಣುವತಿ ।
ಚಿಂತಿಸುತೆ ಕಲಿಜಲಂಧರನೊಳೆಂದಂ ಗದೆಗಳೇಕೆ ಭುಜಸತ್ತ್ವದಿಂದೆ ॥
ನಿಂತು ನೀಂ ಮಲ್ಲಗಾಳೆಗದೊಳೆನಗಿದಿರಾಗ ।
ಲಂತಾಗ ಕಾಣಬಹುದೆನೆ ಖಳಂ ನಸುನಗುತೆ ।
ತಾಂ ತಡೆಯದಾ ಗದೆಯನುಳಿದು ತೋಳ್ಪೊಯ್ದುತಂ ಪೊಡೆಯಲರಗಿಂತೆಂದವನು
॥ ೩೧ ॥

೧-೧ ಬಲ । ವೀರ (ಹು.) ೨ ಸ್ತುರಿಜವಾದಿ (ಪ.) ೩ ಕೈ (ಮ.)

ಪಕ್ಷಿವಾಹನನ ವ್ಯಘಾಮುಷ್ಟಿಯುದ್ಧದೊಳು ಕಾ |
ಲಕ್ಷೇಪನೇಕೆ ಬಾರೆನುತೆ ಬೊಬ್ಬಿರಿದು ಕಪು |
ಲಾಕ್ಷಂಗೆ ಕೈಗೊಟ್ಟನಸುರಪತಿ ದಿಗ್ಗಜಂ ದಿಗ್ಗಜಕೆ ಕೈಗೊಡುವೊಲು ||
ಕಕ್ಷ ಕಂಧರ ಭುಜದ್ವಯ ಪಾರ್ಶ್ವ ಕಟಿ ಮಧ್ಯ |
ವಕ್ಷಸ್ಸ ಜಾನು ಜಂಘೋರು ಗುಲ್ಫಾಂಘ್ರಿಗಳೊ |
ಳಾ ಕ್ಷಣಂ ಪಿಡಿವ ಬಿಡಿಸುವ ಬಿನ್ನಣಂಗಳವರಿರ್ವರೊಳ್ ಸೊಗಯಿಸಿದುವು || ೩೨ ||

ಸಿಕ್ಕುವಂ ಹರಿಯೊರ್ವನೊರ್ವ ಖಳಪತಿ ಹರಿಯ |
ಡೊಕ್ಕರಕ್ಕೊಳಗಪ್ಪನೊರ್ವ ವಂಚಿಸುತುಮೊಳ |
ಪೊಕ್ಕು ಹರಿಯುಂ ಪಿಡಿವನೊರ್ವ ಕಮಲಾಂಬಕಂ ಚಿಮ್ಮಿ ಕಡುಲಾಗಿನಿಂದೆ ||
ಮಿಕ್ಕು ತಪ್ಪುವನೊರ್ವ ಮಿಂಚು ಪೊಳೆವಂದದಿಂ |
ರಕ್ಕಸಂ ಜುಣುಗುವಂ ಪೇಳಲೇನಿರ್ವರ ಬ |
ಲಕ್ಕಿರ್ವರುರವಣೆಗೆಯಿರ್ವರ ಚಮತ್ಕಾರಕಿರ್ವರೇ ಸಾಟಿಯೆನಲು || ೩೩ ||

ಕರವಲಯದಿಂದೆ ಬಂಧಿಸುವ ತಳಹತ್ತದಿಂ |
ದುರವಣಿಪ ಮಿಗಿದುವಂಗುಲದಿನೊತ್ತುವ ಮೇಲೆ |
ಪರಿಶಿರೋವಲಯದಿಂ ಸಿಲ್ಕಿಪರ್ ತೋರಹತ್ತದೆ ತವಕದಿಂ ಪಿಡಿವರು ||
ಉರಗಬಂಧನದಿಂದಮೊತ್ತುವ ಸಘಾಟಮಾ |
ಹರಿಜಲಂಧರರೊಳತಿ ಪಿರಿದಾಗೆ ಖಳನಿರದೆ |
ಹರಿಯನೊಳಪೊಕ್ಕು ಪಿಡಿದಂ ತನ್ನ ಭುಜಸತ್ತ್ವದಿಂದಲದನೇನೆಂಬೆನು || ೩೪ ||

ಬಿಗಿ ಬಿಡೆ ಮಾಧವಂ ಭೂತಳಕೆ ಬಿದ್ದು ಮಿಗೆ |
ಗಾಸಿಯಾದಂ ದೇಹಬಲವಿಳಿದುದುರೆ ಮನದ |
ವಾಸಿ ಪಯ್ಸರವಾಯ್ತು ಗೆಲ್ವಾಸೆಯಡಗಿತಾಲಸ್ಯವೆಡೆಗೊಂಡುದಾಗ ||
ವಾಸನಾಪ್ಯಮರತತಿಯುಳ್ಕುತಿರ್ದುದು ಪೀತ |
ವಾಸನೊಂದಾಸೊಂದುಪಾಯದಿಂದಂ ಮಂದ |
ಹಾಸವಿಂದಾ ಕಲಿಜಲಂಧರನ ಕೂಡೆ ವಿನಯೋಕ್ತಿಯಿಂದಿಂತೆಂದನು || ೩೫ ||

ನೆಚ್ಚಿದೆಂ ದೈತ್ಯಪತಿ ನಿನ್ನಯ ಪರಾಕ್ರಮಕೆ |
ನಿಚ್ಚಟದ ವರವದೇಂ ಕೇಳೆನೆ ಖಳಂ ನಗುತೆ |
ಕುಚ್ಚಿತದೆ ಗರುಡಮಧುಕೈಟಭಾದ್ಯರ ಗೆಲ್ದ ತೆರನಲ್ಲವಿಾಗ ನೀನು |
ನಚ್ಚಿದೊಡೆ ಲೇಸು ನಿನ್ನರಸಿಸಹಿತಂ ಮನೆಯೊ |
ಳೊಚ್ಚತಂ ಬಂದು ಸೆರೆಯಿರಿಮೆನಲ್ ಕೇಳ್ದು ಬಳಿ |
ಕಚ್ಚ್ಯುತಂ ಖಳನಿವಂ ಬಿಡುವನಲ್ಲೆಂದು ನಿರ್ಧರಿಸಿದಂ ಮನದೊಳಂದು || ೩೬ ||

ಇಂತೆಂದು ಕಲಿಜಲಂಧರನೆಂದ ಮಾತಿಗಾ |
ಕಂತುಪಿತ ಕಮಲೆಯರ್ ಕೈಕೊಂಡು ಖಳನ ರಥ |
ಮಂ ತಡೆಯದೇರಿದರ್ ಕಮಲಾಸನೇಂದ್ರಾದಿಸಕಲವೃಂದಾರಕರನು |
ಸಂತೋಷದಿಂ ಪಿಡಿದುಕೊಂಡು ಜಯದುಬ್ಬಿನಿಂ |
ತಾಂ ತಿರುಗಿದಂ ತನ್ನ ಪಟ್ಟಣಕೆ ನಾನಾದಿ |
ಗಂತಮಂ ವಾದ್ಯರವಮಳ್ಳಿರಿಯೆ ನಿಖಿಳಸೇನಾತತಿಯ ಗಡಣದಿಂದೆ || ೩೭ ||

ಗುಡಿತೋರಣದ ರಚನೆಯಿಂದೊಡನೆ ಕಳಸಕ |
ನ್ನಡಿವಿಡಿದ ಬಾಲೆಯರ ಸಾಲ್ಗಳಿಂದರಮನೆಗೆ |
ಸಡಗರದೊಳೈತಂದು ಸಿರಿವೆರಸಿ ಹರಿಯನೊಂದರಮನೆಯೊಳಿರಿಸಿ ಬಳಿಕೆ |
ಬಿಡದೆ ಶತಕೋಟಿರಾಕ್ಷಸರ ಕಾವಲನಿಕ್ಕಿ |
ಜಡಜಭವದಿವಿಜೇಂದ್ರಮುಖ್ಯಸುರರಂ ಕರೆದು |
ನುಡಿದನೆಲ್ಲರುಮೆನ್ನ ಸೇವೆಯಂ ಮಾಡಿಕೊಂಡಿರಿಮೆನಲ್ ಕೈಕೊಂಡರು || ೩೮ ||

ಕಮಲಜಂ ಮಂತ್ರಾಕ್ಷತೆಯನೀವನಸುರಂಗೆ |
ಸುಮನೋಧಿಪತಿ[೧] ಮುಖ್ಯಸಕಲಬೃಂದಾರಕರ್ |
ತಮತಮಗೆ ಪೇಳ್ದೂಳಿಗಂಗಳಂ ಮಾಡಿಕೊಂಡಾ ಖಳನ ಚಿತ್ತವರಿದು |
ಕ್ರಮದೊಳಿರ್ಪರ್ ಶಿವನ ಕೈಲಾಸಮೊಂದಲ್ಲ |
ದಮರಾರಿ ಮಿಕ್ಕ ಭೂಸ್ವರ್ಗ ಪಾತಾಳಲೋ |
ಕಮನೆಲ್ಲಮಂ ವಶಂಗೆಯ್ದು ಸಕಲೈಶ್ವರ್ಯದಿಂದೆ ಬಾಳುತ್ತಿರ್ದನು || ೩೯ ||

---

೧ ಸುಮನಸಾಧಿಪ (ಪ.)

ಇಂತು ಮೂರರ್ಬುದಾಬ್ದಂ ಸಕಲಲೋಕಮಂ |
ಚಿಂತೆಯಿಲ್ಲದೆ ಪಾಲಿಸುತ್ತಿರಲ್ ಸಕಲಸುರ |
ಸಂತತಿಗಳತಿಚಿಂತೆಯಿಂದೆ ಹರಿಯಜರೊಳೊಂದಿನ ಗುಪ್ತದಿಂ ಯೋಚಿಸಿ ||
ಎಂತು ತಾಳ್ವೆವೀತನಲೆಯನಿವನೈಶ್ವರ್ಯ |
ಕಂತಮಂ ಕಾಣೆವೆಲ್ಲರ್ ಪೋಗಿ ಪೇಳ್ವೆವಾ |
ಕಂತುಹರಗಾತನಿಂ ಪರಿಯದೊಡೆ ಮರಣಮೇ ಮೌಲ್ಯಧನವೆಮಗೆಂದರು || ೪೦ ||

ಈ ತೆರದೊಳಜಹರೀಂದ್ರಾದಿಗಳ್ ತಮ್ಮೊಳಗೆ |
ಮಾತಾಡಿಕೊಂಡೊಂದಿನಂ ರಾತ್ರಿಯೊಳ್ ಸುರ |
ವ್ರಾತಮುಂ ಬೆರಸಿ ರಕ್ಕಸರರಿಯದಂತತಿರಹಸ್ಯದಿಂದೈದೆ ಬಂದು ||
ಸಾತಿಶಯಮಾದ ಕೈಲಾಸಾದ್ರಿಯಂ ಪೊಕ್ಕು |
ಭೂತನಾಥಂಗೆ ಸಾಷ್ಟಾಂಗದಿಂದೆರಗಲತಿ |
ಪ್ರೀತಿಯಿಂದಭವನವರಂ ನೋಡಿ ಬಂದುದೇನೆನುತೆ ಹರಿಯಂ ಕೇಳ್ದನು || ೪೧ ||

ಎಲೆ [1]ಮಹಾದೇವ ಬಿನ್ನಪವನವಧರಿಸೊರ್ವ |
ಖಳ ಜಲಂಧರನೆಂಬವಂ ಪೆರ್ಚಿ ನಾವಿರ್ದ |
ಪೊಳಲ್ಗಳಂ ಬಿಡದೆ ಸಾಧಿಸಿ ಸಮಸ್ತರನಿರದೆ ಪಿಡಿದುಕೊಂಡೊಯ್ದು ತನ್ನಾ[2] ||
ನಿಳಯದೊಳ್ ಸೆರೆಗೆಯ್ದು ಬಿಟ್ಟೋಡಿ ಶಿವ ನಿಮ್ಮ |
ಬಳಿಗೆ ಬಂದೆವು ಕಾವುದೆಂದು ಬಿನ್ನವಿಸಲ್ಕೆ |
ತಿಳಿದಾ ಜಲಂಧರನ ಸಂಹರಿಪೆವಂಜಬೇಡೆಂದಿದಂ ನಂಬುಗೆಯಿತ್ತನಿನು || ೪೨ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನ ಪದಯುಗಲನೆನೆಸುವ ಚೆನ್ನಬಸವೇಶನಕ್ಕರಿಂದೆ || ೪೩ ||

ಅಂತು ಸಂಧಿ ೨೫ಕ್ಕಂ ಪದಗಳು ೯೬೬ಕ್ಕಂ ಮಂಗಳಮಹಾಶ್ರೀ

[1] [illegible] | ಖಳ [illegible] ನಾವಿರ್ದ [illegible] | [illegible] ಸಮಸ್ತರನಿರದೆ ಪಿಡಿದುಕೊಂಡೊಯ್ದು [illegible] || (ಕ.) [2] [illegible] (ಕ.)

ಇಪ್ಪತ್ತಾರನೆಯ ಸಂಧಿ

ಸೂಚನೆ

ವರಜಲಂಧರನತುಳಗರ್ವದಿಂ ಕೈಲಾಸ |
ಪುರಕೆ ದಾಳಿಯನಿಡೆ ಶಿವಂ ಕೇಳ್ದು ಕೋಪದಿಂ |
ಧುರದೊಳಾತನ ಶಿರವನರಿದವನ ಜೀವಮಂ ಪಣೆಗಣ್ಣೊಳಡಗಿಸಿದನು ||

ಶಕ್ರಪಂಕಜಜಾತಚಕ್ರಧರವಿನುತಪಾ |
ದಾಕ್ರಾಂತಲೋಕಘನವಿಕ್ರಮಾಮ್ನಾಯವ್ಯ |
ತಿಕ್ರಮಚರಿತ್ರ ದಕ್ಷಕ್ರತುವಿನಾಶ ವಿಲಯಕ್ರೋಧ ವರವಿನೋದ ||
ಚಕ್ರಿವ್ರಜಾಭರಣ ಶಕ್ರಭವವರದ ಸ |
ವ್ಯಕ್ಕೃಪಾಪಾಂಗ ಲೀಲಾಕ್ರಮವಿಲಾಸ ಖಳ |
ಶುಕ್ರಶಿಷ್ಯಪ್ರಳಯಶುಕ್ರ ಪಂಪಾವಿರೂಪಾಕ್ಷ ಸಲಹಾನತರನು || ೧ ||

ರಾಮ ಕೇಳಿತ್ತಲ್ ಜಲಂಧರಂ ಮರುದಿನಂ |
ರಾಮಣೀಯಾಸ್ಥಾನದೊಳ್ ಸಕಲರಾಕ್ಷಸ |
ಸ್ತೋಮವೆರಸೋಲಗದೊಳಿರುತಿರ್ದು ಕೂಡೆ ನಿರ್ಜರರ ಸುಳಿವಂ ಕಾಣದೆ ||
ಭೀಮರೂಪಾಗಿ ದೂತರನಟ್ಟಲವರರಿದು |
ತಾಮರಸನಯನಜೇಂದ್ರಾದಿಸುರರಿರುತಿರ್ಪ[1] |
ಧಾಮಂಗಳೆಲ್ಲಮುಂ ಶೂನ್ಯಮೆನೆ ಕೇಳ್ದು ಗುಡುಗುಡಿಸಿದಂ ಖಳರಾಜನು || ೨ ||

ನಾಕ ನರಲೋಕ ಪಾತಾಳಂಗಳೆನ್ನಾಜ್ಞೆ[2] |
ಯಾಕಪಟದಿವಿಜರಂ ಮರೆವೊಗಿಸಿಕೊಂಬೆನೆಂ |
ಬಾಕೆವಾಳರನೊರ್ವರಂ ಕಾಣೆನಿವರೆತ್ತ ಪೋದರೆಂದಸುರಗುರುವ ||
ಆ ಕಲಿಜಲಂಧರಂ ಬೆಸಗೊಳಲ್ಕೆಲೆ ಮರುಳೆ |
ಲೋಕನಾಯಕನನಾ ಸಕಲಬ್ರಹ್ಮಾಂಡಗ |
ಭೀಕರನ ಶಿವನ ಶಂಕರನ ಮರೆವೊಕ್ಕರೆನೆ ದೈತ್ಯಪತಿಯುರಿದೆದ್ದನು || ೩ ||

೧-೧ ನಜಸುರಪಮುಖ್ಯರುಯಿರ್ಪ (ಶಿ.) ೨ ಪಾತಾಳಗಳೊಳೆನ್ನಾಜ್ಞೆ (ತು.)

ಸೋಜಿಗವನಾಲಿಸಿದೆನೀಗ ನಾನಾಲೋಕ |
ರಾಜಿಗಧಿಪತಿಯೊಬ್ಬನುಂಟೆಂಬ ಸುದ್ದಿಯಂ |
ನಾಜುವರೆಯಾನಲ್ಲದಿನ್ನೊಬ್ಬ ಲೋಕನಾಯಕ[೧]ರುಂಟೆಯೆಂದಿನ್ನೆಗಂ[೧] |
ಆಜಿಯಂ ಮಾಣ್ದೆ[೨]ರ್ದೆನ್ನೈಸೆ ಬರಲ[೨]ಬಿಳ ಕರಿ |
ವಾಜಿ ರಥ ಭಟರೆನಿತೆ ಸಿಂಹಪೀಠದಿನಸುರ |
ರಾಜನೆದ್ದಂ ಹರವಿರೋಧಮನುಚಿತಮೆಂಬ ಗುರುವಚನಮಂ ಬಗೆಯದೆ ‖ ೪ ‖

ಪಾಳಿಯಿಟ್ಟುದು ರಜತಶೈಲಕಂದಸುರಜನ |
ಪಾಲಕನ ದಂಡು ತದ್ವಾರ್ತೆಯಂ ಕೇಳ್ದೊಡನೆ |
ಗೂಳೆಯಂ ತೆಗೆದುವಲ್ಲಿಯ ಜನಂ ಕೈಲಾಸಕಾಗಿ ಬಹುಬೇಗದಿಂದೆ ‖
ಆಲಸಿದನಿವರ ದೂರಂ ಜಲಂಧರನೊಡನೆ |
ಕಾಳೆಗಂ ನಮಗೆಂದು ಶಂಕರಂ ನಂದಿಯೊಳ್ |
ಪೇಳಲಾತಂ ಹರನ ಕಟಕದೊಳ್ ಪೊಯ್ಸಿದಂ ಡಂಗುರವನಾ ಕ್ಷಣದೊಳು ‖ ೫ ‖

ಎಲೆ ಸಿದ್ಧರಾಮ ಕೇಳಾ ಕ್ಷಣಂ ಶಂಕರಂ |
ಕಲಪಸನ್ನಾಹಮಂ ಕೈಕೊಂಡು ಬಲನೆಡದೊ |
ಳುಲಿವ ಮೇದಾವಳಿಯ ಘೋಷದಿಂ ವೃಷಪತಿಯನೇರೆ ಗಣಕುಲಮಾಗಳು ‖
ಬಳಸಿ ಬರಲಜಸುರೇಂದ್ರಾದಿಗಳ್ ತಂತಮ್ಮ |
ಬಲವೆರಸಿ ಬೆನ್ನೊಳ್ಳೈತರೆ ವಾದ್ಯಘೋಷಣದ |
ಕಳಕಳಂ ದಿಙ್ಮಂಡಲಮೊಳಿಡಿಯೆ ಶಂಭು ಕೈಲಾಸಗಿರಿಯಿಂದಿಳಿದನು ‖ ೬ ‖

ದಿಕ್ಕರಿಗಳಂತೈದುತಿರ್ಪಾನೆಗಳ ಘಟೆಗೆ |
ಲೆಕ್ಕಮಿಲ್ಲಂಬರಕೆ ಚುಂಬಿಸುವ ಪೊಸ ಪೊನ್ನ |
ಪಕ್ಕರಕ್ಕೆಯ ಹಯಾಳಿಗೆ ಗಣನೆಯಿಲ್ಲಮುನ್ನತಮಣಿರಥಪ್ರತತಿಯ ‖
ತಕ್ಕೆಗಗ್ಗವಧಿ ಮುನ್ನಿಲ್ಲ ಕಡುಗಲಿಪಾಯ್ದ |
ಳಕ್ಕೆ ಕಡೆಯಿಲ್ಲ ದೊರೆದೊರೆಗಳೆನಿಬರೊ ಪೇಳ |
ಒಕ್ಕನೇ ಶಿವಶಿವಾ ವಾದ್ಯನಿರ್ಘೋಷಕೆ ಜಗಜ್ಜನಂ ಕಿವುಡಾದುದು ‖ ೭ ‖

೧-೧ ನಿಲ್ಲವೆಂದಿನ್ನೆಗಂ (ಪ.) ೨-೨ ರ್ದನ್ನೈಸೆಂದುಮ (ಗೋ.)

ತರತರದೊಳೈದುತಿರ್ಪಾನೆಗಳ ಸೇನೆಗಳ |
ಪರಿಪರಿವ ಪಟುವರೂಥಾಳಿಗಳ ಪಾಳಿಗಳ |
ಕರಧೃತಾಯುಧತತಿಯ ಕಾಲಾಳ ಮೇಲಾಳ ಸಂದಣಿಯ ಸನ್ನಾಹದ ||
ಮರುತುಚ್ಚ[1]ಲದ್ಧ್ವಜಪಟಾವಳಿಯ ಗಾವಳಿಯ |
ಯಿರದೆ ಡಾಳಿಪ ಚಮರದೊತ್ತುಗಳ ಜೊತ್ತುಗಳ |
ಧುರಮನೈದುವ ಸುಭಟರುಬ್ಬುಗಳ ಕೊಬ್ಬುಗಳ ಸಂಭ್ರಮಂ ಕಣ್ಗೆಸೆದುದು || ೮ ||

ನುತಪುಂಡರೀಕವಿಲಸಿತವಾಗಿ ಕೊಳನಲ್ಲ |
ಮತುಳಪತ್ರವಿರಾಜವಾಗಿ ಮರನಲ್ಲ ವಿ |
ಶ್ರುತಸೋಮಮಂಗಳಬುಧಾನ್ವಿತಂ ತಾನಾಗಿಯಾಕಾಶವಲಯಮಲ್ಲ ||
ಧೃತಖಡ್ಗಸಂತಾನವಾಗಿಯುಂ ನಾಡೆ ಪ |
ರ್ವತಮಲ್ಲ ಕೇತುರಂಜಿತಮುಂ ಗ್ರಹಾಂತ್ಯಮು |
ಲ್ಲತಿಘನಸ್ಯಂದನಾನ್ವಿತವಾಗಿ ವನಮಲ್ಲಮೆನಿಸಿ ಪಡೆ ನಡೆಗೊಂಡುದು || ೯ ||

ಡಾಳಿಸುವ ವಿವಿಧಚಮರಾಳಿಯಿಂ ಪಾಳಿಯಿಂ |
ಸಾಲ ಸೀಗುರಿಗಳೊಲೆದಾಟದಿಂ ಥಾಟದಿಂ |
ಕಾಳೆಗಳ ಬಿರುದಸಿಗಳೆಸಕದಿಂ ಮಸಕದಿಂ ಸೂತರ ಪೊಗಳ್ಕೆಯಿಂದೆ ||
ಮೇಲೆತ್ತಿದಮಳಾತಪತ್ರದಿಂ ಛತ್ರದಿಂ |
ವ್ಯಾಲೋಲಖಡ್ಗಗಳ ಡಾಳದಿಂ ಮೇಳದಿಂ |
ಘೀಳಿಡುವ ಬಹುವಿಧದ ವಾದ್ಯದಿಂ ಚೋದ್ಯದಿಂ ಪಡೆ ಪಡೆಪಿನಿಂ ನಡೆದುದು || ೧೦ ||

ಧರಣಿ ಜಗಿ[2]ದುದು ಗಜಂಗಳ್ ಕುಗ್ಗಿದುವು ಫಣೀ |
ಶ್ವರನ ಪೆಡೆಗಳ್ ಮಣಿದುವಾದಿಕೂರ್ಮಂ ಸಸಿದ |
ಸರಸಿಜಭವಾಂಡಖರ್ಪರಮುಸುರೆ ಕರ್ಚಿದಂ ಬ್ರಹ್ಮಾಂಡಮಿರದೊಲೆದುದು ||
ಭರದೊಳುಬ್ಬಿದ್ದ ಕೆಂದೂಳಿಗಳ್ ಧ್ರುವಲೋಕ |
ಪರಿಯಂತಮೊತ್ತಿದುವು ಶಿವಶಿವಾ ಶಿವಬಲದ |
ಭರವಸವನೇನೆಂಬೆನೈ ಸಿದ್ಧರಾಮ ಕೇಳಚ್ಚರಿಯನಾ ಕ್ಷಣದೊಳು || ೧೧ ||

---

೧ ತೋಚ್ಚ (ಮ, ಕ.) ೨ ಜರಿ (ಮ.)

ಆರ್ಪುಗಳಬಹುದು ಹರಸೈನ್ಯಮಿಾ ಪರಿಯೊಳ್ ಪೊ |
ಡರ್ಪಿನಿಂದೈತರುತ್ತಿರ್ದುದತ್ತಲ್ ಖಳಂ |
ಸರ್ಪಭೂಷಣನ ಬಲಕಿದಿರಾಗಿ ನಡೆತರಲ್ ಕಾಣಿಸಿದುವಿರ್ಬಲಗಳು ||
ಮಾರ್ಪಡೆಯನೀಕ್ಷಿಸಿದ ಮಾತ್ರದಿಂ ಬಿಡದಾರಿ |
ದರ್ಪಟುಭಟರ್ ಶರಧಿಘೋಷದಿಂ ರಣಕೊದಗಿ |
ಬರ್ಪ ಚೂಣಿಗರ ಕೋಲಾಹಲಂ ಮಸಗಿತದನೇನೆಂಬೆನದ್ಭುತವನು || ೧೨ ||

ಮುಂಚಿದುವು ಮನಮನಂಗಳ್ ದೃಷ್ಟಿದೃಷ್ಟಿಗಳ್ |
ಪಿಂಚಿದುವು ಕರದ ಕರವಾಳಂಗಳಾಕ್ಷಣಂ |
ಮಿಂಚಿದುವು ಖಾತಿಯುಬ್ಬರಿಸಿದುವು ಭರವಸದೊಳೈದುತಿಹ ಪದಚರರ್ಗೆ ||
ಅಂಚಿತದ ಹಲ್ಲಣದ ಗಮಕದಿಂ ಹೊಳಕಿ[೧]ದುವು |
ಪಂಚಧಾರಾಪ್ರೌಢವಾಜಿಗಳ್ ತವಕದೆ ಪ |
ಳಂಚಿದುವು ಕಾಲ್ವೇಗದಾನೆಗಳ್ ಬಲಯುಗದ ಚೂಳಿ ಸಂಧಿಸುವಾಗಳು || ೧೩ ||

ಘೀಳಿಟ್ಟುವಖಿಳವಾದ್ಯಂಗಳದ್ಭುತರವದೆ |
ಕಾಳೆಗಳ್ ಕೂಗಿದುವು ಗಜ ಹಯ ರಥಧ್ವನಿಗ |
ಳೇಳಿಸಿದುವೊರಲ್ವ ವಾದ್ಯಧ್ವನಿಗಳಿನಿತುರವಮುಂ ಭಟರ ಹೂಂಕೃತಿಯೊಳು ||
ಕೇಳಿನಿಸಿದುವು ರಣದೊಳುಭಯವೀರರ್ ಮಹಾ |
ಕೋಲಾಹಳದೊಳಿರದೆ ಸೇರಿ ಕೂರಲಗಿನಿಂ |
ತೂಳಿವೆದ್ದಿರಿದಾಡುತಿರ್ದರತಿಖಾತಿಯಿಂ ಪೇಳಲೇನದ್ಭುತವನು || ೧೪ ||

ಮುಟ್ಟಿ ಮುಂದಲೆಗಳಂ ತುಡುಕುವರ್ ಮಿಡುಕುವರ್ |
ಜಟ್ಟಿಸುಂತೊಳಪೊಕ್ಕು ತಬ್ಬುವರ್ ಕೊಬ್ಬುವರ್ |
ಒಟ್ಟಿಸಿಂಪಣೆದು ಕೈಯಿಕ್ಕುವರ್ ಸಿಕ್ಕುವರ್ ಕಾಯದೊಳ್ ಸಾಯಕವನು ||
ಅಟ್ಟಿ ರಿಪುಸುಭಟರಂ ಕೆಡೆಪುವರ್ ಮಡಿಪುವರ್ |
ಕುಟ್ಟಿ ತಲೆಗಳ ಗಗನಕೆತ್ತುವರ್ ಮುತ್ತುವರ್ |
ಒಟ್ಟಿಸುಪ್ರೌಢರಿದೆಸಿಸಿ ಕಾದುವರ್ ಮೋದುವರ್ ಪಟುಸುಭಟರಿರ್ಬಲದೊಳು
|| ೧೫ ||

೧ ಹಳಚಿ (ಪ.)

ಪೋೞ್ಪೊಡಚ್ಚರಿಯಾಯ್ತು ಚೂಣಿಗರ ಕೊಳುಗುಳಂ |
ತೋೞ್ಪೊಯ್ಲ ತುಟಿವೆರಳ ಬೊಬ್ಬೆಗಳ ರಿಪುಗಳಂ |
ಸೀೞ್ವ ಸಡಗರದ ಕೋಳಾಹಳದ ಮೂದಲೆಯ ಮಾತುಗಳ ಪೊಸಮುಳಿಸಿನ ||
ಏೞ್ವ ಬೀೞ್ವುರುಬುವೊತ್ತುವ ತನುಕ್ಷತಗಳಂ |
ತಾೞ್ವ ತವಕಿಸುವ ತಟ್ಟುಚ್ಚಿದ ಸರಂಗಳಂ |
ಕೀೞ್ವ[1] ಕೋಳಂಕೊಂಬ[2] ಸಂಭ್ರಮವನಿರದೆ ಪಡೆಯೆರಡುಂ ಕ್ಷಿಸುತ್ತಿರ್ದುವು || ೧೬ ||

ಇರ್ತಂಡದೊಳ್ ಚೂಳಿ ಪೊಯ್ದಾಡಿ ಮಡಿಯೆ ಸಂ |
ವರ್ತಸಾಗರದಂತೆ ಕರಿ ತುರಗ ರಥ ಪಟುಭ |
ಟರ್ತಡೆಯದೆರಡುಬಲದಿಂದೆ ನೂಂಕಿದರತುಳಕೋಳಾಹಳದ ರಭಸದೆ ||
ಆರ್ತಡೆಯಬಹುದೆಂಬ ಪೆರ್ಮೆಯಿಂ ತಾಗಿದುವು |
ತೇರ್ತೇರೊಳಶ್ವಮಶ್ವದೊಳಾನೆಯಾನೆಯೊಳ್ |
ಧೂರ್ತತ್ವದಿಂ ಭಟರ್ ಭಟರೊಡನೆ ಸೆಣಸಿದರ್ ನಾನಾಪ್ರಕಾರದಿಂದೆ || ೧೭ ||

ತಿವಿದರೊತ್ತರಿಸಿದರ್ ನೂಂಕಿದರ್ ತಾಂಕಿದರ್ |
ಕವಿದರಿಟ್ಟಣಿಸಿದರ್ ಮುತ್ತಿದರ್ ಕುತ್ತಿದರ್ |
ಜವದೊಳಿರಿದಾಡಿದರ್ ಮುಳ್ಗಿದರ್ ತಳ್ಗಿದರ್ ಸಂಗರಾವೇಶದಿಂದೆ ||
ಅವಗಡಿಸಿ ಪೊಕ್ಕು ಪೊಯ್ದಾಡಿದರ್ ಕೋಡಿದರ್ |
ನವರುಧಿರಧಾರೆಯೊಳ್ ಮುಳುಕಿದರ್ ಪೊಳಕಿದರ್ |
ತವಕದಿಂ ತಲೆಗಳಂ ಕುಟ್ಟಿದರ್ ಮೆಟ್ಟಿದರ್ ಬಿದ್ದ[3]ಟ್ಟೆಗಳ ಪಿಂಡನು || ೧೮ ||

ಮುರಿವುದಸುರರ ಸೇನೆಯೊರ್ಮೆ ದಿವಿಜರ ದಳಂ |
ಪೆರದೆಗೆವುದೊರ್ಮೆ ಪಡಿಸಿಬಲಿಸಿ ನೂಂಕುವುದೊರ್ಮೆ |
ಪೊರಿಗೆಯಿಂ ಸುರಬಲಂ ಬೆನ್ನೀವುದಮರಾಳಿಗಳ ಸೈನಿಕಂ ಭರದೊಳು ||
ಇರಿತಮುರಿತದೊಳಿಂತುಟಿರ್ಬಲದ ಸುಭಟರೊಳ್ |
ಕುರಿದರಿಯಳಲುರಿ ಜೋಲ್ವ ಖಂಡಗಳ[4] ಮುಂಡಗಳ |
ಮುರಿಮೂಳೆವಿಂಡುಗಳ ಪೊಸಬಗೆಯ ಜೊಂಡುಗಳ ರೌಕುಳಂ ಕಂಗೆಸೆದುದು
|| ೧೯ ||

೧ ಕೊರಳಂ ಕೊಯ್ಸು (ಶಿ.) ೨ ಬಿಡದ (ಗೀ.) ೩ ಪಡೆ (ಶಿ.) ೪-೪ ಖಂಡಗಳ ತುಂಡಗಳ (ಮ, ಹು, ಗೋ.)

ಮತ್ತೆ ಘೂಂಕೆತು ಹರಿಬುಜೇಂದ್ರಾದಿದಿಕ್ಪಾಲ
ರೊತ್ತರಸಿ ಸಕಲಸನ್ನಾಹದಿಂ ದೈತ್ಯರಂ |
ಕತ್ತರಿಸಿ ಕಡಿದಿರಿದು ತರಿದುರುಬುತಿರ್ಪಲಂದು ದನುಜರತಿಭೀತಿಯಿಂದೆ ||
ನಿತ್ತರಿಸಿ ನಿಲಲಾರದೋಡುತಿರೆ ಸುರರು ಬೆಂ |
ಬತ್ತಿ ಬೋಯೆಂದಾರ್ದು ಸಂಹರಿಸುತಿರಲಸುರ |
ಕೊತ್ತಾಯದಿಂದೆ ದೊರೆದೊರೆಗಳೀ ಮುಂಕೊಂಡು ನಡೆದರತಿಖಾತಿಯಿಂದೆ || ೨೦ ||

ವಾಮನ ವಿರೂಪಾಕ್ಷ ಜಂಭ ಗಜಶಿರ ಖಡ್ಗ |
ರೋಮ ವಿದ್ರಾವಣ ನಿಶುಂಭ ತಾರಕ ಕಾಲ |
ನೇಮಿ ಜರ್ಝರ ಶಂಖುಶಿರ ವಜ್ರನಾಭ ಖರ ಮುರ ಶುಂಭರಾದಿಯಾದ ||
ಭೀಮರೂಪಸುರನಾಯಕರೆ ಬರೆ ನೋಡಿ ಸು |
ತ್ರಾಮುಹರಿಬುಜಮುಖ್ಯ ಸುರರೋಡುತಿರೆ ಕಂಡು |
ಕಾಮುಹರನಿರದೊಡನೆ ಹರಗಣಕೆ ಸೆಲವಿಕ್ಕೆ ಮುಂಕೊಂಡರಾ ಕ್ಷಣದೊಳು || ೨೧ ||

ವರನಂದಿ ಮಾಕಾಳ ಕಾಲಹರ ಕಂಕಾಳ |
ಧರ ಸೂರ್ಯಪಾತ ರೇಣುಕ ಭೈರವಾದಿಗಳ್ |
ಕರದ ಕಾರ್ಮುಕದ ಠಂಕಾರದಿಂ ಮೂಜಗಂ ತಲ್ಲಣಿಸೆ ಕೋಪದಿಂದೆ ||
ಸರಳ್ಗಳಂ ಕರೆವುತೈತರೆ ದಾನವರ ಬಲದ |
ನೆರೆದ ದೊಡ್ಡಗರಾನಲರಿಯದೋಡಲ್ ಕಂಡು |
ದುರುಳಬಲ ಶುಂಭ ಧೂಮ್ರಾಕ್ಷ ವೃತ್ರಾದಿಗಳ್ ಕೈಕೊಂಡರಾಹವವನು || ೨೨ ||

ಜಂಭನಂ ತಡೆದುಗ್ರನೆಚ್ಚಂ ವೃಷೇಶ್ವರಂ |
ಶುಂಭನಂ ತೊಡಕಿದಂ ಭೈರವಂ ಕೆರಳ್ದಾ ನಿ |
ಶುಂಭನಂ ತಾಗಿದಂ ವೃತ್ರಂಗೆ ದಂಡಧರನಿದಿರಾಗಿ ಕೊಲ್ಗರೆದನು ||
ಕುಂಭಂಗೆ ಮಾಲಾಂತು ಕಾಲಹರನೆಚ್ಚಂ ನಿ |
ಕುಂಭಗಂ ಕಂಕಾಳಧರನೈದೆ ಸೆಣಸಿದಂ |
ಶುಂಭನಂದೀಶರ್ಗೆ ಕಾಳಿಗಂ ಬಲಿದುಪದನೆಂಬೆನದ್ಭುತವನು || ೨೩ ||

೨೦ ... ಬಸುತಿರ (ಹು.) ೨ ಜೆಂಬತ್ತಿದರ್ (ಅ.) ; ಬೋಯುಪಂದು (ತಿ.)

ಆದುದಂದಲ್ಲಿ[1] ಸಮರಾಂಗವಿರ್ಬೆರಳಿಂದೆ ।
ಸೇದುವಂಬಿನ ಕಣ್ಣ ಕಿಡಿಯ ಗರ್ಜಿಪ[2] ಸಿಂಹ ।
ನಾದದ [3]ಸಘೋರಬದ್ಧ ಭ್ರುಕುಟಿಮುಖದಲುಷ್ಣಶ್ವಾಸದುಬ್ಬರಗಳ[3] ।
ಸ್ವೇದಬಿಂದುಪ್ರತಾನಾನ್ವಿತಾಂಗದ ರಣಾ ।
ಮೋದಚಿತ್ತದ ಕರಚಮತ್ಕೃತಿಯ ವಿಜಯಸಂ ।
ಪಾದಿಗಳ್ ನಂದಿಶುಂಭಾಸುರರ್ ಧುರದೊಳೆಚ್ಚಾಡಿದರ್ ಗಾಢದಿಂದೆ ॥ ೨೪ ॥

ಶರಕೆ ಶರವದಟಿಗದಟಾವೇಶಕಾವೇಶ ।
ವಿರದೆ ಗಾಯಕೆ ಗಾಯಮುಗ್ಗಳಿಕೆಗಗ್ಗಳಿಕೆ ।
ಕರಚಮತ್ಕಾರಕೆ ಚಮತ್ಕಾರಮಾರ್ಬಟೆಗೆಯಾರ್ಬಟೆ ತುಳಿಲ್ಗೆ ತುಳಿಲು ।
ಭರಕೆ ಭರಮೊಡನೆ ಮೂದಲೆಗೆ ಮೂದಲೆಗಳುಂ ।
ಸರಿಯಾಗೆ ನಂದೀಶಶುಂಭಾಸುರರ್ ಮಹಾ ।
ಧುರದೊಳೆಚ್ಚಾಡಿದರ್ ಕೈಗುಂದದಾಕ್ಷಣಂ ಪೇಳಲೇನಚ್ಚರಿಯನು ॥ ೨೫ ॥

[4]ಎಸುವರೆಚ್ಚಂಬುಗಳನೋರೊರ್ವರಿರದೆ ಖಂ ।
ಡಿಸುವರೊಡನಿಸುವರೈದುವ ಸರಳನಾಗ ಛೇ ।
ದಿಸುವರಾವೇಶದಿಂ ಕೂಗುವರ್ ಬೀಗುವರ್ ಕಣೆಕಣೆಯ ಸೋಂಕಿನಿಂದೆ ।
ಮಸಗಿ ಬೊಬ್ಬಿರಿವರಿರಿದೊತ್ತುವರ್ ಬಿಲ್ಗಳಂ ।
ಕುಸುರಿದರಿವರ್ ಕುಬುಬೆನುತ್ತಾರಿಕೊಂಡು ಕ ।
ಟ್ಟಿಸಕದಿಂ ಪೊಸಬಿಲ್ಲನಾನುವರ್ ತೊಡುವರವರಂಬುಗಳನಾಹವದೊಳು ॥ ೨೬ ॥

ಕಡಿವ ಕಣೆಗಳ್ಗೆ ಗಡಿಯಿಲ್ಲ ಗಗನಾಂಗಣದೊ ।
ಳಿಡಿವಂಬುಗಳ್ಗೆ ಮಿತಿಯಿಲ್ಲ ಭಟರವಯವವ ।
ನುಡಿವ ಶರತತಿಗವಧಿಯಿಲ್ಲ ಮಾರಾಂತ ರಿಪುಗಳ ಲಲಾಟದ ಲಿಪಿಯನು ।
ತೊಡೆವ ಬಾಣಕೆ ಲೆಕ್ಕವಿಲ್ಲಂ ದಿಗಂತದೊಳ್ ।
ಕೆಡೆವ ರಿಪುಳಿಚಯಕೆ ಪವಣಿಲ್ಲ ಪಾತಾಳಕ್ಕೆ ।
ನಡೆವ ಸರಳ್ಗಂತವಿಲ್ಲೆನೆ ಬಾಣಮಯವಾಯ್ತು ಮೂಜಗಂ ನಿಮಿಷದೊಳಗೆ ॥ ೨೭ ॥

---

೧ ಆದುದಲ್ಲಲ್ಲಿ (ಶಿ, ಪ.) ೨ ಗರ್ಜತ್ (ಮ.) ; ಗರ್ಜಿಸೆ (ಶಿ, ಹು.) ೩-೩ ಸಘಾಟಿಕೆಯ ಘೋರಬದ್ಧ ಭ್ರುಕುಟ ಮುಖದಲುಷ್ಣ ಶ್ವಾಸದ (ಹು.) ; ಸಘೋಷನಾಗುತೆ ಬದ್ಧಭ್ರುಕುಟಿಸೋಷ್ಣಶ್ವಾಸದುಬ್ಬರಗಳ (ಶಿ.) ೪ ಯಿಸು (ಹು.)

ರವಿಗೆ ಸ್ವರ್ಭಾನು ಪುಷ್ಕರಕೆ ಕಾದಂಬಿನೀ |
ನಿವಹಮಬ್ಧಿಗೆ ಸೇತು ಪಾತಾಳಕಂ ಗರುಡ |
ವನನಿರುಹತತಿಗೆ ಪೊಸಪೊದರೊಪ್ಪುವದ್ರಿಸಂಕುಲಕೆ ಘನತರದ ವಜ್ರ ||
ಭುವಿಗಂಧಕಾರವಾಹವದೊಳಗೆ ಸೆಣಸುತಿಹ |
ವಿವಿಧಸುಭಟರ ಮೈಗೆ ಜೋಡೆನಿಸಿ ಸುತ್ತಲುಂ |
ಕವಿದವಾ ಪಟುಭಟರ ಬಾಣಂಗಳೆಲ್ಲಾ ದಿಗಂತದೊಳ್ ಚೋದ್ಯದಿಂದೆ || ೨೮ ||

ಎಲೆ ಸಿದ್ಧರಾಮ ಕೇಳ್ ಶುಂಭನಂದೀಶರ್ಗೆ |
ಕಲಹದಾವೇಶಮುಬ್ಬರಿಸಿ ಕರಕಲಿತವಂ |
ದಲಿತಕಾರ್ಮುಕರೊಬ್ಬರೊಬ್ಬರಂ ಜಯಿಸುವಭಿಲಾಷೆಯಿಂ ಕೂರ್ಗಣೆಗಳ ||
ಬಳಿಸಲಿಸಿ ಬೀರುವಂ ದೈತ್ಯನಾ ಬಾಣಮಂ |
ಸಲೆ ಸವರಿ ಬಿಸುಡುವಂ ವೃಷಭನಸುರಂ ಮತ್ತೆ |
ಹೊಳೆವ ಹೊಂಬರಹದಂಬುಗಳಿಂ[೧]ದೆಸೆ ಕಡಿದಂ[೨]ವೃಷರಾಜನಾ ಕ್ಷಣದೊಳು || ೨೯ ||

ಚಾಪಮಂ ಕಡಿದನುಡಿದಂ ತೇರನಾ ಹಯದ |
ರೂಪಮಂ ಛಿದ್ರಿಸಿದನಾ ಸೂತನಂ ತರಿದು |
ಕೋಪಮಂ ತಾಳ್ದು ಸೀಗುರಿ ಛತ್ರ ಚಾಮರ ಪತಾಕೆಗಳ ತಡೆಗಡಿದನು ||
ತಾಪಮಂ ತೋರಿದಂ ಶುಂಭನೊಳ್ ತದ್ರಣಾ |
ಟೋಪಮಂ ನೋಡಿ ವಿಸ್ಮಿತನಾಗಿ ದಾನವಂ |
ಪಾಪಮಂ ಭಾವಿಸದೆ ಕೆಟ್ಟು ಮುರಿದೋಡಿದಂ ಭೀತಿಯಿಂದೇನೆಂಬೆನು || ೩೦ ||

ಪೇಳಲೇನಚ್ಚರಿಯನಿಂತುಭಯಸುನಾಯಕರ್ |
ಕಾಳಗದೊಳೆಚ್ಚಾಡೆ ವೃಷಭಾದಿಪಟುಭಟರ |
ಕೋಲಾಹಳವನಾಂತು ಸೈರಿಸಿದೆ ಮುರಿದರೊಂದೇ ಬಾರಿ ದೊರೆದೊರೆಗಳು ||
ಫಾಲಲೋಚನನ ಭಟರಿರದೆ ಬೆಂಬತ್ತಿದರ್ |
ತೂಳದಿಂದಾಕರ್ಣಪರ್ಯಂತ ಸೇದಿದ ಕ |
ರಾಳಸ್ಫುಲಿಂಗಸಂಗತಬಾಣನಿಚಯದಿಂದೇನೆಂಬೆನಚ್ಚರಿಯನು || ೩೧ ||

---
೧ ದಳಿಸೆಕಡಿದು (ಶಿ, ಹು, ಗೋ.) ೨ ನಡೆ (ಹು.)

ತೋಳಂಗಳಂ ಕಂಡು ಕೆಟ್ಟೋಡುತಿಹ ಕುರಿಯು |
ಜಾಳಮೋ ಶಿವಶಿವಾ ಪಸಿದು ಮುಂಬರಿವ ಶಾ |
ರ್ದೂಲಂಗಳಂ ಕಾಣುತಳವಳಿದು ಪೋಪ ಮೃಗನಿಚಯಮೋ ಪೇಳಿಸಲ್ಕೆ ||
ಕಾಳರಕ್ಕಸರೋಡಿ ಪೋಗಿ ಖಳನರೆ[1]ನೆಲೆಯ |
ಮೇಲೆ ಬೀಳಲ್ ಕಂಡು ಕಲಿಜಲಂಧರನತಿಕ |
ರಾಳಬದ್ಧಭ್ರುಕುಟಿಮುಖನಾಗಿ ನಡೆದನಹಿತರಮೇಲೆ ಖಾತಿಯಿಂದೆ || ೩೨ ||

ಏನನೆಂಬೆನು ಜಲಂಧರನ ಕೈಸನ್ನೆಯಿಂ |
ಸೇನೆ ನೂಂಕಿತು ವಡಬನಂ ಮುಸುಕುವಂಭೋನಿ |
ಧಾನಮೆನೆ ಸಮರಸಂರಂಭದಿಂ ವೃಷಭಾದಿಸಕಲಪಟುಭಟರ ಮೇಲೆ ||
ಆನಲಸದಳಮಾಯ್ತು ಮೆಲ್ಲನೋಸರಿಸಿದುದು |
ಸೇನೆ ಶಿವಭಟರ ದನುಜೇಶ್ವರಂ ಕಿಂಚಿದನು |
ಮಾನವಿಲ್ಲದೆ ಶಿವನ ಬಲದ ಮೇಲೊತ್ತಿ ನಡೆಯಲ್ ಕಂಡು ಹರನಾಗಳು || ೩೩ ||

ಮೆಲ್ಲನೆ ಪಿನಾಕಮಂ ಕೊಂಡು ನಸುನಗುತುಮಾ |
ವಲ್ಲಭಂ ಬಾಣಮೊಂದರೊಳೆಚ್ಚು ತುರಗಂಗ |
ಳೆಲ್ಲಮಂ ಕಡಿದು ಕರಿಗಳನುಡಿದು ತೇರ್ಗಳಂ ಮುರಿದು ಕಾಲಾಳ ತರಿದು ||
ಖುಲ್ಲದನುಜರೊಳರೆಬರಂ ಕೊಂದು ಕೆಲಬರಂ |
ನಿಲ್ಲದೋಡಿಸಿ ಕೆಲಂಬರ್ಗೆ ಮೂರ್ಛೆಯನಿತ್ತು |
ಸಲ್ಲೀಲೆಯಿಂದಿಂದ್ರಜಾಲದೊಡ್ಡಣೆಯಂತೆ ಖಳಬಲವ ಬರಿಕೆಯ್ದನು || ೩೪ ||

ಸೇನೆಯುಳಿಯಲ್ ಕಂಡು ಗುಡುಗುಡಿಸಿ ಖಾತಿಯಿಂ |
ದಾನವೇಶಂ ತನ್ನ ರಥವನೀಶನ ಪೊರೆಗೆ |
ತಾನಿರದೆ ನೂಂಕಿ ಘನತರದ ಕೋದಂಡಮಂ ಕೊಂಡು ಕಡುಮುಳಿಸಿನಿಂದೆ ||
ಜ್ಯಾನಾದ[2]ಮಂ ಮಾಡಿ ಬೊಬ್ಬಿರಿದು ಮಾತಾಡು |
ನೀನೇ ಮಹೇಶನೆಂಬಾತನೆಂದೆನುತಲನು |
ಮಾನವಿಲ್ಲದೆ ಸರಳಸಾರಮಂ ಕರೆದನದನೇನೆಂಬೆನಚ್ಚರಿಯನು || ೩೫ ||

೧ ನಿಹ (ಮ.) ೨ ಜೇನಾದ (ಹು.)

ನೋಡಿದಂ ದಾನವೇಶ್ವರನ ಬಾಣಂಗಳಂ |
ಮಾಡಿದಂ ಚಿತ್ರಮಂ ಮತ್ತೊಂದು ಬಾಣಮಂ |
ಹೂಡಿದಂ ಸುತ್ತಲುಂ ಕವಿವ ಶರಸಮಿತಿಯಂ ಖಂಡಿಸಲ್ ಖಳರಾಜನು ||
ಕೋಡಿದಂ ಚಿತ್ತದೊಳ್ ಶಂಕರನ ಕೂಡೆ ಮಾ |
ತಾಡಿದಂ ಮಚ್ಚರಮನಿನ್ನೊಮ್ಮೆ ಕಡಿಯೆನುತೆ |
ತೋಡಿದಂ ಬತ್ತಳಿಕೆಯಿಂದಂಬುಗಳನಾಗಳೇನೆಂಬೆನದ್ಭುತವನು || ೩೬ ||

ಮತ್ತೆ ಕವಿದುದು ಬಾಣವಾರ್ಧಿ ದಿಗ್ಭಿತ್ತಿಯಂ |
ಕೆತ್ತುವಂಬರದೊಳಗೆ ತುಂಬಿದುವು ಗಿರಿಗಳಂ |
ಮುತ್ತಿದುವು ಸಪ್ತಶರನಿಧಿಗಳಂ ಪೂಳ್ದು[೧]ವು ಧರಾತಲವನೊಡೆಬಗಿದುವು ||
ಚಿತ್ತಜಾರಾತಿಯೀಕ್ಷಿಸಿ ತಲೆಯನಲ್ಲಾಡಿ |
ಚಿತ್ತದೊಳ್ ಕಡುಮೆಚ್ಚಿ ಖಳಪತಿಯ ಕಣೆಗಳಂ |
ಕತ್ತರಿಸಿ ಕರುಣಾಕಟಾಕ್ಷದಿಂದಾತಂಗೆ ನಿಜಮೂರ್ತಿಯಂ ತೋರ್ದನು || ೩೭ ||

ಕಂಡನಸುರಂ ತನ್ನ ಹೃತ್ಕಮಲದೊಳಗಿರ್ಪ |
ಖಂಡಚಿನ್ಮಯನನಿದಿರಿಟ್ಟು ಮಿಗೆ ಸಾಷ್ಟಾಂಗ |
ದಂಡಪ್ರಣಾಮಮಂ ಮಾಡಿ ಕೊಂಡಾಡಿದಂ ಭಯಭರಿತಭಕ್ತಿಯಿಂದೆ ||
ಪುಂಡರೀಕಾಕ್ಷಕಮಲಜಮುಖ್ಯಸುರಮಕುಟ |
ಮಂಡಿತಪದಾಬ್ಜ ಗಿರಿಜಾಧವ ಮಹಾದೇವ |
ಖಂಡೇಂದುಮೌಳಿ ಕಾಯೆನುತೆ ಮಗುಳೆರಗಿದಂ ದನುಜಪತಿಯಕ್ಕರಿಂದೆ || ೩೮ ||

ಮೆಚ್ಚಿದೆಂ ಮಗನೆ ನಿನ್ನಯ ಭಕ್ತಿಗಾನಿರದೆ |
ಬೆಚ್ಚದಿಂ ಬೇಳ್ಪುದುಸಿರೆಂದೀಶ್ವರಂ ನುಡಿಯೆ |
ಸಚ್ಚಿದಾನಂದಸ್ವರೂಪ ನಿನ್ನೊಳ್ ಗರ್ವದಿಂ ಕಾದಿದೆನ್ನೊಡಲನು ||
ಬಿಚ್ಚಿ ಬಿಸುಟೀಗಳೆನ್ನಾತ್ಮಮಂ ನಿನ್ನೊಳಗೆ |
ಬೆಚ್ಚುಗೊಳ್ಳೆಂದು ದನುಜೇಶ್ವರಂ ಬಿನ್ನವಿಸ |
ಲಿಚ್ಚರಿಯೊಳಭವನಾತಂಗೆ ಸಾಯುಜ್ಯಮಂ ಪಾಲಿಸಲ್ಕನುವಾದನು || ೩೯ ||

---

೧ ಪೋಳ್ದು (ಶಿ, ಪ.)

ಕರುಣದೊಳೆ ಪಾದದುಂಗುಷ್ಠದಿಂ ಚಕ್ರಮಂ |
ಬರೆದು ನಯನತ್ರಯದೊಳೀಕ್ಷಿಸಲ್ಕದಕಾಗ |
ತರಣಿಚಂದ್ರರ್ ಮೊಳೆಗಳಗ್ನಿಯೇ ಪಟ್ಟಿಯಾಯ್ತಾ ಚಕ್ರಮಂ ರುದ್ರನು |
ಕರದೊಳಗೆ ಪಿಡಿದಾ ಜಲಂಧರನ ಕಂಧರದ |
ಸರಿಸಕಿಡಲರಿದುದುಜ್ವಲಿಸುವಾತ್ಮಜ್ಯೋತಿ |
ಬೆರಸಿದುದು ಹರನ ಪಣೆಗಣ್ಣ ಪಾವಕನೊಡನೆ ಪೇಳಲೇನಚ್ಚರಿಯನು || ೪೦ ||

ಸುರಿದುದೀಶ್ವರನ ಮಂಡೆಯ ಮೇಲೆ ನವಕುಸುಮ |
ವರುಷಮಾಗಳ್ ದೇವದುಂದುಭಿಗಳುಂ ಮೊಳಗೆ |
ಹರಿಯಜೇಂದ್ರಾದಿವೃಂದಾರಕರ್ ಶಂಕರನ ಪದಕೆರಗಿ ಭಕ್ತಿಯಿಂದೆ ||
ಪರಮಶ್ರುತಿಮಂತ್ರದಿಂ ಕೊಂಡಾಡಿ ಸೆರೆಗಳಂ |
ಪರಿಹರಿಸಿ ರಕ್ಷಿಸಿದೆಯೆಮ್ಮನೆಲೆ ಕಾರುಣ್ಯ |
ಶರಧಿ ನೀನೆನುತೆ ಪುನರಪಿ ಪೊಗಳುತಿರ್ದುದು ಸುರವ್ರಜಂ ಭಕ್ತಿಯಿಂದೆ || ೪೧ ||

ಕೊಂಡಾಡುವಜಹರೀಂದ್ರಾದಿಸುರನಿಕರಮಂ |
ಕಂಡು ಕಾರುಣ್ಯದಿಂ ಸಂತೈಸಿ ಸುರಮುಕುಟ |
ಮಂಡಿತಪದಾಬ್ಜನವರವರಲೋಕಂಗಳ್ಗೆ ಬೀಳ್ಕೊಟ್ಟು ಲೀಲೆಯಿಂದೆ ||
ತಂಡತಂಡದ ಗಣಂಗಳ್ವೆರಸಿ ಬಂದು ಗಿರಿ |
ಮಂಡನವೆನಿಪ್ಪ ಕೈಲಾಸಗಿರಿಯಗ್ರದು |
ದ್ದಂಡರಾಜಾಲಯದೊಳೊಪ್ಪಿದಂ ಪಂಪಾವಿರೂಪಾಕ್ಷನಳ್ತಿಯಿಂದೆ || ೪೨ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೪೩ ||

ಅಂತು ಸಂಧಿ ೨೬ಕ್ಕಂ ಪದಗಳು ೧೧೦೯ಕ್ಕಂ ಮಂಗಳಮಹಾಶ್ರೀ

ಇಪ್ಪತ್ತೇಳನೆಯ ಸಂಧಿ

ಸೂಚನೆ

ಪರಶಿವನ ಕುರಿತು ಹರಿ ತಪದೊಳಿರಲಾಗ ಶಂ |
ಕರನೊಲಿದು ಚಕ್ರಮಂ ಕೊಟ್ಟನಾ ಕಥೆಯನಾ |
ದರದಿಂದೆ ಕೇಳೆಂದು ಸಿದ್ಧರಾಮಂಗೊಲಿದು ಚೆನ್ನಬಸವಂ ಪೇಳ್ದನು ||

ಅಷ್ಟಾಂಗಯೋಗಸಂತುಷ್ಟ ಶುಕ ಶೌನಕ ವ |
ಸಿಷ್ಠಾದಿಸಕಲ ಮುನಿಶ್ರೇಷ್ಠ ಸಮುದಯಮನೋ |
ಭೀಷ್ಟದಾಯಕ ಸುರಜ್ಯೇಷ್ಠಮುಖಸುಮನಸಾಧಿಷ್ಠಿತಪದಾಬ್ಜಯುಗಳ ||
ದುಷ್ಟರಾವಣದನುಜದೃಷ್ಟಿಹೀನಾಸುರೋ |
ತ್ಕೃಷ್ಟಜೀವಾನಿಲಾಕೃಷ್ಟಭುಜ ನಿಜಕೃಪಾ |
ದೃಷ್ಟಿಯಿಂ ನೋಡಿ ಸಂತುಷ್ಟಿಬಡಿಸೆನ್ನ ಗಿರಿಜೋಷ್ಠಚುಂಬನವಿಲಾಸ || ೧ ||

ಆಲಿಸೈ ಸಿದ್ಧರಾಮೇಶ ಕೆಲಕಾಲದಿಂ |
ಮೇಲೆ ಲಕ್ಷ್ಮೀವರಂ [೧]ತಾಂ ಚಕ್ರಮಂ[೧] ಕೂರ್ತು |
ಫಾಲಾಕ್ಷನಂ ಮೆಚ್ಚಿಸುವೆನೆಂದು ತೊಡಗಿದಂ ತಪವನತಿನಿಷ್ಠೆಯಿಂದೆ ||
ಪೇಳಲೇನುಗ್ರತರತಪಕೊಲ್ದು ಶಂಕರಂ |
ಲೀಲೆಯಿಂದೈತಂದು ಮೆಚ್ಚಿದೆಂ ವರವದೇಂ |
ಕೇಳಂಜಬೇಡವೆನಲಚ್ಯುತಂ ಕಣ್ದೆರೆದು ನಮಿಸಿ ಬಳಿಕಿಂತೆಂದನು || ೨ ||

ಎಲೆ ಮಹಾದೇವ ನಿನ್ನಾಜ್ಞೆಯಿಂ ಲೋಕಮಂ |
ಸಲಹುತಿರಲೊಬ್ಬೊಬ್ಬ ಖಳರುದಿಸಿ ಲೋಕಮಂ |
ಕೊಲುತಿರ್ಪರಿದಕೆ ತಾನೇಗುವೆಂ ತವೆ ಕರದ ಚಕ್ರಮಂ ಪಾಲಿಸಿದೊಡೆ ||
ತಲೆಯನರಿವೆಂ ದುಷ್ಟರಾದವರನೆಂದೆನಲ್ |
ಜಲಜನಾಭಂಗೆ ಚಕ್ರಮನಿತ್ತು ತನ್ನ ನಿಜ |
ನಿಲಯಕ್ಕೈದಿದನಭವನತ್ತಲಾ ವಿಷ್ಣುನಿಜಲೋಕದೊಳ್ ಸುಖಮಿರ್ದನು || ೩ ||

೧-೧ ಶಚ್ಚಕ್ರಮಂ (ಮ.)

ಪರಶಿವನ ಕರುಣದಿಂ ಚಕ್ರಮಂ ಪಡೆದು ಮುರ |
ಹರನಖಿಳಲೋಕಮಂ ರಕ್ಷಿಸುತೆ ದುಷ್ಟರುಮ |
ನಿರದೆ ಶಿಕ್ಷಿಸುತಿರಲ್ ಕೆಲಕಾಲದಿಂ ಮೇಲೆ ಕ್ಷುಪನೆಂಬ ಹರಿಭಕ್ತನು ||
ವರಮುನಿದಧೀಚಿಯೊಳ್ ಲೆತ್ತವಾಡುತ್ತೆ ನೀಂ |
ಹರಿಭಕ್ತನಾಗು ಸೋಲ್ತೊಡೆ ಮುನಿಪ ನಾಂ ಸೋಲೆ |
ಹರಭಕ್ತನಾದಪೆಂ ಕೇಳೆಂದು ನುಡಿದಾಡಿ ಸೋಲ್ತನಾ ಕ್ಷುಪಭೂಪನು || ೪ ||

ಇಂತು ನೀಂ ಮೂರುಸೂಳೊಳ್ ಸೋಲ್ತ ಬಳಿಕೀಗ |
ಕಂತುಹರಭಕ್ತನಾಗೆನಲವಂ ನೂಂಕಿಸಲ್ |
ತಾಂ ತಪದೊಳೀಶನಿಂ ವಜ್ರಕಾಯವ ಪಡೆದು ಬಂದರಸನೊಡನೆ ಕಾದಿ ||
ಮುಂತೆ ಕವಿವವನ ಚತುರಂಗಮಂ ಮರ್ದಿಸಿ ಲ |
ಯಾಂತಕನ ಮುಳಿಸಿನಿಂದಾತನಂ ಬೆನ್ನಟ್ಟಿ |
ಕಂತುಪಿತನಾತನಂ ಮರೆವೊಗಿಸಿಕೊಂಡು ಮುನಿಯೊಡನೆ ಯುದ್ಧಂಗೈದನು || ೫ ||

ಪಲವಾಯುಧಂಗಳಿಂ ಕಾದಿ ಹರಿ ಮುನಿಪನಂ |
ಗೆಲಲರಿಯದೆಸೆವ ಚಕ್ರದಿನಿಡಲ್ ಮುನಿ ಪಾಣಿ |
ತಳದಿನಾ ಚಕ್ರಮಂ ಪಿಡಿದೊರೆಸಿ ಚೂರ್ಣೀಕೃತಂಗೆಯ್ಯೆ ಮಾಡೆ ಹರಿಯ ಶಕ್ತಿ ||
ಬಳಿವಿಡಿದು ಪೋಗೆ ಹರಿಯೆರ್ದೆಯನೀತಂ ಪಾದ |
ತಳದಿಂದಲೊದೆಯೆ ಶ್ರೀವತ್ಸಲಾಂಛನನೆಂಬ |
ಬಲುವೆಸರನಾಂತು ಕ್ಷುಪನಂ ಶೈವಭಕ್ತನಂ ಮಾಡಿಸಿದನಬ್ಜಾಕ್ಷನು || ೬ ||

ಪ್ರತಿದಿನಂ ಸಾಹಸ್ರಕಮಲಂಗಳಿಂದುಮಾ |
ಪತಿಯನರ್ಚಿಸಲೊಂದಿನಂ ಶಿವಂ ತನ್ಮನದ |
ಧೃತಿಯನೀಕ್ಷಿಸಲೆಂದು ಸಾವಿರದೊಳೊಂದು ಪಂಕೇಜದಲರಂ ಕುಂದಿಸೆ ||
ಅತಿಶಯಸುಭಕ್ತಿಯಿಂ ತನ್ನ ಬಲಗಣ್ಣನಂ |
ದತುಳಲಿಂಗಕೆ ಸಮರ್ಪಿಸೆ ಮೆಚ್ಚಿ ಪಾರ್ವತೀ |
ಪತಿ ಪುನಶ್ಚಕ್ರಮಂ ಕೊಟ್ಟು ಕಮಲಾಕ್ಷನೊಡನಿಂತೆಂದನಾಕ್ಷಣದೊಳು || ೭ ||

೧ ಸೆತ್ತ್ (ಹು, ಮ.) ೨-೨ ಮಾಡಿ ಜೆಂಬತ್ತೆಲು || ನಿಲಲಂಜ ಹರಿ ಕೆಲೆಯ ಕೆದರಿಕೊಂಡೋಡಲಾ | ನಳಿನಾಕ್ಷನಂ ಕ್ಷುಪಂ ಕಂಡು ಶಿವಭಕ್ತರೇ | ಬಲುಹಲಾಯೆನುತಾಗ ಮುನಿಪಾಲನಿಂದೆ ಶಿವದೀಕ್ಷೆಯಂ ತಾಂ ಪಡೆದನು || (ಗೋ, ಹು, ಮ, ಪ.)

ಪಾವನಸಿತ ಕೇಣಾಮೊಡೆನ್ನ ಭಕ್ತವ್ರಜದ |
ಹೃದಯದೊಳಿರ್ಪೆನನವರತಮಾ ಭಕ್ತರೇ |
ಸದಮಲಪ್ರಾಣವೆನಗೆನ್ನ ಮುದ್ರಾಂಕಿತರ ಮೇಲೊಮ್ಮೆಯುಂ ಚಕ್ರವ ||
ವಿದಿತಂ ಪ್ರಯೋಗಿಸದಿರೆಂದು ನೇಮಿಸಿ ಶಿವಂ |
ಮುದದೊಳಾ ವಿಷ್ಣುವಂ ಬೀಳ್ಕೊಟ್ಟು ಕೈಲಾಸ |
ಸದನಮಂ ಪೊಕ್ಕು ಗಿರಿಜಾತೆಯೊಡಗೂಡಿ ಸುಖಮಿರ್ದಂ ವಿರೂಪಾಕ್ಷನು || ೮ ||

ಇದು ಸಕಲವೀರಮಾಹೇಶ್ವರರ ಸದ್ವಿಮಲ |
ಹೃದಯಾಬ್ಜಮಿತ್ರನುರುಷಟ್‌ಸ್ಥಲಬ್ರಹ್ಮವೆಂ |
ಬುದಧಿವರ್ಧನ ಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು ||
ಸದಮಲಜ್ಞಾನಿ ಸಕಲಾಗಮಪುರಾಣಕೋ |
ವಿದನೆನಿಪ ವಿರುಪಾಕ್ಷಪಂಡಿತಾರಾಧ್ಯನತಿ |
ಮುದದೆ ಪೇಳ್ದೀ ಚೆನ್ನಬಸವಪೌರಾಣಸತ್ಕಥೆಯೊಳೆರಡನೆಯ ಕಾಂಡಂ || ೯ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೧೦ ||

ಅಂತು ಸಂಧಿ ೨೭ ಕ್ಕಂ ಪದಗಳು ೧೦೧೯ ಕ್ಕಂ ಮಂಗಳಮಹಾಶ್ರೀ

ದ್ವಿತೀಯಕಾಂಡಂ ಸಮಾಪ್ತಂ

ತೃತೀಯ ಕಾಂಡ

(ಒಂದನೆಯ ಸಂಧಿ)

ಇಪ್ಪತ್ತೆಂಟನೆಯ ಸಂಧಿ

ಸೂಚನೆ

ಪಿರಿದೆನಿಪಗಸ್ತ್ಯಮುನಿಶಾಪದಿಂ ಗಂಧರ್ವ |
ನುರುಗಜಾಸುರನಾಗಿ ಹರಿಯಜೇಂದ್ರಾದ್ಯರಂ |
ಧುರದೊಳೋಡಿಸಲಭವನಾ ಗಜಾಸುರನ ಸಂಹರಿಸಿದಂ ಲೀಲೆಯಿಂದೆ ||

ಸರಸಗುಣಧಾಮನಂ ಸೋಮನಂ ಭೀಮನಂ |
ಕರಧೃತವಿ[2]ಶೂಲನಂ ಲೀಲನಂ ಪಾಲನಂ |
ಕರಿಚರ್ಮಧಾರನಂ ವೀರನಂ ಶೂರನಂ ಜಿತಮಾರನಂ ಧೀರನಂ ||
ಸುರಶೈಲಚಾಪನಂ ಗೋಪನಂ ಶ್ರೀಪನಂ |
ನಿರುತಂ ಸತಿಕಾಂತನಂ ಕಾಂತನಂ ಶಾಂತನಂ |
ದುರಿತಹರಪಕ್ಷನಂ ರಕ್ಷನಂ ವರವಿರೂಪಾಕ್ಷನಂ ಸ್ತುತಿಯಿಸುವೆನು[4] || ೧ ||

ಆಲಿಸಿನ್ನೆಲೆ ರಾಮ ಪೂರ್ವದೊಳಗಸ್ತ್ಯಮುನಿ |
ಸಾಲಕಂ ಕಾವೇರಿಯಾದಿಯೊಳ್ ತಪಿಸುತ್ತೆ |
ಲೀಲೆಯಿಂದಿರಲೊರ್ವ ಗಂಧರ್ವನಾಗಸದೊಳೊಪ್ಪುವ ವಿಮಾನದೊಳಗೆ ||
ಮೇಳದಿಂದೈದುತ್ತೆ ಮುನಿಪನಂ ಕಂಡು ಹಾ |
ಸ್ಯಾಲಾಪದಿಂ ಸತಿಯ ಮುಡಿಯ ಪೂವಿಂದಿಡಲ್ |
ಮೇಲನೀಕ್ಷಿಸಿ ಮುನೀಶಂ ಕೆರಳ್ದೆತ್ತಿದ ಕರಾಗ್ರದಿಂದಿಂತೆಂದನು || ೨ ||

ಮತ್ತತ್ವದಿಂದೆನ್ನನಿಟ್ಟೆಲಾ ನೀಂ ಮದೋ |
ನ್ಮತ್ತತೆಯನುಳ್ಳುದು ತಾಕೃತಿಯು ನಾನಾಜ |
ಗತ್ತುಗಳನೈದೆ ಸಂಹರಿಪ ದುರ್ಗಜವಾಗಿ ಜನಿಸೆನುತೆ ಶಾಪವೀಯೆ ||
ಚಿತ್ತದುಮ್ಮಳದಿಂದೆ ಋಷಿಯಡಿಗೆ ಮಣಿದು ಮುನಿ |
ಪೋತ್ತಮನೆ ಶಾಪಮಂ ಮಾಣಿಸೆನೆ ನೀನಿಂತಿ |
ರುತ್ತಾರ್ಗೆಯುಂ ಸಾಧ್ಯಮಲ್ಲದಿರಲ್[5] ಶಿವನಿಂದೆ ಮುಕ್ತನಹೆ ಪೋಗೆಂದನು || ೩ ||

---

೧ ರೆ (ಫ.) ೨ ತ್ರಿ (ಶಿ.) ೩ ನಿರುತ ಸುರ (ಮ.) ; ಪರಮ ಶ್ರೀ (ಹು.) ; ನಿರುತಸತ್ (ಶಿ.) ೪ ನುತಿಗೆಯ್ವೆನು (ಮ.) ; ನುತಿಯಿಸುವೆನು (ಹು.) ೫ ರೆ (ಹು.)

ಬಡವನೆ ಮುನಿ ಶಾಪವಿತ್ತ ಮಾತ್ರದೊಳಾಗ |
ಳಡಗಿತೇರಿದ ವಿಮಾನಂ ಸವಿಾಪದೊಳಿರ್ದ |
ಮಡದಿಯೇನಾದಳೋ ಶಿವಶಿವ ಮಹಾದ್ಭುತಾಕೃತಿಯ ಗಜರೂಪಕವನು ||
ಪಡೆದನಾ ಕ್ಷಣದೊಳಾತನ ಕಾಳರೂಪಮಾ |
ದೊಡಲ ಪೆರ್ಮೆಯನದಂತಿಂತೆಂದು[1] ನಿಶ್ಚಯಿಸಿ |
ನುಡಿಯಲಳವೇ ಭಗಣಪಂಕ್ತಿಯುರ[2]ಗೆಜ್ಜೆವೋಲ್ ಕಂಗೆಸೆದುವೆಸೆಂಬೆನು || ೪ ||

ಪುಷ್ಕರವನುರೆ[3]ನೀಡಿ ಬರ[4]ತೆಗೆಯೆ ಸಾಗರಜ |
ತುಷ್ಕ[5]ದ ಜಲಂ[5] ಸುರ್ರನೇರುವುದು ಹಸ್ತಮಂ |
ಪುಷ್ಕರಕ್ಕೆತ್ತಿಯುಸಿರಂ ಬಿಡಲ್ ಬ್ರಹ್ಮಾಸನಾಂಬುಜಂ ಕಂಪಿಸುವುದು ||
ಪುಷ್ಕರಾಪ್ತೇಂದುಬಿಂಬಂಗಳಂ ತದ್ಗಜದ |
ನಿಷ್ಕಂಳಂಕಿನ ಘಂಟೆಯಾದುವೆಡೆಯಾಟದಿಂ |
ಪುಷ್ಕರಭವಾಂಡಮೊಲೆದಾಡುತಿರ್ದುದು ಪೇಳಲೇನದರ ವಿಸ್ಮಯವನು || ೫ ||

ಪಾದಂಗಳವನಿಮಂಡಲಕೆ ಬಹುದುಃಖಸಂ |
ಪಾದಂಗಳುಚ್ಚಬೃಂಹಿತನಾದಮುಮರಪ್ರ |
ಮಾದಮುನ್ನತಕರಂ ಭೀಕರಂ ದಂತಂಗ[6]ಳಖಿಳಲೋಕಾಂತಂಗಳು[6] ||
ಆದುವಾ ಪುಷ್ಕರಂ ದುಷ್ಕರಂ ಮಿಗೆ ದೊಡ್ಡಿ |
ತಾದ ಕುಂಭಸ್ಥಳಂ ಭೀಕರಸ್ಥಳಿ[7]ಮೆನ |
ಲ್ಕಾ ದುಷ್ಟಗಜದದ್ಭುತಾಕೃತಿಯ ಬಣ್ಣಿಸುವೊಡಹಿಪತಿಗೆ ಸಾಧ್ಯಮಲ್ತು || ೬ ||

ಕೊಳದಂತೆ ಪುಷ್ಕರೋದ್ಭಾಸಿತಂ ಸದ್ವಿಪ್ರ |
ಕುಲದಂತೆ ದಾನಧಾರಾಗ್ರಾಹಿ ವಿಮಲ[8]ಕುರು |
ಬಲದಂತೆ ಗುರುಕರ್ಣವಾತಜವಿಭೀಕರಂ ಹಿಮಕಿರಣಬಿಂಬದಂತೆ ||
ಕಲಿತಕರರಾಜಿತಂ ಸಲೆ ವಾಸುದೇವನೊಲ್ |
ಬಲಯುತಂ ತಾನೆನಿಸಿ ಸಂತತಂ ಗುರುತರದ |
ಕಲಿಗಜಾಸುರನದ್ಭುತಾಕೃತಿ ಜಗತ್ರಯಕೆ ಬೀರಿದುದು ವಿಸ್ಮಯವನು || ೭ ||

---

೧ ದಂತೆಂತೆಂದು (ಮ, ಪು.) ೨ ಯುರಿ (ಮ, ಹು.) ೩ ನೆರೆ (ಮ.) ೪ ಪೊರ (ಮ.) ; ಪೆರೆ (ಹು.) ೫-೫ ಜಲಮುಂ (ಮ.) ೬-೬ ಳುಂ ಲೋಕಕಂಠಂಗಳು (ಮ.) ೭ ಪರ್ವತೋಪಮ (ಮ.) ೮ ವಿಪುಳ (ಶಿ.)

ಇರದೆ ನೊಂದುವ ನೋಟಮಖಿಳಜನಸರ್ಗಳ ಕಾಟ |
ಮರಿದೆನಿಸುವೆಡೆಯಾಟಮವನಿವಧುಗೆರ್ದೆಯಾಟ |
ಕರಜಾತಶೀಕರಂ ಪರಸುಭಟಭೀಕರಂ ಸುಳಿವು ಪ್ರಾಣಿ[1]ಗಳಿಗಳಿವು ||
ಸುರಿವ ಘನಮದಧಾರೆ ಸುರಜನಕ್ಕಸಿಧಾರೆ |
ಧರೆಯೊಳೆಳಲುವ[2] ಬಾಲಮುಘಟಿತದ ಕರವಾಲ |
ಮುರುಕರ್ಣಭವವಾತಮುಮರತತಿ ಭಯು[3]ಜಾತಮೆನೆ ಗಜಾಸುರನೆಸೆದನು || ೮ ||

ನೋಡಲಮ್ಮುವರಿಲ್ಲ ಕರಿಯೊಡನೆ ನಿಂದು ಪೊ |
ಯ್ದಾಡಲಮ್ಮುವರಿಲ್ಲ ತದ್ದುಷ್ಟನಲೆಗೆ ಮಾ |
ತಾಡಲಮ್ಮುವರಿಲ್ಲ ಸ್ವರ್ಗಮರ್ತ್ಯಾದಿ[4] ಲೋಕಾದಿಲೋಕಂಗಳೊಳಗೆ ||
ಕೋಡದವ[5]ರಿಲ್ಲ ಮಾರಾಂತು ನಿಜತನುವನೀ |
ಡಾಡದವರಿಲ್ಲ ಸರ್ವಸ್ವಮಂ ಬಿಟ್ಟು ಕೆ |
ಟ್ಟೋಡದವರಿಲ್ಲ ವಿಕ್ರಮದ ಸಿರಿಯಂ ಬಣ್ಣಿಸಲ್ಕರಿದು ಕರಿದನುಜನ || ೯ ||

ನಿಗ್ಗವದೊಳೀಡಿರಿಯೆ ಕುಲಪರ್ವತಂಗಳುಂ |
ನುಗ್ಗುನುಸಿಯುಪ್ಪುವು ಕರೋದ್ಧೂತ ವಾತದಿಂ |
ಸಗ್ಗ ಮೊದಲಾದ ಮೇಲಣ ಲೋಕವಿತತಿಯುಂ ಮಾಲೆಗಳ ಚೆಂಡಿನಂತೆ ||
ಒಗ್ಗಿನಿಂದುತ್ಪತನಪಾತತೆಯುಲಿದುರ್ವಿದ[6] |
ರಗ್ಗಳಿಸುತನವನಾರ್ ಪೇಳ್ವಪರ್ ಮೂಜಗಂ |
ನೆಗ್ಗಳದ ಭಯರಸದೊಳೋಲಾಡುತಿರ್ದುದದನೇನೆಂಬೆನಚ್ಚರಿಯನು || ೧೦ ||

ಗರ್ಜನೆಯು ದನಿ[7]ಗೆಯುನ್ನ[8]ಪ್ರಾಣಿಸಂಕುಲಂ |
ನಿರ್ಜೀವಮಾಯ್ತು ಪಾದಪ್ರಹಾರಂಗಳಿಂ |
ಗುರ್ಜುಗೊಂಡಂ ಫಣಿಪ ನಗ್ಗಿದುವು ದಿಗ್ಗಜಂ[9] ಜರ್ಜುದುದು ಕಚ್ಛಪಾಂಗಂ ||
ನಿರ್ಜರಪುರಂ ಸರಕುಡಿಗೆದುಳಿದ ಲೋಕತತಿ |
ವರ್ಜಿತಸಮಸ್ತಜನಮಾಯ್ತು ಕಟ ಧರೆಯೊಳಿದ |
ನಾರ್ಜಯಿಸಿದಪರೆಂದು ಮೂಜಗಂ ತಲ್ಲಣಿಸುತಿರ್ದುದದನೇನೆಂಬೆನು || ೧೧ ||

---

೧ ಪ್ರಾಣಿ (ಮ.) ೨ ಳೆಳೆಯುವ (ಮ.) ೩ ಭುಜ (ಶಿ.) ೪ ಮರ್ತ್ಯಾದಿ (ಶಿ.)
೫ ಕಾದುವವ (ಶಿ.) ೬ ನೆಪ್ಪಳದ (ಶಿ.) ; ನಿರ್ದುಪದ (ಗೋ.) ೭ ಧ್ವನಿ (ಶಿ.)
೮ ವನ್ಯ (ಶಿ.) ೯ ದಿಗ್ದಂತಿ (ಮು.)

ಭಗ್ನಮಾಯ್ತುಡ[1]ಕಿಲ್ಜಗದ್ವ್ರಜಂ[1] ಬಹುಭೀತಿ |
ಲಗ್ನ[2]ಮಾಯ್ತಲ್ಲಿಯ ಜನಂಗಳ್ಗೆ ಸುರಪಾಲ |
ಕಾಗ್ನಿ[2] ಯಮ ನಿರುತಿ ವರುಣಾನಿಲ ಕುಬೇರ ಹರರೇನಾದರೋ ಭರದೊಳು ||
ದಿಗ್ನಾಗವಿತತಿ ಗೋಣ್ ಕುಸಿದು ನಸಿದುದಕದೊಳ್ |
ಮಗ್ನವಾದುವು ಗಜದ ಶೌರ್ಯಮಂ ಬಣ್ಣಿಪೊಡೆ |
ವಾಗ್ನಾಗರಾಜರ್ಗಗೋಚರಮದೇನೆಂಬೆನದರದ್ಭುತಾಕೃತಿಯನು || ೧೨ ||

ಆಕಸ್ಮಿಕದೊಳಾದ ದುಷ್ಟಗಜವಕಟಕಟ |
ಲೋಕಂಗಳಂ ತಿಂದು ತೇಗುತಿದೆ ಶಿವಶಿವ ಪಿ |
ನಾಕಿಯೇನಾದನೋ ಹರಿಯೆತ್ತ ಪೋದನೋ ಬೊಮ್ಮಂಗದೇನಾದುದೋ ||
ಲೋಕಕರ್ತೃಗಳೆಂಬ ಮಾತುಗಳ್ ತಮಗಿನ್ನ |
ದೇಕೆ ಸಾಕೆನುತೆ ನಾನಾಜನಂ ಭೀತಿಯಿಂ |
ವ್ಯಾಕುಲಾಂತಃಕರಣರಾಗಿ ಚಿಂತಿಸುತಿರ್ದುದೇನೆಂಬೆನಚ್ಚರಿಯನು || ೧೩ ||

ದುರುಳನೆನಿಸುವ ಗಜಾಸುರನಲೆಗೆ ಕಂಗೆಟ್ಟು |
ಸುರಪಮುಖ್ಯಾಮರಕದಂಬಕಂ ಬಂದು ಪಂ |
ಕರುಹಭವಕಮಲಾಂಬಕರ್ಗೆ ದೂರಲ್ಕವರ್ ನಿಜಸೇನೆವೆರಸಿಬಂದು ||
ಕರಿಯೊಡನನಂತಕಾಲಂ ಕಾದಿ ಗೆಲ್ವ ಬಗೆ |
ಯರಿದಾಗಿ ಸೈನ್ಯಮಂ ನೀಗಿ ಕಡುನೊಂದು ಶಂ |
ಕರನೆಡೆಗೆ ಸರ್ವರುಂ ಬಂದು ಬಿನ್ನವಿಸಿದರ್ ನಿಟಿಲತಟಹಸ್ತರಾಗಿ || ೧೪ ||

ಆಲಿಸು ಮಹಾದೇವ ಖಳಗಜಾಸುರನೆಂಬ |
ಕಾಳರಕ್ಕಸನಿರದೆ ಪೆರ್ಚಿಯೆಮ್ಮೆಲ್ಲರಂ |
ಕಾಳೆಗದೊಳೋಡಿಸಿ ಸಮಸ್ತಲೋಕಂಗಳಂ ಸಂಹರಿಪನೆಂದೆನಲ್ಕೆ ||
ಕೇಳಿ ಕರುಣದೊಳಂಜಬೇಡೆಂದು ಸಂತಯಿಸಿ |
ಭಾಳಾಂಬಕಂ ವೃಷೇಂದ್ರನನೇರಿ ಸಕಲಗಣ |
ಜಾಲಮೊಡನೈತರಲ್ ಕೈಲಾಸಗಿರಿಯಿಂದೆ ಪೊರಮಟ್ಟನಾ ಕ್ಷಣದೊಳು || ೧೫ ||

೧-೧ ಕಲಂದದಿ ಜಗಂ (ಮ.) ೨-೨ ಮಯಮಾಯ್ತಲ್ಲಿಯಾ ಜನಂಗಳ್ಗೆ ಸುರ | ಪಾಗ್ನಿ (ಶಿ.)
೩ ಪ್ರ (ಶಿ.) ೪ ಸಹಿತ (ಶಿ.)

ಹರಿಯು ವಾಪಿಸಿಯಜನ ಸ್ವೈಸಿಕಂ ಸುರಕುಲೇ |
ಶ್ವರನ ಚತುರಂಗಮಾಶಾವರರ ಸೇನಾಬ್ಧಿ |
ಗರುಡ ಗಂಧರ್ವ ಕಿನ್ನರ ಯಕ್ಷ ರಾಕ್ಷಸರ ಘನತರಬಲಾಂಬುಧಿಗಳು ||
ವರಭೂತಗಣ ರುದ್ರಗಣಕುಲದ ಪಡೆಗಳ |
ಚ್ಚರಿಯಿಂದೆ ಶಂಕರನ ಹಿಂದು ಮುಂದೆಡಬಲದೊ |
ಳಿರದೆ ಬರುತಿರ್ದುವು ಗಜಾಸುರನ ಹವಣೇ ಮಹಾಪ್ರಳಯಮಪ್ಪುದೆನಲು || ೧೬ ||

ಆನೆಗಳ್ಗೆಣಿಕೆಯೇ ಭಾರದಿಂ ಭೂತಳಕೆ |
ಜೇನೆ ಮುಸಗಿತು ಕುದುರೆಗಳ್ಗದೇಂ ಗಣನೆಯೇ |
ನಾನಾದಿಗಂತಮಂ ತುಂಬಿದುವು ತೇರ್ಗೆ ತಾನವಧಿಯೇ ಧರೆಯನಾಂತ ||
ಆನೆಗಳ್ ಭರಕೆ ಕೊಂಬೂರಿದುವು ಸುಭಟಪ್ರ |
ತಾನಕ್ಕೆ ಗಡಿಯೆ[1] ಪದರಜದಿಂದೆ ಪಿರಿದೆನಿಪ |
ಬಾನೆಡೆಯನೆಲ್ಲಮಂ ತುಂಬಿದುವು ಶಿವಶಿವಾ ಪೇಳಲೇಂ ವಿಸ್ಮಯವನು || ೧೭ ||

ಜೇರಿ ಬೇರತುಳಬಲನಿವಹದೊಳ್ ನಿರ್ಭರದೆ |
ಚೀರುತಿಹ ಕಾಳೆಗಳ ಪೊಡೆವ ಭೇರಿಧ್ವನಿಗೆ |
ಗಾರಾಯ್ತು ಪಂಕಜಭವಾಂಡಮಾಲಿಸಿದಂ ಗಜಾಸುರಂ ತದ್ಧ್ವನಿಯನು ||
ಮೂರುಲೋಕಂ ನಡಗುವಂತೆ ಪೆರ್ದನಿಯಿಂದೆ |
ಕೀರಿ[2] ಶುಂಡಾಗ್ರದಿಂ ಧರೆಯನಪ್ಪಳಿಸುತ್ತೆ |
ಮೀರಿ ನಡೆದಂ ಹರನ[3] ಸೇನಾಸಮುದ್ರಕಿದಿರಾಗಿ ಖಳನದಟನಿಂದೆ || ೧೮ ||

ನೀಲಾದ್ರಿ ಬೇಗದಿಂದಿರದೆ ಘನತರದ ಕೈ |
ಕಾಲಾಂತು ಬಂದಪುದೊ ಶಿವಶಿವಾ ಸಂವರ್ತ |
ಕಾಲದ ಮಹಾಂಧಕಾರಂ ಗಜಾಕೃತಿಯಾಗಿ ಬರ್ಪುದೋ ಪೇಳೆನಲ್ಕೆ ||
ಶೂಲಿಯ ಬಲಾಂಬುಧಿಯ ಮುಂಗಡೆಯ ಸಕಲಸುರ |
ಜಾಲದೆರ್ದೆಯೊಡೆಯೆ ಬೃಂಹಿತರವಂಗೆಯ್ಯುತೆ ಕ |
ರಾಳಘೋಷಶ್ವಾಸಕಂಪಿತಜಗತ್ತ್ರಯಂ ಬರುತಿರ್ದನದ್ಭುತದೊಳು || ೧೯ ||

---

೧ ಕಡೆಯೆ (ಮ.) ೨ ಚೀರಿ (ಶಿ.) ೩ ಶಿವನ (ಗೋ.)

ದಾರಿಯೊಳಗಿದಿರಾಂತ[1] ಘನತರದ ಪರ್ವತದ |
ಬೇರನುಗಿದೆತ್ತುತೆ ಕರಾಗ್ರದಿಂದೊಡ್ಡಿದ[2] ಮ |
ಹೀರುಹಂಗಳನಿರದೆ ಮುರಿದು ಗಗನಾಂಗಣಕೆ ಸಾಲಿಡುತೆ ಗಂಡುಶಿಲೆಯಂ ||
ಓರಂತೆ ಪಿಡಿದು ದೆಸೆದೆಸೆಗೆ ಬೀರುತೆ ಗಜರಿ |
ಭೋರಿಡುತೆ ಧೂಳ್ಗಳಂ ಮೊಗೆಮೊಗೆದು ಚೆಲ್ಲುತೆ ಮ |
ಹಾರಣಾರಂಭಲಂಪಟಸುರರ ಸರಿಸದೊಳ್ ಮುಳುಗಿದಂ ಖಳರಾಜನು || ೨೦ ||

ಇರದೆ ಹಸ್ತಾಗ್ರದಿಂ ತೆಗೆದಿಡುವ ಗುಂಡುಗಳ್ |
ಪರಿಕಿಸ[3]ಲ್ ವಾರಿಕಲ್ ಕಣ್ಗಳೇ ಮಿಂಚುಗಳ್ |
ಗುರುತರಮಹಾದಂತಯುಗಳವೆ ಸಿಡಿಲ್ಗಳಾ[3] ಸೀಕರವೆ ತುಂತುರ್ಗಳು[4] ||
ಸುರಿವ ಮದಧಾರೆಗಳ್ ಮಳೆ ಕರ್ಣತಾಳಭವ |
ಮರುತಂ ಪ್ರಚಂಡಪ್ರಭಂಜನನೆನಲ್ ದುಷ್ಟ |
ಕರಿ ವಿಲಯಕಾಲ[5]ದ ಮಹಾಮೇಘದಂತೆ[5] ಗರ್ಜಿಸುತೆ ನಡೆತರುತಿರ್ದನು || ೨೧ ||

ಎಲೆಲೆ ಲೋಕಂಗಳಂ ತಿಂದು ತೇಗಿದ ಮಹಾ |
ಕಲಿ ಗಜಾಸುರನೀತನೇ ಮಹಾದೇವ ಹೊ |
ಕ್ಕಳಿಯದಿರಿ ಪಂದೆಗಳ್ ಪಿಂದಿರುಗಿ ಸುಭಟರಂಜದೆ ಮುಂದುವರಿವುದೆನುತೆ ||
ಜಲಜಭವಹರಿಸುರೇಂದ್ರಾದಿಗಳ್ ತಮ್ಮ ನಿಜ |
ಬಲವೆರಸಿ ಮುತ್ತಿದರ್ ಖಾತಿಯಿಂ ವಡಬನಂ |
ಜಲಧಿಯ ಜಲಂ ಮುತ್ತುವಂತೆ ಕೋಳಾಹಳದೊಳೇನೆಂಬೆನಚ್ಚರಿಯನು || ೨೨ ||

ಒಂದು ದಿಕ್ಕಿನೊಳಸಿ ಮುಸುಂಡಿಗಳ ತಿವಿಗಳ[6] |
ತ್ತೊಂದು ದೆಸೆಯೊಳ್ ಸಬಳ[7]ಗದೆಗಳ ಪೊಯಿಲ್ ಮೇಣ[7] |
ದೊಂದು ದೆಸೆಯೊಳ್ ಪರಶುಗಳ ಕಡಿತಮೊಂದು ದೆಸೆಯೊಳ್ ಶಿಲಾವರುಷಂಗಳು ||
ಹಿಂದುಮುಂದೆಡಬಲದೊಳೆಲ್ಲಯುಂ ಬಾಣಂಗ |
ಳಿಂದೆ ಮುಸುಕುತೆ ಭಟರ್ ಬೊಬ್ಬಿರಿದರಾಗ ಕ |
ಣ್ಗಿಂದವಾದುದು ಗಜಂ ಬೆತ್ತಗಳ್ ಬೆಳೆದದ್ರಿಯಂತೆ ಘನ ಸಂಗರದೊಳು || ೨೩ ||

---

೧ ರಾಪ (ಮ, ಕ.) ೨ ಲೆ (ಮ, ಕ.) ೩-೩ ಲ್ವಾರಿಕಲ್ ಕಂಗಳೇ ಮಿಂಚು ಗುರು | ತರ ಮಹಾದಂತಯುಗಮೆ ಸಿಡಿಲ್ಗಳಾಗೆ (ಮ.) ೪ ತುಂತುರ್ವನಿಗಳು (ಮ.) ೫-೫ ಮೇಘದ ತಂಪದಂತೆ (ಶಿ.) ೬ ತಿವಿತನು (ಮ.) ೭-೭ ಗದೆಯ ಪೊಯ್ಲಿಮ್ಮೇಣ್ಮುಂದ (ಶಿ.)

ಚಿತ್ರಮಾಸ್ತ್ರಿಲೆ ಸಿದ್ಧರಾಮು ನೋಡಲ್ ನಿಮಿಷ |
ಮಾತ್ರದೊಳ್ ಮುತ್ತಿದ ಭಟಗಳಂ ಮುರಿದು ಶತ |
ಪತ್ರಂಗಗಳಂ ಚಿಗುಳಿದುಳಿದು ಗಜರಾಜಿಯಂ ದಿಂಡುರುಳ್ಚಿಸಿ ತೇರ್ಗಳಂ ||
ಛತ್ರ ಚಮರಾಳಿಗಳ್ವೆರಸಿ ನಿಟ್ಟೊರಸಿ ಶತ |
ಪತ್ರಭವ ಹರಿ ಸುರೇಂದ್ರರ ಭರದೊಳಂ ಜೀವ |
ಮಾತ್ರಮುಳಿಸುವ ಹಾಗೆ ಸವರಿದುದು ಸುಭಟರಂ ಮತ್ತಗಜವೇನೆಂಬೆನು || ೨೪ ||

ಮುರಳಿ ಕವಿದುದು ಸೇನೆ ಮಂಜು ಬಲ್ಬೆಟ್ಟಮಂ |
ಪರಿವೆಸ್ಥಿಸಂದದಿಂ ಶಾತ್ರಶರದಿಂದೊಡ |
ಶರಧಿಯುಂ ಕವಿಸಿದರ್ ತಿವಿಸಿದರ್ ಮುದ್ಗರ ಕಠಾರಿ ಶೂಲಂಗಳಿಂದೆ ||
ಭರಿಕೆಯೊತ್ತಳಡಸಿ ಕುದುರೆಯ ಹಿಂಡುಹಿಂಡನಿ |
ಟ್ಟೊರಿಸಿ ತೇರ್ಗಳ ಮುಚ್ಚುಮುರಿದು ಸಾಡಿಯಾನೆಗಳ |
ನಿರದೆ ತಿವಿತಿವಿದು ಹೊಡೆಚೆಂಡಾಡುತಿರ್ದಂ ಗಜಾಸುರಂ ಸಂಗರದೊಳು || ೨೫ ||

ಇರದಿರಿಯೆ ಕಣ್ಗೆಟ್ಟು ತಳ್ಗುವರ್ ಮುಳ್ಗುವರ್ |
ಭರಿಕ್ಕೆಯುಪೆಟ್ಟಿನಿಂದಳ್ಕುವರ್ ಬಳ್ಕುವರ್ |
ಚರಣಂಗಳಿಂದರೆಯಿಸಿ ಸುಕ್ಕುವರ್ ಕಕ್ಕುವರ್ ಮೂಗಿನಿಂ ಶೋಣಿತವನು ||
ಭರದೆ ಜೆಂಬತ್ತಿ ಬಿಟ್ಟೋಡುವರ್ ಕೊಡುವರ್ |
ಮರಗೊಂಬಿನಿಂ ಬಡಿಯುಲಡಗುವರ್ ನಡುಗುವರ್ |
ಕರಿಯಿಂತು ಸದೆದುದು ನಿಘಾತಿಯಿಂ ಖಾತಿಯಿಂ ಮುತ್ತಿದ ಭಟವ್ರಜವನು
|| ೨೬ ||

ಹರಿ ಕೆರಳ್ದಂ ಮುಳಿದನಬ್ಜಜಂ ರೋಷಮಂ |
ಧರಿಸಿದಂ ದೇವೇಂದ್ರನಾಶಾಧಿಪರ್ ಕೋಪ |
ಭರಿತಮಾನಸರಾದರುಬ್ಬಿದ ರಾ ಗರುಡ ಗಂಧರ್ವಬಲದ ಭಟರು ||
ನಿರುತ್ತಮಾ ಕಣೆಯುದೊಳ್ ಕಲಿ ಗಜಾಸುರನುರವ |
ನಿರಡುತ್ತುಂಡಾಗಿ ಸಿಳದೊಡೆಕೆ ಕೈಗಳೊಳ್ |
ಧರಿಸಿದಾಯುಧಮೊಂದು ಮುತ್ತಿದರ್ ಪಟುಭಟರ್ ಪೇಳಲೇನಚ್ಚರಿಯನು || ೨೭ ||

೧-೧ ಕಿಂಬಂತೆ ಹು (ಹು, ಶಿ.) ೨-೨ ಮುದ್ಗರ ಕಠಾರ ಕಕ್ಕಡೆ ಪರಶು ಶೂಲಂಗಳಿಂ (ಶಿ.); ಮುದ್ಗರ ಕಠಾರಿ ಮುಸಲ ತ್ರಿಶೂಲಂಗಳಿಂದೆ (ಹು.) ೩ ಗುದುಸಿ (ಶಿ.) ೪ ದಳಿಯಿ (ಪ.); ಜಳಿಯಿ (ಶಿ.) ೫ ಸುಭಟ (ಶಿ.)

ವೀರರಿಂತೊಂದೊಂದು ದೆಸೆಗಳೊಳ್ ಮುತ್ತಿ ಪ್ರ |
ಹಾರಿಸಿದರೆನಿತಸ್ತ್ರಮುಂಟನಿತರಿಂದೆ ಗಂ |
ಭೀರಭೇರಿಗಳ ಚಂಬಕ ಢಕ್ಕೆ ಹೌಡೆಗಳ ನಿಸ್ಸಾಳದಾರ್ಭಟೆಯೊಳು ||
ವಾರಿಜಭವಾಂಡಮುಳವಳಿಯೆ ಮೂಜಗದ ಸಂ |
ಹಾರಕಾಲವೊ ಮಹಾದೇವ ಸೋಜಿಗವೆನಲ್ |
ವಾರಣಾಸುರನನಿರಿದರ್ ಭಟರ್ ತಮತಮಗೆ ಪೇಳಲೇಂ ವಿಸ್ಮಯವನು || ೨೮ ||

ಸುರಪಾಗ್ನಿ ಯಮ ನಿರುತಿ ವರುಣ ವಾಯು ಕುಬೇರ |
ಹರರೆಂಬ ಸಕಲದಿಕ್ಪಾಲಕರ ಬೆನ್ನಟ್ಟಿ |
ಚರಣಂಗಳಂ ಪಿಡಿದು ತತ್ತದ್ದಿಗಂತಕೆ ಚಾಡಿದುದು ಮಿಕ್ಕಮರರಂ ||
ಕರಜಾತವಾಯುವಿಂ ದಿವಕೆ ತೂರಿದುದು ಪಂ |
ಕರುಹಭವನಂ ತುಡುಕಿ ಸತ್ಯಲೋಕದೊಳೆ ಸುಖ |
ಮಿರು ನೀನೆನುತ್ತೆ ಬೀರಿದುದಿದೇಂ ಶಿಕ್ಷಾಸಮರ್ಥನೋ ಮೂಜಗದೊಳು || ೨೯ ||

ಕುದುರೆ ಬರುದೊರೆಯಾಯ್ತು ಕರಿಯು ಹಿಂಡಡಗಿದುದು |
ತ್ರಿದಶರುರೆ[1] ದಿಕ್ಕಿಗೊಬ್ಬೊಬ್ಬರಾದರ್ ವೀರ |
ರದಟು ಕೊಳ್ಳದು ಮುಸ್ಕುರೆ ಪೂತೆಸುತೆ ಪುಂಖಾನುಪುಂಖದಿಂ ಕಣೆಗರೆವುತೆ ||
ಮದನಪಿತನೆಸೆವ ಕಾಂಚನರಥದೊಳಡ್ಡೈಸೆ |
ಬಿದುಗೆರಪ ರಾಹುವಿನ ಮಾಳ್ಕೆಯಿಂ ರಥದ ಬಳಿ |
ಗೊದಗಿ ಪಿಡಿದಪ್ಪಳಿಸೆ ಕೆಲಸಿಡಿದು ಮಾಧವಂ ಗದೆಗೊಂಡು ಬೊಬ್ಬಿರಿದನು || ೩೦ ||

ಹರಿ ಬಳಿಕ ಸಿಂಹನಾದಂಗೈದು ಗದೆಯಿಂದೆ |
ಕರಿಯ ಮಸ್ತಕವನಪ್ಪಳಿಸಲಾ ಘಾಯಮಂ |
ಸರಕುಮಾಡದೆ ಮರಿದು ಬೆನ್ನಟ್ಟಿ ಕೆಲವಡಿಯೊಳಾತನಂ ತುಡುಕಿ ಪಿಡಿಯೆ ||
ಸರಸಿಜಾಕ್ಷಂ ಜುಣುಗಿಯುರದೊಳಂಡಿಸಿ ನಿಂದು |
ಭರದಿ ಬೊಬ್ಬಿರಿಯುಲಾಲಿಸುತೆ ಕೆಲವೆಡೆಗಳಂ |
ಪರಿವುತ್ತೆ[2] ನಿಲುತೆ ಮೊರೆವುತೆ[3] ಸರೋಜಾಂಬಕನ ಸುಳಿವನಾಲಿಸುತಿರ್ದುದು
|| ೩೧ ||

೧ ರೀ (ಹು, ಪ.) ೨ ವುತಂ (ಶಿ.) ೩ ಮೊಲೆ (ಮ.)

ಸುರಗರ್ವಮಾ ವಿಧಿಯಾಯ್ತು ಪಂಕರುಹಸಂಭವಂ |
ಕರಿಯಿಟ್ಟದೇ ಪುಣ್ಯವಾಗಿ ಪೋದಂ ರಮಾ |
ವರನಿವರ ಮಧ್ಯದೊಳ್ ಸಿಕ್ಕಿದಂ ಕೆಟ್ಟೆವೆನುತಖಿಲಲೋಕದ ಜನರ್ಗಳು ||
ಹರನ ಮೊರೆಹೊಕ್ಕು ಮೊರೆಯಿಡೆ ಕರುಣದಿಂ ಮಹೇ |
ಶ್ವರನಾ ಪಿನಾಕಮಂ ಕೊಂಡು ಜೇವೊಡೆದು ನಿ |
ಷ್ಠುರಬಾಣಮಂ ಪೂಡಿ ನೋಡಿದಂ ಕರುಣಾಕಟಾಕ್ಷದಿಂ ಖಗಪತಿಯನು || ೩೨ ||

ನೋಡಿ ದಿವ್ಯಾಸ್ತ್ರದಿಂದೆಸೆಯೆ ಗಜಮಸ್ತಕಂ |
ಕೂಡೆ ಪರಿದುದು ಮುಂಡಮಿಳೆಯೊಳ್ ಡಿಗೆಡೆದುದಿದ |
ನೋಡಿ ಸಂತೋಷಸುಧಾಸಾಗರದೊಳದ್ದಿದುದು ಜಗಜ್ಜನಂ ತತ್ಕ್ಷಣದೊಳು ||
ಮಾಡಿದುತ್ಸವದಿಂದೆ ಗಂಧರ್ವಪತಿ ಚಂದ್ರ |
ಚೂಡನ ಪದಂಗಳ್ಗೆ ನಮಿಸಿ ಮತ್ತಂ ಪಿನಾಕ್ |
ನಾಡೆ ನೀನೊಂದು ಕುರುಹಂ ಧರಿಸಬೇಕೆಂದು ನುತಿಸಿದಂ[1] ಭಕ್ತಿಯಿಂದೆ || ೩೩ ||

ಕರಿಚರ್ಮಮಂ ತೆಗದು ಪೊದ್ದು[3] ಗಂಧರ್ವನಂ |
ಕರೆದು ಗಣಪದವಿಯಂ ಕೊಟ್ಟು ದಿವಕಳ್ಳಂ |
ಕರುಣದಿಂ ಸಂತಯಿಸಿ ಗಜಮಸ್ತಕವನಾಂತು ಲೀಲೆಯಿಂದಂ ನಟಿಸುತೆ ||
ಹರುಷದಿಂ ಕೈಲಾಸದರಮನೆಗೆ ನಡೆತರಲ್ |
ಗಿರಿಸುತೆಯ ಮೈದೊಗಲಿನಿಂದಾದ ನಂದನಂ |
ಹರನ ತಡೆಯಲ್ ಖಡ್ಗದಿಂದೆ ತಲೆಯರಿದು ಸಭಕಿಟ್ಟ ಶಿವನೊಳಪೊಕ್ಕನು || ೩೪ ||

ಸುತನಳಿದ ಸುದ್ದಿಯಂ ಕೇಳ್ದು ಕಡುನೊಂದು ಗಿರಿ |
ಸುತೆ ಹರನ ಕೂಡೆ ಮರಸಿದಿರೆ ದೇವಿ ನಿನ್ನ ನಿಜ[4] |
ಸುತಶಿರವ ನೋಡು ಜಾರಿಸುತ ಕರತಂದಾ ಗಜಾಸುರನ ಮಸ್ತಕವನು ||
ಅತಿವೇಗದಿಂ ಮುಂಡಕೊಂದಿಸಲ್ ಪ್ರಾಣಮಾ |
ರುತನೈದೆ ತೀವಿದದು ತದ್ರೂಪಮಂ ಕಂಡು |
ಸುತೋತ್ತರ ಚಿನ್ಮಯಾನನೆಸರಾದ ಗಣಪತಿಗೆ ಪರಮೇಶನಿಂತೆಂದನು || ೩೫ ||

೧ ಖಚ್ (ಪ.) ೨ ನುತಿಸಿದಂ (ಮ.) ೩ ಪೊದೆದು (ಶಿ.) ೪ ನಿನ್ನಯಾ (ಶಿ.)

ರೂಪಿದು ವಿಕಾರವಾಯ್ತೆಂದು ಗಿರಿಜಾತೆ ಸಂ |
ತಾಪಮಂ ತಾಳ್[೧]ದಿರೆನುತ್ತಿಭಮುಖಂಗೆ ಗಾ |
ಣಾಪತ್ಯಮಂ ಕೊಟ್ಟು ನಿನ್ನ ಭಜಿಸಿದರಿಷ್ಟಮಹುದೆಂದು ವರವನಿತ್ತು ||
ಓಪಳ ಮನಕ್ಕೆ ಹರುಷಮನಿತ್ತು ತೋರ್ಪಲ |
ಶ್ರೀಪತಿ[೨]ತ್ರಿಮುಖಾ[೨]ಮರರ ಬೀಳ್ಕೊಟ್ಟು ಮುದದಿಂ ವಿ |
ರೂಪಾಕ್ಷನೊಪ್ಪಿದಂ ಕೈಲಾಸಶಿಖರದರಮನೆಯೊಳ್ ವಿಲಾಸದಿಂದೆ || ೩೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೩೭ ||

ಅಂತು ಸಂಧಿ ೨೮ಕ್ಕಂ ಪದಗಳು ೧೦೫೬ಕ್ಕಂ ಮಂಗಳಮಹಾಶ್ರೀ

---

೧ ಮಾಡ (ಹು, ಮ.) ೨-೨ ಮುಖ್ಯಾ (ಶಿ.)

ಇಪ್ಪತ್ತೊಂಬತ್ತನೆಯ ಸಂಧಿ

ಸೂಚನೆ

ಶಿವಲೋಕವಿಸ್ತಾರಮಂ ಶಿವಸ್ಥಾನಮಂ |
ಶಿವನ ರಾಜ್ಯಕ್ರಮವನೆಲ್ಲಮಂ ವಿಸ್ತರಿಸಿ
ಶಿವನ ಸುಜ್ಞಾನರೂಪಂ ಚೆನ್ನಬಸವನಾ ಸಿದ್ಧರಾಮಂಗೊರೆದನು ||

ಅಣಿಯರಿಂ ಕೈಲಾಸಮಂದಿರದೊಳೊಪ್ಪುತಿಹ |
ಮಣಿಮಯದ ಸೆಜ್ಜೆಯೊಳ್ ರತಿಗೈದು ಮಿಗೆ ತದಂ |
ಗಣದ ಲೀಲಾಸರೋವರದೊಳ್ ತೃಷಾರ್ತೆಯಂಜುಳಿಯೊಳಗೆ ಜಲಮನೆತ್ತಿ ||
ಮಣಿದು ಮಣಿದೀಕ್ಷಿಸುತ ಬಿಡುತ ಮೊಗದೀಕ್ಷಿಸು |
ತ್ತಿಣಿಕೆಗೊಳುತಿಹ ಹಿಮಗಿರೀಂದ್ರಜಾಘನಮುಗ್ಧ |
ಗುಣಕೆ ನಸುನಕ್ಕು ತಲೆವಾಗಿಸುವ ಪಂಪಾವಿರೂಪಾಕ್ಷ ಸಲಹೆಮ್ಮನು || ೧ ||

ಏಕಚಿತ್ತದೊಳಾಲಿಸೈ ರಾಮ ಬ್ರಹ್ಮಾಂಡ |
ಮೇ ಕನಕಮಯ ಶಿವಾಲಯಮದರ ತುದಿಯೆ ಮು |
ಕ್ತ್ಯಾಕಾರ ಕಲಶವಿರ್ಪಂತೆ ಶುದ್ಧಸ್ಫಟಿಕಸಂಕಾಶದಿಂದೆ ಶಿವನ ||
ಲೋಕವಿರ್ಪುದು ಸಕಲ ಬ್ರಹ್ಮಾಂಡಸತ್ಫಲಾ |
ನೀಕಕ್ಕೆ ಕಲ್ಪತರುವೆನಲಖಿಳ ವೇದಾದ್ಯ |
ನೇಕ ತರ್ಕಂಗಳ್ಗೆ[೧] ನಿಲುಕದಪ್ರತಿಮಹಾಮಹಿಮದೊಳದೇನೆಂಬೆನು || ೨ ||

ಇಂತೆಸೆವ ಶಿವಲೋಕಮಂತಧಿಕ ಪುರರೂಪ |
ಮಂ ತಳೆದು[೨] ಕೋಟಿ ಮೂವತ್ತೆರಡು ಯೋಜನಾ |
ಪರ್ಯಂತವಳಯದೊಳನಿತು ವಿಸ್ತರದೊಳತುಳ ಜ್ಯೋತಿರ್ಮಯದ ಕೋಂಟೆಯಿಂದೆ ||
ಸಂತತ ಪರಬ್ರಹ್ಮ ಪೂರ್ಣ ಸತ್ಕೋಶಗೃಹ |
ದಂತೆಂಟುಬಾಗಿಲ್ಗಳಿಂದಲ್ಲಿಗಲ್ಲಿಗೆ ಕೃ |
ತಾಂತಾಂತಕಾಕಾರದಷ್ಟಭೈರವರ ಕಾಪಿಂ ಕಂಗೆ ಚೆಲ್ವಾದುದು || ೩ ||

---

೧ ಶಾಸ್ತ್ರಂಗಳಗೆ (ಶಿ.) ೨ ತಳೆದ (ಶಿ.)

ಕನಕಾರುಣಂ ರಕ್ತ[೧]ಪೀತ ನೀಲೋದ್ರತ್ನ |
ಘನ ಹೇಮವರ್ಣ ಕಾಯಂಗಳಿಂ ಹಂಸಾಜ |
ಘನಕೌಶಿಕ ನಾಗಾರಿ[೨] ಮಹಿಷ ವಾರಣ ಕಾಕ ಗಿರಿಕವಾಹಂಗಳಿಂದೆ ||
ವಿನುತಗುಣ ಸೌತ್ರಮಂಗಿ ಚಂಡ ಕ್ರೋಧೋ[೪]ನ್ಮತ್ತ |
ನನಯ ಕಾಪಾಲಿ[೫] ಭೀಷಣ ಮಹಾಸಂಹಾರ |
ರಸಿಪ ಪೆಸರಿನ ಭೈರವರ್ ಚತುರ್ಭುಜ ತ್ರಿಣೇತ್ರಂಗಳಿಂ ಕ್ರಮತಪ್ಪದೆ || ೪ ||

ಆರಯಲ್ ಬ್ರಾಹ್ಮಿ ಮಾಹೇಶ್ವರಿ ಸಘೋರ[೬] ಕೌ |
ಮಾರಿ ವೈಷ್ಣವಿಯತುಳ ವಾರಾಹಿ ಮಾಹೇಂದ್ರಿ |
ಯೋರಂತೆ ಚಾಮುಂಡಿ ಕಾಳಿಯೆಂದೆಂಬ ಶಕ್ತಿಗಳ ಸಮ್ಮೇಳದಿಂದೆ ||
ಓರೊರ್ವ ಭೈರವರ್ಗಿಪ್ಪತ್ತು ಕೋಟಿ ಪರಿ |
ವಾರವೆಸೆಯಲ್ ಮಹಾ ವಿಭವದಿಂ ಶಿವಪುರ |
ದ್ವಾರಂಗಳೆಂಟು ಪೂರ್ವಾದಿಯಾಗಿರಲಲ್ಲಿ ಕಾದಿರ್ಪರುತ್ಸವದೊಳು || ೫ ||

ಈ ಪರಿಯೊಳೆಂಟು ಬಾಗಿಲ್ಗಳಿಂದೊಪ್ಪುತಿ |
ರ್ಪಾ ಪುರದ ಶಶಿಸೂರ್ಯವೀಥಿಗಳ್ ಲಕ್ಷಮುರೆ |
ಗೋಪು[೭]ರಂಗಳನುಳ್ಳ ವಾಟಂ[೭]ಗಳಗಣಿತಂ ಗೃಹಮಸಂಖ್ಯಾತಂಗಳು ||
ಪಾಪರಹಿತರ್ ಕೇರಿಗೊಬ್ಬೊಬ್ಬ ಗಣಪರ್ ವಿ |
ರೂಪಾಕ್ಷನಾಜ್ಞೆಯಿಂದತುಳ ಬಲವೆರಸಿ ಪ್ರ |
ತಾಪದಿಂ ಕಾದಿರ್ಪರನುದಿನಂ ತನುತಮಗೆ ಬಹಳ ಸುವಿಧಾನದಿಂದೆ || ೬ ||

ನಿಷ್ಕಾಮಿಗಳ್ ನಿಗಮಸುಪ್ರೇಮಿಗಳ್ ನಾಡೆ |
ದುಷ್ಕರ್ಮ ನಿರ್ಜಿತರ್ ಮಾಯಾಪ್ರವರ್ಜಿತರ್ |
ನಿಷ್ಕಂಪ ಚಿತ್ತರುಂ ಸತತಸತ್ಯಸತ್ತ್ರಾಣಘನಾಶರಮೃತರ್ ಶ್ರೀಶರು[೮]ಲ್ ||
ದುಷ್ಕದೂರರ್ ಸುಗುಣ ಪೂರರತಿನಿಪುಣರ್ ಶಿ |
ರಷ್ಕರೋಟೀಧರನಭಕ್ತರವ್ಯಕ್ತರುರೆ |
ಕಿಷ್ಕಿಂದಮಾಗಿರಲ್ ತತ್ಪುರಂ ಸುಕೃತಂಗಳಿಹ ಬೀಡಿನಂತೆಸೆದುದು || ೭ ||

---

೧ ಶಾರಕ್ತ (ಶಿ, ಹು, ಮ.) ೨ ನಾಗರೀ (ಪ, ಗೋ.) ೩ ರುಂ (ಹು, ಮ.)
೪ ಕೋಪೋ (ಮ.) ೫ ಸನಯುನ ಕಪಾಲ (ಶಿ.) ೬ ಸುಘೋರ (ಮ.)
೭–೭ ರಗಳುಳ್ಳ ಕವಾಟಂ (ಮ.) ೮ ಸ್ತ್ರೀಶರು (ಶಿ.)

ಗೋತ್ರಂಗಳೊಳ್ ಮೆರೆವ ಕನಕಾದ್ರಿಯಂತೆ ನ |
ಕ್ಷತ್ರಂಗಳೊಳ್ ಮೆರೆವ ಪೂರ್ಣಶಶಿಯಂತಖಿಳ |
ಚಿತ್ರಮಣಿಮಧ್ಯ ಚಿಂತಾರತ್ನದಂತೆ ಪುಣ್ಯಗ್ರಹಂಗಳ ನಡುವಣ ||
ಮಿತ್ರ ಮಂಡಲದಂತೆ ಸುಕ್ಷೇತ್ರದೊಳ್ಕಾಶಿ |
ಚೈತ್ರದಂತಖಿಳ ಗಣಗೃಹಗಳಾನಡುವೆ ಶಿಖಿ |
ನೇತ್ರನರಮನೆಯಯ್ದು ಕೋಟಿ ಯೋಜನದ ವಿಸ್ತೀರ್ಣದಿಂದೊಪ್ಪಿರ್ದುದು ||೮||

ಬಳಿಕಲಾ ಭವನಮಂ ಬಳಸಿ ಕಡು ಚೆಲ್ವಿನಿಂ |
ಥಳಥಳಿಸಿ ಪೊಳೆವ ಪಳುಕಿನ ನೀಲರೂಪದಿಂ |
ಬಳೆದು ಶಿವತತ್ತ್ವಮಿರ್ಪುದು ದಶ ಸಹಸ್ರ ಯೋಜನಮನ್ನತಿಯೊಳದಕ್ಕೆ ||
ಕಳಕಳಿಪ ರನ್ನದೆನೆ ಶತಯೋಜನಂಗಳೆಂ |
ಬಳತೆ ಭಕ್ತಿಜ್ಞಾನ ಪರಮ ವೈರಾಗ್ಯ ನಿ |
ರ್ಮಳ ಮುಕ್ತಿಗಳೆ ನಾಲ್ಕು ಬಾಗಿಲಾಗಿರಲಭವನಂತಃಪುರಂ ಮೆರೆದುದು ||೯||

ಸಿಂಗರದೊಳಾ ಸುರಪ ಯಮ ವರುಣ ಧನಪತಿ ದಿ |
ಕ್ಕಿಂಗಮರ್ದ ಕನಕ ಹರಿನೀಲ ಮೌಕ್ತಿಕ ಮಾಣಿ |
ಕಂಗಳೊಳ್ಬೆಳಗಿನಿಂ ಋಗ್ಯಜುಃ ಸಾಮವೆ ದಾಥರ್ವಣಾಖ್ಯಂಗಳೇ ||
ತುಂಗತರ ಲಕ್ಷಯೋಜನದುದ್ದದಿಂ ಗೋಪು |
ರಂಗಳಾಕೃತಿಯೊಳಿರೆ ನಂದಿಯುಂ ವೀರಭ |
ದ್ರಂ ಗಣಪ ಮಹಾಕಾಳ ನೀಲಲೋಹಿತರಲ್ಲಿ ಕಾಯ್ದು ಕೊಂಡಿರುತಿರ್ಪರು ||೧೦||

ಅಂತನಿಬರಾ ಚತುರ್ದ್ವಾರಂಗಳೊಳ್ ವೇತ್ರ |
ಪಾಂತು ಹರಿಮುಜನಮುಖ್ಯರಂ ನಿಲಿಸಿ ಮತ್ತವಾ |
ಕಾಂತ ಸೇವಂಗೊಂಡು ಪೋಗಿ ಪೊರಮಡಿಪ ವಿನಿಯೋಗಂಗಳಿಂದಿರ್ಪರು ||
ಅಂತಃಪುರಾಗ್ರಹಾಕಾರದಿಂದತುಳ ವೇ |
ದಾಂತವಿರ್ಪುದು ಮೇರೆ ಕೋಟಿಯೋಜನದಳತೆ |
ಯಿಂ ತಳೆದು ಸತ್ತ್ರಣಮನೆ ಶಿವಸಭಾಸ್ಥಳಾಕಾರವಾಗಿರುತಿರ್ಪುದು ||೧೧||

---

೧ ಪದ (ಶಿ.) ೨ ಳುದ್ದಕೆ (ಶಿ.) ೩ ದ (ಮ.) ೪ ಅಂತಃಪುರದ (ಮ.)

ಆ ಹರನ ಸಭೆಯು ಬೆಳಗಿನ ಮುಂದೆ ಕಂಗೊಳಿಪ |
ಸಾಹಸ್ರ ಕೋಟಿರವಿಗಳ ತಳಪ[1] ವದನಂಗ |
ಳೊಹಿಸಲ್ ಪಳಿಗಂಚುಗಸ್ಸ ಡಿಯೊಲಿಪ್ಪ ಸಾ ಕೃಷ್ಣರ ಮುಹಾಕಾಳಿಯು |
ದೇಹಂಗಳ್ಳೈದೆ ಪಲ್ಲಿಟಿಪುವಚ್ಚರಿಯ ಪರ |
ಮಾಹಾತ್ಮೆಯಂ ನೋಡಲಿಪಿಳ ಬ್ರಹ್ಮಾಂಡಂಗ |
ಳೀ ಸಾಲ ಕಡಲೊಳಗೆ ಪ್ರತಿಬಿಂಬಿಸುವ ಕುಕ್ಕುಟಾಂಡಂಗಳೆನಲೆಸೆದುವು ‖ ೧೨ ‖

ಈ ಪ್ರಕಾರದ ಸಭಾಮಧ್ಯದೊಳಗಭವಂಗೆ |
ಸುಪ್ರತಾಪಂಗೆ ಸುಲಭಂಗೆ ಸಂಸಾರಬಂ |
ಧ ಪ್ರವಿಧ್ವಂಸಂಗೆ ಹಂಸಂಗೆ ಲಕ್ಷಯೋಜನದ ವಿಸ್ತೀರ್ಣಮೆಸೆಯೆ[2] |
ಸುಪ್ರಭೆಯೊಳಷ್ಟ ಮಹದೈಶ್ವರ್ಯಮಂ ನೋಡ |
ಲಪ್ರತಿಮ ಚರಣಂಗಳೆಂಟೆನಿಸಿ ತೋರೆ ಮು |
ಕ್ತಿಪ್ರತಿಷ್ಠಿತ ಸಿಂಹವಿಷ್ಟರಂ ಕಣ್ಣಪುಣ್ಯದ ಬೆಳಸಿನಂತಿರ್ದುದು ‖ ೧೩ ‖

ತನ್ಮಹಾಪೀಠದ ಸುಖಾಸನದ ಮೇಲೆ ಗಿರಿ |
ಜೋನ್ಮನಃಕುಮುದಚಂದ್ರಂ ಚಂದ್ರಶೇಖರಂ |
ಸನ್ಮುನಿ ಸ್ತೋತ್ರ ಪಾತ್ರಂ ತ್ರಿಣೇತ್ರಂ ಭಕ್ತವತ್ಸಲಂ ಬ್ರಹ್ಮಾದ್ಯರ |
ಹೃನ್ಮಧ್ಯ ಶೋಭಿತಾಂಗಂ ಮಂಗಳಂ ವಿವ |
ಸ್ವನ್ಮಂಗಲಾನೀಕಕೋಟಿಪ್ರಕಾಶಂ ಜ |
ಗನ್ಮಹಾಜನನ ಸ್ಥಿತಿ ಪ್ರಳಯ ಕಾರಣ ವಿರೂಪಾಕ್ಷನೊಪ್ಪಿರ್ದನು ‖ ೧೪ ‖

ತೋಳಪೆ[1] ಮುತ್ತಿನ ಮಾಣಿಕದ ಹೊನ್ನ ನೀಲದೊ |
ಳ್ಪೀಳಗಿನಿಂ ಪಶ್ಚಿಮೋತ್ತರ ಪೂರ್ವದಕ್ಷಿಣಂ |
ಗಳೊಳೆ ಸದ್ಯೋಜಾತಮುಂ ವಾಮದೇವಮುಂ ತತ್ಪುರುಷಮೆಸೆವಘೋರಂ ‖
ಪೊಳೆವುತಿರಲವರಗ್ರದೊಳ್ ಸ್ಫಟಿಕ ವರ್ಣದಿಂ |
ತೊಳಗುವೀಶಾನ್ಯ[4] ಮುಖವಿರೆ ತನ್ಮುಖಂಗಳಂ |
ಬಳಸಿ ತನ್ನಾಮ ಪುರುಷರ್ ಪಂಚವದನದಿಂ ತನ್ಮಂತ್ರದಿಂ ನುತಿಪರು ‖ ೧೫ ‖

೧ ತೋಳಪ (ಮ.) ೨ ಸೆಸಿಸಿ (ಶಿ.) ೩ ಪೊಳೆವ (ಶಿ.) ೪ ಶಾನ (ಮ.)

ಇಂತೆಸೆವ ಪಂಚಾಸ್ಯ ಪಂಚವರಸಂಯುಸಂಗ |
ಳಿಂ ತೋರ್ಪ ದಶಭುಜ ವಿಷಗ್ರೀವ ಗಜಚರ್ಮ |
ದಿಂ ತಳೆವ ತಲೆಮಾಲೆಗಳ ಸಾಲ್ಗಳಿಂ ಚಂದ್ರಕಾಂತಮಯತೇಜದಿಂದೆ ||
ಕಂತುಭಸ್ಮೋದ್ಧೂಳಿತಾಂಗದಿಂ ಲಲಿತಫಣಿ |
ಸಂತತಿಯ ವಿಲಸಿತಾಭರಣದಿಂದೊಪ್ಪಿದನ |
ನಂತದೇವರ ದೇವನಖಿಳಸುರರಕ್ಷಂ ವಿರೂಪಾಕ್ಷನೋಲಗದೊಳು || ೧೬ ||

ಶಂಭುವಾಮಾರ್ಧಪೀಠದೊಳೊಪ್ಪಿದರ್ ದೈತ್ಯ |
ಕುಂಭಿಕುಂಭಸ್ಥಳದಳನಸಿಂಹಯಾನೆ ತ |
ತ್ರ್ಯಂಬುಧಿಗಳಧಿದೇವಿ ದೇವಾಳಿನುತೆ ಕಾಳಿ ಕಾಳಾಭ್ರತೀಬ್ರವರ್ಣೆ ||
ಜಂಭಾರಿನುತೆ ಜಗತ್ಪಾವನತೆ ದಕ್ಷಸುತೆ |
ತಾಂ ಭಕ್ತವತ್ಸಲೆ ಶಿಸುನಿಶ್ಚಲೆ ಮಹಾವಿಭವ |
ದಿಂ ಭವಾನಿ ಶ್ಯಾಮಫಣಿವೇಣಿ ಶರ್ವಾಣಿ ಶಂಕರನ ರಾಣಿಯಂದು || ೧೭ ||

ಶಕ್ತಿಸತಿಯರ ತಂಡತಂಡಂಗಳಿಂದೀಶ |
ಭಕ್ತಿಸತಿಯರ ಮೊತ್ತಮೊತ್ತಂಗಳಿಂದಂ ವಿ |
ರಕ್ತಸತಿಯರ ನೆರವಿನೆರವಿಯಿಂ ರುದ್ರಕನ್ಯೆಯರ ಸಾಲ್ಸಾಲ್ಗಳಿಂದೆ ||
ಯುಕ್ತಿಸತಿಯರ ಪಙ್ಕ್ತಿಪಙ್ಕ್ತಿಯಿಂ ದುರಿತನಿ |
ರ್ಮುಕ್ತಸತಿಯರ್ಕಳೆಕ್ಕೈಕ್ಕೆಯಿಂ ಸ್ವರ್ಗಸಂ |
ಯುಕ್ತಸತಿಯರ ಬಳಗಬಳಗಮೋಲೈಸೆ ಶಿವನರಸಿಯಿಂತೆಸೆದಿರ್ದಳು || ೧೮ ||

ನೀಲವರ್ಣರ್ ಸುಪೀತಾಂಬರಧರರ್ ಕುಂಡ |
ಲಾಲಂಕೃತರ್ ಕೋಮಲಾಂಗರ್ ಕೌಸ್ತುಭರ್ |
ಶ್ರೀಲತಾಂಗೀವಕ್ಷರುರುಶಂಖ ಗದೆ ಚಕ್ರ ಶಾರ್ಙ್ಗಸಂಯುಕ್ತವಾದ ||
ಲೋಲಚಾತುರ್ಭುಜರ್ ಮಣಿಮಯಕಿರೀಟರ್ ಮ |
ನೋಲಕ್ಷ್ಮಕಾಷ್ಠಜನಕರ್ ಸರಸಿಜಾಂಬಕರ್ |
ಪೇಳಲೇಂ ಗರುಡವಾಹನರೀಶವಾಮದೊಳ್ ವಿಷ್ಣುಕೋಟಿಗಳೆಸೆದರು || ೧೯ ||

೧ ಪಾಠ | ಶಿ, ಗೋ. | ೨-೨ ಯೋಗಿದೇವದೇವಾಳಿವಂದಿತೆ (ಪ, ಗೋ, ಹು, ಮ.)
೩-೩ ಮಹಾನಯನಿಯುತ (ಮ, ಹು.) ; ೪-೪ ಮೋಹಿಸಿ ಶಿವನರಸಿ ಗೌರಿ (ಶಿ.)

ವಾಣೀವರರ್ ಹಂಸವಾಹನರ್ ನಿಖಿಳಗೀ |
ರ್ವಾಣಜನಕರ್ ಕಮಂಡಲದಂಡಮಾಲಿಕಾ |
ಪಾಣಿಗಳ್ ಸಕಲವೇದಜ್ಞರಬುಜೋದ್ಭವರ್ ಕೋಟಿಬ್ರಹ್ಮಾಂಡಂಗಳ ||
ಪ್ರಾಣಿಗಳ ಸೃಜಿಪ ಕರ್ತರ್ ಮಹಾಪ್ರೌಢಿಕೆಯ |
ಕೇಣಿಗಾ[1]ರರ್ ಚತುರ್ವದನರೊತ್ತೊತ್ತೆಯಿಂ |
ಸ್ಥಾಣುವಿನ ಬಲದ ಕಡೆಯೊಳ್ ಬ್ರಹ್ಮಕೋಟಿಗಳ್ ಕಣ್ಗೆಸೆದರೇನೆಂಬೆನು || ೨೦ ||

ಆ ಬ್ರಹ್ಮನೊತ್ತಿಗರ್ ಭಸಿತಸಂಪತ್ತಿಗರ್ |
ತೀಬ್ರತೇಜರ್ ಜಟಾವಿಭ್ರಾಜರಖಿಳದೇ |
ವಬ್ರಾತಪೂಜಿತರ್ ಮುಕ್ತ್ಯಂಗನಾಯುತರ್ ಶಿವಜಪಿತಜಿಹ್ವಾಗ್ರರು ||
ಸುಬ್ರತಾಚಾರಕರ್ ಶ್ರುತಿಗಣವಿಚಾರಕರ್ |
ಸುಬ್ರಹ್ಮಬೋಧಕರ್ ಜ್ಞಾನಸಾಧಕರುದ್ಗ[2] |
ಣಭ್ರಾಜಕಾರಿಗಳ್ ದುರಿತಸಂಹಾರಿಗಳನಂತಮುನಿವರರೆಸೆದರು || ೨೧ ||

ಕೆಂಜೆಡೆಯನೆಳೆವೆರೆಯನಾಂತೈದುಮುಖದವರ್ |
ಕುಂಜರಾಜಿನದವರ್ ಭಸಿತಲೇಪರ್ ಪಿರಿದು |
ರಂಜಿಪ ತ್ರಿಶೂಲಾದಿಗಳನಾಂತ ದಶಭುಜದವರ್ ವೃಷಭವಾಹರ್ಕಳು ||
ನಂಜುಗೊರಳರ್ ನಾಡೆ ಪದಿನೈದುಕಣ್ಣವರ್ |
ಮಂಜುಳಸ್ಫಟಿಕತೇಜರ್ ಪ್ರಳಯಕರ್ತರ್ಗಳ್ |
ತಾಂ ಜಗತ್ಪತಿ ವಿರೂಪಾಕ್ಷನಿದಿರೊಳ್ ರುದ್ರಕೋಟಿಗಳ್ ಕಣ್ಗೆಸೆದರು || ೨೨ ||

ವರಮಹಿಮನಂದೀಶ ಭೃಂಗೀಶ ವೀರೇಶ |
ಕರಿವದನ ಸೇನಾನಿ ನೀಲಲೋಹಿತ ಮುಂಡ |
ಧರ ಮಹಾಕಾಳ ಗಜಕರ್ಣ ಘಂಟಾಕರ್ಣ ಗೋಕರ್ಣ ಶಂಕುಕರ್ಣ ||
ಸುರಗಿರಿವಿಪಾತನ ವಿರೂಪಾಕ್ಷ ನಿಶ್ಶಂಕ |
ಗರುಡಪಕ್ಷಚ್ಛೇದ ಗಗನಾಂಗ ಧೂಮಾಂಗ |
ಪರಮಕೂಷ್ಮಾಂಡರೊಬ್ಬೊಬ್ಬರಯ್ನೂರ್ಪದ್ಮಬಲವೆರಸಿ ರಂಜಿಸಿದರು || ೨೩ ||

---

೧ ಕಾ (ಶಿ, ಹು, ಮ.) ೨ ರುದ್ಗು (ಮ.)

ಸರ್ವತಾಭರಣ ವಿಕಟಾಂಗ ಭೈರವ ನಿತ್ಯ |
ಸರ್ವಸಂಹಾರ ಮಣಿಭೂಷಣ ಸಹಸ್ರಮುಖ |
ಸರ್ವಪಾತನ ಮಹಾಭದ್ರ ಘಂಟಾಕಾಲ ವಿಶ್ವತೋಮುಖ ಕರಾಳ ||
ಸರ್ವಜ್ಞ ವಿಂಧ್ಯಪಾತನ ವಿಜೃಂಭಣರೂಪ |
ಸರ್ವಕಂಪನ ಚಂಡಕೀರ್ತಿ ಕಂಕಾಳಧರ |
ಸರ್ವಾತ್ಮರೊಬ್ಬೊಬ್ಬರಿಪ್ಪತ್ತುಪದ್ಮಬಲವೆರಸಿ ಕಣ್ಗೆಸೆದಿರ್ದರು || ೨೪ ||

ಕಾಲಮರ್ದನ ವಜ್ರಕಾಯ ರುಂಡಾಭರಣ |
ಕೋಲಾಹಲೋತ್ತುಂಗ ಸಾಗರಾಪ್ರೋಶನ ಕ |
ಪಾಲಧರ ವಡಬಾಗ್ನಿ ತ್ರಿಲಕಪ್ರಚಂಡ ಬಹುವರ್ಣ ಧೂರ್ಜಟಿ ನಿಷ್ಕಳ ||
ಕಾಳಕಂಧರ ಮೇಘವಾಹನ ಮಹಾಸೇನ |
ಭಾಳಲೋಚನ ಮಹಾಕಾಯೋಗ್ರರೂಪ ಘನ |
ಕಾಳಮೇಘಾದಿ ಭಟರೊಬ್ಬೊಬ್ಬರರುವತ್ತು ಪದ್ಮಸೇನೆಯೊಳೆಸೆದರು || ೨೫ ||

ಸೋಮಪಾತನ ಸೂರ್ಯಪಾತನಂಡಾಭರಣ |
ಧೂಮಕೇತು ಸಹಸ್ರಕರ್ಣ[1] ಸಾಹಸ್ರಭುಜ |
ಕಾಮಾಂಗದಹನ ದೈತ್ಯಾಂತಕತ್ರಿಭುವನಾಂತಕ ವಿಧಿಶಿರಶ್ಛೇದನ ||
ಆ ಮಹಾದಿಗ್ವಾರಣಾಹಾರಿ ರೇಣುಕ ಮ |
ಹಾಮಹಿಮ ದಾರುಕ ಸುನಾದ ದಿಕ್ಪಾಲಹರ |
ಭೀಮಕಾಯಾದಿಗಣರಂದು ಶತಕೋಟಿಸೈನಿಕವೆರಸಿ ರಾಜಿಸಿದರು || ೨೬ ||

ನಕ್ಷತ್ರಕೃಂತನ ಮಹಾಕೇಶ ಶತಸಹ |
ಸ್ರಾಕ್ಷ ಬ್ರಹ್ಮಾಂಡಭೇದನ ವಿರೂಪಾಂಗಾರ |
ಭಕ್ಷಣ ಮಹಾದಂಷ್ಟ್ರ ಲಲಿತಾಂಗ ಪಾದಮುಖ ಮೇಘಮುಖ ವಿಶ್ವಮಾಲಿ ||
ದಕ್ಷಮರ್ದನ ವಜ್ರದಂತ ನಿಜಬಲಬ್ರಹ್ಮ |
ಭಕ್ಷಣ ಧನಂಜಯ ಮಹಾಬಾಹು ಸುಮನಸ ಮ |
ಹಾಕ್ಷೇತ್ರಪಾಲರೊಬ್ಬೊಬ್ಬರೆಪ್ಪತ್ತುಪದ್ಮಸೇನೆಯೊಡನಿರಲೆಸೆದರು || ೨೭ ||

---

೧ ಲೋ (ಶಿ.) ೨ ಕರಣ (ಶಿ.)

ದಂಡಧಾರಂ[1] ದಂಡಬಾಹುವಂತಾ ಸುಪ್ರ |
ಚಂಡಾರ್ಚಿ ದಂಡನಾಥಂ ಪ್ರಚಂಡಂ ಮಡೋ |
ದ್ದಂಡದೀರ್ಘಾನನರಿವರ್ ಬೇರೆಬೇರೆ ಹತ್ತುಬರ್ದಕ್ಕೊಡೆಯರೆನಿಸಿ ||
ಖಂಡಪರಶುವಿನದಕ್ಷಿಣ ಭಾಗದೊಳ್ ಮನಂ |
ಗೊಂಡು ಪಾಶುಪತಾಸ್ತ್ರಮೇ ದಿವ್ಯರೂಪಾಗಿ |
ಕೊಂಡಾಡುತಭವನಂ ಬೆಸನನುರೆ ಬೇಡುತಿರ್ಪುದು ಪೇಳಲೇನೆಂಬೆನು || ೨೮ ||

ಸಲೆ ವಾಮದೇವರುಂ ಜ್ಯೇಷ್ಠರುಂ ಶ್ರೇಷ್ಠರುಂ |
ಕಲವಿಕರಣರುಮೆಸೆವ ಕೀಲರುಂ ನಿಧಾನಿಸಲ್ |
ಬಲರುಂ ಬಲಪ್ರಮಥರುಂ ಮನೋನ್ಮನರುಂ ಮಹಾಸರ್ವಭೂತದಮರುಂ |
ತಿಳಿಯಲೀ ರುದ್ರಗಣಮೆಸೆವಸಂಖ್ಯಾತಗಣ |
ಕುಲಕಧಿಪರಾಗಿ ತತ್ತನ್ನಾಮಶಕ್ತಿಗಳ್ |
ತೊಳಗುತಿರೆ ವಿಭವದಿಂದೀಶನೋಲಗದೊಳಗೆ ಭಕ್ತಿಯಿಂದಿರುತಿರ್ದರು || ೨೯ ||

ಬಳಿಕಾ ತ್ರಿಶೂಲಿಕುಲಿಶರ್ ಮಯೂರಾಸ್ಯರ್ಗೆ |
ಬಲಮಿರ್ಪುದರುವತ್ತು ಪದ್ಮಮೋರೊರ್ವರ್ಗೆ |
ಕೆಲದೊಳಂತಷ್ಟವಸುಗಳ್ ನವಗ್ರಹರುಮೇಕಾದಶಮಹಾರುದ್ರರು ||
ತೊಳಪ ದ್ವಾದಶರವಿಗಳಾ ಚತುರ್ದಶಮನುಗ |
ಳೊಲವಿನಿಂದೆಕ್ಕೆಕ್ಕೆಯಿಂ ಕೋಟಿಕೋಟಿ ಕಂ |
ಗೊಳಿಸಲೀಶ್ವರಮಹಾಸ್ಥಾನಮಂ ಬಣ್ಣಿಸಲ್ ಫಣಿಪಂಗ[3]ಸಾಧ್ಯಮಾಯ್ತೆ[3] || ೩೦ ||

ಆ ಹರಿ ಸಮೀಪದೊಳ್ ವಜ್ರಾಯುಧರ್ ತೊಳಪ |
ಸಾಹಸ್ರಲೋಚನರ್ ಹಸ್ತಿವಾಹನರಾ ಸು |
ಧಾಹಾರಿಗಳ್ ವಿಭವಯುತರಿಂದ್ರಕೋಟಿಗಳ್ ಕಂಗೆಸೆಯಲಾ ಕೆಲದೊಳು ||
ಊಹಿಸಲ್ ಶಿಖಿ ಕಾಲ ನಿರುತಿ ವರುಣ ಸಮೀರ |
ರಾ ಹರಸಖೇಶಾನರೆಂಬ ದಿಕ್ಪಾಲಸಂ |
ದೋಹವಿರ್ಪುದು ಕೋಟಿಕೋಟಿಗಳ ಗಣನೆಯಿಂದೇನೆಂಬೆನಚ್ಚರಿಯನು || ೩೧ ||

೧ ದಂಡಧರನುಂ (ಮ.) ೨ ಕ (ಪ, ಮ, ಹು.) ೩-೩ ಗೆ ಸಾಧ್ಯಮಲ್ತು (ಗೋ, ಪ, ಮ.)

ಸುರ ನರೋರಗರಸುರ ಸಿದ್ಧ ವಿದ್ಯಾಧರರ್ |
ಗರುಡ ಗಂಧರ್ವ ಕಿನ್ನರ ಗುಹ್ಯಕಾಳಿ ಕಿಂ |
ಪುರುಷರ್ ಪಿಶಾಚರಪ್ಸರಸರ್ಕಳೊಗ್ಗಿನಿಂ ಕೋಟಿಕೋಟಿಗಳೆಸೆಯಲು ||
ಗಿರಿಗಳೊಳ್ ತರುಗಳೊಳ್ ಮೃಗಪಕ್ಷಿಜಾತಿಯೊಳ್ |
ಪರಿಪರಿಯ ಜೀವಜಾಲಂಗಳೊಳ್ ಮುಖ್ಯಮ |
ಪ್ಪರಸುಗಳ್ ಕೋಟಿಕೋಟಿಗಳೊಪ್ಪುತಿರ್ದರದನೇನೆಂಬೆನಚ್ಚರಿಯನು || ೩೨ ||

ಕೇಳ್ಗೊಣೋಪ್ಪಾಮರ್[1] ನಿಂ ಸಿದ್ಧರಾಮೇಶ ಶಿವ |
ನೆಣ್ಗೆಯಂ ತನ್ಮಹಾರುದ್ರಗಣಭರಮನೀ[2] |
ನಾಣ್ಗಳರಸುಗಳ ಬಿಣ್ಪಿಂ ಶಿವನ ಸಭೆಯಲ್ಲದಾವಲೋಕಂ ದಳಿಸಿದೊಡಂ |
[3]ಪುಗ್ಗಿ ಬೀಳವೆ ಸಕಲದಿಗ್ಗಜಂಗಳ್ ಧರಣಿ |
ತಗ್ಗದೇ ಶೇಷಂ ಸುರುಳ್ವನೇ ಕಮಠಪಂ |
ನುಗ್ಗುಸಿಯಾಗದುಳಿವನೆ ಶಿವಮಹಾತ್ಮೆ[4]ಬಣ್ಣಿಸಲಾರವಶಮೆಂದನುಳ || ೩೩ ||

ಇಂತಖಿಳವಿಭವದಿಂದೀಶನೊಪ್ಪಿರ್ದಪನ |
ನಂತಲೋಕಾಧಿಪತಿಗಳ್ಗೆ ಗುರುವೆನಿಸುತವ |
ರುಂ ತಮ್ಮ ರಾಜ್ಯಂಗಳಂ ಕ್ರಮದೊಳಾಳ್ವಂತೆ ಕರುಣದಿಂ ನೇಮವಿತ್ತು ||
ಸಂತಸದಿ[5] ಚಕ್ರವರ್ತಿತ್ವಮಂ ಧರಿಸಿ ಮಾ |
ಕಾಂತಮುಖ್ಯರ್ ತಳೆದ ಸಕಲವಿನಿಯೋಗಂಗ |
ಳಂತರಮನಾ ಸಿದ್ಧರಾಮನೊಳ್[6] ಚೆನ್ನಬಸವೇಶಂ ನಿರೂಪಿಸಿದನು || ೩೪ ||

ಬಿಂದುದೇಂ ಪ್ರಣವಮೇ ಸಿಂಹಾಸನಂ ಲೋಕ |
ದಂಬಿಕೆಯೆ ರಾಣಿವಾಸಂ ಚಂದ್ರಸರ್ಪಮೆಂ |
ಬೆಂಬಿನೇ ಭೂಷಣಂ ಭಸಿತಮೆ ಸುಗಂಧಮಾ ಹಸ್ತಿಚರ್ಮಮೆ ಸುವಸ್ತ್ರಂ ||
ಉಂಬುದೇ ಮೋಕ್ಷಾಶನಂ ನಾಡೆ ತತ್ತ್ವರಸ |
ದಂಬುಲಿಂ ಕೇಳ್ವುದೆಲ್ಲಂ ಬ್ರಹ್ಮಗರ್ಭಿತಸು |
ಕಂಬನಾಸ್ಥಿತಗಾನಮೆನಲಿಭವನಿಂತಷ್ಟಭೋಗದೊಳ್ ವರ್ತಿಸುವನು || ೩೫ ||

---

೧ ಕೇಳಿಮಾರ (ಮು.); ಕೇಳ್ದಾಮು (ಪ.) ೨ ನಿಂ (ಶಿ.) ೩-೩ ಗ್ಗಿಂ ಶಿವನ ಸಭೆಯಲಿದಾವ ಲೋಕವುಳಿ (ಶಿ.) ೪-೪ ಪುಗ್ಗಿ ಬೀಳವೆ ಸಕಲದಿಗ್ಗಜಂಗಳ್ ಧರಣಿ | ತಗ್ಗ ಶೇಷಂ ಸುರುಳ್ವನೆ ಕ ಮಠಪಂ ನುಗ್ಗಿ | ಗಳ್ಗಿ ಸಿ ಯಾಗದುಳಿವನೆ ಶಿವನಮಹಿಮೆ ಬಣ್ಣಿಸಲಾರವಶವೆಂದನು (ಮು.) ೫ ೪ ಬಣ್ಣಿಸಲ್ಕಾರವಶ (ಮು.) ೬ ಸಂತಸಂ (ಮು.) ೭ ನೊಳಗೆ (ಮು, ಹು.) ೮ ಬಿಂಬಾದ (ಮು.)

ಷಣ್ಮುಖಂ ಯುವರಾಜಪಟ್ಟದ ಸುತಂ ಹಸ್ತಿ |
ರಾಣ್ಮುಖಂ ಶಿವಗಣಕೆ [೧]ದಳವಾಯ್ ನೃಕೇಸರಿ[೧] |
ದ್ವಿಣ್ಮಹಾದುಷ್ಟನಿಗ್ರಹಶಿಷ್ಟಪ್ರತಿಪಾಲನಂ ಮಾಳ್ಪ ಕರ್ತೃ ವಿಶ್ವ ||
ಸ್ಮಣ್ಮುಖ್ಯಸೃಷ್ಟಿಕರ್ತರ್[೨] ನಾಡೆ ಸಾಹಸ್ರ |
ತ್ರಿಣ್ಮಹಾಜ್ಯೋತಿಷಮುಸಂದು [೩]ಪೇಳ್ವರ್ ಯಕ್ಷ[೩] |
ರಾಣ್ಮಿತ್ರರೆನಲೆಸೆವ ರಾಜವಿಭವಂ ಮನೋಹರಮಾದುದಾ ಶೂಲಿಯಾ || ೩೬ ||

ಸಿರಿಯರಸನೊಪ್ಪುವ ಶಿರಃಪ್ರಧಾನಂ ನಾಡೆ |
ಸರಸಿಜಾಂಡಂಗಳೇ ದೇಶಂಗಳಾ ರಜತ |
ಗಿರಿ ಮೇರುಪರ್ವತಂ ಮಂದರಾದ್ರಿಗಳೆ ದುರ್ಗಂಗಳ್ ಮಹಾಧರ್ಮಮೇ ||
ಪರಿವಿಡಿಯ ಭಂಡಾರಮೊಪ್ಪುವ ಗಣಂಗಳೇ |
ಪರಿವಾರಮಪ್ರತಿಜ್ಞಾನಬಲಮೇ ತನ್ನ |
ವರಭುಜಬಲಂಗಳೆನಲೀಶ್ವರಂ ಸಪ್ತಾಂಗದೊಳ್ ಕಣ್ಗೆ ಚೆಲ್ವಾದನು || ೩೭ ||

ನಂದಿಮಾಕಾಳರೇ ವೇತ್ರಧಾರರ್ ಮಹಾ |
ವಂದಿಗಳ್ ಶ್ರುತಿ[೪]ಕೋಟಿಗಳ್ ಸುರಸ್ತ್ರೀಯರೇ |
ನಿಂದು ನಟಿಪರ್ ಭೃಂಗಿಯೇ ಹಾಸ್ಯಕರ್ತೃ ಸುರಗುರುವೆ ತತ್ಪುರೋಹಿತಂ ||
ಸಂದ ಭಕ್ತರ್ ನಂಟರಾ ಶಿಲ್ಪಿ ವಿಶ್ವಕ |
ರ್ಮಂ ದಯಾನಿಧಿ ಕರಣಿಕರ್ ಚಿತ್ರಗುಪ್ತರುಂ |
ಮುಂದೆ ಸುಜ್ಞಾನಿಗಳ್ ಸಂಧಿವಿಗ್ರಹರಿಂತು ವಿನಿಯೋಗದವರೆಸೆದರು || ೩೮ ||

ಸುತ್ರಾಮನೇ ಧವಳಚಮರಧಾರಂ ವೀತಿ |
ಹೋತ್ರನೇ ಸೂಪಕಾರಂ ವರುಣನಮಳಜಲ |
ಪಾತ್ರಧಾರಂ ಗಂಧವಾಹಂ ಸುತಾಲವೃಂತಂಬಿಡಿವಮಾಶಾನನ ||
ಮಿತ್ರನೇ ತಾಂಬೂಲಮೀವವಂ ದಿನಮಣಿಯ |
ಪುತ್ರನೇ ಪಾಪಪುಣ್ಯವಿಚಾರಕಂ ನೆಗಳ್ದ[೫] |
ರಾತ್ರಿಂಚರನೆ ಪಾದುಕಾಧಾರನೆನೆ ಶಿವಂ ವೈಭವದೊಳಿರುತಿರ್ದನು || ೩೯ ||

೧-೧ ದಳವಾಯ್ ನೃಹರಿ ತಾ (ಮ.); ದಳವಾಯಿ ಕೇಸರಿ (ಹು.) ೨ ರ್ತಂ (ಮ.)
೩-೩ ಪೇಳ್ವ ನೃಕ್ಷ (ಮ.) ೪ ಶತ (ಶಿ.) ೫ ವಿಚಾರಕ ನೆಗಳ್ (ಮ.)

ವತ್ಸರಂ ಋತು ಮಾಸ ನಕ್ಷತ್ರ ತಿಥಿಗಳ್ ಜ |
ಗತ್ತಮುಮುಮರಿದು ನಾನಾಜೀವಿಗಳ್ಗೆ ಸಂ |
ಪತ್ಸೌಖ್ಯವಪ್ಪಂತು ಸಕಲಫಲಮುಂ ಪಯಿರನಿಕ್ಕುವ ಮಹಾಪ್ರಜೆಗಳು ||
ಸತ್ಸುಧಾಕಿರಣನುಂ ಜೀಮೂತತತಿಯುಂ ವಿ |
ಯತ್ಸಿಂಧುಗಳ್ ತತ್ಫಲಂಗಳಂ ರಕ್ಷಿಸುವ |
ರುತ್ತಮದೊಳಾ ಲೋಕಪಾಲರೆಲ್ಲರ್ ಮಣಿಹಗಾರರೀಶಂಗೆಂದನು || ೪೦ ||

ದಿಗ್ಗಜಂಗಳ ನೆರವಿಯುಚ್ಚೈಃಶ್ರವಾಳಿಗಳ |
ಮೊಗ್ಗರಂ ಪುಷ್ಪಕಾರೂಢಸುರಪಟುಭಟರ್ಗ |
ಳೊಗ್ಗಿಗೆ ಕಿನ್ನರ ಸುರ ನರೋರಗ ಪದಾತಿಗಳ್ ಚತುರಂಗಬಲವಾಗಲು ||
ಸಗ್ಗವೆಟ್ಟಿಸೆವ ಬಿಲ್ ಪಾಶುಪತಮಂಬು ಸ |
ಮ್ಯಗ್ಗೋಪ ವಾಹಂ ತ್ರಿಶೂಲಮಾಯುಧಮೆನಲ್ |
ಜಗ್ಗದೊವಲುಡಿಗನೀರೇಳ್ಭುವನದೊಡೆಯನೆಸೆದಂ ರಾಜವಿಭವದಿಂದೆ || ೪೧ ||

ಸರ್ಪಿರ್ ದಧೀಕ್ಷು ದುಗ್ಧ ಕ್ಷಾರವಾರ್ಧಿಗಳ್ |
ದರ್ಪಕಧ್ವಂಸಿಯುಗ್ರಾಣದ ಗೃಹಂಗಳೆನೆ |
ತೋರ್ಪೇಳುಂ ದ್ವೀಪಗಳೆ ವೈಹಾಳಿಯಾ ಬಯಲ್ ಸ್ವಾದುಜಲವಾರ್ಧಿ ಹರನ ||
ಕೂರ್ಪ ಕ್ರೀಡಾಸರಸಿ ರೋಹಣಾದ್ರಿಯೆ ರತ್ನ |
ಮಿರ್ಪ ಭಂಡಾರಮಾ ಸುರಧೇನುಸಂಚಯಂ |
ಸರ್ಪಭೂಷಣನ ತುರುವಟ್ಟಿಯೆನೆ ಚೆನ್ನಾದುದರಸುತನಮಂದೀಶನ || ೪೨ ||

ಅಷ್ಟಮದ ಮುದಿತಸಪ್ತವ್ಯಸನಮುಂ ಮಹಾ |
ದುಷ್ಟಷಡ್ವರ್ಗಮುಂ ಪಂಚೇಂದ್ರಿಯಂಗಳ್ ಚ |
ತುಷ್ಟಯಮುಮಂತಃಕರಣಮಿವು ರಾಜಕೀ ಚೋರ ದುರ್ಜನಮಿವರ ಕೂಡಿಕೊಂಡು ||
ಕಷ್ಟಮಂ ಮಾಳ್ಪಾ ಜಗಚ್ಛತ್ರುಮನಸಿಜ |
ಭ್ರಷ್ಟರಂ ಗೆಲ್ಪವೋಲ್ ಶೈವಮಂ ತತ್ತ್ವದೊಳಿಸ |
ಲ್ಪಿಷ್ಟೆ ತಲ್ಲೋಕಂಗಳೊಳ್ ಪ್ರವರ್ತಿಸಲೀಶನರಸುಗೆಯ್ಯುತ್ತಿರ್ದನು || ೪೩ ||

೧ ಳೆಸೆ. (ತಿ.); ೨ ಸರ್ಪಣು (ಹು, ಮ.); ಸರ್ಪತತ್ (ಗೋ.) ೩ ಜಾರ (ಸು. ಮ.) ೪-೪ ಸಪಪಂ ಗೆಲ್ವವೋಲ್ ಶೈವತತ್ತ್ವ (ಗೋ, ಪ, ಸು, ಮ.)

ಈ ರಾಜವಿಭವಂಗಳಂ ತಾನೆ ಧರಿಸಿ ಮ |
ತ್ತಾ ರಾಜಶೇಖರಂ ಸಕಲಬ್ರಹ್ಮಾಂಡದೊಳ್ |
ರಾರಾಜಿಪಖಿಳಲೋಕಂಗಳೊಳ್ ಚರಿಪ ನಾನಾಪುರುಷನಿಕರಂಗಳಂ |
ಶ್ರೀ[೧]ರಾಜಿಯಂ ನಿಖಿಳತರುಲತಾತತಿಗಳಂ |
ಗೋರಾಜಿಮುಖ್ಯಪಶುವರ್ಗಂಗಳಂ ಪಾಲಿ |
ಪಾ ರಾಜರಂ ಬೇರೆ ಬೇರೆ ನಿಯಮಿಸಿಯುವರಿನೋಲಯಿಸಿಕೊಳುತಿರ್ದನು || ೪೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೫ ||

ಅಂತು ಸಂಧಿ ೨೯ಕ್ಕಂ ಪದಗಳು ೧೧೦೧ಕ್ಕಂ ಮಂಗಳಮಹಾಶ್ರೀ

---

೧ ಸ್ತ್ರೀ (ಹು, ಮ.)

ಮೂವತ್ತನೆಯ ಸಂಧಿ

ಸೂಚನೆ

ದಕ್ಷನೀಶ್ವರನಿಂದುದಾಸೀನನಾಗಿ ಕಮ |
ಲಾಕ್ಷಾದಿಗಳ್ವೆರಸಿ ಯಾಗಮಂ ಮಾಡುತಿರೆ |
ದಕ್ಷಸುತೆ ಬಂದು ಪತಿನಿಂದೆಯಂ ಕೇಳಿ ಯೋಗಾಗ್ನಿಗಿತ್ತಳ್ ತನುವನು ||

ಸಾರಗುಣಗಣ ಸುರೋದ್ಧಾರ ಸತ್ಕೀರ್ತಿವಿ |
ಸ್ತಾರ ಖಳದಕ್ಷಸಂಹಾರ ಮಂದರತಟವಿ |
ಹಾರ ಸಮ್ಮೋಹನಾಕಾರ ನಾನಾಸ್ತ್ರಚಯಧಾರ ಕಾರುಣ್ಯಪೂರ ||
ಮಾರಘನದರ್ಪಾಂಧಕಾರಪರಿಹಾರ ವರ |
ಶೂರ ಬ್ರಹ್ಮಾಂಡದಾಧಾರ ಪಂಪಾಪುರಾ |
ಗಾರ ಪಾಲಿಸು ನತರನೋರಂತೆ ಶ್ರೀ[೧]ವಿರೂಪಾಕ್ಷ ಘೋರಾಘಶಿಕ್ಷ || ೧ ||

ಎಲೆ ಸಿದ್ಧರಾಮೇಶ ಕೇಳ್ ದಕ್ಷನಂದು ತ |
ನ್ನಾಳಿಯಂದಿರಂ ಮಕ್ಕಳಂ ನೋಳ್ಪೆನೆಂದು ಮನ |
ದೊಲವಿನಿಂದವರವರ ಪಟ್ಟಣಕೆ ನಡೆತರಲ್ಕೇಳುತತಿ ಸಂಭ್ರಮದೊಳು ||
ಪೊಳಲ್ಗಳಂ ಸಿಂಗರಿಸಿ ಕಳಸ ಕನ್ನಡಿವಿಡಿದ |
ಲಲನೆಯರ್ ಸಹಿತ ಸಂಭ್ರಮದಿಂದಿದಿರ್ಗೊಂಡು |
ನಿಳಯಮಂ ಪೊಗಿಸಿ ಸಿಂಹಾಸನದೊಳಿರಿಸಿ ಪೂಜಿಸಿದರತಿಭಕ್ತಿಯಿಂದೆ || ೨ ||

ಒಲವನಾಲಿಸುತುಬ್ಬಿ ಪರಿತೋಷಜಲಮಾಗ |
ಳೆರಡುಕಣ್ಣೊಳೊಸರಿದಿರ್ದಂದು ವಂದಿಸಿದ |
ವರತನೂಭವೆಯರಂ ಸೆಳೆದು ಬಿಗಿದಪ್ಪಿ ತಂದಖಿಳವಸ್ತುಗಳನಿತ್ತು |
ಕರುಣದಿಂದವರವರ ಮನೆಗಳೊಳ್ ಕೆಲದಿವಸ |
ಮಿರುತಿರುತ್ತಳಿಯರಿತ್ತುಡುಗೊರೆಗಳಂ ಕೊಂಡು |
ಪರಮಸಂತೋಷದಿಂ ಸೆಸೆದನಾ ದಕ್ಷನೆರ್ದೆ[೨]ಯೊಳಗೊಂದು ಯೋಚನೆಯನು || ೩ ||

೧ ವರ (ಗೋ, ಮು.) ೨ ಕ್ಷಣದಲೆದೆ (ಶಿ.)

ಏನೆಂಬೆನೀಯಳಿಯರಿ[1] ಮಕ್ಕಳಿಂದೆ ನಾ |
ನಾನಂದಮಂ ಪಡೆದೆನಿನ್ನೊರ್ವಸುತೆ ಮಹಾ |
ಮಾನಿನಿ ಮಹಾದೇವನರ್ಧಾಂಗಿಯಾಗಿರ್ಪಳವರ ಬಳಿಗಾಂ ಪೋಗಲು ||
ನಾನಾವಿಧೋಪಚಾರಂ ಮಾಡದಿರರೆಂದು |
ಸಾನುರಾಗದೆ ದಕ್ಷ[1]ನೈತರಲ್ ಕಾಣಿಸಿತ[1] |
ಸೂನಸೌಭಾಗ್ಯಲಕ್ಷ್ಮೀ[2]ನಿವಾಸನಮೆನಿಪ ಶಿವಲೋಕಮವನಿದಿರೊಳು[2] || ೪ ||

ಸಕಲಸುಕೃ[3]ತಂಗಳ ಬೆಳೆಯ ಪೊಸಕೊ[3]ಠಾರಮೋ |
ಸಕಲನಿಗಮಾಗಮಪುರಾಣಾರ್ಥದಾಲಯಮೋ[4] |
ಸಕಲಯೋಗಾನಂದಸಂದೋಹದಾಗರಮೊ ಸಕಲಪುಣ್ಯದ ಸದನಮೋ ||
ಸಕಲಮುನಿನಾಥರ ತಪಃಫಲದ ನೆಲೆವನೆಯೊ |
ಸಕಲತಾರಾಗ್ರಹಾಗ್ನಿ[5]ಗಳ ತೇಜೋಗೃಹಮೊ |
ಸಕಲನಿಷ್ಕಲತತ್ತ್ವದ ಮನೆಯೋಯೆನಲೆಸೆವ ಶಿವಲೋಕ[6]ಕೈತಂದನು[6] || ೫ ||

ಬಿಳಿಯಾನೆಗಳ ಪಙ್ಕ್ತಿ ತಗರ ಸಂದಣಿ ಕೋಣ |
ಗಳ ನೆರವಿ ನಿರುತಿವಾಹನರ ವೃಂದಂ ನೆಗ |
ಳ್ಗಳ ಸಾಲ್ ಕುರಂಗಸಮುದಯಮಶ್ವರಾಜಿ ವೃಷಭವ್ರಜಂ ಪುಷ್ಪಕಾಳಿ ||
ಪೊಳೆವಂಚೆವಿಂಡು ಗರುಡೋತ್ಕರಂ ಪುರಬಹಿ |
ರ್ವಳಯದೊಳಗೆಲ್ಲಿಯುಂ ತೀವಿರಲ್ ಕಂಡು ತ |
ನ್ನಳಿಯನೈಶ್ವರ್ಯಮಂ ಪೊಗಳುತಾ ದಕ್ಷನಾಶ್ಚರ್ಯಮಾನಸನಾದನು || ೬ ||

ಎಲ್ಲೆಲ್ಲಿ ನೋಡಲ್ಕೆಮೊಗಹತ್ತುತೋಳಿನವ |
ರೆಲ್ಲೆಲ್ಲ ನೋಡಲರೆವೆರೆದಳೆದ ಜಡೆದಲೆಯ |
ರೆಲ್ಲೆಲ್ಲ ನೋಡಲುರಿಯಂ ಪಣೆಯೊಳಿಟ್ಟಜಕಪಾಲಮಂ ಪಿಡಿದೆಸೆವರು ||
ಎಲ್ಲೆಲ್ಲ ನೋಡಲಾನೆಯ ತೊಗಲಿನುಡಿಗೆಯವ |
ರೆಲ್ಲೆಲ್ಲಿ ನೋಡಲಹಿಕಟಕಕುಂಡಲಧಾರ |
ರೆಲ್ಲೆಲ್ಲ ನೋಡಲರೆವೈವಣ್ಣರೆಸೆದಿರ್ದರಾ ಪುರದೊಳೇನೆಂಬೆನು || ೭ ||

೧-೧ ನಾಕ್ಷಣಂ ನಡೆತಂದ (ಶಿ, ಹು, ಮ.) ೨-೨ ನಿವಾಸಮೆನಿಪ್ಪ ಶಿವಲೋಕಮಂ ಕಂಡನು|| (ಶಿ.) ; ನಿಕೇತನವೆನಿಪ ಶಿವಲೋಕಮಂ ಕಂಡನು (ಹು, ಮ.) ೩-೩ ತದ ಬೆಳೆಯ ಪೊಸತು ಕೊ (ಶಿ.) ೪ ದರಮನೆಯೊ (ಪ.) ೫ ಹಾದಿ (ಶಿ.) ೬-೬ ಮಂ ಪೊಕ್ಕನು (ಹು, ಮ.)

ಸಾರೂಪ್ಯದವರ ಘನತರದ ಸಂಪದದ ವಿ |
ಸ್ತಾರಮಂ ನೋಡುತ್ತೆ ಬರೆ ಕಾಣಿಸಿತು ಶಿವಾ |
ಗಾರಂ ವಿಮಲಮೋಕ್ಷಲಕ್ಷ್ಮಿಯಾನನಸರೋರುಹದಂತೆ ರಮ್ಯವಾಗಿ ||
ದ್ವಾರದ ಬಹಿರ್ಭಾಗದೊಳ್ ಸಮಯಮಂ ಪಡೆಯ |
ದೋರಣಿಸಿ ನಿಂದ ಮನುಮುನಿಗಳ ನಿರೀಕ್ಷಿಸು |
ತ್ತೋರಂತೆ ದಾಕ್ಷಾಯಣೀಪಿತಂ ಪುಷ್ಪಕವನಿಳಿದು ನಡೆದೊಳಪೊಕ್ಕನು || ೮ ||

ತಡೆವರಿಲ್ಲಂತರಂತರದ ಬಾಗಿಲೊಳಿವಂ |
ಮೃಡನರಸಿಯಯ್ಯನೆಂದರಿದು ಸಂತಸದಿಂದೆ |
ನಡೆವು ಬರೆಬರೆ ಮುಂದೆ ಕಾಣಿಸಿತ್ತೋಲಗದ ಶಾಲೆ ಕಡುರಮ್ಯವಾಗಿ ||
ಇಡಿದಿರ್ದ ವೇದ ವೇದಾಂತ ಮಂತ್ರಂಗಳು |
ಗ್ರಡಣೆಯ ಮಹಾಪ್ರಣವದಂತೆ ಹರಿಮೊದಲಾದ |
ಬಿಡುಗಣ್ಣರೋಲಗದ ನಡುವೆ ಜಸವೆತ್ತ ದೇವರ ದೇವನಿರೆ ಕಂಡನು || ೯ ||

ಸಿದ್ಧರಾಮೇಶ ಕೇಳಭವನೋಲಗಶಾಲೆ |
ಯುದ್ದ ಶತಲಕ್ಷಯೋಜನದಗಲವನಿತು ಪ್ರ |
ಸಿದ್ಧವಲ್ಲಿನಕೋಟಿಶಶಿಕೋಟಿಯಿಂ ಶಿವಂ ಚಿತ್ತಾನುರಾಗದಿಂದೆ ||
ಉದ್ಧರಿಸಿದಂ ತನ್ಮಹಾಸಭಾಚಕ್ರವಂ |
ಬುದ್ಧಿಗರಿದುಸಿರಲನಿತಗಲದೊಳಗೆಡೆವಿಡದೆ |
ಬದ್ಧಾಂಜಲಿಪ್ರಘಟ್ಟನಮುಕುಟತಟರಾಗಿ ಸುರಗಣಂ ನಿಂದಿರ್ದುದು || ೧೦ ||

ಸಿರಿಯ ಸೌಭಾಗ್ಯಮಾ ಸರಸತಿಯ ಜಾಣ್ಮೆಯುಂ |
ಸುರನದಿಯ ನೈರ್ಮಲ್ಯಮಾ ಶಚಿಯ ವೈಭವಂ |
ವರಮಂತ್ರದೇವಿಯರ ನಿಜಶಕ್ತಿ ರೋಹಿಣಿಯ ಸರಸತರಲಾವಣ್ಯಮುಂ ||
ಧರೆಯ ಸ್ಥೈರಣೆ ಮಾತೃಕೆಯರ ಸಾಮರ್ಥ್ಯಮುಂ |
ಪರಮಮೋಕ್ಷಾಂಗನೆಯ ಸೌಖ್ಯಮುಂ ಪಾರ್ವತಿಯ |
ಚರಣಪಂಕಜದ ಮಾಂಗಲ್ಯತೆಯುನೋಲಗಿಸಿ ನಿಂದಿರ್ದುವೇ[1]ವೇಳ್ವೆನು || ೧೧ ||

---

೧ ದುರ್ವೇಂ (ಹು.) ; ದ್ದರೇ (ಶಿ, ಗೋ, ಕೋ.)

ತುಂಬುರನ ನಾರದನ ಗಾನವೀಣಾಕ್ವಣಂ |
ಕಂಬಳಾಶ್ವತರ ಗೀತಂ ಕಿವಿಯೊಳಿಡಿಯೆ ಲೋ |
ಕಾಂಬಿಕೆಯ ವದನಮಂ ನೋಡಿ ನಸುನಗುತೆ ಭೃಂಗಿಯ ನರ್ತನಕೆ ಮೆಚ್ಚುತೆ ||
ಅಂಬುಜೋದರಕಮಲಸಂಭವರ ಬಿನ್ನಪಗ |
ಳಂ ಬಹಳಕರುಣದಿಂ ಕೇಳಿ ಮನ್ನಿಸುತೆ ತ್ರಿ |
ಯಂಬಕಂ ಸಿಂಹಪೀಠಾಗ್ರದೊಳ್ ಕುಳ್ಳಿರ್ದು ರಂಜಿಸಿದನೋಲಗದೊಳು || ೧೨ ||

ನಿಂದು ಬಿನ್ನೈಸು ಹರಿ ಅಜ ಕಳಕಳವ ಮಾಣ್ ಪು |
ರಂದರ ಕಡೆಗೆ ಸಾರ್ ಧನೇಶ ಸುಳಿಯದಿರಿಲ್ಲಿ |
ಮಂದನಗ್ರಜ ಕೆಲಕ್ಕೊತ್ತಿ ನಿಲ್ ವರುಣ ವಸು ರುದ್ರರೆಡಬಲಕೆ ತೊಲಗಿ ||
ವೃಂದಾರಕಸ್ತ್ರೀಯರಾರತಿಯನೆತ್ತಿ ಮುನಿ |
ವೃಂದ ಪುಷ್ಪಾಂಜಲಿಯ ಸೂಸಿ ಚರಣದೊಳಿನುತೆ |
ನಂದಿಯುಂ ಮಾಕಾಳನುಂ ಭರಾಭರಿಯ ಮಾಡುತ್ತಿರ್ದರೋಲಗದೊಳು || ೧೩ ||

ಹರಿನೇತ್ರಕಮಲಸಂಪೂಜಿತಪದಾಂಭೋಜ |
ಹರಿಯನೆಡಗಾಲೊಳೊದೆದಡೆಗೆಡಹಿದಪ್ರತಿಮ |
ಹರಿ ಹರಿ [1]ಹರಿಗಳನೇ ನಯನ[1]ತ್ರಯಂ ಮಾಡಿ ಜಸವನಾಂತೆಸೆವ ಮಹಿಮ ||
ಹರಿಕಟಕಕುಂಡಲೋದ್ಭಾಸಿತಕರಶ್ರವಣ |
ಹರಿವರ್ಣ ಹರಿರೂಪ ಹರಿಮುಖ್ಯ ಸುರಸೇವ್ಯ |
ಹರಿಹರನ ಪಿತನೆ ಜಯಜಯವೆಂದು ವಂದಿಗಳ್ ಕೊಂಡಾಡುತಿರಲಿತ್ತಲು || ೧೪ ||

ಬಾಗಿಲೊಳ್ ಪುಗಲೀಯದಿರೆ ತರುಬಿನಿಂದ ಶತ |
ಯಾಗರಂ ಬಿನ್ನಪಕೆ ಸಮಯವಲ್ಲದೆ[2] ನಿಂದು |
ಮೂಗುವಟ್ಟಿರ್ದ[3] ನಾನಾಲೋಕಪಾಲರಂ ಕಾಣುತುಂ ದಕ್ಷನಂದು ||
ಭಾಗೀರಥೀಧರನ ಪರಮವಿಭವದ ಸಭಾ |
ಸಾಗರದ ಕಡೆಯ ಕೋಹಿನ ಕೊಲ್ಲಿಯೊಳ್ ನಿಂದು |
ತೂಗಿದಂ ಮಕುಟಮಂ ತನ್ನ ನುಡಿಸದ ಮಗಳನಳಿಯನಂ ನೋಡಿನೋಡಿ || ೧೫ ||

೧-೧ ಗಳಗ್ನಿನಯನ (ಮ.) ೨ ಸಿಲ್ಲದೆ (ಮ.) ೩ ಮುಟ್ಟಿರ್ದ (ಶಿ.)

ಐಶ್ವರ್ಯಮದದಿಂದೆ ಮರೆವರೆನ್ನವನೀಗ |
ಈಶ್ವರಂ ತಾಂ ಪಡೆದ ಮಗಳೆಂದು ಬಗೆಯುತಿದೆಯ |
ನೈಶ್ವರ್ಯನೆಂದು ಮನ್ನಿಸದಾದಳ್ಳಿಸೆ ಸಾಕಿನ್ನಿವರ ಸಿರಿಯುನಿರದೆ ||
ವೈಶ್ವಾನರಂಗೀವುದಕ್ಕೇನುಪಾಯಮೊಡ |
ನಾಶ್ವಮೇಧವ ಮಾಡಿ ನೋಡುವೆಂ ತಾನೆನುತೆ |
ವಿಶ್ವೇಶನಂ ಜರಿದು ದಕ್ಷನಿರದೈದಿದಂ ನಿಜಪುರಕೆ ವಹಿಲದಿಂದೆ || ೧೬ ||

ಪ್ರೊಕ್ಕನರಮನೆಯನೇಕಾಂತದಾಲೋಚನೆಗೆ |
ತಕ್ಕರಂ ಕರೆಸಿದಂ ಮಂತ್ರಿಗಳನವರೊಡನೆ |
ಮುಕ್ಕಣ್ಣನಿಂದೆ ತನಗಾದುದಾಸೀನಮಂ ವಿಸ್ತಾರವಾಗಿ ಪೇಳ್ದು ||
ಅಕ್ಕಟಾ ಕಂಡಿರೇ ಗೊರವಂಗೆ ಮಗಳಿತ್ತು |
ದಕ್ಕಾಯ್ತು ಫಲವಾದೊಡೇನಾದುದಿಂದವನ |
ಸೊಕ್ಕನೀಗಲೆ ನಿಲಿಪೆನೆಂದು ದಕ್ಷಂ ತನ್ನ ಪಿತನೆಡೆಗೆ ನಡೆತಂದನು || ೧೭ ||

ಕಂಡು ಬಿನ್ನೈಸಿದಂ ಬೊಮ್ಮಂಗೆ ಸುರಮುಕುಟ |
ಮಂಡಿತಪದಾಬ್ಜ ಕೇಳ್ ನೀನೆನ್ನ ಕುವರಿಯಂ |
ಮುಂಡೆಯೊಳ್ ಜಡೆಗಟ್ಟಿ ಮೈಗೆ ಬೂದಿಯ ತೊಡೆದ ಗೊರವಂಗೆ ಕೊಟ್ಟ[೫]ಬಳಿಕೆ ||
ಕಂಡೊಮ್ಮೆ ಬಪ್ಪೆನೆಂದೈದಲೆನ್ನಂ ಪೆಸ |
ಗೊಂಡನೇ ನುಡಿಸಿದನೆ ಕುಳ್ಳಿರೆಂದನೆ ಪಿಂತೆ |
ಕಂಡು ಬಲ್ಲಿರೆ ಮಗಳನಿತ್ತವರ್ಗೀ ವಿಧಿಯನೆಂದು ದಕ್ಷಂ ಸುಯ್ದನು || ೧೮ ||

ತನ್ನಂ ತಿರಸ್ಕರಿಸಿದವನನಾ ಪರಿಮಾಳ್ಪ |
ಮುನ್ನತಮದಲ್ಲದೊಡೆ ಸೃಷ್ಟಿಗೊಡೆತನದಿಂದ |
ಬಿನ್ನೈತರಂಗಳಿಕೆ ತಂದೆ ಕೊಡು ತಪಕನುಜ್ಞೆಯನೆಂದು ನಿಂದಿರಲ್ಕೆ ||
ನಿನ್ನೆನ್ನ ಬಾಯ ಹವಣಿನ ತುತ್ತೆ ಹರಿಗಿದಂ |
ಬಿನ್ನೈಸಿ ನೋಳ್ಪೆನೆಂದತ್ಯಂತ-ಚಿಂತೆಯಿಂ |
ಪನ್ನಗಾರಿಧ್ವಜನ ಬಳಿಗೆ ದಕ್ಷಂಗೂಡಿ ಕಮಲಜಂ ನಡೆತಂದನು || ೧೯ ||

೧-೧ [illegible] (ಮ, ಪ, ಗೋ.) ೨-೨ ಪೆ | ಸ್ವೈಶ್ವರ್ಯದಿಂದೆ (ಡಿ.) ೩-೩ [illegible] (ಮ.) ೪-೪ ಜರೆಯುತಾ ದಕ್ಷನೈದಿ (ಮ.) ೫ ಕೊಟ್ಟು (ಡಿ. ಪ, ಗೋ.) ೬ [illegible] (ಮ.)

ಕಮಲಜಂ ಬಂದು ಬಿನ್ನವಿಸಿದಂ ಹರಿಗಾಗ |
ಉಮೆಯರಸನಿಂದೆ ದಕ್ಷಂಗಾದವಜ್ಞೆ೧ಯಂ |
ಕ್ರಮದಿಂದೆ ಹಯಮೇಧಮಂ ರಚಿಸಿ ನಿಮಗಗ್ರಪೂಜೆಯಂ ಕೊಟ್ಟ೨ಬಳಿಕೆ ||
ಕುಮತಿಯಾ ರುದ್ರನಂ ಕ್ಷುದ್ರನೆಂದೆನಿಸಿ ಸುರ |
ಸಮಿತಿಯೊಳ್ ಹವ್ಯಕವ್ಯಕೆ ಹೊರಗುಮಾಳ್ಪೆನೆಂ |
ದಮಿತಕೋಪದೊಳಿನ್ನು ಕರೆತಂದನೆನೆ ಕೇಳಿ ಕಮಲಾಕ್ಷನಿಂತೆಂದನು || ೨೦ ||

ಶಿವ ಶಿವಾ ಸಕಲಯಜ್ಞಾದಿಕರ್ಮಂಗಳಿಗೆ |
ಶಿವನೊಡೆಯನಾತನಂ ಬಿಟ್ಟಿನಗೆ ಸಕಲಸುರ |
ನಿವಹದೊಳಗಗ್ರಪೂಜೆಯನಿತ್ತು ಯಾಗಮಂ ಮಾಳ್ಪೆನೆಂಬುದು ನೀತಿಯೆ ||
ಶಿವನೆ ಕೇಳ್ ಸಕಲ೩ಲೋಕಾರಾಧ್ಯನಾತನೇ |
ವಿವರಿಸಲ್ಕೆಮಗೊಡೆಯನೆಂದೆನಲ್ ಕಮಲಸಂ |
ಭವನೆಂದ ನಿಮ್ಮ ಮರೆವೊಕ್ಕರಂ ಕಾಯಬೇಕೆನಲಚ್ಯುತಂ ನುಡಿದನು || ೨೧ ||

ಆದುದಾಗಲಿ೪ ಬಂದುದಂ ಕಾಣ್ಬವಿದರಿಂದೆ |
ಮಾದೇವನೆಮಗೆ ಮುನಿಯದೆ ಬಿಡಂ ಪೋಗಿ ಸಂ |
ಪಾದಿಸು ಮಖದ್ರವ್ಯಮಂ ಬರ್ಪವಾವೆಂದವರ್ಗಳಂ ಕಳುಪಿ ಬಳಿಕೆ ||
ಐದಿದಂ ಸಕಲಚತುರಂಗಮಂ ಕೂಡಿಕೊಂ |
ಡಾ ದಕ್ಷನೆಡೆಗೆ ಕಮಲೋದರಂ ದಕ್ಷನಿಂ |
ಬಾದ ಹಿಮಗಿರಿಯ ಗಂಗಾದ್ವಾರದೊಳ್ ಯಜ್ಞಶಾಲೆಯಂ ಮಾಡಿಸಿದನು || ೨೨ ||

ಕರೆಸಿದಂ ಮನುಗಳಂ ಮುನಿಗಳಂ ದಿನಪರಂ |
ಬರಿಸಿದಂ ವಸುಗಳಂ ಋಷಿಗಳಂ ತ್ರಿದಶರಂ |
ವರಿಸಿದಂ ಸವನಾಧಿಪತ್ಯಕ್ಕೆ ೫ಮಿಕ್ಕಿನ ಜನರ ರಕ್ಷೆಗಬ್ಜಾಕ್ಷನಂ೫ ||
ಹರಿಸಿದಂ ಸಕಲ ಭೂಮಂಡಲಕೆ ತುರಗಮಂ |
ತರಿಸಿದಂ ಸಕಲಲೋಕದ ವಿವಿಧವಸ್ತುಗಳ |
ನಿರಿಸಿದಂ ಬ್ರಹ್ಮತ್ವಕಬ್ಜಭವನಂ ಯಜ್ಞದೀಕ್ಷೆಯಂ ತಾಂ ತಳೆದನು || ೨೩ ||

೧ ವಸ್ಥೆ (ಮ, ಹು.) ೨ ಕೊಟ್ಟು (ಪ.) ೩ ಅಖಿಳ (ಮ.) ೪ ಆದೊಡಾಗಲಿ (ಪ, ಗೋ.) ೫-೫ ಮಿಕ್ಕಿನ ಜಗದ್ರಕ್ಷಕಬ್ಜಾಕ್ಷನು (ಹು.)

ಚರುಪುರೋಡಾಶಂಗಳಿಂ ತಿಲವ್ರೀಹಿಗಳ |
ನೆರಪಿಯುಂ ಪೃಷದಾಜ್ಯಮಧುಕುಶಸ್ತಂಡುಲೋ |
ತ್ಕರದಿಂದೆ ಬರ್ಹಿಗಳ ಹೊರೆಗಳಿಂ ಸ್ರುಕ್ಸ್ರುವಾದಿಗಳ ಸಂದೋಹದಿಂದೆ ||
ಘರಣಿಯುಮರರ ವೇದಮಂತ್ರಘೋಷಣೆಗಳಿಂ |
ನಿರುಪಮಾಹವನೀಯಪರಮಗಾರುಹಪತ್ಯ |
ವರದಕ್ಷಿಣಾಗ್ನಿಗಳ ಬೆಳಗಿನಿಂ ದಕ್ಷನಧ್ವರಶಾಲೆ ಕಣ್ಗೆಸೆದುದು || ೨೪ ||

ಆ ಕ್ಷಣಂ ಬಂದಂ ದಧೀಚಿ ಮುನಿ ಮಂಟಪದೊ |
ಳೀಕ್ಷಿಸಿದನಾಚಂದ್ರಚೂಡನಂ ಕಾಣದೆ ಮ |
ನೋಕ್ಷೋಭನಾಗಿ ಸ್ಮರಿಸಿ ತನ್ನೊಳಾ ಯಜ್ಞದೀಕ್ಷಿತನ ಮುಂದೆ ನಿಂದು ||
ದಕ್ಷ ಕೇಳ್ಳೈ ಮಹಾದೇವನಿಲ್ಲದೆ ಯಜ್ಞ |
ಮೀ ಕ್ಷೀಣಮೆಂಬುದಂ ತಿಳಿದು ತೊಡಗುವರೆ ಪ್ರ |
ತ್ಯಕ್ಷವೀ ವೇದಂಗಳಂ ಕೇಳ್ವುದೆನೆ ನಿಜಾಕಾರದಿಂ ಶೃತಿ ನುಡಿದುದು || ೨೫ ||

ಯಾಗಕರ್ತಂ ಶಿವಂ ಶಿವನಿಲ್ಲದಿರೆ ದುಷ್ಟ |
ಯಾಗಮೇ ಸರ್ವಥಾ ಕೆಡುಗುಮೆಂದುಸಿರಿ ಬಯ |
ಲಾಗಲಾ ಶಿವನಿಂದೆಯಂ ಮಾಳ್ಪ ದಕ್ಷನಂ ಕಂಡು ಮುನಿ ಕೋಪದಿಂದೆ ||
ಈಗಳೀ ಶಿವರಹಿತಯಾಗಕ್ಕೈತಂದವರ್ಗೆ |
ಬೇಗಂ ಶಿವಜ್ಞಾನಮುಳಿಗೆಂದು ಶಪಿಸಿ ಮುನಿ |
ಪೋಗಲ್ಕೆ ಸಂತಮುನಿಗಳ್ ಪೋದರಿತ್ತಲೀ ಯಾಗಂ ನಡೆವುತಿರ್ದುದು || ೨೬ ||

ಪ್ರತ್ಯಕ್ಷವಾಗಿ ದಿವಿಜರ್ ತಮ್ಮ ಹಸುಗೆಗಳ |
ನತ್ಯಂತಹರುಷದಿಂ ನಡೆತಂದು ಕೊಂಬುದಂ |
ಪ್ರತ್ಯಕ್ಷಮಾಗಿ ಹರಿಕಮಲಜರ್ ಸವನರಕ್ಷಕರಾಗಿ ಕಾದಿರ್ಪುದಂ ||
ಮೃತ್ಯುಹರನಂ ನಿಂದಿಸುತ್ತೆ ದಕ್ಷಂ ಮಾಳ್ಪ |
ಕೃತ್ಯಮಂ ಕಂಡು ನಾರದನಖಿಳಮುನಿಜನ |
ಸ್ತುತ್ಯನಡಿಗೆಯ್ದಿ ಬಿನ್ನಪಿಸಿದಂ ಕೃತಕಮುಖದಾದ್ಯಂತಸಂಗತಿಯನು || ೨೭ ||

---

೧ ಸಲ್ಲದಿ (ಶಿ.) ; ಸಫಲಸಿ (ಹು.) ೨ ಪ್ರತ್ಯೇಕ (ಪ, ಗೋ.)

ಅಲಿಸಿದಳುಮೆ ತನ್ನ ಪಿತನ ದೂರಂ ಮನಕೆ |
ತಾಳಿ ಕಡುದುಗುಡಮಂ ಹರನಡಿಗೆ ಮಣಿದು ಮುಖ |
ಶಾಲೆಗಾಂ ಪೋಗಿ ಪಿತನಜ್ಞಾನಮಂ ತಿಳಿಸಿದಪೆನೆಂದು[೧] ಬಿನ್ನೈಸಲು ||
ಕೇಳಬಲ್ಲನೆ ನಿನ್ನ ಮಾತನಾ ದಕ್ಷಂ ಕ |
ರಾಳಮತಿ ಬೇಡ ಬೇಡಬಲೆ ಪರಿಭವಮಹುದು |
ಕೇಳೆಮ್ಮ ಮಾತನೆನೆ ಮತ್ತೆ ಮೆಯ್ಯಿಕ್ಕಿ ದಾಕ್ಷಾಯಣಿ ಶಿವಂಗೆಂದಳು || ೨೮ ||

ತಂದೆಯಿರ್ದೆಡೆಗೆ ಮಗಳೈದಲ್ಕೆ ಪರಿಭವಂ |
ಬಂದಪುದೆ ಸರ್ವಥಾ ಬಾರದೆಂತಾದೊಡಂ |
ಮಂದಮತಿಯಾದ ಪಿತನಂ ತಿಳಿಪಿ ಬರ್ಪೆನೆನೆ ಪೋಗಾದೊಡಾತನಿಂದೆ |
ಮುಂದಪ್ಪುದಂ ಕಾಣ್ಬೆ ನೀನೆಂದು[೨] ದೇವಿಯಂ |
ನಂದಿಮುಖ್ಯಾಮರಗಣಂಗಳಂ ಕೂಡಿಕೊ |
ಟ್ಟಿಂದುಜೂಟಂ ಕಳುಪಲತಿವೇಗದಿಂ ಪಿತನ ಯಜ್ಞಕ್ಕೆ[೩] ಬರುತಿರ್ದಳು || ೨೯ ||

ಭರದಿಂದೆ ಮುಂದೊರ್ವ ಗಣನಾಯಕಂ ಬಂದು |
ತುರಗಮೇಧಾಧ್ವರದ ಯಾಜಮಾನದೊಳೆ[೪] ಹರಿ |
ಸರಸಿಜಾಸನ ಸುರೇಂದ್ರಾದಿ ದಿವಿಜರ ನಡುವೆ ದೀಕ್ಷೆಯಂ ತಳೆದೊಪ್ಪುವ |
ದುರುಳದಕ್ಷನ ಮುಂದೆ ನಿಂದು ದೇವರದೇವ |
ನರಸಿ ನಿನ್ನಣುಗಿ ತವೆ[೫] ಯಾಗಮಂ ನೋಡಲೆಂ |
ದಿರದೆ ಬಿಜಯಂಗೆಯ್ದಳೆನೆ ಬ್ರಹ್ಮಜಂ ಕೇಳದಂತೆ ಗರ್ವದೊಳಿದ್ದನು || ೩೦ ||

ಏಕೆ ನುಡಿಯದೆ ಸುಮ್ಮನಿರ್ಪೆ ಅಕ್ಕಟ[೬] ಮರುಳೆ |
ಲೋಕನಾಯಕನರಸಿ ನಿನ್ನ ಪುಣ್ಯದ ಫಲವೆ |
ಸಾಕಾರಮಂ ತಳೆದುದೆಂಬಂತೆ ಬಂದಳಿದೆ ಸುಧೆಯನುಳಿದಳೆಗೆಳಸುವ ||
ಕಾಕರ್ಗೆ ಗುರುವಾಗಬೇಡಿದಿಗೊಳ್ಳಲೇ[೭] |
ಜೋಕೆಯಿಂ ಪುರವ ಸಿಂಗರಿಸು ವಹಿಲದೊಳೆನಲ್ |
ನೂಕಿವನನೆನುತೆ ಗುಡುಗುಡಿಸಿ ಕಿಡಿಕಿಡಿಯಾಗಿ ದೀಕ್ಷಿತಂ ಕೋಪಿಸಿದನು || ೩೧ ||

೧ ತಿಳಿಪೆನೆಂದು ಶಿವೆ (ಮ.) ೨-೨ ಣ್ಬೆನಿನ್ನೆಂದು (ಅ, ಬ, ಕ.) ೩ ಯಾಗಕ್ಕೆ (ಮ.)
೪ ಯಜಮಾನನಾದ (ಹು, ಶಿ.) ೫ ತವೆ (ಪ.) ೬ ಅಕಟಾ (ಮ.) ; ಅಕಟಾ (ಶಿ.)
೭ ಗೊಳ್ಳಲೇ (ಶಿ, ಹು.)

ಅನಿತಮೊಳನೇಕವೈಭವದಿಂದೆ ಬಂದೆಸೆವ |
ಜನಕನ ಮಹಾಧ್ವರವ ನೋಡಿ ನುಡಿಸಿದಳಾಗ |
ವಿನಯದಿಂದೆಲೆ ಬೊಪ್ಪ ಸಕಲರಾಹಸ್ಯಂಗಳಂ ಕೇಳಿ ಕೇಳಿ ಕಂಡು ||
ನಿನಗಿದೇಕಜ್ಞಾನಮಕಟಕಟ ಜೀಡವುಭ |
ವನಮುಳಿದು ಮಾಳ್ಪ ಯಜ್ಞಂ ನಡೆವುದೇಮಾತ |
ನನುಕರಿಸು ನೀನೆಂದು ಬೇಡಿಕೊಳೆ ಗುಡುಗುಡಿಸಿ ದಕ್ಷನಂದಿಂತೆಂದನು || ೩೨ ||

ಹರಿಯು ನೆಮ್ಮಗೆ ಕಮಲಜನ್[೧] ಸಹಾಯಂ ದಿಶಾ |
ವರಮೊತ್ತು ತರಣಿ ವಸು ದನುಜ ಮನುಗಳ ಕಾವ |
ಲೆರವೆ ಚಂದ್ರಾತ್ರಿಕಶ್ಯಪರೆನ್ನ ಜಾಮಾತರಾಂ[೨] ಜಗತ್ಕರ್ತೃವೆನಗೆ ||
ತಿರುಕಂ ಮಸಣಗಾಹಿ ಹಾವಡಿಗನೆಲುಮಾಲೆ |
ಗೊರಲ ಗೊರವಂ ನೋಡಲೆನಗೆ ಪಾಸಟಿಯೆ ನೀ |
ನಿರದೆ ಕೆಲಸಾರೆನುತೆ ಕೋಪದಿಂ ಮರಳಿ ಮರಳೀಶನಂ ನಿಂದಿಸಿದನು || ೩೩ ||

ಕೇಳಿ ಶಿವಶಿವ ಮಹಾದೇವವೆಂದರ್ ಕೆಲರ್ |
ಕೇಳಿ ಕೇಳದವೊಲ್ ಪರಾಕುಗೈದರ್ ಕೆಲರ್ |
ಕೇಳಬಾರದು ಶಿವನ ನಿಂದೆಯನೆನುತ್ತಿದ್ದು ತಂತಮ್ಮ ನಿಳಯಕೊಡನೆ ||
ಹೇಳದೆ ಬಿಟ್ಟು ಪೋದರ್ ಕೆಲರ್ ಬುದ್ಧಿಯಂ |
ಪೇಳಲವ ಕೇಳದಿರೆ ಜಡಿದು ಪೋದರ್ ಕೆಲರ್ |
ಪೇಳಲೇನಧ್ವರದ ಶಾಲೆಯೊಳಗಿರ್ದ ಮುನಿವರರದೇನೆಂದೆಂಬೆನು || ೩೪ ||

ಇಂತಿರದೆ ದಕ್ಷನತಿಕೋಪದಿಂದಾಗಳ |
ತ್ರ್ಯಂತಶಿವನಿಂದೆಯಂ ಮಾಡಲಕಟಾ ಪ್ರಾಣ |
ಕಾಂತನಿಂದೆಯನಾಲಿಸಿದೆನಿವನ ಸಂಬಂಧಕಾಯಮಂ ಬಿಡುವೆನೆನುತೆ ||
ತಾಂ ತನ್ನ ದೇಹಮಂ ಯೋಗಾ[೩]ಗ್ನಿಗಿತ್ತಾಗ |
ಪಿಂತೆ ಮೇನೆಗೆ ಕೊಟ್ಟ[೪] ವರಕಾಗಿ ಪೋಗಿ ಸಲೆ |
ಕಂತುಮದಮರ್ದನನ ರಾಣಿ ಕಲ್ಯಾಣಿ ಮೇನೆಯ ಗರ್ಭದೊಳ್ ಬಳೆದಳು || ೩೫ ||

---

೧ ಹರಿಯು ಓರಯುನೆನಗೆ ಕಮಲಜ (ಶಿ.) ೨ ರಂ (ಮ.) ; ರಾ (ಪ, ಗೋ, ಶಿ.)
೩ ಯಗ್ನಾ (ಶಿ.) ೪ ಮೇನಕೆಗಿತ್ತ (ಶಿ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೩೬ ||

ಅಂತು ಸಂಧಿ ೩೦ಕ್ಕಂ ಪದಗಳು ೧೧೩೭ಕ್ಕಂ ಮಂಗಳಮಹಾಶ್ರೀ

ಮೂವತ್ತೊಂದನೆಯ ಸಂಧಿ

ಸೂಚನೆ

ರುದ್ರನ ಮಹಾಕೋಪದಿಂದುದಿಸಿ ಸುರಬಲಸ |
ಮುದ್ರಮಂ ಕಲಕಿ ಕಮಲಜಮುಖ್ಯರಂ ವೀರ |
ಭದ್ರನತಿ ಕೋಪದಿಂ ಪೆಡಗುಡಿಯ ಕಟ್ಟಿ ಭೂತಾಳಿಗಳ ವಶಕಿತ್ತನು ||

ದಕ್ಷಮುಖಸಂಹಾರ ದಕ್ಷದುರಿತೇಭಹ |
ರ್ಯಕ್ಷ ಮಿತ್ರೀಭೂತಯಕ್ಷಪತಿನುತ ಸಹ |
ಸ್ರಾಕ್ಷನಿಧಿಪಂಕೇರುಹಾಕ್ಷವಂದಿತಪದ ಮಹೋಕ್ಷವಾಹನ ಜಯ ಜಯ ||
ಋಕ್ಷಪತಿಜೂಟಾನಲಾಕ್ಷಸುಲಲಾಟ ನತ |
ರಕ್ಷ ಖಳಸಂಕುಲವಿಪಕ್ಷ[1] ಲೋಕವ್ರಜಾ |
ಧ್ಯಕ್ಷ ಪಂಪಾವಿರೂಪಾಕ್ಷ ನಿಜಭಕ್ತರಂ ರಕ್ಷಿಪುದಪೇಕ್ಷೆಯಿಂದೆ[2] || ೧ ||

ಈಶ್ವರಿಯ ಕಾಯಮಳಿದಂದಮಂ ಕಂಡು ಪರ |
ಮೇಶ್ವರಂಗೀಹದನನರುಹಬೇಕೆಂದು ನಂ|
ದೀಶ್ವರನತಿತ್ವರಿತಗಮನದಿಂದೈತಂದು ಶಿವನಿದಿರೊಳ್ಸೈದೆ ನಿಂದು ||
ಶಾಶ್ವತನೆ ಕೇಳ್ ತವಾರ್ಧಾಂಗಿಯಾ ದಕ್ಷಪ್ರ |
ಜೇಶ್ವರಂ ನಿಂದಿಸಲ್ ಕೇಳ್ದು ತನ್ನಯ ಕೋಪ |
ವೈಶ್ವಾನರಂಗೆ ತುತ್ತಾದಳೆನೆ ಕೇಳ್ದುಗ್ರನಾಗ್ರಹಂ ತಾಳ್ದನಂದು || ೨ ||

ಬಿಡದೆ ಕಾಲಂಗಳೊಳ್ ಘನಪರ್ವತಂಗಳಂ |
ಸುಡುವ ವಹ್ನಿಗೆ ಗಾಳಿಬೀಸಗೆಗಳೊಡವರಲ್ |
ತಡವದೆಸುಂಟು ಪೆಸರಿಂ ವಿಷಗ್ರೀವನುಗ್ರಂ ಕಿಚ್ಚುಗಣ್ಣನೆಂತುಂ ||
ಕಡೆಗೆ ಸಂಹರಮೂರ್ತಿಯಾಗಿರ್ಪವಂ ಮುಚ್ಚು |
ಪುಡವಿಯುಳಿವುಂ ಪಳಿವುಮುಂ ಕೊಳ್ಳ ಸೈರಿಪನೆ |
ಕಡುಗಾಯ್ಪಿನಿಂದೆ ಗುಡಿಗುಡಿಸಿ ಕಿಡಿಕಿಡಿಯಾದನೊಡನಾ ವಿರೂಪಾಕ್ಷನು || ೩ ||

೧ ಲೋಪೇಕ್ಷ (ಮ, ಪ, ಗೊ.) ೨ ದು ಪಕ್ಷದಿಂದೆ (ಮ.) ೩ ಯೊ (ಮ.)

ಜಾರಿದುದು ಶಾಂತಿ ಮಿಗೆ ಮೀರಿದುದು ಮುಳಿಸು ಬೇ |
ರೂರಿದುದು ಶಿಖಿ ಸಿಡಿದು ಹಾರಿದುದು ಕಿಡಿ ಬೆಮರ್ |
ತೋರಿದುದು ಪಣೆಗಿಚ್ಚು ಕಾರಿದುದು ಕಣ್ ನಟಣವೇರಿದುದು ಮೀಸೆ ಬಿಸುಪಂ ||
ಪೇರಿದುದು ಸೂರ್ಯ ಭಾರ್ಯಂ ಬೀರಿದುದು ಮೊಗಮಿರದೆ |
ಚೀರಿದುದು ತಲೆಮಾಲೆ ಕೀರಿದುದು ಫಣಿವಿತತಿ |
ಕಾರಿದುದು ಸಭೆಗೆ ಬಾಯಾರಿದುದು ಜನಕೆ ಲಯದೋರಿದುದು ಜಗಕೆಂದಸು || ೪ ||

ಪಳಪಳನೆ ನಕ್ಷತ್ರಮುದುರುತಿರ್ದುವು ಬೆಟ್ಟ |
ಛಿಳಿಛಿಳಿಲ್ ಛಿಟಿಲೆಂದು ಸಿಡಿವುತಿರ್ದುವು ಜಳಧಿ |
ತಳಮೞಳನೆ ಕುದಿವುತಿರ್ದುವು ಧರಣಿ ಧಗಧಗೆಂದುರಿಯೆ ದಿಗ್ಗಜಫಣಿಗಳ ||
ತಲೆತಲೆಯ ಮುತ್ತುರನ್ನಂಗಳುಂ ಸಿಡಿ[೪]ದೊಡೆದು |
ಬಳಬಳನೆ ಸುರಿವುತಿರ್ದುವು ನಿಖಿಳಲೋಕಂಗ |
ಳೊಳಗೊಳಗು ಹೊರಗೆಂಬ ಭೇದವಿಲ್ಲದೆ ಹರ[೩]ನ ಕೋಪಾಗ್ನಿ ಸುಡುತಿರ್ದುದು || ೫ ||

ಪೋಳಾಯ್ತು ಜಾಂಡವಾ ಕಾದಹಂಚೊಡೆದಂತೆ |
ಮೇಲಣಾವರಣಾಂಬು ಕುದಿವುತಿರ್ದುದು ಶಿಖಿ ಚ |
ಡಾಳಿಸಲ್ ಭೂತೇಶನೀ ಜಗತ್ತ್ರಿಂಗಿಂದು ಮುಳಿದನೋ ಕಲ್ಪಾಂತದ ||
ಕಾಲಮಂ ಕಂಡು ಸಂಹರಿಸುವನೊ ಮೇಣ್ ಮಹಾ |
ಕಾಳಿಯುಳಿದುರಿಯೊಳೀ ಲೋಕಮಂ ಸುಡುವನೋ |
ಪೇಳೆನೆ ಮಹಾರುದ್ರಕೋಪಾಗ್ನಿ ಸುಡುತಿರ್ದುದೇನೆಂಬೆನಚ್ಚರಿಯನು || ೬ ||

ಆ ಮಹಾದೇವಕೋಪದೊಳಜಾಂಡಕೆ ನೆಗೆದ |
ಧೂಮವೇ ಪೌರುಷಾಕಾರಮಾದುದೊ ಪ್ರಳಯ |
ದಾ ಮೇಘತತ್ರಿ[೫]ಗಳಂ ಪೆರೆಗಳಂ ಭಗಣಂಗಳಂ ತಾಳ್ದ[೫] ನೀಲಾಚಲಂ ||
ವ್ಯೋಮಕೇಶಶ್ವಾಸಪಾಶದಿಂದಿಳಿದುದೆನೆ |
ಶ್ಯಾಮಳ[೬]ಸಹಸ್ರಾಸ್ಯ ದ್ವಿ[೬]ಸಹಸ್ರಬಾಹುವಿಂ |
ದಾ ಮಹಾದಂಷ್ಟ್ರದಿಂ ತ್ರಿಸಹಸ್ರಲೋಚನದ ಭೀಮರೂಪೊಗೆದುದಂದು || ೭ ||

೧-೧ ಯಿಲ್ಘ (ಪ, ಗೋ.) ೨ ಘೞಘ (ಪ, ಗೋ, ಹು.) ; ಫಳಫ (ಶಿ.) ೩ ಸೀ (ಪ, ಗೋ.) ೪ ಶಿವ (ಶಿ.) ೫-೫ ಗಳೊಂದಾಯ್ತೊ ಭಗಣಂಗಳಂ ತಾಳ್ದುದು (ಶಿ.)
೬-೬ ತೆರದಿನೊಪ್ಪುವಾ (ಶಿ.)



ವೀರಭದ್ರಾವತಾರ

ಅಂತಾ ವಿರಾಡ್ರೂಪವೆಂಬುದೇಂ ಬ್ರಹ್ಮಾಂಡ |
ದಂತವೆ ಶಿರಂ ವಕ್ಷದೊಳ್ ತೊಳಪ ಸೂತ್ರರ |
ತ್ನಂ ತರಣಿ ಶಶಿಬಿಂಬಮುಡುಗಣಂ ನವಕಂಠಸರವೆನಿಸುವುಗ್ರರೂಪಂ ||
ತಾಂ ತಳೆದು ನಿಂದು ಶತಕೋಟಿ ಸಿಡಿಲಾರ್ಭಟಿಸು |
ವಂತೆ ಗುಡುಗುಡಿಸುತೊಲೆದಾಡೆ ಪದಹತಿಗೆ ದಿ |
ಗ್ದಂತಿಗಳ್ ಮುಗ್ಗುತೊಲೆದಾಡೆ ಧರೆಯೊಲೆದಾಡುತಿರ್ದುದದನೇನೆಂಬೆನು || ೮ ||

ಎಳ್ಗೆಯಿಂ ತಲೆಮಾಲೆ ಫಣಿಭೂಷಣಂಗಳಿಂ |
ಖಳ್ಗಮುಂ ಫಲಕಮುಖ್ಯಾಯುಧಂಗಳನಾಂತ |
ತೋಳ್ಗಳಿಂ ಜುಂಜುದಲೆ ಕೆವಿಮ್ಮಾಸೆ ಕೆಂಗಣ್ಗಳಿಂದಂ ಮಹಾಶೇಷನ ||
ಒಳ್ಗಾಸೆಯುರ್ಚಿಟ್ಟು ಸುರನರಭುಜಂಗರುಗಳ್ಚಿಸು |
ಗಳ್ಗೊಂಬ ಕಾಲ್ದೊಡಗರ್ಬಟ್ಟೆ ನಡೆತಂದು ಕ |
ಟ್ಟಾಳ್ಗಳಧಿದೈವವಿಾಶಂಗೆರಗಿ ಬಿನ್ನೈಸುತಿರ್ದನದನೇನೆಂಬೆನು || ೯ ||

ಸೀಳ್ವೆನಿಳೆಯಂ ಕೀಳ್ವೆನದ್ರಿಗಳನರ್ಕನಂ |
ತೂಳ್ವೆನೇಳಬ್ಧಿಯಂ ಪೂಳ್ವೆನಿದಿರಾದರಂ |
ಬಾಳ್ವೆಗೆಡಿಸುತ್ತಸುಂಗೊಂಬೆನೀ ಬ್ರಹ್ಮಾಂಡಮಂ ಪೋಳ್ವೆನರಿಭಟರನು ||
ಬೇಳ್ವೆನಗ್ನಿಗೆ ಬುದ್ಧಿವೇಳ್ವೆನುಳಿದರ್ಗಿಳೆಯ |
ನಾಳ್ವರಂ ಸದೆವೆನೆಳ್ನೊಳ್ವರಂ ಬಳಿಡಿವೆನೀ |
ರೇಳ್ವರ ಜಗಂಗಳಂ ತಾಳ್ವುದಿಲ್ಲಿಲ್ಲೆನಗೆ ಪೇಳ್ವುದೇಂ ಬೆಸನೆಂದನು || ೧೦ ||

ನೆಗ್ಗಲೋ ಬ್ರಹ್ಮಾಂಡಮಂ ಬ್ರಹ್ಮನೆಲುಗಳಂ |
ನುಗ್ಗುಮಾಡಲೊ ಹರಿಯ ಹರಣಮಂ ತೆಗೆಯಲೋ |
ಸಗ್ಗದಸುಗಳ ಸಿರಿಯಂ ಸುಡಲೊ ಪಾತಾಳದವರನೊರಸಲೊ ಸೊಕ್ಕಿದ ||
ದಿಗ್ಗಜಂಗಳ ಕೊಂಡ್ಗಳಂ ಕೀಳಲೋ ಫಣಿಯ |
ಜಗ್ಗರಿಯ ಪೀಳಲೋ ಬೆಸಸು ಬೆಸಸೆನಗೆನುತ |
ಉಗ್ಗಳಿಕೆಯಿಂದಮಾರ್ಭಡಿಸುತಿರ್ದಂ ಭೀಕರಾಕಾರನೆವೆಳ್ವಿನು || ೧೧ ||

೧-೧ ಘುತಿರ್ದುದು ಮಹಾದ್ಭುತವಾದುದೇನೆಂಬೆನು (ಶಿ.) ೨-೨ ಟ್ಟುಸುರಸುರನರಭುಜಂಗರು (ಹು.) ೩-೩ ಮರಸು । ರ್ಗ (ಶಿ.) ೪ ಬಿ (ಮ.) ೫ ಳುಂ (ಮ.)

ಆರಾದೊಡೇನೆನಗೆ ಬೆಸಸು ಬೆಸಸೀಗ ಸಂ |
ಹಾರಮಂ ಮಾಳ್ಪೆನೆಂದೆನುತಲತ್ಯಧಿಕತರ |
ಘೋರರೂಪಿಂದಲಾರ್ಭಟಿಸುತಿಹ ಪುತ್ರಪ್ರತಾಪಕೆಳೆನಗೆಗೂಡಿದ ||
ಕಾರುಣ್ಯದಿಂ ನೋಡಿ ಸಕಲರಂ ಗೆಲ್ವೆ ನೀಂ |
ವೀರನಿಂತೀ ಭದ್ರಮೂರ್ತಿಯಿಂ ಭದ್ರವದು |
ಕಾರಣಂ ನೀಂ ವೀರಭದ್ರನೆಂದೀಶ್ವರಂ ಕೃಪೆಯೊಳಂದಿಂತೆಂದನು || ೧೨ ||

ಕೇಳಲೆ ಕುಮಾರಕನೆ ದಕ್ಷನೆಂಬವನೆಮ್ಮ |
ನೋಲಗಿಪ ಹರಿಯಜೇಂದ್ರರ್ಗೂಡಿ ಯಾಗಮಂ |
ಮೇಳೈಸಲಾ ಕಥಾಂತರದೊಳೀಶ್ವರಿಯಳಿದಳಾ ಸ್ಥಳಕೆ ನೀನೆ ಪೋಗಿ ||
ಪೇಳೊಮ್ಮೆ ಬುದ್ಧಿಯಂ ರುದ್ರಾಂಶವಿಾಯದೊಡೆ |
ಪಾೞಾಗಿಸಧ್ವರವನೊರ್ವರಂ ಬಿಡದೆ ಪಿಡಿ |
ಯಾೞಾಗಿ ತರ್ಪುದೆಂದೀಶ್ವರಂ ನೇಮಿಸಿ ಕುಮಾರನಂ ಬೀಳ್ಕೊಟ್ಟನು || ೧೩ ||

ಕೇಳ್ದನಾ ಹರವಚನಮಂ ರೋಷವಾರ್ಧಿಯೊಳ |
ಗಾಳ್ದನಂತೇಱಿಗೆಯ್ವೆನೆಂದೆರಗಿ ಮೂದೇವ |
ರಾಳ್ದನಂ ಬೀಳ್ಕೊಂಡು ನಡೆತರುತ್ತೆಂದನಾ ಹರಿಯ[3]ಜಸುರೇಂದ್ರಾದ್ಯರಂ[3] ||
ಬಾಳ್ತಲೆಗಳಂ ಕೊಂಬೆನುಳಿದವರ ಪೊಡೆಗಳಂ |
ಸೀಳ್ದಿಕ್ಕುವೆಂ ನಿಕ್ಕುವಂ ಕಾದಲೆನಗೆ ದೊರೆ |
ಯಾಳ್ದಿಟದೊಳಾರೆಂದು ವೀರಭದ್ರಂ ಕೋಟಿಸಿಡಿಲಂತೆ ಗರ್ಜಿಸಿದನು || ೧೪ ||

ಆ ಧ್ವನಿಗೆ ನಡುಗಿತೀರೇಳ್ಜಗಂ ನಿಖಿಳತಾ |
ರಾಧ್ವಚರಾಚರಿಸಿ ಕೆಡೆದರಿಳೆಯೊಳ್ ಮಹಾ |
ಸಾಧ್ವಸಂ ಮೂಡಿದುದು ಹರಿಯಜಾದ್ಯರ ಹೃದಯದೊಳ್ ದಕ್ಷನಳವಳಿದನು ||
ಅಧ್ವರಾಲಯದ ಮುನಿಪಾಲಕರ್ ಬೆದರಿ ವೃಷ |
ಭಧ್ವಜಾಟೋಪವೆಂದರಿವರೊಳಗೊಳಗೆ ದ |
ಕ್ಷಧ್ವಂಸ[4]ಕಂ ನೆನೆದನೊಂದು ಕಾರ್ಯಮನದೇನೆಂದೆಂಬೆ[4]ನಚ್ಚರಿಯನು
|| ೧೫ ||

೧ ಬ (ಮ.) ೨ ಹುಂ (ಶಿ.) ೩-೩ ಜೇಂದ್ರಾದ್ಯಸುರರಂ (ಶಿ.) ೪-೪ ನೆನೆದನೊಂದಾ
ಸೊಂದು ಕಾರ್ಯಮನದೇನೆಂಬೆ (ಗೋ.)

ರೌದ್ರದಿಂ ಹೂಂಕರಿಸೆ ಪೊರಪೊಣ್ಮಿದಳ್ ಮಹಾ |
ಭದ್ರಕಾಳೀಶಕ್ತಿ ಮತ್ತೆ ಪಡೆದಂ ತನ್ನ |
ತದ್ರೂಪವೀರರಗಣಿತಕೋಟಿಯಂ ಚತುರ್ಬಲಮನಗಣಿತಮನೊಡನೆ ||
ಉದ್ರೇಕದಿಂ ಬಲಂ ನಡೆಯಲಹಿ ದಿಗ್ಗಜ ಕು |
ಲಾದ್ರಿ ಕಚ್ಛಪರದೇನಾದರೋ ಧರೆಯುಂ ಸ |
ಮುದ್ರಂಗಳೊಂದಾಗುತಿರ್ದುವಾ ಕ್ಷಣದೊಳದನೇನೆಂಬೆನದ್ಭುತವನು || ೧೬ ||

ವಿಕ್ರಮದೊಳ್ಳೈದುವ ಚತುರ್ಬಲಾಳಿಗೆ ಧರಾ |
ಚಕ್ರಮುಬ್ಬರಿಪ ಬಹುವಾದ್ಯಘೋಷಕೆ ದಿಶಾ |
ಚಕ್ರಮೆತ್ತಿದ ಸಿಂಧ ಸೀಗುರಿ ಪತಾಕೆ ಚಾಮರ ಛತ್ರತತಿಗೆ ಗಗನ ||
ಚಕ್ರವೀರದೇಳ್ಪ ೧ಕೆಂದೂಳ ದಾಳಿಗೆ ನೆಗಳ್ದ೧ |
ಶಕ್ರಜಗವಿಂಬಿಲ್ಲಿನಲ್ ಬೇಗ ತಮತಮಗ |
ತಿಕ್ರಮಿಸಿ ನೆಲನೀದುದೆನೆ ನಡೆದುದಾ ಸೈನ್ಯಚಕ್ರಮದನೇನೆಂಬೆನು || ೧೭ ||

ಇಂತಾ ಮಹಾಸೇನೆಯಂ ನೆರಪಿ ವೀರಭ |
ದ್ರಂ ತಳರ್ದೂರ್ವಗಣನಾಥನಂ ಕರೆದು ನೀಂ |
ಮುಂತಾ ಶಿವದ್ರೋಹಿ ದಕ್ಷನೆಡೆಗೈದಿ ನಮ್ಮಯ ಬರವನೆಚ್ಚರಿಸದೆ ||
ಎಂತಾದೊಡಂ ಮಹಾದೇವವಿರಹಿತಯಜ್ಞ |
ಮಂತರಿಪುದಾ ರುದ್ರಭಾಗೆಯಂ ಕೊಟ್ಟು ಜೀ |
ವಂತನಾಗೆಂದು ಪೇಳ್ದವನೆಂದ ಮಾತನೆಮಗುಸುರೆಂದು ಬೀಳ್ಕೊಟ್ಟನು || ೧೮ ||

ಜೀಯೆಂದು ನಮಿಸಿ ಬೀಳ್ಕೊಂಡಾ ಗಣೇಶ್ವರಂ |
ವಾಯುವೇಗದೊಳೈದಿ ಶಾಲೆಯಂ ಪೊಗುತೆ ನಿಖಿ |
ಳಾಯುಧಾಧೃತಹಸ್ತನಾಗಿ ಹರಿಯಜರ ಸಂದಣಿಗಳಂ ಬಗಿದು ಪೋಗಿ ||
ಆ ಯಜ್ಞದೀಕ್ಷಿತನ ಮುಂದೆ ನಿಂದೆಲವೊ ನಿ |
ನ್ನಾಯುತಿಕೆಯಿದು ಮಹಾಸಿಂಹಮಂ ಕೆಣಕಿ ಗೋ |
ಮಾಯುಗಣದಿಂ ಬಾಳ್ಕೆನೆಂಬ ಮೂರ್ಖರ ಮಾಳ್ಕೆಯಾಯ್ತು ಕಟ ನಿನಗೆಂದನು
|| ೧೯ ||

೧-೧ ಕೆಂದೂಳಿಗೆ ನೆಗಳ್ದಸುರ (ಶಿ.) ೨ ಗು (ಮ.)

ಆರನೊಲಿಪೊಡೆ ಯಜ್ಞಮಂ ಮಾಳ್ಪರೀ ನೆರೆದ |
ಹಾರುವರ್ ಬ್ರಹ್ಮಾಚ್ಯುತರ್ ನೀವು ಜನಿಸಿದಿರ |
ದಾರಿಂದೆ ನೀವೀಗ ಹುತವಹಂಗಾಹುತಿಯನೀವ ಶ್ರುತಿಮಂತ್ರಂಗಳು ||
ಆರನುರೆ ನುತಿಪುವೆಂದೆಂಬುದಂ ಮರೆದಹಂ |
ಕಾರದಿಂ ಕೆಟ್ಟರಿಯಕಾರಣಂ ಬರಬರಲ್ |
ವಾರುವನ ಮರಿ ಗರ್ದಭಾಕಾರಮಾದೊಲಾಯ್ತಾ ಬಾಳ್ಕೆ ನಿಮಗೆಂದನು || ೨೦ ||

ಕೇಳಿ ಕಿಡಿಕಿಡಿಯಾದನಾ ದಕ್ಷನೆಲ್ಲರುಂ |
ತಾಳಿ ಕಡುರೋಷಂಗಳಂ ಬರಿದೆ ನೀನದೇ |
ಕೂಳುತಿಹೆ ಯಾರವಂ ನಿನಗದೇತಕೆ ಮಂತ್ರತಂತ್ರರಾಹಸ್ಯದರಿತಂ ||
ಹೇಳೀಗ ನೀಂ ಬಂದ ಹದನನೆನೆ ಮುಳಿ[1]ದು ಕ |
ಣ್ಣಾಳಿಗಳ್ ಕೆಂಪಡರಲಿ[2]ನಿಬರಂ ಸದೆವೆನೆಂ |
ದಾಳೋಚನಂಗೈದು ಪತಿವಚನಮರಿದಾ ಗಣೇಶನಂದಿಂತೆಂದನು || ೨೧ ||

ಆರೆಂಬುದರಿಯಿರೇ ಕೇಳ್ ನಿಮ್ಮ ಮತ್ಸ್ಯಾವ |
ತಾರದುಕ್ಕಂ ಮುರಿದ ಬ್ರಹ್ಮ ಶಿರವರಿದ ಜಗ |
ದಾರಾಧ್ಯಶಿಖಿನೇತ್ರಶಿವದೂತನಾಂ ದೇವನಾಜ್ಞೆಯಿಂ ಯಜ್ಞಮುಖದ ||
ಈ[3] ರುದ್ರಭಾಗೆಯಂ ಬೇಡ ಬಂದೆಂ ಕೊಡದ |
ಕಾರಣದಿನೂಳ್ವನರಿ ನಾಯ್ಗಳ್ಗೆ ನಿಮ್ಮಾ ಶ |
ರೀರದಡಗೌತಣಮನುಸುರಬಂದವನಲ್ಲದಾನೂಳ್ವನಲ್ಲೆಂದನು || ೨೨ ||

ಎತ್ತಣವನೀಶ್ವರಂ ರುದ್ರಭಾಗೆಯದೆತ್ತ |
ಕತ್ತ ಹಿಡಿದೀಗಳೀ ಬಾಯ್ಬಡಿಕನಂ ನೂಂಕೆ |
ನುತ್ತೆ ನೂಂಕಲ್ ಬಪ್ಪ ಚರಹಸ್ತಮಂ ಕಡಿಯಲನಿಬರುಂ ಮುಳಿದೈದಲು ||
ಮತ್ತೆಲ್ಲರಂ ಗೆಲ್ದು ವೀರಭದ್ರಂಗೆ ತ |
ದ್ವೃತ್ತಾಂತಮಂ ತಿಳಿಪಬೇಕೆಂದು ಬಂದು ತ |
ನ್ನತ್ತಮಾಂಗಕೆ ಕಯ್ಯನಿಟ್ಟು ಬಿನ್ನೈಸಿದಂ ತಾಂ ಪೋದ ವೃತ್ತಾಂತಮಂ[4] || ೨೩ ||

೧ ನಿ (ಶಿ.) ೨ ಲ (ಶಿ.) ೩ ಆ (ಶಿ.) ೪ ವೃತ್ತಕವನು (ಮ, ಗೋ, ಹು.)

ಆ ಮಾತ ಕೇಳ್ದವಂ ತಾಳ್ದನತಿಕೋಪಮಂ |
ಭೀಮಾವತಾರವೀರಂ ಪಿಡಿದು ಚಾಪಮುಮ |
ನೀ ಮಖಾಲಯಮಂ ಲಯಂಗೈವೆನೆಂದು ಪ್ರತಾಪಮಂ ನುಡಿದು ಮಿಡಿಯೆ ||
ಸೋಮಾರ್ಕರಡಗಿದರ್ ನಡುಗಿದರ್ ಶ್ರೀಪಮು |
ಬ್ರ್ಯಾಮರಗಣಂಗಳಾ ಧ್ವನಿಗೇಳ್ದು ತಾಪಸರ್ |
ತಾಮೊಡನೆ ಸುಕ್ಕಿದರ್ ಸಿಕ್ಕಿದರ್ ಪಾಪವೆಂತಪ್ಪರಂ ಕೆಡಿಸದಿಹುದೆ || ೨೪ ||

ಮೊಳಗಿದುವು ಭೇರಿಗಳ್ ಭಾರಿಗಳ್ ನಡೆದುವಾ |
ಗಳೆ ಧೂಳ್ಗಳೆತ್ತಿದುವು ಮುತ್ತಿದುವು ಛತ್ರಮಂ |
ತಱದುರ್ವಾ ತೇಜಿಗಳ್ ವಾಜಿಗಳ್ ಗಮಕದಿಂ ತೇರ್ಗಳಂ ಸೂಟಿಯಲ್ಲಿ ||
ಸುಳಿಸಿದರ್ ಸಾರಥಿಗಳಾ ರಥಿಗಳೋಜೆಯಿಂ |
ಬಳಸಿದರ್ ಪೊಕ್ಕು ಮಖಶಾಲೆಯಂ ಜ್ವಾಲೆಯಂ |
ಕೊಳಿಸಿದರ್ ಪಟುಭಟರ್ ಖಾತಿಯಿಂ ಭೀತಿಯಿಂ ಸಕಲಜನಮುಳವಳಿಯಲು
|| ೨೫ ||

ಯಾಗಶಾಲೆಯನೊಲ್ದು ಸುತ್ತಲುಂ ಕಾವ ಶತ |
ಯಾಗಚತುರಂಗಮಿವರುರುಬೆಯಂ ಕಂಡು ಘಡ |
ಹೋಗದಿರ್ ಮುಮ್ಮರೆಸಿ ಮಂಟಪಕೆ ಕಿಚ್ಚನಿಕ್ಕಿದ ಕಳ್ಳಬಂಟರಿವರಂ ||
ಬೇಗದಿಂ ಪಿಡಿಯನುತ್ತೊದಗಿ ಬರುತಿರ್ಪರಂ |
ತಾಗಿ ತಲೆಗಳನರಿದು ಮುಂಡರುಂಡಂಗಳಂ |
ಮೇಗಣಿಂ ಹೋಮಕುಂಡದೊಳೈದೆ ಕೆಡಪಿದರ್ ಮಡುಪಿದರ್ ಸುರಭಟರನು
|| ೨೬ ||

ಆನೆ ಕುದುರೆಗಳ ಶುಂಡಿಲ್ಗಳುಂ ಕಾಲ್ಗಳುಂ |
ನಾನಾಭಟಾಳಿಗಳ ಬಾಳ್ಗಳುಂ ತೋಳ್ಗಳುಂ |
ಸೂಸರಥಿಕರ ತಲೆಗಳೊಳ್ಗಳುಂ ಸೀಳ್ಗಳುಂ ಬಾನಿಂದೆ ಬೀಳುತಿರಲು ||
ಏಸಿವಚ್ಚರಿಯೆಂದು ನೋಡಿದರ್ ಬಾಡಿದರ್ |
ಘಾಸಿಯಿಂ ಕೆಟ್ಟೆವೆನುತಾಡಿದರ್ ಕೋಡಿದರ್ |
ತಾನೆ ತನಗೆದ್ದು ಬಿದ್ದೋಡಿದರ್ ಮಾಡಿದರ್ ಭೀತಿಯಂ ಸುರಮುನಿಗಳು || ೨೭ ||

---

೧ ಹೂ (ಪ್ರ. ಮ.)

ಒಳಗೆ ಗಜಬಜವಾದುದಾ ಕ್ಷಣಂ ಭಾವಿಸಲ್ |
ಹೞಸಿದುದು ಯಜ್ಞಗಿಜ್ಞದ ಮಾತಜೇಂದ್ರರುಂ |
ಕೞವೞಿಸಿದರ್ ಮುನಿಜನಾಳಿ ಬಾಯ್ಬಿಡುತಿರ್ದದಸುರಾಂತಕಂ ಮನದೊಳು ||
ತಿಳಿದನೀ ಹದನನರಿದೆಸಗಿ ಪಶ್ಚಾತ್ತಾಪ |
ದೊಳಗಡೆಂ ಕಾರಣಂ ಕಂಡುದಂ ಕಾಣ್ಬೆನಿಂ[೧] |
ಹೞಚಿನೋಡುವೆನೆನುತ್ತೋಡುವ ಸುರಾಳಿಯಂ ಕೂಡಿ ಹುರಿಗೈದನಂದು || ೨೮ ||

ಕಣ್ಗೆಟ್ಟ ದಿಗ್ಪಾಲಪಾಲರಂ ಭೀತಿಯಿಂ |
ನಾಣ್ಗೆಟ್ಟ ಸರ್ವಗಂಧರ್ವರಂ ಪರಿದೆಯ್ದಿ |
ಗೋಣ್ಗಳಂ ತಡವರಿಪ ಯಕ್ಷರಕ್ಷರ್ಕಳಂ ಸುಗಿದ ಕಿನ್ನರ ನರರನು ||
ಬಿಣ್ಗತ್ತಿಗಳನುಗಿದ ಸಿದ್ಧಸಾಧ್ಯರ ನೋಡಿ |
ಮಾಣ್ಗೆ[೨] ನಿಮ್ಮಯ ಭಯಂ ಪೋಪವಿಡಿ ಕಾಳಿಗಕೆ |
ಪಣ್ಗಜಾಶ್ವಮನೆಸುತೆ ನಡೆದನಾ ಗರುಡವಾಹನ ಮಹಾಸತ್ತ್ವದಿಂದೆ || ೨೯ ||

ಭೋರ್ಗರೆದುವನಿತರೊಳ್ ಸಾಳನಿಸ್ಸಾಳಮಾ |
ತೇರ್ಗಳ ಪೊದರ್ ಪೊದಳ್ಳ[೩]ದಿದುವು ಮೈಬೆಮರ್ |
ನೀರ್ಗೞೊಗೆಯಲ್ ವಾಜಿರಾಜಿ ನಡೆದುದು ಭಟರ್ ಲಟಕಟಿಸಿ ಮುಂಕೊಂಡರು ||
ಕಾರ್ಗಾಲದಭ್ರಮೆನಲಾನೆಗಳ್ ನಡೆದುವನಿ |
ಬರ್ಗೂಡಿ ಜಂಭಾರಿಯಂ ಭಾರಿಯಂಕಳಿಕ್ಕಿ |
ದಿರ್ಗೊಳಿಸಿ ನಡೆತಂದನಖಿಳಸುರಸೇನೆಯೊಡವರಲಂದು ದೇವೇಂದ್ರನು || ೩೦ ||

ಕೇಳ್ ಸುಗುಣಭೂಷ ನೀಂ ಸಿದ್ಧರಾಮೇಶ ಸುರ |
ರಾಳ್ ಸುಳಿದುದಾಗಳ್ಕೆ ಸೂರ್ಪದ್ಮಮಭವಬಲ |
ದೊಳ್ ಸಮೀಪದ ಚೂಣಿಯೊಳ್ ದೊರೆಗೆ ದೊರೆಗಳಾ ರಥಕೆ ರಥಮಶ್ವಕಶ್ವಂ |
ಆಳ್ ಸುಭಟರೊಳ್ ಮದೇಭಂಗಳ್ಗೆ ಮದದಾನೆ |
ಗಳ್ ಸಮಮೆಸಲ್ಕಿಂತು ಕಾದುತಿರ್ದರ್ ಪೊಯಿಲ |
ಸೂಳ್ ಸುರಿಯೆ ಕಿಡಿಗಳಂ ಸುಡಿಗಳಡಿಗಡಿಗೆ ಮೂದಲಿಸೆ ಕೇಳದು[೪] ತವನು || ೩೧ ||

---

೧ ನಿದ (ಮ.) ೨ ಙ್ಗ (ಮ.) ೩ ರ್ಗಳ್ಕೆ (ಶಿ.) ೪ ಕು (ಶಿ.)

ಸೂಱ್ಕಿ ಗಜದಿಂ ತಿವಿಸಿದರ್ ಮಾವುತರ್ ಮಡದೊ ।
ಛೌಂಕಿ ಹಯದಿಂದಿರಿದ೧ರಾ ರಾವುತರ್ ಕರುಳ್ಗ೧ ।
ಸೊಂಕೆ ಸರಳಿಟ್ಟಾಡಿದರ್ ವರೂಥಾರೋಹಕರ್ ಭಟರ್ ಖಾತಿಯಿಂದೆ ॥
ಅಂಕೆಗೊಂಡಿರಿದು ತರಿದರ್ ತಲೆಯುನಟ್ಟಿಗ ।
ಕ್ರೌಂಕೆ ರಕ್ತಂ ಪೊನಲ್ವರಿಯಲಜಿಗಿಜಿಯಿಂ ರ ।
ಗಾಂಕಣಂ ಕೆಸರಾಗಿ ಕಾಗೆಗೂಗೆಗಳಾ೨ಗ ಮೇ೨ಲೆ ಸಲಿಯಲ್ ಬೀಲದೊಳು ॥ ೩೨ ॥

ಇರ್ಬಲಂ ಸಮನಾಗಿ ಕಾದಲಿಂದ್ರನ ಮುಳಿಸು ।
ಪರ್ಬೆ ಕಂಡಖಿಳದಿಕ್ಪಾಲಕರ್ ತಂತಮ್ಮ ।
ಸರ್ಬಬಲಸನ್ನಾಹದಿಂದೊತ್ತಿ ಕೋಪದಿಂದಂಬುಗಳ ಪೆರ್ಮಳೆಯನು ॥
ಒರ್ಬೊರ್ಬರೊಂದು ಕಡೆಯೊಳ್ ನಿಲ್ತು ಕರೆವುತಾ೩ ।
ಪೆರ್ಬಡೆಯನೊಳಪೊಕ್ಕು ಬರೆ ಕಂಡು ವಿಕ್ರಮದ ।
ಗರ್ಬದಿಂ ವೀರೇಶನಾರ್ಭಟಿಸಿ ಕೈದೋರಿದದ್ಭುತವನೇನೆಂಬೆನು ॥ ೩೩ ॥

ಬಾಯ್ಗಳಂ ಕೊಯ್ ಬೀಳಹೊಯ್ ಕಾಯ್ದುವೆಣ್ಟೆಸೆಯ ।
ನಾಯ್ಗಳ ಕರುಳ್ಗಳಂ ತಿನಿಸಾ ಮರುಳ್ಗೆನುತೆ ।
ಬಯ್ಗಳಿನ ಬೊಬ್ಬೆಯಿಂ ವೀರೇಶನೆಸೆಯಲಿಂದ್ರಾದ್ಯಷ್ಟದಿಕ್ಪಾಲರ ॥
ಮೆಯ್ಗಳಂ ಕೊಯ್ದುತ್ರಿ ಸಭಕೆ ಕೊಂಡೊಯ್ಯುತಿರೆ ।
ಸುಯ್ಗಳುಣ್ಮಿದುವವರ ವದನದೊಳ್ ಪೇಳ್ವುದೇ ।
ಸುಯ್ಗಳಗ್ನಿಯು ಮುಂದೆ ನಿಲ್ವುವೇ ಕಾಣೆನಳವಿಯೊಳವರ್ಗಳನೆಂದನು ॥ ೩೪ ॥

ಆ ಸೂರ್ಯಮಂಡಲಸಮೀಪಕ್ಕೆ ಪೋಗಿ ಬಳಿ ।
ಕೀ ಸುಧಾಹಾರಿಗಳ್ ಭೂತಳಕೆ ಬೀಳುತ್ತ ।
ದೇಸು ಬಲ್ಪೀ ಪೊಸ ರಥಂಗಳೊಳ್ ನಿಂತು ಬೊಬ್ಬಿಡುತೆಂದರಿದಿದಾಗದೆ ॥
ಮೋಸದೊಳಗೆಚ್ಚು ಸಭಕೆಬ್ಬಿಸಿದ ಬಲ್ಪನೆ ।
ಪಿಸ್ಮ ಸರಿಸದೊಳ್ ತೋರಿ೪ ಕಾಣಬಹುದೆಂದೆನುತೆ ।
ಸಾಸಿರ೫ಸರಳ್ಗಳಸದೋರೊರ್ವರೆಚ್ಚರಂದಾ ರುದ್ರಗಣದ ಮೇಲೆ ॥ ೩೫ ॥

೧-೧ ರಾವುತರ್ ಕರನಾಳು (ಶಿ.) ೨-೨ ಡೆ ಮೇಗೆಸೆರೆದಿರ್ಬ (ಮ.) ; ಗೆ ಮೇಗೆ ಸೇಲಿರ್ಬ (ಮ.) ಗೆ ಮೇಲೆ ಸೇಲಿರ್ಬ (ಪ, ಗೋ.) ೩ ತ್ತೆ (ಮ.) ೪ ತೊಡಕೆ (ಮ.) ೫ ಶಿರದ (ಹು, ಪ, ಗೋ.)

ಸಿಡಿಲ ಭೈ[1]ರವೆತ್ತ ಶಿಶು[2]ಗಳ ಬಳಗವೆತ್ತ[3] ಗುಡಿ |
ಗುಡಿಪ ಸಿಂಹಮದೆತ್ತ ಸೀಳ್ನರಿಗಳೆತ್ತಲಾ |
ಮೃಡನ ಸುತನೆತ್ತ ಸುರರಪಟೆತ್ತ ಕಾದುವೊಡೆ ಕೇಳಿದ್ಮೆ ಸಿದ್ಧರಾಮ ||
ಕಡಿದನಸಿಬರ ಸರಳ ಸಾರಮಂ ಮತ್ತೆಚ್ಚು |
ಪಿಡಿದ ಕಾರ್ಮುಕ ಛತ್ರ ಚಮರ ಹಯ ಸಾರಥಿಗ |
ಳೊಡವೆರೆದ ತೇರ್ಗಳಂ ಕತ್ತರಿಸಿ ಸಮ್ಮುಖದೊಳಾರ್ಭಟಿಸಿ ನಿಂದಿರ್ದನು

|| ೩೬ ||

ಕಂಡು ಹಮ್ಮೈಸಿದರ್ ಕೆಲಕೆಲಂಬರ್ ಭಯಂ |
ಗೊಂಡು ಬಿಳ್ದರ್ ಪಲಂಬರ್ ಮುಂದುಗೆಟ್ಟಿರ್ದರು |
ಗುಂಡಿಗೆಗಳೊಡೆದರೆಬರಾಚರಿಸಿದರ್ ನಡುಗಿದರ್ ಸಲವುಗೆಟ್ಟನಿಜರು ||
ಕಂಡಕಡೆಗಾಲಿ[4] ಪರಿದೊಡನೆ ತಮತಮಗೆ ಮುಂ |
ಕೊಂಡೆಲ್ಲರೆದ್ದು ಬಿಝ್ಜೋಡಿಯಾ ಸರಸತಿಯ |
ಗಂಡನಂ ಮರೆವೊಕ್ಕದಖಿಳದಿಕ್ಪಾಲಕರ ತಂಡಮದನೇನೆಂಬೆನು || ೩೭ ||

ಬಿಡುಮುಡಿಗಳಿಂ ತಪ್ಪುನುಡಿಗಳಿಂ ನಡೆಗಳಿಂ |
ನಿಡುಸುಯ್ಗಳಿಂದೊಡೆದ ಮೆಯ್ಗಳಿಂ ಕೆಯ್ಗಳಿಂ |
ಕಡುಬರೆತ ವದನದಿಂ ರದನದಿಂ [5]ಪದನದಿಂಪಳಿವಧರದಮರನಿಕರಂ[5] ||
ಸೆಡೆದ ಪಿನ್ನೋ[6]ಟದಿಂದೋಟದಿಂ ಘಾಟದಿಂ |
ಕಡಿವಡೆದ ಕಾಲ್ಗಳಿಂ [7]ಪಲ್ಗಳಿಂದೆಲ್ಗಳಿಂ[7] |
ದೊಡ[8]ನೊಡನೆ ನೊಂದು ವಿಧಿಯೊಳ್ ಚೀರಿ ದೂರಿ ತೋರಿದರದ್ಭುತಾಕಾರನಂ[8]

|| ೩೮ ||

ಆರಿವಂ ವಿಲಯಮಾರಾರಿಯೋ ಮಾರಿಯೋ |
ಸಾರಿದಂ[9] ಕಾರ್ಮುಗಿಲ ತಾತನೋ ಭೂತನೋ |
ಭೂರಿವೈರಿಪ್ರಾಣಿಹಾರನೋ ವೀರನೋ ನೋಡಬುಜ[10]ಭವ ಮೇಲನು[10] |
ಆರಯ್ಯದೀಯಾಗರೋಗಮಂ ತೊಡಗಿದರ |
ಪಾರಯ್ಯ ನಿಮ್ಮನಿಂ[11]ಕಾವ ದೇವರ್[12] ತೋರಿ |
ಸಾರಯ್ಯಮಾದ ಕದನದೊಳಿಂದು ನೊಂದು ಸುರಕುಲವೈದಿ ಮೊರೆಯಿಟ್ಟುದು

|| ೩೯ ||

---

೧ ಬ (ಗೋ, ಶಿ.) ೨–೨ ಪ್ರಗೆಳಬ್ಬರೆತ್ತ (ಶಿ.) ೩ ೦ (ಹು, ಮ, ಗೋ.) ೪–೪ ದಧರದಿಂದಮರನಿಕರಂ ಕೆಡೆದುದು (ಮ.); ಪದನಖಂ ಮುರಿವ್ಯೆ ಮವುಪದಮರಗಣಂ (ಹು.) ೫ ವಿಪ್ಪ ನೋ (ಶಿ.) ೬–೬ ಪೆಲ್ಗಳಿಂ ತೋಳ್ಗಳಿಂ (ಮ.) ೭–೭ ನೆ ವಿಧಿಯೊಳ್ ಕೀರಿ ದೂರಿ ತೋರಿದರದ್ಭುತಾಕಾರದವ ಕಾರಮಂ (ಹು.) ೮ ಪಂ (ಮ.) ೯ ಜ (ಹು.) ೧೦–೧೦ ಜಾ ಮೆಲ್ಲನೆ (ಶಿ.) ೧೧ ನುಂ (ಶಿ.) ೧೨ ವನ (ಮ.)

ಕೇಳಿ ಕಾಹೇರಿದಂ ಮೀರಿದಂ ಸಾರಿದಂ |
ಕಾಳೆಗಮನುಬ್ಬಿನಿಂ ಕೊಬ್ಬಿನಿಂ ತಬ್ಬಿನಿಂ |
ತ್ರೈಳಿಭವುಕ್ಕುವುದೆ ಬಳ್ಕುವುದೆ ತುಳ್ಕುವುದೆ ನಾಡೆ ಭಯರಸಮೆಮ್ಮೊಳು ||
ಏಳಿಸನರಾತಿಯಿಂ ಪೋತಿಯಿಂ ಖಾತಿಯಿಂ |
ತಾಳದಿರಿ ಸುರಬಲಂ ನರಬಲಂ ಪರಬಲಂ |
ತೂಳ್ದು ಸುತ್ತಲ್ ಮುತ್ತಲೊತ್ತಲೆಂದಬ್ಜಗರ್ಭಂ ಗರ್ಜಿಸುತ್ತಿರ್ದನು || ೪೦ ||

ಕೆಟ್ಟೋಡಿದವಸುರ ಸುರ ನರ ಭುಜಂಗರ್ ಭೀತಿ |
ಬಿಟ್ಟೋಡಿದಬ್ಜಾರ್ಕರ್ ವಸು ಮನುಗಳೊಡೆಯನಂ |
ಬಿಟ್ಟೋಡಿದಪ್ಸರರ್ ಕಿನ್ನರರ್ ಸಿದ್ಧ ವಿದ್ಯಾಧರರ್ ಕಿಂಪುರುಷರು ||
ಪಟ್ಟೈಸಿದರ್ ಜಗತ್ತ್ರಿತಸೇಮದಿಂದೆ ಪೊರ |
ಮುಟ್ಟೈಸು ವಾದ್ಯಘೋಷಣೆಗಳಿಂ ನಡೆತಂದು |
ಮುಟ್ಟೈಸಿ ಮುತ್ತಿ ಮೂದಲಿಸಿದರ್ ಬಲಿಸಿದರ್ ಕಲಹಮಂದನೇನೆಂಬೆನು || ೪೧ ||

ಉರಗಂಗಳುರವಣಿಗೆ ಗರುಡಕುಲಮಳಿಗುಮೇ |
ಕರಿಗಳುರುಬೆಗೆ ಸಿಂಗದದಟು ಕೆಡುಗುಮೆ ಸೊಕ್ಕಿ |
ದೆರಳೆಗಳ್ ಮುತ್ತೆ ಪುಲಿವಳಗಮೆಂ ಪಾಳಕ್ಕುಮೇ ಬ್ರಹ್ಮಬಲಮೊತ್ತಲು ||
ಹರಗಣಂಗಳ್ಗೆ ನೋವಕ್ಕುಮೇ ನಿಮಿಷದೊಳ್ |
ಪರಬಲಂ ಸಾಸಿರಮಹಾಪದ್ಮಮಳಿದುದ |
ಚ್ಚರಿಯಹಾಯ್ತು ಸಂಗರಂ ಭಂಗಮಾದರ್ ಸಕಲಸುರರದೆಂ ವಣ್ಣಿಸುವೆನು || ೪೨ ||

ಮೋಡಿತ್ತಿದರ್ ತರಿದರಿರಿದರ್ ಕೊರೆದರುರುಬಿ ಬೆಂ |
ಬತ್ತಿದರ್ ಸಾರ್ದಾರ್ದರ್ ಪೊರ್ದೆರಗಿದು ಬಾ |
ಳ್ತಿತ್ತ್ರ ಜಡಿದರ್ ಪೊಡೆದವಡೆದರಾ ಬ್ರಹ್ಮಾಂಡಮಂ ಬೊಬ್ಬೆಯುಬ್ಬರದೊಳು ||
ಮುತ್ತಿದರ್ ಕೆಡಹಿದರ್ ಕೊಡಹಿದರ್ ಮಡಹಿದರ್ |
ಮುತ್ತಿರಿಯೆ ಮೆಟ್ಟಿದರ್ ಪೆಟ್ಟಿದರ್ ಕೊಟ್ಟಿದರ್ |
ಪತ್ತುರಂ ಬಿತ್ತರದೊಳೊತ್ತರಿಸಿ ಹರಗಣಂ ಸುರಗಣವ ಬೆಂಕೊಂಡುದು
|| ೪೩ ||

---
೧ ದೂ (ಮ.) ೨ ೪ (ಶಿ.) ೩ ಬ (ಹು, ಗೋ.)

ಸುರಪಂ ಸುರುಳ್ದನಲನಳಲ್ದಂ ಯಮಂ ಯಮಳ |
ಕರಮನುರೆ ಮುಗಿದು ದನುಜಂ ನಿಜಂಗೆಟ್ಟು ತ |
ದ್ವರುಣನಿರೆ ಶರಣೆಂದು ವಾಯು ಕಾಲ್ಗೆಂದು ಧನದಂ ಮನಕೆ ಮುಂಚಿ ಪಾಯ್ದು ||
ತರಣಿಗಳ್ ಸರಣಿಗೆಟ್ಟಾ ಮನುಗಳನುಗುಂದಿ |
೧ಗರಗಳ್ ಕರಂಗಿ ವಸುಗಳ್ ಮುಸುಂಕಿಟ್ಟೊಂಡೆ೧ |
ಸರಸಿಜಭವಂ ಕಂಡು ಕಂಡು ಕಾಳೆಗಕೆ ಮುಂಕೊಂಡನದನೇನೆಂಬೆನು || ೪೪ ||

ಮುರಿದ ಬಲಮಂ ಜರೆದು ಪಿಂದಿಕ್ಕಿ ಮುಂದೆ ತ |
ನ್ನುರುವಾತ್ಮಬಲಮೆಡಬಲಂಗಳೊಳ್ ಸಂದಣಿಸೆ |
ತರಗೆಲೆಗಳಗ್ನಿಗಿದಿರಪ್ಪಂತೆ ರುದ್ರಬಲಕಿದಿರಾಗಿ ನಡೆದಜಬಲಂ ||
ಪೆರಸಾರ್ ಜಗತ್ಕರ್ತೃ ಬಂದನದೆ ಕೊಂದನದೆ |
ಬರಿದೆ ಕೆಡಬೇಡ ತೊಲತೊಲಗೆಂಬ ಕಹಳೆ ಮುಂ |
ದೊರಲೆ ಬರಸಿಡಿಲಂತೆ ಬ್ರಹ್ಮನಾರ್ಭಟಿಸಿ ತಾಗಿದನಂದು ಹರಬಲವನು || ೪೫ ||

ಎಲ್ಲಿರ್ಪನಿನಿತು ಪೊಳ್ತೀ ಸುರಬಲಂಗಳಂ |
ಚೆಲ್ಲವಡಿದಣ್ಣನಂ ತೋರ್ ತೋರೆನುತ್ತೆ ಬಲ್ |
ಬಿಲ್ಲನೊದರಿಸುತಂಬುಗಳ ಮಳೆಗಳಂ ಕರೆವುತಬ್ಜಗರ್ಭಂ ನೂಂಕಲು ||
ಬಲ್ಲಿದರ್ ತಾಗಿ ಹಿಮ್ಮೆಟ್ಟಿದರ್ ಕೆಲಬರ |
ಲ್ಲಲ್ಲಿ ನಿಂದರ್ ಕೆಲಬರಳವಳಿಯೆ ಕಂಡು ಸುರ |
ದಲ್ಲಣಂ ವೀರನಾ ಬ್ರಹ್ಮನಿದಿರೊಳ್ ನಿಂದು ನುಡಿದನದನೇನೆಂಬೆನು || ೪೬ ||

ಉಕ್ತಿಸತಿಯರಸ ನೀಂ ಚತುರಾನನಂ ಪರಮ |
ಭಕ್ತನೆಂದೀಶ್ವರಂ ನಿನಗೆ ಕೃಪೆಯಿಂದೆ ಸು |
ವ್ಯಕ್ತಮಪ್ಪೀ ಜಗತ್ಸೃಷ್ಟಿಯೊಡೆತನವಿೞಾಯೆ ಮಗನ ಮರುಳಪ್ಪಿ ನಿನ್ನ ||
ಯುಕ್ತಿಗೆಡಿಸಿತು ಜಗಲ್ಲಯಕಿಟ್ಟ ಯಜ್ಞದಾ |
ಸಕ್ತಿಯಂ ಸುಡು ಶರಣ್ಬೊಗು ಶಿವನನಲ್ಲದೊಡೆ |
ಶಕ್ತನಾಗೇಳ್ ಸಮರಕೆನೆ ಬ್ರಹ್ಮನಂದು ಘನರೋಷದಿಂದಿಂತೆಂದನು || ೪೭ ||

೧ ಕರಗಳ್ ಕರಂ ಮುಗಿದು ವಸುಗಳ್ ಮುಸುಂಕಿಟ್ಟು (ಹು.)

ಬಿಟ್ಟ ಸಂಸಾರ ನಿನ್ನ ಪೆಸರಂದೇಸೆವುಗವಾರ್ |
ಕೊಟ್ಟರಿ ಬ್ರಹ್ಮತ್ವಮಂ ಪುಸಿಯನಿಂತು ಹ |
ಸ್ಕಟ್ಟುವರೆ ನೀನೆಮ್ಮೊಳಿಂದಜಂ ಸರಳ ಸಾರಂಗಳಂ ಕರೆವುತಿರಲು |
ನೆಟ್ಟ ಸಸಿಯೆಂದಿನ್ನೆಗಂ ತಾಳ್ದರೆಮಗಂಬು |
ದೊ[೧]ಟ್ಟೈಲಾ ಭಾವು ನಿನ್ನುಳಿದಿಂ ಶಿರಂಗಳಂ |
ಕುಟ್ಟಿ ಶಿವರುಂಡಮಾಲೆಗೆ ಕೊಡುವೆನೆಂದು ಕಣೆಗಡಿದೆಚ್ಚನಾ ವೀರನು || ೪೮ ||

ಕೇಳ್ದೊಸತನೆಲೆ ನಾನು ವೀರನೆಚ್ಚಂಬುಗಳ್ |
ಸೂಳ್ಪೆಚ್ಚ ಸೂತಾಸ್ತ್ರಮಂ ಕೊಚ್ಚಿ ವಿಧಿಕಾಯ |
ಮೊಳ್ದಕ್ಕ ತ್ರ[೨]ಟ್ಟಚ್ಚಲಾ ಕ್ಷಣಂ ಗುಡಿಗುಡಿಸಿ ಕೋಪದಿಂ ಗಾಯವಡೆದ ||
ಕಾಳ್ಪಂದಿಯಂತಜಂ ಪೊಸರಥದೊಳ್ಳೈದಿ ಬಿ |
ಲ್ಲಾಳ್ಪಂಥಗಾರ ನೀನಹುದೆನುತ್ತೆಚ್ಚಂಬು |
ಗಳ್ಪೊಳೆವುತ್ತೈತರಲ್ ವೀರಭದ್ರಂ ಕಡಿದು ಮಗುಳೆಚ್ಚು ಬೊಬ್ಬಿರಿದನು || ೪೯ ||

ಪುತ್ತಾ ರಥಾಶ್ವಮಂ ತೆವರಿದುವು ಸವರಿದುವು |
ಸುತ್ತಣ ಬಲಂಗಳಂ ಮುತ್ತಿದುವು ಕುತ್ತಿದುವು |
ಪೊತ್ತು ವಿಧಿಯಂ ಗಗನಕೆತ್ತಿದುವು ಸುತ್ತಿದುವು ಬ್ರಹ್ಮಾಂಡದೆಲ್ಲೆಡೆಯೊಳು ||
ಮತ್ತೆ ರಣರಂಗಕೀಡಾಡಿದುವು ಕಾಡಿದುವು |
ಪತ್ತು ದೆಸೆದೆಸೆಗಳೊಳಗುಬ್ಬಿದುವು ಪಬ್ಬಿದುವು |
ಸುತ್ತಲೆತ್ತೆತ್ತಲುಂ ತೋರಿದುವು ವೀರಿದುವು ವೀರಭದ್ರನ ಕಣೆಗಳು || ೫೦ ||

ಈ ತೆರದೆ ವೀರಭದ್ರಂ ವಿಧಿಯನೊಡನೊಡನೆ |
ಘಾತಿಸುತ್ತಿರೆ ಕಂಡು ಘನರೋಷದಿಂ ಸುರ |
ವ್ರಾತಮುಡಿಗಡಿಗೆ ಮುಸಗಲ್ ಕಂಡು ನಸುನಗುತ್ತಿರೆ ಭದ್ರಕಾಳಿಯೊಡನೆ |
ಜಾತಿಯಂ ಕೊಲುತಿರ್ದಳೊಂದೆಸೆಯೊಳಾ ಭೂತ |
ಬೇತಾಳರಾರ್ಭಟಿಸಿ ನುಂಗುತಿರೆ ಕಾಣುತ್ತ |
ಶೀತಕರೋಪಂ ಬ್ರಹ್ಮನಂದು ಬ್ರಹ್ಮಾಸ್ತ್ರಮಂ ತೊಟ್ಟೆಚ್ಚನೆಸೆಂಜಿನು || ೫೧ ||

೧ ಗೊ (ಮ.) ೨ ಥ (ಪ, ಹು.)

ಕಿಡಿಯನುಗುಳುತೆ ಪೊಡವಿಯಂ ಸುಡುತೆ ಗಿರಿಗಳಂ |
ನಡುಗಿಸುತೆ ಕಡಲನುಕ್ಕಿಸುತುಡುಗಣಂಗಳಂ |
ಕೆಡೆಪುತ್ತೆ ನಡೆತಪ್ಪ ಬ್ರಹ್ಮಾಸ್ತ್ರಮಂ ಕಂಡು ನಸುನಗುತೆ ರುದ್ರಾಸ್ತ್ರದಿಂ ||
ನಡುವೆ ಖಂಡಿಸಿ ರತ್ನಮಕುಟಮಂ ಸವರಿ ಪಣೆ |
ಯೊಡೆಯೆಚ್ಚು ಸಾರಥಿ ರಥಾಶ್ವಮಂ ಕೊಚ್ಚಿ ಪೆಡ |
ಗುಡಿಗಟ್ಟಿ ವಿಧಿಯನಂಬಿಂ ಮತ್ತೆ ವೀರಭದ್ರಂ ಕೆರಳುತೈತಂದನು || ೫೨ ||

ಮೇಲಾತನಾಪ್ತರಂ ಸವರಿ ಮಾರಾಂತ ಸುರ |
ಪಾಲಕನ ತೋಳ್ಗಳಂ ಕಡಿದು ಮತ್ತಾ ಶಿಖಿಯ |
ನಾಲಗೆಯನೇಳಾಗಿ ಸೀಳಿ ಪೂಷನ ಪಲ್ಗಳಂ ಕಳೆದು ಭಗನ ಕಣ್ಣ ||
ಆಲಿಯಂ ಕಿಳ್ತು ಚಂದ್ರನನೊರಸಿ ಮಿಕ್ಕ ಗ್ರ |
ಹಾಳಿ ದಿಕ್ಪಾಲ ವಸು ಮನುಗಳವಯವದೊಳಗೆ |
ಮೇಲಾದ ಕುರುಪುಗೊಂಡೆಲ್ಲರಂ ಕಟ್ಟಿ ಭೂತಾಳಿಗಳ ವಶಕಿತ್ತನು || ೫೩ ||

ಕೂಡೆ ಕಳ^೧^ವಳಮಾಯ್ತು ಕ^೧^ಳನೊಳಗೆ ಮಿಕ್ಕ ಭಟ |
ರೋಡಿ ಮಖಶಾಲೆಯಂ ಪೊಕ್ಕಸುರಮಥನನಂ |
ದಾಡುವರ್ ನಿನ್ನ ನೆಲೆ ವೈಕುಂಠ ನಿನಗೀಗಳಾಯ್ತು ಸುರಮಥನನಾಮಂ ||
ಕಾಡ ಯಜ್ಞಮನೆಸಗಿ ಸಕಲರಂ ಭೂತಗಣ |
ಕೀಡು ಮಾಡಿದರವರ್ ಮಡಿದರಿನ್ನಿರದೆ ನೀಂ |
ನೋಡಿ ಬದುಕಲ್ಲದೊಡೆ ಸಮರಕೇಳೆಂದು ರಣಭಂಗಮಂ ಪೇಳ್ದರಂದು || ೫೪ ||

ಕೇಳಿ ಸಲೆ ಮೌನಮಂ ತಾಳಿ ದುಃಖಾಂಬುಧಿಯೊ |
ಳಾಳಿ ಧೃತಿಯಂ ಮನಕೆ ಪೇಳಿ ಚಿಂತಾಬ್ಧಿಯಂ |
ಪೂಳಿಯೋಡುವ ಪಟುಭಟಾಳಿಯಂ ಮರಳಿ ಬರವೇಳಿಮೆಂದುಸಿರಿ ಪಗೆಯ ||
ಏಳಿಸುವೆನದಟರಂ ಸೀಳಿಸುವೆನಂಗಮಂ |
ಬೀಳಿಸುವೆನಗ್ನಿಯೊಳ್ ತಾಳಿ ಸುರರೆಂದು ದು |
ವ್ಯಾಳಿಸುತೆ ಮಂದಿರವದೋಳಿ ಸುತ್ತಲ್ ಮುಸುಕೆ ತೂಳದಿಂ ಹರಿ ನಡೆವನು
|| ೫೫ ||

೧-೧ ಕಳಮಾಯ್ತು ಖ (ಹು, ಮ.)

ಮುತ್ತಿಂದ ಮೊದಲಾದ ದಿಗ್ಗರಕುಮಾರರ್ |
ಕೀತ್ತ್ರಿ ತರಣಿ ಮೊದಲಾದ ಗ್ರಹನಂದನರ |
ಮೊತ್ತಮುಜನಾಪ್ತಸ್ತೈನ್ಯಂ ಸಕಲದೇಶಪತಿಗಳ ಸುತರ್ ಕೋಪದಿಂದೆ ||
ಎತ್ತೆತ್ತಲುಂ ಪೋದವರ್ ಮರಳಿ ಕೂಡೆ ಬಂ |
ದೆತ್ತಿ ನಡೆದರ್ ತಮ್ಮ ತಂದೆಗಳ ಹರಿಬದಿಂ |
ಸತ್ತ್ರ ಬಲವೆದ್ದು ಬಂದಂತೆ ದಿಗ್ಘರೆಗಳಂ ಧೂಳಿಯಿಂ ಬಾಸಣಿಸುತೆ || ೫೭ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮುಂ ಸಕಲಭೋಗಮುನ |
ನಂತಸೌಭಾಗ್ಯಮುಂ ಕೊಟ್ಟು ರಕ್ಷಿಸುವನಾ |
ಕಂತುಹರಸಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೮ ||

ಅಂತು ಸಂಧಿ ೩೧ಕ್ಕಂ ಪದಗಳು ೧೧೯೪ಕ್ಕಂ ಮಂಗಳಮಹಾಶ್ರೀ

ಮೂವತ್ತೆರಡನೆಯ ಸಂಧಿ

ಸೂಚನೆ

ಪಕ್ಷಿವಾಹನನನುರೆ[೧]ಗೆಲ್ದು ಸುರರಂ[೧] ತರಿದು |
ದಕ್ಷಶಿರವರಿದು ಸೆರೆವಿಡಿದೆಲ್ಲರಂ ವಿರೂ |
ಪಾಕ್ಷನೆಡೆಗೈತರಲ್ ವೀರಭದ್ರೇಶಂಗೆ ಶಾಂತಿಯಂ ಮಾಡಿಸಿದನು ||

ಚಿದ್ರೂಪ ಚಿನ್ಮಯ ಜಗದ್ರಕ್ಷ ಕರುಣಾಸ |
ಮುದ್ರ ಗುರುತರವೀರಭದ್ರ ದುರಿತವ್ರಜೋ |
ಪದ್ರವಚ್ಛೇದನ ಲಸದ್ರಾಜರಾಜಸಖ ರುದ್ರಾಣಿಯರ್ಧದೇಹ |
ರುದ್ರಭವಬಂಧನ ಶಿವದ್ರೋಹಿದಕ್ಷಮದ |
ವಿದ್ರಾವಣ ಪ್ರಸ್ಥಿತೋದ್ರೇಕದೈತ್ಯಮದ |
ಛಿದ್ರ ವಿಶ್ರುತತರ ವಿಯದ್ರಮ್ಯಕೇಶನೆ ವಿರೂಪಾಕ್ಷ ಸಲಹೆಮ್ಮನು || ೧ ||

ಆಲಿಸೈ ರಾಮ ಹರಿ ಕಾಳೆಗಕೆ ನಡೆಯಲೆಡ |
ದಾಲಿ ತೋಳ್ ತೊಡೆಗಳುರೆ ಕೆತ್ತಿದುವು ಮಾರ್ಗಮಂ |
ವ್ಯಾಳ ಶಶ ಕಾಕಾದಿಗಳ್ ಕಟ್ಟಿಯುಂ[೨] ಬಗೆಯದಂತು ತಲೆ ಪೋಪಬಳಿಗೆ |
ಕಾಲೆ ಹೊಣೆಕಾರನೆಂದೆಂಬ ಗಾದೆಗೆ ಸಂದು |
ಮೇಲನರಿಯದೆ ಬಂದು ಕಂಡನಾ ವೀರಶರ |
ಜಾಲದಿಂ ಪುದಿದ ರಣರಂಗಮಂ ಹತಪಟುಭಟಾಂಗಮಂ ಸುರಭಂಗಮಂ || ೨ ||

ಎತ್ತಿ ಕೈಕೋಳಿಲ್ಗಳಿಂ ಕಟ್ಟುವಡೆದನಿಬರಂ |
ತತ್ತಧಿಮಿಕೆಂದು ಕುಣಿದಾಡಿಸುವುದಂ ಮರುಳ್ಗ |
ಳೆತ್ತಲೆನ್ನದೆ ವಿನೋದಂಗಳಿಂದೈರಾವತಾದಿವಾಹನಮನೇರಿ |
ಸುತ್ತಿಸುವುದಂ ಘಾಯದಿಂ ಹೊರಳಿ ನರಳಿ ಬಾ |
ಯ್ಬತ್ತಿ ವಿಧಿಯಂ ಬಯ್ವುತಿರ್ಪರಿವೆಣಂಗಂಡು |
ಚಿತ್ರಜಸಿತಂ ಪ್ರಳಯಚಿತ್ತಜಾ[೪]ರಾತಿಯೆನೆ ರೌದ್ರದಿಂ[೪] ನಡೆತಂದನು || ೩ ||

೧-೧ ಗೆಲ್ದುವಿಳಸಂ (ಶಿ, ಗೋ.) ; ಗೆಲ್ದು ಖಳರಂ (ಹು, ಮ.) ೨ ಮುಂ (ಮ.)
೩ ಕಾ (ಹು,) ೪-೪ ರಿಯೆನೆ ರೌದ್ರತ್ವದಿಂ (ಶಿ, ಗೋ.)

ಘೋರೆಂದುವಹಿಪಾದ್ಯಂಗಳಾನವೀ ಕಡೆಗೆ |
ಸಾರೆಂದುಸರಿಗಳಂ ಕಹಳೆಗಳ್ ತಿತಮುಗೆ ದೊರೆ |
ಬಾರೆಂದನಂತಗಜ ಹಯ ರಥ ಪದಾತಿವೆರಸ್ಯೆದಿದರ್ ದೊರೆದೊರೆಗಳು ||
ಬಾರೆಂದು ಪಗೆಗಳಂ ಮೂದಲಿಸಿ ಕರೆದೆಮ್ಮ |
ನಾರೆಂದು ಸೆಣಸಿದಿರಿ ಮೊದಲೆ ನಿಮ್ಮೊಡೆಯನಂ |
ತಾರೆಂದು ಚೂಣಿಗರ್ ಕಾದುತಿರೆ ಕಂಡು ಹರಿ ಕೋಪದಿಂದಾ ಕ್ಷಣದೊಳು || ೪ ||

ಘೀಳಿಡಲ್ ದಿಕ್ಕುಗಳ್ ಸಿಂಜಿನಿನಿನಾದದಿಂ |
ಸಾಲಿಡಲ್ ಶಿಖಿಕಣಂ ಬಾಣಮಂ ಪಿಡಿದಿಂತು |
ಘೋಳಿಡಿಸಿ ಸವ್ಯ ಬಲಮುಂ ಕೊಂದು ಬ್ರಹ್ಮಾದ್ಯರಂ ಕಟ್ಟಿದಾತನೊಡಲಂ ||
ಸೀಳಿಡು ದಿಶಾಬಲಿಗೊಡೆಂದೆಸೆಲ್ ವೀರಬಲ |
ವಾಳಿಡುಕುದೊಳ್ ಕರಿತುರಂಗರಥಸಂದಣಿಯ |
ಮೇಲಿಡಿಮುವಂಬುಗಳ್ ಸುರಿದುವರುಣಾಂಬುಗಳ್ ಪೊಳಲೆಸಚ್ಚರಿಯನು || ೫ ||

ಅಂಬುಜಾಂಬಕನಂದು ಬೆಂಬಿಡಿವುತುರ್ಬಿ ಕ |
ರ್ಣಂಬರಂ ತೆಗೆದು ಬಿಟ್ಟಂಬುಗಳ್ ಗಗನಮಂ |
ತುಂಬಿದುವು ದೆಸೆಗಳೊಳ್ ಮುಂಬರಿದುವಿಂಟಿದುವು ಬಾಂಬೊಳೆಯನಬ್ಜಾರ್ಕರ |
ಬಿಂಬಮುರಿವುತ್ತೆ ವಿಶ್ವಂಭರೆಯ ಸುತ್ತುಮು |
ತ್ತಂ ಬಲಿದು ಪೂಳಿ ಸಪ್ತಾಂಬುಧಿಯ ಸುಭಟದೇ |
ಹಂಬೊಕ್ಕು ಖಂಡಮುಂ ತಿಂಬುವೆನೆ ಕವಿದುವೇನೆಂಬೆನಾ ಹರಿಯುದಟನು || ೬ ||

ತಾಗಲಾನೆಗಳ ಗಳಮುಂ ಮಾವುತರ್ ಧರೆಗೆ |
ಸೂಗೂರಿ ಬೀಳೆ ತುರಗದ ಮೊಗಂ ಮೊಗರಂಬು |
ಸಾಗ ಗಗನಕೆ ಚಿಗಿಯೆ ರಾವುತರ್ ತರತರದ ಕೈಖಡ್ಗವೆರಸಿ ಬೀಳೆ ||
ಮೇಗೆ ರಥಿಕಾಳಿ ಕಾಳಿಕೆಗಾರೆ ಜೀವನಂ |
ಜೋಗಿ ಭೋಗಿಸೆ ಸುಭಟರಮುರಿಯುರೊಳಮುರಿ ಜಗ |
ಕಾ ಗರಿಯ ಸಾಯುಸಾಯಾಸಮುಂ ಬೀರೆ ಬೀರಿದನಚ್ಯುತಂ ಕಣೆಗಳ || ೭ ||

---

೧ ವಾದ್ಯಗಳ ಖನಮ (ಮು.) ೨-೨ ತಮುತಮುಗ (ಹು.) ೩ ಘೋ (ಶಿ, ಗೋ, ಹು, ಮು.) ೪ ದಿದಲ್ (ಹು.) ೫ ಳ (ಹು.) ೬ ಕಾ (ಶಿ.)

ನಾರಾಯಣಂ ಮಹಾರೋಷದಿಂದೆಸುತಿರ್ಪ |
ತೋರಾಯುದೆಸುಗೆಯಿಂ ತರಹರಿಸದಾಕ್ಷಣಂ |
ಪೂರಾಯುಗಾಯುದಿಂ ಬಲಮುಳಿಯೆ ಕಂಡು ಸಂಹಾರಾವತಾರನಾಗಿ |
ಸಾರಯುತನಿವನಾವನೋ ರಣಕೆ ಲೇಸುಲೇ |
ಸಾರಯುಲಿವಂ ಗುಣಕೆ ಮತ್ಸರವೆ ಸೂತ ಹರಿ |
ಸಾರಯುದೊಳೀ ರಥವನಲ್ಲಗೆಂದೀಶ್ವರಕುಮಾರಕಂ ನೇಮಿಸಿದನು || ೮ ||

ಅ[1]ದೆ ವಜ್ರಿಗಿರಿವಜ್ರನಗ್ನಿವನ ದಾವಾಗ್ನಿ |
ಯ[2]ದೆ ಯಮ ಯಮಂ ನಿರುತಿಸಿಂಹಸಿಂಹಾರಿ ಮ |
ತ್ರ[3]ದೆ ವರುಣತಿಮಿರತಿಮಿರಾಪಹ್ನತ್ಪವಮಾನಮೇಘಪವಮಾನಸ[4]ದೆಕೋ ||
ಅ[5]ದೆಕೊ ಯಕ್ಷೇಶಗಜಗಜಮಥನನಿದೆ ಬಂದ |
ನ[6]ದೆ ಬ್ರಹ್ಮಮದನಮದನಾರಿ ವೀರಂ ಬಂದ |
ನ[7]ದೆ ಕಂಡು ಬದುಕೆಂದು ವಂದಿಗಳ್ ಪೊಗಳೆ ಹರಿಯಂ ತಡೆದನಾ ವೀರನು || ೯ ||

ಅಚ್ಚರಿಯನೀ ನಿನ್ನ ಬಾಣಮಿತ್ತುವ್ರ ಮನಕೆ |
ಕೆಚ್ಚೆರ್ದೆಯ ಸುಭಟ ನೀನಾರ್ ನಿನ್ನ ಪೆಸರದೇ |
ನುಚ್ಚರಿಸು ದಿಟ್ಟನಹೆಯಾಂ ಗೆಲ್ದವರೊಳೆಂದು ವೀರನೆಚ್ಚಂಬುಗಳನು ||
ಕೊಚ್ಚಿ ನಸುನಗೆಯೊಳಗೆ ನೀನೆನ್ನ ಸಾಹಸಕೆ |
ಮೆಚ್ಚಿ ಫಲವೇಂ ಬೇಗದಿಂ ಸುರರ ಸೆರೆಗಳಂ |
ಚೆಚ್ಚರಂ ಬಿಟ್ಟು ನಡೆಯೆನಲಚ್ಯುತಂ ತಾಳ್ವನಲ್ಲೆಂದು ತೆಗೆದೆಚ್ಚನು || ೧೦ ||

ನಕ್ಕನಾ ನುಡಿಗೆ ವೀರಂ ಸುರರ ನೀಂ ಬಿಡಿಪ |
ಕಕ್ಕುಲತೆಯೆಂತಕವತಾರಂಗಳೊಳ್ ಬರ್ಪ |
ಲೆಕ್ಕಮುಸುರುವೆ ನಿನ್ನ ನೆಸೆವಚ್ಯುತತ್ವಮಂ ನೀಲ್ನಾಡಲೇಕೆ ನಿನಗೆ ||
ಸೊಕ್ಕೇರಿತಾ ಯಾಗಪಶುರುಚಿಗಳಿಂದದಂ |
ಕಕ್ಕಿಸುವೆನೀ ಕ್ಷಣಂ ನೋಡೆನುತೆ ಕಣೆಗಡಿದು |
ಕಕ್ಕಸದ ಬಾಣವೊಂಬತ್ತರಿಂ ಹರಿವರೂಥವನೆಚ್ಚು ಬೊಬ್ಬಿರಿದನು || ೧೧ ||

೧ ಇ ; ೨ ಯಿ ; ೩ ತ್ರಿ ; ೪ ನಿ ; ೫ ಇ ; ೬ ನಿ ; ೭ ನಿ (ಮ.) ೮ ನಾ (ಮ.)

ತೀರ್ಥರುಗುತಾಗಸಕೆ ಪೋಗಿ ಬಳಿಕುಗ್ರನೇ |
ಪತ್ರಾಗಲುರಿದು ಬೀಳ್ವನಿತರೊಳ್ ಮಾಧವಂ |
ಮಾತ್ರಾಂಗನಳವಡಿಸಿ ಬಲೆ ಭಾಪು ವೀರೇಶ ನಿನ್ನ ಸರಿ ಸಾಮರ್ಥ್ಯರು ||
ವರ್ತಿಸುವರಾರ್ ಜಗದೊಳೆಮ್ಮ ಬಾಣಂಗಳತಿ |
ಘೂರ್ತೆಯುಸೀಕ್ಷಿಸೆಂದೆಸೆಯಲೈತರುತಿರ್ಪ |
ಕಾರ್ತಸ್ವರಾಂಕಿತಶರಂಗಳಂ ಕತ್ತರಿಸಿ ಮಾಧವಂಗಿಂತೆಂದನು | ೧೨ ||

ಪತ್ರಿವಾಹನ ನಿನ್ನ ನಾಂ ಕರುಣದಿಂ ಜೀವ |
ಮಾತ್ರದಿಂ ಬಿಡುವೆನೆಂದಿರ್ದೆನೈಸೆನಗೆ ಸಮ |
ಶತ್ರುವೇ ನೀನೆನುತೆ ಬತ್ತಳಿಕೆಯಿಂದೆ ಮಸೆವೆತ್ತಂಬನೈದನುಗಿದು ||
ಛತ್ರ ಚಾಮರ ಸಿಂಧ ಸೀಗುರಿ ವರೂಥಾಶ್ವ |
ಚಿತ್ರರಥ ಸಾರಥಿಗಳಂ ಕಡಿದು ಪಂಕೇಜ |
ಪತ್ರಾಂಬಕನ ಪಣೆಯನೊಂಬತ್ತು ಬಾಣದಿಂ ಕೆಡೆಯೆಚ್ಚು ಬೊಬ್ಬಿರಿದನು || ೧೩ ||

ಹಾರಿಬಿದ್ದಂ ನೆಲಕೆ ನೀಲಗಿರಿ ಬೀಳ್ವಂತೆ |
ಕಾರಿದಂ ರಕ್ತಮಂ ಜೀವನಂ ನಡುನೆತ್ತಿ |
ಗೇರಿದುದದಂ ಕಂಡು ವೀರಭದ್ರಂ ಶಿವ ಮಹಾದೇವ ಪಿತನಾಜ್ಞೆಯ ||
ಮೀರಿತೆಮ್ಮದಟೆಂದು ಹರಿಯುಸಿರನಾರೈದು |
ತೋರಿ ಶೈತ್ಯೋಪಚಾರಂಗಳಂ ಕಣ್ದೆರೆದು |
ಮಾರುದ್ದಿ ಕೈಗಳಂ ವಿಷ್ಣುವಾರ್ಭಟಿಸಿ ಕೋಪಾಟೋಪದಿಂದೆಳ್ದನು || ೧೪ ||

ಆಕ್ಷಣಂ ಬಂದುದಾ ಹರಿಗೆ ಮಣಿರಥಮದಂ |
ತೀಕ್ಷ್ಣದೊಳಡರಲಸ್ತ್ರಾಭ್ಯಾಸಮಂ ಹರಿಗೆ |
ಶಿಕ್ಷಿಸುವಸೊ ವೀರನೆಂಬಂತೆ ಕಾದುತಿರಲಭವನಿವರತಿಸಮರಮಂ ||
ಈಕ್ಷಿಸುವೆನೆಂದಳ್ತಿವಟ್ಟು ಸಭದೊಳ್ ನಿಂದು |
ಪೇಕ್ಷೆಯಿಲ್ಲದೆ ಭೃತ್ಯಪುತ್ರರದಟಂ ನೋಡೆ |
ಸಾಕ್ಷಾಜ್ಜಗಪ್ರಕ್ಷಸಂಹಾರಕರ್ ಪೊರ್ದರೇನೆಂಬೆನಚ್ಚರಿಯನು || ೧೫ ||

ಸಂಗರಂ ಸಮವಾಗುತಿರೆ ಕೋಪದಿಂದೆ ವೀ |
ರಂ ಗರುಡವಾಹನನ ವಾಹನಚತುಷ್ಕ[1]ಮುಂ |
ಮುಂಗಡೆಯ ಸೂತನಂ ಸಿಂಧ ಸೀಗುರಿ ಛತ್ರ ಚಾಮರ ಮಹಾಧನುವನು ||
ಹಿಂಗದ್ವೆನೂರ್ಸೂಳೊಳಂ ಕಡಿದು ವಿಷ್ಣುವಂ |
ಭಂಗಿಸಿ ಧರಾತಳಕೆ ಮೂರ್ಛೆಯಿಂ ಕೆಡೆಪಿ ಚತು |
ರಂಗಮಂ ಕೊಲತೊಡಗಿದಂ ಕರುಣಿಯೀ ರುದ್ರಪುತ್ರನೆಂಬೊಲ್ ವೀರನು || ೧೬ ||

ನಿಡುಸರಳ ಸಾರದಿಂ ಘೋರದಿಂ ಭಾರದಿಂ |
ದಡೆಗೆಡದ ಸೇನೆಯಿಂದಾನೆಯಿಂ ಬೇನೆಯಿಂ |
ದೊಡನೆ ಧರೆಗುರುಳ್ವರಿಂ ನರಳ್ವರಿಂ ತೆರಳ್ವರಿಂ ತಮತಮಗೆ ಕಂಡಕಡೆಗೆ ||
ಕಡಿವಡೆದ ಕೊರಳ್ಗಳಿಂ ಕ[2]ರುಳ್ಗಳಿಂ ಮರುಳ್ಗಳಿಂ |
ಪಿಡಿವಡೆದ ಸುರರಿಂದಸುರರಿಂದೆ ನರರಿಂದೆ |
ಮಡಲಿರಿದ ಭೀತಿಯಿಂ ಖಾತಿಯಿಂ ಹೇತಿಯಿಂದಾ ರಣಾಂಕಣವೆಸೆದುದು || ೧೭ ||

ವರನದಿಗಳಂತೆ ಕೀಲಾಲಮಯವಾಗಲಹಿ |
ಪುರದಂತೆ ಕೌಶಿಕವಿಲಾಸಮಯವಾಗೆ ವ |
ತ್ಸರಮಾರ್ಗದಂತೆ ವಿಕ್ರಮಪರಾಭವಯುಕ್ತವಾಗಲಾ ಸರಸಿಯಂತೆ ||
ಸಿರುತಮಳಿಗಳಿ ಪದ್ಮಮಯವಾಗಲಂದಮರ |
ಗಿರಿಯಂತೆ ಸುರಗಣವಿಮಾನಮಯವಾಗೆ ಸಾ |
ಗರದಂತೆ ವಡಬವಾರಣಭಂಗಮಯವಾಗೆ ರಣಭೂಮಿ ಕಂಗೆಸೆದುದು || ೧೮ ||

ಜವಮಯಂ ಬೆಂಗೊಟ್ಟ ಭಟರ ಕಿಕ್ಕಿರಿದಿರ್ದ |
ಶವಮಯಂ ನೆಣನ ನೆತ್ತರ ಬಸೆಯ ಜಿಗಿಯ ರೌ |
ರವಮಯಂ ನೆರದ ಮಕ್ಷಿಕ ಕಾಕ ಘೂಕ ಬಕ ಶುನಕ ಜಂಬುಕತತಿಗಳ ||
ರವಮಯಂ ಶಾಕಿನಿ ಪಿಶಾಚ ಡಾಕಿನಿಯರು |
ತ್ಸವಮಯಂ ಮುರಿದ ತೇರ್ ಕಡಿವಡೆದ ಹಸ್ತಿ ಸೈಂ |
ಧವಮಯಂ ತಾನೆನಿಸಿ ವೀರೇಶನಿರಿದ ರಣಮುಂಡಲಂ ಕಣ್ಗೆಸೆದುದು || ೧೯ ||

---

೧ ವಾರುವಚತುಷ್ಟ (ಪ.) ೨ ಕು (ಪ.) ೩ ಣ (ಮ.)

ಸುರರ ಮುಂಡಗಳ ಹಸಿವಣೆಗಳೊಳ್ ಕುಳಿತು ಕೆಂ
ಗುರುಳ ಬಣ್ಣದ ಬಾಸಿಗಂಗಳಂ ಧರಿಸಿ ಪೊಸ |
ತೋರಕರುಳ ದಂಡೆಮೊಂಡಲ್ಗಳಂ ಮುಡಿದುಮೆಲ್ಗಳ ತೊಡಂಗಳನೆ ತೊಟ್ಟು |
ನರದ ಕಂಕಣದಾರಮೆಸೆಯೆ ಶೋಭಾನಮಂ |
ನರಿಗಳಿಂ ಪಾಡಿಸುತೆ ನೆತ್ತರೋಕುಳಿಯಾಡಿ |
ಮೆರೆವ ಮಾವಮರ್ಕಳಿಸೆಯುಲ್ ವೀರನಿರಿದ[೧] ಸಮರಾಂಗಣದೊಳೇನೆಂಬೆನು || ೨೦ ||

ರುದ್ರಾತ್ಮಜಂ ಮಹಾಕೋಪದಿಂದಾ ಬಲಸ |
ಮುದ್ರಮಂ ಕಲಕುತಿರೆ ಲಕ್ಷ್ಮೀವರಂ ಸಮರ |
ನಿದ್ರೆಯಿಂದೆಚ್ಚತ್ತು ಬಹುರೋಷದಿಂದೆ ಗುಡಿಗುಡಿಸಿ ದಿವ್ಯಾಸ್ತ್ರಂಗಳ ||
ಉದ್ರೇಕದಿಂದೆಸೆಯೆ ತುಡುಕುವ ಶರಂಗಳಂ |
ಛಿದ್ರಿಸಿದನೊಂದುಳಿಯದಂತೆ ಭಾಪುರೆ ವೀರ |
ಭದ್ರಸಿದಿರೊಳ್ ಕಾದುತಿರ್ಪರಾತಿಗೆ ವಿಜಯಮೆಂತೆಂದು ಸುರರುಲಿಯಲು || ೨೧ ||

ನೋಡಿದಂ ವೀರನಾಟೋಪಮಂ ಕೋಪಮಂ |
ಮಾಡಿದಂ ವೈಷ್ಣವಾಸ್ತ್ರಮನಾಗ ಚಾಪದೊಳ್ |
ಪೂಡಿದಂ ವೀರಭದ್ರನ ಸರಿಸದೊಳ್ ಬಿಟ್ಟು ಸಕಲಲೋಕಮನುರಿಯೊಳು ||
ಕೂಡಿದಂ ಬರ್ಪ ಬಾಣವನವಂ ಖಂಡಿಸೀ |
ಡಾಡಿದಂ ರುದ್ರಾಸ್ತ್ರದಿಂ ಮತ್ತೆ ಖತಿಯೊಳೋ |
ಲಾಡಿದಂ ಹರಿಯೆನ್ನನಳಲಿಸಿದ ಫಲಮನುಣ್ಣೆಸುತೆ ಚಕ್ರದೊಳಿಟ್ಟನು || ೨೨ ||

ಬೆಚ್ಚಿದುವು ನಿಖಿಳಲೋಕಂಗಳಾ ಕ್ಷಣದೊಳುರೆ |
ಮುಚ್ಚಿದುವು ಸೂರ್ಯಕಿರಣಂಗಳಾಕಾಶದಿಂ |
ದುಚ್ಚಿದುವು ತಾರೆಗಳ್ ಧರಣಿ ನಡುಗಿತು ಸಪ್ತಸಾಗರಂಗಳ್ ಕುದಿಯಲು |
ಕೆಚ್ಚನುಗುಳುತೆ ಬರ್ಪ ಘನಚಕ್ರಮಂ ನಡುವೆ |
ಕೊಚ್ಚಿ ಸೂರ್ಕಡಿಮಾಡಿ ಕೆಯ್ಯೊಡನೆ ವೀರೇಶ |
ನೆಚ್ಚಿ ಹರಿರಥ ಸೂತ ತುರಗ ಮೊದಲಾದವಂ ಸವರಿದಂ ಸಾಹಸದೊಳು || ೨೩ ||

೧ ನೆಸೆದ (ತಿ.)

ಕಿರಣವಿಲ್ಲದ ಸೂರ್ಯನಂತೆ ಭರಿಕ್ಕೈ ಪರಿದ |
ಕರಿಯಂತೆ ದಂತಂಗಳುಡಿದುರುಗನಂತಸುರ |
ಹರನತಿಭಯಂಗೊಂಡು ತಾಂ ಗೆಲವುಪಾಯಮಂ ಕಾಣದಲೆ ವೇಗದಿಂದೆ ||
ಎರಳೆಯಾಕಾರದಿಂದೋಡುತ್ತಿರಲ್ ಕಂಡು |
ಹರಸುತಂ ಕಡು ವೇಗದಿಂದೊಂದು ಬಾಣಮಂ |
ಹರಿವಿಡಲ್ ಬೇಗದಿಂ ಬೆಂಬತ್ತಿ ಸರಳೆರಳೆಯಂ ಕೆಡೆಪಿತಾ ಕ್ಷಣದೊಳು || ೨೪ ||

ಪಚ್ಚಳಮನೊಡೆದು ಬಳಿಕಾ ಸರಳ್ ನೆತ್ತಿಯೊಳ |
ಗುಚ್ಚಳಿಸಿದುದು ಬಳಿಕ್ಕಾ ಹರಿಣನುರೆ ನೆಲಂ |
ಗಚ್ಚಿ ನೆತ್ತರ್ಗಾರಿ ಬಾಯ್ಬಿಡಲ್ ವೀರಭದ್ರಂ ಮಹಾಕರುಣದಿಂದೆ ||
ಸಚ್ಚಿದಾನಂದರೂಪಂ ತೋರಿ ವಿಷ್ಣುವಂ |
ಬೆಚ್ಚಬೇಡೇಳ್ ಪ್ರಾಣಮಂ ಕಾಯ್ವೆನೆಂದೆಂಬ |
ಮೆಚ್ಚುರಿದು ನಿಜರೂಪಿನಿಂ ವೀರಭದ್ರನಂ ನುತಿಸಿದಂ ಭಕ್ತಿಯಿಂದೆ || ೨೫ ||

ಜಯ ಜಯ ಸುಚಾರಿತ್ರ ಭವಗಣಾಂಬುಧಿಚೈತ್ರ |
ಜಯ ಜಯ ವಿರಾಡ್ರೂಪ ಹಸ್ತಮಂಡಿತಚಾಪ |
ಜಯ ಜಯ ಸುಜನಪಾಲ ದುಷ್ಟನಿಗ್ರಹಶೀಲ ಜಯ ಜಯ ಸುಭಕ್ತಭಕ್ತ ||
ಜಯ ಜಯ ಶುಭಾಕಾರ ಜನನಮರಣವಿದೂರ |
ಜಯ ಜಯ ನತೋದ್ಧರಣ ದಕ್ಷಮುಖಸಂಹರಣ |
ಜಯ ಜಯ ಸುಫಣಿಭೂಷ ವೀರೇಶ ಸರ್ವೇಶ ಜಯ ಜಯತು ಸಲಹೆಂದನು || ೨೬ ||

ಸಾಹಸ್ರವದನ ರಕ್ಷಿಸು ರಕ್ಷಿಸೆನ್ನ ತ್ರಿ |
ಸಾಹಸ್ರನಯನ ರಕ್ಷಿಸು ರಕ್ಷಿಸೈ ಯುಗಳ |
ಸಾಹಸ್ರಬಾಹು ರಕ್ಷಿಸು ರಕ್ಷಿಸೈ ನಿನ್ನ ಮಹಿಮೆಯಂ ಬಣ್ಣಿಸುವೊಡೆ ||
ಸಾಹಸ್ರವದನರಗಣಿತಕೋಟಿ ತಮ್ಮ ಯುಗ |
ಸಾಹಸ್ರಜಿಹ್ವೆಯಿಂ ಪೊಗಳಲಾರ್ಪರೆಯೆಂದು |
ಸಾಹಸ್ರನಾಮದಿಂ ನುತಿಸುತಿರೆ ವಿಷ್ಣುವಿಗೆ ವೀರೇಶನಿಂತೆಂದನು || ೨೭ ||

---

೧ ಗಿ (ಮ.) ೨-೨ ಚಿ ಸೀಳಿದುದು ಬಳಿಕಾ (ಹು.)

ಬರ್ಪುದಾವಾಗಲುಂ ಬಾರದಿರದೈಸೆ ಕಂ |
ದರ್ಪಪಿತ ನೀಂ ನೋಯಲೇಕೆ ಖಳದಕ್ಷನ ಸ |
ದರ್ಪಮುಖಮಂ ನೋಳ್ಪೆನೆಂದೆನಲ್ ಕೇಳಿ ಹರಿ ಭಯಭರಿತಭಕ್ತಿಯಿಂದೆ |
ಸರ್ಪಭೂಷಣನೆ ಯಜ್ಞಾದಿ ಸತ್ಕರ್ಮದಿಂ |
ದಿರ್ಪವರ ಕೃತ್ಯಕೀ ಕಪಟಕೃಷ್ಣಾಜಿನಂ |
ಬರ್ಪಂತು ಗೈವುದೆನಲೊಪ್ಪಿ ವೀರಂ ಸೀಳಲನುಗೈದನಾ ದೇಹಮಂ ‖ ೨೮ ‖

ಸರಸರನೆ ಸೀಳ್ದು ಚರ್ಮಂದೆಗೆವುತಿದನಾವ |
ಚರಿತವಿಂ ಜಪ ಹೋಮ ಯಜ್ಞಾದಿ ಕರ್ಮದೊಳ್ |
ತರಿಸಂದು ಭಕ್ತಿಯಿಂ ಬಳಸಿದಪರವರ ವರದುಷ್ಕರ್ಮಪಾಶಂಗಳು |
ಪರಿಪಟ್ಟು ಪೋಗಲೆಂದಧಿಕವರವಿತ್ತು ಮುಂ |
ದುರುವ ಕಜ್ಜಮನೆಣಿಸುತಿರಲಿತ್ತಲತ್ತ ರಸ |
ಪರಿತ ನಾಲಗೆಗೊನೆಯ ದೂತರೈತಂದು ದೀಕ್ಷಿತನ ಮುಂದಿಂತೆಂದರು ‖ ೨೯ ‖

ಜೀಯ ಬಿಡು ದೀಕ್ಷೆಯಂ ವೀರನೊಳ್ ಕಾದಿ ನಾ |
ರಾಯಣಂ ಶರಣೆಂದು ಜೀವಿಸಿದನಿನ್ನೇನು |
ಪಾಯಮಂ ಕಂಡಪೆ ಶರಣ್ಬೊಗುವೆಯೋ ರಣಂಬೊಗುವೆಯೋ ಪೇಳೆನಲ್ಕೆ |
ವಾಯುಸಖನೊಳ್ ತುಪ್ಪಮಂ ಪೊಯ್ದವೊಲ್ ತನ್ನ |
ಕಾಯದೊಳ್ ಭುಗಿಭುಗಿಲೆನುತ್ತುರಿವ ಶಿಖಿಯ ಭಾ |
ರಾಯಸಾನಸನಾಗಿ ದಕ್ಷನಾ ಕೆಲಬಲದ ಮಂತ್ರಿಗಳೊಳಿಂತೆಂದನು ‖ ೩೦ ‖

ಆರಳಿದರೇಂ ಮರಳಿ ಪಡೆವ ಬಲ್ಪೆಮ್ಮೊಳಿರೆ |
ವೀರನೇಂ ಗಹನಮವನಂ ಗೆಲ್ವುದೇಂ ಯಾಗ |
ಭಾರದಿಂದಾಪೀರಲ್ಕಿಂತಾದುದೆಂದು ದಕ್ಷಂ ಮಹಾಕೋಪದಿಂದೆ |
ಬೂರಂ ಸಮೀರನಂ ಗೆಲ್ವಕ್ತಿಯಂತೆ ನೀಂ |
ಹಾರವಗ್ನಿಯನಟ್ಟ ಬಾಳ್ಪೆನೆಂಬಂತಿರ್ದ |
ನಾದೊಡಂ ಫಲಗ್ರಹಿಗಳಜ್ಞಾನಸಾಗರೆ ಲೋಕದೊಳಗೆಂದನು ‖ ೩೧ ‖

೧ ನರಿಕೆಯಿಂ (ಮ.) ೨ ನ್ನೊ (ಹು, ಮ.) ೩ ನಿ (ಮ.)

ಬಿಟ್ಟನಾ ಮಂತ್ರದುಚ್ಚರಣೆಯಂ ಹವಿಗಳಂ |
ತೊಟ್ಟನಿಳೆಗಿಳಿಪಿದಂ ದಕ್ಷನಾ ಕ್ಷಣದೊಳಗೆ |
ದಿಟ್ಟನಾಗುತೆ ಪಡೆದನಖಿಳಚತುರಂಗಮಂ ತನ್ನ ಮೊಮ್ಮಕ್ಕಳೆನಿಪ ||
ಬೆಟ್ಟದಂತೊಪ್ಪುತಿರ್ಪರ್ವತಾಕೋಟಿ ಜಗ |
ಜಟ್ಟಿರಕ್ಕಸದೊರೆಗಳಂ ಕರೆಸಿ ನೇಮಮಂ |
ಕೊಟ್ಟು ಕಳುಪಿದನತ್ತಲಿತ್ತ ದಕ್ಷಂ ಹವಿಗಳಂ ಜೀಳುತಿರುತಿರ್ದನು || ೩೨ ||

ಕಾಳಮೇಘಾಳಿ ನಡೆದಪುವೊ ಕೈಕಾಲ್ ಮೂಡಿ |
ನೀಲಾದ್ರಿಗಳ್ ತಳರ್ದಪುವೊ ಕತ್ತಲೆ ಬಂದು |
ಮೇಲಾದ ಬಹುರೂಪಮಂ ಧರಿಸಿ ಸಂದಣಿಸಿ ಪೋದಪುವೊ ಪೇಳೆನಲ್ಕೆ ||
ಮೇಳದಿಂ ತಾರಕ ನಿಶುಂಭ ಜಂಭಾಸುರರ್[1] |
ಭೀಳಧೂಮ್ರಾಕ್ಷ ಮಹಿಷಾಸುರ ಮಹಾಪಾಪ |
ಶೀಲ ಚಂಡಾಸುರ ಕರಾಳರೆಂಬತುಳದಾನವರೊದಗಿದರ್ ಕ್ಷಣದೊಳು || ೩೩ ||

ಶರಭ ದುಂದುಭಿ ಹಯಗ್ರೀವ ಶತಮಾಯ ಗಜ |
ಶಿರ ಗಗನಮೂರ್ಧ್ನಿ ಸ್ವರ್ಭಾನು ವೃಷಪರ್ವ ದು |
ರ್ಧರ ವಜ್ರನಾಭ ವಿದ್ರಾವಣ ಮಹಾನಾಭ ಶಂಕುಕರ್ಣರ್ ಸುಬಾಹು ||
ವರಮಹಾಬಲ ಹಿರಣ್ಯಕಶಿಪು ಹಿರಣ್ಯಾಕ್ಷ |
ಯಿರಶುಂಭ ಮಯ ಶಂಖುಶಿರ ಸಮುಚಿ ಕಾಳಿಕೇ |
ಯರಘನನಿವಾತಕವಚರ ಹಿಂಡು ಪೌಲೋಮಿಗಳ ತಂಡವೈತಂದುದು || ೩೪ ||

ಇತ್ತಲಾ ಮರುಳ ತಂಡಂ ಯಾಗಶಾಲೆಯಂ |
ಮುತ್ತಿ ಕಾವಲಭಟರ್ಗಳ ಸದೆದು ಬಾಗಿಲಂ |
ಕಿತ್ತು ದಳದುಳಿಪನಿತರೊಳ್ ದಡಿಗರಕ್ಕಸರ್ ಕಂಡು ಕಡುಖಾತಿಯಿಂದೆ
ಕಿತ್ತು ಬಲ್ಗೈದುಗಳನೆತ್ತಿ ಜಡಿದಬ್ಬರಿಸು |
ತೊತ್ತಿ ತರಿದಿರಿದು ಖಂಡಿಸಿ ಕೊಚ್ಚಿ ಕೊರೆಕೊರೆದು |
ಕತ್ತರಿಸಿ ನಾನಾಪ್ರಕಾರದಿಂ ಕೊಲುತಿರ್ದರೇನೆಂಬೆನದ್ಭುತವನು || ೩೫ ||

---

೧ ಸುರಾ (ಹು, ಮ.) ೨ ವು (ಹು, ಶಿ, ಪ, ಗೋ.)

ಬರಸಿಡಿಲ್ಗಳಾಗಿ ಮಳೆಯಾಗಿ ಬೆಟ್ಟಗಳಾಗಿ |
ಸರಿಕಲ್ಗಳಾಗಿ ಗುಂಡುಗಳಾಗಿ ಮೈಗಳಂ |
ಕೊರೆವ ಕರಗಸವಾಗಿ ಪುಲಿಕರಡಿಯಾಗಿ ಕೇಸರಿಯಾಗಿ ಘೋರವಿಷಮಂ ||
ಕರೆವಹಿಗಳಾಗಿ ಶಿಖಿಯಾಗಿ ಕಳ್ತಲೆಯಾಗಿ |
ಬಿರುಗಾಳಿಯಾಗಿ ಬಿಸಿಲಾಗಿ ನಾನಾವಿಧದೆ |
ತರಿವ ಶಸ್ತ್ರಾಸ್ತ್ರಂಗಳಾಗಿ ಮಾಯೆಯೊಳುರುಬಿ ರಕ್ಕಸರ್ ಕೊಲುತಿರ್ದರು || ೩೬ ||

ಪಿಡಿಪಿಡಿದು ರಕ್ಕಸರ್ ಮರುಳ್ಗಳಂ ಬಾಯ್ಗಳೊಳ |
ಗಡಸಿ ನುಂಗಲ್ ಕಿವಿಗಳೊಳ್ ಮೂಗಿನೊಳ್ ಕಣ್ಣ |
ಕಡೆಗಳೊಳ್ ಪೊರಮಟ್ಟು ನೆಗೆದು ನೆತ್ತಿಯನೇರಿ ಪಲ್ಗಳಿಂದಾ ದನುಜರ ||
ಕುಡಿಮೂಗನುರೆ ಕಚ್ಚಿ ಕಿವಿಗಳಂ ಕಿಳ್ತು ಕೈ |
ಯೊಡನೆ ಕಿವಿಮೂಗಮೂಕೊರೆಯರಂ ಮಾಡಿ ನೆರೆ |
ಒಡಿದಾಡುತಿರ್ದರೊಡವೆರಸಿಯಾ ದನುಜರುಂ ಮರುಳ್ಗಳುಂ ತತ್‌ಕ್ಷಣದೊಳು
|| ೩೭ ||

ಏರಿದರ್ ಬೀರಿದರ್ ಬೆಟ್ಟದೊಲ್ ಗಾಳಿವೊಲ್ |
ತೂರಿದರ್ ಪಾರಿದರ್ ನಭದೆಡೆಗೆ ಬಲ್ಮೆಯಂ |
ಸಾರಿದರ್ ಮೀರಿದರ್ ಬೀರಂಗಳಿಂ ಪೊಯಿಲ್ ಪೊಯಿಲ್ಗೆ ನೆರೆನೆತ್ತರ್ಗಳ ||
ಕಾರಿದರ್ ಪೇರಿದರ್ ಭಯರಸಮನೊಡನೆ ಬಾ |
ಯಾರಿದರ್ ಬೀರಿದರ್ ಸಿಡಿಲಂತೆ ಕೌತುಕಂ |
ದೋರಿದರ್ ಮಾರಿದರ್ ಮೈಗಳಂ ದನುಜರುಂ ಮರುಳ್ಗಳುಮದೇನೆಂಬೆನು || ೩೮ ||

ಈ ಪರಿಯೊಳಿರ್ವಲಂ[2] ಕಾದುತಿರೆ ರಕ್ಕಸರ್ |
ಕೋಪದಿಂ ಹೂಂಕರಿಸಿ ನೂಂಕಿ ದನುಜಾಳಿಪ್ರ |
ತಾಪದಿಂ ನಾನಾಪ್ರಕಾರದಿಂದೊಡನೊಡನೆ ವೀರಭದ್ರನ ಬಲವನು ||
ಆಪನಿತನುರೆಸದೆವುತಟ್ಟಲತಿಭೀತಿಯಿಂ |
ದಾ ಪಂಥಮುಡುಗಿ ಕಡುವೇಗದಿಂ ಭದ್ರಕಾ |
ಳೀಪತಿಯ ಮರೆವೊಕ್ಕುದಖಿಳಸೈನ್ಯಂ ಪೇಳ್ವುದೆಂ ದನುಜರುರ್ಬಟೆಯನು[3]
|| ೩೯ ||

೧ ಪಿ (ಹು, ಮ.) ೨ ರುಂ (ಹು, ಶಿ.) ೩ ಯೊಳು (ಶಿ.)

ನೋಡಿದಂ ವಿಸ್ಮಯರಸಾಬ್ಧಿಯೊಳ್ ಮಿಗೆ ಮುಳುಂ |
ಗಾಡಿದಂ ವಿಷ್ಣುವಂ ಕರೆದು ನಸುನಗುತೆ ಮಾ |
ತಾಡಿದಂ ವೀರನಾ ದಕ್ಷನ ಛಲಕ್ಕೆ ಮನದೊಳ್ ಮೆಚ್ಚಿ ಕೋಪದಿಂದೆ ||
ಪೂಡಿದಂ ಸರಳ್ಗಳಂ ತೆಗೆದೆಚ್ಚು ವಿರಥರಂ |
ಮಾಡಿದಂ ದೈತ್ಯರಂ ಮತ್ತಖಿಳಸೇನೆಯಂ |
ಕೂಡಿದಂ ಪೆಣನ ಮೆದೆಗಳೊಳೊಂದುಕ್ಷಣದೊಳೆಲೆ ರಾಮ ಕೇಳ್ ಕೌತುಕವನು
|| ೪೦ ||

ದುಂದುಭಿಗೆ ನಾಲ್ಕು ಶರಭಂಗಯ್ದು ತಾರಕಂ |
ಗೊಂದು ಸ್ವರ್ಭಾನು ವೃಷಪರ್ವರ್ಗೆ ನಾಲ್ಕು ನಾ |
ಲ್ಕೊಂದು ಶಲಭಂಗೆಂಟು ಗಗನಮೂರ್ಧ್ನಿಗೆ ಪತ್ತು ಶತಮಾಯ ನಮುಚಿ ಹಯದ ||
ಕಂಧರರ್ಗೆಂಟೆಂಟು ಶುಂಭಜಂಭರ್ಗಿಪ್ಪ |
ತೊಂದಾ ಹಿರಣ್ಯಾಕ್ಷ ಧೂಮ್ರಾಕ್ಷಕರ್ಗೆ ಹ |
ನ್ನೊಂದಿಂತಸಂಖ್ಯಾತಬಾಣಂಗಳಿಂದೆಲ್ಲರುಮನೆಚ್ಚು ಬೊಬ್ಬಿರಿದನು || ೪೧ ||

ಎಲೆ ಸಿದ್ಧರಾಮ ಕೇಳಾ ವೀರನಂಬುಗಳ |
ಮಳೆಗಳಿಂ ನನೆಯದವರಿಲ್ಲವಾ ರಕ್ಕಸರ |
ಬಲದೊಳಗೆ ದೊರೆದೊರೆಗಳುಂ[1] ಪಲಾಯನಮನನುಕರಿಸಿ ಕಡುಭೀತಿಯಿಂದೆ ||
ಜಲದೊಳ್ ಮುಳುಂಗಿ ಪುಲ್ಗಚ್ಚಿ ಪೆರ್ಮರ ಪುತ್ತು |
ಗಳನೇರಿ ಕೈಗಳಂ ಮುಗಿದು ಬಾಯೊಳ್ ಬೆರ |
ಲ್ಗಳನಿಟ್ಟು ಕೈದುಮಂ ಹಾಯ್ಕಿ ಹಾಯ್ದರ್ ಕಂಡಕಡೆಗದೇಂ ವಣ್ಣಿಸುವೆನು
|| ೪೨ ||

ಕಂಡನನಿಬರ ಕಾಲ ಬೇಗಮಂ ಕರುಣದಿಂ |
ದಂಡಲೆಯ ಬಾರದೆಂದೆನುತೆ ಹಸ್ತದ ಹಲಗೆ |
ಖಂಡೆಯವಸಿರದೆ ಝಳಪಿಸುತೆ ತೇರಿಂದಿಳಿದು ಸಲೆ ಭದ್ರಕಾಳಿಸಹಿತೆ ||
ಗಂಡುಗಲಿ ವೀರನಾ ಹೋಮಶಾಲೆಗೆ ಮರುಳ್ |
ತಂಡವೆರಸಳ್ಳಿರಿವ ವಾದ್ಯರವಮೊ[2]ಡನೆ ಬ್ರ |
ಹ್ಮಾಂಡಮಂ ತೀವೆ ಬರುತಿರ್ದನೆಡಬಲದ ವಂದಿದ್ವಯದ[3] ಗಡಣದಿಂದೆ || ೪೩ ||

೧ ಬಿಲ್ಲಾಳ್ಗಳುಂ (ಮ.) ೨ ಡೊ (ಮ, ಹು.) ೩ ಧ್ವನಿಯ (ಹು, ಮ.)

ಬಾಗಿಲೊಳಿರ್ದ ಭೈರವನನುರೆ ಭಂಗಿಸುತೆ |
ಬೇಗದಿಂ ಕಾದಿರ್ದ ಸುಭಟರಂ ಸದೆಬಡಿದು |
ಯಾಗಮಂಟಪದೆಡೆಗೆ ಪೊಕ್ಕು ಚೌಡೇಶ್ವರಿಯು ಕರ್ಣಮಂ ಕಿತ್ತು ಕೂಡೆ ||
ರಾಗದಿಂ ಪಿರಿಯ ಮುಂದಲೆಗೊಯ್ದು ಶಾರದೆಯ |
ಮೂಗನರಿದಾ ಶಚೀದೇವಿಗಚ್ಚೊತ್ತಿ ಮಿಗೆ |
ನೀಗಿದಂ ಸ್ವಾಹಾಸ್ತನಂಗಳಂ ಮಿಕ್ಕ ಸುರಸತಿಯರಂ ನಾಣ್ಗೆಡಿಸಿದಂ || ೪೪ ||

ಕಟ್ಟಿದಿರಿಸೊರ್ ತೋರ್ಪ ಮಟ್ಟಿಯು ಮರುಳ್ ವಿಪ್ರ |
ರುಟ್ಟ ಘೋತ್ರಂಗಳಂ ಸೆಳೆದು ಭಂಗಿಸಿ ತೆಗೆದು |
ಕಟ್ಟುತೊರ್ಪನ ಶಿಖಮನೊರ್ವನ ಗಡ್ಡಕಿಂತೆಲ್ಲರಂ ಮರುಳ ತಂಡಂ ||
ಅಟ್ಟುಳಿಯನೆಸಗಬೇಡೆಂದು ಕೃಪೆಯಿಂ ಸಂತ |
ವಿಟ್ಟು ಮುನಿನಿಕರಮಂ ಶಿಖಿಗೆ ಪೂರ್ಣಾಹುತಿಯ |
ಕೊಟ್ಟಪೆನೆನುತ್ತಿರ್ಪ ದಕ್ಷನ ಶಿರಸ್ಸುಮಂ ಕುಟ್ಟಿ ಹೋಮದೊಳಿಟ್ಟನು || ೪೫ ||

ಜೋಯೆಂದು ಕುಣಿ[1]ದಾಡಿತಾ ಮರುಳಗಣಮಿರದೆ |
ಹಾಯೆಂದು ದಕ್ಷನರಸಿಯರಳುತೆ ನಡೆತಂದು |
ಕಾಯೆಮ್ಮ ಕರ್ಣತಾಟಂಕಸೌಭಾಗ್ಯಮಂ ನೀನೆಂದು ಬೇಡಿಕೊಳಲು ||
ಜೀಯೆಂದು ಹರಿಯಜರ್ ಬಿನ್ನೈಸೆ ಕರುಣದಿಂ |
ದಾ ಯಜ್ಞಪಶುಶಿರವನರಿದು ಪತ್ತಿಸೆ ದಕ್ಷ |
ನಾಯುತಮನಜಪುತ್ರನೆಂಬ ನಾಮಂ ಸಾಮ್ಯಮಾದುದದನೇನೆಂಬೆನು || ೪೬ ||

ಶಿರದ ಮುಸುಕಿಂ ದಕ್ಷನಂದು ವೀರೇಶ್ವರನ |
ಚರಣಕೆರಗಲ್ ಕಡೆಗೆ ಪೋಗೆಲವೊ ತಾಂ ಕೆಡುತೆ |
ನೆರೆಯುಪವರನೆಲ್ಲರಂ ಕೆಡಿಪುವರಳ್ ಮಾಳ್ಕೆಯಾಯ್ತೆಂದು ನಿನ್ನೀ ವರ್ತನಂ ||
ಹರನದಕೆ ತಕ್ಕುದಂ ವಿರಚಿಸಿದನೆಂದವಂ |
ಪೊರಟು ಹರಿಯಜಮುಖ್ಯರೆಲ್ಲರುಂ ಬರೆ ಬಂದು |
ಪರಮಕೈಲಾಸಮಂ ಪೊಕ್ಕೀಶ್ವರಾಸ್ಥಾನದೆಡೆಗೆ ಬಂದಂ ಕ್ರಮದೊಳು || ೪೭ ||

---

೧ ಕಿತ್ತಿಡುತಿರ್ದ (ಮು.) ೨ ನಿಗೆ (ಹು, ಮು, ಶಿ, ಗೋ.) ೩ ಯೆಂದು (ಪ, ಮು.)
೪ ೪ ಮನೆಯುವರನೆಲ್ಲರಂ ಕೆಡಿಪ (ಮು.)

ಕಡೆವಾಗಿಲೊಳ್ ನಿಲಿಸಿ ಸಕಲರಂ ನಾರದನ |
ನೊಡಗೊಂಡು ಪೋಗಿ ವೀರೇಶ್ವರಂ ತನ್ನ ಪಿತ |
ನಡಿಗಳ್ಗೆ ನಮಿಸಲ್ ಶಿವಂ ಹರುಷದಿಂ ತೆಗದು ತಳ್ಕೈಸಿ ಮೈದಡವುತೆ ||
ಒಡನೆ ನಾರದನಿಂದೆ ವೃತ್ತಾಂತಮರಿದು ಮು |
ತ್ತಡಿಗಡಿಗೆ ಕರುಣರಸಮಿರದೆ ತುಳ್ಕಾಡಲಾ |
ಮ್ಮಡನೆಲ್ಲರಂ ಕರೆಸಿ ಪಡೆಗೈಗಳಂ ಬಿಡಿಸೆ ಸ್ತುತಿಸಿದರ್ ಭಕ್ತಿಯಿಂದೆ || ೪೮ ||

ದೇವ ರಿಪುದೈತ್ಯವನದಾವ ಹರಿಶಕ್ರರಾ |
ಜೀವಭವಮುಖ್ಯನಾನಾವಿಬುಧಮುಕುಟರ |
ತ್ನಾವಳೀಬಹುಲಪ್ರಭಾವಪದ ಭಕ್ತಸಂಜೀವ ದೈ[1]ವಾಧೀಶನೆ ||
ಪಾವಕರವೀಂದುನೇತ್ರಾವಲಂಬನ ಲೋಕ |
ಸೇವಿತ ಮಹಾವಿಷಗ್ರೀವ ಕೈಲಾಸಶಿಖ |
ರೀವಾಸ ಭೂತೇಶ ವೀರೇಶಪಿತನೆ ಸಲಹೆಂದು ತುತಿಯಿಸುತಿರ್ದರು || ೪೯ ||

ಇಂತೆಂದು ನುತಿಪ ಹರಿಯಜಮುಖ್ಯದಿವಿಜರಂ |
ಸಂತೈಸಿ ನೀವೆಮಗೆ ವಿರಹಿತದ ಕಾರ್ಯದೆಡೆ |
ಗಿಂತು ಪೋಗದಿರಿ ನಿಮ್ಮಯ ಶರೀರದ ಕೊಂಕುಕೊರತೆಗಳ್ ಪೋಗಿ ಮಡಿದ[2] ||
ತಿಂತಿಣಿಯ ಬಲಮೇಳ್ವುದೆಂದೆಲ್ಲರಂ ಕಳುಪಿ |
ಮುಂತಿರ್ದ ವೀರೇಶನುಗ್ರತ್ವವನು ಕಂಡು |
ಶಾಂತಿಯಂ ಮಾಡಿಸಿ ಜಗದ್ರಕ್ಷನಾ ವಿರೂಪಾಕ್ಷನಿರ್ದಂ ಮುದದೊಳು || ೫೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೧ ||

ಅಂತು ಸಂಧಿ ೩೭ಕ್ಕಂ ಪದಗಳು ೧೭೪೫ಕ್ಕಂ ಮಂಗಳಮಹಾಶ್ರೀ

---

೧ ದೇ (ಪ.) ೨ ಬಳಿಕ (ಶಿ.)

ಮೂವತ್ತಮೂರನೆಯ ಸಂಧಿ

ಸೂಚನೆ

ಹರನಾಜ್ಞೆಯಿಂದೆ ಹರಿ ಹರಿಯಾಗಿ ರಕ್ಕಸನ |
ಹರಿಸಿ ಜಗವುಂ ಹರಿಸುತಿರೆ ಹರಿಯು ಮೊರೆಗೇಳ್ದು |
ಹರನಿರೂಪದೆ ಹರಿಯು ಹರಿಸಿದಂ ಹರಸುತಂ ಶರಭಾವತಾರದಿಂದೆ ||

ಅಕ್ಷಯಾಕಾರ ಮೋಕ್ಷಾಗಾರ ಲೋಕಸಂ |
ರಕ್ಷ ಖಳಶಿಕ್ಷ ಭಕ್ತಾಪೇಕ್ಷ ಭೀಮಭಾ |
ಲಾಕ್ಷ ದಕ್ಷಾಧ್ವರವಿಪಕ್ಷ ಸುರಪಕ್ಷ ಪ್ರತ್ಯಕ್ಷಪಾವನಸ್ವರೂಪ ||
ಯಕ್ಷಪತಿಸೇವಿತ ಮಹೋಕ್ಷವಾಹನ ವರಮು |
ಮುಕ್ಷುವಂದಿತ ನಿರಾಪೇಕ್ಷ ಕಾಮಿತಪೂಜ್ಯ |
ಪಕ್ಷಿಗಮನಾಕ್ಷಿಘನನಿಕ್ಷೇಪಪದ ವಿರೂಪಾಕ್ಷ ತ್ರಿಯಕ್ಷ ಸಲಹು || ೧ ||

ಆಲಿಸಿನ್ನೆಲೆ ಸಿದ್ಧರಾಮ ದಿವಿಜರ್ ಕೆಲವು |
ಕಾಲಮಂ ಸುಖದಿಂದೆ ಕಳಿವುತಿರಲಲ್ಲಿಂದೆ |
ಮೇಲೊಂದು ಮೃತ್ಯುವಾಯ್ತುಮರರ್ಗೆ ಖಳಹಿರಣ್ಯಕಶಿಪುವೆನಿಪ್ಪ ಪೆಸರ ||
ಕಾಳರಕ್ಕಸನೊರ್ವವಂ ಪೆರ್ಚಿ ಸಕಲದೇ |
ಪಾಳಿಯಂ ತನ್ನ ಭುಜಬಲದಿಂದೆ ಸದೆಯೆ ಸುರ |
ಜಾಲಸಹಿತಮರೇಂದ್ರನೀಶನಂ ಕಂಡು ಬಿನ್ನೈಸಿದಂ ಭಕ್ತಿಯಿಂದೆ || ೨ ||

ಧರೆಯೊಳೊರ್ವಂ ಹಿರಣ್ಯಕಶಿಪುವೆನಿಪ್ಪವಂ |
ಸರಸಿಜಾಸನನಿಂದೆ ಪಗಲಿರುಳ್ ಪೊರಗೊಳಗು |
ಸುರನರೋರಗದನುಜರಿಂದೆ ಬತ್ತೀಸಾಯುಧಗಳಿಂ ಸಾಯದಂತೆ ||
ವರವನಾಸಿತುಂ ಪಡೆದು ತಮ್ಮೆಲ್ಲರಂ ಪದದೊ |
ಳೊರಸಿ ದೇವಸ್ತ್ರೀಯರಂ ಪಿಡಿದನಿಂತಿದಂ |
ಪರಿಹರಿಸಿ ಕಾಯೆಮ್ಮನೆಂದು ಸುರಸಂಕುಲಂ ಧರಣಿಯೊಳಗಡೆಗೆಡೆದುದು || ೩ ||

೧ ನ (ಹು, ಶಿ, ಮ.)

ಏಳಿಸಿದನಮರರಂ ಶಿವನಂದು ಕರುಣಮಂ |
ತಾಳಿ ಸಿರಿಯರಸನಂ ಕರೆದೆಂದನೀಪರಿ ವಿ |
ತಾಳಿಸಿ ಜಗಕ್ಕೆ ಕೇಡಂ ತಂದ ಖಳನಸುಂಗೊಳ್ಳೆಂದು ನೇಮಿಸಿಯೆ |
ಆಲಿಸಿದನಾ ನಿರೂಪಂಗಳಂ ಶಿವನಡಿಗೆ |
ಬೀಳಿಸಿ ಕಿರೀಟಾಂಕಶಿರಮನಿನ್ನಮರರಂ |
ಪಾಲಿಸುವೆನೆಂದು ಕಡುಬೇಗದಿಂದೈತಂದನೇನೆಂಬೆನದ್ಭುತವನು ॥ ೪ ॥

ಕಂಜಸಂಭವನಿತ್ತ ವರದ ಬಲವಂ ನೆನೆವು |
ತುಂ ಜನಾರ್ದನನವನ ಮನೆಯ ಕಂಭದೊಳುಗ್ರ |
ದಿಂ ಜನಿಸಿ ನರಸಿಂಹರೂಪದಿಂ ದೈತ್ಯನಂ ಪಿಡಿತಂದು ಹೊಸ್ತಲೊಳಗೆ |
ಸಂಜೆಯೊಳ್ ತನ್ನ ತೊಡೆಯೊಳ್ ಕೆಡಪುತುಗುರ್ಗೊನೆಗ |
ಳಿಂ ಜಠರಮಂ ಬಗಿದು ರಕ್ತಮಂ ಸುರಿಸುರಿದು |
ಭುಂ[೧]ಜಿಸಿದನಾ ಹಿರಣ್ಯಕಶಿಪುವನಖಿಳಲೋಕಾಳಿ ಹರುಷಂಬಡೆಯಲು ॥ ೫ ॥

ಮತ್ತೆ ಕೆಲಕಾಲಕೆ ನೃಸಿಂಹಂಗೆ ಖಳನ ನೊರೆ |
ನೆತ್ತರಾವರಿಸಲಂಗೋಪಾಂಗಮಂ ಮದೋ |
ನ್ಮತ್ತತೆಯನೈದಿ ತಾನಾ ಹಿರಣ್ಯಕಶಿಪುವಿಗೆಂಟುಮಡಿಯಾಗಿ ಜಗಮಂ |
ಸುತ್ತಿ ಸುಡುತಿರೆ ಸಕಲಜಗಮನಮರಾಳಿ ಬೆ |
ಸತ್ತು ಮಗುಳೈದಿ ಕೈಲಾಸಮಂ ಪೊಕ್ಕು ನಮಿ |
ತೋತ್ತಮಾಂಗಿಗಳಾಗಿ ಬಿನ್ನವಿಸಿದರ್ ಶಂಕರಂಗೆ ತದ್ವೃತ್ತಕವನು ॥ ೬ ॥

ಪಳೆಯ ರೋಗಕ್ಕೌಷಧಂಗೊಳಲ್ ನವರೋಗ |
ಮೊಲಿದು ಬಂದಂತೆ ಮೊದಲಾಣ್ಮನೊಲ್ಲೆಂದೊರ್ವ |
ಬಲವಂತನಂ ಬಯಸಿ ಬಾಳ್ವೊಗಲ್ ಬಡಿವ ಗಂಡಂ ದೊರಕಿದಂತೆ ಖಳನಾ |
ಕೊಲೆಗಂಜಿ ದೇವರಂ ಮರೆವೊಕ್ಕೊಡೆಮ್ಮನಂ |
ಡಲೆದು ತಿಂಬೊಂದು ಸಿಂಹಾಕೃತಿಯ ಭೂತಮಂ |
ಕಳುಪಿದಿರಿಯೆಂದು ನೊಂದಮರಾಳಿ ವಿಸ್ತರಿಸಿದರ್ ನೃಸಿಂಹನ ಹದನನು ॥ ೭ ॥

---

೧ ಭಂ (ಮ.)

ಅಚ್ಚರಿಯನಾಂತು ಶಿವನಾ ನುಡಿಗೆ ಹರಿಗಿಂತು
ಪೆಚ್ಚಿದ ಮದಂಗಳಂ ನಿಲಿಸುವೆವು ನಿಂ ಮುಂದೆ |
ಬೆಚ್ಚಿ ಬೇಡೆಂದಭಯವಿತ್ತು ದಿವಿಜರ್ಗೆ ವೀರೇಶನಂ ಕರೆದು ನೀನು ||
ಎಚ್ಚರದೊಳಾ ಹರಿಯ ಬಳಿಗೈದು ನೀತಿಗಳ |
ನುಚ್ಚರಿಸಿ ಕರೆ ಬಾರದಿರ್ದೊಡಾ ದೇಹಮಂ |
ಬಿಚ್ಚುತೆ ಶಿರಶ್ಚರ್ಮವೆರಡುಮಂ ತಾರೆಂದು ಕುವರನಂ ಬೀಳ್ಕೊಟ್ಟನು || ೮ ||

ನಮಿಸಿದಂ ಶಿವನಡಿಗೆ ಭಕ್ತಿಯಿಂ ಕೂಡಿ ಸಂ |
ಕ್ರಮಿಸಿದಂ ತನ್ನ ಬಲಮಂ ದಿವಿಜವರ್ಗಮಂ |
ಗಮಿಸಿದಂ ನಿಂದಲ್ಲಿ ನಿಲ್ಲದಾ ನರಸಿಂಹನಿದಿರೊಳೈತಂದು ನಿಂದು ||
ಭ್ರಮಿಸಿ ನುಡಿಯದೆ ಸುಮ್ಮನಿರ್ಪ ಹರಿಯಂ ಕಂಡು |
ಕ್ಷಮಿಸಿ ನುಡಿದಂ ಸಕಲಜನರ ಭೀತಿಯನುಪ |
ಕ್ರಮಿಸಿ ನಡೆವುದು ನೀತಿಯೇ ನಿನಗೆ ಹೇಳೆಂದು ಹರಿಗೆ ಮತ್ತಿಂತೆಂದನು || ೯ ||

ಎಲೆ ಹರಿಯೆ ಕೇಳ್ ನೀನು ಸತ್ವಗುಣಸಂಯುತಂ |
ಸುಲಲಿತಂ ಜ್ಞಾನಿ ಲೋಕಂಗಳಂ ನಲಿವಿನಿಂ |
ಸಲಹುವಂ ನೀನಸುರಕೃತ್ಯದೊಳ್ ತಾಮಸದೊಳಜ್ಞಾನದೊಳ್ ಲೋಕದ[1] ||
ಕೊಲೆಗೆಳ[2]ಸೆ ನಗದಿಹರೆ ಕೇಳ್ವವರ್ ನಿನ್ನೊಳಗೆ |
ತಿಳಿದು ನೋಡೀ ನುಡಿಯನೆಂದು ನರಹರಿಗಂದು |
ಪಲತೆರದ ಬುದ್ಧಿಯಂ ಪೇಳಿದಂ ರುದ್ರಾವತಾರನತಿಶಾಂತತೆಯೊಳು || ೧೦ ||

ವಾರಿನಿಧಿ ಮೇರೆಯಂ ಮೀರ್ದಂತೆ[3]ಕಾರಣಂ |
ಘೋರಮಣಿ ಬಾಯ್ದೆರದು ನುಂಗುವೊಲಕಾ[4]ಲದ ಸ |
ಮೀರಣಂ ಪೆರ್ಚಿ ಬೀಸುವಂತಾವಗಂ ಸಕಲರಂ ಸಲಹುವವನೇ ||
ಈ ರಾಕ್ಷಸತ್ವದಿಂ ಲೋಕಮಂ ನೀನೆ ಸಂ |
ಹಾರಮಂ ಮಾಳ್ಪುದನುಚಿತಮೆಂದು ನಿನ್ನನಾ |
ಮಾರಾರಿ ತನ್ನಲ್ಲಿಗೊಡಗೊಂಡು ಬರವೇಳ್ದನೆನೆ ನೃಸಿಂಹಂ ನುಡಿದನು || ೧೧ ||

೧ ಲೋಕಮಂ (ಹು, ಮ.) ೨ ಣೆ (ಹು, ಪ, ಗೋ.) ೩ ಮಾರಿಮೊಲ (ಹು, ಮ.)
೪ ಪೋಲ್ವ (ಮ.)

ಆವನದಾರ್ ಮಾರಾರಿಯೆಂಬುವಂ ತನ್ನ ಕರೆ |
ನವನಪಾರಿನಿತೊಂದು ಪೆಸರೊಳಂ ಬಾಳ್ವ ದೊ |
ಡ್ಡವನಪಾರೆನ್ನಿದಿರೊಳ್ಳೆದಿ ಸರಿಬರಿಗೆ ಮಾತಾಡುವಂ ಸೀನಪಾರು ||
ಜವನವರ್ ನಿನ್ನ ಕರೆದಪರೆಸೊ ನೀನಧಿಕ |
ಜವದೊಳಳಿಯಲ್ ಬಂದೆಯಕಟೆಮ್ಮ ಶೌರ್ಯಪುಂ[೧] |
ಜವನೆಲ್ಲರಿಂ ಕೇಳ್ದು ಬರ್ಪುದನುಚಿತವೆಂದು ಗುಡಿಗುಡಿಸಿದಂ ನೃಸಿಂಹಂ || ೧೨ ||

ಕೇಳ್ದು ಗಹಗಹಿಸಿ ವೀರಂ ಮಹಾಕೋಪಮಂ
ತಾಳ್ದು ತರಹರಿಸಿ ಹರಿ ಕೇಳ್ ದೈತ್ಯರಾಜನಂ |
ಸೀಳ್ದು ನೆತ್ತರ್ಗುಡಿಯಲಾ ಮದಂ ಪತ್ತಿ ನೀಂ ಮೈಮರೆಯೆ ತಪ್ಪದೇನು |
ಪೇಳಪೆವು ಕೇಳ್ ಬ್ರಹ್ಮನೇ ಸೃಷ್ಟಿಕರ್ತೃ ಜಗ |
ದೊಳ್ದಿಟಂ ರಕ್ಷಿಪಂ ನೀಂ ನಿಮ್ಮನುಂ ಜಗಮು |
ನಾಳ್ಪು ಸೃಷ್ಟಿಸಿ ಸಲಹಿ ಕೊಲ್ಪವಂ ರುದ್ರನಾತನ ಪುತ್ರನಾನೆಂದನು || ೧೩ ||

ಹೋ ಹೋ ಪುರೇ ಕೇಳ್ದೆವಾಶ್ಚರ್ಯಮಂ ಮಸಣ |
ಗಾಹಿ ಗೊರವಂ ಬೂದಿಬಡಿಕನರೆವೆಣ್ಣವನ |
ಸಾಹಸಂ ಗಡ ಜಗತ್‌ಸ್ಥಿತಿ ಜನನ ಲಯಕರ್ತುವಾತಂ ಗಡೆಮಗೊಡೆಯನು |
ಈ ಹದಿರುಗಾರನಾತನ ಮಗಂ ಗಡ ಮರ |
ಳ್ದಾ ಹಿರಿಯನೆಡೆಗೆಮ್ಮನೊಯ್ವ ಗಡ ಕೇಳಿಮೆಂ |
ದಾ ಹತ್ತಿರಿರ್ದವರ ಕೈವೊಯ್ದು ನಕ್ಕು ನರಹರಿ ಮಗುಳ್ದಿಂತೆಂದನು || ೧೪ ||

ನುಡಿಯೊಳೇಂ ಪಿರಿಯತನಮಪ್ಪುದೇ ನಿನ್ನ ಬಾ |
ಯ್ಬಡಿಕತನಮಂತಿರಲಿ ಲೋಕಕ್ಕೆ ತಾನಲ್ಲ |
ದೊಡೆಯರುಂ[೨]ಟಿ ಸುರಪಬ್ರ[೨]ಹ್ಮ ರುದ್ರಾದಿಗಳ್ ಸಮ್ಮಾಜ್ಞೆಯೊಳ್ ನಡೆವರು
ಕಡೆಗೆ ಸಂಹರಿಸುವೆವು ಸೃಷ್ಟಿಪೆವು ರಕ್ಷಿಪೆವು |
ಕೊಡುವೆವಳಿವೆವು ಸಕಲಸಂಪದವ ನಿನಗದರ |
ಗೊಡವೆಯೇತಕೆ ಬಂದ ದಾರಿಯೊಳ್ ನಡೆಯೆಂದು ನುಡಿದನಾ ನರಸಿಂಹನು
|| ೧೫ ||

೧ ಮಂ (ಮ, ಶಿ.) ೨-೨ ಟೇ ಸುರಬ್ರ (ಗೋ, ಪ, ಹು, ಮ.)

ತರಹರಿಸಿದಂ ವೀರನಾ ನುಡಿಗೆ ಪಲ್ಮೊರೆದು |
ಹರನಾಜ್ಞೆಯಿಂದಿವಂಗಿನ್ನೊಮ್ಮೆ ಬುದ್ಧಿಗಳ |
ನೊರೆವೆನವನುಂ ಕೇಳದೊಡೆ ತಕ್ಕುದಂ ನೆಗಳ್ವೆನೆಂದುರೆ ಮಹಾನಯದೊಳು ||
ನರಸಿಂಹ ಕೇಳ್ ನಿನ್ನ ಮೂರ್ಖತೆಯನುಳಿ ಬರಿದು[೧] |
ಮರುಳಾಟದಿಂದೆ ಫಲವೇಂ ಸಕಲಲೋಕಮಂ |
ಪೊರೆವಾತನಹುದು ನೀನಾದೊಡಂ ಹರನಾಜ್ಞೆಯುಂ ಮೀರಬೇಡೆಂದನು ॥ ೧೬ ॥

ಹರನಾಜ್ಞೆಯಿಂ ಮತ್ಸ್ಯ ಕೂರ್ಮ ಕಿಟಿ ಘೋರಕೇ |
ಸರಿಮುಖ್ಯರೂಪುಗಳನಾಂತು ತಮನಂ ಮಹಾ |
ಗಿರಿಯುಂ ಹಿರಣ್ಯಾಕ್ಷನಂ ಹಿರಣ್ಯಕಶಿಪುವನರಿದೆತ್ತಿ ಸದೆದು ಸೀಳಿ ॥
ಸುರರ ಸಲಹಿದೆ ಈಗಳದನೆಲ್ಲಮಂ ಮರೆದು |
ಸುರರನೇ ಸಂಹಾರಮಂ ಮಾಳ್ಪಬೇಡಿಡೆನ |
ಕ್ಕರರೆ ವೀರೇಶವಚನಾಮೃತದೆ ನನೆದುದಿಲ್ಲವನೆರ್ದೆಯದೇಂ ಕಠಿಣಮೋ ॥ ೧೭ ॥

ಬೇಡ ಬಾರೈ ನೃಕೇಸರಿ[೨] ಶಂಕರಂ ನಿನಗೆ |
ಕೇಡನೆಣಿಸುವನಲ್ಲ ಕಂಡು ಬರ್ದುಕೆಂದು ಮಾ |
ತಾಡುತಿರೆ ಗುಡಿಗುಡಿಸಿ ಕೋಪದಿಂ ವೀರನಂ ಮೇಲ್ವಾಯ್ದು ಕೊಲ್ವೆನೆಂದು ॥
ಕೂಡೆ ಲಂಘಿಸೆ ಕಂಡು ತಪ್ಪಿಲ್ಲವೆಮ್ಮೊಳೆಂ |
ದಾಡಿ ಸುರರೆಲ್ಲರುಂ ನೋಡುತಿರೆ ಪುಟನೆಗೆದು |
ಗಾಢದಿಂ ನರಮೃಗದ ಮಸ್ತಕವನೆಡಗಾಲೊಳೊದೆದನವನೇನೆಂಬೆನು ॥ ೧೮ ॥

ತದ್ದನುಜರಿಪು ಧರೆಗೆ ಬಿದ್ದು ಚೇತರಿಸಿ ಮಾ |
ರುದ್ದಿ ಕೈಗಳನತುಳರೋಷದಿಂ ವೀರನಂ |
ಗುದ್ದುವೆನೆನುತ್ತೆ ನಡೆತರ್ಪುದಂ ಕಾಣುತ್ತೆ ವೀರಭದ್ರಂ ಮನದೊಳು ॥
ಉದ್ದುರುಟುತನದ ಸಿಂಹಾಕೃತಿಗೆ ತಕ್ಕ ಬ |
ಲ್ಪಿದ್ದನಿತ್ತೀ[೩] ನೃಸಿಂಹನ ಪಣೆಯ ಬರಹಮಂ |
ತಿದ್ದಿ ಬಿಟ್ಟಪೆನೆಂಗಳೆನುತೆ ಶರಭಾಕಾರಮಂ ತಾಳ್ದು ರಂಜಿಸಿದನು ॥ ೧೯ ॥

---

೧ ದೆ (ಮ.) ೨-೨ ಮಾಡಬೇ (ಮ.) ೩ ನೃಸಿಂಹನೆ (ಮ.)

ಕಾಂಚನಮಹಾಗಿರಿಗೆರಂಕೆಗಳ್ ಪಾದವೆಂ |
ಟುಂ ಚಮತ್ಕಾರದಿಂ ಮೂಡಿದುವೊ ನಭದೊಳಿದು |
ತಾಂ ಚಲಿಸೆ ಗರಿಯ ಗಾಳಿಯೊಳಬ್ಧಿಗಳ್ ಮೇರೆಯಂ ಮೀರವೇ ಗಿರಿಗಳ ||
ಸಂಚಯಂ ಪಾರದಿರ್ಪುವೆ ತರಣಿ ಶಶಿ ತಾರೆ |
ಯುಂ ಚಲ್ಲವಡಿದಂತೆ ಬೀಳದಿರವೆಂಬಿನಂ |
ಚಂಚುವಿಂ ನರಮೃಗದ ಕಂಠಮಂ ಕರ್ಚಿ ಪಾರಿತು ಗಗನಕೇನೆಂಬೆನು || ೨೦ ||

ಕೊಡಹುವಂ ನರಮೃಗಶರೀರಿ ಚರಣಂಗಳಿಂ |
ತೊಡರುವಂ ಶರಭಾವತಾರಿ ಮತ್ತೆಡಬಲಕೆ |
ಮಿಡುಕುವಂ ನಾರಸಿಂಹಂ ಬಳಿಕ್ಕೊಡನೊಡನೆ ತುಡುಕುವಂ ವೀರಭದ್ರಂ ||
ಸಿಡಿವೆನೆಂದುಬ್ಬುವಂ ದನುಜಾರಿ ಪಕ್ಕದೊಳ್ |
ಬಡಿವೆನೆಂದಬ್ಬರಿಸೆ ದಕ್ಷಾರಿ ಕಣ್ಬಾಯ |
ಬಿಡುವಂ ನೃಹರಿ ಜರೆವನೊಡನತನ್ನರಿಪುತ್ರನೇನೆಂದು ಬಣ್ಣಿಸುವೆನು || ೨೧ ||

ಎಲ್ಲ ತೋರಿಸು ಜಗತ್ಸ್ಥಿತಿಲಯೋತ್ಪತ್ತಿಗಾ |
ನಲ್ಲದಿಲ್ಲೆಂಬ ನಾಲಗೆಯನಾ ಶಿವನ ಬಳಿ |
ಗೊಲ್ಲೆನೆಂದೆಂಬ ಬಲ್ಮೆಯನಭವನಂ ಜರೆವ ಚತುರಿಕೆಯ ಮಾತುಗಳನು ||
ಸೊಲ್ಲು ಸೊಲ್ಲೆಂದು ಮೂದಲಿಸುತುಂ ನಿಖಿಳನಖ |
ದಲ್ಲಿ ಮುಖದಲ್ಲೆರಂಕೆಯಲೆರಗಿ ದೆಸೆದೆಸೆಗೆ |
ಚೆಲ್ಲಿಸಿದನರುಣಾಂಬುವಂ ನೃಕೇಸರಿಯಂಗದಿಂದಮದ್ಭುತಶರಭನು || ೨೨ ||

ಕುಸುಕಿರಿವನಡಿಗಡಿಗೆ ಘನಪರ್ವತಂಗಳೊಳ್ |
ಬಸಿವನಲ್ಲಲ್ಲಿ ನೆತ್ತರನಬ್ಧಿಯೊಳ್ ಮುಳುಂ |
ಗಿಸುವನೊಮ್ಮೊಮ್ಮೆ ತೆಗೆದೆತ್ತುವಂ ಸುತ್ತುವಂ ನಾನಾದಿಗಂತಗಳನು[೧] ||
ಕೊಸರಿ ಬೀಸಾಡುವಂ ಗಗನದಿಂದಿಳೆಗಪ್ಪ |
ಳಿಸುವನಿಂತೆರ್ದೆಯಳಲ್ ತೀರ್ವನ್ನೆಗಂ ನೃಹರಿ |
ಯಸು ಪಿಂಗುವನ್ನೆಗಂ ವೀರನಾರುಂ ಕೊಲ್ಲದರೆಗೊಲೆಯನುರೆಕೊಂದನು || ೨೩ ||

---

೧ ತಂಗಳ (ಹು, ಮ.)

ಇಂತು ಕೊಂದಾ ನೃಕೇಸರಿಚರ್ಮಮಂ ಶಿರ |
ಸ್ವಂ ತಂದು ತಂದೆಗೊಪ್ಪಿಸೆ ಕಾಣುತೀಶ್ವರಂ |
ಸಂತಸದೊಳಾ ಮುಖಕೆ ಕೀರ್ತಿಮುಖಮೆಂಬ ಪೆಸರಿಟ್ಟೆಸೆವ ಭೂಷಣದೊಳು ||
ಅಂತು ತಚ್ಚರ್ಮಮಂ ಸಿಂಹಾಸನಮಿದೆಂದು |
ತಾಂ ತಡೆಯದೇರಿ ಸುತನಂ ಮನ್ನಿಸುತ್ತೆ ಸುರ |
ಸಂತತಿಗಳಂ ಮುದದೆ ಬೀಳ್ಕೊಟ್ಟು ಸುಖದೊಳಿರ್ದಂ ವಿರೂಪಾಕ್ಷನಂದು || ೨೪ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೫ ||

ಅಂತು ಸಂಧಿ ೩೩ ಕ್ಕಂ ಪದಗಳು ೧೨೭೦ ಕ್ಕಂ ಮಂಗಳಮಹಾಶ್ರೀ

ಮೂವತ್ತುನಾಲ್ಕನೆಯ ಸಂಧಿ

ಸೂಚನೆ

ದಕ್ಷಸಂಬಂಧಕಾಯವನಳಿದು ಮೇನೆಯಂ[1] |
ರಕ್ಷಿಸುವೆನೆನುತೆ ಸುತೆಯಾಗಿ ಪಂಪಾವಿರೂ |
ಪಾಕ್ಷನಂ ಪೂಜಿಸುತ್ತಿರ್ದಳಗಜಾತೆ ವಿಖ್ಯಾತೆಯತಿಭಕ್ತಿಯಿಂದೆ ||

ಚಂದ್ರಾರ್ಧಧರಣ [2]ದಿವಿಜೇಂದ್ರನು[2]ತಚರಣ ಭುಜ |
ಗೇಂದ್ರಾಭರಣ ಭಾರತೀಂದ್ರಶಿರಹರಣ [3]ವಿಜಿ |
ತೇಂದ್ರಿಯ[3]ವಿರಣ ಪರ್ವತೇಂದ್ರಜಾವರಣ ಗುಣಸಾಂದ್ರಸತ್ಕರಣ ಶರಣ[4] ||
ರುಂದ್ರ[5] ನಿಜಶರಣವೃಷಭೇಂದ್ರವರಕರುಣ ಸೌ |
ಪೇಂದ್ರಸಾಧರಣ ದಿವಸೇಂದ್ರ ಹಿಮ[6]ಕಿರಣ ಸ್ವಾ |
ಹೇಂದ್ರಾಕ್ಷ ಶರಣು ಮೋಕ್ಷೇಂದ್ರ ವಿರುಪಾಕ್ಷ ಖಳಶಿಕ್ಷ ಸೌಜನ್ಯರಕ್ಷ || ೧ ||

ಆಲಿಸಿನ್ನೆಲೆ ಸಿದ್ಧರಾಮ ಶಿವೆಯಂ ಕುರಿತು |
ಪ್ರಾಲೇಯಶೈಲನರ್ಧಾಂಗಿ ಪೂರ್ವದೆ ಬಹಳ |
ಕಾಲಪರಿಯಂತರಂ ತಪದೊಳಿರಲುಮೆಯೊಲಿದು ಬಂದವಳ ಮುಂದೆ ನಿಂದು ||
ಬಾಲೆ ನಿನ್ನಯ ತಪಕೆ ಮೆಚ್ಚಿದೆಂ ವರವದೇಂ |
ಕೇಳೆನಲ್ ನೀನೆನಗೆ ಸುತೆಯಪ್ಪುದೆನಲದರಿ |
ನಾ ಲಲನೆ ದಕ್ಷಸಂಬಂಧಕಾಯವನುಳಿದು ಮೇನೆಯುದರದೆ ಬಳೆದಳು || ೨ ||

ಬಳಿಕ ತಿಥಿ ವಾರ ತಾರಾ ಯೋಗ ಕರಣಸ |
ಮ್ಮಿಳಿತಶುಭದಿವಸದೊಳ್ ಶುಭಲಗ್ನದೊಳ್ ಪಡೆದ |
ಳೊಲವಿನಿಂ ಶಿವಲಿಂಗಧರೆಯಾದ ಕುವರಿಯಂ ಗಿರಿರಾಜನೆಯ್ದೆ ನೋಡಿ ||
ನಲಿದು ತಚ್ಛಿಶುವಿಂಗೆ ತಲ್ಲಿಂಗಮಂ ತನ್ನ |
ಕುಲಗುರುವಿನಿಂ ದೀಕ್ಷೆಯಿಂ ಕೊಡಿಸಿ ಪೆಸರಿಡಲ್ |
ಬಳೆವುತಿರ್ದಳ್ ಲೋಕಮಾತೆ ಗಿರಿಜಾತೆ ಶಿವಶರಣಕುಲಪಾರಿಜಾತೆ || ೩ ||

---

೧ ಮೇನಕೆಯ (ಶಿ.) ೨-೨ ವಿಜತೇಂದ್ರನ (ಹು.) ೩-೩ ದಿವಿ | ಜೇಂದ್ರಾ (ಹು.) ೪ ಭರಣ (ಶಿ.)
೫ ವೃಂದ (ಪ.) ೬ ವಿಧು (ಹು.)

ಶಿವನ ಪುಣ್ಯದ ಫಲಂ ಪೆರ್ಚಿ ಬಳೆಬಳೆವಂತೆ |
ಶಿವನ ಮೋಹನಮಂತ್ರಶಕ್ತಿ ಬಳೆಬಳೆವಂತೆ |
ಶಿವನ ಸುಖವಿದಿರಿಟ್ಟು ಮೂರ್ತಿವಡೆದಂ ಧರಿಸಿ ಬಳೆಬಳೆವಂತೆ ಕಂಗೊಳಿಸುವ ||
ಶಿವನ ಸತ್ಕೀರ್ತಿಲತೆ ನಳನಳಿಸಿ ಬಳೆವಂತೆ |
ಶಿವನ ಜಯಲಕ್ಷ್ಮಿ ಬಳೆಬಳೆವಂತೆ ಬಳೆದಳಾ |
ಶಿವನ ಪಟ್ಟದರಾಣಿ ಕಲ್ಯಾಣಿ ಮೃದುಪಾಣಿ ಫಣಿವೇಣಿ ಮಧುರವಾಣಿ || ೪ ||

ಎಳೆಯ ಸುರಲತೆಯಂತೆ ಬೆಳ್ವಕ್ಕದೊಳ್ ತೊಳಗಿ |
ಬೆಳಗುವ ಸುಧಾಸೂತಿಯಂತೆ ಶಿಶಿರಾಂತದೊಳ್ |
ತಲೆದೋರುವಂಗಜನ ಸಖನಂತೆ ನಳನಳಿಕೆ ಕಾಂತಿ ಮೋಹನಗಳೊಗೆಯೆ ||
ಲಲಿತಾಂಗದೊಳ್ ವದನದೊಳ್ ಬಾಹುಮೂಲದೊಳ್ |
ಸಲೆ ನುಂಪು ಸೊಂಪು ಕೆಂಪಮರೆ ರಂಜಿಸೆ ಸೊಗಸೆ |
ವಿಲಸಿತಗುಣವ್ರಾತೆ ಕಣ್ಗೆಸೆದಳಗಜಾತೆ ಚಾರುಚಾರಿತ್ರಪೂತೆ || ೫ ||

ತೋಳ ಮೊದಲೊಳ್ ಕಂಪು ಮುಖಕಮಲದೊಳ್ ಸೊಂಪು |
ಲೋಲಾಕ್ಷಿಯೊಳ್ ನೀಳ್ಪು ನುಣ್ಬಸಿರಿನೊಳ್ ತೆಳ್ಪು |
ಬಾಳೆದೊಡೆಯೊಳ್ ನುಂಪು ನುಡಿಯೊಳ್ ಸೊಗಸಿನಿಂಪು ಸಂಜನಿಸಿ ಮೆರೆಯೆ ಕೂಡೆ
ಆಲಸಂ ನಡೆಗುಣ್ಮೆ ಲಜ್ಜೆ ನಡೆಯೊಳ್ ಪೊಣ್ಮೆ |
ಮೇಲೆ ವಕ್ಷದೊಳುರ್ವು ಭ್ರೂಲತೆಗಳೊಳ್ ಜರ್ವು |
ಮೇಳವಿಸಿ ಶಿವೆಯಿಂತು ಜವ್ವನದ ಸಿರಿಯಾಂತು ಕಣ್ಗೆಸೆದಳೇನೆಂಬೆನು || ೬ ||

[1]ಚಕ್ಕಬ್ಬೊಳಡಗದ ವಿಶಾಲಲೋಚನಯುಗಳ |
ಮಿಕ್ಕುಬ್ಬೊಳಡಗದ ಕುಚದ್ವಯಂಗಳ್ ಬೆನ್ನ[1] |
ಮಿಕ್ಕೊಳಗುಮಾಡಿಕೊಂಡೆಸೆವ ವೇಣೀ[2]ಬಂಧಮಸಿಯ ನಡು ತನ್ನಿದಿರೊಳು ||
ಚಿಕ್ಕದೆಸಿಸುವ ಬಾಸೆ ಮೊದಲಾದಿವಳ ಯೌವ |
ನಕ್ಕೆಣೆಯೊಡಲ್ ಸಾಲದೆಂದು ಮುನ್ನವೆ ಕಂಡು |
ಮುಕ್ಕಣ್ಣನೆಣ್ಮಯ್ಯನಾದನೆನಲಗಸುತೆಯ ಯೌವನದ ಪೆಂಪದೆಂತೋ || ೭ ||

೧-೧ ಚಿಕ್ಕಂದು ಬಳೆವ ಪೆರ್ಮೊಲೆಗಳೊಳ್ಕ್ಕೆಯೊಳಗೆ | ಪೊಕ್ಕಡಗದಿರ್ಪ ನಗೆಗಣ್ಬೊಳಪುತಿಹ ಬೆನ್ನ | (ಹು, ಮು.) ೨ ವೇಣಿಯ (ಶಿ, ಮು.)

ಪೊಳೆವ ಮುಖಮಂಬುಜಂ ಕುಂತಳಂ ಷಟ್ಪದಿಗ |
ಳಲರ್ಗಣ್ಗಳುರೆ ಮೀನ್ಗಳೆಸೆವ ಕಂಠಂ ಶಂಖ |
ವೆಳೆದೋಳ್ಗಳಾ ತೆರೆಗಳುರಸಿಜಂ ಚಕ್ರತತಿ ಬಾಸೆಯೇ ಶೈವಾಲವು ‖
ಸುಳಿನಾಭಿ ನಿಮ್ನವಳಿಸಂಕುಲಂ ಕಿರುದೆರೆಗ |
ಳಲಘುಜಘನಂ ಪುಳಿನ ಮೇಗಾಲ್ಗಳಾವೆಗಳ್ |
ತಿಳಿವೊಡೆನೆ ಗಿರಿಜೆ ಬಾಂಬೊಳೆಯಂತೆ ಕಣ್ಗೆಸೆದಳೀಕ್ಷಿಸುವರಕ್ಷಿಗಳ್ಗೆ ‖ ೮ ‖

ಶಿವನ ವಿಭವದ ನಾಡು ಶಿವನ ಮಹಿಮೆಯ ಬೀಡು |
ಶಿವನ ಸುಖಮಯಮೂರ್ತಿ ಶಿವನ ನಿರುಪಮಕೀರ್ತಿ |
ಶಿವನ ಭಾಗ್ಯದ ಪೆಂಪು ಶಿವನ ವಿಷಯದ ಸೊಂಪು ಶಿವನ ಶೋಭನದಲಂಪು ‖
ಶಿವನ ಬಯಕೆಯ ಗೊತ್ತು ಶಿವನ ತನುವಿನ ಜೊತ್ತು |
ಶಿವನ ಮನದನುಕೂಲೆ ಶಿವನ ಚಿತ್ತದ ಲೀಲೆ |
ಶಿವನ ಸುಕೃತವ್ಯಕ್ತಿ[1]ಯೆನಿಸುವ ಮಹಾಶಕ್ತಿ ವಿಭವದಿಂದಿರುತಿರ್ದಳು ‖ ೯ ‖

ಇಂತು ಪಾರ್ವತಿ ಲೀಲೆಯಿಂದಿರಲ್ ನೀರದಪ |
ದಾಂತರದೆ ನಾರದಂ ಬಂದೊಡಗರಾಜನ |
ತ್ಯಂತಹರುಷದೊಳೆರಗಿ ಕೈಗೊಟ್ಟು ತನ್ನ ರಾಜಾಲಯಕ್ಕೊಯ್ಯುತಿರಲು ‖
ಮುಂತೆ ಗಿರಿಸುತೆಯಿರಲ್ ಮುನಿ ಕಂಡು ಪದಕೆರಗಿ |
ಸಂತಸದಿ ಪೊಗಳುತಿರೆ ನೀಂ ವಂದ್ಯರೆಮ್ಮ ಮಗ |
ಳಂ ತುತಿಸಿ ಮಣಿದಿರೇಕೆನೆ ನಗುತೆ ಗಿರಿರಾಜಗಾ ಮುನಿಪನಿಂತೆಂದನು ‖ ೧೦ ‖

ಜನನಿಯೇ ದೇವಗಂಗೆಗೆ ವಿಯನ್ಮಂಡಲಂ |
ಜನನಿಯೇ ಕಲ್ಪವೃಕ್ಷಕೆ ಚೈತ್ರರಥವನಂ |
ಜನನಿಯೇ ದಿವ್ಯನಿಗಮಾಕ್ಷರಾಳಿಗೆ ಮುಖಂ ವಿಮಲಸುಜ್ಞಾನಸುಧೆಗೆ |
ಜನನಿಯೇ ವೈಕಾರ್ಯಮಾನಸಂ ರತ್ನಕ್ಕೆ |
ಜನನಿಯೇ ಫಣಿಶಿರಂ ಸರ್ವಮಂಗಲೆಗೆ ನೀವ್ |
ಜನನಿಜನಕರೆ ಜಗನ್ಮಾತೆ ನಿಮ್ಮಯ ಮಗಳೆ ಶಿವಶಿವಾ ಕೇಳೆಂದನು ‖ ೧೧ ‖

---

೧ ದ ವ್ಯಕ್ತಿ (ಹು, ಶಿ.) ೨ ಥಾ (ಹು, ಮ.)

ವಕ್ಷಸಂಬಂಧಕಾಯವನುಳಿದು ಮಿಗೆ ವಿರೂ |
ಪಾಕ್ಷನರ್ಧಾಂಗಿ ಮೇನೆಯ ವರಕ್ಕಾಗಿ ತವ |
ಕುಕ್ಷಿಯೊಳ್ ಬರೆ ನಿನ್ನ ಮಗಳೆಯಿಸಾಕೆಯು ವಿಯೋಗದೆ ಹೇಮಕೂಟಗಿರಿಯ ||
ಸುಕ್ಷೇತ್ರತುಂಗಭದ್ರಾನದಿಯ ತೀರದ ಸ |
ಮಕ್ಷದೊಳ್ ಘನತಪೋಧನನಾಗಿ ನಿಂದು ಭಾ |
ಳಾಕ್ಷನಾನಂದದಿಂ ತನ್ನ ನಿಜಮಂ ತಾನೆ ಜಾನಿಸುತ್ತಿರುತಿರ್ಪನು || ೧೨ ||

ಆ ವಿರೂಪಾಕ್ಷನಿರ್ದೆಡೆಗೆ ಕಳುಪೈ ಮಹಾ |
ದೇವಿಯುಂ ನೀನೆನಲ್ ಕೈಕೊಳುತ್ತು[1]ಚಿತಸಂ |
ಭಾವನೆಯೊಳಾ ಮುನಿಪನಂ ಕಳುಪಿ ಪರಶಕ್ತಿಯೆಂದರಿದು ಭಕ್ತಿಯಿಂದೆ ||
ಪಾವನಚರಿತ್ರೆ ನಡೆ ಪೋಪೆವೆನೆ ತಾಯ್ಗೆರಗಿ |
ತೀವಿದನುರಾಗದಿಂ ಪುಷ್ಪಕವನೇರಿ ಕಾಂ |
ತಾವಳಿಯು ಗಡಣದಿಂ ಪಿತನೊಡನೆ ಹೇಮಕೂಟಾಚಲಕೆ ಬರುತಿರ್ದಳು
|| ೧೩ ||

ಕರಕಧಾರಕನಾಗಿಯಕ್ಷಮಾಲಿಕನಾಗಿ |
ನಿರುತಮುಂ ರತಿಮು[2]ಕ್ತನಾಗಿ ನಿಶ್ಚಲನಾಗಿ |
ಸ್ಥಿರಜೀವಿಯಾಗಿ ಜಟಿಯಾಗಿ ಮುಕ್ತಾಹಾರಿಯಾಗಿ ಸದ್ವಂಶಿಯಾಗಿ ||
ಉರುತರಪವಿತ್ರಾಂಗಿಯಾಗಿ ಸದ್ವಿಜವೃಂದ |
ಪರಿವೃತ್ತನಾಗಿ ಪುಷ್ಕರತೀರಗತನಾಗಿ |
ಪರಮಯೋಗೀಂದ್ರನೆನೆ ಹೇಮಕೂಟಾಚಲಂ ಕಣ್ಗೆಸೆದುದೇನೆಂಬೆನು || ೧೪ ||

ಗಿರಿಶಿರದ ಕುಜದೆಳದಳಿಗ[3]ಳೇ ಕೆಂಜೆಡೆಗ |
ಳಿರದಲ್ಲ ಮೆರೆವ ಶಶಿಸೂರ್ಯಶಿಲೆಯೇ ಕಂಗ |
ಳುರಿವ ದಾವಾನಲನೆ ಬಿಸಿಗಣ್ ತದವನಿಧರಕಂದರದ ನೀಲಶಿಲೆಯೇ ||
ಕೊರಳ ಗರಳಂ ಪುದಿದ ಮಂಜೇ ವಿಭೂತಿ ವಿ |
ಸ್ತರಗಂಡಶಿಲೆಗಳೆ ಶಿರೋಮಾಲೆಯಾಗೆ ಶಂ |
ಕರನ ಸಾರೂಪ್ಯಮಂ ಪಡೆದಂತೆ ಹೇಮಕೂಟಾಚಲಂ ಕಣ್ಗೆಸೆದುದು || ೧೫ ||

---

೧ ತಲು (ಮ.)　೨ ಯು (ಶಿ, ಹು, ಮ.)　೩ ಗಳೆ (ಮ.)

ಪರಿವ ಪರಿಪರಿಯ ಮೃಗಕುಲವೆಂಬ ಮೀನ್ಗಳಿಂ |
ಮರುತಹತಿಗೊಲಿವ ತರುಶಿರವೆಂಬ ತೆರೆಗಳಿಂ |
ಕರಿಕುಂಭಮೊಡೆದೊಕ್ಕ ಮುಕ್ತಾಫಲಂಗಳಿಂ ತಳಿರೆಂಬ ಪವಳದಿಂದೆ |
ವರಧಾತುನಿರ್ಝರಾವಳಿಯ ಪೊಸನೀರ್ಗಳಿಂ |
ಚರಿಪ ಸುರಪುಷ್ಪಕವೆನಿಪ್ಪ ಛೈತ್ರಂಗಳಿಂ |
ಶರಧಿಯಂದದಿನೆಸೆವ ಹೇಮಕೂಟಾದ್ರಿಯಂ ಗಿರಿರಾಜಸುತೆ ಕಂಡಳು || ೧೬ ||

ನೋಡು ನೋಡಿದು ಹೇಮಕೂಟಮಿದನೊಲ್ಲು ಕೊಂ |
ಡಾಡಲಸದಳಮಿದರ ಮಹಿಮೆ ಪಿರಿದಬ್ಜಾರಿ |
ಚೂಡನಿಲ್ಲಿರ್ಪ ಕಾರಣದಿಂದಲೆಂದು ಮಿಗೆ ನಗರಮಂ ತೋರುತೆ ಬರೆ ||
ಕೂಡೆ ಕಚ್ಛಪ ಪುಳಿನ ನಳಿನ ಚಕ್ರಾಳಿಗಳ್ |
ನಾಡೆ ಪದ ಜಘನ ಮುಖಮಂಡಲ ಕುಚಂಗಳ್ಗೆ |
ಮೀಡಾಗೆ ವರತುಂಗಭದ್ರೆಯಂಗನೆಯಂತೆ ಕಣ್ಗೆಸೆದಳಗಜಾತೆಯಾ || ೧೭ ||

ಗುರುಫೇನಪಿಂಡಂಗಳೇ ಕಳಶವೆಸೆವ ತಾ |
ವರೆಯೆ ಕನ್ನಡಿ ಕಣಾವಳಿಯೆ ಮುತ್ತಿನ ಸೇಸೆ |
ಮೊರೆವ ಧ್ವನಿಯೆ ವಾದ್ಯಮಂಬುಚರಮೆ ಜನಂ ಸುಳಿಗಳಾರತಿಗಳಾಗೆ ||
ಪರಮಶಂಕರನ ಪಟ್ಟದ ರಾಣಿ ಬರೆ ಕಂಡು |
ಹರುಷದಿಂದಿದಿರ್ಗೊಂಬ ಪಾಂಗಿನಿಂದೊಪ್ಪಿದಳ್ |
ಸರಸಪುಣ್ಯರಸಾರ್ದ್ರೆ ವಿಷಯದುರಿತಚ್ಛಿದ್ರೆ ಗುಣಮುದ್ರೆ ತುಂಗಭದ್ರೆ || ೧೮ ||

ನಿರುತಮನಿಮಿಷಕುಲಕ್ಕಾಶ್ರಯಂ ತಾನಾಗಿ |
ವರಸಕಲಭುವನಕಾಸ್ಪದಮಾಗಿ ಹಂಸಸಂ |
ಚರಣಾನುಬಂಧಿಯಾಗಿಯುಮೆಸೆವ ಕಮಲಸಂಭವನಿಜನಿವಾಸಮಾಗಿ |
ದುರಿತದೂರಮುಮಾಗಿ ಮುನಿಜನಾನ್ವಿತಮಾಗಿ |
ನಿರುತಂ ಶಿವೋದ್ಭಾಸಕರಮಾಗಿ ಸುಮನಸರಳ |
ಗಿರಿಯಂತೆ ಕಂಗೊಳಿಸುತಿಹ ತುಂಗಭದ್ರೆಯಂ ಗಿರಿರಾಜಸುತೆ ಕಂಡಳು || ೧೯ ||

೧ ನಂ (ಮ.) ೨ ಯೊ (ಮ.) ೩ ಜು (ಪ, ಶಿ, ಗೋ.) ೪ ನಿಸುಪ ಸು (ಮ.)

ಪಂಜರದೊಳೊಪ್ಪುವರಸಂಚೆಗಳ ಕೊಂಚೆಗಳ |
ಮುಂಚೆ ಪರಿವ್ರುರುತರಂಗಾವಳಿಯ ಗಾವಳಿಯ |
ಸಂಚರಿಪ ಸಕಲಮುನಿರಾಜಿಗಳ ವಾಜಿಗಳ ತಡಿವಿಡಿದ ವೃಕ್ಷಂಗಳ ||
ಚಂಚರೀಕದ ಸರದ ಸೊಂಪುಗಳ ಪೆಂಪುಗಳ |
ಮಿಂಚುತಿಹ ನೈದಿಲ್ಗಳೋಳಿಗಳ ಪಾಳಿಗಳ |
ಕಾಂಚನಾಂಭೋಜಾತಧೂಳಿಗಳ ಕೇಳಿಗಳ ತುಂಗಭದ್ರೆಯ ಕಂಡಳು || ೨೦ ||

ಜಂಬೂ ರಸಾಲ ಪೂಗ ದ್ರಾಕ್ಷೆ ಖರ್ಜೂರ |
ಜಂಬೀರ ನಾರಂಗ ಮಾತುಳುಂಗಾಮಳಕ |
ದಿಂಬಾದ ಪನಸ ದಾಡಿಮ ನಾಳಿಕೇರ ರಂಭಾದಿಗಳ್ ಫಲಭಾರದೆ ||
ಅಂಬಿಕೆ ಬರಲ್ ಕಂಡು ಭಯಭರಿತಭಕ್ತಿಯಿಂ |
ದಂ ಬಾಗಿ ನಮಿಸುವೊಲ್ ತುಂಗಭದ್ರಾತೀರ |
ಮಂ ಬಿಡದೆ ಸಾಲ್ಗೊಂಡ[1] [2]ಬನಬನದೊಳೆಸೆದಿರ್ದುವೇನೆಂಬೆ[2]ನಚ್ಚರಿಯನು
|| ೨೧ ||

ತುಂಗಭದ್ರೆಯನಾಗ ಗಿರಿಸುತೆಗೆ ತೋರಿಸುತೆ |
ತುಂಗಸಂತೋಷದಿಂದಂ[3] ತಳರೆ ರಂಜಿಸುವ |
ಸಂಗಹರನಿರ್ಪ ಪಂಪಾಕ್ಷೇತ್ರಮೆಡೆವಿಡದೆ ರಂಜಿಪ ವನಂಗಳಿಂದೆ ||
ಕಂಗೆಸೆವುದೈದೆ ಸಾಸಿರಮೊಗದ ಫಣಿವಲ್ಲಿ |
ಭಂಗೆ ಕೊಂಡಾಡಲಸದಳವೆನಿಸುವದರ ನವ |
ಮಂಗಲತೆಯಂ ಕಂಡು ಪುಷ್ಪಕವನಾ ಸರ್ವಮಂಗಲೆಯ ಪಿತನಿಳಿದನು || ೨೨ ||

ಬಾಗಿಲೊಳ್ ಕಾದಿರ್ದ ನಂದೀಶನಂ ಕಂಡು |
ಬಾಗಿ ಮಸ್ತಕವನಗರಾಜನನುರಾಗದಿಂ |
ಭೋಗಿಭೂಷಣನಿರ್ಪನಿಲ್ಲಿ ನಿನ್ನಂ ಪಿಂತೆ ಭೋಗಿಸಿದ ನಿಜರಮಣನು ||
ಯೋಗಿರೂಪಿಂದೆ ನಿನ್ನಾತನೆಂತಿಹನಂತು[4] |
ಯೋಗಿಣಿಯುಮೆನಿಸಿ ನೀನೊಲಿಸೆಂದು ಬಿನ್ನೈಸಿ |
ನಾಗಿದಂ ಬೀಳ್ಕೊಂಡು ಪರಶಿವನ ಮನವನಿಂಪಾ[5]ಗಿ ಪಡೆಯೆಂದು ಪುರಕೆ
|| ೨೩ ||

೧ ಹು (ಮ, ಶಿ, ಹು.) ೨-೨ ಬನಮೊಳೆಸೆದಿರ್ದುವೇನೆಂಪೆಂಚ (ಶಿ.) ೩ ಮುಂ (ಮ, ಹು.) ೪ ನಮ್ಮ (ಪ.) ೫ ಬಾ (ಹು, ಮ.)

ಜಯವಿಜಯೆಗಳುವೆನಿಪ ಘನಸಹಾಯಿಗಳನನು |
ನಯದಿಂದೆ ಬೆಸಸಿ ನಿಜಪುರದತ್ತ ಕುಧರಸಂ |
ಚಯನಾಥನೈದಲುವೆಯಿತ್ತ ಪಂಪಾಮಹಾಕ್ಷೇತ್ರಕ್ಕೆ ನಡೆದು ಬರಲು ||
ನಿಯತದಿಂ ಹೋಮಧೂಮಂಗಳಿಂ ಶೃತಿಸಮಾ |
ಶ್ರಯಮಂತ್ರಘೋಷದಿಂ ವರಹವಿರ್ಗಂಧದಿಂ |
ನಯನಕರ್ಣಘ್ರಾಣತತಿಗಳಂ ತಣಿಸುತೆ ತಪೋವನಂ ಕಣ್ಗೆಸೆದುದು || ೨೪ ||

ರುದ್ರಾಕ್ಷೆಗಳ ಕೋವ[1] ವಿಮಲಶಿವಲಿಂಗಕ್ಕೆ |
ರುದ್ರಾಭಿಷೇಕಮಂ ಮಾಳ್ಪ ಭಯಭಕ್ತಿಯಿಂ |
ರುದ್ರಪೂಜೋಪಕರಣಂಗಳಂ ಬೆಳಪ ವಲ್ಕಲಮನುರೆ ತೊಳೆದೊಣಗಿಪ ||
ರುದ್ರನರ್ಚನೆಗೆ ನಾನಾಕುಸುಮಮಂ ಕೊಯ್ವ |
ರುದ್ರರೆಂದೇ ಕಂಡು ಯತಿಗಳ್ಗೆ ನಮಿಪ ಶತ |
ರುದ್ರೀಯಮೊದಲಾದ ಮಂತ್ರಂಗಳಂ ಜಪಿಪ ಮುನಿಗಳಿಂ ವನಮೆಸೆದುದು || ೨೫ ||

ವೇದಶಾಸ್ತ್ರಾಗಮಗಳಂ ಶಿಷ್ಯಸಮುದಯ |
ಕ್ಕೋದಿಸುವ ಪೌರಾಣಮಂ ಪೇಳ್ವ ಭಾಷೆಮೊದ |
ಲಾದ ತರ್ಕಂಗಳಂ ಕನ್ನಡಿಪ ಸ್ನಾನಮಂ ಮಾಳ್ಪ ಜಪಗಳನೆಣಿಸುವ ||
ಸಾದರದೆ ಯಜ್ಞಂಗಳಂ ಮಾಳ್ಪ ಹೋಮಮೊದ |
ಲಾದ ಸತ್ಕ್ರಿಯೆಗಳಂ ನಡೆಸುತಿರ್ಪರ್ ಶಿವನ |
ಪಾದಯುಗಳಸ್ಮರರ್ ಮುಕ್ತಿಯುವತೀ[2]ವರರ್ ಮುನಿವರರ್ ಕಣ್ಗೆಸೆದರು || ೨೬ ||

ಪೂದೆಡೆಗೆ ಬಳಿವಿಡಿದು ಪೋಗಿ ಬೆಸನೇನೆಂದು |
ಕಾದಿರ್ದು ಹೋಮಕ್ಕೆ ಸಮಿದಾಜ್ಯದರ್ಭಸಂ |
ಪಾದನೆಗಳಂ ನೀಡಿಯಮಳಫಲ ಕಂದ ಮೂಲಗಳನವರಿರ್ದಲ್ಲಿಗೆ ||
ಆದರದೊಳಾಹಾರಕಾಲಕೊದಗಿಸಿ ನಿರ್ಮ |
ಳೋದಕಮನಾಶ್ರಮಕೆ ತಂದಿತ್ತು ಭಕ್ತಿಯೊಳ್ |
ಪಾದಗಳನೊತ್ತುತಿರ್ಪುವು ವೃದ್ಧಮುನಿಪರ್ಗೆ[3] ಕಪಿಗಳಾ ಗಿರಿತಟದೊಳು || ೨೭ ||

೧ ತೊಡುವ (ಹು.) ೨ ವನಿತೆಯ (ಹು.) ೩ ಗಳ್ಗೆ (ಪ.)

ಸುಳಿಯಲಮ್ಮದು ಗಾಳಿ ಬಿರುಸಾಗಿ ಪೂಗಳಂ |
ತುಳಿಯಲಮ್ಮದು ತುಂಬಿವಿಂಡು ಮೊರೆಮೊರೆವುತ್ತ |
ನುಳಿಯಲಮ್ಮದು ಸೂರ್ಯಕಿರಣತತಿ ಬಿಸುಪಾಗಿ ತರುಲತಾಗುಲ್ಮಕುಲಕೆ |
ಮುಳಿಯಲಮ್ಮದು ದವಾನಲನುರುಬಿ ಮಳೆಗಳಂ |
ಪಿಳಿಯಲಮ್ಮದು ಮೇಘಮೊತ್ತಿ ಪಣ್ಗಳ ಸೊಂಪು |
ಕಳಿಯಲಮ್ಮದು ಸಕಲಋತುಗಳೊಂದಾಗಿರ್ಪ ಕಾರಣಂ ತದ್ವನದೊಳು || ೨೮ ||

ಗಿರಿಕಾ ಬಿಡಾಲ ಫಣಿ ನಕುಲ ಶಶ ವೃಕ ನಾಗ |
ಹರಿ ಹರಿಣ ಶಾರ್ದೂಲ ಶರಭ ಭೇರುಂಡಾದಿ |
ಧರೆಯ ಮೃಗಪಕ್ಷಿಕುಲಮನ್ಯೋನ್ಯವೈರಂಗಳಂ ಮರೆದು ಸೊಗಸಿರ್ಪುವು ||
ಬಿರಿದ ಸಂಪಗೆಗಳಿಗಳಂಬುಜಕೆ ಚಂದ್ರಮಂ |
ಪರಸಕೈರವದಲರ್ಗಳಿಂಗೆ ಸೂರ್ಯನಿಂತಿವರೊ |
ಳಿರವಿಲ್ಲದಿಹುದು ಪಂಪಾವಿರೂಪಾಕ್ಷನ ತಪೋವನದೊಳೇನೆಂಬೆನು || ೨೯ ||

ಇಂತು ರಂಜಿಸುವ ಪುಣ್ಯಾಶ್ರಮಂಗಾಣುತೋ |
ರಂತೆ ಗಿರಿಸುತೆ ಬಂದು ಹೇಮಕೂಟಾಚಲ |
ಪ್ರಾಂತದೆ ತಪೋಮೂರ್ತಿಯಾಗಿ ಶೋಭಿಪ ವಿರೂಪಾಕ್ಷನಂ ಕಂಡು ನಮಿಸಿ ||
ಸಂತಸದೊಳೊಲ್ದು ಕೊಂಡಾಡಿ ಭಯಭಕ್ತಿಯಿಂ |
ಸಂತತಂ ಪೂಜಿಸುತ್ತಿರ್ದಳಗಜಾತೆಯ |
ತ್ರ್ಯಂತಭುವನಖ್ಯಾತೆ ಸಕಲನಿಗಮಾತೀತೆ ಸಂಪೂತೆ ಲೋಕಮಾತೆ || ೩೦ ||

ನಿಚ್ಚಲುಂ ತುಂಗಭದ್ರಾನದಿಯೊಳುಂ ಮಿಂದು |
ನಿಚ್ಚಳದ ಧೌತಾಂಬರವನುಟ್ಟು ನೊಸಲಿನೊಳ್ |
ಪೊಚ್ಚಪೊಸತಾದ ಭಸಿತಮನಿಟ್ಟು ರುದ್ರಾಕ್ಷೆಯಂ ತೊಟ್ಟುಕೊಂಡು ಬಳಿಕ ||
ಅಚ್ಚಪೂಗಳನರಸಿ ಕೊಯ್ದು ತಂದವರಿಂದೆ |
ಪಚ್ಚವಂ ಮಾಡಿ ತತ್ತತ್ ಸ್ಥಾನಕಳವಡಿಸಿ |
ಅಚ್ಚಮೂರುಳ್ಳ[4] ಶಿವನಂ ಭಜಿಸುತಗಜಾತೆ ಸುಖಮಿರಲ್ಕಿತ್ತಲತ್ತ || ೩೧ ||

೧ ಸೊಂಪು (ಮ.) ೨ ಸುಖಿಮಿ (ಪ.) ೩ ಳಿಗೆ (ಮ.) ೪ ದುಗಳ (ಶಿ, ಗೋ.)

ತಾರಕಾಸುರನೆಂಬ ದಾನವಂ ಪೆಚ್ಚಿ ವಿೞಗೆ |
ವಾರಿಜಾಂಬಕಸುರೇಂದ್ರಾದಿದಿಕ್ಪಾಲಕರ |
ಗೋಱಿಗೊಳಿಸುತ್ತವರ ದುರ್ಗಂಗಳಂ ಕೊಂಡು ತನ್ನ ತಾಣೆಯುವನಿಡಲು ||
ಭೂರಿಯಾಹವದೆ ಸೈರಿಸಿ ನಿಲ್ಲಲಾರದೆ ವಿ |
ಕಾರಿವೇಷವನಾಂತು ಕೈವಿಡಿದು ತಂತಮ್ಮ |
ನಾರಿಯರನೆಲ್ಲರಂ ನಡೆತಂದು ಮೇರುವಿನ ಗುಹೆಗಳೊಳಗೆ ಮೈಗರೆದರು || ೩೨ ||

ಉಟ್ಟಿರುವೆಗಳ ಮೆಯ್ಯ ಕಾಳಿಕೆಯ ದೈನ್ಯರಸ |
ವಿಟ್ಟಣಿಸಿದಾಸ್ಯದಮರರ್ಕಳಿಂಗಿಷ್ಟಮಂ |
ಕೊಟ್ಟವನ ಪೊರೆ[೧]ಗೆ ನಡೆತರಲಜಂ ಕಂಡು[೧] ನಿಮಗೇಕೆ ಬರವಾದುದೆನಲು ||
ದಿಟ್ಟನಹ ತಾರಕನ ಕೊಲೆಗಾರದಾಂ ಭೀತಿ |
ವಟ್ಟೆವೆಮ್ಮಯ ಸಕಲಸೌಭಾಗ್ಯಮಂ ಪೆಸರ |
ಪಟ್ಟಣಂಗಳನವಂ ಕೊಂಡು ಬಿಡದುರುಬಿಯರೆಯಟ್ಟಿದಂ ಕೇಳೆಂದರು || ೩೩ ||

ಸಾರಿದೆವು ಹರಿಗೆ ತಾರಕನಟ್ಟುಳಿಯನಾತ |
ನಾರೇಳ್ಸಹಸ್ರವರ್ಷಂ ಕಾದಿ ಕಾದಿ ಗೆಲ |
ಲಾರದೆ ಸುದರ್ಶನಂ ಮುರಿದೋಡಿಯಮೃತಾಬ್ಧಿಯಂ ಪೊಕ್ಕು ಮೈಗರೆದನು ||
ಆರೆವಿನ್ನ[೨]ವನಲೆಗೆ ಸುರರುಳಿವ ದಾರಿಯಂ |
ತೋರಿಕೊಡಿಮೆಂದು ಬಿನ್ನವಿಸೆ ಕಮಲಾಸನಂ |
ದೂರನಾಲಿಸಿಯಮರರಂ ಸಂತವಿಟ್ಟು ಪೇಳ್ದಂ ಖಳನ ವೃತ್ತಕವನು || ೩೪ ||

ಪಿಂತೆ ತಾರಕದೈತ್ಯನತಿನಿಷ್ಠೆಯಿಂದಂ ವ |
ನಾಂತರದೆ[೩] ತೊಡಗಿದಂ ತಪವನದರುಗ್ರಮಂ |
ತಿಂತೆಂದು ಪೇೞಲೆನಗರಿದಾ ತಪೋಗ್ನಿಯಿಂದೀರೇಳ್ಜಗಂ ಸುಡುತಿರೆ ||
ಚಿಂತೆವೆತ್ತಾನೀ[೪]ಶನೆಡೆಗೈದಿ ಕೇಳಲಭ |
ವಂ ತನಗೆ ಪೇಳ್ದನಿದು ತಾರಕನ ತಪದ ವೃ |
ತ್ತಾಂತವಾತಂಗೆ ಬೇಡಿದ ವರವನಿತ್ತುದಂ ಬಿಡಿಸೆಂದು ಬೀಳ್ಕೊಟ್ಟನು || ೩೫ ||

೧-೧ ಗಾಗ ನಡೆತರಲ್ ಕಂಡು (ಶಿ.) ೨ ನ್ನಿ (ಶಿ.) ೩ ತದೊಳು (ಮ.) ೪ ಗೀ (ಮ.)

ಮೃಡನಾಜ್ಞೆಯಿಂದೆ ತಾರಕನೆಡೆಗೆ ನಡೆತಂದು |
ನುಡಿಸಿದೆಂ ಸಾಕು ತಪವ ವರವಂ ಬೇಡೆನ |
ಪೊಡನೆ ಕಣ್ದೆರೆದು ಕೋಪಾಡುತುಂ ನುಡಿದನಾನೆಂದಿಗುಂ ಸಾಯದಂತೆ |
ಕೊಡುವುದೆನೆ ಜಾತಸ್ಯ ಮರಣಂ ಧ್ರುವಮುದೆಂಬ |
ನುಡಿಯನರಿದಘಟಿತವನೆಂಬರೇ [illegible]ಜೀವರಂ |
ಬಿಡುವುದೆಂ ಮರಣವೆಂತಾದೊಡಂ ಪೇಳೆನಲ್ಕವನೆನ್ನೊಳಿಂತೆಂದನು || ೩೬ ||

ಆಮೋಡಭವನ ವೀರ್ಯಮಂ ಬಿಡದೆ ಹರಿಯಜೇಂ |
ದ್ರಾದಿಬೃಂದಾರಕರ್ ಧರಿಸಲಾ ವೀರ್ಯದಿಂ |
ಪಾಪೇಳ್ಗನದ ಕುಮಾರಕನಿಂದಲಲ್ಲದುಳಿದವರಿಂದೆ ಸಾಯದಂತೆ ||
ಸಾದರದೊಳೀವುದೆಂದೆನಗೆ ಬಿನ್ನೈಸಲಾಂ |
ಭೇದದಿಂದಾ ವರವನಿತ್ತೆನದರಿಂದವಂ |
ಕಾದಿ ಕೊಂದೊಡೆ ಸಾಯನಾರಕೆಯ್ಯೊಳುಮೆಂದು ಪೇಳ್ದು ಮತ್ತಿಂತೆಂದನು || ೩೭ ||

ಹೇಮಕೂಟಾಚಲದೆ ಶಂಕರಂ ತಪವಿರಲ್ |
ಪ್ರೇಮದಿಂ ಗಿರಿಜೆಯಾತನ ಸೇವೆಯಂ ಮಾಳ್ಪ |
ಆ ಮಹಾದೇವನಾಕೆಯೊಳೊಂದಿದಲ್ಲದೆಮ್ಮಯ ಕಾರ್ಯವಾಗದೆಂದು ||
ಕಾಮಪಿತನಂ ಕೇಳ್ವೆನೆಂದಜಂ ನಿರ್ಜರ |
ಸ್ತೋಮಮಂ ಕೂಡಿ ಹರಿಯೆಡೆಗೆ ಬರೆ ಕಾಣುತ್ತೆ |
ತಾಮರಸಲೋಚನಂ ಬಂದುದೇಂ ಪೇಳೆಂದು ಬೊಮ್ಮನಂ ಬೆಸಗೊಂಡನು || ೩೮ ||

ಹರಿಗೆ ಕೈಮುಗಿದಜಂ ನುಡಿದನಾ ತಾರಕಂ |
ದುರುಳನವನಂ ಕೊಲ್ವೊಡೀಶ್ವರಂ ಗಿರಿಜೆಯೊಳ್ |
ನೆರೆಯಲಾ ವೀರ್ಯದಿಂದುಸಿದವನಿಂದಲ್ಲದಾಗದಾ ಶಂಭು ತನ್ನ ||
ಪರಮಸಿಜನುಂ ತನ್ನ ಸ್ವತ್ವಮಂ ಸಮಾಧ್ಯದೊಳ್ |
ಗಿರಿಶಿ ತನ್ನಂ ತಾನೆ ಜಾನಿಸುತ್ತಿರ್ಪನಾ |
ಪರಬಿನಾತನ ಯೋಗಮಂ ಕೆಡಿಪುದಕ್ಕುಪಾಯಂಗಾಣಬೇಕೆಂದನು || ೩೯ ||

೧. ಈ ವರಂ | ಬಿಡುವಷ್ಟೆ | ಮ. | ೨ ನೆ (ಹು, ಶಿ.)

ಹರನ ನಿಷ್ಠುರತಪಶ್ಚಲನೆಯಂ ಮಾಡೆ ಪೂ |
ಸರನಲ್ಲದುಳಿದರಿಂದಾಗದೆಂದಬ್ಜವಿ |
ಷ್ಟರಕಮಲನಾಭಮುಂತಾದವರ್ ನಿರ್ಧರಿಸಿ ಪುಷ್ಪಾಸ್ತ್ರನಂ ಬರಿಸಲು ||
ಹರಿಗೆ ಪೊಡೆಮಟ್ಟು ನಿಂದಿರ್ದನ್ನನೀಕ್ಷಣಂ |
ಕರೆಸಿದಿರದೇಕೆನಲ್ ಹೇಮಕೂಟದೊಳಿರ್ಪ |
ಹರನ ತಪಮಂ ಕೆಡಿಸಿ ಪಾರ್ವತಿಯೊಳೊಂದಿಸೆಂದಸುರಾರಿ ನೇಮಿಸಿದನು || ೪೦ ||

ಆ ಮಾತು ಕಿವಿಯೊಳಲಗುಡಿದಂತಿರಾಗಲ್ಕೆ |
ಕಾಮಂ ಭಯಂಗೊಂಡು ಶಂಭುವಂ ಕೆಣಕೆ ನಿ |
ರ್ಧೂಮಮಾಗೆನೆ ನಯನವಹ್ನಿಯಿಂದೀ ಮಾತನುಸಿರ್ವರೆ ನೀವೆನಲ್ಕೆ ||
ಈ ಮಹಾದೇವಗಣಕಾಗಿ ತನುವಂ ಕೊಡಲ್ |
ನೀ ಮಾಡಿದುದು ಸಫಲಮೆಂದೊಡಂಬಡಿಸಿ ಲ |
ಕ್ಷ್ಮೀಮನೋವಲ್ಲಭಂ ಕಳುಪಿದಂ ತಿಳುಪಿದಂ ಸುರರ ಚಿತ್ತದ ಭಯವನು || ೪೧ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೨ ||

ಅಂತು ಸಂಧಿ ೩೪ಕ್ಕಂ ಪದಗಳು ೧೩೧೨ಕ್ಕಂ ಮಂಗಳಮಹಾಶ್ರೀ

ಮೂವತ್ತೈದನೆಯ ಸಂಧಿ

ಸೂಚನೆ

ಕಾಮನತಿಗರ್ವದಿಂ ಸಕಲಸನ್ನಾಹದಿಂ |
ಹೇಮಕೂಟಾಚಲಕೆ ನಡೆತಂದು ಹರನನು |
ಪ್ರಾಮಬಾಣಂಗಳಿಂದೆಸೆ ವಿರೂಪಾಕ್ಷನುರಿಗಣ್ಣಿನಿಂ ಸುಟ್ಟನವನ ||

ಅಂಗಭವಸತುಳಸರ್ವಾಂಗದಾಹನಗುಣೋ |
ತ್ತುಂಗನಯನಾಗ್ನಿಸ್ಫುಲಿಂಗ ಹಿಮಶೈಲಜಾ |
ಧಾಂಗ ನತಜನಕಮಲಭೃಂಗ ಶಂಕರ ಕೃಪಾಪಾಂಗ ನಿರ್ಮಲಶುಭಾಂಗ ||
ಗಂಗಾತರಂಗಪ್ರಸಂಗತಜಟಾಪಟಲ |
ಮಂಗಳಾತ್ಮಕ ಭಕ್ತಸಂಘಮಂ ರಕ್ಷಿಪುದು |
ಹಿಂಗದನುದಿನಮೆಸೆವ ಪಂಪಾವಿರೂಪಾಕ್ಷಲಿಂಗ ಸತ್ಕೀರ್ತಿಸಂಗ || ೧ ||

ತಂದೆಯಡಿಗೆರಗಿ ಕಳುಹಿಸಿಕೊಂಡು ಮನ್ಮಥಂ |
ಮಂದಮಾರುತನಂ ಸಮೀಪಕ್ಕೆ ಕರೆದು ನೀಂ |
ಸಿಂದೆಮ್ಮ ಚೈತ್ರನಂ ಸಕಲಬಲಮಂ ಕೂಡಿಕೊಂಡು ಬರವೇಳೆಂದೆನೆ ||
ಅಂದವಂ ಬಂದಾ ವಸಂತಂಗೆ ಕಂದರ್ಪ |
ನಿಂಮಥರನಂ ಜಯಿಸಲೈದುವಂ ನೀಂ ಬೇಗ |
ದಿಂಪೆ ಚತುರಂಗಮಂ ಕೂಡಿಬಹುದೆನಲಖಿಳಬಲವೆರಸಿ ಪೊರಮಟ್ಟನು || ೨ ||

ಸಾಪ್ರಗಳ್ ಪಡವೇರಿ ಮಲ್ಲಿಗೆ ಮಸಂಗೊಳಿಸ |
ಲಾ ವಿಮಲಚಂಪಕಂ ಸೊಂಪಡರೆ ಬಕುಳವಿರ |
ಪಾವರಿಸಿ ಮುಕುಳವಂ ಪಾದರಿಗೆ ಪದವಿ ಪೆಚ್ಚಲ್ಕೆಯದಿರ್ಗಂತಿಸಿಯಲರ |
ತೀಸೆ ಪ್ರೊಸತಳಿರ್ಗಳಸಶೋಕೆಗಳ್ ತಳೆಯೆ ಚಿಂ |
ದಾವರೆಗಳಲಿನಿಮಿರೆ ಚೆಲ್ವಾಗೆ ಬನಬನದೊ |
ಳೀಪೊಳ್ಪಿನಲಂಬರಾಯಸೆಡೆಗಾ ವಸಂತಂ ಬಂದನುತ್ಸವದೊಳು || ೩ ||

೧-೧ ಬಾಗಳಿಂದೆಸೆಯೆ (ಮ.) ೨ ಹಿ (ಹು.) ೩ ಚಿ (ಹು.)

ಬಂದು ಕಾಣ್ಕೆಯನಿಕ್ಕಿ ಭಯಭರಿತಭಕ್ತಿಯಿಂ |
ಕಂದರ್ಪರಾಯ ಚಿತ್ತಯಿಸೀಗಳೆನ್ನೊಡನೆ |
ಬಂದ ಸೇನಾಸಮುದ್ರವನೆಂದು ಬಿನ್ನವಿಸುತಿರೆ ಕೇಳಿ ಚೈತ್ರನೊಡನೆ ||
ಇಂದುಧರನಿರ್ಪನಾ ಹೇಮಕೂಟಾಚಲದೊ |
ಳಿಂದು ನಾವಾತನಲ್ಲಿಗೆ ಬೇಗ ಪೋಗಬೇ |
ಕೆಂದು ಕರೆಸಿದೆವೆಂದು ಪೇಳ್ದು ಸಂಭ್ರಮದಿಂದೆ ಪೊರಮಡಲ್ಕನುವಾದನು || ೪

ನವಪರಾಗದ ತಿಲಕಮಂ ರಚಿಸಿ ಮಲ್ಲಿಗೆಯ |
ವಿವಿಧಮುಕುಳದ ಕಂಠಮಾಲೆಯುಂ ತಳೆದು ಸೊಗ |
ಸುವ ಕಂಜಗುಣದ ವಸನದ ಮಲ್ಲಗಾಸೆಯುಂ ಬಿಗಿದುಟ್ಟು ಮಾಂದಳಿರೊಳು ||
ಸವೆದ ಕೈಪೊಡೆಯ ಚೆಂಗಣಗಿಲೆಯ ಗೊಂಡೆಯದ |
ತವೆ ಮೆರೆವ ಕುಂದಕಿಂಕಿಣಿಯ ಪೂವಿನ ಬಿಲ್ಗೆ |
ಸವಡಿಸಿದ ತುಂಬಿಮುಡಿವಾಳಗಳ ಸಿಂಜಿನಿಯ ಮಂಜುಳಾಂಗಂ ಮೆರೆದನು || ೫

ಎಸೆವ ಕಬ್ಬಿನ ಬಿಲ್ಲನುರೆ ಪಿಡಿದು ತುಂಬಿಗಳ |
ಪೊಸ ತಿರುವನಳವಡಿಸಿ ನನೆಯಂಬುಗಳನು ಸೇ |
ರಿಸಿ ನೋಡಿ ಹೆದೆಗಳೊಳ್ ತೀವಿ ಪೂವಿನ ಸರದ ಝಲ್ಲಗಳನಾಂತು ಬಳಿಕ ||
ಮಿಸುಪ ಕೇದಗಿಯೆಸಳ ಕಿಗ್ಗಟ್ಟ ಕಟ್ಟಿ ರಂ |
ಜಿಸುವ ಪೂದೇರನಾ ರತಿಯ ಕೈವಿಡಿದಡರಿ |
ಬಿಸಜಾತಪತ್ರಂಗಳಿಂದೆ ಪೊಂಬಾಳೆಗಳ ಚಮರದಿಂ ರಂಜಿಸಿದನು || ೬

ತಳಿರ[೧] ಮಾಮರದಾನೆಗಳ ಗಿಳಿಯ ಕುದುರೆಗಳ |
ಸಲೆ ರಥಾಂಗಂಗಳ ರಥಂಗಳ ವಿಲಾಸದಿಂ |
ತಳರ್ವ ಕಾಂತಾಜನದ ಕಾಲಾಳ ಚಂದ್ರಮಂತ್ರಿಯ ವರವಸಂತನೆಂಬ ||
ದಳವಾಯ ಗಡಣಂಗಳಿಂ ಕಾವರಾಯನಳಿ |
ಕುಳರವದ ಭೇರಿಯುಂ ಪೊಯ್ಸುತ್ತೆ ಕೋಕಿಳಂ |
ಗಳ ರವದ ಕಹಳೆ ಚಾಳಂಕಿಪಾಠಕರ ಕಳಕಳದಿಂದೆ ಪೊರಮಟ್ಟನು || ೭ ||

೧ ತ (ಹು, ಮ.)

ಒಸೆದು ಕೂಜಿಸುವ ಕೋಕಿಲರವಂ ಬೃಂಹಿತಂ |
ಮಿಸುಪ ಕೆಂದಳಿರೆ ಪಣೆಗಮರ್ದ ಸಿಂಧೂರವಾ[೧] |
ಲಸಿತಷಟ್ಪದಿಗಳೆರಗಿ[೨]ನಿಗಂಪು ಮದಗಂಧಮಲರ್ಗಣೆಗಳೇ ಕೋಡ್ಗಳು ||
ಸಸುಗಾಳಿಗೊಲಿದಾಡುವೆಳಗೊಂಬೆ ಸೊಂಡಿಲಾ |
ಗಸಕೆವ್ವ ನಟ್ಟಿಗೊಂಬೆಸೆವ ಠಕ್ಕೆಯುಮಾಗ |
ಲಸಮಶರನೆಡಬಲದೊಳಿಟ್ಟಣಿಸಿ ನಡೆವ ಮಾಮರದಾನೆಗಳ್ ಮೆರೆದುವು || ೮ ||

ಗಳದ ಕಪ್ಪಿನ ಗೆರೆಯೆ ವಾಘೆ ರಕ್ಕೆಗಳೆ ವ್ಯೈ |
ಗಳವಟ್ಟ ಮರಕತದ ಪೊಸ ಪಕ್ಕರಕ್ಕೆ ಮೇಂ |
ಲುಲಿಯೆ ಹೇಷಾರವಂ ಗತಿಗಮಕಮೇ ಪಂಚಧಾರಾವಿಶೇಷಮಾಗೆ ||
ನಳಿನಸಾಯಕಚಕ್ರವರ್ತಿಯಿಕ್ಕೆಲದೊಳಗೆ |
ಪೊಳೆವ[೩] ಖೇಚರಭೂಚರಂಗಳೊಳ್ ನಡೆಗೊಳ್ವ |
ಗಿಳಿಗುದುರೆಗಳ ಹಿಂಡು[೪]ಹಿಂಡು ರಂಜಿಸಿದುವಂದೇನೆಂದು[೫] ಬಣ್ಣಿಸುವೆನು || ೯ ||

ತನುತನುಗಳೇ ರಥದ ಗಾಲಿಯೆರಡೊಂದಾದ |
ಮನವೆ ರಂಜಿಸುವಚ್ಚು ಬಾಯ್ಗೂಟದಿಂದೊಗೆದ |
ದನಿಯೆ ಚೀತ್ಕಾರಮೆಲರಲೆಪದಿಂದೆದ್ದ ಗರಿ ಮೆರವ ಠಕ್ಕೆಯಮುದಾಗೆ ||
ಮನಸಿಜಮಹಾಮಂಡಲೇಶನೆಡಬಲಗಳೊಳ್ |
ವಿನುತವಿಭವದ ವಿಡಾಯದೊಳೆ ನಡೆಗೊಳ್ವ ನೂ |
ತನರಥಾಂಗಂಗಳ ರಥಂಗಳಿಟ್ಟಣಿಸಿ ಸಂಭ್ರಮದಿಂದೆ ನಡೆಗೊಂಡುವು || ೧೦ ||

ಕುಡುಹುಬ್ಬುಗಳೆ ಬಿಲ್ ಕಟಾಕ್ಷಂಗಳಂಬುಗಳ್ |
ಪಿಡಿಮೊಲ್ಗಳೇ ಲೌಡಿ ಕುರುಳುಗುರ್ಗಳೇ ಸುರಗಿ |
ತೊಡೆದ ಕತ್ತುರಿಯು ಬೊಟ್ಟೇ ಹರಿಗೆ ಬಾಸೆಗಳೆ ಕರವಾಳ್ಗಳಾಗೆ ಕೂಡೆ ||
ಕಡುತವಕದಿಂದೆ ಮನ್ಮಥನ ಹೂವಿನ ತೇರಿ |
ನೆಡಬಲದೊಳಿಟ್ಟಣಿಸಿ ಪರಿದು ಪಂಕ್ತಿಸಿ ಕೊಳಕಿ |
ನಡೆವ ಕಾಲಾಳ ಮಂಗಡದ ಸಂದಣಿಯ ಸಂಭ್ರಮವನೇಂವಣ್ಣಿಸುವೆನು || ೧೧ ||

೧ ದಪಿ (ಶ್ರಿ, ಗೋ.) ; ರಂಪಿ (ಹು, ಮ.) ೨ ಪಿ (ಹು, ಮ.) ೩ ಗೊನೆಸೆ (ಹು, ಮ, ಶ್ರಿ, ಗೋ.) ೪ ವ (ಹು, ಮ.) ೫-೫ ರಂಜಿಸಿದುವಂದುವದನೇನೆಂದು (ಮ.)

ಚೂಳಿಯೊಳ್ ಪೈದೋರಿದಂ ಮಂದಮಾರುತಂ |
ಪಾಳಿಯಿಂ ನಡೆಸಿದಂ ಸೇನೆಯಂ ಸೇನಾನಿ |
ಪೇಳಲೇಂ ಸಕಲಭರಭಾರಮಂ ಧರಿಸಿದಂ ಚಂದ್ರಮಂ ಮದನಜಲದ ||
ಘೋಳಿಟ್ಟುದಖಿಳಖಗವರವಾದ್ಯನಿಸ್ವನಂ |
ಧೂಳಿ ಮುಸುಕಿದುದು ಬ್ರಹ್ಮಾಂಡಮಂ ರತಿಯ ಸ |
ಮ್ಮೇಳದಿಂದೈದುವಂಗಜನ ಚಾತುರ್ಬಲಂ ನಡೆದುದೀಶ್ವರನ ಮೇಲೆ || ೧೨ ||

ಇದಿರೊಳಾನದೆ ತೊಲಗು ತೊಲಗು ಮನ್ಮಥನೃಪನ |
ಮದದಾನೆವಿಂಡೈದುತಿದೆಕೊ ಕಾಯಜನ ತೇಳ |
ಪದ ಖಡ್ಗಮೈತರ್ಪುತಿದೆಕೊ ಕಾಮನ ಪೊಸ ಕಠಾರವಿದೆ ಪೋಗು ಪೋಗು |
ಅದಟುಕೊಳ್ಳದು ಸಾರೆನುತ್ತೆ ಸನ್ಮುನಿಜನಕೆ |
ಬೆದರಿಕೆಯನಿಕ್ಕಿ ಸಾರುವ ತೆರದೊಳೊಡನೆ ಕೂ |
ಗಿದುವು ಮನ್ಮಥನ ಪೂವಿನ ತೇರ ಮುಂಗಡೆಯ ಕಹಳೆಗಳದೇನೆಂಬೆನು || ೧೩ ||

ಚೂಳಿಗಾಳಿಯ ದನಿಯನಾಲಿಸುತೆ ನೆಲದೊಳಗೆ |
ಪೂಳಿರ್ದ ತನುಗಳಂ ಕೀಳಲಾರದೆ ಮದನ |
ದಾಳಿಯಂ ಕಂಡು ತರುಗುಲ್ಮಪುತ್ತಡರ್ದೊಡಲನಲುಗಲಾರದೆ ಭರದೊಳು |
ಘೋಳಿಟ್ಟು ಕಣ್ಗೆಟ್ಟು ಬಾಯ್ಬಿಟ್ಟು ಮರವಟ್ಟು |
ಬಾಳಗೊಲೆಯಂ ಬಂದನೆಂತೆನುತೆ[1] ತಾಪಸರ್ |
ಬೀಳಾಗಿ ಕಾಳಾಗಿ ಪಾಳಾಗಿ ಮಮ್ಮಲಂ ಮರುಗಿದರ್ ತತ್‌ಕ್ಷಣದೊಳು || ೧೪ ||

ಕದಡಿ ತೊಟ್ಟಿಕ್ಕುವ ವಿಭೂತಿಗಳ ಬೆಮರಿನಿಂ |
ಕೆದರಿ ನೆಲಕೆಳಲ್ವ ಜಡೆಗಳನಕ್ಷಮಾಲೆಯಿಂ[3] |
ಗದಗದಿಪ ಕಂಠದ ಶಿವಸ್ಮರಣೆಯಂ ಕಮಂಡಲುದಂಡಗಳನೆ ಮರೆದು ||
ಮದನನಿದೆ ಬಂದನೇಳೇಳೆಂದು ಕಣ್ಗೆಟ್ಟು |
ಬೆದರಿ ಕೈಕಾಲ್ಗೆಟ್ಟು ಕಳವಳಿಸಿ ಬೆಬ್ಬಳಿಸಿ |
ಕುದಿದೋಡಿದರ್ ತಾಪಸರ್ ಕಾಮಭಯಮಾರನಳ್ಕಿಸದು ಮೂಜಗದೊಳು || ೧೫ ||

---

೧ ತು (ಶಿ, ಗೋ.) ೨ ನೆಂತೆಂದು (ಹು.) ೩ ಮಾಲೆಗಳ (ಹು, ಮ.)

ನುತಿಗಳಿಂದೆರಗಿಸಿಕೊಳುತ್ತೆ ಕಾಣ್ಕೆಗಳುಮಂ |
ಪ್ರತಿಗಳಿಂದಿಕ್ಕಿಸಿಕೊಳುತ್ತೆ ಯೋಗೀಶ್ವರರ |
ಮತಿಗಳೊಳ್ ತಮ್ಮ ಮುದ್ರಾಂಕಿತವನೊತ್ತುತ್ತೆ ಯುವಿಗಳಂ ಕೊಂದೆತ್ತುತೆ ||
ಶ್ರುತಿಸುಮಾರ್ಗಿಗಳ ಸರ್ವಸ್ವಮಂ ಕೈಕೊಳು |
ತ್ರತಿಜಿತೇಂದ್ರಿಯರನಂಗನೆಯರೊಳ್ ನೆರೆಪುತು |
ಸ್ಮಿತಹರುಷದಿಂದಂಗಭವಚಕ್ರವರ್ತಿ ನಡೆಗೊಂಡನೀಶ್ವರನ ಮೇಲೆ ||೧೬||

ಮುನಿನಿಕರವಾರಾಸಿವಡಬಾನಲಂ ಯೋಗಿ |
ಜನಮದದ್ವಿಪಕುಂಭವಿದಳನಮೃಗೇಂದ್ರ ಪಾ |
ವನನೈಷ್ಠಿಕವ್ರಜಮನೋಹರಿಣಶಾರ್ದೂಲ ಯತಿಮೇಘಚಂಡಪವನ ||
ಘನಜಿತೇಂದ್ರಿಯಕುಧರಕುಲಿಶ ವೈರಾಗಿಜನ |
ವನದವಾನಲನೆಂದು ಪಾಠಕಾವಳಿಯಂದು |
ಮನಸಿಜನ ಬಿರುದ ಕೊಂಡಾಡುತಿರೆ ಬೇಗ ಪಂಪಾಕ್ಷೇತ್ರಕೈತಂದನು ||೧೭||

ಪಟ್ಟದ ಮದದ್ವಿಪಂ ಮುಗ್ಗಿದುದು ಮುಂದಡ್ಡ |
ಗಟ್ಟಿ ಸರಿಯೂಳ್ಕುವರೆ ನಡೆಗೊಂಬ ಸೈನಿಕರ |
ನಟ್ಟನಡುವಡಹಾಯ್ದು ಪೋಯ್ತು ಸಿಕ್ಕದೆ ಮೊಲಂ ಗಜಹಯಂಗಳ ಕಣ್ಣೊಳು ||
ಬಟ್ಟಾಡಿದುವು ಕಂಬನಿಗಳಲರ ತೇರಿಂಗೆ |
ಕಟ್ಟಿದ ಹಯಂ ಸೊಗನನೀಡಾಡಿ ದೆಸೆದೆಸೆಗೆ |
ಕೆಟ್ಟೋಡಿದುವು ಸ್ಮರನ ದಳದೊಳಾಯ್ತುತ್ಪಾತಶತಮದೇಂ ವಣ್ಣಿಸುವೆನು ||೧೮||

ಸಾರಸೊಡನಾಗ ಚೈತ್ರಂ ಪೇಳ್ದನಪಜಯಂ |
ಬಾರದಿರದವಶಕುನಮಂ ಮಾರೆ ತಿರುಗೆನ |
ಜ್ಯೋರಂತೆ ದಿವಿಜರ್ಗೆ ನಂಬುಗೆಯನಿತ್ತಬಳಿಕಾದುದಂ ಕಾಣ್ಬೆನೆನುತೆ ||
ದಾರಿವಿಡಿದೈತಂದು ಹೇಮಕೂಟಾಚಲ |
ದ್ವಾರದೊಳಗಿರ್ದ ನಂದೀಶನಂ ಕಂಡು ಪರಿ |
ವಾರಸಹಿತಂ ಕಳನಳಿಸಿದುದು ಮಾರಿ ಪೊಗಲಂಜಿ ಶಂಕರನ ಪೊರೆಗೆ ||೧೯||

---

೧ ಕೊಲಡೆ (ಮ.)

ಹರನೆಡೆಗೆ ನಡೆವ ತೆರನಂ ಕಾಣದಾ ಕುಸುಮ |
ಶರನಧಿಕಚಿಂತೆಯಿಂದಿರೆ ಪೂಗಳಂ ಕೊಂಡು |
ಗಿರಿತನುಜೆ ಪುಷ್ಪಕದೊಳಾಳಿಯರ್ವೆರಸಿ ಬರೆ ಮನ್ಮಥಂ ಕಂಡು ನಮಿಸೆ ||
ತರಳ[1] ನೀನಾರೆಂದು ಬೆಸಗೊಳಲ್ಕಾಂ ಪುಷ್ಪ |
ಶರನಭವನಂ ನಿಮ್ಮೊಳೊಂದಿಸೆಂದಮರಕುಲ |
ಮೊರೆಯೆ ಬಂದೆಂ ನಂದಿಯಂ ಕಂಡು ಪೋಗಲಂಜಿದೆನೆಂ[2]ದೊಡಿಂತೆಂದಳು || ೨೦ ||

ಎನ್ನ ಪುಷ್ಪಕದ ಮರೆಯೊಳಗೆ ಬಾರೈ ಮದನ |
ಮುನ್ನ ದಿವಿಜರ್ಗಿತ್ತ ಮಾತ ನೀಂ ಸಲಿಸೆನಲ್ |
ಪನ್ನಗಾಭರಣನಿನಪಾಯಮಾದಪುದೆನಲ್ಕಂಜದಿರು ಭೀತಿಬೇಡ ||
ಎನ್ನ ನೀನಂಬಿ ಬಾರೆಂದು ಸಂತೈಸಿ ಮನ |
ದನ್ನನೆಡೆಗಂಗಜಂವೆರಸು ನಡೆತಂದಭವ[3]ಳಿ |
ನನ್ನೀಮದಿಂ ಪೂಜಿಸಲ್ ಕಾವನಿನಿವಿಲ್ಲಿಗಳಿವೆದೆಯನೇರಿಸಿದನು || ೨೧ ||

ಮದನನಾ ದೇವಿಯರ ಪಿಂತೆ ನಿಂದುನ್ಮದನ |
ಮದನ ಮೋಹನ ವಶೀಕರಣ ಸಂತಾಪಸಂ |
ಜ್ಞದ ಮಹಾಬಾಣಂಗಳಿಂ ಕ್ರಮದೊಳೆಸೆಯೆ ಶಿವನಂ ತಾಗಲಂಜಿ ಮರಳೆ ||
ಮುದಮಡಗಿ ಸಲ್ಕೈದರಿಂದಲೊಂದೇ ಬಾರಿ |
ಬೆದರದಾರ್ದೆಸೆಯಲಾ ಶಿವನಂಗಮಂ ತಾಗೆ |
ಹೃದಯದೊಳಗರಿವು ತೋರಲ್ ವಿರೂಪಾಕ್ಷನತಿಕೋಪದಿಂದೀಕ್ಷಿಸಿದನು || ೨೨ ||

ನೋಡಲುರಿಗಣ್ಣಿನಿಂ ಮದನನ ಕಳೇವರಂ |
ಕೂಡೆ ಭುಗಿಭುಗಿಲೆಂದು ಬೆಂದು ಪೋದುದು ಹರಂ |
ನಾಡೆ ತದ್ಭಸ್ಮಮಂ ಸರ್ವಾಂಗಕುದ್ಧೂಳನಂಗೈದು ಪಾರ್ವತಿಯನು ||
ನೋಡಿ ನುಡಿಸದೆ ನಿರಾಕಾರಮಂ ತಳೆಯೆ ರತಿ |
ಗಾಡದಿಂದೈತಂದು ಪತಿಯುಳಿದ ಬಳಿಯೊಳೀ |
ಡಾಡಿದಳ್ ದೇಹಮಂ ಬಾಯ್ವೊಯ್ದು ಮೊರೆಯಿಟ್ಟು ಬಹಳಶೋಕಾರ್ತೆಯಾಗಿ
|| ೨೩ ||

೧ ತರುಣಿ (ಪ, ಗೋ, ಮ.) ೨ ಪೊಗಲಂಜಿದೆನ್ನೆಂ (ಮ.) ೩ ದು ಭವ (ಹು.)



ಕಾಮದಹನ

ಪೊಡೆದವರೆ ಕಾಮಧೇನುವ ಕಲ್ಪವೃಕ್ಷಮಂ
ಕಡಿದವರೆ ಸೌಂದರ್ಯರಸದ ಕೆರೆಯಂ ಮಾಣ |
ದೊಡೆದವರೆ ವಿಮಲಮುಕ್ತಾಮಣಿಯ ಕೆಂಡದೊಳ್ ಸುಟ್ಟರೆ ಮಾಣಿಕವನು ||
ಪುಡಿಗೆಯ್ದರೆ ಲಲಿತಶೃಂಗಾರಲತೆಯ ಕುಡಿ |
ಯುಡಿದವರೆ ಕೆಟ್ಟೆನಯ್ಯೋ ಎನ್ನಕಲ್ ಪೋಗಿ |
ಸುಡದೆ ಗಂಡನ ಕಳುಪಿ ಕೊಲಿಸಿದಮರರನೆಂದು ದೆಸೆದೆಸೆಗೆ ಬಾಯ್ಬಿಟ್ಟಳು || ೨೪ ||

ಹಾಯೆನ್ನ ಪ್ರಾಣೇಶ ಹಾಯೆನ್ನ ಸುವಿಲಾಸ |
ಹಾಯೆನ್ನ ಮನದನ್ನ ಹಾಯೆನ್ನ ಪೊಸರನ್ನ |
ಹಾಯೆನ್ನ ಭಾಗ್ಯನಿಧಿ ಹಾಯೆನ್ನ ಗುಣಶರಧಿ ಹಾಯೆನ್ನ ಸಕಲಸುಖವೇ ||
ಓಯೆನ್ನಲಾಗದೇ ಶಿವಶಿವಾಯೆನ್ನೆಡೆಗೆ |
ಬಾಯೆನ್ನಲಾಗದೇಯಾನಗಲೆ ನೊಂದೆಯ |
ಯ್ಯೋಯೆನ್ನಲಾಗದೇ ಮದನ ಮೋಹನವದನ ಹಾಯೆನುತ್ತಳವಳಿದಳು || ೨೫ ||

ಮಾರನಂ ಹರಿಯ ಸುಕುಮಾರನಂ ರಮ್ಯಾವ |
ತಾರನಂ ಕೀರ್ತಿವಿಸ್ತಾರನಂ ಸೌಂದರ್ಯ |
ಸಾರನಂ ಸತ್ಕೃಪಾಸಾರನಂ ಮುನಿಮದವಿದೂರನಂ ತನ್ನ ಕುಚದ ||
ಹಾರನಂ ಶೃಂಗಾರಹಾರನಂ ಲೋಕೋಪ |
ಕಾರನಂ ಮೋಹನಾಕಾರನಂ ಸಂತತೋ |
ದ್ಧಾರನಂ ಸುರತಮಂದಾರನಂ ಕಾಣದೆಂತಿರ್ಪೆನೋ ಹಾಯೆಂದಳು || ೨೬ ||

ಚೆಂದುಟಿಯ ಸೊಂಪುಗಳ ಪೊಳೆವ ಕದಪುಗಳ ನವ |
ಕುಂದರದನದ ಚೆಲ್ವ ಬಾಯ್ದೆರೆಯ ಕುಡುಪುರ್ವಿ |
ನಂದನಡೆದಿರ್ದ ನಾಸಿಕದ ಸಿಟ್ಟಿಸಳ್ಗಣ್ಣ ಕಾಂತಿಗಳ ತುರುಗೆವೆಗಳ ||
ಮಂದಹಾಸದ ಕರ್ಣಭೂಷಣದ ಮಾಣಿಕ್ಯ |
ದಿಂದೆ ಝಗಝಗಿಪ ಮುಕುಟದ ಮಸ್ತಕದ ಮಹಾ |
ಸೌಂದರ್ಯಸದನನಂ ಮದನನಂ ಕಾಣದೆಂತಿರ್ಪೆನೋ ಹಾಯೆಂದಳು || ೨೭

೧ ಮುಡುಗಿದರೆ (ಶಿ.) ೩ ಪಾ (ಹು.); ಕಾ (ಮ.) ೩ ನ (ಪ.) ೪-೬ [illegible]
ರ್ಪೆನೊ ಮಹಾದೇವ (ಹು, ಮ.)

ಕುಸುಮಬಾಣವನೆತ್ತ ಬಿಸುಟೆ ಗಿಳಿಗುದುರೆಗಳ |
ಹಸರಮನದೆಲ್ಲಿ ಕಳುಪಿದೆ ಚಂದ್ರಮನನಾವ |
ದೆಸೆಗೆ ಬೀಳ್ಕೊಟ್ಟೆ ತಂಗಾಳಿಗೇನೂಳಿಗವನಿತ್ತೆ ಮಾಮರದಾಸೆಯ ||
ಎಸೆವ ಪೂವಿಲ್ಲನಳಿವೆದೆಯನಾರ್ಗಿತ್ತೆ ಶೋ |
ಭಿಸುವಂಚೆ ಕೊಂಚೆ ಕೊಳರ್ವಕ್ಕಿಗಳನೇಗೆಯ್ದೆ |
ಪೊಸ ಬಸಂತನನಾರ ಕಯ್ಯೆಡೆಯನಿತ್ತೆ[೧]ಯ್ಯೆ ಹಾ ಕಾಂತೆ ಹಾಯೆಂದಳು || ೨೮ ||

ಪತಿಯಳಿದ ಪೊರೆ[೨]ಯೊಳಗೆ ಪೊರಳುತುಂ ನರಳುತುಂ |
ಮತಿಗೆಟ್ಟು ಮರವಟ್ಟು ಚೀರುತುಂ ದೂರುತುಂ |
ಧೃತಿಯಿಂದೆ ತಾಂ ಮೆಲ್ಲನೇಳುತುಂ ಬೀಳುತುಂ ದೆಸೆದೆಸೆಗೆ ಬಾಯ್ವಿಡುತ್ತುಂ ||
ಗತಿಯಾವುದೆನಗೆಂದು ಬೇಡು[೩]ತುಂ ಕೋಡುತುಂ |
ಕ್ಷಿತಿಯೆ ಬಾಯ್ದೆರೆಯೆಂದು ಕರಗುತುಂ ಕೊರಗುತುಂ |
ಖತಿಯಿಂದೆ ದಿವಿಜರಂ ಬಯ್ವುತುಂ ಸುಯ್ವುತುಂ ರತಿ ಪತಿಗೆ ಶೋಕಿಸಿದಳು || ೨೯ ||

ರಾಮ ಕೇಳಾಗಳಾ ಮೃಗಪಕ್ಷಿಸಂಕುಳಂ |
ಕಾಮನರಸಿಯ ಶೋಕಮಂ ನೋಡಿ ದುಃಖದಿಂ |
ತಾಮೊಡನೆ ಬಳಸಿ ಕಂಬನಿದುಂಬಿ ಮೋಹಿನಾಸೆಯನುಳಿದು ನಿಂದಿರ್ದುವು ||
ಭೂಮಿಜಂಗಳ್ ಬಾಡಿ ಸೋಲುತಿರ್ದುವು ಲತಾ |
ಸ್ತೋಮಂಗಳೊಣಗಿ ಮಿಗೆ ನೇಲುತಿರ್ದುವು ಕೂಡೆ |
ತಾಮರಸವಾದಿಗಳ್ ಕೊರಗುತಿರ್ದುವು ದುಃಖಮೆಂತಪ್ಪರಂ ಕೆಡಿಸದೇ || ೩೦ ||

ಉಲಿಯದಿರ್ದುದು ಭ್ರಮರಿ ಪೊಳೆಯದಿರ್ದುದು ಚಮರಿ |
ಕೆಲೆಯದಿರ್ದುದು ಪಿಕಂ ಮುಲಿಯದಿರ್ದುದು ಶುಕಂ |
ಸುಳಿಯದಿರ್ದುದು ಕರಿಣಿ ಕಳಿಯದಿರ್ದುದು ಹರಿಣಿ ಗಳಹದಿರ್ದುದು ಶಾರಿವಂ ||
ಉಲಿಯದಿರ್ದುದು ಕೋಕಿ ನಲಿಯದಿರ್ದುದು ಕೇಕಿ |
ಪುಲುಕದಿರ್ದುದು ಕೊಂಚೆ ಪುಲುಕದಿರ್ದುದದಂಚೆ |
ಲಲನೆಯಳಲಂ ನೋಡಿ ತಮ್ಮದೆಂದೇ ಮಾಡಿಕೊಂಡು ಘನಶೋಕದಿಂದೆ || ೩೧ ||

೧ ಚಿಪೆಗೊಟ್ಟೆ (ಶಿ.) ೨ ಬಳಿ (ಹು, ಮ, ಶಿ.) ೩ ಬಾಡು (ಹು, ಮ.)

ಕಾವ ನಿನ್ನಂ ಕಾಯದಾದನೇ ಮಗನೆಂದು |
ಮಾವನಿಂ ಲೋಕಮಂ ರಕ್ಷಿಸುವ್ನೆಂಬ ನುಡಿ |
ಹೋವವಲ್ಲವೆ ತನಗೆ ಕಟಕಟಾ ಸಕಲಲೋಕಂಗಳಂ ಸೃಜಿಪೆನೆಂಬ ||
ಭಾವನೆಯ್ದೆ ತನ್ನ ತಮ್ಮನೆಂದೆಂಬ ನಿಜ |
ಭಾವದಿಂ ಮರಳಿ ಸೃಷ್ಟಿಸಲಾಗದೇ ಮಹಾ |
ದೇವ ನನಗಿನ್ನಾರು ದಿಕ್ಕುಗೆಟ್ಟೆಂ ಕೆಟ್ಟೆನೆಂದು ರತಿ ಶೋಕಿಸಿದಳು || ೩೨ ||

ತರುಗಳಿರ ಲತೆಗಳಿರ ಮೃಗಪಕ್ಷಿಗಳಿರ ಭಾ |
ಸುರಸುರಾಂಗನೆಯರಿರ ದಿಗ್ದೇವಿಯರಿರ ವರ |
ಗಿರಿಗಳಿರ ಭೂದೇವಿವನಲಕ್ಷ್ಮಿಯರಿರ ಕಂಡಿರೆಯೆನ್ನ ವಿಧಿಯನೀಗ ||
ಕರುಣಿಸೆಲೆ ತಾಯೆ ಗಿರಿಜಾತೆ ನಿನ್ನಂ ನಂಬಿ |
ಹರನ ಕಣ್ಗಿಚ್ಚಿಗಾಹುತಿಯಾಗಿ ಪೋದನೆ |
ಸ್ಮರನನೀಗುವೆನೆಂದು ಮರುಗುತಿರೆ ಕೇಳುತಾ ಶಿವೆ ತನ್ನೊಳಿಂತೆಂದಳು || ೩೩ ||

ತಂದೆ ತಾಯಂ ಬಿಟ್ಟುದೊಂದು ಮದನಂ ನಂಬಿ |
ಬಂದುದೆರಡೀಶ್ವರನವಜ್ಞೆ ಮೂರ್ ಸತಿಯ ಶೋ |
ಕಂ ದೋರೆ ನಾಲ್ಕು ಲೋಕಾಪವಾದಮುದೈದು ನವಯೌವನೋದಯದೊಳು ||
ಬಂದಡವಿಯೊಳಗಿರ್ಪುದಾರೆನ್ನ ನುಡಿಸದೆಯು |
ಮಿಂದುಜೂಟಂ ಪೋಗಲೇಳಾದುದೀಗಲೆನ |
ಗೊಂದಡಸಲೆಂಟಡಸಿತೆಂಬ ನುಡಿ ನಿಜವಾದುದೆಂದಗಜೆ ಚಿಂತಿಸಿದಳು || ೩೪ ||

ರತಿಯ ಸಂತಾಪಮಂ ನೋಡಿ ಕಡುನೊಂದು ಪಾ |
ರ್ವತಿ ಮಹಾಕರುಣದಿಂ ಕಾಂತೆ ಬಾ ಕೇಳ್ ನಿನ್ನ |
ಪತಿಯನೀವೆಂ ಮಹಾದೇವನಂ ಕೂರ್ತು ತಪವಂ ಮಾಡಿ ಸಲೆ ಮೆಚ್ಚಿಸಿ ||
ಅತಿದುಃಖಮಂ ಮಾಡಬೇಡೆಂದು ತಲೆದಡವಿ |
ಸತಿ ಸಂತವಿಟ್ಟು ಜಳಕೀಶ್ವರನನೊಳಕೆಯ್ವು |
ಗತಿಯಾವುದೆಂದು ನಿರ್ಧರಿಸಿ ತನ್ನೊಳ್ ತಾನೆ ಗಿರಿಜಾತೆ ಚಿಂತಿಸಿದಳು || ೩೫ ||

---

೧ ವೆ (ಮ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ವವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೬ ||

ಅಂತು ಸಂಧಿ ೩೫ಕ್ಕಂ ಪದಗಳು ೧೩೪೮ಕ್ಕಂ ಮಂಗಳಮಹಾಶ್ರೀ

ಮೂವತ್ತಾರನೆಯ ಸಂಧಿ

ಸೂಚನೆ

ರತಿಗಭಯಮಂ ಕೊಟ್ಟು ಘನತಪದೊಳಂದು ಪಾ |
ರ್ವತಿ ಶಿವನನೊಲಿಸಿ ಪಿತನರಮನೆಗೆ [೧]ಬರೆ ಶೈಲ |
ಪತಿ ಸುತೆಗೆ ಕಲ್ಯಾಣಮಂಟಪವನಾ ವಿಶ್ವಕರ್ಮನಿಂ ನಿರ್ಮಿಸಿದನು[೧] ||

ಗಂಗಾತರಂಗೋತ್ತಮಾಂಗದಹನೀಕೃತಾ |
ಪಾಂಗಸ್ಮರಭಸ್ಮಧವಳಾಂಗ ಮುಕ್ತ್ಯಂಗನಾ |
ಲಿಂಗ [೨]ಸದ್ಭಕ್ತಭವಭಂಗ ಶ್ರುತಿ[೨]ಸಂಗ ಮುನಿಪುಂಗವಾಭೇದ್ಯ ಸರ್ವ ||
ಮಂಗಳಾರ್ಧಾಂಗ ತ್ರಿಗುಣಂಗಳುತ್ತುಂಗ ನೇ |
ತ್ರಂಗಳ ಸೊಬಂಗ ಕರ್ಣಂಗಳ ತೊಡಂಗಳುರ |
ಗಂಗಳಾ ಸಂಗಮಂ ಹಿಂಗದ ವಿರೂಪಾಕ್ಷಲಿಂಗ ರಕ್ಷಿಸುವುದೆನ್ನ || ೧ ||

ಆಲಿಸೈ ಸಿದ್ಧರಾಮೇಶ ಗಿರಿಜಾತೆ ಕರು |
ಣಾಳುವಲ್ಲಾ ರತಿಯ ಶೋಕಮಂ ಸಂತೈಸಿ |
ಮೇಲೆ ಪಂಪಾಕ್ಷೇತ್ರದೊಳ್ ತನಗೆ ವರತಪಃಸ್ಥಳಮಾವುದೆಂದು ಬಂದು ||
ಸಾಲಾದ ತರು[೩]ಲತೆಯ ಸೊಂಪಿನೊಳ್ ನಿಂದು ತದ್ |
ಭಾಳಲೋಚನನುದಾಸೀನಮಂ ನೆನೆನೆನೆದು |
ಮೇಳದಾಳಿಯರಾದ ಜಯೆವಿಜಯೆಮುಖ್ಯರೊಳ್ ಗಿರಿಜಾತೆಯಿಂತೆಂದಳು || ೨ ||

ಆನೆ ತನ್ನೆಡೆಗೆ ಬರೆ ನೋಡಿ ನುಡಿಸದೆಯುದಾ |
ಸೀನಮಂ ಮಾಡಿ ಪೋದನೆ ಭಳಿರೆಯೆನ್ನೆಡೆಗೆ |
ತಾನೆ ಬರ್ಪಂತೆ ಮಾಳ್ಪೆಂ ಶಿವನನೆಂದು ರುದ್ರಾಣಿ ಘನಧೈರ್ಯದಿಂದೆ ||
ಸಾನುರಾಗದೆ ತನ್ನ ಹೃತ್ಕಮಲಮಧ್ಯದೊಳ್ |
ಧ್ಯಾನಿಸಿದಳೀಶನಂ ತತ್ತಪಸ್ತೇಜಮಾ |
ಭಾನುಮಂಡಲಮಂ ತಿರಸ್ಕರಿಸಿತೆಂಬೆನುಗ್ರತರತಪದಿರವನು || ೩ ||

೧-೧ ಬರಲುನಗಾ । ಪತಿಯೊಲಿದು ಮದುವಳಿಗನಾಗಿ ಗಿರಿರಾಜನರಮನೆಗಿರದೆ ನಡೆತಂದನು || (ಹು. ಮ.) | ೨-೨ ಭವಭಂಗ ಶ್ರುತಿಸಂಗತಾ (ಹು, ಮ.) ೩ ಲ (ಹು.)

ವಾಗಿ ಬೇಸಗೆ ಮಳೆಗಳೆಂದೆಂಬ[1] ಕಾಲದೊಳ್ |
ಭೋಗಿಭೂಷಣನರಸಿ ಮಾಡಿದಳ್ ತಪವನನು |
ರಾಗದಿಂ ಕೊಳನ ತಡಿಯೊಳ್ ಕೋಡುಗಲ್ಗಳೊಳ್ ವಟಮೂಲದಾಶ್ರಯದೊಳು ||
ನೋಗೊಗು[2]ವ ಶೀತ ಶಿಖಿ ವಾರಿಧಾರೆಗೆ ಮನಂ |
ಬೀಗದೆ ತಪಶ್ಚಲನೆಯಾಗದೆ ಸುಧೈರ್ಯಮಂ |
ನೀಗದೆ ಸದಾ ತನಗೆ ಯೋಗಿಣಿಯೆನಿಪ್ಪ ಪೆಸರಾಗ ನಿಶ್ಚಯವಾಗಲು || ೪ ||

ಕಂದಮೂಲಫಲಾದಿಗಳನುಳಿದು ತರಗೆಲೆಯ |
ದಂದುಗಂದೊರೆದಂಬುವಾಯುಗಳನೊಲ್ಲದಾ |
ನಂದದಿಂ ಶಿವನಂಘ್ರಿಪಂಕಜಧ್ಯಾನಾಮೃತವನುಂಡು ಸೊಗಸಿ ದಣಿದು ||
ಕಂದದೊಡಲಿನ ಕಾಂತಿಯೇರಿದ ಮುಖಾಂಬುಜದ |
ಕುಂದದನುರಾಗದಗಜೆಯನೀಕ್ಷಿಸುತ್ತಮರ |
ಬೃಂದವಚ್ಚರಿವಟ್ಟು ಕೊಂಡಾಡಿ ಭಕ್ತಿಯಿಂ ನಮಿಸುತಿಹರಾಗಸದೊಳು || ೫ ||

ತಿಳಿದನೀಶ್ವರನುಮೆಯ ತಪದುಗ್ರಮಂ ಕೃಪೆಯೊ |
ಳೆಳಿದು ನಿರ್ಮಳಮಹಾಯತಿರೂಪನಳವಡಿಸಿ |
ನಲಿವಿನಿಂ ಪರ್ಣಶಾಲೆಯ ಬಾಗಿಲಿಗೆ ಬರಲ್ಕಾಣುತಿದಿರೆದ್ದು ನಮಿಸಿ ||
ಬಳಿಕಮರ್ಘ್ಯಾಸನಾದಿಗಳಿಂ[3]ದಲುಪಚರಿಸಿ[3] |
ಫಲಕಂದಮೂಲಾದಿಗಳನಿರಿಸಿ ಭಕ್ತಿಯಿಂ |
ಬಳಲಿದಿರಿ ಕೈಕೊಂಬುದೆಂದು ಸಖಿಯರ್ ನುಡಿಯೆ ಕಪಟಯತಿಯಿಂತೆಂದನು || ೬ ||

ಆನಿದಂ ಕೈಕೊಂಬೆನಂತಿರಲಿ ಪೇಳಿವಿಾ |
ಮಾನಿನಿಗೆ ತಪವದೇಂ ಕಾರಣಮೆನಲ್ಕವರ್ |
ನೀನತಿಥಿಪೂಜೆಯಂ ತಳೆದು ಪೋಗೀಕೆಯ ವಿಚಾರವೇಕೆಂದೆನಲ್ಕೆ ||
ಹಾನಿಯೇ ಬೆಸಗೊಂಡೊಡಕಟ ಯೌವನದೊಳೀ |
ಕಾನನದೊಳಿರೆ ಬಿಡಿಪರಿಲ್ಲಲಾಯೆಂಬೀ ನ |
ವೀನರವಮಂ ಕೇಳ್ದು ಕಣ್ದೆರೆಯೆ ಕಪಟಯತಿ ಗಿರಿಸುತೆಯೊಳಿಂತೆಂದನು || ೭ ||

೧ ದೆನಿಪ (ಹು, ಮ.) ೨ ಗೊಗೆ (ಹು.) ೩ ದೆ ಸತ್ಕರಿಸಿ (ಹು.)

ಮಲಯಜಮದಘುಸೃಣಂಗಳಂ ಪೂಸುವಂಗದೊಳ್ |
ತಳೆವರೇ ಭಸಿತವಂ ದಿವ್ಯವಸ್ತ್ರವನುಡುವ |
ಸೆಳೆನಡುವಿಗಕಟ ವಲ್ಕಲಮನೇಂ ಸಾರ್ಚುವರೆ ಮಂದಾರಮುಖ್ಯಮಾದ ||
ಅಲರ್ಗಳಂ ಮುಡಿವ ಕುರುಳಂ ಪೊಸೆದು ಜಡೆಯನಂ |
ತಳವಡಿಪರೇ ರತಿ[1]ಸುಖಂಬಡೆವ ಕಾಲದೊಳ್ |
ಕೆಳೆಗೊಂಬರೇ ತಪವನಾರನೊಲಿಸುವೆನೆಂದು ಮಾಳ್ಪೆಯೆನಲಿಂತೆಂದಳು || ೮ ||

ಆಲಿಸೈ[2] ಯತಿಯೆ ಸರ್ವಜ್ಞನಂ ಶಂಭುವಂ |
ಭಾಳಾಕ್ಷನಂ ಸದಾಶಿವನನೊಲಿಸುವೆನೆನಲ್ |
ಕೇಳಿ ಗಹಗಹಿಸಿ ಮನ್ಮಥಹರನನುಗ್ರನಂ ವಿಷಕಂಠನಂ ತಿರುಕನಂ ||
ವ್ಯಾಳಚರ್ಮಾವರಣನಂ ಸದಾಮಾಂಗಲ್ಯ |
ಶೀಲನಂ ಭಜಿಪರೇಯೆನೆ ಗಿರಿಜೆ ಕೋಪದಿಂ |
ಖೂಳ ಫಡ ಹೋಗೆನುತೆ [3]ಶಪಿಸುವನಿತರೊಳೀಶನೊಲಿದು[3] ನಿಜದಿಂದಿರ್ದನು || ೯ ||

ಹೊಳೆಹೊಳೆವ ಜೆಡೆಗುಡಿಯ[4] ಶಶಿಯ ಸೂಡಿದ ಮುಡಿಯ |
ಥಳಥಳಿಪ ನಗೆಮೊಗದ ನಾಗಕುಂಡಲಯುಗದ |
ತೊಳಗುವಕ್ಷಿತ್ರಯದ ಮಿರುಪ ಗಲ್ಲದ ನಯದ ಬಾಯ್ದೆರೆಯ ಗರಳಗಳದ ||
ವಿಲಸಿತಾಭಯಕರದ ದಂತಿಚರ್ಮಾಂಬರದ |
ಮೊಳೆಮೊಳೆವ ನಸುನಗೆಯ ಕಾಂತೆಗೆಳಸುವ ಬಗೆಯ |
ಲಲಿತತನುದೀಧಿತಿಯ ತಳೆದ ಕರುಣೋನ್ನತಿಯ ಶಿವನೊಪ್ಪಿದಂ ಮುದದೊಳು
|| ೧೦ ||

ಜಯ ಜಯ ಜಗನ್ನಾಥ ಜಯ ಸಕಲಗುಣಯೂಥ |
ಜಯ ಜಯ ಮಹಾದೇವ ಜಯ ದುರಿತವನದಾವ |
ಜಯ ಜಯ ಪ್ರಮಥರಾಜ ಜಯ ಕೋಟಿರವಿತೇಜ ಜಯ ಶಶಿಕಲಾವತಂಸ ||
ಜಯ ಜಯ ಶುಭಾಕಾರ ಜಯ ಭಕ್ತಮಂದಾರ |
ಜಯ ಜಯ ನಿರಾವರಣ ಜಯ ಪುಣ್ಯಮಯಚರಣ |
ಜಯ ಜಯ ನಿಗಮಕೋಶ ಜಯ ಮಹಾಂಬರಕೇಶ ಜಯಯೆನುತ್ತಡಿಗೆಡೆವಳು
|| ೧೧ ||

---
೧ ತನೆ (ಹು.) ೨ ಆಲಿಸೆಲೆ (ಹು.) ೩-೩ ಶಪಿಸೆ ಶಿವನೀಕ್ಷ್ಯರಿಗೆ ಮೆಚ್ಚಿ (ಘು, ಮು.)
೪ ಜೆಡೆಮುಡಿಯ (ಮ.)

ಬಡವಂಗೆ ಕಡವರಂ ಪಸಿದವಂಗೊಳ್ಳುಣಿಸು |
ನಡೆಗೆಟ್ಟ ಪೆಳವಂಗೆ ಕಾಲಂಧಕಂಗೆ ಕಣ್ |
ನುಡಿ ಮೂಕಗರತಂಗೆ ಶೀತಾಂಬು ತಾಪತ್ರಯದೆ ನೊಂದ ಸಂಸಾರಿಗೆ ||
ಬಿಡಪೆ ಸದ್ಗುರುಬೋಧೆ ರೋಗಿಗಮೃತಂ ಸೇದೆ |
ವಡೆದಂಗೆ ತಂಗಾಳಿ ಪಗಲ ನೈದಿಲಬನ |
ಕ್ಕಡುರಾಜ[1]ನಿರದೆ ದೊರೆಕೊಂಡೊಲಾಯ್ತುಮೆಗೆ[1] ಶಿವನಡಿಗಳಂ ಕಾಣಲೊಡನೆ
|| ೧೨ ||

ಶ್ರುತಿನಿಕರಮೌಳಿ ಮೌಳಿಯನೆತ್ತಿ ನಿಜರಮಣಿ |
ಗತಿಶಯಕೃಪೋಕ್ತಿಯಿಂ ಬೆಸಸಿದಂ ಲೋಕಸ |
ನ್ನುತೆ ನಿನ್ನ ಮನವನೀಕ್ಷಿಪೆನೆಂದಿನಿತ್ತು ದಿವಸಂ ತಡೆದೆನೈಸೆ ಮುಂದೆ ||
ಕೃತಕವಲ್ಲಿನ್ನು ಮೆಯ್ಯರೆಯ ನೀಂ ಮನೆಮಾಡಿ |
ಪ್ರತಿಪಾಲಿಸಳ್ಕರಿಂ [2]ಸಕಲಲೋಕಮು[2]ನೆನಲ್ |
ಧೃತಸೋಮನಡಿಗಳ್ಗೆ ಮಗುಳೆರಗಿ ನಿಂದು ಬಿನ್ನವಿಸಿದಳಗೇಂದ್ರತನುಜೆ
|| ೧೩ ||

ಕಾಯಭವನೆನ್ನ ಕಾರಣದಿಂದೆ ತನ್ನ ಸತ್ |
ಕಾಯಮಂ ನಿಮಗರ್ಪಿಸಿದ ಸುಕೃತಭೂರುಹಂ |
ಕಾಯಬೇಡವೆ ಮುನ್ನಮದು ಕಾರಣದೊಳವನ ಹರಣಮಂ ಕೊಟ್ಟು ತನ್ನ ||
ಕಾಯಬೇಕಾಮೇಲೆ ಹರಿಮುಖ್ಯನಿರ್ಜರನಿ |
ಕಾಯದೊಡನೈತಂದು ಗಿರಿರಾಜನಾಲಯದ |
ಕಾಯಮಾನದ ಕೆಳಗೆ ಕಲ್ಯಾಣಿ[3]ಮಪ್ಪುದೆಂದಡಿವಿಡಿದಳಗಜೆ ಶಿವನ[3] || ೧೪ ||

ಈಶ್ವರಾಜ್ಞೆಯನುಳಿಯಬಾರದೆಂಬುಕ್ತಿಯಂ |
ಶಾಶ್ವತಂ ಮಾಡಬೇಕಲ್ಲದುಳಿದರೆ ಮಾತ |
ರಿಶ್ವಮಿತ್ರಂಗಾಹುತಿಯನೀಯಬೇಕಲ್ಲದಿತ್ತುದಂ ತೆಗೆಯಬಹುದೇ ||
ವಿಶ್ವಕೆಲ್ಲಂ ಮನೋಭವನಾಗಲೀವೆಂ ರ |
ತೀಶ್ವರನನೀ ರತಿಗೆನೆನುತಿತ್ತು ಶಂಭು ಸ |
ರ್ವೇಶ್ವರಿಯ ಮದುವೆಯಾದಪೆನೆಂದು ಬೀಳ್ಕೊಟ್ಟು ಕೈಲಾಸಮಂ ಪೊಕ್ಕನು
|| ೧೫ ||

೧-೧ ದೊರೆಕೊಂಡೊಲಾಯ್ತುಮಿಗೆ ಬಳಿಕ (ಹು, ಮ.) ೨-೨ ದುಮೆಯಿ ಸಕಲಮ (ಶಿ.)
೩-೩ ಮಪ್ಪುದೆಂದಗಜೆ ಶಿವನಡಿವಿಡಿದಳು (ಹು, ಮ.)

ಆದುದು ಮಹೋತ್ಸವಂ ಬಳಿಕ ಜಯೆವಿಜಯೆಮೊದ |
ಲಾದ ಕೆಳದಿಯರ ತಂಡದ ಮನಕೆ ಬಹಳಸಂ |
ತೋಷದಿಂ ರತಿ ತನ್ನ ವಲ್ಲಭನೊಳೊಡಗೂಡಿ ಗಿರಿಜೆಯಡಿಗಳ್ಗೆ ನಮಿಸಿ ||
ಪೋದಳೀ ವಾರ್ತೆಯಂ ಬಂದು ದೂತರ್ ಪೇಳೆ |
ಮೇದಿನೀಧರರಾಜಮೇನೆಯರ್ ಬಹಳಹರು |
ಷೋದಧಿಯೊಳಾಳ್ದವರ್ ಗಂಗಚಿತ್ತವನಿತ್ತಿದಿರ್ಗೊಳಲ್ ಪೊರಮಟ್ಟರು || ೧೬ ||

ಗುಡಿತೋರಣದ ಕಳಶಕನ್ನಡಿಯ ನಭದೊಳಿರ |
ಇಡಿದಗರುಧೂಪಧೂಮದ ಬೀದಿಬೀದಿಯೊಳ್ |
ಬಿಡದಿತ್ತ ಪನ್ನೀರ ಚಳಿಯವಾಡುವ ಪಾತ್ರದುಲಿವ ಮಂಗಳಗೀತದ ||
ಪೊಡೆವ ವಾದ್ಯಧ್ವನಿಯ ಸಂಭ್ರಮದೊಳಿದಿರ್ಗೊಂಡು |
ಪೊಡವಿಯೊಳ್ ಮೆಯ್ಯಿಕ್ಕಿದಗರಾಜಮೇನೆಯರ |
ನೊಡನೆತ್ತಿ ತಾನೆರಗಲುಮೆಯನವರೆತ್ತಿ ಬಿಗಿಯಪ್ಪಿ ಪೊಂಪುಳಿವೋದರು || ೧೭ ||

ನೊಂದೆಯೆಲೆ ತಾಯೆ ತಪದಿಂದೀಶನಂ ಮೆಚ್ಚಿ |
ಸಂದವೆಂ ಸಾಮಾನ್ಯಮೇ ಹರಿಪಿತಾಮಹ |
ರ್ಗೊಂದು ಬಾರಿಯುಮರಸಿದೊಡೆ ಕುರುಪುದೋರದ ಮಹಾಮಹಿಮನೆಮ್ಮ ಮನೆಗೆ
ಬಂದಪನಲಾ ಶಿವಶಿವಾ ನಿನ್ನ ದೆಸೆಯಿಂದ |
ಲಿಂದೆಸುಧನ್ಯರೋ ನೋಳ್ಪೊಡಾವೆನುತೆ ಪಾ |
ದೇಂದೀವರಕ್ಕೆರಗಿ ನಿಜನಿಳಯಕೊಯ್ದರತಿವಿಭವದಿಂ ಪಾರ್ವತಿಯನು || ೧೮ ||

ರಾಜಿಸುತ್ತಿರ್ಪ ಮಾಂಗಲ್ಯ ಮಜ್ಜನ ದಿವ್ಯ |
ಭೋಜನಾದಿಗಳಿಂದಲುಪಚರಿಸಿ ಭೂಮೀಧರ |
ರಾಜನುಂ ಮೇನೆಯುಂ ಮಗಳೆಂಬ ಭಾವನೆಯನುಳಿದು ಪರಶಕ್ತಿಯೆಂದು ||
ಓಜೆದಪ್ಪದೆ ಬಹಳಭಯಭಕ್ತಿಯಿಂ ಪದಸ |
ರೋಜಂಗಳಂ ಭಜಿಸುತಿರ್ದರಾ ಭಕ್ತಸುರ |
ಭೂಜೆಯಂ ಪೀನವಕ್ಷೋಜೆಯಂ ನತಸುರಸಮಾಜೆಯಂ ವಿಭ್ರಾಜೆಯಂ || ೧೯ ||

೧-೧ ರ್ಗಂಗುಚಿತಪಿತ್ತಿದಿರ್ಗೊಳಲ್ ಪೊರಮಟ್ಟರಂದು || (ಹು.) ೨ ಯಾ (ಹು, ಮು.)

ಅತ್ತಲಾ ಪರಶಿವಂ ಕೈಲಾಸಪುರದೊಳಗಿ |
ರುತ್ತಿರ್ದು ಸಪ್ತರ್ಷಿಗಳನಿರದೆ ಕರೆದು ಶೈ |
ಲೋತ್ತಮನ ಮಗಳ ತಾಂ ಮದುವೆಯಾಗಲ್ಕೇಳ್ಕುಮಾತನಂ ಕೇಳಿಮೆನಲು ||
ಚಿತ್ತಹರುಷದೊಳವರ್ ನಡೆತರಲ್ಕಾಗ ಕಾ |
ಣುತ್ತೆ ಗಿರಿರಾಜನರ್ಘ್ಯಾಸನಾದಿಗಳನೊ |
ಲ್ದಿತ್ತು ವಿವಿಧೋಪಚಾರಂಗಳಿಂ ಸತ್ಕರಿಸೆ ಬೆಸಗೊಂಡನುತ್ಸವದೊಳು ॥ ೨೦

ಬಂದ ಹದನಂ ನಿರೂಪಿಸಿವುದೆನೆ ಮುನಿನಾಥ |
ರೆಂದರೀಶಂಗೆ[1] ಹಿಮಕರಕಲಾಜೂಟಂಗೆ |
ವೃಂದಾರಕೇಂದ್ರ ಕಮಲಜ ಮುಕುಂದಾದಿಸುರನಿಕರಪೂಜಿತಪದಂಗೆ ||
ಕುಂದಕರ್ಪೂರಶುದ್ಧಸ್ಫಟಿಕವರ್ಣಂಗೆ |
ಮಂದರಾಚಲನಿವಾಸಂಗೆ ಮುದದಿಂ ಬೇಡ |
ಬಂದೆವು ಭವತ್ಸುತೆಯನಖಿಳಜನಸನ್ನುತೆಯನಮರಕುಲವಂದಿತೆಯನು ॥ ೨೧

ಈಶ್ವರಿಯ ಘನತಪಕೆ ಮೆಚ್ಚಿ ಕರುಣದೊಳೆ ಪರ |
ಮೇಶ್ವರಂ ಸುರನರೋರಗರಾದಿನಾನಾಗ |
ಣೇಶ್ವರರ್ ಸಹಿತಮತಿವಿಭವದಿಂ ನಿನ್ನ ರಾಜಾಲಯಕೆ ಬಂದು ಕೂಡೆ ||
ಶಾಶ್ವತಂ ಮದುವೆಯಾದಪೆನೆಂದು ಕಳುಪಿದನ |
ಗೇಶ್ವರನೆ [2]ಕೇಳೆಂದು ನುಡಿಯಲದು ಕೇಳ್ದಾ ಮು |
ನೀಶ್ವರರ ಮೊಗನೋಡಿ ನುಡಿದನಾ ಗಿರಿರಾಜನಧಿಕತರವಿನಯದಿಂದೆ[2] ॥ ೨೨

ಲೇಸಾದುದಿಂದೆಮಗೆ ನಮ್ಮ ಮಗಳಿಷ್ಟಾರ್ಥ |
ಕೈಸಾರ್ದುದೀಶಂಗೆ ಕೊಟ್ಟೆವೆರಡಿಲ್ಲದೆ ಸು |
ಧಾಸೂತಿಮುಖಿಯನೆಂದಖಿಳಬಾಂಧವವಿತತಿಯಂ ಕರೆಸಲಾ ಕ್ಷಣದೊಳು ||
ಆಸಪ್ತಋಷಿವರರ್ ಗಿರಿಜೆಗಂದಾ ಘನವಿ |
ಲಾಸದಿಂದುಂಗುರುಡಿಕೆಯ ಮಾಡಿ ಬಳಿಕಾ ಮ |
ಹಾಸಭೆಗೆ[3] [4]ನಿಚ್ಚತಾಂಬೂಲಮಂ ಸಾಗಿಸಿದರಧಿಕತರ[4]ವಿಭವದಿಂದೆ ॥ ೨೩

೧ ಸ್ವರಗೆ (ಶಿ.) ೨-೨ ಕೇಳೆನಲು ಗಿರಿರಾಜನಂದಾ ಮು | ನೀಶ್ವರರ್ಗೆಂದನೆಮಗೇಂ ಸ್ವತಂತ್ರಸು ಕೊಟ್ಟೆಸೆರಡಿಲ್ಲದೆಮ್ಮ ಮಗಳ (ಪು, ಮ.) ೩ ತಿಗೆ (ಪ, ಹು, ಮ.) ೪-೪ ಸ್ವಯಸು ತಾಂಬೂಲಮಂ ಸಾಗಿಸಿದರಧಿಕ (ಮ.)

ಗಿರಿರಾಜನಾ ಋಷಿಗಳಂ ಕಳುಪಿ ಬಳಿಕ ಘನ |
ಹರುಷದಿಂ ವಿಶ್ವಕರ್ಮನನೊಡನೆ ಕರೆಸಿ ಮ |
ದ್ವರಸುತೆಯ ಮದುವೆಗೆ ವಿವಾಹಮಂಟಪವ ರಚಿಸೆನಲವಂ ಭಕ್ತಿಯಿಂದೆ ||
ಪರಶಿವನ ಮದುವೆಯಿದು ಮಿಕ್ಕ ನಾಡಾಡಿ ಸುರ |
ಗಿರರ ಮದುವೆಗಳ ಪಾಡಲ್ಲೆಂದು ಕೂಡಿ ನಿ |
ರ್ಧರಿಸಿ ತೊಡಗಿದನಖಿಳಪರಿಕರದ ಸಂಗ್ರಹದೊಳೇನೆಂಬೆನಚ್ಚರಿಯನು || ೨೪ ||

ವರವಜ್ರಮಯದ ಕಂಭಂಗಳಿಂ ಮಾಣಿಕದ |
ಪರಿಪರಿಯ ತೊಲೆಗಳಿಂ ಗೋಮೇದಿಕಾವಳಿಯ |
ಗುರುತರದ ಬೋದಿಗೆಗಳಿಂದಿಂದ್ರನೀಲಮಯಮಾದ ನೆಲಗಟ್ಟಿನಿಂದೆ ||
ತರತರದ ವಿಮಲವೈಡೂರ್ಯವೇದಿಕೆಗಳಿಂ |
ಪರಮಮುಕ್ತಾಫಲದ ಸೂಸಕದ ಲೋವೆಗಳ |
ಹೊರಳಿಯಿಂ ಪುಷ್ಯರಾಗದ ಮತ್ತವಾರಣದಿನಾ ಸಭಾಸ್ಥಳವೆಸೆದುದು || ೨೫ ||

ಲಲಿತನವಪದ್ಮರಾಗದ ಭಿತ್ತಿ ಭಿತ್ತಿಯೊಳ್ |
ಥಳಥಳಿಸಿ ರಂಜಿಪ ಸಜೀವಪುತ್ರಿಕೆಗಳಿಂ |
ಪ್ರೋಳಿವ ಚಿತ್ರದ ಸಿಂಹ ಶಾರ್ದೂಲ ಗಜ ಶರಭ ಭೇರುಂಡಮುಖ್ಯಮಾದ ||
ಇಳೆಯೊಳುಳ್ಳಖಿಳಮೃಗಪಕ್ಷಿಜಾತಿಗಳ ಸಂ |
ಕುಳಮುಂ ವಿಚಿತ್ರವರ್ತನಮನಭಿನಯಿಸುತಿಹ |
ಕಳಗೀತಮುಂ ಪಾಡುವಂದದೊಳ್ ಮೆರೆವ ಚಿತ್ರದ ಬೊಂಬೆಯೆಸೆದಿರ್ದುವು
|| ೨೬ ||

ಬಿಗಿದ ದೇವಾಂಗವಸ್ತ್ರಂಗಳಿಂ ಝಲ್ಲಿ ಪ |
ಟ್ಟಿಗಳ ಮುತ್ತಿನ ಗುಡಿಯ ಪವಳವಳ್ಳಿಗಳ ಕಡು |
ಸೊಗಸಿವ ಪರಿಪರಿಯ ಕುಸುಮಮಂಜರಿಗಳ ವಿಡಾಯದಿಂದೆಡೆಯೆಡೆಯೊಳು ||
ಝಗಝಗಿಪ ರನ್ನಗನ್ನಡಿಗಳಿಂ ಪರಿಮಳಿಸು |
ವಗರುಧೂಪೋದ್ಧೂಮನಿಕರದಿಂ ಕತ್ತುರಿಯ |
ಬಗೆಬಗೆಯ ಸಾರಣೆಯ ಕುಂಕುಮದ ಕಾರಣೆಯ ಮಂಟಪಂ ಚೆಲ್ವಾದುದು
|| ೨೭ ||

ಅಲ್ಲಲ್ಲಿ ಸಮೆದ ಪೊನ್ನುಪ್ಪರಿಗೆಯೊಗ್ಗಿನಿಂ |
ದಲ್ಲಲ್ಲಿ ಸಮೆದ ಮಣಿವೇದಿಕೆಯ ಪೆಂಪಿನಿಂ |
ದಲ್ಲಲ್ಲಿ ಸಮೆದ ಗುಡಿ ಗೂಡಾರ ಬೀಡಾರದರಮನೆಗಳೋಳಿಯಿಂದೆ ||
ಅಲ್ಲಲ್ಲಿ ಸಮೆದ ಕ್ರೀಡಾವನದ ಸೊಂಪಿನಿಂ |
ದಲ್ಲಲ್ಲಿ ಸಮೆದ ಪೂಗೊಳದ ಶೃಂಗಾರದಿಂ |
ದಲ್ಲಲ್ಲಿ ಸಮೆದ ಕೃತಕಾದ್ರಿಯಿಂದಾ ಮಂಟಪಪ್ರದೇಶಂ ಮೆರೆದುದು || ೨೮ ||

ಎಡೆಯೆಡೆಗೆ ತೀವಿದ ಸುಗಂಧದ ಕಟಾಹದಿಂ |
ಕಡುಗಂಪು ಬೀರುವ ಜವಾದಿಯ ಘಟಂಗಳಿಂ |
ದೊಡನೆ ತೀವಿದ ಸುಕಸ್ತೂರಿಗಳ ದೋಣಿಯಿಂದೆಸೆವ ಕರ್ಪೂರಂಗಳ ||
ಕೊಡಗಳಿಂ ಕುಂಕುಮದ ರಂಜಣಿಗೆಯಿಂದಂದ |
ವಡೆದಿಹ ಕದಂಬಪೂರಿತದ ಪೆಟ್ಟಿಗೆಗಳಿಂ |
ದಡಿಗಡಿಗೆ ಪರಿವ ಪನ್ನೀರ ಪರಿಕಾಲ್ಗಳಿಂದಾ ಸ್ಥಳಂ ಚೆಲ್ವಾದುದು || ೨೯ ||

ನೀರಡಿಸಿದರ್ಗೆ ನೀರೆರೆವ ಪಸಿದೊಡೆ ಫಲಾ |
ಹಾರಮಂ ಕೊಡುವ ಗಂಧವನೀವ ಲಲಿತಕ |
ಸ್ತೂರಿಕರ್ಪೂ[೧]ರಂಗಳಂ ನೀಡುತಿಹ[೧] ರನ್ನಗನ್ನಡಿಗಳಂ ತೋರುವ ||
ಓರಂತೆ ಬಳಲ್ದರಂ ಸತ್ಕರಿಪ ವಿವಿಧೋಪ |
ಚಾ[೨]ರಂಗಳಂ ನುಡಿವ ಪಲವು[೨] ಪುತ್ತಳಿಗಳಂ |
ಸೇರಿಸಿದನಲ್ಲಲ್ಲಿ ವಿಶ್ವಕರ್ಮಂ ಕರುಣವೆಂತುಟೋ ಗಿರಿಜಾತೆಯ || ೩೦ ||

ಗಿರಿರಾಜನಿರ್ದೆಡೆಗೆ ವಿಶ್ವಕರ್ಮಂ ಬಂದು |
ಕರಯುಗಳಮಂ ಮುಗಿದು ದೇವ ದೇವೇಶಂಗೆ |
ವಿರಚಿಸಿದ ತನ್ನ ಬಡ[೩]ಭಕ್ತಿಯಂ ನೀಂ ಬಂದು ನೋಡಬೇಕೆನೆ ಕೇಳುತೆ ||
ವರತನುಜೆಯಂ ಬಂಧುವರ್ಗಮಂ ಕೂಡಿಕೊಂ |
ಡಿರದೆ ಮಂಟಪವನೀಕ್ಷಿಸಿ ವಿಶ್ವಕರ್ಮಂಗೆ |
ಹರುಷದಿಂದುಡುಗೊರೆಯನಿತ್ತು ಮನ್ನಿ[೪]ಸಿ ಸುತೆಗೆ ಗಿರಿರಾಜನಿಂ[೪]ತೆಂದನು || ೩೧ ||

೧-೧ ರಮುಂ ನೀಡುವ ಪೊಳೆವ (ಹು, ಮ.) ೨-೨ ರಮುಂ ನುಡಿವ ಪಲತೆರದ (ಹು.
೩ ನಿಜ (ಪ.) ೪ ಸುತೆ ಗಿರಿರಾಜಸುತೆಗಿಂ (ಪ.)

ತಾಯೆ ಕೇಳ್ಭವನೊಡನೈತರ್ಪ ನಿರ್ಜರನಿ |
ಕಾಯಮುನದೆಂತು ಸತ್ಕರಿಸುವೆಂ ತಾನೆನ |
ಲ್ಕಾ ಯುವತಿ ನಸುನಗುತ್ತಾನಿರ್ಪೆನಂಜಬೇಡೈ ಭದ್ರಭವನಿಕೆಯೊಳು ||
ಒಯ್ಯಾರದಿಂದಮರಕುಜವಮರಧೇನು ರವು |
ಣೀಯಚಿಂತಾರತ್ನಮುಂತಾದ ವಸ್ತುಸಮು |
ಪಾಯಮುಂ ಸಕಲಪರಿಕರಮುಮಿರಲೆಂದು ಗಿರಿಜಾತೆಯಾಜ್ಞಾಪಿಸಿದಳು ❁
|| ೩೨ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೩ ||

ಅಂತು ಸಂಧಿ ೩೬ ಕ್ಕಂ ಪದಗಳು ೧೩೮೧ ಕ್ಕಂ ಮಂಗಳಮಹಾಶ್ರೀ

❁ ಪ, ಶಿ, ಗೊ, ತು, ಈ ನಾಲ್ಕು ಕೈಬರೆಹದ ಪ್ರತಿಗಳಲ್ಲಿ ಈ ಸಂಧಿಯು ಇಲ್ಲಿಗೆ ಮುಗಿದಿದೆ. ಆದರೆ ಮ, ಎಂಬ ಕೈಬರೆಹದ ಪ್ರತಿಯಲ್ಲಿಯೂ ಅ, ಬ, ಕ, ಡ, ಮ, ಎಂಬ ಮುದ್ರಣದ ಪ್ರತಿಯುಗಳಲ್ಲಿಯೂ ಇದೇ ಸಂಧಿಯಲ್ಲಿ ಮುಂದಿನ ಸಂಧಿಯೊಳಗಿನ ೨ರಿಂದ ೨೫ ರವರೆಗೆ ಒಟ್ಟು ೨೪ ಪದ್ಯಗಳು ಬಂದಿರುತ್ತವೆ.

ಮೂವತ್ತೇಳನೆಯ ಸಂಧಿ

ಸೂಚನೆ

ಹರನೊಲಿದು ಸಿಂಗರಿಗನಾಗಿ ವಿಭವದೆ ಸಾಗಿ |
ಗಿರಿರಾಜನರಮನೆಗೆ ಬಂದು ಕರುಣದೊಳಂದು |
ಗಿರಿಜಾತೆಯಂ ಮದುವೆಯಾಗಿ ಶಿವೆಸಹವಾಗಿ ಶಿವಲೋಕಮಂ ಪೊಕ್ಕನು ||

ಹಸ್ತಿಚರ್ಮಾಂಬರ ಸಮಸ್ತದೇವ[1]ವ್ರಾತ |
ಮಸ್ತಕಕಿರೀಟಸುಗಭಸ್ತಿಪರಿಪೂರ್ಣವಿ |
ನ್ಯಸ್ತಪದಪದ್ಮ ವೇದಸ್ತವಾಭೇದ್ಯ ನಿರ್ವಿಸ್ತರಣಕಾಯ ಗಿರಿಜಾ ||
ಸುಸ್ತನವಿಲೇಪನವಕಸ್ತೂರಿಪಂಕಾಂಕ |
ಹಸ್ತಪಲ್ಲವಯುಗ ಪ್ರಶಸ್ತನಾನಾಮುನಿಮ |
ನಸ್ತಿಮಿರಭಾಸ್ಕರ ನಮಸ್ತೇ ವಿರೂಪಾಕ್ಷ ಸುಸ್ಥಿರದೆ ಸಲಹೆಮ್ಮನು || ೧ ||

ಆಲಿಸೈ ಸಿದ್ಧರಾಮೇಶ ಗಿರಿನಂದನೆಯ |
ಲೀಲೆಯೆಂತುಟೊ ಚತುರ್ದಶಭುವನದೊಳಗುಳ್ಳ |
ಮೇಲಾದ ನಾನಾಸುವಸ್ತುಗಳ್ ಕೋಟಾನುಕೋಟಿಗಳ್ ಪಸರಿಸಿದುವು ||
ಭಾಳಾಂಬಕಂಗತ್ತಲಾ ಸಪ್ತಋಷಿವರರ್ |
ಪೇಳಿದಾ ಕ್ಷಣದೊಳಗೆ ಮದವಣಿಗನಾಗಿ ಗಣ |
ಜಾಲಮಂ ಸಕಲಜನಜಾಲಮಂ ಬೆರಸಿ ಪೊರಮಡಲಭವನನುವಾದನು || ೨ ||

ಹರಿಯಜ ಸುರೇಂದ್ರ ವರಗರುಡ ಗಂಧರ್ವ ಕಿ |
ನ್ನರ ಯಕ್ಷ ಸಿದ್ಧ ವಿದ್ಯಾಧರ ಪಿಶಾಚ ಕಿಂ |
ಪುರುಷ ಮನು ಮುನಿ ವಸು ದಿಶಾಧಿಪ ದಿನಾಧಿಪಾದ್ಯಖಿಳಸುರಸಂದೋಹಮುಂ ||
ನರಭುಜಂಗಾದಿನಾನಾಲೋಕವಾಸಿಗಳ್ |
ಪರಿಕಿಸಲನಂತಬ್ರಹ್ಮಾಂಡದ ಜನಂ ಮಹೇ |
ಶ್ವರನ ವೈವಾಹಮಂ ನೋಳ್ಪೆವೆಂದುತ್ಸವದೊಳೈತಂದುದಾ ಕ್ಷಣದೊಳು || ೩ ||

---

೧ ವೇದ (ಹು.)

ಬಿದಬಲದೊಳಾವ್ನಾಯತತಿ ಹರನ ಬಿರುದನು |
ಗ್ಗಡಿಸೆ ಮುತ್ತಿನ ಬಾಸಿಗಂಗಟ್ಟಿ ನಂದಿಯಂ |
ವೃಡದನೇರಿದಂ ಹರಿಯಜಾದ್ಯರುಂ ವಾಹನಂಗಳನೇರಿ ^೧^ಪಿಂತೆ ಬರಲು^೧^ ||
ಒಡನುಲಿವ ವಾದ್ಯನಿಸ್ವನದಿಂದೆ ಶಂಕರಂ |
ನಡೆತರಲ್ ಕೇಳಿ ಸಂಭ್ರಮದಿಂದೆ ಬಾಂಧವರ |
ಗಡಣದಿಂದಿದಿರ್ಗೊಳಲ್ಕೈದಿದಂ ತುಹಿನಗಿರಿರಾಜನತಿವಿಭವದಿಂದೆ || ೪ ||

ಮೊಳಗುತಿಹ ನಿರ್ಜರರ ಭೇರಿಗಳ ಭೂರಿಗಳ |
ಕಳಸಕನ್ನಡಿವಿಡಿದ ಬಾಲೆಯರ ಲೋಲೆಯರ |
ನಲಿದು ಸಿಂಗರಿಸಿದಿಭರಾಜಿಗಳ ವಾಜಿಗಳ ದಂಡಿಗೆಯ ತಂಡಂಗಳ ||
ಥಳಥಳಿಪ ಪಲ್ಲವದ ಸತ್ತಿಗೆಯ ಮುತ್ತಿಗೆಯ |
ಚಲಿಸುತಿಹ ಕನಕಚಮರಾಳಿಗಳ ಪಾಳಿಗಳ |
ತೊಳಪ ರತ್ನಾಭರಣರೋಚಿಗಳ ವೀಚಿಗಳ ಸಂಭ್ರಮದೆ ನಡೆಗೊಂಡರು || ೫ ||

ಇಂತೆಸೆವ ಸಕಲವೈಭವದಿಂದಲಂದು ಹಿಮ |
ವಂತನಭವನನಿದಿರ್ಗೊಂಡು ಘನಹರುಷದಿಂ |
ಮುಂತೆ ತನ್ನಯ ಪುರಕ್ಕೊಡಗೊಂಡು ಬಂದು ಬೀಡಾರದರಮನೆಯೊಳಿಳಿಸಿ ||
ಅಂತರಂತರವರಿದು ಬಂದ ನಿಬ್ಬಣಿಗರ್ಗ |
ನಂತಮಾಗಿರ್ದ ಪಡಿ ಬೀಡಾರಮಂ ತೋರಿ |
ಸಂತಸದೊಳೀಶ್ವರಂ ಹರಿಯಜೇಂದ್ರಾದ್ಯರೊಡನೊಸಿಡ್ಡೋಲಗದೊಳೆಸೆದನು || ೬ ||

ನಾರದನ ವೀಣಾಕ್ವಣಂ ತುಂಬುರರ್ ಮಾಳ್ಪ |
ಸಾರಸಂಗೀತಮುಂ ರಂಭಾದಿಸಕಲಸುರ |
ನಾರಿಯರ ನರ್ತನಂ ಭ್ರಂಗಿಯ ಸುನಾಟ್ಯಮಾ ಚಾರಣರ ಕೈವಾರಮುಂ ||
ಭೋರೆಂಬ ವಾದ್ಯನಿರ್ಘೋಷಮುಂ ಸುರಸತಿಯ |
ಭಾರತಿಯ ಮಾಂಗಲ್ಯರಭಸದ ವಿಲಾಸದಿಂ |
ಮಾರಾರಿಯಿರಲಿತ್ತ ನಗರಾಜನಗಜೆಯುಂ ಸಿಂಗರಿಸವೇಳ್ದನಂದು || ೭ ||

೧-೧ ಪಿಂತ್ನೆಡೆಲು (ಹು, ಮ.) ೨ ೦ (ಹು, ಮ.) ೩ ಖಿಳರೊ (ಹು.) ೪ ವೇದ (ಹು, ಮ.) ೫-೫ ತ್ರೈಲ (ಮ.)

ಗಿರಿರಾಜನಾಜ್ಞೆಯಿಂ ಶತಕೋಟಿ ಕೆಳದಿಯರ್ |
ಗಿರಿಜೆಯೆಡೆಗೈತಂದು ನಸುನಗುತೆ ಕೇಳ್ ನಿನ್ನ |
ಪರಮಪುಣ್ಯದ ಫಲಂ ಕೈಸಾರ್ದುದೆನುತವರ್ ಕುಂಕುಮದ ರಸದೊಳಂದು ||
ಇರದೆ ಸರ್ವಾಂಗಮಂ ತಿಗುರಿ ಮಗಮಗಿಸುತಿಹ |
ಪರಿಮಳದ ಪನ್ನೀರಿನಿಂ ಮಜ್ಜನಂಬುಗಿಸಿ |
ವರದುಕೂಲಮನುಡಿಸಿ ಪಣೆಯೊಳಗೆ ಮೃಗಮದಲಲಾಮಮಂ ರಚಯಿಸಿದರು || ೮ ||

ಲಲಿತಜೂಳಿಯ ರನ್ನದೋಲೆ ಮುತ್ತಿನ ಬೊಟ್ಟು |
ಪೊಳೆವ ಮೂಗುತಿ ಕಂಠಮಾಲೆ ಭುಜಕೀರ್ತಿ ಸರ |
ಪಳಿ ತೋಳಬಳೆ ಹಸ್ತಕಡಗ ಮಾಣಿಕ್ಯದುಂಗುರ ರಂಜಿಪೊಡ್ಯಾಣಮುಂ ||
ಉಲಿವ ಘಂಟೆಗಳ ಕಟಿಸೂತ್ರ ನೂಪುರ ಕಾಲ |
ಉಳಿ ಕಡೆಯ ಬೆರಳ ಮುದ್ರಿಕೆ ಕಂಕಣಂಗಳಂ |
ಲಲನೆಯರ್ ಗಿರಿರಾಜಸುತೆಗೆ ಸಿಂಗರಿಸಲತಿವಿಭವದಿಂ ರಂಜಿಸಿದಳು || ೯ ||

ಸುಳಿಗುರುಳ ನಗೆಮೊಗದ ಸುಲಿಪಲ್ಲ ಚೆಂದುಟಿಯ |
ಪೊಳೆವ ಕರ್ಣಾಭರಣದೆ¹ಸೆವ ತಿಲಕದ ನೊಸಲ |
ನೆಲೆಮೊಲೆಯ ನೀಳ್ದ ಬಾಸೆಯ ಗುಳಿದ ಪೊಕ್ಕುಳಿನ ಸೆಳೆನಡು³ವಿನೊಬ್ಬುಳಿ³ಗಳ ||
ಲಲಿತಜಂಘಾಕಾಂಡದಮರ್ದ ಪರಡುಗಳ ಕೆಂ |
ದಳದ ಸೊಬಗಿನ ನಾರಿ ಸಕಲಸೌಖ್ಯಾಧಾರಿ |
ಲಲನೆಯರ ತಲೆರನ್ನೆ ವಿವಿಧಗುಣಸಂಪನ್ನೆ ಗಿರಿಜಾತೆ ಕಣ್ಗೆಸೆದಳು || ೧೦ ||

ಪರಿಕಿಸೆ ಕುಜಾತಿಗಳೊಳುದಿಸಿದೆವನಂತರಂ |
ಹರವೈರಿಗಸ್ತ್ರಂಗಳಾದೆವನಿತಲ್ಲದೆಯು |
ನಿರುತಮತಿರಾಗತೆಯ ಕೈಕೊಂಡೆವಕಟ ಪೆಣ್ಗೊಲೆಗೊಡಂಬಟ್ಟೆವೆಂದು ||
ಪರಿಭವವ ಬಿಡಿಸು ನೀನೆಂದಂಘ್ರಿಪಂಕಜವ |
ನಿರದೆ ಸಾರ್ದಸುಗೆಯೆಳೆದಳಿರ್ಗಳೋ ಪೇಳೆನಲ್ |
ಸರಸಿರುಹಮುಖಿಯ ಪದತಳಪಲ್ಲವಂಗಳೊಪ್ಪಿದುವದೇಂ ವರ್ಣಿಸುವೆನು || ೧೧ ||

---

೧ ವಿರಚಿ (ಹು.) ೨ ಮೆ (ಹು.) ೩-೩ ವನುಣ್ಪೊಡೆ (ಮ.); ವಿನೊಳ್ಪೊಡೆ (ಪ, ಹು.)

ಅಕ್ಷಿಗಳ್ ಪದಿನೈದವರೊಳೈದು ಮುಗಿಯೆ ವಿ |
ಕ್ಷಕ್ಷಿಗಳೊಳೀಶನಗಜೆಯು ದೇಹಕಾಂತಿಯ ನಿ |
ರೀಕ್ಷಿಸಲ್ ತನುನುಣ್ಪಿನೊಳ್ ಸಿಲದೆ ಜಗುಳ್ದು ಪದಕಮಲಂಗಳೊಳ್ ನಿಂದುವೋ ||
ದಕ್ಷಯಾಗದಲಿ ವೀರಂ ಭಗಂ ಪೂಷರಂ |
ಶಿಕ್ಷಿಸಲ್ ಮಿಕ್ಕ ರವಿಗಳ್ ಭಯದೆ ಬಂದೆಮ್ಮ |
ರಕ್ಷಿಸೆನುತಡಿಗೆರಗಿದುವೊಯೆನಲ್ ಗಿರಿಸುತೆಯ ಪದನಖದ ಚೆಲ್ವೆಸೆದುದು || ೧೨ ||

ತಳಿರಲರ್ ಪುದಿದಮರತರುಶಾಖೆಯಂ ಮುತ್ತಿ |
ದಳಿಗಳೆನೆ ನೀಲಸರಪಳಿಯೆಸೆದುವಾಗಲವ |
ರುಲಿಪೆನಲ್ ಚಾರುನೂಪುರಝುಣತ್ಕಾರಮೊಪ್ಪಿದುದೊಂದು ಮದದಾನೆಯ ||
ತಲೆಯೊಳಗೆ ಸೊಂಡಿಲೆರಡೊಗೆದಂತೆ ಗಿರಿಜಾತೆ |
ಯುಲಘುಜಘನಂ ಬಟ್ಟದೊಡೆಗಳುಂ ಮೆರೆದುವದ |
ಬಳಸಿದರಳೆಲೆಮಾಲೆಯಂತೆ ಕಾಂಚೀದಾಮ ಕಣ್ಗೆಸೆದುದೇನೆಂಬೆನು || ೧೩ ||

ಹರನ ಮೋಹನದ ನಿಧಿಯಂ ಪುತ್ತುವೆರಸಿ ಫಣಿ |
ಪರಿಕಿಸೆ ಸದಾ ಕಾದುಕೊಂಡಿರುತ್ತಿರ್ದೊಡಂ |
ನಿರುತಮಬಲಾಶ್ರಯದೊಳಿರ್ದ ಕಾರಣದಿನೆಚ್ಚರಿಕೆಯೇ ಕಾರ್ಯಮೆಂದು ||
ತರತರದ ಘಂಟೆಪಾರಿಗಳನಿಂಬಿಟ್ಟರೆನೆ |
ವರರೋಮರಾಜಿ ಸುಳಿನಾಭಿಯೊತ್ತಿನೊಳೆ ಪರಿ |
ಪರಿಯ ರಸನಾಂಚಿತದ ಕಟಿಸೂತ್ರಮೊಪ್ಪಿತಗಜಾತೆಯ ತನೂದರದೊಳು || ೧೪ ||

ಹರಿಯಂತೆ ಚಕ್ರಶೋಭನಕರಂ ಯೋಗಿಪ್ರ |
ವರನಂತೆ ವಿಮಲಮುಕ್ತಾಹಾರವಿಲಸಿತಂ |
ಧರಾಧರನಂತೆ ಭೂಭೃತ್‍ಗುರುತ್ವಾಪಹಂ ನೀಳ್ದ ನೀರೊಟ್ಟಿಲಂತೆ ||
ಪರಮಲಾವಣ್ಯವಿಭ್ರಾಜಿತಂ ಮೃಗಕುಲೇ |
ಶ್ವರನಂತೆ ಕುಂಭಿಕುಂಭಸ್ಪರ್ಧಿ ದುರ್ಜನೋ |
ತ್ಕರಸಂಗದಂತೆ ಕರ್ಕಶವೃತ್ತಿಯಿಂದೆಸೆದುವುನ್ನತಕುಚಂಗಳುಮೆಯ ✿ || ೧೫ ||

---

೧ ಶೋಭೆ (ಮ.) ೨ ನೀ (ಶಿ.) ೩-೩ ಭೂಭೃದ್ವೃತ್ತಪರಿಹರಂ (ಮ.); ಭೂಭೂರ್ಗುರುತ್ವಾಪಹಂ (ಮ.) ✿ ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ಆವಗಂ ತವೆ ವಿಕಾಸಂಗೆಯ್ಯದಿರ್ಪ ರಾ |
ಜೀವಮುಕುಳಂಗಳುಂಟೇ ಚೋದ್ಯಮೆಂದೊರ್ವ |
ಭಾವೆ ಗಿರಿಜೆಯ ಕುಚದ್ವಯವನೀಕ್ಷಿಸುತಿರಲ್ ಮತ್ತೊರ್ವಳವಳ ಕೂಡೆ |
ಆವ ಸೋಜಿಗಮುಬಲೆ ಮೆರೆವ ನಕ್ಷತ್ರಮಾ |
ಲಾವಳಿಯ ಗಡಣದಿಂ ಚಂದ್ರಮಂ ಪೊರೆಯೊಳಿರೆ |
ತಾವರೆಗರಳ್ಕೆಯೆಂಕೆಗನುತಗಜೆಯಸ್ಯಾಹಾರಂಗಳಂ ತೋರಿಸಿದಳು || ೧೬ ||

ಸಸಿಯು ಬಟ್ಟೆನೊಳಿರ್ದ ದಿವ್ಯಸುಧೆಯಂ ಚಿತ್ತ |
ದೊಸಗೆಯಿಂ ಕೊಂಡೊಯ್ದು ಶಿಷ್ಯರಂ ಬಿಡದೆ ರ |
ಕ್ಷಿಸುವೆನೆಂಬಳ್ತಿಯಿಂ ಬಂದು ತದ್ಬಿಂಬದಮೃತದ ರಸದ ರುಚಿಗೆ ಸೊಗಸಿ ||
ಅಸುರಗುರುವಕ್ಕರಿಂದಲ್ಲಿ ನೆಲೆಗೊಂಡು ಸಂ |
ತಸದಿಂದೆ ನಿಂದನೋಯೆನೆ ಸಖಿಯರೊಲ್ದು ಸೇ |
ರಿಸಿದ ಮೂಗುತಿ ನಾಡೆ ಕಣ್ಗೊಳಿಸಿತುಮೆಯ ವದನಾಂಬುಜವನಿಂಬುಗೊಂಡು
|| ೧೭ ||

ರಾಜೀವಕುಮುದಂಗಳೆಂಬ ಮತ್ಸರದೆ ರವಿ |
ರಾಜಮಂಡಲಯುಗಂ ರಂಜಿಸುವ ತುಹಿನಗಿರಿ |
ರಾಜನಂದನೆಯ ವಿಮಲಾಂಬಕದ್ವಯಮನಿದು ತನ್ನದಿದುವೆನ್ನದೆಂಬ ||
ವ್ಯಾಜದಿಂದೊಂದೊಂದರೊತ್ತಿನೊಳ್ ಸಲೆ ನಿಂದು |
ರಾಜಿಪರೊ ಪೇಳೆನಲ್ ಚಾರುತರನವರತ್ನ |
ರಾಜಿನಿರ್ಮಿತಮಾದ ಕರ್ಣತಾಟಂಕಯುಗಮೊಪ್ಪಿದುದು ಗಿರಿಜಾತೆಯ || ೧೮ ||

ಕುವಲಯಪರಾಜಿತಂ ಕಂಜಾತರಂಜಿತಂ |
ತವೆ ತಾರಕಾಲಂಕೃತಂ ನಾಡೆ ಸಂತತಂ |
ರವಿಯಂತೆ ಪುರದಂತೆ ವನದಂತೆ ಶಿವನಂತೆ ದಿವದಂತೆ ದನುಜರಂತೆ ||
ವಿವಿಧಾನಿಮಿಷಭಂಗವರ್ಧನಂ ಶ್ರುತಿಯುತಂ |
ವಿವರಿಸಲ್ಕಂಜನೋದ್ಭಾಸಿತಂ ಬಕಸರಸಿ |
ನವಗಾನವಿಪ್ರಕುಲಗಿರಿವರುಣದಿಶೆಯಂತೆ ಗಿರಿಜೆಯಂಬಕಮೆಸೆದುವು || ೧೯ ||

---

೧ ಯೆಂತೆ (ಹು, ಮ.) ೨ ರಾ (ಹು.)

ಈಕೆ ಮೂಜಗದ ಸತಿಯರ್ಗೆ ಭೂಷಾರತ್ನ |
ಮೀಕೆಗಿನ್ನೇಕೆ ಭೂಷಣಮಖಿಳದೇವಿಯ |
ಗೀಕೆ ಮಸ್ತಕದ ಮಣಿಯೀಕೆಗಿನ್ನೇಕೆ ಸೀಮಂತಮಣಿ ಭಾವಿಸುವೊಡೆ ||
ಈಕೆ ಪೆಣ್ಗಳ ನೊಸಲ ತಿಲಕವೀಕೆಗೆ ತಿಲಕ |
ವೀಕೆ ರಂಜಿತಕುಸುಮಕೋಮಲಾಂಗದ ಚೆಲ್ವೆ |
ಯೀಕೆಯೀಕೆಗೆ ಪುಷ್ಪಮಾಲೆಯೇಕೆಂದೊರ್ವಳಾಪ್ತಸಖಿಯಂ ಕೇಳ್ದಳು || ೨೦ ||

ಸಿಂಗರಕೆ ಸಿಂಗರಂ ಸಲ್ಲವ[1]ಹುದಾದೊಡಂ |
ಮಂಗಲಾರ್ಥಕ್ಕೆ ಮಾಡಿದೆವೆನಲ್ ತೆಗೆ ಸರ್ವ |
ಮಂಗಲೆಗೆ ಮಂಗಲಮದೇಕೆನಲ್ ನಸುನಗುತೆ ಲೋಕೋಪಚಾರಕಾಗಿ ||
ಸಿಂಗರಂಗೈದವೀ ನಳನಳಿಪ ನವಕೋಮ |
ಲಾಂಗಿಯನೆನುತ್ತುಸಿರುತಿರಲೆಸೆದಳಾಗಲಗ |
ಪುಂಗವನ ತನುಜಾತೆ ಸಕಲನಿಗಮಾತೀತೆ ವಿಖ್ಯಾತೆ ಲೋಕಮಾತೆ || ೨೧ ||

ಮಿಡಿಗೆ[2] ಮೋಹಿದ ಕೇಶಮುಭವಬಂಧನಪಾಶ |
ಮೊಡರ್ವ ಮೊಲೆಗಳ ಕೊರ್ಬು ಭವನ ಹರುಷದ ಪರ್ಬು |
ಕುಡಿನೋಟಗಳ ಕಾಂತಿ ಹರನ ಚಿತ್ತದ ಭ್ರಾಂತಿ ರೂಪು ಶಂಕರನ ಕಾಪು ||
ಮುಡಿದ ಪೂವಿನ ತುರುಬು ಮೃಡಗಂಧಗಜದಿರುಬು |
ನಡೆಯ ಸೊಬಗಿನ[3] ಸೊಂಪು ಚಂದ್ರಚೂಡನಲಂಪು |
ನುಡಿಯ ಮಾತಿನ ಮುದ್ದು ಶಿವನನೊಲಿಸುವ ಮದ್ದು ತಾನೆನಲ್ ಶಿವೆ ಮೆರೆದಳು
|| ೨೨ ||

ಥಳಥಳಿಪ ನೀಲಾಳಕಾಳಿಗಳ ಪಾಳಿಗಳ |
ತೊಳತೊಳಗುವಾಭರಣದೋರಣದ ಪೂರಣದ |
ಝಳಝಳಿಪ ಕಾಂತಿಗಳ ಸೊಂಪುಗಳ ಪೆಂಪುಗಳ ಕಸ್ತೂರಿಕಾತಿಲಕದ ||
ಕಳಕಳಿಪ ನಗೆಗಣ್ಣ ಡಾಳಗಳ ಮೇಳಗಳ |
ಹೊಳೆಹೊಳೆವ ಬೈತಲೆಯ ಮುತ್ತುಗಳ ಜೊತ್ತುಗಳ |
ಘಳಿಘಳನೆ ಮೆರೆವಂದುಗಾವಳಿಯ ಗಾವಳಿಯ ಗಿರಿಜಾತೆ ರಂಜಿಸಿದಳು || ೨೩ ||

೧ ದ (ಹು, ಮ.) ೨ ಮುಡಿಗೆ (ಮ.) ೩ ಬೆಡಗಿನ (ಹು, ಮ.)

ಚಂದ್ರಬಿಂಬಾನನದ ಕುಲಿಶರದನದ ಲಸ |
ಚ್ಚಂದ್ರಾರ್ಧಭಾಳದ ಲಲಾಮದ ವಿರಾಜಿಸುವ |
ಚಂದ್ರಕಿಸಮಾನಕಬರಿಯ ಭರದ ಸೂಸಕದ ನುಣ್ಬೊಡೆ[೧]ಯ ಪೊಸತು ನಡೆಯ |
ಚಂದ್ರಗಾವಿಯ ದುಕೂಲದ ಬೈತಲೆಗೆ ಪೊರೆದ |
ಚಂದ್ರರಜದೊಬ್ಬುಳಿಯ ಶೃಂಗಾರಸಾರದಿಂ |
ಚಂದ್ರಶೇಖರನ ಪಟ್ಟದರಾಣಿ ನಮಿತಗೀರ್ವಾಣಿ ರಂಜಿಸುತಿರ್ದಳು || ೨೪ ||

ರಾಜಹಂಸೀಯಾನೆ ಸುಕಲಾನಿಧಾನೆ ಮೃಗ |
ರಾಜಸನ್ನಿಭಮಧ್ಯೆ ಸರ್ವನಿಗಮಾಭೇದ್ಯೆ |
ರಾಜಸಮಶುಭವದನೆ ಕುಂದಕುಟ್ಮಲರದನೆ ಸಕಲಸೌಂದರ್ಯಸದನೆ ||
ರಾಜನ್ಮಹಾಭರಣೆ ದಿವಿಜವಂದಿತಚರಣೆ |
ರಾಜರಿಪುಘನವೇಣಿ ದಳಿತಪಂಕಜ[೨]ಪಾಣಿ |
ರಾಜಶೇಖರನರಸಿ ವಿಮಲಸದ್ಗುಣಸರಸಿ ಸಿಂಗರದೊಳೊಪ್ಪಿರ್ದಳು ❀ || ೨೫ ||

ಆ ಸಮಯದೊಳ್ ಬೃಹಸ್ಪತಿ ಶಂಭುವೆಡೆಗೆ ಸುವಿ |
ಲಾಸದಿಂ ಬಂದು ಬಂದುದು ಮುಹೂರ್ತಂ ಕೃತ್ತಿ |
ವಾಸ ಬಿಜಯಂಗೆಯ್ವುದೆನೆ ಕೇಳುತಾಗ ಹರಿಯಜರ ಕೈಲಾಗಿನಿಂದೆ ||
ಬಾಸಿಗದ ನೊಸಲ ದೇವಂ ಕೋಮಲಾಂಘ್ರಿವಿ |
ನ್ಯಾಸದಿಂದೈತಂದು ಮಣಿಕಾಂತಿ ದೆಸೆದೆಸೆಗೆ |
ಸೂಸುತಿಹ ಪಲ್ಲಕ್ಕಿಯಂ ಪತ್ತಿ ಸಕಲವೈಭವದಿಂದೆ ಬರುತಿರ್ದನು || ೨೬ ||

ಹರಿಯಜೇಂದ್ರಾದಿನಾನಾಲೋಕಪಾಲಕರ್ |
ಹರನೆಡಬಲಂಗಳೊಳ್ ಕಾಲ್ನಡೆಯೊಳೈತರಲ್ |
ಪರಿಪರಿಯ ವಿನಿಯೋಗದಷ್ಟದಿಕ್ಪಾಲಕರ್ ಸುತ್ತಲುಂ ಬಳಸಿ ಬರಲು ||
ತರಣಿಚಂದ್ರಮರುಭಯಚಮರವಂ ಡಾಳಿಸಲ್ |
ಪರಮಕರ್ಪುರದ ಬೊಂಬಾಳದೀವಿಗೆಬೆಳಗು |
ಪರಿಶೋಭಿಸಲ್ಕಾಗ ಮುತ್ತುಗಳ ಸತ್ತಿಗೆಯ ಮೊತ್ತವೆಸೆಯಲ್ ಬಂದನು || ೨೭ ||

---

೧ ತೋಳ್ಪೊಡೆ (ಹು.) ೨ ಪಲ್ಲವ (ಹು.) ೩ ನಡೆ (ಶಿ, ಗೋ, ಹು, ಮ.) ❀ ಈ ಪದ್ಯಕ್ಕೆ ಮುದ್ರಿತ ಪ್ರತಿಗಳಲ್ಲಿ ೯ ನೆಯ ಸಂಧಿಯು ಮುಗಿಯುತ್ತದೆ.

ತರತರದೆ ಪೊಗಳ್ವ ವೇದಾವಳಿಯ ಗಾವಳಿಯ |
ಬಿರುದ ಕೊಂಡಾಡುತಿಹ ಪಾಠಕರ ನೋಟಕರ |
ಮೊರೆವ ವಾದ್ಯಧ್ವನಿಗಳೋಳಿಗಳ ಪಾಳಿಗಳ ಸುರವಧೂನೃತ್ಯಂಗಳ ||
ಇರದೆತ್ತುವಾರತಿಯ ಚೆನ್ನೆಯರ ಕನ್ನೆಯರ |
ಶಿರಕೆ ತಳಿವಕ್ಷತೆಯ ಮುತ್ತುಗಳ ಜೊತ್ತುಗಳ |
ಪರಮಸಂಭ್ರಮದಿಂದೆ ವರಮಂಟಪದ ಮುಂದೆ ಪಲ್ಲಕ್ಕಿಯಿಂದಿಳಿದನು || ೨೮ ||

ಸುರಲೋಕದಂತೆ ರಂಭಾರಂಜಿತಂ ರತೀ |
ಶ್ವರನ ಕೈಪೊಡೆಯಂತೆ ಪೂಸರಕ್ಕಾಶ್ರಯಂ |
ಗುರುಮೇರುಗಿರಿಯಂತನಂತಮಣಿವೇಷ್ಟನವಿಲಾಸನ[1] ಸರೋಜದಂತೆ ||
ವರಚಿತ್ರಪತ್ರರಾರಾಜಿತಂ ಸಂತತಂ |
ಹರಿಯಂತೆ ಲಕ್ಷ್ಮೀಕರಗ್ರಾಹಿಯೆಂದೆನಿಸಿ |
ಪರಿಶೋಭಿ[2]ಸಿತ್ತು ತದ್ವೈವಾಹಮಂಟಪಂ ಲೋಕನಾಯಕನಿದಿರೊಳು || ೨೯ ||

ಪರಮರುಚಿಪೀತಾಂಬರಂ ವರಶ್ರೀಧರಂ |
ಸರಸಗಾರುತ್ಮಧ್ವಜಾಲಂಕೃತಂ ಚಕ್ರ |
ಪರಿರಂಜಿತಂ ವಿಶ್ವಕರ್ಮನಿರ್ಮಾಣವಣ[3] ಗೋವರ್ಧನಂ[4] ಸಂತತಂ ||
ಪರಿಕಿಸಲನಂತಮಣಿಕಿರಣವಿಭ್ರಾಜಿತಂ |
ನಿರುತಮತಸುಪ್ರಭಾವೋಲ್ಲಾಸಿತಂ ನಾಡೆ |
ಹರಿಯಂತೆ ವೈವಾಹಮಂಟಪಂ ರಂಜಿಸಿದುದೇನೆಂಬೆನಚ್ಚರಿಯನು || ೩೦ ||

ವಿಲಸದ್ವಿಭೂತಿಶೋಭಾರಂಜಿತಂ ಮಹೋ |
ಜ್ವಲಪದ್ಮರಾಗವಿಭ್ರಾಜಿತಂ ಗಾಂಗೇಯ |
ಜಲಧೃತಂ ನವಚಂದ್ರಕಾಂತಕಾಂತಂ ರಾಜಹಂಸಲೋಚನರಾಜಿತಂ ||
ಸುಲಲಿತಪಿ[5]ಚಿತ್ರವೃಗಸಂಶೋಭಿತಂ ಸುನಿ |
ಶ್ಚಲಸೀಲಲೋಚಿತಂ ನುತಸರ್ವಮಂಗಲಾ |
ಕಲಿತಮುಂ ತಾನೆನಿಸಿ ಮಂಟಪಂ ಶಿವನಂತೆ ಶಿವನಿದಿರೊಳೆಸೆದಿರ್ದುದು || ೩೧ ||

೧ ಅಮಲ (ಪು, ಮ.) ೨ ರಂಜಿ (ಹು.) ೩ ನಿರ್ಮಾಣಕಂ (ಮ.); ನಿರ್ಮಾಣನಂ (ಪ, ಹು.) ೪ ಗೋವಧರನಂ (ಶಿ.) ೫ ಸು (ಪ.)

ಬಿಗಿದ ನವಮಕರತೋರಣದಿಂದೆ ಗುಣದಿಂದೆ |
ನೆಗೆದ ನಾನಾಧ್ವಜಾವಳಿಯಿಂದೆ ಪಳಿಯಿಂದೆ |
ಝುಗಝುಗಿಪ ಮಣಿದೀಪಚಯದಿಂದೆ ನಯದಿಂದಲೆಸೆವಮೌಲ್ಕಟ್ಟಿನಿಂದೆ ||
ಅಗರುಧೂಪದ ಪೊಗೆಯ ಕಂಪಿಂದೆ ಪೆಂಪಿಂದೆ |
ಮೃಗನಾಭಿ ಕರ್ಪುರದ ಸೊಂಪಿಂದೆ ತಂಪಿಂದೆ |
ನಿಗುರ್ವ ಪೂಮಾಲೆಗಳ ಲಂಪಿಂದಲಂಪಿಂದೆ ಮಂಟಪಂ ಚೆಲ್ವಾದುದು || ೩೨ ||

ನಟ್ಟನಡುವಗಲ ಮಾರ್ತಾಂಡನೇರಿದ ರಥದ |
ತಿಟ್ಟವೋ ಭೂಮಂಡಲದ ನಡುವೆ ಪೊಳೆವ ಪೊಂ |
ಬೆಟ್ಟವೋ ತತ್ಸಭಾಪಂಕೇರುಹದ ಮಧ್ಯಕರ್ಣಿಕೆಯೊ ಪೇಳೆಂದೆನೆ ||
ಇಟ್ಟಣಿಸಿ ಬಿಗಿದ ಮಾಣಿಕ್ಯಲಹರಿಯ ಮುತ್ತಿ |
ನೊಟ್ಟಜೆಯ ಕೀಲಣಿಯ ಗಾಡಿಯಿಂದಿರದೆ ಕರು |
ವಿಟ್ಟ ವೈವಾಹವೇದಿಕೆಯನೇರಿದನಭವನಧಿಕತರವಿಭವದಿಂದೆ || ೩೩ ||

ಇಂತು ರಾಜಿಸುವ ವೈವಾಹವೇದಿಕೆಯೊಳಗ |
ನಂತಶಿವಗಣಕುಲಂ ಪಿಂತೆ ರಾಜಿಸುತಿರಲ್ |
ಕಂತುಪಿತ ಕಮಲಜೇಂದ್ರಾದಿ ದಿವಿಜವ್ರಾತಮೆಡಬಲದೊಳಿಟ್ಟಣಿಸಲು ||
ಮುಂತೆ ರಂಭಾದಿ ನಾನಾದೇವ[2]ಕಾಂತೆಯರ್ |
ಸಂತಸದೆ ನರ್ತಿಸುತ್ತಿರೆ ನಂದಿಮಾಕಾಳ |
ರುಂ ತವೆ ಭರಾಭರಿಗಳಂ ಮಾಡುತಿರಲಿತ್ತಲತ್ತಲತಿಸಂಭ್ರಮದೊಳು || ೩೪ ||

ಇಂದೀವರಾಯತಾಂಬಕಿಯನೊಲವಿಂದೆ ಪೊ |
ನ್ನಂದಣದೊಳಿಟ್ಟು ಹಡಪಂ ಗಿಂಡಿ ಕಾಳಂಜಿ |
ಯಂದವಡೆದಿರ್ದ ಚಮರಾದಿಯೂಳಿಗವಾಂತು ಚೌಷಷ್ಟಿಯೋಗಿಣಿಯರು ||
ಕುಂದರದನದ ಕುಮುದಲೋಚನದ ಲಲಿತಾರ |
ವಿಂದವದನದ ವಿಪುಳಕುಚಭರದ ಕೆಳದಿಯರ್ |
ಕಂದರ್ಪನಾನೆಯಂತೈದಿದರ್ ಗಿರಿತನುಜೆಯಂ[4]ದಣದ ಮುಂದೆಸೆಯೊಳು || ೩೫ ||

---

೧ ಭೆಯ (ಹು.) ೨ ದಿವಿಜ (ಪ.) ೩ ತಿರುತಿರ್ದರಿತ್ತ (ಹು, ಮ.) ೪ ಸುತೆಯಳಂ (ಹು.)

ನಾಗಸನ್ನಿಭವೇಣಿ ನಳಿನದಳನಯನೆ ಮದ |
ನಾಗಮೋಹನಯಾನೆ ನಾನಾಕಲಾಲೋಲೆ |
ನಾಗರಿಪುಮಧ್ಯೆ ನರನಾಗಸುರಲೋಕದಬಲಾಗಣದ[1] ಮಸ್ತಕಮಣಿ ||
ನಾಗಾರಿಗಮನಾತ್ಮಜನ ಪಟ್ಟದಾನೆ ಪುಂ |
ನಾಗಸೌಗಂಧಿ ಕಡುಬಿಳಿದಾಗಿ ರಂಜಿಸುವ |
ನಾಗವಲ್ಲೀದಳವ ಮಡಿದೀವುತ್ತೈದಿದಳ್ ನಾಗಭೂಷಣನರಸಿಗೆ || ೩೬ ||

ತೋಳ ಮೊದಲಂ ಕರವನೆತ್ತಿ ಸಿತಚಾಮರವ |
ಢಾಳಿಸುವ ನೆವದೆ ತೋರುತ್ತಲೊರ್ವರನೊರ್ವ |
ರಾಲೋಕಿಸುವ ನೆವದೆ ಲೋಚನಮರೀಚಿಗಳ ಪಸರಿಸುತೆ ಬಲ್ಮೊಲೆಗಳ ||
ಮೇಲುದಂ ಪೊದೆವ ನೆವದಿಂದೆ ನಸುದೋರಿಸುತೆ |
ಮೇಳದಿಂ ಗಿರಿಜೆಯೆಡಬಲಗಳೊಳ್ ಕಣ್ಗೊಳಿಸಿ |
ಲೀಲೆಯಿಂ ನಡೆವ ಚಮರಗ್ರಾಹಿಣಿಯರೆಸೆದರೇನೆಂದು ಬಣ್ಣಿಸುವೆನು || ೩೭ ||

ತಾವರೆಯ ಕನ್ನಡಿಯ ಶಶಿಯ ಪಡಿಗಟ್ಟುವುದಿ |
ದಾವ ಬಲ್ಲವಿಕೆ ಕೆಸರೊಳ್ ಪುಟ್ಟಿ ಕಠಿಣತೆಯ |
ನಾವರಿಸಿ ಕಂದಿ[2]ನಾಂತುವನೆಮ್ಮ ಮೊಗಕೆಂದವಂ ಪಿಡಿದು ಸರಿನೋಡುವ ||
ಭಾವದಿಂ ಗೌರಿಯಿಕ್ಕೆಲಗಳೊಳ್ ಬೀಸುವಬ |
ಲಾವಳಿಯ ಕರಪಲ್ಲವಂಗಳೊಳಗೊಪ್ಪುತಿಹ |
ಪಾವನವ್ಯಜನಂ ವಿರಾಜಿಸಿದುವೆನಲವರ ನಗೆಮೊಗದ ಗಾಡಿಯೆಂತೋ || ೩೮ ||

ಈತನಸುದಿನಪುಷ್ಟಿ ತಾಸಂಗಿ ಕುವಲಯವಿ |
ಘಾತಕಂ ದ್ವಿಜವರ್ಣಹೃತನದರಿನೀಗ ಪ್ರ |
ದ್ಯೋತಕಿರಣಂಗಳೆಮ್ಮರಸಿಯಂ ಸೋಂಕಬೇಡೆಂದುರೆ ನಿವಾರಿಪಂತೆ ||
ಮಾತಂಗದಾನಲೋಭಿಗಳಿರದೆ ಮಧುವನತಿ |
ಪ್ರೀತಿಯಿಂದುಂಬ ಚಂಡಾಳಿಗಳ್ ಶಿವೆಯ ಮುಖ |
ಜಾತಪರಿಮಳಕೆರಗಬೇಡೆಂದು ಪೊಡೆವಂತೆ ಛತ್ರಚಾಮರಮೆಸೆದುವು || ೩೯ ||

---

೧ ಜನದ (ಹು, ಮ, ಪ.)　೨ ಕುಂದ (ಮ.)

ಭೇರೀಮೃದಂಗ ದುಂದುಭಿ ಶಂಖ ಕಹಳಾಮು |
ಹಾರವಂಗಳ ಶೋಭನಸ್ವನದ ವಂದಿಗಂ |
ಭೇರಘೋಷದ ಸಖೀನಿಕರದುಗ್ಗಡಣೆಗಳ ವರಸಿಂಜಿತಧ್ವಾನದ ||
ಭೂರಿಸಂಭ್ರಮದೊಳ್ಳೈತರುತಿರ್ದಳೀಶ್ವರನ |
ನಾರಿ ಘನದುರಿತಸಂಹಾರಿ ಸತ್ಕೀರ್ತಿವಿ |
ಸ್ತಾರಿ ಭಕ್ತವ್ರಜಾಧಾರಿ ಗಿರಿರಾಜನ ಕುಮಾರಿ ಪೊನ್ನಂದಣದೊಳು || ೪೦ ||

ತಳಿರಡಿಯ ಮೆಲ್ಲಡಿಯ ತಾವರೆಗಳಡಿಯ ಥಳ |
ಥಳಿಪ ಚೆನ್ನಡಿಗಳಸಿಯಡಿಯ ಲಲಿತಾಂಗಿಯರ್ |
ಪೊಳೆವ ನುಣ್ದೊಡೆಯ ಪೊಸಪೊಂಬಾಳೆದೊಡೆಯಾನೆಗೈದೊಡೆಯ ಬಾಲಕಿಯರು ||
ಕಳಹಂಸೆಗಳ ನಡೆಯ ಕಳಭಂಗಳೊಳ್ನಡೆಯ |
ಸಲೆ ಸೊಂಪುನಡೆಯ ಸೋಲ್ನಡೆಯ ಸೊಬಗಿಯರಿರದೆ |
ತಳರ್ದರತಿಸಂಭ್ರಮದೆ ಪಾರ್ವತಿಯ ದಂಡಿಗೆಯ ಮುಂದೆಸೆಯೊಳೀನೆಂಬೆನು
|| ೪೧ ||

ಸಲೆ ತೋರ ಪೊರವಾರ ಬಿಣ್ಪುಪೊರವಾರ ನು |
ಣ್ಮ[1]ಳ[2]ಲ್ಪಿಟ್ಟಿಪೊರವಾರ ಬಟ್ಟಪೊರವಾರುಗಳ |
ಲಲನೆಯರ್ ತೆಳ್ವಸುರ ಸುಳಿವಾಳೆವಸುರ ಕೈದಳವಸುರ ಕೋಮಳೆಯರು[2] ||
ಸೆಳೆನಡುವಿನಸಿಯ ನಡುವಿನ ಕಮಲನಾಳದೊಂ |
ದೆಳೆಯ ನಡುವಿನ ಸಿಂಗನಡುವಿನೊಪ್ಪಿಡಿನಡುವು |
ಗಳ ಸಣ್ಣನಡುವಿನಿಲ್ಲುಂಟೆಂಬ[3] ನಡುವಿನಬಲೆಯರೈದೆ ಬರುತಿರ್ದರು || ೪೨ ||

ಪೊಂಗಳಸಮೊಲೆಯ ಪೊಣ್ಮುವ ಮೊಲೆಯ ಕಿಕ್ಕಿರಿದ |
ತೆಂಗಾಯ್ಮೊಲೆಯ ಪೊಚ್ಚ ಪೊಸ ಪೊಂಬೊಗರಿಮೊಲೆಯ |
ಸಿಂಗರದ ಮೊಲೆಯ ಬೆಳುಗಾ[4]ಯ್ಮೊಲೆಯ ಬಟ್ಟಡಕೆಮೊಲೆಯ ಕಡುಮೊಗ್ಗೆಮೊಲೆಯ
ಪೊಂಗುತಿಹ ಮೊಲೆಯ ನುಣ್ಮೊಲೆಯ ನೊಳ್ಪವರಂ ಬೆ |
ರಂಗುವಡಿಸುವ ಮೊಲೆಯ ಮೇಲುರದ[5] ಸೆರಗಂ ತೊ |
ಲಂಗನೂಂಕುವ ಮೊಲೆಯ ಬಲ್ಮೊಲೆಯ ಬಿಣ್ಮೊಲೆಯ ಭಾವೆ[6]ಯರ್ ಬರುತಿರ್ದರು
|| ೪೩ ||

---

೧ ಣ್ಭ (ಶಿ.) ೨-೨ ಲಿಂಟೆ ಪೊರೆವಾರಗಳ ಲಲನೆಯರು ಚೆಲ್ವ | ತೆಳುವಸುರ ಸುಳಿವಾಳೆವಸುರ ಕೈದಳವಸುರ ಕೋಮಳೆಯರತಿಹರುಷದಿಂ || (ಮ.) ೩ ದಿನ್ನಿಲ್ಲೆಂಬ (ಹು.) ; ನಿಲ್ಲೆಂದೆಂಬ (ಮ.) ೪ ಬೆಳಲ್ಗ (ಹು.) ೫ ಉದರ (ಹು.) ೬ ಬಾಲೆ (ಪ.)

ಒಚ್ಚಾರೆಗಣ್ಣ ತಾವರೆಗಣ್ಣ ನಗೆಗಣ್ಣ |
ಬೆಚ್ಚೆರಳೆಗಣ್ಣ ತುರುಗೆವೆಗಣ್ಣ ಕಿವಿಗಳೊಳ್ |
ಬೆಚ್ಚಿಸೆವಗಣ್ಣ ಬೆಳತಿಗೆಗಣ್ಣ ನಿಟ್ಟೆಸಳ್ಗಣ್ಣ ವಿಾನ್ಗಣ್ಣ ನಿಜದ ||
ಅಚ್ಚಕಾಡಿಗೆಗಣ್ಣ ಮಿಗೆ ಮಿಂಚುಗಣ್ಣ ಕಡು |
ಪೊಚ್ಚಲರ್ಗಣ್ಣ ಬಲ್ಬೊಗಸೆಗಣ್ಣ ಬಲೆಯರ್ |
ನಿಚ್ಚಳದ ನೀರೆಯರ್ ನಿಬಿಡಕುಚಭಾರೆಯರ್ ಬರುತಿರ್ದರುತ್ಸವದೊಳು || ೪೪ ||

ತಳಿರ್ದುಟಿಯು[1] ತೊಂಡೆವಣ್ದುಟಿಯು ಬಂದುಗೆದುಟಿಯು |
ಪೊಳೆವ ಸಸಿಗೆಂಪಿದುಟಿಯು ಆಲವಣ್ದುಟಿಯ ಥಳ |
ಥಳಿಪ ಚೆಂದುಟಿಯು ಪೊಸ ಪವಳದುಟಿಯೊಳುರನ್ನದುಟಿ ರಂಗುದುಟಿಗಳವರು ||
ಸುಲಿಪಲ್ಲ ಕೆಂಬಲ್ಲ ಮೊಲ್ಲೆಯ ಮುಗುಳ್ವಲ್ಲ |
ಯೆಳೆರನ್ನವಲ್ಲ ಕುಲಿಶದ ಪಂತಿವಲ್ಲ ಕಂ |
ಗೊಳಿಪ ಮೊನೆವಲ್ಲುಗಳ ನಾರಿಯರ್ ಶೃಂಗಾರಹಾರಿಯರ್ ಬರುತಿರ್ದರು || ೪೫ ||

ಕಡುಚೆಲ್ವ ಮೊಗದ ಸಸಿಮೊಗದ ನಗೆಮೊಗದ ಸೊಂ |
ಪಿಡಿವ ತಾವರೆಮೊಗದ ನೆರೆ ಮುದ್ದುಮೊಗದ ಕ |
ನ್ನಡಿಮೊಗದ ನುಣ್ಮೊಗದ ಸಲೆ ಬಟ್ಟಮೊಗದೆಸೆವ ಸಂಪೂರ್ಣಸೌಂದರಿಯರು ||
ಮಡಕೆಳೆದ ಕುರುಳ ನಿರಿಗುರುಳ ಸುಕ್ಕುಂಗುರುಳ |
ನಿಡಿಗುರುಳ ಪೊಸ ನೀಲಗುರುಳ ಪೆರೆನೊಸಲೊಳೆಡೆ |
ವಿಡಿದಲೆವ ಕುರುಳ ನುಣ್ಗುರುಳ ಕೋಮಲೆಯರೆಡೆವಿಡದೊದಗಿ ಬರುತಿರ್ದರು || ೪೬ ||

ಎಳೆಯ ಬಿದಿರಿನ ಬಣ್ಣ ಸುಳಿವಾಳೆಲೆಯ ಬಣ್ಣ |
ಮೊಳೆಗರಿಕೆವಣ್ಣ ಪೊಂಬಣ್ಣಮೆಯ್ಯಬಲೆಯರ್ |
ಸುಳಿಯ ಸಂಪಗೆಗಂಪು ತಾವರೆಯ ಗಂಪು ಕತ್ತುರಿಗಂಪು ಸಿರಿಕಂಡದ ||
ತಿಳಿಗಂಪು ಪೊಂಬಾಳೆಗಂಪು ಕರ್ಪುರಗಂಪು |
ಗಳೆ ಸುಯ್ಯೊಳುಣ್ಮುವ ಬೆಮರ್ಗಳೊಳ್ ಮೆಯ್ಗಳೊಳ್ |
ಸಲೆ ಸಾಜವಾದ ಸಾಮಜಗಮನೆಯರ್ ಧೈರ್ಯಶಮನೆಯರ್ ಬರುತಿರ್ದರು || ೪೭ ||

೧ ಬಿ | ಪು, ಮ.) ೨ ತಳಿಪುದುಟ (ಮ.) ೩ ಸೀಕರ್ಣಂ (ಶಿ, ಗೋ.)

ನುಡಿವ ಕನ್ನಡಿ ನೋಡುವುತ್ಪಲಂ ಪೂಗಳಂ ।
ಮುಡಿವ ಕಾಳಾಹಿ ಚಲಿಸದೆ ನಿಂದ ಮರಿದುಂಬಿ ।
ನಡೆವ ಪೊಂಬಾಳೆಯುಲರದ ಮೊಗ್ಗೆ ತಳರದೊಳ್ದಿರೆ ಪರಿಯದೆಳೆಯಪಾವು ॥
ಕುಡಿವರಿಯದಿರ್ಪ ಲತೆ ಕಾಯದ ಸುಮಂ ಸಿಂಹ ।
ಕಡಗವಾನೆಯ ಕುಂಭಮೆಂಬಿವವಯವಮಾಗೆ ।
ಬಿಡದೆ ಮೂಲೋಕಮೋಹಿನಿಯರಾ ಗಿರಿತನುಜೆಯೆಡಬಲದೊಳಿಟ್ಟಣಿಸಿತು[1]
॥ ೪೮ ॥

ನಡೆಗಳಿಂದರಸಂಚೆವಿಂಡು ನಡೆವಂತೆ ಸವಿ ।
ನುಡಿಯೊಳರಗಿಳಿಯ ಬಳಗಂ ತಳರ್ವಂತೆ ಸೋ ।
ರ್ಮುಡಿಗಳಿಂ ಸೋಗೆಗಳ ಸಾಲ್ ತೆರಳ್ವಂತೆ[2] ನಿರಿಗುರುಳ್ಗಳಿಂ ಮರಿದುಂಬಿಯ ॥
ಗಡಣಮೆದ್ದಂತೆ ನೆಲೆಮೊಲೆಗಳಿಂದೆಣೆವಕ್ಕಿ ।
ವಡೆದು[3]ಗುಳ್ವಂತೆ ತನುವಿಂದತನುಶರಕೋಟಿ ।
ಯೆಡೆವಿಡದೆ ಭರದೊಳೊದಗುವ ತೆರದಳೊದಗಿ ಬರುತಿರ್ದರಖಿಳಸ್ತ್ರೀಯರು ❁
॥ ೪೯ ॥

ಚರಣನೂಪುರರವಂ ಕಾಂಚೀರವಂ ಚೆಲ್ವ ।
ಕರದ ಕಂಕಣರವಂಗಳ್ ಪೊಣ್ಮೆ [4]ಸುಯ್ಯಗಂ ।
ಪರಳ್ಮ[4]ಡಿಯ ಗಂಪು ಮೈಗಂಪೊಂದಸೊಂದೊದಗಿ ತಂಗಾಳಿಯುಂ ಕೊರ್ವಿಸೆ ॥
ತರಳಾಕ್ಷಿಗಳ ಬೆಳ್ಪು ಸುಲಿಪಲ್ಲ ಬೆಳ್ಪೆಸೆವ ।
ಕರದ ಸೆಳ್ಳುಗುರ್ವೆಳ್ಪು ದೆಸೆಗಳೊಳ್ ಪಸರಿಸಲ್ ।
ಬರುತಿರ್ದರತಿಸೊಗಸುಗಾರ್ತಿಯರ್ ಮದನಶರಮೂರ್ತಿಯರ್ ತವಕದಿಂದೆ ❁
॥ ೫೦ ॥

ಪಿಕತುಂಡಹತಿ ಶೀತಭಯ ನಿರಾಧಾರ ಸ ।
ತ್ಪ್ರಕಟಮಾರುತ ಕಂಪ ವಜ್ರಹತಿ ಶರಭಕಂ ।
ಟಕ ಗರುಡಭೀತಿ ಗಜಕರಪಂದ[5] ದುಷ್ಟಜಲಚರಸಂಗ ಫಣಿಪೀಡೆಯ ।
ನಿಕರದಟ್ಟುಳಿಗೆ ಪಲ್ಲವ ಕಮಠ ಸ್ಮರ ಶರಧಿ ।
ಸುಕರರಂಭಾದ್ರಿ ಹರಿ ರಾಹು ಪಂಕೇಜಾತ ।
ಮುಕುಳ ಶಂಖೇಂದುಗಳ್ ಕಾಂತೆಯರ ಕಾಯದೊಳಡಂಗಿದುವೆನಲ್ ಮೆರೆದರು
॥ ೫೧ ॥

೧ ಣಿಸಿದರು (ಮ.) ೨ ಸಾಲ್ತೊರಳ್ವಂತೆ (ಮ.) ೩ ನಡೆದು (ಮ.) ೪ ಸುಯ್ಗಂಪ।ಲರ್ಮು (ಮ.) ೫ ಪಾತೆ (ಹು, ಮ.) ❁ ಈ ಪದ್ಯಗಳು ಹು. ಪ್ರತಿಗಳಲ್ಲಿಲ್ಲ.

ಕರಿಕಳಭಯಾನೆಯರ್ ಕೌಶಲ್ಯಗಾನೆಯರ್ |
ಕರಮುಬ್ಜನೇತ್ರೆಯರ್ ಕಾಂತಿಯುತಗಾತ್ರೆಯರ್ |
ಕರಿವೈರಿಮಧ್ಯೆಯರ್ ಕಾಮುಕಾಸಾಧ್ಯೆಯರ್ ಕಠಿಣಕುಚಮಂಡಲೆಯರು ||
ಕರಣಸುವಿಲಾಸೆಯರ್ ಕಳಕಳಿಪ ಹಾಸೆಯರ್ |
ಕರಜಪ್ರಕಾಶೆಯರ್ ಕಳಕೀರಭಾಷೆಯರ್ |
ಕರಚರಣಭೂಷೆಯರ್ ಕಾಮಪರಿತೋಷೆಯರ್ ಕಳಕಳದೊಳೈತಂದರು || ೫೨ ||

ನೀಲಾಳಕಪ್ರಭೆಯೊಳಾಗಸಂ ಕತ್ತಲಿಸೆ |
ಲೋಲಾಕ್ಷಿಗಳ ಬೆಳ್ಪು ಬೆಳಗನಾಗಿಸೆ ಬರ್ಪ |
ಗಾಳಿಯುಂ ಸುನಿತಂಬಕುಚ[1]ಗಿರಿಗಳಡ್ಡೈಸಿ[1] ಸೆಕೆಯನುಬ್ಬಿಸೆ ಸುಯ್ಗಳ ||
ಗಾಳಿತಂಪೀಯೆ ಕಟಿತಟಕಾಂಚಿ ಪದನೂಪು |
ರಾಳಿಸ್ವನಂ ದಿಗ್ಗಜಂಗಳ್ಗೆ ಬಧಿರತೆಯ |
ನೊಲ್ದೀಸೆ ಬರುತಿರ್ದುದಾ ಭವಾನಿಯ ಸಖೀನಿವಹಮದನೇನೆಂಬೆನು[2] || ೫೩ ||

ಪೊಳೆವ ಮಿಂಚಿನ ಗೊಂಚಲಂತೆ ಮರಿದುಂಬಿಗಳ |
ಬಳಗದಂತಚ್ಚ ಪೊಸ ಬೆಳ್ದಿಂಗಳಂತೆ ಮಿಾ |
ನ್ಗಳ ಮಾಲೆಯಂತೆ ಪಾಲ್ಮೊರೆವೆಳ್ಳಿನಂತೆ ಕುಮುದಂಗಳೊಳ್ನಗೆಗಳಂತೆ ||
ಜಲಜದ ವಿಕಾಸದಂತಮರ್ದುವಳಿಯಂತೆ ಕಂ |
ಗಳ ಕಾಂತಿ ದೆಸೆದೆಸೆಗೆ ಪಸರಿಸಲ್ ನೋಡುತಿ |
ರ್ದಲಘುಜಘನೆಯರಾಗ ಪಾರ್ವತಿಯ ದಂಡಿಗೆಯ ಮುಂಗಡೆಯೊಳಿಟ್ಟಣಿಸಿತು ⊛
|| ೫೪ ||

ಇಂತು ನಾನಾವಿಲಾಸದ ವಿಡಾಯಿಗಳಿಂದೆ |
ಕಂತುಹರನರಸಿ ವೈವಾಹಮಂಟಪದೆಡೆಗೆ |
ಸಂತಸದೊಳೈತಂದು ದಂಡಿಗೆಯನಿಳಿದು ಕೆಳದಿಯರ ಕೈಲಾಗಿನಿಂದೆ ||
ಮುಂತೆಸೆವ ನವರತ್ನಖಚಿತವೇದಿಕೆಯನೊಲ |
ವಿಂ ತಡೆಯದೇರಿದಳ್ ಸಕಲಜನನಿಕರಮೊಂ |
ದಂತೆ ಹರುಷದಿ ಜಯಜಯೆಂದು ಕೈಮುಗಿವುತಿರ್ದುದು ಜಲಧಿಘೋಷದಂತೆ
|| ೫೫ ||

೧-೧ ಗಳ್ಕೈಸೆ ಪಕೆ | ಶಿ. | ೨ ನೇನೆಳ್ಳಿಸು (ಮ.) ⊛ ಈ ಪದ್ಯವು ಕೈಬರೆಹದ ಹು. ಪ್ರತಿಯಲ್ಲಿಯೂ ಮುದ್ರಣದ ಎಲ್ಲ ಪ್ರತಿಗಳಗಳಲ್ಲಿಯೂ ಇಲ್ಲ.

ಸಿರಿ ಸರಸ್ವತಿ ಶಚಿಯಹಲ್ಯೆ ಲೋಪಾಮುದ್ರೆ |
ಪರಮಗಾಯತ್ರಿ ಸಾವಿತ್ರಿ ಮುಂತಾಗಿರ್ದ |
ಸುರನರಭುಜಂಗಮುಸ್ತ್ರೀಯರೊಲವಿಂದೆ ಶೋಭಾನಮಂ[1] ಪಾಡುತಿರಲು ||
ವರಮುಹೂರ್ತದ ಸಮಯವಾಯ್ತೆಂದು ಬಂದು ಸುರ |
ಗುರುವಾಗ ಬಿನ್ನೈಸೆ ಕೇಳ್ದು ನಸುನಗುತಲೀ |
ಶ್ವರಂ ಗಿರಿಜೆಯರ್ ಮಹಾಹರುಷದಿಂ ಮೆಟ್ಟಕ್ಕಿಗಿರದೆ ಬಿಜಯಂಗೈದರು || ೫೬ ||

ಸುರರ ಗುರುವಾ ಸಮಯದೊಳ್ ಭಕ್ತಿಯಿಂ ಶಿವನ |
ವರಮಂಗಳಾಷ್ಟಕವನೋದುತಾಯತವೆಯೆನ |
ಲಿರದೆ ಮುನಿವರರು ಸರ್ವಾಯತಾಯತವೆನಲ್ ತೆರೆಸೀರೆಯಂ ಸರಿಯಲು ||
ಕರದ ಜೀರಿಗೆಬೆಲ್ಲದಿಂದಲೊರ್ಬೊರ್ಬರಂ |
ಹರಗಿರಿಜೆಯರ್ ಬೇಗದಿಂದಿಡುತಿರಲ್ ನೋಡಿ |
ಹರಿಯಜೇಂದ್ರಾದಿಗಳ್ ಜಯಜಯಧ್ವಾನದಿಂ ನುತಿಸಿದರ್ ಭಕ್ತಿಯಿಂದೆ || ೫೭ ||

ಆ ಸಮಯದೊಳ್ ಸಕಲವಾದ್ಯನಿರ್ಘೋಷದಿಂ |
ಗಾಸಿಯಾದುವು ದಿಗ್ಗಜಂ ಮುತ್ತಿನಕ್ಷತೆಯ |
ಸೂಸಿದರ್ ಶಿವಶಿವೆಯರೊರ್ಬೊರ್ಬರುತ್ತಮಾಂಗದಮೇಲೆ ಲೀಲೆಯಿಂದೆ ||
ಈ ಸದಾಶಿವನೆಡೆಗೆ ಗಿರಿರಾಜನೈದಿ ಸುವಿ |
ಲಾಸದಿಂ ಮಗಳ ಮುಂದಿಟ್ಟು ಧಾರೆಯನೆರೆಯ |
ಲಾ ಸಮೀಪದ ಮನೆಯೊಳೀಶ್ವರಂ ಶಿವೆಗೂಡಿ ಹಸೆಯೊಳಗೆ ಮಂಡಿಸಿದನು || ೫೮ ||

ಇಂತು ಶಿವಶಿವೆಯರಿರೆ ಹರಿಸುಜೇಂದ್ರಾದಿ ಸುರ |
ಸಂತತಿಗಳಿರದೆ ಸೇಸೆಯನಿಕ್ಕಿ ಪೋಪ ಸಮ |
ನಂತರದೊಳೀಶ್ವರಂ ನಾನಾಗಣಂಗಳಂ ಪಙ್ಕ್ತಿಯೊಳ್ ಕೂಡಿಕೊಂಡು ||
ಸಂತಸದೊಳಗಜೆಯೊಡಗೂಡಿ ಭೂಮವನುಂಡು |
ಪಿಂತೆ ಪರಿಮಳಗಂಧ ಪುಷ್ಪ ತಾಂಬೂಲಂಗ |
ಳಿಂ ತಣಿಸಿ ಕಳುಹಿದಂ ಬಂದ ನಿಬ್ಬಣಿಗರಂ ಗಿರಿರಾಜನಳ್ತಿಯಿಂದೆ || ೫೯ ||

೧ ಶೋಭನನುನುರೆ (ಹು, ಮ.) ೨-೨ ತೆ ೯೦ | ಕರ (ಹು, ಮ.)





ಬಳಿಕ ನಾಲ್ಕನೆಯ ದಿವಸದ ರಾತ್ರಿಯೊಳ್ ನಾಗ |
ವಲಿಯು ಮೆರೆದಂ ನವರತ್ನ ನಿರ್ಮಿತವಾದ |
ಪೊಳೆವ ಪಲ್ಲಕ್ಕಿಯೊಳ್ ಗಿರಿಜಾತೆಸಹಿತೆ ನಾನಾವೇದಘೋಷದಿಂದೆ ||
ಥಳಥಳಿಪ ಪಂಜುಗಳ ಮೊತ್ತದಿಂ ವಂದಿಗಳ |
ಕಳಕಳಧ್ವನಿಯಿಂದೆ ವಾದ್ಯನಿರ್ಘೋಷದಿಂ |
ಜಲಜಭವ ಹರಿ ಸುರೇಂದ್ರಾದಿಗಳ್ ಕಾಲ್ನಡೆಯೊಳೈದಿ ಬರಲುತ್ಸವದೊಳು || ೬೦ ||

ಇಂತೆಸೆವ ವಿಭವದಿಂದುತ್ಸವಮೆರಲಾಗ ಹಿಮ |
ವಂತನಳಿಯಂಗಿತ್ತನುಡುಗೊರೆಯನೋವಿಸಿದ |
ಅಂತಾಗ ಮುಯ್ಯನೀ[1]ಶಂಗೆ ಗಿರಿಜೆಗೆ ಹರಿಯಜೇಂದ್ರರುಂ ಸುರನಿಕರಮುಂ ||
ಮುಂತೆ ಕಾಣ್ಕೆಯನಿಕ್ಕಿ ನಮಿಸಿದರ್ ಸಕಲಸುರ[2] |
ಸಂತತಿಗಳಾಮ್ನಾಯಮಂತ್ರದಿಂ ನುತಿಸಿದರ್ |
ಸಂತಸದೆ ನಂದಿಮುಖ್ಯರ್ ನಲಿದರಭವನ ವಿವಾಹೋತ್ಸವವನೀಕ್ಷಿಸಿ * || ೬೧ ||

ನಾಗವಲಿಯಾದ ಮರುದಿವಸ ನಗ[3]ರಾಜನನು |
ರಾಗದಿಂ ಬಂದ ನಿಬ್ಬಣಕೆ ಮೃಷ್ಟಾನ್ನದಾ |
ಬೋಗಣೆಯನ್ನೈದೆ ಮಾಡಿಸಿ ದಿವ್ಯಗಂಧತಾಂಬೂಲದಿಂ ತುಷ್ಟಿವಡಿಸಿ ||
ಮೇಗೆ ವಸ್ತ್ರಾಭರಣದುಡುಗೊರೆಗಳಂ ಕೊಟ್ಟು |
ಬೇಗದಿಂ ಕೋಟಿಯೋಜನದಿಂದೆ ಚಚ್ಚೌಕ |
ಮಾಗಿರ್ಪ ಪರವಸಂತೋತ್ಸವದ ದೊಡ್ಡ ಖೇಡಾಕುಳಿಯನಾಗಿಸಿದನು || ೬೨ ||

ಫಳಫಳಿಪ ಶಶಿಕಾಂತಶಿಲೆಯ ನೆಲಗಟ್ಟುಗಳ |
ಸಳವಡಿಸಿ ಮುತ್ತು ಮಾಣಿಕ ವಜ್ರ ವೈಡೂರ್ಯ |
ಲಲಿತಗೋಮೇಧಿಕ ಸುಪದ್ಮರಾಗಾದಿ ನಾನಾರತ್ನನಿಚಯದಿಂದೆ |
ಹೊಳೆಹೊಳೆವ ಸೋಪಾನಪಙ್ಕ್ತಿ[4]ಯಿಂ ವಿಸ್ತರಿಸಿ |
ಒಳಗೆ ಕುಂಕುಮಮಲಯಜಾತಮಿಶ್ರಾಂಬುವಂ |
ನೆಲೆಗೊಳಿಸಿ ಕಸ್ತೂರಿಮಲಯಜೋದಕದ ಕೊಪ್ಪರಿಗೆಯಂ ಬಳಸಿಟ್ಟರು || ೬೩ ||

---

೧ ಶಿವಂ (ಶಿ, ಗೋ. ಪ.) ೨ ಮುನಿ (ಶಿ, ಗೋ.) ೩ ಗಿರಿ (ಶಿ, ಹು, ಮ.) ೪ ಯುಂ (ಹು, ಮ.) * ಈ ಪದ್ಯವು ಕೈಬರೆಹದ ಹು. ಮ. ಈ ಪ್ರತಿಗಳಲ್ಲಿಯೂ ಎಲ್ಲ ಮುದ್ರಿತ ಪ್ರತಿಗಳಲ್ಲಿಯೂ ಇಲ್ಲ.

ಭೋಜನಾನಂತರದೊಳಜ ಹರೀಂದ್ರಾದಿ ಜನ |
ರಾಜಿಯಂ ಕೂಡಿಕೊಂಡತುಳವೈಭವದಿಂದೆ |
ರಾಜಶೇಖರನಗಜೆಗೂಡಿ ನಡೆತಂದು ಖೇಡಾಕುಳಿಯ ಬಳಿಯೊಳಿರ್ದ ||
ರಾಜಿಸುವ ಮಂಟಪದೊಳಮಳಮಣಿಖಚಿತಮಪ್ಪಗ |
ರಾಜಪೀಠವನೇರಿ[೧]ಯೋಲಗದೊಳಿರೆ ಶೈಲ |
ರಾಜನಂದನೆ ಮಲಯಜೋದಕದ ಪೊಟ್ಟಣದೊಳಿಟ್ಟಳಾ ಶಂಕರನನು || ೬೪ ||

ಇಟ್ಟನೀಶಂ ತನ್ನ ಕೆಯ್ಯ ಕತ್ತುರಿನೀರ |
ಪೊಟ್ಟಣದೊಳಗಜೆಯಂ ದೇವಿ ಹೊರಕೆಯ್ಯಿಂದೆ |
ತಟ್ಟ ಮರಳೀಶ್ವರನನಿಡೆ ನಗುತೆ ಹರಿಯಜೇಂದ್ರಾದಿಗಳ ಮನವನರಿದು ||
ಕೊಟ್ಟಂ ನಿರೂಪಮಂ ಜಲಕೇಳಿಗಭವನವ |
ರಿಟ್ಟಣಿಸಿ ಹರುಷದಿಂ ತಮತಮಗೆ ಹಸ್ತಕಳ |
ವಟ್ಟ ಜಲಯಂತ್ರ ಪೊನ್ನಂಡೆಗಳ ಗಡಣದಿಂ ನೀರಾಟಕನುವಾದರು || ೬೫ ||

ಹರಿವಿಧಿಗಳುಂ ಸುರೇಂದ್ರಾದಿದಿಕ್ಪಾಲಕರ |
ನೆರವಿ ಚಂದ್ರಾರ್ಕ ವಸು ಮನುಮುಖ್ಯಪುರುಷರುಂ |
ಸಿರಿ ಸರಸ್ವತಿ ಶಚಿ ಸ್ವಾಹೆ ರೋಹಿಣಿಮುಖ್ಯಮಾದ ತ[೨]ತ್ಪತ್ನೀಕುಳಂ ||
ವರರಂಭೆಯೂರ್ವಸಿ ತಿಲೋತ್ತಮೆ ಸುಕೇಶಿ ಸೌಂ |
ದರಿಮುಖ್ಯಸುರವರಾಂಗನೆಯರುಂ ನಡೆತಂದು |
ಹರುಷದಿಂದೆಸೆವ ಖೇಡಾಕುಳಿಯನೊಳಪೊಕ್ಕರೇನೆಂಬೆನಚ್ಚರಿಯನು || ೬೬ ||

ಪೊಕ್ಕು ಕುಂಕುಮವಿಮಿಶ್ರಾಂಬುವಂ ಮಾನಿನಿಯ |
ರೆಕ್ಕತುಳದಿಂದೊರ್ಬರೊರ್ಬರಂಗಂಗಳೊಳ್ |
ಮಿಕ್ಕು ಸೂಸಲ್ ಸಿಡಿದ ಜಲಕಣಾವಳಿಸುವರ ಮುಖಪಂಕಜಂಗಳೊಳಗೆ ||
ಮುಕ್ಕುರಿಕೆ ಶಶಿಯೊಡನೆ ಪಂಕಜಂಗಳ್ ಖಾತಿ |
ಮಿಕ್ಕು ಕಿಡಿಗಳನುಗುಳ್ವುವೆನಲ್ ಸುರರ ನೋ |
ಟಕ್ಕೆ ಸೋಜಿಗಮನಾಗಿಸಿತಂಬುಕೇಳಿಯೊಳ್ ಪೇಳ್ವುದೇನಚ್ಚರಿಯನು || ೬೭ ||

---

೧ ನಡರಿ (ಶಿ, ಗೋ, ಹು, ಮ.) ೨ ಸ (ಶಿ.)

ಕೆಲಕೆಲರ್ ತಜ್ಜಲವನೀಸುತುಂ ಸೂಸುತುಂ |
ಕೆಲಕೆಲರ್ ಕುಚಭರದೆ ಬಳ್ಕುತುಂ ತಳ್ಕುತುಂ |
ಕೆಲಕೆಲರ್ ಬೆಂಬತ್ತಿ ಬಯ್ಯುತುಂ ಪೊಯ್ಯುತುಂ ಪೊನ್ನಂಡೆ[೧]ಗಳನೆ ಪಿಡಿದು ||
ಕೆಲಕೆಲರ್ ಪೊಯ್ಲ ಪೊರೆಗಳೆವುತುಂ ಕಳೆವುತುಂ |
ಕೆಲಕೆಲರ್ ಪಂಥಗಳ ನುಡಿವುತುಂ ಜಡಿವುತುಂ |
ಕೆಲಕೆಲರ್ ಸೊಗಸಿನಿಂದಾಡುತುಂ ಪಾಡುತುಂ ಕಣ್ಗೆಸೆದರಾ ಕೊಳದೊಳು || ೬೮ ||

ಪೊರವಾರ ಭಾರಂಗಳಂ ಕುಚಭರಂಗಳಂ |
ತುರುಬುಗಳ ಬಿಣ್ಪುಗಳನಡಿಯಿಡುವ ಕಾಲದೊಳ್ |
ಪೊರಲಾರದಳಲಿ ಬಳಲ್ದು ತಳೋದರಿಯರಾ ಸರಸೀಜಲಂಗಳೊಳಗೆ ||
ತರಿಸಂದವೆಲ್ಲವುಂ ಲಘುವಾಗೆ ನೆಗೆದು ಧುಡು |
ಮಿರಿದೀಸಿದರ್ ಜಡಸ್ನೇಹದಿಂದೀ ಲೋಕ |
ಮಿರಿಯಲ್ ಗುರುತ್ವಕೆ ಲಘುತ್ವಮಪ್ಪುದನುದಾಹರಿಪಂತದೆನೆಂಬೆನು || ೬೯ ||

ಅಲ್ಲಲ್ಲಿ ಸತಿಯರಿಂತಾಡುತಿರೆ ಸಿರಿ ತನ್ನ |
ವಲ್ಲಭಾಂಗಕೆ ಕುಂಕುಮಾಂಬುವಂ ಲೀಲೆಯಿಂ |
ಚೆಲ್ಲೆ ಮಿಂಚಂದಳೆವ ಕಾರ್ಮುಗಿಲಿನಂದಮಂ ಧರಿಸಿ ಹರಿ ಮರಳಿ ತನ್ನ ||
ನಲ್ಲಳಂ ಮಲಯಜಾಂಬುವಿನಿಂ ಮುಸುಂಕೆ ರಸ |
ದಲ್ಲಿ ಲೇಪಿಸಿದ ಪೊಂಬುತ್ತಳಿಯ ಮಾಳ್ಕೆಯೊಳ್ |
ತಲ್ಲಲಿಸಿಯೊಪ್ಪಿದಳ್ ನೋಳ್ಪವರ ಕಣ್ಗಳ್ಗದೇನೆಂಬೆನಚ್ಚರಿಯನು || ೭೦ ||

ಒಂದೆಸೆಯೊಳಬ್ಜಜಂ ಸರಸತಿಯ ಮೇಲೆ ತಾ |
ನೊಂದೆಸೆಯಿಂ ಕತ್ತುರಿಯ ಜಲಂಗಳಂ ನಿಸಿ ಬಳಸಿ |
ಸಂದೆಸೆಯಲೆಸೆವ ಸಸಿಗಲ್ಲ ಪುತ್ತಳಿಯೊಲಾ ವಾಣಿ ಜಕ್ಕೊಳವಿಯೊಳಗೆ ||
ಒಂದಿಸಿದ ಮಲಯಜಜಲಂ ಬೊಮ್ಮಸಂಗದೊಳ್ |
ಸಂದಿಸಿದೊಡದನಾ ಸ್ವಯಂಭುವಂ ತಿಳಿಜೊನ್ನ |
ದಿಂದೆ ಪೂಸಲ್ಪಟ್ಟ ಕನಕಾದ್ರಿಯಂತೆ ಕಣ್ಗಳ್ಗದೆಂ ರಾಜಿಸಿದನೋ || ೭೧ ||

---

೧ ಪೊನ್ನಂಡಿ (ಹು.)

ಬೇರೊಂದು ದಿಕ್ಕಿನೊಳ್ ಕೋಟಿಗಳ್ ಮೂವತ್ತು |
ಮೂರೊಂದುಗೂಡಿದ ಸುರಸ್ತ್ರೀಯರುಂ ಬರಲ್ |
ಸಾರೆಂದು ಪೌಲೋಮಿ ಸುರಪ[೧]ನಂ ಕರೆದಳರಸರಿ[೨] ಸರಸಕೆನಗೆ ಮೆಯ್ಯ ||
ತೋ[೩]ರೆಂದು ಕೆನ್ನೀರ್ಗಳಂ ಪೊಯ್ವುತಿರೆ ಪತ್ತು |
ನೂರೆಂದೆನಿಪ ಲೆಕ್ಕದಕ್ಷಿಯಂ ಪಡೆದ ನಗೆ[೪] |
ಗಾರೆಂದ[೫]ರಸಿಮಿಷತೆಯಂ ಪಡೆದನಮರಿಯರ್ ಕೈವೊಯ್ದು ನಗುತಿರಲ್ಕೆ || ೭೨ ||

ಮರಳಿ ಸುರಪಂ ನಗುತ್ತೂರ್ವಶಿಯ ಮೇಲೆ ಕ |
ತ್ತುರಿಯ ಮಲಯಜದ ಕುಂಕುಮಧಾರೆಗಳನೊತ್ತು |
ತಿರೆ ಪಡೆದುದಾಕೆಯಂಗಂ ನೀಲ ಮಾಣಿಕ್ಯ ಮೌಕ್ತಿಕದ ಹಾರಂಗಳಂ ||
ಪೊರೆಯೊಳಿದಸೀಕ್ಷಿಪ ಶಚೀಮನಂ ಪಡೆದುದಾ |
ಸ್ಮರರಾಜನೆಚ್ಚ ಕನ್ನೈದಿಲೆಯ ಕೆಂಪುದಾ |
ವರೆಯ ಮಲ್ಲಿಗೆಯರಳ ಸರಳ ಬಾಯ್ಧಾರೆಗಳನಿಂತಿದು ವಿಚಿತ್ರಮೆನಲು || ೭೩ ||

ಮತ್ತಮೂರ್ವಶಿಯ ಮೊಗಕಾ ಸುರಪನಕ್ಕರಿಂ |
ಕತ್ತುರಿಯನೀರನಾ ಜೀರ್ಕೊಳವಿಯಿಂದೆ ತೆಗ |
ದೊತ್ತಲಾಕೆಯ ಮೊಗಂ ಕಳಕಳಿಸಿ ಹೊಳೆಹೊಳೆದು ಸೊಂಪಾದುದಾ ಕ್ಷಣದೊಳು ||
ಇತ್ತಲ್ ಶಚೀಮುಖಂ ಸರ್ವರುಂ ನೋಡಲಾ |
ಕತ್ತುರಿಯ ಬಣ್ಣಮಾದುದು ಚಿತ್ರಮಿದು ಜಗದೊ |
ಳಿತ್ತ ಮೆಟ್ಟಿತ್ತ ಚಪ್ಪಟೆಯೆಂಬ ನಾಣ್ನುಡಿಯನಭಿನಯಿಸುವಂತಾದುದು || ೭೪ ||

ಸಂಗಳಿಸಿ ನೀರ್ಹೊಯ್ವ ಕಾಲದೊಳ್ ಕರದ ಪೊಸ |
ಪೊಂಗಳಸಗಳ್ ಜಗುಳೆ ನೀರನೀಸುತ್ತಿರ್ಪ |
ಹೆಂಗಳ ಕುಚಂಗಳ್ಗೆ ಕೈನೀಡುವರ್ ಪೊನ್ನ ಜೀರ್ಕೊಳವಿಗಳ್ ಬೀಳಲು ||
ಮುಂಗಡೆಯೊಳೀಸಾಡುವಬಲೆಯರ ನಳಿತೋಳ್ಗ |
ಳಂಗವಿಸಿ ಪಿಡಿದೊಡನೆ ನಗಿಸುವರ್ ತಮ್ಮೊಳಗೆ |
ಹಿಂಗಪಾ ಮುಗ್ಧೆಯರ್ ತಜ್ಜಲಕ್ರೀಡೆಯೊಳ್ ಪೇಳ್ವುದೇನಚ್ಚರಿಯನು ❁ || ೭೫ ||

---

೧ ಪುರುಷ (ಶಿ, ಗೋ.) ೨ ಸಾ (ಶಿ, ಗೋ.) ೩ ರೊ (ಶಿ, ತು.) ೪ ಪದನಾಗೆ (ತು.)
೫ ನಾರಂದು (ತು.) ; ಗಾರಂದು (ಪ.) ❁ ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ನಾಕದಬಲೆಯರನಾಲಿಂಗಿಸುವ ಬಯಕೆಯೊಳ್ |
ನೇಕಕಾಲಂ ಭ್ರಮೆಯೊಳಿರ್ದೊಡಂ ದೊರಕದಿ |
ರ್ಪಾಕಸ್ಮಿಕಂ ಬಂದ ಜಲಕೇಳಿಯೊಳಗಿದರೊಳಾದ ಕಿಂಚಿದ್ಯೋಗವೇ ||
ನಾಕೆಂದು ಕೆಲಕೆಲರ್ ನೀರ್ಜೊಂಪ್ಪು ಸಂದಣಿಯ |
ನೂಕುನೂಂಕಿನ ಸೋಂಕಿನೊಳ್ ಸುಖಂ ಬಡೆದರಿಂ |
ದೋಕುಳಿಯ ನೆವದೊಳಪ್ಪಿದರೆಂಬ ನಾಣ್ನುಡಿಯನಭಿನಯಿಸಿ ತೋರುವಂತೆ
|| ೭೬ ||

ನಡುಕವಾದುದು ಮೆಯ್ಗೆ ರೋಮಾಂಚಮಾಯ್ತು ಕಂ |
ಗಡೆ ಕೆಂಪನಾಳ್ದುದಧರಂ ಬೆಳರ್ತುದು ನಡೆಗೆ |
ತಡಬಡಿಸಿದುದು ಗುಜ್ಜುಗೊಂಡುದಾ ಪೆರ್ಮೊಲೆಗಳುಗುರ್ವೊಯಿಲ್ಗಳುಂ ಮೆರೆದುವು
ನುಡಿ ಬಿನ್ನನಾದುವು ಮುಖಂ ವಿವರ್ಣಿಸಿದುವೊ |
ಳ್ಮುಡಿ ಬಿಚ್ಚಿದುವು ತಿಲಕಲೇಪಂಗಳಳಿದುವಿದು |
ಜಡಕೇಳಿಯೋ ನಿಶ್ಚಯಂ ಸುರತಕೇಳಿಯೋಯೆಂಬಂತೆ ಕಣ್ಗೆಸೆದರು || ೭೭ ||

ಪಲತೆರದೊಳಬಲೆಯರ್ ಸಲಿಲಕೇಳಿಯೊಳಿರಲ್ |
ಮಲಯಜದ ಕುಂಕುಮದ ಕತ್ತುರಿಯ ಪರಿಮಳಂ |
ಗಳ ತಂಪು ತಣ್ಗೊಳದ ತಂಪು ತಣ್ಣೆಲರ ತಂಪಾ ನವ್ಯಯೌವನೆಯರ ||
ಪೊಳೆವ ಮುಖಶಶಿರುಚಿಯೊಳೊಸರ್ವಿಂದುಕಾಂತನಿ |
ರ್ಮಳಿನಸೋಪಾನನೀರ್ಗಳ ತಂಪು ಕೂಡಲಾ |
ಲಲನೆಯರ ಮೆಯ್ಗೆ ತಣ್ಣಸಮೇರಿರೆ ಮೆಲ್ಲನಾ ಕೊಳದಿಂದೆ ಪೊರಮಟ್ಟರು (*) || ೭೮ ||

ಗುರುಕುಚಂಗಳೊಳೆಸೆವ ಸ್ವಸ್ತಿಕಶಿಕರಂಗಳೊ |
ಳ್ಗೊರಳಬಂಬಲೊಳಿಳಿವ ಜಲಧಾರೆಗಳ್ ಮೆಯ್ಯೊ |
ಳೊರೆವಂತೆ ಸಾಂದು ಪತ್ತಿದ ಸೀರೆಗಳ್ ಹುಹೂಯೆಂಬ ನಡುಕದ ನುಡಿಗಳು ||
ಪಿರಿದು ಪಿರ್ಪಿಸಿದಾಂತ ಪ್ರೈಸನಿರ್ ಮೌನಸಮುಂ |
ಧರಿಸಿದ ಸುಕಾಂಚಿಕಿಂಕಿಣಿ ಕಂಕಣಾಂಘ್ರಿನೂ |
ಪುರಸಂಚಯಂಗಳಿವು ಜೇಡೊಂದು ಚೆಲ್ವಿನಿಂ ತಡಿಗಡರ್ದರ್ ಸತಿಯರು || ೭೯ ||

೧-೧ ಉರ್ವೊಯಿಲ್ಗಳುಂ (ಶಿ.) ೨ ಭಿನ್ನನಾ (ಪ.) ; ಭಿನ್ನಮಾ (ಹು, ಮ.) ೩ ಜಾ (ಶಿ, ಗೊ.) (*) ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ಇಂತು ನಾನಾವಿನೋದಂಗಳ ವಿಲಾಸಂಗ |
ಳಂ ತಳೆದು ಹರಿಮುಖ್ಯಮಾದ ದಿವಿಜರ್ ತಮ್ಮ |
ಕಾಂತೆಯರ್ವೆರಸಿ ತಡೆಗಡರ್ದು ವರವಸ್ತ್ರಾನುಲೇಪನಾಭರಣಂಗಳ ||
ತಂತಮ್ಮ ಕಾಯದೊಳ್ ಸಂಗೊಳಿಸಿಯನಿಬರುಂ |
ಸಂತಸದೆ ಕರ್ಪೂರತಾಂಬೂಲಮಂ[೧] ಕೊಂಡು |
ಕಂತುಹರನೊಡ್ಡೋಲಗಕ್ಕೆ ನಡೆತಂದು ನಿಂದಿರ್ದ ಸಮನಂತರದೊಳು || ೮೦ ||

ಓಲಗದಿನೆದ್ದು ಜಗದೀಶ್ವರಂ ಗಿರಿರಾಜ |
ನಾಲಯಕೆ ಬರೆ ಮಹಾಭಕ್ತಿಯಿಂದಳಿಯಂಗೆ |
ಮೇಲಾದ ವಸ್ತುಗಳ ಕಾಣ್ಕೆಗಳನಿತ್ತು ನಿಜನಂದನೆಗೆ ಬಳುವಳಿಯನು ||
ಮೇಳದಾಳಿಯರ ಜಯೆವಿಜಯೆ ಮುಂತಾದ ಸಖಿ |
ಜಾಲಮನನರ್ಘ್ಯವಸ್ತ್ರಾಭರಣಮಂ ಕೊಟ್ಟು |
ಲೀಲೆಯಿಂ ಸಕಲಗಣವೃಂದಕುಡುಗೊರೆಯಿತ್ತು ಬೀಳ್ಕೊಟ್ಟನಗರಾಜನು || ೮೧ ||

ಕಳುಪಲೈತಂದ ಗಿರಿರಾಜಮೇನಕೆಯರಂ |
[೨]ಕಳುಪಿದಂ ಶಿವ[೨]ನುಚಿತವಚನರಚನೆಗಳಿಂದೆ |
ಬಳಿಕವರ್ ಗಿರಿಜೆಯಡಿಗಳ್ಗೆರಗಿ ತಾಯೆ ನಿನ್ನಂ ಪೆತ್ತ ಸುಕೃತಕುಜದ ||
ಫಲದಿಂದಲೀಶ್ವರಂ ನಮ್ಮ ಮನೆಗೈತಂದ |
ನುಳಿದವರನೆಲ್ಲರಂ ಕಂಡೆವಾವಿಂತಪ್ಪ |
ಸುಲಭತೆಯ ಮರೆಯಬೇಡೆಂದಂಬಕಾಂಬುವಂ ತುಂಬಿ ಕಳುಹಿಸಿಕೊಂಡರು || ೮೨ ||

ಗಿರಿಜೆಸಹಿತೀಶ್ವರಂ ವೃಷಪತಿಯನೇರಲಂ |
ದಿರದೆ ಹರಿಯಜಸುರೇಂದ್ರಾದಿಗಳ್ ತಂತಮ್ಮ |
ವರವಾಹನಂಗಳುಮನೇರಿ ಶಿವನೊಡನೆ ಬರುತಿರಲಾಗ ಸಂಭ್ರಮದೊಳು ||
ಮೊರೆವ ಬಹುವಿಧವಾದ್ಯಘೋಷದಿಂ ಕೈಲಾಸ |
ಪುರವ ಗುಡಿತೋರಣದ ವಿಭವದಿಂದೈದಿ ಸುರ |
ತರುಣಿಯರ ಮಂಗಳಾರತಿಗಳಂ ನೋಡಿ ಮನ್ನಿಸುತೆ ಮನೆಯಂ ಪೊಕ್ಕನು || ೮೩ ||

೧ ಗಳ (ಶಿ.) ೨-೨ ದೊಲಿದು ಕಳುಪಿದ (ಹು.)

ನಂದೀಶಮೊದಲಾದ ಸಕಲಗಣನಿಕರವಾ |
ನಂದಿಸುತ್ತಿರಲಭವನಗಜೆಸಹವಾಗಿ ನಿಜ |
ಮಂದಿರದೊಳೆಸೆವ ಸಿಂಹಾಸನದ ಮೇಲೆ ಕುಳ್ಳಿರ್ದ್ದ ಹರಿಯಜಮುಖ್ಯರ ||
ಛಂದದಿಂದುಡುಗೊರೆಯನಿತ್ತು ಬೀಳ್ಕೊಟ್ಟು ಮುನಿ |
ವೃಂದಮಂ ಕರುಣದಿಂ ಕಳುಪಿ ಕೈಲಾಸದೊಳ್ |
ಮಂದಾಕಿನೀಧರಂ ಪರಮಸಂತೋಷದಿಂದಿರುತಿರ್ದನುತ್ಸವದೊಳು || ೮೪ ||

ನನ್ನಿಯಿಂ[೧]ದಾತ್ಮಶಕ್ತಿಯನೇ[೧] ಬಹಿಷ್ಕರಿಸಿ |
ತನ್ನ ನಿಜಸುಖವ[೨]ನಿದಿರಿಟ್ಟು ಸಂಸೃತಿಗಳಿಗೆ[೨] |
ಭಿನ್ನವಾಗದೆ ತೋರಿ ನಾಡಾಡಿಗಳ ತೆರದೆ ನಾನಾವಿಲಾಸದಿಂದೆ ||
ಸನ್ನುತಮಹಾವಿಭವದಿಂದೆ ಭೃಂಗಿಯ ನಾಟ್ಯ |
ದುನ್ನತಿಯ ನೋಡಿ ಕರುಣಾಕಟಾಕ್ಷದೊಳ್ಳೈದೆ |
ಮನ್ನಿಸುತೆ ಪಂಪಾವಿರೂಪಾಕ್ಷನೊಪ್ಪಿದಂ ಕೈಲಾಸದರಮನೆಯೊಳು || ೮೫ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೮೬ ||

ಅಂತು ಸಂಧಿ ೩೭ಕ್ಕಂ ಪದಗಳು ೧೮೬೭ಕ್ಕಂ ಮಂಗಳಮಹಾಶ್ರೀ

೧-೧ ದೇವಮಾತೃಶಕ್ತಿಯನೆ (ಶ, ಗೋ.) ೨-೨ ತಾನಿದಿರಿಟ್ಟು ಸಂಸೃತಗ (ಹು.)

ಮೂವತ್ತೆಂಟನೆಯ ಸಂಧಿ

ಸೂಚನೆ

ಶಿವನ ವೀರ್ಯವನಗ್ನಿ ಧರಿಸಲದರಿಂದೊಗೆದು[1] |
ಶಿವಕುಮಾರಂ ಸಕಲಸುರಸೈನ್ಯಪತಿಯಾಗಿ |
ಶಿವನಾಜ್ಞೆಯಿಂ ತಾರಕಾಸುರನ ಮೇಲಿರದೆ ದಂಡೆತ್ತಿ ನಡೆತಂದನು ||

ಹೊರಗಾಣದಿಹ ನೇಹಗಲಹದೆ ಮೊಗಂಗೊಡದ |
ಗಿರಿಸುತೆಯ ಬೆಂಗಡೆಗೆ ಸೊಪ್ಪುಳಾಗದ ತೆರದೊ |
ಳಿರದೆ ಬಳಿಸಂದು ತನ್ನಯನಾಬ್ಜಮಂ ನಿಜಾಂಜಲಿಯಿಂದೆ ಬಾಸಣಿಸಲು |
ಗಿರಿಜೆ ನಿಜಸಖಿಯೆಂದು ಬೇಡಿತಂ ನಿನ್ನಾಣೆ |
ಯರವರಸದೀವೆನುಗಿಯೆನಲಾಣೆಗೊಳಗೆನಿಸಿ |
ಕರವನುಗಿ[2]ದಾಲಿಂಗನಂಗೆಯ್ವ[3] ಪಂಪಾವಿರೂಪಾಕ್ಷ ಸಲಹೆಮ್ಮನು || ೧ ||

ಆಲಿಸೈ ಸಿದ್ಧರಾಮೇಶ ಕೈಲಾಸದೊಳ್ |
ಭಾಳಲೋಚನನಗಜೆಯೊಡನೆ ಮುದದಿಂ ಸುರತ |
ಕೇಳಿಯಿಂದಿರುತಿರಲ್ಕತ್ತಲಿಂದ್ರಾದಿ ನಿರ್ಜರರಜನ ಪೊರೆಗೆ ಬಂದು ||
ಪೇಳೆ ತಾರಕನುರುಬೆಯಂ ಕೇಳ್ದು ಚಿಂತೆಯಂ |
ತಾಳಿ ದಿವಿಜರ್ವೆರಸಿ ಹರಿಯೆಡೆಗೆ ಬಂದು ಕಂ |
ಡಾಲೋಚನಂಗೈದರಸುರನಟ್ಟುಳಿಗೇನುಪಾಯಮಂ ಕಾಣ್ಬೆವೆಂದು || ೨ ||

ಗಿರಿಜೆಯೊಡನಭವನಿರ್ಪಂ ಸುರತಕೇಳಿಯೊಳ್ |
ತರುಣನಾಕೆಯ ಗರ್ಭದೊಳ್ ಜನಿಸಿದೊಡೆ ತಮ್ಮ |
ನಿರಗೊಡಂ ತಾರಕಾಸುರನಿಂದೆ ನೂರ್ಮಡಿಯುಪದ್ರವಂ ಮಾಳ್ಪನದನು ||
ಪರಿಹರಿ[4]ಸಿ ಬೇರೊಂದುಪಾಯದಿಂದೀಶ್ವರನ |
ವರವೀರ್ಯದಿಂದೆ ಸುತನಪ್ಪಂತೆ ಮಾಳ್ಪೆವೆಂ |
ದಿರದೆ ನಿರ್ಧರಿಸಿ ಶಿವನಂ ಕುರಿತು ಹರಿಮುಖ್ಯರೆಸಗಿದರ್ ಘನತಪವನು || ೩ ||

೧ ದ (ಶಿ.) ೨ ಳಿ (ಪು, ಪ.) ೩ ಗೈದ (ಮ.) ೪ ಸ ಬೇಕೊಂದು (ಪ.)

ಹರನಂದು ಕರುಣದಿಂ ಸುರರೆಡೆಗೆ ನಡೆತಂದು |
ವರವದೇಂ ಬೇಡಿಮೆನೆ ಕಣ್ದೆರೆದು ಕಂಡರಾ |
ಪರಶಿವನ ದಿವ್ಯಮೂರ್ತಿಯುಮನೆದು ಭಯಭರಿತ ಭಕ್ತಿಯಿಂದೆರಗಿ ನಿಂದು ||
ಗಿರಿಸುತೆಯ ಗರ್ಭದೊಳ್ ಸುತರುದಿಸದಂತೆ ತವ |
ವರವೀರ್ಯದಿಂದಲುದ್ಭವಿಸಿ ತಾರಕನ ಸಂ |
ಹರಿಪಂತೆ ಕರುಣಿಸೆನಲಂತೆಗೈದಪೆವೆಂದು ಕೈಲಾಸಮಂ ಪೊಕ್ಕನು || ೪ ||

ಶಿವೆ ಕಂಡು ಕೇಳ್ದಳೆನ್ನೆಡೆಯಿಂದೆ ಪೋಗಿರ್ದ |
ವಿವರವೇನೆನೆ ಶಂಕರಂ ಪೇಳ್ದನಖಿಳಸುರ |
ನಿವಹಮೆನ್ನಂ ಕುರಿತು ತಪಿಸಲ್ಕೆ ಮೆಚ್ಚಿ ವರವೇಂ ಬೇಡಿಮೆಂದೆನಲ್ಕೆ |
ಶಿವೆಯುದರದೊಳ್ ತನುಜರುದಿಸದಂತೀಯೆಸಲ್ |
ತವೆ ಕೊಟ್ಟು ಬಂದೆನೆನಲೆನಗಿಂತು ಗೈದರೇ |
ದಿವಿಜಸಂಕುಲಕೆ ನಿಸ್ಸಂತಾನವಾಗಲೆಂದಗಜಾತೆ ಶಾಪಿಸಿದಳು || ೫ ||

ಇಂತು ದಿವಿಜರ್ಗೆ ಶಾಪವನಿತ್ತು ಶಿವೆ ತನಗೆ |
ಸಂತಾನವಿಲ್ಲದಾಯ್ತೆಂದು ಮನದೊಳ್ ಬಹಳ |
ಚಿಂತೆಯಿಂದಿರುತಿರಲ್ಕಗಜೆಯುಂ ಸಂತಯಿಸಿ ನಾನಾವಿನೋದದಿಂದೆ ||
ಸಂತಸಪಡೆ ನಾನಾಪ್ರಕಾರಸ್ವರೂಪದಿಂ |
ಸಂತತಂ ಕ್ರೀಡಿಸುತ್ತಿರ್ದನಗಜೆಯೊಳಮರ |
ಸಂತತಿಗೆ ಕೊಟ್ಟವರಕಾಗಿ ಗಿರಿಜಾವರಂ ದಿವ್ಯಸಾಹಸ್ರವರ್ಷಂ || ೬ ||

ಪರಮತಪದಿಂದೆ ಮೆಚ್ಚಿಸಿ ವರಂ ಬಡೆದುದಂ |
ಹರನೆಮ್ಮುವಂ ಮರೆದು ಗಿರಿಜೆಯೊಡನಿರ್ದಪಂ |
ದುರುಳ ರಕ್ಕಸನೆಮ್ಮನಿರಲೀಯನೆಮ್ಮಳಿ ದೂರಂ ಪೇಳ್ವರಿಲ್ಲಿನುತ್ತೆ ||
ಸುರಕುಲಂ ಯೋಚಿಸುತ್ತಗ್ನಿಯಂ ಕರೆದು ನೀಂ |
ಹರನೆಡೆಗೆ ಪೋಗಿ ಬಿನ್ನಯಿಸೆನಲ್ ಭೀತಿಯಿಂ |
ಸ್ಮರನುರಿದುದಂ ಕಂಡು ಕಂಡಿಂತು ಪೇಳ್ವರೇ ಪೋಗಲಂಜುವೆನೆಂದನು || ೭ ||

೧ [illegible] (ಶಿ.) ೨ ಬೇಡಂ (ಹು, ಮು.) ೩ ನಿಂದು (ಹು.) ೪ ಕೇಳ್ದ (ಮು.)

ಅಂಜಲೇಕೈ ಶಿವಂ ತಪ್ಪಿಲ್ಲದಾರನುಂ |
ಭಂಜಿಸುವನಲ್ಲ ಕರುಣದೊಳಖಿಳನಿರ್ಜರರ |
ಪುಂಜಮುಂ ಕಾಯಬೇಕೆಂದನಿಬರುಂ ದೈನ್ಯವಚನದಿಂ ಬೇಡಿಕೊಳಲು ||
ಅಂಜುವೆಂ ಸರ್ವಥಾ ನಾನೆನಲ್ ಕೇಳ್ವೆ ಧ |
ನಂಜಯನೆ ನಿನಗಾದ ಸುಖದುಃಖವೆಮಗೆ ಮೃ |
ತ್ಯುಂಜಯನ ಪೊರೆಗೆ ಪೋಗೆನುತೆ ನಂಬುಗೆಯಿತ್ತು ಕಳುಪಿದರ್ ಸಕಲಸುರರು || ೮ ||

ಬಂದನಾ ಪಾವಕಂ ಸುರರ ನಂಬುಗೆವಿಡಿದು |
ಮಂದರಾಚಲದೊಳೀಶಂ ತುಹಿನಗಿರಿರಾಜ |
ನಂದನೆಯ ಕೂಟದಿಂದಿರ್ಪ ಸೆಜ್ಜೆಯ ಮನೆಗೆ ಪಾರಿವದ ಪಕ್ಷಿಯಾಗಿ ||
ನಿಂದು ಜಾಳಂಧರದೆ ನೋಡೆ ಗಿರಿಶಂ ಲಜ್ಜೆ |
ಯಿಂದೆ ಸುರತವನುಳಿದು ಬೇಗಲಾ ಪಕ್ಕಿಯಂ |
ತಂದದರ ವದನದೊಳ್ ತನ್ನ ರೇತಸ್ಸನಿಂಬಿಟ್ಟನದನೇನೆಂಬೆನು || ೯ ||

ಶಿವನ ವೀರ್ಯವನಗ್ನಿ ಧರಿಸಿ ಬರಲಾಗ ಸುರ |
ನಿವಹಕಾದುದು ಪುರುಷಗರ್ಭಂಗಳಾ ಕ್ಷಣಂ |
ತವೆ ವಿಾಸೆಗಡ್ಡಂಗಳುದುರ್ದುವಾ ಮುಖಮಂಡಲಂಗಳುಂ ಬೆಳ್ಪಾದುವು ||
ನವೆದರೀಪರಿ ದಿವ್ಯಸಾಹಸ್ರವರ್ಷಮುಂ |
ಹವಿಯನುರೆ ಕೇಳ್ದರೀ ಪುರುಷಗರ್ಭಂ ಪೋಪ |
ವಿವರಮೇನೆನೆ ಶಂಭುವಂ ಕೇಳ್ವೆನೆಂದವಂ ಮಾಡಿದಂ ಘನತಪವನು || ೧೦ ||

ಪರಶಿವಂ ಮೆಚ್ಚಿ ಪಾವಕನೆಡೆಗೆ ನಡೆತಂದು |
ವರವದೇಂ ಬೇಡೆನಲ್ ಕಣ್ದೆರೆದು ನೋಡಿ ಶಂ |
ಕರ ನಿನ್ನ ವೀರ್ಯಮಂ ತಾಂ ಧರಿಸಿದುದರಿಂದೆ ಸಕಲವೃಂದಾರಕರ್ಗೆ ||
ಪುರಷಗರ್ಭಂಗಳಾದುವು ಕರುಣದಿಂದದಂ |
ಪರಿಹರಿಸಬೇಳ್ಪುದೆನೆ ಮೇರುವಿನ ಪೊರೆಯೊಳಿಹ |
ಶರವಣದ ಗಂಗೆಯೊಳಗಿರಿಸೆಂದು ಹರನಗ್ನಿಗೊರೆದು ನಿರವಯನಾದನು || ೧೧ ||

ಇತ್ತಲೀ ಪಾವಕಂ ಶರವಣಕೆ ನಡೆತಂದು |
ಚಿತ್ರಜಾರಾತಿಯ ನಿರೂಪದಿಂ ಧರಿಸಿದ ಮ |
ಹತ್ತಾದ ವೀರ್ಯಮಂ ತದ್ಗಂಗೆಯೊಳ್ ಬಿಡಲ್ ಸಕಲದೇವವ್ರಾತಕೆ ||
ಪೊತ್ತ ಗರ್ಭಂಗಳಿರದಡಗಿ ಪೋದುವು ಬಳಿ |
ಕ್ಕತ್ತಲಾ ಗಂಗೆಯೊಳಗಿದ್ದ ರೇತಸ್ಸು ಕುದಿ |
ಪ್ರತ್ತಿರದೆ ಪೊರಮಟ್ಟು ತತ್ತಟದೊಳುಜ್ವಲಿಸುತಿರ್ದುದದನೇನೆಂಬೆನು || ೧೨ ||

ಗಂಗಾನದೀತಟಕೆ ನಡೆತಪ್ಪ ಷಟ್ಕೃತ್ತಿ |
ಕಾಂಗನೆಯರೀ ಮಹಾಜ್ವಾಲೆಯೆತ್ತಣದೆಂದು |
ಹಿಂಗದೀ ವೀರ್ಯದೆಡೆಗೈತಂದು ನೋಡುತಿರಲಾ ಸ್ತ್ರೀಯರಂ ಕಾಣುತೆ ||
ಪೊಂಗುತೊಡನೊಡನೆ ಘನಗಾಢದಿಂದವರ ಗ |
ರ್ಭಂಗಳಂ ಬಿಡದೆ ಭೇದಿಸಿ ಬಲಿಯಲಾಕ್ಷಣಂ |
ಕಂಗೆಟ್ಟು ಕಾಂತೆಯರ್ ಶಿಶುಗಳಂ ಪಡೆದಿರಿಸಿ ಪೋದರತಿವೇಗದಿಂದೆ || ೧೩ ||

ಮಿಕ್ಕ ರೇತಸ್ಸು ಮಿಗೆ ಗಗನಾಂತಪರ್ಯಂತ |
ಮುಕ್ಕಿ ಸುರಗಿರಿಯ ಶಿಖರಮನೊಡೆದುಕೊಂಡು ನೆಲ |
ಕೊಕ್ಕ ಛಟಕ್ಕೈದುಕೂಪಂ ಬೇರೆಬೇರೆ ಶತಯೋಜನದ ಘಾತದಿಂದೆ ||
ಸಕ್ಕಸಮನಾದುವಾ ಹರವೀರ್ಯಬಿಂದುಗಳ್ |
ಕಿಕ್ಕಿರಿದು ತುಂಬಿದುವು ಪಂಚಕೂಪಂಗಳೊಳ್ |
ಚೊಕ್ಕವಾಗಿರ್ದ ರಸಮೈದು ಬಣ್ಣಂಗಳಿಂ ಕಣ್ಗೊಳಿಪುದೇವೇಳ್ವೆನು || ೧೪ ||

ಆ ಸಿದ್ಧರಸದ ಸೋಂಕಿಂದೆ ಸುರಗಿರಿತರುಲ |
ತಾಸಮುದಯಂ ಪಕ್ಷಿಮೃಗಮಾದಿಯಾದವುಂ |
ಶ್ರೀಸಾದ ಕನಕಮಯತನುವಾದುವಾ ಮನುಜರಮರತ್ವಮಂ ಪಡೆದರು ||
ಆ ಸಮಯದೊಳ್ ಶಂಭು ಗಿರಿಜೆಯೊಡನೆಂದಂ ವಿ |
ಲಾಸದಿಂ ನಿನಗೆ ಸುತರಾಗಿಹರ್ ನೋಳ್ಪೆವೆಂ |
ದೋಸರಿಸದೈತಂದು ಚೀರುತಿಹ ಬಾಲರಂ ಕಂಡರ್ ಮಹೋತ್ಸವದೊಳು || ೧೫ ||

ಕಾಣುತಗಜಾತೆಯಾ ಬಾಲರಂ ತೆಗೆದೆತ್ತಿ |
ಮಾಣದಮರ್ದಪ್ಪಲಾ ಭರಕೆ ಶಿಶುಗಳ ತನು |
ಶ್ರೇ[1]ಣಿಯೊಂದಾಗಲಾಮೊಗಗಳಂ ಮುಂಡಾಡಿ ತೊರೆದ ಮೊಲೆಯೂಡುತಿರಲು ||
ಪ್ರಾಣವೈತಂದಂತೆ ಹರುಷದಿಂ ಸಕಲಗೀ |
ರ್ವಾಣತತಿ ಪುಷ್ಪವರ್ಷಂಗಳಂ ಕರೆಯಲಾ |
ಸ್ಥಾಣುವದ್ರಿಜೆಕುಮಾರರ್ವೆರಸಿ ಕೈಲಾಸಮಂ ಪೊಕ್ಕಸುತ್ಸವದೊಳು || ೧೬ ||

ಗಿರಿಜೆ ಕುವರನನೆತ್ತಿ ಮುದ್ದಾಡುತಿರಲಾಗ |
ಗಿರಿಗಳಂ ಕಿತ್ತು ಚೆಂಡಾಡಲಪ್ಪಳಿಸುವಂ |
ಶರಧಿಯೊಳ್ ನೀರಾಟವಾಡಲುಜ್ಜುಗಿಸುವಂ ಸಿಡಿಲ ತೊಡಲಂಗೈಸುವಂ |
ತರಣಿ ಚಂದ್ರಮರ ಬಿಂಬಂಗಳಂ ಕಾಣುತುಂ |
ಹರುಷದಿಂ ಮಿಂಚುಬುಳುವೆಂದು ಕೈನೀಡುವಂ |
ಧರೆ ನಭಂಗಳನುಗಿದು ತಾಟಡಕೆಯೆಂದಾಡಲೆಳಸುವಂ ಸುಕುಮಾರನು || ೧೭ ||

ಇಂತಪ್ಪ ಸುಕುಮಾರನಂ ನೋಡಿ ಗಿರಿಜೆ ಸುಖ |
ಸಂತಸದೊಳೋಲಾಡುತಿರಲಾಗ ಗೀರ್ವಾಣ |
ಸಂತತಿಗಳಂ ಕೂಡಿಕೊಂಡು ಹರಿಯಜರಿರದೆ ಕೈಲಾಸಕೈದಿ ಶಿವನ ||
ಮುಂತಡ್ಡಬಿದ್ದೆದ್ದು ಕೈಮುಗಿದು ನಿಂದು ಕಾ |
ಮಾಂತಕನೆ ಕರುಣಿಪುದು ತಾರಕಾಸುರನಿಂದ |
ನಂತಕಾಲಂ ನೊಂದೆವಿನ್ನಾದೊಡಂ ಕಾಯಬೇಕೆಂದು ಮೊರೆಯಿಟ್ಟರು || ೧೮ ||

ಆಲಿಸಿದನಭವನಮರರ ಮೊರೆಯನೆಮ್ಮ ನಿಜ |
ಬಾಲನಂ[2] ಕಳುಪಿ ತಾರಕನಡಗನ[3]ಖಿಳ ಭೂ |
ತಾಳಿ[3]ಗಣಕೌತಣವನಿಕ್ಕಿಸುವೆನಂಜಬೇಡೆನುತವರ್ಗಭಯವಿತ್ತು |
ಲೀಲೆಯಿಂ ಕುವರಂಗೆ ಯುವರಾಜಪಟ್ಟಮಂ |
ಭಾಳಲೋಚನನಿರದೆ ಕಟ್ಟಿ ಸಂತಸದೆ ಸುರ |
ಜಾಲಮಂ ಕರೆದು ಕಾಣ್ಕೆಯನಿತ್ತು ನಮಿಸೆಂದು ನಿರವಿಸಿದನಾ ಕ್ಷಣದೊಳು || ೧೯ ||

೧ ಶ್ರೋ (ಶಿ.) ೨ ಕನ (ಹು.) ೩-೩ ತುಳ ಬೇ | ತಾಳ (ಹು.)

ವಾಣೀಧವಾಚ್ಯುತರ್ ಮೊದಲಾದ ನಿರ್ಜರ |
ಶ್ರೇಣಿ ನಡೆತಂದು ಕಾಣ್ಕೆಯನಿತ್ತು ಮೈಯಿಕ್ಕಿ |
ಪ್ರಾಣದತಿಭಯಭರಿತಭಕ್ತಿಯಿಂ ಕುವರನಂ ಕೆಯ್ಯೆತ್ತಿ ಕೊಂಡಾಡುತೆ ||
ಹೂಣಿಸುತ್ತಿಂದು ತಾರಕನಡಗ ನಿನ್ನ ನಿಜ |
ಬಾಣಕಾಹುತಿಯ ಕೊಟ್ಟೆಮ್ಮನುಳಿಪೆನುತೆ ಗೀ |
ರ್ವಾಣತತಿ ಬಿನ್ನೈಸೆ ಕೇಳ್ದು ಶಿವನಾಜ್ಞೆಯಿಂ[೧] ಷಣ್ಮುಖಂ ಬೀಳ್ಕೊಂಡನು || ೨೦ ||

ಧಳಧಳಂ ಧಳಧಳಂಧಳವೆಂಬ ಶಬ್ದ ಸ |
ಮ್ಮಿಳಿತಕೋಣಪ್ರಸಾರದಿನುಣ್ಮಿದತಿರವಂ |
ನಳಿನಜಾಂಡವನೊಡೆದು ಬಹಿರಾವರಣಮನಾವರಿಸಲಾ ನೀರೊಳಿರ್ದ ||
ಜಲಚರಂ ಬೆದರಿ ಪರಿದಾಡಲ್ ತದಂಡಮೆಡ |
ಬಲಕೊಲಿವುತಿರ್ದುದಭವನ ಸುತಂ ಸಂಗರಕೆ |
ಮುಳಿದು ನಡೆಗೊಂಡ ಸಮಯದೊಳಮರರುರೆ ಕೋಟಿದುಂದುಭಿಗಳಂ ಪೊಯ್ಸಲು
|| ೨೧ ||

ಮೇಲೆ ಸಂಗರದ ಸನ್ನಾಹದಿಂ ಷಣ್ಮುಖಂ |
ಪೇಳಲೇಂ ನೆಡೆವಿಡದೆ ತೆರಳಿತು ಸಮಸ್ತಸುರ |
ಜಾಲ ತಂತಮ್ಮ ವಾಹನ ಶಸ್ತ್ರ ಕರಿ ತುರಗ ರಥ ಪತ್ತಿ[೨]ಗಳ ಗಡಣದೆ ||
ತೂಳುವರೆಗಳ ರವಂ ತುಂಬಿತಾಶೆಗಳಂ ಮ |
ರಾಳವಾಹನ ಗರುಡಗಮನರಿಕ್ಕೆಲದೊಳಿರೆ |
ನೀಲಕಂಠಾರೂಢನಾಗಿ ಸುರಗಣಸಹಿತೆ ಷಣ್ಮುಖಂ ನಡೆಗೊಂಡನು || ೨೨ ||

ಬಿರುದನುರೆ ಸಂಬಾಳಿಸಿತು ಮುಂದೆ ಪಾಠಕರ |
ನೆರವಿ ಶ್ರುತಿವಿತತಿ ಜಯಜಯವೆನುತೆ ಸಕಲನಿ |
ರ್ಜರಜನಂ ಕೈಯೆತ್ತಿ ಪೊಗಳಿದುದು ನಿಸ್ಸಾಳಕೋಟಿಗಳ್ ನೆರೆ ಮೊಳಗಲು ||
ಸುರಪ ಶಿಖಿ ಯಮ ನಿರುತಿ ವರುಣ ವಾಯು ಕುಬೇರ |
ಹರರೆಂಟುದಿಕ್ಕಿನೊಳ್ ಕೈವಾರಿಸಲ್ ಗಣೌ |
ಘ್ಯರಮುಘೇಯುಘೋಷಿಸೆ ವಿಲಾಸದಿಂ ಸೇನಾನಿ ಸಂಗರಕೆ ನಡೆಗೊಂಡನು || ೨೩ ||

೧ ಯೊಳ್ (ಹು.) ೨ ಪಂಕ್ತಿ (ಶಿ, ಗೋ.)

ಎತ್ತೆತ್ತಲುಂ ತೀವಿ ನಡೆವ ಕರಿ ತುರಗ ರಥ |
ಪತ್ತಿಗಳ ಸಂದಣಿಗಳಂ ನೋಡಿ ತೂಗಿ ತ |
ನ್ನತ್ತವಾಂಗವನೆಲ್ಲಿಯಡಗಿರ್ದರೋ ದಿವಿಜರಿನಿತುದಿನವಿ ಬಲವನು ||
ತತ್ತೊಡರ್ದರಿದೋಡಿಸುವೊಡಸುರಂಗೆ ವಶವೆ ಶಿವ |
ನಿತ್ತನಿಂದೆಮಗೆ ವಿಜಯವನೆನುತೆ ಸಂತಸಂ |
ಬೆತ್ತು ದಿವಿಜೇಂದ್ರನೈತಂದನಾನೆಯನೇರಿ ದಿಗಧಿಪರ್ ಬಳಸಿ ಬರಲು || ೨೪ ||

ಸುರರಭವಜಂಗೆ ಸೇನಾಧಿಪತ್ಯವನಿತ್ತು |
ನಿರುತಮೈತಂದರೆಂದೆಂಬ ವಾರ್ತೆಯನೊರ್ವ |
ಚರನೈದಿ ದಾನವೇಶಂಗೆ ಪೇಳಲ್ ಕೇಳ್ದು ರೋಷತಾಮ್ರಾಕ್ಷನಾಗಿ ||
ಉರಿ ಸೂಸೆ ವದನದೊಳ್ ಕುಡಿಮಿಸೆ ಕುಣಿದಾಡೆ |
ಕರವಾಳನುರೆ ಜಡಿದು ಪಹಿಲದೊಳ್ ನಿಂದು ಸಂ |
ಗರಕೆ ಬರಹೇಳು ಸುರರಂ ಬೇಗನುತ್ತೆ ತಾರಕನಾಗಳೈತಂದನು || ೨೫ ||

ತಾರಕಂ ವೈರಿಸೇನಾಚಕ್ರವಾರ್ಧಿಯು |
ತ್ತಾರಕಂ ಸಂತತಂ ಸುರಲೋಕಶೋಕವಿ |
ಸ್ತಾರಕಂ ನಿಜಮಹಾಸೈನ್ಯಲೋಚನಮಧ್ಯತಾರಕಂ ಮಸಗಿ ಕೂಡೆ ||
ತಾರಕಾಂಚನರತ್ನಮಯವರೂಥವನೇರಿ |
ತಾರಕಾಧ್ವದೊಳಾರಿ ಬೊಬ್ಬಿರಿದು ಶಚಿಯ ಭ |
ರ್ತಾರಕಾದ್ಯರ ಮೇಲೆ ಮುಳಿದು ಸಂಗರಕೆ ಸನ್ನಾಹದಿಂ ಬರುತಿರ್ದನು || ೨೬ ||

ಸುರಪಮೃಗಶಾರ್ದೂಲ ಹರಿಮೇಘಪವನ ಯಮ |
ಶರಧಿವಾಡಬ ನಿರುತಿವನದಾವ ವರುಣಭೂ |
ಧರವಜ್ರ ವಾಯುರವಿರಾಹು ವಿತ್ತಪಪಕ್ಷಿಸಾಳ್ವ ತನ್ಮಿತ್ರಸರ್ಪ ||
ಗರುಡ ಕಮಲಾಕ್ಷಪದ್ಮಜಮುಖ್ಯದಿವಿಜಕುಲ |
ಶರಭಭೇರುಂಡ ಜಯಜಯಯೆಂದು ಮುಂದುಲಿವ |
ಬಿರುದುಪಾಠಕರ ಗಡಬಡೆ ಮಸಗೆ ತಾರಕಂ ಬರುತಿರ್ದನುತ್ಸವದೊಳು || ೨೭ ||

---

೧ ಡಿ (ಮು.) ೨-೨ ನಾನೆಯನೇರಿ ಜಯರವದೆ (ಹು.)

ಚಂಬಕ ಪಟಹ ಪಣಹ ಡಿಂಡಿಮ ಡಮರು ಢಕ್ಕೆ |
ತಂಬಟೆ ಕರಡೆ ಡೌಡೆ ರಾಯಗಿಡಿಬಿಡಿ ಕಹಳೆ |
ಕಂಬು ಭೇರಿ ಮೃದಂಗ ಬೊಂಬುಳಿ ರವಂಗಳಿಂದಂಬುಜಭವಾಂಡಮದಿರೆ ||
ಮುಂಬರಿವ ಕುದುರೆಗಳ ಮೊತ್ತದಿಂ ಬಹುಮದ |
ಸ್ತಂಭೇರತತಿಯ ಸುತ್ತಂ ಪರಿವ ತೇರ್ಗಳೊ |
ತ್ತಂಬರದೆ ತಾರಕಾಸುರನಾಹವಕೆ ನಡೆವ ಸಂಭ್ರಮವನೇನೆಂಬೆನು || ೨೮ ||

ಇಟ್ಟಣಿಸಿ ಶತಮಾಯ ವೃಷಪರ್ವ ಶಬಲ ಜಗ |
ಜಟ್ಟಿ ಗಜಶಿರ ಶಂಖುಕರ್ಣ ದುಂದುಭಿ ಸುರಘ |
ರಟ್ಟೆ ವಿದ್ರಾವಣ ವಿರೂಪಾಕ್ಷ ಸ್ವರ್ಭಾನು ವಾಮನ ವಿಧಾತೃ ಕಪಿಲ ||
ಕಟ್ಟಾಳ್ತನದ ಶುಂಭ ರಣಜಯಮಹಾನಾಭ |
ದಿಟ್ಟನು ಹಯಗ್ರೀವ ಶಂಖುಶಿರರೆನಿಸುವೊಡ |
ಹುಟ್ಟಿದರ ತಂಡವೆಡಬಲದೊಳೈತರುತಿರಲ್ ತಾರಕಂ ಬರುತಿರ್ದನು || ೨೯ ||

ಅಡಿಯುಡುಗದುರುಬಿದುದು ದಾನವೇಶ್ವರನ ಸಂ |
ಗಡಮಹಾಪದ್ಮಪಲ್ಲಿರ್ದಾನೆ ಕುದುರೆ ತೇರ್ |
ನಡೆತಪ್ಪ ಕಾಲಾಳ ಲೆಕ್ಕಮಂ ಕಮಲಜಂ ಬಲ್ಲನೋ ಮೇಣರಿಯನೋ ||
ನುಡಿಯಲಳವೇ ವಾದ್ಯರಭಸಂ ಲಯಾಂಬುದದ |
ಸಿಡಿಲ ನಿನದಕ್ಕೆ ತಾಯ್ಗರುವೆನಿಸಿತೆನೆ ರಣಕೆ |
ನಡೆದುದಿಟ್ಟಣಿಸಿ ತಾರಕನ ಪಡೆ ಪಡೆದುದಚ್ಚರಿಯನನಿಮಿಷರ ಕಣ್ಗೆ || ೩೦ ||

ಕರಿ ತುರಗ ರಥ ಪದಾತಿಗೆ ಧರಣಿಮಂಡಲಂ |
ಮೊರೆವ ವಾದ್ಯದ ನಿನಾದಕೆ ದಿಶಾಮಂಡಲಂ |
ಪರಿಪರಿಯ ಛತ್ರ ಚಾಮರ ಪತಾಕೆಗೆ ಗಗನಮಂಡಲಂ ನೆರೆಯವೆನಲು[೩] ||
ಭರವಸದೆ ನಡೆದುದಸುರನ ಸೇನೆ ತಂತಮ್ಮ |
ಮೊರೆಗಳಂ ಬಳಸಿ ಕುಲಗಿರಿ ಜರಿಯೆ ಫಣಿಕುಲೇ |
ಶ್ವರನ ತಲೆ[೨] ಬಿರಿಯೆ ದಿಕ್ಕರಿಗಳೆರ್ದೆವೊಡೆಯೆ ಕೂರ್ಮನ ಖರ್ಪರಂ ನೆಗ್ಗಲು
|| ೩೧ ||

೧ ಸು (ಷ.)　೨ ರ (ಶಿ.)　೩ ದಿರಲು (ಹು.)

ನಿಲಿಸಿದಂ ನಾಡೆ ಪದ್ಮಾಯು[1]ತವ್ಯೂಹಮಂ |
ದಳದೊಳಗ್ಗಳಿಯುರಿಸಳಿಸಳಾಗೆ ದನುಜಕುಲ |
ತಿಲಕಸನುಜರ್ ಕೇಸರಂಗಳಾಗಲ್ ಮಧ್ಯಕರ್ಣಿಕೆಗೆ ಶುಂಭಾಸುರಂ ||
ನಿಲೆ ಪರಾಕ್ರಮಿ ತಾರಕಾಸುರಂ ತನ್ಮಹಾ |
ಬಲದ ಕಾವಲ್ಗೆ ತಾನೊತ್ತಾಗಿ ನಿಲೆ ರಣಕೆ |
ಮಲೆತು ನಿಂದಂ ವಜ್ರನಾಭನೆಂದೆಂಬ ಸೇನಾನಿ ಸನ್ನದ್ಧನಾಗಿ || ೩೨ ||

ಮುಂದುಗಡೆಯೊಳ್ ರಣವಿಜೃಂಭನಂ ಕುಂಭನಂ |
ಹಿಂದೆ ರಿಪುಬಲಜಯಪ್ರಬಲನಂ ಶಬಲನಂ |
ತಂದು ಸುರಕುಲಧೂಮಕೇತುವಂ ಕೇತುವಂ ನಿಲಿಸಿದಂ ತತ್‌ಕ್ಷಣದೊಳು |
ಕುಂದದಾದಿತ್ಯಹರಿಶರಭನಂ ಶರಭನಂ |
ನಿಂದಿರಿಸಿ ಬಲದ ಸನ್ನಾಹಮಂ ವ್ಯೂಹಮಂ |
ನಂದದಿಂ ನೋಡಿ ಕೊಂಡಾಡಿದಂ ನೀಡಿದಂ ವೀಳೆಯವನತಿಬಲರ್ಗೆ || ೩೩ ||

ಎಡೆವರಿಯದಿಟ್ಟಣಿಸಿ ತೋರಿದುದು ವಿೂರಿದುದು |
ನಡೆದು ಪೊಯ್ದಾಡಲುದ್ಯೋಗಿಸಿತು ರಾಗಿಸಿತು |
ಬಿಡದೆ ಖತಿ ಮಸಗಿ ಪೊಯ್ದಾಡಿದುದು ಮಾಡಿದುದು ಭಾಷೆಯಂ ದಿವಿಜಭಟರ ||
ಘಡ[2]ಯೆನುತೆ ತಡೆದು ತಲೆಯೊತ್ತಿದುದು ಮುತ್ತಿದುದು |
ಕಡುಗಿ ಕಾಳಗಕೆ[3] ಮೂದಲಿಸಿದುದು ಚಲಿಸಿದುದು |
ಗೆಡೆಗೊಂಡು ಹತ್ತಿರಕೆ ಸೇರಿದುದು ಪೋ[4]ರಿದುದು ಚೂಳಿ ದಾನವರ ಪಡೆಯು
|| ೩೪ ||

ತಲೆಪಟ್ಟುದುಭಯಸೈನಿಕಕೆ ಚೂಳಿಯೊಳಾಜಿ |
ಜಲಧಿ ಜಲಧಿಯನೊತ್ತುವಂತೆ ಘನಘೋಷದಿಂ |
ನಲಿದು ಬಿಲ್ಲವರೊಡನೆ ಬಿಲ್ಲವರ್ ಹರಿಗೆಯವರೊಡನೆ ಹರಿಗೆಯ ವೀರರು |
ಅಳವಿಗೊಟ್ಟರ್ ಸಬಳದವರೊಡನೆ ಸಬಳದವ |
ರುಲಿದು ನೂಂಕಿತು ಹಯಕೆ ಹಯಮಾನೆಗಾನೆಯು |
ಚ್ಚಳಿಪ ತೇರ್ಗಂ ತೇರ್ಗಳಾಂತಾಂತು ಸಮಮೆನಲ್ ಕಾದುತಿರ್ದುದು ಕ್ರಮದೊಳು
|| ೩೫ ||

---
೧ ಯು (ಶಿ, ಗೋ, ಕೋ) ೨ ಪಡೆ (ಶಿ, ಗೋ, ಹು.) ೩ ಳೆ (ಶಿ.) ೪ ಪಾ (ಶಿ.)

ಸೆವರಿರಿವರ್ ಪೊಯ್ವರುಬ್ಬುವರ್ ಕೊಬ್ಬುವರ್ |
ಮುಸಕದಿಂ ಸಮರಂಗಕುರುಬುವರ್ ತರುಬುವರ್ |
ಪೊಸಪರಿಯ ಬಿರುದನುರೆ ಪೆಸರಿಪರ್ ಪಸರಿಪರ್ ತಂತಮ್ಮ ಬೀರಂಗಳ ||
ಕುಸಮಸೆಯನುಳಿದು ಕೈದುಡುಕುವರ್ ಮಿಡುಕುವರ್ |
ಕುಪಿರಿದರಿವಡಗನಿರದೊಟ್ಟುವರ್ ಮೆಟ್ಟುವರ್ |
ಬಸೆನೆಣನನುರುಬಿ ಮೂದಲಿಸುವರ್ ನಿಲಿಸುವರ್ ಪಟುತನವನುಭಯಭಟರು || ೩೬ ||

ಹರಿಗೆಗಳ್ ಮೇಘದೊಡ್ಡಣೆ ಕತ್ತಿಗಳ ತೊಳಪ |
ದಿರವೆ ಝೊಂಚುವ ಮಿಂಚು ಕವಿದೆಸೆವ ಸಾಯಕದ |
ಸರಿಯೆ ಸರಿವಳೆ ಭುಜಂಬೊಯ್ದು ಬೊಬ್ಬಿರಿದಿಡುವ ಶಕ್ತಿಯುಬ್ಬರವೆ ಸಿಡಿಲು ||
ಭರದೆ ಪೊಯ್ದಾಡಲಸಿಯುಸಿಯಿಂದೊಗೆದ ಕಿಡಿಯೆ |
ಹರಿಗೋಪಮಾ ವೀರರಸವೆ ಪರಿವೊನಲಾಗೆ |
ವರುಷವಂತಿರ್ಪ ರಣವುಂ ಕಂಡು ವೀರರ ಮನಶ್ಚಾತಕಂ ನಲಿದುದು || ೩೭ ||

ಬೆರಸಿ ಪೊಯ್ದಾಡಿದುದು ಚೂಳಿಯೊಳ್ ತಮತಮಗೆ |
ಶರ ಶಕ್ತಿ ಶಲ್ಲಿಹ ಕೃಪಾಣ ತೋಮರ ಚಕ್ರ |
ಪರಶು ಮುಸಲ ಮುಸುಂಡಿ ಗದೆ ಪಿಂಡಿವಾಳ ಮೊದಲಾಗಿರ್ದ ಕೈದುಗಳೊಳು ||
ಕರಚಮತ್ಕಾರ ಲಾಘವ ಲವಣಿ ಪಯ ಪಾಡು |
ಮುರಿಪು ಪೈಲಾಳಿ ಲಾಗುಲವಣಿ ಲಕ್ಷ್ಯಂಗಳಿಂ |
ಘುರದೊಳೀರಂ ತೋರಿ ವಿಾರುತತಿಬಲದಲ್ಲ ನಾನಾಪ್ರಹಾ[3]ರದಿಂದೆ || ೩೮ ||

ಕಡಿವಡೆದ ತೋಳ್ಗಳಿಂ ಸಿಡಿದ ತಲೆಯೋಡ್ಗಳಿಂ |
ಮುಡಿದ ವಾರಣದಿಂದೆ ಕರುಳ ತೋರಣದಿಂದೆ |
ಕಡಿದ ರಥರಾಜಿಯಿಂ ಹರಿದ ಬಹುವಾಜಿಯಿಂ ಸೆರೆಗಳಿಂ ನರಗಳಿಂದೆ ||
ಬಿಡೆಕುಣಿವ ಮುಂಡದಿಂ ಬೊಬ್ಬಿಡುವ ರುಂಡದಿಂ |
ಬಿಡುಮುಡಿಯ ಜೊಂಡಿನಿಂ ನಡು ತೊಡೆಯ ತುಂಡಿನಿಂ |
ಪೊಡೆಗೆಡೆದ ಬೀಳ್ವರಿಂ ನೆತ್ತರಿನೊಳಾಳ್ವರಿಂ ರಣಧರಣಿ ಕಣ್ಗೆಸೆದುದು || ೩೯ ||

೧ ಜರಾಪ (ಹು, ಮು.) ೨ ಪ (ಶಿ.) ೩ ಕಾ (ಮ.) ೪ ಸೀಳ್ಗಳಿಂ (ಮ.)
೫ ಯೊ (ಮ.)

ಚೂಣಿ ಪೊಯ್ದಾಡಿ ಮಡಿಯಲ್ಕೆ ಸುರನಾಯಕರ್ |
ಬಾಣಾಸನದೊಳಂಬ ಪೂಡಿ ಕೆಲಬಲದೊ[೧]ಳೆ |
ಕ್ಷೋಣಿ[೧]ದೈತ್ಯರ ಮಹಾಸೇನೆ ನಡೆತರೆ ನಾಡೆ[೨] ಸಮರಸನ್ನಾಹದಿಂದೆ ||
ಕಾಣಬರ್ಪುದು ಸುರೇಂದ್ರನ ಬಲ್ಮೆಯಂ ಮಹಾ |
ತ್ರಾಣನಲ್ಲಾ ಕಂಡು ಮುನ್ನರಿವೆವೆಂದು ಗೀ |
ರ್ವಾಣಭಟರಂ ಪಚಾರಿಸಿ ವಜ್ರನಾಭನುರುಬಿದನೊಡನೆ ಬೊಬ್ಬಿರಿವುತೆ || ೪೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೧ ||

ಅಂತು ಸಂಧಿ ೩೮ ಕ್ಕಂ ಪದಗಳು ೧೫೦೮ ಕ್ಕಂ ಮಂಗಳಮಹಾಶ್ರೀ

೧-೧ ೪। ಕ್ಷೀಣ (ಪ.) ; ೪। ಕ್ಷೂಣ (ಹು, ಮ.) ೨ ಕೂಡೆ (ಹು, ಮ.)

ಮೂವತ್ತೊಂಬತ್ತನೆಯ ಸಂಧಿ

ಸೂಚನೆ

ಹರಿ ವಜ್ರನಾಭನಂ ಹರಿಸಲ್ ಮಹಾನಾಭ |
ನಿರದಾಗ ಹರಿಯನತಿಪರಿಭವಿಸೆ ಕಾಣುತುಂ |
ಹರಕುಮಾರಂ ತಾರಕಾಸುರನ ಸೇನೆಯಂ ಬರಿಕೈದನುಗ್ರದಿಂದೆ ||

ಹರಿಹರಿಯ ಹಗೆಗೆಳೆಯುನಂ ಹರಿಯೊಳೊಂದಿರ್ದ |
ಪರಕಮಲಪರ್ಯಾಯುಮಂ ತದ್ವಿರೋಧಿಯಾ |
ಕರಧೃತಾಯುಧಭೇದಮಂ ಹಸ್ತದೊಳ್ ತಳೆದು ಶಿವರಿಪುವನೇರಿದವನ ||
ತರಣಿಪುಯ್ಯನ ಮೆರೆವ ಪರ್ಯಾಯದಾತ್ಮಜನ |
ಶಿರವನರಿದಮಳಪಂಪಾವಿರೂಪಾಕ್ಷ ಘನ |
ಕರುಣದಿಂ ರಕ್ಷಿಪುದು ಭೀಮಾಂಗದಹನನಿಸ್ಸೀಮ ಲೋಕಾಭಿರಾಮಾ || ೧ ||

ಎಲೆ ಸಿದ್ಧರಾಮೇಶ ಕೇಳಿನ್ನು ದನುಜಸಂ |
ಕುಲದೊಳಗ್ಗಳಿಯ ವೀರರೆ ತವಕದಿಂದಲಾ |
ಖಳವಜ್ರನಾಭನಿರದೊತ್ತಾಗಿ ಬರಲಿತ್ತ ಕಾಣುತ್ತಲಾಗ ಸುರರ ||
ಬಲದ ದೊರೆ[೧]ದೊರೆಗಳ್ ಕೋಪದಿಂ ಕೂಡಿ[೧] ನಿಜ |
ಬಲವೆರಸಿ ಸಕಲಸನ್ನಾಹದಿಂದೊದಗಿ ಭುಜ |
ಬಲದಿಂದೆ ನಡೆತಂದು ಸುರಪನಂ ಬಳಸಿದರದೇನೆಂಬೆನಚ್ಚರಿಯನು || ೨ ||

ಕಪಿಮುದಿಂದ್ರನ ಕೆಲಬಲಂಗಳೊಳ್ ದಿಕ್ಪಾಲ |
ನಿವಹಮಾ ಸುರ ಸಿದ್ಧ ವಿದ್ಯಾಧರರ್ ಮುಖ್ಯ |
ದಿವಿಜ[೨]ರಿಟ್ಟಣಿಸಿ ನೂಕಿದರಿಭ ತುರಂಗ ರಥ ಪತ್ತಿಗಳ ಗಡಣದಿಂದೆ[೨] ||
ವಿವಿಧವಾದ್ಯಂಗಳ ನಿನಾದದಿಂದಾರ್ಭಟಿಸಿ |
ತ್ರಿವಿ ಬಸುರನುಗಿ ಕರುಳನಗಿಯೆಸುತ್ತಾಹವ |
ಕ್ಷ್ಮವಗವಿಸಿದುದು ವಜ್ರನಾಭನದಿರೊಳ್ ನಿಂದು ನರಳ್ವೆಳಿಗಳಂ ಕರೆವುತೆ || ೩ ||

೧-೧ ಗಳೆ ಕೋಪದಿಂ ಕೂಡಿ ತಮ್ಮ (ಮ.) ೨-೨ ಭಟರಿಟ್ಟಣಿಸಿ ನೂಂಕಿದರಿಭತುರಂಗರಥ ಪತ್ತಿಗಳ ಗಡಣದಿಂ (ಹು, ಮ.)

ರಣಕೆ ಬಂದವರಮರರಾಜರೋ ಕೂಡೆ ಸಂ |
ದಣಿಸುವವರಷ್ಟದಿಕ್ಪಾಲಕರೊ ಮುಂದೆ ಮಾ |
ರ್ಗಣದ ಮಳೆಗರೆವವರ್ ಸುಭಟರೋ ಚೋದ್ಯಮಿದು ಪಸಿದ ಪೆರ್ಬುಲಿಯ ಬನಕೆ ||
ಸೆಣಸಲೆಂದೆರಳೆವಳಗಂ ಬಂದೊಲಾದುದಿ |
ಕಣೆಯದೊಳ್ಪರಿವಪ್ಪುದೆಂದೆನುತ್ತಸುರ ಕುಲ |
ಮಣಿ ಭುಜಂಬೊಯ್ದಾರಿ[1] ಬೊಬ್ಬಿರಿದು ಬೆರಸಿದಂ ಖಾತಿಯಿಂ ಪರಬಲವನು || ೪ ||

ತೆಗೆಯದಿರಿ ಕೊಂಡ ಹಜ್ಜೆಯ ಬೆನ್ನೊಳಿರ್ಪವಂ |
ಜಗದ ವಲ್ಲಭನ ಸುಕುಮಾರನಲ್ಲಾ[2] ಸಾಕು |
ಬಗಿಯದಿರಿ ದಾನವರ [3]ಸಾಹಸಂಗಳನೆನುತ್ತುಬ್ಬಿ[3] ಬೊಬ್ಬಿರಿದು ಜರಿದು ||
ತೆಗೆದರಿಟ್ಟಣಿಸಿ ಪೊಯ್ ತಿವಿ ಪಿಡಿಸು ಬಸುರ್ಗಳಂ |
ಬಗಿ ಕರುಳನುಗಿ ಮಿದುಳನಗಿ ರಕ್ತವಾರಿಧಾ |
ರೆಗಳನೆರೆ ಭೂತವೇತಾಳರ್ಗೆನುತ್ತೆ ಕವಿದುದು ಸುರಪದಾತಿ ಮಸಗಿ || ೫ ||

ಮುಂದುವರಿದಿರದುರುಬಿ ತ[4]ರುಬಿ ಕಾದಿತು ಖಾತಿ |
ಯಿಂದೆ ನಾನಾದಿಕ್ಕುಗಳೊಳೆ ಬೊಬ್ಬಿರಿವುತ್ತೆ |
ನಿಂದು ಸುರಪಾಗ್ನಿ ಯಮ ನಿರುತಿ ವರುಣಾನಿಲ ಕುಬೇರರೀಶಾನ್ಯರೆಂಬ ||
ಸಂದ ದಿಕ್ಪಾಲಕನಿಕಾಯ ವಸು ತರಣಿಗಳ |
ವೃಂದ ಯಕ್ಷೋರಕ್ಷ ಸಿದ್ಧ ಸಾಧ್ಯೋರಗರ |
ಮಂದಿಯುದನೀಕ್ಷಿಸುತೆ ವಜ್ರನಾಭಂ ಕೋಪದಿಂದಾರಿ ಬೊಬ್ಬಿರುವುತೆ[5] || ೬ ||

ಸರಳ ಮಳೆಗರೆದು ಕೈದೋರಿದಂ ಮೀರಿದಂ |
ಸುರಸುಭಟರಸುಗಳಂ ಸೇದಿದಂ ಕಾದಿದಂ |
ಘುರದೊಳಗೆ ಮಲೆತವರನಟ್ಟಿದಂ ಕುಟ್ಟಿದಂ ಪೆಸರುಳ್ಳ ನಾಯಕರನು ||
ಕರೆಕರೆದು ಮೂದಲಿಸಿ ತಾಗಿದಂ ಕೂಗಿದಂ |
ತುರಗ ಮದಕರಿಗಳಂ [6]ಕೆಡೆಪಿದಂ ಮಡಿಪಿದಂ[6] |
ಭರದಿಂ ವರೂಥಮಂ ರೂ[7]ಥಮಂ ಕೆಡಸಿದಂ ದಾನವಂ ದಿವಿಜಬಲದ || ೭ ||

೧ ಲಿ (ಶಿ, ಗೋ.) ೨ ಕನಲಾ (ಹು, ಮ.) ೩-೩ ಬಲುಸಾಹಸಂಗಳೆನುತುಬ್ಬಿ (ಹು.) ೪ ತು (ಶಿ, ಗೋ.) ೫ ಧಿದನು (ಹು, ಮ.) ೬-೬ ಕೆಡಿಸಿದಂ ಕೆಡಿಸಿದಂ (ಮ.) ೭ ಯೂ (ಹು.)

ಸುರಪತಿಯನೆಚ್ಚನಗ್ನಿಯನೊತ್ತಿದಂ ಯಮನ |
ಭರಮುಸುರೆ ನಿಲಿಸಿದಂ ನೈರುತ್ಯನೊಡಲ ಜ |
ರ್ಜರಿತಮಂ ಮಾಡಿದಂ ವರುಣನಂ ಘಾತಿಸಿದನನಿಲನೊಡಲಂ ಸೀಳ್ದನು ||
ವಿರಥನಂ ಮಾಡಿದಂ ಧನಪತಿಯನೀಶಾನ |
ನುರದೊಳಗೆ ಸೆಕ್ಕಿದಂ¹ ಸರಳ್ಗಳಂ ವಸು ರುದ್ರ |
ತರಣಿಗಳ ಕಾಯಮಂ ನೋಯಿಸಿದನಾಹವದೊಳಸುರ ಸೇನಾನಿಯಂದು || ೮ ||

ಮುರಿದುದೆಮ್ಮಯ ಸೇನೆ ಸಮರದೊಳ್ ಪೊಕ್ಕು ವೈ |
ಗುರುಹ ಕಾಣಿಸಿಕೊಂಬರಂ ಕಾಣೆ²ವಗ್ನಿ ಜನ |
ಬರಿದೆ ಕರೆತಂದೆವಕಟಕಟ ಪುಗುದೆಸೆಯಾವುದೆಮಗೆಂದು ಬಾಯ್ವಿಡುತ್ತೆ ||
ಒರಲ್ವಮರರಂ ನೋಡಿ ನಗುತೆ ನಿಜವಾಹನದ |
ಗರಿಯ ಗಾಳಿಯೊಳೆ ಗಿರಿಕುಲವನಲ್ಲಾಡಿಸುತ್ತೆ³ |
ತರಿಸಂದು ಸೆಣಸಿ⁴ದಂ ಕಲಿವಜ್ರನಾಭನಂ ಕಮಲಾಕ್ಷನಾ ಕ್ಷಣದೊಳು || ೯ ||

ಅದುದೀರ್ವರ್ಗೆ ಸಮರಂಗವಂಬಂಬುಗಳ |
ಬೀದಿವರಿಗಿಂಬಿಲ್ಲವಾಗಸಂ ಬೊಬ್ಬೆಯ ನಿ |
ನಾದಕಾಶಾತಟಂ ಸಾಲದು ಸುಪ⁵ರ್ಣರಥಚಕ್ರಂಗಳೋಡಾಟಕೆ ||
ಮೇದಿನಿಯೆ ನೆರೆಯುದೆನೆ ಸಮಜೋಳಿ ಜೋಕಿಯಿಂ |
ಕಾದಿದರ್ ಬಿಲ್ಲಬಿನ್ನಾಣಿಗಳ್ ನಾನಾವಿ |
ನೋದದಿಂದಸ್ತ್ರ ಪ್ರತ್ಯಸ್ತ್ರ ದಿವ್ಯಾಸ್ತ್ರ ಮಂತ್ರಾಸ್ತ್ರಂಗಳೇಳ್ಗೆಯಿಂದೆ || ೧೦ ||

ಉರಗಬಾಣದೊಳಿಸುವಸವನಾಕಳಂಬಮಂ |
ಗರುಡಾಸ್ತ್ರದಿಂದಿವಂ ಕಡಿದು ಕೆಯ್ವೊಡನೆ ದ |
ಳ್ಳುರಿಯುಂಬಿಸಿಂದೆಸುವನಾ ಶರವನಾ ಖಳಂ ನಂದಿಪಂ ವರುಣಾಸ್ತ್ರದೆ ||
ಮರಳೆ ಗಿರಿಖಗ⁶ದೊಳವನೆಸುವನಾ ಮಾರ್ಗಣವ |
ನರವಿಂದನಾಭನಾ ವಜ್ರಶರದಿಂದೆ ಜ |
ರ್ಜರಿತಮಂ ಮಾಡುವಂ ತೊಡುವಕಡಿವದಟೀರ್ವರಿಗೆ ಸಾಟಿಯಾಯ್ತು ಬಳಿಕ || ೧೧ ||

೧ ಸೇರಿಸಿದ (ಹು.) ೨ ನ (ಹು, ಮ.) ೩ ವ (ಹು.) ೪ ಕೆಣಕಿ (ಪ.)
೫ ವ (ಹು.) ೬ ಶರ (ಪ.)

ಖಳಪತಿಗೆ ದಳಪತಿಯು ನೀನು ತಾಳೆನುತೆ ಕೈ |
ಚಳಕದಿಂ ವೈಷ್ಣವಾಸ್ತ್ರದೊಳಾರ್ದೆಸಲ್ಕವನ |
ತಲೆ ಚಿಗಿದುಪಾಗಸಕೆ ಮುಂಡಮೆಸುತಿರ್ದುದರೆಜಾವಪರಿಯಂತರದೊಳು ||
ಬಳಿಕ ಗರುಡನನಿರದೆ ನೂಂಕೆ ತಾಗಿದುದು ಭುಜ |
ಬಲದರ್ಪದಿಂದೆ ಪುಂಖಾನುಪುಂಖಂಗಳಿಂ |
ಮುಳಿದೆಸುತ್ತಾ ಮಹಾನಾಭನ ಚತುರ್ಬಲಂ ಹರಿಯ ಸಮ್ಮುಖದೊಳಾರ್ದು || ೧೨ ||

ಎತ್ತಲುಂ ಕವಿದೆಸುವ ಖಳಸೇನೆಯುಂ ಕಂಡು |
ಚಿತ್ತಜಪಿತಂ ಮಹಾಕೋಪದಿಂದನಿಬರಂ |
ಕತ್ತರಿಸಿ ಮುಂಬರಿದು ಬರ್ಪುದಂ ಕಂಡಂ ಮಹಾನಾಭನಾ ಕ್ಷಣದೊಳು ||
ಮತ್ತದಂತಿಯ ಕರದ ಕಬ್ಬನುಗಿದವನದಾ |
ರಿತ್ತ ಸಮ್ಮುಖವಾಗೆನುತ್ತೆ ಖಳನೊಡನೆ ಮಸೆ |
ವೆತ್ತ ಶರವೈದರಿಂ ಮೂದಲಿಸಿ ಕಮಲಾಂಬಕನನೆಚ್ಚು ಬೊಬ್ಬಿರಿದನು || ೧೩ ||

ಭರದೊಳಗೆ ವಜ್ರನಾಭನ ಹರಿಬಕಿದಿರಾದ |
ಮುರಿರುಳನಾರೆಲವೊ ನೀ ನಿನ್ನನೇನಾ ಖಳಂ |
ಕರೆಯಲಟ್ಟಿದನೊ ಮೇಣಂತಲ್ಲದಿರಲೆನ್ನ ಸರಿಸದೊಳ್ ಮಾರಾಂಪೆಯಾ ||
ಶಿರವನೀಯದೆ ಪೋಗು ಕಾಯ್ವೆನೆಂದಾ ಖಳನ |
ಶರವನೈದಂಬಿನಿಂ ಕಡಿದು ಪುನರಪಿ ನಾಲ್ಕ |
ಶರದಿಂದಲವನ ರಥ ತುರಗ ಸಾರಥಿ ಕರದ ಚಾಪಂಗಳಂ ಕಡಿದನು || ೧೪ ||

ಚಾಪಮಂ ಕೊಂಡು ಸೂತಾಶ್ವಧ್ವಜಂಗಳಿಂ |
ಚಾಪಲ್ಯಸ್ಯಂದನಮನೇರಿ ಮಚ್ಚರಮನೆ |
ಚ್ಚಾ ಪಂಥಮಂ ಮಗುಳೆ ತೋರೆನುತೆ ನಾಲ್ಕಂಬಿನಿಂ ಹರಿಯ ಬಾಹುಗಳನು ||
ಕೋಪದಿಂದೆಸೆಯೆ ಹರಿನೊಂದನಕಟೆನುತಂತ |
ಕೋಪಮರ್ ದಿಕ್ಪಾಲರೊತ್ತಿದರ್ ತತ್ಸೈನ್ಯ |
ಕೋಪಮಿತಭಟರೆಸುತೆ ಕೈಚಳಕದಿಂದವನ ತೇರ ಸುತ್ತಲ್ ಮುತ್ತಲು || ೧೫ ||

---

೧ ಬಲು (ಹು.) ೨ ಧು (ಹು.) ೩ ದು (ಮ, ಹು.)

ಸುರಪತಿಯ ಚಾಪಮಂ ಕಡಿದು ವಹ್ನಿಯ ತಗರ |
ಬರಿಯನೆಚ್ಚಂತಕನನಟ್ಟಿ ದೈತ್ಯನನಣೆದು |
ವರುಣನೊಡಲೊಳಗರುಣವಾರಿಯಂ ತೋರಿ ವಾಯುವಿಗಾಯಸಂಗಾಣಿಸಿ ||
ಹರಮಿತ್ರನಂ ಪರಾಭವಿಸಿಯಿಶಾನನಗೋ |
ಚರನೆನಿಸಿ ತತ್ಸೈನ್ಯಮಂ ಸವರಿ ಮತ್ತೆಯುಂ |
ಹರಿಯೊಡಲೊಳೇರುಗಾಣಿಸಿ ಮಹಾನಾಭನುರೆ ಬೆಂಕೊಂಡನರಿಬಲವನು || ೧೬ ||

ಓಡಿದರ್ ಸುರರಪ್ಸರರ್ ಕೆಟ್ಟೆವೆಂದು ಮಾ |
ತಾಡಿದರ್ [1]ಯಕ್ಷರಕ್ಷೀಣ[1]ಸಾಧ್ವಸರಾಗಿ |
ನೀಡಿದರ್ ಖಗನಿದಿರೊಳಂಗವಮಂ ಭಂಗವಮಂ ಕಿನ್ನರರ್ ಕೈಕೊಂಡರು ||
ಬೇಡಿದರ್ ಪ್ರಾಣದಾನಮನಖಿಳಗರುಡರುರೆ |
ಕೂಡಿದರ್ ಕಣ್ಗೆಟ್ಟು ಬಾಯ್ಬಿಟ್ಟು ಖತಿಯೊಳೋ |
ಲಾಡಿದರ್ ದಿಕ್ಪಾಲರಿನಿಬರುಂ ಬಂದಭವತನುಜನಂ ಮರೆಗೊಂಡರು || ೧೭ ||

ಬನ್ನದಿಂದಂ ಮಹಾನಾಭನುರುಬೆಗೆ ಮುರಿದು |
ಬೆನ್ನ ಹಿಂದಡಗಿದ ಸಮಸ್ತ ದಿಕ್ಪಾಲರಂ |
ಕೆನ್ನೀರ ಧಾರೆಯಿಂ ನನೆದ ವೈಗಳ ಯಕ್ಷ ಗರುಡ ಗಂಧರ್ವರ್ಕಳ ||
ತಿನ್ನಡಗನುಗಿ ಕರುಳನಗಿಯೆಲುವನೆನುತೆ ಭರ |
ದಿನ್ನಡೆವ ಬರ್ಪಸುರವೀರರಂ ಕಂಡೊಡನೆ |
ಪನ್ನಿರಕ್ಷಯನದಿಂ ಕಿಡಿಸುರಿಯೆ ಕಲ್ಪಾಂತ ಹರನಂತೆ ಗುಹನೆಸೆದನು || ೧೮ ||

ಓಡುವ ಹರೀಂದ್ರಾದಿ ಸಕಲಸುರಸಂತತಿಗೆ |
ನೀಡಿ ನಂಬುಗೆಯುಂ ಸ್ವಹಸ್ತಧೃತ ಚಾಪಮಂ |
ತೀಡಿ ಮಸೆವೆತ್ತ ಕೂರ್ಗಣೆಗಳಂ ಡೊಣೆಗಳಿಂದುಗಿದುಗಿದು ತೆಗೆದೆಸೆಯಲು |
ಆಡಲೇನಖಿಳಖಳರಂಬಿನಂಬುಧಿಯೊಳೋ |
ಲಾಡಿದರ್ ಕೋಡಿದರ್ ಮೂಕಿಡಿದರ್ ಭಯರಸದೊ |
ಳಾಡಿದರು ಮಸೆವೆತ್ತಲುಂ ಸುತ್ತಲುಂ ಪೊತ್ತಲುರಿ ಹರಸುತನ ಬಾಣಂಗಳು || ೧೯ ||

೧.೧ ಹರ್ಯಕ್ಷರಕ್ಷಿ (ಪ.) ೨ ಕೂ (ಶಿ, ಗೋ.) ೩ ಮಾ (ಶಿ.)

ಎಡದೊಳೌಂಕುವ ಕುದುರೆಕಾರರಂ ಬೇಗದೊಳ್ |
ತಡೆಗಡಿದು ಬಲದೊಳೊತ್ತುವ ಗಜಘಟಾಳಿಯಂ |
ಕೆಡಹಿ ಹಿಂದೆಸೆಯೊಳುರುಬುವ ರಥಾರೂಢರಂ ದೆಸೆದೆಸೆಗೆ ಚೆಲ್ಲಬಡಿದು ||
ಬಿಡದೆ ಮುಂದೆಸೆವ ಕಾಲಾಳ್ಗಳಂ ಸಾಲ್ಗಳಂ |
ಪೊಡವಿಯೊಳಗುರುಳಿಸುತ್ತಾ ಮಹಾನಾಭ ಖಲ |
ನೊಡಲೊಳಂಬಂ ತುಂಬಿ ಮತ್ತವನ ಚಾಪಮಂ ಕೋಪದಿಂ ಖಂಡಿಸಿದನು || ೨೦ ||

ಕಾರ್ಮುಕಂ ಕಡಿವಡೆದು ಪೊಡವಿಗುರುಳಲ್ಕವಂ |
ಸೂರ್ಮಡಿ ಪರಾಕ್ರಮದೆ ಹಲಗೆಖಂಡೆಯವನಾಂ |
ತಾರ್ಮೊಗನನಿರಿದು ಕೆಡಪುವೆನೆಂದು ತೇರಿನಿಂ ದುಮ್ಮಿಕ್ಕಿ ಧರಣಿತಳಕೆ ||
ಪೆರ್ಮೆಯಿಂ ಸಮ್ಮುಖದೊಳಾರ್ಭಟಿಸುತ್ತೈತರ್ಪ |
ಕಾರ್ಮುಗಿಲ ಕಾಂತಿಯ ಮಹಾನಾಭನಂ ಕಂಡು |
ಕೂರ್ಮೊನೆಯ ಶರವೆರಡರಿಂ ಗುಹನೆಸಲ್ಕವನ ತಲೆ ಚಿಗಿದುದಾ ಕ್ಷಣದೊಳು
|| ೨೧ ||

ಭೋರೆಂದುವಖಿಳವಾದ್ಯಂಗಳಮರರ ಪಡೆಯೊ |
ಳೋರಂತೆ ದೊರೆ ಮಡಿದನುರುಬೆಂದು ದಿವಿಜಪರಿ |
ವಾರ ಮುತ್ತಲ್ ಕಾಣುತಾ ಮಹಾನಾಭನಾಪ್ತರ್ ತಮ್ಮ ಸೇನೆಸಹಿತೆ ||
ವೀರದಿಂದಿರಿವುತ್ತೈತರೆ ಕಂಡು ಖತಿಯಿಂ ಕು |
ಮಾರನನಿಬರನನೀತು ಬಾಣದಿಂ ಸದೆಬಡಿವು |
ತಾರಿ ಬೊಬ್ಬಿರಿದು [3]ಬೆನ್ನಟ್ಟಿ ಖಳಸೇನೆಯೊಳ್ ಕೋಳಾಹಳಂಗೈದನು[3] || ೨೨ ||

ಗಜ ತುರಗ ರಥವೆರಸಿ ನೂಂಕಿದುದು ಸಂಗರಕೆ |
ಗಜಬಜಪಿದೇಕೆ ಹೋ ಹೋ ಸಾಕು ಸಾಕೆನುತೆ |
ಗಜಶಿರಸ್ವರ್ಭಾನು ಶಬಲ ವಾಮನ ಶಂಖುಶಿರ ಹಯಗ್ರೀವರೆನಿಪ ||
ರಜನೀಚರರ್ ನಿಜಪದಾತಿಪದಸಂಜನಿತ |
ರಜವಜಾಂಡಂ ಮುಸುಕೆ ಸರ್ವಸನ್ನಾಹದಿಂ |
ರಜತಗಿರಿವಾಸನ ಕುಮಾರನಂ ಜರಿದು ಮೂದಲಿಸು[4]ತೆಣ್ದೆಸೆಯೊಳಂದು[4] || ೨೩ ||

---

೧ ಸು (ಹು, ಶಿ, ಗೋ.) ೨ ರಿ (ಶಿ, ಗೋ.) ೩-೩ ಖಳಸೇನೆಯೊಳ್ ಕೋಳಾಹಳಂ ಗೈದನೇನೆಂಬೆನು (ಹು.) ೪-೪ ತಂದೆಣ್ದೆಸೆಯೊಳು (ಹು.)

ಛಲದಿಂದಮುರವಣಿಸಿ ನೂಂಕುವರ್ ಸೋಂಕುವರ್ |
ಸಲೆ ಬಾಣಜಾಲಮಂ ಬೀಸುವರ್ ಸೂಸುವರ್ |
ಬಳಸಿ ಸುರಗಿರಿಯ ಕೈಮೀರುವರ್ ತೋರುವರ್ ಭುಜಬಲಪರಾಕ್ರಮದೊಳು ||
ಕಲಿತನವ ಮುಸಕದಿಂದುಬ್ಬುವರ್ ಕೊಬ್ಬುವರ್ |
ಪಲವಾಯುಧಂಗಳಿಂ ಮೊ[೧]ತ್ತುವರ್ ಕುತ್ತುವರ್ |
ಜ್ವಲಿತಕೋಪಾಗ್ನಿಯಿಂದುರುಬುವರ್ ತರುಬುವರ್ ಗುಹನನಾ ಖಳನನುಜರು
|| ೨೪ ||

ದೊರೆಗಳೀ[೨] ಮುತ್ತಿದರ್ ಮೂವತ್ತುಪದ್ಮಮುಂ |
ಮರಳಿ ಮೂವತ್ತೈದುಕೋಟಿಗಳ್ ಮಿಕ್ಕಳಿದ |
ಕರಿರಥಾಶ್ವಪದಾತಿಗಳ[೩]ನೆಣಿಸಿ ನೋಡೆ ಕಡೆಗಾಣ್ಬ ಗಣಿತಜ್ಞರೊಳರೇ[೩] ||
ಧುರದೊಳೊಂದೊಂದು ಸಾರಿಗೆಗನಿತು ಬಾಣಂಗ |
ಳುರವಣಿಸಿ ಕಡಿದನಿತು ಮಂದಿ ಸುಭಟರ ಕಳೇ |
ಬರದೊಳಂಬಂ ಬಿಡದೆ ತುಂಬುವನೆನಲ್ ಬಣ್ಣಿಸಲ್ ಪವಣೆ ಗುಹನದಟನು
|| ೨೫ ||

ಮರಳಿ ಚೇತರಸಿಕೊಂಡನಿಬರೆಚ್ಚರ್ ಮಹಾ |
ಶರದಿಂದವನಿಯಾವುದಾಶೆಗಳದಾವುವಂ |
ಬರಚಕ್ರಮಾವುದೆಂಬಂತೆ ನಿಮಿಷಾರ್ಧದೊಳಗನಿಬರೆಚ್ಚಂಬುಗಳನು ||
ಸರಳ್ಗಳಿಂದೆಚ್ಚು ಕತ್ತರಿಸಿ ಮೊದಲವರೆಚ್ಚ[೪] |
ಸರಳಿಗಿಮ್ಮಡಿಯನೆಚ್ಚನಿಬರಂ ಬಾಣಪಂ |
ಜರದೊಳಗೆ ಪೊಗಿಸಿದನೆನಲ್ ಕರಚಮತ್ಕಾರಮಂ ಪೊಗಳಲಳವೆ ಗುಹನಾ || ೨೬ ||

ಎಚ್ಚು ರಥ ಚಕ್ರ ಹಯ ಸಿಂಧಂಗಳಂ ಮಗು |
ಳ್ದೆಚ್ಚು ಶಿರಸಕ ಕವಚ ಬಾಹುರಕ್ಕೆಗಳನಾ |
ದೆಚ್ಚು ಕಾರ್ಮುಕ ಶರಧಿ ಛತ್ರಚಮರಂಗಳಂ ಸಕಲಸಾಧನತತಿಯನು ||
ಕೊಚ್ಚಿ ಬಿಸುಟ[೫]ತುಳಬಾಣಂಗಳಂ ಪೂಡಿ ತೆಗೆ |
ದೆಚ್ಚು ಮೂವತ್ತೆರಡುಪದ್ಮ ರಥಿಕಾಂಗನಂ |
ಕೆಚ್ಚೆದಂ ಕೀಳೆರಡು ಸಮನಾಗಿ ಸಮರದೊಳ್ ಗುಹನ ಸಾಮರ್ಥ್ಯಮೆಂತೋ
|| ೨೭ ||

೧ ಮೊ (ಕ.) ; ಮು (ಮು.) ೨ ದೊರೆಗಳ್ಗೆ (ಹು.) ೩-೩ ನೋಡೆ ಕಡೆಗಾಣ್ಬ ಗಣಿತಜ್ಞರಾನರೊಳರೇ (ಹು.) ೪ ಮುತ್ತವರೆಚ್ಚ (ಮು.) ೫ ಬೆಚ್ಚು (ಹು.)

ಪೌಲೋಮಿ ಕಾಳಿಕೇಯರನೆಚ್ಚು ಕೌತುವಿಗೆ |
ಕೋಲ ಸವಿದೋರಿಸಿ ವಿರೂಪಾಕ್ಷನಂಗಮಂ |
ಕೀಲಿಸಿ ಗಗನಮೂರ್ಧ್ನಿಯೊಡಲೊಳೀರಂ ತೋರಿ ಶಂಖಶಿರನಂ ನೋಯಿಸಿ ||
ಮೇಲೆ ವಾಮನಹಯಗ್ರೀವರಂ ಸಮರದೊಳ್ |
ಕೋಳಾಹಳಂಗೈದು ಮಿಕ್ಕುಳಿದ ದನುಜರಂ |
ಘೋಳಿಡಿಸಿದಂ ಸರಳ ಮಳೆಗರೆದು[1] ನಿಮಿಷದೊಳಗೇನೆಂಬೆನಚ್ಚರಿಯನು || ೨೮ ||

ಶಿರಮುಡಿದು ಶಂಖುಕರ್ಣಂ ಬಿದ್ದನಾ ಶಬಲ |
ನಿರದೆರಳ್ತುಂಡಾದನಬ್ಜಸಖಸಂಭವಂ |
ಬರಸೆಳದನಾ ಕಪಿಲನಸುವನೇನಾದನೋ ಶಂಖುಕರ್ಣಂ ತಿಳಿಯಲು ||
ಸುರನಾರಿಯರನಪ್ಪಿದಂ ಗಗನಮೂರ್ಧ್ನಿ ಗಜ |
ಶಿರನಿಳೆಯ ಬಾಳ್ಕೆಯಂ ನೀಗಿದಂ ತಾರಕಂ |
ಗರಮನೆಯ ಕಟ್ಟೆಸಲ್ ಜವನ ಪುರಕ್ಕೈದಿದಂ ಶರಭನರೆಗಳಿಗೆಯೊಳಗೆ || ೨೯ ||

ಕೆಟ್ಟೋಡಿದರ್ ಕೆಲಕೆಲರ್ ಗಜರಥಂಗಳಂ |
ಬಿಟ್ಟೋಡಿದರ್ ಕೆಲಕೆಲರ್ ಕೈದುಗಳನವನಿ |
ಗಿಟ್ಟೋಡಿದರ್ ಕೆಲಕೆಲರ್ ಜೀವದಾಸೆಯಿಂ ಬೇಗ ಬಹುರೂಪಂಗಳ ||
ತೊಟ್ಟೋಡಿದರ್ ಕೆಲಕೆಲರ್ ಬಿರುದನಾಗಳ್ ಬಿ |
ಸುಟ್ಟೋಡಿದರ್ ಕೆಲಕೆಲರ್ ಬೆದರಿ ರಣಕೆ ಬೆಂ |
ಗೊಟ್ಟೋಡಿದರ್ ಕೆಲಕೆಲರ್ ಗುಹನ ಕಣೆ ತಾಗದುಳಿದ ದೊರೆಗಳ್ ಧುರದೊಳು
|| ೩೦ ||

ಖಂಡಿಸಿದನಸುರನ ಚತುರ್ಬಲವನೀ ಪರಿ ಶಿ |
ಖಂಡಿವಾಹನನುಳಿದ ದನುಜಭಟರೋಡುವೊಡೆ |
ಖಂಡಿಗಳನರಸಿ ತೊಳಲುತ್ತಿರ್ದರಬುಜಸಂಭೂತಾಂಡಖರ್ಪರದೊಳು ||
ಖಂಡಮುಯಮೆಸೆವ ಪೊಸಮುಂಡಮುಯಮಾಯ್ತು ನವ |
ಖಂಡಧಾರುಣಿಯೆಲ್ಲಮಾ ಕ್ಷಣದೊಳೊಪ್ಪುವಾ[2] |
ಖಂಡಲಾದ್ರಮರತತಿ ನಲಿದುದುರೆ ನರ್ತಿಸಿತು ಭೂತವೇತಾಳನಿವಹಂ || ೩೧ ||

---

೧ ಸಿ (ಹು.) ೨ ಮ (ಪ.)

ಅಳಿವದಸುರನ ಸಹೋದರರಖಿಳನಾಯಕರ್ |
ತಲೆಯ ನೀಗಾ[1]ಡಿದರ್ ಕರಿರಥಾಶ್ವಪದಾತಿ |
ನೆಲಕೆ ಸಾರ್ದುದು ಬಾಂಧವಪ್ರತತಿ ಬಯಲಾದುದಾಪ್ತರಡಗಿದರಿಳೆಯೊಳು ||
ಮಲೆತು ನಿಲ್ವದಟರೊರ್ವರುಮಿಲ್ಲಮಿಾ ಗುಹನ |
ಕಲಹಮೊಡನೊಡನೆ ಕೈಮೀರಾಯ್ತು ತಾರಕಂ |
ಗಳವಿಗೊಟ್ಟುದು ದಿವಿಜಸೇನೆ ಪೊಯ್ ಪೊ[2]ಯ್ಯೆನುತ್ತೆ ನೆಂಬೆನದ್ಭುತವನು
|| ೩೨ ||

ಕೆಡೆಕೆಡೆಯೆನುತ್ತೆ ಕಹಳೆಗಳುಲಿವುತಿರ್ಪುದಂ |
ನಡುನಡುಗಿ ಸುರವಿರೋಧಿಗಳೋಡುತಿರ್ಪುದಂ |
ಕಡಿಕಡಿಯೆನುತ್ತೆ ಸುಮನಸರಟ್ಟುತಿರ್ಪುದಂ ಸೊಕ್ಕಾನೆ ಕುದುರೆಗಳನು ||
ಪಿಡಿಪಿಡಿದು ವೀರಸುಭಟರ್ ಕಟ್ಟುತಿರ್ಪುದಂ |
ತಡೆತಡೆದು ಕಾದಿ ವೀರರ್ ಮಡಿವುತಿರ್ಪುದಂ |
ಗುಡಿಗುಡಿಸಿದಂ ಕಂಡು ಕನಲಿ ಕಿಡಿಕಿಡಿಯಾಗಿ ತಾರಕಂ ಸಂಗರದೊಳು || ೩೩ ||

ಪ್ರಳಯರುದ್ರನ ಫಾಳಲೋಚನಕೃಶಾನುವೀ |
ಖಳನಕ್ಷಿಯುಗಳದೊಳ್ ತತ್ಸಮಯಕೈತಂದು |
ನೆಲೆಗೊಂಡುದೋ ಎನಲ್ ಕೆಂಪ ಕಾರಿದುವಾಲಿಗಳ್ ಕೋಟಿಸಿಡಿಲೊರ್ಮೆಯೊ
ಮೊಳಗಿದುದೊಯೆನೆ ಬೆರಳ ಬೊಬ್ಬೆ ರಂಜಿಸಿತು ಪೊ |
ಕ್ಕಳವಿಯೊಳ್ ನೂಂಕಿದಂ ರಥವನುರೆ ಮುರಿದ ನಿಜ |
ಬಲಕಭಯಮಂ ಕೊಡುತೆ ತಾರಕಂ ಶೌರ್ಯವಿಸ್ತಾರಕಂ ಸಂಗರದೊಳು || ೩೪ ||

ಅಳಲುರುಗನೋ ನೊಂದ ಪೆರ್ಬುಲಿಯೊ ಕಿನಿಸಿದೆ |
ಕ್ಕಲನೊ ಪಸಿದೈತಂದ ಪೆರ್ಮಾರಿಯೋ ಜಗದ |
ಕೊಲೆಗುಜ್ಜುಗಿಸಿ ಬಂದ ಮಿಳ್ತುವೊ ಮಹಾಕ್ರೋಧವೆಡೆಗೊಂಡ ಕೀನಾಶನೋ ||
ಪ್ರಳಯಭೈರವನೊ ಮಸಗಿದ ವೀರಭದ್ರನೋ |
ತಿಳಿಯೆ ಕಲ್ಪಾಂತಸಮಯದ ರುದ್ರನೋಯೆಂದು |
ಕಳವಳಿಸಿ ಮುರಿದೋಡಿತಸುರನ ಭಯಂಕರಾಕಾರಮಂ ಕಂಡು ಸುರರು || ೩೫ ||

---

೧ ದಾ (ಶಿ, ಹು, ಮ.) ೨ ಬ (ಗೋ.)

ಜಾಳಿಸಿದನಿಂದ್ರನನಲಂ ಪೋದನಂತಕಂ |
ಕಾಲ ಬೇಗಂದೋರಿದಂ ನಿರುತಿ ಸಾಗಿದಂ |
ಕಾಳಾಗಿ ವನಧಿಪಂ[1] ಸರಿದು ವಾಯುವಡಂಗಿ ಧನದಂ ಪಲಾಯನವನು ||
ಓಲಗಿಸಲನಿಬರ್ಗೆ ಗುರುವಾದನೀಶಂ ಮ |
ರಾಳವಾಹನಗರುಡಗಮನರೇನಾದರೋ |
ಪೇಳಲಚ್ಚರಿಯಾಯ್ತು ತಾರಕನ ಭೀಕರಾಕಾರಮಂ ಕಾಣುತೊಡನೆ || ೩೬ ||

ಏನೆಂಬೆನೈ ಸಿದ್ಧರಾಮ ಹರಿಮುಖ್ಯಸುರ |
ಸೇನೆಯೊಳಸರಿವುದಂ ಕಂಡು ಖತಿಯಿಂದಂ ಷ |
ಡಾನನಂ ವಾಹನಮನೊಲಿದು ಬೋಳೈಸಿ ಬಲವನಧಿಗಭಯವನೀವುತೆ ||
ತಾನಿರದೆ ಬಾಯಾರರಿಂ ಬೊಬ್ಬೆಗೊಡುತಂ ಕೃ |
ಶಾನುಮಂ ಕಣ್ಗಳೊಳ್ ಕೆದರುತ್ತಲಾಗಲಾ |
ದಾನವಾಧೀಶನಂ ಸಂಹರಿಪೆನೆಂದು ಧನುವಂ ಪಿಡಿವುತೈತಂದನು || ೩೭ ||

ಕಾಲಮೇಘದ ಸಿಡಿಲ ಛಟಛಟನಿನಾದವೋ |
ಕಾಲಭೈರವನ ಡಮುರುಗದ ನಿರ್ಘೋಷವೋ |
ಕಾಲರುದ್ರನ ಘನತರಟ್ಟಹಾಸಸ್ವನವೊ ಪೇಳೆನಲ್ಕಾ ಕ್ಷಣದೊಳು ||
ಬಾಲಕಂ ಧನುವ ಮಿ[2]ಡಿಯಲ್ ಬೆ[3]ದಿರಿತವನಿ ಜಂ |
ಬಾಲವಾಯ್ತುಬುಧಿಯಿಾತಂಗಗುರ್ವ[4]ನಿಸಿಕೊಂ |
ಬಾ ಲಯಾಂತಕನಿದಿರೆ ಸಾಕೆ[5]ನಲ್ ತಡೆದಂ ಕುಮಾರಕಂ ತಾರಕನನು || ೩೮ ||

ಕಂಡನಸುರೇಶ್ವರಂ ಬೇಸಗೆಯ ನಡುವಗಲ |
ಚಂಡಕರನಂತೆಸೆವ ಕುವರನಾಕಾರಮಂ |
ಖಂಡಪರಶುವಿನ ಸುಕುಮಾರನಾಹವಧೀರನಾರುವಂ ಬಗೆಯನಿವನು ||
ದಿಂಡೆಯಂ ಪಲವಂಗದಿಂದವಿಂದೆನ್ನಸುವ |
ಕೊಂಡಲ್ಲದಿರನೆಂದು ನಿರ್ಧರಿಸಿ ವಿಜಯಕೋ |
ದಂಡಮಂ ದನಿಮಾಡುತಿದಿರಾಗಿ ನುಡಿಸಿದಂ ಮಧುರವಚನಂಗಳಿಂದೆ || ೩೯ ||

---

೧ ಪತಿ (ಹು.) ೨ ಪಿ (ಪ.) ೩ ಬಿ (ಗೋ, ಹು, ಮ.) ೪ ಗೆ ಗುರುವೆ (ಪ, ಹು.)
೫ ರೆ (ಪ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ ।
ಸಂತಸದೆ ಬರೆದವರ್ಗೋದಿದರ್ಗರ್ಥಮಾ ।
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ॥
ಸಂತತಂ ಸಕಲಸುಖಮಂ ಸಕಲಭೋಗಮನ ।
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ ।
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ॥ ೪೦ ॥

ಅಂತು ಸಂಧಿ ೪೯ಕ್ಕಂ ಪದಗಳು ೧೫೪೮ಕ್ಕಂ ಮಂಗಳಮಹಾಶ್ರೀ

ನಾಲ್ವತ್ತನೆಯ ಸಂಧಿ

ಸೂಚನೆ

ವೀರಷಣ್ಮುಖನದಟನೀಕ್ಷಿಸುತೆ ಖತಿಯಿಂದೆ |
ತಾರಕಾಸುರನಿರದೆ ಕಾದಲ್ಕೆ ಕೂಡೆ ಸಂ |
ಹಾರಮಂ ಮಾಡಿ ಸುರರಂ ಕಾಯ್ದನಭವನ ಕುಮಾರಕಂ ಲೀಲೆಯಿಂದೆ ||

ಪಕ್ಷಿವಾಹನ ಸಹಸ್ರಾಕ್ಷ ಪಂಕೇಜಭವ |
ಯಕ್ಷಪತಿನಮಿತ ಗಜರಾಕ್ಷಸಾಜಿನಚೇಲ |
ಚಕ್ಷುಃಶ್ರವೋಭೂಷ ಋಕ್ಷಪತಿಶೇಖರ ಮಹಾಕ್ಷ್ವೇಳಗಲಸಿತಕಂಠ ||
ಅಕ್ಷೀಣತರಮಹಿಮದಕ್ಷಮತ್ತೇಭಹ |
ಯರ್ಕ್ಷ ಚಿತ್ರೋದ್ಭವವಿಪಕ್ಷ ಘನಕರುಣಾಕ |
ಟಾಕ್ಷ ಪಂಪಾಪುರಾಧ್ಯಕ್ಷ ಜಯಜಯ ವಿರೂಪಾಕ್ಷ ಭುವನೈಕರಕ್ಷಾ || ೧ ||

ಆಲಿಸಿನ್ನೆಲೆ ಸಿದ್ಧರಾಮ ಖಳನೆಂದನೆಲೆ |
ಬಾಲ ಕೇಳ್ ನಿನ್ನನೀಕ್ಷಿಸೆ ಮಿಕ್ಕ ನಾಡಾಡಿ |
ಬಾಲನೇ ತವೆ ನಿನ್ನ ಪಡೆದ ಜನನಿಯದಾರೊ ಮುಗ್ಗಲೊಳ್ ತಾಯ ಮೊಲೆಯ ||
ಪಾಲನುಂಡೊರಗಿರ್ಪ ದಿನದೊಳೈತಂದು ಗೋ |
ಪಾಲಕಾದ್ಯರ ಬಲಿಗೆ ಸಿಲ್ಕಿ ಕೆಡಬೇಡ ನಾಂ |
ಪಾಲನಂಗೈಯ್ದು[೨] ಪೋಗೆನೆ ನಗುತೆ ಗುಹನಸುರವಲ್ಲಭಂಗಿಂತೆಂದನು || ೨ ||

ಬಾಲಕಂ ತಾನಾದೊಡೇನಾಯ್ತು ಕತ್ತಲೆಗೆ |
ಬಾಲಾರ್ಕನಂಜುವನೆ ವನದ ಮದದಾನೆಯ ಕ |
ರಾಳತೆಗೆ ಸಿಂಗವರಿಯೋಡುವುದೆ ಪರ್ವತಕೆ ವಜ್ರಮೇನಳವಳಿವುದೇ ||
ಮೇಲನರಿಯದೆ ನುಡಿವರೇ ಮರುಳೆ ನೀಂ ನೋಡೆ |
ಮೂಲೋಕಮಂ ಕೊಂದು[೩] ತೇಗುತಿರ್ದಪೆ ನಿನಗೆ |
ಪಾಲನಾಗುಣವೇಕೆಸುತ್ರಾತಸಂ ಬಾಣಜಾಲದಿಂ ಮುಳುಗಿಸಿದನು || ೩ ||

---

೧ ದ (ಹು, ಮ.) ೨ ಯ್ವ (ಶಿ.) ೩ ತಿಂದು (ಹು, ಮ.)

ಮಾನವಭುಜಂಗರೆನಗಿದಿರಿಲ್ಲ ದಿವಿಜರ ವಿ |
ಮಾನಂಗಳಂ ಸೆಳೆದು ಹರಿಯಜೇಂದ್ರಾದ್ಯರ್ಗೆ |
ಮಾನಸವ್ಯಥೆಯನಾಗಿಸಿದೆನಾಹವದೊಳಗೆ ನೀನದಂ ಕೇಳ್ದರಿಯಲಾ ||
ಮಾನಗರ್ವದ ಮಾತಿದೆನ್ನದಿರು ನೀಂ ಜಸುರ |
ಮಾನಮುನಿಕುಮುದಚಂದ್ರಮನೆನಿಸುವೆನ್ನಯ ಸ |
ಮಾನನೇ ನೀಂ ಪಸುಳೆ ಪೋಗೆನುತ್ತಸುರೇಂದ್ರನಾರ್ದೆಚ್ಚು ಬೊಬ್ಬಿರಿದನು || ೪ ||

ಹರಿಯಜೇಂದ್ರಾದಿ ಸುರನರಭುಜಂಗಮರ ನೀಂ |
ಧುರದೊಳೋಡಿಸಿದೆನೆಂದೆಂಬ ಸುದ್ದಿಯು ಕೇಳ್ದು |
ಹರಿಮುಖ್ಯರಂ ಕಾಯ್ದು ನಿನ್ನನಾಂ ಸಂಹರಿಸಲೈತಂದೆ ನೋಡು ತನ್ನ |
ಪರಮವಿಕ್ರಮವ ನೀಂ ಮುನ್ನ ತಪವಂ ಮಾಡಿ |
ಪರಮೇಷ್ಠಿಯಿಂ ಪಡೆದ ಪದ[೨]ವಿಂದಿನಲ್ಲಿಸರಿ |
ಪರಶಿವನ ಕುವರನಾನರಿಯುನಲಾಯೆಂದೆನುತಲಸುರನಂಬಂ ಕಡಿದನು || ೫ ||

ಪಲಬರ್ಗೆ ಜನಿಸಿ ಪರಶಿವನಣುಗನಾನೆನಲ್ |
ಕೆಲದವರ್ ನಗ[೩]ದಿಹರೆ ತೆಗೆ[೩] ಬೇರ ಬಲ್ಲವ |
ಗೇಲಿಯು ತೋರ್ಪರೆ ಸಾಕು ಸಾಕು ಕೂರಂಬಿನಿಂ ತವೆ ನಿನ್ನ ಸಾಲ್ದಲೆಯನು ||
ಕಳಚುವೆಂ ನೋಡೆನುತೆ ದಾನವಂ ಬೆನ್ನ ಬ |
ತ್ತಳಿಕೆಯಿಂದುಗಿದು ಬಿಡಲಾ ಬಾಣವೆಲ್ಲವಂ |
ಮುಳಿಪು[೪] ಕಡಿದಂ ಗುಹಂ ಮತ್ತಿಸುವನಾ ಖಳಂ ಮರಳಿ ಕಡಿವಂ ಕುವರನು
|| ೬ ||

ಎಸುವ ಹೊಡೆಯಿಂದೆ ತೆಗೆದೆಸುವ ಬೊಬ್ಬಿರಿದು ತೊ |
ಟ್ಟೆಸುವ ಕುಶಲಂಗಳಿಂದೆಸುವ ಕೈಚಳಕದಿಂ |
ದೆಸುವ ಕಿವಿವರೆಗೆ ತೆಗೆದೆಸುವ ತವಕದೊಳೆ ಸವ್ಯಾಪಸವ್ಯಂಗಳಿಂದೆ ||
ಎಸುವ ದಶದಿಕ್ಕುಗಳೊಳೆಸುವ ಲಘುಸಾಳಿಯಿಂ |
ದೆಸುವ ದೂರಾಪಾತ ಲಕ್ಷಸಿದ್ಧಿಗಳಿಂದ |
ಮೆಸುವ ಚಾಪಕಲಾಪ್ರವೀಣರೆಚ್ಚಾಡಿದರ್ ಪಟುಭಟರ್ ಸಂಗರದೊಳು || ೭ ||

೧ ಪ (ಹು, ಮು.) ೨ ಪದ (ಪ.) ೩-೩ ರೆ ತೆಗೆ ತೆಗೆ (ಹು.) ೪ ಬಳಕ (ಹು, ಮು.)

ಖಣಿಖಟಿಲ್ ಛಿಳಿಛಿಟಿಲ್ ಭುಗಿಲೆಂಬ ಸಾಯಕ |
ಕ್ಷಣನದಿಂ ತೀವಿದುದಜಾಂಡಮಂಡಲವುಸ್ತ್ರ |
ಗಣದ ತುಂಡುಗಳಿಂದಲಿಡಿದುದವನೀಚಕ್ರವೇನೆಂಬೆನಚ್ಚ ರಿಪುಸು ||
ಕಣೆ ಕಣೆಯ ತಾಗೆ ಪೊಣ್ಮಿದ ಕಿಡಿಯ ಗಡಣದಿಂ |
ಪೆಣೆದುದು ಸಮಸ್ತಜಗಮೆನಲೊರ್ವರೆಚ್ಚ ವಾ |
ರ್ಗಣವನೊರ್ವರ್ ಕಡಿವುತೆಚ್ಚಾಡಿದರ್ ಕುಮಾರಕತಾರಕರ್ ಧುರದೊಳು || ೮ ||

ಪುರ್ವುಗಳ್ ಬಿಗಿದವುಡುಗರ್ಚಿ ಮುಂಡಿಗಳನಿ |
ಟ್ಟೊರ್ವರೊರ್ವರ್ಗೆ ತೆರಳದೆ ಮಹಾಕೋಪಾಗ್ನಿ |
ಯುರ್ವುತಿರೆ ಕಂಗಳೊಳ್ ನಾಸಿಕದೆ ಸೂಸೆ ಕಾರ್ಬೊಗೆ ಭುಜಬಲಾಟೋಪದ ||
ಗರ್ವದಿಂ ಸರಿಯಾಗಿ ಕಾದಿದರ್ ಧುರದೊಳ್ ಧ |
ನುರ್ವೇದನಿಪುಣರಾಮೇಲೆ ಗುಹನದ್ಭುಟಂ ಸು |
ಪರ್ವರಾಯೆನಲೆರಳ್ಮಂತ್ರಾಸ್ತ್ರಮಂ ಪೂಡಿ ಕೂಡೆ ಬೊಬ್ಬಿರಿದೆಚ್ಚನು || ೯ ||

ಕೀಲಿಸಿದುವವನ ನೊಸಲಂ ನೊಸಲ ಕಣ್ಣವನ |
ಬಾಲನೆಚ್ಚಂಬು ಪೊಸ ಬಿಸಿಯ ನೆತ್ತರ ಪೊನಲ್ |
ಭಾಳದಿಂ ಪರಿದುದವನಿಗೆ ದಾನವನ ವೀರರಸಮುಕ್ಕಿ ಸೂಸುವಂತೆ ||
ಪೇಳಲೇನಾ ಶರವನುಗಿದು ರಕ್ತವನೊರಸಿ |
ವೀಳೆಯಂಗೊಂಡು ಹೊದೆಗಳೊಳ್ಕಿದೆ ಪೊಸ ಮಸೆಯ |
ಬೋಳೆಗಳನಾಯ್ದು ಕುವರನನೆಸೆಯಲವಸರಿದು ತಾನೆಚ್ಚು ಬೊಬ್ಬಿರಿದನು || ೧೦ ||

ಹೊಗರೊಗುವ ಪೊಸಮಸೆಯ ಬಾಣವಸುರನ ತನುವ |
ನುಗಿದು ಭರವಸದಿಂದೆ ಪಾಯ್ದುಂದು ಧರಣಿಯಂ |
ಬಗಿದು ಪಾತಾಳಮಂ ಪೊಕ್ಕು ಫಣಿಪನನಲೆಯಲಾತನೊಡಲುಂ ಬಿರಿಯಲು ||
ವಿಗಡದನುಜಂ ಶರವಿಘಾತಿಯಿಂದಳಿವಳಿದು |
ಮಿಗೆ ಮೂರ್ಛೆವೋಗಿ ಧರೆಯುದಿರಲೆಚ್ಚೆತ್ತು ದ್ಮ |
ಗ್ಯುಗಳಮಂ ತೆರೆದೆದ್ದು ನಿಂದು ಕಟ್ಟಾಳಾಗಿ ಸೇನಾನಿಗಿಂತೆಂದನು || ೧೧ ||

೧-೧ ಟಿಸಿಂ | ಪೂರ್ವದೇವನಮೆ (ಮ.) ೨-೨ ಲಂ ಬಿದಿರಲು (ಹು, ಗೋ.) ೩ ಸ (ಶಿ, ಗೋ.)

ಕಿರುಬನೊಡನೇನೆಂದು ಕೈದೆಗೆದು ಕಾದಿದೊಡೆ |
ಬೆರೆದೆಲಾ ಬಹಳಗರ್ವದೆ ನಿನ್ನ ತಲೆಗಳಂ |
ತರಿದು ಬಿಸುಡುವೆನೀಗ ನೋಡೆನುತೆ ಹೊಸಮಸೆಯ ಬಾಣಂಗಳಂ ತೊಡರ್ಚಿ ||
ಹೆರೆವಲೆಯಸುತಾತ್ಮಜನನೆಚ್ಚು ಮರಳೆಚ್ಚು ಬೊ |
ಬ್ಬಿರಿದು ಕೈಯ್ಯೊಡನೆಸೆಯೆ ಸೇನಾನಿಯಸಿತುಮಂ |
ಮುರಿದು ಮುಗುಳೆಚ್ಚು ಸಾರಥಿವರೂಥಾಶ್ವಂಗಳಂ ಕಡಿದು ಬೊಬ್ಬಿರಿದನು || ೧೨ ||

ಬಳಿಕ ನೂತನವರೂಥಾಶ್ವಸಾರಥಿಗಳುಮ |
ನಳವಡಿಸಿ ತತ್ಸ್ಯಂದನವನೇರಿ ಷಡ್ವದನ |
ನಳವಿಗೈತಂದು ಬಿಲ್ಗೊನೆಯಸುರೆ ನೇವರಿಸಿ ಬೆನ್ನ ಬತ್ತಳಿಕೆಯಿಂದೆ ||
ಪೊಳೆವ ಪೊಸಮಸೆಯ ಕೂರ್ಗಣೆಗಳಂ ತೊಟ್ಟಾರ್ದು |
ಖಳನೆಸೆಯಲನಿತುಬಾಣಂಗಳಂ ಕಡಿದೊಡನೆ |
ಮುಳಿದವನ ಕರದ ಕಾರ್ಮುಕವನಿರ್ಕಡಿಗೈದನಾ ಕುವರನಾ ಕ್ಷಣದೊಳು || ೧೩ ||

ಮತ್ತೆ ಪೊಸಬಿಲ್ಪಿಡಿದಿಸಲ್ ಕೆರಳಿ ಗುಹನದಂ |
ಕತ್ತರಿಸಿ ಬಿಸುಡಲಾ ಕ್ಷಣದೊಳಗೆ ಸಾಹಸೋ |
ನ್ಮತ್ತಂ ಬಳಿಕ್ಕೊಂದು ಕಾರ್ಮುಕವನಳವಡಿಸಿ ತೆಗದೆಸಲ್ ಕೋಪದಿಂದೆ ||
ಉತ್ತರಿಸಿದಂ ಹಿಡಿವ ಕಡಿವ ಕೈಯ್ಯೊದಗಿನಿಂ |
ಹತ್ತುಕೋಟಿ ಶರಾಸನಂ ತೀರಲಾಗ ದನು |
ಜೋತ್ತಮಂ ಮರಳಿ ಪೊಸಬಿಲ್ಪಿಡಿದು ಪಾವಕಕಳಂಬದಿಂದಾರ್ದೆಚ್ಚನು || ೧೪ ||

ಉರಿದುವು ರಥಚ್ಛತ್ರ ಚಾಮರಂಗಳ್ ಕರಿಕು |
ಸರಿದು ಕರಿತುರಗನುರುಳ್ದುವು ದೊಡ್ಡ ಹಂಚಿಟ್ಟ |
ಸುರಿದವೋಲ್ ಸೇನೆ ಸಿಡಿಮಿಡಿಗೊಂಡು ಬಿವಕುಮುರ್ವರಿಯಿತ್ತ ಜಾಂಡಕಂದು ||
ಹರಸುತಂ ಕೋಪದಿಂದೀ ಕಿಚ್ಚನೀಗ ಸಂ |
ಹರಿಸುವೆಂ ವರುಣಬಾಣದೊಳೆಂದು ಧನುವಿನಿಂ |
ಹರಿಸಿದಂ ಹಿರಿದು ಸಂಹರಿಸುವುರಿಯು ಡಗೆಯಾವರಿಸೆ ನೀರ್ ಸಿಮಿಸುಮದೊಳಗೆ
|| ೧೫ ||

೧-೧ ದ ಕೈಯೊದಗಿ ನಿಂದಿರದೆ (ಶಿ, ಗೋ.)

ಕಾರ ಮುಗಿಲುರೆ ಕರೆವ ನೀರೆಂಬೊಲುದಕದಾ |
ಕಾರಮಾಯ್ತಾ ಬಲಮದೆಲ್ಲಮುಂ ಬಿಲ್ಲ ಟಂ |
ಕಾರಮುಖ್ಯಧ್ವನಿಗಳಡಗಿದುವು ಚಾತುರಂಗಂಗಳ್ ಮಹಾಪ್ರಳಯದ ||
ವಾರಾಸಿಜಲಚರವೆನಲ್[೨] ತೇಂಕುತಿರ್ದುವಿದ |
ಕಾರಾಸೆಯೆಂದೆಲ್ಲರುಂ ಬಾಯ್ವಿಡಲ್ ಬಳಿ |
ಕ್ಕಾ ರಾಸಿತೋಯಸಂಹಾರವಡಬಾಸ್ತ್ರಮುಂ ತಾರಕಂ ತೊಟ್ಟೆಚ್ಚನು || ೧೬ ||

ಕೆರಳಿ ಪುನರಪಿ ತಾರಕಾಸುರಂ ಕೋಪದಿಂ |
ಗಿರಿಶರಂ ತೊಟ್ಟೆಚ್ಚನಾ ಗುಹಂ ಕೂಡೆ ಸಂ |
ಹರಿಸಿದಂ ವಜ್ರಕಾಂಡವನೆಚ್ಚು ದನುಜೇಂದ್ರನೆಚ್ಚಂ ನಿಶಾಬಾಣಮಂ ||
ತರಣಿಶರದಿಂ ಕಾರ್ತಿಕೇಯನೆಚ್ಚಂ ಬಳಿ |
ಕ್ಕುರಗವಿಶಿಖಮನಾಗಳಸುರನೆಚ್ಚಂ ಮಹಾ |
ಗರುಡಾಸ್ತ್ರಮಂ ತೊಟ್ಟು ತತ್ಸರ್ಪಬಾಣಮಂ ಗುಹನಾರ್ದು ಖಂಡಿಸಿದನು
|| ೧೭ ||

ಇಂತಖಿಳದಿವ್ಯಾಸ್ತ್ರತತಿಗಳಿಂದೋರೊರ್ವ |
ರುಂ ತೊಲಗದೆಚ್ಚಾಡುತಿರೆ ಮಹಾಕೋಪದಿಂ |
ದಂತಕೋಪಮತಾರಕಂ ಬಳಿಕ ಬ್ರಹ್ಮಾಸ್ತ್ರಮಂ ಪೂಡಿ ತೆಗೆದೆಸಲ್ಕೆ ||
ಸಂತಾಪಿಸಿತು ನಿಖಿಳಲೋಕಮಾ ಬಾಣಮುಂ |
ಕಂತುಹರನನುಗನತಿವೇಗದಿಂ ರುದ್ರಾಸ್ತ್ರ |
ಮಂ ತೊಟ್ಟು ಬಿಟ್ಟು ಖಂಡಿಸಿದನಿಕ್ಕಡಿಗಳ್ ರಣಾಂಕಣದೊಳಡೆಗೆಡೆಯಲು
|| ೧೮ ||

ಅಂಬುಜಭವಾಸ್ತ್ರಮಂ ಕಡಿದು ಬಿಡಿಸಳಿಲ್ ದೈತ್ಯ |
ನಂಬಕಂ ಕೆಂಪೇರಿ ಘುಡಿಘುಡಿಸಿ ಮುನ್ನಮೆ |
ಚ್ಚಂಬುಗಳ ಹವಣಲ್ಲ ಬಾಲ[೪]ಬಾಲಕನೆಂದು ಕೈಗಾಯ್ದೊಡರಿಯೆನುತ್ತೆ[೫] ||
ತಾಂ ಬೇಗದಿಂ ದಿವ್ಯಶಕ್ತಿಯುಂ ಸೆಳೆಯಲಾ |
ಡಂಬರದ ಕಿಡಿಯ ಗಡಣಂಗಳಿಂ ಗಗನಮಂ |
ಚುಂಬಿಸುತ್ತತಿಭಯಂಕರಮಾಗಿ ತಾರಕನ ಕರದೊಳಗೆ ರಂಜಿಸಿದುದು || ೧೯ ||

೧ ವಿ (ಪ.) ೨ ಕಾರಾಸಿಜಲಮನೆಲ್ಲಂ (ಹು.) ೩ ಸುಡ (ಹು, ಮ.) ೪ ಬಹಳ (ಹು.) ೫ ಯೆಯೆನುತೆ (ಪ, ಹು, ಮ.)

ಧಗಧಗತ್ಕಾರದಿಂದಂ ಧರಣಿಮಂಡಲಂ |
ಪೊಗೆವುತಿರ್ದುದು ಸಮುದ್ರಂ ಕುದಿದು ತಳಮಳಿಲ |
ನಗುಳುತಿರ್ದುದು ನಭದ ನಕ್ಷತ್ರತತಿ ಭೂಮಿಗುದುರುತಿರ್ದುದು ದನುಜನು ||
ನಗುತೆ ಕೇಳೆಲವೆಲವೊ ಬಾಲ ನೀನೆನ್ನೊಡನೆ |
ಪಗೆಗೊಂಡ ಫಲವನುಣ್ಣೆನುತೆ ತಿರುಪಿಡಲುರಿಯ |
ನುಗುಳುತೈದುವ ಶಕ್ತಿಯುಂ ಗುಹಂ ಪಿಡಿದಿಡಲ್ ಖಳನೆದೆಯ ತಟ್ಟುಗಿದುದು
|| ೨೦ ||

ತನು ನಡುಗಿ ತುಟಿಯೊಣಗಿ ತಲೆ ತಿರುಗಿ ಬಸವಳಿದು |
ದನುಜನುರೆ ಬೀಳ್ದಂ ರಣಾಗ್ರದೊಳ್ ನಸೆದ ಜಾ |
ಜಿನ ಗಿರಿಯೊಲಿರ್ದುದು ಕಳೇವರಂ ರಕ್ತಾಂಬು ಸರ್ವಾಂಗಮುಂ ಮುಸುಕಲು ||
ಕನಲಿ ಕಡುವೇಗದಿಂದೊಡೆಯನಾಹವವೆನಗೆ |
ತನಗೆನುತೆ ಮುತ್ತಿದುದು ದೈತ್ಯಬಲಮೀ ಷಡಾ |
ನನನಸಂಬಿನ ಮಳೆಯೊಳಂಬರಂ ತುಂಬಿ ಕೋಲಾಹಳದ ರಭಸದಿಂದೆ || ೨೧ ||

ಕೆರಳಿ ನಾಲ್ದೆಸೆಯೊಳಿರದೊತ್ತಿದರ್ ಮುತ್ತಿದರ್ |
ಕರಿತುರಂಗಾರೂಢರುರುಬಿದರ್ ತರುಬಿದರ್ |
ವರಮಹಾರಥರಿರದೆ ತಾಗಿದರ್ ಕೂಗಿದರ್ ಸರಳ ಸರಿವಳೆಗರೆವುತೆ ||
ಘೊರೆಘೊರೆಗಳಡಿಗಡಿಗೆ ಮಿಸುಕಿದರ್ ಮುಸುಕಿದರ್ |
ಪರಿಪರಿಯ ಕೈದುಗಳೊಳಿಕ್ಕಿದರ್ ಸೊಕ್ಕಿದರ್ |
ಸರಳ್ಗಳಂ ತಸತಸಗೆ ಬೀರಿದರ್ ತೋರಿದರ್ ಪೌರುಷಮನಸುರಭಟರು || ೨೨ ||

ಇತ್ತಲೀ ತಾರಕಂ ಮೂರ್ಛೆ ತಿಳಿದೆದ್ದು ಮಿಗೆ |
ಕೆತ್ತಿರ್ದೆಯ ಶಕ್ತಿಯುಂ ಕಿತ್ತು ಮನದೊಳ್ ಚಿಂತೆ |
ವೆತ್ತಿವಸೋಳಿಸಿತು ಪೊಳ್ತುಂ ಪಸುಳೆಯಿಂದುದಾಸೀನದಿಂ ಸೆಣಸಿದೆನಲಾ ||
ಕತ್ತರಿಸುವಂ ಶಿರವನಿನ್ನಿರಲ್ ಕೇಳ್ ದಿನವ |
ನುತ್ತರಿಸಿ ನಾಳೆ ಸುರರಂ ತಿಂದು ತೇಗುವೆನೆ |
ನುತ್ತಮಂ ಕ್ರೌಂಚಪರ್ವತದ ಮರೆಯೊಳ್ ಪೋಗಿ ಮೈಗರೆದನಾ ಕ್ಷಣದೊಳು
|| ೨೩ ||

ಸೇನಾನಿ ತನ್ನನುರುಬುವ ಸಕಲತಾರಕನ |
ಸೇನಾಸಮುದ್ರಮಂ ಕಲಕಿ ತತ್ಸುಭಟರಂ |
ನಾನಾಪ್ರಕಾರದಿಂ ಸಂಹರಿಸಿದಂ ಮಹಾಪ್ರಳಯಸಮವರ್ತಿಯಂತೆ ||
ಏನೆಂಬೆನೈ ರಾಮ ಹರಿಯಜೇಂದ್ರಾದ್ಯರ್ ಮ |
ಹಾನಂದದಿಂ ಗುಹನನೊಲ್ದು ಕೊಂಡಾಡೆ ಸಲೆ |
ದಾನವಾಧೀಶನಂ ಕಾಣದೆ ರಣಾಂಕಣದೆ ನೋಡುತ್ತೈತರುತಿರ್ದನು[1] || ೨೪ ||

ಇರುಳಂತೆ ದಳಿತೋತ್ಪಲಾಳಿಮಯಮುಭವಭೂ |
ಧರದಂತೆ ಶಿವಗಣವಿಲಾಸಮಯಮುಬಲೆಯುರ |
ಗುರುಕುಚದ್ವಯದಂತೆ ವರಪತ್ರಭಂಗಮಯಮಾನೆಗಳ್ ಕದಡಿ ಬಿಟ್ಟ ||
ಸರಸಿಯಂತೆ ನಿಪಾತಪುಂಡರೀಕೌಘಮಯ |
ವಿರದೆ ಹರನಾಭರಣದೊಲ್ ರುಂಡಮಯಮೆಸೆವ |
ತರಣಿಜನ ಪುರದಂತೆ ಬಹುನರಕಬಂಧಮಯಮಾಗಿ ರಣಮೆಸೆದಿರ್ದುದು || ೨೫ ||

ಕರಿಯ ಚರ್ಮವನುಗಿದು ಪೊದ್ದು ತಲೆಗಳ ಕೋದು |
ಕೊರಳೊಳಗೆ ಹಾಯ್ಕಿ ಬಿದ್ದಿರ್ದ ಶೂಲಮನಾಂತು |
ನೊರೆನೆತ್ತರಂ ತೆಗೆದು ಪಣೆಯೊಳಗೆ ಬೊಟ್ಟಿಟ್ಟು ಮತ್ತೊಂದು ಬಲ್ದಲೆಯನು ||
ಕರತಳದೆ ಪಿಡಿದು ಮರುಳ್ಗಳ ಮೇಳದಲಿ ಪೆ |
ರ್ಮರುಳೊಂದಿರುತ್ತಿರಲ್ ಕಂಡು ಭಯಭಕ್ತಿಯಿಂ |
ಚರಣಕೆರಗಿದುದೊಂದು ಪುಲ್ಮರುಳ್ ಶಿವನೆಂದು ಗುಹನಿರಿದ[3] ಸಂಗರದೊಳು || ೨೬ ||

ಪೆಣನ ತಿಂದೊಲ್ವ ಬಳ್ಳುಗಳ ದನಿಗಾನಮಾ |
ವ್ರಣದ ನೋವಿಂ ನರಳ್ವರ ರವದ ತಾಳಮುಂ |
ಕುಣಿವ ಮುಂಡಗಳ ನವಪಾತ್ರಮಲ್ಲಿಯ ನೋಟಕರ್ಕಳ್ ನೆಣನ ತಿಂದು ||
ತಣಿದು ತಲೆಗಳ ತೊನೆವ ಬೇತಾಳತತಿ ಸಭ್ಯೊಂ |
ಗಣದಿಂದೆ ಚಿಗಿಚಿಗಿದು ಬೀಳ್ವ ತಲೆ ಮುಜ್ಜಾಗೆ |
ರಣರಂಗಮೆ ನಾಟ್ಯರಂಗ[4]ದಂತೊಪ್ಪಿದುದು ಖಳನ ಶೋಧಿಪರ ಕಣ್ಗೆ || ೨೭ ||

---

೧ ರು (ಹು, ಮ.) ೨ ನ (ಮ.) ೩ ದಿರ (ಹು.) ೪ ಶಾಲೆ (ಶಿ.)

ಮುಂಡಂಗಳಂ ಮುಗುಚಿ ನೋಡಿ ಬೆಟ್ಟಾಗಿರ್ದ |
ಖಂಡಂಗಳಂ ಕೆದರಿ ನೋಡಿ ಮಿಗೆ ಮಡಿದ[೧] ವೇ |
ತಂಡಂಗಳಂ ನೂಂಕಿ ನೋಡಿ ರಥಸಂದೋಹದಿಡುಕಿನೊಳ್ ಬೆದಕಿ ನೋಡಿ ||
ರುಂಡಂಗಳಂ ಬಗಿದು ನೋಡಿ ಹಯದೊಟ್ಟಲಿನ |
ತಂಡಂಗಳಂ ತೆಗೆದು ನೋಡಿ ನೊರೆನೆತ್ತರಿನ
ಕೊಂಡಂಗಳಂ ಮುಳುಗಿ ನೋಡಿದರ್ ಮಾಡಿದರ್ ಕ್ಲೇಶಮಂ ದಿವಿಜಭಟರು
|| ೨೮ ||

ಇಂತು ರಣರಂಗದೆಲ್ಲೆಡೆಯೊಳುಂ ಸಕಲಸುರ |
ಸಂತತಿಗಳರಸುತಿರೆ ದಿಗ್ವರರ್ ನಾನಾದಿ |
ಗಂತದೊಳ್ ನೋಡೆ ಹರಿ ಕ್ರೌಂಚಪರ್ವತದ ಮರೆಯೊಳಗಿರ್ದ ಖಳನಿರವನು ||
ತಾಂ ತಿಳಿದು ಬಂದು ಸುರಪಾಲಂಗೆ ಪೇಳಲ್ಕೆ |
ಸಂತಸದೊಳಿಂದ್ರನೈತಂದು ತಾರಕನ ವೃ |
ತ್ತಾಂತಮಂ ಗುಹನೊಡನೆ ಬಿನ್ನೈಸೆ ಶಾಂಭವಾಸ್ತ್ರಕೆ ನೀಡಿದಂ ಕೈಯನು
|| ೨೯ ||

ಮೂಡಿಗೆಯೊಳುಗಿದು ಶಾಂಭವಬಾಣಮಂ ಹೆದೆಗೆ |
ಹೂಡಲೀರೇಳ್ ಜಗಂ ನಡುಗಿತದ್ರಿಗಳ ತತಿ |
ಬೀಡೆಬಿರಿದುದು ಸಪ್ತಶರನಿಧಿಗಳುಕ್ಕಿದುವು ಕುಸಿದುದಿಳೆ ಧ್ರುವನ ಪೊರೆಗೆ ||
ಓಡಿದುವು ತಾರೆ ಹರಿಯಜಪುರದ[೨] ಸರಕುಗಳ್ |
ಪೂಡಿದುವು ಶಿವಲೋಕಕಹಿಪ ಕರಿ ಕಮಠರ |
ಲ್ಲಾಡಿದರಕಾಲದೊಳ್ ಪ್ರಳಯವಾಯ್ತೆಂದು ಪಂಕಜಭವಂ ಚಿಂತಿಸಿದನು || ೩೦ ||

ಸಿಸಗೆ ಗುರಿ ಕ್ರೌಂಚಪರ್ವತದ ಮರೆಯೊಳಗಿರ್ದ |
ದನುಜನೊಡಲೆಂದು ಬಾಣಕೆ ಬೆಸಸಿ ಮಂತ್ರಮಂ |
ಮನದೊಳಗೆ ಜಪಿಸಿ ಕಿವಿವರೆಗುಗಿದು ಬಿಡಲುದಿರ್ದ ಕೆಂಗಿಡಿಯ ಗಡಣದಿಂದೆ ||
ಅನಿಲಪಥದಿಂದಲ್ಲೈತಂದದ್ರಿವಲ್ಲಭನ |
ತನುವನಿಬ್ಬಗಿಗೈದು ತಾರಕನ ದೇಹಮಂ |
ಚಿನಕಡಿಯನಿರದೆ ಮಾಡಿತು ಶಾಂಭವಾಸ್ತ್ರಮದನೇನೆಂಬೆನದ್ಭುತವಹಿನು || ೩೧ ||

೧ ಕಾಂಡ (ಶಿ, ಗೋ.) ೨ ಸುರಪ (ಶಿ, ಗೋ.) ೩ ಸಚ್ಚರಿಯ (ಪು.)

ತ್ರಿದಶರರ್ಗಲ್ಲ್ಪಳಿಗರದು ನೋಡಿದರ್ಗೆ ಪಾಡಿದರ್ |
ಪದೆದು ಗಂಧರ್ವರಾನಂದದಿಂ ಛಂದದಿಂ |
ದೊದರಿದುವು ಸುಮನಸರ ಭೇರಿಗಳ್ ಸೂರಿಗಳ್ ಕೈಯೆತ್ತಿ ಬಣ್ಣಿಸಿದರು ||
ಮುದದೆ ಸುರಕಾಂತಾಳಿ ನರ್ತಿಸಿತು ವರ್ತಿಸಿತು |
ಪದಪಿನಿಂ ಜಯರವಂ ಲೋಕದೊಳ್ ನಾಕದೊಳ್ |
ಪಮುಳಿಸಿದರಮರರ್ ಪ್ರಮೋದದಿಂ ಭೇದದಿಂದುಳಿದಸುರರಳವಳಿದರು || ೩೨ ||

ಪೊಡವಿಯೊಳ್ ದುರ್ಜನರನೊಳಕೊಂಡವರ್ಗೆ ಕೇ |
ಡಡಸುವುದು ನಿಜವೆಂದು ಲೋಕದವರೆಂಬ ನಾ |
ಣ್ಣುಡಿ ಪುಸಿವುದೇ ಕ್ರೌಂಚಪರ್ವತಂ ತಾರಕಸನಂದು ತನ್ನಯ ಮರೆಯೊಳು ||
ಅಡಗಿರಿಸಿಕೊಂಡಿರ್ದಕಾರಣಂ ನಾಡೆ ತ |
ನ್ನೊಡಲೊಳೇರಾದುದನಿತಲ್ಲದಾ ದಾನವಂ |
ಮಡಿದು ಪೋದಂ ನಿಮಿಷಮಾತ್ರದೊಳ್ ಜಗವರಿಯೆ ರಾಮ ಕೇಳಚ್ಚರಿಯನು
|| ೩೩ ||

ತೀರಿತ್ತು ತಿದ್ದದಿಹ ವಿಲಗವಮರರ್ಗಮರ |
ನಾರಿಯರ್ಗೋಗೆತನಂ ನೆಲೆಯಾಯ್ತು ನಾಕದೊಳ್ |
ಶೌರಿ ಪದ್ಮಜಸುರೇಂದ್ರಾದಿ ದಿಗ್ವರರ ಪುರಮವರವರ ವಶಮಾದುವು ||
ದೂರಮಾದುದು ದುರಾಚಾರವಾಗ್ನೇಶಿಯಕಂ |
ಸೇರತೊಡಗಿದುದವನಿಯಮರರಿಂದಮರರ್ಗೆ |
ಮಾರೋಗಿಸಿತ್ತು ಪಾಲಿರದಖಿಳಭುವನಜನಮಸುರೇಂದ್ರನಸ್ತಮಿಸಲು || ೩೪ ||

ತಾರಕನ ಸುತರಾದಿ ಮಿಕ್ಕ ರಕ್ಕಸರೋಡಿ |
ಸೇರಿದರ್ ಗಿರಿಗುಹೆಗಳಂ ಬಳಿಕ್ಕಿತ್ತಲ್ ಕು |
ಮಾರಕಂ ಹರಿಯಜೇಂದ್ರಾದ್ಯಮರತತಿವೆರಸಿ ಕೈಲಾಸಪುರವನ್ನೈದಿ |
ಮಾರಹರನಡಿಗೆರಗೆ ಕುವರನಂ ತೆಗೆದಪ್ಪಿ |
ವಾರಿಜಾಂಬಕ ಕಮಲಭವಮುಖ್ಯಸಕಲರ್ಗಂ |
ದಾರಕರಸವರವರ ಪುರಕೆ ಬೀಳ್ಕೊಟ್ಟು ವಿರೂಪಾಕ್ಷನೊಪ್ಪಿರ್ದನು || ೩೫ ||

೧-೧ ೪ ಮಳೆಗರಿದಾಡಿದರ್ (ಮ.) ೨ ಷೇ (ಮ.) ೩ ಜ್ಞೀ (ಪ.)

ಇದು ಸಕಲವೀರಮಾಹೇಶ್ವರರ ಸದ್ವಿಮಲ |
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ |
ಬುಧಧಿವರ್ಧನ ೧ಪೂರ್ಣಸೋಮನಾ ಸಿದ್ಧ೧ವೀರೇಶ್ವರನ ಕರಜಾತನು ||
ಸದಮಲಜ್ಞಾನಿ ಸಕಲಾಗಮಪುರಾಣಕೋ |
ವಿದನೆನಿಪ ವಿರುಪಾಕ್ಷಪಂಡಿತಾರಾಧ್ಯರತಿ |
ಮುದದೆ ಪೇಳ್ದಿ ಚೆನ್ನಬಸವಪೌರಾಣಕಥೆಯೊಳಗೆ ಮೂರನೆಯ ಕಾಂಡಂ || ೩೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೭ ||

ಅಂತು ಸಂಧಿ ೪೦ ಕ್ಕಂ ಪದಗಳು ೧೫೮೫ ಕ್ಕಂ ಮಂಗಳಮಹಾಶ್ರೀ

ತೃತೀಯಕಾಂಡಂ ಸಮಾಪ್ತಂ

೧-೧ ಸೋಮನೆನಿಪ ಗುರುಸಿದ್ಧ (ಹು.)



ಅರ್ಜುನನಿಗೆ ಪಾಶುಪತಾಸ್ತ್ರದಾನ

ಚೆನ್ನಬಸವ ಪುರಾಣ

(ಭಾಗ ೩)

ವೀರಭದ್ರಪ್ಪ ರುದ್ರಪ್ಪ ಕೊಪ್ಪಳ, ಎಮ್. ಎ., ಬಿ. ಟಿ., ಇವರು
ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ
ವಾಙ್ಮಯ ಶಾಖೆಯ ಕಚೇರಿಯಲ್ಲಿ (ಮನೆ ನಂ. ೭೪೨೦) ಪ್ರಕಟಿಸಿದರು.

ವಾಙ್ಮಯ ಶಾಖೆಯ ಸದಸ್ಯರು :

೧ ಶ್ರೀಮಾನ್ ವೀರಭದ್ರಪ್ಪ ಬಸಪ್ಪ ಹಾಲಬಾವಿ, ಬಿ. ಎ., ಎಲ್ಎಲ್. ಬಿ.,
ನಿವೃತ್ತ ೧ನೆಯ ವರ್ಗ ಸಬ್‌ಜಜ್ಜ, ಧಾರವಾಡ-ಅಧ್ಯಕ್ಷ.

೨ ,, ವೀರಭದ್ರಪ್ಪ ರುದ್ರಪ್ಪ ಕೊಪ್ಪಳ, ಎಮ್. ಎ., ಬಿ. ಟಿ.,
ಅಧ್ಯಾಪಕ, ರಾಜಾಲಖಮಗೌಡಾ ಸರದೇಸಾಯಿ ಹಾಯ್‌ಸ್ಕೂಲ, ಧಾರವಾಡ
-ಡೆಪ್ಯುಟಿ ಚೆನ್ನಬಸಪ್ಪ ಪುಸ್ತಕಾಲಯದ ವ್ಯವಸ್ಥಾಪಕ.

೩ ,, ವಿರೂಪಾಕ್ಷಪ್ಪ ಶಿವಯೋಗಪ್ಪ ಬಸವನಾಳ, ಬಿ. ಎ., ಎಲ್ಎಲ್. ಬಿ.,
ವಕೀಲ, ಧಾರವಾಡ
-ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಗೌರವ ಕಾರ್ಯದರ್ಶಿ.

೪ ಡಾಕ್ಟರ ಶಿವಲಿಂಗಯ್ಯ ಚೆನ್ನಬಸವಯ್ಯಸ್ವಾಮಿ ನಂದೀಮಠ,
ಎಮ್. ಎ. (ಮುಂಬಯಿ), ಪಿಎಚ್. ಡಿ. (ಲಂಡನ್), ಎಮ್. ಆರ್. ಎ. ಎಸ್.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ, ಪ್ರಿನ್ಸಿಪಾಲ್, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ.

೫ ಶ್ರೀಮಾನ್ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ,
ಎಮ್. ಎ., ಎಮ್. ಆರ್. ಎ. ಎಸ್.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ, ಪ್ರೊಫೆಸರ, ಲಿಂಗರಾಜ ಆರ್ಟ್ಸ ಕಾಲೇಜ, ಬೆಳಗಾಂವ.

೬ ರಾವಸಾಹೇಬ ಫಕೀರಪ್ಪ ಗುರುಬಸವಪ್ಪ ಹಳಕಟ್ಟಿ, ಬಿ. ಎ., ಎಲ್ಎಲ್. ಬಿ.,
ಮುಂಬಯಿ ವಿಶ್ವವಿದ್ಯಾಲಯದ ಸಭಾಸದ,
"ಶಿವಾನುಭವ" ದ ಮತ್ತು "ನವಕರ್ನಾಟಕ" ದ ಸಂಪಾದಕ, ವಿಜಾಪುರ.

೭ ಶ್ರೀಮಾನ್ ಸಿದ್ಧೇಶ್ವರ ಸಿದ್ಧಲಿಂಗಸ್ವಾಮಿ ಮಳಿಮಠ, ಬಿ. ಎ., ಎಲ್ಎಲ್. ಬಿ.,
ಆಡ್ವೊಕೇಟ, ಧಾರವಾಡ.

೮ ,, ಬುದ್ಧಯ್ಯ ಮಗೆಯ್ಯಸ್ವಾಮಿ ಪುರಾಣಿಕ, ಧಾರವಾಡ.

ಎಮ್. ಮಧುಲಿಂಗಪ್ಪ ಹರ್ಡೇಕರ ಇವರು ತಮ್ಮ
ಮಾಳಮಡ್ಡಿಯಲ್ಲಿರುವ ಲಿಂಗರಾಜ ಆರ್ಟ ಪ್ರೆಸ್ಸಿನಲ್ಲಿ
(ಮನೆ ನಂ. ೨೨೦) ಮುದ್ರಿಸಿದರು.

೨ನೆಯ ಭಾಗದ ಪರಿವಿಡಿ

ನಾಲ್ಕನೆಯ ಕಾಂಡ

ಐದನೆಯ ಕಾಂಡ

ಚಿತ್ರಗಳು

ನಾಲ್ಕನೆಯ ಕಾಂಡ

(ಒಂದನೆಯ ಸಂಧಿ)

ನಾಲ್ವತ್ತೊಂದನೆಯ ಸಂಧಿ

ಸೂಚನೆ

ತಾರಕಾತ್ಮಜರಲೇಗೆ ಕಣ್ಗೆಟ್ಟು ಸುರರಿರದೆ |
ಮಾರಾರಿಗತುಳಪಶುಪತಿಪಟ್ಟಮಂ ಕಟ್ಟಿ |
ಕ್ರೂರಖಳರಂ ಕೊಲ್ವೆನೆಂದೀಶ್ವರಂ ತ್ರಿಪುರಕ್ಕೈದಿ ಪಾಳೆಯಮಿಳಿದನು ||

ಪುರದಹನಕರ ಕಾಮಹರ ಪರಮಸುರನದೀ |
ಧರ ಕೃಪಾಕರ ದಿವಾಕರಕೋಟಿವರತೇಜ |
ನರವಿಪುಳತರಶೈವಶರವರದ ಹರ ಮಹೇಶ್ವರ ದುರುಳಖಳಸಂಹರ ||
ಮುರಹರ ಸರೋಜಜಾಮರವರಾನತದಿವ್ಯ |
ಚರಣ ಘನತರಪುಣ್ಯಕರಣ ವ್ಯಾಘ್ರಾಜಿನಾ |
ವರಣ ನತಸಂಕುಲೋದ್ಧರಣ ಸರ್ಪಪ್ರಜಾಭರಣ ಸಲಹಾನತರನು || ೧ ||

ಸನ್ನುತಗುಣಾಗ್ರಣಿಯೆ ಸಕಲಧರ್ಮದ ಖಣಿಯೆ |
ಚೆನ್ನಬಸವೇಶ ದುಷ್ಕೃತನಾಶ ಪೇಳ್ವುದೆನ |
ಗಿನ್ನು ತಾರಕನ ಸುತರಾ ಗುಹೆಯೊಳಡಿಗಿರ್ದು ಬಳಿಕಲೇನಾದರೆನಲು ||
ಚೆನ್ನಾಗಿ ಕೇಳಯ್ಯ ಸಿದ್ಧರಾಮೇಶ ಶಿವ |
ಸನ್ನುತಕಥಾಮೃತದ ಸುಗ್ಗಿಯಂ ಶೌರ್ಯಸಂ |
ಪನ್ನನೆಂದೆನಿಪ ಷಣ್ಮುಖನಿಂದೆ ತಾರಕಂ ಮಡಿದ ಸಮನಂತರದೊಳು || ೨ ||

ತಲೆವಡೆದಳ್ ಧರಾವನಿತೆ ಲೋಕದ ಜನರ್ |
ನಲಿದರ್ ಸಮಸ್ತದೇವಪ್ರತತಿ ದುಂದುಭಿಯ |
ಮೊಳಗಿಸಿ ಗುಡಿತೋರಣಂಗಳಿಂ ಸಿಂಗರಿಸಿ ತಂತಮ್ಮ ನಗರಂಗಳ ||
ಸಲೆ ಪೊಕ್ಕು ಸುಖದಿನಿರುತಿರೆ ತಾರಕಾತ್ಮಜರ್ |
ಕಲಿತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ |
ಗಳೆನಿಪ್ಪ ಖಲಜನಪರು ಮೂವರುಂ ಗಿರಿಗುಹಾಂತರದೊಳಡಗಿರ್ದರು * || ೩ ||

---

೧ ಶಕ್ತಿ (ಮ.) ೨ ಊದ (ಹು, ಮ.) ೩-೩ ರಾಮಯ್ಯ ನಿನ | ಗಿನ್ನು ಪೇಳ್ವೆ ತಾರಕಾತ್ಮಜರ್ ಗುಹೆಗಳಿಂದ | ಬನ್ನಬಟ್ಟರ್ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿಗಳೆನಿಪ್ಪರು || (ಶಿ, ಕೋ.) ೪ ವ್ಯಾಪಕ (ಹು.) * ಈ ಪದ್ಯವು ಶಿ, ಗೋ. ಪ್ರತಿಗಳಲ್ಲಿಲ್ಲ.

ನೂಕಿದರ್ ಖಳರಿಂತು ಬಹುಕಾಲಮಂ ಗುಹಾ |
ನೀಕದೊಳ್ ಭೇದದಿಂ ಮೇಣೊಂದು ದಿವಸ ಚಿಂ |
ತಾಕುಳಿತಮಾನಸರ್ ತಮ್ಮೊಳಗೆ ತಾವೆ ನೆನೆದಾಲೋಚನಂಗೈವುತೆ ||
ಸಾಕಿನ್ನು ಚಿಂತೆ ನಮ್ಮಯ್ಯಂಗೆ ವರವಿತ್ತ |
ಕೋಕನದಗರ್ಭನಂ ಕುರಿತು ತಪವಂ ಮಾಡಿ |
ಬೇಕಾದ ವರಗಳಂ ಪಡೆದು ದಿವಿಜರ ಬಡಿವೆವೇಕೆ ಸಂಶಯವೆಂದರು || ೪ ||

ಖಳರಿಂತು ನಿರ್ಧರಿಸಿ ಕ್ರೂರತಪಮಂ ಮಾಡಿ |
ಸುಲಭವಾಗಿರ್ದ ವರವಂ ಪಡೆವೆವೆಂದಾಗ |
ತೊಳಗುವ ತಪೋವನವ ನೋಡುತ್ತೈತರೆ ಮುಂದೆ ಕಾಣಿಸಿತು ವನಮದರೊಳು ||
ಸುಲಿಪಲ್ಲ ಕೆಂಜಡೆಯ ಕೃಷ್ಣಾಜಿನಾಂಬರದ |
ವಿಲಸದ್ವಿಭೂತಿಲೇಪನದ ಸರ್ವಾಂಗದು |
ಜ್ವಲಿಪಕ್ಷಮಾಲಾವಿಭೂಷಿತೋರಸ್ಥಲದ ಮುನಿವರರ್ ಕಣ್ಗೆಸೆದರು || ೫ ||

ಎಲೆ ಸಿದ್ಧರಾಮು ಕೇಳಾ ವನದೊಳೆಸೆವ ತಿಳಿ |
ಗೊಳದಲ್ಲಿ ಮಿಂದು ಶುಚಿಯಾಗಿ ತೀರವನಡರಿ |
ನಳಿನಬಾಂಧವಗಂ ನಮಸ್ಕರಿಸಿ ತಮ್ಮ ಮನದಿಷ್ಟಂಗಳಂ ಜಾನಿಸಿ ||
ಜಲಜಸಂಭವನ ನಿರ್ಮಳಪೂತಮೂರ್ತಿಯಂ |
ನೆಲೆಗೊಳಿಸಿ ತಮ್ಮ ಹೃತ್ಕಮಲದೊಳ್ ಯೋಗಿಸಂ |
ಕುಲದೊಳಪ್ರತಿಮರೆಂದೆನಿಸಿ ಖಳರಾಗತೊಡಗಿದರುಗ್ರತರತಪವನು || ೬ ||

ಚರಣದುಂಗುಟವುನಿಳೆಗೂರಿ ನಾಸಾಗ್ರದೊಳ |
ಗಿರಿಸಿ ದೃಷ್ಟಿಯನಮಲತರತಪೋವೃದ್ಧಿಯಂ |
ಹುರಿಗೊಳಿಸಿ ಚಿತ್ತಮಂ ಬಲಿದು ನಿಷ್ಕಂಪನಂ ಮಾಡಿ ಸರ್ವಾಂಗದೊಳಗೆ ||
ಇರದೆ ದೇಹಾಭಿಮಾನವನುಳಿದುಮತ್ಯುಗ್ರ |
ತರವಾದ ನಿಷ್ಠೆಯಿಂ ದುಷ್ಟದೈತೇಯರಾ |
ಚರಿಸುತಿರೆ ತತ್ತಪೋವಹ್ನಿ ಸುಡುತಿರ್ದುದಂದಖಿಳಲೋಕವ ಕ್ಷಣದೊಳು[1] || ೭ ||

---

೧ ನಾ ಕ್ಷಣಂ (ಶಿ.)

ಹಾರಿದುದು ಶಿಖಿರಿಶಿಖರಂ ಸಿಡಿದು ನಭಕೆ ಕಾ |
ವೇರಿದುದು ನಿರ್ಜರಾಂಬುಪ್ರವಾಹಂಗಳುರೆ |
ಮೀರಿದುದು ಮುನಿಕುಲಂ ತದ್ವನಮುನಾ ಕ್ಷಣಮತಿತ್ವರಿತಗಮನದಿಂದೆ |
ಸೇರಿದುದು ಭಯಮನಹಿಸಂಕುಲಂ ತವೆ ಕರಿಕು |
ಮೋರಿದುದು ನಾನಾಕುಜಪ್ರತತಿಯೊಡನೊಡನೆ |
ಚೀರಿದುದು ಸಕಲಖಗಮೃಗಕುಲಂ ತಚ್ಛಿಖಿಯನೇನೆಂದು ಬಣ್ಣಿಸುವೆನು || ೮ ||

ಘುಳುಘುಳುಧ್ವಾನದಿಂ ಸಾಗರಂ ಕುದಿದು ತಳ |
ಮಳಲನೆಬ್ಬಿಸೆ ದಿಶಾಗಜರಾಜಿ ತಾಪದಿಂ |
ತಲೆಗೊಡಹೆ ಶೇಷನ ಫಣಾಮಣಿಗೆ ಶಿಖಿ ತಾಗೆ ಕಚ್ಛಪನ ಬೆನ್ ಕಾಯಲು |
ಜಲರುಹಭವಾಂಡಬಹಿರಾವರಣಮುಂ ತುಡುಕಿ |
ಕುಲಗಿರಿಗಳಚಲತೆಯನುಳಿದಾ ವಿಧಾತ್ರನುಂ |
ಬಳಿಕೆ ಸೃಷ್ಟಿಯನೆಸಗುವಂತಖಿಳಲೋಕಮಂ ದಹಿಸುತಿರ್ದುದು ಭರದೊಳು || ೯ ||

ಏನೆಂಬೆನಸುರರ ತಪಸ್ತೇಜಮುರೆ ಪೆರ್ಚಿ |
ಭಾನುಮಂಡಲಮಂ ತಿರಸ್ಕರಿಸಿ ಬೇಗದಿಂ |
ಭೂ ನಾಗ ನಾಕಲೋಕದ ಜನರ್ಗತಿಭಯಂಕರಮಾಗಿ ತೋರುತಿರಲು ||
[1]ತಾನರಿದನಬ್ಜಸಂಭವನಾಗ ಚಿಂತೆಯಿಂ |
ಜಾನಿಸಿದನೆದೆಯೊಳಗೆ ಖಳರದಿರೊಳಾಂ ಸುಳಿಯೆ |
ಹಾನಿ ತಪ್ಪದು ಸುರರ್ಗಾಂಶಿ ಪೋಗದಿರಬಾರದೇನ ಮಾಡುವೆನೆಂದನು[1] || ೧೦ ||

ಕತ್ತಲೆಗೆ ಕಠಿಣತೆಯನಹಿಗಳ್ಗೆ ಗರಿಗಳಂ |
ಮತ್ತಹಸ್ತಿಗೆ ಮಹಾಯುದ್ಧವ ಧರಾಧರದ |
ಮೊತ್ತಕ್ಕೆ ಚೈತನ್ಯಮಂ ಕೊಟ್ಟೊಡುಳಿಯುವುವೆ ಲೋಕಮುಂ ತಾಂ ಕೃಪೆಯೊಳು ||
ತತ್ತಾಪಸರ್ಗೆ ಮೊಗದೋರಲವರೇನೆಂದು |
ಬಿತ್ತರಿಪರೋ ಶಿವನ ಕರುಣಮಿರೆ ದಿವಿಜರ್ಗೆ |
ಮತ್ತಾವ ಭಯಮಿಲ್ಲವೆನುತೆ [2]ಬಂದಾಗ ಖಳ[2]ತಾಪಸರೊಳಿಂತೆಂದನು ೞ || ೧೧ ||

---

೧ ಮೊರೆ [illegible] ಜಾನಿಸಿದನೆದೆಯೊಳಗೆ ಕಮಲಸಂಭವನಾಗ [illegible]
[illegible]
[illegible]
ೞ ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ಎಲೆ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ।
ಬಳಲಿದಿರಿ ಬಹಳಕಾಲಂ ನಡೆದುದೀ ತಪಂ ।
ಸಲೆ ಮೆಚ್ಚಿದೆಂ ನಿಮ್ಮ ಮನದಭೀಷ್ಟಮದಾವುದಿತ್ತಪೆಂ ಪೇಳಿನಲ್ಕೆ ॥
ಬಳಿಕ ಕಣ್ದೆರೆದು ಕಂಡರ್ ನಳಿನಸಂಭವನ ।
ಸುಲಲಿತಮಹಾಸೌಮ್ಯಮೂರ್ತಿಯಂ ಭಾಳತಟ ।
ವಿಳಿತವಿಲಸಿತಕರಾಂಜಲಿಯೊಪ್ಪೆ ವೈಯಿಕ್ಕಿ ತುತಿಸಿದರ್ ಭಕ್ತಿಯಿಂದೆ ॥ ೧೨ ॥

ಜಯಜಯ ಜನನಕರ್ತೃ ಜಯ ವಾಕ್ಪತೀಭರ್ತೃ ।
ಜಯಜಯ ಜಗದ್ವಿನುತ ಜಯ ಲೋಕಪಾವನತ ।
ಜಯಜಯ [1]ಸುರಜ್ಯೇಷ್ಟ ಜಯ ಸರ್ವಜನರಿಷ್ಟ ಜಯಜಯ ಹಿರಣ್ಯಗರ್ಭ ॥
ಜಯಜಯ ಚತುರ್ವದನ ಜಯ ಸಕಲಗುಣಸದನ ।
ಜಯಜಯ ದುರಿತದೂರ ಜಯ ಸುನಿಗಮೋದ್ಧಾರ[1] ।
ಜಯಜಯ ಕೃಪಾಪಾಂಗ ಜಯ ವಿಮಲಸರ್ವಾಂಗ ಜಯವೆನುತ್ತಿಂತೆಂದರು ॥ ೧೩ ॥

ಗಗನಾಗ್ರದೊಳ್ ಮುಪ್ಪುರಂಗಳಂ ಮಾಡುವೆವು ।
ಸೊಗಸಾಗಿ ಕನಕಕಲಧೌತಲೋಹಂಗಳಿಂ ।
ನಗರಮೂರಕ್ಕೊಂದೆ ಕೀಲದಂ ಸುರನರಭುಜಂಗಮರ್ ಕಾಣದಿರಲಿ[2] ॥
ಮಿಗೆ ಸುರಸಹಸ್ರವರುಷಕ್ಕಮೊಂದಾಗಲಂ ।
ತಗಲದಂದೊಂದಂಬಿನಿಂದೆಸೆಯಲೀ ಪೊಳ್ದು ।
ನಗರಮುಳಿಗಲ್ಲದೊಡೆ ಸಂತತಂ ತಿರುಗುತಿರಲೆಂದು ಮತ್ತಿಂತೆಂದರು ॥ ೧೪ ॥

ಖಚರ ಕಿನ್ನರ ಕಿಂಪುರುಷ ಯಕ್ಷ ರಾಕ್ಷಸ ।
ಪ್ರಚಯಮಿರದೊಲ್ಪೈಸಲೆಮ್ಮನೆಡೆವಿಡದೆ ಮ ।
ದ್ವಚನಮನತಿಕ್ರಮಿಸಿ ನಡೆಯದಿರಲೀ ಲೋಕಿಗರ್ ನಾಕಿಗರ್ ಭಯದೊಳು ॥
ಉಚಿತವಿದನೆ ಕರುಣಿಸೆನೆ ವಾಗ್ಮಧೂವರಂ ।
ವಿಚಲಮಾನಸನಾಗಿ ಶಿವಶಿವಾ ಖಲಪೂರ್ವ ।
ರಚಿತಸಂಕಲ್ಪವೇ ತೋರಿದುದಲಾಯೆನುತೆ ದನುಜರೊಡನಿಂತೆಂದನು ॥ ೧೫ ॥

೧-೧ ದುರಿತದೂರ ಜಯ ಸುನಿಗಮೋದ್ಧಾರ ಜಯಜಯ ಹಿರಣ್ಯಗರ್ಭಾ ॥ ಜಯಜಯ ಚತುರ್ವದನ ಜಯಸಕಲಗುಣಸದನ । ಜಯಜಯ ಸುರಶ್ರೇಷ್ಠ ಜಯಸರ್ವಜನರಿಷ್ಟ । (ಹು, ಪ, ಗೋ.) ೨ ಲು (ಮ.) ೩ ರ (ಹು. ಮ.) ೪-೪ ಸುಪ್ಪಪೆನಲ್ ವಾಗ್ (ಶಿ.)

ಅಂತೆ ಪುರಮೂರನೇ ರಚಿಸಿ ನಿಮಗಾ ದಿವಿಜ |
ಸಂತತಿಗಳೊಳಗಂ ಸಮನಿಸಲ್[1] ತ್ರಿಪುರಂಗ |
ಳಂ ತವೆ ರಣಾಂಕಣದೊಳಾವವಂ ಬಾಣೈಕದಿಂದೆಸುವನಾತನಿಂದೆ ||
ಅಂತವಹುದಾಗ ಪೋಗೆನುತೆ ಕಮಲೋದ್ಭವಂ |
ತಾಂ ತಳರ್ದನಾಗಸಕ್ಕಂಜೆಯುನಡದುರ್ ಖಲ |
ರಂತರಂಗದ ಮಹಾನಂದಮಂ ಬಣ್ಣಿಸುವೊಡಾವಂಗೆ ವಶವೆಂದನು || ೧೬ ||

ಮಸಗಿ ನೀರಸಕುಜಾರಣ್ಯಮಂ ಬಿಡದೆ ಭ |
ಕ್ಷಿಸುವ ವಹ್ನಿಗೆ ಮರುದ್ಬಲಮಾಗೆ ನಿಂದು ಯೋ |
ಚಿಸುವುದೇನುಂಟು ಮುನ್ನವೆ ತಾರಕಾತ್ಮಜರ್ ಕಮಲಜಂ ವರವೀಯಲು ||
ವಶವಿಲ್ಲದಿಹ ಕಾರ್ಯಮಾವುದೈ ತವೆ ಮಯಂ |
ಗಸಮಬಲದಾನವರ್ ಸೂಚಿಸಲ್ ಕೇಳಿ ನಿ |
ರ್ಮಿಸಿದಂ ಪುರತ್ರಯಮನಾಕಾಶಚುಂಬಿತಪ್ರಾಸಾದತತಿ ಮೆರೆಯಲು || ೧೭ ||

ಪೊಗುರೊಗುವ ಪೊಂಗೊಂಟೆ ತಾರಕಾಕ್ಷಂಗೆ ಝಗ |
ಝಗಿಪ ಬೆಳ್ಳಿಯ ಕೋಂಟೆ ಕಮಲನಯನಂಗೆ ಕಾ |
ರ್ಬೊಗೆವ ಕಾರ್ಬೊನ್ನಿನದು ವೀರವಿದ್ಯುನ್ಮಾಲಿಗೀ ಕ್ರಮದೊಳಾಣ್ಮರಾಗಿ ||
ಅಗಣಿತಮಹಾವಿಭವದಿಂದೆ ಸಂಪದದಿಂದೆ |
ಮಿಗೆ ನೆರೆವ ಸೈನ್ಯಂ[3]ಗಳಿಂದೆ ಸಂಭ್ರಮದಿಂದೆ[3] |
ಸೊಗಸುಬೀರುತ್ತಿದ್ದುವೀಕ್ಷಿಸುವರಕ್ಷಿಗಳ್ಗೀನೆಂಬೆನಚ್ಚರಿಯನು || ೧೮ ||

ಹರಿಯಂತೆ ಚಾರುವನಮಾಲಾಭಿರಂಜಿತಂ |
ಹರನಂತೆ ಭೋಗಿಸಿಕರಾಲಂಕೃತಂ ಸದಾ[4] |
ಶರಧಿವೊಲ್ ಲಾವಣ್ಯಸಂಯುತಂ ಗಿರಿಯಂತೆ ದನುಜಶಾರ್ದೂಲಾಸ್ಪದಂ ||
ಪರಿಕಿಸಲ್ ಮಾರ್ಗಣತೆಯುಗ್ರತೆ ಜಡಾಶ್ರಯತೆ |
ಪರಮಕಠಿಣತೆಯೆಸೆಸ್ಕೊಳಿಸ್ಲಿಂದು ಪುರವಸಿತೆ |
ಬಿರುದ ಕಡೆಯುವನಾಂತಳಿಸೆ ತಾರಕಾಂಬಕನ ಪೊಂಗೊಂಟಿ ಕಣ್ಗೆಸೆದುದು || ೧೯ ||

---

೧ ಲಿ | ಹು, ಮ. | ೨ ಳ್ (ಶಿ.) ೩-೩ ಸಂದೋಹಂಗಳಿಂದೆ ಮಿಗೆ (ಶಿ, ಗೋ.) ೪ ನಾಡೆ (ಹು.)

ಬೇಸರದೆ ನಿಚ್ಚ ವಾಕಾಶದೊಳ್ ತೊಳಲ್ವುದೆನ |
ಗೇಸರಾಸರ್ ಬಿಡದೆ ಬಾಂಬಾವಿಗಂಗಮುಮ |
ನೋಸರಿಸ[೧]ದಿಪ್ಪುದೆನಿತು[೧]ಬ್ಬಿ ತರಹರಿಸದಾನಪುರರಂ ಕೆಳೆಗೊಳಲ್ಕೆ ||
ಆ ಸುಪರ್ವರೆ ತಿಂದು ತೇಗುವರ್ ಪೋಗಿ ತಾ |
ನಿ[೨] ಸುರದ್ವಿಷರ ಸೇರುವೆನೆಂ[೨]ದು ವಿಧು[೩] ಬಂದು |
ಲೇಸಾಗಿ ನಿಂದುದೆ[೪]ನೆ ರಜತಕೋಟಾವಳಿಯ ನಿರ್ಮಿತಪುರಂ ಮೆರೆದುದು || ೨೦ ||

ಪಗಲೊಳ್ ಪ್ರಚಾರಮಂ ಮಾಳ್ಪೆನೆಂದೊಡೆ ಖಗಂ |
ಬಗೆಯುದರೆಯಟ್ಟುವಂ ಪಕ್ಷದ್ವಯಂಗಳೊಳ |
ಗಗಲಿ ಕೂಡುವ ಚಂದ್ರಕಲೆಗಳ್ ರಾತ್ರಿಯೊಳ್ ಪೂರ್ಣತೆಯನೆನಗೀಯುವು ||
ಮಿಗೆ ನಿಲಲ್ಕೆಡೆಗಾಣೆನೀ ಖಳರ್ ತಾಮಸರ್ |
ಪೊಗುವೊಡಿದು ನೆಲೆಯೆನುತ್ತಂಧಕಾರಂ ದನುಜ |
ನಗರಮಂ ಪರಿವೇಷ್ಟಿಸಿರ್ಪುದೆನೆ ಕಾರ್ಬೊನ್ನ ಕೋಂಟೆಯಿಂ ಪುರಮೆಸೆದುದು
|| ೨೧ ||

ಅಮರಾವತಿಯನೆಮಗೆ ಸರಿಯೆಂದು ಪೊಗಳೆಯು |
ತ್ತಮರಿದಂ ಮೆಚ್ಚುವರೆ ಕುಲಗೋತ್ರಘಾತಕಂ |
ಗಮರ್ವ ಮನೆ ತಾನಾದುದನಿತಲ್ಲದೂರ್ಧ್ವಗಮನಾಪೇಕ್ಷೆಯಂ ಮಾಳ್ಪುದು ||
ಸುಮನೋಹರಾಸ್ಪದಂ ಭೂಸ್ವರ್ಗಮಧ್ಯಮನು |
ಪಮ[೬]ಮಪ್ಪೆಮಗೆ ಸಾಟಿಯೆಂತೆ[೬]ನುತೆ ತ್ರಿಪುರಂಗ |
ಳಮರಪುರಮಂ ನಗುವುವೆನೆ ಕೇರಿಕೇರಿಯ ಸುಧಾಧವಳಿಮಂ ಮೆರೆದುವು || ೨೨ ||

ಇಂತೆಸೆವ ಮುಪ್ಪುರದ ಸಿರಿಯ ಬಣ್ಣಿಪೊಡಾವ |
ಗಂ ತೀರದತುಳಬಲದೈತೇಯತೀವ್ರತೇ |
ಜಂ ತೀವಿತಖಿಳಲೋಕಂಗಳಂ ಕಂಗಳೆರಡೈನೂರನುಳ್ಳವಂಗೆ ||
ಚಿಂತೆ ನಿಃಪ್ರತ್ಯೂಹಮಾಯ್ತುಳಿದ ದಿಕ್ಪಾಲ |
ಸಂತತಿಯ ಮನದಂತರವದೇನೊ ಪರ್ವತ ಗು |
ಹಾಂತರದೆ ಮೈಗರೆದ ಪಳೆರಕ್ಕಸರ್ ಬಂದು ಸೇರುತಿರ್ದರ್ ಖಳರನು ⊛ || ೨೩ ||

೧-೧ ಬಿಹುದೆನುತ್ತು (ಶಿ, ಗೋ.) ೨-೨ ದುಃಇದು (ಶಿ, ಗೋ.) ೩ ದನೆ (ಹು, ಮ.)
೪ ಳೀ (ಮ.) ; ಉಂ (ಹು.) ೫ ನ (ಶಿ.) ೬-೬ ಕೆಯೆಮಗೇ ಸಾಟಯೇ ಯ (ಶಿ.)
⊛ ಈ ಪದ್ಯವು ಹು, ಮತ್ತು ಮುದ್ರಿತವಾದ ಎಲ್ಲ ಪ್ರತಿಗಳಲ್ಲಿ ಇಲ್ಲ.

ಕೇಳಿದೆಯಲಾ ಸಿದ್ಧರಾಮ ದನುಜರ ಭಾಗ್ಯ |
ದೇಳಿಗೆಯನಗಡುರಕ್ಕಸರಿರ್ದರಿತ್ತಲಿಂ[೧] |
ಸೋಳಲೇಂ ಪೂರ್ವಕಾಲದೊಳಳಿದ[೨] ದಾನವರ ಬಂಧುವರ್ಗಂಗಳಾದ ||
ನೀಳ ನಳ ಕೆ[೩]ಮ್ಮೂಕ ಜಂಭ ಧೂಮ್ರಾಕ್ಷ ಖಳ |
ಕಾಳದಾನವ ಭ[೪]ಟಾಸುರ ಶುಂಭ ಮುಂತಾದ |
ಕಾಳರಕ್ಕಸರ್ಪ್ರಿದಿ ಸೇರಿದರ್ ತ್ರಿಪುರಮಂ ಪರಿಗಣನೆಗರಿದೆನಲ್ಕೆ || ೨೪ ||

ತಾರಕಸುತರ್ ಗಡ ಸರೋಜಭವನಂ ಕೂರ್ತು |
ಘೋರತಪವಂ ಮಾಡಿದರ್ ಗಡಾ ದೈತ್ಯರ್ಗೆ |
ವಾರಿಜೋದ್ಭವನಿತ್ತ ಗಡ ಸದ್ವರಂಗಳಂ ತದ್ವರದ ಬಲ್ಮೆಯಿಂದೆ ||
ಸೇರಿತು ಗಡೈಶ್ವರ್ಯ ತತ್ತ್ರಿ[೫]ಪುರವಂ ಮಾಡಿ |
ಗೋರಿಗೊಳಿಪರ್ ಗಡ ಸಮಸ್ತಲೋಕಂಗಳೊಳ್ |
ಪಾರಿಸಿಮಗೆಂತೆನುತೆ ಸಕಲಲೋಕಂಗಳೊಳ್ ಗುಜುಗುಜು ಮಸಗುತಿರ್ದುದು
|| ೨೫ ||

ಕೀರ್ತಿಸುವುದೇಂ ಪ್ರಳಯಕಾಲದೆ ಜಗತ್ತಿನೊಳ್ |
ನರ್ತಿಸುವ ಘೋರತರ ಹರನಯನಜಾತಸಂ |
ವರ್ತವಹ್ನಿಗೆ ಕಟ್ಟೆಹಾಯ್ದು ಕಟ್ಟೋಣಗಿರ್ದ ಮೆಳಗಳೆನಡ್ಡೈಪುವೆ ||
ಆರ್ತಮಗೆ ಸರಿಸಮಾನವರಿನ್ನು ಲೋಕದೊಳ್ |
ವರ್ತಿಸುವರಾರೆನುತೆ ಗರ್ವದಿಂ ತಾರಕಸು |
ತರ್ತಮ್ಮ ಸೇನೆಸಹಿತೈತಂದು ಭೂಲೋಕಮಂ ಸೂರೆಗೊಳುತಿರ್ದರು ✿ || ೨೬ ||

ಚಂಡಲಂಘನಹಯಮಿಭಸ್ಯಂದನಾದಿಗಳ |
ಕೊಂಡಲಂಪಿಂಡೆ ತತ್ಪುರಗಳೊಳ್ ನುತಚಂದ್ರ |
ಮಂಡಲಂಬೊಲ್ ಮೆರೆವ ಮೊಗದಬಲೆಯರ ಪಿಡಿದು ತನ್ನ್ಪುರ ಜೀವಂಗಳ ||
ಹಿಂಡಲಂಬುಧಿವೇಲೆಯಾಗಿರ್ದ ಸಕಲಭೂ |
ಮಂಡಲಂ ಭಯರಸದೊಳಾಳಲದ ಕೇಳುತಾ |
ಹಿಂಡಲಂ ಬಹಳಚಿಂತಾಕ್ರಾಂತನಾಗಿರಲ್ಕಿತ್ತಲತಿಸಂಭ್ರಮದೊಳು ✿ || ೨೭ ||

೧ ರ್ತ್ತಲೀಂ (ಹು, ಪ.) ೨ ಉಳ್ಳ (ಪ.) ೩ ಕ (ಮ.) ೪ ಜ (ಹು, ಮ.) ೫ ತತಿ ತ್ರಿ (ಹು.) ✿ ಈ ಪದ್ಯವು ಹು, ಹಾಗೂ ಮುದ್ರಿತಪ್ರತಿಗಳಲ್ಲಿಲ್ಲ.

ಉತ್ಸುಕದಿನಿರುತೊಂದುದಿವಸಮಾ ದಾನವರ್
ತತ್ಸಕಲಚತುರಂಗಮುಂ ಕೂಡಿಕೊಂಡು ಸಂ |
ಪತ್ಸೌಖ್ಯದಿಂ ಕೊಬ್ಬಿ ವಿಪುಲದೋರ್ದಂಡಕಂಡೂತಿಯಂ ಕಳೆವೆನೆಂದು ||
ಉತ್ಸುಕ[೧]ದೊಳೈತಂದು ಕಂಗೊಳಿಪ ನಿರ್ಮಲವಿ |
ಯತ್ಸಿಂಧುವಂ ದಾಂಟಿ ನಾಕ[೨]ಲೋಕಂಬೊಕ್ಕು |
ಕುತ್ಸಿತದೊಳಖಿಳದಿಕ್ಪಾಲರಂ ಸದೆದು ತತ್ಪುರಕೆ ಠಾಣೆ[೩]ಯನಿಟ್ಟರು || ೨೮ ||

ಹರಿಹರಿದನಗ್ನಿ ಭಗ್ನೀಕೃತವಿಜಯನಾದ |
ನಿರದೆ ಯಮ ನಿಯಮಮಯಯುತನಾದನಾನಿರುತಿ |
ನಿರುತಂ ಗುಹಾಂತರಮನೈದಿದಂ ಸಲೆ ವರುಣ ಶರಣೆಂದು ಜೀವಿಸಿದನು ||
ಮರುತನುರುತರಪರಾಭವಿಯಾದನತಿಭಯಂ |
ಕರದಾನವರ ದೆಸೆಗೆ[೪] ದೆಸೆಗೆಟ್ಟು ಭೀತಿಯಿಂ |
ದಿರದೆ ಧನದಂ ಬಿನದಮಂ ಬಿಟ್ಟನೀಶಾನನಾಶುಗಮನದೆ ಪೋದನು || ೨೯ ||

ಅಲ್ಲಿಯ ಸಮಸ್ತಹಯಗಜಮುಖ್ಯವಸ್ತುಗಳ |
ನೆಲ್ಲವಂ ತ್ರಿಪುರಕ್ಕೆ ಕಳುಪಿ ಪುರಜನಗಳಂ |
ಘಲ್ಲಿಸುತೆ ಸುರಪನಂ ಪರಿಭವಿಸಿ ತತ್ಪುರದ ಸತಿಯರಂ ಸೂರೆಗೊಂಡು ||
ಮೆಲ್ಲಮೆಲ್ಲನೆ ಪೋಗಿ ವೈಗರೆವ ಸುಭಟರ್ಗ |
ಳೆಲ್ಲರಂ ಸದೆಬಡಿದು ತಿರುಗಿದರ್ ದಾನವರ್ |
ಗೆಲ್ಲ[೫]ವೆಂದೆಂಬ ಕಾಮಿನಿಯ ಮುಂದಲೆವಿಡಿದು ಸೈನಿಕದ ಗಡಣದಿಂದೆ[೫] || ೩೦ ||

ಕೋಡದ ಸುಭಟರಿಲ್ಲ ತ್ರಿಜಗದೊಳ್ ಕೂರ್ತು ಕೊಂ |
ಡಾಡದ ದನುಜರಿಲ್ಲ ಕಂಡು ನಂಬುಗೆಗಳಂ |
ಬೇಡದವನಿಪರಿಲ್ಲ ದುರ್ಗಮಂ ಧನಮಂ ಸಮಸ್ತಸಂಪದವನುಳಿದು ||
ಓಡದ ಪಗೆಗಳಿಲ್ಲ ಬಹುದಿಗಂತದೊಳೆ ಕೈ |
ಗೂಡದ ವಿಜಯವಿಲ್ಲ ಮಾ[೬]ಡೆ ಮನಸಂದಿವರ್ |
ಮಾಡದ ಮಹಾಹಿಂಸೆಯಿಲ್ಲ ದಾನವರ ಭುಜಬಲದಿರವನೇನೆಂಬೆನು || ೩೧ ||

೧ ತ್ಸವ (ಹು, ಮು.) ೨ ಗ (ಹು, ಮು.) ೩ ಥಾಳಿ (ಹು.) ೪ ದದಾನವರಿಂದೆ (ಶಿ, ಗೋ.) ೫-೫ ಬಲವಾಗಿ ಜಯಕಾಮಿನಿಯ ಮುಂದಲೆಯ ಪಿಡಿದು ಬಂದರ್ ವೇಗದೆ (ಹು.) ೬ ನಾ (ಹು, ಮು.)

ಈ ಪರಿಯೊಳಖಿಳಲೋಕಾಳಿಗಳ ಪಾಳಿಗಳ |
ನಾ ಪುರದ ದನುಜಪ್ರತಾಪಮುಂ ಕೋಪಮುಂ |
ವ್ಯಾಪಿಸಿದುದಿತ್ತ ಸುರಪುಂಗವಂ ಭಂಗವಂ ಪಡೆದು ಹಿಮಗಿರಿತಟದೊಳು ||
ರೂಪಳಿದು ಸುರರ ಸಾವಿರಾಪ್ಪದೊಳ್ ಗೋಪ್ಯದೊಳ್ |
ಪಾಪಾತ್ಮರಂ ಜರೆದು ಬಯ್ವುತುಂ ಸುಯ್ವುತುಂ |
ಕೂಪಗತಪುತ್ರಿಕಾವೇಷದಿಂ ರೋಷದಿಂ ಪಲವುದಿನವಿರುತಿರ್ದರು || ೩೨ ||

ಒಂದು ದಿವಸಂ ಸಕಲದಿಕ್ಪಾಲಕರ್ವೆರಸಿ |
ಬಂದು ತದ್ಗಿರಿತಟದ ಘೋರಗಹ್ವರದೊಳ್ ಪು |
ರಂದರಂ ಕುಳ್ಳಿರಲ್ ಪೂರ್ವಕೃತದುಷ್ಕೃತಂ ತಮಗೆ ಕೈಗೂಡಿತೆಂದು ||
ನೊಂದು ದಿವಿಜರ್ ವಿಧಿಯನುರೆ ಬೈವುತಿರೆ ಸುರಪ |
ನೆಂದನಿನ್ನೇಕೆ ಶೋಕಿಪಿರಿ ಮುನ್ನಾವನಿಂ |
ಬಂದುದವನಿಂ ಕಳೆವೆವೇಳಿಯೆನುತ್ತೈತಂದು ಪೊಕ್ಕರಜನೋಲಗವನು || ೩೩ ||

ಕಂಡನಮರೇಂದ್ರಾದಿವೃಂದಾರಕರ ವಕ್ತ್ರ |
ಮಂಡಲದ ದುಗುಡಮನಿದೇನಿದೇನಾವ ಖಳ |
ಸಂಡಲಿದವನೆನೆ ಮಕುಟತಟಘಟಿತವರಕರಾಂಜಳಿಯೊಪ್ಪೆ ಸುರಪಾಲನು ||
ಚಂಡಬಲತಾರಕಸುತರ್ ಸಕಲಲೋಕಮಂ |
ಹಿಂಡಿ ಹಿಳಿದೆಮ್ಮನರೆಯಟ್ಟಲಂದಿತಿಭಯಂ |
ಗೊಂಡು ನಿಮ್ಮಂಘ್ರಿಯಂ ಸಾರ್ದೆವೆನೆ ಸಂತೈಸಿದಂ ದೇವಸಂತತಿಯನು || ೩೪ ||

ರಾಜಹಂಸನನೇರಿ ಕಮಲಜಂ ಬಂದು ಸುರ |
ರಾಜಮುಖ್ಯಾಮರಕದಂಬಕಂ ಬೆರಸು ಸುತ |
ರಾಜತಮಹಾಶೈಲಶಿಖರದೊಳ್ ರಾಜಾಲಯೋಚಿತಾಸ್ಥಾನನಾಗಿ ||
ರಾಜತ್ಸಮಸ್ತಲೋಕೇಶಮಣಿಮಕುಟನಿ |
ರಾಜಸದ್ಯುತಿ ಮಸಗಲಾ ಸಭೆಯನಾಗ ಗಿರಿಶ |
ರಾಜನಂದನೆಯ ವಕ್ಷೋಜಜಾತಘುಸೃಣಾಂಕಿತಾಂಗನಡಿಯೊಳ್ ಮಣಿದರು || ೩೫ ||

೧-೧ ನೂರಿರೋಷಮುಂ ತಾಳ್ದು ಪಲದಿನಮಿರ್ದರು (ಹು, ಮ.) ೨-೨ ನಸಕಲದಿಕ್ಪಾಲಕರ್ವೆರಸಿ ಮನ (ಹು.) ೩ ಅನ (ಹು, ಮ.) ೪-೪ ಮುಖಸಕಲನಿರ್ಜರಮಕುಟಮಣಿಗಣವಿ ರಾಜಮಾನಾಂಘ್ರಿ ರಾಜೀವಯುಗ ರಾಜಾರ್ಕಕೋಟಿಕಿರಣಾವಂಸಿದ || ರಾಜರಾಜಾಪ್ತನನು ಮಹಾರಿ ಕ್ಷೇತ್ರ ರಾಜಶೇಖರನ ಸಭೆಯಂ ಪೊಕ್ಕು ಕುಳಿಸಗಿರಿ । (ಹು.)

ದೇವ ಸಾಕ್ಷಾತ್ಪರಬ್ರಹ್ಮಸ್ವರೂಪ ಭುವ |
ನಾವಲಂಬನ ಸಕಲಗುಣನಿಳಯ ಬಹುಲೋಕ |
ಪಾವನತಪಾದಪಂಕೇಜಾತಯುಗ್ಮ ಸರ್ವೋತ್ತಮ ಭವಾನೀಧವ ||
ಸಾವಧಾನಮೊಳೆಮ್ಮ ಬಿನ್ನಪವ ಕೇಳಿ ಕರು |
ಣಾವಲೋಕನದ ಪೀಯೂಷಮಂ ಕರೆಯೆಂದು |
ದೇವತತಿ ಮುಗು[1]ಳಿರಗಿ ತುತಿಯಿಸೆ ಮಹೇಶ್ವರಂ ಕಮಲಜನನೀಕ್ಷಿಸಿದನು || ೩೫ ||

ಅವಧರಿಸು ಜೀಯ ತಾರಕದೈತ್ಯನಾತ್ಮಜರ್ |
ದಿವಿಜರಂ ಸದೆಬಡಿದು ಹವ್ಯಕವ್ಯಂಗಳಂ |
ತವಿಸಿ ಧರ್ಮವನಧಃಕರಿಸಿ ದುಷ್ಕರ್ಮಮಂ ಪ್ರಕಟಿಸಿ ಜಗಜ್ಜನರನು ||
ಅವಗಡಿಸಲಿಂದ್ರಾದಿ ದೇವತೆಗಳೈತಂದು |
ತವ ಚರಣಕಮಲಮಂ ಸಾರ್ದರಿನ್ನವರ್ಗೆ[2] ಬೆಸ |
ಸುವ ಬುದ್ಧಿಯಾವುದೆನೆ ನಸುನಗುತ್ತೀಶ್ವರಂ ಕಮಲಜಂಗಿಂತೆಂದನು || ೩೬ ||

ನೋಡಿದೈ ಬೊಮ್ಮ ನೀಂ ದನುಜರ್ಗೆ ಮುಂಬರ್ಪ |
ಕೇಡನರಿಯದೆ ವರವನಿತ್ತೆಯವರಿವರ ಸಿರಿ |
ಗೇಡುಗರಲಾ ಮೊದಲ್ ನೀನೀಗ ದಿವಿಜರಂ ಹಿಂದಿಕ್ಕಿ ಬಂದ ಬಳಿಕ ||
ಆಡಲೇನೆಮಗೆ ಪಶುಪತಿಪಟ್ಟಮಂ ಕಟ್ಟಿ |
ನೋಡಿ ಸಂಗ್ರಾಮದೆ ಪುರತ್ರಯದ ವೀರರಂ |
ನಾಡೆ ಸಂಹರಿಪೆವೆನೆ ಪರಶಿವನ ನುಡಿಗೇಳ್ದು ಸುರಕುಲಂ ತಲೆವಾಗಿತು[4] || ೩೭ ||

ಮೂಗುವಟ್ಟಿರಲೇಕೆ ಶಿವನೆಂದ ನುಡಿ ನಿಮಗೆ |
ಸಾಗದೋ ಕಮಲಮಿತ್ರನ ಮಹತ್ತ್ವಂಗಳಂ |
ಗೂಗೆ ಬಲ್ಲುದೆ ಮಿಥ್ಯಮಿದು ತಥ್ಯವೆಂಬುದಂ ಮರುಳುಗಳ್ ನೀವರಿವಿರೇ ||
ಭೋಗದೊಳ್ ಮೈಮರೆದು ನಿಮ್ಮನರಿಯದೆ ವಿಪ |
ತ್ಸಾಗರದೊಳೋಲಾಡಿ ನಿತ್ಯನವ್ಯಯನಭವ |
ನಾಗಿ ರಂಜಿಸುವ ಪರಶಿವನನುರೆ ಮರೆದವರ[5] ಪಶುವೆಂದೊಡೇನೆಂದನು || ೩೮ ||

೧ ರ (ಶಿ.) ೨ ರಿಸ್ನೆವುಗೆ (ಹು, ಮ.) ೩ ತಲೀ (ಹು, ಮ.) ೪ ದೂಗಲು (ಹು.)
೫ ದರಂ (ಹು, ಮ.)

ಸಕಲಭೂತಂಗಳೇ ಪಶುಗಳ್ ವಿಚಾರಿಸ |
ಲ್ಕಕಳಂಕನಾದ ಪರಮಾತ್ಮನೇ ಪಶುಪತಿ ಸ |
ವಿಕಲಮತಿಗಳ್ ತತ್ಪ್ರಪಂಚಮಂ ಬಲ್ಲರೇ ರಚಿಸಿ ಪಟ್ಟಮನೆನಲ್ಕೆ ||
[1]ಪ್ರಕಟಿಸಿದ ವೃಷಪತಿಯ ನುಡಿಗೇಳ್ದು[1] ಬೆಳಗಿರ್ದ |
ಮುಕುರದಂತಾಯ್ತುವರ ಮನದ ಜಾಡ್ಯ[2]ವಿಸ್ವಪ್ನ |
ನಿಕರವಗಜಾಪತಿಗೆ ಮಾಡಿದರ್ ಪಟ್ಟಾಭಿಷೇಕಮಂ ವಿಭವದಿಂದೆ || ೩೯ ||

ಆಲಿಸೈ ಸಿದ್ಧರಾಮೇಶ ಹರಿಯಜದಿವಿಜ |
ಪಾಲಮುಖ್ಯಾಮರಕದಂಬಕಂ ಹರುಷದಿಂ |
ಕಾಲಕಂಠಂಗೆ ಕಾಣ್ಕೆಯನಿಕ್ಕಿ ನಮಿಸಲತಿಕರುಣದಿಂದಿಂದ್ರನೊಡನೆ ||
ಭಾಳಾಂಬಕಂ[3] ನುಡಿದನೆಲೆ ಸುರಪ ನೀನೆಮಗೆ |
ಮೇಳೈಸು ರಥವನೆನಲಿಂದ್ರನತಿವೇಗದಿಂ |
ಪೇಳಿದಂ ವಿಶ್ವಕರ್ಮಂಗವಂ ವರವರೂಥವನೊಡರಿಚಲ್ ಬಗೆದನು || ೪೦ ||

ಏನೆಂಬೆನಾ ವಿಶ್ವಕರ್ಮನಿಂದಂ ಭೂಮಿ |
ತಾನೇ ವರೂಥಮಾಯ್ತೀಸುಗಳ್ ತಾರೆಗಳ್ |
ನಾನಾಸಮುದ್ರಂಗಳಚ್ಚಾದುವಾ ವಿಂಧ್ಯಗಿರಿ ಹಾಸುವಲಗೆಯಾಯ್ತು ||
ಭಾನುಚಂದ್ರರ ಮಂಡಲಂಗಳೇ ಗಾಲಿ ನೊಗ |
ಮಾ ನಿಶಿ[4]ದಿವಸ ದಕ್ಷಿಣೋತ್ತರಾಯಣ ಯುಗಮು |
ಮಾನವೇದಂಗಳೇ ಮೆರೆವ ಕುದುರೆಗಳಾಯ್ತು ಶಾಸ್ತ್ರಮೇ ಕೀಲಾದುವು[5] || ೪೧ ||

ಎಸೆವ ಪೀಳಿ ಸರ್ಪವುಪನಿಷದಾಳಿ ಹಯರಜ್ಜು |
ಮಿಸುಪ ಚಮ್ಮಟಿಗೆಯೋಂಕಾರಂ ಮಹಾಮೇರು |
ಪೊಸತಪ್ಪ ಚಾಪವಹಿರಾಜನೆ ಸಿಂಜಿನಿ ಸರೋಜಾಕ್ಷನಸ್ತ್ರವಾಗೆ ||
ಬಿಸಜಾಸನಂ ಸೂತನಮಲನದ್ಯಂಗನೆಯ |
ರಸಮನಯನಂಗೆ ಚಾಮರವನಿಕ್ಕುವರಾದ |
ರಿಸಕದಿಂ ನಭವನಕ್ಕೆ ರಾಜ [6]ಮಂದರನಗಂ ಛತ್ರ[6]ಮಂ[7]ದೆಸೆದಿರ್ದುದು || ೪೨ ||

(೧-೧ ಸಕಳಗಣಗಭಿಷಂದಿಯು ನುಡಿಗೆ. ಹು, ಮು.) ೨-೨ ವ ಚೋದ್ಯ (ಹು.); ವ ಜಾಡ್ಯ (ಶಿ, ಪ, ಮು.) ೩ ಒಲಿಯುವಂ (ಹು, ಮು.) ೪ ನಾಡಿತಿ (ಗೊ.); ನಾಸಿಲೆ (ಶಿ.) ೫ ನಾಡಿಬಿಸ್ತ ಕೀಲಾದುವು (ಹು, ಶಿ.) ೬-೬ ಕನಕಾಬ್ಜದ ಛತ್ರ (ಹು, ಮು.) ೭ ಮುಂ (ಮು.)

ಆವ ದೇವರ್ಗೆ ಶಿವಶಿವ ಮಹಾದೇವ ವಿ |
ಶ್ವಾವನೀತಳ ರಥಂ ಮತ್ತಾವ ದೇವರ್ಗೆ |
ಗೋವಿಂದನೆ ಶರಂ ವಿಧಿ ಸೂತನಾಮ್ನಾಯತತಿ ಹಯಂ ಪಣಿರಾಜನೆ ||
ಆವ ದೇವರ್ಗೆ ಸಿಂಜಿನಿ ಮಹಾಮೇರು ಮ |
ತ್ತಾವ ದೇವರ್ಗೆ ಧನುವೀ ಚರಾಚರದೊಳಾ |
ದೇವನೆ ದೇವನಾತಗೆ ದೇವರಿಲ್ಲೆಂದು ಸರ್ವಲೋಕಂ ನುತಿಸಿತು || ೪೪ ||

ಕರತಳದೆ ವಾಘೆಯಂ ಪಿಡಿದಜಂ ಸತ್ತ್ರಣವ |
ಭರಿತಚಮ್ಮಟಿಗೆಯಿಂ ವೇದಮಯವಾಜಿಗಳ |
ನಿರದೆ ಝುಂ[೧]ಕಿಸಲೊಡಂ ರಥಸಹಂ ಹಯಮಭ್ರಮಂಡಲವನಂಡೆಲೆದುವು[೨] ||
ಕರುಣಿ ಬಿಜಯಂಗೈವುದೆನೆ ಸುರರ ನುಡಿಗೇಳ್ದು |
ಪರಮಪಾವನಮೂರ್ತಿ ಶಂಕರಂ ದೈತ್ಯಸಂ |
ಹರಣಕಾರಣನೆದ್ದನಾ ಮಹಾಸ್ಥಾನರಂಜಿತಸಿಂಹಪೀಠದಿಂದೆ || ೪೫ ||

ಪೊಳೆವ ತಲೆಮಾಲೆಯಂ ಕಿರೀಟಲೆಯಿಂ ತೆಗೆತೆಗೆದು[೩] |
ಕೆಲದವರ್[೩] ಕೈಸಾರ್ಚೆ ವಿಲಸದ್ವಿಭೂತಿಯಂ |
ಥಳಥಳಿಪ ಸರ್ವಾಂಗಕುದ್ಧೂಳನಂ ಗೆಯ್ದು ಪೆಡೆವಣೆಯ ಪಾವುಗಳನು ||
ಪೊಳೆ[೪]ವಿನಂ ಕಡೆಯು[೪] ಸರಪಳಿ ತೋಳ ಭೂಷಣ |
ಕ್ಕಳವಡಿಸಿ ಪುಲಿದೊವಲ ಮುಂಜೆರಗು ಮಿಗೆ[೫]ದೆಸೆ |
ಯೊಳೆ[೫] ಮೆರೆವುತೀಶ್ವರಂ ನಸುನಗುತೆ ನಡೆತಂದು ರಥವೇರಲನುವಾದನು || ೪೬ ||

ಉದರದೊಳನೇಕಬ್ರಹ್ಮಾಂಡಂಗಳಂ ತಾಳ್ದ |
ಮದನರಿಪು ತನ್ನ ವಾಮಾಂಘ್ರಿಯನಿಡಲ್ ರಥಂ |
ಪುದಿದ ಭಾರದೆ ರಸಾತಳಕಿಳಿಯೆ ಗಾಲಿಗಳ್ ನೆಗ್ಗಿದವು ಹಯಮು[೬]ಕುಲು ||
ಇದನೀಕ್ಷಿಸುತೆ ಸರೋಜಾಂಬಕಂ ಪಾತಾಳ |
ಸದನಮಂ ಪೊಕ್ಕು ವೃಷಭಾವತಾರದಿನಾಗ |
ಳದುಭುತವರೂಥಮಂ ನೆಗಪಲಾಕ್ಷಣದೊಳೊಯ್ಯಾರದಿಂ ರಥಮೆಸೆದುದು || ೪೭ ||

---

೧ ಧಿಂ (ಹು, ಮ.) ೨ ವುದು (ಹು.) ೩-೩ ತೆಗೆದು ತೆಗೆದುಂ ಬಿಡದೆ (ಶಿ, ಗೋ.)
೪-೪ ವ ಖಂಡೆಯದ (ಹು.) ೫-೫ ದೆಸೆಗ | ಳೊಳು (ಮ.) ೬ ಮ (ಶಿ, ಹು, ಮ.)

ತಲೆಗೊಡಹಿದುವು ವೇದವಾಜಿ ಬಳಿಮೊಳೆಯುಚ್ಚ |
ನಳವಡಿಸಿದಂ ಮತ್ತೆ ವಿಶ್ವಕರ್ಮಂ ರಥಂ |
ಥಳಥಳಿಸಿದುದು ವೇದವಾಜಿಯುಂ ಚಪ್ಪರಿಸಿ ಸಾರಥಿ ರಥವ ಸಾಗಿ[೧]ಸೆ ||
ನಲಿದು ಹರನಿಕ್ಕೆಲದೊಳಖಿಳವೇದವಿತಾನ |
ಮುಲಿವುತಿರೆ ರಥವೇರಿ ಶಂಭು ಸರ್ವೇಶ್ವರಂ |
ಕಲಹಸನ್ನಾಹಮಂ ಕೈಕೊಂಡು ಸಕಲಗಣಕುಲದೊಡನೆ ನಡೆಗೊಂಡನು || ೪೮ ||

ಪಸಿದೊಡಂಬುಜಭವಾಂಡಂಗಳಂ ಕಳಚಿ ಭ |
ಕ್ಷಿಸುವ ಬಾಯಾರಿದೊಡೆ ಸಪ್ತಶರನಿಧಿಗಳಂ |
ಮಸಗಿ ಸೂಳೊಂದದೊಳ್ ಸುರಿವ ಭೂಷಣಕೆಂದು ಸಿಡಿಲ ತುಡುಲವ್ವಳಿಸುವ ||
ಶಶಿರವಿಗಳಂ ರನ್ನಕನ್ನಡಿಗಳೆಂದು ನಿ |
ಟ್ಟಿಸುವ ಕುಲಗಿರಿಗೆ ಲೀಲಾಕಂತುಕತೆಯನಾ |
ಗಿಸುವ ವಿಷಮಪ್ರಮಥಗಣಮೈದುತಿರ್ದುದಗಣಿತಕೋಟಿಸೇನೆಸಹಿತ || ೪೯ ||

ಬಿಗಿದ ರಂಚೆಗಳ ತವೆ ಕೊಂಬುಕತ್ತಿಗಳ ಸಬ |
ಳಗಳ ಬಾಂಬರಮೆಸೆವ ಠಕ್ಕೆಯದ ನಾಳಿವಿಲ್ |
ಝಗಝಗಿಪ ಪೊಸಪೊನ್ನ ಪಕ್ಕರಕ್ಕೆಗಳ ಜೋಲುವ ಘಂಟೆಗಳ ದನಿಗಳ ||
ಮಿಗೆ ಹೊಳೆವ ಹೊಮ್ಮಿಳಿಯ ಹಮ್ಮುಗೆಯ ನಿರ್ಭಿನ್ನ |
ನಿಗಳದ ಮದಾಂಧಸಿಂಧುರವರ್ಗಮಸ್ತಕವ |
ನಗಿದು ಪೊನ್ನಂಕುಶದೆ ಮೈವಳಿಗೆ ತರ್ಪ ಜೋದರ ಹಿಂಡು ನಡೆಗೊಂಡುದು || ೫೦ ||

ಸಿಂಗಾಡಿಗಳ ಸರಳ ಹೊದೆಯ ಮೊಗರಂಬುಗಳ |
ಪೊಂಗೆಜ್ಜೆಗಳ ರತ್ನವಾವುಡದ ಬಂಧಿಸಿದ |
ಕಂಗೊಳಿಪ ಹಲ್ಲಣದ ಖಣಖಣಧ್ವಾನದಿಂ ರಂಜಿಸುವ ಕಡಿಯಣಗಳ ||
ಮುಂಗಾಲ ಕಡೆಯಗಳ ಭೂಷಣದ ಸಲೆ ರಾವ್ತ |
ರಿಂಗಿತದ ಗಮನಗಳ ರಾಜಿಸುವ ತೇಜಿಗಳ |
ಸಂಗಡದ ರಾವುತರ್ ನಡೆಗೊಂಡರ[೨]ಗಣಿತಂ ಬೆರಳ ಚಮ್ಮಟಿಗೆಯಿಂದೆ || ೫೧ ||

೧ ಸಾಗಿ (ಪ, ಹು.) ; ಸಾನಿ (ಮ.) ೨ ದುದ (ಪ. ಹು.)

ತುಂಬಿದಂಬುಗಳ ಮೊಣೆಡಿಕಿರಿದ ಶಸ್ತ್ರಕುಲ ।
ದಂಬರವನಳ್ಕಿರಿವ ಕೌತುವಿತತಿಯ ಹಯಕ ।
ದಂಬಕದ ಚಾರುಲಘು [1]ಗಮನದ ಸಚಿ[1]ತ್ಕಾರಚಕ್ರಂಗಳಿಂ ಸೊಗಸುವ ॥
ಇಂಬಾದ ಪೊಂದೇರ್ಗಳಿಂ ಪತ್ತಿ ಟಂಕೃತಾ ।
ಡಂಬರದೆ ಲೋಕಮಂ ಕಿವುಡಾಗಿಸುವ ರಥಿಕ ।
ರೆಂಬುದೇಂ ಕೋಟಾನುಕೋಟಿಗಳ್ ನಡೆಗೊಂಡರತುಳಸನ್ನಾಹದಿಂದೆ ॥ ೫೨ ॥

ಹರಿಗೆಗಳ ಹಲಗೆಗಳ ಖಂಡೆಯದ ಸಬಳಗಳ ।
ಸುರಗಿಗಳ ಬಿಲ್ಗಳಂಬಿನ ಹೊದೆಯ ಕೈಪೊಡೆಯ ।
ತರತರದ ಜೋಡುಗಳ ತಲೆಶೌಳಿಗಳ ಸಮರಸನ್ನಾಹದಾಯತಗಳ ॥
ಬಿರುದುಗಳ ಸಾಲ ಸತ್ತಿಗೆಯ ಚಮರಗಳ ಪರಿ ।
ಪರಿಯ ಕಾಲಾಳ್ಗಳೈದಿದರಭವಸೇನೆಯೊಳ್ ।
ಪರಿಗಣನೆಗರಿದೆಂದೆನಲ್ಕೆ ಹಾಣಾಹಾಣಿಗೆಯ್ವ ಕಡುತವಕದಿಂದೆ ॥ ೫೩ ॥

ಹರಿಮಯಂ ಘನರಥಶಿಥ್ವಜಮಯಂ ಗಜಮಯಂ ।
ಕರಿಮಯಂ ಪಟಹತಮ್ಮಟಮಯಂ ಭಟಮಯಂ ।
ಶರಮಯಂ ವಾದ್ಯನಿಸ್ವನಮಯಂ ಜನಮಯಂ ನಾನಾಯುಧಾವಳಿಮಯಂ ॥
ಸುರಮಯಂ ಸಕಲಗಣಕುಲಮಯಂ ಬಲಮಯಂ ।
ಗರಮಯಂ ಭೂತಸಂತತಿಮಯಂ ಖತಿಮಯಂ ।
ನರಮಯಂ ನೆಗಳ್ದ ಕಿನ್ನರಮಯಂ ಭರಮಯಂ ಹರನ ಸೇನಾಂಬುಧಿಯೊಳು ॥ ೫೪ ॥

ಕರಿಯಂತೆ ಗಿರಿಯಂತೆ ನದಿಯಂತೆ ಸಿಧಿಯಂತೆ ।
ಹರನಂತೆ ಮರದಂತೆ ಸರದಂತೆ ಪುರದಂತಿ ।
ರಿರಡೆ ಪುಷ್ಕರ ಪುಂಡರೀಕ ಹರಿ ಶಂಖ ವಿಷ ಪತ್ರ ಶರ ಸುಮನಾನ್ವಿತಂ ॥
ಶರಧಿಯಂತಬುಜಾಕ್ಷನಂತೆ ಕೇಸರಿಯಂತೆ ।
ಸರಸಿರುಹದಂತೆ ವಸುಚಕ್ರಪಂಚಾಸ್ಯರಣ ।
ದುರುರಸೋನ್ಮಗ್ನಾಳಿಯಿಂದೆ ಶೋಭಿತವಾಗಿ ಪಡೆ ಪಡೆಳಪಿನಿಂ ನಡೆದುದು ॥ ೫೫ ॥

೧-೧ ಪಿನ ಮಸದ ಚೀ (ಹು.) ೨ ರ (ಮ.) ೩ ಶರ (ಹು, ಮ.) ೪ ದ (ಮ.)

ಪಸೆಂಬೆಸ್ಸೈ ರಾಮ ಶಂಕರನ ಪಡೆ ನಡೆದು |
ದಾನವರ ಪುರಸಮೀಪದ ಮಹಾಬಯಲೊಳಗೆ |
ತಾನೀಶಮಹೇಶ್ವರನ ಪಾಳೆಯಂ ಹರಿಯಜರ ಪಾಳೆಯಂಗಳ್ ಭರದೊಳು ||
ನಾನಾವಿಲಾಸದಿಂದೆಡಬಲದೊಳಿಳಿಯೆ ಪ್ರಮ |
ಥಾನೀಕಮುಭವನಪರಾಶಿಯೊಳ್ ದೇವಸಂ |
ತಾನಕಂ ಮುಂದೆ ಬಿಡೆ ಮಿಕ್ಕ ಸೇನಾಪತಿಗಳಿಳಿದರೊಂದೊಂದೆಸೆಯೊಳು || ೫೬ ||

ಕರಿಯ ರಂಚಿಕೆಗಳುಂ[೧] ವಾಜಿಗಳ ಹಲ್ಲಣಂ |
ವರವರೂಥದ ಸಿಂಧಮೆಸೆವ ಸುಭಟರ ಜೋಡು |
ಶಿರದ ಸೀಸಕ ಬಾಹುರಕ್ಕೆ ಕೈಪೊಡೆ ಬಿಗಿದ ವಜ್ರಾಂಗಿ ಬತ್ತಳಿಕೆಯಿಂ[೨] ||
ಇರದುಳಿದ ಸದಳಿಗರ ಸಾಧನಸಮಗ್ರಮುಂ |
ತರತರದೊಳಿಳಿದುವತಿಚೆಲ್ವಾಗಿ ಪಾಳೆಯಂ |
ಪರಿಶೋಭೆವಿಡಿದು ರಂಜಿಸುತಿರ್ದುದೆಲೆ ಸಿದ್ಧರಾಮೇಶ ಕೇಳೆಂದನು || ೫೭ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೮ ||

ಅಂತು ಸಂಧಿ ೪೧ಕ್ಕಂ ಪದಗಳು ೧೬೪೩ಕ್ಕಂ ಮಂಗಳಮಹಾಶ್ರೀ

---

೧ ಳಂ | ಶಿ., ೨ ಯುಂ (ಮ.)

ನಾಲ್ವತ್ತೆರಡನೆಯ ಸಂಧಿ

ಸೂಚನೆ

ಹರನಾಜ್ಞೆಯಿಂದಿಂದ್ರನತುಳಸನ್ನಾಹದಿಂ |
ದಿರದೆ ತ್ರಿಪುರಕೆ ಲಗ್ಗೆಯಂ ಬಿಡಲ್ ಕೇಳುತಾ
ದುರುಳವಿದ್ಯುನ್ಮಾಲಿ ಚತುರಂಗವೆರಸಿ ಸಂಗರಕಿರದೆ ನಡೆತಂದನು ||

ಅತ್ಯಧಿಕ ಮಾಯರಾ[1]ಹಿತ್ಯ ನಿಗಮಾಳಿಸಂ |
ಗತ್ಯ ನಿರ್ಜರಮುನಿಸ್ತುತ್ಯ ನಿಷ್ಕಾಮುಸಾ |
ಹಿತ್ಯ ನಿರುಪಮಿತ ಸತ್ಕೃತ್ಯ ನಿರವದ್ಯವಹ್ನಿನ್ನೇತ್ರ[2] ನಿರ್ವಸನ ಸತ್ಯ
ಪ್ರತ್ಯೂಹದಾನವಾಘಾತ್ಯ ಬ್ರಹ್ಮಾಚ್ಯುತನು |
ಭೃತ್ಯಕೃತವರಪ್ರದೌಚಿತ್ಯ ಲಕ್ಷ್ಮೀವರಾ |
ಪತ್ಯದಹನೀಕೃತಾದಿತ್ಯಸುತ[4]ಮತ್ಯಾಸು ನಿತ್ಯ[4] ವಿರೂಪಾಕ್ಷ ಸಲಹು || ೧ ||

ಆಲಿಸಿನ್ನೆಲೆ ಸಿದ್ಧರಾವು ಬಳಿಕಾಗಲಾ |
ಭಾಳಲೋಚನನ ಪಾಳೆಯದ ಕಾವಲ ಭರಂ |
ಕಾಳಭೈರವನ ವಶವಾಯ್ತು ಸೇನಾಪತ್ಯಮೇ ಕುಮಾರಕನದಾಯ್ತು ||
ಪೇಳಲೇಂ ಸಕಲಭರಭಾರಮುಂಡಾ ಭದ್ರ |
ಕಾಳಿಯುರಸನದಾಯ್ತು ತ್ರಿಪುರಮಂ ಸಂಹರಿಪ |
ಲೀಲೆಯೇ ಶಿವನದಾಯ್ತು ಸಮಯದೊಳಗರ್ಕನಸ್ತಗಿರಿಯಂ ಸಾರ್ದನು || ೨ ||

ಅಸ್ತಮಿಸಿತಂಬುಜದ ಕಾಂತಿ ಕೈರವದ ನಗೆ |
ವಿಸ್ತಾರಮಾಯ್ತು ನಾನಾರಥಾಂಗಂಗಳ ಮ |
ನಸ್ಥಿರದೊಡನೆ ತಿಮಿರಂ ಪೆರ್ಚಿದುದು ತುಂಬಿವಿಂಡಲರ್ಗಳೊಳ್ ಸೇರ್ದುದು
ನ್ಯಸ್ತಪ್ರಭೆಯೊಳಲ್ಲಗಲ್ಲಿಗುಡುಗಣಮಿರೆ ಪ್ರ |
ಶಸ್ತಮಣಿಬಂಧುರಾಸ್ಥಾನಮಂಟಪದೊಳ್ ಸ |
ಮಸ್ತರಾಕ್ಷಸರ ಸಂಗಡದಿನಿತ್ತಂ ತಾರಕಾಕ್ಷನೋಡ್ಡೋಲಗವನು || ೩ ||

೧ ಮಾಯಾರಹಿತ್ಯ (ಶಿ, ಗೋ, ಮು.) ೨ ವನ್ಹಿನ್ನೇತ್ರ (ಶಿ, ಪ.) ೩ ದನಾ (ಮು.) ೪-೪ ಮುಕ್ತ ನಿತ್ಯ ಸು (ಮು.)

ಜಂಭ ವಾಮನ ಹಯಗ್ರೀವ ವಿಕ್ಷೋಭಣ ನಿ |
ಕುಂಭ ಕರ ಮುರ ಪಂಚಜನ ಕೌತುಮಾಲಿ ಪ್ರ |
ಲಂಬ ಹಯಮುಖ ಲೋಕಜಿತು [1]ವಿಪ್ರಜಿತು ವಜ್ರನಾಭ ಗಜಶಿರ[1] ಜರ್ಝರ ||
ಶುಂಭ ವಿದ್ರಾವಣ ವಿರೂಪಾಕ್ಷ ಪಿಂಗಳ ನಿ |
ಶುಂಭ ವಿದ್ಯುನ್ಮಾಲಿ ಕಮಲಾಕ್ಷರೆಂದೆನಿಪ |
ತ್ರಾಂ ಭಯಂಕರರೆನಿಸುವಸುರನಾಯಕರೋಲಗಕ್ಕೆ ನಡೆತರುತಿರ್ದರು || ೪ ||

ನೋಡಿ ಕೆಲಬರ[2]ನುಚಿತವಚನಂಗಳಿಂದೆ ಮಾ |
ತಾಡಿ ಕೆಲಬರನೊಲ್ದು ಸಮ್ಮುಖಂಗಳ್ಗೆ ಕೈ |
ನೀಡಿ ಕೆಲಬರ[4]ನಚಲಭ್ರೂ[4]ಸೌಂಜ್ಞೆಯಿಂ ಕೆಲರನುಪಚರಿಸಿ ಕುಳ್ಳಿರಿಸುತೆ ||
ಮೂಡುವೆಳನಗೆಯಿಂದೆ ಬಲದ ಶುಕ್ರನ ಮೊಗಂ |
ನೋಡಿ ಸದ್ವಿನಯಗಂಭೀರವಾಕ್ಯಂಗಳಿಂ |
ಮಾಡಿದಂ ಬಿನ್ನಪವನಸುರಪತಿಯಂದು ದಂತದ್ಯುತಿ ವಿರಾಜಿಸುತಿರೆ || ೫ ||

ಕಂಡಿರೇ ಸೋಜಿಗವನಮರಸಂಕುಲವೆಮ್ಮ |
ಖಂಡೆಯದ ದೆಸೆಗಳ್ಕಿ ಮೂರಿಯೆಮ್ಮಂ ಕೊಲಲ್ |
ಖಂಡಪರಶುವನೆಮ್ಮ ಪುರಕೆ ತಂದರ್ ಗಡಂ ನೀವೆಮ್ಮ ಕಾರ್ಯಗತಿಗೆ ||
ಕಂಡುದೇನೆನೆ ಶಿವಂ ಕೊಲಲೆಮ್ಮನಾರ್ ಬಿಡಿಸಿ |
ಕೊಂಡಪರ್ ಕಾಯ್ದೊಡಾರ್ ಕೊಲ್ವರಾರ್ ಶಂಭುವಂ |
ಕಂಡು ಬಾಳ್ವುದು ನೀತಿಯೆನೆ [5]ಕನಲುತೆದ್ದು[5] ವಿದ್ಯುನ್ಮಾಲಿಯಿಂತೆಂದನು || ೬ ||

ಜಲಧಿಯಂ ನಿಶ್ಶೇಷಮಾಗಿ ಸುರ್ರನೆ ಸುರಿವ |
ಸಿಲಿಯುವಹ್ನಿಗೆ ಶೀಕರೋದಕಂ ಸಾಲ್ದಪುದೆ |
ಬಲುಗಡೆಯುರಿಡೆ ನಿನ್ನ ಘಟ್ಟಿನೊಳ್ ಬಿಟ್ಟು ನೋಡಿ ದೈತ್ಯಸಂಕುಲವನು ||
ಹುಳುಗಳಾ ದಿವಿಜಭಟರೆಂಬವರ್ ಮತ್ಸರದ |
ನೆಲಸ ಮೆಟ್ಟಿಲ್ ಸಮರ್ಥರೆ ಹರಿಣಶಾಬಕಂ |
ಪುಲಿಯ ಬಿರುದಂ ನಿವಾರಿಸುವಂತುಟಾಯ್ತೆನಲ್ ಸುಭಟಾಳಿಯಿಂತೆಂದುದು || ೭ ||

೧-೧ ವಜ್ರನಾಭಮುರಗಜಶಿರಾಖ್ಯ (ಹು.) ೨ ಸು (ಹು, ಮು.) ೩ ೀ (ಹು.)
೪-೪ ಸಚಲಪುರು (ಮು.) ೫-೫ ಕೇಳಿ ಕನಲ್ದು (ಹು, ಮು.)

ಪಿಡಿವೆವು ಸುರೇಂದ್ರಾದಿ ಸಕಲದಿಕ್ಪಾಲರಂ[೧] |
ಕುಡಿವೆವು ಸಮುದ್ರಾದಿ ಸಕಲಾಂಬುಜಾಲಮಂ |
ಹುಡಿ[೨]ಬಡಿವೆವಮರಾಧರಾದಿ[೨] ಸಕಲಾದ್ರಿಗಳನಜಹರಿಗಳಂ ದಟ್ಟಿಸಿ ||
ಒಡೆವೆವೀ ಬ್ರಹ್ಮಾಂಡಮಂ ಸಂಚಕಾರಮಂ |
ಕೊಡುವೆವು ವಿರೋಧಿಗಳ ಜೀವನಕೆ ಶೂಲಿಯಂ |
ತಡೆವೆವೆಮ್ಮಂ ಬಿಟ್ಟು ನೋಡೆನುತೆ ರಕ್ಕಸರ್ ಜಡಿದರಾಸ್ಥಾನದೊಳಗೆ || ೮ ||

ಗರ್ಜಿಸುವ ಸುಭಟರಂ ನಿಲಿಸಿಯೋಲಗಮಂ ವಿ |
ಸರ್ಜಿಸಿ ಸುರತ್ರಯದ ಕೋಂಟೆಗಾವಲ ಪಟುಭ |
ಟರ್ಜತನವೆಂದು ನೇಮಿಸಿ ತಾರಕಾಕ್ಷನರಮನೆಪೊಕ್ಕನಾ ಕ್ಷಣದೊಳು ||
ದುರ್ಜಯರ್ ಬಡಿವ ಹ[೩]ರೆಗಳ ಕೈಗಳೊ[೪]ಳಗಾಂತ |
ಪೆರ್ಜೋಡರ ಗಡಣದಿಂ ಪ್ರಹರಿಪುದಕಳದಿಂದೆ |
ವರ್ಜಿತಸ್ವಾಪರುರೆ ಭೋ[೫]ಯೆನುತೆ ಮುಪ್ಪುರದ ಕೋಂಟೆಯಂ ಕಾದಿರ್ದರು || ೯ ||

ಬಿಡದೆ ಕೂಗುವ ಪಹರೆ ತಿರುಗುತಿಹ ಪಂಜುಗಳ್ |
ಗಡಬಡಿಪ ಕೋಂಟೆವರೆ ದನಿಗೆಯ್ವ ಪೆಟಲುಗಳ್ |
ವೊಡನೊಡನೆ ಸುಳಿವ ಮೇಲ್ಪಹರಿಯಾಳ್ಗಳ್ ಚೀರುತಿಹ ಕಹಳೆಗಳ್ ಭರದೊಳು ||
ಪೊಡೆವ ತಂಬಟರವಂ ಮೋಸವೋಗದಿರೆನು |
ತ್ತಡಿಗಡಿಗೆ ಸುಯ್ದಾನಮಂ ಮಾಳ್ಪ ಭಟರವಂ |
ಗಡಮೆಸೆದುದಾಗಳಾ ತ್ರಿಪುರದಾಳ್ವೇರಿಯೆಡೆಯೆಡೆಯೊಳತಿನಿಬಿಡವಾಗಿ || ೧೦ ||

ಹುರಿವ ಮಳಲಿನ ಕಾಸುವಂಬಲಿಯ ಬಿಸಿಯೆಣ್ಣೆ |
ವರವಿಗಳ ಪುದಿದ ಪುಲ್ದೊಂದೆಗಳ ತರತರದೊ |
ಳಿರಿಸಿರ್ದ ಬಲ್ಪೊಲೆಯ ಡೆಂಕಣಿಯ ಮರುಳ ಕೈಗಳ ನೆಟ್ಟ ಬಲ್ಪಸಿಗಳ ||
ಪರಿಪರಿಯ ಗುಂಡುಗೋವಿಯು ಕುದಿವ ಸುಣ್ಣಗಳ |
ಪಿರಿದಾದ ಗುಂಡುಗಳ ಕವಣೆಗಳ ಸಬಳಗಳ |
ಸುರಿದ ಕಲ್ಗಳ ಪಂದಿದಲೆಯ ಮೊತ್ತಂಗಳಾಳ್ವೇರಿಯೊಳ್ ಪಸರಿ[೬]ಸಿದುವು || ೧೧ ||

೧ ಕರ (ಹು.) ೨-೨ ಬಡಿವೆವಮರದರಾಧರಾದ್ರಿ (ಶಿ, ಗೋ.); ಗೆಯ್ವೆವಮರರ ಧರಾದಿ (ಹು, ಮ.) ೩ ವ (ಹು.) ೪-೪ ರಿಗೆಗಳ ಕೈಯೊ (ಶಿ.) ೫ ಖೋ (ಶಿ,ಹು.) ೬ ರಂಜಿ (ಶಿ.)

ಇಂತು ಪಲತೆರದ ಸಂವರಣೆಯಂ ಮಾಡುತ |
ತ್ವಾಂತಸುಯ್ಯಾನದಿಂ ದುರ್ಗಮಂ ಕಾಯ್ವ ಸುರ |
ಸಂತಾನಮಿದಿರ್ದಪಾ ಸಮಯದೊಳ್ ದಿನಪನುದಯಂಗೈದನಮರೇಂದ್ರನು ||
ಸಂತಸದೊಳಿದ್ದನಾ ತ್ರಿಪುರಕ್ಕೆ ಲಗ್ಗೆಯಿಂ |
ದಂತರಿಸದೆಲ್ಲರುಂ ಸನ್ನಾಹವಾಗಿ ಬೇ |
ಗಂ ತಳರಲೆಂದು ಪಾಳೆಯದೊಳಗೆ ಪೊಯ್ಸಿದಂ ಡಂಗುರವನಾ ಕ್ಷಣದೊಳು
|| ೧೨ ||

ಆಲಿಸೈ ಸಿದ್ಧರಾಮೇಶ ಮುಪ್ಪುರದ ಜನ |
ಜಾಲಮತಿಚೋದ್ಯದಿಂ ಶಂಕರಂ ಮುತ್ಪುರದ |
ಮೇಲೆ ದಂಡೆತ್ತಿ ನಡೆತಂದು ಪಾಳೆಯಮನಿಳಿದಿರ್ದಪಂ ನೋಳ್ಪೆವೆಂದು ||
ಮೇಲೆ ಮೇಲೈತಂದು ಕೋಂಟೆಯಂ ಪತ್ತಿ ಪೊರ |
ಪಾಳೆಯವನೀಕ್ಷಿಸುತ್ತಿರ್ಪಿನಂ ಕಾಣಿಸಿತು |
ಪೇಳಲೇನಚ್ಚರಿಯನಿಡಿಕಿರಿದ ಬಣ್ಣಗೂಡಾರಗಳ ಸಾಲ್ಗಳಿಂದೆ　　|| ೧೩ ||

ಪೊಳೆವ ಗೂಡಾರಗಳ ಬುದ್ಬುದದ ಪೋಪ ಬ |
ರ್ಪಲಘುವಾಜಿಗಳ ತೆರೆಗಳ ಕರಿಯ ಗಿರಿಯ ಜನ |
ಜಲಚರದ ಮಿನುಗುವಾಯುಧದ ನೊರೆಗಳ ವಾದ್ಯದಾರ್ಭಟಿಯ ಪೆರ್ಮೊರಹಿನ ||
ಚಲಿಪ ಕೇತನತತಿಯ ಸುಳಿಯ ಸಬಳದ ಸಾಲ |
ತೊಳತೊಳಪ ಪವಳ ವಳ್ಳಿಗಳ ಭಯರಸಸಮು |
ಜ್ಜ್ವಳಿತ ಪರಶಿವನ ಸೇನಾಸಮುದ್ರವನಾಗ ಪುರಜನಂ ನಿಟ್ಟಿಸಿದುದು　　|| ೧೪ ||

ಎರಡುತೆರದೊಳಗೊಪ್ಪುವಂಗಡಿಯ ಮುಂಗಡಿಯ |
ಸುರಿದ ಧಾನ್ಯದ ರಾಸಿಯೊತ್ತುಗಳ ಜೊತ್ತುಗಳ |
ಕರಿತುರಗನಿಚಯದೆಡೆಯಾಟಗಳ ಘಾಟಗಳ ಪೊಂದೇರ ಸಂದಣಿಗಳ ||
ಅರಮನೆಗೆ ಪೋಪ ಸ್ವಪರಂದಳದ ಗೊಂದಳದ |
ತರುಣಿಯರ ಮಣಿಭೂಷಣಾವಳಿಯ ಗಾವಳಿಯ |
ಪರಮಘೋಷಣಪಟುಭಟಾಳಿಗಳ ಕೇಳಿಗಳ ಪಾಳೆಯಂ ಕಣ್ಗೆಸೆದುದು　　|| ೧೫ ||

೧ ತೆರಳ್ದೆಂ (ಮ.) ೨ ತಿರ್ಪೆಗೆ (ಮ.) ೩ ಣ್ಣದ ಗು (ಶಿ, ಹು,ಮ.) ೪ ಸುಗು (ಶಿ, ಹು, ಮ.) ೫ ಗು (ಪ.) ೬ ಣ (ಹು.) ೭ ಣ (ಹು.)

ಈಗಳಿದ ನೋಡಿರೇ ತವೆ ಮೇರೆಯಂ ಮೀರ್ದ |
ಸಾಗರದೊಲಿದೆ ಶಿವನ ಪಾಳೆಯಂ ಕಾಳೆಗಂ |
ತೂಗದಿವರೊಡನೆಮ್ಮವರ್ಗೆನುತೆ ನೋಟಕರ್ ನುಡಿವುತ್ತಿರೆ ಸತಿಯರಾಗ |
ಏಗುವೆಂ ಶಿವನೀಗಲೆಮ್ಮ ತ್ರಿಪುರಕೆ ಲಗ್ಗೆ |
ಯಾಗಿ ಬಿಟ್ಟಪನಂತೆ ಕೆಟ್ಟೆವುರುಬಿದೊಡೆ ಶತ |
ಯಾಗವೈರಿಗಳೆಂತು ಸೈರಿಸುವರಕಟೆನುತೆ ಗುಜುಗುಜುಸುತಿರಲಿತ್ತಲು ॥ ೧೬ ॥

ನಿತ್ಯನೇಮಂ ಮಾಡಿ ಪಾವಕ ಕೃತಾಂತ ನೈ |
ಋತ್ಯ ವರುಣಾನಿಲ ಕುಬೇರರೀಶಾನರೊಡ |
ನತ್ಯಧಿಕ ಸಂಭ್ರಮದೆ ನಡೆತಂದು ಶಿವನಡಿಗೆ ನಮಿಸಿ ಭಯಭಕ್ತಿಯಿಂದೆ ॥
ಮೃತ್ಯುಸಂಹರನೆ ಚಿತ್ತವಿಸಿನ್ನು ನಾಂ ಮಾಳ್ಪ |
ಕೃತ್ಯಮಂ ನಿರವಿಸೆನಲೀಶ್ವರಂ ಕೇಳ್ದು ತಾಂ |
ದೈತ್ಯರ ಪುರಕ್ಕೆ ಲಗ್ಗೆಯ ಬಿಡುವುದೆಂದು ಸುರಪಂಗಿರದೆ ನೇಮಿಸಿದನು ॥ ೧೭ ॥

ಆ ಸಮಯದೊಳಗಿಂದ್ರನಮಳತರಮಣಿಕನಕ[1] |
ಭಾಸುರಾಭರಣದಿಂದೆಸವ ಬಿಳಿಯಾನೆಯ ವಿ |
ಲಾಸದಿಂದೇರಿದಂ ಛತ್ರ ಚಾಮರ ಪತಾಕಾಳಿಗಳ್ ಕಣ್ಗೆಸೆದುವು ॥
ಲೇಸಾಗಿ[2] ಬಿರುದುಪಾಠಕರ ಕಳಕಳದಾ ಮ |
ಹಾಸಕಲಸಚಿವ ಸಾಮಂತಸೇನಾಧೀಶ |
ರೋಸರಿಸದೈತರಲ್ ನಡೆಸಿದಂ ಗಜಮನಾ ತ್ರಿಪುರಶಿವ ನಿರೀಕ್ಷಿಸಲ್ಕೆ[3] ॥ ೧೮ ॥

ಗುಳಮನನಿಕ್ಕಿದರಾನೆಗಳ್ಗೆ ಪಲ್ಲಣಮನಿರ |
ದಳವಡಿಸಿದರ್ ಕುದುರೆಗಳ್ಗೆ ತೇರ್ಗಂ ವಾಜಿ |
ಗಳನೈದೆ ಕಟ್ಟಿದರ್ ಸಂಜೋಗಮಾಗಿ ಕಾಲಾಳ್ಗಳುಂ ಪೊರಮಟ್ಟರು ॥
ಮೊಳಗಿದುವು ಭೇರಿ ದುಂದುಭಿ ಢಕ್ಕೆ ಡೌಡೆ ಜೋಂ |
ಬುಳಿ ಕರಡಿ ನಿಸ್ಸಾಳಮೆಂಬ ವಾದ್ಯಪ್ರತತಿ |
ತಳ್ದುರ್ದಾ ಚತುರಂಗ ಸೇನೆ ಪರಿಗಣನೆಗರಿದೆಂದೆನಲ್ ತವಕದಿಂದೆ ॥ ೧೯ ॥

---

೧ ಮಕುಟ (ಪ.) ೨ ಘೋಷಣೆಯ (ಹು.) ೩-೩ ವಂ ಶಿಕ್ಷಿಸಲ್ಕೆ (ಶಿ, ಹು.)

ಸಿಂಧುರದ ಮಸ್ತಕವನೇರಿ ಮುದದಿಂ ಜಯಧು |
ರಂಧರಂ ಪುರಪನ್ನೈತರೆ ಮುಂದೆ ಕಾಣಿಸಿತು |
ಬಂಧುರದ ಕನಕಕೋಟಾವಳಿಯುಮೆಸೆವ ಮಾಣಿಕದ ತೆನೆಗಳ ಸೊಗಸುವ |
ಬಂಧಿಸಿದ ನಾನಾವಿಚಿತ್ರಚಿತ್ರಾಂಬರದ |
ಸಿಂಧುಂಗಳೋಳಿಯಿಂ ಪೊರವಳಯಮುಂ ಬಳಸಿ |
ಸಿಂಧುವಂತೊಪ್ಪುತಿರ್ಪಗಳ ಶೋಭೆಗಳಿಂದೆ ತ್ರಿಪುರಂಗಳತಿಚೆಲ್ವಿನಿಂ || ೨೦ ||

ತೆನೆತೆನೆಯ ಪರಿಸಗಳ ಸತ್ತಿಗೆಯ ಮುತ್ತಿಗೆಯ |
ದನುಜೇಶರಿಕ್ಕೆಲದ ಮಂದಿಗಳ ವಂದಿಗಳ |
ಮಿನುಮಿನುಪ ಕೈದುಗಳ ಮಿಂಚುಗಳ ಸಂಚುಗಳ ಡಾಳಿಸುವ ಚಮರಂಗಳ ||
ತನತನಗೆ ನೋಳ್ಪ ಗುಣಶೀಲೆಯರ ಬಾಲೆಯರ |
ಕನಕರತ್ನಾಭರಣರೋಚಿಗಳ ವೀಚಿಗಳ |
ತೊನೆವುತಿಹ ಚಿತ್ರದ ಪತಾಕೆಗಳ ಜೋಂಕೆಗಳ ಕೋಟಾವಳಿಯುಮೆಸೆದುದು || ೨೧ ||

ಸಾಲ ಮುಗಿಲಟ್ಟಣೆಯ ಡಂಕಣಿಯ ಪಂದಿದಲೆ |
ಜೋಳಿಗಳ ಮುರುಳ ಕೈಗಳ ತೂಗದೊಲೆಯ ಧ್ವ |
ಜಾಳಿಗಳ ನೆಟ್ಟ ಸಬಳಗಳ ನಿಡುಗುಂಡುಗಳ ಸಂದಣಿಯ ಸನ್ನಾಹದ ||
ಸ್ಥೂಲಮಾಗಿರ್ದ ತೆನೆಗಳ ಕನಕರತ್ನಪ್ರ |
ಭಾಲಹರಿಯೊಬ್ಬುಳಿಯ ಘಾತಮಾದಗಳಿನ ವಿ |
ಶಾಲಜಾಲಮನಿರದೆ ದಿವಿಜಪತಿ ಕಂಡು ತನ್ನವರ ಕೂಡಿಂತೆಂದನು || ೨೨ ||

ಸುರ ನರೋರಗ ಯಕ್ಷ ರಾಕ್ಷಸ ಪಿಶಾಚ ಕಿಂ |
ಪುರುಷ ಗುಹ್ಯಕ ಸಿದ್ಧ ಸಾಧ್ಯ ವಿದ್ಯಾಧರರ್ |
ವರಗರುಡ ಗಂಧರ್ವ ಕಿನ್ನರಪ್ರತತಿ ದಿಕ್ಪಾಲಕರ್ ಮುಖ್ಯಮಾದ |
ಜೋಡಿಜೋಡಿಗಳಂ ಕರೆದು ಕೇಳಿಸಿತ್ತು ತ್ರಿಪುರಮಂ |
ಪರಿದೈದಿ ಮುತ್ತಿ ದೊಳ್ಕೋಂಟೆಯಿಂ ಕೊಂಬುದೆನೆ |
ಹರುಷದಿಂ ತಂತಮ್ಮ ಚಾತುರ್ಬಲಂ ಬೆರಸಿ ನಡೆದರತಿಸಂಭ್ರಮದೊಳು || ೨೩ ||

೧ ಪ ದೋಷ | ಪು, ನು | ೨ ಜನಪತಿಗಳ | ಪು. | ೩ ಮಂತ್ರಿಗಳ (ಶಿ. | ೪ ಪಿ | ಶಿ.)

ಲಗ್ಗವರೆ ಮೊಳಗಿದುವು ಕೂಗಿದುವು ತಮತಮಗೆ |
ಬೊಗ್ಗುಹೆಗ್ಗಾಳೆಗಳ್ ಬಿಡದೆ ನಡೆಗೊಂಟಿಗಳ |
ಮೊಗ್ಗರಂ ನೂಂಕಿದುವು ಪುರದ ಪೊರಬಳಿಸಿನೊಳ್ ಪಡಿಯಟ್ಟಣೆಗಳೆದ್ದುವು ||
ಒಗ್ಗಿನಿಂ ಬದ್ದರದ ಬಂಡಿವಿಂಡೈದಿದುವು |
ವೆಗ್ಗಳದ ಬಿರುದಿನಾಳ್ತಳಿಯನಗಳಿನ ಸರಿಸ[೧] |
ಕಗ್ಗಳಿಕೆಯಿಂ ಸೇರಿಸುತ್ತಿರ್ದರೆಲೆ ಸಿದ್ಧರಾಮ ಕೌಳಚ್ಚರಿಯನು || ೨೪ ||

ಕಂಡರಾ ಸಮಯದೊಳ್ ಖಳರು ಗಜಬಜಸುವಾ |
ಖಂಡಲಾದ್ಯ[೨]ರ್ ಕೊಂಟಿಗಾಳೆಗವನಿಂಗೆ[೨] ಕೈ |
ಕೊಂಡರೈತಪ್ಪುವುದೆಚ್ಚರಿಕೆಯೆಂದು ದಾನವರಾಗ ನೇಮಿಸಲ್ಕೆ ||
ಖಂಡೆಯದ ಪೊಳಪಿನ ಭಟಾಳಿ ಭೋ[೩]ಯಿಸುತಾಲಿ |
ಕೊಂಡು ಬೊಬ್ಬಿರಿವುತಿರ್ದುದು ದಿವಿಜವಿತತಿ ಮುಂ |
ಕೊಂಡು ತಲೆದೋರಿದುದು ಪುರದಗಳ ಸರಿಸದೊಳ್ ಪೇಳಲೇನಚ್ಚರಿಯನು || ೨೫ ||

ತಲೆವರಿಗೆಯಿಂದೆ ಕೆಲರಗಳ ಸರಿಸದೊಳಾಗ |
ತಲೆದೋರಿದರ್ ಗಜದ ಭಾರಿ[೪]ಯುಂ ಮಾವುತರ್ |
ಪುಲಿಮುಖ[೫]ಕೆ ನೂಂಕಿದರ್ ಬಿಗಿದ ರೆಂಚೆಗಳ ಮರೆಯೊಳಗಡಗಿ ಬೇಗದಿಂದೆ ||
ಎಲೆಲೆ ಸೇರಿದರಗಳ ದಿಡ್ಡಿಯಂ ಸುಮನಸರ್ |
ಚಲಿಸದಿರಿಯೆಂದಸಿ ಮುಸುಂಡಿ ಮುದ್ಗರ ಗದಾ |
ವಳಿಯಿಂದೆ ಬೊಬ್ಬಿರಿದು ಹೂಣಲಿಡುತಿರ್ದ[೬]ರಾ ಸುರಭಟರ್ ಸುರಭಟರನು[೬] || ೨೬ ||

ತೊಲಗದಿಡುಕಿನೊಳಂಡಿಸಿದರಾಗಳೇ ಕೆಲರ್ |
ತಳಿಗಳೊಳ್ ಪೊಕ್ಕು ವೈಗರೆದರಾಗಳೆ ಕೆಲರ್ |
ಬಲಿದ ಬದ್ದರಗಳಂ ಮುರಿಗೊಂಡರಾ ಕ್ಷಣಂ ಕೆಲರೆಸೆವ ನಡೆಗೊಂಟೆಯ ||
ಬಳಿಯೊಳಿರ್ದರ್ ಕೆಲರ್ ಕೆಲಕೆಲರ್ ಲಾಗಿನಿಂ |
ಲಳಿಯೆದ್ದು ಸುಳಿವಾಡಿದರ್ ಬೀಳ್ವ ಕವಣೆಗ |
ಉಗ್ಗಳ ಬೀರುಗುಂಡುಗಳ ಘಾತಿಯಿಂ ಬಸವಳಿದು ಬೀಳುತಿರ್ದರ್ ಕೆಲಬರು || ೨೭ ||

---

೧ ಸುತ್ತ (ಮ.) ೨-೨ ಗಳಿಳದೇವರ್ ಕೋಟ ಕೋಟಿ (ಹು.) ೩ ಘೋ (ಶಿ, ಹು.)
೪ ರಾಜ (ಮ.) ೫ ಮೊಗ (ಮ.) ೬-೬ ರಾ ಸುರಭಟರನಸುರಭಟರು (ಮ.)

ದಿಡ್ಡಿಗಳೊಳ್ಕೈತಂದು ಗುಪ್ತದಿಂ ಖಳರಗಳ |
ಬಿಷ್ಟೆಯೊಳ್ ಸಾಲ್ಗೊಂಡು ತರತರದ ಪೇರ್ದಳಿಯು |
ವಡ್ಡಿಗಳನುರೆ ಮುರಿದು ಮರೆಯೊಳಗೆ ವ್ಯೈಗರೆದ ವೀರರಂ ಸಂಹರಿಸುತೆ ||
ಬಡ್ಡು ಬಣಗುಗಳನೋಡಿಸಿ ಮುಗ್ಗುವಮರರಂ |
ಕಡ್ಡಿಗೆಣಿಸದೆ ತಳಿಗಳಂ ಮುರಿದುಕೊಂಡಗಳೊ |
ಳಡ್ಡಾದಮರರಂ ತರಿವುತುಂ ಪುರವನೊಳಪೊಗುತಿರ್ದರಾ ಕ್ಷಣದೊಳು || ೨೮ ||

ಕಲ್ಕೊರಡು ಸದೆಸಟ್ಟು ಪುಲ್ಪೊರೆಗಳಾಂತವರ್ |
ನಿಲ್ಕಿದರ್ ಪುರದಗಳನೇಣಿಯಂ ಪೊತ್ತವರ |
ಸಾಲ್ಕದಲಿದುದು ಪೊರಗಣಟ್ಟಣೆಯ ಮೇಲಣವರಿಟ್ಟರಾ ತ್ರಿಪುರದವರ ||
ನಾಲ್ಕು ದಿಕ್ಕಿನ ಸುರಂಗಂ ನಡೆವ ಭರವಸಕೆ |
ನಿಲ್ಕಡೆಯ ಕಾಣೆಂ ಪುರಂದರನ ಸೇನೆಯೊಳ್ |
ಪೋಲ್ಕೆಗ್ಗಳೆಂಬ ಭೇದಮನರಿಯೆನೆಲ್ಲಾ ಭಟರ್ ಮುಸುಕಿದರ್ ಭರದೊಳು || ೨೯ ||

ಇರದೆ ಪದಹತಧೂಳಿಯಿಂದೆ ಪಿರಿದಿಹ ಸಪ್ತ |
ಶರಧಿಯುಂ ಪೂಳ್ವರ್ಗೆ ಪುರದಗಳ ಪೂಳ್ವುದಂ |
ನೆರೆದು ನಿಮಿಷಾರ್ಧದೊಳ್ ಮಡಿದ ಪೆಣಗಳನೆಳೆದು ತುಂಬಿದರ್ ಪುಲ್ಪೊರೆಗಳಂ ||
ಕೊರಡುಗಳನೊಟ್ಟಿದರ್ ಕಲ್ ಗುಂಡು ಮಣ್ಗಳಂ |
ಸುರಿದು ನೆಲಸರಿಮಾಡಿದರ್ ಖಳರ್ ಪೊಯಿಲ್ಗಳಂ |
ಸರಕು ಮಾಡದೆ ಮುಗ್ಗಿ ಕವಿದರಾ ತ್ರಿಪುರಮಂ ಸುತ್ತಲಾ ದಿವಿಜಭಟರು || ೩೦ ||

ಮೂಡಲುರುಬಿತು ಬಡಗಲೊತ್ತಿದುದು ಪಡುವ ಪರಿ |
ಪಾಡಿದುದು ತೆಂಕ ಕೈಕೊಂಡುದೀಶಾಸ್ಯದೊಳ್
ಕೋಡಿಯಿಲ್ಲದೆ ಜಡಿದುದನಿಲನೊಳ್ ಬಲಿದುದಸುರನ ದೆಸೆಯೊಳಾರ್ಭಟಿಸಿತು
ನೋಡಲಗ್ನಿಯೊಳಡಗಿ ನುಗ್ಗಿದುದು ಸುತ್ತಲುಂ
ಮಾಡಿದುದು ಕರ್ಕಶವನಮರಸುಭಟಾಳಿ ನಾ |
ಪಾಡಿಗಳ ಕೋಂಟೆಗಾಳೆಗವೆ ಕಸಿದುದು ಕಲ್ಲ ಮಳೆ ಕವಿದ ಭಟರ ಮೇಲೆ || ೩೧ ||

ಆಡಿದುವು ಡೆಂಕಣಿಗಳಲ್ಲಲ್ಲಿ ಮರುಳ ಕೈ |
ನೀಡಿದುವು ಕವಣೆಗಲ್ ಸೂಸಿದುವು ಕಾಯ್ದೆಣ್ಣೆ |
ಗೂಡಿ ಮುಳಲುರಗು ಕಾಸಿವೆ ಗದಡು ಸುಣ್ಣ ಕಲ್ಲಂಬಲಿಗಳುಂ ಸುರಿದುವು |
ಸೂಡಿದುವು ಪೆಟಲ್ಗೊಳಿಕ್ಕುವ ದಸಿಗಳಾಗಳೊ |
ಲಾಡಿದುವು ಪೇರಿತ್ತುಗುಂಡುಗಳ್ ಭರದೊಳೋ |
ಡ್ಯಾಡಿದುವು ಬಾಡಿದುವು ಮೋರೆಗಳ್ ಕವಿಕವಿದು ಬೀಳ್ವ ದಿವಿಜಾಳಿಭಟರ || ೩೨ ||

ನಿಚ್ಚಣಿಕೆಯಂ ಪತ್ತಿ ಬೇಗ ಪುಲ್ಲೊಂದೆಗಳ
ಕಿಚ್ಚಿನಿಂ ಸುದರೆಡಬಲದೊಳಿಟ್ಟಣಿಸರಂ |
ಮುಚ್ಚಿದರ್ ಕಲ್ಗುಂಡುಮಳೆಗಳಿಂ ಪಂದಿದಲೆಗಳೊಳಿಟ್ಟು ಬೊಬ್ಬಿರಿದರು |
ಕೊಚ್ಚಿದರ್ ಕತ್ತಿ ಕೈದುಗಳಿಂದೆ ಪೆಣಗಳಂ
ಪೆಚ್ಚಿದರ್ ಭೂತವೇತಾಳಸಂಕುಲಕೆ ನೆರೆ |
ಹುಚ್ಚು ಮಾಡಿದರೊಂದು ನಿಮಿಷದೊಳ್ ದಿವಿಜರಂ ಖಳಭಟರ್ ತವಕದಿಂದೆ
|| ೩೩ ||

ಕಾಸಿದೆಣ್ಣೆಯು ಪೊಯಿಲ್ಗೆ ಪಟುಭಟರ ಮೈದೊಗಲ್
ಕೀಸಿದುದು ಮಳಲ ಮಳೆಯಿಂದೆ ಪುಣ್ಣಾದುವುರೆ |
ಸೂಸುತಿಹ ಸುಣ್ಣಗಳ ಸೋಂಕಿನಿಂ ಕಣ್ಣುರಳಿ ಬಾಯ್ಬಂದು ಬಸವಳಿದರುಳ್ |
ಕಾಸಿವೆಯು ಬಿಸಿಗದಡು ಬೀಳೆ ಜಠರಾಗ್ನಿಯೊಳ್ |
ಕೇಸುರಿಗಳುಬ್ಬಿದುವು ಕಲ್ಗುಂಡುಗಳ ಹತಿಯೊ |
ಳೋಸರಿಪ ದಿವಿಜರಂ ಕಂಡು ಮೂದಲಿಸಿದಂ ಸುರಪಸತಿಕೋಪದಿಂದೆ || ೩೪ ||

ಮತ್ತೆ ಮೂದಲಿಸಿದಂ ಸುರಪನೆಲವೆಲವೊ ಬೆ |
ನ್ನಿತ್ತಿರೇ ದನುಜರ್ಗೆ ಸುರರೆಂದು ಮೂದಲಿಸಿ |
ಚಿತ್ತದಾವೆ ಶನುಬ್ಬರಿಸಿದುದು ಪೊಂಗಿದುದು ತಮತಮಗೆ ಸಂದಣಿಸುತ್ತೆ |
ಕೊತ್ತಳದ ಹುಲಿಮುಖದ ದಿಡ್ಡಿಗಳ ಸರಿಸದೊಳ್ |
ಪತ್ತಿದರ್ ಸಾಲ ನಿಚ್ಚಣಿಕೆಗಳ ಮೇಲೆ ಮೊರೆ |
ವುತ್ತಿದರ್ ಪಳಿಯಾದ್ಯಂಗಳಿತ್ತಂಡದೊಳ್ ಶರಧಿನಿರ್ಘೋಷದಂತೆ || ೩೫ ||

---

೧ ತ್ತಿ (ತಿ. ಪ.) ೨ ಮ್ಮಂದೆ (ಹು.) ೩ ಕು (ಹು.) ೪ ಬಸವಳಿಯಲು (ತಿ.)

ಸೂಸಿದರ್ ಕೆಂಡಮಂ ಬಲ್ಗವಣೆ ಕಲ್ಗಳಂ |
ಬೀಸಿದರ್ ಬಿಸಿಯ ಮೇಣಮನೆರೆದು ತನುಗಳಂ |
ಕಾಸಿದರ್ ಬೀರ್ವಗ್ಗವಂ ಹಾಯ್ಕಿ ಸೇದಿದರ್ ಮರುಳ್ಗ್ತ್ರಗಳಿಂ ತೂಂತರು ||
ಸಾಸಿದರ್ ಕಾರ್ಬೊಗೆಯ ಪರ್ಬಿನಿಂ ಬಲ್ಗೊಲೆಗೆ |
ಹೇಸಿದರ್ ಸುರರಗಳ ದಿಡ್ಡಿಯೊಳ್ ಕೈಗಳಂ |
ಸಾಸಿದರ್ ಕೆಲಂಬಾಗ ಕೆಲರುರುಬಿ ಕಾದುತಿರ್ದರ್ ಬಳಿಕ್ಕೇನೆಂಬೆನು || ೩೬ ||

ಇರದೆ ಹಮ್ಮೈಸಿದರ್ ಕೆಂಡಗಳ್ ಬೀಳೆ ಕೇಃ |
ಸುರಿಯಿಂದೆ ಮೊಗಮುರಿದು ಮುರಿದುರೆ ತೊಲೆಯುರುಳೆ |
ಕರಚರಣಮುಡಿದು ಕೆಡೆದರ್ ಪಂದಿದಲೆ ತಾಗೆ ಜರ್ಜರಿತತನುವಾದರು ||
ಸಿರಿಯ ದಸಿಗಳು ವ್ಯೆಯನಾಂಟಿ ಕಳವಳಿಸಿದರ್ |
ಪರಿಪರಿಯ ಸಮರಸಾಧನಗಳಿಂ ಬಿಡದೊಡನೆ |
ತರತರದೆ ಬೀಳುತಿರ್ದರ್ ದಿವಿಜಸುಭಟರದನೇನೆಂಬೆನಚ್ಚರಿಯನು || ೩೭ ||

ಕಾಪೆಣ್ಣೆ ಸುಣ್ಣಗಳ್ ಜಲಧಾರೆಯಿರ್ಕಡೆಯೊ |
ಊದುತಿಹ ಕಾಳೆಗಳ್ ಮೊಳಗು ಕಲ್ಗುಂಡುಗಳ್ |
ಭೇದವಿಲ್ಲದೆ ಸೂಸುವಾರಿಕಲ್ ಕಂಡೆಯುದ ಬೆಳಗು ಮಿಂಚುಗಳ ಸಂಚು ||
ಆದರದೆ ಕುಣಿಸಿವ ಶಾಕಿನಿಯರೇಃ ನವಿಲಲ್ಲಿ |
ಕಾದುವ ಸುರರ್ ಜಲಧರಂಗಳೆನೆ ಕಣ್ಗೆ ಸೊಗ |
ಸಾದುದಳಿದಮರರಟ್ಟಿಯ ಬೆಳಸು ತ್ರಿಪುರದ ಮಹಾಬಯಲ ಪೆರ್ಬೊಲದೊಳು
|| ೩೮ ||

ಪಡಿಬಲಿಸಿ ಸುರಭಟರ್ ಮುತ್ತುವರ್ ಪತ್ತುವರ್ |
ಕಡುಗಿ ರಾಕ್ಷಸಭಟರ್ ನೂಂಕುವರ್ ತಾಂಕುವರ್ |
ಮುಡಿಪ ಪೆಣಗಳ ಬಳಿಯೊಳೊತ್ತುವರ್ ಸುತ್ತುವರ್ ಪರಿಗೆಯಿಂ ದಿವಿಜಭಟರು ||
ಕೊಡದೆ ಕೋಪದೊಳಸುರರುರುಬುವರ್ ತರಬುವರ್ |
ಬಿಡದೆ ಸುರರೊತ್ತಿ ಪ್ರೊಯಾಡುವರ್ ಕಾಡುವರ್ |
ಕಡಿದಿರಿದಸುರಭಟರ್ ಕೆಡಪುವರ್ ಮಡಪುವರ್ ಮಾರಾಂತ ಸುರಭಟರನು
|| ೩೯ ||

೧ ಗೆ (ಶಿ. ನೋ.) ೩ ಕಟ್ಟೋಳ (ಹು.) ೩-೩ ಪ್ರತಿಹ ನಾದಂ (ಹು, ಮು.)

ಸುರಗಿಯಿಂದಿರಿದು ಶೂಲದೆ ತಿವಿದು ಖಡ್ಗದಿಂ |
ದಿರದೆ ಕತ್ತರಿಸಿ ಕೊಡಲಿಗಳಿಂದೆ ಕಡಿದು ಮು |
ದ್ಗರದಿಂದೆ ಮೋದಿ ಮುಸಲದೊಳಿಟ್ಟು ಗದೆಗಳಿಂದಪ್ಪಳಿಸಿ ಸಬಳದಿಂದೆ ||
ಶಿರವನಿರಿದೆತ್ತಿ ಚಕ್ರದಿನರಿದು ಮಿಕ್ಕ ಪರಿ |
ಕರದಿಂದೆ ದೈತ್ಯನಾಯಕರಾರ್ದು ಕೊಲುತಿರಲ್ |
ಪರಿಕಿಸಲ್ ದೀಪಮಂ ಸೋಂಕುವ ಪತಂಗಮಾದರ್ ದಿವಿಜಸುಭಟರಂದು || ೪೦ ||

ಆರ್ಭಟಿಸಿದಂ ವಹ್ನಿಯಂತಕಂ ಮುಳಿಸಿನಿಂ |
ನಿರ್ಭರಾವೇಶನಾದಂ ನಿರುತಿ ಕೋಪಸಂ |
ದರ್ಭಮಾನಸನಾದನಬ್ಧಿಪಂ ಕಣ್ಗಳೊಳ್ ಕಿಡಿಗೆದರಿದಂ ಮರುತನು ||
ಗರ್ಭೀಕೃತಾಮರ್ಷನಾದಂ ಕುಬೇರನಾ |
ವಿರ್ಭೂತಶಿಖಿನಯನನಾದನೀಶಾನಂ ಹ |
ವಿರ್ಭುಕ್ತರಾಜನಿನಿ[1]ಬರ್ಗೆ ಕೈವೀಸಿದಂ ಮೊಳಗಿದುವು ವಾದ್ಯಂಗಳು || ೪೧ ||

ಕೇಳಾದೊಡೆಲೆ ಸಿದ್ಧರಾಮ ಮೇಲಪ್ಪ[2] ಘನ |
ಕೋಲಾಹಳವನೆಂಟು ದಿಕ್ಕಿನೊಳ್ ದಿಕ್ಪಾಲ |
ಜಾಲರೇ[3] ಹರಿಗೆಖಂಡೆಯವಾಂತು ವಾಹನಂಗಳನುಳಿದು ಕಾಲ್ನಡೆಯೊಳು ||
ಹೊಳಿದಗಳೊಳ್ ನಿಂದು ಸವ್ಯಾಪಸವ್ಯದೊಳ್ |
ಮೇಲಿಕ್ಕದಮರರಂ ಜರೆವುತಂ ಮುಗ್ಗಿ ಕೈ |
ಕಾಲೊಡೆದು ಬೀಳ್ದವರನೆಳೆಸುತಂ ಕೋಂಟೆಯಂ ಪತ್ತಿದರದೇನೆಂಬೆನು || ೪೨ ||

ಪಿಡಿದು ಮುಂದಲೆಯನಾಳ್ವೇರಿಯಿಂದಗಳೊಳಗೆ |
ಕೆಡಪುವರ್ ಸುರರಸುರರಂ ದಿವಿಜರಂ ಮೇಲ |
ಕಡರದಂತಿರಿದಿರಿದು ನೂಂಕುವರ್ ಹಾಯ್ಕುವರುವ್ವರಿವ ಮದ್ದಿನ ತಿತ್ತಿಯಂ ||
ಬಿಡದುಳಿದ ಸಮರಸಾಧನದಿಂದೆ ದಿವಿಜರಂ |
ಮಡಿಪುತಿರೆ ಮತ್ತೆ ಮತ್ತುರವಣಿಸಿ ದೈತ್ಯರಂ |
ಗಡಣೆಗೊಳ್ಳದೆ ಪತ್ತುತಿರ್ದುದಮರವ್ರಾತಮೇನೆಂಬೆನದ್ಭುತವನು || ೪೩ ||

---

೧ ನನಿ (ಶಿ, ಗೋ.) ೨ ಲಾದ (ಪ.) ೩ ವುರೆ (ಹು.)

ದುರ್ಗಳೊಳಗಾದುವತಿಕಳಕಳಂ ತತ್ಪುರಜ |
ನರ್ಗಳಾರ್ಭೀರಿಯಂ ಪತ್ತಿದರ್ ಶಿವಶಿವಾ |
ಮಾರ್ಗಂಗಳಿರದೆ ಕೋಳ್ಕೊಂದುವೆಂದೆಡೆಗೆಡೆಗೆ ಬೀದಿಗರ್ ಗಜಬಜಿಸಲು |
ಭರ್ಗನಯನಜ್ವಾಲೆ ರೂಪಾದುದೆನೆ ಖಳಭ |
ಟರ್ಗಳಂ ತೇರ್ಗಳಂ ವಾಜಿರಾಜಿಗಳನಿಭ |
ವರ್ಗಮಂ ಕೂಡಿಕೊಂಡಾ ಕ್ಷಣಂ ವೀರವಿದ್ಯುನ್ಮಾಲಿ ನಡೆತಂದನು ||೪೪||

ಕಾರೊಡಲ ಕೆಮ್ಮೀಸೆಗಳ ಕೋರೆದಾಡೆಗಳ |
ಚೂರಿಸುವ ಖಂಡೆಯದ ಕರದ ಬಹು ರೌದ್ರರಸ |
ಘೋರಣಾನನದ ಕಣ್ಗಳ ಕಿಡಿಯ ಝಳದ ಜಾಡಿಯ ಭೀಷಣಧ್ವನಿಗಳ |
ಘೋರರಾಕ್ಷಸರವನ ಕೂಡೆ ಬರುತಿರ್ಪುದಂ |
ದೂರದೊಳ್ ಕಂಡು ದಿವಿಜಾಳಿ ಯಮದೂತರುಂ |
ಸಾರಿ ಬರೆ ಕಂಡು ಹಮ್ಮೈಪ ರೋಗಿಯ ತೆರದೊಳಳವಳಿದುದೇನೆಂಬೆನು ||೪೫||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ||೪೬||

ಅಂತು ಸಂಧಿ ೪೨ಕ್ಕಂ ಪದಗಳು ೧೬೮೯ಕ್ಕಂ ಮಂಗಳಮಹಾಶ್ರೀ

ನಾಲ್ವತ್ತಮೂರನೆಯ ಸಂಧಿ

ಸೂಚನೆ

ವೀರವಿದ್ಯುನ್ಮಾಲಿ ಸುರಪನಂ ಗೆಲೆ ಶಿವಕು |
ಮಾರನವನಂ ಮುರಿಯೆ ಕಮಲಾಕ್ಷನೈದಿ ದ |
ಕ್ಷಾರಿಯೊಳ್ ಸೆಣಸಲವನಂ ಬಾಣದಿಂದೆಚ್ಚು ಪುರಕಿಟ್ಟನಾ ವೀರನು ||

ಅಪ್ರತಿಮಮಹಿಮ ದನುಜಪ್ರಲಯಕಾಲ ಲೋ |
ಕಪ್ರಭು ದಯಾಳು ಗಿರಿಜಾಪ್ರಮೋದಾಬ್ಧಿ ಚಂ |
ದ್ರಪ್ರತಿಮ ಕೋಟಿಸೂರ್ಯಪ್ರಭಾಸಂಪೂರ್ಣ ಸುಪ್ರತೀಕವಿರಾಜಿತ ||
ಕ್ಷಿಪ್ರಪ್ರಸನ್ನ ದೇವಪ್ರಚಯಮುಕುಟರ |
ತ್ನಪ್ರಚುರನೀರಾಜನಪ್ರಕಾಶಾಂಘ್ರಿಯುಗ |
ಸುಪ್ರೇಮದಿಂ ರಕ್ಷಿಸ[1]ಪ್ರಕಟಪಂಪಾವಧೂಪ್ರಿಯ ವಿರೂಪಾಕ್ಷನೇ || ೧ ||

ಎಲೆ ಸಿದ್ಧರಾಮೇಶ ಕೇಳಿನ್ನು ದಿವಿಜಸಂ |
ಕುಲಮಿರದೆ ತ್ರಿಪುರದಾಳ್ವೇರಿಯಂ ಪತ್ತಿ ತ |
ತ್ತಳರೊಡನೆ ಕಾದುತಿರಲಾಕ್ಷಣಂ ವೀರವಿದ್ಯುನ್ಮಾಲಿಯೊಡನೆ ಬರ್ಪ ||
ಕಲಿಮಹಾನಾಭ ವಿದ್ರಾವಣ ವಿರೂಪಾಕ್ಷ |
ಶಲಭ ಗಜಶಿರ ಶಂಖುಶಿರ ಜಂಭ ಮುಂತಾದ |
ಬಲುಗಯ್ಯ ರಕ್ಕಸರ್ ಕೋಂಟೆಯಂ ಪತ್ತಿರ್ದ ದಿವಿಜರಂ ಸದೆಬಡಿದರು || ೨ ||

ಪುರಮನಧಟಿಂ ಬಳಸಿ ಕಾದುವಮರವ್ರಜಂ |
ಮುರಿದು ಘಟ್ಟೊಡ್ಡಿ ನಿಂದುದು ಸುರಪನಾಜ್ಞೆಯಿಂ |
ದುರುಳರಕ್ಕಸ ಜಂಭನಾಜ್ಞೆಯಿಂ ದಾನವರ ಬಲಮಿರದೆ ಪೌಜೊಡ್ಡಿತು |
ಎರಡರ ಸುಮೋಹರದೊಳಧಿಪತಿಗಳಾಜ್ಞೆಯಿಂ |
ಪರಿದುದೊಡನೊಡನೆ ಚೂಣಿಯ ಭಟರ ಬೊಬ್ಬೆಯ |
ಬ್ಬರಕೆ ಧರೆ ಬಿರಿಯೆ ಕರಿಕಮಠರೆರ್ದೆ ಜರಿಯೆ ಸಂಗರಮಿರದೆ ಸಂಕ್ರಮಿಸಿತು || ೩ ||

---

೧ ಸಾ (ಹು, ಮ.)

ಕರಿಕರಿಯನಶ್ವಮಶ್ವಮನಾಳ್ಗಳಾಳ್ಗಳಂ |
ವರವರೂಥಂ ವರೂಥಮನೊದಗಿ ಸೆಣಸುವ |
ಚ್ಚರಿಯುಪೆಂ ಪಣ್ಣಿಸೆಂ ಚೂಣಿಯಿಂದರೊಳೊದಗಿ ಪೊಯ್ದಾಡುತಿಹ ಸುಭಟರು ||
ಉರುನಖಾನಖಿ ಹತಾಹತಿಗಳಿಂ ಕಾದುತಿರ |
ಲಿರದೆ ರಕ್ಕಸರಾರ್ದು ನಾನಾಪ್ರಕಾರದಿಂ |
ದಿರಿವ್ರತಿರೆ ಕಂಗೆಟ್ಟು ಸುರಬಲಂ ಮುರಿದು ಬೆಂಕೊಂಡುದದನೇನೆಂಬೆನು || ೪ ||

ಕವಿವಸುರಬಲದ ಸುಮ್ಮಾನಮುಂ ಮಾನಮುಂ |
ದಿವದವರ ವಿಗತಪ್ರತಾಪಮುಂ ತಾಪಮುಂ |
ತವೆ ಕೊರೆವ ದೈತ್ಯರ ಕೃಪಾಣಮುಂ ಬಾಣಮುಂ ಸುರಭಟರ ಚೇತನವನು ||
ದಿವಿಜವೈರಿಗಳ ಬೊಬ್ಬಾಟಮುಂ ಘಾಟಮುಂ |
ವಿವಿಧಸುರಭಟರ ಪರಿದಾಟಮುಂ ನೋಟಮುಂ |
ವಿವರಿಸುವಡೆ ಸಮರರೊಳಿಡಿದರ್ ಕೂಡಿದರ್ ಸುರಪಾಲನರಿಸೆಲೆಯನು || ೫ ||

ಖೂಳದೈತ್ಯರ ಬೊಬ್ಬೆಗೊಡುವಸುರಪಾಳಿಗಳ |
ಕಾಲನುಡಿ ಕಳಿಳವಳಿಸದಿರಿ ಬೆನ್ನೊಳಿರ್ಪಂ ತ್ರಿ |
ಶೂಲಿ ಭಯವೇಕೆಂದು ವೈಶ್ವಾನರಾದಿ ದಿಕ್ಪಾಲಕರ್ ಮುಂಕೊಂಡರು ||
ಪೇಳಲೇಂ ಮುಪ್ಪುರದ ದೊರೆಗಳೊಡನಿರ್ವರ್ಗೆ |
ಕಾಳೆಗಂ ಸಮನಿಸಿತು ಸುರಪಾಲನಾ ಕ್ಷಣಂ |
ಕಾಳರಕ್ಕಸ ಜಂಭನಂ ಜರೆದು ಶರವರುಷಮಂ ಕರೆದು ಬೊಬ್ಬಿರಿದನು || ೬ ||

ಶಕ್ರನುರೆ ಜರಿದು ಬಾಣಂಗಳಂ ಕರೆಯಲ್ಕ |
ತಿಕ್ರಮಿತಕೋಪದಿಂ ಚಾಪದಿಂದಾಕಾಶ |
ಚಕ್ರಮೆಲ್ಲಂ ಪೂರ್ಣಮಪ್ಪಂತೆ ಚಿತ್ರದಿಂದಂಬಿನಂಭೋನಿಧಿಯನು ||
ವಿಕ್ರಮದೊಳಾ ಖಳನುಗುಳ್ಚಲಿಂದ್ರನ ಸೈನ್ಯ |
ಚಕ್ರದೊಡಲೊಳ್ ಕಿಲಿಸಲ್ ಕಂಡು ಸುರಪತಿಯು |
ಸಕ್ರಮಮೋಘದ ಬಾಣಂಗಳಂ ತಡೆಗಡಿದು ತಾನೆಚ್ಚು ಬೊಬ್ಬಿರಿದನು || ೭ ||

೧-೧ ಪಾಯ್ದಟ್ಟು ಸುರಬಲಂ ಮುರಿದು (ಹು, ಮು.) ೨ ನಿಜ (ಮು.) ೩-೩ ಗೋಡುವಸುರಾಳಿಗಳ | ಕಾಳನುಡಿಗ (ಗೋ, ಶಿ, ಹು.)

ಬಿಡುಗಣ್ಣರರಸನೆಚ್ಚಂಬುಗಳನಾ ದೈತ್ಯ |
ನೆಡೆಯೊಳೇ ಸಂಹರಿಸಿ ಪುನರಪಿ ಶರಂಗಳಂ |
ತೊಡಿಸಿ ತಿರುವಿಂದುಗುಳ್ಚಲ್ ಸುರಪನಂಗಮಂ ತಾಗಲತಿವೇಗದಿಂದೆ |
ಗುಡಿಗುಡಿಸಿ ಕೋಪದಿಂ ಶಕ್ರನೈದಂಬಿನಿಂ |
ದಡಿಗರಕ್ಕಸನ ವಕ್ಷಸ್ಥಳವನೆಚ್ಚೊಡದ |
ನೊಡೆದು ಬೆನ್ನೊಳ್ ಮೂಡಿದುವು ಖಲಂ ಮೈಮರೆದು ವರವರೂಥದೊಳೊರಗಲು || ೮ ||

ಮತ್ತೆ ಹದಿನಾಲ್ಕು ಬಾಣದೊಳವನ ಸೂತನಂ |
ಕತ್ತರಿಸಿ ತುರಗಮಂ ಕಡಿದು ರಥಮಂ ಮುರಿಯ |
ಲುತ್ತಮಭಟರ್ ನವವರೂಥದೊಳ್ ಜಂಭನಂ ಕೊಂಡೊಯ್ಯಲಾ ಕ್ಷಣದೊಳು |
ಮತ್ತೆ ಗಜನಿಕರದೊಳ್ ಕಂಠೀರವಂ ಪೊಕ್ಕು |
ತತ್ತರಂ[೧]ದರಿವೋಲ್ ಸುರೇಂದ್ರ[೧]ನಾ ದಾನವರ |
ನೊತ್ತಿ ಸವರಲ್ ಕಂಡು ವೀರವಿದ್ಯುನ್ಮಾಲಿ ತಾನಿರದೆ ಮುಂಕೊಂಡನು || ೯ ||

ಆರಳವು ವೀರವಿದ್ಯುನ್ಮಾಲಿಯಂ ತಡೆವ |
ವೀರರೊಳರೇ ಭಲರೆನುತ್ತೆ ಖಲವಂದಿ ಕೈ |
ವಾರಿಸಲ್ ಪೊಕ್ಕನಸುರಂ ಸುರರ ಸೇನೆಯಂ ಕೋಪದಿಂ ಸಂಹರಿಸುತೆ |
ಆರಿವಂ ಜಂಭಾರಿಯೋಯೆಮ್ಮಪುರಕೆ ಮದ |
ನಾರಿಯಂ ತಂದನೋ ಲೇಸೆಮ್ಮುಮಂ ಜಯಿಸ |
ದೂ[೨]ರನೇಂ ಪೊಕ್ಕಪನೆ ನೋಳ್ಪೆನೆನುತಿಂದ್ರ[೨]ನಂ ತರುಬಿ ಖಳನಿಂತೆಂದನು || ೧೦ ||

ಧರೆಗೆ ಮಳೆಯಂ ಕರೆದು ಬಡಪಾರ್ವರಿಂದೆ ನೀಂ |
ಧರಿಸುವ ಹವಿರ್ಭಾಗಮಲ್ಲ ಜಲಕೇಳಿಯೊಳ್ |
ಸುರವಧುಗಳಿಡುವಂಬುಧಾರೆಯಲ್ಲಿನ್ನಂಬು[೩]ಧಾರೆಯಿವೆ ಕೊಳ್ಳೆನುತ್ತೆ[೩] |
ಸರಳ ಸಾರದೊಳೆ ದೇವೇಂದ್ರನಂ ಕೊರೆದುಳಿದ |
ಸುರರ ಗಂಟಲೊಳಸುವನಿರಿಸಿ ವಿದ್ಯುನ್ಮಾಲಿ |
ಹರದಳಕೆ ದಾಳಿಮಾಡಲ್ ಕಂಡು ಶಿವಕುಮಾರಂ ತಡೆದು ಬೊಬ್ಬಿರಿದನು || ೧೧ ||

೧-೧ ದರಿಪವೊಲ್ ಸುರಪ (ಶಿ, ಗೋ., ಹು.) ೨-೨ ರ ಪೊಕ್ಕಪನೆ ನೋಳ್ಪೆವೆನುತ್ತಲಿಂದ್ರ (ಶಿ, ಗೋ.) ೩-೩ ಗಳ ಧಾರೆಯಿಕ್ಕಿಸೆನುತೆ (ಹು, ಮ.) ೪ ಬಲ (ಗೋ., ಶಿ, ಮ., ಹು.)

ಕೋದಂಡಮುಂ ಗುಹಂ ಜೇವೊಡೆಯೆ ಸಿಂಜನಿಯು |
ನಾದಮುಣ್ಮಿದುದಖಿಳಲೋಕಂಗಳೊಳಗೆ ಕಿವು |
ಡಾಮುವು ದಿಶಾಗಜಂ ಭ್ರಮಿಸಿದುವು ಕುಲನಗಂ ಬಿರಿದುದಂಬುಜಭವಾಂಡಂ ||
ಈ ದನುಜಪುರದ ನೆವದಿಂ ಸಕಲಭುವನಮಂ |
ಮಾದೇವನಳಿಯಲ್ಕೈದಿದನಲ್ಲದೆಮ್ಮನೇಂ |
ಕಾದಪನೆ ಹಾಯೆನುತೆ ಚಾಪಟಂಕಾರದಿಂ ಸಕಲಜನಮಳವಳಿದುದು || ೧೨ ||

ಮಾಡಿದ ಮಹಾಧನುಷ್ಟಂಕಾರಕೊಂದಿನಿಸು |
ಕೋಡದಸುರೇಂದ್ರನಂ ಕಂಡು ಸೇನಾನಿ ಮಾ |
ತಾಡಿಸಿದನೆಲವೊ ತಾರಕದರ್ಪ ದರ್ಪಕಹರಂ ಹರನ ಸುಕುಮಾರನಾಂ |
ಓಡಿ ಬದುಕಲ್ಲದೊಡೆ ಯಮಪುರದೊಳಾಲಯಂ |
ಕೂಡೆ ಕೈಗೈವುತಿದೆ ನಿನಗೆ ನಿಮ್ಮಯ್ಯಂಗೆ |
ಹೂಡಿದಂಬಿನ ದೊರೆಯ ಬಾಣವಿದೆ ಕೊಳ್ಳೆನಲ್ ಖಳರಾಜನಿಂತೆಂದನು || ೧೩ ||

ಬಿಡದರಸಿ ತೊಳಲುತಿಹ ಬಳ್ಳಿ ತಾನೇ ಕಾಲ್ಗೆ |
ತೊಡರಲೇನೊಳ್ಳಿತಲ್ಲವೆ ತಮ್ಮ ತಂದೆಯಂ |
ಕಡುಮೋಸದಿಂದೆಚ್ಚು ಕೊಂದ ಖೂಳನೆ ಭಾಪುಭಾಪುರೇ ಖಳ ನಿನ್ನನು ||
ಮಡಿದನೆಂದಿರ್ದೆನಾವಿನ್ನೆಗಂ ನೀನೆ ಕೈ |
ಯ್ಯೊಡನೆ ಬಂದೈ ಪುಣ್ಯವುಳ್ಳ ಕಾಲಕ್ಕೆ ತ |
ನ್ನೊಡೆಗೆ ಬರ್ಪುದು ಕೂರ್ತ ವಸ್ತುವೆಂಬುದಕೆ ನೀನೆ ಸಾಕ್ಷಿ ಹೋಗೆಂದನು || ೧೪ ||

ರಾಮ ಕೇಳಾ ಮಾತುಗೇಳುತತಿಸಂಗರವಿ |
ರಾಮನತಿರೌದ್ರಮಾನಸನಾಗಿ ನೋಡೆನ್ನ |
ಸಾಮರ್ಥ್ಯಮಂ ಖಳಾಧಮ ನಿನ್ನ ತಂದೆಯಂ ಮೋಸದಿಂ ಕೊಂದೆಂದೆಲಾ ||
ಈ ಮಹಾನಗರಂಗಳಂ ನಿಮಿಷದೊಳಗೆ ನಿ |
ರ್ಧೂಮಮಂ ಮಾಡಿದಪೆ ಪಿಸುಗ ತಾಳೆಂದೆನುತೆ |
ಕಾಮವೈರಿಯ ಸುತಂ ಮೂಡಿಗೆಯೊಳಂಬುಗಿಯಲೆಂಬೆನಚ್ಚರಿಯನು || ೧೫ ||

[illegible] (ಮ.) ೩ ತ್ರಿಜಗಸಜ್ಜುಗನೆ (ಮ.) ೪-೪ ಮಾಡಿದ ಮಹಾಧನುಷ್ಟಂಕಾರ
(ಹು, ಮ.) ೫-೫ ಪಸಿಸ್ನೇಕೆ ತಾಳೆ (ಹು, ಮ.)

ಬತ್ತಳಿಕೆಯಿಂದುಗಿವ ಸಮಯದೊಳಗೊಂದು ತುಡೆ |
ಪತ್ತು ಗುಣದಿಂ ಬರಲ್[೧] ನೂರ್ ಜವದೊಳೊಡನೆ ಪರಿ |
ವೃತ್ತಿ ಸಾಸಿರಮುರಿಯ ಬಾಣಮಂ ಕಡಿವಲ್ಲಿ ಲಕ್ಕಮರಿವಾಗ ಕೋಟಿ |
ಬಿತ್ತರದ ದೈತ್ಯಸೇನಾಂಗದೊಳ್ ಪರಿಗಣನೆ |
ಯೆತ್ತಣದು ಕುವರನಂಬಿನ ಚಮತ್ಕಾರಮೋ |
ಸುತ್ತರೋತ್ತರವೊ ಭಲರೆನುತುಭಯಸೇನೆಯೊಳ್ ಕೊಂಡಾಡಿದರ್ ಗುಹನನು
|| ೧೬ ||

ಈತನಂಬಿನ ಚಮತ್ಕಾರಮಂ ಕಂಡು ಮ |
ತ್ತಾತನೊಡನೊಡನೆ ಖತಿಮಸಗಿ ಬಿಲ್ಲಂದಿಸು |
ವ್ರಾತಮಂ ಕರೆಯಲಾ ಗುಹನೆಸುಗೆಗಿರ್ಮಡಿಯೆನಲ್ ಪುದಿದುವೆಲ್ಲೆಡೆಯೊಳು |
ಭೀತಿಗೊಂಡರ್ ಸುರರ್ ವೀರವಿದ್ಯುನ್ಮಾಲಿ |
ಗೇತರತಿಶಯವೊ ಬಿಲ್ಬಲ್ಮೆಯೆಂದೆಲ್ಲರುಂ |
ಪೂತುರೇ ಸುಭಟ ಚಾಗೆಂದುಲಿಯೆ ಕೋಪದಿಂ ಗುಹನಾರ್ದು ತೆಗೆದೆಚ್ಚನು
|| ೧೭ ||

ಬಿಟ್ಟ ಕಣೆ ಪಗೆಗಳಂ ಕಚ್ಚಿದುವು ಕೊಚ್ಚಿದುವು |
ಮುಟ್ಟೆ ಗಗನಾಂಗಣಕ್ಕುರ್ಬಿದುವು ಪರ್ಬಿದುವು |
ನೆಟ್ಟನೆ ದಿಶಾತಟಕ್ಕೊತ್ತಿದುವು ಮುತ್ತಿದುವು ಬಿಡದೆ ನೋಟಕಜನವನು ||
ಅಟ್ಟೆ ತತ್ಪುರಿಗಳಂ ಪುಗಿಸಿದುವು ಸುಗಿಸಿದುವು |
ಇಟ್ಟಣಿಸಿ ಭಗಣಮಂ ಸೋಂಕಿದುವು ನೂಂಕಿದುವು |
ನಿಟ್ಟೆಪರ ಕಣ್ಗೆ ಪೊಳೆದಾಡಿದುವು ಮಾಡಿದುವು ಕೌತುಕಮನಾ ಕ್ಷಣದೊಳು || ೧೮ ||

ಭೋರ್ಮೊರೆವ ಗುಹನ ಶರಮಂ ಕಂಡು ಮನದ ಖತಿ |
ನೂರ್ಮಡಿಸೆ ವೀರವಿದ್ಯುನ್ಮಾಲಿ ಬೇಗದಿಂ |
ಕಾರ್ಮುಕದೊಳಂಬನೊಂದಿಸುತೆಲವೊ ನಿನ್ನ ಶರಕೊಂದೆ ವಾಹನಕಮೆರಡು |
ಆರ್ಮೊಗಕೆ ಮೂರ್ಬಿಲ್ಗೆ ನಾಲ್ಕು ತೊಣೀ[೩]ಗೈದೆಸುತೆ |
ಕೂರ್ಮೊನೆಯ ಸರಳ್ಗಳಿಂದೆಸೆಯಲ್ಕೆ ಖಂಡಿಸಿತು |
ಮೂರ್ವರ್ಡಿ ನಸುನಗುತೆ ವೀರವಿದ್ಯುನ್ಮಾಲಿಗಭವಸುತನಿಂತೆಂದನು || ೧೯ ||

೧ ಬಿಪಲ್ (ಶಿ, ಗೋ, ಪು, ಮ.) ೨ ಆ (ಶಿ, ಗೋ.) ೩ ಪೊಣೆ (ಶಿ, ಗೋ.) ;
ತೋಳ್ (ಮ.)

ಅರರೆ ಖಳರಾಜ ನಿನ್ನಯ ಶರಕಿದೊಂದಂಬು |
ಕರದ ಕಾರ್ಮುಕಕೆರಡು ಸೂತಂಗೆ ಮೂರ್ ತೋರ್ಪ |
ತುರಗಕ್ಕೆ ನಾಲ್ಕು ತವರಥಕ್ಕೈದು ನಿನ್ನೆರ್ದೆಯನೊಡೆಯಲಾರೊಡನೆ ಬರ್ಪ |
ದುರುಳದಾನವಸೇನೆಗೇಳ್ ಮುಪ್ಪುರಕ್ಕೆಂಟು |
ಪರಿಯುಳಿದ ದೈತ್ಯಗಣಕೊಂಬತ್ತು ನೋಡೆಂದು |
ಹರಸೂನುವೆಸುವಿನಂ ಸಿದ್ಧರಾಮೇಶ ಕೇಳೆನೆಂಬೆನಚ್ಚರಿಯನು ‖ ೨೦ ‖

ಬಾಣಮುಡಿದುವು ಕರಶರಾಸನಂ ಖಂಡಿಸಿತು |
ಕಾಣೆಸಸುವಂ ಸೂತನಂಗದೊಳ್ ಹಯತತಿಯ |
ಗೋಣೆರಳ್[೧]ತುಂಡಾದುವಾ ರಥಂ ಪುಡಿಯಾಯ್ತು ಖಳನೆರ್ದೆಯೊಳೇರಾದುದು |
ದಾಣವಸುರರ್ ಗಾಯವಡೆದುರುಳೆ ಮುಪ್ಪುರಕೆ |
ಸಾಣೆಯುಲಗಿನ ಸರಳ್ ಸುರಿದುವಿನ್ನೆಂತೊ ಬಿ |
ಲ್ಜಾಣಿಕೆ ಕುಮಾರಕಂಠೀರವನ ಜಗಜಟ್ಟಿ ಭಾಪೆಂದು ಸುರರುಲಿದರು ‖ ೨೧ ‖

ಭಲರೆ ಕೋದಂಡಶಿಕ್ಷಾಚಾರ್ಯ ಘನಚಾಪ |
ವಿಲಸಿತಾಮ್ನಾಯಮೃತ್ಯುಂಜಯ ಮಹಾಶರಾ |
ವಳಿಯ ಸೃಷ್ಟಿಗೆ ವಿನೂತನಚತುರ್ಮುಖನೆಂದು ಜನರೀತನಂ ಪೊಗಳಲು |
ಖಳನತುಳಕೋಪದಿಂ ಗರ್ಜಿಸುತೆ ಮತ್ತೆಯುಂ |
ಕಲಹಸನ್ನಾಹಮಂ ಕೈಕೊಂಡು ಬೇಗದಿಂ |
ಜಿಳಿಸೆರೆಯ ಪೊತ್ತನ ಕುಮಾರನಂ ತಿನ್ನೆನುತ್ತುರಗಾಸ್ತ್ರದಿಂದೆಚ್ಚನು ‖ ೨೨ ‖

ಕಾದುದು ಸಮಸ್ತರಣರಂಗಂ ವಿಷಾಗ್ನಿಯಿಂ |
ಸೀದುದು ಜಗಂ ಮಸಗಿ ಸುಡುವ ತಜ್ಜ್ವಾಲೆಯಿಂ |
ಪೋದುದಲ್ಲಿಯ ಜನಂ ಹರಣಮುಳ್ಳೊಡೆ ಹಾಡಿಕೊಂಡು ಬದುಕುವೆವೆನುತ್ತೆ |
ತೋದುದಂಬರತಳಂ ವಿಷದ ಲೋಳೆಗಳಿಂದೆ |
ತೀದುದಮರರ ಹರುಷವಿನ್ನೆಮ್ಮ ಬಲಕೆ ಲೇ |
ಸಾದುದೆಂದಸುರಾಳಿ ಬಾಹುಗಳನುರೆ ಪೊಯ್ದು ಬೊಬ್ಬಿರಿದುದಾ ಕ್ಷಣದೊಳು
‖ ೨೩ ‖

೧ ಗೋಣುಗಳ್ (ಮ.)

ವಿಷಕಂಠನಾತ್ಮಜಂ ಫಣಿಭೂಷಣೋದ್ಭವಂ |
ವಿಷಮನುಗುಳುತೆ ಬರ್ಪ ಸರ್ಪಾಸ್ತ್ರಕಳುಕುವನೆ |
ವಿಷದಮಾರ್ಗದೊಳೈದಲೆಚ್ಚು ಗರುಡಾಸ್ತ್ರದಿಂದುರಗಾಸ್ತ್ರಮಂ ತುಂಡಿಸಿ ||
ವಿಷಮದಾನವ ನಿನ್ನ ಬತ್ತಳಿಕೆಯೊಳಗಿನ್ನು |
ವಿಷುಗಳೆನಿತಿರ್ದಪುವು ತೊಡು ಮಹಾಸ್ತ್ರವನೆನ |
ಲ್ಕಿಷುಧಿಯಿಂ ಪರ್ವತಾಸ್ತ್ರಮನುಗಿದು ಕುವರನಂ ಕೆಡಪೆನುತೆ ತೆಗೆದೆಚ್ಚನು || ೨೪ ||

ಎತ್ತಲುಂ ಕತ್ತಲಿಸೆ ಭೋರೆನುತೆ ಸುರಬಲದ |
ನೆತ್ತಿಯೊಳ್ ಕೆಡೆಕೆಡೆದುರುಳ್ಚುತಿಪ್ಪದ್ರಿಗಳ |
ಮೊತ್ತಮಂ ಕಂಡು ಸೇನಾನಿ ಕಡುಮುಳಿಸಿನಿಂ ಮತ್ಸೈನ್ಯ ನೊಂದುದೆಂದು ||
ಬತ್ತಳಿಕೆಯಿಂದೆ ವಜ್ರಾಸ್ತ್ರಮಂ ತೆಗೆಯೆ ಸುಗಿ |
ದತ್ತು ಲೋಕಂ ಧನುರ್ಗುಣದೊಳೊಂದಿಸಿ ಬಿಡಲ್ |
ಮುತ್ತುವಗನಿಕರಮಂ ತತ್ತರಂದರಿದುದದು ಮತ್ತವಂ ಖತಿಗೊಂಡನು || ೨೫ ||

ಇನ್ನಿದಂ ಪರಿಹರಿಸಿಕೊಳ್ಳೆನುತ್ತಮುರಾರಿ |
ತನ್ನ ಬತ್ತಳಿಕೆಯಿಂ ಮೇಘಬಾಣವನುಗಿದು |
ಸನ್ನುತಶರಾಸನದಿನುಗುಳಿಸಲ್ ಘುಡುಘುಡುಧ್ವಾನದಿಂ ಭೋರ್ಮೊರೆವುತೆ ||
ಸನ್ನಾಹವಾಗಿ ಸೈರಿಸುವ[1] ಮೇಘಾಸ್ತ್ರಕ್ಕೆ |
ಪನ್ನತಿಕೆಯಿಂದೆ ವಾಯುವ್ಯಾಸ್ತ್ರಮಂ ಪೂಡಿ |
ಪನ್ನಗಾಭರಣನ ಕುಮಾರನಾರ್ದೆಸಲೊಡನೆ ಪಸರಿಸಿತ್ತರಿ[2]ಬಲದೊಳು || ೨೬ ||

ಬಿರುಗಾಳಿ ಬೀಸೆ ರಣಮಂಡಲದೊಳೆಲ್ಲಯುಂ |
ಮುರಿದುದಾ ಮುಗಿಲೊಡ್ಡು ಚಲಿಸುವ ರಥ[3]ಧ್ವಜದ |
ಸೆರಗುವಿಡಿದೆಳೆದುದತ್ತಲ್ ಖೇಟಕ[4]ದ ಭಟರನಂಡಲೆದು ಕೊಂಡೊಯ್ದುದು ||
ತುರುಗಿದ ಹಯಂ ತಾರುಥಟ್ಟಾಯ್ತು ಭಲಭಲರೆ |
ಕರಿಗೊರಲನಾತ್ಮಜನೆ ನಿನ್ನಹಂಕಾರಮಂ |
ಮುರಿವೆನೆಂದೆನುತೆ ವಿದ್ಯುನ್ಮಾಲಿ ತಿಮಿರಾಸ್ತ್ರಮಂ ಪೂಡಿ ತೆಗೆದೆಚ್ಚನು || ೨೭ ||

೧ ನರಿವ (ಹು, ಮ.) ೨ ತು ಪರ (ಶಿ, ಗೋ, ಹು, ಮ.) ೩ ವರ (ಹು.)
೪ ಕಾಳಿಗ (ಹು.)

ಆನೆಕುದುರೆಗಳಾಟಪಡಗಿದುದು ಸಡುಗಿದುದು |
ಸೇನೆ ರಥಚಕ್ರಮುವು ಮುಗ್ಗಿದುವು ತಗ್ಗಿದುವು |
ನಾನಾಸ್ತ್ರಘಾತಿಗಳ್ ಖಾತಿಗಳ್ ಪೆಚ್ಚಿದುವು ಬೃಂದಾರಕರ ಮನದೊಳು ||
ಏನೆಂಬೆನಭವನ ಕುಮಾರಕಂ ಧೀರಕಂ |
ತಾಂ ನಿಭೃತಶರಧಿಯೊಳ್ ನೋಡಿದಂ ಪೂಡಿದಂ |
ಭಾಸುಶರಮಂ ತಿಮಿರಮೋಡಿದುದು ಮೂಡಿದುದು ಹರುಷಮುಂ ಸುರಸೇನೆಗೆ || ೨೮ ||

ತೋರಿತೆ ನಿನ್ನ ಮಂತ್ರಾಸ್ತ್ರದುಬ್ಬಟೆಯೆನಲ್ |
ತಾರಕಾರಿಯನೆಂಟು ಬಾಣದಿಂದೆಸಲವಂ |
ವಾರಿಯೊಳ್ ಕಡಿದೊಂದು ಶಕ್ತಿಯಿಂದಿಡೆ ಖಳನವಕ್ಷಮಂ ಬಗಿದುಗಿಯಲು ||
ವೀರವಿದ್ಯುನ್ಮಾಲಿ ಮೂರ್ಛೆಯಿಂ ಮೈಮರೆದು |
ಧಾರುಣಿಯೊಳಡೆಗೆಡೆಯೆ ಖಳರವನ ಪುರಕಿರದೆ |
ಸೇರಿಸಿದರುಳಿದಸುರರಂ ಸವರಿ ಗುಹನತ್ತ ತಿರುಗಿದಂ ಸಂತಸದೊಳು || ೨೯ ||

ಗೆಲವಿನಿಂ ಕಾರ್ತಿಕೇಯಂ ಪೋಗಲಿತ್ತಲುರೆ |
ನಲವಿನಿಂದತ್ತಲಮರೇಶ್ವರಂ ತನ್ನ ಸುರ |
ಬಲವೆಲ್ಲಮಂ ಕೂಡಿಕೊಂಡುಳಿದ ದೈತ್ಯರಂ ಖಾತಿಯಿಂ ಘಾತಿಸುತಿರೆ ||
ಖಳ ಕಮಲಲೋಚನಂ ತನ್ನ ತಮ್ಮಂ ಬೀಳ |
ಅಳಲಿನಿಂದಣ್ಣನಿಂ ಕಾಳಗದ ವೀಳೆಯಂ |
ತಳೆದು ನಿಜಬಲವೆರಸಿ ಪೊರಮಟ್ಟನಾಪುರವನೇನೆಂಬೆನದ್ಭುತವನು || ೩೦ ||

ಪಟುಹಯಂಗಳ್ ಪದ್ಮಪದ್ಮಂಗಳುಗ್ರಗಜ |
ಘಟೆಗಳುಂ ಪದ್ಮಪದ್ಮಂಗಳಷ್ಟಾಪದೋ |
ತ್ಕಟವರೂಥಂಗಳುಂ ಪದ್ಮಪದ್ಮಂಗಳೆಂಳ್ ಕೋಟಿದೊರೆಗಳ್ ಸಮರಕೆ ||
ಲಟಕಟಿಸುತ್ತೈತರ್ಪ ಭಟರ ಪರಿಗಣನೆಯದು |
ಘಟಿಸಮೊಡನೊಡನೆ ತಂಬಟ ಭೇರಿ ಡೌಡೆಗಳ |
ಚಟುಳರವಮುಣ್ಮೆ ದಿಕ್ತಟದೊಳಸುರೇಂದ್ರನಾರ್ಭಟಿಸುತೈತರುತಿರ್ದನು || ೩೧ ||

---

೧. ... ಮುಂ ಧೀರನು | ಪಾ. | ಶಿ. ಗೋ., ಹು., ಮ. | ೨. ... ಬಿದ್ದ | ಮುಳಿಸಿ | ಹು. ಮ. |

ಸುರಪಗಜಕೇಸರಿ ಕೃಶಾನುಹರಿಣವ್ಯಾಘ್ರ |
ನುರುತರಯಮಾಂಧಕಾರದ್ಯುಮಣಿ ನಿರುತಿಮದ |
ಹರಣನಾ ವರುಣಗರ್ವೋದ್ದಂಡಪರ್ವತಚ್ಛೇದಘನವಜ್ರದಂಡ ||
ಮರುತವನದಾವಂ ಕುಬೇರಾಬ್ಧಿವಾಡಬಂ |
ಹರಮೇಘನಿಚಯಪವಮಾನನಿದಕೋ ಬಂದ |
ನರರಿ ತೊಲತೊಲಗೆನುತೆ ಕೂಗಿದುವು ಕಹಳೆಗಳ್ ಸುರಬಲಂ ಬೆರಗಾಗಲು || ೩೨ ||

ಘೋರವಂ ಮಾಳ್ಪ ಭುಜದಾರವಂ ಧೃತಖೇಟ |
ಕಾರವಂ ಹಸ್ತಿಘಂಟಾರವಂ ವಾದ್ಯದ ಮ |
ಹಾರವಂ ತುರಗಹೇಷಾರವಂ ನೋಡಲತಿಭೈರವವೆನಿಸಿ ದೈತ್ಯರ |
ವೀರವಂ ಪೊಗಳ್ವ ಕಹಳಾರವಂ ಸಲೆ ಸರಳ |
ಸಾರವಂ ಕಡಿವ ಸುಭಟಾರವಂ ಕೃತಸಿಂಜಿ |
ನೀರವಂ ದಿವಿಜರ ಗಭೀರವಂ ಮುರಿದತುಳಭಾರವಂ ಜಗಕಿತ್ತುದು || ೩೩ ||

ಗಿರಿಗಿರಿಯನಬುಧಿಯಂಬುಧಿಯನವನಿಯವನಿಯಂ |
ಬೆರಸುವಂತಸುರಸುರಸೈನಿಕಂ ಕಳಚಿದುದು |
ಕರಿ ತುರಗ ವರವರೂಥಂಗಳಂ ನೂಂಕಿದರ್ ತಮತಮಗೆ ಬೇಗದಿಂದೆ ||
ಶರ ಶಕ್ತಿ ಶಲ್ಲೆಯ ಕೃಪಾಣ ತೋಮರ ಕುಂತ |
ಪರಶು ಮುಸಲಾದಿ ಪರಿಪರಿಯ ಕೈದುಗಳಿಂದೆ |
ಸುರಸೇನೆಯಂ ಪೊಕ್ಕು ಸವರಿದರ್ ದಾನವರ್ ಪೇಳ್ವುದೇನಚ್ಚರಿಯನು || ೩೪ ||

ಉರುಬಿ ಮುಂದಸುರಸಂದೋಹಮಂ ದಾನವರ್ |
ಕೊರೆಕೊರೆದುರುಳ್ಚುತಿರೆ ಕಂಗೆಟ್ಟು ಸುರಪನಂ |
ಜರೆವುತೋಡಿದರೆಮ್ಮ ಗಂಟಲಂ ಕೊಯ್ದನೀ ಪಾಪಿ ಹಿಮಗಿರಿತಟದೊಳು |
ಮರೆಸಿಕೊಂಡಿದ್ದೆವೆಮ್ಮೊಡಲ್ಗಳಂ ರಕ್ಷಿಪಂ |
ಕರಿಗೊರಲನೆಂದು ತಂದಂ ರಣಾಂಕಣಕದೇಂ |
ಹರಿಯ ನೋಡುವನೆಮ್ಮ ಕೇಡನೀ ಹರನೆನುತೆ ಸುರಕುಲಂ ಮೊರೆಯಿಟ್ಟುದು || ೩೫ ||

ವಂಚಿಸಿ ಕಳೆವನೆಮಗೆ ಪಾಪಿಯಲ್ಲವೆ ಖಳವಿ
ರಿಂಚಿ ಪೈತ್ರ್ಯರ್ ತನ್ನ ಕೂರ್ತು ಬೇಡಿದವರೆಂದು |
ತಾಂ ಬೇಗದಿಂದಿತ್ತನಘಟಿತವರಂಗಳಂ ತಾನೀಗ ಸೂತನಾಗಿ ||
ಇಂ ಚಮ್ಮಟಿಗೆವಿಡಿಯಲೀನಹುದಿದೆಲ್ಲಾ ಪ್ರ |
ಪಂಚೆನಲ್ ಸುರಭಟರ ನುಡಿಗೇಳಿ ರೋಷದಿಂ |
ಪಂಚಾನನ[೧]ನ ಕುಮಾರಂ[೧] ವೀರಭದ್ರನಾಹವಕೆ ನಡೆತರುತಿರ್ದನು || ೩೬ ||

ರಾಕ್ಷಸನ ಕ್ರೂರಾಂಧಕಾರಸೂರಂ ಲಲಾ |
ಟೀಕ್ಷಣನ ಪ್ರೇಮದ ಕುಮಾರವೀರಂ ಶಿಷ್ಟ |
ರಕ್ಷಾಕರಂ ದುಷ್ಟಶಿಕ್ಷಾಕರಂ ಶೈವಭಕ್ತಿಸಾರಂ ಧೀರನು ||
ಅಕ್ಷಯಾಕಾರಂ ಗಭೀರಂ ಸಮಸ್ತಸುರ |
ಯಕ್ಷವಂದಿತಪದದ್ವಂದ್ವಂ ರಣೋದ್ಧತಂ |
ದಕ್ಷಾಧ್ವರಧ್ವಂಸಿಯಿದೆಬಂದನೆಂದು ವಂದಿವ್ರಜಂ ಘೋಷಿಸಿದುದು || ೩೭ ||

ಏನೆಂಬೆನತುಳಸಂತೋಷಮುಂ ರೋಷಮುಂ |
ಬಾನೆಡೆಗೆ ನೆಗೆವ ಬೊಬ್ಬಾಟಮುಂ ಘಾಟಮುಂ |
ನೂಸಮಿಲ್ಲದೆ ಪೊಲ್ಮ ಭಾವಮುಂ ಹೇವಮುಂ ನಗೆಯುಮುಳ್ಕುವ ಬಗೆಯುಮುಂ ||
ಸಾನುರಾಗದೊಳೊಗೆವ ವೀರವುಂ ಘೋರವುಂ |
ಮಾನಸಕೆ ಮುಂಚಿರಿವ ಹಸ್ತಮುಂ ವ್ಯಸ್ತಮುಂ |
ನಾನಾಸ್ತ್ರಸಂತತಿಯ ಘಾತಿಯುಂ ಖಾತಿಯುಂ ದೇವಾಸುರರೊಳೆಸೆದುದು || ೩೮ ||

ಈ ಪರಿಯೊಳಮರಾಸುರವ್ರಜದ ಹರುಷಮಂ |
ತಾಪಮಂ ನೋಡುತೆ ವಿರೋಧಿ ಸೇನಾಭೀಮ |
ರೂಪಂ ಜಿತಾನೇಕಪಾಪಂ ಮಹಾಸುಪ್ರತಾಪಂ ಜಯಶ್ರೀಪನು ||
ಕೋಪಪಾವಕನಪುರಕಾಲಸುತಂ ಘನರಣಾ |
ಟೋಪಸಂಸ್ಕೃತ ಫಲಕಹಸ್ತಂ ಸಮಸ್ತರಿಪು |
ಶಾಪಕರಕರಖಡ್ಗರೌದ್ರನಾ ವೀರಭದ್ರಂ ಪೊಕ್ಕನಾಹವವನು || ೩೯ ||

೧-೧ ಕುಮಾರನುಂ (ಮ.)

ತೆಗೆತೆಗೆಸು ದೊಡ್ಡಿಗರನಸುರಸುಭಟಾಳಿಯೊಳ್ |
ವಿಗಡರುಳ್ಳೊಡೆ ಬರಲಿ ತದ್ಬಲದೊಳತುಳಸಂ |
ಯುಗಸಮರ್ಥರ್ಗೆ ಕಟ್ಟಿದ ಬಿರುದು ತಡೆಯಲಾವವನಾದೊಡಂ ತನ್ನನು |
ಬಗಿಬಗಿದು ಕುಕ್ಷಿಗಳನುಗಿದುಗಿದು ಕರುಳ್ಗಳಂ |
ತೆಗೆತೆಗೆದು ರಕ್ತಮಂ ಮೊಗೆಮೊಗೆದು ಭೂತಗಣ |
ಕಗಲದಗಲಿಕ್ಕಿಸುವೆನೆಂದಸುರಸೇನೆ ಸುಗಿಸುಗಿದೋಡುವ್ರೋಲ್ ಕಡಿದನು || ೪೦ ||

ಕಡಿದನಿರಿದಂ ತರಿದನುರುಬಿಘಾತಿಸಿದನಿರ |
ದಡಸಿ ಮೆಟ್ಟಿದನಟ್ಟಿಬಡಿದನೊದಗಿಂ ಪೊಡೆದ |
ನೊಡನೊಡನೆ ಗಜವಾಜಿನಿಕರಮಂ ಸವರಿದಂ ಪ್ರಳಯಸಮವರ್ತಿಯಂತೆ ||
ಕಡಲಮಧ್ಯದ ವಡಬಶಿಖಿಗೆ ಘನಘೋರಮಾ |
ದಡವಿಯೊಳಗೊಗೆದ ದಾವಾಗ್ನಿಗಂ ದಕ್ಷಾರಿ |
ಪಿಡಿದ ಖಡ್ಗಕೆ ನಿಮಿಷಮುಂಟೆ ನಿಲ್ಕಡೆಯೆಸಲ್ ಸವರಿದಂ ಪರಬಲವನು || ೪೧ ||

ಉದ್ರೇಕದಿಂದೆಮ್ಮ ಸೇನೆಯ ಭಟಾಳಿಯಂ |
ಛಿದ್ರಿಸುತೆ ಮುಂಬರಿದು ಬರ್ಪ ವೀರಂ ವೀರ |
ಭದ್ರನೊ ಸಂವರ್ತಕಾಲದೊಳ್ ಸಕಲ ಲೋಕಂಗಳಂ ಸಂಹರಿಸುವ ||
ರುದ್ರನೊ ಭಟನವಟನಹುದೆನುತೆ ದೈತ್ಯರುರೆ |
ಭದ್ರಗಜಘಟೆಯಶ್ವಗಳ ಪದ್ಮಪದ್ಮದಿಂ |
ಮುದ್ರಿಸುವೆವಿವನ ವೀರವನೆನುತೆ ಕವಿಸಿದರ್ ತವಿಸಿದರ್ ಸುರರದಟನು || ೪೨ ||

ಘನನಖಾಗ್ರೋದ್ಭಿನ್ನದಂತಿಮಸ್ತಕಸಿಂಹ |
ಕೆನಿತಾದೊಡೇಂ ಗಜಂ ಕೊಲ್ಲದೇ ದಕ್ಷರಿಪು |
ಗನುಪಮಹಯರಥದ್ವಿರದಪತ್ತಿಯೇಸು ಘನವೈದಿವಾಕ್ಷಣಂ ಸದೆಬಡಿದನು |
ತನತನಗೆ ಕವಿವಸುರ ಸಮಿತಿಯಂ ಶಾಕಿನೀ |
ಜನಕೆ ತರಿದೊಟ್ಟಿದಂ ಕುಟ್ಟಿದಂ ಸುಳಿದ ಖಳ
ಜನಸರಂ ನೆರೆದ ದೇವಾಸುರರ್ ಕೊಂಡಾಡೆ ಮೂದೇವರುಂ ತುತಿಸಲು || ೪೩ ||

೧-೧ ರಾಮೋಸಂ ಜೀಗನಿಂದಂ (ಮ.) ೨ ದಕ್ಷಿಕ್ಕೆ (ಶಿ, ಗೋ.); ದಿಕ್ಕಿಕ್ಕೆ (ಮ.)
೩ ಸುರ (ಹು.); ಮಹಾ (ಮ.)

ಕಡಿದ ತಲೆಯೋಳ್ಗಳಿಂ ತೋಳ್ಗಳಿಂ ಬಾಳ್ಗಳಿಂ |
ದಡೆಗೆಡೆದ ರುಂಡದಿಂ ಮುಂಡದಿಂ ಖಂಡದಿಂ |
ಪಿಡಿದ ಕರಜಾತದಿಂ ಭೂತದಿಂ ಪ್ರೇತದಿಂ ಪುದಿದ ಶಾಕಿನಿಯರಿಂದೆ ||
ಉಡಿದ ಗಜರಾಜಿಯಿಂ [2]ವಾಜಿಯಿಂ ತೇಜಿಯಿಂ[2] |
ದೆಡೆವಿಡದ ಘೂಕದಿಂ ಕಾಕದಿಂ ಶೋಕದಿಂ |
ಸಡಿಲ್ವ ರಣಚಾರಿರರಿಂ ವೀರರಿಂ ಧೀರರಿಂದಾ ರಣಾಂಕಣಮೆಸೆದುದು || ೪೪ ||

ಕಂಡನಾ ಕಮಲಾಂಬಕಂ ರಣಾಂಕಣದೊಳಗೆ |
ತುಂಡುತುಂಡಾದ ಗಜರಾಜಿಯಂ ವಾಜಿಯಂ |
ದಿಂಡುರುಳ್ವ ದೈತ್ಯಭಟಕಾಯಮಂ ತಾಂ ಯಮಾಕೃತಿಯೊಳತಿರೌದ್ರಮಾಗಿ ||
ಗಂಡುಜೋಹದ ಸೂಳೆಯರ್ ದೇವರವರೊಳು |
ದಂಡಭಟ ನೀನಹುದೆಲಾ ಕಾಣ್ಬೆವೆನುತೆ ಕೈ |
ಕೊಂಡಂ ಮಹಾಸಂಗರಮನಸ್ತ್ರತತಿ ವೀರಭದ್ರನಂ ಮುಸುಕುತಿರಲು || ೪೫ ||

ಆಲಿಸೆಲವೆಲವೊ ಮತ್ಸರಮಡೆಂ ದಕ್ಷಮುಖ |
ಶಾಲೆಯೋ ನಿನ್ನ ಸಾಮರ್ಥ್ಯಕೆಮ್ಮಯ ರಣಂ |
ನೋಳ್ಪಿದೆ ಕೊಡ್ಲಾದೊಡೆನುತೆ ಮೂವತ್ತೆಂಟುಬಾಣದಿಂ ಖಳನೆಸೆಯಲು ||
ಕಾಲಾಂತಕೋಪಮಂ ವೀರಭದ್ರಂ ಬರ್ಪ |
ಕೋಲ ಕೋಲಾಹಲಮನಾ ಕ್ಷಣಂ ಕಡಿದು ದನು |
ಜಾಳಿಸಿರ್ದ ಜರ್ಜರಿತಮಾಗೆ ಕೋದಂಡಮಂ ಜೇವಡೆದು ಬೊಬ್ಬಿರಿದನು || ೪೬ ||

ಈರವಂ ಪ್ರಳಯಭೈರವನ ಕರಕಲಿತಥ |
ಕ್ಕಾರವಂ ಪುಸಿಯುತ್ತಿ ಮಾರಾಂತ ದನುಜರ ವಿ |
ಕಾರಮಂ ಮುರಿದುದಿನ್ನೀತನೆಚ್ಚಂಬು[5]ಗಳ್ಗಾಪ್ರದಾಹಾರವೆನುತೆ[5] ||
ವೀರವಂ ನೋಟಕರ್ ಪೊಗಳೆ ಪಗೆವ[6]ನ ಸರಳ |
ಸಾರವಂ ಕಡಿವುತ್ತೆ ವೈರಿಮದಹಸ್ತಿಕಂ |
ಠೀರವಂ ಸರಳೊಳಿದಿರೊಳ್ ಕೂಗಿ ಬೊಬ್ಬಿಡುವ ದೈತ್ಯನಂ ಘಾತಿಸಿದನು || ೪೭ ||

---

೧ ಸೀ (ಮ.) ೨-೨ ರಾಜಿಯಿಂ ವಾಜಿಯಿಂ (ಹು, ಮ.) ೩ ಚೋ (ಹು, ಮ.)
೪-೪ ಮರೆಮಾಡನೆಸೋಳ್ಪ (ಮ.) ೫-೫ ಗಳಿಗಾವಮಂ ಸಿಲ್ಕಿಸೆನುತೆ (ಮ.)
೬ ಯ (ಮ.)

ಹೋಮಮುಮಂ ಕೆಡಿಸಿ ಪಾರ್ವನ ತಲೆಯನಿರದರಿದ |
ಸಾಮರ್ಥ್ಯಮೀಯೆಮ್ಮ ಕೂಡೆ ನೋಡೆನುತೆ ನಿ |
ಸ್ಸೀಮಬಾಣಂಗಳಿಂ ಕೆಡೆಯೆನುತ್ತಾರ್ದೆಸೆಲ್ ವೀರಭದ್ರಂ ಕಾಣುತೆ |
ಆ ಮಹಾಬಾಣಮಂ ಪ್ರತ್ಯಸ್ತ್ರದಿಂ ಕಡಿಯೆ |
ಭೀಮರೂಪಾಗುತೆಲವೋ ನಿನ್ನನೀಗ ನಿ |
ರ್ಧೂಮಮಂ ಮಾಡುವೆಂ ನೋಡೆನುತೆ ಖಳನೊಂದುಶಕ್ತಿಯಂ ಬರಸೆಳೆದನು
|| ೪೮ ||

ಆರ್ಭಟಿಸಿ ಶಕ್ತಿಯನವಂ ಪಿಡಿಯೆ ಬ್ರಹ್ಮಾಂಡ |
ಗರ್ಭಮದಿರಿದುದು ತಜ್ಜ್ವಾಲೆಯೊಡನೊಡನೆಯಾ |
ವಿರ್ಭಾವಮಾದುದಾ ಶಕ್ತಿಯಂ ಬಿಡದೊಗೆವ ಬಹಳಶಿಖಿಕಣಗಣಾಳಿ |
ನಿರ್ಭರದೊಳುಬ್ಬಿಯೊಬ್ಬುಳಿಯಾಗಿ ಪಂಕೇಜ |
ಗರ್ಭರಚಿತೋಪರಿಜಗದ್ಬಾಂಡವಿತತಿಗಾ |
ವಿರ್ಭವಿಸುವಿವಾವೃಗೆಯು ಕಿಚ್ಚಾದುದೇನೆಂಬೆನದರ ಬಲುವಿಭೀಕರವನು || ೪೯ ||

ಕಾಯುದೆಲವೋ ನಿನ್ನನಿದು ಬಿಡಿಸಿಕೊಂಬೊಡಾ |
ಕಾಯಜಾರಾತಿಯಂ ಕರೆದುಕೋ ಬೇಗ ತವ |
ಕಾಯಕತಿರಕ್ಷೆಯಂ ಬಲಿ ವೃಥಾಬೊಬ್ಬಾಟಮಂ ಮಾಡುತೆನ್ನ ಕೂಡೆ |
ಕಾಯಲೇಂ ಫಲಮೆನುತ್ತಸುರನಿಡೆ ಸಂಗರ |
ಕ್ಕಾಯತದೊಳಲ್ಲಲ್ಲಿ ನಿಂದಿರ್ದ ನಿರ್ಜರನಿ |
ಕಾಯಮಂ ಪೆರ್ಗಿಡಿಯ ಗಡಣದಿಂ ಚುಂಬಿಸುತೆ ಶಕ್ತಿಯೈತರುತಿರ್ದುದು
|| ೫೦ ||

ಪೆರ್ಗಿಡಿಯ ಗಡಣದಿಂದೈತರ್ಪ ಶಕ್ತಿಯಂ |
ಕೂರ್ಗಣೆಗಳೈದರಿಂದೆಚ್ಚು ಭಟನದ ಸುಚ್ಚು |
ನೂರ್ಗಳಾಗಲ್ ಕಡಿದು ಮತ್ತೊಂದು ಬಾಣದಿಂ ವೀರನಿರದಾರ್ದೆಸೆಯಲು
ಭೋರ್ಗರೆವುತಾ ಬಾಣಮಸುರನ ಕಳೇವರವ |
ನೇರ್ಗಾಣಿಸುತ್ತೆತ್ತಿ ಕೊಂಡಂಬರವನು ಕೆ |
ನ್ನೀರ್ಗಳಿಂ ನನೆಯಿಸುತ್ತಾ ಪುರಮೊಳಿಹ ತಾರಕಾಕ್ಷನಿದಿರೊಳ್ ಬಿಸುಟುದು
|| ೫೧ ||

---

೧ ಕಣಾಳಿ (ಹು, ಮ.); ಗಳಾಗಿ (ಶಿ.) ೨ ಘುರ್ಗಿಪ (ಶಿ, ಗೋ.) ೩ ಹು (ಹು, ಮ.)

ಕೇಳ್ದಿಲಾ ಸಿದ್ಧರಾಮೇಶ್ವರ ನಿಜಾನುಜಂ |
ಬೀಳ್ದು ಮೂರ್ಛಿತನಾಗೆ ತಾರಕಾಕ್ಷಂ ತವೆ ಕೆ |
ರಳ್ದು ಕೇಸರಿಯಂತೆ ಗುಡುಗುಡಿಸಲವರ ಮೈದುನನೆನಿಪ ಶಿಂಶುಮಾರಂ ||
ಏಳ್ದು ನಿಂದಿರ್ದು ವಿಲಯದ ಸಿಡಿಲರವಮೆನಲ್[೧] |
ಪೇಳ್ವನೇತಕೆ ಚಿಂತೆ ಸುರ ನರ ಭುಜಂಗಮರ |
ಬಾಳ್ದಲೆಗಳಂ ತಂದು ಬಿಸುಡುವೆಂ ವೀಳೆಯವನೀಯೆನುತೆ ಗರ್ಜಿಸಿದನು || ೫೨ ||

ಕರ್ಕಶದ ಕಾಳೆಗದೊಳೆನಗೆ ಮಾರಾಂತ ದೇ |
ವರ್ಕಳಂ ಸಂಹರಿಪೆನವರ ಹರಿಬಕೆ ಬಂದ |
ಸೂರ್ಕಿದಜ ಹರಿಗಳಂ ಬಡಿವೆನಲ್ಲಹುದೆಂದು ಸಮರದೊಳ್ ಮಾರಾಂತೊಡೆ ||
ಅರ್ಕಚಂದ್ರಾಗ್ನಿಲೋಚನನನಳವಳಿಸುವೆಂ |
ಬೀರ್ಕಾಳೆಗಕೆ ವೀಳೆಯವನೆನುತೆ ಕೋಪಸಂ |
ಪರ್ಕಮಾನಸನಾಗಿ ಶಿಂಶುಮಾರಂ ತಾರಕಾಕ್ಷನಂ ಬೀಳ್ಕೊಂಡನು || ೫೩ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೪ ||

ಅಂತು ಸಂಧಿ ೪೩ಕ್ಕಂ ಪದಗಳು ೧೭೪೩ಕ್ಕಂ ಮಂಗಳಮಹಾಶ್ರೀ

---

೧ ಪಂಕ್ತಿ । ಮು, ಮು. ; ೨ ಮು (ಮು.)

ನಾಲ್ವತ್ತನಾಲ್ಕನೆಯ ಸಂಧಿ

ಸೂಚನೆ

[1]ವೀರನಂದೀಶನಾ ಶಿಂಶುಮಾರನ ಸೀಳೆ ।
ತಾರಕಾಕ್ಷಂ ಬರಲ್ ಬೆಂಬತ್ತೆ ಹರಗಣಂ ।
ಮಾರಾರಿ ಪಾಶುಪತಬಾಣದಿಂದೆಚ್ಚು ತ್ರಿಪುರಂಗಳಂ ಸುಟ್ಟುರುಪಿದಂ[1] ॥

ನಿರ್ಗತಾಖಿಳದುರಿತವರ್ಗ ಘನಪ್ರಮಥಸಂ ।
ಸರ್ಗಕೈಲಾಸಗಿರಿದುರ್ಗ ಸನ್ನುತಭಕ್ತಿ ।
ಮಾರ್ಗ ನತರಕ್ಷಾನಿಸರ್ಗ ನಿರ್ಮಲಿನಾಪವರ್ಗದಾಯಕ ಜಯಜಯ ॥
ಭರ್ಗ ಭಾಳಾಂಬಕ ಸ್ವರ್ಗಪತಿನುತಪಾದ ।
ದುರ್ಗತಿವಿದೂರನೆ ನಿರರ್ಗಳಮಹಾಮಹಿಮ ।
ಸ್ವರ್ಗಮುಖಲೋಕರಕ್ಷಾದಕ್ಷ ದಕ್ಷಮುಖದುರ್ಘಟನೆ ಸಲಹೆಮ್ಮನು ॥ ೧ ॥

ಮತ್ತೆ ಕೇಳೈ ಸಿದ್ಧರಾಮ ಪುರದಿಂ ಮದೋ ।
ನ್ಮತ್ತಖಳಶಿಂಶುಮಾರಂ ರಣಾಟೋಪದಿಂ ।
ಮುತ್ತಿದ ಚತುರ್ಬಲದ ಗಡಣದಿಂ ಪೊರಮಟ್ಟನೆಂಬೆನಚ್ಚರಿಯನು ॥
ಪೊತ್ತ ತನುವಂ ಬಣ್ಣಿಸಲ್ಕಾಗದಾ ದೈತ್ಯ ।
ನುತ್ತುಮಾಂಗಂ ಗಗನಮಂ ಚುಂಬಿಸಿತ್ತವನ ।
ಪೆತ್ತ ತಾಯಾವಳೋ ಶಿವಶಿವಾಯೆನುತೆ ಲೋಕದ ಜನಂ ಬೆರಗಾದುದು ॥ ೨ ॥

ಅತಿದೀರ್ಘವಾದೊಡೆನಾಯ್ತವನ ತನು ಕೋಮ ।
ಲತೆಯೆ ಘನಪರ್ವತೋದ್ಯಚ್ಛೃಂಗಸಂದೋಹ ।
ಪ್ರತಿಮಾನಮವಯವಂ ಕಾಂತನೆ ಸಕಲಲೋಕಂಗಳಂ ತಿಂಬೆನೆಂಬ ॥
ಕೃತಕಚಿತ್ತಂ ಕಾಂತಿಪೂರನೇ ದೈತ್ಯನ ।
ಪ್ರತಿಮಾಂಧಕಾರರೂಪಂ ಸಮ್ಮುಖದೊಳಾಂತು ।
ಕೃತಯುದ್ಧಕುಶಲನುಂ ತೋರ್ಪ ಭಟನಾವನೋ ಹಾಯೆನುತೆ ಸುರರುಲಿದರು ॥ ೩ ॥

೧-೧ ತಾರಕಾತ್ಮಜನ ಸೈದುನನೆನಿಪ ವಿೞಿಶಿಂಬು । ಮಾಱನಮುರಾಳಿಯುಂ ಸಂಹರಿಸುತ್ತಿರೆ ಕಂಡು । ವೀರನಂದೀಶ್ವರಂ ಘುರಮೊಳವನಂ ಸೀಳ್ದು ಬಿಸುಟನತಿಸಾಹಸದೊಳು ॥ (ಹು. ; ೧-೩ ಸೀರ ನಂದೀಶ್ವರಂ (ಮ.)

ಚೂಣಿಯೊಳ್ ಸಮ್ಮುಖದೊಳಾಂತ ಭಟವಿತತಿಯಂ[೧] |
ಶಾಣಿತಳದಿಂದೆ ತೆಗೆತೆಗೆದಣಲೊಳಡಸುತೆ ವಿ |
ಷಾಣದಿಂದೆಚ್ಚು[೨] ಬಿಸುಡುತೆ ಗಜಹಯಾಳಿಯಂ ಗಗನಾಂಗಣಂ ತುಂಬಲು ||
ಮಾಣದುಶ್ವಾಸನಿಶ್ವಾಸದಿಂ ದಿವಿಜರಂ |
ಘೋಣದೊಳ್ ಸೆಳೆವುತ್ತೈತರೆ ಕಂಡು ಭೀತಿಯಿಂ |
ಪ್ರಾಣಮುಳಿದುದೆ ಹಬ್ಬವೆನುತೆ ಕೆಟ್ಟೋಡಿದರ್ ನಿರ್ಜರರ್ ಕಂಡಕಡೆಗೆ || ೪ ||

ಚರಣತಳದಿಂ ಸುರರನೊರಸುತುಂ ಬೆರೆಸುತುಂ |
ಕರಿತುರಂಗಾಳಿಯಂ ಕುಟ್ಟುತುಂ ಮೆಟ್ಟುತುಂ |
ವರಮಹಾರಥವನೀಡಾಡುತುಂ ನೋಡುತುಂ ದೆಸೆದೆಸೆಗೆ ನಾಲಗೆಯನು ||
ಉರವಣಿಸಿ ಪಿಡಿಪಿಡಿದು ನುಂಗುತುಂ ಪೊಂಗುತುಂ |
ಸುರರೋಟಮಂ ಕಂಡು ಬೀಗುತುಂ ಕೂಗುತುಂ |
ಸರಿಸಕಾಂತವರಸುವ ನೀಗುತುಂ ತೇಗುತುಂ ಶಿಂಶುಮಾರಂ ನಡೆದನು || ೫ ||

ಇಂದಿನ ದಿನಂ ಸಕಲಜಗಕಿಕೆ ಕಡೆಗಾಲವೆಂ |
ಬಂದುದೊ ಕಟಕಟಾ ವಿಳತ್ಸುಭಟನಾವವಂ |
ನಿಂದು ಕಾದುವನವನ ತಾಯ್ ಪುಸಿಕರಂ ಮುನ್ನ ಪೋದ ಸಂಪದಕಸುವನು ||
ತಂದು ಬಳುವಲಿಗೊಡುವೊಲಾಯ್ತು ಲಾ ಸಿರಿಯಂ ಪು |
ರಂದರನೆ ಭೋಗಿಸಲಿ ಸಾಕೆಮಗೆನುತ್ತಮರ |
ಸಂದೋಹಮೋಡಿದುದು ನಿಂದಲ್ಲಿ ನಿಲ್ಲದೆಯುಮಿಂದುಮೌಳಿಯ ಸರಿಸಕೆ || ೬ ||

ನೋಡಲಿವೆಲ್ಲ ಜೀಯ ಖಳನಿದಿರೊಳನಿಮಿಷತೆ |
ಮೋಡಿದುದು ನೀಲಪರ್ವತಕೆ ಕೈಕಾಲ್ಗಳಿರೆ |
ಮೂಡಿದುದೊ ಲೋಕದ ಮಹಾಂಧಕಾರಂ ಬಿಡದೆ ಪುರುಷಾಕೃತಿಯನಾಂತುದೊ ||
ಆಡಲೇನೆಮ್ಮ ಸಲಹುವ ಕರುಣಮುಳ್ಳೊಡೆ |
ಪೂಡಿರ್ದ ಪಾಶುಪತಬಾಣದಿಂದೆಸೆ ಮಿಕ್ಕ |
ನಾಡಾಡಿಸುಭಟರಿಂದಾಗದೆಂದಮರಾಳಿ ಮೊರೆಯಿಟ್ಟುದಭವಗಂದು[೫] || ೭ ||

---

೧ ಚಿನವರಿಯಂ (ಪು.) ೨ ತ್ರಿ (ಪು, ಮ.) ೩ ಪ (ಶಿ, ಗೋ.) ೪ ಜ ಮಠ (ಮು.)
೫ ದೇಸೆಂಜಿಸು (ಪು, ಮ.)

ಅನಿತರೊಳಗತುಳಕೋಪಾಟೋಪದಿಂ ದೂರು |
ವನಿಮಿಷರ ಬಾಯ್ಗಳಂ ಪೊಯ್ಸಿಯಭವಂಗುಸುರ |
ಲೆನಿತು ಘನವಮಾ ದೈತ್ಯನಂ ಸೀಳ್ವೆನೆಂದೆಸುತ್ತಾದಿವೃಷಭಂ ಕನಲ್ದು ||
ತನತನಗೆ ಸಕಲಸುರಗಣಮೊಡನೆ ಬರುತಿರಲ್ |
ವನಧಿಘೋಷಮನತಿಕ್ರಮಿಸೆ ಬಹುವಾದ್ಯನಿ |
ಸ್ವನಮೈದಿದಂ ಮಹಾಡಂಬರಕೆ ದಾನವರ ಸೇನೆ ತಲೆಕೆಳಗಾಗಲು || ೮ ||

ಪೊಕ್ಕನಾಹವಕೆ ವೃಷಭೇಶ್ವರಂ ರಜತಾಚ |
ಲಕ್ಕವಯವಂಗಳಾದುವೊ ಪೇಳೆನಲ್ಕಾಗ |
ಳೊಕ್ಕಲಿಕ್ಕುತೆ ಸೊಕ್ಕಿದರಿಸೇನೆಯಂ ಮಹಾರೌದ್ರಾವತಾರದಿಂದೆ ||
ಎಕ್ಕತುಳದಿಂದಾಗ ಬಿಡದೆ ದೆಸೆದೆಸೆಗಳಂ |
ಕೆಕ್ಕರಿಸಿ ನೋಡುತ್ತೆ ಸೈವರಿದು ಬರುತಿರಲ್ |
ದಿಕ್ಕುದಿಕ್ಕಿನೊಳಿರ್ಪ ರಕ್ಕಸರ್ ಕಾಣುತ್ತೆ ಬೆಕ್ಕಸಂ ಬೆರಗಾದರು || ೯ ||

ಉಗ್ರನೇರುವ ಮಹಾವಾಹನದ ಘೋರತರ |
ವಿಗ್ರಹವನೇನೆಂದು ಬಣ್ಣಿಪೆಂ ನಾಲ್ಕುಪಾ |
ದಾಗ್ರಹತಿಗೇಳ್ವ ಕೆಂಧೂಳ್ ಬತ್ತಿಸಿತು ಗಗನಗಂಗಾನದೀಜಲವನು ||
ವ್ಯಗ್ರಹೂಂಕಾರದಾರುಣನಾದದಿಂದೆ ಗರ |
ಳಗ್ರೀವನಹಿತರೆರ್ದೆಯೊಡೆದು ಕೆಡೆದರ್ ಮಿಗೆ ರ |
ಣಾಗ್ರಮಂ ನಂದಿ ಪುಗಲಿಂತಾಯ್ತು ಕಾದಲಿನ್ನೆಂತೆನುತೆ ಸುರರುಲಿದರು || ೧೦ ||

ಆರ್ಭಟಿಸಿ ಪೊಯ್ದು ವಾಲಾಗ್ರದಿಂ ನಭದ ರೋ |
ಚಿರ್ಭಗಣಪಂಕ್ತಿಯನುದಿರ್ಚುತುಂ ಘನರತ್ನ |
ಗರ್ಭೆಯಂ ಪಾದಾಗ್ರದಿಂ ಕೆರೆದು ಮೊರೆದು ಕಲ್ಗುಂಡುಗಳನೇಳಿಸುತ್ತೆ ||
ನಿರ್ಭರದೆ ಕೋಡಿಕ್ಕಿ ಮೀಂಟೆ ಗಿರಿಗಳಸಬ್ಜ |
ಗರ್ಭನಾಲಯಕೆ ಸಾಲಿಡುತೆ ವೃಷರಾಜಂ ಹ |
ವಿರ್ಭುಕ್ತರಾಯೆಂದು ಕೊಂಡಾಡೆ ಸವರಿದಂ ಪೊಕ್ಕು ರಾಕ್ಷಸಬಲವನು || ೧೧ ||

---

೧ ನಾಗಿ (ಹು, ಮ.)

ಮುತ್ತಿದುದು ವೃಷಭನಂ ತಮತಮಗೆ ರಾಕ್ಷಸರ
ನೊತ್ತಮೊಡನೊಡನೆ ವಡಬಾಗ್ನಿಯಂ ಕಡಲ ನೀರ್
ಮುತ್ತುವಂತುಗ್ರಕೇಸರಿಯಂ ಗಜವ್ರಜಂ ಮುತ್ತುವಂದದಿ ದೀಪಮಂ |
ಮುತ್ತುವಂತೊಪ್ಪುವ ಪತಂಗಸಂದೋಹಮುರೆ |
ಕತ್ತಿಯಿಂ ಸುರಗಿಯಿಂ ದಿಟ್ಟಿಯಿಂ ಕುಂತದಿಂ |
ಮೊತ್ತೆ ಕವಿದರ್ ತಿವಿದರುರುಬಿದರ್ ತರುಬಿದರ್ ಮೂದಲಿಸುತಾ ದನುಜರು
॥ ೧೨ ॥

ಬಿಟ್ಟ ಕಣೆಗಳ್ ಕಲ್ಲ ತಾಗಿ ಮುರಳುತ್ತಿರ್ಪ |
ಪಿಟ್ಟಿಯಂತಾದುವಸಿ ಮುಸಲ ಮುದ್ಗರತತಿಗ |
ಳಿಟ್ಟಿಗಳ್ ನುಚ್ಚುನೂರಾದುವು ಸಬಳ ಚಕ್ರಮಾಕ್ಷಣಂ ತುಮುರಾದುವು ||
ಮುಟ್ಟಿ ಬರ್ಪಸುರರ ಪದಾತಿ ಕಾಣುತೆ ಬೆರಗು |
ವಟ್ಟೊಡನೆ ಖತಿಮಸಗಿ ಕಲ್ಲಿನಿಂ ಗುಂಡಿನಿಂ |
ಬೆಟ್ಟದಿಂ ಮರಗಳಿಂದಿಟ್ಟು ತನತನಗೆ ಬೊಬ್ಬಿಟ್ಟುದದನೇನೆಂಬೆನು ॥ ೧೩ ॥

ಕುಲಿಶಮುಳಿಗಳ್ ನಾಂಟಿ ಪರ್ವತಂಗಳ ಪಕ್ಷ |
ಮುಳಿವುವೇ ವೃಷಪತಿಯ ರೋಮಸೋಂಕಿನೊಳದ್ರಿ |
ಕುಲಮಿರದೆ ಶತಚೂರ್ಣಮಾಯ್ತು ಕಲ್ಗುಂಡುಮರಗಳ ಪಾಡೆ ಭಾಪೆನಲ್ಕೆ ||
ಸಲೆ ಮಿಕ್ಕು ಮೀರಿ ನಾನಾಪ್ರಹಾರಂಗಳಿಂ |
ಕೊಲುತಿರ್ದನಂದು ರಣಮಂಡಲದೊಳೀಕ್ಷಿಸುತೆ |
ಖಳನೃಪರ್ ಮತ್ತೆ ಗಜ ಹಯ ಪದಾತಿಗಳೊಡನೆ ಮುತ್ತಿದರ್ ವಿಕ್ರಮದೊಳು
॥ ೧೪ ॥

ಕಡಿಯದಿರಿರೊ ಕೈದುಗಳೊಳಿರಿದೊಡೀಯಿತ್ತು |
ಗಡಣೆಗೊಳ್ಳದು ಬಹಳಪಾಶಂಗಳಂ ಬೀಸಿ |
ತೊಡರಿ ಕೆಡಪಲ್ ನೇಣ್ಕುಮೆಂದು ಬಲ್ಮಿಣಿಗಳಂ ತಮತಮಗೆ ಕೆಯ್ಯೊಳಾಂತು ||
ಪಡದಿರಿಪಬಲಿಕೆಸುತೆ ಸುತ್ತಲುಂ ಕಟ್ಟಿ ಕೊಂ |
ಡಡಿಗಡಿಗೆ ಬೀಸಿದರ್ ಸಿಕ್ಕಿದುದನಡ್ವಾಹ |
ಮುಡಿ ಕೊಚ್ಚಿ ತರಿಯರಿಯೆಸುತ್ತೆ ಕೋಲಾಹಳದೊಳುರುಬಿದರ್ ವೃಷಪತಿಯನು
॥ ೧೫ ॥

೧-೧ ಗಳನಂಟಿ (ಹು, ಮ.)

ನಿಗಳಮಂ ಮುರಿದುಕೊಂಡಾಂತಾಂತ ಜನರ್ಗಳಂ ।
ಸಿಗಿದ[೧] ಮದದಾನೆಯಂ ತಾವರೆಯ ನೂಲಿನಿಂ ।
ಬಿಗಿದೊಡೇಂ ವಶಮಪ್ಪುದೇ ಸಿಂಹಮಾನೆಗಳ ಸೊಂಡಿಲಿಂ ಬಿಗಿವಡೆಪ್ಪುದೇ ।
ವಿಗಡಬಸವಂ ಮುಸಗಿ ಲಳಿಯೆದ್ದು ತತ್ಕ್ಷಣಂ ।
ಚಿಗಿಯಲ್ ತೊಡರ್ದ ದಾಮಂಗಳೆಲ್ಲಂ ಪರಿದು
ವಗಡರಕ್ಕಸರ ಸೇನಾಶರಧಿಯಂ ಪೊಕ್ಕು ಕಲಕಿದನದೇನೆಂಬೆನು ॥ ೧೬ ॥

ಪುಂಗವಂ ಕೆರಳಿ ಗುಡಿಗುಡಿಸುತ್ತೆ ತನ್ನ ಭಯ ।
ಶೃಂಗವಂ ನೀಡಿ ದೈತ್ಯರ ಸೇನೆಯೊಳ್ ಘನತು ।
ರಂಗವಂ ಮತ್ತಮಾತಂಗವಂ ಗುರುತರರಥಾಂಗವಂ ಕೊಡಹಿಟ್ಟಿಸು ।
ಸಿಂಗವಂ ಕೆಣಕಿ ಗಜಮುಳಿವುವೆ ವೈರಿಚತು ।
ರಂಗವಂ ಸವರಿದಂ ರಣಭೂಮಿ ಪುದಿದುತ್ತ ।
ಮಾಂಗವಂ ಕೆಡೆದ ಭಟರಂಗವಂ ಬಹುಳತರಭಂಗವಂ ಪೊಗಳ್ವೆನೇ ನಾ ॥ ೧೭ ॥

ಕರ್ಕಶಪದಾಗ್ರದಿಂದೊದೆವುತುಂ ಸದೆವುತುಂ ।
ಸೊರ್ಕಿ ಮಾರ್ಮಲೆದು ತೂಗಾಡುತುಂ ನೋಡುತುಂ ।
ಮಾರ್ಕಣೆಗಳಂ ಪಣೆಯೊಳಣೆವುತುಂ ಪೊಣೆವುತುಂ ಕೂರ್ಗೊಂಬುದುದಿಗಳಿಂದೆ ॥
ಇರ್ಕೆಲದ ದಾನವರನಿರಿವುತುಂ ಮುರಿವುತುಂ ।
ಡುರ್ಕಿಡುತ್ತಸುರರಂ ಕೆಡೆವುತುಂ ಕೊಡವುತುಂ ।
ತೇರ್ಕುದುರೆಗಳ ಭಟರನಟ್ಟುತುಂ ಮೆಟ್ಟುತುಂ ವೃಷಭಂ ಪ್ರಹಾರಿಸಿದನು ॥ ೧೮ ॥

ಉರ್ಚಿ ಕೆಲಬರನುತ್ಖುರಾಗ್ರಹತಿಯಿಂ ಕರುಳ ।
ಸೋರ್ಚಿ ಕೆಲಬರಸವಸುವಂಗಳಂ ದೆಸೆದೆಸೆಗು ।
ದಿರ್ಚಿ ಕೆಲಬರನಿರದೆ ಕೋಡ್ಗಳಿಂದಿರಿದು ಕಾಲ್ಗೆರೆದೊಡನೆ ಮುಚ್ಚಿಯಸುವಂ ॥
ತೀರ್ಚಿ ಕೆಲವರ ಮಹಾಹೂಂಕಾರದಿಂದಂ ತ
ಳರ್ಚಿ ಕೆಲವರನೊಡನೆ ವಾಲಾಗ್ರದಿಂದಿರದೆ ।
ಬಾರ್ಚಿ ಕೆಲಬರನಿಂತು ಪುಂಗವಂ ಭಂಗವಂ ಮಾಡುತ್ತೈತರುತಿರ್ದನು ॥ ೧೯ ॥

---

೧ ವ (ಗೋ.)

ಹಜ್ಜೆಹಜ್ಜೆಗೆ ಭೂಮಿ ಕುಸಿಯೆ ದಿಗ್ಗಜಚಯಂ |
ಗುಜ್ಜುಗೊಂಡುವು ಫಣೀಂದ್ರನ ಫಣಾಮಂಡಲಂ |
ಬಿಜ್ಜಣಿಗೆಯುಂ ಮಡಿಸಿದಂತಾಯ್ತು ಕೂರ್ಮನೆರ್ದೆಯೊಡೆದು ಬೃಹತೀಫಲವನು ||
ಜಜ್ಜಿದಂತಾದುದೀ ವೃಷಪತಿಯ ಸಮರಜಯ |
ಕುಜ್ಜುಗಿಪರಂ ಕಾಣೆನಸುರಬಲದೊಳಗಿವನ[೧] |
ಕಜ್ಜವಂ ನೋಳ್ಪೆವೆನುತಿರೆ ವೃಷಭನಂ ತಡೆದು ಶಿಂಶುಮಾರಂ ನುಡಿದನು || ೨೦ ||

ಕಾರ ಹಬ್ಬದೊಳೆತ್ತು ಪೂಜ್ಯವಲ್ಲದೆ ಸಮರ |
ಧಾರುಣಿಗೆ ಯೋಗ್ಯವೇ ಕಂಡೆವಚ್ಚರಿಯಂ ವಿ |
ಕಾರಿಯಲ್ಲವೆ ನಿನ್ನ ಪಡೆವ ಬೊಮ್ಮಂ ಮುಸುಡ ಭಾವಮಿದೆ ರವ್ಯಮಾಗಿ ||
ಆರ ಮಗನೇಸುದಿನಪರಿಯಂತರಂ ತಪಿಸಿ |
ನಾರಿ ಪೆತ್ತಳ್ ನಿನ್ನನಾದೊಡಂ ಕಿರಿಕಿರಿದು |
ವೀರವಿದೆ ನಿನ್ನೊಳೆನೆ ಖಳನ ಹಾಸ್ಯೋಕ್ತಿಗಾ ವೃಷರಾಜನಿಂತೆಂದನು || ೨೧ ||

ಒರಲಬೇಡೆಲೆ ಕುನ್ನಿ ತನ್ನನೀಕ್ಷಿಸಿ ಪೆರರ |
ಜರಿಯಬೇಡೆಲೆ ಕಾರ ಹಬ್ಬಮಿಂದಿನ ದಿನಂ |
ತರಿದ ದನುಜರ ಖಂಡದಿಂಡೆ ಕೊಬ್ಬಿದ ಬೆಳಸು ತವ ರುಧಿರಧಾರೆಯೆಂಬ ||
ಕೆರೆಯೊಳೀಸಾಡಿ ಗೆಲವಿನ ಸಿಂಗರಂ ಪಡೆದು |
ತರಿಸಂದು ಘನರಣಾಂಕಣದೊಳೀ ಸುರರಿಂದೆ |
ಮೆರೆದಪೆಂ ಪೂಜೆಯಂ ತಾನೆನುತೆ ಹೂಂಕಾರದಿಂ ಮಸಗಿದಂ ವೃಷಭನು || ೨೨ ||

ಪೂಜೆಯಿದು ನಿನಗೆ ಕೊಳ್ಳೆನುತೆ ಖತಿಮಸಗಿ ಖಳ |
ರಾಜನಾಗಳ್ ತನ್ನ ಕೈಯ ಗಿರಿಯಂ ವೃಷಭ |
ರಾಜನಂ ಮುಳಿದೆರಗೆ ತದ್ರೋಮತತಿಯ ಸೋಂಕಿಂದಾ ಮಹಾಪರ್ವತಂ ||
ಗಾಜುವಳೆವೇರನೆಗ್ಗಿದ ಪಾಂಗಿನಿಂದಂ ಮ |
ಹಾಜವದೆ ಶತಚೂರ್ಣಮಾದುದಂದಂ ಕಂಡು |
ಸೋಜಿಗಂಬಟ್ಟು ಖಳಶಿಂಶುಮಾರಂ ಕೂಡೆ ರೋಷಮಾನಸನಾದನು || ೨೩ ||

---
೧ ರ (ಪ.)

ಮತ್ತೊಂದು ಪರ್ವತವನಾ ಖಳಂ ವೃಷಪತಿಯ |
ನೆತ್ತಿಯೊಳ್ ತೆಗೆದಿಡಲ್ ಬೀಳುತಿರೆ ನಂದಿ ಕೊಂ |
ಡೆತ್ತಿ ಬಿಸುಡಲ್ ಬಿದ್ದುದಸುರಬಲದೊಳ್ ಕೋಟಿಸಂಖ್ಯೆಯಸುರರ್ ಮಡಿಯಲು |
ಚಿತ್ತಜಾರಿಯ ವಾಹನಂ ಖಳನ ಗದ್ದಮಂ |
ಕುತ್ತಿ ಬಿಸುಡವೆನೆಂದು ಲಾಗಿಸಲ್ಕಾ ಮದೋ |
ನ್ಮತ್ತನಿರದಿವನ ನುಂಗುವೆನೆಂದು ಬಾಯ್ದೆರೆಯಲೊಳಪೊಕ್ಕನಾ ಕ್ಷಣದೊಳು
|| ೨೪ ||

ಸಾರತರವಾದ ಸದ್ಧರ್ಮಂ ವಿಚಾರಿಸಲ್ |
ಕ್ರೂರಕರ್ಮದ ಖಳನ ದೇಹದೊಳ್ ನಿಂದಪುದೆ |
ವೀರನಂದೀಶ್ವರಂ ಧರ್ಮಸ್ವರೂಪನಿ ದಾನವನ ವಿಗ್ರಹದೊಳು |
ಸೇರಿರ್ಪನೆಂತುಟದ್ಭುತರೂಪಿನಿಂ ಬಳಿಯೆ |
ಘೋರದಾನವನ ತನು ಬಿರಿವುತಿರೆ ಖುರದಿಂ ಪ್ರ |
ಹಾರಿಸಲ್ ಸೀಳ್ದುದದು ಸಕ್ಕಸಮವಾಗಿ ಮತ್ತೇನೆಂಬೆನದ್ಭುತವನು[1] || ೨೫ ||

ಎರಡು ಕೋಡಿನೊಳೆರಡು ಸೀಳ್ಗಳಂ ನೆಗಪಿ ಮು |
ಪ್ಪುರಕೊಂದನೀಡಾಡಿ ಮತ್ತೊಂದು ಸೀಳನಿ |
ಹರಬಲಕ್ಕಿಡಲ್ ಸೀಳ್ಗಳೆರಡರಡಿಯೊಳ್ ಸಿಕ್ಕಿ ದೈತ್ಯಾಮರರ್ ಮಡಿವುದಂ |
ಪರಿಗಣಿಸಲರಿದು ಪುರದೊಳ್ ಶಿಂಶುಮಾರಖಳ |
ನುರುಮರಣವಾರ್ತೆ ವಿಸ್ತರವಾಯ್ತು ತಾರಕನ |
ಹಿರಿಯ ತನುಜಂ ಕೇಳಿ ಪರಿಭವದ ಬೇಗೆಯೊಳ್ ಪಾಡಳಿವುತಿಂತೆಂದನು || ೨೬

ಅಳಿದನೇ ಹಾ ಶಿಂಶುಮಾರನೆಮ್ಮಯ ಭುಜವ |
ಸುಳಿದಳೇ ಜಯಲಕ್ಷ್ಮಿ ಬೊಮ್ಮನೆಮ್ಮೊಡನಾಡಿ |
ಹೊಳೆದನೇ ಅಕಟಕಟ ತಮ್ಮ ಭಾಗ್ಯದ ಶರಧಿ ಬತ್ತಿ ಬಯಲಾದುದೆಂದು |
ಅಳಲಿ ನಿಮಿಷಾರ್ಧದೊಳ್ ತನ್ನ ತಾನೇ ಕೂಡಿ |
ತಿಳಿದು ರೋಷಾವೇಶನಾಗಿ ಸಿಂಹಾಸನವ |
ನಿಳಿದು ನಡೆದಂ ತಾರಕಾಂಬಕಂ ವಿಲಯದಾರಂಭದ ಕೃತಾಂತನಂತೆ || ೨೭ ||

---

೧ ಸುಕ್ಕರಿಸುಸು (ಶಿ.)

ಬಿತ್ತರಿಪೆನಾಲಿಸೈ ರಾಮ ಬಳಿಕಾ ರಾಕ್ಷ |
ಸೋತ್ತಮಂ ಪುರದಿಂದೆ ಪೊರಮಡಲ್ ಕೂಡೆ ಮೂ |
ವತ್ತುಪದ್ಮ ಪ್ರಬಲಬಲದೈತ್ಯನಾಯಕರ್ ಪೊರಮಟ್ಟರಾ ಕ್ಷಣದೊಳು ||
ಮತ್ತವಾರಣಘಟೆಗಳಂ ತುರಂಗಾಳಿಯಂ |
ಪತ್ತಿಗಳ ವಂಗಡಮದೇಂ ಗಣನೆಯಿನಿತುವಂ |
ಸೆತ್ತವಂಗುಸುರಲಸದಳವಹಿಪಗಿಪಿಪರಳವೇ ಮಹಾದ್ಭುತವಾದುದು || ೧೮ ||

ಆನೆಗಳ ಘಂಟಾಸ್ವನಂ ಬ್ರಂಹಿತಸ್ವನಂ |
ದಾನವರ ಭುಜತಾಡನಸ್ವನಂ ತುರಗಸಂ |
ತಾನದ ಮಹಾಹೇಷಿತಸ್ವನಂ ಬಹುವಾದ್ಯನಿಸ್ವನಂ ಪೊಣ್ಮುತಿರಲು ||
ಏನೆಂಬೆನದ್ಭುತವನುಪರಿಲೋಕದ ಜನಂ |
ತಾನಿರದೆ ಕಿವುಡಾಯ್ತು ದಿಗ್ಗಜಪ್ರತತಿ ಮರ[೧] |
ವಾನೆಯಾಯ್ತದನರಿದು ಫಣಿರಾಜನಾದಿಯೊಳ್ ಕರ್ಣವಿರಹಿತನಾದನು || ೧೯ ||

ಮಸಗಿ ಮುಂಬರಿವ ಭಟರಾಜಿಯುಂ ವಾಜಿಯುಂ |
ರಸೆಯನಲ್ಲಾಡಿಸುವ ಕರಿಗಳುಂ ಹರಿಗಳುಂ |
ಮಿಸುಪ ಕೂರ್ಮೊನೆಗಳ ಸರಳ್ಗಳುಂ ಬಾಳ್ಗಳುಂ ಕೇತನದ ಸಾಲ್ಗಳಿಂದೆ ||
ಪಸರಿಸಿದ ವಾದ್ಯನಿರ್ಘೋಷಮುಂ ರೋಷಮುಂ |
ಮುಸುಕುತಿಹ ಸತ್ತಿಗೆಗಳೋಳಿಯುಂ ಧೂಳಿಯುಂ |
ಬಿಸಮರಕ್ಕಸರ ಬೊಬ್ಬಾಟಮುಂ ಘಾಟಮುಂ ಬಹುಭಯಂಕರಮಾದುದು
|| ೨೦ ||

ಬೀಳಕೊಯ್ ಕೊಯ್ ಸಾಯ್ಗಳಂ ನುಚ್ಚುನುರಿಗಳಂ |
ಜಾಳಿಸಿದಹಂಕಾರಮೇ ಸುರರ ಗಂಟಲಂ |
ಕೀಳೆನುತೆ ತಾರಕಾಕ್ಷಂ ತನ್ನ ಸೇನೆಯುಂ ಕೈವೀಸಿ ಮುಂಬರಿಯಲು ||
ಕಾಳಕೂಟದ ಚೂಳಿಯಂತಸುರನಾಯಕರ್ |
ಕೋಲಾಹಳಂಗೆಯ್ವುತುರುಬಿದರ್ ತುರುಗಿದರ್ |
ಜಾಳಿಸು ಒಸಂಜೊಕ್ಕ ಮದದಾಸೆಪಿಂಡೆಸಲು ಸವರಿದರ್ ಸುರಬಲವನು || ೨೧ ||

೧ ದೆ (ಹು, ಮ.)

ಅಸಿಗಳಿಂದಿರಿದು ಚಕ್ರದೊಳಿಟ್ಟು ಸಬಳದಿಂ |
ಕುಸುಕಿ ಪರಶುವಿನಿಂದೆ ಮುಸುಕಿ ಮುದ್ಗರದಿಂದ |
ಲಸಿಯುರೆದು ಬಾಣಂಗಳಿಂದೆಚ್ಚು ಖಡ್ಗದಿಂ ಕತ್ತರಿಸಿ ಕೋಪದಿಂದೆ ||
ಮುಸಲದಿಂ ಬಡಿದು ಗದೆಯಿಂ ಮೋದಿಯಿಟ್ಟಿಯಿಂ |
ಮುಸಗಿಟ್ಟು ನಾನಾಪ್ರಕಾರಪ್ರಹಾರದಿಂ |
ದೆಸೆಗೆಡಿಸಿದರ್ ಸುರಪ್ರಸರಮಂ ದಾನವರ್ ಪೊಸಕೊಲೆಯ ಕಡುಪಿನಿಂದೆ || ೩೨ ||

ಒಂದು ದೆಸೆಯೊಳ್ ಕಮಲಲೋಚನಂ ಜಂಭನಿರ |
ದೊಂದು ದೆಸೆಯೊಳ್ ವಜ್ರನಾಭನೊಂದೆಸೆಗೆ ಮ |
ತ್ತೊಂದು ದೆಸೆಯೊಳ್ ವೀರಸುಭಟವಿದ್ಯುನ್ಮಾಲಿ ಶುಂಭಖಳನೊಂದೆಸೆಯೊಳು ||
ಒಂದು ದೆಸೆಯೊಳ್ ತಾರಕಾಕ್ಷನಿಂತೆಲ್ಲರುಂ |
ಮುಂದುವರಿದರೆಯಟ್ಟಿ ಕುಟ್ಟಿ ಘಟ್ಟಿಸೆ ಕೆಟ್ಟಿ |
ವೆಂದೋಡಿದರ್ ಕಂಡಕಡೆಗೆ ನಿರ್ಜರಭಟರ್ ನಿಂದುನಿಲ್ಲದೆ ಭರದೊಳು || ೩೩ ||

ಕಂಡನಮರೇಶ್ವರಂ ಮಡಿದ ದಾನವರೆಳ್ದು |
ಖಂಡಿಸುತೆ ಬೆಂಕೊಂಡು ಬರ್ಪುದಂ ನಡೆತಂದು |
ಖಂಡಪರಶುವಿಗೆಂದನೆಲೆ ದೇವ ಮಡಿದಸುರಬಲಮೆದ್ದು ಸುರಬಲವನು ||
ಅಂಡಲೆದು ಬರ್ಪರೆನಲಜಹರಿಗಳಂ ಕರೆದು |
ಚಂಡದೈತ್ಯರ ಪುರದೊಳುಂಟಮೃತಕೂಪಮು |
ದ್ದಂಡಪಾತಿವ್ರತೆಯರುಂಟ[1]ವರುಮಂ ಕೆಡಿಸಿಮೆಂದೀಶ್ವರಂ ಕಳುಪಿದಂ[1] || ೩೪ ||

ಹರನಾಜ್ಞೆಯಿಂ ಹರಿಯಜರ್ ತಮ್ಮ ರೂಪನಾ |
ದರದಿಂದೆ ಮರೆಸಿ ಪಶು ಕರುವಾಗಿ ಪೋಗಿ[2] ತ |
ತ್ಪುರವನೊಳಪೊಕ್ಕಮೃತಮಂ ಪೀರ್ದು ಬಳಿಕಚ್ಯುತಂ ಬೌದ್ಧರೂಪಿನಿಂದೆ ||
ಹರಭಕ್ತಿಯಂ ಬಿಡಿಸಿ ದನುಜಸತಿಯರ ಮಹಾ |
ಪರಮಪಾತಿವ್ರತ್ಯಮಂ ಕೆಡಿಸಿ ಹರಿಯಜರ್ |
ಮರಳಿ ಬಂದೀಶಂಗೆ ಬಿನ್ನವಿಸೆ ಹರನಂದು ಹರಗಣಕೆ ಸೆಲವಿತ್ತನು || ೩೫ ||

೧-೧ ವಂ ಕೆಡಿಸಿಮೆಂದೀಶ್ವರಂ ಕಳಹಿಸಿದನು (ಶಿ, ಗೋ.) ೨ ಚೇಗ (ಮ.)

ಬಿಡದಾಗ ನಂದೀಶ ಭೃಂಗೀಶ ವೀರೇಶ |
ಒಡನೆ ಷಣ್ಮುಖ ಗಜಾನನ ಭೈರವಾದಿಗಳ್ |
ಸಡಗರಿಸಿ ತಂತಮ್ಮ ಸೇನೆಸಹಿತಂ ಮುಳಿದು ದೈತ್ಯರಂ ನುಂಗುವಂತೆ ||
ಸಿಡಿಲ ಜಂಗುಳಿಯೊ ವಿಲಯಾಂತಕನ ವಂಗಡವೊ |
ಮೃಡನ ಫಾಲಾಂಬಕಮಹಾಜ್ವಾಲೆಯಾಕೃತಿಯ |
ಗಡಣವೊ ತನ್ಮಹಾಮೂರ್ತಿಗಳೊ ಪೇಳೆನಲ್ ಗುಡುಗುಡಿಸಿ ನಡೆತಂದರು || ೩೬ ||

ಮೊಳಗಿದುವು ಲಗ್ಗೆವರೆಗಳ್ ಭಟರ ಬೊಬ್ಬೆಗಳ |
ಕಳಕಳಂ ಪರ್ಬಿದುದು ಹರಗಣದ ನಾಯಕರ್ |
ಮುಳಿದು ಕೊಲತೊಡಗಿದರ್ ದೈತ್ಯರಂ ತಮತಮಗೆ ನಾನಾಪ್ರಕಾರದಿಂದೆ ||
ಕಲಿವೀರಭದ್ರನಾ ಕಮಲಾಕ್ಷನಂ ಗುಹಂ |
ನಲಿದು ವಿದ್ಯುನ್ಮಾಲಿಯಂ ನಂದಿ ಶುಂಭನಂ |
ಬಲವೈರಿ ಜಂಭನಂ ಭೈರವಂ ತಾರಕಾಕ್ಷನನುರುಬಿ ಘಾತಿಸಿದರು || ೩೭ ||

ವೀರಭದ್ರನ ಖಡ್ಗಹತಿಗೆ ಕಮಲಾಕ್ಷಂ ಕು |
ಮಾರನಂಬಿನ ಹತಿಗೆ ವೀರವಿದ್ಯುನ್ಮಾಲಿ |
ಧೀರ ನಂದೀಶನುರವಣೆಗೆ ಶುಂಭಂ ಹರಿಯ ಭರವಸಕೆ ಜಂಭಾಸುರಂ ||
ಭೈರವನ ಭೈರವಾಡಂಬರಕ್ಕೆರ್ದೆ ಬಿರಿದು |
ತಾರಕಾಕ್ಷಂ ಮುರಿದನೆಲೆ ಸಿದ್ಧರಾಮ ಕೇಳ್ |
ಸಾರಧರ್ಮದ ಮುಂದಧರ್ಮಮುಡ್ಡೈಸುವದೆ ಪೇಳಲೇನಚ್ಚರಿಯನು || ೩೮ ||

ಧರ್ಮಹೀನರ್ಗೆ ಜಯಲಕ್ಷ್ಮಿಯೊಲಿವಳೆ ಖಳರ |
ಮರ್ಮಮಂ ತಿಳಿದು ಕೋಪದೊಳ್ ಭವಬಲದ ವೀ |
ರರ್ಮಸಗಿ ಕಡಿದಿರಿದು ಮುಂಕೊಂಡು ಕೊಚ್ಚಿ ಖಂಡಿಸಿ ತರಿದು ಜಡಿದು ಬಡಿದು ||
ನಿರ್ಮಥಿಸಿ ವಿಕ್ರಮಂ ದೈತ್ಯರಂ ಮೂದಲಿಸಿ |
ಮಾರ್ಮಲೆವರಂ ಮಡಿಪೆ ತರಹರಿಸಲಾರದೆ ಖ |
ಳರ್ಮುರಿದು ಕಂಡಕಡೆಗೋಡಿದರ್ ತದ್ರಣಾಂಕಣವನೇಂ ಬಣ್ಣಿಸುವೆನು || ೩೯ ||

ಉರುಳ್ವ ತಲೆಯೊಡ್ಡಳಿಂ¹ ಕಡಿವಡೆದ ತೋಳ್ಗಳಿಂ |
ಪರಿದ² ನವಖಂಡದಿಂದಡೆಗೆಡೆದ ಮುಂಡದಿಂ |
ಸುರಿವ ಕರುಳೊಳಿಯಿಂ ಮಡಿದ ತುರಗಾಳಿಯಿಂ ಬಿಡುಮಿದುಳ ಜೌಗಿಸಿಂದೆ |
ನರಳ್ವರಿವೆಣಂಗಳಿಂ ಪರಿವ ರಕ್ತಂಗಳಿಂ |
ಮೊರೆವ ರಣಭೂತದಿಂ ಶಾಕಿನಿವ್ರಾತದಿಂ |
ತರತರದ ಬಾಣದಿಂ ಖಂಡಿತಕೃಪಾಣದಿಂ ರಣಭೂಮಿ ಕಣ್ಗೆಸೆದುದು || ೪೦ ||

ಮತ್ತೆ ಗಣನಾಯಕರ್ ಮುತ್ತಿ ರಿಪುವೀರರುಮ |
ನೊತ್ತಿ ಮಾರಾಂತರಂ ತತ್ತರಂದರಿದಿರಿದು |
ಕತ್ತರಿಸಿ ದುರದುರಿಪ ನೆತ್ತರಿನ ಕೋಡಿಯಿರದೊತ್ತರಿಸಿ ಸುತ್ತುವರಿಯೆ³ |
ಎತ್ತಲುಂ ಪರಿದು ಬಾಯ್ ಬತ್ತಿ ಧಗೆಯೊತ್ತಿ ಮೆಯ್ |
ಪೊತ್ತಿ ಮಿಗೆ ಪುತ್ತುಮಂ ಪತ್ತಿದಮರಾಳಿಗಳ |
ಮೊತ್ತಮಂ ಕಾಯ್ದು ಬೆಂಬತ್ತಿದರ್ ದಾನವರನೆತ್ತಿದಾಯುಧಗಳಿಂದೆ || ೪೧ ||

ಸಿಕ್ಕಿದಳಲಾ ಬಹಳಕಾಲಕಿಂದಿನದಿನಂ |
ರಕ್ಕಸರ ಜಯಲಕ್ಷ್ಮಿ ಕವಿವ ನುಚ್ಚುಗಳ ಪೊಯ್ |
ಮಿಕ್ಕು ಕವಿಕವಿಯೆನುತೆ ಸುರಬಲದ ನಾಯಕರ್ ತಾವಾಗ ಕೂಡೆ ಮುಸಗಿ ||
ಒಕ್ಕಲಿಕ್ಕುತೆ ಕರದ ಖಂಡೆಯದ ದನಿಯೊಡನೆ |
ನೆಕ್ಕನೆಳಿಲೆನೆ ವಾದ್ಯರಭಸದಿಂದುರುಬಿದರ್ |
ಮಕ್ಕಳಾಟಿಕೆಯಾಯ್ತು ಖಳಭಟರ ಕಾಳೆಗಂ ಪೇಳಲೇನಚ್ಚರಿಯನು || ೪೨ ||

ಆನೆಗಳನಿಳಿದು ಮಾವ್ತರ್ ದಿವ್ಯತುರಗಸಂ |
ತಾನಮಂ ಬಿಟ್ಟು ರಾವ್ತರ್ ತೇರಿನಿಂ ಧುಮುಕಿ |
ಹೀನಮಂ ಭಾವಿಸದೆ ರಥಿಕರಸಿಮುಸಲಾದಿ ಕೈದುಗಳನಿಳೆಗೆ ಬಿಸುಟು |
ಮಾನವುಳಿದೊಡನೆ ಕಾಲಾಳ್ ರುದ್ರಸುಭಟಪ್ರ |
ತಾನಮಂ ದೈನ್ಯದಿಂ ಕಾಲ್ಗೆರಗಿ ಕಳವಳಿಸಿ |
ಮೌನದಿಂ ಪ್ರಾಣಮಂ ಮಿಗಿಸಿ⁴ಕೊಂಡೋಡಿದರ್ ತಮತಮಗೆ ಕಂಡಕಡೆಗೆ || ೪೩ ||

೧ ಸೀಳ್ಗಳಿಂ (ಹು, ಮ.) ೨ ರಳ್ವ (ಪ.) ೩ ಯೆ (ಹು. ಮ. ಶಿ. ಗೋ.) ೪ ೦ (ಹು, ಮ.) ೫ ಬಿಡಿಸಿ (ಮ.)

ತಲೆಗಳಂ ಮೆಟ್ಟಿ ಮುಂಡಮನೆಡಹಿ ಕರುಳ್ಗಳಂ |
ತುಳಿದು ನರದೊಳ್ ತೊಡರಿ ರಕ್ತದೊಳ್ ಸನೆದು ಪೇ
ರೆಲುಗಳನುಸೊದೆದು ಕೈದುಗಳ ಸೋಂಕಿಂ ಗಾಯವಡೆದು ಪಗೆಗಳ ಬೊಬ್ಬೆಗೆ ||
ಸಲೆ ಬೀಳುತೇಳುತಳಲುತೆ ಮುಂದುಗಾಣದುರೆ |
ಕಳವಳಿಸಿ ಕಾಲ್ಗೆಟ್ಟು ದೈತ್ಯಸೇನಾಭಟರ್ |
ತಲೆವಡೆವುತೋಡಿದರ್ ಪೇಳಲೇನಸುರರಾತ್ತನದ ಭಂಗಮುನಾಗಳು || ೪೪ ||

ಮಲೆತವರ ತಲೆಗಳಂ ಕೊಳುತೆ ನತರಾದವರ |
ನುಳುಪುತ್ತೆ ಮಾಪ್ತರಾಪ್ತರ್ಗೆ ನಂಬುಗೆಯಿತ್ತು |
ಕಳುಪಿ ಗಜತುರಗಂಗಳಂ ಪಿಡಿವುತೋಡುವರ ಕೈದುಮಂ ಸೆಳೆದುಕೊಳುತೆ ||
ಖಳನೃಪರ ಛತ್ರ ಚಾಮರ ಪತಾಕಾಳಿಯುಂ |
ಕೆಲವವರ ಕೈಗೊಳಗುಮಾಡಿಸುತೆ ಹರೆಗಳಂ[1] |
ನೊಳಗಿಸುತೆ ಬಿರುದನುರೆ ಪೊಗಳಿಸುತೆ ಹರಗಣಂ ಬೆಂಬತ್ತಿತರಿಬಲವನು || ೪೫ ||

ಓಡಿದಂ ವೀರವಿದ್ಯುನ್ಮಾಲಿ ಮನದೊಳಗೆ |
ಕೋಡಿದಂ ಕಮಲಾಕ್ಷನೂರೊಳಗೆ ವಿಶ್ರಮಂ |
ಮಾಡಿದಂ ತಾರಕಾಕ್ಷಂ ಮಿಕ್ಕ ದೊರೆಗಳೇನಾದರೋ ತತ್ಕ್ಷಣದೊಳು ||
ಕೂಡಿದುದು ಪುರದೊಳಸುರಪದಾತಿ ದಾಳಿಯುಂ |
ಮಾಡಿದುದು ಹರಗಣಂ ಪುರದ ಪೆರ್ಬಾಗಿಲೊಳ್ |
ಗಾಡದಿಂ ಧರ್ಮಗಾಳೆಯನಿರದೆ ಪಿಡಿಸಿ ತಿರುಗಿತು ವಿಜಯದುತ್ಸವದೊಳು || ೪೬ ||

ರಾಮ ಕೇಳ್ ವಿಜಯದುತ್ಸಹದಿಂದಲಂದು ಸು |
ತ್ರಾಮಮುಖ್ಯಾಮರಕದಂಬಕಂ ಸಂಗರೋ |
ದ್ದಾಮಷಣ್ಮುಖಸಿಂಧುರಭವಾದಿಗಳ್ ಕೂಡಿ ಸಂಭ್ರಮದೊಳೈತರುತಿರೆ ||
ಕಾಮಸಂಹರನಿತ್ತಲಚಲಚಾಪದೊಳೆ ನಿ |
ಸ್ಸೀಮ ಪಾಶುಪತಾಸ್ತ್ರಮಂ ಪೂಡಿ ಖಳರ ನಿ |
ರ್ನಾಮಮಂ ಮಾಳ್ಪೆನೆಂದೆನುತೆ ಮುಪ್ಪುರದ ಕೀಲಂ ನಿರೀಕ್ಷಿಸುತಿರ್ದನು || ೪೭ ||

೧ ವಾದ್ಯಗಳ (ಹು. ಮ.)

ನೆರೆ ಪುರಸಹಸ್ರವರುಷಂ ನೋಡಲಾಗ ಮು |
ಪ್ಪುರಗಳೊಂದಾದುವು ಲಲಾಟೇಕ್ಷಣಾಗ್ನಿಯಂ |
ಹರಿಗೊಳಿಸಿ ಪಾಶುಪತಬಾಣಮಂ ಬಿಡೆ ಪುರತ್ರಯದ ಕೀಲಂ ಖಂಡಿಸಿ ||
ಉರಿಪಿದುದು ತತ್ಪುರಂಗಳ ಪರಿಕರಂಗಳಂ |
ಕರಿಕಾದುದಾ ಕ್ಷಣದೊಳಾ ದೈತ್ಯಸಂಕುಲಂ |
ಸುರರೆ ಪೂಮಳೆಗರೆದರೀಶ್ವರನ ಸಿರಿಮುಡಿಯೊಳೀನೆಂದು ಬಣ್ಣಿಸುವೆನು || ೪೮ ||

ಹರಿಯಜಸುರೇಂದ್ರಾದಿ ಸಕಲನಿರ್ಜರಜನಂ |
ಹರನ ಬಿರುದಾವಳಿಯ ಕೊಂಡಾಡುತಿರಲಾಗ |
ವರರಥವನಾ ಪರಿಕರಂಗಳಂ ಮುನ್ನಿನಂತಿರವೇಳ್ದು ಸಕಲಸುರರ ||
ಕರುಣದಿಂ ನೋಡಿ ಮನ್ನಿಸುತಲವರನವರ |
ಪುರಗಳ್ಗೆ ಬೀಳ್ಕೊಟ್ಟು ಮಂದರಾಚಲಕ್ಕೈದಿ |
ಗಿರಿಜೆಯೊಡಗೂಡಿ ಸುಖಸಂತಸದೆ ಪಂಪಾವಿರೂಪಾಕ್ಷನೊಪ್ಪಿರ್ದನು ⊛ || ೪೯ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೦ ||

ಅಂತು ಸಂಧಿ ೪೪ಕ್ಕಂ ಪದಗಳು ೧೭೯೩ಕ್ಕಂ ಮಂಗಳಮಹಾಶ್ರೀ

---

೧ ೮೧ ನೋಡಿ (ಹು, ಮ.) ೨-೨ ಡಿ ನಮಿಸಲತಿ | ಕರುಣದಿಂ ನೋಡಿ ಮನ್ನಿಸುತಾಗಲವರವರನವರ ಲೋಕಕೆ ಕಳುಹಿಸಿ || ಹರಗಣಂಗಳ್ಗೆರಸಿ ಮಂದರಾಚಲಕ್ಕೈದಿ | ಗಿರಿಜೆಯೊಡಗೂಡಿ ನಾನಾ ವಿನೋದಂಗಳಿಂ | ಪರಮಸುಖಸಂತೋಷದಿಂದಲಾ ಪಂಪಾವಿರೂಪಾಕ್ಷನೊಪ್ಪಿರ್ದನು || (ಮ.) ⊛ ಈಪದ್ಯವು ಹು. ಪ್ರತಿಯಲ್ಲಿಲ್ಲ.

ನಾಲ್ವತ್ತೈದನೆಯ ಸಂಧಿ

ಸೂಚನೆ

ಮಂದರಾಚಲದ ಮನೆಯೊಳಗಿರುತೆ[೧] ಶಂಕರಂ |
ಮಂದಾರವರಲಿಗಾಗಿಯೆ ಚೈತ್ರರಥವನಮ |
ಸಂದು ಸೃಜಿಯಿಸಿ ಜಲಕ್ರೀಡೆಯುಂ ಕಳೆದು ತದ್ವನದೊಳಗೆ ಸುಖಮಿರ್ದನು ||

ಮಂದರಾಗದ ತಟದೊಳೆಡೆಯೆಡೆಗೆ ರಂಜಿಸುವ |
ಮಂದರಾಗದ ವನದೊಳೀಕ್ಷಿಸುವರಕ್ಷಿಗಂ |
ಮಂದರಾಗವನೀವ ಕ್ರೀಡಾಸ್ಥಳಂಗಳೊಳ್ ಕೆಳದಿಯರ್ವೆರಸಿ ನಲಿದು ||
ಮಂದಗಾಮಿನಿ ಗಿರಿಜೆ ಪಳುಕಿನರೆಯೊತ್ತಿನೊಳ |
ಮುಂದೆಸೆವ ಶಂಭುದ್ವಯಾಕಾರಮಂ ಕಂಡು[೨] |
ಮಂದಸಂಶಯದಿಂದೆ ನಿಂದುದಂ ನೋಡಿ ನಗುವಿಂದುಧರ ಸಲಹೆಮ್ಮನು || ೧ ||

ಆಲಿಸಿನ್ನಾದೊಡೆಲೆ ರಾಮ ಶಂಕರನಧಿಕ |
ಲೀಲೆಯಿಂ ಮಂದರಾಚಲವಾಸವಾಗಿರ್ಪ |
ಕಾಲದೊಳ್ ಪುಷ್ಪದತ್ತಂ ಪ್ರತಿದಿನಂ ಲೋಕಲೋಕದ ವನಂಗಳಿಂದೆ ||
ಮೇಲಾದ ಕುಸುಮಂಗಳಂ ತಿರಿದು ತಂದು ಪೊಸ |
ಮಾಲಿಯುಂ ಕಟ್ಟಿ ತತ್ಕುಸುಮದೇಳ್ಗೆಯನುಸುರಿ |
ಬಾಲೇಂದುಧರನರಸಿಯುಮಳಸಿರಿಮುಡಿಗೀವುತಿರ್ದನತಿಭಕ್ತಿಯಿಂದೆ || ೨ ||

ಈ ತೆಱದೊಳೊಂದು ದಿವಸಂ ಪೂವಳಂ ಶೈಲ |
ಜಾತೆಗಾ ಮಾಲೆಯುಂ ಕೊಡುತಿರಲ್ಕಾ ಪಾರಿ |
ಜಾತಕುಸುಮಂಗಾಣದಾ ಗಿರಿಜೆಯಾ ಪುಷ್ಪದತ್ತನ ಮೊಗಂ ನೋಡಲು ||
ಭೀತಿಯಿಂ ಕೈಗಳಂ ಮುಗಿದು ನಿಂದೆಲೆ ಲೋಕ |
ಮಾತೆಯುದು ಸುರವನದ ಕುಸುಮಮದಕೆಳಸಿ ಪುರು |
ಹೂತನರ್ಧಾಂಗಿ ಮುಂತರಿಸಿ ಸೂಡಿದಳೆಂದು ನುಡಿದನಭವಂ ಕೇಳಲು || ೩ ||

೧ ಗಿರದೆ (ಹು.) ೨ ಡ (ಹು, ಮ.) ೩-೩ ಸಾಮೊಡೆ ಸಿದ್ಧ (ಹು, ಮ.) ೪ ವ್ವ (ಶಿ.); ಗ (ಹು.)

ಆ ನುಡಿ ಭವಾನಿಗೀರ್ಷೆಯನುಂಟುಮಾಡೆ ಮುಂ ।
ದೇನಪ್ಪುದೋಯೆಂದು ಶಿವನಂದು ಹೃದಯದೊಳ್
ಜಾನಿಸುತ್ತಿರೆ ಗಿರಿಜೆ ಸುರತರುಗಳೈದವರ ಕುಸುಮಂಗಳೇನಧಿಕಮೋ ।
ಈ ನಗದ ತಪ್ಪಲೊಳಗತುಳಸುರತರುವನವು ।
ನೀ ನಿನ್ನ ಮನಕಳ್ತಿಯಪ್ಪಂತೆ ಗೈದೆನೆಲೆ ।
ಮಾನನಿಧಿ ನಡೆ ನೋಳ್ಪೆವೆಂದೆನಲ್ ಗಿರಿಜೆ ಸಖಿಯರ್ಗೂಡಿ ಪೊರಮಟ್ಟಳು ॥ ೪ ॥

ಆಕೆ ಪೊರಮಡಲೊಡನೆ ಪೊರಮಟ್ಟುದಖಿಳನಾ ।
ರೀಕದಂಬಂ ಸಕಲವಿಭವದಿಂದೀಶ್ವರಂ ।
ಜೋಕೆ ಮಿಗೆ ಶರ್ವಾಣಿವೆರಸಿ ತದ್ವನಮನೊಳಪೊಕ್ಕದಂ ನೋಳ್ಪಾಗಳು ।
ಏಕಸಾಹಸ್ರಯೋಜನದಗಲದಿಂದುಪರಿ ।
ಲೋಕಂಬರಂ ಬೆಳೆದ ಸುರತರುಗಳಿಂದೆ ನಾ ।
ನಾಕುಸುಮಜಾತಿಯಿಂದಮೃತದ ಕೊಳಂಗಳಿಂದಾ ವನಂ ಕಣ್ಗೆಸೆದುದು ॥ ೫ ॥

ಆ ವನದ ಸಿರಿಯನೀಕ್ಷಿಸಿ ಗಿರಿಜೆ ನಗುತಲೆಲೆ ।
ದೇವ ನಿಮ್ಮಡಿಯ ಕರುಣಾಮೃತದ ಮಳೆಯೊಳೆಸ ।
ನಾನಾವ ಸುಖದ ಬೆಳೆ ಫಲಿಸದಿರ್ಪುದೆಯೆಂದು ಹರುಷದಿಂ ಪೊಗಳುತಿರಲು ।
ದೇವಿ ಕೇಳಿದು ಚೈತ್ರರಥವೆಂಬ ವನಮಿದ ।
ಕ್ಕಾವಾವ ಲೋಕದ ವನಂಗಳೆಣೆಯಲ್ಲಿದರ ।
[೧]ಪೂವೆ ನಿನ್ನೆಸೆವ ಸಿರಿಮುಡಿಗೆ ಪೂಗೀ ಮುಡಿಯೆ ತಕ್ಕುದಿದು ನಿಜವೆಂದನು ॥ ೬ ॥

ಎಂದು ಪೊಸಪೂಗಳಂ ತರಿಸಿ ಗಿರಿಜೆಯ ಮುಡಿಯು ।
ನಂದು ಸೆಳ್ಳುಗುರ್ಗಳಿಂ ಪಿಕ್ಕಿ ತತ್ಕುಸುಮಗಳ ।
ಸೊಂದಿಸುತ್ತಿಣ್ಣಗಂಟಿಟ್ಟು ಮೊಗಮಂ ನೋಡಿ ಸುಖದೊಳೋಲಾಡಿ ವನಮಂ ।
ಇಂದು ಮೊದಲಾಗಿ ಸಲಹೆಂದೊರ್ವ ವನಪಾಲ ।
ನಂ ದಯಂಗೆಯ್ದೊಂದಿನಂ ಬಿಡದೆ ಪೂಗಳಂ ।
ತಂದೀಕೆಗೀಯೆಂದು ಪುಷ್ಪದತ್ತಂಗೆ ನೇಮಿಸಿದನಭವಂ ಕೃಪೆಯೊಳು ॥ ೭ ॥

೧ ತೆ (ಹು,ಮ.) ೨-೨ ಹೂವಿನಿಂದೆ (ಶಿ, ಗೋ.)

ಸಂತಸಮೊದವ ಪೂಗಳಂ ದೇವಿ ಮುಡಿದ ಸಮು |
ನಂತರದೊಳೆಲ್ಲರುಂ ಕೊಂಡಾಡೆ ಶಂಕರನ |
ನಂತವಿಭವದೊಳಗಜೆಗೂಡಿ ಬನದಿಂ ಮಂದರಾಚಲವನೈದೆ ಸುರರ |
ಸಂತತಿಗಳೋಲೈಸುತಿರಲೀಶನಿಪ್ಪ ಸಮು |
ನಂತರದೊಳುರೆ ವಿರಹಿಬೃಂದಹೃಚ್ಛೂಲಂ ವ |
ಸಂತಕಾಲಂ ಭೋಗಿನಿಕರಾನುಕೂಲಂ ಪ್ರಸೂನಜಾಲಂ ಬಂದುದು || ೮ ||

ಚಳಿಪೊಡ್ಡು ಜಾರೆ ತಂಗಾಳಿ ತಲೆದೋರೆ ಪೂ |
ಗಳ ಕಂಪು ಮೀರೆ ಭೃಂಗಂ ನಲಿದು ಪಾರೆ ಕೋ |
ಕಿಲೆಯ ದನಿ ಸಾರೆ ಮದನಂಗೆ ಬಲವೇರೆ ನದಿಗಳ್ ತಾರೆ ಮಾಮರಗಳು |
ತಳಿರ್ಗಳಂ ಪೇರೆ ವಿರಹಿಗಳ ಬಾಯಾರೆ ಸುಖಿ |
ಗಳ ತಾಪಮಾರೆ ಮುನಿಗಳ ಮನಂ ಮೀರೆ ಭೂ |
ವಳಯಕೆ ವಸಂತಾಗಮಂ ಮನೋರಾಗಮಂ ಮಾಡುತೈತರುತಿರ್ದುದು || ೯ ||

ಬೀತುವಾ ಜಾತಿ ನೈದಿಲ್ ಮೊಲ್ಲೆಗಳ್ ಕರಂ |
ಪೂತುದವನೀಲತಾವಿತತಿ ಮಾಮರಗಳುರೆ |
ಕಾತುವಿನಿವಣ್ಣುಂಡು ಗಿಳಿವಿಂಡು ತೊಂಡುಗೆಯ್ಯಲೆಳಸಿತಂಬುಜಮುರಳ್ದುವು ||
ಓತುದು ವಿಯೋಗಿಜಾಲಂ ಮುನಿದರೊಳ್ ಕರಂ |
ಸೋತುದಂಗನೆಯರ್ಗೆ ಮುನಿಕುಲಂ ಫಲವಿತತಿ |
ಜೋತೊರಗಿದುದು ಬನಬನಂಗಳೊಳ್ ಪೊಸಬಸಂತಂ ಬರಲದೇವೊಗಳ್ವೆನು
|| ೧೦ ||

ಫಾಲ್ಗುಣಿಯ ಹೃತ್ಕುಮುದಮಳಿಯೆ ತನ್ನೇತ್ರಪಂ |
ಕೇರುಹಂ ಪೊಳೆಯೆ ಮುನಿದಿಸೆಯರೆಂದೆಂಬಾ ಚ |
ಕೋರಕೆರ್ದೆ ಬಿರಿಯೆ ಕೂರಿದರೆನಿಪ್ಪೆಣೆವಕ್ಕಿ ನೆರೆಯೆ ಜಾತೀಕುಸುಮದ ||
ತಾರಗೆಗಳಡಗೆ ತಚ್ಛಿಶಿರೇಂದುವಸ್ತಮಿಸ |
ಲಾ ರಮ್ಯಮಧುವೆಂಬ ಸೂರನುದಯದೊಳೆ ಪರಿ |
ವಾರವಂ ನೆರಪಿ ಮನಸಿಜನೃಪಂ ದಿಗ್ವಿಜಯಕೆತ್ತಿ ನಡೆದಂ ಮುದದೊಳು || ೧೧ ||

೧ [illegible] (ಶಿ, ಗೊ.) ೨ ರಾಗಮಂ ಬೀಗ (ಹು.) ೩-೩ ಡೆಯಲ್ಕೆಳಸಿತಬುಜಮುರಲ್ದುವು ([illegible])

ಅಳಿಕುಳಕ್ಕಾರೋಗಣೆಯ ಪೇೞ್ದು ಕೋಕಿಲಂ |
ಗಳ ಬಾಯ ಬೀಗಮಂ ತೆಗೆದು ಪಸಿದೊಡಲ ಗಿಳಿ |
ಗಳ ಕಳವಳಂಗಳಂ ಬಿಡಿಸಿ ಕಳಹಂಸೆಗಳ ಕಾಲ್ಗೆ ನಟಣೆಯನೊದವಿಸಿ |
ಕೊಳರ್ವಕ್ಕಿಗಳ ಚಿತ್ತಮಂ ಬೞಲಿಸಿ ವಿರಹಿಗಳ |
ನಳಲಿಸುತ್ತೆತ್ತೆತ್ತಲುಂ ಕಾಮದೂತನಂ |
ತೆಳೆಗಾಳಿ ತೆಂಕಣಿಂ ಸುಳಿದುದು ವಸಂತಾಗಮದ ಮೊದಲೊಳೇನೆಂಬೆನು || ೧೨ ||

ಮೌ[೧]ನವ್ರತಾಚಾರಿಯಾದ ಕೋಕಿಲೆಯಿಂದು |
ಮಾ[೨]ನಮಂ ಬಿಟ್ಟುಲಿಯತೊಡಗಿದುದು ಮಲ್ಲಿಕಾ |
ಮಾನಿನಿಗೆ ಚಂಡಾಳಿಯೊಳ್[೩] ಸಂಗಮಾದುದಿನನರಸಿ ಸಿರಿವನೆಂಬೆನಿಸುವ ||
ಆ ನಳಿನಿ ಬಂಡಿನೊಳಗಾದಳುತ್ತಮಜಾತಿ |
ಹೀನಮಾಯ್ತಿಳೆಯೊಳೀ[೪] ಮಧುಸಂಗದಿಂದಲೇ |
ನೀನಾಗದಿರದೆಂದು ತೋರ್ಪಂತೆ ಬಂದುದು ಬಸಂತಮದನೇನೆಂಬೆನು || ೧೩ ||

ಸಲೆ ಸುಜಾತಿಯ ಸಿರಿಯಡಂಗಿತು ವಿಜಾತಿಗತಿ |
ನಲವಾದುದುನ್ಮಧುಪಕುಲಕೆ ಸುಮನಃಕುಲದ |
ಕೆಳೆಯಾದುದಂಗಭವನೇ ತನ್ನ ತಾಯ್ಮನೆಗೆ ಕೇಡನೆಣಿಸುವನೆರ್ದೆಯೊಳು ||
ನೆಲೆಗೆ ಸಂದುದು ಪಾದರೀವಿಭವಮಾದುದಾ |
ಗಳೆ ತಪೋಹೀನತೆಯದೆಲ್ಲಿಯುಂ ಚಿತ್ರಮಿದು |
ಕಲಿಕಾಲಮೋ ಚೈತ್ರಕಾಲಮೋ ಪೇಳೆನಲ್ ಸುರಭಿಸಮಯಂ ಬಂದುದು || ೧೪ ||

ಎಳದಳಿರ ಕೆಂಪು ಪೂಗಳ ಕಂಪು ಕೋಕಿಲಂ |
ಗಳ ಸರದ ನುಂಪು ತಂಗಾಳಿಯ ಪದಂಪು ಗಿಳಿ |
ಗಳ ರವದ ಸೊಂಪು ತುಂಬಿಯ ಗಾನದಿಂಪು ನಾನಾಫಲಾವಳಿಯ ಬಿಣ್ಪು ||
ತಿಳಿಗೊಳದ ತಂಪು ವಿರಹಿಯ ಕೈಕದಂಪು ಸುಖಿ |
ಗಳ ಮನದ ಪೆಂಪು ಬನಗಳ ಗುಂಪು [೫]ಗುಂಪು ಸಂ[೫] |
ಗಳಿಸಿತೆಲ್ಲೆಲ್ಲಿಯುಂ ಚೈತ್ರಾಗಮಂ ಬರಲ್ ಪೇಳ್ವುದೇನಚ್ಚರಿಯನು || ೧೫ ||

---

೧ ನ (ಹು, ಮ.) ೨ ಮೌ (ಮ.) ೩ ಗಳ (ಹು. ಮ.) ೪ ಳಿಮ (ಮ.)
೫-೫ ವಿರದೆಸಂ (ಶಿ, ಗೋ.)

ತಂಬೆಲರ ಕೊಬ್ಬು ಬನಬನದ ಸೌಭಾಗ್ಯವೆಳೆ |
ತುಂಬಿಗಳ ಸಂಗೀತಶಾಲೆ ಚೈತ್ರನ ರಥದ |
ಸುಂಬೇಸು ಮೆಚ್ಚಿದರ ಮನಮೆಚ್ಚು ಗೆಲ್ವರೆದೆಗಿಚ್ಚು ರತಿದೇವಿಯೊಲವು ||
ಶಂಬರಾರಿಯ ಸರಳ ಸಂತಾನಮರಳ ಕುಲ |
ಕಂಬೈತಲೆಯ ಚೊಕ್ಕ ಮುತ್ತೆನಿಪ ಮಲ್ಲಿಗೆಗ |
ಳಿಂ ಬಿರಿದುವೊ ಬಿರಯಿಸುದೆ[2] ಬಿರಿವ ಮಾಳ್ಕೆಯಿಂದಾ ಬಸಂತದ ಮೊದಲೊಳು
|| ೧೬ ||

ಕಾಮರಾಯನ ತೇಜದಂಕುರಮಿವೇನೆ[3] ರತಿ |
ದೇವಿ ತಾಂ ತೊಡುವ ಚಿನ್ನದ ಪೂಗಳೆನೆ ಪಸಂ |
ತಾಪಸೋಶಂ ಬರಲ್ ವನವಧು ನಿವಾಳಿಸುವ[4] ನೀರಾಜನಂಗಳೆನಲು ||
ಆವಾವ ಪೂಗಂಪನೊತ್ತರಿಸಿ ತನ್ನ ಕಂ |
ಪಾವರಿಸೆ ದೆಸೆದೆಸೆಗಳಂ ಮೊಗ್ಗೆ ಬಿರಿಮುಗುಳ್ |
ಪೂವಾಂತ ಸಂಪಗೆಗಳೊಪ್ಪಿದುವು ಸ್ಮರನುರಿಯ[5]ಬಾಣಂಗಳೆಂಬಂತಿರೆ || ೧೭ ||

ಮನಸಿಜನ ಶಸ್ತ್ರಾಸ್ತ್ರಶಾಲೆಯಿದು ಕಾಮರಾ |
ಜನ ಚತುರ್ಬಲದ ಪಾಳೆಯಮಿದಂಗಜನೃಪನ |
ಬಿಸವದರಮನೆಯಿಂದು ಮಧು ವನಕೆ ಕಕ್ಕುದರಿಯಂ ನೆಟ್ಟನೋ ಮದನನ ||
ಸಸೆಯಂಬು ಮುನಿಹೃದಯಮಂ ನಡವೆಸುತ್ತೆ ಚಿಲು |
ಕಿಸ ದೊಡ್ಡ ಮೊನೆಯಂಬನಾಗಿಸಿದನೋ ಯೆನಲ್ |
ಪಸಮಸುರೆ ಬಳಸಿ ಕಂಗೊಳಿಸ ಪೊಂಗೇದಗೆಗಳೊಪ್ಪಿದುವು ತರತರದೊಳು || ೧೮ ||

ಭಾವಿಸಲ್ ಸ್ಮರನ ಪಯಣಕೆ ಪೊಯ್ವ ನವಚಂದ್ರ |
ಗಾಮಿಯೊಳ್ ಧಾರದರಳಿಲೆಗಳೆನೆ ಮಿಯೊ |
ಗಾನಳಿಪ್ಪುಗಂಗಳಂ ಮಧುವೆಂಬ ಬೇಂಟೆಗಂ ಸುಡಲೆಂದು ಬನದೊಳಿಟ್ಟ ||
ದಾವಾಗ್ನಿ[7]ಸಿಡುಪ್ಪರಿಯ[7] ಸಾಲಿಗೆಗಳೆನೆ ಕೆಂಪು |
ದೀವಿ ದಟ್ಟೈಯಿಸಿರ್ದ ತಳಿರ್ವೊದರ್ಗಳ ಕೆಳಗ |
ನಾವರಿಸುತೆಳಲ್ವಿ[8] ತಳಿರಿಂದಶೋಕದ್ರುಮಂಗಳ್ ಕರಂ ಮೆರೆದುವಂದು || ೧೯ ||

೧ ಜಸದ (ಹು, ಮ, ದಾ.) ೨ ಬಾಯ್ (ಶಿ, ಗೋ.) ೩ ವೆನ್ನೆ (ಮ.) ೪ ಸಿದ (ಹು. ಮ.) ೫ [illegible] (ಮ.) ೬ ಮಸೆ (ಹು. ಮ.) ೭-೭ ಮುರಿಯುರಿನ (ಮ.) ೮ ಕೆಲ್ವ (ಮ.)

ಎಳೆದಳಿರ ಮಾಣಿಕದ ಗೊಂಚಲ್ಗಳಿಂದೆ ಪೂ |
ಗಳ ಮಿಸುನಿಗುಸುರಿಗಳ ಕುಚ್ಚುಗಳಿನೆಸೆವ ಮಿಡಿ |
ಗಳ ಪಚ್ಚೆವರಲ ಸೂಸಕಗಳಿಂದಪ್ಪಿದೆಳೆವಳ್ಳಿಗಳ ಬಿರಿಮುಗುಳ್ಗಳ ||
ತೊಳಪ ಮುತ್ತಿನ ಗುದಿಗಳಿಂ ಚರಿಪ ಮರಿದುಂಬಿ |
ಗಳ ನೀಲಮಣಿಮಾಲೆಯಿಂದೆಸೆವ ಮಾಮರಂ |
ಗಳೆ ವಸಂತಂ ಸ್ಮರನ ಬರವಿಂಗೆ ಕೈಗೈದ ಗೂಡಾರವೆನಲೆಸೆದುವು || ೨೦ ||

ಕೋಮಳರಸಾಲಪ್ರಸೂನಗುಚ್ಛಂಗಳೊಳ್ |
ಕಾಮವಾರಣಬೃಂಹಿತಸ್ವನಮಿವೆನೆ ಹೇಮ |
ತಾಮರಸದೊಳ್ ಜಲಾಂಗನೆಯ ಮುಖಸಂಗೀತಸಪ್ತಸ್ವರಂಗಳೆನಲು ||
ಆ ಮಲ್ಲಿಕಾಮುಕುಳದೊಳ್ ಮನೋಜಾಸ್ತ್ರಾಭಿ |
ರಾಮಭೀಂಕೃತನಿನಾದಂಗಳೆನೆ ಬನಬನದೊ |
ಳಾ ಮಧುವ್ರತನಿಸ್ವನಂ ವಿರಹಿಕಂಪನಂ ಪೊಣ್ಮಿದುದದೇನೆಂಬೆನು || ೨೧ ||

ತೀರ್ವೈಸಿ ಬರ್ಪ ತುಂಬಿಗಳ ಮೈಗಪ್ಪು ಮುಂ |
ಗಾರ ಮುಗಿಲವರ ಝೇಂಕಾರವೆ ಮೊಳಗು ಚರಿಪ |
ನಾರಿಯರ ತಳಪಗಣ್ ಮಿಂಚು ಮಾರುತಹತಿಗೊಗುವ ಮಲ್ಲಿಗೆಯುರಳ್ಗಳೆ ||
ತೋರಮಳೆವನಿಗಳೊಂದೊಂದುದಿರ್ವ ಬಂದುಗೆಯ |
ಪೂ ರಯ್ಯಮಾದಿಂದ್ರಗೋಪಂಗಳಾಗೆ ಶ್ರಂ |
ಗಾರಮಾಯ್ತುದು ವರ್ಷಮೋ ವಸಂತಮೊ ತಿಳಿಯಲರಿದೆನಲ್ ಬನಬನದೊಳು || ೨೨ ||

ಸರಸಿಯೊಳಗಾಡುವರಸಂಚೆಯಿಂ ಕೊಂಚೆಯಿಂ |
ಬಿರಿಮುಗುಳ್ಗೆರಗುವ ಮದಾಳಿಯಿಂ ಗಾಳಿಯಿಂ |
ವರಫಲವನುಂಬ ಪೊಕ್ಕುಳಿಗಳಿಂ ಗಿಳಿಗಳಿಂ ಲತೆವನೆಗಳೊವರಿಯೊಳು ||
ಹರುಷದಿಂದೊಪ್ಪುವ ವಿಟಾಳಿಯಿಂ ಕೇಳಿಯಿಂ |
ಮೊರೆವ ನಾನಾಪಕ್ಷಿಜಾಳದಿಂ ಮೇಳದಿಂ |
ದರಳ್ವ ಪೂಗಳ ಸೊಗಸುಗಂಪಿನಿಂ ಸೆಂಪಿನಿಂ ವನವನಂಗಳ್ ಮೆರೆದುವು || ೨೩ ||

ಪೊದವಿದೆಲ್ಲಂ ಕುಸುಮಪರಿಮಳಮಯಂ ಕಾಣ್ಬ |
ಕಡೆಗಳೆಲ್ಲಂ ಸಕಲಫಲಮಯಂ ಬನಬನಗ |
ಳಡೆಗಳೆಲ್ಲಂ ಮದನಬಲಮಯಂ ಲೋಕವೆಲ್ಲಂ ಭೋಗಿಸಂಕುಲಮಯಂ ||
ಪಡಿವ್ರದೆಲ್ಲಂ ಮನೋಭವಮಯಂ ಮುನಿಮನದ |
ಪಡುವೆಲ್ಲಮಂತ್ರನಾಶರಮಯಮೆಸೆವ ತಣ್ಗೊಳದ
ತಡೆಯೆಲ್ಲಮುಂ ವಿರಹಿಮಯಮಾದುದಾ ವಸಂತಾಗಮದೊಳೇನೆಂಬೆನು || ೨೪ ||

ಇಂತು ಜನಕಾನಂದಮಂ ಕೊಡುತೆ ಬಂದಾ ವ |
ಸಂತನಂ ಚೈತ್ರರಥವನಪಾಲನಿದಿರ್ಗೊಂಡ |
ಸಂತವಿಭವದೊಳೆಸೆವ ವನವಿಭೂತಿಗೆ ಮೆಚ್ಚಿ ತಲೆದೂಗಿ ಶಿವನಿದಿರೊಳು ||
ಸಂತಸದೊಳಗಜಾತೆಯೊಡಗೂಡಿ ಸಲೆ ಬಿನದಿ |
ಸಂತೆ ಸಿಂಗರಿಪೆನೆಂದೊಡನೆ ಮಿಸುನಿಗೆ ಕಂಪು |
ಮಂ ತೀವ್ರವಂತೆ ಬನಮಂ ಬಣ್ಣವಿಟ್ಟನದನೇನೆಂದು ಬಣ್ಣಿಸುವೆನು || ೨೫ ||

ಅಲ್ಲಗಲ್ಲಿಗೆ ಲತಾಮಂಟಪಂಗಳ್ ನೋಡ |
ಲಲ್ಲಗಲ್ಲಿಗೆ ತಳಿತ ಚಪ್ಪರಂಗಳ್ ಬಳಿ |
ಕ್ಕಲ್ಲಗಲ್ಲಿಗೆ ಪೂಗಳಿಂ ಸಮೆದು ತೋರ್ಪ ಚಾವಡಿ ಮಲಗುಮಾಡಂಗಳು ||
ಅಲ್ಲಗಲ್ಲಿಗೆ ಮಾಡುವೆಟ್ಟು ತಳಿರುಯ್ಯಲೆಗ |
ಳಲ್ಲಲ್ಲಿ ಪನ್ನೀರ ಕಾಲ್ಗಳರವಟ್ಟಿಗೆಗ |
ಳೆಲ್ಲೆಡೆಯೊಳಿಂತು ಸಾಹಸ್ರಯೋಜನವನಂ ಕಣ್ಗೆಸೆದುದೇನೆಂಬೆನು || ೨೬ ||

ತಳಿರ ಗುಡಿತೋರಣದ ಸಾಲ್ಗಳಿಂದೆಡೆಗೆಡೆಗೆ |
ತೊಳಪ ಮುಕುರ್ಪದ ಮಕರತೋರಣಗಳಿಂದೆ ಪೂ |
ಗಳ ಕುರುಜು ಜೊಡ್ಡಮೋರುವೆಗಳಿಂದವರ ಸೆಲಿಸೆಲಿಗಳೊಳ್ ಕಣ್ಗೊಳಿಸುವ ||
ನಲಿದು ನರ್ತಿಸುವ ಪೂವಲಿಗೆದರ್ವ ಕಲಿತಪರಿ |
ಮಳಜಲಂಗಳನೆ ಜಂಕೊರ್ಳವಿಯಿಂದೆಸೆವ ಪೂ |
ಗಳ ಜೋಂಜೆಗಳ ಸಾಲ್ಗಳಿಂದೆ ಚೆಲ್ವಾದುದಾ ಬನಮದೇಂ ವಣ್ಣಿಸುವೆನು || ೨೭ ||

---

೧ ರ (ಶಿ, ಗೋ.)

ಶಿರವನಲ್ಲಾಡಿದಂ ವನಪಾಲನಾ ಬನದ |
ಸಿರಿಯನೀಶಂಗರಿಪಬೇಕೆಂದು ಮಲ್ಲಿಗೆಯ |
ಬಿರಿಮುಗುಳ್ಗಳನೆಸೆವ ಸಂಪಗೆಯ ಪೂಗಳಂ ತಾವರೆಯ ಮೊಗ್ಗೆಗಳನು ||
ಕುರವಕದ ಕುಸುಮಮುಸುಗೆಯ ತಳಿರನಾ ಪೊನ್ನೆ |
ಯರಳ್ಗಳಂ ಪಾದರಿಯ ಪೂವ ಮುಡಿವಾಳ ಕ |
ತ್ತೂರಿಯ ಪೊಂಬಾಳೆಗಳ ಪೊಟ್ಟಣಗಳಂ ಕಟ್ಟಿದಂ ಕಣ್ಗೆ ಸೊಬಗೆಸೆಯಲು || ೨೮ ||

ಕಿಕ್ಕಿರಿದು ಬೆಳೆದ ರಸವಾಳೆವಣ್ಗೊನೆಗಳಂ |
ಕಕ್ಕಸದೆ ಬೆಳೆದ ತೆಂಗಾಯ್ಗೊನೆಗಳಂ ನೆಲ |
ಕ್ಕೊಕ್ಕಪುದು ರಸವೆಂಬ ಮಾವಿನಿನಿವಣ್ಗೊನೆಗಳಂ ಬೇರ್ಗಳೊಳಗೆ ಕಾತ ||
ಬಕ್ಕೆವಲಸುಗಳ ಪಣ್ಗೊನೆಗಳಂ ಬಿತ್ತುಗಳ |
ವೆಕ್ಕಸಂ ಬಿರಿದ ದಾಳಿಂಬವಣ್ಗೊನೆಗಳಂ |
ಮುಕ್ಕಣ್ಣನೆಡೆಗೆ ವನಪಾಲಕಂ ಪೊರಿಸಿಕೊಂಡೈತಂದನಾಕ್ಷಣದೊಳು || ೨೯ ||

ಬಂದು ಸದ್ಭಯಭರಿತಭಕ್ತಿಯಿಂ ಸಾಷ್ಟಾಂಗ |
ದಿಂದೆರಗಿ ಮುಗುಳಿದ್ದು ಕರಕಮಲಮಂ ಪಣೆಗೆ |
ತಂದು ದೇವರ ದೇವ ಸಕಲಜಗದೊಡೆಯ ಚಿತ್ತವಿಸು ಚಿತ್ತಾವಧಾನ ||
ಅಂದೆನಗೆ ಸಲಹೆಂದು ನಿರವಿಸಿದಿರಾ ವನಮ |
ದಿಂದು ಫಲಿಸಿದುದೀಕ್ಷಿಸೆನುತಿರದೆ ಕಾಣ್ಕೆಯಂ |
ಮುಂದಿಳಿಪಿ ಶಿವನ ಮನಮೆಚ್ಚರಿದು ಮತ್ತೆ ವನಪಾಲನಂದಿಂತೆಂದನು || ೩೦ ||

ಭೋಗಿಭೂಷಣನೆ ಕೇಳ್ ವನದೇವಿ ಷಟ್ಪದೀ |
ರಾಗದಿಂ ಪಾಡಿ ದಾಳಿಂಬವಲ್ಗಿರಿದೊಡನೆ |
ಕೋಗಿಲೆಯ ಸರವೆತ್ತಿ ನಿಮ್ಮನೀ ಕರೆದೆನ್ನನಟ್ಟಿದಳ್ ಗಿರಿಜೆವೆರಸಿ |
ಬೇಗ ಚಿತ್ತೈಸೆನಲ್ ವನಪಾಲಕಂಗೊಲಿದು |
ರಾಗದಿಂದುಡುತೊಡಂಗಳನಿತ್ತು ಬೀಳ್ಕೊಟ್ಟು |
ನಾಗಭೂಷಣನಗಜೆಗೂಡಿ ಸುವಿಲಾಸದಿಂ ಪೊರಮಟ್ಟನಾ ಕ್ಷಣದೊಳು || ೩೧ ||

ಆ ಭವಾನಿಯು ಪಿಂತೆ ಪೊರಮಡುತ್ತಿರ್ದುದು ಮ |
ದೇಭವರಯಾನೆಯರ್ ಸುಕಲಾನಿಧಾನೆಯರ್ |
ಶೋಭಿಸುವ ಕಾಂತೆಯರ್ ನೀಲಾಳಕಾಂತೆಯರ್ ನಿಬಿಡಕುಚಮಂಡಲೆಯರು ||
ನಾಭಿಗಂಭೀರೆಯರ್ ನವರತ್ನಹಾರೆಯರ್ |
ಸ್ವಾಭರಣಹಸ್ತೆಯರ್ ಸುಗುಣಪ್ರಶಸ್ತೆಯರ್ |
ಸ್ವಾಭಾವಮುಗ್ಧೆಯರ್ ಸಾಜದ ವಿದಗ್ಧೆಯರ್ ನಡೆಗೊಂಡರೀವೇಳ್ಪಿನು || ೩೨ ||

ಕುಡಿತೆಗಂಗಳ ಗರುವೆಯರ್ ನೆಲಕ್ಕಲೆವ ನಿಡು |
ಜಡೆಯ ಸೀಟಿನ ನೀರೆಯರ್ ಮುದ್ದುಮೊಗದ ಸೊಂ |
ಪಿಡಿವ ಸೊಬಗಿನ ಸೊಗಸುಗಾತಿಯರ್ ನಸುನಗೆಯ ಸುಲಿಪಲ್ಲ ಕೋಮಲೆಯರು ||
ಕಡುಕಕ್ಕಸದ ಬಟ್ಟಬಲ್ಮೊಲೆಯ ಭಾಮೆಯರ್ |
ನಡೆಯ ಬೆಡಗಿನ ಬಿಂಕಗಾತಿಯರ್ ಪೊಂಬಾಳೆ |
ದೊಡೆಯ ಪೊಸಪೊಂಗೊಡದ ಪೊರವಾರ ಸೊಕ್ಕಾನೆನಡೆಯವರ್ ನಡೆತಂದರು || ೩೩ ||

ಅಡಿ ತಳಿರ್ಗಳ್ ಕುರುಳ್ ತುಂಬಿಗಳ್ ಮುಖಮೆ ಸೊಂ |
ಪಿಡಿದ ತಾವರೆಗಳಾ ಬಾಹು ಲತೆಗಳ್ ನುಂಪು |
ದೊಡೆ ಬಾಳೆಗಳ್ ಪೊಕ್ಕುಳೆ ಕೊಳಂಗಳ್ ಮೊಲೆಗಳೇ ಚಕ್ರವಾಕಂಗಳು ||
ನುಡಿಯೆ ಗಿಳಿಗಳ್ ನಡೆಗಳಂಚೆಗಳ್ ತೋರಸೋ |
ರ್ಮುಡಿ ನವಿಲ್ಗಳಾಗಲಾ ಸತಿಯರೆಂದೆಂಬ ಚೆ |
ಲ್ವಿಡಿದ ಜಂಗಮವನಂ ಸ್ಥಾವರವನಕ್ಕೈದುವಂತೆ ವನಮಂ ಪೊಕ್ಕರು || ೩೪ ||

ಪೊಕ್ಕಮಂತ್ರಬಲಿಯರ ತಂಡಮೊಡನೊಡನೆ ಮೇ |
ಲೆಕ್ಕೆಕ್ಕೆಯಿಂ ಹಿಂಡುಹಿಂಡಾಗಿ ಮನಸಿಜನ |
ಸೊಕ್ಕಾನೆಗಳ್ ನಿಗಳಮಂ ಪರಿದು ಬಂದಂತೆ ಬನಮನಾ ಕೋಮಳೆಯರು ||
ಒಕ್ಕೈಗೆ ಪೂ ತಳಿರ್ಗಳೊಂದೊಂದರಿಂ ಮೇಲೆ |
ಕಿಕ್ಕಿರಿಯುವುವೆಂಬ ಸಂದೆಗಂಗಳ್ ಸಲೆ ಮ |
ನಕ್ಕೈಗೆ ಪೂಗೊಯ್ಯ ತವಕದಿಂದಬಲೆಯರ್ ಸಂದಣಿಸಿದರ್ ಬನದೊಳು || ೩೫ ||

೧ ಕ್ಕೆಳಿ (ಮ.)

ತಳಿರ್ಗಳಿವು ಕರಪದತಳಂಗಳಿವು ತುಂಬಿಗಳ |
ಬಳಗವಿವು ಕುರುಳ್ಗಳಿವು ತುಟಿಗಳಿವು ಬಂಧೂಕ |
ದಲರ್ಗಳಿವು ತನುಗಳಿವು ಲತೆಗಳಿವು ನಗೆಗಳಿವು ಮಲ್ಲಿಗೆಯ ಪೂವೆಳ್ಳಿವು ||
ಸಲೆನಾಸಿಕಂಗಳಿವು ಚಂಪಕದ ಮುಕುಳವಿವು |
ಗಿಳಿನುಡಿಗಳಿವು ನುಡಿಗಳಿವಿವೆಂಬ ಭೇದಮಂ |
ತಿಳಿಯಲರಿಯದೆ ಕೆಲರ್ ಮುಗ್ಧೆಯರ್ ಕಳಕಳಂಗೊಂಡರೆಂ ವಣ್ಣಿಸುವೆಸು || ೩೬ ||

ನಲಿದು ಮಲ್ಲಗೆಯ ಪೂಗೊಯ್ವ ಸತಿಯರೊಳೊರ್ವ |
ಲಲಿತಾಂಗಿಯುರದ ಮೇಲುದು ಜಾರೆ ಕಂಗೊಳಿಪ |
ನೆಲೆಮೊಲೆಗಳಂ ಕಾಣುತಕ್ಕಕ್ಕ ಮಲ್ಲಿಗೆಯ ಬಳ್ಳಿ ತಾವರೆಮೊಗ್ಗೆಯಂ ||
ತಳೆದಿದೆಕೊ[1] ಕೊಯ್ಯುತ್ತಪೆಂ ನೋಡೆನುತ್ತವಳ |
ಮೊಲೆಗಳ್ಗೆ ಕೈನೀಡಿ ಸಖಿಯರಂ ಹಾಸ್ಯರಸ |
ಜಲಧಿಯೊಳಗದ್ದಿದಳ್ ಮುಗ್ಧೆಯೊರ್ವಳ್ ಬಳಿಕ್ಕೇಂನೆಂಬೆನಚ್ಚರಿಯನು || ೩೭ ||

ಅಸಿಯ ನಡು ನಿಮಿರೆ ಮೆಯ್ ಬೆಮರೆ ಕಣ್ಬೆಳಗು ಡೆಸೆ |
ದೆಸೆಗೆ ಪಸರಿಸೆ ಮೇಲುದೋಸರಿಸಿ ಮೊಲೆಗಳುಂ |
ಕುಸುಮದೋಳ್ ಮುಂಡಾಡೆ ಮುಡಿ ಬೆನ್ನೊಳೊಲೆದಾಡೆ ಚರಣಾಗ್ರದೊಳಗೆ ನಿಂದು
ಪೊಸಪೂಗಳಂ ನೋಡಿ ನಳಿತೋಳ್ಗಳಂ ನೀಡಿ |
ಮುಸುರ್ವಳಿಗೆ ಕಾಯ್ವುತಂ ಕುಸುಮಮಂ ಕೊಯ್ಯುತಂ |
ದೆಸೆದರ್ ಪ್ರಮೋದಂಗಳಿಂ ವಿನೋದಂಗಳಿಂದೊಬ್ಬೊಬ್ಬರೊಳ್ ನಲಿವುತೆ || ೩೮ ||

ಮಾತಂಗದಾನಾರ್ಥಿಗಳ್ ಮಲಿನದೇಹಿಗಳ್ |
ನೂತನಸುಪುಷ್ಪಿತಾಸಂಗಿಗಳ್ ಮಧುವನತಿ |
ಪ್ರೀತಿಯಿಂದುಂಬುವೀ[2] ಚಂಡಾಳಿಗಳ್ ತಾಸಿವಂ ಕಂಡು ಕಂಡು ಸೋಂಕೆ |
ಪಾತಕವೆನುತ್ತೆ ಸಂಪಗೆ ತೆವರಿತೈಸೆ ಬಳಿ |
ಕೀ ತುಂಬಿ ಸಂಪಗೆಗೆ ಪಗೆಯಪ್ಪವೇ ಪುಷ್ಪ |
ಜಾತಿನಾಯಕರತ್ನಮೆನುತೆ ಸಂಪಗೆಯ ಪೂಗಳ ತಿರಿದರಂಗನೆಯರು || ೩೯ ||

---

೧ ದಿದೇ (ಮ.) ೨-೨ ಮಿಗೆ ಸವಿವ (ಶಿ, ಗೋ.)

ಗಣಿಕಾಸಮೂಹಕೊಲಿದರ್ ಬೊಜಗರಂತೆ ಜೊಂ |
ಗಿಣಿಯಂತೆ ಮಧುದೂತಿಗೆಳಸಿದರ್ ಬಿಲ್ಲ ಬಿ |
ಸ್ವಣಿಗರೆನೆ ಬಾಣಮಂ ತುಡುಕಿದರಶೋಕದೊಳ್ ಬೆರಸಿದರ್ ಸುಖಿಗಳಂತೆ ||
ಫಣಿಯುವತಿಯಂತೆ ಪುನ್ನಾಗದೊಳ್ ಕ್ರೀಡಿಸಿದ |
ರೆಣಿಸಿ ಬೆಲೆವೆಣ್ಣಂತೆ ಕಾಂಚನಂ ಬಿಡಿದರಿಂ |
ತಣಿಯರಂ ನಾನಾಪ್ರಕಾರದಿಂ ಪರಿದಾಡಿದರ್ ಬನದೊಳಾ ಪೆಣ್ಗಳು || ೪೦ ||

ಪೂಗಳ ಮರಂ ತಳಿರ ಮರನಾಗುತಿರ್ದುವತಿ |
ಬೇಗದಿಂ ಚೆಂದಳಿರ್ಗೆಯ್ಯ ಕೆಂಪಿಂ ಬಳಿ |
ಕ್ಕಾಗಳಸ್ತ್ರೀಗಳ ಬೆಳ್ಪಿಂ ತಳಿರ್ಮರನವೆಲ್ಲಂ ಪೂಮರಗಳಾದುವು ||
ಮೇಗೆ ಬಗೆಬಗೆವಣ್ಣದಲರ್ಗಳಿಂದವರಧರ |
ರಾಗ ನಗೆವೆಳ್ಪಿನಿಂ ಪಲ್ಲಟಿಸಿದುವು ಚೋದ್ಯ |
ಮಾ ಗರುವೆಯರ್ ಬನದೊಳಿಂದ್ರಜಾಲಿಗರಂತೆ ಕಣ್ಗೆಸೆದರೇನೆಂಬೆನು || ೪೧ ||

ತಿಲಕ ಕುರವಕ ಚಂಪಕಾಶೋಕ ಪ್ರಿಯಂಗು ರಸಾಲ |
ಲಲಿತಕಂಕೇಳಿ ವರಬಕುಳ ಪುನ್ನಾಗ ಕೋ |
ಮಲ ಕರ್ಣಿಕಾರ ಮಂದಾರಂಗಳಕ್ಷಿ ಕುಚ ಹರುಷತನು ಸರಸಪದದ ||
ತಳ ಮಧುರಗೀತ ಗುಣ ಚತುರೋಕ್ತಿಗಳ್ ಮನಂ |
ಗೊಳಿಸೆ ನೋಡಿಯುಪ್ಪಿ ಸಕ್ಕರೆಸೋಂಕಿ ಜರೆದೊದೆದು |
ಗುಳಿಪಾಡಿ ಕೊಂಡಾಡಿ ನುಡಿದು ಪೂದೋರಿಸಿದರಂಗನೆಯರಾ ಬನದೊಳು
|| ೪೨ ||

ವಕುಳ ಪಾದರಿ ಪಾರಿಜಾತ ಪುನ್ನಾಗ ಕುರ |
ವಕ ಕರ್ಣಿಕಾರ ಪ್ರಿಯಂಗು ಮಧುದೂತಿ ಚಂ |
ಪಕ ತಿಲಕ ಬಂಧೂಕ ಚೂತ ಕರವೀರ ಕೇತಕಿ ಯೂಥಿಕಾ ಮಲ್ಲಿಕಾ ||
ಪ್ರಕಟಮಂದಾರ ಬಗೆ ನಾಗಸಂಪಗೆಯಾದಿ |
ಸಕಲಕುಸುಮಂಗಳಂ ತಂದು ತಮತಮಗೆ ಕಾ |
ಜಿಕೆಯನವರೀಯಲಂಬಿಕೆಸಹಿತನೀಶ್ವರಂ ಕೈಕೊಂಡನುತ್ಸವದೊಳು || ೪೩ ||

---

೧ ಶ್ರೀ (ಪ.) : ರವೆ (ಮ.) ೨ ದೊಳ್ (ಶಿ, ಗೋ.) ೩ ಪಾದರಿ (ಹು, ಮು.)

ಬಳಿಕಲೀಶ್ವರನಗಜೆಗೂಡಿ ಸಖಿಯರ್ವೆರಸಿ |
ತೊಳತೊಳಪ ನಂದನದ ಸಿರಿಯನೀಕ್ಷಿಸಿ ತಲೆಯು |
ನೊಲೆದೊಲೆದು ಪೊಗಳುತ್ತಲೈತರಲ್ ತದ್ವನಾಂತರದೊಳತಿರಮ್ಯವಾಗಿ ||
ವಿಲಸಿತಚಲಚ್ಚಂಚರೀಕಝೇಂಕೃತಿಮಿಳಿತ |
ನಳಿನರಾಜಿಗಳ ಚಕ್ರಕ್ರಮವಿಕೀರ್ಣಸ |
ತ್ಪುಳಿನರಾಶಿ[1]ಗಳ ಕುವಲಯಗಂಧಬಂಧುರದ ಪದ್ಮಾಕರಂ ಮೆರೆದುದು || ೪೪ ||

ಕಂಗೊಳಿಪ ರನ್ನಸೋಪಾನ ಮೀನ ಪ್ರಸೂ |
ನಂಗಳಿಂದೊಳ್ಪ ತೆರೆ ನೊರೆ ಪೊರೆಯ ರಾಜಹಂ |
ಸಂಗಳಿಂ ನಿರ್ಮಳಿನಪುಳಿನ ನಳಿನಂಗಳಿಂ ತಡಿವಿಡಿದು ಸಂತಸದೊಳು ||
ಸಂಗಳಿಸಿ ನಲಿವ ನವನಕ್ರ ಚಕ್ರ ಪ್ರಕ್ರ |
ಮಂಗಳಿಂ ಭೃಂಗಾಳಿ ಗಾಳಿ ಕೇ[2]ಳೀಜಲವಿ |
ಹಂಗಂಗಳಿಂ ಕಂಪು[2] ತಂಪು ಗುಂಪುಗಳೊಳಾ ಕಾಸಾರಮುಂದೆಸೆದುದು || ೪೫ ||

ವಿಕಸಿತೋತ್ಪುಂಡರೀಕೋತ್ಸಾಹದಿಂ ಮೆರೆವ |
ವಿಕಟವಾಜಿಗಳಿಂದತೀತವಾರಣದಿಂದೆ |
ಪ್ರಕಟತರರಾಜಹಂಸಾಳಿಗಳ ಸೌಖ್ಯದಿಂ ವಿವಿಧಕೋಶಂಗಳಿಂದೆ ||
ಸಕಲಕುವಲಯಮಹೋತ್ಪತ್ತಿಯಿಂ ಕಾಲಕಾ |
ಲಕೆ ಮುಕುಳಿತೋತ್ಕರಸರೋಜದಿಂದಮಲವೃ |
ತ್ತಕದೊಳೊಪ್ಪುವ ಭುವನಶೋಭೆಯಿಂ ಸರಸಿಯರಸಿನ ತೆರದೊಳಂದೆಸೆದುದು || ೪೬ ||

ನಳನೀಳಕುಮುದಕುಶಲವಲಕ್ಷ್ಮ[3]ಣಾನ್ವಿತಂ |
ತಿಳಿಯಲ್ಕೆ ರಘುರಾಮನಲ್ತು ಕಂದರ್ಪಜೋ |
ತ್ಕಳಿಕಾಪ್ರಸಂಗಿ ತಾನಾಗಿಯುಂ ವಿರಹಿಗಳ ಹೃತ್ಕಮಲಮಧ್ಯಮಲ್ತು ||
ಸಲೆ ಶಿಳೀಮುಖವಾಜಿವಾರಣರಥಾಂಗಸಂ |
ಕುಲಗತಾಗತಮಾಗಿ ಕಾಳೆಗಮದಲ್ತು ನಿ |
ರ್ಮಲಿನಪುಷ್ಕರಣಿ ತಾನಾಗಿಯುಂ ಕರಿಣಿಯಲ್ತೆನೆ ತತ್ಸರಂ ಮೆರೆದುದು || ೪೭ ||

೧ ಜ (ಶಿ, ಗೋ, ಹು.) ೨-೨ ಳಿಗಳ ವಿಹ | ಗಂಗಳಿಂ ಪೂಗಂಪು (ಶಿ, ಗೋ, ಹು. ಮ.)
೩ ಕ್ಷೆ (ಶಿ, ಗೋ.)

ಕುಮುದವನ್ಮಿತ್ರಿಯನೆಣಿಸದೆ ಪೆರ್ಚುವಾರಡಿಯ |
ಕ್ರಮಕೆ ಚಲಿಸದೆ ಸಲೆ ವಿಪಕ್ಷಘಾತಕೆ ತೆಗೆಯ |
ದಮದ ಕಮಲಾಶ್ರಯಕೆ ಪೆರ್ಚ್ಚಿದುದು ವನಶೋಭೆಯು ಮುದಕ್ಕೊಳಗಾಗದೆ |
ಸುಮನೋಕುಲಾಸ್ಪದಕ್ಕಬ್ಬಿ ವಿರಾರದೆ ಶಿವಾ |
ಗಮಯುಕ್ತಸದ್ವೃತ್ತಿಯಾಗಿ ದುಃಖಂ ಸುಖಂ |
ಸಮನೆಂದು ಕಾಣ್ಬ ಸಮ್ರಾಜಋಷಿಯಂತೆ ಕಾಸಾರಮದು ಚೆಲ್ವಾದುದು || ೪೮ ||

ಹರನಂತೆ ವಿಷಧಾರಿ ವಿಷಧಾರಿಯಂದದಿಂ |
ತರುಣಾಬ್ಜಶೋಭಿ ತರುಣಾಬ್ಜಶೋಭಿಯ ತೆರದೆ |
ಸರಸಹಂಸಂ ಸರಸಹಂಸನೊಲ್ ಸದ್ವಿಜಾನ್ವಿತನಾ ದ್ವಿಜಾನ್ವಿತನೊಲು ||
ಹರಗಣನಿಷೇವಿಯಾ ಹರಗಣನಿಷೇವಿಯೊಲ್ |
ಕಶೇರಕಮಲ ಸಂಗಿಯಾ ಕಶೇರಕಮಲಸಂಗಿಯೊಲ್ |
ಪರಮಪತ್ರಾನ್ವಿತಂ ಪರಮಪತ್ರಾನ್ವಿತನೊಲಾ ಸರಸಿ ಕಣ್ಗೆಸೆದುದು || ೪೯ ||

ಪರಮಾಬ್ಜರಮ್ಯಮುಡುಗಣದಂತೆ ಹರಿಯಂತೆ |
ವರದ್ವಿಜಾಲಂಕೃತಂ ಹರನಂತೆ ಯಜ್ಞದಂ |
ತುರುಚಕ್ರಶೋಭಿ ರವಿಯಂತೆ ರಥದಂತೆ ಸತ್ಕುವಲಯಾಶ್ರಿತಮೊಪ್ಪುವ ||
ಶರಧಿಯಂತೆ ಕೃಷ್ಣಪಕ್ಷೇಂದುವಂತಮೃತ |
ಪರಿಪಾಲನಂ ಸಗ್ಗದಂತಬ್ಧಿಯಂತೆ ಶಿವ |
ಭರಿತಮಾ ಕೈಲಾಸದಂತೆ ವನದಂತೆನಲ್ ಪದ್ಮಾಕರಂ ಮೆರೆದುದು || ೫೦ ||

ಕುಮುದಾಕ್ಷಿ ಕಳಹಂಸಗಮನೆ ಸಾರಸವಚನೆ |
ಭ್ರಮರಕುಂತಳೆ ಚಕ್ರಕುಚೆ ಪುಳಿನಜಘನೆ ಸ |
ತ್ಕಮಲಮುಖಿ ಸುಳಿಪೊಕ್ಕುಳಬಲೆ ತೆರೆತಿವಳಿಯಂಗನೆ ದಿವ್ಯಕುಸುಮಗಂಧಿ |
ವಿಮಲಾಮೃತಾಧರೆಯಪಾರಗಂಭೀರೆ ಸ |
ದ್ರುಮಣಾನುಕೂಲೆ ಕಾಸಾರವಧು ಕಣ್ಗೆ ದಂ |
ಸಮುದಂಶೋ ತಡಿಪಿಡಿದು ನೋಳ್ಪ ತರುಣೀಜನಂಗಳ್ಗೆ ಬಹುರೂಪಮಾಗಿ || ೫೧

೧ ಷ್ಟ (ಶಿ.) ೨ ವ (ಹು, ಮ.) ೩ ವ (ಶಿ, ಗೋ, ಹು, ಮ.) ೪ ಅರಸನ (ಮ.)
೫ ಸೆ (ಹು, ಮ.)

ಹಾರಿದ್ರಜಲಮದೊಂದೆಡೆ ರಕ್ತವರ್ಣಾಂಬು |
ವೋರೊಂದುಕಡೆ ಸಿತೋದಕಮೊಂದುದೆಸೆ ಕೃಷ್ಣ |
ನೀರೊಂದುದೆಸೆಯೊಳಿರಲೊಪ್ಪಿತು ಕೊಳಂ ಶಿವಕ್ರೀಡನಾರ್ಥಂ ಕದಡಿದ ||
ಗೋರೋಜದಮಳಕುಂಕುಮದ ಮಲಯಜದ ಕ |
ಸ್ತೂರಿಯ ಕೆಸರ್ ತೆರೆಗಳಿಂ ತಡಿಗೆ ಸಾರೆ ಕಾ |
ಸಾರವಧುವೀಶಂಗೆ ನಿವಳಿಸುವ ಬಣ್ಣಬರ್ದಾರತಿಯಿದೆಂಬಂತಿರೆ || ೫೨ ||

ಆ ಕೊಳದ ಚೆಲ್ವನೀಕ್ಷಿಸುತಗಜೆಸಹಿತಂ ಪಿ |
ನಾಕಿ ತತ್ಸರಸಿಯಂ ಹರುಷದಿಂ ಪೊಕ್ಕು ಬಳಿ |
ಕಾ ಕನ್ಯೆಯರ್ಗೆ ನೇಮಿಸಲಂಚೆ ಕೊಂಚೆ ಗಿಳಿ ಕೊಳರ್ವಕ್ಕಿ ಜೊನ್ನವಕ್ಕಿ ||
ಕೋಕ ಕರಿ ತುರಗ ಹರಿ ಶರಭ ಭೇರುಂಡಂಗ |
ಳಾಕಾರದಿಂ ಸಮೆದ ನವರತ್ನಖಚಿತನಾ |
ನಾಕುಶಲದಂಡೆ ಜೀರ್ಕೊಳವಿ ಜಲಯಂತ್ರಂಗಳಂ ತಾಳ್ದು ಕಣ್ಗೆಸೆದರು || ೫೩ ||

ಬಳಿಕ ಮಣಿಸೋಪಾನದಿಂದಿಳಿದು ನಿಂದುದಾ |
ಕೊಳದೊಳಗಜಾಳೀಜನಂ ಜಂಘೆ ಜಾನು ಕಟಿ |
ಸುಳಿನಾಭಿ ಕುಚದಘ್ನಮಾದ ವಿಮಳೋದಕಂಗಳನತಿವಿಲಾಸದಿಂದೆ ||
ತಳುವದೋರೊರ್ವರಂ ಮುಂಚಿ ತಮ್ಮೊಳ್ ಸರಸ |
ಕಳವಟ್ಟ ಸಖಿಯರಂ ಸರಿಸಮಾಗೆನುತೆ ನೀರ್ |
ದುಳುಕಿದರ್ ಪೊಳಕಿದರ್ ಮುಳುಕಿದರ್ ಕಲಕಿದರ್ ಕೊಳದೊಳೇಂ ವರ್ಣಿಸುವೆನು
|| ೫೪ ||

ಇತ್ತ ನಸುನಗುತೀಶನಗಜೆಯೊಳ್ ಸರಸವಾ |
ಡುತ್ತೆ ಸರ್ವಾಂಗದೊಳ್ ನಿರ್ಮಳೋದಕವನಿರ |
ದೊತ್ತೆ ಚಂದ್ರಿಕೆ ಬಳಸಿ ನಿಂದ ನೀಲದ ಪ್ರತಿಮೆಯಂದಮಂ ಪೋಲ್ತು ಕೂಡೆ ||
ತತ್ತರುಣಿ ಕೈಚಳಕದಿಂ ರನ್ನದಂಡೆಯೊಳ್ |
ಕತ್ತುರಿಯ ನೀರನೀಶನ ಮೊಗಂಗಳೊಳೊತ್ತೆ |
ಕತ್ತಲೆಯು ಮರಳಿಂದುಬಿಂಬಂಗಳಂ ಮುತ್ತಿದಂತಾದುದೇವೇಳ್ವೆನು || ೫೫ ||

---

೧ ಮರ (ಶಿ, ಗೋ, ಹು, ಮ.)

ನೀರಸವಸೋರಸಿಕೊಳುತುಂ ಕುಂಕುಮಾಂಬುಗಳ
ನಾ ರಮಣಿಯಂಗದೊಳಗೀಶ್ವರಂ ಸೂಸೆ ಸಂ |
ಧ್ಯಾರಾಗದಿಂದೆ ರಂಜಿಸುತಿಹ ನಿಶಾಂಗನೆಯ ಭಂಗಿಯಂ ತಳೆದು ಶಿವನ ||
ಗೋರೋಜವಂಬುವಂ ಜೀಕೊಳವಿಯಿಂದೆಚ್ಚು |
ವಾರಾರಿಯುಂ ಮುಸುಕೆ ಪೊಂಬಿಸಿಲ್ ಬಳಸಿ ನಿಂ |
ದಾ ರಜತಗಿರಿಯಂತೆ ಚೆಲ್ವಾದನೀಶನದನೇನೆಂದು ಬಣ್ಣಿಸುವೆನು || ೫೬ ||

ನೀಲಿ ಮೌಲೀಶ್ವರಂ ಮಲಯಜೋದಕಮನಾ |
ಕಾಳಿಯಂಗಂದುಂಬಿ ಸೂಸೆ ಕ್ಷೀರಾಂಬುಧಿಯ |
ಸಾಲ ತೆರೆಗಳ ನಡುವೆ ರಂಜಿಸುವ ಕೃಷ್ಣನದಿದೇವಿಯಂ[1] ಪೋಲ್ತು ಕೂಡೆ ||
ಆ ಲಲನೆ ಕುಂಕುಮಾಂಬುವನೊತ್ತುತಿರಲರುಣ |
ಧೂಳಿಯೊಳ್ ಪೂರಿದು[2] ನೀರೊಳಗಾಡುತಿಹ ಸುರಿರ ಶುಂ |
ಡಾಲದ ವಿಲಾಸಮಂ ತಳೆದೀಶ್ವರಂ ಕಣ್ಗೆ ಚೆಲ್ವಾದನೇನೆಂಬೆನು || ೫೭ ||

ಮರಳಿ ಮರಳೀಶಂ ಕರಂಗಳನಿತರೊಳೊಳಿಮ್ಮ |
ಪರಿಪರಿಯ ನೀರ್ಗಳಂ ಸೂಸುತಿರಲಾಗ ಶಾಂ |
ಕರಿ ಚಿತ್ರವರ್ಣದ ಸುಪುತ್ರಿಕೆಯ ಭಾವಮಂ ತಳೆದು ಕಣ್ಸನ್ನೆಯಿಂದೆ ||
ಕರೆಕರೆದು ಸಖಿಯರ್ಗೆ ನೇಮಿಸಿದಳೊಡನೆ ಪರಿ |
ಪರಿದೆಡಬಲಂ ಪಿಂದು ಮುಂದೆ ಸಂದಣಿಸಿ ಶಂ |
ಕರನ ಸರ್ವಾಂಗದೊಳ್ ಸೂಸುತಿರ್ದರ್ ನೀರನೇನೆಂದು ಬಣ್ಣಿಸುವೆನು || ೫೮ ||

ನೋಡುವರ್ ಪೂಡುವರ್ ಜಂತ್ರಮಂ ನೀರ್ ಸೂಸ |
ಲಾಡುವರ್ ತೀಡುವರ್ ನಗೆಯನಗಜೆಗೆ ಪಿಂದ |
ಕೋಡುವರ್ ಕೂಡುವರ್ ಶಿವನ ಪ್ರೊಯ್ಲಗೆ ಮತ್ತೆ ಶಿವೆಯ ಕಣ್ಸನ್ನೆಯಿಂದೆ ||
ಕೂಡುವರ್ ಕಾಡುವರ್ ನೀರ್ದುಳುಕಿ ಮಿಗೆ ಮುಳುಂ |
ಗಾಡುವರ್ ಮಾಡುವರ್ ಸುಖವನೀಶಂಗೆ ಕೆಯ್ |
ನೀಡುವರ್ ಕಾಡುವರ್ ಪಾರ್ವತಿಯ ಸಂಘಮಂ ತತ್ಸಖಿಯರೇನೆಂಬೆನು || ೫೯ ||

೧ ಮಂದಮಿ (ಮ.) ೨ ಪರೆದು (ಶಿ.); ಪೊರಳಿ (ಹು.) ೩-೩ ವಮ (ಹು, ಮ.)
೪-೪ ಳಿಸಿ ಶಂಕರಂಗನಿತರೊಳಗೊ (ಪ.)

ಝುಲ್ಲೆಂಬ ರವಮುಣ್ಮೆ ಮೊಗೆಮೊಗೆದು ನೀರ್ಗಳಂ |
ಚೆಲ್ಲುತಿರ್ಪರ್ ಶಿವಂ ಪಿಂತಿರುಗಿ ಪೆಸರ್ವಿಡಿದು |
ನಿಲ್ಲೆಂಬ ದನಿಯುಣ್ಮಲೊರ್ವರೊರ್ವರ್ ಮಱೆಯೊಳಡಗುವರ್ ಮಱಳಿ ಮಱಳಿ |
ಮೆಲ್ಲಮೆಲ್ಲನೆ ಪೊರ್ದಿ ಕನಕಶೃಂಗಾಂಬುವಿಂ |
ದೆಲ್ಲರುಂ ಕೂಡಿ ಕೈಯೆತ್ತಿ ಪೊಯ್ದರ್ ಮಗುೞೆ |
ತಲ್ಲಣಿಸುವರ್ ಶಿವನ ಪೊಯ್ಲಿಂಗೆ ತತ್ಸಖೀಪುರೀನೆಂಬೆನಚ್ಚರಿಯನು || ೬೦ ||

ಕಾವನಂ ನಿಷ್ಕಾರಣಂ ಕೊಂದನಕ್ಕಟೀ |
ದೇವನಾಂ ಗೆಲ್ವೆನೀತನನೆಂದು ಮದನನಧಿ |
ದೇವಿ ದಂಡೆತ್ತಿ ನಿಜನಾರೀಬಲಕ್ಕೆ ಸೆಲವಿಕ್ಕೆ ಪೊಕ್ಕಲ್ಲಿ ಪೊಕ್ಕು |
ಜೀವನಂಬೊಕ್ಕಡಂ ಕಾಯದಾ ಸುರರ ಸಂ |
ಜೀವಂಗೆ ಕರೆವರಳಮಳೆಗಳೆನೆ ಹಸ್ತರಾ |
ಜೀವಗತಯಂತ್ರಮುಕ್ತಾಂಬುಗಳನಭವಂಗೆ ಕರೆದರಗಜೆಯ ಸಖಿಯರು || ೬೧ ||

ಪರಿಪರಿದು ತರಳೆಯರ್ ಪರಿಪರಿಜಲಂಗಳಂ |
ಸುರಿಸುರಿಯೆ ಹಿಂದಕ್ಕೆ ಸರಿಸರಿದು ಶಂಕರಂ |
ತಿರುತಿರುಗಿ ಸುರಿವ ನೀರ್ವನಿಗಳಂಗನೆಯರಂಗೋಪಾಂಗದೊಳ್ ತುಂಬಲು |
ಗುರುಕುಚಂಗಳ ಮಧ್ಯದೊಳ್ ಹಾರದಂತೆ ಕಚ |
ಭರದೊಳ್ ಕದಂಬಗಳ ಪೂಗಳಂತಂಗದೊಳ್ |
ಪೊರೆದು ನವರತ್ನಭೂಷಣಸುಚಿತ್ರಾಂಬರಂಗಳವೊಲತಿಚೆಲ್ವಾದುದು || ೬೨ ||

ಮೃಗಮದಸುಗಂಧಿಯೊರ್ವಳ ಮೊಗಕೆ ಶಂಕರಂ |
ಮೃಗಮದಜಲಂಗಳಂ ಸೂಸುತಿರಲಾ ಚಕಿತ |
ಮೃಗಲೋಚನೆಯ ಥಳತ್ಥಳಿಪ ನಗೆಮೊಗದೊಳಿರದೊಡನಿಳೆಗೆ ಸೂಸುತಿರ್ಪ |
ಮೃಗಮದೋದಕಧಾರೆಗಳ್ ಪೊರೆಯೊಳಿರ್ಪ ಸನ್ |
ಮೃಗರಾಜವಾಹನಾದ್ಯಬಲೆಯರ ಕಣ್ಗಳ್ಗೆ |
ಮೃಗಧರನ ಬಿಂಬವಾ ನಿಜಕಳಂಕಂ ಕಾರುವಂತೆಸೆದುದಾ ಕ್ಷಣದೊಳು || ೬೩ ||

ಇಂತು ನಾನಾವಿನೋದಂಗಳ ವಿಲಾಸಂಗ |
ಳಂ ತಳೆದು ಹರಗಿರಿಜೆಯರ್ ಮುಂಚಿ ಪೊರಮಟ್ಟ |
ನಂತವಿಭವದೆ ನವ್ಯವಸ್ತ್ರಭೂಷಾನುಲೇಪಂಗಳಂ ತಳೆದು ಬಳಿಕ ||
ಸಂತಸದಿ ನಿಂದು ನಿಟ್ಟಿಸುತಿರಲ್ ತತ್ಸರಸಿ |
ಯಂತರಂತರದ ಸೋಪಾನದೊಳ್ ಸತಿಯರಾ |
ಕಂತುವಿನ ಮಂತ್ರಾಧಿದೇವಿ ಬಹುರೂಪಾಂತು ನಿಂದಂತೆ ಕಣ್ಗೆಸೆದರು　　|| ೬೪ ||

ಕಂಗೊಳಿಪ ಸೋಪಾನದಂತರಂಗಳೊಳೆಸೆವ |
ತಂಗದಿರ್ಗಲ್ಲ ಪುತ್ಥಳಿಗಳೋ ಮೇಣೀ ಭು |
ಜಂಗಭೂಷಣಸೇವೆಗೀ ಸರಬಿಲದ್ವಾರದಿಂ ಬಂದ ನಾ೧ಗಿಣಿಯರೋ ||
ಅಂಗಮಂ ಜಲಕ್ರೈತ್ಯಮಂಟೆ ಬಿಸಿಲ್ಗಾದಪೆ ಜ |
ಲಾಂಗನೆಯರೋ ಪೇಳಿಮೆಂಬಿನಂ ಸರಸೀತ |
ಟಂಗಳನಲಂಕರಿಸಿ ನಿಂದ ನಿಬಿಡಸ್ತನಾಲಂಕೃತೆಯರೊಪ್ಪಿರ್ದರು　　|| ೬೫ ||

ತೀರಮನಡರ್ದು ನಿಡುಗೇಸಂಗಳೊಳ್ ಸುರಿವ |
ನೀರನಾರಿಸಿ ನಾಂದು ಕಾಯದೊಳ್ ಪತ್ತಿರ್ದ |
ಸೀರೆಯುಂ ಕಳೆದು ನವವಸ್ತ್ರಭೂಷಣ ಕುಸುಮ ಪರಿಮಳದ್ರವ್ಯಂಗಳ ||
ಓರಂತೆ ತೊಟ್ಟುಟ್ಟು ಮುಡಿದು ಲೇಪಿಸಿ ಸುಕ |
ರ್ಪೂರತಾಂಬೂಲಂಗಳಂ ಕೊಂಡು ನಲವಿನಿಂ |
ನಾರೀಜನಂ ಬರಲ್ ಶಿವನಗಜೆಗೂಡಿ ನಿಜ೨ರಾಜಾಲಯಂಬೊಕ್ಕನು　　|| ೬೬ ||

ಮೇರು ಮಂದರ ರಜತಗಿರಿಗಳೊಳ್ ಕಣ್ಗೊಳಿಸು |
ವಾ ರಾಜಮಂದಿರಂಗಳ ಚೆಲ್ವುಗಳನತ್ತ |
ಸಾರೆಂದು ಮಣಿಕನಕಮಯವಾದ ಸೌಧಪ್ರಕಾಶಂಗಳಿಂದೆ ನಗುವ ||
ಆ ರಮ್ಯಗೇಹಮಂ ಕಂಡೀ ವಸಂತಋತು |
ತೀ೩ವ್ರೋಪಸ್ಮಾಪಿಸಾ ಮನೆಯೊಳಿರವೊಳ್ಕೆಂದು |
ಮಾರಾರಿ ಮನಸಂದು ಗಿರಿಜೆಯೊಡಗೂಡಿ ನಾನಾವಿಲಾಸದೊಳಿರ್ದನು　　|| ೬೭ ||

---

೧ ಶೋ (ಮ.) ೨ ...ಸುವ (ಮ.) ೩ ಸವ (ಶಿ, ಗೋ, ಹು, ಮ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೬೮ ||

ಅಂತು ಸಂಧಿ ೪೫ ಕ್ಕಂ ಪದಗಳು ೧೮೬೧ ಕ್ಕಂ ಮಂಗಳಮಹಾಶ್ರೀ

ನಾಲ್ವತ್ತಾರನೆಯ ಸಂಧಿ

ಸೂಚನೆ

ಹರನಕ್ಷಿಗಳನಗಜೆ ಸರಸದಿಂ ಮುಚ್ಚಲಂ |
ದಿರದೆ ತ್ರಿಪ್ರಳಯಂಗಳಾಗಲಾ ಜಲವನಾ |
ದರದಿಂದೆ ಶಿರದೊಳಿಂಬಿಟ್ಟು ಗಂಗಾಧರಸುಲೀಲೆಯಿಂ ಶಿವನೆಸೆದನು ||

ತೊಳಪ ಮಾಣಿಕದ ಭಿತ್ತಿಯ ರಮ್ಯಮಂದಿರದ |
ಸೆಳೆಮಂಚದೊಳ್ ಮಲಂಗಿರೆ ಹಿಮಗಿರೀಂದ್ರಸುತೆ |
ಸಲಿವಿನಿಂದೊಳಪೊಕ್ಕು ಕಾಣುತಡಿಗಡಿಗೆ ಕಡುನೊಂದಂತರಂಗದೊಳಗೆ ||
ಮುಳಿಮುಳಿದು ಪೋಗೆ ಬೆಂಬತ್ತಿ ತೋರುವುದೆನು |
ತ್ರೈಳೆಯಳಂ ತದ್ಗೃಹಕೆ ತರೆ ಯುಗಪ್ರತಿರೂಪು |
ಪೊಳೆಯೆ ತಲೆವಾಗಿದಗಜೆಯ ನಗುವ ಪಂಪಾವಿರೂಪಾಕ್ಷ ಸಲಹೆಮ್ಮನು || ೧ ||

ಮುಂತೆ ಕೌಳ್ಳೈ ಸಿದ್ಧನಾಮ ಮರುದಿವಸಮಾ |
ಕಂತುಹರನತಿವಿಲಾಸದೊಳೆ ತಾನೊರ್ವನೇ |
ಯಂತಃಪುರದ ಬಾಗಿಲಂ ಕಳಿದು ಪೊರಬಾಗಿಲಂ ದಾಂಟಿ ಬನದ ಚೆಲ್ವಂ ||
ಮುಂತೆಪಿಂತೆಡಬಲಂಗಳನೊಲ್ದು ನೋಡೆ ದೂ |
ರಾಂತರದೊಳೆಸೆವ ಚೆಂದಳಿರ ಚೆಲ್ವಂ ಪೊಗ |
ಳಿಂ ತರದ ಮಿಡಿಗಳಿಂ ಕಾಯ್ವಣ್ಗಳಿಂದೊಂದು ಮಾಮರಂ ಕಣ್ಗೆಸೆದುದು || ೨ ||

ಸೆಳೆಗೊಂಬು ಸೊಂಡಿಲ್ ಕವಲ್ಗೊಂಬು ಕೊಂಬುಗಳ್ |
ಬಳೆದ ಗ್ರಂಥಿಗಳೆಸೆವ ಕುಂಭಸ್ಥಳಂ ಸುತ್ತ |
ಬಳಸಿ ಮೊರೆವಳಿಗಳುರುಗೆಜ್ಜೆಗಳ್ ತಳಿರ್ಗಳರಳೆಲೆ ಸುರಿವ ಸೋನೆಯ ಮದಂ ||
ಉಲಿವ ಕೋಕಿಲರವಂ ಬೃಂಹಿತಂ ವೈದೊಡ |
ದಳಿವಳ್ಳಿ ತೊಡರ್ಜೆ ಮಿಳಿ ಸಂಕಲಿಗಳಾಗೆ ಕಂ |
ಗೊಳಿಸಿತಾ ಮಾಮರಂ ಸ್ಮರನ ಸೊಕ್ಕಾನೆಯೆಂಬಂತೆ ಶಂಕರನಿದಿರೊಳು || ೩ ||

ಮನದೊಳಚ್ಚರಿವಟ್ಟು ಶಂಕರಂ ತಾನಿರದೆ |
ಘನಹರುಷದಿಂದಲಾ ಮರನನೀಕ್ಷಿಸುತಲೊ |
ಯ್ಯನೆ ಬಂದು ತತ್ತರುಸವಿಾಪದೊಳ್ ಮೆರೆವ ಸಸಿಗಲ್ಲ ಪೊಂಜಗುಲಿಯೊಳಗೆ ||
ಮನವೊಸೆ[1]ದು ಮಂಡಿಸಿರಲಾ ಮರದ ತುದಿಯ ಕೊಂ |
ಬಿನೊಳಿ ಮೃದುವಾಣಿಯೆಂದೆನಿಪ ಪೆಣ್ಗಿಳಿ ತನ್ನ |
ಮನದನ್ನ ಮಧುಮಿತ್ರ[2]ನೆಂಬರಸಗಿಳಿಯಿರುಳ್ ತಡೆಯೆ ಶೋಕಿಸುತಿರ್ದುದು || ೪ ||

ಬೆಕ್ಕುಗಳ್ ನುಂಗಿದುವೊ ಮೇಣ್ ಬೇಡಬಲೆಗಳೊಳ್ |
ಸಿಕ್ಕಿದುದೊ ಕೈಗಲ್ಲ ಗಾಯಂಗಳಿಂದಾವ |
ರೆಕ್ಕೆ ಮುರಿದುದೊ ರೂಪು ಯೌವನಕೆ ಸೋಲ್ತು ಪೊಸವೆಣ್ಗಿಳಿಯ ಸೊಗಸುನುಡಿಯ ||
ಠಕ್ಕಿಗೊಳಗಾದುದೋ ತಡೆಯಲೇಂ ಕಾರಣಮಿ |
ದಕ್ಕೆ ತಾನೇವೆನೆಂತುಳಿವೆನಯ್ಯೋ ಅಕ್ಕ |
ಟಕ್ಕಟಾ ವಿಧಿಯೆ ಹಾಯೆಂದು ಹಂಬಲಿಸಿ ಕಂಬನಿಗರೆದುದೇವೊಗಳ್ಪೆನು[3] || ೫ ||

ಸುತ್ತಲಾಲಿಪುದೊಮ್ಮೆ ಬರ್ಪ ಬಟ್ಟೆಯನೀಕ್ಷಿ |
ಸುತ್ತೆ ನಿಂದಿಹುದೊಮ್ಮೆ ಬರವಗಾಣದೆ ಶೋಕಿ |
ಸುತ್ತೆ ತಿರುಗುವುದೊಮ್ಮೆ ಮರಳಿ ಗೂಡಂ ಸಾರ್ದು ತಿರುಗಿ ಪುದಿಯಲ್ಲ ನಿಂದು ||
ಮತ್ತೆ ನೋಡುವುದೊಮ್ಮೆ ರಕ್ಕೆಗಳನುರೆ ಜೋಲಿ |
ಸುತ್ತೆ ಜೊಂಪಿಪುದೊಮ್ಮೆ ಸುಯ್ಗಳಿಂ ತಳಿರನುರು |
ಪುತ್ತಳುವುದೊಮ್ಮೊಮ್ಮೆ ಪತಿವಿರಹದಿಂದಮಾ ಪೆಣ್ಗಿಳಿಯದೇನೆಂಬೆನು || ೬ ||

ಸಿಂಗರಂ ರೂಪು ಹರೆಯಂ ಜಾಣ್ಮೆ ನಿನಗಲ್ಲ |
ದಿಂ[4]ಗಿಳಿಗಳೊಳಗೆತ್ತಲಾನುಂಟೆ ನಿನ್ನಯ ಗು |
ಣಂಗಳಂ ಬಣ್ಣಿಸುವೊಡಳವೆ ಮನದನ್ನ ನೀನಗಲಲೆನಗೀ ಜೀವದ ||
ಹಂಗುಂಟೆ ಬಾ ನೋಡು ಮಾತಾಡು ಚುಂಬಿಸಾ |
ಲಿಂಗಿಸೊಡಗೂಡು ಸಾವನ್ನಬರಮಿನಿತು ಸರ |
ಸಂಗಳುಂಟೇ ರಮಣ ಮೊಗದೋರೆನುತ್ತೆ ಹಲುಬುತ್ತಿರ್ದುದೇವೇಳ್ಪೆನು || ೭ ||

---

೧ ಲಿ (ಶಿ, ಗೋ. ; ೨ ಪ್ರಿಯ (ಶಿ.) ೩ ವೇಳ್ಪೆನು (ಶಿ, ಗೋ, ಮ.); ನೆಂಬೆನು (ಹು.) ೪ ದೇಂ (ಮ.)

ಅನ್ನೆಗಂ ಬರುತಿರ್ದ್ದಾಚೆಯೊಳ್ ತನ್ನ ಮನ |
ದನ್ನಳಿದಿರ್ಪಳೊ ಜೀವಿಸಿರ್ಪಳೊ ವಿರಹ |
ದಿನ್ನೋವುತಿರ್ಪಳೊ ಬೇವುತಿರ್ಪಳೊ ಅಗಲ್ಕೆಯ ಕುರುಹನರಿಯದಬಲೆ ||
ಎನ್ನ ವಿಯೋಗದಿಂದುಳಿಯಳಿಂತಾದೊಡಂ |
ಪನ್ನಗಾಭರಣನುರುಸೇವೆಗಾಂ ತಡೆದೆನದ |
ರನ್ನತಿಕೆ ದುಃಖಮಂ ತರದೆಂಬ ಧೈರ್ಯದಿಂದಿನಿಯಳೆಡೆಗೈತಂದುದು || ೮ ||

ಘುಸೃಣರಸದಿಂ ನಾಂದ ರಕ್ಕೆಗಳ ಸೊಬಗು ರಂ |
ಜಿಸೆ ಮಲಯಜೋದಕಂಬೊರೆದ ನುಣ್ಗೊರಳ್ ವಿರಾ |
ಜಿಸೆ ಮೃಗಮದಾಂಬುವಿನೊಳದ್ದ ಮುಖಚಂಚುಗಳ್ ಮೆರೆಯಲಾ ದಿವ್ಯ ಗಂಧಂ ||
ದೆಸೆಗಳೊಳ್ ತೀವೆ ಸವಿಗುಟುಕಾಂತು ದನಿಯನಾ |
ಲಿಸುತೆ ಹರಣಂ ಬರ್ಪವೊಲ್ ಬಂದ ಪ್ರಿಯನನಿದು |
ಪೊಸಪಕ್ಕಿಯೆಂದು ಕೋಪಿಸಿ ನುಡಿಗಳಿಂದಿನಿಯನೆಂದು ಪೆಣ್ಗಿಳಿಯರಿದುದು || ೯ ||

ವಿರಹವಿಮ್ಮಡಿಸೆ ಸುಯ್ ಮೂವಡಿಸೆ ಮೈಬಿಸು |
ಪೇರದೆ ನಾಲ್ಮಡಿಸೆ ಕಿಡಿಕಿಡಿಯಾಗಿ ಕಂಗಳಿಂ |
ಸುರಿವಶ್ರುಧಾರೆಗಳ್ ಕುದಿದು ಬತ್ತಲ್ ಪೆಣ್ಗಿಳಿ ತನ್ನ ಪ್ರಿಯನ ಮೆಯ್ಯ ||
ಪರಿಮಳಮಿದನ್ಯರತಸಂಬಂಧಮೆಂದು ಕೇ |
ಕರದ ಕಿಚ್ಚಿಂದಿನಿಯನಂ ಮುಸುಕಿ ಮೌನಮಂ |
ಧರಿಸಿ ಕಣ್ಮುಚ್ಚಿದುದು ಮೋಹಮೆಂತಪ್ಪರಂ ಕಣ್ಗೆಡಿಸದೇಂ ಬಿಡುವುದೇ || ೧೦ ||

ನಡುಗಿತಾ ಗಂಡುಗಿಳಿ ನಲ್ಲಳಂ ಕಂಡಿರುಳ್ |
ತಡೆದುದಿದು ತಪ್ಪಲ್ಲಮೆಂತಾದೊಡಂ ಮೋಹ |
ಡೆಡೆಗಿಡೆ ತಪ್ಪಿದಂ ಕಾಯಬೇಕಬಲೆ ನೀನೆಂದೆರಗಲೊದ್ದು ನೂಂಕಿ ||
ನಡೆ ನಿನ್ನ ನೆಡೆಗೆ ಹೋ ಹೋಯಿನಿತ್ತಲ್ಲದಿ |
ರ್ದೊಡೆ ನಡೆಯದೇ ನಿನ್ನ ವಿಟಚಿಹ್ನಮೆಂದು ಪಿಡಿ |
ಪಿಡಿಗೊಂಡು ಕುದಿಗೊಳಿನಂತೆಸೆವ ಶುಕಿಗಾ ಶುಕಂ ಮುಗುಳ್ಳಿಂತೆಂದುದು || ೧೧ ||

---

೧ ಚೀರು (ಮ.)

ಮುಳಿಸೇಕೆ ನೀನಲ್ಲದನ್ಯವರಿಯೆಂ ತರುಣಿ |
ತಿಳಿವುದೀ ಪರಿಮಳವನೀಶನೀ ಬನದ ಪೂ |
ಗೊಳದೊಳ್ ಜಲಕ್ರೀಡೆಗೆಯ್ಯಲಿಳೆಗೀ ಸರಸಿಯೇ ಪುಣ್ಯತೀರ್ಥವೊಂದು ||
ನಳಿನಾಕ್ಷಮುಖ್ಯರುಂ ಮಿಂದು ಸುಕೃತಿಗಳಾಗೆ |
ಬಳಿಕಾಂ ಮುಳುಂಗಿ ಬರೆ ತಡವಾಯ್ತು ತೋರ್ಪೆನಾ |
ಕೊಳನನೆಂದಿನಿಯಳಂ ತಿಳುಪಿ ರತಿಸುಖದೊಳಾ ಶುಕನೆಸೆದುದಾ ಕ್ಷಣದೊಳು
|| ೧೨ ||

ಇತ್ತಲೀಶಂ ಗಿಳಿಗಳತಿವಿನೋದಮನಾಲಿ |
ಸುತ್ತಿರಲ್ ಗಿರಿಜೆ ಸೆಜ್ಜೆಯ ಮನೆಯೊಳಂ ಕಾಣ |
ದೆತ್ತಪೋದನೊಯೆಂದು ರಾಜಮಂದಿರದೊಳೆಲ್ಲಂ ನೋಡಿಯುಂ ಕಾಣದೆ ||
ಚಿತ್ತವಿಭ್ರಮೆಯಾಗಿ ಜಲಕೇಳಿಯೊಳಗೆ ಮನ |
ಮಿತ್ತಾವಳಂ ನೆರೆಯ ಪೋದನೋಯೆಂದು ತ |
ನ್ನುತ್ತಮಾಂಗಮನೊಲಿವುತರಮನೆಯನಿರದೆ ಪೊರಮಟ್ಟರಸುತೈತಂದಳು || ೧೩ ||

ನುತವಸಂತಾಧಿದೇವತೆಯಂತೆ ಪರಿಪರಿದು |
ಲತೆವನೆಗಳೊಳ್ ತಳಿರ ಕಾವಣಗಳೊಳ್ ಕುಸುಮ |
ವಿತತಿಗಳ ಮಂಟಪಂಗಳೊಳೆ ಮಾಮರದ ಪೊರೆಯೊಳ್[೧] ಮಣಿಯ ಜಗುಲಿಗಳೊಳು
ಕೃತಕಾದ್ರಿಮುಖ್ಯಸ್ಥಳದೊಳರಸಿ ಕಾಣದುರೆ |
ಮತಿಗೆಟ್ಟು ಧೃತಿಗುಂದಿ ಬರುತೆ ದೂರದೊಳೆ ಗಿರಿ |
ಸುತೆ ಕಂಡಳೀಶನಂ ಮಾಮರದ ಪೊರೆಯ ಸಸಿಗಲ್ಲ ಪೊಸವೇದಿಕೆಯೊಳು || ೧೪ ||

ಪೊರೆಯೇರಿತಂಗಲತೆ ಹರುಷಾಶ್ರುಗಳ್ ಕರೆದು |
ವರಳ್ದುದು ಮುಖಾಂಬುಜಂ ರೋಮಾಂಚನಂಗಳು |
ಬ್ಬರಿಸಿದುವು ಶಿವನೊರ್ವನಿರ್ಪುದಂ ಕಂಡು ಗಿರಿಸುತೆ ಮರಳ್ಳಿಂತು ಬಂದ
ಬರವನರಿದಪೆನೆಂಬ ಲಜ್ಜೆಯುಂ ಭೀತಿಯುಂ |
ಪಿರಿದಾಗಲಿವನೊಂದುಪಾಯಮಂ ಕಂಡು ಪರಿ |
ಹರಿಸಬೇಕೆಂದು ತನ್ನೊಳ್ ತಿಳಿದು ಲತೆಯ ಮರೆಗಳೊಳ್ಪೈದೆ ಮೆಯ್ಗರೆದಳು
|| ೧೫ ||

೧-೧ ದಡಿಗಳೊಳು (ಹು, ಮ.)

ಇಂಚರಮೊಗೆಯುವಂತೆ ಕಟಕನೂಪುರರತ್ನ
ಕಾಂಚಿಗಳನಳವಡಿಸಿ ಸಖಿಯರಂ ಕೈಸನ್ನೆ |
ಯಿಂ ಚಲಿಸಬೇಡೆಂದು ಮರೆಯೊಳಡಗಿಸಿ ಮೆಲ್ಲನೊಯ್ಯಾರದೊಳ್ ಚರಣದ ||
ಸಂಚುಗೇಳಿಸದಂತುಮಲ್ಲಲ್ಲಿ ನಿಂದು ವೈ |
ವಂಚಿಸುತೆ ಪಿಂದೆ ಬಂದಭವಾಕ್ಷಿಯುಗಳಂಗ |
ಳಂ ಚೆಂದಳಿರ್ಗೈಗಳಿಂ ಮುಚ್ಚಿದಳ್ ಗಿರಿಜೆಯೇನೆಂಬೆನಚ್ಚರಿಯನು || ೧೬ ||

ರಾಮ ಕೇಳಾ ಮೋಹನಾಂಗಿಯ ಕರಂಗಳಾ |
ಕಾಮರಿಪುವಂ ಸೋಂಕೆ ಗಿರಿಜೆಯಿವಳೆಂದರಿದು |
ರೋಮಾಂಚಮುಖ್ಯಸಾತ್ವಿಕಮೊಗೆಯೆ ಮೈಮರೆದನಭವನಾತನಸೋಂಕಿನಿಂ ||
ಈ ಮಹಾದೇವಿ ಮರವಟ್ಟಳಭವಾಕ್ಷಿ ಮೊದ |
ಲೀ ಮುಚ್ಚಿದಂತಿರ್ಪುದುಂ ಬಂದುದದ್ಭುತಂ |
ಭೂಮಿಯೊಳ್ ಸ್ತ್ರೀಬುದ್ಧಿಯೇ ಪ್ರಳಯಮೆಂಬ ನೀತಿಗೆ ನಿದರ್ಶನದಂತಿರೆ || ೧೭ ||

ಮುಚ್ಚಿದ ಶಿವಾಕ್ಷಿಯೊಳಗಿಂದುರವಿಮೂರ್ತಿಗಳ್ |
ಮುಚ್ಚಿದುವು ನಿಖಿಳಭುವನಜನಾಕ್ಷಿಸಂಕುಲಂ |
ಮುಚ್ಚಿದುದು ಲೋಕಲೋಕಪ್ರಭಾಸಮುದಯಂ ನಿಮಿಷದೊಳಗೇನೆಂಬೆನು ||
ಪೆಚ್ಚಿದುದು ಘೋರಾಂಧಕಾರಮಿರ್ದಂತಿರ್ದು |
ಪೆಚ್ಚಿದುದು ಜನಮನಸ್ತಿಮಿರಮೊಂದೇ ಬಾರಿ |
ಪೆಚ್ಚಿದುದು ಲೋಕಲೋಕದೊಳತಿಭಯಂಕರಂ ಪೇಳಲೇನದ್ಭುತವನು || ೧೮ ||

ಅಂಜನಕರಂಡದಂತೋ ಬಹಳರಾತ್ರಿಗಳ |
ಪುಂಜದಂತೋ ವಿಲಯಘೋರಾಂಧಕಾರದ ಕ |
ಣಂಜದಂತೋ ಪ್ರಳಯಕಾಲಮೇಘಂಗಳ ಕಠೋರದಂತೋ ಭಾವಿಸೆ ||
ನಂಜಿಡಿದ ಭರಣಿಯಂತೋ ಮಹಾಮಾಯೆಗಳ |
ಬಿಂಜದಂತೋ ಯಿಂಬವೂಹೆಗಳವಡದಂತೆ |
ಕಂಜೋದ್ಭವಾಂಡಮೊಪ್ಪಿರ್ದುದೆಂ ಸಾಂದ್ರಾಂಧಕಾರದೊಳದೇವೇಳ್ವೆನು || ೧೯ ||

ಮಬ್ಬಿನೊಳಗಾಚರಿಸಿ ಕೆಡೆವರಿಂ ಮಡಿವರಿಂ |
ಬೆಬ್ಬಳಿಗಿಸಿ ಧರೆಗೆ ಬೀೞ್ದೞಲ್ವರಿಂ ತೊಳಲ್ವರಿಂ |
ತಬ್ಬಿಬ್ಬುಗೊಂಡು ಮೊರೆಗೆಯ್ವರಿಂ ಸುಯ್ವರಿಂದೆಡಬಲಕೆ ಕಾಲಿಡಲ್ಕೆ |
ಒಬ್ಬೊಬ್ಬರಿಂತಾಗಿ ಬೀೞ್ವರಿಂದೇೞ್ವರಿಂ |
ದೆಬ್ಬಿಸಲ್ ದಿಕ್ಕಿಲ್ಲದಳಿವರಿಂ ಕೊಳೆವರಿಂ |
ಸಬ್ಬಲೋಕದೊಳೆ ಜಾನಿಸುವರಿಂ ನಸಿವರಿಂ ಪೊಳಲದ್ಭುತಮಾದುದು || ೨೦ ||

ಅಂತಪ್ಪ ಕತ್ತಲೆಯೊಳಖಿಳಲೋಕದ ಜನಂ |
ಪಿಂತೆ ಮುಂತೆಡ ಬಲಂಗಾಣದಡಿಯಿಡಲಂಜಿ |
ನಿಂತಲ್ಲಿ ನಿಂತು ಕಲ್ಮರನಾಗಿ ಲಯಮೆಯ್ದುತಿರ್ದುದಾ ಹರಿವಿಧಿಗಳು ||
ಚಿಂತಿಸುತೆ ಕಣ್ಗೆಟ್ಟದೇಂ ಪ್ರಳಯಸಮಯಮ |
ಲ್ಲೆಂತಾದುದೋ ಈ ವಿಪತ್ತಿದಕೆ ನಿಷ್ಕೃತಿಯ |
ನೆಂತೊ ಶಿವನೇ ಬಲ್ಲನೆನುತೆ ಮೃತ್ಯುಂಜಯಧ್ಯಾನದಿಂದಿರುತಿರ್ದರು || ೨೧ ||

ಅನಿತರೊಳ್ ಹಿಮಗಿರಿಸುತಾಪುಳಕಜಲಕಣಂ |
ನನೆಯಿಸಲ್ ಬೆಂಗೆ ತಣ್ಣಸಮೀರಲೆಚ್ಚತ್ತು |
ನೆನೆದು ಲೋಕಾಪತ್ತನಕಟೆಂತು ಕೆಯ್ಗಳಂ ಬಲ್ಮೆಯಿಂ ಬಿಡಿಸಲೊಡನೆ ||
ಮುನಿವಳಂಗನೆಯೆಂಬ ಭೀತಿಯಿಂ ಕತ್ತಲೆಯ |
ಮನೆಗೆ ದೀಪವನಿಡುವ ಮಾಳ್ಕೆಯಿಂ ನೊಸಲಕ |
ಣ್ಗೊನೆಯನೆಳ್ಳನಿತನೊಯ್ಯನೆ ತೆರೆದನೀಶ್ವರಂ ರಾಮ ಕೇಳದ್ಭುತವನು || ೨೨ ||

ಭವನ ಪಣೆಗಣ್ಣುರಿಯ ಬೆಳಗಿನಿಂ ತಮಮಿರದೆ |
ಜವದಿಂದಲೋಡುತಿರೆ ಮುಂದೊಂದು ಕಾರಣಕೆ |
ಶಿವನಾಜ್ಞೆಯಿಂದಲಾ ತಮದ ತಿರುಳೆಲ್ಲಮೊಬ್ಬುಳಿಯಾಗಿ ಬಲಿದು ಕೂಡೆ ||
ತವಕದಿಂದೊಂದು ಶಿಶುವಾಗಿ ಶಿವನಿದಿರೊಳಂ |
ದವಿರಳಾನಂದದಿಂದಿರಲಿತ್ತ ಪಣೆಗಿಚ್ಚು |
ಭುವನಂಗಳಂ ದಹಿಸತೊಡಗಿತದರದ್ಭುತವನೇನೆಂದು ಬಣ್ಣಿಸುವೆನು || ೨೩ ||

---

೧ ರಿ (ಶಿ, ಮ, ಹು.) ೨ ದೆ (ಹು, ಮ.)

ನಿಟಿಲಾಕ್ಷನುರಿವೆರೆಯೆ ತುಂಬಿದುದು ಬ್ರಹ್ಮಾಂಡ |
ಘಟದೊಳಗೆ ಬೆಳಗು ಬೆಳಗಿಂದುಷ್ಣಮುಷ್ಣದಿಂ |
ಪುಟನೆಗೆವ ಬಳೆವ ಪೊಗೆ ಪೊಗೆಯೊಳುರಿಯುರಿಯೊಳಿರದೇಳ್ವ ಕಿಡಿ ಕಿಡಿಗಳೊಳಗೆ ||
ಲಟಕಟಿಪ ಶಿಖಿಯ ನಾಲಗೆ ಪೆರ್ಚೆ ಭುಗುಭುಗಿಲ್ |
ಚಿಟಿಚಿಟಿಲ್ ಛಿಳಿಛಿಳಿಲ್ ಸಿಮಿಸಿಮಿಸಿಮೆಂದು ಛಟ |
ಛಟ ಧಗಂ ಧಗಧಗೆಂದೆಂಬ ನಾನಾಘೋಷಮುಣ್ಮಿದುದದೇನೆಂಬೆನು || ೨೪ ||

ಸಿಡಿಸಿಡಿದು ಪಾರಿದುವು ಬೆಟ್ಟಂಗಳೆತ್ತಲುಂ |
ಪೊಡವಿ ಬೆಂದಿರ್ಭಾಗಮಾಗುತಿರ್ದುದು ಸಪ್ತ |
ಜಡಧಿಗಳ್ ತಕಪಕನೆ ಕುದಿದುಕ್ಕಿ ಬತ್ತುತಿರ್ದುವು ಕೆಳಗೆ ಫಣಿಕರಿಗಳ ||
ಹೆಡೆಗಳುಂ ಕೈಕಾಲ್ಗಳುಂ ಮುರುಂಟುತ್ತಿರ್ದು |
ಪೊಡೆದು ಬ್ರಹ್ಮಾಂಡಮಾ ಮೇಲಣ ಜಲಂ ಚುಯ್ಯ |
ನಡಿಗಡಿಗೆ ಸೇದಿಂಗುತಿರ್ದುದೇಂ ವರ್ಣಿಸುವೆನಾ ಹರಾಕ್ಷಿ[1]ಯ ಕಿಚ್ಚನು || ೨೫ ||

ಘೋಳಿಡುತೆ ಕೆಡೆವ ಕೇಸರಿಗಳಿಂ ಕರಿಗಳಿಂ |
ಘೀಳಿಡುತುರುಳ್ವ ಮೃಗರಾಜಿಯಿಂ ವಾಜಿಯಿಂ |
ಜೀಳಿಡುತೆ ಬೀಳ್ವ ಕಾಳ್ಪಸುಗಳಿಂ ಮುಸುಗಳಿಂದುರಿಯ ಪೊಯ್ಲುಗಳೊಳಂದು ||
ಕಾಲುಡುಗಿ ಬೀಳ್ವ ಬಹುದನುಜರಿಂ ಮನುಜರಿಂ |
ಮೇಲಣಿಂ ಕೆಡೆದುರುಳ್ವ ಯಕ್ಷರಿಂ ರಕ್ಷರಿಂ |
ಪಾಳಾದ ಸಕಲಲೋಕಂಗಳಿಂ ಕಂಗಳಿಂ ನೋಡ[2]ಲುರಿ ಘನ[2]ಮಾದುದು || ೨೬ ||

ಹಾಯೆಂದು ಹರಿಯಜರ್ ಬಾಯ್ ಬಿಡಲ್ ಶಿವನೆ ಮೊರೆ |
ಹೋಯೆಂದು ಸುರನಿಕರಮೊರಲುತಿರೆವುರಿಯೊಳ |
ಹ್ಯೋಯೆಂದು ಸಕಲಲೋಕಪ್ರಾಣಿಗಳ್ ಮಡಿವುತಿರೆ ಶಿವ ಮಹಾದೇವನೆ ||
ಕಾಯೆಂದು ಮುನಿನಿಕರಮುರಚುತಿರೆ ತಪ್ಪಾಯ್ತು |
ಆಯೆಂದು ನಡುನಡುಗಿ ಶಿವನ ಕಣ್ಣಂ ಮುಚ್ಚಿ |
ದಾ ಯುಮಳಹಸ್ತಮಂ ಗಿರಿಜೆ ತೆಗೆದಳ್ ಮತ್ತೆ ರಾಮ ಕೇಳ್[3] ಕೌತುಕವನು
|| ೨೭ ||

೧ ಗ್ರಿ (ಪ.) ೨-೨ ಲದ್ಧುಳ (ಹು, ಮ.) ೩ ಮ (ಹು.)

ನ್ಯಡಲೋಚನಂಗಳಿಂದೊಗೆದ ಹರುಷಾಶ್ರುಜಲ |
ಮೊಡನೆ ಗಿರಿಜೆಯ ಕುಡಿತೆಯೊಳ್ ತುಂಬಿ ಬರಲದಂ |
ಕೊಡಹಲ್ ದಶಾಂಗುಲಿಯ ಸನ್ವಳಿಯೊಳಿಳಿದ ನೀರ್ ದಶನದಿಗಳಾಗಿ ಪರಿದು ||
ಅಡಿಗಡಿಗೆ ಹತ್ತುಸಾವಿರ ಲಕ್ಷ ಕೋಟಿಗಿ |
ಮ್ಮಡಿಯಾಗಿ ಪೆಚ್ಚಿ ಪ್ರವಾಹಿಸಿ ಪೊದಳ್ದು ಭೋ |
ರಿಡುತೆ ನಾನಾಮುಖದೊಳವನಿಯಂ ತುಂಬಿದುರಿ ನಂದಿ ಜಲಮಯವಾಗಲು
|| ೨೮ ||

ಸುತ್ತಲುಂ ಪರಿವ ಪ್ರಚಾರದಿಂ ಪೂರದಿಂ |
ದೊತ್ತಿರಿಸಿ ಬರ್ಪ ಬಲ್ದೆರೆಗಳಿಂ ನೊರೆಗಳಿಂ |
ದೆತ್ತೆತ್ತಲೊಗೆವ ಸನ್ಸುಳಿಗಳಿಂ ಸುಳಿಗಳಿಂ ನಾನಾಪ್ರಕಾರದಿಂದೆ ||
ಒತ್ತಿ ಭೋರ್ಗರೆವ ರವದುರ್ಬಿನಿಂ ಪರ್ಬಿನಿಂ |
ಹತ್ತೊಂದುಗೂಡಿ ವಿಸ್ತೀರ್ಣದಿಂ ಪೂರ್ಣದಿಂ |
ತುಂತ್ತಿದುದು ಸಕಲಲೋಕಂಗಳಂ ತಿಂಗಳಂಪೊತ್ತವಂ ಬೆರಗಾಗಲು || ೨೯ ||

ವಸುಧೆಯಂ ಸಪ್ತಶರನಿಧಿಗಳೇಕಾರ್ಣವದೊ |
ಳೆಸೆವಿನಮಧೋಭುವನಮೆನಿತನಿತುವಂ ಮುಳುಂ |
ಗಿಸಿಯೂರ್ಧ್ವಲೋಕಂಗಳಂ ನುಂಗಿ ಮುನ್ನುರಿಯೊಳೊಡೆದೆಸೆವ ಬ್ರಹ್ಮಾಂಡದ |
ಪೊಸತಪ್ಪ ಖಂಡಖಂಡಗಳೊಳಲ್ಲಲ್ಲ ಭೇ |
ದಿಸಿ ಮೇಲಣಾವರಣಜಲದೊಳಗೆ ಕೂಡಿ ಕಂ |
ಗೆಸೆದುದುಮಹಾಪ್ರಳಯದುದಕಮಯಮಾದಂತೆ ತಜ್ಜಲಮದೇನೆಂಬೆನು
|| ೩೦ ||

ಆಲಿಸೆಲೆ ಸಿದ್ಧರಾಮೇಶ ಬಳಿಕಾ ಕ್ಷಣದೊ |
ಳಾಳಿಪೋದುದು ಸಕಲಲೋಕಸಂತತಿ ಕಂಡು |
ಪೇಳಲರಿಯೆಂ ಸುರಬ್ರಹ್ಮರೇನಾದರೆಂಬುದನಾ ಮಹಾಜಲದೊಳು ||
ಆಲದೆಲೆಯೊಳ್ ಮಲಗಿಯೊಮ್ಮೆ ಮುಳುಗುತ್ತೊಡನೆ |
ತೇಲುತೊರ್ವನೆಯುಗುಳ್ನೀರನುಗುಳುತ್ತೆ ಕ |
ಣ್ಣಾಲಿಗಳ್ ಮರಳಲ್ ಮಹಾವಿಷ್ಣು ಮನದೊಳ್ ಭಯಂಗೊಳುತ್ತಿಂತೆಂದನು
|| ೩೧ ||

೧ ಕು (ಮ.)

ಕಡೆಗಾಲದಂಧತಮವಿನಿತಿಲ್ಲವಿಲ್ಲವಾ |
ಮೃಡನಂದು ಕಾಲ ಕಾಮ ತ್ರೈಪುರಂಗಳಂ |
ಸುಡುವ ಕಣ್ಗಿಚ್ಚಿನಿತ್ತಲ್ಲಂತ್ಯದಗ್ನಿಯಂತೋದಕಪ್ರಳಯಂಗಳ ||
ಕಡುಪಿನಿತ್ತಿಲ್ಲಕಾಲಪ್ರಳಯಮಾಗಲೊಡ |
ನೊಡನೆ ತನಗಂತ್ಯವಿಲ್ಲದೆಯುದಕಮಯವಾಯ್ತು |
ನುಡಿವುದಿನ್ನೇನೆನುತ್ತಚ್ಚರಿಯೊಳಾ ಹರಿ ಶಿವಧ್ಯಾನದಿಂದಿರ್ದನು || ೩೨ ||

ಬೆರಗಾದಳಿತ್ತ ಗಿರಿಸುತೆ ಮತ್ತೆ ಶಂಕರಂ |
ಮರುಗಿ ಲೋಕಕೆ ಲಯಂ ಬಂದುದಕಟೆಂದೊಂದು |
ಕಿರುಜಡೆಯ ಕೊನೆಯನಾ ಜಲದೊಳದ್ದಲ್ ಸರಸಿಜಾಂಡದೊಳಗಂ ಪೊರಗನು ||
ನೆರೆ ತೀವಿದುದಕಮೆಲ್ಲಂ ಸರ್ರನೈತಂದು |
ಮಿರುಪ ಮುತ್ತಿನ ಮಣಿಯೊಲಾ[೧] ಜಡೆಯ ತುದಿಯೊಳಗೆ |
ಪೆರೆಯುಲದನೀಶ್ವರಂ ಶಿರದೊಳಗೆ ಧರಿಸಿ ಗಂಗಾಧರತ್ವಮನಾಂತನು || ೩೩ ||

ಆದುದೀಶಂಗೆ ಗಂಗಾಧರಸುಲೀಲೆ ನೆರೆ |
ಪೋದುದಖಿಳಾವನಿಯ ಪೂರ್ಣಜಲದೊದವು ಬಳಿ |
ಕಾ ದಯಾನಿಧಿ ಶಂಕರಂ ಕರುಣದಿಂದಖಿಳಜಗಮೆಸೆಯಲೆಂದೆನಲ್ಕೆ ||
ಆ ದಿವಿಜರಾ ದನುಜರಾ ಮನುಜರಾವುರಗ |
ರಾದಿ ನಾನಾಲೋಕಮೆಂದಿನಂತೆಸೆದರೆನ |
ಲಾದರದೆ ಸಿದ್ಧರಾಮಂ ವಿಸ್ಮಯಂಬಟ್ಟು ಕೈಮುಗಿವುತಿಂತೆಂದನು || ೩೪ ||

ಎಲೆ ಚೆನ್ನಬಸವೇಶ ತ್ರಿಪ್ರಳಯದೊಳ್ ಬಿಡದೆ |
ನಳಿನೋದ್ಭವಾಂಡಮಿರದಳಿದುದೆಂದೆನಗಿಂದು |
ತಿಳಿಪಿದಿರಲಾ ಶಿವನದೆಂತಿರ್ದನಾ ಸಮಯದೊಳ್ ಪೇಳಿಮೆಂದೆನಲ್ಕೆ ||
ಬಳಿಕ ನಗುತೆಲೆ ರಾಮ ಕೇಳ್ ಶಿವನ ಪುರ್ಬುಗೊನೆ |
ಪುಳಕದಿಂ ಸಕಲಬ್ರಹ್ಮಾಂಡಸೂತ್ರಂಗಳುರೆ |
ಕಳಚಿ ಹೂಡುವುದೀಶ್ವರಂಗಿದೇನಚ್ಚರಿಯೆನುತ್ತೆ ಮತ್ತಿಂತೆಂದನು || ೩೫ ||

೧ ಳಾ (ಹು, ಮ.)   ೨ ಯಾಂಬು (ಮ.)   ೩ ನಿಃ (ಮ.) ; ಮಯಾ (ಪ.)

ಮರೆಯಲ್ಲ ನೋಡಲೌದುಂಬರದ ಮರದೊಳಿಡಿ |
ಕಿರಿದ ಫಲದಂತಭವರೋಮಕೂಪಂಗಳೊಳ್ |
ತುರುಗಿಪ್ಪುವಖಿಳಬ್ರಹ್ಮಾಂಡಂಗಳಾ ಫಲಂ ಕಳಿತುದುರೆ ತತ್ತರುವಿಗೆ ||
ಮರುವೆಳಸು ಮೊದಲಂತೆ ವರುಷವರುಷಕೆ ಬಪ್ಪ |
ತೆರದೆ ಬ್ರಹ್ಮಾಂಡಂಗಳಳಿದುದಿಸುತಿರ್ಪುವಿಃ |
ಕರೆಗೊರಲನಾಟಕ್ಕಿದೇಂ ಚೋದ್ಯಮಲ್ಲಮೆಂದಿರದೆ ಮಗುಳಿಂತೆಂದನು || ೩೬ ||

ಕತ್ತಲೆಯ ಮನೆಯ ಮಣಿದೀಪದೊಲ್ ದಾವಾಗ್ನಿ |
ಸುತ್ತಿರ್ದ ತಂಗೊಳದವೊಲ್ ಶರಧಿಯೊಳ್ ಶೋಭಿ |
ಸುತ್ತಿರ್ಪವಡಬನಂತಂಧಕಾರಾಗ್ನಿವುದಕಂಗಳತಿದೂರದಲ್ಲಿ ||
ಬಿತ್ತರದೊಳೆಸೆಯಲಾ ಸಸಿಗಲ್ಲ ವೇದಿಕೆಯ |
ನೆತ್ತಿಯನಡರ್ದಗಜೆಯೊಡಗೂಡಿ ನಲಿವುತೆ ನ |
ಗುತ್ತೀಶನಂತುಗ್ರೈದಂ ಶಿವಮಹಾತ್ಮೆ ಬಣ್ಣಿಸಲಾರ ವಶವೆಂದನು || ೩೭ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೩೮ ||

ಅಂತು ಸಂಧಿ ೪೬ಕ್ಕಂ ಪದಗಳು ೧೮೯೯ಕ್ಕಂ ಮಂಗಳಮಹಾಶ್ರೀ

ನಾಲ್ವತ್ತೇಳನೆಯ ಸಂಧಿ

ಸೂಚನೆ

ಅಂಧಕಾರಂ ಬಲಿದು ಶಿಶುವಾದ ಕಾರಣದೊ |
ಳಂಧಕಾಸುರನೆಂಬ ಪೆಸರಾಂತು ಪೆಚ್ಚಿದ ಮ |
ಹಾಂಧಕಾರದೊಳೆ ದಿವಿಜರನಟ್ಟಿ ಕೈಲಾಸಪುರಕೆ ದಾಳಿಯನಿಟ್ಟನು ||

ಅರುಣಜಾತ್ಯಂಧನಂದನರನನ್ಯಾಯದಿಂ |
ಧುರದೊಳಗೆ ಮಥಿಸಿದವರಯ್ಯಂದಿರಾತ್ಮಜರ |
ನಳಿದಾಳ್ದನಂಗನೆಯ ತಾಯ ತನುಜನ ಹಿಂದಣಾತನೊಂದೇ ಭಾಗಮುಂ |
ವರಮುನಿಯ ಪಟ್ಟಣದ ಪೆಸರೊಳೊಗೆದಾಕೆಯುಂ |
ಬೆರಸಿ ಧರಿಸಿದ ಲಸತ್ಪಂಪಾವಿರೂಪಾಕ್ಷ |
ಶರಣಜನಸಂರಕ್ಷ ರಕ್ಷಿಸೆಮ್ಮಂ ಬಹಳಕರುಣದಿಂದನವರತವು || ೧ ||

ಆಲಿಸೈ ಸಿದ್ಧರಾಮೇಶ ಕನಕಾಂಬಕಂ |
ಭಾಳಾಕ್ಷನಂ ಕುರಿತು ಪುತ್ರನಂ ಬೇಡಿ ಬಹು |
ಕಾಲಪರಿಯಂತರಂ ತಪವನಾಚರಿಸಲೀಶ್ವರನರಿದು ಕರುಣದಿಂದೆ ||
ಕಾಳಿ ತನ್ನಕ್ಷಿಯಂ ಮುಚ್ಚಲದರಿಂದಾದ |
ಕಾಳಗತ್ತಲೆಯ ಶಿಶುವಿರೆ ನೋಡಿ ಕೊಂಡು ಸ |
ಲ್ಲೀಲೆಯಿಂದಾ ಖಳಂಗೀವೆನೆನುತಗಜೆಯುಂ ಕೂಡಿ ನಡೆತರುತಿರ್ದನು || ೨ ||

ಅನ್ನೆಗಂ ಬರಬರಲ್ ಕೈಲಾಸಗಿರಿತಟದೊ |
ಳುನ್ನತತಪಂ ಗೆಯ್ವ ಕನಕಾಕ್ಷನಿದಿರೊಳ್ ಪ್ರ |
ಸನ್ನತೆಯನೈದಿ ನಿನ್ನಿಷ್ಟಮಂ ಬೇಡೆನಲ್ ಕಣ್ದೆರೆದವಂ ಕಾಣುತೆ ||
ಪನ್ನಗಾಭರಣನಂ ಸುತಿಗೆಯ್ದು ಬೇಳ್ಪುದೆನ |
ಗಿನ್ನೀಂ ವರಂ ಸುರಪಬ್ರಹ್ಮಾಚ್ಯುತಾದ್ಯರಂ |
ತನ್ನ ಬಲ್ಪಿಂ ಗೆಲ್ವ ಕುವರನಂ ಪಾಲಿಸೆನಲೀಶನೊಲಿದಿಂತೆಂದನು || ೩ ||

---

೧ ದಾ (ಹು, ಮ.) ೨ ಸಜ್ಜನ (ಹು, ಮ.)

ಆದೊಡಂತಪ್ಪ ಪ್ರತಾಪಶಿಶುವಿದು ಮಹ |
ತ್ತಾದಂಧಕಾರಸ್ವರೂಪಿದಾ ಹರಿವಿಧಿಗ |
ಳಾದಿ ಸುರರಂ ತನ್ನ ಬಾಹುಬಲದಿಂ ಗೆಲ್ದು ಸರ್ವಾವನೀತಳವನು ||
ಸಾಧಿಸಿ ಸಗರ್ವದಿಂ ಬಾಳ್ವುದಿದು ಕೊಳ್ಳೆನು |
ತ್ತಾದರದೊಳಾ ಶಿಶುವನಾ ಖಳಂಗಿತ್ತು ಬಳಿ |
ಕಾ ದಯಾಂಬುಧಿ ರಜತಗಿರಿವೊಕ್ಕು ಗಿರಿಜೆಯೊಡಗೂಡಿ ಸುಖದಿಂದಿರ್ದನು || ೪ ||

ಇತ್ತಲೀ ಕನಕಲೋಚನನತುಳಸಂತಸಂ |
ಬೆತ್ತು ಶಿಶುವೆರಸಿ ಗುಡಿತೋರಣದ ವಿಭವದಿಂ |
ದೆತ್ತುವಾರತಿಗಳಿಂ ಬಹುವಾದ್ಯಘೋಷದಿಂ ಭಟ್ಟರ ಪೊಗಳ್ಕೆಯಿಂದೆ ||
ಮುತ್ತೈದೆಯರ ಪರಕೆಸೇಸೆಗಳನುರೆ ಕೈಕೊ |
ಳುತ್ತೆ ಪೊಳಲೊಳ್ ಮೆರೆದು ಮಂದಿರಂಬೊಕ್ಕು ತ |
ನ್ನುತ್ತಮಾಂಗನೆಗಾ ಕುಮಾರಕನನಿತ್ತಂ ಹಿರಣ್ಯಾಕ್ಷನುತ್ಸವದೊಳು || ೫ ||

ನೋಡಿದಳ್ ತರುಣಿ ಹರುಷಾಶ್ರುರಸದೊಳ್ ಮುಳುಂ |
ಗಾಡಿದಳ್ ಕುವರನಂ ತೆಗೆದಪ್ಪಿ ತೊರೆದ ಮೊಲೆ |
ಯೂಡಿದಳ್ ತೂಪಿರಿದು ಪರಸಿ ಸಲೆ ಜೋಗುಳಂ ಪಾಡಿದಳ್ ಮೋಹದಿಂದೆ ||
ಪೂಡಿದಳ್ ಪೊಂದೊಟ್ಟಿಲಂ ಸಖಿಯರೊಡನೆ ತೂ |
ಗಾಡಿದಳ್ ಪತಿಯ ಪೌರುಷಕೆ ತಾಂ ಮೆಚ್ಚಿ ಕೊಂ |
ಡಾಡಿದಳ್ ಕನಕಾಕ್ಷನರ್ಧಾಂಗಿ ಸುತಮೋಹದಿಂದದೇವಣ್ಣಿಸುವೆನು || ೬ ||

ವರಶುಕ್ರನೇಮದಿಂದಾದುದಾಗಳೆ ನಾಮ |
ಕರಣವಿನಾಶಂ ನುಡಿದೊಲಂಧಕಾಸುರನೆಂದು |
ಪಿರಿದು೧ವಂ೨ದಿವಸದಿವಸಂ ಮಾಸವರುಷಂಗಳಿಂದೆನಲ್೨ ಭೀಕರದೊಳು ||
ಸುರಕುಲದ ಮಿಳ್ತು ಬೆಳೆವಂತಿತಖಿಳಮಾಯೆಗಳ |
ಗಿರಿ ಪೆಚ್ಚುವಂತೆ ಪಾಪಂ ರೂಪುವೆತ್ತು ಸಂ |
ಚರಿಪಂತೆ ಬೆಳೆವುತಿರ್ದಂ ಮಹಾಕಾಯನದನೇನೆಂದು ಬಣ್ಣಿಸುವೆನು || ೭ ||

೧ ದ (ಮ.) ೨-೨ ದೀಸದಿವಸಂ ಮಾಸವರುಷವರುಷಂಗಳೀ (ಶಿ, ಗೋ.) ; ದಿವಸದಿವಸಕೆ ಮಾಸಮಾಸವರುಷಂಗಳ್ಗೆ (ಹು, ಮ.) ೩ ವಂದಂ (ಶಿ, ಗೋ.)

ಇಂತಿರಲ್ ಕನಕಲೋಚನ ಹಿರಣ್ಯಕಶಿಪುಗ |
ಳಂತಿರ್ವರುಂ ಹರಿವರಾಹನರಸಿಂಹರೂ |
ಪಿಂ ತಡೆಯದಳಿದು ಪೋಗಲ್ ಬಳಿಕ್ಕವರವರ ದೇಶದುರ್ಗಂಗಳೊಳಗೆ ||
ಮುಂತೊಪ್ಪುವಗ್ರಜಾನುಜ ಪುತ್ರ ಮಿತ್ರ ಸಾ |
ಮಂತ ಸೇನಾನಿ ಸಚಿವಪ್ರಮುಖದಾನವರ |
ಸಂತತಿಗಳುಂ ಶುಕ್ರನೇಮದಿಂದಂಧಕಾಸುರನೆಡೆಗೆ ನಡೆತಂದರು || ೮ ||

ಈ ಜಗಂಗಳೊಳ್ಳಿದೆ ಪೆಸರ್ವಡೆದ ದಾನವಸ |
ಮಾಜಮೈತಂದಂಧಕಾಸುರಂಗಂದಸುರ |
ರಾಜಪಟ್ಟಂಗಟ್ಟಿ ಕೈಮುಗಿದು ಕಾಣ್ಕೆಗಳನಿಕ್ಕಿ ನಿಂದೋಲೈಸಲು ||
ತೇಜಮಗ್ಗಳಿಸಿದುದು ದಿನದಿನಕ್ಕವಗೆ ನಾ |
ನಾಜಗರ್ದೊಳವನಾಣೆಯಾಜ್ಞೆ ಸಂದುದು ಧರೆಗೆ |
ಸೋಜಿಗಮುದಾಯ್ತವನ ವರ್ತನಂ ಸಿದ್ಧರಾಮೇಶ ಕೇಳ್ ಕೌತುಕವನು || ೯ ||

ಸೊಕ್ಕಿದಾನೆಗೆ ಕೈದು ಪಸಿದ ಪೊಸಪಾವಿಂಗೆ |
ಪಕ್ಕಮುಬ್ಬರಿಪ ಪೆರ್ಬುಲಿಗೆ ಧೈರ್ಯಂ ನವತ |
ಮಿಕ್ಕೆ ಕಠಿಣತೆಗಳೊದಗುವುವೆಂತುಟಂತುಟಾ ದೈತ್ಯರ ಸಹಾಯಮಾಗೆ ||
ದಿಕ್ಕುದಿಕ್ಕಿಂಗೆ ದಾಳಿಯನಿಟ್ಟು ಮಲೆತರಂ |
ಪೊಕ್ಕಲ್ಲಿ ಪೊಕ್ಕು ಸಂಹರಿಸುತ್ತೆ ಸಕಲಲೋ |
ಕಕ್ಕೆ ತನ್ನಾಜ್ಞೆಯಂ ಪಸರಿಸಿದನಾ ಖಳಂ ಪೇಳ್ವುದೇನವನದಟನು || ೧೦ ||

ಸಪ್ತಾಬ್ಧಿಗಳನೊಂದಿನಂ ದಾಂಟಿ ತನ್ಮಧ್ಯ |
ಸಪ್ತ[೨]ಸದ್ವೀಪಂಗಳಂ ಕಟ್ಟಿಕೊಂಡಿಂದ್ರ[೨] |
ಸಪ್ತಾರ್ಚಿರಾಜಿ[೩] ದಿಕ್ಪಾಲರಂ ಸದೆದವರ ಲೋಕಂಗಳಂ ಸಾಧಿಸಿ ||
ಸಪ್ತಾಶ್ವ ಚಂದ್ರ ವಸು ಮನುಗಳಂ ಬಡಿದು ದ್ವಿ |
ಸಪ್ತ ಲೋಕಂಗಳ್ಗೆ ರಾಣೆಯುವನಿಟ್ಟು ವಿಧಿ |
ಸಪ್ತತ್ರಯಮಾವತಾರಾಧಿಪರನೆಬ್ಬಟ್ಟಿದಂ ಖಳಂ ಸಾಮಾನ್ಯನೇ || ೧೧ ||

--- ವ (ಗೋ.) ೨-೨ ದ್ವೀಪಂಗಳಂ ತಾಂ ಕಟ್ಟಿಕೊಂಡಿಂದ್ರ (ಶಿ, ಗೋ.); ಸದ್ವೀಪಂಗಳಂ ಕಟ್ಟಿಕೊಂಡಿರ್ದ (ಹು.); ಸದ್ವೀಪಂಗಳಾ ಕಟ್ಟಿಕೊಂಡಿಂದ್ರ (ಮ.) ೩ ಮಾಮಿ (ಮ.)

ಗೂಳಿಯಂ ತೆಗೆದು ಹರಿಮುಖ್ಯರೆಲ್ಲರ್ ಬಂದು |
ಪಾಳಿಯುಮನಿಳಿದರಾ ರಜತಗಿರಿಯೊಳ್ ಸುರರ |
ಸೂಳೆಯುರನೆಲ್ಲರಂ ಸೆರೆವಿಡಿದು ತನಗೆ ಸರಿಯಿಲ್ಲೆಂದು ಬಲ್ಬಿರುದಿನ ||
ಕಾಳೆಯಂ ಪಿಡಿಸಿ ಬಲದಿಂ ಚತುಸ್ಸಾಗರದ |
ವೇಳೆಯ ಧರಾಮಂಡಲಂಗಳಂ ಸಂತಸದೊ |
ಳಾಳಿಯಂಧಾಸುರಂ ತತ್ಪಳನ ಕೀರ್ತಿ ಮೂಜಗದೊಳಗೆ ಪಸರಿಸಿದುದು || ೧೨ ||

ಮಾರ್ಮಲೆವರಿಲ್ಲವೆಲ್ಲೆಲ್ಲಿಯುಂ ರಕ್ಕಸನ |
ದೋರ್ಮಹಿಮೆ ಮಡಲರಿದು ಪರ್ಬಿದುದು ತಾನಲ್ಲ |
ದಾರ್ಮತ್ತದೊರ್ವರೀಜಗಕೊಡೆಯರಿಲ್ಲವೆಂದೇ ಬಗೆದು ತನ್ನ ಮನದ ||
ಪೆರ್ಮೆಯಿಂ ಮತ್ತತ್ಸವಂ ತಾಳ್ದಿರುತ್ತೆ ನೇ |
ಸರ್ಮೂಡಿಬರ್ಪಕಾಲದೊಳೊಂದಿನಂ ರತ್ನ |
ಧರ್ಮನಿರ್ಮಾಣದಾಸ್ಥಾನದೊಳ್ ಖಳಶಿರೋಮಣಿಯೋಲಗಂಗೊಟ್ಟನು || ೧೩ ||

ಓರೊರ್ವರಂ ಮುಂಚಿಬಂದುದವನೋಲಗಕೆ |
ಕಾರೊಡಲ ಕೆಮ್ಮೀಸೆಗಳ ಕೆಂಡಗಣ್ಣ ಹೆ |
ಮ್ಮಾರಿಮೊಗಗಳ ಬಿಗಿದ ಹುಬ್ಬುಗಳ ಬಲ್ಗೋರೆದಾಡೆಗಳ ಸಲೆಕೊಬ್ಬಿದ ||
ತೋರದೊಡೆಗಳ ತೋಳ್ಗಳೊಳಗಾಂತ ಕೈದುಗಳ |
ಹೇರುರದ ಹಿಂಗಾಲ ಬಿರುದುಹಾಹೆಗಳಹಂ |
ಕಾರದುಬ್ಬಿನ ದಡಿಗರಕ್ಕಸರ್ ಕೋಟಾನುಕೋಟಿಗಳದೇನೆಂಬೆನು || ೧೪ ||

ಮಣಿಪೂರಿತೋರಣದ ಕೀಲಣದ ಮಕುಟದಿಂ[1] |
ಮಣಿವ ತನುಜರ್ ದನುಜಮನುಜರ್ಕಳಿಂದಾಗ |
ಕುಣಿವ ಪಾತ್ರ ಸ್ತೋತ್ರ ವೇತ್ರಧಾರ್ ಮುಖ್ಯಸಕಲವಿನಿಯೋಗದಿಂದೆ |
ಗಣಿಕೆಯರ ನೋಟ ಬೇಟದ ಪಾಟದೇಳ್ಗೆಯಿಂ |
ಬಣಿತೆಯ ವಿಧಾವಂತ ಮಾವಂತ ಸಾವಂತ |
ಗಣದಿನೊಪ್ಪುವ ಸಭೆಗೆ ನಾರದಂ ನೀರದಾಧ್ವದಿನಿಳಿದು ನಡೆತಂದನು || ೧೫ ||

---

೧ ಪೆ (ಶಿ, ಗೋ.) ೨-೨ ತೋರಣದ ಕಿರಣದ ಮಕುಟದಿಂಪೆ (ಶಿ, ಗೋ.) ; ತೋರಣದ ಕೀರಣದ ಮಕುಟದಿಂ (ಹು.) ; ತಾರಣದ ಕಿರಣದ ಸುಮಕುಟದಿಂ (ಮ.)

ಆ ಸುರಮುನೀಶ್ವರಂಗಿದಿರೆದ್ದೆರಂಗಿ ಸಿಂ |
ಹಾಸನಾರ್ಘ್ಯವನಿತ್ತು ಕುಳ್ಳಿರಿಸಿ ವಿನಯದಿಂ |
ದೇಸುಪುಣ್ಯದ ಫಲವೊ ನಿಮ್ಮ ದರುಶನವೆಮಗೆ ಸಮನಿಸಿತ್ತೆಂದು ಕೂಡೆ ||
ಈ ಸಭೆಗೆ ಬರವೆತ್ತಣಿಂದಾಯ್ತು ನಿಮಗೆಲ್ಲ |
ವಾಸವಾವುದು ಬಂದ ಕಜ್ಜವಿಂತೆಂದಂಧ |
ಕಾಸುರಂ ಬೆಸಗೊಳಲ್ ನಾರದಂ ದಶನದೀಧಿತಿ ಮಿಸುಗಲಿಂತೆಂದನು || ೧೬ ||

ಇರ್ಪೆವೆಮ್ಮಯ ಮನಂ ಬಂದೆಡೆಗಳೊಳ್ ಪೋಗಿ |
ಒರ್ಪೆವು ದಿನಂದಪ್ಪದಖಿಳಲೋಕದ ಕರ್ತೃ |
ಸರ್ಪಭೂಷಣನೋಲಗಕ್ಕಿಲ್ಲಿಗೈತಂದ ಕಾರಣಂ ನಿನ್ನ ಭುಜದ ||
ದರ್ಪದಿಂ ನೊಂದ ನಿಮ್ಮಯ್ಯನಂ ಕೊಂದ ಕಂ |
ದರ್ಪಜನಕಾದಿಗಳ್ ಮೊರೆಯಿಡಲ್ ಕೇಳ್ದು ತ |
ದ್ದರ್ಪಕಧ್ವಂಸಿ ತವ ವಧೆಗೆ ಬರುತಿರಲುಸಿರಬಂದೆವಿದು ಹದನೆಂದನು || ೧೭ ||

ಕೇಳ್ದು ಗಹಗಹಿಸಿ ಶುಕ್ರನ ಮೊಗಂ ನೋಡಿ ಜಗ |
ಪಾಳ್ದನಿನ್ನೊರ್ವನಿರ್ದಪನೆಂಬುದಂ ನಮಗೆ |
ಪೇಳ್ದುದಿಲ್ಲಿಂದುವರೆಗಂ ಭಾಪು ನಿಮ್ಮನೇನೆಂದಪೆವು ತನ್ನ ಪಿತನಂ ||
ಸೀಳ್ದಸಂ ಮರೆವೊಗಿಸಿಕೊಂಡೆಮ್ಮುವಂ ಕೊಂದು |
ಬಾಳ್ವಪನ ಪೆಸರದೇನಿನ್ನೊಮ್ಮೆ ನುಡಿಯೆನುತೆ |
ಸೂಳ್ದ ನಿಟ್ಟುಸಿರ ಹೂಂಕೃತಿ ನೆಗೆಯೆ ನಾರದನೊಳಂಧಕಾಸುರ ನುಡಿದನು
|| ೧೮ ||

ಉಸುರ್ದಪರೇಕೆ ಹರಿಯಜಾದ್ಯರ್ ನಮ್ಮ ದೂರನಾ
ಮಸಣಗಾಹಿಗೆ ಬೂದಿಬಡಕನಾ ಮೊರೆಯನಾ |
ಲಿಸಿದನೆ ಪೆಣ್ಗೂಸುವೆಯ್ಯವಂ ಮುಳಿದು ತಾನೆಮ್ಮುವಂ ಕೊಲ ಬಪ್ಪುದು ||
ಹಸನಾಯ್ತು ದಿಗ್ವಿಜಯದೊಳ್ ಗೊರವನೆಂದು ಪಾ |
ಲಿಸಿದೆವವನೇ ಜಗತ್ಕರ್ತೃ ಗಡವೆನುತಾಗ |
ಲಿಸನಾಸನಸಿರದೆ ಮಸಗಿ ಕಡು ಕೋಪದಿಂದೊಡನೊಡನೆ ಗರ್ಜಿಸಿದನು || ೧೯ ||

೧ ಕೈಗಟ್ಟಿ (ಮು.) ೨ ಹೊ (ಶಿ, ಗೋ, ಮು.); ಯೊ (ಹು.) ೩ ರಾವರೆ (ಮು, ಹು.)

ಗಜಾನನಂ ದನಿಗವೀಳ್ಬೋಕದ ಜನಂ ಬೆರ್ಚೆ |
ನಿಜಾ[illegible] ಮುನ್ನೊಂದು ಹರಿವಿಧಿಮುಖ್ಯ
ನಿಜಾರರ್ ಕಣ್ಗೆಟ್ಟು ಸುರಕುಲಂ ನಡುಕಿವರ್ [illegible] |
ಜರ್ಜರಿಸಿದಂ ನಾರದಂ ಬೆರಗುವಟ್ಟಿವನ |
ನಾರ್ಜಯಿಪರೆಂದು ಸರಿದಂ ಬಳಿಕ್ಕಾ ಮಹಾ |
ಮರ್ಜನಂ ಶತವಾಯುನೆಂಬ [illegible] ಕರೆದು [illegible] ॥ ೨೦ ॥

ಬರಹೇಳ್ ನಿಕುಂಭನಂ ಶುಂಭನಂ ಜಂಭನಂ |
ಬರಹೇಳ್ ಸಶಬಲನಂ ಪ್ರಬಲನಂ ಸುಬಲನಂ |
ಬರಹೇಳ್ [illegible] ಬರಹೇಳ್ [illegible] |
ಬರಹೇಳ್ ನಿಶುಂಭನಂ ಕುಂಭನಂ ಲಂಬನಂ |
ಬರಹೇಳ್ ಸುವಿಪುಳನಂ ಚಪಳನಂ ಕಪಿಲನಂ |
ಬರಹೇಳ್ ಮುಹುಂಡನಂ ಮುಂಡನಂ ಹುಂಡನಂ [illegible]ನೆನುತ್ತುರಿದೆದ್ದನು
॥ ೨೧ ॥

[illegible] ಭೇರಿಯನಿಂದೆ ನಡೆಸು ಸಂತೈನ್ಯಮಂ |
[illegible] ಗೋಳಿಡುವಂತೆ |
[illegible] ಕುಡಿಸು [illegible] |
ಒಡಿಸು ಹರಿವಿಧಿಗಳಂ ಬಡಿಸು ಮೂವಿಧಿಗಳಂ |
ಸುಡಿಸು ಕೈಲಾಸಮಂ ಕೆಡಿಸು [illegible] |
[illegible] ಬೇಗದೊಳೆನುತ್ತಾಡನೊಡನೆ [illegible] ॥ ೨೨ ॥

ಅನಿತರೊಳ್ ಕಂಡಂ [illegible] |
[illegible] ಸಾಕು ಸಾಕಿದೆಂ |
[illegible] ಕಲಹ ಮತ್ತೇಕೆ [illegible] ಶಿವಶಿವ [illegible] |
[illegible] ತನ್ನ [illegible] |
[illegible] ನಿನ್ನ |
[illegible] ಶುಕ್ರನಂ [illegible] ॥ ೨೩ ॥



ಅಂಧಕಾಸುರನ ಓಲಗ

ಪರಶಿವನ ಶಶಿಸೂರ್ಯನೇತ್ರಂಗಳಂ ಗಿರಿಜೆ |
ಸರಸದೊಳ್ ಮುಚ್ಚಲ್ ತಮಂ ಪೆರ್ಚಲೀಶನಂ |
ಮೂರಿಗಣ್ಣಿನಿಂ ಬೆಳಕುದೋರಲಾ ತಮದಳವಿನೊಳಗೆ ನೀಂ ಜನಿಸಿ ಶಿವನ ||
ಪೊರೆಯೊಳಿರುತಿರೆ ಶಿವಂ ಕಂಡು ಕನಕಾಕ್ಷನುರು |
ತರತಪಸ್ಸಿಂಗೊಲಿದು ನಿನ್ನನಿತ್ತಂ ನಿನ್ನ |
ಗುರುಶುಕ್ರನಂ ವಿಚಾರಿಸು ತೋಳ್ಗಳುರೆ ಬೆಳೆಯಲಾರನಪ್ಪವೆಯೆಂದನು || ೨೪ ||

ಶಿವಮಹಿಮೆ ಬಣ್ಣಿಸುವೊಡಳವೆ ಕೇಳ್ ಮುನ್ನಬ್ಜ |
ಭವವಿಷ್ಣುಗಳ ಸಮರಮಂ ಬಿಡಿಸಲುರುಲಿಂಗ |
ಮುಪತರಿಸೆ ಶೀರ್ಷಪದಮಂ ಕಾಣ್ಬೆವೆಂದು ನೇಮಿಸಲೊರ್ವರುಂ ಕಾಣದೆ ||
ಬವಣೆಯೊಳ್ ತಿರುಗಿ ಗರ್ವಮನುಳಿದರಾ ಕಮಲ |
ಭವನಿರುತಿರುತ್ತಹಂಕರಿಸೆ ರುದ್ರಂ ನಗು |
ತ್ತವನ ತಲೆಯಂ ಚಿವುಂಟಿದನುಗುರ್ಗೊನೆಯೊಳಾ ಬ್ರಹ್ಮನೇಂ ಸಾಮಾನ್ಯನೇ || ೨೫ ||

ಕಾಲನಂ ಕಾಮನಂ ತ್ರಿಪುರಮಂ ನೊಸಲಕ |
ಣ್ಣಾಲಿಯುರಿಯಿಂ ಸುಟ್ಟನುದ್ಭವಿಸಿದೋಳ್ಪಿನದ |
ಬಾಲನಿಂ ತಾರಕನನುರೆ ಕೊಲಿಸಿದಂ ಕೊಂದನಾ ಜಲಂಧರದೈತ್ಯನಂ ||
ಕಾಲುಂಗುಟದಿನವನಿಯೊಳ್ ಬರೆದ ಚಕ್ರದಿಂ |
ಪೇರ್ಲೆಂ ಶ್ರುತಿಚೋರತಮನೆಂಬನಂ ಕೊಂದ |
ಫೀಳಹರಿಮತ್ಸ್ಯರೂಪಂ ಸೀಳ್ವನಂತಿವರ್ ಸಾಮಾನ್ಯರೇಯೆಂದನು || ೨೬ ||

ಪೂರ್ವಮಂತಿರಲತಿಪ್ರತಾಪರೆಮ್ಮಯ್ಯಂಗ |
ಳಿರ್ವರಂ ಪೇಳ್ದ ಮಹಾವಿಷ್ಣುವಿನದೊಂದು |
ಜೋರ್ವಲಿಪ ನರಿಸಿಯೊ ತತ್ಸಿಂಹಕ್ರೋಡಾವತಾರಂಗಳವನಿಯೊಳಗೆ ||
ಗರ್ವಿಸಲ್ ಹರನಾ ವರಾಹನಂ ಸೀಳ್ದು ಮ |
ತ್ತೊರ್ವಮೃಗನಿಂ ಸಿಂಹನಂ ಕೊಲಿಸಿದಂ ಶಿವಂ |
ಸರ್ವಥಾ ದುಷ್ಟನಿಗ್ರಹಶಿಷ್ಟಪಾಲಕಂ ನೀಂ ತಿಳಿದುಕೊಳ್ಳೆಂದನು || ೨೭ ||

---

೧ ಮೇಲಖಿಳ (ಹು, ಮ.) ೨ ವುರ್ವಿಯೊಳ್ (ಶಿ, ಗೋ.)

ಎವೆಯಾಟದಿಂದಖಿಳಬ್ರಹ್ಮಾಂಡಮಳಿದುದಿಸು |
ವುವು ವಿಷ್ಣು ಬ್ರಹ್ಮೇಂದ್ರರುಂ ಭೃತ್ಯರಗ್ನಿ ಶಶಿ |
ರವಿಗಳಕ್ಷಿಗಳವನಿ ಜಲ ವಹ್ನಿ ಪವನ ಗಗನಾತ್ಮಾರ್ಕ ಶಶಿಮುಖ್ಯರು ||
ಶಿವನಷ್ಟಮೂರ್ತಿಗಳ್ ಸರ್ವಕೆಲ್ಲಂ ಸದಾ |
ಶಿವಮಯಂ ನೀನದೇತಕೆ ಮರುಳ್ಗೊಂಬೆ ಬಾ |
ಶಿವಚರಣಮಂ ಕಂಡು ಬದುಕಲಿಹಪರಸೌಖ್ಯಮಪ್ಪುದಿದು ನಿಜವೆಂದನು || ೨೮ ||

ಕೇಳಿ ಕಿಡಿಕಿಡಿವೋಗಿ ಬಾಯ್ ದೊಡ್ಡಿತೆಂದೆನ್ನ |
ನೂಳುವೆಯ[೧]ದಾರ್ ಕರೆದರೈ ನಿನ್ನನೀಗ[೧] ನೀಂ |
ಪೇಳಿದ ಹರಿ ಬ್ರಹ್ಮಮುಖ್ಯರೆನ್ನಿಂದಲೇನಾದರೆಂಬುದನರಿಯೆಲಾ ||
ಆ ಲೋಕಮನಿತನೆನ್ನಯ ಭೃತ್ಯಸಂದೋಹ |
ಮಾಳುತಿರಲಾ ಹರನದೇಗೆಯ್ದನೆಲವೊ ಫಡ |
ಖೂಳ ಕೂಗದೆ ಕೆಲಕೆ ಸಾರೆಂದು ತನ್ನವರ ಮೊಗನೋಡುತಿಂತೆಂದನು || ೨೯ ||

ಊರೊಂದೆರಳ್ಮಾರ್ಗಳಂ ಸುಟ್ಟನಂತೆ ಬಡ |
ಹಾರುವನ ತಲೆಯಂ ಚಿವುಂಟಿದಂ ಗಡ ಪೊಕ್ಕು |
ನೀರೊಳಗಣೊಂದು ಮೀನಂ ಸೀಳ್ದನಂತೊಂದು ಪಂದಿಯುಂ ಕೊಂದನಂತೆ ||
ಬೀರದಿಂದರೆಮಾನಿಸನನಿರಿದನಂತೆ ಬಡ |
ತಾರಕ ಸ್ಮರ ಕಾಲರಂ ಮುರಿದನಂತವನ |
ಬೀರಮಂ ಕಾಣ್ಬೆ[೩] ನೀಂ ಪೊಯ್ಸು ಭೇರಿಯನೆನುತ್ತಾಸ್ಥಾನದಿಂದೆದ್ದನು || ೩೦ ||

ಧಂಧಣಂ ಧಳಧಳಧಳಂ ಧಳಧ್ವನಿಗೆ ದಿ |
ಕ್ಸಂಧಿಗಳ್ ಸಡಿಲಲಾ ಫಣಿಪದಿಕ್ಕರಿಗಳ ಶಿ |
ರಂ ಧಿಮ್ಮೆನುತ್ತೆ ಕಿವುಡೆಸೆಯಲಾ ಕುಲಪರ್ವತಂಗಳ ಧರಾಚಕ್ರದ ||
ಬಂಧನಂಗಳ ಬಿಗುಹು ಬಿಡೆ ಕಲಕಲುಂ ಸಕಲ |
ಸಿಂಧುಗಳ್ ತರಣಿಶಶಿಗಳ್ ಸರಣಿಗೆಡೆ ಜಗದೊ |
ಳಂಧಕಾಸುರನ ಭೇರೀರವಂ ಪೊಣ್ಮಿದುದನೇನೆಂಬೆನದ್ಭುತವನು || ೩೧ ||

೧-೧ ಮಾಡಿದಾರ್ ಕರೆದರೇ ನಿನ್ನ (ಮ.) ; ಳೀಡಿದಾರ್ ಕರೆದರೇ ನಿನ್ನ (ಹು,ಗೋ.)
೨ ಓ (ಪ.) ೩ ಕಾಬ (ಶಿ, ಗೋ ಪ.)

ಪೊಱಮಟ್ಟ ಘನಭೇರಿಯಂ ಭಾರಿಯಂಕಕ್ಕೆ ಮು |
ಟ್ಟಯ್ಸಲಿ ಚತುರ್ಬಲಂ ಸಗ್ಗಲಗ್ಗೆಯೊಳೆಂಬ |
ಕಯ್ಸನ್ನೆಯೊಳ್ ಮನ್ನೆಯರ್ ಮಂಡಲೀಕ ಸಾವಂತ ಸಚಿವಪ್ರಮುಖರು ||
ಅಯ್ಸುದಾನವಮಾನವರ್ ಕದನಕರ್ಕಶದ |
ಮೆಯ್ಸಿರಿಯ ರಾವುತರ್ ಪಾವುತರ್ ಬಳಸಿ ವೇ |
ಡಯ್ಸಿ ಬರಲಂದಂಧಕಾಸುರಂ ಪೊಱಮಟ್ಟು ಪೊಱಬೀಡಸುರೆ ಬಿಟ್ಟನು || ೩೨ ||

ನೆಗೞ್ದ ಪಲ್ಲಲ್ಲಿ ಮಯನಿರ್ಮಿತದೊಳಾಗ ಬಗೆ |
ಬಗೆಯ ಗುಡಿಗುಮುತಿ ಗೂಡಾರ ಸಾಗರದಾನ |
ಮುಗಿಲದೊಳ್ ಚಾವಡಿ ಹಜಾರ ಹಯಗಜಶಾಲೆಮುಖ್ಯಬೀಡಾರಂಗಳು ||
ಗಗನವಿಾದುದೊ ನೆಲಂ ಬೆಸಲೆಯಾದುದೊ ನಿಖಿಳ |
ಜಗಮಿದಂ ಪೆತ್ತುದೋ ಜಡಧಿ ಪಡೆದುದೊ ಬಲಮಿ |
ದಗಣಿತಮೆನಲ್ ಪೊಱಮಡುತ್ತಿರ್ದುದೂರೊಳಗಣಿಂದದೇಂ ವಣ್ಣಿಸುವೆನು || ೩೩ ||

ಕುಲಗಿರಿಗಳೊಲ್ ದಿಶಾಕರಿಗಳೊಲ್ ಬರ್ಪ ಭರ |
ಕಿಳಿ ತರ್ಗೆ ಸುರಿವ ಮೇಲ್ಕಿಳ್ ಮದಜಲಂ ಕಾರ |
ಮಳೆಗಾಲಮೆನಿಸೆ ಘನಕರ್ಣತಾಳಾನಿಲಂ ಬೆಟ್ಟಗಳನಲ್ಲಾಡಿಸೆ ||
ಚಲಿಪ ಕದಳೀದಳದ ಮಾರುತಂ ರವಿಘರ್ಮ |
ಜಲವನಾರಿಸಿ ವಿಯದ್ಗಂಗೋದಕಮನೂಡಿಸಿ |
ಕೊಳುತೆ ನಡೆತಂದತ್ತು ಶುಂಡಾಲಸೈನ್ಯಮದನೇನೆಂಬೆನದ್ಭುತವನು || ೩೪ ||

ಪರಮರುಚ್ಚೈರದೃಷ್ಟಿ ಮಸದ ಬೆಳಗಂಗಳಂ |
ತ್ವರಿತದೊಳ್ ಪಿಂದೆನಿಸುತಾಯತದೊಳಿಂದ್ರಾರ್ಕ |
ಹರಸಖಾಶ್ವಂಗಳಂ ಕೀಳ್ಪಡಿಸುತಂಬರಕೆ ಲಂಘಿಸುತ್ತವನಿತಳಮಂ ||
ಖುರಪುಟಂಗಳೊಳೆ ಕೆರೆವುತ್ತೆ ಕಡಿವ ಕಬ್ಬಿಗಳ |
ಘುರುಘುರುಧ್ವನಿ ಹೇಷಿತಸ್ವನಂ ಕಟವಾಯ |
ನೊರೆ ರನ್ನವಕ್ಕರಿಕೆಗಳ್ ಮೆರೆಯೆ ಬಂದತ್ತು ತುರಗಬಲಮೇನೆಂಬೆನು || ೩೫ ||

೧-೧ ಕಮುಪ್ಪವಲ್ಲಿಲ್ಲಿ ಮಯುಕ್ಕೃತ (ಮ.) ೨ ರಿ (ಮ ಹು.) ೩ ಟಿ (ಶಿ, ಗೋ., ಮ.)
೪ ಜಿ (ಹು, ಮ.) ೫-೫ ತ್ರೆ ಕಪಿಮಾಣಗಳ (ಶಿ, ಗೋ.); ತ ಕಡಿವ ಕಬ್ಬುನದ (ಮ.)

ತಳಪ ಮಣಿವೆಳಗಿನಿಂ ಚಕ್ರರವದಿಂ ನಭದೊ |
ಳೊಳೆಯೊಳ್ ಸಿಡಿಲ್ಮಿಂಚಿನೊಲ್ ಪೊಳೆದು ಮೊಳಗುತಿಹ |
ಘ[1]ಲವಾಜಿರಾಜಿಯಿಂ ಸೂತಹೂಂಕೃತಿಗಳಿಂ ಧೃತಶಸ್ತ್ರಜಾಲದಿಂದೆ ||
ಪಲತೆರದ ಕೇತನಂಗಳ ಕುರುಪಿನಿನ್ನಿಲ್ಲ |
ದುಲಿವ ಘಂಟೆಯ ಥಣತ್ಕೃತಮೊಗೆಯೆ ಬಂದತ್ತು |
ನಳಿನಸಖಸುರಪರ ರಥಂಗಳಂ ಕೀಳ್ಪಡಿಸಿ ರಥಸೈನ್ಯಮೇನೆಂಬೆನು || ೩೬ ||

ಪಿಡಿದೆರಳ್ ಸತ್ತಿಗೆಗಳೆರಡೆರಳ್ ಚವರಗಳ |
ನಡುವಗಲ್ಪಂಜುಗಳ ಡೌಡೆಜೇಗಟೆಗಳಾ |
ಕಡುಬಿರುದುಗಳ ಬಿಂಕದಿಂ ನಡೆದು ಲಾಗಿಸುತೆ ಹೂಂಕರಿಸಿ ತೋಳ್ಪೊಯ್ಯುತೆ ||
ಖಡುಗ ಖೇಟಕ ಸಬಳ ಕತ್ತಿ ಹೇರಿಟ್ಟೆವಂ |
ಕುಡಿ ಪರಶು ತೋಮರ ಗದಾದಿಯಾಯುಧಮನುರೆ |
ಜಡಿವುತ್ತೆ ಸಿಡಿಲ ಬಳಗಂಗಳೆನೆ ಬಂದುದು ಪದಾತಿಬಲಮೇನೆಂಬೆನು || ೩೭ ||

ಮತ್ತಗಜಘಟೆಗಳೊಂದೊಂದು ಪದ್ಮಂಗಳ |
ತ್ತ್ಯುತ್ತಮವರೂಥಂಗಳೈದು ಪದ್ಮಂ ಕುದುರೆ |
ಹತ್ತುಪದ್ಮಂಗಳ್ ಪದಾತಿ ತಾನಿಪ್ಪತ್ತುಪದ್ಮಮೊರ್ವನ ಬಳಿಯೊಳು ||
ಸುತ್ತಲೊಲೈ[2]ಪುದಿಂತಪ್ಪದೊರೆಗಳ್ಗ[2]ಳಿಂ |
ಬತ್ತೆಂಟುಕೋಟಿ ಮೊದಲಿಂಗಂಧಕಾಸುರಂ |
ಗಿತ್ತಲಿದರಿನಿತಾತ್ಮ[3]ಬಲಮುದೆಲ್ಲಂ ಬಂದುದಾ ಕ್ಷಣದೊಳೇನೆಂಬೆನು || ೩೮ ||

ಕೆಳದಿಯರ್ ಸುತ್ತಬರುತಿರೆ ರಾಣಿವಾಸದಂ |
ದಳರನ್ನ ಪಲ್ಲಕ್ಕಿ ಪನ್ನಂಗಗಳ್ ಮುಚ್ಚಿ |
ತಳದರ್ವಗಣಿತಮಾನೆ ಕುದುರೆಗಳ ಮೇಲೆ ಮೆಲ್ಲುಸುಕಿನಿಂ ಕೆಲಕೆಲಬರು ||
ಬಳಿಕೈದಲಿತ್ತ ದಂಡಿಗೆ ಮಂಚ ಪಲ್ಲಕ್ಕಿ |
ಗಳನಡರ್ದೆತ್ತು ಕುದುರೆಗಳೇರಿಯಾಳಿಯರ್ |
ಬಳಸಿ ಬರೆ ಬಂದತ್ತು ವಾರಾಂಗನಾನಿವಹಮೋರಂತೆ ಸಂಭ್ರಮದೊಳು || ೩೯ ||

---

೧ ಬ (ಶಿ.) ; ಚ (ಪ, ಗೋ.) ೨-೨ ಸುತಿಹುದಿಂತಪ್ಪದೊರೆಗ (ಮ.) ೩ ರನಿತಾದ (ಹು, ಮ.)

ಬಂಡಿಯೊಳ್ ಕನಕಭೂಷಣವಸನಪರಿಮಳದ |
ಭಂಡಾರಗಳ್ ಬರಲ್ ಘೃತತೈಲಮುಖ್ಯರಸ |
ಭಾಂಡಂಗಳಖಿಳಧಾನ್ಯಂಗಳಾ ಪೆರ್ವೆತ್ತುಗಳಮೇಲೆ ಬರೆ ತಾಮ್ರದ ||
ಭಾಂಡತತಿ ಪೊಂಬೆಳ್ಳಿಗೊಪ್ಪರಿಗೆ ಕೊಡಪಾನ
ಗಿಂಡಿ ಪರಿಯಣ ಪಡಿಗ ಮಣಿಮಂಚ ಸುಪ್ಪತಿಗೆ
ಮುಂಡೆ ಮಲಗುಗಳಡ್ಡೆ ಪೊರೆಯಾಳ್ಗಳಿಟ್ಟಣಿಸಿ ನಡೆತಂದುದೆಂವೇಳ್ವೆನು || ೪೦ ||

ಸಾಣೆಯರ್ ಚಿನ್ನವರದರ್ ದೂಸಿಗರ್ ಮುತ್ತು |
ಮಾಣಿಕದ ಪರದರ್ ವಣಿಗ್ವರರ್ ಗಂಧಿಗರ್ |
ಬಾಣಸರ್ ತಾಂಬೂಲಿಗರ್ ಮಾಲೆಗಾರರಾ ಪಾಲ್ಮೊಸರ ಮಾರುವವರು ||
ಗಾಣಿಗರ್ ಚಿಪ್ಪಿಗರ್ [೧]ಮುಚ್ಚಿಗರ್ ಲಾಳಕರ್[೧] |
ಸಾಣಿಗರ್ ಕೆಲಸಿಗರ್ ಮಡಿವಳರ್ ಬಿಸಿನೀರ |
ಕೇಣಿಗರ್ ಜೂಜುಗಾರರ್ ಮುಖ್ಯರೊದಗಿ ಬರುತಿರ್ದರೆಂ ವರ್ಣಿಸುವೆನು || ೪೧ ||

ಕೊಡಲಿ ಗುದ್ದಲಿ ಹಾರೆ ಮಚ್ಚು ಕುಡುಗೋಲವರ್ |
ಕೊಡನೀರ ಕೊಟ್ಟಣದವರ್ ಕಸಂಗಳನಿರದೆ |
ಗುಡಿಪ ಕೂಲಿಗಳವರ್ ಬಳೆದೊಡಿಪ ಕುಂಟಣಿಯ ನಡೆಯಿಸುವ ಮುದಿವೆಣ್ಗಳು ||
ಅಡುಗೂಳವರ್ ದೋಸೆ ಕಜ್ಜಾಯ ರೊಟ್ಟಿ ಹೊಯಿ |
ಗಡುಬತಿರಸಂಗಳುಪ್ಪಿನಕಾಯಿ ಹುರಿಮೆಣಸು |
ಗಡಲೆ ಸಕ್ಕರೆ ಶುಂಠಿ ಕಬ್ಬುವಿಲ್ಲೆಗಳನುರೆ ಮಾರುವರ್ ಬರುತಿರ್ದರು || ೪೨ ||

ಕಪಿ ಗಮಕಿ ವಾದಿ ಗಾಯಕ ವಾಗ್ಮಿ ನಟ ಹಾಸ್ಯ |
ದವರಾದಿ ಚೌಷಷ್ಟಿಕಲೆಯವರ್ ಲೇಖನ |
ವ್ಯವಹಾರ ಕೃಷಿ ಖಡ್ಗ ಗೋಪಾಲ ಯಾ[೨]ಚಂಗಳೆನಿಪ ಷಟ್ಕರ್ಮದಿಂದೆ[೨] ||
ತವೆ ಜೀವಿಪಷ್ಟಾದಶಂಗಳೆಂದೆನಿಪ ಜಾ |
ತಿವಳವರ್ ನೂರೊಂದು ಕುಲದವರ್ ತಂತಮ್ಮ |
ಹಸಣಿಸುದ್ಯೋಗಂಗಳಿಂದಖಿಳಲೋಕದ ಜನಂ ಕೂಡಿ ಬರುತಿರ್ದರು || ೪೩ ||

೧ ಲಾಳಕರ್ ಸೂಳಕರ್ (ಶಿ, ಗೋ.) ೨-೨ ಚಕಂಗಳೆಸಿಪ್ಪ ಷಟ್ಕರ್ಮದಿಂ (ಶಿ, ಗೋ.) ೩ಗ(ಪ.)

ಕುದುರೆಗಳ ಜೀನ ಹಲ್ಲಣ ಲೇವೆ ಕಬ್ಬಿ ಕಂ |
ದದ ಹಕ್ಕರಿಕೆ ಚಬುಕು ಮೊಗರಂಬ ವಾಘೆಗಳ್ |
ಮದಗಜದ ಹೊರಜೆ ರಂಚಿಕೆ ಗುಳಂ ಘಂಟೆ ಸರಪಳಿ ಮಿಳಿಗಳಾದಿಯಾಗಿ |
ಪುದಿದ ಪರಿಕರಮೆಸೆವ ರಾವುತಮಾವುತರ್ಕಳಂ |
ಗದ ಜೋಡು ವಜ್ರಾಂಗಿ ಕೊಳಗ ಸೀಸಕ ಭುಜಯು
ಗದ ರಕ್ಕೆ ಸುಂಡಾಯ್ತು[1] ಕೈದುಗಳ್ ತುಂಬಿ ಬಂಡಿಗಳಗಣಿತಂ ಬಂದುವು ‖ ೪೪ ‖

ಹುರಿದ ಹೊಸಭಂಗಿ ಹದಗೆಯ್ದು ಪಿನಿಕೂಟದೊಳ್ |
ಬೆರೆದಮಲ್ ಜಾಯಿಕಾಯ್ ಪತ್ರೆ ಕಸಕಸೆಯೆಂಬ |
ತರತರದೊಳೆಸೆವ ಲಹರಿಗಳುಮೆಲ್ಲಾ ಪಕ್ಷಿಮೃಗಕುಲದ ಮಾಂಸಂಗಳು ‖
ಸುರೆ ಬಗಿನಿಯಿೀಚಲೋಲೆಯ ಮರಗಳಾದಿ ಮ |
ತ್ತಿರದೆಸೆವ ಗಂಗಸಾಗರಮುಖ್ಯರಕ್ಕಸರ |
ಪರಿಪರಿಯ ಭೋಜನದ್ರವ್ಯಂಗಳಿಡಿದ ಭಂಡಿಗಳೈದೆ ಬರುತಿರ್ದುವು ‖ ೪೫ ‖

ತಪ್ಪಿದೆತ್ತೆಮ್ಮೆ ತೊತ್ತಿರ್ಮಕ್ಕಳಂ ಕೂಗು |
ದಪ್ಪದರಸುತೆ ಹೇರ್ಗಳಂ ಬಿಸುಟ ಹೋರಿಗಳ |
ಚಪ್ಪರಣೆಯಿಂ ನಿಲಿಸಿ ಮೂಗುನೇಣಿಡುತೆ ಹೇರ್ಗಳ ಹೊಲಿವುತೋಸರವಸು |
ಅಪ್ಪಿ ಸೆಗಪುತ್ತೆ ಸತಿಯಂ ನಡೆಸುತತಿಭಾರ |
ಮಪ್ಪ ಪೊರೆಗಳನಿಳುಪುತಲ್ಲಲ್ಲಿ ನಿಲುತೆ ಕಡು |
ಮುಪ್ಪುಜಪ್ಪನದ ನಾನಾ ತೆರದ ಸದಳಿಗರ್ ನಡೆದು ಬರುತಿರ್ದರಂದು ‖ ೪೬ ‖

ಅಂತು ನಡೆತಂದು ನೆಲದಗಲದೊಳ್ ಬಿಟ್ಟುದು ತ |
ದಂತರದೊಳಿನನಪರವಾರ್ಧಿಗಿಳಿದಂ ತಮಂ |
ಮುಂತಾದ ನಿಶಿಚಿಹ್ನಮೆದ್ದುವಾ ಸಂಜೆವರೆ ಮೊಳಗಿದುವು ಪಾಳೆಯದೊಳು |
ಕಾಂತಿಯಿಂದೆಸೆದುವಗಣಿತದೀಪಮೆಲ್ಲರುಂ |
ಸಂತಸದೊಳುಂಡೊರಗುತಿರೆ[2] ಪೂರ್ವಗಿರಿಯ ಶಿಖ |
ರಾಂತರದ ಪದ್ಮರಾಗದ ಕಳಸಮೆನೆ ಸೂರ್ಯಮಂಡಲಂ ರಂಜಿಸಿದುದು ‖ ೪೭ ‖

೧ ವು (ಶಿ, ಗೊ, ಪ.) ೨ ಸೂಡಾಯ್ತು (ದಾ.); ಸೂಡಾಯು (ಮ, ಮ.) ೩ ರಂಗಿರೆ (ದಾ, ಹು, ಮ.)

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೪೮ ||

ಅಂತು ಸಂಧಿ ೪೭ಕ್ಕಂ ಪದಗಳು ೧೯೪೭ಕ್ಕಂ ಮಂಗಳಮಹಾಶ್ರೀ

ನಾಲ್ವತ್ತೆಂಟನೆಯ ಸಂಧಿ

ಸೂಚನೆ

ಸರ್ವಸನ್ನಾಹದಿಂದಂಧಕಾಸುರನಿರದೆ |
ಸರ್ವೇಶ್ವರನ ಮೇಲೆ ದಂಡೆತ್ತಿ ಬರೆ ಕೇಳ್ದು |
ಶರ್ವನತಿಕೋಪದಿಂದಾ ಖಳನ ಸಂಹರಿಪ ಲೀಲೆಯಿಂ ನಡೆತಂದನು ||

ಅಸಮಾಕ್ಷ ನತಪಕ್ಷ ಲಸದಮಳಹಸ್ತಧೃತ |
ವಸು ವಿಶದಶಶಿಕಾಂತಸುಸಮಸರ್ವಾಂಗ ಗ |
ರ್ವಿಸಿದಖಿಳದಾನವಪ್ರಸರಾಭ್ರನಿರಸನಶ್ವಸನ ಮ[1]ರುದಶನಭೂಷ ||
ಅಸಿತಗಳ ಭಸಿತದರಹಸಿತಮುಖ ಲಸಿತಸುಖ |
ಸಸಿದಲೆಯ ಬಿಸಿಗಣ್ಣ ಪಂಪಾವಿರೂಪಾಕ್ಷ |
ವಸುಧೆಯಾನತರ ಪಾಲಿಸು ಕುಸುಮಶರದಹನಭಸಿತಭೂಷಿತವಿಗ್ರಹ || ೧ ||

ರಾಮ ಕೇಳ್ಳೈಯಂಧಕಾಸುರಂ ಹರುಷದಿಂ |
ತಾಮರಸಮಿತ್ರೋದಯಂಗಂಡು ಕೂಚಿಯಂ |
ನೇಮಿಸಿ ಮಹಾಬಲಕೆ ಸಕಲಸನ್ನಾಹಸಂರಂಭದಿಂ ನಿಬಿಡಮಾದ ||
ಭೀಮವಿಕ್ರಮರಾಕ್ಷಸೇಂದ್ರರೈತರೆ ಸಮರ |
ಭೀಮನೈದಿದನೈದುತಿರ್ಪ ಸೇನಾರಜದೆ |
ಭೂಮಿಯಾಗಸ ದಿಶಾಮಂಡಲಮಭೇ[2]ದಮೆನಲೇನೆಂಬೆನಚ್ಚರಿಯನು || ೨ ||

ವಾಜಿಹೇಷಾರವಂ ಖುರಪುಟಧ್ವನಿ ಹಸ್ತಿ |
ರಾಜಿಘಂಟಾಸ್ವನಂ ಬೃಂಹಿತಧ್ವಾನಂ ವಿ |
ರಾಜಿಪ[3] ವರೂಥಚಕ್ರದ ಘೋಷಮಖಿಳವಾದ್ಯಂಗಳಾರ್ಭಟಿತಂಗಳು ||
ಆಜಿಲಂಪಟಭಟರ ತೊಡರ ಘಲ್ಲಣೆ ಮದ್ಯ |
ಭೋಜಿಗ[4]ಳ ಪಚದಬ್ಬರಂಗಳಿಡಿಕಿರಿಯಲಾ |
ರಾಜೀವಜಾಂಡಮಿರಳ್ದೊಡೆಯದಿರದೆಂಬಿನಂ ಪಡೆ ನಡೆದುದೇನೆಂಬೆನು || ೩ ||

೧ ಮ (ಪ.) ೨ ಜ (ಹು, ಮ.) ೩ ಖ (ಹು, ದಾ, ಮ.) ೪ ಮಿಂ (ಹು, ದಾ, ಮ.)

ಚಲಮಯಂ ಧಾತ್ರಿಯೆಲ್ಲಂ ಶತ್ರುಜಯಯಾನದ |
ಭಲಮಯಂ ಧೊರೆಗಳೆಲ್ಲಂ ಕಡಿವ ಸಾಹಸದ |
ಕಲಿಮಯಂ ಸೇನೆಯೆಲ್ಲಂ ರಥಚ್ಛತ್ರಚಾಮರಕೇತುಭಲ್ಲಂಗಳ ||
ಕಲಮಯಂ ಗಗನವೆಲ್ಲಂ ಮೊರೆವ ವಾದ್ಯಸಂ |
ಕುಲಮಯಂ ದೆಸೆಗಳೆಲ್ಲಂ ದನುಜಭೀತಿವಿ |
ಹ್ವಲಮಯಂ ಲೋಕಂಗಳೆಲ್ಲಮೆನೆ ನಡೆದುದಾಬಲಮದೇಂ ವರ್ಣಿಸುವೆನು || ೪ ||

ತಗ್ಗಿದುದು ಧಾತ್ರೀತಳಂ ಕುಲಾಚಲಚಯಂ |
ನೆಗ್ಗಿದುದುಸಿರ್ವೊಯ್ವ ಬಸಿರ ತಳ್ಳಂಕದಿಂ |
ಮುಗ್ಗಿದುದು ದಿಕ್ಕರಿಕುಲಂ ಬಳಲಿ ಬಸವಳಿದು ಫಣಿಪತಿಫಣಾಸಹಸ್ರಂ |
ಬಗ್ಗಿದುದು ತಳೆಯೊಡೆದ ಮಣ್ಣಕಪ್ಪರದಂತೆ |
ನೆಗ್ಗಿದುದು ಕೂರ್ಮಖರ್ಪರಮಾ ಬಲದ ಭಾರ |
ವಗ್ಗಳಿಕೆಯೆಂತೊ ಗಣಿತಕ್ಕಳವೆ ಸಿದ್ಧರಾಮೇಶ ಕೇಳ್ ಕೌತುಕವನು || ೫ ||

ರಥಮನೇರ್ದಾ ಖಳಂ ಪೋಗುತಿರೆ ಮುಗ್ಗಿ ಸಾ |
ರಥಿ ಕೆಡೆದುವಶ್ವಂಗಳಂಡಿಸಿದುವಾ ಮುಂದೆ |
ಪಥದೊಳಡಿಗಡಿಗೆ ದುಶ್ಶಕುನಂಗಳಗಣಿತಂಗಳ್ ನೆಗಳ್ದುವಾ ದೈತ್ಯನ |
ಪೃಥುಕಿರೀಟಾಗ್ರದೊಳ್ ಪದ್ದುಕುಳ್ಳಿರಲುಮವಿ |
ತಥವೆಂದು ತಿಳಿಯದೆ ತೆರಳ್ದಸುರಂ ಮರಣ |
ಕಥನಮಂ ತಿಳಿಯಲೀವುದೆ ಮನದಹಂಕೃತಂ ರಾಮಕೇಳಚ್ಚರಿಯನು || ೬ ||

ಗರ್ಬದಿಂದಿಂತು ನೆಲನಗಲದೊಳ್ ನಡೆವ ಚಾ |
ತುರ್ಬಲಂ ಪಯಣಪಯಣದೊಳೆ ಖಂಡಂಗಳಂ |
ಸರ್ಬದೇಶಂಗಳಂ ಘನಪರ್ವತಂಗಳಂ ಸಕಲಘೋರಾರಣ್ಯದ |
ಪರ್ಬುಗೆಗಳಂ ನಗರ ನಿಗಮ ಖೇಡ ಮಡಂಬ |
ಖರ್ಬಡ ಗ್ರಾಮಾಗ್ರಹಾರನಗರಂಗಳಂ |
ಪೆರ್ಬೊಳೆಗಳಂ ದಾಂಟಿ ಕೈಲಾಸಪುರದ ರಾಜ್ಯದ ವಳಿತವಂ ಪೊಕ್ಕುದು || ೭ ||

---

೧ ಪದ (ಹು, ಮ.) ೨ ಹೂ (ಮ.) ೩-೩ ಮಗ್ರಾಮಾಗ್ರಹಾ (ಹು, ಮ.)

ಸೆರೆ ಸೂರೆ ತತ್ತಿಗಳಂ ಪಿಡಿದರಿದಿರಾದವರ |
ನಿರಿದರಾಂತೊಡನೆ ಕಾದಿದ ದುರ್ಗತತಿಯುಮಂ |
ಉರುಬಿ ಧೂಳ್ಗೋಂಟೆಯಂ ಕೊಂಡು ನೆಲಸರಿತವಂ ಮಾಡುತಿರಲಸುರನಿತ್ತ |
ನೆರೆಜಾಣ ಭಟ್ಟನೊರ್ವನನಿ ಕರೆದು ನೀಂ ಪೋಗಿ |
ಕರಿಗೊರಲನೊಡನೆ ನಮ್ಮಯ ವೈರಿಯಾದ ಸಿರಿ |
ಯರೆಯನಂ ಕೊಟ್ಟು ಬಾಳ್ವನೊ ಬಂದು ಕಾದುವನೊ ಕೇಳ್ದು ಬಾ ಪೋಗೆಂದನು
|| ೮ ||

ಜಿಯ್ಯೆಂದೆರಂಗಿ ಬೀಳ್ಕೊಂಡು ಖಳಪಾತಕಂ |
ರಯ್ಯಮಾದಶ್ವರತ್ನಮನೇರಿ ನಿಖಿಳಜಗ |
ದಯ್ಯನಿರ್ಪಮಳ ಕೈಲಾಸದ ಬಹಿರ್ದ್ವಾರದೆಡೆಯೊಳೈತಂದುನಿಂದು ||
ಕಯ್ಯೆತ್ತಿಯಂಧಕಾಸುರನ ವೀರಂಗಳಂ |
ಪುಯ್ಯಲ್ಚುತಿರೆ ಶಂಕರಂ ಕೇಳ್ದು ಕರೆಸಲವ |
ನೊಯ್ಯನೈತಂದೀಶನಿದಿರಿನೊಳ್ ನಿಂದು ಬಳಿಕಾ ಭಟ್ಟನಿಂತೆಂದನು || ೯ ||

ಧಾತ್ರೀವಿಲೋಲನಮರಣ್ಯನಿರ್ಮೂಲನಂ |
ಗೋತ್ರಪ್ರಚೂರ್ಣಮಖಿಳಾಬ್ಧಿಶೋಷಣವಿಂದು |
ಮಿತ್ರಮಂಡಲಕಂಪಮುಡುಪತನಮುಹಿಪಕರಿಕೂರ್ಮಪತ್ನೀಮಂಗಳ ||
ಸೂತ್ರಖಂಡಂಗಳಾದುವು ಮತ್ಪತೀದಂಡ |
ಯಾತ್ರೆಯೊಳ್ ತವವಿಜಯಕಾರಣಂ ನಿಂ ಕಮಲ |
ನೇತ್ರನಂ ಕೊಟ್ಟು ಕಾಣ್ಬೆಯೊ ಬಂದು ಕಾದುವೆಯೊ ಪೇಳೆಂದನಾ ಭಟ್ಟನು
|| ೧೦ ||

ತಾಪಮಾಯ್ತುಜಹರೀಂದ್ರರ್ಗಂಧಕಾಸುರಪ್ರ |
ತಾಪಶಿಖಿ ಕಿವಿಗಳಂ ಪುಗೆ ಬಳಿಕ್ಕೊಡನಂತ
ಕೋಪಮಾಸುರಚರವಚಂಗೇಳ್ದು ಸಂದೀಶವೀರೇಶ್ವರಾದಿಗಳ್ಗೆ ||
ಕೋಪಮಾವರಿಸಲಿವನಾರ್ ಬೆನ್ನಸುಳಿಗಿ ಕರುಳ |
ನೀ ಪಂಥಮಂ ಬಗುಳ್ವ ನಾಲಿಗೆಯನರಿ ಕಾಲೊ |
ಕಾಪನಿತು ಸಡೆಯಸುತ್ತಿದ್ದು ತಮತಮಗೆ ಗರ್ಜಿಸಿದರೇಂ ವಣ್ಣಿಸುವೆನು || ೧೧ ||

೧-೧ ತುರುಗಳಂ ಪಿಡಿದರಿದಿರಾದ ಧೀರರುಮ (ಗೋ.) ; ತುರುಗಳಂ ಪಿಡಿದರಿದಿರಾದ ವೀರರುಮ (ಶಿ.) ೧-೨ ಸೂರೆ ತುರು (ಹು, ದಾ, ಮ.) ೩ ಭಟನೊರ್ವನಂ (ಶಿ, ಗೋ, ಪ.) ೪ ನ್ನೊಳು (ಶಿ, ಗೋ, ಹು, ದಾ, ಮ.)

ಸಾಕು ಸಾಕಾಯ್ತು ಪೋಪೋ ನಿಲ್ಲದೈ ನಿನ್ನ |
ನೀ ಕಳಾವಂತನೇಗೈದನವನೆಂದುದಂ |
ಜೋಕೆ ಮಿಗೆ ಪೇಳ್ದ ನಿವಸಂ ಕೊಲ್ಲ ಸಲ್ಲದೆಂದೆಲ್ಲರಂ ನಿಲಿಸಿ ಬಳಿಕ ||
ಆ ಕುಮತಿಯಂ ಕರೆದು ಹರಿಯೆತ್ತ ತಾನೆತ್ತ |
ಲೋಕಹಂಕರಿಸುವಂ ಕಾದುವೆವು ಪೋಗೆನಲ್ |
ಜೋಕೆ ಮಿಗಲೀ ವರ್ತಮಾನವನವಂ ಬಂದು ಖಳಪತಿಗೆ ಸೂಚಿಸಿದನು || ೧೨ ||

ಮತ್ತೆ ಪೊಡಕರಿಸಿ ಕೋಪಾಗ್ನಿ ರಕ್ಕಸನ ಮೈ |
ಪೊತ್ತಿದುದು ಕೈಲಾಸಪರ್ವತವನೀ ಕ್ಷಣಂ |
ಮುತ್ತುವೆನೆನುತ್ತಿರುಳ್ಪಗಲಾಗಿ ದಂಡು ನಡೆತರುತಿರಲ್ಕಾ ಕ್ಷಣದೊಳು ||
ಇತ್ತಲಸುರನ ದಾಳಿಗರ್ಗೆ ಸೆರೆಸೂರೆಗಳ |
ನಿತ್ತ ರಾಜ್ಯದ ಜನಂ ಪೊರಬಾಗಿಲೊಳ್ ಮೊರೆಯಿ |
ಡುತ್ತಿರಲ್ ಕೇಳ್ದು ಕೋಪದೊಳೀಶ್ವರಂ ನಂದಿಕೇಶ್ವರಂಗಿಂತೆಂದನು || ೧೩ ||

ಆದ್ಯಂತದೇವರ್ಕಳಂ ಸಿದ್ಧಗಂಧರ್ವ |
ವಿದ್ಯಾಧರಾಳಿಯಂ ಭೂತವೇತಾಳ ಬಲ |
ಚೋದ್ಯ ರುದ್ರಪ್ರಮಥಗಣಸೈನ್ಯಮಂ ಬ್ರಹ್ಮವಿಷ್ಣುಗಳ ಸೇನೆಗಳನು |
ಸದ್ಯಪ್ರಸನ್ನಾಹದಿಂದಂಧಕಾಸುರ ವ |
ಧೋದ್ಯುಕ್ತರಾಗಿದಿರ್ದಂಡೆತ್ತಲೆಂದಮರ |
ಸದ್ಯಂಗನಾಥರಂ ನೇಮಿಸಲ್ ಕರೆಸಿದಂ ನಂದೀಶನುತ್ಸವದೊಳು || ೧೪ ||

ಅನ್ನೆಗಂ ಸಿದ್ಧ ವಿದ್ಯಾಧರರ್ ಕಿಂಪುರುಷ |
ಕಿನ್ನರರ್ ಗರುಡ ಗಂಧರ್ವಾಪ್ಸರರ್ ಯಕ್ಷ |
ರುನ್ನತಪಿಶಾಚ ಗುಹ್ಯಕ ಭೂತನಿಕರ ಶಾಕಿನ್ಯಾಳಿ ರಾಕ್ಷಸನಿಕರರು |
ಸನ್ನುತ ಮಯೂರ ತುರಗರ್ ಸಕಲಲೋಕಗ |
ಳೆನ್ನೆಲ್ಲರುಂ ಬೆರಸಿ ಬರೆ ಸಕಲದಿಗಧಿಪರ್ |
ತನ್ನಿಜಬಲಂಗಳೊಳ್ ಬರೆ ಕರಿಯುಸೌರಿ ಸುರಪಾಲಕಂ ಪೊರಮಟ್ಟನು || ೧೫ ||

---

೧ ಸರ್ವ (ಶಿ, ಗೋ, ಹು, ದಾ, ಮ.)

ತವಕದಿಂದಷ್ಟವಸುಗಳ್ ಸವಬ್ರಹ್ಮರವ |
ರವರ ಸಂತತಿಗಳಾ ದ್ವಾದಶಾದಿತ್ಯರೊ |
ಪ್ಪುವ ಚತುರ್ದಶಮನುಗಳಖಿಳಗ್ರಹಾಳಿ ಖಳರಲ್ಲದಗಣಿತದನುಜರು |
ಸುವಿವೇಕಿ ರಾಜಋಷಿಗಳ್ ಜಗದ ಖಗಮೃಗದ |
ನಿವಹಾಧಿಪ ಸ್ಥಾವರರ್ ಜಂಗಮಾದಿಯೊಳ್ |
ತವೆ ಬಲ್ಲಿದರ್ ಬೆರಸಿ[೧]ಬರೆ ಬ್ರಹ್ಮನಂಚೆಯನಡರ್ದಿರದೆ ಪೊರಮಟ್ಟನು ॥ ೧೬ ॥

ಅಗಣಿತಜನಾರ್ದನರನಂತಬ್ರಹ್ಮರ್ ಬಹಳ |
ದಿಗಧಿಪರಸಂಖ್ಯಾತಲೋಕಪಾಲರ್ ಧರೆಯ |
ಯುಗಯುಗದ ಬಹುಚಕ್ರವರ್ತಿಗಳಪಾರದ್ವೀಪಾಧಿಪರ್ ಖಂಡಂಗಳ ||
ಮಿಗೆ ಪಾಲಿಪಪರಿಮಿತ ರಾಜರ್ಕಳಮಿತಭೂ |
ಮಿಗಳನಾಳ್ವರಸುಗಳ್ ಬರೆ ಮಂತ್ರತಂತ್ರ ಮಾ |
ಯೆಗಳೊಡನೆ ಬಲವೆ[೨]ಡಂ ಬರೆ ವಿಷ್ಣು ಗರುಡನನಡರ್ದಿರದೆ ಪೊರಮಟ್ಟನು
॥ ೧೭ ॥

ವೀರೇಶ ಗುಹ ಗಣಪ ನಂದೀಶ ಭೃಂಗೀಶ |
ಭೈರವರನೇಕಸೈನ್ಯಂ ಬೆರಸಿ ನಡೆದರತಿ |
ಘೋರಾಂಗ ಕಾಪಾಲಿ ಕಾಲಲೋಹಿತ ಧೂಮ್ರವರ್ಣ ವಿಷಧರಲೋಚನ ||
ಕ್ರೂರಾಸ್ಯ ವಜ್ರದಂಷ್ಟ್ರಕನನಿಲವೇಗನಂ |
ಗಾರ ಮುಖ್ಯಂತ್ರ್ಯಾಗ್ನಿ[೩]ಶಿರಭಮುಖಮುಖ್ಯಮಾ |
ದಾ ರೌದ್ರರೂಪುಗಳ ರುದ್ರಗಣಮಗಣಿತಂ ಬಲವೆರಸಿ ನಡೆತಂದುದು ॥ ೧೮ ॥

ಕಾಲಾಪಹರಣ ಘಂಟಾಕರ್ಣ ಧೂಮಾಂಗ |
ಹಾಲಾ[೪]ಹಲಾಶನ ವಿರೂಪಾಕ್ಷ ವಿಕಟಾಂಗ[೪] |
ಕಾಲಸ್ವರೂಪ ರವಿಶಶಿಪಾತ ಪರ್ವತಾಭರಣ ವಡಭಾಗ್ನಿ ತಿಲಕ ||
ನೀಲಾಂಗ ವಹ್ನಿಮುಖ ಸಾಗರಾಪೋಷಕಂ |
ಕಾಳಧರ ಸರ್ವಭಕ್ಷಕ ಮೃತ್ಯುಹರ ಮಹಾ |
ಕಾಳ ನಂದಿಪ್ರಮುಖಪ್ರಮಥಗಣವೊಗ್ಗಾಗಿ ಸೈನ್ಯಸಹಿತೈತಂದುದು ॥ ೧೯ ॥

೧ ಬಳಸಿ (ಶಿ, ಗೋ, ದಾ.) ೨ ವೊ (ಶಿ, ಗೋ.) ೩ ಖನಂತಗ್ನಿ (ಹು.); ಖರಂತಗ್ನಿ (ಶಿ, ಗೋ.) ೪-೪ ಶನಂ ವಿರೂಪಾಕ್ಷ ವಿಕಟಾಂಗನುಂ (ಮ.)

ವಾಮದೊಳ್ ಶಕ್ತೀಗಣಂ ಬೆರಸು ಪಾರ್ವತೀ |
ಭಾಮೆ ಬರೆ ವೃಷಭಯೋಗಾಚಾರ್ಯರುಂ ಮುನಿ
ಸ್ತೋಮಮಾ ಬಲಗಡೆಯೊಳ್ಕೈತರಲ್ ಮುಂದೆ ನಾನಾವೇದಮುಗ್ಗಡಿಸಲು ||
ಸಾಮೀಪ್ಯ ಸಾಲೋಕ್ಯ ಸಾರೂಪ್ಯದವರುಂ ಸ |
ನಾಮವಗಣಿತರುದ್ರತತಿ ಮುಂದೆಬರೆ ಕಾಲ |
ಕಾಮಾಂತಕಂ ಮಹಾವೃಷಪತಿಯನೇರಿ ಕೈಲಾಸಮಂ ಪೊರಮಟ್ಟನು || ೨೦ ||

ಎಲೆ ಸಿದ್ಧರಾಮ ಕೇಳ್ ಮಳೆವನಿಗಳಂ ಭಗಣ |
ಕುಲಮನೆಣಿಸಲ್ ಬಹುದು ಕಡಲೇಳರೊಳಗಿಪ್ಪ |
ಮಳಲನೆಣಿಸಲ್ ಬಹುದು ಶಿವಗಣಂಗಳ ಬಲದ ಲೆಕ್ಕಮನಿತಿನಿತೆಂಬುದ ||
ಬಳಿಕಾ ಶಿವಂ ಬಲ್ಲನರಿಯನೆಂದೂಹಿಸುವೊ |
ಡಳವಲ್ಲದಖಿಳಶಿವಗಣಮಂದು ದುರ್ಗದಿಂ |
ದಿಳಿದು ಬೀಡಂ ಬಿಟ್ಟು ದಂಡೆತ್ತಿ ಪಯಣಪಯಣದೊಳೆ ನಡೆತರುತಿರ್ದುದು
|| ೨೧ ||

ಡವುಡೆಮುಂತಾಗಿರ್ದ ಬಹುವಾದ್ಯದಬ್ಬರಕೆ |
ಕಿವುಡಾಯ್ತು ಜಗತೀಕುಲಂ ಬಲದ ಪದಹತಿಗೆ |
ತವುಡಾಯ್ತು ಗಿರಿಸಂಕುಲಂ ಸೈನ್ಯಭಾರದಿಂ ಸೀರೆಯುಂ ಸುತ್ತಿದಂತೆ ||
ಸಿವುಡಾದನಹಿರಾಜನಖಿಳದಿಗ್ಗಜರಾಜಿ |
ಪುವುಡೂರಿ ಮಣ್ಗಚ್ಚಿದುವು ಗಜಂ ತುಳಿದೊಡೆದ |
ಕವುಡೆ[೧]ಯುಂತಾಯ್ತು ಕಚ್ಛಪನ ಬೆನ್ ಸಿದ್ಧರಾಮೇಶ[೧] ಕೇಳದ್ಭುತವನು || ೨೨ ||

ಗೊಂದಣಿಸಿ ನಡೆವ ಮದಕರಿಗಳಿಂ ಹರಿಗಳಿಂ |
ಮುಂದಣಿಂ ಮುಂಚುವ ಭಟರ್ಗಳಿಂ ತೇರ್ಗಳಿಂ |
ದಂದಣದೊಳ್ಕೈತಪ್ಪ ವೀರರಿಂ ಧೀರರಿಂದೆಸೆವ ಬಹುವಾದ್ಯದಿಂದೆ ||
ಪಿಂದನೆಣಿಸದೆ ಬರ್ಪ ಕಲಿಗಳಿಂ ಛಲಿಗಳಿಂ |
ಸಂದಣಿಪ ಛತ್ರಧ್ವಜಾಳಿಯಿಂ ಧೂಳಿಯಿಂ |
ಕುಂದದೆಸೆವಷ್ಟತರಸಂಗಳಿಂ ಕಂಗಳಿಂ ನೋಡೆ ಪಡೆ ಪಡಸಾದುದು || ೨೩ ||

೧-೧. ಕಾಯುಂತಾಯ್ತು ಕಚ್ಛಪನ ಬೆನ್ ಸಿದ್ಧರಾಮ (ಶಿ, ಗೋ, ಹು, ದ.)

ಏನೆಂಬೆನೈ ರಾಮ ಕೇಳತ್ತಣಿಂ ಹರನ |
ಸೇನೆಯೈತಪ್ಪುದಂ ಕೇಳ್ದಿತ್ತಣಿಂ ಖಳನ |
ಸೇನೆಪೈದಿದುದುಭಯಸೇನೆಯಾನೆಗಳ ಮೇಲಣಕೇತುಪಟವಾಗಲು |
ಭಾನುಮಂಡಲಕೆ ಮುಸುಕಿರ್ದ ಧೂಳಂ ಬೀಸೆ |
ಸಾನಂದದಿಂದೈದುದಿರ್ಬಲದ ಚೂಣಿಯ ಭ |
ಟಾನೀಕಮುಭಯಬಲಮಂ ಕಂಡು ತೋಳ್ಪೊಯ್ದು ಬೊಬ್ಬಿರಿದುವಾ ಕ್ಷಣದೊಳು
|| ೨೪ ||

ಇರ್ದೆಸೆಯ ಕುದುರೆಗಾರರ್ ಚೂಣಿಯೊಳ್ ಕಾಣು |
ತ್ತಾರ್ದು ನಿಡುಸೂಟಿಯೊಳ್ ನಿಲ್ಲದೋರ್ವಾಘೆಯೊಳ್ |
ನಿಾರ್ದು ಸದಳಂಗಳಂ ಸುಲಿದು ಸೆರೆತುರುಗಳಂ ಪಿಡಿದರಿದಿರಾದಡೊಡನೆ
ಪೊರ್ದರಿರಿದರ್ ನೂಂಕಿದರ್ ಮರಳಿ ಪಿನ್ನೆಲೆಗೆ |
ಸಾರ್ದು ಖೋಯೆಂದುರುಬಿ ತಮತಮಗೆ ಪೊಯ್ದಾಡು |
ತ್ತಿರ್ದುದಲ್ಲಲ್ಲ ಬಳಿಕೊರ್ವರೊರ್ವರ್ಗೆ ತೆಗೆಯದೆ ನೂಂಕಿ ಬರಲೀಯದೆ || ೨೫ ||

ಬೇರೆಬೇರಾಜಿಯೊಳ್ ಪಿಂದಣಿಂ ಬಲ್ಗುದುರೆ |
ಗಾರರಂ ಕಂಡು ಫೌಜಂ ಕಾಣುತೊಡಹಾಯ್ಸಿ |
ತ್ತಾರುತಟ್ಟಂ ಮಾಡಿ ಕುದುರೆರಾವ್ತರ್ ಹಲ್ಲಣಂಗಳೊಂದೇ ಹೊಯಿಲಿಗೆ |
ಹಾರಲಾರ್ತುಂಡಾಗಿ ಪರಿದ ರಕ್ತಂ ಪೊನಲ್ |
ನಿಾರೆ ಕಡಿತಲೆಗಳಂ ಕೊಂಡು ತಮ್ಮೊಡೆಯರ್ಗೆ |
ತೋರಿಸಿ ನಿವಾಳಿಸಿ ಬಿಸುಟ್ಟರಿರ್ಬಲದ ಚೂಣಿಗರದೇಂ ವಣ್ಣಿಸುವೆನು || ೨೬ ||

ಭಟರೊಡನೆ ಭಟರಾನೆಗಳೊಳಾನೆಗಳ್ ಮಹಾ |
ಚಟುಳರಥಿಕಾಳಿಯೊಳ್ ರಥಿಕಾಳಿ ರಾವ್ತರೊಳ್ |
ಪಟುತರದ ರಾವುತರ್ ನೂಂಕಿ ಬಳಿಕೆಚ್ಚು ಪೊಯ್ದಾಡುತಿರೆ ಮರಳಿ ಮರಳಿ |
ಅಟಮಟಿಸಿ ಮಗುಳೊತ್ತಿ ಕತ್ತರಿಸಿ ಬಳಿಕೊಡ್ಡಿ |
ದಿಟವಲ್ಲ ಪುಸಿಪೊಯ್ಲಿದಂ ತೆಗೆಯೆನುತ್ತೆ ನಿ |
ಚ್ಚಟದ ಕಲಿಗಳ್ ಕಾದುತಿರ್ದರಿರ್ಬಲದ ಮುಂಗುಡಿಯವರದೇನೆಂಬೆನು || ೨೭ ||

---

೧ ಸಿ (ಶಿ, ಗೋ.) ೨ ರ್ಮೆತಂದು (ಶಿ, ಗೋ, ಮ, ಹು, ದಾ.)

ಬರುತಿರ್ಪುದಸಿತರೊಳ್ ಸಿದ್ಧರಾವೇಶ ಕೇಳ್ |
ಶರಧಿಶರಧಿಗಳಿರದೆ ತಾಗುವಂತಾ ಮಹಾ |
ಗಿರಿಗಿರಿಗಳಿದಿರಾಗುವಂತೆ ಪೇರಡವಿಪೇರಡವಿಗಳ್ ಸಂಧಿಪಂತೆ ||
ಫಣಿಸಭಂಗಳ್ ಸೋಂಕುವಂತೊಡನೆ ಪ್ರಳಯಜಲ |
ಧರಜಲಧರಗಳೊರಸೊರಸುವಂತೆ ಕಣ್ಗೆಸೆವ |
ವೆಂಡರಸುವಳವಸಿತರೊಳ್ ಪಶ್ಚಿಮಾಬ್ಧಿಗ್ರಹಮಂ ಭಾಸ್ಕರಂ ಪೊಕ್ಕನು || ೨೮ ||

ಮುಗಿದುದಬ್ಜಾಳಿ ಬಾಯ್ದೆಗೆದುದುತ್ಪಲನಿಕರ |
ಮುಗಿಲ್ಪುದು ರಥಾಂಗಕುಲಮೊಗೆದುದಾಗಳೆ ಸಂಜೆ |
ಜಗಜಗಿಸಿತುಡುಗಣಂ ಗಗನದಿಗ್ಭರಿಗಳಂ ಮಿಗೆ ಮುಸುಂಕಿದುದು ತಿಮಿರಂ ||
ತೆಗೆದುದಾ ಚೂಣಿಗಾಳೆಗಮಾಗ ಬೇಗ ದಳ |
ಯುಗಪತಿಗಳಾಜ್ಞೆಯಿಂ ತೆಗೆದೆರಳ್ದಂಡು ನೆಲ |
ನಗಲದೊಳ್ ಬೀಡುಬೀಡುಗಳ್ಬೈದೆ ಬಿಟ್ಟುವಾರ್ ಪೊಗಳ್ವರವರೇಳ್ಗೆಗಳನು || ೨೯ ||

ಇಳಿಪು ಗಜವಾಜಿಗಳ ಗುಳಪಲ್ಲಣಂಗಳಂ |
ಕಳಚು [1]ತೇರ್ ತೇಜಿಗಳ ಕೊರಳ ನೊಗಗಳನೆತ್ತು[1]
ಗಳ ಪೇರ್ಗಳಂ ನೂಂಕಿ ಬಿಡು ಸಬರಮಂ ಜೀವಧನಕೆ ನೀರ್ಗಳನೀಂಟಿಸು ||
ಬಲಿದು ಗೂಂಟಗಳನೆತ್ತಾನೆ ಕುದುರೆಗಳ ನೀಂ |
ಮೇಳೆಯಿಕ್ಕು ಗುಡಿಗಳಂ ಪೊಯ್ಯು ತೃಣಕಾಷ್ಠಾಗ್ನಿ |
ಜಲಮುಖ್ಯಸಾಧನಮನೊದವಿಸೆಂದೆಂಬ ದನಿಯುಭಯಕಟಕದೊಳೆಸೆದುದು || ೩೦ ||

ನೀಲ ಕಲಧೌತ ಕನಕಾರುಣ ಮಹಾದ್ರಿಗಳ್ |
ತಾಳಿ ಬಹುರೂಪನೆರಡೊಡ್ಡಾದುವೆಂಬಂತೆ |
ನಾಲಾಗ ನೆಗಳ್ದುದಾ ಬಣ್ಣಬಗೆಗಳೊಳೆಸೆವ ಗೂಡಾರಗಳ್ ರುದ್ರನ |
ಪಾಳೆಯದೊಳನೆ ಸೆಗಳೊಳ್ ಬಿಟ್ಟುದಷ್ಟದಿ |
ಕ್ಪಾಲಕರ್ ತದಂತರಂ ವೀರಾದಿಪ್ರಮುಥರಿರೆ |
ಸಾಲ್ಕಂಧರನೆಡಬಲಂಗಳೊಳ್ ಹರಿಯುಜರ್ ಬಿಟ್ಟರದನೇನೆಂಬೆನು || ೩೧ ||

೧-೧ ಪರ್ ತೇರ್ ತೇಜಗಳ ಕೊರಳ ನೆಗೆದೆತ್ತು (ಹು.); ಪರ್ ತೇಜಗಳ ಕೊರಳ ನೊಗಗಳನೆತ್ತು (ಪಾ.); ತೇರ್ ತೇಜಿಗಳ ಕೊರಳ ನೊಗನೆತ್ತು (ಮು.) [illegible] ಕರ ತೆಂದಂತರಂ ವೀರ (ಶಿ, ಗೋ.)

ಇಂತು ನೆಲದಗಲದೊಳ್ ಸಕಲವಿಭವಂಗಳಿಂ |
ದಂತರಂತರದೊಳೀಶ್ವರನ ದಂಡಿಳಿದುದಿದ |
ರಂತೆ ಪರಿವಿಡಿಯೊಳನಿತಗಲದೊಳಗಂಧಕಾಸುರನ ಪಾಳೆಯವಿಳಿದುದು |
ಕಾಂತಿಯಿಂದಂಗಡಿಗಳೊಳ್ ಸರ್ವಜನತಾಗ್ರ |
ಪಾಂತದೊಳ್ ದೊರೆದೊರೆಗಳೋಲಗದೊಳೊಪ್ಪಿದುವ |
ನಂತದೀಪಂ ದೊಡ್ಡದೀವಟಿಗೆಗಳ್ ನಭದ ನಕ್ಷತ್ರಜಾಲದಂತೆ ॥ ೩೨ ॥

ಸುತ್ತಲುಂ ಗೇ[೧]ರಿಯುಂ ನೆಗಳ್ವವಾ[೧]ಗಿ ಪಾಳೆಯದೊ |
ಳೆತ್ತೆತ್ತಲುಂ ಕೋಟಿವಾದ್ಯಘೋಷಂಗಳಿಂ |
ಪೊತ್ತಿಸಿದ ಪಂಜುಗಳನೇಕದಿಂದೊಳಪಹರಿಗ[೨]ಳ್ ಮೆರೆದುವವರ ಪೊರೆಗೆ |
ಬಿತ್ತರದೊಳಶ್ವ ಗಜ ರಥ ಪದಾತಿಗಳೊಡನೆ |
ಹತ್ತುಪದ್ಮ ಪ್ರಬಲಭಟರುಕ್ಕಿಡಂಗಳನಿ |
ರುತ್ತಿರಲ್ಕುಭಯಶಿಬಿರಂಗಳುಂ ಪಲವುತೆರದೆಚ್ಚರಿಕೆಯಿಂದೆಸೆದುವು ॥ ೩೩ ॥

ಆ ರುದ್ರನೇಮದಿಂ ಬಲದ ಕಾವಲ್ ಕಾಲ |
ಭೈರವನ ವಶವಾಯ್ತು ಸೇನಾಧಿಪತ್ಯಂ ಕು |
ಮಾರಕಂಗಾದುದೀಶ್ವರನಲ್ಲದುಳಿದರೊಡೆತನವಾಯ್ತು ದಕ್ಷರಿಪುಗೆ |
ಈ ರಕ್ಕಸರ ತಳವರಂ ಜಂಭನವನ ಪರಿ |
ವಾರಾಧಿಪತಿಯೆ ಶತಮಾಯನಾ ಬಲದಾರ |
ಭಾರವೇ ಕುಂಭಾಸುರಂಗಾದುದಿದುಳಿನೋಲಗದೊಳವರಿತ್ತಂಡದ ॥ ೩೪ ॥

ನಾಳೆ ಬಲ್ಗಾಳಗವೆನುತ್ತೆ ಸಾರಿದರೆರ |
ಳ್ಪಾಳೆಯಂಗಳೊಳೋಲಗಂ ಪರೆದುವುಂಡು ನಿ |
ದ್ರಾಲಿತಾಂಗಿಯ ಸೌಖ್ಯಮಂ ಪಡೆದುದಖಿಳಜನಮನಿತರೊಳ್ ಮುಂಬೆಳಗಿನ |
ಕೋಳಿ ಕೂಗಿತು ಮೂಡದೆಸೆಗೆಂಪಡರ್ದುದ |
ಬ್ಜಾಳಿಯರಳ್ದುವು ಮುಗಿದುವುತ್ಪಲಂ ಪೂರ್ವಾಂಗ |
ನಾಲಲಿತಮಾಣಿಕ್ಯಮುಕುರದಂತುದಯಾದ್ರಿಯೊಳ್ ಭಾಸ್ಕರಂ ಮೆರೆದನು ॥ ೩೫ ॥

೧-೧ ಯುಂ ನೆಗಳ್ವ ತಾ (ಮ.) ೨ ಗ್ಗ (ಮ.)

ರುದ್ರನುಪ್ಪವಡಿಸಿದನೆಳ್ಚತ್ತರಾ ವೀರ |
ಭದ್ರಮುಖ್ಯರ್ ಖಳನ ಪಾಳೆಯಮೊಳಿಲ್ದಗೇ |
ನಿದ್ರೆ ತಿಳಿದುದು ಲಗ್ಗೆವರೆ ಮೊಳಗಿದುವು ನಿತ್ಯನಿಯಮಂಗಳಂ ತೀರ್ಚಿಸಿ ||
ಸದ್ರಾಜರಾಹವೋದ್ಯುಕ್ತಬಲರಾಗಿ ತ |
ತ್ತದ್ರಮ್ಯವಾಹನಂಗಳನಡರ್ದರ್ ತುರಗ |
ಭದ್ರಗಜ ರಥ ಪದಾತಿಗಳ ಪೌಜುಗಳಿರಲ್ಬಲದೊಳಾಯತವಾದುದು || ೩೬ ||

ಎಲೆ ಸಿದ್ಧರಾಮ ಕೇಳ್ ಕಲಹ ಸಮಯಂಗಂಡು |
ಉಳಿ ಮಸಗಿದುವು ಕುದುರೆಗಳ್ ದಂತಿಗಳ್ ತಮ್ಮ |
ನೆಲನಿದಿರಾನೆಯೆಂದಪ್ಪಳಿಸಿದುವು ಪಟುಭಟರ್ ಮುಂಚಿ ತವಕಿಸಿದರು ||
ಬಳಿಕ ನಸುನಗುತಂಧಕಾಸುರಂ ತನ್ನಿಕೆಲ |
ದಲಿಹ ಶುಕ್ರನ ಮೊಗಂ ನೋಡಿ ತೋರಿಸುವುದೀ |
ಬಲದ ದೊರೆದೊರೆಗಳಂ ಬೇರೆಬೇರೆನೆ ಶುಕ್ರನಾ ಖಳಂಗಿಂತೆಂದನು || ೩೭ ||

ಶ್ರೀಪಾದದಾಲಿಸೈ ದನುಜೇಂದ್ರ ನೆಗಳ್ದ ಕಣ್ |
ಸಾಸಿರದ ಪಿಡಿದ ವಜ್ರದ ಶುಭ್ರಗಜಕಂಧ |
ರಾಸನದೊಳಿರ್ಪ ಗಾಡಿಯ ಸುತ್ತಲೆತ್ತಲುಂ ಬಳಸಿಕೊಂಡೊಪ್ಪುತಿರ್ಪ ||
ಆ ಸಕಲದಿಕ್ಪಾಲಕಾದಿಬೃಂದಾರಕಮ |
ಹಾಸುಭಟಕೋಟಿಗಳ ಮಧ್ಯದೊಳ್ ನಾಡೆಸುವಿ |
ಲಾಸದಿಂದಿರ್ಪಾತನೀತನೆ ಜಂಭಾರಿಯೆಂಬವಂ ನೋಡೆಂದನು || ೩೮ ||

ರಾಜಹಂಸನ ಮೇಲೆ ರಂಜಿಸುವ ನಾಲ್ಮೊಗದ |
ತೇಜದವನೀ ಬ್ರಹ್ಮನೀತನಿಂದಾದರ್ ವಿ |
ರಾಜಿಪ ನವಬ್ರಹ್ಮರವರಿಂದಮೀ ದನುಜರಾ ಸುರನರೋರಗಾದಿ ||
ಮೂಜಗಂಗಳೊಳ್ಪಿಡಿದೆ ತೋರ್ಪ ನಾನಾಜೀವ |
ರಾಜಿಯುದಿಸಿದುದು ಸದ್ಮದ ಸೇನೆಯೊಳಗೀತ |
ನಾಜಗದಿರಾಂಪರಂ ಕಾಣಿಸಿದನೇ ಲೋಕಪಿತನೊಲ್ದು ನೋಡೆಂದನು || ೩೯ ||

೧-೧ ರ್ ಖಳನ (ದಾ.); ರ್ ಶಿವನ (ಹು.); ರ್ಕಲುಂ (ಮು.) ೨ ನ್ಯ (ಶಿ, ಗೋ, ಹು.)
೩-೩ ಬಲ | ಗೆಲ (ಶಿ, ಗೋ, ಹು, ದಾ, ಮು.) ೪ ನೋ (ಗೋ, ಮು.)

ಆಲಿಸಿನ್ನಿತ್ತಲಾ ಪಕ್ಷಿರಾಜನ [೧]ಬೆನ್ನ |
ಮೇಲೆ ರಂಜಿಪ ಶಂಖ ಚಕ್ರ ಗದೆ[೧] ಶಾರ್ಙ್ಗದ ವಿ |
ಶಾಲಚಾತುರ್ಭುಜದ ಪೊಳೆವ ಪೀತಾಂಬರದ ಮಸ್ತಕದ ಮಣಿಮಕುಟದ ||
ನೀಲಕಾಯದ ಕೌಸ್ತುಭಾಂಕಿತೋರಸ್ಥಳದ |
ಲೀಲೆಯಿಂ ಸಕಲಲೋಕಂಗಳಂ ರಕ್ಷಿಸುವ |
ಪೇಳಲೇನನ್ವರ್ಥನಾಮದಸುರಾಂತಕನಿವಂ ನೋಡು ನೀನೆಂದನು || ೪೦ ||

ಆರೈದು ನವಿಲಡರ್ದಾರ್ಮೊಗದ ಜಗದೇಕ
ವೀರನಂ ನೋಡು ಪಿಂದಖಿಳಲೋಕಂಗಳಂ |
ತಾರಕಂ ತಿಂದು ತೇಗುತ್ತಿರಲ್ ವಿಧಿವಿಷ್ಣುಮುಖ್ಯದಿವಿಜರ್ ಮೊರೆಯಿಡೆ ||
ಮಾರಾರಿ ಕೇಳೀತನಂ ಪಡೆದೊಡೇಳ್ದಿನದೊ |
ಳಾ ರಾಕ್ಷಸಪ್ರಾಣಮಂ ಕೊಂಡ[೨]ನಿನ್ನಿವಂ |
ಗಾರಿದಿರು ಶಿವಬಲಕೆ ಸೇನಾಧಿನಾಯಕನಿವಂ ನೋಡು ನೀನೆಂದನು || ೪೧ ||

ಭೀಮರೂಪಿನ ಫಲಕಖಡ್ಗದಿಂದೆಸೆವ ನಿ |
ಸ್ಸೀಮನೇ ವೀರೇಶಸಿವನೀಶಕೋಪಾಗ್ನಿ |
ಧಾಮದೊಳಗುದಿಸಿಯುಜಹರಿಗಳಂ ಬಡಿದು ದಕ್ಷನ ಶಿರವನರಿದು ಬಳಿಕ[೩] ||
ಹೋಮದೊಳಗಿಟ್ಟು ನರಹರಿ ಪಂಚಮೇಢ್ರ ಬಹು |
ಭೀಮವಿಕ್ರಮ ಜಲ[೪]ವ್ಯಾಳ ಸಿಂಹಾಸುರ |
ಸ್ತೋಮಮಂ ಮುಳಿದು ಸಂಹರಿಸಿದನಿವಂಗೊರ್ವರಿದಿರಿಲ್ಲ ಕೇಳೆಂದನು || ೪೨ ||

ಅವರ ನೋಡತ್ತಲಾನುಂ ಮುನಿಯೆ ಲೋಕಸಂ |
ಘವನುರುಪುವರ್ ಸಕಲಬ್ರಹ್ಮಾಂಡಭಾಂಡಮಂ |
ತವೆ ನಿಮಿಷದೊಳಗೊಡೆವರಬ್ಧಿಗಳನಾಪೋಷಣಂಗೊಂಬರಾಗಸವನು ||
ಅವನಿಯಂ ಕಿಳ್ತು ತಾಳವನೊತ್ತುವರ್ ಶೈಲ |
ನಿವಹವಂ ಪುಡಿಗೈವರಹುದಲ್ಲವೆಂದೊಡೀ |
ಶಿವನ ಲೆಕ್ಕಿಸದ ರುದ್ರ ಪ್ರಮಥ ಭೂತಗಣಮಗಣಿತಂಗಳೆಂದನು || ೪೩ ||

೧-೧ ಮೇಲೆ | ಲೋಲಿಪಂ ಶಂಖ ಚಕ್ರಂ ಗದಾ (ಶಿ, ಗೋ.) ೨ ತರಿದ (ಶಿ, ಗೋ.) ೩ ಮುಖದ (ಶಿ, ಗೋ, ಹು, ಮ.) ೪ ಜ್ವಾಲ (ಶಿ, ಗೋ, ಹು.)

ಲೀಲೆಯಿಂ ಪಂಚವದನದ ತ್ರಿಪಂಚಾಕ್ಷಿಗಳ |
ಶೂಲ ವಜ್ರಾಭಯ ಮಹಾಖಡ್ಗ ಪರಶು ಸು |
ವ್ಯಾಳಾಗ್ನಿ ಪಾಶಾಂಕುಶ ಪ್ರಘಂಟಾಯುಕ್ತ ಚಾರುಭುಜದಶಕದಿಂದೆ |
ಆಲೋಲಫಣಿಕುಂಡಲದ ಕಂಠದೊಳ್ ಮೆರೆವ |
ಹಾಲಾಹಲದ ಚಂದ್ರಕಾಂತಕಾಂತಿಯ ಶಿರೋ |
ಮಾಲೆಗಳ ಚರ್ಮಾಂಬರದ ವೃಷಭವಾಹನದ ದೇವನಂ ನೋಡೆಂದನು ॥ ೪೪ ॥

ಮರೆಯ ಮಾತಲ್ಲವಗಣಿತಹರಿಯಜೇಂದ್ರರಂ |
ನೆರೆ ಸೃಜಿಸಿ ರಕ್ಷಿಸಿ ಲಯಂಗೆಯ್ವು ಮಾಣದುರೆ |
ಮರಳಿ ಪುಟ್ಟಿಸುವನೀ ಮಹಾತ್ಮನ ಮಹಾತ್ಮೆಯಂ ಶೇಷಂಗೆ ಪೊಗಳಲಳವೆ ॥
ಮರೆವೊಕ್ಕರಂ ಕಾಯ್ವ ಮಾರಾಂತರಂ ಕೊಲ್ವ |
ತರಿಸಂದ ಬಿರುದೀತನದು ಶರಣ್ಬೊಗು ಪಿಂದ |
ನರಿದರಿದು ಪೇಳ್ದೆವು ಕೆಡಲ್ ಬೇಡವೆನೆ ಖಳಂ ಖತಿಯೊಳಂದಿಂತೆಂದನು ॥ ೪೫ ॥

ಪಿಂದಣವರ್ಗಳೊಳಾನದೊರ್ವನೇಯಾರಯ್ಯೆ |
ಬಂದು ಕರುಳಂ ತೊಳೆವೊಲಾಯ್ತಾಯ್ತು ಗುರುಗಳೇ |
ನೆಂದರೇನೆನುತೆ ಕಿಡಿಕಿಡಿವೋಗಿ ಬಳಿಕಾ ಖಳಂ ತೀವ್ರಕೋಪದಿಂದೆ ॥
ಪೊಂದೇರನಾರ್ಭಟಿಸಿ ನೂಂಕುತಿರಲಾ ಕ್ಷಣಂ |
ಮುಂದುವರಿದುಭಯಸೇನಾಭಟರ್ ಚೂಣಿಯೊಳ್ |
ಸಂದಿಸಿ ಮಹಾಹವದೊಳೆಚ್ಚಾಡಿದರ್ ಬೊಬ್ಬೆಯಬ್ಬರಂ ಪರ್ಬುತಿರಲು ॥ ೪೬ ॥

ಗರ್ಬದಿಂ ಬಡಿದು ನಾದಧ್ವನಿ ಧರಿತ್ರಿಯೊಳ್ |
ಪರ್ಬಿದುದು ಮಡಲಿರಿದು ಪಟುಭಟರ್ ತಂತಮ್ಮೊ |
ಳೊರ್ಬೊರ್ಬರಂ ಜರೆದು ಹರಿಗೆ ಬಿಲ್ ಸಬಳ ಡೊಂಕಣಿ ಕತ್ತಿ ತವೆ ಮುಸುಂಡಿ ॥
ಕರ್ಬುನದ ಕೋಲ್ ಮುಖ್ಯವಿವಿಧಾಯುಧಂಗಳಿಂ |
ದಿರ್ಬಲದ ಕಾಲವರ್ ಪೊಯ್ದಾಡಿ ನೆತ್ತರಿನ |
ಪೆರ್ಬೊಳೆಗಳೊಳ್ ತೇಂಕುತಿರ್ದರರೆನಿಮಿಷದೊಳ್ ರಾಮ ಕೇಳದ್ಭುತವನು ॥ ೪೭ ॥

---

೧ ನೆರೆ (ಶಿ, ಗೋ.)

ಮತ್ತೆ ಶತಮಾಯ ಷಣ್ಮುಖರ ನೇಮಂಗಳಿಂ ।
ದೊತ್ತಿ ತಂದುಭಯಚಾತುರ್ಬಲಂ ಕವಿಕವಿಸಿ ।
ನುತ್ತೆ ರಥದೊಳ್ ತೇರ್ ತುರಂಗದೊಳ್ ಕುದುರೆ ಕರಿ[1]ಯೊಳ್ ಗಜಂ[2] ಭಟರೊಳಾಳು ।
ಒತ್ತಿದರ್ ದೊರೆದೊರೆಗಳಿಂ ಬೆನ್ನೊಳಿರ್ದು ನಡೆ ।
ಮುತ್ತು ತೆಗೆದೆಸು ನೂಂಕು ತಿವಿ ಪೊಡೆ ಪೊರಳ್ಚಿರಿದು ।
ಕತ್ತರಿಸು ಸೀ[3]ಳ್ ಮೋದು ನುಂಗೆನುತೆ ತಮತಮಗೆ ಕೈಕೊಂಡರೇವೇಳ್ಸಿಸು ॥ ೪೮ ॥

ಹೊದರ ಝಲ್ಲಿಗಳಡಾಯುಧ ಕೆಯ್ಯ ಪೊಡೆ ಸರಳ ।
ಹೊದೆಗಳಂ ತತ್ತ್ರಸ್ಥಳಂಗಳೊಳ್ ಕಟ್ಟಿ ಬಿಲ್ ।
ಹೆದೆಯನಾರ್ಪಿದು ಗೊಲೆಗೇರಿಸುತೆ ಜೇವೊಡೆದು ಕರ್ಣಾಂತಕಂಬುದೊಟ್ಟು ॥
ಕದಲದತ್ತಿತ್ತ ಮಂಡಿಯನಿಕ್ಕಿ ತೆಗೆದೆಸು ।
ತ್ತಿದಿರಂಬುಗಳ[4]ನೊಡನೆ ಖಂಡಿಸುತ್ತೆಸುಗೆಗುಂ ।
ದದೆ ಕೊರಳ್ ನಡುಗಳಿಕ್ಕಡಿಸಲೆಚ್ಚಾಡಿದರ್ ಬಿಲ್ಲಬಿನ್ನಣಿಗರಂದು ॥ ೪೯ ॥

ಪಲತೆರದ ಬಿರುದುಗಳ್ ಕಿರುಗತ್ತಿಗಳ್ ನೆಲ ।
ಕ್ಕಲೆವ ಝಲ್ಲಿಗಳಂಗದೊಳಗವುರ್ದ ಬಣ್ಣಬಗೆ ।
ಗಳ ಬೆಳ್ಳಿಪೊಂಗುಬ್ಬಿವರಿಗೆಯಂ ತೊಡೆ ಚಾಟುಗೊಳುತೊಡನೆ ಖಡ್ಗಂಗಳ ॥
ಝಳಪಿಸುತೆ ಲಾವಣಿಗೆಯಂ ಕದಲದೊಡ್ಡುತ ।
ಪ್ಪಳವಿ ಮೇಲ್ಕೀಳ್ಕೊಯಿಲ್ಮೊನೆ ದಿವಿಗುಳಿಂದೆ ಮೆ ।
ಯ್ಗಳ ತುಂಡುಗಳ್ ಬೀಳೆ ಮೂದಲಿಸಿ ಪೊಯ್ದಾಡುತಿರ್ದರಾ ಹರಿಗೆಯವರು ॥ ೫೦ ॥

ಮಿಗೆ ತನಗೆ ಸಂಜೋಗಮಂ ತೊಟ್ಟು ಹಯತತಿಗೆ ।
ಮೊಗರಂಬ ಕಡಿಯಣಂಗಳನಿಟ್ಟು ಪಲ್ಲಣದ ।
ಬಿಗುಹುಗಳ ತಾಪಣೆಯ ಲೇವೆಗಳನಳವಡಿಸಿ ಬಲ್ಗಂದವಿಡಿದು ನಮಿಸಿ ॥
ನೆಗೆದಡರಿ ಸೇಜಯಂಜೊತ್ತೇರಿ ತಿವಿದೊಡನೆ ।
ಚಿಗದೆತ್ತಿ ಬಿಸುಡುತ್ತೆ ರಾವ್ತ[5]ಗುದುರೆಗಳನುಗಿ[5] ।
ಬಗಿವಾಡಿ ಕಾದುತ್ತಲಿರ್ದರಿರ್ಬಲದ ಘೋಟಾರೂಢರಾಹವದೊಳು ॥ ೫೧ ॥

೧ ಕರಿಯು (ಶಿ, ಗೋ.) ೨ ಳಿ (ಪ, ಗೋ.) ೩ ಗೊಂಡೆ (ಮ.) ೪ ಗ (ಮ.)
೫-೫ ರ್ ಕುದುರೆಗಳುಗಿ (ಮ.)

ತೊರಜೆ ನಿಳಿ ಘಂಟೆ ಸರಪಳಿ ಕೊಂಬು ಕತ್ತಿಯುಂ
ಬರಕದಳಿ ರಂಚಿಕೆಗಳಂ ತಾಳ್ದ ಭದ್ರಮದ |
ಕರಿಗಳಪಡರ್ದು ಜೋದರ್ಕಳಂಕುಶದೊಳೊತ್ತಲ್ ಘೀಳಿಡುತ್ತಗಲಕೆ ||
ಪರಿದೆಡಬಲಂ ಪಿಂದುಮುಂದಣವರಂ ಕಾಲೊ |
ಳರಿದು ತೇರ್ ಕುದುರೆಗಳನಪ್ಪಳಿಸಿ ಮಿಗೆ ಚಾರಿ |
ಪರಿದಾನೆಯಾನೆಯೊಳ್ ಕೈಗೊಟ್ಟು ತಿವಿದಾಡುತಿರ್ದರತಿಗಾಢದಿಂದೆ || ೫೨ ||

ವಾರುವಗಳಂ ಪೂಡಿ ಕೀಲಚ್ಚು ಬಳೆ ಮೊಳೆಯ |
ನಾರೈದು ಸಿಂಧಮಂ ನೆಗಪಿ ಶಸ್ತ್ರಾಸ್ತ್ರಮುಮ |
ನೋರಂತೆ ತುಂಬಿ ಚಮ್ಮಟಿಗೆವಿಡಿದಾ ಸೂತನಿದಿರಾಗಿ ತಂದಿರಿಸಿದ ||
ತೇರ ತೇಜಿಗೆ ನಮಿಸುತೊಡನೇರಿ ಬಿಲ್ಸರಳ |
ಸಾರದಿಂ ಕರಿ ತುರಗ ರಥ ಪಟುಭಟಾಳಿ ಸಂ |
ಹಾರಮಾಗಲ್ ನೆರೆ ವರೂಥದವರೆಚ್ಚಾಡುತಿರ್ದರತಿತವಕದಿಂದೆ || ೫೩ ||

ಪಸಿದ ಪೆರ್ಬುಲಿಯಂತೆ ಹುದುಗಿ ಮಿಗೆ ಲಂಘಿಪರ್ |
ಮುಸಗಿದೆಕ್ಕಲನಂತೆ ಪಾಯ್ದಿತ್ತು ಬಿಸುಡುವರ್ |
ಪೊಸಪಾವಿನಂತೆ ಮೇಲ್ವರಿವರ್ ಕೆರಳ್ದ ತಗರಂತೆ ತಾಗುವರಾಹವಂ ||
ಮುಸಿವಾಸಿಯಂತೆ ಮುಲಿತೊತ್ತುವರ್ ಕಾಳ್ಕೋಣ |
ನೆಸಕಮೆನೆ ಪೊಯ್ದಾಡುವರ್ ಸಿಂಗದಂತೆ ಗ |
ರ್ಜಿಸಿ ಬಡಿವರಾಹವೋದ್ರೇಕದಿಂದಿರ್ಬಲದ ಸುಭಟರೆಂ ವರ್ಣಿಸುವೆನು || ೫೪ ||

ಸೋಂಕುವರ್ ತರಿವರಿರಿವರ್ ಪರಿವ ರಕ್ತದೊಳ್ |
ತೇಂಕುವರ್ ಬೀಳ್ವರೇಳ್ವರ್ ತಿವಿದು ಕೆಡಪಿ ನೆಲ |
ಕೌಂಕುವರ್ ಕಡಿವರುಡಿವರ್ ಸಮರನಿರ್ಭರಾವೇಶದಿಂ ಮೆಯ್ಮೆಯ್ಗಳಂ ||
ಸೋಂಕುವರ್ ಸಿಗಿವರಗಿವರ್ ಬಲಾಂಬುಧಿಯಂ ಕ |
ಲಂಕುವರ್ ಪಳಿವರಳಿವರ್ ಸೆಳೆದು ಕಕ್ಷದೊಳಿ |
ಡಂಕುವರ್ ಜಾರ್ವರೇರ್ವರ್ ಬಳಿಕ್ಕಿರ್ಬಲದ ಸುಭಟರ್ಕಳಾಹವದೊಳು || ೫೫ ||

ಪೆಣನ ಮೆದೆ ಮಾಂಸದೊಟ್ಟಿಲ್ ಬಸೆಯ ಪರಿಕಾಲ್ವೆ |
ನೆಣನ ಪೆರ್ಬೆಟ್ಟ ಮಿದುಳಿನ ರಾಸಿ ಕರುಳ ತಿಂ |
ತಿಣಿ ತೊರಳೆಗುಪ್ಪೆ ಮಜ್ಜೆಯ ತೆವರ್ ಸುಂಟಗೆಯ ಸಾಲ್ ತಳಿತ ಖಂಡಂಗಳ |
ಬಣಬೆ ನೆತ್ತರಿನ ಪೊಳೆ ಮೂಳೆಬಿಕ್ಕೆಗಳ ಸಂ |
ದಣಿ ಕೊಬ್ಬುದೆಕ್ಕೆ ಕಾಳಿಜಗಳೆಕ್ಕೆಕ್ಕೆ ತ |
ದ್ರಣರಂಗದೆಲ್ಲೆಡೆಯೊಳುಂ ತೀವೆ ಬಲಮೆರಕ್ ಪೊಣರ್ದುದೇಂ ಬಣ್ಣಿಸುವೆನು || ೫೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೭ ||

ಅಂತು ಸಂಧಿ ೪೮ ಕ್ಕಂ ಪದಗಳು ೨೦೦೪ ಕ್ಕಂ ಮಂಗಳಮಹಾಶ್ರೀ

ನಾಲ್ವತ್ತೊಂಬತ್ತನೆಯ ಸಂಧಿ

ಸೂಚನೆ

ಇರದೆ ಶುಂಭಾಸುರನ ಧುರಕೆ ನಿಲಲಾರದಾ |
ಹರಿಯಜೇಂದ್ರಾದಿಸುರರೋಡುತಿರೆ ಕಾಣುತ್ತೆ |
ಹರಕುಮಾರಂ ಸಕಲದೈತ್ಯರಂ ಮುರಿದು ತಿರುಗಿದನಧಿಕವಿಜಯದಿಂದೆ ||

ಭೀಮ ಪದನಮಿತಸುತ್ರಾಮ ಬೃಂದಾರಕ |
ಸ್ತೋಮ ಸದ್ಗುಣಗುಣೋದ್ದಾಮ ಗೌರೀವದನ |
ತಾಮರಸಸಾಹಸ್ರಧಾಮ ವರಲೋಕಾಭಿರಾಮ ಧೃತಸೋಮ ಜಯತು ||
ಕಾಮಸರ್ವಾಂಗನಿರ್ಧೂಮ ಘನಕೈಲಾಸ |
ಧಾಮ ಸಲೆ ಸನ್ನುತಸುಸಾಮ ನಯನಾಗ್ನಿ ಜಿತ |
ಭೀಮ ಪಂಪಾವಿರೂಪಾಕ್ಷ ರಕ್ಷಿಸು ನತಸ್ತೋಮಮಂ ಲೀಲೆಯಿಂದೆ || ೧ ||

ಪ್ರೀತಿಯಿಂದಾಲಿಸೆಲೆ ಸಿದ್ಧರಾಮೇಶ್ವರ ಮ |
ಹಾತಿಶಯವಿಕ್ರಮದೊಳಿರ್ದಲಂ ಕಾದಲ್ಕ |
ತೀತಕೋಪದೊಳೆ ದಿಕ್ಪಾಲಕರ್ ಮುಂಕೊಂಡು ಕೈಚಳಕದಿಂದೆಸುತಿರೆ ||
ಶಾತಕುಂಭವಿಚಿತ್ರಮಾರ್ಗಣಂಗಳ್ ಕರಿ |
ವ್ರಾತಮಂ ಜೋಧರಂ ತುರಗಮಂ ತೇರ್ಗಳಂ |
ಸೂತರ್ಕಳಂ ತುಂಡುತುಂಡಾಗೆ ಕತ್ತರಿಸುತಿರ್ದುವೇಂ ವಣ್ಣಿಸುವೆನು || ೨ ||

ತೊಟ್ಟ ಕಣೆಯೊಂದು ಕರ್ಣಾಂಬರಂ ತೆಗೆತೆಗೆದು |
ಬಿಟ್ಟ ಕಣೆಗಳ್ ನೂರರಾತಿಸೈನಿಕದೊಳಗೆ |
ನಟ್ಟ ಕಣೆಗಳ್ ಸಾಸಿರಂ ಲಕ್ಕ ಕೋಟಿ ಶತಕೋಟಿ ಪದ್ಮಂಗಳೆನಿಪ ||
ಕಟ್ಟಳೆಗಳಂ ಮೀರಿ ಪೆಚ್ಚಿದುವು ಮಾರ್ಬಲದೊ |
ಳಟ್ಟಿಪರಂ ಬಿಡದೆ ಕೊಚ್ಚಿದುವು ತನುಗಳಂ |
ತಟ್ಟುಚರ್ಮಖಂಡಮಂ ಕಚ್ಚಿದುವು ದಿಕ್ಪಾಲರಾರ್ದೆಸುವ ಬಾಣಂಗಳು || ೩ ||

---

೧ ಣೆ (ಹು, ಮು.)

ಎಚ್ಚೊಡ್ಡೊ[೧]ತ್ತರಿಸಿ ಕತ್ತರಿಸಿ ಕಡಿದಿರಿದು ನ |
ಟ್ಟಚ್ಚಳಿಸಿ ಪಾಯ್ದು ಪೊಯ್ದುರೆಯುಟ್ಟಿ ಮುಟ್ಟಿ ಕಡು |
ಚೆಚ್ಚರದೆ ತೂಳ್ದು ಸಿಂಡ್ದವರಿಸಿ ಡಾವರಿಸಿ ಹೇವರಿಸಲಹಿತರ್ಕಳು ||
ಅಚ್ಚರಿಯೊಳೊಡನೊಡನೆ ಕಂಗೆಡಿಸಿ ಬೆಂಗೆಡಿಸಿ |
ಕೊಚ್ಚಿ ಕೊಯ್ದೆ[೨]ತ್ತಿ ಸುತ್ತಿಸಿ ಕೊಡಹಿ ಕೆಡಹಿ ನೆರೆ |
ಹುಚ್ಚುವಾಡಿದುವಾಡಿದುವು ಕಾಡಿದುವು ಬಲದೊಳಾಶಾಧಿಪರ ಕಣೆಗಳು || ೪ ||

ಕಡಿದುಡಿದ ತೋಳ್ ನೆಗೆದು ಕೆಡವುತಿರ್ದುವು ಬೀಳ್ವ |
ತೊಡೆಯ ತುಂಡುಗಳೇಳ್ದು ಬಡಿವುತಿರ್ದುವು ಮುಂಡ |
ಮೊಡನೊಡನೆ ತೆಗೆದೆಸೆವುತಿರ್ದುವುರೆ ಪರಿದ ತಲೆಗಳ್ ಬೊಬ್ಬಿಡುತ್ತಿರ್ದುವು ||
ಕಡುಗಲಿಗಳಾಂತು ಮಡಿವುತ್ತಿರ್ದರೊಡನೆ ಬೆಂ |
ಗೊಡದಖಿಳಬಲವಳಿವುತಿರ್ದುದೇನೆಂಬೆನಾ |
ವಡಬನಂ ತಾಗಿ ಬಯಲಪ್ಪ ಶರಧಿಯ ತೆರೆಗಳಂತೆ ದಿಗಧಿಪರಿದಿರೊಳು || ೫ ||

ಬತ್ತಿದುದು ಮುಂಗಡಿಯ ಸೇನಾರ್ಣವಂ ಮುಂದ |
ಕೊತ್ತಿದುದು ದಿಕ್ಪಾಲಬಲವಡಸಿ ಖೋಯೆಂದೆ |
ಸುತ್ತೊಡನೆ ಬಲನಮುಚಿ ಜಂಭ ದುಂದುಭಿ ಮಹಾನಾಭ ಗಜಶಿರ ಶೂರ್ಪಕ ||
ಮತ್ತೆ ವೃತ್ತಾದಿಖಳರಾ ಪ್ರಳಯಸಮಯದ ಮ |
ಹೋತ್ತುಂಗಮೇಘಾಳಿಗಳ್ ಕರೆವ ಮಳೆಗಳೆನ |
ಲೆತ್ತಲುಂ ದಿಕ್ಪಾಲರಂ ತರುಬಿ ಶರವರುಷಮಂ ಕರೆದರೇನೆಂಬೆನು || ೬ ||

ಸುರಪನಂ ನಮುಚಿಯಗ್ನಿಯನಾ ಬಲಂ ದಂಡ |
ಧರನನಾ ಜಂಭಂ ನೃವಾಹನನನಾ ಹಸ್ತಿ |
ಶಿರನಬ್ಧಿಪಾಲನಂ ದುಂದುಭಿ ಜಗತ್ಪ್ರಾಣನಂ ಶೂರ್ಪಕಂ ಧನದನಂ ||
ವರಮಹಾನಾಭನೀಶಾನನಂ ವೃತ್ರನತಿ |
ಭರದೊಳಿದಿರಾಗಿ ಕಾದುತಿರ್ದರಿತ್ತಲಾ |
ಪುರುಹೂತನೆಚ್ಚ ಬಾಣಂಗಳಂ ಕತ್ತರಿಸಿ ನಮುಚಿ ಬಳಿಕಿಂತೆಂದನು || ೭ ||

೧ ಡು (ಶಿ, ಗೋ, ದಾ, ಮ.) ೨ ಕೋದೆ (ಮ.)

ಎಲವೊ ಸುರಪಾಲ ಪೂರ್ವಾಸುರರ್ಕಳೊಳಂ ನಿನ್ನ |
ತಲೆಗೊಳ್ಳದುಳುಹಿ ಬಿಟ್ಟವನರಿದು ಮತ್ತಿನ್ನು |
ಕಲಹಕಿದಿರಾದೆ ನೀಂ ವೆರಸಿ ದಿಕ್ಪಾಲಕನಿಬರ ಶಿರಸ್ಸುಗಳನಿನ್ನು ||
ಕಳೆದುಕೊಂಬುದಕಿದೇ ಸಂಚಕಾರಂ ಕಡೆಗೆ |
ತೊಲಗದಿರ್ ಕೊಳ್ಳೆನುತ್ತೊಂದು ಬಾಣದೊಳೆ ತೋ |
ಳ್ಗೆನೆಚ್ಚು ಬೊಬ್ಬಿರಿಯಲಿಂದ್ರಂ ಮಹಾಕೋಪದಿಂದವಂಗಿಂತೆಂದನು || ೮ ||

ಎನೆಲವೊ ಕಕ್ಕುಡುಹಿತನದ ಮಾತಿದು ನಿನಗೆ |
ತಾನುಚಿತವೇ ಬಗುಳದಿರ್ ದನುಜಹಸ್ತಿಪಂ |
ಶಾಸನ ಶಿವಂ ಬೆನ್ನೊಳಿರ್ದಪಂ ನೀಂ ಬೆರಸಿಯಂಧಾಸುರಾದಿಯಾದ ||
ದಾನವರ ಮಾಂಸವಂ ಕಾಕ ಜಂಬುಕ ಪಿಶಾ |
ಚಾನೀಕಕುಣಿಸುವೆಂ ನೋಡೆನುತೆ ಬಾಣಸಂ |
ಧಾನದೊಳ್ ಖಳನ ರಥ ತುರಗ ಸಾರಥಿ ಧನುಗಳಂ ಕಡಿದು ಬೊಬ್ಬಿರಿದನು || ೯ ||

ಮತ್ತೊಂದು ರಥಕಡರ್ದಾ ಖಳಂ ರೋಷಾಗ್ನಿ |
ಪೊತ್ತಿ ಕಿಡಿಗೆದರಿ ಭುಗಿಲೆಂದೊಡನೆ ದೇವೇಂದ್ರ |
ನುತ್ತಮಾಂಗದ ಮಕುಟ ಕವಚ ಕಾರ್ಮುಕ ವರೂಥಾಶ್ವ ಸೂತಾದಿಗಳನು ||
ತತ್ತರಂದರಿಯೆ ಪೊಸ ತೇರ್ಗಡರ್ದಿಂದ್ರನವ |
ನೆತ್ತಿದ ಪತಾಕ ಚಾಮರ ತುರಗ ಸಾರಥಿ ಗ |
ಳುತ್ತಮವರೂಥಮಂ ತರಿದು ನಮುಚಿಯ ಮನೋಗರ್ವಮಂ ಮುದ್ರಿಸಿದನು || ೧೦ ||

ನಿಮಿಷದೊಳ್ ಪೊಸರಥಕಡರ್ದಿಸುವನಾ ದನುಜ |
ನಮರಪತಿ ತರಿವನಾ ತೇರಂ ಬಳಿಕ್ಕಿಂತು |
ಕ್ರಮದೊಳ್ ವರೂಥಮಗಣಿತಮಳಿದೊಡಂ ಮತ್ತೆ ಕಾದುತಿರೆ ರುದ್ರಾಸ್ತ್ರದಿಂ ||
ನಮುಚಿಯ ಶಿರಃಖಂಡನಂ ಮಾಡಿ ಸೇನೆಯಂ |
ಯಮನಗರಿಗೈದಿಸಲ್ ಕೇಳಿ ಬಲನಗ್ನಿಯುಂ |
ಭ್ರಮೆಗೊಳಿಸಿ ಕೆಡಪಿ ಸುರಪಾಲನಿದಿರೊಳ್ ನಿಂದು ಕಣೆಗರೆವುತಿಂತೆಂದನು || ೧೧ ||

---

೧ ಕೊ (ಹು, ಮ.)

ತಾಳ್ವಿಜ ಖೂಳ ನೀಂ ನಮುಚಿಯುಂ ಕೊಂದು ಸಾಁ |
ಬಾಳ್ವೆನೆನಲ್ ಬೇಡ ನಿನ್ನೊಡಲನೀ ಕ್ಷಣಂ |
ಸೀಳ್ತ್ರಿದಪೆನವನ ಪಗೆಯನೆಂದಂಬಿನಂಬೋಧಿಯುಂ ತುಳ್ಕುತಿರಲು ||
ಪೂಳ್ದುವು ದಿಶಾವನಿನಭೋಮಂಡಲಂಗಳ್ ಜ |
ಗುಳ್ದುವಾ ತಾರಾಗ್ರಹಾಳಿಗಳ್ ಕ್ಷಣದೊಳ್ ಮು |
ಗುಳ್ದನಿತುಮಂ ಕಡಿದು ಕರ್ಣಾಂತಕಂಬುದೊಟ್ಟೆಂದ್ರನಸುರಂಗೆಂದನು || ೧೨ ||

ಬಾಯ್ಗಂಡಿತನದೊಳೀನೆಂದಾದೊಡಂ ಜರೆದು |
ಬಯ್ಗುಮೇ ಪಟುಭಟರ್ ನೋಡು ನಿನ್ನಂ ಪಡೆದ |
ತಾಯ್ಗೆ ತವ ಮರಣಮಂ ಕೇಳಿಪೆಂ ನಮುಚಿಗಳಲುವೆಯೇಕೆ ನಿನ್ನಾತನ ||
ಮೆಯ್ಗಳೊಂದಪ್ಪಂತು ಗೆಯ್ದಪೆನೆನುತ್ತೆ ಪದಿ |
ನಯ್ಗಣೆಗಳಿಂ ಬಲನ ಕಾಯಮಂ ಸೀಳಿ ನಿಡು |
ಸುಯ್ಗಳಿಂ ಪೊಗೆ ನೆಗೆಯಲೊಂದಂಬಿನಿಂದಿಂದ್ರನಿಟಿಲಮಂ ಬಲನೆಚ್ಚನು || ೧೩ ||

ಕಣ್ಮುಚ್ಚಿ ಮೆಯ್ಮರೆದನರೆಘಳಿಗೆ ಬಳಿಕೆಚ್ಚ |
ರುಣ್ಮಿದುದು ಸುರಪಂಗೆ ರೋಷಾಗ್ನಿ ಪುಟನೆಗೆದು |
ಪೊಣ್ಮಿದುದು ಭಳಿರೆ ಭಾಪುರೆ ಬಲಾಸುರ ನೀನೆ ಜಗದ ಬಿಲ್ಲಾಳ್ಗಳೊಳಗೆ ||
ಜಾಣ್ಮೆಯುಳ್ಳವನಪ್ಪೆಯಾದೊಡೀ ಸರಳ ಸವಿ |
ಗಾಣ್ಮಗುಳ್ದೆನುತೆ ಕವಲಂಬಿನಿಂದೆಚ್ಚೊಡಾ |
ಗೋಣ್ಮೊದಲ್ ಕತ್ತರಿಸಿ ತಲೆಮುಂಡಮುರುಳ್ದುವು[2] ಬಲಂ ಮಡಿದನಾ ಕ್ಷಣದೊಳು || ೧೪ ||

ಭುಲ್ಲವಿಸಿತಮರಬಲವೊಡನೆ ದೆಸೆದೆಸೆಗಳ್ಗೆ |
ಚೆಲ್ಲಿದುದು ಖಳರ ಬಲನೀ ವಾರ್ತೆಯಂ ಕೇಳಿ |
ನಿಲ್ಲದೀಶಾನಯಮನರ ಮೂರ್ಛೆವಡಿಸಿ ಗುಡುಗುಡಿಸಿ ಘನರೋಷದಿಂದೆ ||
ಎಲ್ಲ ಬಲನಂ ನಮುಚಿಯುಂ ಕೊಂದನಂ ತೋರಿ |
ಸಲ್ಲಯುವನಂ ಸೀಳ್ದು ದಿಗುಬಲಿಯನೀಯಬೇ |
ಕಲ್ಲದೇ ಬಾಳ್ವುದೇಕೆನುತಿಂದ್ರನಂ ವೃತ್ರಜಂಭರಾರ್ದೆಚ್ಚರಂದು || ೧೫ ||

---

೧ ಪಡೆ (ಶಿ.) ೨ ಳ್ವಾ (ಮ.)

ಪರ್ಬಿದುವು ದೆಸೆದೆಸೆಗಳಂ ಖಳರ ಬಾಣತತಿ |
ಸರ್ಬಣ್ಣಿಸುವರವರ ಪೆರ್ಮೆಯುಂ ನೋಡಿ ಬಳಿ |
ಕಿರ್ಬರಿಡಬಲದೊಳೊಂದೆ ಬಾರಿ ತೆಗೆತೆಗೆದೆಸುತ್ತಿರಲ್ ಸುರಪನಂದು ||
ಒರ್ಬೊರ್ಬರೆಸುಗೆಯಂ ಕತ್ತರಿಸುತುಂ ಮುರ |
ಳ್ದಿರ್ಬಲದ ಸುಭಟರೀಕ್ಷಿಸೆ ಬಳೆದುವತ್ತಿತ್ತ |
ಪೆರ್ಬೆಟ್ಟದಂತೆ ಕಡಿದಂಬುಗಳ ರಾಸಿಗಳ್ ಪೊಳಲೆನಸದ್ಭುತವನು || ೧೬ ||

ಒಮ್ಮೊಮ್ಮೆ ರಕ್ಕಸರ್ ಮೆಯ್ಮರೆದು ಹಾಯೆಂದು |
ಸುಮ್ಮಿಪುದವರ ಪರಿವಾರವಾ ಕ್ಷಣದೊಳಿಂ |
ದ್ರಮ್ಮೂರ್ಛೆಗಯ್ಯೆ ಕಣ್ಗೆಡುವುದೀ ಬಲವಿಂತು ಬಲ್ಪಿನಿಂ ಕಾದುತಿರಲು ||
ತಮ್ಮೊಳಂ ಖಳರೊಬ್ಬರೊಬ್ಬರಂ ಮೂದಲಿಸು |
ತುಮ್ಮಗುಳೆ ದಿವ್ಯಾಸ್ತ್ರಮೆರಡರಿಂದೆಸೆಯಲಿಂ |
ದ್ರಮ್ಮಹಿಗುರುಳ್ದನಾ ಸೇನೆಯುಂ ಜಂಭವೃತ್ರರ್ ಕೊಲುತ್ತಿರ್ದರಂದು || ೧೭ ||

ದಿವ್ಯಮಂತ್ರೌಷಧಂಗಳ ಶಿವಸ್ಮರಣೆಗಳ |
ಸೇವ್ಯದೊಳ್ ಮೂರ್ಛೆ ತಿಳಿದೆಳ್ದಿಂದ್ರನಾ ಪ್ರಳಯ |
ಹವ್ಯವಾಹನಸಪರರೂಪಾಗಿ ರಥಮನಡರ್ದುಗ್ರಬಾಣಂಗಳೆರಡಂ ||
ಸವ್ಯಾಪಸವ್ಯದೊಳ್ ತೊಟ್ಟೆಸೆಯೆ ಭುಗಿಲೆಂಬ |
ನವ್ಯಸ್ಫುಲ್ಲಿಂಗಸಂತಾನಧೂಮಂಗಳಿಂ |
ಭೂವ್ಯೋಮಮಂ ಬಿಡಿಯೆ ಬರುತಿರ್ದುವಾ ಬಾಣಂಗಳತಿಭರದೊಳೇನೆಂಬೆನು || ೧೮ ||

ಬಿತ್ತರಿಸಲಳವೆ ದನುಜರ ಸಾಹಸಂ ಮುಂದ |
ಕೊತ್ತರಿಸಿ ಬರ್ಪ ಬಾಣಂಗಳೆರಡಂ ನಡುವೆ |
ಕತ್ತರಿಸಲಿಳೆಗುರುಳ್ದುವು ಹಿಂದಣರ್ಧಂಗಳಗ್ರದ ಶರಂಗಳೊದಗಿ ||
ಕತ್ತರಿಸಿ ಕಡುವೇಗದಿಂದಾ ಮಹಾಮದೋ |
ನ್ಮತ್ತಖಳವೃತ್ರಜಂಭರ ತಲೆಗಳಂ ಕಚ್ಚಿ |
ಪೊತ್ತಾರಿ ಸಮುದ್ರಕಾಗಸಕೆತ್ತಿ ಬಿಸುಟುವೆಲೆ ರಾಮ ಕೇಳಚ್ಚರಿಯನು || ೧೯ ||

ಬೀಳ್ವುವವರಟ್ಟಿಗಳ್ ಶ್ರೈಲಂಗಳುರುಳ್ವಂತೆ ।
ತಾಳ್ದುದು ಭಯಮನಹಿತಸೇನೆ ಬಾಣಂಗಳಿಂ ।
ಪೋಳ್ದು ಸೆಣಸುವ ಭಟರನುಳಿದದಿಕ್ಪಾಲಕರ್ ಸಂಹರಿಸಿ ವಿಕ್ರಮದೊಳು ॥
ಕೇಳ್ದು ಸುರಪನ ವಿಜಯವಾರ್ತೆಯಂ ಸಂತಸದೊ ।
ಳಾಳ್ದು ಕೊಲತೊಡಗಿದರ್ ದೈತ್ಯರಂ ಕೇಳುತೆ ಕೆ ।
ರಳ್ದು ಕೇಸರಿಯಂತೆ ಖತಿಗೊಂಡು ಶತಮಾಯನಾಹವಕ್ಕನುವಾದನು ॥ ೨೦ ॥

ಸೂಳೈಸಿದುವು ವಾದ್ಯನಿಖಿಳಮಾ ಖಳನೊಡನೆ ।
ಮೇಳೈಸುತಸುರತತಿ ಕರದ ಬಿಲ್ದೆದೆಯಂ ಚ ।
ಡಾಳೈಸುತಾಗ ಶತಮಾಯನಿಂದ್ರನ ಸರಿಸದೊಳ್ ನಿಂದು ನಿನ್ನ ಕೊಂದು ॥
ಪಾಳೈಸುವೆಂ ನಾಕಲೋಕಮಂ ಶೋಕಮುಮ ।
ನೋಳೈಸಿಸುವೆನೆಲವೊ ನಿನ್ನ ಬಲೆಯರ್ಗೆ ಪಿಡಿ ।
ಯಾಳೈಸುವೆಂ ನೆರೆದ ನಿನ್ನ ತೆತ್ತಿಗರನೆನುತಾ ಖಳಂ ಕೋಲ್ಗರೆದನು ॥ ೨೧ ॥

ನೂರಂಬಿನಿಂದಿಂದ್ರನಂ ಶಿಖಿಯನಂಬುಹದಿ ।
ನಾರರಿಂ ಯಮನನೈದಿಷುಗಳಿಂ ನಿರುತಿಯಂ ।
ಮೂರಂಬಿನಿಂ ವರುಣ ಮರುತ ಧನದೀಶಾನ ವಸು ಮನುಗಳೆಂಬನಿಬರ ॥
ಆರಾರ್ ಶರಗಳಿಂದೆಚ್ಚವರ ತನುಗಳಿಂ[೧] ।
ಡೋರೆನಿಸಿಯಶ್ವ ಸಾರಥಿ ತೇರ್ಗಳಂ ತಿರುವ ।
ನೇರಿಸಿದ ಬಿಲ್ಗಳಂ ಕಡಿಕಡಿದು ಮತ್ತೆಮತ್ತೆಸುತಿರ್ದನೇವೇಳ್ಪಿಸು ॥ ೨೨ ॥

ಅತ್ಯುಗ್ರಖಳನ ರೂಪಂ ಕಂಡು ಸುರಬಲದ ।
ಪತ್ತೀಕರೆಲ್ಲರುಂ ಮೂರ್ಛೆವಡೆದರ್ ದುಷ್ಟ ।
ದಿತ್ಯಾತ್ಮಜರ ಬಾಣವೃಷ್ಟಿಯಿಂ ನನೆಯದವರಿಲ್ಲವಾ ನಿರ್ಜರರೊಳು ।
ಮೃತ್ಯು ಪೊಕ್ಕಂತಾಯ್ತು ಪೇಳಲೇನಾ ಖಳಾ ।
ಘಾತ್ಯಮಂ ಮಿಗೆ ಯಕ್ಷ ಸಿದ್ಧ ವಿದ್ಯಾಧರಾ ।
ದಿತ್ಯ ವಸು ಮನುಕುಲಂ ಕಂಗೆಟ್ಟು ಬೆಂಗೊಟ್ಟು ಭಯದೊಳೋಡುತ್ತಿರ್ದರು
॥ ೨೩ ॥

---

೧ ಳಂ (ಶಿ, ಗೋ.) ೨ ಘ (ಮ.)

ಸೋರ್ವ ನೆತ್ತರ ಸುರಿವ ಕರುಳ ನಡುಪಂಗದ ಬೆ |
ಮರ್ಸಿಸು ಪರಿದೆಳೆವ ವ್ಯೆಜೋಡ ಮೊಗದೊಳ್ವು |
ಸುರ್ವ ಬಿಡುಗುರುಳ ಬೆನ್ನೊಳ್ ನಟ್ಟ ಸರಳ ತಬ್ಬಿಬ್ಬೆಸೆವ ನಡೆನುಡಿಗಳ ||
ಬೀರ್ವರಿವ ಭಯದ ಪಿನ್ನೋಟದೊಣವಾಯ ಕಡು |
ಪಾರ್ವೆದೆಸು ಪೊಯ್ಮುಳ್ಳಿಗಳ ಪೊತ್ತ ನಾಣ್ಚಿಕೆಯ |
ಸರ್ವದಿಕ್ಪಾಲರೋಟಂಗಾಣುತಜನಾಗ್ರಹಂದಾಳ್ದನಾ ಕ್ಷಣದೊಳು || ೨೪ ||

ಸಂತೈಸಿದಂ ಕೆಟ್ಟು ಮುರಿದೋಡಿ ಬರ್ಪಮರ |
ಸಂತತಿಗಳಂ ಸರ್ವಸನ್ನಾಹದಿಂದಾತ್ಮ |
ಸಂತಾನಮುಗಣಿತವೆಡಂ ಬಲಂ ಬರೆ ಮಹಾಕೋಪದಿಂ ರಥವನಡರ್ದ ||
ಸಂತಖಿಳಲೋಕಮಂ ಪೆತ್ತವಂ ಕೊಲೆಗೆಣಿಸ |
ಅಂತಖಿಳಮಾಗದಿಹುದೇನೆನಲ್ ಬ್ರಹ್ಮನಾಂ |
ತಾಂತ ಖಳರಂ ಕೊಂದುಕೊಳುತೆ ಶತಮಾಯನಂ ತಾಗಲವನಿಂತೆಂದನು || ೨೫ ||

ಪಡಪಡೆಲವೆಲವೊ ತೊಲತೊಲಗು ಲೋಕಂಗಳಂ |
ಪಡೆದೆನೆಂಬಗ್ಗಳಿಕೆ ನಮ್ಮೊಡನೆ ಸಲ್ಲದಾ |
ಪಡಪಸುಳಿದೆಚ್ಚರಿಕೆಯಿಂ ಕಾದೆನುತ್ತೆಚ್ಚ ಖಳನ ಶರಜಾಲಂಗಳ ||
ತಡೆಗಡಿದು ಶತಮಾಯನೆಂಬಹಂಕಾರದಿಂ |
ತಡೆ[2]ದೆನೀನೆಮ್ಮ ನೀಂ ಪೆಸರಳಿವುದಿನ್ನಿ[2]ನಗೆ |
ತಡವಿಲ್ಲವೆಂದು ಪೊಸಮಸೆಯ ವಿಶಿಖಂಗಳಂ ಪದ್ಮಾಸನಂ ಕರೆದನು || ೨೬ ||

ಆ ಚತುರ್ಮುಖನೆಚ್ಚ ಬಾಣಂಗಳಂ ಕಡಿದು |
ಭೂಚಕ್ರಮೆತ್ತ ನಭಮೆತ್ತ ದೆಸೆಯೆತ್ತ ತಾ |
ರಾ ಚಂದ್ರಸೂರ್ಯಮಂಡಲಂಗಳ ಗತಿಯದೆತ್ತ ನಾನಾಭಾವದ ||
ಈ ಚರಾಚರಮೆತ್ತಲೆಂಬುದೇಂ ಬ್ರಹ್ಮಂಗ |
ಗೋಚರಮದಾಗಲಾ ಶತಮಾಯಕರತಳಮು |
[illegible]ಚಾಪನಿರ್ಮುಕ್ತಬಾಣಾಬ್ಧಿ ಬ್ರಹ್ಮನಂ ಮುಸುಕಿತೇಂ ವಣ್ಣಿಸುವೆನು || ೨೭ ||

೧ ತಡೆ | ಮ. | ೨-೨ ದೆ ನೀನೆಮ್ಮನಿಂ ಪೆಸರಳಿವುದಿನ್ನು (ಶಿ, ದಾ.); ನೀನೆಮ್ಮ ಪೆಸರಳಿವುದೆಂ ಬುನ್ನಿ (ಮ.); ನೀನೆಮ್ಮ ಪೆಸರಳಿವುದೀಗಂ ನ (ಹು.)

ಮುಚ್ಚಿದ ಶರಂಗಳಂ ಕೊಚ್ಚಿ ಕೆಯ್ಯೊಡನೆ ಬ |
ಲ್ಕಿಚ್ಚಿರ್ದೆಯು ಖಳನ ರಥದಚ್ಚು ನೊಗ ಗಾಲಿಯಂ |
ನುಚ್ಚುಗಡಿದವನೆರ್ದೆಯನುಚ್ಚಳಿಸಲಂಬು ಕಣ್ಮುಚ್ಚಿ ಮೆಯ್ಮರೆದು ಖಳನು |
ಚೆಚ್ಚರದೊಳೇಳ್ದು ಖತಿ ಪೆಚ್ಚಿ ದಿವ್ಯಾಸ್ತ್ರದಿಂ |
ದೆಚ್ಚಡಾ ಬಾಣಮಂ ಕೊಚ್ಚಲಿವನಂ ಗೆಲ್ವು
ದಚ್ಚರಿಯೆ ತನಗೆನುತೆ ಮಚ್ಚರದೆ ಮಾಯೆಯಂ ಬಿಚ್ಚಿದಂ ಶತಮಾಯನು
|| ೨೮ ||

ಪೆಸರದೇಂ ಶತಮಾಯನವನ ಘನಮಾಯೆ ಬ |
ಣ್ಣಿಸಲಳವೆ ಕೇಳ್ ಸಿದ್ಧರಾಮ ತತ್‌ಕ್ಷಣದೊಳಗೆ |
ಮಸಿವಣ್ಣಮಾಯ್ತು ಬ್ರಹ್ಮಾಂಡಮಿನಶಶಿಕಿರಣಮಡಗಿದುವು ತಮಮೆತ್ತಲು ||
ಪಸರಿಸಿದುದಾ ಬ್ರಹ್ಮನೆಸುವ ಪ್ರತ್ಯಸ್ತ್ರದೊಂ |
ದೆಸಕಮಂ ಮಾರಿ ಮೆಯ್ವೆಚ್ಚಿದುದು ಸಲೆ ಪೆಚ್ಚಿ |
ಬಸವಳಿದರೆಲ್ಲರುಂ ಕಂಗೆಟ್ಟು ಬಾಯ್ವಿಟ್ಟು ಮರವಟ್ಟರೇವೇಳ್ವೆನು || ೨೯ ||

ಪುಲಿ ಕರಡಿ ಪಂದಿಗಳ್ ಫಣಿ ಮಹಿಷ ವೃಕ ದಂತಿ |
ಬಲಸಿಂಹ ಶರಭ ಭೇರುಂಡಾದಿ ಖಗಮೃಗದ |
ಬಳಗಂ ನೆಗಳ್ ಮೊಸಳೆ ಕರ್ಕಟಕ ತಿಮಿ ತಿಮಿಂಗಿಲವಾದಿ ಜಲಚರಾಳಿ ||
ಮಳೆ ಮಿಂಚು ಬರಸಿಡಿಲ್ ಬಿರುಗಾಳಿ ಧೂಳಿ ಸೆಕೆ |
ಚಳಿ ಕಿಚ್ಚು ಪೊಗೆಯಸ್ತ್ರ ಶಸ್ತ್ರತತಿ ಪೇರ್ಗುಂಡು |
ಪೊಳೆ ಭೂತ ವೇತಾಳಕುಲಮೆಲ್ಲಮೆಡೆವಿಡದೆ ಬಲಮನುರೆ ನೋಯಿಸಿದುವು
|| ೩೦ ||

ಎತ್ತೆತ್ತಲುಂ ಪಳ್ಳ ಕೊಳ್ಳ ಮುಳ್ಳವನಿತಳ |
ಮೆತ್ತೆತ್ತಲುಂ ಘಟ್ಟ ಬೆಟ್ಟ ನಟ್ಟಡವಿಗಳ |
ವೆತ್ತೆತ್ತಲುಂ ಪಿರಿಯ ಕಮ್ಮರಿಯ ದರಿಯ ಭೀಕರಗುಹಾ[1]ಗಂಹರಚಯಂ ||
ಎತ್ತಲುಂ ಲಯಕಾರಿ ಮಾರಿ ಭೂರಿಪಿಶಾಚ |
ರೆತ್ತಲುಂ ಬಿಸ[2]ಮುಂಡ ಕೊಂಡ ಕೆಂಡದ ಮಳೆಗ |
ಳೆತ್ತಲುಂ ಘೋರ ಸಂಹಾರ ಕ್ರೂರ ಮೃಗಾಳಿಯಿರ್ದುದೇಂ ವಣ್ಣಿಸುವೆನು || ೩೧ ||

೧ ಗೃಹಂ (ಶಿ, ಗೋ, ದಾ.) ೨ ಸಿ (ಮ.)

ಪಿಡಿವ ನುಂಗುವ ತೂಳ್ವ ಪೂಳ್ವ ಪಿಳ್ಳಿರಿವ ನೆರೆ |
ಕಡಿವ ಕೊಚ್ಚುವ ತಿವಿವ ಕವಿವ ಕೆವಿಯೊಳಗೆ ಬೊ |
ಬ್ಬಿಡುವ ಪೊಂಚುವ ಪಾಯ್ವ ಪೊಯ್ವ ಕೊಯ್ಮೆಳೆವ ತುಳಿವೊಳೆವ ಮುಳಿವಾಗಸಕ್ಕೆ ||
ಇಡುವೆಸುವ ತರಿವಿರಿವ ಕೊರೆವ ಬಿಸಿನೆತ್ತರಂ |
ಕುಡಿವ ಕಚ್ಚುವ ಪಿರ್ವ ಕಾರ್ವ ವಿರ್ವರೆಗೊಲೆಯು |
ಗಡಣಂಗಳಿಂ ನೋವ ಸಾವ ಬೇವನಿಬರಂ ಪದ್ಮಾಸನಂ ಕಂಡನು || ೩೨ ||

ಬೆಸಗಾಗಿ ಕಮಲಭವನಿವನವಮಾಯಿಯುನೊಂದು |
ತೆರದೊಳಪಹರಿಪೆನೆಂಬನಿತರೊಳ್ ಶತಮಾಯ |
ನುರುಬಿ ಕಣ್ಗಳ್ಗೆ ಕಾಣಿಸಿಕೊಳ್ಳದೆಡಬಲಂ ಪಿಂದು ಮುಂದೆಲ್ಲಿಡೆಯೊಳು |
ಕರೆವನಂಬುಗಳನವನರಿಯೆ ಸಿಡಿಲಂತದಂ |
ಮುರಿಯೆ ಗಿರಿಯಂತದಂ ತರಿಯೆ ಕಡಲಂತದಂ |
ಸುರಿಯೆ ಮತ್ತೊಂದೊಂದು ತೆರದೊಳಿಡೆವಿಡದೆ ಬಂದೆರಗಿದಂ ವಿಕ್ರಮದೊಳು || ೩೩ ||

ಈ ಸಕಲಸೃಷ್ಟಿಕರ್ತನ ಧುರಕೆ ನಿಲ್ವರುಂ |
ಟೀ ಸಮಾನಂ ಕಾದಿ ಕಾದಿ ಶತಮಾಯನುರೆ |
ಬೇಸತ್ತಡರ್ದಂಬರಾಂಗಣದೊಳಿರ್ದು ಬಲ್ಗತ್ತಲೆಯನೊತ್ತಿ ಕವಿಸಿ |
ಮೋಸದೊಳ್ ಬಿಲ್ಲಂಬುಗಳ ಸದ್ದು ಪುಟ್ಟದಂ
ತೋಸರಿಸದೆಸುತಿರ್ದನಂತ್ಯಕಾಲದ ಮೇಘ |
ನೋ ಸಾಣೆವಿಡಿದಂಬುಮಳೆಗಳಂ ಕರೆವ್ರುದೆನೆ ರಾಮ ಕೇಳದ್ಭುತವನು || ೩೪ ||

ಬಾಣದಿಂದಮೆತ್ತೆತ್ತಲುಂ ಕರೆವ ನಿಡುಸರಳ |
ಕೋಣೆಯಿಂದೆಲ್ಲರುಂ ಮೂರ್ಛೆವಡೆದರ್ ಬ್ರಹ್ಮ
ನೇನಾದನೆಂದರಿಯೆಸರೆಜಾಪಮುಸಿತರೊಳಗವನೆಸುವ ಬಾಣಂಗಳ |
ನಾನಾಪ್ರಕಾರದಿಂ ಕಡಿದುಮವನೆರ್ದೆಗೆ ಸಂ |
ಧಾನಮುಂ ಮಾಳ್ಪ ಬಗೆಯುಂ ಕಾಣದೀಶ್ವರ |
ಧ್ಯಾನದಿಂದರಿದೊಡನೆ ಪ್ರಳಯರುದ್ರಾಸ್ತ್ರಮಂ ಸರಸಿಜಭವಂ ತೆಗೆದನು || ೩೫ ||

ಬತ್ತಳಿಕೆಯಿಂದುಗಿಯಲಾ ಮಾಯೆಗಳ್ ಕೂಡಿ
ಕೆತ್ತ ತನುವುಡಗಿದುದು ಹೆದೆಯೊಳ್ ತೊಡರ್ಚಲಿ ।
ತ್ತೆತ್ತಲುಂ ಬ್ರಹ್ಮಾಂಡಮುರಿದುದಾ ಬಾಣಮಂ ಕಿವಿವರೆಗೆ ತೆಗೆದು ಬಿಡಲು ।
ಮತ್ತೆ ನಭದೊಳಗೆಸೆವ ಶತಮಾಯಕಂಠಮಂ ।
ಕತ್ತರಿಸಿ ತಲೆಮುಂಡಮೆರಡನುಂ ಕಡಲೊಳ
ರತ್ತ ಮರುಭೂಮಿಗಿಟ್ಟುದು ಬೀಳ್ವ ಭರಕದೇನಾಯ್ತೊ ಭೂತಳವೆಂದಸು ॥ ೩೬ ॥

ಝಲ್ಲೆಂದು ಸುರಕುಸುಮವೃಷ್ಟಿ ಕರೆದತ್ತು ಪಾ ।
ಗ್ವಲ್ಲಭನ ಸಿರಿಮುಡಿಗೆ ದೈತ್ಯಸೇನಾರ್ಣವಂ ।
ತಲ್ಲಣಿಸಿದುದು ಬೇಹ ರಕ್ಕಸರ್ ಸರಿದರಲ್ಲಲ್ಲ ಬಳಿಕಾ ಬ್ರಹ್ಮನು ॥
ಬಿಲ್ಲೊಳಂಬಂ ತೊಟ್ಟು ನಡೆವುತಿರೆ ಕಾಳೆಗದ ।
ಗೆಲ್ಲದೊಳ್ ದಿಕ್ಪಾಲ ವಸು ಮನುಗಳಾದ್ಯಂತ ।
ರೆಲ್ಲರೊತ್ತಿದರಳಿದುದಗಣಿತಬಲಂ ಖಳರ ಸೇನೆಯೊಳ್ ನಿಮಿಷದೊಳಗೆ ॥ ೩೭ ॥

ವಿಕ್ರಮದೊಳೊತ್ತುವಾ ಬ್ರಹ್ಮನಂ ನಿಲಿಸುವ ಪ ।
ರಾಕ್ರಮಿಗಳೊರ್ವರಂ ಕಾಣೆನಾ ಖಳಸೈನ್ಯ ।
ಚಕ್ರಪತಿಯಳಿವನಾ ಶುಂಭಾಸುರಂ ಕೇಳ್ದು ಖೇದಸಂಯುಕ್ತನಾಗಿ ।
ವಕ್ರಮಾದುದೆ ಸಮರಜಯಮೆನುತೆ ವಿಗ್ರಹೋ ।
ಪಕ್ರಮಾವೇಶದಿಂ ತನ್ನ ಬಲಸಹಿತಂದ ।
ತಿಕ್ರಮಿಸಿ ನಡೆದನಾ ದಾನವಂ ಮಾನವಂ ನೀಗಲಿದಿರಾಂತ ಭಟನು ॥ ೩೮ ॥

ನಿರ್ದಯಬಹ ದೊದ್ದೆಗರ್ ತೆಗೆದೋಡಲಿದೇಯ ಕೆ ।
ಚ್ಚೆರ್ದಪರ್ ಬರಲಿ ಕಾಳಗಕೆನುತೆ ಕಡುಪಸಿದ ।
ಶಾರ್ದೂಲದಂತೆ ಶುಂಭಾಸುರಂ ರಥವಡರಿ ನಡೆಯೆ ಕಂಡಜಮುಖ್ಯರು
ಇರ್ದರೆಲ್ಲರ್ ಗರಂ ಪೊಡೆದಂತೆ ದುರ್ಜಯಂ ।
ಪೊರ್ದಿದುದು ಸುರಬಲಕೆ ಶುಂಭಾಸುರಂಗಾಂತುರಿ ।
ಪೋರ್ದೊಡೆಯನ ರಿಣವ ನೀಗಿದರ್ ಬೇಗಿದರ್ ಸಾಗಿದರ್ ಕಂಡಕಡೆಗೆ ॥ ೩೯ ॥

---

೧ ದು (ಪ.) ೨ ರು (ಹು, ಮ.) ೩ ತುಡುಕೆ (ಮ.)

ನೋಯಿಸೆನೊಂದಂ ಬ್ರಹ್ಮನಿಂದ್ರನೊಡಲೊಳಗೆ ಪೂ |
ರಾಯವಾಯ್ತೀರುತದ್ದಿಕ್ಪಾಲರೆಲ್ಲರುಂ |
ಗಾಯದಿಂ ಮೂರ್ಛೆವಡೆದರ್ ವಿಕ್ಕರೆನಾದರೆಂದರಿಯೆನಾ ಪಥದೊಳ್ ||
ಪೋಯೆಂದು ತರುಬಿದರ್ ಖಳರಜೇಂದ್ರಾದ್ಯರ ಪ |
ಲಾಯನದ ಹೇವಮುಂ ಕಂಡನಿತೆ ವಿಷ್ಣು ರೋ |
ಷಾಯಮಾನಸನಾಗಿ ಸರ್ವಸನ್ನಾಹದಿಂ ಶುಂಭಂಗೆ ಮಾರಾಂತನು || ೪೦ ||

ಸಾರ್ತನಗಿದಿರ್ಚೆ ನೀಂ ಬಾಳ್ವನೇ ನಿನ್ನನೈ |
ಸೂರ್ತುಂಡುಗಯ್ದು ಬಲಿಗೆದರ್ವೆನೆನಗಾಂತು ದುಃ |
ಖಾರ್ತರಾದರ್ ನಿನ್ನವೊಂದಿಗರ್ ಪೋಗೆನಲ್ ವಿಷ್ಣುವತಿಕೋಪದಿಂದೆ ||
ಆರ್ತನಗೆ ಸರಿಯಿಲವೊ ಸಾಯಬೇಡೆನುತವನ |
ತೀತರ್ವುತರ್ವುರಾಗಲೆಚ್ಚು ವಸುಮತಿಗೆ ಕೆ |
ನ್ನೀರ್ತಳ್ಕೆ ತುಳ್ಕಿದಂ ಕೈಗೆಡದೆ ಸಾಯಕಸಮುದ್ರಮಂ ಶಾರ್ಙ್ಗಿ ಬಳಿಕ || ೪೧ ||

ಏರ್ದಳೆದು ನೊಂದ ಕಾಳ್ಪಂದಿಯಂತವನಾ ಧ |
ನುರ್ದಂಡ ಶರಮನೊರ್ಕೈಗೊಂಡು ಗುಡುಗುಡಿಸಿ |
ದೋರ್ದಂಡಮಂ ನೀಡಿ ವಿಷ್ಣುವಿನ ತೇರ ನಿಡುಬೊಗರೆವೊಲ್ ನಭಕಿಡಲ್ಕೆ ||
ಸಾರ್ದು ಬ್ರಹ್ಮಾಂಡಮಂ ಬೀಳ್ವ ರಥಮಂ ನಡುವೆ |
ಪೇರ್ದು ಹರಿ ಪುಟನೆಗೆದು ಗಗನದೊಳ್ ಮೇಘದಂ |
ತಾರ್ದು ಶುಂಭನವೋಲೆ ಬೀಳಲಿರ್ವರ್ ನೊಂದುರುಳ್ದು ಮೂರ್ಛಿತರಾದರು || ೪೨ ||

ಕ್ಷಣದೊಳೆಚ್ಚತ್ತು ಕಡುವೇಗದಿಂದಿರ್ವರುಂ |
ಪಣೆಸಮಾಘಾತೋಘರಾಗಿ ಬಿಲ್ವಿಡಿದು ವಾ |
ರ್ಗಣಕೆ ಮಾರ್ಗಣಮೊಡನೆ ಸಾಯಕಂ ಸಾಯಕಮಳಲಿಂಗಳಲ್ ಖತಿಗೆ ಖಾತಿ ||
ಕಣಸಿಂಗೆ ಕಣಸು ಮೂದಲಿಗೆ ಮೂದಲೆಗಳಿಂ |
ಹೆಣಗಿದರ್ ಶರ ಖಡ್ಗ ಪರಶು ಗದೆ ಚಕ್ರ ಕಂ |
ಪಣ ಮುಷ್ಟಿಯುದ್ಧಾದಿ ಸಕಲಾಯುಧಂಗಳಿಂ ಹೆರೆತೆಗೆಯದೋರೊರ್ವರು || ೪೩ ||

೧-೨ ನಾಯಸ (ಮ.) ೩ ಕಂಡಾಪಿ (ಶ.) ೪ ಸಾರ್ಚೆ (ಶ, ಗೋ.)

ನೀ೧ಲಪರ್ವತಮೆರಡ್ ಪೋರ್ವಂತೆ ಸಂವರ್ತ |
ಕಾಲಮೇಘದ್ವಯಂ ಸೆಣಸುವಂತಾ ಮಹಾ |
ಸ್ಥೂಲಾಂಗರೆಚ್ಚಾಡುತಿರಲಿರ್ವರವಯವದ ಗಾಯಗಾಯಂಗಳೊಳಗೆ |
ಮೇಲೆ ಮೇಲೊಸರ್ವ ನೆತ್ತರೊಳದ್ದು ಪೂವಾದ |
ಪಾಲಾಶತರುಗಳೊಲ್ ನನೆದ ಜಾಜಿನಗಿರಿಯೊ |
ಲಾ ಲಕ್ಷ್ಮಿಯರಸಶುಂಭಾಸುರರ್ ಪೋರ್ದರೇನೆಂದೆಂಬೆನವರದಟನು || ೪೪ ||

ಸಮನಪ್ಪನೀ ಹರಿಗೆ ಶುಂಭನಾ ಶುಂಭಂಗೆ |
ಸಮನೀ ಮಹಾವಿಷ್ಣುವೆಂದೆರಳ್ತಂಡದವ |
ರಮಮ ಮಝು ಭಾಪೆನಲ್ ಕಾದಿದರನೇಕಸತ್ತ್ವದೆ ಬಳಿಕ್ಕಿಂತಿರ್ವರು ||
ಸಮರದೊಳ್ ಸರಿಯಾಗೆ ಶುಂಭನತಿಕೋಪದಿನ |
ಸಮಬಾಣಮೊಂದರಿಂದೆರ್ದೆಯನೆಚ್ಚೊಡೆ ಶಿರೋ |
ಭ್ರಮಣದಿಂ೨ ಮೂರ್ಛಿಸಿ ಮರಳ್ದೆಳ್ದು ವಿಷ್ಣು ದಿವ್ಯಾಸ್ತ್ರದಿಂ ಕೆಡೆಯೆಚ್ಚನು || ೪೫ ||

ಸರ್ಪಶಯನನ ಬಾಣಹತಿಗವನ ಮುಖದೆ ನೆ |
ತ್ತರ್ಪರಿದುದೆತ್ತಲುಂ ಸುತ್ತಲುಂ ಕೋಪದಿಂ |
ಕೂರ್ಪ ಸೋದರ ನಿಶುಂಭಾದಿಗಳ್ ವಿಷ್ಣುವಂ ತವೆ ಮುತ್ತಲಾ ಕ್ಷಣದೊಳು ||
ತೇರ್ಪತ್ತು೩ ಶುಂಭನಿದಿರಂ ನೋಡಿ ಮುಳಿಸು ಮೂ |
ರ್ಪತ್ತುಮಡಿಯಾಗೆ ವಿಷ್ಣುವಂ ಕಾಣುತಿ |
ನ್ನೊರ್ಪತ್ತು ಬದುಕುನೀಂ ಕಾಬೆನೆನುತುಗ್ರಶಕ್ತಿಯನಾರ್ದು ತೆಗೆದಿಟ್ಟನು || ೪೬ ||

ಪೇ೪ರುರವನುಗಿದುಪಾ ಶಕ್ತಿ ಹರಿ ಮೆಯ್ಮರೆದು |
ತೇರೊಳಗೆ ಬಿಳ್ದನಿನ್ನಿರಬಾರದೆಂದವನ |
ಸಾರಥಿ ಮರಳ್ಚಿದಂ ಪಾಳೆಯಕೆ ರಥಮನಾ ಬ್ರಹ್ಮೇಂದ್ರರಳವಳಿದರು ||
ಈ ರಾಕ್ಷಸಾಳಿ ಬೆಂಬತ್ತಿದುದು ನಿಡುಸರಳ |
ಸಾರದಿಂ ತೊಡೆ ನಡು ಕೊರಳ್ ಪರಿಯೆ ಕೂಡೆ ಸಂ |
ಹಾರಮಾಯ್ತಾಗಳೈನೂರ್ಪದ್ಮಬಲಮುಳಿದುದೋಡಿ ಬೀಡಂ ಪೊಕ್ಕುದು || ೪೭ ||

೧ ಏಃ (ತಿ, ಗೋ, ಹು, ಮ.) ೨ ಪೊಳ್ (ತಿ, ಗೋ, ಹು, ಮ.) ೩ ತ್ತಿ (ಮ.) ೪ ಕಾಂಚಿವು (ಮ.)

ಕರಿ ತುರಗ ರಥ ಶರಾಳಿಯುನಿರಿಸಿ ಕೈಮುಗಿದು |
ಸುರಸ್ತೋತ್ರಡದರ್ಪ ಪುಲ್ಗಚ್ಚಿ ನಿರ್ವ್ರೋಕ್ಕ ಸಲೆ |
ಬೆರಳುಗಳ್ ಬಾಯೊಳಿಟ್ಟಯ್ಯ ಕಾಯೆಂದು ಕಾಲ್ಗೆರಗಿ ಬಹುದೈನ್ಯಮಾಂತು ||
ಕರುಣವನೆ ಪಡೆದು ಕಳುಹಿಸಿಕೊಂಡು ಕಾಲ್ಬೇಗ |
ನೆರಪಿ ತಿರುತಿರುಗಿ ನೋಡುತೆ ಪಾಳೆಯಂ ಬುಗುವ |
ಸುರರ ಸೇನೆಯು ಸಡಗರಂಗಂಡು ಸೇನಾನಿಯುರಿದೆಪ್ಪನಾ ಕ್ಷಣದೊಳು || ೪೮ ||

ಬಾಯುಸೊಡೆಬಡಿ ವಿರಾಸೆಗೇೞ್ ಕುರುಳ್ಗೊಯ್ಯ್ ಪುಗಲ್ |
ತಾಯೊಡಲ್ ತೆರಪಿಂವ್ರದೇ ನಿಮಗೆ ಪೋಯ್ಯಾಡಿ |
ನಾಯುಲೂಣೆಯುವಹುದೆ ಸುಡು ನಿಮ್ಮ ಬಾಳ್ಕೆಗಳನೆನುತೆ[1] ಜರೆದಮರಕುಲವಂ ||
ಖೋಯೆನುತೆ ಬಪ್ಪಸುರರಂ ಕಂಡು ತೇರೇರಿ |
ಜೇಯುನೇರಿಸಿ ಬಿಲ್ಲನೊದರಿಸುತೆ ಪ್ರಳಯಹರ |
ನಾಯತಂಪಾಳ್ದಾತ್ಮಬಲಸಹಂ ಷಣ್ಮುಖಂ ತರುಬಿದಂ ಪರಬಲವನು || ೪೯ ||

ಗಡಬಡಿಸಿದುದು ಲಗ್ಗೆವರೆ ಕೋಟಿ ಪಗೆಗಳಂ |
ಕೆಡೆಕೆಡೆಯೆನುತ್ತೆ ಕಹಳೆಗಳೊದರ್ದುವಳ್ಳಿರ್ದೆಯು |
ಪಡಪಡಂಗಳ್ ಮಾಣ್ದುದಮರರ್ಗೆ ಹರಿಯುಜರ್ ತರಹರಿಸಿ ಧೈರ್ಯದಿಂದೆ ||
ಒಡನೊಡನೆ ಹುರಿಗಟ್ಟಿಯುರುಬುವಸುರಾಳಿಯಂ |
ತಡೆತಡೆದು ಕಾದುತಿರ್ದಂ[2] ಶುಂಭನಿಷುಗಳಂ |
ಕಡಿಕಡಿದು ಖಾತಿಯಿಂದಾ ಷಣ್ಮುಖಂ ಸರಳ್ತೊಟ್ಟು ಮತ್ತಿಂತೆಂದನು || ೫೦ ||

ನಾರಿಪೆಂ ಕೆಡಬೀತ ತೊಲಗು ಹರಿವಿಧಿಗಳಂ |
ಗಾರಾಗಿಸಿದ ವಿಕ್ರಮಂ ಸಲ್ಲದೆಮಗೆ ಮೆ |
ಯ್ದೋರಿ ಕಾದಿದ ದೈತ್ಯರೇನಾದರೆಂಬುದಂ ಪಿಂತೆ ನೀಂ ಕೇಳ್ದರಿಯೆಲಾ ||
ಕಾರಿಸುವೆನಮರರಂ ಜಯಿಸಿದುದನೆನುತೆ ಬಿ |
ಲ್ಲಾರರಧಿದೇವನೆಚ್ಚಂ ಕರದ ಬಲ್ಬಿಲ್ಗ |
ಳಾರಿಂ ಖಳನ ಸಾರಥಿ ರಥಾಶ್ವಂಗಳರಡೆಗೆಡೆಯಲೇಸೆಂಬೆನು || ೫೧ ||

೧ ಮ (ಮಾ, ಸು.) ; ಹು (ಹು.) ೨ ಬಾಳ್ಗಳನೆನುತ್ತೆ (ಶಿ, ಗೋ, ಡಾ, ಹು, ಸು.) ೩ ದರ್ (ಹು, ಡಾ, ಮ.)

ತೇರ್ಮುರಿಯೆ ಪೊಸತೇರನಳವಡಿಸಿ ಶುಂಭನೈ |
ನೂರ್ಮಡಿಯ ಬೀರದಿಂ ಪೊಸಮಸೆಯ ಕಣೆಗಳಂ |
ಕಾರ್ಮುಕದೊಳೊಂದಿಸಿ ಬಿಡಲ್ ದಿಶಾವನಿ ನಭೋಮಂಡಲಂಗಳೊಳೆಲ್ಲಯುಂ |
ಕಾರ್ಮುಳಿಗಳೆನೆ ಕರೆದುವನಿತುಮಂ ನಿಮಿಷದೊಳ |
ಗಾರ್ಮೊಗಂ ಕಡಿದವನ ಕೇತು ಚಾಮರ ಕವಚ |
ಧರ್ಮ ಸಾರಥಿ ವರೂಥಂಗಳಂ ಕಡಿದು ವಿರಥನ ಮಾಡಿದಂ ಕ್ಷಣದೊಳು || ೫೨ ||

ವಿರಥನಾದಾ ಶುಂಭನೊಡನೆ ಗದೆವಿಡಿದು ಚೆ |
ಚ್ಚರದೊಳೊದಗಲ್ಕದಂ ಕಡಿಯುಲಸಿವಿಡಿದು ನಿ |
ರ್ಭರದೊಳೊದಗಲ್ಕದಂ ತರಿಯೆ ತೋಮರ ಚಕ್ರ ಪರಿಘ ಮುದ್ಗರ ಮುಸುಂಡಿ |
ಪರಶುಮೊದಲಾದ ಬತ್ತೀಸಾಯುಧಂಗಳೊಳ್ |
ಪರಿವಿಡಿಯುಲೊದಗಲನಿತಂ ಬೇಗದೊಳ್ ಮಹೇ |
ಶ್ವರಸುತಂ ತರಿದವನ ಮೆಯ್ಯುಂಬ ಗಾಯಮಂ ಕಾಣಿಸಿದನೇನೆಂಬೆನು || ೫೩ ||

ಇಂತು ನಾನಾವಿಧದ ಶಸ್ತ್ರಾಸ್ತ್ರಜಾಲಂಗ |
ಳಿಂ ತಡೆಯದೊದಗಿ ಗುಹನಂಗದೊಳ್ ಗಾಯಂಗ |
ಳಂತಾಗಿಸಲ್ ನೆರೆಯದಾತನಂ ಪಿಡಿದೆತ್ತಿ ನುಂಗಿದಪೆನೆಂಬ ಮನದ ||
ಭ್ರಾಂತಿಯಿಂ ಮೇಲ್ವಾಯೆ ತಲೆಯನರಿಪಾ ಬಾಣ |
ಮಂ ತೆಗೆದಿವಂ ಗಿರಿಜೆಯುಸ್ತ್ರಕ್ಕೆ ಮಿಾಸಲೆಂ |
ದಂತದಂ ಬಿಟ್ಟು ಷಣ್ಮುಖನಾರ್ಶರಂಗಳಿಂ ಖಳನುರವನೊಡೆಯೆಚ್ಚನು || ೫೪ ||

ನಿಲವಿನಿಂ ಕೆಡೆದನವನನಿತರೊಳ್ ದೊರೆ ಬಿಳ್ದ |
ನೆಲೆಲೆ ಕವಿಕವಿಯೆನುತೆ ಸುತ್ತಲೆತ್ತೆತ್ತಲವ |
ನಳಲಿಗೆ ನಿಶುಂಭ ಕುಂಭ ನಿಕುಂಭ ಶರಭ ಗಜಶಿರ ಕಪಿಲ ವೃಷಪರ್ವರು ||
ಬಲಿ ವಿಲೋಚನ ಪಾಕ ಬಾಣ ವಿದ್ರಾವಣ ಶ |
ಬಲ ಶಂಖಶಿರ ವಜ್ರನಾಭ ಮೊದಲಾಗಿರ್ದ |
ಖಳರೊದಗಿ ಶುಂಭನಂ ಬೀಡಿಂಗೆ ಪೊರಿಸಿ ಕೆಣಕಿದರೊಡನೆ ಷಣ್ಮುಖನನು || ೫೫ ||

---
೧ ಮೆ (ಮ.)

ಗಿರಿಯುಂ ಬಕಗಂ ಮುತ್ತೆ ಕುಲಿಶವುಂ ಜುವ್ವದೆ ವನ |
ಕರಿಯುಂ ಜಂಗುಳಿಸುರುಬೆ ಸಿಂಗಮುಳ್ಕುವುದೆ ಪುದು |
ನರಿಯ ಹಿಂಡುರವಣಿಸೆ ಪೆರ್ಬುಲಿ ಭಯಂಗೊಂಬುದೆ ಸಿದ್ಧರಾಮ ಕೇಳು ||
ತರತರದೊಳೆತ್ತೆತ್ತಲುಂ ಕವಿವ ರಕ್ಕಸರ |
ನೆರವಿ ಷಣ್ಮುಖನಂ ತೆರಳ್ಚುವುದೆ ಕೂಡೆ ಸಂ |
ಹರಿಸತೊಡಗಿದನವಂ ಪ್ರಳಯಹರನಪರಾವತಾರವೆನೆ ಸಂಗರದೊಳು || ೫೬ ||

ಇದಿರೊಳುರುಬಿದ ನಿಶುಂಭನನೆಚ್ಚು ಬಲದೊಳೊ |
ತ್ತಿದ ಕುಂಭನಂ ಬಡಿದು ವಾಮದೊಳ್ ಬಂದು ತಾ |
ಗಿದ ಶರಭನಂ ಸದೆದು ಬೆಂಗಡೆಯೊಳೆಸುವ ಬಲಿಯುಂ ಕೆಡಪಿ ಮೇಲೆಮೇಲೆ ||
ಒದಗುವ ನಿಶುಂಭ ಪಾಕರನಿಳೆಗುರುಳ್ಚಿ ಮೋ |
ಹಿದ ಶಬಲ ಶಂಖುಶಿರ ವಜ್ರನಾಭಾದಿ ಬಲ್ |
ಕವನಕರ್ಕಶದನುಜರಂ ಮೂರ್ಛೆವಡಿಸಿದಂ ಗುಹನೊಂದುನಿಮಿಷದೊಳಗೆ || ೫೭ ||

ಮಡಿವರ್ಗೆ ಗಡಿಯಿಲ್ಲ ವಾಹನದ ಮೇಗಣಿಂ |
ಕೆಡೆವರ್ಗೆ ಮಿತಿಯಿಲ್ಲ ಗಾಯಂಗಳಿಂ ಮೂರ್ಛೆ |
ವಡೆವರ್ಗೆ ಗಣನೆಯಿಲ್ಲರೆಜೀವವಾಗಿ ಕೈಕಾಲ್ಗಳುಡಿದರೆಗಂಗಳ ||
ಬಿಡುವರ್ಗೆ ಲೆಕ್ಕವಿಲ್ಲೆಸುಗೆಯುರುಬೆಯೊಳೆರ್ದೆಗ |
ಳೊಡೆವರ್ಗೆ ಮೇರೆಯಿಲ್ಲೆತ್ತಲುಂ ಪರಿದು ಬೆಂ |
ಗೊಡುವರ್ಗೆ ಕಡೆಯಿಲ್ಲವೆನೆ ಮುರಿದುದಾ ಬಲಂ ಪೇಳಲೇನದ್ಭುತವನು || ೫೮ ||

ಬೆಂಬತ್ತಿ ಪಡು ಪಿಸ್ಸು ವಿಧಿಮುಖ್ಯದೆ ವನಿಕು |
ರುಂಬಮೆತ್ತೆತ್ತಲುಂ ಖಳರಾನೆ ಕುದುರೆ ತೇ |
ರಂ ಬಿಟ್ಟು ಕಂಗೆಟ್ಟು ಮಾತ್ರಿಯಳಿದು ಧೃತಿಗುಂದಿ ಬಹುದೈನ್ಯದಿಂ ಕೈಗಳಂ |
ತಂಬುಲಕೆ ನೀಡಿ ಗಡ್ಡಂ ಮೀಸೆವೆರಸಿ ಬಸು |
ರಿಂ ಬಂದಮಕ್ಕಳಾವ್[1] ನಿಮಗೆಂದು ಘಟಿಸನೂ |
ಕಂ ಬಿಡಿಸಿಕೊಂಡು ತಮ್ಮಯ ಬಾಳಿಯಂ ಬೊಕ್ಕುದೇನೆಂಬೆನಚ್ಚರಿಯನು || ೫೯ ||

೧ ಪಿ (ಶಿ, ಗೋ.) ೨ ಳುಂ (ಶಿ, ಗೋ.)

ಓಡುವಸುರಾಳಿಯುಂ ಸುರರಿರದೆ ಬೆಂಬತ್ತಿ |
ಕೂಡೆ ಪೊಕ್ಕರ್ ಪಾಳೆಯಂಗಳಂ ಬಲ್ಸೂರೆ |
ಮಾಡಿ [1]ಗೂಡಾರಮಂ ಕೊಯ್ದು ತಮತಮಗೆ ಸೂಳೆಯರ ಕೈ[1]ಸೆರೆಯ ಪಿಡಿದು ||
ಮಾಡಿದರ್ ಸಕಲರ್ಗೆ ಭೀತಿಯಂ ಜಯದೊಳೋ |
ಲಾಡಿದರ್ ಬಿಂಕದಿಂ ಜಯಭೇರಿಯಂ ಪೊಯ್ಸು |
ತಾಡಲೇನಾ ಷಣ್ಮುಖಂ ತಿರುಗಿದಂ ತಮ್ಮ ಪಾಳೆಯಕೆ ಸಂಭ್ರಮದೊಳು || ೬೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೬೧ ||

ಅಂತು ಸಂಧಿ ೪೯ಕ್ಕಂ ಪದಗಳು ೨೦೬೫ಕ್ಕಂ ಮಂಗಳಮಹಾಶ್ರೀ

೧-೧ ಗೂಡಾರಮಂ ಕೊಯ್ದೊಯ್ದು ತಮತಮಗೆ ಸೂಳೆಯರ (ಶಿ, ಗೋ.) ; ಗುಡಿಗೂಡಾರಮಂ ಕೊಯ್ದು ತಮತಮಗೆ ಸೂಳೆಯರ (ಹು, ದಾ, ಮ.)

ಐವತ್ತನೆಯ ಸಂಧಿ

ಸೂಚನೆ

ಘೋರದೊಳಂಧಾಸುರಂ ಹರನೊಡನೆ ಕಾದಲಾ |
ಪರಶಿವಂ ಶೂಲದಿಂದಿರಿದೆತ್ತಿ ನುತಿಸಲವ[೧] |
ಕರುಣದಿಂದವನ ಹೃದಯಾಂಗಣದೆ ನಟಿಸಿ ಗಣಪದವಿಯಂ ಕೊಟ್ಟನೊಲಿದು ||

ಕಮಲನೇತ್ರಾಂಬಕಸುಪೂಜಿತಪದಾಂಭೋಜ |
ಕಮಲಗರ್ಭೋದಯಕುಮಾರಕಶಿರಶ್ಛೇದ |
ಕಮಲಸಖಪುತ್ರಗಾತ್ರಾರಣ್ಯಘನದಾವಕಮಲ ಕಮಲಾರಿಧರನೇ ||
ಕಮಲಮಿತ್ರಾಬ್ಜವಹ್ನಿತ್ರಿಲೋಚನನಮೆಸೆವ |
ಕಮಲಾಕುಮಾರದಹನೀಕೃತಸುಭಸಿತಾಂಗ |
ಕಮಲಾಪ್ತಕೋಟಿಪ್ರಕಾಶ ಜಯ ಪಂಪಾವಿರೂಪಾಕ್ಷ ಸುಜನರಕ್ಷ || ೧ ||

ಘನಮಹಿಮ ಚೆನ್ನಬಸವಣ್ಣ[೨] ನಿಂ ಮುಂಗಥೆಯ |
ನನುನಯದೆ ಪೇಳೆನಲ್ ಸಿದ್ಧರಾಮೇಶಂಗೆ |
ವಿನಯದಿಂ ಪೇಳ್ದನಾ ಸಮಯದೊಳಗಿನನಪರವಾರ್ಧಿಗಿಳಿದಂ ಭರದೊಳು ||
ನೆನೆದು ರಣಭಂಗಮಂ ಸಕಲದೈತ್ಯರ್ ತಮ್ಮ |
ಮನದಹಂಕೃತಮಳಿದು ದುಃಖದಿಂ ನೋವುತಿ |
ರ್ಪಿನಮಂಧಕಾಸುರಂ ಕರೆಸಿದಂ ದೊರೆದೊರೆಗಳಂ ಮಂತಣಂಗೆಯ್ಯಲು || ೨ ||

ಮುಸುಕದಲಿಗಳ ಪೊಂದಹಂಕೃತದ ನಿಷ್ಕಳೆಯ |
ಮುಸುಡುಗಳ ಮೆಲ್ಲಮೆಲ್ಲನೆ ಬರ್ಪ ನಡೆಯ ಜಾ |
ರಿಸುವ ಒಗೆಗಳ ಪೊತ್ತ ದುಗುಡಗಳ ಕೆಳಗೆ ನಿಟ್ಟಿಪ ನೋಟಗಳ ಸನ್ನೆಯ ||
ಸಸುವಾತುಗಳ ಸೆಗಳ್[೩] ಸುಯಿಲ ನಾಚಿಕೆಯ ಗುಹ |
ನೆಸುಗೆಯಿಂ ಸೀಳ್ದ ಮೊಯ್ಗಳ ಖಳರ್ ಬಂದು ಮಂ |
ಡಿಸಿದರೋರೊರ್ವರೋರ್ವರ ಮರೆಯೊಳತ್ತಿತ್ತ ಮಿಸುಕದೆಂ ವಣ್ಣಿಸುವೆನು || ೩ ||

೧ ಕೆ (ಮು, ದಾ, ಸು.) ೨ ನೇ (ಮು.) ೩ ಸೇಳ್ದ (ತ್ರಿ, ಗೋ, ಹು, ದಾ, ಮ.)

ಘೋರ್ಗರೆಯುದೊಪ್ಪುವ ಸಮುದ್ರದಂತೊಂದರೆತ |
ಳಿರ್ಗದಲದಿರ್ಪ ವನದಂತೆ ಗುಡುಗುಡು ಮಾಣ್ದು |
ಕಾರ್ಗಾಲದಬ್ಬ ಮಾಲೆಗಳಂತೆ ಮೌನಮಂ ತಾಳ್ದು ಮಹಾಸಭೆಯೊಳು ||
ದೋರ್ಗರ್ವಮುಳಿದ ಭಟರಂ ಮಿತ್ರರಂ ಬಂಧು |
ವರ್ಗಂಗಳಂ ನೋಡಿ ಬೇರೆಬೇರನಿಬರ ಪೆ |
ಸರ್ಗಳಿಂ ಕರೆದು ಪೊರೆಯೊಳ್ ಕುಳ್ಳಿರಿಸಿಯಂಧಕಾಸುರನವರ್ಗೆಂದನು || ೪ ||

ಚಿಂತೆಯೇತಕ್ಕಿರಿತ ಮುರಿತಮಿವು ಸಮರದೊಳ |
ಗೆಂತಪ್ಪವರ್ಗಾದೊಡಂ ಬರ್ಪುವೀ ವೃಥಾ |
ಭ್ರಾಂತಿ ಬೇಡೆಂದೆಲ್ಲರಂ ತಿಳಿಪಿ ತನ್ನಾಪ್ತರಂ ಕರೆದು ವಿನಯದಿಂದೆ ||
ಪಿಂತಾದ ಕಾಳೆಗದೊಳೆಮ್ಮಾ ಜಯಾಪಜಯ |
ಮಂತಿರ್ಕೆ ಬಹುಕಾಲಮಾಯ್ತು ರಣಮಾ ಪಗೆಯು |
ನೆಂತು ಸಂಹರಿಸವೇಳ್ಕೆಂಬುದಂ ತಿಳಿದೆಮಗೆ ಪೇಳಿರೈ ನೀವೆಂದನು || ೫ ||

ಆ ಮಾತನೆಲ್ಲರುಂ ಕೇಳ್ದು ಮೌನಂದಾಳ್ದು |
ತಾಮೊರ್ವರೊರ್ವರ ಮೊಗಂ ನೋಡುತಿರೆ ಮಹಾ |
ಭೀಮಾಂಗನಾ ಗಗನಮೂರ್ಧ್ನಿಯಂಧಾಸುರನ ಸಮ್ಮುಖದೊಳೆಳ್ದು ನಿಂದು ||
ಈ ಮಹಾಸಭೆಯ ವೀರರ್ಕಳಿರೆ ರಿಪುವಂ ವಿ |
ರಾಮವೆನಿಪುದು ನಿನಗೆ ಚೋದ್ಯಮಲ್ಲಾದೊಡೆ |
ನಿ[೧] ಮನಕೆ ತೋರಿದುದನುಸಿರ್ದಪೆನದಂ ಕೇಳೆಮೆಂದು ಮತ್ತಿಂತೆಂದನು || ೬ ||

ಅಂದು ಮೊದಲಾಗಿ ಪಗಲಿನ ಸಮರದಿಂದೆಮಗೆ |
ಬಂದುದಪಜಯಮಾವ್[೩] ನಿಶಾಚರರ್ ನೋಡಲದ |
ರಿಂದಿರುಳ್ಗಾಳೆಗಂ ಜಯಮಪ್ಪುದೆಮಗೆ ನಮ್ಮಾ ಸರ್ವಶಕ್ತಿವೆರಸಿ |
ಇಂದು ಜಯಿಸಿದ ಗೆಲ್ಲದೊಳ್ ಮೆಯ್ಗಳಂ ಮರೆದು |
ಸಂದ ಗರ್ವದೊಳೊರಂಗಿದ ಸಕಲದೇವತಾ |
ವೃಂದಮಂ ಕೊಲಲಕ್ಕುಮಿದು ನಿಶ್ಚಯಂ ಮನಕೆ ಬರ್ಪೊಡೆಸಗುವುದೆಂದನು
|| ೭ ||

೧ ದು (ಹು, ಮ.) ೨ ಮ (ಹು, ಮ.) ೩ ಮಂ (ಶಿ.); ಮಾಂ (ದಾ.)

ಸಹಜವೆಂದಂ ಶುಂಭನೊಪ್ಪಿದಂ ಶರಭನದ |
ನಹುದೆಂದನಂಧಕಾಸುರನುಳಿದರೆಲ್ಲರುಂ |
ವಹಿಸಿಕೊಂಡರ್ ಗಗನಮೂರ್ಧ್ನನ ಮತಮೇ ತಮ್ಮ ಮತಮೆಂದು ತತ್ಕ್ಷಣದೊಳ್
ಗಹಗಹಿಸಿದಂ ಪ್ರಹಲ್ಲಾದನರಿದರಿದು ಮರು |
ಳಹರನುರೆ ಕಂಡುಕಂಡುಂ ಕಾಣದಿರ್ಪುದು |
ಮರ್ಚಿಸಿಸಸ್ವರೂಪರಂ ತಿಳಿಸಲೀಶಂಗೆ ವಶಮಲ್ಲಮೆಂದಿಂತೆಂದನು ||೮||

ಶತಮಾಯ ಜಂಭ ಬಲ ನಮುಚಿ ವೃತ್ರರ್ಗೆ ಮುಂ |
ಪ್ರತಿಮಾನರುಂಟೆ ಸಮರದೊಳವರ್ ಮೊದಲಾದ
ರತಿನಾಶನಡಗಿ ಮುಡಿದರ್ ಸತ್ತ್ವ ಬಲಕೆ ಕಡೆಗಾಣೆನಾ ರಕ್ಕಸರೊಳು ||
ಕ್ಷತಮಾಗದವರದಾರ್ ತೋಂರಹಿತಬಲದೊಳಗೆ |
ಹತಮಾದರಾರೆಣಿಸು ಬೇಗ ಶಿವನಡಿಗಳ್ಗೆ |
ನತನಾಗು ಮರುಳ್ವೆಶಿರಂ ನಂಬಿ ಕೆಡಬೇಡ ಪೇಳ್ವೆಂ ತ್ರಿವಚನದೊಳೆಂದನು ||೯||

ಎನೆ ಕೇಳ್ದು ಗುಡುಗುಡಿಸಿ ಕಣ್ಗಳೊಳ್ ಕಿಡಿಗೆದರಿ |
ಕನಲುತಂಧಾಸುರಂ ನುಡಿದನಿವನಂತೆ ಯೋ |
ಚನೆಗೆ ಕರೆದಿಪೆ ನಿನ್ನ ಸರಿಚಬೇಡೆಮ ಪ್ರಹಲ್ಲಾದನಂ ಜರೆದು ನುಡಿಯೆ |
ದನುಜಸೇನಾಪತಿತ್ವಕೆ ಗಗನಮೂರ್ಧ್ನಗುರೆ |
ಮನಸೊಲಿದು ಮೂರ್ಧಾಭಿಷೇಚನಂ ಗೆಯ್ದಾಗ |
ನೆನೆದ ಕಾರ್ಯಮನೆಸಗಿಮೆಂದು ವೀಳೆಯಮಿತ್ತು ಕಗ್ಗೊಲೆಗೆ ಬೀಳ್ಕೊಟ್ಟನು ||೧೦||

ಕರಿಯು ಘಂಟೆಗಳ ಕುದುರೆಗಳ ನಾಲಗೆಗಳಂ |
ಸರಮಣ್ಮದೊಳ್ ಕಟ್ಟಿ ಸಂಜುಪ್ರೊತ್ತಿನವೆ ಪರಿ
ಪರಿಯ ವಾದ್ಯಂಗಳಂ ಬಾಜಿಸದೆ ಗುಪ್ತದಿಂ ಸರ್ವಸನ್ನಾಹಮಾಗಿ ||
ಮೊರೆಮೊರೆಗಳಿಂ ಕೂಡಿಕೊಂಡಿನಲ್ಲಿ ತವ
ಗೆರೆದೊಳಗೊಂದಾಗಮೆಳ್ಕಿಂದು ಬಂದು ಪುರ |
ಹರನ ಪಾಳೆಯದ ಸುತ್ತಿತ್ತಲುಂ ಮೋಹರಿಸಿ ನಿಂದರೆಂ ವಣ್ಣಿಸುವೆನು ||೧೧||

೧ ಮೂರ್ಧ್ನಿಯಮಾಡುತ (ಹು.) ೨-೨ ದಂತಿರ್ಪ | ಮು (ಹು, ಮ.) ೩ ಮದಾಪ (ಶಿ, ಗೋ, ಹು, ದಾ, ಮ.) ೪ ನಡೆದು (ಹು, ಮ.)

ಎಲೆ ಸಿದ್ಧರಾಮ ಕೇಳ್ ಖಳರನುರೆ ನೋಯಿಸಿದ |
ಗೆಲವಿನೊಳ್ ಪಹರಿ[1]ಪಡೆ ಕಳನೆಲ್ಲವಂ ಮರೆದ[2]
ಮಲಗಿದರ್ ಸಕಲರುಂ ಮತ್ತಲ್ಲದಾ ಖಳರ್ ಬೆಳುವೆಯ್ ಬೂದಿಯಂ ಡಿ[3] ||
ತಳಿ ಬೇಲಿ ಬದ್ದರಗಳಂ ಮುರಿದುಕೊಂಡೊಯ್ಯ |
ನೊಳಪೊಕ್ಕು ಸುರಪ ಹರಿ ಬ್ರಹ್ಮರಿಹ ಪಾಳೆಯಂ |
ಗಳ ಮೇಲೆ ಬಿಳ್ದು ಕೊಲತೊಡಗಿದರ್ ತನ್ನಿಚ್ಛೆಯಿಂದದೇಂ ವರ್ಣಿಸುವೆನು
|| ೧೨ ||

ಮರೆದೊರಗಿದರನಿರಿದಿರಿಪೌಂಕಿ ಕೊರಳ್ಗಳಂ |
ಕೊರೆದೆಚ್ಚರೊಳಗೊಳ್ವರಂ ಮೆಟ್ಟಿ ಕಾಲ್ಪಿಡಿದು
ಸರಸರನೆ ಸೀಳ್ದುರೆಳ್ದೋಡುವರನಟ್ಟಿ ಪಿಡಿದೊತ್ತಿ ನಡು ಕೈ ಕಾಲ್ಗಳಂ |
ಮುರಿದಿಟ್ಟರೆತ್ತಾನುಮಿದಿರಾದೊಡಲ್ಗಳಂ |
ತರಿತರಿದು ಕತ್ತರಿಸಿ ಕೊಚ್ಚಿ ಖಂಡಿಸಿ ಪಲವು |
ತೆರದೊಳರೆಗೊಲೆಗಳಂ ನೆರೆಕೊಂದು ಕೊಲೆಯಾಡಿದರ್ ಖಳರದೇಂ ಪೊಗಳ್ವೆನು
|| ೧೩ ||

ಆಳ ಕಾಲ್ವಿಡಿದು ಭಟರಂ ಬಡಿದು ಕುದುರೆಗಳ |
ಬಾಲಮಂ ಪಿಡಿದು ತೇಜಿಗಳನಪ್ಪಳಿಸಿ ಶುಂ |
ಡಾಲಂಗಳಂ ಪಿಡಿದು ಕರಿಗಳಂ ಸದೆದು ತೇರಿಂದಂ ವರೂಥಂಗಳ ||
ಸಾಲನಡಿಹುಡಿಮಾಡಿ ಭಂಡಾರಬೊಕ್ಕಸದ |
ಶಾಲೆಗಳನುರೆ ಸೂರೆಯಾಡಿ ಪಲತೆರದೊಳಾ |
ಕಾಳರಕ್ಕಸರಟ್ಟೆ ಮುಟ್ಟೆ [4]ಕೊಲುತಿರ್ದರೇನೆಂದೆಂಬೆನಚ್ಚರಿಯನು[4] || ೧೪ ||

ಬೊಬ್ಬಾಟಮಾದುದೆಲ್ಲೆಲ್ಲಿಯುಂ ಸಕಲರುಂ |
ಬೆಬ್ಬಳಿಸುತೆಲೆಲೆ ಹೋಹೋ ಕಡಿಯೆನುತ್ತೆ ಬಿಡ |
ದಬ್ಬರಿಸಿ ಸಿಗ್ಗಂತದಿಂದೆಳ್ದು ಕೈದುವಂ ಮರೆದು ತಲೆಗೆದರಿ ಕೂಡೆ ||
ತಬ್ಬಿಬ್ಬುಗೊಂಡು ತಮ್ಮೊಳ್ ತಾವೆ ಸಿಲ್ಕಿದಂ |
ತಬ್ಬಿಹಿಡಿ ಹೊಯ್ ಹೊಯ್ಯೆನುತ್ತೆ ಕೊಲ್ಲದ ಕೊಲೆಯ |
ಹಬ್ಬದೊಳ್ ಮಣಿದು ಮರುಳಾದುದಮರವ್ರಜಂ ಪೇಳಲೇನಚ್ಚರಿಯನು || ೧೫ ||

೧-೧ ಪಡೆಯೆಲ್ಲಮುಂ ಮರೆದು ತಾಂ (ಮ.) ೨ ದಿ (ಮ.) ೩ ನಡಿಯು (ಶಿ, ಗೋ.)
೪-೪ ಬಲುಗೊಲೆಯ ಕೊಲುತಿರ್ದರೇನೆಂದೆಂಜನು (ಹು, ಮ.)

ಮದಗಜಂಗಳ್ಗೆ ಪಲ್ಲಣಗಳಂ ಹಾಯ್ಕು ಬಲು |
ಗುಮುರಿಗಳ ಬೇಗೆ ರಂಚಿಕೆಯುಸೊಂದಿಸು ಕೆಯ್ಯ |
ಮೊವಲೊಳಿಡು ವಜ್ರಾಂಗಿಯುಂ ಮೆಯ್ಗೆ ತೊಡಿಸು ಸೂಳಾಯ್ತುಮಂ ಕಾಳೆಯಿಂದೆ ||
ಬೆದರದಿರಿ ನೇಜಯುಂಗಳನೂದು ಹರಿಗೆಯುಂ |
ಕವಲಿಸು ವರೂಥಮಂ ತೊಡೆ ಚಾಟುಗೊಳ್ಳೆನುತೆ |
ಕವನವಿಕ್ರಮರೆಲ್ಲರುಂ ಬೆದರಿ ಕಂಡಕಡೆಗೋಡಿವರದೇಸಂಬೆಸು || ೧೬ ||

ಸುರಭಟರ್ ಮುರಿದು ದಿಕ್ಪಾಲಕರ ಮೇಲೆಯಾ |
ಸುರಭಟರ್ ದಿಕ್ಪಾಲರುಂ ವಿಧಿಯ ಮೇಲೆಯಾ |
ಸುರಭಟರ್ ದಿಕ್ಪಾಲವಿಧಿಗಳುಂ ಮಾಧವನ ಮೇಲೆ ಕಡುವೇಗದಿಂದೆ |
ಸುರಭಟರ್ ದಿಕ್ಪಾಲವಿಧಿಮಾಧವಾದಿಗಳ್ |
ಹರಗಣದಮೇಲೆ ಕಣ್ಗೆಟ್ಟು ಬೀಳಲ್ಕಾಗ |
ಮರುಳರಕ್ಕಸರಿನಿಬರುಂ ಸವರಿ ಸಾಹಸದೆ ಮುಂಬರಿದು ಬರುತಿರ್ದರು || ೧೭ ||

ಬರಿಯು ಮೆಯ್ಗಳ ಬಿಟ್ಟ ಮುಂಡೆಗಳ ಬಾಳ್ವಿಗಸು |
ಟ್ರೊರೆಪಿಡಿದ ಕೆಯ್ದುಗಳ ಜಗುಳಿ ತಬ್ಬಿಬ್ಬಾಗಿ |
ಮೆರೆವಂಗರಕ್ಷೆಗಳ ವಾಹನಂಗಳ ರಕ್ಕಸರ್ ಕಂಡಕಡೆಗಳಲ್ಲ |
ಇರಿದ ಘಾಯಂಗಳಿಂ ಹಜ್ಜೆಹಜ್ಜೆಗೆ ಬಿಡದೆ |
ಕರೆವ ನೆತ್ತರ ಶಿವಾ ಸಲಹುಸಲಹೆಂಬಿದೆಂಬ |
ಮೊರೆಯು ಬಾಯ್ಗಳ ದಿವಿಜನಿಕರಮುಂ ಕಂಡು ರುದ್ರಪ್ರಮಥಗಣಮೆಳ್ದುವು
|| ೧೮ ||

ವೀರಭದ್ರಂ ಕಾರ್ತಿಕೇಯನುರುತರಕಾಲ |
ಭೈರವಂ ನಂದೀಶ್ವರಂ ಮಹಾಕಾಳನಂ |
ಗಾರವಮನಂ ಧೂಮುಕಾಯುಂ ವಿರೂಪಾಕ್ಷನದ್ರಿಭೇದನನೊಪ್ಪುವ |
ಸೂರೇಂದುಪಾತ ಘಂಟಾಕರ್ಣ ಬಡಬಾಗ್ನಿ |
ಪಾರ ಸುರಪ್ರೋಷ ಚಂಡೇಶಮುಖ್ಯರ್ ಸ್ವಪರಿ
ವಾರಸಹಮಗಾಬಟಿಸುತೆಲ್ಲರೊಂದೇಬಾರಿ ರಾಮು ಕೆಳದ್ಭುತವನು || ೧೯ ||

---

೧ ಳು (ಮ.) ೨-೨ ದು ಬಿ । ಟ್ರೊ (ಹು.)

ಭೂಗಗನಕಳತೆಯಿಟ್ಟಂತೆಳ್ದು ದುರವಣಿಸಿ |
ಸಾಗರಾಪ್ರೋಷಣನ ಸೈನ್ಯದ ಭಟಾಳಿಯಿಂ |
ಬಾಗಿ ನೀಲಾದ್ರಿಗಳ್ ನೆಗಳ್ದಂತೆ ಪರ್ವತಾಭರಣನ ಬಲಂ ನೆರೆದುದು |
ವೇಗವೇಗೊತ್ತುವಬ್ಧಿಯ ತೆರೆಗಳಂತೊದಗಿ |
ತಾಗ ಕಾಲಾಪಹರಣನ ಸೇನೆ ಹೆರೆಯುಗಿದ |
ಭೋಗಿಕುಲದಂತೆ ಕಂಕಾಳಧರಸೈನಿಕಂ ಮೊರೆದೆದ್ದುದೇನೆಂಬೆನು || ೨೦ ||

ಮತ್ತೊಂದುದೆಸೆಯೊಳಾ ಕಾಳ ಯಮ ನಿರುತಿಗಳ
ಮೊತ್ತವೆಳ್ದುದು ಬಳಿಕ್ಕೊಂದೆಡೆಯೊಳಾ ಮದೋ
ನ್ಮತ್ತಜಟ್ಟಿಗಘೋರಭೂತವೇತಾಳ ಗಣಕುಲಮೊಡನೆ ಕವಿದುದಿರದೆ ||
ಇತ್ತ ಚಾಮುಂಡಿ ವಾರಾಹಿ ಭೈರವಿ ದುರ್ಗಿ |
ಯತ್ತ ಕೌಮಾರಿ ವೈಷ್ಣವಿ ಮುಖ್ಯಶಕ್ತಿಕುಲ
ವೆತ್ತೆತ್ತಲೆನ್ನದೊತ್ತರಿಸಿ ಕವಿದತ್ತಲೇ ರಾಮ ಕೇಳದ್ಭುತವನು || ೨೧ ||

ಒಡನೆ ವೀರೇಶಷಣ್ಮುಖರ ನೇಮಂಗಳಿಂ |
ಪಡೆದು ರುದ್ರಪ್ರಮಥಗಣಮಾದರ್ಪಕೋಪದಿಂ
ಗುಡಿಗುಡಿಸಿ ಸುತ್ತಲುಂ ವೇಡೆಯಮನಿಕ್ಕಿಯೊಬ್ಬೊಬ್ಬರಂ ಮೂದಲಿಸುತೆ ||
ಪಿಡಿ ಬಾಚು ಸುಂಗು ಕೊಯ್ ಕತ್ತರಿಸು ನೂಂಕು ಕಡಿ |
ಕಡಿ ಕೊಚ್ಚು ಮೋದು ತುಂಡಿಸಿ ಸೀಳ್ದು[1] ನೆತ್ತರಂ |
ಕುಡಿ ಕರುಳ್ವಗಿಯೆನಿಪ್ಪಬ್ಬರಂಗಳ್ ಪೊಣ್ಮೆ ಕೊಲತೊಡಗಿತಾ ಕ್ಷಣದೊಳು || ೨೨ ||

ಕೂಡೆ ಹುರಿಗಟ್ಟಿತಾ ಹರಿಯುಜೇಂದ್ರಾದಿಸುರ |
ರೀಡಿರಿದುದಖಿಳದೆಸೆಯಂ ವಾದ್ಯದಬ್ಬರಮು |
ದೀಡಿರಿದುದೆಲ್ಲಿಯುಂ ತೇರಾನೆಕುದುರೆಗಳ್ ಕಾಲಾಳ ಬಲಮೊದಗಿತು |
ಓಡಿದವರೆಲ್ಲರುಂ ಕಲಿಯಾಗಿ ನಿಲ್ತು[2] ಹೊ |
ಯ್ದಾಡುತಿರ್ದರ್ ಕತ್ತಿವೆಳಗು ತೊಡವೆಳಗುಗಳ್ |
ಮಾಡೆ ಬೆಳಗಂ[3] ರಾಕ್ಷಸಾಳಿ ಕಣ್ಗೆಡೆ ಸಿದ್ಧರಾಮ ಕೇಳದ್ಭುತವನು || ೨೩ ||

---

೧ ಸಿ (ಹು.) ೨ ಲು (ಶಿ, ಗೋ, ಹು, ದಾ, ಮ.) ೩ ನಾಡೆ ಬೆಳಗಿಂ (ಶಿ, ಗೋ.)

ಪಾಡಬಾಗ್ನಿಯು ಮೇಲೆ ಕಗ್ಗೊಲಿಗೆ ಸಕಲಜಲ |
ಮೋಡಿಕಪಿವಂತೆ ಮಾರಿಯು ಮನೆಗೆ ಕನ್ನಮಂ |
ನಾಡೆ ಸವೆವಂತೆ ಶಂಕರನ ಪಾಳೆಯದೊಳಗೆ ಕಗ್ಗೊಲೆಯಿ ನಿಮಿರ್ಗೆನುತ್ತೆ ||
ಓಡುವರನಿರಿದಿರಿದು ಕೆಡೆಪಿ ಪಾರಾಂತು ಕೈ |
ಮಾಡುವರನಲ್ಲಲ್ಲಿ ಸೆಣಸಿ ಭಟರಿಂತು ಪೊ |
ಯ್ದಾಡಿದರ್ ಕೋಳಾಹಳಂಗಳಿಂ ಶಿವಗಣದ ಸೈನ್ಯದೊಳಗೇನೆಂಬೆನು || ೨೪ ||

ಕರವಾಳ್ಗಳಂ ಜಡಿದು ನೂಂಕುವರ್ ತಾಂಕುವರ್ |
ಕರೆಕರೆದು ಪಗೆಗಳಂ ಮುತ್ತುವರ್ ಕುತ್ತುವರ್ |
ತರತರದ ಪೆಣಗಳಂ ಮೆಟ್ಟುವರ್ ಕುಟ್ಟುವರ್ ತಲೆಗಳಂ ದೈತ್ಯಭಟರ ||
ಮೊರೆವ ವಾದ್ಯಧ್ವನಿಗೆ ಹಿಗ್ಗುವರ್ ಮುಗ್ಗುವರ್ |
ಕರದಿಂದೆ ಮುಂದಲೆಗೆ ತುಡುಕುವರ್ ಮಿಡುಕುವರ್ |
ಮರಳಿ ಪಜ್ಜೆಯನಿಡದೆ ಕಾದುವರ್ ಮೋದುವರ್ ಶಿವಬಲದ ವೀರಭಟರು || ೨೫ ||

ವೀರಭದ್ರನ ಬಲದ ಬಿರುಬು ಷಣ್ಮುಖನ ಪರಿ |
ವಾರದಟ್ಟುಳಿ ಗಣೇಶನ ಸೈನ್ಯದುರುಬೆಯಾ |
ಭೈರವನ ಸೈನಿಕದ ಕೋಳಾಹಳಂ ದಂಡಧರನ ಸೇನಾಕರ್ಕಶಂ ||
ವೀರಕಂಕಾಳಧರವಾಹಿನಿಯ ವಿಕ್ರಮಂ |
ಸೂರೇಂದುಪಾತರಾ ಪಡೆಯ ಬಿರುಬಂ ತಡೆಯ |
ದಾ ರಾಕ್ಷಸಪ್ರತಾನಂ ತಾಯ್ಗೆ ಮಕ್ಕಳಾಗದೆ ಕೂಡೆ ಬೆಂಗೊಟ್ಟುದು || ೨೬ ||

ಅರಿಯದಿರ್ದಂಧಕಾಸುರನೊಡನೆ ಹುಸಿಯನೆ |
ಚ್ಚರಿಸಿ ಕಗ್ಗೊಲಿಗೆ ಚಾಚಿದ ಗಗನಮೂರ್ಧ್ನಿಯಂ |
ತರಿದಕಟ ಗಗನಮೂರ್ಧ್ನಿಯ ಮಾಡಬೇಡವೇ ಶಿವಸುಭಟರೆಂದೆನುತ್ತೆ ||
ಮೊರೆಯಿಟ್ಟು ಬಾಯ್ಬಿಟ್ಟು ಕಣ್ಗೆಟ್ಟು ಮರವಟ್ಟು |
ಕರಕರನೆ ಕಂದಿ ಧೃತಿಗುಂದಿ ಭೀತಿಯೊಳೊಂದಿ |
ಪರಿಕೆಗೆವರಂ ಕಂಡು ಬೆಂಬತ್ತಿ ಸುತ್ತಿ ಮುತ್ತಿರಿದರದನೇನೆಂಬೆನು || ೨೭ ||

---

೧ ಡು (ಹು)

ವೀರಭದ್ರಾದಿಗಣಸ್ಸೈನಿಕದ ಭಾರಣೆಯು |
ನಾರಾಂತು ನಿಂದಪರ್ ಖಳರು ಮುರಿದೋಡಲಾ |
ಗೇರೆಯುಮನುಗಿದು ಪಾಳೆಯುಮನೊಳಪೊಕ್ಕು ಸತಿಯರನಿರದೆ ಪಿಡಿದು ಕೂಡೆ ||
ಸೇರಿ ಗೂಡಾರಂಗಳಂ ಕೊಯ್ದರಶ್ವಮದ |
ವಾರಣಂಗಳನೈದೆ ಪಿಡಿದರವನಿಪರ ಭಂ |
ಡಾರಂಗಳಂ ಸೂರೆಯಾಡಿದರ್ ಮಾಡಿದರ್ ಕಳಕಳವನಾ ಕ್ಷಣದೊಳು || ೨೮ ||

ದೂರಿದುದು ಜನಮಂಧಕಾಸುರಂಗತಿಕೋಪ |
ಮೀರಿದುದು ಚಿತ್ತದೊಳ್ ನಯನದ್ವಯಂ ಕೆಂಪ |
ಗಾರಿದುದು ಗುಡಿಗುಡಿಸುತೆಲ್ಲ ರಿಪುಭಟರೆಸುತೆ ಸುಭಟರಂ ಕೂಡಿಕೊಂಡು ||
ಸಾರುತಿಹ ಕಹಳೆಗಳ ಗರ್ಜನೆಗೆ ಪರಿಪರಿವ |
ಸೂರೆಗರ್ ಕೈಗುಂದಲಂಧಾಸುರಂ ತೀರ |
ನೇರಿ ನಡೆದಂ ವಿಲಯಕಾಲದಂತಕನಂತೆ ಪೇಳಲೇನದ್ಭುತವನು || ೨೯ ||

ಪರಿವ ಸೂರೆಗರ ನಡೆಗೆಡಪಿದರ್ ಮಡುಪಿದರ್ |
ಪರಿಪರಿಯ ಸೂರೆಯಂ ಬಿಡಿಸಿದರ್ ಕಡಿಸಿದರ್ |
ಸರಳ ಬಿರುವಳೆಗಳಂ ಕವಿಸಿದರ್ ತವಿಸಿದರ್ ಸುರಭಟರ ವಿಕ್ರಮವನು ||
ಬಿರುದನಹಿತರ ಮುಂದೆ ದೂರಿದರ್ ಸಾರಿದರ್ |
ತುರಗಕರಿನಿಚಯಮಂ ನೂಂಕಿದರ್ ತಾಂಕಿದರ್ |
ಭರವಸದ ಸಮರದೊಳ್ ಬಾವುತರ್ ಮಾವುತರ್ ಖಳನ ಸೇನಾಂಬುಧಿಯೊಳು
|| ೩೦ ||

ತಗುಳ್ದಿರಿದು ತರಿದು ಪಾಳೆಯದಿಂದೆ ಹಿಂದಕ್ಕೆ |
ತೆಗೆಸಿದರ್ ಪೊರಗಂಧಕಾಸುರಂಗಂ ನಾಡೆ |
ವಿಗಡವೀರೇಶಂಗೆ ಕಾಳೆಗಂ ತಪ್ಪಿದುದು ಕುಮಾರನೊಳ್ ಗಗನಮೂರ್ಧ್ನಿ ||
ತೆಗೆದನಂದಸಮಸಮರಂಗಮಂ ತಮತಮಗೆ |
ತೆಗೆದೆಚ್ಚರಸುರರಂ ವೃಷಭಮೊದಲಾದ ಸಂ |
ಯುಗಸಮರ್ಥರ್ ಬಳಿಕ್ಕಿತ್ತ ವೀರಾಂಧಕಾಸುರರಾಹವಂ ಬಲಿದುದು || ೩೧ ||

ಆರೀತನೆಮ್ಮೊಡನೆ ಕಾದಲನುಗೆಯ್ದುವಂ |
ವೀರಭದ್ರನೊ ಲೇಸುಲೇಸಂಧಕಾಸುರನ |
ವೀರಮುಂ ಮುನ್ನ ಕೇಳ್ದರಿಯೆಲಾ ಕೊಳ್ಳಾದೊಡೆನುತೆ ಚಾಪಮನೊದರಿಸಿ ||
ಭೂರಿಬಾಣಂಗಳಂ ತೆಗೆದೆಸಲ್ ಘನಶರಾ |
ಸಾರಮೆತ್ತೆತ್ತಲುಂ ಕತ್ತಲಿಸಲಾ ಕ್ಷಣಂ |
ಕಾರ ಮೇಘದ ಮರೆಯ ಸೂರಿಯನ ತೆರದೊಳಾ ವೀರನಂದಿಂತೆಂದನು || ೩೨ ||

ಮುನ್ನ ಕೇಳ್ದರಿಪುದೇಂ ಕೆಯ್ಯ ಕಂಕಣಕೇಂಕೆ |
ಕನ್ನಡಿ ಪರಾಕ್ರಮಂ ನಿನಗುಳ್ಳೊಡೀ ಕ್ಷಣದೊ |
ಳಿನ್ನು ನಿನ್ನಂಬುಗಳ ಗುರುಲಘುಸ್ಥಿತಿ ಕಾಣಲಹುದೆನುತೆ ಚಾಪದಿಂದೆ ||
ಪನ್ನೆರಡು ಬಾಣಮನುರುಳ್ಚಲಹಿ ಗರುಡಭರ |
ಪ್ರಸ್ಫೋಡಲಾತನೀತನ ಕಣೆಯೊಳಾದುದವ |
ನಿನ್ನಿವಂ ಕಡಿಯೆನುತ್ತಿನ್ನೂರುಬಾಣಮಂ ಕೆನ್ನೆವರೆಗುಗಿದೆಚ್ಚನು || ೩೩ ||

ವೀರನಾತನ ಸರಳ್ಗ[೧] ಸಾರವಂ ನಾಲ್ಕೆಂಟು |
ಕೂರಂಬಿನಿಂ ಕಡಿದು ನಾರಿಯಂ ತೀಡುತೆ ವಿ |
ಚಾರಿಸದೆ ನೀನೆನ್ನೊಳೀರಂತೆ ತೊಡಕಿದೆ ಮಹಾರಣಾಂಕಣದೊಳೆನಲು ||
ವೀರತ್ವದಳವರಿಯಲೆಚ್ಚತ್ತರಂಬುಗಳ |
ಸಾರಮುಂ ಕಡಿದೊಡೇಂ ಯಜ್ಞದೀಕ್ಷಿತನಾ[೨]ದ |
ಮಾರಮರೆ ನಾವೆನುತೆ ಘೋರಾಸ್ತ್ರಮಂ ಪೂಡಿ ವೀರನೊಡನಿಂತೆಂದನು || ೩೪ ||

ಉದ್ರೇಕದಾಹವಂ ಬೇಡ ನಿನ್ನಯ ಬಳಿಗೆ |
ರುದ್ರನಂ ಕರೆಸಿಕೊಳ್ಳೆನ್ನಂಬಿನಿಂ ದೀರ್ಘ |
ನಿದ್ರೆಯಾದಪುದು ನಿನಗೆನುತಂಧಕಾಸುರಂ ಕೋಪದಿಂ ತೆಗೆದೆಸೆಯಲು ||
ಮುದ್ರಿಸಿದುದಾಕಾಶ ಭೂಮಿ ದಿಗ್ಜಾಲಮತಿ |
ರೌದ್ರಾಯಮಾನ ಛಟಛಟಧಗತ್ಕೃತಿ ವೀರ |
ಭದ್ರನಿಕ್ಕಿದ ಘನಪ್ರತ್ಯಸ್ತ್ರದಿಂದವಂ ಛಿದ್ರಿಸಿದನೇನೆಂಬೆನು || ೩೫ ||

೧ ಶರಾ (ಶಿ, ಗೋ, ಹು, ದಾ, ಮ.) ೨ ರಾ (ಮ.)

ಮುರಳಿ ಖಳನಂಬುಗಳನಿಕ್ಕುವಂ ಸಿ[೧]ಕ್ಕುವಂ |
ಕೆರಳಿ ವೀರನ ಕಣೆಯ ಕವಿಸುವಂ ತವಿಸುವಂ |
ಸರಳಿಂದಲವನಿಯುಂ ಮುಚ್ಚುವಂ ಪಚ್ಚುವಂ ದಿವಿಜರಂ ದೆಸೆದೆಸೆ[೨]ಯೊಳು ||
ಉರುಳುಗಡಿವಂ ವೀರನೊಲವಿನಿಂ ಗೆಲವಿನಿಂ |
ತೆರಳದವನೊಡನೆಸೆವನುಬ್ಬಿನಿಂ ಕೊಬ್ಬಿನಿಂ |
ತರಹರಿಸದವನೆಚ್ಚು ಕೂಗುವಂ ಬೀಗುವಂ ವೀರಭದ್ರಂ ಕ್ಷಣದೊಳು || ೩೬ ||

ಶರಕೆ ಶರಮುದಟಂಗಮುದಟು ಬೊಬ್ಬೆಗೆ ಬೊಬ್ಬೆ |
ಪರಮುಶೌರ್ಯಕೆ ಶೌರ್ಯಮಾಯಾಸಕಾಯಾಸ |
ಮಿರದೆ ಗಾಯಕೆ ಗಾಯಮತಿಜವಕ್ಕತಿಜವಂ ಮೂದಲೆಗೆ ಮೂದಲೆಗಳು ||
ಕರಚಮತ್ಕಾರಕ್ಕೆ ಕರಚಮತ್ಕೃತಿ ವಿನಿ |
ಷ್ಠುರಕೆ ನಿಷ್ಠುರಮಿವೀರ್ವರ್ಗೆ ಸರಿಯಾಗಲಂ |
ದುರುಶಕ್ತಿಯಿಂ ವೀರಭದ್ರನಿಡೆ ಖಳನೆದೆಯನಾ ಕ್ಷಣಂ ಗರಿಯುಗಿದುದು || ೩೭ ||

ಭೋರ್ಗರೆದು ಸುರಿವರುಣವಾರಿಯಿಂ ಖಳರಾಜ |
ನೊರ್ಗುಡಿಸಿ ಕೆಡೆದನಿಳೆಗೀತನಂ ನಾಂ ಕೊಲಲ್ |
ಭರ್ಗನಂಬುಗಳಿಗಾನಪರಾಧಿಯಾದಪೆಂ ಸಾಕೆನುತ್ತುಳಿದಸುರರ ||
ವರ್ಗಮಂ ಬೆಂಬತ್ತೆ ಖಳಗಗನಮೂರ್ಧ್ನಿಯಂ |
ಸ್ವರ್ಗಮಂ ಕಾಣಿಸೆ ಗುಹಂ ತನಗೆ ಮಾರಾಂತ |
ವರ್ಗಳಂ ಮಡುಪೆ ಸಂಧ್ಯಾದಿಗಳ್ [೩]ಸವರತೊಡಗಿದರಸುರಭಟವನವನು[೩] || ೩೮ ||

ಇತ್ತಲಂಧಾಸುರನ ಪಾಳೆಯದೊಳಸುರರಂ |
ತತ್ತರಂದರಿವುತ್ತೆ ವೀರಗುಹರೈ[೪]ತರ |
ಲ್ಕತ್ತಲಾ ಖಳರಾಜನೆಚ್ಚತ್ತು ವೀರಭದ್ರನನರಸುತತಿಭರದೊಳು ||
ಚಿತ್ರಜಾರಿಯ ಸಮ್ಮುಖಕ್ಕಾಗಿ ನಡೆತರಲ್ |
ತ[೫]ತ್ತುದಾಹವವಿಾಶನೊಡನೆ ಕೂರಂಬುಗಳ |
ಕಿತ್ತು ಕಿವಿವರೆಗುಗಿದು ಕರೆದನಾಕಾಶವೆಲ್ಲಂ ಬಾಣಮಯವಾಗಲು || ೩೯ ||

೧ ಸಿ (ಶಿ, ಗೋ.); ಚು (ಮ.) ೨ ಮುಮಿ (ಗೋ.) ೩-೩ ಸಂಹರಿಸ ತೊಡಗಿದರಸುರ ಭಟರನು (ಶಿ, ಗೋ, ಮ.) ೪ ನೈ (ಪ, ಶಿ.) ೫ ಪ (ಹು.)

ಗಗನಮಂ ತುಂಬಿದಂಧಾಸುರನ ಬಾಣಮಂ |
ನಗೆಮೊಗದೊಳ್ ತ್ರಿನೇತ್ರಭವಂ ಪಿನಾಕಮಂ |
ನೆಗಪಿ ಜೇವೊಡೆದೊಂದುಬಾಣಮಂ ಪೂಡಿ ತೆಗೆದೆಸಲಾಕ್ಷಣಂ ನೋಡಲು ||
ಆಗಲದೊಳ್ ಪುದಿದಂಬುಗಳ್ ತುಂಡುತುಂಡಾಗಿ |
ಪೋಗುತಿರ್ದುವವನಿಯೊಳಗಂಧಾಸುರಂ ಕಂಡು |
ನಗುತೆ ಕೋಟಾನುಕೋಟಿಯ ಮಾರ್ಗಣಂಗಳಂ ತುಳ್ಕಿದಂ ಬೇಗದಿಂದೆ || ೪೦ ||

ಹೇಮಾಚಲದ ಸರಿಸದೊಳ್ ಬೀಳ್ವ ವರುಷಧಾ |
ರಾಮಹಾಗಣದಂತೆ ದೈತ್ಯನೆಸುಗೆಯ ಶರ |
ಸ್ತೋಮಮನಿಭಾಶನ ಸುತ್ತಲುಂ ಬಳಸೆ ಕಂಡು ಮತ್ತೊಂದು ಬಾಣವನಭವನು ||
ತಾಮಸಂಗೆಯ್ಯದೆಸಲಸುರನಂಬಂ ಕಡಿದು |
ಭೂಮಿಯೊಳಗುದುರಿಸಿದುದೊಡನಂಧಕಾಸುರಂ |
ಹೇಮಪುಂಖದ ಸರಳನಗಣಿತಮನೆಚ್ಚನಾ ವ್ಯೋಮಕೇಶನ ಸರಿಸಕೆ || ೪೧ ||

ಕಡುತವಕದಿಂ ಕಿಡಿಯನುಗುಳುತುಂ ತಗುಳುತುಂ |
ಪೊಡವಿಗತಿಭೀತಿಯಂ ಮಾಡುತುಂ ಕಾಡುತುಂ |
ಬಿಡದಮಡುಗಳಡಕಿಲಂ ತೂರುತುಂ ಸಾರುತುಂ ಖಳಪತಿಯ ವಿಕ್ರಮವನು ||
ನಡೆವಿಷುವ್ರಜವನೊಂದಂಬಿನಿಂ ಮುಂಬಿನಿಂ |
ತಡೆಗಡಿದು ಬಿಡಲವಂ ಕೋಪದಿಂ ಚಾಪದಿಂ |
ಜೋಡಕವಿಸಿದವನಿಷುಸ್ತೋಮಮಂ ವ್ಯೋಮಮಂ ತಾಳದಿರಲಖಿಳಜನರು || ೪೨ ||

ಹೇಳಲೇಂ ಭಾಂಡತತಿಗೊಂದು ಗುಡುಗೆಯ ಪೆಟ್ಟು |
ಸಾಲದೇ ಖಳನೆಚ್ಚ ಮಾರ್ಗಣವ್ರಾತಮಂ |
ಶೂಲಪಾಣಿಯ ಬಾಣಮೊಂದೆ ಕಡಿದವನ ಕರದ ಕಾರ್ಮುಕವನುಂ ಛಿದ್ರಿಸಿ ||
ಸಾಲಿಸಿಸಕ ಜೋಡು ಬತ್ತಳಿಕೆ ಕೈವೊಡೆಯ |
ಮೇಳಮಂ ತರಿದಂಧಕಾಸುರನ ಗರ್ವಗಿರಿ |
ಜಾಲಮಂ ಸವರಿದುದು ಶಿವನ ಬಾಣದ ಚಮತ್ಕಾರಮಂ ಪೊಗಳಲಳವೆ || ೪೩ ||

೧ ಸಿ (ಗೋ.) ೨-೨ ಕರದವನ (ಶಿ. ಗೋ.) ೩-೩ ಕಾರ್ಮುಕವನುಂ ಛಿದ್ರಿಸುದುದು (ಹು.)

ಚಂಡವಿಕ್ರಮನತುಳಕೋಪದಿಂದಂ ಹಲಗೆ |
ಖಂಡೆಯಂಗಳನಾಂತು ಪೊಯ್ವೆನೆಂದುಬ್ಬಿನಿಂ |
ಖಂಡಪರಶುವನಿರದೆ ಮೇಲ್ವಾಯಲಭವಂ ತ್ರಿಶೂಲದಿಂದಿರಿದು ಬಳಿಕ |
ಅಂಡಲೆವುತಾಕಾಶಕೆತ್ತಲಾ ಖಳನ ಮೆ |
ಯ್ಯುಂಡ ರಕ್ತಂ ನಿಮಿಷಮಾತ್ರದೊಳ್ ಭೂತಳಕೆ |
ಹಿಂಡಿ ಹಿಳಿದಂತೆ ಕರೆಯಲ್ ವಿಗತಮದನಾಗಿ ಕೊಂಡಾಡಿದಂ ಶಿವನನು || ೪೪ ||

ಜಯ ೧ಸಕಲಗುಣಧಾಮ ಜಯ ಸಜ್ಜನಪ್ರೇಮ೧ |
ಜಯ ದಿವಿಜನುತಚರಣ ಜಯ ಭುಜಂಗಾಭರಣ |
ಜಯ ಹುತಾಶನನೇತ್ರ ಜಯ ಮನೋಹರಗಾತ್ರ ಜಯ ಭೀಮ ವಿಧೃತಸೋಮ |
ಜಯ ದನುಜಲಯಕಾಲ ಜಯ ಸಕಲಜನಪಾಲ |
ಜಯ ವಿಜಿತಸಮವರ್ತಿ ಜಯ ಚಾರುತರಕೀರ್ತಿ |
ಜಯ ದಕ್ಷಮುಖಶಿಕ್ಷ ಜಯಜಯ ವಿರೂಪಾಕ್ಷ ಸಲಹೆಂದನಸುರೇಂದ್ರನು || ೪೫ ||

ಇಂತೆಂದು ಕೊಂಡಾಡಿದಂಧಾಸುರಂಗೊಲ್ದು |
ಕಂತುಮರ್ದನ ಮೆಚ್ಚಿದೆಂ ಬೇಡು ಬೇಡೆನಲ್ |
ಸಂತೋಷಸಾಗರದೊಳದ್ದೆನ್ನ ವಕ್ಷದೊಳ್ ನಾಟ್ಯಮಂ ನಟಿಸಿ ಬಳಿಕ ||
ಮುಂತೆ ಚಿರಮಾದ ಗಣಪದವಿಯಂ ಪಾಲಿಸೆನ |
ಲಂತೆ ಗೈದಪೆನೆಂದು ತಾಂಡವದ ಚಿಹ್ನಮಂ |
ತಾಂ ತಳೆಯಲುದ್ಯೋಗಿಸಿದನದೇಂ ಭಕ್ತರಾಧೀನನೋ೨ ಸರ್ವೇಶನು || ೪೬ ||

ಕುಂಜರವ್ಯಾಘ್ರಚರ್ಮಂಗಳಂ ದೇಸಿಯಿಂ |
ಮುಂಜೆರಗು ಮಿಗಲುಟ್ಟು ಪೊಳೆವ ಮರಿಪಾವಿನಿಂ |
ಕೆಂಜಡೆಗಳಂ ಬಿಗಿದು ವರವಿಭೂತಿಯನೆಸೆವ ಸರ್ವಾಂಗದೊಳ್ ಧೂಳಿಸಿ ||
ರಂಜಿಸುವ ಶರಪಿನಾಕಮನುಳಿದು ಶೂಲದಿಂ |
ದಂ ಜವದೊಳಸುರನಂ ನೆಲಕಿಳುಪಿ ಶಂಭು ಪು |
ಷ್ಪಾಂಜುಳಿಯ ಗಮಕದಿಂದವನ ವಕ್ಷೋರಂಗಮಂ ಪೊಗಲ್ಕನುಗೈ೩ದನು || ೪೭ ||

೧-೧ ಸರ್ವಕಾಧಾರ ಜಯ ಕಾಲಸಂಹಾರ (ಮ.) ೨ ಮೋ (ಶಿ, ಗೋ, ದಾ, ಹು, ಮ.)
೩ ಮಾ (ಶಿ, ಹು.)

ನಂದಿ ಮದ್ದಳೆಯನಬ್ಜಾಸನಂ ತಾಳಮಂ |
ಕಂದರ್ಪಪಿತನೆಸೆವ ವಾಸಮಂ ಹರುಷದಿಂ
ದಿಂದಿರಸುತಾಂಗನುಂ ನಾರದಂ ವೀಣೆಯುಂ ತುಂಬುರಂ ದಂಡಿಗೆಯನು ||
ಇಂದುಮೌಳಿಯ ಸುತ್ತಲುಂ ಪಿಡಿದು ತತ್ಪ್ರಯೋಗ |
ದಿಂದೆ ಬಾಜಿಸಿದರಂಬುಜಭವಾಂಡಂ ನೋಡ |
ಲಂದು ಶಬ್ದಬ್ರಹ್ಮದಿಂ ಪೂರ್ಣಮಾದುದೆಂಬಂದಮಾಯ್ತೇಂ ಪೇಳ್ವೆನು || ೪೮ ||

ವೀರಭದ್ರಾದಿಗಣವಿತತಿ ತದ್ಬಾಣಸಂ |
ಹಾರಶೇಷಾಸುರನಿಕಾಯಂ ಸಮಸ್ತಭೃಂ |
ಗಾರಕಪ್ರಜಮಖಿಳಭುವನಜನಮಕ್ಕರಿಂ ಶಿವನಾಟ್ಯಮಂ ನೋಡಲು ||
ಸಾರಸಂತೋಷದಿಂ ನೆರೆದುದು ಜಯಸ್ವನಂ |
ಭೋರಿಡಲ್ ಶರಧಿ ನಿರ್ಘೋಷದಿಂ ದುರಿತಸಂ |
ಹಾರಸಂಘಾಸುರನ ವಕ್ಷದೊಳ್ ಪುಷ್ಪಾಂಜುಳಿಯನೆಸಗಿದಂ ಮುದದೊಳು || ೪೯ ||

ಇರದೆ ಪುಷ್ಪಾಂಜುಳಿಯ ಸಮನಂತರದೊಳೆ ವಿ |
ಸ್ತರದಿಂದೆ ಧುತ ವಿಧುತಮಾಧೂತಮೆಂದೆನಿಪ |
ಶಿರದ ಭೇದಂಗಳಿಂದಂ ಪತಾಕಾದಿ ಹಸ್ತಂಗಳ ವಿಡಾಯದಿಂದೆ ||
ಪರಿಕಿಸೆ ಸಮಾಭುಗ್ನಮಾಭುಗ್ನ ಮುಖ್ಯಮಾ |
ದುರದ ಭೇದಂಗಳಿಂದಂ ವಿವರ್ತಿತಮುಖ್ಯ |
ಪಿರಿಯೊಳ್ ಭೇದಂಗಳಿಂದಾಡಿದಂ ಶಂಕರಂ ಪೇಳಲೇನಚ್ಚರಿಯನು || ೫೦ ||

ನಟನೆಯುಂ ಕಂಪಿತೋದ್ವಾಹಿತಚ್ಛಿನ್ನಾದಿಳ |
ಕಟಿಯ ಭೇದಂಗಳೈದಂ ಸವಿಸ್ತರಮಾಗಿ |
ನಿಟಿಲಾಂಬಕಂ ತೋರಿ ಸಮಸಂಚಿತಾದಿ ಪದಭೇದಂಗಳಂ ಕಾಣಿಸಿ ||
ಪಟುತರಪ್ರತ್ಯಂಗಭಾವಮಂ ಕೈಗೈದು |
ಜಟಿಲವಾಗಿರ್ದ ಕೊರಳೆಡೆಗಳನನುಗೊಳಿಸಿ |
ನಟಿಸಿದಂ ಶಂಭು ನೋಟಕರ ದಿಟ್ಟಿಗಳೊಡನೆ ನಟಿಸಲ್ ವಿಲಾಸದಿಂದೆ || ೫೧ ||

೧ ಕೃತಿ (ಶಿ. [illegible] (ಶಿ, ಗೊ.) ; ಬಿರಿಯು (ಹ.) ; ಬರಿಯ (ದಾ.) [illegible] (ಶಿ.) ; [illegible] (ಗೊ.) ; [illegible] (ಹ.) ; ಸುಚಿತ್ರಾ [illegible] (ಹ.) [illegible]
(ಶಿ, ಗೊ, ದಾ.)

ಇರದೂರ್ಧ್ವ ಮುಂತಾದ ಭುಜದ ಭೇದಂಗಳಂ |
ಪರಿವಿಡಿಯೊಳರುಪಿ ಖಲ್ವಕ್ಷಾಮವೆಂಬುದರ |
ದುರು[1]ಭೇದವಂ ತೋರಿ ವಲಿತ ಕಂಪಿತಮುಖ್ಯವಾದೂರುಭೇದಂಗಳ ||
ಹರುಷದಿಂ ವಿಸ್ತರಂಗೆಯ್ದು ವಾವರ್ತಿತಂ |
ಪರಿಕಿಸಲ್ಕುನ್ನತೋತ್ಕ್ಷಿಪ್ತಾದಿ ಜಂಘೆಗಳ |
ಪರಮಭೇದಂಗಳಂ ತೋರಿದಂ ಭುವನಜನಕೇಶಂ ಚಮತ್ಕೃತಿಯೊಳು || ೫೨ ||

ಪರಮಶೃಂಗಾರಾದಿರಸದೆಸಕದಿಂದೆ ವಿ |
ಸ್ತರದ ಸಾತ್ವಿಕವರಸ್ಥಾಯಿಸಂಚಾರಿಗಳ |
ಪರಿವಿಡಿಗಳಿಂದಲಾಂಗಿಕೆ ವಾಚಿಕಾಹಾರ್ಯ ಸಾತ್ವಿಕಾದ್ಯ[2]ಭಿನಯಗಳ ||
ಗರುವಿಕೆಯ ಗಮಕದಿಂ ಪಾದಚಾರಿಗಳ ಲಘು |
ಚರಣವಿನ್ಯಾಸದಿಂದೆಸೆವ ಕೊಂಪು ಕಳಾಸ |
ತಿರುಪುಗಳ ಬೆಡಗುಬಿನ್ನಣದೆ ನಗಜಾಧವಂ ತೋರಿದಂ ತಾಂಡವವನು || ೫೩ ||

ಇವು ಮುಖ್ಯವಾದ ವರಭರತಶಾಸ್ತ್ರಕ್ರಮದ |
ವಿವರಣೆಯನೆಲ್ಲಮಂ ವಿಸ್ತರಿಸಿಯಂಬುರುಹ |
ಭವನ ತಾಳಕೆ ನಂದಿ ಬಾಜಿಸುವ ಮದ್ದಳೆಯ ಗತಿಗೆ ವಾಸವಿಲಾಸಕೆ ||
ದಿವಿಜವಲ್ಲಭನುಪಾಂಗಶ್ರುತಿಗೆ ನಾರದೋ |
ದ್ಭವಸುವೀಣಾಕಿಂಕಿಣೀಸ್ವನದ ಸಮ್ಮತಕೆ |
ಭವನಾಡಿದಂ ಸಕಲಭುವನಜನದುತ್ಸವಂ ತವೆ ಪೆರ್ಚೆ ಸಂತಸದೊಳು || ೫೪ ||

ತಲೆಯ ನದಿಯುಲ್ಲಾಡೆ ಕಿರುಜಡೆಗಳೊಲೆದಾಡೆ |
ಲಲಿತಮುಖರಸವೇರೆ ಬೆಮರಂಗದೊಳ್ ತೋರೆ |
ಪುಲಿದೊವಲ್ ನೆಲಕಲೆಯೆ ರುಂಡಮಾಲಿಗಳೊಲೆಯೆ ಭರವಾಗಿ ನಾಸಿಕದೊಳು ||
ಎಲರೊಡನೊಡನೆ ಸುಳಿಯೆ ತೆಳ್ಪಸುರ್ ಬಳಿದಿಳಿಯೆ |
ಸಲೆ ವಾದ್ಯತತಿ ಮೊಳಗೆ ಫಣಿಭೂಷಣಂ ತೊಳಗೆ |
ನಳಿತೋಳ್ಗಳಂ ನೀಡಿ ಪಲವಂಗದಿಂದಾಡಿ ಮೆರೆದನುರೆ ಬಿನ್ನಣವನು || ೫೫ ||

---

೧ ಘುರ (ಮ.) ೨ ದ (ಪ.)

ದೇವತೆಗಳಲರ್ಮಳೆಯುಂ ಕರೆಯೆ ಜಯಜಯಾ |
ರಾವದಿಂದಖಿಲಲೋಕದ ಜನಂ ಕೈಮುಗಿಯೆ |
ದೇವಸಂಘಾಸುರನ ವಕ್ಷದಿಂದಿಳಿದವಂಗಿತ್ತು ವರಗಣಪದವಿಯ ||
ತೀವಿದ ಜನಂಗಳಂ ಬೀಳ್ಕೊಟ್ಟು ಕರುಣದಿಂ |
ದೇವಿಯರ್ವೆರಸಿ ಕೈಲಾಸಗಿರಿಶಿಖರದ ಮ |
ಹಾವಿಭವದರಮನೆಗೆ ಪೋಗಿ ಘನಹರುಷದಿಂದಿರ್ದಂ ವಿರೂಪಾಕ್ಷನು || ೫೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೭ ||

ಅಂತು ಸಂಧಿ ೫೦ಕ್ಕಂ ಪದಗಳು ೨೧೨೨ ಕ್ಕಂ ಮಂಗಳಮಹಾಶ್ರೀ

ಐವತ್ತೊಂದನೆಯ ಸಂಧಿ

ಸೂಚನೆ

ಮೂಲೋಕವರಿಯಲೀಶ್ವರನೊಲಿದು ಶ್ವೇತಭೂ |
ಪಾಲಕನ ಮೊರೆಗೇಳ್ದು ಭಾಳಾಕ್ಷಿಯಗ್ನಿಯಿಂ |
ಕಾಲನಂ ಸುಟ್ಟು ಮಗುಳ್ದಸುವಿತ್ತು ಶ್ವೇತನಂ ಕೈಲಾಸಪುರಕೊಯ್ದನು ||

ಹೆಂಡತಿಯ ಮಗನನರಿದನ ಮಗನ ಮಾವನಂ |
ಮಂಡೆಯೊಳ್ ಧರಿಸಿ ಕರಜಾತಪ್ರಘಾತದಿಂ |
ಪುಂಡರೀಕೈಕಕರಧೃತನಾಗಿ ತಜ್ಜಾತಸವನಪ್ರತಿಘ್ನನಾಗಿ ||
ಹೆಂಡತಿಯ ಲೀಲಾಕುಮಾರನಂ ಶಿರವನುರೆ |
ಖಂಡಿಸಿದ ಪಂಪಾವಿರೂಪಾಕ್ಷ ನೀನೆ ಮುಂ |
ಕೊಂಡು ರಕ್ಷಿಪುದು ಭೂಮಂಡಲದ ಸುಜನರಂ ಚಂಡಕರಕೋಟಿತೇಜ || ೧ ||

ಎಲೆ ಸಿದ್ಧರಾಮ ಕೇಳ್ ಪೂರ್ವದೊಳ್ ಶ್ವೇತನೆಂ |
ಬಳೆಯಾಣ್ಮನುಂಟಾ ನೃಪಂ ಬಹಳಭಾಗ್ಯದಿಂ |
ಬಲದಿಂ ಮಹಾದೇಶ ದುರ್ಗ ತಳತಂತ್ರಾದಿ ಸಕಲಸನ್ನಾಹದಿಂದೆ ||
ಇಳೆಯನಾಳುತ್ತೊಂದು ದಿವಸಮಾ ಭೂವರಂ |
ತಳರ್ದನೊಲವಿಂದಲಾ ಚತುರಂಗಬಲವೆರಸಿ |
ನಲವಿನಿಂ ವೈಹಾಳಿಗುದಧಿರವಮಂ ಮೀರಲಳ್ಳಿರಿವ ವಾದ್ಯಂಗಳಿಂ || ೨ ||

ಆ ಪುರದೊಳೊರ್ವ ಪರದಂ ಸಮುದ್ರಾಂತರ |
ದ್ವೀಪಂಗಳೊಳ್ ತನ್ನ ಬೆವಹಾರಕೈದಲವ |
ನೋಪರ್ ನೃಪಾಲಕಂ ವೈಹಾಳಿಗೈದುವುದನೀಕ್ಷಿಸುವ ತವಕದಿಂದೆ ||
ಸ್ಥಾಪಿಸಿದ ಕನಕಮಣಿಗಣತೋರಣಾವಳಿಯ |
ಗೋಪುರವನಡರಿ ನೋಡುತ್ತಿರಲ್ ಶಶಿಮುಖಿಯ |
ರೂಪು ಯೌವನ ವಿಲಾಸಂಗಳಂ ಶ್ವೇತನೆಂಬವನೀಶನೀಕ್ಷಿಸಿದನು || ೩ ||

ಕಾಱಿದುದು ಕರಣತತಿ ಲಜ್ಜೆಯಂ ನಿಮಿರ್ದ ಕಾ |
ಊರಿದುದು ಹೃದಯದೊಳ್ ತಿಮಿರಂ ಗಭೀರಾಬ್ಧಿ |
ಮಾರಿದುದು ಮನ್ಮಥಂ ಪೂಗಣೆಗಳಂ ಪೂಡಿದಂ ತನ್ನ ಕಬ್ಬುವಿಲ್ಗೆ ||
ಪಾರಿದುದು ಧೃತಿ ಪಲ್ಲಟಂಬೋಯ್ತು ತನುಬಲಂ |
ಜಾರಿದುದು ಚಿಂತಾಲತಾವೃದ್ಧಿ ಪರ್ಬಿ ಕುಡಿ |
ಮೀರಿದುದು ಭೂಪಂಗೆ ಪರಪತಿಯ ಬೇಟವೇಂ ಪಥ್ಯಮೋ ಮಾನವರ್ಗೆ || ೪ ||

ಅಂತರಂಗದೊಳನಿತು ಹದನಾಯ್ತು ಭೂಪತಿಗೆ |
ಮುಂತಿರ್ಪ ಸಚಿವ ಸಾಮಂತಸೇನಾಧಿಪ |
ರ್ಗಂ ತೋರದಂತವಳ್ಗೆ ಕರಣವನೊತ್ತೆಗೊಟ್ಟು ವೈಹಾಳಿಯ ಬಯಲ್ಗೆ ಪೋಗಿ ||
ತಿಂತಿಣಿಯ ತುರಗದೇರಾಟಮಂ ಕೈಗೊಡುವ |
ದಂತಿಗಳ ಯುದ್ಧದ ಸಘಾಟಮಂ ನೋಡದೆ ನೃ |
ಪಂ ತಿರುಗಿದಂ ಚಿತ್ರಪಟದ ರೂಪಿನ ತೆರದಿನಂದಣದ ಗೋಂದಣದೊಳು || ೫ ||

ಅರಮನೆಯ ಮುಂದಂದಳವನಿಳಿದು ಭೂಪರಂ |
ಬೆರಳ ಸನ್ನೆಯೊಳಾಲಯಂಗಳ್ಗೆ ಬೀಳ್ಕೊಟ್ಟು |
ತರತರದೊಳಾರತಿಯನೆತ್ತುವಂಗನೆಯರಂ ಕಣ್ಣೋರೆಯಿಂ ಜರ್ವುತೆ ||
ಸರಸಪರಿಮಳಪೂರವಾದ ಶಯ್ಯಾಗೃಹ |
ಕ್ಕರಸನೈತಂದು ಪವಡಿಸಿ ದಿವಮನೊಂದು ಸಾ |
ಸಿರವಾಗಿ ಕಳಿಯೆ ಮಾರ್ತಾಂಡನೈದಿದನಸ್ತಗಿರಿಯ ಮರೆಯಂ ಕ್ಷಣದೊಳು || ೬ ||

ಅರಳ್ದುದಾ ಕುಮುದಂ ಮುದಂ ಚಕೋರಕ್ಕಾಯ್ತು |
ಹೊರಳ್ದುವಳಲಿಂ ಚಕ್ರವಾಕವಾ ಕಮಲದೊಳ್ |
ಸೆರೆಸಿಲ್ಕಿದುದೆ ತುಂಬಿ ತುಂಬಿದುದು ತಿಮಿರಂ ಕ್ಷಿತಿನೃಪನ ಹೃತ್ತಿಮಿರದೊಡನೆ ||
ಮರಳ್ದುದಂ ಸಿಡಕೆ ಬಿಗಾಳಿ ಗಾಳಿಯ ಕೂಡೆ |
ಕೆರಳ್ದುದೆಲ್ಲಾ ಕುಸುಮಪರಿಮಳಂ ಮಲತರ್ಗೆ |
ಕೆರಳ್ದು ವಿರಹಿಚಿತ್ತಮೆಂದಂಗಜಂ ಗಜರಿ ಸರಳಂ ಪ್ರಯೋಗಿಸಿದನು || ೭ ||

---

೧ ಮಂ (ಮ.) ೨-೩ ೪ | ಮರ (ಪ.) ೩ ಕೆ (ಶಿ, ಗೋ, ಮ.)

ಎಲೆ ಸಿದ್ಧರಾಮ ಕೇಳಾ ಸಮಯದೊಳ್ ನೃಪಂ |
ಕಳವಳಿಸಿ ವಿರಹದಿಂ ತನ್ನಾಪ್ತಸಖಿಯನೊ |
ರ್ವಳನಿರದೆ ಕರೆದು ಕೇಳಿಲೆ ತರುಣಿ ರತ್ನವರ್ಣನ ಕಾಂತೆಯುಂ ಪಗಲೊಳು ||
ಲಲಿತಸೌಧಾಗ್ರದೊಳ್ ಕಂಡೆನವಳಂ ತಂದು |
ಕಳುಪದಿರಲೆನ್ನ ಹರಣಂ ಪೋಪುದೆನೆ ಮುನ್ನ |
ಕಳುಪಿದವರೊಳಗಿದೇಂ ಘನವೆ ತಂದಪೆನೆಂದು ಬೀಳ್ಕೊಂಡು ನಡೆತಂದಳು || ೮ ||

ಬಂದು ಪರದನ ಮನೆಯನೊಳಪೊಕ್ಕು ಪಲವುತೆರ |
ದಿಂದಾತನರಸಿಯನೊಡಂಬಡಿಸಿ ಗುಪ್ತದಿಂ |
ತಂದವನಿಪತಿಯ ಪೊರೆಯೊಳಗಿರಿಸಲಾತನಿವಳಂ ನೋಡಿ ವಿನಯದಿಂದೆ ||
ಇಂದುಮುಖಿ ಕೊಳ್ಳೆನುತೆ ಸಕಲಪರಿಮಳಕುಸುಮ |
ವೃಂದಮಂ ಕೊಡುವನಿತರೊಳಗೆ ಚಂಪಕಪುಷ್ಪ |
ಮೊಂದು ಪಡಿಗದೊಳೆ ಬೀಳ್ವನಿತರೊಳ್ ಶಂಕರಾರ್ಪಿತವೆಂದನವನೀಶನು || ೯ ||

ಈತನೀ ತೆರದೆ ದುಷ್ಟವ್ಯಸನ ಪಾಪ ದು |
ರ್ನೀತಿಯುತನಾಗಿರಲ್ಕಂತ್ಯಕಾಲ[೧]ಕ್ಕೆ ಯಮ[೧] |
ದೂತರಿವನಂ ಕೊಂಡು ಪೋಗಿ ಯಮರಾಜನಿದಿರೊಳ್ ನಿಲಿಸೆ ಕಂಡಾತನು ||
ಪಾತಕವೃಷಂಗಳೆಂತೆನೆ ಚಿತ್ರಗುಪ್ತರ್ ವಿ |
ಜಾತಕಿಲ್ಬಿಷನಿವಂ ರೌರವಪ್ರಾಪ್ತಿ ಮಿಗೆ |
ಭೂತನಾಥಂಗೆ ಬೀಳ್ದಲರನರ್ಪಿಸಿದ ಸದ್ಧರ್ಮವಿರ್ದಪುದೆಂದರು[೨] || ೧೦ ||

ಆಗ ಮಾಡಿದ ಧರ್ಮದಿಂ ರಂಭೆಯೊಡನೆ ಸಂ |
ಭೋಗವೀತಂಗೊಂದು ರಾತ್ರಿಯೆಂದಾತನಂ |
ಬೇಗದಿಂ ತಂದು ರಂಭೆಗೆ ರಹಸ್ಯದೊಳಿವನ ವರ್ತನಂಗಳನುಸಿರ್ದು ||
ರಾಗದಿಂದಿವನೊಳೀ ರಾತ್ರಿಯೊಳಗಿರ್ದೀವು |
ದೀ ಗುಣವಿಹೀನನಂ ನಾಳೆ ನಮಗೆಂದವರ್ |
ಪೋಗಲೀಗುವೆನೆನ್ನ ಸಂಗದೊಳಗಿರ್ದಂಗೆ ನರಕವೇ ಹಾಯೆಂದಳು || ೧೧ ||

೧-೧ ಕೆ ಯಮನ (ಗೋ.) ೨ ದೀಶಗೆ (ಶಿ, ಗೋ.)

ಚಿಂತಿಸಿದೊಡೇನಭವಪೂಜೆ[1]ಯಿಂದೀ ಸ್ವಪ್ನ |
ಗಂತಕನ ಬಾಧೆಯಂ ಪಿಂಗಿಸುವೆನಾನೆನು |
ತ್ತಂತರಂಗದೆ ತಿಳಿದು ಶ್ವೇತನಿರ್ಮಲಪರ್ಯಂಕಮಂ ಸಾರ್ದು ನಿಲಲು |
ಮುಂತವಳನೀಕ್ಷಿಸಿ ರತಾರಂಭಚೇಷ್ಟೆಯಿಂ |
ಕಾಂತೆಯಂ ಬರಸೆಳೆವುತಿತ್ತ ಬಾಯೆ[2]ನಲವಳ್ |
ದಂತರುಚಿ ಧಾತ್ರಿಯನಲಂಕರಿಸೆ ನಸುನಗಲ್ ಭೂಮಿಪತಿಯಿಂತೆಂದನು ‖ ೧೨ ‖

ರೂಪು ಗುಣ ಸತ್ಕಲಾಪ್ರೌಢಿಯಿಲ್ಲೆನಗೆ ತ |
ಕ್ಕರೂಪನಿವನಲ್ಲೆಂದು ನಗುವಿಂದೋ ನೀನೆನಲ್ |
ಭೂಪ ಕೇಳ್ ರತಿಗೆ ಲಟಕಟಿಪೆ ನಾಳಿನ [3]ಯಮನ ಬಾಧೆಯಂ ನೋಡೆಯ[3]ೆಂದು |
ಈ ಪರಿಯೊಳಾಂ ನಕ್ಕೆನೆನಲಿಂದಿದೇಕೆ ನಿ |
ನ್ನಿಂ ಪರಮಸಂಗಮಿದು ನಾಳೆ ಭಯಮೇಕೆನಲ್ |
ಪಾಪಿ ಕೇಳಾ ನಿನ್ನ ವಿಧಿಯನುಸಿರುವೆನೆನುತ್ತಂಬುಜಾಕ್ಷಿಯಿಂತೆಂದಳು ‖ ೧೩ ‖

ಮುನ್ನನೀಂ ಮಾಡಿದ ಮಹಾಪಾಪಮಂ ಪೇಳ |
ಲೆನ್ನ ಹವಣಲ್ಲಪ್ರಯತ್ನದಿಂದೊಂದು ಕುಸು |
ಮನ್ನೆಲಕೆ ಬೀಳಲೀಶಾಪರ್ಣಮೆನಲ್ ಬಂದುದೆನ್ನ ಸಂಭೋಗಮಿಂದು |
ಇನ್ನಾಲಿಸೈ ಭಸ್ಮ ರುದ್ರಾಕ್ಷೆ ಶಿವಮಂತ್ರ |
ಸನ್ನುತಿಯೊಳಭವನಂ ಭಜಿಸಿ ನಾಳಿನ ನರಕ |
ಮನ್ನಿವಾರಿಪುದೆನಲ್ಕನಿತು ಬೇಗದೊಳಪ್ಪುದೇಯೆನಲ್ಕಿಂತೆಂದಳು ‖ ೧೪ ‖

ಅತಿಪಾಪಿಯೊರ್ವನೇ ಪಾಳ್ಗುಡಿಯೊಳೆಡೆಗೆಡೆದು |
ಮೃತಸಮಯದಿಂದಿರಲ್ ಕಂಡೊಂದು ಶುನಕನ |
ಪ್ರತಿಹರುಷದಿಂ ತಿಂಬೆನೆಂದು ಕಾದಿರ್ದು ಜೀವಂಬೋಗದಿರೆ ಕಾಣುತೆ |
ದ್ರುತಮೊಳಾತನ ಪಣೆಯ ಮೆಟ್ಟಿ ಪೋಗಲ್ಕವಂ |
ಹತನಾಗೆ ಯಮದೂತರೆಳೆಯೆ ಶಿವಚರರೈದಿ |
ಸಿತಭಸಿತಮಿವನ ಪಣೆಯೊಳಗಿರ್ಪುದೆನುತೆ ಕೈಲಾಸಕ್ಕೆ ಕೊಂಡೊಯ್ದರು ‖ ೧೫ ‖

---

೧ ಪ್ರೀತಿ (ಮು.) ೨ ರೆ (ಶಿ, ಗೋ.) ೩-೩ ಬಾಧೆಯಂ ನೋಡಲಾರೆನೆ (ಶಿ, ಗೋ.)

ವನದೊಳಗೆ ರುದ್ರಾಕ್ಷಿವಣ್ಗಳಂ ಕಂಡೊರ್ವ
ವನಚರಂ ಮೆಲ್ದದರ ಬೀಜಮಂ ಸರಗಟ್ಟೆ |
ಶುನಕನ ಕೊರಳ್ಗೆ ಬಂಧಿಸಿ ಪಂದಿ ಪೊಯ್ಯು ನಾಯ್ ಸಾಯೆ ಯಮದೂತರೈದಿ
ಶುನಕನಂ ಪಿಡಿಯೆ ಶಿವದೂತರೈತಂದಂತ |
ಕನ ದೂತರಂ ಬಡಿದು ಶಿವಲೋಕಕೊಯ್ದುರೆ |
ಘನವಲಾ ಶಿವಲಾಂಛನಂ ಭೂಪ ಕೇಳೆಂದು ತರಳಾಕ್ಷಿಯಿಂತೆಂದಳು || ೧೬ ||

ಅರಸ ಕೇಳತಿ[1]ಪಾಪಿಯೊರ್ವಶೂದ್ರಂ ತನ್ನ |
ಮರಣಕಾಲದೊಳೆ ಮಗನಂ ಕರೆದು ಹೊಲನ ನಿಂ |
ಹರಗಣಾಯೆನುತಸುವನುಳಿಯಲವನಂ ಶಿವನ ಪೊರೆಗೊಯ್ದರಿನ್ನಾಲಿಸು ||
ತರಣಿಜನಪುರಕ್ಕೈದಿ ಸಾನಂದ ಮುನಿವರಂ |
ಪರಮಪಂಚಾಕ್ಷರೀ ಮಂತ್ರಮಂ ಸ್ಮರಿಸಲಾ |
ನರಕಿಗಳ್ ಕೇಳ್ದು ತನ್ಮಂತ್ರಮುಚ್ಚಾರಣೆಯಿಂ ಕೈಲಾಸಪುರಕ್ಕೈದರೆ || ೧೭ ||

ಮುನ್ನೊರ್ವ ಪಾರ್ವನತಿಪಾತಕಂ ಚಂಡಾಲ |
ಕನ್ನೆಯೊಳ್ ನೆರೆಯಲವರಿರ್ವರಂ ಪೊರಡಿಸಲ್ |
ತನ್ನವಳ್ವೆರಸಿ ಕಾಂತಾರದೊಳಗಿರಲವಳ್ ಸಾಯಲವಳಾತ್ಮಜೆಯನು ||
ಗನ್ನದಿಂ ಕೂಡಿರುತೆ ಶೈವಾಲಯದೊಳೆ ದೀ |
ಪನ್ನಂದುತಿರೆ ಕಳವು ನಂದಿಸದೆನುತೆ ಬತ್ತಿ |
ಯನ್ನಾಂಕೆ ಮರಣಕಾಲದೊಳಭವದೂತರವನಂ ಶಿವನ ಪೊರೆಗೊಯ್ದರು || ೧೮ ||

ಪನ್ನೆರಳ್ವರುಷದಾಯುಷ್ಯದ ಕುಮಾರನಂ |
ಪನ್ನಗಾಭರಣನಿಂ ಪಡೆದಾ ಮೃಕಂಡುಮುನಿ |
ತನ್ನಂದನಂ ದಿನಂ ಸಾರೆ ಬರೆ ಕಂಡು ಶಿವಪೂಜೆಯಂ ಮಾಡುತಿರಲು ||
ಉನ್ನತದ ಪಾಶದಿಂದಂತಕಂ ಕೋದೆಳೆಯೆ |
ತನ್ನಿದಿರಲಿಂಗಮಂ ತಬ್ಬಿ ಶಿವಘೋಷಿಸಲ್ |
ಮನ್ನಿಸುತೆ ಮುನಿಪನಂ ಮೃತ್ಯುಂಜಯಂ ಶೂಲದಿಂದಂತಕನನಿರಿಯಸೆ || ೧೯ ||

---

೧ ಳಿಲೆ (ಶಿ, ಹು.)

ಅರಸ ಕೇಳಿಂತು ದೈವಾಧೀನದಿಂ ಪೂರ್ವ |
ಪುರುಷರೀಶನ ಪದಂಗಂಡರಿಂದೀಗ ನೀ |
ನಿರದೆ ಶಿವಪೂಜೆಯಂ ಮಾಡು ಮಾಡಿದೊಡಂತಕನ ಭಯಂ ಪೋಪುದೆನುತೆ |
ವರವಸ್ತ್ರ ಭಸಿತ ರುದ್ರಾಕ್ಷ ನಾನಾಕುಸುಮ |
ಪರಿಮಳ ಸುಗಂಧ ನವಧೂಪದೀಪಂಗಳಂ |
ತರಿಸಿ ತರತರದೊಳಂಬಿಡಿಸಿದಳ್ ರಂಭೆ ಶಂಭುವಿನಿದಿರೊಳಾ ಕ್ಷಣದೊಳು || ೨೦ ||

ಈಕ್ಷಿಸಿದನೀ ಸಕಲಪರಿಕರಂಗಳನರಸ |
ನಾ ಕ್ಷಣದೊಳೆಲೆ ರಂಭೆ ಶಿವಪೂಜೆಯಂ ಮಾಡೆ |
ದೀಕ್ಷೆಯೆನಗಿಲ್ಲ ಪಾಪಾತ್ಮನಂ ಪತಿಕರಿಸಿ ಕರುಣದಿಂ ಧರ್ಮಪಥಕೆ ||
ಶಿಕ್ಷಿಸಿದೆ ನೀನೆ ಗುರುವಲ್ಲದೆನಗಿನ್ನಾರು |
ಪೇಕ್ಷಿಸದನುಜ್ಞೆಯಂ ಕೊಡುವುದೆನೆ ಕೇಳ್ದಂಬು |
ಜಾಕ್ಷಿಯಾ ಶ್ರೀಮಂತಂಗೆ ದೀಕ್ಷೆಯಂ ಕೊಟ್ಟು ಶಿವಪೂಜೆಯಂ ತೊಡಗಿಸಿದಳು || ೨೧ ||

ಪರಿಪರಿಯ ಕಪ್ಪುರಸೊಡರ್ಗಳಿಂ ಧೂಪದಿಂ |
ಗುರುತರದ ನೀರಾಜನಂಗಳಿಂ ಬಹುಭಕ್ಷ್ಯ |
ಪರಡಿ ಪಾಯಸ ಮೋದಕಾಜ್ಯ ದಧಿ ದುಗ್ಧ ಶಾಲ್ಯನ್ನ ಸೂಪಂಗಳಿಂದೆ ||
ಪರಮಕರ್ಪೂರತಾಂಬೂಲದಿಂ ಭೂಮಿಪಂ |
ಗಿರಿಜಾಧವನನರ್ಚಿಪನಿತರೊಳಗಿಂದ್ರದಿ |
ಗ್ವರವಧೂಸೀಮಂತಮಣಿಪೋಲುದಯಾದ್ರಿಯೊಳ್ ತರಣಿಮಂಡಲಮೆಸೆದುದು || ೨೨ ||

ಓಡಿದುದು ತಿಮಿರಮಿಂದೀವರದ ನಗೆಮೊಗಂ |
ಬಾಡಿದುದು ಮಿಗೆ ಚಕೋರಂಗಳ ಮನಂ ಬಿಡದೆ |
ಕೋಡಿದುದು ಕಮಲಕುಲಮರಳಿದುದು (೧)ತೆರಳಿದುದು ಶೋಕಮೆಣೆವಕ್ಕಿಗಳ್ಗೆ(೧) ||
ತೀಡಿದುದು ತಣ್ಗಾಳಿ ತರಣಿಯ ಬಿಸಿಲ್ ದಾಳಿ |
ಮಾಡಿದುದು ದೆಸೆಗಳೊಳ್ ತುಂಬಿವಿಂಡಲರ್ಗಳೊಳ್ |
ನಾಡಿದುದು ಸಿದ್ಧರಾಮೇಶ ಕೇಳಾ ಸಮಯದೊಳಗೊಂದು ಕೌತುಕವನು || ೨೩ ||

(೧–೧) ಕೂಡೆ ಕಮಲಶೋಕಮೆಣೆವಕ್ಕಿಗಳ್ಗೆ (ದಾ.); ನಾಡಿದುದು ಶೋಕಮೆಣೆವಕ್ಕಿಗಳ್ಗೆ (ಪು. ಮ.); ಶೋಕಮಾಯ್ತೆಣೆವಕ್ಕಿಗಳ್ಗೆ ಬಿಡದೆ (ಶಿ, ಗೋ.)

ಮುನ್ನ ರಂಭೆಗೆ ಭೂಪನಂ ಕೊಟ್ಟು ಪೋದ ಯಮ |
ನನ್ನರಾ[೧]ಳ್ಗಳ್ ಬಂದು ರಂಭೆ ಭೋಗಿಸಲೆಂದು |
ನಿನ್ನಿರುಳ್ ನಿನಗಿತ್ತವನನೀವುದೆನಲಾಕೆಯಾತನಂ ತೋರಿಬಿಡಲು ||
ಪನ್ನಗಾಭರಣನಪರಾವತಾರದೊಳಿರ್ದ |
ದನ್ನೋಡಿ ನೋಡಿ ವಿಸ್ಮಿತರಾಗಿ ಮುಟ್ಟಲ್ ಭ |
ಯನ್ನಾಟಿ ಚಿತ್ತದೊಳ್ ದೂತರೈತಂದಾ ಕೃತಾಂತನೊಡನಿಂತೆಂದರು || ೨೪ ||

ಜೀಯ ಚಿತ್ತಯಿಸು ನಿನ್ನಾಜ್ಞೆಯಿಂದಾ ಶ್ವೇತ |
ರಾಯನಂ ಸುರಸತಿಗೆ ಕೊಟ್ಟು ಬಂದೆವು ನಿನ್ನೆ |
ಮಾಯೆಯೇನೆಂದರಿಯೆವಿಂದಾತನಂ ತರಲ್ ಪೋಗಿ ನೋಡಲ್ಕಾತನು ||
ಕಾಯದ ವಿಭೂತಿ ರುದ್ರಾಕ್ಷೆಗಳ ಪೂಗಳ ನಿ |
ಕಾಯದಿಂ ಮಾಳ್ಪಭವಪೂಜೆಗಳ ಹದನರಿದು |
ಕಾಯಲಮ್ಮದೆ ಬಂದೆವೆಂದು ಬಿನ್ನವಿಸೆ ಕಿಡಿಕಿಡಿಯಾದನಾ ಕೃತಾಂತಂ || ೨೫ ||

ಆಗಲದಕೇನಾಯ್ತು ರಂಭೆಯ ವಿಡಾಯಮಂ |
ನೀಗಿಯವನೊಡನವಳನೆಳೆ[೨]ಕೊಂಡು ಬಹೆನೆಂದು |
ಬೇಗದಿಂ ತನ್ನ ಕರಕಲಿತಭೀಷಣಗದಾದಂಡಮಂ ತವೆ ತಿರುಪುತೆ ||
ಆಗಳ್ ಯಮಂ ದೂತರಂ ಕೂಡಿಕೊಂಡು ಶತ |
ಯಾಗಪುರಕ್ಕೈತಂದು ರಂಭೆಯಂ ಕರೆದೆಲೆಗೆ |
ಚಾಗು ಚಾಗೆನ್ನವನನೇಕೆ ಕೊಡೆ ನೀನೆಂದು ಮೊರೆಯಲವಳಿಂತೆಂದಳು || ೨೬

ಕೊಂಡುಪೋಗೆಲೆ ಕಾಲ ನಿನ್ನಾತನದೆಕೊ ನೀ |
ನಂಡಲೆಯಬೇಡೆನಗೆನಲ್ ಕೇಳುತಾ ಯಮಂ |
ಬಂಡತನವೇ ಶ್ವೇತ ನಡೆ ನರಕಕುಂಡಕ್ಕೆ ನೀನೆಂದು ಗರ್ಜಿಸಲ್ಕೆ ||
ಖಂಡಪರಶುವಿನ ಪೂಜಾವಿಧಿಯನುಳಿದ್ಯೆದೆ |
ಕಂಡವರ್ ನಗರೆ ನೀನಜ್ಞನೇ ಕಾಲ ಮಾ |
ರ್ಕಂಡೇಯನಂ ಪಿಡಿಯೆ ಬಂದ ಸಂಕಟವನೇಂ ಮರೆದೆಯಾ ನೀನೆಂದನು || ೨೭ ||

---

೧ ನುನ್ನತಾ (ಮ.) ೨ ನೇ (ಶಿ, ಗೋ, ಹು, ದಾ, ಮ.)

ಎನೆ ರಂಭಿಸಿಂದಳಿಲಿ ಶಮನೆ ಶಿವಪೂಜಕರ |
ಘನವವನರಿಯಾ ರುದ್ರಮುದ್ರಾಸ್ಪದರನೆಂತು |
ಕನಲಿಸೈ ಕನಲಿದೊಡೆ ಸೈರಿಪನೆ ಶಂಭು ಭಕ್ತರ ಭಕ್ತನಾತನಲ್ತೇ ||
ನಿನಗೆ ತರ್ಕ್ಕ ಜ್ಞಾನ ಭಕ್ತರಾಡಿದುದೆ ದೇ |
ವನ ವಾಕ್ಯವವರೆಸಗಿದುದೆ ಶಿವನ ತಂತ್ರವಿ |
ತನನುಳಿವು ಪೋಪುದೇ ಕಾರ್ಯವೆನೆ ಕಣ್ಗಳೊಳ್ ಕಿಡಿಗೆದರುತಿಂತೆಂದನು || ೨೮ ||

ಪಾಶದಿಂಪೆಳೆವು ಮೃತ್ಯುರಕೊಯ್ಸ್ಯನಿವನಂ ಸ |
ದಾಶಿವನೆ ಬಿಡಿಸಿಕೊಳಲೆಂದು ಗುಡುಗುಡಿಸಿ ಕೀ |
ನಾಶಂ ನೃಪಾಲಕನ ಕೊರಳ್ಗೆ ಪಾಶವನಿಕ್ಕಿ ಗರ್ಜಿಸುತೆ ಬರಸೆಳೆಯಲು ||
ಈಶ ಶಂಕರ ಸರ್ವಗತ ಮಹಾದೇವ ಭವ |
ನಾಶ ಭಕ್ತಪ್ರಿಯ ಶಶಾಂಕಶೇಖರನೆ ಯವಿ |
ಘೋ ಶರಣು ಸಲಹಲಾಗದೆ ಸರ್ವದೋಷಕನನೆಂದು ಶ್ವೇತಂ ಚೀರ್ದನು || ೨೯ ||

ರಕ್ಷಿಸೈ ಪಿಂತೆ ಮಾರ್ಕಂಡೇಯನಂ ಸಲಹಿ |
ಶಿಕ್ಷಿಸಿದೆ ಮೃತ್ಯುವಂ ಸತನ ಮೊರೆಯಂ ಕೇಳ್ದು |
ಪೇಕ್ಷಿಸುವರೇ ಭಕ್ತಭಕ್ತನೆಂಬೀ ಬಿರುದನುಳಿವರೇ ದೇವ ನಿನ್ನ ||
ಈಕ್ಷಿಸಿದ ಮಾತ್ರದಿಂ ಸರ್ವಭಯಮುಡಗಿದಪು |
ದಕ್ಷಿಣಮುಹಿಮ ನೀನೇ ಕೆಯ್ಯೊಳಿರ್ದುಮಿತ |
ರಕ್ಷೋಭೆಯೇಕೆಂದು ಭೂಮಿಪಂ ಪೊಗಳಲ್ಕೆ ರಾಮ ಕೇಳ್ ಕೌತುಕವನು || ೩೦ ||

ವಿಸ್ತರಿಪೆನೇನನೆಲೆ ರಾಮ ಶ್ವೇತಕಿನ ವಿಮಲಿ |
ಹಸ್ತದೊಳ್ ಪೂಜೆಗೊಂಬತುಳತರಲಿಂಗಮೇ |
ಮಸ್ತಕದ ಚಾಂದೊರೆಯ ಪೆರೆಯ ಕೆಂಜಡೆಯ ನಯನಾವಳಿಯ ಪಂಚಾಸ್ಯದ ||
ನ್ಯಸ್ತಸುಶಿರೋಮಾಲಿಗಳ ಗಳದ ಫಣಿಗಳ ಸ |
ಮಸ್ತ ಭೂಷಣದ ನಿಜಮೂರ್ತಿಯಂ ತೋರೆ ಯಮ |
ಪಸ್ತವಿಸಿದಂ ನಯನವಹ್ನಿಯಿಂ ಶಿವಭಕ್ತರಳಲದೆಂ ಪಥ್ಯಮಹುದೇ || ೩೧ ||

೧ ಸೇಕಕ (ಶಿ, ಗೋ, ದಾ, ಮು.); ಗೇಶಿರ (ಹು.) ೨ ಶಿವ (ಶಿ, ಗೋ, ಮು.)
೩-೩ ನೃಪಾಲ (ಹು, ಮು.)

ಹೃದಯದೊಳ್ ತಲ್ಲಣಿಪ ದಿವಿಜರಂ ಕರೆದು ನೀಂ |
ಬೆದರದಿರಿಮೆಮ್ಮ[೧] ಭಕ್ತಂಗೆ ಮಾಡಿದ ದ್ರೋಹ |
ಮದು ಕೊಂದುದಿವನಂ ಸಮಸ್ತಲೋಕದೊಳೆನ್ನ ಭಕ್ತರೇ ಪ್ರಾಣಮೆನಗೆ |
ಇದ ನೋಡಿ ನಡೆವುದಿಂತೆಂದಮರರಂ ತಿಳಿಪಿ |
ಮುದದಿಂದೆ ರಂಭೆಯುಂ ಕರೆದು ನೀಂ ಶ್ವೇತಂಗೆ |
ಮೊದಲನುಜ್ಞಿಸಿದೆ ನೀನೇ ಭಕ್ತೆ ಭಲರೆಂದು ಶ್ವೇತನಂ ಮನ್ನಿಸಿದನು || ೩೨ ||

ಸರಸಿಜೋದ್ಭವನಾಗಲಖಿಳದೇವವ್ರಾತ |
ವೆರಸಿ ಶಂಕರನ ಪಾದಾಂಬುಜದೊಳಡೆಗೆಡೆದು |
ಮರಳಿ ಮಣಿದೆದ್ದು ದೇವರ ದೇವ ನಿನ್ನ ಭಕ್ತದ್ರೋಹದಿಂ ಕಾಲನು ||
ಉರಿಯೊಳುರಿದಂ ಮುಂದೆ ಪಾಪಪುಣ್ಯಂಗಳಾ |
ಧರಣಿಯೊಳಗೆಂತು ನಡೆದಪುವು ಜೀವರ್ಗೆಂತು |
ಮರಣಭಯಮಾದಪುದು ಬುದ್ಧಿಗಲಿಸೆಂದು ವಿಧಿ ತುತಿಸಿದಂ ಭಕ್ತಿಯಿಂದೆ || ೩೩ ||

ವಾರಿರುಹಸಂಜಾತ ನಿನ್ನ ನುಡಿ ತಥ್ಯವಹು |
ದಾರೆಮ್ಮ ಭಕ್ತರಂ ಮೀರಿದರವರ್ಗೆ ಸಂ |
ಹಾರಮೇ ವಿಧಿಯಂತೆ ದಹಿಸಿದೆವು ಯಮನ ನೀಂ ಬದುಕಿಸುವುದನುಚಿತವೆನೆ ||
ಮಾರಹರ ಸರ್ವಾಪರಾಧಮಂ ಕ್ಷಮಿಸೊಂದು |
ಬಾರಿಗೆಂದಂಬುಜಾಸನನಭವನಡಿಗೆರಗೆ |
ಕಾರುಣ್ಯದಿಂದಿತ್ತೆವಸುವನೆನೆ ಮಲಗಿದವರೇಳ್ವಂತೆ ಯಮನೆದ್ದನು || ೩೪ ||

ಮೊಳಗಿದುವು ದೇವದುಂದುಭಿ ಸುರಿದುವರಲ ಮಳೆ |
ನಲವೇರಿದಂ ಶ್ವೇತನಂಬುಜಭವಾದ್ಯಮರ |
ಕುಲವೈದೆ ಕೊಂಡಾಡಿತಭವನಂ ಯಮನೆಳ್ದು ಕೆಯ್ಗಳಂ ಮುಗಿದುಕೊಂಡು |
ಸಲಹೆನ್ನನೆಲೆ ಶಂಭು ಸರ್ವಪಾತಕನನ |
ಸ್ಖಲಿತಮೂರ್ಖನನಜ್ಞನಂ ತಾಮಸನನರಿದು |
ಸಲೆ ನೆನೆದೆನಪರಾಧಶತಮನೆಂದಂತಕಂ ಹರನಡಿಯೊಳಡೆಗೆಡೆದನು || ೩೫ ||

---

೧ ಯೆಂದು (ಶಿ, ಗೋ, ದಾ, ಮ.)

ಹರ ಹರ ತ್ರಾಹಿ ಸರ್ವೇಶ್ವರ ತ್ರಾಹಿ ಶಂ |
ಕರ ಪಾಹಿಯೆಂದು ಕಾಲಂ ತುತಿಸೆ ಶಂಕರಂ |
ಕರೆದು ನಿನ್ನ ಭಕ್ತದ್ರೋಹಮಂ ಮಾಡಬೇಡೆನುತೆ ಶ್ರೀಕಾಂತಸಹಿತ ||
ತೆರಳಿದಂ ಕೈಲಾಸಕಂತಕಂ ತನ್ನವ |
ಗಿರದೆ ನೇಮಿಸಿ ರುದ್ರಮುದ್ರೆಯಂ ತಾಳ್ದವರ |
ಪೊರೆಗೈದಬೆಂದು ಪುರಕ್ಕೈದಿದಂ ಪರಿವಾರಮರರಾ ಬ್ರಹ್ಮಸಹಿತ || ೩೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಂ |
ಪ್ರೀತಮಂ ಬಿಡದೆ ಪೇಳ್ವರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ವವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೩೭ ||

ಅಂತು ಸಂಧಿ ೫೧ಕ್ಕಂ ಪದಗಳು ೨೧೫೯ಕ್ಕಂ ಮಂಗಳಮಹಾಶ್ರೀ

ಐವತ್ತೆರಡನೆಯ ಸಂಧಿ

ಸೂಚನೆ

ಹರಭಕ್ತಗೌತಮನ ಶಾಪದಿಂ ಋಷಿಗಳಂ |
ದಿರದೆ ಪಾಷಂಡಿಮತರಾಗಿರಲ್ ಶಂಕರಂ |
ಕರುಣದಿಂ ಸುಖಮೂರ್ತಿಯಾಗಿ ನಂದೀಶನಿಂ ತತ್ತ್ವಮಂ ಪೇಳಿಸಿದನು ||

ಪೊದೆದ ನಿಜವಸ್ತ್ರಮಂ ಕಂಡು ಕಡುಭೀತಿಯಿಂ |
ಬೆದರಿ ಕರದಿಂದಿಳಿಯಬೀಳುತೆಡದೊಡೆಯೊಳಿಹ |
ಸುದತಿಯ ವಿರಾಜಿಸುವ ನಗೆಗಣ್ಗಳಂ ಕಾಣುತುನ್ಮುಖತ್ವವನೆ ತಳೆದು ||
ಗದಗದಿಪ ಕರಕಮಲಮಂ ಕಂಡು ದಂತಿಜ |
ನ್ಮದ ಪೊದಿಕೆಯಿಂದದಂ ಮುಚ್ಚಿ ಕರತಳದಿನಂ |
ಕದ ಸತಿಯ ನಯನಮಂ ಮುಚ್ಚಿ ಸಂತಯಿಸುವ ವಿರೂಪಾಕ್ಷ ಸಲಹೆಮ್ಮನು
||೧||

ಇನ್ನಾಲಿಸೈ ರಾಮ ದಂಡಕಾರಣ್ಯದೊಳ್ |
ಮುನ್ನ ಗೌತಮಮುನೀಂದ್ರಂ ಸಕಲಶಾಸ್ತ್ರಸಂ |
ಪನ್ನನಾಗಿರುತೆ ಶನಿ ರೋಹಿಣೀಶಕಟಮಂ ಭೇದಿಸುವನಿಳೆಯೊಳಿನ್ನ |
ಪನ್ನೆರಡು ವರುಷಪರಿಯಂತರಂ ಬರನಪ್ಪು |
ದಿನ್ನಿದಕುಪಾಯಮಂ ಕಾಣ್ಬೆ ನಾನೆಂದೆನುತೆ |
ಪನ್ನಗಾಭರಣನಂ ಕೂರ್ತು ಮುನಿಪಾಲಕಂ ತೊಡಗಿದಂ ಘನತಪವನು ||೨||

ತಿಳಿದನೀಶಂ ಮನದೊಳೀ ಗೌತಮಂ ತನ್ನ |
ನೊಲಿಸೆ ಮಾಡುವ ತಪಸ್ಸೆಂದು ಕರುಣದೊಳಾಗ |
ನಳಿನಾಕ್ಷನಂ ಕರೆದು ಬೆಸಸಿದಂ ನೀನೀ ಜಗತ್ತಿಂಗೆ ಕರ್ತನೆಂದು ||
ಇಳೆಗೈದಿ ಗೌತಮನ ಕೂಡೆ ವಾದವ ಮಾಡಿ |
ಬಳಿಕ ಬಹುದೆನಲಂಜುವೆಂ ದೇವ ನೀವಿರ್ದು |
ತಿಳಿಯಲಾಂ ಕರ್ತನಹ ಪರಿಯೆಂತು ವಾದವಂ ಮಾಡಲಂಜುವೆನೆಂದನು ||೩||

ಎನಲೀಶ್ವರಂ ನಕ್ಕು ಹರಿಯಜರ ನೋಳದಿಂ |
ಘನತರದ ವೈಷ್ಣವಾಕೃತಿಯನಂಗೀಕರಿಸಿ |
ತನುಜಯುದೊಳಾ ತ್ರಿಯಂಬಕಪರ್ವತಕ್ಕೈದಿ ಗೌತಮನ ಮುಂದೆ ನಿಂದು |
ಮುನಿಪಾಲ ನೀನಾರ ಕುರಿತು ತಪವಂ ಮಾಳ್ಪೆ |
ಎನಗೆ ತಿಳಿಪೆನಲಾಗ ಕಣ್ದೆರೆದು ನೋಡಿಯಾಂ |
ಮನಸಿಜಾರಿಯನೊಲಿಸೆ ಮಾಳ್ಪೆನೆನೆ ಕಪಟವೈಷ್ಣವ ನಗುತ್ತಿಂತೆಂದನು ॥ ೪ ॥

ಹರನೀವನೈ ನಿನಗೆ ವರವನದು[೧]ನಿಶ್ಚಯಂ |
ಮರುಳೆ ನಿನಗೇತಕಜ್ಞಾನವಾ ಶಂಕರಂ |
ತಿರುಕಂ ದಿಗಂಬರಂ ಬೂದಿಬಡಿಕಂ ಮಸಣಗಾಹಿಯೆಲುವಾಲೆಗೊರಲಂ |
ಪರಿಕಿಪೊಡೆ ಸಂಹಾರಕಾರನಾತನ ಬಿಟ್ಟು |
ಹರಿಯನೇ ಭಜಿಸು[೨] ಭಜಿಸಿದೊಡೆ ನಿನ್ನಿಷ್ಟಮಂ |
ಕರುಣಿಪಂ ನಾ ವಿಷ್ಣು ಪೃಥ್ವಿಪತಿಯೆಂಬ ಶ್ರುತಿವಚನಮುಂಟಂತಪಾಗಿ ॥ ೫ ॥

ಹರಿಯೆನಲ್ ಜ್ಞಾನರೂಪಂ ನಿತ್ಯನಚ್ಯುತಂ |
ಪರಮಪುರುಷೋತ್ತಮಂ ಸಕಲರಂ ರಕ್ಷಿಪಂ |
ಸಿರಿಯರಸನೆಸೆವ ಪೀತಾಂಬರಧರಂ ಕೌಸ್ತುಭೋರಸ್ಥಲಂ ಸಾತ್ವಿಕಂ |
ಉರುತರಜಗತ್ಕರ್ತನಾತನೇ ಬ್ರಹ್ಮಾದಿ |
ಸುರರೊಡೆಯನಹಿತರಂ ಸಂಹರಿಸಿ ಶಿಷ್ಟರಂ |
ಪೊರೆವ ಕೀರ್ತಿಂ ಸರ್ವಮುಂ ವಿಷ್ಣುಮಯಜಗತ್ತೆಂಬ ಶ್ರುತಿಯುಂಟಪಾಗಿ ॥ ೬ ॥

ಹರನತಿರಹಸ್ಯದಿಂ ರಾಮಮಂತ್ರವನಂದು |
ಗಿರಿಜೆಗುಪದೇಶಮಂ ಮಾಡಲಾ ಶಿವೆಯೊಲ್ಲು |
ಕರುಣದಿಂ ಕಾಶಿಯೊಳಗಳಿವವರ ಕರ್ಣಂಗಳೊಳಗೆ ಬಿಡದಿ ಮಂತ್ರಮಂ |
ಒರೆಯಲವರಿರದೆ ಸದ್ಯೋನ್ಮುಕ್ತರಪ್ಪರಾ |
ಪರಮಕಾಶಿಯೊಳ್ ವೇದವ್ಯಾಸನೆಂದೆಂಬ |
ವರಮುನೀಶಂ ನ ದೈವಾತ್[೩] ಕೇಶವಾತ್ಪರಂ ಎಂದು ತಾಂ ಕೈಯೆತ್ತಿನೇ ॥ ೭ ॥

---

೧ ದ (ಮ.) ೨ ಕುರ್ಪು (ಶಿ, ಗೋ.) ೩ ದೇವೋ (ಹು.)

ಇನ್ನು ಕೇಳೈ ಮುನಿಪ ರುದ್ರನೊಲವಿಂದೆ ಕೊ |
ಟ್ಟನ್ನುತಪದಂಗಳಂ ಹರಿ ತೆಗೆದು ಹರಿಸನೇ[1] |
ಬನ್ನಬಡಿಸುತ್ತೆ ಖಳರಕ್ಕಸರನೆಲ್ಲರಂ ಸಂಹಾರಮಂ ಮಾಡನೇ |
ತನ್ನ ನಾಭೀಕಮಲದಿಂದಜನ ಪಡೆಯನೇ |
ಚೆನ್ನಾಗಿ ಹರಿಯನೇ ಭಜಿಸಲಾತಂ ನಿನಗೆ |
ಸನ್ನುತಪದಂಗಳಂ ಕೊಟ್ಟು ರಕ್ಷಿಸುವನಿದು ನನ್ನಿ ನೀಂ ಕೇಳೆಂದನು || ೮ ||

ಎಂದಿಂತು ಕಪಟವೈಷ್ಣವನುಸುರೆ ಕೇಳ್ದು ಕಡು |
ನೊಂದು ಮುನಿನಾಥನಾಸಜ್ಜನಂ ಕೇಳೆಲವೊ |
ಮಂದಮತಿ ವೈಷ್ಣವಂ ನೀಂ ನಿನಗೆ ಶಿವನ ಮಾಹಾತ್ಮೆಯಂ ಪೊಗಳ[2]ಲಳವೇ |
ಇಂದುಧರನತ್ಯತಿಷ್ಠದ್ದಶಾಂಗುಲನಭವ |
ನೆಂದು ಕೇಳೀಕಮೇವಾದ್ವಿತೀಯಂ ರುದ್ರ |
ನೆಂದು ಶ್ರುತಿವಚನಮುಂಟರಿಯದಾ ಹರಿಗಿರಿಯ ಸರಿಯೆಂದು ನುಡಿಯಬಹುದೇ || ೯ ||

ಹರಿಯು ತಾಂ ಜ್ಞಾನರೂಪಾದೊಡಂ ಭೃಗುಮುನಿಪ |
ನರಸಿಯನದೇತಕಜ್ಞಾನದಿಂ ಕೊಂದನಂ |
ದಿರದೆ ಮತ್ತಚ್ಯುತಂ ತಾನಾಗೆ ಸತ್ತು ಸತ್ತುಂ ಹುಟ್ಟುತಿರಲೇತಕೆ ||
ಪರಮಪುರುಷೋತ್ತಮಂ ತಾನಾಗೆ ಕಳವಿನಿಂ |
ಪರಸತಿಯರಂ ಬಯಸಲೇಕೆ ಸರ್ವಂ ವಿಷ್ಣು |
ವರಮಯಮದಾಗೆ ತನ್ನರಸಿಯಂ ಕದ್ದುಕೊಂಡೊಯ್ವಾಗಳೆಲ್ಲಿರ್ದನು || ೧೦ ||

ಹರಿಯು ರಕ್ಷಾಕರ್ತನೆಂದೆಲಾ ಮರುಳೆ ಕೇಳ್ |
ಹರನಂದು ತನ್ನ ಮಗನಂ ದಹಿಸೆ ಕಾಣುತ್ತೆ |
ಮರಳಿ ರಕ್ಷಿಸದಾದನೇತಕ್ಕೆ ಸಿರಿಯು ತನ್ನರಸಿಯಾದೊಡೆ ಧರೆಯೊಳು ||
ದೊರೆಗಳಂ ಸೇರಿರ್ಪ ಕಾರಣಮದೇತಕ್ಕೆ |
ಹರಿಯೀ ಜಗತ್ತಿಂಗೆ ಕರ್ತನಾದೊಡೆ ತಾನೆ |
ಮರಳಿ ಮಮ ಕರ್ತಂ ಮಹೇಶನೆಂದೆನಲೇಕೆ ವೈಷ್ಣವಂ[3] ಕೇಳೆಂದನು || ೧೧ ||

---

೧ ರಕ್ಷಿಸನೆ (ಮ.) ೨ ತಿಳಿಯ (ತಿ, ಗೋ, ಹು, ಡಾ, ಮ.) ೩ ವನೆ (ಮ.

ನಾಮಮಂತ್ರವೆ ಶಿವನ ನಿಜನಾಮವೆಂದರಿದು |
ಪ್ರೇಮದಿಂ ಜಮದಗ್ನಿದಶರಥರ್ ಮಕ್ಕಳಂ |
ರಾಮರೆಂದೇ ಕರೆಯೆ ನಾಮಕ್ಕೆ ಯೋಗ್ಯರಲ್ಲದೆ ಪಟ್ಟಕರ್ಹರಹರೇ |
ಆ ಮಂತ್ರಮಂ ಗಿರಿಜೆ ಬೋಧಿಸಲ್ಕಳಿದವರ್ |
ಸೋಮರಾಗುದ್ಭವಿಪರಲ್ಲದಾ ಪರಶುರಘು |
ರಾಮರಾಗುದ್ಭವಿಪರೇ ಯಥಾ ಬೀಜಂ ತಥಾಂಕುರಮುಮೆಂದುದಾಗಿ ‖ ೧೨ ‖

ಪರಮಕಾಶಿಯೊಳ್ ವೇದವ್ಯಾಸನಕ್ಕರಿಂ |
ಹರಿಯಲ್ಲದಿಲ್ಲೆಂದು ಕೆಯ್ಯೆತ್ತಲಾ ತೋಳ |
ನಿರದೆ ನಂದೀಶ್ವರಂ ಮುರಿಯನೇ ಮರುಳೆ ಭಸ್ಮಾಸುರನ ದಶಕಂಠನ |
ಪರಮೇಶನೊಲಿದಿತ್ತ ವರದಿಂದಲವರನಾ |
ಹರಿ ಕೊಂದನೈಸೆ ಕೇಳೀಶ್ವರಾಜ್ಞೆಯು ವಿಚಾರೆ
ಹರಿಗಿರಿಯುಜಂಗಿಜಂ ಸಾಮರ್ಥ್ಯರೇ ಹರಿಯ ಮಗನಜನ ತಲೆಯೆ ಸಾಕ್ಷಿ ‖ ೧೩ ‖

ಹರನ ವರದಿಂದಲುಪಮನ್ಯುಮುನಿ ಕ್ಷೀರಸಾ |
ಗರವನುರೆ ಪಡೆದು ತತ್ಕ್ಷೀರಮಂ ಸೇವಿಸು |
ತ್ತಿರಲಿವರೊಳಿರ್ದ ಕೃಷ್ಣಂ ಬಂದು ಬಾಯ್ಗಾನಲುಗುಳಲದರೊಳಗೆ ಬಿದ್ದು |
ಮರಳಿ ಬರೆ ಕಂಡು ಕಡೆಗುಗುಳಲಾ ಹರಿ ಮುನಿಯ |
ನಿರದೆ ನುತಿಗೆಯ್ದು ಶಿವದೀಕ್ಷೆಯಂ ಕೊಡುವುದೆನೆ |
ಕರುಣದಿಂದಾ ಹರಿಗೆ ಮುನಿವರಂ ದೀಕ್ಷೆಯಂ ಕೊಟ್ಟುದಂ ಕೇಳ್ದರಿಯಲಾ ‖ ೧೪ ‖

ವರದಧೀಚಿಯು ಕೂಡೆ ಕ್ಷುಪಗಾಗಿ ಕಾದಲಾ |
ಹರಿಯ ಚಕ್ರವನುಡಿದು ಬಿಸುಟು ಬೆಂಬತ್ತಲಾ |
ಧುರದೊಳಿದಿರಾಗಲರಿಯದೆ ತಲೆಯ ಕೆದರಿಕೊಂಡೋಡಿದಂ ಕೇಳ್ದರಿಯಲಾ |
ಪರಮಪಾವನಚರಿತ್ರಂ ಭೃಗುಮುನೀಶನಾ |
ಹರಿಯುರಮನೊದೆಯಲದು ಕಂದಿ ಕಲೆಯಾಗಲದು |
ಹರಿಗೆ ಶ್ರೀವತ್ಸಲಾಂಛನನೆಂಬ ಪೆಸರಾಯ್ತೆಂದುದುಂ ಕೇಳ್ದರಿಯಲಾ ‖ ೧೫ ‖

ತಾರಕಾಸುರನೊಡನೆ ಕಾದಿ ಮುರಿದೋಡಿ ಹರಿ |
ಕ್ಷೀರಾಬ್ಧಿಯಂ ಪೊಕ್ಕು ಮೆಯ್ಗರೆದು ಬದುಕಿದಂ |
ವೀರನಾ ಕಲಿಜಲಂಧರನೊಡನೆ ಕಾದಲವ ಪಿಡಿದು ನಿಡುಬೊಗರಿಯಂತೆ |
ತಾರಾಪಥಕ್ಕೆ ಹಾಯ್ಕಿದನದಿಪ್ಪತ್ತೊಂದು |
ಬಾರಿ ಮತ್ತಾ ಹರಿಯ ಪಿಡಿತಂದು ಮನೆಯೊಳಗೆ |
ಘೋರದಿಂ ಮೂರು ನಿರ್ಬುದ ವರ್ಷಪರಿಯಂತರಂ ಸೆರೆಯನಿಟ್ಟಿರ್ದನಸುರಾ || ೧೬ ||

ಹರಿಯು ನೇಮದೊಳಜಂ ಸೃಷ್ಟಿಸಲ್ ಕಾಣುತಾ |
ಕರಿಮುಖಂ ತನ್ನ ಪ್ರಾರ್ಥಿಸಿದುದಿಲ್ಲೆನುತಲಾ |
ಹರಿಯಜರ್ಗಿರದೆ ಶಾಪವನೀಯಲವರೊಬ್ಬರೊಬ್ಬರುದರವನೆ ಪೊಕ್ಕು |
ಬರಲಾರದಾ ಹರಿಯ ನಾಭಿಯಿಂದಜನುದಿಸೆ |
ಸರಸಿಜೋದ್ಭವನೆಂಬ ಪೆಸರಾಯ್ತು ಮತ್ತೆ ಕೇಳ್ |
ಹರಿಯಜನ ಗುದದಿನುದ್ಭವಿಸಲಾ ಹರಿಗಧೋಕ್ಷಜನೆಂಬ ಪೆಸರಾದುದು || ೧೭ ||

ಹರಿಯಜರ್ ಮತ್ತೆ ಮತ್ಸರದಿಂದೆ ಕಾದುತಿರ |
ಉರುಲಿಂಗಮುದಿಸೆ ಕಂಡದರ ಪದಮಸ್ತಕವ |
ಹರಿಯಜರ್ ಹಂದಿ ಹಕ್ಕಿಗಳಾಗಿ ಕಾಣಲಾರದೆ ನುತಿಸಿ ಬಳಿಕ ಶಿವನ |
ಕರುಣಮಂ ಪಡೆದು ಸುಖಮಿರುತಜಂ ಮತ್ತಹಂ |
ಕರಿಸಲಾತನ ತಲೆಯನರಿದಭವನೈತಂದು |
ಹರಿಯ ಮನೆಯಂ ಪೊಗಲ್ ನಿಲಿಸೆ ವಿಷ್ವಕ್ಸೇನನಂ ತ್ರಿಶೂಲದೊಳಿರಿಯನೆ || ೧೮ ||

ಹರನ ಬರವಂ ಕಂಡು ಹರಿ ತನ್ನ ಹಣೆಯನೆ |
ತ್ತ್ರರನಜಕಪಾಲಕಾಗಂ ದಿವ್ಯಸಾಹಸ್ರ |
ವರುಷಪರಿಯಂತರಂ ಕರೆದಾಗ ಪರಶಿವನ ಕರುಣಮಂ ತಾಂ ಪಡೆಯನೇ |
ವರಜಲಂಧರನ ಸಂಹರಿಸಿದಾ ಚಕ್ರಮಂ |
ಹರಿ ಹರನ ಕುರಿತು ತಪವಂ ಮಾಡಿ ಬಳಿಕಲಾ |
ಪರಶಿವನನೊಲಿಸಿ ತಚ್ಚಕ್ರಮಂ ಪಡೆಯನೇ ವೈಷ್ಣವನೆ ಕೇಳೆಂದನು || ೧೯ ||

ಭೂಲೋಕಮುಂ ತ್ರಿವಿಷ್ಟಪಕದೊಳ್ ವಿಷ್ಣುವುಂ |
ಪಾಲಿಪೆಲೆಯೊಳ್ ತೇಲುತ್ತುಂ ಮುಳುಗುತ್ತಿರೆ ಶಿವಂ |
ಲೀಲೆಯಿಂದಾ ಗಂಗೆಯುಂ ಮಲ್ಲಿಕಾಕುಸುಮದೊಲ್ ಧರಿಸನೇ ಜಡೆಯೊಳು ||
ಕಾಳಕೂಟಂ ಸಕಲಜಗಮನುರಿಪಲ್ ಸುರರ್ |
ಘೋಳಿಟ್ಟು ಶಿವಗೆ ಮೊರೆಯಿಡೆ ಕೇಳ್ದು ತದ್ವಿಷವ |
ನೀಲಮಣಿಯಂತಭವ ಕಂಠದೊಳ್ ತಾಳ್ದವರ ರಕ್ಷಿಸನೆ ಕೇಳ್ದರಿಯಲಾ || ೨೦ ||

ಮಾರಾರಿಯಲ್ಲೆಂದು ದಕ್ಷನತಿಗರ್ವದಿಂ |
ನಾರಾಯಣಂಗಗ್ರಪೂಜೆಯಂ ಕೊಟ್ಟಿರದೆ |
ವಾರಿಜಾಸನಮುಖ್ಯದೇವತೆಗಳಂ ನೆರೆಪಿ ಯಾಗಮಂ ಮಾಡುತಿರಲು ||
ವೀರಭದ್ರಂ ಸಕಲದಿವಿಜರಂ ಭಂಗಿಸಲ್ |
ವಾರಿಜಾಕ್ಷಂ ಕಾದಿಯೆರಳೆಯಾಗೋಡುತಿರೆ |
ಕೂರಲಗಿನಿಂದೆಚ್ಚು ಪ್ರಾಣಮಂ ಕಾಯ್ದು ತಚ್ಚರ್ಮವಂ ಪೊದೆದನರಿಯಾ || ೨೧ ||

ಸಿರಿಯ ಮುಂದಲೆಗೊಯ್ದು ವಿಧಿಯ ಪಣೆಯಂ ಪೊಯ್ದು |
ಸರಸತಿಯ ನಾಸಿಕವನರಿಸಿ ಚಂದ್ರನನೊರಸಿ |
ಸುರಪತಿಯ ತೋಳ್ಗಳಂ ಕುತ್ತಿ ಶಚಿಗಚ್ಚೊತ್ತಿ ಶಿಖಿಯ ನಾಲಗೆಯ ಸೀಳಿ ||
ವರುಣನಂ ತುಳಿದು ಪೂಷನ ಪಲ್ಗಳಂ ಕಳಿದು |
ಮರುತನೂರಂ ಕಡಿದು ಭಗನ ಕಣ್ಗಳನೊಡೆದು |
ಸುರರೊಳಗ್ಗಳಿಯರಂ ತರಿದು ಸ್ವಾಹಾಸ್ತನಂಗಳನರಿಯನೇ ವೀರನು || ೨೨ ||

ತಾರಕಾಸುರ ಜಲಂಧರನಂಧಕಾಸುರಂ |
ವೀರವಿದ್ಯುನ್ಮಾಲಿ ಕಮಲಲೋಚನನೆಸೆವ |
ತಾರಕಾಕ್ಷಂ ಗಜಾಸುರ ಸಿಂಹ ವ್ಯಾಘ್ರ ವ್ಯಾಳಾಸುರರ್ ಮುಖ್ಯರಾದ ||
ಕ್ರೂರರಕ್ಕಸರನುರೆ ಕೊಂದಾಗ ಸುರರನತಿ |
ಕಾರುಣ್ಯದಿಂ ಕಾಯ್ದು ರಕ್ಷಿಸನೆ ಕೇಳ್ ಮರುಳೆ |
ಮಾರಾರಿಯೇ ದುಷ್ಟನಿಗ್ರಹಂ ಶಿಷ್ಟಪ್ರತಿಪಾಲ[೧]ನೆಂದರಿಯಲಾ || ೨೩ ||

---

೧ ಪರಿಪಾಲನೀ (ಮ.); ಪರಿಪಾಲಕಂ (ಹು.)

ನೆಟ್ಟನಾ ಕಾಲ ಕಾಮ ತ್ರೈಪುರಂಗಳಂ |
ಸುಟ್ಟುರುಪನೆ ಹರಂ ಪಶುಪತಿಯು ಪಟ್ಟಿಸಂ |
ಕಟ್ಟಿ ಸರ್ವೇಂದ್ರಿಯಕ್ಕಕ್ಷಿ ಗಾತ್ರಸ್ಯ ಶಿರಸೆ ಪ್ರಧಾನಂಗಳೆಂದು ||
ವಿಟ್ಟುವುಂ ಬ್ರಹ್ಮನುಂ ಕಣ್ ತಲೆಗಳಂ ಶಿವಗೆ |
ಕೊಟ್ಟು ಡಿಂಗರಿಗರಾದವರನೀಶಂಗೆ ಪಡಿ |
ಗಟ್ಟುವರೆ ಕೇಳೆಲೋ ಭ್ರಷ್ಟವೈಷ್ಣವ ನಿನ್ನ ವಿಷ್ಣುವಿನ ವಿಧಿಯನಿನ್ನು || ೨೪ ||

ಗೋಪನಾ ಭೃಗುವಿನರಸಿಯ ಹತಿಸಲಾ ಮುನಿಯು |
ಕೋಪದಿಂ ದಶಯೋನಿಯೊಳ್ ಪುಟ್ಟು ಪೋಗೆಂದು |
ಶಾಪಮಂ ಕೊಡಲದಂ ಕೈಕೊಳುತ್ತಾ ವಿಷ್ಣು ಶರಧಿಯೊಳ್ ಪೊಕ್ಕು ಮತ್ಸ್ಯ ||
ರೂಪಿನಿಂ ಸೋಮನಂ[2] ಕೊಂದಹಂಕರಿಸಲಗ |
ಜಾಶಿಪನಾ ಮತ್ಸ್ಯಮಂ ಕೊಂದು ನೆಟ್ಟೆಲುವನುರೆ |
ತಾ ಪಿಡಿಯೆ ವಿಷ್ಣುಕಂಕಾಳಧರನೆಂಬ ಪೆಸರುಂಟದಂ ನೀನರಿಯಲಾ || ೨೫ ||

ಶರಧಿಯಂ ಮಥಿಸಲದಕಾಧಾರಮಾಗಿಯಾ |
ಹರಿ ಕಮಠರೂಪಿನಿಂ ತಾಳ್ದಿರ್ದು ಬಳಿಕಹಂ |
ಕರಿಸಲಾ ಕಮಠನಂ ಕೊಂದದರ ತಲೆಯನುರುಹಾರದೊಳ್ ಶಿವ ಧರಿಸನೆ ||
ಧರಣಿಯಂ ಕದ್ದು ಕೊಂಡೊಯ್ದು ಕನಕಾಕ್ಷನಂ |
ಹರಿ ಹಂದಿಯಾಗಿ ತದ್ದನುಜನಂ ಹತಿಸಿ ತಾ |
ನಿರದಹಂಕರಿಸಲಾ ಕ್ರೋಡನಂ ಕೊಂದದರ ಕೋರೆಯಂ ಹರ ಪಿಡಿಯನೇ || ೨೬ ||

ಹರಿ ಹರಿಯರೂಪಿನಿಂ ಖಳಹಿರಣ್ಯಕಶಿಪುವ |
ನಿರದೆ ಸಂಹರಿಸಿ ನೆತ್ತರ್ಗುಡಿದಹಂಕರಿಸೆ |
ಶರಭಾವತಾರದಿಂದಾ ಹರಿಯ ಹರಿಸಿ ತಚ್ಚರ್ಮಮಂ ಶಿವ ಪೊದೆಯನೆ ||
ಹರಿ ಸುರಪನನುಜನಾಗುದಿಸಿ ಬಂದಾ ಬಲಿಯ |
ನಿರದೆ ಬಂಧಿಸಿ ತ್ರಿವಿಕ್ರಮರೂಪಿನಿಂ ಬಳೆಯೆ |
ಹರನವನ ಸಂಹರಿಸಿ ಬೆನ್ನ ನಿಟ್ಟೆಲುವ ಖಟ್ವಾಂಗಮಂ ಮಾಡಿಕೊಳನೆ || ೨೭ ||

೧ ಬಂದುಪಟ್ಟ (ಹು.) ೨ ಸೋಮುಖನ (ಶಿ, ಗೋ, ಹು, ದಾ.) ೩ ಜಾ (ಶಿ.)

ಪ್ರೇಮದಿಂ ಜಮದಗ್ನಿಯರಸಿಯುದರದೆ ಪರಶು
ರಾಮವೆಸರಿಂ ಮೊಗೆದು ಕ್ಷತ್ರಿಯರ ಹತಿಸಿ ರಘು |
ರಾಮನೊಡನಿರದೆ ವಾದವ ಮಾಡಿ ಸೋಲ್ತು ಶಕ್ತಿಯ ನೀಗಿ ದುಃಖದಿಂದೆ ||
ಭೂಮಿಯಂ ಭೂಸುರರ್ಗಿತ್ತು ಶಿವಲಿಂಗವಂ |
ರಾಮೇಶನೆಂದು ಪೂಜಿಸಿ ತನ್ನ ಭವವ ನಿ |
ರ್ನಾಮಮಂ ಮಾಡಿ ತಪಿಸುತ್ತಿರ್ಪ ಕಥೆಯ ನೀನೆಂದುವುಂ ಕೇಳ್ದರಿಯಲಾ || ೧೮ ||

ರಾಮವೆಸರಿಂದೆ ದಶರಥನರಸಿಗುದಿಸಿ ತಾಂ |
ಭೂಮಿಸುತೆಯಂ ಮದುವೆಯಾಗಿ ವನವಾಸದೊಳ್ |
ಕಾಮಿನಿಯ ನೀಗಾಡಿಕೊಂಡು ರಾವಣನಿಂದೆ ನೊಂದು ತಾನವನ ಕೊಂದು ||
ಪ್ರೇಮದಿಂ ಸೀತೆಯಂ ತಂದು ಸುತರಿಂದೆ ಸಂ |
ಗ್ರಾಮದಿಂದಳಿದು ಮುನಿಯಿಂ ಮರಳಿ ಬದುಕಿ ಬಂ |
ದಾ ಮಹಾದುಃಖದಿಂ ಶರಧಿಯೊಳ್ ಬಿದ್ದಳಿದ ಕಥೆಯ ನೀಂ ಕೇಳ್ದರಿಯಲಾ
|| ೧೯ ||

ವಸುದೇವದೇವಕಿಗೆ ಜನಿಸಿ ಕೃಷ್ಣಂ ಸಜೀ |
ವಿಸಿದನಾ ಗೊಲ್ಲರಲ್ಲುಂಡುಟ್ಟು ಬೆಳೆದು ಪಾಲ್ |
ಮೊಸರು ಬೆಣ್ಣೆಯ ಕದ್ದು ಮೆಲ್ದು[1] ಗೋವಂ ಕಾಯ್ದು ಗೋಪಾಂಗನೆಯರ ಕೂಡೆ ||
ನಸೆಮಾಡಿ ಹಾದರಕೆ ಹೊಕ್ಕು ಜಾರತ್ವದೊಂ |
ದೆಸಕದಿಂ ಬಾಳ್ದು ದಿಂಡೆಯತನದೆ ಕೆಲವು ರ |
ಕ್ಕಸರನುರೆ ಕೊಂದು ಕೆಲಬರ ಕೆಯ್ಯ ನೊಂದೋಡಿ ಬದುಕನೇ ಕೇಳೆಂದನು
|| ೨೦ ||

ಘಾಸಿಯಾದಂ ಜರಾಸಂಧನಿಂದಂ ಪೀತ |
ವಾಸನಂದೆಂಬತ್ತುನಾಲ್ಕು ದುರ್ಗವ ಬಿಟ್ಟು |
ವಾಸವಂ ಮಾಡಿಕೊಂಡಿರನೆ ಸಾಗರಮಧ್ಯದಲ್ಲ ಕಡುಭೀತಿಯಿಂದೆ ||
ದಾಸಿಯಾತ್ಮಜನ ಮನೆಯೊಳಗುಂಡನೆಂದಧಿಕ |
ಮೋಸದಿಂ ಕೌರವೇಶ್ವರ ಕಟ್ಟಿಹಾಯ್ಕಿಸನೆ |
ದಾಸತ್ವದಿಂದರ್ಜುನನ ಬಂಡಿಯ ಬೋವನಾದುದಂ ಕೇಳ್ದರಿಯಲಾ || ೨೧ ||

೧ ತಿಂದು (ಹು, ದಾ, ಮ.)

ಪರಮೇಶನಂ ಕೂರ್ತು ಕೃಷ್ಣ ತಪವಂ ಮಾಡಿ |
ಮರಳಿ ಮನ್ಮಥನ ಪಡೆಯುನೆ ಸಹಸ್ರಾಂಬುಜದಿ |
ಹರನ ಚರಣವನರ್ಚಿಸಲ್ಕೊಂದು ಕುಂದೆ ಬಲಗಣ್ಣ ತಾಂ ತೆಗೆದೇರಿಸಿ ||
ಹರನೊಲವಿನಿಂ ಮರಳಿ ಚಕ್ರಮಂ ಪಡೆಯನೇ
ಮರುಳೆ ಕೇಳಾ ಕೃಷ್ಣನಳಿಯೆ ಹದಿನಾರುಸಾ |
ಸಿರಮಂದಿ ಸತಿಯರುಂ ಸರ್ವರುಂ ನೋಡುತಿರೆ ಹೊಲೆಬೇಡರೆಳೆದೊಯ್ಯರೆ || ೩೨ ||

ಹರಿ ಮತ್ಸ್ಯ ಕೂರ್ಮ ಕಿಟಿ ಸಿಂಹ ವಾಮನರೂಪ |
ಧರಿಸಹಂಕರಿಸಲವನೀಶ್ವರಂ ಕೂಡೆ ಸಂ |
ಹರಿಸಿದನೆನಲ್ ನಿನಗೆ ನೋವಾಯ್ತೆ ಹುಲುಬೇಡನೆಸೆಯೆ ನಿನ್ನಯ ಕೃಷ್ಣನು |
ಮರಣವಾಗನೆ ಬಳಿಕ್ಕಾ ಹೆಣನ ಸುಡಲಾಗ |
ಲರೆಬೆಂದು ಕೈಕಾಲ್ಗಳುಡಿದು ಮೋಟಾಗಲದ |
ಸಿರಪಾ ಜಗನ್ನಾಥನೆಂದು ಪೂಜಿಸುವರಿದು ಲೋಕದೃಷ್ಟಾಂತವಿದೆಲಾ || ೩೩ ||

ಇನ್ನು ಕೇಳ್ ಬುದ್ಧಕಲ್ಕ್ಯವತಾರಂಗಳಿಂ |
ನಿನ್ನ ಹರಿ ಜನಿಸೆ ಕೆಲದಿನದ ಮೇಲಳಿವನಿದು |
ನನ್ನಿ ಕೇಳೀ ತೆರದೆ ಸತ್ತು ಹುಟ್ಟುತ್ತೆ ಬಹು ಭಂಗಿಯಾಪಾ ಹರಿಯನು |
ಸನ್ನುತಮಹಾಮಹಿಮ ಪರಶಿವ ಪರಂಜ್ಯೋತಿ |
ಯುನ್ನತ ಮಹಾದೇವ ಶಂಕರಂ ಶಶಿಧರಂ |
ಪನ್ನಗಾಭರಣ ಪರಮೇಶೇಶನಭವಂಗೆ ಸರಿಯೆಂದು ನುಡಿಯಬಹುದೇ || ೩೪ ||

ಹರಿ ಹತ್ತು ಜನ್ಮದೊಳ್ ಬಂದಾ ಶರೀರದಿಂ |
ದಿರದೆ ಲಿಂಗಂಗಳಂ ಭಜಿಸಿ ಪಾಪಂಗಳಂ |
ಪರಿಹರಿಸಿಕೊಂಡನಿದಕಿಳೆಯೊಳಗೆ ರಾಮೇಶಲಿಂಗಂಗಳಿವೆಕೊ ಸಾಕ್ಷಿ |
ಪರಮಕಾಶಿಯೊಳೆ ಹರಿಮುಖ್ಯದೇವಾಸುರರ್ |
ನಿರುತದಿಂ ತಂತಮ್ಮ ಪೆಸರಿಂದೆ ಪೂಜಿಸುವ |
ಪರಮಹಾಲಿಂಗಂಗಳಿವೆ ಲೋಕದೃಷ್ಟವೆಲೆ ವೈಷ್ಣವಂ ಕೇಳೆಂದನು || ೩೫ ||

ಹರಿಯಜೇಂದ್ರಾರ್ಕ ಶಶಿ ವಸು ದಿಶಾಧೀಶ ಕಿ |
ನ್ನರ ಯಕ್ಷ ರಾಕ್ಷಸ ಪಿಶಾಚ ಗುಹ್ಯಕ ಸಿದ್ಧ |
ಗರುಡ ಗಂಧರ್ವ ವಿದ್ಯಾಧರರ್ ಕಿಂಪುರುಷರುರಗ ಮನು ಮುನಿಮುಖ್ಯರು ||
ಪರಮಶಿವಲಿಂಗಂಗಳಂ ಧರಿಸಿ ತಂತಮ್ಮ |
ಮರಣಂಗಳಂ ನೀಗಿಯಮರರೆಂದೆನಿಸಿದರ್ |
ಮರುಳೆ ನೀಂ ಕೇಳೆನಲ್ ನಸುನಗುತ್ತಾ ಕಪಟವೈಷ್ಣವನದಿಂತೆಂದನು || ೩೬ ||

ಹರನಲ್ಲದಿಲ್ಲೆಂದು ನುಡಿವುದಿದು ಸತ್ಯವೇ |
ಹರಿಯಲ್ಲದಿಲ್ಲೆಂದು ಭಾಳದೊಳಗಕ್ಷಿಯನ |
ದಿರದೆ ತೋರುವೆನೆನಲ್ ತೋರೆನಲ್ ಕಪಟವೈಷ್ಣವನಾಗ ತೋರೆ ಮುನಿಪ ||
ಹರನಲ್ಲದಿಲ್ಲೆಂದು ಪಾದದೊಳಗಕ್ಷಿಯಂ |
ಮರುಳೆ ವೈಷ್ಣವ ನೋಡೆನುತ್ತೆ ತಾಂ ತೋರಲತಿ |
ಕರುಣದಿಂ ಮುನಿವರನ ನಿಷ್ಠೆಯಂ ಹರಿಯಜಾದ್ಯರಿಗಭವ ತೋರಿಸಿದನು || ೩೭ ||

ಮೆಚ್ಚಿದಂ ಮುನಿವರನ ಶೈವಭಕ್ತಿಗೆ ಶಿವಂ |
ಮುಚ್ಚಿದಂ ಕೃತಕವೇಷವನಾತನಿದಿರಿನೊಳ್ |
ಪೊಚ್ಚಿದಂ ನಿಜಚಿಹ್ನಮಂ ಹರಂ ರೋಮಾಂಚನದ ಸುಗ್ಗಿ ತಲೆದೋರಲು ||
ಪೆಚ್ಚಿದಂ ವಿಲಸಿತಾನಂದಾಶ್ರುವಾರಿಯಂ |
ಕಚ್ಚಿದಂ[1] ಕಾಯಮಂ ಪಾರ್ವತಿಗೆ ದೇಹಮಂ |
ಪಚ್ಚಿ ಕೊಟ್ಟಭವ ಸರ್ವಾಪರಾಧಂಗಳಂ ಕ್ಷಮಿಸೆಂದು ನುತಿಯಿಸಿದನು || ೩೮ ||

ಅಕಟ ನೀನೆಂದ ನುಡಿಯೆನಗೆ ಮಿಥ್ಯವೆ ಮಗನೆ |
ಚಕಿತನಾಗದಿರು ನಿನ್ನಿಷ್ಟವೇನೆಂದು ಮ |
ಸ್ತಕವನೆತ್ತಲ್ ಬಿತ್ತಿದಾ ಕ್ಷಣಂ ಸಕಲಧಾನ್ಯಂಗಳುಂ ಬೆಳೆವುದೆನಲು ||
ಅಕುಟಿಲಂಗಾ ವರವನಿತ್ತು ಮನ್ನಿಸಿ ಪ್ರಿಯಂ |
ಒಕಸ್ಥೈವಿದಂ ರಜತಗಿರಿಗೊಮ್ಮೆ ರೋಹಿಣೀ |
ಶಕಟಮಂ ಶನಿ ಭೇದಿಸಲ್ಕಾಗ ಪನ್ನೆರಡುವರುಷಂ ವರುಷಮುಡುಗಿತು || ೩೯ ||

---

೧ ಜ (ಹು, ದಾ, ನು. | ೨-೨ [illegible] | ಕಚ್ಚಿದರ್ (ಹು.) ೩-೩ ಬೆಳೆವೊಲೀ (ಹು, ದಾ, ನು.)

ಉದಯದೊಳ್ ನೋಡೆ ಮಂಜಿನ ಮಳೆ ಧರಿತ್ರಿಯಂ |
ಪುದಿದಿಹುದು ಮಧ್ಯಾಹ್ನದೊಳ್ ಘನಾಡಂಬರಂ |
ಬಿದರಿಸುವುದಾಗಸಂ ರಾತ್ರಿಯೊಳ್ ಸಿರ್ವುಲಿಸವುಹುದಿಂತು ದಿನದಿನದೊಳು |
ಉದಿರ್ವೆಲೆಗಳೊಡನೆ ನಾನಾವೃಕ್ಷರಾಜಿಯೊಣ |
ಗಿದುದು ಕೆರೆ ತೊರೆ ಪಳ್ಳ ಕೊಳ್ಳ ಕೊಳ ಬಾವಿ ಬೆ |
ಟ್ಟದ ಪೊನಲ್ಗಳ್ ನದಿ ನದಾಳಿ ಜಲರಾಶಿಗಳ್ ಪುಡಿವಟ್ಟುದೇಂ ಪೇಳ್ವೆನು ॥ ೪೦ ॥

ಇಂತು ಬರನೆಲ್ಲೆಡೆಯೊಳುಂ ಪುದಿಯೆ ಕಂಡು ವಿ |
ಭ್ರಾಂತರೆಂಬತ್ತೆಂಟುಸಾವಿರ ಮುನೀಶ್ವರರ್ |
ಕಂತುಹರನಿಂ ಗೌತಮಂ ಪಡೆದ ವರವರಿದು ದಾರುವನದಿಂ ತಳರ್ದು |
ತಾಂ ತಡೆಯದೀತನಾಶ್ರಮಕೆ ಬರೆ ಕಂಡು ಮುನಿ |
ಸಂತಸದೊಳನ್ನಪಾನಂಗಳಿಂ ಸತ್ಕರಿಸೆ |
ತಂತಮ್ಮ ದೇಶಂ ಸುಭಿಕ್ಷವಾದುವು ಪೋಪೆವೇಳೆಂದು ಯೋಚಿಸಿದರು ॥ ೪೧ ॥

ಕೇಳಿದಂ ಶಾಂಡಿಲ್ಯನವರ ನುಡಿಯಂ ಮುನಿಗೆ |
ಪೇಳದೇಂ ಪೋಪುದುಚಿತವೆಯನ್ನದಾನದಿಂ |
ಮೇಲಾದ ದಾನಮುಂಟೇ ಬರದೊಳೆಮ್ಮನೆಲ್ಲರನು ರಕ್ಷಿಸಿದನಿನ್ನು ॥
ಪೇಳಿದಪೆನನ್ನದಾನದ ಕಥೆಯ ಗುಣನಿಧಿನೃ |
ಪಾಲನೆಂಬಂ ಬೇಂಟೆಯಂ ಪೋಗಿ ಸಕಲಮೃಗ |
ಜಾಲಮಂ ಕೊಲಿಸುತಿರೆ ಪೊದರಿಂದಮೊಂದು ಸಿಂಹಂ ಪಾಯ್ದುದವನ ಮುಂದೆ
॥ ೪೨ ॥

ಬೆನ್ನಟ್ಟಿದಂ ಹರಿಯನತಿಜವದ ವಾರುವನ |
ಬೆನ್ನೊಳಿರ್ದವನಿಪಂ ಸಿಂಹಮಂ ಪೊಯ್ವೆನೆಂ |
ಬನ್ನಮದು ಪೂರ್ವಶಾಪದೆ ಮಾಯವಾಗಲರಸಂ ವಾಜಿಯಿಂದಿಳಿಯಲು ॥
ತನ್ನವ್ಯವಾಜಿಯುಂ ಬಯಲಾಗಿ ಪೋಗಲರ |
ಸನ್ನೋಡಿ ನೋಡಿ ವಿಸ್ಮಿತನಾಗಿ ಬಳಿಕ ತನ |
ಗನ್ನವಿಲ್ಲದೆ ಬಳಲಿ ಕಣ್ಗೆಡುವ ನೃಪತಿಯಂ ಶಬರನೊರ್ವಂ ಕಂಡನು ॥ ೪೩ ॥

---

೧ ದಿ (ಶಿ. ಗೋ.)

ಬಳಲಿದೈ ಭೂಪ ನಡೆ ನಿನಗೆ ನಾಂ ಭುಕ್ತಿಯಂ |
ಸಲಿಸುವೆನೆನುತ್ತೆ ಗುಡಿಲಿಂಗೆ ಕರೆತಂದು ಬಾ |
ಗಿಲಿಗೆ ಮುನ್ನಾಂ ತಂದ ಬಿದರಕ್ಕಿಜೇನುಮಂ ಭೂಪಂಗೆ ನೀಡೆನಲ್ಕೆ ||
ಬಳಿಕಲಾ ಶಬರಿಯಡಿಗೆಯು ಮಾಡಿ ನೀಡಿ ಮನ |
ಮೊಲಿದು ಮಂಚಿಗೆಗೆ ಮಲಗಲ್ಕೆ ಭೂಪಾಲನಂ |
ಕಳುಪಿ ಕೆಳಗಿರ್ದರುಮುಪಾಸಮೊರಗಿರಲೊಂದು ಪುಲಿ ಕೊಂದು ತಿಂದುದವರ || ೪೪ ||

ಬೆಳಗಾದುದನಿತರೊಳಗವನಿಪಂ ಮಂಚಿಗೆಯ |
ನಿಳಿದು ಮಡಿದಿಹ ವಧೂವರರನೀಕ್ಷಿಸಿ ಮನದೊ |
ಳಳಲಿ ಶೇಷಾಂಗಮಂ ಸಂಸ್ಕರಿಸಿ ಮರಳೆ ನೆರೆದುದು ಸೇನೆ ನೃಪನ ಕೂಡೆ
ಪೊಳಲಿಗೈತಂದು ಮಜ್ಜನಭೋಜನಂಗಳಿಂ |
ಬಳಲಿಕೆಯನಾರಿಸಿ ನೃಪಂ ಕೆಲವು ಕಾಲಮಂ |
ಕಳಿಪುತೊಂದಿವಸಮೋಲಗದೊಳ್ ಪುರೋಹಿತಂಗವನೀಶನಿಂತೆಂದನು || ೪೫ ||

ಧರೆಯೊಳ್ ಪ್ರಸಿದ್ಧವೀರೆಂಟು ದಾನಂಗಳಿಂ |
ದಿರದವಱೊಳತಿಮುಖ್ಯದಾನಮಾವುದು ತನ್ನೊ |
ಳೊರೆಯೆನಲ್ಕನ್ನದಾನವೆ ಮುಖ್ಯಮದಕೊಂದು ಕಥೆಯುಂಟದಂ ಪೇಳ್ವೆನು |
ಪುರಮುಂಟು ಗಂಗಾವತೀನಾಮಮೊಂದದಱೊ |
ಳಿರುತಿರ್ದನೊರ್ವ ಪಾರ್ವಂ ಪ್ರತಿದಿನಂ ಬಿಡದೆ |
ಕರೆದುಣ್ಬ ವೇಳೆಯೊಳಗನ್ನಪಾನಂಗಳಿಂ ವಿಪ್ರರಂ ಪೋಷಿಸುವನು || ೪೬ ||

ಒಂದಿನಂ ವೃದ್ಧಚಂಡಾಲನಾ ಪಟ್ಟಣಕೆ |
ತಂದು ಕಟ್ಟಿಗೆಯ ಪೊರೆಯಂ ಮಾರುತಿರೆ ಮಳೆಯೊ |
ಳಂದು ತೊಪ್ಪನೆ ತೊಯ್ದನಂತಭಟ್ಟನ ಗೃಹಬಹಿದ್ವಾರವೇದಿಕೆಯೊಳು ||
ಇಂಧನದ ಪೊರೆಯನೊರಗಿಸಿ ಮಹಾಶೀತಭಯ |
ದಿಂದೆ ಪಲ್ಗಿಟಕಿರಿದು ನರಗಳೆಲ್ಲಂ ಸೇದಿ |
ನೊಂದು ಕಡುಹಸಿವಿನಿಂ ಬಾಡಳಿದು ತದ್ವೇದಿಕಾಗ್ರದೊಳಗಿರುತಿರ್ದನು || ೪೭ ||

೧ ಭ (ಹ.) ೨ ಸತ್ಕ (ಹ.) ೩ ದಿಮವದ (ಮ.) ೪ ನೊಂ (ಮ.) ೫-೫ ಸ್ವರ್ಗ
೪೦ ಬಂದ (ಮ.)

ಆ ಸಮಯದೊಳಗೀಯನಂತಭಟ್ಟಂ ನಿಜನಿ |
ವಾಸದೊಳ್ ಭುಂಜಿಸುವುದಕ್ಕೆಂದಿನಂತೆ ಪರ |
ದೇಸಿಗಳ್ ಪಸಿದವರ್ಗಳಿರ್ದಪರೊ ನೋಡಬೇಕೆಂದು ಬಾಗಿಲ್ಗೆ ಬಂದು ||
ಘಾಸಿಯಾದಂಗಸಂಕೋಚನದ ಪೊಲೆಯನಂ |
ಲೇಸಾಗಿ ನೋಡಿ ನೀನಾರೆಂದು ಬೆಸಗೊಂಡು |
ಭೂಸುರೋತ್ತಮನವನೊಳುತ್ತರಂ ಬಾರದಿರೆ ಮಗುಳೆ ನೀನಾರೆಂದನು || ೪೮ ||

ಅವಧರಿಸು ಜೀಯ ಚಂಡಾಲ ತಾನೀಪುರಕೆ |
ತವೆ ತಂದೆನಿಂಧನದ ಪೊರೆಯನದು ಮಾರಿದಿ |
ಲ್ಲವಿರಳಮಹಾವೃಷ್ಟಿಯಿಂ ನನೆದು ಸೇಡುಗೊಂಡೆಂ ನಡೆದುಪೋಗಲಾರೆ ||
ತವೆ ಗೃಹದ್ವಾರಕತಿದೂರದೊಳಗಿರ್ಪೆ ನಾ |
ನವಗಡಿಸಬೇಡೆನ್ನನೆಂದು ದೈನ್ಯಂಗೆಯ್ಯೆ |
ಲವನೀಸುರೋತ್ತಮಂ ಕಾರುಣ್ಯದೃಷ್ಟಿಯಿಂ ನೋಡಿ ಮಗುಳಿಂತೆಂದನು || ೪೯ ||

ಚಂಡಾಲನಾದೊಡೇನಾಯ್ತುಂಜದಿರ್ ನಿನ್ನ |
ದಂಡಿಸುವರಲ್ಲ ನಿನ್ನಯ ಕಾಷ್ಠಭಾರಮಂ |
ಕೊಂಡಪೆವದಕ್ಕೆ ಕ್ರಯವೇನೆನಲ್ ಪಣಚತುರ್ಥಾಂಶಮೆನೆ [1]ಕೊಟ್ಟು ಬಳಿಕ[1] ||
ಕೆಂಡಮಂ ತರಿಸಿಕೊಟ್ಟೀ ಕಾಷ್ಠದಿಂ ಕಾಸಿ |
ಕೊಂಡು ಶೀತಮನಡಂಗಿಸಿಕೊಳ್ಳೆನಲ್ಕವಂ |
ಕಂಡೆ[2]ನಚ್ಚರಿಯನೀತನೊಳೆನುತೆ[2] ಸರ್ವಾಂಗಮಂ ಕಾಸಿದಂ ಶಿಖಿಯೊಳು || ೫೦ ||

ತನುವನಾವರಿಸಿದ ಮಹಾಶೀತಮಡಗಲ್ಕೆ |
ಘನಮಾದುದೀತಂಗೆ ಪಸಿವಿರದನಂತಭ |
ಟ್ಟನನಯ್ಯ ಪಸಿದು ಕಣ್ಗೆಟ್ಟೆನೆನೆ ಕರುಣದಿಂ ಕೂಗಬೇಡೆಂದು ನಿಲಿಸಿ |
ಮನೆಗೆ ಬಂದೊಂದು ಪೊಸಬಗರಿಗೆಯೊಳನ್ನಮಂ |
ವಿನುತಸೂಪಾದಿಶಾಖಂಗಳಂ ಘೃತಮನು |
ಪ್ಪಿನ ಕಾಯ್ಗಳಂ ಬೇರೆ ಬೇರಿರಿಸಿ ತಂದದಂ ಪೊಲೆಯಂಗೆ ನೀಡಿಸಿದನು || ೫೧ ||

೧-೧ ತರಿಸಿಕೊಟ್ಟು (ಮ.) ೨-೨ ನೀತನೊಳಚ್ಚರಿಯನೆಂದು (ಮ.)

ಬಂದು ವಣಿದಿಂ ಘನಸಕ್ತಿಯುವನುಳಿದನ್ನಮಂ |
ಸೆಂಪತಿಗೆ ತಂದಿತ್ತು ಪೊರೆಯುಸಿ ವಿಪ್ರನಂ |
ಕೊಂಡಾಡುತಿರಲತ್ತಲಿತ್ತ ಗಂಗಾವತಿಗೆ ಯೋಜನಾಂತರದೆಡೆಯೊಳು ||
ಮಂಡಲೇಶ್ವರ ಕೇಳ್ ಜಯಂತಿಪುರವುಂಟಲ್ಲಿ |
ಚಂಡತರಬ್ರಹ್ಮರಾಕ್ಷಸನೊಂದು ಬಂದು ಮೆ |
ಯ್ಯಾಂಡಿಹುದು ತತ್ಪುರದ ಸರ್ವಜ್ಞನೆಂಬ ವಿಪ್ರಾತ್ಮಜನನನುದಿನದೊಳು || ೫೨ ||

ಆವಾವ ಮಂತ್ರತಂತ್ರಂಗಳಿಂ ಪೋಗದಿ |
ರ್ಪ್ಪ ವರ್ತಮಾನವನನಂತಭಟ್ಟಂ ಕೇಳ್ದು |
ನಾವಾತನಂ ನೋಡಬೇಕೆಂದು ಸರ್ವಜ್ಞನಾಲಯಂಬೊಕ್ಕು ಬರಲು ||
ಆ ವಿಪ್ರಸುತನ ಮೇಲಿಹ ಭೂತಮತುಳಸ |
ದ್ಭಾವದಿಂ ಕೈಮುಗಿಯೆ ಕೇಳಿದಂ ಮುನ್ನ ನೀ |
ನಾವನೈಯೆನಗೆ ಕೈಮುಗಿದ ಹದನೇನೆನಲ್ಕಾ ಭೂತಮಿಂತೆಂದುದು || ೫೩ ||

ಆದೊಡಾಲಿಸು ಪೂರ್ವಭವದೊಳಾವಿರ್ವರೊಡ |
ನೋದಿದೆವು ವಿದ್ಯೆಯುಂ ತನಗಿಂದಮೆನಗಧಿಕ |
ವಾದುದೀತಂ ತಾಳದೆನ್ನ ಮಂಡೆಯ ಮೇಲೆ ಕಲ್ಲನುರೆ ಹಾಯ್ಕಿ ಕೊಂದಂ ||
ಈ ದುರಾತ್ಮನನೀಗ ಕೊಲ್ವೆನಾನೆಂದು ನೀ |
ನಾದರದೆ ಪೊರೆಯುಗಿತ್ತನ್ನದಾನವನೀಯೆ |
ಪೋದಪೆಂ ತಾನೆನಲ್ ಕೇಳ್ದು ಕೌತುಕದೆ ಸರ್ವಜ್ಞನಂದಿಂತೆಂದನು || ೫೪ ||

ಹಿಂತೀರ್ವ ಪೊರೆಯುಂಗೆ ನೀಡಿದನ್ನದ ಮಹಿಮೆ |
ಯಿಂತಾದುದೆಮ್ಮ ಬ್ರಾಹ್ಮಣಕುಟುಂಬವನೋವ |
ಲೆಂತಹುದೊ ನಿನಗೆ ಸದ್ಧರ್ಮಮೇಲೆ ಭೂಸುರೋತ್ತಮ ಪಾಲಿಸೈ ನಮ್ಮನು ||
ಇಂತೆಂದು ಸರ್ವಜ್ಞನೆಂಬ ವಿಪ್ರಂ ತನ್ನ |
ಕಾಂತೆವೆರಸೆಯ್ದಿ ಅನಂತನ ಪದಕೆ ನಮಿಸಲ್ಕೆ |
ಸಂತೈಸಿ ಪೊರೆಯುಗಿತ್ತನ್ನದಾನಮನುದಕದಿಂದೆ ಧಾರೆಯನೆರೆದನು || ೫೫ ||

೧ ಮ್ಮ (ಶಿ, ಗೋ, ಹು, ದಾ, ಮ.) ೨-೨ ಬನಂತನಾ (ಮ.)

ಪಿಂಗಿತು ಪಿಶಾಚತ್ವಮಾತಂಗೆ ನೆರೆದ ದೇ |
ವಾಂಗನೆಯರೋಳಿಯಿಂ ಮಣಿಮಯವರೂಥದೊಳ್ |
ಪೊಂಗುತಾತಂ ಪೋದನಾ ವಿಪ್ರನಂದನಂ ಜೀವಿಸಿದನಿತ್ತನಿಂದೆ ||
ತುಂಗವಿಕ್ರಮ ಪೇಳಲೇನನ್ನದಾನದು |
ತ್ತುಂಗತೆಯನಿಂತೆನಲ್ ಭೂವರಂ ಕನಲಿ ದೃ |
ಷ್ಟಂಗಳಂ ತೋರ್ ಬರಿದೆ ಗಳಹಬೇಡೆಂದೆನಲ್ ಭೂಮಿಸುರನಿಂತೆಂದನು || ೫೬ ||

ನಾಳೆ ನಿನಗೀ ದೃಷ್ಟವಂ ಸರ್ವಥಾ ತಂದು |
ಪೇಳದಿರ್ದರೆನಾನೆನಲ್ ಪೋಗೆನಲ್ ಬಂದು ತ |
ನ್ನಾಲಯದೊಳತುಳಚಿಂತಾಭಾರದಿಂ ಮಲಗೆ ಸ್ವಪ್ನದೊಳಗೀಶನೈದಿ ||
ಪೇಳಿದಂ ನಿಮ್ಮ ರಾಯಂಗೆಂಟು ದಿನಕೊರ್ವ |
ಬಾಲನುದಿಸುವನಾತನುಸಿರುವನೆನಲ್ಕದಱು |
ಕಾಲದೊಳಗರಮನೆಗೆ ಬಂದು ಭೂಪಾಲನೊಡನೀ ವಿಪ್ರನಿಂತೆಂದನು || ೫೭ ||

ಅರಸ ಕೇಳಿಂದಿಗೆಂಟೀ ದಿನಕೆ ನೋಡು ನಿ |
ನ್ನರಸಿಯುದರದೊಳೊರ್ವ ಸುಕುಮಾರಕಂ ಜನಿಪ |
ನೊರೆದಪಂ ನಿನಗನ್ನದಾನಫಲಮಂ ನಿನ್ನ ಕುವರನೆನೆ ಭೂಪಾಲನು ||
ಶಿರವನೊಲೆದೊಲೆದು ತನ್ನಯ ಪಟ್ಟದರಸಿಯೊಳ್ |
ತರುಣನುದಿಸುವದೊಂದು ಮೇಣೆಂಟು ದಿನಕೆಂಬು |
ದೆರಡಾದ ಸಂಶಯಂ ಪೋಪುದೀ ಮೂರರಿಂದಿದಂ ನೃಪಂ ಹರುಷಿಸಿದನು || ೫೮ ||

ನುಡಿದ ಕಾಲಂ ಬಂದುದನಿತರೊಳ್ ಬೇಗದಿಂ |
ಪಡೆದಳರಸನ ರಾಣಿ ನವಮಾಸ ತುಂಬಲಾ |
ಪೊಡವಿಪಂ ತನ್ನಯ ಪುರೋಹಿತಂ ಬೆರಸಿ ನಿಂದಿರೆ ಕಂಡು ಸುಕುಮಾರನು ||
ನುಡಿವುದೆನ್ನೈಯನ್ನದಾನಮಂ ನಿನಗೊಂದು |
ಪಡಿ ಬಿದಿರ ತಂಡುಲಮನಿಕ್ಕಿದ ಮಹತ್ತ್ವದಿಂ |
ಪೊಡವೀಶ ನಿನ್ನುದರದೊಳ್ ಬಂದೆ ನಾನೆಂದು ಶಿಶು ಮೌನಮಂ ತಾಳ್ದುದು || ೫೯ ||

೧-೧ ಲಾಜ್ಞೆಯಂ ಮಾಡೆ (ಮ.) ೨ ಜನಿಸುವ (ಶಿ.) ೩-೩ ನೃಪತಿ ಸಂತೋ (ಹು.)

ಅನ್ನದಾನವ ಮಹಿಮೆಯಿಂತಿನಿತು ಮುಂದಿಯುಂ |
ಮನ್ನಿಸಿದನೀ ಗೌತಮಂ ಮಹಾಕ್ಷಾ೧ಮದೊಳ |
ಗಿನ್ನಿಸದಾಂ ಪೋಪೆವೆಂತೆನಲ್ ಪೇಳಿ ಪೋ ನೀನೆ೨ನಲ್ ಕೆಲರದರೊಳು ||
ಗನ್ನಗತಕದೊಳೊಂದು ಗೋವನೊಡರಿಚಿ ಗೌತ |
ಮನ್ನದೆವ ಬಳಿಯು ಬೆಳೆಯೊಳ್ ನಿಲಿಸೆ ಕಂಡು ಮುನಿ |
ಸನ್ನುತಗೋವಿದೆಲ್ಲಿಯದೆನುತೆ ನೈದಡವೆ ಬಿದ್ದು ಗೋವಸುದೊರೆದುದು || ೬೦ ||

ಬೆಳೆಯ ತಿನ್ನದೆ ಸಮೀಪದೊಳಿರ್ದ ಗೋವನಿಂ |
ತಳಿವನೀತನ ಮನೆಯೊಳನ್ನದಾನವನೆಂತು |
ಕೊಳಲಕ್ಕುಮೆಂದೆನುತಿವರ್ ಪೋಗೆ ಗೌತಮಂ ಕಾಲ್ವಿಡಿದು ಬೇಡಿಕೊಂಡು ||
ತಿಳಿಪಿ ನಿಷ್ಕೃತಿಯಾವುದಿದಕೆನಲ್ ಶಂಕರಂ |
ತಳೆದ ಮಸ್ತಕದ ಗಂಗೆಯ ತಂದು ಗೋವಳಿದ |
ಬಳಿಯೊಳ್ಳೈದಿಸೆ ಪೋಪುದೆನೆ ಗೌತಮಂ ತಪದೊಳೀಶನಂ ಮೆಚ್ಚಿಸಿದನು || ೬೧ ||

ಮುನಿ ನಿನಗೆ ಬೇಳ್ಪುದೇನೆನೆ ಮಸ್ತಕದ ಗಂಗೆ |
ಯನು ಕೊಡುವುದೆನೆ ಬಿಂದುಮಾತ್ರವಂ ಕೊಡಲಾತ |
ನೆನಗೆ ಗೋಹತಿಯೇಕೆ ಬಂದುದೈ ಜಗದೀಶ ಪೇಳೆನಲು ನಿಂ ಬರದೊಳು ||
ಮನೆಯೊಳಗೆ ರಕ್ಷಿಸಿದ ಋಷಿಗಳಪಕಾರವೆನೆ |
ಮುನಿ ಮುನಿದು ಮುನಿಗಳ್ಗೆ ಭಸಿತ ರುದ್ರಾಕ್ಷೆ ರು |
ದ್ರಸ ಭಕ್ತಿಗಳನುಳಿದು ಪಾಷಂಡಿಮತರಾಗಿ ಕೆಡಲೆಂದು ಶಾಪಿಸಿದನು || ೬೨ ||

ಬಳಿಕಮಾ ಗಂಗೆಯುಂ ತಂದು ಪಶುವಳಿದಿರ್ದ |
ಬಳಿಯೊಳ್ಳೈದಿಸೆ ಗೌತಮಂ ತಂದ ಕಾರಣಂ |
ತಳೆದುದದು ಗೌತಮೀನಾಮಮಂ ಗೋ ಸೋಂಕೆ ಗೋದಾವರೀಯೆನಿಸಿತು ||
ಎಲೆ ಸಿದ್ಧರಾಮ ಶಂಕರನಿತ್ತ ವಿಷ್ಣುವಂ |
ಬಳಿಗೆ ಕರೆದೆನ್ನ ಭಕ್ತನ ವಾಕ್ಯಮಂ ಪಿಂದು |
ಗಳೆದು ಬಾಂದ ಜೈನ ಬೌದ್ಧ ಚಾರ್ವಾಕಾದಿಮತವ ನೀಂ ಬೆಳೆಸೆಂದನು || ೬೩ ||

---

೧ ಕ್ಷೇ (ಮ.) ೨ ಗಿರಿಮೆ (ಶಿ, ಗೋ.); ಗುವೆವೆ (ಮ.)

ಲೇಸಾದುದೆಂದು ಕಳುಹಿಸಿಕೊಂಡು ವಿಷ್ಣು ಕೈ |
ಲಾಸದಿಂ ಧರೆಗಿಳಿದು ಬೌದ್ಧಾವತಾರದಿಂ |
ಮೋಸಮಂ ಮಾಡಿ ಜಿನ ಬೌದ್ಧ ಚಾರ್ವಾಕಾದಿಮತವನುರೆ ಸಂಸ್ಥಾಪಿಸಿ |
ಈ ಸಕಲಮಾನವರೊಳೆಲ್ಲಿಯುಂ ಮಿಗೆ ಕೃತ್ತಿ |
ವಾಸನ ಮಹಾಭಕ್ತಿಯಂ ಮರೆಸಿ ಬಳಿಕವಾ |
ದೇಶದೊಳ್ ವೇದಬಾಹಿರರೆನಿಸಿ ಪಾಷಂಡಿಮತವನುರೆ ಪೆರ್ಚಿಸಿದನು || ೬೪ ||

ಹರಿಯ ಕೃತ್ಯ[೧]ವನರಿದರತ್ರಿಮುನಿ ಕಶ್ಯಪಾಂ |
ಗಿರಸ ಕೌಶಿಕ ಭರದ್ವಾಜಾದಿಮುನಿಗಳೀ |
ಶ್ವರನಂ ತಪಸ್ಸಿನಿಂ ಮೆಚ್ಚಿಸಲ್ ಶಂಭು ನಿಮ್ಮಿಷ್ಟವಂ ಬೇಡಿಮೆನಲು ||
ಕರುಣಿಸೈ ಮತ್ಕುಲದ ಋಷಿಗಳಜ್ಞಾನಸಂ |
ಭರಿತರಾದರ್ ನಿನ್ನ ಭಕ್ತಿ ವೇದಾಗಮಂ |
ದೊರೆಕೊಳ್ಳದವರನುದ್ಧರಿಸೆಂದು ಕೊಂಡಾಡೆ ಲೋಕೇಶನಿಂತೆಂದನು || ೬೫ ||

ಪೋಗಿ ಭಯಬೇಡ ನೀವೆರಡನೆಯ ನಮ್ಮ ರೂ |
ಪಾಗಿ [೨]ಶ್ರೀಶೈಲಾದಿ ಬಂದು[೨] ಮುನಿವ್ರಜಕೆ ಶೈ |
ವಾಗಮರಹಸ್ಯಮಂ ತಿಳಿಪಿ ಸುಜ್ಞಾನಮಂ ನೆಲೆಗೊಳಿಪನೆಂದು ಪೇಳ್ದು ||
ಭೋಗಿಭೂಷಣನವರ ಕಳುಪಿ ಸುಖವಹಮೂರ್ತಿ |
ಯಾಗಿ ಶಿರವೊಂದು ಭುಜವೆರಡಕ್ಷಿಮೂರರಿಂ |
ದಾಗಲಾ ವಿಮಲಶುದ್ಧಸ್ಫಟಿಕವರ್ಣದಿಂ ವೃಷಪತಿಗೆ ಬೋಧಿಸಿದನು || ೬೬ ||

ವೇದ ವೇದಾಂತ ಶಿವಶಾಸ್ತ್ರ ಪೌರಾಣಾಗ |
ಮಾದಿಗಳನವನಿಯೊಳ್ ಪ್ರಜ್ವಲಿಸೆನುತ್ತೆ ಶೈ |
ಲಾದಿಗೆಲ್ಲಾ ರಹಸ್ಯವನರಿಪಿ ಶಂಕರಂ ವೃಷರಾಜನಂ ಕಳುಪಲು ||
ಮೇದಿನಿಯೊಳಜ್ಞಾನಿಋಷಿಗಳ್ಗೆ ಶೈವಮಂ |
ಬೋಧಿಸಿ ಶಿವಾಚಾರವಲ್ಲದನ್ಯಂಗಳುಮ |
ನಾದರಂಗೆಯ್ವಂತೆ ಮಾಡಿ ವೃಷವಲ್ಲಭಂ ಕೈಲಾಸಮಂ ಪೊಕ್ಕನು || ೬೭ ||

---

೧ ಕೃತಕ (ದಾ.) ೨-೨ ಶೈಲಾದಿ ಬಂದಾ (ಶಿ, ಗೋ, ದಾ.) ; ಸಿರಿಶೈಲಾದ್ರಿ ಗೈದಿ (ಮ.)
೩-೩ ಮಾದಿ ರಹಸ್ಯಮಂ ತಿಳಿಪಿ (ಶಿ, ಗೋ.)

ಇಂತೆಸೆವ ಚೆನ್ನಬಸವೇಶನ ಪುರಾಣವಂ |
ಸಂತಸದೆ ಬರೆದವರ್ಗೋದಿದರ್ಗರ್ಥವಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮುನ |
ಸಂತಸೌಭಾಗ್ಯವಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೬೮ ||

ಅಂತು ಸಂಧಿ ೫೨ಕ್ಕಂ ಪದಗಳು ೨೨೨೭ ಕ್ಕಂ ಮಂಗಳಮಹಾಶ್ರೀ

ಐವತ್ತುಮೂರನೆಯ ಸಂಧಿ

ಸೂಚನೆ

ಇಂದ್ರಕೀಲದೊಳರ್ಜುನಂ ತಪದೊಳಿರಲರಿದು |
ಚಂದ್ರಧರನಾಗ ಶಾಬರನಾಗಿ ಬಂದಾ ನ |
ರೇಂದ್ರಂಗೆ ಕರುಣದಿಂ ಪಾಶುಪತಬಾಣವಂ ಕೊಟ್ಟನತಿಸಂತಸದೊಳು ||

ಭಕ್ತಜನದೋಷನಿರ್ಮುಕ್ತ ಗುಹಗಣ[1]ಪಾಂಗ |
ಸಿಕ್ತಾನುಕಂಪರಸಯುಕ್ತ ಗಿರಿಜಾ[2]ಕೂಲ |
ರಕ್ತ ಸತ್ತ್ರಣವಸಂಪ್ರೋಕ್ತ ವೇದಾಗಮಾಸಕ್ತ ಮಹಿಮಾವಲಂಬ ||
ಮುಕ್ತಾಫಲಸ್ಫಟಿಕವ್ಯಕ್ತಾಂಗ[3]ದಿಂ ದಶಾ[3] |
ದಿಕ್ತಟಾವ್ಕತ ಘನವಿರಕ್ತಸಂಪ್ರೀತ ಹುತ |
ಭಕ್ತರಣಿಹಿಮಧಾಮದೃಕ್ತತ್ತ್ವರಸಸುಧಾಭುಕ್ತ ವಿರುಪಾಕ್ಷ ಶರಣು || ೧ ||

ಆಲಿಸಿನ್ನೆಲೆ ಸಿದ್ಧರಾಮ ಮುನ್ನುಂಟು ಭೂ |
ಪಾಲಕರ್ ಹಿಮಕರಾನ್ವಯಜಾತರೆನಿಸುವ ವಿ |
ಶಾಲಮತಿಧರ್ಮಜಂ ಭೀಮಂ ಕಿರೀಟಿ ಮಾದ್ರೇಯರೆಂಬೈವರಿಂತು ||
ಪಾಲಿಸೆ ಧರಿತ್ರಿಯಂ ದಾಯಾದ್ಯರೊಳ್ ದ್ಯೂತ |
ಕೇಳಿ ಸಮನಿಸೆ ತಮ್ಮ ದೇಶಕೋಶಂಗಳಂ |
ಸೋಲದಿಂದೊಪ್ಪಿಸಿಯರಣ್ಯವಾಸದೊಳಿರ್ದರತುಳಶೋಕಾರ್ತರಾಗಿ || ೨ ||

ಒಂದು ದಿನಮಾ ಭೂಪರಿ[4]ರ್ದ ವನಭೂಮಿಗೈ |
ತಂದು ವೇದವ್ಯಾಸಮುನಿ ನುಡಿದನೆಲೆ ಭೂಪ |
ಬಂದುದು ಮಹಾಪತ್ತು ನಿನಗೆ ರಿಪುವೀರರಂ ನೀಂ ಜಯಿಸಬೇಕಾದೊಡೆ ||
ಇಂದುಧರನಲ್ಲಿ ಪಾಶುಪತಾಸ್ತ್ರಮಿರ್ದಪುದು |
ತಂದುಕೊಂಡೊಡೆ ನಿನಗೆ ಮಲೆತ ರಾಯರ್ಗಳಂ |
ಕೊಂದು ಕೊಡುವುದು ಸಂದೆಗಂ ಬೇಡವೆನೆ ಮುನಿಗೆ ಧರ್ಮಸುತನಿಂತೆಂದನು
|| ೩ ||

---

೧ ಗುಣಗಣ (ಪ, ಶಿ, ಗೋ, ಮ.); ಸುಘೃಣಾ (ಹು.) ೨ ಜನು (ಶಿ, ಗೋ.) ೩ ವಿಶದ
ದಶ (ಮ.) ೪ ನಿ (ಶಿ, ಗೋ.)

ಲೇಸನಾಡಿದೆ ಮುನೀಶ್ವರ ಭಗೀರಥಪುತ್ರ |
ನೈಸಲೇ ನೀವ್ರಸಾರಿಮುದು ಶಂಭುವಂ ಕಾಣ |
ಲೇಸದವರಾವ್ ಕಂಡೊಡಂ[೧] ಶರವನಿತ್ತಪನೆಯಿತ್ತೊಡವು ಸಂಹರಿಪುದೆ ||
ಆ ಸದಾಶಿವನೆನ್ನೊಳಾಗೇ ಗೋಚರಿಪನೆನೆ |
ವ್ಯಾಸಮುನಿ ಪೇಂದನೆಲೆ ಭೂಪ ಪಶುಪತಿ ಭಕ್ತ |
ದಾಸೆಯುಂ ಸಲಿಸದವನೇ ಕೃಪಾಕರನೀವನಸ್ತ್ರಮಂ ಕೇಳೆಂದನು || ೪ ||

ತಿಳಿಯೆ ನಿಮ್ಮೈವರೊಳಗರ್ಜುನಂಗಿಂದುಧರ |
ನೊಲಿವನೆಂತೆಂದು ಮಂತ್ರೋಪದೇಶವನಿತ್ತು |
ನಲವಿನಿಂ ಮುನಿ ಪೋದನಿತ್ತಲರಸಂ ನರಂಗಾ ಮಂತ್ರಮಂ ನಿರವಿಸಿ ||
ಕಳುಪಲೊಡನಿಂದ್ರಕೀಲಮನೈದಿ ಸರಸಿಯೊಳ್ |
ಮುಳುಗಿ ಶುಚಿಯಾಗಿ ಪಾದಾಂಗುಷ್ಠಮಂ ಧರಾ |
ತಳದೊಳಾನಿರಿಸಿ ಭುಜಂಗಳನೆತ್ತಿ ಶಿವಮೂರ್ತಿಯಂ ಮನಸ್ಸಿನೊಳಾಂತನು || ೫ ||

ಜಪಮಾಲೆ ಕರದೊಳ್ ವಿಭೂತಿ ಸರ್ವಾಂಗದೊಳ್ |
ವಿಪುಳರುದ್ರಾಕ್ಷೆಯಾಭರಣವಂಗಂಗಳೊಳ |
ಗಪರಭಾಗದೊಳಕ್ಷಯಾಸ್ತ್ರಪೂರಿತದ ಬತ್ತಳಿಕೆ ಚಾಪಂ ಪೆಗಲೊಳು ||
ವಿಪರೀತವರ್ತನಮೆನಲ್ಕೆ ತರಗೆಲೆಯುಂಡು |
ತಪಿಸಿದಂ ಪಲದಿವಸಮನಿಲದಿಂದುದಕದಿಂ |
ದಪಗತಾಹಾರದಿಂದಿರೆ [೪]ತತ್ತಪಸ್ತೇಜಮುಣ್ಮಿತು ತಪೋವನದೊಳು || ೬ ||

ಉರಿದುದು ಕುಜಪ್ರಕರವೆತ್ತಲುಂ ಸುತ್ತಲುಂ |
ಕರಿದುದು ಲತಾಪ್ರತತಿ ದಾಹದಿಂ ಮೋಹದಿಂ |
ಸರಿದುದಗಲಿಕೆ ಮೃಗಮೃಗೀಕುಲಂ ವ್ಯಾಕುಲಂ ಖಗಗಣಕೆ ಪಿರಿದಾದುದು ||
ಜರಿದುದು ಶಿಖರಿಶಿಖರಮುರಿಗಳಿಂ ದರಿಗಳಿಂ |
ದಿರದೋಡಿತಟಿಕುಲಂ ಭೀತಿಯಿಂ ಖ್ಯಾತಿಯಿಂ |
ಪರಿದುದು ಪಶುವ್ರಾತಮೋಟದಿಂ ಘಾಟದಿಂ ಪರಿಹರಿಪರಿಲ್ಲೆನುತ್ತೆ || ೭ ||

---

೧ ಕಂಡೊಡೇಂ (ಶಿ, ಹು, ದಾ.); ಕಂಡೊಡೇಂ (ಮ.) ೨-೨ ರಸಪೂರ (ಹು.) ೩ ಗ (ಶಿ, ಗೋ.) ೪-೪ ತಪಸ್ತೇಜಮುಣ್ಮಿತು ತತ್ತಪೋವನದೊಳು (ಶಿ, ಗೋ.); ತಪಸ್ತೇಜಮುಣ್ಮಿತು ತಪೋವನದೊಳಂದು (ಮ.) ೫ ದೆ (ಶಿ, ಗೋ, ಹು, ದಾ, ತ, ಮ.)

ಕಂಡನೀ ಮುನಿವರರ ಕೋಳಾಹಳವನಭ್ರ |
ಮಂಡಲದೊಳಮರಮುನಿ ನಾರದಂ ತಾಪಸರ |
ತಂಡಮಂ ಪೊರ್ದಲವರೆಲೆ ಮುನಿಪ ಪರಿಹರಿಸು ನೀನೆಂದು ಬೇಡಿಕೊಳಲು ||
ಖಂಡಪರಶುವಿನೆಡೆಗೆ ಪೋಗಿ ನಿಮ್ಮುಪಹತಿಯ |
ಖಂಡಿಸುವೆನೆಂದು ನಂಬುಗೆಯಿತ್ತು ಗಿರಿಸುತೆಯ |
ಗಂಡನಂ ಕಂಡು ಕೊಂಡಾಡಿದಂ ಮಾಡಿದಂ ನಾರದಂ ಬಿನ್ನಪವನು || ೮ ||

ಹರ ಪರಾಮರಿಸಿಂದ್ರಕೀಲದೊಳ್ ತಪಿಸುತಿಹ |
ನರನವಂ ಋಷಿಯಲ್ಲ ಋಷಿಗೇಕೆ ಕೋದಂಡ |
ಶರ ಖಡ್ಗ ಭೂಷಣಂಗಳ್ ದುಷ್ಟತಪಸಿಯ ತಪೋವಹ್ನಿ ಮಸಗಲಾಗಿ ||
ತೆರಳ್ದುವಾ ಮುನಿಪರ ಜಪಂ ತಪಂ ನಿತ್ಯಕ |
ರ್ಮರಹಸ್ಯಮಂತ್ರಂಗಳೇಗುವರ್ ಪೇಳೆಂದು |
ಸುರಮುನಿ ಹರಂಗೆ ಬಿನ್ನವಿಸೆ ಕೇಳ್ದ[೧]ರಿದು ನಸುನಗುತ ಭವನಿಂತೆಂದನು || ೯ ||

ಆತನೆಮ್ಮಯ ಪರಮಭಕ್ತನವನಿಂದವ |
ರ್ಗೀತರುಪಹತಿಯಿಲ್ಲ ನಾವೀಗ ಬಂದವ |
ರ್ಗಾ ತಪೋವನವನೇ ಕೊಟ್ಟಪೆವು ನೀಂ ಪೋಗಿ ಬೆದರುತಿಹ ಮುನಿಪಾಲರ ||
ಭೀತಿಯುಂ ಬಿಡಿಸೆಂದು ನಂದಿಯಂ ಕರೆದು ಗಣ |
ಜಾತಕ್ಕೆ ಬೇಂಟೆಯಂ ಪೇಳೆಂದು ಹರನೆನಲ್ |
ಭೂತನಾಥನ ನೇಮದಿಂದೆ ನಂದೀಶ್ವರಂ ಪೊಯ್ಸಿದಂ ಡಂಗುರವನು || ೧೦ ||

ಕರದ ಬಲೆಗಳ ಕಾಲ ಕಣ್ಣಿಗಳ ಬಡಿಕೋಲ |
ಹೊರಳಿಗಳ ಸೊಪ್ಪಿನುಡುಗೆಯ ಹಾಸುಗಳನಾಂತು |
ಪರಿವ ಕುನ್ನಿಗಳ ಶಾಬರಗಣಂ ಬಿಡದೆ ಪೊರಮಟ್ಟುದಾ ಕ್ಷಣಮಭವನು ||
ವರಶಿರೋಮಾಲೆಯಂ ಕಳಚಿ ಚಲ್ಲಣಮನು |
ಟ್ಟರದೆ ಗುಂಜಾಭರಣಮಂ ತೊಟ್ಟು ಲೀಲೆಯಿಂ |
ಪಿರಿದೆನಿಪ ಶಾಬರವನನುಕರಿಸೆ ತದ್ರೂಪಿನಿಂದೆ ದೇವಿಯರೆಸೆದರು || ೧೧ ||

೧ ರೆ (ಶಿ.)

ತೊಳಪ ಸುಲಿಪಲ್ಲ ಬಂದುಗೆವಾಯ ನಿರಿಗುರುಳ
ಪೊಳೆವಲಗಣ್ಣ ತೆಕ್ಕಸುರ ಸುಣ್ಣೊಡೆಯ ಕೊರ |
ಮಲಿಕಾಯುವಸಿಯ ನಡುವಿನ ಮುದ್ದುಮೊಗದ ಸಳಿತೋಳ ಮೃದುಕರಚರಣದ ||
ಅಲಘುಜಘನದ ಕುಂಭಕುಚದ ಗಿಳಿನುಡಿಯ ಸ
ತ್ಕಲಹಂಸಗಮನದ ಸುನೀಲಕಾಂತಿಯ ಕಂಬು |
ಗಳದ ನಾನಾಶಕ್ತಿಯರ್ ಪುಳಿಂದಿಯರಾಗಿಯುಮೆಯೊಡನೆ ನಡೆತಂದರು || ೧೨ ||

ವೇದಂಗಳುಂ ಪುರಾಣಂಗಳುಂ ಶಾಸ್ತ್ರಮುಂ |
ನಾದರದೊಳುಪನಿಷತ್ ಜಪ ತಪ ಸಮಾಧಿಮುಂ |
ತಾದುವಾದುವು ಶುನಕ ನಿಡುಗೋಲ್ ಕವಣೆ ಖಡ್ಗಮುತುಳಶರಜಾಲಂಗಳು ||
ಆ ದಿವಿಜಪ್ರಮಥಗಣಮೇ ಶಬರರೂಪಾಗಿ |
ಮಾದೇವನಂ ಪೊರ್ದಿದುದು ಸಕಲಭುವನಜನ |
ನೀ ದಯಾಂಬುಧಿಯ ಲೀಲಾವಿನೋದವನೀಕ್ಷಿಪುತ್ಸಕದೊಳ್ಕೈತಂದುದು || ೧೩ ||

ತೆರಳಿದಂ ಹರನಿಂದ್ರಕೀಲಪರ್ವತಕಾಗಿ |
ಮೊರೆವ [2]ನಾನಾವಾದ್ಯ[3]ರಭಸದಿಂ ಬರಬರ |
ಲ್ಕೈರಗಭೂಷಣಮಾಗಿ ಹರನಂತೆ ಪಂಚಾಸ್ಯಯುಕ್ತದೆ ನೃಸಿಂಹನಂತೆ ||
ಹರಿವಿಲಾಸದಿನಂಬುನಿಧಿಯಂತೆ ಸಂತತಂ |
ವರಪುಂಡರೀಕವಿಲಸಿತಮಾಗಿ ಕೊಳನಂತೆ |
ಪರಿಶೋಭಿಸಿತ್ತು ಕಾಂತಾರಂ ಮಹಾತಿವಿಸ್ತರಘೋರಮಾ ಹರನಿದಿರೊಳು || ೧೪ ||

ನಾಗಪೂಗ[4]ಂಗಳಿಂ ವಾಜಿರಾಜಿಗಳೊಳಿಂ |
ಬಾಗಿರ್ದ ಸ್ಯಂದನೋತ್ಕರಮುಗಳಿಂದೆಸೆವ ಖ |
ಡ್ಗಿಗಣದಿನವಗಡಿಪ ಭಲ್ಲನಿ[5]ಕುರುಂಬದಿಂ ಕದಳಿಗಳ ಗಡಣದಿಂದೆ ||
ಸೋಗೆಸೆವ ಧನ್ವಿಕದಂಬದಿಂ ಕಡುರಯ್ಯ |
ಮಾಗೆತ್ತ ಪುಂಡರೀಕಾಳಿಯಿಂ ಶರಕುಲದೊ |
ಳಾ ಗಿರೀಂದ್ರನ ಮಹಾಸೈನ್ಯಮೆನೆ ಬಳಸಿರ್ದ ಕಾನನಂ ಕಣ್ಗೆಸೆದುದು (೧೫) || ೧೫ ||

---

೧ ಹೇರ (ಹು, ದಾ, ಮ.); ಕೇತ್ (ಶಿ, ಗೋ.) ೨-೩ ವಾದ್ಯದ ಮಹಾ (ಹು, ದಾ, ಮ.)
೪ ರ (ಮ.) ೫ ಕೆ (ಮ.) (೧೫) ಈ ಪದ್ಯವು ಹು. ದಾ. ಈ ಪ್ರತಿಗಳಲ್ಲಿಲ್ಲ.

ಮಾತಂಗಯುತಮಾಗಿ ಸದ್ವಂಶಹರಮಲ್ತು |
ಜಾತಿಸಂಕರಮಾಗಿ ದ್ವಿಜಕುಲರಹಿತಮಲ್ತು |
ಖಾತಂ ಸದಾಪುಷ್ಪಿತಾಸಂಗಿಯಾಗಿ ಮತ್ತಪವಿತ್ರದೇಹಮಲ್ತು ||
ಪ್ರೀತಿ ಮಿಗೆ ಮದನವಿಜಯಾವೃದ್ಧಿಕರಮಾಗಿ |
ವೀತರಾಗಸ್ಥಾಣುದೂರರಮ್ಯಕಮಲ್ತು |
ಮಾತೇಂ ಕಬಂಧಾಂಕಮಾಗಿ ಶಿಖಿಮುಖದೂರಮಲ್ತೆನಿಸಿ ವನಮೆಸೆದುದು
@ || ೧೬ ||

ಅಮ್ಮತಾಶ್ರಯಂ ಮಹಾವಜ್ರಿಗೇಹಂ ನಾಡೆ |
ಯಮರೀನಿವಾಸಮುಂ ಹರಿಚಂದನಾಲಯಂ |
ಸುಮನೋಗೃಹಂ ನೆಗಳ್ದಿಂದ್ರಾಣಿಸದ್ಮಮುದರಿಂದೆ ಭೂಸ್ವರ್ಗಮೆನಿಸಿ ||
ಅಮಿತಶಿವಗಣಶರಣಮಾಶ್ವರಿಯ ಬೀಡು ಸಂ |
ಭ್ರಮಿತಗಜಮುಖವಾಸಮಾ ಶರಭನಿಳಯಮಿ |
ಕ್ರಮಯುತಂ ನಂದಿಭೃಂಗೀವಿನೋದದೊಳೆ ಕೈಲಾಸಮೆನೆ ವನಮೆಸೆದುದು
* || ೧೭ ||

ಆಲಮಾ ಬಸುರಿ ದಿಂಡಂ ತಂಡಸಂ ನೆಲ್ಲಿ |
ಜಾಲಮಾ ಹೊನ್ನರಳಿಯತ್ತಿಯರನೆಲ್ಲಿಯಾ |
ಬೇಲವರನೇರಿಲಾಮ್ರಂ ಹುಣಿಸೆ ತದಕು ತುಂಬುರು ಬೆಳಲ್ ಬೆಲ್ಲವತ್ತ ||
ಪಾಲಾಶಮರಟಾಳಮಾ ತಡಸು ಕಕ್ಕೆಯಂ |
ಕೋಲೆ ತರೆಯಂ ಹಲಸು ಹೇಸವಂ ಬಿಳಿಲ್ಬದರಿ |
ಸಾಲಮಾ ಹೊನ್ನೆ ಚೆನ್ನಂಗಿಮೊದಲಾದ ವೃಕ್ಷಂಗಳಿಂ ವನಮೆಸೆದುದು * || ೧೮ ||

ಕರಿಯಂತೆ ಕೊಳದಂತೆ ಹರಿಯಂತೆ ಪುರದಂತೆ |
ಸರಸಿರುಹಭವನಂತೆ ಸುರಕುಲೇಶ್ವರನಂತೆ |
ಪರಮಪುಷ್ಕರ ಪುಂಡರೀಕ ಶಿಖಿ ಕನ್ಯಕಾ ಗೋ ವಜ್ರಯುಕ್ತಮಾಗಿ |
ಹರನಂತೆ ಮುಖದಂತೆ ಗುಹನಂತೆ ರಣದಂತೆ |
ಗಿರಿಜಾತೆಯಂತೆ ಮಿಗೆ ಹಂಸ ಸದ್ವಿಜ ಕೇಕಿ |
ಶರ ಸಿಂಹಯುತಮಾಗಿ ಕಾನನಂ ಬಹಳರೌದ್ರಾನನಂ ಕಣ್ಗೆಸೆದುದು || ೧೯ ||

೧ ಹರಂ (ಮ.) ೨ ಪ (ಶಿ, ಗೋ.) ೩ ತಾ (ಶಿ, ಗೋ.) ೪ ಬರ (ಶಿ.)
@ ಈ ಪದ್ಯವು ಹು, ದಾ, ಮ. ಈ ಪ್ರತಿಗಳಲ್ಲಿಲ್ಲ. * ಈ ಪದ್ಯಗಳು ಹು, ದಾ. ಈ ಪ್ರತಿಗಳಲ್ಲಿಲ್ಲ.

ತರಣಿಕಿರಣಾಭೀಶು ಕುಜಮುಯಂ ಗಜಮುಯಂ
ಪರಿಪಿಡಿದೊಳಿಸೆವ ಕೇಸರಿಮುಯುಂ ಹರಿಮಯಂ |
ಪರಿಪೂರ್ಣ ಪಾರಿಕಾಸರಮುಯಂ ಸರಮುಯಂ ನಾನಾತೃಣಾವಳಿಮಯಂ ||
ಧರಣಿತಳಮಿಳಿತಕಂಟಕಮುಯಂ ಶುಕಮುಯಂ |
ಪರಿಪರಿಯ ಸೆರೆದ ಸನ್ಮೃಗಮುಯಂ ಖಗಮುಯಂ |
ಗಿರಿಯಿಂದೆ ಸೋರ್ವ ನಿರ್ಝರಮಯಂ ಶರಮುಯಂ ತಾನೆನಿಸಿ ವನಮೆಸೆದುದು
|| ೨೦ ||

ಸರಳ್ಗಳಂ ತಿದ್ದಿ ಗರಿಗಟ್ಟುತುಂ ಬಿಲ್ಗಳಂ |
ಪೆರೆದು ಹೆದೆಯಂ ಹೂಡುತುಂ ಕಲ್ಲ ಬಲೆಗಳಂ |
ಸರಗೊಳಿಸುತುಂ ಹಾಸುಮಂ ಹಸಂಗೆಯ್ಯುತುಂ ನಾಯ್ಗಳಂ ಮೆಯ್ಯುಡವುತೆ ||
ಪೊರೆವ ದೋಹದ ಮಿಗಂಗಳ್ಗೆ ಮೋಹಂ ನೀಡಿ |
ಕರೆದು ಬೇಂಟೆಗಳನುರೆ ಕಲಿಸುತುಂ ತಂತಮ್ಮ |
ಪರಿಪಿಡಿಯ ಜಾತಿವಿದ್ಯಂಗಳಿಂದೆಸೆವ ಲುಬ್ಧಾಶ್ರಯದೆ ವನಮೆಸೆದುದು || ೨೧ ||

ತಲೆನವಿರ್ ಜುಂಜುಳ್ಳಿಗಡ್ಡ ಕೆಮ್ಮೀಸೆ ಕ |
ಣ್ಗಳ ಪಸುರ್ ಕಿನಿಸಿವಲ್ಲುಗಳ ಕಾರೊಡಲ ಜೋ |
ಲ್ದಿಳಿವ ಬಸುರಿನ ಕೂನ ಬೆನ್ನ ಕುಗ್ಗಿದ ಕೊರಲ ಬೇಟೆಗಾಲ್ ಜಗ್ಗುನಡೆಯ ||
ಬಲೆ ಕಲ್ಲಿಕುಬ್ಬಿಗಳ ಪೊತ್ತ ಹೆಗಲಿನ ದಡ್ಡು |
ಗಳ ಪಿಡಿದ ಬಲೆಕೋಲ ಕುಕ್ಕುರಂಗಳ ಕೆಯ್ಯೊ |
ಳಳವಟ್ಟ ಗಿಡುಗಲಗುಡ್ಗಳೆಸೆಯಲಲ್ಲಿ ವನಚರರಿಂದೆ ವನಮೆಸೆದುದು
|| ೨೨ ||

ವನಗಜದ ಮೌಕ್ತಿಕದ ತೊಡಗಳಂ ತೊಟ್ಟು ಮಾ |
ಪಿನ ತಳಿರನುಟ್ಟು ದಂತದ ಬಳೆಯನಿಟ್ಟು ಪೂ |
ಪಿನ ಪಚ್ಚೆಗಳೊಳಲಂಕರಿಸಿ ಪೊಸದಂತದೋಲೆಗಳ ಕಿವಿಗಳೊಳಮುರ್ಚಿಸಿ ||
ಪಿಸುತಚಂದನದ ಮರದೊರಳ್ಗಳೊಳ್ ಬಿದಿರಕ್ಕಿ |
ಯನೆ ಪೊಯ್ದು ಬಳಿಕಲಿನ್ನು ತದಂತಿದಂತಂಗ |
ಳೊನಕೆಯಂ ಪಿಡಿದು ತಳಿಸುತೆ ಪಾಡುತಿರ್ಪ ವನಚರಿಯರಿಂ ವನಮೆಸೆದುದು
|| ೨೩ ||

೧ ನು (ಶಿ. ಗೋ.) ೨ ಕಿರ (ಮು.) ೩ ೩ ಗಳ ಹೊತ್ತ ಹೆಗಲವಡುಪಿಗ ಪಿಡಿದ | ಬಲೆಕೋಲ ಕುಕ್ಕುರಂ ಗಳ ಗಿಡುಗುಗಳ ಕೆಯ್ಯ | ಳಳವಟ್ಟ ಗಡುಗಳೆಸೆಯಲ್ಕೆ ವನಚರರಿಂದೆ ವನಮೆಸೆದುದೇನೆಂಜಿಸು (ಮ.) ೪ ಕಾಲ (ಶಿ.) ೫ ಕಲ್ಲ (ಶಿ, ಗೋ.) ೫ ಸೊಗಡು (ಶಿ, ಗೋ.) ; ದಂಡ (ಕು.) ೬ ದು (ಶಿ.) ೭ ಬಿ (ಶಿ.) ೮ ಕ (ಶಿ.) ೯ ಗದು (ಪ, ಗೋ, ಕು.) ಈ ಪದ್ಯಗಳು ಹು, ದಾ. ಈ ಪ್ರತಿಗಳಲ್ಲಿಲ್ಲ.

ಪರಿವಿಡಿಯೊಳಿಂತೆಸೆವ ವನಮನುರೆ ನೋಡಿಯುಂ[೧] |
ದಿರದೆ ಬೆಳ್ಳಾರವಲೆ ತಡಿಕೆವಲೆ ಸಿಡಿವಲೆಯು |
ಕರದೊಳಾಂತಾಗಲಾ ಹರಗಣಂ ಸುರಗಣಂ ಶಾಬರಗಣಂಗಳಂತೆ |
ಕರಿ ಸಿಂಹ ಶರಭ ಶಾರ್ದೂಲ ಭೇರುಂಡಾದಿ |
ಪರಿಪರಿಯೊಳೊಪ್ಪುವ ಮೃಗಂಗಳಂ ಪಾರಿವಂ |
ಪುರುಳಿ ಲಾವುಗೆ ಗುಬ್ಬಿಮುಂತಾದ ಖಗಕುಲವನರಸುತ್ತಿರುತಿರ್ದರು † || ೨೪ ||

ವರಶರಭ ಶಾರ್ದೂಲ ಸಿಂಹಾದಿ ಮೃಗಕುಲಂ |
ಪುರುಳಿ ಲಾವುಗೆ ಪಿಕಂ ಮುಂತಾದ ಖಗಕುಲಂ |
ಸಿರಿದಾಗಿ ತೋರ್ಪ ಮಾಮರ ನೆಲ್ಲ ಕಡವು ತಂಡಸ ಜಾಲ ಬೇಲಂಗಳು ||
ಪರಿಶೋಭಿಸುವ ಮಹಾರಣ್ಯಮಂ ಪೊಕ್ಕುಮಂ |
ತಿರದೆ ಬೆಳ್ಳಾರವಲೆ ತಡಿಕೆವಲೆ ಸಿಡಿವಲೆಯು |
ಕರದೊಳಾಂತೆಸೆವ ಶಾಬರಗಣಂ ಸುರಗಣಂ ನೋಡಿ ಬೆರಗಾಗುತಿರಲು
* || ೨೪ ಅ ||

ಇದೆ ಪಾವುಗಡಿದ ಸಾರಂಗಮೈದಿದ ಠಾಣ |
ವಿದೆಕೊ ಸಾರಂಗಮಂ ಪುಲಿ ಕೊಂದ ಠಾಣವಿ |
ಲ್ಲದೆ ಪುಲಿಯನೊಡೆಬಡಿದು ಕರಿ ಪೋದ ತಾಣವಿದೆ ಕರಿಯ ಹರಿ ಸೀಳ್ದ ಠಾವು ||
ಇದೆ ಹರಿಯ ಶರಭನುರೆ ಚಂಚುವಿಂ ಸೀಳ್ದ ಬಳಿ |
ಯಿದೆ ಶರಭನಂ ಸವರಿ ಭೇರುಂಡನಡಿಯಿಟ್ಟ |
ಪದದ ಕುರುಪೆಂದು ತಮತಮಗೆ ಸನ್ನೆಗಳಿಂದೆ ಶಬರರರಸುತ್ತಿರ್ದರು || ೨೫ ||

ಕೆಡಪು ಸಾರಂಗಮಂ ಸಿಂಗಮಂ ಪೊಯ್ ತಲೆಯ |
ನೊಡೆ ಗಜದ ಪುಲಿಯನೆಬ್ಬಟ್ಟು ಪಂದಿಯನಿಟ್ಟು |
ಮಡಿಪು ಖಡ್ಗಿಯ ಖಡ್ಗದಿಂದೆ ಮರ್ದಿಸು ಮರೆಯ ಪೊರೆಯ ಮರೆಯಂ ತುಡುಂಕು
ಕಡಿ ನರಿಯನರಿ ಹರಿಯನಿಡು ಮೊಲಸನುಡುಗಳಂ |
ಬಡಿ ಚಮರಿವಾಲಮಂ ಪಿಡಿ ತಡೆಯದಡಿಯಿಡೆಂ |
ದೊಡನೊಡನೆ ಗುಡುಗುಡಿಸಿ ಝಡಿತೆಯಿಂದುರುಬಿದರ್ ಬಿಡದೆ ಮಾಯಾಶಬರರು
|| ೨೬ ||

---

೧ ಪೊಕ್ಕಸುಂ (ಶಿ, ಗೋ.) ; ಪೊಕ್ಕೊದಂ (ಮ.) † ಈ ಪದ್ಯವು ಹು, ದಾ. ಈ ಪ್ರತಿಗಳಲ್ಲಿಲ್ಲ.
* ಈ ಪದ್ಯವು ಹು, ದಾ. ಈ ಪ್ರತಿಗಳಲ್ಲಿ ಮಾತ್ರವಿದೆ.

ಬಂದು ದಿಟ್ಟತನದಿಂದೆ ಬಲೆಯೊಳಗೆ ಬಿದ್ದು ಬಿ |
ಡ್ದೊದ್ದು ಕೊಂಡುವು ಕೆಲವು ಶಿವಭಟರ ಗಾವಳಿಗೆ |
ಮುಂದಾಡಿಸುವ ಮರಿಗಳಂ ಬಿಟ್ಟು ಕೆಟ್ಟೋಡಿದುವು ಕೆಲವು ಕಂಡಕಡೆಗೆ |
ಉಚ್ಚಳಿತ ಬಾಣದಿಂ ತಂತಮ್ಮ ಹರಣಮಂ |
ತಿಟ್ಟಿದುವು ಕೆಲವಿಂತು ಮಾಯಾಪುಳಿಂದತತಿ |
ಮುಟ್ಟಿದುವವಿಳಮೃಗಸಂತತಿಗೆ ಪೇಳಲೇನದ್ಭುತವನಾ ವನದೊಳು ೨೭ ||

ಗಜಮೊಂದು ಪೋಗುತಿರೆ ಸಿಂಹಮೈತಂದು ತ |
ಧ್ವಜಕುಂಭಮಂ ಸೀಳುತಿರೆ ಶರಭನಾರ್ಭಟಿಸಿ |
ಗಜಸಿಂಹಮೆರಡುಮಂ ಪಿಡಿಯಲಾ ಭೇರುಂಡನಾಗ ತುಂಡಂಗಳಿಂದೆ ||
ಗಜಸಿಂಹಶರಭಂಗಳಂ ಕಚ್ಚಿ ಪಾರುತಿರೆ |
ಗಜಸಿಂಹಶರಭಭೇರುಂಡಂಗಳಂ ಕಂಡು |
ತ್ರಿಜಗದೊಳ್ ಚೋದ್ಯಮೆನಲೆಚ್ಚು ಕೆಡಪಿದನವಂ ಮಾಯಾಪುಳಿಂದನೊಮ್ಮೆ ೦

(?) || ೨೮ ||

ತಟಿಕೆಯಂ ಪಿಡಿದೊರ್ವ ಮಾಯಾಪುಳಿಂದನಡಿ |
ಯಿಡುವುದಂ ಕಂಡೊಂದು ಪುಲ್ಲೆ ತನ್ನ ದ್ದೆಯೊಳಂ |
ನಡುಗಿ ಶಿವ ಶಿವ ಕಂಡೆನಚ್ಚರಿಯನೆತ್ತಲಾನುಂ ಚೇತನಂಬಡೆಯದ ||
ಗಿಡು ನಡೆವುದುಂಟೆ ಬರುತಿದೆ ಬಳಿಗೆಯಕಟೆಂದ^೧ |
ಕಡೆಗಾಲಮೋ ತಮಗೆಯಾದೊಡಂ ವಿಪರೀತ |
ಡೆಡೆಯೊಳಿರಬಾರದೆಂದೋಡುತಾ ಮೃಗವಿರದೆ ನಗಿಸಿದುದು ಗಣಕುಲವನು

|| ೨೯ ||

ಪುಲಿ ಹುಲ್ಲೆ ಹರಿಣಂ ಶಶಂ ಸೈರಿಭಂ ಬೆಕ್ಕು |
ಮೊಲನೆಯ್ಯ ಮೃಗಮಾಸೆ ಸಾರಂಗ ವೃಕ ಕರಡಿ |
ಬಲಿಮುಖಂ ಪಂದಿ ಮುಂಗುಲಿ ಜಂಬುಕಂ ಗೋಧಿಕಾತ್ಮಜಂ ಮರೆ ಮೂಷಕಂ |
ಸಲೆ ಶರಭ ಭೇರುಂಡ ಚಮರೀಮೃಗಂಗಳಂ |
ಚಲಿಪ ಕತ್ತುರಿಯ ಮೃಗಮಂ ಜವಾದಿಯ ಬೆಕ್ಕು |
ಗಳನಿರದೆ ಪಿಡಿದು ಜಡಿದರ್ ಬಡಿದರಲ್ಲಲ್ಲಿ ಮಾಯಾಪುಳಿಂದರಾಗ (?) ೩೦

೧ ಬಂದು (ಶಿ.); ಬರದೆ (ಹು, ದಾ, ನು.) (?) ಈ ಪದ್ಯಗಳು ಹು, ದಾ. ಈ ಪ್ರತಿಗಳಲ್ಲಿಲ್ಲ.

ಸೋಗೆ ಹಪ್ಪರಸಂಚೆ ಕೊಂಚೆ ಬಕ ಟಿಟ್ಟಿಭಂ |
ಕೋಗಿಲರಗಿಳಿ ಪಾರಿವಂ ಲಾವಕಂ ಗುಬ್ಬಿ |
ಗೂಗೆ ಚಾದಗೆ ಹರಡೆ ಹಂಗಂ ಚಕೋರಿ ತಿತ್ತಿರಿ ಸಾಳುವಂ ಗರುತ್ಮಾ ||
ಕಾಗೆ ಹೊಂಗಾಗೆ ಚರಣಾಯುಧಂ ಚಾಳಾಂಕಿ |
ಯಾ ಗೌಜು ಕಂಕಂ ಭರದ್ವಾಜಮೆಂ^೧^ಬ ನಾ |
ನಾಖಗಸಮೂಹಂಗಳಂ ಪಿಡಿದರಾಗಲಾ^೧^ ಮಾಯಾಪುಳಿಂದರಂದು (*) || ೩೧ ||

ಮೃಗಮುಸುರೆ ಪಿಡಿದರಾ ಹರನಂತೆ ಹರಿಯಂತೆ |
ಮಿಗೆ ಶಿಖಿಯನಾಂತರಾ ದ್ವಿಜನಂತೆ ಹರಿಯಂತೆ |
ಮುಗುಳೆ ಘನಪುಂಡರೀಕಮುನರಸಿದರ್ ತುಂಬಿಯಂತೆ ಹರಿಯಂತೆ ಬಳಿಕ ||
ಸಿಗಿದರುರುನಾಗಮುಂ ನವಿಲಂತೆ ಹರಿಯಂತೆ |
ಸೊಗಸಾದರುಡುಗಳಿಂ ನಭದಂತೆ ಹರಿಯಂತೆ |
ಬಿಗಿದರ್ ಖಗಾಳಿಯುಂ ಭಟರಂತೆ ಹರಿಯಂತೆ ಮಾಯಾಪುಳಿಂದರಂದು || ೩೨ ||

ಉರಗನಂ ಕೊಂದು ತಲೆವಣಿಗಳಿಂ ಗಿಣಿಗಳಿಂ |
ಪರಿದು ಪೊಳೆವೆಳೆಯ ಸಾರಂಗಮುಂ ಸಿಂಗಮುಂ |
ಕರಿಶಿರದ ಮೌಕ್ತಿಕದ ಜಾಲಮುಂ ವಾಲಮುಂ ನೆಗಳ್ದ ಚಮರೀನಿವಹದ ||
ಇರದೆ ಪಾರುವ ನವಿಲ ಮರಿಗಳಂ ಗರಿಗಳಂ |
ಪರಿಪರಿಯ ಪಕ್ಕಿಗಳ ಗುದಿಗಳಂ ತಿದಿಗಳಂ |
ನೆರೆ ಸುಲಿವ ಪುಲಿಯ ಚರ್ಮಂಗಳಂ ಪಣ್ಗಳಂ ಪಿಡಿದು ಶಬರರ್ ನಡೆದರು || ೩೩ ||

ಇಂತು ಪಲತೆರದ ಬೇಂಟೆಯನಾಡುತಾಗಳ |
ತ್ಯಂತಹರುಷದೊಳಖಿಳಮಾಯಾಪುಳಿಂದರಾ |
ಕಾಂತಾರದೊಳಗೆ ಬರುತಿರಲವರ ಗಾವಳಿಗೆ ತದ್ಗಿರಿಗುಹಾಂತರದೊಳು ||
ಚಿಂತೆಯಿಲ್ಲದೆ ಜಗತ್ತ್ರಳಯಸಮಯದ ಮಹೋ |
ಗ್ರಾಂತಕನ ರೂಪಿನಿಂ ಮೂಕದಾನವನೆಂಬ |
ನಂತರಿಸದತಿಭೀಕರಾಕಾರಸೂಕರಂ ತಾನಾಗಿ ಪೊರಮಟ್ಟನು || ೩೪ ||

೧-೧ ಬುವಾ | ಒಗೆಬಗೆಯ ಪಕ್ಷಿಗಳ ತಂಡಮಂ ಬಡಿದರಾ (ಮ.) (*) ಈ ಪದ್ಯವು ತು, ವಾ. ಈ ಪ್ರತಿಗಳಲ್ಲಿಲ್ಲ.

ಜಡಜಡಂ ಪಿಡಿಲ ಪಡೆಸಂ ಪಿಡಿದು ಸೂಕರನ |
ಕುಡಿದಾಡೆಯಂ ಸವೆದನೋ ತಟಿಜ್ಜಾಲದಿಂ |
ಮೊಡರಿಚಿಪನೋ ಕಣ್ಗಳಂ ರೋಮನಿಚಯಮಂ ಲೋಹದ ಶಲಾಕೆಯಿಂದೆ |
ಸಿಡಿಮಗೆಗ್ಗೆನೊ ಕಠಿಣಮಾದ ಪೆರ್ಗುಂಡಿನಿಂ |
ಕಡೆದು ಕಂಡರಿಸಿದನೊ ತನುವನಕಟೆನುತಾಗ |
ಮೃಡದನ ಸೇನೆಯ ಭಟರ್ ನಡುನಡುಗಲಾ ಪಂದಿ ತುಡುಕಿದುದು ಸುರಭಟರನು || ೩೫ ||

ಕಿರುತೆಡಬಲಕೆ ಮುರಿಮುರಿವ ಮರಿನಾಯ್ಗಳಂ |
ಕೋರೆಯಿಂದೆರಗಿ ಖಂಡಿಸುತೆ ತರುಬಿದ ಭಟ |
ಗೋಣುಗಾಣಿಸುತಾಂತ ಬಲಿಗಳಂ ಸವರುತೆ ಸರೋಷಮನನಾಗಿ ಕೂಡೆ ||
ಕೀರುತ್ತೆ ಸಮ್ಮುಖದೊಳಾಂತ ತರುಲತೆಗಳಂ |
ಹಾರಿಸುತೆ ಬೇಹ ಗಣಪಾಲರಂ ಶಂಭುವಿಗೆ |
ಮೂರಿಸುತೆ ಘೀಕರಾಕಾರನೈದಿದುದಾಗ ಕ್ರೋಡನಾ ವನದೆಡೆಯೊಳು || ೩೬ ||

ಎಲ್ಲಿ ತಾಗಿತು ಘಾಯಮಲ್ಲಿ ರುಧಿರದ ತೋಯ |
ಮೆಲ್ಲಿ ಮುರುಬಿನ ಬೊಬ್ಬೆಯಲ್ಲಿ ಸುರಗಣದುಬ್ಬೆ |
ಯೆಲ್ಲಿ ಖುರಚಯಪಾತವಲ್ಲಿ ಮಾಂಸವ್ರಾತವೆಲ್ಲಿ ಸುಳಿವಲ್ಲಿಯಳಿವು ||
ಎಲ್ಲಿ ಮೆಯ್ದೊಲಿಪಾಟವಲ್ಲಿಯೆ ಕುಜೋತ್ಪಾಟ |
ಮೆಲ್ಲಿ ಪದಸಂಘಟನಮಲ್ಲಿ ಧರಣೀನಟನ |
ಮೆಲ್ಲಿ ಸನ್ಮುಖಭಾವಮಲ್ಲಿ ದಿವಿಜರ ಹೇವಮಾ ಪಂದಿಯಿಂದಾದುದು || ೩೭ ||

ಸೂಕರನಿನಸತಿಭಯಂಕರದೊಳೀ ಪರಿ ದಿ |
ವೌಕಸರ ಸೇನೆಯಂ ಸದೆವುದಂ ಕಂಡಿಂತು |
ನಾಕಮುನಿವರರೊಳೆಂದು ಚಾಪಮಂ ಜೇಗೆಯ್ದು ಹರನೆಚ್ಚು ಬೊಬ್ಬಿಡಲ್ಕೆ ||
ಆ ಕುಮತಿಯಂ ತಾಗೆ ಪೊತ್ತಂಬುಸಹಿತೆ ಬಂ |
ದಾ ಕಿರಾಟನ ಮುಂದೆ ಗುಡುಗುಡಿಸಲಾ ಕ್ಷಣಂ |
ಲೋಕನಾ ಫಲ್ಗುನನುಮಳಿದು ಕಂಡಂ ವೈರಿಘೀಕರಂ ಸೂಕರನನು || ೩೮ ||

ಸೊಕ್ಕಿದೆಕ್ಕಲನೊಕ್ಕಲಿಕ್ಕುತೆ ವನದ್ರುಮವ |
ನಿಕ್ಕೆಯಂ ಬಿಟ್ಟೆತ್ತ ಪೊಕ್ಕು ಪೋದಪುದೊ ನೋ |
ಟಕ್ಕೆ ಸೋಜಿಗವಾಗೆ ರಕ್ಕಸನ ಪಗೆ ಬಲ್ಲನಕ್ಕೆನುತೆ ಬಾಣದಿಂದೆ |
ಇಕ್ಕಲಾ ಸೂಕರಂ ಕಕ್ಕಸದ ಬಾಣದಿಂ |
ದೊಕ್ಕುದೊಡಲಂ ನೆಲಕೆ ಪಕ್ಕನಸುವಂ ಬಿಡಲ್ |
ದಕ್ಕಿದುದು ಕಿಟಿಯೆನುತೆ ಮುಕ್ಕಣ್ಣನಟ್ಟಿದವನೆಕ್ಕತುಳದಿಂ ಪಿಡಿದನು || ೩೯ ||

ಮುಂದಿವಾಳವೆ ನಮ್ಮ ಕೂಡೆಲೆ ಪುಳಿಂದ ನಾಂ |
ಕೊಂದ ಪಂದಿಯನೊಯ್ವುಪೈ ನಿನ್ನ ತೆತ್ತಿಗನ |
ತಂದು ತೋರಾತನೇತರ ಸಮರ್ಥಂ ಕಾಣ್ಬೆನೆಂದರ್ಜುನಂ ನುಡಿಯುಲು |
ಇಂದುಧರನವನೆಂದ ನುಡಿಯನಾಲಿಸಿ ನಲವಿ |
ನಿಂದೆ ಬಂದಂ ನರನ ಪೊರೆಗೆಲೆ ತಪಸ್ವಿದೇ |
ನೆಂದು ನುಡಿಪೈ ಪಂದಿ ನಮ್ಮದೆನೆ ಗುಡುಗುಡಿಸಿ ಕಲಿಪಾರ್ಥನಿಂತೆಂದನು || ೪೦ ||

ಸಾಕೆಲೆ ಕಿರಾತ ನಿನ್ನಯ ಬಲ್ಮೆಯೆಮ್ಮೊಡನೆ |
ನೂಕುವದೆ ನಮ್ಮಂಬಿನಿಂದೆ ಬಿರ್ದುದು ಪಂದಿ |
ಜೋಕೆ ಮಿಗೆ ತೆರಳಲ್ಲದೊಡೆ ಕೊಳ್ ಶರಾಳಿಯಂ ನೀನೆನುತೆ ಪಾರ್ಥನೆಸೆಯೆ |
ಈ ಕಿರೀಟಿಯ ಬಾಣಸಂಕುಲಂ ಶಂಭುವಂ |
ಸೋಂಕದುರೆ ಬಲವಂದುದಂ ಕಂಡು ಕೋಪದಿಂ |
ಭೀಕರದ ಬಾಣಂಗಳಂ ಪೂಡಿದಂ ಪಾರ್ಥನೇನೆಂಬೆನಚ್ಚರಿಯನು || ೪೧ ||

ಅಬ್ಬರಿಸಿ ಪಾರ್ಥನೆಸೆ ಬಾಣಂಗಳಭವನಂ |
ನಿಬ್ಬರದೊಳೈದಿ ನಸು ಸೋಂಕಿ ಸೋಂಕದೆ ಮರಳ |
ಲುಬ್ಬೆಗದೊಳರ್ಜುನಂ ಮತ್ತೆ ಮತ್ತೊಡನೊಡನೆ ಮರಳಿ ಮರಳಿಸುಗಳಿಂದೆ |
ಕೊಬ್ಬಿದ ಕಿರಾತ ನಿಂ ಬೀಳೆನುತೆ ಮುಸುಕೆ ಸರ |
ಳುಬ್ಬಿದುವು ದೆಸೆಯೆತ್ತ ಹರನೆತ್ತ ನರನೆತ್ತ |
ಸಬ್ಬ ತರುಗಿರಿಲತಾಳಿಗಳೆತ್ತ ಮುಗುಳೆತ್ತ ನಭಮನಲ್ ಪಸರಿಸಿದುವು || ೪೨ ||

---

೧ ರ (ಹು. ಮ.)

ಕಂಡು ಖಡ್ಗಮನುಗಿದು ದಕ್ಷಾರಿ ಚಾಪಮಂ |
ಕೊಂಡು ಗುಹನುಗ್ರಪರಶುವನೆತ್ತಿ ಗಜಮುಖಂ |
ಹಿಂಡುಹಿಂಡಾದ ಗಣಜಾಲವಾಯುಧವೆರಸಿ ತಾಪಸನ ಜೀವಸವನು ||
ಹಿಂಡುವೆವೆನುತ್ತೈದೆ ಕಣ್ಸನ್ನೆಯಿಂ ನಿಲಿಸಿ |
ಚಂಡವಿಕ್ರಮನರನ ಬಾಣಂಗಳನಿತುಮಂ |
ಖಂಡಿಸುತ್ತೆ ಮರುಳ ತಮ್ಮಡಿ ಸಾಕು ಹೋಗೆನಲ್ಕರ್ಜುನಂ ಖತಿಗೊಂಡನು || ೪೩ ||

ಬಾಣಮಂ ಕಡಿದುರುಳ್ಚುವನಿವನದೇಂ ಪಂಚ |
ಬಾಣಹರನೋ ಗುಹನೊ ರಾಮನೋ ರಾಮನೋ
ದ್ರೋಣನೋ ಭೀಷ್ಮನೋ ಕರ್ಣನೋ ಬಿಲ್ಬಲ್ಮೆಯಾವವಂಗಿಂತಪ್ಪುದು ||
ಕೇಣವೇಕಿದಕೆ ಭಳಿರೇ ಪುಳಿಂದಂಗೆ ಸರಿ |
ಗಾಣೆನೆಂದೆನುತೆ ಬತ್ತಳಿಕೆಯಿಂದರ್ಜುನಂ |
ಸಾಣೆಯಲಗಿನ ಸರಿಯನರೆ ಕರೆಯೆ ಕರೆಗೊರಲನನಿತುಮಂ ಖಂಡಿಸಿದನು || ೪೪ ||

ಮತ್ತೆ ಪೊಸಬಾಣಮಂ ಪೂಡುವಂ ನೋಡುವಂ |
ಚಿತ್ತಜಾರಾತಿಯಂ ಖಾತಿಯಂ ತಾಳಿ ಪೋ |
ಗತ್ತಲಿಸುತೆಚ್ಚು ಮೂದಲಿಸುವಂ ನಿಲಿಸುವಂ ಬಾಣದದಟಂ ರುದ್ರನು ||
ಚಿತ್ರಕಾಷ್ಟ್ರಪರ್ವಮಂ ಮಾಡುವಂ ಕಾಡುವಂ |
ಪೊತ್ತ ಪರಿಭವಕೆ ಸರನಾಕ್ಷಣಂ ತೀಕ್ಷ್ಣಣಂ |
ಚಿತ್ತಂಬಸೊಡನೆಚ್ಚು ಬೀಗುವಂ ತೂಗುವಂಬಿಂದಮಂ ಹರನರಿವನು || ೪೫ ||

ಶ್ವೇತವಾಹನನಾಗಳೆಸುವನಾ ಬಾಣಮಂ |
ಭೂತನಾಥಂ ಕಡಿವನೊಡನೆಸುವನಾ ಪಾರ್ಥ |
ಭೀತನರಿವಂ ಮತ್ತೆ ಕಪಿಸುವಂ ಪಾರ್ಥನವನುಂ ಕಡಿವನಿಂದುಧರನು ||
ಈ ತೆರದೊಳೆಚ್ಚೆಚ್ಚು ಬಾಣಮಂ ಕಡಿಯೆ ಸ |
ಖ್ಯಾತಿಶಯದಿಂದೆ ಮಂತ್ರಾಸ್ತ್ರಂಗಳಂ ಪೂಡಿ |
ಆತಿಯಿಂದಾರ್ಪಸಂಧಿಸಿತು ಮಂತ್ರಾಸ್ತ್ರಮಂ ನುಂಗಿದಂ ಹರನಾಗಳು || ೪೬ ||

ಗಿರಿಯ ಬಳಗಂ ಮುಸುಕೆ ವಜ್ರಮಳ್ಕುವುದೆ[೧] ವನ |
ಕರಿಯ ಬಳಗಂ ಮುಸುಕೆ ಸಿಂಹಮೇನಂಜುವುದೆ |
ಹರಿಯ ಬಳಗಂ ತೊಡರೆ ಗರುಡನಿರದೋಡುವನೆ ಕೇಳಿದೈ ಸಿದ್ಧರಾಮ |
ನರನ ಮಂತ್ರಾಸ್ತ್ರಂಗಳಾ ಕ್ಷಣಂ ಪರಿಪರಿದು |
ಹರನನಂಡಲೆಯಲಾರ್ಪುವೆ ನಿಮಿಷದೊಳಗುಮಾ |
ವರನನಂ ಪರಿಹರಿಸೆ ಮಗುಳೆ ದಿವ್ಯಾಸ್ತ್ರಮಂ ತೊಟ್ಟೆಚ್ಚು ಬೊಬ್ಬಿರಿದನು || ೪೭ ||

ನರನೆಚ್ಚ ಬಾಣಮಂ ನುಂಗುವಂ ಪೊಂಗುವಂ |
ಕೆರಳಿ ಮೂದಲಿವಾತನಾಡುವಂ ನೋಡುವಂ |
ತಿರುತಿರುಗಿ ಪಾರ್ವತಿಗೆ ಸೂಚಿಪಂ ನಾಚಿಪಂ ಹಾಸ್ಯೋಕ್ತಿಯಿಂ ನರನನು ||
ಮರುಳೆ ತಮ್ಮಡಿ ಶೌರ್ಯ ಮಗ್ಗಿತೇ ತಗ್ಗಿತೇ |
ಸರಳ್ಗಳುಂ ತೀರಿ ಬಯಲಾದುವೇ ಪೋದುವೇ |
ಧುರಕೆಮಗೆ ಸರಿಯಪ್ಪ ವೀರನೇ ಧೀರನೇ ನೀನೆನುತೆ ಹರನೆಂದನು || ೪೮ ||

ಕಾಡಬೇಡಂ ಹೀನಕುಲದವಂ ನಿನ್ನಂತೆ |
ಬೇಡನಲ್ಲಾಂ ಕ್ಷತ್ರಿಯಂ ವೀರನೆನಲಾವು |
ಬೇಡರೆಂಬುದು ದಿಟಂ ಮೂಲೋಕವರಿಯೆ ನೀಂ ಬೇಡಿ ತಪವಂ ಮಾಡುತೆ |
ಬೇಡನಲ್ಲೆನೆ ನಗರೆ ಮರುಳೆ ತಾಪಸ ನಿನ್ನ |
ಮೂಡಿಗೆಯೊಳಂಬಿಲ್ಲ ವೀರನೆಂತಹೆ ನಿನ್ನ |
ನೋಡಿ ಜರೆಯೆನಲೆನ್ನ ಪಳಿವವನೆ ನೀನೆನುತೆ ನಿಜಚಾಪದಿಂ ಬಡಿದನು || ೪೯ ||

ನಸುನಗೆಯೊಳಂದು ಪಾರ್ಥನ ಕರದ ಚಾಪಮಂ |
ಸಸಿದಲೆಯನೀಳ್ದು ಕೊಳಲರ್ಜುನನಡಾಯುಧದೆ |
ಮಸಗಿ ತಿವಿಯಲ್ಕದಂ ಕೊಳೆ ಕಲ್ಗಳಿಂ ಗುಂಡಿನಿಂ ಮರದ ಕೊಂಬಿನಿಂದೆ |
ಬಿಸಗೊರಲನಂ ಸೆಣಸಲೆಲೆ ತವಸಿ ನೀನೀಗ |
ಪೊಸತಾದ ಕೆಯ್ದುವಳ್ಕೊಡೆ ಕೊಂಡು ಬಾರೆನ |
ಲ್ಕಸಮಬಲನಾನೆನಗೆ ಕೆಯ್ದುವೇಕೈ ಮಲ್ಲಯುದ್ಧಕನುವಾಗೆಂದನು || ೫೦ ||

---

೧ ನಳ್ಕು (ಪ.)

ನೋಡಿದೈ ದೇವಿ ಪಾರ್ಥನನೆನುತ್ತಾ ಚಂದ್ರ |
ಚೂಡನರ್ಜುನನಿದಿರಿನೊಳ್ ನಿಂದು ಕೆಯ್ಗಳಂ |
ನೀಡಿ ಬಾಹುಗಳನಪ್ಪಳಿಸಿ ಬೊಬ್ಬಿಡುತೊರ್ವರೊರ್ವರಂ ತಡೆದು ಪಿಡಿದು ||
ಝಾಡಿಸುವ ತೆಗೆವ ತೊಡಚುವ ಪಿಡಿವ ಸೇವುವಂ |
ನೋಡುವ ನಿಧಾನಿಸುವ ಭೀಷಣಧ್ವನಿಗಳಂ |
ಮಾಡುವ ವಿರೋಧಿಯಿಂಗಿತವರಿವ ಬಿನ್ನಾಣಂ ಹರನರರೊಳೆಸೆದಿರ್ದುದು || ೫೧ ||

ಬಿಗಿವನಭವಂ ಬಿಡಿಸುವಂ ಪಾರ್ಥನಾಗ ಪೆರೆ |
ದೆಗೆವನೀಶಂ ಪಿಡಿವನರ್ಜುನಂ ಸಮ್ಮುಖಕೆ |
ನೆಗೆವನಗಜಾಧವಂ ನಾಚಿಸುವನೀ ನರಂ ಬಂಧಿಸುವನಹಿಭೂಷನು ||
ಮುಗುಳೆ ಕಳಚುವನೀ ಕಿರೀಟಿ ಹರನಾರ್ಭಟಿಸಿ |
ಪೊಗುವನುಬ್ಬೆದ್ದು ಪೊಕ್ಕೊಡೆ ಬಾಹುಸತ್ತ್ವದಿಂ |
ತೆಗೆವ ತುಡುಕುವ ತಡೆವ ಸಾಹಸಂ ನರಚಂದ್ರಚೂಡರೊಳ್ ಪೊಸತಾದುದು
|| ೫೨ ||

ಕರವಳಯದಿಂದೆ ಡೊಕ್ಕರದಿಂದವಂಗುಲದಿ |
ನುರಗಬಂಧನದಿಂದಮಂತರಲಗಡಿಯಿಂದೆ |
ಪರಿಪಮಂಕಪದಿಂದೆ ತೋರಹತ್ತಾದಿಸನಿತುಮೊದಲಾಗಿ ಕಣ್ಗೊಳಿಸುವ ||
ಗುರುತರದ ಮಲ್ಲಯುದ್ಧದ ಜಾಣ್ಮೆ ನೋಳ್ಪವ |
ಗರಿದೆನಿಸೆ ವಜ್ರನಿಭಮುಷ್ಟಿಯಿಂದರ್ಜುನಂ |
ಪರಸನೆಂಗಲ್ ತಪಸಿ ನಿಂ ಕೆಟ್ಟೆ ಹೋಗೆನುತೆ ಶಿವನಾತನಂ ತಿವಿದನು || ೫೩ ||

ಕುಣಿದುಪಿರ್ದಾರ ಮುಷ್ಟಿಯಿವರಂಗಂಗಳೊಳ್ |
ಖಣಿಖಟಿಲ್ ಖಟಿಲೆಂಬ ರವಮುಣ್ಮೆ ಹತಿಗಗ್ಗಿ |
ಕಣಮೊಗೆಯೆ ಪೊಗೆಯೆ ಸ್ವೇದಾಂಬುವುಂ ರುಧಿರಜಲಮುಗ್ಗಳವಳಿದು ನರನಾಗಳು
ಸೆಣಸಲೆನ್ನೊಳ್ ಸಮರ್ಥನೆ ಶಬರನಿವನೆನು |
ತ್ರಣಕದಿಂದೆರಗೆ ವಂಚಿಸುತಭವನೀ ನರನ |
ಪಣೆಯುಮಣೆಯುಲ್ ನೋಡು ನರನಳಲಿ ಮುಷ್ಟಿಯಂ ನೆಗೆಸಿ ಬಳಿಕಿಂತೆಂದನು
|| ೫೪ ||

... ಸ್ವೇದಾಂಬುವುಂ ರುಧಿರಜಲಮೊಳೆಯುಲ (ಶಿ, ಗೋ, ಮ.) ೧-೩ ಮೊಗೆಯೆ (ಬ, ದಾ.); ಪರಿಯೆ (ಪು, ಮ.)

ಮಾಯದಿಂದೆನ್ನ ಶರನಿವಹವಂ ಸವರಿದ ವಿ |
ಡಾಯಕಿದೆ ಮದ್ದು ಮಂತ್ರಾಸ್ತ್ರಮುಂ ತವೆ ನುಂಗಿ |
ದಾಯತಿಕೆಗಿದೆ ಮೃತ್ಯು ಚಾಪಮಂ ಕೊಂಡ ಗರ್ವಾದ್ರಿಗಿದೆ ವಜ್ರದಂಡಂ ||
ನೋಯಬೇಡೆಲವೆಲವೊ ಪೋಗು ಲುಬ್ಧಕ ನಿನ್ನ |
ಕಾಯಕಿದೆ ಕಡೆಯೆನುತೆ ಪಾರ್ಥನುಬ್ಬಿದ್ದು ಪೂ |
ರಾಯದಿಂ ಹರನ ವಕ್ಷಸ್ಥಳವನುರೆ ತಿವಿದು ನರನಾರ್ದು ಬೊಬ್ಬಿರಿದನು || ೫೫ ||

ಪರಿಹರಿಸಿ ನರನಂ ಧುರಾವನಿಯೊಳಡೆಗೆಡಹಿ |
ಹರನಂದು ಮೆಟ್ಟಿ ಮೆಲ್ಲಡಿ ಸೋಂಕುಮಾತ್ರದಿಂ |
ದರುಣಜಲಮಂ ಕಾರಿದಂ ಬಾಯೊಳುಂ ನಾಸಿಕದೊಳಮುರಿ[೧] ತೀವ್ರಮಾಗಿ ||
ಕರಗಿದುದು ಚಿತ್ತವರ್ಜುನನಿರವನೀಕ್ಷಿಸುತೆ |
ಕರುಣದಿಂ ಫಲ್ಗುಣಂ ನೊಂದನಕಟೆಂದು ಶಂ |
ಕರನೆರ್ದೆಯೊಳಿರದೆ ಮರುಗಿದನತಿಕ್ಕಪಾಳುವಲ್ಲಾ ಶಿವಂ ಭಕ್ತರೆಡೆಗೆ || ೫೬ ||

ಶಿವನ ಮೆಲ್ಲಡಿ ಸೋಂಕಲೊಡನೆ ಕೌಂತೇಯನವ |
ಯವಮೆಲ್ಲ ನೆಗ್ಗಿ ಮೈಮರೆದು ಚೇತರಿಸಿ ಕ |
ಣ್ದೆರೆದು ನೋಡಿ ತನಗಾವ ಜನ್ಮದಮಹಾಪಾತಕಂ ಸಮನಿಸಿದುದೋ ||
ಶಿವಗೃಹಂಗಳನಳಿದು ಶಿವನ ಮತಮಂ ಪಳಿದು |
ಶಿವಭಕ್ತರಂ ಜರೆದ ಕಾರಣಂ ತನಗೆ ಪರಿ |
ಭವಮಾದುದೀತನಿಂದಾತನಂ ಮರೆವೊಗುವೆನೆಂದರ್ಜುನಂ ತಿಳಿದನು || ೫೭ ||

ಎಸೆವ ಮಳಲಿಂ ಲಿಂಗಮಂ ಮಾಡಿ ಪರಿಪರಿಯ |
ಕುಸುಮಂಗಳಂ ತಿರಿದು ತಂದು ಭಕ್ತಿಯೊಳೆ ಪೂ |
ಜಿಸಿ ಶೈವಮಂತ್ರಮಂ ಜಪಿಸಿ ಬಲವಂದು ಲಿಂಗವ ನೋಡಿ ಸಂತಸದೊಳು ||
ಅಸಮಾಕ್ಷ ದಕ್ಷಮುಖಶಿಕ್ಷ ಲೋಕಾಧ್ಯಕ್ಷ |
ಹಸಗೆಡಿಸಿದಂ ಶಬರನೆನ್ನ ನಿನ್ನಿವನ ಶಿ |
ಕ್ಷಿಸುವನಿತು ಸತ್ತ್ವಮಂ ಪಾಲಿಸೆಂದರ್ಜುನಂ ನುತಿಸಿ ಬಳಿ[೨]ಕತ್ತ ನೋಡೆ[೨] || ೫೮ ||

೧ ಉಮತಿ (ಪು, ದಾ, ಪ, ಮ.) ೨-೨ ಕಿತ್ತ ನೋಡೆ (ಶಿ, ಗೋ, ಹು.) ; ಕಿಂತೆಂದನು (ಮ.)

ಇತ್ತಲರ್ಜುನನಭವನಂ ಪೂಜಿಸಿದ ಕುಸುಮ |
ಅತ್ತಲ್ ಕಿರಾತಮಸ್ತಕದೊಳಿರೆ ಕೌತುಕದೆ |
ಮತ್ತೆ ಪೂಜಿಸಲವು ಕಿರಾತಮಂಡೆಯೊಳಿರಲ್ ಶಿವನೆಂದು ತಿಳಿದು ಕೂಡೆ
ಮತ್ತನಾದೆಂ ದೇವ ಕಾಯೆನುತ್ತೆರಗೆ ನರ |
ಉತ್ತಮಾಂಗವನಿರದೆ ನೆಗೆಪಿ ಗಿರಿಜಾಧವಂ |
ಬಿತ್ತರಿಸಿದಂ ತನ್ನ ನಿಜಮೂರ್ತಿಯಂ ಶಾಬರವನುಳಿದು ಸಂತಸದೊಳು || ೫೯ ||

ಎಳೆವೆರೆಯ ಬಾಂದೊರೆಯ ಕೆಂಜಡೆಯ ಪಂಚಾಸ್ಯ |
ಮೊಳೆ ಪೊಳೆವ ಪಂಚದಶಲೋಚನದ ದಶಭುಜದ |
ಪುಲಿದೊವಲ ಢಕ್ಕೆ ಡಮರುಗ ಶೂಲ ಮುಖ್ಯಾಯುಧಂದಳೆದ ಹಸ್ತಂಗಳ್
ಪೊಳೆವ ಶುದ್ಧಸ್ಫಟಿಕಸಂಕಾಶಕಾಯದು |
ಜ್ವಲಿಪ ಸೂರ್ಯೇಂದುಶತಕೋಟಿತೇಜದ ತೊಡೆಯೊ |
ಳೊಲಿದಿರ್ಪ ಪಾರ್ವತಿಯ ಪಂಪಾವಿರೂಪಾಕ್ಷನೊಪ್ಪಿದಂ ನರನಿದಿರೊಳು || ೬೦ ||

ವೀರಭದ್ರಂ ಕುಮಾರಂ ನಂದಿ ಭೃಂಗಿಯುಂ |
ಹೇರಂಬನಾದಿಯಾಗಿರ್ಪ ನಾನಾಪ್ರಮಥ |
ವೀರರೆಲ್ಲಂ ಶಾಬರವನುಳಿದು ನಿಜರೂಪಿನಿಂ ಹರನ ಬಳಸಿರಲ್ಕೆ ||
ಪಾರಾಶರಾತ್ರಿಮುನಿಯಾಂಗಿರಸಕೌಶಿಕಮು |
ಹಾಋಷಿ ವಶಿಷ್ಠಾದಿಗಳ್ ನರನ ದೆಸೆಯಿಂದ |
ಪಿರಾ ದಿವ್ಯಮೂರ್ತಿಯಂ ಕಂಡೆವೆನುತೆರಗಿದರ್ ಜಯಯೆನುತೆ ಶಿವನಿದಿರೊಳು
|| ೬೧ ||

ದುಂದುಭಿಯ ರಭಸದಿಂದರಳ ಮಳೆಯುಂ ಸುರರ್ |
ಮಂದಾಕಿನೀಧರನ ಮಣಿಮುಕುಟದೊಳ್ ಜಯಜ |
ಯೆಂದು ಕರೆದರ್ ವೇದಶಾಸ್ತ್ರಾಗಮಂ ಪುರಾಣಂಗಳತಿಹರುಷದಿಂದೆ ||
ನಿಂದು ನಿಜರೂಪಿನಿಂ ಪೊಗಳುತಿರ್ದುವು ಮಹಾ |
ನಂದದಿಂ ಶಿವಮೂರ್ತಿಯಂ ಕಂಡು ಪಾರ್ಥನಾ |
ನಂದಾಶ್ರು ತುಳ್ಕಾಡೆ ಮನದಣಿಯೆ ಪೊಗಳುತಿರ್ದಂ ಮಹಾಭಕ್ತಿಯಿಂದೆ || ೬೨ ||

ರುದ್ರಾಯ ಗಿರಿಶಾಯ ಶರ್ವಾಯ ಕರುಣಾಸ |
ಮುದ್ರಾಯ ಲೋಕನಾಥಾಯ ಗಜದಾನವ |
ಚ್ಛಿದ್ರಾಯ ನುತಖಂಡಪರಶವೇ ದಕ್ಷಮುಖಸಂಹಾರಕಾರಣಾಯ |
ಭದ್ರಾಯ ಭರ್ಗಾಯ ಮೃತ್ಯುಂಜಯಾಯ ಬಹು |
ರೌದ್ರಾಸ್ಪದಾಯ ದುರಿತಧ್ವಂಸಿನೇ ವರಹಿ |
ಮಾದ್ರಿಜಾಕುಚಭೂಷಣಾಯ ಭೂತೇಶಾಯ ವಿಶ್ವಾತ್ಮನೇ ನಮಸ್ತೇ[೧] || ೬೩ ||

ನಿರುಪಮ ನಿರಾಧಾರ ನಿತ್ಯ ನಿಷ್ಕಾಮಿ ಜಯ |
ನಿರುತಂ ನಿಗಮದೂರ ನಿರ್ವಾಯ ನಿರ್ಗುಣನೆ |
ಪರಮಪಾವನ ಪಂಚಮುಖ ಪಂಚಬಾಣಹರ ಪಾರ್ವತೀಪ್ರಾಣನಾಥ ||
ಕರಿಚರ್ಮವಸನ ಕರಧೃತಕಮಲಭವವದನ |
ಸುರ ನರೋರಗನಮಿತ ಸೂರ್ಯೇಂದುವಹ್ನಿಭಾ |
ಸುರನಯನ ಸಲಹೆಂದು ಶಂಭುವಂ ಪೊಗಳಿದಂ ಪಾರ್ಥನತಿಭಕ್ತಿಯಿಂದೆ || ೬೪ ||

ದೇವ ಸಲಹರಿವಿಪಿನದಾವ ಸಲಹತುಳರಾ |
ಜೀವಭವಶಕ್ರನುತಪಾವನಪದಾಬ್ಜ ಲೋ |
ಕಾವಳೀಭಕ್ತಸಂಜೀವನ ಸುಜನಸೇವ್ಯ ಭಾವಿಸದಿರಪರಾಧಮಂ ||
ಕಾವನಂ ಗೆಲ್ದ ಲೋಕಾವನತ ಸಲಹು ಭುವ |
ನಾವಲಂಬನ ದೇವ ದೇವ ನಿಜಭಕ್ತನನ |
ಭಾವಮಂ ಮಾಡದುರೆ ಕಾವುದೆಂದರ್ಜುನಂ ಸಾವಧಾನದೆ ಪೊಗಳ್ದನು || ೬೫ ||

ಕರಕಮಲದಿಂದೆ ನರನಂ ತೆಗೆದು ಬಿಗಿಯಪ್ಪಿ |
ಕರಗದಿರ್ ನೀಂ ಮಾಡಿದುಪಹತಿಯೆ ಪೂಜೆ ನಿ |
ನ್ನುರುಚಾಪಖಡ್ಗಬಾಣಂಗಳಂ ಕೊಳ್ಳೆನುತೆ ಕೊಟ್ಟು ನಿನ್ನಿಷ್ಟವೇನು ||
ಒರೆಯೆನಲ್ ದೇವ ಪಾಲಿಸು ಪಾಶುಪತಮಹಾ |
ಶರವನೆನೆ ಕೊಟ್ಟನುಮೆಯಿತ್ತಳಂಜನಶರವ |
ನಿರದಾಗ ಹರ ಸುರ ಗಣಾಧಿಪರಿರ್ ಕೊಟ್ಟರೊಳಲಿದೊಂದೊಂದುಬಾಣಂಗಳ

|| ೬೬ ||

---

೧ ತೇ ನಮಃ (ಪ, ಹು, ತು, ದಾ, ಮ.) ೨ ತಿ (ಶಿ, ಗೋ, ತು.); ಹಾ (ಹು.); ಫ (ಮ.) ೩ ದಿಕ (ಶಿ, ಹು.); ಧಿಕ (ಗೋ, ತು, ಮ.) ೪-೪ ಲವಿಂದಲೊಂದೊಂದು ಶ ರಮಂ (ಶಿ, ಗೋ.)

ಕೊಂಡಾಡುವಖಿಳಮುನಿನಿಕರಮಂ ಮನ್ನಿಸುತೆ |
ಮುಂಪಾಡಿ ಫಲ್ಗುಣನನಕ್ಕರಿಂ ಬೀಳ್ಕೊಟ್ಟು |
ಚಂಡಕರಪಾವಕಶಶಾಂಕನಯನಂ ರಜತಪರ್ವತಂಬೊಕ್ಕನಂದು ||
ಖಂಡಪರಶುವಿನ ಲೀಲೆಗಳಿಪ್ಪತ್ತೈದು ಕಡೆ |
ಗಂಡುವೀಬಳಿಗೆನಲ್ ಪಾರ್ಥನಾ ಬಾಣಮಂ |
ಕೊಂಡದೇಗೈದನವನಾರ ಮಗನಾ ಕಥೆಯನುಸಿರೆನಲ್ಕಿಂತೆಂದನು || ೬೭ ||

ಇದು ಸಕಲವೀರಮಾಹೇಶ್ವರರ ಸದ್ವಿಮಲ |
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೇಂ |
ಬುವಧಿವರ್ಧನಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು ||
ಸದಮಲಜ್ಞಾನಿ ಸಕಲಾಗಮಪುರಾಣಕೋ |
ವಿದನಾ ವಿರೂಪಾಕ್ಷಪಂಡಿತಾರಾಧ್ಯರತಿ |
ಮುದದೆ ಪೇಳ್ದೀ ಚೆನ್ನಬಸವಪೌರಾಣಕಥೆಯೊಳಗೆ ನಾಲ್ಕನೆಯ ಕಾಂಡಂ || ೬೮ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೬೯ ||

ಅಂತು ಸಂಧಿ ೫೩ಕ್ಕಂ ಪದಗಳು ೨೨೯೬ ಕ್ಕಂ ಮಂಗಳಮಹಾಶ್ರೀ

ಚತುರ್ಥಕಾಂಡಂ ಸಮಾಪ್ತಂ

ಐದನೆಯ ಕಾಂಡ

(ಒಂದನೆಯ ಸಂಧಿ)

ಐವತ್ತನಾಲ್ಕನೆಯ ಸಂಧಿ

ಸೂಚನೆ

ಸೋಮಸೂರ್ಯಾನ್ವಯಭುವನವರೊಳಗೆ ಪಾಂಡವರ್ |
ಭೂಮಿಗೋಸುಗ ಬಂಧುಗಳ ವಧಿಸಿದುದ ಸಿದ್ಧ |
ರಾಮನಿಂ ಕೇಳ್ದು ಚೆನ್ನಬಸವೇಶ್ವರಂ ಕರುಣದಿಂ ನಿರವಿಸಿದನು ||

ವಿಷ್ಣುನೇತ್ರಾರ್ಚಿತಪದಾಂಭೋಜನಾ ಪರಮ |
ವಿಷ್ಣುಸುಕುಮಾರದಹನೋಕ್ತಸುಭಸಿತಾಂಗ |
ವಿಷ್ಣುನಾಭೀಕಮಲಸಂಭವಶಿರಚ್ಛೇದ ವಿಷ್ಣುಕಂಕಾಳಧರನೇ ||
ವಿಷ್ಣುಸಾಯಕಮೇರುಚಾಪವಿಲಸಿತಹಸ್ತ |
ವಿಷ್ಣುವಾಹನವೈರಿಭೂಷಣಕರಶ್ರವಣ |
ವಿಷ್ಣುಪದಕೇಶ ಪಂಪಾವಿರೂಪಾಕ್ಷ ರಕ್ಷಿಸು ಸಕಲಭಕ್ತಜನರ || ೧ ||

ಆಲಿಸೈ ರಾಮ ಸೃಷ್ಟಿಯ ಮೊದಲೊಳಬುಜಜಂ |
ಭಾಳಲೋಚನನ ವರದಿಂದವಯವಂಗಳೊಳ್ |
ಲೀಲೆಯಿಂದಂ ನವಬ್ರಹ್ಮರಂ ಪಡೆದನವರೊಳಗತ್ರಿಮುನಿಪನಿಂದೆ ||
ಪೇಳಲೇಂ ಚಂದ್ರನುದ್ಭವಿಸಲವನಿಂದಮೆ ವಿ |
ಶಾಲತರಶಶಿವಂಶವಾಯ್ತಾತನಿಂ ಬುಧಂ |
ಭೂಲಿತಾಂಗೀವರಪುರೂರವಂ ಬುಧನ ತನುಸಂಭವಂ ತಾನಾದನು || ೨ ||

ಆ ಪುರೂರವಗಮುರ್ವಶಿಗೆ ನಂದನನಾದ |
ನೀ ಪರಿಯೊಳಾಯುಃಕುಮಾರನವನಿಂ ನಹುಷ |
ನಾ ಪರಾಕ್ರಮನಹುಷನಿಂದಂ ಯಯಾತಿ ಯದು ಪೂರುಗಳ್ ತತ್ತನುಜರು ||
ಈ ಪೂರು ಯದುಗಳಿಂ ಸೋಮಕುಲವೆರಡಾಯ್ತು |
ಭೂಪಾಲಯದುವಿನಿಂ ಯಾದವರ ಕುಲವಾಯ್ತು |
ರೂಪಯುತಪೂರುವಿಂ ಪೌರವಾನ್ವಯವಾದುದೆಲೆ ರಾಮಕೇಳೆಂದನು || ೩ ||

---

೧ ಭ್ರೂ (ಶಿ, ಗೋ, ಹು, ದಾ, ತು, ಮ.)

ಪೂರುವಿಂ ಜನಮೇಜಯಂ ತನ್ನೃಪಾಲಂಗೆ |
ಧೀರಪ್ರಜಿಹ್ವನಾತಂಗೆ ಸಂಯಾತಿಯಾ |
ಭೂರಮಣನಿಂದೆ ಹಂಪಾತಿಯವನಿಂ ಸಾರ್ವಭೌಮನಾ ಭೂಮಿಪಂಗೆ ||
ವೀರಜಯಸೇನನವನಿಂದನಿಂದ್ರಂ ತದ್ಧ |
ರಾರಮಣನಿಂ ಮಹಾಭೂಮನಾ ಭೂಪನ ಕು |
ಮಾರನಯುತಾನೀತ[1]ಮಾತನಿಂದಂ ಕ್ರೋಧನಾತನಿಂ ದೇವಾತಿಯು || ೪ ||

ದೇವಾತಿಯಿಂ ರುಚಿಕನಾತನಿಂ ರುಕ್ಷನಾ |
ಭೂವರಂಗಂ ಮತಿವರಂ ತನ್ನೃಪಾಲಂಗೆ |
ಕೋವಿದಂ ತ್ರಷ್ಣುವಾತಂಗಿಲನುಮಾತಂಗೆ ದುಷ್ಯಂತನಾ ಭೂಪನ ||
ದೇವಿ ಶಾಕುಂತಳೆಯವರ್ಗೆ ಭರತಂ ಸುತಂ |
ಭಾವಿಸಲ್ ಭರತನ ಕುಮಾರಂ ಹುಮನ್ಯು ಮ |
ತ್ತಾ ವಸುಧೆಯರಸಗೆ ಸುಹೋತ್ರನವನಿಂ ಹಸ್ತಿ ಹಸ್ತಿಗೆ ವಿಲೋಚನಾಖ್ಯಂ || ೫ ||

ವರವಿಲೋಚನನಿಂದಜಾಮಿಳನವಂಗೆ ಸಂ |
ವರಣನಾತಂಗೆ ದಿನಕರಪುತ್ರಿ ತಪತಿಯೊಳ್ |
ಕುರುವಾ ನೃಪಂಗಂ ಪರೀಕ್ಷಿತಂ ತತ್ಸುತಂ ಭೀಮಸೇನಂ ತಿಳಿಯಲು ||
ಧರಣಿಪತಿ ಭೀಮಸೇನಂಗಂ ಪ್ರದೀಪನಾ |
ನರಪತಿಗೆ ಶಂತನಾ ಶಂತಭೂಪಾಲಂಗೆ |
ವರವಸಿಷ್ಠನ ಶಾಪದಿಂದಂ ಪ್ರಭಾಸವಸು ನಂದನಂ ತಾನಾದನು || ೬ ||

ಚಿತ್ತಹರುಷದೆ ಶಂತನಾತಂಗೆ ಭೀಷ್ಮನೆಂ |
ದಿತ್ತು ಪೆಸರಂ ಸಲಹಲುಳಿದ ವಸುಗಳ ಬಲಂ |
ಬೆತ್ತು ಭೀಷ್ಮಂ ಸುಪ್ರತಾಪದಿಂದಹಿತರಂ ಗೆಲ್ದು ಸುಖಮಿರಲಾಗಳು ||
ಅತ್ತಲಜಶಾಪದಿಂದದ್ರಿಕೆಯೆನಿಪ್ಪಮರಿ |
ಯುತ್ತುಂಗಮತ್ಸ್ಯರೂಪಿಂ ಗಂಗೆಯೊಳಗಿರೆ ವಿ |
ಯತ್ತಳದೊಳಿರ್ದ[2]ಪರಿಚರವಸುವಿನಿಂದ್ರಿಯಂ ಬೀಳಲದು ಗರ್ಭಮಾಯ್ತು || ೭ ||

---

೧ ಕ (ಶಿ, ಗೋ, ಹು, ದಾ, ಮ.) ೨ ಉ (ಪ, ಶಿ, ಗೋ, ಹು, ದಾ.)

ಅದನೊರ್ವಜಾಲಗಾರಂ ತಂದು ಸೀಳಲದ |
ರುದರದೊಳಗಿರ್ದ ಶಿಶುವೆರಡನಾ ಸೂತನತಿ |
ಮುದದಿಂದೆ ವಸುಗೀಯೆ ಪೆಣ್ಣನಾತಂಗಿತ್ತು ಕುವರನಂ ತಾಂ ರಕ್ಷಿಸೆ ||
ಪದೆದಾತನಂ ಮತ್ಸ್ಯನೃಪನೆಂದು ಕರೆದನಾ |
ಸುದತಿ ಘನಮತ್ಸ್ಯಗಂಧಿನಿಯುಂ ಪರಾಶರಂ |
ನದಿಯ ತಟದೊಳ್ ಪ್ರೀತಿಯಿಂ ಕೂಡೆ ಜನಿಸಿದಂ ಮುನಿಪ ವೇದವ್ಯಾಸನು || ೮ ||

ಇಂತು ಯೋಜನಗಂಧಿಯಿರೆ ಬೇಟೆಗೈತಂದು |
ಶಂತನಿವಳಂ ಕಂಡು ಭ್ರಮಿಸಿ ಕರೆಯಲ್ಕಾಗ |
ಕಾಂತೆಯೊಲ್ಲದೊಡವಂ ಪೋಗಿ ಚಿಂತಿಸೆ ಭೀಷ್ಮನೀಕೆಯುಂ ಕೆಯ್ಗೂಡಿಸೆ ||
ಅಂತವಳ ಗರ್ಭದೊಳ್ ಚಿತ್ರಾಂಗದಂ ಧರಾ |
ಕಾಂತಂ ವಿಚಿತ್ರವೀರ್ಯಂ ಜನಿಸಿ ಪಗೆಗಳಿಂ |
ದಂತವಾಗಲ್ಕೆ ವೇದವ್ಯಾಸನಿಂದವನ ಕಾಂತೆಯರ್ ಬೆಸಲಾದರು || ೯ ||

ಜನಿಸಿದರ್ ಧೃತರಾಷ್ಟ್ರ ಪಾಂಡು ವಿದುರರವರ್ಗೆ |
ಜನಪ ಧೃತರಾಷ್ಟ್ರಂಗೆ ಕೌರವೇಶ್ವರನಾದಿ |
ತನುಭವರ್ ನೂರ್ವರಾ ಪಾಂಡುವಿಗೆ ಧರ್ಮಜಾದ್ಯೈವರಾತ್ಮಜರಾದರು ||
ಮುನಿಶಾಪದಿಂ ಪಾಂಡುವಳಿಯೆ ಹಸ್ತಿನಪುರದೊ |
ಳನಯಕೌರವ ಪಾಂಡವರ್ಗೆ ಮತ್ಸರಮಾಗಿ |
ಮನಮೊಲ್ದು ವಾರಣಾವತದೊಳಿರುತರಗುವನೆಯುಂ ಕಳಿದು ಪೊರಮಟ್ಟರು
|| ೧೦ ||

ಘೋರಕಾನನದೊಳ್ ಹಿಡಿಂಬನಂ ಮುರಿದಗ್ರ |
ಹಾರದೊಳ್ ಬಕನ ಮರ್ದಿಸಿ ದ್ರುಪದನಂದನೆಗೆ |
ಭೂರಮಣರೈವರುಂ ವರರಾಗಿ ಕೌರವರ ಪರಿಭವಿಸಿ ಮತ್ತೆ ಬಂದು ||
ಓರಂತೆ ಭೂಪರಿಂದ್ರಪ್ರಸ್ಥಮಂ ಪೊಕ್ಕು[1] |
ಕೌರವನ ಕೂಡೆ ಜೂಜಾಡಿ ಸೋಲಲ್ಕವರ |
ಧಾರುಣಿಯನಾ ಕೌರವಂ ಕೊಳಲ್ ಮತ್ತೆ ಘೋರಾರಣ್ಯಮಂ ಪೊಕ್ಕರು || ೧೧ ||

೧ ಕೊಂಡು (ಹು, ದಾ, ಮ.)

ಕೌರವರನೆಲ್ಲರಂ ಜಯಿಸಲೆಂದಾ ನರಂ |
ಮಾರಹರನಂ ಮುನಿಯ ಮತವಿಡಿದು ಪಾಶುಪತ |
ಘೋರಶರವಂ ಪಡೆದು ನಾಕಮಂ ಪೊಕ್ಕಸುರರಂ ಕೊಂದು ಭೂಮಿಗೈದಿ |
ಭೂರಮಣರಜ್ಞಾತವಾಸದಿಂ ಮತ್ಸ್ಯನ |
ಕಾರಣದೊಳೋಲಯಿಸಿಯಜ್ಞಾತದಿಂ ಮೇಲೆ |
ಧಾರುಣಿಯ ಹುದುಭಾಗೆಗೋಸುಗಂ ಪಾಂಡವರ್ ಕಲಹಕುದ್ಯೋಗಿಸಿದರು || ೧೨ ||

ವಸುದೇವ ದೇವಕಿಗೆ ಜನಿಸಿ ಕೃಷ್ಣಂ ಬಳಿಕ |
ವಸುಮತಿಯ ಭಾರಮಂ ಕಳೆಯೆ ಪಾರ್ಥಂಗಾಗ |
ಳೆಸೆವ ಸಾರಥಿಯಾಗೆ ಪಾಶುಪತಬಾಣದ ಮಹಾತ್ಮೆಯಿಂ ನರನಾಗಳು |
ಮುಸಗಿ ಸಂಗರದೊಳಗ್ರಜಗುರುಪಿತಾಮಹಾ |
ದ್ಯಸಮಕುರುಸೇನೆಯಂ ಬಿಡದೆ ಸಂಹರಿಸಿದಂ |
ವಸುಧೆಯೊಳ್ ಮಣ್ ಪೆಣ್ಣಿಗಳಿಯದವರಾರೆಂದು ಚೆನ್ನಬಸವಂ ನುಡಿದನು || ೧೩ ||

ವಿರಚಿಸೆಲೆ ಚೆನ್ನಬಸವೇಶ ಪಾಂಡವರಿಂತು |
ಧರೆಯ ಹುದುಭಾಗೆಗೋಸುಗಮಳಿದರಿಂ ಮುಂದೆ |
ತರುಣಿಗೋಸುಗಮಳಿದರೆಂತೆನಲ್ಪೇಳ್ವೆನಾಂ ಕೇಳಯ್ಯ ಸಿದ್ಧರಾಮ ||
ತರಣಿವಂಶದೊಳೆಸೆವ ರಘುರಾಮನೆಂಬಾತ |
ನರಸಿಗೋಸುಗಮಳಿದರೆನಲಾರಮಗನಾತ |
ನಿರದಾತನರಸಿಯಿಂದಳಿದ[1] ಕಾರಣವನುಸಿರೆನಲಾಗಳಿಂ[1]ತೆಂದನು || ೧೪ ||

ಒರೆವೆನಾಲಿಸು ರಾಮ ಸೂರ್ಯಾನ್ವಯದೊಳಾದ |
ದೊರೆಗಳಾರೆಂಬುದಂ ವಿಸ್ತರಿಪೆ ಪೂರ್ವದೊಳ್ |
ಹರನಾಜ್ಞೆಯಿಂದಾದಿಬ್ರಹ್ಮನಂಗದಿ ಮರಿಚಿಯೆಂಬನುದಯಿಸಿದನಲ್ಲಾ ||
ಇರಲಾತನುದರದೊಳ್ ಕಶ್ಯಪಂ ಜನಿಸಿದಂ |
ವರಕಶ್ಯಪಂಗಂ ವಿವತ್ಸ್ವಾತಂಗಾದ |
ಸುರುತರಚರಿತ್ರವೈವಸ್ವತಂ ಮನುವವಂಗಿಕ್ಷ್ವಾಕು ಮಗನಾದನು || ೧೫ ||

೧ ಓಹ (ಶಿ, ಗೋ, ಹು, ತು, ದಾ, ಮ.) ೨-೨ ರಾರ್ ಕಾರಣವನುಸುರೆನಲ್ಕಿಂ (ಮ.)

ಆತಂಗೆ ನಿಮಿ ವಿಕುಕ್ಷಿಗಳೆಂಬ ಪೆಸರ ತನು |
ಜಾತರ್ ವಿಕುಕ್ಷಿಗೆ ಪುರಂಜಯಸುಭೂಪಾಲ |
ನಾತಂಗೆ ನೇನಸ್ಸನಾತಂಗೆ ಪೃಥುವಾ ನೃಪಾಲಕನ ಸಂತತಿಯೊಳು ||
ಜಾತನಾದಂ ಕುವಲಯಾಶ್ವನಾ ಸಂತತಿ |
ಪಾತ್ರದೊಳ್ ಯೌವನಾಶ್ವಂ ಜನಿಸಿದಂ ಬಹುತ್ರ |
ಪಾತುರಂ ಯಾಗಮಂತ್ರೋದಕವನೀಂಟಿಲ್ ಮಹಂಧಾತಮಗನಾದನು || ೧೬ ||

ಅತಿದಾನಿ ಮಾಂಧಾತಗಂ ತದಂಗನೆ ಬಿಂದು |
ಮತಿಗಂಬರೀಷ ಪುರುಕುತ್ಸರೆಂಬಿರ್ವರುಂ |
ಸುತರಾದರೆಸೆವ ಪುರುಕುತ್ಸಸಂತತಿಯಲ್ಲಿ ಸತ್ಯವ್ರತಂ ಜನಿಸಿದಂ ||
ಅತುಳಬಲಸತ್ಯವ್ರತಂಗಾ ತ್ರಿಶಂಕುಭೂ |
ಪತಿಯಾದನಾತಂಗೆ ಜನಿಸಿದಂ ಕೇಳು ಸೂ |
ನೃತಹರಿಶ್ಚಂದ್ರನಾತಂಗೆ ಸಂಜನಿಸಿದಂ ಲೋಹಿತಾಶ್ವಕುಮಾರನು || ೧೭ ||

ಆ ಲೋಹಿತಾಶ್ವವಂಶಾವಳಿಯೊಳಾದಂ ನೃ |
ಪಾಲಸಗರಂ ತದಾತ್ಮಜಸಮಂಜಸನವಗೆ |
ಲೀಲೆಯಿಂದಂಶುಮಾನೆಂಬವಂ ಸುತನಾದನಾತಗೆ ದಿಳೀಪನೃಪನು ||
ಕೇಳಾದೊಡಾ ದಿಳೀಪಂಗಂ ಭಗೀರಥಂ |
ಮೇಳದಾತ್ಮಜನಾ ಭಗೀರಥನ ವಂಶದೊಳ್ |
ಸ್ಥೂಲಬಾಹುವೆನಿಪ್ಪನಾದನಾತಂಗೆ ರಘು ರಘುನೃಪಂಗಜನಾದನು || ೧೮ ||

ಆ ಮಹೀಪತಿಯ ಗರ್ಭದೊಳುದಿಸಿದಂ ಸುಗುಣ |
ಧಾಮ ದಶರಥನಾತನುದರದೊಳಗಂದು ರಘು |
ರಾಮನುದ್ಭವಿಸಿ ತಾಂ ಬಾಲಲೀಲೆಯ ಕಳಿದು ತಾಟಕಿಯನುರೆ ಮರ್ದಿಸಿ ||
ಭೂಮಿಸುತೆಯಂ ಮದುವೆಯಾಗಿ ಬರುತಾ ಪರಶು |
ರಾಮನಡ್ಡೈಸಲಾತನ ಚಾಪಮಂ ಸೆಳೆದು |
ಪ್ರೇಮದಿಂ ತಮ್ಮ ಪುರವಂ ಪೊಕ್ಕು ತಂದೆಯಾಜ್ಞೆಯಲಿ ಕಾನನಕ್ಕೈದಿದಂ || ೧೯ ||

---

೧ ಸುತ (ಮ.) ೨-೨ ಉಂ ಮಾಂ (ಮ.)

ಭರತಶತ್ರುಘ್ನರೆಂಬನುಜರಲ್ಲಿಗೆ ಬಂದು |
ಕರೆದೊಡೊಲ್ಲದೆ ತಮ್ಮ ಲಕ್ಷ್ಮಣಂ ತಾನು ತ |
ನ್ನರಸಿಸಹಿತಿರುತಲ್ಲ ಶೂರ್ಪನಖಿಯೆಂಬ ರಕ್ಕಸಿಯ ನಾಸಿಕವನರಿದು ||
ಖರದೂಷಣಾದಿ ಖಳರಂ ಕೊಂದು ಹರುಷದಿಂ |
ದಿರುತೆ ಹೊನ್ನಮೃಗ ಬರಲ್ ಕೊಲಪೋಗೆ ಸೀತೆಯಂ |
ದುರುಳರಕ್ಕಸನೊಯ್ಯುತಿರೆ ತಡೆಯಲಾ ಜಟಾಯುವನಿರದೆ ಮರ್ದಿಸಿದನು || ೨೦ ||

ಸತಿಯನಾ ರಾವಣಂ ಕದ್ದೊಯ್ಯಲೀ ರಾಮ |
ನತಿದುಃಖಮಂ ಮಾಡುತಲ್ಲಿಂದೆ ಲೋಕಸ |
ನ್ನುತೆಯಪ್ಪ ಸೀತೆಯಂ ಬೆದಕುತ್ತೈತರುತಾ ಜಟಾಯುವಿರೆ ಕಂಡು ದಹಿಸಿ ||
ಗತಿಯಾವುದೆನುತಿರಲ್ ಹನುಮಂತ ಬರಲಾತ |
ನತಿಶಯಂ ಕಂಡು ಕಾಣಿಸಿಕೊಂಡು ವಾಲಿಯಂ |
ಹತಿಸಿ ಸುಗ್ರೀವನಂ ಕೂಡಿಕೊಂಡಬ್ಧಿಯಂ[೧] ಕಟ್ಟಿದರ್ ಸೇತುವೆಯನು || ೨೧ ||

ಹರುಷದಿಂ ಕಪಿಕಟಕಮಂ[೨] ಕೂಡಿಕೊಂಡಾಗ |
ಶರಧಿಯಂ ದಾಂಟಿ ರಾವಣಕುಂಭಕರ್ಣಾದಿ |
ದುರುಳರಕ್ಕಸರನೆಲ್ಲರ ಹತಿಸಿ ಬಳಿಕವನ ತಮ್ಮಂಗೆ ಪಟ್ಟಗಟ್ಟಿ ||
ಮರಳಿ ಸೀತೆಯನು ಕೈಪಿಡಿದು ರಾಮಂ ತನ್ನ |
ಪುರಕೆ ಬಂದಂ ಸತಿಯರಿಂ ಕೆಟ್ಟರಿವರೆಂದು |
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು || ೨೨ ||

ಎಲೆ ಚೆನ್ನಬಸವೇಶ ಪೇಳ್ವುದೆನಗಿನ್ನುಭಯ |
ಕುಲದೊಳತಿದಾನಧರ್ಮೋಪಕಾರಂಗಳಿಂ |
ದಿಳೆಯನಾಳಿದ ರಾಯರುಗಳದಾರ್ ಚಕ್ರವರ್ತಿತ್ವಮಂ ತಳೆದರಾರು ||
ಬಳಿಕಲವರೊಳಗೆ ಕೆಟ್ಟವರದಾರ್ ಸತ್ಕೀರ್ತಿ |
ಗೊಳಗಾಗಿ ಬಾಳ್ದರಾರೆಂಬುದಂ ಕೇಳ್ವೆನೆನ |
ಲೊಲವಿನಿಂ ಸಿದ್ಧರಾಮೇಶಂಗೆ ಚೆನ್ನಬಸವೇಶನಂದಿಂತೆಂದನು || ೨೩ ||

---

೧ ಯೊಳ್ (ಶಿ, ಮ.) ೨ ಕಟ್ಟಿ ಕಟಕಂ (ಗೋ.)

ಧರಣಿಪಹರಿಶ್ಚಂದ್ರ ನಳ ಪುರೂರವ ಸಗರ |
ಪುರುಕುತ್ಸ ಕಾರ್ತವೀರ್ಯರ್ ಚಕ್ರವರ್ತಿಗಳ್ |
ಪರಿಗಣಿಸಲರುವರುಂ ವೈನ್ಯಂ[1] ಸುಹೋತ್ರಂ ಮರುದ್ಧರಂ ಮೇದಿನಿಗ್ ತಿಳಿಯಲು[2] ||
ಭರತನಾ ಭಾಗ ಶಶಿಬಿಂದ್ವಂಬರೀಷ ಗಯ |
ಪರಿಕಿಸೆ ದಿಳೀಪನೃಪ ರಂತಿದೇವ ಯಯಾತಿ |
ವರಭಗೀರಥ ರಾಮ ನಹುಷ ಮಾಂಧಾತೃಗಳ್ ಷೋಡಶಮಹೀಪಾಲರು || ೨೪ ||

ಆಲಿಸೆಲೆ ಸಿದ್ಧರಾಮೇಶ ಜೂಜಾಡಿ ಭೂ |
ಪಾಲರೊಳ್ ನಳಧರ್ಮಜರ್ ಮದ್ಯದಿಂದೆ ಯದು |
ಜಾಲಂ ಪರಾಂಗನಾವ್ಯಸನದಿಂದಿಂದ್ರ ಕೀಚಕ ವಾಲಿ ದಶವದನರು ||
ಪೇಳಲೇಂ ಮೃಗಯಾನಿಮಿತ್ತದಿಂ ದಶರಥನ್ಯ |
ಪಾಲಪಾಂಡುಗಳ್ಪಿದೆ ನಿಂದೆಯಿಂ ಬ್ರಹ್ಮ ಶಿಶು |
ಪಾಲ ದಕ್ಷರ್ ಗುರುದ್ರೋಹದಿಂದಿಂದುತ್ರಿಶಂಕುಗಳ್ ಕೆಟ್ಟರಂದು || ೨೫ ||

ಧರಣಿಯೊಳ್ ಬೇಡಿದರ್ಗಿತ್ತ ಮಾಂಧಾತನುಂ |
ಹರಿಗೆ ರಣದೊಳ್ ಕವಚಮಂ ಕೊಟ್ಟ ಕರ್ಣನುಂ |
ಗರುಡನಹಿಯುಂ ಕಚ್ಚಿ ಕೊಲೆ ಜೀವಮಂ ಕೊಟ್ಟ ಜೀಮೂತವಾಹಾಖ್ಯನು ||
ಸುರಪತಿಗೆ ಬೆನ್ನೆಲುವನಿತ್ತಾ ದಧೀಚಿಯುಂ |
ಧರೆಯನಳೆದಸುರಾರಿಗಿತ್ತ ಬಲಿಯುಂ ಕೀರ್ತಿ |
ಪುರುಷರೆನಿಸಿದರಲ್ಲದೀಶನಂ ಭಜಿಸಿ ಮುಕ್ತಿಗೆ ಸಂದುದಿಲ್ಲೆಂದನು || ೨೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೨೭ ||

ಅಂತು ಸಂಧಿ ೫೪ಕ್ಕಂ ಪದಗಳು ೨೩೨೩ಕ್ಕಂ ಮಂಗಳಮಹಾಶ್ರೀ

---

೧ ನೃಸ್ತಂ (ಹು, ಮ.) ೨-೨ ಣೆಳೆಯೊಳು (ಶಿ, ಗೋ.)

ಐವತ್ತೈದನೆಯ ಸಂಧಿ

ಸೂಚನೆ

ಶೈವಶರಣರ ಕಥೆಯನೊಲವಿನಿಂ ಪೇಳಿನುತೆ ।
ಶೈವಸಿದ್ಧಾಂತಿಯಾ[೧] ಸಿದ್ಧರಾಮಂ ವೀರ ।
ಶೈವಸದ್ಗುರು ಚೆನ್ನಬಸವೇಶನಂ ಕೇಳೆ ಪೇಳ್ದಂ ಸವಿಸ್ತರದೊಳು ‖

ತಾರಕಾಸುರಮತ್ತಮಾತಂಗಹರ್ಯಕ್ಷ ।
ತಾರಕಾಸುರವರದಮಸ್ತಕಸಧೃತಹಸ್ತ ।
ತಾರಕಾಸುರಸುತರ್ ತಾರಕಾಂಬಕಮುಖ್ಯದನುಜಪುರವನದವಾಗ್ನಿ ‖
ತಾರಕಾಸುರ[೨]ರಿಪುಪಿತಾಮತನು[೨]ಜಾರ್ಧಾಂಗ ।
ತಾರಕಾಪತಿಕಲಾಧರಜಟಾಮಕುಟತಟ ।
ತಾರಕಾಪಥಕೇಶ ಪಂಪಾವಿರೂಪಾಕ್ಷ ತಾರೆಮಗೆ ಸದ್ವರವನು ‖ ೧ ‖

ಚೆನ್ನಾಗಿ ತಿಳಿಪು ದೇವಾಸುರಮನುಷ್ಯರೊಳ್ ।
ಮುನ್ನಿಂತು ಮುಕ್ತಿವಡೆಯದೆ ಕೆಟ್ಟರೀ ಶೈವ ।
ದಿನ್ನವ್ಯಮುಕ್ತಿಯಂ ಪಡೆದರಾರೆಂದೊಡನೆ ಸಿದ್ಧರಾಮಂ ಕೇಳಲು ‖
ಇನ್ನಾಲಿಸೈ ಶೈವದಿಂ ಮುಕ್ತಿವಡೆದ ಮಹಿ ।
ಮೋನ್ನತರಚಾರಿತ್ರಮಂ ಪೇಳ್ವೆನಾನೆಂದು ।
ಚೆನ್ನಬಸವೇಶ್ವರಂ ಕರುಣದಿಂ ಶೈವರ ಸುಚಾರಿತ್ರಮಂ ಪೇಳ್ದನು ‖ ೨ ‖

ಹರಿಭಕ್ತನೊರ್ವನಿಂದ್ರದ್ಯುಮ್ನನೆಂಬರಸು ।
ಹರಿಯನೆರ್ದೆಯೊಳಗಿಟ್ಟು ಯೋಗದಿಂ ಜಾನಿಸು ।
ತ್ತಿರಲಗಸ್ತ್ಯಂ ಬಂದೊಡಾತನಂ ಸತ್ಕರಿಸದಿರಲವನು ಕೋಪದಿಂದೆ ‖
ದುರುಳ ನಾಂ ಬರೆ ಮತ್ತನಾಗಿರ್ದ ಕಾರಣಂ ।
ಕರಿಯಾಗಿ ಪುಟ್ಟೆಂದು ಶಾಪಮಂ ಕೊಡಲಾಗ ।
ಧರಣಿಪಂ ಮದಗಜಾಕೃತಿಯಾಗಿರುತ್ತೊಂದು ಕಾಸಾರಕೈತಂದನು ‖ ೩ ‖

---

೧ ಯಹ (ಮ.) ೨-೨ ಶತ್ರುತಾತನಗ (ಹು.); ರಿಪುಪಿತಾಗತನು (ಶಿ, ಗೋ, ಮ.)

ಆಪದೊಳಿರ್ಪೊಂದು ನೆಗಳಿಂ ಗಜೇಂದ್ರನದೊಂದು |
ಪದವನುರುದಂಷ್ಟ್ರದಿಂದವಚಿಕೊಳೆ ಭೀತಿಯಿಂ |
ಪದವನಪಿತ ರಕ್ಷಿಸೆನೆ ಚಕ್ರದಿಂ ನೆಗಳ ತಲೆಯಂ ವಿಷ್ಣುವರಿದು ಬಳಿಕ ||
ಉದಕದಿಂ ಪೊರಮಡಿಸೆ ಭಕ್ತಿಯಿಂದಾ ಹರಿಯ |
ಪದಕೆರಗಿ ಮುಕ್ತಿಯಂ ಬೇಡಲೆನ್ನಿಂ ಹರಿಯ |
ದಿವು ಕೀರ ಸರ್ಪಕರ್ಣಿಕೆಯರ್ಗೆ ವರವಿತ್ತಲಿಂಗಮೊಂದಿಹುದೆಂದನು || ೪ ||

ಹರುಷದಿಂ ಗುಣಗರ್ಭನೆಂಬ ಶಿಷ್ಯಂ ತನ್ನ |
ಗುರುರಾಜಹಂಸನಂಗದೊಳೊಂದು ಜೇಡನಿರೆ |
ಪರಿಯುಲದನವನಿಯೊಳ್ ತೆಗೆದಿಡಲು ಕಂಡು ನೀನುಂ ಜೇಡನಾಗೆನುತ್ತೆ ||
ಕೆರಳಿ ಶಪಿಸಲ್ ಮುಕ್ತಿವಡೆಯೆ ಪೂಜಿಸುತಾತ |
ನಿರುತಿರ್ಪನಾ ಲಿಂಗಮಂ ನೀನುಮಾಸ್ಥಳ |
ಕ್ಕಿರದೈದಿ ಪೂಜಿಸಲ್ ಮುಕ್ತಿಯಾದಪುದೆಂದು ಹರಿ ಕರಿಗೆ ನೇಮಿಸಿದನು || ೫ ||

ಇಂತೆಂದು ಪೇಳಲಾ ಸ್ಥಳಕಾಗಿ ನಡೆತಂದು |
ದಂತಿರಾಜಂ ಜೇಡನಾಲಿಂಗಕರ್ಪಿಸುವ |
ತಂತುವಂ ಪ್ರತಿದಿನಂ ಪರಿಹರಿಸಿ ತಾಂ ಪೂಜಿಸಲ್ಕಿದತಿಕೋಪದಿಂದೆ ||
ಅಂತವರ ಸೊಂಡೆಯೊಳ್ ಪೊಕ್ಕು ಮಿದುಳಂ ಕಚ್ಚೆ |
ದಂತಿಯುಂ ಜೇಡನುಂ ಹತವಾಗಲಾ ಕ್ಷಣಂ |
ಕಂತುಹರನವರ ಭಕ್ತಿಗೆ ಮೆಚ್ಚಿ ನಿಮ್ಮಿಷ್ಟವಾವುದೆನಲಿಂತೆಂದರು || ೬ ||

ಕರುಣಿಸೆಲೆ ದೇವ ವರಮಂ ನಮ್ಮ ಪೆಸರಿನಿಂ |
ತಿರುಕಳಾಹಸ್ತೀಶನೆಂಬ ನಿಜನಾಮದಿಂ |
ಕರೆಸಿಕೊಂಡಿವಗೆ ನಿಜಪದವಿಯಂ ಕೊಟ್ಟು ಕಾಯೆಂದೆರಗಲಭವನೊಲಿದು ||
ಕರಿಯೆ ನೀಂ ಕರಿಕಾಲನಾಗುದಿಸು ಕಾಳ ನೀ |
ನಿರದೆ ಕಳಚಂಗನಾಗುದ್ಭವಿಸು ನಿಮಗೆ ಸು |
ಸ್ಥಿರಪದವಿಯಂ ಕೊಡುವೆನೆನಲಿರಡು ಚೋಳರಾಜಾಹ್ವಯದೊಳುದಯಿಸಿದುವು
|| ೭ ||

ಒರೆವೆನಾಲಿಸು ನಾಗಕನ್ನೆಯರ ಶಾಪದಿಂ |
ದುರುಶಿವಾರ್ಚನೆಯು ಪೂವಂ ವಾಸಿಸಲ್ ಕಂಡು |
ಭರದೆ ಮಣ್ಮಳೆ ಬಂದು ಸತ್ತ ಚೋಳನ ಸತಿಗೆ ಕರಿಕಾಲಚೋಳನುದಿಸೆ ||
ಧರಣೀಶ್ವರಂ ಕೂಡಿಕೊಂಡು ಕಾವೇರಿಗಂ |
ದಿರದೆ ಕಟ್ಟೆಯು ಕಟ್ಟೆ ಮುಕ್ಕಣ್ಣಚೋಳನೆಂ |
ಬರಸು ಬಾರದೊಡವನ ರೂಹು ಬರೆದಕ್ಷಿಯಂ ತಿವಿಯೆ ಪಣೆಗಣ್ಣೊಡೆದುದು || ೮ ||

ಬೀತಹಂಕಾರದಿಂ ಮುಕ್ಕಣ್ಣಚೋಳನೆಂ |
ಬಾತನೀ ಕರಿಕಾಲಚೋಳನೆಡೆಗೈದಿ ಸಂ |
ಪ್ರೀತಿಯಿಂ ನುತಿಸೆ ಪಣೆಗಣ್ಣಿತ್ತು ಕಟ್ಟೆಯಂ ಕಟ್ಟಿಸುತ್ತಿರಲಿತ್ತಲು ||
ಭೂತಳಾಧಿಪ ಪ್ರಭಾಕರಚೋಳನನುದಿನಂ |
ಶಾತಕುಂಭದ ಪರಿಯಣಂ ಸಹಸ್ರದೊಳೆ ಖ |
ದ್ಯೋತಂಗೆ ಷಡ್ರಸಾನ್ನಂ ಕಳುಪಲುಂಡವಂ ತಿರುಗಿ ಕಳುಪುವನಾಗಳು[೧] || ೯ ||

ಕರಿಕಾಲಚೋಳನಟ್ಟಿದ ಚರರ್ ಬಾರೆಂದು |
ಕರೆಯಲೊಲ್ಲದೊಡಾಣೆಯಿಟ್ಟು ತಡೆಯಲ್ ಪೊನ್ನ |
ಹರಿವಾಣಮನಿತುಂ ದಿವಾಕರನ ಪೊರೆಗೈದದಿರಲಾತನಿಳಿದು ಬಂದು ||
ಹರಭಕ್ತರೊಳ್ ವಿರೋಧಂ ಕೊಂಬುದೇ ಪೋಗಿ |
ವಿರಚಿಸಾ ಕಟ್ಟೆಯಂ ನೀನೆಂದು ಪೇಳ್ದ ದಿನ |
ಕರನಾ ಪ್ರಭಾಕರನನಟ್ಟಿದಂ ಶಿವಭಕ್ತರಂ ಮೀರಿ ಬಾಳ್ವರುಂಟೇ || ೧೦ ||

ಆಲಿಸೈ ಪಿಟ್ಟವ್ವೆಗಭವನಾತ್ಮಜನಾಗಿ |
ಲೀಲೆಯಿಂ ಮಣ್ಣನಾ ಕಟ್ಟೆಗಡಕುತ್ತೊಲ್ದು |
ಕೈಲಾಸಕಾಕೆಯಂ ಕೊಂಡೊಯ್ಯೆ ಚೋಳನಿಕ್ಷಿಸಿ ಶಂಭುವಂ ಮೆಚ್ಚಿಸಿ ||
ಪಾಲಿಸೆನ್ನಯ ರಾಜ್ಯದೊಳ್ ಪೊನ್ನಮಳೆಯನೆ |
ನ್ನಾಲಯದೊಳಾದ ನೈವೇದ್ಯಮಂ ಸಲಿಸೆನಲ್ |
ಬಾಲೇಂದುಮೌಳಿ ಕೈಯ್ಕೊಂಡಂತೆ ಸಲಿಸಿದಂ ಭಕ್ತನ ಮನೋರಥವನು[೨] || ೧೧ ||

---

೧ ಲಿ (ಹು, ಮ.) ೨ ಕನು (ಹು, ಮ.)

ಒಂದು ದಿನವಿಶಾತ್ಮರಂ ತೆರೆಯ ಮರೆಯೊಳ್ ಮುನ್ನಿ |
ನಂದದಿಂ ಚೆಪ್ಪರಿವುತಾರೋಗಿಸದಿರಲಗಿ |
ನಿಂದೆ ಮೆಚ್ಚಿಸೆ ಸಲಿಸೆ ಏಕೆನಲ್ ಮಾಪಾರ ಚೆನ್ನಯ್ಯನೊಡನೆ ಸಲಿಸಿ ||
ಬಂದೆವೆನಲಾತನಂ ತೋರೆನಗೆನಲ್ ತೋರ |
ಲಂದಾತನಡಿಗೆರಗಿ ಪೊಗಳುತಿರೆ ಗಿರಿರಾಜ |
ನಂದನೆಯ ವರನಿರ್ವರಂ ತನ್ನ ಕೈಲಾಸಪುರಕಿರದೆ ಕರೆದೊಯ್ದನು || ೧೨ ||

ಒರೆವೆನಾಲಿಪುದು ಕಳಚಂಗಪೆರುಮಾಳೆಯೆಂ |
ಬರಸಿನರ್ಧಾಂಗಿ ಚೊಲ್ಲಡಿನಾಚಿ ಬರುತಲಾ |
ಹರನ ಪೂಜೆಯ ಪೂವನೊಂದ ವಾಸಿಸೆ ಕಂಡು ತೊಣೆಯಾಂಡಿ ಮೂಗರಿಯಲು ||
ಅರಸನೀಕ್ಷಿಸಿ ಮೊದಲೆ ತಪ್ಪಿದೀ ಕರವಿರ |
ಲ್ಕರಿವರೇ ಮೂಗನೆಲೆ ಮರುಳೆ ನೀನೆನುತವಳ |
ಕರವನರಿಯಲ್ಕಭವನೊಲಿದಿವರ್ ಮೂವರಂ ಕೈಲಾಸಪುರಕೊಯ್ದನು || ೧೩ ||

ಆಲಿಸಿನ್ನೆಲಿ ರಾಮ ಸತ್ಯೇಂದ್ರಚೋಳಭೂ |
ಪಾಲಂಗೆ ಮಿತವಚನ ಮಂತ್ರಲಕ್ಷ್ಮಾಹ್ವಯದ |
ಬಾಲರುಂಟಾ ಮಂತ್ರಲಕ್ಷ್ಮನಂ ಕೂಡಿಕೊಂಡೊಂದಿನಂ ವೈಹಾಳಿಗೆ ||
ಲೀಲೆಯಿಂ ಮಿತವಚನನೈದೆ ಬರುತಿರಲೊರ್ವ |
ಬಾಲೆ ತಿರುಕೊಳನಾಚಿಯಾತ್ಮಜಂ ಶಂಕರಂ |
ಮೇಳದಿಂದಾಡುತಿರೆ ಮಂತ್ರಲಕ್ಷ್ಮನ ಹಯದ ಖುರಹತಿಗೆ ತಲೆ ಹರಿದುದು || ೧೪ ||

ಕಂಡು ತಿರುಕೊಳನಾಚಿ ಮೊರೆಯಿಡುತೆ ತಲೆಯುಮಂಶಿ |
ಕೊಂಡು ರಾಯಂಗೆ ದೂರಿಡೆ ಮಗನ ಶಿರವ ನಿಂ |
ಖಂಡಿಸೆಂದಾ ಪ್ರಧಾನಿಗೆ ಬೆಸಸಲೊಡೆಯನ ಕುಮಾರನೆಂದುಳಿಹಿ ತನ್ನ ||
ಮಂಡೆಯಂ ಮನೆಗೆ ಬಂದರಿದುಕೊಳೆ ಮಂತ್ರಿಯು |
ದ್ದಂಡಿಸಿದನೆಲಮೊ ಸಂದಾಯಿ ಸೀನಿತನಂ |
ಕೊಂಡೊಯ್ದು ಮಸ್ತಕವನರಿಯೆನುತೆ ಮಂತ್ರಲಕ್ಷ್ಮನನವನ ವಶಕಿತ್ತನು || ೧೫ ||

೧ ೧ ಕೊಂಡುಪುಕ್ಕನೊಳು (ಶಿ, ಗೋ.) ; ಕಿರದೆ ಕೊಂಡೊಯ್ದನು (ಹು, ಮ.) ೨ ಲೆಯ (ಹು.) ೩ ಮುಮುಂ (ಹು, ಷು, ಮಿ.)

ಅರಸನಾಜ್ಞೆಯೊಳೆ ಶಿರವರಿಯೆ ಪಂಚಾಕ್ಷರಿಯು |
ಸ್ಮರಣೆಯಿಂದಿರ್ಪ ಶಿರಮಂ ನೋಡಿ ಭೂಪನ |
ಚ್ಚರಿವಟ್ಟುದೇನೆನಲ್ ಚೋದ್ಯವೇನೆನುತೆ ಸಂದಾಯಿ ತನ್ನಯ ಶಿರವನು ||
ಅರಿದೀಯಲಾ ಶಿರಂ ಪ್ರಣವಪಂಚಾಕ್ಷರಿಯ |
ಸ್ಮರಿಸುತಿರೆ ಕಂಡು ತಿರುಕೊಳನಾಚಿ ಮಾತ್ಸುತಂ |
ಗರಸನಣುಗಂ ಸಾಟಿಯಿಾತಂಗೆ ಪಳಿಯೆನುತೆ ತನ್ನ ತಲೆಯುಂ ಕೊಟ್ಟಳು || ೧೬ ||

ಅನಿತರೊಳಗಾ ಪ್ರಧಾನಿಯ ಮಸ್ತಕಂ ಬೇಗ |
ಜನಪತಿಯು ಪೊರೆಗೆ ಬರಲವಕವೇ ಸರಿಯಿಾತ |
ನೆನಗಾಗಿ ಮಡಿದನೆಂದಾ ಕ್ಷಣಂ ತನ್ನುತ್ತಮಾಂಗಮಂ ನೃಪನರಿಯಲು ||
ಮನೆಯೊಳಿರ್ದಾ ಮಂತ್ರಲಕ್ಷನಂ ನಾನೊಯ್ಯ |
ಲಿನಿತಾದುದೆನ್ನಿಂದೆನುತ್ತಲಾ ಮಿತವಚನ |
ನನುನಯದೆ ತನ್ನ ಶಿರವರಿಯೆ ಪಂಚಾಕ್ಷರಿಯನುಚ್ಚರಿಸುತಿರ್ದುದಂದು || ೧೭ ||

ಇಂತಿನಿಬರೆಲ್ಲರುಂ ಬೆರಸಿ ತನ್ನಯ ಜೀವ |
ಕಾಂತನಳಿದಂ ತನ್ನ ಪ್ರಾಣಮೇಕೆನುತೆ ನೃಪ |
ಕಾಂತೆ ತನ್ನಯ ಶಿರವನರಿವನಿತರೊಳಗವಳ ಭಕ್ತಿಭಾವನೆಗೆ ಮೆಚ್ಚಿ ||
ಕಂತುಹರನಬಲೆ ವರವೇನೆನಲ್ ಶಂಕರಂ |
ಗಂತರಿಸದಸುವೀಯೆನಲ್ಕದಕೆ ಮೆಚ್ಚಿ ಭೂ |
ಕಾಂತಾದಿಗಳ್ಗೆ ಹರಣವನಿತ್ತು ಬಳಿಕವರ ಕೈಲಾಸಪುರಕೊಯ್ದನು || ೧೮ ||

ಕರವೂರೆನಿಪ್ಪ ಪುರದೊಳ್ ಧರ್ಮಚೋಳನೆಂ |
ಬರಸಂಗೆ ಭೀಮಚೋಳಾಹ್ವಯದ ಸುತನಿರು |
ತ್ತಿರುತೆ ವೈಹಾಳಿಗೈದುವ ಸಮಯದೊಳಗೊಂದು ಪಸುವಿನೆಳೆಗರು ಸುಳಿಯಲು |
ಅರಿದುದು ವರೂಥಚಕ್ರಂ ರಾಯನವನ ತಾಂ |
ಪರಿಹರಿಸೆ ಶಂಭು ಮೆಚ್ಚಿದೆನೆನಲ್ ಕರುವಿಗಸು |
ದೊರೆಕೊಳ್ಳಲೆನೆ ಮತ್ತೆ ಮೆಚ್ಚಿ ಮಗನಸುವಿತ್ತು ಕೈಲಾಸಪುರಕೊಯ್ದನು
|| ೧೯ ||

---

೧ ಸೂ (ಹು, ಮ.) ೨ ಕಿರದೊ (ಹು, ದಾ, ಮ.)

ಉತ್ತುಂಗಚೋಳನೀಶ್ವರವರದೆ ಕುವರನಂ |
ಪೆತ್ತನಮ್ಮುಡಿಚೋಳನಂ ಪುರದೊಳಾಡುತಿರೆ |
ಮತ್ತಗಜನೈತರಲ್ ಕೊಂದು ತನ್ನಂಗುಷ್ಠದಿಂದವಚಿ ಬಿಸುಡಲಾಗಿ |
ಸುತ್ತಣವನಿಪರಂಜಿ ಪೋಗಲೀತಂ ಕೇಳ್ದು |
ಪತ್ತಿತೆನ್ನೊಳ್ ಪಾಪಮೆನುತೆ ಶಿವಲಿಂಗಮಂ |
ಬಿತ್ತರದೊಳೊಂದುಕೋಟಿ ಪ್ರತಿಷ್ಠೆಯನೆಸಗಿ ಕೈಲಾಸಪುರಕೈದಿದಂ || ೨೦ ||

ಲೀಲೆಯಿಂ ಚೇರಪಾಂಡ್ಯರ್ ವೆರಸಿ ರಾಜೇಂದ್ರ |
ಚೋಳನಿಂದ್ರನ ಬಳಿಗೆ ನಿಚ್ಚಲುಂ ಪೋಗಿಯವ |
ನೋಲಗದೊಳಿರ್ದು ಬರುತೊಂದುದಿನ ಬಾಗಿಲೊಳ್ ಬಿಗಿದ ಪಾವುಗೆಗಳ |
ಮೇಲೆ ಹಯಮಂ ನೆಗೆಸಿಕೊಂಡೊಯ್ಯೆ ಕೋಪಮಂ |
ತಾಳಿ ತಪ್ರಾಜ್ಯದೊಳ್ ಮಳೆಗರೆಯಬೇಡೆಂದು |
ಪೇಳಲಿಂದ್ರಾಜ್ಞೆಯಿಂ ನಕ್ಷತ್ರತತಿಯನಾವೃಷ್ಟಿಯಂ ಪಸರಿಸಿದುವು || ೨೧ ||

ತಾವಿದಂ ಕೇಳ್ದಂದಿನಂದದಿಂ ಪೋಗಿಯಮ |
ರಾವತಿಯೊಳಖಿಳನಕ್ಷತ್ರಂಗಳಂ ಪಿಡಿದು |
ದೇವೇಂದ್ರನಂ ಮಾರಿ ಮನೆಯೊಳಗೆ ಸೆರೆಗೆಯ್ಯಲಮರಪತಿದಂಡು ನಡೆಯೆ ||
ಕೋವಿದಂ ಚೊಕ್ಕನೈನಾರು ನರಿವಿಂಡಂ ಹ |
ಯಾವಳಿಯ ಮಾಡಿಕೊಡಲವರ ಬಲ್ಪಿಂದಖಿಳ |
ದೇವತೆಗಳಂ ಜಯಿಸಿ ಸುರಪನಂ ಪಿಡಿಯೆ ಮಳೆ ಬರುವಂತೆ ನೇಮಿಸಿದನು || ೨೨ ||

ಹರಿ ತಾರೆಗಳ್ವೆರಸಿ ಬೀಳ್ಕೊಂಡು ಪೋದನೀ |
ಧರಣೀಶ ರಾಜೇಂದ್ರಚೋಳಂ ಕುಮಾರಿಯಂ |
ಹರುಷದಿಂ ರೇವಣಾಸಿದ್ಧಂಗೆ ಕೊಟ್ಟು ಶಿವಭಕ್ತರ್ಗೆ ಸಾಮ್ರಾಜ್ಯದ ||
ಸಿರಿಯಿತ್ತು ಕೈಲಾಸಕೈದಿದಂ ಪಾಂಡ್ಯಭೂ |
ವರನಾತ್ಮರಾಜ್ಯಮಂ ಚೊಕ್ಕನಾಥೇಶ್ವರನ |
ಪರಮಪಿಸಿಯೋಗಕಮರಿಸಿ ಕೊಟ್ಟು ವಿಭವದಿಂ ಕೈಲಾಸಮಂ ಪೊಕ್ಕನು || ೨೩ ||

ಜಡೆಯನ್ನೈನಾರಿ ಯಸ್ಯಜ್ಞಾನಿದೇವಿಯರ |
ಪೊಡೆಯೊಳುದಿಸಿದ ನಂಬಿ ನರಸಿಂಗಮೊನೆಯಾರಿ |
ಗೊಡನೆ ತಾಂ ಸಾಕುಮಗನಾಗಿ ಶಂಕಿಲೆಪರವೆಯರ ವರಸಿಯಾ ಪರವೆಯ ||
ಕೊಡಮೊಲೆಯೊಳಭವನಂ ನುಡಿಸಿ ಪಡಿಹೊನ್ನಸುಂ |
ಪಡೆದು ಸೋಮಸಿಯಾರ ಮಖಕೀಶನಂ ಕಳುಪಿ |
ಬಿಡದೆ ಪೆರುಮಳಲೆ[1]ಯ ಕುರುಂಬರಂ ಬೆರಸನಿಬರಂ ಶಿವಪುರಕ್ಕೊ[2]ಯ್ದನು || ೨೪ ||

ಚೇ[3]ರಮಂ ತದ್ವಾರ್ತೆಯಂ ಕೇಳ್ದು ಧರೆಯ ಭಂ |
ಡಾರಮಂ ತಿರುನೀಲಕಂಠಪಾಣಿಗೆ ಕೊಟ್ಟು |
ವಾರಹರಭಕ್ತಿಯಿಂ ಕೈಲಾಸಪುರಕೆ ದಾಳಿಯನಿಟ್ಟನುತ್ಸವದೊಳು ||
ವೀರಚಂಡೇಶ್ವರಂ ಲಿಂಗಮಜ್ಜನಕೆ ಗೋ |
ಕ್ಷೀರಮಂ ಕರೆಯೆ ಲಿಂಗಮನೊದೆದ ತಂದೆಯಂ |
ಕ್ರೂರ ಹೋಗೆನುತೆ ಶಿರವರಿಯಲಭವಂ ಮೆಚ್ಚಿ ಕೈಲಾಸಪುರಕೊಯ್ದನು || ೨೫ ||

ಪಿಂತೆ ಮೊನೆಧರಚೋಳನಖಿಳಸಾಮ್ರಾಜ್ಯಮಂ |
ಸಂತೋಷದಿಂದಾಳುತಿರಲೊರ್ವ ಜಂಗಮಂ |
ಕಾಂತೆಯಳಿಯಲ್ಕೆ ಬಹುದುಃಖದಿಂದವಳೊಡನೆ ಮಡಿವೆನೆನೆ ನೃಪತಿ ತನ್ನ ||
ಕಾಂತೆಯಂ ಕೊಟ್ಟು ಮಸ್ತಕದ ರತ್ನಮನಿತ್ತು |
ಚಿಂತೆಯಂ ಬಿಟ್ಟು ಸೇವಕನಾಗಿ ನಡೆವುತಿರೆ |
ಕಂತುಹರನಾತಂಗೆ [4]ಕೈಲಾಸಪದವಿಯಂ ಕೊಟ್ಟನಧಿಕೋತ್ಸವದೊಳು[4] || ೨೬ ||

ಆಲಿಸೆಲೆ ಸಿದ್ಧರಾಮೇಶ ನೀಂ ಕೈವಲ್ಯ |
ಚೋಳನಹಿತರ ಮೇಲೆ ಪೋಗಿ ಮೂರಬ್ದಮಂ[5] |
ಜೋಲಿಯಾಗಲ್ ತನ್ನ ರಾಜ್ಯಕ್ಕೆ ಬರನ್ಯೈದೆ ಸಿರಿವಂತಸೆಟ್ಟಿ ತನ್ನ ||
ಆಲಯದ ಧನವನಿತ್ತೆಲ್ಲರಂ ಸಲಹಲಾ |
ಚೋಳನಾಲಿಸಿ ಸೆಟ್ಟಿಗುರೆ ಪಟ್ಟಮಂ ಕಟ್ಟಿ |
ಪಾಲಿಸು [6]ಧರಿತ್ರಿಯನೆನಸಲ್ಕೊಲ್ಲದಿರೆ ಶಿವಂ ಕೈಲಾಸಪುರಕೊಯ್ದನು[6] || ೨೭ ||

---

೧ ಪೇರುಮಳೆ (ಶಿ.) ; ಪೆರುಮಳೆಯ (ಗೋ.) ೨ ಶಿವಂ ಪುರಕೊ (ಗೋ.) ೩ ಚಾ (ಗೋ, ಮ.) ೪-೪ ಮೋಕ್ಷಪದವಿಯನಿತ್ತು ಕೈಲಾಸಪುರಕೊಯ್ದನು (ಶಿ, ಗೋ.) ೫ ಮುಂ (ಮ.) ೬-೬ ಧರೆಯನೆನಲ್ಕೊಲ್ಲದಿರೆ ಶಿವನಂದು ಕೈಲಾಸಪುರಕೊಯ್ದನು (ಶಿ, ಗೋ.) ; ಧರಿತ್ರಿಯನೆನಲ್ಕೊಲ್ಲದಿರೆ ಶಿವಂ ಕೈಲಾಸಕೊಯ್ದನವರ (ಹು, ತು, ದಾ, ಮ.)

ಮನುಜೇಂದ್ರ ಚೋಳಭೂಪಾಲಕಂ ಪೊಸಲಿನ |
ಮನಮೊಳೊಪ್ಪುವ ಶಿವಾಲಯಮನೀಕ್ಷಿಸಿ ತಾನು |
ಮನುನಯದೊಳನುಪಮಶಿವಾಲಯಂಗಟ್ಟಿ ಮಜ್ಜನಕೆಳ್ಳನೊಣಗಿಸುತಿರೆ ||
ಮುನಿರಾಜನೈದಿ ಭಕ್ಷಿಸೆ ಕಾಪಿಗರ್ ಕೊಂಡು |
ಜನಪತಿಯ ಪೊರೆಗೆ ತರಲೇಕೆ ಮೆಲ್ದಪೆಯೆನ |
ಲ್ಕನುದಿನಂ ಶಿವನಣುಗನಾಗಿ ಪುಟ್ಟುವೆನೆಂದು ಮೆಲ್ದಪೆಂ ಕೇಳೆಂದನು || ೨೮ ||

ಆದೊಡಾಂ ಶಿವಭಕ್ತರಣುಗನಹೆನೆನುತಹ |
ಲ್ಲಾದದಿಂದವನ ಬಾಯೆಳ್ಳನೀತಂ ಮೆಲ |
ಲ್ಕಾ ದೇವರಿವರೀರ್ವರಣಲಿಂದೆ ಬೀಳ್ವೆಳ್ಳ ಮೆಲಲೇಕೆ ಮೆಲ್ವೆಯೆನಲು ||
ಆದರದೆ ನಿಮಗೆ ಮಗನಹೆನೆಂದು ಮೆಲ್ವೆನೆನು |
ತಾದಿಪುರುಷಂ ಮೆಚ್ಚಿ ಚೋಳ ಮುನಿರಾಜರುಮ |
ನಾ ದಿವ್ಯಕೈಲಾಸಪುರಕೆ ಕೊಂಡೊಯ್ದನೆಲೆ ರಾಮ ನೀಂ ಕೇಳೆಂದನು || ೨೯ ||

ವೀರಚೋಳಂ ದಿನಂಪ್ರತಿ ಶಿವನ ಸಾಹಸ್ರ |
ವಾರಿಜದೊಳರ್ಚಿಸುತ್ತೊಂದುದಿನಮೊಂದುಳಿಯೆ |
ಧೀರತನದಿಂ ಶಿರವನರಿದೇರಿಸಲ್ ಶಿವಂ ಮೆಚ್ಚಿ ಶಿವಪುರಕೊಯ್ದನು ||
ಮಾರಹರಭಕ್ತಂ ಪಗಲ್ಚೋಳನೆಂದೆಂಬ |
ಧಾರುಣೀಶಂ ಜಡೆಯ ತಲೆಗೆ ಮುಡಿದಲೆಯಿತ್ತು |
ಕಾರುಣ್ಯಸಾಗರನ ಕೈಲಾಸಮಂ ಪೊಕ್ಕನೆಲೆ ರಾಮ ಕೇಳೆಂದನು || ೩೦ ||

ವೀರಪಾಂಡ್ಯಂ ಮಹೇಶಂಗೆ ಗಿರಿರಾಜಂ ಕು |
ಮಾರಿಯಂ ಕೊಟ್ಟುದಂ ಕೇಳ್ದು ತಾನುಂ ತನ್ನ |
ನಾರಿ ರತ್ನಾವತಿಯ ಗರ್ಭದಿಂ ಶರ್ವಾಣಿಯಂ ಪಡೆದು ಶಂಕರಂಗೆ ||
ಓರಂತೆ ಮದುವೆಯಂ ಮಾಡಿ ನಿಜರಾಜ್ಯಭಂ |
ಡಾರಮಂ ಶಿವನ ಶರಣರ್ಗಿತ್ತು ಬಳಿಕವರ್ಗಳ್ |
ಸಾರಸಂತೋಷದಿಂ ವಿಮಳಕೈಲಾಸಪುರಮಂ ಪೊಕ್ಕರಾಳ್ ಕ್ಷಣದೊಳು || ೩೧ ||

೧ ಕ (ಮ.) ೨ ಪೆ (ಡಾ.) ೩ ಪಂ (ಶಿ, ಗೋ.) ೪ ನಾ (ಶಿ, ಗೋ.)

ಧರಣಿಪಕುಲೋತ್ತುಂಗಚೋಳರಾಯುಂ ತನ್ನ |
ಪುರಕೆ ರೋಗದ ಮೇಲೆ ಬಿರುದಿಕ್ಕೆ ಜಂಗಮಂ |
ಭರದೆ ಕುಷ್ಠವ್ಯಾಧಿಯಿಂ ಬರಲ್ ಕಂಡು ರಾಯಂ ಬಹಳ ಚಿಂತೆಯಿಂದೆ ||
ಧರಿಸಿದೆನ್ನಯ ವ್ರತಂ ವಿಘ್ನಮಾದುದೆನುತ್ತೆ |
ಕೊರಳನರಿವನಿತರೊಳ್ ಶಂಕರಂ ಮೆಚ್ಚಿ ಭೂ |
ವರನನಾ ಕೈಲಾಸಪಟ್ಟಣಕೆ ಕೊಂಡೊಯ್ದನೆಲೆ ರಾಮ ಕೇಳೆಂದನು || ೩೨

ಹರುಷದಿಂ ಶ್ರೀಕಾಳಪಿಳ್ಳೆಯರ ಗರ್ಭದಿಂ |
ದುರು ತಿರುಜ್ಞಾನಿಸಂಬಂಧಿಗಳ್ ಜನಿಸಿ ತಾಂ |
ವರ ಚೋಳಭೂಪಂಗೆ ಗುರುವಾಗಿರುತ್ತಿರಲ್ ಚೋಳಂಗೆ ಮಗಳೆನಿಸುವ ||
ಗರುವೆ ಮಂಗಾಯಕ್ಕರಸಿ ಕೂನಪಾಂಡ್ಯಭೂ |
ವರನ ಪೆಂಡತಿಯೊವ್ಮೆ ತನ್ನ ಪಟ್ಟಣಕೆ ಸ |
ದ್ಗುರುವ ಕರೆಸಲ್ ಬಂದು ಜೈನರೊಳ್ ವಾದದಿಂ ಗೆಲ್ದನತಿಸಂತಸದೊಳು || ೩೩

ವರಕುಲಚ್ಚರೆಯರಾಗಿಸಿದ ಹದಿನೆಂಟು ಸಾ |
ವಿರ ಶೂಲದೊಳಗಾ ಪ್ರಮಾಣದ ಜಿನರ್ಕಳಂ |
ತರತರದಿ ಬಸಿದು ಬಳಿಕಾ ಕೂನಪಾಂಡ್ಯನೀಶ್ವರಭಕ್ತನಾಗಿ ತನ್ನ ||
ತರುಣಿಯೊಳಗೊರ್ವ ಮಗಳಂ ಪಡೆದು ಶಂಭುಗಿ |
೧ತ್ತರಸುಂ ತಿರುಜ್ಞಾನಿಸಂಬಂಧಿಗಳ್ ಕುಲ೧ |
ಚ್ಚರೆಯರುಂ ತನ್ನರಸಿಯುಂ ವೆರಸಿ ಪರಶಿವನ ಕೈಲಾಸಮಂ ಪೊಕ್ಕರು || ೩೪

ಚತುರತಿರುವಲಿ೨ನಾಚಿಯನುಜಾತ ಪಾರ್ಶ್ವಪಂ |
ಡಿತನಿರದೆ ಜೈನರ್ಗೆ ಗುರುವಾಗಿರಲ್ಕವನಿ |
ಗತಿಶಯದ ಶೈವೋಪದೇಶಮಂ ಕೊಡಲವಂ ವಾಗೀಶನೆನಿಸಿ ತನ್ನ ||
ನುತಶಿಷ್ಯನಃಪೂತಿವೆರಸಿ ತನಗುರೆ ಶೈವ |
ಗತಿಯಿತ್ತ ತಿರುವಲ್ಲನಾಚಿಯರ್ ಸಹಿತೆ ಪಾ |
ರ್ವತಿಯರಸನಮಳಕೈಲಾಸಮಂ ಪೊಕ್ಕರೆಲೆ ರಾಮೇಶ ಕೇಳೆಂದನು || ೩೫

೧-೧ ತ್ತುರು ತಿರುಜ್ಞಾನಿಸಂಬಂಧಿಗಳು ತತ್ಕುಲ (ಹು, ಮ.) ೨ ತಿಲಿವಲಿ (ಡಾ.)

ಪರಿಕಿಸಲ್ ನಂಬಿಯಂ ಮೆರೆವಿಂಡನೆಂದು ನಿ |
ಷ್ಠುರದಿಂ ಪೊರೆಗೆ ಶಂಕರಂ ನೋಡಿ ಕೊಂಡಾಡ |
ಲಿಂದವೆ ನಾದವನಿಳಿಸಿ ಲೀಶನಂ ಮೆರೆವಿಂಡನಂ ತನ್ನ ಪುರಕೊಯ್ದನು ||
ಹರನ ಕೆಯ್ಯಿಂ ಹಡಪವಂ ಹೊರಿಸಿದಂ ನಂಬಿ |
ಪರವಾದಿಯೆಂದು ಕಲಿಕಾಮನಾಡಲ್ ಶಿವಂ |
ಕರುಣದಿಂ ಕಲಿಕಾಮನಂ ತಿಳಿಸಿ ಕೈಲಾಸಕೊಯ್ದನತಿಸಂಭ್ರಮದೊಳು || ೩೬ ||

ತಿರುನೀಲಕಂಠರಂದೆಸೆವ ಖರ್ಪರದಿಂದ |
ಮರನೀತಿಕೌಪಿನಿಂದಿರಿಭಕ್ತನಾನೆಯಂ |
ಭರವೆ ಕೊಂದಸುವಿತ್ತಿಹಪಗೆಯನಂದು ಜಂಗಮಕೆ ಪೆಂಡತಿಯನಿತ್ತು ||
ತಿರುಕುರುಂಬೆಯ ತೊಂಡರಂದು ಕಂಥೆಯನೊಗೆದು |
ತಿರುಮೂಲನೆಂಬುವಂ ಕಾಮಧೇನುವಿನಿಂದ |
ಲಿಂದೆ ತಿರುನಾಳ್ಪೋವರುಂ ಬಿಟ್ಟಿಯಂ ಪೋಗಿ ಕೈಲಾಸಮಂ ಪೊಕ್ಕರು || ೩೭ ||

ಇಳೆಯಾಂಡಿಗುಡಿಮಾರನೆಂಬವಂ ಜಂಗಮಕೆ |
ಮೊಳೆನೆಲ್ಲ ನೆಟ್ಟಕ್ಕಿ ಸೇದಿರಾಜಂ ತತ್ತ |
ಕಲಹದೊಳ್ ಕಪಟಜಂಗಮವಿರಿಯೆ ಶಿವನೆಂದು ಕಾದುತೇಣಾದಿನಾಥಂ ||
ಅಲಗಿನಿಂ ಕಪಟಜಂಗಮವಿರಿಯೆ ಶಿವನೆಂದು |
ಕೊಳಲಸ್ಸೈನಾರಿ ಕಕ್ಕೆಯಮರಂ ಶಿವನೆಂದು |
ವಲಘಾಂಡಮೂರ್ತಿ ಮೊಳಕೆಯ್ಯ ಸಿರಿಗಂಧದಿಂ ಕೈಲಾಸಮಂ ಪೊಕ್ಕರು || ೩೮ ||

ಕಾರಿಕಾಲಮ್ಮೆ ಪತಿಯಂ ಭಕ್ತನಂ ಮಾಡಿ |
ಧೀರಚಂಡೇಶನಯ್ಯನ ತಲೆಯರಿದು ನಕ್ಕ |
ನಾರುಷಿಸ ಮಡದಿ ನೀಲಕ್ಕ ಸೆಲದಿಯನೂದಿ ಕಣ್ಣಪ್ಪ ಕಣ್ಣನಿತ್ತು ||
ನಾರದಹರನಾಟ್ಯಮಂ ನೋಡಿ ನಾಟ್ಯನಿಮಿತ್ತಿ |
ಯೋರಂತೆ ರುದ್ರಪಶುಪತಿ ಶಿವನ ವಿಷಮಂ ನಿ |
ವಾರಿಸಿ ಪುಸಿನ ಪೂಜೆಯಿಂ[೪] ವಾಯಿಲಾರಿ ಕೈಲಾಸಮಂ ಪೊಕ್ಕರಂದು || ೩೯ ||

---

೧ ಪ (ಮ, ದಾ.) ೨ ಮ (ಹು, ಕು, ದಾ, ಮ.) ೩ ಯಂ (ಪ, ಶಿ, ಗೋ, ಕು, ದಾ.)
೪ ರಿಲಾರಿ (ಪ, ಶಿ, ಗೋ.)

ಕಲಿಯ ನಯ್ನಾರಿ ದೀಪಕ್ಕೆ ನೆತ್ತರನೆರೆದು |
ಕಲಿಕಂಬನೆಂಬವಂ ಪೆಂಡತಿಯ ಕರವರಿದು |
ಕಲಿಚಿಟ್ಟನೀಶಭಕ್ತರ ನಿಂದೆಗೇಳದುರುವಾಳ್ತಂಡರೀಶ್ವರಂಗೆ ||
ಸಲುವ ನೈವೇದ್ಯದಾ ರಾಜಾನ್ನಭತ್ತಮುಗೆ |
ನೆಲಕೆ ಶಿರವರಿದು ಕೊಂಗುಲಿಯ ಕಲಿಯುಂದು ಗು |
ಗ್ಗಳದ ನೇಮದೆ ಲಿಂಗಮುರುಗಿರಲ್ ತಿದ್ದಿ ಕೈಲಾಸಮಂ ಪೊಕ್ಕರಂದು || ೪೦ ||

ಸಿರಿಯಾಳನೀಶಂಗೆ ಮಗನನಟ್ಟಕ್ಕೆಯಾ |
ಪರಿಯೊಳೀ ಮನುಚೋಳನುಂ ಮಗನನಟ್ಟಕ್ಕಿ |
ಪರುಷದೆ ನಮಃಶಿವಾಯಾಖ್ಯಮುರುಘರ್ ಪರಮಪಂಚಾಕ್ಷರೀ ಮಂತ್ರದಿಂ ||
ವರಜಂಗಮಕೆ ಮಾನಕಂಜನಣುಗೆಯ ಮುಡಿಯ |
ನರಿದಿತ್ತು ಸಾಂಖ್ಯತೊಂಡಂ ಕಲ್ಗಳಿಲ್ಲದೊಡೆ |
ಶಿರವನರಿದಿಟ್ಟು ನಮಿನಂದಿ ದೀಪದ ನೇಮದಿಂ ಶಿವಪುರಂಬೊಕ್ಕರು[೧] || ೪೧ ||

ಕಡುಹುಲ್ಲನಂಬಿ[೨] ದೀಪದ ನೇಮದಿಂ ಶಿವನ |
ಗುಡಿಯನೊಲವಿಂ ರಚಿಸಿ ನೈಯಾಂಡಿಕೊಲ್ಪುಲಿಯೆ |
ಪಡಿಹೊನ್ನ ಪಡೆದು ವೆಳ್ಳೂತರುಂ ಗುರುವಿಂಗೆ ಶರಣೆಂದು ಬಲ್ಬರದೊಳು ||
ಎಡೆಗಣೆಯ ಪೆರುಮಾಳೆ ಜಂಗಮಕೆ ನೀಡಿ ಮೊನೆ |
ಯಿಡುವರಂ ಕಾದಿ ಜಂಗಮಕೊಲವಿನಿಂ ನೀಡಿ |
ಕಡವೂರಕಾರಿಯುಂ ನಗೆಯ ಕಾಯಕದಿಂದೆ ಕೈಲಾಸಮಂ ಪೊಕ್ಕರು[೩] || ೪೨ ||

ಎಸೆವಚ್ಯುತಯ್ಯನುಂ ಜೂಜಾಡಿ ಗೊಲ್ಲಾಳ |
ನೊಸೆದು ತಂದೆಯು[೪]ನರಿದು ಜಂಗಮಂ ಸಿಕ್ಕದೊಡೆ[೫] |
ಪಸಿದು ನಾಲ್ವತ್ತುದಿನಮುಪವಾಸಮಿರ್ದು ಚಿರುಪುಲಿಯಿರಿತ್ತಾಂಡಿ ಕುರುಡಂ |
ಶಶಿಧರನ ಮಜ್ಜನಕೆ ಬಾವಿದೆಗೆವುತೆ ಜೈನ |
ರಸುಗಳಂ ಸಂಹರಿಸಿ ಯಿರಿಭಕ್ತನುಂ ಮೊದಲ್ |
ವಸಪಾದ ಮಾನನುರೆ ಬಿಡುವ ನೇಮದೊಳೆ ಕೈಲಾಸಮಂ ಪೊಕ್ಕರಂದು || ೪೩

೧ ಯು (ಪ, ಗೋ.) ೨ ಸುತ (ಹು, ದಾ, ಮ.) ೩ ನು (ಪ.) ೪ ಬಿ (ಪ.) ೫ ಸು (ಪು) ೬-೬ ತಲೆಯರಿದು ಚರಂ ಸಿಕ್ಕದೊಡೆ (ಹು.); ತಲೆಯರಿದು ಜಂಗಮಂ ಸಿಗದೆ (ಮ.)

ಮಾಳವರಾಜಂ ತನ್ನ ನವಲಕ್ಕರಾಜ್ಯಮಂ |
ತನುವೆಂದಾ ಶಿವನ ಪುರಕೊಯ್ದನಾ ಮಲುಹಣಂ |
ಮಲುಹಣಿಯುಮೆರಸಿ ಕೈಲಾಸಕ್ಕೆ ಪೋದನಾ ಓಹಿಲಯ್ಯಂ ಧೂಪದ ||
ಬಲುಸೊಮದಿಂದೆ ಕೈಲಾಸಕ್ಕೆ ಪೋದನಾ |
ನಲುವಿಗೆಯು ಗುಡ್ಡವ್ವೆಯುಂ ಕುಷ್ಠಳಿಂದೆನುತೆ |
ತಳುವದಾ ಮನೆಯು ಹೊರವಡಿಸೆ ಸೌರಾಷ್ಟ್ರಪತಿಯಿಂದೆ ಕಾಂತಿಯ ಪಡೆದಳು
* || ೪೪ ||

ಕತ್ತಲೆಯ[೩]ರಾಯನ ಕುಮಾರ ಕಾಳಿಂಗ[೩]ನಾ |
ಛತ್ರಿಯಿಂ[೪] ಬರೆದ ಪುಲಿಗಂಜಿ ಪ್ರಾಣವ ಬಿಟ್ಟ[೫] |
ಸತ್ತ ಹೆಣಕಾಗ ವಧುವಾಗಿ ಬಸವನ ನೋಂಪಿಯನ್ನೊಂತು ಧೈರ್ಯದಿಂದೆ ||
ಚಿತ್ರಜಾರಿಯನೊಲಿಸಿ ಗಂಡನಸುವಂ ಪಡೆದು |
ಮುತ್ತೈದೆಯಾಗಿ ಕೆಲದಿನವಿರ್ದು ಚೆನ್ನೆ ಬಳಿ |
ಕುತ್ತಮದ ಪದವಿಯಂ ಪಡೆದಳೆಲೆ ಸಿದ್ಧರಾಮೇಶ ನೀಂ ಕೇಳೆಂದನು * || ೪೫ ||

ಹರುಷದಿಂದೆಂಟಾಲ ಮಲ್ಲಯ್ಯನೆಂಬವಂ |
ಕರವೀರಮೊಂದುಳಿಯೆ ಕಣ್ಣನರ್ಪಿಸಿ ಬಳ್ಳ |
ಮುರುಲಿಂಗಮೆಂದು ಬಳ್ಳೇಶ ಮಲ್ಲಯ್ಯನುಂ ಚಿರುತೊಣೆಯ ದಂಡಯ್ಯನುಂ ||
ತಿರಳುತಬಲಿಗೆ ಜಂಗಮಾರ್ಚನೆಯ ಮಾಡೆಂದು |
ಪಿರಿದರ್ಥಮಂ ಕೊಡಲ್ ಪರದೊಳಗೆ ಬಂಧುಗ |
ಳ್ಗಿರಿದಿಕ್ಕಿ ಬಂದು ಬಂಧುಗಳನರಿದಾಕೆಯುಂ ಸೀಳ್ದು ಶಿವಪುರವೊಕ್ಕನು
❁ || ೪೫ ಅ ||

ಆಲಿಸು ಸುವರ್ಣಭಟ್ಟರ ಮಗಂ ಮಲುಹಣಂ |
ಸೂಳೆ ಪದ್ಮಾವತಿಯ ತನುಜೆ ಮಲುಹಣಿಯನಿರ |
ದಾಲೋಕನಂ ಗೈದು ಸಿಕ್ಕಿ ಹಣಮೆಲ್ಲಮುಂ ಕೊಟ್ಟು ತೀರಲ್ ಪೊರಡಿಸೆ ||
ಪೇಳಲೇಂ ಭ್ರಮೆಗೊಂಡವಳ್ಗೆರಸಿ ವಿಜಯೇಶ |
ನಾಲಯಕೆ ಪೋಗಿ ಮೆಚ್ಚಿಸಿ ಕೆಲಪ್ರದಿನವಿರ್ದು |
ಕೈಲಾಸಕಂದು ಮಲುಹಣಿಸಹಿತ ಮಲುಹಣಂ ಪೋದನತಿಸಂಭ್ರಮದೊಳು
❁ || ೪೫ ಬ ||

೧-೧ [illegible] (ಮ.) ೨-೨ ಯನಾಂತ (ಮ.) ೩-೩ ನ ಕುಮಾರ ಕಾಳಿಂಗರಾಜ (ಮ.) ೪ ಯೊಳ್ (ಮ.) ೫ ಡಲು (ಮ.) * ಈ ಪದ್ಯಗಳು ದಾ. ಪ್ರತಿಯಲ್ಲಿಲ್ಲ. ❁ ಈ ಪದ್ಯಗಳು ದಾ. ಪ್ರತಿಯಲ್ಲಿ ಮಾತ್ರ ಇವೆ.

ಉಡುಗಣೆಯ ಪೆರುಮಾಳೆ ರಾಜ್ಯಮಂ ಜಂಗಮಕೆ |
ತಡೆಯದಿತ್ತೆಸೆವ ಪುಲಿಕಾಮನುಂ ನವನಿಧಿಯ |
ಪಡೆದು ಕಣ್ಗಳ ವಿರೂಪಾಕ್ಷನಾ ಕಣ್ಗಳಂ ಕೊಟ್ಟರದೆ ಮಗುಳೆ ಪಡೆದು ||
ಇಡುಗಡೆಯ ಪೇರ್ಮಾಡಿ ಧನಧಾನ್ಯ ವಸ್ತುಗಳ |
ನೊಡನೆ ಜಂಗಮಕಿತ್ತು ಶಿವಯೋಗಿ ದೇವಯ್ಯ |
ನಡಿಗಡಿಗೆ ನಾಲಗೆಯನರಿದಿತ್ತು ಪಡೆದು ಕೈಲಾಸಮಂ ಪೊಕ್ಕರಂದು
@ || ೪೫ ಕ ||

ಕಾಳಮ್ಮನೆಂಬವಳ್ ಕಗ್ಗಲ್ಲಿನಿಂ ಕರೆದ |
ಹಾಲನೀಶಂಗುಣಿಸಿದಳ್ ಕಣ್ಗಳಂ ಕೊಟ್ಟು |
ಕಾಳಿದಾಸಂ ಮಗುಳೆ ಮೂಗಳದ ಕಣ್ಣಸುರೆ ಪಡೆದನೊಲವಿಂ ಹೇನನು ||
ಗೂಳಿಯೆಂದರಿದ ತಾಯೊಡಲನಿಬ್ಬಗಿಯಾಗಿ |
ಸೀಳಿಯುಂ ರಾಮನಾಥಂ ವೀರಸಂಗಯ್ಯ |
ನಾ ಲಲಿತತನುವನರಿದಿತ್ತು ಹೇರೂರ ನಾಚಯ್ಯನುಂ ತನುವನಿತ್ತು @ || ೪೫ ಡ ||

ಶಿವರಾತ್ರಿ ಸಂಕಣಂ ಪುಲಿಗಂಜಿ ಬಿಲ್ವದಳ |
ನಿವಹದಿಂ ಭಜಿಸಿ ಬಹುರೂಪಿಣ್ಣಿಯಾರ್ ಕುಣಿಯ |
ಲವಶಮಾಗಲ್ಕೆ ಕರುಗಾಯ್ಸಿ ಕಳವಿಂದೆ ಸುಕುಮಾರಕಂ ಶುದ್ಧಬುದ್ಧಂ ||
ವಿವಿಧರಾಗಂಗಳಿಂ ಧೂಪದಾ ಗೊಗ್ಗವ್ವೆ |
ನವಧೂಪದಿಂ ರಂಗವಲಿಯ ಸೋವಣನೆನಿ |
ಪ್ಪವನೆಸೆವ ರಂಗವಲಿಯಿಂ ಚಿರುತ್ತೊಣಿಯಾಂಡಿ ಪಡಿಹೊನ್ನ ಪಡೆದು ಬಳಿಕ
@ || ೪೫ ಇ ||

ಹುಲಿಗೆರೆಯ ಸೋವಣಂ ನಮಿಸಿ ಜಿನನಂ ಹತಿಸಿ |
ಬಲುಲಿಂಗಮಂ ಮಾಡಿ ಮಾರುಡಿಗೆನಾಚನಾ |
ಖಳಜೈನರಂ ಗೆಲ್ದು ಓಹಿಲಂ ಗುಗ್ಗುಳಂ ಬಿಲ್ವದಳ ನೇಮದಿಂದೆ ||
ಮಳೆಯ ರಾಜಂ ತನ್ನ ನವಲಕ್ಷಸೀಮೆಸಹ |
ಕಲಿಯುದ್ಭಟಂ ತನ್ನ ಪುರವೆರಸಿ ಸರ್ವರುಂ |
ನಲವಿನಿಂ ಕೈಲಾಸಮಂ ಪೊಕ್ಕರೆಲೆ ಸಿದ್ಧರಾಮೇಶ ಕೇಳೆಂದನು @ || ೪೫ ಫ ||

@ ಈ ಪದ್ಯಗಳು ದಾ. ಪ್ರತಿಯಲ್ಲಿ ಮಾತ್ರ ಇವೆ.

ನಿಂದಕರ ನುಡಿಗೆ ಭೋಜನ ಗುರುದ್ಭಟನಳಿಯು |
ಲಂದವನ ಸುಟ್ಟು ಪೊಗೆಯಿಂ ಶಾಪದಿಂದಿರು |
ತ್ತೊಂದುಳಿದುಲೋಳ್ಪೊರು ಭೂತವಿನಾಶನ ಪುರಕ್ಕೈದಲುಳಿದೊಂದು ಭೂತಂ ||
ಬಂದವಂ ಕಾಣದಳುತಿರೆ ಭೋಜನದರ ದೆಸೆ |
ಯಿಂದೆ ಮಗುಳಾ ಗುರುವಿನಸ್ಥಿಗಳ ಪೊಗೆಯೊಳಗೆ |
ಚಂದದಿಂದಖಿಳಜನವೆರಸಿ ವಟವೃಕ್ಷಮಂ ಪತ್ತಿ ಶಿವಪುರಕ್ಕೈದಿದಂ || ೪೬ ||

ವರಸಿಂಗಿ[೧]ದೇವ ಸಾತ್ವಿಕ ಸಂಗಯ್ಯ ದೇ |
ವರ ಪಡಿ[೨]ಹಾರಿ ಬಸವಯ್ಯ ಕಾಮಲದೇವಿ |
ಪರಿಕಿಸಲ್ ದೇವಯ್ಯ ರೇವಯ್ಯ ಮೋಳಿಗೆಯ ಸಂಗವ್ವೆ ಕನ್ನಮರಸಿ ||
ಇರದೆ ಪೂವಿನ ಬಾಚಿದೇವ ರೋಹಿಲ ಬೊಪ್ಪಿ[೩] |
ನಿರುತಮುಂ ಬೊಮ್ಮಿಸೆಟ್ಟಿಗಳಿವರ್ ತೇರಸಲ್ |
ತೆರದೊಳೆ ಪವಾಡಂಗಳಂ ಮಾಡಿ [೪]ಕೈಲಾಸಮಂ ಪೊಕ್ಕರಿವರೆಂದನು[೪] || ೪೭ ||

ಹರನಾಜ್ಞೆಯಿಂ ಗಿರಿಜೆಯಿಾರೆಂಟು ಕಳೆಗಳಂ |
ಬೆರಸಿ ಗುಡ್ಡಾಪುರದೆ ಪೊನ್ನಯ್ಯ ಪಾಂಡ್ಯಭೂ |
ವರಬಿರಿದೇವಯ್ಯ ಬೀಚಯ್ಯ ಹಂದಯ್ಯ ಕಿನ್ನರ ಬ್ರಹ್ಮಯ್ಯನು ||
ಇರದೆ ಗುಡ್ಡವ್ವೆ ಪೂವಿನ ಬಾಚಿದೇವನಾ[೫] |
ವರ ಕಂದುಲಿಗೆ ನಾಗಿದೇವ ಬಾಚಲದೇವಿ |
ಪರಿಕಿಸಲ್ ಕಲಿಕೇತದೇವಿ ಸೇನಾನಾಥ ಚಿಕ್ಕಲಿಗೆ ನಾಚಯ್ಯನು || ೪೮ ||

ಪಡಿಹಾರಿಸೋಮಯ್ಯ ಮುಂತಾದ ಪೆಸರ್ಗಳಂ |
ಪಡೆದುದಿಸಿಯುಣಪೂರ ಬ್ರಹ್ಮೇಶನಂ ಕಿತ್ತು |
ನಡೆ ವಿಷ್ಣುವಂ ನಿಲಿಸಿ ಚಿಕ್ಕಲಿಗೆ ನಾಚಯನ ಕನಸಿನೊಳ್ ಶಿವನುಸಿರಲು |
ಒಡನೆ ಗುಡ್ಡಾದೇವಿಗರಿಪಲಲ್ಲಿಗೆ ಪೋಗಿ |
ಮೃಡಮೂರ್ತಿಯಂ ಪ್ರತಿಷ್ಠಿಸಿ ಪರರ ಸಮಯಮಂ |
ಜಡಿದು ಭಂಗಿಸಿ ಷೋಡಶರ್ ಮಹಾಕೈಲಾಸಪುರಕೆ ದಾಳಿಯನಿಟ್ಟರು || ೪೯ ||

೧ ವರಸಿಂಗ (ಶಿ, ಗೋ.) ೨ ವರಸ ಪಡಿ (ಶಿ, ಗೋ, ಹು, ತು, ಮ.) ೩ ಮ್ಮಿ (ತು.)
೪-೪ ಶಿವನ ಕೃಪೆಯಿಂ ಪಡೆದರೊಲವಿನಿಂದಂ (ಹು, ಮ.) ೫ ಯ್ಯ (ಹು, ಮ.)

ವರವೀರಘಂಟೆಯಾ ವ್ವೈಲಿ ಕಾಮಲದೇವಿ |
ಪರಿಕಿಸಲ್ ದೋರಿದೇವಯ್ಯ ಬೊಪ್ಪಲದೇವಿ |
ಪರಿವಿಡಿಯೊಳಾ ಸಿಂಗಿದೇವ ಚೋಳವ್ವೆ ಬೀಚಲದೇವಿ ಮಾಯಿದೇವ ||
ಪರಮಶಿವಭಕ್ತನಾ ಸಿಂಗಿರಾಜಂ ಕನ್ನ |
ಮರಸಿಯಿವರೇ ದಶಗಣಂಗಳೆಂದಾಗಲತಿ |
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು || ೫೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೧ ||

ಅಂತು ಸಂಧಿ ೫೫ಕ್ಕಂ ಪದಗಳು ೨೩೭೪ಕ್ಕಂ ಮಂಗಳಮಹಾಶ್ರೀ

ಐವತ್ತಾರನೆಯ ಸಂಧಿ

ಸೂಚನೆ

ಸಾನಂದನೊಲಿದು ಧರ್ಮಾಧರ್ಮಮಂ ಕೇಳ್ದು |
ತಾನಂದು ಯಮಪುರದ ನರಕಿಗಳನೆಲ್ಲರಂ |
ಸಾನಂದದಿಂದೆ ಶಿವಪುರಕೊಯ್ದ ಕಥೆಯನಾ ಚೆನ್ನಬಸವಂ ಪೇಳ್ದನು ||

ನಾಗೇಂದ್ರಶಯನನೇತ್ರಾರ್ಚಿತಪದಾಂಭೋಜ |
ನಾಗೇಂದ್ರವರಕಟಕಕುಂಡಲಕರಶ್ರವಣ |
ನಾಗೇಂದ್ರವಾಹಸಾದ್ಯಖಿಳದೇವವ್ರಾತಮಕುಟಮಂಡಿತಪದಾಬ್ಜ ||
ನಾಗೇಂದ್ರಸುರಮತ್ತ[1]ಮಾತಂಗಪಂಚಾಸ್ಯ |
ನಾಗೇಂದ್ರವೈರಿಯುಗವಹ್ನಿತ್ರಿಲೋಚನನೆ |
ನಾಗೇಂದ್ರಸುಕುಮಾರಿಯರ್ಧಾಂಗ ಸಲಹು ಪಂಪಾವಿರೂಪಾಕ್ಷಲಿಂಗ || ೧ ||

ಚಿತ್ತಶುದ್ಧಿಯೊಳಾಲಿಸೆಲೆ ರಾಮ ಸಂಪೂರ್ಣ |
ವಿತ್ತನೆಂಬೊರ್ವ ಋಷಿ ಹರವರದಿನಣುಗನಂ |
ಪೆತ್ತು ಮಿಗೆ ಜಾತಕರ್ಮಂ ಗೆಯ್ದು[2] ನಾಮಕರಣಮನಿರದೆ ಹರುಷದಿಂದೆ ||
ಬಿತ್ತರಿಸಿ ಸಾನಂದಪೆಸರೊಳುಪನಯನಮಂ |
ಮತ್ತೆ ವಿರಚಿಸಿ ವಿಮಲಶೈವೋಪದೇಶಮುಮ |
ನಿತ್ತು ಸಲಹಲ್ಕೆ ದಿನದಿನದೊಳಾತಂ ಬೆಳೆವುತಿರ್ದನತ್ಯುತ್ಸವದೊಳು || ೨ ||

ತಿಳಿಯಲೀಶ್ವರಭಕ್ತಿಯೇ ವಿಮಳರೂಪಾಂತು |
ಬಳೆವಂತೆ ಪ್ರಣವಪಂಚಾಕ್ಷರಿಯೆ ದೇಹಮಂ |
ತಳೆದಂತೆ ಶುಕ್ಲಪಕ್ಷೇಂದುಮಂಡಲದಂತೆ ದಿನದಿನಕೆ ಪೆರ್ಚಿ ಬಳೆದು ||
ನಲವಿನಿಂ ಬಾಲತ್ವಮಂ ನಟಿಸಿ ಬಳಿಕದಂ |
ಕಳೆದು ಸುಜ್ಞಾನಯುತನಾಗಿ ಮುನಿರಾಜಕುಲ |
ತಿಲಕನೆಂದೆನಿಪ ಸಾನಂದಮುನಿನಾಥನಿರುತಿರ್ದನತ್ಯುತ್ಸವದೊಳು || ೩ ||

---

೧ ನ್ಪೆ (ಮ.) ೨ ಮಾಡಿ (ಹು, ಮ.) ೩ ತು (ಹು.); ತಿ (ಮ.)

ವೇದಶಾಸ್ತ್ರಾಗಮಪುರಾಣಂಗಳಂ ತೀರ |
ಲೋದಿ ಪರಿಣತನಾಗಿ ಮತ್ತುಳಿದ ಸತ್ಕಲಾ |
ಭೇದಂಗಳಂ ತಿಳಿದು ವರಕಮಂಡಲ ದಂಡ ಕಾವಿ ಕಾಷಾಂಬರಗಳ ||
ಸಾದರದೊಳಾಂತು ತ್ರಿಪುಂಡ್ರ ಪಂಚಾಕ್ಷರೀ |
ನಾದ ರುದ್ರಾಕ್ಷಭೂಷಿತನಾಗಿ ಬಹುಶುಭ್ರ |
ಮಾದ ಸುಲಿಪಲ್ ಕರ್ಣಕುಂಡಲದಿನಪರಪರಶಿವನಂತೆ ರಂಜಿಸಿದನು || ೪ ||

ಇಂತೆಸೆವ ಸಾನಂದಮುನಿನಾಥನಿರುತಲತಿ |
ಸಂತಸದೊಳೀಶನಂ ಕುರ್ತು ತಪವಂ ಮಾಡೆ |
ಕಂತುಹರನಾ ಮುನಿಗೆ ಮೆಚ್ಚಿ ಶೈವೋಪದೇಶವನಿತ್ತು ಗಣಪದವನು ||
ತಾಂ ತಡೆಯದಿತ್ತಮಳಪುಷ್ಪಕವನಾಗಳ |
ತ್ಯಂತವಿನಿಯೋಗದವರಂ ಕೊಟ್ಟು ಪೋಗೆ ಮುನಿ |
ಸಂತತಿಗಳಂ ಕೂಡಿಕೊಂಡು ಸಾನಂದಗಣನಾಥನೊಲವಿಂದಿರ್ದನು || ೫ ||

ಒಂದು ದಿನಮತುಳಸದ್ಭಕ್ತಿಯುತಮುನಿವರರ |
ಸಂದಣಿಯ ಸದ್ಗೋಷ್ಠಿಯೊಳಗಿರ್ಪ ವಿಮಳಸಾ |
ನಂದಮುನಿಗೊರ್ವ ಋಷಿ ಮಾತುಮಾತಿನಲಿ ಧರ್ಮಾಧರ್ಮನಿರ್ಣಯವನು ||
ಎಂದನೀ ಲೋಕದೊಳ್ ಪುಣ್ಯಪಾಪದ ಬಹಳ[೧] |
ವೃಂದಮುಂ ಮಾಳ್ಪರಂ ಯಮದೂತರಿರದೊಯ್ವ |
ಚೆಂದಮುಂ ಪೇಳ್ವೆ ಲಾಲಿಪುದೆಂದು ವಿನಯದಿಂದಾತನೊಡನಿಂತೆಂದನು || ೬ ||

ಎಲ್ಲ ಮನೆ ಮನೆವಾರ್ತೆ ತಾಯ್ತಂದೆ ಸತಿಸುತರ |
ದೆಲ್ಲಿಯನುಗ್ರಜ ಬಂಧುಬಾಂಧವರ್ಗಳೆಲ್ಲಿ ತಾ |
ನೆಲ್ಲಿಗೈದುವೆನೆಂಬ ದುಃಖಮೆಳ್ಳನಿತಾದೊಡಂ ಮನಕೆ ತೋರದಂತೆ ||
ಎಲ್ಲೆಲ್ಲಿಯುಂ ಬಿಗಿದ ಗುಡಿತೋರಣಂಗಳುಮ |
ದೆಲ್ಲೆಲ್ಲಿಯುಂ ನರ್ತಿಪಂಗನಾಸಂಕುಲಮ |
ದೆಲ್ಲೆಲ್ಲಿಯುಂ ಪುದಿದ ಧೂಪಧೂಮಂಗಳಿಂದಾ ಪಥಂ ಕಣ್ಗೆಸೆದುದು || ೭ ||

---

೧ ಪ್ರಬಳ (ಮ.)

ದಾರಿಯೊಳಗಳವಟ್ಟ ಝಲ್ಲಿಪಟ್ಟಿಗಳ ವಿ |
ಸ್ತಾರಫಲಕುಸುಮಮಾಲೆಗಳ ಮೇಲ್ಕಟ್ಟಿನಿಂ |
ಮೋರಣವ ತೋರಣವ ಪೂರಣದ ಶೋಭೆಯಿಂದೀ ತೆರದೊಳುಂ ರಂಜಿಪ ||
ಸಾರಮುತ್ತಿನ ಸೂಸಕಂಗಳಿಂ ತಳಿದ ಪ |
ನ್ನೀರ ಚಳೆಯಂಗಳಿಂದಿಕ್ಕಿದರವಟ್ಟಿಗೆಯ |
ನಾರಿಯರ ಸೊಂಪಿನಿಂ ಧರ್ಮಿಗಳ ಕಣ್ಗೆ ಕೌತುಕಮನಿರದಾಗಿಸುವುದು || ೮ ||

ಬಲನೆಡನೊಳೆಡೆಯೆಡೆಯೊಳೆಸೆವ ನವವೀಥಿಯವ |
ರೊಳಗೆ ನಾನಾಪುಷ್ಪಲತೆ ಫಲಿತವೃಕ್ಷಮುಂ |
ತಿಳಿಗೊಳಂ ಮಣಿಮಂಟಪವ ರಚಿಸಿದರಮನೆಯೊಳುಲಿವ ಶುಕಪಿಕಸಮೂಹಂ ||
ಸುಳಿವ ನವಿಲರಸಂಚೆ ಕೊಂಚೆಗಳ್ ಸೊಂಪಿನಿಂ |
ಕಳಗೀತಮಂ ಪಾಡುವಳಿಯಲೆವ ತಂಗಾಳಿ |
ನಲಿದಾಡುವೆಳೆವೆಂಡಿರಲ್ಲದಿಲ್ಲೆಂತುಟೋ ಧರ್ಮದ ಮಹತ್ತ್ವಂಗಳು || ೯ ||

ಹರುಷದಿಂ ಧರ್ಮಿಗಳ್ ಬರ್ಪುದಂ ಕಾಣುತ |
ಲ್ಲಿರುತಿರ್ಪ ಜನರ್ಗಳೆಲೆ ಧರ್ಮಾತ್ಮರಿರ ನಿಮ್ಮ |
ದರುಶನದೊಳಾವ್ ಧನ್ಯರಾದೆವೀ ಮಂಟಪಕೆ ಚಿತ್ತೈಸಿ ಕರುಣದಿಂದೆ ||
ಪರಿಮಳದ ಗಂಧಮಿದೆ ಕತ್ತುರಿಜವಾದಿಗಳ |
ಭರಣಿಯಿವೆ ಕಜ್ಜಾಯವಿವೆ ಷಡುರಸಾನ್ನವಿವೆ |
ಪರಿಪರಿಯ ಪನ್ನೀರ್ಗಳಿವೆಕೊ ಕೈಕೊಳ್ಳಿಮೆಂದುಪಚರಿಪರೊಲವಿನಿಂದೆ || ೧೦ ||

ಬಿರಿದ ರಸದಾಳಿಂಬವಣ್ಗಳಿವೆ ಚಿತ್ತೈಸಿ |
ಪರಿಮಳಿಪ ಕುಸುಮಮಾಲೆಗಳನಂಗೀಕರಿಸಿ |
ಸರಸಕರ್ಪೂರ ತಾಂಬೂಲವಿವೆಯವಧರಿಸಿ ದೇವಾಂಗವಸ್ತ್ರಂಗಳ ||
ಪೊರಳೆಯುಂ ಕೈಕೊಳ್ಳಿ ರತ್ನಭಂಗಾರಗಳ |
ನಿರದಲಂಕರಿಸಿ ನಾನಾವಿಧರಸಾಯನಂ |
ಪರನಾಳಿಕೇರಫಲವಿವೆ ಸವಿಯಬೇಕೆಂದು ಪೇಳುವರ್ ದೈನ್ಯದಿಂದೆ || ೧೧ ||

೧ [illegible] (ಶಿ, ಗೋ, ಹು.) ; [illegible] (ಮ.) ೨ ಪಣ್ಗ್ಯ (ಶಿ, ಗೋ, ಹು, ಬ, ದಾ, ಮ.)

ಸಾನಂದಮುನಿಪ ಕೇಳ್ ಧರ್ಮನಿಷ್ಠರನಿಂತು |
ನಾನಾವಿಧೋಪಚಾರಂಗಳಿಂ ಸತ್ಕರಿಸ |
ಲಾನಂದದಿಂದೆ ಯಮದೂತರೊಡೆಯನ ಮುಂದೆ ನಿಂದಿರಿಸಿ ಬಿನ್ನವಿಸಲು ||
ಏನಿವರ ಧರ್ಮಭೇದಂಗಳೆಂದಂತಕಂ |
ತಾನಿರದೆ ಚಿತ್ರಗುಪ್ತರ್ಗಳಂ ಕೇಳಲ್ಕೆ |
ನೂನಮಿನಿತಿಲ್ಲದವರವರೆಸಗಿದಖಿಳಸದ್ಧರ್ಮಮಂ ಪೇಳ್ದರಂದು || ೧೨ ||

ಪರಮ^೧^ಪರಪುರುಷಾರ್ಥ^೧^ನೀತನೀತಂ ದಯಾ |
ಪರನತುಳಸತ್ಕಲಾದಾನಿಯಿೀತಂ ಬಿಡದೆ |
ಗುರುಹಿರಿಯರೆಂದರಿದು ^೨^ನಡೆದಾತನೀತ^೨^ನೀತಂ ಸಕಲಸನ್ಮಾರ್ಗನು ||
ಇರದೆ ಭೂದಾನವಿತ್ತಾತನೀತಂ ವಸ್ತ್ರ |
ದುರುದಾಸಮಂ ಕೊಟ್ಟನೀತನೀತಂ ಮಹೋ |
ತ್ಕರದ ಗೋದಾನಮಂ ಮಾಡಿದವನೀತನೆಂದೊದಿದರ್ ಶಮನಿದಿರೊಳು || ೧೩ ||

ವರಧೇನು ಧನ ಧಾನ್ಯ ವಸ್ತ್ರ ವಾಹನಸಮು |
ತ್ಕರ ಗೃಹ ಕ್ಷೇತ್ರ ಪರಿಮಳಕುಸುಮ ತಾಂಬೂಲ |
ಪರಿಮಳೋದಕ ಷಡ್ರಸಾನ್ನ ನಾನಾವಿಧಫಲಾನೀಕಪಾನಂಗಳ ||
ಕರೆಕರೆದು ಸತ್ಪಾತ್ರಸಂತತಿಗೆ ಸಂತತಂ |
ಹರುಷದಿಂದಿತ್ತನಿವನಿವನೀತನೀತನೆಂ |
ದಿರದೆ ವಿವರಿಸಿ ತೋರಿದರ್ ಧರ್ಮರಾಜನಿದಿರೊಳ್ ಧರ್ಮಕೋವಿದರನು || ೧೪ ||

ಪ್ರಾಣದಾನವನಿತ್ತನೀತನೀತಂ ಸುಕ |
ಲ್ಯಾಣಮಂ ಮಾಡಿದಂ ಭಕ್ತಿಯಿಂ ಜಂಗಮ |
ಶ್ರೇಣಿಯಂ ಮನ್ನಿಸಿದನೀತನೀತಂ ಗುರುಪದಾರಾಧಕಂ ತಿಳಿಯಲು ||
ಮಾಣದೀತಂ ಪುಷ್ಪವಾಟಿಯಂ ರಚಿಸಿದಂ |
ಜಾಣನೀತಂ ಸಕಲಧರ್ಮಮಂ ಮಾಡಿದಂ |
ಸ್ಥಾಣುಲಿಂಗಲಸದಭಿಷೇಕಮಂ ಮಾಡಿದವನೀತನವಧರಿಸೆಂದರು || ೧೫ ||

೧-೧ ಪುರುಷಾರ್ಥಪರ (ಶಿ, ಗೋ.) ೨-೨ ನೋಡಿ ನಡೆದಾತ (ಶಿ, ಗೋ.)

ಪಶುವಿಗುದಕವನೆರೆದವನೀತನಸಮ್ಮತಾನ್ನಮಂ |
ಪಸಿದವರ್ಗಿಕ್ಕಿದವನೀತಂ ಸುಭಕ್ತಿಯಿಂ |
ಭಸಿತರುದ್ರಾಕ್ಷಧಾರಕರನೊಲವಿಂ ಕಂಡು ನಮಿಸುತುಂ[1] ಸಂತಸದೊಳು ||
ಎಸೆವ ಪಂಚಾಕ್ಷರೀಮಂತ್ರಮಂ ಬಿಡದೆ ಜಪಿ |
ಯಿಸುವನೀತಂ ಶಿವಂಗನುದಿನಂ ಮಿಗಲೊಂದು |
ಕುಸುಮಮುಮನರ್ಪಿಸಿದನೀತನೆಂದೋದಿದರ್ ಚಿತ್ರಗುಪ್ತರ್ ಮುದದೊಳು
|| ೧೬ ||

ಈತಂ ತಟಾಕಮಂ ಕಟ್ಟಿದಂ ಸದ್ಧನ |
ವ್ರಾತಮಂ ನಿಕ್ಷೇಪಿಸಿದನಿವಂ ವಿಪ್ರಜನ |
ಕೋಂತು ವೈವಾಹಮಂ ಮಾಡಿದನಿವಂ ಶಿವಾಲಯವನೀತಂ ರಚಿಸಿದಂ ||
ಈತಂ ವನಂಗಳಂ ಬಿತ್ತಿದಂ ಶಿವಕಥಾ |
ಪೂತಪೌರಾಣವನಿವಂ ಪೇಳಿಸಿದನತಿ |
ಪ್ರೀತಿಯಿಂದಂ ಸುಪುತ್ರರನಿರದೆ ಪಡೆದಾತನೀತನವಧರಿಸೆಂದರು || ೧೭ ||

ವರದಯಾಪರನಿವಂ ದಾಕ್ಷಿಣ್ಯಯುತನಿವಂ |
ಪರಮಸದ್ಗುಣಿಯಿವಂ ಸತ್ಯಸಂಭ್ರಮಿನಿವಂ |
ಗುರುಭಕ್ತಿಪರನಿವಂ ಮಾತೃಪಿತೃಸೇವಾಸಮನ್ವಿತನಿವಂ ತಿಳಿಯಲು ||
ಕರುಣಾಕಟಾಕ್ಷನಿವನತಿಶಮದಮಾನ್ವಿತಂ |
ಪರಿಕಿಸಲ್ಕಿವನೆ ಪರಪುರುಷಾರ್ಥಕಾರಿಯಿವ |
ನಿರತರಸುಧರ್ಮಂಗಳಂ ಮಾಡಿದವನೆಂದು ಕೇಳೆಂದು ಪೇಳ್ದರಂದು || ೧೮ ||

ದಾರಿಯೊಳಗರವಟಿಗೆಯಿಕ್ಕಿದನಿವಂ ಮುದದೆ |
ಹೋರಿಗಳ ಬಸವನಂ ಬರೆದವನಿವಂ ಬಹಳ |
ದಾರಿದ್ರರಂ ರಕ್ಷಿಸಿದನಿವಂ ಪರ್ವತಕೆ ಕಂಬಿಯನಿವಂ ಪೊತ್ತನು ||
ಭೂರಿಯಿಂದನ್ನಛತ್ರಂಗಳಂ ಮಾಡಿಸಿದು |
ದಾರನೀತಂ ಶಿಸುಜನರಂ ಪೊರೆವ ಸುಶಿಪರೋಪ |
ಕಾರಿಯೀತಂ ಸದಾಶುಚಿ ಏಕಪತ್ನೀವ್ರತಸ್ಥನಿವನೆಂದೊರೆದರು || ೧೯ ||

೧ ನುತಿಸುವಂ (ದಾ.); ನಮಿಸುವಂ (ಹು, ಮ.) ೨ ಭೃತ (ಹು, ಪು, ದಾ, ಮ.)
೩-೩ ಪೊಂದಿದವರ ಪೊರೆವ (ಶಿ, ಗೋ.)

ಇಂತಿವರ ಧರ್ಮಂಗಳಿವಕವಿಾ ಲೋಕಲೋ |
ಕಾಂತರದ ಭೋಗಂಗಳುಮವರ್ಗೆ[1]ನಿತಿನಿತು ದಿನ |
ಸಂತೋಷದಿಂದುಂಡು ತೀರಿಸಲ್ವೇಳ್ಕುಮೆಂದವರಂತಕಂಗೆ ಪೇಳೆ |
ಮುಂತಿರ್ದ ದೂತರಂ ಕರೆದಿವಂ[2] ಬೆಸಸೆಯುಂಚಿ |
ತಾಂತರದೊಳಮಳಮಣಿಗಣವಿಮಾನಂಗಳೊಳ |
ಗಂತರವನಾ ಲೋಕಲೋಕದೊಳ್ ತಂದಿರಿಸಲವರಲ್ಲ ಸುಖಿಮಿರ್ಪರು || ೨೦ ||

ಒರೆವೆನಿನ್ನಾಲಿಸ್ವೈ ಸಾನಂದಮುನಿ ದುಃಖ |
ಮರಣಕಾಲದೊಳ್ಳೆದೆ ಕರ್ಮಿಗಳನಂತಕನ |
ಚರರ್ಬೈದಿ ಕಡಿ[3] ಕೆಡಪು ಬಡಿಯೆಲ್ವನುಡಿ ತಲೆಯ ಪೊಡೆ ಪೊಡೆಯುನೊಡನೆ ಸೀಳು |
ಕರುಳನುಗಿ ಕಾಲೊಳೊದೆ ತಿದಿಯ ಸುಲಿ ಕಿವಿ ಮೂಗ |
ನರಿಯುಡ[4]ಸಿ ತಿನ್ನೆನುತೆ ಗುಡುಗುಡಿಸಿ ರೌದ್ರದಿಂ |
ಮೊರೆದು ಕಿಡಿಗೆದರುತಡಿವಿಡಿದೆಳೆದು ಸೆಳೆದುಕೊಂಡೊಯ್ವರತಿಕೋಪದಿಂದೆ || ೨೧ ||

ಎಡೆವಿಡದೆ ಕಾಲ್ಗಡರ್ವ ಕಲ್ಗಳಿಂ ಮುಳ್ಗಳಿಂ |
ದೊಡನೆ ಭೀಕರಮಾದ ಘಟ್ಟದಿಂ ಬೆಟ್ಟದಿಂ |
ದಿಡಿದ ಕಂಟಕವೃಕ್ಷಜಾತದಿಂ ಭೂತದಿಂ ಪ್ರೇತದಿಂದಂಜೈಸುವ ||
ಬ[5]ಡಿವ ಪುಲಿ ಕರಡಿವಿಂಡೋಳಿಯಿಂ ಸಾಳಿಯಿಂ |
ದಡರಿ ಛಿಟಛಿಟಿಪ ಕಾಳ್ಗಿಚ್ಚಿನಿಂ ಪೆಚ್ಚಿನಿಂ |
ಪೊಡೆವ ಸಿಡಿಲ್ಮಿಂಚುಗಳ ಹೊಯ್ಗಳಿಂ ಬಯ್ಗಳಿಂ ತತ್ಪಥಮುಗುರ್ವಿಸಿದುದು || ೨೨ ||

ಸರು[6]ಗಳಿಂ ದರಿಗಳಿಂ ಹಳ್ಳದಿಂ ಕೊಳ್ಳದಿಂ |
ಮುರುಡಿನಿಂ ಮುಕ್ಕಿನಿಂ ತಗ್ಗಿನಿಂ ತೆವರಿನಿಂ |
ಪರಳಿನಿಂ ಪುತ್ತದಿಂ ಪೊಗೆಗಳಿಂ ಪಗೆಗಳಿಂ ಕಾಲ್ದೊಡರ್ವ ಪಾವ್ಗಳಿಂದೆ ||
[7]ಉರಿಗಳಿಂದೋರೆಯಿಂ ಪೋರೆಯಿಂ[7]ದಿಡಿದ ಕ |
ಮ್ಮರಿಗಳಿಂ ಕರೆವ ಕೆಂಡದ ಮಳೆಗಳಿಂ ಗಜರ್ವ |
ಮರುಳ್ಗಳಿಂ ಶಾಕಿನಿಯರಿಂ ಡಾಕಿನಿಯರಿಂದಮಾ ಪಥಂ ಬೆದರಿಸುವುದು || ೨೩ ||

---

೧ ನಿ (ಶಿ, ಗೋ.) ೨ ದೆಮುಂ (ಪ, ಶಿ, ಗೋ.) ೩ ಕೆಡ (ಶಿ, ಗೋ.) ೪ ರ (ಪ.) ೫ ಪಿ (ಮು.); ಜ (ಡಾ.) ೬ ರಿ (ಮ, ಗೋ.) ೭-೭ ಉರಿಗಳಿಂ ಮೊರೆಗಳಿಂ ಪೊರೆಗಳಿಂ (ಶಿ, ಗೋ.); ಜರಿಗಳಿಂದುರಿಗಳಿಂ ಪೋರೆಯಿಂ (ಹು.)

ನೀರಿಲ್ಲದಂಗುಳಗಳೊಣಗುತುಂ ನೆಳಲ್ಗಳುಂ |
ದಾರಿಯೊಳಗಿಲ್ಲದಂಗಂಗಳುಂ ಬೇವುತುಂ |
ಗೋರಿಕಲ್ಗಳ್ ಸೋಂಕಿ ಕಾಲ್ಗಳಿಂ ಶೋಣಿತಂ ಬಸಿವುತುಂ ಮುಳ್ಗಳಿಂದೆ ||
ಕ್ರೂರವೆಸೆ ವೇಗಾಲ್ಗೆ ಮೂಡುತುಂ ಯಮಚರರ್ |
ಸೇರದಡಿಗಡಿಗೆ ತ್ರಿವಿತ್ರಿವಿದೆಳೆವುತಂತ್ರಿಂತು |
ಘೋರದುಃಖಂಗೊಳಿಸಿ ಕೊಂಡುಪೋಪಂಡಲೆಯನೇನೆಂಬೆನಾ ಪಥದೊಳು || ೨೪ ||

ಆಡಲೇನಾ ದಾರಿಯೆಲ್ಲಮುಂ ಬರಿಯ ಸುಡು |
ಗಾಡಲ್ಲಿ ಚರಿಪರೆಲ್ಲರ್ ಭೂತರಾಕ್ಷಸರ್ |
ಕೂಡೆ ತಿರುಗುವ ಮೃಗಂಗಳ್ ದುಷ್ಟಮೃಗಮಲ್ಲಿ ವೃಕ್ಷಮೇ ಬೆಂದ ಕೊರಡು ||
ರೂಕ್ಷಿಸುವ ಝುಳಮಲೆವ ಬಿರುಗಾಳಿ ಬಿರುಬಿಸಿಂ |
ಕಾಡುತಿಹ ಯಮದೂತರಿಂ ತೆರದೊಳಡಿಗಡಿಗೆ |
ಕೋಡುತುಂ ಶೋಕಮಂ ಮಾಡುತುಂ ದೈನ್ಯಮುಮನಾಡುತುಂ ಪೋಪರಂದು
|| ೨೫ ||

ಉರಿಗಳೊಳ್ ಪೊಗಿಸುತುಂ ದರಿಗಳೊಳ್ ನೂಂಕುತುಂ |
ಕರದಿಂದೆ ಮೋದುತುಂ ಚಾಟಿಯೊಳ್ ಬಡಿವುತುಂ |
ಸರಳ್ಗಳಂ ಪೊಸೆವುತುಂ ಭೂತದಿಂ ಪೊಯ್ಸುತುಂ ಪುತ್ತದೊಳ್ ಕೈಯಿಡಿಸುತೆ ||
ಮರುಳ್ಗಳಿಂ ಪಿಡಿಸುತುಂ ಚೋರರಿಂ ಕೊರಿಸುತುಂ |
ಭರದಿಂ ಸೆಳೆದು ಪೊಯ್ವುತುಂ ಜರೆದಿರದೆ ಬಯ್ವುತುಂ |
ಗರಳದೊಳಗದ್ದುತುಂ ಬಿರುಬಿನಿಂ ಗುದ್ದುತುಂ ಬಳಲಿಸುವರೇನೆಂಬೆನು || ೨೬ ||

ಸೊಕ್ಕಿದೆಕ್ಕಲಗಳಿಂ ಪೊಯ್ಸುತುಂ ಕರಡಿಯಿಂ |
ಜಕ್ಕುಲಿಸುತುಂ ಕೆಂಡವಳಿಗೆ ವೈಗೊಡಿಸುತುಂ |
ಸಕ್ಕು ಮೂದಲಿಸುತುಂ ಪಸಿದ ಪಾವುಗಳಿಂದೆ ಹರಿಸುತುಂ ಗೋರಿಗೊಳಿಸಿ ||
ಬಿಕ್ಕಿಬಿರಿದಳಿಸುತುಂ ಪಸಿದ ಶಾಕಿನಿಯರಿಂ |
ಡೊಕ್ಕಲಿಕ್ಕಿಸುತೆ ಬುಸುಗುಟ್ಟುತಿಹ ದನುಜರಿಂ |
ಮುಕ್ಕುರಿಕಿಸುತೆ ಮುಳಿದು ಗರ್ಜಿಸುತೆ ಕರ್ಮಿಗಳನೊಯ್ವರದನೇನೆಂಬೆನು
|| ೨೭ ||

೧ ಕೂರಪೆಸೆ (ಶಿ, ಗೋ, ದಾ.); ಕೂರಮೊಸೆ (ಹು, ಮ.) ೨ ಬರಸೆ (ಮ.)

ಇಂತು ನಾನಾವಿಧದೆ ಬಾಧಿಸುತೆ ಕರ್ಮಿಗಳ |
ನಂತಕನ ಪೊರೆಯೊಳಗೆ ನಿಲಿಸಲ್ಕೆ ರೌದ್ರರೂ |
ಪಂ ತಾಳ್ದು ಚಿತ್ರಗುಪ್ತರನೆಯ್ದೆ ನೋಡುತಿವರೇಗೆಯ್ದರೆಂದು ಕೇಳೆ ||
ಇಂತಿವಂ ಕೆರೆಯೊಡೆದನರ್ಥಮಂ ವಂಚಿಸಿದ |
ನಿಂತಿವಂ ಬ್ರಹ್ಮಹತಿಗೆಯ್ದನಿವನಭವಗೃಹ |
ಮಂ ತಾಳದಳಿದಂ ವನಂಗಡಿದನಭವಕೃತಿಯುಂ ಜರೆದನಿವನೆಂದರು || ೨೮ ||

ಪರವಧೂಗಮನಮಂ ಮಾಡಿದನಿವಂ ಬಿಡದೆ |
ಗುರುವಿನುಪದೇಶಮಂ ಜರೆದನೀತಂ ಪರಮ |
ಹರಭಕ್ತರಂ ನೋಯೆನುಡಿದನೀತಂ ಕೂಟಸಾಕ್ಷಿಯಂ ಪೇಳ್ದನಿವನು ||
ಇರದಾಶ್ರಿತರನುಪೇಕ್ಷಿಸಿದನೀತಂ ನಂಬಿ |
ದರಸಿಗಪರಾಧಮಂ ಗೆಯ್ದನೀತಂ ಮಿತ್ರ |
ನರಸಿ ಮಗಳನುಜೆ ಸೊಸೆ ಸೂತಕಿಯ ನೆರೆದನಿವನಿವನೆಂದು ಸೂಚಿಸಿದರು || ೨೯ ||

ಇವನಾಗರಂಗಳಂ ತರಿದವಂ ಕೊಂಡೆಯವ |
ನಿವನುಸಿರ್ದನಬಲೆಯಂ ಕೊಂದನಿವನೀತನಿ |
ಗವನೀಸುರಗ್ರೀವ ಗೋದಾನ ಭೂದಾನ ಮುಖ್ಯಂಗಳಂ ತಡೆದನು ||
ಇವನೆಸೆವ ಹಿರಿಯರಂ ನಿಷ್ಕಾರಣಂ ಪಳಿದ |
ನಿವನಮಳಭಸಿತರುದ್ರಾಕ್ಷೆಯಂ ನಿಂದಿಸಿದ |
ನಿವನರ್ಥದಾಶೆಗನ್ಯಾಯಮಂ ಪೇಳ್ದವಂ ಕೇಳೆಂದು ಪೇಳ್ದ[೧]ರಂದು || ೩೦ ||

ಜಾತಿಧರ್ಮಂಗಳಂ ಬಿಟ್ಟು ಸಲೆ ನಡೆದಾತ |
ನೀತನತಿಮಾನ್ಯರಪಮಾನಂಗಳಂ ಕೊಂಡ |
ನೀತನಾಚರಿಪ ಸುವ್ರತಭಂಗನಾದವಂ ಖಳನಿವಂ ಕ್ರೂರನಿವನು ||
ಮಾತೆಪಿತರಂ ಬಯ್ದನಿವನುಗ್ರದಿಂ ಬಂಧು |
ಜಾತಮಂ ದಟ್ಟಿಸಿದನುದಕಕೈತಂದ ಗೋ |
ವ್ರಾತಮಂ ಪೊಡೆದು ದಟ್ಟಿಸಿದಾತನಿವನೆಂದು ಪ್ರೇತಪತಿಯೊಳ್ ಪೇಳ್ದರು || ೩೧ ||

೧ ನುಡಿದ (ಶಿ, ಗೋ, ಹು, ತು, ದಾ, ಮ.)

ಇವನುತ್ತಮರ ಮನೆಯನತಿದುರ್ಜನರಿಗಿತ್ತ |
ನಿವನಿರವೆ ಸಜ್ಜನರ ಕೆಯ್ಯ ದಂಡಂಗೊಂಡ |
ನಿವನತ್ಯವಮದದೆ ಶಿವಪೂಜೆಯಂ ಮಾಡದಾದಂ ಬಹಳನಿಷ್ಠುರದೊಳು ||
ಇವನಶ್ರುಹತಿಗೆಯ್ದು ನಿವನತಿಥಿಯಂ ಪೊಯ್ದು |
ನಿವನೀಶನಿರ್ಮಾಲ್ಯಮಂ ನಿಂದೆಯಿಂದುಳಿದ |
ನಿವನೊಡೆಯನಂ ಕೊಂದನಿವನಭಕ್ಷ್ಯಂ ತಿಂದನೆಂದವರ್ ಪೇಳ್ದರಂದು || ೩೨ ||

ಮಾಡಿದುಪಕಾರಮಂ ನೆನೆಯನಿವನಕ್ಕರಿಂ |
ಕೂಡಿದೆಡೆಗೆರಡುಗೆಮಂ ಬಗೆದನಿವನಿರದೆ ಕೊಂ |
ಡಾಡುತಿಹ ಜಡನ ಬಲ್ಲಿದರೊಳಗೆ ಬಲ್ಲದರ ಪಕ್ಷದಿಂ ನುಡಿದನಿವನು ||
ಬೇಡಿದರ್ಗಿಲ್ಲೆಂದು ಗರ್ಜಿಪನಿವಂ ಪರರ |
ಕೇಡನೀಕ್ಷಿಸಿ ಸಂತಸಂಬಡುವನಿವನಿವಂ |
ರೂಪಾಡಿ ಸತ್ಪುರುಷರಂ ನಗುವನಿವನೆಂದು ಚಿತ್ರಗುಪ್ತರ್ ಪೇಳ್ದರು || ೩೩ ||

ಪರಗೃಹದೊಳುಂಡುಂಡು ಜೀವಿಪನಿವಂ ತನ್ನ |
ಗುರುವಲ್ಲದನ್ಯರಂ ಸೇವಿಪನಿವಂ ಪಥದೊ |
ಳಿರದೆ ಕಲ್ಮುಳ್ಳಳಂ ಪರಪಿದನಿವಂ ವೇಶ್ಯೆಯೊಡನುಂಡನಿವಂ ಖೂಳನು ||
ಇರದಲನ್ಯಾಹಾರಮಂ ಕೊಂಡನಿವನಿವಂ |
ದುರುಳರೊಡನಾಡಿದಂ ದೂಷಕನಿವಂ ಪರರ |
ಸಿರಿಗೆ ಕರುಬಿಸಿಪಾತನೀತನೆಂದೋದಿದರ್ ಚಿತ್ರಗುಪ್ತರ್ ಮುದದೊಳು || ೩೪ ||

ಪರಮಶಿವಪೂಜಕರ ಕಂಡು ನಿಂದಿಪನಿವಂ |
ಪರಮಪ್ರಸಾದಮುಮನೆಂಜಲೆಂಬುವನಿವಂ |
ಪರಮಪಂಚಾಕ್ಷರಿಯ ಮಂತ್ರಮಂ ಜಪಿಪರಂ ಹಾಸ್ಯಂಗಳಾಡುವನಿವಂ ||
ಪರದೈವಕಂ ಮುಡುಹ ಮುಡಿಯನಿತ್ತವನಿವಂ |
ಪರಧನವ ಪರಸತಿಯರಂ ಬಯಸುತಿಹನಿವಂ |
ಪರಮಸತ್ಪುರುಷರಂ ಬಡಿದು ಬಾಧಿಸಿ ದಂಡಮಂ ಕೊಂಡನಿವನೆಂದರು || ೩೫ ||

೧ ಕೈಗಂಟಮಂ (ಮ.) ೨ ಮರೆದ (ಶಿ, ಗೋ, ದಾ, ಮ.) ೩ ದರು (ಶಿ, ಗೋ.) ೪ ಕ (ಕ.) ೫-೫ ನವ | ಶೋ (ಹು.) ೬ ದಾಸಿ (ಹು, ದಾ.) ೭-೭ ಖೂಳನಿವನು (ಹು, ಮ.) ೮ ದನ್ಯಘಾ (ಹು.); ದನ್ಯದಾ (ದಾ.) ೯-೯ ಸುನರ ಹಾಸ್ಯಮಂ ಮಾ (ಹು, ಮ.)

ಬೆಟ್ಟಕ್ಕೆ ಬೇಗೆಯಿಕ್ಕಿದನಿವಂ ಸಾಲಮಂ |
ಕೊಟ್ಟುದಿ[೧]ಲ್ಲೆಂದು ಬಾಯಾರಿದನಿವಂ ಪರರು |
ಬಿಟ್ಟ ಬಸವನ ಮೇಲೆ ಹೇರಿದನಿವಂ ಗೊಡ್ಡುಹಸುವ ಕಟ್ಟುತ್ತವನಿವಂ |
ಬಟ್ಟೆಯಂ ಬಡಿದು ಬಾಳಿದನಿವಂ ಪರರೊಲಿದು |
ಕೊಟ್ಟ ಪುರಮಾನ್ಯಮಂ ಸೆಳೆದುಕೊಂಡವನಿವಂ |
ಕೊಟ್ಟ ದಾನವ ನೆನೆದು ಮರುಗುತಿರ್ಪವನಿವಂ ಕೇಳೆಂದು ಪೇಳ್ವರಂದು || ೩೬ ||

ಪಸುವ ಕೊಂದವನಿವಂ ಶಿಶುವ ಕೊಂದವನಿವಂ |
ಹುಸಿದು ಚಹಡಿಯ ಮಾತನುಸಿರ್ದು ಬಾಳ್ದವನಿವಂ |
ಬಸವನಂ ಕೊಂದು ತಿಂದವನಿವಂ ಬಸವಿಯಂ ಕೊಂದ ಕಡುಪಾತಕನಿವಂ ||
ವ್ಯಸನಸಪ್ತಕದೆ ಮೆಯ್ಮರೆದಿಹನಿವಂ ಮುಂದೆ |
ಯೆಸೆವಷ್ಟಮದದೆ ಮುಂಗಾಣದಿರುತಿರ್ಪನಿವ |
ನಸಮುಸಂಗ್ರಾಮದಲ್ಲೋಡಿ[೨] ಪುಲ್ಗಚ್ಚಿ ಪುತ್ತಡರ್ದನಂ ಕೊಂದನಿವನು || ೩೭ ||

ನಂಬಿದರಿಗೆರಡ ಬಗೆದವನಿವಂ ತನ್ನಯ ಕು |
ಟುಂಬವಂ ಸಲಹಲಾರದೆ ಬಿಟ್ಟು ಪೋದನಿವ |
ನುಂಬಾಗ ಬಂದತಿಥಿಗನ್ನವಿಕ್ಕದನಿವಂ ಸರ್ವಸಾಮಗ್ರೀವೆ[೩]ವು ||
ತುಂಬಿರ್ದ ಮನೆಗೆ ಕಿಚ್ಚಿಕ್ಕಿ ಸುಟ್ಟವನಿವಂ |
ತಂಬುಲಕೆ ಕೆಯ್ಯಾಂತು ಪೆಸರಿಟ್ಟು ಕುಲಗೆಟ್ಟು |
ತಾಂ ಬದುಕಿ[೪]ದವನಿವಂ ಮೃಗ ಪಕ್ಷಿ ಜಲಚರಾಳಿ[೫]ಗಳನುರೆ ಕೊಂದವನಿವಂ || ೩೮ ||

ಗಂಡ ಮಾಡುವ ದಾನಕಡ್ಡಲಾಗುವಳಿವಳ್ |
ಕೊಂಡೆಯಂಗೇಳ್ದು ಪತಿಯಂ ನಿಂದಿಸಿದಳಿವಳ್ |
ಕಂಡವರ ಕೂಡೆ ನಸುನಗುತಿರ್ಪಳಿವಳನ್ಯಪುರುಷರುಗಳಂ ಕಾಣುತೆ |
ಕೊಂಡಾಡುತಿಹಳತ್ತೆ ಮಾವ ಮೈದುನರುಗಳ |
ನಂಡಲೆದು ಬಯ್ದು ಕೆಲದಾಡುತಿರ್ಪವಳಿವಳ್
ಗಂಡನಿರೆ ಕಳವಿನಿಂದನ್ಯಪುರುಷರ [೬]ನೆರೆವಳಿವಳೆಂದು ಪೇಳ್ದರಂದು[೬] || ೩೯

೧ ಟ್ಟೊಡಿ (ಗೋ, ಹು, ತು, ದಾ, ಮ.) ೨ ದಿಂ ಮುರಿದು (ಹು.) ೩ ಯ (ಹು, ಮ.) ೪ ಬಾಳಿ (ಹು, ಮ.) ೫ ದ (ಹು, ತು.) ೬-೬ ಕೂಡಲೆಳಸುವಳು ಕೇಳೆಂದರು (ಹು, ಮ.)

ಇವಳೆ ಭಿಕ್ಷಕ್ಕೆ ಬಂದತಿಥಿಯುಂ ಪೊರಡಿಸಿದ |
ಳಿವಳೆ ಮಂತ್ರಿಯುಲಿ ಪ್ರಪಂಚುವಂ ಮಾಡಿದವ |
ಳಿವಳಿಯುರೆಯೂಟವಿಕ್ಕೆಬ್ಬಿಸಿದಳಿವಳೆ ಹುಸಿಯುಂ ನುಡಿವಳಿವಳೆ ಕಳ್ಳಿ ||
ಇವಳೆ ಪತಿಯೊಡನೆ ನಿಷ್ಕಾರಣಂ ವಾದಿಸುವ |
ಳಿವಳೆ ಬಂಧುಗಳೊಡನೆ ಕಲಹಂಗಳಂ ತೆಗೆವ |
ಳಿವಳೆ ಗಂಡನ ತಲೆಯ ಮೇಲೆ ಕಲ್ಲಂ ಹಾಯ್ಕಿ ಕೊಂದ ಪಾತಕಿಯೆಂದರು || ೪೦ ||

ಎಂದು ಬಿನ್ನವಿಸುತಿಹ ಚಿತ್ರಗುಪ್ತರ ನುಡಿಯ |
ನಂದು ಕೇಳುತ್ತೆ ಯಮರಾಜನತಿರೌದ್ರದಿಂ |
ನಿಂದು ಸಿಟ್ಟಿಸಲಾಗ ಕಣ್ಗಳೊಳ್ ಕಿಡಿಗೆದರಿ ಕೋಪದಿಂ ಗುಡಿಗುಡಿಸುತೆ ||
ಮುಂದಿರ್ದ ದೂತರೊಳ್ ಪಾತಕದ್ರೋಹಿಗಳ |
ನಂದಲೆಯ ಪಿಡಿದೆಳೆದುಕೊಂಡೊಯ್ದು ಕೈಕಾಲ |
ಸಂದುಗಳ ಬಿಡಿಸಿ ಕೊರೆದಿರಿದರಿದು ಬಾಧಿಸುವುದೆಂದಾಗ ನೇಮಿಸಿದನು || ೪೧ ||

ಕಡಿ ಕೊಚ್ಚು ತಿವಿ ಯೆಲುವ[೨]ನುಡಿ ಬಸುರನು[೩]ಗಿಯಡ್ಡ |
ಹಿಡಿ ಕಾಸು ಕೊರೆ ಕುಸುರಿದರಿ ಕೆತ್ತಿ ತಲೆಯನೊಡೆ |
ಬಡಿ ಬಸಿದ ಶೂಲದಲಿ ಹಾಯ್ಕಿ ಚಿನಿಖಂಡಮಂ ಕಡಿಕಡಿದು ದಿಗುಬಲಿಯನು ||
ಕೊಡಿ ಕೀಸಿ ಕಿವಿ ಮೂಗನರಿ [೪]ದುಂದುಭಿಯ[೪] ಕಟ್ಟಿ |
ಸುಡಿ ಚಬುಕ ಚಾಟಿ ಚಮ್ಮಟಿಗೆಯಿಂದರಿಚರಿಚ |
ಬಡಿದು ನಾನಾತೆರದೆ ಕೊಂದು ಬಾಧಿಸಿ ಭಂಗಬಡಿಸೆಂದು ನಿರವಿ[೫]ಸಿದನು || ೪೨ ||

ಅಸಿ ಪರಶು ತೋಮರ ಕಠಾರಿ ಕಕ್ಕಡೆ ಕುಂತ |
ಮುಸಲ ಮುದ್ಗರ ಭಿಂಡಿವಾಳ ಗದೆ ಸಬಳ ಪ |
ಟ್ಟಿಸ ಪಟ್ಟಿ ಖಡ್ಗ ಕರವಾಳ ಕರಗಸ ಶೂಲ ಶಕ್ತಿ ಸೆಲ್ಲೆಯ ಬಲ್ಲೆಯ ||
ಪಸೆಸ ಪರಿಘವು ಲೌಡಿ ಚಕ್ರ ಬಾಣಾದಿ ರಾ |
ಜಿಸುವ ಬತ್ತೀಸಾಯುಧಂಗಳಿಂದಿರಿದು ಮ |
ನ್ನಿಸದೆ ಸಂಹರಿಸಿಯೆಕ್ಕಲನರಕದೊಳ್ ಹಾಯ್ಕು ಹೋಗೆಂದು ನೇಮಿಸಿದನು || ೪೩ ||

೧.೧ ಕ್ಷೆತ್ರಿ (ಪ, ಶಿ, ಗೋ.) ೨ ಕೊಲ್ವ (ಪ, ಶಿ, ಗೋ.) ೩ ಬ (ಹು, ಮ.)
೪.೪ ದು ದುಂದುಭಿ (ಮ.); ದು ದುಂಬಿಯ (ತು.) ೫ ಸೇಮಿ (ಹು, ಮ.)

ಎಂದು ನೇಮಿ[1]ಸಲಾಗ ದೂತರಾ ಪಾತಕರ |
ಮುಂದಲೆಗಳಂ ಪಿಡಿದು ಕೊಂಡೊಯ್ದು ತಮ್ಮೊಡೆಯ |
ನೆಂದುದಕೆ ಶತಸಹಸ್ರಾಧಿಕ್ಯಮಡಿಯಾಗಿ ನಾನಾಪ್ರಕಾರದಿಂದೆ ||
ಕೊಂದು ಕೊಲೆಯಾಡಿ ನಾಯಕನರಕದಲ್ಲಿರದೆ |
ತಂದು ಹಾಯ್ಕುವರಾಗ ಪಾತಕರ್ ನರಕದ |
ಲ್ಲಿಂದುರವಿಯುಳ್ಳನ್ನ ಬರತೆಗೆಯುದಲ್ಲಿರ್ಪರೆಂದು ಋಷಿ[2] ಪೇಳ್ದನೆಂದು || ೪೪ ||

ಎಂದಿಂತಧರ್ಮಿಗಳ ವೃತ್ತಾಂತವಂ ಮುನಿಪ |
ನಂದು ಪೇಳಲ್ ಕೇಳ್ದು ಸಾನಂದಮುನಿವರಂ |
ನೊಂದು ಶಿವಶಿವ ಮಹಾದೇವ ಮುಂದರಿಯದಜ್ಞಾನದಿಂ ಮಾಡಲವರ ||
ಕೊಂದು ಬಾಧಿಸಬಹುದೆ ಯಮಧರ್ಮರಾಜ ತಾ |
ನೆಂದೆನಿಸಿಕೊಳಲೇಕೆ ಶಿವಶಿವಾ ಪ್ರಾಣಿಗಳ್ |
ನೊಂದರಲ್ಲಾ ಮಹಾದೇವ ನೀವಿಂತಿವರ ಕೊಲಿಸಿ ನೋಡುವುದುಚಿತವೇ || ೪೫ ||

ಹರಹರಾ ಪ್ರಾಣಿಗಳನಿಂತು ಸಂಹರಿಸಿದೊಡೆ |
ಪರಿಹರಿಪರಾ[3]ರುಂಟು ಶಿವನಲ್ಲದಿನ್ನು[3] ಶಂ |
ಕರ ಸರ್ವಗತ ಸರ್ವಜೀವನದಯಾಪರನೆನಿಪ್ಪ ಬಿರುದೆಲ್ಲಿ ನಿಮಗೆ ||
ಕೆರಹುಗಾಲಿಂ[4]ದೊದೆಯಲೊಲಿದೆ ನೀಂ ಬಿಲ್ಲನಿಂ[4] |
ಭರದಿಂದೆ ಪೊಯ್ಯೆ ಮೆಚ್ಚಿದೆ ಕಲ್ಲಲಿಡೆ ನಿಮ್ಮ |
ಪುರಕೆ ಕೊಂಡೊಯ್ದೆಯಾ ಪರಿಯಲ್ಲಿ ಕರುಣವಿರಬೇಡವೇ ಸರ್ವರಲ್ಲಿ || ೪೬ ||

ಹರಹರನಮಶ್ಶಿವಾಯಯೆನುತ್ತೆ ಮನದೊಳತಿ |
ಕರುಣದಿಂ ಪ್ರಾಣಿಗಳ್ ನೊಂದರಿನ್ನೀಗಲಾ |
ತರಣಿಜನ ಪುರದ ವೈತರಣಿಯೊಳಗಿರ್ದ ಪಾತಕರನೆಲ್ಲರನು ಶಿವನ ||
ಪುರಕೆ ಕೊಂಡೊಯ್ವೆನೆಂದಾಗಲಾ ಸಾನಂದ |
ವರಮುನಿಪನೇಳಲೆದ್ದು ದು ಮುನಿಸ್ತೋಮವಂ |
ದಿರದೆ ನವರತ್ನಮಯಪುಷ್ಪಕವನೇರಿ ತಳರಿದನಧಿಕಸಂಭ್ರಮದೊಳು || ೪೭ ||

೧ ನೀರವಿ (ಹು, ಮ.) ೨ ಮುನಿ (ಹು, ಮ.) ೩-೩ ರಿನ್ನು ನೀವಲ್ಲದೀಗ (ಹು, ಮ.)
೪-೪ ದಲೊಡೆಯಲ್ಕೊಲಿದೆ ಬಿಲ್ಲಿಂದ (ಹು, ಮ.)

ಭೇರೀಮೃದಂಗ ದುಂದುಭಿ ಶಂಖವಾದಿ ನಾ |
ನಾರವದ ವಾದ್ಯನಿರ್ಘೋಷವಾ ದಿಕ್ತಟವ |
ಪೂರೈಸಿ ಮುಂದೆ ಕೀರ್ತಿಸುವ ಸರ್ತಕರಿಂ ಸುಗಾಯಕರ ಕೈವಾರದಿಂ ||
ಮಾರಾರಿಯಣುಗ ಸಾನಂದಮುನಿ ದುರಿತಸಂ |
ಹಾರನಿದೆ ಬಂದನಘ[೧] ತೊಲಗೆಂಬ ಕಹಳಾಸು |
ಭೂರಿನಾದಂಗಳಿಂ ಮುನಿಗಣಸಮೇತದಿಂದೆಮಪುರಕೆ ಬರುತಿರ್ದನು || ೪೮ ||

ದೂರದಿಂ ಬರೆ ಕಂಡು ಚರನೈದಿ ಶಮನೊಡನೆ |
ಮಾರಾರಿಯಣುಗ ಸಾನಂದಮುನಿ[೨]ನಾಥನೆ |
ಮ್ಮೂರಿಗಿದೆ ನಡೆತಪ್ಪನೆನೆ ಕೇಳ್ದು ತನ್ನ ನಗರಿಯನಲಂಕರಿಸವೇಳ್ದು ||
ಭೂರಿವಾದ್ಯಧ್ವನಿಯ ಗಡಣದಿಂ ಸಕಲಸುರ |
ನಾರಿಯರ ಮಂಗಳಾರತಿ ಕಳಸ ಕನ್ನಡಿಯ |
ಸೆ[೩]ರುವೆಯೊಳಿಮರಾಜನಧಿಕವೈಭವದಿಂದಿದಿರ್ಗೊ[೪]ಳ್ಳಲ್ ಪೊರಮಟ್ಟ[೪]ನು || ೪೯ ||

ಅತ್ತಲಾ ಸಾನಂದಗಣನಾಥನಖಿಳಮುನಿ |
ಪ್ರೋತ್ತಮರ ಗಡಣದಿಂ ಸಕಲಸಂಭ್ರಮದಿಂದೆ |
ಚಿತ್ತಹರುಷದೊಳೆ ನಡೆತಂದು ಯಮಪುರದ ಬಾಗಿಲೊಳೆ ಪುಷ್ಪಕವಿಳಿದನು[೫] ||
ಬಿತ್ತರದ ಪಾವುಗೆಯ ಮೆಟ್ಟಿ ನಡೆತರುತಿರ |
ಛತ್ರಲತಿವಿಭವದಿಂ ಯಮರಾಜನೊಲಿದು ಬಾ |
ಹತ್ತಿವಿಡಿಸಿಯೋಂಗದವರಂ ಕೂಡಿಕೊಂಡು ಬರುತಿರ್ದನತಿಸಂತಸದೊಳು || ೫೦ ||

ಕಂಡನೆ[೬]ಮರಾಜನಾ ಸಾನಂದಮುನಿವರನ |
ದಂಡಿಯಂ ಪ್ರೇಸತೆಸುತೆ ಕಾಣ್ಕೆಯಂ ಮುಂದಿರಿಸಿ |
ದಿಂಡುಗೆಡೆದಿಪು ಮಗುಳೆರಗಲಾ ತರಣಿಜನ ನೋಡುತತಿ ಕರುಣದಿಂದೆ ||
ಮಂಡೆಯುಂ ಪಿಡಿದೆತ್ತಿ ವಿನಯದಿಂದೊಲಿದು ಬೆಸ |
ಗೊಂಡನೆಲೆ ಮಗನೆ ಕುಶಲವೆಯೆಸಲ್ ಭಕ್ತಿಯಿಂ |
ಕೊಂಡಾಡುತೆಲೆ ದೇವ[೭] ನಿವಿರಿಸಿದಂತಿಪ್ಪೆನೆನುತೆ ಮಗುಳೀಂತೆಂದನು || ೫೧ ||

೧ ಕೊಲ (ಹ, ಮ.) ೨ ಘೇ (ಶಿ, ಹು, ಮ.) ೩ ಗಣ (ಹು.) ೪-೪ ಆಲ್ಲನು ನಾದ (ಹು, ಮ.) ೫ ವಸಿಳಿದು (ಹು, ಮ.) ೬ ರ (ಮ.) ೭ ಡು ಯ (ಮ.) ೮ ಜೀಯ (ಮ.)

ದೇವ ಚಿತ್ರೈಸೆನ್ನ ಮೇಲಣತಿ ಪ್ರೇಮದಿಂ |
ಪಾವನವ ಮಾಡಲೈತಂದಿರಿಂ ನಾಂ ಮಾಳ್ಪ |
ಸೇವೆಯೇನೆಂದು ಬಿನ್ನವಿಸಲಾ ಸಾನಂದಮುನಿನಾಥನೆಮನ ಮನವ ||
ಭಾವದಿಂ ತಿಳಿದಾಗಲೆಲೆ ಮಗನೆ ನೀಂ ಮಾಳ್ಪ |
ಸೇವೆಯನೆ ನೋಡಬಂದೆವು ತೋರಬೇಕೆನಲ್ |
ತಾವರೆಯ ಸಖನ ಸುಕುಮಾರಕಂ ಕೆಯ್ಗೊಟ್ಟು[೧] ಕರೆತಂದನುತ್ಸವದೊಳು || ೫೨ ||

ಪರಮಋಷಿಗಣದೊಡನೆ ಸಾನಂದಮುನಿಪನಾ |
ತರಣಿಜನ ಕೈಲಾಗಿನಿಂದೆ ಕಾಲ್ನಡೆಯೊಳುಂ |
ಪುರವನೊಳಪೊಕ್ಕು ಬರುತಿರೆ ಮುಂದೆ ಬೀದಿ ಬೀದಿಗಳ ಸಿಂಗರವನೊಲಿದು ||
ಹರುಷದಿಂದೆಮನಿರದೆ ತೋರಿಸುತೆ ಬರಲಾಗ |
ಕರುಣದಿಂ ಸಾನಂದಮುನಿವರಂ ನಮಗೆ ವೈ |
ತರಣಿಗಳನೆಲ್ಲಮಂ ತೋರಿಸೆನೆ ಜೀಯ ಚಿತ್ರೈಸೆನುತ್ತಿಂತೆಂದನು || ೫೩ ||

ಎರಡನೆಯ ಮೃಡಮೂರ್ತಿ ಸಾನಂದತಂದೆ ವೈ |
ತರಣಿಯಂ ನೋಡಬಾರದು ನುಡಿಯಬಾರದಾ |
ನರಕಿಗಳ ನೋಡಿದೊಡೆ ಪಾತಕಂ ಸಂಭವಿಪುದೆಂದಾತ ಬಿನ್ನವಿಸಲು ||
ಹರ ಹರ ನಮಶ್ಶಿವಾಯಾ ಮಹಾದೇವ ಶಂ |
ಕರ ಸರ್ವಗತ ಸದಾಶಿವ ಶಿವಾಯೆನುತಲತಿ |
ಕರುಣದಿಂದೆಮಧರ್ಮರಾಜನೆಮಗೀಗಲಾ ನರಕಿಗಳ ತೋರಬೇಕು || ೫೪ ||

ಎಂದು ನಿರವಿಸಲಾಗ ತರಣಿಜಂ ಮನದೊಳತಿ |
ನೊಂದು ಬಾಹ್ಯೋಪಚಾರಂಗಳಿಂ ಸಾನಂದ |
ತಂದೆ ಚಿತ್ರೈಸೆನುತೆ ಕರೆತಂದು ಸಕಲ ನಿರಯಂಗಳಿಹ ಬಲ್ಗೇರಿಯ[೨] ||
ಮುಂದೆ ನಿಂದಿಲ್ಲಿ ಕಡುಪಾತಕವ ಮಾಡಿದರ |
ನಂದಾಗ ತೋರಲೆಮದೂತರಾ ಪಾತಕರ |
ಕೊಂದು ಕೊಲೆಯಾಡಿ ಮೂದಲಿಸಿ ಬಾಧಿಸುತಿರ್ಪ[೩] ದಂದುಗವನೇನೆಂಬೆನು || ೫೫ ||

೧ ಯ್ದುಗಿದು (ಹು.) ೨ ಹು ಕೇ (ಮ.) ೩-೩ ರ್ಲಿರ್ಪ (ಹು, ಮ.)

ಗುಡುಗುಡಿಸುತಾಗ ಪಾತಕರ ಮುಂದಲೆಗಳಂ |
ಪಿಡಿದುಕೊಂಡೆಳೆದೆಳೆದು೧ ಕುಸಿಕಿರಿದು ಪೊಡವಿಗಂ |
ಕೆಡಹಿ ಕೈಕಾಲ್ಗಳಿಂ ಸದೆಯೆ ಕಂಗೆಟ್ಟವರ್೨ ಬಾಯ್ಬಿಡುತೆ ಬಸವಳಿಯಲು ||
ಪೆಡಗುಡಿಯ ಕಟ್ಟಿ ಬಲ್ಬಾಟಿ ಚಮ್ಮಟಿಗೆಯಿಂ |
ಪೊಡೆಯೆ ಮೊರೆಯಿಕ್ಕುತಿರೆ೩ ಬಾಯ್ಗಳಂ ಕೆಯ್ಗಳಿಂ |
ಬಡಿವುತುಂ ನಾನಾಪ್ರಕಾರದಿಂ ಕೊಲುತಿರ್ದರೇನೆಂಬೆನದ್ಭುತವನು || ೫೬ ||

ಸರಸರನೆ ಸೀಳ್ದು ನೆಲಕಪ್ಪಳಿಸಿ ಸಬಳದಿಂ |
ದಿರಿದಿರಿದು ಪೊಡವಿಗಂ ಕೆಡೆಪಿ ಕರಗಸದಿಂದೆ |
ಕೊರೆಕೊರೆದು ಸಂದುಗಳ ಬಿಡಿಸಿ ಬಿಸುಡುತಿತ್ತಾಗಳ್೪ ಕೀಸಿ ಕಿವಿ ಮೂಗನರಿದು ||
ಜರೆಜರೆದು ಖಡ್ಗದಿಂ ಕತ್ತರಿಸಿ ಚರ್ಮವಂ |
ಪರಿಪರಿದು ರಕ್ತಮಂ೫ ಚೆಲ್ಲುತುಮೆಲುವುಗಳಂ೬ |
ಮುರಿಮುರಿದು ಮೂದಲಿಸಿ ದೂತರಾ ಪಾತಕರನರಿಚರಿಚೆ ಕೊಲುತಿರ್ದರು || ೫೭ ||

ಎಲೆ ತಂದೆಗಳಿರ ಕೊಲದಿರಿ ಕೊರೆಯದಿರಿ ಮಹಾ |
ಬಳಲಿದೆವು ಬಾಡಿದೆವು ಬತ್ತಿದೆವು ಬಸವಳಿದೆ |
ವೆಳೆಯದಿರಿ ತುಳಿಯದಿರಿ ಕೊಚ್ಚದಿರಿ ಚುಚ್ಚದಿರಿ ಕಾಸದಿರಿ ಕರಗಿಸದಿರಿ ||
ಕಳಲಿದೆವು ಕಂದಿದೆವು ಕುಂದಿದೆವು ಮುಂದುಗೆ |
ಟ್ಟಳವಳಿದೆವೆಮ್ಮಯ್ಯ ದಮ್ಮಯ್ಯ ಸಾಕೆಮ್ಮ |
ನುಳುಹಿಕೊಳಿ ದಾತರಿರ ತಾತರಿರ ದೂತರಿರಯೆಂದು ಮೊರೆಯಿಡೆ ಖಾತಿಯಿಂ || ೫೮ ||

ಸುರಗಿಯಿಂ ತಿವಿದು ಶೂಲದಿನಿರಿದು ಕತ್ತಿಯಿಂ |
ದಿರದೆ ಕತ್ತರಿಸಿ ಕರಗಸದಿಂದೆ ಕೊರೆದು ಮು |
ದ್ಗರದಿಂದೆ ಮೊಂದಿ ಮುಸಲದೆ ಬಡಿದು ಗದೆಗಳಿಂದಪ್ಪಳಿಸಿ ಕೈಕಾಲ್ಗಳ ||
ಕರವಾಳಿನಿಂದೆ ಖಂಡಿಸಿ ಖಡ್ಗದಿಂದೊಡನೆ |
ಶಿರವನರಿದಿಟ್ಟಿಯಿಂದಿಟ್ಟು ನಾನಾಯುಧದ |
ಪರಿಕರಗಳಿಂದೆ ಪಾತಕರ ಯಮನಾಳ್ಗಳತಿ ಭರವಸದೆ ಕೊಲುತಿರ್ದರು || ೫೯ ||

---

೧ ಮೊಯ್ವ (ಶಿ.) ೨ ಕ್ಲಾ (ಹು.) ; ಕ್ಕುತುಂ (ಮು.) ೩ ಡಿಸು (ಪ.)
೪ ತಿಲವರ (ಹು.) ೫ ನೆತ್ತರಂ (ಹು, ಮು.) ೬ ತುಂ ಯೆಲ್ಗಳಂ (ಪ.)

ಕಡಿವ ಕೊಚ್ಚುವ ತೂಳ್ವ [1]ಪೊಳ್ವ ಸೀಳ್ವರಿವ[1] ಸೆರೆ |
ಪಿಡಿದು ನುಂಗುವ ಕವಿವ ತಿವಿವ ಕಿವಿಯೊಳಗೆ ಬೊ |
ಬ್ಬಿಡುವ ಗುದ್ದುವ ಪಾಯ್ವ ಪೊಯ್ವ ಕೊಯ್ದೆಳೆವ ತುಳಿದೆಳೆವ ಮುಳಿದಾಗಸಕ್ಕೆ ||
ಇಡುವೆಸೆವ ತರಿವಿರಿವ ಕೊರೆವ ಬಿಸಿನೆತ್ತರಂ |
ಕುಡಿವ ಕರ್ಚುವ ಸೀರ್ವ ಪಾರ್ವ ಮೀರ್ವರೆಗೊಲೆಯು |
ಗಡಣಂಗಳಿಂ ನೋವ ಸಾವ ಬೇವನಿಬರಂ ಸಾನಂದಮುನಿ ಕಂಡನು || ೬೦ ||

ಈ ತೆರದೆ ಕೊಂದಿವರನೇನ ಮಾಡುವಿರೆಂದು |
ಪ್ರೇತಪತಿಯಂ ಕೇಳೆ ದೇವ ಕೇಳಿ ಮಹಾ |
ಪಾತಕವ ಮಾಡಿದವರಂ ಮಹಾನರಕಕುಂಡದಲಿ ಹಾಯ್ಕುವರೆಂದೆನೆ ||
ಈ ತೆರದ ಕುಂಡವದನೆಮಗೆ ತೋರೆನುತತಿ |
ಪ್ರೀತಿಯಿಂ ಕೇಳೆ ಕೈಗೊಟ್ಟು ಕರೆದೊಯ್ದು ಘನ |
ಪಾತಕವ ಮಾಡಿದವರಿಪ್ಪ ಕುಂಡವ ತೋರೆ ಸಾನಂದಮುನಿ ಕಂಡನು || ೬೧ ||

ಕಂಡು ಶಿವ ಶಿವ ಮಹಾದೇವಯೆಂದೆನುತೆ ಬೆಸ |
ಗೊಂಡನಿಂತಪ್ಪ[2] ಪಾತಕರಿಪ್ಪ ಘನತರದ |
ಕುಂಡಂಗಳೆಷ್ಟೆಂದು ಕೇಳಲಿಪ್ಪತ್ತೆಂಟುಕೋಟಿ ನಾಯಕನರಕವು ||
ತಂಡ ತಂಡದ ಮಂತ್ರಿ ಮನ್ನೆಯಸಹಿಪರಿವಾರ |
ಕುಂಡಂಗಳಗಣಿತಂ ದೇವ ಕೇಳೆಂದು ಮಾ |
ರ್ತಂಡಸುತನಾಗ ಬಿನ್ನವಿಸೆ ಸಾನಂದಮುನಿ ಕೇಳುತತಿವಿಸ್ಮಯದೊಳು || ೬೨ ||

ಶಿವ ಶಿವ ನಮಃಶಿವಾಯಾಯೆಂದು ನುಡಿಯಲಾ |
ಶಿವಮಂತ್ರದುಚ್ಚರಣೆ ನಿರಯದೊಳಗಿರ್ದವರ |
ಕಿವಿಗಳೊಳ್ ಮಂತ್ರೋಪದೇಶವಂ ಮಾಡಿದಂದದೊಳಾಗ ಪಾಪಿಷ್ಠ[3]ರ ||
ನಿವಹವೆಲ್ಲಂ ಕೇಳ್ದು ಗುರುವೀತನೆಮಗೆಂದು |
ಶಿವ ಶಿವಾಯೆಂದೆನಲ್ ನಿರಯವೆಲ್ಲಂ ಬತ್ತೆ |
ಶಿವ ಶಿವ ನಮಃಶಿವಾಯಾಯೆನುತೆ ಸರ್ವರುಂ ನಿರಯದಿಂ ಪೊರಮಟ್ಟರು || ೬೩ ||

೧-೧ ಪೊಳ್ವರಿವರರಿದು (ಹು.) ೨ ತೆಂದು (ಹು.) ೩ ರ (ಹು, ಬ.)

ಓರಂತೆ ಶಿವಮಂತ್ರಮಂ ಬಿಡದೆ ಜಪಿಸೆಂದು |
ಸಾರಿದರ್ ಡಂಗುರವ ನಿರಯಂಗಳಿರುತಿರ್ಪ |
ಕೆರೆಕೆರೆಯು ಸಂದುಸಂದು ಪಾತಾಳಾದಿ ನಿರಯಂಗಳೆಲ್ಲೆಡೆಯೊಳು ||
ಘೋರಪಾತಕವ ಮಾಡಿದರೆಲ್ಲರುಂ ಕೇಳು |
ತಾರ್ತ್ರಿಮು ಶಿವ ಶಿವ ಸಮುಶ್ಚಿಪಾಯಾಯಿಸುತೆ |
ಸೇರಿವರ್ ಬಂದು ಸಾನಂದಮುನಿಯುಂ ಜವನ ದೂತರಂ ದಂಡಿಸುತಲಿ || ೬೪ ||

ತಮತಮಗೆ ಸರ್ವರುಂ ಶಿವಮಂತ್ರಮಂ ಜಪಿಸು |
ತೆಮಮೂತರಂ ತಾವು ಕೊಂದು ಕೊಲೆಯಾಡುತುಂ |
ಕ್ರಮದೊಳಾ ಚಿತ್ರಗುಪ್ತರುಗಳಂ ಜಡಿದು ಕಡಿತಂಗಳಂ ಸೆಳೆದು ಬಿಸುಟು ||
ಸುಮನದಿಂ ಸಾನಂದಮುನಿಗೆರಗಲೆಲ್ಲರಂ |
ವಿಮಲಪುಷ್ಪಕದೊಳಿಂಬಿಟ್ಟು ಮುನಿಗಣಸಹಿತ |
ರಮಣೀಯಮಾದ ಕೈಲಾಸಕ್ಕೈದಿದನಖಿಳವಾದ್ಯನಿರ್ಘೋಷದಿಂದೆ || ೬೫ ||

ಇತ್ತಲೆಮರಾಜನತಿಖೇದದಿಂ ತನ್ನ ಬಾ |
ಹತ್ತ^(1)ವಿನಿಯೋಗದವರಂ^(1) ಕೂಡಿಕೊಂಡು ತಲೆ |
ಗುತ್ತಿ ಚಿಂತಿಸುತಿರಲ್ ಚಿತ್ರಗುಪ್ತರ್ ನೋಡಿ ಚಿಂತೆಯೇಕಿನ್ನು ಜೀಯ ||
ಚಿತ್ತಜಹರಂಗೆ ಬಿನ್ನವಿಸಿ ಬಳಿಕಾತಂಗೆ |
ಮತ್ತೆ ತಕ್ಕುದನೆಸಗಬೇಕೆಂದು ಪೇಳಲದ |
ಚಿತ್ತಕ್ಕೆ ಸರಿತಂದುಕೊಂಡು ಬಳಿಕೆಮನೆದ್ದನಖಿಳರಂ ಕೂಡಿಕೊಂಡು || ೬೬ ||

ಬಂದನನಿಬರ್ಗೂಡಿ ಶಿವಪುರದ ಬಾಗಿಲ್ಗೆ |
ನಂದೀಶನಂ ಸಮಯಮರಿದು ತಾನೊಳಯಿಕ್ಕೆ |
ತಂದೀಶನಂ ಮಹಾಸಭೆಯೊಳಗೆ ಕಂಡು ಬೇಗದಿ ಬೀಗಮುದ್ರೆಗಳನು ||
ಮುಂದಿರಿಸಿ ನಮಿಸಿ ಬಿನ್ನವಿಸಿದಂ ದೇವ ಸಾ |
ನಂದಮುನಿ ಮಾಡಿದುದ ನೋಡಿದಿರೆ ಸಾಕೆನಗ |
ದೊಂದೊಂದಿಗಿಂತಪ್ಪ ಪಣಿಹನೇ ಸಾಕು ಸಾಕೆಂದೆರಗಿ ಬಿನ್ನವಿಸಿದಂ || ೬೭ ||

೧-೧ ರ ಸುವಿನಿಯೋಗಮಂ (ಹು, ಮ.)

ಎಂದಿಂತು ಬಿನ್ನವಿಸಲೀಶ್ವರಂ ನಸುನಗುತೆ |
ಮುಂದರಿಯದಿಂದು ಮಾಡಿದನಿನ್ನು ಮನದೊಳತಿ |
ನೊಂದುಕೊಳಬೇಡೆಂದು ಸಂತೈಸಿ ಬೀಗಮುದ್ರೆಯನಿತ್ತು ಸಲೆ ಮನ್ನಿಸಿ |
ಇಂದುಧರನೊಲಿದೆಮನ ಕಳುಹಿ ಬಳಿಕತ್ತ ಸಾ |
ನಂದಂಗೆ ಗಣಪದವನಿತ್ತಾತನಾಗ ಕರೆ[1] |
ತಂದರ್ಗೆ ಸಾಲೋಕ್ಯಪದವಿಯಂ ಕೊಟ್ಟನೆಲೆ ರಾಮೇಶ ಕೇಳೆಂದನು ॥ ೬೮ ॥

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ |
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ॥ ೬೯ ॥

ಅಂತು ಸಂಧಿ ೫೬ಕ್ಕಂ ಪದಗಳು ೨೪೪೩ ಕ್ಕಂ ಮಂಗಳಮಹಾಶ್ರೀ

---

೧ ಲೈ (ಹು. ಮ.)

ಐವತ್ತೇಳನೆಯ ಸಂಧಿ

ಸೂಚನೆ

ವೀರಶೈವಾಚಾರಸಂಪನ್ನರಾದರಸು |
ಚಾರಿತ್ರಮಂ ಚೆನ್ನಬಸವರಾಜಂ ಸವಿ |
ಸ್ತಾರದಿಂಪಾಗಲಾ ಸಿದ್ಧರಾಮೇಶಂಗೆ ಕರುಣದಿಂ ನಿರವಿಸಿದನು ||

ನಿರುಪಮಂ ನಿಷ್ಕಾಮಿ ನಿಶ್ಚಲಂ ನಿರ್ಮಲಂ |
ನಿರುಪಾಧಿಕಂ ನಿಃಸ್ಪೃಹಂ ನಿರ್ವಿಕಾರಗುಣ |
ಭರಿತಂ ನಿರಾಭಾರಿ ನಿಶ್ಚಿಂತಮತಿನಿರ್ವಿಕಲ್ಪಂ ನಿರಾಕಾರನು ||
ನಿರಪೇಕ್ಷಕಂ ನಿಷ್ಕಳಂಕಂ ನಿರಾಮಯಂ |
ನಿರತಿಶಯಭರಿತಂ ನಿರಾಲಂಬಕಂ ನಿರಾ |
ವರಣಂ ನಿರಂಜನಂ ಪಂಪಾವಿರೂಪಾಕ್ಷ ಪಾಲಿಸುವುದಖಿಳಜನರ || ೧ ||

ಆಲಸ್ಯೆ ರಾಮ ಶೈವಾಚರಣೆಯಿಂದವರ್ |
ಕೈಲಾಸಮಂ ಪೊಕ್ಕರೆನೆ ಶೈವನಿಷ್ಠೆಯಿಂ |
ಕೈಲಾಸಮಂ ಪೊಗುವ ಸಾಮರ್ಥ್ಯಮಿರಲಿಷ್ಟಲಿಂಗಮಿನ್ನೇತಕೆನಲು ||
ಕೈಲಾಸಪುರದ ಬಾಗಿಲೊಳಿವರ್ಗೆ ಲಿಂಗಮಂ |
ಶೈಲಾದಿ ಕಟ್ಟಿ ಮಿಗೆ ವೀರಶೈವಂಮಾಡಿ |
ಲೀಲೆಯಿಂ ಪೊಗಿಸುವರೆನಲ್ಕವರ ಕಥೆಯನೆನಗುಸಿರೆನಲ್ಕಿಂತೆಂದನು || ೨ ||

ನೀತಿವಿದ ಸಾಮವೇದಿಗಳೆನಿಪ ಮಹಿಮಂಗೆ |
ಜಾತಿಸೂತಕವಿಲ್ಲ ನಿಂಬವ್ವೆಯೆಂಬಳ್ಗೆ |
ಪ್ರೇತಸೂತಕವಿಲ್ಲ [4]ನಿಂಬಿಗಂ ನಿತ್ಯಸೂತಕವಿಲ್ಲ[4] ಸಿಂಧುಮಂಗೆ ||
ಜಾತಸೂತಕವಿಲ್ಲ ಬಿಬ್ಬಿಬಾಚಯ್ಯನೆಂ |
ಬಾತಂಗೆ ತಿಳಿಯಲೆಂಜಲ ಸೂತಕವದಿಲ್ಲ |
ಭೂತನಾಧಿಪಕಾಚಿರಾಜನುಂ ಪಾದೋದಕದ ಮಹಾತ್ಮ್ಯೆಯ ಪುರುಷನು || ೩ ||

---

೧ ಸು (ಶಿ.) ೨ ವರ (ಹು, ಮ.) ೩ ಲಿಂಬ (ಹು, ಮ.) ೪-೪ ದಾಸಿನಿಂಬಿಗೆ ನಿಚ್ಚಿಲ್ಲವಾ (ಹು ದಾ, ಮ.)

ವೀರಶಂಕರದಾಸನುರೆ ಕನಸಿನೊಳ್ ಭವಿಯ |
ಸೇರಿ ಮುಟ್ಟಿದೆನೆಂದು ಕಾದ ಕೊಪ್ಪರಿಗೆಗೆ ಶ |
ರೀರಮಂ ಕೊಟ್ಟ ಮಿಗೆ ಕರುಳಕೇತಯ್ಯನುಂ ಲಿಂಗಕರ್ಪಿಸದೆ ಮರೆದು ||
ಕ್ಷೀರಮಂ ಕೊಂಡೆನೆಂದುರೆ ಕರುಳ್ಗಳಂ ತೆಗೆದ |
ಧೀರಶೀಲದ ಪರ್ವತಂ ತಾಯ್ನುಡಿಯೆ ಕರುಳ |
ತೋರಣಂಗಟ್ಟಿದಂ ಕೇಳೆಂದು ಸಿದ್ಧರಾಮೇಶಂಗೆ ನಿರವಿಸಿದನು || ೪ ||

ಗಂಡಗತ್ತರಿಯ ನಾಚಂ ಶಿವನ ನಿಂದಿಸಲ್ |
ತುಂಡುತುಂಡಾಗಿ ಕಡಿಯಲ್ಕೆ ಪರಸಮಯದವ |
ರಂಡಲೆದು ಮತ್ತೆ ತಲೆಯಂ ಗಂಡಗತ್ತರಿಗೆ ಕೊಡೆ ರಾಚಮಲ್ಲಯ್ಯನು ||
ಕೊಂಡು ತಾಳವನೊತ್ತೆ ಚಿಕರಾಚಮಲ್ಲ[1]ನು |
ದ್ದಂಡದಿಂ ಪಾಡಲಿಪ್ಪತ್ತೈದು ಲೀಲೆಯಿಂ |
ಮುಂಡಮುರೆ ಕುಣಿದಾಡಿ ಮತ್ತೆ ಶಿರಮಂ ಪಡೆದುದೇನೆಂಬೆನಚ್ಚರಿಯನು || ೫ ||

ಹರಶರಣನೆಸೆವ ಹಾವಿನಹಾಳ ಕಲ್ಲಯ್ಯ |
ನಿರುತವಿಪ್ರರ ವಾದದಿಂದೆ ಶುನಕನ ಕೈಯ್ಯ |
ಲಿರದೆ ವೇದವನೋದಿಸಿದನಂತೆ ಜಂಬೂರಕಾಳಯ್ಯನೊಲಿದೋದಿಸಿ ||
ಶಿರವನರಿದಕ್ಕರಿಂ ಲಿಂಗಕಾರತಿಯೆತ್ತಿ |
ಮರಳಿ ಪತ್ತಿಸಲಣುಗಗೋವಿಂದಭಟ್ಟನಾ |
ಶಿವದೆ ನಿರ್ಮಾಲ್ಯವೆನುತೆ ಮಸ್ತಕವರಿದು ಮೂರುದಿನದೊಳ್ ಪಡೆದನು || ೬ ||

ಹರಭಕ್ತನೆಂದು ಮೊರಟದ ಬಂಕಿದೇವನುರೆ |
ಕೊರಡಪತ್ರಿಯನೆಸೆವ ಗೊಡ್ಡಹಸುವಿನ ಹಾಲ |
ನಿರದೆ ಬರಿಸಿರ್ದ ಚಿಲುಮೆಯ ನೀರನಿತ್ತು ಜಂಗಮಕೆ ತನ್ನಯ ಲಿಂಗಕೆ ||
ಶಿರವನರಿದಾರತಿಯನೆತ್ತಿ ಮಗುಳುದಿಸಲವ |
ನರಿದಿತ್ತಲಿಂತುಟಿರುವತ್ತೆರಡು ಬಾರಿಯೊಳ್ |
ಮರಳಿ ಮರಳುದಿಸಲಾ ಮಸ್ತಕಂಗಳ್ಗೆ ಬೇರಂಗಂಗಳಂ ಪಡೆದನು || ೭ ||

೧ ಚಿಕ್ಕರಾಚಯ್ಯ (ಮ.) ೨-೨ ರಿದು ಬರು (ಶಿ, ಗೋ.); ರನೆ ಬರು (ಹು.)

ಪರರ ಲಿಂಗಸ್ಪರ್ಶನದ ನೇಮದವನೊರ್ವ |
ಹರಶರಣಬೊಮ್ಮಯ್ಯನಸ್ರಂ ಸ್ವಲಿಂಗಮಂ |
ಕರದೆ ಮುಟ್ಟಲ್ಕಳಿವ ನೇಮದವನೊರ್ವ ಬೊಮ್ಮಯ್ಯನಿರ್ವರ್ ಬಸವನ ||
ಅರಮನೆಗೆ ಬಂದು ಶಿವಪೂಜೆಯಂ ಮಾಡಿಕೊಳು |
ತಿರಲವನ ಲಿಂಗಮಂ ಮುಟ್ಟಿ ಪೊಡಮಡೆ ಜೀವ |
ವಿರದೆ ಪೋದುದು ಮುಟ್ಟಿದೊಡೆ ಹರಣಮಂ ಬಿಡುವ ಬೊಮ್ಮಯ್ಯನೊಡಲಿನಿಂದೆ
|| ೮ ||

ಹರಹರ ಮಹಾದೇವ ತಪ್ಪಾದುದೆನುತಸುವ |
ನಿರದುಳಿದನೀತನುಂ ಮೋಣಿರ್ವರಂ ಕಂಡು |
ತರಹರಿಸದಸುವುಳಿದನಿನ್ನೊರ್ವ ಬೊಮ್ಮಯ್ಯನೀ ಮೂವರಂ ಕಾಣುತೆ ||
ಹರಣಮಂ ಬಸವಣ್ಣನುಳಿವೆನೆಂಬನಿತರೊಳ್ |
ಕೊರಲಿಗಲಗಂ ಪೂಡಿ ವೀರಬಂಕಯ್ಯ[೧]ನಂ |
ದಿ[೧]ರದೆ ಮೂವರ ಜೀವಮಂ ಪಡೆದನೆಲೆ ಸಿದ್ಧರಾಮ ಕೇಳಚ್ಚರಿಯನು || ೯ ||

ತೆಲುಗಬೊಮ್ಮಯ್ಯನೆಂದೆಂಬವಂ ಗಂಧರ್ವ |
ರೊಲವಿನಿಂ ವ್ಯಗವಾಗಿರಲ್ಕೆಚ್ಚ ಮುಕ್ತಿಗುರೆ |
ಸಲಿಸಿ ಶಿವನಿಂದೆಯಂ ಮಾಡುವ ಪುರಾಣಿಕನನಿರಿಯೆ ಹೆಮ್ಮಡಿರಾಯನು ||
ಮುಳಿಸಿನಿಂ ಕರೆದು[೨] ಪಾರ್ವನನಿರಿದೆಯೇಕೆ[೩]ದಂ |
ತಿಳಿಪೆನಲ್ ಶಿವನ ನಿಂದಿಸಿದನೆಂದಾತನಂ |
ಹುಳುರಾಶಿಯಂ ಮಾಡಿ ತೋರಿದಂ ಸಿದ್ಧರಾಮೇಶ ಕೇಳಚ್ಚರಿಯನು || ೧೦ ||

ಜಿನಭಕ್ತನೆಸೆವ ದೇಸಿಂಗಬಲ್ಲಾಳನಾ |
ತನ ಮಡದಿ ಸುಗ್ಗಲೆಯು ಶಿವಭಕ್ತೆ ತನ್ನಗುರು |
ವೆನಿಪ ದೇವರ ದಾಸನಂ ಜಿನರ ಕೂಡೆ ವಾದಂಗೆಯ್ಸಿ ಪೆಟ್ಟಿಗೆಯೊಳು ||
ತೊನೆವ ಘಟಸರ್ಪನಂ ಚಂದ್ರಕಾಂತದ ಲಿಂಗ |
ವನೆ ಮಾಡಿ ಗೆಲಿಸಿ ಜೈನರಿಗಾಜ್ಞೆಯಂ ಮಾಡಿ |
ಜನಪತಿಯುಮಂದು ಶಿವಭಕ್ತನಂ ಮಾಡಿದಳದೇನೆಂಬೆನಚ್ಚರಿಯನು || ೧೧ ||

೧-೧ ಶಾ|ನಿ (ಮ.) ೨ ಕರೆಸಿ (ಹು.) ೩ ಯಿಕ್ಕಿ (ಹು.)

ಇನ್ನಾಲಿಸೈ ಸಿದ್ಧರಾಮ ಹೆಂಡದಮಾರ |
ತನ್ನ ಕೆಯ್ಯಂ ಕಡಿದು ಕೋಲಶಾಂತಂ ಚಿತ್ರ |
ಮಂ ನೋಡಿ ಜಂಗಮುವನಿರಿದನಂ ಕೊಂದು ಕಕ್ಕಯ್ಯನಾ ಶಂಕರನನು[೧] ||
ಪನ್ನಗಾರಿಧ್ವಜನ ಭಜಕನೇದಿನನರಿದು |
ಮುನ್ನಂ ಪ್ರಭಾತಯ್ಯನಣುಗನಳವಿಗೆ ಸತ್ತ |
ಕನ್ನಿಗಸುವಂ ಕೊಟ್ಟು ಮಹಿಮೆಯಂ ಮೆರೆದನದನೇನೆಂಬೆನಚ್ಚರಿಯನು || ೧೨ ||

ಉರಗಹಾಯಣ್ಣನೆಂಬವನೊರ್ವ ಸೂಳೆ ಮನೆ |
ಯುರಿಯಲ್ಲಿ ಬೇಯಲದಕವಳ ಜಂಗಮದೇವ |
ರಿರದೆ ಹರವಳಿಸಲಗ್ನಿಯ ಮುಖದಿನಾಕೆಯನುಗುಳ್ಚಿದಂ ಸಾಹಸದೊಳು ||
ವರಜೋದವಹಾಯಣ್ಣ ಜಂಗಮಂ ಬೇಡಲ್ಕೆ |
ಕರಿಯನಿತ್ತಂ ರಕ್ಕಸಬ್ರಹ್ಮನೆಂಬೊರ್ವ |
ನರಸು ನಿಜಸಮಯಚಾರದ ಜಂಗಮಂ ಪೋಗೆ ತಲೆಯನರಿದಸುವಿತ್ತನು || ೧೩ ||

ಓರಂತೆ ಜಂಗಮಕೆ ಸಲಿಸವೇಳಲ್ಕವರ್ |
ಬಾರದಿರೆ ಲಕ್ಕಮುಂ ತೊಂಭತಾರ್ಸಾಸಿರದ |
ಸಾರಲಿಂಗಂಗಳಂ ಗಾಣದಾ ಕಣ್ಣಪ್ಪನಿರದೆ ಸೆಳೆದಂ ರಕ್ಕಸ ||
ಮಾರಣ್ಣನೆಂಬವಂ ಪೆಂಡತಿಯ ತನ್ನೊಡೆಯ |
ನಾರಯ್ಯದಾ ಜಂಗಮಂ ತನ್ನೊಡೆಗಳನುಣೆ |
ಕೂರಲಗಿನಿಂದರಿದು[೨] ತನ್ನ ಪಾಲಂ ಕೊಂಡು ಜಂಗಮಕ್ಕಸುವಿತ್ತನು || ೧೪ ||

ವರಮುಷ್ಟಿ[೪]ಚೌಡಯ್ಯನಂದು ಮುಷ್ಟಿಯ ಹಣ್ಣ |
ಸುರುತರದ ಜಂಗಮಕ್ಕಮೃತಫಲಮಂ ಮಾಡಿ |
ಪರಿಕಿಸಲ್ ಪೊಳೆರ್ದ ಬಸವಗಸುವಂ ಪಡೆದು ಸತ್ತವಳನೆಬ್ಬಿಸಿದನು ||
ಇರದೆ ಕೋಂಪು[೫]ರ ಬೊಮ್ಮಯ್ಯನೊಲವಿಂದೆ ಜೈ |
ನರ ಪಾದದಿಂ ದಹಿಸಿದಾಲಮಂ[೬] ಮೊದಲಂತೆ |
ಮರಳಿ ನಿರ್ಮಿಸಿ ಸತ್ತ ಕುವರಂಗೆ ಪರಣಮಂ ಕೊಟ್ಟನದುದಿಂಗಳೆಡೆಗೆ || ೧೫ ||

---

೧ ..ಣವರನು (ಹು.) ೨ ನಾ (ಹು.) ೩ ಕೊಂದು (ಮ.) ೪ ಮುಸು.. (ಶಿ. ಗೋ.) ೫ ಲೂ (ಕೋ.) ೬ ಯಂ (ಹು.)

ವರವೇಮನಾರಾಧ್ಯರಂ ಕಂಡು ಧರಣಿಪಂ |
ಶರಣೆನ್ನ ಪರಸದಿರೆ ನಿಂದಿಸುತೆ ಮನೆಗೆ ಬರ |
ಉರಗವಸ್ತ್ರದಿನಳಿಯಲಿಸನರಸಿ ಬೇಡಿಕೊಳಲರಸಗಂದಸುಮಿತ್ರನು ||
ಗುರುವರಾಶನಕೆ ಕದುರ ರೇಮಯ್ಯನೈದುತ್ತ
ಪುರವೊಂದರೊಳ್ ಸೋಮನಾಥನೆಂಬನ ತನುಜ |
ಉರಗವಸ್ತ್ರದಿನಳಿಯಲುರೆ ಸಮಾಧಿಯನಿಕ್ಕಿದೇಳ್ದಿವಸಕೆಬ್ಬಿಸಿದನು || ೧೬ ||

ಅಮರಗುಂಡದ ಮಲ್ಲಿಕಾರ್ಜುನಾರಾಧ್ಯರು |
ತ್ರಮಪಾದುಕೆಗಳಂಘ್ರಿಯಂ ಸೋಂಕೆ ಕಾಲ್ಗಡಿದು |
ನಿಮಿಷದೊಳಗವರಾಜ್ಞೆಯಿಂ ಶೂಲಮಂ ಪತ್ತಿ ಗುರುಭಕ್ತನಂಘ್ರಿ ಪಡೆದಂ ||
ವಿಮಲಪ್ರೌಢಾವತಿಯನೊರ್ವ ಗುರುಭಕ್ತಾಂಡಿ |
ನಮಿತವಚನದಿ ಕರೆಸಿ ಗುರು ನೆರೆದುದಂ ಪೇಳೆ |
ಭ್ರಮೆಗೊಳಿಸಿದಕ್ಷಿಗಳನಾ ಕ್ಷಣಂ ಕಿತ್ತು ಗುರುಕರುಣದಿಂ ಪಡೆದನಂದು || ೧೭ ||

ವೆಲ್ಲಿಗೊಂಡದ ಮಹಾದೇವನುಮುಷಃಕಾಲ |
ದಲ್ಲಿ ಶಿವಪೂಜೆಮಾಡುವ ನೇಮಮೊಂದುದಿನ |
ದಲ್ಲಿ ಮರೆದೊರಗಲಿನಬಿಂಬಮಂ ಕಂಡು ಕಣ್ಗಳನುಗಿದು ಮರಳಿ ಪಡೆದಂ ||
ಸಲ್ಲಲಿತಗುರುಪಂಡಿತಾರಾಧ್ಯರುಪಕರಣ |
ದಲ್ಲಿ ತನ್ನಂಘ್ರಿಗಳ್ ಸೋಂಕೆ ಕಾಲ್ಗಳನರಿದು |
ಮೆಲ್ಲನಂತೆ ಗುರುಕರಣದಿಂ ಮಗುಳೆ ಪಾದಂಗಳಂ ಪಡೆದನೇನೆಂಬೆನು || ೧೮ ||

ಒಯ್ಯನೀಶ್ವರನಿಂದೆ ಪಡೆದು ಶಂಕರದಾಸಿ |
ಮಯ್ಯಂ ನೊಸಲ್ಗಣ್ಣನನ್ಯದೈವಂಗಳಂ |
ಕೆಯ್ಯೊಡನೆ ನೋಡಿ ದಹಿಸುವೆನೀಶನಿಂದೆ ತವನಿಧಿಯ ಜೇಡರ ದಾಸನು ||
ಕೆಯ್ಯಾರೆ ಪಡೆದು ಭತ್ತಗಳ ಶಂಕರದಾಸಿ |
ಮಯ್ಯನಾಲಿಂಗಕಟ್ಟಲಾತನೀಕ್ಷಿಸಿ ತನ್ನ |
ಕೆಯ್ಯೊಳವನಡಗಿಸಲ್ಕಡಗಿತಾತಂ ಪಡೆದ ತವನಿಧಿಯದಾ ಕ್ಷಣದೊಳು || ೧೯ ||

೧ ಮೊಳೆ (ಹು, ಮ.) ೨ ಮ (ಹು, ಮ.) ೩ ನಾ (ಶಿ, ಗೋ, ಹು, ಮ.)

ಬಂದು ಕೊಂಡಾಡೆ ಶಂಕರದಾಸನೊಕ್ಕ ನೆ ।
ಲ್ಲಿಂದೆ ತವನಿಧಿಯಾಗುವಂತೆ ಸೇವಿಸಿ ಬಳಿಕ ।
ಬಂದೊರ್ವ ಮಸಣದಾ ಮಾರಯ್ಯನೆಂಬವಂ ಮಸಣಿಯುಂ ಕುಣಿಸೆ ತನ್ನ ।
ಮುಂದೆ ಮಸಣಿ[1]ಯೆನುತೆ ಪಣೆಗಣ್ಣ ತೆಗೆಯೆ ಬೆರ ।
ಳಿಂದದಂ ಬೆರಟೆ ನುಂಗಲ್ಕಹಂಕರಿಸಿರ್ದ ।
ನೆಂದು ಪೊಗಳ[2]ಲ್ ಮಸಣಿಯಿಂದೆ ಬಳಿಕಾತಂಗೆ ಪಣೆಗಣ್ಣನುಗುಳಿಸಿದನು
॥ ೨೦ ॥

ಜಂಗಮಕೆ ಸಂನ್ಯಾಸಿ ಮಂಚಣ್ಣನಿತ್ತನುರೆ ।
ಪೊಂಗಳಂ ಪಿಡಿದ ಕಂಕರಿಗೋಲಿನಿಂದೆ ತ ।
ನ್ನಂಗದೊಳ್ ಪೊರೆದ ಮಣ್ಣಂ ಪರುಷಮಂ ಮಾಡಿ ಮೊರನ ಸೋಮಯ್ಯನಿತ್ತ ।
ಹಿಂಗದ ಸುವರ್ಣಮಯದಂಡುಕೋಲುಗಳನಿ ।
ತ್ತಂ ಗಣಿಸದಾ ಮೋಳಿಗಯ್ಯನಾ ತೆರದೊಳೇ ।
ಪೊಂಗೋಲ್ಗಳಂ ನುಲಿಯಚಂದಯ್ಯನಿತ್ತನೆಲೆ ರಾಮೇಶ ಕೇಳೆಂದನು ॥ ೨೧ ॥

ಬೊಂತೆಯನುದುರ್ಚೆ ಬೊಂತಾದೇವಿಯೆಂದೆಂಬ ।
ಕಾಂತೆ ಜಂಗಮಕೆ ಪೊನ್ನಿತ್ತಳುರೆ ಮಾರಗೌ ।
ಡಂ ತನೆ ಸಹಸ್ರಸಂಖ್ಯೆಯ ಪೊಂಗಳಂ ಕೊಟ್ಟು ಜಂಗಮಕೆ ಶೂಲಾಯುಧಂ ।
ಸಂತಸದೆ ಚಿತ್ರದೊಳಗಿರ್ದ ಪೆಣ್ಣಂ ಕೊಟ್ಟು ।
ಮುಂತೆ ವರ ಗೌಳಭಟ್ಟಾರಕಂ ಮುಕುರದೊಳ್ ।
ಕಂತುಹರಮೂರ್ತಿಯಂ ಜಂಗಮಕೆ ತೋರಿದಂ ರಾಮೇಶ ಕೇಳೆಂದನು ॥ ೨೨ ॥

ಕೆಂಬಾವಿ ಭೋಗಣ್ಣನಭವನಂತ್ಯಜನಾಗಿ ।
ತಾಂ ಬರಲ್ ಪೂಜಿಸಿದನೆಂದು ವಿಪ್ರರ್ ನಗರ ।
ಮಂ ಬಿಟ್ಟು ಪೊರಡಿಸಲ್ಕೂರಲಿಂಗಂಗಳಾತನ ಕೂಡೆ ವಲಸೆದೆಗೆಯೆ ॥
ಎಂಬುದೇಂ ಚೋದ್ಯಮುಂ ಮರಳಿ ಬರೆ ಲಿಂಗದ ಕ ।
ದಂಬನೊಡನೈತಂದು ಪೀಠಂಗಳೊಳ್ ಪಲ್ಲ ।
ಟಂಬೋಗಿ ನೆಲಸಿದುವು [3]ಪೇಳ್ವೆನೇಂ ಸಿದ್ಧರಾಮೇಶ ಕೇಳಚ್ಚರಿಯನು[3] ॥ ೨೩ ॥

೧ ಮು (ಹು.) ೨ ಪೋಗ (ಪ.) ೩-೩ ಸಿದ್ಧರಾಮೇಶ ಕೇಳಚ್ಚರಿಯ ಸೀನೆಂದನು (ಹು, ಮ.); ಸಿದ್ಧರಾಮೇಶ ಕೇಳಚ್ಚರಿಯನೇನೆಂಬೆನು (ದಾ.)

ಎಸೆವಗ್ರಹಾರಪುರೋ[illegible]ಾಂಡಲದ ಸೂರಾಂಬೆ |
ಬಿಸಕಂಠಸಂತ್ಯಜಾಕೃತಿಯೊಳೈತರೆ ಕಾಣು |
ತೊಸೆದು ಪೂಜಿಸೆ ವಿಪ್ರಜನಮವಳ ಮನೆಯ ಸುತ್ತಂ ಮುತ್ತಿ ಪತ್ತಿ ಕೆಲೆಯೆ ||
ರಸಮುಮಂ ಸುರಿದು ಚಪ್ಪರಿದುಣುತೆ ಕೆಟ್ಟಿ ನಾಂ |
ಬಿಸವಟ್ಟೆ ಕೊಂದಪರ್ ಬುಧರೆನುತೆ ಶಂಭು ತವ |
ಕಿಸಲಭಯುಮಂ ಕೊಟ್ಟಕಭವನಾ ಕ್ಷಣದೊಳ್[1] ಬಯಲಾದನೇನೆಂಬೆನು || ೨೪ ||

ಎಸೆವ ತೆಲುಗೇಶನುರೆ ನವಲಿಂಗಮುಮನರಿದು |
ಮಸಣಯ್ಯನೆಂಬುವಂ ಲಿಂಗದೊಳ್ ನೋಡಿ ಸಮ |
ರಸಭಾವದಿಂ ಡಕ್ಕೆಬ್ರಹ್ಮಯ್ಯನೊಪ್ಪುವಷ್ಟಾವರಣದಿಂದೆ ಬಳಿಕೆ ||
ಒಸೆದಭವನಾ ಭಾನುದೇವಂಗೆ ಗುರುವಾಗಿ |
ಯುಸವಾಂಗಲಿಂಗಸಂಬಂಧಗಾಣಿಸಿದನಾ |
ಲಿಸು ಬಡಿಬ್ರಹ್ಮನಾ ಕನಸಿನೊಳ್ ಬಡಿಹೋ[2]ರಿಕಾಯಕಮನುರೆ ಪಡೆದನು || ೨೫ ||

ಮಿಗೆಯೆಲೇಶ್ವರದ ಕೇತಯ್ಯಂ ತನೂಜಂಗೆ |
ಮಗಳನೀ ಮದುವೆಯಂ ಮಾಡಿದಂ ಹುರಿದ ಬೀ |
ಜಗಣಂಗಳಂ[3] ಬಿತ್ತಿ ಬೆಳದನಾ ತಣಿಯೂರ ಬಾಚಯ್ಯನಂತೆ ಗೆಯ್ದು ||
ಒಗೆದ ಮರುಕೂಳಂಯೊಳ್ ತೆನೆಗಳಂ ಕೊಯ್ದನುರೆ |
ಸುಗುಣಸಿಳಿಪಾಳ ಬೊಮ್ಮಯ್ಯನುಂ ಬಿತ್ತದೇ |
ಬಗೆಬಗೆಯ ಧಾನ್ಯಂಗಳಂ ಬೆಳೆದನೆಲೆ ಸಿದ್ಧರಾಮೇಶ ಕೇಳೆಂದನು || ೨೬ ||

ಆಲಿಸೈ ಜಂಗಮಕ್ಕಳತಿಯಾ ಚೆಂದಯ್ಯ |
ನಾ ಲಲಿತಚಿಂತಾಮಣಿಯನೊಲಿದುಕೊಟ್ಟನಾ |
ಕಾಳಿರಾಜಂ ತನ್ನ ಲಿಂಗಕ್ಕೆ ಷಡ್ರಸಾನ್ನಂಗಳಂ ತಾನುಣಿಸುವಂ ||
ಪೇಳಲೇನೈಚತಂ ಲಿಂಗಕ್ಕೆ ತಾನುಂಡ |
ಮೇಲೆ ತದ್ರಸರಸಾಯನವನರ್ಪಿಸುವನಾ |
ಶೀಲವಂತಂ ಕೇತಿತಂಡೆ ಸಿಚ್ಚಂ ಮಳೆಯನೀರನೊಲವಿಂ ತರಿಸುವಂ ❀ || ೨೭ ||

೧ ಕೊಟ್ಟೈಪವನಾ ಕ್ಷಣದೊಳಗೆ (ಹು.) ೨ ಹಾ (ಶಿ, ಗೋ.) ೩ ಗಳನಾಗಂ (ಶಿ, ಗೋ.)
❀ ಈ ಪದ್ಯವು ಹು, ಮ. ಈ ಪ್ರತಿಗಳಲ್ಲಿಲ್ಲ.

ಶೂಲಾಯುಧಂ ಚಿತ್ರದಿಂ ಬರೆದ ಹೆಣ್ಣ ಸತಿ |
ಲೀಲೆಯಿಂ ನಿಜಮಾಡಿ ಜಂಗಮಕ್ಕಿತ್ತನಾ |
ಕಾಳಿರಾಜಂ ತನ್ನ ಲಿಂಗಕ್ಕೆ ಷಡುರಸಾನ್ನಂಗಳಂ ತಾನುಣಿಸುವಂ |
ಪೇಳಲೇನ್ನೈಚತಂ ಸಲಿಸಿದ ರಸಾಯನವ |
ಮೇಲೆ ತನ್ನಯ ಲಿಂಗಕರ್ಪಿಸಿದನನುದಿನಂ |
ಶೀಲವಂತಂ ಕೇತಿತಂದೆ ನಿಚ್ಚಂ ಮಳೆಯ ನೀರನೊಲವಿಂ ತರಿಸುವಂ
❁ || ೨೭ ಅ ||

ಪುಲಿಕಾಮನೊಲವಿನಿಂ[1] ತವನಿಧಿಯ ಪಡೆದನೈ |
ಬಳಿಕಲಾ ಕೋಟಿಯಾ ಶಿವದೇವನಾಗ[2] ಶಿವ |
ನೊಲವಿನಿಂದಿರದೆ ಧಾನ್ಯದ ಮಳೆಯ ಬರಿಸಿದನದಂಬಿಗರ ಚೌಡಯ್ಯನು ||
ನಲಿದು ಸಂಸಾರಸಾಗರವ ದಾಂಟಿದನಾಗ |
ಕಲಿಚಂಡಕೇಶಿಮಾರಾ ಭಕ್ತರಿಬ್ಬರುಂ |
ಸಲೆ ಲಿಂಗದಲ್ಲಿ ಪೊಕ್ಕಡಗಿದರ್ ಸಿದ್ಧರಾಮೇಶ ನೀಂ ಕೇಳೆಂದನು || ೨೮ ||

ಚಿಕ್ಕಲಿಗೆನಾಚಯ್ಯನಿರದೆ ಗೀತವ ಪಾಡೆ |
ಮುಕ್ಕಣ್ಣನೊಲಿದು ಪ್ರಸಾದಮಂ ಕೊಟ್ಟನಾ |
ಕಕ್ಕಯ್ಯಗಂದು ಕಂಕರಿಗತಿಳಿಗೆ ಕುಣಿದನಾ ಭೂಧರಂಗೊಲಿದು ಕುಣಿದ ||
ಚಿಕ್ಕಯ್ಯಗೊಲಿದು ನಿಜಲಿಂಗಪಾದಂ ಸೊಲ್ಲೆ |
ಗಕ್ಕಿಮಾರಣ್ಣನುಂ ಜಂಗಮಕೆ ಮೃಷ್ಟಾನ್ನ |
ವಿಕ್ಕಲಾತಂಗೊಲಿದನೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು || ೨೯ ||

ಉಡುಗಣೆಯ ಪೆರುಮಾಳಿಳ ಜಂಗಮಕೆ ರಾಜ್ಯವಿ |
ತ್ತಿಡುಗಡಲ ಪೇರ್ಮಡಿ ಸುಧನಧಾನ್ಯಮಂ ಕೊಟ್ಟು |
ನಿಡುಗುಡಿಯ ಮಾರನಾ ಸತಿಯ ಸೀರೆಯನಿತ್ತು ಸಿಂಧುಬಲ್ಲಾಳ ತನ್ನ ||
ಮಡದಿಯಂ ಕೊಟ್ಟಾಯಿದಕ್ಕಿಯಾ ಮಾರನಂ |
ದೊಡನೆ ಸತಿಯಂ ಕೊಟ್ಟಹಪ್ಪಗೆಯನುಂ ತನ್ನ |
ಮಡದಿಯಂ ಕೊಟ್ಟು ಮುಕ್ತಿಯನಾಂತರೆಲೆ ಸಿದ್ಧರಾಮೇಶ ಕೇಳೆಂದನು || ೩೦ ||

೧ ನುಡುತಂದ (ಹು, ಮ.) ೨ ನಾಗಮಯ್ಯ (ಹು, ಮ.) ೩ ದನಿ (ಮ.) ೪ ಪೇರು ಮಳೆ (ಗೋ, ಹು.) ❁ ಈ ಪದ್ಯವು ಹು, ಮ. ಪ್ರತಿಗಳಲ್ಲಿ ಮಾತ್ರವಿದೆ.

ಗುರುವೀರಬ್ರಹ್ಮಯ್ಯನೊಲಿದು ಪರವಾದಿಶಂ |
ಕರಕೂಚಿಗನ ಕೊಂದು ವೀರಬಲದೇವನಂ |
ಧಿರವೆ ವೆಲನಾಡ ಚೋಳನ ತಲೆಯನರಿದು ಸಗರದ ಬ್ರಹ್ಮದೇವನಾಗ ||
ಪರವಾದಿಕ್ಷಪಣನಂ ಕೊಂದು ರಾಜಬ್ರಹ್ಮ |
ನರಿಮು ಸುಕುಮಾರಸೆಟ್ಟಿಯ ತಲೆಯನರಿದು ಶಂ |
ಕರನನುರೆ ಮೆಚ್ಚಿಸಿದರೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು || ೩೧ ||

ಪರಮಭಕ್ತಂ ತನ್ನ ಗುರುವಳಿಯೆ ತಾಂ ತನ್ನ |
ಶರಣಪಿತ್ತವರನುಳುಹಿದನು ಬಿಲ್ಲಮರಾಯ |
ನಿರದೆ ತನ್ನಯ ಗುರುವ ಶಿವಲೋಕಕೊಯ್ದನಾ ಗೂಗೆಯಾ ಮಾರಣ್ಣನು ||
ಗುರುವಿನುಪದೇಶದಿಂ ಮುಕ್ತಿವಡೆದಂ ಮಗನ[1] |
ಗುರುವರನ ಹೆಸರಿಟ್ಟು ಕಾಯಸಿದ್ಧಿಯನಾಗ |
ಲಿರದೆ ಪಡೆದಂ ಬೊಪ್ಪಿದೇವನೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೩೨ ||

ಒಲಿದು ಶಿವಲಿಂಗಮಂ ಮಾದಾರಧೂಳಯ್ಯ |
ನುಳಿಯ ಮೊನೆಯಲ್ಲಿ ತೋರಿದನು ಮಾಚಯ್ಯಂಗೆ |
ಬಲಿಯಲ್ಲಿ ತೋರಿದನು ಚಿಕ್ಕಲಿಗೆಲಿಂಗನಾ ಭೀಮರಸಗಂ ತೋರಿದಂ ||
ಬಳಿಕವುರಿಲಿಂಗವಾ ಪೆದ್ದಯ್ಯನಿದಿರಿನಿಂ |
ಪೊಳೆದು ತೋರಿದನು ಸೊಡ್ಡಳಬಾಚಿದೇವಂಗೆ |
ನೆಲಸಿಳೆ ಸೌರಾಷ್ಟ್ರಸೋಮೇಶಂ ಕೊಟಾರದಿಂ ತೋರಿದಂ ಕೇಳೆಂದನು || ೩೩ ||

ವೀರರೇಚಯ್ಯನಾ ಲಿಂಗಕ್ಕೆ ಶಿರವನರಿ |
ದಾರತಿಯನೆತ್ತೆತ್ತಿ ಮರಳಿ ಪಡೆದಂ ಸದಾ |
ಚಾರಿಯುಂ ನಾ ಕೇಶಿತಂದೆ ತನ್ನಯ ತಲೆಯದಾಗ ಭವಿ ಮುಟ್ಟುತಿರಲು ||
ಜಾರದೆಂದಾ ತಲೆಯನರಿದು ಪಡೆದಂ ತನಗೆ |
ಪೂರಹರಪೂಜೆ ತಪ್ಪಿದುದೆನುತೆ ಬಾಚಯ್ಯ |
ನೋರಂತೆ ತನ್ನ ತಲೆಯುಂ ತರಿದು ಪಡೆದನೆಲೆ ರಾಮೇಶ ಕೇಳೆಂದನು || ೩೪ ||

೧ ಗೆ (ಮ.) ೨ ನೆಲಸಿ (ಹು, ಮ) ೩ ರಾಜ (ಶಿ, ಗೋ.) ೪ ನಲಿದು (ಹು, ಮ.) ೫ ನಾ (ಹು, ಶು, ದಾ, ಮ.) ೬ ಟ್ಟಲಿ (ಹು, ತು.)

ಕಲಿಸೋಮಿದೇವಯ್ಯನೆಸೆವ ಲಿಂಗಕೆ ತನ್ನ |
ತಲೆಯ ನಲಿದಾರತಿಯನೆತ್ತಿ ಬಳಿಕಾಗಲಾ |
ತಲೆಯ ಪಡೆದಂ ಜೈನವಾದದಿಂದೇಕಾಂತರಾಮಯ್ಯನಾಗ ತನ್ನ |
ತಲೆಯನರಿದೆಳ್ಳಿನದವೋಲೆ ಪಡೆದಂ ಮತ್ತೆ |
ಹುಲಿಗೆರೆಯ ಸೋಮಣ್ಣನಮಿಸಿ ಜಿನನಂ ಹತಿಸಿ |
ಬಲು ಲಿಂಗಮಂ ಮಾಡೆ ಮಾರುಡಿಗೆನಾಚಯ್ಯನುಂ ಜಿನರನುರೆ ಹತಿಸಿದಂ || ೩೫

ಹರಭಕ್ತನಾದಯ್ಯನರಸಿ ಪದ್ಮಾವತಿಯು |
ಮಿರದೆ ಜಂಗಮಕೆಂದು ಮಾಡಿದನ್ನವ ಜಿನರ |
ಚರುವೆಗೆಂದೊಯ್ಯಲಾ ಸತಿಯ ಕೊಲೆ ಜೈನರಿಂ ಹುಲಿಗೆರೆಯ ಸೋಮೇಶನ ||
ಕರೆದು ತಂದಲ್ಲದುಣೆನೆಂದು ಹಾಸ್ಯವನಾಡೆ |
ಸುರಹೊನ್ನೆಯೆಂಬ ಬಸದಿಗೆ ಬೇಗ ಹುಲಿಗೆರೆಯ |
ಪುರದ ಸೋಮೇಶನಂ ಕರೆದು ತಂದಾದಯ್ಯನಿರದೆ ಜೈನರ ಹತಿಸಿದಂ || ೩೬

ಹರುಷದಿಂ ಮೂರ್ಖನೈನಾರ್ ಶಿವಂ ಜೂಜಾಡಿ |
ಭರದೆ ಸೋಲಲ್ ಕಟ್ಟಿಹಾಯ್ಕೆ ಪಣೆಗಣ್ಣೋರೆ |
ನಿರುತ ಜಂಗಮದೊಡವೆಯೆನುತೆ ಹುರುಗೊಂಡನಾ ಚಿರುತೊಣೆಯನುದ್ದಂಡನು
ತೆರಳುತಬಲೆಗೆ ಜಂಗಮಾರ್ಚನೆಯ ಮಾಡೆಂದು |
ಪಿರಿದರ್ಥಮಂ ಕೊಡಲ್ ಭರದೊಳಗೆ ಬಂಧುಗಳ |
ಗಿರದಿಕ್ಕೆ ಬಂದು ಬಂಧುಗಳನರಿದಾಕೆಯಂ ಸೀಳ್ದು ಶಿವಪುರಕ್ಕೈದಿದಂ || ೩೭ ||

ಸಿರಿಯಾಳಸೆಟ್ಟಿ ಮಗನಂ ಕೊಂದು ನೀಡಿದಂ |
ಹರನದಂ ಭುಂಜಿಸಿದನೀರ್ವರುಂ ಹೊರಗೆನಲ್ |
ಗಿರಿಜೆಯುಂ ಚಂಗಳೆಯುಮಾ ಹಲಾಯುಧನ ಮನೆಗೈತಂದು ಬೇಡಿಕೊಳಲು ||
ಮರುಳಿಯೊಳಗೆನಿಸಿದಂ ಬಾಹೂರ ಬೊಮ್ಮಣ್ಣ |
ಕರಿಯ ಕೊಂದಸುವಿತ್ತು ಜೋಳರಾಸಿಯೊಳೆ ಶಂ |
ಕರನನೋಯೆನಿಸಿ ಕಬ್ಬಂ ಕಲ್ಲನಂದಿಗಂ ಮೇಯ್ಸಿದಂ ಭಕ್ತಿಯಿಂದೆ || ೩೮ ||

---

೧ ರಿ (ಹು.) ೨-೨ ಯ | ರಿ (ಹು, ಮ.); ಯ | ದಿ (ಪ, ದಾ.) ೩ ರು (ತಿ, ಗೋ.) ೪ ಹ (ಹು, ಪ, ದಾ.) ೫ ಕೆ (ಪ, ಗೋ.) ೬ ಮಾ (ಪ.)

ಕಾಳಮ್ಮನೆಂಬಾಕೆ ಕಗ್ಗಲ್ಲಿನಿಂ ಕರೆದ |
ಹಾಲನೀಶಂಗುಣಿಸಿದಳ್ ಬಳಿಕ್ಕಿರದೆಯಾ |
ಕೋಳೂರಕೊಡಗೂಸು ಹಾಲನೀಶಂಗೆರೆದಳೊಲವಿನಿಂ ಬಲುಹೇನನು ||
ಗೂಳಿಯೆಂದಿರಿ[1]ವಾತನೊ[1]ಡಲನಿಬ್ಬಗಿಮಾಡಿ |
ಸೀಳಿದಂ ರಾಮನಾಥಂ [2]ಗೊಲ್ಲಳಂ ತಂದೆ |
ಕಾಲಿಂದೆ ಲಿಂಗಮಂ ನೂಂಕೆ ಸಿರವರಿದನೆಲೆ ರಾಮೇಶ[2] ಕೇಳೆಂದನು || ೩೯ ||

ಕಂಗಳ ವಿರೂಪಾಕ್ಷನೊಲವಿನಿಂದಾಗ ಶಿವ |
ಲಿಂಗಾರ್ಚನೆಯ ಕಾಲದಲ್ಲಿ ತನ್ನಯುವೆರಡು |
ಕಂಗಳಂ ತೆಗೆದು ಪೂಜಿಸಿ ಮಗುಳೆ ಪಡೆದನಾ ಕಂಗಳಾ ದೇವಯ್ಯನು ||
ಕಂಗಳಂ ತೆಗೆದುಪೂಜಿಸಲಾಗ[3] ದೋಷಕಜ |
ನಂಗಳತಿಹಾಸ್ಯವಂ ಮಾಡೆ ಮಾರ್ಜಾಲಕನ |
ಕಂಗಳಂ ತೆಗೆದದಕೆ ಮಗುಳೆ ಪಡೆದಂ ಸಿದ್ಧರಾಮೇಶ ಕೇಳೆಂದನು || ೪೦ ||

ಶಿವರಾತ್ರಿಸಂಕಣ್ಣ ಪುಲಿಗಂಜಿ ಬಿಲ್ವದಳ |
ನಿವಹದಿಂದರ್ಚಿಸಿದ[4]ನಧಿಕತರಭಕ್ತಿಯಿಂ[4] |
ಶಿವರಾತ್ರಿಭದ್ರಯ್ಯ[5]ನಾ ತೆರದೊಳರ್ಚಿಸಿದನೆಂ[5]ಟಾಲಮಲ್ಲಯ್ಯನು ||
ಶಿವಲಿಂಗಪೂಜೆಗಂ ಕರವೀರಮೊಂದುಳಿಯೆ |
ತವೆ ತನ್ನ ಕಣ್ಣ ಕಳೆದರ್ಚಿಸಿ[6] ಮರಳಿ ಪಡೆದ |
ಶಿವಯೋಗಿದೇವಯ್ಯನುಂ ತನ್ನ ನಾಲಗೆಯನರಿದಿತ್ತು ಮರಳಿ ಪಡೆದಂ || ೪೧ ||

ಊರಿಲಿಂಗಪೆದ್ದಯ್ಯನತಿಭಕ್ತಿಯಿಂದೊಲಿದು[7] |
ಶರಣನೇ ಸತಿ ಲಿಂಗವೇ ಪತಿಯೆನಲ್ಕಾಗ |
ಉರದಲ್ಲಿ ಮೊಲೆ[8]ಗಳೇ ಮೂಡಿದುವು ಹೇರೂರಹೆಣ್ಣು ತಾಂ ಗಂಡಾದಳು ||
ಪರಿವಳಿಗೆವೈಜಕವ್ವಂ ಜಂಗಮಕ್ಕಿಕ್ಕ |
ಲಿರದೆ[9]ಗಂಡಂ ಜೈನ[9] ಪೊರಡಿಸಿದೊಡ್ಯೆದಿ ಶಂ |
ಕರನೆಂದು ಜಿನನಪ್ಪಿದೊಡೆದೊಡೆದು ವೈಜಕೇಶ್ವರಲಿಂಗವಾದುದೊಲಿದು || ೪೨ ||

೧ ದಂತಸೊ (ಪು.) ; ದ ತಾಯೊ (ಹು, ದಾ, ಮ.) ೨-೨ ಭೀಮನಾಥನಾ ! ಚೋಳಿಯಕ್ಕನ ಸುತ ಹುಗ್ಗಿಯಂ ತಾನುಣ ತನೆಲೆ ರಾಮ (ಹು, ಮ.) ೩ ಸುತಿಸಲು (ಹು, ಮ.) ೪ ನಾ ತೆರದೊಳೊಪ್ಪುವಂ (ಹು, ಮ.) ೫ ದಂ ಪೂಜಿಸಿದರು ಬಳಿಕೆಂ (ಹು, ಮ.) ೬ ತೆಗೆದೇರಿಸಿ (ಹು, ಮ.) ೭ ದಾಗ (ಹು.) ೮ ಕುಚ (ಹು.) ೯-೯ ಜೈನಂ ಗಂಡ (ಶಿ.)

ಪರಮಶಿವಯೋಗಿ ಮಲ್ಲರಸನಾಜ್ಞೆಯೊಳೆ ಶ್ರೀ |
ಗಿರಿಯಿಂದೆ ಸಕಳೇಶಮಾದಿರಾಜಂ[೧]ಬಂದು |
ಹರುಷದಿಂ ಕಲ್ಯಾಣಪಟ್ಟಣದೊಳಿರೆ[೨] ಚಿಕ್ಕಮಾದಣ್ಣನಳಿಯಲಸನ ||
ಅರಸಿ ಮಹದೇವಿ ಮನೆಯೊಳ್[೩] ಸಮಾಧಿಯಂ ತೆಗೆವು
ತಿರಲಾಕೆಯಣುಗನಾ ಬಾಲಲಿಂಗಣ್ಣನಂ |
ದಿರಿಸಿದೆ ಪೇಳಲ್ಕೆ ಸಕಳೇಶಮಾದರಸರಾ[೩] ಮಾದಣ್ಣನಸುವ ಪಡೆದಂ || ೪೩ ||

ಪರಮಶಿವಲೆಂಕಮುಂಚಣನೆಂದು ಬೆರಳನರಿ |
ದರಿದು ಶಂಕರಗೀಯೆ[೪] ದೂಷಕರ್ ನಿಂದಿಸ |
ಲ್ಕಿರದೆ ಕಾಸಿಯ ವಿಶ್ವನಾಥಂಗೆ ನಲವಿಂ ಗದಾಧರನೆನಿಪ್ಪ ಪೆಸರ ||
ಹರಿಯ ತಂದಡ್ಡಬೀಳಿಸಿದನರಿಯಮರಾಜ
ನರಿದನಾ ಹರಿಯೆಂದು ನುಡಿದನಂ[೫] ಸತ್ಯಕ್ಕ |
ನಿರದೆ ಹರಿಯೆಂದನಂ ಹುಟ್ಟೆಂದಲಿರಿದಳೆಲೆ ರಾಮೇಶ ಕೇಳೆಂದನು || ೪೪ ||

ಬಳ್ಳಮಂ ಬಲುಲಿಂಗಮಂ ಮಾಡಿ ಮೆರೆದನಾ |
ಬಳ್ಳೇಶಮಲ್ಲಯ್ಯನೆಸೆವ ಕಲಿಗಣನಾಥ |
ನಲ್ಲಲ್ಲ ಭವಿಗಳಂ ಪಿಡಿತಂದು ಲಿಂಗಂಗಳಂ ಕಟ್ಟಿ[೬]ಲೀಶನರಿದು ||
ಮೆಲ್ಲನೈತರೆ ಕಂಡು ಭವಿ ಲಿಂಗಮಂ ಕಟ್ಟಿ |
ಕೊಳ್ಳೆಂದೊಡೊಲ್ಲೆನೆನೆ ಕಡಿಯೆ ನಿಜದೊರಲಾ |
ಬಲ್ಲದಂ ಶಿವಗೆ ಲಿಂಗವ ಕಟ್ಟಿ ಗುರುವಾದನೆಲೆ ರಾಮ ಕೇಳೆಂದನು || ೪೫ ||

ಶಿವ ಕುಣಿಯಲಾರದೊಡೆ ಬಹುರೂಪಿನಿಣಿಯರುಂ
ಜವದಿಂದೆ ಕರುಗಾಯ್ಸಿ ಬಹುರೂಪಚೌಡನುಂ |
ಶಿವನ ಮುಂದಾಡಿ ಕುಂಬಾರಗುಂಡಯ್ಯನುಂ[೭] ಗತಿಗತಿಗೆ[೭] ಶಿವನ ಕುಣಿಸಿ ||
ತವೆ ರಾಗಮಂ ಪಾಡಿ ಶುದ್ಧಬುದ್ಧಂ ಬಳಿ |
ಕ್ಕವಸಂತೆ ಭದ್ರಗಾಯಕನಲ್ಲಮಯ್ಯ ಕೇ |
ಶವರು ರಾಗಂಗಳಂ ಪಾಡಿ ಮುಕ್ತಿಯನಾಂತರೆಲೆ ರಾಮ ಕೇಳೆಂದನು || ೪೬ ||

೧ ಮ-ಮ (ಪ.) ೨ ಪರಪೊಳಿರುತಿರೆ (ಹು, ಮ.) ೩-೩ ದರುಪ ಸಕಳೇಸಮಾದರಸರಾ ಚಿಕ್ಕ (ಹು, ಮ.) ೪ ಶಿವಗೀಯಲಾ (ಹು, ಮ.) ೫ ನಾ (ಪ.) ೬ ಧರಿಸ (ಪ, ಮ.) ೭-೭ ನೊಲವಿಂದಲಾ (ಹು.)

ರಂಗವಲಿಸೀವೆಯಿಂ ಸೋವಣ್ಣ ಕಳವಿನಿಂ |
ಹಿಂಗದಾ ಸುಕುಮಾರಕಂ ವಿರತಮಾಣಿಕಂ |
ಲಿಂಗವಂ ಮೆಟ್ಟಿ ಪುಷ್ಪದ ದಂಡಿಲಿಂಗವಂ ಪೂಗರಡಿಗೆಯಲಿ ಬಡಿದು ||
ಅಂಗುಗಷ್ಟನ ಗುರುವ ಶಿವ ತೋರೆ ಕೇಶವಂ |
ಲಿಂಗವುಂ ಬೇಗೆ ಬರಲೊಡಲಿನಲ್ಲಿಂಬಿಟ್ಟು |
ಲಿಂಗವಲ್ಲಿಯೆ ಮುಕ್ತಿವಡೆದರೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೪೭ ||

ವೀರಸಂಗಯ್ಯನಾ ಪರವಾದಿಗಳ ಹತಿಸೆ |
ಸಾರಿ ಜಂಗಮವಾಗಿ ಬರೆ ತನುವನಿತ್ತನಾ |
ಹೇಮೂರ ಸಾಚಯ್ಯನುಂ ಜಂಗಮಕ್ಕೆ ತನ್ನಯ ತನುವನಿರಿದಿತ್ತನು ||
ಧೀರ ಸೋಮಯ್ಯ ಕಾಲೊಳ್ ಮೊಳೆಗಳಂ ಬೆಟ್ಟಿ |
ನೀರ ತಂದೀಶಂಗೆ ಮಜ್ಜನಕ್ಕೆರೆದನಾ |
ವೀರಭೋಗಣ್ಣನುಂ ತನುವ ಬತ್ತೀಸಾಯುಧಂಗಳಿಂದರಿಕೊಂಡನು[೨] || ೪೮ ||

ಪರವಾದಿಜೈನರಂದಾ ಮೋಟಮಲ್ಲನಂ |
ಕರೆದು ಜಂಗಮರೂಪಿನಿಂದೆ ದಸರಯ್ಯಗಳ |
ಪೊರೆಗೆ ಕಳುಪಲ್ಕವಂ ಬಂದು ಮೋಟಗಳಿಂದೆ ತಿವಿಯೆ ಕೈಕಾಲ್ಬಂದುವು ||
ಕರದ ಲಿಂಗಂ ಮಡುವಿನೊಳ್ ಬೀಳೆ ಕಾಣುತುಂ |
ಶರಣನೇ ಸತಿಯೆಂದು ಕೊಂಡಾಡೆ[೩] ಲಿಂಗವ |
ಭ್ರರದೆ ಮೊದಲಂತೆ ಬಂದುದು ಕೇಶಿರಾಜದಂಡೇಶಂಗೆ ಕೇಳೆಂದನು || ೪೯ ||

ಬಸವ ಶಿವದೇವನಾ ಬಚ್ಚಲೊಳ್[೪]ದಕದಲ್ಲಿ |
ಹಸನಾಗಿ ತೊನ್ನಗಳ ಮಾಣಿಸಿದನಾಗ ಲಾ |
ಲಿಸಿ ಮಿಂದ ನೀರಿನಿಂದೇಳ್ನೂರುಮಂದಿಗೊಲವಿಂದಾಗ ದೂಡದೇವಂ ||
ಬಿಡದು ಸೋ[೫]ರುಫ ಮಹಾತೊನ್ನಗಳನಾಗ ಮಾ |
ಣಿಸಿದನಾ ಸಿಂಗಿದೇವಂ ನಿಷ್ಠೆಯಿಂ ರೋಗ |
ವಿಷರಂಗಳೆಂಬವರ ಮೇಲೆ ಬಿರುದಿಕ್ಕಿದಂ ರಾಮೇಶ ಕೇಳೆಂದನು || ೫೦ ||

೧ ವೀರ (ಹು, ಮ.) ೨ ದರಿದುಕೊಂಡಂ (ಹು, ಮ.) ೩ ಸುತಿಸಲಾ (ಹು, ಮ.)
೪ ಲದುದ (ಮ.) ೫ ಹೋ (ಹು, ಮ.)

ಇನ್ನು ಕೇಳ್ ನಿರ್ವಿಷದ ಸಂಗಣ್ಣನಿರಲೊಂದು |
ಪನ್ನಗಂ ಕಡಿದಳಿಯಲದಕೆ[೧] ಹರಣವನಿತ್ತ |
ನುನ್ನತದ ಧರ್ಮಯ್ಯನುಂ ಕಲ್ಲನಾಥಯ್ಯನೆಂಬೀರ್ವರಿರಲವರನು ||
ಪನ್ನಗಂಗಳ್ ಕಚ್ಚಿ ಸಾಯಲ್ಕವಕೆ ಪ್ರಾಣಮಂ |
ಚೆನ್ನಾಗಿ ಕೊಟ್ಟು ಬದುಕಿಸಿದಸುದ್ಧಟದೇವ |
ನುನ್ನತದ ಪುರಸಹಿತೆ ಕೈಲಾಸಕ್ಕೈದಿದಂ ರಾಮೇಶ ಕೇಳೆಂದನು || ೫೧ ||

ಆಲಿಸೈ ಕಿನ್ನರಬ್ರಹ್ಮಯ್ಯನಿಲ್ಲಿಯ ನೃ |
ಪಾಲಕಂ ಕೇಳೆ ತ್ರಿಪುರಾಂತಕನ ನುಡಿಸಿದಂ |
ಪೇಳಲೇನಿ ಮಡಿವಳಯ್ಯನೇ ಬಿಜ್ಜಳನ ಪಡೆಯನುರೆ ಹತಿಸಿ ನುತಿಸೆ ||
ಮೇಲವರ ಬದುಕಿಸಿದನೀಯಮುಗಿದೇವರುಗ |
ಳಾಲಯವ ಪೊರಡಿಸಲ್ ತನ್ನ[೨] ಲಿಂಗದ ತಲೆಯ |
ಮೇಲೆ ತನ್ನಯ ಮನೆಯ ಮುಟ್ಟುಗಳನೆಲ್ಲವಂ ಹೊರಿಸಿಕೊಂಡೊಯ್ದಾತನು || ೫೨ ||

ಈತನೇ ಕಲಕೇತಬ್ರಹ್ಮಯ್ಯನಧಿಕಧನ |
ವ್ರಾತಮಂ ಸುಂಕದಾ ಬಂಕಯ್ಯನೆಂದೆನಿ |
ಪ್ಪಾತಂಗೆ ತಗರ ಕೋಡಿಂದಿತ್ತನೀತನೇ ಕನ್ನದ ಬ್ರಹ್ಮಯ್ಯನು ||
ಭೀತಿಯಿಲ್ಲದೆ ಕನ್ನಗಳವಿನಿಂದಂ ಹಾಗ |
ವೇ ತನಗೆ ಕಾಯಕಂಗೊಂಡು ಕನ್ನದ ವಣ್ಣ |
ನೋತು ಚಿನ್ನದ ರಾಶಿಯಂ ಮಾಡಿಕೊಟ್ಟನೆಲೆ ರಾಮೇಶ ಕೇಳೆಂದನು || ೫೩ ||

ಹಾದರದೆ[೪] ಬೊಮ್ಮಣ್ಣನಳಿಯಲಾತನ ಮಡದಿ |
ಹಾದರದಿ ಕಾಯಕವ ತಂದು ಪಾಕವ ಮಾಡಿ |
ಮೋದದಿಂ ಜಂಗಮಂ ಹಸಿದರೇಳೆಂದಾಗ ಗಂಡನಸುವಂ ಪಡೆದಳು ||
ಸಾದುನಿರ್ಲಜ್ಜೆಯಾ ಶಾಂತಯ್ಯನರಸಿಯು ವಿ |
ನೋದದಿಂ ಶಿವನು ಶೀತಃಳಪರಿಹರಂ[೫] ಕೇಳೆ |
ಚೋದ್ಯಮೆನೆ ಸತಿಪತಿಯರಿರ್ವರುಂ ಕೌಪುಗಳನಿತ್ತರ್ ದಿಗಂಬರದೊಳು || ೫೪ ||

---

೧ ಕಚ್ಚಿ ಸಾಯಲ್ಕೆ (ಹು, ಮ.) ೨ ಸಲ್ ನಿನ್ನ (ಪ, ತು, ದಾ.); ಸಲ್ತಾಗ (ಹು.); ಸಲ್ಲಿಂದ (ಮ.) ೩ ದ (ಶಿ, ಗೋ.) ೪ ದ (ಹು, ಮ.) ೫ ವ (ದಾ, ಮ.)

ಇರದೆ ಕಾಳಿಂಗದೇಶದಿ ಬಂದನಿಲ್ಲಿಗೆ |
ಮರುಳಶಂಕರದೇವರಿಲ್ಲಿಯೇ ಹನ್ನೆರಡು |
ವರುಷಪರಿಯಂತರಂ ಸುಪ್ರಸಾದದೆ ಮುಕ್ತಿವಡೆದನೀ ಘನಮಹಿಮನು |
ಹರನರಸಿಯಂಶವೇ ಧರೆಯೊಳುಡುತಡಿಯೆಂಬ |
ಪುರದೊಳುದ್ಭವಿಸಿ ಭವಿಯಿಂದು ಕೌಶಿಕನ ಪರಿ
ಹರಿಸಿ ಘನವಿರತಿಯಿಂ ಬಂದಳೀ ಮಹದೇವಿಯಕ್ಕ ನೀಂ ಕೇಳೆಂದನು || ೫೫ ||

ಈತನೇ ನಿಜಗುಣಮಹಾರಾಜನೆಂಬಾತ |
ನೀತನೇ ಚಂದಿಮರಸಂ ಸಚಿವರಿರ್ವರುಂ |
ಪ್ರೀತಿಯಿಂ ವಿರತರಾದರ್ ಬಳಿಕ್ಕೀತನೇ ಸಪ್ಪಿಯಲ್ಲಮದೇವನು ||
ಈತನೇ ಮಿಂಡಸಂಗಯ್ಯನೆಂದೆಂಬಾತ |
ನೀತನೇ ಮುಗ್ಧಸಂಗಯ್ಯನೆಂದೆಂಬಾತ |
ನೀತನೇ ಸತ್ಯಣ್ಣನೆಂಬಾತನೆಲೆ ಸಿದ್ಧರಾಮೇಶ ಕೇಳೆಂದನು ❀ || ೫೬ ||

ಈತನೇ ಮೇದಾರಕೇತಯ್ಯನೆಂಬಾತ |
ನೀತನೇ ಡೋಹಾರಕಕ್ಕಯ್ಯನೆಂಬಾತ |
ನೀತನೇ ಹೊಡೆಹುಲ್ಲ ಬಂಕಯ್ಯನೀತನೇ ತಳವಾರರಾಮಯ್ಯನು ||
ಈತ ಭರಿತಾರ್ಪಣದ ಸಂಗಯ್ಯನೆಂಬಾತ |
ನೀತನೇ ವೈದ್ಯ¹ಸಂಗಣ್ಣನೆಂದೆಂಬಾತ |
ನೀತನರುವಿನ ಮಾರಿತಂದೆ ಕೇಳೀತಂ ಪ್ರಸಾದಿಭೋಗಣ್ಣತಂದೆ ❀ || ೫೭ ||

ಈತನೇ ದಾಸೋಹಿಸಂಗಣ್ಣನೆಂಬಾತ |
ನೀತನೇ ಬಾಚಿಯಕಾಯಕದ ಬಸವಪ್ಪ |
ನೀತನೇ ನಗೆಯಮಾರಣ್ಣನೆಂದೆಂಬಾತನೀತನೇ ಘಟ್ಟಿಮರಸ ||
ಈತನೇ ಒಕ್ಕಲಿಗಮುದ್ದಯ್ಯನೆಂಬಾತ |
ನೀತನೇ ಉದ್ದೆಯ ಸೋಮಯ್ಯನೆಂಬಾತ |
ನೀತ ಗಾವುದಿಮಾರಿತಂದೆ ಕೇಳಿನ್ನೀತನೇ ಲೆಂಕಬಂಕಣ್ಣನು ೫೮ ||

೧-೧ ದಾಕ (ಗೊ.) ೨-೨ ಸ್ವೀವೇದ್ಯ (ಶಿ, ಹು.) ❀ ೫೬, ೫೭ನೆಯ ಪದ್ಯಗಳಲ್ಲಿಯ ಕೊನೆಯಪಾದಗಳು ಹು, ಮು. ಪ್ರತಿಗಳಲ್ಲಿ ೫೭, ೫೬ನೆಯ ಪದ್ಯಗಳಲ್ಲಿ ಬಂದಿವೆ.

ಈತನೇ ರಾಯಸದ ಮಂಚಣ್ಣನೆಂಬಾತ |
ನೀತನೇಯವಸರದ ಲೆಂಕಣ್ಣನೆಂಬಾತ |
ನೀತನೇ ಪಡಿಹಾರಿಯುತ್ತಣ್ಣನೀತನೇ ಬೊಕ್ಕಸದ ಚಿಕ್ಕಣ್ಣನು ||
ಈತನೇ ಭಂಡಾರಿಶಾಂತಯ್ಯನೆಂಬಾತ |
ನೀತನೇ ಹಡಪದಪ್ಪಣ್ಣನೆಂದೆಂಬಾತ |
ನೀತ ಚವುರದ ನಾಚಿತಂದೆ ಕೇಳೀತನೇ ಕಾಳಾಂಜಿಯಪ್ಪಣ್ಣನು || ೫೯ ||

ಈತನೇ ಭಟ್ಟಮಾರಣ್ಣನೆಂದೆಂಬಾತ |
ನೀತನಿರದುಗ್ಗಡಿಪ ಗಬ್ಬಿದೇವಯ್ಯ ಕೇ |
ಳೀತ ಕೂಗಿನಮಾರಿತಂದೆ ಕೇಳಿನ್ನೀತನೇ ಕೋಲಶಾಂತಯ್ಯನು ||
ಈತನೇ ಪ್ರಹರಿಯಾ ಮಾರಣ್ಣನೆಂಬಾತ |
ನೀತನೇ ತುರುಗಾಹಿಮಾರಣ್ಣನೆಂಬಾತ |
ನೀತ ಕೇಳಗ್ಗಣಿಯ ಹೊನ್ನಯ್ಯನೀತನೇ ಸತ್ತಿಗೆಯ ಶಾಂತಯ್ಯನು || ೬೦ ||

ಇವರು ಮೊದಲಾದೇಳುನೂರೆಪ್ಪತಮರಗಣ |
ನಿವಹಮಂ ಕೂಡಿಕೊಂಡೀ ಬಸವರಾಜನೊ |
ಲ್ದವನಿಯೊಳ್ ವೀರಶೈವಾಚಾರಮಂ ಪ್ರತಿಷ್ಠಿಸುವೆನೆಂದ್ಯೈತಂದನು ||
ಇವರ ಮಾಹಾತ್ಮೆಗಳನುಸಿರಲೆನ್ನಳವಲ್ಲ |
ವವಿರಳಾನಂದಬಸವೇಶ್ವರನ ಮಹಿಮೆಯಂ |
ವಿವರಿಸುವೆ ಕೇಳೆಂದು ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು || ೬೧ ||

ಈತನಾರೆಂದು ತಿಳಿದೆಯ್ ಮಲ್ಲಗಣಪನೆಂ |
ಬಾತನರೆ ಮೋಖಲಾಸುರನನರಿದಿವರ ಸಂ |
ಗಾತ ಮರ್ತ್ಯಕೆ ಬಂದು ಕಲಕೇತಬ್ರಹ್ಮನೆಂದೆನಿಸಿ ಬಿಜ್ಜಳನ ತಗರ |
ಘಾತಿಸಿ ತದೀಯ ಶೃಂಗಂಬಿಡಿದು ಮಗುಳೆ ಬಂ |
ದಾತನೊಲವಿಂ ತುತಿಸಲದಕೆ ಹರಣಮನಿತ್ತು |
ಪ್ರೀತಿಯಿಂದದರ ಕೋಡಿಂ ಪೊನ್ಗಳಂ ಬಂಕನೆಂಬವಂಗೊಲಿದಿತ್ತನು || ೬೨ ||

ಮೃಡನರಸಿಯಂಶವೀ ಧರಣಿಯೊಳಗೊಪ್ಪುತಿ |
ಪ್ಪುಡುತಡಿಯೆನಿಪ್ಪ ಪಟ್ಟಣದಲ್ಲಿ ಜನಿಸಲಾ |
ಪ್ಪೊಡವೀಶ ಕೌಶಿಕಂ ಕಾಮದಿಂ ಪಿಡಿಯೊಡೊಲ್ಲದೆ ದಿಗಂಬರಿಯಾಗಿ ||
ಕಡುವಿರಕ್ತಿಯೊಳೀ ಮಹಾದೇವಿಯಕ್ಕ ತಾಂ |
ನಡೆವಿಲ್ಲಿಗೈತಂದಳೀಕೆಯ ಮಹಾತ್ಮೆಯಂ |
ನುಡಿಯಲಿನ್ನಳವಲ್ಲವೆನುತಲಾ ಸಿದ್ಧರಾಮೇಶಂಗೆ ನಿರವಿಸಿದನು || ೬೩ ||

ರಾಮ ಕೇಳೆಂದು ಹರಿಯಜಮುಖ್ಯನಿರ್ಜರ |
ಸ್ತೋಮಮಂ ಗೆಲ್ದು ದಕ್ಷನ ಶಿರವನರಿದು ಸು |
ಪ್ರೇಮದಿಂ ಮಗುಳೆ ಬರ್ದುಕಿಸಿ ಮರ್ತ್ಯದೊಳಗೆ ಪರವಾದಿಗಳನಪಹರಿಸಲು ||
ಈ ಮಹಿಗೆ ಬಂದು ಬಿಜ್ಜಳನ ಬಲಮಂ ವಿನಿ |
ರ್ನಾಮಮಂ ಮಾಡಿ ಮಗುಳಸುವಿತ್ತು ಭಕ್ತರ ಮ |
ಹಾಮನದ ಮೈಲಿಗೆಯ ತೊಳೆದನೀ ಮಡಿವಳಂ ಸಾಮಾನ್ಯನಲ್ಲೆಂದನು || ೬೪ ||

ಎಲೆ [1]ರಾಮ ನೀಂ ಬಸವನಾರೆಂಬುದಂ ನಿನಗೆ |
ತಿಳಿಪುವೆಂ ಪ್ರಣವಸ್ವರೂಪಂ[1] ದ್ವಿತೀಯಶಿವ |
ನೊಲವಿಂ ಶಿಲಾದಮುನಿ ತಪದೆ ಮೆಚ್ಚಿಸಿ ಬೇಡೆ ಮಗನಾಗಿ ತಾಂ ತಪದೊಳು ||
ಸಲೆ ಶಿವನ ಮೆಚ್ಚಿಸಿ ಸುಭಕ್ತಿಯಂ ಪಡೆದು ತಾಂ |
ತಳೆದೀಶನಂ ಸುಖದೊಳಿರೆ ಹರಿಬ್ರಹ್ಮಾದಿ |
ಗಳ ಗಡಣದಿಂ ಮಹಾದೇವನೊಡ್ಡೋಲಗದೊಳಿರ್ಪ ಸಮನಂತರದೊಳು || ೬೫ ||

ಸುರಪನಖಿಳಾಮರಕದಂಬಕಂಬೆರಸು ಶಂ |
ಕರನೋಲಗಕ್ಕೈದುತೀಶನಿದಿರಿನೊಳಿರ್ದ |
ಪರಸಂದಿಯಂ ಸೋಂಕಿ ಬರೆ ಬಾಲದಿಂ ಬಡಿಯೆ ಕಡುನೊಂದು ದೇವೇಂದ್ರನು ||
ಗರುಡ ಹಂಸೈರಾವತೋಚ್ಚೈಶ್ಶ್ರವಾದಿಗಳಿ |
ರಲೀಯಸದ್ವಾಹನವೇಕೆ ಶಿವಗೆಂದು |
ಸುರರೊಡನೆ ನುಡಿವುತಿರಲಾ ಮಾತುಗೇಳದಂದದೊಳೀಶನಿರುತಿರ್ದನು || ೬೬ ||

೧-೧. ಸಿದ್ಧರಾಮ ಕೇಳ್ ಬಸವನಾರೆಂದು | ತಿಳಿಪೆ ಸಾಕ್ಷಾತ್ಪ್ರಣವರೂಪ (ಹು, ದಾ, ಮ.) ೨ ಸ್ವ
(ಶಿ, ಹು.)

ಶಿವನಿದನುಪೇಕ್ಷಿಸಿದನೆಂದು ನಂದೀಶ್ವರಂ |
ತವಕದಿಂ ಮುನಿದೈದೆ ನಾರದಂ ಬಂದು ಶಂ |
ಭುವಿನೊಡನೆ ತದ್ವಾರ್ತೆಯಂ ಪೇಳಲಭವಂ ಸುರಪನೆಂದ ವಾಹಂಗಳ ||
ನಿವಹವೆಮ್ಮಂ ಧರಿಸಲಾರ್ಪುವೆ ಮದ್ಧರ್ಮ |
ಮವಯವಂಗಳನಾಂತ ನಂದಿ ನೀನೆಂದ ನುಡಿ |
ಗವಗಡದೊಳೈದಿದಂ ಕರೆತರ್ಪುದೆನಲಿಂದ್ರನಾ ಕ್ಷಣಂ ಬೀಳ್ಕೊಂಡನು || ೬೭

ಚತುರಂಗಸೇನೆಯುಂ ದಿಕ್ಪಾಲಕರ್ವೆರಸಿ |
ಶತಮುಖಂ ಪೋಗಿ ನಂದಿಯ ಕರೆಯಲೊಲ್ಲದಿರೆ |
ವಿತತಿ ಯಮವರುಣಪಾಶಂಗಳಂ ಗಳಕಿಕ್ಕಿ ಗಾಢದಿಂ ಬರಸೆಳೆಯಲು ||
ಅತಿಕೋಪದಿಂ ಪಾದದಿಂದೆ ಕೆರೆದಿಟ್ಟ ಮ |
ಣ್ಣತುಳಕೇತಾರ ಮಕ್ಷೆಯಗಳಾದುವು ಶೃಂಗ |
ಹತಿಯೊಳಿಡೆ ಸಿಂಗಳಂ ತಾನಾದುದದುವೆ ಮಾನಸಸರೋವರವಾದುದು || ೬೮

ಪಾಶಂಗಳಂ ಪರಿದು ಹೂಂಕರಿಸಲಾತನು |
ಚ್ಛ್ವಾಸನಿಶ್ವಾಸದಿಂದಮರೇಂದ್ರಮುಖನಾಕ |
ವಾಸಿಗಳ್ ತರಗೆಲೆಗಳಂತೆಡಬಲಕ್ಕೊಲೆಯುದೆಡೆಯಾಡುತಿರ್ದುದ ಬಳಿಕೆ ||
ವಾಸವಂ ಕಡುನೊಂದು ಸುಜ್ಞಾನಯುತನಾಗಿ |
ಲೇಸಾಗಿ ನಂದಿಯಂ ಕೊಂಡಾಡೆ ಮಚ್ಚಿ ಸುವಿ |
ಲಾಸದಿಂ ವರವದೇನೆನಲಮರಪತಿ ವೃಷಭರಾಜನೊಡನಿಂತೆಂದನು || ೬೯

ನಂದೀಶ ಕೇಳ್ಪುದಿ ಭಾಗ್ಯಮುಸ್ಥಿರಮಿದರ |
ದಂದುಗವನೊಲ್ಲೆ ನಾಂ ಪ್ರಾಣಲಿಂಗವನಿತ್ತು |
ಮುಂದೆ ನಿಜಸುಖವಿಾವುದೆನಲಿ ಶರೀರದಿಂದಾಗದದು ನರಜನ್ಮದಿಂ ||
ಬಂದು ವರಶೈವನಿಷ್ಠೆಯೊಳಿರಲ್ ಕೊಡುವೆನೆನ |
ಲಿಂದಿರಂ ಕೆಯ್ಕೊಂಡು ಬಳಿಕಲಾ ಪಟ್ಟಗ |
ಲ್ಲಿಂದೆಂಬ ಪುರದ ಚಾಳೋಕ್ಯಕುಲ ತ್ರೈಲೋಕ್ಯಚೂಡಾಮಣೀಶನರಸಿ || ೭೦

೧ ಲ್ಲಾ (ಶಿ.); ೨ ದೆ (ಹು, ದಾ.) ೩ ನಡೆತರಲ್ (ಹು.); ತಾ ಒಂದು (ನಾ.);
ಬೀಳ್ಕೊಂಡು (ದಾ.)

ತರುಣಿ ಸುಮಹಲೇಖೆಯುದರದೊಳ್ ವಸುದೀಪ್ಯ |
ವರನಾಮದಿಂದುದಿಸಿದನಿಮಿಷಂ ಚತುರಂಗ |
ವೆರಸಿ ಬೇಂಟೆಗೆ ಪೋಗಿ ಬಳಲಿಯೊಂಟಿಗನಾಗಿ ಹಯಮಿಳಿಯೆ ಬಯಲಾಗಲು ||
ದರುಶನಕೆ ಲಿಂಗಮಿಲ್ಲದೆ ಪಸಿದ ಭೂವರನ |
ಸರಿಸದೊಳ್ ಮುನ್ನಿತ್ತ ವರಕಾಗಿ ನಂದಿ ಸಂ |
ಚರಿಸಲೀಕ್ಷಿಸಿ ಲಿಂಗಮಂ ಕೇಳಲಿಷ್ಟಲಿಂಗೋಪದೇಶಂಗೆಯ್ವನು || ೭೧ ||

ಸಲೆ ಪ್ರಾಣಲಿಂಗಸಂಬಂಧಿಯಂ ಮಾಡಿ ಮ |
ತ್ತೊಲಿದು ನಿಜಸುಖಮಿತ್ತು ಪೋಗಲಾತನ ಮಂತ್ರಿ |
ಕುಲಮಿರದೆ ಗುಡಿಗಟ್ಟಿ ಮಿಗೆ ಸಮಾಧಿಸ್ಥಿತನ ಮಾಡಿ ಪೋಗಲ್ಕತ್ತಲು ||
ನಲವಿನಿಂ ನಾರದಂ ಪೋಗಿ ಶಿವಪುರದ ಬಾ |
ಗಿಲನಿರದೆ ಕಾಯ್ದಿರೊಳ್ ನಂದೀಶನನಿಮಿಷಂ |
ಗೊಲವಿನಿಂ ಪ್ರಾಣಲಿಂಗವನೀತ್ತು ಬಹನೆನಲ್ ಸಿಂಹಿಕೇಶಿದ್ರವಿಡರು || ೭೨ ||

ಭವಿಯೆಂದು ಬಾಗಿಲಿಗೆ ಬಂದ ನಂದಿಯು ತಡೆಯೆ |
ಶಿವನರಿದು ಬಂದು ಸರ್ವಾಂಗಲಿಂಗಿಯನಿಂತು |
ಭವಿಯೆಂದ ಕಾರಣಂ ಮರ್ತ್ಯದೊಳ್ ಭವಿಗಳಾಗುದ್ಭವಿಸಿ ನಂದೀಶನ ||
ಸಮಹತ್ತ್ವಮನರಿದು ಬನ್ನಿಮೆನಲವದಿರು |
ದ್ಭವಿಸಿದರ್ ಕನ್ನೇಶಬಿಜ್ಜಳಾಖ್ಯದೊಳತ್ತ |
ಶಿವನಿರದೆ ನಂದಿಯಂ ಸಂತಯಿಸಿಯೊಂದಿನದೊಳೊಡ್ಡೋಲಗದೊಳಿರ್ದನು || ೭೩ ||

ನಾರದಂ ಬಂದು ಶಿವನಡಿಗೆರಗಿ ದೇವ ಕೇಳ್ |
ಧಾರುಣೀಮಂಡಲದೊಳಡಗಿತನುಪಮಶಿವಾ |
ಚಾರಮದನುದ್ಧರಿಸಬೇಕೆನಲ್ಕೀಶ್ವರಂ ನಂದಿಯಂ ಕರೆದು ನೀನು ||
ವೀರಶೈವಾಚಾರಮಂ ನಿಲಿಸಿ ಬಿಜ್ಜಳಂ |
ಗೋರಂತೆ ನಿನ್ನ ಮಹಿಮೆಯನರಿಪಿ ಬಾರೆನಲ್ |
ಮಾರಾರಿಯಾಜ್ಞೆಯಿಂದಮರಗಣವೆರಸಿ ನಂದೀಶ್ವರಂ ಬೀಳ್ಕೊಂಡನು || ೭೪ ||

೧ ಪೊಗಳ (ಶಿ.) ೨-೨ ತ್ತಸೆಂದೆ (ಶಿ.) ೩ ಸಿಂಹಕೇಸರಿ (ಹು, ದಾ) ; ಸಿಂಹಿ ಕೇಸರಿ (ಮ.)

ಎಸೆವ ಮಾದರಸ ಮಾದಾಂಬೆಯರ ಗರ್ಭದಿಂ |
ಬಸವನೆಂದೆಂಬ ನಾಮದೆ ಜನಿಸಿ ವಿಪ್ರಸುತ |
ನಸಮುಕೂಪದೊಳಿಯ್ದೆ ಬಿದ್ದು ಸಾಯಲ್ಕವನ ತಾಯ್ತಂದೆಗಳ್ ಭರದೊಳು ||
ಬಸವನಂ ಬೆಂಬತ್ತಲೋಡಿ ನದಿಯಂ ಕಾಣು |
ತೆಸಕದಿಂದಿರ್ಭಾಗಮಂ ಮಾಡಿ ಪೋಗಿ ಸಂ |
ತಸದೆ ಸಂಗಮನಾಥನಿಂದೆ ತಾಂ ಕೊಂದುದಿಲ್ಲೆನಿಸಿದಂ ಚೋದ್ಯಮೆನಲು || ೭೫ ||

ಮೇಲೆ ಕಲ್ಯಾಣಪುರಕಗ್ರಭವವೆರಸಿ ಬಂ |
ದಾ ಲಲಿತಬಲದೇವಮಂತ್ರಿಯ ಕುಮಾರಿಯಂ |
ನೋಳದಿಂ ಮದುವೆಯಾಗಾತನಳಿಯಲ್ಕವನ ಪಟ್ಟಕಧಿನಾಥನಾಗಿ ||
ಭಾಳಾಕ್ಷನಟ್ಟಿದ ಮಹಾಲಿಪಿಯನೋದಿ ಸ |
ಲ್ಲೀಲೆಯಿಂದರುವತ್ತುಕೋಟಿ ಧನಮಂ ತೆಗೆಸಿ |
ಪೇಳಲೇಂ ಬಿಜ್ಜಳಂಗಿತ್ತನೆಲೆ ಸಿದ್ಧರಾಮೇಶ ಕೇಳಚ್ಚರಿಯನು || ೭೬ ||

ಮತ್ತೆ ಹಗರಣಿಯಾಟದವರನೀ ಬಸವಣ್ಣ |
ನುತ್ತಮದ ಜಂಗಮಂ ಮಾಡಿ ಜೋಳಂಗಳಂ |
ಮುತ್ತುಗಳ ಮಾಡಿ ಜಂಗಮಕಿತ್ತು ಜಂಗಮಕೆ ಮುಕುರದೊಳ್ ಪಣೆಗಣ್ಣನು ||
ಬಿತ್ತರದೆ ತೋರಿ ಪೆಟ್ಟಿಗೆಪವಾಡಂ ಮೆರೆದು |
ಕತ್ತಿಯಿಂ ತೆಗೆದ ಕನ್ನದ ಮಣ್ಣನಾ ಕ್ಷಣಂ |
ವಿತ್ತಮಂ ಮಾಡಿ ಲೆಕ್ಕದ ಪವಾಡಕೆ ರವಿಯ ಪನ್ನೊಂದಿನಂ[೨] ತಡೆದನು || ೭೭ ||

ಬಳಿಕೆ ಮಜ್ಜಿಗೆಪವಾಡಂ ಲಿಂಗಕೊಲ್ದು ಕೂ |
ದಲನಿರದೆ ತೋರಿದ ಪವಾಡಮಾ ಮೇಲೆ ಕುಂ |
ಬಳದಕಾಯ್ಗಳ ಪವಾಡಂ ಕೇತಕೀಪ್ರಸೂನದ ಪವಾಡಂ ಬಸವನ ||
ಶಳೆದುಂಗುರದ ಪವಾಡಂ ಗುಪ್ತಮಂಚಣ್ಣ |
ನೊಲವಿನ ಪವಾಡಮುಂ ತೇಜಿಯ ಪವಾಡಮುಂ |
ಸಲೆ ವಿಷದ ಬಲುಪವಾಡಂಗಳಂ ಮೆರೆದನೀ ಬಸವನೇಂ ಸಾಮಾನ್ಯನೇ || ೭೮ ||

೧-೧ ನಿಂ | ತ (ಹು.) ೨ ಪನ್ನೊಂದುದಿನ (ಶಿ, ಗೋ.)

ಹರಿವಿಯೊಳಗಿರ್ದ ನೀರಂ ಘಟ್ಟಿಮಾಡಿ ಮೇ |
ಣಿರದೆ ಕಾಷ್ಠದಜಂಗಮುವನೈದೆ ನಿಜಮಾಗಿ |
ಪರಿರಚಿಸಿ ಮೀಮಾಂಸಕನನತುಳವಾದದಿಂ ಗೆಲ್ದು ಶಿವನಾಗಯ್ಯನ ||
ಜಿರಲೊಳಗೆ ಪಾಲನುರೆ ಕರೆದು ನಾಗಾಂಬಿಕೆಗೆ |
ವರಶಿಶುತ್ವಮನಾಂತು ಸೀರೆಯ ಪವಾಡದ |
ಚ್ಚರಿಯನಾಗಿಸಿ ಬಳಿಕ ಕರುವಿನ ಪವಾಡಮಂ ಮೆರೆದನೀ ಬಸವಣ್ಣನು || ೭೯ ||

ಕರವೀರಕುಸುಮಮಂ ಸಂಪಗೆಯ ಪೂವಾಗಿ |
ವಿರಚಿಸಿ ನಿಜಾಂಗಮಂ ಕಚ್ಚಿ ಸತ್ತಹಿಗಿತ್ತು |
ಹರಣಮಂ ಚಿತ್ರದೊಳ್ ಬರೆದ ಹಲಸಿನ ಹಣ್ಣನೀ ನಿಜದ ಹಣ್ಣಾಗಿಸಿ ||
ಸುರೆಯನಮೃತಂ ಮಾಡಿ ಬಿಜ್ಜಳನೃಪಾಲಕನ |
ತರುಣಿಯರನೇ ಜಂಗಮಂಗಳಂ ಮಾಡಿ ಮೇ |
ಣರಮನೆಯೊಳವರ್ಗಳಂ ತೋರಿಸಿದನೀತನ ಪವಾಡಂಗಳುಸಿರಲಳವೇ || ೮೦ ||

ಮುದದಿಂದೆ ತೊಗರಿಯಂ ಮಾಣಿಕಂ ಮಾಡಿ ತೋ |
ರಿದನಂದು ಜಂಗಮಕೆ ವಾರಕದ ವಸ್ತುವಂ |
ಪಡೆದಿತ್ತು ಮರಳಿ ತೋರಿದನಿರದೆ ಲಿಂಗದೊಳ್ ಭಕ್ತನಂ ತೋರಿಯುವನ |
ಹೃದಯದೊಳ್ ಲಿಂಗಮಂ ತೋರಿದಂ ಬಳಿಕ ಚಿ |
ತ್ರದ ಜಂಗಮುವನಿರಿದನಂ ಕೊಂದು ಮಗುಳೆತ್ತಿ |
ಬದಣೆಗಾಯಂ ಸಹಜಲಿಂಗಮಂ ಮಾಡಿದಂ ಬಸವನಾಲಿಪುದೆಂದನು || ೮೧ ||

ಲೀಲೆಯಿಂ ಬಸವನಾ ಮೋಟಂಗೆ ಕೊಡನೆ ಕೈ |
ಕಾಲ ಶರಣೆಂದೆರಗೆ ಮಾಸ್ತಿ ಮುತ್ತಯ್ದೆಯಾ |
ಗೇಳೆನಲ್ಕವಳ ಗಂಡನ ಪ್ರಾಣವೈದದೆ ಮಣ್ಣಹೋರಿಯನೆತ್ತನು ||
ಪೇಳಲೇಂ ಮಾಡನೇ ಸತ್ತ ಬಸವಂಗಸುವ |
ನಾಲೋಕಿಸಿದ ಮಾತ್ರದಿಂ ಕೊಡನೆ ಜನ[೧]ವರಿಯೆ |
ಹಾಲ ಕರಿಸನೆ ಹುಲಿಯ ಕಪಿಲೆಯಂ ಮಾಡಿ ಬಸವಂಗಾವನೆಣೆಯೆಂದನು || ೮೨ ||

೧ ಗ (ಹು.)

ಹರುಷದಿಂ ಮಜ್ಜನೋದಕದಲ್ಲ ಮಾಡಿದಂ |
ಪರುಷನಂ ಹಾವಲೇ[1]ವಳವನಡಪಂ ಹಾಯ್ಕಿ |
ತರಿಸಿದಂ ದ್ರವ್ಯಮಂ ಸುಣ್ಣಮಂ ಪಾಯಸಪ್ರಸಾದಮೆನೆ ಕೆಯ್ಕೊಂಡನು |
ಧರೆಯರಿಯೆ ಹಡಪದಪ್ಪಣ್ಣಗಳ ಬೊಟ್ಟನಿಂ |
ಗಿರಿಯನೆತ್ತಿಸಿದನೀತನ ಪವಾಡಂಗಳ |
ಚ್ಚರಿಯನಭಿ[2]ವರ್ಣಿಸಲ್ಕೆನ್ನಳವೆ ಸಿದ್ಧರಾಮೇಶ ನೀಂ ಕೇಳೆಂದನು ॥ ೮೩ ॥

ಜಂಗಮಕೆ ತನ್ನ ಸತಿಯಂ ಕೊಟ್ಟನಾ ಮಿಂಡ |
ಜಂಗಮಕೆ ಸತಿಯು ಹೊನ್ನೋಲೆಯಂ ಕೊಡಿಸಿದಂ |
ಜಂಗಮಂ ಬಾರದಿರೆ ತಲೆಯರಿದು ಪತ್ತಿಪಂ[3]ಗೂಡ್ಗಾಕಳಂ ಕರಿಸಿದಂ ॥
ಜಂಗಮದ ಕೂಡೆ ಪ್ರಾಣವ ಬಿಟ್ಟನಾ ಮಿಂಡ |
ಜಂಗಮಕೆ ಲಿಂಗಪ್ರಸಾದಮಂ ಕಳುಪುವಂ |
ಹಿಂಗದಲಗಿಂ ತಿವಿಯೆ ನಿರ್ದೇಹಿಯಾದನೀ ಬಸವ ನೀಂ ಕೇಳೆಂದನು ॥ ೮೪ ॥

ಇನ್ನಾಲಿಸೈ ಬಿಜ್ಜಳಂ ಕಟಕಿಯಿಂದಾಗ |
ತನ್ನ ಹಡಪದ ಬಸವನಂ ಬಸವ ಬಾರೆನಲ್ |
ಪನ್ನಗಂ ಕಚ್ಚಿ ನೃಪನಳಿಯಲವಗಸುವಿತ್ತನಗ್ಗಣಿಯನೊಲಿದು ತರುವ ॥
ಹೊನ್ನಯ್ಯನಂ ಕುಷ್ಠನೆನಲರಸನಾಗಲಾ |
ತೊನ್ನನುರೆ ಪರಿಹರಿಸಿದಂ ಮೋಟಭಟ್ಟಂಗೆ |
ಚೆನ್ನಾಗಿ ಕೈಕಾಲ್ಗಳಂ ಕೊಟ್ಟನೀ ಬಸವನೆಲೆ ರಾಮ ಕೇಳೆಂದನು ॥ ೮೫ ॥

ಸತ್ತಿಗೆಯುಮಂ ಕಪಟಚರರೂಪಿನಿಂದೆ ಬರೆ |
ಚಿತ್ತದಿಂ ತಿಳಿದು ನಿಜಜಂಗಮವ ಮಾಡಿದಂ |
ಮತ್ತೆ ವಿಪ್ರನ ಸುತನ ಕೊಂದನೆನಲಿಲ್ಲೆಂದು ಸಂಗಮೇಶನ ನುಡಿಸಿದಂ ॥
ಸತ್ತ ಪ್ರಾಣಂಗಳವ[4]ನಂತರ್ಗೆ ಕರುಣದಿಂ |
ದಿತ್ತನೀ ಬಸವನ ಮಹಾಪವಾಡಂಗಳಂ |
ಬಿತ್ತರಿಸಿ ಪೇಳಲೆನ್ನಳವಲ್ಲ ಸಿದ್ಧರಾಮೇಶ ನೀಂ ಕೇಳೆಂದನು ॥ ೮೬ ॥

---

೧ ಸೇ (ಹು, ಮ.) ೨ ನುತ (ಹು.) ೩ ಸಿದ (ಹು.) ೪ ನ (ಹು, ದಾ, ಮ.)

ಒರೆವೆನಾಲಿಸು ರಾಮ ಪೂರ್ವದೊಳಗಲ್ಲಮಂ |
ಗುರುತರದ ನಿರ್ಮಾಯನೆನಿಪ ಗಣನಾಥನೆಂ |
ಬಿರದೆ ನಿರಹಂಕಾರ ಸುಜ್ಞಾನಿಯೆಂಬವರ್ಗೊಲ್ದು ಶಿಶುವಾಗಿ ಬಳೆದು ||
ಗಿರಿಜೆಯಟ್ಟಿದ ಮಾಯೆಯಂ ಜರೆದು ಬಂದು ಸ |
ದ್ಗುರುವೆನಿಸುವನಿಮಿಷನ ಕೆಯ್ಯ ಲಿಂಗಂಗೊಂಡು |
ಹರುಷದಿಂ ಗೊಗ್ಗಯ್ಯ ಮುಕ್ತಾಯಿಗಳ್ಗೆ ಬೋಧಿಸಿ ಮುಕ್ತಿಯಂ ಕೊಟ್ಟನು || ೮೭ ||

ಅಲ್ಲಿಂದೆ ನಿನ್ನ ಪುರಕೈತಂದು ನಿಂ ಮಾಳ್ಪ |
ದೆಲ್ಲಮಂ ನೋಡಿ ನಿನ್ನಂ ಜರೆದು ಶಿವತತ್ತ್ವ |
ವೆಲ್ಲಮಂ ತಿಳಿಪಿ ಕರದಿಷ್ಟಲಿಂಗದ ಹದನನರಿಪಲೋಸುಗ ನಿನ್ನನು ||
ಇಲ್ಲಿಗೊಡಗೊಂಡು ಬಂದಂ ಪರಮಗುರುವೆನಿಸು |
ವಲ್ಲಮಪ್ರಭುವೀತನೆಂ ಸದರವೇ ಜಗದ |
ವಲ್ಲಭಂ ಕೇಳೆಂದು ಸಿದ್ಧರಾಮೇಶಂಗೆ ಚೆನ್ನಬಸವಂ ಪೇಳ್ದನು || ೮೮ ||

ಪಾವನಚರಿತ್ರರಿವರೀಗ ಕೇಳ್ವೈ ವೀರ |
ಶೈವವೀ ಧರೆಯೊಳೆಂಭತ್ತುನಾಲ್ಕುಂ ಲಕ್ಷ |
ಜೀವದೊಳ್ ಗೋಜನ್ಮಮುತ್ತಮಮದಕ್ಕೆಯುಂ ನರರಧಿಕಮಾ ನರರೊಳು ||
ಭಾವಿಸಲ್ ಶಿವಭಕ್ತರೇ ಘನಮದಕೆ ವೀರ |
ಶೈವವೇ ವೆಗ್ಗಳಮದಕ್ಕೆಯುಂ ಷಟ್ಸ್ಥಲಂ[1] |
ಕೋವಿದರ ಮತವೆ ವೆಗ್ಗಳಮದಕೆ ಪರಮಾವುದಿನ್ನಿಲ್ಲ ಕೇಳೆಂದನು || ೮೯ ||

ಅದುಕಾರಣಂ ಷಟ್ಸ್ಥಲಬ್ರಹ್ಮಯುತರನ |
ಲ್ಲದೆ ಪುಗಿಸರೀ ಬಾಗಿಲಿಂದತ್ತಲಿಷ್ಟಲಿಂ |
ಗದ ಸೇಮವಿಲ್ಲ ನಿನ್ನಂ ಪೊಗಿಪರೆಂತೆನಲ್ಕಲ್ಲಿರ್ದ ಶರಣರೆಲ್ಲ ||
ಇದು ಸಹಜಮಿಷ್ಟಲಿಂಗಮುಮಿಲ್ಲದಿರ್ಪವರ |
ವದನಮಂ ನೋಳ್ಪುದನುಚಿತಮೆನಲ್ಕಲ್ಲಮಂ |
ಸದಮಲಂ ಸಿದ್ಧರಾಮಂಗಿಷ್ಟಲಿಂಗಮೇಕೆಂದು ಮತ್ತಿಂತೆಂದನು || ೯೦ ||

---

೧ ದ (ಮ.)

ಅಂಬರವನಡರ್ವವಂಗಟ್ಟಗೋಲೇಕೆ ಬಿಡ |
ದಂಬುಧಿಯ ದಾಂಟುವಂಗೇಕೆ ಹರುಗೋಲ್ ಸೀಮೆ |
ಯೆಂಬುದಂ ಮೀರಿದೀ ನಿಸ್ಸೀಮಸಿದ್ಧರಾಮಂಗಿಷ್ಟಲಿಂಗವೇಕೆ ||
ತಾಂ ಬಗೆಯೆ ಸರ್ವಾಂಗಲಿಂಗಿಯೆನೆ ಚೆನ್ನಬಸ |
ವಂ ಬಳಿಕ ಸಿದ್ಧರಾಮನೊಳಿಷ್ಟಲಿಂಗಮೆಂ |
ದೆಂಬುದೇ ಮುನ್ನಿಲ್ಲ[1] ಸರ್ವಾಂಗಲಿಂಗಿಯಾದಂದಮಂ ಪೇಳೆಂದನು || ೯೧ ||

ಚೆನ್ನಬಸವೇಶ ನೀಂ ನೋಡೆನುತೆ ಹರುಷದಿಂ |
ತನ್ನಂಗದೊಳ್ ಲಿಂಗಚಯದ ಗೊಂಚಲ್ಗಳಂ |
ಚೆನ್ನಾಗಿ ತೋರಲ್ಕೆ ಸರ್ವಾಂಗಲಿಂಗತ್ವಮಿಂತೆ ಹಗರಣಿಯಾಟದ ||
ಗನ್ನಮಲ್ಲದೆ ಏಕಲಿಂಗನಿಷ್ಠಾಪರಂ |
ಮುನ್ನಲ್ಲ ಮನೆಗೆ ಬಂದಲ್ಲಮನ ದಹಿಸಲ್ಕೆ |
ನಿನ್ನ ಪಣೆಗಣ್ದೆರೆದ ಜಂಗಮದ್ರೋಹಿ ನೀನೆಲೆ ರಾಮ ಹೋಗೆಂದನು || ೯೨ ||

ಮೆಲ್ಲನೀ ಜಂಗಮದ್ರೋಹಿಯಂ ಕರೆದು ತಂ |
ದಿಲ್ಲಿ ಸರ್ವಾಂಗಲಿಂಗಮನುಂಟುಮಾಡುತಿ |
ಪ್ಪಲ್ಲಮಂ ನೀಂ ಗುರುವನಳಿದು ಲಿಂಗವ ತಂದೆ ನೀನದೇಂ ಸಾಮಾನ್ಯನೇ ||
ಸಲ್ಲದಿರ್ಪರ ಮೊಗಂ ನೋಳ್ಪುದೆನೆ ಕೇಳ್ದು ಬಳಿ |
ಕಲ್ಲಮಂ ಗುರುವನಳಿದಾ ಲಿಂಗಮಂ ತಂದು |
ದಿಲ್ಲ ಮದ್ಗುರು ಸುಚಿತ್ಕಳೆಯುಮೀ ಲಿಂಗದೊಳಗಿದೆ ತಿಳಿದು ನೋಡೆಂದನು
|| ೯೩ ||

ಪರಿಕಿಸಲ್ಕೆಮ್ಮ ಗುರುವರನ ಶಿವಸೋದರಂ |
ಗುರುವಲಾ ನೀನೆನಗೆ ನೀನೆ ಗುರುವೀತನೇ |
ಪರಮಗುರು ಬಸವಣ್ಣನಿರೆ ಗುರುವನೆಂತಳಿದನೆನೆ ಕೇಳ್ದು ಶರಣರೆಲ್ಲ ||
ಪರಿತೋಷದಿಂದೊಪ್ಪೆ ಸಿದ್ಧರಾಮಂ ಪ್ರಭುವಿ |
ಗೊರೆದನೆನಗಾವಗತಿಯೆನಲಿಷ್ಟಲಿಂಗಮಂ |
ನಿರುತದಿಂ ಪಡೆದಲ್ಲದಾಗದೆನಲೆನಗೆ ದೀಕ್ಷೆಯನೀವರಾರೆಂದನು || ೯೪ ||

---

೧ ತನಗಿಲ್ಲ (ಹು, ಮ.) ೨ ಲಸ (ಹು.)

ಬಸವಮೊದಲಾದೇಳುನೂರೆಪ್ಪತಮರಗಣ |
ಸೊಸೆದು ಮರ್ತ್ಯಕೆ ವೀರಶೈವಮಂ ಬಿಡದುದ್ಧ |
ರಿಸಲೆಂದು ಬಂದುದಿವರಿಗೆ ಪ್ರಾಣಲಿಂಗಸಂಬಂಧದುರುಷಟ್ಸ್ಥಲವನು ||
ವಸುಧೆಯೊಳ್ ಬೋಧಿಸಲ್[1] ಶಿವಚಿತ್ಕಳಾರೂಪು |
ಬಸವಪ್ರಸಾದಮುಖದಿಂ ಬಂದುದೀ ಚೆನ್ನ |
ಬಸವಣ್ಣನೆಂಬ ನಾಮದೊಳಿಷ್ಟಲಿಂಗಮಂ ನಿನಗೆ ಪಾಲಿಸುವನೆನಲು || ೯೫ ||

ಹರುಷದಿಂದೆದ್ದು ಸಾಷ್ಟಾಂಗವಿನಮಿತನಾಗಿ |
ಮರಳೆದ್ದು ಕೊಂಡಾಡಿ ಗುರು ಚೆನ್ನಬಸವೇಶ |
ನಿರುತವೆಂಬತ್ತುನಾಲ್ಕುಂ ಲಕ್ಷ ಜೀವರಾಶಿಗೆ ಮುಖ್ಯ ಗೋಜನ್ಮವು ||
ನರಜನ್ಮಮದಕಧಿಕಮೆಂದೆಲಾ ತಜ್ಜೀವ |
ಪರಿಭೇದಮಂ ತನ್ಮನುಷ್ಯಜನ್ಮದ ಪಿಂಡ |
ದಿರವನದರುದಯಮಂ ಪೇಳ್ದೆನಗೆ ದೀಕ್ಷೆಯಂ ಪಾಲಿಸೆನಲಿಂತೆಂದನು || ೯೬ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮುನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೯೭ ||

ಅಂತು ಸಂಧಿ ೫೭ಕ್ಕಂ ಪದಗಳು ೨೫೪೦ಕ್ಕಂ ಮಂಗಳಮಹಾಶ್ರೀ

---

೧ ಸುಕೆ (ಹು.); ಸುವ (ಮ.)

ಐವತ್ತೆಂಟನೆಯ ಸಂಧಿ

ಸೂಚನೆ

ಎಸೆವ ಪಿಂಡೋತ್ಪತ್ತಿಯಂ ಬಳಿಕ್ಕಾ ಕರಣ |
ಹಸಿಗೆಯಂ ಜ್ಞಾನತ್ರಯಂಗಳ ವಿಭೇದಮಂ |
ಹಸನಾಗಿ ಸಿದ್ಧರಾಮೇಶಂಗೆ ಗುರು ಚೆನ್ನಬಸವಂ ನಿರೂಪಿಸಿದನು ||

ಶಿವ ಶಿವವಿಭೂಷ ಭೂಷಿತಸೋಮ ಸೋಮ ಘನ |
ಭವ ಭವವಿನಾಶ ನಾಶಾಭಾವ ಭಾವಸಂ |
ಭವದಹನ ದಹನಾನ್ವಿತಾಕ್ಷಾಕ್ಷಪಾದಪ್ರಣತ ನತಾಂಬೋಧಿಚಂದ್ರ ||
ಪ್ರವಿಮಳಾಕಾರ ಕಾರಣರೂಪ ರೂಪಯುತ |
ಯುವತಿಯರ್ಧಾಂಗ ಗಂಗಾಂಬುಸಂಭೃತಜೂಟ |
ದಿವಿಜನುತ ಪಂಪಾವಿರೂಪಾಕ್ಷ ಪಕ್ಷದಿಂ ರಕ್ಷಿಪುದು ನತಜನವನು || ೧ ||

ಇನ್ನಾಲಿಸೈ ರಾಮ ನಿನಗೆ ನಾ ಮುಂಪೇಳ್ದ |
ಸನ್ನುತಸುಧರ್ಮಿಗಳ್ ಸುರಲೋಕಭೋಗಮಂ |
ಚೆನ್ನಾಗಿ ತೀರಲನುಭವಿಸಿ ಕರ್ಮಿಗಳೆಮನ ಪಟ್ಟಣದ ನರಕಂಗಳ ||
ಬನ್ನದಿಂ ತೀರಲನುಭವಿಸಿ ಬಳಿಕಿರ್ತಂಡ |
ಮುನ್ನಭೋನಿಲವಾರಿಧರೆಗಳೆಂಬೀ ನಾಲ್ಕು |
ಮುನ್ನುತ ಭವದ್ವಾರಮಿವುಮಿವರೊಳೊಂದಿ ಭೂಲೋಕದೊಳ್ ಸಂಜನಿಪರು || ೨ ||

ಸ್ಥಾವರಂ ಲಕ್ಷಮಿಪ್ಪತ್ತುಬಗೆ ಯೋನಿ ಜನ |
ಜೀವಂಗಳೊಂಭತ್ತುಲಕ್ಷಮಿಾ ಕ್ರಿಮಿಕುಲಂ |
ಭಾವಿಸಲ್ ಪನ್ನೊಂದು ಲಕ್ಷಮುಂ ಪಕ್ಷಿಗಳ್ ದಶಲಕ್ಷಭೇದಂಗಳು ||
ಗೋವ್ರಮುಂತಾದ ಪಶುಜಾತಿ ತ್ರಿಂಶಲ್ಲಕ್ಷ |
ಮಿಾ ವಿಧದೆ ನಾಲ್ಕುಲಕ್ಷಂ ಮನುಜಯೋನಿಯುಂ |
ತೀವಿ ಭೇದದೊಳೆ ಚೌರಾಶೀತಿಲಕ್ಷ ಜೀವಂಗಳಿವು ಕೇಳೆಂದನು || ೩ ||

ಸ್ವೇದಜಾಂಡೋದ್ಭಿಜ ಜರಾಯುಜಾಖ್ಯದ ಚತು |
ರ್ಭೇದಜನನದೊಳುದಿಸಿ ತಜ್ಜಾತಿಧರ್ಮಸಂ |
ಪಾದನೆಯ ಪರಿಕರಮನುಂಡು ತತ್ಕ್ರಿಯೆಗಳೊಳ್ ಕಣ್ಗೆಟ್ಟು ಗೋಜನ್ಮಕೆ ||
ಆವಿಸಂಚಿತದಿನ್ನೈತಂದು ಬಳಿಕತ್ಯಧಿಕ |
ಮಾದ ನರಜನ್ಮದೊಳಗೈದುವಂ ಜೀವನದ |
ಸಾವರಿಸಿ ಪೇಳ್ವಪೆಂ ಋತುಕಾಲದೊಳ್ ದಂಪತಿಗಳೊಂದೆ ಪಿಂಡವಹುದು || ೪ ||

ಮಾತೆಯ ರಜಸ್ಸು ಪಿತೃವೀರ್ಯಂಗಳೊಂದಾಗಿ |
ಸಾತಿಶಯದಿಂ ಪ್ರಥಮದಿನದಲ್ಲ ಕಲಲಮಹು |
ದಾ ತೆರದೊಳೈದುರಾತ್ರಿಗೆ ಬೊಬ್ಬುಳಿಕೆಯಾಗಿ ಹತ್ತನೆಯ ದಿವಸದೊಳಗೆ ||
ಖ್ಯಾತಿಯಿಂ ರಕ್ತಬಲಿದಾ ಚತುರ್ದಶದಿನ |
ವ್ರಾತದೊಳ್ ಮಾಂಸಮೆಂದೆನಿಸಿ ವಿಂಶತಿದಿನ |
ಕ್ಕೋತು ತನ್ಮಾಂಸಮೇ ಘಟ್ಟಿಗೊಂಬುದು ಸಿದ್ಧರಾಮ ಕೇಳಚ್ಚರಿಯನು || ೫ ||

ಅವಯವಾಂಕುರವಾಗಿ ತೋರ್ಪುದಿಪ್ಪತ್ತೈದು |
ದಿವಸಕಾಮೇಲೆ ತಿಂಗಳಿಗೆ ಶಿರಮುದಯಿಪುದು |
ಸವಡಿತಿಂಗಳ್ಗೆ ತೋಳ್ತೊಡೆಗಳಪ್ಪುವು ಮೂರುತಿಂಗಳ್ಗೆ ವ್ಯಕ್ತವಾಗಿ ||
ತವೆ ಹಸ್ತ ಪಾದ ಸರ್ವಾಂಗುಲಿಗಳೈದೆ ಪು |
ಟ್ಟುವುವು ತಿಂಗಳ್ ನಾಲ್ಕಕಕ್ಷಿ ನಾಸಾ[೩]ಪುಟಂ |
ಶ್ರವಣ[೩] ಗುದ ಮೇಢ್ರ ರೋಮಂಗಳಪ್ಪುವು ಸಿದ್ಧರಾಮೇಶ ಕೇಳೆಂದನು || ೬ ||

ಎಲೆ ಸಿದ್ಧರಾಮ ಕೇಳ್ ಐದನೆಯ ತಿಂಗಳ್ಗೆ |
ಸಲೆ ನವದ್ವಾರ ಜಠರಂಗಳಿಂಬಾಗುವುವು |
ತಿಳಿಯೆ ನಖಕೇಶಮಾರಕೆ ಮೊಳೆವುವೇಳರೊಳಗವಯವಾದಿಗಳೆ ಬಲಿದು ||
ಬಳೆವುದಾ ಮಾತೆಯುಂಡನ್ನರಸಮುದರುದರ |
ದೊಳಗೆ ತನ್ನಾಭಿಸೂತ್ರದೊಳೆಂಟುತಿಂಗಳ್ಗೆ |
ನೆಲೆಯಹುದು ಜಾತಿಸ್ಮರತ್ವಮುಂ ಸುಜ್ಞಾನಮಾ ಶಿಶುವಿಗೇನೆಂಬೆನು || ೭ ||

---

೧ ಯೊ (ಶಿ.) ೨ ವ (ಹು.) ೩-೩ ಶ್ರವಣ। ವಿವರ (ಹು.)

ನವಮಾಸದೊಳ್ ಶಿವಧ್ಯಾನಪರನಾಗಿ ಸಂ |
ಭವಿಸಿದೆಂ ಭವಭವದೊಳಿಂತು ಗುರುಕರುಣದಿಂ |
ಶಿವಪರಾಯಣನಾಗಿ ಮುಕ್ತನಹೆನೆನುತಿರಲ್ ಸೂತಿಕಾವಾಯುವಿಂದೆ ||
ತವೆ ಕೆಳಗುದಲೆಯಾಗಿ ಬೀಳುತುಂ ವಿಷ್ಣುವಾ |
ಯುವಿನಿಂದಲಜ್ಞಾನಯುತನಾಗಿ ಧರೆಗೆ ದೂ |
ರುವ ಸಾಂಗಿನಿಂ ತನ್ನ ದುಃಖಮಂ ಚೀರುತುಂ ನಡುಗುತುಂ ಜನಿಯಿಸುವುದು
|| ೮ ||

ಸತಿ ಋತುಸ್ನಾತೆಯಾದೊಂದನೆಯ ದಿವಸದೊಳ್ |
ರತಿಕೇಳಿಯಂ ಮಾಡೆ ಕುಲಗೇಡಿಯಹ ಕುಮಾ |
ರತಿಯುದಿಪಳೆರಡನೆಯ ದಿವಸದೊಳ್ ಪಾತಕಂ ಪುಟ್ಟುವಂ ಮೂರರಲ್ಲಿ ||
ಅತಿಚೋರನುದಯಿಪಂ ನಾಲ್ಕನೆಯ ದಿವಸದೊಳ್ |
ಕೃತಕಿ ಸಂಜನಿಪನೈದಕೆ ಬುದ್ಧಿವಂತನಾ |
ರೃತುದಿವಸದೊಳ್ ಕೂಡೆ ವ್ರತಗೇಡಿ ಜನಿಯಿಸುವನೆಲೆ ರಾಮ ಕೇಳೆಂದನು
|| ೯ ||

ಏಳನೆಯ ದಿನದೊಳ್ ದಯಾಪರನುಮೆಂಟುದಿನ |
ಕಾಲಿಸು ದರಿದ್ರನೊಂಬತ್ತಕೆ ಧನಾಢ್ಯನಾ |
ಮೇಲೆ ಹತ್ತಕೆ ಕಾಮಿ ನಿಷ್ಕಾಮಿ ಪನ್ನೊಂದು ದಿವಸದೊಳ್ ಪನ್ನೆರಡಕೆ ||
ಪೇಳಲೇಂ ಕೋಪಿ ಪದಿಮೂರಕ್ಕೆ ಪಂಡಿತಂ |
ವ್ಯಾಲೋಲರೋಗಿ ಪದಿನಾಲ್ಕರೊಳ್ ಮೇದಿನೀ |
ಪಾಲಕಂ ಪದಿನೈದು ದಿನಕೆ ಪದಿನಾರರೊಳ್ ಶಿವಯೋಗಿ ಸಂಜನಿಪನು || ೧೦ ||

ಯೋಗದೊಳ್ ಸತಿ ಪುರುಷರಿರ್ವರ್ ಪರಧ್ಯಾನ |
ರಾಗಿರಲ್ ಜಾರನುದಿಪಂ ಶಿವಧ್ಯಾನಪರ |
ರಾಗಿರಲ್ ಶಿವಯೋಗಿ ಜನಿಸುವಂ ರವಿಯುದಯಕಾಲದೊಳ್ ಜನಿಸಿದವನು |
ಭೋಗಧಿಕಶಿ ಕೋಪಿ ಮಧ್ಯಾಹ್ನದೊಳ್ ಪಾಪಿ ಸಂ |
ಧ್ಯಾಗಮದೊಳುದಿಪಂ ಕುತ್ರಾಪಿ ರಾತ್ರಿಯೊಳುದಿಸಿ |
ಸಾ ಗುಣಾನ್ವಿತನಮಳಶಾಂತಿಯುತನಾಗುವಂ ರಾಮೇಶ ಕೇಳೆಂದನು || ೧೧ ||

೧ ...ಜನಿಸದು (ಪ, ಗೋ.) ೨ ಭೋ (ಮ.) ೩ ಪ (ಶಿ, ಗೋ, ಮ, ತು.

ಪರಿಕಿಸಲ್ ಪಿತ್ತಮುಂ ಶ್ಲೇಷ್ಮಮುಂ ತಿಳಿಯುಲೊಂ |
ದೆರಡು ಬಳ್ಳಂ ಮಾಂಸ ಬಸೆ ರಕ್ತ ಮೇದಸ್ಸು |
ವರಶುಕ್ಲ ಸರ್ವಾಂಗಸಂದೋಹವಿಪ್ಪತ್ತು ಪತ್ತು ಪತ್ತೈದುಮೂರು ||
ಇರದೆ ಪನ್ನೆರಡುಸಾಸಿರ ಹಲದಾ ಗಣನೆಯಿಂ |
ನರರ ದೇಹಂ ರೋಮತತಿ ಮೂರುವರೆಕೋಟಿ |
ನಿರುತ ಮುನ್ನೂರರುವತಸ್ಥಿಗಳ್ ಸೇರಿರ್ಪುವೆಲೆ ರಾಮ ಕೇಳೆಂದನು ❀ || ೧೨ ||

ನರ ರೋಮ ಶುಕ್ಲಾಸ್ಥಿಗಳ್ ತಂದೆಯಂಶಂಗ |
ಳುರು ಚರ್ಮ ಮಾಂಸರಕ್ತಂಗಳೇಳ್ ತಾಯಂಶ |
ವಿರದಿವೇಳುಂ ಸಪ್ತಧಾತುಗಳ್ ಶುಕ್ಲಾಧಿಕತ್ವದಿಂ ಪುರುಷನಹನು ||
ಪರಿಕಿಸಲ್ ರಕ್ತಾಧಿಕತ್ವದಿಂ ಸ್ತ್ರೀ ಜನಿಪ |
ಳೆರಡುಂ ಸಮಾನಮಾಗಲ್ ನಪುಂಸಕನಾಗಿ |
ಧರೆಯೊಳುದಯಿಪನೆಂದು ಸಿದ್ಧರಾಮೇಶಂಗೆ ಚೆನ್ನಬಸವಂ ಪೇಳ್ದನು || ೧೩ ||

ಪಂಚಭೂತಂಗಳಿಂತಾದುವೆಲೆ ರಾಮ ಕೇಳ್ |
ಪಂಚವಿಂಶತಿ ತತ್ವಮೆಂತೆನಲ್ ಜ್ಞಾನಾದಿ |
ಪಂಚಕರಣಂಗಳಾಕಾಶದಿಂದಾದುವಾ ಮರುತನಿಂ ಪ್ರಾಣವಾದಿ ||
ಪಂಚವಾಯುಗಳಾದುವಗ್ನಿಯಿಂ ಶ್ರೋತ್ರಾದಿ |
ಪಂಚಸುಜ್ಞಾನೇಂದ್ರಿಯಂಗಳಾ ವಾರಿಯಿಂ |
ಪಂಚವಿಷಯಂಗಳಾ ಪೃಥ್ವಿಯಿಂ ಪಂಚಕರ್ಮಾಖ್ಯಂಗಳುದಯಿಸಿದುವು || ೧೪ ||

ಪಂಚಮತ್ಕಾರದಿಂ ಪಿಂಡ ಬ್ರಹ್ಮಾಂಡ ಪ್ರ |
ಪಂಚಮುಂ ಪೇಳ್ವೆನಾಲಿಸು ರಾಮ ಮುಂಪೇಳ್ದ |
ಪಂಚಭೂತಂಗಳೇ ಪಂಚಾಂಶಪಂಚೀಕೃತಿಯನೈದಿ ದೇಹಮಾಯ್ತು ||
ಪಂಚಭೂತಂ ಧರಣಿ ಜಲತೇಜ ಹರಿ ನಭಂ |
ಪಂಚಾಂಶಮಸ್ಥಿತ್ವಙ್ನಾಡಿ ಮಾಂಸಂ ರೋಮ |
ಪಂಚಮಿಪ್ಪೈದುಮುಂ ಪೃಥ್ವಿಯಿಂದಾದುವಾಲಿಸು ರಾಮ ನೀನೆಂದನು || ೧೫ ||

೧ ವ (ಮ.) ೨ ರರುವತ್ತಸ್ಥಿ (ಶಿ.) ೩ ಳಿವು (ಹು, ಮ.) ೪-೪ ದಾ ಮೇಲೆ (ಹು.) ❀ ಈ ಪದ್ಯವು ಹು. ಪ್ರತಿಯಲ್ಲಿಲ್ಲ.

ಸ್ವೇದ ಜೊಲ್ ಮೂತ್ರ ಶುಕ್ಲಂ ಶೋಣಿತಂ ಜಲದಿ |
ನಾದುವು ತೃಷಾ ನಿದ್ರೆಯಾಲಸ್ಯ ಸಂಗ ಕ್ಷು |
ತ್ತಾದುವಗ್ನಿಯೊಳಿರದೆ ಪರಿವ ಪಾರುವ ಸುಳಿವ ಕೂಡುವಗಲ್ವುವು ವಾಯುವಿಂ ||
ಆದುವುರೆ ಮೋಹ ರಾಗದ್ವೇಷ ಲಜ್ಜೆ ಭೀ |
ತ್ಯಾದಿಗಳ್ ಗಗನದಿಂ ತತ್ಪಂಚಭೂತದಿಂ |
ದಾದುವಿಪ್ಪತ್ತೈದು ಗುಣಮುವಕ್ಕೊಂದೊಂದಕ್ಕೈದೈದು ಗಣನೆಯಿಂದೆ || ೧೬ ||

ಧರೆಗೆ ವಿಷಯಂಗಳೈದಂಬುವಿಗೆ ನಾಲ್ಕಗ್ನಿ |
ಗಿರದೆ ಮೂರನಿಲಂಗಮೆರಡಾಗಸಕ್ಕೊಂದು |
ಪರಿಕಿಸಲ್ಕೀ ಮಿಶ್ರಮಿಪ್ಪತ್ತೈದಹುದು ಪಂಚೀಕೃತಿಯನಿನ್ನಾಲಿಸು ||
ಧರೆ ಪಾಯು ಗಂಧ ನಾಸಿಕ ಪ್ರಾಣ ಚಿತ್ತಂಗ |
ಳುರುತರದ ಪೃಥ್ವಿಪಂಚಕವೈದು ಗುಹ್ಯ ರಸ |
ಪರಮುಜಿಹ್ವಾಪಾನ ಬುದ್ಧಿಗಳಿವಪ್ಪುವಿಂದೆಲೆ ರಾಮ ಕೇಳೆಂದನು || ೧೭ ||

ಪಾದ ರೂಪಾಕ್ಷಿಗಳುದಾನಮುಮಹಂಕಾರ |
ಮಾದುವಗ್ನಿಯೊಳಿರದೆ ಪಾಣಿ ಸ್ಪರುಶ ತ್ವಕ್ಕು |
ಭೇದಿಸಲ್ ವ್ಯಾನ ಮನಮನಿಲನಿಂ ವಾಕ್ ಶಬ್ದ ಶ್ರುತಿ ಸಮಾನ ಜ್ಞಾನಮುಂ ||
ಆದುವಾಕಾಶದಿಂ ಶ್ರೋತ್ರೇಂದ್ರಿಯಕೆ ಭೂತ |
ಮಾ ದಿವಂ ದಿಕ್ಕುಗಳ್ ದೇವತೆ ವಿಷಯ ಶಬ್ದ |
ಮಾದರದಿ¹ನಕ್ಷರಾನಕ್ಷರಂಗಳ್ ಶಬ್ದ¹ಭೇದಮಾಲಿಪುದೆಂದನು || ೧೮ ||

ಭಾವಿಸಲ್ ತ್ವಕ್ಕಿಗೆ ಮರುತ್ ಭೂತಮಿಂದ್ರನಧಿ |
ದೇವತೆಯುದಕ್ಕೆ ವಿಷಯಂ ಸ್ಪರ್ಶ ಮೃದು ಕಠಿಣ |
ಮಾವರಿಪ ಶೀತೋಷ್ಣಮೆಂಬ ನಾಲ್ಕುಂ ಸ್ಪರ್ಶಭೇದಮಕ್ಷೀಂದ್ರಿಯಕ್ಕೆ ||
ಪಾವಕಂ ಭೂತಮಾ ರೂಪು ವಿಷಯಂ ಶ್ವೇತ |
ಭಾವಾದಿಷಡ್ವರ್ಣಮಾ ರೂಪಭೇದಮಿ |
ನ್ನಾ ವಿಮಲಜಿಹ್ವೇಂದ್ರಿಯಕ್ಕಪ್ಪು ಭೂತಮು²ರೆ ವರುಣನಧಿದೈವಮುದಕೆ || ೧೯ ||

೧-೧ ನಕ್ಷರಂಗಳ ಶಬ್ದಮುದರಿಂದ (ಹು.) ೨ ಮಿ (ಮ.)

ರಸ ವಿಷಯಮುದಕೆ ಮಾಧುರ್ಯ ಲವಣಾದಿ ಷ |
ಡ್ರಸವೆ ತದ್ಭೇದಮಾ ಘ್ರಾಣೇಂದ್ರಿಯಕ್ಕಿರದೆ |
ಧರೆ ಭೂತಮಶ್ವಿನಿದೇವತೆಗಳಧಿದೈವಮದಕೆ ಗಂಧಂ ವಿಷಯವು ||
ಸುಸುಗಂಧ ದುರ್ಗಂಧವೆರಡು ಗಂಧದ ಭೇದ |
ಮುಸಮುವಾಗಿಂದ್ರಿಯಕೆ ನಾಗ ಮರುತಂ ವಾಣಿ |
ಯೆಸೆವ ದೈವಂ ಸುವಾಕ್ಯಂಗಳುಂ ದುರ್ವಾಕ್ಯಸಂಕುಲಂ ವಿಷಯಂಗಳು || ೨೦ ||

ಒರೆವೆನಾಲಿಸು ರಾಮ ಪಾಣೀಂದ್ರಿಯಕೆ ಕೂರ್ಮ |
ಮರುತನಿಂದ್ರಂ ದೈವಮಾದಾನ ದಾನಮೆಂ |
ಬೆರಡು ವಿಷಯಂ ಪದೇಂದ್ರಿಯಕೆ ಕೃಕರಂ ವಾಯು ವಿಷ್ಣುವಧಿದೈವಮದಕೆ ||
ಇರದೆ ಗಮನಾಗಮನ ವಿಷಯಮಾ ಗುಹ್ಯಕ್ಕೆ |
ವರ ದೇವದತ್ತ ಮರುತಂ ಮೃತ್ಯುವಧಿದೈವ |
ಪರಿಕಿಸಲ್ಕಾನಂದ ವಿಷಯಮಾ ಪಾಯುಗೆ ಧನಂಜಯಾಖ್ಯಂ ಮರುತನು || ೨೧ ||

ಪರಮೇಷ್ಠಿ ದೈವಂ ವಿಸರ್ಜನಂ ವಿಷಯಮಿ |
ನ್ನಿರದೆ ಕೇಳ್ ದಶವಾಯುಗಳ ನಿರ್ಣಯಂಗಳಂ |
ಪರಿಕಿಸಲ್ ಪ್ರಾಣ ಮರುದಿಂದ್ರನೀಲದ ವರ್ಣಮದು ಹೃದಯದೊಳಗೆ ನೆಲೆಸಿ ||
ಹಿರಿಯ ಬೆರಳಿಂದೆ ವಾಲಾಗ್ರಪರಿಯಂತರಂ |
ಸ್ಥಿರದೆ ಸಂಚರಿಸುತಮುಚ್ಛ್ವಾಸ ನಿಶ್ವಾಸ |
ಮೆರಡನಾಗಿಸಿಯನ್ನಜೀರ್ಣಮಂ ಮಾಡುವುದು ರಾಮ ನೀಂ ಕೇಳೆಂದನು
|| ೨೨ ||

ಗುದದೊಳಗಪಾನಹರಿಯಿರ್ದು ಮಲಮೂತ್ರಮುಮ |
ನೊದವಲೀಯದೆ ವಿಸರ್ಜಿಸಿಯಘೋದ್ವಾರವಂ |
ಪದೆದು ಬಲಿದನ್ನರಸಮಂ ವ್ಯಾಪ್ತಿಯಂ ಮಾಡುತಿಹುದನುದಿನಂ ಮರೆಯದೆ
ವಿದಿತಂ ಸಮಾನಾನಿಲಂ ನೀಲವರ್ಣಮಿ |
ರ್ಪುದು ನಾಭಿಯಾ ಪಾದಮಸ್ತಕಂಬರಮುವಯ |
ಪದೊಳೆ ಪಸರಿಸಿಕೊಂಡು ಕೊಂಡನ್ನರಸವನೆಲ್ಲಾ ರೋಮಕೈದಿಸುವುದು ೨೩ ||

ಎಳೆಮಿಂಚುವಣ್ಣದೊಳಪಾ೧ನಾನಿಲಂ ಕಂಠ |
ದೊಳಗಿರ್ದು ಸೀನ್ ಕೆಮ್ಮು ಕನಸು೨ಗಳ ಕಾಂಬ೨ ಮೆಯ್ |
ವಳಿಯೊಳೇಳಿಪ ಕುಳ್ಳಿರಿಪ ಛರ್ದಿಯುಂ ನಿರೋಧಂಗಳಂ ಮಾಡಿಸುತ್ತೆ ||
ಇಳಿವನ್ನರಸವನುತ್ತಾಪನಂಗೆಯ್ವುತ್ತೆ |
ನೆಲಸಿರ್ಪುದಾ ವ್ಯಾನವಾಯು ಕ್ಷೀರದ ಬಣ್ಣ |
ಮೊಲವಿನಿಂ ಸರ್ವಾಂಗಸಂಧಿಗಳೊಳಿರ್ಪುದೆಲೆ ರಾಮ ನೀಂ ಕೇಳೆಂದನು || ೨೪ ||

ಮುದುಡಿರ್ದುದಂ ತಿದ್ದಿಯನ್ನಪಾನಾದಿಗಳ |
ನೊದವಿಸುವದಲ್ಲಲ್ಲಿ ಮೇಣ್ ನಾಗವಾಯುವೆಂ |
ಬುದು ಪೀತವರ್ಣಮುರೆ ರೋಮನಾಳದೊಳಿರ್ದು ನಿಶ್ಚಲದೆ ಪಾಡಿಸುವುದು ||
ಉದರಭಾಳದೊಳಿರ್ದು ಕೂರ್ಮ೩ಮರುತಂ ಸುಧವ |
ಳದಶಿ ವರ್ಣ ತನುವಿಗಾಧಾರವಾಗಿರ್ದಪುದು |
ಪದೆದು ಕಣ್ಬಾಯ್ಗಳಂ ಮುಚ್ಚಿ ತೆರೆಸುತ್ತಿಹುದು ಕೇಳೆಂದು ನಿರವಿಸಿದನು || ೨೫ ||

ಕೃಕರವೆಂಬಾ ವಾಯುವಂಜನದಕಾಂತಿ ನಾ |
ಸಿಕದುದಿಯೊಳಿರ್ದು ಕ್ಷುತ್ತ್ರಾದಿ ಧರ್ಮಂಗಳಂ |
ಪ್ರಕಟಿಸುತೆ ಗಮನಾಗಮನ ಕಾರ್ಯಮಂ ಮಾಡುವುದು ದೇವದತ್ತವಾಯು ||
ವಿಕಲವಿಲ್ಲದೆ ಗುಹ್ಯಕಟಿದೇಶದೊಳಗೆ ಸ್ಫ |
ಟಿಕವರ್ಣದಿಂದಿರ್ದು ಕುಳ್ಳಿರಿಸುವೇಳಿಸುವ |
ಸಕಲಭೇದಂಗೆಯ್ವುತೊರಲಿ ಮಾತಾಡಿಸುವುದೆಲೆ ರಾಮ ಕೇಳೆಂದನು || ೨೬ ||

ವರಧನಂಜಯವಾಯು ಬ್ರಹ್ಮರಂಧ್ರದೊಳಿರ್ಪು |
ದುರುನೀಲವರ್ಣಮದು ಕರ್ಣಂಗಳೊಳ್ ಬಿಡದೆ |
ಶರಧಿ೪ನಿರ್ಘೋಷಂಗಳಂ ಘೋಷಿಸುತೆ ಮರಣದಲ್ಲಿ೪ ನಿರ್ಘೋಷಮಾಗಿ ||
ಇರುತಿರ್ಪುದೆಲೆ ಸಿದ್ಧರಾಮ ದಶವಾಯುಗಳ |
ಪರಿಯನಿನ್ನಾಲಿಸೈ ಮುಂದಿರದೆ ಪೇಳ್ವಪೆಂ |
ಕರಣಭೇದಂಗಳಂ ವಿಸ್ತರದೊಳೆನುತಲಾ ಚೆನ್ನಬಸವಂ ನುಡಿದನು || ೨೭ ||

---

೧ ಉದಾ (ಶಿ, ಗೋ, ಮ.) ೨-೨ ಮರವೆಗಳ (ಹು.) ೩-೩ ನುಂಸುದ್ಧವಾಲ್ಲದ (ಶಿ, ಗೋ.) ೪-೪ ಘೋಷಂಗಳೊಲು ಘೋಷಿಸುತೆ ಮರಣಗಾಲಕ್ಕೆ (ಮ.)

ಪುತ್ತ್ರ ಕೇಳಾತ್ಮನಾಗಸವೊಂದೆ ಜ್ಞಾನವಾ |
ದತ್ತು ವಾಯುವನೊಂದೆ ಮನವೊಂದುದಗ್ನಿಯೊಳ್ |
ಬಿತ್ತರದಿನೊಂದಹಂಕಾರವಾಯ್ತುದಕವುಂ ಕೂಡೆ ಬುದ್ಧಿಯಾಯ್ತು ||
ಚಿತ್ತವಾಯ್ತಾ ಭೂಮಿಯೊಳ್ ಬೆರಸೆ ಮೇಣಿವನಿ |
ತುತ್ತಮುಜ್ಞಾನಾದಿಯಂತಃಕರಣವಾಲಿ |
ಸುತ್ತರವ್ಸಾ ಮನಸ್ಸಿಗೆ ವಾಯುಭೂತವಾ ಚಂದ್ರನಧಿದೈವಮುದಕೆ || ೨೮ ||

ಸತತವುದು ಸಂಕಲ್ಪವುಂ ವಿಕಲ್ಪಂಗಳಂ |
ಪ್ರತಿದಿನಂ ಮಾಡುವುದಹಂಕೃತಿಗೆ ರುದ್ರದೇ |
ವತೆಯಗ್ನಿ ಭೂತವೊಡನೊಡನಹಂಕರಿಸುತಿಪ್ಪುದು ಬುದ್ಧಿಗಪ್ಪು ಭೂತಂ ||
ಚತುರಾನನಂ ದೈವ ಬುದ್ಧಿಯುಂ ನಿಶ್ಚಯಿಪು |
ದತುಳಚಿತ್ತಕೆ ಪೃಥ್ವಿಯೆಂಬ ಭೂತಮುಮಾತ್ಮ |
ನಿತತಿ ದೈವಂ ಸ್ಥಿರದೊಳವಧರಿಸುತಿರ್ಪುದೆಲೆ ರಾಮೇಶ ಕೇಳೆಂದನು || ೨೯ ||

ಇಂತುಟಿಪ್ಪತ್ತುನಾಲ್ಕುಂ ತತ್ವಮೇ ದೇಹ |
ಮಂತದಂ ತಾಳ್ದಿರ್ಪ ದೇಹಿಯಾತ್ಮಂ ತನಗೆ |
ಸಂತತಂ ಜ್ಞಾನೇಂದ್ರಿಯಂಗಳ್ ಚಿದಾಕಾರನುಧಿದೈವಮುದಕೇಶನು ||
ಸಂತಸನೊಳಖಿಳಸರ್ವಾಂಗಪ್ರದೇಶಮುಂ |
ತಾಂ ತುಂಬಿಕೊಂಡು ಚೈತನ್ಯರೂಪಾಗಿ ಸ |
ತ್ಕಾಂತಿಯುಮನೈದಿಸುತ್ತಿರ್ಪನಾತ್ಮಂ ಮೂರುಭೇದವಾಲಿಪುದೆಂದನು || ೩೦ ||

ಪರಿಕಿಸಲ್ ಜೀವಾತ್ಮನಂತರಾತ್ಮಂ ಬಳಿಕ |
ಪರಮಾತ್ಮನೆಂದು ಸಂಸಾರಸುಖದುಃಖದೊಳ್ |
ಪರಿಬದ್ಧನಾದವಂ ಜೀವಾತ್ಮನವರೊಳಗೆ ಸಲೆ ಹೊದ್ದಿಯುಂ ಹೊದ್ದದೆ ||
ಇರುತಿಪ್ಪನಂತರಾತ್ಮಂ ತತ್ವಪ್ರಪಂಚದೊಳ್ |
ಬರದೆ ಸಿಲ್ಕದೆ ನಿರಾಕಾರರೂಪಿನೊಳಿಹಂ |
ಪರಮಾತ್ಮನಿಂತಾತ್ಮತ್ರಯದ ನಿರ್ಣಯಂ ಕೇಳೆಂದು ನಿರವಿಸಿದನು || ೩೧ ||

೧ [illegible] ಪು (ಶಿ, ಪು.)

ಪ್ರಿಯದೆ ಪೇಳ್ವೆಂ ಸ್ಥೂಲ ಸೂಕ್ಷ್ಮ ಕಾರಣತನು |
ತ್ರಯದೊಳಾ ಸ್ಥೂಲತನುವೇ ಪಂಚಭೂತಗಳ |
ಮಯಮಿಂದ್ರಿಯಂಗಳೀರೈದು[೧] ವಾಯುಗಳೈದು ತನ್ಮನೋಬುದ್ಧಿಯೆರಡು ||
ನಿಯತಮಿಾ ಸಪ್ತದಶಕಂ ಲಿಂಗಭೌತಿಕಾ |
ಹ್ವಯಮಿದೇ ಸೂಕ್ಷ್ಮತನುವಾತ್ಮ ಚಿತ್ತಾಹಂಕೃ
ತಿಯುಮಿರದೆ ಸಂಯೋಗಮಾಗೆ ಕಾರಣತನುತ್ರಯಮಿಪ್ಪಂ ಹೀಗೆಂದನು || ೩೨ ||

ಎಸೆವಂಗ ಪ್ರತ್ಯಂಗ ಸಾಂಗಾಂಗ ಸಮುಪಾಂಗ |
ನಿಸರಭೇದಂಗಳ್ ಶಿರೋವಕ್ಷಮೂರು ಭುಜ |
ವಸಮಾಂಗಮಾಸನಂ ನಾಸಿಕಂ ಶ್ರುತಿಯಧರ ಲೋಚನಾಂಗುಲಿಯೆಂಬಿವು ||
ಸಸಿನದಿಂ ಪ್ರತ್ಯಂಗಮಿಂತು ಸಾಂಗಾಂಗ ಭಾ |
ವಿಸೆ ನಾಲ್ಕು ಕರಣ ವಸ್ತ್ರಾಭರಣ ಲೇಪ ಕೂ |
ರಸಿತ್ರ[೨]ತಿಯುಪಾಂಗಮಿಂತಂಗಂ[೩] ಚತುಷ್ಟಯಂ ದಶನಾಡಿಯಂ ಪೇಳ್ವೆನು || ೩೩ ||

ಮೇಲೆನಿಸುವಿಡ ಪಿಂಗಳನಾಡಿ [೪]ಚಂದ್ರ ರವಿ |
ನಾಳದೊಳಗಾ ಸುಷುಮ್ನಂ ಮಧ್ಯನಾಳದೊಳ್ |
ತಾಳಿರಲ್[೫] ಗಾಂಧಾರಿ ಬಲದಕ್ಷಿಯೊಳ್ ಹಸ್ತಿಜಿಹ್ವೆಯೆಡದಕ್ಷಿಯೊಳಗೆ ||
ಲೀಲೆಯಿಂದೆಡಬಲದ ಕಿವಿಯೊಳ್ ಪಯಸ್ವಿನಿ ವಿ |
ಶಾಲಪೂಷಂಗಳಾಲಂಬಮಿರ್ಪುದು ಮೇಢ್ರ |
ನಾಳದೊಳ್ ಪಾಯುವೊಳ್ ನ[೬]ಕುಹಮಾ ಶಂಕಿನಿಯೆ ನಾಭಿನಾಳದೊಳಿರ್ಪುದು || ೩೪ ||

ಧರೆ ಸಲಿಲ ಪಾವಕಾನಿಲ ಗಗನ ರವಿ ನಿಶಾ |
ಕರರಾತ್ಮರೀಯಷ್ಟಮೂರ್ತಿಗಳ ಮದವಿವಾ |
ಧರೆಯ ಮದವೆತ್ತೆ ತನು[೭]ಗುಣಭರಿತನಾಗಿಹಂ ಸಲಿಲಮದವೆತ್ತಿದಲ್ಲಿ ||
ಇರದೆ ಸಂಸಾರಮದನಾಗಿಹಂ ಶಿಖಿಮದೋ |
ತ್ಕಟಮಾಗೆ ಕಾಮಮದನಾಗಿಹಂ ಪವನಮದ |
ಭರಿತನಾಗಲ್ ಗಮನಮದ[೮]ನಹಂ ಗಗನಮದಕೇರುವಂ ವಾಹನವನು || ೩೫ ||

೧ ಳೀ ಪಂಚ (ಶಿ, ಗೋ.) ೨ ಪ (ಪ, ಶಿ, ಗೋ.) ೩ ಗದ (ಹು, ಪು, ಮ.) ೪-೫ ಗಳ್ ಚಂದ್ರ | ನಾಳದೊಳು ಸೂರ್ಯನಾಳದೆ ಸುಷುಮ್ನಂ ಮಧ್ಯ | ನಾಳದೊಳ್ (ಶಿ, ಗೋ.); ಗಳ್ ಚಂದ್ರ | ನಾಳದೊಳಗಾ ಸೂರ್ಯನೊಳು ಸುಷುಮ್ನಂ ಮಧ್ಯ | ನಾಳದೊಳ್ (ಹು, ಮ.) ೬ ಲ (ಹು, ಮ.); ಯು (ಪ.) ೭ ಸುತೆ (ಮ.) ೮ ಛದ (ಶಿ, ಗೋ, ಹು, ಮ.)

ತರಣಿಮುದವೆತ್ತಿ ಕೋಪಾಗ್ನಿಯೊಳ್ ಪುದಿದಿಹಂ |
ಪರಮಶಶಿಮುದವೆತ್ತಿ ಚಿಂತೆಯೊಳ್ ಕೂಡಿರ್ಪ |
ನಿರವಾತ್ಮಮುದವೆತ್ತಿ ಬಳಿಕಹಂಕಾರಯುತನಾಗುವಂ ಕೇಳ್ವುದಿನ್ನು ||
ನಿರುತವಿಾ ಸಪ್ತಧಾತುತ್ಪತ್ಯವರ್ಣಾಂಶ |
ದುರತರದ ಕರ್ಮಂಗಳಿಂತೆನಲ್ ರಸಕೆ ಭಾ |
ಸುರಕಪಿಲವರ್ಣಮುಂ ಪೃಥ್ವ್ಯಂಶಮುಂಗಮಂ ಭರದಿನಳ್ಳಿಸುತಿರ್ಪುದು || ೩೬ ||

ತವೆ ರುಧಿರಮುದು ನೀಲವರ್ಣಮುಪ್ಪಿನಂಶ |
ಮವಯವವ ನಡುಗಿಸುತ್ತಿಹುದು ಮಾಂಸಂ ರಕ್ತ |
ನಿವಹವರ್ಣಮುಮಗ್ನಿಯಂಶಂ ಶರೀರಮುಂ ಕಳವಳಿಸುತಿರುತಿರ್ಪುದು ||
ವಿವರಿಸಲ್ ಮೇದಸ್ಸು ಮಾಂಜಿಷ್ಠವರ್ಣಮುದು |
ಪವನಾಂಶಮುಂಗಮುಂ ಬೆದರಿಸುತ್ತಿಹುದು ಮೇ |
ಲವಿರಲಾಸ್ಥಿಗಳ್ಳೈದೆ ಕೃಷ್ಣವರ್ಣಂ ಗಗನದಂಶಮಾಗಿರುತಿರ್ಪುದು || ೩೭ ||

ಮರುಳಾಗಿ ನುಡಿಯಿಪುದು ಮಜ್ಜೆ ತಾಮ್ರಚ್ಛಾಯೆ |
ತರಣಿಯಂಶಂ ಶರೀರಮನೊತ್ತರದೊಳೆ ಕನ |
ವರಸಿ ನುಡಿಸುತ್ತಿಹುದು ಶುಕ್ಲಮೇ ಶ್ವೇತವರ್ಣಂ ಚಂದ್ರನಂಶಿಕಮುದು ||
ಇರದೆ ಕಳವಳಮುಮಂ ಕಂಪನಮನೆಸಗುತೀ |
ಪರಿ ಸಪ್ತಧಾತುಗಳ ನಿರ್ಣಯಂ ತನುಮನಂ |
ವರಧನಂ ರಾಜ್ಯ ವಿಶ್ವೋತ್ಸಾಹ ಸೇವಕಾದಿಗಳಿವೇ ವ್ಯಸನಂಗಳು || ೩೮ ||

ತನುವಿನ ವ್ಯಸನವಾದಲ್ಲಿ ತನು ಬಡವಾದ |
ನೆನೆಸುತಿಹಂ ಮೋಹ್ ಮನೋವ್ಯಸನವಾದಲ್ಲಿಯೊ |
ಯ್ಯನೆ ಕಳವು ಪಾದರಂಗಳ ಬಯಸುತಿರ್ಪನರ್ಥವ್ಯಸನವಾದಾಗಳು ||
ಧನಕೆ ಚಿಂತಿಸುತಿಹಂ ರಾಜ್ಯವ್ಯಸನಮಾಗೆ |
ವಿನುತವಸ್ತ್ರಾಭರಣ ವಾಹನಂಗಳ ಬಯಪ |
ನನುಪಮಿತವಿಶ್ವವ್ಯಸನಮಾಗೆ ಸದ್ಗೃಹಕ್ಷೇತ್ರಮುಂ ಬಯಸುತಿಹನು || ೩೯ ||

---

೧ ವ (ತಿ.) ೨-೨ ಯಿ | ಶೆ (ಮ.)

ಆಲಿಸುತ್ಸಾಹಮದವಾದಲ್ಲಿ[೧] ಪುತ್ರ ಮಿ |
ತ್ರಾಳಿಯಂ ಬಯಸುವಂ ಸೇವಕವ್ಯಸನಮಂ |
ತಾಳಲ್ಕೆ ಕೊಂಡು ಕೊಟ್ಟುಂಡುಡಲ್ ಬೇಕೆಂಬ ಕೋಟಲೆಯೊಳೊಂದಿರ್ಪನು ||
ಪೇಳಲಿವು ಸಪ್ತವ್ಯಸನವಿಾ[೨] ಷಡೂರ್ಮಿಗಳ |
ಕೇಳಾದೊಡಾ ಕ್ಷುತ್ ಪಿಪಾಸೆ ಶೋಕಂ ಮೋಹ |
ಮಾಲೋಕಿಸಲ್ ಜನನ ಮರಣಾದಿಗಳ್ ಕ್ಷುತ್ ಪಿಪಾಸೆಗಳ್ ಪ್ರಾಣಧರ್ಮಂ
|| ೪೦ ||

ವರಮೋಹ ಶೋಕಂ ಮನೋಧರ್ಮಮಾ ಜನನ |
ಮರಣಮೆರಡುಂ ದೇಹಧರ್ಮ ಕಾಮ ಕ್ರೋಧ |
ಮುರುಲೋಭ ಮೋಹ ಮದ ಮತ್ಸರಂಗಳ್ ತಿಳಿಯಲಾರುಮರಿವರ್ಗಂಗಳು ||
ಪರಿಕಿಸಲ್ ಜಾತಿ ವರವರ್ಣ ಕುಲಗೋತ್ರಂಗ |
ಳೊರೆವೆನಾಶ್ರಮನಾಮವಿವು ಬಗೆಯೆ ಷಡ್ಭ್ರಮೆಗ |
ಳಿರದೆ ಜಾಯತೆಯು[೩]ಪಕ್ಷತೆ ವಿನಶ್ಯತೆ ವಿಪರಿಣಮತೆ ವರ್ಧತೆಯಸ್ತಿತೆ || ೪೧ ||

ಇವು ತಿಳಿಯೆ ಷಡ್ಭಾವವಿಕೃತಿಗಳ್ ಜಾಯತೆಯೆ |
ತವೆ ಜನನಿಯುದರದಿಂ ಬರ್ಪುದಸ್ತಿತೆಯುಂಟೆ |
ನುವ ವಿಪರಿಣಮತೆ ಪರಿಣಮಿಸುವುದು ವರ್ಧತೆಯೆ ಬಳೆವ ಪಕ್ಷತೆಯೆ ಕುಸಿಹಂ[೪]
ಸವಿನಶ್ಯತೆಯೆ ಕೆಡುವುದಿಂತಿವೇ ಷಡ್ಭಾವ |
ವಿವರಂಗಳನ್ನಮಯ ಪ್ರಾಣಮಯ ವಿಜ್ಞಾನ |
ನಿವಹ[೫]ದಾನಂದಮಯಮುಂ[೫] ಮನೋಮಯಮಿಂತು ಪಂಚಕೋಶಂಗಳಿರವು
|| ೪೨ ||

ಒರೆವೆನಾಲಿಸು ಗುಣತ್ರಯದ ಭೇದಂಗಳಂ |
ವರಸತ್ಯ ಹರುಷ ಕ್ಷಮಾಕುಲ ಜ್ಞಾನ ಭಾ |
ಸುರಮಾನನಿಶ್ಚಯಂ ಶ್ರದ್ಧೆ ಧೈರ್ಯ ವಿವೇಕ ಸಹಸಗಳ್ ಸಾತ್ವಿಕಗುಣಂ ||
ಪರಮಪ್ರಿಯಾಹಂಕೃತೋದ್ಯೋಗ ರೋಷ ಮ |
ತ್ಸರವಿ[೬]ವೇ ರಾಜಸಗುಣಂ[೬] ನಿದ್ರೆಯಾಲಸ್ಯ |
ಮುರುಮೋಹ ಚಪಲ ಹಿಂಸಾ ನಿಂದೆಯೆಂಬಿವೇ ತಾಮಸಗುಣಂ ತಿಳಿಯಲು
|| ೪೩

೧ ವ್ಯಸನವಾಗೆ (ಹು, ಮ.) ೨ ಗಳು (ಹು, ಮ.) ೩ ಪಿ (ಹು, ಮ.) ೪ ಪ
(ಹು, ಮ.) ೫-೫ ಮಯವಾನಂದಮಯ (ಹು.) ೬-೬ ವು ರಜೋಗುಣಂ ಪವೆ (ಮ.)

ಅನುಪಮದ ಸಪಿನಂ ತೃಣೀಕೃತಂ ತಿಳಿಯೆ ವ |
ರ್ತಿನಿ ಮಹಾಕ್ರೋಧಿನಿ ಸಗಂಧಧಾರಿಣಿ ವಿಮೋ |
ಹಿನಿಯುಮತಿಧಾರಿಣಿಯುಮೆಸೆವ ಹಾಸಿ[೧]ನಿಯಂತರಂಗದ ಮದಾಷ್ಟಕಮಿವು |
ಧನಮದಂ ಕುಲಮದಂ ಛಲಮದಂ ಚಾರುಯೌ |
ವನಮದಂ ರೂಪ ವಿದ್ಯಾ ರಾಜ್ಯ ಸತ್ತಪೋ |
ಘನಮದಾಷ್ಟಕಮಿವೇ ಬಾಹ್ಯಮದಸಂಕುಲಂ ಕೇಳೆಂದು ನಿರವಿಸಿದನು || ೪೪ ||

ಒರಿವೆನೆಲೆ ರಾಮ ನೀಂ ಕೇಳ್ವುದಾಧ್ಯಾತ್ಮಿಕಮು |
ನಿರಪಾದಿಭೌತಿಕಮುನಾಧಿದೈವಿಕಮುಮಿವು |
ಪರಿಕಿಸಿಲ್ ತಾಪತ್ರಯಂಗಳಾಧ್ಯಾತ್ಮಿಕಮದೆರಡುತೆರನೆಂತೆಂದೊಡೆ ||
ನಿರುತದಿಂ ಮಾನಸಂ ಶಾರೀರಮೆಂದು ಮ |
ತ್ಸರದೆ ಸೂಯಾಸೂಯ ಚಿಂತೆಯಿಂದಾದ ಪರಿ |
ಕರಮೆ ಮಾನಸಮಿನ್ನು ಜ್ವರಮುಖ್ಯರೋಗದಿಂ ನೋವುದೇ ಶಾರೀರವು || ೪೫ ||

ಚೋರರಿಂ ರಾಜರಿಂ ಪಶುಪಕ್ಷಿ ಮೃಗಗಳಿಂ |
ಕ್ರೂರಾಹಿ ಭೂತ ವೇತಾಳಾದಿ ಸಂಕುಲದ |
ಸೇರುವೆಯ ಜೀವಚಯದಿಂದಲಾದುಪಹತಿಗಳಾಧಿಭೌತಿಕಮದಿನ್ನು ||
ಸೇರುವೆಯ ಜನನ ಮರಣಂ ಹಸಿವು ತೃಷೆಗಳಂ[೨] |
ದಾರಯ್ಯೆ ನೆರೆ ತೆರೆಗಳ ಜ್ಞಾನಮಿವರಿಂದೆ |
ಸೇರಿದ ಮಹಾದುಷ್ಕಮಾಧಿದೈವಿಕಮಿದೆಲೆ ರಾಮೇಶ ಕೇಳೆಂದನು || ೪೬ ||

ಇಂತು ಭವಭವದೊಳುದ್ಭವಿಸಿ ತಾಪತ್ರಯದ |
ಭ್ರಾಂತಿಯೊಳ್ ಕಡುನೊಂದು ಜೀವಂಗೆ ಬಿಡದೆ ಜ |
ನ್ಮಾಂತರದ ಸುಕೃತವಾಸನೆವಿಡಿದು ಶಿವಭಕ್ತಿ ಸಂಜನಿಸಲದರಿಂದಲೆ ||
ಮುಂತೆ ಸುಜ್ಞಾನಮೊದಗುವುದು ತತ್‌ಜ್ಞಾನದಿರ |
ವೆಂತೆನಲ್ ಮೂರು ತೆರನವರ ಭೇದಂಗಳಂ |
ನೀಂ ತಿಳಿವುದೆಂದು ದಯದಿಂ ಸಿದ್ಧರಾಮಂಗೆ ಚೆನ್ನಬಸವಂ ಪೇಳ್ದನು || ೪೭ ||

೧ ಪಾಠ (ಶಿ.); ಪಾಸಿ (ಗೋ, ಹು, ಮ.) ೨ ಳಿಂ (ಹು, ಮ.)

ಹಿಂಗದಿ ಪ್ರತ್ಯಕ್ಷಮುಂ ಪರೋಕ್ಷಾಪರೋ |
ಕ್ಷಂಗಳೆಂಬುರುತರಜ್ಞಾನತ್ರಯಂ ನೋಡೆ |
ಕಂಗೊಳಿಪುವೀ ತನುತ್ರಯದೊಳಂ ಶ್ರೋತ್ರಾದಿ ಜ್ಞಾನತ್ರಯಂಗಳಿಂದೆ ||
ತುಂಗಶಬ್ದಾದಿವಿಷಯಂಗಳಿಂ ಜ್ಞಾನಾದಿ |
ಪೊಂಗುವಂತಃಕರಣವೈದರಿಂದರಿವುದೇ |
ಕಂಗೊಳಿಸುವಮಲಪ್ರತ್ಯಕ್ಷಮಾಲಿಸು ಸಿದ್ಧರಾಮೇಶ ನೀನೆಂದನು || ೪೮ ||

ವರದೇಶ ಕಾಲಮುಂ ಲೋಕಾಂತರಂಗಳಂ |
ಪರಮಜನ್ಮಾಂತರದ ಸುಖದುಃಖ ದುಷ್ಕರ್ಮ |
ಮುರುಸುಕರ್ಮದ ಬಂಧಮೋಕ್ಷಂಗಳೆಂಬಿವಂ ವೇದಾಗಮಂಗಳಿಂದೆ ||
ಇರದರಿವುದೇ ಪರೋಕ್ಷಂ ಬಾಹಿರಂಗದ |
ಲ್ಲಿರುತಿರ್ಪ ಭೂತಪಂಚಕಮಂತರಂಗದ |
ಲ್ಲಿರುತಿರ್ಪ ⁽¹ಸೂಕ್ಷ್ಮಭೂತಂಗಳೊಂದೆಂದರಿದು ಸಿದ್ಧರಾಮೇಶ ಕೇಳು⁾¹ || ೪೯ ||

ಮುಂದೆ ತದ್ಗುಣಧರ್ಮವಿಷಯಮುಂ ತಾನಲ್ಲ |
ವೆಂದರಿದು ಜೀವಾತ್ಮಪರಮಾತ್ಮರೇಕಾರ್ಥ |
ವೆಂದು ನಿಶ್ಚಯಿಸಿ ಮಿಗೆ ತನ್ನ ನಿಜವೆಂದರಿದು ಶ್ರೀಗುರುಕಟಾಕ್ಷದಿಂದೆ ||
ಸಂದೇಹಮಿಲ್ಲದರಿವಂದಮಪರೋಕ್ಷಮಿಾ |
ಸಂದ ಸಂವಿತ್ರಯಮಿವೀಗೆಂದು ಪೇಳಲಾ |
ನಂದದಿಂ ಸಿದ್ಧರಾಮಂ ಚೆನ್ನಬಸವನಡಿಗೆರಗಿ ಮಗುಳಿಂತೆಂದನು || ೫೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೫೧ ||

ಅಂತು ಸಂಧಿ ೫೪ಕ್ಕಂ ಪದಗಳು ೨೫೯೧ ಕ್ಕಂ ಮಂಗಳಮಹಾಶ್ರೀ

೧-೧ ಸೂಕ್ಷ್ಮಂಗಳೊಂದೆಂದರಿದು ಸಿದ್ಧರಾಮೇಶ ಕೇಳೆಂದನು (ಹು, ಮ.)

ಐವತ್ತೊಂಬತ್ತನೆಯ ಸಂಧಿ

ಸೂಚನೆ

ಮೋಕ್ಷಮಂ ಕೊಟ್ಟೆನ್ನ ಸಿದ್ಧರಾಮೇಶನಂ |
ರಕ್ಷಿಸುವೆನೆನುತಾಗ ಚೆನ್ನಬಸವಂ ಲಿಂಗ |
ದೀಕ್ಷೆಯಂ ಮಾಡಿ ಗುರು ಲಿಂಗ ಜಂಗಮದ ಮಾಹಾತ್ಮೆಯಂ ವಿರಚಿಸಿದನು ||

ಪುಷ್ಕರಾಂಬಕನಯನಪೂಜಿತಪದಾಂಭೋಜ |
ಪುಷ್ಕರಾಪ್ತೇಂದುವಹ್ನಿತ್ರಿಲೋಚನಮೆಸೆವ |
ಪುಷ್ಕರಾಸನಶಿರಶ್ಛೇದಕಂ ಪುಷ್ಕರಾಸನ ಪಾರ್ವತೀವಲ್ಲಭ ||
ಪುಷ್ಕರಕರಾಸುರಸುಗರ್ವಪರ್ವತಕುಲಿಶ |
ಪುಷ್ಕರಕಳಂಬಕಂಗಾರಣ್ಯಘನದಾವ |
ಪುಷ್ಕರಸುಕೇಶ ದಿಗ್ವಸನ[೧] ಪಂಪಾವಿರೂಪಾಕ್ಷ ರಕ್ಷಿಸು ನತರನು ❁ || ೧ ||

ಎನ್ನ ಸದ್ಗುರು ಚೆನ್ನಬಸವೇಶ ಪೇಳ್ವುದೆನ |
ಗಿನ್ನಾವ[೨] ಗತಿಯೆನಲ್ ಶೈವಾಗಮಾರ್ಥ ಸಂ |
ಪನ್ನರಾಗಿರ್ಪ ವರಗುರುಕರುಣದಿಂದಲಷ್ಟಾವರಣದಿರವನರಿದು ||
ಚೆನ್ನಾಗಿ ವೀರಶೈವೋಪದೇಶಂಬಡೆದು |
ನಿನ್ನ ಭವಮಂ ತೊಲಗಿಸೆನೆ ನೀನೆ ಗುರುವಲ್ಲ |
ದಿನ್ನೆನಗೆ ಬೇರೆ ಗುರುವಿಲ್ಲ ಕರುಣಿಪುದೆಂದು ಮುಗುಳೆರಗಲಿಂತೆಂದನು || ೨ ||

ಒರೆವೆನಾಲಿಸು ನಾವು ಗುರುವಿನ ಸುಲಕ್ಷಣಮ |
ನುರುಶಿವಾಗಮಪುರಾಣಂಗಳಂ ತಿಳಿದಮಳ |
ಪರಮಶಾಂತಂ ಶುಚಿ ಶಿವಾಚಾರಸಂಪನ್ನನುತ್ತಮಂ ಪೂರ್ಣಾಂಗನು ||
ಪರಜಿತೇಂದ್ರಿಯನತುಳಗುರುಸಂಪ್ರದಾಯಕಂ |
ನಿರುಪಮಿತಸದ್ವಂಶಜಾತಂ ಶಿವಧ್ಯಾನ |
ಪರನಾಶಿದರಲ್ಲಿ ನೀಂ ದೀಕ್ಷೆಯಂ ಮಾಡಿಕೊಳ್ಳೆನಲಾತನಿಂತೆಂದನು || ೩ ||

---

೧ ನಸು (ಶಿ.) ೨ ನ್ನೇಸು (ಹು, ಮ.) ೩ ನಾ (ಶಿ.) ❁ ಈ ಪದ್ಯವು ಅ, ಬ, ಕ, ಡ, ಹು, ಮ. ಈ ಪ್ರತಿಗಳಲ್ಲಿ ೬೦ನೆಯ ಸಂಧಿಯ ಮೊದಲನೆಯ ಪದ್ಯವಾಗಿದೆ.

ಪರಮುಸದ್ಗುರು ಚೆನ್ನಬಸವೇಶ ನೀಂ ಪೇಳ್ದ |
ವರಲಕ್ಷಣಂಗಳೆಲ್ಲಂ ನಿನ್ನೊಳಿವೆ ನೀನೆ |
ಪರಶಿವನ ಚಿತ್ಕಳಾರೂಪ ನೀಂ ಬಸವಣ್ಣ ಮೊದಲಾದ ಪ್ರಮಥಗಣಕೆ ||
ವಿರಚಿಸಿದೆ ಪ್ರಾಣಲಿಂಗೋಪದೇಶವನೆನಗೆ |
ಕರುಣದಿಂ ದೀಕ್ಷೆಯಂ ಮಾಡಿ ಭವಪಾಶಮಂ |
ಪರಿಹರಿಸಿ ರಕ್ಷಿಸೆನೆ ಚೆನ್ನಬಸವೇಶ್ವರಂ ಕರುಣದಿಂದಿಂತೆಂದನು || ೪ ||

ಎಲೆ ಸಿದ್ಧರಾಮ ಕೇಳ್ ವೀರಶೈವಂ ನಿನಗೆ |
ಸುಲಭವೇ ಖಡ್ಗಧಾರೆಯ [೧]ಮಧು ಮಹಾ[೧]ಫಣಿಯ |
ತಲೆಯ ಮಾಣಿಕವಿದಾರ್ಗಳವಹುದು ಬಹಳ ಧೀರೋದ್ಧಾರಣಂಗಲ್ಲದೆ ||
ಸಲೆ ಮಲತ್ರಯ ಪಂಚಸೂತಕಾದಿಗಳನತಿ |
ಗಳೆದನ್ಯ[೨]ಭವಿನಾಸ್ತಿಯಾಗಿರುತೆ ನಿರುತ[೨] ನಿ |
ರ್ಮಲದ ಪಂಚಾಚಾರದಿಂ ನಡೆಯಬೇಕೆನಲ್ಕವನೆನಗೆ ತಿಳಿಪೆಂದನು || ೫ ||

ಇನ್ನಾಲಿಸೈ ಸಿದ್ಧರಾಮ ತ್ರಿಮಲದಿರವ |
ನೆನ್ನ ಪಿತ್ರ ಮಾತೃ ಸುತರೆಂಬುದಾಣವಮಲವ |
ದುನ್ನತದ ಕುಲಗೋತ್ರಮೆಂದೆನಲ್ ಮಾಯಾಮಲಂ ಧನಂ ಕಾರ್ಮಿಕಮಲಂ ||
ಮುನ್ನಿವಂ ಬಿಡಬೇಕದೆಂತೆನಲ್ ಶಿವ ಶಿವೆಯ |
ರೆನ್ನ ಪಿತೃ ಮಾತೃಗಳ್ ಶಿವಕುಲಂ ಶಿವನೊಡವೆ |
ಯೆನ್ನವಲ್ಲೆಂಬುವಂಗಿಲ್ಲಾ ಮಲತ್ರಯಂ ಕೇಳೆಂದು ನಿರವಿಸಿದನು || ೬ ||

ಜಾತಿಸೂತಕ ಜನನಸೂತಕಂಗಳ್ ಮಹಾ |
ಪ್ರೇತಸೂತಕ ನಿತ್ಯಸೂತಕಮುದುಚ್ಛಿಷ್ಟ |
ಸೂತಕಮಿವೇ ಪಂಚಸೂತಕಂ ಸ್ಥಾವರಾದ್ಯನ್ಯಲಿಂಗದ ಭಜನೆಯುಂ ||
ಓತನ್ಯತೀರ್ಥಮನ್ಯಕ್ಷೇತ್ರಯಾತ್ರೆಗ |
ಳ್ಗಾತುರದೆ ಪೋಪುದೀಗನ್ಯದೇವಾರ್ಚನೆ ವಿ |
ನೀತಭವಿಯಾದವರ ತನ್ನ ತಾಯ್ತಂದೆ ಬಂಧುಗಳೆನಲ್ ಭವಿಸಂಗವು || ೭ ||

೧-೧ ಮಹಾಮಧು (ಪ.) ೨-೨ ಭವಿಜನ್ಮನಾಸ್ತಿಯಾಗಿರುತೆ (ಶಿ, ಗೋ.) ; ದೈವಭವಿನಾಸ್ತಿ ಯಾಗಿರುತೆ (ಹು, ಮ.)

ಎನ್ನ ಸಮ್ಮರುವೆ ಸುರತರುವೆ ಮುಕ್ತಿಯ ಕರುವೆ |
ಚೆನ್ನಬಸವೇಶ ಭವನಾಶ ನಿಂ ಪೇಳ್ವಂ |
ಮುನ್ನವೇ ಬಿಟ್ಟೆನಿನ್ನೇನೇನುವಂ ಬಿಡುವುದೆನಲವಂ ಬಿಡುವೆನೆನಗೆ[1] ||
ಚೆನ್ನಾಗಿ ವೀರಶೈವೋಪದೇಶವನೆ ಕೊ |
ಟ್ಟಿನ್ನ ಭವಪಾಶಮಂ ಪರಿವುದೆನುತೆರಗಲಾ |
ಚೆನ್ನಬಸವಂ ಕರುಣದಿಂ ಸಿದ್ಧರಾಮನಂ ನೋಡುತಂದಿಂತೆಂದನು || ೮ ||

ಶರಣರೆಲ್ಲರ್ ಕೇಳ್ವುದೀ ಸಿದ್ಧರಾಮನಾ |
ಪರಶಿವನ ಪ್ರತಿಬಿಂಬಮೆಂತೆನಲ್ ಪೂರ್ವದೊಳ್ |
ಗಿರಿಜೇಶನಡಿಗೆ ಗಂಧರ್ವರ್ಕೈತರುತೆ ಭೃಂಗೀಶನಂ ಕಂಡು ನಗಲು ||
ಕೆರಳಿ ಭೃಂಗೀಶ್ವರಂ ಗಂಧರ್ವರಂ ನೋಡಿ |
ನರಜನ್ಮದೊಳ್ ಭವಿಗಳಾಗಿ ಸಂಜನಿಸಿ ಬಳಿ |
ಕಿರದೆ ದಂಪತಿಗಳಾಗೆಂದು ಶಾಪವನೀಯಲವರಾಗಳಿಂತೆಂದರು || ೯ ||

ತಂದೆ ಕರುಣಿಸು ವಿಶಾಪವನರಿಯದಜ್ಞಾನ |
ದಿಂದೆ ನಕ್ಕೆವು ಕಾವುದೆನುತಲಡಿಗೆರಗಲಾ |
ನಂದದಿಂ ಭೃಂಗೀಶ್ವರಂ ನಿಮ್ಮ ಗರ್ಭದೊಳ್ ಶಿವಯೋಗಿ ಸಂಜನಿಸಲು ||
ಅಂದಿಗೆ ವಿಶಾಪಮೆನೆ ಗಂಧರ್ವರಾಗ ನಡೆ |
ತಂದು ಶಂಕರಗೆರಗಿ ಭೃಂಗಿಯಿಂ ತಮಗಾದ |
ದಂದುಗವನೆಲ್ಲವಂ ಪೇಳಲೀಶ್ವರನಂದು ಕೃಪೆಯೊಳೊಲಿದಿಂತೆಂದನು || ೧೦ ||

ಅಂಜದಿರಿ ನಿಮ್ಮ ಜಠರದೊಳೆಮ್ಮ ನಿಜರೂಪು |
ಸಂಜನಿಸಿ ನಿಮಗೆ ಮುಕ್ತಿಯನೀವನೆನಲಿರ್ವ |
ರುಂ ಜವದೊಳೈತಂದು ಸೊನ್ನಲಿಗೆಯೊಳಗೊಪ್ಪುತಿರ್ಪ ಕುಡಿಯೊಕ್ಕಲಿಗರ ||
ರಂಜಿಸುವ ಗರ್ಭಂಗಳಿಂದುದಿಸಿ ಪುಣ್ಯದ ಸು |
ಪುಂಜಂಗಳಂತೆ ಮೊರಡಿಯ ಮುದ್ದಗೌಡನಾ |
ಕಂಜಮುಖಿ ಸುಗ್ಗಾಯ್ಗಳೆಂಬ ನಾಮದೆ ಬಳೆದು ದಂಪತಿಗಳಾದರೊಲಿದು || ೧೧ ||

---

೧ ಉ (ಹು.)

ಇಂತೆಸೆವ ದಂಪತಿಗಳಿರಲವರ ಗರ್ಭದಿಂ |
ಕಂತುಮದಹರನ ಪ್ರತಿಬಿಂಬಮೋ ಜನಿಸಿದನ[1] |
ನಂತರಂ ಸಿದ್ಧರಾಮೇಶನೆಂದೆಂಬ ನಾಮಮನಾಂತು ಶ್ರೀಶೈಲಕೆ ||
ಸಂತಸದೆ ಪೋಗಿಯಾ ಮಲ್ಲಿಕಾರ್ಜುನಲಿಂಗ |
ಮಂ ತನ್ನ ಪುರಕೆ ಕರೆತಂದು ಪೂಜಿಸುತಲಾ |
ಕಂತು ಒರೆ ಗೆಲಿದು ಯಮುಗೊಂಡದಲ್ಲಿರ್ದರಂ ಕೈಲಾಸಕಿರದೊಯ್ವನು || ೧೨ ||

ಬಸವೇಶನಂ ತನ್ನ ಹೃದಯಮಂ ಬಗಿದು ತೋ |
ರಿಸಿದನೀ ಸಿದ್ಧರಾಮೇಶನ ಮಹಾತ್ಮೆಗಳ |
ನುಸಿರಲಳವೇ ಶಿವಪ್ರತಿಬಿಂಬಮೆನೆ ಸಿದ್ಧರಾಮನತಿಭಕ್ತಿಯಿಂದೆ ||
ಹಸನಾಯ್ತು ನಿಮ್ಮ ಭೃತ್ಯರ ಭೃತ್ಯನೆಂದು ಭಾ |
ವಿಸುತಿಪ್ಪಲಿಂಗಮಂ ಪಾಲಿಸೆಲೆ ಗುರುಚೆನ್ನ |
ಬಸವೇಶ [2]ಸ್ವಾಮಿನೆಂದು ಸಾಷ್ಟಾಂಗದಿಂದೆರಗಿ ನುತಿಸ[2] ಸಮನಂತರದೊಳು || ೧೩ ||

ಅಲ್ಲಮಂ ಬಸವಮೊದಲಾದಸಂಖ್ಯಾತಗಣ |
ರೆಲ್ಲರುಂ ಚೆನ್ನಬಸವೇಶ ಕೇಳ್ ನೀಂ ಕರುಣ |
ದಲ್ಲಿ ಬಿಡದೀ ಸಿದ್ಧರಾಮೇಶ್ವರಂಗೆ ದೀಕ್ಷೆಯನಿತ್ತು ಸಂತಸದೊಳು ||
ಸಲ್ಲಲಿತಮೋಕ್ಷಮಂ ಕೊಟ್ಟು ರಕ್ಷಿಪುದೆನಲ್ |
ಮೆಲ್ಲನಾ ಚೆನ್ನಬಸವೇಶ್ವರಂ ತನ್ನ ಕರ |
ಪಲ್ಲವದೆ ಸಿದ್ಧರಾಮೇಶ್ವರನ ಮಕುಟಮಂ ಪಿಡಿದೆತ್ತಲಾ ಕ್ಷಣದೊಳು || ೧೪ ||

ನವರತ್ನಮಯಮಾದ ತನ್ನ ಮಹಾಮಂಟಪವ |
ನವದುಕೂಲಂಗಳಿಂ ನವಕುಸುಮಮಾಲೆಯಿಂ |
ತವೆ ಝಲ್ಲಿ ಪಟ್ಟಿಗಳ ಮುತ್ತುಗಳ ಪೊಸಫಲದ ಗೊಂಚಲ್ಗಳಿಂ ವಿರಚಿಸಿ ||
ಅವಿರಳದ ಕಸ್ತುರಿಯ ಸಾ[3]ರಣೆಯ ಕಣ್ಗೊಳಿಪ |
ವಿವಿಧಮುತ್ತಿನ ರಂಗವಲಿಯಿಂದಲಂತಿಂತು |
ಹವಣಿಸಿದ ಸುಸ್ಥಳದೊಳಂದಿಪದೆ ತಂಡುಲದ ಚೌಕಮಂ ಕೆಯ್ಗೆಯ್ದರು || ೧೫ ||

---

೧ ಸನು (ಶಿ, ಗೋ.); ಶದ (ಹು, ಮ.) ೨-೨ ನೆಂದು ಸಾಷ್ಟಾಂಗದಿಂದೆರಗಿ ನುತಿಗೆಯ್ದು (ಶಿ, ಗೋ.) ೩ ಕಾ (ಶಿ.)

ಪ್ರೋಕ್ಷಿಪ್ರೋಕ್ಷಿವ ಜಲಪೂರ್ಣಮಾಗಿರ್ದ ಸತ್ಪಂಚ |
ಕಳಶಂಗಳಂ ಸ್ಥಾಪನಂಗೆಯ್ದು ಪೊಸನೂಲಿ |
ನೆಳೆಗಳ್ಳಿವಂ ಸುತ್ತಿಯಷ್ಟವಿಧಪೂಜೆಯಿಂದರ್ಚಿಸಿ ತದಾಜ್ಞೆಯಿಂದೆ ||
ಬಳಿಕಲಾ ಸಿದ್ಧರಾಮಂ ಭಸಿತ ವೀಳೆಯಂ |
ಗಳನಖಿಳಗಣಕುಲದ ಮುಂದಿರಿಸಿ ನಮಿಸಲ್ಕೆ |
ನಲವಿನಿಂದಾತನಂ ಚೆನ್ನಬಸವಂ ಚೌಕಮಧ್ಯದೊಳ್ ಕುಳ್ಳಿರಿಸಿದಂ || ೧೬ ||

ವರವಿಭೂತಿಯು ಪಟ್ಟಗಟ್ಟಿ ರುದ್ರಾಕ್ಷೆಯಿಂ |
ದಿರದಲಂಕರಿಸಿ ದರ್ಭಾಂಕುರದೆ ತತ್ಕಲಶ |
ಭರಿತಜಲಮಂ ತಳೆದು ನಾಲ್ವರಾಚಾರ್ಯರೊಡನಾ ಕಲಶಪಂಚಕವನು ||
ಹರುಷದಿಂ ಮೂರುಸೂಳಾ ಸಿದ್ಧರಾಮನುರು |
ಶಿರಕೆತ್ತಿಯಭಿಷೇಚನಂಗೆಯ್ದು ಕಳಶಮಂ |
ಮರಳಿ ತತ್ತತ್ಸ್ಥಳದೊಳಿರಿಸಿ ಪರಿಶುದ್ಧನಂ ಮಾಡಿದಂ ಕರುಣದಿಂದೆ || ೧೭ ||

ವಿವರಿಸಲ್ ಬಳಿಕಲಾ ಚೆನ್ನಬಸವೇಶ್ವರಂ |
ತ್ರಿವಿಧದೀಕ್ಷೆಗಳಿಂದೆ ತ್ರಿವಿಧಲಿಂಗಂಗಳಂ |
ತ್ರಿವಿಧಾಂಗದೊಳ್ ದೀಕ್ಷೆಯಂ ಮಾಡಿ ತ್ರಿವಿಧಮಲಮಂ ಬಿಡದೆ ಛೇದಿಸಲ್ಕೆ ||
ತವೆ ಸಿದ್ಧರಾಮನಾ ಗುರುಮುಖ್ಯಸಕಲಗಣ |
ನಿವಹಕ್ಕೆ ಸಾಷ್ಟಾಂಗದಿಂದೆರಗಿ ಕುಳಿತು ಮ |
ತ್ತವಿರಳಾನಂದದಿಂದೀ ಕಲಶದಿರವನೆನಗುಸಿರೆಂದೊಡಿಂತೆಂದನು || ೧೮ ||

ಆದೊಡಾಲಿಸು ರಾಮ ಪರಶಿವಂ ತಾಂ ತ್ರಿವಿಧ |
ಭೇದದಿಂ ಗುರುಲಿಂಗಚರಮೆನಿಸಿ ತನ್ನಯ ವಿ |
ನೋದದಿಂ ಪಂಚಸಾದಾಖ್ಯದಿಂ ಪಂಚಕಲೆಗಳನೈದೆ ಗುರುವೆ ಬಳಿಕ ||
ಸಾದರದೊಳಾ ನಂದಿವಾಹಿಹಂ ಪರಾಶಕ್ತಿ |
ನಾದ ಚಿತ್ತ್ರಣವಮಂತ್ರಂ ವಿಸುನಿಗಳಸದಿಂ |
ದಾ ದಯಾಂಬುಧಿಯೆನಿಸಿಪ ಸದ್ಗುರುವೆ ನಾಲ್ವರ್ಗೆ ದೀಕ್ಷೆಯಂ ಪಾಲಿಸಿದನು
|| ೧೯ ||

೧-೧ ಕಲಶಂಗಳಿ (ಶಿ, ಗೋ.)　೨-೨ ಹನಂ ಪರ (ಶಿ, ಗೋ.)

ವಿವರಿಸುವೆ[೧]ನಾ ನಾಲ್ವರಾರೆನಲ್ಕಾ[೧] ಸದಾ |
ಶಿವನೀಶ್ವರಂ ಮಹೇಶಂ ರುದ್ರರೆನಿಪವರ್ |
ಶಿವದೀಕ್ಷೆವಡೆದಾರ್ಯರಾಗಿಯಾ ಸಕಲಗಣಕುಲಕೆ ದೀಕ್ಷೆಯನೆ ಮಾಡಿ ||
ತವೆ ಹರಿಯಜೇಂದ್ರಾ[೨]ರ್ಕ ಶಕ್ರಾದಿದಿಕ್ಪಾಲ |
ನಿವಹಕಂ ನರ ಸುರೋರಗ ಗರುಡ ಗಂಧರ್ವ |
ವಿವಿಧರಾಕ್ಷಸ ಯಕ್ಷ ಸಿದ್ಧ ವಿದ್ಯಾಧರಾಪ್ಸರಗ[೩]ಕಿನ್ನರವಿತತಿಗೆ || ೨೦ ||

ತಿಳಿಯೆ ಮನು ಮುನಿ ಪಿಶಾಚಾವಳಿಗೆ ಕಿಂಪುರುಷ |
ಕುಲಕೆ ವರಶೈವಾಗಮೋಕ್ತಪ್ರಕಾರದಿಂ |
ನಲವಿನಿಂ ದೀಕ್ಷೆಯಂ ಮಾಡಿ ಮರ್ತ್ಯದ ಜನರ ಭವಬಂಧಮಂ ಕಳೆಯಲು ||
ಇಳೆಯೊಳವರಂಶದಿಂ ರೇವಣಾಸಿದ್ಧ ನಿ |
ರ್ಮಲಮರುಳಸಿದ್ಧನೇಕೋರಾಮನತುಳಗುಣ |
ನಿಳಯರಾ ಪಂಡಿತಾರಾಧ್ಯರಾದರ್ ಕ್ರಮದೊಳವರಿರವ ನೀಂ ಕೇಳ್ವುದು || ೨೧ ||

ಪರಿವಿಡಿಯೊಳಾ ರೇವಣಂಗಾದಿಶಕ್ತಿ ತ |
ತ್ಪುರುಷಮುಖಮೆಂಟುಜಡೆ ಯೋಗದಂಡಂ ಮೆಯ್ಗೆ |
ಕರಿಯ ಕಂಬಳಿಯ ಕುಪ್ಪಸಕಂಥೆ ಬ್ರಹ್ಮಚರಿಯಾಶ್ರಮಂ ಲೋಹದಿಂದೆ ||
ವಿರಚಿಸಿದ ಮುರಿಪಾತ್ರೆಯುಂ ಕುಂಡಲಂ ತನ್ನ |
ಕರದಿನಗಲದ ಶಾಂತಮಲ್ಲಿಕಾರ್ಜುನಲಿಂಗ |
ಮುರುಪ್ರಣವಮಂತ್ರಮಾ ಋಗ್ವೇದಮತುಳಕೇಸರಿ ವಾಹನಂ ಕೇಳ್ವುದು || ೨೨ ||

ನಕ್ಷತ್ರಪರ್ವತದ ತಟದೊಳಿರ್ಪಂ ಕಲ್ಪ |
ವೃಕ್ಷದಡಿಯಲ್ಲಿ ಪದ್ಮಾಸನಕ್ಕೆಸೆವ ತಾಳ |
ರಕ್ಷಚರ್ಮದೊಳೆ ಗದ್ದುಗೆ ಭಸ್ಮರುದ್ರಾಕ್ಷೆಯಿಂ ತನ್ನ ಶಿಷ್ಯಕುಲಕೆ ||
ದೀಕ್ಷೆಗೆಯ್ವಲ್ಲಿ ವರಪಾರಿಜಾತದ ತಳಿರ |
ಪಕ್ಷದಿಂದೆಸೆವ ಲೋಹದ ಕಳಶಮಂ ಸಹ |
ಸ್ರಾಕ್ಷದಿಕ್ಕಿನೊಳಿಟ್ಟು ಪೂಜಿಪರ್ ಸಿದ್ಧರಾಮೇಶ ನೀಂ ಕೇಳೆಂದನು || ೨೩ ||

೧-೧ ನಾನಾಲ್ವರಾರಾರೆನಲ್ (ಶಿ, ಗೋ, ತು, ದಾ.); ನಾ ನಾಲ್ವರಾರೆನಲ್ ಕೇಳ್ (ಹು.); ಕೇಳ್ ನಾಲ್ವರಾರಾರೆನಲ್ (ಮ.) ೨ ದ್ರಾ (ಪ, ಶಿ, ಗೋ, ಹು, ತು, ಮ.) ೩ ಣ (ಶಿ, ಗೋ.) ೪-೪ ವಾ ತೆ (ಹು, ತು, ದಾ, ಮ.)

ತಿಳಿ ಮರುಳಸಿದ್ಧೇಶ್ವರಂಗಘೋರಾಸ್ಯಮಾ |
ಪೊಳೆವ ಬಹುಶಿಖಿಗಳಿಚ್ಛಾಶಕ್ತಿ ಸೆರಗುಗಂ |
ಬಳಿಗಂಥೆ ಲೋಹದಿಂ ಮಾಡಿದೆಡಮುರಿಪಾತ್ರೆಯುಂ ಕುಂಡಲಂ ಕೆಯ್ಯೊಳು ||
ತೊಳಗುವ ಕುಠಾರದಂಡಂ ಬಾಯೊಳಮಳ್ಳೈಕ್ಯ |
ದೊಳೆ ಕಪಿಲಸಿದ್ಧ ಸನ್ಮಲ್ಲಕಾರ್ಜುನಲಿಂಗ |
ದೊಲವಾ ಷಡಕ್ಷರಿಯ ಮಂತ್ರಂ ಯಜುರ್ವೇದಮಾತಂಗೆ ಕೇಳೆಂದನು ||೨೪||

ಬಿಡವೆ ಪುಲಿವಾಹನಂ ಯತ್ಯಾಶ್ರಮಂ ಸಮಂ|
ಬಡೆ ಕುಮಾರಾದ್ರಿಗತಮಂದಾರತರುತಟಂ |
ಬಿಡಿದು ಮೃಗಚರ್ಮದೊಳ್ ಗೋಮುಖಾಸನದೊಳಿರ್ಪಂ ಭಸ್ಮ ರುದ್ರಾಕ್ಷೆಯು ||
ತೊಡಗಳಿಂ ಶಿಷ್ಯರ್ಗೆ ದೀಕ್ಷೆಯಂ ಕರುಣದಿಂ |
ಕೊಡುವಲ್ಲಿ ದೂರ್ವಾಂಕುರಾದಿಕುಸುಮದೆ ತೆಂಕ |
ಣೆಡೆಯ ಲೋಹದ ಕಳಶಮಾತಂಗೆ ಸಿದ್ಧರಾಮೇಶ ನೀಂ ಕೇಳೆಂದನು ||೨೫||

ಕ್ರಮದಿನೇಕೋರಾಮತಂದೆಗಂ ವಾಮದೇ |
ವಮುಖಮ್ಯೆ ಜಡೆ ಕಾವಿಯಂಬರಂ ತಾಮ್ರದಿಂ |
ಸಮೆದ ಮುರಿಯುಂ ಪಾತ್ರೆ ಕುಂಡಲಂ ಚಿತ್ರದಂಡಂ ಜ್ಞಾನಶಕ್ತಿ ಶಿಖಿಗೆ ||
ಅಮರ್ದಿಪ್ಪ ವರಭೋಗಮಲ್ಲಕಾರ್ಜುನಲಿಂಗ |
ವಮಿತಪ್ರಸಾದಪಂಚಾಕ್ಷರೀಮಂತ್ರಮು |
ತ್ತಮಸಾಮವೇದಂ ಮರಾಳವಾಹನಮೆಸೆವುದಾತಂಗೆ ಕೇಳೆಂದನು ||೨೬||

ಭೂತಿ ರುದ್ರಾಕ್ಷೆ ವಾನಪ್ರಸ್ಥದಾಶ್ರಮದೊ |
ಳಾತನಿರ್ಪಂ ಮೇರುಗಿರಿತಟದ ವಟವೃಕ್ಷ |
ದಾ ತಡಿಯೊಳೆಸೆವ ಭದ್ರಾಸನಕ್ಕಮರ್ದ ಕಾಷಾಂಬರದ ಗದ್ದುಗೆಯೊಳು ||
ಪ್ರೀತಿಯಿಂ ದೀಕ್ಷೆಯಂ ಕೊಡುವಲ್ಲಿ ಪೊಂಬಾಳೆ |
ಯೀ ತಸಗಲಂಕಾರಮಾ ತಾಮ್ರದುರುಕಳಶ |
ಮಾತಂಗೆ ಧನದದಿಕ್ಕಿನೊಳಿರ್ಪುದಿದು ಸಾಮ್ಯಲಕ್ಷಣಂ ಕೇಳೆಂದನು ||೨೭||

---

೧ ರ್ಪೆ (ಹು, ಮ.) ೨ ಕ (ಶಿ, ಗೋ.)

ವರಪಂಡಿತಾರಾಧ್ಯರಿಗೆ ಕ್ರಿಯಾಶಕ್ತಿ ಸಿಂ |
ಗರದೇಕಶಿಖಿ ಬಿಳಿದಿನುಡೆ ಬೆಳ್ಳಿಯಿಂ ಸಮೆದ |
ಮುರಿಯುಮಾ ಘಾತ್ರೆ ಮೌಕ್ತಿಕಕುಂಡಲಂ ಮುಖಕೆ ವಿಮಲಸದ್ಯೋಜಾತಮುಂ ||
ಕರದೊಳಾದೊಡಮಧಿಕಕಕ್ಷದೊಳಗಾದೊಡಂ |
ಧರಿಸಿಹುದು ವರಚೆನ್ನಮಲ್ಲಿಕಾರ್ಜುನಲಿಂಗ |
ಮುರುಹಂಸ ಪಂಚಾಕ್ಷರೀಮಂತ್ರಮೆಸೆವಥರ್ವಣವೇದಮುಮಗೆಂದನು || ೨೮

ಮತ್ತಗಜವಾಹಂ ಗೃಹಸ್ಥಾಶ್ರಮುಂ ಚೆಲ್ವು |
ವೆತ್ತೆಸೆಯುಲಾ ತ್ರಿಕೂಟಾದ್ರಿತಟದಿನಿವಾವಿ |
ನೊತ್ತಿನೊಳಗುರುಸುಖಾಸನಕಮರ್ದ ಪೊಸರನ್ನಗಂಬಳಿಯ ಗದ್ದುಗೆಯೊಳು ||
ಬಿತ್ತರದೆ ಕುಳ್ಳಿರ್ದ ಶಿಷ್ಯರ್ಗೆ ದೀಕ್ಷೆಗಳ |
ನಿತ್ತು ರಕ್ಷಿಸುವಲ್ಲಿ ನಾಗವಲ್ಲೀದಳಂ |
ಬೊತ್ತ ಬೆಳ್ಳಿಯ ಕಳಶದಿಂದೊಪ್ಪುಗುಂ ವರುಣದಿಕ್ಕಿನೊಳ್ ಕೇಳೆಂದನು || ೨೯

ಹರುಷದಿಂದಾ ನಾಲ್ವರಾಚಾರ್ಯರೊಲವಿನಿಂ |
ಬರುತಿರ್ಪರುಗಯುಗಂಗಳೊಳುಮತಿಕರುಣದಿಂ |
ಧರೆಯ ಭಕ್ತರ್ಗೆ ದೀಕ್ಷೆಯನಿತ್ತು ರಕ್ಷಿಸುತ್ತಿರಲಾಗಿಯಾ ವಂಶದಿಂ ||
ಪಿರಿಯರುಮುಮಾ ನಾಲ್ಕು ಕಳಶಮಂ ನಾಲ್ಕೆಸೆಯೊ |
ಳಿರಿಸಿ ತನ್ಮಧ್ಯದೊಳ್ ಗುರುಕಳಶಮಂ ನಿಲಿಸಿ |
ಪರಮಶಕ್ತಿಯೊಳೆ ತತ್ಕಳಶಮಂ ಗುರುಭಾವದೊಳ್ ಕಂಡು ಪೂಜಿಸುವುದು
|| ೩೦ ||

ಕರುಣದಿಂ ದೀಕ್ಷೆಯಂ ಕೊಡುವಲ್ಲಿ[1] ಶಿಷ್ಯರಂ |
ಕರಚರಣ ಮುಖಮಾದವ[2]ರಿಯುವದೊಳೆಳ್ಳನಿತು |
ಪರಿಕಿಸಲ್ಕೂನಮಿಲ್ಲದ ಹೀನಜಾತರಲ್ಲದ ನಾಲ್ಕು ವರ್ಣದವರ್ಗೆ ||
ತರತರದೊಳಾ ವಿಪ್ರರೊಳ್ ಮೂರು ವರುಷಮಂ |
ತರಸುಮಕ್ಕಳನಾರು ವರುಷಮಾ ವೈಶ್ಯರಂ |
ನಿರುತಮೊಂಬತ್ತು ವರುಷಂ ಶೂದ್ರರುಗಳನೀರಾರುವರುಷಂ ನೋಳ್ಪುದು || ೩೧

---

೧ ರುಂ (ಹು, ಮ.) ೨ ಮುಖ್ಯಮಾದವ (ಹು, ಮ.)

ಇಂತವರ ಮನದ ಪಕ್ವಾಪಕ್ವ[೧]ಭೇದಮಂ |
ತಾಂ ತಿಳಿದು ನೋಡಿ ದೀಕ್ಷಾತ್ರಯಂಗಳನೊಲ್ದು |
ಸಂತೋಷದಿಂ ತ್ರಿವಿಧಲಿಂಗಮಂ ತ್ರಿವಿಧಾಂಗದೊಳ್ ಪ್ರತಿಷ್ಠಿಸುವರೆನಲು |
ಕಂತುಹರನಪರಾವತಾರ ದೀಕ್ಷಾತ್ರಯಮ |
ದೆಂತು ಲಿಂಗತ್ರಯಮದಾವುದಂಗತ್ರಯಮ |
ನಿಂ ತಿಳಿಯುಪೇಳೆನಲ್ ಸಿದ್ಧರಾಮೇಶ ಕೇಳಾ ಗುರುವೆ ಕರುಣದಿಂದೆ ॥ ೩೨ ॥

ಉರುತರಜ್ವಲಿತಕಾಲಾಗ್ನಿ ರುಚಿಯಂ ಜರೆವ |
ಪರಮವಿದ್ಯುತ್ಕೋಟಿಕಾಂತಿಯಂ ಪಳಿವ ಭಾ |
ಸುರಶಿಖಾಚಕ್ರದೊಳ್ ಸೂಕ್ಷ್ಮದಿಂ ಚಿದ್ರೂಪಿನಿಂದೆಸೆವ ಚಿತ್ಕಲೆಯನು |
ಗುರುವರಂ ಭಾವಕ್ಕೆ ತಂದು ತದ್ಭಾವದಿಂ |
ದಿರದಾ ಮನಸ್ಸಿಂಗೆ ತಂದು ತನ್ಮನದಿಂದೆ |
ಭರದೆ ದೃಕ್ಕಿಗೆ ತಂದು ತದ್ದೃಕ್ಕಿನಿಂದಿರದೆ ವರಕರಸ್ಥಲಕೆ ತಂದು ॥ ೩೩ ॥

ಕರುಣದಿಂ ಶಿಷ್ಯನುರುಮಸ್ತಕದೆ ಹಸ್ತವಿ |
ಟ್ಟಿರದೆ ವೇಧಾದೀಕ್ಷೆಯಿಂ ಭಾವಲಿಂಗಮಂ |
ಪರಮಕಾರಣತನುವಿನೊಳ್ ಕರ್ಣದೊಳ್ ವಿರಾಜಿಸುವ ಮಂತ್ರಾದೀಕ್ಷೆಯಿಂ |
ಉರುತರಪ್ರಾಣಲಿಂಗವ ಸೂಕ್ಷ್ಮ ತನುವಿನೊಳ್ |
ಕರದಿಂ ಕ್ರಿಯಾದೀಕ್ಷೆಯಿಂದಿಷ್ಟಲಿಂಗಮಂ |
ನಿರುತವಾ ಸ್ಥೂಲತನುವಿನೊಳುಂ ಪ್ರತಿಷ್ಠಿಸುವರೆಲೆ ರಾಮ ಕೇಳೆಂದನು ॥ ೩೪ ॥

ಗುರುವರಂ [೨]ಲಿಂಗಮಂ ಕೊಡುವುದೇ ದೀ[೩]ಯೆಂಬು |
ದಿರದಾ ಮಲತ್ರಯವ ಛೇದಿಪುದೆ ಕ್ಷೇ[೪]ಯೆಂಬುಳ |
ದೆರಡುಮಾ ದೀಕ್ಷಾಭಿಧಾನವಿನ್ನಾಲಿಸ್ಯೆ ಗುರುವಿನ ಮಹಾತ್ಮೆಗಳನು ||
ಸರಸಿಜಾಸನ ವಿಷ್ಣು ರುದ್ರ ನಂದೀಶ್ವರಂ |
ಪರಸದಾಶಿವ ತತ್ತ್ವಸಿಚರ[೫]ದಾಕಾರಸುಂ |
ಪರಮಚೈತನ್ಯಾತ್ಮ ಶಾಶ್ವತಂ ಶಾಂತಂ ನಿರಂಜನಂ ನಿರ್ಮಲಿನನು ॥ ೩೫ ॥

---

೧ ಕ್ವಾಪಕ್ವ (ಪು, ಮ.) ೨ ಸ (ಶಿ.) ೩-೩ ಶಿಷ್ಯಂಗೆ ಲಿಂಗವಂ ಕೊಡುವುದುರು | ಪರಮಲತ್ರಯವನುಮಂ ಛೇದಿಸುವುದೆಂಬುದೀ | ಯೆ (ದಾ.) ೪ ದೀಕ್ಷೆಯೆಂ (ಪ, ಮ.) ೫ ಕಾಧಾ | ಹು, ಪು, ಮ. |

ನಿರುತವಮಾ ನಾದ ಬಿಂದು ಕಳಾವ್ಯತೀತನುಂ |
ಪರಮುಷಟ್ತ್ರಿಂಶತ್ಸತತ್ತ್ವಮಾಲಾಭೂಷ |
ನುರುತರಜ್ಞಾನಶಕ್ತಿಪ್ರಯುಕ್ತಂ ನಿತ್ಯನಿಂತಪ್ಪ ಗುರುವಿನಿಂದೆ ||
ಪರವಿಲ್ಲವಾಗಿ ನಗುರೋರಧಿಕವೆಂದು ಶ್ರುತಿ |
ಯೊರೆವುತಿರ್ಪುದು ರಾಮು ಕೇಳೆನಲ್ಕಿಂತಪ್ಪ |
ಪರಮಗುರು ನೀನೆ ನೀಂ ಪೇಳ್ವ ಲಿಂಗತ್ರಯದ ಭೇದಮಂ ತಿಳಿಪೆಂದನು || ೩೬ ||

ಒರೆವೆನಾಲಿಸು ರಾಮು ನಿನಗೆ ನಾಂ ಮುಂಪೇಳ್ದ |
ವರಮಹಾಲಿಂಗವೇ ನಿಷ್ಕಲದೆ ಭಾವಕೊ |
ಳ್ಳಿರದೆ ಗೋಚರಮಾಗೆ ಭಾವಲಿಂಗಮುದಾಯ್ತುದೇ ಮನಕೆ ಗೋಚರಿಸಲು ||
ಉರುಸಕಲನಿಷ್ಕಲದೆ ಪ್ರಾಣಲಿಂಗಮುದಾಯ್ತು |
ಪರಿಕಿಸಲದೇ ಕಣ್ಗೆ ಗೋಚರಿಸೆ ಸಕಲದಿಂ |
ಪರಿವಿಡಿಯೊಳಿಷ್ಟಲಿಂಗಮುದಾಯ್ತು ತಲ್ಲಿಂಗದಿರವ ನೀಂ ಕೇಳೆಂದನು || ೩೭ ||

ಪರಿಕಿಸಲ್ಕತ್ಯತಿಷ್ಠದ್ದಶಾಂಗುಲಮಜಂ |
ನಿರುಪಮಂ ನಿತ್ಯಂ ನಿರಾಮಯಂ[೧] ನಿರ್ಗುಣಂ |
ನಿರಘಂ ನಿರಂಜನಂ ನಿರ್ದ್ವಂದ್ವಮವ್ಯಕ್ತಮವ್ಯಯಂ ನಿಃಶೂನ್ಯನು ||
ವರಸಾಕ್ಷಿರೂಪಕಮಕರ್ತೃಕಮಭೋಕ್ತೃಕಂ |
ನಿರುತಮಿರದೇಕಮೇವಾದ್ವಿತೀಯಂ ಬ್ರಹ್ಮ |
ಪರಕೆ ಪರಮೆನಿಸುವ ಪರಬ್ರಹ್ಮಮಿಾ ಲಿಂಗಮೆಲೆ ರಾಮು ಕೇಳೆಂದನು || ೩೮ ||

ಇಂತಪ್ಪ ಲಿಂಗಮಂ ಶಿರದೊಳಮುಳ್ಳೈಕ್ಯದೊಳ್ |
ಸಂತತಂ ಗಳ ಬಾಹು ಕಕ್ಷೆ ವಕ್ಷಂಗಳೊಳ್ |
ಸಂತಸದೆ ಧರಿಸವೇಳ್ಪುದು ನಾಭಿಯಿಂ ಕೆಳಗೆ ಧರಿಸೆ ಪಾತಕಮರಿವುದು ||
ಮುಂತೆ ಮಜ್ಜನ ಭೋಜನಂಗಳೊಳ್ ಮಲ ಮೂತ್ರ |
ಮಂ ತವೆ ವಿಸರ್ಜಿಸುವ ಕಾಲದೊಳ್ ನಿದ್ರೆಯೊಳ್ |
ಕಾಂತೆಯರ ರತಿ ರಾಜಭಯಮಾದಿಗಳೊಳಂಗದಿಂದಗಲದಿರವೇಳ್ಪುದು || ೩೯ ||

---

೧ ನಿರಂಜನಂ (ಪ, ಕೋ, ಗೋ.)

ಎಲೆ ಸಿದ್ಧರಾಮೇಶ ಕೇಳ್ವುದೀ ಲಿಂಗಕ್ಕೆ |
ತಿಳಿಯಲಾ ಜಂಗಮುವೆ ವದನವಾ ಜಂಗಮುದ |
ಲಲಿತಮುಖದಿಂದೆ ಲಿಂಗಕೆ ತೃಪ್ತಿಯೆಂದೊಡಾ ಜಂಗಮುದ ಲಕ್ಷಣವನು ||
ನಲವಿನಿಂ ತಿಳಿಪೆನಲ್ಲಾದಿಮಧ್ಯಾಂತಮಂ |
ಕಳೆವಂ ನಿತ್ಯಪರಿಪೂರ್ಣಂ ನಿರಾಮಯಂ |
ಸಲೆ ಸಗುಣನಿರ್ಗುಣಂ ಹರಿಯಜ ಮಹೇಂದ್ರ ಶಿವಮುಖ್ಯಪೂಜಿತನೆಂದನು || ೪೦ ||

ಜಂಗಮುವೆನಲ್ ಜನನವಾ ಮರಣವರ್ಜಿತಂ |
ಜಂಗಮುವೆನಲ್ ನಾದಬಿಂದುಕಳೆಸಂಯುತಂ |
ಜಂಗಮುವೆನಲ್ ಸ್ವರ್ಗ ಮರ್ತ್ಯ ಪಾತಾಳಾದಿಸಕಲಭುವನಾಧಾರನು ||
ಜಂಗಮುವೆನಲ್ ಸಚ್ಚಿದಾನಂದರೂಪಕಂ |
ಜಂಗಮುವೆನಲ್ ತ್ರಿವಿಧಮೂರ್ತಿಸ್ವರೂಪಕಂ |
ಜಂಗಮುವೆನಲ್ ತ್ರಿವಿಧತತ್ತ್ವಾತ್ಮಕಂ ಸಿದ್ಧರಾಮೇಶ ಕೇಳೆಂದನು || ೪೧ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಸ್ಕರಿಂದೆ || ೪೨ ||

ಅಂತು ಸಂಧಿ ೫೯ಕ್ಕಂ ಪದಗಳು ೨೬೩೩ಕ್ಕಂ ಮಂಗಳಮಹಾಶ್ರೀ

ಅರುವತ್ತನೆಯ ಸಂಧಿ

ಸೂಚನೆ

ಭಸಿತ ರುದ್ರಾಕ್ಷಿ ಪಂಚಾಕ್ಷರಿಯ ಮಹಿಮೆಗಳ |
ನೊಸೆದು ಪಾದೋದಕ ಪ್ರಸಾದದ ಮಹಾತ್ಮೆಗಳ
ನಸಮಲಿಂಗಾರ್ಚನಾ೧ಭೇದಮಂ ಗುರುಚೆನ್ನಬಸವಂ ನಿರೂಪಿಸಿದನು ||

ಈಶ್ವರಿಯ ನಿರ್ಮಲಾನನಸರೋರುಹಮಿತ್ರ |
ಶಾಶ್ವತಂ ಸರ್ವಸಾಕ್ಷಿಕ ಸುಭಸ್ಮೋದ್ಧಾತ್ರ |
ವಿಶ್ವಾಧಿಕೋರುದ್ರ ಭವಗಣಾಂಬುಧಿಚೈತ್ರ ಸನ್ಮುನಿಸ್ತೋತ್ರಪಾತ್ರ ||
ಭಾಸ್ವತ್ಸಲೀಲಾಸವಿಶ್ವ೨ನಾಟಕಸೂತ್ರ |
ವೈಶ್ವಾನರೋವಿಧುವಿವಸ್ವಾನುಗುಣನೇತ್ರ |
ನೈಶ್ವರ್ಯಮಂ ಕೊಟ್ಟು ಸಲಹು ಧನಪತಿಮಿತ್ರ ವಿಮಲಸದ್ಗುಣಚರಿತ್ರ || ೧ ||

ಪರಮಸದ್ಗುರು ಚೆನ್ನಬಸವೇಶ ನೀಂ ಪೇಳ್ದ |
ಗುರುಲಿಂಗಜಂಗಮಮಹಾತ್ಮೆಗಳನರಿದೆನಾಂ |
ಕರುಣದಿಂ ಮುಂತೆ ಲಿಂಗಾರ್ಚನೆಯ ಮಾಳ್ಪ ತೆರನಂ ನಿರೂಪಿಸುವುದೆನಲು ||
ಒರೆವೆನಾಲಿಸು ರಾಮ ಪೂರ್ಣ೩ನಕ್ಷತ್ರಂಗ |
ಳಿರುತಿರ್ಪಕಾಲಮುತ್ತಮಮವೆಲ್ಲಂ ನಾಡೆ |
ಪರಿವಾಗ ಮಧ್ಯಮಂ ರವಿಯುದಯಕಾಲದರ್ಚನೆಯೆ ತಿಳಿಯಲ್ಕಧಮವು || ೨ ||

ಉತ್ತಮದ ಕಾಲದೊಳ್ ಶಿವನ ನೆನೆವುತ್ತಲೆ |
ಚ್ಚತ್ತು ಮೆಯ್ಮುರಿದೆದ್ದು ಮಲಮೂತ್ರಮಂ ತ್ಯಜಿಸಿ |
ಮೃತ್ತಿಕಾಶೌಚಮಂ ಮಾಡಿ ಹಸ್ತಾಂಘ್ರಿಗಳನೊಲವಿನಿಂ ತೊಳೆದು ಬಳಿಕ ||
ಚಿತ್ತರದೆ ಪಾಲ್ಮಗ್ಗ೪ಳ್ಳ ಮರದೊಳ್ ಖದಿರ |
ಮುತ್ತಮಂ ತತ್ಕಾಷ್ಠದಿಂ ದಂತಧಾವನಾ |
ವೃತ್ತಮಂ ತೀರ್ಚಿ ಲಿಂಗೋದಕದೆ ಗಂಡೂಷಮಂ ಮಾಡಬೇಕೆಂದನು || ೩ ||

೧ ಸೆಯ (ಶಿ.) ೨ ವಿಲಾಸ (ಹು, ಮ.) ೩ ರ್ವ (ಶಿ, ತು.) ೪ ಪಾಲ್ಮುಗುಳ್ (ಹು, ಮ.)
ಈ ಪದ್ಯವು ಅ, ಬ, ಕ, ದ, ಹು, ಮ. ಈ ಪ್ರತಿಗಳಲ್ಲಿ ೬೧ನೆಯ ಸಂಧಿಯ ಮೊದಲನೆಯ ಪದ್ಯವಾಗಿ…

ಬಳಿಕ ಮುಖಮಜ್ಜನಂಗೆಯ್ದು ಮಡಿವರ್ಗಮಂ |
ತಳೆದು ವಿಮಲೇಶಾನದಿಕ್ಕಿನೊಳಗಿರದೆ ಕ |
ಣ್ಗೊಳಿಪ ಶಿವಪೂಜಾಸುಮಂಟಪಕೆ ಬಂದು ಸಮ್ಮಾರ್ಜನಂಗೆಯ್ದು ಮೇಲೆ ||
ಸಲೆ ರಂಗವಲಿಯಿಂದಲಂಕರಿಸಿ ಭಕ್ತಿಯಿಂ |
ಲಲಿತಪದ್ಮಾಸನದೊಳ್ಕಿದೆ ಮಂಡಿಸಿ ಸುನಿ |
ಶ್ಚಲಚಿತ್ತನಾಗಿ ಶಿವಪೂಜೋಪಕರಣಮಂ ತರತರದೊಳಿರಿಸಿಕೊಂಡು || ೪ ||

ರಾಮ ಕೇಳ್ ಬಳಿಕ ಭಸ್ಮಸ್ನಾನಮಂ ಮಾಡಿ |
ನೇಮದಿಂ ಭಸಿತದುದ್ಧೂಳನಂಗೆಯ್ದು ಸು |
ಪ್ರೇಮದಿಂ ವರತ್ರಿಪುಂಡ್ರಂ ವಿಮಳರುದ್ರಾಕ್ಷಿಯಿಂದಲಂಕರಿಸಿಕೊಂಡು ||
ಆಮೇಲೆ ಶಿವಮಂತ್ರದಿಂದಲುಪಕರಣಸಂ |
ಸ್ತೋಮಮುಮನರ್ಚಿಸಿ ಶಿವಾರ್ಚನಂಗೆಯ್ವುದೆನೆ |
ಸ್ವಾಮಿ ನೀವಿವರ ಭೇದಂಗಳಂ ವಿಸ್ತರಿಸಿ ಪೇಳ್ವುದೆನಲಿಂತೆಂದನು || ೫ ||

ವಿದಿತಸದ್ಯೋಜಾತಮುಖದಿನಾದುದು ಪೃಥ್ವಿ |
ಯದರಿಂ ನಿವೃತ್ತಿಕಳೆಯಾ ಕಳೆಗೆ ಕಪಿಲವ |
ರ್ಣದ ನಂದೆಯೆಂಬ ಗೋವದರ ಗೋಮಯದಿನಾದುದು ಭೂತಿ ವಾಮದೇವ ||
ವದನದಿಂ ಜಲಮಾದುದದರಿಂ ಪ್ರತಿಷ್ಠೆ ಕಲೆ |
ಯುದರೊಳಗೆ ಕೃಷ್ಣವರ್ಣದ ಭದ್ರೆಯೆಂಬ ಗೋ |
ವದರ ಗೋಮಯದಿಂದೆ ಭಸಿತಮಾದುದು ಸಿದ್ಧರಾಮೇಶ ಕೇಳೆಂದನು || ೬ ||

ಪ್ರೋಕ್ತಘೋರಾಸ್ಯದಿಂ ತೇಜಮುದರಿಂ ವಿದ್ಯೆ |
ಕಲೆಯುದರಿನರುಣವರ್ಣದ ಸುರಭಿಯದರಿನಿಂ |
ದಿಳಿದ ಗೋಮಯದೊಳಾದುದು ಭಸ್ಮವೆಸೆವ ತತ್ಪುರುಷಮುಖದಿಂ ಮರುತನು ||
ಸುಳಿದುದದರಿಂದಾಯ್ತು ವರಶಾಂತಿಯೆಂದೆಂಬ |
ಕಲೆ ಶುಭ್ರವರ್ಣದ ಸುಶೀಲೆ ಗೋವಾಯ್ತು ತ |
ತ್ಕಲೆಯಿಂದಲದರ ಗೋಮಯದೊಳಾದುದು ಕ್ಷಾರವೆಲೆ ರಾಮ ಕೇಳೆಂದನು || ೭ ||

೧ ಪ ; ಪು. | ೨ ದಿವ್ಯ (ಶಿ.)

ಭೂತೇಶನೀಶಾಸ್ಯಮುಖದೆ ನಭವಾಯ್ತು ಶಾಂ |
ತ್ಯಾತೀತಕಲೆಯುದರೋನ್ನಾ ಕಲೆಯೊಳಾದುದೈ |
ಸಾತಿಶಯಚಿತ್ರವರ್ಣದ ಸುಮನೆಯುದರ ಗೋಮಯದಿಂದೆ ರಕ್ಷೆಯಾಯ್ತು ||
ಭೂತಿಯಿಂ ಸಿರಿ ಭಸಿತದಿಂ ಜ್ಞಾನ ಭಸ್ಮದಿಂ |
ಪಾತಕಹರಂ ಕ್ಷಾರದಿಂ ವಿಪತ್ತಿಲ್ಲಖಿಳ |
ಭೀತಿಯಂ ಕೆಡಿಸಿ ರಕ್ಷಿಸುವುದೇ ರಕ್ಷೆಯಿಂತಿವರ ಪರಿ ಕೇಳೆಂದನು || ೮ ||

ಎಲೆ ರಾಮ ಕೇಳಭಕ್ಷಣೆ ವತ್ಸರಹಿತೆ ರುಜೆ |
ಸಲೆ ಶಕ್ತಿಹೀನೆ ವಿಕಟಾಂಗಿ ಬಹುಭಕ್ಷೆ ಬರೆ |
ಗೊಳಗಾದುದತ್ಯಂಗಹೀನೆ ನಿರ್ವೀರ್ಯೆ ವಂಧ್ಯಾದ್ಯಲಕ್ಷಣಪಶುಗಳಂ ||
ಕಳೆದು ಸಲ್ಲಕ್ಷಣದ ಗೋವಿತ್ತ ಗೋಮಯಂ |
ನೆಲಕಿಳಿಯದಂತಾಂತುಕೊಂಡದಂ ಘನಭಕ್ತಿ |
ಯೊಳೆ ಗ್ರಹಣ ಕಬಳ ಶೋಷಣ ದಹನ ಪ್ಲವ[^1]ಶೋಧನಾಭಿಮಂತ್ರಗಳಿಂದೆ || ೯ ||

ವಿರಚಿಸಿದ ಭಸಿತವಿಲ್ಲದೊಡೆ ಪರರಿತ್ತುದಂ |
ವರಭಕ್ತಿಯಿಂ ಕೊಂಡು ಸಿರ ವದನ ಹೃದ್ಗುಹ್ಯ |
ಚರಣಯುಗ ಸರ್ವಾಂಗಕೀಶಾನ ತತ್ಪುರುಷಯುಗಮಘೋರಂ ಕ್ರಮದೊಳು ||
ಉರುವಾಮದೇವ ಸದ್ಯೋಜಾತವೆಂಬಿವಂ |
ಪರಮಪಂಚಾಕ್ಷರಿಗಳಿಂ ವಿಭೂತಿಸ್ನಾನ |
ಪರಿಶುದ್ಧನಾದವಂಗಿಲ್ಲ ಭವಬಂಧನಂ ರಾಮ ನೀಂ ಕೇಳೆಂದನು || ೧೦ ||

ಮಳೆ ಬಿಸಿಲ್ಗೂಡಿ ಬರಲದುವೆ ದಿವ್ಯಸ್ನಾನ |
ಮಿಳೆಯ ಗೋಧೂಳಿ ಗಾಳಿಗೆ ತೋರೆ ವಾಯವ್ಯ |
ಮೊಲವಿನಿಂ ಜಲದಿನಪ್ಪುದು ವಾರುಣಂ ತಜ್ಜಲಕ್ಕೆ ಗಂಗಾಸ್ನಾನದಿಂ |
ಫಲಮಧಿಕವೀಶ್ವರಧ್ಯಾನಂ ಮನಸ್ನಾನ |
ವೆಲೆ ರಾಮ ಭಸ್ಮದಿಂದಪ್ಪುದಾಗ್ನೇಯಮಿವ |
ರೊಳಗೆಲ್ಲವಾಗ್ನೇಯಮಲ್ಲದಿನ್ನಿಲ್ಲುತ್ತಮಸ್ನಾನ ಕೇಳೆಂದನು || ೧೧ ||

[^1]: ವರ (ಮ.)

ಒರೆವೆನಾಲಿಪುದು ಭಸ್ಮೋದ್ಧೂಳನಂಗೆಯ್ದು |
ಪರಿಶುದ್ಧನಾಗಿ ವರಮಧ್ಯಮಾಂಗುಷ್ಠಯುಗ |
ನಿರವನಾಮಿಕೆಗಳಿಂ ಧರಿಯಿಸು ತ್ರಿಪುಂಡ್ರಮಂ ತದ್ಧೃತಸ್ಥಾ[೧]ನಂಗಳು ||
ಶಿರದೊಳಗೆ ಶಿವ ಭಾಳದೊಳ್ ಮಹೇಶ್ವರ ಕರ್ಣ |
ಕುರುರುದ್ರ ಚರಣದ್ವಯಂಗಳೊಳ್ ಶ್ರೀಕಂಠ |
ವರಶಂಭು ಭುಜಯುಗದೊಳೀಶ ಸುಮಹಾದೇವ ವಕ್ಷದೊಳ್ ಘನಪಶುಪತಿ || ೧೨ ||

ವರನಾಭಿಯೊಳಗೆ ಶಂಕರ ಪೃಷ್ಠದೊಳ್ ವೃಷಭ |
ವರಯಾನ ಕಕುದಿನೊಳ್ ಪರಮಾತ್ಮಮಂತ್ರದಿಂ |
ಧರಿಯಿಪುದು ಪೂರ್ವೋಕ್ತದೇಕಾದಶಸ್ಥ[೨]ಳದೊಳಿಮ್ಮುಂಪೆ ರಾವು ಕೇಳು ||
ಪರಿಕಿಸಲ್ ಮೂರ್ಧ್ನ ಭಾಳ ಶ್ರವಣ ದೃಙ್ನಾಸ |
ವರಮಾಸ್ಯ ಬಾಹು ಭುಜ ಕುಚ ಕುಕ್ಷಿ ಮಣಿಬಂಧ |
ಮುರುಪಾರ್ಶ್ವ ನಾಭಿ ಮೇಢ್ರೋತ್ಪೃಷ್ಠ ಜಾನು ಜಂಘೋರುಪಾಯ್ವಂಘ್ರಿಗಳಿವು || ೧೩ ||

ಮೂವತೆರಡುಂ ಧೃತಸ್ಥಾನವಿವಕಾರದೊಡೆ |
ಭಾವಿಸು ಶಿರೋಭಾಳಕರ್ಣಗಳ ಬಾಹು ಸ |
ದ್ಭಾವದೊಳ್ ಮಣಿಬಂಧ ಹೃದಯ ಪೃಷ್ಠೋನ್ನಾಭಿ ಭುಜವೋಷ್ಠವೆಂದೆನಿಸುವ ||
ಈ ವಿಮಲಷೋಡಶಸ್ಥಾನವಿವಕಾರದೊಡೆ |
ತೀವ್ರಪ್ರಮು ಭಾಳಗಳ ಭುಜ ಹೃದಯ ನಾಭಿಯುಪ |
ರಾವಳಿಯೆನಿಪ್ಪಷ್ಟಮಸ್ಥಾನಮಿವಸುಳಿಸ ಬಾರದಾಲಿಪುದೆಂದನು || ೧೪ ||

ಇರದೆ ಭೂತ ಪ್ರೇತ ಘನತರಾಪಸ್ಮಾರ |
ಪರಮಸ್ತ್ರೈಶಾಚತತ್ರಿಶಿಜಟ್ಟಿ ಗಂಭೀರರುರುಳ್ |
ತರಬ್ರಹ್ಮರಾಕ್ಷಸಾದ್ಯಖಿಳದುಷ್ಟಗ್ರಹಕೆ ದುಷ್ಟಮೃಗಸಂದೋಹಕೆ ||
ಉರಗವೃಶ್ಚಿಕಭಯಂ[೫] ಸಿಡಿಲ ಭಯ ರಾಜಾಗ್ನಿ |
ವರಚೋರ ರೋಗ ಭಯ[೬]ಚಯಕಾ ವಿಭೂತಿಯದು[೬] |
ಬೆರಲ ಸೋಂಕಿದೊಡೆ ಪರಿಹರಿಸುವುದದೇ ಮಹೇಶ್ವರರೂಪಮಹುದೆಂದನು || ೧೫ ||

---

೧ ಸ್ಥಾನ (ಹು, ಮ.) ೨ ಸ್ಥಾ (ಶಿ.) ೩ ಘನ (ಮ.) ೪ ಪರ (ಮ.) ೫ ಭೀತಿ (ಮ.) ೬-೬ ಕಾ ವಿಭೂತಿಯೆ ಮುಖ್ಯ (ಹು.)

ರಾಮ ಕೇಳ್ ಮುಂದೆ ರುದ್ರಾಕ್ಷಿಯ ಮಹತ್ತ್ವಮಂ |
ಕಾಮಮದಮರ್ದನಂ ಪೂರ್ವದೊಳ್ ತ್ರಿಪುರನಿ |
ರ್ಧೂಮಮಂ ಮಾಳ್ಪಂದು ಪುಟ್ಟಿದುವು ತನ್ನಯನಜಲದಿಂದೆ ಶಿಖಿಯೊಳೊಂದು ||
ಪ್ರೇಮದಿಂ ನೆತ್ತಿಯೊಳ್ ಮೂರ್ ಶಿರಕೆ ಷಟ್ತ್ರಿಂಶ |
ದಾಮಹಾಕರಣಕ್ಕೆಯೊಂದೊಂದು ಗಳದೊಳು |
ದ್ವಾಮಿದ್ವಾತ್ರಿಂಶತ್ತು ರೋಮಾಳಿಗೈವತ್ತು ನೂರೆಂಟುಮುಪವೀತಕೆ || ೧೬ ||

ವರಭುಜದ್ವಯಕೆ ಪದಿನಾರು ಮಣಿಬಂಧಕ್ಕೆ |
ತರಣಿಸಂಖ್ಯೆಗಳಕ್ಷಮಾಲೆಗಂ ನೂರೆಂಟು |
ಪರಿಗಣನೆಯಿಂದೆ ತತ್ತ್ವತ್ಸ[3]ಳದೊಳಕ್ಕರಿಂದೀಶಸ್ವರೂಪವೆಂದು ||
ಧರಿಸೆ ಶಿರದೊಳ್ ಕೋಟಿ ದಶಕೋಟಿ[1] ಕಿವಿಗಳ್ಗೆ |
ಪರಮಶತಕೋಟಿ ಕಂಠಕೆ ಸಹಸ್ರಂಕೋಟಿ |
ಯುರುಬಾಹುಗಳ್ಗೆ ಪ್ರಮಾಣದಫಲಂ [2]ತಿಳಿಯೆ ಮಣಿಬಂಧದೊಳ್ ಧರಿಸಲು[2]
|| ೧೭ ||

ಪರಿಕಿಸಲ್ ಮೋಕ್ಷಮದು ಪಂಚವಿಂಶತಿಮಣಿಯ |
ಸರದಿಂದಮಷ್ಟವಿಂಶತಿಗೆ ಪೌಷ್ಟಿಕೆಯಾಲಿ |
ಸಿರದೆಯಿಪ್ಪತ್ತೇಳನುಳ್ಳ ಸರದಿಂ ಭುಕ್ತಿ ಮೂವತ್ತುಮೇಲಾರರಿಂ ||
ಪಿರಿದರ್ಥಮಹುದು ಮೂವತ್ತೆರಡನುಳ್ಳಮಳ |
ಸರದಿಂದೆ ವಿಜಯಮಪ್ಪುದು ಪಂಚದಶಕದಿಂ |
ದರಿದೆನಿಸುವಾಭಿಚಾರಕಮಹುದು ಕೇಳೆಂದು ಚೆನ್ನಬಸವಂ ನುಡಿದನು || ೧೮ ||

ಒರವೆನಾಲಿಸು ರಾಮ ಪ್ರಣಮದುತ್ಪತ್ತಿಯಂ |
ಪರಶಿವನ ಚಿತ್ತೆ ಚಿತ್ಪ್ರಣವಮಾಯ್ತದರಿಂದ |
ಉರು ನಾದ ಬಿಂದು ಕಳೆಗಳ್ ಪುಟ್ಟಿದುವು ನಾದ ಬಿಂದು ಕಳೆಗಳ್ ಕ್ರಮದೊಳು |
ಇರದಕಾರೋಕಾರ ವರಮಕಾರತ್ರಯಂ |
ಪರಿಕಿಸಲವೊಂದಾಗಲೋಂಕಾರವೆಂದೆನಿಪ |
ಪರತತ್ತ್ವ[4]ಪ್ರಣವಮಾದುದು ಪ್ರಣವದಿಂ ಪಂಚಲಕ್ಷಣಂ ಜನಿಯಿಸಿದುವು || ೧೯ ||

---

೧ ಫಲಮೆರಡು (ಶಿ, ಗೋ.) ೨-೨ ಹಸ್ತದೊಳ್ ಧರಿಸೆ ಕೇಳೆಂದನು (ಹು, ಮ.) ೩ ಧ (ಶಿ, ಹು.) ೪ ತೆರ (ಹು, ತು, ದಾ, ಮ.)

ತಾರಕಂ ದಂಡಕಂ ಕುಂಡಲವುಮರ್ಧೇಂದು |
ಸಾರಸ್ಥ ಬಿಂದುವುಂ ಪಂಚಲಕ್ಷಣಮಿಂತು |
ತಾರಕಾಕಾರಂ ನಕಾರಂ ಮಕಾರವೆ ದಂಡಕಂ ಕುಂಡಲವದು ||
ತೋರುವ ಶಿಕಾರಮರ್ಧೇಂದುವೆ ವಕಾರವದ |
ಸೇರಿಪ ಬಿಂದುವೆ ಯಕಾರವಿಂತೈದು ಕೇಳ್ |
ತಾರಕಬ್ರಹ್ಮಮೆಂದೆನಿಪ ಚಿತ್ಪ್ರಣವದಿಂದಾದುವವನಿನ್ನಾಲಿಸು || ೨೦ ||

ಪಂಚಾಕ್ಷರಂಗಳಿಂದಾದುವೆಲೆ ರಾಮ ಕೇಳ್ |
ಪಂಚಸಂಜ್ಞಾಳಿಯಾ ಪಂಚ¹ಸಂಜ್ಞಾಳಿಯಿಂ |
ಪಂಚಸಾದಾಖ್ಯವಾ ಪಂಚಸಾದಾಖ್ಯಮೆ ಪಂಚವದನಂಗಳವ¹ರಿಂ ||
ಪಂಚಕಲೆಯಾದುವಾ ಪಂಚಕಲೆಗಳ್ ಮೆರೆವ |
ಪಂಚಶಕ್ತಿಗಳೆನಿಪರವರಿಂದಲಾದುವಾ |
ಪಂಚಭೂತಂಗಳವರಿಂ ಪಂಚವಿಂಶತಿಸುತತ್ತ್ವಂಗಳುದಯಿಸಿದುವು || ೨೧ ||

ಇಂತೆಸೆವ ಪ್ರಣವಪಂಚಾಕ್ಷರೀಮಂತ್ರಮಿದ |
ನಂತಮಗಣಿತಕೋಟಿಮಂತ್ರಕ್ಕೆ ಮಾತೆಯಿದ |
ನಂತತಂ ಜಪಿಸುವಂ ಸಾಕ್ಷಾಚ್ಛಿವಂ ಸಿದ್ಧರಾಮ ಕೇಳೀ ಮಂತ್ರದಿಂ ||
ಮುಂತೆ ಸಕಲೋಪಕರಣಂಗಳಂ ಶುದ್ಧಿಯಂ |
ಸಂತಸದೆ ಮಾಡಿ ತದನಂತರದೆ ಶಿವಪೂಜೆ |
ಯಂತಧಿಕಭಕ್ತಿಯಿಂ ಮಾಳ್ಪುದದರಿರವ ನೀಂ ಕೇಳೆಂದು ನಿರವಿಸಿದನು || ೨೨ ||

ಹರುಷದಿಂದರ್ಘ್ಯಪಾದ್ಯಾಚಮನಂಗಳಿಂ |
ದಿರದೆ ಗಂಧೋದಕಂ ಪುಷ್ಪೋದಕಂ ಸುವಿ |
ಸ್ಥಿರದ ಮುತ್ತೋದಕಂ ಸ್ವರ್ಣ ರತ್ನೋದಕಾದ್ಯಖಿಳೋದಕಂಗಳಿಂದೆ ||
ಪರಿಕಿಸಲ್ ಪಂಚಾಮೃತಾಭಿಷೇಕಂಗಳಿಂ |
ಪರಿವಿಡಿಯೊಳಭಿಷೇಕವಂ ಮಾಡಿ ಬಳಿಕ ತ |
ತ್ಪರಮಪಾದೋದಕಂಗೊಂಬುದೆನಲದನೆನಗೆ ವಿಸ್ತರಿಸಿ ಪೇಳೆಂದನು || ೨೩ ||

೧. ೧. ಸಾದಾಖ್ಯನಾ । ಪಂಚಸಾದಾಖ್ಯನೀ ಪರಶಿವನ ಪಂಚವದನಂಗಳಿಂದಾದುವದ (ಹು.) ೨ ಸ (ಹು.)

ಆದೊಡಿನ್ನಾಲಿಸೆಲೆ ರಾಮೇಶ ನೀಂ ಕೇಳ್ದು |
ಪಾದೋದಕಂಗಳಿರವೆಂತೆನಲ್ ತಾಂ ತ್ರಿವಿಧ |
ಭೇದದಿಂ ವರ್ತಿಸುಗು ಗುರುವಿನ ಸುಪಾದೋದಕಂ ತಿಳಿಯೆ ಕರುಣೆಜಲವು[೧] ||
ಸಾದರದೊಳೀ ಮಹಾಲಿಂಗದಿಂದಾದ ತ |
ತ್ಪಾದೋದಕಂ ವಿನಯಜಲಮುಮಾಜಂಗಮದ |
ಪಾದೋದಕಂ ಸಮತೆಜಲಮೆಂದು ಕರುಣದಿಂ ಚೆನ್ನಬಸವಂ ಪೇಳ್ದನು || ೨೪

ಗುರು ಲಿಂಗ ಜಂಗಮದ ಪಾದೋದಕಂಗಳಿಂ |
ಪರಿವಿಡಿಯ ಸಂಚಿತಂ ಪ್ರಾರಬ್ಧಮಾಗಾಮಿ |
ಯುರುತರದ ಕರ್ಮಂಗಳಿರದೆ ಪೋಪುವು ಕೇಳ್ವುದೆನಲದರ ಭೇದಂಗಳ ||
ವಿರಚಿಸೆನೆ ಜನನ[೨]ದಜ್ಞಾನಮುಂ ಕಳೆದು ಸ |
ತ್ಪರಮಸುಜ್ಞಾನಮುಂ ಕೊಡುವುದೇ ಸಂಚಿತಂ |
ನಿರುತದಿಂದಿಹಲೋಕಭೋಗಮುಂ ಬಿಡಿಸಿ ಶಿವಲೋಕಪದಮುಂ ಕೊಡುವುದೇ || ೨೫ ||

ಪರಿಕಿಸಲ್ ಪ್ರಾರಬ್ಧಮಿದು ಭವಭವಾಂತರದೆ |
ಬರಲೀಯದಿಹಪರಕ್ಕೆಡೆಯಾಡಗೊಡದಾಗ |
ಪರಶಿವನೊಳೊಂದಿಸುವುದಾಗಾಮಿ ಕೇಳಿನ್ನು ತ್ರಿವಿಧೋದಕಂಗಳಿರವ ||
ಪರಮಪಂಚಾಕ್ಷರೀ[೩]ಮಂತ್ರದಿಂ ತನ್ನ ಮನೆ |
ಗಿರದೆ ತಂದುದೆ ಸುಮಂತ್ರೋದಕಂ ತಜ್ಜಲದಿ |
ಹರುಷದಿಂದಿಷ್ಟಲಿಂಗಕೆ ಮಜ್ಜನಕ್ಕೆರೆದುದೇ ಪರಮಪಾದೋದಕಂ || ೨೬

ಲಿಂಗಕೆ ಸಮರ್ಪಿಸಿದುದೇ ಪ್ರಸಾದೋದಕಂ |
ಹಿಂಗದೀ ತ್ರಿವಿಧೋದಕಂಗಳಿಂ ಮಾಳ್ಪ ಕ |
ಜ್ಜಂಗಳಂ ಪೇಳ್ವೆನೀ ಮಂತ್ರೋದಕದೊಳೆ ಪಾಕಪ್ರಯತ್ನಂಗೆಯ್ವುದು ||
ಮಂಗಳಮೆನಿಪ್ಪ ಪಾದೋದಕದೆ ಮುಖಮಜ್ಜ |
ನಂಗೈವುದೀ ಪ್ರಸಾದೋದಕಮನೀಂಟುವುದು |
ಲಿಂಗವಂತಂಗಿವೇ ಮುಖ್ಯಮಿನ್ನಾಲಿಸೈ ಲಿಂಗಪೂಜಾವಿಧಿಯನು || ೨೭

೧ ಕರುಣಾಜಲಂ (ಹು, ಮ.) ೨ ಮುಂದ (ಹು.) ೩ ರಿಯ (ಶಿ.)

ಅಷ್ಟವಿಧಪೂಜೆಯಿಂದುಪಚಾರಷೋಡಶದೊ |
ಳಿಷ್ಟಲಿಂಗವನೆ ಪೂಜಿಸಿ ಮಹಾಭಕ್ತಿಯಿಂ |
ಮೃಷ್ಟಾನ್ನಮಂ ಸಮರ್ಪಿಸಿ ತತ್ಪ್ರಸಾದಮಂ ಸುವಿಧಾನದಿಂದೆ ಕೂಡೆ ||
ನಿಷ್ಠೆಯಿಂ ಸವಿದು ತದ್ರವಮನಿರದಂಗಕ್ಕೆ |
ಹೃಷ್ಟಮಾನಸನಾಗಿ ಲೇಪಿಸುವುದೆನೆ ಕೇಳು |
ತೆಷ್ಟುವಿಧವೀ ಪ್ರಸಾದಂ ತಿಳಿಯೆ ಪೇಳ್ವುದೆನೆ ಕೃಪೆಯೊಳೊಲಿದಿಂತೆಂದನು || ೨೮ ||

ಸಿದ್ಧರಾಮೇಶ ಕೇಳ್ವುದು ತತ್ಪ್ರಸಾದಮದು |
ಶುದ್ಧ ಸಿದ್ಧ ಪ್ರಸಿದ್ಧಮೆಂದು ಮೂರುಬಗೆ[೧] |
ಶುದ್ಧವೇ ಗುರುಭುಕ್ತಶೇಷಮೀ ಶಿವಲಿಂಗಕರ್ಪಿಸಿದುದೇ ತಿಳಿಯಲು ||
ಸಿದ್ಧಮದು ಜಂಗಮಸುಭುಕ್ತಶೇಷವೆ ಸುಪ್ರ |
ಸಿದ್ಧಮೆನೆ ಕೇಳ್ದಿಲ್ಲಮಂ ತಿಳಿಯೆ ಪೇಳ್ದಿನ್ನ |
ಸುದ್ಧರಿಸಿದೈ ಗುರುವೆ ಶಿವಪೂಜೆಯಂ ಮಾಡುವಂದಮಂ ಪೇಳೆಂದನು || ೨೯ ||

ಆದೊಡೀ ಶಿವಪೂಜೆಯಂ ಮಾಳ್ಪುದೇ ತ್ರಿವಿಧ |
ಭೇದಮವು ರಾಜಸಂ ತಾಮಸಂ ಸಾತ್ತ್ವಿಕಂ |
ವೇದಾಗಮಂಗಳಂ ಮನ್ನಿಸದೆ ಮನಕೆ ಬಂದಂತರ್ಚಿಪುದೆ ರಾಜಸಂ ||
ವೇದಾಗಮಂಗಳಹುದೆಂದುದಲ್ಲೆಂದುದಿದಂ |
ಮಾದುದಿಮನಬಂದಂತೆ ಪೂಜಿಪುದೆ ತಾಮಸಂ |
ವೇದಾಗಮೋಕ್ತಿಯಿಂ ಭಕ್ತಿಯಿಂದರ್ಚಿಪುದೆ ಸಾತ್ತ್ವಿಕಮದೆಂದರಿವುದು || ೩೦ ||

ಇನ್ನಾಲಿಸೈ ಶುದ್ಧ ಮಿಶ್ರ ಸಂಕೀರ್ಣಮೆಂ |
ಬನ್ನತಜ್ಞಾನಪೂಜಾವಿಧಿಯನೊಲವಿನಿಂ |
ತನ್ನ ಲಿಂಗದೊಳೆಸೆವಖಂಡಪರಿಪೂರ್ಣತೇಜೋರಾಶಿಯೆನಿಪ ಶಿವನಂ ||
ಸನ್ನಯದಿಂ ಭಾವಿಸುತ್ತರ್ಚಿಪುದೆ ಶುದ್ಧಮಿರ |
ದನ್ನೋಡೆ ತಲ್ಲಿಂಗದಿಂ ಪಂಚಮುಖಮೆಸೆವ |
ಸನ್ನೇತ್ರಾಕ್ಷಿಗಳೆ ಪದಿನೈದು ದಶಬಾಹು ಶುದ್ಧಸ್ಫಟಿಕಸಂಕಾಶದ || ೩೧ ||

೧ ಶಿರ (ಹು.) ೨-೨ ದಲ್ಲೆಂದದಂತ (ಹು.) ೩ ದಿ (ಮ.)

ವರಸದಾಶಿವನೆಂದು ಭಾವದಿಂ ತಿಳಿದು ಸು |
ಸ್ಥಿರದಿಂದೆ ಪೂಜಿಪುದೆ ಮಿಶ್ರಮಾ ಲಿಂಗದಿಂ |
ದುರುಶಕ್ತಿಸಹಿತೆ ಹರಿಯಜಸುರೇಂದ್ರಾದಿದಿವಿಜರ ನಡುವೆ ಕಣ್ಗೊಳಿಸುವ ||
ಪರಮಮಾಹೇಶನಂ೧ ಭಾವಿಸುತ್ತರ್ಚಿಪುದೆ |
ನಿರುತದಿಂ ಸಂಕೀರ್ಣವೆಲೆ ರಾಮ ಕೇಳಿನ್ನು |
ಹರುಷದಿಂ ಕರ್ಮ ಭಕ್ತಿ ಜ್ಞಾನಪೂಜಾವಿಧಾನಂಗಳಂ ಪೇಳ್ವೆನು || ೩೨

ಇರದೆ ವರ್ಣಾಶ್ರಮಸುಧರ್ಮಕರ್ಮಂಗಳಂ |
ಬೆರಸಿಕೊಂಡೊಲವಿನಿಂ ಫಲಪದಂಗಳ ಬಯಸಿ |
ಪರಿಕಿಸಲುಪಾಧಿಯಂ ಮುಂದಿಟ್ಟುಕೊಂಡು ಪೂಜಿಸುವುದೇ ಜಡಕರ್ಮವು ||
೨ಪರಮವರ್ಣಾಶ್ರಮ ಸುಧರ್ಮಕರ್ಮಂಗಳಂ |
ಪರಿಹರಿಸಿ ಭವಿ ಭಕ್ತಭೇದಮಂ ತಿಳಿದು೨ ಸ |
ದ್ವರ ಪದಂಗಳ ಬಯಸದರ್ಚಿಪುದು ನಿರುಪಾಧಿಯಜಡಸದ್ಭಕ್ತಿ ಕೇಳಾ || ೩೩

ಎಸೆವ ವರ್ಣಾಶ್ರಮ ಸುಧರ್ಮ ಕರ್ಮಂಗಳಾ |
ವಿಸರಂಗ೩ಳಂ ನೀತಿಗಳೆದು೪ ಬಳಿಕೊಲವಿನಿಂ |
ಡೊಸೆದು ಸತ್ಫಲಪದಂಗಳ ಮೀರಿ ಪೂಜ್ಯ ಪೂಜಕಮೇಕಮೆಂದು ತಿಳಿದು ||
ಹಸನಾದ ಸ್ವಾನುಭಾವದೆ ಸಿದ್ಧನಾಗಿ ರಾ |
ಜಿಸುವ ನಿರ್ವಾಣನಿಜಪದವಿಯಿಂದೊಲಿದು ಪೂ |
ಜಿಸುವುದೇ ಸುಜ್ಞಾನಮಿದುವೆ ಸದ್ಯೋನ್ಮುಕ್ತಿಯೆಲೆ ರಾಮ ಕೇಳೆಂದನು || ೩೪

ಪರಮಸದ್ಗುರು ಚೆನ್ನಬಸವೇಶ ನೀನೆನಗೆ |
ಕರುಣದಿಂ ಪೇಳ್ದ ಶಿವಪೂಜಾವಿಧಾನಮಂ |
ಪರಿವಿಡಿಯೊಳರಿದು ಕೃತಕೃತ್ಯನಾದೆಂ ಮುಂದೆ ಶಿವತತ್ತ್ವಭೇದಂಗಳ ||
ವಿರಚಿಸಿ ಕೃತಾರ್ಥನಂ ಮಾಡೆಂದು ಬಿನ್ನವಿಸೆ |
ಪರಮಕಾರುಣ್ಯದಿಂ ಸಿದ್ಧರಾಮೇಶಂಗೆ |
ಪಿರಿದೆನಿಸುವಮಳಶಿವತತ್ತ್ವಮಂ ಪೇಳಲುದ್ಯೋಗಿಸಿದನೇನೆಂಬೆನು || ೩೫

೧ ಶ್ವರನ (ಶಿ.) ೨-೨ ಪರಿಹರಿಸಿ ಭವಿಭಕ್ತಭೇದಮಂ ತಿಳಿದು ಸ | ತ್ತ್ವರಜೋತಮೋಗುಣಗಳಾ ನಿವರ ಕರ್ಮ (ಹು.) ೩ ಮು (ಶಿ.) ೪ ಳಸು (ಹು.); ಳಸ (ಮ.) ೫-೫ ಯಿಂತ ದಂ ತಿಳಿದು (ಹು.) ೬ ತ (ಶಿ.)

ಪರಶಿವಂ ಚಿತ್ತದೆ ಪ್ರವೃತ್ತಿಯಂ ನೆನೆಯಲಂ
ತರುಪಿತರದ ಚಿತ್ತೆ ಚಿಚ್ಛಕ್ತಿಯಾಯ್ತುದರಿಂದೆ |
ಪರಮಹಾಲಿಂಗವಾಯ್ತುದರಿಂದೆ ಪಂಚಕಲೆಯಾದುದಾ ಘನಲಿಂಗವೇ[೧] ||
ಪರಮೆಂದು ಗೂಢಮೆಂದುಂ ಶರೀರಸ್ಥಮೆಂ |
ದುರುಲಿಂಗಸುಕ್ಷೇತ್ರಮೆಂದನಾದಿಯುಮೆಂದು |
ಪರಿಕಿಸಲ್ ಪಂಚಸಂಜ್ಞೆಗಳಾದುವವನಿನ್ನು ವಿಸ್ತರಿಪೆನಾಲಿಸೊಲಿದು || ೩೬ ||

ಪರಮೆಂದು ಸಕಲತತ್ತ್ವಂಗಳ್ಗೆ ತಾನೆ ತ |
ತ್ಪರತತ್ತ್ವಮಾದಕಾರಣದಿಂದೆ ಪರಮಾದು |
ವಿರಪೆ ತಾಂ ಮೂರ್ತಿಯಲ್ಲದೆ ಸಕಲಮೂರ್ತಿಯಂ ತನ್ನಿಂದಲೇ ಪುಟ್ಟಿಸಿ ||
ಪರಿಕಿಸಲ್ ಗೋಪ್ಯದಿಂದಿರೆ ಗೂಢಮೆನಿಸಿತಂ |
ತರುಸಕಲಸಚರಾಚರಂಗಳಂ ಸೃಜಿಸಿ ಮ |
ತ್ತಿರದವಕ್ಕಾಧಾರಮಾಗಲ್ ಶರೀರಸ್ಥಮೆಂದೆನಿಸಿತೊಲವಿನಿಂದೆ || ೩೭ ||

ಕಂಗೊಳಿಪ ಸಕಲಸಚರಾಚರಂಗಳನೆ ತ |
ನ್ನಂಗದಿಂ ಸೃಜಿಸಿ ವಿಲಯಕ್ಕೆ ಕಾರಣವಾದ |
ತುಂಗಸುಕ್ಷೇತ್ರಮೆಂದೆನಿಪ ಕಾರಣದೆ ಲಿಂಗಕ್ಷೇತ್ರಮೆಂದೆನಿಸಿತು ||
ಹಿಂಗದೆ ಶಿವಾದಿ ರುದ್ರಾಂತಮಾದಖಿಳತ |
ತ್ತ್ವಂಗಳ್ಗೆ ತಾನನಾದಿಯುಮೆನಿಪ ಕಾರಣಂ |
ಮಂಗಳಮೆನಿಪ್ಪನಾದಿಯುಮೆನಿಸಿತೆಲೆ ಸಿದ್ಧರಾ[೨]ಮ ನಿಂ[೨] ಕೇಳೆಂದನು || ೩೮ ||

ಒರೆವೆನಾಲಿಸು ಪಂಚಕಲೆಯ ನಾಮಂಗಳಂ |
ಪರಮಶಾಂತ್ಯಾತೀತೆ ಶಾಂತಿಯುಂ ವಿದ್ಯೆ ಮ |
ತ್ತಿರದಾ ಪ್ರತಿಷ್ಠೆ ಮಾನಿವೃತ್ತಿಯೆನಿಸುವ ಕಳಾಶಕ್ತಿಯರಿವೈದು ಮೊದಲಿ ||
ವಿರಚಿಸಿದ ಪಂಚಸಂಜ್ಞೆಗಳೆನಿಸುತಿಹ ಮಹಾ |
ಪರಮಸಾದಾಖ್ಯಂಗಳೈದು ಪರಶಿವನೊಂದು |
ಪರಿಕಿಸಲ್ ಪನ್ನೊಂದು ಶಿವತತ್ತ್ವಮೆಲೆ ಸಿದ್ಧರಾಮೇಶ ಕೇಳೆಂದನು || ೩೯ ||

---

೧ ಮಂ (ಹು.) ೨-೨ ಮೇಶ (ಹು, ಮ.)

ಲಿಂಗತತ್ತ್ವಂಗಳಿವು ಪನ್ನೊಂದು ಮೊದಲೆ ನಿನ |
ಗಂಗತತ್ತ್ವಂಗಳಿಪ್ಪತ್ತೈದು ಪೇಳ್ದಿನುಭ |
ಯಂಗಳಿಂ ಷಟ್ತ್ರಿಂಶ ತತ್ತ್ವಂಗಳೆಲೆ ರಾಮು ಕೇಳೆಂದು ಪೇಳಲಂದು ||
ಮಂಗಳಾತ್ಮಕ ಮಹಾಗುರುವೆ ನೀಂ ಪೇಳ್ದ ತ |
ತ್ತ್ವಂಗಳಂ ಕೇಳ್ದು ಕೃತಕೃತ್ಯನಾದೆಂ ಷಟ್ಸ್ಥ |
ಲಂಗಳಂ ಪೇಳ್ದಿನ್ನು ರಕ್ಷಿಸುವುದೆನೆ ಚೆನ್ನಬಸವೇಶನಿಂತೆಂದನು || ೮೦ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ || ೮೧ ||

ಅಂತು ಸಂಧಿ ೬೦ಕ್ಕಂ ಪದಗಳು ೨೬೭೪ಕ್ಕಂ ಮಂಗಳಮಹಾಶ್ರೀ

ಅರುವತ್ತೊಂದನೆಯ ಸಂಧಿ

ಸೂಚನೆ

ಷಟ್ಸ್ಥಲಬ್ರಹ್ಮಮಹ ಚೆನ್ನಬಸವೇಶ್ವರನೆ |
ಷಟ್ಸ್ಥಲವ ನಿರವಿಸೆನೆ ಸಿದ್ಧರಾಮೇಶಂಗೆ |
ಷಟ್ಸ್ಥಲಬ್ರಹ್ಮೋಪದೇಶಮಂ ಮಾಡಿದಂ ಸಕಲಶರಣರ್ ತಿಳಿಯಲು[೧] ||

ಪುಂಡರೀಕಾಕ್ಷಸುಕುಮಾರಹರಭಸಿತಾಂಗ |
ಪುಂಡರೀಕೋದ್ಭವಶಿರಶ್ಛೇದಕಂ[೨] ವಿಮಲ |
ಪುಂಡರೀಕಾಪ್ತೇಂದುವಹ್ನಿತ್ರಿಲೋಚನಂ[೩] ಪುಂಡರೀಕಾಜಿನಧರ ||
ಪುಂಡರೀಕಾಪ್ತಪುತ್ರಾರಣ್ಯಘನದಾವ |
ಪುಂಡರೀಕಾಂಬಕಸುನಯನಪೂಜಿತಪಾದ |
ಪುಂಡರೀಕಾತ್ಮಜಮುಖಧ್ವಂಸಿ ಪಂಪಾವಿರೂಪಾಕ್ಷ ಸಲಹೆಮ್ಮನು * || ೧ ||

ಎಲೆ ಸಿದ್ಧರಾಮೇಶ ಕೇಳಿನ್ನು ಮುಂದೆ ಷ |
ಟ್ಸ್ಥಲಸುಮಾರ್ಗವನು ಮಹದಾದಿತತ್ತ್ವಂಗಳ್ಗೆ |
ನೆಲೆಯಾಗಿ ಪ್ರಕೃತಿ ಪುರುಷಾತ್ಮಕದ ವಿಶ್ವಕ್ಕೆ ಲಯಜನ್ಮಭೂಮಿಯೆನಿಸಿ |
ವಿಲಸತ್ಸದಾ[೪]ನಂದನತ್ಯತಿಷ್ಠದ್ದಶಾಂ |
ಗುಲನದ್ವಿತೀಯಂ ಪರಬ್ರಹ್ಮವೆನಿಪ ನಿ |
ರ್ಮಲನಾದ ಪರಶಿವಂ ತಾನಿರಲದೇ ಮಹಾಸ್ಥಲವೆಂಬ ಪೆಸರಾದುದು || ೨ ||

ಎಸೆವ ಪರಶಿವನೆ ತನ್ನೊಳ್ ಲೀನವಾಗಿ ರಾ |
ಜಿಸುವ ಚಿಚ್ಛಕ್ತಿಯಾ ಸ್ಫುರಣೆಯಿಂದಿರದೆ ಸಂ |
ತಸದೊಳಾ ಸೇವ್ಯಸೇವಕ ಭೇದದಿಂದೆ ಲಿಂಗಾಂಗಮೆಂದುಭಯವಾಯ್ತು |
ಪಸರಿಪ ಲಿಂಗವೆ ಸೇವ್ಯನಂಗವೇ ಸೇವಕನ |
ದೆಸಕದಿಂದಾದುದಾ ಪರತತ್ತ್ವಮೊಂದೆ ಭಾ |
ವಿಸಿ ನೋಡೆ ಲಿಂಗಸ್ಥಲಾಂಗಸ್ಥಲಂಗಳೆಂದೆರಡಾಯ್ತು ಕೇಳೆಂದನು || ೩ ||

---

೧ ಪ್ರೊಲು (ಹು, ಮು, ಮು.) ; ಪುದು (ಶಿ, ಗೋ,) ೨ ಕನೆ (ಮ.) ೩ ನನೆ (ಮ.)
೪ ವಿಲಸಚ್ಚಿದಾ (ಹು, ಮು.) * ಈ ಪದ್ಯವು ಅ, ಬ, ಕ, ಡ, ಹು, ಮು. ಈ ಪ್ರತಿಗಳಲ್ಲಿ ೬೦ನೆಯ ಸಂಧಿಯ ಮೊದಲನೆಯ ಪದ್ಯವಾಗಿದೆ.

ಪರಮಲಿಂಗತ್ವಮಂಗತ್ವಂ ಶಿವತ್ವಮಂ |
ದಿರದೆ ಪರಮಾತ್ಮತ್ವವೆಂಬೀ ವಿಭೇದದಿಂ |
ಪರಿಯಾಯಗುಣನಾಮದಿಂದೆ ಸುಸ್ಥಲವೆಂಬ ಸಂಜ್ಞೆಯಾ ಶಿವತತ್ತ್ವವೇ ||
ಪರಿವಿಡಿಯೊಳೆರಡಾಗಲಾ ಮಹಾಶಕ್ತಿ ತಾ |
ನೆರಡಾದಳೆಂತೆನಲ್ ತನ್ನ ಸ್ವತಂತ್ರದಿಂ |
ಪರಶಿವಸಮಾಸಧರ್ಮಂಗಳಿಂ ಲಿಂಗಾಂಗವೇ ನಿಜನಿವಾಸವಾಗೆ ॥ ೪ ॥

ಪರಮಲಿಂಗಸ್ಥಲವನಾಶ್ರಯಿಸಿದಾ ಶಕ್ತಿ |
ಪರಿ[1]ಯೆನಿಸಿಕೊಂಡುದಂಗಸ್ಥಲವನಾಶ್ರಯಿಸಿ |
ಯಿರುವ ಶಕ್ತಿಯೆ ಭಕ್ತಿಯೆನಿಸಿತ್ತು ಸಿದ್ಧರಾಮೇಶ ನೀಂ ಕೇಳ್ವುದಿನ್ನು ||
ಉರಿವ ವಹ್ನಿಜ್ವಾಲೆ ಭೇದವಡೆದಾಗ ವಿ |
ಸ್ಫುರಿಸಿ ತೋರುವ ಜ್ಯೋತಿಯಾದಂತೆ ಪರಶಿವನ |
ಪರಮಚಿತ್ತೇ ಶಕ್ತಿ ಭಕ್ತಿಯಾಯ್ತೆಲೆ ಸಿದ್ಧರಾಮೇಶ ಕೇಳೆಂದನು ॥ ೫ ॥

ತಿಳಿಯಲನಲಜ್ವಾಲೆ ಧೂಮದಾವರಣದಿಂ |
ಬೆಳಗದೆ ತಮೋಮಯದೊಳಿರ್ಪಂತೆ ಶಕ್ತಿ ತಾ |
ನೊಲವಿನಿಂದಿಹುದು ವಾಸನೆವಿಡಿದು ಶಕ್ತಿ ನಿರ್ವಾಸನೆಯೊಳಿಹುದೆಂತೆನೆ ||
ಬೆಳಗಿನಿಂದೆಸೆವ ನಿರ್ಮಲಿನದೀಪಿಕೆಯಂತೆ |
ಹೊಳೆವ ಘನಸಚ್ಚಿದಾನಂದಸ್ವರೂಪಮಂ |
ಗಳಮೆನಿಪ ಭಕ್ತಿಯಾ ಶಕ್ತಿಯಿಂ[2]ದಧಿಕವೆಲೆ ರಾಮೇಶ ಕೇಳೆಂದನು ॥ ೬ ॥

ಶಕ್ತಿ ಪ್ರವೃತ್ತಿಮಾರ್ಗವನುಳ್ಳುದಾ ವಿಮಲ |
ಭಕ್ತಿಯೆ ನಿವೃತ್ತಿಮಾರ್ಗವನುಳ್ಳುದಾ ಪರಮ |
ಶಕ್ತಿ ಮಾಯಾಪ್ರಪಂಚವುಳ್ಳುದಾ ಭಕ್ತಿಯಾ ಮಾಯಾಪ್ರಪಂಚರಹಿತಂ ||
ಶಕ್ತಿ ಪುಣ್ಯಫಲಪ್ರದಂಗಳಂ ಕೊಡುವುದಾ |
ಭಕ್ತಿ ಶಿವನಲ್ಲಿ ಯುಕ್ತಂ[3] ಮಾಳ್ಪುದಾ ಪರಮ |
ಶಕ್ತಿ ತಾನೆ[4]ಯಧೋಮುಖಿ ಭಕ್ತಿಯೂರ್ಧ್ವಮುಖಿ ರಾಮೇಶ ಕೇಳೆಂದನು ॥ ೭

೧ ರೆ (ಹು, ತು, ಮ.) ೨ ಭಕ್ತಿನಿಂ (ಪ.) ೩ ಯುಕ್ತವ (ಹು, ಮ.) ೪ ಧೋನ್ಮು (ಶಿ, ಗೋ.)

ಎಸೆವ ಲಿಂಗಸ್ಥಲದೆ ಶಿವನೆನಿಸಿಕೊಳುತಿ ಸಂ |
ತಸದಿಂದುಪಾಸ್ಯವಾಗಿರುತಿರ್ಪುದಾ ಶಕ್ತಿ |
ನೆಸಗುವಂಗಸ್ಥಲದೆ ಜೀವನೆನಿಸಿತ್ತುಪಾಸಕವಾಗಿ ಭಕ್ತಿಯಿರ್ಪುದು |
ಪಸರಿಸುವ ಲಿಂಗಸ್ಥಲಾಂಗಸ್ಥಲಂಗಳಿಂ |
ಮೊಸೆವುಭಯಸಂಗವೆ ಶಿವೈಕ್ಯವಾ ಶಿವನೆ ಭಾ |
ವಿಸಿ ನೋಡೆ ಮೂರು ತೆರನಾದನೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೮ ||

ವೇದಮಂತ್ರಕ್ರಿಯೆಗಳಿಂ ಬಳಿಕ್ಕಾ ಮಹಾ |
ನಾದ ಬಿಂದುವು ಕಳೆಗಳಿಂ ಲಿಂಗವೇ ತ್ರಿವಿಧ |
ಭೇದದಿಂ ಭಾವಲಿಂಗಂ ಪ್ರಾಣಲಿಂಗಮೊಂದಿಷ್ಟಲಿಂಗಂಗಳೆಂದು |
ಆದುದಾ ಭಾವಲಿಂಗವೆ ನಿಷ್ಕಲಂ ಮಹ |
ತ್ತಾದ ತತ್ಪ್ರಾಣಲಿಂಗವೆ ಸಕಲನಿಷ್ಕಲಂ |
ಭೇದಿಸಲ್ಕಿಷ್ಟಲಿಂಗವೆ ಸಕಲವೆಲೆ ಸಿದ್ಧರಾಮೇಶ ಕೇಳೆಂದನು || ೯ ||

ತಿಳಿಯೆ ಸದ್ರೂಪವೇ ಭಾವಲಿಂಗಂ ಮನಕೆ |
ಹೊಳೆವ ಚಿದ್ರೂಪವೇ ಪ್ರಾಣಲಿಂಗಂ ಕಣ್ಗೆ |
ಬೆಳಗುವಾನಂದವೇ ಇಷ್ಟಲಿಂಗಂ ಬಳಿಕ್ಕಸಿಪದವೆ ಭಾವಲಿಂಗಂ |
ನೆಲೆವೆತ್ತ ತ್ವಂಪದವೆ ಪ್ರಾಣಲಿಂಗಂ ಸುನಿ |
ಶ್ಚಲವಾದ ತತ್ಪದವುದಿಷ್ಟಲಿಂಗಂ ಮಹಾ |
ಸ್ಥಲವಾದ ತತ್ತ್ವಮಸಿಯೆಂಬುದೇ ತ್ರಿವಿಧಲಿಂಗಂಗಳಿವು ಕೇಳೆಂದನು || ೧೦ ||

ಎಸೆವ ಪರತತ್ತ್ವವೇ ಭಾವಲಿಂಗಂ ಸೂಕ್ಷ್ಮ |
ಪೆಸರಾಂತರ ತತ್ತ್ವವೇ ಪ್ರಾಣಲಿಂಗಂ ಸ್ಥೂಲ |
ವೆಸಕ ತತ್ತ್ವವೆ ತಿಳಿಯಲಿಷ್ಟಲಿಂಗಂ ಸ್ಥೂಲತತ್ತ್ವವೇ ಹೊರಗೆನಿಸಿತು |
ಪಸರಿಸುವ ಸೂಕ್ಷ್ಮತತ್ತ್ವವೆ ತಾನೆಯೊಳಗೆನಿಸಿ |
ತಸಮಪರತತ್ತ್ವವೇ ನೋಡಲಿಡೆವಿಡದೆ ರಾ |
ಜಿಸುವ ಖಂಡಿತವೆನಿಸಿಕೊಂತಪ್ಪ ಮೂರುಲಿಂಗಂಗಳಿರದಾರಾದುವು || ೧೧ ||

೧ ಮು (ಹು.) ೨ ಲಿಂಗ (ಪ.) ೩ ರಾದ (ಶಿ.)

ಪರಿವಿಡಿಯೊಳಾ ಭಾವಲಿಂಗವೇ ತಿಳಿಯಲಾ |
ಪರಮಹಾಲಿಂಗಂ ಪ್ರಸಾದಾಖ್ಯಲಿಂಗವೆಂ |
ದೆರಡಾಯ್ತು ಪ್ರಾಣಲಿಂಗವೆ ತಿಳಿಯೆ ಚರಲಿಂಗವೆಂದು ಶಿವಲಿಂಗವೆಂದು ||
ಎರಡಾಯ್ತುದಿಷ್ಟಲಿಂಗವೆ ತಿಳಿದು ನೋಡಲಾ |
ಗುರುಲಿಂಗವೆಂದು ಬಳಿಕಾಚಾರಲಿಂಗವೆಂ |
ದೆರಡಾಯ್ತು ಮೂರುಲಿಂಗಂಗಳಾದಾಗಲಾ ಶಕ್ತಿ ತಾನಾದಾದುವು || ೧೨ ||

ಹೊಳೆವ ನಿರ್ಮಳ ನಿತ್ಯ ಶಾಂತ್ಯತೀತೋತ್ತರಾ |
ಕಳೆಯೆ ಚಿಚ್ಛಕ್ತಿ ಶಾಂತಾತೀತೆಯೆಂದೆಂಬ |
ಕಳೆ[೧]ಯೆಂ ಪರಾಶಕ್ತಿ[೧] ಶಾಂತಿಯೆಂದೆನಿಸುವಾ[೨] ಕಳೆಯೆ ತಾನಾದಿಶಕ್ತಿ ||
ಬಳಿಕ ವಿದ್ಯೆಯೆನಿಪ್ಪ ಕಳೆಯದಿಚ್ಛಾಶಕ್ತಿ |
ತಿಳಿಯಲ್ ಪ್ರತಿಷ್ಠೆಕಳೆಯೆ ಜ್ಞಾನಶಕ್ತಿ ಥಳ |
ಥಳಿಸುವ ನಿವೃತ್ತಿಕಳೆಯೇ ಕ್ರಿಯಾಶಕ್ತಿಯೆಲೆ ರಾಮೇಶ ಕೇಳೆಂದನು || ೧೩

ಇಂತು ಚಿಚ್ಛಕ್ತಿಕ್ರಮದಿಂದೆ ಷಡ್ವಿಧಕಳೆಯು |
ನಾಂತು ಷಡ್ವಿಧಶಕ್ತಿಯಾದಳಾ ಪರಶಿವಂ |
ಪಿಂತೆ ಷಡ್ವಿಧಲಿಂಗವಾಗಿರ್ದ ಕ್ರಮದೊಳೀಶಕ್ತಿಯರೊಳೊಡಗೂಡಿದ[೩] ||
ಎಂತೆಂದೊಡಾದ್ಯಂತಶೂನ್ಯಮಮಲಂ ಪರಂ |
ಸಂತತಂ ಚಿಚ್ಛಕ್ತಿಸಂಯುತಂ ಶಿವತತ್ತ್ವ |
ಮಿಂತಿದೇ ನಿಷ್ಕಲಂ ಭಾವಗಮ್ಯಂ ಮಹಾಲಿಂಗಮಿದು ಕೇಳೆಂದನು || ೧೪

ಪರತರಂ ಜ್ಯೋತಿಸ್ಸ್ವರೂಪಕಂ ಜ್ಞಾನಗೋ |
ಚರನಾ ಪರಾಶಕ್ತಿಸಂಯುತಂ ನಿರ್ಮಲಂ |
ನಿರುಪಮಂ ಸಾದಾಖ್ಯತತ್ತ್ವಪ್ರಸಾದಾಖ್ಯಲಿಂಗಮಿದು ಕೇಳೆಂದನು[೪] ||
ಪರಿಕಿಸಲ್ ಜ್ಯೋತಿರ್ಮಯಂ ಸಕಲನಿಷ್ಕಲಂ |
ಪರಮಪುರುಷಂ ಮನಕಗೋಚರನಮೂರ್ತಕನ |
ದಿರದಾದಿಶಕ್ತಿಸಂಯುಕ್ತಮಿದು ಚರಲಿಂಗವೆಲೆ ರಾಮ ಕೇಳೆಂದನು || ೧೫

೧-೧ ಯೆ ಪರಶಕ್ತಿಯಾ (ಶಿ, ಗೋ.); ಯೆ ತಾ ಪರಶಕ್ತಿ (ಮ.) ೨ ತಿಹ (ಮ.
೩ ಡಲು (ಶಿ.) ೪ ಕೇಳ್ವುದಿನ್ನು (ಮ.)

ಘಳಘಳಿಸಿ ಹೊಳೆವ ತೇಜೋಮೂರ್ತಿಯಾಗಿ ಪ್ರ |
ಜ್ವಲಿಸುತಿಚ್ಛಾಶಕ್ತಿಯೊಡಗೂಡಿ ವ್ಯಕ್ತದಿಂ |
ನಲಿವಹಂಕಾರಕ್ಕೆ ಗೋಚರಿಸುತಿಪ್ಪುದೇ ಶಿವಲಿಂಗವಿನ್ನು ಕೇಳು ||
ಲಲಿತತೇಜೋರಾಶಿಯಾಗಿ ಕರ್ತೃತ್ವವುಂ |
ತಳೆವ ಸುಜ್ಞಾನಶಕ್ತಿಯ ಕೂಡಿ ಬುದ್ಧಿಗಂ |
ಪೊಳೆವ ಗೋಚರಿಪುದೇ ಗುರುಲಿಂಗವೆಲೆ ಸಿದ್ಧರಾಮೇಶ ಕೇಳೆಂದನು || ೧೬ ||

ಸಕಲತತ್ತ್ವಾಶ್ರಯಂ ನಿತ್ಯಕರ್ಮಾತ್ಮಕಂ |
ಪ್ರಕಟಿಸುವ ಸತ್ಕ್ರಿಯಾಶಕ್ತಿಯುಕ್ತಂ ನೋಡ |
ಅಕಳಂಕಚಿತ್ತ ಕರಣಗ್ರಾಹ್ಯನಚಲಸಾಧಾರನಧಿಕಾರೂಢನು ||
ವಿಕರಿಸಿ ನಿವೃತ್ತಿಮಾರ್ಗಾಭಿಧಾನವನುಳ್ಳ |
ಸುಕರವೆನಿಸುವ ಸದಾಚಾರಲಿಂಗವಿದೆಂದು |
ಮುಕುತಿದಾಯಕನೆನಿಪ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು || ೧೭ ||

ಇಂತೀ ಮಹಾಲಿಂಗವಾದಿ ಷಡ್ವಿಧಲಿಂಗ |
ವಂತಾಗ ತಮ್ಮ ಷಡ್ವಿಧಶಕ್ತಿಯರ ಕೂಡಿ |
ಸಂತಸದಿ ಕರಣಷಡ್ವಿಧಗ್ರಾಹ್ಯದಿಂದೆ ತತ್ಸೇವ್ಯದಿಂದಿರುತಿರ್ದರು ||
ಮುಂತೆ ತತ್ಸೇವ್ಯೈಕವಿಭೇದದಿಂದಾತ್ಮತ |
ತ್ತ್ವಂ ತಾನೆ ತನ್ನ ಸದ್ಭಕ್ತಿಯ ವಿಚಿತ್ರದೆ ನಿ |
ರಂತರಂ ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ತಾಂ ತ್ರಿವಿಧಮಾಯ್ತು
|| ೧೮ ||

ಯೋಗಾಂಗವೆನೆ ಶಿವನ ಸಂಯೋಗವಾ ವಿಮಲ |
ಭೋಗಾಂಗವೆನೆ ಶಿವಂ ಸಹವಾಗಿ ಭೋಗಿಪುದು |
ತ್ಯಾಗಾಂಗವೆನೆ ಶಿವಂ ಶಿವಭಕ್ತರಲ್ಲದನ್ಯರಸಂಗಮಂ ತ್ಯಜಿಪುದು ||
ಯೋಗಾಂಗವೇ ಸುಕಾರಣತನುವೆನಿಪ್ಪುದಾ |
ಭೋಗಾಂಗವೇ ಸೂಕ್ಷ್ಮತನುವೆನಿಪುದಾ ವಿಮಲ |
ತ್ಯಾಗಾಂಗವೆನಿಪುದೇ ಸ್ಥೂಲತನುವೆಲೆ ಸಿದ್ಧರಾಮೇಶ ಕೇಳೆಂದನು || ೧೯ ||

---

೧ ಬ (ಮ.) ೨ ವ (ಷು, ಮ.)

ಬಳಿಕಲಾ ಯೋಗಾಂಗವೇ ಪ್ರಾಜ್ಞನಾ ಮನಕೆ |
ಹೊಳೆವ ಭೋಗಾಂಗವೇ ತೈಜಸಂ ಕಣ್ಗಳ್ಗೆ
ಸುಳಿವ ತ್ಯಾಗಾಂಗವೇ ವಿಶ್ವನಾ ಯೋಗಾಂಗವೇ ಸುಷುಪ್ತಿಯೊಳಿಪ್ಪುದು ||
ತಿಳಿಯಲಾ ಭೋಗಾಂಗವೇ ಸ್ವಪ್ನದಲ್ಲಿ ಥಳ |
ಥಳಿಪುದಾ ತ್ಯಾಗಾಂಗವೇ ಜಾಗ್ರವಿಂತು ನಿ |
ರ್ಮಳಮೆನಿಪ್ಪಂಗತ್ರಯಂಗಳೀ ತತ್ತ್ರಿವಿಧವಸ್ಥೆಗಳೊಳಿರುತಿರ್ಪುವು || ೨೦ ||

ಯೋಗಾಂಗವೆಂಬುದೇ ಪರಮಾತ್ಮನಾ ವಿಮಲ |
ಭೋಗಾಂಗವೆಂಬುದೇಯಂತರಾತ್ಮಂ ಮಹಾ |
ತ್ಯಾಗಾಂಗವೆಂಬುದೇ ಜೀವಾತ್ಮವಿಂತು ನಾಮಂಗಳಿಂದೆಸೆವುತಿರ್ಪ ||
ಯೋಗ ಭೋಗ ತ್ಯಾಗವೆಂಬೀ ತ್ರಯಾಂಗವೇ |
ರಾಗದಿಂದೊಂದೊಂದು ತಮ್ಮೊಳ್ ವಿಲಾಸದಿಂ |
ದಾಗಳೆರಡೆರಡಾದುವೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು || ೨೧ ||

ವಿಸುಪ ಯೋಗಾಂಗವೆಂದೈಕ್ಯನುಂ ಶರಣನಂ |
ದೆಸೆವ ಭೋಗಾಂಗವೇ ಪ್ರಾಣಲಿಂಗಿ ಪ್ರಸಾದಿ |
ಯುಸಿರಲೇಂ ತ್ಯಾಗಾಂಗವೇ ಮಹೇಶಂ ಭಕ್ತನೆಂದು ಷಟ್ಸ್ಥಲವಾದುದು ||
ಪಸರಿಸುವ ತನ್ನ ಸದ್ಭಕ್ತಿಯ ವಿಚಿತ್ರದೊಂ |
ದೆಸಕದಿಂದಂಗವೇ ಷಟ್ಸ್ಥಲವನೈದೆ ರಾ |
ಜಿಸುವ ತದ್ಭಕ್ತಿ ತಾನಾರಾದುದೆಲೆ ಸಿದ್ಧರಾಮೇಶ ಕೇಳೆಂದನು || ೨೨ ||

ಪರಮಸಮರಸಭಕ್ತಿಯಾನಂದಭಕ್ತಿ ಮ |
ತ್ತಿರಲದೆನುಭವಭಕ್ತಿಯವಧಾನಭಕ್ತಿ ಸು |
ಸ್ಥಿರದಿಂದೆ ನೈಷ್ಠಿಕಾಭಕ್ತಿಯದು ಸದ್ಭಕ್ತಿಯೆಂದು ಷಡ್ವಿಧವನಾಂತು ||
ಪರಿವಿಡಿಯೊಳೈಕ್ಯಸ್ಥಲವನೆ ಸಮರಸಭಕ್ತಿ |
ಶರಣಸ್ಥಲವನೆ ಮತ್ತಾನಂದಭಕ್ತಿಯಾ |
ಪರಿಯೊಳಾ ಪ್ರಾಣಲಿಂಗಿಸ್ಥಲವನನುಭಾವಭಕ್ತಿ ತತ್ಕ್ರಮದೊಳಿನ್ನು || ೨೩ ||

೧-೧ ಳ್ಗೆ ತತ್ತ್ರಿ (ಶಿ, ಗೋ.) ; ಳೀ ತಾಂತ್ರಿ (ಮ.) ೨ ಸ್ಥಿರ (ಶಿ, ಗೋ.) ೩ ದಲ (ಮ.)

ನರಪ್ರಸಾದಿಸ್ಥಲವನವಧಾನಭಕ್ತಿಯಾ |
ಪರಿ ಮಹೇಶಸ್ಥಲವ ನೈಷ್ಠಿಕಾಭಕ್ತಿ ಮ |
ತ್ತಿರದೆ ಭಕ್ತ[೧]ಸ್ಥಲವನೆಸೆವ ಸದ್ಭಕ್ತಿಯಿಂತಂಗಸ್ಥಲಂಗಳಾರು ||
ಪರಿವಿಡಿಯೊಳಾ ಭಕ್ತಿ ತಾನೆ ಷಡ್ವಿಧರೂಪ |
ಧರಿಸಿಯೊಡವೆರೆದಿವಲ್ಲೈಕ್ಯಾದಿಭಕ್ತಾಂತವಾ |
ಗಿರುತಿರ್ಪ ಷಟ್ಸ್ಥಲವನೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು || ೨೪ ||

ಎಲೆ ಸಿದ್ಧರಾಮೇಶ ಕೇಳ್ವುದಿನ್ನಂಗಷ |
ಟ್ಸ್ಥಲಮುಂ ಪ್ರವೃತ್ತಿಮಾರ್ಗದೊಳುದಿಸಿದುದನೊಲಿದು |
ಪ್ರೋಳಿವ ಚಿಚ್ಛಕ್ತಿಯಿಂ ಶಿವನೇ ಮಹಾಲಿಂಗವೆನಿಸಿ ತತ್ಸೇವಕದೊಳು ||
ಬಳಿಕಲ್ಲೈಕ್ಯಸ್ಥಳವದಾಯ್ತಾ ಮಹಾಲಿಂಗ |
ದೊಳೆ ಪರಾಶಕ್ತಿಯನುಭವದಿಂ ಪ್ರಸಾದಾಖ್ಯ |
ದಲಿ ಮೆರೆವ ಲಿಂಗಮಾಯ್ತುದರುಪಾಸಕದೆ ಶರಣಸ್ಥಲಂ ತಾನಾದುದು || ೨೫ ||

ವರಸುಪ್ರಸಾದಲಿಂಗದಿನಾದಿಶ[೨]ಕ್ತಿಯುಂ |
ಬೆರಸಿ ಚರಲಿಂಗವಾಯ್ತುದರುಪಾಸಕದೊಳಂ |
ದಿರದೆ ಸತ್ಪ್ರಾಣಲಿಂಗಿಸ್ಥಲವದಾಯ್ತು ಚರಲಿಂಗದಿಂದುದಿಸಿ ಬಳಿಕೆ ||
ನಿರುತದಿಚ್ಛಾಶಕ್ತಿಯಾಗೆ ತತ್ಸಂಗದಿಂ |
ಪರಿಕಿಸಲ್ ಶಿವಲಿಂಗವಾಯ್ತುದರ ಸೇವಕದಿ |
ಪರಮಪ್ರಸಾದಿಯ[೩-೩] ಸ್ಥಲವಾಯ್ತು ಸಿದ್ಧರಾಮೇಶ ನೀಂ[೪] ಕೇಳೆಂದನು || ೨೬ ||

ಎಸೆವ ಶಿವಲಿಂಗದಿಂ ಜ್ಞಾನಶಕ್ತಿಯ ಕೂಟ |
ದೆಸಕದಿಂ ಗುರುಲಿಂಗವಾಯ್ತು ತತ್ಸೇವಕದಿ |
ಪಸರಿಪ ಮಹೇಶ್ವರಸ್ಥಲವಾಯ್ತು ಗುರುಲಿಂಗದಿಂ ಕ್ರಿಯಾಶಕ್ತಿಯೊಡನೆ ||
ಬೆಸುಗೆಯಿಂದಾಚಾರಲಿಂಗಮಾಯ್ತುದನು ಪೂ |
ಜಿಸುವ ಭಕ್ತನೊಳೆ ಭಕ್ತ[೫]ಸ್ಥಲವದಾಯ್ತು ರಾ |
ಜಿಸುವ ಷಡ್ವಿಧಲಿಂಗದಿಂದಲ್ಲೈಕ್ಯಾದಿ ಭಕ್ತಾಂತ ಷಟ್ಸ್ಥಲಮಾದುದು || ೨೭ ||

---

೧ ಕ್ತಿ (ಶಿ.) ೨ ಥ (ಮ.) ೩-೩ ಯಾ ಸ್ಥಲವದಾಯ್ತೆಲೆ ಸಿದ್ಧರಾಮೇಶ (ಶಿ, ಗೋ.)
೪ ಕ್ತಿ (ಶಿ.) ೫ ಸ್ತ್ರ (ಶಿ.)

ಪರಮ ಟ್ಸ್ಥಲವನಾಂತಂಗವೆನಿಪಾತ್ಮನಿಂ |
ದಿರದೆ ಗಗನಂ ಗಗನದಿಂ ವಾಯು ವಾಯುವಿಂ |
ಮರುತಾಪ್ತನಾ ಮರುತಸಖನಿಂದೆ ವಾರಿ ತದ್ವಾರಿಯಿಂ ಪೃಥ್ವಿಯಾಯ್ತು ||
ಪರತತ್ತ್ವದಿಂದೆ ಭಾವಂ ಭಾವದಿಂ ಜ್ಞಾನ |
ವಿರದೆ ಸುಜ್ಞಾನದಿಂ ಮನವಾ ಮನಸ್ಸಿನಿಂ |
ದುರುತರದಹಂಕಾರವದರಿಂದೆ ಬುದ್ಧಿಯಾ ಬುದ್ಧಿಯಿಂ ಚಿತ್ತವಾಯ್ತು || ೨೮ ||

ಪರಿ[೧]ಯೊಳೈಕ್ಯಸ್ಥಲವೆ ನಿರ್ಮಳಾತ್ಮಾಂಗವಾ[೧] |
ಶರಣಸ್ಥಲಂ ತಿಳಿಯೆ ಗಗನಾಂಗವಾಗಲಂ |
ದಿರದಿನ್ನು ಪ್ರಾಣಲಿಂಗಸ್ಥಲವೆ ಮರುತಾಂಗವೀ ಕ್ರಮದೊಳಿನ್ನುಮುಂದೆ ||
ಪರಮಪ್ರಸಾದಿಸುಸ್ಥಲವೆಯನಲಾಂಗವಾ |
ವರಮಹೇಶಸ್ಥಲವೆ ಜಲದಂಗವಿನ್ನು ಸು |
ಸ್ಥಿರದಿಂದಲೆಸೆವ ಭಕ್ತಸ್ಥಲವೆ ಭೂಮ್ಯಂಗವೆಲೆ ರಾಮ ಕೇಳೆಂದನು || ೨೯ ||

ಇಂತು ಷಡ್ವಿಧವನಾಂತೈಕ್ಯಾದಿಭಕ್ತಸ್ಥ |
ಲಾಂತಂಗಳಂ ಕ್ರಮದೊಳೊಂದರಿಂದೊಂದಂ ಗು |
ಣಾಂತರವಿಲಕ್ಷಣಂಗಳ ಬೇರೆ ಬೇರೆ ಪೇಳುವೆನೊಲಿದು ಕೇಳ್ವುದಿನ್ನು ||
ಎಂತೆಂದೊಡಾದಿಯೊಳಗಾನು ನೀನೆಂಬುಭಯ |
ವಾಂತಾ ಮನಃಪ್ರಾಣದೇಹೇಂದ್ರಿಯಾದಿಗಳ |
ಸಂತವೆನ್ನೊಳಗುದಿಸವೆಂದರಿದ ಸಮರಸವೆ ತಾನೀಗದೈಕ್ಯಸ್ಥಲಂ || ೩೦ ||

ಎಸೆವ ದೇಹೇಂದ್ರಿಯದ ಪರಿಯಾಯಗಳನು ಭಾ |
ವಿಸಿ ತನ್ನ ರೂಪೆಂದು ಕಂಡಖಿಳವಿಷಯವುಂ |
ಹಸನಾಗಿ ಕೂಡಿಕೊಂಡಾನಂದಭಕ್ತಿಯಿಂದಿರ್ಪುದೇ ಶರಣಸ್ಥಲಂ ||
ಮಿಸುಪ ತತ್ಪ್ರಾಣೇಂದ್ರಿಯಾದ್ಯಹಂ ಮಮತೆ ರಾ |
ಜಿಸುವ ಮೋಹ ಭ್ರಾಂತಿಗಳನಳಿದು ಪರಮಸಂ |
ತಸದಿಂದೆ ತತ್ತ್ವಾನುಭವದೊಳೊಪ್ಪಿರ್ಪುದೇ ಪ್ರಾಣಲಿಂಗಿಯ ಸುಸ್ಥಲಂ || ೩೧ ||

೧-೧ ವಿಡಿಯೊಳ್ಳೈಕ್ಯಸ್ಥಲವೆ ನಿರ್ಮಳಾತ್ಮಾಂಗ (ಹು.)

ಅನ್ನದೊಂದಿಂದ್ರಿಯದ ಸುಖವನೆಲ್ಲವ ತನುವ |
ಸಾವರಿಸುವುದರಿಂದೆ ಮುನ್ನ ಲಿಂಗಕೆ ಕೊಟ್ಟು |
ಸಾವಧಾನದ ಭಕ್ತಿಯಿಂದವಂ ಕೈಕೊಂಬುದೇ ಸುಪ್ರಸಾದಿಸ್ಥಲಂ ||
ಆವಗಂ ವ್ರತ ನಿಯಮ ನಿತ್ಯಕರ್ಮಾದಿವಿಧಿ |
ಭಾವಿಸು ಕ್ರಿಯೆಗಳಿಗಸಾಧ್ಯವೆಂದರಿದು ಸ |
ದ್ಭಾವದಿಂ ಶಿವಲಿಂಗನಿಷ್ಠೆಯಿಂ ಸುಖವಿರ್ಪುದೇ ವರಮಹೇಶಸ್ಥಲಂ || ೩೨ ||

ಪರಿಕಿಸೆ ಶರೀರತತ್ಪ್ರಾಣಧರ್ಮಂಗಳ |
ಸ್ಥಿರವೆಂದು ತಿಳಿದು ಸತ್ಕ್ರಿಯೆಗಳಿಂದೆಲ್ಲವಂ |
ಪರಿಹರಿಸಿ ವಿಮಲಸದ್ಭಕ್ತಿಯಿಂದಾವಾಗಲಿರ್ಪುದೇ ಭಕ್ತಸ್ಥಲಂ ||
ಪರಿವಿಡಿಯೊಳಿಂತೆಸೆವ ಷಡ್ವಿಧಾಂಗಸ್ಥಲದ |
ಪರಿಯಾಯ ಗುಣ ನಾಮ ಲಕ್ಷಣಮಿದೆಂದಾಗ |
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು || ೩೩ ||

ತಿಳಿವುದಿನ್ನೈಕ್ಯಂಗೆ ಸದ್ಭಾವಹಸ್ತವಂ |
ವಳವಟ್ಟ ಶರಣಂಗೆ ಸುಜ್ಞಾನಹಸ್ತವಿ |
ನ್ನೊಲಿದು ಸತ್ಪ್ರಾಣಲಿಂಗಿಗೆ ಸುಮನಹಸ್ತವಾ ಸುಪ್ರಸಾದಿಗೆ ಭಾವಿಸೆ ||
ಪೊಳೆವ ನಿರಹಂಕಾರಹಸ್ತಂ ಮಹೇಶಂಗೆ |
ಸಲೆ ಬುದ್ಧಿಯೇ[೧] ಹಸ್ತವಿನ್ನು ಭಕ್ತಂಗೆ ಥಳ |
ಥಳಿಸುವ ಸುಚಿತ್ತವೇ ಹಸ್ತವೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೩೪ ||

ಇಂತು ಷಡ್ವಿಧವನಾಂತಂಗಸ್ಥಲಂಗಳಂ |
ಪಿಂತೆ ಷಡ್ವಿಧವಾಂತ ಲಿಂಗಸ್ಥಲಂಗಳಂ |
ಸಂತಸದುಪಾಸ್ಯೋಪಾಸಕ ಸೇವ್ಯಸೇವಕ ಸುಪೂಜ್ಯಪೂಜಕಭಾವದಿಂ ||
ಅಂತರಿಸದಾ ತಮ್ಮ ಭಕ್ತಿಯ ವಿಲಾಸದಿಂ |
ದಂ ತಳೆದು ತಮ್ಮ ಹಸ್ತಂಗಳಿಂದರ್ಚಿಸಿದ |
ರಿಂತಿದರ ಸಂಸ್ಥಿತಿಗಳಾದ್ಯಂತಲಕ್ಷಣಂಗಳನೊರೆವೆನಾಲಿಸಿನ್ನು || ೩೫ ||

---

೧ ಸುಬುದ್ಧಿಯೆ (ಹು, ಮ.)

ತಿಳಿಯಲಾತ್ಮಾಂಗದೊಳ್ ಸದ್ಭಾವಹಸ್ತದಿಂ |
ಪೊಳೆವ ಸಮರಸಭಕ್ತಿಯಿಂದೆ ಚಿಚ್ಛಕ್ತಿಯೊಳ್ |
ಬೆಳಗುವ ಮಹಾಲಿಂಗವಂ ಧರಿಸಿ ಪೂಜಿಸುವನೇ ಪರಮಲಿಂಗೈಕ್ಯನು ||
ಬಳಿಕ ಗಗನಾಂಗದೊಳ್ ಸುಜ್ಞಾನಹಸ್ತದಿಂ |
ತೊಳಗುವಾನಂದಭಕ್ತಿಯೊಳೆ ಪರಶಕ್ತಿಸ |
ವ್ಮಿಳಿತಪ್ರಸಾದಲಿಂಗವ ಧರಿಸಿ ಪೂಜೆಯಂ ಮಾಡುವಾತನೆ ಶರಣನು || ೩೬ ||

ಸ್ಪಸನಾಂಗದೊಳ್ ಸುಮನಹಸ್ತದಿಂ ಪರಮಸಂ |
ತಸದಲನುಭವಭಕ್ತಿಯಿಂದಾದಿಶಕ್ತಿಯೊಳ್ |
ಬೆಸುಗೆಯಿಂದಿರ್ಪ ಚರಲಿಂಗವಂ ಧರಿಸಿ ಪೂಜಿಸುವನೇ ಪ್ರಾಣಲಿಂಗಿ ||
ಮಿಸುಗುವನಲಾಂಗದೊಳಹಂಕಾರಹಸ್ತದಿಂ |
ಪಸರಿಪವಧಾನಭಕ್ತಿಯೊಳಗಿಚ್ಛಾಶಕ್ತಿ |
ಯೊಸೆದು ಕೂಡಿರ್ಪ ಶಿವಲಿಂಗವಂ ಧರಿಸಿ ಪೂಜಿಸುವನೇ ಸುಪ್ರಸಾದಿ || ೩೭ ||

ವರಜಲಾಂಗದೊಳಾ ಸುಬುದ್ಧಿಯುರುಹಸ್ತದಿಂ |
ಪರಮನಿಷ್ಠಾಭಕ್ತಿಯಿಂ ಜ್ಞಾನಶಕ್ತಿಯೊಳ್ |
ಬೆರಸಿ ಸುಖದಿಂದಿರ್ಪ ಗುರುಲಿಂಗವಂ ಧರಿಸಿ ಪೂಜಿಪನೆ ಮಾಹೇಶನು ||
ಧರಣಿಯಂಗದೊಳಾ ಸುಚಿತ್ತದುರುಹಸ್ತದಿಂ |
ದಿರದೆ ಸದ್ಭಕ್ತಿಯಿಂದಾ ಕ್ರಿಯಾಶಕ್ತಿಯೊಡ |
ವೆರಸಿದಾಚಾರಲಿಂಗವ ಧರಿಸಿ ಪೂಜೆಯಂ ಮಾಡುವಾತನೆ ಭಕ್ತನು || ೩೮ ||

ಹಿಂಗದೀ ಪರಿಯೊಳೈಕ್ಯಾದಿಭಕ್ತಾಂತವಾ |
ಲಿಂಗಂಗಳಂ ಧರಿಸಿ ಪೂಜಿಸುವರಿಂತಿದೇ |
ಲಿಂಗಾಂಗಸಂಯೋಗವೆಂದೆನಿಪುದದರ ಪರಿಯಾಯಮಂ ಪೇಳ್ವೆನಿನ್ನು ||
ಲಿಂಗವೆನಿಪುದೆ ತತ್ಪದಂ ತ್ವಂಪದಂ ತಾನೆ |
ಯಂಗಮುಭಯದ ನಿತ್ಯಸಂಯೋಗಮಸಿಪದಂ |
ಲಿಂಗಮೆನಿಪುದೆ ನಾದವಂಗವೆನಿಪುದೆ ಬಿಂದು ಸಂಯೋಗವೇ ಚಿತ್ಕಳೆ || ೩೯ ||

ಲಿಂಗವೇ ಪರಬ್ರಹ್ಮವಂಗವೆ ಚಿದಾತ್ಮನಾ |
ಸಂಗವೇ ಸಂಯೋಗವೆಂದೆನಿಪುದಾ ವಿಮಲ |
ಲಿಂಗವೇ ಸನ್ಮಾತ್ರವಂಗವೇ ಚಿನ್ಮಾತ್ರವಾನಂದವೇ ಯೋಗವು ||
ಲಿಂಗವೇ ಮಂತ್ರವಂದ[1]ಂಗವೇ ಕ್ರಿಯೆಯುವರ |
ಸಂಗವೇ ಸಂಯೋಗವದರಿಂದಲಿ[2]ದು ಮಹಾ |
ಲಿಂಗಾಂಗಸಂಯೋಗವೆಂದೆನಿಪುದೆಲೆ ಸಿದ್ಧರಾಮೇಶ ಕೇಳೆಂದನು ೪೦ ||

ಒರೆವೆನಿಂ[3] ಸರ್ವಾಂಗಲಿಂಗಸಾಹಿತ್ಯಮಂ |
ಪರಿಕಿಸಲ್ ಹೃದಯಾಂಗದೊಳ್ ಮಹಾಲಿಂಗವಾ |
ಪರಿಯಲ್ಲಿ ಶ್ರೋತ್ರಾಂಗದೊಳ್ ಪ್ರಸಾದಾಖ್ಯಲಿಂಗಂ ಸತ್ವಗಂ[4]ಗದಲ್ಲ ||
ಚರಲಿಂಗವಾ ದೃಗಂಗದೊಳೆ ಶಿವಲಿಂಗವಂ |
ದಿರದೆ ಜಿಹ್ವಾಂಗದೊಳ್ ಗುರುಲಿಂಗಮನ್ನಿರಂ |
ತರದೊಳಾ ನಾಸಿಕಾಂಗದೆ ಸದಾಚಾರಲಿಂಗಂಗಳೊಲಿದಿರುತಿರ್ಪುವು ೪೧ ||

ಪರಿವಿಡಿಯೊಳಿನ್ನು[5] ಸುಜ್ಞಾನೇಂದ್ರಿಯಂಗಳ |
ಲ್ಲಿರುವಂತೆ ಲಿಂಗವಾ ಕರ್ಮೇಂದ್ರಿಯಂಗಳ |
ಲ್ಲಿರುತಿರ್ಪವೆಂತೆನೆಲ್ ಜ್ಞಾನೇಂದ್ರಿಯಂಗಳಲ್ಲೊಂದು ತದ್ವಿಷಯಮೊಂದು |
ಇರದೆ ಕರ್ಮೇಂದ್ರಿಯಲ್ಲೊಂದು ವರವಿಷಯಮೊಂ |
ದುರುತರದ ಭೂತದಲ್ಲೊಂದಿಂತಿವೈದಕ್ಕೆ |
ಪರಿಕಿಸಲ್ ಶಿವಮೂರ್ತಿಯಲ್ಲಿಯೊಂದಧಿದೈವವೆಲೆ ರಾಮ ಕೇಳೆಂದನು ೪೨ ||

ಪರಮಸುಜ್ಞಾನೇಂದ್ರಿಕರ್ಮೇಂದ್ರಿಯಂಗಳೆಂ |
ಬೆರಡಕೊಂದೇ ಮೂರ್ತಿಯಧಿದೈವವಾದುದಂ |
ಪರಿವಿಡಿಯೊಳೊರೆವೆನಿಂ[6] ಶ್ರೋತ್ರ ವಾಕ್ ಶಬ್ದ ವಚನಂಗಳೆಂಬೈವಕೆ[7] ||
ಪರಿಕಿಸಲ್ಕಾಕಾಶಮೂರ್ತಿಯಧಿದೈವವಾ |
ಪರಿಯೊಳಂ ತ್ವಕ್ಪಾಣಿ ಸ್ಪರ್ಶ ದಾನಂ[8]ಗಳಾ |
ಮರುತಂಗೆ ತತ್ಪುರುಷನಧಿದೈವವೆಲೆ ಸಿದ್ಧರಾಮೇಶ ಕೇಳೆಂದನು || ೪೩ ||

೧ ವೇದಾ (ಹು, ಮು.) ೨ ರಿ (ಹು, ಮು.) ೩ ನೀ (ಮು.) ೪ ಚಾ (ಶಿ.) ೫ ಳಿಂತು (ಹು, ಮು.) ೬ ನೀ (ಹು, ಮು.) ೭ ಬಿವಕ್ಕೆ (ಹು, ಮು.) ೮ ನಾದಂ (ಶಿ.)

ಇರದೆ ದೃಕ್ ಪಾದವಾ ರೂಪು ಗಮನಾಗ್ನಿಗಂ |
ಪರಿಕಿಸಲ್ಕದಘೋರಮೂರ್ತಿಯಧಿದೈವವ ,
ತ್ಯರುತರದ ಜಿಹ್ವೆ ಗುಹ್ಯಂ ರಸಮುಮಾನಂದವಾರಿಗಂ ವಾಮದೇವ ||
ವರಮೂರ್ತಿಯಧಿದೈವಮಿನ್ನು ನಾಸಿಕ ಪಾಯು |
ಗಿರದೆ ಗಂಧಂ ವಿಸರ್ಜನಭೂಮಿಗಂ ನಿರಂ |
ತರದಿ ಸದ್ಯೋಜಾತಮೂರ್ತಿಯಧಿದೈವಮಿಂತಿವಕೆ ಹೃದಯುವೆ ನೆಲೆವನೆ || ೪೪ ||

ಅದುಕಾರಣಂ ಜ್ಞಾನಕರ್ಮೇಂದ್ರಿಯಂಗಳ್ಗೆ |
ಹೃದಯುವೇ ನೆಲೆವೀಡು ತಿಳಿಯಲಾ[೧] ಹೃದಯಕ್ಕೆ |
ಹೃದಯುವಾ ಶ್ರೋತ್ರಕ್ಕೆ ಶ್ರೋತ್ರವಾ ತ್ವಕ್ಕಿಂಗೆ ತೊಕ್ಕು ನೇತ್ರಕೆ ನೇತ್ರವು ||
ಮೃದುಳಜಿಹ್ವೆಗೆ ಜಿಹ್ವೆ ನಾಸಿಕಕೆ ನಾಸಿಕಂ |
ಉದಿತವಾಕ್ಕಿಗೆ ವಾಕ್ಕು ಪಾಣಿಗೆ ಸುಪಾಣಿ ಪಾ |
ದದ[೨]ಕೆ ಪದ ಗುಹ್ಯಕೆ ಸುಗುಹ್ಯ ಪಾಯುಗೆ ಪಾಯುವಾಗಿಹುದು[೨] ಲಿಂಗಮುಖವು || ೪೫ ||

ಪರಮಹೃದಯುದ ಹೃದಯುವೇ ಮಹಾಲಿಂಗವಂ |
ದಿರದೆ ಶ್ರೋತ್ರದ ಶ್ರೋತ್ರವೇ ಪ್ರಸಾದಸುಲಿಂಗ |
ಮುರುತರದ ತೊಕ್ಕಿನ ಸುತೊಕ್ಕೆ ಜಂಗಮಲಿಂಗಮೆಸವ ನೇತ್ರದ ನೇತ್ರವೇ ||
ವರದ ಶಿವಲಿಂಗವಾ [೩]ಜಿಹ್ವೆಯ ಸು[೩]ಜಿಹ್ವೆಯೇ |
ಗುರುಲಿಂಗವಿನ್ನು ನಾಸಿಕದ ನಾಸಿಕವದೇ |
ಪರಿಕಿಸಲ್ಕಾಚಾರಲಿಂಗ[೪]ವೆಲೆ ಸಿದ್ಧರಾಮೇಶ ನಿಂ[೪] ಕೇಳೆಂದನು || ೪೬ ||

ಪರಿವಿಡಿಯೊಳಿಂತಿವು ಪ್ರವೃತ್ತಿಮಾರ್ಗಂ ಮುಂದೆ |
ಪರಿಕಿಸೆ ನಿವೃತ್ತಿಮಾರ್ಗಾಭಿಧಾನವನುಳ್ಳ |
ಪರಮಷಟ್ಚಕ್ರ[೫]ಭೇದಂಗಳಂ ಪೇಳ್ವೆನಾದರದಿಂದೆ[೫] ಕೇಳ್ವುದಿನ್ನು ||
ನಿರುತದಿಂದಾಧಾರ ಲಿಂಗ ನಾಭೌ ಹೃದಯ |
ಸರಸಿಜಂ ತಾಲು ಭ್ರೂ[೬]ಮಧ್ಯಮಿಂತಾರವರೊ |
ಳೆರಡು ಹದಿನಾರು ಹನ್ನೆರಡು ಹತ್ತಾರು ನಾಲ್ಕೆನಿಸು[೭]ವ ದಳಂ[೭]ಗಳಲ್ಲ || ೪೭ ||

---

೧ ವುದಾ (ಹು.) ೨-೨ ಪಾದ ಗುಹ್ಯಕ್ಕೆ ಗುಹ್ಯವಾ ಪಾಯುವಿಗೆ ಪಾಯುವಾ (ಹು.) ೩-೩ ಜಿಹ್ವೆಯಾ (ಶಿ.) ೪-೪ ವಿಂತೆಲೆ ಸಿದ್ಧರಾಮೇಶ (ಹು.) ೫-೫ ಭೇದಗಳನಾದರದಿಂದೆ ಪೇಳ್ವೆನಿಂ (ಶಿ.) ೬ ಪುರು (ಮ.) ೭-೭ ವವಯುವ (ಹು.)

ವಾಸಾಂತ ಬಾಲಮಧ್ಯಂಡಪಕಟಾಂತಂಗ |
ಳಾ ಸೇರುವೆಯೊಳಕಾರಾದಿಹಂಕ್ಷಂಗಳಿಂ |
ಬೀ ಸುತಪ್ಪಪದಕ್ಷರಂಗಳಾಜ್ಞಾದಿ ಷಟ್ಚಕ್ರಮಧ್ಯದೊಳೊಪ್ಪುವ ||
ಭಾಸುರಪ್ರಣವಂ ಯಕಾರಂ ವಕಾರ^೧^ಂಗ |
ಳಾ^೧^ ಸಮೀಪದ ಶಿಕಾರಂ ಮಕಾರಂ ತಿಳಿಯ |
ಲೋಸರಿಸದಾ ನಕಾರಂಗಳಿಂಬಾರು ಷಟ್ಚಕ್ರಮಧ್ಯದೊಳಿರ್ಪುವು　　|| ೪೮ ||

ಬಳಿಕಲಾಚಾರಲಿಂಗವೆ ನಕಾರಂ ಮುಂದೆ |
ತೊಳೆವ ಗುರುಲಿಂಗವೆ ಮಕಾರವಾ ಕಣ್ಗೆ ಥಳ |
ಥಳಿಪ ಶಿವಲಿಂಗವೆ ಶಿಕಾರವಾ ಚರಲಿಂಗವೇ ತಿಳಿಯೆ ವಾಕಾರವು ||
ಬೆಳಗುವ ಪ್ರಸಾದಲಿಂಗವೆ ಯಕಾರಂ ಸಮು |
ಜ್ವಲಿಸುವ ಮಹಾಲಿಂಗವೇ ಪ್ರಣವಮಿಂತು ನಿ |
ರ್ಮಳಷಡಕ್ಷರಗಳೀ ಷಡ್ಲಿಂಗ^೨^ವೆಲೆ ಸಿದ್ಧರಾಮೇಶ ಕೇಳೆಂದನು^೩^　　|| ೪೯ ||

ಪರಮಚಿತ್ರಣಮವೇ ತ್ವಕ್ಕಿನೆಲ್ಲೆಡೆಯೊಳೊಲಿ |
ದಿರುವುದಿನ್ನಾ ನಕಾರವೆ ರುಧಿರದಲ್ಲಿ ತಾ |
ನಿರುವುದು ಮಕಾರವೇ ಮಾಂಸದಲ್ಲಿರುವುದು ಶಿಕಾರ ಮೇದಸ್ಸಿನಲ್ಲಿ |
ಇರುವುದಿನ್ನಾ ವಕಾರವೆಯಸ್ಥಿಯಲ್ಲಿ ತಾ |
ನಿರುವುದು ಯಕಾರವೇ ಮಜ್ಜೆಯಲ್ಲಿರುವುದಾ |
ಪರಷಡಕ್ಷರಿಗಳೀ ಶುಕ್ಲದಲ್ಲಿರುವುವೆಲೆ ರಾಮೇಶ ಕೇಳೆಂದನು　　|| ೫೦ ||

ಇಂತಿದೇ^೪^ ಸರ್ವಾಂಗಲಿಂಗಸಾಹಿತ್ಯವೈ^೪^ |
ಮುಂದೆ ಲಿಂಗಾರ್ಪಣವಿಧಾನಮಂ ಪೇಳ್ವೆನೋ |
ರಂತೆ ಕ್ರಿಯಾರ್ಪಣಮದೆಂದು ಜ್ಞಾನಾರ್ಪಣಮದೆಂದುಭಯಭೇದಂಗಳು ||
ಅಂತೆಸೆ ಕ್ರಿಯಾರ್ಪಣದ ಭೇದಮಂ ವಿಸ್ತರಿಪೆ^೫^ |
ನಿಂ ತಿಳಿವುದಾತ್ಮೋಪಭೋಗಕ್ಕೆ ತಕ್ಕ ದ್ರ |
ವ್ಯಂ ತಾನೆ ಬರಲಿದೇ ಮೂರು ತೆರನದರ ಪರಿಯಾಯಮಂ ಪೇಳ್ವೆನಿನ್ನು　　|| ೫೧ ||

೧-೧ ವಿರ ವಾ (ಹು.) ೨-೨ ನೆಸಸಿ ಷಟ್ಚಕ್ರಮಧ್ಯದೊಳಿರ್ಪವು (ಹು, ಮ.) ೩ ವೇ (ಹು.) ೪ ವಿಂ (ಮ.) ; ದಿಂ (ಹು.) ೫ ವಿಸ್ತರಿಸಿ (ಶಿ, ಗೋ.) ; ಚೆನ್ನಾಗಿ (ಹು, ಮು.)

ಸ್ಥೂಲದ್ರವ್ಯಾರ್ಪಣಂ ಸೂಕ್ಷ್ಮದ್ರವ್ಯಾರ್ಪಣಂ |
ಮೇಲೆಯಾನಂದದ್ರವ್ಯಾರ್ಪಣವಿವೀಗಲಾ |
ಸ್ಥೂಲದ್ರವ್ಯವೆ ರೂಪು ಸೂಕ್ಷ್ಮದ್ರವ್ಯವೆ ರುಚಿ ಸದಾನಂದವೇ ತೃಪ್ತಿಯು ||
ಸ್ಥೂಲದ್ರವ್ಯದ ರೂಪನಿಷ್ಟಲಿಂಗಾರ್ಪಣವ |
ಲೀಲೆಯಿಂ ಮಾಡುವಾತನೆ ವಿಶ್ವನೊಲವಿನಿಂ |
ದಾಲಿಸಾ ಸೂಕ್ಷ್ಮದ್ರವ್ಯದ ರುಚಿಯನೇ ಪ್ರಾಣಲಿಂಗಕರ್ಪಿಸುವಾತನೇ || ೫೨ ||

ಸಲೆ ತೈಜಸಂ ನಿರ್ಮಳಾನಂದದ್ರವ್ಯಮುಮ |
ನೊಲಿದು ಸದ್ಭಾವಲಿಂಗಾರ್ಪಣವ ಮಾಳ್ಪನೇ |
ನೆಲೆವೆತ್ತ ಪ್ರಾಜ್ಞನೆಂದಿಷ್ಟಲಿಂಗದ ಪ್ರಸಾದವೆ ಶುದ್ಧವೆಂದೆನಿಪುದು ||
ಬಳಿಕಲಾ ಪ್ರಾಣಲಿಂಗದ ಪ್ರಸಾದವೆ ಸಿದ್ಧ |
ವಳವಟ್ಟ ಭಾವಲಿಂಗದ ಪ್ರಸಾದವೆ ತಾನೆ |
ತಿಳಿಯಲ್ ಪ್ರಸಿದ್ಧವಾ ಸುಪ್ರಸಾದಿಗಳೆ ವಿಶ್ವಂ ತೈಜಸಂ ಪ್ರಾಜ್ಞರು[೧] || ೫೩ ||

ನಿರುತದಿಂ ಜಾಗ್ರ ಸ್ವಪ್ನಂ ಸುಷುಪ್ತಿಗಳೊಳಾ |
ಪರಮಾತ್ಮನೇ ತ್ರಿವಿಧಭೇದದಿಂ ತ್ರಿವಿಧಸ |
ತ್ಪರಮಲಿಂಗಾರ್ಪಿತಪ್ರಸಾದಭೋಗೋಪಭೋಗದೊಳ್ ಸಂತುಷ್ಟನಾಗಿ ||
ಪರಮಸುಖದಿಂದೆ ನಿರ್ಲೇಪತ್ವನಾಗಿ ತಾ |
ನಿರುತಿರ್ಪನಿಂತಿದೇ ಸತ್ಕ್ರಿಯಾರ್ಪಣಮೆಂದು |
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು || ೫೪ ||

ಒರೆವೆನಾಲಿಪುದು ಸುಜ್ಞಾನಾರ್ಪಣವನಿನ್ನು |
ಪರಿಕಿಸಲ್ ಸರ್ವೇಂದ್ರಿಯಂಗಳ ಮುಖಂಗಳ್ಗೆ |
ಬರುತಿರ್ಪ ಸಕಲದ್ರವ್ಯಂಗಳಂ ಷಡ್ವಿಧಾತ್ಮಾಂಗರೂಪಿಂದಲವನು ||
ಇರದೆ ಷಡ್ವಿಧಲಿಂಗಮುಖದಿನರ್ಪಿಸಿ ನಿರಂ |
ತರ ತತ್ಪ್ರಸಾದಮುಂ ಭೋಗಿಸುವರಿನ್ನದರ |
ಪರಿಯನಾಲಿಸು ಗಂಧ ರಸ ರೂಪು ಸ್ಪರ್ಶವಾಶಿ ಶಬ್ದ ಪರಿಣಾಮಂಗಳು || ೫೫ ||

---

೧ ನು (ಮ.) ೨-೨ ಗಂಗಳಿಂ (ಮ.) ೩ ನಾ (ಶಿ, ಗೋ.)

ಇಂತೆಸೆವ ಷಡ್ವಿಷಯವೇ ಷಟ್ಪದಾರ್ಥಂಗ |
ಳೆಂತೆನಲ್ ಗಂಧವೇ ಪರಿಮಳಪದಾರ್ಥವಾ |
ಮುಂತೆಸೆವ ರಸವೆ ಮಧುರಾದಿ ಸುಪದಾರ್ಥವಾ ರೂಪೆ ವರ್ಣಪದಾರ್ಥವು ||
ಸುಂತಾ ಸ್ಪರುಶವೆ ಮೃದುವಾದಿ ಸುಪದಾರ್ಥವಾ
ನಂತರಂ ಶಬ್ದವೇ ನಾದ ಸುಪದಾರ್ಥಮೋ |
ಇಂತೆ ಪರಿಣಾಮವೆ ಸುಖ ಪದಾರ್ಥವಿವಿಂಗಲಿಲಿ ರಾಮ ಕೇಳೆಂದನು || ೫೬ ||

ಪರಿಯೊಳಿಂತೆಸೆವ ನಾನಾಪದಾರ್ಥಂಗಳೊಳ್ |
ಬೆರಸಿ ಲಿಂಗಾರ್ಪಣಸುಬುದ್ಧಿಯುಂ ತಿಳಿದು ತ |
ತ್ವರಿತನಾತ್ಮನೆ ಷಡ್ವಿಧಾಂಗದಿಂ ಷಡ್ವಿಧಸುಲಿಂಗಮುಖದಿಂದರ್ಪಿಸಿ ||
ವರಸುಪ್ರಸಾದವುಂ ಭೋಗಿಸುವನಿಂತಿವ[೧]ರ |
ಪರಿಯನೊರೆವೆಂ ಸುಚಿತ್ತದೊಳಾಲಿಸೆಂದಾಗ |
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು || ೫೭ ||

ಪರಮಸದ್ಭಕ್ತಿಯುತಭಕ್ತನೊಲವಿಂ ತನ್ನ |
ಧರಣಿಯಂಗದೆ ಕ್ರಿಯಾಶಕ್ತಿಸಂಯುಕ್ತವಾ |
ಗಿರುತಿಹ ಸದಾಚಾರಲಿಂಗನಾಸಿಕಮುಖದೆ ಚಿತ್ತದುರುಹಸ್ತದಿಂದೆ ||
ವರಚಂದನಾದಿ ನಾನಾಪರಿಮಳಂಗಳಂ |
ಹರುಷದಿಂದರ್ಪಿಸಿ ಸುಗಂಧಪ್ರಸಾದಮಂ |
ನಿರುತದಿಂ ಭೋಗಿಪನೆ ಸದ್ಭಕ್ತನೆಲೆ ಸಿದ್ಧರಾಮೇಶ ಕೇಳೆಂದನು || ೫೮ ||

ಪರಮನಿಷ್ಠಾಭಕ್ತಿಯುತಮಹೇಶಂ ನಿರಂ |
ತರ ವಾರಿಯಂಗದಿಂ ಸುಜ್ಞಾನಶಕ್ತಿಯುತ |
ಗುರುಲಿಂಗರಸನಮುಖದಿಂದಾ ಸುಬುದ್ಧಿಯುರುಹಸ್ತದಿಂದನವರತವು ||
ಹರುಷದಿಂ ಮಧುರಾದಿ [೨]ಷಡ್ರಸಪದಾರ್ಥಮಂ[೨] |
ಪರಿವಿಡಿಯೊಳುಂ ಸಮರ್ಪಿಸಿ ತತ್ಪ್ರಸಾದಮಂ |
ಪರಿಣಾಮದಿಂದೆ ಭೋಗಿಸುವನೆ ಮಾಹೇಶನೆಲೆ ರಾಮ ಕೇಳೆಂದನು || ೫೯ ||

---

೧ ದೆ (ಹು.) ೨-೨ ಷಡ್ರಸ್ಯವೊಲವಿನಿಂ (ಶಿ, ಗೋ.)

ಅವಧಾನಭಕ್ತಿಸಂಯುತಸುಪ್ರಸಾದಿಯಾ ।
ಹವಿಯಂಗದಿಂದಲಿಚ್ಛಾಶಕ್ತಿಯೊಡನಿರ್ಪ ।
ಶಿವಲಿಂಗನೇತ್ರಮುಖದಿಂದೆ ನಿರಹಂಕಾರಹಸ್ತದಿಂದನವರತವು ॥
ಸುವಿವೇಕದಿಂದೆ ಶ್ವೇತಾದಿಷಡ್ವರ್ಣದ್ರ ।
ವ್ಯವನೊಲವಿನಿಂದಲರ್ಪಿಸಿ ತತ್ಪ್ರಸಾದಮಂ ।
ಸವಿದಾತನೇ ಸುಪ್ರಸಾದಿಯಹನೆಲೆ ಸಿದ್ಧರಾಮೇಶ ಕೇಳೆಂದನು ॥ ೬೦ ॥

ಹರುಷದಿಂದನುಭಾವಭಕ್ತಿಯಂ ಕೂಡಿಕೊಂ ।
ಡಿರುತಿರ್ಪ ಸತ್ಪ್ರಾಣಲಿಂಗಿಯೆಂದೆಂಬ ತ ।
ನ್ಮರುತಾಂಗದಿಂದಾದಿಶಕ್ತಿಸಂಯುತವಾದ ಚರಲಿಂಗ ತನ್ಮುಖದೊಳು ॥
ನಿರುತದಿಂದಾ ಸುಮನಹಸ್ತದಿಂ ಮೃದುವಾದಿ ।
ಸ್ಪರುಶನಪದಾರ್ಥಮುಮನರ್ಪಿಸಿ ಪ್ರಸಾದಶಿಮಂ ।
ಪರಿಣಾಮದಿಂದೆ ಭೋಗಿಸುವಾತನೇ ಪ್ರಾಣಲಿಂಗಿ ನಿಂ ಕೇಳೆಂದನು ॥ ೬೧ ॥

ನಿರುತದಿಂದಾನಂದಭಕ್ತಿಸಂಯುತವಾದ ।
ಶರಣನೇ ವ್ಯೋಮಾಂಗದಿಂ ಪರಾಶಕ್ತಿಯೊಡ ।
ನಿರುವ ಪ್ರಸಾದಲಿಂಗದ ಶ್ರೋತ್ರಮುಖದಿನಾ ಸುಜ್ಞಾನಹಸ್ತದಿಂದೆ ॥
ವರಸುನಾದದ್ರವ್ಯಮಂ ಸಮರ್ಪಿಸಿ ನಿರಂ ।
ತರಸುಪ್ರಸಾದಮಂ ಸೇವಿಸುತ್ತಿರ್ಪನೇ ।
ಶರಣನೆಂದಾಗಲಾ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು ॥ ೬೨ ॥

ಎಸೆವ ಸಮರಸಭಕ್ತಿಯುಕ್ತನಾದೈಕ್ಯನಾ ।
ಪಸರಿಸುವ ಪರಮಾತ್ಮನೆಂದೆನಿಸುವಂಗದಿಂ ।
ಮಿಸುಪ ಚಿಚ್ಛಕ್ತಿಸಂಯುತಮಹಾಲಿಂಗ ಹೃನ್ಮುಖದಿಂದಲನವರತವು ॥
ಹಸನಾದ ಸದ್ಭಾವಹಸ್ತದಿಂ ಪರಿಣಾಮ ।
ದೆಸಕದ ಪದಾರ್ಥಮುಮನರ್ಪಿಸಿ ಬಳಿಕ್ಕೆ ಸಂ ।
ತಸದೊಳಾ ಸುಪ್ರಸಾದವ ಭೋಗಿಸುವನೈಕ್ಯನೆಲೆ ರಾಮ ಕೇಳೆಂದನು ॥ ೬೩ ॥

೧-೧ ವ್ಯಾಪ್ತ್ಯ (ಹು.) ೨ ಮಾ (ಹು.) ೩ ಪದಾರ್ಥ (ಹು, ಮ.)

ಪರಿವಿಡಿಯೊಳಿಂತೊಪ್ಪುವಂಗವುಂ ಲಿಂಗವುಂ |
ಹರುಷದಿಂದಿರ್ಪ ಸದ್ಭಕ್ತಿಯುಂ ಶಕ್ತಿಯುಂ |
ಸಿರಿಯುತವಿಂಬೆಸೆವ ತದ್ವದನವುಂ ಹಸ್ತವುಮನರ್ಪಿತಪ್ರಸಾದಂಗಳುಂ |
ಪರಿಕಿಸಲ್ಕೆಂಟುತೆರದಿಂ ಪ್ರತಿಸ್ಥಳಗಳ |
ಲ್ಲಿರುತಿರ್ಪುವಿಂತಪ್ಪ ಷಟ್ಸ್ಥಲವಿದೀಗೆಂದು |
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು || ೬೪ ||

ಎಸೆವ ಸತ್ತೇಯಂಗಲಿಂಗವೆಂದೆರಡಾಯ್ತು |
ಮಿಸುಪ ಚಿತ್ತೇ ಶಕ್ತಿಭಕ್ತಿಯೆಂಬೆರಡಾಯ್ತು |
ಪಸರಿಪಾನಂದವೆ ಸಮರ್ಪಣಂ ತತ್ಪ್ರಸಾದಂಗಳೆಂಬೆರಡಾದುವು |
ಹಸನಾದ ಸಚ್ಚಿದಾನಂದಲಕ್ಷಣವೆ ರಾ |
ಜಿಸುವ ತತ್ತ್ವತ್ರಯಂ ತಾನೆ ಷಟ್ಸ್ಥಲವೆಂಬ |
ಪೆಸರಾಂತುದೆಂದಾಗ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು || ೬೫ ||

ಇಂತು ಪರಶಿವನೆ ಷಡ್ವಿಧಲಿಂಗವಾಗಲಾ |
ಸಂತರದಿ ಪರಮಾತ್ಮನೇ ಷಡ್ವಿಧಾಂಗಮುಂ |
ತಾನೆ ತಳೆದು ಸರ್ವಾಂಗಲಿಂಗಿಯಾಗಿರುತೆ ಸರ್ವೇಂದ್ರಿಯಪದಾರ್ಥಂಗಳ |
ತಾಂ ತಡೆಯದಾಗಲರ್ಪಿಸಿ ತತ್ಪ್ರಸಾದಮಂ |
ಸಂತೋಷದಿಂದೆ ಸೇವಿಸಿ ಸುಖದೊಳಿರುತಲಾ |
ಮುಂತೆ ಕ್ರಮದಿಂ ನಿವೃತ್ತಿಯೊಳೈಕ್ಯವಪ್ಪುದಿದಂ ಪೇಳ್ವೆನೊಲಿದಾಲಿಸಿನ್ನು || ೬೬ ||

ಪರಶಿವನೆ ಲಿಂಗವಾ ಪರಮಾತ್ಮನೇಯಂಗ |
ವೆರಡರೊಳ್ ತೆರಹಿಲ್ಲದಿರ್ಪುದೇ ಸಂಯೋಗ |
ವಿರದೆ ಸಂಯೋಗವೇ ಸದ್ಭಕ್ತಿಯೆನಿಸಿತದರಿಂದಾಯ್ತು ಭಕ್ತಿಸ್ಥಲಂ ||
ವರಭಕ್ತನಾಚಾರಲಿಂಗಸಂಯೋಗದಿಂ |
ಮಿರುತಿರ್ಪ ಸದ್ಭಕ್ತಿಯಿಂದಿರ್ಪ ನಿಷ್ಠೆಯೇ |
ಪರಮನಿಷ್ಠಾಭಕ್ತಿಯೆನಿಸಿತೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೬೭ ||

೧-೧. ೬೧ ತಿಳಿಯೆಂ (ಹು, ಮ.) ೨ ದಿಂ | ದೆ (ಹು.) ೩ ಪ (ಶಿ, ಗೋ.) ೪ ನಾದು (ಹು, ಮ.)

ಎಸೆವ ನಿಷ್ಠಾಭಕ್ತಿಯಿಂದಲಾತ್ಮಂಗೆ ರಾ |
ಜಿಸುವ ಮಾಹೇಶ್ವರಸ್ಥಲವದಾಯ್ತಾತ[1]ನೆ |
ಪಸರಿಸುವ ಗುರುಲಿಂಗಸಂಗದಿಂದಿರ್ಪ ನಿಷ್ಠಾಭಕ್ತಿಯವಧಾನವೇ ||
ಎಸಕದಿಂದವಧಾನಭಕ್ತಿಯೆನಿಸಿತ್ತದರ |
ದೆಸೆಯಿಂ ಪ್ರಸಾದಿಯ ಸ್ಥಲವಾದುದಾತನಾ |
ಜಸವೆತ್ತ ಶಿವಲಿಂಗಯೋಗದಿಂದಿರುವಾವಧಾನದ ಮಹಾನುಭವವೇ || ೭೮ ||

ತಿಳಿಯಲನುಭವಭಕ್ತಿಯೆನಿಸಿತಾ ಭಕ್ತಿಯಿಂ |
ದಳವಟ್ಟ ಪರಣಲಿಂಗಿಯ ಸ್ಥಲವದಾಯ್ತಾತ |
ನೊಲಿದು ಚರಲಿಂಗಸಂಯೋಗದಿಂದಿರ್ಪ ಪರಮಾನುಭವದಾನಂದವೇ ||
ಪೊಳೆವುತಿರ್ಪಾನಂದಭಕ್ತಿಯೆನಿಸಿತ್ತದರೊ |
ಳೊಲಿದು ಶರಣಸ್ಥಲವದಾಯ್ತಾತ[2]ನೇ ತನ್ನ[2] |
ಬೆಳಗುವ ಪ್ರಸಾದಲಿಂಗದ ಯೋಗದಿಂದಿಹ ಸದಾನಂದಸಾಮರಸವೇ || ೭೯ ||

ಪರಮಸಮರಸಭಕ್ತಿಯೆನಿಸಿತಾ ಭಕ್ತಿಯಿಂ |
ದಿರದಲ್ಲೈಕ್ಯಸ್ಥಲಮದಾಯ್ತು ಬಳಿಕೈಕ್ಯನಾ |
ವರಮಹಾಲಿಂಗಸಂಯೋಗದಿಂದೈಕ್ಯವಾಗಲ್ಕೆ ಪರವೈಕ್ಯನಿಂದೆ ||
ಪರವಿಲ್ಲವಾಗಿ ಸಮರಸಭಕ್ತಿಯಾತನ |
ಲ್ಲಿರುತೆ ಸಮರಸವಾಗಿ ನಿಶ್ಶಬ್ದವಾಯ್ತೆಂದು |
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು || ೮೦ ||

ಶಶಿಮಂಡಲಂ ಜೊನ್ನವಾಗಸಂ ವಾಯುವಾ |
ಕುಸುಮಮಾ ಸುರಭಿ ಕರಕಾಂಭಸಂ ವಾಗರ್ಥ |
ವೆಸವದೀಪಂ ಬೆಳಗು ರತ್ನವಾ ಕಾಂತಿ ರಸ ರುಚಿಗಳೆಂದೆಂಬೆರಡರ ||
ಬೆಸುಗೆಯಿಂದಾ ವಿಭಾಗಂಗಳೆಂತಂತೆ ರಾ |
ಜಿಸುತೆ ತಲ್ಲಿಂಗದಂಗದ ಸಂಗಯೋಗದಿಂ[3] |
ತೆಸೆದುಭಯವಳಿದೇಕವಾದುದೈಕ್ಯ[4]ಸ್ಥಲವಿದೀಗ ನೀಂ[4] ಕೇಳೆಂದನು || ೮೧ ||

೧ ಮಾಯ್ತುದಾತ್ಮ (ಹು.) ೨-೨ ಚೆನ್ನ ತಾಂ (ಹು, ಮ.) ೩ ವಂ (ಹು, ಮ.) ೪-೪ ವಿವಿ
ಗವೆಲೆ ರಾಮ (ಹು, ಮ.)

ಪಸರಿಸುವ ಲಿಂಗದಂಗದ ಸಂಗವೇ ಯೋಗ |
ವೆಸೆವ ಸಂಯೋಗವೆ ನಿವೃತ್ತಿಯಾ ನಿರ್ವೃತಿಯು |
ಮಿಸುಗುವದ್ವೈತವದ್ವೈತವೆನಲೈಕ್ಯವಂತೈಕ್ಯವೇ ಸಾಯುಜ್ಯವು ||
ಮಿಸುಪ ಸಾಯುಜ್ಯವೇ ವಿಶ್ರಾಂತಿಯೆನಿಪುದಾ |
ಪಸರಿಸುವ ವಿಶ್ರಾಂತಿಯೇ ಪರಮಪದವಿಯಾ |
ಜಸವೆತ್ತ ಪರಮಪದದಿಂ ಬೇರೆ ಮುಕ್ತಿಯಿಲ್ಲೆಲೆ ೧ರಾಮ ಕೇಳೆಂದನು೧　　|| ೭೨ ||

ಇಂತು ಭಕ್ತಾದಿಯೈಕ್ಯಾಂತವಾದಾತ್ಮನೇ |
ಮುಂತೆಯಾಚಾರಲಿಂಗಾದಿ ಸುಮಹಾಲಿಂಗ |
ವಾಂತ ಷಡ್ವಿಧಲಿಂಗಮುಂ ಷಡ್ವಿಧಾಂಗದಿಂ ತಳೆದೈಕ್ಯನಿಜಪದವಿಯ ||
ಅಂತು ಷಟ್ಸ್ಥಲಬ್ರಹ್ಮದಾಚರಣೆಮಾರ್ಗವಿದು |
ನೀಂ ತಿಳಿವುದೆಂದಾಗ ಸಿದ್ಧರಾಮೇಶಂಗೆ |
ಸಂತಸದೆ ಚೆನ್ನಬಸವೇಶ್ವರಂ ನಿರವಿಸಿದನಖಿಳಶರಣರು ತಿಳಿವೊಲು　　|| ೭೩ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮುನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ　　|| ೭೪ ||

ಅಂತು ಸಂಧಿ ೬೧ಕ್ಕಂ ಪದಗಳು ೨೭೪೮ಕ್ಕಂ ಮಂಗಳಮಹಾಶ್ರೀ

೧-೧ ಸಿದ್ಧರಾಮ ಕೇಳು (ಮ.)

ಅರುವತ್ತೆರಡನೆಯ ಸಂಧಿ

ಸೂಚನೆ

ಎಸೆವ ಷಟ್ಸ್ಥಲಮಾರ್ಗಮಂ ತಿಳಿದೆನಿನ್ನು ರಾ |
ಜಿಸುವ ಕಾಲಜ್ಞಾನಮಂ ತಿಳಿಯಪೇಳ್ಗು ರ |
ಕ್ಷಿಸುವುದೆನೆ ಸಿದ್ಧರಾಮೇಶಂಗೆ ಗುರುಚೆನ್ನಬಸವೇಶ ನಿರವಿಸಿದನು ||

ಸಾರಂಗದೈತ್ಯಚರ್ಮಾಂಬರಧರಂ ದೇವ |
ಸಾರಂಗಧರಕಲಾಜೂಟವಿಲಸದ್ದೇವ |
ಸಾರಂಗವಾಹನಾದ್ಯಖಿಳದೇವರ ದೇವ ಸಾರಂಗಪಾಣಿದೇವ ||
ಸಾರಂಗಧರ ಪರಮವಾಹನಮಹಾದೇವ |
ಸಾರಂಗವೈರಿವಾಹಿನಿ[೧]ಯಾಳ್ದ[೨]ನೇ ದೇವ |
ಸಾರಂಗವದನಪಿತ ಪಂಪಾವಿರೂಪಾಕ್ಷ ಸಾರಂಗವರಶಿವಂವುದು ✽ || ೧ ||

ಎಲೆ ಮಹಾಗುರುವೆ ನೀಂ ಕರುಣದಿಂ ಪೇಳ್ದ ಷ |
ಟ್ಸ್ಥಲವನುರೆ ತಿಳಿದೆನ್ನ[೪] ಭವಭವಾಂತರವನತಿ |
ಗಳೆದು ಸದ್ಯೋನ್ಮುಕ್ತನಾದೆನೆಂದಾ ಚೆನ್ನಬಸವನಂ ನುತಿಸುತಿರಲು ||
ನಲವಿನಿಂ ಪ್ರಭು ಸಿದ್ಧರಾಮ ನೀಂ ಬಂದುದಕೆ |
ಫಲವಾಯ್ತು ನಾವಿನ್ನು ಪೋಗಿಬಂದಪೆವೆನಲ್ |
ಮಲಹರನೆ ನಿಮ್ಮಿಂದಲಿಂತಪ್ಪ ಸದ್ಗುರುವ ಕಂಡು ಕೃತಕೃತ್ಯನಾದೆ || ೨ ||

ಎಂದಾಗ ಸಿದ್ಧರಾಮೇಶನಲ್ಲಮಗೆರಗಿ |
ನಿಂದು ಕೊಂಡಾಡುತಿರೆ ಚೆನ್ನಬಸವೇಶನಾ |
ನಂದದಿಂದಲ್ಲಮಪ್ರಭು ಸಿದ್ಧರಾಮೇಶನಾದ್ಯಖಿಳಗಣಕುಲವನು ||
ಮಂದಿರಕ್ಕೊಡಗೊಂಡುಪೋಗಿ ಮೃಷ್ಟಾನ್ನದಿಂ |
ದಂದವರನೆಲ್ಲರಂ ತುಷ್ಟಿವಡಿಸಲ್ ಕರುಣ |
ದಿಂದಾಗಲಲ್ಲಮಂ ಬಸವಮೊದಲಾದ ಗಣಸಂಕುಲಕ್ಕಿಂತೆಂದನು || ೩ ||

---

೧ ಹನ (ಪ, ಹು, ತು, ದಾ.); ಹನೆ (ಮ.) ೨ ಳ್ಮ (ಪ, ಗೋ, ತು, ದಾ.); ಙ (ಮ.) ೩ ಪದ (ಮ.) ೪ ದಿನ್ನು (ಶಿ.) ✽ ಈ ಪದ್ಯವು ಅ, ಬ, ಕ, ಪ, ಹು, ಮ. ಈ ಪ್ರತಿಗಳಲ್ಲಿ ೬೩ನೆಯ ಸಂಧಿಯ ಮೊದಲನೆಯ ಪದ್ಯವಾಗಿದೆ.

ಚೆನ್ನಬಸವಂ ಪೇಳ್ದ ಷಟ್ಸ್ಥಲಸುಮಾರ್ಗವುಂ |
ಚೆನ್ನಾಗಿ ತಿಳಿದುಕೊಳುತಿರಿ ಮರಳಿಬಂದಾವು |
ಭಿನ್ನವಿಲ್ಲದ ತೆರದೆ ಸಂಪಾದನಂಗೆಯ್ದು ನೋಡಿ ನಿಮಗಾಗ ಬಳಿಕೆ ||
ಉನ್ನತಸುಮುಕ್ತಿಯೊಳಗಿಂಬಿಟ್ಟು ಪೋದಪೆಂ |
ನನ್ನಿಯೆಂದಾಗ ನಂಬುಗೆಯಿತ್ತು ಬಸವನಂ |
ಚೆನ್ನಬಸವನ್ ಸಿದ್ಧರಾಮುಮೊದಲಾದರಂ ನಿಲಿಸಿ ತಾಂ ಬೀಳ್ಕೊಂಡನು || ೪ ||

ಸಿದ್ಧರಾಮೇಶನಾ ಚೆನ್ನಬಸವಂಗೆರಗಿ |
ಬುದ್ಧಿಯಿನ್ನಾವುದೆನಗೆನೆ ಕೇಳ್ದು ನೀಂ ಸುಪ್ರ |
ಸಿದ್ಧಮೆನಿಸುವ ಸೊನ್ನಲಾಪುರದೆ ನಿಜಸಮಾಧಿಯೊಳಿರ್ಪುದೆನಲಾತನು ||
ಬದ್ಧಾಂಜಲಿಪುಟಘಟ್ಟನಮುಕುಟತಟನಾಗು |
ತುದ್ಧರಿಸಬೇಕಿನ್ನು ಮುಂದಣಾಗಂತರದ |
ಸುದ್ದಿಯಂ ಪೇಳ್ವುದೆನಗೀಗಲೆನೆ ಚೆನ್ನಬಸವೇಶನೊಲಿದಿಂತೆಂದನು || ೫ ||

ಆಲಿಸೈ ರಾಮ ಕಾಲಜ್ಞಾನಮಂ ಮಹಾ |
ಲೀಲೆಯಿಂದಲ್ಲಮಪ್ರಭುವೀಗ ತಾಂ ಪೋದ |
ನೋಲಖಿಳದೇಶಮಂ ಚರಿಸುತಾ ಶಿವಭಕ್ತರಿಷ್ಟಮಂ ಕರುಣದಿಂದೆ ||
ಪಾಲಿಸುತ್ತಲ್ಲಿರ್ಪ ಗಿರಿಗುಹಾನದನದೀ |
ಜಾಲಮಂ ತನ್ನ ಪಾದಸ್ಪರ್ಶನದೊಳಾಗ |
ಮೇಲಾದ ಪುಣ್ಯತೀರ್ಥಂಗಳಂ ಮಾಡುತುಂ ತಿಗುಳಾಣ್ಯಕೈತರುವನು || ೬ ||

ಇರದಲ್ಲಿ ಕಂಚಿ ಕಾಳಾಸ್ತಿ ಪೊನ್ನಾಂಬಲಮ |
ದರುಣಾಚಲಂ ಕುಂಭಕೋಣ ರಾಮೇಶ ಮ |
ತ್ತಿರದಲ್ಲಿ ಗೋಕರ್ಣ ಸೌರಾಷ್ಟ್ರ ಕಾಶಿ ಕೇತಾರಾದಿ ತೀರ್ಥಂಗಳ ||
ಕರುಣದಿಂ ನೋಡುತ್ತೆ ಹಿಮಗಿರಿಯ ದಾಂಟಿ ತಾಂ |
ತಿರುಗಿಬರುವಂ ಸವಾಲಕ್ಷಪರ್ವತದಲ್ಲಿ |
ಪರಮಮುನಿಗಳ ನೋಡಿ ತತ್ತ್ವಮಂ ಪೇಳ್ದು ಮುಕ್ತಿಯನೊಲಿದು ಕೊಟ್ಟು ಬಳಿಕೆ
|| ೭ ||

೧ ಮಂ (ಹು, ಮ.) ೨ ಗಾಂ (ಗೋ, ಮ.) ೩ ಳಸ್ತಿ (ಪ, ಶಿ, ಗೋ, ಹು.)

ಆ ಗಿರಿಗುಹಾಂತರದೆ ಹಟಯೋಗ ಲಂಬಿಕಾ |
ಯೋಗಮೊದಲಾದವಕ್ಕಧಿಕವೆನಿಸುವ ರಾಜ |
ಯೋಗದಿಂ ತನ್ನ ನಿಜಮಂ ತಾನೆ ಜಾನಿಸುತ್ತಿರ್ದರುವರುಷವಿರ್ದು |
ಆಗಲೀ ಬಸವಣ್ಣನಂದುವರೆಗಂ ಬಿಡದೆ |
ಸಾಗಿಸುವ ಶೂನ್ಯಪೀಠವನರಿದು ತಾಂ ಮನೋ |
ವೇಗದಿಂದಿಲ್ಲಿಗೈತರುವನೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೮ ||

ಅಲ್ಲಮಪ್ರಭುವಿಲ್ಲಿಗೈತರ್ಪುದಂ ತಿಳಿದು |
ಮೆಲ್ಲನೀ ಬಸವಣ್ಣಗರುಪೆ ಬಳಿಕೀ ಶರಣ |
ರೆಲ್ಲರುಂ ಸಹಿತಿದಿರ್ಗೊಂಡು ಕರೆತರಲಾತ ಶೂನ್ಯಪೀಠವನೇರುವಂ |
ಅಲ್ಲಿರ್ದ ಚರಪತಿಗಳದ ಕಂಡು ಕಡುಮುಳಿದು |
ನಿಲ್ಲದೇ ಪೋಗಲೀ ಬಸವರಾಜಂ ಮಹಾ |
ತಲ್ಲಣಂಗೊಂಡು ಪ್ರಭುರಾಯಂಗೆ ಬಿನ್ನವಿಪನೆಲೆ ರಾಮ ಕೇಳೆಂದನು || ೯ ||

ನೋಡಿರೇ[೧] ಗುರುವೆ ಜಂಗಮದೇವರಿರದೆ ಮಾ |
ತಾಡದೇ ಮುಳಿದು ಸಲಿಸದೆ ಪೋದರಿದಕೇನ |
ಮಾಡುವೆಂ ತಾನೆನುತ್ತಿ ಬಸವನಲ್ಲಮಂಗುಸಿರಲತಿಕರುಣದಿಂದೆ |
ಕೋಡದಿರ್ ಮನದೆ ಘನಚರಲಿಂಗಕೀಗ ನೀಂ |
ಮಾಡಿಸಿದ ಪರಿಕರವನೆಲ್ಲವಂ ತರಿಸೆಮಗೆ |
ನೀಡಿಸಿದೊಡಾರೋಗಿಸುವೆವೆಂದು ನುಡಿಯಲದ ಕೇಳುತತಿಭಕ್ತಿಯಿಂದೆ || ೧೦ ||

ಲಕ್ಕದಿಂ ಮೇಲೆ ತೊಂಭತ್ತಾರು ಸಾವಿರದ |
ಲೆಕ್ಕದಿಂ ಮಿಗಿಲೆನಿಪ ಚರಲಿಂಗಕೊಲವಿನಿಂ |
ಚೊಕ್ಕಟದೆ ಮಾಡಿಸಿದ ಪರಿಪರಿಯ ಪರಿಕರಂಗಳನಿರದೆ ತರಿಸಿ ಕೂಡೆ |
ಉಕ್ಕುವತಿಹರುಷದಿಂ ನೀಡಿಸುವನನಿತುಮಂ |
ಮುಕ್ಕಣ್ಣನಪರಾವತಾರನಲ್ಲಮನಾಗ |
ಲೆಕ್ಕಿಸದೆ ಸಲಿಸುವಂ ಗಗನವೇ ಬಾಯ್ತೆರದೊಲೆಲೆ ರಾಮ ಕೇಳೆಂದನು || ೧೧ ||

---

೧ ದಿರೆ (ಶಿ, ಗೋ.)

ಅವಿರಳಾನಂದಮಯ ಗುರು ಚೆನ್ನಬಸವ ನೀಂ |
ವಿವರಿಸುವುದೆನಗೆ ಘನಚರಲಿಂಗಕೊಲವಿನಿಂ |
ಸವೆದ ಬೋನವನಿತನೊರ್ವನಲ್ಲಮದೇವನುಂಬುದಚ್ಚರಿಯೆಂದೆನೆ ||
ಶಿವನಾಜ್ಞೆಯಿಂದಖಿಳಗಣಕುಲಕ್ಕೌತಣವ |
ಶಿವೆ ಪೇಳ್ದು ಮಾಡಿದನಿತನ್ನವಂ ತಾನವರ |
ಸೆವದಿಂದಲಿಂಗಾಷ್ಟಗಣನಾಥನೊರ್ವನಾರೋಗಿಸನೆ ಕೇಳೆಂದನು || ೧೨ ||

ಆ ಗಣೇಶ್ವರನಿಂದಸಂಖ್ಯಾತಗಣಕುಲ |
ಕ್ಕಾಗದೇ ತೃಪ್ತಿ ಕೇಳೈ ಸಿದ್ಧರಾಮ ನೀ |
ನೀಗಳಾ ನಿರ್ವಾಯನೆಸಿಪ ಗಣನಾಥನಲ್ಲಮನೆನಿಸಿ ಚರಿಸಿ ಬಂದು ||
ಭಾಗದಿಂದನಿತನೊಬ್ಬನೆ ಸಲಿಸೆ ಮುಳಿದಿದ್ದು |
ಪೋಗೆ ಚರರೆಲ್ಲರ್ಗೆ ತೃಪ್ತಿಯಹುದೆನೆ ಪರಮ |
ಶ್ರೀಗುರುವೆಯೊರ್ವನಿಂದಿನಿಬರ್ಗೆ ತೃಪ್ತಿಯೆಂತಪ್ಪುದೆನಲಿಂತೆಂದನು || ೧೩ ||

ಕುರುಪತಿಯ ನೇಮದಿಂ ದೂರ್ವಾಸನಂದು ಹ |
ನ್ನೆರಡುಸಾವಿರಮಂದಿಋಷಿಗಳಂ ಕೂಡಿಕೊಂ |
ಡಿರ್ದ್ದೈದಿ ಧರ್ಮಜನ ಗ್ರಾಸಮಂ ಕೇಳಲಾಗಿ ಕೃಷ್ಣನಕ್ಷಯಪಾತ್ರೆಯ ||
ತರಿಸಿ ತೊಳೆದುದಕಮಂ ಕುಡಿಯೆ ಹನ್ನೆರಡು ಸಾ |
ವಿರಮಂದಿಋಷಿಗಳ್ಗೆ ತೃಪ್ತಿಯಾಗದೆ ಪಿಂತೆ |
ಮರಳಿ ಶಿವಚಿತ್ಪ್ರಸಾದದೆ ತೃಪ್ತಿಯಪ್ಪುದದು ಚೋದ್ಯವೇ ಕೇಳೆಂದನು || ೧೪ ||

ಅದು ನಿಮಿತ್ತದೊಳಲ್ಲಮನ ಮುಖದಿನನಿತುಚರ |
ರುದರ ತುಂಬುವುದಾಗ ಬಸವನವರೆಲ್ಲರಂ |
ಸದನಕ್ಕೆ ಮರಳಿ ಕರೆತಂದವರ್ ಬೇಡಿದಿಷ್ಟಂಗಳಂ ಕೊಟ್ಟು ಕಳುಪಿ ||
ಮುದದೆ ಗಣಕುಲಸಹಿತೆ ಬಸವನಲ್ಲಮಗೆರಗಿ |
ಸದಮಲಜ್ಞಾನಿ ಗತಿಯೆಮಗಾವುದೆನೆ ನಿಮ್ಮ |
ಹೃದಯದನುಭಾವದೈಕ್ಯಸ್ಥಲವ ಪೇಳಿಮೆಂದಲ್ಲಮಂ ನಿರವಿಸುವನು || ೧೫ ||

---

೧ ... ನಲ್ಲಮನೊಬ್ಬ ಸಲಿಸೆ ಮುಳಿ | ದಾಗೆದು ಪೋದರೆಲ್ಲರ್ಗೆ ತೃಪ್ತಿಯ (ಹು.) ೨ ಪೋದ ಚರ (ಪ, ಪು.); ಪೋಗಿರ್ದ (ಮ.) ೩ ಕೊಳ್ಳಲಾ (ಶಿ, ಗೋ.)

ಎಂದು ನಿರವಿಸಲಾಗ ಬಸವಾದಿ ಸಕಲಗಣ |
ಬೃಂದವಿರದೊಡನೆ ತಮ್ಮೈಕ್ಯಸ್ಥಳಂಗಳಂ |
ಸಂದಿಲ್ಲದಂತೆ ಬಿನ್ನವಿಸಲಲ್ಲಮನಾಗ ಮೆಚ್ಚಿ ನಿಮಗೈಕ್ಯಪದವಿ ‖
ಚೆಂದದಿಂದೞವಟ್ಟುದೆನುತೆ ನಿರವಯವಾಗು |
ವಂದವಂ ಕರುಣದಿಂ ತಿಳಿಪಿ ಬಳಿಕೆಮ್ಮನಾ |
ನಂದದಿಂ ಬೀಳ್ಕೊಂಡು ಶ್ರೀಶೈಲಕ್ಕೈದುವಂ ಕೇಳೆಂದು ನಿರವಿಸಿದನು ‖ ೧೬

ಆ ಗಿರಿಯ ಮೇಲೆ ಗೋರಕ್ಷ ಮೊದಲಾದಖಿಳ |
ಯೋಗಿಗಳ ಮನದಿಷ್ಟಮಂ ಕೊಟ್ಟು ಮಹದೇವಿ |
ಗಾಗ ನಿರ್ವಾಣಪದವಿಯನರಿಪಲಾಕೆ ಕದಳಿಯಲಿ ನಿರವಯಮಪ್ಪಳು ‖
ರಾಗದಿಂದಲ್ಲಮಂ ಕದಳಿಯಂ ಪೊಕ್ಕು ಶಿವ |
ಯೋಗದಿಂ ನಿರವಯವನೈದುವನದಂ ತಿಳಿದು |
ಬೇಗದಿಂದೀ ಬಸವನಖಿಳಗಣಸಂಕುಲಕ್ಕೆರಗಿ ಬಿನ್ನಹವ ಮಾಡಿ ‖ ೧೭

ಆಲಿಸೈ ಸಿದ್ಧರಾಮೇಶ ನೀಂ ಬಳಿಕಲಾ |
ಶಾಲಿವಾಹನಶಕದೊ[೧]ಳರುನೂರರಿಂದ ಮುಂ |
ದೇಳನೆಯ ರಕ್ತಾಕ್ಷಿಯೆಂಬ[೧] ವತ್ಸರದ ಫಾಲ್ಗುಣಶುದ್ಧದೇಕಾದಶಿ ‖
[೨]ಮೇಲಾದ ತಿಥಿಯು[೨] ಮಂಗಳವಾರದುದಯದಾ[೩] |
ಕಾಲದಿ[೪]ಪ್ಪತ್ತೈದು ಗಳಿಗೆಯೊಳ್ ಬಸವನತಿ |
ಲೀಲೆಯಿಂ ಸಂಗಮೇಶ್ವರನ ಹೃತ್ಕಮಲಕರ್ಣಿಕೆಯ ಮಧ್ಯದೊಳಡಗುವಂ ‖ ೧೮

ಅಲ್ಲಮಪ್ರಭುವಲ್ಲಿ ನಿರವಯವನೈದೆ ಬಳಿ |
ಕಿಲ್ಲಿಯಾ ಬಸವಣ್ಣನಿರದೆ ಸಂಗಮನಾಥ |
ನಲ್ಲಿ ತಾನೈಕ್ಯವಾಗಲ್ಕಂಡು ಹಡಪದಪ್ಪಣ್ಣನಿ ನೀಲಾಂಬೆಗೆ ‖
ನಿಲ್ಲದುಸಿರ್ದಿರ್ವರುಂ ತಮ್ಮಿಷ್ಟಲಿಂಗಂಗ |
ಳಲ್ಲಿ ತಾವೈಕ್ಯರಾಗುವರಾಗ ಶಿವಶರಣ |
ರಲ್ಲಿ ಕೆಲಕೆಲರೈಕ್ಯವಾಗುವರ್ ಸಿದ್ಧರಾಮೇಶ ನೀಂ ಕೇಳೆಂದನು ‖ ೧೯

೧-೧ ಆರುನೂರ ತೊಂಬತ್ತ | ಮೇಲದಾರನೆಯ ರಕ್ತಾಕ್ಷಿ (ಶಿ, ಗೋ, ಕೋ.); ಆರುನೂರ ತೊಂಬತ್ತ | ಮೇಲದಾರನೆಯ ರಾಕ್ಷಸ (ಪು.) ; ಳೇಳನೂರಿಂದ ಮುಂ | ದೇಳನೆಯ ರಕ್ತಾಕ್ಷಿಯೆಂಬ (ಹು, ದಾ, ಮ.) ೨-೨ ಬಾಲಪಾಕರಣ (ಹು, ದಾ.) ; ಮೇಲಾದ ತಿಥಿಯು (ಮ.) ೩ ದುದಯದಿಂ (ಹು, ದಾ, ಮ.); ದಂದುದಯ (ಶಿ, ಕೋ, ಗೋ, ಪು.) ೪ ಮೇಲಣ (ಹು.)

ಬಸವದಂಡಾಧೀಶನೈದೆ ತತ್ಪಟ್ಟಮಂ |
ವಸುಧೇಶಬಿಜ್ಜಳಂ ನಮಗೆ ಕಟ್ಟುವನಾಗ |
ಬಸವಕಾಲಿಗರೆಂದು ಹರಳಯ್ಯ ಮಧುವಯ್ಯಗಳನೆಳಹೂಟೆಯುಂ ಕಟ್ಟಿಸೆ ||
ಹಸನಾದುದೆಂದು ಜಗದೇವ ಬೊಮ್ಮಣ್ಣಂಗ |
ಳೆಸೆವುತಿಹ ಪಂಜಿನವರಾಗಿ ಬಿಜ್ಜಳರಾಯ |
ಬಸುಗೊಂಬೆವೆಂದೆಮ್ಮ ಕೈಯಿಂದಲಲಗಿನ ಪ್ರಸಾದವುಂ ಪಡೆದೊಯ್ವರು || ೨೦ ||

ಬಳಿಕಿತ್ತಲಾವು ಘನಪರ್ವವೆಂದಾ ಶರಣ |
ಕುಲವನೆಲ್ಲವ ಕರೆಸಿ ಕೇಳ್ವೆವಿಲ್ಲರಬಾರ |
ಮಠವನು ಮಹಾಮನೆಗೆ ಹೋಗಬೇಕೆನೆ ಕೆಲವರೊಪ್ಪುವರ್ ಪತ್ತವರೊಳು ||
ಕೆಲಬರೇ ಬಾರೆವೆನಲವರನೆಲ್ಲರ ತಿರುಗಿ |
ಕಳುಪಿ ಮಿಕ್ಕವರನೀ ಪುರದಿಂದಲಾಗಳೇ |
ಕಳುಪುವೆವು ಸಂಗಮೇಶ್ವರನ ಘನಪರ್ವವೆಂದೆಂಬ ನೆವದಿಂದೆ ಬೇಗ || ೨೧ ||

ಇತ್ತ ನಾವೀ ಶರಣರೊಳಗೆ ಕೆಲಬರ್ ಸಹಿತೆ |
ಜತ್ತಾಯತದೊಳಾನೆ ಕುದುರೆ ಕಾಲಾಳುಗಳ |
ಸೊತ್ತುಸಹಿತತಿಜತನವಾಗಿ ನಮ್ಮರಮನೆಯನೇ ಕಾದುಕೊಂಡಿರ್ಪೆವು ||
ಅತ್ತಲಾ ಜಗದೇವ ಬೊಮ್ಮಣ್ಣರಿರ್ವರುಂ |
ಚಿತ್ತಹರುಷದೊಳೈದಿ ಬಿಜ್ಜಳಮಹೀಪಾಲ |
ಸುತ್ತಿಸೊಳಗೆಂದಿಸಂದದಲಿ ಪಂಜುಗಳನುರಿರೆ ಪಿಡಿದುಕೊಂಡಿರಲಾಗಳು || ೨೨ ||

ಓಲಗದವರನೆಲ್ಲರಂ ಕಳುಪಿ ಬಿಜ್ಜಳನೃ |
ಪಾಲನಾ ಪಂಜುಗಳ ಬೆಳಗಿನಿಂ ತನ್ನ ರಾ |
ಆಲಯವನೊಳಪೊಕ್ಕು ಬರಲಾಗ ಜಗದೇವ ಮೊಲ್ಲೆಯಾ ಬೊಮ್ಮಣ್ಣನು ||
ಬೀಳಲಿರಿದರಸಿನುದರವ ಸೀಳ್ದು[೫] ಬಳಿಕಲ್ಲಿ |
ಕೇಳಿಪೆಸಬೇಡ ಪರನಾದಿಯುಂ ಕೊಂದೆವೆಂ |
ಪಾಲಿ ಬೊಬ್ಬಿರಿವುತ್ತಲೆಮ್ಮ ರಾಜಾಲಯಕ್ಕೈತರ್ಪರುತ್ಸವದೊಳು || ೨೩ ||

೧ ಸುಧು (ಹು.) ೨ ಗಣ (ಹು.) ೩ ದಿ (ಶಿ, ಹು, ಮ.) ೪ ಸೆ (ಹು.) ೫ ಬಗಿದು (ಹು, ಮ.)

ಬಂದು ತದ್ವಾರ್ತೆಯಂ ಪೇಳ್ವವರ್ ಬಳಿಕಲಾ |
ನಂದದಿಂ ಕೈಲಾಸಕ್ಕೈದುವರ್ ಸಾವಿರದೆ |
ಮುಂದಿಕ್ಕುದುರೆಯ ಕೂಡಿಕೊಂಡಾಗಲೀ ಪುರವಸತಿಗಳಿದು ಪೋಗುತಿರಲು ||
ಹಿಂದುಗೊಂಡಳಿಯಬಿಜ್ಜಳನೊಡನೆ ದಾಳಿಯಂ |
ಬಂದೆಮ್ಮ ತಡೆವ ತಡೆಗೊಡದಲ್ಲಿ[1] ನಾವಾಗ |
ನಿಂದು ಕಾದುವೆವು ಕಾತರವಳ್ಳಿಯಲ್ಲ ಮುರುಗೋಡಿಂದ ಮುರಿ[2]ಯ ತಿವಿದು[2]
|| ೨೪ ||

ಮಡಿವಳಯ್ಯಗಳ ಕೂಗಿನ ಮಾರಿತಂದೆಗಳ |
ನೊಡಗೂಡಿಕೊಂಡಳಿಯಬಿಜ್ಜಳನ ಸೇನೆಯಂ |
ಮಡಿಪಿ ತನ್ನ ಪತಿಯುಂ ಕೈಸೆರೆಯು ಪಿಡಿದು ಗೂಳಿಯಕೆ ಬರೆ ನಾಗಾಂಬಿಕೆ ||
ಕಡುನೊಂದು ಶಿವಶರಣರಿಂತಪ್ಪ ಕೊಲೆಗೊಡಂ |
ಬಡುವರೇ ಸಾಕಿನ್ನವನ ಬಿಟ್ಟು ಪ್ರಾಣಮಂ |
ಮಡಿದ ಸೇನೆಗೆ ಕೊಟ್ಟು ಕಳುಪಿ ನೀವೆಂದೆಮಗೆ ಪೇಳ್ದು ಮತ್ತಿಂತೆಂಬಳು || ೨೫ ||

ಬಸವಣ್ಣನೈದಲಾ ಪಟ್ಟಕ್ಕೆ ನೀನಿಂದು |
ಸಸಿನದಿಂ ಮೂರುವರೆ ತಿಂಗಳಾಯ್ತುಷ್ಟರೊಳ್ |
ವಸುಧೇಶ ಬಿಜ್ಜಳನನಿರಿದ ಶರಣರ್ ಶಿವನ ಪೊರೆಗೈದಲಾತನವರ ||
ಹಸನಾಯ್ತು ಶಿವಭಕ್ತರಿಂತು ಬಿಜ್ಜಳರಾಯ |
ನಸುಗೊಂಡು ಬಂದಿರದರಿಂದವನಿಯೊಳ್ ಜನಿಸಿ |
ಬಸಿದ ಶೂಲವನೇರಿ ಬನ್ನಿಮೆನಲವರು ಭೂಲೋಕದೊಳ್ ಜನಿಸಿ ಬಳಿಕೆ || ೨೬ ||

ಓರುಗಲ್ಲೆಂಬ ಪಟ್ಟಣದ ಹೊರಪುರದಲ್ಲಿ |
ವೀರಗುಂಡ ಬ್ರಹ್ಮರೆಂಬ ಪೆಸರಿಂದಿರಲ್ |
ಮಾರಾರಿ ಬಂದು ಗಣಪತಿರಾಯನರಮನೆಯ ಕದ್ದವರ ಮರೆಯ ಹೊಗಲು ||
ದಾರಿವಿಡಿದೈತಂದ ಕಳ್ಳರಂ ನೀವೆಮಗೆ |
ತೋರಿಮೆನೆ ಮರೆಯಹೊಕ್ಕರ ಕೊಡದವರಿಗಾಗಿ |
ಧೀರರಾ ಗುಂಡಬೊಮ್ಮಯ್ಯಗಳ್ ಶೂಲಮಂ ಪತ್ತಿ ನೆರೆ ಮುಕ್ತರಹರು || ೨೭ ||

೧ ಗೋಡಲ್ಲಿ (ಹು, ಮ.) ೨-೨ ಯಲಿರಿದು (ಶಿ, ಗೋ.) ೩ ನ (ಹು.)

ಅದುಕಾರಣದೊಳೀಶಭಕ್ತರೀ ಕಾರ್ಯಮಂ |
ಹೃದಯದೊಳ್ ನೆನೆಯಲಾಗದು ಪೋಗಲೀತನಂ |
ಸಮಯದಿಂ ತತ್ಪುರಕೆ ಕಳುಪೆಂದು ನಾಗಲಾಂಬಿಕೆ ನನಗೆ ತಿಳುಪಲಾಸು ||
ಬೆದರಬೇಡೆಂದಳಿಯಬಿಜ್ಜಳನನೆನ್ನಾ[೧]ನೆ |
ಕುದುರೆ ಕಾಲಾಳನೆಲ್ಲವನಿತ್ತು ಮಡಿದಿರ್ದ |
ಚತುರಂಗಕಂ ಹರಣಮಂ ಕೊಟ್ಟು ಪೋಗೆಂದೊಡಾತನಿರದಿಂತೆಂಬನು || ೨೮ ||

ಮುಂದೆನಗೆ ಗತಿಯಾವುದೆನೆ ಪಿಂತೆ ಬಿಜ್ಜಳಂ |
ಮಂದಮತಿಯಿಂದೆ ಶಿವಶರಣರಂ ಯೆಳೆಹೂಟಿ |
ಯಿಂದೆಳೆಸಲಾ ಕೊಲೆಗೆ ಜಗದೇವಮೊಲ್ಲಯ್ಯಾ ಬೊಮ್ಮಣ್ಣನವರು ತನ್ನ ||
ಕೊಂದ[೨]ರಾತನ ತೆರದೆ ನಡೆಯದೆ[೨] ಸದಾಚಾರ |
ದಿಂದೆ ನಡೆಯೆಂದಳಿಯಬಿಜ್ಜಳಂಗಾಗಲಾ |
ನಂದದಿಂ ಪಟ್ಟಮಂ ಕಟ್ಟಿ ಬಳಿಕಾಗಲಾ ನೃಪತಿಯೊಡನಿಂತೆಂಬೆವು || ೨೯ ||

ಅರಸ ಕೇಳೀ ಪಟ್ಟವಿಂದಿಗಿನ್ನರುವತ್ತು |
ವರುಷಪರಿಯಂತರಂ ನಿನಗೆ ನಡೆವುದು ಮುಂದೆ |
ಹರನ ವರದಿಂದೆ ರಾಜ್ಞಾಸಕ್ತಿ[೪]ತಾಂಬರಂ ತುರುಕಕುಲದಿಂದೆ ಜನಿಸಿ ||
ಪರಿವಿಡಿಯೊಳಾಗಲೇಳ್ನೂರು ಮೇಲೆಪ್ಪತ್ತು[೪] |
ವರುಷಪರಿಯಂತರದೊಳಾಳ್ವರೀ ದೇಶಮಂ |
ತುರುಕಾಣ್ಯವೆನಿಸಿ ಕಲ್ಯಾಣಮಂ ಕೆಡಿಸಿ ಕಲುಬುರಿಗೆಯಂ ಕಟ್ಟಿಸುವರು || ೩೦ ||

ಹೀಗಿನ್ನು ತುರುಕಾಣ್ಯವಾಗುವುದು ನಾವೀಗ |
ಪೋಗಬೇಕೆಂದಳಿಯಬಿಜ್ಜಳನ ಕಳುಹಲತಿ |
ವೇಗದಿಂ ಕಲ್ಯಾಣಪುರಕೈದಿ ಬಿಜ್ಜಳಂ ಸತ್ತ ಹಾವಳಿಯ ನಿಲಿಸಿ ||
ಮೇಗೆ ತದ್ರಾಜ್ಯಮಂ ಸುಖದಿಂದಲಾಳುವಂ |
ರಾಗದಿಂದುಳವಿಯ ಮಹಾಮನೆಗೆ ನಾವಿನ್ನು |
ಸಾಗಬೇಕೆನೆ ಮಡಿವಳಯ್ಯನಾ ಹಿಪ್ಪಲಿಗೆಗಿರದೆ ಕಳುಹಿಸಿಕೊಂಬನು || ೩೧ ||

---

೧ ನನಾ | ಮು. ೨-೨ ರವನಂತೆ ನಡೆಯದೆ ನೀಂ (ಹು, ದಾ, ಮು.) ೩ ಪಿಂ (ವ.)
೪-೪ ಶವನ ಸಂತತಿಯಿಂದಲೇಳ್ನೂರು (ಹು, ದಾ.)

ಇರದಲ್ಲಿ ತಮ್ಮ ಗುರುಲಿಂಗಣಾರ್ಯನ ಪಾದ |
ಸರಸಿರುಹದಲ್ಲೈಕ್ಯವಾಗುವಂ ನಾವು ಶಿವ |
ಶರಣರೆಲ್ಲರ ಕೂಡಿಕೊಂಡಾಗಲು[1]ಪೋಗೈತರುವೆವತಿಸಂಭ್ರಮದೊಳ್[1] ||
ಹರುಷದಿಂದಲ್ಲಿ ಘನಪರ್ವಮಂ ಮಾಡಿ ತ |
ತ್ಪರಮಮಾಹೇಶ್ವರರ ಕರುಣಮಂ ಪಡೆದಾಗ |
ಶರಣರೆಲ್ಲರ್ ನಿಮ್ಮ ನಿಜದಲ್ಲಿ ನಿರವಯವನೈದಿ[2]ಮೇಲವಾಗ[2]ಳು || ೩೨

ಹರಶರಣರೆಲ್ಲರುಂ ತಮ್ಮ ತಮ್ಮಿಷ್ಟದೊಳ್ |
ನಿರವಯುವನೈದುವರ್ ನಮ್ಮ ಸಮಯಾಚಾರ |
ದುರುತರದ ಹನ್ನೆರಡುಸಾವಿರಂ ಬಸವಣ್ಣನವರ ಸಮಯಾಚಾರದ ||
ಪರಮಮಾಹೇಶ್ವರರ್ ಮೂರು ಹನ್ನೆರಡು ಸಾ |
ವಿರವನಿಬರೆಲ್ಲರಂ ಹೊನ್ನರಳಿಯೆಂದೆಂಬ |
ಮರಕೆ ತೊಟ್ಟಿಲಕಟ್ಟಿ ತೂಗುವೆವು ತೂಗಲವರಿರದೆ ನಿರವಯವಪ್ಪರು || ೩೩

ನಾವಾಗಲುಳಿದ ಚರಪತಿಗಳ್ಗೆ ಶರಣೆಂದು |
ದೇವರೆಲ್ಲರ್ ನಿರಾಕಾರಮಂ ತಳೆದಪಿರೊ |
ಕೇವಲಂ ಸಾಕಾರದಿಂದಿರ್ಪಿರೋ ನಿರೂಪಿಸುವುದೆನಲವರಾಗಳು ||
ನೀವೆಲ್ಲರುಂ ಮರಳಿಬರುವಪರಿಯಂತರಂ |
ನಾವು ನಮ್ಮಾರಾಧ್ಯರಿತ್ತಪ್ರಸಾದವಂ |
ಸೇವಿಸುತಲತಿಗೋಪ್ಯದಿಂದಲಿ ಕಲ್ಯಾಣಪಟ್ಟಣದೊಳಿಹೆವೆಂಬರು || ೩೪

ಇಂತೆಂದು ರುದ್ರಮುನಿಮುಖ್ಯಚರಪತಿಗಳಿಗ |
ಸಂತಭಕ್ತಿಯೊಳೆರಗಿ ಬಳಿಕಾಗ ನಿಸ್ಸೊಡನೆ |
ನಿಂ ತಡೆಯದೈದಿ ಸೊನ್ನಲಪುರದೆ ಶಿವಯೋಗನಿಜಸಮಾಧಿಯಲಿ ನಿಂದು ||
ಸಂತೋಷದಿಂದಿಹುದು ನಾವಿನ್ನು ಮರಳಿ ಬರು |
ವಂತನಕಲೆಂದುಸುರಿ ರೇಚಣ್ಣನಂ ಪಿಂತೆ |
ನಿಂತಲ್ಲಿ ಹಾವುಗೆಯ ಮರೆದುಬಂದೆವು ಕೊಂಡುಬಹುದೆಂದು ಕಳುಪಿ ಬಳಿಕ
|| ೩೫

೧-೧ ಗತಿಸಂಭ್ರದೆ ಪೋಗಿ ಬಳಿಕಾ (ಶಿ.) ೨-೨ ದಾ ಮೇಲವರೊ (ಶಿ, ಗೋ.) ; ಮೆನಲವ ರಾಗ (ಹು, ದಾ, ಮ.)



ಉಳುವೆಯಲ್ಲಿಯ ಶ್ರೀಚೆನ್ನಬಸವೇಶ್ವರದೇವರ ಗುಡಿ

ಅಕ್ಕನಾಗಾಂಬಿಕೆಯುಸಹವಾಗಿ ನಾವಲ್ಲಿ |
ಮಿಕ್ಕ ಶರಣರನಿರದೆ ನಿರವಯುವನೈದಿಸಿ ಬ |
ಳಿಕ್ಕಾವು ನಿರವಯುವನೈದುವೆವು ಸಿದ್ಧರಾಮೇಶ ನೀಂ ಕೇಳ್ವುದಿನ್ನು[1] ||
ಲಕ್ಕದಿಂ ಮೇಲೆ ತೊಂಭತ್ತಾರುಸಾವಿರದ |
ಲೆಕ್ಕದಿಂ ಸಾಗಿಲಾದ ಜಂಗಮಂ ಚರಿಸುವೊಡೆ |
ದಿಕ್ಕುದಿಕ್ಕಿಗೆ ಪೋಪಮುಳಿದ ಚರಪತಿಗಳೀ ಕಲ್ಯಾಣಕೈತರುವರು || ೩೬ ||

ಬಂದನಿಬರತಿಗೋಪ್ಯದಿಂದಿರುತೆ ರುದ್ರಮುನಿ |
ತಂದೆ ತನ್ನಯ ಶಿಷ್ಯ ಮುಕ್ತಿಮುನಿಯೊಡನೆ ನಿ |
ಸಿಂದ್ಯದಿ ಸಕಲದೇಶಂಗಳಂ ಚರಿಸುತುಂ ದುಷ್ಟಪರವಾದಿಗಳನು ||
ಕೊಂದು ಶರಣರ ಪೊರೆವುದೆಂದುಸಿರಿ ಕಳುಹಲಾ |
ನಂದದಿಂದಖಿಳದೇಶಂಗಳಂ ಚರಿಸುತಾ[2] |
ನಿಂದು ಶ್ರೀಗಿರಿಯ ಸಿಂಹಾಸನದೆ ಸಕಲಸದ್ಭಕ್ತರಂ ಪಾಲಿಸುವನು || ೩೭ ||

ಇರುತಲೈವತ್ತಾರು ದೇಶಕ್ಕೆ ತಾವು ಸ |
ದ್ಗುರುಗಣಾಚಾರಿಗಳ ಕಳುಹಿ ತಮ್ಮಾಜ್ಞೆಯಿಂ |
ದಿರದೆ ಪಿರಿದಪ ಕ್ರೈಯಿಂದಲಪರಾಧಕಾಣ್ಕೆಗಳ ತಾಂ ತರಿಸಿಕೊಳುತೆ ||
ಪರವಾದಿಗಳನಿರದೆ ಸಂಹರಿಸುತಾಗಲತಿ |
ಹರುಷದಿಂದಿರಲತ್ತ ಮಲೆರಾಜ್ಯದೊಳ್ ದುರುಳ |
ಮೊರೆ ಜೈನರೀ ಪೆರ್ಚಿ ಶಿವಮತವ ಜರೆದು ವೀರೇಶನಂ ಕಿತ್ತುಬಿಸುಡೆ[3] || ೩೮ ||

ಈ ವಾರ್ತೆಯಂ ಕೇಳ್ದು ಬಳಿಕಲಾ ಮುಕ್ತಿ[4]ಮುನಿ |
ದೇವರಾಜಾತಭಿಕ್ಷಾವರ್ತಿಯೆಂದೆಂಬ |
ದೇವರ್ಗೆ ಪಟ್ಟಮಂ ಕಟ್ಟಿ ಕಾಣ್ಕೆಯನಿತ್ತು ತನ್ನ ವರಶಿಷ್ಯನಾದ ||
ಕೋವಿದ ದಿಗಂಬರ ಸುಮುಕ್ತಿಮುನಿಯೆಂದೆಂಬ |
ದೇವರಂ ಕರೆದು ನೀನೀಗ ಮಲೆರಾಜ್ಯದೊಳ್ |
ಶ್ರೀವಿರ್ದ ಪರವಾದಿಗಳನಿರದೆ ಸಂಹರಿಸು ಪೋಗೆಂದು ಪೇಳ್ದು ತಾವು || ೩೯ ||

೧ ಕೇಳ್ವುದು (ತಿ, ಗೋ.) ೨ ಚರಿಸುತಾ (ಹು, ಮ.) ೩ ಬಿಡಲ್ (ಹು.)
೪ ರಾಜ (ಹು.)

ಮಲ್ಲಿಕಾರ್ಜುನಲಿಂಗದಲ್ಲಿ ನಿರವಯವಾಗೆ |
ನಿಲ್ಲದೆ ದಿಗಂಬರ ಸುಮುಕ್ತಿಮುನಿಚರಪತಿಗ |
ಳಲ್ಲಿ ಕೆಲಬರ್ ಸಹಿತೆ ಮಲದೇಶಕ್ಕೈತಂದು ಖಾಂಡೆಯಾದಿ ಬಂದು ನಿಂದು ||
ಖುಲ್ಲ ಪರವಾದಿ ಜೈನರನಿರದೆ ಸಂಹರಿಸಿ |
ಹಲ್ಲುಗಳ ಕಳೆದು ಮಣುವಿನ ಮೂರುಖಂಡುಗವ |
ನಲ್ಲಿ ಕಣಜಂ ಕಟ್ಟಿ ತುಂಬಿಸುವರೆಲೆ ಸಿದ್ಧರಾಮೇಶ ಕೇಳೆಂದನು || ೪೦ ||

ಬಳಿಕಲ್ಲಿ ವೀರೇಶನಂ ಕಿತ್ತು ಜೈನರಾ |
ಹೊಳೆಯಲ್ಲಿ ಹಾಯ್ಕಿರಲ್ ತೆಗೆದು ಬಾಳೆಯದೊಂದು |
ಎಲೆಯ ದಂಡಿಗೆಯ ಮೇಲೊಲಿದು ಬಿಜಯಂಗೆಯ್ಸಿತಂದಾಗ ಹೊಸ್ನೂರಿನ |
ಬಳಿಯಲ್ಲಿ ಗುಡಿಯ ಕಟ್ಟಿಸಿ ಪ್ರತಿಷ್ಠಿಸಿ ತಾವು |
ನೆಲೆಯಾಗಿ ನಿಂದು ದುರ್ಜನರ ಸಂಹರಿಸುವೊಡೆ |
ಸ್ಥಳಮಿದೀಗೆಂದು ಬಾಳೆಯಹಳ್ಳಿಯೆಂಬ ಪುರಮುಂ ಬೇಗ ಕಟ್ಟಿಸುವರು || ೪೧ ||

ಹರುಷದಿಂದಲ್ಲಿ ಸಿಂಹಾಸನಾಸೀನನಾ |
ಗಿರುತಾ ದಿಗಂಬರಸುಮುಕ್ತಿಮುನಿನಾಥನಾ |
ಚರಪತಿಗಳಲ್ಲೊರ್ವ ಯೋಗ್ಯರಂ ನೋಡ್ ಪಟ್ಟವಗಟ್ಟಿ ಬಳಿಕವರೊಳು |
ಪರವಾದಿಗಳನಿರದೆ ಸಂಹರಿಸುವುದು ತಮ್ಮ |
ಶರಣರಂ ಪಾಲಿಸುವುದೆಂದುಸುರಿ ತಾವಾಗ |
ಪರಮಶಿವಯೋಗದಿಂ ನಿಜಸಮಾಧಿಯೊಳಿರ್ಪರೆಲೆ ರಾಮ ಕೇಳೆಂದನು || ೪೨ ||

ವರದಿಗಂಬರಮುಕ್ತಿಮುನಿದೇವರಾಜ್ಞೆಯಿಂ |
ಹರುಷದಿಂ ಸುಕುಮಾರಚೆನ್ನಬಸವೇಶ್ವರಂ |
ಶರಣಸಂಕುಲವನುರೆ ಪಾಲಿಸುತೆ ದುಷ್ಟಪರವಾದಿಗಳ ಸಂಹರಿಸುತೆ |
ಇರುತಿರಲ್ಕಿತ್ತಲೀ ಚಿಕ್ಕಸಿದ್ಧೇಶ್ವರಂ |
ಚರಪತಿಗಳಂ ಕೂಡಿಕೊಂಡು ಚರಿಸುತ್ತೆ ಬಂ |
ದಿರದೆ ಶಿವಗಂಗೆಗೈತಂದು ಹೊನ್ನಾದೇವಿಯಿಂದೆ ಕಂಕಣವ ಪಡೆವರ್ || ೪೩

೧ ಕೆರೆದು (ಹು, ಮ,) ೨ ದು (ಶಿ, ಗೋ.)



ಗುಬ್ಬಿಯಲ್ಲಿಯ ಶ್ರೀ ಚೆನ್ನಬಸವೇಶ್ವರದೇವರ ರಥೋತ್ಸವ

ಬಸವೇಶನೈಕ್ಯವಾದರುವತ್ತು ವರುಷವಿಃ |
ವಸುಮತಿಯನಳಿಯುವಿಜ್ಜಳನಾಳುತಿರ್ದ ಬಳಿ |
ಕಸವುಬಲಿದಿಂ ತುರುಕರೊಳ್ ಕಾದಿ ಮಡಿಯಲಾ ತುರುಕರತಿಸಾಹಸದೊಳು ||
ಎಸೆವ ಕಲ್ಯಾಣಮಂ ಕೆಡಿಸಿ ಕಲುಬುರಿಗೆಯಂ |
ಹೊಸದಾಗಿ ರಚಿಸಿ ತ್ರಿಪುರಾಂತಕಾಲಯದಲ್ಲಿ |
ಪಸುಗಸಂ ಕೊಂದು ಗರುಡನ ಕಂಬಮಂ ಮುರಿದು ಮಸುದಿಯಂ ಕಟ್ಟಿಸುವರು || ೪೪ ||

ಎಲೆ ಸಿದ್ಧರಾಮೇಶ ಕೇಳ್ ಜಸದಿ[1]ಕಲ್ಯಾಣ |
ವಳಿಯಲಾ ಪ್ರಜೆಗಳಂ ತುರುಕರಾಕ್ಷಸರಾಗ |
ಸುಲಿದು ಸೂರೆಮಾಡಲಾ ಗುಮ್ಮಣಂ[2] ಪೆಮ್ಮಣಯ್ಯಗಳೆನಿಪ ವ್ರತಿಗಳಿರದೆ ||
ನೆಲೆಗೆಟ್ಟು ಪೋಗಿ ದಕ್ಷಿಣಕಾಶಿಯೆನಿಸಿ ಭೂ |
ತಳದೊಳಗೆ ಮೆರೆವ ಶಿವಗಂಗೆಯ ಸಮೀಪಸು |
ಸ್ಥಳದೊಳಗೆ ಪುರವನುರೆ ರಚಿಪರಾ ಗುಮ್ಮಣಂ ಪೆಮ್ಮಣಯ್ಯಗಳೆಂಬರು || ೪೫ ||

ಪರಮಕೈಲಾಸಕ್ಕೆ ಮಿಗಿಲೆನಿಸಿ ಗುಮ್ಮಳಾ |
ಪುರವೆಂಬ ನಾಮದಿಂದುದ್ಧರಿಪರೆಂತೆನಲ್ |
ಚರಲಿಂಗಪದಮುಳಪಾದೋದಕವನೆ ಮಣ್ಣ ಹಸಿಯು ಬಿಂದಿಗೆಯ ತುಂಬಿ ||
ಪರಿಮಾಣದೊಳಗಿರಿಸಿ ಹೊತ್ತುಕೊಂಡಾ ಪುರವ |
ತಿರುಗಿ ಬಂದಾ ಮಧ್ಯದಲ್ಲಿ ನಿಕ್ಷೇಪಿಸಿಃ |
ಪುರವನೀಗ[3] ಲಿಂಗವಿಲ್ಲದ ಭವಿಯು ಪೊಗಲಳಿಯಲೆನುತಲಾಜ್ಞಾಪಿಸುವರು || ೪೬ ||

ಆಲಿಸೈ ರಾಮೇಶ ಬಳಿಕಲಿನ್ನಾ ಪುರಂ |
ಭೂಲೋಕಕರಿದೆನಿಸಿ ಮೆರೆವುದಾ ಸ್ಥಳದಲ್ಲಿ |
ಫಾಳೆಪಾವಡನಾದಿ ಸರ್ವಾಂಗಸಾವಡಂ ಕಡೆಯಾಗಿ ಕ್ರಮಧೋಳೆಸೆವ ||
ಶೀಲಂಗಳರುವತ್ತುನಾಲ್ಕುಮವ ನಡೆಸುವಾ |
ಶೀಲವಂತರೆ ಬಹಳವವರ ಮಾಹಾತ್ಮೆಗಳ |
ಪೇಳಲಿನ್ನಳವಲ್ಲಿಸೋಮಾಗ ಚೆನ್ನಬಸವೇಶ್ವರಂ ನಿರವಿಸಿದನು || ೪೭ ||

---

೧ ಕೇಳ್ವುದೀ (ಶಿ, ಹು, ಮ.) ೨ ಳಂ (ಶಿ.) ೩ ನುರೆ (ಶಿ.)

ಚಾರುಚ[1]ರಲಿಂಗಕ್ಕೆ ಸದ್ಭಕ್ತಿಯಿಂದಾಗ |
ವಾರಿಯಿಂದೆಡೆವಿಡದೆ ದಾಸೋಹಮಂ ಮಾಳ್ಪ |
ಧೀರಶೈವಾಚಾರಸಂಪನ್ನ ಸದ್ಭಕ್ತರಲ್ಲಿರುವರದು ಕಾರಣಂ |
ಧಾರುಣಿಗೆ ಮಿಗಿಲೆನಿಸಿ ತದ್ದೇಶವೆಸೆವುದಾ |
ಚಾರವೇ ಪ್ರಾಣವೆಂದೆನಿಸಿ ತದ್ರಾಜ್ಯದೊಳ |
ಪಾರಮಹಿಮರೆ ಜನಿಸಿ ನೆರೆ ಬಾಳ್ವರೆಲೆ ಸಿದ್ಧರಾಮೇಶ ಕೇಳೆಂದನು || ೪೮

ಮುದದಿಂದಲಲ್ಲಿ ಧನಸಂಪನ್ನಸೆಟ್ಟಿಗಳ್ |
ಪುದಿದಿರ್ಪಕಾರಣಂ ಸೆಟ್ಟಿನಾಡೆನಿಪುದದು |
ಪದುಳದಿಂ ಸಕಲಸೌಭಾಗ್ಯದಿಂ ಪ್ರಭುಗಳಿರೆ ಪ್ರಭುನಾಡವೆಂದೆನಿಪುದು |
ಸದಮಲಜ್ಞಾನಸಕಲಾಗಮಪುರಾಣಕೋ |
ವಿದ ಸಕರ್ಣಾಟಕಾದ್ಯಖಿಳಶಾಸ್ತ್ರವ ಬಲ್ಲ |
ಚದುರರಿರೆ ಕರ್ಣಾಟಕವೆನಿಪುದೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೪೯

ಚಿತ್ತಶುದ್ಧಿಯೊಳಾಲಿಸೆಲೆ ರಾಮ ಬಳಿಕಲ್ಲಿ |
ವತ್ತಾರು ದೇಶಕ್ಕೆ ಕರ್ಣಾಟದೇಶವೇ |
ಉತ್ತಮಮದಲ್ಲಿರ್ಪ ಶಿವಭಕ್ತರೆಲ್ಲರುಂ ಸತ್ಯರ್ ಸದಾವ್ರತಿಗಳು |
ಮತ್ತಿನ್ನು ಮಿಕ್ಕದೇಶದೊಳಲ್ಲಿಗಲ್ಲಿಗಂ |
ಹತ್ತುಸಾವಿರಲಕ್ಷಕೋಟಿಗೋರೊರ್ವರೇ |
ಚಿತ್ತಜಾರಿಯ ಶರಣರುದಿಸಿ ನಾನಾಪವಾಡಂಗಳಂ ನೆರೆ ಮೆರೆವರು || ೫೦

ಶಾಲಿವಾಹನ ಶಕದೊಳೆಂಟುನೂರಿಂದಲಾ[3] |
ಮೇಲಣ ವಿಳಂಬಿ ವತ್ಸರ[4]ಚೈತ್ರಶುದ್ಧದೊಳ್[4] |
ಮೇಲಾದ ದಶಮಿಯಾ ಗುರುವಾರದುದಯದೊಳ್ ಗಳಿಗೆ ಹನ್ನೆರಡಾಗಲಾ |
ವೇಳೆಯೊಳ್[4] ಹೊಯ್ಸಳಗೆ ಪಟ್ಟಮಂ ಕಟ್ಟಲವ |
ನಾಳುತಿರ್ಪಿಳೆಯು ಹೊಯ್ಸಳರಾಜ್ಯವೆನಿಪುದದು |
ಲೀಲೆಯಿಂದ[5]ದನಾದಿಯಾದ ನವಬಲ್ಲಾಳರೊಲಿದಾಳ್ವರಾ ಧರೆಯ[5]ನು || ೫೧

೧ ತ (ಹು.) ೨ ಗಣಿಬಿ (ಹು.) ೩ ರೊಂದರಿಂ (ಹು, ದಾ.) ೪-೪ ದ ಶ್ರಾವಣ ಶುದ್ಧ | ದೇಸೆಯ ತಿಥಿಯಾಗಿನಾರಿನಾ ಸಂಖ್ಯೆಯಾ ಗಳಿಗೆ ಗಂಜಾಕರಣದ || ವೇಳೆಯಿಂ (ದಾ.) ೫-೫ ಲಿಯಿಂ ನವ ಬಲ್ಲಾಳರೊಲಿದಾಳ್ವರಾ ಧರೆಯನೇವೇಳ್ವೆ (ತಿ, ಗೋ.)

ಆಲಿಸವರೊಳ್ ವಿಷ್ಣುವರ್ಧನನೆನಿಪ್ಪ ಬ |
ಲ್ಲಾಳನತಿಸುಖದೆ ತದ್ರಾಜ್ಯವಾಳುತ್ತಲಾ |
ಬೇಲಾಪುರದೊಳೊಂದು ಗುಡಿಯನೊಲವಿಂದೆ ಕಟ್ಟಿಸಿ ಪರಮಸಂತಸದೊಳು ||
ಗಾಳಿಪೂಜಿಯೊಳಿರ್ದ ವಿಷ್ಣುವಂ ತೆಗೆತರಿಸಿ |
ಲೀಲೆಯಿಂದಾ ಗುಡಿಯೊಳುಂ ಪ್ರತಿಷ್ಠಿಸಿ ಬಳಿಕ |
ಪೇಳಲೇನಲ್ಲಿ ತೊಲಿಹದಿನೆಂಟು ಜಾತಿಯವರೊಂದಾಗಿ ಸಲೆ ನಡೆವರು || ೫೨ ||

ಹಳೆಯಬೀಡೆಂಬ ಪಟ್ಟಣದಲ್ಲಿ ಕರಣಿಕರ |
ಕುಲತಿಲಕನೆನಿಸುವ ಹರೀಶ್ವರನ ಲೆಕ್ಕವನೆ |
ಬಿಳಿಯಹಣ್ಣ ಬಲ್ಲಾಳ ಕೇಳುತಿರೆ ಕಡಿತವುಂ ಬಿಟ್ಟು ಕೆಯ್ಮುಗಿನೂರೆಸಲು ||
ತಿಳಿಪಿದರ ವೃತ್ತಕವನೆಂದು ಭೂಪಂ ಕೇಳೆ |
ಬಳಿಕ ಪೇಳ್ದಂ ವಿರೂಪಾಕ್ಷನಾಲಯದೊಳಗೆ |
ಪೊಳೆವ ದೀಪಂ ಸೋಂಕಿ ತೆರೆಸೀರೆ ಬೇವುತಿರಲಾರಿಸಿದೆ ಕೇಳೆಂಬನು || ೫೩ ||

ಎಲ್ಲಿಯ ವಿರೂಪಾಕ್ಷನಾಲಯದ ತೆರೆಸೀರೆ |
ಯೆಲ್ಲಿ ನೀನೆಲ್ಲಿಯುಚ್ಚರಿಯೆಂದು ಭೂಮಿಪತಿ |
ನಿಲ್ಲದೊರ್ವನ ಕಳುಪಿ ಕೇಳಿಸೆ ವಿರೂಪಾಕ್ಷಲಿಂಗನಾಸ್ಥಾನದವರು |
ಇಲ್ಲಿಯೆ ಹರೀಶ್ವರಂ ತೆರೆಸೀರೆಯುರಿಯೆ ಕರ |
ಪಲ್ಲವದೊಳಾರಿಸಿದ ನೋಡೆಂದು ತೋರಲದ |
ನೆಲ್ಲವಂ[1] ಮರಳಿ ಬಂದಾ ಚರಂ ಭೂಪತಿಗೆ ಪೇಳ್ವಂ ಸವಿಸ್ತರದೊಳು || ೫೪ ||

ಚರನೆಂದ ಮಾತಿಗಚ್ಚರಿವಟ್ಟು ಧರಣಿಪಂ |
ಹರಿಯಣ್ಣ ನೀಂ ವಿರೂಪಾಕ್ಷನಾಲಯದಲ್ಲಿ |
ಒರೆಮುಕೊಂಡಿಹುದೆಂದು ಕಳುಪೆ ಪಂಪಾಕ್ಷೇತ್ರಕ್ಕೈತಂದು ಬಳಿಕಾತನು[2] |
ವರವಿರೂಪಾಕ್ಷನೊಪ್ಪಿತದ ರಗಳೆಗಳನಾ |
ಪರಿಪರಿಯ ಶಿವಗಣಂಗಳ ಮೇಲೆ ಪೇಳ್ದು ಸ |
ದ್ಗಿರಿಜಾವಿವಾಹಮಂ ಪೇಳ್ದು ವಿರೂಪಾಕ್ಷಲಿಂಗದಲ್ಲೈಕ್ಯವಹನು || ೫೫ ||

೧ ಮಂ (ಹು.) ೨ ಕ ತಾನುಂ (ಹು.)

ವರಹರೀಶ್ವರನ ಸೋದರದಳಿಯನುಭಯಕವಿ
ಶರಭಭೇರುಂಡನೆಂದೆಂಬ ನಾನಾಪರಿಯ |
ಬಿರುದಾಂಕ[1]ಕವಿ ರಾಘವಾಂಕನಿರಲೋರುಗಲ್ಲೆಂಬ ಪಟ್ಟಣಕೆ ಪೋಗಿ ||
ಪರವಾದಿಗಳನಲ್ಲಿ ಗೆಲ್ದು ವೀರೇಶನಿಂ |
ದರಿದೆನಿಪ ಪದಕವಂ ಪಡೆದು ಪೆಲಾಪುರಿಗೆ |
ಮರಳಿಬಂದಲ್ಲಿ ದೇಹವನುಳಿದು ವರಸಮಾಧಿಯೊಳಿರದೆ ಬಯಲಪ್ಪನು || ೫೬ ||

ಮತ್ತೆ ಕೇಳಲ್ಲಿ ಪದ್ಮರಸನೆನಿಸುವ ಬ್ರಾಹ್ಮ |
ಣೋತ್ತಮಂ ವೀರಶೈವಾಚಾರ್ಯನಿರಲಲ್ಲಿ |
ಗತ್ತಣಿಂ ಬಂದು ತ್ರಿಭುವನತಾತನೆನಿಪನವರೊಡನೆ ವಾದವ ಮಾಡಲು ||
ಚಿತ್ತದಿಂದರಿದವನ ತ್ಕಣಪುರುಷನಿಂ ಗೆಲ್ದು |
ಬಿತ್ತರದೆ ವೀರಶೈವೋಪದೇಶವನಾಗ |
ಳಿತ್ತು ವರಶಿಷ್ಯನಂ ಮಾಡಿಕೊಂಡಿರೆ ಬಿಟ್ಟ[2]ಬಲ್ಲಾಳನವರ ಕರೆಸಿ || ೫೭

ಬಳಿಕಲಾ ಪದ್ಮರಸರಂ ನೀವು ನಮಗೊಂದು |
ಬಲುಗೆರೆಯ ಕಟ್ಟಿಸೆಂದಧಿಕಧನವಂ ಕೊಟ್ಟ |
ಕಳುಹಲಾ ರೊಕ್ಕದಿಂ ಜಂಗಮಾರ್ಚನೆಯ ನಲವಿಂ ಮಾಡಿ ಶಿವನೊಲವಿನಿಂ ||
ತಳುವದಾ ಕೆರೆಯ ಕಟ್ಟಿಸಲರಸನಾ ಕೆರೆಯ |
ಕೆಳಗಿರ್ಪ ಬಯಲನೆಂಬತ್ತೆಂಟುಮಂದಿಯಾ |
ಸ್ಥಲದ ಬ್ರಹ್ಮರಿಗಿತ್ತು ಕೆರೆಯ ಪದ್ಮರಸರಂ ಮೊಗನೋಡುತಿಂತೆಂಬನು || ೫೮

ನಿಮಗಾವ ಬಯಲಾಗಬೇಕು ನಿರವಿಸುವುದೆನ |
ಲೆಮಗೀ ಮಹಾಬಯಲೆ ಸಾಕೆನುತ್ತಾಗಲಾ |
ಸುಮತಿ ಸತ್ಕೆರೆಯಪದ್ಮರಸರಾ ಬಯಲಲ್ಲಿ ಬಯಲಪ್ಪರಿನ್ನಾಲಿಸು |
ವಿಮಲಚರಿತಂ ಪಾಲ್ಕುರಿಕೆಯ ಸೋಮೇಶ್ವರಂ |
ಕ್ರಮದಿಂದಲರವತ್ತುನಾಲ್ಕು ಶೀಲವ ನಡೆಸಿ |
ಸುಮನ[3]ದಿಂ ಕಲ್ಯಾಣಕೆ[3] ಬಂದಲ್ಲ ಶಿವಸಮಾಧಿಯಲಿ ನಿಜಮುಕ್ತನಹನು || ೫೯

೧ ದಾಂಕ (ತಿ.) ೨ ವಿಷ್ಣು (ತಿ.) ೩-೩ ದಿಂದಾಕಳಿಕೆ (ತಿ.)

ಮೋಪೂರಿನಿಂದೆ ಭೈರವರಾಜನಧಿಕಪ್ರ |
ತಾಪದಿಂ ಮಲ್ಲಿಪಟ್ಟಣಕೆ ಬಂದಲ್ಲಿರ್ಪ |
ಭೂಪತಿಯು ಕಂಡೆಲ್ಲರಂ ಗೆಲ್ದು ಬೇಂಟೆಯ ಪ್ರಸಾದದಿಂ ಲಿಂಗಂಗಳ |
ಸ್ತ್ರೀಪುರುಷರಿರ್ವರುಂ ಹರುಷದಿಂ ವೀರಶೈ |
ವೋಪದೇಶವನಾಂತು ಸಾಸಲಿಗೆ ಪೋಗಿ ಚಿ |
ದ್ರೂಪಸೋಪಾನದಿ ಕೈಲಾಸಕ್ಕೆ ಪೋಪರೆಲೆ ರಾಮೇಶ ಕೇಳೆಂದನು　　೬೦ ||

ಆಲಿಸಾ ಸಾಸಲೆಂಬೂರಲ್ಲಿ ಬಳಿಕ ಸ |
ಲ್ಲೀಲೆಯಿಂ ಸೋಮೇಶಲಿಂಗದಿಂ ಘನವಾಗಿ |
ಹಾಲು ಸುರಿವುದು ನೋಡಲಾ ಸಮೀಪದೊಳ್ ಕೆಂಡದ ಮಳೆಯು ಕರೆವುದಿನ್ನು |
ಭೂಲೋಕಕಧಿಕದಿಂ ಮೆರೆವುತಿಹ ಶ್ರೀಗಿರಿಯ |
ಮೇಲೆ ಮೆತ್ತೈಯರು ಗುಡಿಯಂ ಕಟ್ಟುವರ್ ಬಳಿಕ |
ಪೇಳಲೇಂ ಸುರೆಯನುರೆ ಮಾರುವರ್ ಮತ್ತಲ್ಲಿ ನೆತ್ತರಿನ ಹೊಳೆ ಹರಿವುದು　　೬೧ ||

ದಿಂಡುಗೂರಲ್ಲಿ ನಾಗಾಭಕ್ತನಿರುತಲು |
ದ್ದಂಡಭಕ್ತಿಯಲಿ ಜಂಗಮಕೆ ನೀಡುತ್ತಿರ |
ಲ್ಕಂಡಲೇಂದು ಹಣ ಹೊನ್ನ[೨] ಬೇಡೆ ಸಾಲವ ತೆಗೆದು ನೀಡೆ ಬಹುಋಣವಾಗಲು |
ಖಂಡಪರಶುವಿನ ಕೆಯ್ಯಿಂದಲಾ ಹೊನ್ನ ತೆ |
ಕೊಂಡು ಸಾಲವ ತಿದ್ದಿ ಶುಚಿಯಾಗಿ ಬಳಿಕ ಭೂ |
ಮಂಡಲಂ ಬೆರಗಾಗಿ ನೋಡುತಿರೆ ಕೈಲಾಸಕ್ಕೈದುವಂ ಸಂಭ್ರಮದೊಳು　　೬೨ ||

ಹರಭಕ್ತ[೩]ನೆಂಬನೇ ಕಂಜನೂರಾಂಡಿಯಾ |
ಪರಮವೇದಂಗಳ್ಗೆ ಭಾಷ್ಯಮಂ ಮಾಡಿ ತಾ |
ನಿರುತಲ್ಲಿ ಸರಸಿಯೊಳ[೪]ಗೆಳೆಯನಂ ಪುಗಿಸಿ ಮಣಿ[೪]ಕರ್ಣಿಕೆಯೊಳೊಲಿದೆಬ್ಬಿಸಿ |
ಹರುಷದಿಂ ರಂಗನಾಥನ ಕೆಯ್ಯ ಬಾಗಿಲಂ |
ತೆರೆಸಿ ಮಹಿಮೆಯಂ ತೋರಿ ಶಿವನ ವರದಿಂ ತನ್ನ |
ಪುರಮುಖಯಕೆರೆಯೊಳಗಿರ್ದರಂ ಕೈಲಾಸಕೊಯ್ವನತಿಸಂಭ್ರಮದೊಳು　　೬೩ ||

೧ [illegible] (ಶಿ.)　೨ ಹೊನ್ನುವಂ (ಹು.)　೩ ದತ್ತ (ಪ, ತು, ದಾ.)　೪-೪ ಗಿಪ್ಪ
[illegible] (ಪ.); ಗಿಪ್ಪಳಿಯ ಪುಗಿಸಿ ಮಣಿ (ಶಿ, ಗೋ.)

ಎಲೆ ರಾಮ ಕೇಳಿನ್ನು ವೇಕ್ಕಲೂರೊಳಗೊರ್ವ |
ಸುಲಿಯ ಕಾಯಕದ ಕಲ್ಲಪ್ಪನಿರುತೊಂದು ದಿನ |
ಹೊಲದೊಳೊಣಗಿದ ನಾರನೆತ್ತುತಿರೆ ಹಾವ್ಕಚ್ಚಿ ಮಗ ಸಾಯೆ ತಂದು ತನ್ನ ||
ಸುಲಿಯ ವಿಕ್ರಯದಿಂದೆ ಜಂಗಮಾರ್ಚನೆ ಮಾಡಿ |
ನಲವಿನಿಂ ತೀರ್ಥಪ್ರಸಾದಮಂ ಮಗಗೂಡೆ |
ಮಲಗಿದವರೇಳ್ವಂದದಿಂದೇಳೆ ಶಿವನವರ ಶಿವಪುರಕ್ಕೊಲಿದೊಯ್ಯನು ‖ ೬೪

ಕರಿಯಿಡೆಯೆನಿಪ್ಪ ಪುರದಲ್ಲಿ ಮುಮ್ಮಡಿಭಕ್ತ |
ನಿರುತ ಜಂಗಮಕೆ ಮೃಷ್ಟಾನ್ನಮಂ ನೀಡಿ ತಾ |
ನಿರದವರಿಗೊಂದೊಂದು ವಸ್ತ್ರಮಂ ಕೊಡುವನದಕೊರ್ವ ಜಂಗಮನಾತನ ||
ಅರಸಿಯುಡಪಿಟ್ಟ ಸೀರೆಯನುಟ್ಟುಕೊಂಡಾಗ |
ಬರಲದರ ಸೆರಗ ಬೇಡಿದೊಡಿತ್ತು ಬಳಿಕದಕೆ |
ಪರಮಪಾದೋದಕವ ತಳಿಯಲಾ ಸೆರಗು ಬರಲಡಪಿನವಗಿತ್ತು ಮೆರೆವಂ ‖ ೬೫

ಪೆರುಮೊಗೆಯೆನಿಪ್ಪ ಪುರದಲ್ಲ ದೇವಮ್ಮ ತಾ |
ನಿರುತ ಜಂಗಮಕೆ ವಾರಿಯಲಿ ದಾಸೋಹಮಂ |
ಪರಿವಿಡಿಯೊಳೊದಗಿ ಮಾಡುತ್ತಮಿರಲೊರ್ವ ಜಂಗಮ ತನ್ನ ಪುಲಿಚರ್ಮವ ||
ಗುರುತಿನಿಂ ಬೈಚಿಡುವುದೆಂದಿತ್ತು ಪೋಗಿ ತಾಂ |
ಮರಳಿಬಂದಾ ಚರ್ಮಮಂ ಬೇಡಲೊಡನಿಲ್ಲ |
ದಿರಲದಕೆ ತನ್ನ ದೇಹದ ಚರ್ಮಮಂ ಕೊಡುವಳೆಲೆ ರಾಮ ಕೇಳೆಂದನು ‖ ೬೬

ಕಂಚಿಯೊಳ್ ಬಯಲಲಿಂಗಣ್ಣನತಿವಾದದಿಂ |
ಪಂಚಾಕ್ಷರಿಯ ಮಂತ್ರವೇ ಮಹಾ ಘನವೆಂದು |
ಸಂಚಿಕೆಯ ಚೀಟನಿಂ ಬರೆದದಂ ತೂಗಿ ಮೆರೆವಂ ಮತ್ತೆ ಕೇಳ್ವುದಿನ್ನು ||
ಮಿಂಚುತಿಹ ಕೆಯ್ಯ ಬೆರಳುಂಗುರದ ಬಸವಂಗೆ |
ಕಿಂಚಿತುಳಿಯದ ಹಾಗೆ ರಾಸಿಕಡಲೆಯ ಮೆಲಿಸಿ |
ಸಂಚಿತಪವಾಡಮಂ ಗೆಲ್ವನಾ ಗುಜ್ಜರಾತಿಯಲಿ ದೇಶಾರಾವುತಂ ‖ ೬೭ ‖

---

೧ ವ (ಶಿ.) ೨ ತಾನು (ಮ.) ೩-೩ ಶಿವಪುರಕ್ಕೊಲಿದೊಯ್ವರಾ ಶರಣರು (ಶಿ, ಗೋ.) ೪-೪ ಲಿಲ್ಲದಿರ | ಲರಿತು ತಾ (ಹು, ಮ.) ೫ ಮೆರೆವ (ಹು, ಮ.)

ಎಸೆವ ಪಟ್ಟೇಶ್ವರದೆ ವೀರಭದ್ರನ ಮುಂದೆ |
ಬಸವಪ್ಪನಿರದೆ ತನ್ನಯ ಮಕ್ಕಳಿರ್ವರಂ |
ಹೊಸತೆನಿಸಿ ತಲೆಗಳಂ ತರಿದು ಪತ್ತಿಸಿ ಮೆರೆದು ಪರವಾದಿಗಳ ಗೆಲ್ದನು |
ಉಸಿರ್ವುದೇನುದಯಗಿರಿಯಲ್ಲಿ ಪರವಾದಿಗಳ್ |
ಬಸವಪೌರಾಣಮಂ ಪಳಿಯಲಾ ಪುಸ್ತಕವ |
ಸೊಸೆದು ಕಿಚ್ಚಲಿ ಹಾಕ್ಕೆ ಬೇಯದಿರೆ ವಾದಿಗಳ ಗೆಲುವನಾ ರಾಮಯ್ಯನು
|| ೬೮ ||

ಇರದೆ ರಾಜಮಹೇಂದ್ರದಲ್ಲಿ ವಿಪ್ರರ್ ನೆರೆದು |
ಹರಭಕ್ತನಾದನೀ ಬ್ರಾಹ್ಮಣಂ ನೋಡೆನು |
ತ್ತಿರದೆ ನಿಂದಿಸಲಾತ ಕೋಪದಿಂತಿರಲವರ ಕೇರಿಯಾದ್ಯಂತವೆಲ್ಲ |
ಉರಿದುದಾತನದೊಂದು ಮನೆಯುಳಿಯಲದ ಕಂಡು |
ವೀರಭಕ್ತಭಂಡಾರಿ ಸೋವಣ್ಣನಡಿಗಳಿಗೆ |
ಶರಣೆಂದು ಬಳಿಕವನ ಕರುಣಮಂ ಪಡೆವರೆಲೆ ರಾಮೇಶ ಕೇಳೆಂದನು || ೬೯ ||

ವರದಕ್ಷಿಣಾಪುರದಿ ಶಿವಭಕ್ತರೊಲವಿನಿಂ |
ಕೊರಡನೂರೆ ಕುಣಿಸಿ ಬರಡಂ ಹಯನಮಾಳ್ಪರಿಂ |
ದಿರವಾಗ ಬೇಳಿಸೊಡೆಯರ್ ನುಡಿಯೆ ತುರುಕರದ ಕೇಳ್ದು ನೀಂ ಮಾಡೆಂದೆನೆ |
ಮರನ ಕುದುರೆಯನೇರಿ ಕುಣಿಸಿ ಗೊಡ್ಡಾಕಳಂ |
ಕರಿಸಿ ಮಿಾನಂ ಚಂದ್ರಕಾಂತಲಿಂಗವಮಾಡಿ |
ಮೆರೆಲಿಂಗವೆರಡುಹೋಳಾಗಿರಲ್ ಪತ್ತಿಸುವರೆಲೆ ರಾಮ ಕೇಳೆಂದನು || ೭೦ ||

ಕುರುವಸೇಬೂರಲ್ಲಿ ಸೊಪ್ಪಿಯಂ ಕೊಂಡು ದಿನ |
ಚರಿಯದಿಂ ಬಸವಂಗೆ ಹಾಯ್ಕುತಿರೆ ಕೇಳ್ದದಂ |
ಸುರಿತಾಳನಾತನಂ ಕರೆಸಿ ಮನೆಯಂ ಹೊಗಿಸಿ ಕಿಚ್ಚನಿಕ್ಕಿಸಲಾತನು |
ಇರದಲ್ಲಿಯೆಂದಿನಂದದಿ ಸೊಪ್ಪಿಯಂಗಡಿಯೊ |
ಳಿರಲದಂ ಕೇಳ್ದು ಸುರಿತಾಳನಾತನ ಕರೆಸಿ |
ಪರಮಕರ್ತಾರನೆಂದೆರಗಿ ಪೂಜಿಸುವನಾ ಸೊಪ್ಪಿಯಾ ಬಸವಪ್ಪನ || ೭೧ ||

೧ ಹ (ಮ.)

ವರಶಿವಕವೀಶನೇಕೋಭಾ[1]ಯಿಬಿದಿರಿಯಲಿ |
ಸುರಿತಾಳನೊಡನೆ ವಾದಿಸಿ ಸತ್ತ ಕುದುರೆಗಂ |
ಶರಣವಂ ಪಡೆದು ಸುರಿತಾಳನ ಮಗಂ ಸಾಯಲವನ ಪ್ರಾಣವನು ಪಡೆವಂ ||
ಇರದೆ ಸುತ್ತೊಪಾನಂ ಹಾವ್ ಕಚ್ಚಿ ಸಾಯಲಾ |
ಪರಿವಿಡಿಯೊಳಪಸುವನುಂ ಪಡೆವನೆಂದೆನುತೆ |
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು || ೭೨ ||

ಮೇಲುಕೊಂಕಣದೇಶದಲ್ಲಿ ದೋಪೇಶ್ವರದ |
ನೀಲಕಂಠೇಶ್ವರನ ಗುಡಿಯಲ್ಲಿ ಸದ್ಭಕ್ತ |
ಶೀಲವಂತಂ ಸೂಜಿಗಾಯಕದ ವೀರಪ್ಪನಿರುತೆ ಪರವಾದಿಜನರ ||
ಲೀಲೆಯಿಂ ಗೆಲ್ದು ತದ್ದೇಶದೊಳಗುಳ್ಳ ಜನ |
ಜಾಲಮೆ[2]ಲ್ಲಂ ನೋಡುತಿರಲಖಿಳವಿಭವದಿಂ |
ಕೈಲಾಸಕ್ಕೈದುವಂ ಕೇಳೆಂದು ಸಿದ್ಧರಾಮೇಶಂಗೆ ನಿರವಿಸಿದನು || ೭೩ ||

ಹರಿಭಕ್ತನುಪ್ಪಲಿಕರಣ್ಣಪ್ಪನಿರೆ ಶಿವಂ |
ಹರಭಕ್ತನಾಗೆಂದೊಡಾಗಲಾ ಮುದ್ರೆಗಳ |
ವಿರದೆ ವಾದಕ್ಕಿಳಿಯೆ ಪರವಾದಿಗಳ್ ಕಂಡು ವಾದವಂ ಮಾಡಲಾಗ ||
ಹರನೊಲವಿನಿಂ ಹಾಳುಗೆರೆಗಳಂ ಬೇಸಗೆಯೊ |
ಳಿರದೆ ಮಳೆಯಂ ಬರಿಸಿ ತುಂಬಿಸಿ ಬಳಿಕ್ಕಲಾ |
ಪರವಾದಿಗಳನೆಲ್ಲರಂ ಗೆಲ್ದು ಮೆರೆವನಣ್ಣಾ ಭಕ್ತನೊಲವಿನಿಂದೆ || ೭೪ ||

ವರಸುಗ್ಗ[3]ಲೂರಲ್ಲಿ ಕಾಚನಾಯಕನೆನಿಪ |
ಹರಿದಾಸನಿರುತೆ ಬೇಂಟೆಗೆ ಪೋಗಿ ಮೊಲನ ಕಂ |
ಡಿರದೆ ಬೆಂಬತ್ತಲದು ಕೆರೆಯೊಳಗೆ ಬೀಳೆ ತಾನುಂ ಕೂಡೆ ಬಿದ್ದು ಪಿಡಿಯೆ ||
ಪರಮಶಿವಲಿಂಗವಾಗಿರೆ ಕಂಡು ತಾನದಂ |
ಧರಿಸಿ ಮಹಲಿಂಗದೇವಯ್ಯನೆಂದಾಗ ತಾಂ |
ಕರೆಸಿಕೊಳುತತಿನಿಷ್ಠೆಯಿಂದಿರದೆ ಬಳಿಕಲಾ ಲಿಂಗದೊಳಗೊಡವೆರೆವನು || ೭೫ ||

---

೧ ಖಾ (ಹು.) ೨ ರೆ (ಶಿ.) ೩ ಸಂಗ (ಹು.)

ಅಸಗೊಂಡ ಮುಷ್ಟಿಪಯ್ಯಂ ತನ್ನ ಹೋರಿಯಂ |
ಬಸವನಂ ಬರೆದು ಬಿಡಲದು ಕೆಲವುದಿವಸಕಂ |
ವಸುವಳಿಯುಲವರೊಡನೆ ತಾನು ತನ್ನರಸಿ ತನ್ನಯ ಮಗಂ ಮಗನ ಸತಿಯು[1] ||
ಬಸವನೊಡನೆ ಸಮಾಧಿಯಂ[2] ಕುಳಿತು ಜನರೆಲ್ಲ |
ಹೊಸತೆನುತೆ ಚೋದ್ಯದಿಂ ನೋಡುತಿರಲಳಿದಿರ್ದ |
ಬಸವನ ಸುಪ್ರಾಣಮಂ ಪಡೆವನೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೭೬ ||

ಇಂತಿವರ್ ಮೊದಲಾದ ಶಿವಶರಣರಲ್ಲಲ್ಲಿ |
ಸಂತಸದೆ ನಾನಾಪವಾಡಂಗಳಂ ಮೆರೆದು |
ಕಂತುಹರನೊಲವಿನಿಂ ನಿಜಪದವಿಯಂ ಪಡೆವರೆಲೆ ರಾಮ ಕೇಳ್ಪುದಿನ್ನು ||
ಮುಂತೆ ಹೊಸಮಲೆಯಲ್ಲ ಕಂಪಿಲನೆನಿಪ್ಪ ಭೂ |
ಕಾಂತನಿಹನವನ ಸುಕುಮಾರಕಂ ರಾಮನಾ |
ಥಂ ತನಗೆ ಕುಮ್ಮಟವೆನಿಪ್ಪ ದುರ್ಗವನಿರದೆ ಕಟ್ಟಿಸುವನರ್ತಿಯಿಂದೆ || ೭೭ ||

ಅಲ್ಲಿ ತಾನಿರುತೆ ಸುತ್ರಾಣ ಭೂಮಿಪಾಲಕರ |
ನೆಲ್ಲರಂ ಗೆಲ್ದು ಹೊಗಳಿಸಿಕೊಳಲದಂ ಕೇಳ್ದು |
ದಿಳ್ಳಿಯಿಂದಿರದೆ ಲಕ್ಕದ ಮೇಲೆ ತೊಂಭತ್ತಾರ್ಸಾವಿರಂ ಕುದುರೆ ಸಹಿತೆ ||
ಬಲ್ಲಿದ ಸುಖಾನರಾ ಕುಮ್ಮಟಕೆ ದಾಳಿಯಂ |
ನಿಲ್ಲದೈತಂದು ತಾವಿರ್ವರುಂ ಕಾದಿ ಬಳಿ |
ಕಲ್ಲಿಯೋ ಬಯಲಪ್ಪರಾಗಲಾ ಕುಮ್ಮಟಂ ಹಾಳಪ್ಪುದೇನೆಂಬೆನು || ೭೮ ||

ಇಂತೆಸೆವ ಚೆನ್ನಬಸವೇಶ್ವರಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಸುರಾಮರಾರನೆನಿಸುವ ಚೆನ್ನಬಸವೇಶನಳ್ಕರಿಂದೆ || ೭೯ ||

ಅಂತು ಸಂಧಿ ೬೨ಕ್ಕಂ ಪದಗಳು ೨೮೨೭ಕ್ಕಂ ಮಂಗಳಮಹಾಶ್ರೀ

೧ ರಸಿಯು (ಹು, ಮ.) ೨ ಯಲಿ (ಹು.)

ಅರುವತ್ತುಮೂರನೆಯ ಸಂಧಿ

ಸೂಚನೆ

ಹರನಾಜ್ಞೆಯಿಂದಿಂದ್ರಸಹವಾಗಿ ನೂರೊಂದು ।
ವಿರತರಿಳೆಯೊಳ್ ಜನಿಸಿ ಬಯಲಾಗಲೀಳ್ನೂರು ।
ವಿರತರುಂ ಸಂಜನಿಸಿ ಪೋಗಲೀ ಬಸವಾದಿಶರಣರುಂ ಜನಿಯಿಸುವರು ॥

ದೇವ ಜಯಜಯ ಶಾರ್ವರೀಶ್ವರಕಲಾಜೂಟ ।
ದೇವ ಜಯಜಯ ಮನ್ಮಥಪ್ರಮೋದವಿದೂರ ।
ದೇವ ಜಯಜಯ ವಿಭವವಿಕ್ರಮಾನ್ವಿತದೇವ ರಾಕ್ಷಸವಿಮದವಿದೂರ ॥
ದೇವ ಜಯಜಯ ಶುಕ್ಲಧಾತುವಿಲಸದ್ಗಾತ್ರ ।
ದೇವ ಜಯಜಯ ನಂದನಶ್ರೀಮುಖಾಂಭೋಜ ।
ದೇವ ಜಯಜಯ ಪ್ರಭವತಾರಣಶರಣ ವಿರೂಪಾಕ್ಷ ಕಾಲಸ್ವರೂಪ ❀ ॥ ೧ ॥

ಆಲಿಸೈ ಶಾಲಿವಾಹನಶಕದ ಸಾವಿರದ ।
ಮೇಲದಿನ್ನೂರೈವತೆಂಟರಿಂದಂ ಮುಂದೆ ।
ಪೇಳಲೇಂ ಧಾತುಸಂವತ್ಸರದ ವೈಶಾಖ ಶುದ್ಧ೧ಸಪ್ತಮಿ ಸುದಿನದೆ ॥
ಲೀಲೆಯಿಂ ಹರಿಹರಗೆ ಪಟ್ಟವಂ ಕಟ್ಟಲವ ।
ನಾಳುವಂ ಹದಿಮೂರು ಪಟ್ಟಪರಿಯಂತರಂ ।
ಪೇಳಲೇಂ ತನ್ನ ಸಂತತಿಗೂಡಿ ನೂರೈವತ್ತೈದು ಸಂವತ್ಸರವನು ॥ ೨ ॥

ಆಲಿಸಾನೆಯಗೊಂದಿಯಲ್ಲಿರುತಿ ಹರಿಹರನ ।
ಪಾಲವಂಶೋದ್ಭವಂ ಪಂಪಾವಿರೂಪಾಕ್ಷ ।
ನಾಲಯುಸಮೀಪದೊಳ್ ವಿದ್ಯಾನಗರಿಯೆಂಬ ಪಟ್ಟಣವ ರಚಿಪನಿತ್ತ ॥
ಲೀಲೆಯಿಂದಮರೇಂದ್ರನತಿವಿಭವದಿಂದಭವ ।
ನೋಲಗಕೆ ಪೋಗುತಿರೆ ಕೈಲಾಸಪರ್ವತದ ।
ಮೇಲೆ ವಿಕಟಾಂಗದ ಗಣೇಶ್ವರರ ಕಂಡು ತನ್ನವರ ಕೂಡಿಂತೆಂಬನು ॥ ೩ ॥

---

೧ ಸುಕ್ಲ (ಶಿ.) ❀ ಈ ಪದ್ಯವು ಅ, ಬ, ಕ, ಪ, ಹು, ಮ. ಈ ಪ್ರತಿಗಳಲ್ಲಿ ೬೪ನೆಯ ಸಂಧಿಯ ಮೊದಲನೆಯ ಪದ್ಯವಾಗಿದೆ.

ನೋಡಿರೆ ವರಿಗೆ ಶಿವನ ಲಾಂಛನಮದಿಲ್ಲವರ |
ಗಾಡಿಕೆಯಿಂ ಪೊಸತು ಭವಿಗಳೊ ಕಾಣಬಾರದೆಂ |
ಪಾಡಲಿವನೆಲ್ಲವಂ ಕೇಳ್ದವರ್ ಕಡುಕೋಪದಿಂದೆ ಸುರಪಾಲ ನೀನು |
ಮೂಢನೇ ನಮ್ಮ ಮಹಿಮೆಗಳನರಿಯದೆ ಹೋಗ |
ಲಾಡುವುದು ನೀತಿಯೇ ಕೇಳ್ವುದದುಕಾರಣಂ |
ಗಾಢದಿಂದಿಳೆಯೊಳಗೆ ಭವಿಯಾಗಿ ಪುಟ್ಟು ಪೋಗೆಂದಾಗ ಶಾಪಿಸುವರು ॥ ೪ ॥

ಸುರಪನಾ ಶಾಪಮಂ ಕೈಕೊಂಡು ಬಂದೊಡನೆ |
ಹರಗೆ ಬಿನ್ನವಿಸಲದನರಿದಾ ಗಣೇಶ್ವರರ |
ವರಶಾಪಮಂ ಮೀರಬಾರದದುಕಾರಣಂ ಪ್ರೌಢದೇವೇಂದ್ರನೆಂಬ |
ನರಪಾಲನಾಗಿ ಜನಿಸೆಂದಾ ಗಣೇಶ್ವರರ |
ಕರೆಸಿ ನೀವನಿಬರಾ ಧಾರುಣಿಯೊಳುದಿಸಿ ಬಳಿ |
ಕಿರವಲ್ಲ ಮಹಿಮೆಗಳ ತೋರಿ ನಿರವಯವಾಂತು ಬಹುದೆಂದು ಬೀಳ್ಕೊಡುವನು ॥ ೫ ॥

ಹರನಾಜ್ಞೆಯಿಂದೆ ಬೀಳ್ಕೊಂಡಿಂದ್ರನಿಳೆಗೈದಿ |
ಹರಿಹರಮಹಾರಾಯ ಬುಕ್ಕರಾಯನೆನಿಪ್ಪ |
ಧರಣೀಶರಂಶದಿಂ ಜನಿಸಿ ವಿದ್ಯಾನಗರಿಯಲ್ಲಿ ರಾಜ್ಯವನಾಳುತೆ ||
ಹರುಷದಿಂ ಪ್ರೌಢದೇವೇಂದ್ರನಿರುತಿರಲತ್ತ |
ಪರಮಕೈಲಾಸದಿಂದಿಳೆಗೈದಿ ನೂರೊಂದು |
ವರಗಣೇಶ್ವರರುದಿಸಿ ಜಂಗಮಸ್ಥಲವನಂಗೀಕರಿಸಿ ವಿರತರಹರು ॥ ೬ ॥

ವರಕರಸ್ಥಲದ ವೀರಣ್ಣೊಡೆಯರೆಂಬುವರ |
ಕರಕಮಲಸಂಜಾತನಕ್ಕಸಾಲೆಯನಾಗ |
ನಿರುತಲೊಂದಿನದಲ್ಲಿ ಹಾವರಕೆ ಹೊಕ್ಕೊಡಾ ಮನೆಯವರ್ ಮುತ್ತಿಕೊಳಲು |
ಪರಮಸಮ್ಯಗ್ಜ್ಞಾನ ತಲೆದೋರೆ ಚಿತ್ತದಿಂ |
ವಿರತನಹೆನೆಂದು ಸಂಸಾರಮಂ ಬಿಟ್ಟಾಗ |
ಕರಪೀಠದಲ್ಲಿ ಲಿಂಗವ [4]ತೆಗೆದುಕೊಂಡು ಪೀಠವನೊಡನೆ ಕಡೆಗೆ[4] ಹಾಯ್ಕೆ ॥ ೭ ॥

೧ ಹಲ (ಹು, ಮ.) ೨ ಬಯೀ (ಹು, ಮ.) ೩-೩ ಯುಸರಿಯದೇ (ಹು, ಮ.)
೪-೪ ಧರಿಸಿ ಕಚ್ಛುಟವನೊಡನೆ ಕಡೆಗೆದ್ದು (ಶಿ, ಗೋ.)

ಮರುಳನಂದದೆ ೧ತನ್ನ ತಲೆಗೆ೧ ಬೂದಿಯ ಹೂಸಿ
ವರದಿಗಂಬರನಾಗುತಾ ಮನೆಯ ಬಾಗಿಲಂ |
ಪೊರಮಡುಬರೆ ಸರ್ವರುಂ ನೋಡುತಿರೆ ತನ್ನ ಗುರುವಿದ್ದ ಪುರಕೈದಿಬರಲು ||
ಪರಿಹಾಸ್ಯಮಂ ಮಾಡುತಕ್ಕಸಾಲೆಯನಾಗ |
ನಿರದೆ ಭಿಕ್ಷಕೆ ಬಂದನಿದೆಕೊ ನೋಡೆನಲವರ |
ಗುರುವೈದೆ ಕಾಣುತ್ತಿದೇನೆಂದು ಕೇಳಲಾ ಗುರುವಿನೊಡನಿಂತೆಂಬನು || ೮

ಎಲೆ ಗುರುವೆ ಕೇಳೆಂದು ತನ್ನ ವೃತ್ತಾಂತಮಂ |
ತಿಳಿಪಿ ಕೈಯೊಳಗಿರ್ದ ಲಿಂಗಮಂ ತೋರಲದ |
ಬಲಿದು ಮತ್ತೊಂದು ಪೀಠಕ್ಕದಂ ಮಗುಳ್ಚಿತ್ತು ಕ್ರಿಯೆಯುಳಿವ ಪರಿಯಂತರ ||
ತೊಲಗಲೀಯದಿರು ಲಿಂಗವ ಪೀಠದಿಂದಲೆಂ |
ದಲಘುಮತಿ ಮಗುಳೆ ಬೋಧಿಸಿ ಪ್ರಸಾದವ ನೀಡಿ
ಕಳುಹಲಲ್ಲಿಂದೈದಿ ಸಕಲದೇಶವ ತಿರುಗಿ ಮಗುಳಲ್ಲಿಗೈತರುವನು || ೯ ||

ಬಂದ ಶಿಷ್ಯನ ನಿಲವನರಿದು ವೀರಣ್ಣೊಡೆಯ |
ರಂದು ಗುರುವೆಂಬ ಭಾವವನುಳಿದು ಬಳಿಕಲಾ |
ನಂದದಿಂದರ್ಘ್ಯಪಾದ್ಯಾದಿ ಸತ್ಕ್ರಿಯೆಗಳಿಂದುಪಚರಿಸಿ ಭಕ್ತಿಯಿಂದೆ ||
ಚೆಂದದಿಂದೆಸೆವ ಮಣಿಮಂಚ ಸುಪ್ಪತಿಗೆಯು೨ಲಿ೨ |
ತಂದು ಬಿಜಯಂಗೆಯ್ಸಿ ಪುಷ್ಪಕ್ಕೆ ಪೋಗೆ ನಲ |
ವಿಂದೆ ಮೂರೆಡೆಯಲ್ಲಿ ಮಲವ ಬಿಟ್ಟಲ್ಲಿರ್ದ ನಾರಿಯೊಡನಿಂತೆಂಬನು || ೧೦ ||

ತರುಣಿ ಕೇಳೀ ಮಲಕ್ಕೊಳಗಾದೊಡಿಲ್ಲಿ ಸುಖ |
ವಿರಲಿ ನಿಮ್ಮೊಡೆಯರಲ್ಲದೊಡೆಮ್ಮಕೂಡೀಗ |
ಬರಲಿಯೆನುತುಸಿರಿ ತಾಂ ಪೋಗೆ ವೀರಣ್ಣೊಡೆಯರೆಯ್ತಂದು ಕೇಳೆ ನಿಮ್ಮ ||
ಗುರುವೊ ಶಿಷ್ಯನೊ ಕಾಣೆವೀ ಮಲಕ್ಕೊಳಗಾದೊ |
ಡಿರಲಿಯಲ್ಲದೆ ಬರಲಿಯೆಂದುಸಿರಿ ಪೋದನೆನೆ |
ಹರಹರಾಯೆಂದೆಲ್ಲವಂ ಬಿಟ್ಟು ಬಳಿಕಾತನಡಿವಿಡಿದು ನಡೆಗೊಂಬನು || ೧೧ ||

೧-೧ ತಲೆಯ ಕೆದರಿ (ಹು, ದಾ, ಮ.) ೨ ತ್ರಿಗೆಗೆ (ಶಿ.); ತ್ರಿಗೆಲಿ (ಹು, ಮ.)

ಬರುತಲ್ಲಿ ಕಾಂಬನಾ ಮೆಳೆಗೆ ಕೂದಲು ಸಿಕ್ಕಿ |
ಪರಮಶಿವಯೋಗದಿಂದಿರಲೊಡನೆ ಬೇಗದಿಂ |
ಪರಿತಂದು ತಲೆಯ ಕೂದಲು ಬಿಡಿಸೆ ಕಣ್ದೆರೆದು ಕಂಡು ಹಾ ವೀರ ನೀನು |
ಪರಿಹರಿಸಿ ಬಂದೆಯಾ ಸಂಸಾರಬಂಧಮಂ |
ಸಿರುತನೇ ನಡೆಯೆಂದು ತಾವಿರ್ವರೊಂದಾಗಿ |
ಹರುಷದಿಂದಿರದೆ ವಿದ್ಯಾನಗರಿಗೈತರುವರಲೆ ರಾಮ ಕೇಳೆಂದನು ॥ ೧೨ ॥

ಬಂದಲ್ಲಿ ಹುಚ್ಚರಾವುತನ ಮನೆಯಂಗಣದೊ |
ಳಂದು ಲಿಂಗಾರ್ಪಿತದ ಭಿಕ್ಷಮಂ ಬೇಡೆ ನಲ |
ನಿಂದಲಾ ಮನೆಯಾಕೆ ಭಸಿತವಂ ಮುಂದಿರಿಸಿ ತನ್ನ ಕೆಯ್ಗೊಂಬುದೆನಲು |
ಸಂದೇಹವಿಲ್ಲದಾಕೆಯನಾಗಳಾ ಮನೆಯ |
ಮುಂದೆ ಸಂಭೋಗಿಸುತ್ತಿರಲಾಗಲವಳ್ಗಂಡ |
ನೆಂದೆಂಬ ಹುಚ್ಚರಾವುತನೈದಿ ಬಂದವರ ಕಾಣುತತಿಕೋಪದಿಂದೆ ॥ ೧೩ ॥

ಉಚ್ಚಿದಾಯುಧದಿಂದಲಿರ್ವರಂ ತಿವಿಯೆ ತ |
ಟ್ಟುಚ್ಚಲಲಗಂ ಕೀಳೆ ಗಾಯಂಗಳಿಲ್ಲದಿರ |
ಲಚ್ಚರಿಯೆನುತ್ತವಂ ನಡುಗುತಿರೆ ನಾಗಿದೇವಂ ಕಂಡು ಕರುಣದಿಂದೆ |
ಬೆಚ್ಚಬೇಡೆಲವೊ ನೀನೊಂದು ಭಿಕ್ಷವನಿತ್ತೆ |
ಮೆಚ್ಚಿಯಿವಳೊಂದು ಭಿಕ್ಷವನಿತ್ತಳಿವರೊಳಗೆ |
ಹೆಚ್ಚು ಕುಂದಿಲ್ಲೆಮಗೆ ನೀನಂಜಲೇತಕೆಲೆ ಹುಚ್ಚ ನೀಂ ಕೇಳೆಂದನು ॥ ೧೪ ॥

ಹರುಷದಿಂದವನೈದಿ ಪ್ರೌಢದೇವೇಂದ್ರಂಗೆ |
ವಿರಚಿಸಿದೊಡೆಲ್ಲವಂ ಕೇಳ್ದು ಬೇಗದೊಳವರ |
ಕರೆಸಿ ಭಯಭಕ್ತಿಯಿಂದೆರಗಿ ಗುರುಬಸವೇಶನರಮನೆಗೆ ಕಳುಹಲಾತ |
ಪರಮಸಂತೋಷದಿಂ ಲಿಂಗಪೂಜೆಯ ಮಾಡು |
ತಿರೆ ನೋಡುತುಪಕರಣಮಂ ಬಿಸುಟು ದಂಡಿಗೆಯ |
ನಿರದೆ ನೆಲಕಪ್ಪಳಿಸೆ ಗುರುಬಸವನಾ ನಾಗಿದೇವರೊಡನಿಂತೆಂಬನು ॥ ೧೫ ॥

೧ ಕಾಂ (ಹು, ಮು.) ೨-೨ ದೆ ಮನೆಯಾಕೆ ಭಸಿತವ ತಂದು (ಹು, ಮು.) ೩ ಗಳ (ಹು, ಮು.)

ಏನ ಮಾಡಿತ್ತು ದಂಡಿಗೆ ನಿಮ್ಮನೆನೆ ನಿನ್ನ |
ಜ್ಞಾನವೆಲ್ಲತ್ತು ಲಿಂಗವಬಿಟ್ಟು ಬಯಲಸಂ |
ಧಾನವಲ್ಲದಲರ್ಪಿತಾವಧಾನವನರಿಯೆ ಕೇಳೆಸುತ್ತೈಕ್ಯಪದವ ||
ಸ್ವಾನುಭಾವದೊಳರಿಪೆ ಗುರುಬಸವದೇವರನು |
ಮಾನವಿಲ್ಲದೆ ನಾಗಿದೇವಂಗೆ ನಮಿಸಿ ಸು |
ಮ್ಮಾನದಿಂದಾ ವಿರಕ್ತರ ಕೂಡಿ ತೋಂಟಕ್ಕೆ ಪೊರಮಡುವರುತ್ಸವದೊಳು || ೧೬ ||

ಸಿಂಗಾರ[೧]ತೋಟಕ್ಕೆ ವಿರತರೆಲ್ಲರ್ ಪೋಗಿ |
ತೆಂಗಿನಮರನ ಮೇಗಳೆಳೆನೀರ್ಗಳುಂ ತಮ್ಮ |
ಲಿಂಗಕರ್ಪಿತವಾದುವೆನುತವಂ ಕುರಿತುಕೊಳೆ ತೋಟಿಗಂ ತಂದಿರಿಸಲು ||
ಹಿಂಗದೆಲ್ಲರ್ ಕುರಿತ ಕಾಯಿಗಳು ಮೊದಲಂತೆ |
ಕಂಗೆಸೆವುತಿರ್ದುವಾ ನಾಗಿದೇವರ ಕಾಯ್ಗ |
ಳಿಂಗಿ ನೀರೆಲ್ಲ ಬಯಲಾಗಲದನೋಡಿ ವೀರಣ್ಣೊಡೆಯರಿಂತೆಂಬರು || ೧೭ ||

ತಿಳಿದುಕೊಳಿ ನಮ್ಮಂತೆ ಕ್ರಿಯೆಗಳಿಂ ಶಿವಗಿತ್ತು |
ಕೊಳಬೇಕದಲ್ಲದೊಡೆ ನಾಗಿದೇವರ ತೆರದೊ |
ಳುಳಿದ ಕ್ರಿಯೆಗಳನಿಂತು ನಡೆಯಬೇಕಲ್ಲದೆರಡಕೆ ಬಿಟ್ಟ ಕರುವಿನಂತೆ ||
ಕಳವಳಿಸಬೇಡವೆಂದಾ ವಿರಕ್ತರಿಗಾಗ |
ತಿಳಿಪಿ ಷಟ್ಸ್ಥಲಮಾರ್ಗಮಂ ಕರುಣದಿಂದಿರದೆ |
ಬಳಿಕ ತಾವಿರ್ವರೇ ಶ್ರೀಗಿರಿಗೆ ಪೋಪರೆಲೆ ರಾಮೇಶ ಕೇಳೆಂದನು || ೧೮ ||

ಗುರು ಕರಸ್ಥಲದ ವೀರಣ್ಣೊಡೆಯರೇ ತನ್ನ |
ವರಶಿಷ್ಯ ನಾಗಿದೇವನ ಕೂಡೆ ನಾವಿನ್ನು |
ನಿರವಯುವನೈದಬೇಕೆನಲಾಗ ಮೋಹಿನೀಗಜವಿದ್ದ ಬಳಿಗೆ ಪೋಗಿ ||
ಸರವಿಗಳನೆಡೆಗೆಡೆಗೆ ಕಟ್ಟಿಕೊಂಡಾ ಗಜವ |
ನಿರದೇರಿ ಗುರುವೆ ನೋಡೆಂದೊಡಾತಂ ನೋಡಿ |
ಸರವಿಗಳೆ ಪರಿಪರಿಯ ಬಂಗಾರವಾಗಿ ಕಾಣಿಸುತಿವೆಕೊ ಕೇಳೆಂಬನು || ೧೯ ||

---

೧ ಸಿಂಗರದ (**ಹು.**)

ಎನೆ ಕೇಳ್ದು ನಾಗಿದೇವಂ ಗುರುವೆ ನೀ[೧]ವಿನ್ನು |
ಜನಪನಿಂ ಪೂಜೆಯುಂ ಕೆಯ್ಕೊಳುತ್ತುಂ ಕೆಲವು |
ದಿನವಿದ್ದು ಬಹುದೆಂದೊಡಾಗ ವೀರಣ್ಣೊಡೆಯರೆಲೆ ಮಗನೆ ನಂಬಿದೆನೆನೆ ||
ಅನುಮಾನವೇಕೆ ನಾನೇ ಬಂದು ನಿಮ್ಮನಾ |
ಜನವರಿಯೆ ನಿರವಯವನೈದಿಸುವೆನೆಂದಾಗ |
ವಿನಯದಿಂದವರ ಬೀಳ್ಕೊಟ್ಟು ತಾಂ ನಿರವಯವನೈದುವಂ ಕೇಳೆಂದನು || ೨೦ ||

ಇನ್ನಾಲಿಸೈ ಸಿದ್ಧರಾಮ ವೀರಣ್ಣೊಡೆಯ |
ರುನ್ನತದ ಚಿಂತೆಯಿಂದಲ್ಲಿರದೆ ಬೇಗದಿಂ |
ಮುನ್ನ ತಾನಿರ್ದ ವಿದ್ಯಾನಗರಿಗೈತರಲ್ ಪ್ರೌಢದೇವೇಂದ್ರನರಿದು ||
ತನ್ನ ಮಗಳಂ ಕೊಟ್ಟು ಕಳುಹಲಾ ತತ್ತ್ವಸಂ |
ಪನ್ನನಾ ನಾಗಿದೇವಂ ಬರುವತನಕ ನಾ |
ವಿನ್ನಿಲ್ಲಿ ಬಿಟ್ಟಗಲೆವೆಂದು ಶಿವಗೋಷ್ಠಿಯಿಂದಿರುತಿರ್ಪರುತ್ಸವದೊಳು || ೨೧ ||

ಒಂದುದಿನವಾ ನೃಪತಿಯೊಡನೆ ವೀರಣ್ಣೊಡೆಯ |
ರೊಂದಾಗಿ ಪಂಪಾನದೀತೀರಕೈತಂದು |
ನಿಂದಿರಲ್ ಮೀನ್ಬಲಿಗನೆಂದೆಂಬ ಪಕ್ಕಿ ಮೀನಂ ಕಚ್ಚಿ ಗಗನಕೊಯ್ಯು ||
ತಿಂದಪೆನೆನುತ್ತದಂ ಬಿಡೆ ಬೀಳುತಿರೆ ಮಗುಳೆ |
ಬಂದದಂ ಪಿಡಿಯೆ ವೀರಣ್ಣೊಡೆಯರದ ಕಾಣು |
ತಂದದಕೆ ಮೆಚ್ಚಿ ಪಚ್ಚೆಯ ಕಡಗಮಂ ಹಾಯ್ಕೆ ಹೊಳೆಯಲ್ಲಿ ಬೀಳೆ ಕಂಡು
|| ೨೨ ||

ಪಚ್ಚೆಯದ ಕಡಗಮಂ ಬಿಸುಟಿಯೇಕೆನಲದಕೆ |
ಮೆಚ್ಚಿ ಯಾವಲ್ಲಯಿಸೆ ಮತ್ತೊಂದು ಕಡಗವನ |
ಮುಚ್ಚಿ ಮೊದಲಿಟ್ಟ ಬಳಿಯಲಿ ಹಾಯ್ಕಿ ತೋರಿಸಿದೊಡರಸನತಿಚಿಂತೆಯಿಂದೆ ||
ಕೆಚ್ಚಿನವು ಕಡಗಂಗಳೆನೆ ನೃಪತಿ ನೀನದೇಂ |
ಹುಚ್ಚನೇ ಬೊಕ್ಕಸದೊಳಿವೆ ತರಿಸಿ ನೋಡೆಂದೊ |
ಡಚ್ಚರಿಯೆನುತ್ತಾಗ ನೋಡಲಾ ಕಡಗಂಗಳಿರೆ ನೃಪತಿ ಬೆರಗಪ್ಪನು || ೨೩ ||

---
೧ ನಾ (ಹು.)

ಚೆನ್ನಾಗಿ ಚಂದ್ರಗಾವಿಯ ಹಚ್ಚಡವ ಮಾಡಿ |
ತನ್ನ ಗುರುವಿಂಗೊಂದು ಹೋಳನರಸಿಂಗೊಂದು |
ಸನ್ನಿಯಿಂ ಕೊಡೆ ಕರಸ್ಥಲದ ವೀರಣ್ಣೊಡೆಯರರಸಿಯುದನುಟ್ಟುಕೊಂಡು ||
ತನ್ನ ಪಿತನರಮನೆಗೆ ಬರಲರಸ ನೋಡುತಾ |
ಹೊನ್ನನಂ ಕರೆಸಿದೆಲ್ಲಿಯದೆಂದು ಕೇಳಲವ |
ನೆನ್ನ ದೇವರಿಗೊಂದ ರಾಯರಿಂಗೊಂದ ನಾಂ ಕೊಟ್ಟೆನೆನಲಿಂತೆಂಬಸು || ೩೪ ||

ನನ್ನೊಡವೆಯಂ ನಿನ್ನ ದೇವರಿಗದೆಂತಿತ್ತೆ |
ಚೆನ್ನಾಗಿ ತಿಳಿಪೆಂದೊಡೆಲೆ ಭೂಮಿಪತಿ ಕೇಳ್ವು |
ದೆನ್ನ ದೇವರದನವರಿಗೆ ಕೊಟ್ಟೆನಲ್ಲದಾಂ ಪೆರರೊಡವೆಯಂ ಕೊಡುವೆನೇ ||
ನಿನ್ನೊಡವೆ ನಿನ್ನ ಬೊಕ್ಕಸದ ಪೆಟ್ಟಿಗೆಯುಲಿದೆ |
ಸನ್ನಿಯೆನೆ ಪೆಟ್ಟಿಗೆಯ ತರಿಸಿ ನೋಡಿದೊಡಿರಲ್ |
ಹೊನ್ನಯ್ಯ ನೀನಸಗನಲ್ಲವೆನಲವನರಿದನೆನುತೆ ನಿರವಯಮಪ್ಪನು || ೩೫ ||

ಮಿಡಿಬಿಲ್ಲ ಶಾಂತದೇವರೆ ತನ್ನ ಲಿಂಗಮಂ |
ತೊಡಚಿ ಸಂಧಾನದಿಂ ನೋಳ್ಪವರನೆಲ್ಲರಂ |
ಮಿಡಿಯೆಪೋಗಲ್ಕಿವಂ ಹುಚ್ಚನೆಂದಿರದೋಡುತಿರಲಾಗಲೊಂದು ದಿವಸ ||
ಕಡುವೇಗದಿಂ ಕರಸ್ಥಲದ ವೀರಣ್ಣೊಡೆಯ |
ರೆಡೆಗೆ ಬಂದೆಸೆವುತಿರೆ ಸಂಧಾನವಾಯ್ತಿನ್ನು |
ಬಿಡದೆಸವುದೆನಲಾತನೆಸೆದು ಬಳಿಕಾ ಲಿಂಗದೊಡನೆ ನಿರವಯಮಪ್ಪನು || ೩೬ ||

ಪೇಳಲಿನ್ನೇಂ ಸಿದ್ಧರಾಮ ಹೇಟಿಯ ಮರುಳ |
ಕೋಳಿಗಳ ಮೇಲೆ ತನ್ನಯ ಹೇಟೆಯಂ ಬಿಟ್ಟು |
ಕಾಳೆಗದಿನೆಲ್ಲವಂ ಗೆದ್ದು ಕೊಂಡಿರದೆ ತಾನೊಯ್ಯುತಿರಲೊಂದು ದಿವಸ ||
ಆಳೋಚನಂಗೆಯ್ದು ತನ್ನೊಳಗೆ ಚಿಂತೆಯಂ |
ತಾಳಿ ವೀರಣ್ಣೊಡೆಯರ್ಗೈತಂದು ನೋಡಲಾ |
ಕೋಳಿಗಳನೆಲ್ಲವಂ ನಿರವಯುವನೈದಿಸಲ್ ಕಂಡೆನೆನೆ ಬಯಲಪ್ಪನು || ೩೭ ||

---

೧ ಮಾ (ಪು.)

ತಗರಕಾಳೆಗದ ಪ್ರಭುಸಾ ತೆರದೊಳ್ಪೈದುವಂ |
ಮಿಗೆ ಗೆಲ್ಲಗೂಳಿಯುಂಗಡಿಯು ಕಜ್ಜಾಯಗಳ |
ತೆಗೆತೆಗೆದು ಮೆಲುತಿರಲ್ಕಿರದವರ್ ಕೊಲ್ಲುತಿರಲಿಂ ಪರಿಯೊಳೊಂದು ದಿವಸ |
ವರಕರಸ್ಥಲದ ವೀರಣ್ಣೊಡೆಯರಾಗಲೈ |
ತರುತಾತನಂ ಕಂಡು ಕೊಲ್ಲಬೇಡೀತನೇ |
ಪರಮಶಿವಯೋಗಿಯೆಸಲರಿದನೆಂದೆನುತಾಗಲಿರದೆ ನಿರವಯನಪ್ಪನು ॥ ೨೮ ॥

ಬಾಲಲಿಂಗಣ್ಣನೊಲವಿಂದೆ ವೀರಣ್ಣೊಡೆಯ |
ರಾಲಯಕೆ ಬಂದು ಭಿಕ್ಷವ ಬೇಡೆ ಕಾಣುತಿವ |
ಬಾಲನೆಂದೊಳಯಕ್ಕೆ ಕರೆಯಲ್ಕೈತಂದು ಮಂಚದ ಮೇಲೆ ಪವಡಿಸಿರಲು |
ಲೀಲೆಯಿಂದಾತನಂಗೆಯ್ಯ ಲಿಂಗವ ತೆಗೆದು |
ಮೇಲೆ ತಾವೆಲ್ಲರುಂ ಸವಿಸಿ ಬಳಿಕಾಗಲಾ |
ಬಾಲಲಿಂಗಣ್ಣನಂ ಕರೆಯೆನಲ್ ಕರೆಯೆ ಹರಣವನುಳಿದು ಡಿಂಬವಿರಲು ॥ ೨೯ ॥

ಕಂಡಾಗಲಾ ವಿರಕ್ತರನೆಲ್ಲರಂ ಕೂಡಿ |
ಕೊಂಡು ವೀರಣ್ಣೊಡೆಯರೆ ತಾವು ಮೊದಲಿತೆ |
ಕೊಂಡ ಲಿಂಗವನಾತನಂಗೆಯ್ಯೊಳಿರಿಸೆ ಕಣ್ದೆರೆಯಲಾ ಲಿಂಗಣ್ಣನ |
ಉಂಡುದಿಲ್ಲೇಳೆಂದೊಡಾನು ನಿಮ್ಮೊಡನಾಗ |
ಉಂಡೆನೆನೆ ಕೇಳ್ದು ವೀರಣ್ಣೊಡೆಯರೆಂತು ನೀ |
ನುಂಡೆಯೆನೆ ಬಾಲಲಿಂಗಣ್ಣನವರುಂಡೂಟಗಳ ಕುರುಪುಗಳ ಪೇಳ್ದನು ॥ ೩೦ ॥

ಅದನರಿದು ಕೇಳ್ದು ವೀರಣ್ಣೊಡೆಯರಧಿಕನು |
ಮನ್ನಿಸಿಂದಾಗಲಿಂತಂ ಪ್ರಾಣಲಿಂಗನಂ |
ಭಾಸಿಸಿ ನಿನಗೆ ಹುದುಂದು ಬಾಲಲಿಂಗಣ್ಣನಂ ಪಿಡಿದೆತ್ತಿಕೊಂಡು ಕೂಡೆ ||
ಪ್ರೇಮಭಾವದೊಳೊಲಿದು ಕೊಂಡಾಡುತಿರಲದಂ |
ತಾನರಿದು ನಾಗಿದೇವಂ ಬಳಿಕ್ಕವರನನು |
ಮಾನವಿಲ್ಲದೆ ನಿಜ ನಿಜಾನಂದವನ್ನೈದಿಸುವನೆಲೆ ರಾವು ಕೇಳೆಂದನು ॥ ೩೧ ॥

೧ ಯಹುದ (ಶಿ, ಗೋ.)

ಸರವಿಯಿಂ ತನ್ನ ಕಾಲಂ ಸುತ್ತಿಕೊಂಡು ಬಳಿ |
ಕಿರಲವಕೆ ಲಿಂಗಮಂ ಕಟ್ಟಿಕೊಂಡೆಡೆಯಾಡು |
ತಿರಲೊಂದು ದಿನದಲ್ಲಿ ಮಲಗಿಕೊಂಡಿರೆ ಪ್ರೌಢರಾಯನದ ಕಂಡು ತೆಗೆಸೆ ||
ಹರಣವಿಲ್ಲದೆ ಡಿಂಬವಿರೆ ನೋಡಿ ಭೂಪನಾ |
ಸರವಿಗಾ ಲಿಂಗಮಂ ಕಟ್ಟಿಸಲ್ ಕಣ್ದೆರೆವು |
ತಿರಬಾರದಿವನರಿದನೆನುತೆ ನಿರವಯವುಪ್ಪನೆಲೆ ರಾಮ ಕೇಳೆಂದನು || ೩೨ ||

ಬತ್ತಲೇಶ್ವರನೆಂಬ ಶಿವಯೋಗಿ ಗುಹೆಯಲ್ಲಿ |
ಬತ್ತಿದ ಶರೀರದಿಂದಿರೆ ನೃಪತಿ ನೋಡುತ್ತೆ |
ವೃತ್ತಕುಚೆ ನೀನೀತನಂ ಒಲಿಸಲಾಪೆಯಾ ಎಂದೊಡಾ ಪದ್ಮಾವತಿ ||
ಚಿತ್ತೈಸು ಜೀಯ ನಾನೀತನಿಂ ಪುತ್ರನಂ |
ಪೆತ್ತು ನಿನ್ನಯ ಬಳಿಗೆ ಕರೆತರುವೆನೆಂದೊಡನೆ |
ಬಿತ್ತರದೊಳಾ ಯತಿಯನೊಲಿಸಿಕೊಂಡೊರ್ವ ಮಗನಂ ಪಡೆವಳುತ್ಸವದೊಳು
|| ೩೩ ||

ಇರುತಲೊಂದಿನ ವಿರೂಪಾಕ್ಷಲಿಂಗನ ತೇರ |
ಪರುಸೆಗೆಂದಾಗಳಾ ಪದ್ಮಾವತಿಯೆ ತನ್ನ |
ಪುರುಷನಂ ಕೂಡಿಕೊಂಡೈತಂದು ಮಗನನಾತನ ಕೈಗೆ[2] ಕೊಟ್ಟು ಬಳಿಕೆ |
ಧರಣಿಪತಿ ನೋಡೀತ ಬತ್ತಲೇಶ್ವರನೆಂದು |
ಕರವೆತ್ತಿ ತೋರಲಿವರರಿದರಿಲ್ಲಿನ್ನು[1] ನಾ |
ವಿರಬಾರದೆನುತಲಾ ಶಿಶುವ ಮೇಲಕೆ ಹಾಯ್ಕಿ ತಾನೊಡನೆ ಬಯಲಪ್ಪನು || ೩೪ ||

ಪರಮಗುರು ಬಸವೇಶನಧಿಕತರವಾದದಿಂ |
ದಿರದೆ ಶಾರದೆಯ ಪೀಠವನೇರಿ ಗೆಲವಿನಿಂ |
ಮರಳಿಬಂದಾ ಪ್ರೌಢನರಮನೆಯೊಳಿರಲೊರ್ವಯೋಗಿ ಖೇಚರಪವನದೆ ||
ಇರಲರಸನತಿಚೋದ್ಯದಿಂ ನೋಡುತಿರಲರಿದು |
ಗುರುಬಸವನವನಿಗಿಂ ಮೇಲಕ್ಕೆ ಪೋಗಿ ಖೇ |
ಚರದಲ್ಲಿ ಸಕಲರಾಗಂಗಳಂ ಪಾಡಿ ಬಳಿಕಿರದೆ ನಿರವಯವುಪ್ಪನು || ೩೫ ||

---

೧ ಲ್ಲಿಂತು (ಶಿ, ಹು, ಮ.) ೨ ಗಮು (ಮ.)

ಆಲಿಸಿನ್ನೆಲೆ ಸಿದ್ಧರಾಮೇಶ ನಿರ್ವಾಣಿ |
ಬೋಳೇಶನತಿಪವಾಡಂಗಳಂ ಮೆರೆವುತಿರು |
ಕಾಲದ ಮರನ ಬೇರಲ ಪಿಡಿಕೊಂಡು ಶಿವಯೋಗನಿಜಸಮಾಧಿಯಲಿ ನಿಂದು ||
ಲೀಲೆಯಿಂದಿರಲಾಗಲಲ್ಲಿರ್ಪ ಭಕ್ತಜನ |
ಜಾಲವೀತಂ ತೀರ್ದನೆಂದು ತೆಗೆಯಲ್ಕಿರದೆ |
ಪೇಳಲೀಸವರ ಕೆಯ್ಯೊಳಗೆ ನಿರವಯವಪ್ಪನೆಲ್ಲರುಂ ಚೋದ್ಯಮೆನಲು || ೩೬ ||

ಪುರುಷನಂದದೆ ಮುಕ್ಕಳೊಡನೆ ಪರಪಟ್ಟ ತಾ |
ನಿರಾಡುತಿರಲಿರಸನ್ನೈತರುತೆ ನೋಡೀತ |
ಪರಮಶಿವಯೋಗಿಯಹನೆಂದು ನಿಶ್ಚಯಿಸಿ ಕರೆಯೆಂದೊಡಿವನರಿದನೆನುತೆ |
ಇರದಾಗ ಬಯಲಪ್ಪನಾತ ಮೊದಲಾಗಿ ಪರಿ |
ಪರಿಯಲತಿಮರುಳರಂದದೊಳಿರ್ಪ ನೂರೊಂದು |
ನಿರುತರೆಲ್ಲರ್ ನಿರಾಕಾರಮಂ ತಳೆವರೆಲೆ ರಾಮೇಶ ಕೇಳೆಂದನು || ೩೭ ||

ಎಲೆ ರಾಮ ಕೇಳಿನ್ನು ಸಕಲಾಗಮಂಗಳ್ಗೆ |
ನೆಲೆಯೆನಿಸಿ ಪ್ರೌಢನಿಂ ಪೂಜೆಯಂ ಕೊಂಡು ಷ |
ಟ್ಸ್ಥಲಮಾರ್ಗಮಂ ಸಕಲಶಿವಭಕ್ತಸಂತತಿಗೆ ಕರತಳಾಮಳಕವಾಗಿ ||
ತಿಳಿಪ್ಪೊಲನುಭವಸೂತ್ರವಾದಿ ಶಾಸ್ತ್ರಂಗಳಂ |
ಗೆಲಿಪಿನಿಂ ಪೇಳ್ದು ನಿಜಶಿವಸಮಾಧಿಯಲಿ ಮಿಗೆ |
ನಲಿಪಿನಿಂದಲ್ಲಿ ಮಗ್ಗೆಯ ಮಾಯಿದೇವಪ್ರಭುವರನಿರದೆ ಮುಕ್ತನಹನು || ೩೮ ||

ಎಲೆ ರಾಮ ಕೇಳ್ಬುದಾ ಪ್ರೌಢದೇವೇಂದ್ರನಿರು |
ತಳೆವನುಮನಂಶದೆ ವಿರೂಪಾಕ್ಷರಾಯನಂ |
ದಿಳೆಯನಾಳುತ್ತಮಿರಲವನನೆಬ್ಬಿಟ್ಟ ನರಸಣನಾಯ್ಕ[೧]ನಾ ನಗರಿಯ ||
ಗೆಲಿಪಿನಿಂ ತೆಗೆದುಕೊಳಲವನ ಸುತರಾ[೨]ಗ ಭೂ |
ತಳಮನೊಲಿದಾಳ್ವರ್ಕೆ[೩]ಳವತ್ತೊಂದು[೪]ವರುಷಮದ |
ತಿಳಿವುದಾ ಪಟ್ಟಕಚ್ಯುತನೆ ಕಡೆ ಬಳಿಕಲವ[೫]ರಳಿಯಂದಿರೊ[೫]ಲಿದಾಳ್ವರು || ೩೯ ||

೧ ರಾಮು (ಮು.) ೨ ನಾ (ಮು.) ೩ ನ್ಯೆ (ಮು.) ೪ ತ್ತೈದು (ತಿ, ಗೋ.)
೫-೫ ರಳ್ತಿಯಿಂದೊ (ತಿ, ಗೋ.)

ಆಲಿಸಾ ಪ್ರೌಢರಾಯಂ ಪೋದ ಕೆಲದಿನದ |
ಮೇಲಿರದನಾಚಾರವೇ ಪೆರ್ಚೆ ಧರೆಯೊಳಗೆ |
ಮೇಲಾದ ವೀರಶೈವಾಚಾರವಡಗಿ ಪರವಾದಿಗಳೆ ಘನವಾಗಲು ||
ಕೈಲಾಸಕೈದಿ ನಾರದನಾಗ ಪರಮೇಶ |
ನೋಲಗಂಗೊಟ್ಟಿರ್ಪ ಸಮಯದೊಳ್ ಕಂಡು ಸ |
ಲ್ಲೀಲೆಯಿಂದೆರಗಿ ಮಗುಳ್ದಿದ್ದು ಬಿನ್ನವಿಸುವಂ ಭಯಭರಿತಭಕ್ತಿಯಿಂದೆ || ೪೦ ||

ಮಾರಾರಿ ಚಿತ್ತೈಸು ಪಿಂತೆ ಧರೆಯೊಳಗನಾ |
ಚಾರವೇ ಪೆರ್ಚಿತೆನೆ ನಂದಿಮೊದಲಾದರಂ |
ವೀರಶೈವಾಚಾರಮಂ ಪ್ರತಿಷ್ಠಿಪುದೆಂದು ಕಳುಹಿದಿರಿ ಕೂಡೆ ನೀವು ||
ಓರಂತೆ ರಾಕ್ಷಸಶ್ವೇತಾಂಬರಂಗದೇ |
ಳ್ನೂರುಂಯೆಪ್ಪತ್ತುವರುಷವುಮವನ ಸಂತತಿಯ |
ಧಾರುಣಿಯನಾಳೆಂದು ಕಳುಹಿದಿರಿ ಕಳುಹಲಾ ಬಸವಾದಿಶರಣರೆಲ್ಲ || ೪೧ ||

ಹರನೆ ಚಿತ್ತೈಪುದೇಳ್ನೂರು ಮೇಲೆಪ್ಪತ್ತು |
ವರುಷಪರಿಯಂತರಂ ಬರಲೊಲ್ಲೆವೆಂದವರ್ |
ನಿರವಯವನೈದಿದರ್ ಧರೆಯೊಳಗೆ ಮೊದಲಂತನಾಚಾರವೇ ಪೆರ್ಚಲು ||
ಸುರಪನ ನಿಮಿತ್ತದಿಂದಿಳೆಯೊಳಗೆ ನೂರೊಂದು |
ವರಗಣೇಶ್ವರರುದಿಸಿ ಜಂಗಮಸ್ಥಲವಾಂತು |
ಪರಮಷಟ್ಸ್ಥಲವನುದ್ಧರಿಸಿ ಬಳಿಕವರಿರದೆ ನಿರವಯವನೈದಲಿಂಗ || ೪೨ ||

ಧರೆಯೊಳಗೆ ವೀರಶೈವಾಚಾರವಡಗಿತ್ತು |
ಕರುಣದಿಂ ನೀವೆ ಚಿತ್ತೈಸಿ ಷಟ್ಸ್ಥಲವನು |
ದ್ಧರಿಸೆಂದು ನಾರದಂ ಬಿನ್ನವಿಸಲೀಶಂ ನಿರಂಜನಗಣೇಶನೊಡನೆ ||
ವರಗಣೇಶ್ವರರನೇಳ್ನೂರ್ವರಂ ಕೂಡಿಕೊಂ |
ಡಿರದೆ ಭೂಮಿಯೊಳುದಿಸಿ ಜಂಗಮಸ್ಥಲವಾಂತು |
ಪರಮಷಟ್ಸ್ಥಲವನುದ್ಧರಿಸೆಂದು ಕಳುಹಲವರೊಡಗೂಡಿ ಭೂಮಿಗಿಳಿದು || ೪೩ ||

ಪರಮಗೋಸಲಜೆನ್ನಬಸವೇಶ್ವರನ ಹಸ್ತ |
ಸರಸಿಜದುದಿಸಿದಾ ನಿರಂಜನ ಗಣೇಶ್ವರಂ |
ಪರುಷವಿಂದೊಗೆದು ಸಿದ್ಧೇಶನಾಮವನಾಂತು ಕಗ್ಗೆರೆಯ ತೋಂಟಕೈದಿ ||
[1]ಇರದೆ ನಂಬ್ಯ[1]ಣ್ಣನೆಂಬಾತನತಿಭಕ್ತಿಯಿಂ |
ಶರಣೆಂದು ಭಿಕ್ಷಕ್ಕೆ ಬಿನ್ನವಿಸಿಕೊಂಡೀಗ |
ತಿರುಗಿಬಂದಪಾನೆ ಕರೆಕೊಂಡು ಪೋದಪೆನೆಂದು ಕಗ್ಗೆರೆಗೆ ಪೋಗಲಾಗ || ೨೪ ||

ಜಗಳದಿಂದೂರೊಡೆದು ಪೋಗಿ ಕೆಲದಿವಸಕ್ಕೆ |
ಮಗುಳೆ ಬರ್ಪನ್ನೆಗಂ ತೋಂಟದೊಳಗೀತನುವಂ |
ಬಗೆಯದೆ ಶಿವಧ್ಯಾನದಿಂದೆ ಪರವಶವಸ್ಸೈದಿರೆ ಗೆದಲೆ ಹುತ್ತವಿಕ್ಕೆ ||
ಜಗನೆಲ್ಲಮತಿಚೋದ್ಯದಿಂ ನೋಡಿ ಹುತ್ತಮಂ |
ಬಗಿದು ಕಂಡಾಗ ತೋಂಟದ ಸಿದ್ಧಲಿಂಗನೆಂ |
ದಗಣಿತಮಹಾಪುರುಷನೆಂದು ಪೂಜಿಸುವರೆಲೆ ರಾಮೇಶ ಕೇಳೆಂದನು || ೨೫ ||

ಅಲ್ಲಲ್ಲಿ ನಾನಾಪವಾಡವಂ ಮೆರೆವುತಿರ |
ಲಲ್ಲಲ್ಲಿ ಗಣನಾಥರುದಿಸಿ ಚರರೂಪಿನಿಂ |
ದೆಲ್ಲೆಲ್ಲ ಪೂಜೆಗೊಳುತೈದಿ ತೋಂಟದ ಯತಿಯ ಸಾರಲತಿಪ್ರೀತಿಯಿಂದೆ ||
ನಿಲ್ಲಿಸಲ್ಲಿಸೆ ತೋಂಟದಾರ್ಯರಾ ವಿರತರೊಳ್ |
ಬಲ್ಲಬಲ್ಲರೊಳು ತತ್ವಾನುಭಾವಂಗಳಿಂ |
ಸೊಲ್ಲುಸೊಲ್ಲಿಗೆ ಪರಮಪಟ್ಟಸ್ಥಲವನುಸಿರ್ವರಾ ವಿರತಸಾರರೆಂದೆನೆ || ೨೬ ||

ಸಿದ್ಧಲಿಂಗೇಶ್ವರಂ ಕಂಬಳಾದೇವರಾ |
ಸಿದ್ಧಮಾಚೇಶ್ವರಂ ಚೆನ್ನದೇವರ್ ದೊಡ್ಡ |
ಸಿದ್ಧಲಿಂಗೇಶ್ವರಂ ಕಂಕಣದ ದೇವರಾ ಲಂಬಕರ್ಣದ ದೇವರು ||
ಸಿದ್ಧಮಲ್ಲೇಶ್ವರಂ ಗುಮ್ಮಳಾಪುರದ ವರ |
ಸಿದ್ಧಲಿಂಗೇಶ್ವರಂ ಬಿಡತೊರೆಮುಪ್ಪುರದ ಗುರು |
ಸಿದ್ಧಪಿರಿಯಣ್ಣದೇವರುಶಿವ ಘನಲಿಂಗದೇವರ್ ಚಿಕ್ಕಮಲ್ಲೇಶನು || ೨೭ ||

೧-೧ ಇರೆ ನಂಬಿಯ (ಹು, ಮ.)

ಮರುಳಸಿದ್ಧೇಶ್ವರಂ ಚಂದ್ರಶೇಖರನೆಸೆವ |
ಸುರಗಿಯಾರ್ಯಂ ಶಾಂತಮಲ್ಲಿಕಾರ್ಜುನದೇವ |
ರಿರದೆ ಬೆಡಗಿನ ಪರ್ವತೇಶ್ವರಂ ಪಟ್ಟಣದ ದೇವರೆಂದಾ ಜಗುನಿಯ ||
ಮರುಳದೇವರ್ ಮಳೆಯದೇವರಾ ಬತ್ತಲೆಯ |
ಲಿರುವ ದೇವರ್ ಸಂಪಗೆಯ ರಾಚವಟ್ಟದೇ |
ವರು ಸಪ್ಪಿಯಾರ್ಯನುಪ್ಪಿನಹಳ್ಳಿಯಾರ್ಯನೊಪ್ಪುವ ಶೀಲವಂತಾರ್ಯನು || ೪೮ ||

ಎಸೆವ ಕೊಡಗಿಯಹಳ್ಳಿಯಾರ್ಯನುಂ ಜೋಲಿಯಾ |
ಬಸವೇಶ್ವರಂ ರಾಚವಟ್ಟ ಕೋರಿಯ ಸಿದ್ಧ |
ಬಸವೇಶ್ವರಂ ಹಿರಣ್ಯಾರ್ಯನಾ ಶಿವಪೂಜೆಯಾರ್ಯನೆಂದೆನಿಪ ಬೋಳ ||
ಬಸವೇಶನಂದು ಕಿತ್ತಾವರದೆ ನಿಂದು ರಾ |
ಜಿಸುವ ಚೆನಮಲ್ಲೇಶ್ವರಾದಿ ಪರಿಪರಿಯಲ್ಲಿ |
ಪೆಸರ್ವಡೆದ ವಿರತರೇಳ್ನೂರ್ವರಾ ತೋಂಟದ ಯತೀಶನಂ ಕೂಡಿರ್ಪರು || ೪೯ ||

ಇಂತಿವರ್ ಮೊದಲಾದ ವಿರತರೇಳ್ನೂರ್ವರುಂ |
ಸಂತತಂಗೂಡಿ ಷಟ್ಸ್ಥಲಮಾರ್ಗಮಂ ಧರೆಯೊ |
ಳಂತರಿಸದಂತೆ ನೆಲೆಗೊಳಿಸುತ್ತೆ ಪೂಜೆಗೊಳುತಿರದೆ ನಿಜಮುಕ್ತರಹರು ||
ಸಂತಸದೆ ಹುಚ್ಚನಂಜೇಶ್ವರಂ ಬಳಿಕವರ |
ಪಿಂತೆ ಬಲು ಹುಚ್ಚ ವಿರುಪಾಕ್ಷನುಂ ಶ್ರೀಗಿರಿಯ |
ಪ್ರಾಂತದೊಳಗಿರ್ಪ ಮೋಹಿನಿಯ ಗಜಮಂ ಪತ್ತಿ ನೋಡೆ ನಿರವಯವಪ್ಪರು || ೫೦ ||

ಮಾದಾಪುರದ ಮರುಳದೇವರೆಂಬುವರಧಿಕ |
ವಾದದಿಂ ಸತ್ತ ಪ್ರಾಣಂಗಳಂ ಪಡೆದು ಸ |
ನ್ಮೋದದಿಂ ಬಿತ್ತಿದರುದಿಂಗಳಿಗೆ ತೆಂಗು ಮೊದಲಾದ ಫಲಗಳನೆ ಪಡೆವರ್ ||
ಮೇದಿನಿಗೆ ಪೊಸತೆನಿಸಿ ಹೊನ್ನಹಳ್ಳಿಯಲಿರುತ |
ನಾದಿಸಿದ್ಧರ ದೇವ ಸಿದ್ಧವೀರೇಶಂ ವಿ |
ನೋದದಿಂ ನಾನಾಪವಾಡಂಗಳಂ ಮೆರೆದು ಬಳಿಕ ನಿಜಮುಕ್ತರಹರು || ೫೧ ||

ನಿಡುಮಾಮಿಡಿಯ ಕರಿಯಬಸವೇಶನೈತರುತೆ |
ನುಡಿದು ತೆಂಗಿನ ಮರನ ಭಿಕ್ಷಮಂ ಬೇಡಲತಿ |
ಕಡುಬಾಗಿನಿಂದು ಫಲಗಳ ನೀಡಿ ಬಳಿಕಲಾ ಮರನೆಂದಿನಂತೆಸೆವುದು ||
ಬಿಡದೆ ಸುವ್ರತದ ಕರಡಿಯ ಹಾಲದೇವರಂ |
ದೊಡನೆ ಸರವೆಯ ಸಿದ್ಧರಾಮೇಶನಾದಿಯಾ |
ದೊಡೆಯರುಗಳುದಿಸಿ ನಾನಾಪವಾಡಂಗಳಂ ಮೆರೆದು ನಿಜಮುಕ್ತರಹರು || ೫೨ ||

ವೀರಶೈವಾಚಾರಪಟ್ಟಸ್ಥಲಬ್ರಹ್ಮಿ ಸ |
ಜ್ಞಾರುಚಾರಮೂರ್ತಿ ಯತಿಕುಲತಿಲಕನೆಂದೆನಿಪ |
ಕೋರಾಸ್ವಾದಾರ್ಯನೆಡೆವಿಡದೆ ಘನಚರಕೆ ಮೃಷ್ಟಾನ್ನಮಂ ನೀಡಿಸುವನು ||
ಧಾರುಣಿಯೊಳೆಸೆವುತಿಹ ಬುಕ್ಕಸಾಗರದ ಘನ |
ಚಾರಿತ್ರಮಹಿಮನಾ ಕರಿಯ ಸಿದ್ಧೇಶ್ವರನ |
ವಾರಿಯಿಂ ಬಂದ ಜಂಗಮಕೆ ಮೃಷ್ಟಾನ್ನಮಂ ನೀಡಿಸುವನತಿಮುದದೊಳು
|| ೫೩ ||

ನಾರಕಂಥೆಯದೇವರೆಸೆವ ಚೆಂಗಡಹಳ್ಳಿ |
ವೀರಪ್ಪನಲ್ಲಿ ಮಾವಿನಹಳ್ಳಿಮಲ್ಲಪ್ಪ |
ನೋರಂತೆ ಗ್ರಾಮದಾ ಸಂಗಮೇಶಂಗೆ ಗುಮ್ಮಳಾಪುರದೊಳಿಹ ಜಂಗುಳಿ ||
ವೀರಪ್ಪನುಂ ಸುಪ್ರಸಾದಿದೇವರ್ಮುಖ್ಯ |
ಚಾರುಚರಮೂರ್ತಿಗಳೆ ಬಂದ ಜಂಗಮಕಿರದೆ |
ವಾರಿಯಿಂ ದಾಸೋಹಮಂ ಮಾಳ್ಪರೆಲೆ ಸಿದ್ಧರಾಮೇಶ ಕೇಳೆಂದನು || ೫೪ ||

ಪರಮಜಂಗಮಕಿನ್ನು ದಾಸೋಹಮಂ ಮಾಳ್ಪ |
ದೊರೆಗಳಂ ಪೇಳ್ವೆನಾ ನಂಜರಾಯಂ ಮುಂದೆ |
ನಿರುತದಿಂ ಕೆಂಜಗೆಸೋಮಣ್ಣನಾಯಕಯೆಳಂದೂರರಸು ಚೆನ್ನೊಡೆಯರು ||
ಒರಗಿರಿಯ ದೇವಿನಾಯಕನು ಬುಕ್ಕಣ್ಣೊಡೆಯ |
ನಿರದಲ್ಲಿ ಸಿದ್ದಮಲಿನಾಯಕಂ ಮತ್ತೆ ಶಿವ |
ಶರಣನಾ ಸಂಕಣ್ಣನಾಯಕಂ ಜಂಬೂರದಾನಿವಾಸದ ದೊರೆಗಳು || ೫೫ ||

೧ ಗ (ಶ್ರೀ, ಗೋ.) ೨-೨ ಮ ಮೊದಲಂತೆ (ಮ.) ೩ ತ್ರೆ (ಶಿ.) ೪ ಸ್ತ್ರ (ಹು.) ೫ ಚ (ಹು, ಮ.)

ಕೇತಸಾಗರದ ಚಿಕ್ಕಣ್ಣಸೆಟ್ಟಿಗಳು ವಿ |
ಖ್ಯಾತಿಬಿಜ್ಜಾವರದ ಪ್ರಭುವೆ ಚಿಕ್ಕಣಗೌಡ |
ಸಾತಿಶಯದಿಂದೆ ಸುಕುಟೂರ ತಮ್ಮಣಗೌಡನೆಸೆವ ತಗಡೂರ ಪ್ರಭುವು ||
ಪ್ರೀತಿಯಿಂ ತಳಕಾಡ ಚಂದ್ರಶೇಖರನುರುವ |
ದಾತನಾ ಭೋಗವಾಡಿಯ ಲಿಂಗರಾಯನತಿ |
ಭೂತಹಿತನುಡುವಂಕಸಾಡ ಪ್ರಭು ಮೊದಲಾಗಿ ದಾಸೋಹಮಂ ಮಾಳ್ಪರು || ೫೬ ||

ಜಂಗಮಕೆ ಬಿಡದೆ ದಾಸೋಹಮಂ ಮಾಳ್ಪ ನಿಜ |
ಲಿಂಗೈಕ್ಯನೆಸೆವ ಸೋಲೂರ ಬಸವಪ್ಪನಾ |
ಸಂಗಯ್ಯನುಂ ಮಹಂತಯ್ಯನುಂ ಸಂಡಿಗೆಯ ಸಿದ್ಧಪ್ಪನಿರದೆ ಮುದ್ದು ||
ಸಂಗಪ್ಪನಂದೂರ ಕೆರೆಯ ದಾಸೋಹದಾ |
ಲಿಂಗಪ್ಪನಲ್ಲಿ ಮಲ್ಲಪ್ಪನಾ ಕಾಬಣದ |
ಬಿಂಗಿಗಂಗಾಧರಂ ಕಳಲಿಯಾ ವೀರಪ್ಪನೆಸೆವ ಧೂಕಾಭಕ್ತನು || ೫೭ ||

ಪೊಸಹಳ್ಳಿಯಲ್ಲಿ ನಾಗಪ್ಪನುಂ ನೆರೆ ದಾತ |
ಬಸವಪ್ಪನುಂ ಮೋಳಿಗಯ್ಯನುಂ ಬಿಡದೆ ರಾ |
ಜಿಸುವ ಬಾಣಾವರದ ಸಿದ್ಧಪ್ಪನುಂ ಶೀಲವಂತ ಸಿರಿಯಾಳಯ್ಯನು ||
ಜಸವಡೆದ ಹೋಳಿನಾ ಸಿದ್ಧಪ್ಪನುಂ ಮತ್ತೆ |
ಹೊಸತೆನಿಪ ದುರ್ಗದಾ ಕಲ್ಲಪ್ಪನುಂ ವಿರತ |
ಬಸವಪ್ಪನುಂ [೧]ತ್ರೈಲದಲ್ಲಿ ಮರುಳಪ್ಪನುಂ[೧] ಮಾನಂಗಿಶಿಖರಪ್ಪನು || ೫೮ ||

ಬಿಟ್ಟಮುಂಡಿಯ ಪ್ರಭುವರಂ ಬಯಲ ಪ್ರಭುವರಂ |
ನೆಟ್ಟನಾ ಕಳಲಿಯಾ ಕಂಚಿದೇವರ್ ಮಹಾ |
ದಿಟ್ಟ ರಾಸಾಪುರದ ಮರುಳಸಿದ್ಧೇಶನುಪ್ಪಲಗುಡಿಯ ಸಂಗಮೇಶ |
ಕೊಟ್ಟೂರ ಬಸವಲಿಂಗೇಶನಾನೆಯಗೊಂದಿ |
ಬೆಟ್ಟದಲ್ಲಿಹ ಹುಚ್ಚದೇವರಾ ಬೆಳುಗಾವಿ |
ಪಟ್ಟಣದೊಳಿಹ ಹುಚ್ಚಸಿದ್ಧರಾಮೇಶ ನಿರವಧಿಕಮಹಿಮೆಯ ಪುರುಷರು || ೫೯ ||

೧-೧ ಝುಲ್ಲಿಮರುಳಪ್ಪನುಂ ಮತ್ತೆ (ಶಿ.)

ನರಸಿಂಹನಂಶದಳಿಯರ್ ಮೂವರುಂ ಪೋಗಿ |
ತುರುಕರೊಳ್ ಕಾದಿ ಮಡಿಯಲ್ಕೆ ಪಿರಿಯವನ ತಲೆ |
ನಿರುತದಿಂ ಕಾಶಿಯೊಳ್ ಪೂಜೆಗೊಂಬುದು ಬಳಿಕ್ಕುಳಿದವರೆ ತಮ್ಮ ಪುರದೆ ||
ಇರದೋಡಿಪೋಗಲಾ ಪಟ್ಟಣಕೆ ಬೇಗದಿಂ |
ತುರುಕರೈತಂದು ಸೆರೆಗಳ ಪಿಡಿದು ಸೂರಾಡಿ |
ಭರದಿಂದೆ ಸಕಲರಂ ಸಂಹರಿಪರೆಲೆ ಸಿದ್ಧರಾಮೇಶ ಕೇಳೆಂದನು | ೬೦

ಎಲೆ ಸಿದ್ಧರಾಮೇಶ ಕೇಳಿನ್ನು ಹಂಪೆಯಾ |
ಸೆರೆಸೆರೆಯ ಗೋಪುರವನಳಿದು ಮಾತಂಗದಿಂ |
ಚಲುಕಪಾ ವೀರೇಶನಂ ಕಿತ್ತು ವಿಷ್ಣುಮೊದಲಾದ ಪ್ರತಿಮೆಗಳನೊಡೆದು ||
ಬಳಿಕಲ್ಲಿ ಸಕಲವಂ ಸಂಹರಿಸಿ ಕೆಲದಿನಂ |
ಕಳಿದು ಬಳಿಕಲ್ಲಿಂದೆ ಸಂತಸದೆ ತಂತಮ್ಮ |
ನೆಲೆಗಳ್ಗೆ ಪೋಗಲಾ ಪಟ್ಟಣದ ರಾಜ್ಯದೊಳಗೇನೆಂಬೆನದ್ಭುತವನು || ೬೧ ||

ಪಟ್ಟಣಂ ಕೆಟ್ಟು ತತ್ರಾಜ್ಯದೊಳಗೆಲ್ಲಯುಂ |
ಹಟ್ಟಿ ಕೊಟ್ಟಿಗಳಾಗಿ ದೇಶದೊಳಗಲ್ಲಲ್ಲಿ |
ಸೆಟ್ಟಿಸುಪ್ರಜೆಗಳಂ ಕಟ್ಟಿಕೊಂಡುಳ್ಳಧನಮಂ ಕೊಂಡು ಬಾಧಿಸುವರು ||
ನೆಟ್ಟನೆ ಸುಜಂಗಮಂ ಭಕ್ತಾಚಾರಮಂ |
ಬಿಟ್ಟು ಮನಬಂದಂತೆ ತಮತಮಗೆ ಭೂಮಿಯೊಳ್ |
ಕೆಟ್ಟು ಧರ್ಮವನು ವರ್ಜಿಸುವರೆಲೆ ಸಿದ್ಧರಾಮೇಶ ನೀಂ ಕೇಳೆಂದನು || ೬೨ ||

ಎಲೆ ರಾಮ ಕೇಳಿನ್ನು ದುರ್ಗಿ ಮಾರಿಯರೆ ಭೂ |
ತಳದಲ್ಲಿ ನರಬೇಂಟೆಯಾಡುವರ್ ಮತ್ತವರೊ |
ಳುಳಿದವರಲ್ಲಲ್ಲಿ ಕುಲಕೊಬ್ಬೊಬ್ಬ ಸತ್ಯರೇ ಮಿಕ್ಕವರ್ ಲಯವಪ್ಪರು ||
ಅಳಿದುಳಿಯುವಸುಜನಂದುಳಿದೋಡಿ ಪೋಗಿರ್ದು |
ಬಳಿಕ ತುರುಕರ್ ಪೋಗೆ ತಾನಾಗಲಂದು ತ |
ನ್ನಳಿಯುಸೊಲಿದಾಳ್ವನಾ ದೇಶದೊಳಗಲ್ಲಲ್ಲಿ ಕೊಟ್ಟಂಗಳಾಗಿಪ್ಪುವು || ೬೩ ||

ಎಲೆ ಸಿದ್ಧರಾಮೇಶ ಕೇಳ್ವುದೊಲವಿಂ ಮುಂದೆ |
ಕಲಿಯುಗದ ನಾಲ್ಕುಸಾವಿರದಾರುನೂರರಿಂ |
ಬಳಿಕಲೆಂಭತ್ತುಮೂರನೆಯ ಸ್ವಭಾರ್ನುಸಂವತ್ಸರದ ಮಾಘಬಹುಳ ||
ಸಲೆ ಚತುರ್ದಶಿ ಸೋಮವಾರದಿಪ್ಪತ್ತೆಂಟು |
ಗಳಿಗೆಯೊಳ್ ಕರ್ಣಾಟದೇಶಮಂ ತಾನಂದು |
ತಳುವದೈದುವನಿರದೆ ವೀರವಸವಂತಭೂಪಾಲನತಿಗೋಪ್ಯದಿಂದೆ || ೬೪ ||

ಎಸೆವ ಶಿವಭಕ್ತ ಕ್ಷತ್ರಿಯರಲ್ಲಿ ಜನಿಸಿ ರಾ |
ಜಿಸುವೆಣ್ಣೆಕಾವೇರಿಮಧ್ಯದಲ್ಲಿರುತಿರ್ಪ |
ಬಸವನಾಮಾಂಕಿತದ ಪಟ್ಟಣಕ್ಕೈದುವಂ ನಾವಾಗಲಾ ಸ್ಥಳದೊಳು ||
ಜಸವಡೆದ ವಿಪ್ರಜಾತಿಯಲುದಿಸಿ ಪರಮಸಂ |
ತಸದೆ ಷಟ್ಸ್ಥಲವನುದ್ಧರಿಸುವೆವು ಬಳಿಕಲೀ |
ಬಸವಣ್ಣನಖಿಳಗಣಸಂಕುಲಂ ಸಹಿತಲ್ಲಿಗೈತರುವನುತ್ಸವದೊಳು || ೬೫ ||

ನರಸಿಂಹನಂಶದಳಿಯರ ಸುತರು ಪೆರ್ಚಿಯಾ |
ತುರುಕಾಣ್ಯಕೈದಿ ಬಿದಿರೆಯ ಕೋಂಟೆಯಂ ಕೆಡಿಪಿ |
ಗುರುತಿನಿಂ ಮೆರೆವ ಮಧುರಸೆಗಳಂ ಮುರಿದಾಗ ಕಾಶಿಯಾ ಪರಿಯಂತರ ||
ತುರುಕರಂ ಸಂಹರಿಸಲದ ಕೇಳ್ದು ಡಿಳ್ಳಿಯಾ |
ಸುರಿತಾಳನಿರದೆ ತೆಲುಗರ ಮೇಲೆ ದಂಡೆತ್ತಿ |
ತೆರಳುವಂ ರಾಮೇಶಪರಿಯಂತರಂ ಸಿದ್ಧರಾಮೇಶ ಕೇಳೆಂದನು || ೬೬ ||

ಹದಿನೆಂಟು ನೇಜಯದ ಖಾಸರುಂ ಸಹ ತಮ್ಮ |
ಹದಿನೆಂಟುಲಕ್ಷ ಕುದುರೆಯ ಕೂಡಿಕೊಂಡಾಗ |
ಮುದದಿಂದೆ ಸಕಲದೇಶಂಗಳಂ ಸುಡುತೆ ಸೇತುವೆಗೈದಿ ಕೂಡೆ ಮರಳಿ ||
ಕದಲುವಂ ಬೇಡರಿರದಲ್ಲಲ್ಲಿ ಗಿಡಕೊಂದು |
ಕುದುರೆಯಂ ತೆಗೆತೆಗೆದು ಕಟ್ಟುತುಂ ಬಳಿಕಲಾ |
ಸದೆಯುಂ ಸುಲಿದು ಸೂರಾಡಿ ಸಂಹರಿಪರೆಲೆ ರಾಮೇಶ ಕೇಳೆಂದನು || ೬೭

ಬಂದ ವಂದಿಸೊಳರ್ಥವಳಿಯಲವರದ ಕಂಡು ।
ಹಿಂದುವರನೆಲ್ಲರಂ ಸಂಹರಿಸುತಾಗಲೈ ।
ತಂದು ಪಾಳೆಯುವನಾನೆಯುಗೊಂದಿಪುಲ್ಲಳಿದು ಪರಮಸಂತೋಷದಿಂದೆ ।
ಮುಂದಿರ್ಪ ಬಾಲಿಯಾ ಭಂಡಾರವಮಂ ತೆಗೆಸಿ ।
ತಂದು ತದ್ಧನದ ರಾಸಿಯು ಮಾಡಿ ನನಗೆ ತನ ।
ಗೆಂದು ತಮ್ಮೊಳ್ ತಾವೆ ಕಡಿದಾಡಿ ಮಡಿವರೆಲೆ ರಾಮೇಶ ಕೇಳೆಂದನು　　॥ ೬೮ ॥

ನರಸಿಂಹನವತಾರಮಳಿವುದಾ ಕಾಲಕ್ಕೆ ।
ಪರಮೇಶನಿತ್ತ ವರವಂದಿಂಗೆ ಸರಿಯಾಗೆ ।
ತುರುಕರುಂ ತಮ್ಮೊಳಗೆ ತಾವೆ ಕಡಿದಾಡಿ ಹತಮುಪ್ಪರಾ ಪಟ್ಟಣವನು ॥
ಪರಿವಿಡಿಯೊಳೊದಗಿ ಕಟ್ಟಿಸಿ ಬಳಿಕ್ಕಲ್ಲಿ ತಾ ।
ವಿರುತೆ ಪಟ್ಟವನಾಗ ಬೇಡರರುದಿಂಗಳತಿ ।
ಹರುಷದಿಂದಾಳ್ವರೆಲೆ ರಾಮೇಶ ಕೇಳ್ವುದೊಲಿದಿತ್ತಲತಿ ಸಂಭ್ರಮದೊಳು　　॥ ೬೯ ॥

ಬಸವನಾಮಾಂಕಿತದ ಪಟ್ಟಣದೊಳಾ ವೀರ ।
ವಸವಂತಗಾಗ ಪಟ್ಟವ ಕಟ್ಟಲಿರದೆ ರಾ ।
ಜಿಸುವ ವಿದ್ಯಾನಗರಿಗೈತಂದು ಬಾಲಿಯಾ ಭಂಡಾರದಾ ಧನವನು ॥
ವಶವರ್ತಿಯುಂ ಮಾಡಿಕೊಂಡು ಬಳಿಕಲ್ಲಿ ಸಂ ।
ತಸದೆ ತದ್ರಾಜ್ಯಮುಂ ಪಾಲಿಸುತ್ತಿರುತಿರ್ದು ।
ಜಸವಡೆದ ಕಲ್ಯಾಣಪಟ್ಟಣವನಾಗ ಕಟ್ಟಿಸುವರಧಿಕೋತ್ಸವದೊಳು　　॥ ೭೦ ॥

ತ್ರರತ್ರರದಗಳ್ ಕೋಂಟೆ ಕೊತ್ತಳಗಳಾಳ್ಪೇರಿ ।
ಪರಿಪರಿಯ ಬಣ್ಣದಟ್ಟಳೆ ಕೇತನಂಗಳಿಂ ।
ಸುರುಚಿರದ ಶಶಿ ಸೂರ್ಯವೀಥಿಗಳ ಗಡಣದಿನಗಣ್ಯಸೌಧಂಗಳಿಂದೆ ॥
ಹೊರೆ ಹೊರೆಗಳರಮನೆಯು ಸಾಲ್ಗಳಿಂದಲ್ಲಲ್ಲಿ ।
ಪರಿಪಿಪಿಯು ಮಂತ್ರಿಮುಖ್ಯರ ಗೃಹಗೃಹಂಗಳಂ ।
ಪ್ರಜಜನದ ಭವನಭವನಂಗಳಿಂ ವೇಶ್ಯಾಲಯದ ಪಂಕ್ತಿಯಿಂ ರಚಿಪರ್　　॥ ೭೧ ॥

೧ ರಾಜಕುಂ । ಮು.

ಎಸೆವ ತ್ರಿಪುರಾಂತಕಾಲಯವಾದಿ ಗುಡಿಗಳಂ |
ಪೊಸತಾಗಿ ಕಟ್ಟಿಸುವರಧಿಕತರ ವಿಭವದಿಂ |
ಬಸವಣ್ಣಮೊದಲಾದ ಸಕಲಶರಣರ ಮನೆ ಮಠಂಗಳಂ ಕಟ್ಟಿಸುವರು ||
ಉಸಿರಲೇನ[1]ಂದಿನಿಂದಧಿಕನಾನಾಚಿತ್ರ |
ಕುಶಲದಿಂ ಕಲ್ಯಾಣಪಟ್ಟಣದೊಳೆಡೆವಿಡದೆ |
ಮಿಸುನಿಗೆಲಸಂಗಳಿಂದೆಲ್ಲವಂ ಕಟ್ಟಿಸುವರೆಲೆ ರಾಮ ಕೇಳೆಂದನು || ೭೨ ||

ಎಲೆ ಸಿದ್ಧರಾಮೇಶ ಕೇಳ್ಬುದೀ ಪಟ್ಟಣವ |
ನಲವಿನಿಂದೆಂದಿನಿಂ ಮಿಗಿಲಾಗಿ ಪೊಸಬಗೆಯ |
ಚೆಲುವಿನಿಂ ಸಕಲಸಂಪದ ಸಕಲಶಿವಭಕ್ತಿ ಸಕಲಸುಕೃತಂಗಳಿರವ ||
ನೆಲೆಯಾಗಿ ರಾಜಿಸಲ್ ವೀರವಸವಂತನತಿ |
ಗೆಲವಿನಿಂದಾಗ ವಿದ್ಯಾನಗರಿಯಿಂದೆ ಬಂ |
ದಳಿಯಬಿಜ್ಜಳರಾಯನರಮನೆಯೊಳಿರುವನಂದಧಿಕತರವಿಭವದಿಂದೆ || ೭೩ ||

ಬಸವೇಶನಾಗಲೇಳ್ನೂರೆಪ್ಪತಮರಗಣ |
ವಿಸರಮಂ ಕೂಡಿಕೊಂಡೈತಂದು ತಂತಮ್ಮ |
ಮಿಸುಗುವರಮನೆಗಳೊಳಗೊಲಿದಿರ್ಪರಾಗಲಾ ವೀರವಸವಂತರಾಯ ||
ಒಸೆದು ನಮಗಾಗಂ ಪ್ರಧಾನಿಪಟ್ಟವ ಕಟ್ಟಿ |
ಲೆಸೆವುತಿರ್ಪೆಮ್ಮ ರಾಜಾಲಯಕೆ ಪೋಗಿ ಸಂ |
ತಸದಿಂದಲಿರ್ಪೆವೆಲೆ ಸಿದ್ಧರಾಮೇಶ ನೀಂ ಕೇಳೆಂದು ನಿರವಿಸಿದನು || ೭೪ ||

ಎಂದಿಂತು ಚೆನ್ನಬಸವೇಶನಂದತಿಕರುಣ |
ದಿಂದಾಗ ಸಿದ್ಧರಾಮೇಶಂಗೆ ಪೇಳ್ದನಿದು |
ಮುಂದಣಾಗಾಂತರದ ಸುದ್ದಿ ನೀಂ ಸೊನ್ನಲಾಪುರದೊಳೈಕ್ಯಸ್ಥಲದಲಿ ||
ನಿಂದು ನಿಜಸುಖಸಮಾಧಿಯೊಳಿರೆಸೆ ಕೇಳ್ದು ಸಾ |
ನಂದದಿಂದೆದ್ದು ಸಾಷ್ಟಾಂಗಪ್ರಣತನಾಗಿ |
ಮುಂದಿರ್ದ ಬಸವೇಶಮೊದಲಾದ ಶರಣರ್ಗೆ ನಮಿಸಿದಂ ಭಕ್ತಿಯಿಂದೆ || ೭೫ ||

---

೧ ನಿ (ಶಿ.); ನೆ (ಹು.)

ಬಸವದಂಡಾಧೀಶಮೊದಲಾದ ಶರಣಗಣ |
ವಿಸರವಾ ಸಿದ್ಧರಾಮೇಶಂಗೆ ನಮಿಸೆ ಸಂ |
ತಸದಿಂದೆ ಬೀಳ್ಕೊಂಡು ಸೊನ್ನಲಾಪುರಕ್ಕೈದಿ ಶಿವಸಮಾಧಿಯೊಳಿರ್ದನು ||
ಎಸೆವ ಕಲ್ಯಾಣಪಟ್ಟಣದೊಳಂದಾ ಚೆನ್ನ |
ಬಸವೇಶನುಂ ಬಸವದಂಡೇಶಮೊದಲಾದ |
ಜಸವಡೆದ ಶರಣಸಂಕುಲವಾಗಿ ಶಿವತತ್ತ್ವಗೋಷ್ಠಿಯಿಂ ಸುಖಮಿರ್ದರು || ೭೬ ||

ಶಾಲಿವಾಹನಶಕದ ಸಾಹಸ್ರದ್ವೈನೂರ |
ಮೇಲದೇಳನೆಯ ತಾರಣ ಸುಸಂವತ್ಸರದ |
ಕಾಲದೊಳಗೆಸೆವ ಶ್ರಾವಣ ಬಹುಳ ದಶಮಿಯಾ ಗುರುವಾರಕತಿಸಾಂಗದೆ ||
ಪೇಳಿ ಮುಗಿಸಿದ ಪಂಡಿತಾಗ್ರಣಿ ವಿರೂಪಾಕ್ಷ |
ಲೀಲೆಯಿಂ ಚೆನ್ನಬಸವೇಶನ ಪುರಾಣವಿದ |
ನಾಲಿಸುವ ಶರಣರ್ಗೆ ಸಕಲಪದವಿಯನೀವ ಚೆನ್ನಬಸವೇಶನೊಲಿದು || ೭೭ ||

ಸಾರಂಗಪದ್ಮಧರ ಜೀಮೂತಜಾರಮಣ |
ಸಾರಂಗಮಣಿಪದ್ಮಧೂಮಾಂಕಗೋಪದ್ಮ |
ಸಾರಂಗಸುರಜ್ಯೇಷ್ಠ ಶತಧರ್ಮನಮಿತಪದ ಸಾರಂಗಚರ್ಮಾಂಬರ ||
ಸಾರಂಗಶ್ರವಣಭೂಷಣ ಸುರಭಿಸಂಹಾರ |
ಸಾರಂಗಸಾಮಾಯುಧಾಕಲಿತಕರಪದ್ಮ |
ಸಾರಂಗಜಟಿ ಸಿದ್ಧನಂಜೇಶ ಪಾಲಿಪುದು ಸಾರಂಗಪದವನೊಲಿದು ❀ || ೭೭ ಅ ||

ಸಾರಂಗವರ್ಣಕಂ ಸೂತ್ರನಂ ಪಾತ್ರನಂ |
ಸಾರಂಗ ಅಮೃತಶಿವಚರ್ಮನಂ ಧರ್ಮನಂ |
ಸಾರಂಗಗಮನ ಹರಿಮಿತ್ರನಂ ಪಾತ್ರನಂ ಸಾರಂಗಪತ್ರೇಷ್ಟಿಗೋ ||
ಸಾರಂಗ ಅಂಕವಿಲಸಿಲಾಟನಂ ಜೂಟನಂ |
ಸಾರಂಗತನುಜವಾಮಾಂಗನಂ ಭಂಗಿಗನಂ |
ಸಾರಂಗತೇಜ ಆಜೀವಲಿಗನಂ ತಲಿಗನಂ ಸಾರಂಗಮೌಳಿ ತ್ರಾಹಿ ❀ || ೭೭ ಬ ||

೧ ಪಯಣ ; ೨ ಗಮನಸಖ ; ೩ ಅಂದಕುಶ ; ೪ ಘೋ ; ೫ ಜನ (‘ಶಿವಾನುಭವ’).
❀ ಈ ಪದ್ಯಗಳು ಮೈಸೂರು ಅರಮನೆಯ ಹಸ್ತಕಭಂಡಾರದಲ್ಲಿಯ ‘ಚೆನ್ನಬಸವಪುರಾಣದ ನಾಂದಿ ಪದ್ಯ ಸಂಗ್ರಹ’ದಲ್ಲಿರುವುವು. ಇವೇ ಪದ್ಯಗಳು ವಿಜಾಪುರದ ‘ಶಿವಾನುಭವ’ ದ್ವೈಮಾಸಿಕದ ಜೂನ್ ೧೯೩೦ನೆಯ ಸಂಚಿಕೆಯ ೯೪–೯೬ನೇ ಪುಟಗಳಲ್ಲಿರುವ ಸಾರಂಗಸ್ತೋತ್ರ ಪಂಚಕದಲ್ಲಿಯೂ ಕಂಡುಬರುವುವು.

ಇದುಸಕಲ ವೀರಮಾಹೇಶ್ವರರ ಸದ್ವಿಮಲ |
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ |
ಬುದಧಿವರ್ಧನಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು ||
ಸದಮಲಜ್ಞಾನಿ ಸಕಲಾಗಮಪುರಾಣಕೋ |
ವಿದನಾ ವಿರೂಪಾಕ್ಷಪಂಡಿತಾರಾಧ್ಯರತಿ |
ಮುದದೆ ಪೇಳ್ದೀ ಚೆನ್ನಬಸವಪೌರಾಣಸತ್ಕಥೆಯೊಳೈದನೆಯ ಕಾಂಡಂ || ೭೮ ||

ಇಂತೆಸೆವ ಚೆನ್ನಬಸವೇಶನ ಪುರಾಣಮಂ |
ಸಂತಸದೆ ಬರೆದವರ್ಗೋದಿದರ್ಗರ್ಥಮಾ |
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ||
ಸಂತತಂ ಸಕಲಸುಖಮಂ ಸಕಲಭೋಗಮನ |
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ |
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಲ್ಕರಿಂದೆ || ೭೯ ||

ಅಂತು ಸಂಧಿ ೬೩ಕ್ಕಂ ಪದಗಳು ೨೯೦೬ಕ್ಕಂ ಮಂಗಳಮಹಾಶ್ರೀ

ಮುಗಿದುದು

ಚೆನ್ನಬಸವ ಪುರಾಣ

ಕಠಿಣಶಬ್ದಗಳ ಕೋಶ

ಚೆನ್ನಬಸವ ಪುರಾಣ

ಕಠಿಣಶಬ್ದಗಳ ಕೋಶ

ಅ

ಅಕುಟಿಲ (೫೨-೩೯) ಸರಳ
ಅಕ್ಕರ್ (೧-೨೨) ಪ್ರೀತಿ
ಅಕ್ಕೆ (೨೧-೩೪) ಶೋಕ
ಅಕ್ಷ (೩೪-೧೪) ರುದ್ರಾಕ್ಷ, ನೆಲ್ಲಿಯಗಿಡ, ದಾಳಿಂಬ ಗಿಡ, ಕೇರಗಿಡ
ಅಗಚಾಪ (೫೨-೨೫) ಶಿವ
ಅಗಡು (೪೧-೨೪) ಕಾಡು
ಅಗರು (೩೬-೨೭) ಒಂದು ಸುವಾಸಿಕ ದ್ರವ್ಯ
ಅಗಲ್ (೨-೧೨) ಕಂದಕ
ಅಗಿ (೪೧-೫೦) ತಿವಿ
ಅಗುರ್ವಿಸು (೫೬-೨೨) ಭೀಕರವಾಗು
ಅಗ್ಗ (ದ್ಭ-ಅಗ್ರ) (೭-೩) ಶ್ರೇಷ್ಠ
ಅಗ್ಗಳಿಕೆ (೩೦-೧೯) ದೊಡ್ಡಸ್ತನ
ಅಗ್ಗಳಿಯ (೩೮-೩೭) ಹೆಚ್ಚಿನವ
ಅಗ್ನಿಜ (೩೯-೯) ಷಣ್ಮುಖ
ಅಂಕ (೩೧-೩೦) ಕಾಳಗ
(೫೨-೧) ತೊಡೆ
ಅಂಗಚಿತ್ತ (೩೬-೧೬) ಉಚಿತ
ಅಂಗಲಾಚು (೬-೩೦) ದುಃಖದಿಂದ ಬೇಡಿಕೊಳ್ಳು
ಅಂಗವಿಸು (೩೭-೭೫) ಕೂಡು, ಹಿಡಿ
ಅಂಗೈಸು (೫೬-೨೨) ಒಟ್ಟುಗೂಡು
ಅಚ್ಚರಿ (ದ್ಭ) (೬-೫೨) ಅಪ್ಸರೆ
ಅಚ್ಚಿ (ದ್ಭ-ಅಕ್ಷಿ) (೧೬-೪೭) ಕಣ್ಣು
ಅಚ್ಚೊತ್ತಿ (೫೨-೨೨) ಒತ್ತಿ
ಅಂಜನ (೩೭-೧೯) ಅಂಜನಾದ್ರಿ, ಕಾಡಿಗೆ, ಅಂಜನವೆಂಬ ಆನೆ
ಅಟಮುಟಿಸು (೪೮-೨೭) ಠಕ್ಕಿಸು
ಅಟ್ಟ (೫೭-೯೧) ಎತ್ತರ
ಅಟ್ಟಣೆ (೪೨-೨೨) ಗೋಪುರ
ಅಟ್ಟಳ (ದ್ಭ-ಅಟ್ಟಾಲ) (೬೩-೭೧) ಅರಮನೆ
ಅಟ್ಟಳೆ (೨-೧೨) ಬುರುಜು
ಅಟ್ಟುಳಿ (೩೨-೪೫) ಪೀಡೆ, ತ್ರಾಸ
ಅಟ್ಟೆ (೧೬-೨೦) ಮುಂಡ
ಅಡಕ (೯-೮) ಅಡಗುವ ಸ್ಥಳ
ಅಡಕಿಲ್ (೫೦-೪೨) ರಾಶಿ
ಅಡಕು (೪೭-೨೦) ಒಟ್ಟು
ಅಡಗು (೩೧-೨೨) ಮಾಂಸ
ಅಡಗೆಡೆ (೨೧-೨೮) ಕೆಳಗೆ ಬೀಳು
ಅಡಪ (೫೭-೮೩) ಸಣ್ಣ ಚೀಲ
ಅಡಪು (೬೨-೬೫) ಅಡವು

ಅಡರು (೩೫-೩) ಉಂಟಾಗು, ಕೂಡು
ಅಡರ್ಪು (೧೬-೪೩) ನೆಮ್ಮುಗೆ
ಅಡಸು (೧೦-೭೫) ಹೊಂದಿಕೆಯಾಗು
(೨೪-೬) ಧುಮುಕು
(೩೫-೩೪) ಉಂಟಾಗು
ಅಡಾಯುಧ (೪೮-೪೯) ತುದಿ ಬಗ್ಗಿದ ಕತ್ತಿ
ಅಡಿಗೆಡೆ (೨೦-೭) ಪಾದಕ್ಕೆಬೀಳು
(೪೦-೧೮) ಕೆಳಗೆ ಬೀಳು
ಅಡಿಹುಡಿಮಾಡು (೫೦-೧೪) ಪುಡಿಪುಡಿಮಾಡು
ಅಡುಗೂಳ್(೪೭-೪೨) ಕುದಿಸಿದ ಅನ್ನ
ಅಡೆ (೯-೧೪) ಸ್ಥಾನ
ಅಡೆಗೆಡೆ (೪೪-೪೦) ನೆಲದ ಮೇಲೆ ಕೆಡವು
ಅಡೆಯುಡುಗು (೩೮-೩೦) ಸ್ಥಳಬಿಡು
ಅಡ್ಡವಿಸು (೨೮-೩೦) ಅಡ್ಡಿಮಾಡು, ಎದುರಾಗು
ಅಡ್ಡೆ (೪೭-೪೦) ಅಡ್ಡಹಾಕುವ ಕಟ್ಟಿಗೆ
ಅಡ್ಡೈಸು (೩೭-೫೩) ಅಡ್ಡಿಮಾಡು
(೫೪-೧೯) ಎದುರಾಗು
ಅಣಕ (೫೩-೫೪) ಚೇಷ್ಟೆ
ಅಣಲ್ (೧೦-೭೬) ಬಾಯಿ
ಅಣಿ (೩೨-೩೩) ಕೂಡಿಸೋಣ
ಅಣಿಯರ (೨೯-೧) ಯೋಗ್ಯತೆ
ಅಣಿಯರಂ (೬-೪೩) ಅತಿಶಯವಾಗಿ
ಅಣೆ (೨೪-೮) ಹೊಡೆ
ಅಣ್ಮು (೧೬-೧೫) ಪರಾಕ್ರಮ
ಅಂಡಲೆ (೨೩-೩೧) ಪೀಡೆಮಾಡು
ಅಂಡಲೆ (೪೧-೪೫) ಏರು
ಅಂಡಿಸು (೨೮-೩೧) ಸಮೀಪಿಸು
(೪೮-೬) ಆಶ್ರಯ ಬೇಡು
ಅಂಡು (೧೧-೨೧) ಆಶ್ರಯ
ಅಂಡೆ (೩೭-೬೫) ಜೀರ್ಕೊಳವಿ
ಅತನ್ವರಿಪುತ್ರ (೩೩-೨೧) ವೀರಭದ್ರ
ಅದಟು (೩೫-೧೩) ದರ್ಪ, ಸಾಹಸ
(೫೩-೪೫) ಶೌರ್ಯ, ಶಕ್ತಿ
ಅದಿರ್ಗಂತಿ (೩೫-೩) ಮಾಧವೀಲತೆ
ಅದ್ದು (೪-೨೪) ಮುಳುಗು
ಅಥಟ (೭-೨) ಬಲಾಢ್ಯ
ಅಧೋಕ್ಷಜ (೫೨-೧೭) ಗುದದಲ್ಲಿ ಹುಟ್ಟಿದವ, ವಿಷ್ಣು
ಅಧ್ವಾನ (೧೬-೨೪) ಕಾಲ
ಅನಡ್ವಾಹ (೪೪-೧೫) ಎತ್ತು
ಅನಂತ (೩೭-೩೦) ಶೇಷ
ಅನಯ (೫೪-೧೦) ನೀತಿರಹಿತ
ಅನಿಬರ್ (೫೦-೪) ಅಷ್ಟು ಜನರು
ಅನಿಮಿಷ (೨೧-೪) ಮೀನ, ದೇವತೆ
(೩೭-೧೯) ಮೀನ, ರೆಪ್ಪೆ
ಅನಿಲ (೫೩-೬) ಗಾಳಿ
ಅನುಕರಿಸು (೩೦-೩೨) ಅಂಗೀಕರಿಸು
ಅನುಗುಂದು (೩೧-೪೪) ಹಸಗೆಡು
ಅನುಗೈ (೫೦-೬೨) ಸಿದ್ಧನಾಗು
ಅನುಗೊಳಿಸು (೫೦-೫೧) ಸರಿಯಾಗಿ ಮಾಡು
ಅನುಜ್ಞೆ (೫೧-೨೧) ಸಮ್ಮತಿ, ಅಪ್ಪಣೆ
ಅನುನಯ (೩೪-೨೪) ಸ್ನೇಹ
ಅನ್ವಯ (೫೩-೨) ವಂಶ
ಅಂತರಿಸದೆ (೫೩-೩೪) ಕೂಡಲೆ
ಅಂದಣ (೩೭-೩೫) ಪಲ್ಲಕ್ಕಿ

ಅಂದಳ (೫೧-೬) ಪಲ್ಲಕ್ಕಿ
ಅಪರಭಾಗ (೫೩-೬) ಹಿಂಭಾಗ
ಅಪರವಾರ್ಧಿ (೫೦-೨) ಪಶ್ಚಿಮಸಮುದ್ರ
ಅಪವರ್ಗ (೪೪-೧) ಮೋಕ್ಷ
ಅಪಾಂಗ (೩೫-೧) ಕಡೆಗಣ್ಣು
ಅಪ್ರತಿ (೫೧-೧೫) ಬಹಳ, ಹೆಚ್ಚಿನ
ಅಬಳ್ಳ (೫೫-೪೫) ಕಾಲು ಕೊಳಗ
ಅಬುಜಜ (೧೩-೯) ಬ್ರಹ್ಮ
ಅಬುಜಾಕ್ಷಿ (೫೧-೧೩) ಕಮಲನಯನೆ
ಅಬ್ಜ (೪೫-೪೯, -೫೦) ಚಂದ್ರ, ಕಮಲ, ಲಕ್ಷ್ಮೀ
ಅಭೀಳ (೪೭-೫೬) ಭಯಂಕರ
ಅಭ್ರಮಂಡಲ (೫೩-೮) ಆಕಾಶ
ಅಮರ್ (೭-೪) ರಾಶಿಯಾಗಿ ಬೀಳು, ಸೇರು
(೩೫-೮) ಹಚ್ಚು
(೩೭-೧೦) ಹಾಳತಾಗು
(೪೧-೨೨) ಸೇರು, ಹೊಂದು
ಅಮರಿಸು (೫೫-೨೩) ಸಿದ್ಧಮಾಡು
ಅಮರೀ (೫೩-೧೭) ದೇವತಾಸ್ತ್ರೀ
ಅಮರ್ಚಿಸು (೫೩-೨೩) ಇಟ್ಟುಕೊಳ್ಳು
ಅಮರ್ದು (೩೭-೫೪) ಅಮೃತ
ಅಮೃತ (೪೫-೫೦) ದೇವತೆ, ನೀರು, ದಿಕ್ಕು
(೫೩-೧೭) ಸುಧಾಹಾರ, ನೀರು
ಅಮ್ಮು (೨೮-೯) ಸಮರ್ಥನಾಗು, ಇಚ್ಛಿಸು
ಅಂಬ (೫೦-೪೧) ಬಾಣ
ಅಂಬಕ (೫೦-೧) ಕಣ್ಣು
ಅಂಬುಜಭವಾಂಡ (೫೦-೪೮) ಬ್ರಹ್ಮಾಂಡ
ಅಂಬುರುಹಭವ (೫೦-೫೪) ಬ್ರಹ್ಮ
ಅಯ್ದು (೨೩-೩೪) ಹೊರಡು, ಹೊಂದು
ಅಯ್ಸು (೪೭-೩೨) ಅಷ್ಟು
ಅರ್ (೩೨-೨೯) ಒಣಗು
ಅರತ (೩೬-೧೨) ಬಾಯಾರಿದವ
ಅರಮೆ (೫-೩೧) ತುಸ, ಅರ್ಧ
ಅರಲ್ (೫೦-೫೬) ಹೂವು
ಅರವರಿಸು (೨೫-೧೦) ಅರ್ಧಮಾಡು
ಅರಸಂಚೆ (೫೩-೩೧) ರಾಜಹಂಸ
ಅರಳ್ (೩೭-೫೦) ಹೂವು
ಅರಿ (೫೫-೪೧) ಹರಿ, ಕಡಿ
ಅರಿಚು (೨-೨೬) ಚೀರಾಡು, ಒದರು
ಅರಿತ (೩೨-೨೯) ತಿಳುವಳಿಕೆ
ಅರು (೫೪-೨೪) ಆರು
ಅರುಜಾಂಗ (೧೧-೪೪) ಬೇನೆಯಿಲ್ಲದ
ಅರೆ (೩-೮) ನಾಶವಾಗು
(೧೧-೪) ಶಿಲೆ
ಅರೆನೆಲೆ (೨೪-೧೦) ಹಿಂಭಾಗ
ಅರೆನೈವೆಣ್ಣ (೩೦-೭) ಅರ್ಧನಾರೀಶ್ವರ
ಅರೆಯುಟ್ಟು (೨೪-೧೧) ಬೆನ್ನಟ್ಟು
ಅರೆವರಿಸು (೮-೧೮) ಕೈಬಿಡು
ಅರೆವೆರೆ (೩೦-೭) ಅರ್ಧಚಂದ್ರ
ಅಲಗು (೫೫-೧೨) ಕತ್ತಿ
ಅಲಂಪು (೩೪-೯) ಅಲಂಕಾರ
(೩೭-೨೨) ಸೊಗಸು
ಅಲರಂಬರಾಯ (೩೫-೩) ಹೂಬಾಣಗಳುಳ್ಳವ, ಕಾಮ
ಅಲರ್ಗಣೆ (೩೫-೮) ಹೂಬಾಣ
ಅಲುಕು (೩೫-೩೧) ಅಲಗಾಡು
ಅಲೆ (೪೦-೧೧) ಅಲ್ಲಾಡು

ಅಲೆಪ (೩೫-೧೦) ಬೀಸುವಿಕೆ
ಅವಗಡ (೫೭-೬೭) ತೊಂದರೆ
ಅವಗಡಿಸು (೨೬-೧೮) ಹುರಿದುಂಬು
(೩೯-೩) ತ್ವರೆಮಾಡು
(೫೨-೪೯) ದೂಡು
(೪೧-೩೬) ವಶಮಾಡಿ ಕೊಳ್ಳು
ಅವಗಾಹಿಸು (೧೩-೫) ಸೇರು
ಅವಚು (೫೫-೨೦) ಒತ್ತು
ಅವಜ್ಞೆ (೩೦-೨೦) ಅವಮಾನ
ಅವತಂಸ (೩೬-೧೧) ತಲೆಯ ಮೇಲಿ ನ ಆಭರಣ
ಅವಧರಿಸು (೫೬-೧೧) ಲಕ್ಷ್ಯಗೊಡು
ಅವಧಾನ (೬-೯) ಭಕ್ತಿ, ಎಚ್ಚರಿಕೆ
ಅವುಂಕು (೨೧-೬) ಹಿಚಕು
ಅವುಡು (೪೦-೯) ದವಡೆ
ಅವ್ವಳಿಸು (೩೮-೧೭) ಮೇಲ್ವಾಯು
ಅಸಗ (೬೩-೨೫) ಸಾಮಾನ್ಯ
ಅಸಿ (೩೭-೪೧) ತೆಳುವಾದ
ಅಸಿದು (೧೦-೧೪) ಸಣ್ಣ
ಅಸಿಯ (೫೩-೧೨) ಸಣ್ಣ
ಅಸುಗೆ (ದ್ಭ) (೧೦-೧೪) ಅಶೋಕ
ಅಸ್ತಮಿಸು (೫೧-೩೧) ಕಾಣದಾಗು
ಅಹಿ (೫೦-೩೩) ಸರ್ಪ
ಅಹಿತಬಲ (೫೦-೯) ಶತ್ರುಬಲ
ಅಹಿಪ (೨-೧೧) ಶೇಷ
ಅಹಿಪುರ (೩೨-೧೮) ನಾಗಲೋಕ
ಅಳಕಾಪುರ (೧೧-೩೬) ಕುಬೇರನ ಪ ಟ್ಟಣ
ಅಳಪು (೧೬-೭) ಸಾಮರ್ಥ್ಯ
ಅಳಲ್ (೨೪-೧೭) ಪೀಡೆ, ದುಃಖ
ಅಳವಡಿಸು (೩೫-೬) ಸಿದ್ಧಮಾಡು
ಅಳವಡು (೫೬-೮) ಚೆನ್ನಾಗಿ ರಚಿಸು
ಅಳವಳಿ (೩೫-೧೯) ಶಕ್ತಿಗುಂದು
ಅಳವಳಿಸು (೫೩-೫೪) ಬಲಗುಂದು
ಅಳವಿ (೧೫-೭) ಯುದ್ಧ
(೪೦-೧೩) ಸಾವಿಪ್ಯ
ಅಳವಿಗೊಡು (೩೯-೩೨) ಎದುರಾಗು
ಅಳವು (೯-೫) ಅಳತೆ
(೧೫-೭) ಸಾಮರ್ಥ್ಯ
ಅಳಿ (೩೨-೧೮) ಭ್ರಮರ, ನಾಶ
(೫೨-೨೯) ನಾಶಹೊಂದು. ಸಾಯು
ಅಳಿಜಸ (೩-೧೧) ಅಪಕೀರ್ತಿ
ಅಳಿಪು (೧೦-೯) ಅನುರಾಗ
ಅಳೆ (೩೦-೩೧) ಮಜ್ಜಿಗೆ
ಅಳ್ಕರು (೩೬-೧೩) ಪ್ರೀತಿ
ಅಳ್ತಿವಡು (೬-೫೨) ಆನಂದಪಡು
ಅಳ್ಳಿರಿ (೧೬-೧೩) ಭಯಹುಟ್ಟಿಸು
(೪೧-೪೨) ಅಲ್ಲಾಡಿಸು
(೫೧-೨) ದನಿಮಾಡು
ಅಳ್ಳೆ (೪೯-೨೪) ಕಿಬ್ಬೊಟ್ಟೆ

ಆ

ಆಕೆವಾಳ (೨೬-೩) ಶೂರ
ಆಖಂಡಲ (೧೯-೪೬) ಇಂದ್ರ
ಆಗಸ (೩೫-೮) ಆಕಾಶ
ಆಜ್ಯ (೫೧-೨೨) ತುಪ್ಪ
ಆಣೆ (ದ್ಭ) (೮-೧೧) ಆಜ್ಞೆ
ಆಂಟು (೪೨-೩೭) ನಡು
ಆನ್ (೨೦-೨೦) ತಾಳು
(೩೫-೧೩) ಎದುರಾಗು, ಅಡ್ಡಬರು

ಆನ್ (೪೮-೪೬) ಅವಲಂಬಿಸು
(೫೩-೩೬) ಒಡ್ಡು
ಆನುತವಂ (೩೨-೪೬) ಯೋಗ್ಯವಾಗಿ
ಆಪನಿತು (೩೨-೩೯) ಸಾಕಷ್ಟು, ಶಕ್ಯವಿದ್ದಷ್ಟು
ಆಭಿಚಾರಕ (೬೦-೧೮) ದುಷ್ಟ ಉದ್ದೇಶವನ್ನು ಸಾಧಿಸುವದು
ಆಮ್ನಾಯ (೩೭-೪) ವೇದ
ಆಯತ (೩೭-೩೫) ವಿಶಾಲ
(೩೭-೫೭) ಸಿದ್ಧತೆ, ಯೋಗ್ಯತೆ
(೪೧-೫೩) ಸಾಧನ
(೪೬-೩೫) ಅನಾಯಾಸ
ಆಯತಂಗೆಯ್ (೫-೬೪) ಸ್ವೀಕರಿಸು
ಆಯತಿಕೆ (೩-೨೯) ವೈಭವ, ಹೆಚ್ಚಳ
ಆರ್ (೨೬-೨೬) ತಾಳಿಕೊಳ್ಳು
(೩೮-೨೬) ಹಾರು
(೬೦-೧೪) ಶಕ್ಯವಾಗು
(೫೦-೨೮) ಯಾರು
(೫೦-೨೨) ಒದರು
ಆರಡಿ (೬-೪೧) ದುರ್ವಾರ್ತೆ
(೪೫-೪೮) ಭ್ರಮರ, ಅಪಕೀರ್ತಿ
ಆರಯ್ (೩೧-೩೯) ವಿಚಾರಿಸು
ಆರಾವ (೫೦-೫೬) ಧ್ವನಿ
ಆರೋಂಗಣೆ (೩೭-೬೨) ಊಟ
ಆರ್ತ (೫೨-೨) ಪೀಡಿತ
ಆಲ್ (೬೨-೨೩) ಕೂಗು
ಆಲ (೧೦-೧೭) ಆಲದ ಮರದಂತೆ ಕಾಣುವ ಚಂದ್ರನ ಕಲಂಕ
ಆಲಿ (೩೨-೨) ಕಣ್ಣು
ಆವರಿಸು (೩೫-೩) ಧರಿಸು
ಆಶಯ (೪-೨೩) ಅಭಿಪ್ರಾಯ
ಆಸಾರ (೫೦-೩೨) ಬಿರುಮಳೆ
ಆಸೆ (೪೦-೧೬) ದಿಕ್ಕು, ಗತಿ
ಆಹವ (೫೦-೩೫) ಕಾಳೆಗ
ಆಳಿ (೭-೧೪) ದಾಸಿ, ತೊತ್ತು
(೧೧-೪೨) ಸಮೂಹ
(೧೯-೨೭) ಗೆಳತಿ
ಆಳಿಪೋಗು (೪೬-೩೧) ಮುಳುಗಿಹೋಗು
ಆಳು (೪೧-೨೭) ಮುಳುಗು
ಆಳ್ದ (೧೧-೧೧) ಅರಸ (ಇಲ್ಲಿ ಕಾಮ)
ಆಳ್ವೇರಿ (೨-೧೨) ಕೋಟೆಯ ಗೋಡೆ

ಇ

ಇಕ್ಕೆ (೫೩-೩೯) ಸ್ಥಳ
ಇಕ್ಕೆಕ್ಕೆಯಿಂ (ಇಕ್ಕ + ಎಕ್ಕೆ) (೧೧-೩೭) ದಟ್ಟವಾಗಿ
ಇಕ್ಕೆಲ (೩೫-೯) ಎರಡೂ ಮಗ್ಗಲು
ಇಡಿ (೫೬-೨೨) ಸಮೃದ್ಧಿಯಾಗು
ಇಡಿಕಿರಿ (೪೧-೫೨) ಸಮೂಹವಾಗಿರು
ಇಡು (೯-೬) ಎಸೆ
ಇಟ್ಟಣಿಸು (೩೭-೬೫) ಗುಂಪಾಗು
ಇದಿರಾದೊಡಲ್ (೫೦-೧೩) ಇದಿರಾದಾಗ್ಗೆ
ಇನಸುತ (೧೬-೧೦) ಯಮ
ಇನಿಗಂಪು (೩೫-೮) ಮಧುರ ಪರಿಮಳ
ಇನಿವಿಲ್ಲು (೩೫-೨೧) ಕಬ್ಬಿನ ಬಿಲ್ಲು
ಇಸಿಸು (೧-೩೫) ತುಸು
ಇಂದಿಂದಿರ (೯-೬) ಗುಂಗೀಹುಳ

ಇಂದೀವರ (೫೧-೨೩) ರಾತ್ರಿಕಮಲ
ಇಂದ್ರದಿಕ್ (೫೧-೨೨) ಪೂರ್ವದಿಕ್ಕು
ಇಂದ್ರಾಣಿ (೫೩-೧೭) ಲಕ್ಕೀಗಿಡ, ಶಚಿ
ಇಂಧನ (೫೨-೪೭) ಉರುವಲು
ಇಭ (೩೭-೫) ಆನೆ
ಇಂಪು (೧-೨) ಮಾಧುರ್ಯ
ಇಂಬಿಡಿಸು (೫೧-೨೦) ಸ್ಥಳದಲ್ಲಿ ಇಡಿಸು
ಇರಿಂಕು (೪೮-೫೫) ಹಿಚುಕು
ಇರುಬು (೩೭-೨೨) ಮೃಗಗಳನ್ನು ಕೆಡವುವ ಗುಳಿ ಅಥವಾ ತಗ್ಗು
ಇಷು (೫೨-೪೨) ಬಾಣ
ಇಳುಪು (೫೦-೪೭) ಇಳಿಸು
ಇಳೆಯ+ಅಣ್ಮ (೫೧-೨) ಅರಸ

ಈ

ಈಡಾಡು (೫-೧೪) ಚೆಲ್ಲಿಕೊಡು
(೩೨-೨೨) ಚದರಿಸು
ಈಡಿರಿ (೨೨-೧೪) ಹಿಡಿದು ಜಗ್ಗು
(೩೯-೧೯) ತುಂಬು
ಈಡು (೩೪-೧೭) ಸರಿ, ಸಮ
ಈಡೇರಿಸು (೮-೧೭) ವಚನಪಾಲಿಸು
ಈರೈದು (೨೧-೮) ಹತ್ತು
ಈಶಾನ್ಯ (೧೧-೧೮) ಶಿವ
ಈಶ್ವರಿ (೫೩-೧೭) ದುರ್ಗಾ, ಈಶ್ವರ ಬಳ್ಳಿ
ಈಳ್ದುಕೊಳ್ (೫೩-೫೦) ಕಸಕೊಳ್ಳು

ಉ

ಉಕ್ಕಡ (೪೮-೩೩) ಮುಂಗಾವಲು
ಉಕ್ಕು (೩೧-೨೨) ಸೊಕ್ಕು
ಉಗಿ (೮-೩) ಹರಣಮಾಡು
ಉಗಿ (೨೪-೨೮) ತೆಗೆ
(೩೧-೪೩) ನೋಯಿಸು
(೪೦-೧೦) ಕಡಿ
(೪೮-೧೧) ಸೀಳು
(೫೦-೨೦) ಬಿಡು
(೫೦-೨೮) ದಾಟು
(೫೦-೩೩) ಜಗ್ಗು
ಉಗಿಬಗಿಮಾಡು (೪೮-೫೧) ಬೇರೆಬೇರೆ ಮಾಡು
ಉಗು (೩೧-೨೯) ಒಗೆದುಬಿಡು
(೫೫-೪೦) ಬೀಳು
ಉಗ್ಗಡಿಸು (೩೭-೪) ಹೊಗಳು
ಉಚ್ಚೈಃಶ್ರವ (೨೯-೪೧) ಇಂದ್ರನ ಕುದುರೆ
ಉಡಿ (೬-೪೪) ಜಜ್ಜು
(೧೮-೧೪) ಚಿವುಟು, ಒಡೆ
(೨೫-೩೦) ತಿಗ
(೪೩-೨೧) ಚೂರುಚೂರಾಗು
(೫೨-೩೩) ಮುದ್ದೆಯಾಗು
ಉಡು (೫೩-೩೨) ಮೃಗವಿಶೇಷ, ನಕ್ಷತ್ರ, ನೀರು
ಉಡುಗು (೩೮-೩೦) ಸಂಕೋಚವಾಗು
ಉಣ್ಮು (೫೦-೧೧) ಉಂಟಾಗು, ಹುಟ್ಟು
ಉತ್ಕಟ (೪೩-೩೧) ಉತ್ಕೃಷ್ಟ
ಉತ್ಕರ (೫೬-೧೩) ವಿಪುಲತೆ
ಉತ್ಕಲಿಕೆ (೪೫-೪೭) ಅಂಜಿಕೆ, ತೆರೆ
ಉತ್ಕಳಿಕೆ (೨೨-೮) ಕಮಂಡಲು, ಕೋರಕ, ಜಲಭಂಗ
ಉತ್ತರಿಸು (೪೦-೧೪) ತಪ್ಪಿಸಿಕೊಳ್ಳು
ಉತ್ತುಂಗ (೩೫-೧) ಉನ್ನತ
ಉತ್ಪಲ (೪೦-೨೫) ರಾತ್ರಿಕಮಲ

ಉತ್ಪಾತ (೩೫-೧೮) ಅಪಶಕುನ
ಉದಾಸಿಪು (೮-೮) ದೂರ ಇರು
ಉದುರ್ಚು (೫೭-೨೨) ಚೆಲ್ಲು
ಉದ್ದಾಮ (೩೫-ಸೂ) ಶ್ರೇಷ್ಠ
ಉದ್ದು (೩೨-೧೪) ತಿಕ್ಕು
ಉದ್ಧತ (೪೩-೩೭) ಆವೇಶವುಳ್ಳ
ಉದ್ಧುರ (೧೦-೧೧) ಮನೋಹರ
ಉದ್ರೇಕ (೪-೩೧) ಉದ್ಧಟತನ, ದಿಟ್ಟತನ
ಉನ್ಮುಖತ್ವ (೫೨-೧) ಮೋರೆಯನ್ನು ಮೇಲಕ್ಕೆ ಮಾಡೋಣ
ಉಪಲಕ್ಷ್ಯ (೧೦-೩೬) ಗುರಿ
ಉಪವೀತ (೬೦-೧೬) ಜನ್ನಿವಾರ
ಉಪಹತಿ (೫೩-೮) ಪೀಡೆ
ಉಪೇಕ್ಷಿಸು (೫೧-೨೧) ತಾತ್ಸಾರಮಾಡು
ಉಪೇಂದ್ರ (೧೩-೧) ವಿಷ್ಣು, ಇಂದ್ರ
ಉಬ್ಬಟಿ (೫-೭) ಉನ್ನತಿಕೆ
ಉಬ್ಬರ (೨೦-೧೯) ಉನ್ನತ
ಉಬ್ಬರಿಸು (೪೨-೩೫) ಹೆಚ್ಚಾಗು
(೪೭-೧೦) ಮದವೇರು
ಉಬ್ಬಸ (೧೦-೭೪) ತ್ರಾಸ
ಉಬ್ಬು (೪೧-೨೦) ದುಃಖಪಡು
(೫೩-೪೨) ಹೆಚ್ಚಾಗು
ಉಬ್ಬೆ (೫೩-೩೭) ಉಬ್ಬು, ಚೀರಾಟ
ಉಬ್ಬೆಗ (ದ್ಬ - ಉದ್ವೇಗ) (೫೩-೪೨) ಸಂಕಟ
ಉಮ್ಮಳಿ (೧೦-೩೪) ಖೇದಪಡು, ಚಿಂತೆಮಾಡು
[illegible] (೩೧-೩೪) ಸೊಪ್ಪೆ
ಉರವಣಿಸು (೧೬-೩೨) ಗರ್ವವನ್ನು ತೋರಿಸು

ಉರವಣೆ (೩-೧೪) ಪ್ರಭಾವ
ಉರಿಪು (೫೨-೨೦) ಸುಡಹತ್ತು
ಉರು (೩೨-೨೯) ಉದ್ಭವಿಸು
ಉರುಗಿಸು (೨-೨೭) ಡೊಂಕುಮಾಡು
ಉರುಗು (೫೫-೪೦) ಡೊಂಕಾಗು
ಉರುಬು (೨೪-೬) ಹಲ್ಲಾಮಾಡು
(೩೮-೩೦) ಯುದ್ಧಕ್ರಮಣ ಮಾಡು
ಉರುಬೆ (೩೧-೪೩) ಆವೇಶ, ಕಠೋರತನ
ಉರುಳುಗಡಿ (೫೦-೩೬) ಉರುಳುವಂತೆ ಕಡಿ
ಉರುಳ್ಚು (೫೦-೩೩) ಬೀಳಿಸು
ಉರ್ಚು (೧೬-೧೦) ಹಿರಿ, ತೆಗೆ
(೪೪-೧೯) ಚುಚ್ಚು
ಉಲಿ (೩೫-೩೧) ದನಿಮಾಡು
ಉಲುಹು (೧೬-೪೧) ಸಪ್ಪಳ
ಉಳಿ (೩೬-೧೫) ಮೀರು
(೫೬-೩೨) ಬಿಡು
ಉಳು (೫೬-೩೬) ನೇಗಿಲಹೊಡೆ

ಊ

ಊಡಿಕೊಳ್ (೪೭-೩೪) ಚೆಲ್ಲಾಡು
ಊಣೆಯ (೪೯-೪೯) ಹೀನತೆ
ಊರು (೧೨-೧೨) ತೊಡೆ
ಊಳ್ (೧-೩೫) ಒದರು, ಬೊಗಳು
ಊಳಿಗ (೩೫-೨೮) ಕೆಲಸ, ಸೇವೆ

ಋ

ಋಕ್ಷ (೧೬-೨೦) ನಕ್ಷತ್ರ
ಋಕ್ಷಪತಿ (೩೧-೧) ಚಂದ್ರ

ಎ

ಎಕ್ಕತುಳ (ದ್ಭ. ಏಕತಾಳ) (೩೭-೬೭) ಆವೇಶ
ಎಕ್ಕಲ (೩೯-೩೫) ಕಾಡಹಂದಿ
(೫೬-೪೩) ದೊಡ್ಡ
ಎಕ್ಕೆಕ್ಕೆಯಿಂ (೬-೧೮) ಸಾಲುಸಾಲಾಗಿ
(೨೦-೩) ಒಂದೇಸವನೆ
ಎಗ್ಗ (೨೦-೨೬) ಗಾಂಪ, ಹೆಡ್ಡ
ಎಚ್ಚು (೧೦-೬೭) ಸವರು
ಎಡೆಯಾಡು (೧೦-೧೫) ಸಂಚರಿಸು, ಅಲ್ಲಾಡು
ಎಣೆ (೫-೧೬) ಸರಿ
ಎಣೆವಕ್ಕಿ (೩೭-೪೯) ಚಕ್ರವಾಕಪಕ್ಷಿ
ಎಂಟು (೧೦-೪೭) ಸೊಕ್ಕು
ಎತ್ತಾನುಂ (೧-೩೪) ಎಲ್ಲಿಯಾದರೂ
ಎಬ್ಬಟ್ಟು (೪೭-೧೧) ಪೀಡಿಸು, ಬೆನ್ನಟ್ಟು
ಎಯ್ಯಮೃಗ (೫೩-೩೦) ಏದು
ಎರಗು (೪೯-೩೩) ಹಲ್ಲಾಮಾಡು
ಎರಂಕೆ (೩೩-೨೦) ರೆಕ್ಕೆ
ಎರವು (೩೪-೨೯) ವೈರಭಾವ
ಎರೆ (೧-೨೫) ದಾನಮಾಡು
ಎರೆಯ (೧೬-೫) ಒಡೆಯ
ಎಸಕ (೬-೨೨) ಕೀರ್ತಿ, ಹೆಚ್ಚಳ
(೫೨-೩೦) ರೀತಿ
ಎಸುಗೆ (೫೦-೩) ಹೊಡತ
(೫೦-೪೧) ಬಿಡುವಿಕೆ
ಎಸೆ (೩೭-೭೧) ಹೊಡೆ, ಶೋಭಿಸು
ಎಳಲ್ (೪೫-೧೯) ಜೋತಾಡು
ಎಳಹೂಟ (೬೨-೨೦) ಪಶುವಿನ ಕಾಲಿಗೆ ಕಟ್ಟೆ ಎಳೆಸುವದು

ಏ

ಏಕಪಿಂಗಳ (೧೧-೩೬) ಒಂದು ಕಣ್ಣಿನ ಸ್ಥಳದಲ್ಲಿ ಹಳದಿ ಗುರುತುಳ್ಳವ, ಕುಬೇರ
ಏಗುವೆ (೫೧-೧೧) ಏನು ಮಾಡಲಿ
ಏರು (ಧಾ-ಇರಿ?) (೩೯-೧೬) ಗಾಯ
ಏಸರ (ಮೂ-ಏಸು) (೪೧-೨೦) ಎಷ್ಟು
ಏಳಿಸು (೩೧-೫೫) ಅವಮಾನಪಡಿಸು

ಐ

ಐದು (೩೫-೨) ಹೋಗು
ಐಸಲೆ (೫೩-೪) ಶಾಬಾಸ್
ಐಸೆ (೩೬-೧೩) ಅಷ್ಟೆ

ಒ

ಒಕ್ಕ (ಧಾ-ಒಕ್ಕು) (೫೭-೨೦) ಒಕ್ಕಿದ
ಒಕ್ಕ (ಧಾ-ಒಗು) (೩೪-೧೬) ಹೊರಬಿದ್ದ
(೩೮-೧೪) ಹೋದ, ಸಿಡಿದ
ಒಕ್ಕಲಿಕ್ಕು (೪೪-೯) ನಾಶಮಾಡು, ಕೊಲ್ಲು
ಒಗು (೫-೨೬) ಕೆಳಗಿಳಿಸು
(೩೬-೪) ಹೊರಸೂಸು, ಬೀಳು
ಒಗೆ (೩೫-೧೦) ಹೊರಡು
ಒಗ್ಗು (೨-೧೭) ಸಮೂಹ
ಒಚ್ಚಾರೆಗಣ್ (೩೭-೪೪) ಅಂಗೈಯಂತೆ ವಿಶಾಲವಾದ ಕಣ್ಣು
ಒಟ್ಟಜೆ (೩೭-೩೩) ಸಾಲು
ಒಟ್ಟಿಲ್ (೧೧-೪೬) ರಾಶಿ
ಒಡಕವಿಸು (೫೦-೪೨) ಒಟ್ಟಾಗಿ ತಿರುವು
ಒಡರ್ (೩೭-೨೨) ಕೂಡು
ಒಡರಿಚು (೫೨-೬೦) ಮಾಡು
ಒಡ್ಡು (೨೮-೨೦) ಇದಿರಿನಲ್ಲಿರು

ಒಡ್ಡು (೪೮-೨೭) ಕ್ರಮವಾಗಿ ನಿಲ್ಲು
ಒತ್ತಂಬರ (೩೮-೨೮) ಗಡಬಡಿ
ಒತ್ತರಿಸು (೪೫-೧೭) ಹಿಂದೆ ಮಾಡು
ಒತ್ತು (೨-೯) ಮಗ್ಗಲು
(೨-೧೭) ಸಮೂಹ
(೩೦-೩೩) ಆಶ್ರಯ
ಒತ್ತೆ (೧೦-೭೭) ಕೂಟಕ್ಕೆ ಬರುವದು
ಒದಗು (೧೭-೩೯) ಹತ್ತು
(೪೯-೫೩) ಸಿದ್ಧವಾಗು
ಒದವು (೫೮-೨೩) ಹೆಚ್ಚಾಗು
ಒಪ್ಪಿಡಿ (೩೭-೪೨) ಒಂದು ಹಿಡಿ
ಒಬ್ಬುಳಿ (೨-೧೦) ಸಮೂಹ
ಒಯ್ಯಾರ (೫-೫೩) ಶೋಭೆ
ಒರಗಿಸು (೫೨-೪೭) ಕೆಳಗಿಡು
ಒರಂಗು (೫೦-೭) ಮಲಗು
ಒರೆ (೫-೬೨) ನೀರುಬಿಡು, ದ್ರವಿಸು
(೧೧-೪೬) ಒರೆಗಲ್ಲಿಗೆ ತಿಕ್ಕು
(೩೫-೨೦) ಹೇಳು
(೩೭-೭೯) ಹತ್ತಿಕೊಳ್ಳು
ಒರೆಯಾಗು (ಒರೆ-ಸಂಪರ್ಕವಾಗು)
(೧೯-೨೮) ಒಳಗಾಗು
ಒಗ್ಗೂಡಿಸು(೫೦-೩೮) ಒಂದುಗೂಡಿಸು
ಒಲಹು (೨೫-೨೯) ಜೋತಾಡುವ ಆಭರಣ
ಒಲೆ (೫೦-೫೫) ತೂಗಾಡು
ಒಸಗೆ (೪-೫) ಸುದ್ದಿ
(೩೭-೫೭) ಆನಂದ, ಆಶೆ(?)
ಒಳಕೆಯ್ (೩೫-೩೫) ಒಲಿಸಿಕೊಳ್ಳು
ಒಳ್ಪುದಿದ (೫೦-೪೦) ಚೆನ್ನಾಗಿ ಗುಂಪು ಗುಂಪಾದ

ಓ

ಓ (೪೫-೧೦) ಪ್ರೀತಿಸು
ಓಜೆ (೩೬-೧೯) ಯೋಗ್ಯತೆ
(೫೦-೫೧) ಸರಿಯಾಗಿರುವಿಕೆ
ಓಡ್ (೩೮-೩೯) ತಲೆಪರಟಿ
ಓಂಟಿ (೧೫-೪) ಪರಟಿ
ಓಪ (೧೯-೨೯) ನಲ್ಲ
ಓಪಳು (೫೧-೩) ಪ್ರಿಯತಮೆ
ಓರಂತೆ (೩೬-೩೦) ಚೆನ್ನಾಗಿ
ಓಲಗಿಸು (೩೯-೩೬) ಸೇವೆಮಾಡು
ಓಲೈಸಿಸು (೪೯-೨೧) ತರು, ಉಂಟು ಮಾಡು
ಓಲೈಸು (೧೨-೧೯) ಹೊಂದು
(೪೧-೧೫) ಸೇವೆಮಾಡು
ಓವಿಸು (೩೭-೬೧) ಮಾಡು
ಓವು (೨೦-೧೮) ಉಪಚರಿಸು
ಓಸರ (೪೭-೪೬) ವಾಸರ
ಓಸರಿಸು (೬-೧೦) ಹಿಂದೆಮುಂದೆ ನೋಡು
ಓಳ್ (೩೧-೨೭) ಹೋಳು
ಓಳಿ (೩೬-೨೮) ಸಾಲು

ಔ

ಔಂಕು (೩೯-೨೦) ಒತ್ತು, ಹಿಚಕು

ಕ

ಕಂ (೪೫-೪೭) ನೀರು
(೬೩-೭೭ ಬ) ವಾಸುಕಿಯೆಂಬ ಸರ್ಪ
ಕಂಸಾಳ (೫-೭) ತಾಳ
ಕಕುದ್ (೬೦-೧೩) ಹೆಗಲು
ಕಕ್ಕಸ (ದ್ಭ-ಕರ್ಕಶ) (೧೦-೨೩) ಕಠಿಣ
ಕಕ್ಕದರಿ (೪೫-೧೮) ಹಲ್ಲುಗಳುಳ್ಳ ಕತ್ತಿ

ಕಕ್ಷ (೧೨-೧೭) ಬಗಲು
ಕಗ್ಗೊಲೆ (ಕರ್+ಕೊಲೆ) (೫೦-೧೦) ಹೆಚ್ಚಿನ ಕೊಲೆ
ಕಂಕರಿ(ದ್ಬ-ಖಂಕರಿ)ಗೋಲ್ (೫೭-೨೧) ದೊಡ್ಡ ಚಾಬೂಕ
ಕಂಕಾಳ (೨೧-೬) ಬೆನ್ನೆಲುವು
ಕಂಕಾಳಧರ (೫೨-೨೫) ಶಿವ
ಕಚ್ಚರಿ (೫-೬೦) ಬಜ್ಜಿ
ಕಚ್ಛಪ (೩೪-೧೭) ಆನೆ
ಕಂಜ (೩೭-೫೨) ಉಗುರು, ಒಂದು ಸುವಾಸಿಕ ದ್ರವ್ಯ
ಕಂಜಗುಣ (೩೫-೫) ಕಮಲಕೇಸರ
ಕಂಜಾತ (೩೭-೧೯) ಚಂದ್ರ, ಕಮಲ, ತಾರಕನೆಂಬ ರಾಕ್ಷಸ
ಕಟಕ (೬-೫೭) ಪಟ್ಟಣ, ಬೆಟ್ಟದ ತಪ್ಪಲು
(೩೦-೭) ಕಡಗ
ಕಟಕಿ (೪-೨೩) ಮನಸ್ಸಿಗೆ ನಡುವ ಹಾಗೆ (ಡೊಂಕ) ಮಾತಾಡುವ
ಕಟಾಹ (೩೬-೨೯) ಕೊಪ್ಪರಿಗೆ
ಕಟಿ (೧೨-೧೨) ನಡು
ಕಟ್ಟಾಳ (೩೧-೯) ಶೂರ ಪುರುಷ
ಕಡಂಬ (೧೧-೩) ಕದಂಬವೃಕ್ಷ
ಕಡವರ (೩೬-೧೨) ಸಂಪತ್ತು
ಕಡಿತ (೬೨-೫೩) ಮುಡಚಿದ ಅರಿವೆಯ ಹೊತ್ತಿಗೆ
ಕಡಿಯಣ (೪೧-೫೧) ಲಗಾಮು
ಕಡಿವಡೆ (೩೧-೩೮) ಕಡಿತಹೊಂದು
ಕಡುಗು (೩೮-೩೪) ಔತ್ಸುಕ್ಯ ತೋರಿಸು
ಕಡುಪು (೨೫-೧೧) ಅದಟು, ಶೌರ್ಯ

ಕಣೆ (೫೦-೩೬) ಬಾಣ
ಕಂಠೀರವ (೪೩-೬) ಸಿಂಹ
ಕಂಡಿರಿಸು (ದ್ಬ-ಖಂಡ) (೫೩-೩೫) ತುಣುಕಿನಿಂದ ಮಾಡು
ಕಂಡೂತಿ (೪೧-೨೭) ತಿಂಡಿ, ತುರಿಕೆ
ಕಂಡೆಯ (೧೬-೧೪) ಒಂದು ತರದ ಕತ್ತಿ
ಕದಕ್ಕದಿಸು (೫-೧೩) ಸಂಚಲಿಸು
ಕದಡು (೩೫-೧೫) ಕ್ಷುಬ್ಧವಾಗು
ಕದಪು (೩೫-೨೭) } ಗಲ್ಲ
ಕದಂಪು (೪೫-೧೫) }
ಕದಂಬ (೩೬-೨೯) ಕಲಸನ್ನ, ಅರಿಸಿಣ
ಕದಳಿ (೧-೧೫) ಬಾಳೆಯಬನ
(೪೭-೩೪) ಪತಾಕೆ
ಕನಕಾಕ್ಷ (೫೨-೨೬) ಹಿರಣ್ಯಾಕ್ಷ
ಕನಲು (೫೦-೧೦) ಸಿಟ್ಟಿಗೇಳು
ಕನಲ್ಕೆ (೬-೪೨) ಸಿಟ್ಟು
ಕಂತು (೫೦-೪೬) ಕಾಮ
ಕಂಥೆ (೫೫-೩೭) ಕವುದಿ
ಕಂದ (೩೭-೩೮) ಉಬ್ಬು, ಮೇಘ
(೪೭-೪೪) ಕುತ್ತಿಗೆಯ ಕೆಳಗಿನ ಭಾಗ
ಕಂದು (೫೦-೨೭) ಬಾಡು
ಕಂಧರ (೧೨-೧೩) ಹೆಗಲು
ಕಬಂಧ (೪೦-೨೫) ಮುಂಡ
(೫೩-೧೬) ನೀರು, ಮೋಟ ಗಿಡ
ಕಬಳ (೬೦-೯) ತುತ್ತು, ಮುದ್ದಿ
ಕಬ್ಬಿ (೪೭-೩೫) ಕಡಿವಾಣ
ಕಮಠ (೩೭-೫೧) ಆನೆ
(೫೨-೨೬) ಕೂರ್ಮ, ಆವಿ

ಕಮಲಗರ್ಭೋದಯಕುಮಾರಕ (೫೦-೧) ಬ್ರಹ್ಮ

ಕಮಲಾ (೪೫-೪೮) ಲಕ್ಷ್ಮಿ

ಕಮಲಾಕುಮಾರ (೫೦-೧) ಕಾಮ

ಕಮಲಾರಿ (೫೦-೧) ಚಂದ್ರ

ಕಮ್ಮರಿ (೪೯-೩೧) ಕಡದು

ಕಂಪನ (೪೯-೪೩) ಒಂದು ಆಯುಧ

ಕಂಬು (೧೦-೨೩) ಶಂಖ

ಕರ (೩೭-೨೯) ಅತಿಶಯ
(೪೫-೪೯) ನೀರು

ಕರಕ (೩೪-೧೪) ಕಮಂಡಲು, ಅರಣ್ಯ
(೬೧-೭೧) ಆಣೆಕಲ್ಲು

ಕರಜಾತ (೫೧-೧) ಉಗುರು

ಕರಟ (೧೦-೬೫) ಕಾಗೆ

ಕರವಲಯ, ತಳಹತ್ತ, ಸರಿಸಮಂಕಡ, ಬಂಧಪಟ್ಟಸ, ಉರಗಬಂಧನ, ಬಾಹುದಣಿವು, ಡೊಕ್ಕರ, ಸಿರವಲಯ, ಕಂಡಡೊಕ್ಕರ (೧೬-೩೯) ಕುಸ್ತಿಯ ಪೇಚುಗಳು

ಕರವಾಳ (೩೫-೧೧) ಕತ್ತಿ

ಕರಹ (೧೯-೨೯) ಕರೆಯೋಣ

ಕರಾಳ (೩೦-೨೮) ದುಷ್ಟ

ಕರಿದುದು (೫೩-೭) ಕಪ್ಪಾಯಿತು

ಕರಿಮುಖ (೫೨-೧೭) ಗಣಪತಿ

ಕರುಬು (೨೪-೭) ಮತ್ಸರಪಡು

ಕರುವಿಡು (೧೬-೪೩) ಮೂರ್ತಿಮಾಡು, ಎರಕಹೊಯ್ಯು
(೩೭-೩೩) ಲೇಪ್ಯಕರ್ಮ ಮಾಡು

ಕರೆ (೫೨-೧೬) ಅಡಗು

ಕರ್ಣಿಕೆ (೫೫-೪) ಅಪ್ಸರಸ್ತ್ರೀ

ಕರ್ದಂಕು (೧೦-೬೪) ಚುಂಚುವಿನಿಂದ ಕಚ್ಚು

ಕಲಧೌತ (೪೧-೧೪) ಬೆಳ್ಳಿ

ಕಲಭ (೩೭-೪೧) ಮರಿಯಾನೆ

ಕಲಲ (೫೮-೫) ಪಿಂಡ

ಕಲಾನಿಧಿ (೧೦-೪೫) ಚಂದ್ರ

ಕಲ್ಪ (೧೨-೧೮) ಸಹಸ್ರ ಯುಗ

ಕಲ್ಯಾಣ (೧-೩೮) ಲಗ್ನ

ಕವಡು (೧೦-೪೬) ಟಿಸಲು, ಮೋಸ

ಕವಲ್ (೪೬-೩) ಟಿಸಲು

ಕವಿ (೧೦-೪೫) ಶುಕ್ರ
(೪೪-೪೨) ಹೊಡೆ, ಮೇಲೆ ಬೀಳು

ಕವಿಕುಲಪಾರಿಜಾತೆ (೧೦-೪೫) ಕವಿಗಳಲ್ಲಿ ಶ್ರೇಷ್ಠ

ಕವಿಚು (೩೬-ಸೂ) ಮೇಲೆ ಹೋಗುವಂತೆ ಮಾಡು

ಕಸವರ (೨-೬) ಬಂಗಾರ

ಕಹಳಾ (೧೬-೧೩) ಕಾಳೆ

ಕಳ (ದ್ಭ-ಖಲ) (೧೬-೩೬) ಕಣ
(೩೧-೫೪) ರಣಾಂಗಣ

ಕಳ (೩೭-೫೨) ಮಧುರ

ಕಳಕಳ (೬-೪೨) ಚಿಂತೆ
(೩೭-೫) ಪ್ರಕಾಶ
(೫೦-೨೮) ಗದ್ದಲ

ಕಳಚು (೪೧-೪೯) ಜಗ್ಗು
(೪೩-೩೪) ಅಲ್ಲಾಡು, ಸರಿದಾಡು
(೫೩-೫೨) ಜಾರಿಹೋಗು

ಕಳವೆ (೧೧-೯) ಬತ್ತ

ಕಳಲ್ (೧೯-೩೧) ಬಡವಾಗುವಂತೆ ಮಾಡು

ಕಳಲ್ (೫೬-೫೮) ಬಡವಾಗು
ಕಳಿ (೩೫-೩೧) ಹೋಗು
ಕಳಿಕೆ (೫-೧) ಮೊಗ್ಗೆ
ಕಳ್ಗಡಿಹುತನ (೪೯-೯) } ಸೆರೆಬಡಕತನ
ಕಳ್ಗಡುಹಿತನ (೨೫-೭) }
ಕಾಕ (೩೦-೩೧) ಉದ್ಧಟ ಪುರುಷ
ಕಾಗಜ (೯-೨೫) ಕಾಗದ
ಕಾಂಚನ (೪೫-೪೦) ಬಂಗಾರ, ನಾಗಸಂಪಿಗೆ
ಕಾಂಚಿ (೩೭-೫೩) ಕಾಂಚಿಯ ಹುಲ್ಲು
ಕಾಂಚೀದಾಮ (೩೭-೧೩) ನಡಪಟ್ಟಿ
ಕಾಂಡ (೪೦-೧೭) ಬಾಣ
ಕಾದಂಬರಿ (೨೨-೨೬) ಸುರೆ
ಕಾದಂಬಿನಿ (೨೬-೨೮) ಮೇಘಗಳ ಸಾಲು
ಕಾದಲ (೧೧-೨೧) ನಲ್ಲ
ಕಾಂತ (೨೪-೨೧) ಮನೆ
ಕಾಪಿಗ (೫೫-೨೮) ಕಾವಲುಗಾರ
ಕಾಪು (೩೭-೨೨) ರಕ್ಷಿಸುವದು
ಕಾಯ್ (೩೭-೯೮) ಕಾಯಾಗು
(೧೯-೨೭) ಸಿಟ್ಟಾಗು
ಕಾಯಬೇಡವೆ (೩೬-೧೪) ಕಾಯಬಿಡಬಾರದೆ, ರಕ್ಷಿಸಬಾರದೆ
ಕಾಯ್ಪು (೩೧-೩) ಸಿಟ್ಟು
ಕಾಯಮಾನ (೩೬-೧೪) ಮಂಟಪ
ಕಾರ್ (೨೦-೫) ಮಳೆಗಾಲ
ಕಾರಣೆ (೫-೫) ಸಾರಣೆ
ಕಾರ್ಗಾಲ (೫೦-೪) ಮಳೆಗಾಲ
ಕಾರ್ತಸ್ವರ (೩೨-೧೨) ಬಂಗಾರ
ಕಾರ್ಯ (೫೧-೨೮) ಯೋಗ್ಯ
ಕಾಲ್ (೪೫-೨೬) ಕಾಲುವೆ
ಕಾಲಕಂಧರ (೧೭-೧) ಕಪ್ಪುಗೊರಲುಳ್ಳವ, ಶಿವ

ಕಾವಣ (೪೬-೧೪) ಚಪ್ಪರ
ಕಾಷಾಂಬರ (೫೯-೨೭) ಕೆಂಪುವಸ್ತ್ರ
ಕಾಸರ (೫೩-೨೦) ಹೊಂಡ
ಕಾಸೆ (ದ್ಭ-ಕಾಶಾ) (೩೧-೯) ಚಡ್ಡಿ
ಕಾಳ (೫೫-೭) ಜೇಡಹುಳ
ಕಾಳಿಜ (೪೮-೫೬) ಅಗ್ರಮಾಂಸ
ಕಾಳಾಂಜಿ (೨-೩೧) ರಸಪಾತ್ರೆ, ಗುಲಾಬದಾನಿ
ಕಿಕ್ಕಿರಿದ (೩೭-೪೩) ದಟ್ಟಾದ
ಕಿಗ್ (೧೯-೨೭) ಸಣ್ಣ
ಕಿಗ್ಗಟ್ಟು (೩೫-೬) ಸಣ್ಣಗಂಟು
ಕಿಂಕಿಣಿ (೩೫-೫) ಗೆಜ್ಜೆ
ಕಿಂಚುಳಕ (೨-೩) ಒಂದು ತರದ ಕ್ರಿಮಿ
ಕಿಟಿ (೫೨-೩೨) ಹಂದಿ
ಕಿತ್ತ (೨೪-೩೦) ಗಿಡ್ಡ
ಕಿನಿಸು (೩೯-೩೫) ಕೋಪಗೊಳ್ಳು
ಕಿರಿ (೨-೨೭) ಕಿಸಿ
ಕಿರೀಟಿ (೫೩-೨) ಅರ್ಜುನ
ಕಿವಿಮೂಳ (೩೨-೩೭) ಕಿವಿಯಿಲ್ಲದವ
ಕಿಷ್ಕಿಂಧ (೨೯-೭) ಅತಿಶಯ
ಕಿಸು (೧೧-೧೮) ಕೆಂಪು
ಕಿಸುರ್ (೩-೧೧) ಅಸಹ್ಯಭಾವ, ಜಗಳ
ಕೀನಾಶ (೨-೧) ಯಮ
ಕೀನಿವಲ್ (೫-೨೨) ಕಿಸಿದ ಹಲ್ಲು
ಕೀರ (೩೭-೫೨) ಗಿಳಿ
(೫೫-೪) ಮುಂಗುಲಿ, ಗಿಳಿ
ಕೀರು (೩೧-೪) ಸಿಟ್ಟಿನ ಜ್ವಾಲೆಯಿಂದ ಸುಡು
(೫೩-೩೬) ಕೆದರು, ತಿಕ್ಕು
ಕೀಲಣ (೪೭-೧೫) ಕೀಲು
ಕೀಲಾಲ (೩೨-೧೮) ರಕ್ತ, ನೀರು

ಕೀಸು (೪೨-೩೪) ಸುಲಿದು ಬೀಳು
(೫೬-೪೨) ಜಗ್ಗು

ಕು (೩೭-೧೯) ಭೂಮಿ
(೪೫-೫೦) ಅಸ್ಪಷ್ಟ

ಕುಕ್ಕೆ (೧೦-೭೭) ಬಿದಿರಿನ ಸಣ್ಣ ಬುಟ್ಟಿ

ಕುಚ್ಚು (ದ್ಭ-ಕೂರ್ಚ) (೫-೩) ಗೊಂಡೆ

ಕುಜ (೫೩-೭) ಗಿಡ

ಕುಜಾತಿ (೩೭-೧೧) ಗಿಡ

ಕುಂಜರ (೫೦-೪೭) ಆನೆ

ಕುಟ್ಮಲ (೩೭-೨೫) ಮೊಗ್ಗೆ

ಕುಡಿಚೆ (೧೦-೭೪) ಕುಡಿಯುವ ವ್ಯಸನವುಳ್ಳಾಕೆ

ಕುಡಿತೆ (೪೬-೨೮) ಬೊಗಸೆ

ಕುಡಿತೆಗಣ್ (೪೫-೩೩) ವಿಶಾಲವಾದ ಕಣ್ಣು

ಕುತ್ತು (೨೪-೬) ಜಜ್ಜು, ಚುಚ್ಚು
(೫೬-೬೬) ಕೆಳಗೆ ಮಾಡು

ಕುತ್ಸಿತದೊಳು (೪೧-೨೭) ತಿರಸ್ಕಾರದಿಂದ

ಕುಂದ (೧೦-೩) ಕೋಲಮಲ್ಲಿಗೆ

ಕುಪ್ಪೆ (೪೮-೫೬) ರಾಶಿ

ಕುಬ್ಬಿ (೫೩-೨೨) ಕಣ್ಣಿ (?)

ಕುಮುದ (೧೦-೪೯) ನೆಯ್ದಿಲು, ಚಂದ್ರ
(೪೫-೪೮) ಆನಂದ, ನೀಲೋತ್ಪಲ

ಕುಮುದಖಳ (೪-೧) ನಿಷ್ಠುರ ರಾಕ್ಷಸ

ಕುರಿ (೬೩-೧೭) ಇಚ್ಛೈಸು, ಗುರುತಿಸು

ಕುರಿದರಿ (೨೪-೭) ಕೊಲೆಮಾಡು

ಕುರುಜು (೫-೨) ಆಸನ, ಕಳಿತು ಕೊಳ್ಳುವ ಮಂಟಪ

ಕುರುಪಿಡು (೧೬-೧೯) ಲಕ್ಷಿಸು

ಕುರುಪು (೯-೨೫) ಗುರುತು

ಕುಲಗೋತ್ರಘಾತಕ (೪೧-೨೨) ಇಂದ್ರ

ಕುಲಿಶ (೩೫-೧೭) ವಜ್ರ

ಕುಲ್ಲಾಯಿ (೭-೮) ಸಣ್ಣಟೊಪ್ಪಿಗೆ

ಕುವಲಯ (೯-೩) ಕನ್ನೆಯ್ದಿಲು, ಭೂಮಿ

ಕುಶೇಶಯ (೨-೧) ಕಮಲ

ಕುಸುಕಿರಿ (೩೩-೨೩) ಕೆಳಗೆ ಹೋಗಿಸು

ಕುಸುಕು (೪೪-೩೨) ಹೊಡೆ

ಕುಸುರಿ (೪೫-೨೦) ಕುಸುಮಕೇಸರ

ಕುಸುರಿದರಿ (೨೪-೩೦) ಪುಡಿಮಾಡು

ಕೂಚಿ (೪೮-೨) ಪಯಣ

ಕೂಟ (೫೬-೨೯) ಸುಳ್ಳು

ಕೂಡೆ (೫೦-೨೮) ಆ ಕೂಡಲೆ

ಕೂನ (೫೩-೨೨) ಡೊಂಕಾದ

ಕೂರ್ (೩೫-೧೧) ತೀಕ್ಷ್ಣ
(೪೫-೧೧) ಪ್ರೀತಿಸು

ಕೂರಲಗು (೫೨-೨೧) ತೀಕ್ಷ್ಣಬಾಣ

ಕೂರ್ತು (೩೫-೩೫) ಮನಸಿನಿಂದ, ಕುರಿತು

ಕೂರ್ಪ (೪೯-೪೬) ಸ್ನೇಹಿತ

ಕೂಷ್ಮಾಂಡ (೨೯-೨೩) ಕುಂಬಳಕಾಯಿ

ಕೂಳಿ (೪೬-೧೧) ಅಡ್ಡನಾಡಿ ಹೆಂಗಸು

ಕೂಳೆ (೫೭-೨೬) ಕೋಲಿ

ಕೃತಕ (೩೬-೧೩) ಸುಳ್ಳು, ಕಪಟ
(೩೬-೨೮) ಮಾಡಿದ

ಕೃತಾಂತ (೫೧-೨೪) ಯಮ

ಕೃತ್ತಿವಾಸ (೩೩-೨೬) ಶಿವ

ಕೃಪಾಣ (೩೮-೪೮) ಕತ್ತಿ

ಕೆಕ್ಕರಿಸು (೪೪-೯) ಕೆಂಪಾಗು

ಕೆಡೆ (೪೨-೩೭) ಬೀಳು
ಕೆತ್ತ (ಧಾ-ಕಿರ್) (೪೯-೩೬) ಆವರಿಸಿದ
ಕೆತ್ತು (೩೨-೨) ಹಾರು
ಕೆತ್ತೆರ್ದೆ (೪೦-೨೩) ಗಟ್ಟಿಯಾದ ಎದೆ
ಕೆನ್ನೆ (೫೦-೩೩) ಕಪಾಳ
ಕೆಯ್ಯಾರೆ (೫೭-೧೯) ಕೈತುಂಬ
ಕೆಲದವ (೪೦-೬) ನೆರೆಯುವ
ಕೆಲೆ (೫೭-೨೪) ಚೀರಾಡಿ ಬೈಯು
ಕೆಳೆ (೮-೨೦) ಗೆಳೆಯ
(೧೧-೪೩) ಗೆಳೆತನ
ಕೆಳೆಗೊಂಬು (೩೬-೮) ಕೈಕೊಳ್ಳು
ಕೇಕರ (೪೬-೫೦) ಕಡೆಗಣ್ಣು
ಕೇಕಿ (೫೩-೧೯) ನವಿಲು
ಕೇಣ (೫-೪೪) ದೀರ್ಘವಿಚಾರ, ಮತ್ಸರ
ಕೇಣಿಗ (೪೭-೪೧) ವ್ಯಾಪಾರಮಾಡುವವ
ಕೇಣಿಗಾರ (೨೯-೨೦) ವ್ಯಾಪಾರಮಾಡುವವ
ಕೇತು (೨-೧೨) ಪತಾಕೆ
ಕೇಸುರಿ (೪೨-೩೪) ಕೆಂಪುಜ್ವಾಲೆ
ಕೇಳಿ (೩೪-೨೦) ಪಂಕ್ತಿ, ಸಾಲು
ಕೈ (೪೨-೧೧) ಕೋಲು
ಕೈಗೈ (೫೦-೫೧) ತೋರಿಸು
ಕೈದು (೫೦-೧೫) ಆಯುಧ
ಕೈಪೊಡೆ (೩೫-೫) ಬಾಣದ ಹಿಂಭಾಗ
ಕೈಯ್ಯೊದಗಿನಿಂ (೪೦-೧೪) ಕೈಯೊಳಗಿಂದ
ಕೈಲಾಗ (೩೭-೨೬) ಕೈಸಹಾಯ
ಕೈವಾರ (೩೭-೭) ಸ್ತುತಿ
ಕೈವಾರಿಸು (೩೮-೨೩) ಸ್ತುತಿಸು
ಕೈಸಾರ್ (೩೬-೨೩) ಫಲಿಸು
ಕೊ (ಧಾ-ಕೊಳ್) (೫೧-೨೭) ತಕ್ಕೊಳ್ಳು
ಕೊಚ್ಚು (೫೦-೧೩) ಕೊಯ್ಯು, ಚೂರುಮಾಡು
ಕೊಂಚ (೩೪-೨೦) ಕ್ರೌಂಚಪಕ್ಷಿ
ಕೊಟಾರ (೫೭-೩೩) ಕಣ
ಕೊಟ್ಟ (೬೩-೬೩) ಹಟ್ಟಿ, ಕೋಟೆ
ಕೊಠಾರ (೩೦-೫) ಕೊಠಡಿ, ಕೋಣೆ
ಕೊಡಪು (೩೧-೪೩) ಅಲ್ಲಾಡು
(೪೪-೧೮) ತಿವಿದಾಡು
ಕೊಡಹು (೩೩-೨೧) ಜಾಡಿಸು
ಕೊಣ (೧೨-೧೮) ಕೊಳ
ಕೊಂಡ (೪೯-೩೧) ದಿನ್ನಿ
ಕೊಂಡೆಯ (೭-೧೯) ಚಾಡಿಹೇಳುವವ
(೫೬-೩೦) ಚಾಡಿ
ಕೊನರ್ (೪-೩೪) ಚಿಗುರು
ಕೊಂತ (೨೧-೨೫) ಬರ್ಚಿ
ಕೊರಚಾಡು (೨೨-೧೫) ಛೀ ಹಾಕು
ಕೊರ್ಬು (೩೭-೨೨) ಸೊಕ್ಕು
ಕೊಲ್ಲಟಿಗ (೧೨-೬೨) ಡೊಂಬ
ಕೊಲ್ಲೆ (೩೦-೧೫) ಮೂಲೆ
ಕೊಳಗ (೪೭-೪೪) ಕರ್ಣಾಭರಣ
ಕೊಳರ್ವಕ್ಕಿ (೩೫-೨೮) ಒಂದು ಜಾತಿಯ ಪಕ್ಷಿ
ಕೊಳುಗುಳ (೧೬-೯) ಕಾಳೆಗ
ಕೋ (೩೪-೨೫) ಪೋಣಿಸು

ಕೋಕನದ (೪೧-೪) ಕೆಂದಾವರೆ
ಕೋಟಲೆ (೩-೧೭) ನೋವು, ಕಷ್ಟ
ಕೋಟೀರ (೧೯-೩) ಕಿರೀಟ
ಕೋರ್ (೩೫-೮) ಕೋರೆ
ಕೋಡಿ (೨೨-೨೬) ಮನೋತ್ಸಾಹ
(೪೨-೩೧) ಸೋಲು
ಕೋಡು (೨೨-೨೬) ಹಿಂಜರಿ, ಅಂಜು
ಕೋಡುಗಲ್ಲು(೩೬-೪) ಚೂಪಾದ ಬಂಡೆಗಲ್ಲು
ಕೋಣಪ್ರಹಾರ (೩೮-೨೩) ಗುಣಕ
ಕೋಲಾಹಲ (೫೦-೨೬) ಗಜಬಜ, ಗದ್ದಲ
ಕೋವಿ (೯-೬) ಲಳಿಗೆ
(೪೨-೧೧) ತುಬಾಕಿ
ಕೋವು (೨೦-೧೮) ಬಿಸುಡು (?)
ಕೋಶ (೪೫-೪೬) ಬಂಗಾರ, ಕರ್ಣಿಕ, ಕುಟ್ಮಲ
(೫೩-೨) ದ್ರವ್ಯ
ಕೋಹು (೩೦-೧೫) ಸಾಲು, ಪಂಕ್ತಿ
ಕೋಳಹಿಡಿ (೧-೩೫) ಗಟ್ಟಿಯಾಗಿ ಹಿಡಿ
ಕೋಳಾಹಳ (೫೩-೮) ಗದ್ದಲ
ಕೋಳುಕೊಳ್ಳು (೨೩-೩೨) ಸುಲಿಗೆ ಮಾಡು
ಕೌಂಗು (ದ್ಭ-ಕ್ರಮುಕ) (೧೧-೨೧) ಅಡಿಕೆ ಮರ
ಕೌಂತೇಯ (೫೩-೫೭) ಅರ್ಜುನ
ಕೌಮೋದಕಿ (೨೫-೨೭) ವಿಷ್ಣುವಿನ ಗದೆ
ಕೌಶಿಕ (೩೨-೧೮) ಹಾವಿನಮುಖ, ಗೂಗೆ
ಕೌಳಿಕ (೨೩-೧೭) ವಂಚನೆ
ಕ್ರಮುಕ (೧೦-೨೦) ಅಡಿಕೆ
ಕ್ರೋಡ (೫೨-೨೬) ಹಂದಿ
ಕ್ವಣ (೩೭-೭) ಧ್ವನಿ
ಕ್ಷತ (೫೦-೯) ಗಾಯವಡೆದ
ಕ್ಷೋಣಿ (೩೮-೪೦) ಖರ್ವ
ಕ್ಷೋಭ (೫೧-೪೧) ಅಂಜಿಕೆ, ತ್ರಾಸ
ಕ್ಷ್ವೇಳ (೪೦-೧) ವಿಷ

ಖ

ಖಗ (೩೯-೧೧) ಬಾಣ
(೪೧-೨೧) ಸೂರ್ಯ
ಖಟ್ವ+ಅಂಗ (೫೨-೨೭) ಹೊರಸಿನ ಕಾಲಿನ ಆಕಾರದ ಗದೆ
ಖಂಡಪರಶು (೫೩-೮) ಶಿವ
ಖಂಡಿ (೩೯-೩೧) ಕಿಂಡಿ, ಕೋಟೆಯೊಳಗಿನ ಮಾರ್ಗ
ಖಂಡೆಯ (೨೪-೧೦) ಒಂದು ತರದ ಕತ್ತಿ
ಖಡ್ಗ (೨೬-೯) ಗಂಡಕ, ಕತ್ತಿ
ಖಡ್ಗಿ (೫೩-೧೫) ಗಂಡಕ, ಖಡ್ಗಧಾರಿ
ಖತಿ (೩೫-೨೯) ಸಿಟ್ಟು
ಖದಿರ್ (೬೦-೩) ಕಾಚಿನ ಗಿಡ
ಖರ್ಪರ (೧೫-೨) ಕಪಾಲ
(೪೮-೫) ಆವಿಯ ಬೆನ್ನು
ಖರ್ಬಡ (೪೮-೭) ದೊಡ್ಡ ಊರು
ಖರ್ವಡ (ಕರ್ವಟ ?) (೧೧-೩) ಪೇಟೆಯ ಊರು
ಖಲಿಂದರ (೧-೧೯) ಮಹಮ್ಮದೀಯರ ಧರ್ಮಗುರು
ಖಳ್ಗ (೩-೧) ಖಡ್ಗ
ಖಾತ (೫೩-೧೬) ದೊಡ್ಡ ಕೆರೆ

ಖಾತಿ (೨೪-೪) ಸಿಟ್ಟು
ಖುಲ್ಲ (೧೩-೧೧) ಕ್ಷುಲ್ಲಕ
(೬೨-೪೦) ದುಷ್ಟ
ಖೇಟ (೪೮-೭) ಹಳ್ಳಿ
ಖೇಟಕ (೪೩-೨೭) ಢಾಲು
ಖೇಡ (೧೧-೩) ಹಳ್ಳಿ
ಖೇಡಾಕುಳಿ (೩೭-೬೨) ಆಟದತಗ್ಗು

ಗ

ಗಕ್ಕಪಾಡಿಂ (೯-೧೪) ಒಮ್ಮಿಂದೊಮ್ಮೆ
ಗಂಗಸಾಗರ (೪೭-೪೫) ಸಾರಾಯಿ
ಗಂಗೆವಾಳುಕ (೧-೮) ಸ್ವರ್ಗವಾಸಿಗಳ ಒಂದು ವರ್ಗ
ಗಜಮುಖ (೫೩-೧೭) ಗಣೇಶ, ಶ್ರೇಷ್ಠ ಆನೆ
ಗಜರು (೫೧-೭) ಕೋಪಿಸು
ಗಡಣ (೩೫-೭) ಸಮೂಹ
ಗಡಣೆಗೊಳ್ಳು (೪೪-೧೫) ಅಸಕೊಳ್ಳು
ಗಡೆ (೧೯-೨೭) ಬಿದರಗಳ
ಗಣಿಕಾ (೪೫-೪೦) ಪಾತರದವಳು, ಜಾಜಿಮಲ್ಲಿಗೆ
ಗಂಡು (೨೮-೨೦) ದೊಡ್ಡ
ಗಂಡೂಷ (೬೦-೩) ಮುಕ್ಕಳಿಸುವದು
ಗದಡು (೪೨-೩೨) ದನದ ಉಚ್ಚಿಯ ಜಿಡ್ಡು
ಗನ್ನ (೧೬-೪೦) ಠಕ್ಕುತನ
(೫೧-೧೮) ಕಳವು
ಗನ್ನಗತಕ (೩-೧೧) ಠಕ್ಕುತನ
ಗಂಧನಾಹ (೨೯-೩೯) ವಾಯು
ಗಂಧಿಗ (ದ್ಬ-ಗ್ರಂಥಿಕ) (೧೧-೪೪) ಔಷಧಮಾರುವವ
ಗಭಸ್ತಿ (೧೯-೧) ಸೂರ್ಯ
ಗಭಸ್ತಿ (೩೭-೧) ಕಿರಣ
ಗಮಕ (೩೧-೨೫) ಚಪಲಗತಿ
(೩೫-೯) ರೀತಿ
ಗಮಕಿ (೧೧-೪೭) ಲಿಪಿಯನ್ನೋದುವವ
ಗರ (ದ್ಭ) (೩೧-೪೪) ಗ್ರಹ
(೪೧-೫೪) ಪಿಶಾಚಿ
ಗರಳ (೩೬-೧೦) ವಿಷ
ಗರುತ್ಮ (೨-೧೫) ಗರುಡ
ಗರುವ (೧೪-೫) ಶ್ರೇಷ್ಠ
ಗವಾಸ್ಪದ (೧೧-೪) ಆಕಳಿರುವ ಸ್ಥಾನ
ಗಸಣಿ (೬-೪೦) ದುಃಖಕಾರಕ ವಿಚಾರ
ಗಸಣೆ (೨೦-೫೬) ಕಾರ್ಯ
ಗಹಗಹಿಸು (೫೦-೮) ತಿರಸ್ಕಾರದಿಂದ ನಗು
ಗಳ (೧೧-೪೦) ಕಂಠ
ಗಳಹು (೫೨-೫೬) ಬಡಬಡಿಸು
ಗಾಂಗೇಯ (೩೭-೩೧) ಬಂಗಾರ
ಗಾಡ (೬-೨೭) ನಿಶ್ಚಯ
ಗಾಡಿ (೧೦-೧೭) ಸೊಬಗು
ಗಾಡಿಕೆ (೬೩-೪) ವೈಶಿಷ್ಟ್ಯ
ಗಾರು (೨೮-೧೮) ಆವೇಶಯುಕ್ತ
ಗಾರುತ್ಮ (೩೭-೩೦) ಗರುಡ, ಪಚ್ಚೆ
ಗಾವಳಿ (೬-೪೦) ಅಬ್ಬರ
(೩೪-೨೦) ಸಪ್ಪಳ
ಗಿಡಿಬಿಡಿ (೫-೭) ಕಿಡಬಿಡಕಿ
ಗಿಣ್ಣಿಲ್ (೧೦-೫೯) ಗಿಂಡಿ
ಗಿರಿಕೆ (೨೯-೪) ಇಲಿ
ಗುಜ್ಜುಗೊಳ್ಳು (೩೭-೭೭) ಮುದುಡು
ಗುಡ (೫-೫೦) ಬೆಲ್ಲ
ಗುಡಿ (೫-೨) ಪತಾಕೆ

ಗುಡಿ (೩೬-೧೦) ಗಂಟು
(೪೮-೩೦) ಗುಡಾರ
ಗುಡಿಗಟ್ಟು (೧೩-೧೫) ಏಕಾಗ್ರಚಿತ್ತ
ನಾಗು
(೫೭-೭೨) ಸುತ್ತುಗಟ್ಟು
ಗುಡಿಲ್ (೫೨-೪೪) ಗುಡಿಸಲು
ಗುಣ (೧೦-೫೬) ಗುಣಗಳು,
ದಾರ
ಗುದಿ (೫-೩) ಗೊಂಚಲ
(೫೩-೩೩) ಗುಂಪು
ಗುಮುತಿ (೪೭-೩೩) ಗುಮುಟ
ಗುರ್ಜುಗೊಳ್ಳು (೨೮-೧೧) ಗಾಸಿಯಾ
ಗು
ಗುಲ್ಫ (೧೨-೧೨) ಹರಡು
ಗುಲ್ಮ (೩೫-೧೪) ಕಂಟಿ
ಗುಹ್ಯಕೇಶ್ವರ (೬-೪೫) ಕುಬೇರ
ಗುಳ (೪೨-೧೯) ಜೂಲು
ಗುಳಿದ (೩೭-೧೦) ತಗ್ಗಾದ
ಗುಳಿಪಾಡು (೪೫-೪೨) ಚೀರಾಡು
ಗೂಡಾರ (೪೨-೧೩) ಡೇರೆ
ಗೆಡೆ (೩೮-೩೪) ಪಾರ್ಶ್ವ
ಗೆಂಟು (೨೧-೨೧) ಅಂತರ
ಗೇಯ (೧೧-೩) ಗಾನ
ಗೇರೆ (೪೮-೩೩) ವರ್ತುಲ
ಗೇಹ (೫೩-೧೭) ನಿವಾಸ
ಗೈ (೫೦-೪೬) ಮಾಡು
ಗೊಂದಣ (೫೧-೫) ಸಮೂಹ, ಸಾಲು
ಗೊಂದಣಿಸು (೪೮-೨೩) ಒಟ್ಟುಗೂಡು
ಗೋ (೧-೫) ದಿಕ್ಕು, ಪರ್ವ
ತ, ಪೃಥ್ವಿ, ಚಂದ್ರ
(೯-೨೪) ಕಿರಣ
(೧೧-೧೮) ನೀರು, ಆಕಳು,
ಹೋರಿ
ಗೋ (೨೨-೮) ಆಕಳು, ಸರಸ್ವತಿ
(೬೩-೭೭ ಅ) ಕಣ್ಣು
ಗೋಕರ್ಣ (೧-೬) ಸರ್ಪ
ಗೋಂಟು (೨೧-೨೧) ಮೂಲೆ
ಗೋತ್ರ (೨-೭) ವಂಶ, ಪರ್ವತ
ಗೋಧಿಕಾತ್ಮಜ (೫೩-೩೦) ಉಡು
ಗೋಪ (೧-೫) ಹಿಮಾಚಲ, ವೃಷಭ,
ಮೇರು, ವಿಷ್ಣು, ಇಂದ್ರ,
ಶಿವ
ಗೋಪವಾಹನ (೧-೧) ಇಂದ್ರ, ಬ್ರ
ಹ್ಮ, ವಿಷ್ಣು
ಗೋಪಾಂಗನೆ (೫೨-೩೦) ಗೌಳಗಿತ್ತಿ
ಗೋಮಾಯು (೩೧-೧೯) ನರಿ
ಗೋಮೇದಿಕ (೩೬-೨೫) ನಸುಗೆಂಪು
ಬಣ್ಣದ ಹರಳು
ಗೋರಿಕಲ್ (೫೬-೨೪) ಬೆಣಚಿಗಲ್ಲು
ಗೋರಿಗೊಳಿಪು (೪೧-೨೫) ಯುಕ್ತಿ
ಯಿಂದ ಅಂಕಿತ ಮಾಡಿ
ಕೊಳ್ಳು
ಗೋರಿಗೊಳಿಸು (೩೪-೩೨) ಮೋಸ
ದಿಂದ ಬಲಿಯಲ್ಲಿ ಕೆಡವು
ಗೋವರ್ಧನ (೩೭-೩೦) ಕಣ್ಣುಗಳನ್ನು
ಅರಳಿಸುವ
ಗ್ರಾಸ (೬೨-೧೪) ಆಹಾರ

ಘ

ಘಾಟ (೨೬-೧೦) ಸಂಗಮ
ಘಾತ್ಯ (೪೯-೨೩) ಕೊಲೆ
ಘುಡುಘುಡಿಸು (೫೦-೧೦) ಗದ್ದರಿಸು
ಘುಸೃಣ (೩೬-೮) ಚಂದನ
ಘೋಟಾರೂಢ (೪೮-೫೧) ರಾವುತ

ಘೋಣ (೪೪-೪) ಮೂಗು

ಚ

ಚಕ್ರ (೩೭-೩೦) ಜನಸಮೂಹ
(೪೧-೫೫) ಸೇನೆ
(೪೫-೫೦) ಆಕಾಶ, ಜಕ್ಕವಕ್ಕಿ
ಚಕ್ರಿ (೨೬-೧) ಸರ್ಪ
ಚಕ್ಷುಃಶ್ರವ (೧-೩) ಸರ್ಪ
ಚಚ್ಚರ (೧೦-೧೬) ಜಾಗರೂಕತೆ
ಚಂಚರೀಕ (೩೪-೨೦) ತುಂಬಿ, ಭ್ರಮರ
ಚಟುಲ (೪೩-೩೧) ಸ್ಫುರಿಸುವ
(೫೦-೫೧) ಸುಂದರ
ಚಡಾಳಿಸು (೩೧-೬) ಹೆಚ್ಚಾಗು
ಚಡಾಳ್ಸೈಸು (೪೯-೨೧) ಏರಿಸು
ಚಂಡ (೫೦-೪೪) ವಿಶೇಷ
ಚಂದ್ರ (ದ್ಭ - ಸಿಂದೂರ) (೩೭-೨೪) ಕುಂಕುಮ
ಚಂದ್ರಕಿ (೩೭-೨೪) ನವಿಲು
ಚಂದ್ರಗಾವಿ (೪೫-೧೯) ಕೆಂಪುಸೀರೆ
ಚಮರ (೩೫-೫) ಚೌರಿ
ಚಮ್ಮಟಿಗೆ (ದ್ಭ - ಚರ್ಮಯಷ್ಟಿಕಾ) (೪೧-೪೨) ಬಾರಕೋಲು
ಚಂಬಕ (೫-೭) ಒಂದು ತರದ ಡೊಳ್ಳು
ಚರ (೩-೧೦) ಅರಸಾಳ್
ಚರು (೨೦-೧೮) ಪಾತ್ರೆ
(೫೭-೩೬) ಊಟ
ಚಲ್ಲವಡಿ (೩೧-೪೬) ಚದರಿಸು, ಚಲ್ಲಾಪಿಲ್ಲಿ ಮಾಡು
ಚಷಕ (೧೦-೭೧) ಬಟ್ಟಲು
ಚಾಟಿ (೫೬-೨೬) ಬಾರಕೋಲು
ಚಾಟು (೪೮-೫೦) ಆಶ್ರಯ
ಚಾಟುಗೊಳ್ಳು (೫೦-೧೬) ಮರೆಮಾಡಿಕೊಳ್ಳು
ಚಾರಣ (೩೭-೭) ಹೊಗಳುವವ, ಭಟ್ಟಂಗಿ
ಚಾರಿ (೨೩-೩೮) ಹಂಚಿಕೆ
ಚಾರಿಪರಿ (೪೮-೫೨) ಯುಕ್ತಿಯನ್ನು ಸಾಧಿಸು
ಚಾರಿವರಿ (೨೧-೨೨) ಹಂಚಿಕೆಹಾಕು
ಚಾವಡಿ (೪೫-೨೬) ಮಂಟಪ
ಚಾಳಂಕಿ (೩೫-೭) ಒಂದು ಜಾತಿಯ ಪಕ್ಷಿ
ಚಿಗುಳಿದುಳಿ (೨೮-೨೪) ಜಬ್ಬಾಗುವಂತೆ ತುಳಿ
ಚಿಚ್ಛಕ್ತಿ (೧೨-೧೦) ಜ್ಞಾನಶಕ್ತಿ
ಚಿತ್ (೩೨-೧) ಜ್ಞಾನ
ಚಿತ್ತೈಸು (೭-೧೭) ಸಮಾಚಾರ ತಕ್ಕೊಳ್ಳು, ಕೇಳು
ಚಿನಕಡಿ (೪೦-೩೧) ಸಣ್ಣ ಸಣ್ಣ ತುಣುಕು
ಚಿನಿಖಂಡ (೫೬-೪೨) ಸಣ್ಣ ಚೂರು
ಚುಬುಕ (೧೯-೪) ಗದ್ದ
ಚೂಚುಕ (೪-೧೧) ಕುಚಾಗ್ರ
ಚೂಡ (೧೩-೧) ಶಿಖೆ
ಚೂಣಿ (೧೬-೧೧) ಮುಂಭಾಗ
ಚೂರ್ಣ (೧೦-೨೪) ಚಂದನದ ಪುಡಿ
ಚೂಳಿ (೩೫-೧೨) ಮುಂಭಾಗ
ಚೆಚ್ಚರಂ (೩೨-೧೦) ಶೀಘ್ರವಾಗಿ
ಚೇಗೆಯಾಗು (೧೨-೨೦) ಹುಟ್ಟು
ಚೇತ್ರ (ದ್ಭ) (೨೯-೮) ಕ್ಷೇತ್ರ
ಚೋದ್ಯ (೪೮-೧೪) ಆಶ್ಚರ್ಯ
ಚೋಹ (ದ್ಭ-ಯೋಗ) (೧೮-೧೩) ಜೋಹ, ಸೋಗು

ಛ

ಛಲ (೪೭-೩೬) ದಿಟ್ಟ
ಛರ್ದಿ (೫೮-೨೪) ಸರ್ದಿ
ಛಾನಸ (ದ್ಭ-ಛಾಂದಸ) ವಿಲಂಬ

ಜ

ಜಕ್ಕಲಿಸು (೫೬-೨೭) ಕಟ್ಟಾಡಿಸು
ಜಗುಳ್ (೩೭-೧೨) ಜಾರು
(೪೯-೧೨) ಉದುರಿ ಬೀಳು
ಜಘನ (೫೩-೧೨) ತಿಗ
ಜಂಘಾ (೧೨-೧೨)
ಜಂಘಾಕಾಂಡ (೩೭-೧೦) } ಮೊಳಕಾಲಿಂದ ಹರಡಿನ ವರೆಗಿನ ಭಾಗ, ಕಿರುದೊಡೆ
ಜಟೆ (೩೪-೧೪) ಜೋತಾಡುವ ಬೇರುಳ್ಳ, ಜಡೆಯುಳ್ಳ
ಜಡಜಜ (೫೩-೩೫) ಬ್ರಹ್ಮ
ಜಡಿ (೩೦-೩೪) ದೂಷಿಸು, ಬೆದರಿಸು
ಜತನ (ದ್ಭ-ಯತ್ನ) (೬೨-೨೨) ಎಚ್ಚರಿಕೆ
ಜತ್ತ (ದ್ಭ-ಯತ್ತ) (೬೨-೨೨) ಪ್ರಯತ್ನ
ಜಂಬಾಲ (೩೯-೩೮) ರಾಡಿ
ಜಂಭ (೧೦-೨೦) ಲಿಂಬೆ
ಜರಾಯು (೫೮-೪) ಗರ್ಭಕೋಶ
ಜರ್ಜರಿಸು (೪೭-೨೦) ಧೈರ್ಯಗುಂದು
ಜವ (೫೦-೩೭) ವೇಗ
ಜವಳಿ (೧೧-೪೫) ವಸ್ತ್ರ
ಜವಾದಿ (೩೬-೨೯) ಕಸ್ತೂರಿ
ಜವಾದಿಬೆಕ್ಕು (೫೩-೩೦) ಪುಣುಗು ಬೆಕ್ಕು
ಜಾಜು (೪೦-೨೧) ಕೆಂಪು
ಜಾತವೇದ (೧೦-೧) ಅಗ್ನಿ
ಜಾತಿ (೫೩-೧೬) ಚೆಳ್ಳುಗಿಡ, ಮಲ್ಲಿಗೆಬಳ್ಳಿ, ವರ್ಣ
ಜಾತಿವಳ (೪೭-೪೩) ಜಾತಿವಂತ
ಜಾನು (೧೨-೧೨) ಮೊಳಕಾಲು
ಜಾವ (೩೮-೧೨) ಪ್ರಹರ
ಜಾಳಂಧರ (೩೮-೯) ಕಿಡಕಿ
ಜಾಳಿಸು (೩೯-೩೬) ನಡುಗು
(೪೪-೩೧) ತಿರಸ್ಕರಿಸು
ಜೀಮೂತ (೬೩-೭೭ ಅ) ಪರ್ವತ
ಜೀವ (೨೧-೯) ಬೃಹಸ್ಪತಿ
ಜೀವನ (೪೫-೬೧) ನೀರು
ಜುಂಜು (೩೧-೯) ಕೆಂಗೂದಲು
ಜುಂಜುಳ್ಳಿ (೫೩-೨೨) ಗಿಡ್ಡ ಮತ್ತು ಸುತ್ತಿಕೊಂಡ
ಜುಣುಗು (೨೫-೩೩) ಹಿಂಜರಿ
ಜೂಳೆಯ (೩೭-೯) ತಿಲಕ
ಜೇವಡೆ (೫೦-೪೦) ಹೆದೆಯನ್ನು ಜಗ್ಗು
ಜೊತ್ತು (೩೭-೨೩) ಸಾಲು
(೪೨-೧೫) ಜೋಡಿ, ಸಮೂಹ
ಜೊನ್ನ (ದ್ಭ-ಜ್ಯೋತ್ಸ್ನ) (೬೧-೭೧) ಬೆಳದಿಂಗಳು
ಜೊಂಪಿಪು (೪೬-೬) ಗಾಬರಿಯಾಗು
ಜೋಕೆ (೪೨-೨೧) ವೈಭವ
ಜೋಡು (೪೭-೪೪) ಕವಚ, ಅಂಗರಕ್ಷ
ಜೋದ (ದ್ಭ) (೧೬-೧೪) ಯೋಧ
ಜೋಲಿ (೫೫-೨೭) ತಡ
ಜೋಹ (ದ್ಭ-ಯೋಗ) (೪೩-೪೫) ವೇಷ
ಜೋಳಿ (ಜವಳಿ) (೩೯-೧೦) ಜೋಡು

ಝ

ಝುಡಿತೆಯಿಂದ (ದ್ಭ-ಝುಟಿತಿ) (೫೩-೨೬) ಕೂಡಲೆ

ಝುಲ್ಲಿ (೩೫-೬) ಗೊಂಡೆಗಳ ಸಾಲು

ಠ

ಠಕ್ಕೆ (೩೫-೮) ಧ್ವಜ
ಠೌಳಿ (೧೪-೪) ಮೋಸ
ಠೌಳಿಗ (೯-೧೮) ಠಕ್ಕ

ಡ

ಡಗೆ (೪೦-೧೫) ಶಕೆ
ಡಮಾನ (೫-೭) ಜೋಡುಡೊಳ್ಳು
ಡವುಡೆ (೫-೭) ಸಣ್ಣ ಡೊಳ್ಳು
ಡಾವರಿಸು (೪೯-೪) ಒಂದೇ ಸವನೆ ತಿರುಗಿಸು
ಡಾಳ (೩೭-೨೩) ಕಳೆ, ಹೊಳಪು
ಡಾಳಿ (೧೦-೬೪) ಲಾವಣ್ಯ
ಡಾಳಿಸು (೩೭-೨೭) ಬೀಸು
ಡಿಂಗರಿಗ (೫೨-೨೪) ಸೇವಕ
ಡಿಂಬ (೬-೨೩) ದೇಹ
ಡೆಂಕಣಿ (೪೨-೧೧) ಧ್ವಜಸ್ತಂಭ
ಡೊಕ್ಕರ (ಮರಾಠಿ-ಠೋಕರ) (೧೬-೩೯) ಗುದ್ದು
ಡೋರು (೪೯-೨೨) ಡೊಗರು

ಢ

ಢಕ್ಕೆ (೧೬-೧೩) ಜೋಡುಡೊಳ್ಳು
ಢಗೆ (೪೪-೬೧) ಜಳ

ತ

ತಕ್ಕೈ (೧೧-೨೩) ಆಲಿಂಗನ
(೨೬-೭) ಸಮೂಹ
ತಗರ್ (೩೦-೬) ಟಗರು
ತಗುಳ್ (೫೦-೩೧) ಮೈಮೇಲೆ ಬೀಳು, ಹಿಂದಕ್ಕೆ ಸರಿಸು
ತಟಿತ್ (೫೩-೩೫) ಮಿಂಚು
ತಟ್ಟುಗಿ (೪೦-೨೦) ಚೆನ್ನಾಗಿ ಒಡೆ
ತಟ್ಟುಚ್ಚು (೨೬-೧೬) ಪಾರಾಗಿ ಹೋಗು
ತಡಬಡಿಸು (೩೭-೩೭) ಹೆಚ್ಚು ಕಡಿಮೆಯಾಗು
ತಡವರಿಸು (೧೦-೭೭) ತಪ್ಪು ಹೆಜ್ಜೆಯಿಡು
ತಡವು (೯-೧೬) ಮುಟ್ಟಿಕೊಳ್ಳು
ತಡಹು (೪೧-೩) ಚಪ್ಪರಿಸು
ತಡಿಕೆ (೫೩-೨೯) ಎಲೆಹುಲ್ಲುಗಳ ತಟ್ಟಿ
ತಡಿಕೆವಲೆ (೫೩-೨೪) ಚೌಕಟ್ಟಿನ ಜಾಳಿಗೆ
ತಡೆ (ದೃ-ತಟಾ) (೪೫-೨೪) ದಂಡೆ
ತಡೆಗಡಿ (೫೦-೪೨) ಕಡಿ, ಅಡ್ಡಕಡಿ
ತಂಡ (೧೬-೨೨) ಸಮೂಹ
ತತಿ (೪೮-೮) ಗುಂಪು
ತತ್ತ (ಧಾ-ತರು) (೫೫-೩೮) ತೊಡಗಿದ, ಉಂಟಾದ
ತತ್ತರಂದರಿ (೫೦-೩೯) ಕಡಿದು ಗೊಂದಲವೆಬ್ಬಿಸು
ತದೆ (೩೮-೨೪) ಸದೆ, ಹೊಡೆ
ತನತು (೧೯-೩೬) ತನ್ನ
ತನಿ (೩-೨೪) ಸಮೃದ್ಧ, ಸಿಹಿ
ತನು (೩೫-೧೦) ಸಣ್ಣ
ತಂತ್ರ (೫೧-೨೮) ಸಿದ್ಧಾಂತ
ತಬ್ಬಿಬ್ಬುಗೊಳ್ (೪೬-೨೦) ಭ್ರಮೆಗೊಳ್ಳು
ತಬ್ಬಿಬ್ಬೆಸೆ (೪೯-೨೪) ಎಬಡತಬಡಾಗು
ತಬ್ಬು (೫೦-೧೫) ಹಿಡುಕೊಳ್ಳು
ತಮ್ಮಟ (೧೬-೧೩) ಒಂದು ವಾದ್ಯ

ತಮ್ಮಡಿ (೫೩-೪೩) ದೇವರ ಸೇವಕ
ತಂಬಟ (೫-೭) ತಪಟೆ
ತಂಬಿಸು (೫-೨೬) ತಡೆ
ತರಕ್ಷು (೧೮-೧) ಹುಲಿ
ತರಗೆಲೆ (೩೬-೫) ಒಣಗಿದ ಎಲೆ
ತರಣಿ (೫೧-೨೨) ಸೂರ್ಯ
ತರಣಿಜ (೫೬-೪೭) ಯಮ
ತರಹರ (೯-೧೩) ತಾಳ್ಮೆ
ತರಹರಿಸು (೭-೨೩) ಸಮಾಧಾನದಿಂದ ತಾಳು, ಸಹಿಸು
ತರಳ (೧೬-೧) ಸೂಕ್ಷ್ಮ
ತರಿಸಂದು (ಧಾ-ತರಿಸಲ್) (೧೬-೪೨) ನಿಶ್ಚಯವಾಗಿ
ತಲೆಪಡು (೩೮-೩೫) ಉಂಟಾಗು
ತಲೆವಣಿ (೫೩-೩೩) ತಲೆಯೊಳಗಿನ ಮಣಿ
ತಲ್ಲಣ (೭-೨೬) ಭಯ, ಬೆದರಿಕೆ
ತಲ್ಲಣಿಸು (೧೦-೩೩) ಗಾಬರಿಯಾಗು
ತವಕ (೩೫-೧೧) ಉತ್ಸುಕತೆ, ಅವಸರ
ತವಕಿಸು (೨೪-೨) ತೀವ್ರಬರು
(೪೮-೩೭) ಉತ್ಸಾಹಗೊಳ್ಳು
ತವನಿಧಿ (೫೭-೧೯) ತಪದಿಂದ ಪಡೆದ ನಿಧಿ
ತವಿಸು (೪೧-೩೬) ಕುಂದಿಸು, ನಷ್ಟಪಡಿಸು
ತವೆ (೫೦-೫೪) ಹೆಚ್ಚಾಗಿ, ಪೂರ್ಣವಾಗಿ
ತಸ್ಕರ (೧೦-೧೭) ಕಳವು
ತಳ (೩೭-೧೦) ಅಂಗಾಲು
ತಳತಂತ್ರ (೫೧-೨) ಒಬ್ಬನ ಅಧಿಪತ್ಯದಲ್ಲರುವ ದಂಡು
ತಳಪು (೩೫-೧೩) ಹೊಳಪು
ತಳರ್ (೩೫-೭) ಸಾಗು, ಚಲಿಸು
ತಳವಾರ (ದ್ಭ-ಸ್ಥಳವಾರ) (೪೮-೩೪) ಕಾವಲುಗಾರ
ತಳಿ (೧೯-೯) ಸಿಂಪಡಿಸು
(೪೨-೨೪) ಜನಾಂಗ?
(೪೨-೨೭) ಆಶ್ರಯ, ಸ್ಥಾನ
(೫೦-೧೨) ಬೇಲಿ, ಪಾಳೆಯ
ತಳುವು (೩-೨೮) ತಡ, ವಿಲಂಬ
ತಳೆ (೧೯-೨೩) ಛತ್ರ
(೩೫-೩) ಧರಿಸು
ತಳ್ಕಿಸು (೧೯-೩೨) ಆಲಿಂಗಿಸು
ತಳ್ಕು (೩೭-೬೮) ಲೇಪಿಸು
ತಳ್ಗು (೨೮-೨೬) ಧೈರ್ಯಗುಂದು
ತಾಟಡಕೆ (೩೮-೧೭) ತಾಕಲಾಡುವ ಅಡಕೆ
ತಾಟಂಕ (೧೬-೧) ಕರ್ಣಾಭರಣ
ತಾಟಿಸು (೧೦-೬೧) ಸಂಯೋಗಿಸು
ತಾಂಡವ (೫೦-೪೬) ಕುಣಿತ
ತಾಪಣೆ (ದ್ಭ-ಸ್ಥಾಪನೆ) (೪೮-೫೧) ಇರುವಿಕೆ
ತಾಮುಸಂಗೆಯ್ (೫೦-೪೧) ತಡಮಾಡು
ತಾಯ್ಮಳಲ್ (೨೧-೫) ತಳದಲ್ಲಿರುವ ಉಸುಕು
ತಾರ್ (೪೫-೯) ಪ್ರವಾಹ ಕಡಿಮೆಯಾಗು, ಒಣಗು
ತಾರ (೩೮-೨೬) ಉತ್ತಮ
ತಾರಕಾ (೩೭-೧೯) ನಕ್ಷತ್ರ, ಕಣ್ಣಗೊಂಬೆ
ತಾರಾಧ್ವ (೩೧-೧೫) ಆಕಾಶ
ತಾರಾಪಥ (೫೨-೧೬) ಆಕಾಶ
ತಾರುಥ(ತ)ಟ್ಟು (೪೩ ೨೭) ಚಲ್ಲಾಪಿಲ್ಲಿ

ತಾರೆ (೨೦-೫೫) ಮುತ್ತು
ತಾಲವೃಂತ (೭೯-೩೯) ಬೀಸಣಿಗೆ
ತಾಳ (೪೭-೩೪) ಹೊಡೆತ
ತಿಗುರು (೧೯-೨೪) ತೊಡೆ, ಹಚ್ಚು
(೭೮-೩೪) ಅನುಲೇಪನ
ತಿಟ್ಟೆ (೩೭-೩೩) ಆಸನ
ತಿಟ್ಟೆ (೩೭-೪೨) ದಿನ್ನಿ
ತಿಣ್ಣ (೧೦-೫೯) ವಿಶೇಷ
(೧೯-೨೬) ದೊಡ್ಡ
ತಿತ್ತಿ (೪೨-೪೩) ಚೀಲ
ತಿದಿ (೫೩-೩೩) ತೊಗಲು
ತಿಂತಿಣಿ (೧೧-೨೨) ಗೊಂಚಲು
(೫೧-೫) ಸಮೂಹ
ತಿಮಿ (೪೯-೩೦) ಮೀನ
ತಿಮಿರ (೩೭-೧) ಕತ್ತಲೆ
ತಿರು (೩೫-೬) ಬಿಲ್ಲಿನ ದಾರ, ಹೆದೆ
ತಿರುಪಿಡು (೪೦-೨೦) ತಿರುಗಿಸು
ತಿಸುಳ (೧೯-೩೪) ತ್ರಿಶೂಲ
ತಿಳಿಪು (೫೦-೮) ತಿಳಿಸು, ಶಾಂತ ಪಡಿಸು
ತೀ (೪೩-೨೩) ಹರಿದು ಹೋಗು, ಸುಡು
ತೀಡು (೪೫-೫೯) ಚೇಷ್ಟೆಮಾಡು
(೫೦-೩೪) ಜಗ್ಗು
ತೀಬ್ರ (೭೯-೧೭) ತೀವ್ರ, ಹೆಚ್ಚಿನ
ತೀವು (೩೫-೩) ತುಂಬಿಕೊಳ್ಳು
ತುಡು (೪೧-೪೯) ತೊಡು
(೪೩-೧೬) ಹೂಡು
ತುಡುಕು (೧೬-೩೦) ಗಟ್ಟಿಯಾಗಿ ಹಿಡಿ
(೨೪-೧೪) ದೂಡು
ತುಡುಂಕು (೫೩-೨೬) ಗಟ್ಟಿಯಾಗಿ ಹಿಡಿ

ತುತ್ತ (೪೯-೯೮) ತುದಿ
ತುತ್ತು (೪೬-೭೯) ನುಂಗು
ತುಮುರಾಗು (೪೪-೧೩) ಚೂರಾಗು
ತುರು (೧೦-೪೬) ಓಡುವ
ತುರುಕಾಣ್ಯ (೧-೧೯) ತುರುಕರ ದೇಶ
ತುರುಗಲ (೩-೧೩) ದಟ್ಟಣೆ
ತುರುಗು (೧೬-೫) ಗುಂಪಾಗು
ತುರುಗೆವೆ (೪-೧೧) ದಟ್ಟ ಕೂದಲಿನ ಎವೆ
ತುರುವಟ್ಟಿ (೭೯-೪೨) ದನದ ಹಕ್ಕೆ
ತುಹಿನಗಿರಿ (೩೭-೪) ಹಿಮಾಚಲ
ತುಳುಕು (೪೫-೫೪) ಸೇಚನ ಮಾಡು
ತುಳ್ಕು (೨೪-೧೭) ಬಾಣಹೊಡೆ
(೪೯-೪೧) ಸೇಚನ ಮಾಡು
ತೂಗು (೨೩-೮) ಜಗ್ಗಾಡು
ತೂಂತರು (ಧಾ-ತೂರು) (೪೨-೩೬) ಒಳಗೆ ಹೊಗಿಸಿದರು
ತೂಪಿರಿ (೫-೧೯) ಅನಿಷ್ಟನಿವಾರಣೆಗಾಗಿ ಊದು
ತೂರ್ಯತ್ರಯ (೬-೫೩) ಗೀತ ನಾಟ್ಯ ವಾದ್ಯಗಳ ಸಮ್ಮೇಲನ
ತೂಳ್(೪-೯) ಹೊಡೆದಟ್ಟು, ಬೆನ್ನಟ್ಟು
ತೂಳ (೩೧-೫೫) ಕ್ಷೋಭ
ತೂಳುವರೆ (೩೮-೨೨) ರಣದುಂದುಭಿ
ತೆಗಹು (೧೯-೩೫) ಧರಿಸೋಣ
ತೆಂಕು (೩೧-೩೨) ತೇಲಾಡು
ತೆತ್ತಿಗ (೫೩-೪೧) ಆಳು, ಗೆಳೆಯ
ತೆನೆ (೧೧-೨೮) ಮೇಲ್ಭಾಗ
ತೆರಪು (೪೯-೪೯) ಅವಕಾಶ
ತೆರಳ್ (೫೦-೩೬) ಹಿಂಜರಿ
ತೆರಳ್ಕೆ (೨-೧೭) ಸಮೂಹ
ತೆರಳ್ಚು (೪೯-೫೬) ನಡುಗಿಸು

ತೆರು (೧೦-೪೬) ಕೊಡು
ತೆರೆ (೬೨-೫೩) ಪಡದೆ
ತೆವರ್ (೪೮-೫೬) ದಿನ್ನಿ
ತೆವರು (೩೧-೨೮) ಇಲ್ಲದಂತೆ ಮಾಡು
(೩೧-೫೦) ತಿಕ್ಕು
(೪೫-೩೯) ತಿರಸ್ಕರಿಸು
ತೆಳ್ವಸುರ (೫೩-೧೨) ತೆಳ್ಳನ್ನ ಹೊಟ್ಟೆ
ತೇಜಿ (೫೦-೧೪) ಕುದುರೆ
ತೇರ್ರೈಸು (೪೫-೨೨) ತಿರಿಗಿ ಬರು
ತೊಕ್ಕು (೪-೨೭) ಅಂಶ
ತೊಟ್ಟು (೩೫-೨೫) ಹನಿ
ತೊಡ (೫೦-೨೩) ಆಭರಣ, ಹೊದ್ದಿಕೆ
ತೊಡಚು (೫೩-೫೧) ಕಟ್ಟು, ಬಾಣಕ್ಕೆ ಹೂಡು
ತೊಡರ್ (೩೧-೯) ಬಿರುದು
(೩೩-೨೧) ಕಟ್ಟು
ತೊಡೆ (೯-೧೬) ಜಾಡಿಸು
ತೊಣೆ (೪೩-೧೯) ಬತ್ತಳಿಕೆ
ತೋಡು (೪೫-೧೦) ಮಾತಾಡು
ತೊನೆ (೧೧-೧೫) ಅಲ್ಲಾಡಿಸು
(೪೨-೨೨) ಹೋದಾಡು
ತೋರಳೆ (೩೨-೨೦) ಗುಲ್ಮ, ಪ್ಲೀಹ
ತೊರೆ (೧೦-೬೧) ಪ್ರವಾಹ
(೨೪-೭) ತ್ಯಾಗಮಾಡು
(೫೨-೪೦) ನದಿ
ತೊಳಪ (೫೩-೧೨) ಹೊಳೆಯುವ
ತೊಳಲು (೪೧-೨೦) ತಿರುಗು
(೪೬-೨೦) ಭ್ರಮೆಗೊಳ್ಳು
ತೋಟಿಯಾಟ (೧೦-೯) ಜಗಳಾಟ
ತೋಮರ (೩೮-೩೮) ಗದೆ, ಬರ್ಚಿ
ತೋರ (೩೭-೪೨) ದೊಡ್ಡ
ತೋರಾಯುದ (೩೨-೮) ಜೋರಿನ

ತ್ವಿಟ್ (೨೯-೩೬) ಪ್ರಕಾಶ

ಥ

ಥಟ್ಟು (೨೫-೧೧) ಸೇನೆ, ಸಮೂಹ

ದ

ದಕ್ಷಿಣ (೧೦-೪೮) ಸರಳ ಮನಸಿನವ
ದಘ್ನ (೪೫-೫೪) ಮಟ್ಟಿಗೆ
ದಟ್ಟಿಸು (೪೨-೮) ಬೆದರಿಸು
ದಟ್ಟೈಸು (ದಟ್ಟು-ಸಮೂಹ) (೩೧-೪೧) ಕೂಡು
ದಡ (೪೯-೫೦) ನಡುಗು
ದಡಿಗ (೩೨-೩೫) ಗದೆಯನ್ನು ಹಿಡಿದ
ದಡ್ಡಕ್ಕರ (೧-೩೧) ಒತ್ತಕ್ಷರ
ದಂಡಿ (೫೬-೫೧) ಪ್ರಭಾವ
ದಂಡಿಗೆ (ದ್ಭ-ದಂಡಿಕಾ) (೩೭-೫) ಪಲ್ಲಕ್ಕಿ
(೫೦-೪೮) ವೀಣೆ
(೬೩-೧೫) ಕೋಲು
ದಧಿ (೫೧-೨೨) ಮೊಸರು
ದನುಜ (೫೦-೪೫) ರಾಕ್ಷಸ
ದಂತಾವಳ (೧೬-೮) ಆನೆ
ದಂದುಗ (೩-೧೫) ಕಷ್ಟ
(೩೬-೫) (ತಿನ್ನುವ) ಕಷ್ಟ
ದಮ್ಮಯ್ಯ (ದ್ಭ - ಧರ್ಮ+ಅಯ್ಯ) (೫೬-೫೮) ಧರ್ಮಿಷ್ಠ
ದಂಭೋಳಿ (೭-೧) ವಜ್ರಾಯುಧ
ದರಿ (೫೩-೭) ಕಂದರ, ತಗ್ಗು ಪ್ರದೇಶ
ದರ್ಪ (೧೦-೬೬) ನೋವು ಮಾಡುವಿಕೆ

ದರ್ಪ (೪೫-೪೭) ವೇಗ, ಅಬ್ಬರ

ದರ್ಪಕ (೪೩-೧೩) ಕಾಮ

ದಸಿ (೪೨-೧೧) ಚೂಪಾದ ಕೋಲು

ದಳದುಳ (೯-೫) ಬಲ್ಸೂರೆ

ದಳೆಯಿಡು (೪೮-೩೦) ಕೂಡಿಕಟ್ಟು

ದಳ್ಳುರಿ (೩೯-೧೧) ಪೇರುರಿ, ದೊಡ್ಡ ಉರಿ

ದಾಂಗುಡಿಯಿಡು (೨೦-೬)ಮೇರೆದಪ್ಪು

ದಾದಿ (ದ್ಭ-ಧಾತ್ರಿ) (೫-೪೦) ದಾಯಿ

ದಾಯ (೩-೨೯) ಸಾಲು

ದಾವ (೫೦-೧) ಕಾಳ್ಗಿಚ್ಚು

ದಾವಾನಲ (೩೫-೧೭) ಕಾಳ್ಗಿಚ್ಚು

ದಾಸಿಯಾತ್ಮಜ (೫೨-೩೧) ಕರ್ಣ

ದಾಳಿ (ದ್ಭ-ಧಾಟಿ) (೧೧-೧೨) ದೌಡು (೩೧-೧೭) ಅಬ್ಬರ

ದಿಟದೊಳ್ (೩೧-೧೪) ನಿಶ್ಚಯವಾಗಿ

ದಿಟ್ಟಿ (ದ್ಭ) (೪೪-೧೨) ದೃಷ್ಟಿ

ದಿಡ್ಡಿ (೪೨-೨೬) ಜಿಡ್ಡೀ ಬಾಗಿಲ

ದಿಂಡುಕರಿ (೨೩-೩೧) ಗರ್ವನಾಶಮಾಡು

ದಿಂಡುರುಳ್ಚು(೧೧-೧೧) ಕೊರಡಿನಂತೆ ಉರುಳಿಸು

ದಿಂಡೆ (೩೯-೩೯) ಮುಂಡ

ದಿಂಡೆಯತನ(೫೨-೩೦)ಉದ್ಧಟತನ

ದಿನಮಣಿಪುತ್ರ (೨೯-೩೯) ಯಮ

ದಿವ್ಮಿದ (೨-೨೬) ಬ್ರಾಹ್ಮಣ, ಶ್ರೇಷ್ಠ ಪುರುಷ

ದಿವ (೩೭-೧೯) ಆಕಾಶ

ದಿವಾಕರ (೧೨-೧) ಸೂರ್ಯ

ದಿವಿಜವಲ್ಲಭ (೫೦-೫೪) ಇಂದ್ರ

ದಿವೌಕಸ (೧೨-೧) ದೇವತೆ

ದೀಧಿತಿ (೩೬-೧೦) ಕಾಂತಿ

ದೀರ್ಘಿಕೆ (೧೧-೨೯) ಉದ್ದವಾದ ಕೆರೆ

ದುಕೂಲ (೩೭-೮) ವಸ್ತ್ರ

ದುಗುಡ (೩೦-೨೮) ದುಃಖ, ಚಿಂತೆ

ದುಗ್ಧ (೫೧-೨೨) ಹಾಲು

ದುಂದುಭಿ (೩೭-೪೦) ನಗಾರಿ

ದುಮ್ಮಾನ (ದ್ಭ-ದುರ್ಮಾನ) (೭-೨೫) ಮನಸಿನ ತ್ರಾಸ

ದುವ್ವಾಳಿಸು (೩೧-೫೫) ತ್ವರೆಮಾಡು

ದುಷ್ಕ (೨೯-೭) ಕೆಡಕು, ಕಷ್ಟ

ದುಷ್ಕರ (೨೮-೬) ಕೇಡು ಮಾಡುವ

ದೂಸರ್ (೧೦-೨೮) ಕಾರಣ

ದೂಸಿಗ (೪೫-೪೧) ಅರಿವೆ ಮಾರುವವ

ದೂವೆ (೧೯-೪೩) ಧೂಮ

ದೆಸೆ (೪೧-೨೯) ಗುಣ

ದೆಸೆಗಂಪು (೧೧-೨೧) ಎಲ್ಲ ಕಡೆಗಳಲ್ಲಿ ಪಸರಿಸಿದ ಸುವಾಸನೆ

ದೇವಮಾತೃಕ (೧೧-೮) ಮಳೆಯಿಂದ ಬೆಳೆವ

ದೇವಾಂಗ (೩೬-೨೭) ರೇಶ್ಮೆಯ ವಸ್ತ್ರ

ದೇಶಿ (೨-೨೯) ರಾಗದ ಹೆಸರು

ದೇಸಿ (೫೦-೪೭) ಚಂದ

ದೇಸಿವಡೆ (೨-೨೫) ಶೋಭಿಸು

ದೇಸೆ (೪೧-೪೬) ಸೌಂದರ್ಯ

ದೊದ್ದೆಗ (೨೬-೨೨) ಸೈನಿಕ

ದೊಂದೆ (೪೨-೧೧) ಪಂಜು, ಪಂಜುಗಳ ಸಲುವಾಗಿ ಉಪಯೋಗಿಸುವ ಕಟ್ಟಿಗಗಳ ಕಟ್ಟು

ದೊರೆಯ (೪೩-೧೩) ಸರಿಯಾದ

ದೋಷಾಕರ (೧೦-೧೬) ಚಂದ್ರ, ಪಾಪಿಷ್ಠ

ದ್ಯೂತಕೇಳಿ (೫೩-೨) ಲೆತ್ತದ ಆಟ
ದ್ರುತದೊಳ್ (೫೧-೧೫) ತೀವ್ರವಾಗಿ.
ದ್ರೋಣ (೧೧-೩) ಬಾನಿ, ದೊನ್ನೆ ತುಂಬೆಯ ಗಿಡ
ದ್ವಿಜ (೩೭-೩೯) ಬ್ರಾಹ್ಮಣ, ನಕ್ಷತ್ರ
(೪೫-೪೯) ಪಕ್ಷಿ, ಸರ್ಪ
(೪೫-೫೦) ಸರ್ಪ, ಚಂದ್ರ, ಪಕ್ಷಿ
ದ್ವಿಷ್ (೨೯-೩೬) ಶತ್ರು

ಧ

ಧನಂಜಯ (೧೨-೧) ಅಗ್ನಿ
ಧನದದಿಕ್ಕು (೫೯-೨೭) ಉತ್ತರ
ಧನ್ವಂತ್ರಿ (೨೨-೨೫) ದೇವತೆಗಳ ವೈದ್ಯ
ಧನ್ವಿ (೫೩-೧೫) ಧನುರ್ಧಾರಿ, ಗಿಡಮೂಲಿಕೆಗಳು
ಧರ (೧೧-೬) ಪರ್ವತ
ಧರ್ವ (೪೯-೫೨) ಬಿಲ್ಲು
ಧಾನುಷ್ಕ (೬-೪೫) ಬಿಲ್ಲುಳ್ಳವ
ಧಾಮ (೧-೬) ನಿವಾಸ
ಧಾರಾ (೩೫-೯) ಕುದುರೆಯ ವಿಶಿಷ್ಟ ಗತಿ
ಧುರ (೫೦-೧) ಕಾಳಗ
ಧುರಾವನಿ (೫೩-೫೬) ರಣಾಂಗಣ
ಧೂಳಿಸು (೫೦-೪೭) ಧರಿಸು
ಧೇನು (೧೧-೧೮) ಭೂಮಿ, ಒಂದು ಜಾತಿಯ ಆಕಳು
ಧ್ವಾನ (೩೭-೪೦) ದನಿ

ನ

ನಡುಪ (೪೯-೨೪) ನಡುಗುವ
ನನೆ (೩೫-೬) ಮೊಗ್ಗೆ
ನಮಿತ (೫೭-೧೭) ನಮ್ರ
ನಂಬುಗೆಯಿಡು(೫೩-೮) ವಚನಕೊಡು
ನರ (೪೧-೧) ಅರ್ಜುನ
ನಲವು (೩೧-೩೭) ಸಂತೋಷ
ನವಿರ್ (೫೩-೨೨) ಕೂದಲು
ನವೆಸು (೫-೩) ಕ್ಷೀಣಮಾಡು
ನವ್ಯ (೫೨-೪೩) ಹೊಸ
ನಸುವಾತು (೫೦-೩) ಅಲ್ಪ ಭಾಷಣ
ನಸೆ (೧೦-೭೫) ಕಾಮುಚೇಷ್ಟೆ
ನಳ (೪೫-೪೭) ಗಲಗು
ನಾಗ (೫೩-೧೫) ಸುರಗಿ, ನಾಗರು
ನಾಗಲತೆ (೧೧-೨೩) ಎಲೆಬಳ್ಳಿ
ನಾಗವಲ್ಲೀದಳ (೩೭-೩೬) ವೀಳ್ಯದೆಲೆ
ನಾಡಾಡಿ (೧-೧೪) ಸಾಮಾನ್ಯ
ನಾಯಕನರಕ (೫೬-೪೪) ದೊಡ್ಡ ನರಕ
ನಾರಿ (೧೦-೫೦) ಬಿಲ್ಲಿನ ಹೆದೆ
ನಾಳಿವಿಲ್ (೪೧-೫೦) ಕೊಳವಿಯಿಂದ ಮಾಡಿದ ಬಿಲ್ಲು
ನಿಕುರುಂಬ (೫೩-೧೫) ಸಮೂಹ
ನಿಕ್ಷೇಪ (೩೩-೧) ಹೂಳಿಟ್ಟ ದ್ರವ್ಯ
ನಿಗಮ (೪೮-೭) ಪಟ್ಟಣ
ನಿಗಳ (೪೧-೫೦) ಆನೆಯನ್ನು ಕಟ್ಟುವ ಸರಪಳಿ
ನಿಗುರ್ (೩೭-೩೨) ಪಸರಿಸು
ನಿಗ್ಗವ (೨೮-೧೦) ಗಜದಂತ
ನಿಚ್ಚ (೩೬-೨೩) ಅವಶ್ಯಕ
ನಿಚ್ಚಟ (ದ್ಭ-ನಿಃಶಠ) (೪೮-೨೭) ಸರಳ ಮನಸ್ಸು
ನಿಚ್ಚಳ (೩೭-೪೪) ನಿಶ್ಚಲ
ನಿಟಲ+ಅಂಬಕ (೫೦-೫೧) ಹಣೆಗಣ್ಣುಳ್ಳವ

ನಿಟ್ಟೆಲುವ (೫೨-೨೭) ಬೆನ್ನೆಲುವ
ನಿಡಿ (೩೭-೪೬) ಉದ್ದ
ನಿಡಿದು (೫೩-೩೫) ನೆಟ್ಟಗೆ
ನಿಡುಗೋಲ್ (೫೩-೧೩) ಉದ್ದ ಕೋಲು, ಉದ್ದ ಬಾಣ
ನಿದಾಘ (೧೬-೧೧) ಬೇಸಿಗೆ, ಕಾವು
ನಿಧಾನ (೩೭-೨೫) ಸ್ಥಾನ, ನೆಲೆ
ನಿಧಾನಿಸು (೫-೨೫) ವಿಚಾರಿಸು
ನಿಬ್ಬರ (ದ್ಭ-ನಿರ್ಭರ) (೧೦-೧೩) ಅತಿಶಯ
(೫೦-೪೨) ಹೆಚ್ಚಿನ ವೇಗ
ನಿಭ (೫೩-೫೩) ಸರಿಯಾದ, ಹೋಲುವ
ನಿಮಿರ್ (೪೫-೩೮) ಉದ್ದಾಗು
ನಿಮಿಷ (೧೦-೪೨) ರೆಪ್ಪೆ ಬಡಿಯುವಿಕೆ
ನಿಮ್ನ (೪-೧೩) ತಗ್ಗು
ನಿಮ್ನಗಾ (೧೦-೫೬) ನದಿ
ನಿರಂಜನ (೧೦-೧೨) ಕೃತ್ರಿಮರಹಿತತ್ವ
ನಿರಯ (೧೪-೨೪) ನರಕ
ನಿರವಿಸು (ದ್ಭ-ನಿರೂಪಿಸು) (೫೩-೫) ಹೇಳಿಕೊಡು
ನಿರಾವರಣ (೩೬-೧೧) ಮಾಯಾಚ್ಛಾದನವಿಲ್ಲದವನು
ನಿರುತಿವಾಹನ (೩೦-೬) ನೈರುತ್ಯ
ನಿರ್ಘೋಷ (೩೭-೭) ಸಪ್ಪಳ
ನಿರ್ಧೂತ (೨೪-೯) ನಾಶಪಡಿಸಿದ
ನಿರ್ವಿಸ್ತರಣ (೩೭-೧) ಸೂಕ್ಷ್ಮ
ನಿಲವು (೪೯-೫೫) ನಿಂತ ಸ್ಥಳ
ನಿಲಿಂಪ (೨೫-೧೫) ದೇವತೆ
ನಿಲ್ಕಡೆ (೪೩-೪೧) ವಿಶ್ರಾಂತಿ
ನಿಷ್ಕೃತಿ (೪೬-೨೧) ಉಪಾಯ
ನಿಃಪ್ರತ್ಯೂಹ (೪೧-೨೩) ಆತಂಕವಿಲ್ಲದ
ನಿಸ್ವನ (೩೫-೧೨) ಧ್ವನಿ
ನಿಸ್ಸಾಳ (೫-೭) ಡೊಳ್ಳು
ನಿಳಯ (೫೩-೧೭) ಆವಾಸ
ನೀರ (೧೯-೩೭) ಸುಂದರ ಪುರುಷ
ನೀರಾಜನ (೫೧-೨೨) ಆರತಿ
ನೀಲಕಂಠ (೩೮-೨೨) ನವಿಲು
ನೀಲಲೋಹಿತ (೩೭-೩೧) ಧೂಮ್ರ ವರ್ಣ, ಶಿವ
ನೀಸು (ನಯಿಸು) (೧೮-೩) ವ್ಯವಸ್ಥೆ ಮಾಡು
ನೀಹಾರ (೩೨-೩೧) ಮಂಜು
ನೀಳ್ದ (೩೭-೧೦) ಉದ್ದವಾದ
ನೀಳ್ಪ (೩೪-೬) ಉದ್ದ
ನುಚ್ಚು (೪೪-೪೨) ಚೂರು
ನುಡಿಯುಡುಗು (೧-೨೭) ಮಾತು ಬಾರದಂತೆ ಆಗು
ನುಣ್ಪು (೩೭-೧೨) ಸೌಂದರ್ಯ
ನುಂಪು (೧೯-೨೫) ನುಣುಪು
ನುಸುಳ್ (೩-೧೧) ಮೋಸ
ನೂಂಕು (೫೦-೨೫) ನುಗುಸು, ಕೆಣಕು
ನೂಪುರ (೩೭-೯) ಕಾಲುಕಡಗ
ನೆಕ್ಕನೆಳಿಲ್ (೪೪-೪೨) ದಡದಡದನಿ
ನೆಗಳ್ (೯-೧೧) ಮೊಸಳೆ
(೫೦-೩) ಉಂಟಾಗು
(೫೩-೩೩) ಪ್ರಸಿದ್ಧಿಯನ್ನು ಹೊಂದು
ನೆಗೆ (೫೩-೫೨) ಹಾರು
ನೆಗ್ಗು (೧೯-೨೭) ಮುರಿ

ನೆಗ್ಗು (೩೧-೧೧) ಜಜ್ಜು
(೫೩-೫೭) ಕುಗ್ಗು
ನೆಮ್ಮು (೫-೧೧) ಆತುಕೊಳ್ಳು
ನೆರವಿ (೩೭-೬೬) ಸಮೂಹ
ನೆರೆ (೨-೧೧) ಶಕ್ತನಾಗು
(೧೯-೧೪) ಸಾಕಾಗು
(೩೮-೨೩) ಸಮೂಹ
ನೆರೆತೆರೆ (೫೮-೪೬) ಮುಪ್ಪು
ನೆರೆಪು (೩೫-೧೬) ಕೂಡಿಸು
ನೆಲ್ (೫೫-೩೮) ಬತ್ತ
ನೆಲೆ (೫-೩) ಸ್ಥಾನ, ಉಪ್ಪರಿಗೆ
(೩೭-೧೦) ದೊಡ್ಡ
ನೇಜಯ (೪೮-೫೧) ಬರ್ಚಿ
ನೇಣ್ (೨೨-೧೦) ಹಗ್ಗ
ನೇಮ (೯-೧೫) ಕುಚ
(೫೦-೨೨) ಅಪ್ಪಣೆ
ನೇಲು (೩೫-೩೦) ಜೋತಾಡು
ನೇವರಿಸು (೯-೧೬) ಸರಿಪಡಿಸು
ನೇಹ (೩೮-೧) ಸ್ನೇಹ
ನೈಷ್ಠಿಕ (೩೫-೧೭) ವ್ರತವನ್ನು ಆಚರಿಸುವವ

ಪ

ಪಕ್ಕ (ದ್ಭ-ಪಕ್ಷ) (೧೧-೨೬) ಸ್ಥಾನ
ಪಕ್ಕರಕ್ಕೆ (೩೫-೯) ಜೀನ, ಜೂಲ
ಪಕ್ಕೆ (೨೩-೩೮) ಮುಗ್ಗಲು
ಪಂಕ (೩೭-೧) ಕೆಸರು
ಪಚಾರಿಸು (೧೦-೧೭) ತಿರಸ್ಕರಿಸು, ಹೀಯಾಳಿಸು
ಪಚ್ಚ (ದ್ಭ-ಪ್ರಚ್ಛದ ಅಥವಾ ಪ್ರಸಾಧನ) (೩೪-೪೧) ಅಲಂಕಾರ, ತೊಡ
ಪಚ್ಚಳ (೩೨-೨೫) ಚಪ್ಪೆ
ಪಚ್ಚುಕೊಡು(೫೨-೩೮) ಹಂಚಿಕೊಡು
ಪಚ್ಚೆ (೧೦-೪೭ಅ) ಹಸರು ಕಾಯಿ
ಪಚ್ಚೆಯಾಡು (೧೦-೪೭) ಹಸರು ಕಾಯಿಯನ್ನು ಆಡು
ಪಂಚಧಾರೆ (೨೬-೧೩) ಕುದುರೆಯ ೫ ಗತಿಗಳು (ಧೋರಿತ, ವಲ್ಗಿತ, ಪ್ಲುತ, ಉತ್ತೇಜಿತ, ಉತ್ತೇರಿತ)
ಪಂಚಾಸ್ಯ (೪೧-೫೫) ಅಗಲ ಅಥವಾ ವಿಸ್ತಾರವಾದ ಬಾಯಿಯುಳ್ಳ
(೫೩-೧೪) ಸಿಂಹ
ಪಂಜು (೩೭-೬೦) ದೀವಟಿಗೆ
ಪಟಲ (೩೫-೧) ಸಮೂಹ
ಪಟಹ (೫-೭) ಡೊಳ್ಳು
(೧೬-೧೩) ಕಾಳೆಗದ ವಾದ್ಯ
ಪಟ್ಟಸ (೨೪-೧೯) ಒಂದು ತರದ ಕೊಡ್ಲಿ
ಪಡಪಾಗು (೪೮-೨೩) ಸಿದ್ಧವಾಗು
ಪಡಪು (ಧಾ-ಪಡೆ) (೪೯-೨೬) ದೊಡ್ಡಸ್ತಿಕೆ
ಪಡಿ (೫-೧೬) ಸರಿಯಾದ
ಪಡಿಗ (ದ್ಭ-ಪ್ರತಿಗ್ರಹ) (೧೯-೪೫) ಪೀಕದಾನಿ
ಪಡಿಗಟ್ಟು (೩೭-೩೮) ಹೋಲಿಸು
ಪಡಿಯಟ್ಟಣೆ(೪೨-೨೪) ತಕ್ಕಂಥ ಎದೆ ಮಟ್ಟ ಗೋಡೆ
ಪಡಿಯರ (ದ್ಭ-ಪ್ರತಿಹಾರ) (೬-೨) ದ್ವಾರಪಾಲಕ
ಪಡಿಹಾರ (೭-೬) ಸೇವಕ
ಪಡೆ (೫೦-೨೬) ದಂಡು
(೫೩-೫೫) ಸಮೂಹ
ಪಡೆಪು (೨-೪) ಹೆಚ್ಚಳ, ವೈಭವ
ಪಣ (೫೨-೫೦) ಒಂದು ನಾಣ್ಯ

ಪಣ್ಣು (೨೩-೨೫) ಸಜ್ಜುಮಾಡು
ಪಣ್ಯವೀಥಿ (೧೧-೪೦) ವೇಶ್ಯಾವಾಟ
ಪಂಠಿಸು (೩೫-೧೧) ಲಾಗಾ ಹೊಡಿ
ಪತಿಕರಿಸು (ದ್ಭ-ಪ್ರತಿಕರಿಸು) (೫೧-೨೧) ದಯತೋರಿಸು
ಪತ್ರ (೨೬-೯) ರಥ, ಕುದುರೆ (೪೫-೪೯) ಆಯುಧ
ಪದ (೧೬-೯) ಸ್ಥಾನ, ಪ್ರಸಂಗ
ಪದನ (೩೧-೩೮) ರೀತಿ
ಪದಪು (೬-೧೬) ಸೌರಂಭ, ಉತ್ಸುಕತೆ
ಪದಂಪು (೪೫-೧೫) ಮನೋಹರತೆ
ಪದುಳ (೬೨-೨೮) ರಕ್ಷಣೆ (೬೨-೪೯) ಸಮೃದ್ಧಿ
ಪದುಳಿಸು (೪೦-೩೨) ಸಂತೋಷ ಹೊಂದು
ಪದೆ (೪೦-೩೨) ಉತ್ಸುಕನಾಗು (೫೮-೨೩) ಪ್ರಯತ್ನದಿಂದ ಸೇರು
ಪದ್ಮ (೫-೫೩) ನೀರು, ಕುಬೇರನ ಒಂದು ನಿಧಿ (೧೦-೪೯) ಸರ್ಪಭೇದ (೬೩-೭೭೮) ಚಂದ್ರ
ಪದ್ಮರಾಗ (೩೬-೨೬) ಮಾಣಿಕ
ಪದ್ಮಿನಿ (೭-೩) ಕಮಲ, ಪದ್ಮಿನಿ ಜಾತಿಯ ಸ್ತ್ರೀ
ಪನ್ನಂಗ (ದ್ಭ-ಪಲ್ಯಂಕ) (೪೭-೩೯) ಪಲ್ಲಕ್ಕಿಯ ಆಚ್ಛಾದನ
ಪನ್ನತಿಕೆ (೪೩-೨೬) ಪರಾಕ್ರಮ
ಪಂದ (೩೭-೫೧) (ಸ್ಪಂದ?) ಚಲನೆ
ಪಂದಿದಲೆ (೪೨-೧೧) ಒಂದು ತರದ ರಕ್ಷಣೆಯ ಸಾಧನ
ಪಯ(ದ್ಭ-ಪದ)ಪಾಡು (೩೮-೩೮) ಕಾಲುಗಳನ್ನು ಇಡುವ ರೀತಿ
ಪಯ್ಸರವಾಗು (೨೫-೩೫) ಕುಂದು
ಪಯ್ಸರಿಸು (೫-೧೩) ಜಾರು
ಪರದ (೧೧-೪೬) ವರ್ತಕ
ಪರಪುಟ್ಟ (೧೧-೨೬) ಕೋಗಿಲೆ
ಪರಮೆ (೧೧-೫) ಭೃಂಗ
ಪರಮೇಷ್ಠಿ (೨-ಸೂ) ಬ್ರಹ್ಮ
ಪರಾಕು (೭-೧೭) ಎಚ್ಚರಿಕೆ
ಪರಾಗ (೩೫-೫) ಧೂಳಿ
ಪರಾಮರಿಸು (೫೩-೯) ಕೇಳು
ಪರಿ (೧೧-೨೨) ಅಲಂಕಾರವಾಗು
ಪರಿಕರ (೩೬-೨೪) ಸಾಹಿತ್ಯ (೫೧-೨೧) ಪೂಜಾಸಾಮಗ್ರಿ
ಪರಿಗೆ (೪೨-೨೬) ಥಾಲು
ಪರಿಭವ (೩೭-೧೧) ಅವಮಾನ
ಪರಿವಿಡಿ (೫-೫) ಕ್ರಮ
ಪರಿವೇಷ (೧೧-೩೧) ಸೂರ್ಯನ ಸುತ್ತಲಿರುವ ಹೊಳಪು
ಪರುಪೆ (೫-೬೨) ಒಂದು ಬಗೆಯ ಖಾದ್ಯ
ಪರೆ (೫-೨೦) ಡೊಳ್ಳು (೧೧-೧೬) ಪಸರಿಸು
ಪರ್ವ (೬೨-೨೧) ಕಾಲ, ಹಬ್ಬ
ಪಲ್ಲಟ (ದ್ಭ-ಪರ್ಯಯ) (೫೧-೪) ವ್ಯತ್ಯಯ
ಪಲ್ಲಟಿಸು (೨೯-೧೨) ಕೆಳಗೆ ಮೇಲೆ ಆಗು
ಪಲ್ಲಣ (ದ್ಭ-ಪಲ್ಯಯನ) (೫೦-೧೬) ಜೀನು
ಪಲ್ಲವ (೧೦-೪೯) ತಳಿರು, ಹವಳ (೧೧-೧೮) ತಳಿರು, ಬಾಲ, ಕೂದಲು

ಪಲ್ಲವಕ (೨೨-೯) ವಿಟಪುರುಷ
ಪವಡಿಸು (೫೧-೬) ಮಲಗು
ಪವಣ (ದ್ಭ-ಪ್ರಮಾಣ) (೧೦-೪೭) ಶಕ್ತಿ
ಪವನಪದಚರ(೧೧-೨೭) ದೇವತೆ
ಪವಿತ್ರ (೩೪-೧೪) ಕುಶ, ದರ್ಭೆ
ಪಸದನ (ದ್ಭ-ಪ್ರಸಾಧನ) (೫-೧೨) ಅಲಂಕಾರ
ಪಸರ (ದ್ಭ-ಪ್ರಸರ) (೧೧-೪೩)ಅಂಗಡಿ
ಪಸು (ದ್ಭ) (೬೨-೪೪) ಪಶು
ಪಸುಳೆತನ (೫-೪೧) ಬಾಲ್ಯ
ಪಹರೆ (೫೦-೧೨) ಕಾವಲು
ಪಳಂಚು (೨೬-೧೩) ಎದುರಾಗು
ಪಳಿ (ದ್ಭ-ಪಟ) (೬-೪೪) ವಸ್ತ್ರ ವಿಶೇಷ
(೩೭-೩೦) ಪಡದೆ
ಪಳಿ (ದ್ಭ-ಪ್ರತಿ) (೫೫-೧೬) ಸರಿ
ಪಳಿಕ (ದ್ಭ) (೯-೨೩) ಸ್ಫಟಿಕ
ಪಳಿಕು (ದ್ಭ) (೫-೪೦) ಸ್ಫಟಿಕ
ಪಳುಕು (ದ್ಭ) (೨೯-೯) ಸ್ಫಟಿಕ
ಪಳೆ (೨೯-೧೨) ಹಳೆ
ಪಾಕಶಾಸನ (೧೨-೧) ಇಂದ್ರ
ಪಾಟ (ಧಾ-ಪಾಡು) (೪೭-೧೫) ಗಾಯನ
ಪಾಟವ (೧-೫) ಸತ್ವ, ಆರೋಗ್ಯ
ಪಾಡು (೧೬-೩೨) ರೀತಿ
(೪೪-೨೬) ಎಚ್ಚರಿಕೆ
(೫೨-೪೭) ಒಳ್ಳೇ ಸ್ಥಿತಿ
ಪಾದರಿ (೧೧-೨೫) ಪಾದರೀ (ಪಾಟಲ) ಮರ, ಜಾರಿಣಿ
ಪಾಮರಿ (೧೧-೯) ಬೇಡತಿ
ಪಾಯು (೫೮-೧೭) ಗುದ
ಪಾರ್ (೨೩-೨೨) ಬಯಸು
ಪಾರಿ (೩೭-೧೪) ಪಹರೆ
ಪಾವುಡ (೪೧-೫೧) ವಸ್ತ್ರ
ಪಾಶಿ (೨೩-೩೭) ವರುಣ
ಪಾಷಂಡಿ (೫೨-ಸೂ) ನಾಸ್ತಿಕ
ಪಾಳಿ (೨೪-೩೬) ಸಾಲು
(೩೪-೨೦) ಬದುಹು
(೩೫-೧೨) ಸಮೂಹ
ಪಿಂಗಿಸು (೫೧-೧೨)ಹೋಗಲಾಡಿಸು
ಪಿಂಗು (೧೨-೩) ತಪ್ಪು
ಪಿಂಚು (೨೧-೨೭) ಹಿಂದೆ ಬರು
ಪಿಂಜರ (೫-೧) ಪಿಂಗಲವರ್ಣ
ಪಿಡಿಯಾಳು (೩೧-೧೩) ಸೆರೆಯಾಳು
ಪಿಡಿಹಾರದಿಂ (೫-೧೭) ಹಿಡಿತುಂಬ
ಪಿಣಿಲ್ (೧೩-೨೨) ಇಣಿ
ಪಿಂಡಿವಾಳ(೨೩-೩೪) ಒಂದು ಆಯುಧ
ಪಿನಾಕ (೫೧-೪೦) ಶಿವನ ಬಿಲ್ಲು
ಪಿನಿಕೂಟ (೪೭-೪೫) ಒಂದು ಮಾದಕ ಪದಾರ್ಥ
ಪಿಶಂಗ (೯-೧೮) ಕಂದಿಬಣ್ಣದ
ಪಿಸುಣ (೪-೧೭) ದುರ್ಜನ, ಚಾಡಿಹೇಳುವವ
ಪೀಠವರ್ಧನ (೧೦-೨) ಆಸನಗಳನ್ನು ಕೊಡುವವ
ಪೀತವಾಸ (೫೨-೩೧) ಕೃಷ್ಣ
ಪೀನ (೩೬-೧೯) ದಪ್ಪ
ಪೀಯೂಷ (೧೧-೧೮) ಅಮೃತ, ಗಿಣ್ಣದ ಹಾಲು
ಪೀಲಿ (೧೯-೨೩) ನವಿಲಗರಿ
ಪುಗಿಸು (೩೭-೮) ಮಾಡಿಸು
ಪುಂಖ (೨೮-೩೦) ಬಾಣದ ಗರಿ ಹಚ್ಚಿದ ಭಾಗ

ಪುಂಖ (೫೦-೪೧) ರೆಕ್ಕೆ
ಪುಂಗವ (೧೩-೨೨) ಗೂಳಿ
(೩೭-೨೧) ಶ್ರೇಷ್ಠ
ಪುಂಡರೀಕ (೧೬-೨೨) ಬಿಳಿಯ ಸತ್ತಿಗೆ, ಛತ್ರ, ಕಮಲ
(೨೬-೯) ಐರಾವತ, ದಿಗ್ಗಜ, ಪತಾಕೆ
(೪೧-೫೫) ಹುಲಿ, ಪತಾಕೆ
(೫೧-೧) ಶಿರಸ್ಸು
(೫೩-೧೫) ಹುಲಿ, ಬಿಳೀ ಕಮಲ, ಆನೆ
(೫೩-೩೨) ಹುಲಿ, ಕಮಲ, ಕಲ್ಪವೃಕ್ಷ
ಪುತ್ತಳಿ (೩೬-೩೦) ಗೊಂಬೆ
ಪುತ್ತು (೪೪-೪೧) ಹುತ್ತು
ಪುತ್ರಿಕಾ (೪೧-೩೨) ಪುತ್ಥಳಿ
ಪುತ್ರಿಕೆ (೩೬-೨೬) ಹೆಣ್ಣು ಗೊಂಬೆ
ಪುದಕಳ (೪೨-೯) ಗದ್ದಲ
ಪುದಿ (೩೭-೧೩) ಆಚ್ಛಾದಿಸು
(೪೨-೧೧) ಗುಂಪಾಗು, ಕೂಡು, ಸೇರು
(೪೬-೬) ದ್ವಾರ, ಪಾರ್ಶ್ವ
(೫೬-೭) ತುಂಬು
ಪುನ್ನಾಗ (೩೭-೩೬) ಸುರಹೊನ್ನೆ
(೧೦-೬೩) ಪುರುಷಶ್ರೇಷ್ಠ
ಪುಯ್ಯಲ್ಚು (೪೮-೯) ಒದರಿ ಕರೆ
ಪುರಂಧ್ರಿ (೨೪-೩೬) ಸನ್ಮಾನನೀಯ ಸ್ತ್ರೀ
ಪುರುಹೂತ (೪೫-೩) ಇಂದ್ರ
ಪುರೋಡಾಶ (೩೦-೨೪) ಯಾಗಾರ್ಥ ಮಹ ಹೋಳಿಗೆ
ಪುಲಿಮೊಗ (೪೨-೨೬) ಕೋಟೆಯಿಂದ ಹೊರಗೆ ಹೋಗುವ ದಾರಿ
ಪುಲ್ಮರುಳ್ (೪೦-೨೬) ಕೈಲಾಗದ ರಾಕ್ಷಸ
ಪುಷ್ಕರ (೨-೧) ಆಕಾಶ
(೨೨-೮) ಆನೆಯ ಸುಂಡಿಲ ತುದಿ, ಖಡ್ಗ, ನೀರು
(೨೬-೨೮) ಸಾರಸ ಪಕ್ಷಿ
(೨೮-೫) ಆನೆಯ ಸುಂಡಿಲ ತುದಿ, ಆಕಾಶ, ನೀರು, ಕಮಲ
ಪುಷ್ಪಕ (೫-ಸೂ) ದೇವರಥ
ಪುಷ್ಪವಾಟಿ (೫೬-೧೫) ಹೂದೋಟ
ಪುಷ್ಪಾಂಜುಳಿ (೫೦-೪೭) ಬೊಗಸೆಯಿಂದ ಹೂಗಳನ್ನು ಎಸೆಯುವದು
ಪುಷ್ಪಿತೆ (೯-೪) ರಜಸ್ವಲೆಯಾದ ಸ್ತ್ರೀ
ಪುಷ್ಯರಾಗ (೫-೪೮) ಪೀತಕಾಂತ ಮಣಿ
ಪುಳಿಂದಿ (೫೩-೧೨) ಬೇಡತಿ
ಪುಳು (೨೦-೧೧) ಕೀಟ
ಪೂಗ (೧೧-೨೨) ಅಡಿಕೆ
(೫೩-೧೫) ಅಡಿಕೆಗಿಡ, ಸಮೂಹ
ಪೂತ (೫೬-೧೭) ಪವಿತ್ರ
ಪೂತು (೨೮-೩೦) ಶಾಬಾಸ್
ಪೂದೇರ (೩೫-೬) ಕಾಮ
ಪೂರಾಯದಿಂದ (೫೩-೫೫) ಪೂರ್ಣವಾಗಿ, ತುಂಬ
ಪೂವಳ (೪೫-೩) ಹೂವಡಿಗ
ಪೂಷ (೫೨-೨೨) } ಸೂರ್ಯ
ಪೂಷರ (೩೭-೧೨) } ಸೂರ್ಯ
ಪೂಷಾ (೩೧-೫೩) } ಸೂರ್ಯ
ಪೂಸು (೯-೧೨) ವಿಲೇಪಿಸು
ಪೂಳ್ (೩೧-೧೦) ಹೊಳು

ಪೃಷದಾಜ್ಯ (೩೦-೨೪) ಮೊಸರು ತು
ಪ್ಪಗಳ ಮಿಶ್ರಣ
ಪೆಟಲು (೪೨-೧೦) ಧಡಲ್ಬಾಜಿ
ಪೆಡೆಗುಡಿಗಟ್ಟು (೧೨-೪) ಹೆಡಮುರಿಗೆ
ಕಟ್ಟು, ಸಿವುಡು ಕಟ್ಟು
(೩೧-೫೨) ಸುತ್ತುಗಟ್ಟು
ಪೆಡೆಗೈ (೩೨-೪೮) ಹೆಡಮುರಿಕೆ
ಪೆಂಡೆಯ (೭-೧೫) ಬಿರುದಿನ ಆಭರಣ
ಪೆಂಪು (೧-೨) ಹೆಚ್ಚಳ, ವೈಭವ
ಪೆಂಪುಳಿವೋಗು (೩೬-೧೭) ಹರ್ಷರೋ
ಮಾಂಚನ ಹೊಂದು
ಪೆರಸಾರು (೧೬-೩೨) ಹಿಂದಕ್ಕೆ ಸರಿ
ಪೆರೆ (೩೧-೭) ಚಂದ್ರ
(೫೧-೩೧) ಚಂದ್ರಕಲೆ
ಪೇರ್ + ಅಗಳ (೨೪-೨೪) ದೊಡ್ಡ
ಕಂದಕ
ಪೇರು (೧೦-೧೩) ಪ್ರದರ್ಶಿಸು
ಪೈತೃಪತಿ (೧೫-೧) ಯಮ
ಪೊಕ್ಕುಳಿ (೪೫-೨೩) ಕೋಗಿಲೆ
ಪೊಗರ್ (೪೧-೧೮) ಕಾಂತಿ
ಪೊಗೆ (೪೧-೧೮) ಹೊಗೆಬಿಡು
ಪೊಂಗು (೧-೮) ಅತ್ಯಾನಂದ ಪಡು
(೧೦-೨೦) ಅರಳು, ಉಬ್ಬು
(೩೮-೧೩) ಕುದಿ, ಸ್ಫುಟವಾಗು
ಪೊಚ್ಚ (೩೭-೪೪) ಸ್ವಚ್ಛ, ಪ್ರಕಾ
ಶಮಾನ
ಪೊಂಚು (೪೯-೩೨) ಅಡಗು
ಪೊಟ್ಟಣ (೩೭-೬೪) ಎಲೆಗಳಿಂದ
ಮಾಡಿದ ಬಟ್ಟಲು, ದೊನ್ನೆ
ಪೊಡಕರಿಸು (೧೦-೨೧) ಕಾಣು, ಪ್ರ
ಕಾಶವಾಗು
ಪೊಡರ್ಪು (೨೬-೧೨) ವೈಭವ
ಪೊಡೆ (೧೮-೧೦) ಹೊಟ್ಟೆ
(೪೮-೪೯) ಬಾಣಬಿಡುವಾ
ಗ ಹಿಡಿಯುವ ಭಾಗ
ಪೊಡೆಗೆಡೆ (೩೮-೩೯) ನೆಲದ ಮೇಲೆ
ಉದ್ದಕ್ಕೆ ಬೀಳು
ಪೊಡೆಯಲರ (೨೫-೩೦) ವಿಷ್ಣು
ಪೊಣರ್ (೨೪-೫) ಕೂಡು
ಪೊಣೆ (೪೪-೧೮) ಹೊಡೆ
ಪೊಣ್ಮು (೧೦-೨೧) ಹುಟ್ಟು
(೩೭-೪೩) ಉಬ್ಬು
(೫೦-೨೨) ಹೊರಡು
ಪೊದರ್ (೩೧-೩೦) ಸಮೂಹ
ಪೊದಳ್ (೩೧-೩೦) ಹೊರಡು
ಪೊದೆ (೩೭-೩೭) ಹೊದೆ
ಪೊದ್ದು (೭-೨೯) ಹೊಂದು
ಪೊನಲ್ (೪೦-೧೦) ಪ್ರವಾಹ
ಪೊಂದು (೨-೪) ಸಮೂಹ
ಪೊಯಿಲ್ (೩೧-೩೧) ಹೊಡತ
ಪೊಯ್ಲು (೩೭-೬೮) ಹೊಡತ
ಪೊಯ್ಸು (೪೪-೮) ಹೊಡೆಸು
ಪೊರಮಡು (೨೯-೧೧) ಹೊರಡು
ಪೊರವಾರ (೧೯-೨೬) ತಿಗ
ಪೊರಿಜು (೯-೧) ರೂಪು
ಪೊರೆ (೪-೩೩) ಭಾರ, ಹೊರೆ
(೫-೫೦) ಲೇಪಿಸು
(೧೧-೬) ತ್ರಾಣವನ್ನು
ಕೊಡು
(೩೭-೨೪) ಧರಿಸು
(೪೦-೩೦) ಮಗ್ಗಲು
(೪೫-೪೫) ಸಮೀಪ
(೪೫-೫೭) ಕೂಡು
ಪೊರೆಯೇರು (೧೦-೧೪) ಪೋಷಣ
ಹೊಂದು

ಪೊರೆಯೇರು(೧೦-೨೯) ಹುರಿದುಂಬು, ಹುರುಪಾಗು
ಪೊರ್ದು (೩-೧೩) ಹೊಂದು
(೫೩-೮) ಸಮೀಪಕ್ಕೆ ಬರು
ಪೊಸೆ (೫೬-೨೬) ಝುಳಪಿಸು
ಪೊಳಕು (೨೬-೧೮) ತೇಲಾಡಿಸು
ಪೊಳಲ್ (೫೨-೪೫) ಪಟ್ಟಣ
ಪೋಕ (೪-೧೭) ದುಷ್ಟ, ಠಕ್ಕ
ಪೋರ್ (೩೮-೩೪) ಕಾದಾಡು
ಪೋಳ್ (೨೫-೭) ವ್ಯವಸ್ಥೆ, ರಚನೆ
ಪೌಜು (೪೩-೩) ದಂಡು
ಪೌಲೋಮಿ(೩೨-೭೨) ಇಂದ್ರನ ಹೆಂಡತಿ
ಪ್ರಕೃತಿ (೧೩-೨) ತನ್ನ ಸ್ವರೂಪ
ಪ್ರತತಿ (೫೩-೭) ಸಮೂಹ
ಪ್ರತಾನ (೫೦-೨೬) ಸಮೂಹ
ಪ್ರತಿಮಾನ (೫೦-೯) ಸರಿಯಾದ
ಪ್ರತ್ಯೂಹ (೪೨-೧) ಅಡ್ಡಿಮಾಡುವ, ಎದುರಾಗುವ
ಪ್ರದ್ಯೋತ (೩೭-೩೯) ಸೂರ್ಯ
ಪ್ರಮಾದ (೨೮-೬) ತೊಂದರೆ
ಪ್ರಸಂಗತ (೩೫-೧) ಕೂಡಿದ
ಪ್ರಸೂನ (೪೫-೮) ಹೂವು
(೪೫-೪೫) ಅಸಂಖ್ಯಾತ
ಪ್ರಹರಿ (೪೨-೯) ಕಾವಲುಗಾರ
ಪ್ರಾಲೇಯಶೈಲ (೩೪-೨) ಹಿಮಾಚಲ
ಪ್ರೋದ್ದಾಮ(೧೨-೧೮) ಅಪರಿಮಿತ
ಪ್ಲಕ್ಷ (೧೫-೧೧) ಸಪ್ತದ್ವೀಪಗಳಲ್ಲಿ ಒಂದು
ಪ್ಲವ (೬೦-೯) ನೀರಿನಲ್ಲಿ ತೇಲು ಬಿಡುವ
ಪ್ಲವಂಗ (೧೦-೪೧) ಮಂಗ, ಕಪ್ಪೆ

ಫ

ಫಡ (೩೧-೨೬) ಎಲೆ!
ಫಲಕ (೩೧-೭) ಢಾಲು
ಫಲ್ಗುಣ (೫೩-೫೬) ಅರ್ಜುನ

ಬ

ಬಕ್ಕುಡಿ (೬-೪೨) ಬೆರಗಾಗುವ ಭಾವ
ಬಗರಿಗೆ (೫೨-೫೧) ಒಂದು ತರದ ಪಾತ್ರೆ
ಬಗಿ (೪-೨೭) ವಿಭಾಗಿಸು
(೫-೧೪) ಸರಿಸು
ಬಗೆ (ದ್ಭ-ಬಕ) (೪೫-೪೩) ಬಗೆಯ ಪುಷ್ಪ
ಬಗ್ಗುರಿ (೨೧-೬) ಗಂಟಲದ ಎಲವು
ಬಟ್ಟಾಡು (೩೫-೧೮) ಉದರು
ಬಟ್ಟಿತ (೧೦-೮೧) ದುಂಡ
ಬಟ್ಟೆ (೯-೨೫) ಮಂಡಲ
ಬಡ್ಡು (೪೨-೨೮) ಮೂರ್ಖ
ಬಣಗು (೪೨-೨೮) ಕೈಲಾಗದ ಮನುಷ್ಯ
ಬಣಿತೆ (ದ್ಭ-ಭಣಿತ) (೪೭-೧೫) ಮಿತ್ರಗೋಷ್ಠಿ
ಬಂಡತನ (೫೧-೨೭) ನಾಚಿಕೆಗೇಡಿತನ
ಬಂಡು (೯-೪) ಪುಷ್ಪರಜ, ಲಜ್ಜಾವಿಹೀನತ್ವ
ಬತ್ತಳಿಕೆ (೫೦-೪೩) ಬಾಣ ಹಾಕುವ ಚೀಲ
ಬದ್ದರ (ದ್ಭ-ಭದ್ರ) (೪೨-೨೪) ಎತ್ತು, ಆನೆ
ಬನ್ನ (ದ್ಭ-ಭಗ್ನ ಅಥವಾ ಭಂಗ) (೩೯-೧೮) ನಾಶ, ಸೋಲು, ಕಷ್ಟ

ಬಂದಿ (೬-೪೦) ಊಟ
ಬಂದುಗೆ (ದ್ಭ-ಬಂಧೂಕ) (೩೭-೪೫) ಒಂದು ಜಾತಿಯ ಹೂ
ಬಂಧಕಿ (೯-೧೬) ಜಾರಸ್ತ್ರೀ
ಬಂಧುರ (೪೨-೨) ಸುಂದರ
ಬಂಬಲ್ (೧೮-೧) ಗುಂಪು, ಶ್ರೇಣಿ
ಬಯ್ (೯-೬) ನಿಕ್ಷೇಪಿಸು
ಬರತುದು (ಧಾ-ಬರೆ) (೧೯-೧೪) ಇಲ್ಲದಂತಾಯಿತು
ಬರಸೆಳೆ (೩೯-೨೯) ಹಿರಿದುತೆಗೆ, ಹೀರಿಕೊಳ್ಳು
ಬರಿ (೩೯-೧೬) ಮಗ್ಗಲು
ಬರಿಕೆಯ್ಯ (೧೯-೩೭) ಅನಾಚ್ಛಾದಿತ
ಬರಿಕೈ (೩೯-ಸೂ) ಸಂಪೂರ್ಣ ನಾಶ ಮಾಡು
ಬರೆ (೩೧-೩೮) ಒಣಗು
(೬೦-೯) ಅನುಪಯೋಗ
ಬರ್ಹಿ (೩೦-೨೪) ಕುಶ
ಬಲಿ (೨೫-೨೨) ತುಂಬು
(೪೩-೫೦) ದೃಢಪಡಿಸು
ಬಲುಗಡೆಯ(೪೨-೭) ಅನೇಕ ಕಡೆಯ
ಬಲುಹು (೨೪-೨೭) ಬಲಾತ್ಕಾರ
ಬಲ್ಮೆ (೫೩-೪೧) ಸಾಮರ್ಥ್ಯ
ಬಲ್ಲೆಯ (೪-೨೦) ಬರ್ಚಿ
ಬವಣಿ (ದ್ಭ-ಭ್ರಮಣಿ) (೧೬-೩೬) ತಿರುಗೋಣ
ಬಸ(ದ್ಭ-ವಶ)ವಳಿ (೮-೧) ಕಾಂತಿಹೀನನಾಗು, ಸಾಮರ್ಥ್ಯವು ಹೋಗು
ಬಸಿ (೫೫-೩೪) ಶೂಲಕ್ಕೆ ಹಾಕು
ಬಸಿದ (೫೬-೪೨) ಚೂಪಾದ
ಬಸುರ್ (೫೦-೫೫) ಹೊಟ್ಟೆ
ಬಸೆ (೩೨-೧೯) ಮೇದ, ನೆಣ
ಬಹುಧಾನ್ಯ(೧೧-೭) ೧೨ನೇ ಸಂವತ್ಸರ
ಬಳವಿಗೆ (೧೧-೩೩) ಹೆಚ್ಚಳ
ಬಳಸೆ (೫೦-೪೧) ಸುತ್ತಲು
ಬಳಾಹಕ (೨೫-೨೫) ಮೇಘ
ಬಳಿದು (೫೦-೫೫) ಬಾಗಿ
ಬಳಿವಿಡಿ (೨೭-೬) ಹಿಂಬಾಲಿಸು
ಬಳುವಳಿ (೩೭-೮೧) ಹೆಣ್ಣುಮಕ್ಕಳಿಗೆ ತವರುಮನೆಯವರು ಕೊಡುವ ಸಾಮಾನು
ಬಳ್ಳ (೫೮-೧೨) ಒಂದು ಅಳತೆ
ಬಳ್ಳು (೪೦-೨೭) ನರಿ
ಬಾಚು (೫೦-೨೨) ಕೆತ್ತು
ಬಾಣಸ (ದ್ಭ-ಮಹಾನಸ) (೧೧-೧೮) ಅಡಿಗೆಯ ಮನೆ
ಬಾನ್ (೩೧-೨೭) ಆಕಾಶ
ಬಾಂದೊರೆ (೫೧-೩೧) ಆಕಾಶಗಂಗೆ
ಬಾಂಬಾವು (೪೧-೨೦) ರಾಹು
ಬಾರ್ಚು (೪೪-೧೯) ರಾಶಿಹಾಕು
ಬಾಯ್ದೆರೆ (೩೬-೧೦) ತುಟಿ
ಬಾಲಿ (೬೩-೬೮) ವಾಲಿ
ಬಾಸಣಿಸು (೩೧-೫೬) ಆಚ್ಛಾದಿಸು
ಬಾಸೆ (೪-೧೧) ನಾಭಿಯ ರೋಮ
ಬಾಳ್ (೧೬-೧೦) ಕತ್ತಿ
(೩೩-೭) ಜೀವ
ಬಾಳಗೊಲೆಯ (೩೫-೧೪) ತರುಣರನ್ನು ಕೊಲ್ಲುವವ
ಬಾಳ್ದಲೆ (೩೧-೧೪) ಜೀವಂತ ತಲೆ
ಬಿಕ್ಕ (೪೮-೫೬) ಮಾಂಸ
ಬಿಜ್ಜಣಿಗೆ (ದ್ಭ-ವ್ಯಜನ) (೫-೪೫) ಬೀಸಣಿಗೆಯವ
ಬಿಂಜ (ದ್ಭ-ವಿಂಧ್ಯ)(೨೬-೧೯) ಅಡವಿ

ಬಿಡುಗಣ್ಣ (೩೦-೯) ದೇವತೆ
ಬಿಣ್ (೩೧-೨೯) ಗಡುತರ
ಬಿಣ್ಪು (೧೬-೧೪) ಭಾರ
(೨೯-೩೩) ವೈಭವ, ದೊಡ್ಡಸ್ತಿಕೆ
ಬಿತ್ತು (೪-೩೫) ಬೀಜ
ಬಿದಿ (೧೬-೩೩) ಬ್ರಹ್ಮ
ಬಿದಿರ್ (೧೦-೫೩) ಪಸರಿಸು
ಬಿನದ (೪೧-೨೯) ವಿನೋದ
ಬಿನ್ನಣ (೫೦-೫೩) ಜಾಣತನ, ಚತುರತೆ
ಬಿರುಬು (೫೦-೨೬) ಆವೇಶ, ಕಾಠಿಣ್ಯ
ಬಿಲ್ಲೆ (೪೭-೪೨) ದುಂಡ ಚೂರು
ಬಿಸಗೊರಲ (೫೩-೫೦) ವಿಷಕಂಠ
ಬಿಸಜ (೩೫-೬) ಕಮಲ
ಬಿಸುಪು (೩೧-೪) ಜಳ
ಬಿಳಲ್ (೬೩-೩೬) ಜೋಂತಾಡುವ ಬೇರು
ಬೀ (೧೦-೭೫) ತೀರು, ಸವೆ
(೪೫-೧೦) ಅರಳು
(೫೫-೯) ನಾಶಹೊಂದು
ಬೀಗು (೧-೨) ಹಿಮ್ಮೆಟ್ಟು
(೪೪-೫) ಹರ್ಷಭರಿತನಾಗು
ಬೀಟಿ (೫೩-೨೨) ಕೆಸಿದ
ಬೀಡು (೫೩-೧೭) ಆವಾಸ
ಬೀಡೆ (೪೦-೩೦) ಬಿರುಕು
ಬೀದಿವರಿ (೩೯-೧೦) ಓಡಾಟ
ಬೀಯ್ಯ (ದ್ಭ) (೮-೧೯) ವ್ಯಯ
ಬೀರ್ (೪೩-೫೩) ಕೊಡು
ಬೀರ (೪೭-೩೦) ಶೌರ್ಯ
ಬೀರ್ವಗ್ಗ (೪೨-೩೬) ಜೋಲುಬಿಟ್ಟ ಹಗ್ಗ
ಬೃಹತಿ (೪೪-೨೦) ಗುಳಲಗಿಡ
ಬೃಂಹಿತ (೩೫-೮) ಮದಗಜಧ್ವನಿ
ಬೆಕ್ಕಸ (೪೪-೯) ಆಶ್ಚರ್ಯ
ಬೆಂಗೆ (೫೦-೧೬) ಬೆನ್ನಿಗೆ
ಬೆಚ್ಚು (೩೭-೪೪) ಬೆದರು, ಕೂಡು
ಬೆಟ್ಟತು (೨೪-೨೭) ಕಠಿಣಕೆಲಸ
ಬೆಟ್ಟು (೫೭-೪೮) ನಡು
ಬೆಡಗು (೭-೧೦) ಸೌಂದರ್ಯ, ವಿಲಾಸ
ಬೆದಕು (೪೦-೨೮) ಹುಡುಕು
ಬೆಬ್ಬಳಿಸು (೩೫-೧೫) ಗಾಬರಿಯಾಗು
ಬೆಬ್ಬರಿ (೬೨-೨೩) ಚೀರಾಡು
ಬೆರಟು (೫೭-೨೦) ಚಿವುಟು
ಬೆರೆ (೨-೨೭) ಅಹಂಕಾರ ತೋರಿಸು
ಬೆವಹಾರ (೫೧-೩) ವ್ಯಾಪಾರ
ಬೆಸ(ದ್ಭ-ವಿಧ)ಕೆಯ್ (೧೯-೧೮) ಶುಶ್ರೂಷೆಮಾಡು
ಬೆಸಗೆ (೬೧-೨೭) ಸಂಯೋಗ
ಬೆಸನ (ದ್ಭ-ವಿಧಾನ) (೨೦-೨೬) ಅಪ್ಪಣೆ
ಬೆಸಲಾಗು (೫೪-೯) ಹಡೆ
ಬೆಸವೇಳ್ (೬-೫೧) ಅಪ್ಪಣೆಮಾಡು
ಬೆಸಸು (೩೪-೨೪) ಅಪ್ಪಣೆಮಾಡು
ಬೆಸುಗೆ (೭-೬) ನಿಕಟಸಂಬಂಧ
(೨೦-೨) ಕಿವಿಯ ಮೂಲ
ಬೆಳತಿಗೆ (೩೭-೪೪) ಹೊಳಪು
ಬೆಳುಗವತೆ (ಬೆಳು + ಕವತೆ) (೬-೪೦) ಹಗಲುಲೂಟಿ
ಬೆಳ್ಳಾರವಲೆ (೫೩-೨೪) ಪಾಶ, ಮೃಗಜಾಲಿಕೆ
ಬೇಟ (೮-೨೦) ಇಂದ್ರಿಯಸುಖ
ಬೇಃಹ (೨೫-೧೦) ಬೇಕಾದ
(೪೯-೩೭) ಹುರುಪಳಿಸಿದ, ಪೀಡಿತ

ಬೇಹರ (೨೫-೫೦) ಬಹಳ ಬುದ್ಧಿ ಬಲವಂತ
ಬೇಳ್ (೧-೩೫) ಬಯಸು
(೨೦-೨೪) ಹವಿಸ್ಸನ್ನು ಅಗ್ನಿಯಲ್ಲಿ ಹಾಕು
ಬೇಳಾಗು (೩೫-೧೪) ಹುಚ್ಚಾಗು
ಬೇಳಿಡು (೪೬-೨೬) ಭ್ರಮೆಗೊಳ್ಳು
ಬೇಳುವೆಯಬೂದಿ (೫೦-೧೨) ಭ್ರಮೆಗೊಳಿಸುವ ಬೂದಿ
ಬೈತಿಡು (೨೦-೧೦) ಜೋಕೆಯಿಂದಿಡು
ಬೊಗ್ಗು (೪೨-೨೪) ಮಣಿದ
ಬೊಜಗ (೪೫-೪೦) ವಿಟ
ಬೊಟ್ಟು (೩೭-೯) ಹಣೆಯ ಆಭರಣ
ಬೊಂತೆ (೫೭-೨೨) ಕಂಥೆ
ಬೊಬ್ಬುಳಿಕೆ (೫೮-೫) ಗುಳ್ಳೆ
ಬೊಬ್ಬೆ (೫೦-೩೭) ಚೀರಾಟ
ಬೊಮ್ಮಂತಿ (ದ್ಭ) (೧೬-೨೫) ಬ್ರಹ್ಮಹತ್ಯೆ
ಬೊಂಬಾಳದೀವಿಗೆ (೩೭-೨೭) ಕೈಗಳನ್ನು ಜೋಡಿಸಿದ ಗೊಂಬೆಗಳ ಮಾಟದ ದೀವಿಗೆ
ಬೋವ (೫೨-೩೧) ಸಾರಥಿ
ಬೋಳೆ (೪೦-೧೦) ಹೂವಿನ ಎಸಳಿನ ಆಕಾರದ ಬಾಣ
ಬೋಳೈಸು (೩೯-೩೭) ಚಪ್ಪರಿಸು
ಬ್ರತ (೨೯-೨೧) ವ್ರತ
ಬ್ರಾತ (೨೯-೨೧) ವ್ರಾತ, ಸಮೂಹ

ಭ

ಭ (೪೩-೮) ನಕ್ಷತ್ರ
ಭಗ (೩೧-೫೩) ಸೂರ್ಯ
(೩೭-೧೨) ದ್ವಾದಶಾದಿತ್ಯರಲ್ಲಿ ಒಬ್ಬ
ಭಂಗ (೩೭-೧೯) ತೆರೆ, ಅವಮಾನ
(೫೦-೨) ಸೋಲು
ಭಣಿತೆ (೨-೨೮) ಧ್ವನಿ
ಭಂಡಾರ (೫೦-೧೪) ಬೊಕ್ಕಸ
ಭದ್ರ (೩೬-೩೨) ಶುಭ
ಭರ (೩೫-೧೨) ಉದ್ದೇಶ, ಕಾರ್ಯ
ಭರತಶಾಸ್ತ್ರ (೫೦-೫೪) ನಾಟ್ಯಕಲಾಶಾಸ್ತ್ರ
ಭರವಸ (೨೪-೪) ಉತ್ಸುಕತೆ, ಆತುರತೆ
ಭರಾಭರಿ (೨-೨೬) ವ್ಯವಸ್ಥೆ
ಭರಿಕೆಯ್ (೨೮-೨೫) ಆನೆಯ ಸೊಂಡಿ
ಭರ್ಗ (೫೦-೩೮) ಶಿವ
ಭರ್ಮ (೪೬-೧೩) ಬಂಗಾರ
ಭಲ್ಲ (೫೩-೧೫) ಒಂದು ತರದ ಬಾಣ, ಕರಡಿ
ಭವಣಿ (೨೫-೧೮) ತಿರುಗೋಣ
ಭವನಿಕೆ (೩೬-೩೨) ಅರಮನೆ
ಭಾಮೆ (೪೮-೨೦) ಸ್ತ್ರೀ
ಭಾರಣೆ (೫೦-೨೮) ಹೊಡತ
ಭಾರಿ (೩೧-೨೫) ಸಮೂಹ
ಭಾವೆ (೩೭-೧೬) ಚೇಷ್ಟಿಸುವ ಸ್ತ್ರೀ
ಭಿತ್ತಿ (೫೧-೧೨) ಗೋಡೆ
ಭೀಮ (೩೯-೧) ಯಮ
(೫೦-೪೫) ಭಯಂಕರ
ಭುಕ್ತಿ (೫೨-೪೪) ಊಟ
ಭುಜಂಗ (೫೦-೪೫) ಸರ್ಪ
ಭುಲ್ಲವಿಸು (೪೯-೧೫) ಸಂತೋಷದಿಂದ ಉಬ್ಬು
ಭುವನ (೪೫-೪೬) ನೀರು, ಭೂಮಿ
ಭೂಭೃತ್ (೩೭-೧೫) ಅರಸು, ಪರ್ವತ

ಭೇರುಂಡ (೩೬-೨೬) ಎರಡು ತಲೆಗ ಳುಳ್ಳ ಒಂದು ಜಾತಿಯ ಪಕ್ಷಿ
ಭೈತ್ರ (ದ್ಭ-ಬಹಿತ್ರ) (೫-೨೯) ಡೋಣಿ
ಭೈರವ (೪೪-೩೮) ಭಯಂಕರ
ಭೋಗಾವತಿ (೧೧-೩೬) ಪಾತಾಳ
ಭೋಗಿ (೩೬-೪) ಸರ್ಪ
(೪೧-೧೯) ಸರ್ಪ, ವಿಲಾಸಿ
ಭೌಮಾಪರಗ್ರಹ (೨-೩೨) ಚಂದ್ರ
ಭ್ರಾಜ (೨೯-೨೧) ಪ್ರಕಾಶ

ಮ

ಮಕರ (೩೭-೩೨) ಮೊಸಳೆಯ ಮುಖದ ಪ್ರತಿಮೆ
ಮಖ (೫೦-೪೫) ಯಜ್ಞ
ಮಗಮಗಿಸು (೩೭-೮) ಸುಗಂಧವನ್ನು ಬೀರು
ಮಗಳು (೫೭-೨೬) ಹೆಣ್ಣುಗೊಂಬೆ
ಮಗುಚು (೪೦-೨೮) ತಿರುವು
ಮಗುಳ್ (೨೧-೫) ತಿರುಗು
ಮಂಕಡ (ದ್ಭ-ಮರ್ಕಟ) (೫೩-೫೩) ಮಲ್ಲಯುದ್ಧದ ಒಂದು ಪೇಚು
ಮಚ್ಚರಿಸು (ದ್ಭ) (೧೦-೪) ಮತ್ಸರಿಸು
ಮಚ್ಚು (೪೭-೪೨) ನೀಟಾದ ಚೂರಿ
ಮಂಚಿಗೆ (೫೨-೪೪) ಮಂಚ
ಮಡ (೧೨-೧೩) ಹಿಮ್ಮಡ
ಮಡಂಬ (೪೮-೭) ಊರು
ಮಡಲಿರಿ (೧೯-೨೯) ಹೆಚ್ಚಾಗು
ಮಡಿ (೩೭-೩೬) ಮಡಚು
ಮಡುಪು (೫೦-೩೦) ಕೊಲ್ಲು
ಮಣಿಹ (೬-೯) ಕಾರ್ಯ, ಉದ್ಯೋಗ
(೨೯-೪೦) ಊಳಿಗ, ಸೇವೆ
ಮಂಡೆ (ದ್ಭ-ಮಂಡ) (೫೦-೧೮) ತಲೆ
ಮಂಡೆಮಲಗು (೪೭-೪೦) ತಲೆಗಿಂಬು
ಮತ್ತಕಾಶಿನಿ (೧೦-೭) ಮೋಹಕಸ್ತ್ರೀ
ಮತ್ತವಾರಣ (೩೬-೨೫) ಕಟಾಂಜನ
ಮದನ (೫೩-೧೬) ಉನ್ಮತ್ತವೃಕ್ಷ, ಪಿಂಡೀತಕವೃಕ್ಷ, ಕಾಮ
ಮದವಣಿಗ (೩೭-೨) ಮದುಮಗ
ಮದವರ್ಕಳು (೩೨-೨೦) ಮದುಮಕ್ಕಳು
ಮದ್ದು (೫೩-೨೭) ವಿಷ
ಮಧು (೩೭-೩೯) ಮದ್ಯ, ಮಕರಂದ
ಮಧುದೂತಿ (೪೫-೪೦) ಒಂದು ಜಾತಿಯ ಹೂವಿನ ಗಿಡ
ಮನದನ್ನ (೩೫-೨೧) ಪ್ರಿಯತಮ
ಮನಸಂದು (ಧಾ-ಸಲ್) (೪೧-೩೧) ಮನಃಪೂರ್ವಕವಾಗಿ
ಮನ್ನೆಯ (ದ್ಭ-ಮಾನ್ಯ) (೪೭-೩೨) ಶ್ರೇಷ್ಠಪುರುಷ
ಮಂತಣ (ದ್ಭ-ಮಂತ್ರಣ) (೫೦-೨) ಗುಪ್ತಾಲೋಚನೆ
ಮಂದ (೩೦-೧೩) ಶನಿ
ಮಂದಾರ (೩೬-೧೧) ಬೇಡಿದ್ದನ್ನು ಕೊಡುವ ವೃಕ್ಷ
ಮಂದಿವಾಳ (೫೩-೩೯) ಉದ್ಧಟತನ
ಮಮ್ಮಲಂ (೧೦-೫೨) ಅತಿಶಯವಾಗಿ
ಮಯೂರ (೨-೧೬) ಸ್ವರ್ಗವಾಸಿಗಳ ಒಂದು ವರ್ಗ
ಮರವಡು (೩೫-೧೪) ಶಕ್ತಿಗುಂದು
ಮರಳ್ (೫೩-೪೨) ತಿರುಗು
ಮರಾಳವಾಹನ (೩೮-೨೨) ಬ್ರಹ್ಮ
ಮರಿವಾವು (೫೦-೪೭) ಚಿಕ್ಕ ಸರ್ಪ
ಮರು (೫೭-೨೬) ಒಣಗಿದ

ಮರುಜ (೧-೧೨) ಒಂದು ಜಾತಿಯ ಗಿಡ

ಮರುತ್ (೫೨-೨೨) ವಾಯು

ಮರುಳ್ (೨-೩೦) ರಾಕ್ಷಸ

ಮರೆ (೫೩-೨೬) ಒಂದು ಜಾತಿಯ ಚಿಗರಿ

ಮರ್ದನ (೫೦-೪೬) ನಾಶಪಡಿಸಿದವ

ಮಲತರ್ (೫೧-೭) ಸೊಕ್ಕಿನವರು

ಮಲಯರುಹ (೩೬-೮) ಚಂದನ

ಮಲರ್ (೧೦-೨೧) ಹೂವು

ಮಲೆ (೧೬-೩೧) ಎದುರಾಗು

ಮಸಕ (೧೬-೧೫) ಅಬ್ಬರ

ಮಸಗು (೨-೨೬) ಆವೇಶತೋರಿಸು
(೭-೧೮) ಹೆಚ್ಚಾಗು, ಆವಿರ್ಭವಿಸು
(೫೩-೫೦) ಸಿಟ್ಟಾಗು

ಮಸಣಗಾಹಿ (೫೨-೫) ಸ್ಮಶಾನವನ್ನು ಕಾಯುವವ

ಮಸಣಿ (ದ್ಭ-ಸ್ಮಶಾನಿ) (೫೭-೨೦) ದುರ್ಗೆಯ ಅವತಾರ

ಮಸುಳು (೩-೮) ಅಡಗು

ಮಹಂತ (೬-೧೬) ದೊಡ್ಡಮನುಷ್ಯ

ಮಹೋಕ್ಷ (೩೧-೧) ವೃಷಭ

ಮಾಂಜಿಷ್ಠ (೫೮-೩೭) ಕೆಂಪು

ಮಾಡ (೫-೧೧) ಉಪ್ಪರಿಗೆ

ಮಾಡುವೆಟ್ಟು (೪೫-೨೬) ಕೈಯಿಂದ ಮಾಡಿದ ದಿನ್ನಿ, ಕೃತಕಾದ್ರಿ

ಮಾಣ್ (೨೬-೪) ಬಿಡು, ನಿಲ್ಲಿಸು

ಮಾತಂಗ (೩೭-೩೯) ಆನೆ, ಹೊಲೆಯ

ಮಾತರಿಶ್ವಮಿತ್ರ (೩೬-೧೫) ಗಾಳಿಯ ಸ್ನೇಹಿತ, ಬೆಂಕಿ

ಮಾದು (ಧಾ-ಮಾಯ್) (೬೦-೩೦) ತ್ಯಜಿಸಿ

ಮಾದ್ರೇಯರು (೫೩-೨) ಮಾದ್ರಿಯ ಮಕ್ಕಳು

ಮಾರಾಂತು (೫೦-೨೪) ಎದುರಾಗಿ

ಮಾರಾರಿ (೫೨-೨೧) ಶಿವ

ಮಾರಿ (೫೦-೨೪) ಮರಣದೇವತೆ

ಮಾರ್ಗಣ (೫೦-೪೦) ಬಾಣ

ಮಾರ್ಮಲೆ (೧೧-೧೭) ಎದುರಾಗು

ಮಾವಂತ (೪೭-೨೦) ಮಾವುತ

ಮಾಳ್ಕೆ (೩೭-೨೦) ರೀತಿ

ಮಿಗಿಸಿಕೊಳ್ಳು (೪೪-೪೩) ಬಿಡಿಸಿಕೊಳ್ಳು

ಮಿಗು (೭-೧೩) ಮೀರಿಹೋಗು

ಮಿಟ್ಟಿ (೪೪-೧೩) ಒಂದು ಆಯುಧ

ಮಿಡಿ (೧೯-೨೯) ಉದುರು
(೨೫-೧೩) ಬಿಲ್ಲಿನ ದಾರವನ್ನು ಜಗ್ಗು
(೩೭-೨೨) ಹಿಮ್ಮಡ
(೬೩-೨೬) ಹೊಡೆ

ಮಿಡುಕು (೨೬-೧೫) ಆವೇಶಯುಕ್ತನಾಗು
(೫೦-೨೫) ನೂಕು

ಮಿತ್ರ (೨೯-೮) ಸೂರ್ಯ

ಮಿನುಗು (೧೬-೩೮) ಹೊಳೆ

ಮಿಳಿ (೪೧-೪೨) ಮಿಣಿ

ಮಿಳ್ತು (೩೯-೩೫) ಮೃತ್ಯು

ಮೀನ್ (೯-೨೪) ನಕ್ಷತ್ರ

ಮೀರ್ (೪೧-೮) ದಾಟು
(೪೯-೩೨) ಹೆಚ್ಚಾಗು

ಮುಂ (೫೦-೯) ಮುಂದೆ

ಮುಕುಳ (೩೫-೩) ಮೊಗ್ಗೆ

ಮುಕ್ಕುರಿಕು (೩೭-೬೭) ಮೇಲೆ ಬೀಳು

ಮುಗಿ (೩೭-೧೨) ಮುಚ್ಚು

ಮುಗ್ಗು (೪೨-೩೫) ಕಡಿಮೆಯಾಗು

ಮುಗ್ಗು (೫೦-೨೫) ಮುಂದೆ ಬೀಳು

ಮುಂಚಿ (೩೧-೪೪) ಮೊದಲು

ಮುಂಚು (೨೬-೧೩) ಮುಂದೆ ಹೋಗು

ಮುಂಜೆರಗು (೫೬-೪೭) ಮುಂದಿನ ಸೆರಗು

ಮುಟ್ಟು (೫೭-೫೨) ಉಪಕರಣ

ಮುಡಿ (೫೬-೩೫) ಮೂರ್ತಿಗಳ ಕಿರೀಟ

ಮುಡಿವಾಳ (೩೫-೫) ಬಾಳದ ಬೇರಿನ ಜಾತಿಯ ಹುಲ್ಲು

ಮುಡುಹು (೭-೫) ಹೆಗಲು
(೫೬-೩೫) ಮುಡುಪು

ಮುಂಡಾಡು (೪೫-೩೮) ಚುಂಬಿಸು

ಮುತ್ತಿಗೆ (೩೭-೫) ಸಮೂಹ

ಮುದ್ಗರ (೪೨-೪೦) ಗದೆ

ಮುದ್ರಿಸು (೫೦-೪೫) ಮುಚ್ಚಿ ಹೋಗು

ಮುನಿ (೫೫-೨೮) ಗಂಡು ಭೂತ

ಮುನ್ನೀರ (೯-೨) ಸಮುದ್ರ

ಮುಂತು (೬-೧೬) ಮುಂದೆ

ಮುಂತೆ (೫೦-೪೬) ಆಮೇಲೆ

ಮುಂಬು (೫೦-೪೨) ಮುಂಭಾಗ

ಮುರಿತ (೫೦-೫) ಹೊಡತ

ಮುರಿಪು (೩೮-೩೮) ಮುಷ್ಟಿಭ್ರಣಮು

ಮುರುಡಿ (೫೬-೨೩) ಕಂಟೆ

ಮುರುಡು (೧೦-೭೭) ಹುರುಬರಕ

ಮುರುಂಟು (೪೬-೨೫) ಒಣಗು

ಮುಲಿ (೩೫-೩೦) ದನಿಮಾಡು

ಮುಸು (೪೬-೨೬) ದೊಡ್ಡಜಾತಿಯ ಕರೀ ಮಂಗ

ಮುಸುಡು (೫೦-೩) ಮೋರೆ

ಮುಸುರ್ (೪೫-೩೮) ಮುತ್ತು
(೪೯-೨೪) ಬೀಳು

ಮುಳು (೨೬-೧೮) ಕೆಳಗೆ ಬೀಳು

ಮುಳುಕು (೪೫-೫೪) ಮುಳುಗು

ಮೂಕುರೆ (೩೨-೩೭) ಮೂಗಿಲ್ಲದವ

ಮೂಗಳ (೫೫-೪೫ಡ) ಮೂರು ಕೊಳಗ?

ಮೂಗುವಡು (೩೦-೧೫) ಸ್ತಬ್ಧವಾಗು

ಮೂಡಿಗೆ (೫೩-೪೯) ಬತ್ತಳಿಕೆ

ಮೂದಲಿಸು (೧೧-೩೦) ಈರ್ಷೆ ತುಂಬಿಸು

ಮೂವಿಧಿ (೪೭-೨೨) ಮೂರು ಬಟ್ಟೆ

ಮೃಗ (೫೩-೩೨) ಸಾಮಾನ್ಯಪಶು, ಎರಳೆ, ಆಕಳು

ಮೃಗಮದ (೩೭-೮) ಕಸ್ತೂರಿ

ಮೆಚ್ಚು (೩೧-೪೩) ಮಾಯಮಾಡು

ಮೆಟ್ಟಕ್ಕಿ (೩೭-೫೬) ಸೇಸೆಹಾಕಿದ ಸ್ಥಾನ

ಮೆದೆ (೩೨-೪೦) ರಾಶಿ

ಮೇಢ್ರ (೫೮-೬) ಪುರುಷನ ಜನನೇಂದ್ರಿಯ

ಮೇದಸ್ಸು (೫೮-೧೧) ಮಿದುಳು

ಮೇದಿನೀಧರರಾಜ (೩೬-೧೬) ಪರ್ವತರಾಜ

ಮೇರುವೆ (೪೫-೨೭) ಗೋಪುರ

ಮೇಹು (೩೫-೩೦) ಆಹಾರ

ಮೇಳಯಿಸು (೩೧-೧೩) ಹೂಡು

ಮೈಗರೆ (೯-೮) ಅಡಗು

ಮೈವಳಿ (೪೧-೫೦) ಆಧೀನತೆ

ಮೊಗರಂಬ (೨೩-೩೮) ಮೊಗವಡ, ಶಿರಸ್ತ್ರಾಣ

ಮೊಗೆ (೨೯-೧) ಹೊಂಡದಿಂದ ನೀರು ತಕ್ಕೊಳ್ಳು
(೪೩-೪೦) ಹಲ್ಲಾವಮಾಡು
ಮೊತ್ತ (೩೭-೨೭) ಸಮೂಹ
ಮೊತ್ತು (೩೧-೪೩) ಮುಗಿಬೀಳು
ಮೊನೆ (೫೫-೪೨) ಕಾಳಗ
ಮೊಮ್ಮ (೨-೫) ಮೊಮ್ಮಗ
ಮೊರಹು (೪೨-೧೪) ಧ್ವನಿ
ಮೊರೆ (೩೩-೧೬) ಮಸೆ
(೩೭-೨೩) ಧ್ವನಿಮಾಡು
(೫೦-೧೮) ಅಳುವಿಕೆ
(೫೧-ಸೂ) ದೂರು
ಮೊರ್ಗುಡಿಸು(೨೧-೩೨) ಪರಿಣಾಮಿಸು
ಮೊಳಗು (೨೦-೫) ಗುಡುಗು, ಧ್ವನಿ
(೪೨-೩೮) ಗರ್ಜಿಸು
ಮೊಳೆ (೩೬-೧೦) ಹುಟ್ಟು
ಮೋಟ (೫೭-೪೯) ಮೊಂಡಬೊಡ್ಡಿ
ಮೋದಕ (೫೧-೨೨) ಉಂಡಿ, ಕಾಯ್ಗಡುಬು
ಮೋದಿಕೊಳ್ (೨೧-೨೮) ಬಡಕೊಳ್ಳು
ಮೋದು (೪೨-೪೦) ಹೊಡೆ, ತಿವಿ
ಮೋಹ (೫೩-೭) ಹುಚ್ಚುತನ
ಮೋಹನ (೩೭-೧೪) ಮನೋಹರಣ
ಮೋಹರ (೨೫-೧೦) ಸೇನೆ
ಮೋಹರಿಸು (೫೦-೧೧) ಕಾಳಗಕ್ಕೆ ಒಡ್ಡು
ಮೋಹು (೩೭-೨೨) ತಾಗು
(೪೯-೫೭) ಹೊಡತಕೊಡು
ಮೌರಿ (೫-೭) ತುತೂರಿ

ಯ

ಯಕ್ಷಪತಿ (೩೧-೧) ಕುಬೇರ
ಯಮಳ (೧-೨) ಯುಗ, ಜೋಡು
ಯಮಿ (೩೫-೧೬) ತಪಸ್ವಿ
ಯಾತುಧಾನ (೨೩-೩೭) ರಾಕ್ಷಸ
ಯಾನ (೩೭-೧೬) ಗಮನ
ಯುತ (೫೧-೧೦) ಕೂಡಿದ
ಯೂಥ (೩೬-೧೧) ಸಮೂಹ

ರ

ರಕ್ಕೆ (ದ್ಭ-ರಕ್ಷೆ) (೫-೨೮) ಭಸ್ಮ
(೨೩-೩೮) ರಕ್ಷೆ
ರಂಚಿಕೆ(೫೦-೧೬)ಅಂಬಾರಿ, ಮಹಾಸನ
ರಂಚೆ (೪೧-೫೦) ಪಕ್ಕರಕ್ಕೆ
ರಂಜಿಕೆ (೪೭-೪೪) ಅಂಬಾರಿ, ಹೌದಾ
ರಣ (೪೧-೫೫) ಕಾಳಗ, ಆನಂದ
ರತಾರಂಭಚೇಷ್ಟೆ (೫೧-೧೨) ಕಾಮಚೇಷ್ಟೆ
ರತಿ (೩೪-೧೪) ಆನಂದ, ಕಾಮಾತುರತೆ
ರಥಾಂಗ (೩೫-೭) ಚಕ್ರವಾಕಪಕ್ಷಿ
ರದನ (೩೭-೨೪) ಹಲ್ಲು
ರಭಸ (೩೭-೭) ಆನಂದ
(೫೩-೧೪) ದೊಡ್ಡದನಿ
ರಯ (೧೦-೫೬) ಪ್ರವಾಹ
ರಯ್ಯ (೩೦-೯) ರಮ್ಯ
ರವಕೆ (೧೯-೨೪) } ಕುಪ್ಪಸ
ರವಿಕೆ (೧೦-೭೫)
ರಸನ (೩೭-೧೪) ಕಿರುಗೆಜ್ಜೆ
ರಸಾಯನ (೫೬-೧೧) ಹಣ್ಣಿನ ರಸ, ಹಾಲುಸಕ್ಕರೆಗಳ ಪಾಕ
ರಸೆ (೫೮-೨೦) ಭೂಮಿ
ರಹಿತಾನುಕೂಲೆ (೧೦-೫೬) ಅನುಕೂಲವಲ್ಲದಾಕೆ, ದಂಡೆಯನ್ನು ಬಿಟ್ಟು ಹರಿಯುವ (ನದಿ)
ರಾಜ (೧-೪) ಚಂದ್ರ

ರಾಜ (೩೨-೧) ಯತಿ, ಚಂದ್ರ
ರಾಜರಾಜ (೨-೭) ಕುಬೇರ
ರಾಜವಿಪಕ್ಷನೇತ್ರ (೧-೩) ಕಮಲನೇತ್ರ (ವಿಷ್ಣು)
ರಾಜಹಂಸ (೪೫-೪೬) ಪಕ್ಷಿ, ರಾಜಶ್ರೇಷ್ಠ
ರಾಜಿ (೩೪-೨೦) ಸಾಲು, ಸಮೂಹ
ರಾಜೀವಪೀಠ (೧೩-೧೦) ಬ್ರಹ್ಮ
ರಾಜೀವವರರಾಜ (೧೬-೫೧) ಜಡೆಯಲ್ಲಿ ಚಂದ್ರನುಳ್ಳವ
ರಾತ್ರೀಚರ (೨೯-೩೯) ರಾಕ್ಷಸ
ರಾಧೇಯ (೭-೧೧) ಕರ್ಣ
ರೂಥ (೩೯-೭) ರಥ
ರೋಚಿ (೩೭-೫) ಕಾಂತಿ
ರೋಡಾಡು (೫೬-೩೩) ತಿರಸ್ಕರಿಸು
ರೊಮಾಂಚ (೫೨-೩೮) ಹರ್ಷದಿಂದ ನೆಟ್ಟಗಾದ ಕೂದಲು
ರೋಮಾಳಿ (೧೦-೪೫) ಜಡೆ
ರೋಹಿಣೀ (೧೧-೧೮) ದಕ್ಷನ ಮಗಳು, ಒಂದು ಜಾತಿಯ ಆಕಳು
ರೌಕುಳ (೨೬-೧೯) ಭಯಂಕರ ಸ್ವರೂಪ
ರೌರವ (೫೧-೧೦) ಒಂದು ನರಕ

ಲ

ಲಕ್ಷ್ಮಣ (೪೫-೪೭) ಬಕ
ಲಕ್ಷ್ಯ (೩೮-೩೮) ಗುರಿ
ಲಗಡಿ (ಲಗಾಯಿಸು) (೫೩-೫೩) ಹೊಡತ
ಲಗುಡ (೫೩-೨೨) ಕೋಲು, ಡೊಣ್ಣೆ
ಲಗ್ಗೆ (ದ್ಭ-ಲಂಘ) (೪೨-೧೨) ಮುತ್ತಿಗೆ
ಲಗ್ಗೆ(ದ್ಭ-ಲಗ್ನ)ವರೆ (೪೨-೨೪) ತರತರದ ದನಿಗಳ ಡೊಳ್ಳುಗಳ ಮೇಳ
ಲಘುಪಾಳಿ (೪೦-೭) ಸಹಜವಾದ ರೀತಿ
ಲಂಘನ (೪೧-೨೭) ಗತಿವಿಶೇಷ
ಲಟಕಟಿಸು (೪೩-೩೧) ಆತುರಪಡು
ಲಂಪು (೩೭-೩೨) ಸೊಗಸು, ವಿಭವ
ಲಲಾಮ (೩೭-೮) ತಿಲಕ, ಬೊಟ್ಟು
ಲಲಿತ (೫೦-೫೫) ಶೋಭಿಸುವ
ಲಲ್ಲೆ (೯-೧೫) ಮುದ್ದು
ಲವ (೪೫-೪೭) ಒಂದು ಜಾತಿಯ ಪಕ್ಷಿ
ಲವಣಿ (೩೮-೩೮) ಹಿಂದೆಮುಂದೆ ಬಾಗೋಣ
ಲಸಿತ (೩೫-೮) ಉಲ್ಲಾಸಿತ
ಲಹರಿ (೩೭-೩೩) ತರಂಗ
(೪೭-೪೫) ಮಾದಕ ಪದಾರ್ಥ
ಲಳಿ (೪೨-೨೭) ತಂತ್ರ, ಚಾಪಲ್ಯ (೪೪-೧೬) ಸಾಮರ್ಥ್ಯ
ಲಾಕುಳ (೧೦-೬೨) ಗಣೆ, ದಂಡ
ಲಾಗಿಸು (೪೪-೨೪) ಸಿದ್ಧವಾಗು
ಲಾಗು (೨೫-೧೧) ಹಿಡಿತ, ಜಿಗಿತ (೫೬-೫೩) ಆಸರ
ಲಾಘವ (೩೮-೩೮) ಪಟುತ್ವ
ಲಾಂಛನ (೫೨-೧೫) ಚಿಹ್ನ
ಲಾವಕ (೮-೧೯) ದುಷ್ಟ
ಲಾವಣಿಗೆ (೪೮-೫೦) ಸಮೂಹ?
ಲಾವಣ್ಯ (೩೭-೧೫) ಉಪ್ಪು, ಸೌಂದರ್ಯ
ಲಾಸ್ಯ (೧೧-೨೭) ನೃತ್ಯ
ಲಾಳಕ (೪೭-೪೧) ನಾಲುಹೊಡೆಯುವವ
ಲುಬ್ಧ (೫೩-೨೧) ಬೇಟೆಗಾರ
ಲುಳಿ (೩೮-೩೮) ಚಪಲತನದಿಂದ ತಿರುಗಿಸುವದು

ಲೆಂಕ (೩-೨೨) ಸೇವಕ

ಲೇವಳ (೫೭-೮೩) ಕೊರಳಲ್ಲಿ ಹಾಕುವ ಸರ

ಲೇವೆ (೪೭-೪೪) ಹೊಲಿದು ಸಿದ್ಧಮಾಡಿದ ಆಸನ

ಲೋಕೇಶ (೧೨-೧) ಬ್ರಹ್ಮ

ಲೋಲೆ (೩೭-೫) ಆನಂದವಶಳು

ಲೋವೆ (೫-೩) ತಾಟು

ಲೋಳೆ (೪೩-೨೩) ಜಿಗಟುಮುಟ್ಟಿ

ಲಾಡಿ (೩೫-೧೧) ಕಬ್ಬಿಣದ ಗದೆ

ವ

ವಂಶ (೫೩-೧೬) ಬಿದರು, ಕುಲ

ವಂಗಡ (೨-೨೦) ಸಮೂಹ

ವಜ್ರಾಂಗ (೪೧-೫೭) ವಜ್ರಕವಚ

ವಜ್ರಿ (೫೩-೧೭) ಎಲೆಗಳ್ಳಿ, ಇಂದ್ರ

ವಂಚಕತ್ವ (೬-೪೩) ಡೊಂಕಾಗುವದು

ವಡಬ (೩೨-೧೮) ಸಮುದ್ರದೊಳಗಿನ ಬೆಂಕಿ, ಕುದುರೆ

ವನಧಿಪ (೩೯-೩೬) ವರುಣ

ವನಮಾಲೆ (೪೧-೧೯) ಕೃಷ್ಣನು ಧರಿಸಿದ ಹಾರ

ವರವಿ (೪೨-೧೧) ಹರವಿ

ವರಿ (೪೦-೩) ಮರಿ

ವರಿಸು (೫೫-೨೪) ಸ್ವೀಕರಿಸು

ವರುಣದಿಶೆ (೩೭-೧೯) ಪಶ್ಚಿಮ ದಿಕ್ಕು

ವರುಷ (೫೦-೪೧) ಮಳೆ

ವರೂಥ (೫೦-೧೪) ತೇರು

ವರ್ಗ (೭-೭) ಖಾತೆ
(೬೦-೪) ಪದಾರ್ಥಗಳ ಸಮೂಹ

ವರ್ಣಕ (೧-೨೮) ವರ್ಣನಾತ್ಮಕ ಮಹಾಕಾವ್ಯ – ನಗರಾರ್ಣವ ಸರಿದಟವೀ । ನಗ ಚಂದ್ರಾರ್ಕೋ ದಯರ್ತು ಸಲಿಲಕ್ರೀಡಾ ॥ ದಿಗಳಾದಿಯಾಗೆ ಸರಸೋ । ಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದರೊಳ್ – ಕಾವ್ಯಾವಲೋಕನ

ವರ್ಮ (೪೪-೩೪) ಮರ್ಮ

ವಲ (೪೮-೧೫) ಬಲ

ವಲಯ (೩೭-೧೯) ಸಮೂಹ

ವಲಸೆ (೫೭-೨೩) ಪಲಾಯನ, ಹೊರಗೆ ಹೋಗೋಣ

ವಲಿತ (೪೮-೭) ಸೀಮೆ

ವಶಾ (೧೧-೧೮) ಸ್ತ್ರೀ, ಗೊಡ್ಡಾಕಳು

ವಸ (೫೫-೪೩) ವಶ

ವಸು (೩೨-೨) ದೇವತೆಗಳ ಭೇದ
(೪೧-೫೫) ರತ್ನ, ಧಾಲು
(೪೮-೧) ಕುಬೇರ

ವಹಿಲ (೩೦-೧೬) ಅವಸರ, ಚಪಲತೆ

ವಳಿ (೧೯-೨೫) ನಿರಿಗೆ

ವಳೆ (೩೭-೫೪) ವಲಯ

ವಾಘೆ (೩೫-೯) ಲಗಾಮು

ವಾಜಿ (೩೪-೨೦) ಪಕ್ಷಿ
(೫೩-೧೫) ಪಕ್ಷಿ, ಬಾಣ

ವಾಟ (೨೯-೬) ಒಳಂಗಳ, ತೋಟ

ವಾಡಬ (೨೨-೮) ಕುದುರೆ, ಬ್ರಾಹ್ಮಣ, ವಡಬಾಗ್ನಿ

ವಾತ (೧೩-೪) ವಾಯು

ವಾತಾಯನ (೧೦-೮೦) ಕಿಡಿಕಿ

ವಾರಣ (೩೨-೧೮) ದಂಡೆ, ಚಿಲಖತ
(೪೫-೨೧) ನಿವಾರಿಸುವ

ವಾರಿ (೬೨-೪೮) ನಿಯಮ

ವಾರಿಜಾಕ್ಷ (೫೨-೨೧) ವಿಷ್ಣು

ವಾರುಣಿ (೯-೩) ಒಂದುವಾದ್ಯ,

ಪಶ್ಚಿಮ
ವಾರುವ (ದ್ಭ-ವಾಡವ) (೩೧-೨೦) ಕುದುರೆ
ವಾಲ (೨೨-೧೦) ಬಾಲ
(೫೮-೨೨) ಕೂದಲು
ವಾಸ (ದ್ಭ-ವಾಂಶ್ಯ) (೫೦-೪೮) ಕೊಳಲು
ವಾ(ಕಾ?)ಸರ (೨೦-೧) ಕೋಣ
ವಾಸಿ (೨೫-೩೫) ಸ್ಥಿತಿ
ವಾಸ್ತು (೫-೪೯) ಕಟ್ಟಡ
ವಾಹಿನಿ (೨-೭) ನದಿ, ದಂಡು
ವಿ (೪೫-೪೮) ಪಕ್ಷಿ
ವಿಕಲ (೪೧-೩೯) ಕಲುಷಿತ
(೫೮-೨೬) ಊನ
ವಿಕಲ್ಪ (೫೮-೨೯) ಅನಿಶ್ಚಯ
ವಿಕಳ (೧೦-೬೭) ದುಃಖ
ವಿಕಳಿಸು (೧೯-೩೧) ಭ್ರಮೆಗೊಳ್ಳು
ವಿಗಡ (ದ್ಭ-ವಿಕಟ) (೨೧-ಸೂ) ದೊಡ್ಡ, ಹೆಚ್ಚಿನ
ವಿಗತ (೫೦-೪೪) ಹೋದ, ಕಳೆದ
ವಿಗ್ರಹ (೪೯-೩೮) ಕಾಳಗ
ವಿಚಕಿಲ (೯-೨೨) ಒಂದು ಜಾತಿಯ ಮಲ್ಲಿಗೆ
ವಿಜಯ (೫೩-೧೬) ಅಣಿಲೆಗಿಡ
ವಿಜಾತಕಿಲ್ಬಿಷ (೫೧-೧೦) ಹೆಚ್ಚಿನ ಪಾಪ ಮಾಡಿದವ
ವಿಟ (೧೦-೪೮) ಪಟಂಗ
ವಿಟ್ಟು (೫೨-೨೪) ವಿಷ್ಣು
ವಿಡಾಯ (೩೫-೫೦) ವೈಭವ, ಶೋಭೆ
(೩೭-೫೫) ಉತ್ಸವ
ವಿಡಾಯಿ (೩೯-೩) ಹೆಚ್ಚಳ
ವಿಂಡು (೩೦-೬) ಹಿಂಡು
ವಿತತಿ (೫೭-೬೮) ಪಸರಿಸಿದ
ವಿತರಣ (೧-೨೫) ಔದಾರ್ಯ
ವಿತಾಳಿಸು (೩೩-೪) ಗರ್ವಿಸು, ಸೊಕ್ಕಿನಿಂದ ಮೆರೆ
ವಿದಳನ (೩೫-೧೭) ಸೀಳುವಿಕೆ
ವಿಧಾವಂತ (೪೭-೧೫) ಬಾಡಿಗೆಯ ಆಳು
ವಿಧಿ (೫೨-೨೪) ಗತಿ
ವಿಧೃತಸೋಮ (೫೦-೪೫) ಚಂದ್ರಮೌಳಿ
ವಿನಿಯೋಗ (೫-೫೦) ಸೇವೆ, ಊಳಿಗ, ಅಧಿಕಾರ
ವಿಭಾಡ (೨೦-೭) ನಾಶಮಾಡುವವ
ವಿಭ್ರಾಜೆ (೩೬-೧೯) ತೇಜಸ್ವಿನಿ
ವಿರಣ (೩೪-೧) ಶ್ರೇಷ್ಠ
ವಿರಾಡ್ರೂಪ (೧೨-೧೨) ವಿಶ್ವರೂಪ
ವಿರಾಮುವೆನಿಪು (೫೦-೬) ತಣ್ಣಗೆ ಮಾಡು
ವಿಶದ (೫೩-೧) ವಿಶಾಲ
ವಿಶ್ವಕರ್ಮ (೩೬-೨೪) ದೇವತೆಗಳ ಶಿಲ್ಪಿ
ವಿಷ (೪೧-೫೫) ಕಠೋರನುಡಿ
ವಿಷ್ಟರ (೨೯-೧೩) ಪೀಠ
ವಿಷ್ವಕ್ಸೇನ (೫೨-೧೮) ವಿಷ್ಣುವಿನ ಸೇನಾನಾಯಕ
ವೀಚಿ (೩೭-೫) ತೆರೆ
ವೀತರಾಗ (೫೩-೧೬) ವಿಕಾರರಹಿತ, ವರ್ಣರಹಿತ
ವೀತಿಹೋತ್ರ (೨೯-೩೯) ಅಗ್ನಿ
ವೀರಣ (೫-೭) ಎರಡೂ ಮಗ್ಗಲು ಡೊಳ್ಳುಗಳುಳ್ಳ ವಾದ್ಯ
ವೀಳೆಯವಿತ್ತು (ಧಾ-ಈ) (೫೦-೧೦) ಅಪ್ಪಣೆಕೊಟ್ಟು
ವೃಂದಾರಕ (೩೬-೨೧) ದೇವತೆ
ವೃಷ (೫೧-೧೦) ಹೆಚ್ಚಿನ
ವೃಷಧ್ವಜ (೩೧-೧೫) ಶಿವ

ವೆಕ್ಕಸಂ (೪೫-೨೯) ಅತಿಶಯವಾಗಿ
ವೆಗ್ಗಳ (೫೭-೮೯) ಅಧಿಕ
ವೆಟ್ಟ (೨೯-೪೧) ಬೆಟ್ಟ
ವೆಂಟಣಿಸು (೨೧-೨೧) ಸುತ್ತುಗಟ್ಟು
ವೇಡಯ್ಸು (ದ್ಭ-ವೇಷ್ಟಿಸು) (೪೭-೩೨) ಸುತ್ತುಗಟ್ಟು
ವೇಡೆಯವನಿಕ್ಕು (೫೦-೨೨) ಮುತ್ತಿಗೆ ಹಾಕು
ವೇಣಿ (೧೦-೪೯) ಜಡೆ, ಹೆಳಲು
ವೇತಂಡ (೪೦-೨೮) ಆನೆ
ವೇದಿಕೆ (೩೬-೨೫) ಕಟ್ಟೆ, ಜಗುಲಿ
ವೇಲೆ (೪೧-೨೭) ತೀರ, ದಂಡೆ
ವೈಡೂರ್ಯ (೩೬-೨೫) ಕಪ್ಪುಬಣ್ಣದ ಹರಳು
ವೈತರಣಿ (೫೬-೪೭) ನರಕದಲ್ಲಿರುವ ನದಿ
ವೈಶಾಖ (೧೦-೧೮) ಕಡಗೋಲು
ವೈಸಿಕ (ದ್ಭ-ವೈಶಿಕ) (೧೦-೨೧) ಕಾಪಟ್ಯ
ವೈಹಾಳಿ (ದ್ಭ-ವ್ಯಾಹಾಳಿ) (೫೧-೨) ಕುದುರೆಗಳ ಓಡಾಟದ ಪ್ರದರ್ಶನ
ವ್ಯಕ್ತ (೫೩-೧) ವಿಕಾಸವಾದ
ವ್ಯಜನ (೩೭-೩೮) ಬೀಸಣಿಕೆ
ವ್ಯಸ್ತ (೪೩-೩೮) ಅಸಂಖ್ಯಾತ
ವ್ಯಾಕುಲ (೫೩-೭) ಕಷ್ಟ
ವ್ಯಾಜ (೩೭-೧೮) ನೆವ, ಠಕ್ಕುತನ
ವ್ಯಾಲೋಲ (೫೮-೧೦) ಅಶಕ್ತ
ವ್ಯಾಳ (೩೬-೯) ಹುಲಿ
ವ್ಯೂಹ (೩೮-೩೨) ಸೇನಾರಚನೆ
ವ್ಯೋಮಕೇಶ (೫೦-೪೧) ಆಕಾಶವೇ ಕೇಶವಾಗುಳ್ಳವ, ಈಶ್ವರ
ವ್ರಜ (೧೧-೧೮) ಸಮೂಹ
ವ್ರಾತ (೫೦-೪೩) ಸಮೂಹ
ವ್ರೀಹಿ (೩೦-೨೪) ಅಕ್ಕಿ

ಶ

ಶಕ್ತಿ (೩೮-೩೮) ಬರ್ಚಿ, ಖಡ್ಗ
ಶಕ್ರ (೨೬-೧) ಬಿಳಿ
ಶತಧರ್ಮ (೬೩-೭೭೪) ಇಂದ್ರ, ಬ್ರಹ್ಮ
ಶತಪತ್ರ (೨೮-೨೪) ಕುದುರೆ ?
ಶಮ (೫೧-೨೮) ಯಮ
ಶಮನ (೩೭-೪೭) ಶಾಂತ
ಶಂಬರಮಥನ (೧೦-೧೩) } ಕಾಮ
ಶಂಬರಾರಿ (೪೫-೧೬) } ಕಾಮ
ಶರ (೫೩-೧೫) ಒಂದು ಜಾತಿಯ ಹುಲ್ಲು, ಬಾಣ
ಶರಧಿ (೨೫-೨೪) ಬತ್ತಳಿಕೆ
ಶರಭ (೩೬-೨೬) ಎಂಟಡಿ
(೫೩-೧೭) ಎಂಟಡಿ, ವೀರಭದ್ರ
ಶಲ್ಲೆಹ (೩೮-೩೮) ಬರ್ಚಿ
ಶಾತಕುಂಭ (೧೫-೫) ಬಂಗಾರ
ಶಾರ್ಙ (ಮೂ-ಶೃಂಗ) (೪೮-೪೦) ವಿಷ್ಣುವಿನ ಧನುಸ್ಸು
ಶಾರ್ದೂಲ (೩೬-೨೬) ಹುಲಿ
ಶಾಲ (೪೨-೨೨) ಕೋಟೆ
ಶಾಲೂರ (೨-೩) ಕಪ್ಪೆ
ಶಾಲ್ಯಾನ್ನ (೫೧-೨೨) ಮಧುರಾನ್ನ
ಶಾಳಿ (೧೧-೮) ಬತ್ತ
ಶಿಕ್ಷ (೫೦-೪೫) ಕೆಡಿಸಿದವ
ಶಿಕ್ಷಿಸು (೫೧-೨೧) ಬೋಧಿಸು
ಶಿಖರಿ (೫೩-೭) ಗಿಡ
ಶಿಖಿ (೫೨-೨೨) ಅಗ್ನಿ
(೫೩-೧೯) ನವಿಲು, ಕೃಷ್ಣಸರ್ಪ
(೫೩-೩೨) ಕೃಷ್ಣಸರ್ಪ, ನವಿಲು, ಚಂಡಿಕೆ
ಶಿಲೀಮುಖ (೪೫-೪೭) ಬಾಣ, ಭ್ರಮರ
ಶಿವ (೧೦-೪೯) ಗಿಳಿ, ಸರ್ಪ
(೨೨-೮) ನರಿ, ಬುರುಗು

ಶಿವ (೪೫-೪೮) ಉಸುಕು, ನೀರು
(೪೫-೫೦) ಶಂಕರ, ನರಿ,
ಸರ್ಪ, ನೀರು, ಉಸುಕು
(೫೩-೧೭) ನೆಲ್ಲಿ, ವಟ, ಗಿಳಿ
ಶೀಸಕ (ದ್ಭ-ಶೀರ್ಷಕ) (೪೭-೪೪) ಶಿರ
ಸ್ತ್ರಾಣ
ಶುಕ (೫೩-೨೦) ಮಾವಿನಮರ,
ಎಲವದಮರ
ಶುಕ್ರ (೨೬-೧) ಅಗ್ನಿ
ಶುಂಡಾಲ (೪೫-೫೭) ಆನೆ
ಶುಕ್ಲ (೫೮-೧೧) ರೇತಸ್ಸು
ಶೈಲಾದಿ (೫೨-೬೬) ಶಿಲಾದ ಋಷಿಯ
ಮಗ (ನಂದಿಯ ಅವತಾರ)
ಶೈವಶರ (೪೧-೧) ಪಾಶುಪತಾಸ್ತ್ರ
ಶೈವಾಲ (೩೪-೮) ಹಾಂಸೆ
ಶ್ರೀಕರದಿ (೨-೨) ಶೋಭೆಯ
ನ್ನುಂಟುಮಾಡುವಂತೆ
ಶ್ರುತಿ (೩೭-೧೯) ಗಾಯನದ
೨೨ ಶ್ರುತಿಗಳು, ವೇದ, ಕರ್ಣ
ಶ್ಲೇಷ್ಮ (೫೮-೧೨) ಕಫ
ಶ್ವೇತವಾಹನ (೫೩-೪೫) ಅರ್ಜುನ

ಷ

ಷಟ್ಪದಿ (೩೫-೮) ಭ್ರಮರ
ಷಡ್ಗುಣ (೩-೧) ಸಂಧಿ, ವಿಗ್ರಹ,
ಯಾನ, ಆಸನ, ದ್ವೈಧೀ
ಕೃತ (ಭಾವ), ಸಮಾಶ್ರ
ಯ ಎಂಬ ಆರು ಗುಣಗಳು

ಸ

ಸಂವರಣೆ (೪೨-೧೨) ಸಿದ್ಧತೆ
ಸಂವರ್ತ (೧೬-೩೦) ಪ್ರಳಯ
ಸಂವಿಂದ್ (೫೮-೫೦) ಜ್ಞಾನ
ಸಘಾಟ (೨೫-೧೪) ದೊಡ್ಡಸ್ತ್ರಿಕೆ
ಸಘಾಡ (೧೧-೩) ಗುಂಪು
ಸಕ್ಕ (೪೪-೨೫) ತೀರ, ಚಕ್ಕ
ಸಂಕಲ್ಪ (೪-೪) ಚಿಂತೆ
(೫೮-೨೯) ನಿಶ್ಚಯ
ಸಂಗಳಿಸು (೩೭-೭೫) ಕೂಡು
ಸಂಚಿಕೆ (೬೨-೬೭) ತಾಡವೋಲೆ
ಸಂಚು (೪೨-೪೧) ಸಮೂಹ
(೪೬-೧೬) ಸದ್ದು
ಸಂಜೋಗ (೪೮-೫೧) ಕವಚ
ಸತ್ತಿಗೆ (ದ್ಭ-ಛತ್ರಿಕೆ) (೩೫-೫) ಛತ್ರ
ಸದರ (೫೭-೮೮) ಸಾಮಾನ್ಯ
ಸದಳಿಗ (೪೧-೫೭) ಕಾಳುವಾರುವವ
ಸದೆ (೩೧-೧೦) ಜಜ್ಜು
(೪೨-೨೯) ಕಸ
ಸದೆಬಡಿ (೪೩-೨) ಒಳಿತಾಗಿ ತಳಿಸು
ಸದ್ಮ (೫೩-೧೭) ನಿವಾಸ
ಸದ್ಯೋನ್ಮುಕ್ತ (೫೨-೭) ಕೂಡಲೆ
ಮೋಕ್ಷವನ್ನು ಹೊಂದಿದ
ಸನ್ನಿಭ (೩೭-೨೫) ಸರಿಯಾದ
ಸಂದ (ಧಾ-ಸಲ್) (೫೦-೭) ಉಂಟಾ
ದ
ಸಂದಣಿ (೫-೩) ಸಮೂಹ
ಸಂದಿಸು (೫೧-೧೮) ಸಾಧಿಸು
ಸಂದು (೩೨-೨) ಸರಿಯಾಗಿ
ಸಂದೆಗ (೫೩-೩) ಸಂಶಯ
ಸಂಧಾನ (೮-೧೫) ಒಪ್ಪಂದ
ಸಪ್ತಾಂಗ (೮-೧೮) ರಾಜ್ಯದ ೭
ಅಂಗಗಳು -- ಸ್ವಾಮಿ, ಅ
ಮಾತ್ಯ, ಸುಹೃತ್, ಕೋ
ಶ, ರಾಷ್ಟ್ರ, ದುರ್ಗ, ಬಲ
ಸಪ್ತಾರ್ಚಿ (೪೭-೧೧) ಅಗ್ನಿ

ಸಬ್ಬ (ದ್ಭ) (೫೩-೪೨) ಸರ್ವ
ಸಮನಿಸು (೫೩-೨) ಉಂಟಾಗು
ಸಮವರ್ತಿ (೪೦-೨೪) ಯಮ
ಸಮಿತಿ (೩೦-೨೦) ಸಭೆ
ಸಮೆ (೧೧-೧೪) ಸಿದ್ಧಪಡಿಸು
ಸಮ್ಮಾರ್ಜನ (೬೦-೪) ಸಾರಣೆ
ಸಂಪಾದನ (೬೨-೪) ಶಿವಾನುಭವ
ಸಂಪ್ರೋಕ್ತ (೫೩-೧) ಸ್ತುತಿಸಲ್ಪಟ್ಟ
ಸರ (೩೭-೨೯) ಬಾಣ
(೫೦-೧೧) ಸ್ವರ
ಸರಕು (೨೩-೨೦) ಲಕ್ಷ, ಗಣನೆ
ಸರಕುದೆಗೆ (೨೮-೧೧) ಜಾರಿಹೋಗು
ಸರಕುಮಾಡು (೪೨-೩೦) ಗಣನೆಗೆ ತರು
ಸರಣಿಗೆಡು (೩೧-೪೪) ಕ್ರಮತಪ್ಪು
ಸರಮುರಿಕೆ (೯-೧೫) ಸರಸಾಲಿಂಗನ
ಸರು (೬೨-೧೯) ರಜ್ಜು
ಸರಸಿಜೋದ್ಭವ (೫೨-೧೭) ಕಮಲದಲ್ಲಿ ಹುಟ್ಟಿದವ, ಬ್ರಹ್ಮ
ಸರಳ್ (೩೫-೨೨) ಬಾಣ
ಸರಿ (೩೨-೩೬) ಕಡುದಾದ
(೩೮-೩೭) ಸುರಿಯುವಿಕೆ
(೫೩-೪೪) ರಾಶಿ
ಸರಿಗ (೨೪-೨೧) ಜೋಡಿ
ಸರಿಬರಿ (೩೩-೧೨) ಸಮಾನತೆ
ಸರಿಸ (೪೫-೫೪) ಎದುರು
(೫೦-೪೧) ಮುಗ್ಗಲು
ಸರ್ಪಿ (೧-೧೧) ತುಪ್ಪ
ಸರ್ಭವ (೧೦-೨೫) ಹಾಸ್ಯ
ಸಲ್ಲ (೫-೧೪) ಸಲ್ಲದು
ಸವಡಿ (೧೬-೨೫) ಜೋಡಿ
ಸವಡಿಸು (೩೫-೫) ಕೂಡಿಸು
ಸವನ (೩೦-೨೩) ಯಜ್ಞ
ಸವೆ (೩೫-೫) ಮಾಡು
ಸವ್ಯಾಪಸವ್ಯ (೪೦-೭) ಎಡಬಲ, ಹಿಂದೆಮುಂದೆ
ಸವ್ವಳಿ (೨-೩) ತೆರೆಯ ತುದಿ
(೪೬-೨೮) ತುದಿ
ಸಸಿನದಿಂ (೮-೧) ಸರಿಯಾಗಿ
ಸಹಣಿ (೧೧-೩೦) ಕುದುರೆ ಚಾಕರಿ ಮಾಡುವವ
ಸಾಗರದಾನ (೪೭-೩೩) ಸಾಗರದ ತಾನ (ವಿಶಾಲತೆ)
ಸಾಗಿಸು (೩೬-೨೩) ಕೊಡು
ಸಾಜ (ದ್ಭ-ಸಹಜ) (೩೭-೪೬) ಏಕಕಾಲಕ್ಕೆ ಕೂಡಿದ
ಸಾದಾಖ್ಯ (೧೩-೮) ಕರ್ತೃಸಾದಾಖ್ಯ, ಕರ್ಮಸಾದಾಖ್ಯ, ಮೂರ್ತಸಾದಾಖ್ಯ, ಅಮೂರ್ತಸಾಖ್ಯ, ಶಿವಸಾದಾಖ್ಯ ಎಂಬವು
ಸಾಧ್ವಸ (೩೧-೧೫) ಹೆದರಿಕೆ
ಸಾಂದ್ರತ್ವ (೧೧-೨೫) ದಟ್ಟಾಗಿರುವದು
ಸಾಮ (೮-೧೪) ಒಡಂಬಡಿಕೆ
ಸಾಮಜ (೨೩-೨೭) ಆನೆ
ಸಾಯಕ (೩೫-೯) ಬಾಣ
ಸಾರ್ (೬೩-೪೬) ಹತ್ತರಬರು
ಸಾರ (೪೩-೧೧) ಗತಿ, ಪರಾಕ್ರಮ
ಸಾರಂಗ (೬೨-೧) ಗಜ, ಐರಾವತ, ಎರಳೆ
(೬೩-೭೭ಅ) ಮನೋಹರ, ಆನೆ
(೬೩-೭೭ಬ) ಚಂದ್ರ
ಸಾರಂಗಗಮನ (೬೩-೭೭ಬ) ಚಂದ್ರ
ಸಾರಂಗಧರ (೬೨-೧) ಶಿವ

ಸಾರಂಗಪದ (೬೩-೭೭ಅ) ಮೋಕ್ಷ
ಸಾರಂಗಪದ್ಮ(೬೩-೭೭ಅ)ಆಕಾಶಗಂಗೆ
ಸಾರಂಗಮಣಿ (೬೩-೭೭ಅ) ಸೂರ್ಯ
ಸಾರಂಗವರ್ನ(೬೩-೭೭ಬ) ಶುಭವರ್ಣ
ಸಾರಂಗವೈರಿವಾಹಿನಿ(೬೨-೧) ಪಾರ್ವತಿ
ಸಾರಂಗಶ್ರವಣ (೬೩-೭೭ಅ) ಸರ್ಪ
ಸಾರಸ್ವತ (೬-೪೫) ಪಾಂಡಿತ್ಯ, ಸರಸ್ವತಿ ನದಿ
ಸಾರೆಬರು (೫೧-೧೯) ಸಮೀಪಿಸು
ಸಾರ್ಚು (೩೬-೮) ಧರಿಸು
ಸಾಸ (ದ್ಭ) (೩-೩೨) ಸಾಹಸ
ಸಾಸಿರ (೫೧-೬) ಸಾವಿರ
ಸಾಳ (೩೧-೩೦) ಒಂದುತರದ ವಾದ್ಯ
ಸಿಕ್ತ (೫೩-೧) ಸೇಚನ ಮಾಡಿದ
ಸಿಗಿ (೪೪-೧೬) ಹಲ್ಲಿಸಿಂದ ಕಡಿ (೫೩-೩೨) ಹರಿ
ಸಿಂಗಾಡಿ (೧೦-೬೫) ಬಿಲ್ಲು
ಸಿಂಜಿತ (೩೭-೪೦) ಧಾತುವಿನಿಂದ ಹೊರಡುವ
ಸಿಂಜಿನಿ (೩೫-೫) ಬಿಲ್ಲು
ಸಿಬಿರ (೧೦-೧೧) ಪಾಳಯ
ಸೀ (೨೫-೨೩) ಸುಡು
ಸೀಗುರಿ (೩೨-೧೩) ಚೌರಿ
ಸೀಮಂತ (೩೭-೧೯) ಬೈತಲೆ
ಸೀರು (೫೬-೬೦) ಸಿಟ್ಟಾಗು
ಸೀರ್ಪನಿ (೩೭-೭೯) ನೀರಿನ ತುಷಾರ
ಸೀಸಕ (ದ್ಭ-ಶೀರ್ಷಕ) (೨೩-೨೫) ಕಬ್ಬಿಣದ ಟೊಪ್ಪಿಗೆ
ಸೀಳ್ (೩೧-೨೭) ಚೂರು, ತುಣುಕು
ಸುಕ್ಕು (೨೮-೨೬) ಮುದುಡು
ಸುಗಿ (೩೧-೨೯) ಅಂಜು
ಸುಗಿಸು (೪೩-೧೮) ಭಯಪಡಿಸು
ಸುಂಟಿಗೆ (೪೮-೫೬) ಹೃದಯ
ಸುಂಡಾಯ್ತು (೪೭-೪೪) ಹಸ್ತ (ಮುಖ?) ರಕ್ಷಕ
ಸುತ್ರಾಮ (೧೬-೧೦) ಇಂದ್ರ
ಸುದತಿ (೫೨-೧) ಚೆಲುವಾದ ಹಲ್ಲುಳ್ಳವಳು
ಸುಧಾ (೫೩-೧) ಅಮೃತ
ಸುಧಾಸೂತಿ (೩೬-೨೩) ಚಂದ್ರ
ಸುಪರ್ಣ (೩೯-೧೦) ಒಳ್ಳೇ ರೆಕ್ಕೆಗಳುಳ್ಳ
ಸುಪರ್ವ (೨೩-೨೨) ದೇವತೆ
ಸುಪ್ಪತಿಗೆ (೪೭-೪೦) ಮುಗ್ಗಲುಹಾಸಿಗೆ, ತಲ್ಪ
ಸುಪ್ರತೀಕ (೪೩-೧) ಸುಂದರ
ಸುಮ (೩೭-೪೬) ಹೂವು
ಸುಮನ (೧೮-೧೮) ದೇವತೆ (೪೧-೫೫) ಐಶ್ವರ್ಯ
ಸುಮನಸ್ (೧೮-೧೮) ದೇವತೆ
ಸುಮನೋಹರ (೪೧-೨೨) ರಾಕ್ಷಸ
ಸುಮ್ಮಾನ (೪೩-೫) ಆನಂದ
ಸುಯ್ (೩೧-೪) ಸ್ವಾಸ, ಉಸುರು
ಸುಯಿಧಾನ (೨೯-೬) ಎಚ್ಚರಿಕೆ
ಸುಯಿಲ್ (೫೦-೩) ಉಸುರು
ಸುಯ್ದಾನ (೫-೬೩) ಎಚ್ಚರಿಕೆ
ಸುರಗಿ (ದ್ಭ-ಕ್ಷುರಿಕಾ ಅಥವಾ ಛುರಿಕಾ) (೩೫-೧೧) ಕಠಾರಿ
ಸುರಭಿ (೧೧-೧೮) ಸುಗಂಧ, ಆಕಳು (೬೩-೭೭ಅ) ಕಾಮ
ಸುರುಳ್ (೩೧-೪೪) ಮುದ್ದಿಯಾಗು
ಸುಳಿಗುರುಳು (೩೭-೧೦) ಉಂಗುರ ಕೂದಲು
ಸೂಕರ (೫೩-೩೪) ಹಂದಿ

ಸೂಟ (೭-೨೪) ವೇಗ

ಸೂತ್ರ (೬೩-೭೭ಬ) ಯಜ್ಞೋಪವೀತ

ಸೂಪ (೫೧-೨೨) ಸಾರು

ಸೂಯ (೫೮-೪೫) ದುಷ್ಪ್ರೇಮ

ಸೂರ (೪೩-೩೭) ಸೂರ್ಯ

ಸೂರಾಡು (೬೩-೬೦) ಊಟಮಾಡು

ಸೂರಿ (೪೦-೩೨) ವಿದ್ವಾಂಸ

ಸೂರಿಯ (೫೦-೩೨) ಸೂರ್ಯ

ಸೂರೆಗರ್ (೫೦-೨೯) ಊಟಮಾಡುವವರು

ಸೂರೆಗೊಳು (೪೧-೩೦) ಕೆಡಿಸು

ಸೂಸಕ (೩೬-೨೫) ಗೊಂಡೆ

(೩೭-೨೪) ಹಣೆಯಲ್ಲಿ ಧರಿಸುವ ಆಭರಣ

ಸೂಳ್ (೩೧-೧೦) ಸರತಿ

ಸೂಳಾಯ್ತು (೫೦-೧೬) ಹಸ್ತರಕ್ಷಕ

ಸೂಳೆಬಂಟಿಕೆ (೧೦-೧೮) ಜಾರತನ

ಸೆಕಳೆ (೨೫-೨೩) ಉಷ್ಣ

ಸೆಕ್ಕು (೩೯-೮) ಸೇರಿಸು

ಸೆಜ್ಜರ (೧೦-೮) ಹಾಸಿಗೆ

ಸೆಡೆ (೧೬-೧೪) ಬಗ್ಗು

(೨೫-೧೩) ಅಂಜು

ಸೆಣಸು (೫೦-೨೪) ಎದುರಾಗು, ಈರ್ಷೆತೊಡು

ಸೆಲದಿ (೫೫-೩೯) ಜೇಡಹುಳ

ಸೆಲವು (೪೨-೨೩) ಅಪ್ಪಣೆ

ಸೆಳೆ (೩೭-೧೦) ಸಣ್ಣ

ಸೆಳ್ಳು + ಉಗುರ್ (೪೫-೭) ಉದ್ದಚೂಪಾದ ಉಗುರು

ಸೇದು (೧೬-೧೪) ಜಗ್ಗು

ಸೇದೆ (೩೬-೧೨) ಬಳಲಿಕೆ

ಸೈಂಹಿಕೇಯ (೧೦-೪೫) ರಾಹು

ಸೈತುಮಾಡು (೯-೧೬) ಸರಿಪಡಿಸು

ಸೈಂಧವ (೯-೩) ಕುದುರೆ, ಲವಣ

ಸೈರಿಭ (೫೩-೩೦) ಕೋಣ

ಸೈವರಿ (೪೪-೯) ನೀಟಾಗಿಬರು

ಸೊಡರ್ (೫೧-೨೨) ದೀಪ

ಸೊದೆ (ದ್ಭ-ಸುಧೆ) (೧೧-೩೫) ಹಾಲು, ಜೇನತುಪ್ಪ, ಮತ್ತೀಗಿಡ, ನೆಲ್ಲೀಗಿಡ

ಸೊಬಂಗ (ದ್ಭ-ಸುಭಗ) (೩೬-೧) ಚೆಲುವಿಕೆ

ಸೊಂಪು (೩೫-೩) ಸೌಂದರ್ಯ

ಸೋ (೧೧-೯) ಹಾರಹೊಡಿ

ಸೋಗಿಲ್ (೫-೨೭) ಉಡಿ

ಸೋಗೆ (೩೭-೪೯) ನವಿಲು

(೪೯-೩೫) ಸುರಿಯೋಣ

ಸೋಮ (೧೯-೧೭) ಅಮೃತ, ಚಂದ್ರ

(೫೨-೧೨) ರುದ್ರ, ಶಿವ

ಸೋರ್ಚು (೪೪-೧೯) ಬೀಳುವಂತೆ ಮಾಡು

ಸೋವು (೭-೧೪) ಹೊಡೆದೋಡಿಸು, ನಿವಾರಿಸು

ಸೋಹು (೨೧-೨೦) ಬೆನ್ನಟ್ಟು

ಸೌದಾಮಿನಿ (೨೦-೧೬) ಮಿಂಚು

ಸೌಧ (೫೧-೮) ಉಪ್ಪರಿಗೆ

ಸೌಮ್ಯ (೨-೭) ಬುಧ

ಸೌವರ್ಣಚೇಲ (೧೭-೧) ಪೀತಾಂಬರ, ವಿಷ್ಣು

ಸ್ತಂಡುಲ (ದ್ಭ-ಸ್ಥಂಡಿಲ) (೩೦-೨೪) ಯಜ್ಞಕ್ಕೆ ಸಿದ್ಧಪಡಿಸಿದ ಸ್ಥಳ

ಸ್ತಂಭೇರ (೩೮-೨೮) ಆನೆ

ಸ್ತೋಮ (೫೦-೪೧) ಸಮೂಹ

ಸ್ಥಾಣು (೫೩-೧೬) ಮೋಟ ಬೊ

ಡ್ಡಿ, ಶಿವ
ಸ್ಫುಲಿಂಗ (೩೫-೧) ಕಿಡಿ
ಸ್ಯಂದನ (೨೬-೯) ತಾರಿಯಮರ, ರಥ
ಸ್ರುಕ್ (೩೦-೨೪) ಸವಟು
ಸ್ರುವ (೩೦-೨೪) ಸವಟು
ಸ್ವನ (೩೭-೪೦) ಸಪ್ಪಳ, ದನಿ
ಸ್ವರ್ಭಾನು (೨೬-೨೮) ರಾಹು
ಸ್ವಾಪ (೪೨-೯) ನಿದ್ರೆ
ಸ್ವಾಹಾ (೩೨-೪೪) ಅಗ್ನಿಯ ಹೆಂಡತಿ
ಸ್ವಾಹೇಂದ್ರ (೩೪-೧) ಅಗ್ನಿ

ಹ

ಹಂಸ (೨-೭) ಸೂರ್ಯ
(೨೯-೧೩) ಪರಮಾತ್ಮ, ಶಿವ
(೪೫-೪೯) ಶ್ರೇಷ್ಠತೆ, ಕಿರಣ
(೫೩-೧೯) ಚಂದ್ರ, ಪಕ್ಷಿವಿಶೇಷ
ಹಕ್ಕರಿಕೆ (೪೭-೪೪) ಪಕ್ಕರಕ್ಕೆ
ಹಕ್ಕೆ (೧೧-೩೭) ಬೀಡು
ಹಗರಣ (೮-೧೨) } ಬಡಾಯಿ
ಹಗರಣಿ (೫೭-೭೭) } ಬಡಾಯಿ
ಹಚ್ಚವಡಿಸು (೧೦-೩೨) ಮೇಲಿನ ಆ
ಚ್ಛಾದನವನ್ನು ಹಾಸು
ಹಜಾರ (೪೯-೩೩) ಮಂಟಪ
ಹಜ್ಜೆ (೫೦-೧೮) ಹೆಜ್ಜೆ
ಹಡಪ (೨-೩೧) ತಾಂಬೂಲಚೀಲ
ಹದ (೫೧-೨೫) ರೀತಿ
ಹದನ (೩೧-೨) ಸಂಗತಿ, ಸುದ್ದಿ
(೩೬-೨೧) ಕಾರಣ
(೫೧-೫) ರೀತಿ
ಹದಿರ್ (೧೧-೩೭) ಹಾಸ್ಯ
ಹದಿರು (೯-೧೫) ಹಗುರಾದ
ಹದುಳ (೬-೧೬) ಕುಶಲ, ಕ್ಷೇಮ
ಹಮ್ಮು (೨೫-ಸೂ) ಗರ್ವ
ಹಮ್ಮುಗೆ (೪೧-೫೦) ಹಗ್ಗ
ಹಮ್ಮೆ (೧-೧೬) ಗರ್ವ
ಹಮ್ಮೈಸು (೩೧-೩೭) ಮೂರ್ಛೆ
ಹೊಂದು
ಹರಣ (೫೧-೫) ಪ್ರಾಣ
ಹರವಸ (ದ್ಭ) (೧೯-೪೩) ಪರವಶ
ಹರವಳಿಸು (೫೭-೧೩) ದುಃಖಪಡು
ಹರವು (೧೩-೫) ವಿಸ್ತಾರ
ಹರಿ (೧೬-೮) ಕುದುರೆ
(೨೧-೧) ಸರ್ಪ, ಯಮ,
ದಿಕ್ಕು, ಶುಭ್ರ, ಚಂದ್ರ,
ವಿಷ್ಣು, ಬ್ರಹ್ಮ, ಸೂರ್ಯ,
ಪ್ರಕಾಶಮಾನ, ಇಂದ್ರ
(೩೦-೧೪) ಸೂರ್ಯ, ಚಂದ್ರ,
ಅಗ್ನಿ, ಸರ್ಪ, ಶಿವ, ಶುಭ್ರ
(೪೧-೨೯) ಓಡಿಹೋಗು
(೪೧-೫೫) ನೀರು, ಬಾಣ, ಕುದುರೆ
(೫೩-೧೪) ನೀರು, ವಾನ
ರ, ಪಾರಿವಾಳ, ಗಿಳಿ
(೫೩-೧೯) ಕೃಷ್ಣ, ಬ್ರಹ್ಮ
ಹರಿಗೆ (ದ್ಭ-ಫಲಕ) (೩೫-೧೧) ಢಾಲು
ಹರಿಗೋಪ (೩೮-೩೬) ಇಂದ್ರಗೋಪ
(ಎಂಬ ಒಂದುತರದ ಹು
ಳಗಳು ಮಳೆಯ ಕೂಡ
ಸುರಿಯುತ್ತವೆಯೆಂದು ಕ
ವಿಯ ಸಂಕೇತವು)
ಹರಿಚಂದನ (೫೩-೧೭) ಶ್ರೀಗಂಧವೃಕ್ಷ,
ದೇವಲೋಕದ ಐದು ವೃಕ್ಷ
ಗಳಲ್ಲಿ ಒಂದು
ಹರಿಪದ (೯-೨೪) ಆಕಾಶ
ಹರಿಬ (೩೧-೫೬) ಚಿಂತೆ?
(೩೯-೧೪) ಕಾರ್ಯ

ಹರಿಯನೋಡು (೪೩-೩೫) ಫಜೀತಿಯನ್ನು ನೋಡು
ಹರಿವಿಡು (೩೨-೨೪) ಬಿಡು
ಹರಿಸು (೩೦-೨೩) ಕಳಿಸು
ಹರಿಹರ (೩೦-೧೪) ವೀರಭದ್ರ
ಹರೆ (೪೨-೯) ಡೊಳ್ಳು
ಹರ್ಯಕ್ಷ (೨-೧೩) ಸಿಂಹ
ಹಲ (೫೮-೧೧) ಮೂರು ತೊಲೆಯ ತೂಕ
ಹಲಗೆ(ದ್ಭ-ಫಲಕ) (೫೦-೪೪) ಢಾಲು
ಹಲ್ಲಣ (ದ್ಭ-ಪಲ್ಯಯನ) (೪೧-೫೧) ಜೀನು
ಹಲ್ಲಣಿಸು (೨೩-೨೫) ಜೀನು ಹಾಕು
ಹವಣಿ (೭-೬) ಯೋಗ್ಯಸಂಧಿ
ಹವಣಿಸು (೫೯-೧೨) ಸಿದ್ಧಪಡಿಸು
ಹವಣು (ದ್ಭ-ಪ್ರಮಾಣ) (೧-೨೭) ಯೋಗ್ಯತೆ, ಅಳತೆ, ರೀತಿ
ಹವಿ (೩೮-೧೦) ಅಗ್ನಿ
ಹವ್ಯವಾಹನ (೪೯-೧೮) ಅಗ್ನಿ
ಹಸಗೆಡಿಸು (೫೩-೫) ಅಂದಗೆಡಿಸು
ಹಸರ (ದ್ಭ-ಪ್ರಸರ) (೧೦-೯) ಪ್ರವಾಹ, ಗುಂಪು
ಹಸಿಗೆ (೫೮-೧) ವಿಭಾಗ
ಹಸುಗೆ (೩೦-೨೭) ಪಾಲು
ಹಸೆ (೩೭-೫೮) ಅಲಂಕೃತ ಪೀಠ
ಹಸ್ತಿರಾಣ್ಮುಖ (೨೯-೩೬) ಗಣಪತಿ
ಹಳಚು (೩೧-೨೮) ಎದುರುನಿಂತು ಕಾದು
ಹಳೆಯಂತೆ (೧೯-೧೫) ಮೊದಲಿನಂತೆ
ಹಳ್ಳುಕಟ್ಟು (೩೧-೪೬) ಬೊಗಳು
ಹಾಗ (೫೭-೫೩) ೧ಆಣೆ ೨ಕಾಸು
ಹಾಸು (ದ್ಭ) (೫೩-೧೧) ಪಾಶ, ನಾಯಿಯ ಕೊರಳಪಟ್ಟಿ
ಹಾಹೆ (೨೩-೧೨) ನಿಶಾನಿ, ಪಟ
ಹಿಂಗು (೩೫-೧) ಹಿಂದೆ ಸರಿ
ಹಿಂಚುಮುಂಚು(೪-೮) ಹಿಂದೆಮುಂದೆ
ಹಿಮಕರ (೫೩-೨) ಚಂದ್ರ
ಹಿಮಧಾಮ (೫೩-೧) ಚಂದ್ರ
ಹಿಳಿ (೨-೧೦) ಸುರಿಸು
(೪೧-೩೪) ಹಿಂಡಿ ಹಿಪ್ಪೀ ಮಾಡು
(೫೦-೪೪) ಸುರಿ
ಹುಂಡ (೬-೧೦) ಪುಂಡ
ಹುತಭುಕ್ (೫೩-೧) ಅಗ್ನಿ
ಹುತಾಶನ (೫೦-೪೫) ಅಗ್ನಿ
ಹುದು (೫೪-೧೨) ಸಮೂಹಿಕ
ಹುಯ್ಯಲು (೮-೧೨) ಚೀರಾಟ
ಹುರಿಗಟ್ಟು (೪೯-೫೦) ಧೈರ್ಯತಾಳು
ಹುರುಡು (೧೦-೯) ಮತ್ಸರ
ಹುಲಿಮುಖ (೪೨-೩೫) ಕೋಟೆಯೊಳಗಿಂದ ಹೊರಗೆ ಹೋಗುವ ದಾರಿ
ಹುಲು (೫೨-೩೩) ಕ್ಷುಲ್ಲಕ
ಹುಲ್ಲೆ (೫೩-೨೯) ಏಣ, ಕುರಂಗ, ಹರಿಣ, ಮೃಗ
ಹೂಣಲಿಡು(೪೨-೨೬) ಜೋರಿನಿಂದ ಒಳಗೆ ಹೋಗು
ಹೂಣಿಸು (೩೮-೨೦) ಪ್ರತಿಜ್ಞೆಮಾಡು
ಹೂಣೆಹೋಗು(೮-೧೧) ಯುದ್ಧದ ಮಧ್ಯದಲ್ಲಿ ಸೇರು
ಹೂಸಕ (೨೫-೧೪) ಸುಳ್ಳು
ಹೂಸು (೬-೧೦) ಲೇಪಿಸು
ಹೆಡೆಗುಡಿಕಟ್ಟು (೫೬-೫೬) ಹೆಡಮುರಿಗೆ ಕಟ್ಟು

ಹೆರೆ (೪೦-೧೨) ಚಂದ್ರ
(೫೦-೨೦) ಪರಿ
(೫೩-೨೧) ಕೆತ್ತು
ಹೆಂಟೆ (೬೩-೨೭) ಹೆಣ್ಣುಕೋಳಿ
ಹೇತಿ (೯-೩) ಆಯುಧ, ಕಿರಣ
ಹೇರಂಬ (೫೩-೬೧) ಗಣಪತಿ
ಹೇರು (೪೧-೮) ತೋರಿಸು
ಹೇವ (೪೯-೪೦) ದುಃಖ
ಹೇವರಿಸು (೪೯-೪) ತಿರುಗಿ ಒತ್ತು
ಹೇಷಾ (೩೫-೯) ಕುದುರೆಯ ಹೇಕರಿಸುವಿಕೆ
ಹೊಕ್ಕರಣಿ (ದ್ಭ-ಪುಷ್ಕರಣಿ)(೧೧-೨೯) ಕೃತಿಮ ಚಚ್ಚೌಕ ಕೆರೆ
ಹೊಗರು (೧೮-೧೪) ಪ್ರಕಾಶ
ಹೊಗರೊಗುವ (೪೦-೧೧) ಪ್ರಕಾಶ ಕೆಡವುವ
ಹೊಗೆ (೨೦-೨೭) ಬಿಟ್ಟಿಗೆಳು
ಹೊಂಚು (೩೮-೩೭) ಅಡಗು
ಹೊಡಕರಿಸು (೪೮-೧೩) ಹೊರಡು
ಹೊದರ (೪೮-೪೭) ಅಸಂಖ್ಯಾತ
ಹೊಡೆ (೩೫-೬) ಬತ್ತಳಿಕೆ
ಹೊಮ್ಮಿಗ (೫೪-೩೦) ಬಂಗಾರದ ಬಣ್ಣದ ಚಿಗರಿ
ಹೊರಜೆ (೨-೮) ಆನೆಯ ಕುತ್ತಿಗೆಯ ಸುತ್ತಲು ಹಾಕಿದ ಹಗ್ಗ
ಹೊರಳಿ (೨-೧೭) ಸಮೂಹ
ಹೊರಳಿ (೫೬-೧೧) ಸುರುಳಿ
ಹೊರೆ (೩೮-೧) ತಪ್ಪು
ಹೊಳಕು (೨೬-೧೩) ಪ್ರಕಾಶಿಸು
ಹೊಳೆ (೪೪-೨೭) ವಚನ ತಪ್ಪಿಸು
ಹೋರಟೆ (೧೯-೪೦) ಹೊಡತ

ಒಪ್ಪೋಲೆ

ಪುಟ	ಸಾಲು	ತಪ್ಪು	ತಿದ್ದು
೩೫	೨೬	ನಸ	ನಸು
೩೬	೧೩	ಕೆಳ್ದ್‌ನಿಂ	ಕೇಳ್ದನಿಂ
೪೧	೨೭	ಡೊಳ್ಳಾರಿ	ಡೊಳ್ಳಾರಿ
೪೫	೧೭	ವೈಭವದಿಂದೆ	ವೈಭವದಿಂದ
೭೯	೪	ವಾ ಗುಳಿಕೆ	ವಾಗುಳಿಕೆ
೯೧	೨೪	ಲ್ಲಲ್ಲೆ	ಲಲ್ಲೆ
೯೯	೨೧	ಮೊಲಯ	ಮೊಲೆಯ
೧೦೬	೧೦	ಸಿಂಹಿ-	ಸೈಂಹಿ-
೧೨೫	೩	ನೀಲಂಗಳಂ	ನೀಲಂಗಳಿಂ
೧೨೭	೨	ವೀಧಿ	ವೀಥಿ
೧೫೯	೧೪	ಬಾಗ	ಭಾಗ
೧೬೭	೨೪	-ತರಿಸಿ	-ತರಸಿ
೧೮೩	೪	ಖಾತಿ	ಘಾತಿ
೨೦೩	೧೮	ಪರಿತಂದ	ಪರಿತಂದು
೨೧೯	೧೦	ಧತ	ಧೃತ
೨೩೫	೨೪	ಮುಸುಡ	ಮುಸಲ
೨೫೧	೨೪	ಜನು	ಜುರು
೩೦೦	೧೬	೧ತ್ರಯು	ತ್ರಯಂ೧
೩೦೦	೨೬	ನಯುನ	ನಯನತ್ರಯಂಗಳ
೩೨೩	೨೧	ಮೊಗರಂಜು	ಮೊಗರಂಬ
೩೬೭	೨೬	ಗೊಳಲ್	ಗೊಳಲು
೩೮೪	೨೬	ಣೆಸಿದರು	ಣೆಸಿದರ್
೩೮೧	೨೧	ಕತ್ತ್ರುರಿಪ	ಕತ್ತುರಿ
೩೯೧	೭	ನಾಣ್ಣುಡಿ	ನಾಣ್ಣುಡಿ
೩೯೧	೨೩	ಸೀಷಿಣಿ	ಸೀರ್ಷಣಿ

೪೦೬	೨೪	ಽಕೆಡೆಪಿದಂ ಮಡಿಪಿದಂಽ	ಕೆಡೆಪಿದಂ ಮಡಿಪಿದಂ
೪೦೬	೨೫	ರೂ-ಥಮಂ ಕೆಡಸಿದಂ	ಽರೂ-ಥಮಂ ಕೆಡಸಿದಂಽ
೪೧೨	೧೧	ಮೂಧ್ನಿ	ಮೂರ್ಧ್ನಿ
೪೧೯	೨೨	ಬೆವಕುಮುರ್	ಬೇವ ಕಮರ್
೪೨೪	೧೮	-ಮರರ್ಗೆ	-ಮರರ್ಗ
೪೨೭	೧೬	ಳಡಿಗಿರ್ದು	ಳಡಗಿರ್ದು
೪೩೧	೧೪	ಪೊಗುರೊಗುವ	ಪೊಗರೊಗುವ
೪೪೪	೯	ಸುರತ್ರಯದ	ಪುರತ್ರಯದ
೪೪೪	೨೬	ಬಡಿವೆವಮರದರಾಧರಾದ್ರಿ	ವೆವಮರದರಾಧರಾದ್ರಿ
೪೪೫	೩	ಕಾಯ್ವ ಸುರ	ಕಾಯ್ವಸುರ
೪೪೮	೨೬	ಗಖಿಳ	ಖಿಳ
೪೭೧	೯	ಮಿಟ್ಟೆ	ಮಿಟ್ಟೆ
೪೯೦	೧೫	ಸರಿಸಿ	ಸರಿಸೆ
೫೧೨	೯	ಮಡಲರಿದು	ಮಡಲಿರಿದು
೫೭೫	೧೨	ಶಶಾಂಖ	ಶಶಾಂಕ
೬೨೮	೪	ವರಸಿ	ವರಿಸಿ
೬೩೩	೧೮	ಪರ	ಬರ
೬೩೩	೧೯	-ಳ್ಗಿರದಿಕ್ಕಿ	-ಳ್ಗಿರದಿಕ್ಕೆ
೬೪೫	೧೩	ರೋಃರಾಡಿ	ರೊಂಡಾಡಿ
೬೫೯	೨೨	ದಹಿಸುವೆ	ದಹಿಸುವ
೬೮೨	೧೩	ವೃತ	ವ್ರತ
೬೮೩	೧೩	ಧರೆಯುಳು	ಧರೆಯೊಳು
೬೯೦	೧೫	-ದಸ್ಥಿತೆ-	-ದಸ್ತಿತೆ-
೬೯೨	೧೮	ಸಂವಿತ್ರಯ	ಸಂವಿತ್ತ್ರಯ
೬೯೩	೮	ದಾಸನ	ದಾನನ
೭೧೮	೨೪	ಮನಕ	ಮನಕೆ
೭೨೨	೨	ಟ್ಸ್ಥಲ	ಷಟ್ಸ್ಥಲ
೭೨೫	೨೨	ಗಣ್ಣಿಕೆಂ	ಗಗನಮೆಂ
೭೩೦	೧೦	ತಸ್ಮುಖ	ತ್ವಙ್ಮುಖ

ತಪ್ಪಿ ಉಳಿದ ಪಾಠಾಂತರಗಳು

ಪುಟ	ಸಾಲು	ಮೂಲ	ಪಾಠಾಂತರಗಳು
೯೪	೬	ನೋಳ್ಪನೆನುತಲಿ ಪಾಲ	ನೋಡಬೇಕೆಂದು ಪಾಲ್ (ಪ, ಶಿ, ಮ.)
೯೯	೨೭	(ಶಿ.) ಇದರ ಮುಂದೆ	ಚೆಲ್ವ ಚಂ|ದಳ (ಮ.)
೧೦೨	೧೦	ದೊಡ	ಒಡ (ಮ.)
೧೭೭	೨೦	ಮೆನೆ	ಮೇನ್ (ಮ.)
೧೯೯	೯-೧೦	ವಾಸರ	ಕಾಸರ (ಹು, ಮ, ತು, ದಾ.)
೨೩೫	೩	ಜಾಲ ಮಘವನ	ಜಾಲಮುಗವನ- (ಪ, ಶಿ, ಮ.)
[illegible]	೩	ಸೀಳ್ನರಿ	ಸೀರ್ನರಿ (ಮ.)
[illegible]	೫	ತಬ್ಬಿನಿಂ	ಕಬ್ಬಿನಿಂ (ಪ, ಶಿ, ಗೋ, ದಾ, ತು.)
,,	೯	ಬಿಟ್ಟೋಡಿ	ಬಟ್ಟೋಡಿ (ಪ, ಗೋ, ಮ.)
[illegible]	೨	ಒಚ್ಚಾರೆ	ಒಚ್ಚೆರೆಯ (ಮ.)
[illegible]	೨೧	ನೊಂದೆಸೆಯು	ನಂದೆಸೆಯು (ಪ.)
[illegible]	೨೫	ಸೀರ್ಪಿನಿ	ಪೇರ್ಪನಿ (ಮ.), ಸೀರ್ಪನಿ (ಪ.)
[illegible]	೧೪	ಆಡೆ	ಎಡೆ (ಪ, ಶಿ, ಗೋ, ದಾ.)
[illegible]	೧೦	ಕೊಂಡರೈ	ಕೊಂಡರೇ (ಪ, ಹು, ಶಿ, ಗೋ.)
[illegible]	೧೨	ಕೊಂಡು	ಕಂಡು (ಗೋ.)
[illegible]	೨	ಕೊಂಡಾಂತಾಂತ	ಕೊಂಡಾಡುತಂ (ಮ.)
[illegible]	೪	ಹಿತರ್ಕಳು	ಹಿತರ್ಕಳಂ (ಮ.)
[illegible]	೩	ಜೋಂಡ	ಜೋಡು (ಪ, ಶಿ, ಮ.)
[illegible]	೩	ಪ್ಪುರದಿಂ ಪೊರೆಗೆ	ಪ್ಪುರದಿ ಪೊರಗೆನೆ (ಶಿ.), ಪ್ಪುರದಿಂ ಪೊರಗೆ (ಪ, ಮ.)
[illegible]	೧೬	ಕಾಣುತೇ	ಕಾಣುತೇ (ಮ.)

೬೪೩	೧೬	ಸರಳ್ಗಳಂ	ಸರಳಿನಿಂ (ಮ.)
೬೫೮	೧೦	ಹರವಳಿ	ಹಳವಳಿ (ಮ.)
೬೬೩	೬	ನರಿದು	ನಂದು (ಶಿ, ಮ.)
೬೬೪	೧೧	ದುಣೆನೆಂದು	ದುಣನೆಂದು (ಶಿ.)
೬೬೫	೨೫	ಜಿನನಪ್ಪಿ ದೊಡೆದೊಡೆದು	ಜಿನನಪ್ಪಿ ದೊಡನೊಡೆದು (ಮ.), ಜಿನನನಪ್ಪಿದೊಡೊಡದು (ಪ, ಶಿ.)
೬೬೬	೨೦	ನಿಣಿಯರುಂ	ನಿಣಿಯರಂ (ಮ.)
೬೭೮	೨೧	ನೀನೆ	ನಿನಗೆ (ಗೋ.)
೬೯೧	೨	ಸಸಿವಂ	ಅಸಿವಂ (ದಾ.), ಸಂಸ್ಥಿತ (ಶಿ, ಗೋ.)
೬೯೩	೧೦	ಕಂಗಾರಣ್ಯ	ಕಾಂಗಾರಣ್ಯ (ಮ.)
೭೫೭	೧೯	ಕೇಳೆಂದನು	ಕೇಳೆಂಬನು (ಮ.)
೭೬೭	೧೨	ಸಿದ್ಧೇಶ್ವರನ	ಸಿದ್ಧೇಶ್ವರಂ (ಮ.)